ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೧೩

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೧೪೭
ವಿಚಾರ ಸಾಹಿತ್ಯಮಾಲೆ - ೬೦

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೧೩

## ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

## ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

(ಸಂಪುಟ ೧೩)

**ಸಂವಿಧಾನ ರಚನಾ ಸಭೆಯಲ್ಲಿ ಡಾ॥ ಅಂಬೇಡ್ಕರ್ ಸಿದ್ಧಪಡಿಸಿ ಮಂಡಿಸಿದ ಭಾರತ ಸಂವಿಧಾನದ ವಿಧಿಗಳು ಮತ್ತು ಕಲುಮುಗಳ ಮೇಲೆ ಮುಂದುವರಿದ ಚರ್ಚೆ ಮತ್ತು ಅವುಗಳ ಸ್ವೀಕಾರ**


## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

## ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 13** — Kannada translation of the Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056 ; Third Edition: 2015; Pp. xxxiv + 564; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೂರನೇ ಮುದ್ರಣ : ೨೦೧೫
ಪುಟಗಳು : xxxiv + ೫೬೪
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೦೫.೦೬.೨೦೧೫

ಸಿಎಂ/ಪಿಎಸ್/೧೫೦/೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

**(ಸಿದ್ದರಾಮಯ್ಯ)**

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಹೆಚ್.ಆಂಜನೇಯ)**

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೬೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

ದಿನಾಂಕ: ೦೪.೬.೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

**(ಉಮಾಶ್ರೀ)**

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

## ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ–ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ–ಭಾಷಣಗಳ ಮೂಲಕ, ವೈಚಾರಿಕ ಚರ್ಚೆ–ಸಂವಾದಗಳ ಮೂಲಕ ಸಾಮಾಜಿಕ–ರಾಜಕೀಯ ಜಾಗೃತಿಯನ್ನೇ ಮೂಡಿಸಿದರು. 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡುಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್–III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ. ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ ಜೀವಿತ–

ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫ್ಫರ್‌ಪುರದಲ್ಲಿನ 'ಬಿ. ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು ತಮ್ಮ ಅನುಯಾಯಿಗಳಿಗೆ "ಶಿಕ್ಷಣ ! ಸಂಘಟನೆ !! ಹೋರಾಟ !!! (Educate ! Organize !! Agitate !!!) ಎಂಬ ತತ್ವಗಳನ್ನು ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಹದಿನಾಲ್ಕು ಸಂಪುಟಗಳಲ್ಲಿ ಹೊರತಂದಿತು. ಅನಂತರದಲ್ಲಿ ಹದಿನೈದನೆಯ ಇನ್ನೊಂದು ಸಂಪುಟವನ್ನೂ ಹೊರತರಲಾಗಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ. ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡು ಬಿಟ್ಟುದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದುಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯ ನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರನ್ನಾಗಿ ನಾಮಕರಣ ಮಾಡಲಾಯಿತು. (ಆದೇಶ ಸಂಖ್ಯೆ ಕ ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪–೩–೨೦೦೮.)

೧. ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

೨. ಶ್ರೀ ದೇವನೂರ ಮಹದೇವ, ಖ್ಯಾತಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡುಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು. ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯-೮-೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕತ ಆವೃತ್ತಿಯನ್ನು ೬.೧೨.೨೦೧೦ ರಂದು ಬಿಡುಗಡೆ ಮಾಡಲಾಯಿತು. ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ.ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಕೆಲಮಂದಿ ಪರಿಷ್ಕರಣಕಾರರ ಅತಿವ್ಯಸ್ತತೆಯಿಂದಾಗಿ, ಪರಿಷ್ಕರಣ ಕಾರ್ಯದಲ್ಲಿಯೂ ವಿಳಂಬವಾಯಿತು. ನಮ್ಮ ಒತ್ತಾಯ-ಒತ್ತಡಗಳನ್ನು ಮನ್ನಿಸಿ ಅವರು ನಮಗೆ ನೆರವು ನೀಡಿದ್ದಾರೆ. ಈ ವಿದ್ವಾಂಸರು ಸಾಧ್ಯವಿದ್ದಷ್ಟು ಮಟ್ಟಿಗೆ ಈ ಸಂಪುಟಗಳನ್ನು ಪರಿಷ್ಕರಿಸಿದ್ದಾರೆ. ಈಗಾಗಲೇ ೫, ೬, ೭, ೮ ಮತ್ತು ೯ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಗಿದೆ. ಇವುಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ:

೧. ಶ್ರೀಮತಿ ಬಿ.ಎನ್. ಶಾಂತಾ (ಸಂ. ೫)

೨. ಶ್ರೀ ವಿ. ಕೃಷ್ಣ (ಸಂ. ೬)

೩. ಶ್ರೀ ಕೆ.ಎಲ್. ಚಂದ್ರಶೇಖರ (ಸಂ. ೭)

೪. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೮)

೫. ಶ್ರೀ ಜೆ.ಎನ್. ಶಾಮರಾವ್ (ಸಂ. ೯)

ಈಗ ೧೦ ರಿಂದ ೧೪ ರವರೆಗಿನ ಸಂಪುಟಗಳ ಪರಿಷ್ಕೃತ ಆವೃತ್ತಿಗಳನ್ನು ಹಾಗೂ ಹೊಸದಾಗಿ ಅನುವಾದಿಸಿ ಪ್ರಕಟಿಸಲಾಗುತ್ತಿರುವ ೧೯ ಮತ್ತು ೨೦ನೆಯ ಸಂಪುಟಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಕಾರ್ಯಗಳಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ.

೧. ಶ್ರೀ ಎಸ್.ಆರ್. ಗೌತಮ್ (ಸಂ. ೧೦; ಭಾಗಗಳು ೧-೩ ಮತ್ತು ಸಂ. ೧೪, ಭಾಗ ೨)

೨. ಶ್ರೀ ಜೆ.ಎನ್. ಶಾಮರಾವ್ (ಸಂ. ೧೧; ಭಾಗಗಳು ೧-೨)

೩. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೧೨; ಭಾಗಗಳು ೧-೨)

೪. ಶ್ರೀ ಕೃಷ್ಣ ಮೂರ್ತಿ ಸಿರ್ಸಿ (ಸಂ. ೧೩; ಭಾಗಗಳು ೧-೨; ಸಂ. ೧೪ ಭಾಗ ೧(ಅ) ಮತ್ತು (ಆ))

೫. ಶ್ರೀಮತಿ ಅಕ್ಷತಾ ದೇಶಪಾಂಡೆ ಮತ್ತು ಶ್ರೀಮತಿ ಸುಮಾ ದ್ವಾರಕನಾಥ (ಸಂ. ೧೯)

೬. ಶ್ರೀಮತಿ ಶ್ಯಾಮಲಾ ಮಾಧವ್ ಮತ್ತು ಶ್ರೀ ವಿರೂಪಾಕ್ಷ ಕುಲಕರ್ಣಿ (ಸಂ. ೨೦)

ಇವರೆಲ್ಲರ ಸಹಾಯ-ಸಹಕಾರಗಳಿಗಾಗಿ ನಾವು ಕೃತಜ್ಞರಾಗಿದ್ದೇವೆ. ಅವರ ಗಮನವನ್ನು ತಪ್ಪಿಸಿ ಬಿಟ್ಟು ಹೋಗಿದ್ದ ಭಾಗಗಳನ್ನು ಸೇರಿಸಲಾಗಿದೆ; ಸಾರಣಿಗಳ ಮಾಹಿತಿಯನ್ನು ಸರಿಪಡಿಸಲಾಗಿದೆ; ಉಲ್ಲೇಖಗಳನ್ನು, ಅಂಕಿತನಾಮಗಳನ್ನು ಪರಿಷ್ಕರಿಸಲಾಗಿದೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳೂ ಅವಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ-ಸಹಕಾರ-ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೆ ನಮ್ಮ ಕೃತಜ್ಞತೆಗಳು.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ವಿದ್ವಾಂಸರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ-ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಶ್ರೀ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆರ್ಟ್ಸ್‌ನ ಶ್ರೀ ಬಿ.ಎಲ್.ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

# ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಸಂಪಾದಕೀಯ

ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು, ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ॥ ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ದೇಶದ ಇಂತಹ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ, ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲ ತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ ಇಡೀ ಮಾನವಕುಲದ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು. ಅವರು ತಮ್ಮ ಇಡೀ ಜೀವನವನ್ನು ಈ ಗುರಿಸಾಧನೆಗಾಗಿ ಮುಡಿಪಾಗಿಟ್ಟರು.

ಡಾ॥ ಅಂಬೇಡ್ಕರ್ ಅವರು ಜಾತ್ಯತೀತ, ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರಮೂರ್ತಿಗಳಾಗಿದ್ದು, ದೀನದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಡಾ॥ ಅಂಬೇಡ್ಕರ್ ಅವರು ಕೇವಲ ರಾಜಕೀಯ ಮುಖಂಡರಾಗಿರದೇ, ಆಧುನಿಕ ಭಾರತದ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವೇತ್ತರೂ, ಪ್ರೌಢ ಲೇಖಕರೂ, ಕಾನೂನು ಪಂಡಿತರೂ ಹಾಗೂ ಸಂವಿಧಾನ ತಜ್ಞರೂ ಆಗಿದ್ದರಲ್ಲದೆ ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿ ಪದ್ಧತಿ, ಅಸ್ಪೃಶ್ಯತೆ, ಬಡತನ ಮುಂತಾದ ಸಾಮಾಜಿಕ–ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ ಇವುಗಳ ನಿವಾರಣೆಯ ವಿಧಾನಗಳನ್ನು ನಿರೂಪಿಸಿದರು. ಅದೃಷ್ಟವಶಾತ್ ಅವರು ತಮ್ಮ ಅಮೂಲ್ಯವಾದ ವಿಚಾರಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು, ಇವುಗಳಲ್ಲಿ 'ಜಾತಿ ನಿರ್ಮೂಲನೆ', 'ಶೂದ್ರರು ಯಾರು?', 'ಅಸ್ಪೃಶ್ಯರು ಯಾರು– ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು?', 'ರೂಪಾಯಿಯ ಸಮಸ್ಯೆ', 'ಪಾಕೀಸ್ತಾನ ಅಥವಾ ಭಾರತದ ವಿಭಜನೆ' ಪ್ರಮುಖವಾಗಿವೆ. 'ಬುದ್ಧ ಮತ್ತು ಅವನ ಧಮ್ಮ' ಇದು ಅವರ ಮರಣೋತ್ತರ ಪ್ರಕಟಣೆ. ಇವುಗಳಲ್ಲದೇ ಅವರ ಅಪ್ರಕಟಿತ ಬರೆಹಗಳು ಅಸಂಖ್ಯಾತ. ಅವರ ಮರಣಾನಂತರ ಇವು ಆಸ್ತಿವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಅವುಗಳ ಅಧ್ಯಯನ ಸಾಧ್ಯವಿರಲಿಲ್ಲ. ಆದರೆ ಮಹಾರಾಷ್ಟ್ರ ಸರ್ಕಾರದ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ॥ ಅಂಬೇಡ್ಕರ್ ಅವರ ಕುಟುಂಬದ ಸದಸ್ಯರ ಸಹಕಾರ, ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆಯೂ ಸಾಧ್ಯವಾಗಿದೆ.

ಡಾ॥ ಅಂಬೇಡ್ಕರ್ ಅವರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿಯೇ ಬರೆದಿದ್ದಾರೆ. ಅವರ ಬರವಣಿಗೆಯ ಕೆಲ

ಭಾಗಗಳು, ಅದರಲ್ಲಿಯೂ ಅವರು ತಾವೇ ಆರಂಭಿಸಿ, ನಡೆಸಿಕೊಂಡು ಬಂದ ಪಾಕ್ಷಿಕಗಳಾದ ಸಮತಾ, ಜನತಾ ಮತ್ತು ಬಹಿಷ್ಕೃತ ಭಾರತ ಇವುಗಳಲ್ಲಿ ಮರಾಠಿಯಲ್ಲಿಯೇ ಅಗ್ರ ಲೇಖನಗಳಾಗಿ ಬಂದಿವೆ. ಅವರು ಮಾಡಿದ ಅನೇಕ ಸಾರ್ವಜನಿಕ ಭಾಷಣಗಳೂ ಮರಾಠಿ ಭಾಷೆಯಲ್ಲಿಯೇ ಇವೆ.

ಡಾ॥ ಅಂಬೇಡ್ಕರ್ ಅವರು ತಮ್ಮ ಕೆಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ತಾವು ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಿದ್ಧಪಡಿಸಿ ೧೯೧೮ರಿಂದಲೇ ಪ್ರಕಟಿಸಿದರು. ನಂತರ ೧೯೨೩ರಿಂದ ೧೯೫೫ರವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಇವೂ ಅಲ್ಲದೆ ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡುಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು, ಅವರ ರಾಜಕೀಯ ಮತ್ತು ಸಂವಿಧಾನದ ವಿಚಾರಗಳು ಮಹತ್ವದವುಗಳಾಗಿವೆ ಮತ್ತು ಅವರು ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರ ಶಾಸನ ಸಭೆಗಳಲ್ಲಿ, ನಂತರ ಸಂವಿಧಾನ ಸಭೆಯ ಸದಸ್ಯರಾಗಿ, ಕರಡು ಸಮಿತಿಯ ಅಧ್ಯಕ್ಷರಾಗಿ ಸಿದ್ಧಪಡಿಸಿ, ಮಂಡಿಸಿದ ಕರಡು ಸಂವಿಧಾನ ಮತ್ತು ಅದರ ಮೇಲೆ ನಡೆದ ಚರ್ಚೆಗೆ ಅವರು ನೀಡಿದ ಉತ್ತರ, ಸಮಾಧಾನ, ವಿವರಣೆಗಳು ಮತ್ತು ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅವರು ವ್ಯಕ್ತಪಡಿಸಿದ ವಿಚಾರಗಳು, ಮಂಡಿಸಿದ ಮಸೂದೆಗಳು ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ದಿ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸ್ತಾಪ ಬಂದಾಗಲೆಲ್ಲಾ ಅವರು ಅಂದು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಿಗಣಿಸಲಾಗಿದೆ. ಆದ್ದರಿಂದ. ಡಾ॥ ಅಂಬೇಡ್ಕರ್ ಅವರ ವಿಚಾರಗಳು ಅಂದೂ ಅಲ್ಲದೆ ಇಂದೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ.

ಆದರೆ ಕಾಲಕ್ರಮೇಣ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ ಮತ್ತು ಅವು ಮುಂದೆ ದೊರೆಯುವ ಸಾಧ್ಯತೆಯೂ ಇಲ್ಲದಾಗಿದೆ. ಅವುಗಳೆಲ್ಲವೂ ಸಂಪೂರ್ಣವಾಗಿ ಅಳಿದುಹೋಗುವ ಅಪಾಯ ಇದೆ. ಇದನ್ನರಿತ ಮಹಾರಾಷ್ಟ್ರ ಸರ್ಕಾರದವರು ಡಾ॥ ಅಂಬೇಡ್ಕರ್ ಅವರ ಇಂಗ್ಲಿಷಿನಲ್ಲಿರುವ ಎಲ್ಲಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಅವಶ್ಯ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು, ಈ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ಆ ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ॥ ಅಂಬೇಡ್ಕರ್ ಅವರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿದ "ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ವಿಷಯಗಳ ಪ್ರಕಟನಾ ಸಮಿತಿ, ಮಹಾರಾಷ್ಟ್ರ ಸರ್ಕಾರ" ಎಂಬ ಸಮಿತಿಯನ್ನು ರಚಿಸಿ, ಅದು ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೬ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಶರದ್ ಪವಾರ್ ಅವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಇದರ ವಿಶೇಷ ಅಧಿಕಾರಿ ಶ್ರೀ ವಸಂತ ಮೂನ್ ಅವರ ಪರಿಶ್ರಮ ಮುಖ್ಯ ಕಾರಣ. ಈ ಸಮಿತಿಯು ಡಾ. ಅಂಬೇಡ್ಕರ್ ಅವರ ಎಲ್ಲಾ ಬರಹಗಳನ್ನೂ ಸಂಗ್ರಹಿಸಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ– "ಬರೆಹಗಳು ಮತ್ತು ಭಾಷಣಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡು, ಇದುವರೆಗೆ ಒಟ್ಟು ಹದಿನಾಲ್ಕು ಸಂಪುಟಗಳನ್ನು ಪ್ರಕಟಿಸಿದೆ. ಇದುವರೆಗೆ ಪ್ರಕಟವಾದ ಹದಿನಾಲ್ಕು ಸಂಪುಟಗಳಲ್ಲಿ ಬಹಳಷ್ಟು ಅವರ ಪ್ರಕಟಿತ ಮತ್ತು ಅಪ್ರಕಟಿತ ಬರಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ ಜಾತಿ ನಿರ್ಮೂಲನೆ, ಭಾಷಾವಾರು ಪ್ರಾಂತ್ಯಗಳು; ರಾನಡೆ, ಗಾಂಧಿ, ಜಿನ್ನಾ; ರಾಜ್ಯಗಳು ಮತ್ತು ಅಲ್ಪಸಂಖ್ಯಾತರು, ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ ಮುಂತಾದ ಪರಿಚಿತ ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ(೧೯೮೨)ದಲ್ಲಿ ಮುಂಬಯಿ ಶಾಸಕಾಂಗದಲ್ಲಿ ಮತ್ತು ದುಂಡುಮೇಜಿನ ಪರಿಷತ್ತುಗಳಲ್ಲಿ ಅವರು ಮಾಡಿದ ಭಾಷಣಗಳೂ ಅಲ್ಲದೆ, ಸೈಮನ್

ಆಯೋಗಕ್ಕೆ ಅವರು ನೀಡಿದ ಹೇಳಿಕೆಗಳೂ ಮನವಿಗಳೂ ಸೇರಿವೆ. ಮೂರನೆಯ ಸಂಪುಟ(೧೯೮೭)ದಲ್ಲಿ ಅವರ ಅಪ್ರಕಟಿತ ಕೃತಿಗಳಾದ ಹಿಂದೂಧರ್ಮ ದರ್ಶನ; ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ; ಭಾರತ ಮತ್ತು ಸಮತಾವಾದದ ಪೂರ್ವಭಾವಿ ಆವಶ್ಯಕತೆಗಳು: ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್ ಮುಂತಾದವು ಸೇರಿವೆ. ೧೯೮೭ರಲ್ಲಿಯೇ ಪ್ರಕಟವಾದ ನಾಲ್ಕನೆಯ ಸಂಪುಟ ಮಹಾರಾಷ್ಟ್ರದಲ್ಲಿ ವಿವಾದದ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಅವರ ಇನ್ನೊಂದು ಅಪ್ರಕಟಿತ ಬರಹ ಮಾಲೆ 'ಹಿಂದೂ ಧರ್ಮದ ಒಗಟುಗಳು' ಪ್ರಕಟವಾಗಿದ್ದೇ ಆಂದೋಲನಕ್ಕೆ ಪ್ರಚೋದನೆಯಾಯಿತು. ಇದರಿಂದಾಗಿ ಮಹಾರಾಷ್ಟ್ರ ಸರ್ಕಾರ ಈ ಸಂಪುಟದ ಮಾರಾಟವನ್ನು ಕೆಲಕಾಲ ತಡೆಹಿಡಿಯಬೇಕಾಯಿತು. ನಂತರ ಆದ ಒಪ್ಪಂದದಿಂದ ಪುನಃ ಇದರ ಮಾರಾಟ ಮುಂದುವರಿಯಿತು. ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟವು ಸಂಪೂರ್ಣವಾಗಿ ಅಪ್ರಕಟಿತ ಬರಹಗಳಿಂದ ಕೂಡಿದ್ದು, ಇದರಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಶ್ಲೇಷಣೆಯ ಲೇಖನಗಳಿವೆ. ಅದೇ ವರ್ಷ ಪ್ರಕಟವಾದ ಆರನೆಯ ಸಂಪುಟದಲ್ಲಿ ಸೇರಿರುವ ಎಲ್ಲಾ ಲೇಖನಗಳೂ ಅರ್ಥಶಾಸ್ತ್ರ ಸಂಬಂಧವಾಗಿದ್ದು, ಅವರ ಮಹಾಪ್ರಬಂಧ "ರೂಪಾಯಿಯ ಸಮಸ್ಯೆ" ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾಗಿರುವ ಏಳನೆಯ ಸಂಪುಟದಲ್ಲಿ "ಶೂದ್ರರು ಯಾರು...? ಅವರು ಹಿಂದೂ ಆರ್ಯ ಸಮಾಜದ ನಾಲ್ಕನೆಯ ವರ್ಣ ಹೇಗಾದರೂ ಮತ್ತು ಅಸ್ಪೃಶ್ಯರು ಯಾರು?– ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು" ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್ ಮುದ್ರಿಸಲಾಗಿದೆ. ೧೯೯೦ರಲ್ಲಿ ಪರಕಟಿಸಲಾದ ಎಂಟನೆಯ ಸಂಪುಟದಲ್ಲಿ ಡಾ॥ ಅಂಬೇಡ್ಕರ್ ಅವರ ಅತ್ಯಂತ ವಿವಾದಾತ್ಮಕ, ಆದರೆ ಅಷ್ಟೇ ವಿದ್ವತ್‌ಪೂರ್ಣ ಹಾಗೂ ವಾಸ್ತವಿಕತೆಯಿಂದ ಪ್ರೇರಿತವಾದ ಅವರ ಗ್ರಂಥ 'ಪಾಕೀಸ್ತಾನ ಮತ್ತು ಭಾರತದ ವಿಭಜನೆ'ಯ ಪುನರ್ಮುದ್ರಣವಾಗಿದೆ. ಇದು ಅವರ ಮೇರುಕೃತಿ. ಮುಂಬರುವ ಸಂಪುಟಗಳಲ್ಲಿ ಗವರ್ನರ್ ಜನರಲ್ ಪರಿಷತ್ತು, ಸಂವಿಧಾನ ಸಭೆ ಮತ್ತು ಸಂಸತ್ತಿನಲ್ಲಿ ಡಾ. ಅಂಬೇಡ್ಕರ್ ಅವರು ಭಾಗವಹಿಸಿರುವುದು (೧೯೪೨–೧೯೫೬) ಕಾಂಗ್ರೆಸ್ ಮತ್ತು ಮಿಸ್ಟರ್ ಗಾಂಧಿ ಅಸ್ಪೃಶ್ಯರಿಗೆ ಮಾಡಿದುದು ಏನು? ಹಾಗೂ ಮಿಸ್ಟರ್ ಗಾಂಧಿ ಹಾಗೂ ಅಸ್ಪೃಶ್ಯರ ವಿಮೋಚನೆ, (೯ನೆಯ ಸಂಪುಟ ೧೯೯೧) ಮುಂಬಯಿಯ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿ ನೀಡಿರುವ ಇನ್ನೂ ಕೆಲವು ಅಪ್ರಕಟಿತ ಬರಹಗಳು; ಮತ್ತು ಇತರ ಸಮ್ಮಿಶ್ರ ಬರಹಗಳು ಪ್ರಕಟವಾಗಿವೆ. ಹತ್ತನೆಯ ಸಂಪುಟದಲ್ಲಿ (೧೯೯೧) ಅವರು ಗವರ್ನರ್ ಜನರಲ್‌ರವರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾಗಿನ ದಾಖಲೆಗಳಿವೆ. ೧೯೯೨ರಲ್ಲಿ ಪ್ರಕಟವಾಗಿರುವ ೧೧ನೆಯ ಸಂಪುಟದಲ್ಲಿ ಅವರ ಅಪ್ರಕಟಿತ ಕೃತಿಗಳಾದ 'ಪ್ರಾಚೀನ ಭಾರತದ ವಾಣಿಜ್ಯ', 'ಅಸ್ಪೃಶ್ಯರು ಮತ್ತು ಬ್ರಿಟಿಷ್ ಸಾಮ್ರಾಜ್ಯ', 'ಇಂಗ್ಲಿಷ್ ಸಂವಿಧಾನ ಕುರಿತು ಉಪನ್ಯಾಸಗಳು', 'ಕಾಯ್ದೆ ಮತ್ತು ಕಾನೂನುಗಳ ಮೇಲೆ ಟಿಪ್ಪಣಿಗಳು', 'ವೀಸಾಕ್ಕಾಗಿ ಕಾದಿದ್ದು' ಮತ್ತು ಇತರ ಸಮ್ಮಿಶ್ರ ಲೇಖಗಳು ಸೇರಿವೆ. ೧೯೯೪ರಲ್ಲಿ ಪ್ರಕಟವಾಗಿರುವ ಹದಿಮೂರನೆಯ ಸಂಪುಟವು ಬಹಳ ಮಹತ್ವದ್ದಾಗಿದ್ದು, ಅತ್ಯಂತ ಉಪಯುಕ್ತವೂ ಆಗಿದೆ. ಇದರಲ್ಲಿ ಡಾ. ಅಂಬೇಡ್ಕರ್ ಅವರು ಭಾರತ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಭಾರತದ ಸಂವಿಧಾನ ಸಭೆಯಲ್ಲಿ ನಿರ್ವಹಿಸಿದ ಪಾತ್ರದ ಸಂಪೂರ್ಣ ಪರಿಚಯವನ್ನು ದಾಖಲೆಗಳೊಂದಿಗೆ ನೀಡಲಾಗಿದೆ. ಇದರಲ್ಲಿ ಸಂವಿಧಾನದ ಸಿದ್ಧಾಂತಗಳು ಮತ್ತು ನಿಯಮಗಳನ್ನು ಹಾಗೂ ಅವುಗಳಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಮನಗಂಡು ಅವುಗಳಿಗೆ ಡಾ. ಅಂಬೇಡ್ಕರ್ ಅವರು ನೀಡಿದ ವಿವರಣೆಗಳೂ ಸೇರಿವೆ. ೧೯೯೫ರಲ್ಲಿ ಪ್ರಕಟವಾಗಿರುವ ೧೪ನೆಯ ಸಂಪುಟವು ಎರಡು ಭಾಗಗಳಾಗಿದ್ದು, ಇವೆರಡೂ ಭಾಗಗಳಲ್ಲಿ ಡಾ. ಅಂಬೇಡ್ಕರ್ ಅವರು ಸ್ವತಂತ್ರ ಭಾರತದ ಸಂಸತ್ತಿನಲ್ಲಿ ಮಂಡಿಸಿದ ಮಹತ್ತರವಾದ ಮಸೂದೆ ಎನಿಸಿದ 'ಹಿಂದೂ ಕೋಡ್ ಬಿಲ್' ಬಗ್ಗೆ ಪೂರ್ಣ ಪರಿಚಯವಿದೆ. ಈ ಮಸೂದೆಯ ರೂಪುರೇಷೆಗಳು ಮತ್ತು ಅದರ ಬಗ್ಗೆ ಡಾ॥ ಅಂಬೇಡ್ಕರ್ ಅವರು ನೀಡಿದ

ವಿವರಣೆ ಮತ್ತು ನಂತರ ಜರುಗಿದ ಚರ್ಚೆಗಳ ಸಂಪೂರ್ಣ ವಿವರಣೆ ಈ ಸಂಪುಟದಲ್ಲಿ ಎರಡೂ ಭಾಗಗಳಲ್ಲಿ ಲಭ್ಯವಿದೆ.

ಡಾ॥ ಅಂಬೇಡ್ಕರ್ ಅವರ ಅಮೂಲ್ಯ ಸಮಗ್ರ ವೈಚಾರಿಕ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ, ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ಮಹಾರಾಷ್ಟ್ರ ಸರ್ಕಾರವು ವೈಚಾರಿಕ ಸಾಹಿತ್ಯಕ್ಕೆ ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ನೀಡುವ ಮೂಲಕ ಮಹತ್ತರವಾದ ಸೇವೆ ಸಲ್ಲಿಸಿದೆ.

ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಸಮಗ್ರ ಸಾಹಿತ್ಯ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವುದರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಹೊಂದಬಹುದಾಗಿದೆ. ಆದ್ದರಿಂದ ಈ ಭಾಷೆಯಲ್ಲಿ ಪರಿಶ್ರಮವಿಲ್ಲದ ಇತರ ಭಾಷಿಕರಿಗೆ ಡಾ. ಅಂಬೇಡ್ಕರ್ ಅವರ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ. ಇದು ಒಂದು ದೊಡ್ಡ ಕೊರತೆ. ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಅವರ ಎಲ್ಲಾ ಬರಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ಎಲ್ಲಾ ಭಾಷೆಗಳಲ್ಲಿ ತುರ್ತಾಗಿ ಆಗಬೇಕಾಗಿದೆ.

ಈ ಆವಶ್ಯಕತೆಯನ್ನು ಮೊದಲು ಮನಗಂಡ ಕರ್ನಾಟಕ ರಾಜ್ಯ ಸರ್ಕಾರ ೧೯೮೮ರ ಜೂನ್ ತಿಂಗಳಲ್ಲಿ ಡಾ॥ ಅಂಬೇಡ್ಕರ್ ಅವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಆದೇಶ ಹೊರಡಿಸಿತು.

| | | |
|---|---|---|
| ೧. | ಡಾ. ಎ. ಎಂ. ರಾಜಶೇಖರಯ್ಯ | – ಸಂಪಾದಕರು |
| ೨. | ಡಾ. ಸಿದ್ದಲಿಂಗಯ್ಯ | – ಸದಸ್ಯರು |
| ೩. | ಶ್ರೀ ದೇವನೂರ ಮಹಾದೇವ | – ಸದಸ್ಯರು |
| ೪. | ನಿರ್ದೇಶಕರು,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | – ಸದಸ್ಯ–ಕಾರ್ಯದರ್ಶಿ |

ಸಮಿತಿಯ ಪ್ರಥಮ ಸಭೆ ೩೦–೮–೧೯೮೮ರಂದು ಬೆಂಗಳೂರಿನಲ್ಲಿ ಸೇರಿ ಡಾ॥ ಅಂಬೇಡ್ಕರ್ ಅವರ ಪ್ರಕಟಿತ ಸುಪರಿಚಿತವಾದ ಹದಿನಾಲ್ಕು ಬಿಡಿ ಕೃತಿಗಳನ್ನು ಮಾತ್ರ ಭಾಷಾಂತರ ಮಾಡದೆ ಮತ್ತು ಅವುಗಳಲ್ಲಿ ಕೆಲವು ಅಲಭ್ಯವಿರುವ ಕಾರಣದಿಂದಲೂ, ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟಿತವಾಗುತ್ತಿರುವ ಎಲ್ಲಾ ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಮಹಾರಾಷ್ಟ್ರ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಯಿತು. ಮಹಾರಾಷ್ಟ್ರ ಸರ್ಕಾರದವರು ತಮ್ಮ ದಿನಾಂಕ ೨–೫–೧೯೮೯ರ ಪತ್ರದಲ್ಲಿ ತಮ್ಮ ಅನುಮತಿ ನೀಡಿ, ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಅನಂತರ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯು ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ ಅವರ ಸಮ್ಮತಿ, ಸಹಕಾರ ಕೋರಿತು. ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲ ಕೃತಿಯ ಸುಮಾರು ಒಂದು ನೂರು ಪುಟಗಳನ್ನು ವಹಿಸಲಾಯಿತು. ಡಾ. ಅಂಬೇಡ್ಕರ್ ಅವರ ಬರೆಹಗಳ ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾದುವುಗಳಾಗಿರುವುದರಿಂದ ಅವುಗಳ ಭಾಷಾಂತರ ಸುಲಭ ಸಾಧ್ಯವಲ್ಲ. ಭಾಷಾಂತರ ಮಾಡುವ ಮೊದಲು ಅವುಗಳ ಆಳವಾದ ಅಧ್ಯಯನ ಮತ್ತು ಮನನ ಅವಶ್ಯ. ಆದ್ದರಿಂದ ಭಾಷಾಂತರಕಾರರಿಗೆ

ಹೆಚ್ಚು ಅವಧಿ ಬೇಕಾಯಿತು. ಕೆಲವರು ಭಾಷಾಂತರ ಮಾಡಿ ಕಳುಹಿಸಿದ ನಂತರ ಭಾಷೆ, ಶೈಲಿ, ಪರಿಭಾಷಾ ಪದಗಳು ಮುಂತಾದವುಗಳ ಪರಿಶೀಲನೆ ಅಗತ್ಯವೆನಿಸಿತು. ಈ ಕಾರ್ಯದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ಸಂಪಾದಕ ಸಮಿತಿ ತೀರ್ಮಾನಿಸಿ ಕೆಳಕಂಡ ಮಹನೀಯರನ್ನು ಆಹ್ವಾನಿಸಲಾಯಿತು.

(೧) ಡಾ. ಆರ್. ಸಿ. ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; (೨) ಡಾ. ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು (೩) ದಿ. ಶ್ರೀ ವೈ. ಎಂ. ಸಿ. ಶರ್ಮ, ಅಂದಿನ ಅಧ್ಯಕ್ಷರು ಕರ್ನಾಟಕ ರಾಜ್ಯ ಭಾಷಾ ಆಯೋಗ, ಬೆಂಗಳೂರು, ನಂತರ ದಿ. ಶ್ರೀ ಕಂಠೀರಾವ್ ಇವರು ಅನುವಾದಿತ ಭಾಗಗಳ ಪರಿಶೀಲನೆ ಮಾಡಲು ಒಪ್ಪಿಕೊಂಡರು. ಅನುವಾದ ಮಾಡಿದ ಭಾಗಗಳಲ್ಲಿ ಪದಬಳಕೆ, ಭಾಷೆ, ಶೈಲಿ ಮುಂತಾದವುಗಳಲ್ಲಿ ಸಾಧ್ಯವಾದಷ್ಟು ಏಕರೂಪತೆ ತರುವ ಕಾರ್ಯ ಭಾಷಾಂತರ ಮಾಡುವುದಕ್ಕಿಂತಲೂ ಹೆಚ್ಚು ಕಠಿಣ ಮತ್ತು ಪ್ರಯಾಸಕರ. ರಾಜ್ಯದ ವಿವಿಧ ಭಾಗಗಳ ಅನುವಾದಕರು ತಮ್ಮ ತಮ್ಮ ಪ್ರಾದೇಶಿಕ ಭಾಷೆ, ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕ ವೈವಿಧ್ಯವನ್ನು ಉಳಿಸಿಕೊಂಡು ಬರಲಾಗಿದೆ. ಈ ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಿ ಹೆಚ್ಚು ಶ್ರಮ ವಹಿಸಿ ಭಾಷಾಂತರದ ಮಟ್ಟವನ್ನು ಸುಧಾರಿಸುವ ಪ್ರಯತ್ನ ಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿರಲಿಲ್ಲ. ಇವರು ಮೊದಲು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ, ನಂತರ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಮೂರು ದಿನಗಳ ಭಾಷಾಂತರ ಕಮ್ಮಟಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಈ ತಜ್ಞರಿಗೆ ಸಂಪಾದಕ ಸಮಿತಿ ಅತ್ಯಂತ ಋಣಿಯಾಗಿದೆ.

ಈಗ ಪ್ರಕಟವಾಗುತ್ತಿರುವ ಈ ಸಂಪುಟವು ಡಾ॥ ಅಂಬೇಡ್ಕರರ ರಾಜಕೀಯ ಜೀವನ ಮತ್ತು ಮುಖಂಡತ್ವದಲ್ಲಿ ಅತ್ಯಂತ ಮಹತ್ವದ ಅವಧಿಗೆ ಸಂಬಂಧಪಟ್ಟ ದಾಖಲೆಗಳನ್ನೊಳಗೊಂಡಿದೆ. ಏಕೆಂದರೆ, ಅವರು ಪ್ರಥಮ ಬಾರಿಗೆ ಭಾರತದ ಗವರ್ನರ್ ಜನರಲ್‌ರವರ ಕಾರ್ಯಕಾರಿ ಪರಿಷತ್ತಿನಲ್ಲಿ ಕಾರ್ಮಿಕ ಸದಸ್ಯ(ಸಚಿವ)ರಾಗಿ ೧೯೪೨ರಲ್ಲಿ ನೇಮಕಗೊಂಡರು. ೧೯೪೩ರಿಂದ ೧೯೪೬ರ ಅವಧಿಯಲ್ಲಿ ಅವರು ಈ ಮಹತ್ವದ ಸ್ಥಾನವನ್ನು ಅಲಂಕರಿಸಿದ್ದು, ಈ ಅವಧಿಯಲ್ಲಿ ಅದರಲ್ಲಿಯೂ ಎರಡನೆಯ ಮಹಾಯುದ್ಧದ ಸಂಕಟ ಕಾಲದಲ್ಲಿ ಕಾರ್ಮಿಕ ಖಾತೆಯ ಸಚಿವರಾಗಿ ಕಾರ್ಮಿಕ ಸಮಸ್ಯೆಗಳತ್ತ ರಚನಾತ್ಮಕ ರೀತಿಯಲ್ಲಿ ಗಮನ ಹರಿಸಿದರು. ಸಾಮಾನ್ಯವಾಗಿ ಯುದ್ಧ ಕಾಲದಲ್ಲಿ ಕಾರ್ಮಿಕರು ವಿಶೇಷವಾಗಿ ಶೋಷಣೆಗೆ ಒಳಗಾಗುತ್ತಾರೆ ಮತ್ತು ಅವರ ತೀವ್ರ ಸಮಸ್ಯೆಗಳತ್ತ ಯಾರೂ ಗಮನ ಹರಿಸುವುದಿಲ್ಲ. ಆದರೆ ಡಾ॥ ಅಂಬೇಡ್ಕರರು ತಮ್ಮ ಅಧಿಕಾರಾವಧಿಯಲ್ಲಿ ಭಾರತೀಯ ಕಾರ್ಮಿಕರ ಅನೇಕ ಸಮಸ್ಯೆಗಳನ್ನು ಬಗೆಹರಿಸಿದರಲ್ಲದೆ, ಅವರ ಸ್ಥಿತಿಗತಿಗಳಲ್ಲಿ ಗಮನಾರ್ಹವಾದ ಸುಧಾರಣೆಗಳನ್ನು ತಂದರು. ಇದರ ಕೀರ್ತಿ ಡಾ॥ ಅಂಬೇಡ್ಕರರಿಗೆ ಸಲ್ಲುವುದು.

ಅವರ ಬರೆಹಗಳು ಮತ್ತು ಭಾಷಣಗಳ ಮಾಲಿಕೆಯ ಹತ್ತನೆಯ ಸಂಪುಟದಲ್ಲಿ ಡಾ॥ ಅಂಬೇಡ್ಕರರು ಕೇಂದ್ರ ಶಾಸನಸಭೆಯಲ್ಲಿ ೧೯೪೨ರಿಂದ ೧೯೪೬ರ ಅವಧಿಯಲ್ಲಿ ವಿವಿಧ ವಿಷಯಗಳ ಮೇಲೆ ಮಾಡಿದ ಭಾಷಣಗಳು ಅದರಲ್ಲಿಯೂ ಪ್ರಮುಖವಾಗಿ ಭಾರತದ ಕಾರ್ಮಿಕರ ಸಮಸ್ಯೆಗಳ ಮೇಲೆ ಮಾಡಿದ ಭಾಷಣಗಳು ಕಾರ್ಮಿಕರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿವೆ. ಈ ಭಾಷಣಗಳು ವಿದ್ವತ್‌ಪೂರ್ಣವೂ ಬೋಧಪ್ರದವೂ ಮತ್ತು ಸಂವೇದನಾಶೀಲವೂ ಆಗಿರುವುದಲ್ಲದೇ ಈ ದಿನಗಳಲ್ಲಿ ಕಾಣಸಿಗದಂತಹ ಸಾಹಿತ್ಯದ ವೈಖರಿಯನ್ನು ಪ್ರತಿಬಿಂಬಿಸುತ್ತದೆ. ಅವು ಅತ್ಯಂತ ಸ್ವೋಪಜ್ಞವಾಗಿವೆ. ಎಲ್ಲಕ್ಕಿಂತಲೂ ಮಿಗಿಲಾಗಿ ಅವುಗಳಲ್ಲಿ ಡಾ॥ ಅಂಬೇಡ್ಕರರು ಕಾರ್ಮಿಕ ಸಮಸ್ಯೆಗಳ ಬಗ್ಗೆ ಅಗಾಧ ಅರಿವನ್ನು ಹೊಂದಿದ್ದರೆಂಬ ಅಂಶ ಗೊತ್ತಾಗುತ್ತದೆ. ಅವರೇ ಮುಂಬಯಿಯ ಪರೇಲ್‌ನಲ್ಲಿ ಕೂಲಿಕಾರರ ಚಾಲಿನಲ್ಲಿ ವಾಸವಾಗಿದ್ದ ದಿನಗಳಲ್ಲಿ ಪ್ರತಿನಿತ್ಯವೂ ನೋಡುತ್ತಿದ್ದ ಕೂಲಿಕಾರರ ಕಠಿಣ ಜೀವನದ ಅರಿವು

ಅವರಲ್ಲುಂಟಾಗಿತ್ತು. ಈ ಕಟು ಅನುಭವದ ಹಿನ್ನೆಲೆಯಲ್ಲಿ ಅವರು ಅಧಿಕಾರದ ಅವಕಾಶ ಸಿಕ್ಕಾಗ ಸ್ವತಃ ತಾವೇ ಕಾರ್ಮಿಕ ಇಲಾಖೆಯನ್ನು ಆಯ್ದುಕೊಂಡು ಕಾರ್ಮಿಕರ ಕಲ್ಯಾಣ ಸಾಧಿಸುವ ಪಣ ತೊಟ್ಟರು.

ಅವರು ಅಧಿಕಾರದಲ್ಲಿದ್ದ ದ್ವಿತೀಯ ಮಹಾಯುದ್ಧದ ಕಾಲ ದೇಶಕ್ಕೆ ಕಠಿಣ ಕಾಲವಾಗಿತ್ತದರೂ ಯುದ್ಧದ ಆವಶ್ಯಕತೆಗಳ ಒತ್ತಡಗಳಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಗಮನೀಯ ಪರಿವರ್ತನೆಯುಂಟಾಯಿತು. ಔದ್ಯೋಗಿಕ ವಿಸ್ತರಣೆಯ ಅವಕಾಶಗಳೊದಗಿ ಬಂದವು. ಇದರಿಂದ ಉದ್ಯಮಿಗಳು ಮತ್ತು ಉದ್ಯೋಗಪತಿಗಳಿಗೆ ಅಭಿವೃದ್ಧಿಯ ವಿಪುಲ ಅವಕಾಶ ದೊರೆತವಾದರೂ ಕಾರ್ಮಿಕರಿಗೆ ಅದರ ಲಾಭ ದೊರೆಯಲಿಲ್ಲ. ಇದನ್ನರಿತಿದ್ದ ಡಾ॥ ಅಂಬೇಡ್ಕರರು ಕಾರ್ಮಿಕ ಕಲ್ಯಾಣ ಕುರಿತ ಅನೇಕ ಮಸೂದೆಗಳನ್ನು ಮಂಡಿಸಿ ಅವುಗಳನ್ನು ಸಮರ್ಥ ರೀತಿಯಲ್ಲಿ ನಡೆಸಿ ಕಾನೂನುಗಳನ್ನು ಮಾಡಿದರು.

ಕಾರ್ಮಿಕರ ಬಗ್ಗೆ ಅವರು ತಳೆದಿದ್ದ ನಿಲುವು ಮತ್ತು ಸಿದ್ಧಾಂತಗಳನ್ನು ಅವರು ೧೫ನೆಯ ಸೆಪ್ಟೆಂಬರ್ ೧೯೪೩ರಲ್ಲಿ ಕಾರ್ಮಿಕ ಸಮ್ಮೇಳನದ ಬಹಿರಂಗ ಅಧಿವೇಶನದ ಮೊದಲನೆಯ ಗೋಷ್ಠಿಯಲ್ಲಿ ಮಾಡಿದ ಭಾಷಣದಿಂದ ತಿಳಿದುಕೊಳ್ಳಬಹುದು. ಅವರ ಮಾತಿನಲ್ಲಿಯೇ ಹೇಳುವುದಾದರೆ ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ, ಉದ್ಯೋಗಿಗಳು ಮತ್ತು (ಕೆಲಸ ಕೊಡುವ) ಧಣಿಗಳು ಪರಸ್ಪರ ಜವಾಬ್ದಾರಿ, ಗೌರವ ಮತ್ತು ಪ್ರತಿಯೊಬ್ಬರೂ ಕೊಡುಕೊಳ್ಳುವ ಭಾವನೆಯಿಂದ ಕೆಲಸ ಮಾಡಲು ಸಿದ್ಧವಾಗಬೇಕು. ಈ ರೀತಿಯ ಪರಸ್ಪರ ಗೌರವ ಮತ್ತು ಜವಾಬ್ದಾರಿ ಬೆಳೆಯದೇ ಹೋದರೆ ಔದ್ಯೋಗಿಕ ಕಾರ್ಮಿಕರ ಕಲ್ಯಾಣದ ಸಮಸ್ಯೆ ನಿವಾರಣೆಯಾಗುವುದು ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ ಸ್ವತಂತ್ರ ಭಾರತದ ಪುರೋಗಾಮಿ ಕಾರ್ಮಿಕ ಧೋರಣೆಗಳಿಗೆ ಬಹುಮಟ್ಟಿಗೆ ಡಾ॥ ಅಂಬೇಡ್ಕರರು ನಲವತ್ತರ ದಶಕದಲ್ಲಿ ಅನುಷ್ಠಾನಕ್ಕೆ ತಂದಂತಹ ಅನೇಕ ಕಾನೂನು ವಿಧಿಗಳೇ ಕಾರಣ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಅವರು ಔದ್ಯಮಿಕ ಬೆಳವಣಿಗೆಗೆ ಬಹುಮುಖ್ಯವಾದ ಕಾರ್ಮಿಕರ ತಾಂತ್ರಿಕ ತರಬೇತಿ ಮತ್ತು ನೈಪುಣ್ಯಗಳ ವೃದ್ಧಿಯತ್ತ ಹೆಚ್ಚು ಒತ್ತು ನೀಡಿದರು. ಇವುಗಳ ಬೆಳವಣಿಗೆ ಸುಲಭಸಾಧ್ಯವಲ್ಲ ಮತ್ತು ಅದರಲ್ಲಿ ವಿಳಂಬವೂ ಸಹಜ. ಶಾಂತಿಯುತ ಬದಲಾವಣೆಯಲ್ಲಿ ಯಾವಾಗಲೂ ವಿಳಂಬವಾಗುತ್ತದೆ. ಸಾಮಾಜಿಕ ಪ್ರಜ್ಞೆ ಹೊಂದಿರದ ಭಾರತದಂತಹ ಪುರಾತನ ದೇಶದಲ್ಲಿ ಪ್ರಗತಿ ಮಂದಗತಿಯಲ್ಲಿಯೇ ಸಾಗುವುದು. ಆದ್ದರಿಂದ ಡಾ॥ ಅಂಬೇಡ್ಕರರು ನಮ್ಮ ಜನತೆಯ ದೃಷ್ಟಿಕೋನದಲ್ಲಿ ಬದಲಾವಣೆಯಾಗಬೇಕೆಂದು ಪ್ರತಿಪಾದಿಸಿದರು. ಇದೂ ಅಲ್ಲದೇ ಸ್ವಾತಂತ್ರ್ಯ ಅರ್ಥಪೂರ್ಣವಾಗಬೇಕಾದರೆ ಒಳ್ಳೆಯ ಸಕಾರ ಒಳ್ಳೆಯ ಸಮಾಜ ಅವಶ್ಯ ಎಂದೂ ಅವರು ಹೇಳಿದರು.

ಭಾರತದಲ್ಲಿ ಕಾರ್ಮಿಕರು ಬಹುವಾಗಿ ಶೋಷಿತರಾಗಿದ್ದಾರೆ. ಕಾರ್ಮಿಕ ವರ್ಗವನ್ನು ಸಾಮಾಜಿಕ ಭದ್ರತೆಯ ರಕ್ಷಣೆಯಡಿಯಲ್ಲಿ ತರುವುದೇ ಡಾ॥ ಅಂಬೇಡ್ಕರರ ಮೂಲ ಗುರಿಯಾಗಿತ್ತು. ಕಾರ್ಮಿಕರ ಪರಿಹಾರ ಕಾಯ್ದೆ, ಹೆರಿಗೆ ಸೌಕರ್ಯ ಕಾಯ್ದೆ ಮುಂತಾದವು ಅವರು ಕೈಗೊಂಡ ಶಾಶ್ವತ ಮಹತ್ವದ ಕ್ರಮಗಳಾಗಿದ್ದವು.

ಡಾ॥ ಅಂಬೇಡ್ಕರ್‌ರವರು ಕಾರ್ಮಿಕ ಸಚಿವರಾಗಿದ್ದಾಗ ಕಲ್ಲಿದ್ದಲು ಗಣಿಗಳಲ್ಲಿ ಪರಿಸ್ಥಿತಿಗಳನ್ನು ಖುದ್ದಾಗಿ ಪರಿಶೀಲಿಸಲು ಮುಂದಾದರು. ಅವರು ಕಲ್ಲಿದ್ದಲು ಮತ್ತು ಅಭ್ರಕ ಗಣಿಗಳಲ್ಲಿ ಸುಮಾರು ೪೦೦ ಅಡಿಗಳಷ್ಟು ಆಳದವರೆಗೆ ಸ್ವತಃ ಇಳಿದು ಪರಿಸ್ಥಿತಿಯನ್ನು ಪರಿಶೀಲಿಸಿದರು. ಕಾರ್ಮಿಕರ ಬಗ್ಗೆ ಅವರು ಹೊಂದಿದ್ದ ಈ ಕಾಳಜಿ, ಅದರಲ್ಲಿಯೂ ಕಲ್ಲಿದ್ದಲು ಗಣಿಗಳ ಕೆಲಸಗಾರರ ಬಗ್ಗೆ ಅವರಿಗಿದ್ದ ಕಾಳಜಿಯ ಪ್ರತಿಫಲವೇ ಕಲ್ಲಿದ್ದಲು ಗಣಿ ಕೆಲಸಗಾರರ ಕಲ್ಯಾಣ ಅಧ್ಯಾದೇಶ–೧೯೪೪. ಆದ್ದರಿಂದ ಅವರು ಕಾರ್ಮಿಕ ಕಲ್ಯಾಣ ಸಮಸ್ಯೆಯ ವಿವಿಧ ಮುಖಗಳ ಬಗ್ಗೆ ಮಾಡಿದ ಅನೇಕ ಭಾಷಣಗಳು ಬಹಳ ಬೋಧಪ್ರದವಾಗಿವೆ.

ಕಾರ್ಮಿಕರ ಸಮಸ್ಯೆಗಳೂ ಅಲ್ಲದೆ, ಆರ್ಥಿಕ ಪ್ರಗತಿಯ ಇನ್ನೊಂದು ಮುಖವೆನಿಸಿದ ಇತರ ಅಭಿವೃದ್ಧಿಪರ

ಯೋಜನೆಗಳಿಗೂ ಅವರ ಕೊಡುಗೆ ಅಪಾರ. ಅವರು ಕಾರ್ಮಿಕ ಸದಸ್ಯರಾಗಿದ್ದಾಗಲೇ ಕೈಗೊಂಡ ದಾಮೋದರ ಕಣಿವೆ ವಿವಿಧೋದ್ದೇಶ ಅಭಿವೃದ್ಧಿಯ ಬೆಳವಣಿಗೆ, ಒರಿಸ್ಸಾದ ನದಿಗಳ ಬಗೆಗೆ ವಿವಿಧೋದ್ದೇಶ ಯೋಜನೆಗಳು, ಅಂತರ್ದೇಶೀಯ ಜಲಸಂಚಾರ ಯೋಜನೆ ಮುಂತಾದವು ಉಲ್ಲೇಖನಾರ್ಹ. ಈ ಸಂಪುಟದಲ್ಲಿ ಈ ವಿಷಯಗಳ ಕುರಿತು ಅವರು ಮಾಡಿದ ಭಾಷಣಗಳೂ, ವಿಧಾನಸಭೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳೂ ಬಹಳ ಮಹತ್ವದವುಗಳಾಗಿವೆ. ಇವುಗಳಿಂದ ದೇಶದ ಆರ್ಥಿಕ ಪ್ರಗತಿಯ ಸಮಸ್ಯೆಗಳ ಬಗ್ಗೆ ಅವರಿಗೆ ಎಷ್ಟು ಅರಿವಿದ್ದಿತೆಂಬುದು ಗೊತ್ತಾಗುತ್ತದೆ. ನದಿಗಳ ಪ್ರವಾಹ ನಿಯಂತ್ರಣ, ಜಲಸಂಚಾರ, ನೀರಾವರಿ ವ್ಯವಸಾಯ ಮತ್ತು ಮಣ್ಣಿನ ರಕ್ಷಣೆ ಹಾಗೂ ವಿದ್ಯುಚ್ಛಕ್ತಿ ಉತ್ಪಾದನೆ ಮುಂತಾದವುಗಳ ಬಗ್ಗೆ ಅವರ ವಿಚಾರಗಳು ಎಷ್ಟು ಆಧುನಿಕ ಮತ್ತು ವೈಜ್ಞಾನಿಕವಾಗಿದ್ದವೆಂಬುದು ಗಮನಾರ್ಹವಾಗಿದೆ.

ಅವರು ಸಚಿವರಾಗಿದ್ದಾಗ ಸರ್ಕಾರದ ಕಾರ್ಯವಿಧಾನವನ್ನು ಸುಧಾರಿಸಲು ಕೂಡ ಗಮನ ನೀಡಿದರು. ಅವರು ಕಾಗದ ನಿಯಂತ್ರಣ ಆಜ್ಞೆಯನ್ನು ಕುರಿತು ವಿಧಾನಸಭೆಯಲ್ಲಿ ಮಾಡಿದ ಭಾಷಣದಲ್ಲಿ ಸರ್ಕಾರದಲ್ಲಿ ಬಳಸಲಾಗುತ್ತಿದ್ದ ಯುದ್ಧಕಾಲದಲ್ಲಿ ೧೪೯ ವ್ಯವಹಾರ ನಮೂನೆ(ಜಿಂಡಿಟ)ಗಳನ್ನು ಅಮಾನತ್ತಿನಲ್ಲಿಟ್ಟು ೧೯೦ ನಮೂನೆಗಳನ್ನು ರದ್ದುಪಡಿಸಿರುವುದಾಗಿ ತಿಳಿಸಿದರು. ಅದೇ ರೀತಿ ಕೆಲವು ವ್ಯವಹಾರವನ್ನು ಕಡಿಮೆ ಮಾಡಬಹುದೆಂಬ ಅಂಶವನ್ನು ಭಾರತ ಸರ್ಕಾರದ ಗಮನಕ್ಕೆ ತಂದರು.

ಒಟ್ಟಿನಲ್ಲಿ ಡಾ॥ ಬಾಬಾಸಾಹೇಬ್ ಅಂಬೇಡ್ಕರ್‌ರವರ ಬರಹಗಳು ಮತ್ತು ಭಾಷಣಗಳ ಮಾಲಿಕೆಯ ಹತ್ತನೆಯ ಸಂಪುಟದಲ್ಲಿ ಪ್ರಕಟಿತವಾಗಿರುವ ಬರೆಹಗಳು ಮತ್ತು ಭಾಷಣಗಳು ಇಂದಿಗೂ ಸಹ ಪ್ರಸ್ತುತವಾಗಿರುವ ಅಮೂಲ್ಯ ವಿಚಾರಗಳನ್ನೊಳಗೊಂಡಿವೆ. ಇವು ಸಾಮಾನ್ಯ ಓದುಗರಿಗೂ, ಆಡಳಿತಗಾರರಿಗೂ, ಸಂಶೋಧಕರಿಗೂ, ಕಾರ್ಮಿಕ ವಕೀಲರಿಗೂ, ಕಾರ್ಮಿಕ ಮುಖಂಡರಿಗೂ, ಅರ್ಥಶಾಸ್ತ್ರಜ್ಞರಿಗೂ ಮತ್ತು ಇತಿಹಾಸದ ವಿದ್ಯಾರ್ಥಿಗಳಿಗೂ ಅತ್ಯುಪಯುಕ್ತವೂ ಬೋಧಪ್ರದವೂ ಮತ್ತು ಜ್ಞಾನಪ್ರದವೂ ಆಗಿವೆ.

ಕೊನೆಯಲ್ಲಿ ಒಂದು ಮಾತು. ಮೊದಲಿನಿಂದಲೂ ನಿಮ್ನವರ್ಗಗಳ ಹಿತಾಸಕ್ತಿಗಳು ಮತ್ತು ಅಭಿವೃದ್ಧಿಯನ್ನು ಚಿಂತಿಸುತ್ತಿದ್ದ ಮತ್ತು ಅಸ್ಪೃಶ್ಯತೆಯನ್ನು ಆಮೂಲಾಗ್ರವಾಗಿ ನಿರ್ಮೂಲ ಮಾಡಲು ಪಣತೊಟ್ಟಿದ್ದ ಡಾ॥ ಅಂಬೇಡ್ಕರರು ೪೦ರ ದಶಕದ ಆರಂಭದಲ್ಲಿ ಎಂದರೆ ೧೯೪೨ರಲ್ಲಿ, ಅದರಲ್ಲಿಯೂ ಬ್ರಿಟಿಷರ ಅಧಿಕಾರಾವಧಿ ಎಂದರೆ ೧೯೪೨ರಲ್ಲಿ, ಅದರಲ್ಲಿಯೂ ಬ್ರಿಟಿಷರ ಅಧಿಕಾರಾವಧಿ ಪರ್ಯವಸಾನವಾಗುತ್ತಿರುವುದು ಸ್ಪಷ್ಟ ಗೋಚರವಾಗುತ್ತಿರುವ ಕಾಲದಲ್ಲಿ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟಿಷರಿಗೆ ದೇಶಬಿಟ್ಟು ತೊಲಗಿ ಎಂದು ಕರೆ ನೀಡಿದ ಸಂದರ್ಭದಲ್ಲಿ ವೈಸರಾಯ್‌ರವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾಗಿ ಏಕೆ ಸೇರಿದರು ಎಂಬ ಜಿಜ್ಞಾಸೆ ಓದುಗರ ಮನಸ್ಸಿನಲ್ಲಿ ಸುಳಿಯುವುದು ಸಹಜ. ಇದಕ್ಕೆ ಉತ್ತರ ಬಹುಶಃ ಡಾ॥ ಅಂಬೇಡ್ಕರರ ವಿಚಾರದಲ್ಲಿಯೇ ಅಡಗಿದೆ ಎಂದೆನಿಸುತ್ತದೆ. ಅವರ ಅಭಿಪ್ರಾಯದಲ್ಲಿ ಸರ್ಕಾರದ ಹೊರಗುಳಿದು ಹೋರಾಡುವುದಕ್ಕಿಂತಲೂ ಒಳಗಿನಿಂದ ಹೋರಾಡುವುದು ಹೆಚ್ಚು ಮತ್ತು ಪ್ರಭಾವಿ ಹೋರಾಟವಾಗಬಲ್ಲದು. ಆದುದರಿಂದಲೇ ಅವರು ಸಮಾಜದ ಅತ್ಯಂತ ಶೋಷಣೆಗೊಳಗಾದ ಕಾರ್ಮಿಕವರ್ಗದ ಹಿತವನ್ನು ಗಮನದಲ್ಲಿಟ್ಟುಕೊಂಡು ಮಂತ್ರಿಮಂಡಲದಲ್ಲಿ ಕಾರ್ಮಿಕ ಇಲಾಖೆಯನ್ನೇ ಸ್ವಸಂತೋಷದಿಂದ ಆಯ್ದುಕೊಂಡರು.

ಈ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ ಡಾ॥ ಅಂಬೇಡ್ಕರರ ಪ್ರಕಾರ ದೇಶದ ಕಾರ್ಮಿಕರಲ್ಲಿ ಸುಮಾರು ಶೇಕಡಾ ೯೦ರಷ್ಟು ಕಾರ್ಮಿಕರು ನಿಮ್ನ ವರ್ಗಕ್ಕೆ ಸೇರಿದವರು. ಈ ಕಾರಣದಿಂದ ಅವರು ಸರ್ಕಾರ ಸೇರುವ ಈ ನಿರ್ಧಾರಕ್ಕೆ ಬಂದಿದ್ದರೆನ್ನಬಹುದು.

ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಅಲ್ಲಿಯವರೆಗೂ ಜಾತಿಪ್ರಜ್ಞೆಗೇ ಪ್ರಾಧಾನ್ಯ ಇತ್ತಿದ್ದ

ಡಾ॥ ಅಂಬೇಡ್ಕರರು ಕಾರ್ಮಿಕ ಸಮಸ್ಯೆಗಳಿಗೆ ಮಹತ್ವ ನೀಡಿದ್ದು ಅವರಲ್ಲುಂಟಾದ ವರ್ಗಪ್ರಜ್ಞೆಯ ಸಂಕೇತವಾಗಿದೆಯೇ? ಅವರಲ್ಲಿಯ ಈ ವರ್ಗಪ್ರಜ್ಞೆಯ ದ್ಯೋತಕವಾಗಿಯೇ ಅವರು 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ'ಯನ್ನು ಸ್ಥಾಪಿಸಿದ್ದರೆನ್ನಬಹುದೇ? ಹೀಗೆ ಅವರು ತಮ್ಮ ಕಾರ್ಯಕ್ಷೇತ್ರದಡಿಯಲ್ಲಿ ತಮ್ಮ ವರ್ಗಪ್ರಜ್ಞೆಯು ಜಾತಿಪ್ರಜ್ಞೆಗೆ ವಿಶಾಲ ತಳಹದಿಯೊದಗಿಸಿತೆಂದು ಹೇಳಬಹುದೇ? ಈ ಕುರಿತ ಹೆಚ್ಚಿನ ಚಿಂತನೆ ಅವಶ್ಯ.

ಈ ಸಂಪುಟದ ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಎರಡು ಭಾಗಗಳಲ್ಲಿ ಪ್ರಕಟಿಸಲಾಗಿದೆ. ಒಂದನೆಯ ಭಾಗದಲ್ಲಿ ಡಾ॥ ಅಂಬೇಡ್ಕರರು ಕೇಂದ್ರ ವಿಧಾನಸಭೆಯಲ್ಲಿ ಕಾರ್ಮಿಕ ಕಲ್ಯಾಣ ಮತ್ತು ತತ್ಸಂಬಂಧ ಮಸೂದೆಗಳನ್ನು ಮಂಡಿಸಿದ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ಕಾರ್ಮಿಕ ಸದಸ್ಯರಾಗಿದ್ದ ಅವರು ಸದಸ್ಯರು ತನ್ನ ಇಲಾಖೆಯ ಬಗ್ಗೆ ಕೇಳಿದ ಅನೇಕ ಪ್ರಶ್ನೆಗಳಿಗೆ ನೀಡಿದ ಉತ್ತರಗಳ ಪ್ರಶ್ನೋತ್ತರಗಳು ಸೇರಿವೆ. ಓದುಗರು ಈ ಸೂಚನೆಯನ್ನು ಗಮನಿಸಬೇಕಾಗಿ ವಿನಂತಿ.

ಈಗ ಪ್ರಕಟವಾಗುತ್ತಿರುವ ಸಂಪುಟವು ಭಾರತದ ಸಂವಿಧಾನದ ಸಂಪೂರ್ಣ ಪರಿಚಯ ಮಾಡಿಕೊಡುತ್ತದೆ. ಸಂವಿಧಾನ ರಚನಾ ಸಭೆಯಲ್ಲಿನ ನಡಾವಳಿಗಳ ಮುಖಾಂತರ ಸಂವಿಧಾನದ ವಿವರವಾದ ಚರ್ಚೆ, ಅಭಿಪ್ರಾಯಗಳು ಮತ್ತು ಭಿನ್ನಾಭಿಪ್ರಾಯದಿಂದ ಸಂವಿಧಾನದ ಸಂಪೂರ್ಣ ಚಿತ್ರಣ ಈ ಸಂಪುಟದಲ್ಲಿ ದೊರೆಯುತ್ತದೆ. ಸಂವಿಧಾನದ ಸಂಪೂರ್ಣ ಪರಿಚಯ ನೀಡುವ ಈ ಸಂಪುಟವು ಭಾರತೀಯ ಸಂವಿಧಾನದ ಚರಿತ್ರೆಯ ಮತ್ತು ಸಂವಿಧಾನದ ವಿದ್ಯಾರ್ಥಿಗಳಿಗೆ ಬಹು ಮಹತ್ವದ ಗ್ರಂಥ ಎಂದೇ ಹೇಳಬಹುದಾಗಿದೆ.

ಸುಮಾರು ೧೨೫೦ ಪುಟಗಳ ಈ ಬೃಹತ್ ಸಂಪುಟವನ್ನು ಎರಡು ಭಾಗಗಳಲ್ಲಿ ಪ್ರಕಟಿಸಲಾಗಿದೆ. ಭಾಷಾಂತರ ಕಾರ್ಯದಲ್ಲಿ ಆಸಕ್ತಿ ವಹಿಸಿ ನೆರವಾದ ಎಲ್ಲಾ ಭಾಷಾಂತರಕಾರರಿಗೆ ಸಂಪಾದಕ ಸಮಿತಿ ಸದಾ ಋಣಿಯಾಗಿದೆ. ಅದೇ ರೀತಿ ಈ ಕಾರ್ಯದಲ್ಲಿ ನೆರವಾದ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಅವರ ಸಿಬ್ಬಂದಿ ವರ್ಗದವರೆಲ್ಲರಿಗೂ ನಾವು ಆಭಾರಿಯಾಗಿದ್ದೇವೆ. ಈ ಸಂಪುಟವನ್ನು ಸಕಾಲದಲ್ಲಿ ಮುದ್ರಿಸಿಕೊಟ್ಟ ಸ್ಕ್ಯಾನ್‌ಡಾಟ್ ಪ್ರಿಂಟಿಂಗ್ ಪ್ರೆಸ್ ಅವರಿಗೆ ನಮ್ಮ ಧನ್ಯವಾದಗಳು.

**ಡಾ॥ ಎ.ಎಂ. ರಾಜಶೇಖರಯ್ಯ**
ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


| | |
|---|---|
| ಸಂದೇಶಗಳು | v |
| ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ | x |
| ಎರಡನೇ ಮುದ್ರಣಕ್ಕೆ ಮುನ್ನುಡಿ | xiv |
| ಮೂರನೇ ಮುದ್ರಣಕ್ಕೆ ಮುನ್ನುಡಿ | xv |
| ಸಂಪಾದಕೀಯ | xvi |


ಸಂವಿಧಾನ ರಚನಾ ಸಭೆಯಲ್ಲಿ ಡಾ॥ ಅಂಬೇಡ್ಕರ್ ಸಿದ್ಧಪಡಿಸಿ ಮಂಡಿಸಿದ ಭಾರತ ಸಂವಿಧಾನದ ವಿಧಿಗಳು ಮತ್ತು ಕಲಮುಗಳ ಮೇಲೆ ಮುಂದುವರಿದ ಚರ್ಚೆ ಮತ್ತು ಅವುಗಳ ಸ್ವೀಕಾರ


| | |
|---|---|
| ವಿಧಿ ೧೬೪ | ೧ |
| ವಿಧಿ ೧೬೭ಎ | ೧ |
| ವಿಧಿ ೨೦೩ | ೫ |
| ಹೊಸ ವಿಧಿ ೨೦೯–ಎ | ೫ |
| ವಿಧಿ ೨೦೩ | ೫ |
| ವಿಧಿ ೨೭೦ | ೬ |
| ವಿಧಿ ೨೭೧ | ೧೧ |
| ವಿನೂತನ ವಿಧಿ ೨೭೧ಎ | ೧೧ |
| ವಿಧಿ ೨೭೧ಎ | ೧೪ |
| ವಿಧಿ ೨೭೨ | ೧೪ |
| ವಿಧಿ ೨೭೩ | ೧೪ |
| ವಿಧಿ ೨೭೪ | ೧೬ |
| ವಿಧಿ ೨೭೪ಎ | ೧೯ |
| ವಿಧಿ ೨೮೯ | ೧೯ |
| ಹೊಸ ವಿಧಿ ೨೮೯ಎ | ೨೭ |
| ವಿಧಿ ೨೯೦ | ೨೮ |
| ವಿಧಿ ೨೯೧ | ೨೯ |

ವಿಧಿ ೨೯೧ಎ ೩೦
ವಿಧಿ ೨೯೭ ೩೧
ವಿಧಿ ೩೦೦ ೩೨
ವಿಧಿ ೩೦೧ ೩೨

## ವಿಭಾಗ – ೬

## ಕಲಮುವಾರು ಚರ್ಚೆ

### ೩೦ ಜುಲೈ ೧೯೪೯ರಿಂದ ೧೬ ಸೆಪ್ಟೆಂಬರ್ ೧೯೪೯

ಹೊಸ ವಿಧಿ ೭೯ಎ ೩೭
ವಿಧಿ ೧೦೪ ೩೯
ಹೊಸ ವಿಧಿ ೧೪೮ಎ ೪೧
ವಿಧಿ ೧೫೦ ೪೨
ಹೊಸ ವಿಧಿ ೧೬೩ಎ ೪೭
ವಿಧಿ ೧೭೫ ೪೮
ವಿಧಿ ೧೭೨ ೫೦
ವಿಧಿ ೧೭೬ ೫೫
ವಿಧಿ ೮೩ಎ ೫೫
ವಿಧಿ ೧೨೩ಎ ೫೬
ವಿಧಿ ೧೯೭ ೫೬
ವಿಧಿ ೨೧೨ರಿಂದ ೨೧೪ರವರೆಗೆ ೫೭
ವಿಧಿ ೨೧೩ ೫೯
ವಿಧಿ ೨೧೩ಎ ೬೦
ವಿಧಿ ೨೧೪ ೬೨
ವಿಧಿ ೨೩೫ ೬೨
ವಿಧಿ ೨೭೬ ೬೫
ವಿಧಿಗಳು ೧೮೮, ೨೭೭ಎ, ೨೭೮ ಮತ್ತು ೨೭೮ಎ ೬೬
ವಿಧಿ ೨೭೯ ೭೭
ವಿಧಿ ೨೮೦ ೭೮
ವಿಧಿ ೨೪೭ ೭೯
ವಿಧಿ ೨೪೮ ೮೦
ವಿಧಿ ೨೪೯ ೮೦
ವಿಧಿ ೨೫೦ ೮೧
ವಿಧಿ ೨೫೧ ೮೨

ವಿಧಿ ೨೫೩ ೮೫
ವಿಧಿ ೨೫೩ ೮೭
ವಿಧಿ ೨೫೪ ೮೭
ಹೊಸ ವಿಧಿ ೨೫೪ಎ ೯೨
ವಿಧಿ ೨೫೫ (ಮುಂದುವರಿದುದು) ೯೪
ವಿಧಿ ೨೫೫ (ಮುಂದುವರಿದುದು) ೯೫
ವಿಧಿ ೨೫೬ ೯೬
ವಿಧಿ ೨೫೭ ೯೭
ವಿಧಿ ೨೫೯ ೯೮
ವಿಧಿ ೨೬೦ (ಮುಂದುವರಿದುದು) ೯೮
ವಿಧಿ ೨೬೦ ೯೯
ವಿಧಿ ೨೬೧ ೧೦೨
ವಿಧಿ ೨೬೩ ೧೦೩
ವಿಧಿ ೨೬೭ ೧೦೪
ವಿಧಿ ೨೬೮ ೧೦೫
ವಿಧಿಗಳು ೫ ಮತ್ತು ೬ ೧೦೭
ಭಾರತೀಯ ಸರ್ಕಾರ ಅಧಿನಿಯಮ, ೧೯೩೫ರ ವಿಭಾಗ – ೨೯೧ (ತಿದ್ದುಪಡಿ) ಮಸೂದೆ ೧೧೯
ವಿಧಿ–೧೫೦ (ಮುಂದುವರಿಕೆ) ೧೨೩
ವಿಧಿ ೨೧೫–ಎ ೧೨೮
ವಿಧಿ ೨೫೦ ೧೨೯
ವಿಧಿ ೨೭೭ ೧೩೦
ವಿಧಿ ೨೮೦ ೧೩೪
ವಿಧಿ ೨೮೫ ೧೪೨
ವಿಧಿ ೨೮೬ರಿಂದ ೨೮೮–ಎ ವರೆಗೆ ೧೫೦
ವಿಧಿ ೨೯೨ ೧೫೫
ವಿಧಿ ೨೯೩ ೧೫೮
ವಿಧಿ ೨೯೪ ೧೫೮
ವಿಧಿ ೨೯೫–ಎ ೧೫೯
ವಿಧಿ ೨೯೬ ೧೬೩
ವಿಧಿ ೨೯೯ ೧೬೪
ಮೂರನೇ ಪರಿಶಿಷ್ಟ ೧೬೫


## ಕೇಂದ್ರ ಯಾದಿ ಪಟ್ಟಿ

| | |
|---|---|
| ದಾಖಲಾತಿ ೧ | ೧೭೧ |
| ದಾಖಲಾತಿ ೨ | ೧೭೨ |
| ದಾಖಲಾತಿ ೩ | ೧೭೩ |
| ದಾಖಲಾತಿ ೪ | ೧೭೫ |
| ದಾಖಲಾತಿ ೫ | ೧೭೬ |
| ದಾಖಲಾತಿ ೬ | ೧೭೭ |
| ದಾಖಲಾತಿ ೭ | ೧೭೭ |
| ದಾಖಲಾತಿ ೧೨ | ೧೭೯ |
| ಹೊಸ ದಾಖಲಾತಿ ೯–ಎ | ೧೮೦ |
| ದಾಖಲಾತಿ ೨೨ | ೧೮೦ |
| ದಾಖಲಾತಿ ೨೬ | ೧೮೩ |
| ದಾಖಲಾತಿ ೨೬–ಎ | ೧೮೩ |
| ದಾಖಲಾತಿ ೩೧ | ೧೮೪ |
| ದಾಖಲಾತಿ ೩೭ | ೧೮೪ |
| ದಾಖಲಾತಿ ೩೮ | ೧೮೫ |
| ದಾಖಲಾತಿ ೩೯ | ೧೮೭ |
| ದಾಖಲಾತಿ ೪೦ | ೧೮೮ |
| ದಾಖಲಾತಿ ೪೧ | ೧೯೦ |
| ದಾಖಲಾತಿ ೪೩ | ೧೯೧ |
| ದಾಖಲಾತಿ ೫೦ | ೧೯೩ |
| ದಾಖಲಾತಿ ೫೨ | ೧೯೪ |
| ದಾಖಲಾತಿ ೫೩ | ೧೯೯ |
| ದಾಖಲಾತಿ ೫೬ | ೨೦೦ |
| ದಾಖಲಾತಿ ೫೭ | ೨೦೧ |
| ದಾಖಲಾತಿ ೫೭ ಎ | ೨೦೨ |
| ದಾಖಲಾತಿ ೫೮ | ೨೦೪ |
| ದಾಖಲಾತಿ ೫೮–ಎ | ೨೦೬ |
| ದಾಖಲಾತಿ ೬೦ | ೨೦೬ |
| ದಾಖಲಾತಿ ೬೧ | ೨೦೭ |
| ದಾಖಲಾತಿ ೬೧–ಎ | ೨೦೮ |
| ದಾಖಲಾತಿ ೬೩ | ೨೦೯ |
| ದಾಖಲಾತಿ ೬೪ | ೨೦೯ |
| ದಾಖಲಾತಿ ೬೪–ಎ | ೨೧೦ |

| | |
|---|---|
| ದಾಖಲಾತಿ ೬೫ | ೨೧೧ |
| ದಾಖಲಾತಿ ೬೬ | ೨೧೨ |
| ದಾಖಲಾತಿ ೬೭ | ೨೧೩ |
| ದಾಖಲಾತಿ ೬೮ | ೨೧೩ |
| ದಾಖಲಾತಿ ೬೯ | ೨೧೪ |
| ದಾಖಲಾತಿ ೭೦ | ೨೧೫ |
| ದಾಖಲಾತಿ ೭೦–ಎ | ೨೧೬ |
| ದಾಖಲಾತಿ ೭೩ | ೨೧೭ |
| ದಾಖಲಾತಿ ೭೩–ಎ | ೨೧೭ |
| ಯಾದಿ ೧– ದಾಖಲಾತಿ ೭೪ | ೨೧೮ |
| ದಾಖಲಾತಿ ೭೫ | ೨೧೯ |
| ದಾಖಲಾತಿ ೭೬ | ೨೧೯ |
| ದಾಖಲಾತಿ ೭೯ | ೨೧೯ |
| ದಾಖಲಾತಿ ೮೧ | ೨೨೦ |
| ದಾಖಲಾತಿ ೮೩ | ೨೨೧ |
| ನಮೂದು ೮೬ | ೨೨೨ |
| ನಮೂದು ೮೬–ಎ | ೨೨೩ |
| ನಮೂದು ೮೮ಎ | ೨೨೩ |
| ನಮೂದು ೯೧ | ೨೩೧ |


**ಪಟ್ಟಿ I**


| | |
|---|---|
| ನಮೂದು ೭೦–ಎ | ೨೩೩ |
| ನಮೂದು ೫೯ | ೨೩೪ |


**ಪಟ್ಟಿ II**


| | |
|---|---|
| ನಮೂದು ೧ | ೨೩೪ |
| ನಮೂದು ೨ | ೨೩೫ |
| ನಮೂದು ೪ | ೨೩೫ |
| ನಮೂದು ೭ಎ | ೨೩೭ |
| ನಮೂದು ೯ | ೨೩೮ |
| ನಮೂದು ೧೦ಎ | ೨೩೮ |
| ನಮೂದು ೧೨ | ೨೩೮ |
| ನಮೂದು ೧೪ | ೨೩೯ |
| ನಮೂದು ೧೫ | ೨೪೧ |

| | |
|---|---|
| ನಮೂದು ೧೮ | ೨೪೨ |
| ನಮೂದು ೪೫ | ೨೪೩ |
| ನಮೂದು ೪೬ | ೨೪೪ |
| ನಮೂದು ೪೮ | ೨೪೪ |
| ನಮೂದು ೪೯ | ೨೪೫ |
| ನಮೂದು ೫೦ | ೨೪೫ |
| ನಮೂದು ೫೨ | ೨೪೫ |
| ನಮೂದು ೫೬ | ೨೪೬ |
| ನಮೂದು ೫೮ | ೨೪೬ |
| ನಮೂದು ೫೯ | ೨೪೮ |
| ನಮೂದು ೬೪ | ೨೪೮ |
| ನಮೂದು ೬೭ | ೨೪೮ |


## ಪಟ್ಟಿ III


| | |
|---|---|
| ನಮೂದು ೨–ಎ | ೨೪೯ |
| ನಮೂದು ೩ | ೨೫೧ |
| ನಮೂದು ೪ | ೨೫೨ |
| ನಮೂದು ೬ | ೨೫೨ |
| ನಮೂದು ೧೫ | ೨೫೪ |
| ಹೊಸ ನಮೂದು ೧೭ಎ | ೨೫೪ |
| ನಮೂದು ೨೦ | ೨೫೫ |
| ನಮೂದು ೨೧ | ೨೫೫ |
| ಹೊಸ ನಮೂದು ೨೫ಎ | ೨೫೫ |
| ನಮೂದು ೨೬ | ೨೫೫ |
| ಹೊಸ ನಮೂದು ೨೬ಎ | ೨೫೬ |
| ಹೊಸ ನಮೂದು ೨೬ಬಿ | ೨೫೬ |
| ನಮೂದು ೨೭ | ೨೫೮ |
| ನಮೂದು ೨೮ | ೨೫೯ |
| ಹೊಸ ನಮೂದು ೨೮ಎ | ೨೫೯ |
| ನಮೂದು ೨೯ | ೨೫೯ |
| ಹೊಸ ನಮೂದು ೩೧ಎ | ೨೬೦ |
| ನಮೂದು ೩೨ | ೨೬೧ |
| ನಮೂದು ೩೩ | ೨೬೧ |

| | |
|---|---|
| ನಮೂದು ೩೩ಎ ಮತ್ತು ೩೩ಬಿ | ೨೬೧ |
| ನಮೂದು ೩೪ | ೨೬೧ |
| ನಮೂದು ೩೪ಎ | ೨೬೨ |
| ನಮೂದು ೩೫ | ೨೬೩ |
| ನಮೂದು ೩೫ಎ | ೨೬೩ |
| ನಮೂದು ೩೬ | ೨೬೩ |
| ಹೊಸ ನಮೂದು | ೨೬೪ |
| ಹೊಸ ನಮೂದು ೮೮ಎ | ೨೬೬ |
| ಐದನೆಯ ಅನುಸೂಚಿ | ೨೭೦ |
| ಆರನೆಯ ಅನುಸೂಚಿ | ೨೭೫ |
| ಆರನೆಯ ಅನುಸೂಚಿ (ಮುಂದುವರಿದುದು) | ೨೭೮ |
| ವಿಧಿ (ಅನುಚ್ಛೇದ) ೨೮೧ | ೩೧೨ |
| ವಿಧಿ ೨೮೨ರಿಂದ ೨೮೨–ಸಿ | ೩೧೨ |
| ಅಖಿಲ ಭಾರತ ಸೇವೆಗಳು | ೩೧೪ |
| ವಿಧಿ ೨೮೨ಬಿ | ೩೧೫ |
| ವಿಧಿ ೨೮೨ಸಿ | ೩೧೯ |
| ವಿಧಿ ೨೮೩ | ೩೨೧ |
| ವಿಧಿ ೩೦೨ | ೩೨೧ |


**ಭಾಗ X ಎ**


| | |
|---|---|
| ವಿಧಿ ೨೭೪ಎ | ೩೨೬ |
| ವಿಧಿ ೨೬೪ | ೩೨೬ |
| ವಿಧಿ ೨೬೫ | ೩೩೧ |
| ವಿಧಿ ೨೬೫ಎ | ೩೩೧ |
| ವಿಧಿ ೨೬೬ | ೩೩೨ |
| ಅನುಸೂಚಿ: ೭ | ೩೩೨ |
| ವಿಧಿ ೨೫೦ (ಮುಂದುವರಿದುದು) | ೩೩೨ |
| ನಮೂದು ೫೮ | ೩೩೪ |
| ವಿಧಿ ೨೫೦ | ೩೩೬ |
| ವಿಧಿ ೨೦೨ | ೩೩೭ |
| ವಿಧಿ ೨೩೪ಎ | ೩೩೭ |
| ಹೊಸ ವಿಧಿ ೨೪೨ಎ | ೩೩೯ |
| ಅನುಚ್ಛೇದ ೨೪೮–ಎ, ೨೬೩ ಮತ್ತು ೨೬೩–ಎ | ೩೪೦ |

ಹೊಸ ವಿಧಿ ೧೧೨ಬಿ ೩೪೪
ಹೊಸ ವಿಧಿ ೧೫ಎ ೩೪೫
ವಿಧಿ ೨೦೯ಎ ೩೬೪
ವಿಧಿ ೨೧೫ ೩೬೭
ವಿಧಿ ೩೦೩ ೩೬೮


## ವಿಭಾಗ – ೭

### ೧೭ ಸೆಪ್ಟೆಂಬರ್ ೧೯೪೯ರಿಂದ ೧೬ ನವೆಂಬರ್ ೧೯೪೯


ಪ್ರಿವಿ ಕೌನ್ಸಿಲ್ಲಿನ ಅಧಿಕಾರವ್ಯಾಪ್ತಿಯ ರದ್ದತಿ ಮಸೂದೆ ೩೭೫
ವಿಧಿ ೩೦೩ (ಮುಂದುವರಿದುದು) ೩೮೩
ಹೊಸ ವಿಧಿ ೩೦೦ಎ ಮತ್ತು ೩೦೦ಬಿ ೩೮೫
ಪರಿಶಿಷ್ಟ ೮ ೩೮೭
ಅನುಚ್ಛೇದ ೩೦೪ ೩೮೮
ವಿಧಿ ೯೯ ೩೯೫
ವಿಧಿ ೧ ೩೯೭
ವಿಧಿ ೩೦೬ ೪೦೦
ವಿಧಿ ೩೦೯ ೪೦೨
ವಿಧಿ ೩೧೦ಎ ಮತ್ತು ೩೧೦ಬಿ ೪೦೨
ವಿಧಿ ೩೧೦ಎ ೪೦೨
ವಿಧಿ ೩೧೧ಎ ೪೦೪
ವಿಧಿ ೩೧೧ ಬಿ ೪೦೬
ವಿಧಿ ೩೧೨ ೪೦೮
ಅನುಚ್ಛೇದಗಳು ೩೧೨(ಎ)ರಿಂದ ೩೧೨ ಮತ್ತು ೩೧೨ (ಎಚ್) ೪೦೯
ವಿಧಿ ೩೧೩ ೪೧೨
ವಿಧಿ ೩೦೭ ೪೧೪
ವಿಧಿ ೩೦೮ ೪೧೫
ವಿಧಿ ೩೧೦ ೪೧೭
ವಿಧಿ ೩೧೧ ೪೧೮
ವಿಧಿ ೩೧೨ ಎಫ್ ೪೨೨
ಎರಡನೆಯ ಪರಿಶಿಷ್ಟ ೪೨೬
ಎರಡನೆಯ ಪರಿಶಿಷ್ಟ (ಮುಂದುವರಿದುದು) ೪೨೯
೨೩೫ಎ ೪೩೯

| | |
|---|---|
| ವಿಧಿ ೩೦೬ಬಿ | ೪೪೧ |
| ವಿಧಿ ೨೯೬ | ೪೪೧ |
| ವಿಧಿ ೨೯೯ | ೪೪೨ |
| ವಿಧಿ ೪೮ | ೪೪೨ |
| ವಿಧಿ ೩೦೩ | ೪೪೫ |
| ಮೊದಲನೆಯ ಪರಿಶಿಷ್ಟ | ೪೪೬ |
| ವಿಧಿ ೨೬೪ ಎ | ೪೪೮ |
| ವಿಧಿ ೨೭೪ಡಿಡಿ | ೪೫೩ |
| ವಿಧಿ ೨೮೦ಎ | ೬೫೩ |
| ನೂತನ ವಿಧಿ ೩೦೨ಎಎಎ | ೪೬೦ |
| ವಿಧಿಗಳ ತಿದ್ದುಪಡಿಗಳು | ೪೬೬ |


## ವಿಭಾಗ – ೮

### ಕರಡು ಸಂವಿಧಾನದ ಮೂರನೆ ಸುತ್ತಿನ ಪಠಣ

### ೧೭ ನವೆಂಬರ್ ೧೯೪೯ರಿಂದ ೨೬ ನವೆಂಬರ್ ೧೯೪೯


| | |
|---|---|
| ಕರಡು ಸಂವಿಧಾನದ ಮೂರನೆ ಸುತ್ತಿನ ಪಠಣ | ೪೮೫ |
| ಭಾರತ ಸರ್ಕಾರ ಕಾಯ್ದೆ ತಿದ್ದುಪಡಿ ಮಸೂದೆ | ೫೦೮ |
| ಸಂವಿಧಾನ ಅಂಗೀಕಾರ | ೫೩೪ |
| ಭಾರತದ ಸಂವಿಧಾನದಲ್ಲಿ ಇರುವ ವಿಧಿಗಳನ್ನು ಮತ್ತು ಕರಡು ಸಂವಿಧಾನದಲ್ಲಿ ಇರುವ ಖಂಡಗಳನ್ನು, ಅವನ್ನು ಚರ್ಚಿಸಿ ಅನುಮೋದಿಸಿದ ದಿನಾಂಕಗಳನ್ನು ತೋರಿಸುವ ಕೋಷ್ಟಕ ರೂಪದ ನಿರೂಪಣೆ. | ೫೩೭ |
| ವಿಷಯಸೂಚಿ | ೫೫೫ |

## ವಿಧಿ ೧೬೪

* **ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುವುದೇನೆಂದರೆ "೧೬೪ನೆಯ ವಿಧಿಯ ಕಲಮು(೧)ರಲ್ಲಿರುವ 'ವಿಧಿಸಲಾಗಿರುವುದನ್ನು ಹೊರತುಪಡಿಸಿ' ಎಂಬ ಪದಗಳಿಗೆ ಬದಲಾಗಿ 'ಬೇರೆ ಕ್ರಮದಲ್ಲಿ ವಿಧಿಸಲಾದುದನ್ನು ಹೊರತುಪಡಿಸಿ' ಎಂಬ ಪದಗಳನ್ನು ಸೇರಿಸಿಕೊಳ್ಳತಕ್ಕದ್ದು."

[**ಯಾವುದೇ ಚರ್ಚೆಯಿಲ್ಲದೆ ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ತಿದ್ದುಪಡಿಯೊಂದಿಗೆ ೧೬೪ ವಿಧಿಯನ್ನು ಸಂವಿಧಾನಕ್ಕೆ ಅಳವಡಿಸಲಾಯಿತು.**]

## ವಿಧಿ ೧೬೭ಎ

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ಈ ಚರ್ಚೆಯಲ್ಲಿ ಅನೇಕ ವಿಷಯಗಳನ್ನು ಎತ್ತಲಾಗಿದ್ದು, ಅವುಗಳನ್ನು ಒಂದೊಂದಾಗಿ ಪ್ರಸ್ತಾಪ ಮಾಡಬಯಸುತ್ತೇನೆ. ನನ್ನ ಮಿತ್ರ ಶ್ರೀ ಸಿದ್ವರವರು ಹೇಳಿದ್ದನ್ನು ನಾನು ಸರಿಯಾಗಿ ಕೇಳಿಸಿಕೊಂಡಿರುವೆನಾದರೆ ಅವರು ೧೬೫ನೆಯ ವಿಧಿಯಲ್ಲಿ ಪ್ರಸ್ತಾಪವಾಗಿರುವ ಪ್ರಮಾಣವಚನದ ಅಥವಾ ದೃಢೀಕರಣದ ವಿಷಯ ಪ್ರಸ್ತಾಪ ಮಾಡಿರುತ್ತಾರೆ. ೧೬೫ನೆಯ ವಿಧಿಯ ಬಗ್ಗೆ ಹೇಳಬೇಕೆಂದರೆ ಅದರ ಪ್ರಕಾರ ಕ್ರಮ ಕೈಗೊಂಡಿಲ್ಲವೆಂದಾಕ್ಷಣ ಯಾವುದೇ ಒಂದು ಸ್ಥಾನ ತೆರವಾಗುವುದಿಲ್ಲ. ೧೬೫ನೆಯ ವಿಧಿ ಹೇಳುವುದೇನೆಂದರೆ, ಅದರನ್ವಯ ಪ್ರಮಾಣವಚನ ಸ್ವೀಕರಿಸದೆ ಯಾವ ವ್ಯಕ್ತಿಯೂ ಮತದಾನದಲ್ಲಿ ಇಲ್ಲವೆ ಚರ್ಚೆಯಲ್ಲಿ ಭಾಗವಹಿಸುವಂತಿಲ್ಲ. ಅದರಲ್ಲಿ ಹೇಳಿರುವುದು ಇಷ್ಟು ಮಾತ್ರ. ಆದ್ದರಿಂದ ಈ ಬಗ್ಗೆ ಯಾವ ತೊಂದರೆಯೂ ಇಲ್ಲ ಎಂದು ನನಗೆ ತೋಚುತ್ತದೆ.

**ಶ್ರೀ ಆರ್. ಕೆ. ಸಿಧ್ವ:** ಈ ವಿಷಯ ಚುನಾವಣಾ ಆಯೋಗಕ್ಕೆ ಏಕೆ ಹೋಗಬೇಕು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಆ ವಿಷಯವನ್ನು ಪ್ರಸ್ತಾಪಿಸಲಿದ್ದೇನೆ. ೧೬೫ನೆಯ ವಿಧಿಗೆ ಸಂಬಂಧಿಸಿದಂತೆ, ಈ ವಿಧಿ ಮತ್ತು ೧೬೭ನೆಯ ವಿಧಿಯ ನಡುವಣ ಮೂಲಭೂತವಾದ ವ್ಯತ್ಯಾಸವನ್ನು ಅವರು ಅರಿತುಕೊಳ್ಳಬೇಕು. ೧೬೫ನೆಯ ವಿಧಿಯ ಪ್ರಕಾರ ಒಂದು ಸ್ಥಾನ ತೆರವಾಗಿರುವುದಿಲ್ಲ, ಆದರೆ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಬರುವುದಿಲ್ಲ ಎಂಬ ಅನರ್ಹತೆ ಮಾತ್ರ ಇದೆ.

ಇನ್ನು ನನ್ನ ಗೌರವಾನ್ವಿತ ಮಿತ್ರ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ೧೬೭ಎ ಗೆ ಮಂಡಿಸಿರುವ ಮೂಲಕ ತಿದ್ದುಪಡಿಯನ್ನು ಪ್ರಸ್ತಾಪಿಸುತ್ತೇನೆ. ನಾನು ಈ ಕೂಡಲೇ ಪ್ರಸ್ತಾಪಿಸಲಿರುವ ಒಂದು ಅಂಶವನ್ನು ಹೊರತುಪಡಿಸಿ ಅವರ ತಿದ್ದುಪಡಿಯು ಸರಿಯಾದ ಆಧಾರ ಹೊಂದಿದೆ. ಈ ವಿಷಯವನ್ನು ಏಕೆ ರಾಜ್ಯಪಾಲರ ತೀರ್ಮಾನಕ್ಕೆ ಬಿಡಲಾಗಿದೆ ಎಂಬುದಕ್ಕೆ ಒಂದು ಕಾರಣವಿದೆ. ಅದೇನೆಂದರೆ ಯಾವುದೇ ಸ್ಥಾನ ತೆರವಾಗಿದೆ ಎಂದು ನಿರ್ಧರಿಸುವ ಅಧಿಕಾರ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಸುವ ಮೂಲಕ ಆ ಸ್ಥಾನವನ್ನು ತುಂಬಬೇಕೆಂದು ನಿರ್ಧರಿಸುವ ಮತ್ತು ಆಜ್ಞಾಪಿಸುವ ಅಧಿಕಾರವನ್ನು ಯಾರು ಹೊಂದಿರುತ್ತಾರೋ

---

* ಸಿ.ಎ.ಡಿ. ಸಂ. VIII ಜೂನ್ ೧೪, ೧೯೪೯, ಪುಟ ೬೦.

ಅವರು ಮಾತ್ರ ಈ ತೀರ್ಮಾನ ತೆಗೆದುಕೊಳ್ಳಬೇಕೆಂಬ ಸಾಮಾನ್ಯ ನಿಯಮವಿರುತ್ತದೆ. ಈ ವಿಷಯವನ್ನು ಇಷ್ಟು ಸ್ಪಷ್ಟವಾಗಿ ಹೇಳಲಾಗಿಲ್ಲವಾದರೂ, ೧೬೭ನೆಯ ವಿಧಿಯ ಪ್ರಕಾರ ಉಂಟಾಗುವ ಯಾವುದೇ ಅನರ್ಹತೆಯ ಕಾರಣ ಯಾವುದೇ ಸ್ಥಾನ ತೆರವಾಗಿದೆ ಎಂದು ನಿರ್ಧರಿಸುವ ಅಥವಾ ಘೋಷಿಸುವ ಅಧಿಕಾರವುಳ್ಳವರು ಮಾತ್ರ ಅಂತಹ ತೀರ್ಮಾನ ಕೈಗೊಳ್ಳುತ್ತಾರೆ ಎಂಬುದು ಸಾಮಾನ್ಯ ತಿಳಿವಳಿಕೆಯ ವಿಷಯವಾಗಿದೆ. ಹೊಸ ಸಂವಿಧಾನದಲ್ಲಿ ತೆರವಾದ ಯಾವುದೇ ಮತಕ್ಷೇತ್ರದಲ್ಲಿ ಚುನಾವಣೆಯ ಮುಖಾಂತರ ತೆರವಾದ ಸ್ಥಾನಕ್ಕೆ ಪ್ರತಿನಿಧಿಯನ್ನು ಚುನಾಯಿಸತಕ್ಕದ್ದು ಎಂದು ಆಜ್ಞಾಪಿಸುವ ಅಧಿಕಾರವನ್ನು ರಾಜ್ಯಪಾಲರಿಗೆ (ಗವರ್ನರಿಗೆ) ನೀಡಲಾಗಿದೆ ಎಂಬುದು ನಿಸ್ಸಂಶಯವಾದ ಸಂಗತಿ. ಹೀಗಿರುವಾಗ ಯಾವುದೇ ಅನರ್ಹತೆಯ ಕಾರಣದಿಂದ ಒಂದು ಸ್ಥಾನ ತೆರವಾಗಿದೆ ಎಂದು ಘೋಷಿಸುವ ಅಧಿಕಾರ ರಾಜ್ಯಪಾಲರಿಗೆ ಇದೆ. ಈ ಕಾರಣದಿಂದ ೧೬೭–ಎ ವಿಧಿಯ ೧ನೆಯ ಕಲಮಿಗೆ ಸಂಬಂಧಿಸಿದಂತೆ ಅದನ್ನು ಅಂಗೀಕರಿಸುವುದರಲ್ಲಿ ಯಾವ ತೊಂದರೆಯೂ ಇಲ್ಲ.

ಈಗ ೨ನೆಯ ಕಲಮನ್ನು ಪ್ರಸ್ತಾಪಿಸುವೆ. ಇದರಲ್ಲಿ ಬಹಳ ವಿಶಾಲವಾದ ಪದ ಬಳಕೆಯಾಗಿದೆ. ಇದರಲ್ಲಿ ಹೇಳಿರುವುದೇನೆಂದರೆ, ಅನರ್ಹತೆಯ ವಿಷಯದಲ್ಲಿ ರಾಜ್ಯಪಾಲರು ನಿರ್ಧಾರ ಮಾಡಬೇಕು. ಹಾಗೆ ಮಾಡುವಾಗ ಅವರು ಚುನಾವಣಾ ಆಯೋಗದ ಅಭಿಪ್ರಾಯವನ್ನು ಪಡೆದುಕೊಳ್ಳಬೇಕು ಮತ್ತು ಆ ಅಭಿಪ್ರಾಯದ ಪ್ರಕಾರ ತೀರ್ಮಾನ ಮಾಡಲೇಬೇಕು. ಈ ವಿಷಯದಲ್ಲಿ ಮಾನ್ಯ ಸದಸ್ಯರು ೧೬೭ನೆಯ ವಿಧಿಯನ್ನು ಅವಲೋಕಿಸಿದಾಗ, ಅದರಲ್ಲಿ ಕಲಮು (ಎ)ಯಿಂದ (ಡಿ)ಯವರೆಗೆ ಹೇಳಲಾದ ಅನರ್ಹತೆಗಳಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗವು ಈ ವಿಷಯದಲ್ಲಿ ರಾಜ್ಯಪಾಲರಿಗೆ ಸಲಹೆ ನೀಡುವ ಸ್ಥಿತಿಯಲ್ಲಿರುವುದಿಲ್ಲ. ಏಕೆಂದರೆ ಈ ವಿಷಯಗಳು ಚುನಾವಣಾ ಆಯೋಗದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಉದಾಹರಣೆಗೆ ಯಾವುದೇ ಒಬ್ಬ ವ್ಯಕ್ತಿ ಲಾಭದಾಯಕ ಅಧಿಕಾರ ಸ್ಥಾನ ಹೊಂದಿರುವನೇ ಹೇಗೆ, ಅಥವಾ ಯಾವುದೇ ವ್ಯಕ್ತಿ ಮಾನಸಿಕವಾಗಿ ಅಸ್ವಸ್ಥನಾಗಿರುವನೇ ಮತ್ತು ಅವನು ಹಾಗಿದ್ದಾನೆ ಎಂದು ಯಾವುದಾದರೂ ಅಧಿಕಾರಸ್ಥ ನ್ಯಾಯಾಲಯವು ಘೋಷಿಸಿದೆಯೇ, ಅಥವಾ ಅವನು ವಿಮೋಚಿತ ದಿವಾಳಿಯಾಗಿದ್ದಾನೆಯೇ, ಅಥವಾ ಅವನು ಯಾವುದೇ ವಿದೇಶೀ ರಾಷ್ಟ್ರದ ಕರಾರು ಅಥವಾ ಬಾಧ್ಯತೆಗೆ ಒಳಗಾಗಿರುವನೇ ಎಂದು ಮುಂತಾದ ವಿಷಯಗಳು ಚುನಾವಣಾ ಆಯೋಗದ ವ್ಯಾಪ್ತಿಗೊಳಪಡುವುದಿಲ್ಲ. ಆದ್ದರಿಂದ ಅವರು ರಾಜ್ಯಪಾಲರಿಗೆ ಸಲಹೆ ಕೊಡಲಾಗುವುದಿಲ್ಲ. ಆದರೆ ನೀವು ಉಪಕಲಮು (ಇ)ಯನ್ನು ಪರಿಶೀಲಿಸಿದಾಗ ಅದು ಚುನಾವಣಾ ಆಯೋಗದ ವ್ಯಾಪ್ತಿಯಲ್ಲಿರುವ ವಿಷಯ ಎಂಬುದು ಗೊತ್ತಾಗುತ್ತದೆ. ಏಕೆಂದರೆ ಉಪಕಲಮು (ಇ)ಯ ಪ್ರಕಾರ ಯಾವುದೇ ವ್ಯಕ್ತಿ ಭ್ರಷ್ಟಾಚಾರ, ಅಥವಾ ಯಾವುದೇ ವೃತ್ತಿ ಬಾಹಿರ ಚಟುವಟಿಕೆಗಳಲ್ಲಿ ನಿರತನಾಗಿದ್ದು ಅದು ಚುನಾವಣಾ ಕಾಯ್ದೆಯನ್ವಯ ಅನರ್ಹತೆಗೊಳಗಾಗಿದ್ದರೆ ಅದು ಅನರ್ಹತೆ ಎನಿಸುವುದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ:** ಚುನಾವಣಾ ಆಯೋಗವೇ ಅವಶ್ಯವೆನಿಸಿದ ವಿಚಾರಣೆ ಮಾಡಲು ಬರುವುದಿಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದರಲ್ಲಿ ವಿಚಾರಣೆ ಅಥವಾ ತನಿಖೆಯ ಪ್ರಶ್ನೆಯೇ ಇಲ್ಲ. ಒಬ್ಬ ವಿಮೋಚಿತ ದಿವಾಳಿಯಾಗಿರುವನೇ ಇಲ್ಲವೇ ಎಂಬ ವಿಷಯವನ್ನು ಖಚಿತಪಡಿಸಿಕೊಳ್ಳಲು ತನಿಖೆಯ ಅವಶ್ಯಕತೆ ಇಲ್ಲ. ೧೬೭ನೆಯ ವಿಧಿಯ (೨)ನೆಯ ಕಲಮು ಸರಿಯಾಗಿರುವುದರಿಂದ ಈ ವಿಷಯವು ೧೬೭–ಎ ವಿಧಿಯ ಉಪಕಲಮು (ಇ) ಅಡಿಯಲ್ಲಿ ಬರುವ ವಿಷಯಗಳಿಗೆ ಮಾತ್ರ ಸೀಮಿತವಾಗಿರಬೇಕೆಂಬುದು

ನನ್ನ ಅಭಿಪ್ರಾಯ. ಆದ್ದರಿಂದ ತಮ್ಮ ಅನುಮತಿಯೊಂದಿಗೆ ನಾನು ಕಲಮು (೨)ಕ್ಕೆ ಈ ತಿದ್ದುಪಡಿ ಸೂಚಿಸ ಬಯಸುತ್ತೇನೆ: "ಈ ವಿಧಿಯ ಮುಂಚಿನ ವಿಧಿಯ ಕಲಮು (೧)ರ ಉಪಕಲಮು (ಇ)ಯ ಪ್ರಕಾರ ಉದ್ಭವಿಸುವ ಅನರ್ಹತೆಗಳಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಯ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಪೂರ್ವದಲ್ಲಿ ರಾಜ್ಯಪಾಲರು ಚುನಾವಣಾ ಆಯೋಗದ ಅಭಿಪ್ರಾಯವನ್ನು ಪಡೆದುಕೊಳ್ಳತಕ್ಕದ್ದು ಮತ್ತು ಆ ಅಭಿಪ್ರಾಯದಂತೆ ನಡೆದುಕೊಳ್ಳತಕ್ಕದ್ದು."

**ಮಾನ್ಯ ಸಭಾಧ್ಯಕ್ಷರು:** ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಸೂಚಿಸಿರುವ ತಿದ್ದುಪಡಿಯನ್ನು ಓದಿದಾಗ ಅದರಲ್ಲಿ ಅದು ಚುನಾವಣೆಯ ಮುನ್ನ ಅಥವಾ ಚುನಾವಣೆ ನಡೆದಿರುವಾಗ ಸಂಭವಿಸಬಹುದಾದ ಪ್ರಕರಣಕ್ಕೆ ಸಂಬಂಧಿಸಿಲ್ಲ ಎಂದು ನನಗನಿಸುತ್ತದೆ. ಅದು ಚುನಾವಣೆಯ ನಂತರ ಒಬ್ಬ ವ್ಯಕ್ತಿ ಶಾಸಕಾಂಗದ ಸದಸ್ಯನಾದ ಬಳಿಕ ಗುರಿಯಾಗುವಂತಹ ಅನರ್ಹತೆಗಳ ಕುರಿತಾದ ಪ್ರಕರಣಗಳಿಗೆ ಸಂಬಂಧಿಸಿದುದಾಗಿದೆ. ಚುನಾವಣಾ ಆಯೋಗವು ಇಂತಹ ಪ್ರಕರಣಗಳನ್ನು ಪರಿಶೀಲಿಸಬಹುದಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅರ್ಜಿಯನ್ನು ಸಲ್ಲಿಸಿದ ನಂತರ, ಚುನಾವಣಾ ಆಯೋಗವು ಚುನಾವಣೆಯ ಕಾಲದಲ್ಲಿ ಉಮೇದುವಾರನು ಮಾಡಿರಬಹುದಾದ ಕೆಲವು ಅಪರಾಧಗಳನ್ನು ಚುನಾವಣೆಯ ನಂತರ ಮತ್ತು ಸದಸ್ಯನಾದವನ ಕುರಿತಾಗಿರುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಅಂತಹ ಪ್ರಕರಣಗಳನ್ನು ಪರಿಶೀಲಿಸುವ ಅರ್ಹತೆ ಚುನಾವಣಾ ಆಯೋಗಕ್ಕೆ ಇರುವುದಿಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು ಇದೆ. ಆಗ ಏನಾಗುತ್ತದೆ ಎಂದರೆ ಒಬ್ಬ ವ್ಯಕ್ತಿ ತಾನು ಚುನಾಯಿತನಾದೊಡನೆಯೇ ಪ್ರಮಾಣವಚನ ಸ್ವೀಕರಿಸಿ ತನ್ನ ಸ್ಥಾನದಲ್ಲಿ ಕುಳಿತುಕೊಳ್ಳಲು ಅರ್ಹನಾಗುತ್ತಾನೆ. ಅವನು ಹಾಗೆ ಮಾಡಿದ ನಂತರ ಅವನ ವಿರೋಧಿ ಅಭ್ಯರ್ಥಿ ಚುನಾವಣಾ ತಕರಾರು ಅರ್ಜಿ ಸಲ್ಲಿಸುತ್ತಾನೆ. ನಂತರ ಅವನು ಕೆಲವು ಚುನಾವಣಾ ಕಾನೂನಿನ ಪ್ರಕಾರ ಕೆಲವು ಅಪರಾಧಗಳನ್ನು ಮಾಡಿರುವನೆಂಬ ಅಂಶ ಆಯೋಗಕ್ಕೆ ಮನವರಿಕೆಯಾಗಿ, ಅವನ ಸದಸ್ಯತ್ವವನ್ನು ರದ್ದುಮಾಡುತ್ತದೆ. ಇದೂ ಸಹ (ಇ)ಯ ವ್ಯಾಪ್ತಿಗೊಳಪಡುತ್ತದೆ. ಒಬ್ಬ ವ್ಯಕ್ತಿ ಸದಸ್ಯನಾಗಿ ಆಸೀನನಾದ ನಂತರ...

**ಮಾನ್ಯ ಸಭಾಧ್ಯಕ್ಷರು:** ಇಲ್ಲಿ ಎರಡು ವಿಧವಾದ ಅನರ್ಹತೆಗಳಿವೆ ಎಂದು ನನಗೆ ತೋರುತ್ತದೆ. ಒಬ್ಬ ಸದಸ್ಯನು ತಾನು ಸದಸ್ಯನಾಗುವ ಮುಂಚೆ ಗುರಿಯಾದ ಕೆಲವು ಅನರ್ಹತೆಗಳು ಅಥವಾ ಚುನಾವಣೆಯಲ್ಲಿ ಗುರಿಯಾದ ಅನರ್ಹತೆಗಳು. ಅಂತಹ ಪ್ರಕರಣಗಳನ್ನು ಪರಿಶೀಲಿಸಲು ಚುನಾವಣಾ ಆಯೋಗ ಅಧಿಕಾರ ಹೊಂದಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ವಿಷಯವಾಗಿ ನಾವು ನಂತರ ಯಾವ ವಿಧಾನಗಳನ್ನು ಗೊತ್ತುಪಡಿಸುವೆವು ಎಂಬುದನ್ನು ಅವಲಂಬಿಸಿದೆ.

**ಮಾನ್ಯ ಸಭಾಧ್ಯಕ್ಷರು:** ಆದರೆ ಒಬ್ಬ ವ್ಯಕ್ತಿ ಸದನದಲ್ಲಿ ತನ್ನ ಸ್ಥಾನ ಸ್ವೀಕರಿಸಿದ ನಂತರ ಅಂತಹ ಅನರ್ಹತೆಗಳಿಗೆ ಗುರಿಯಾಗಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನೇ (ಇ)ನಲ್ಲಿ ಹೇಳಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಇತರ ವಿಧದ ಅನರ್ಹತೆಗಳೂ ಉಂಟಾಗಬಹುದು. ಆ ವ್ಯಕ್ತಿ ನಂತರದಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಬಹುದು ಅಥವಾ ಅವನು ಆ ರೀತಿ ಮಾನಸಿಕ ಅಸ್ವಸ್ಥನಾಗಿರುವನೆಂದು ಘೋಷಿಸಲಾಗಬಹುದು ಅಥವಾ ಬಿಡುಗಡೆ ಹೊಂದಿರದ ದಿವಾಳಿಯಾಗಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ವಿಷಯಗಳನ್ನೇ ಇಲ್ಲಿ ಪರಿಗಣಿಸಲಾಗಿದೆ. ಅವೆಲ್ಲವೂ ಸದ್ಯ ಸದ್ಯಸನಾಗಿರುವವನ ಕುರಿತಾಗಿಯೇ ಇವೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ:** ದಯಮಾಡಿ ತಿದ್ದುಪಡಿಯನ್ನು ಓದಿನೋಡಿರಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದರಲ್ಲಿ ಎರಡು ವಿಧದ ಅನರ್ಹತೆಗಳಿವೆ. ಅಭ್ಯರ್ಥಿಗೆ ಅನ್ವಯಿಸುವ ಅನರ್ಹತೆಗಳು, ಎಂದರೆ ಅನರ್ಹತೆಗಳಿಗೆ ಗುರಿಯಾಗಿರುವ ವ್ಯಕ್ತಿಗಳು ಚುನಾವಣೆಗೆ ನಿಲ್ಲಬಾರದು. ಚುನಾವಣೆಯಲ್ಲಿ ಆರಿಸಿ ಬಂದ ನಂತರ ೧೬೭ನೇ ವಿಧಿಯ ಪ್ರಕಾರ ಅನರ್ಹತೆಗೆ ಗುರಿಯಾದವರು ಸದನದಲ್ಲಿ ಕುಳಿತುಕೊಳ್ಳಬಾರದು. ಈ ಎರಡು ವಿಷಯಗಳಲ್ಲಿ ನಾವು ಗೊಂದಲಕ್ಕೀಡಾಗ ಬಾರದು.

**ಗೌರವಾನ್ವಿತ ಶ್ರೀ ಕೆ. ಸಂತಾನಮ್:** ಈ ಎರಡೂ ವಿಷಯಗಳನ್ನು ೧೬೭ಎ ವಿಧಿಯಲ್ಲಿ ಪ್ರಸ್ತಾಪಿಸಲಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಹಾಗಿರಬಹುದು. ಈಗ ನಾನು ಅದರ ಬಗ್ಗೆ ವಿವರಣೆ ನೀಡುವೆ. ಅದು ನಾವು ಯಾವ ವಿಧಾನವನ್ನು ಅನುಸರಿಸುತ್ತೇವೆ ಎಂಬುದನ್ನು ಅವಲಂಬಿಸುತ್ತದೆ. ಒಬ್ಬ ಅಭ್ಯರ್ಥಿ ಚುನಾವಣೆಗೆ ಅರ್ಹನಾಗಿರುವನೋ ಇಲ್ಲವೋ ಎಂಬುದನ್ನು ಪೂರ್ವಭಾವಿ ಪ್ರಶ್ನೆಯನ್ನಾಗಿ ಪರಿಗಣಿಸುವ ವಿಧಾನವನ್ನು ಅನುಸರಿಸುವುದಾದರೆ ಅದು ೧೬೭ನೆಯ ವಿಧಿಯನ್ವಯ ಅನರ್ಹತೆಯಾಗುವುದಿಲ್ಲ. ಇದ್ದುದೇ, ಈಗ ಅನುಸರಿಸುತ್ತಿರುವ ವಿಧಾನ, ಎಂದರೆ ಚುನಾವಣೆಗೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳನ್ನು, ಇದುವೇ, ಯಾವುದೇ ಅಭ್ಯರ್ಥಿ ಚುನಾವಣೆಗೆ ನಿಲ್ಲಲು ಅರ್ಹನಾಗಿದ್ದಾನೆಯೇ ಇಲ್ಲವೇ ಎಂಬ ಪ್ರಶ್ನೆಯೂ ಸೇರಿದಂತೆ, ಪರಿಗಣಿಸಿದರೆ ಆಗ ೧೬೭ನೆಯ ವಿಧಿ ಅನ್ವಯವಾಗುತ್ತದೆ. ಈ ವಿಷಯದಲ್ಲಿ ಕರಡು ಸಮಿತಿಯ ಉದ್ದೇಶ ಮತ್ತು ನನ್ನ ಉದ್ದೇಶವೂ ಸಹ ಚುನಾವಣೆಗೆ ಸಂಬಂಧಿಸಿದ ಕೆಲವು ಪೂರ್ವಭಾವಿ ಪ್ರಶ್ನೆಗಳನ್ನು ಬಗೆಹರಿಸಲು ಚುನಾವಣಾ ಆಯೋಗಕ್ಕೆ ಅವಕಾಶ ನೀಡುವುದೇ ಆಗಿದೆ. ಇದರಿಂದಾಗಿ ಚುನಾವಣೆಯನ್ನು ವ್ಯವಸ್ಥಿತವಾಗಿ ನಡೆಸಲಾಗಿದೆಯೇ ಇಲ್ಲವೇ ಎಂಬ ಪ್ರಶ್ನೆಯನ್ನು ಮಾತ್ರ ಇತ್ಯರ್ಥಗೊಳಿಸಲು ಅದು ಅನುಕೂಲವಾಗುತ್ತದೆ. ಪ್ರಸ್ತುತ, ಈ ಎಲ್ಲಾ ವಿಷಯಗಳನ್ನು ಒಂದೆಡೆ ಸೇರಿಸಿದಂತಾಗಿದೆ.

* * *

**ಮಾನ್ಯ ಸಭಾಧ್ಯಕ್ಷರು:** ಇನ್ನು ಶ್ರೀ ಟಿ. ಟಿ. ಕೃಷ್ಣಮಾಚಾರಿಯವರ ತಿದ್ದುಪಡಿ:

## ಸದಸ್ಯರ ಅನರ್ಹತೆಯ ವಿಷಯದಲ್ಲಿ ನಿರ್ಣಯ

"ತಿದ್ದುಪಡಿಗಳ ಪಟ್ಟಿಯಲ್ಲಿರುವ ೨೪೪೧ನೆಯ ತಿದ್ದುಪಡಿಗೆ ಬದಲಾಗಿ ಈ ಕೆಳಗಿನ ಪದಗಳನ್ನು ಸೇರಿಸತಕ್ಕದ್ದು:–

"೧೬೭ನೆಯ ವಿಧಿಯ ನಂತರ ಈ ಕೆಳಗಣ ಹೊಸ ವಿಧಿಯನ್ನು ಸೇರಿಸತಕ್ಕದ್ದು–

"೧೬೭–ಎ (೧) ರಾಜ್ಯ ಶಾಸಕಾಂಗದ ಯಾವುದೇ ಸದಸ್ಯನು ಇದರ ಹಿಂದಿನ ವಿಧಿಯ ಕಲಮು (೧)ರಲ್ಲಿ ಹೇಳಲಾದ ಯಾವುದೇ ಅನರ್ಹತೆಗೊಳಗಾಗಿದ್ದರೆ, ಆ ವಿಷಯವನ್ನು ರಾಜ್ಯಪಾಲರ ನಿರ್ಣಯಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ಅವರ ನಿರ್ಣಯವೇ ಅಂತಿಮ ತೀರ್ಮಾನವಾಗುವುದು. (೨) ಅಂತಹ ವಿಷಯದಲ್ಲಿ ನಿರ್ಣಯಿಸುವ ಮೊದಲು ರಾಜ್ಯಪಾಲರು ಚುನಾವಣಾ ಆಯೋಗದ ಅಭಿಪ್ರಾಯವನ್ನು ಪಡೆದುಕೊಳ್ಳತಕ್ಕದ್ದು ಮತ್ತು ಆ ಅಭಿಪ್ರಾಯದ ಪ್ರಕಾರ ರಾಜ್ಯಪಾಲರು ನಡೆದುಕೊಳ್ಳತಕ್ಕದ್ದು."

ಈ ತಿದ್ದುಪಡಿ ಅಂಗೀಕೃತವಾಯಿತು. ಈ ಹೊಸ ೧೬೭ನೆಯ ವಿಧಿಯನ್ನು ಸಂವಿಧಾನದಲ್ಲಿ ಅಳವಡಿಸಲಾಯಿತು.

* * *

[**ಡಾ. ಅಂಬೇಡ್ಕರ್‌ರವರ ತಿದ್ದುಪಡಿಯ ಪ್ರಕಾರ ತಿದ್ದುಪಡಿಯಾದ ೧೬೭ಎ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.**]

* * *

## ವಿಧಿ ೨೦೩

* ಮಾನ್ಯ ಸಭಾಧ್ಯಕ್ಷ: ಇನ್ನು ೨೦೩ನೆಯ ವಿಧಿಯನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದನ್ನು ತಡೆಹಿಡಿಯಬೇಕಾಗಿದೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ೨೦೩ (೨) (ಬಿ) ಈ ಒಂದು ಉಪಕಲಮನ್ನು ಹಾಗೆಯೇ ಉಳಿಸಿಕೊಳ್ಳಬೇಕೇ ಅಥವಾ ಅದನ್ನು ಬದಲಾಯಿಸಬೇಕೇ ಎಂಬ ಪ್ರಶ್ನೆ ಇದೆ. ಅದಕ್ಕಾಗಿ ಕಾಲಾವಕಾಶ ಬೇಕಾಗಿದೆ. ನಾಳೆಹೊತ್ತಿಗೆ ನಾವು ಸಿದ್ಧತೆ ಮಾಡಿಕೊಳ್ಳುತ್ತೇವೆ.

* * *

## ಹೊಸ ವಿಧಿ ೨೯೯–ಎ

****ಮಾನ್ಯ ಸಭಾಧ್ಯಕ್ಷರು: ಕೆಲವು ಹೊಸ ವಿಧಿಗಳನ್ನು** ಸೂಚಿಸಲಾಗಿದೆ, ಸಂ. ೨೯೯–ಎ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ೨೯೯–ಎ ವಿಧಿಯನ್ನು ತಡೆಹಿಡಿಯಬೇಕು.

**ಮಾನ್ಯ ಸಭಾಧ್ಯಕ್ಷ:** ಶ್ರೀ ಶಿಬ್ಬನ್‌ಲಾಲ್ ಸಕ್ಸೇನಾರವರು ಒಂದರ ಬಗ್ಗೆ ಗಮನ ಸೆಳೆದಿದ್ದಾರೆ.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಅದನ್ನೂ ತಡೆಹಿಡಿಯಬಹುದು.

* * *

## ವಿಧಿ ೨೦೩

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್: (ಮುಂಬಯಿ ಸಾಮಾನ್ಯ) ಮಾನ್ಯ ಸಭಾಧ್ಯಕ್ಷರೇ ನಾನು ಮಂಡಿಸುತ್ತಿರುವುದೇನೆಂದರೆ,

"೨೦೩ನೆಯ ವಿಧಿಯ ಪಕ್ಕದ ಶಿರೋನಾಮೆಯ ಬದಲು ಈ ಕೆಳಗಿನಂತೆ ಸೇರಿಸಬೇಕು.

**'ಎಲ್ಲಾ ನ್ಯಾಯಾಲಯಗಳ ಮೇಲೆ ಉಚ್ಚ ನ್ಯಾಯಾಲಯದ ಉಸ್ತುವಾರಿಯ ಅಧಿಕಾರ"**

ನಾನು ಇನ್ನೂ ಮುಂದುವರೆಸಿ ಮಂಡಿಸುವುದೇನೆಂದರೆ

"೨೦೩ನೆಯ ವಿಧಿಯ (೨)ನೆಯ ಕಲಮಿನಲ್ಲಿ 'ಉಚ್ಚ ನ್ಯಾಯಾಲಯವು, ಬಹುದು' ಎಂಬ

---

* ಸಿ.ಎ.ಡಿ. ಸಂ. VIII ಜೂನ್ ೧೫, ೧೯೪೯, ಪುಟ ೮೭೩.

** ಅದೇ, ಪುಟ ೮೭೫

*** ಅದೇ, ಜೂನ್ ೧೫, ೧೯೪೯, ಪು ೮೮೩–೮೫

ಪದಗಳ ಆರಂಭದಲ್ಲಿ 'ಮೇಲೆ ಹೇಳಲಾದ ಉಪಬಂಧಗಳ ಸಾಮಾನ್ಯ ಅರ್ಥಕ್ಕೆ ಹಾನಿಯಾಗದಂತೆ; ಎಂಬ ಪದಗಳನ್ನು ಸೇರಿಸತಕ್ಕದ್ದು."

"ತಿದ್ದುಪಡಿಗಳ ಪಟ್ಟಿಯಲ್ಲಿನ ತಿದ್ದುಪಡಿ ಸಂಖ್ಯೆ ೨೬೬೪ಕ್ಕೆ ಸಂಬಂಧಿಸಿದಂತೆ

(i) ೨೦೩ನೆಯ ವಿಧಿಯ ಕಲಮು (೧)ರಲ್ಲಿ 'ಎಲ್ಲಾ ನ್ಯಾಯಾಲಯಗಳು' ಎಂಬುದರ ನಂತರ 'ಮತ್ತು ನ್ಯಾಯಾಧಿಕರಣಗಳು' ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) ೨೦೩ನೆಯ ವಿಧಿಯ (೨)ನೆಯ ಕಲಮಿನ (ಬಿ) ಉಪಕಲಮನ್ನು ಬಿಡತಕ್ಕದ್ದು."

* * *

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

* * *

[**ಮೇಲ್ಕಾಣಿಸಿದ ತಿದ್ದುಪಡಿಗಳ ಪ್ರಕಾರ ತಿದ್ದುಪಡಿಯಾದ ೨೦೩ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.**]

* * *

# ವಿಧಿ ೨೭೦

* **ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಈ ವಿಷಯವನ್ನು ಮಂಡಿಸುತ್ತಿದ್ದೇನೆ:

"ತಿದ್ದುಪಡಿಗಳ ಪಟ್ಟಿಯ ಸಂಖ್ಯೆ ೨೯೭೫ ಮತ್ತು ೧೯೭೬ ತಿದ್ದುಪಡಿಗಳ ೨೭೦ನೆಯ ವಿಧಿಯಲ್ಲಿ 'ಆಸ್ತಿಗಳು ಮತ್ತು ಹೊಣೆಗಳು' ಎಂಬ ಪದಗಳ ಬದಲಾಗಿ 'ಆಸ್ತಿಗಳು ಹೊಣೆಗಳು ಮತ್ತು ಬಾಧ್ಯತೆಗಳು' ಎಂಬ ಪದಗಳನ್ನು ಸೇರಿಸತಕ್ಕದ್ದು.

ಇನ್ನು ಶ್ರೀಯುತ ನಜೀರುದ್ದೀನ್ ಅಹ್ಮದ್‌ರವರು ಮಂಡಿಸಿರುವ ತಿದ್ದುಪಡಿಯನ್ನು ಕುರಿತು ಹೇಳಬೇಕೆಂದರೆ ನಾವು 'ಭಾರತ ಸರ್ಕಾರ' ಎಂಬ ಪದವನ್ನು ಹೊಸ ಸಂವಿಧಾನದನ್ವಯ ಅಸ್ತಿತ್ವಕ್ಕೆ ಬರಲಿರುವ ಸರಕಾರ ಎಂಬ ಅರ್ಥದಲ್ಲಿ ಬಳಸುತ್ತಿದ್ದೇವೆ ಎಂಬ ಅಂಶವನ್ನು ಅವರು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾರೆ. 'ಭಾರತದ ಡೊಮಿನಿಯನ್ ಸರಕಾರ' ಎಂಬ ಪದ ಸದ್ಯದಲ್ಲಿ ಅಸ್ತಿತ್ವದಲ್ಲಿರುವ ಸರಕಾರ ಎಂದು ಸೂಚಿಸುತ್ತದೆ. ತತ್ಪರಿಣಾಮವಾಗಿ ಅವರ ತಿದ್ದುಪಡಿಯನ್ನು ಅಂಗೀಕರಿಸಿದಲ್ಲಿ ಅದರಿಂದ ಭಾರತ ಸರಕಾರವು ಭಾರತ ಸರಕಾರದ ಹೊಣೆಗಾರಿಕೆಗಳು ಮತ್ತು ಆಸ್ತಿಗಳಿಗೆ ಉತ್ತರಾಧಿಯಾಗುವುದೆಂದು ಅರ್ಥವಾಗುತ್ತದೆ. ಇದು ಅಸಂಬದ್ಧವೆನಿಸುವುದು. ಆದ್ದರಿಂದ ಈಗಾಗಲೇ ಸೂಚಿಸಲಾದ ಪದಗಳು ಹೆಚ್ಚು ಸೂಕ್ತವಾಗಿದ್ದು, ಅವುಗಳನ್ನು ಹಾಗೆಯೇ ಉಳಿಸಿಕೊಳ್ಳಬೇಕು.

**ಗೌರವಾನ್ವಿತ ಶ್ರೀ ಕೆ. ಸಂತಾನಮ್:** (ಮದ್ರಾಸು, ಸಾಮಾನ್ಯ) ನಾವು ಈ ವಿಧಿಯನ್ನು ಆತುರದಲ್ಲಿ ಅನುಮೋದಿಸುತ್ತಿದ್ದೇವೆ ಎಂದು ನಮಗನಿಸುತ್ತದೆ. ಭಾರತೀಯ ಸಂಸ್ಥಾನಗಳನ್ನು ಪ್ರಾಂತ್ಯಗಳ ಅಂತಸ್ತಿಗೆ ತರುವುದು ನಮ್ಮ ಪ್ರಯತ್ನವಾಗಿರುವುದರಿಂದ ನಾವು ಇಲ್ಲಿ ಹಳೆಯ ಪ್ರಾಂತ್ಯಗಳನ್ನೇ ಮುಂದುವರಿಸಿಕೊಂಡು ಹೋಗಲು ಪ್ರಯತ್ನಿಸಿದ್ದೇವೆಯೇ ಹೊರತು ಅಂತಹ ಯಾವುದೇ ಅವಕಾಶವನ್ನು ಸಂಸ್ಥಾನಗಳಿಗೆ (ರಾಜ್ಯಗಳಿಗೆ) ಕೊಡಲಾಗಿಲ್ಲ.

---

* ಸಿ.ಎ.ಡಿ. ಸಂ. VIII, ಜೂನ್ ೧೫, ೧೯೪೯, ಪುಟ ೮೭೭

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಮ್ಮ ತಿದ್ದುಪಡಿಯಾದರೂ ಏನು?

**ಗೌರವಾನ್ವಿತ ಶ್ರೀ ಕೆ. ಸಂತಾನಮ್:** ನಾನು ಯಾವ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ....

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸನ್ಮಾನ್ಯ ಸಭಾಧ್ಯಕ್ಷರೆ, ಈ ವಿಧಿಯ ಮೇಲೆ ಇಷ್ಟೊಂದು ಚರ್ಚೆಯಾಗುವುದೆಂದು ನನಗನಿಸಿರಲಿಲ್ಲ. ಆದ್ದರಿಂದ ಈ ಚರ್ಚೆಯಲ್ಲಿ ಪ್ರಸ್ತಾಪಿಸಲಾಗಿರುವ ಸಂಶಯಗಳು, ತೊಂದರೆಗಳು ಮತ್ತು ತಪ್ಪು ಅಭಿಪ್ರಾಯಗಳನ್ನು ನಿವಾರಿಸುವ ದೃಷ್ಟಿಯಿಂದ ಕೆಲವು ಮಾತುಗಳನ್ನಾಡಬೇಕೆಂದು ನನಗನಿಸುತ್ತದೆ.

ಈ ಸಂವಿಧಾನದಲ್ಲಿ ೨೭೦ನೆಯ ವಿಧಿಯನ್ನು ಸೇರಿಸುವ ಅವಶ್ಯಕತೆಯಾದರೂ ಏನು ಎಂಬುದು ಕೇಳಲಾಗಿರುವ ಮೊದಲನೆಯ ಪ್ರಶ್ನೆಯಾಗಿದೆ. ಇದಕ್ಕೆ ಉತ್ತರ ಬಹಳ ಸರಳ. ಗೌರವಾನ್ವಿತ ಸದಸ್ಯರಿಗೆ ತಿಳಿದಿರುವಂತೆ ೧೯೩೫ರ ಕಾಯ್ದೆಗೆ ಮುಂಚೆ ಭಾರತ ಸರ್ಕಾರದ ಆಸ್ತಿಗಳು, ಹೊಣೆಗಾರಿಕೆಗಳನ್ನು ಒಂದು ಅಧಿಕೃತ ಸೆಕ್ರೆಟರಿ ಸಂಸ್ಥೆಯಾಗಿದ್ದ ಸೆಕ್ರೆಟರಿ ಆಫ್ ಸ್ಟೇಟ್–ಇನ್–ಕೌನ್ಸಿಲ್‌ಗೆ ನೀಡಲಾಗಿತ್ತು. ಆಫ್ ಸ್ಟೇಟ್–ಇನ್–ಕೌನ್ಸಿಲ್‌ರವರೇ ಭಾರತದ ಎಲ್ಲಾ ಆದಾಯಗಳು ಎಲ್ಲಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದು, ಭಾರತ ಸರ್ಕಾರದ ಎಲ್ಲಾ ಹೊಣೆಗಾರಿಕೆಗಳಿಗೆ ಮತ್ತು ಒಪ್ಪಂದಗಳಿಗೆ ಭಾರತ ಸರ್ಕಾರದ ಪರವಾಗಿ ಹೊಣೆಗಾರರಾಗಿದ್ದರು. ೧೯೩೫ರ ಪೂರ್ವದಲ್ಲಿ ಭಾರತ ಸರ್ಕಾರವು ಒಂದು ಏಕಾತ್ಮಕ ಪದ್ಧತಿಯ ಸರ್ಕಾರವಾಗಿತ್ತು. ಭಾರತ ಸರ್ಕಾರಕ್ಕೆ ಸೇರಿದ ಆಸ್ತಿಗಳು ಮತ್ತು ಪ್ರಾಂತ್ಯ ಸರ್ಕಾರಕ್ಕೆ ಸೇರಿದ ಆಸ್ತಿಗಳು ಎಂಬ ಯಾವುದೇ ವಿಭಿನ್ನತೆ ಇರಲಿಲ್ಲ. ಇವೆಲ್ಲವುಗಳನ್ನು ಒಂದು ಏಕಾತ್ಮಕ ಸಂಸ್ಥೆಯಾಗಿದ್ದ ಸೆಕ್ರೆಟರಿ ಆಫ್ ಸ್ಟೇಟ್–ಇನ್–ಕೌನ್ಸಿಲ್‌ನ ಯಾವುದೇ ತಕರಾರಿನಲ್ಲಿ ಈ ಸಂಸ್ಥೆಯ ಮೇಲೆಯೇ ದಾವೆ ಮಾಡಬಹುದಾಗಿತ್ತು ಅಥವಾ ದಾವೆಗೆ ಗುರಿಯಾಗಬಹುದಿತ್ತು. ಈ ವಿಷಯದಲ್ಲಿ ಭಾರತ ಸರ್ಕಾರ ಕಾಯ್ದೆ ೧೯೩೫ ಒಂದು ಮಹತ್ವದ ಬದಲಾವಣೆಯನ್ನು ಮಾಡಿತು. ಅದೇನೆಂದರೆ, ಅದರಲ್ಲಿ ಸೆಕ್ರೆಟರಿ ಆಫ್ ಸ್ಟೇಟ್–ಇನ್–ಕೌನ್ಸಿಲ್ ಭಾರತ ಸರ್ಕಾರದ ಪರವಾಗಿ ಹೊಂದಿದ್ದ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಿತು. ಭಾರತ ಸರ್ಕಾರಕ್ಕಾಗಿಯೇ ನಿಗದಿಪಡಿಸಲಾಗಿದ್ದ ಆಸ್ತಿ ಮತ್ತು ಹೊಣೆಗಾರಿಕೆಗಳು ಮತ್ತು ಪ್ರಾಂತ್ಯಗಳಿಗಾಗಿಯೇ ನಿಗದಿಪಡಿಸಲಾಗಿದ್ದ ಆಸ್ತಿಪಾಸ್ತಿ ಮತ್ತು ಹೊಣೆಗಾರಿಕೆಗಳು, ಸೆಕ್ರೆಟರಿ ಆಫ್ ಸ್ಟೇಟ್‌ರವರು ಭಾರತ ಸರ್ಕಾರದ ಮೇಲೆ ತಮ್ಮ ನಿಯಂತ್ರಣವನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟಿರಲಿಲ್ಲ ಎಂಬುದೇನೋ ನಿಜವೇ. ಭಾರತ ಸರ್ಕಾರ ಮತ್ತು ವಿವಿಧ ಪ್ರಾಂತೀಯ ಸರ್ಕಾರಗಳ ನಡುವೆ ಹಾಗೆ ಹಂಚಲಾದ ಆಸ್ತಿಗಳು ಭಾರತ ಸರ್ಕಾರದ ಸಾರ್ವಭೌಮ ಪ್ರಭುಗಳು ಭಾರತ ಸರ್ಕಾರದ ಕಾಯ್ದೆಯ ೧೭೨ನೆಯ ಭಾಗದಲ್ಲಿ ಹೇಳಿರುವಂತೆ ಅವೆಲ್ಲವುಗಳನ್ನೂ ಭಾರತ ಸರ್ಕಾರದ ಮತ್ತು ಪ್ರಾಂತೀಯ ಸರ್ಕಾರಗಳ ಪರವಾಗಿ ಹೊಂದಿರುತ್ತಾರೆ. ಇದೂ ಅಲ್ಲದೆ, ಹೊಣೆಗಾರಿಕೆಗಳು, ಆಸ್ತಿಪಾಸ್ತಿಗಳನ್ನು ವಿಭಜಿಸಿ ಅವುಗಳನ್ನು ವಿವಿಧ ಘಟಕಗಳಿಗೆ ಮತ್ತು ಕೇಂದ್ರದಲ್ಲಿ ಭಾರತ ಸರ್ಕಾರಕ್ಕೆ ಹಂಚಲಾಗಿದೆ ಎಂಬುದೂ ಸತ್ಯಸಂಗತಿ. ಈ ಸಂವಿಧಾನವನ್ನು ಅಂಗೀಕರಿಸುವ ಮೂಲಕ ಇಂದು ಏನು ಮಾಡುತ್ತಿದ್ದೇವೆ ಎಂಬುದನ್ನು ತಿಳಿದುಕೊಳ್ಳೋಣ. ಈ ಸಂವಿಧಾನವನ್ನು ಅಂಗೀಕರಿಸುವುದರೊಂದಿಗೆ ಭಾರತ ಸರ್ಕಾರ ಕಾಯ್ದೆ ೧೯೩೫ನ್ನು ರದ್ದುಗೊಳಿಸಿ ಅದನ್ನು ನಿರಸಿತಗೊಳಿಸುತ್ತಿದ್ದೇವೆ. ನಿರಸಿತಗೊಳಿಸಲಾದ ಕಾಯ್ದೆಗಳ ಅನುಸೂಚಿಯಲ್ಲಿ ಭಾರತ ಸರ್ಕಾರ ಕಾಯ್ದೆ ೧೯೩೫ನ್ನು ಸಹ ಉಲ್ಲೇಖಿಸಲಾಗಿದೆ. ಹಾಗೆ ನಿರಸಿತಗೊಳಿಸುವಾಗ ಈ ಭಾರತ ಸರ್ಕಾರ ಕಾಯ್ದೆಯಲ್ಲಿ ನಮೂದಿಸಲಾಗಿರುವ ಆಸ್ತಿಪಾಸ್ತಿ ಮತ್ತು ಹೊಣೆಗಾರಿಕೆಗಳು, ಸಂಬಂಧಪಟ್ಟ

ಕಾಯ್ದೆ ನಿರಸಿತಗೊಂಡಿದ್ದಾಗ್ಯೂ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಪ್ರಾಂತ್ಯಗಳಿಗೇ ಸೇರಿರುತ್ತವೆ ಎಂಬ ಅಂಶವನ್ನು ಸಂವಿಧಾನದಲ್ಲಿ ಎಲ್ಲಿಯಾದರೂ ಒಂದು ಕಡೆ ಹೇಳಬೇಕಾಗುತ್ತದೆ. ಹಾಗೆ ಮಾಡದಿದ್ದರೆ ೧೯೩೫ರ ಕಾಯ್ದೆ ರದ್ದಾದ ನಂತರ ಆಸ್ತಿಪಾಸ್ತಿಗಳು ಮತ್ತು ಹೊಣೆಗಾರಿಕೆಗಳ ಬಗ್ಗೆ ಎಲ್ಲಿಯೂ ಪ್ರಸ್ತಾಪವಿರುವುದಿಲ್ಲ. ಇಂದು ನಾನು ಮಾಡುತ್ತಿರುವುದಾದರೂ ಏನೆಂದರೆ ಸಂಬಂಧಪಟ್ಟ ಯಾವುದೇ ಕಾಯ್ದೆ ರದ್ದುಗೊಂಡಾಗ ಅದರ ಪ್ರಕಾರ ಕೈಗೊಂಡ ಕಾರ್ಯಗಳು ಅಸ್ತಿತ್ವದಲ್ಲಿರುತ್ತವೆ ಎಂದು ಹೇಳುವುದೇ ಆಗಿದೆ. ಪ್ರಸ್ತುತ ೨೭೦ನೆಯ ವಿಧಿ ಹೇಳುವುದೇನೆಂದರೆ ಭಾರತ ಸರ್ಕಾರ ಕಾಯ್ದೆ ೧೯೩೫ ರದ್ದಾದಾಗ್ಯೂ ಭಾರತದ ಕೇಂದ್ರ ಸರ್ಕಾರದ ಮತ್ತು ಇತರ ಘಟಕಗಳ ಆಸ್ತಿಪಾಸ್ತಿ ಮತ್ತು ಹೊಣೆಗಾರಿಕೆಗಳು ಮೊದಲಿನಂತೆ ಅವುಗಳಿಗೇ ಸೇರಿರುತ್ತವೆ. ಇದನ್ನೇ ಬೇರೆ ರೀತಿಯಲ್ಲಿ ಹೇಳಬೇಕೆಂದರೆ ಅವುಗಳು ೧೯೩೫ರ ಕಾಯ್ದೆಯನ್ವಯ ಸ್ಥಾಪಿಸಲಾಗಿದ್ದ ಭಾರತ ಸರ್ಕಾರ ಮತ್ತು ಪ್ರಾಂತ್ಯ ಸರ್ಕಾರಗಳ ಉತ್ತರಾಧಿಕಾರಿ ಸರಕಾರಗಳಾಗುತ್ತವೆ. ಇದರಿಂದ ಈ ಕಲಮನ್ನು ಸಂವಿಧಾನದಲ್ಲಿ ಸೇರಿಸಬೇಕಾದ ಅವಶ್ಯಕತೆ ಏನಿದೆ ಎಂಬುದು ಸದನಕ್ಕೆ ಅರ್ಥವಾಗುವುದೆಂದು ನಾನು ಭಾವಿಸುತ್ತೇನೆ.

ಈಗ ನಾನು ಚರ್ಚೆಯಲ್ಲಿ ಎತ್ತಲಾದ ಇನ್ನೊಂದು ಪ್ರಶ್ನೆಯನ್ನು ಪರಿಶೀಲಿಸುತ್ತೇನೆ. ಅದೇನೆಂದರೆ, ೨೭೦ನೆಯ ವಿಧಿಯಲ್ಲಿ ಭಾರತೀಯ ಸಂಸ್ಥಾನಗಳ ಆಸ್ತಿಪಾಸ್ತಿಗಳು ಮತ್ತು ಹೊಣೆಗಾರಿಕೆಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲ ಎಂಬುದು. ಈ ಬಗ್ಗೆ ಎರಡು ಸಂಗತಿಗಳನ್ನು ವಿಂಗಡಿಸಬೇಕಾಗಿದೆ. ಮೊದಲನೆಯದಾಗಿ, ನಾವು ಸಂವಿಧಾನದಲ್ಲಿ ತಮ್ಮ ಭೂಭಾಗದಲ್ಲಿ ಅಥವಾ ಇನ್ನಾವುದೇ ವಿಷಯದಲ್ಲಿ ಯಾವ ಮಾರ್ಪಾಡೂ ಆಗದೇ ಅವು ಇದ್ದ ಹಾಗೆಯೇ ಸಂವಿಧಾನಕ್ಕೊಳಪಡಲಿರುವ ಭಾರತೀಯ ಸಂಸ್ಥಾನಗಳ ಪ್ರಶ್ನೆ. ಉದಾಹರಣೆಗಾಗಿ ಮೈಸೂರು ಸಂಸ್ಥಾನ. ಅದು ಈಗ ಸ್ವತಂತ್ರ ಸಂಸ್ಥಾನವಾಗಿದ್ದು ಯಾವುದೇ ಮಾರ್ಪಾಡಿಗೊಳಗಾಗದೇ ಸಂವಿಧಾನಕ್ಕೊಳಗೊಳ್ಳುವುದಿದೆ. ಇನ್ನೊಂದು ಉದಾಹರಣೆಯೆಂದರೆ ತಮ್ಮ ನೆರೆಯ ಪ್ರಾಂತ್ಯಗಳೊಂದಿಗೆ ಈಗಾಗಲೇ ವಿಲೀನಗೊಂಡಿರುವ ರಾಜ್ಯಗಳು ಅಥವಾ ಸಂಸ್ಥಾನಗಳು ಮೂರನೆಯ ಪ್ರಾಂತ್ಯದೊಂದಿಗೆ ವಿಲೀನಗೊಳ್ಳದೆ ಎರಡು ಮೂರು ಸಂಸ್ಥಾನಗಳು ತಾವೇ ಒಟ್ಟಾಗಿ ಸೇರಿ ಒಂದು ದೊಡ್ಡ ಘಟಕವಾಗಿರುವ ಸಂದರ್ಭದಲ್ಲಿ ಅದು ತನ್ನ ಸಂವಿಧಾನದಲ್ಲಿ ಕೇಂದ್ರ ಸಂವಿಧಾನದ ೨೭೦ನೆಯ ವಿಧಿಯಲ್ಲಿರುವಂತೆಯೇ ಪ್ರಸ್ತುತ ಮೈಸೂರು ಸರ್ಕಾರದ ಆಸ್ತಿಪಾಸ್ತಿ ಮತ್ತು ಹೊಣೆಗಾರಿಕೆಗಳು ಹೊಸ ಮೈಸೂರು ಸರ್ಕಾರದಲ್ಲಿಯೂ ಮುಂದುವರಿಯುತ್ತವೆ ಎಂದು ನಮೂದಿಸುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದ್ದರಿಂದ ೨೭೦ನೆಯ ವಿಧಿಯಲ್ಲಿರುವಂತೆ ಪ್ರತ್ಯೇಕವಾಗಿ ಪ್ರಸ್ತಾಪದ ಅವಶ್ಯಕತೆ ಇರುವುದಿಲ್ಲ. ಅದೇ ರೀತಿ ತಮ್ಮೊಳಗೆ ಒಟ್ಟಾಗಿ ಸೇರಿಕೊಂಡಿರುವ ರಾಜ್ಯಗಳೂ ತಮ್ಮ ಒಡಂಬಡಿಕೆಗಳಲ್ಲಿ ಇದೇ ರೀತಿಯ ವ್ಯವಸ್ಥೆ ಮಾಡಿಕೊಂಡಿರಬಹುದು. ಒಕ್ಕೂಟಕ್ಕೊಳಗೊಳ್ಳುವ ರಾಜ್ಯಗಳೂ ತಮ್ಮ ತಮ್ಮ ಆಸ್ತಿಪಾಸ್ತಿ ಮತ್ತು ಹೊಣೆಗಾರಿಕೆಗಳು ತಾವು ಸೇರಿರುವ ರಾಜ್ಯಕ್ಕೆ ಸೇರಿದವುಗಳಾಗಿರುತ್ತವೆ ಎಂದು ತಮ್ಮ ಒಡಂಬಡಿಕೆಯಲ್ಲಿ ನಮೂದಿಸಬಹುದು.

ಇನ್ನು ತಮ್ಮ ನೆರೆಯ ಪ್ರಾಂತ್ಯಗಳೊಂದಿಗೆ ವಿಲೀನಗೊಂಡಿರುವ ರಾಜ್ಯ ನೆರೆಯ ಅಥವಾ ಸಂಸ್ಥಾನಗಳ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಈ ಸಂಬಂಧವಾಗಿಯೂ ೨೭೦ನೆಯ ವಿಧಿಯ ಬಗ್ಗೆ ಯಾವ ತೊಂದರೆಯೂ ನನಗೆ ಕಂಡುಬರುವುದಿಲ್ಲ. ಒಂದು ನಿರ್ದಿಷ್ಟ ಪ್ರಸಂಗವನ್ನೇ ತೆಗೆದುಕೊಳ್ಳೋಣ. ಯಾವುದೇ ಒಂದು ರಾಜ್ಯ ತನ್ನ ನೆರೆಯ ಪ್ರಾಂತ್ಯದೊಂದಿಗೆ ವಿಲೀನಗೊಂಡಾಗ ತಮ್ಮ ತಮ್ಮ ಆಸ್ತಿಪಾಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಹಂಚಿಕೊಳ್ಳುವ ಬಗ್ಗೆ ಯಾವುದಾದರೂ ಒಂದು ಒಪ್ಪಂದವಾಗಿರಲಿಕ್ಕೇ ಬೇಕು.

ಅವುಗಳು ರದ್ದಾಗುವುವೇ ಅಥವಾ ಅಳಿಸಿಹೋಗುವುವೇ ಅಥವಾ ಸಂಬಂಧಪಟ್ಟ ರಾಜ್ಯಗಳೇ ತಮ್ಮ ತಮ್ಮ ಆಸ್ತಿಪಾಸ್ತಿ ಮತ್ತು ಹೊಣೆಗಾರಿಕೆಗಳನ್ನು ನಿರ್ವಹಿಸಬೇಕೇ, ಇಲ್ಲವೇ ಅವುಗಳ ವಿಲೀನವನ್ನು ಸ್ವೀಕರಿಸಿದ ಪ್ರಾಂತ್ಯ ಸರ್ಕಾರ ನಿರ್ವಹಿಸಬೇಕೇ? ಅದೇನೇ ಇರಲಿ, ಈ ವಿಧಿಯು ಹೇಳುವುದೇನೆಂದರೆ, ಸಂವಿಧಾನ ಜಾರಿಗೆ ಬಂದಾಗಿನಿಂದ ಇವು ಬಹು ಮುಖ್ಯ ಪದಗಳು. ಸಂವಿಧಾನ ಸದ್ಯ ಜನವರಿ ೨೬ರಿಂದ ಜಾರಿಯಾಗುತ್ತದೆ ಎಂದು ನಾನೆಂದುಕೊಂಡಿದ್ದೇನೆ. ಸಂವಿಧಾನ ಜಾರಿಯಾಗುವುದಕ್ಕೆ ಮೊದಲು ವಿಲೀನಗೊಂಡ ರಾಜ್ಯಗಳು ಮತ್ತು ಪ್ರಾಂತ್ಯಗಳು ಆ ಹೊಣೆಗಾರಿಕೆಯನ್ನು ತಾವೇ ನಿಭಾಯಿಸಬೇಕಾಗುತ್ತದೆ. ಉದಾಹರಣೆಗಾಗಿ, ಸಂವಿಧಾನ ಜಾರಿಯಾಗುವ ಮುನ್ನ ಅಂತಹ ಯಾವುದೇ ಒಪ್ಪಂದವಾಗಿರದಿದ್ದ ಪಕ್ಷದಲ್ಲಿ ಕೇಂದ್ರ ಸರ್ಕಾರ ಮತ್ತು ಪ್ರಾಂತ್ಯ ಸರಕಾರಗಳು ಅಂತಹ ರಾಜ್ಯ ಅಥವಾ ಪ್ರಾಂತ್ಯ ಸರ್ಕಾರದ ಮೇಲೆ ಯಾವುದೇ ರೀತಿಯ ಹೊಸದಾದ ಹೊಣೆಯನ್ನು ಹೇರಲು ಸ್ವತಂತ್ರವಾಗಿರುತ್ತವೆ. ಆದ್ದರಿಂದ ನಾವು ಯಾವುದೇ ರೀತಿಯ ವ್ಯವಸ್ಥೆ ಅಥವಾ ಉಪಬಂಧವನ್ನು ಪ್ರತ್ಯೇಕವಾಗಿ ಮಾಡುವ ಅವಶ್ಯಕತೆ ಇಲ್ಲ. ಮೈಸೂರು ಸಂಸ್ಥಾನದಂಥ ಉದಾಹರಣೆಗಳಲ್ಲಿ ಅಂತಹ ರಾಜ್ಯಗಳು ತಮ್ಮದೇ ಆದ ವ್ಯವಸ್ಥೆ ಮಾಡಿಕೊಳ್ಳಲು ಸ್ವತಂತ್ರವಾಗಿವೆ. ಅಂತಹ ವ್ಯವಸ್ಥೆ ಮಾಡಲಾದಾಗ ನಾವು ಅವುಗಳನ್ನು ಸಂವಿಧಾನದ ಭಾಗ IIIರಲ್ಲಿ ಹೇಳಲಾಗಿರುವ ರಾಜ್ಯಗಳ ಸಂಬಂಧ ಸೂಚಿತವಾದ ರಾಜ್ಯಗಳ ಪಟ್ಟಿಯಲ್ಲಿ ಸೇರಿಸುತ್ತೇವೆ. ಆದ್ದರಿಂದ ೨೭೦ನೆಯ ಸಂಬಂಧ ಯಾವುದೇ ತೊಂದರೆ ಇರುವುದಿಲ್ಲ ಎಂದು ನನಗನಿಸುತ್ತದೆ. ಅದನ್ನು ಇದ್ದಹಾಗೆಯೇ ಅಂಗೀಕರಿಸಬೇಕೆಂದು ಕೋರುತ್ತೇನೆ.

**ಶ್ರೀ ಮಹಾವೀರ್ ತ್ಯಾಗಿ:** ಇಲ್ಲಿ ಹೇಳಲಾಗುತ್ತಿರುವ ಒಪ್ಪಂದವು ಹಣಕಾಸು ವಿಷಯಗಳಿಗೆ ಮಾತ್ರ ಸಂಬಂಧಿಸಿದೆಯೋ ಅಥವಾ ಪ್ರಾದೇಶಿಕ ವಿಷಯಗಳಿಗೂ ಸಂಬಂಧಿಸಿದೆಯೋ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಮತ್ತು ಕರ್ತವ್ಯಗಳ ಬಗ್ಗೆ ಹೇಳುತ್ತದೆ. ಉದಾಹರಣೆಗಾಗಿ ಒಂದು ಪ್ರಾಂತ್ಯವು ಒಂದು ರಾಜ್ಯವನ್ನು ತನ್ನಲ್ಲಿ ಸೇರಿಸಿಕೊಂಡಾಗ ಆ ರಾಜ್ಯದ ಅರಸನಿಗೆ ನಿರ್ದಿಷ್ಟವಾದ ಪಿಂಚಣಿ ಕೊಡಲು ಒಪ್ಪಂದ ಮಾಡಿಕೊಂಡಿದ್ದರೆ ಆಗ ಅದು ೨೭೦ನೆಯ ವಿಧಿಯ ಪ್ರಕಾರ ಒಂದು ಹೊಣೆ ಎನಿಸುತ್ತದೆ. ಪ್ರದೇಶಗಳ ವರ್ಗಾವಣೆಯ ವಿಷಯಗಳ ಇತರ ಅನುಬಂಧಗಳು ಅನ್ವಯವಾಗುತ್ತವೆ.

**ಶ್ರೀ ಹೆಚ್. ವಿ. ಕಾಮತ್:** ಪುಟದ ಬದಿಯಲ್ಲಿರುವ ಉಪಶೀರ್ಷಿಕೆಯಲ್ಲಿರುವ "ಹಕ್ಕುಗಳು" ಎಂಬ ಪದವನ್ನು ಈ ವಿಧಿಯಲ್ಲಿ ಏಕೆ ಕೈಬಿಡಲಾಗಿದೆ ಎಂಬುದನ್ನು ನಾನು ತಿಳಿಯಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಕರಡು ಸಮಿತಿ ಇದನ್ನು ಪರಿಶೀಲಿಸುವುದು.

**ಶ್ರೀ ಬಿ. ದಾಸ್:** ವಿದೇಶಗಳಲ್ಲಿ, ಅದರಲ್ಲಿಯೂ ಯುನೈಟೆಡ್ ಕಿಂಗ್‌ಡಮ್ಸ್‌ನಲ್ಲಿ, ಭಾರತ ಹೊಂದಿರುವ ಆಸ್ತಿಪಾಸ್ತಿಗಳನ್ನು ೨೭೦ನೆಯ ವಿಧಿಯಲ್ಲಿ ಏಕೆ ಸೇರಿಸಲಾಗಿಲ್ಲ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಂತಹ ಆಸ್ತಿಪಾಸ್ತಿ ಭಾರತ ಮತ್ತು ಪಾಕಿಸ್ತಾನ ವಿಭಜನೆಗೆ ಸಂಬಂಧಿಸಿದ್ದಾಗಿದೆ ಎಂದು ನಾನು ಭಾವಿಸುತ್ತೇನೆ. ಉದಾಹರಣೆಗೆ, ಇಂಡಿಯಾ ಆಫೀಸ್ ಗ್ರಂಥಾಲಯ ಮುಂತಾದವು ಅದನ್ನು ಚರ್ಚಿಸಲಾಗುತ್ತಿದೆ ಎಂದು ನಾನು ತಿಳಿದಿದ್ದೇನೆ.

**ಶ್ರೀ ಬಿ. ದಾಸ್:** ಪೌಂಡುಗಳ ರೂಪದಲ್ಲಿರುವ ಉಳಿಕೆಯ ಶಿಲ್ಕಿನ ವಿಷಯ ಹೇಗೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಗೌರವಾನ್ವಿತ ಮಿತ್ರರು ಈ ವಿಷಯವನ್ನು ನನಗಿಂತ ಚೆನ್ನಾಗಿ ಬಲ್ಲರು.

[**ಡಾ. ಅಂಬೇಡ್ಕರ್‌ರವರು ಸೂಚಿಸಿರುವ ಏಕೈಕ ತಿದ್ದುಪಡಿಯೊಂದಿಗೆ ೨೭೦ನೆಯ ವಿಧಿಯು ಅಂಗೀಕೃತವಾಗಿ ಅದನ್ನು ಸಂವಿಧಾನದಲ್ಲಿ ಸೇರಿಸಲಾಗಿದೆ.**]

* * *

## ವಿಧಿ ೨೭೧*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ೨೭೧ನೆಯ ವಿಧಿಯಲ್ಲಿ

(i) ಎರಡು ಕಡೆ ಬರುವ “ರಾಜ್ಯ ಸರಕಾರದ ಉದ್ದೇಶಕ್ಕಾಗಿ” ಎಂಬ ಪದಗಳನ್ನು ಕೈ ಬಿಡತಕ್ಕದ್ದು.

(ii) ಎರಡು ಕಡೆ ಬರುವ “ಭಾರತ ಸರಕಾರದ ಉದ್ದೇಶಕ್ಕಾಗಿ” ಎಂಬ ಪದಗಳನ್ನು ಕೈಬಿಡತಕ್ಕದ್ದು.

[**ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ತಿದ್ದುಪಡಿಯೊಂದಿಗೆ ೨೭೧ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**]

## ವಿನೂತನ ವಿಧಿ ೨೭೧ಎ**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಹೀಗೆ ಮಂಡಿಸುತ್ತಿದ್ದೇನೆ.

“ಈ ಕೆಳಗೆ ಕಾಣಿಸಲಾದ ೨೭೧–ಎ ಹೊಸ ವಿಧಿಯನ್ನು ೨೭೧ನೆಯ ವಿಧಿಗೆ ಸೇರಿಸಬೇಕು.

**ಪ್ರಾದೇಶಿಕ ಜಲ ಭಾಗದಡಿಯಲ್ಲಿರುವ ಎಲ್ಲಾ ಭೂಮಿ ಖನಿಜಗಳು ಮತ್ತು ಇತರ ಬೆಲೆ ಬಾಳುವ ವಸ್ತುಗಳು ಒಕ್ಕೂಟಕ್ಕೆ ಸೇರಿವೆ.**

೨೭೧–ಎ: “ಭಾರತದ ಪ್ರಾದೇಶಿಕ ಸಮುದ್ರದಡಿಯಲ್ಲಿ ಹುದುಗಿರುವ ಎಲ್ಲಾ ಭೂಮಿ, ಖನಿಜಗಳು ಮತ್ತು ಇತರ ಬೆಲೆಯುಳ್ಳ ವಸ್ತುಗಳು ಒಕ್ಕೂಟಕ್ಕೆ ಸೇರಿದವುಗಳಾಗಿದ್ದು ಅವುಗಳನ್ನು ಭಾರತ ಒಕ್ಕೂಟದ ಉದ್ದೇಶಕ್ಕಾಗಿ ಬಳಸತಕ್ಕದ್ದು.” ಇದು ಬಹಳ ಮುಖ್ಯವಾದ ವಿಧಿ ಎನಿಸಿದೆ. ಭಾರತದ ಭೂಭಾಗದಲ್ಲಿ ಅನೇಕ ರಾಜ್ಯಗಳು ಕಡಲ ತೀರದ ರಾಜ್ಯಗಳಾಗಿದ್ದು ಅವು ಎಂದಾದರೂ ತಮ್ಮ ತೀರದಲ್ಲಿರುವ ಜಲಭಾಗಗಳಲ್ಲಿ ಹುದುಗಿರುವ ಎಲ್ಲಾ ಸಂಪತ್ತು ತಮಗೆ ಸೇರಿದವು ಎಂದು ಪ್ರತಿಪಾದಿಸಬಹುದಾಗಿದೆ. ಅಂತಹ ವಾದವನ್ನು ಆ ರಾಜ್ಯಗಳು ಎತ್ತುವುದಕ್ಕೆ ಪೂರ್ವದಲ್ಲಿಯೇ ನಾವು ಈ ವಿಧಿಯನ್ನು ಸಂವಿಧಾನದಲ್ಲಿ ಅಳವಡಿಸುವುದು ಅವಶ್ಯವೆನಿಸಿದೆ.

* * *

***__ಶ್ರೀ ಹೆಚ್. ವಿ. ಕಾಮತ್:__** “ಭಾರತದ ಜಲ ಪ್ರಾಂಗಣದಲ್ಲಿರುವ ಎಲ್ಲಾ ಭೂಮಿ, ಖನಿಜ ಮತ್ತು ಬೆಲೆ ಬಾಳುವ ಇತರ ವಸ್ತುಗಳು” ಎಂದು ಈ ವಿಧಿಯಲ್ಲಿ ಹೇಳಲಾಗಿದೆ. ನಾವು ಅನುಸೂಚಿ Iರಲ್ಲಿ

---

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೮೮೬.

** ಅದೇ, ಪುಟ ೮೮೭.

*** ಅದೇ, ಪುಟ ೮೮೭.

ಈಗಾಗಲೇ ರಾಜ್ಯಗಳ ಮತ್ತು ಭಾರತದ ಭೂ ಪ್ರದೇಶವನ್ನು ವಿವರಿಸಿದ್ದೇವೆ. ಆದರೆ, ನಾವು ಸಂವಿಧಾನದಲ್ಲಿ ಎಲ್ಲಿಯೂ 'ಭಾರತದ ಜಲಪ್ರಾಂಗಣ' ಎಂಬುದನ್ನು ವಿವರಿಸಿಲ್ಲ. ಈ ಬಗ್ಗೆ ಸಂವಿಧಾನ ಮೌನವಾಗಿದೆ.

**ಮಾನ್ಯ ಸಭಾಧ್ಯಕ್ಷ:** ಇದು ಅಂತಾರಾಷ್ಟ್ರೀಯ ಕಾನೂನಿನಲ್ಲಿ ಹೇಳಲಾದ ಮತ್ತು ಎಲ್ಲರಿಗೂ ಗೊತ್ತಿರುವ ಅಭಿವ್ಯಕ್ತಿಯಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದಕ್ಕೆ ಪ್ರತ್ಯೇಕ ವ್ಯಾಖ್ಯೆ ಅಥವಾ ವಿವರಣೆ ನೀಡುವ ಅವಶ್ಯಕತೆಯಿಲ್ಲ.

* * *

***ಶ್ರೀ ಹೆಚ್. ವಿ. ಕಾಮತ್:** ಸದನವು ಈ ವಿಷಯದ ಮೇಲೆ ಮತ ನೀಡುವ ಮುಂಚೆ ಡಾ. ಅಂಬೇಡ್ಕರರು ಈ ಬಗ್ಗೆ ಸ್ಪಷ್ಟೀಕರಣ ನೀಡುವರೆಂದು ಭಾವಿಸುತ್ತೇನೆ.

**ಶ್ರೀ ಎ. ಥಾನು ಪಿಳ್ಳೈ** (ತ್ರಾವಂಕೋರ್ ಸಂಸ್ಥಾನ): ಮಾನ್ಯ ಸಭಾಧ್ಯಕ್ಷರೇ, ಈಗ ಹೇಳಿರುವ ರೀತಿಯಲ್ಲಿ ಈ ಉಪಬಂಧದ ಅವಶ್ಯಕತೆಯಾದರೂ ಏನು ಎಂಬುದರ ಬಗ್ಗೆ ಡಾ. ಅಂಬೇಡ್ಕರರು ಹೆಚ್ಚು ವಿವರಣೆಯನ್ನು ಸದನಕ್ಕೆ ನೀಡುವರೆಂದು ನಾನು ನಿರೀಕ್ಷಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ನಿರ್ದಿಷ್ಟವಾಗಿ ಏನನ್ನು ವಿವರಿಸಬೇಕಾಗಿದೆ ಎಂಬುದನ್ನು ತಿಳಿಯಬಹುದೇ?

* * *

**ಶ್ರೀ ಎಂ.ಅನಂತಶಯನಂ ಅಯ್ಯಂಗಾರ್:** "ಭಾರತ ಜಲಪ್ರದೇಶಗಳಲ್ಲಿರುವ ಎಲ್ಲಾ ಸಾಗರಗಳು ಮತ್ತು ಅವುಗಳಲ್ಲಡಗಿರುವ ಎಲ್ಲಾ ಭೂಮಿಗಳು ಖನಿಜಗಳು ಮತ್ತು ಇತರ ಬೆಲೆ ಬಾಳುವ ವಸ್ತುಗಳು ಭಾರತದ ಒಕ್ಕೂಟ ಸೇರಿದವುಳಾಗಿದ್ದು ಅವುಗಳನ್ನು ಒಕ್ಕೂಟವಾಗಿಯೇ ಇಟ್ಟುಕೊಳ್ಳಲಾಗಿದೆ" ಎಂದು ನಾನು ಹೇಳಬಯಸುತ್ತೇನೆ.

**ಒಬ್ಬ ಗೌರವಾನ್ವಿತ ಸದಸ್ಯ:** ವಾಯುವಿನ ವಿಷಯ ಹೇಗೆ?

**ಇನ್ನೊಬ್ಬ ಗೌರವಾನ್ವಿತ ಸದಸ್ಯ:** ಸ್ವರ್ಗದ ಬಗ್ಗೆ ಹೇಗೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ತಿದ್ದುಪಡಿಯನ್ನು ಸೂಚಿಸುವಾಗ ಮಾಡಿದ ಭಾಷಣದಲ್ಲಿ ಈ ವಿಧಿಯ ಅವಶ್ಯಕತೆ ಏನು ಎಂಬುದನ್ನು ವಿವರಿಸುತ್ತ ಅವುಗಳಿಗೆ ಕಾರಣಗಳನ್ನು ತಿಳಿಸಿದ್ದೇನೆ. ಇದರಲ್ಲಿ ಮೀನುಗಾರಿಕೆಯ ಹಕ್ಕು ಸೇರಿದೆಯೋ ಇಲ್ಲವೋ ಎಂಬುದರ ಬಗ್ಗೆ ನನ್ನ ಗೌರವಾನ್ವಿತ ಮಿತ್ರ ಶ್ರೀ ಪಿಳ್ಳೈಯವರ ಮನಸ್ಸಿನಲ್ಲಿ ಅನುಮಾನ ಉಂಟಾಗಿರಬಹುದು. ಪಟ್ಟಿ IIರ ೨೯ನೆಯ ಬಾಬಿನಲ್ಲಿ ಈಗಾಗಲೇ ಮೀನುಗಾರಿಕೆಯನ್ನು ಸೇರಿಸಲಾಗಿರುವ ಬಗ್ಗೆ ನಾನು ಅವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಎ.ಥಾನು ಪಿಳ್ಳೈ:** ನನ್ನ ತಕರಾರು ಬೇರೆ ವಿಷಯಗಳ ಸಂಬಂಧವಾಗಿಯೂ ಇದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಆ ವಿಷಯಕ್ಕೆ ಬರಲಿದ್ದೇನೆ. ಸದ್ಯ ಅದನ್ನೇ ಪರಿಶೀಲಿಸುತ್ತಿದ್ದೇನೆ. ಆದ್ದರಿಂದ IIನೆಯ ಸಂಖ್ಯೆಯಲ್ಲಿ ಮೀನುಗಾರಿಕೆಯನ್ನು ಸೇರಿಸಲಾಗಿದೆಯಾದರೂ ಆ ಪಟ್ಟಿಯ ೨೯ನೆಯ ಬಾಬಿನ ಪ್ರಕಾರವೇ ಕೇಂದ್ರ ಸರಕಾರ ಯಾವುದೇ ಜಲಪ್ರಾಂಗಣದ ಮೇಲೆ

---

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪು. ೮೮೮.

ಅಧಿಕಾರ ಹೊಂದಿರುತ್ತದೆ. ಆದ್ದರಿಂದ ಭಾರತದ ಜಲಪ್ರಾಂಗಣದೊಳಗಡೆಯೂ ಮೀನುಗಾರಿಕೆ ಪ್ರಾಂತೀಯ ವಿಷಯವಾಗಿರುತ್ತದೆ. ಈಗ ಈ ವಿಷಯ ನನ್ನ ಗೌರವಾನ್ವಿತ ಮಿತ್ರ ಶ್ರೀ ಥಾನು ಪಿಳ್ಳೈಯವರಿಗೆ ಸ್ಪಷ್ಟವಾಗಿರಬಹುದು.

ಮೊದಲನೆಯ ಪ್ರಶ್ನೆಗೆ ಸಂಬಂಧಿಸಿದಂತೆ ವಸ್ತುಸ್ಥಿತಿ ಹೀಗಿದೆ. ನನ್ನ ಗೌರವಾನ್ವಿತ ಮಿತ್ರ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಹೇಳಿದಂತೆ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿಯೂ ಜಲಪ್ರಾಂಗಣವು ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಸೇರಿದೆಯೇ ಅಥವಾ ಅದರ ವಿವಿಧ ರಾಜ್ಯಗಳಿಗೆ ಸೇರಿದೆಯೇ ಎಂಬ ಪ್ರಶ್ನೆ ಇದೆ. ಏಕೆಂದರೆ, ಅಮೆರಿಕದ ಸಂವಿಧಾನದ ಪ್ರಕಾರ ಕೇಂದ್ರ ಸರ್ಕಾರಕ್ಕೆ ನಿರ್ದಿಷ್ಟವಾಗಿ ಸಂವಿಧಾನದಲ್ಲಿ ನೀಡಲಾದ ಅಧಿಕಾರಗಳು ಮಾತ್ರ ಇರುತ್ತವೆ. ಆದ್ದರಿಂದ ಅದು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಇನ್ನೂ ಒಂದು ಚರ್ಚಾಸ್ಪದ ವಿಷಯವೇ ಆಗಿ ಉಳಿದಿದೆ. ಇದು ಒಂದು ಪ್ರಮುಖ ಪ್ರಶ್ನೆಯಾಗಿದ್ದು ಇದನ್ನು ಭವಿಷ್ಯದಲ್ಲಿ ಊಹಾಪೋಹಕ್ಕೆ ಇಲ್ಲವೆ ವ್ಯಾಜ್ಯಕ್ಕೆ ಆಸ್ಪದ ಮಾಡಬಾರದೆಂಬ ಉದ್ದೇಶದಿಂದ, ಈ ಸಮಸ್ಯೆಯನ್ನು ಈಗಲೇ ಬಗೆಹರಿಸುವ ಉದ್ದೇಶದಿಂದ, ಈ ವಿಧಿಯನ್ನು ಮಂಡಿಸಲಾಗಿದೆ. ಸಾಮಾನ್ಯವಾಗಿ ಯಾವುದೇ ರಾಜ್ಯದ ಭೂಪ್ರದೇಶದ ಗಡಿಯು ಭೂಪ್ರದೇಶಕ್ಕೆ ಮಾತ್ರ ಸೀಮಿತವಾಗಿರದೆ ಸಮುದ್ರದಲ್ಲಿ ಮೂರು ಮೈಲಿಗಳವರೆಗೆ ಹಬ್ಬಿರುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಇದಕ್ಕೆ ಅಂತಾರಾಷ್ಟ್ರೀಯ ಕಾನೂನಿನ ಮಾನ್ಯತೆಯೂ ಇದೆ. ಈಗ ತೋರುತ್ತಿರುವ ಭೀತಿ ಏನೆಂದರೆ, ನಾನು ಯಾವ ವಿಷಯವನ್ನೂ ಮುಚ್ಚಿಡಲು ಬಯಸುವುದಿಲ್ಲ. ಕೆಲವು ಕಡಲ ತೀರ (ಕರಾವಳಿ) ರಾಜ್ಯಗಳು, ಉದಾಹರಣೆಗಾಗಿ, ಕೊಚ್ಚಿ, ಟ್ರಾವಂಕೋರ್ ಅಥವಾ ಕಛ್ ರಾಜ್ಯಗಳು ಭಾರತದ ಒಕ್ಕೂಟಕ್ಕೆ ಪ್ರವೇಶಿಸಿವೆ. ನಾವು ಈಗ ಪ್ರಸ್ತಾಪ ಮಾಡುತ್ತಿರುವಂತಹ ಯಾವುದೇ ವಿಧಿ ಸಂವಿಧಾನದಲ್ಲಿರದಿದ್ದರೆ ಆ ರಾಜ್ಯಗಳು ಮುಂದೆ ಎಂದಾದರೂ "ಭಾರತ ಕೇಂದ್ರ ಸರ್ಕಾರದಲ್ಲಿ ವಿಲೀನಗೊಂಡಿರುವ ಪರಿಣಾಮವಾಗಿ ಕೇಂದ್ರ ಸರ್ಕಾರಕ್ಕೆ ವಿಲೀನಗೊಂಡ ರಾಜ್ಯ ಸರ್ಕಾರಗಳ ಭೌತಿಕ ಭೂಭಾಗಗಳ ಮೇಲೂ ಅಲ್ಲದೆ, ಜಲಪ್ರಾಂಗಣದ ಮೇಲೂ ಅಧಿಕಾರ ರಾಜ್ಯಕ್ಕೇ ಸೇರಿರುತ್ತದೆ. ಆ ಅಧಿಕಾರ ಅಂತಾರಾಷ್ಟ್ರೀಯ ಕಾನೂನಿನ ಪ್ರಕಾರ ತಮಗೇ ಸೇರಿದೆ" ಎಂದು ಅವು ಹೇಳಬಹುದು. ಆದ್ದರಿಂದ ಯಾವುದೇ ಕಡಲ ತೀರದ ರಾಜ್ಯ ಭಾರತ ಒಕ್ಕೂಟಕ್ಕೆ ಸೇರಿದಾಗ ಆ ಕರಾವಳಿ ರಾಜ್ಯದ ಜಲಪ್ರಾಂಗಣವೂ ಕೇಂದ್ರ ಸರಕಾರದ ಅಧಿಕಾರಕ್ಕೊಳಪಡುವುದು ಎಂಬುದನ್ನು ಸಂವಿಧಾನದಲ್ಲಿ ಹೇಳಬೇಕಾಗಿದೆ. ಹಾಗಾದಾಗ ಮುಂದೆ ಯಾವುದೇ ವ್ಯಾಜ್ಯಕ್ಕೆ ಅವಕಾಶವಿರುವುದಿಲ್ಲ. ಆದಕಾರಣ ನಾವು ೨೭೧–ಎ ವಿಧಿಯನ್ನು ಸೇರಿಸಬೇಕಾಗಿದೆ.

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್:** ನೀರಿನ ಮೇಲಣ ಅಧಿಕಾರ ಹೇಗೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನೀವು ಏಕೆ ನೀರಿನ ಸ್ವಾಮ್ಯ ಹೊಂದಬಯಸುವಿರಿ? ಅಂತೆಯೇ ನೀವು ಆಕಾಶ ಸ್ವಾಮ್ಯವನ್ನು ಹೊಂದಲು ಬಯಸಬಹುದು.

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್:** ಉಪ್ಪು ತಯಾರಿಕೆ ಮುಂತಾದವುಗಳಿಗಾಗಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆ ಪ್ರದೇಶದ ಮೇಲೆ ನಿಮ್ಮ ಕಾನೂನುಗಳೇ ಜಾರಿಯಾಗುತ್ತವೆ. ಭೌತಿಕ ಭೂಭಾಗದ ಅಂಚಿನಿಂದ ಸಮುದ್ರದ ಮೂರು ಮೈಲಿಗಳವರೆಗೆ ನೀವು ಮಾಡುವ ಕಾನೂನುಗಳೇ ಈ ವಿಷಯಕ್ಕೆ ಅನ್ವಯಿಸುತ್ತವೆ. ನಿಮಗೆ ಬೇಕಾಗಿರುವುದೂ ಅದೇ ಮತ್ತು ಇದರಿಂದಾಗಿ ಆ ಅಧಿಕಾರ ನಿಮಗೆ ದೊರೆಯುತ್ತದೆ.

**ಶ್ರೀ ಮಹಾವೀರ್ ತ್ಯಾಗಿ:** ನೀರನ್ನು ಇದರಲ್ಲಿ ಸೇರಿಸಲಾಗಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಂತಾರಾಷ್ಟ್ರೀಯ ಕಾನೂನಿನಂತೆ ಒಂದು ರಾಜ್ಯದ ಭೂಭಾಗದಲ್ಲಿ ಭೌತಿಕ ಭೂಭಾಗವೂ ಅಲ್ಲದೆ, ಸಮುದ್ರದಲ್ಲಿಯೂ ಮೂರು ನಾವಿಕ ಮೈಲಿಗಳವರೆಗೆ ಹಬ್ಬುತ್ತದೆ. ಆದ್ದರಿಂದ ನೀವು ಮಾಡುವ ಯಾವುದೇ ಕಾನೂನು ಅಲ್ಲಿಯತನಕ ಅನ್ವಯಿಸುತ್ತದೆ.

**ಶ್ರೀ ಮಹಾವೀರ್ ತ್ಯಾಗಿ:** ಉಳಿದ ಇತರ ನೀರಿನ ಸ್ಥಿತಿ ಏನು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ವಾಯುವಿನ ಕೆಳಗಿರುವ ಎಲ್ಲವೂ ನಿಮಗೇ ಸೇರಿದ್ದಾಗಿದೆ.

**ಶ್ರೀ ಮಹಾವೀರ್ ತ್ಯಾಗಿ:** ಮೂರು ನಾವಿಕ ಮೈಲುಗಳ ನಂತರದಲ್ಲಿರುವ ನೀರಿನ ಸ್ಥಿತಿ ಏನು?

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್:** ನೀರು ಇತರ ವಸ್ತುಗಳಿಗಿಂತ ಹೆಚ್ಚಲ್ಲದಿದ್ದರೂ ಅವುಗಳಷ್ಟೇ ಮಹತ್ವದ್ದಾಗಿದ್ದು, ಆ ಸಂಬಂಧ ಭವಿಷ್ಯದಲ್ಲಿ ಬಹಳಷ್ಟು ವಿವಾದಗಳು ಉದ್ಭವಿಸಬಹುದೆಂಬ ಅಂಶವನ್ನು ಡಾ. ಅಂಬೇಡ್ಕರ್‌ರವರು ಅರಿತಿದ್ದಾರೆಯೇ ಎಂಬುದನ್ನು ನಾನು ಅವರಿಗೆ ಕೇಳಬಹುದೇ? ಪ್ರಾಂತ್ಯಗಳೂ ಮತ್ತು ಒಕ್ಕೂಟದ ನಡುವೆ ಉದ್ಭವಿಸಬಹುದಾದ ವ್ಯಾಜ್ಯಗಳು ಉಂಟಾಗದಂತೆ ಮಾಡಲು ನೀರಿನ ಆಸ್ತಿಯನ್ನು ಭಾರತ ಒಕ್ಕೂಟದ ಆಸ್ತಿಗಳ ಪಟ್ಟಿಯಲ್ಲಿ ಸೇರಿಸುವುದು ಅಪೇಕ್ಷಣೀಯ ವಲ್ಲವೆ?

**ಮಾನ್ಯ ಸಭಾಧ್ಯಕ್ಷ:** ಅವರ ಅಭಿಪ್ರಾಯದಲ್ಲಿ ಅದರ ಅವಶ್ಯಕತೆ ಇಲ್ಲ ಎಂದು ಅವರು ಈಗಾಗಲೇ ಉತ್ತರ ನೀಡಿದ್ದಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಭೂಭಾಗದ ಮೇಲಿರುವ ಎಲ್ಲವೂ ಭೂಮಿಯೊಡನೆ ಸೇರಿರುತ್ತದೆ. ಭೂಮಿಯ ಮೇಲೆ ಒಂದು ಮರ ಇದ್ದರೆ ಅದು ಆ ಭೂಮಿಗೇ ಸೇರುತ್ತದೆ. ನೀರು ಭೂಮಿಯ ಮೇಲೆ ಇದ್ದರೆ, ಅದು ಆ ಭೂಮಿಗೇ ಸೇರುತ್ತದೆ. ನೀರು ಭೂಮಿಯ ಮೇಲೆ ಇರುವುದರಿಂದ ಅದು ಆ ಭೂಮಿಗೇ ಸೇರಿರುತ್ತದೆ.

**ಒಬ್ಬ ಗೌರವಾನ್ವಿತ ಸದಸ್ಯ:** ಮಾನ್ಯರೇ........

**ಮಾನ್ಯ ಸಭಾಧ್ಯಕ್ಷ:** ಈ ವಿಷಯದ ಮೇಲೆ ಸಾಕಷ್ಟು ಚರ್ಚೆ ಮಾಡಿದ್ದೇವೆ ಎಂದು ನಾನು ಭಾವಿಸುತ್ತೇನೆ ಹಾಗೂ ಡಾ. ಅಂಬೇಡ್ಕರ್‌ರವರು ಚರ್ಚೆಗೆ ಉತ್ತರ ನೀಡಿದ್ದಾರೆ. ಚರ್ಚೆಯನ್ನು ಮುಂದುವರೆಸುವ ಅವಶ್ಯಕತೆ ಇಲ್ಲ. ಈ ವಿಧಿಯನ್ನು ಮತದಾನಕ್ಕೆ ಹಾಕುತ್ತೇನೆ.

**ಶ್ರೀ ಕೆ. ಹನುಮಂತಯ್ಯ** (ಮೈಸೂರು ಸಂಸ್ಥಾನ)**:** ನಾನು ಒಂದು ಸ್ಪಷ್ಟೀಕರಣ ಪಡೆಯಬಯಸುತ್ತೇನೆ. ಡಾ. ಅಂಬೇಡ್ಕರ್‌ರವರು ಹೇಳಿದಂತೆ ಜಲಪ್ರಾಂಗಣದ ನೀರು, ಎಂದರೆ ಕರಾವಳಿಯ ಆಚೆಗಿರುವ ಮೂರು ನಾವಿಕ ಮೈಲು ಭೂಮಿಯು ಒಕ್ಕೂಟಕ್ಕೆ ಸೇರಿದ್ದಾಗಿದೆ ಎನ್ನುವುದಾದರೆ ಈ ವಿಧಿಯ ಅವಶ್ಯಕತೆಯಾದರೂ ಏನು?

**ಮಾನ್ಯ ಸಭಾಧ್ಯಕ್ಷ:** ಈ ಪ್ರಶ್ನೆಗೆ ಅವರು ಉತ್ತರ ನೀಡಿದ್ದಾರೆ.

**ಶ್ರೀ ಕೆ. ಹನುಮಂತಯ್ಯ:** ಡಾ. ಅಂಬೇಡ್ಕರರು ಅರ್ಥೈಸುವುದು ಸರಿ ಇದ್ದರೆ...

**ಮಾನ್ಯ ಸಭಾಧ್ಯಕ್ಷ:** ಅದರ ಬಗ್ಗೆ ಹೆಚ್ಚಿನ ಚರ್ಚೆ ಬೇಡ. ಡಾ. ಅಂಬೇಡ್ಕರ್‌ರವರು ತಾವು ಹೇಳಬೇಕಾದ್ದನ್ನು ಹೇಳಿರುತ್ತಾರೆ. ಸದಸ್ಯರು ಅದನ್ನು ಒಪ್ಪಿಕೊಳ್ಳಬೇಕು.

ಈಗ ನಾನು ಈ ವಿಧಿಯನ್ನು ಮತಕ್ಕೆ ಹಾಕುತ್ತೇನೆ.

ನಮ್ಮ ಮುಂದೆ ಇರುವ ಪ್ರಶ್ನೆ ಎಂದರೆ, "ಈ ಕೆಳಗಣ ಹೊಸ ವಿಧಿಯನ್ನು ೨೭೧ನೆಯ ವಿಧಿಯ

ನಂತರ ಸೇರಿಸತಕ್ಕದ್ದು ಒಕ್ಕೂಟದ ಜಲಪ್ರಾಂಗಣದ ಒಳಗಿರುವ ಎಲ್ಲಾ ಭೂಮಿ, ಖನಿಜಗಳು ಮತ್ತು ಇತರ ಬೆಲೆಬಾಳುವ ವಸ್ತುಗಳು ಒಕ್ಕೂಟಕ್ಕೆ ಸೇರಿರುತ್ತವೆ.

## ವಿಧಿ ೨೭೧ಎ

**"ಭಾರತದ ಜಲಪ್ರಾಂಗಣದೊಳಗಿನ ಸಮುದ್ರದೊಳಗಿನ ಎಲ್ಲಾ ಭೂಮಿ, ಖನಿಜ ಮತ್ತು ಇತರ ಬೆಲೆಬಾಳುವ ವಸ್ತುಗಳು ಒಕ್ಕೂಟಕ್ಕೆ ಸೇರಿದವುಗಳಾಗಿದ್ದು, ಒಕ್ಕೂಟದ ಉಪಯೋಗಕ್ಕಾಗಿಯೇ ಬಳಸಬಹುದಾಗಿದೆ."**

**ಈ ಸೂಚನೆಯು ಅಂಗೀಕೃತವಾಯಿತು.**

**೨೭೧–ಎ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.**

## ವಿಧಿ ೨೭೨

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಹೀಗೆ ಮಂಡಿಸುತ್ತಿದ್ದೇನೆ.

"೨೭೨ನೆಯ ವಿಧಿಯಲ್ಲಿ 'ಪಾರ್ಟ್ I' ನಂತರ ಎರಡು ಕಡೆ ಬರುವ ಪದ ಮತ್ತು ಸಂಖ್ಯೆಯ ನಂತರ 'ಅಥವಾ ಪಾರ್ಟ್ III' ಎಂಬ ಪದ ಮತ್ತು ಸಂಖ್ಯೆಯನ್ನು ಸೇರಿಸತಕ್ಕದ್ದು."

* * *

*__ಮಾನ್ಯ ಸಭಾಧ್ಯಕ್ಷ:__ ಡಾ. ಅಂಬೇಡ್ಕರ್, ನೀವೇನಾದರೂ ಹೇಳಬಯಸುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಶ್ರೀ ಮುನ್ಷಿಯವರು ಈ ಬಗ್ಗೆ ಸಾಕಷ್ಟು ವಿವರಿಸುತ್ತಾರೆಯಾದ್ದರಿಂದ, ಅದಕ್ಕಿಂತ ಹೆಚ್ಚಿನದೇನನ್ನು ನಾನು ಹೇಳಬಯಸುವುದಿಲ್ಲ.

**ತಿದ್ದುಪಡಿ ಅಂಗೀಕೃತವಾಯಿತು. ತಿದ್ದುಪಡಿಯೊಂದಿಗೆ ೨೭೨ ವಿಧಿ ಅಂಗೀಕೃತವಾಗಿ ಸಂವಿಧಾನಕ್ಕೆ ಸೇರಿಸಲಾಯಿತು.**

## ವಿಧಿ ೨೭೩**

**ಮಾನ್ಯ ಸಭಾಧ್ಯಕ್ಷರು:** ಇನ್ನು ೨೭೩ನೆಯ ವಿಧಿಯನ್ನು ತೆಗೆದುಕೊಳ್ಳೋಣ ಡಾ. ಅಂಬೇಡ್ಕರ್,

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನಾನು ಇದನ್ನು ಹೀಗೆ ಮಂಡಿಸುತ್ತಿದ್ದೇನೆ.

"೨೭೩ನೆಯ ವಿಧಿಯ ಕಲಮು (೧)ರ ನಂತರದ ಪದ ಮತ್ತು ಸಂಖ್ಯೆ 'ಪಾರ್ಟ್ I' ನಂತರ ಪದ ಮತ್ತು ಸಂಖ್ಯೆ 'ಅಥವಾ ಪಾರ್ಟ್ III' ಎಂಬುದಾಗಿ ಸೇರಿಸತಕ್ಕದ್ದು.

ಮೇಲೆ ಹೇಳಲಾದ ತಿದ್ದುಪಡಿ ಸಂಖ್ಯೆ ೨೦೧ರ ವಿಷಯವಾಗಿ, ೨೭೩ನೆಯ ವಿಧಿಯ ಕಲಮು (೧)ರಲ್ಲಿ 'ಒಂದು ರಾಜ್ಯದ ರಾಜ್ಯಪಾಲರು' ಎಂದು ಎರಡು ಕಡೆ ಬರುವ ಪದಗಳು ಬದಲು

'ರಾಜ್ಯಪಾಲರು ಅಥವಾ ಆಳುವವರು' ಎಂಬ ಪದಗಳನ್ನು ಸೇರಿಸತಕ್ಕದ್ದು.

ಮೇಲೆ ಹೇಳಲಾದ ತಿದ್ದುಪಡಿ ಸಂಖ್ಯೆ ೨೦೧ ಕಲಮು (೨)ಕ್ಕೆ ಸಂಬಂಧಿಸಿದ ೨೭೩ನೆಯ

---

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೯೩.

** ಅದೇ, ಪುಟ ೯೯೫.

ವಿಧಿಯನ್ನು 'ಒಂದು ರಾಜ್ಯದ ರಾಜ್ಯಪಾಲರು' ಎಂಬ ಪದಗಳ ಬದಲು 'ರಾಜ್ಯಪಾಲರು ಅಥವಾ ಆಳುವವರು' ಎಂಬ ಪದಗಳನ್ನು ಸೇರಿಸತಕ್ಕದ್ದು.

* * *

* **ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ ನನ್ನ ಗೌರವಾನ್ವಿತ ಮಿತ್ರ ಶ್ರೀ ಕಾಮತ್‌ರವರು "ಆಶ್ವಾಸನೆಗಳು" ಎಂಬ ಪದದ ಬಗ್ಗೆ ಏನನ್ನೋ ಹೇಳಬೇಕೆಂದಿದ್ದರು. ನಾವು ಕೆಲವು ಕಡೆ "ಒಪ್ಪಂದಗಳು" ಮತ್ತು ಇನ್ನು ಕೆಲವು ಕಡೆ ಅದರ ಬದಲು "ಆಶ್ವಾಸನೆಗಳು" ಎಂದು ಪದವನ್ನೂ ಉಪಯೋಗಿಸುತ್ತಿದ್ದೇವೆ ಎಂಬುದು ಅವರ ವಾದವಾಗಿತ್ತು. 'ಆಶ್ವಾಸನೆಗಳು' ಎಂಬುವ ಪದ ಇಂಗ್ಲಿಷ್‌ನಲ್ಲಿ ಬಳಸಲಾಗಿರುತ್ತಿರುವ ಬಹಳ ಹಳೆಯ ಪದ. ಅದನ್ನು ಎಲ್ಲಾ ಬಗೆಯ ಹಸ್ತಾಂತರ ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ ಯಾದ್ದರಿಂದ 'ಆಶ್ವಾಸನೆಗಳು' ಎಂಬ ಪದದಲ್ಲಿ 'ಒಪ್ಪಂದಗಳು' ಎಂಬ ಅರ್ಥವೂ ಸೇರಿಸಿದೆ. ಆದ್ದರಿಂದ ಈ ಎರಡೂ ಪದಗಳನ್ನು ಉಪಯೋಗಿಸುವಲ್ಲಿ ಯಾವ ತೊಂದರೆಯೂ ಇರುವುದಿಲ್ಲ. ಹೀಗಾಗಿ ಒಂದು ಆಸ್ತಿಯ ವರ್ಗಾವಣೆಯ ವಿಷಯದಲ್ಲಿ ಅದಕ್ಕೆ ಒಪ್ಪಂದದ ಮಹತ್ವವಿರುತ್ತದೆ.

**ಶ್ರೀ ಹೆಚ್. ವಿ. ಕಾಮತ್:** ನನ್ನ ತೊಂದರೆ ಭಾಷೆಯ ಬಗ್ಗೆ ಈ ವಿಧಿಯ "ಎಲ್ಲಾ ಒಪ್ಪಂದಗಳು" ಎಂಬುವುದರೊಂದಿಗೆ ಆರಂಭವಾಗಿ ನಂತರ ಅದರಲ್ಲಿ "ಅಂತಹ ಎಲ್ಲಾ ಒಪ್ಪಂದಗಳು ಮತ್ತು ಆಸ್ತಿಯ ಎಲ್ಲಾ ಆಶ್ವಾಸನೆಗಳು" ಮುಂತಾದವುಗಳು ಎಂದು ಹೇಳಲಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಭಾಷೆಯ ಬಗ್ಗೆ ಏನಾದರೂ ತೊಂದರೆ ಇದ್ದರೆ ಅದನ್ನು ಕರಡು ಸಮಿತಿ ಪರಿಶೀಲಿಸುವುದು. ನಾನು ಆಶ್ವಾಸನೆ ಮತ್ತು ಒಪ್ಪಂದ ಪದಗಳ ನಡುವಣ ಪಾರಿಭಾಷಿಕ ವ್ಯತ್ಯಾಸವನ್ನು ಮಾತ್ರ ವಿವರಿಸುತ್ತಿದ್ದೆ.

ನಂತರ ಶ್ರೀ ಮಹಾವೀರ್ ತ್ಯಾಗಿಯವರು ಒಪ್ಪಂದಕ್ಕೆ ಸಹಿ ಹಾಕಿದ ಒಬ್ಬ ವ್ಯಕ್ತಿ ಹೊಣೆಗಾರಿಕೆಯಿಂದ ಏಕೆ ಮುಕ್ತವಾಗಬೇಕೆಂಬುದಾಗಿ ಕೇಳಿದ್ದಾರೆ. ಶ್ರೀ ತ್ಯಾಗಿಯವರನ್ನು ಮಂತ್ರಿ ಮಂಡಳದ ಸದಸ್ಯರನ್ನಾಗಿ ಮಾಡಿದರೆ ಅವರು ಎತ್ತಿರುವ ಎಲ್ಲಾ ತಕರಾರುಗಳು ಇಲ್ಲವಾಗುವುವು. ಅವರು ಭಾರತ ಸರಕಾರದ ಪರವಾಗಿ ಮಾಡಲಾದ ಯಾವುದೇ ಒಪ್ಪಂದಕ್ಕೆ ಅವರನ್ನು ವೈಯಕ್ತಿಕವಾಗಿ ಹೊಣೆಗಾರರನ್ನಾಗಿ ಮಾಡಲು ಬರುತ್ತದೆಯೇ? ಅವರಿಗೆ ಸಾಮಾನ್ಯ ವಾಣಿಜ್ಯ ವಿಧಿವಿಧಾನದ ಅರಿವು ಇದೆ ಎಂದು ಭಾವಿಸಿದ್ದೇನೆ, ಒಬ್ಬ ಪ್ರಧಾನ ವ್ಯಕ್ತಿ ಅಥವಾ ಮೂಲಕರ್ತ ತನ್ನ ಪರವಾಗಿ ಕಾರ್ಯ ನಿರ್ವಹಿಸಲು ತನ್ನ ಒಬ್ಬ ಪ್ರತಿನಿಧಿಯನ್ನು (ಏಜೆಂಟ್) ನೇಮಿಸುತ್ತಾನೆ. ಮೂಲಕರ್ತನು ಏಜೆಂಟನಿಗೆ ಕೊಟ್ಟಿರುವ ಅಧಿಕಾರಕ್ಕಿಂತ ಹೆಚ್ಚಿನ ಅಧಿಕಾರ ಚಲಾಯಿಸಿರದಿದ್ದಾಗ ಏಜೆಂಟನು ತನ್ನ ಮೂಲಕರ್ತನ ಹಿತದೃಷ್ಟಿಯಿಂದ ಮಾಡಿಕೊಂಡ ಯಾವುದೇ ಒಪ್ಪಂದಕ್ಕೆ ವೈಯಕ್ತಿಕವಾಗಿ ಹೊಣೆಗಾರನಾಗಲಾರ. ಇದರಲ್ಲಿಯೂ ಅದೇ ತತ್ವ ಅಡಗಿದೆ, ಅದು ಭಾರತ ಸರಕಾರದಲ್ಲಿ ಒಂದು ಗೊತ್ತಾದ ಅಂತಸ್ತು, ಅಧಿಕಾರ ಹೊಂದಿರುವ ಅಧಿಕಾರಿ ಹೊರಡಿಸಿರುವ ದಾಖಲೆಗೆ ಭಾರತ ಸರಕಾರ ಬಾಧ್ಯವಾಗಿರುತ್ತದೆ ಎಂದು ಸುಸ್ಥಾಪಿತವಾದ ಪದ್ಧತಿ ಇದೆ ಎಂಬುದು ನನ್ನ ಗೌರವಾನ್ವಿತ ಮಿತ್ರ ಶ್ರೀ ಮಹಾವೀರ್ ತ್ಯಾಗಿಯವರಿಗೆ ಗೊತ್ತಿರುವುದಿಲ್ಲವೆಂದು ತೋರುತ್ತದೆ. ನಿರ್ದಿಷ್ಟ ಅಂತಸ್ತು ಮತ್ತು ಅಧಿಕಾರ ಹೊಂದಿರದ ಅಧಿಕಾರಿ ಹೊರಡಿಸಿದ ಯಾವುದೇ ದಾಖಲೆ ಅಥವಾ ಪತ್ರಕ್ಕೆ ಭಾರತ ಸರಕಾರ ಬಾಧ್ಯವಾಗುವುದಿಲ್ಲ. ಆದ್ದರಿಂದ ನಿಯಮದನ್ವಯ ನಾವು ನಿರ್ದಿಷ್ಟವಾಗಿ ಉಪಕಾರ್ಯದರ್ಶಿ ಭಾರತ

---

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೮೮–೯೮೯.

ಸರಕಾರವನ್ನು ಬಾಧ್ಯತೆಗೊಳಪಡಿಸುವ ಅಧಿಕಾರ ಹೊಂದಿರುವರೇ ಅಥವಾ ಸಹ ಕಾರ್ಯದರ್ಶಿ ಅಥವಾ ಹೆಚ್ಚುವರಿ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಮಾತ್ರವೇ ಅಂತಹ ಅಧಿಕಾರ ಹೊಂದಿರುವರೇ ಎಂಬುದನ್ನು ಹೇಳಬೇಕಾಗುತ್ತದೆ. ಆದ್ದರಿಂದ ಭಾರತ ಸರಕಾರದ ಪರವಾಗಿ ಸಹಿ ಹಾಕುವ ಕಾರ್ಯ ನಿರ್ವಹಿಸುವ ವ್ಯಕ್ತಿಗೆ ವೈಯಕ್ತಿಕ ಹೊಣೆಗಾರಿಕೆಯನ್ನು ಹೇರುವುದು ಹೇಗೆ ಸಾಧ್ಯ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ, ಆ ವ್ಯಕ್ತಿ ಭಾರತ ಸರಕಾರ ಕೊಟ್ಟಿರುವ ಅಧಿಕಾರದ ಪ್ರಕಾರ ಅಥವಾ ಭಾರತ ಸರಕಾರ ಕೊಟ್ಟಿರುವ ಪ್ರಕಾರ ಅಥವಾ ಭಾರತ ಸರಕಾರ ಕೊಟ್ಟಿರುವ ಅಧಿಕಾರದ ಮಿತಿಯಲ್ಲಿ ಕಾರ್ಯ ಮಾಡಿರುತ್ತಾನೆ. ಭಾರತ ಸರಕಾರ ಒಪ್ಪಿಗೆ ನೀಡಿದಂತಹ ಯಾವುದೇ ವ್ಯವಹಾರವು ಅನವಶ್ಯಕ, ಲಾಭ ರಹಿತವಾದ ಅಥವಾ ಸಂಸತ್ತಿನಿಂದ ಕಾರ್ಯಾಂಗಕ್ಕೆ ಕೊಡಮಾಡಲ್ಪಟ್ಟ ಶಾಸನಾಧಿಕಾರದ ಮತ್ತು ಸಂಸತ್ತಿನ ನಡುವಣ ಸಮಸ್ಯೆ ಆಗಿ ಸಂಸತ್ತು ಸರಕಾರವನ್ನು ಕಿತ್ತುಹಾಕಬಹುದು ಅಥವಾ ಆ ಒಪ್ಪಂದವನ್ನು ರದ್ದುಗೊಳಿಸಬಹುದು ಅಥವಾ ತನಗೆ ತಿಳಿದ ಇನ್ನಾವುದಾದರೂ ಕ್ರಮ ತೆಗೆದುಕೊಳ್ಳಬಹುದು. ಕೇವಲ ಪ್ರತಿನಿಧಿ ಅಥವಾ ಏಜೆಂಟ್ ಎಂದು ನಿಯುಕ್ತನಾದ ಮತ್ತು ತಾನು ಭಾರತ ಸರಕಾರದ ಹೆಸರಿನಲ್ಲಿ ರುಜು ಮಾಡುತ್ತಿರುವುದಾಗಿ ಸಹಿ ಮಾಡುತ್ತಿರುವ ಇನ್ನೊಂದು ಪಕ್ಷಕ್ಕೆ ಖಾತ್ರಿ ನೀಡುತ್ತಿರುವ ವ್ಯಕ್ತಿಯ ಮೇಲೆ ವೈಯಕ್ತಿಕ ಹೊಣೆಗಾರಿಕೆ ಹೊರಿಸುವುದು ಹೇಗೆ ಸಾಧ್ಯವೆಂಬುದು ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ನನ್ನ ಮಿತ್ರ ಶ್ರೀ ತ್ಯಾಗಿಯವರು ಎತ್ತಿರುವ ಆಕ್ಷೇಪಣೆಯಲ್ಲಿ ಯಾವುದೇ ಹುರುಳಿಲ್ಲ.

**ಮಾನ್ಯ ಸಭಾಧ್ಯಕ್ಷ:** ಈಗ ನಾನು ವಿವಿಧ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತಿದ್ದೇನೆ.

**ಡಾ. ಅಂಬೇಡ್ಕರರು ಸೂಚಿಸಿದ ಮೂರು ತಿದ್ದುಪಡಿಗಳು ಸ್ವೀಕೃತವಾದವು. ತಿದ್ದುಪಡಿಗಳೊಂದಿಗೆ ೨೭೩ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

## ವಿಧಿ ೨೭೪

***ಮಾನ್ಯ ಸಭಾಧ್ಯಕ್ಷ:** ಈಗ ೨೭೪ನೆಯ ವಿಧಿಯ ಮೇಲೆ ಚರ್ಚೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೀಗೆ ವಿಷಯ ಮಂಡಿಸುತ್ತಿದ್ದೇನೆ.

"೨೭೪ನೆಯ ವಿಧಿಯ ಕಲಮು (೧)ರಲ್ಲಿ ಎರಡನೆಯ ಬಾರಿ 'ಭಾರತ ಸರಕಾರ' ಎಂದು ಬರುವ ಪದಗಳ ಬದಲಾಗಿ 'ಭಾರತ ಒಕ್ಕೂಟ' ಎಂಬ ಪದಗಳನ್ನು ಸೇರಿಸತಕ್ಕದ್ದು."

ಮಾನ್ಯರೆ ತಮ್ಮ ಅನುಮತಿಯೊಂದಿಗೆ ನಾನು ಈ ವಿಧಿಗೆ ನನ್ನ ಇತರ ತಿದ್ದುಪಡಿಗಳನ್ನೂ ಸೂಚಿಸ ಬಯಸುತ್ತೇನೆ.

ನಾನು ಸೂಚಿಸುವುದೇನೆಂದರೆ:

"೨೭೪ನೆಯ ವಿಧಿಯ ಕಲಮು (೨)ರ ಉಪಕಲಮು (ಎ)ನಲ್ಲಿ 'ಭಾರತ ಸರಕಾರ' ಎಂಬ ಪದಗಳ ಬದಲು 'ಭಾರತ ಒಕ್ಕೂಟ' ಎಂಬ ಪದಗಳನ್ನು ಸೇರಿಸತಕ್ಕದ್ದು"

ಮತ್ತೂ ಹೀಗೆ ಸೂಚಿಸುತ್ತಿದ್ದೇನೆ.

"ತಿದ್ದುಪಡಿಗಳ ಪಟ್ಟಿಯ ಸಂಖ್ಯೆ ೨೯೮೦ರಲ್ಲಿ ೨೭೪ನೆಯ ವಿಧಿಯ ಕಲಮು (೧)ರಲ್ಲಿ 'ಭಾಗ I'

---

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೦೦.

ಎಂಬ ಪದಗಳು ಮತ್ತು ಸಂಖ್ಯೆಗಳ ಬದಲಾಗಿ 'ಅಥವಾ ಭಾಗ III' ಎಂಬುದಾಗಿ ಸೇರಿಸತಕ್ಕದ್ದು.

ನಾನು ನಂತರ ಹೀಗೆ ಸೂಚಿಸುತ್ತಿದ್ದೇನೆ.

"ತಿದ್ದುಪಡಿಗಳ ಪಟ್ಟಿಯ ಸಂಖ್ಯೆ ೨೯೮೦ ಮತ್ತು ೨೯೮೧ರಲ್ಲಿ ೨೭೪ನೆಯ ವಿಧಿಯ ಕಲಮು (೧)ರಲ್ಲಿ 'ಶಾಸಕಾಂಗದಿಂದ' ಎಂಬ ಪದಗಳ ಬದಲು 'ಶಾಸಕಾಂಗದ' ಎಂಬ ಪದಗಳನ್ನು ಸೇರಿಸತಕ್ಕದ್ದು."

ನಾನು ಈ ಕೆಳಗಿನಂತೆ ಕೂಡ ವಿಷಯ ಮಂಡಿಸುತ್ತಿದ್ದೇನೆ.

"ಮೇಲ್ಕಾಣಿಸಿದ ೨೦೬ನೆ ಸಂಖ್ಯೆಯ ತಿದ್ದುಪಡಿಗೆ ಸಂಬಂಧಿಸಿದಂತೆ ೨೮೪ನೆಯ ವಿಧಿಯ ಕಲಮು (೧)ರಲ್ಲಿ 'ಸಂವಾದಿ ಪ್ರಾಂತ್ಯಗಳು' ಎಂಬ ಪದಗಳಿಗೆ ಬದಲಾಗಿ 'ಅಥವಾ ಸಂವಾದಿ ಭಾರತೀಯ ರಾಜ್ಯಗಳು' ಎಂಬ ಪದಗಳನ್ನು ಸೇರಿಸತಕ್ಕದ್ದು."

ನಾನು ಮತ್ತೂ ಹೀಗೆ ವಿಷಯ ಮಂಡಿಸುತ್ತಿದ್ದೇನೆ.

"ಮೇಲ್ಕಾಣಿಸಿದ ತಿದ್ದುಪಡಿ ಸಂಖ್ಯೆ ೨೦೬ಕ್ಕೆ ಸಂಬಂಧಿಸಿದ ೨೭೪ನೆಯ ವಿಧಿಯ ಉಪಕಲಮು (೨)ರಲ್ಲಿ

(i) 'ಒಂದು ಪ್ರಾಂತ್ಯ' ಎಂಬ ಪದಗಳ ಬದಲು ಅಥವಾ 'ಒಂದು ಭಾರತೀಯ ರಾಜ್ಯ' ಎಂಬ ಪದಗಳನ್ನು ಸೇರಿಸತಕ್ಕದ್ದು ಮತ್ತು

(ii) 'ಪ್ರಾಂತ್ಯ' ಎಂಬ ಪದದ ಬದಲಾಗಿ ಅಥವಾ 'ಭಾರತೀಯ ರಾಜ್ಯ' ಎಂಬ ಪದಗಳನ್ನು ಸೇರಿಸತಕ್ಕದ್ದು."

**ಶ್ರೀ ಜಸ್ಪತ್‌ರಾಯ್ ಕಪೂರ್** (ಸಂಯುಕ್ತ ಪ್ರಾಂತ್ಯಗಳು, ಸಾಮಾನ್ಯ): ನಾನು ನನ್ನ ತಿದ್ದುಪಡಿ ಸಂಖ್ಯೆ ೨೯೮೧ ಮತ್ತು ೨೯೮೪ ಇವುಗಳನ್ನು ಮಂಡಿಸುತ್ತಿಲ್ಲ. ಅವುಗಳನ್ನು ಪರಿಶೀಲನೆಗಾಗಿ ಕರಡು ಸಮಿತಿಗೆ ಕಳುಹಿಸಿಕೊಡಬಹುದು.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಈ ವಿಧಿಗೆ ಸೂಚಿಸಿರುವ ಎಲ್ಲಾ ತಿದ್ದುಪಡಿಯೊಂದಿಗೆ ಇದು ಹೇಗಿರುವುದು ಎಂಬುದನ್ನು ಈ ಸದನಕ್ಕೆ ಓದಿ ಹೇಳುವುದು ಅಪೇಕ್ಷಣೀಯವೆಂದು ನನಗನಿಸುತ್ತದೆ. ಈ ವಿಧಿಯು ಹೀಗಿರುವುದು:

"ಭಾರತ ಸರಕಾರವು ಭಾರತ ಒಕ್ಕೂಟದ ಹೆಸರಿನಲ್ಲಿ ದಾವೆಗೆ ಗುರಿಯಾಗಬಹುದು ಮತ್ತು ಸದ್ಯದಲ್ಲಿ ಒಂದನೆಯ ಅನುಸೂಚಿಯ ಭಾಗ I ಮತ್ತು ಭಾಗ IIIರಲ್ಲಿ ನಮೂದಿಸಲಾಗಿರುವ ರಾಜ್ಯ ಸರಕಾರವು ಆ ರಾಜ್ಯದ ಸರಕಾರದ ಹೆಸರಿನಲ್ಲಿ ದಾವೆ ಮಾಡಬಹುದು. ಇಲ್ಲವೆ ದಾವೆಗೆ ಗುರಿಯಾಗಬಹುದು. ಇದು ಸಂಸತ್ತು ಅಥವಾ ರಾಜ್ಯ ಶಾಸಕಾಂಗ ಅಂಗೀಕರಿಸಬಹುದಾಗಿರುವ ಯಾವುದೇ ಕಾಯ್ದೆಗೊಳಗಾಗುವುದು ಮತ್ತು ಸಂವಿಧಾನಕ್ಕೆ ಮುಂಚೆ ಭಾರತ ಡೊಮಿನಿಯನ್ ಸರಕಾರದನ್ವಯ ಯಾವುದೇ ಸಂವಾದಿ ಪ್ರಾಂತ್ಯಗಳು ಮತ್ತು ಸಂವಾದಿ ರಾಜ್ಯಗಳು ದಾವೆ ಮಾಡಬಹುದಾಗಿದ್ದ ವಿಷಯಗಳಿಗೆ ಸಂಬಂಧಿಸಿದುದಾಗಿದೆ.

(೨) ಸಂವಿಧಾನವು ಜಾರಿಯಾಗುವ ದಿನಾಂಕದಂದು (ಎ) ಇತ್ಯರ್ಥವಾಗದೇ ಉಳಿದಿರುವ ಯಾವುದೇ ಕಾನೂನು ಪ್ರಕ್ರಿಯೆಗೆ ಭಾರತ ಡೊಮಿನಿಯನ್ ಪಕ್ಷಗಾರರಾಗಿದ್ದರೆ ಭಾರತ ಒಕ್ಕೂಟವು"

ಇದು ಹೊಸ ವಿಷಯ

---

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೦೧–೦೨.

"ಅಂತಹ ಎಲ್ಲಾ ಪ್ರಕರಣಗಳಲ್ಲಿ ಡೊಮಿನಿಯನ್ ಸ್ಥಾನಕ್ಕೆ (ಭಾರತ ಒಕ್ಕೂಟ) ಬರುತ್ತದೆ ಮತ್ತು

(ಬಿ) ಹಾಗೆ ಯಾವುದೇ ಪ್ರಾಂತ್ಯ ಮತ್ತು ಭಾರತೀಯ ರಾಜ್ಯವು ಇತ್ಯರ್ಥವಾಗಿರುವ ಪ್ರಕರಣಗಳಲ್ಲಿ ಪಕ್ಷಗಾರನಾಗಿದ್ದರೆ ಸಂವಾದಿ ಪ್ರಾಂತ್ಯ ಅಥವಾ ಭಾರತೀಯ ರಾಜ್ಯ ಸರಕಾರವು ಅಂತಹ ಪ್ರಕರಣಗಳಲ್ಲಿ ಪಕ್ಷಗಾರನಾಗುತ್ತದೆ."

ಈ ವಿಧಿಯು ಇತ್ಯರ್ಥವಾಗದಿರುವ ದಾವೆಗಳ ಮತ್ತು ಪ್ರಕರಣಗಳನ್ನು ಯಾವ ರೀತಿ ಪರಿಗಣಿಸ ಬೇಕೆಂಬುದನ್ನು ಮಾತ್ರ ಹೇಳುತ್ತದೆ. ಇದಕ್ಕಿಂತ ಹೆಚ್ಚಿನ ಮಹತ್ವ ಇದಕ್ಕಿಲ್ಲ. ಮೂಲ ಪದ ಬಳಕೆಯಲ್ಲಿ ಅದು ಭಾರತ ಸರಕಾರದ ಹೆಸರಿನಲ್ಲಿ ದಾವೆ ಮಾಡಬಹುದೆಂದಿತ್ತು. ನಿಸ್ಸಂಶಯವಾಗಿ, ಭಾರತ ಸರಕಾರ ಎಂದರೆ ಕಾರ್ಯಾಂಗ ಸರಕಾರ, ಒಂದು ಬದಲಾವಣೆ ಹೊಂದುತ್ತಿರುವ ಸಂಸ್ಥೆ. ಅದು ಕ್ಷಣಿಕ, ಒಂದು ಕಾಲ ಇರಬಹುದು, ಇನ್ನೊಂದು ಕಾಲ ಮರೆಯಾಗಬಹುದು ಮತ್ತು ಆ ಸ್ಥಾನದಲ್ಲಿ ಇತರರು ಕಾರ್ಯಾಂಗದಲ್ಲಿ ಅಧಿಕಾರ ವಹಿಸಿಕೊಳ್ಳಬಹುದು.

**ಶ್ರೀ ಹೆಚ್. ವಿ. ಕಾಮತ್:** ಸರಕಾರ ಕ್ಷಣಿಕವಲ್ಲ. ಸರಕಾರದಲ್ಲಿರುವ ವ್ಯಕ್ತಿಗಳು ಕ್ಷಣಿಕರಾಗಿರ ಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಭಾರತ ಸರಕಾರ ಮತ್ತು ಭಾರತ ಒಕ್ಕೂಟ ಇವುಗಳ ನಡುವೆ ವ್ಯತ್ಯಾಸವಿದೆ. ಭಾರತ ಸರಕಾರ ಒಂದು ಕಾನೂನಾತ್ಮಕ ಅಸ್ತಿತ್ವವಲ್ಲ; ಭಾರತ ಒಕ್ಕೂಟ ಕಾನೂನಾತ್ಮಕ ಅಸ್ತಿತ್ವವಾಗಿದೆ. ಅದು ಒಂದು ಸಾರ್ವಭೌಮ ಸಂಸ್ಥೆಯಾಗಿದ್ದು, ಅದಕ್ಕೆ ಹಕ್ಕುಗಳು ಮತ್ತು ಬಾಧ್ಯತೆಗಳು, ಹೊಣೆಗಾರಿಕೆಗಳಿವೆ. ಆದ್ದರಿಂದ ಭಾರತ ಸರಕಾರದಿಂದ ಅಥವಾ ಅದರ ವಿರುದ್ಧ ತರಲಾದ ದಾವೆಗಳು ಒಕ್ಕೂಟದಿಂದ ಅಥವಾ ಒಕ್ಕೂಟದ ವಿರುದ್ಧ ಇರುವುದು ಸೂಕ್ತ.

ಇನ್ನೂ 'ಸಂವಾದಿ ರಾಜ್ಯಗಳು' ಎಂಬ ಪದಬಳಕೆಯ ಬಗ್ಗೆ ಇರುವ ತೊಂದರೆಯನ್ನು ಪ್ರಸ್ತಾಪಿಸಲಾಗಿದೆ. ಯಾವ ರಾಜ್ಯವು ಯಾವ ಹಳೆಯ ಕಾರ್ಯಕ್ಕೆ ಸಂವಾದಿಯಾಗಿದೆ ಎಂದು ಹೇಳುವುದು ಕಷ್ಟ ಎಂಬುದೇನೋ ನಿಜ. ಈ ತೊಂದರೆಯನ್ನು ನಿವಾರಿಸುವುದಕ್ಕಾಗಿ ಕರಡು ಸಂವಿಧಾನದ ೧೪೫ನೆಯ ಪುಟದಲ್ಲಿರುವ ೩೦೩ನೆಯ ವಿಧಿ (೧) (ಜಿ)ಯಲ್ಲಿ ಒಂದು ಪ್ರಾವಧಾನ ಮಾಡಲಾಗಿದೆ. ಇದರಲ್ಲಿ ಸಂವಾದಿ ಪ್ರಾಂತ್ಯ ಅಥವಾ ರಾಜ್ಯದ ಸಂಶಯ ಉಂಟಾದರೆ ಯಾವುದೇ ಒಂದು ಪ್ರಾಂತ್ಯ ಅಥವ ರಾಜ್ಯಕ್ಕೆ ಯಾವುದು ಸಂವಾದಿ ಪ್ರಾಂತ್ಯ ಅಥವಾ ರಾಜ್ಯ ಎಂಬುದನ್ನು ರಾಷ್ಟ್ರಾಧ್ಯಕ್ಷರು ನಿರ್ಣಯಿಸುವರು. ಒಂದು ಹಳೆಯ ಅಥವಾ ಮೊದಲಿನ ಪ್ರಾಂತ್ಯ ಅಥವಾ ರಾಜ್ಯಕ್ಕೆ ಸಮಾನವಾದುದು ಯಾವುದು ಎಂಬುದನ್ನು ನಿರ್ಣಯಿಸುವುದು ಕಷ್ಟವಾಗುವುದರಿಂದ ಆ ನಿರ್ಣಯವನ್ನು ರಾಜ್ಯಾಧ್ಯಕ್ಷರಿಗೆ ಬಿಡುವುದು ಒಳ್ಳೆಯದು. ಆದ್ದರಿಂದ ಅಂತಹ ಪ್ರಾವಧಾನವನ್ನು ಮಾಡಲಾಗಿದೆ.

ಇತ್ಯರ್ಥವಾಗದೆ ಉಳಿದಿರುವ ಪ್ರಕರಣಗಳ ಬಗ್ಗೆ ಉಪಕಲಮು (೨)ರಲ್ಲಿ ಪ್ರಸ್ತಾಪವಿದೆ. ಉಪಕಲಮು (೨)ರಲ್ಲಿ ಹೇಳಿರುವುದೇನೆಂದರೆ, ಪ್ರಕರಣಗಳು ಇತ್ಯರ್ಥವಾಗದೆ ಉಳಿದಿರುವಾಗ ನಾವು ಉಪಕಲಮು (೧)ರಲ್ಲಿ ಹೇಳಿರುವ ದಾವೆ ಮಾಡುವ ಮತ್ತು ದಾವೆಗೆ ಗುರಿಯಾಗುವ ಪಕ್ಷಗಾರರಲ್ಲಿ ಭಿನ್ನತೆ ಉಂಟಾದಾಗ, ಭಾರತ ಒಕ್ಕೂಟ ಅಥವಾ ಸಂವಾದಿ ರಾಜ್ಯ ಎಂಬ ಪದಗಳನ್ನು ಹಳೆಯ ಪ್ರಕರಣಗಳಲ್ಲಿ ಸೇರಿಸಿಕೊಳ್ಳಬೇಕು. ಆಗ ೨೭೪(೧)ನೆಯ ವಿಧಿಯ ಪ್ರಕಾರ ರಾಜ್ಯಗಳನ್ನು ದಾವೆಗೆ ಗುರಿಮಾಡಬಹುದು. ಇನ್ನು ನನ್ನ ಗೌರವಾನ್ವಿತ ಮಿತ್ರ ಶ್ರೀ ಸಂತಾನಮ್‌ರವರ ಅಭ್ಯಂತರದ ಬಗ್ಗೆ ಹೇಳಬೇಕಾಗಿದೆ. ಅವರು "ಸಂವಿಧಾನದತ್ತವಾದ

ಅಧಿಕಾರದನ್ವಯ ಕಾನೂನು ಮಾಡಲಾದ" ಎಂಬ ಪದಗಳು ಅನಾವಶ್ಯಕ ಎಂದು ಹೇಳಿದ್ದಾರೆ. ನಾನು ಇದರ ಬಗ್ಗೆ ಹೇಳುವುದಿಷ್ಟೇ. ನಾನು ಅವರೊಂದಿಗೆ ಸಮ್ಮತಿಸುವುದಿಲ್ಲ ಮತ್ತು ಈ ಪದಗಳ ಅವಶ್ಯಕತೆ ಇದೆ.

**[ಡಾ. ಅಂಬೇಡ್ಕರ್‌ರವರು ಸೂಚಿಸಿದ ಎಲ್ಲಾ ತಿದ್ದುಪಡಿಗಳು ಸ್ವೀಕೃತವಾಗಿ ೨೭೪ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.]**

## ವಿಧಿ ೨೭೪ಎ*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನಾನು ಈ ವಿಧಿಯನ್ನು ತಡೆ ಹಿಡಿಯಬೇಕೆಂದು ಕೋರುತ್ತೇನೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಸದನವು ಚುನಾವಣೆಗೆ ಸಂಬಂಧಿಸಿದ ಭಾಗ XIIIನ್ನು ಆದೇಶ ಕ್ರಮ ಪಟ್ಟಿಯಂತಿರುವ ೨೮೯ನೆಯ ವಿಧಿಯಿಂದ ಕೈಗೆತ್ತಿಕೊಳ್ಳಬಹುದೆಂದು ಸೂಚಿಸಬಹುದೇ?

**ಶ್ರೀ ಆರ್. ಕೆ. ಸಿಧ್ವ:** ಮಾನ್ಯರೆ, ನಾನು ಸೂಚಿಸಬೇಕೆಂದಿರುವ ಹೊಸ ವಿಧಿಯು ಭಾರತದ ಎಲ್ಲಾ ಪ್ರದೇಶಗಳ ಗ್ರಾಮೀಣ ಮತ್ತು ನಗರ ಭಾಗಗಳ ಹಾಗೂ ಸ್ಥಾನಿಕ ಪ್ರದೇಶಗಳ ಪರಿಸೀಮನಾ ಅಥವಾ ಕ್ಷೇತ್ರ ವಿಂಗಡಣೆಗಳ ಕಾರ್ಯಕ್ಕೆ ಸಂಬಂಧಿಸುವುದಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದನ್ನು ತಡೆಹಿಡಿಯಬೇಕು.

* * *

## ವಿಧಿ ೨೮೯

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಸಭಾಧ್ಯಕ್ಷರೇ ನಾನು ಹೀಗೆ ಸೂಚಿಸುತ್ತಿದ್ದೇನೆ:

"೨೮೯ನೆಯ ವಿಧಿಯ ಬದಲು ಈ ಕೆಳಗಣ ವಿಧಿಯನ್ನು ಸೇರಿಸತಕ್ಕದ್ದು:

**ಚುನಾವಣೆಗಳ ಉಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣ ಕಾರ್ಯವನ್ನು ಚುನಾವಣಾ ಆಯೋಗಕ್ಕೆ ವಹಿಸುವುದು.**

೨೮೯ (೧) ಸಂಸತ್ತು ಮತ್ತು ಪ್ರತಿಯೊಂದು ರಾಜ್ಯದ ಶಾಸಕಾಂಗ ಮತ್ತು ರಾಷ್ಟ್ರಪತಿ, ಉಪ–ರಾಷ್ಟ್ರಪತಿ ಸ್ಥಾನಗಳಿಗೆ ಸಂವಿಧಾನದನ್ವಯ ನಡೆಯುವ ಚುನಾವಣೆಗಳು, ಸಂಸತ್ತು ಮತ್ತು ರಾಜ್ಯಗಳ ಶಾಸಕಾಂಗದ ಚುನಾವಣೆಗಳ ಸಂಬಂಧ ಉದ್ಭವಿಸಬಹುದಾದ ವ್ಯಾಜ್ಯಗಳನ್ನು ವಿಚಾರಿಸುವ ಅಧಿಕಾರ ಉಳ್ಳ ಒಂದು ನ್ಯಾಯಾಧಿಕರಣದ ನೇಮಕವೂ ಸೇರಿದಂತೆ ಎಲ್ಲಾ ಚುನಾವಣೆಗಳ ಉಸ್ತುವಾರಿ ನಿರ್ದೇಶನ

---

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೦೩.

** ಅದೇ, ಪುಟ ೯೦೪–೦೭.

ಮತ್ತು ನಿಯಂತ್ರಣ, ಚುನಾವಣೆಗಾಗಿ ಮತದಾರರ ಪಟ್ಟಿ ತಯಾರಿಸುವುದು ಮತ್ತು ಚುನಾವಣೆಗಳನ್ನು ನಡೆಸುವುದು ಈ ಎಲ್ಲಾ ಕಾರ್ಯಗಳು ಈ ಸಂವಿಧಾನದಲ್ಲಿ ಹೇಳಲಾದ ಮತ್ತು ರಾಷ್ಟ್ರಪತಿಗಳಿಂದ ನೇಮಕಗೊಂಡ ಒಂದು ಚುನಾವಣಾ ಆಯೋಗಕ್ಕೆ ನೀಡತಕ್ಕದ್ದು.

(೨) ಚುನಾವಣಾ ಆಯೋಗದಲ್ಲಿ ಮುಖ್ಯ ಚುನಾವಣಾ ಆಯುಕ್ತ ಮತ್ತು ರಾಷ್ಟ್ರಪತಿಗಳು ಕಾಲಕಾಲಕ್ಕೆ ನೇಮಕ ಮಾಡಬಹುದಾದ ಇತರ ಚುನಾವಣಾ ಆಯುಕ್ತರುಗಳನ್ನೊಳಗೊಂಡಿದ್ದು ಅದರಲ್ಲಿ ಒಬ್ಬರಿಗಿಂತ ಹೆಚ್ಚು ಆಯುಕ್ತರಿದ್ದಾಗ ಮುಖ್ಯ ಚುನಾವಣಾ ಆಯುಕ್ತರು ಆಯೋಗದ ಅಧ್ಯಕ್ಷರಾಗಿರುತ್ತಾರೆ.

(೩) ಜನತಾ ಪ್ರತಿನಿಧಿ ಸಭೆ (ಲೋಕಸಭೆ) ಮತ್ತು ಪ್ರತಿಯೊಂದು ರಾಜ್ಯದ ಶಾಸನ ಸಭೆಗೆ ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಗೆ ಪೂರ್ವ ಮತ್ತು ಪ್ರತಿಯೊಂದು ಸಾರ್ವಜನಿಕ ಚುನಾವಣೆಯ ನಂತರ ಯಾವ ರಾಜ್ಯಗಳಲ್ಲಿ ವಿಧಾನಪರಿಷತ್ ಅಸ್ತಿತ್ವದಲ್ಲಿರುವುದೋ ಅಂತಹ ರಾಜ್ಯಗಳಲ್ಲಿ ವಿಧಾನ ಪರಿಷತ್ತಿಗೆ ನಡೆಯುವ ಪ್ರತಿ ದ್ವೈವಾರ್ಷಿಕ ಚುನಾವಣೆಗಳ ಮೊದಲು ರಾಷ್ಟ್ರಪತಿಗಳು ಕೇಂದ್ರ ಚುನಾವಣಾ ಆಯೋಗದೊಂದಿಗೆ ಸಮಾಲೋಚನೆ ನಡೆಸಿ ಈ ವಿಧಿಯ (೧)ನೆಯ ಕಲಮಿನಲ್ಲಿ ಹೇಳಲಾದ ಚುನಾವಣಾ ಆಯೋಗಕ್ಕೆ ಸಹಾಯ ಮಾಡಲು ಅವಶ್ಯವೆನಿಸಬಹುದಾದ ಪ್ರಾದೇಶಿಕ (ಚುನಾವಣಾ) ಆಯುಕ್ತರುಗಳನ್ನು ನೇಮಕ ಮಾಡಬಹುದು.

(೪) ಚುನಾವಣಾ ಆಯುಕ್ತರುಗಳು ಮತ್ತು ಪ್ರಾದೇಶಿಕ ಆಯುಕ್ತರುಗಳ ಸೇವಾವಧಿ ಮತ್ತು ಸೇವಾ ನಿಯಮಗಳನ್ನು ರಾಷ್ಟ್ರಪತಿಗಳು ನಿಯಮಾನುಸಾರವಾಗಿ ನಿರ್ಣಯಿಸಿದಂತಿರುತ್ತವೆ:

ಪರಂತು, ಉಪಬಂಧಿಸಿದಂತೆ ಮುಖ್ಯ ಚುನಾವಣಾ ಆಯುಕ್ತರನ್ನು ಅಧಿಕಾರದಿಂದ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಸೇವೆಯಿಂದ ತೆಗೆದುಹಾಕಬಹುದಾದ ಆಧಾರದ ಹೊರತು, ಬೇರೆ ರೀತಿ ತೆಗೆದುಹಾಕಲು ಬರುವುದಿಲ್ಲ ಮತ್ತು ಮುಖ್ಯ ಚುನಾವಣಾ ಆಯುಕ್ತರ ಸೇವಾ ನಿಯಮಗಳನ್ನು ಅವರು ನೇಮಕಗೊಂಡ ನಂತರ ಅವರಿಗೆ ಅನಾನುಕೂಲವಾಗುವಂತಹ ರೀತಿ ಬದಲಾಯಿಸಲಾಗದು.

ಉಪಬಂಧಿಸಿದಂತೆ ಇತರ ಚುನಾವಣಾ ಆಯುಕ್ತರು ಅಥವಾ ಪ್ರಾದೇಶಿಕ ಆಯುಕ್ತರನ್ನು ಮುಖ್ಯ ಚುನಾವಣಾ ಆಯುಕ್ತರ ಶಿಫಾರಸ್ಸಿಲ್ಲದೆ ಅಧಿಕಾರದಿಂದ ತೆಗೆದುಹಾಕುವಂತಿಲ್ಲ.

(೫) ಈ ವಿಧಿಯ ಕಲಮು (೧)ರಲ್ಲಿ ಚುನಾವಣಾ ಆಯೋಗಕ್ಕೆ ನೀಡಲಾಗಿರುವ ಎಲ್ಲಾ ಕರ್ತವ್ಯಗಳು ಮತ್ತು ಕಾರ್ಯಗಳನ್ನು ನಿಭಾಯಿಸಲು ಅವಶ್ಯಕವಾದ ಸಿಬ್ಬಂದಿಯನ್ನು ರಾಷ್ಟ್ರಪತಿ ಅಥವಾ ರಾಜ್ಯಗಳ ರಾಜ್ಯಪಾಲರುಗಳು ಅಥವಾ ರಾಜ್ಯದ ಆಳ್ವಿಕೆ ನಡೆಸುತ್ತಿರುವವರು ಚುನಾವಣಾ ಆಯೋಗ ಅಥವಾ ಪ್ರಾದೇಶಿಕ ಆಯುಕ್ತರು ಬಯಸಿದ ಎಲ್ಲಾ ಅನುಕೂಲತೆಗಳನ್ನು ಒದಗಿಸತಕ್ಕದ್ದು.

**ಮಾನ್ಯ ಸಭಾಧ್ಯಕ್ಷ:** ನನಗೆ ಅನೇಕ ತಿದ್ದುಪಡಿಗಳನ್ನು ಕಳುಹಿಸಿಕೊಡಲಾಗಿದೆ. ಕೆಲವು ೨೮೯, ೨೯೦ ಮತ್ತು ೨೯೧ನೆಯ ಬದಲಾಗಿ ಬಂದಿವೆ, ಇನ್ನು ಕೆಲವು ಮಂಡಿಸಲಿರುವ ತಿದ್ದುಪಡಿಗಳ ರೂಪದಲ್ಲಿವೆ. ಮೊದಲು ಡಾ. ಅಂಬೇಡ್ಕರರು ಸೂಚಿಸಿರುವ ಈ ವಿಧಿಗೆ ಬದಲಾಗಿ ಸೂಚಿಸಲಾಗಿರುವ ವಿಧಿಗಳನ್ನು ಕೈಗೆತ್ತಿಕೊಳ್ಳುವುದು ಸರಿ ಎನಿಸುತ್ತದೆ. ಡಾ. ಅಂಬೇಡ್ಕರರು ಒಂದು ತಿದ್ದುಪಡಿ ಮಂಡಿಸಿದ್ದಾರೆ. ಪಂಡಿತ್ ಠಾಕೂರ್‌ದಾಸ್ ಭಾರ್ಗವರವರ ಹೆಸರಿನಲ್ಲಿ ಇನ್ನೊಂದು ತಿದ್ದುಪಡಿ ಬಂದಿದೆ.

**ಪಂಡಿತ್ ಹೃದಯನಾಥ್ ಕುಂಝ್ರು** (ಸಂಯುಕ್ತ ಪ್ರಾಂತ್ಯಗಳು, ಸಾಮಾನ್ಯ): ಮಾನ್ಯರೆ, ಡಾ. ಅಂಬೇಡ್ಕರ್‌ರವರು ತಾವು ಮಂಡಿಸುವ ಸೂಚನೆಯ ಪರವಾಗಿ ಏನನ್ನಾದರೂ ಹೇಳುವವರಿದ್ದಾರೆಯೇ? ಆ ಹೇಳಿಕೆ ಒಂದು ಮುಖ್ಯವಾದ ಸಂಗತಿಗೆ ಸಂಬಂಧಿಸಿದ್ದಾಗಿದೆ. ಡಾ. ಅಂಬೇಡ್ಕರರು ೨೮೯ನೆಯ ವಿಧಿಗೆ ಸೂಚಿಸಿರುವ

ತಿದ್ದುಪಡಿಯ ಪರವಾಗಿ ಏನನ್ನಾದರೂ ಹೇಳುವುದು ಅಪೇಕ್ಷಣೀಯವಲ್ಲವೇ? ಅವರು ೨೮೯ನೆಯ ವಿಧಿಯನ್ನು ಬದಲಾಯಿಸಿ ಅದರ ಬದಲು ಇನ್ನೊಂದು ವಿಧಿ ಸೂಚಿಸಲು ಕಾರಣಗಳೇನು ಎಂಬುದನ್ನು ಈ ಸದನಕ್ಕೆ ವಿವರಿಸುವುದು ಸರಿಯಾದ ವಿಧಾನವೆನ್ನಿಸುವುದು. ಈ ವಿಷಯ ಅತ್ಯಂತ ಮಹತ್ವದ್ದಾಗಿದ್ದು, ಈ ಬಗ್ಗೆ ಡಾ. ಅಂಬೇಡ್ಕರರು ಏನನ್ನಾದರೂ ಹೇಳುವ ಅವಶ್ಯಕತೆ ಇದೆ ಎಂದು ಭಾವಿಸದೇ ಇರುವುದು ಖೇದದ ಸಂಗತಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಸಭಾಧ್ಯಕ್ಷರೆ, ನಾನು ನನ್ನ ಸೂಚನೆಯ ಪರವಾಗಿ ಏನನ್ನೂ ಹೇಳದಿರುವುದಕ್ಕೆ ಎರಡು ಕಾರಣಗಳಿವೆ. ಮೊದಲನೆಯ ಕಾರಣವೆಂದರೆ, ಈ ವಿಧಿಯ ಮೇಲೆ ಚರ್ಚೆ ನಡೆದರೆ ಅಂಥ ಚರ್ಚೆ ನಡೆಯುವುದೆಂಬುದು ನಿಸ್ಸಂಶಯ– ಅದರಲ್ಲಿ ಕೆಲವು ಸಂಗತಿಗಳನ್ನು ಪ್ರಸ್ತಾಪಿಸಲಾಗುವುದು. ಅದರಿಂದ ನನಗೆ ಉತ್ತರ ನೀಡಲು ಅನುಕೂಲವಾಗುವುದು, ಮತ್ತು ನನ್ನ ಭಾಷಣದಲ್ಲಿ ಅನಾವಶ್ಯಕ ಪುನರುಕ್ತಿ ತಪ್ಪುವುದು, ಇದು ಒಂದು ಕಾರಣ.

ಎರಡನೆಯ ಕಾರಣವೆಂದರೆ, ಪ್ರತಿಯೊಬ್ಬರೂ ಆ ತಿದ್ದುಪಡಿಯನ್ನು ಓದಿದ್ದಾರೆ ಎಂದು ತಿಳಿದಿದ್ದೇನೆ. ಅದರ ಉದ್ದೇಶ ಏನು ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬಲ್ಲರು. ಅದು ಅತ್ಯಂತ ಸರಳವಾಗಿದೆ. ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಕುಂಝ್ರುರವರು ಅವಸರದಲ್ಲಿ ಅದನ್ನು ಓದಿಲ್ಲವೆಂಬುದು ಸ್ಪಷ್ಟವಾಗಿದೆ.

**ಪಂಡಿತ್ ಹೃದಯನಾಥ್ ಕುಂಝ್ರು:** ನಾನು ತಿದ್ದುಪಡಿಯ ಪ್ರತಿಯೊಂದು ಪಂಕ್ತಿಯನ್ನು ಓದಿರುತ್ತೇನೆ. ನನ್ನ ಗೌರವಾನ್ವಿತ ಮಿತ್ರರು ಸದನವನ್ನು ಗೌರವದಿಂದ ನೋಡುವರೆಂದು ಬಯಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ಸಂವಿಧಾನ ಸಭೆಯ ನಡಾವಳಿಯ ಮೊದಲ ಭಾಗದಲ್ಲಿ ಮೂಲಭೂತ ಹಕ್ಕುಗಳು ಎಂದು ಕರೆಯುವ ಹಕ್ಕುಗಳ ವಿಷಯವಾಗಿ ಒಂದು ಸಮಿತಿಯನ್ನು ರಚಿಸಲಾಗಿತ್ತು ಎಂಬ ವಿಷಯವನ್ನು ಸದನ ಜ್ಞಾಪಿಸಿಕೊಳ್ಳಬಹುದು. ಆ ಸಮಿತಿಯು ತನ್ನ ವರದಿಯಲ್ಲಿ ಚುನಾವಣೆಗಳು ಸ್ವತಂತ್ರ(ಮುಕ್ತ)ವಾಗಿರಬೇಕು ಮತ್ತು ಶಾಸಕಾಂಗಕ್ಕೆ ನಡೆಯುವ ಚುನಾವಣೆಗಳಲ್ಲಿ ಹಸ್ತಕ್ಷೇಪ ಮಾಡಲು ಕಾರ್ಯಾಂಗಕ್ಕೆ ಯಾವುದೇ ಅವಕಾಶವಿರಬಾರದು ಎಂಬ ಅಂಶ ಒಂದು ಮೂಲಭೂತ ಹಕ್ಕಾಗಿದ್ದು, ಅದನ್ನು ಮೂಲಭೂತ ಹಕ್ಕುಗಳ ಅಧ್ಯಾಯದಲ್ಲಿ ಸೇರಿಸಬೇಕು ಎಂದು ಶಿಫಾರಸು ಮಾಡಿತ್ತು. ಈ ವಿಷಯ ಸದನದಲ್ಲಿ ಪ್ರಸ್ತಾಪಕ್ಕೆ ಬಂದಾಗ, ಈ ವಿಷಯ ಮೂಲಭೂತ ಸ್ವರೂಪದ್ದಾಗಿದೆ ಎಂಬುದರ ಬಗ್ಗೆ ಯಾವ ಸಂಶಯವೂ ಇಲ್ಲ. ಆದರೆ ಇದನ್ನು ಮೂಲಭೂತ ಹಕ್ಕುಗಳ ಅಧ್ಯಾಯದಲ್ಲಿ ಸೇರಿಸದೆ, ಸಂವಿಧಾನದ ಇನ್ನಾವುದಾದರೂ ಭಾಗದಲ್ಲಿ ಸೇರಿಸಬಹುದು ಎಂದು ಸದನದ ಅಭಿಪ್ರಾಯವಾಗಿತ್ತು. ಸದನವು ಯಾವುದೇ ಭಿನ್ನಾಭಿಪ್ರಾಯವಿಲ್ಲದೇ ಶಾಸಕಾಂಗಕ್ಕೆ ನಡೆಯುವ ಚುನಾವಣೆಗಳು ಕಾರ್ಯಾಂಗದ ಹಸ್ತಕ್ಷೇಪವಿಲ್ಲದೆ ನಡೆಯಬೇಕೆಂದು ಅಭಿಪ್ರಾಯದನ್ವಯ ಕರಡು ಸಮಿತಿಯು ಈ ವಿಷಯವನ್ನು ಮೂಲಭೂತ ಹಕ್ಕುಗಳ ಅಧ್ಯಾಯದಿಂದ ತೆಗೆದುಹಾಕಿ ಅದನ್ನು ಸಂವಿಧಾನದ ಒಂದು ಪ್ರತ್ಯೇಕ ಭಾಗವನ್ನಾಗಿ ೨೮೯ ಮತ್ತು ೨೯೦ನೇ ವಿಧಿಗಳ ಇತ್ಯಾದಿಯಲ್ಲಿ ಸೇರಿಸಿತು. ಆದ್ದರಿಂದ, ಚುನಾವಣಾ ಪ್ರಕ್ರಿಯೆ ಕಾರ್ಯಾಂಗದ ಅಧಿಕಾರದ ಹಿಡಿತದಿಂದ ಸ್ವತಂತ್ರವಾಗಿರಬೇಕು ಎಂಬ ವಿಷಯದಲ್ಲಿ ಎರಡು ಮಾತಿಲ್ಲ. ೨೮೯ನೆಯ ವಿಧಿಯಲ್ಲಿ ಸಂವಿಧಾನ ಸಭೆಯ ನಿರ್ಣಯದಲ್ಲಿ ಒಂದು ಅಂಶವನ್ನು ಸೇರಿಸಲಾಗಿದೆ. ಚುನಾವಣೆಗಳ ಉಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣ ಮತ್ತು ಸಂಸತ್ತು ಮತ್ತು ರಾಜ್ಯಗಳ ಶಾಸಕಾಂಗಕ್ಕೆ ನಡೆಸಲಾಗುವ ಚುನಾವಣೆಗಾಗಿ ಮತದಾರರ ಪಟ್ಟಿ ತಯಾರಿಕೆ ಮುಂತಾದ ಕಾರ್ಯಗಳನ್ನು ಕಾರ್ಯಾಂಗಕ್ಕೆ

ಸೇರಿರದ ಸಂಸ್ಥೆಯಾದ ಚುನಾವಣಾ ಆಯೋಗಕ್ಕೆ ವರ್ಗಾಯಿಸಲಾಗಿದೆ. ಇದನ್ನು ಉಪ–ಕಲಮು (೧)ರಲ್ಲಿ ಸೇರಿಸಲಾಗಿದೆ.

ಉಪ–ಕಲಮು (೨)ರಲ್ಲಿ ರಾಷ್ಟ್ರಪತಿಗಳು ಕಾಲ ಕಾಲಕ್ಕೆ ನೇಮಕ ಮಾಡಬಹುದಾದ ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರು ಇರತಕ್ಕದ್ದು ಎಂದು ಹೇಳಲಾಗಿದೆ. ಈ ವಿಷಯದಲ್ಲಿ ಕರಡು ಸಮಿತಿಯ ಮುಂದೆ ಎರಡು ಪರ್ಯಾಯ ವಿಧಾನಗಳಿದ್ದವು. ಅವುಗಳಲ್ಲಿ ಒಂದು ನಾಲ್ಕೈದು ಸದಸ್ಯರುಳ್ಳ ಒಂದು ಖಾಯಂ ಚುನಾವಣಾ ಆಯೋಗವಿದ್ದು, ಅದು ಸತತವಾಗಿ ಯಾವ ವಿಳಂಬವೂ ಇಲ್ಲದೆ ಅಸ್ತಿತ್ವದಲ್ಲಿರುವುದು. ಎರಡನೆಯ ವಿಧಾನವೆಂದರೆ, ಚುನಾವಣೆಗಳನ್ನು ನಡೆಸಬೇಕಾದಾಗ ಒಂದು ತಾತ್ಪೂರ್ವಿಕ ಸಮಿತಿಯನ್ನು ನೇಮಿಸಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡುವುದು. ಕರಡು ಸಮಿತಿಯು ಇವೆರಡರ ನಡುವಣ ಮಧ್ಯ ಮಾರ್ಗವನ್ನನುಸರಿಸಿದೆ. ಸಮಿತಿಯ ಉಪಕಲಮು (೨)ರಲ್ಲಿ ಮಾಡಿರುವುದೇನೆಂದರೆ ಮುಖ್ಯ ಚುನಾವಣಾ ಆಯುಕ್ತರಿರುವ ಏಕ ಸದಸ್ಯ ಆಯೋಗವನ್ನು ಖಾಯಂ ಆಗಿ ಅಧಿಕಾರದಲ್ಲಿರುವಂತೆ ನೇಮಿಸಿ ಅದು ಚುನಾವಣೆಗಳನ್ನು ಯಾವಾಗಲಾದರೂ ನಡೆಸಲು ಲಭ್ಯವಿರುತ್ತದೆ. ಚುನಾವಣೆಗಳು ಸಾಮಾನ್ಯವಾಗಿ ಪ್ರತಿ ಐದು ವರ್ಷಗಳ ಕೊನೆಯಲ್ಲಿ ಜರುಗುತ್ತವೆ. ಆದಾಗ್ಯೂ ಯಾವ ಕಾಲದಲ್ಲಾದರೂ ಸಂಭವಿಸಬಹುದಾದ ಉಪ–ಚುನಾವಣೆಗಳು ಇರಬಹುದು, ಎಂಬ ಪ್ರಶ್ನೆ ಉದ್ಭವಿಸುತ್ತದೆ. ತನ್ನ ಐದು ವರ್ಷಗಳ ಅವಧಿ ಮುಗಿಯುವ ಮುನ್ನವೇ ವಿಧಾನಸಭೆಯ ವಿಸರ್ಜನೆಯಾಗಬಹುದು. ತತ್ಪರಿಣಾಮವಾಗಿ, ಮತದಾರರ ಪಟ್ಟಿಯನ್ನು ಪುನರ್ವಿಮರ್ಶಿಸಬೇಕಾಗುತ್ತದೆ. ಇದರಿಂದ ಹೊಸ ಚುನಾವಣೆಗಳನ್ನು ಯಾವುದೇ ತೊಂದರೆಯಿಲ್ಲದೆ ನಡೆಸಲು ಅನುಕೂಲವಾಗುತ್ತದೆ. ಇಂತಹ ಅನಿರೀಕ್ಷಿತ ತುರ್ತುಸಂದರ್ಭಗಳಲ್ಲಿ ಸಹಾಯಕವಾಗಲು ಮುಖ್ಯ ಚುನಾವಣಾ ಆಯುಕ್ತ ಎಂದು ಖಾಯಂ ಆಗಿ ಅಧಿಕಾರದಲ್ಲಿರುವ ಅವಶ್ಯಕತೆಯನ್ನು ಸಮಿತಿ ಮನಗಂಡು, ಚುನಾವಣೆಗಳು ಬರುವ ಪೂರ್ವದಲ್ಲಿ ರಾಷ್ಟ್ರಪತಿಗಳು ಅವಶ್ಯ ಎನಿಸಿದರೆ ಇನ್ನೂ ಇತರ ಸದಸ್ಯರನ್ನು ಚುನಾವಣಾ ಆಯೋಗಕ್ಕೆ ನೇಮಿಸಬಹುದಾಗಿದೆ.

ಮಾನ್ಯರೆ, ೨೮೯ನೆಯ ವಿಧಿಯ ಮೂಲ ಸ್ವರೂಪದಲ್ಲಿ ಕೇಂದ್ರ ಶಾಸಕಾಂಗದ ಮೇಲ್ಮನೆ ಮತ್ತು ಕೆಳಮನೆ(ಸದನ)ಗಳಿಗೆ ಚುನಾವಣೆಯನ್ನು ನಡೆಸಲು ಒಂದು ಆಯೋಗ ಮತ್ತು ಪ್ರತಿಯೊಂದು ಪ್ರಾಂತ್ಯ ಅಥವಾ ರಾಜ್ಯಗಳಿಗೆ ರಾಜ್ಯಪಾಲ ಅಥವಾ ರಾಜ್ಯ ಆಳ್ವಿಕೆ ನಡೆಸುವವರಿಂದ ನೇಮಕಗೊಂಡ ಪ್ರತ್ಯೇಕ ಚುನಾವಣಾ ಆಯೋಗಗಳಿರಬೇಕೆಂಬ ಪ್ರಸ್ತಾಪವಿತ್ತು. ಇದನ್ನು ಈಗಿನ ೨೮೯ನೆಯ ವಿಧಿಗೆ ಹೋಲಿಸಿದಾಗ ಇದರಲ್ಲಿ ಮೂಲಭೂತ ಬದಲಾವಣೆ ಕಂಡುಬರುತ್ತದೆ. ವಿಧಿಯಲ್ಲಿ ಚುನಾವಣಾ ವ್ಯವಸ್ಥೆಯನ್ನು ಒಂದೇ ಚುನಾವಣಾ ಆಯೋಗದಲ್ಲಿ ಕೇಂದ್ರೀಕರಿಸಿ ಅವರಿಗೆ ಪ್ರಾಂತ್ಯ ಅಥವಾ ರಾಜ್ಯ ಸರಕಾರಗಳ ಅಧೀನವಾಗಿ ಕೆಲಸ ಮಾಡದಿರುವಂತಹ ಮತ್ತು ಕೇಂದ್ರ ಚುನಾವಣಾ ಆಯೋಗದ ಉಸ್ತುವಾರಿ ಮತ್ತು ನಿಯಂತ್ರಣದಲ್ಲಿ ಕೆಲಸ ಮಾಡುವ ಪ್ರಾದೇಶಿಕ ಆಯುಕ್ತರನ್ನೊಳಗೊಂಡ ಚುನಾವಣಾ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ನಾನು ಹೇಳಿದಂತೆ ನಿಸ್ಸಂಶಯವಾಗಿ ಇದು ಒಂದು ಮೂಲಭೂತ ಬದಲಾವಣೆಯಾಗಿದೆ. ಆದರೆ ಇದರ ಅವಶ್ಯಕತೆ ಇದೆ. ಏಕೆಂದರೆ ಕೆಲವು ಪ್ರಾಂತ್ಯಗಳಲ್ಲಿ ಸಮ್ಮಿಶ್ರ ಜನಸಂಖ್ಯೆ ಇದೆ. ಮೂಲನಿವಾಸಿಗಳೆಂದು ಕರೆಯಲಾದ ಒಂದು ಪ್ರಾಂತ್ಯಕ್ಕೆ ಸೀಮಿತರಾದ ನಿವಾಸಿಗಳಿದ್ದಾರೆ. ಅವರೊಂದಿಗೆ, ಜನಾಂಗೀಯ ಭಾಷೆ ಅಥವಾ ಸಾಂಸ್ಕೃತಿಕವಾಗಿ ಆ ಪ್ರಾಂತ್ಯದ ಪ್ರಬಲ ಜನಾಂಗದವರಿರುತ್ತಾರೆ. ಇಂತಹ ಪ್ರಾಂತ್ಯಗಳಲ್ಲಿ ಸರಕಾರಗಳು ಜನಾಂಗೀಯವಾಗಿ, ಭಾಷೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ತಮಗೆ ಸೇರಿರದ ವ್ಯಕ್ತಿಗಳನ್ನು ಚುನಾವಣಾ ಯಾದಿಯಿಂದ ಕೈಬಿಡುವಂತೆ ಸೂಚಿಸುತ್ತಿವೆ ಹಾಗೂ ಪಿತೂರಿ ನಡೆಸುತ್ತಿವೆ ಎಂಬ ಅಂಶ ಕರಡು ಸಮಿತಿ

ಮತ್ತು ಕೇಂದ್ರ ಸರಕಾರದ ಗಮನಕ್ಕೂ ಬಂದಿದೆ. ಪ್ರಜಾಪ್ರಭುತ್ವದಲ್ಲಿ ಮತದಾನದ ಹಕ್ಕು ಅತ್ಯಂತ ಮೂಲಭೂತ ಮತ್ತು ಅಮೂಲ್ಯ ಎಂಬುದನ್ನು ಸದನ ಗಮನಿಸಬೇಕು. ನಾವು ಈಗಾಗಲೇ ಸಂವಿಧಾನದಲ್ಲಿ ಹೇಳಿರುವಂತೆ ಯಾವುದೇ ನಾಗರಿಕ ಮತದಾನದ ಯಾದಿಯಲ್ಲಿ ಸೇರಲು ಅರ್ಹನಾಗಿರುವನು ಎಂದರೆ ೨೧ ವರ್ಷ ವಯಸ್ಸಾಗಿರುವ ಪ್ರೌಢನನ್ನು ಯಾವುದೇ ಸ್ಥಳೀಯ ಸರಕಾರ ಅಥವಾ ಅಧಿಕಾರಿಯ ವಿಕ್ಷಿಪ್ತ ವಿಚಾರದ ಕಾರಣ ಚುನಾವಣಾ ಯಾದಿಯಿಂದ ಕೈಬಿಡಲಾಗದು. ಆದ್ದರಿಂದ ಯಾವುದೇ ಕಾರಣಗಳಿಗಾಗಿ ಅರ್ಹರಾದವರನ್ನು ಚುನಾವಣಾ ಯಾದಿಯಿಂದ ಕೈಬಿಡದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಮೂಲ ಪ್ರಸ್ತಾವನೆಯಾಗಿದ್ದ ಪ್ರತಿಯೊಂದು ಪ್ರಾಂತ್ಯಕ್ಕೆ ಪ್ರತ್ಯೇಕ ಚುನಾವಣಾ ಆಯೋಗ ರಚಿಸುವುದನ್ನು ಕೈ ಬಿಡಲಾಯಿತು. ಆದ್ದರಿಂದ ಇಡೀ ಚುನಾವಣಾ ಪ್ರಕ್ರಿಯೆಯನ್ನು ಕೇಂದ್ರ ಚುನಾವಣಾ ಆಯೋಗದ ವ್ಯಾಪ್ತಿಯಲ್ಲಿ ತರುವ ನಿರ್ಧಾರಕ್ಕೆ ಬರಲಾಯಿತು. ಈ ಕೇಂದ್ರ ಆಯೋಗದ ಉಸ್ತುವಾರಿಯಲ್ಲಿಯೇ ಚುನಾವಣಾ ಪ್ರಕ್ರಿಯೆಗಳಾದ ಚುನಾವಣಾ ಅಧಿಕಾರಿಗಳಿಗೆ ಮತ್ತು ಚುನಾವಣಾ ಯಾದಿಗಳನ್ನು ಸಿದ್ಧಪಡಿಸುವ ಮತ್ತು ಪುನರ್ವಿಂಗಡಿಸುವ ಅಧಿಕಾರಿಗಳು ಮತ್ತು ಇತರರಿಗೆ ಯಾದಿಯಿಂದ ಅರ್ಹ ಮತದಾರರ ಹೆಸರುಗಳನ್ನು ಕೈಬಿಡದಂತೆ ನೋಡಿಕೊಳ್ಳಲು ಎಲ್ಲಾ ಕ್ರಮಗಳು ಜರುಗತಕ್ಕದ್ದು. ಇದುವೇ ಕರಡು ಸಂವಿಧಾನದಲ್ಲಿರುವ ಈಗಿನ ವಿಧಿಗಳ ಮೂಲಭೂತ ಬದಲಾವಣೆಯಾಗಿವೆ ಎಂದು ನಾನು ಹೇಳಬಹುದಾಗಿದೆ.

ಕಲಮು (೪)ಕ್ಕೆ ಸಂಬಂಧಿಸಿದಂತೆ, ಚುನಾವಣಾ ಆಯೋಗದ ಸದಸ್ಯರ ಸೇವಾನಿಯಮಗಳು ಮತ್ತು ಅಧಿಕಾರಾವಧಿಯ ವಿಷಯಗಳನ್ನು ಒಂದೆರಡು ಕರಾರುಗಳೊಂದಿಗೆ ರಾಷ್ಟ್ರಪತಿಗೆ ವಹಿಸಲು ನಿರ್ಧರಿಸಿದ್ದೇವೆ. ಮುಖ್ಯ ಚುನಾವಣಾ ಆಯುಕ್ತರನ್ನು ಸರ್ವೋಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶನನ್ನು ಸೇವೆಯಿಂದ ತೆಗೆದುಹಾಕುವ ಪದ್ಧತಿಯನ್ನನುಸರಿಸದೆ ತೆಗೆದುಹಾಕಲು ಬರುವುದಿಲ್ಲ ಎಂಬುದು ಅಂತಹ ಕರಾರುಗಳಲ್ಲೊಂದಾಗಿದೆ. ಚುನಾವಣೆಗಳನ್ನು ಕಾರ್ಯಾಂಗದ ನಿಯಂತ್ರಣದಿಂದ ಮುಕ್ತಗೊಳಿಸುವುದೇ ಈ ಸದನದ ಉದ್ದೇಶವಾಗಿದ್ದರೆ, ಚುನಾವಣಾ ಆಯೋಗವನ್ನು ಕಾರ್ಯಾಂಗದ ಆಜ್ಞೆಯ ಮೂಲಕ ಕಿತ್ತು ಹಾಕದಂತೆ ಮಾಡಬೇಕಾದರೆ ನಾವು ಈ ಮೂಲಕ ಸ್ಥಾಪಿಸಲಿರುವ ವ್ಯವಸ್ಥೆಯನ್ನನುಸರಿಸಬೇಕಾಗುತ್ತದೆ. ಆದ್ದರಿಂದಲೇ ನಾವು ಅವರನ್ನು ತೆಗೆದುಹಾಕುವ ವಿಷಯದಲ್ಲಿ ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರ ಅಂತಸ್ತನ್ನೇ ಮುಖ್ಯ ಚುನಾವಣಾ ಆಯುಕ್ತರಿಗೆ ಕೊಟ್ಟಿರುತ್ತೇವೆ. ಆದಾಗ್ಯೂ ನಾವು ಚುನಾವಣಾ ಆಯೋಗದ ಇತರ ಸದಸ್ಯರಿಗೆ ಇದೇ ಅಂತಸ್ತನ್ನು ಕೊಡುವ ಪ್ರಸ್ತಾವನೆ ಹೊಂದಿಲ್ಲ. ನಾವು ಈ ವಿಷಯವನ್ನು ರಾಷ್ಟ್ರಪತಿಗಳ ನಿರ್ಣಯಕ್ಕೆ ಬಿಟ್ಟಿದ್ದೇವೆ. ಅವರು ಒಬ್ಬ ಸದಸ್ಯರನ್ನು ತೆಗೆದುಹಾಕಬೇಕಾದ ಪ್ರಸಂಗದಲ್ಲಿ ಮುಖ್ಯ ಚುನಾವಣಾ ಆಯುಕ್ತರ ಶಿಫಾರಸಿನನ್ವಯ ನಿರ್ಣಯಿಸಬೇಕೆಂಬ ಕರಾರಿಗೊಳಗಾಗಿ ನಿರ್ಣಯಿಸ ಬೇಕಾಗುತ್ತದೆ.

ಚುನಾವಣಾ ಆಯೋಗವು ತನ್ನ ಕೆಲಸ ಕಾರ್ಯಗಳನ್ನು ನಿಭಾಯಿಸಲು ತನ್ನದೇ ಆದ ಪ್ರತ್ಯೇಕ ಸಿಬ್ಬಂದಿಯನ್ನು ಹೊಂದಿರಬೇಕೇ ಎಂಬುದು ಇನ್ನೊಂದು ಪ್ರಶ್ನೆಯಾಗಿದೆ. ಚುನಾವಣಾ ಆಯೋಗವು ತನ್ನ ಕರ್ತವ್ಯಗಳಾದ ಮತದಾರರ ಪಟ್ಟಿ ತಯಾರಿಸುವುದು, ಅದರ ಪುನರಾವಲೋಕನ, ಚುನಾವಣೆಗಳನ್ನು ನಡೆಸುವುದು ಮುಂತಾದವುಗಳನ್ನು ನಿರ್ವಹಿಸಲು ಬೇಕಾದ ಸಿಬ್ಬಂದಿಯನ್ನು ಸ್ವತಂತ್ರವಾದ ವ್ಯವಸ್ಥೆ ಹೊಂದುವುದರಿಂದ ಅನಾವಶ್ಯಕ ಸಿಬ್ಬಂದಿ ವೆಚ್ಚವಾಗುತ್ತದೆ. ನಾನು ಈಗಾಗಲೇ ಹೇಳಿರುವಂತೆ ಚುನಾವಣಾ ಆಯೋಗಕ್ಕೆ ಕೆಲಕಾಲ ಕೆಲಸದ ಒತ್ತಡವಿದ್ದು, ಇನ್ನು ಕೆಲಕಾಲ ಏನೂ ಕೆಲಸವಿರುವುದಿಲ್ಲ, ಆದ್ದರಿಂದ ಕಲಮು (೫)ರಲ್ಲಿ ಆಯೋಗವು ತನಗೆ ಬೇಕಾದ ಸಿಬ್ಬಂದಿಯನ್ನು ಅಗತ್ಯತೆಗನುಗುಣವಾಗಿ ಪಡೆದುಕೊಂಡು, ಕೆಲಸ

ಮುಗಿದಾಗ ಅವರನ್ನು ವಾಪಸು ಕಳುಹಿಸುವ ವ್ಯವಸ್ಥೆ ಮಾಡಿರುತ್ತೇವೆ. ಅವರು ಚುನಾವಣಾ ಆಯೋಗದೊಂದಿಗೆ ಕೆಲಸ ಮಾಡುವಾಗ ನಿಸ್ಸಂಶಯವಾಗಿ ಆಯೋಗದ ಆಡಳಿತಾತ್ಮಕ ನಿಯಂತ್ರಣಗೊಳಗಾಗುತ್ತಾರೆ. ಆಗ ಅವರು ತಮ್ಮ ಪ್ರಾಂತೀಯ ಆಡಳಿತ ನಿಯಂತ್ರಣಕ್ಕೊಳಪಡುವುದಿಲ್ಲ. ಈ ವಿಧಿಯು ಯಾವ ವಿಷಯಗಳಲ್ಲಿ ಮೂಲ ವಿಧಿಯಿಂದ ಭಿನ್ನವಾಗಿರುತ್ತದೆ ಎಂಬುದನ್ನು ಸದನ ಈಗ ತಿಳಿದುಕೊಳ್ಳಬಹುದಾಗಿದೆ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ, ಸಾಮಾನ್ಯ): ಮಾನ್ಯ ಸಭಾಧ್ಯಕ್ಷರೆ, ನನ್ನ ಈ ತಿದ್ದುಪಡಿಯು ಅನೇಕ ರೀತಿಯ ಟೀಕೆಗೆ ಒಳಗಾಗಿದೆ. ಆದರೆ ಚರ್ಚೆಯ ಕಾಲದಲ್ಲಿ ಎತ್ತಲಾದ ಎಲ್ಲಾ ವಿಷಯಗಳನ್ನು ಪ್ರಸ್ತಾಪಿಸಲು ನಾನು ಇಚ್ಛೆಪಡುವುದಿಲ್ಲ. ನಾನು ನನ್ನ ಸ್ನೇಹಿತ ಪ್ರೊಫೆಸರ್ ಶಿಬ್ಬನ್‌ಲಾಲ್ ಸಕ್ಸೇನಾರವರು ಎತ್ತಿರುವ ಮತ್ತು ಪಂಡಿತ್ ಹೃದಯನಾಥ ಕುಂಝ್ರುರವರು ಬೆಂಬಲಿಸಿರುವ ಸಂಗತಿಗಳನ್ನು ಮಾತ್ರ ಪರಿಶೀಲಿಸುವೆ. ನನ್ನ ಮಿತ್ರ ಪ್ರೊಫೆಸರ್ ಸಕ್ಸೇನಾರವರು ಸೂಚಿಸಿರುವ ತಿದ್ದುಪಡಿಯಲ್ಲಿ ಎರಡು ವಿಷಯಗಳನ್ನು ಮಾತ್ರ ಪರಿಗಣಿಸಬೇಕಾಗಿದೆ. ಮೊದಲನೆಯ ವಿಷಯವೆಂದರೆ, ಈ ಚುನಾವಣಾ ಆಯೋಗಕ್ಕೆ ಆಯುಕ್ತರನ್ನು ನೇಮಿಸುವುದು ಮತ್ತು ಅವರನ್ನು ತೆಗೆದುಹಾಕುವುದು. ಎರಡನೆಯ ಪ್ರಶ್ನೆಗೆ ಸಂಬಂಧಿಸಿದಂತೆ ನಾನು ಈಗಾಗಲೇ ಸೂಚಿಸಿರುವ ತಿದ್ದುಪಡಿಗೆ ಯಾವುದೇ ಬದಲಾವಣೆಯ ಅವಶ್ಯಕತೆ ಇಲ್ಲ. ಏಕೆಂದರೆ, ಮುಖ್ಯ ಆಯುಕ್ತರನ್ನು ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರ ಅಂತಸ್ತಿನಲ್ಲಿಡಲಾಗಿದೆ ಎಂಬ ವಿಷಯ ಈ ಸದನಕ್ಕೆ ಈಗಾಗಲೇ ತಿಳಿದಿದೆ. ನಾವು ಈಗಾಗಲೇ ಸಂವಿಧಾನದ ಕಲಮು (೪)ರ ಪರಂತುಕದಲ್ಲಿ ಕೊಟ್ಟಿರುವಂತಹ ರಕ್ಷಣೆಗಿಂತ ಹೆಚ್ಚಿನ ರಕ್ಷಣೆಯನ್ನು ಇನ್ನಾವುದೇ ಸಂವಿಧಾನದಲ್ಲಿ ಕೊಟ್ಟಿರುವುದು ಸಾಧ್ಯವಿಲ್ಲ.

ಇನ್ನು ಇತರ ಆಯುಕ್ತರ ವಿಷಯದಲ್ಲಿ ಅವರನ್ನು ತೆಗೆದುಹಾಕುವ ಅಧಿಕಾರವನ್ನು ರಾಷ್ಟ್ರಪತಿಗೆ ನೀಡಲಾಗಿದ್ದು, ಆ ಅಧಿಕಾರವು ಒಂದು ಮುಖ್ಯವಾದ ಪರಿಮಿತಿಗೊಳಗಾಗಿರುತ್ತದೆ. ಅದೇನೆಂದರೆ ಆಯುಕ್ತರನ್ನು ತೆಗೆದುಹಾಕುವ ಸಂದರ್ಭದಲ್ಲಿ ರಾಷ್ಟ್ರಪತಿಗಳು ಮುಖ್ಯ ಚುನಾವಣಾ ಆಯುಕ್ತರ ಶಿಫಾರಸಿನಂತೆ ಮಾತ್ರ ನಡೆದುಕೊಳ್ಳತಕ್ಕದ್ದು. ಆದ್ದರಿಂದ ತೆಗೆದುಹಾಕುವ ಪ್ರಶ್ನೆಗೆ ಸಂಬಂಧಿಸಿದಂತೆ ನನ್ನ ತಿದ್ದುಪಡಿಯಲ್ಲಿ ಅಡಕವಾಗಿರುವ ಪರಂತುಕಗಳಿಗಿಂತ ಹೆಚ್ಚಿನದೇನನ್ನು ಸೇರಿಸುವ ಅವಶ್ಯಕತೆ ಇಲ್ಲ ಎಂಬುದು ನನ್ನ ವಾದವಾಗಿದೆ.

ಇನ್ನು ನೇಮಕದ ಪ್ರಶ್ನೆ. ನನ್ನ ಮಿತ್ರ ಪ್ರೊಫೆಸರ್ ಶಿಬ್ಬನ್‌ಲಾಲ್ ಸಕ್ಸೇನಾ ಹೇಳಿದುದರಲ್ಲಿ ಸತ್ವವಿದೆ. ಒಬ್ಬ ಕಾರ್ಯಾಂಗದ ಅಂಕಿತಕ್ಕೊಳಗಾಗಬಹುದಾದ ಮೂರ್ಖ ಅಥವಾ ಮೋಸಗಾರನು ನೇಮಕಗೊಳ್ಳದಂತೆ ನೋಡಿಕೊಳ್ಳಲು ಸಂವಿಧಾನದಲ್ಲಿ ಅವಕಾಶವಿರದಿದ್ದರೆ ಚುನಾವಣಾ ಆಯುಕ್ತರನ್ನು ಗೊತ್ತಾದ ನಿಗದಿತವಾದ ಸುಭದ್ರ ಅವಧಿಗೆ ನೇಮಕ ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ ಎಂಬ ಅವರ ಮಾತುಗಳಲ್ಲಿ ಸತ್ಯಾಂಶವಿದೆ. ನಾನು ಸೂಚಿಸಿರುವ ಉಪಬಂಧಗಳಲ್ಲಿ ಒಬ್ಬ ಅಯೋಗ್ಯನನ್ನು ಮುಖ್ಯ ಚುನಾವಣಾ ಆಯುಕ್ತ ಇಲ್ಲವೇ ಇತರ ಚುನಾವಣಾ ಆಯುಕ್ತರನ್ನು ನೇಮಕ ಮಾಡುವುದನ್ನು ತಪ್ಪಿಸಲು ಯಾವುದೇ ವ್ಯವಸ್ಥೆ ಇಲ್ಲವೆಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು. ಇದು ಒಂದು ಗಹನವಾದ ಪ್ರಶ್ನೆಯಾಗಿದ್ದು, ಇದರಿಂದ ನನಗೆ ಮತ್ತು ಈ ಸದನಕ್ಕೂ ತಲೆನೋವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು. ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂವಿಧಾನ ೨ನೆಯ ವಿಧಿಯ ಭಾಗ (೨)ದಲ್ಲಿ ಈ ಸಮಸ್ಯೆಯನ್ನು ಈ ರೀತಿ ಬಗೆಹರಿಸಲಾಗಿದೆ. ಈ ವಿಧಿಯಲ್ಲಿ ನಮೂದಿಸಲಾದ ಕೆಲವು ಬಗೆಯ ನೇಮಕಗಳನ್ನು ಅಧ್ಯಕ್ಷರು ಸೆನೆಟ್ ಸಭೆಯ ಅನುಮತಿ ಇಲ್ಲದೆ ಮಾಡುವಂತಿಲ್ಲ. ಇದರಿಂದಾಗಿ ನೇಮಕಗಳ ಅಧಿಕಾರವನ್ನು ಅಧ್ಯಕ್ಷರಿಗೆ

ನೀಡಲಾಗಿದ್ದರೂ ಅದು ಸೆನೆಟ್‌ನ ನಿಯಂತ್ರಣಕ್ಕೆ ಒಳಗಾಗಿದೆ. ಹೀಗಾಗಿ ಯಾವುದೇ ನೇಮಕದ ಸೂಚನೆ ಸೆನೆಟ್ ಸಭೆಯ ಎದುರಿಗೆ ಬಂದಾಗ ಅಂತಹ ವ್ಯಕ್ತಿ ಆ ಸ್ಥಾನಕ್ಕೆ ಯೋಗ್ಯನಾಗಿರುವನೇ ಇಲ್ಲವೇ ಎಂಬ ಸಂಗತಿಯನ್ನು ವಿಚಾರಿಸಿ ಅದರ ಬಗ್ಗೆ ಸೂಕ್ತ ನಿರ್ಣಯ ಮಾಡುತ್ತದೆ. ಆದರೆ ಇದು ಒಂದು ವಿಳಂಬಕಾರಿ ಪ್ರಕ್ರಿಯೆ ಎಂಬುದನ್ನು ಅರಿತುಕೊಳ್ಳಬೇಕು. ನೇಮಕ ಮಾಡುವ ಕಾಲದಲ್ಲಿ ಸಂಸತ್ತಿನ ಅಧಿವೇಶನ ಇಲ್ಲದೇ ಇರಬಹುದು. ಯಾವ ವಿಳಂಬವೂ ಇಲ್ಲದೆ ನೇಮಕ ಮಾಡಬೇಕಾಗಿರುತ್ತದೆ. ಎರಡನೆಯದಾಗಿ ಅಮೆರಿಕದಲ್ಲನುಸರಿಸಲಾದ ಪದ್ಧತಿಯಲ್ಲಿ ರಾಜಕೀಯ ಅಂಶಗಳೂ ಗಣನೆಗೆ ಬರಬಹುದು. ಹೀಗಾಗಿ ಅಮೆರಿಕದ ಸಂವಿಧಾನದಲ್ಲಿನ ವ್ಯವಸ್ಥೆ ಅಷ್ಟೇನೂ ಪರಿಣಾಮಕಾರಿ ಎನಿಸುವುದಿಲ್ಲ. ಇದೂ ಅಲ್ಲದೆ ಕೆಲವು ಆಡಳಿತಾತ್ಮಕ ತೊಂದರೆಗಳೂ ಉಂಟಾಗಬಹುದು. ಆದ್ದರಿಂದ ಇಂತಹ ವ್ಯವಸ್ಥೆಯನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸುವುದು ಎಷ್ಟರಮಟ್ಟಿಗೆ ಅಪೇಕ್ಷಣೀಯ ಎಂಬ ಸಂಶಯ ನನಗಿದೆ. ಕರಡು ಸಮಿತಿಯು ಈ ವಿಷಯಕ್ಕೆ ಹೆಚ್ಚಿನ ಗಮನ ನೀಡಿದೆ. ಏಕೆಂದರೆ ನಾನು ಹೇಳಿದಂತೆ ಈ ವಿಷಯ ಹೆಚ್ಚು ತಲೆನೋವುಂಟುಮಾಡಿದೆ. ಆದ್ದರಿಂದ ಒಂದು ಮಧ್ಯವರ್ತಿ ಮಾರ್ಗವಾಗಿ ಈ ಸಭೆಯು ರಾಷ್ಟ್ರಪತಿಗೆ ಈ ವಿಷಯದಲ್ಲಿ ಮಾರ್ಗದರ್ಶಿಯಾಗುವ ಒಂದು ಲಿಖಿತ ಅನುದೇಶವನ್ನು ನೀಡಿ, ಅದರಲ್ಲಿ ನೇಮಕಗಳ ಮುನ್ನ ಸಲಹೆ ಪಡೆಯಲು ಒಂದು ಸಂಸ್ಥೆ ಅಥವಾ ವ್ಯವಸ್ಥೆಯನ್ನು ಮಾಡುವ ಮೂಲಕ ಈ ತೊಂದರೆಯನ್ನು ನಿವಾರಿಸಬಹುದೆಂದು ನನಗನಿಸುತ್ತದೆ. ಈ ಮೂಲಕ ಅಮೆರಿಕದ ಸಂವಿಧಾನದ ವ್ಯವಸ್ಥೆಯಿಂದುಂಟಾಗುವ ತೊಂದರೆಯನ್ನು ನಿವಾರಿಸಬಹುದು. ಈ ಸಂಬಂಧವಾದ ಕರಡು ಅನುದೇಶವನ್ನು ಈ ಸಭೆಯಲ್ಲಿ ಮಂಡಿಸಲಾದಾಗ ಅದಕ್ಕೆ ಈ ಸಭೆಯ ಪ್ರತಿಕ್ರಿಯೆ ಏನಾಗಬಹುದೆಂದು ಈ ಹಂತದಲ್ಲಿ ಊಹಿಸಲು ಬರುವುದಿಲ್ಲ. ಕರಡು ಸಮಿತಿಯ ಈ ಪ್ರಸ್ತಾವನೆಯನ್ನು ಸದನ ನಿರಾಕರಿಸಿದಲ್ಲಿ ಸಮಸ್ಯೆ ಬಗೆಹರಿಯಬಹುದು. ಆದರೆ ಮುಂದೇನಾಗಬಹುದೆಂದು ಹೇಳುವುದು ಕಷ್ಟ. ಆದ್ದರಿಂದ ನನ್ನ ಗೌರವಾನ್ವಿತ ಮಿತ್ರ ಪ್ರೊಫೆಸರ್ ಸಕ್ಸೇನಾ ಸೂಚಿಸಿರುವ ಮತ್ತು ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಕುಂಝ್ರುರವರು ಅನುಮೋದಿಸಿರುವ ಟೀಕೆಗೆ ಉತ್ತರವಾಗಿ ನನ್ನ ತಿದ್ದುಪಡಿ ಸಂಖ್ಯೆ ೯೯ಕ್ಕೆ ಕೆಲವು ತಿದ್ದುಪಡಿಗಳನ್ನು ಸೂಚಿಸಬಯಸುತ್ತೇನೆ. ಈ ತಿದ್ದುಪಡಿಗಳನ್ನು ಮೊದಲೇ ಸದಸ್ಯರುಗಳಿಗೆ ಕಳುಹಿಸಿಕೊಡಲಾಗಲಿಲ್ಲ. ಆದರೆ ನಾನು ಅವುಗಳನ್ನು ಓದಿ ಹೇಳಿದಾಗ ನಾನು ಸೂಚಿಸುತ್ತಿರುವುದೇನು ಎಂಬುದು ಸದನಕ್ಕೆ ಗೊತ್ತಾಗುವುದು.

ನನ್ನ ಮೊದಲನೆಯ ತಿದ್ದುಪಡಿ ಇದು.

"ಕಲಮು (೧)ರ ಕೊನೆಯ ಭಾಗದಲ್ಲಿರುವ

'ರಾಷ್ಟ್ರಪತಿಯಿಂದ ನೇಮಕಗೊಳ್ಳುವ' ಪದಗಳನ್ನು ಕೈಬಿಡತಕ್ಕದ್ದು."

"ಕಲಮು (೨)ರ ೪ನೆಯ ಪಂಕ್ತಿಯಲ್ಲಿರುವ 'ನೇಮಕ' ಎಂಬ ಪದದ ಬದಲು 'ಗೊತ್ತುಪಡಿಸು' ಎಂಬ ಪದವನ್ನು ಸೇರಿಸಿದ ನಂತರ ಈ ಕೆಳಗೆ ಕಾಣಿಸಿದ ಪದಗಳನ್ನು ಸೇರಿಸತಕ್ಕದ್ದು.

"ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರುಗಳ ನೇಮಕವನ್ನು, ಈ ವಿಷಯದಲ್ಲಿ ಸಂಸತ್ತು ಮಾಡಬಹುದಾದ ಯಾವುದೇ ಕಾನೂನಿನ ಉಪಬಂಧಗಳ ಮಿತಿಯಲ್ಲಿ, ರಾಷ್ಟ್ರಪತಿಗಳು ಮಾಡತಕ್ಕದ್ದು."

"ಈ ಕಲಮಿನ 'ಇತರ ಯಾರೇ ಚುನಾವಣಾ ಆಯುಕ್ತರ ನೇಮಕ ಮಾಡಿದಾಗ' ಇತ್ಯಾದಿ ಪದಗಳಿಗೆ ಕಲಮು (೨ಎ) ಎಂಬ ಸಂಖ್ಯೆಯನ್ನು ಕೊಡತಕ್ಕದ್ದು."

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್** (ಮದ್ರಾಸು, ಸಾಮಾನ್ಯ): ಒಂದು ಹೊಸ ವಿಷಯವನ್ನು

ಸೂಚಿಸುವಾಗ ಅದಕ್ಕೆ ಅವಕಾಶ ಕೊಡಬಾರದೆಂಬುದು ಎಂಬ ವಿಧಿ ಬಿಂದುವನ್ನು ಎತ್ತುತ್ತಿರುವೆ. ಇಲ್ಲದೇ ಹೋದರೆ ಇನ್ನೊಂದು ಪ್ರತ್ಯೇಕ ಚರ್ಚೆಯೇ ಆಗಬೇಕಾಗುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸಭಾಧ್ಯಕ್ಷರು ಇತರ ಸದಸ್ಯರಿಗೆ ತಮ್ಮ ಅಭಿಪ್ರಾಯ ತಿಳಿಸಲು ಅವಕಾಶ ಕೊಡುವರೆಂದು ಭಾವಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಹಾಗಾದರೆ ಈ ವಿಧಿಯ ಪರಿಶೀಲನೆಯನ್ನು ಮುಂದಕ್ಕೆ ಹಾಕುವುದೇ ಸರಿಯಾದ ಮಾರ್ಗವೆಂದು ನನಗನಿಸುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ತಿದ್ದುಪಡಿಗಳು ನಿರಾತಂಕ ಸ್ವರೂಪದ್ದಾಗಿವೆ. ಏನೇ ಮಾಡಿದರೂ ಅದು ಸಂಸತ್ತಿನಲ್ಲಿ ಅಂಗೀಕಾರವಾದ ಕಾನೂನುಗಳಿಗೆ ಅನ್ವಯವಾಗಿರಬೇಕೆಂದು ಮಾತ್ರ ಅವುಗಳಲ್ಲಿ ಹೇಳಲಾಗಿದೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ** (ಮದ್ರಾಸ್, ಸಾಮಾನ್ಯ): ಈ ತಿದ್ದುಪಡಿಗಳ ಪ್ರತಿಗಳನ್ನು ಸದಸ್ಯರಿಗೆ ಕಳುಹಿಸಬೇಕು ಮತ್ತು ಅವುಗಳ ಪರಿಶೀಲನೆಯನ್ನು ಮುಂದಕ್ಕೆ ಹಾಕಬೇಕು ಎಂದು ನಾನು ಸೂಚಿಸ ಬಯಸುತ್ತೇನೆ.

**ಗೌರವಾನ್ವಿತ ಶ್ರೀ ಕೆ. ಸಂತಾನಮ್** (ಮದ್ರಾಸ್, ಸಾಮಾನ್ಯ): ಇವುಗಳನ್ನು ಕರಡು ಸಮಿತಿ ಪರಿಶೀಲಿಸಬೇಕೆಂದು ನಾನು ಸೂಚಿಸುತ್ತೇನೆ. ಅವು ಕಾನೂನು ಸ್ವರೂಪದವುಗಳಾಗಿದಾಗ್ಯೂ ನಮಗೆ ಅವುಗಳನ್ನು ಪರಿಶೀಲಿಸುವ ಅವಕಾಶ ಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಕರಡು ಸಮಿತಿಯೊಡನೆ ಸಮಾಲೋಚಿಸಿದ ನಂತರವೇ ಈ ತಿದ್ದುಪಡಿಗಳನ್ನು ತರಲಾಗಿದೆ.

* * *

* **ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿಗಳನ್ನು ಮಂಡಿಸಲಾಗಲಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮುಂದಿನ ತಿದ್ದುಪಡಿ ಹೀಗಿದೆ:

"ಕಲಮು (೪)ರ ಆರಂಭದಲ್ಲಿ ಈ ಪದಗಳನ್ನು ಸೇರಿಸತಕ್ಕದ್ದು: 'ಈ ವಿಷಯದಲ್ಲಿ ಸಂಸತ್ತು ಮಾಡಬಹುದಾದ ಯಾವುದೇ ಕಾನೂನಿಗೊಳಗೊಂಡಂತೆ'."

**ಗೌರವಾನ್ವಿತ ಶ್ರೀ ಕೆ. ಸಂತಾನಮ್:** ಮಾನ್ಯರೆ, ಇದು ಒಂದು ವಿಷಯಕ ತಿದ್ದುಪಡಿಯಾಗಿದ್ದುದಾಗಿದೆ. ಏಕೆಂದರೆ ರಾಷ್ಟ್ರಪತಿಗಳ ವಿವೇಚನೆಯನ್ನು ಸಂಸತ್ತಿನ ಕಾನೂನು ನಿರ್ಬಂಧಿಸಬಹುದು.

**ಮಾನ್ಯ ಸಭಾಧ್ಯಕ್ಷರು:** ಇನ್ನು ಹೆಚ್ಚಿನ ಚರ್ಚೆಯ ಅವಶ್ಯಕತೆ ಇರುವುದಿಲ್ಲ. ತಿದ್ದುಪಡಿಗಳನ್ನು ಮಂಡಿಸಲಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನೀವು ಒಂದು ಸಂವಿಧಾನವನ್ನು ತಾಂತ್ರಿಕ ಅಂಶಗಳಿಂದಲೇ ಪರಿಗಣಿಸಲಾಗದು. ಅತಿಯಾದ ತಾಂತ್ರಿಕತೆ ಸಂವಿಧಾನ ರಚನೆಗೆ ಮಾರಕವಾಗಬಹುದು.

**ಶ್ರೀ ಹೆಚ್. ವಿ. ಕಾಮತ್:** ಮಾನ್ಯರೆ, ಯಾವುದೇ ಮುಖ್ಯವಾದ ತಿದ್ದುಪಡಿಗಳನ್ನು ಮುಂದಕ್ಕೆ ಹಾಕುವುದಾಗಿ ತಾವು ಕೆಲದಿನಗಳ ಹಿಂದೆ ರೂಲಿಂಗ್ ನೀಡಿದ್ದೀರಿ.

**ಮಾನ್ಯ ಸಭಾಧ್ಯಕ್ಷರು:** ಇವು ಮುಖ್ಯವಾದ ಅಥವಾ ಸಾರಭೂತ ತಿದ್ದುಪಡಿಗಳಾಗಿವೆ ಎಂದು ಪರಿಗಣಿಸಿ

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೩೦.

ಅವುಗಳನ್ನು ತಡೆಹಿಡಿಯಲಾಗುವುದು. ಈ ಸದನದ ಬಹುತೇಕ ಸದಸ್ಯರ ಅಭಿಪ್ರಾಯ ಇವುಗಳನ್ನು ಮುಂದಕ್ಕೆ ಹಾಕಬೇಕೆಂದಿರುವಾಗ ಅವುಗಳ ಮೇಲಣ ಚರ್ಚೆಯನ್ನು ತಡೆಹಿಡಿಯಲಾಗಿದೆ.

## ಹೊಸ ವಿಧಿ ೨೮೯ಎ*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಹೀಗೆ ಸೂಚಿಸುತ್ತೇನೆ.

"ಪಟ್ಟಿ I(ಐದನೆಯ ವಾರ)ದ ತಿದ್ದುಪಡಿ ಸಂಖ್ಯೆ ೧೧೦ಕ್ಕೆ ಸಂಬಂಧವಾಗಿ, ಸೂಚಿಸಲಾಗಿರುವ ೨೮೯–ಎಗೆ ಬದಲಾಗಿ ಈ ಕೆಳಗೆ ಹೇಳಲಾದ ವಿಧಿಯನ್ನು ಸೇರಿಸತಕ್ಕದ್ದು:

**ವ್ಯಕ್ತಿಯನ್ನೇ ಆಗಲಿ, ಧರ್ಮ, ಜನಾಂಗ, ಜಾತಿ ಅಥವಾ ಲಿಂಗದ ಆಧಾರದ ಮೇಲೆ ಮತದಾರರ ಯಾದಿಯಲ್ಲಿ ಅನರ್ಹನೆಂದು ಸೇರಿಸುವುದನ್ನು ಕೈ ಬಿಡಲಾಗದು.**

೨೮೯–ಎ: "ಸಂಸತ್ತಿನ ಎರಡೂ ಸದನಗಳ ಇಲ್ಲವೇ ರಾಜ್ಯಗಳ ಎರಡೂ ಸದನಗಳ ಚುನಾವಣೆಗಳಿಗಾಗಿ ಪ್ರತಿಯೊಂದು ಪ್ರಾದೇಶಿಕ ಕ್ಷೇತ್ರಕ್ಕೂ ಒಂದು ಸಾಮಾನ್ಯ ಚುನಾವಣಾ ಯಾದಿ ಇರತಕ್ಕದ್ದು, ಮತ್ತು ಯಾವುದೇ ಧರ್ಮ, ಜನಾಂಗ, ಜಾತಿ, ಲಿಂಗ ಅಥವಾ ಅವುಗಳಲ್ಲಿ ಯಾವುದೇ ಒಂದು ಆಧಾರದ ಮೇಲೆ ಚುನಾವಣಾ ಯಾದಿಯಲ್ಲಿ ಸೇರಲು ಅರ್ಹ ಅಥವಾ ಅನರ್ಹಗೊಳಿಸತಕ್ಕದ್ದಲ್ಲ."

ಮಾನ್ಯರೆ, ಈ ಸದನ ಈಗಾಗಲೇ ನಿರ್ಧರಿಸಿರುವಂತೆ ಇನ್ನು ಮುಂದೆ ಪ್ರತ್ಯೇಕ ಮತದಾರ ಮಂಡಲಿ ಇರುವುದಿಲ್ಲ ಎಂಬ ನಿರ್ಧಾರವನ್ನು ಜಾರಿಯಲ್ಲಿ ತರುವುದೇ ಇದರ ಉದ್ದೇಶವಾಗಿದೆ. ವಾಸ್ತವಿಕವಾಗಿ ಈ ಕಲಮಿನ ಅವಶ್ಯಕತೆಯೇ ಇರುವುದಿಲ್ಲ. ಏಕೆಂದರೆ ನಂತರ ಬರಲಿರುವ ತಿದ್ದುಪಡಿಗಳಲ್ಲಿ ತಾವು ಕರಡು ಸಂವಿಧಾನದಲ್ಲಿರುವ ಮುಸ್ಲಿಮರು, ಸಿಖ್ಖರು, ಆಂಗ್ಲೋ ಇಂಡಿಯನ್ನರು ಮುಂತಾದವರುಗಳಿಗೆ ನೀಡಲಿರುವ ಪ್ರಾತಿನಿಧ್ಯವನ್ನು ಕೈಬಿಡಲಿದ್ದೇವೆ. ಆದಾಗ್ಯೂ, ಹಿಂದಿನದನ್ನೆಲ್ಲಾ ರದ್ದುಗೊಳಿಸುತ್ತಿರುವುದರಿಂದ ಈ ವಿಷಯವನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ಹೇಳಬೇಕೆಂಬ ಅನಿಸಿಕೆ ಉಂಟಾಗಿರುವುದರಿಂದ ನಾನು ಈ ತಿದ್ದುಪಡಿಯನ್ನು ತಂದಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ನೀವು ಈ ತಿದ್ದುಪಡಿಯನ್ನು ಕೇವಲ ಚರ್ಚೆಗಾಗಿ ತಂದಿದ್ದು, ಇದರ ಅಂಗೀಕಾರಕ್ಕಾಗಿ ಅಲ್ಲ ಎಂದು ನಾನು ಭಾವಿಸಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಅದು ಹಾಗಲ್ಲ. ನಾನು ತಿದ್ದುಪಡಿ ಮಂಡಿಸಿದ್ದೇನೆ. ಅದನ್ನು ಏಕೆ ಮಂಡಿಸಲಾಗಿದೆ ಎಂಬುದಕ್ಕೆ ಕಾರಣಗಳನ್ನು ಮಾತ್ರ ಕೊಟ್ಟಿದ್ದೇನೆ.

ಇನ್ನೊಂದು ತಿದ್ದುಪಡಿಯ ಮೂಲಕ ೨೮೯–ಬಿ ಎಂಬ ಹೊಸ ವಿಧಿಯನ್ನು ಸೇರಿಸಲು ಸೂಚಿಸುತ್ತಿದ್ದೇನೆ.

"ತಿದ್ದುಪಡಿಗಳ ಪಟ್ಟಿಯ ತಿದ್ದುಪಡಿ ಸಂಖ್ಯೆ ೩೦೮೭ರ ಬದಲು ಈ ಕೆಳಕಂಡಂತೆ ಸೇರಿಸ ತಕ್ಕದ್ದು:

**ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಚುನಾವಣೆಗಳು ವಯಸ್ಕ ಮತದಾನ ಪದ್ಧತಿಯಂತೆ ನಡೆಯುವುವು.**

---

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೩೦–೩೧.

**೨೮೯–ಬಿ:** ಲೋಕಸಭೆ (ಹೌಸ್ ಆಫ್ ದಿ ಪೀಪಲ್) ಮತ್ತು ಪ್ರತಿಯೊಂದು ರಾಜ್ಯದ ವಿಧಾನಸಭೆಗೆ ಚುನಾವಣೆಗಳು ವಯಸ್ಕ ಮತದಾನ ಪದ್ಧತಿಯ ಮೇಲೆ ನಡೆಯಬೇಕು. ಎಂದರೆ ಅಧಿಕೃತವಾದ ಶಾಸಕಾಂಗವು ನಿಗದಿಪಡಿಸಿದ ದಿನಾಂಕದಂದು ಇಪ್ಪತ್ತೊಂದು ವಯಸ್ಸಿಗೆ ಕಡಿಮೆ ಇರದಂತಹ ಯಾವುದೇ ನಾಗರಿಕನು, ಸಂವಿಧಾನದನ್ವಯ ಯಾವುದೇ ಅನರ್ಹತೆಗೊಳಗಾಗಿರುವ, ಅಥವಾ ಸಂಬಂಧಪಟ್ಟ ಯಾವುದೇ ಶಾಸಕಾಂಗವು ಅಂಗೀಕರಿಸಿದ ಯಾವುದೇ ಕಾನೂನಿನನ್ವಯ ವಾಸಿಯಲ್ಲದವನು, ಬುದ್ಧಿ ಸ್ಥಿಮಿತ ಇಲ್ಲದವನು, ಅಪರಾಧ ಅಥವಾ ಭ್ರಷ್ಟ ಅಥವಾ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿರುವಂತಹ ವ್ಯಕ್ತಿ ಅಂತಹ ಯಾವುದೇ ಚುನಾವಣೆಯಲ್ಲಿ ಮತದಾರನೆಂದು ದಾಖಲಾಗಬಾರದು."

**[ತಿದ್ದುಪಡಿಯುನ್ನು ಅಂಗೀಕರಿಸಲಾಯಿತು. ೨೮೯–ಬಿ ವಿಧಿಯುನ್ನು ಸಂವಿಧಾನದಲ್ಲಿ ಸೇರಿಸಲಾಯಿತು.]**

* * *

## ವಿಧಿ ೨೯೦*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ವಿಷಯವನ್ನು ಹೀಗೆ ಮಂಡಿಸುತ್ತಿದ್ದೇನೆ:

"೨೯೦ನೆಯ ವಿಧಿಯ ಬದಲು ಈ ಕೆಳಗಣ ವಿಧಿಯನ್ನು ಸೇರಿಸತಕ್ಕದ್ದು:

೨೯೦ ಈ ಸಂವಿಧಾನದಡಿ ಮಾಡಬಹುದಾದ ಯಾವುದೇ ಪ್ರಸ್ತಾವನೆಗಳ ಮಿತಿಗೊಳಗಾಗಿ.

**ಸಂಸತ್ತು ಶಾಸನ ಸಭೆಗಳಿಗೆ ಚುನಾವಣೆಗಳ ಸಂಬಂಧ ಉಪಬಂಧಗಳನ್ನು ಮಾಡುವ ಅಧಿಕಾರ**

ತನ್ನ ಎರಡೂ ಸದನಗಳ ಅಥವಾ ರಾಜ್ಯಗಳ ಎರಡೂ ಸದನಗಳ ಚುನಾವಣೆಗಳಿಗೆ ಸಂಬಂಧಿಸಿದಂತೆ, ಆಯಾ ಸದನಗಳ ವಿಧಿವತ್ ಸಂಸ್ಥಾಪನೆ ಮತ್ತು ಮತ ಕ್ಷೇತ್ರಗಳ ರಚನೆಯೂ ಸೇರಿದಂತೆ, ಎಲ್ಲಾ ವಿಷಯಗಳಲ್ಲಿ ಕಾಲ ಕಾಲಕ್ಕೆ ಕಾನೂನು ಮೂಲಕ ವ್ಯವಸ್ಥೆ ಮಾಡತಕ್ಕದ್ದು."

ಮಾನ್ಯರೆ, ತಮ್ಮ ಅನುಮತಿಯೊಂದಿಗೆ ನಾನು ಇದನ್ನು ತಿದ್ದುಪಡಿ ಮಾಡುವ ಇನ್ನೊಂದು ತಿದ್ದುಪಡಿಯನ್ನು ಮಂಡಿಸಬಯಸುತ್ತೇನೆ:

"೨೯೦ನೆಯ ಹೊಸ ವಿಧಿಗೆ ಸಂಬಂಧಿಸಿದ ತಿದ್ದುಪಡಿಗಳ ಪಟ್ಟಿ(ಐದನೆಯ ವಾರ)ಯ ತಿದ್ದುಪಡಿ ಸಂಖ್ಯೆ ೧೨೩ರಲ್ಲಿ 'ಸೇರಿದಂತೆ' ಎಂಬ ಪದದ ನಂತರ 'ಮತದಾರರ ಪಟ್ಟಿ ತಯಾರಿಸುವುದು ಮತ್ತು ಇತರ ಎಲ್ಲಾ' ಎಂಬ ಪದಗಳನ್ನು ಸೇರಿಸತಕ್ಕದ್ದು."

* * *

** **ಮಾನ್ಯ ಸಭಾಧ್ಯಕ್ಷರು:** ವಿಧಿ ೨೯೦ಕ್ಕೆ ಪ್ರೊಫೆಸರ್ ಶಿಬ್ಬನ್‌ಲಾಲ್ ಸಕ್ಸೇನಾರವರು ತಮ್ಮ ತಿದ್ದುಪಡಿ ಕಳುಹಿಸಿರುತ್ತಾರೆ. ತಿದ್ದುಪಡಿಗಳ ಮಂಡನೆಯಾದಾಗ ಅವರು ಇಲ್ಲಿರಲಿಲ್ಲ. ಏನೇ ಆಗಲಿ ಅದು ಸಾರಸ್ವರೂಪದ ತಿದ್ದುಪಡಿಯಾಗಿಲ್ಲ.

---

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೩೨.

** ಅದೇ, ಪುಟ ೯೩೨

ಉತ್ತರ ರೂಪವಾಗಿ ಡಾ. ಅಂಬೇಡ್ಕರರು ಏನನ್ನೂ ಹೇಳಲು ಬಯಸಿಲ್ಲವಾದರೆ, ನಾನು ಈ ತಿದ್ದುಪಡಿಯನ್ನು ಮತಕ್ಕೆ ಹಾಕುವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಈ ವಿಷಯದಲ್ಲಿ ಹೇಳುವುದೇನೂ ಇಲ್ಲ.

**[ಮೇಲೆ ಹೇಳಲಾದ ಡಾ. ಅಂಬೇಡ್ಕರ್‌ರವರ ಎಲ್ಲಾ ತಿದ್ದುಪಡಿಗಳೂ ಅಂಗೀಕೃತವಾದವು. ತಿದ್ದುಪಡಿಗಳೊಂದಿಗೆ ೨೯೦ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು]**

## ವಿಧಿ ೨೯೧*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನಾನು ಹೀಗೆ ಮಂಡಿಸುತ್ತಿದ್ದೇನೆ:

"ಈಗಿನ ೨೯೧ನೇ ಬದಲು ಈ ಕೆಳಗಣ ವಿಧಿಯನ್ನು ಸೇರಿಸತಕ್ಕದ್ದು.

### ಒಂದು ರಾಜ್ಯದ ಶಾಸಕಾಂಗದ ಚುನಾವಣೆಗಳಿಗಾಗಿ ರಾಜ್ಯ ಶಾಸಕಾಂಗದ ಅಧಿಕಾರ.

**೨೯೧.** ಸಂವಿಧಾನದಲ್ಲಿ ಮಾಡಲಾದ ವ್ಯವಸ್ಥೆಯಂತೆ ಮತ್ತು ಸಂಸತ್ತು ಆ ವಿಷಯವಾಗಿ ಯಾವ ವ್ಯವಸ್ಥೆಯನ್ನು ಮಾಡಿರದಿದ್ದರೆ, ಒಂದು ರಾಜ್ಯದ ಶಾಸಕಾಂಗವು ತನ್ನ ರಾಜ್ಯದ ಶಾಸಕಾಂಗದ ಯಾವುದೇ ಸದನದ ಚುನಾವಣೆಗಾಗಿ, ಆಯಾ ಸದನ ಅಥವಾ ಸದನಗಳ ಸಂಸ್ಥಾಪನೆಯೂ ಸೇರಿದಂತೆ ಕಾಲ ಕಾಲಕ್ಕೆ ಕಾನೂನಿನನ್ವಯ ವ್ಯವಸ್ಥೆ ಮಾಡತಕ್ಕದ್ದು."

ಮಾನ್ಯರೆ, ತಮ್ಮ ಅನುಮತಿಯೊಂದಿಗೆ ತಿದ್ದುಪಡಿಗಳ ಪಟ್ಟಿ VI(ಐದನೆಯ ವಾರ)ರ ತಿದ್ದುಪಡಿ ಸಂಖ್ಯೆ ೨೧೧ನ್ನು ಮಂಡಿಸುತ್ತಿದ್ದೇನೆ.

ಈ ತಿದ್ದುಪಡಿಯು ಹೀಗಿದೆ:

"ತಿದ್ದುಪಡಿಗಳ ಪಟ್ಟಿ I (ಐದನೆಯ ವಾರ)ರ ಸಂಖ್ಯೆ ೧೨೮ನೆಯ ತಿದ್ದುಪಡಿಯಲ್ಲಿ ಹೊಸ ವಿಧಿ ೨೯೧ರಲ್ಲಿ 'ಸೇರಿದಂತೆ' ಎಂಬ ಪದದ ನಂತರ 'ಮತದಾರರ ಪಟ್ಟಿ ತಯಾರಿಸುವುದು ಮತ್ತು ಇತರ' ಎಂಬ ಪದಗಳನ್ನು ಸೇರಿಸತಕ್ಕದ್ದು."

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಶ್ರೀ ಕಾಮತ್‌ರವರು ೨೯೦ ಮತ್ತು ೨೯೧ನೆಯ ವಿಧಿಗಳನ್ನು ಸರಿಯಾಗಿ ಓದಿಲ್ಲ ಅಥವಾ ಸರಿಯಾಗಿ ತಿಳಿದುಕೊಂಡಿಲ್ಲವೆಂದು ನನಗನಿಸುತ್ತದೆ. ೨೯೦ನೆಯ ವಿಧಿಯು ಸಂಸತ್ತಿಗೆ ಅಧಿಕಾರ ನೀಡಿದೆಯಾದರೆ ೨೯೧ರ ಪ್ರಕಾರ ಸಂಸತ್ತಿಗೆ ನೀಡಲಾಗದಿರದ ಯಾವುದೇ ವಿಷಯದಲ್ಲಿ ರಾಜ್ಯ ಶಾಸಕಾಂಗವು ಸೂಕ್ತ ವ್ಯವಸ್ಥೆ ಮಾಡಬಹುದಾಗಿದೆ. ಇದು ಸಂಸತ್ತು ರಾಜ್ಯ ವಿಧಾನ ಮಂಡಳಿಗೆ ನೀಡಬಹುದಾದ ಮಿಕ್ಕ–ಅಧಿಕಾರವಾಗಿದೆ. ಇದು ಕೇವಲ ಮಿಕ್ಕ–ಅಧಿಕಾರಕ್ಕೆ ಸಂಬಂಧಿಸಿದ್ದು.

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೩೩.

ಇದರಲ್ಲಿ ಇದಕ್ಕೂ ಹೆಚ್ಚು ಇನ್ನೇನೂ ಇಲ್ಲ.

**ಶ್ರೀ ಎ. ಥಾನು ಪಿಳ್ಳೈ** (ಟ್ರಾವಂಕೋರ್ ಸಂಸ್ಥಾನ): ಸಮಯದ ಅನುಸೂಚಿಯಂತೆ ಕ್ರಮ ತೆಗೆದು ಕೊಳ್ಳಬೇಕಾದಾಗ ಸ್ಥಳೀಯ ಶಾಸಕಾಂಗವು ಕೇಂದ್ರ ಸಂಸತ್ತು ಏನು ಮಾಡಲಿದೆ ಎಂದು ಕಾಯ್ದು ನೋಡಬೇಕೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ೨೯೦ನೆಯ ವಿಧಿಯನ್ವಯ ವ್ಯವಸ್ಥೆ ಮಾಡುವುದು ಸಂಸತ್ತಿನ ಪ್ರಾಥಮಿಕ ಕರ್ತವ್ಯವಾಗಿದೆ. ಈ ಬಾಧ್ಯತೆ ಸಂಸತ್ತಿನ ಮೇಲೆ ಇದೆ. ೨೯೦ನೆಯ ವಿಧಿಯಲ್ಲಿ ಅಡಕವಾಗಿರುವ ಎಲ್ಲಾ ವಿಷಯಗಳ ಮೇಲೆ ವಿಧಿವತ್ತಾದ ಕ್ರಮಗಳನ್ನು ತೆಗೆದುಕೊಳ್ಳುವುದು ಸಂಸತ್ತಿನ ಕರ್ತವ್ಯ ಮತ್ತು ಬಾಧ್ಯತೆಯಾಗಿರುತ್ತದೆ. ೨೯೦ನೆಯ ವಿಧಿಯನ್ವಯ ಯಾವುದೇ ವಿಷಯದ ಬಗ್ಗೆ ವ್ಯವಸ್ಥೆ ಮಾಡುವಾಗ, ಯಾವುದೇ ವಿಷಯದಲ್ಲಿ ಸಂಸತ್ತು ಯಾವುದಾದರೂ ನಿರ್ದಿಷ್ಟ ವ್ಯವಸ್ಥೆ ಮಾಡಿದರೆ, ೨೯೧ನೆಯ ವಿಧಿಯಲ್ಲಿ ಸಂಸತ್ತು ಯಾವುದೇ ವ್ಯವಸ್ಥೆಯನ್ನು ಮಾಡದೇ ಇರುವಾಗ ೨೯೦ನೆಯ ವಿಧಿಯಲ್ಲಿ ಹೇಳಲಾದ ಯಾವುದೇ ವಿಷಯದಲ್ಲಿ ರಾಜ್ಯವಿಧಾನ ಸಭೆಗೆ ಅಂತಹ ವ್ಯವಸ್ಥೆ ಮಾಡುವ ಅಧಿಕಾರವಿರುತ್ತದೆ.

**ಶ್ರೀ ಎ. ಥಾನು ಪಿಳ್ಳೈ:** ಈ ವಿಷಯದಲ್ಲಿ ಕೇಂದ್ರ ಶಾಸಕಾಂಗಕ್ಕಾಗಲೀ ಅಥವಾ ಸ್ಥಳೀಯ ಶಾಸಕಾಂಗಕ್ಕಾಗಲೀ ಸಂಪೂರ್ಣ ಅಧಿಕಾರ ಕೊಡುವುದು ಚುನಾವಣೆಗಳನ್ನು ಸಮಯ ಅನುಸೂಚಿಯಂತೆ ನಡೆಯಲು ಅನುಕೂಲವಾಗುವುದಿಲ್ಲವೇ ಎಂಬುದನ್ನು ನಾನು ಅಂಬೇಡ್ಕರರಿಂದ ತಿಳಿಯಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದನ್ನು ನಾನು ಒಪ್ಪುವುದಿಲ್ಲ. ಸಂಸತ್ತು ತಾನೇ ನಿರ್ಣಯಿಸಬೇಕಾದಂತಹ ಕೆಲವು ವಿಷಯುಗಳಿರುತ್ತವೆ. ಯಾವ ವಿಷಯಗಳು ಸ್ಥಳೀಯ ಮಹತ್ವದವುಗಳಾಗಿರುತ್ತವೆಯೋ ಮತ್ತು ಪ್ರಾಂತ್ಯ ಪ್ರಾಂತ್ಯದ ನಡುವೆ ವ್ಯತ್ಯಾಸವಿರುತ್ತವೆಯೋ ಅಂತಹ ವಿಷಯಗಳನ್ನು ಸಂಸತ್ತು ಸ್ಥಳೀಯ ಶಾಸಕಾಂಗಕ್ಕೆ ಬಿಟ್ಟುಕೊಡುವುದು ವಿಹಿತ. ೨೯೦ ಮತ್ತು ೨೯೧ನೆಯ ವಿಧಿಗಳ ನಡುವೆ ಭಿನ್ನತೆ ಇರುವುದಕ್ಕೆ ಇದೇ ಕಾರಣ.

[**ಡಾ. ಅಂಬೇಡ್ಕರ್‌ರವರ ತಿದ್ದುಪಡಿಗಳು ಸ್ವೀಕೃತವಾಗಿದ್ದು, ತಿದ್ದುಪಡಿಗಳೊಂದಿಗೆ ೨೯೧ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**]

## ವಿಧಿ ೨೯೧ಎ*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೀಗೆ ಸೂಚಿಸುತ್ತಿದ್ದೇನೆ.

"೨೯೧ನೆಯ ವಿಧಿಯ ನಂತರ ಈ ಕೆಳಗಿನ ಹೊಸ ವಿಧಿಯನ್ನು ಸೇರಿಸತಕ್ಕದ್ದು:

**ಚುನಾವಣೆಗಳ ವಿಷಯದಲ್ಲಿ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.**

**೨೯೧–ಎ:** ಈ ಸಂವಿಧಾನದಲ್ಲಿ ಹೇಳಲಾದ ಯಾವುದೇ ವಿಷಯದಲ್ಲಿ (ಎ) ಮತಕ್ಷೇತ್ರಗಳ ಸೀಮಾ ನಿರ್ಣಯ, ಅಥವಾ ಅಂತಹ ಮತಕ್ಷೇತ್ರಗಳಿಗೆ ಸ್ಥಾನಗಳನ್ನು ನಿಗದಿಪಡಿಸುವುದಕ್ಕಾಗಿ ಈ ಸಂವಿಧಾನದ ೨೯೦ ಮತ್ತು ೨೯೧ನೆಯ ವಿಧಿಗಳನ್ವಯ ಮಾಡಲಾದ ಅಥವಾ ಮಾಡಲಾಗಿದೆ ಎಂದು ಹೇಳಲಾದ ಯಾವುದೇ ಕಾನೂನಿನ ಸಿಂಧುತ್ವವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.

---

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೩೯.

(ಬಿ) ಸಂಸತ್ತಿನ ಯಾವುದೇ ಸದನ ಅಥವಾ ಯಾವುದೇ ರಾಜ್ಯದ ಶಾಸಕಾಂಗದ ಯಾವುದೇ ಸದನಕ್ಕೆ ನಡೆಸಲಾದ ಚುನಾವಣೆಯನ್ನು ಸಂಬಂಧಪಟ್ಟ ಶಾಸನ ಸಭೆಯು ಕಾನೂನಿನನ್ವಯ ನಿಗದಿಪಡಿಸಲಾದ ಪ್ರಾಧಿಕಾರ ಮತ್ತು ಗೊತ್ತುಪಡಿಸಲಾದ ಪದ್ಧತಿಯ ಪ್ರಕಾರ ಮಾಡಲಾಗುವ ಚುನಾವಣಾ ಅರ್ಜಿಯ ಮೂಲಕ ಹೊರತು ಇನ್ನಾವ ರೀತಿಯಲ್ಲೂ ಪ್ರಶ್ನಿಸುವಂತಿಲ್ಲ.

(ಸಿ) ಯಾವುದೇ ಚುನಾವಣೆಗೆ ಸಂಬಂಧಿಸಿದಂತೆ ಅಥವಾ ಚುನಾವಣೆಯ ಯಾವುದೇ ಹಂತದಲ್ಲಿರುವ ಸಂಬಂಧಪಟ್ಟ ನಡಾವಳಿಗಳ ಅಂತಿಮ ನಿರ್ಣಯವನ್ನು ಸಂಬಂಧಪಟ್ಟ ಶಾಸಕಾಂಗವು ಕಾನೂನಿನನ್ವಯ ಮಾಡತಕ್ಕದ್ದು.

ಮಾನ್ಯರೆ, ನಾನು ಇದನ್ನೂ ಸಹ ಮಂಡಿಸುತ್ತಿದ್ದೇನೆ.

"ಪಟ್ಟಿ I (ಐದನೆಯ ವಾರ)ರ ತಿದ್ದುಪಡಿ ಸಂಖ್ಯೆ ೧೩೨ರ ಸಂಬಂಧ ಹೊಸ ವಿಧಿ ೨೯೧–ಎ ಕಲಮು (ಸಿ)ಯನ್ನು ಕೈಬಿಡತಕ್ಕದ್ದು."

**[ಡಾ. ಅಂಬೇಡ್ಕರ್‌ರವರ ತಿದ್ದುಪಡಿಯಂತೆ ತಿದ್ದುಪಡಿಯಾದ ವಿಧಿ ೨೯೧–ಎ ಸಂವಿಧಾನಕ್ಕೆ ಸೇರ್ಪಡೆಯಾಯಿತು.]**

* * *

## ವಿಧಿ ೨೯೭*

**ಶ್ರೀ ಹೆಚ್. ವಿ. ಕಾಮತ್:** ಸನ್ಮಾನ್ಯ ಸಭಾಧ್ಯಕ್ಷರೆ, ನಾನು ವಿಷಯವನ್ನು ಹೀಗೆ ಮಂಡಿಸುತ್ತಿದ್ದೇನೆ: "೨೯೭ನೆಯ ವಿಧಿಯ ಕಲಮು (೨)ರಲ್ಲಿ 'ಬೇರೆ ಸಮುದಾಯದ ಜನರೊಂದಿಗೆ ಹೋಲಿಸಿದಾಗ ನೇಮಕಗೊಳ್ಳಲು ಅರ್ಹತೆಯುಳ್ಳ ಅಂತಹ ಸದಸ್ಯರು ಲಭ್ಯವಿದ್ದರೆ' ಎಂಬ ಪದಗಳ ಬದಲು 'ಪರಂತು ಅಂತಹ ನೇಮಕವನ್ನು ಬೇರೆ ಸಮುದಾಯಗಳವರೊಂದಿಗೆ ಹೋಲಿಸಿದಾಗ ಕೇವಲ ಯೋಗ್ಯತೆಯ ಆಧಾರದ ಮೇಲೆ ಮಾಡಲಾದ ನೇಮಕ ಎಂಬ ಪದಗಳನ್ನು ಸೇರಿಸತಕ್ಕದ್ದು."

ಮಾನ್ಯರೆ, ನನ್ನ ಈ ತಿದ್ದುಪಡಿಯ ಬಹುತೇಕ ಕರಡು ಸ್ವರೂಪದ್ದಾಗಿದ್ದು, ಇದನ್ನು ಸೂಕ್ತ ಸಮಯದಲ್ಲಿ ಪರಿಶೀಲಿಸಲು ಇದನ್ನು ಕರಡು ಸಮಿತಿಯ ವಿವೇಚನೆಗೆ ಬಿಡುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಕರಡು ಸ್ವರೂಪದ್ದಾಗಿದೆ ಎಂದು ನನಗೆ ತೋರುವುದಿಲ್ಲ. ಆದಾಗ್ಯೂ ಅದನ್ನು ನಂತರ ಪರಿಶೀಲಿಸಲಾಗುವುದು.

**[೨೯೭ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.]**

* * *

---

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೩೭.

## ವಿಧಿ ೩೦೦

* **ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನಾನು ಈ ವಿಧಿಯನ್ನು ಹೀಗೆ ಸೂಚಿಸುತ್ತಿದ್ದೇನೆ.

"ತಿದ್ದುಪಡಿ ಪಟ್ಟಿಯ ಸಂಖ್ಯೆ ೩೧೮೬ರಲ್ಲಿ ೩೦೦ನೆಯ ವಿಧಿಯು ಕಲಮು (೧)ರಲ್ಲಿ ಪದ ಮತ್ತು ಸಂಖ್ಯೆ 'ಭಾಗ I'ರ ಬದಲು ಪದ ಮತ್ತು ಸಂಖ್ಯೆ 'ಭಾಗ III' ಎಂದು ಸೇರಿಸತಕ್ಕದ್ದು."

** **ಮಾನ್ಯ ಸಭಾಧ್ಯಕ್ಷ:** ಡಾ. ಅಂಬೇಡ್ಕರ್ ನೀವೇನಾದರೂ ಹೇಳಬಯಸುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನಾವು ಹೇಳುವುದೇನೂ ಇಲ್ಲ.

**[ಡಾ. ಅಂಬೇಡ್ಕರ್‌ರವರ ಮೇಲ್ಕಂಡ ತಿದ್ದುಪಡಿ ಸ್ವೀಕೃತವಾಯಿತು. ತಿದ್ದುಪಡಿಯೊಂದಿಗೆ ೩೦೦ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.]**

* * *

## ವಿಧಿ ೩೦೧

* * *

*****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೀಗೆ ಸೂಚಿಸುತ್ತೇನೆ.

"೩೦೧ನೆಯ ವಿಧಿಯ ಕಲಮು (೩)ರಲ್ಲಿ 'ಸಂಸತ್ತು' ಎಂಬ ಪದದ ಬದಲಾಗಿ 'ಸಂಸತ್ತಿನ ಪ್ರತಿಯೊಂದು ಸದನ' ಎಂಬ ಪದಗಳನ್ನು ಸೇರಿಸತಕ್ಕದ್ದು."

**[ಡಾ. ಅಂಬೇಡ್ಕರ್‌ರವರ ತಿದ್ದುಪಡಿಯೊಂದಿಗೆ ೩೦೧ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.]**

* * *

******ಮಾನ್ಯ ಸಭಾಧ್ಯಕ್ಷರು:** ನೀವು ಮತ್ತೆ ಇದು ಸದನದ ಇನ್ನೊಂದು ಸಭೆ ಎಂದು ಗ್ರಹಿಸುತ್ತಿದ್ದೀರಿ.

**ಶ್ರೀ ಜಸ್ಪತ್‌ರಾಯ್ ಕಪೂರ್:** ನಾನು ಹೇಳಿದ್ದು ಖಂಡಿತವಾಗಿ ಅದೇ ಗ್ರಹಿಕೆಯ ಆಧಾರದ ಮೇಲೆ. ಆದರೆ ಅದಲ್ಲದೆ ಇನ್ನಾವುದೇ ಗ್ರಹಿಕೆ ಇರಲು ಸಾಧ್ಯವೆ ಎಂಬುದು ನನಗೆ ತಿಳಿಯದು, ಎಲ್ಲಾ ಕಡೆಯೂ ಸದಸ್ಯರು ಶಾಸಕಾಂಗದ ಸದಸ್ಯರಲ್ಲದೆ ಇನ್ನಾವುದೇ ಅಧಿಕಾರದ ಮೇಲಲ್ಲದೆ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕೌನ್ಸಿಲ್ ಆಫ್ ಸ್ಟೇಟ್(ರಾಜ್ಯ ಸಭೆ)ದ ಸದಸ್ಯರ ಆಯ್ಕೆ ಮಾಡುವವರು ಎಂದು ಹೇಳಲಾಗಿದೆ. ಉದಾಹರಣೆಗೆ, ೫೫ನೆಯ ವಿಧಿಯಲ್ಲಿ ಸಂಸತ್ತಿನ ಎರಡೂ ಸದನಗಳ ಸದಸ್ಯರು ತಮ್ಮ ಸಭೆಯಲ್ಲಿ ಉಪಾಧ್ಯಕ್ಷರನ್ನು ಚುನಾಯಿಸುವರು ಎಂದು ಹೇಳಲಾಗಿದೆ.

* ಸಿ.ಎ.ಡಿ. ಸಂ. VIII, ೧೫ ಜೂನ್ ೧೯೪೯, ಪುಟ ೯೪೨.

** ಅದೇ ಪುಟ ೯೪೩.

*** ಅದೇ ಪುಟ ೯೪೫.

*** ಅದೇ, ಪುಟ ೯೫೨.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದರಲ್ಲಿ 'ಜಂಟಿ ಸಭೆಯಲ್ಲಿ' ಎಂಬ ಪದವಿದೆ, 'ಸಭೆ'ಯಲ್ಲಿ ಎಂದಲ್ಲ.

**ಶ್ರೀ ಜಸ್ಪತ್‌ರಾಯ್ ಕಪೂರ್:** ಈ ವಿಧಿಗೆ ಬೇರೆ ಅರ್ಥ ಕಟ್ಟಿರುವ ಸಾಧ್ಯತೆಯನ್ನು ನಿವಾರಿಸಲು, ಅಧಿಕೃತವಾಗಿ ಸದನದಲ್ಲಿ ಹಾಗೆ ಹೇಳುವುದಾದರೆ ಸರಿ.

***ಮಾನ್ಯ ಸಭಾಧ್ಯಕ್ಷರು:** ನಾನು ಡಾ. ಅಂಬೇಡ್ಕರ್ ಅವರು ಕೊನೆಯಲ್ಲಿ ಸೂಚಿಸಿರುವ ತಿದ್ದುಪಡಿಯನ್ನು ಮೊದಲು ಪ್ರಸ್ತುತಪಡಿಸುತ್ತೇನೆ.

ಪ್ರಶ್ನೆ ಏನೆಂದರೆ;

"೧ನೆಯ ಪಟ್ಟಿಯ ೨೮೯ನೆಯ ವಿಧಿಗೆ ಸೂಚಿಸಲಾಗಿರುವ ೯೯ನೆಯ ಸಂಖ್ಯೆ ತಿದ್ದುಪಡಿಯಲ್ಲಿ

(i) ಕಲಮು (೧)ರಲ್ಲಿ 'ರಾಷ್ಟ್ರಪತಿಗಳಿಂದ ನೇಮಕಗೊಳ್ಳುವ' ಎಂದು ಕೊನೆಯಲ್ಲಿ ಬರುವ ಪದಗಳನ್ನು ಕೈಬಿಡತಕ್ಕದ್ದು.

(ii) ಕಲಮು (೨)ರಲ್ಲಿ ಕೆಳಗಣ ಕಲಮುಗಳನ್ನು ಬದಲಿಸುವುದು 'ಚುನಾವಣಾ ಆಯೋಗವು ಮುಖ್ಯ ಚುನಾವಣಾ ಆಯುಕ್ತ ಮತ್ತು ರಾಷ್ಟ್ರಪತಿಗಳು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದ ಸಂಖ್ಯೆಯ ಇತರ ಚುನಾವಣಾ ಆಯುಕ್ತರನ್ನು ಹೊಂದಿರತಕ್ಕದ್ದು ಮತ್ತು ಈ ವಿಷಯದಲ್ಲಿ ಸಂಸತ್ತು ಮಾಡಬಹುದಾದ ಯಾವುದೇ ಕಾನೂನಿಗೊಳಪಟ್ಟ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರನ್ನು ರಾಷ್ಟ್ರಪತಿಗಳು ನೇಮಕ ಮಾಡತಕ್ಕದ್ದು."

'(೨–ಎ) ಇತರ ಚುನಾವಣಾ ಆಯುಕ್ತರನ್ನು ನೇಮಿಸಿದಾಗ ಮುಖ್ಯ ಚುನಾವಣಾ ಆಯುಕ್ತರು ಆಯೋಗದ ಯಾವುದೇ ಕಾನೂನಿಗೊಳಪಟ್ಟು' ಎಂಬ ಪದಗಳನ್ನು ಸೇರಿಸತಕ್ಕದ್ದು.

ಈ ತಿದ್ದುಪಡಿಯು ಅಂಗೀಕೃತವಾಯಿತು.

[ಇತರ ಸದಸ್ಯರ ಆರು ತಿದ್ದುಪಡಿಗಳು ತಿರಸ್ಕೃತವಾದವು]

**[ತಿದ್ದುಪಡಿಯೊಂದಿಗೆ ೨೮೯ನೆಯದನ್ನು ಸಂವಿಧಾನಕ್ಕೆ ಸೇರಿಸಲಾಯಿತು.]**

[ಸಭಾಧ್ಯಕ್ಷರು ಜುಲೈ ೧೯೪೯ರಲ್ಲಿ ನಿಗದಿಪಡಿಸಿರುವ ದಿನಾಂಕಕ್ಕೆ ಸಭೆಯನ್ನು ಮುಂದೂಡಲಾಯಿತು.]

---

* ಸಿ.ಎ.ಡಿ. ಸಂ. VIII, ೧೬ ಜೂನ್ ೧೯೪೯, ಪುಟ ೯೩೮.

# ವಿಭಾಗ ಆರು

# ಕಲಮುವಾರು ಚರ್ಚೆ

## ೩೦ ಜುಲೈ ೧೯೪೯ರಿಂದ ೧೬ ಸೆಪ್ಟೆಂಬರ್ ೧೯೪೯

# ಹೊಸ ವಿಧಿ ೭೯ಎ*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬೈ ಸಾಮಾನ್ಯ): ಮಾನ್ಯರೆ, ನಾನು ಹೀಗೆ ಸೂಚಿಸುತ್ತಿದ್ದೇನೆ.

ತಿದ್ದುಪಡಿಗಳ ಪಟ್ಟಿ I (ಮೊದಲನೆಯ ವಾರ) ಸಂಖ್ಯೆ ೧ರಲ್ಲಿ ಸೂಚಿಸಲಾದ ಹೊಸ ವಿಧಿ ೭೯–ಎಯನ್ನು ಕೆಳಗಿನಂತೆ ಬದಲಾಯಿಸತಕ್ಕದ್ದು:

**"ಸಂಸತ್ತಿನ ಕಾರ್ಯಾಲಯ" ೭೯–ಎ (೧) ಸಂಸತ್ತಿನ ಪ್ರತಿಯೊಂದು ಸದನಕ್ಕೆ ಪ್ರತ್ಯೇಕ ಕಾರ್ಯಾಲಯ ಸಿಬ್ಬಂದಿ ಇರತಕ್ಕದ್ದು.**

ಈ ಉಪಬಂಧದಿಂದ ಸಂಸತ್ತಿನ ಎರಡೂ ಸದನಗಳಿಗೆ ಸಾಮಾನ್ಯ (ಸಮಾನ) ಹುದ್ದೆಗಳನ್ನು ಸೃಷ್ಟಿಸುವುದಕ್ಕೆ ನಿರ್ಬಂಧವಿದೆ ಎಂದರ್ಥವಲ್ಲ.

(೨) ಸಂಸತ್ತಿನ ಎರಡೂ ಸದನಗಳ ಕಾರ್ಯಾಲಯಗಳ ಸಿಬ್ಬಂದಿಯ ನೇಮಕ ಮತ್ತು ಅವರ ಸೇವಾನಿಯಮಗಳು ಮುಂತಾದವುಗಳನ್ನು ಕಾನೂನಿನ ಮೂಲಕ ಕ್ರಮಗೊಳಿಸಬಹುದು.

(೩) ಈ ವಿಧಿಯ ಕಲಮು (೨)ರ ಪ್ರಕಾರ ವ್ಯವಸ್ಥೆ ಮಾಡುವವರೆಗೂ, ರಾಷ್ಟ್ರಪತಿಗಳು, ಲೋಕಸಭಾಪತಿಗಳೊಂದಿಗೆ ಸಮಾಲೋಚನೆ ಮಾಡಿ, ಲೋಕಸಭೆ ಅಥವಾ ರಾಜ್ಯ ಸಭೆಯ ಆವಶ್ಯಕತೆಯಂತೆ ಕಾರ್ಯಾಲಯ ಸಿಬ್ಬಂದಿಯ ನೇಮಕ ಮತ್ತು ಸೇವಾನಿಯಮಗಳ ನಿಯಮಗಳನ್ನು ರೂಪಿಸುವರು, ಮತ್ತು ಈ ಕಲಮಿನನ್ವಯ ಮಾಡಲಾದ, ಯಾವುದೇ ಕಾನೂನಿನನ್ವಯ ಜಾರಿಗೆ ಬರುತ್ತವೆ.

ಇದು ಹೊಸ ವಿಧಿಯೇ ಆಗಿದ್ದು ಇದನ್ನು ಸಂವಿಧಾನದಲ್ಲಿ ಸೇರಿಸಬೇಕೆಂಬ ಉದ್ದೇಶವಿದೆ ಎಂಬ ಅಂಶ ಸದನದ ಗಮನಕ್ಕೆ ಈಗಾಗಲೇ ಬಂದಿರಬಹುದು. ಇಂತಹ ಒಂದು ವಿಧಿಯನ್ನು ಸಂವಿಧಾನದಲ್ಲಿ ಏಕೆ ಸೇರಿಸಬೇಕಾಗಿದೆ ಎಂಬ ಪ್ರಾಂತ್ಯಗಳ ಸಭಾಧ್ಯಕ್ಷರುಗಳ ಸಮ್ಮೇಳನದಲ್ಲಿ ವ್ಯಕ್ತವಾದ ಅಭಿಪ್ರಾಯಕ್ಕನುಗುಣವಾಗಿವೆ.

ಈ ಸದನದ ಎಲ್ಲಾ ಸದಸ್ಯರುಗಳಿಗೂ ಬಹುಶಃ ಗೊತ್ತಿರುವಂತೆ ಈ ಸಂಗತಿಯು ದಿವಂಗತ ಶ್ರೀ ವಿಠ್ಠಲ ಭಾಯಿ ಪಟೇಲರನ್ನು ಈ ಸದನದ ಅಧ್ಯಕ್ಷ ಸ್ಥಾನ ಅಲಂಕರಿಸಲು ಕೇಳಿಕೊಂಡಾಗಿನಿಂದಲೂ ಕಾರ್ಯಾಂಗದ ಸರ್ಕಾರ ಮತ್ತು ಅಧ್ಯಕ್ಷರ ನಡುವೆ ವಿವಾದಾತ್ಮಕ ವಿಷಯವಾಗಿತ್ತು. ಕಾರ್ಯಾಂಗ ಸರಕಾರ ಮತ್ತು ಅಧ್ಯಕ್ಷರ ನಡುವೆ ಒಂದು ವಿವಾದ ನಡೆದೇ ಇತ್ತು. ಸದನದ ಕಾರ್ಯಾಲಯದ ಸಿಬ್ಬಂದಿಯು ಕಾರ್ಯಾಂಗ ಸರಕಾರದಿಂದ ಸ್ವತಂತ್ರವಾಗಿರಬೇಕೆಂಬುದು ಅಧ್ಯಕ್ಷರ ವಾದವಾಗಿತ್ತು. ಇನ್ನೊಂದೆಡೆ, ಅಂದಿನ ಕಾರ್ಯಾಂಗ ಸರಕಾರವು ಅಧ್ಯಕ್ಷರ ವಿಚಾರ ಅಥವಾ ಅಭಿಪ್ರಾಯ ಏನೇ ಆಗಿದ್ದರೂ ಶಾಸನಸಭೆಯ ಆವಶ್ಯಕ ಕೆಲಸಗಳನ್ನು ನಿರ್ವಹಿಸುವ ಸಿಬ್ಬಂದಿಯ ನಿಯಂತ್ರಣವು ಸರಕಾರದ ಕೈಯಲ್ಲಿರಬೇಕೆಂದು ವಾದಿಸಿತ್ತು. ಕೊನೆಗೆ ೧೯೨೮ ಅಥವಾ ೧೯೨೯ರಲ್ಲಿ ಕಾರ್ಯಾಂಗ ಸರಕಾರವು ತನ್ನ ನಿಲುವನ್ನು ಕೈಬಿಟ್ಟು ಅಧ್ಯಕ್ಷರ ಅಭಿಪ್ರಾಯದ ಪ್ರಕಾರ ಸದನಕ್ಕೆ ಸ್ವತಂತ್ರ ಕಾರ್ಯಾಲಯವಿರಬೇಕೆಂದು ಒಪ್ಪಿಕೊಂಡಿತು. ಆದ್ದರಿಂದ ಕೇಂದ್ರ

---

* ಸಿ.ಎ.ಡಿ. ಸಂ. IX, ೨೦ ಜುಲೈ ೧೯೪೯, ಪುಟ ೨–೩.

ಶಾಸನ ಸಭೆಗೆ ಸಂಬಂಧಿಸಿದಂತೆ ಇದುವರೆಗೂ ಯಾವ ಬದಲಾವಣೆಯೂ ಆಗಿಲ್ಲ. ಏಕೆಂದರೆ, ಹೊಸ ೭೯–ಎ ವಿಧಿಯ ಕಲಮು (೧)ರಲ್ಲಿ ಹೇಳಿರುವುದು ಈಗಾಗಲೆ ಅಸ್ತಿತ್ವದಲ್ಲಿರುವ ವ್ಯವಸ್ಥೆ.

ಆದರೆ, ೧೯೨೮ ಇಲ್ಲದೆ ೧೯೨೯ರಿಂದ ಕೇಂದ್ರ ಶಾಸನ ಸಭೆಯಲ್ಲನುಸರಿಸಲಾದ ಈ ವ್ಯವಸ್ಥೆಯನ್ನು ವಿವಿಧ ಪ್ರಾಂತೀಯ ಶಾಸನ ಸಭೆಗಳಲ್ಲಿ ಅನುಸರಿಸಲಾಗುತ್ತಿಲ್ಲ ಎಂದು ಹೇಳಲಾಗಿದೆ. ಕೆಲವು ಪ್ರಾಂತೀಯ ಶಾಸನ ಸಭೆಗಳಲ್ಲಿ ಶಾಸಕಾಂಗ ಇಲಾಖೆಯ ಶಿಸ್ತುಪಾಲನಾ ಅಧಿಕಾರ ಕ್ಷೇತ್ರಕ್ಕೊಳಗಾದ ಕೆಲವು ಅಧಿಕಾರಿಗಳನ್ನು ಶಾಸನ ಸಭೆಗಳ ಕಾರ್ಯದರ್ಶಿಯನ್ನಾಗಿ ನೇಮಿಸಲಾದ ಕೆಲವು ಪ್ರಸಂಗಗಳಿವೆ. ತತ್ಪರಿಣಾಮವಾಗಿ, ಅಂತಹ ಅಧಿಕಾರಿಯು ಒಂದು ಕಡೆ ತನ್ನ ಇಲಾಖೆಯ ನಿಯಂತ್ರಣಕ್ಕೊಳಪಟ್ಟಿದ್ದು ಇನ್ನೊಂದು ಕಡೆ ತಾನು ಸದ್ಯ ಸೇವೆಯಲ್ಲಿರುವ ಸಭಾಧ್ಯಕ್ಷರ ನಿಯಂತ್ರಣಕ್ಕೊಳಪಟ್ಟಿದ್ದು ಏಕಕಾಲದಲ್ಲಿ ಇಂತಹ ದ್ವಿಮುಖ ನಿಯಂತ್ರಣಕ್ಕೊಳಗಾಗಿರುವ ಪ್ರಸಂಗಗಳಿವೆ. ಈ ವ್ಯವಸ್ಥೆಯಿಂದ ಸಭಾಧ್ಯಕ್ಷರ ಘನತೆ ಮತ್ತು ಶಾಸನಸಭೆಯ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟಾಗುತ್ತದೆ ಎಂದು ವಾದಿಸಲಾಗಿದೆ.

ಶಾಸನ ಸಭಾಧ್ಯಕ್ಷರುಗಳ ಸಮ್ಮೇಳನದಲ್ಲಿ ಅನೇಕ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಸಂವಿಧಾನದಲ್ಲಿ ಮಾಡಲಾಗುವ ಇತರ ಉಪಬಂಧಗಳೊಂದಿಗೆ ಶಾಸನ ಸಭೆಗಳ ಕಾರ್ಯಾಲಯದ ಸಿಬ್ಬಂದಿಯ ಸಂಖ್ಯೆ, ನೇಮಕ, ಸೇವಾನಿಯಮಗಳು ಮುಂತಾದವುಗಳನ್ನು ಕ್ರಮಪಡಿಸುವ ಉಪಬಂಧವೂ ಇರಬೇಕು. ಕರಡು ಸಮಿತಿಯು ಸಭಾಧ್ಯಕ್ಷರುಗಳ ಸಮ್ಮೇಳನದ ಇತರ ವಾದಗಳನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಸಂವಿಧಾನದಲ್ಲಿ ಸಂಸತ್ತಿಗೆ ಒಂದು ಪ್ರತ್ಯೇಕ ಕಾರ್ಯಾಲಯ ಸಿಬ್ಬಂದಿ ಇರತಕ್ಕದ್ದು ಎಂಬ ಒಂದು ಸರಳ ಕಲಮು ಇದ್ದರೆ ಸಾಕು. ಸಂಬಂಧಪಟ್ಟ ಉಳಿದ ವಿಷಯಗಳನ್ನು ಸಂಸತ್ತಿನ ಕ್ರಮಕ್ಕೆ ಬಿಡತಕ್ಕದ್ದು ಎಂದು ಹೇಳಿದರೆ ಸಾಕಾಗುವುದು. ಈ ವಿಷಯದಲ್ಲಿ ಸಂಸತ್ತು ಯಾವುದೇ ವ್ಯವಸ್ಥೆ ಮಾಡುವವರೆಗೆ, ರಾಷ್ಟ್ರಪತಿಗಳು ಲೋಕಸಭೆಯ ಅಧ್ಯಕ್ಷರು ಮತ್ತು ರಾಜ್ಯಸಭೆಯ ಸಭಾಪತಿಗಳೊಂದಿಗೆ ಸಮಾಲೋಚಿಸಿ ಸಿಬ್ಬಂದಿ ನೇಮಕ ಮತ್ತು ಇತರ ಸೇವಾನಿಯಮಗಳನ್ನು ಮಾಡಲು ಕಲಮು (೩)ರಲ್ಲಿ ಅವಕಾಶ ಮಾಡಲಾಗಿದೆ. ಈ ಸಂಬಂಧವಾಗಿ ಸಂಸತ್ತು ಕಾನೂನು ಮಾಡಿದ ಕೂಡಲೆ ರಾಷ್ಟ್ರಪತಿಗಳು ಲೋಕಸಭಾಧ್ಯಕ್ಷರೊಡನೆ ಸಮಾಲೋಚಿಸಿ ಮಾಡಲಾದ ತಾತ್ಕಾಲಿಕ ನಿಯಮಗಳು ರದ್ದಾಗುತ್ತವೆ. ಈ ವ್ಯವಸ್ಥೆಯು ಸಭಾಧ್ಯಕ್ಷರುಗಳ ಸಮ್ಮೇಳನದಲ್ಲಿ ಎತ್ತಲಾದ ತೊಂದರೆಗಳನ್ನು ನಿವಾರಿಸಲು ಸಾಕೆನಿಸುತ್ತದೆ. ಈ ಹೊಸ ವ್ಯವಸ್ಥೆಯನ್ನು ಅಂಗೀಕರಿಸಲು ಸದನಕ್ಕೆ ಯಾವ ಅಭ್ಯಂತರವೂ ಇರುವುದಿಲ್ಲ ಎಂದು ಭಾವಿಸುತ್ತೇನೆ.

[ಎರಡನೆಯ ಪಟ್ಟಿ (ಮೊದಲ ವಾರದ) ೪೩ ಮತ್ತು ೪೪ನೆಯ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.]

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನನ್ನ ಅಭಿಪ್ರಾಯದಲ್ಲಿ ಏನನ್ನೂ ಹೇಳದೇ ಇರುವುದಕ್ಕೂ ಉತ್ತರ ಬೇಕು.

[ಎಲ್ಲಾ ೮ ತಿದ್ದುಪಡಿಗಳೂ ತಿರಸ್ಕೃತವಾದುವು. ಮೇಲೆ ಹೇಳಲಾಗಿರುವ ಡಾ. ಅಂಬೇಡ್ಕರರ ಸೂಚನೆ ಅಂಗೀಕೃತವಾಯಿತು.]

**ಹೊಸ ವಿಧಿ ೭೯–ಎಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.**

---

* ಸಿ.ಎ.ಡಿ. ಸಂ. IX, ೩೦ ಜುಲೈ ೧೯೪೯, ಪುಟ ೯.

## ವಿಧಿ ೧೦೪**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನಾನು ಸೂಚಿಸುತ್ತಿರುವುದೇನೆಂದರೆ

೧೦೪ನೆಯ ವಿಧಿಯ ಬದಲಾಗಿ ಈ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು:

"೧೦೪ (೧) – ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ಎರಡನೆಯ ಅನುಸೂಚಿಯಲ್ಲಿ ಹೇಳಿರುವ ಪ್ರಕಾರ ನ್ಯಾಯಾಧೀಶರ ವೇತನ ಇತ್ಯಾದಿ ಕೊಡತಕ್ಕದ್ದು.

(೨) ಪ್ರತಿಯೊಬ್ಬ ನ್ಯಾಯಾಧೀಶರೂ ಸಂಸತ್ತು ಕಾಲಕಾಲಕ್ಕೆ ಗೊತ್ತುಪಡಿಸುವ ವಿಶೇಷ ಸೌಲಭ್ಯಗಳು, ಭತ್ಯೆಗಳು ಮತ್ತು ರಜೆ ಹಾಗೂ ನಿವೃತ್ತಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ, ಮತ್ತು ಅಲ್ಲಿಯವರೆಗೆ ಅವರು ಎರಡನೆಯ ಅನುಸೂಚಿಯಲ್ಲಿ ಹೇಳಲಾದ ವಿಶೇಷ ಸೌಲಭ್ಯಗಳು, ಭತ್ಯೆಗಳು ಮತ್ತು ಹಕ್ಕುಗಳನ್ನು ಹೊಂದುತ್ತಾರೆ.

ಪರಂತು ನ್ಯಾಯಧೀಶರ ಈ ವಿಶೇಷ ಸೌಲಭ್ಯಗಳು ಇಲ್ಲವೆ ಭತ್ಯೆಗಳು, ಇಲ್ಲವೆ ಅವರ ರಜೆ ಮತ್ತು ನಿವೃತ್ತಿ ವೇತನಗಳಲ್ಲಿ ಅವರು ನೇಮಕಗೊಂಡ ನಂತರ ಅವರಿಗೆ ಅನಾನುಕೂಲ ಮಾಡುವಂತಹ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ."

ಮಾನ್ಯರೆ, ಈ ವಿಧಿಯು ಮೊದಲಿನ ವಿಧಿಯೇ ಆಗಿದ್ದು, ಇದರಲ್ಲಿ ಒಂದು ಬದಲಾವಣೆ ಮಾತ್ರ ಮಾಡಲಾಗಿದೆ. ಅದೇನೆಂದರೆ, 'ವಿಶೇಷ ಸೌಲಭ್ಯ' (ಹಕ್ಕು) ಎಂಬ ಪದವನ್ನು ಮಾತ್ರ ಸೇರಿಸಲಾಗಿದೆ. ಈ ಪದ ಮೂಲ ವಿಧಿಯಲ್ಲಿ ಇರಲಿಲ್ಲ. ವಿಶೇಷ ಸೌಲಭ್ಯ(ಹಕ್ಕು)ಗಳು ಯಾವುವು ಎಂಬುದನ್ನು ನಾನು ಎರಡನೆಯ ಅನುಸೂಚಿಯನ್ನು ಚರ್ಚೆಗೆ ತೆಗೆದುಕೊಂಡಾಗ ಇವುಗಳ ಪ್ರಸ್ತಾಪ ಅನಿವಾರ್ಯ ವಾಗುವುದು.

* * *

*__ಶ್ರೀ ಆರ್. ಕೆ. ಸಿಧ್ವ:__ ಮಾನ್ಯರೆ, ತಿದ್ದುಪಡಿಯಾದ ನಿರ್ಣಯದ ಕಾರಣ ಈ ಅನುಸೂಚಿಯ ಭಾಷೆಯನ್ನು ತಿದ್ದುಪಡಿ ಮಾಡದ ಹೊರತು ಈ ವಿಧಿಯಲ್ಲಿ ಗೊಂದಲ ಉಂಟಾಗುವುದು. ಡಾ. ಅಂಬೇಡ್ಕರರು ಈ ವಿಧಿಗೆ ಮಂಡಿಸಲಾದ ತಿದ್ದುಪಡಿಯ ನಂತರ ಅದರ ಸೂಚಿತಾರ್ಥವಾದರೂ ಏನು ಎಂದು ನಾನು ತಿಳಿಯಬಯಸುತ್ತೇನೆ. ಅವರು ಈ ಅನುಸೂಚಿಯ ಸಂಬಂಧವಾಗಿ ಏನನ್ನೂ ಹೇಳಿಲ್ಲ ಮತ್ತು ಮುಂದೆ ಏನನ್ನಾದರೂ ಹೇಳಲಿರುವರೋ ಎಂಬುದೂ ಗೊತ್ತಿಲ್ಲ. ಏಕೆಂದರೆ ಅದರಿಂದ ಸಮಸ್ಯೆ ಕಷ್ಟವಾಗುತ್ತದೆ ಮತ್ತು ಈ ವಿಷಯವನ್ನು ಸಂಸತ್ತಿಗೆ ಬಿಡುವುದಾದರೆ ಇಡೀ ಉದ್ದೇಶವೇ ವಿಫಲವಾಗುತ್ತದೆ. ಏಕೆಂದರೆ ಮುಖ್ಯ ನ್ಯಾಯಾಧೀಶರಿಗೆ ಒಂದು ಸುಸಜ್ಜಿತವಾದ ಮನೆಯನ್ನು ಕೊಡಬೇಕೆಂಬ ಸದನದ ಆಜ್ಞೆಯನ್ನು ಪ್ರಶ್ನಿಸುವವರು ಯಾರು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಉಪಾಧ್ಯಕ್ಷರೆ, ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಹೃದಯನಾಥ ಕುಂಝ್ರುರವರು ಸೂಚಿಸಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದರ ಬಗ್ಗೆ ವಿಷಾದಿಸುತ್ತೇನೆ. ಮತ್ತು ಆ ತಿದ್ದುಪಡಿಯನ್ನು ತಿರಸ್ಕರಿಸಲು ಎರಡು ಅಭ್ಯಂತರಗಳಿವೆ ಎಂಬುದನ್ನು ಸದನಕ್ಕೆ ತಿಳಿಯಬಯಸುತ್ತೇನೆ. ಮೊದಲನೆಯದಾಗಿ, ಅವರು ಯಾವ ತತ್ವಕ್ಕಾಗಿ ಹೋರಾಡುತ್ತಿದ್ದಾರೋ,

---

** ಅದೇ, ಪುಟ ೧೦

* ಸಿ.ಎ.ಡಿ. ಸಂ. IX, ೨೦ ಜುಲೈ ೧೯೪೯, ಪುಟ ೧೨.

ಎಂದರೆ, ಒಮ್ಮೆ ನೇಮಕಗೊಂಡನಂತರ ಒಬ್ಬ ನ್ಯಾಯಾಧೀಶನ ಸಂಬಳ ಮತ್ತು ನಿವೃತ್ತಿ ವೇತನಗಳು ಕೂಡಿಬರುತ್ತವೆ ಅಥವಾ ಪ್ರಾಪ್ತವಾದವುಗಳಾಗುತ್ತವೆ. ಆದ್ದರಿಂದ ಸಂಸತ್ತು ಈ ಬಗ್ಗೆ ಮಾಡಬಹುದಾದ ಯಾವುದೇ ಕಾನೂನಿನ ಮೂಲಕ ಬದಲಾಗದು ಎಂಬುದು ಅವರ ವಾದ. ನನ್ನ ಹೊಸ ವಿಧಿಯಲ್ಲಿ ಈ ವಿಷಯವನ್ನು ಸಂಸತ್ತಿನ ಅಧಿಕಾರ ವ್ಯಾಪ್ತಿಯಿಂದ ಹೊರಗಿಟ್ಟಿದ್ದೇನೆ ಎಂದು ಅಂದುಕೊಂಡಿದ್ದೇನೆ. ಸಂಬಳ ಮತ್ತು ನಿವೃತ್ತಿ ವೇತನ ಮುಂತಾದವುಗಳನ್ನು ಕುರಿತು ಕಾಲ ಕಾಲಕ್ಕೆ ಕಾನೂನು ಮಾಡುವ ಅಧಿಕಾರವನ್ನು ಸಂಸತ್ತಿಗೆ ನೀಡಲಾಗಿದೆ ಎಂಬುದೇನೋ ನಿಜ. ಆದರೆ ಈ ಅಧಿಕಾರ ಹೊಸದಾಗಿ ನೇಮಕಗೊಳ್ಳುವ ನ್ಯಾಯಾಧೀಶರುಗಳಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಹಳಬರಿಗೆ, ಅವರಿಗೆ ಅನಾನುಕೂಲವಾಗುವುದಾದರೆ, ಅದು ಅವರಿಗನ್ವಯಿಸುವುದಿಲ್ಲ. ಆದ್ದರಿಂದ ಶ್ರೀ ಕುಂಝ್ರುರವರು ಯಾವ ತತ್ವಕ್ಕಾಗಿ ಹೋರಾಡುತ್ತಿರುವರೋ ಆ ತತ್ವವನ್ನು ಈ ವಿಧಿಯಲ್ಲಿ ಈಗಾಗಲೇ ಅಳವಡಿಸಲಾಗಿದೆ.

ಇನ್ನೊಂದು ದೃಷ್ಟಿಯಿಂದಲೂ ಅವರ ತಿದ್ದುಪಡಿಗೆ ಅಭ್ಯಂತರವಿದೆ ಎಂದು ತೋರುತ್ತದೆ. ಅದಕ್ಕೆ ಇರುವ ಕಾರಣ ಇದು ಎಲ್ಲರಿಗೂ ಗೊತ್ತಿರುವಂತೆ ನಿವೃತ್ತಿ ವೇತನಕ್ಕೆ ನ್ಯಾಯಾಧೀಶರ ಸಂಬಳ ಮತ್ತು ಅವರು ಸೇವೆಯಲ್ಲಿದ್ದ ವರ್ಷಗಳ ಆಧಾರವಿರುತ್ತದೆ. ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಕುಂಝ್ರುರವರು ಹೇಳಿದಂತೆ ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರು ಪಡೆಯುವ ನಿವೃತ್ತಿ ವೇತನವು ಫೆಡರಲ್ ಕೋರ್ಟ್ ನ್ಯಾಯಾಧೀಶರಿಗೆ ಅನ್ವಯವಾಗುವ ನಿಯಮಗಳಂತೆಯೇ ಇರಬೇಕು ಎಂದು ಹೇಳುವುದರಿಂದ ಒಬ್ಬ ಫೆಡರಲ್ ಕೋರ್ಟ್ ನ್ಯಾಯಾಧೀಶರು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿ ನೇಮಕಗೊಂಡರೆ ಅವರು ಮೊದಲಿನಂತೆಯೇ ಸಂಬಳ ಪಡೆಯಬೇಕು ಎಂದು ಹೇಳಿದಂತಾಗುತ್ತದೆ. ಇಲ್ಲದಿದ್ದರೆ, ಅದರಲ್ಲಿ ನಿವೃತ್ತಿ ವೇತನವು ಸಂಬಳ ಮತ್ತು ಸೇವಾವಧಿಯನ್ನು ಅವಲಂಬಿಸುತ್ತದೆ ಎಂಬ ತತ್ವವನ್ನು ಕಡೆಗಣಿಸಿದಂತಾಗುತ್ತದೆ. ಫೆಡರಲ್ ಕೋರ್ಟಿನ ನ್ಯಾಯಾಧೀಶರನ್ನೂ ಸುಪ್ರೀಂಕೋರ್ಟಿನ ನ್ಯಾಯಾಧೀಶರನ್ನೂ ಸುಪ್ರೀಂಕೋರ್ಟಿನ ನ್ಯಾಯಾಧೀಶರನ್ನಾಗಿ ನೇಮಕ ಮಾಡಿದರೆ ಅವರು ಮೊದಲಿನ ಸಂಬಳ ಪಡೆಯಬೇಕೇ ಹೇಗೆ ಎಂಬ ವಿಷಯದಲ್ಲಿ ನಾವಿನ್ನೂ ನಿರ್ಧಾರ ಮಾಡಿಲ್ಲ ಮತ್ತು ಈ ವಿಷಯದಲ್ಲಿ ಕರಡು ಸಮಿತಿಯು ನ್ಯಾಯಾಧೀಶರುಗಳ ವೇತನದ ಬಗ್ಗೆ ಸೂಚನೆ ಮಾಡಲು ಸಾಧ್ಯವಾಗುವುದೇ ಎಂಬ ವಿಷಯದಲ್ಲಿ ಇನ್ನೂ ತೀರ್ಮಾನವಾಗಿಲ್ಲ. ಆದ್ದರಿಂದ ಈ ತಿದ್ದುಪಡಿಗೆ ಕಾಲ ಇನ್ನೂ ಪಕ್ವವಾಗಿಲ್ಲ. ಫೆಡರಲ್ ಕೋರ್ಟಿನ ನ್ಯಾಯಾಧೀಶರು ತಾವು ಪಡೆಯುತ್ತಿರುವ ವೇತನವನ್ನೇ ಮುಂದೆಯೂ ಪಡೆಯತಕ್ಕದ್ದು ಎಂಬ ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಕುಂಝ್ರುರವರ ವಾದವನ್ನು ಈ ಸದನ ಒಪ್ಪುವುದಾದರೆ ಈ ತಿದ್ದುಪಡಿಯನ್ನು ಸೂಚಿಸುವುದರಲ್ಲಿ ಏನಾದರೂ ಅರ್ಥವಿರಬಹುದು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಇದನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ, ಈಗಿರುವ ವೇತನಗಳನ್ನು ಮುಂದುವರಿಸಲಾಗುವುದು ಎಂಬ ಗ್ರಹಿಕೆಯ ಮೇಲೆ ವಿಶ್ರಾಂತಿ ವೇತನವನ್ನು ನಿಗದಿಪಡಿಸಲಾಗುವುದು ಎಂಬುದನ್ನು ಅದು ಅವಲಂಬಿಸಿದೆ.

**ಶ್ರೀ ಆರ್. ಕೆ. ಸಿಧ್ವ:** ಗೌರವಾನ್ವಿತ ಡಾ. ಅಂಬೇಡ್ಕರರು ಸಂಸತ್ತು ನಿವಾಸವನ್ನು ಕೊಡಲು ಹೇಗೆ ಸಮರ್ಥವಾಗಿದೆ ಎಂಬ ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾವು ಅದನ್ನು ತಿರಸ್ಕರಿಸುತ್ತಿಲ್ಲ. ಸುಸಜ್ಜಿತ ನಿವಾಸದ ಬಗ್ಗೆ ಏನನ್ನು ಹೇಳಲಾಗಿಲ್ಲ. ಅದನ್ನು ಚರ್ಚಿಸೋಣವಂತೆ.

[ಪಂಡಿತ್ ಕುಂಝ್ರುರವರ ತಿದ್ದುಪಡಿ ತಿರಸ್ಕೃತವಾಯಿತು ಮತ್ತು

**ಡಾ. ಅಂಬೇಡ್ಕರರ ಮೇಲೆ ಹೇಳಿದ ಸೂಚನೆ ಸ್ವೀಕೃತವಾಯಿತು. ತಿದ್ದುಪಡಿಯೊಂದಿಗೆ ೧೦೪ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.]**

## ಹೊಸ ವಿಧಿ ೧೪೮ಎ*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಸೂಚಿಸುತ್ತಿರುವುದೇನೆಂದರೆ ೧೪೮ನೆಯ ವಿಧಿಯ ನಂತರ, ಈ ಕೆಳಗಣ ಹೊಸ ವಿಧಿಯನ್ನು ಸೇರಿಸತಕ್ಕದ್ದು:

**ರಾಜ್ಯಗಳಲ್ಲಿ ವಿಧಾನಪರಿಷತ್ತುಗಳ ಸೃಷ್ಟಿ ಇಲ್ಲವೆ ರದ್ದು**

"೧೪೮–ಎ (೧) ಈ ಸಂವಿಧಾನದ ೧೪೮ನೆಯ ವಿಧಿಯಲ್ಲಿ ಏನೇ ಹೇಳಿದ್ದರೂ, ಸಂಸತ್ತು ತನ್ನ ಕಾನೂನಿನ ಮೂಲಕ ವಿಧಾನ ಪರಿಷತ್ತನ್ನು ಹೊಂದಿರುವ ಯಾವುದೇ ರಾಜ್ಯದಲ್ಲಿ ಅದನ್ನು ರದ್ದುಪಡಿಸುವುದು ಅಥವಾ ವಿಧಾನ ಪರಿಷತ್ತನ್ನು ಹೊಂದಿರದ ಯಾವುದೇ ರಾಜ್ಯದಲ್ಲಿ ಅದನ್ನು ಸ್ಥಾಪಿಸಬಹುದು. ಇದಕ್ಕೆ ಆಯಾ ರಾಜ್ಯದ ವಿಧಾನಸಭೆಯು ತನ್ನ ಸದಸ್ಯರ ಒಟ್ಟು ಸಂಖ್ಯೆಯ ಉಪಸ್ಥಿತ ಮತ್ತು ಮತ ನೀಡಿದ ಮೂರನೆಯ ಎರಡರಷ್ಟು ಸದಸ್ಯರ ಬಹುಮತವಿರತಕ್ಕದ್ದು.

(೨) ಈ ವಿಧಿಯ ಕಲಮು (೧)ರಲ್ಲಿ ಹೇಳಲಾದ ಯಾವುದೇ ಕಾನೂನನ್ನು ಈ ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಅವಶ್ಯಕವಾದಂತಹ ಉಪಾಧಿಗಳ ಪ್ರಕಾರ ಜಾರಿ ಮಾಡಲು ಬರುತ್ತದೆ ಮತ್ತು ಸಂಸತ್ತು ತನಗೆ ಅವಶ್ಯ ಕಂಡ ಇತರ ಪ್ರಾಸಂಗಿಕ ಮತ್ತು ತತ್ಪರಿಣಾಮದ ಉಪಾಧಿಗಳನ್ನೂ ಹೊಂದಿರಬಹುದು.

(೩) ಮುಂದಿನ ೩೦೪ನೆಯ ವಿಧಿಯ ಉದ್ದೇಶಕ್ಕಾಗಿ ಮೇಲೆ ಹೇಳಲಾದ ಯಾವುದೇ ಕಾನೂನನ್ನು ಈ ಸಂವಿಧಾನಕ್ಕೆ ತಿದ್ದುಪಡಿ ಎಂದು ತಿಳಿಯತಕ್ಕದ್ದಲ್ಲ.

ಈ ಹೊಸ ವಿಧಿ ೧೪೮–ಎಯು ಸಂಭವನೀಯ ಎರಡು ವಿಧದ ಸಂಗತಿಗಳಿಗೆ ಅನ್ವಯಿಸುವುದು ಎಂಬುದು ಗೌರವಾನ್ವಿತ ಸದಸ್ಯರಿಗೆ ಗೊತ್ತಾಗುತ್ತದೆ. (೧) ಈ ಸಂವಿಧಾನದ ಆರಂಭದಲ್ಲಿ ಅಸ್ತಿತ್ವದಲ್ಲಿದ್ದ ಎರಡನೆಯ ಸದನವನ್ನು ರದ್ದು ಮಾಡಲು ಮತ್ತು (ii) ಸಂವಿಧಾನದ ಆರಂಭದ ಕಾಲದಲ್ಲಿ ಕಾರಣಾಂತರಗಳಿಂದ ವಿಧಾನ ಪರಿಷತ್ತಿನ ಅಗತ್ಯವಿಲ್ಲವೆಂದು ಭಾವಿಸಿದ್ದಾಗ್ಯೂ ನಂತರ ವಿಧಾನ ಪರಿಷತ್ತನ್ನು ಹೊಂದಬೇಕು ಎಂದು ಭಾವಿಸಿದರೆ ಅಂತಹ ಪ್ರಾಂತ್ಯದಲ್ಲಿ ವಿಧಾನ ಪರಿಷತ್ತನ್ನು ಸ್ಥಾಪಿಸಲು ಸಾಧ್ಯವಾಗುತ್ತದೆ.

ಈ ವಿಧಿಯು ಭಾರತ ಸರ್ಕಾರ ಕಾಯ್ದೆ (೧೯೩೫)ರ ೬೦ನೆಯ ವಿಭಾಗದಲ್ಲಿರುವಂತೆ ವಿಧಾನ ಪರಿಷತ್ತಿನ ಸೃಷ್ಟಿ ಮತ್ತು ೨೦೮ನೆಯ ವಿಭಾಗದಲ್ಲಿರುವಂತೆ ವಿಧಾನ ಪರಿಷತ್ತಿನ ರದ್ದತಿಯ ಉಪಬಂಧಗಳನ್ನೇ ಆಧರಿಸಿದ್ದಾಗಿದೆ. ಅನುಸರಿಸಲಾದ ಈ ಪದ್ಧತಿಯನ್ನು ಕೆಳಸದನಕ್ಕೆ ಬಿಡುವುದಾಗಿದೆ. ಕೆಳಸದನವು ತನ್ನ ನಿರ್ಣಯದ ಮೂಲಕ ಯಾವುದಾದರೂ ಒಂದು ಮಾರ್ಗವನ್ನು ನಿರ್ಣಯಿಸಬಹುದು. ವಿಧಾನ ಪರಿಷತ್ತಿನ ಸೃಷ್ಟಿಗಾಗಿ ಅಥವಾ ರದ್ದತಿಗಾಗಿ ಸೂಕ್ತ ಕಾನೂನನ್ನು ಅಂಗೀಕರಿಸಬಹುದು ಮತ್ತು ಹಾಗೆ ಮಾಡಲಾದ ಕಾನೂನು ಸಂವಿಧಾನದ ತಿದ್ದುಪಡಿ ಎಂದು ಪರಿಗಣಿಸಲಾಗದು. ಇದರಿಂದ ಈ ಸಂವಿಧಾನದ ತಿದ್ದುಪಡಿಗಾಗಿ ಕರಡು ಸಂವಿಧಾನದಲ್ಲಿ ಗೊತ್ತುಪಡಿಸಲಾದ ಕಠಿಣ ವಿಧಾನವನ್ನು ತಪ್ಪಿಸಿದಂತಾಗುವುದು.

ನಾನು ಈ ವಿಧಿಯನ್ನು ಸದನದ ಸ್ವೀಕಾರಕ್ಕೆ ಶಿಫಾರಸು ಮಾಡುತ್ತಿದ್ದೇನೆ.

* * *

---

* ಸಿ.ಎ.ಡಿ. ಸಂ. IX, ೩೦ ಜುಲೈ ೧೯೪೯, ಪುಟ ೧೩–೧೪.

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದಕ್ಕೆ ಉತ್ತರ ನಿಡುವ ಆವಶ್ಯಕತೆ ಇದೆ ಎಂದು ನನಗನಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ಈ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಮೊದಲು ನಾನು ಪ್ರೊಫೆಸರ್ ಸಕ್ಸೇನಾರವರ ತಿದ್ದುಪಡಿಯನ್ನು ತೆಗೆದುಕೊಂಡು ಅದನ್ನು ಎರಡು ಭಾಗಗಳಲ್ಲಿ ಮಂಡಿಸುತ್ತಿದ್ದೇನೆ.

[೩ ತಿದ್ದುಪಡಿಗಳು ತಿರಸ್ಕೃತವಾದವು ಮತ್ತು ಒಂದನ್ನು ವಾಪಸು ಪಡೆಯಲಾಯಿತು.

**ಡಾ. ಅಂಬೇಡ್ಕರರು ಮೇಲಿನಂತೆ ಪ್ರಸ್ತುತಪಡಿಸಿದ ಸೂಚನೆ ಅಂಗೀಕೃತವಾಯಿತು. ೧೪೪–ಎ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**]

# ವಿಧಿ ೧೫೦
## ವಿಧಾನಪರಿಷತ್ತಿನ ರಚನೆ

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಸೂಚಿಸುತ್ತಿರುವುದೇನೆಂದರೆ

೧೫೦ನೆಯ ವಿಧಿಗೆ ಬದಲಾಗಿ ಈ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು;

"೧೫೦ (೧) ವಿಧಾನಪರಿಷತ್ತನ್ನು ಹೊಂದಿರುವ ಯಾವುದೇ ರಾಜ್ಯದಲ್ಲಿ ವಿಧಾನಪರಿಷತ್ತಿನ ಸಂಖ್ಯೆ ಆ ರಾಜ್ಯದ ವಿಧಾನಸಭೆಯ ಒಟ್ಟು ಸಂಖ್ಯೆಯ ಶೇಕಡಾ ಇಪ್ಪತ್ತೈದರಷ್ಟಿರತಕ್ಕದ್ದು.

ಪರಂತು ಒಂದು ರಾಜ್ಯದ ವಿಧಾನಪರಿಷತ್ತಿನ ಸದಸ್ಯರ ಸಂಖ್ಯೆ ನಲವತ್ತಕ್ಕೂ ಕಡಿಮೆ ಇರಬಾರದು (೨) ಒಂದು ರಾಜ್ಯದ ವಿಧಾನ ಪರಿಷತ್ತಿನ ಸ್ಥಾನ ಹಂಚಿಕೆ, ಆ ಸ್ಥಾನಗಳಿಗೆ ಸದಸ್ಯರನ್ನು ಆಯ್ಕೆ ಮಾಡುವ ವಿಧಾನ, ಹಾಗೆ ಆಯ್ಕೆಗೊಳ್ಳಲು ಇರಬೇಕಾದ ಅರ್ಹತೆಗಳು ಮತ್ತು ಹಾಗೆ ಆಯ್ಕೆ ಮಾಡುವವರಿಗೆ ಇರಬೇಕಾದ ಅರ್ಹತೆಗಳು ಮುಂತಾದ ವಿಷಯಗಳನ್ನು ಸಂಸತ್ತು ತನ್ನ ಕಾನೂನಿನ ಮೂಲಕ ಗೊತ್ತುಪಡಿಸಿದಂತಿರುತ್ತದೆ."

ಮೂಲ ವಿಧಿಯನ್ನು ಕರಡು ಸಮಿತಿ ತಯಾರಿಸಿದ ಮೊದಲನೆಯ ಕರಡಿನ ಭಾಗಶಃ ೬೦ನೆಯ ವಿಧಿಯ ಆಧಾರದ ಮೇಲೆ ರೂಪಿಸಲಾಗಿತ್ತು. ಈಗ ಸದನ ಜ್ಞಾಪಿಸಿಕೊಳ್ಳಬಹುದಾದಂತೆ ಮೂಲ ಕರಡಿನ ೬೦ನೆಯ ವಿಧಿಯ ಕೇಂದ್ರದ ಮೇಲ್ಸದನಕ್ಕೆ ಸಂಬಂಧಿಸಿದ್ದಾಗಿತ್ತು. ಕೆಲವು ಕಾರಣಗಳಿಂದ, ಆ ಕಾರಣಗಳನ್ನು ನಾನು ಈಗ ವಿವರಿಸಬಯಸುವುದಿಲ್ಲ, ಈ ಸದನವು, ಮೊದಲಿನ ೬೦ನೇ ವಿಧಿಯಲ್ಲಿ ಅಡಕವಾದ ತತ್ವಗಳನ್ನು ಅಂಗೀಕರಿಸಲಿಲ್ಲ. ಹೀಗಿರುವಾಗ ಪ್ರಾಂತ್ಯಗಳಲ್ಲಿ ಮೇಲ್ಸದನದ ರಚನೆಯಲ್ಲಿ ಅಡಗಿರುವ ತತ್ವಗಳನ್ನು ನಿರಾಕರಿಸಲಾದ ನಂತರ ಪುನಃ ಅವುಗಳನ್ನೇ ಉಳಿಸಿಕೊಳ್ಳುವುದು ಸುಸಂಗತವಾಗಲಾರದು ಎಂದು ಕರಡು ಸಮಿತಿಯು ಭಾವಿಸಿತು. ಈ ಪರಿಸ್ಥಿತಿಯಲ್ಲಿ ಪರ್ಯಾಯ ವಿಧಾನವನ್ನು ಸೂಚಿಸುವ ಸಮಸ್ಯೆಯನ್ನು ಕರಡು ಸಮಿತಿ ಎದುರಿಸಬೇಕಾಯಿತು. ಮೇಲ್ಸದನದ ರಚನೆಯ ಬಗ್ಗೆ ಕರಡು ಸಮಿತಿ ಯಾವುದೇ ನಿರ್ದಿಷ್ಟ ನಿರ್ಣಯ ತೆಗೆದುಕೊಳ್ಳುವಲ್ಲಿ ವಿಫಲವಾಯಿತೆಂದು ನಾನು ಒಪ್ಪಿಕೊಳ್ಳಲೇಬೇಕಾಗಿದೆ. ತತ್ಪರಿಣಾಮವಾಗಿ ವಿಷಯವನ್ನು ಸಂಸತ್ತಿಗೆ ಬಿಟ್ಟುಬಿಡಬೇಕೆಂದು ಅವರು ನಿರ್ಣಯಿಸಿದರು. ಸದ್ಯಕ್ಕೆ ಕರಡು

** ಅದೇ, ಪುಟ ೧೩–೨೦.

* ಸಿ.ಎ.ಡಿ. ಸಂ. IX, ೩೦ ಜುಲೈ ೧೯೪೯, ಪುಟ ೨೧–೨೨

ಸಮಿತಿಯು ಈ ಸದನದ ಸ್ವೀಕೃತಿಗೆ ಯಾವುದೇ ಸಲಹೆಯನ್ನು ಕೊಡಲಾಗಿಲ್ಲವಾದ್ದರಿಂದ ಅವರು ೧೫೦ನೆಯ ವಿಧಿಗೆ ಉಪಕಲಮು (೨)ನ್ನು ಸೂಚಿಸುವ ಮೂಲಕ ಕನಿಷ್ಠ ಪ್ರತಿರೋಧ ಮಾರ್ಗವನ್ನನುಸರಿಸಿದ್ದಾರೆ. ನಾನು ಹೇಳಿದಂತೆ ಅದರಿಂದ ಒಂದು ಅಸಂಗತಿಯುಂಟಾಗಿದೆ. ಅದೇನೆಂದರೆ, ೧೪೮–ಎ ವಿಧಿಯಲ್ಲಿ ಹೇಳಿರುವಂತೆ ಕೆಲವು ಪ್ರಾಂತ್ಯಗಳಲ್ಲಿ ಮೇಲ್ಸದನವಿರತಕ್ಕದ್ದು. ಆದರೆ ಅದೇ ಕಾಲಕ್ಕೆ ಅದು ಮೇಲ್ಸದನಗಳ ರಚನೆಯ ವಿಷಯವನ್ನು ಸಂಸತ್ತಿಗೆ ಬಿಟ್ಟುಕೊಡುತ್ತದೆ.

ಇವು ಅಸಂಗತಿಗಳೇನೋ ನಿಜ. ಸದ್ಯದ ಪರಿಸ್ಥಿತಿಯಲ್ಲಿ ಈ ಅಸಂಗತಿಗಳನ್ನು ನಿವಾರಿಸುವ ಮಾರ್ಗವಿಲ್ಲ. ಆದ್ದರಿಂದ ಸದ್ಯಕ್ಕೆ ನಾನು ಸೂಚಿಸುವ ೧೫೦ನೆಯ ವಿಧಿಯಲ್ಲಿ ಅಡಗಿರುವ ಕರಡು ಸಮಿತಿಯ ಪ್ರಸ್ತಾವನೆಗಳನ್ನು ಅಂಗೀಕರಿಸಬೇಕೆಂದು ಸದನವನ್ನು ಕೋರುತ್ತೇನೆ.

[ಪಟ್ಟಿ III(ಮೊದಲನೆಯ ವಾರ)ರ ತಿದ್ದುಪಡಿ ಸಂಖ್ಯೆ ೯೦ನ್ನು ಮಂಡಿಸಲಾಗಲಿಲ್ಲ]

**ಶ್ರೀ ಹೆಚ್. ವಿ. ಕಾಮತ್:** ನಾನು ಸೂಚಿಸುತ್ತಿರುವುದೇನೆಂದರೆ,

"ತಿದ್ದುಪಡಿಗಳಿಗೆ ಇರುವ ತಿದ್ದುಪಡಿಗಳ ಪಟ್ಟಿ I(ಮೊದಲನೆಯ ವಾರ)ರ ತಿದ್ದುಪಡಿ ಸಂಖ್ಯೆ ೫ರಲ್ಲಿ ಸೂಚಿಸಲಾದ ೧೫೦ನೆಯ ವಿಧಿಯ ಕಲಮು (೨)ರಲ್ಲಿ 'ಆಯ್ಕೆಯಾಗಲು ಹೊಂದಬೇಕಾದ ಅರ್ಹತೆಗಳು' ಎಂಬ ಪದಗಳ ಬದಲಾಗಿ 'ಪರಿಷತ್ತಿನ ಸದಸ್ಯತ್ವಕ್ಕೆ ಇರಬೇಕಾದ ಅರ್ಹತೆಗಳು ಮತ್ತು ಅನರ್ಹತೆಗಳು' ಎಂಬ ಪದಗಳನ್ನು ಸೇರಿಸತಕ್ಕದ್ದು."

ಹಿಂದೊಮ್ಮೆ ಒಂದು ರಾಜ್ಯದ ಶಾಸಕಾಂಗದ ಸದಸ್ಯರ ಆಯ್ಕೆಯ ವಿಷಯದಲ್ಲಿ ಈ ಸದನವು ವಿವಿಧ ವಿಧಿಗಳ ಸಂಬಂಧಪಟ್ಟ ಬೇರೆ ಬೇರೆ ಭಾಗಗಳನ್ನು ಅನುಸರಿಸಿತ್ತು ಎಂಬ ಅಂಶ ಈ ಸದನಕ್ಕೆ ತಿಳಿದಿದೆ. ಉದಾಹರಣೆಗಾಗಿ, ನಾನು ಈ ಸದನದ ಗಮನವನ್ನು ೧೬೭ನೆಯ ವಿಧಿಯತ್ತ ಸೆಳೆಯುತ್ತಿದ್ದೇನೆ. ಅದರಲ್ಲಿ ರಾಜ್ಯ ವಿಧಾನಸಭೆಯ ಸದಸ್ಯತ್ವಕ್ಕೆ ಮೊದಲೇ ಹೇಳಲಾದ ಅರ್ಹತೆಗಳೂ ಅಲ್ಲದೆ, ಸದಸ್ಯತ್ವಕ್ಕೆ ಇರುವ ಅನರ್ಹತೆಗಳನ್ನೂ ಹೇಳಲಾಗಿದೆ. ಮೇಲ್ಸದನದಲ್ಲಿ ಪ್ರಾತಿನಿಧ್ಯ ನೀಡುವಲ್ಲಿ ಮತ್ತು ಈ ಪರಿಷತ್ತಿಗೆ ಸದಸ್ಯರನ್ನು ಚುನಾಯಿಸುವಲ್ಲಿ ಈ ಸದನವು ಅಷ್ಟೇ ಸಮಂಜಸತೆ, ಅಷ್ಟೇ ತರ್ಕಪೂರ್ಣ ಮತ್ತು ಅಷ್ಟೇ ಬಲವತ್ತಾಗಿ ಮೇಲ್ಸದನದ ಸದಸ್ಯರ ಆಯ್ಕೆಗೆ ಇರಬೇಕಾದ ಅರ್ಹತೆಗಳನ್ನು ಅಲ್ಲದೆ ಅನರ್ಹತೆಗಳನ್ನು ಏಕೆ ವಿಧಿಸಬಾರದೆಂಬುದು ನನಗೆ ಅರ್ಥವಾಗುತ್ತಿಲ್ಲ. ೧೬೭ನೆಯ ವಿಧಿಯಲ್ಲಿ ಯಾವುದೇ ರಾಜ್ಯದ ವಿಧಾನಸಭೆ ಇಲ್ಲವೇ ವಿಧಾನಪರಿಷತ್ತಿನ ಸದಸ್ಯತ್ವಕ್ಕೆ ಆಯ್ಕೆಯಾಗಲು ಇರಬಹುದಾದ ಅನರ್ಹತೆಗಳನ್ನು ವಿಧಾನಗಳನ್ನು ಸೂಚಿಸಲಾಗಿದೆ. ಆದ್ದರಿಂದ ಡಾ. ಅಂಬೇಡ್ಕರರು ಮಂಡಿಸಿರುವ ೧೫೦ನೆಯ ವಿಧಿಯಲ್ಲಿ ಅದೇ ರೀತಿ ಏಕೆ ಸ್ಪಷ್ಟಪಡಿಸಬಾರದೆಂಬುದು ನನಗೆ ಅರ್ಥವಾಗುತ್ತಿಲ್ಲ.

ವಿಧಿಯ ಬಗ್ಗೆ ಇನ್ನೊಂದು ಸಂಗತಿಯೂ ಉಂಟು. ಅದೇನೆಂದರೆ ಈ ತಿದ್ದುಪಡಿಯಲ್ಲಿ ಪರಿಷತ್ತಿನ ಸಂಖ್ಯೆ ಕೆಳಸದನದ ಒಟ್ಟು ಸದಸ್ಯರ ಸಂಖ್ಯೆಯ ಒಂದೂ ಕಾಲು ಅಥವಾ ಶೇಕಡಾ ೨೫ಕ್ಕಿಂತ ಹೆಚ್ಚಿರಬಾರದು ಎಂಬುದು. ಅದು ಇನ್ನೂ ಮುಂದುವರಿದು ತನ್ನ ಒಂದು ಪರಂತುಕದಲ್ಲಿ ಹೇಳಿರುವಂತೆ "ಒಂದು ರಾಜ್ಯದ ವಿಧಾನ ಪರಿಷತ್ತಿನ ಸಂಖ್ಯೆ ಯಾವ ಕಾರಣದಿಂದಲೂ ನಲವತ್ತಕ್ಕೆ ಕಡಿಮೆ ಇರತಕ್ಕದ್ದಲ್ಲ. "ಈ ಎರಡೂ ಅಂಶಗಳಲ್ಲಿ ಹೇಗೆ ಸಾಮರಸ್ಯ ಉಂಟುಮಾಡಲು ಸಾಧ್ಯ ಎಂಬುದು ನನಗೆ ತಿಳಿಯದಾಗಿದೆ. ಉದಾಹರಣೆಗೆ ನಾವು ೧೪೮ನೆಯ ವಿಧಿಯನ್ನು ಅಂಗೀಕರಿಸಿದ್ದೇವೆ...

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ೧೬೭ನೆಯ ವಿಧಿಯನ್ನು ಇನ್ನೊಮ್ಮೆ ಓದುವಂತೆ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್. ವಿ. ಕಾಮತ್:** ನಾನು ಮುಂದಿನ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹಾಗಾದರೆ ಮೊದಲನೆಯ ವಿಷಯವನ್ನು ನೀವು ಒಪ್ಪಿಕೊಳ್ಳುತ್ತೀರಾ?

**ಶ್ರೀ ಹೆಚ್. ವಿ. ಕಾಮತ್:** ನಾನು ಅದರ ಪರವಾಗಿಲ್ಲ. ೧೬೭ನೆಯ ವಿಧಿಯು ಅನರ್ಹತೆಗಳನ್ನು ಹೇಳುತ್ತದೆ ಎಂದು ಡಾ. ಅಂಬೇಡ್ಕರರು ಹೇಳುತ್ತಿದ್ದಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ವಿಧಾನಸಭೆ ಮತ್ತು ರಾಜ್ಯಸಭೆ ಎರಡಕ್ಕೂ ಇದು ಅನ್ವಯವಾಗುತ್ತದೆ.

* * *

***ಶ್ರೀ ನಜೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ ಮುಸ್ಲಿಂ): ಈ ಕಲಮು ಅತಿ ಸರಳ ಮತ್ತು ಆಪತ್ಕಾರಿಯಾಗಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬರುವ ಸಂಗತಿ ಮತ್ತು ವಿಧಾನಪರಿಷತ್ತಿನ ಸಂಖ್ಯೆ ಶೇಕಡಾ ೨೫ಕ್ಕಿಂತ ಹೆಚ್ಚಿರಬಾರದು ಎಂಬುದು ಅದರ ಉದ್ದೇಶವಾಗಿತ್ತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಒಂದು ವಿಧಿ ಬಿಂದು ಎತ್ತುತ್ತಿದ್ದೇವೆ. ಮಾನ್ಯ ಸದಸ್ಯರು ಈ ಸದನದ ಮುಂದೆ ಇರದ ಕರಡನ್ನು ಟೀಕಿಸುತ್ತಿದ್ದಾರೆ.

**ಶ್ರೀ ನಜೀರುದ್ದೀನ್ ಅಹ್ಮದ್:** ನಾನು ಇಂದಿನ ಈ ತಿದ್ದುಪಡಿಯಲ್ಲಿ ತೃಪ್ತಿಕರವಲ್ಲದ ಸಂಗತಿ ಹೇಗೆ ಉದ್ಭವಿಸಿದೆ ಎಂದು ತೋರಿಸಲೆತ್ನಿಸುತ್ತಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆದರೆ ಅದು ಸದಸ್ಯರೆದುರಿಗೆ ಇಲ್ಲವಲ್ಲ.

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ಉತ್ತರ ನೀಡಬೇಕಾಗಿರುವ ಎರಡು ಅಂಶಗಳು ಮಾತ್ರ ಇವೆ. ಶ್ರೀಯುತ ಕಾಮತ್ ಮತ್ತು ನನ್ನ ಮಿತ್ರ ನಜೀರುದ್ದೀನ್ ಅಹ್ಮದ್‌ರವರು ಪ್ರಸ್ತಾಪ ಮಾಡಿರುವ ಒಂದು ವಿಷಯವೆಂದರೆ, ಈಗ ಈ ಸದನದಲ್ಲಿ ಮಾಡಿರುವ ಪ್ರಸ್ತಾಪದಂತೆ ಕೆಲವು ಪ್ರಾಂತ್ಯಗಳಲ್ಲಿ ಮೇಲ್ಮನೆ ಮತ್ತು ಕೆಳಮನೆಗಳ ಸದಸ್ಯತ್ವದಲ್ಲಿ ಒಂದು ರೀತಿಯ ಅಸಮ ಪ್ರಮಾಣವಿರುವುದು. ಅವರು ಒಂದು ನಿದರ್ಶನವನ್ನೂ ಕೊಟ್ಟಿದ್ದಾರೆ. ನಾನು ಅವರು ಹೇಳಿದ್ದನ್ನು ಸರಿಯಾಗಿ ಕೇಳಿಸಿಕೊಂಡಿದ್ದೇನೆ ಎಂದು ಅಂದುಕೊಂಡಿದ್ದೇನೆ. ಓಡಿಸ್ಸಾ ಪ್ರಾಂತ್ಯದಲ್ಲಿ ಕೆಳಮನೆಯಲ್ಲಿ ನಾವು ಸಂವಿಧಾನದ ೧೪೯ನೆಯ ವಿಧಿಯಲ್ಲಿ ಗೊತ್ತುಪಡಿಸಲಾದ ಸದಸ್ಯರ ಸಂಖ್ಯೆ ೬೦ರಷ್ಟಾಗಿರುತ್ತದೆ. ತತ್ಪರಿಣಾಮವಾಗಿ, ಮೇಲ್ಮನೆಯ ಕನಿಷ್ಠ ಸಂಖ್ಯೆ ೪೦ ಆದರೆ, ಒರಿಸ್ಸಾದಲ್ಲಿ ಮೇಲ್ಮನೆಯ ಸಂಖ್ಯೆ ಕೆಳಮನೆಯ ಸದಸ್ಯರ ಸಂಖ್ಯೆಯ ನಡುವೆ ಅಸಮ ಪ್ರಮಾಣ ಉಂಟಾಗುವುದು. ತನ್ನ ಮಿತ್ರರಾದ ಶ್ರೀ ನಜೀರುದ್ದೀನ್ ಅಹ್ಮದ್‌ರವರು ಈ ಮಧ್ಯಂತರ ಕಾಲದಲ್ಲಿ ಸಂಭವಿಸಿರುವ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡಿಲ್ಲವೆಂದು ನನಗನಿಸುತ್ತದೆ. ಉದಾಹರಣೆಗಾಗಿ, ಒರಿಸ್ಸಾದಿಂದ ಇದುವರೆಗೂ ಪ್ರತ್ಯೇಕವಾಗಿ ಅನೇಕ ರಾಜ್ಯಗಳು ಈಗ ಒರಿಸ್ಸಾ ಪ್ರಾಂತ್ಯದಲ್ಲಿ ವಿಲೀನವಾಗಿರುವುದರಿಂದ ಅದು ಈಗ ಒಂದು ದೊಡ್ಡ ಪ್ರಾಂತ್ಯವಾಗಿದೆ ಎಂಬುದನ್ನು ಅವರು ಮರೆತಿದ್ದಾರೆ. ಒರಿಸ್ಸಾದಲ್ಲಿ ವಿಲೀನವಾಗಲಿರುವ ರಾಜ್ಯಗಳ ಜನಸಂಖ್ಯೆ ಮತ್ತು ಪ್ರದೇಶಗಳನ್ನು ಒರಿಸ್ಸಾದ ಮೇರೆಯಲ್ಲಿ ಸೇರಿಸಿದರೆ ಕೆಳಮನೆಯ ಸದಸ್ಯರ ಸಂಖ್ಯೆ ೧೫೦ರಷ್ಟು ಆಗಲಿದೆ. ಇದರ ಪರಿಣಮವಾಗಿ, ಅವರು

* ಸಿ.ಎ.ಡಿ. ಸಂ. IX, ३೦ ಜುಲೈ ೧೯೪೯, ಪುಟ ೨೭.

** ಅದೇ, ಪುಟ ३೫–३೭.

ಹೇಳಿದ ಅಸಮ ಪ್ರಮಾಣ ಇಲ್ಲದಂತಾಗುವುದು. ಈ ಸದನವು ೧೭೨ನೆಯ ವಿಧಿಯಲ್ಲಿ ಸೂಚಿಸಲಾಗಿರುವ ಕೆಳಮನೆ ಮತ್ತು ಮೇಲ್ಮನೆಯ ನಡುವಣ ಭಿನ್ನಾಭಿಪ್ರಾಯದ ಪ್ರಶ್ನೆಯನ್ನು ಕ್ರಮಪಡಿಸುವುದರ ಮೂಲಕ ಮೇಲ್ಮನೆ ಮತ್ತು ಕೆಳಮನೆಗಳ ನಡುವಣ ಅಸಮ ಪ್ರಮಾಣದ ಪ್ರಶ್ನೆಯೂ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತದೆ. ಏಕೆಂದರೆ, ೧೭೨ನೆಯ ವಿಧಿಯಲ್ಲಿ ಕೇಂದ್ರದಲ್ಲಿ ಎರಡೂ ಸದನಗಳ ವಿಷಯದಲ್ಲಿ ಹೇಳಲಾಗಿರುವ ವಿಧಾನ, ಎಂದರೆ ಜಂಟಿ ಅಧಿವೇಶನದ ವಿಧಾನವನ್ನು ಈಗಾಗಲೇ ಕೈಬಿಟ್ಟಿದ್ದೇವೆ. ನಾವು ಏನು ಮಾಡಲಿದ್ದೇವೆಂದರೆ, ಕೆಲವು ವಿಷಯಗಳಲ್ಲಿ ಕೆಳಮನೆಯ ಅಭಿಪ್ರಾಯಗಳಿಗೆ ಮೇಲ್ಮನೆಯ ಅಭಿಪ್ರಾಯಗಳ ಮೇಲೆ ಮೇಲುಗೈ ಅಥವಾ ಪ್ರಾಧಾನ್ಯತೆ ನೀಡುವುದು. ಹೀಗಾಗಿ ಮೇಲ್ಮನೆಯು ತನ್ನ ವಿಭಿನ್ನ ರಾಜಕೀಯ ಸ್ವರೂಪದ ಕಾರಣದಿಂದ ಕೆಳಮನೆಯ ಬಹುಮತ ಅಥವಾ ಬಹು ದೊಡ್ಡ ಮಹತ್ವವನ್ನು ಬುಡಮೇಲು ಮಾಡಲಾರದು. ಇದರಿಂದಾಗಿ ನನ್ನ ಗೌರವಾನ್ವಿತ ಮಿತ್ರ ಶ್ರೀ ನಜೀರುದ್ದೀನ್ ಅಹ್ಮದ್‌ರವರು ಎತ್ತಿದ ಮೊದಲನೆಯ ವಿಷಯ ಬಗೆಹರಿದಂತಾಗಿದೆ ಎಂದು ನನ್ನ ಅನಿಸಿಕೆ.

ಇನ್ನು ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಲಕ್ಷ್ಮೀಕಾಂತ ಮೈತ್ರಾರವರು ಎತ್ತಿರುವ ಇನ್ನೊಂದು ಮಹತ್ವದ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಅವರ ವಾದವೇನೆಂದರೆ, ನಾವು ಅದನ್ನು ಸಂಸತ್ತಿಗೇಕೆ ಬಿಡಬೇಕು? ಅದನ್ನು ಸಂಸತ್ತಿಗೆ ಬಿಡಲು ಹೇಗೆ ಸಾಧ್ಯ? ನಾನು ಅವರಿಗೆ ನೀಡಬಹುದಾದ ಉತ್ತರ ನನ್ನ ಪ್ರಕಾರ ಅತ್ಯಂತ ತೃಪ್ತಿಕರವಾಗಿದೆ. ಮೊದಲನೆಯದಾಗಿ, ಕರಡು ಸಮಿತಿಯು ಮೇಲ್ಮನೆಯ ರಚನೆಯ ಬಗ್ಗೆ ಸಂವಿಧಾನದಲ್ಲಿಯೇ ಯಾವುದೇ ರಚನಾತ್ಮಕ ಸೂಚನೆಯನ್ನು ಮಾಡಿಲ್ಲ ಎಂದು ಗ್ರಹಿಸುವುದು ಸರಿಯಲ್ಲ. ನನ್ನ ಗೌರವಾನ್ವಿತ ಮಿತ್ರರು ಜ್ಞಾಪಿಸಿಕೊಳ್ಳಬಹುದಾದರೆ ತಿದ್ದುಪಡಿಗಳಿಗಿರುವ ತಿದ್ದುಪಡಿಗಳ ಕ್ರೋಢೀಕೃತ ಪಟ್ಟಿಯಲ್ಲಿ ತಿದ್ದುಪಡಿ ಸಂಖ್ಯೆ ೧೪೯ರಲ್ಲಿ ನನ್ನ ಮತ್ತು ನನ್ನ ಮಿತ್ರ ಶ್ರೀ ಟಿ.ಟಿ.ಕೃಷ್ಣಮಾಚಾರಿಯವರ ಹೆಸರಿನಲ್ಲಿ ಒಂದು ತಿದ್ದುಪಡಿ ಇದ್ದು ಇದನ್ನು ಸದಸ್ಯರುಗಳಿಗೆ ಕಳುಹಿಸಿಕೊಡಲಾಗಿದೆ. ಅದರಲ್ಲಿ ಮೇಲ್ಮನೆಯ ರಚನೆಯ ಬಗ್ಗೆ ನಾವು ರಚನಾತ್ಮಕ ಸಲಹೆಗಳನ್ನು ಮಾಡಿರುವುದು ನಿಮಗೆ ಕಂಡುಬರುತ್ತದೆ. ದುರ್ದೈವವಶಾತ್ ಅದು ಇನ್ನೊಂದು ಕಡೆ ಸ್ವೀಕೃತವಾಗಲಿಲ್ಲ. ಹೀಗಾಗಿ ಅದರ ಸ್ವೀಕೃತಿಗೆ ಒತ್ತಾಯಿಸುವುದು ಸರಿಯಲ್ಲ ಎಂದು ನಮಗನಿಸಿತು. ಆದ್ದರಿಂದ ಈ ವಿಷಯದಲ್ಲಿ ಕರಡು ಸಮಿತಿ ಯಾವ ಪ್ರಯತ್ನವನ್ನೂ ಮಾಡಿಲ್ಲ ಎಂಬ ಅಪವಾದವನ್ನು ಅದರ ಮೇಲೆ ಹೇರದೆ ಅದನ್ನು ದೋಷವಿಮುಕ್ತಗೊಳಿಸಬೇಕು. ಅವರು ಪ್ರಯತ್ನ ಮಾಡಿರುತ್ತಾರೆ. ಆದರೆ ಅದರಲ್ಲಿ ಅವರು ಯಶಸ್ವಿಯಾಗಲಿಲ್ಲ. ಈ ವಿಷಯದಲ್ಲಿ ಕರಡು ಸಮಿತಿಗೆ ಒಟ್ಟು ೨೮ ವಿಷಯಗಳನ್ನು ಕಳುಹಿಸಿಕೊಡಲಾಗಿತ್ತು. ಅವುಗಳನ್ನು ಈ ಪಟ್ಟಿಯಲ್ಲಿ ೧೨೩ರಿಂದ ೧೪೮ರವರೆಗೆ ಕೊಡಲಾಗಿದೆ. ನನ್ನ ಮಿತ್ರರು ಅವುಗಳನ್ನು ವಿವರವಾಗಿ ಓದಿ ನೋಡಿದರೆ ಅವುಗಳಲ್ಲಿರುವ ದಿಗ್ಭ್ರಮೆ ಹಿಡಿಯುವ ವೈವಿಧ್ಯತೆಯುಳ್ಳ ಸಲಹೆ ಸೂಚನೆಗಳು, ಪರಸ್ಪರ ವಿರೋಧಾತ್ಮಕ ವಿಚಾರಗಳು ಮತ್ತು ವಿವಿಧ ತಿದ್ದುಪಡಿಗಳನ್ನು ಸೂಚಿಸಿರುವವರು ಯಾವುದಾದರೂ ಒಂದು ತೀರ್ಮಾನಕ್ಕೆ ಬರುವಲ್ಲಿ ತೋರಿದ ನಿರಾಸಕ್ತಿಯ ಅರಿವು ಅವರಿಗುಂಟಾಗುತ್ತದೆ. ಇಂತಹ ಒಂದು ಕಠಿಣ ಪರಿಸ್ಥಿತಿಯಲ್ಲಿ ಕರಡು ಸಮಿತಿಯು ಈ ಸದನದಲ್ಲಿ ಬಹುಮತದಿಂದ ಅಂಗೀಕಾರವಾಗುವಂತಹ ಸಲಹೆಯನ್ನು ಅವರೆದುರಿಗೆ ಮಂಡಿಸುವ ಬದಲು ಅದನ್ನು ಸಂಸತ್ತಿಗೇ ಒಪ್ಪಿಸುವುದು ಸರಿ ಎಂದು ಭಾವಿಸಿತು.

**ಶ್ರೀ ಹೆಚ್. ವಿ. ಕಾಮತ್:** ಸಂಸತ್ತಿನಲ್ಲಿಯೂ ಅದಕ್ಕಿಂತಲೂ ಕಡಿಮೆ ವೈವಿಧ್ಯತೆ ಇದೆ ಎಂದು ಡಾ. ಅಂಬೇಡ್ಕರರು ಖಚಿತವಾಗಿ ಹೇಳಬಲ್ಲರೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಗೌರವಾನ್ವಿತ ಮಿತ್ರರು ನನಗೆ ಸ್ವಲ್ಪ ಕಾಲಾವಕಾಶ

ನೀಡುವುದಾದರೆ ನಾನು ಅದಕ್ಕೂ ಉತ್ತರ ಕೊಡಬಲ್ಲೆ.

ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಮೈತ್ರಾರವರು ಹೇಳಿರುವುದೇನೆಂದರೆ ಸಂವಿಧಾನದ ಅತ್ಯಂತ ಮಹತ್ವದ ಸಂಗತಿಯಾಗಿರುವ ಮೇಲ್ಮನೆಯ ವಿಷಯವನ್ನು ಸಂವಿಧಾನದಲ್ಲಿಯೇ ಅಳವಡಿಸದೆ, ಅದನ್ನು ಸಂಸತ್ತಿನ ನಿರ್ಧಾರಕ್ಕೆ ಬಿಡುವುದು ಎಷ್ಟರಮಟ್ಟಿಗೆ ಸಮಂಜಸವೆನಿಸುವುದು. ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಮೈತ್ರಾರವರಿಗೆ ನಾನು ಹೇಳುವುದೇನೆಂದರೆ ನಾವು ಪ್ರಾಂತ್ಯಗಳ ಮತ್ತು ರಾಜ್ಯಗಳ ಕೆಳಮನೆಗಳ ವಿಷಯದಲ್ಲಿ ಏನು ಮಾಡುತ್ತಿರುವೆವೊ ಅದನ್ನೇ ಕೇಂದ್ರದಲ್ಲಿಯೂ ಮಾಡುತ್ತಿದ್ದೇವೆ. ಅವರು ಇದನ್ನು ತಿಳಿದುಕೊಳ್ಳುತ್ತಾರೆ ಎಂದು ಭಾವಿಸುತ್ತೇನೆ. ನಾವು ಈಗಾಗಲೇ ಅಂಗೀಕರಿಸಿರುವ ೧೪೯ನೆಯ ವಿಧಿಯನ್ನು ಅವರು ನೋಡಿದ್ದೇ ಆದರೆ, ನಾವು ಅದರಲ್ಲಿ ಮಾಡಿರುವುದೇನೆಂದರೆ ಚುನಾವಣಾ ಕ್ಷೇತ್ರಗಳನ್ನು ರಚಿಸುವುದಕ್ಕಾಗಿ ಅನುಸರಿಸಬೇಕಾದ ಕೆಲವು ತತ್ವಗಳನ್ನು ಸೂಚಿಸಿದ್ದೇವೆ. ಅವೇನೆಂದರೆ ಯಾವುದೇ ಚುನಾವಣಾ ಅಥವಾ ಮತಕ್ಷೇತ್ರದಲ್ಲಿ ಇಷ್ಟಕ್ಕಿಂತ ಹೆಚ್ಚು ಅಥವಾ ಇಷ್ಟಕ್ಕಿಂತ ಕಡಿಮೆ ಜನರಿರತಕ್ಕದ್ದು. ಆದರೆ ಮತಕ್ಷೇತ್ರಗಳ ಪರಿಸೀಮನಾ ಕಾರ್ಯವನ್ನು ಸಂಸತ್ತಿಗೆ ಬಿಟ್ಟುಕೊಡಲಾಗಿದೆ. ಸಂಸತ್ತು ಕೇಂದ್ರದಲ್ಲಿ ಕೆಳಮನೆಗೆ ವಿವಿಧ ಮತಕ್ಷೇತ್ರಗಳ ಪರಿಸೀಮನೆಗಳಿಸುವ ಕಾನೂನನ್ನು ಮಾಡದೆ ಕೆಳಮನೆಯನ್ನು ಸ್ಥಾಪಿಸಲು ಬರುವುದಿಲ್ಲ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರಾ:** ಅದು ಅನಿವಾರ್ಯ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದೂ ಅಲ್ಲದೆ, ಸ್ಥಾನಗಳನ್ನು ಹಂಚುವ ಇನ್ನೊಂದು ಉದಾಹರಣೆಯನ್ನೇ ತೆಗೆದುಕೊಳ್ಳಿ. ವಾಸ್ತವವಾಗಿ ಸ್ಥಾನ ಹಂಚಿಕೆಯನ್ನು ಸಂಸತ್ತು ತನ್ನ ಕಾನೂನಿನ ಮೂಲಕ ಮಾಡಬೇಕಾಗುತ್ತದೆ. ಆದ್ದರಿಂದ ಇಂತಹ ಪ್ರಮುಖ ವಿಷಯವನ್ನೇ ಸಂಸತ್ತಿಗೆ ಬಿಟ್ಟುಕೊಟ್ಟಾಗ ಮೇಲ್ಮನೆಯ ರಚನೆಯಂತಹ ವಿಷಯವನ್ನೂ ಸಂಸತ್ತಿಗೆ ಬಿಟ್ಟುಕೊಡಲು ಇರುವ ಅಭ್ಯಂತರವಾದರೂ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಅದಕ್ಕೆ ಯಾವ ಅಭ್ಯಂತರವೂ ನನಗೆ ತೋಚುತ್ತಿಲ್ಲ. ವೈಯಕ್ತಿಕವಾಗಿ ಹೇಳುವುದಾದರೆ, ಈ ಸದನದ ಎದುರಿಗಿರುವ ೨೮ ತಿದ್ದುಪಡಿಗಳನ್ನು ನೋಡಿದಾಗ ಅವುಗಳಲ್ಲಿ ಎಷ್ಟು ವಿವಾದಾತ್ಮಕ ವಿಷಯಗಳಿವೆ ಎಂಬುದು ಅರಿವಾಗುತ್ತದೆ. ಆದ್ದರಿಂದ ಸಂಸತ್ತೇ ಈ ಜವಾಬ್ದಾರಿಯನ್ನು ನಿರ್ವಹಿಸುವುದು ಸೂಕ್ತ ಎಂದು ನನಗನಿಸಿತು. ಏಕೆಂದರೆ, ಸಂಸತ್ತಿಗೆ ಕರಡು ಸಮಿತಿಗಿಂತ ಹೆಚ್ಚು ಕಾಲಾವಕಾಶವಿದೆ ಮತ್ತು ಈ ವಿಷಯದಲ್ಲಿ ಸಮಾಲೋಚಿಸಲು ಹೆಚ್ಚು ಮಾಹಿತಿ ಇರುತ್ತದೆ. ಅಲ್ಲದೆ, ಸಂಸತ್ತು ಈ ವಿಷಯದಲ್ಲಿ ವಿವಿಧ ಪ್ರಾಂತೀಯ ಸರಕಾರಗಳೊಂದಿಗೆ ಪತ್ರ ವ್ಯವಹಾರ ಮಾಡಿ ಅವರ ತೊಂದರೆಗಳೇನು, ಅವರ ವಿಚಾರಗಳೇನು ಎಂಬುದನ್ನು ತಿಳಿದುಕೊಂಡು ಅವುಗಳಲ್ಲಿ ಒಂದು ಮಧ್ಯ ಮಾರ್ಗವನ್ನೊಳಗೊಂಡ ಕಾನೂನನ್ನು ಮಾಡಬಹುದು. ಹೀಗಾಗಿ ಈ ಸೂಚನೆಯನ್ನು ಮಂಡಿಸುವುದರಿಂದ ನಾವು ಈಗಾಗಲೇ ಅಂಗೀಕರಿಸಿರುವ ತತ್ವಗಳನ್ನು ಕೈಬಿಟ್ಟಂತಾಗುವುದಿಲ್ಲ. ಈಗಾಗಲೇ ನನ್ನ ಗೌರವಾನ್ವಿತ ಮಿತ್ರ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಹೇಳಿರುವಂತೆ ಈ ಎಲ್ಲಾ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡರೆ ಕರಡು ಸಮಿತಿಯ ಕ್ಷಮಾಪಣೆ ಕೇಳುವ ಯಾವ ಅವಶ್ಯಕತೆಯೂ ಇರುವುದಿಲ್ಲ. ಬದಲಾಗಿ ಕರಡು ಸಮಿತಿಯು ತನ್ನ ಈ ಸೂಚನೆಯನ್ನು ಅಂಗೀಕರಿಸುವಂತೆ ಶಿಫಾರಸು ಮಾಡುತ್ತದೆ.

* * *

***ಪಂಡಿತ್ ಗೋವಿಂದ ಮಾಲವೀಯ** (ಸಂಯುಕ್ತ ಪ್ರಾಂತ್ಯಗಳು, ಸಾಮಾನ್ಯ): ಮಾನ್ಯರೆ, ನಾನು ಈ ವಿಧಿಯ ಪರಿಶೀಲನೆಯನ್ನು ತಡೆಹಿಡಿಯಬೇಕೆಂದು ಸೂಚಿಸುತ್ತೇನೆ.

* ಸಿ.ಎ.ಡಿ. ಸಂ. IX, ೩೦ ಜುಲೈ ೧೯೪೯, ಪುಟ ೩೭.

**ಶ್ರೀ ಬ್ರಜೇಶ್ವರ್ ಪ್ರಸಾದ್:** ನಾನು ಈ ಸೂಚನೆಯನ್ನು ಅನುಮೋದಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಅಭ್ಯಂತರವಿಲ್ಲ. ಇನ್ನೊಮ್ಮೆ ಈ ವಿಷಯವನ್ನು ಪರಿಶೀಲಿಸಬಹುದು.

**ಮಾನ್ಯ ಸಭಾಧ್ಯಕ್ಷ:** ಈ ವಿಧಿಯನ್ನು ತಡೆಹಿಡಿಯಬೇಕು. ಈ ಸೂಚನೆಗೆ ಎಲ್ಲಾ ಸದಸ್ಯರ ಸಮ್ಮತಿ ಇದೆ ಎಂದು ಭಾವಿಸುತ್ತೇನೆ.

**ಗೌರವಾನ್ವಿತ ಸದಸ್ಯರುಗಳು:** ಹೌದು.

## ಹೊಸ ವಿಧಿ ೧೬೩ಎ*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈಗ ಸೂಚಿಸುತ್ತಿರುವುದೇನೆಂದರೆ

"ತಿದ್ದುಪಡಿಗಳಿಗೆ ತಿದ್ದುಪಡಿಯ ಪಟ್ಟಿ I (ಮೊದಲನೆಯ ವಾರ) ತಿದ್ದುಪಡಿ ಸಂಖ್ಯೆ ೧೨ರಲ್ಲಿ ಸೂಚಿತ ಹೊಸ ವಿಧಿ ೧೬೩–ಎ ಬದಲು ಈ ಕೆಳಗಿನದನ್ನು ಸೇರಿಸತಕ್ಕದ್ದು:

**"೧೬೩–ಎ, (೧) ಸದನ ಅಥವ ಪ್ರತಿಯೊಂದು ರಾಜ್ಯದ ಶಾಸಕಾಂಗದ ಸದನವು ತನ್ನದೇ ಆದ ಪ್ರತ್ಯೇಕ ಕಚೇರಿ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.**

ಪರಂತು, ವಿಧಾನಪರಿಷತ್ತನ್ನು ಹೊಂದಿರುವ ರಾಜ್ಯದ ಶಾಸಕಾಂಗವನ್ನು ತನ್ನ ಎರಡೂ ಸದನಗಳಿಗೆ ಸಾಮಾನ್ಯವಾಗಿರುವಂತಹ ಹುದ್ದೆಗಳನ್ನು ಸೃಷ್ಟಿಸುವುದಕ್ಕೆ ಈ ಕಲಮು ಅಡ್ಡಿಯಾಗುವುದಿಲ್ಲ.

(೨) ಒಂದು ರಾಜ್ಯದ ಶಾಸಕಾಂಗವು ತನ್ನ ಮತ್ತು ಎರಡೂ ಸದನಗಳ ಸಿಬ್ಬಂದಿ ನೇಮಕ ಮತ್ತು ಸೇವಾ ನಿಯಮಗಳನ್ನು ತನ್ನ ಕಾನೂನಿನ ಮೂಲಕ ಕ್ರಮಗೊಳಿಸಬಹುದು.

(೩) ರಾಜ್ಯ ಶಾಸಕಾಂಗವು ಈ ವಿಧಿಯ ಕಲಮು (೨)ರ ಪ್ರಕಾರ ವ್ಯವಸ್ಥೆ ಮಾಡುವವರೆಗೆ, ರಾಜ್ಯಪಾಲರು ವಿಧಾನಸಭೆಯ ಅಥವಾ ವಿಧಾನಪರಿಷತ್ತಿನ ಸಭಾಪತಿಗಳೊಡನೆ ಯೋಚಿಸಿ, ವಿಧಾನಸಭೆ ಇಲ್ಲವೆ ಪರಿಷತ್ತಿನ ಕಾರ್ಯಾಲಯಕ್ಕೆ ಅಗತ್ಯವಿರುವ ಸಿಬ್ಬಂದಿಯ ನೇಮಕ ಮತ್ತು ಸೇವಾನಿಯಮಗಳನ್ನು ಕ್ರಮಪಡಿಸತಕ್ಕದ್ದು ಮತ್ತು ಹಾಗೆ ಮಾಡಲಾದ ನಿಯಮಗಳು ಈ ಕಲಮಿನ ಮಿತಿಯೊಳಗೆ ಮಾಡಲಾದ ಯಾವುದೇ ಕಾನೂನಿನ ಪರಿಣಾಮ ಹೊಂದುತ್ತಿರುವುವು."

ಈ ವಿಧಿಯು ನಾವು ಈ ಬೆಳಗ್ಗೆ ಪರಿಶೀಲಿಸಿದ ೭೯–ಎ ವಿಧಿಯ ಇನ್ನೊಂದು ರೂಪವಾಗಿದೆ.

* * *

****ಶ್ರೀ ಹೆಚ್. ವಿ. ಕಾಮತ್:** ಮಾನ್ಯ ಸಭಾಧ್ಯಕ್ಷರೆ, ೭೯–ಎ ಮತ್ತು ೧೪೮–ಎ ವಿಧಿಗಳಲ್ಲಿರುವ ಮೂಲಸ್ವರೂಪದ ಅಂಶಗಳನ್ನು ನಾನು ಮತ್ತು ನನ್ನ ಗೌರವಾನ್ವಿತ ಮಿತ್ರ ಪ್ರೊಫೆಸರ್ ಶಿಬ್ಬನ್‌ಲಾಲ್ ಸಕ್ಸೇನಾರವರು ಅನೇಕ ತಿದ್ದುಪಡಿಗಳ ಮೂಲಕ ಎತ್ತಿರುತ್ತೇವೆ. ಆದರೆ ತಮ್ಮ ಸರದಿ ಬಂದಾಗ ಡಾ. ಅಂಬೇಡ್ಕರರು ತಾವು ಹೇಳುವುದು ಏನೂ ಇಲ್ಲ ಎಂದು ಹೇಳುವ ಸೌಜನ್ಯ ಅಷ್ಟೇ ಅಲ್ಲ, ತಮ್ಮ ಬುದ್ಧಿವಂತಿಕೆ ತೋರಿದರು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದಕ್ಕೆ ಯಾವ ಉತ್ತರವೂ ಅವಶ್ಯವಿಲ್ಲ ಎಂದು ಹೇಳಿದೆ.

**ಶ್ರೀ ಹೆಚ್. ವಿ. ಕಾಮತ್:** ಇದು ಅವರ ತೀರ್ಮಾನಕ್ಕೆ ಬಿಟ್ಟ ವಿಷಯ. ಆದರೆ ಕೆಲವು ಮೂಲ ಸ್ವರೂಪದ ವಿಷಯಗಳನ್ನೆತ್ತಿದಾಗ ಅವುಗಳಿಗೆ ಏನಾದರೂ ಉತ್ತರ ಕೊಡಲೇಬೇಕಾಗುತ್ತದೆ. ಆದರೆ ತಾವು

* ಸಿ.ಎ.ಡಿ. ಸಂ. IX, ೩೦ ಜುಲೈ ೧೯೪೯, ಪುಟ ೩೭.

** ಅದೇ, ಪುಟ ೩೮.

'ಹೌದು' ಎಂದು ಹೇಳಿದಾಗ ಸದನವನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವೆನೆಂಬ ಮುನ್ನರಿವಿನ ಆಧಾರ ಮತ್ತು ರಕ್ಷಣೆ ಅವರಿಗಿದೆ. ತಾವು ಯಾವುದಕ್ಕೆ ಉತ್ತರ ಕೊಡಬೇಕು ಅಥವಾ ಯಾವುದಕ್ಕೆ ಕೊಡಬಾರದು ಎಂಬುದು ಅವರಿಗೆ ಬಿಟ್ಟ ವಿಷಯ. ಆದರೆ ಅವರ ವಿಚಾರವೇನು ಎಂದು ತಿಳಿದುಕೊಳ್ಳುವ ಹಕ್ಕು ಈ ಸದನಕ್ಕಿದೆ. ಅವರಿಗೆ ಅತ್ಯಂತ ದಣಿವಾಗಿದ್ದರೆ ಅವರು ತಮ್ಮ ಇನ್ನಾರಾದರೂ ಬುದ್ಧಿವಂತ ಸಹೋದ್ಯೋಗಿಗೆ ಉತ್ತರ ನೀಡಲು ಹೇಳಬಹುದು...

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಎತ್ತಲಾಗಿರುವ ವಿಷಯಗಳು ಮೂಲಸ್ವರೂಪದ ವಸ್ತುಗಳು ಎಂದು ತೀರ್ಮಾನಿಸುವವರು ಯಾರು? ಸಭಾಧ್ಯಕ್ಷರು ಎತ್ತಲಾದ ವಿಷಯ ಮೂಲಸ್ವರೂಪದ್ದಾಗಿದೆ ಎಂದು ತೀರ್ಪಿತ್ತರೆ ನಾನು ಅದಕ್ಕೆ ನಿಜವಾಗಿಯೂ ಉತ್ತರ ನೀಡುವೆ. ನಾನು ಈ ವಿಷಯವನ್ನು ಶ್ರೀ ಕಾಮತ್‌ರವರ ನಿರ್ಣಯಕ್ಕೇ ಬಿಡಲಾರೆ.

* * *

***ಮಾನ್ಯ ಸಭಾಧ್ಯಕ್ಷ:** ಸದಸ್ಯರಲ್ಲಿ ಇನ್ನಾರಾದರೂ ಏನಾದರೂ ಹೇಳಬಯಸುವರೇ?

(ಮಾತನಾಡಲು ಯಾವ ಸದಸ್ಯರೂ ಏಳಲಿಲ್ಲ)

ಡಾ. ಅಂಬೇಡ್ಕರರು ಏನನ್ನಾದರೂ ಹೇಳಬಯಸುವರೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಏನೂ ಇಲ್ಲ.

**ಮಾನ್ಯ ಸಭಾಧ್ಯಕ್ಷ:** ಹಾಗಾದರೆ ಈ ತಿದ್ದುಪಡಿಯನ್ನು ಮತಕ್ಕೆ ಹಾಕುವೆ.

[**ಎಲ್ಲಾ ೮ ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು.**]

[**ಡಾ. ಅಂಬೇಡ್ಕರರು ಮಂಡಿಸಿದ ೧೬೩–ಎ ವಿಧಿಯನ್ನು ಮತಕ್ಕೆ ಹಾಕಿದಾಗ ಅದನ್ನು ಅಂಗೀಕರಿಸಲಾಯಿತು. ೧೬೩–ಎ ಹೊಸ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**]

## ವಿಧಿ ೧೭೫**

**ಮಾನ್ಯ ಸಭಾಧ್ಯಕ್ಷ:** ಇನ್ನು ೧೭೨ನೆಯ ವಿಧಿಯನ್ನು ತೆಗೆದುಕೊಳ್ಳೋಣವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸದ್ಯಕ್ಕೆ ಅದನ್ನು ತಡೆಹಿಡಿಯೋಣ.

**ಮಾನ್ಯ ಸಭಾಧ್ಯಕ್ಷ:** ೧೭೬ನೆಯ ವಿಧಿಯನ್ನು ತೆಗೆದುಕೊಳ್ಳೋಣವೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆಗಬಹುದು.

**ಶ್ರೀ ಹೆಚ್. ವಿ. ಕಾಮತ್:** ೧೨೭–ಎ ವಿಧಿಯ ಬಗ್ಗೆ?

**ಮಾನ್ಯ ಸಭಾಧ್ಯಕ್ಷ:** ಅದನ್ನು ೨೧೦ನೆಯ ವಿಧಿಯೊಡನೆ ತೆಗೆದುಕೊಳ್ಳಲಾಗುವುದು.

ಈಗ ೧೭೫ನೆಯ ವಿಧಿಯನ್ನು ತೆಗೆದುಕೊಳ್ಳೋಣ ಅದಕ್ಕೆ ಕೆಲವು ತಿದ್ದುಪಡಿಗಳಿವೆ.

(ತಿದ್ದುಪಡಿ ಸಂಖ್ಯೆ ೧೬ ಮತ್ತು ೧೭ ಇವುಗಳನ್ನು ಮಂಡಿಸಲಾಗಲಿಲ್ಲ.)

*****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಸಭಾಧ್ಯಕ್ಷರೆ, ನಾನು ಈಗ ಸೂಚಿಸುವುದೇನೆಂದರೆ!

---

* ಸಿ.ಎ.ಡಿ. ಸಂ. IX, ೩೦ ಜುಲೈ ೧೯೪೯, ಪುಟ ೪೦

** ಅದೇ, ಪುಟ ೪೦.

*** ಅದೇ, ಪುಟ ೪೧–೪೨

"೧೭೬ನೆಯ ವಿಧಿಯ ಪರಂತುಕದ ಬದಲು ಈ ಕೆಳಗಿನ ಪರಂತುಕವನ್ನು ಸೇರಿಸುವುದು.

"ಪರಂತು ರಾಜ್ಯಪಾಲರು ತಮ್ಮ ಸಮ್ಮತಿಗಾಗಿ ಕಳುಹಿಸಲಾದ ಮಸೂದೆಯನ್ನು ಆದಷ್ಟು ತೀವ್ರವಾಗಿ, ಅದು ಹಣಕಾಸು ಮಸೂದೆಯಾಗಿರದಿದ್ದರೆ, ಆ ಮಸೂದೆಯನ್ನು ಅಥವಾ ಅದರ ಯಾವುದೇ ವಿಶೇಷ ಉಪಬಂಧವನ್ನು ಪುನರ್ ಪರಿಶೀಲಿಸಲು ಅದನ್ನು ಸದನಕ್ಕೆ ಅಥವಾ ಸದನಗಳಿಗೆ ಕಳುಹಿಸತಕ್ಕದ್ದು. ಅದರಲ್ಲಿಯೂ ಅದಕ್ಕೆ ಯಾವುದೇ ತಿದ್ದುಪಡಿಯು ಅಪೇಕ್ಷಣೀಯವೆಂದೆನಿಸಿದರೆ ಅಂತಹ ಶಿಫಾರಸ್ಸನ್ನು ತಮ್ಮ ಸಂದೇಶದಲ್ಲಿ ತಿಳಿಸಬಹುದು ಮತ್ತು ಹಾಗೆ ವಾಪಸು ಕಳುಹಿಸಲಾದ ಮಸೂದೆಯನ್ನು ಸದನ ಅಥವಾ ಸದನಗಳು ಹಾಗೆ ಪುನರ್‌ಪರಿಶೀಲಿಸಿ ಮಸೂದೆಯನ್ನು ತಿದ್ದುಪಡಿಗಳೊಂದಿಗೆ ಅಥವಾ ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿ ಪುನಃ ರಾಜ್ಯಪಾಲರ ಸಮ್ಮತಿಗೆ ಕಳುಹಿಸಿದರೆ ರಾಜ್ಯಪಾಲರು, ತಮ್ಮ ಸಮ್ಮತಿಯನ್ನು ನಿರಾಕರಿಸತಕ್ಕದ್ದಲ್ಲ."

ಮಾನ್ಯರೆ, ಇದು ಹಳೆಯ ಪರಂತುಕದ ಬದಲಿ ಪರಂತುಕವಾಗಿದೆ, ಹಳೆಯ ಪರಂತುಕದಲ್ಲಿ ಮೂರು ಮುಖ್ಯ ಉಪಬಂಧಗಳಿವೆ. ಮೊದಲನೆಯದಾಗಿ, ರಾಜ್ಯಪಾಲರಿಗೆ ತಮ್ಮ ಸಮ್ಮತಿಯನ್ನು ನೀಡುವ ಮೊದಲು ಮಸೂದೆಯ ಕೆಲವು ಅಂಶಗಳನ್ನು ಪುನರ್‌ಪರಿಶೀಲಿಸಬೇಕೆಂದು ಶಾಸಕಾಂಗಕ್ಕೆ ಹಿಂತಿರುಗಿಸುವ ಅಧಿಕಾರ ನೀಡುತ್ತದೆ. ಮೊದಲಿನ ಪರಂತುಕದಲ್ಲಿ ಪುನರ್ ಪರಿಶೀಲನೆಗಾಗಿ ಮಸೂದೆಯನ್ನು ಹಿಂದಿರುಗಿಸುವ ವಿಚಾರವನ್ನು ಅವರ ವಿವೇಚನೆಗೆ ಬಿಡಲಾಗಿತ್ತು. ಎರಡನೆಯದಾಗಿ, ತಮ್ಮ ಶಿಫಾರಸ್ಸಿನೊಂದಿಗೆ ಒಂದು ಮಸೂದೆಯನ್ನು ಹಿಂತಿರುಗಿಸುವ ಹಕ್ಕು ಹಣಕಾಸಿನ ಮಸೂದೆಯೂ ಸೇರಿದಂತೆ ಎಲ್ಲಾ ಮಸೂದೆಗಳಿಗೆ ಅನ್ವಯವಾಗುತ್ತಿತ್ತು. ಮೂರನೆಯದಾಗಿ, ಒಂದು ಮಸೂದೆಯನ್ನು ಹಿಂತಿರುಗಿಸುವ ಹಕ್ಕನ್ನು ಯಾವ ಪ್ರಾಂತ್ಯದಲ್ಲಿ ಏಕ–ಸದನ ಶಾಸಕಾಂಗವಿದೆಯೋ ಅಂತಹ ಪ್ರಾಂತ್ಯ ರಾಜ್ಯಪಾಲರಿಗೆ ಮಾತ್ರ ನೀಡಲಾಗಿತ್ತು. ನಂತರ ಒಂದು ಜವಾಬ್ದಾರಿ ಸರಕಾರ ವ್ಯವಸ್ಥೆಯಲ್ಲಿ ರಾಜ್ಯಪಾಲರಿಗೆ ಯಾವುದೇ ರೀತಿಯ ವಿವೇಚನಾಧಿಕಾರವನ್ನು ನೀಡುವುದು ಅಪೇಕ್ಷಣೀಯವಲ್ಲ ಎಂದೆನಿಸಿತು. ಆದ್ದರಿಂದ ಹೊಸ ಪರಂತುಕದಲ್ಲಿ 'ಅವರ ವಿವೇಚನೆಯಲ್ಲಿ' ಎಂಬ ಪದಗಳನ್ನು ಕೈಬಿಡಲಾಗಿದೆ. ಅದೇರೀತಿ ಒಂದು ಮಸೂದೆಯನ್ನು ಹಿಂತಿರುಗಿಸುವ ಹಕ್ಕನ್ನು ಹಣಕಾಸು ಮಸೂದೆಗೆ ಅನ್ವಯವಾಗದೆಂದು ಅನಿಸಿ ಅದರಲ್ಲಿ 'ಅದು ಹಣಕಾಸು ಮಸೂದೆಯಾಗಿರದಿದ್ದರೆ' ಎಂಬ ಪದಗಳನ್ನು ಸೇರಿಸಲಾಯಿತು. ಹಾಗೆಯೆ, ಶಾಸಕಾಂಗಕ್ಕೆ ಮಸೂದೆಯನ್ನು ಹಿಂತಿರುಗಿಸುವ ರಾಜ್ಯಪಾಲರ ಹಕ್ಕು ಏಕ–ಸದನವುಳ್ಳ ಪ್ರಾಂತ್ಯಗಳಿಗೆ ಮಾತ್ರ ಅನ್ವಯಿಸತಕ್ಕದ್ದು ಎಂಬ ವಿಷಯುವೂ ಅನಾವಶ್ಯಕ ಎಂದು ಭಾವಿಸಲಾಯಿತು. ಇದು ಒಂದು ಸತ್ಪರಿಣಾಮಕಾರಿ ಉಪಬಂಧವಾಗಿರುವುದರಿಂದ ಇದರ ಉಪಯೋಗವನ್ನು ಎಲ್ಲಾ ಸಂದರ್ಭಗಳಲ್ಲಿ ಪ್ರಾಂತ್ಯದ ಶಾಸಕಾಂಗವು ದ್ವಿಸದನದ್ದಾಗಿದ್ದರೂ ಪಡೆಯಬಹುದಾಗಿದೆ.

ಈ ಮೂರು ಬದಲಾವಣೆಗಳನ್ನು ತರುವುದಕ್ಕಾಗಿಯೇ ಹಳೆಯ ಪರಂತುಕದ ಬದಲು ಈ ಹೊಸ ಪರಂತುಕವನ್ನು ತರಲಾಗಿದೆ. ಸದನವು ಇದನ್ನು ಸ್ವೀಕರಿಸುವುದೆಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷ:** ಪುರವಣಿ ಪಟ್ಟಿಯಲ್ಲಿ ಮುದ್ರಿಸಲಾದ ಕೆಲವು ತಿದ್ದುಪಡಿಗಳ ಸೂಚನೆ ನನ್ನ ಬಳಿ ಇವೆ. ಯಾರಾದರೂ ಸದಸ್ಯರು ಈ ತಿದ್ದುಪಡಿಗಳಲ್ಲಿ ಯಾವುದಾದರೂ ತಿದ್ದುಪಡಿಯನ್ನು ಮಂಡಿಸಬಯಸುವರೇ? ಅವುಗಳು ಶ್ರೀ ಸತೀಶ್ ಚಂದ್ರ, ಶ್ರೀ ಬಿ.ಎಮ್. ಗುಪ್ತ ಮತ್ತು ಪ್ರೊಫೆಸರ್ ಶಿಬ್ಬನ್ ಲಾಲ್ ಸಕ್ಸೇನಾರವರ ಹೆಸರಿನಲ್ಲಿವೆ.

(ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ)

**ಮಾನ್ಯ ಸಭಾಧ್ಯಕ್ಷರು:** ನಾವು ಮೊನ್ನೆ ದಿನ ಸಭೆಯನ್ನು ಮುಂದೂಡಿದಾಗ ೧೭೫ನೆಯ ವಿಧಿಯನ್ನು ಪರಿಶೀಲಿಸುತ್ತಿದ್ದೆವು. ಈಗ ನಾವು ೧೭೫ನೆಯ ವಿಧಿಯ ಚರ್ಚೆಯನ್ನು ಮುಂದುವರಿಸೋಣ...

**ಶ್ರೀ ಟಿ. ಟಿ. ಕೃಷ್ಣಮಾಚಾರಿ** (ಮದ್ರಾಸು, ಸಾಮಾನ್ಯ): ಮಾನ್ಯರೆ, ಈ ವಿಧಿ ಮತ್ತು ೧೭೨ನೆಯ ವಿಧಿಗೆ ಎಳ್ಳಷ್ಟೂ ಸಂಬಂಧವಿರುವುದಿಲ್ಲ. ನಾವು ೧೭೨ನೆಯ ವಿಧಿಯೂ ಅಲ್ಲದೆ ೧೭೫ನೆಯ ವಿಧಿಯನ್ನು ಮೊದಲು ಪರಿಶೀಲಿಸೋಣ.

**ಮಾನ್ಯ ಸಭಾಧ್ಯಕ್ಷರು:** ನಿಮ್ಮದೇನಾದರೂ ಅಭ್ಯಂತರವಿದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ ಸಾಮಾನ್ಯ): ನನ್ನದೇನೂ ಅಭ್ಯಂತರವಿಲ್ಲ. ಮಾನ್ಯರೆ, ನಾನು ಸಂಪೂರ್ಣವಾಗಿ ನಿಮ್ಮೊಡನಿದ್ದೇನೆ.

**ಮಾನ್ಯ ಸಭಾಧ್ಯಕ್ಷ:** ಹಾಗಾದರೆ ನಾವು ಮೊದಲು ೧೭೨ನೆಯ ವಿಧಿಯನ್ನು ಬಗೆಹರಿಸಿ ನಂತರ ೧೭೫ನೆಯ ವಿಧಿಯನ್ನು ತೆಗೆದುಕೊಳ್ಳೋಣ.

## ವಿಧಿ ೧೭೨

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಈಗ ಮಂಡಿಸುತ್ತಿರುವುದೇನೆಂದರೆ:

"೧೭೨ನೆಯ ವಿಧಿಯ ಬದಲು ಹೀಗಿರುವ ವಿಧಿಯನ್ನು ಸೇರಿಸತಕ್ಕದ್ದು:

**ಹಣಕಾಸು ಮಸೂದೆಯಲ್ಲದ ಇತರ ಮಸೂದೆಗಳ ಮೇಲೆ ವಿಧಾನಪರಿಷತ್ತಿನ ಅಧಿಕಾರದ ಮೇಲೆ ನಿರ್ಬಂಧ**

"೧೭೨–(೧) ವಿಧಾನ ಪರಿಷತ್ತನ್ನು ಹೊಂದಿರುವಂತಹ ರಾಜ್ಯದ ವಿಧಾನಸಭೆ ಅಂಗೀಕರಿಸಲಾದ ಮಸೂದೆಯನ್ನು ವಿಧಾನಪರಿಷತ್ತಿಗೆ ಕಳುಹಿಸಿಕೊಟ್ಟ ನಂತರ: (ಎ) ಮಸೂದೆಯು ಪರಿಷತ್ತಿನಲ್ಲಿ ತಿರಸ್ಕೃತಗೊಂಡರೆ, ಅಥವಾ (ಬಿ) ವಿಧಾನಪರಿಷತ್ತಿನಲ್ಲಿ ಮಂಡಿಸಲಾದ ದಿನಾಂಕದಿಂದ ಎರಡು ತಿಂಗಳ ನಂತರವೂ ಅದು ಅಂಗೀಕೃತವಾಗಿರದಿದ್ದರೆ, ಅಥವಾ (ಸಿ) ಆ ಮಸೂದೆಯನ್ನು ವಿಧಾನಪರಿಷತ್ತು ತಿದ್ದುಪಡಿಗಳೊಂದಿಗೆ ಅಂಗೀಕರಿಸಿದ್ದು, ಆ ತಿದ್ದುಪಡಿಗಳನ್ನು ವಿಧಾನಸಭೆ ಒಪ್ಪದಿದ್ದರೆ, ವಿಧಾನಸಭೆಯು ಅದೇ ಮಸೂದೆಯನ್ನು ಅದೇ ಅಧಿವೇಶನದಲ್ಲಿ ಅಥವಾ ಮುಂದಿನ ಅಧಿವೇಶನದಲ್ಲಿ ತಿದ್ದುಪಡಿಯೊಂದಿಗೆ ಅಥವಾ ತಿದ್ದುಪಡಿಯಿಲ್ಲದೆಯೇ ವಿಧಾನಪರಿಷತ್ತಿನಲ್ಲಿ ಸೂಚಿಸಲಾದ ಇಲ್ಲವೆ ಒಪ್ಪಿಗೆ ಪಡೆದು ಮತ್ತು ಹಾಗೆ ಅಂಗೀಕರಿಸಲಾದ ಮಸೂದೆಯನ್ನು ವಿಧಾನಪರಿಷತ್ತಿಗೆ ಕಳುಹಿಸಿಕೊಡಬೇಕು.

(೨) ವಿಧಾನಸಭೆಯು ಎರಡನೆಯ ಬಾರಿ ಅಂಗೀಕರಿಸಿದ ಅದೇ ಮಸೂದೆಯನ್ನು ವಿಧಾನ ಪರಿಷತ್ತಿಗೆ ಕಳುಹಿಸಿಕೊಟ್ಟರೆ (ಎ) ಮಸೂದೆಯನ್ನು ಪರಿಷತ್ತು ತಿರಸ್ಕರಿಸಿದ್ದರೆ ಅಥವ (ಬಿ) ವಿಧಾನ ಪರಿಷತ್ತಿನಲ್ಲಿ ಆ ಮಸೂದೆಯನ್ನು ಮಂಡಿಸಿದ ಒಂದು ತಿಂಗಳೊಳಗೆ ಅದನ್ನು ಅಂಗೀಕರಿಸಿದ್ದರೆ, ಅಥವಾ (ಸಿ) ವಿಧಾನಸಭೆ ಅಂಗೀಕರಿಸದ ತಿದ್ದುಪಡಿಗಳೊಂದಿಗೆ ಪರಿಷತ್ತು ಆ ಮಸೂದೆಯನ್ನು ಅಂಗೀಕರಿಸಿದರೆ,

ಆ ಮಸೂದೆಯನ್ನು ರಾಜ್ಯದ ಶಾಸಕಾಂಗದ ಎರಡೂ ಸದನಗಳಿಂದ ವಿಧಾನಸಭೆಯ ಯಾವುದಾದರೂ ತಿದ್ದುಪಡಿಗಳೊಂದಿಗೆ ಅಥವಾ ಅದು ಒಪ್ಪಿಗೆ ನೀಡಿರುವ ತಿದ್ದುಪಡಿಗಳೊಂದಿಗೆ ಅಂಗೀಕೃತವಾಗಿದೆ ಎಂದು ತಿಳಿಯತಕ್ಕದ್ದು.

(೩) ಈ ವಿಧಿಯಲ್ಲಿ ಹೇಳಿರುವ ಯಾವುದೇ ಅಂಶವು ಹಣಕಾಸು ಮಸೂದೆಗೆ ಅನ್ವಯಿಸುವುದಿಲ್ಲ."

ನಾವು ಲೋಕಸಭೆ ಮತ್ತು ರಾಜ್ಯಸಭೆಗಳ ನಡುವೆ ಉದ್ಭವಿಸಬಹುದಾದ ಭಿನ್ನಾಭಿಪ್ರಾಯಗಳ ನಿವಾರಣೆಗಾಗಿ ವಿವಿಧ ವಿಧಾನಗಳನ್ನು ಚರ್ಚಿಸಿದ್ದು ಸದನಕ್ಕೆ ನೆನಪಿರಬಹುದು. ಆಗ ನಾವು ಕೇಂದ್ರ ಶಾಸಕಾಂಗದ ಸಂಯುಕ್ತ ಒಕ್ಕೂಟದ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಎರಡೂ ಸದನಗಳ ನಡುವಣ ಭಿನ್ನಾಭಿಪ್ರಾಯಗಳನ್ನು ರಾಷ್ಟ್ರಪತಿಗಳು ಕರೆಯುವ ಎರಡೂ ಸದನಗಳ ಜಂಟಿ ಅಧಿವೇಶನದಲ್ಲಿ ನಿವಾರಿಸುವುದು ಸೂಕ್ತ ಎಂದು ನಿರ್ಧರಿಸಿದ್ದೆವು. ಎರಡೂ ಸದನಗಳ ಜಂಟಿ ಅಧಿವೇಶನದ ಬದಲು ೧೯೧೧ರ ಪಾರ್ಲಿಮೆಂಟ್ ಕಾಯ್ದೆಯಲ್ಲಿರುವ ಪ್ರಕಾರ ಆ ಮಸೂದೆ ಹಣಕಾಸು ಮಸೂದೆಯಾಗಿರದಿದ್ದಲ್ಲಿ ಅದಕ್ಕೆ ಲಾರ್ಡ್ಸ್ ಸಭೆ ಒಪ್ಪಿಗೆ ನೀಡದಿದ್ದಲ್ಲಿ ಅಥವಾ ಕಾಮನ್ಸ್ ಸಭೆ ಸೂಚಿಸಿದ ತಿದ್ದುಪಡಿಗಳಿಗೆ ಒಪ್ಪಿಗೆ ನೀಡಲು ತಿರಸ್ಕರಿಸಿದಲ್ಲಿ ಆ ಮಸೂದೆಗೆ ಕೆಲವು ಕಾಲಾವಧಿಯ ನಂತರ ಕಾಮನ್ಸ್ ಸಭೆಯ ತೀರ್ಮಾನ ಅಂತಿಮವಾಗುವುದು. ಈ ವಿಷಯವನ್ನು ಪರಿಶೀಲಿಸಿದ ನಂತರ ಪ್ರಾಂತ್ಯಗಳಲ್ಲಿ ಸೃಷ್ಟಿಸಲಾದ ಎರಡೂ ಸದನಗಳ ನಡುವಣ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಪಾರ್ಲಿಮೆಂಟ್ ಕಾಯ್ದೆಯಲ್ಲಿ ಹೇಳಲಾದ ವಿಧಾನವೇ ಹೆಚ್ಚು ಸೂಕ್ತ ಎನಿಸಿತು. ಹೀಗಾಗಿ, ನಾವು ಮೂಲ ವಿಧಿಯಲ್ಲಿರುವ ವಿಧಾನದ ಬದಲು ಈ ಹೊಸ ವಿಧಿಯಲ್ಲಿರುವ ತತ್ವವನ್ನನುಸರಿಸಿದ್ದೇವೆ. ಅದೇನೆಂದರೆ, ಪರಸ್ಪರ ಒಪ್ಪಿಗೆಯಿಂದ ಎರಡೂ ಸದನಗಳ ನಡುವಣ ಭಿನ್ನಾಭಿಪ್ರಾಯಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಾಗದಾದಾಗ ಜನತೆಯನ್ನೂ ಪ್ರತಿನಿಧಿಸುವ ಜನತಾ ಸದನದ ಅಭಿಪ್ರಾಯವೇ ಅಂತಿಮವಾದ ನಿರ್ಣಯವಾಗಬೇಕು.

ಮಾನ್ಯರೆ, ನಾನು ಇದನ್ನು ಮಂಡಿಸಿದ್ದೇನೆ.

* * *

**ಪಂಡಿತ್ ಹೃದಯನಾಥ್ ಕುಂಝ್ರು:** ಕಾಲಕಾಲಕ್ಕೆ ಕರಡು ಸಮಿತಿಯು ತನ್ನದೇ ಆದ ಬದಲಾವಣೆಗಳನ್ನು ಮಾಡುತ್ತಿರುವುದನ್ನು ನೋಡಿದರೆ ಅದು ಅನುಸರಿಸುತ್ತಿರುವ ವಿಧಾನಕ್ಕೆ ಯಾವ ತತ್ವದ ತಳಹದಿಯೂ ಇದ್ದಂತಿಲ್ಲ. ಆದರೆ ನನ್ನ ಗೌರವಾನ್ವಿತ ಮಿತ್ರ ಡಾ. ಅಂಬೇಡ್ಕರರು ಇದಕ್ಕೆ ಒಂದು ಒಳ್ಳೆಯ ತತ್ವದ ಆಧಾರವಿದೆ ಎಂದು ಹೇಳುತ್ತಿದ್ದಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದರಲ್ಲಿ ಯಾವ ತತ್ವವೂ ಇಲ್ಲ ಎಂದು ಈಗಲೂ ನಾನು ಹೇಳುತ್ತೇನೆ.

**ಪಂಡಿತ್ ಹೃದಯನಾಥ್ ಕುಂಝ್ರು:** ನನ್ನ ಗೌರವಾನ್ವಿತ ಮಿತ್ರ ಡಾ. ಅಂಬೇಡ್ಕರರು ತಮ್ಮ ತಿದ್ದುಪಡಿಗೆ ಯಾವ ತಾತ್ವಿಕ ಆಧಾರವೂ ಇಲ್ಲ ಎಂದು ಈ ಸದನಕ್ಕೆ ತಿಳಿಸುತ್ತಿರುವುದು ಸಂತೋಷಕರ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಸಾಂದರ್ಭಿಕ ಮತ್ತು ಕಾರ್ಯಸಾಧ್ಯತೆಯ ಸಂಗತಿ ಮಾತ್ರ.

**ಪಂಡಿತ್ ಹೃದಯನಾಥ್ ಕುಂಝ್ರು:** ಅದು ಸಾಂದರ್ಭಿಕ ಮತ್ತು ಕಾರ್ಯ ಸಾಧ್ಯತೆಯ ಸಂಗತಿ ಎಂದು ಅವರೇ ಒಪ್ಪಿಕೊಳ್ಳುತ್ತಿದ್ದಾರೆ.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಸಭಾಧ್ಯಕ್ಷರೆ, ನಡೆದಿರುವ ಚರ್ಚೆಯನ್ನು ಕೇಳಿದಾಗ ಚರ್ಚೆಯಲ್ಲಿ ಭಾಗವಹಿಸಿದ ಅನೇಕರು ಎತ್ತಿರುವ ಕೆಲವು ನಿರ್ದಿಷ್ಟ ಪ್ರಶ್ನೆಗಳಿದ್ದು, ಅವುಗಳಿಗೆ

---

* ಸಿ.ಎ.ಡಿ. ಸಂ. IX, ೩೦ ಜುಲೈ ೧೯೪೯, ಪುಟ ೫೩–೫೯.

ಉತ್ತರ ಕೊಡಬೇಕಾಗಿದೆ ಎಂದು ನನಗೆ ಅನಿಸಿದೆ. ಮೊದಲನೆಯದನ್ನು ನನ್ನ ಮಿತ್ರ ಶ್ರೀ ಸಂತಾನಂ ಅವರು ಎತ್ತಿದಲ್ಲಿ ಇತರ ಪ್ರಶ್ನೆಗಳನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಇವರ ಪ್ರಶ್ನೆಯನ್ನು ಬಗೆಹರಿಸಬೇಕಾಗಿದೆ. ಶ್ರೀಯುತ ಸಂತಾನಮ್‌ರವರು ಹೇಳುವುದೇನೆಂದರೆ ಈ ವಿಧಿಯ ಕಲಮು (೧)ರಲ್ಲಿ ಒಂದು ಮಸೂದೆಯನ್ನು ಮೇಲ್ಮನೆಯು ಆ ಮಸೂದೆಯು ವಿಧಾನಸಭೆಯಲ್ಲಿ ಅಂಗೀಕಾರವಾಗಿರುವ ರೂಪದಲ್ಲಿಯೇ ಅಂಗೀಕರಿಸಲಾಗದಿದ್ದರೆ, ಅಂತಹ ಸಂದರ್ಭದಲ್ಲಿ ಏನು ಮಾಡಬೇಕು ಎಂಬುದನ್ನು ಹೇಳಬೇಕಾಗಿತ್ತು. ಆದರೆ ಅವರು ಈ ವಿಷಯವನ್ನು ಇನ್ನೂ ಹೆಚ್ಚು ವಿವರವಾಗಿ ಪರಿಶೀಲಿಸಿದಲ್ಲಿ ಅವರು ಎತ್ತಿರುವ ಪ್ರಶ್ನೆಯನ್ನು ಉಪ–ಕಲಮು (ಸಿ)ಯಲ್ಲಿ ಅಳವಡಿಸಲಾಗಿದೆ. ಅದು ಬೇರೆ ಸ್ವರೂಪದಲ್ಲಿರಬಹುದು. ವಸ್ತುಸ್ಥಿತಿಯಲ್ಲಿ ನಾವು ಮೂರು ಪ್ರಸಂಗಗಳಲ್ಲಿ ಕೆಳಮನೆಯು ತನ್ನ ಅಧಿಕಾರ ಕಕ್ಷೆಯಲ್ಲಿಯೇ ಚರ್ಚೆ ತೆಗೆದುಕೊಳ್ಳಬಹುದಾದ ಕ್ರಮವನ್ನು ತಿಳಿಸಿದ್ದೇವೆ. ಆ ಮೂಲ ಪ್ರಸಂಗಗಳಾವುವೆಂದರೆ: ಮೊದಲನೆಯದಾಗಿ, ಮಸೂದೆಯ ಪರಿಶೀಲನೆಯ ನಂತರ ಇದನ್ನು ಸಂಪೂರ್ಣವಾಗಿ ತಿರಸ್ಕರಿಸಿದಾಗ; ಎರಡನೆಯದಾಗಿ, ಮೇಲ್ಮನೆಯು ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಹಾಗೆಯೇ ಇಟ್ಟುಕೊಂಡಿದ್ದರೆ, ಅಥವಾ ಕ್ರಮ ತೆಗೆದುಕೊಂಡಿದ್ದರೂ ಒಂದು ಮಸೂದೆಯನ್ನೂ ಪರಿಶೀಲಿಸಿ ನಿರ್ಣಯ ತೆಗೆದುಕೊಳ್ಳುವುದಕ್ಕೆ ನಿಗದಿತವಾದ ಕಾಲಮಿತಿಯನ್ನು ಮೀರಿಸಿದ್ದರೆ; ಮೂರನೆಯದಾಗಿ, ಮಸೂದೆಯನ್ನು ವಿಧಾನಸಭೆ ಅಂಗೀಕರಿಸಿದ ರೂಪದಲ್ಲಿ ಅಂಗೀಕರಿಸಲು ಒಪ್ಪದಿದ್ದಲ್ಲಿ ಇದನ್ನೇ ನನ್ನ ಮಿತ್ರ ಶ್ರೀ ಸಂತಾನಮ್ ಅವರು ಹೇಳುತ್ತಿರುವುದು. ಆದ್ದರಿಂದ ಈ ವಿಧಿಯಲ್ಲಿ ಸಂಬಂಧಪಟ್ಟ ಭಾಗವನ್ನು ಪರಿಷ್ಕರಿಸುವ ಆವಶ್ಯಕತೆ ಇರುವುದಿಲ್ಲ. ಪ್ರಾಸಂಗಿಕವಾಗಿ ಹೇಳಬೇಕೆಂದರೆ, ಕೆಳಮನೆಯಲ್ಲಿ ಸಂಭವಿಸಬಹುದಾದ ಮೂರು ಪ್ರಸಂಗಗಳಲ್ಲಿ ಅದು ತನ್ನ ಅಧಿಕಾರ ಕಕ್ಷೆಯಲ್ಲಿ ಕ್ರಮ ತೆಗೆದುಕೊಳ್ಳಬಹುದಾದ ಅಂಶಗಳನ್ನು ಹೆಚ್ಚು ಕಡಿಮೆ ಆಸ್ಟ್ರೇಲಿಯಾ ಸಂವಿಧಾನದ ೫೭ನೆಯ ವಿಧಿಯಿಂದ ತೆಗೆದುಕೊಳ್ಳಲಾಗಿದೆ.

ಇನ್ನು ಚರ್ಚೆಯಲ್ಲಿ ಎತ್ತಲಾದ ಕೆಲವು ಸಾಮಾನ್ಯ ಅಂಶಗಳನ್ನು ತೆಗೆದುಕೊಳ್ಳುತ್ತೇನೆ. ಈ ವಿಷಯದ ಚರ್ಚೆಯಲ್ಲಿ ಮೂರು ವಿಧದ ಅಂಶಗಳನ್ನು ಪರಿಶೀಲಿಸಬೇಕೆಂದು ನನಗನಿಸುತ್ತದೆ. ಮೊದಲ ಪ್ರಶ್ನೆ ಎಂದರೆ ಒಂದು ಮಸೂದೆಯು ಕೆಳಮನೆಯ ಪರಮಾಧಿಕಾರಕ್ಕೊಳಗಾಗಬೇಕಾಗುವ ಮುನ್ನ ಅದು ಎಷ್ಟು ಸಾರಿ ಪ್ರಯಾಣ ಮಾಡಬೇಕಾಗುತ್ತದೆ? ಅದು ಒಂದು ಸಾರಿಯೇ ಎರಡು ಸಾರಿಯೇ ಅಥವಾ ಎರಡಕ್ಕಿಂತಲೂ ಹೆಚ್ಚು ಸಾರಿ ಪ್ರಯಾಣ ಮಾಡಬೇಕಾಗುತ್ತದೆಯೇ ಎಂಬುದು. ಎರಡನೆಯ ಪ್ರಶ್ನೆ ಎಂದರೆ, ಮೇಲ್ಮನೆಗೆ ಈ ಪ್ರಯಾಣಕ್ಕಾಗಿ ಹೋಗುವುದೂ ಬರುವುದೂ ಕೂಡಿದಂತೆ ನಿಗದಿಪಡಿಸಬೇಕಾದ ಅವಧಿ ಎಷ್ಟಾಗಿರಬೇಕು. ಮೂರನೆಯ ಪ್ರಶ್ನೆ ಎಂದರೆ, ಪರಿಷತ್ತು ಕ್ರಮ ತೆಗೆದುಕೊಳ್ಳಲು ನೀಡುವ ಅವಧಿಯನ್ನು ಯಾವ ರೀತಿ ಲೆಕ್ಕ ಹಾಕುವುದು. ಕಾಲಮಿತಿಯ ಕಾನೂನಿನ ಪರಿಚಯವಿರುವ ಎಲ್ಲರಿಗೂ ಪರಿಚಯವಿರುವ ಪದದಂತೆ ಅದರ ಆರಂಭ ಎಲ್ಲಿಂದ? ಸದ್ಯದ ಈ ತಿದ್ದುಪಡಿಯ ಪ್ರಕಾರ ಒಂದು ಮಸೂದೆಗೆ ಎರಡು ಪ್ರಯಾಣಗಳಿವೆ. ಮೊದಲನೆಯದಾಗಿ, ಅದು ಹೋಗಿ ಪುನಃ ವಾಪಸ್ಸು ಬರುತ್ತದೆ ಮತ್ತು ಪುನಃ ಅದು ಹೋಗುತ್ತದೆ. ಎರಡಕ್ಕಿಂತ ಹೆಚ್ಚು ಸಾರಿ ಪ್ರಯಾಣವಾಗಬಹುದೆಂದು ಅರ್ಥೈಸಬಹುದು. ನಾನು ಹೇಳಿದಂತೆ ಇದು ವಾಸ್ತವಿಕ ರಾಜಕೀಯದ ಪ್ರಶ್ನೆ, ಅದಕ್ಕೆ ನಾವು ಒಂದು ಕೊನೆ ಅಥವಾ ಮುಕ್ತಾಯವನ್ನು ಕಾಣಲೇಬೇಕು. ಈ ಮುಕ್ತಾಯ ಘಟ್ಟದಲ್ಲಿ ಕೆಳಮನೆಯ ಪರಮಾಧಿಕಾರ ಆರಂಭಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಮೇಲ್ಮನೆಯ ಪರಿಷ್ಕಾರಕ ಸದನವೆನಿಸಲು ಎರಡು ಬಾರಿ ಪ್ರಯಾಣ ಸಾಕೆಂದು ಕರಡು ಸಮಿತಿಯು ಭಾವಿಸಿದೆ.

ಇನ್ನೂ ಮಸೂದೆಯ ಪರಿಶೀಲನೆಗಾಗಿ ಕೊಡಬಹುದಾದ ಅವಧಿಯನ್ನು ಕುರಿತು ಕರಡು ಸಮಿತಿಯು ಎರಡು ತಿಂಗಳುಗಳ ಅವಧಿಯನ್ನು ಸೂಚಿಸಿದೆ. ಈಗ ಮೊದಲನೆಯದಾಗಿ ಮಿತ್ರ ಶ್ರೀ ಟಿ. ಟಿ. ಕೃಷ್ಣಮಾಚಾರಿ ಯವರ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದರಿಂದ ಅದು ಮೂರು ತಿಂಗಳುಗಳಾಗಿರಬಹುದು. ಅಥವಾ ಎರಡನೆಯ ಸಂದರ್ಭದಲ್ಲಿ ಅದು ಒಂದು ತಿಂಗಳಾಗಿರಬಹುದು.

ಕರಡು ಸಮಿತಿಗೆ ಯಾವುದೇ ನಿರ್ದಿಷ್ಟ ಮನಸ್ಸಿಲ್ಲ. ಘಳಿಗೆ ಘಳಿಗೆಗೂ ಅದು ಬದಲಾಗುತ್ತಿದೆ. 'ಅದರ ಬುದ್ಧಿ ಚಂಚಲವಾಗಿದೆ ಎಂದು ಮುಂತಾಗಿ ನನ್ನ ಮಿತ್ರ ಪಂಡಿತ್ ಕುಂಝ್ರು ಅವರು ಹೇಳಿದ್ದಾರೆ. ಅವರು ಮೂಲ ಕರಡನ್ನು ಪ್ರಸ್ತಾಪಿಸುತ್ತಾ ಕರಡು ಸಂವಿಧಾನದಲ್ಲಿ ಅದು ಆರು ತಿಂಗಳ ಅವಧಿಯಾಗಿದೆ ಎಂದು ಹೇಳಿದ್ದಾರೆ.' ಇಲ್ಲಿಯೂ ಸಹ ಪ್ರತಿಯೊಂದು ಸದನಕ್ಕೆ ನೀಡಬಹುದಾದ ಅವಧಿಯಲ್ಲಿ ಯಾವ ತತ್ವವೂ ಅಡಗಿಲ್ಲ. ಅದು ಕಾರ್ಯಸಾಧ್ಯ ರಾಜಕೀಯ ಮಾತ್ರ. ಆರು ತಿಂಗಳ ಅವಧಿ ಬಹಳ ಹೆಚ್ಚಾಯಿತೆಂಬ ತೀರ್ಮಾನಕ್ಕೆ ಕರಡು ಸಮಿತಿ ಬಂದಿತು. ವಾಸ್ತವದಲ್ಲಿ ಮೂರು ತಿಂಗಳ ಅವಧಿಯೂ ಹೆಚ್ಚಾಯಿತು ಎಂದು ಅದರ ಅಭಿಪ್ರಾಯವಾಗಿತ್ತು. ಬಹಳಷ್ಟು ಕಲಮುಗಳನ್ನು ಹೊಂದಿರುವಂತಹ ಜಮೀನ್ದಾರಿ ಮಸೂದೆಯನ್ನು ಕೆಳಮನೆಯಲ್ಲಿ ಅಂಗೀಕರಿಸಿದ ನಂತರ ಅದರ ಪರಿಶೀಲನೆಗೆ ಮೇಲ್ಮನೆಗೆ ಕಳುಹಿಸಿಕೊಡುವಲ್ಲಿ ವಿಳಂಬವಾಗುವುದೆಂಬ ಸಂಗತಿಯನ್ನು ಯಾರಾದರೂ ಊಹಿಸಬಹುದು. ಆದರೆ ಕೆಲವು ವಿಶೇಷ ಸಂದರ್ಭಗಳನ್ನು ಬಿಟ್ಟರೆ, ಅವು ಇಂತಹ ಮಸೂದೆಗಳಷ್ಟೇ ಸುದೀರ್ಘ ಮತ್ತು ಹೆಚ್ಚು ವಿಷಯಗಳಿಲ್ಲದ ಮಸೂದೆಗಳಾಗಿರುವುದಿಲ್ಲ ಎಂಬುದನ್ನು ನನ್ನ ಮಿತ್ರರೂ ಒಪ್ಪುತ್ತಾರೆ. ಹೀಗಾಗಿ ಒಂದು ಮಸೂದೆಯನ್ನು ಹಿಂತಿರುಗಿಸಲು ಮೂರು ತಿಂಗಳ ಅವಧಿ ಸಾಕಾಗುವುದು ಎಂದು ನನಗನಿಸಿತು. ಏಕೆಂದರೆ, ಮೇಲ್ಮನೆಯಲ್ಲಿ ಮಾಡುವುದಾದರೂ ಏನಿದೆ? ಅದು ಕೆಳಮನೆಯು ತನಗೆ ಕಳುಹಿಸಿಕೊಡಲಾದ ಮಸೂದೆಯನ್ನು ಪರಿಶೀಲಿಸುತ್ತದೆ. ಅದು ಇಡೀ ಮಸೂದೆಯನ್ನು ಪುನಃ ರಚಿಸುವುದಿಲ್ಲ ಮತ್ತು ಅದರ ಪ್ರತಿಯೊಂದು ಕಲಮುಗಳನ್ನು ಬದಲಾಯಿಸುವುದಿಲ್ಲ. ಅದು ಸಾರ್ವಜನಿಕ ಮಹತ್ವದ ಕೆಲವು ಕಲಮುಗಳನ್ನು ಮಾತ್ರ ಪರಿಶೀಲಿಸಬಯಸಬಹುದು. ಇಂತಹ ಸೀಮಿತ ಶಾಸಕಾಂಗ ಕಾರ್ಯ ನಿರ್ವಹಣೆಗೆ ಮೂರು ತಿಂಗಳ ಅವಧಿ ಸಾಕಷ್ಟು ದೀರ್ಘವಾಗಿದೆ ಎಂದು ನನಗನಿಸಿದೆ. ಅದರಿಂದ ಎರಡನೆಯ ಸದನದ ಶಾಸಕಾಂಗ ಕಾರ್ಯಕ್ಕೆ ಯಾವ ಅಡಚಣೆಯೂ ಉಂಟಾಗಿರಲಿಕ್ಕಿಲ್ಲ. ಎರಡನೆಯ ಪ್ರಸಂಗದಲ್ಲಿ ಕೆಳಮನೆಯು ಮೇಲ್ಮನೆಗೆ ಅದು ತಾನು ಕೆಳಮನೆಯ ಶಿಫಾರಸುಗಳನ್ನು ಎಷ್ಟರಮಟ್ಟಿಗೆ ಪರಿಶೀಲಿಸಬಹುದಾಗಿದೆ ಎಂದು ಮಿತಿಯನ್ನು ಹೇರಿರುವ ಮಸೂದೆಯ ಎರಡನೆಯ ಪ್ರಯಾಣಕ್ಕೆ ಒಂದು ತಿಂಗಳ ಅವಧಿ ಸಾಕಷ್ಟಾಗುವುದೆಂದು ನಮಗನಿಸಿತು. ಆದ್ದರಿಂದ ಇದರಲ್ಲಿ ಯಾವ ತತ್ವದ ಪ್ರಶ್ನೆಯೂ ಇರುವುದಿಲ್ಲ. ಇದು ಕಾರ್ಯಸಾಧುವಾದ ರಾಜಕೀಯದ ಪ್ರಶ್ನೆ ಮಾತ್ರ. ಹಾಗಾಗಿ ನಮಗೆ ಮೂರು ತಿಂಗಳು ಮತ್ತು ಒಂದು ತಿಂಗಳ ಅವಧಿಗಳು ಸಾಕೆನಿಸಿತು.

ಈಗ ನಾನು ಕೊನೆಯ ಪ್ರಶ್ನೆಯನ್ನು ಎತ್ತಿಕೊಳ್ಳುತ್ತಿದ್ದೇನೆ. ಅದೇನೆಂದರೆ, ಮೂರು ತಿಂಗಳು ಮತ್ತು ಒಂದು ತಿಂಗಳಿನ ಅವಧಿಯ ಎಣಿಕೆಯನ್ನು ಎಲ್ಲಿಂದ ಪ್ರಾರಂಭಿಸಬೇಕು. ಪಂಡಿತ್ ಕುಂಝ್ರುರವರು ಕರಡು ಸಮಿತಿಯು ಸೂಚಿಸಿದ ಬದಲಾವಣೆಗಳ ಮಹತ್ವವನ್ನು ಅರ್ಥಮಾಡಿಕೊಳ್ಳಲು ವಿಫಲರಾಗಿದ್ದಾರೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಕರಡು ಸಮಿತಿಯು ೧೭೨ನೆಯ ವಿಧಿಯಲ್ಲಿ ಮಾಡಿರುವ ಉಪಬಂಧವು ಇರದೇ ಹೋಗಿದ್ದರೆ ಮೇಲ್ಮನೆಯ ಅಧಿಕಾರವನ್ನು ಸಂಪೂರ್ಣವಾಗಿ ನಿರರ್ಥಕಗೊಳಿಸುತ್ತಿತ್ತು ಎಂಬುದರಲ್ಲಿ ನನಗೆ ಮತ್ತು ಕರಡು ಸಮಿತಿಗೂ ಯಾವುದೇ ಅನುಮಾನವಿಲ್ಲ. ಇದನ್ನು ವಿವರಿಸಿ

ಹೇಳಬೇಕಾಗಿದೆ. ಆದರೆ, ಅದಕ್ಕೂ ಮುಂಚೆ ಕಾಲಮಿತಿಯ ಆರಂಭವನ್ನು ನಿರ್ಧರಿಸುವ ಸಾಧ್ಯತೆಯನ್ನು ವಿವರಿಸಬಯಸುತ್ತೇನೆ. ಮೊದಲನೆಯದಾಗಿ, ಒಂದು ಮಸೂದೆಯನ್ನು ಕೆಳಮನೆ ಅಂಗೀಕರಿಸಿದ ನಂತರ ಒಂದು ನಿರ್ದಿಷ್ಟ ಅವಧಿಯೊಳಗಾಗಿ ಆ ಮಸೂದೆಯನ್ನು ಮೇಲ್ಮನೆ ಅಂಗೀಕರಿಸತಕ್ಕದ್ದು ಎಂದು ಹೇಳಬಹುದು. ಎರಡನೆಯದಾಗಿ, ಮೇಲ್ಮನೆಗೆ ಒಂದು ಮಸೂದೆಯು ತಲುಪಿದಾಗಿನಿಂದ ಒಂದು ನಿರ್ದಿಷ್ಟ ಅವಧಿಯೊಳಗೆ ಅದನ್ನು ಅಂಗೀಕರಿಸತಕ್ಕದ್ದು ಎಂದೂ ಹೇಳುವುದು ಸಾಧ್ಯ. ನಾವು ಈ ಎರಡೂ ಸಾಧ್ಯತೆಗಳಲ್ಲಿ ಯಾವುದಾದರೂ ಒಂದನ್ನು ಅಂಗೀಕರಿಸಿದ್ದಲ್ಲಿ ಅದರ ಪರಿಣಾಮ ಮೇಲ್ಮನೆಗೆ ವಿನಾಶಕಾರಿಯಾಗಿ ಪರಿಣಮಿಸುತ್ತಿತ್ತು. ಮೇಲ್ಮನೆಯ ಅಧಿವೇಶನವನ್ನು ಕರೆಯುವ ಅಧಿಕಾರ ಕಾರ್ಯಾಂಗಕ್ಕೆ ಸೇರಿದ್ದಾಗಿದೆ ಎಂಬುದನ್ನು ನೀವು ಜ್ಞಾಪಿಸಿಕೊಂಡರೆ, ಅದು ಅಧಿವೇಶನವನ್ನು ಕರೆಯಬಹುದು ಅಥವಾ ಕರೆಯದೆ ಇರಬಹುದು. ಈ ಕಲಮಿನ ಲಾಭ ಪಡೆದು ಅಪ್ರಾಮಾಣಿಕ ಕಾರ್ಯಾಂಗವು ಅಧಿವೇಶನವನ್ನು ಕರೆಯದೇ ಇರಬಹುದು. ಅಥವಾ ನಾವು ಸದನವು ಮಸೂದೆಯನ್ನು ಪಡೆದುಕೊಂಡಾಗಿನಿಂದ ಅವಧಿಯ ಲೆಖ್ಖವನ್ನಾರಂಭಿಸದೆ, ಆಗಲೂ ಕೂಡ ಕಾರ್ಯಾಂಗವು ಆ ಮಸೂದೆಯನ್ನು ಕಾರ್ಯಪಟ್ಟಿಯಲ್ಲಿ ಅನಿರ್ದಿಷ್ಟವಾಗಿ ಸೇರಿಸದೇ ಮೋಸ ಮಾಡಬಹುದು. ಆಗ ಆ ಮಸೂದೆಯನ್ನು ಪರಿಶೀಲಿಸುವ ಅವಕಾಶವೇ ಇಲ್ಲದಾಗಬಹುದು. ಆದ್ದರಿಂದ ಇಂತಹ ವಿಧಾನ ದೋಷಪೂರಿತವಾಗಿದೆ ಎಂದು ನಾವು ಆಲೋಚಿಸಿದೆವು. ಇದರಿಂದ ಯಾವ ತಪ್ಪನ್ನೂ ಎಸಗದ ಮೇಲ್ಮನೆಯನ್ನು ಶಿಕ್ಷಿಸಿದಂತಾಗುತ್ತದೆ. ಸದನದ ಅಧಿವೇಶನವನ್ನು ಕರೆಯದೇ ಹೋದರೆ ಅದಕ್ಕೆ ಮಸೂದೆಯನ್ನು ಪರಿಶೀಲಿಸಲು ಸಾಧ್ಯವಾಗುವುದಿಲ್ಲ ಮತ್ತು ಅಂತಹ ಮಸೂದೆಯನ್ನು ಮೇಲ್ಸದನವು ಅಂಗೀಕರಿಸಿದೆ ಎಂದು ಪರಿಗಣಿಸಲೂ ಬರುವುದಿಲ್ಲ. ಆದ್ದರಿಂದ ಮೇಲ್ಮನೆಯನ್ನು ರಕ್ಷಿಸುವ ಉದ್ದೇಶದಿಂದ ಕರಡು ಸಮಿತಿಯು ಕಾಲಮಿತಿಯ ನಿರ್ಣಯದ ಈ ಎರಡೂ ಮಾರ್ಗಗಳನ್ನು ತಿರಸ್ಕರಿಸಿತು ಮತ್ತು ಉದ್ದೇಶಪೂರ್ವಕವಾಗಿ ಈ ವಿಧಿಯಲ್ಲಿ ಈಗ ಸೂಚಿಸಲಾಗಿರುವ ವ್ಯವಸ್ಥೆಯನ್ನು ಅಂಗೀಕರಿಸಿತು. ಅದೇನೆಂದರೆ, ಮೇಲ್ಮನೆಯಲ್ಲಿ ಮಂಡಿಸಲಾದ ಮಸೂದೆಯನ್ನು ಈ ಕಲಮಿನಲ್ಲಿ ಗೊತ್ತುಪಡಿಸಲಾದ ಅವಧಿಯೊಳಗೆ ಅದರ ಪರಿಶೀಲನೆಯು ಪೂರ್ಣಗೊಳಿಸದಿದ್ದರೆ ಆ ಅವಧಿಯ ನಂತರ ಆ ಮಸೂದೆಯ ಪರಿಶೀಲನೆಯ ಹಕ್ಕನ್ನು ಮೇಲ್ಸದನವು ಕಳೆದುಕೊಳ್ಳುತ್ತದೆ. ಆಗ ಯಾರೂ ದೂರಲು ಸಾಧ್ಯವಿಲ್ಲ. ಅದರಲ್ಲಿಯೂ ಮೇಲ್ಮನೆಯಂತೂ ದೂರಲು ಸಾಧ್ಯವೇ ಇಲ್ಲ. ಮೇಲ್ಮನೆಯ ಹಕ್ಕನ್ನು ಹತ್ತಿಕ್ಕುವ ಬದಲು ಈ ಹೊಸ ಕಲಮು ಕಾರ್ಯಾಂಗವು ಕಸಿದುಕೊಳ್ಳಲು ಬರದಂತಹ ಅಧಿಕಾರ, ಹಕ್ಕನ್ನು ಮೇಲ್ಮನೆಗೆ ಕೊಟ್ಟಿದೆ ಎಂಬ ಸತ್ಯಾಂಶವನ್ನು ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಹೃದಯನಾಥ್ ಕುಂಝ್ರುರವರು ತಿಳಿದುಕೊಳ್ಳುವರೆಂದು ಭಾವಿಸುತ್ತೇನೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಇಂತಹ ಬಾಲಿಶ ವಿವರಣೆಯು ಗೌರವಾನ್ವಿತ ಸದಸ್ಯರಿಗೆ ತೃಪ್ತಿದಾಯಕವಾಗಿದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಗೌರವಾನ್ವಿತ ಮಿತ್ರರು ಈ ವಿವರಣೆಯನ್ನು ಬಾಲಿಶ ಎಂದು ಕರೆಯುವುದಾದರೆ ಕರೆಯಲಿ, ಆದರೆ ಈ ಹೊಸಕಲಮು ಈಗಿರುವ ಕಲಮಿನ ಹೆಚ್ಚು ಸುಧಾರಿತ ಮಾರ್ಗವಾಗಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಪಂಡಿತ್ ಕುಂಝ್ರುರವರಿಗೆ ಅದು ತೃಪ್ತಿಕರವಾಗಿರದಿದ್ದರೆ ಅದಕ್ಕೆ ನಾನೇನೂ ಮಾಡಲಾಗುವುದಿಲ್ಲ. ಆದರೆ ನಾನು ವಿವರಿಸುವ ಯಾವುದೇ ಅಂಶವನ್ನು ಅವರು ಎತ್ತಿ ಹೇಳಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಈಗಿರುವ ವಿಷಯವೇನೆಂದರೆ

"ಸೂಚಿತ ೧೭೨ನೆಯ ವಿಧಿಯ ಕಲಮು (೧) ಮತ್ತು ಉಪ–ಕಲಮು (ಬಿ)ನಲ್ಲಿ 'ಎರಡು ತಿಂಗಳುಗಳು' ಎಂಬ ಪದಗಳ ಬದಲಾಗಿ 'ಮೂರು ತಿಂಗಳುಗಳು' ಎಂದು ಸೇರಿಸತಕ್ಕದ್ದು."

**ತಿದ್ದುಪಡಿಯು ಸ್ವೀಕೃತವಾಯಿತು. ಮಂಡಿಸಲಾದ ಮತ್ತು ತಿದ್ದುಪಡಿಗೊಂಡ ೧೬೨ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

* * *

## ವಿಧಿ ೧೭೬*

ಮಾನ್ಯ ಸಭಾಧ್ಯಕ್ಷ: ಇನ್ನು ನಾವು ೧೭೬ನೆಯ ವಿಧಿಯನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮೊದಲು ನಾವು ೮೫–ಎ ವಿಧಿಯನ್ನು ತೆಗೆದುಕೊಂಡು ಅದನ್ನು ತೀರ್ಮಾನಿಸುವುದು ಒಳ್ಳೆಯದು.

**ಮಾನ್ಯ ಸಭಾಧ್ಯಕ್ಷರು:** ೧೭೬ನೆಯ ವಿಧಿಯಲ್ಲಿ ಹೆಚ್ಚಿನದೇನೂ ಇಲ್ಲ. ಅದನ್ನು ಈಗ ತೆಗೆದುಕೊಳ್ಳಬಹುದು. ಅದಕ್ಕೆ ಯಾವ ತಿದ್ದುಪಡಿಯೂ ಇರುವುದಿಲ್ಲ.

[**ಈ ವಿಧಿಗೆ ಯಾವ ತಿದ್ದುಪಡಿಯೂ ಇಲ್ಲ. ೧೭೬ನೆಯ ವಿಧಿಯ ಸ್ವೀಕೃತವಾಯಿತು. ಅದನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**]

## ವಿಧಿ ೮೫ಎ

****ಮಾನ್ಯ ಸಭಾಧ್ಯಕ್ಷರು:** ಈಗ ನಾವು ೮೫ನೆಯ ವಿಧಿಯನ್ನು ತೆಗೆದುಕೊಳ್ಳೋಣವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಸಭಾಧ್ಯಕ್ಷರೆ, ನಾನು ಅದನ್ನು ಹೀಗೆ ಮಂಡಿಸುತ್ತಿದ್ದೇನೆ.

"೮೫ನೆಯ ವಿಧಿಯ ನಂತರ ಈ ಕೆಳಗಿನ ಹೊಸ ವಿಧಿಯನ್ನು ಸೇರಿಸತಕ್ಕದ್ದು:

**ಸದಸ್ಯರ ಅನರ್ಹತೆಯ ಪ್ರಶ್ನೆಯನ್ನು ಕುರಿತ ನಿರ್ಣಯ**

'೮೫–ಎ ಸಂಸತ್ತಿನ ಯಾವುದೇ ಸದನದ ಸದಸ್ಯನು ಇದರ ಹಿಂದಿನ ವಿಧಿಯ ಕಲಮು (೧)ರಲ್ಲಿ ಹೇಳಲಾದ ಯಾವುದೇ ಅನರ್ಹತೆಗೊಳಗಾಗಿದ್ದರೆ, ಆ ಪ್ರಶ್ನೆಯನ್ನು ರಾಷ್ಟ್ರಪತಿಗಳ ನಿರ್ಣಯಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ಅವರ ನಿರ್ಣಯವೇ ಅಂತಿಮವಾದುದು. (೨) ಅಂತಹ ಪ್ರಶ್ನೆಯನ್ನು ಕುರಿತು ನಿರ್ಣಯ ಕೊಡುವಾಗ ರಾಷ್ಟ್ರಪತಿಗಳು ಚುನಾವಣಾ ಆಯೋಗದ ಅಭಿಪ್ರಾಯ ಪಡೆದು ಆ ಪ್ರಕಾರ ನಡೆಯತಕ್ಕದು."

ಈ ವಿಧಿಯು ನಾವು ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಇಂತಹ ಪ್ರಸಂಗಗಳಲ್ಲಿ ಅನ್ವಯವಾಗುವ ೧೬೭–ಎ ವಿಧಿಯ ತದ್ರೂಪವಾಗಿದ್ದು ಇದರ ಬಗ್ಗೆ ಹೆಚ್ಚಿನ ವಿವರಣೆ ಅವಶ್ಯವಿಲ್ಲವೆಂದು ನನಗನಿಸುತ್ತದೆ.

[**೮೫–ಎ ಎಂಬ ಹೊಸ ವಿಧಿಯನ್ನು ಅಂಗೀಕರಿಸಿ ಅದನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**]

* * *

---

* ಸಿ.ಎ.ಡಿ. ಸಂ. IX, ೧ನೇ ಆಗಸ್ಟ್ ೧೯೪೯, ಪುಟ ೬೨.

** ಅದೇ ಪುಟ ೬೨

## ವಿಧಿ ೧೨೩ಎ*

**ಮಾನ್ಯ ಸಭಾಧ್ಯಕ್ಷರು:** ನಾವು ಮೊದಲು ೨೧೦ ಮತ್ತು ೨೧೧ನೇ ವಿಧಿಗಳನ್ನು ತೆಗೆದುಕೊಂಡು ನಂತರ ೧೨೭–ಎ ವಿಧಿಗೆ ಬರುವುದು ಒಳ್ಳೆಯದು ಎಂದು ನನಗನಿಸುತ್ತದೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಅದರಿಂದ ಯಾವುದೇ ವ್ಯತ್ಯಾಸವಾಗುವುದಿಲ್ಲ. ಏಕೆಂದರೆ, ಈ ವಿಧಿಯು ಅಂಗೀಕೃತವಾದರೆ ೨೧೦ ಮತ್ತು ೨೧೧ನೆಯ ವಿಧಿಗಳು ತಮ್ಮಷ್ಟಕ್ಕೆ ತಾವೇ ಬಿದ್ದುಹೋಗುತ್ತವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಸಭಾಧ್ಯಕ್ಷರೇ ನಾನು ಈ ವಿಧಿಯನ್ನು ಮಂಡಿಸುತ್ತಿದ್ದೇನೆ:

"೧೨೭ನೆಯ ವಿಧಿಯ ನಂತರ ಈ ಕೆಳಗಿನ ಹೊಸ ವಿಧಿಯನ್ನು ಸೇರಿಸತಕ್ಕದ್ದು:

## ರಾಜ್ಯಗಳಿಗೆ ಸಂಬಂಧಿಸಿದ ಲೆಖ್ಖಪತ್ರ ತನಿಖಾ ವರದಿ

'೧೨೭–ಎ, ಒಂದು ರಾಜ್ಯದ ಲೆಖ್ಖ ಪತ್ರಗಳ ವರದಿಯನ್ನು ಭಾರತದ ಕಂಟ್ರೋಲರ್ ಮತ್ತು ಆಡಿಟರ್–ಜನರಲ್‌ನವರು ರಾಜ್ಯದ ರಾಜ್ಯಪಾಲರು ಅಥವಾ ಆಡಳಿತಗಾರರಿಗೆ ಸಲ್ಲಿಸತಕ್ಕದ್ದು, ಮತ್ತು ಅವರು ಅದನ್ನು ರಾಜ್ಯದ ಶಾಸಕಾಂಗದಲ್ಲಿ ಮಂಡಿಸತಕ್ಕದ್ದು."

ಈ ಸದನಕ್ಕೆ ತಿಳಿದಿರುವಂತೆ ನಾವು ಈಗಾಗಲೇ ಅಂಗೀಕರಿಸಿರುವ ವಿಧಿಗಳ ಪ್ರಕಾರ ಲೆಖ್ಖ ಪತ್ರಗಳ ತನಿಖೆ ಮತ್ತು ಲೆಖ್ಖಪತ್ರಗಳ ನಿರ್ವಹಣೆ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಎಂಬ ಒಂದೇ ವ್ಯವಸ್ಥೆಯಡಿ ಬರುತ್ತದೆ. ಆದ್ದರಿಂದ ಒಂದು ರಾಜ್ಯದ ಲೆಖ್ಖ–ಪತ್ರಗಳ ತನಿಖಾ ವರದಿಯನ್ನು ರಾಜ್ಯದ ರಾಜ್ಯಪಾಲರು ಅಥವಾ ಆಡಳಿತಗಾರರು ಈ ವರದಿಯನ್ನು ರಾಜ್ಯದ ಶಾಸನಸಭೆಯಲ್ಲಿ ಅದರ ಪರಿಶೀಲನೆಗಾಗಿ ಮಂಡಿಸುವ ಅವಶ್ಯಕತೆ ಇದೆ. ಅದನ್ನೇ ಈ ವಿಧಿಯಲ್ಲಿ ಹೇಳಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಈ ವಿಧಿಯ ಬಗ್ಗೆ ಯಾರಾದರೂ ಏನನ್ನಾದರೂ ಹೇಳಬಯಸುವರೇ?

**ಗೌರವಾನ್ವಿತ ಸದಸ್ಯರು:** ಹೇಳುವುದು ಏನೂ ಇಲ್ಲ.

**೧೨೭–ಎ ಎಂಬ ಹೊಸ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

## ವಿಧಿ ೧೯೭**

**ಮಾನ್ಯ ಸಭಾಧ್ಯಕ್ಷರು:** ಇನ್ನು ೨೧೨ನೆಯ ವಿಧಿಯನ್ನು ತೆಗೆದುಕೊಳ್ಳೋಣವೇ?

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಮೊದಲು ೧೮೮ನೆಯ ವಿಧಿಯನ್ನು ತೆಗೆದುಕೊಳ್ಳಬಹುದು. ಏಕೆಂದರೆ, ಅದನ್ನು ಕೈಬಿಡಬೇಕಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ೧೮೮ ಮತ್ತು ೨೭೮ನೆಯ ವಿಧಿಗಳನ್ನು ಒಟ್ಟಿಗೆ ತೆಗೆದುಕೊಳ್ಳಬಹುದೆಂದು ನಾನು ಸೂಚಿಸುತ್ತಿದ್ದೆ. ಆ ಬಗ್ಗೆ ಇಡಿ ವಿಷಯವನ್ನು ವಿವರಿಸುವುದು ಒಳ್ಳೆಯದು.

---

* ಸಿ.ಎ.ಡಿ. ಸಂ. IX, ೧ನೇ ಆಗಸ್ಟ್ ೧೯೪೯, ಪುಟ ೬೩.

** ಅದೇ, ಪುಟ ೬೪.

**ಮಾನ್ಯ ಸಭಾಧ್ಯಕ್ಷರು:** ೧೯೮ನೆಯ ವಿಧಿಯನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನಾನು ಇದನ್ನು ಮಂಡಿಸುತ್ತಿದ್ದೇನೆ:

**ನ್ಯಾಯಾಧೀಶರುಗಳ ವೇತನಗಳು ಇತ್ಯಾದಿ**

"೧೯೭ನೆಯ ವಿಧಿಯ ಬದಲು ಈ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು."

'೧೯೭(೧) ಎರಡನೆಯ ಅನುಸೂಚಿಯಲ್ಲಿ ಗೊತ್ತುಪಡಿಸಿರುವಂತೆ ಪ್ರತಿಯೊಂದು ಉನ್ನತ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ವೇತನಗಳನ್ನು ನೀಡತಕ್ಕದ್ದು.

(೨) ಪ್ರತಿಯೊಬ್ಬ ನ್ಯಾಯಾಧೀಶನು ಕಾಲಕಾಲಕ್ಕೆ ನಿಗದಿಗೊಳಿಸಲಾದ ಅಥವಾ ಸಂಸತ್ತಿನಿಂದ ಪಾಸಾದ ಕಾನೂನಿನನ್ವಯ ನಿರ್ಧರಿಸಲಾದಂತಹ ಭತ್ಯೆಗಳು ಮತ್ತು ರಜೆ ಹಾಗೂ ನಿವೃತ್ತಿ ವೇತನಗಳು ಮುಂತಾದ ಹಕ್ಕುಗಳನ್ನು ಪಡೆಯಲು ಅರ್ಹನಾಗಿರುತ್ತಾನೆ. ಮತ್ತು ಅದನ್ನು ನಿರ್ಧರಿಸುವತನಕ ಎರಡನೆಯ ಅನುಸೂಚಿಯಲ್ಲಿ ಗೊತ್ತುಪಡಿಸಲಾದ ಭತ್ಯೆಗಳು ಮತ್ತು ಇತರ ಹಕ್ಕುಗಳಿಗೆ ಅರ್ಹನಾಗಿರುತ್ತಾನೆ.

ಪರಂತು, ನ್ಯಾಯಾಧೀಶನ ಭತ್ಯೆಗಳು ಅವನ ರಜೆ ಸೌಲಭ್ಯ, ನಿವೃತ್ತಿ ವೇತನ ಮುಂತಾದವುಗಳನ್ನು ಅವನ ನೇಮಕದ ನಂತರ ಅವನಿಗೆ ಅನಾನುಕೂಲವಾಗುವ ರೀತಿಯಲ್ಲಿ ಬದಲಾಯಿಸಲಾಗದು."

ಈ ವಿಭಾಗವು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ಅನ್ವಯವಾಗುವ ಇನ್ನೊಂದು ವಿಧಿಗೆ ಸಮನಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಪಂಡಿತ್ ಕುಂಝ್ರುರವರ ಒಂದು ತಿದ್ದುಪಡಿಯಿದೆ.

[ಪಟ್ಟಿ I(ಎರಡನೆಯ ವಾರ)ರಲ್ಲಿರುವ ೨೦, ೨೧ ಮತ್ತು ೨೨ನೆಯ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.]

**ಮಾನ್ಯ ಸಭಾಧ್ಯಕ್ಷರು:** ಇದಕ್ಕೆ ಯಾವ ತಿದ್ದುಪಡಿಯನ್ನೂ ಮಂಡಿಸಲಾಗಿಲ್ಲ. ಇಂದು ಡಾ. ಅಂಬೇಡ್ಕರರು ಮಂಡಿಸಿರುವ ವಿಧಿಯನ್ನು ಮತಕ್ಕೆ ಹಾಕುತ್ತಿದ್ದೇನೆ.

**ಪ್ರಸ್ತಾವ ಅಂಗೀಕೃತವಾಯಿತು ತಿದ್ದುಪಡಿಯಾದ ೧೯೭ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

## ವಿಧಿ ೨೧೨ರಿಂದ ೨೧೪ರವರೆಗೆ*

**ಮಾನ್ಯ ಸಭಾಧ್ಯಕ್ಷರು:** ೨೧೨ನೆಯ ವಿಧಿಯನ್ನು ತೆಗೆದುಕೊಳ್ಳೋಣವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ೨೧೨ರಿಂದ ೨೧೪ರವರೆಗಿನ ವಿಧಿಗಳನ್ನು ತಡೆಹಿಡಿಯಬೇಕೆಂದು ಸೂಚಿಸಬಯಸುತ್ತೇನೆ. ಈಗ ೨೭೫ನೆಯ ವಿಧಿಯನ್ನು ತೆಗೆದುಕೊಳ್ಳಬಹುದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸು, ಸಾಮಾನ್ಯ): ಮಾನ್ಯರೆ ೨೧೨ರಿಂದ ೨೧೪ನೆಯ ವಿಧಿಗಳನ್ನು ತಡೆ ಹಿಡಿಯಬೇಕೆಂದು ಕೋರಲಾಗಿದೆ. ಅವುಗಳನ್ನು ಏಕೆ ತಡೆಹಿಡಿಯಬೇಕೆಂಬ ಬಗ್ಗೆ ವಿವರಣೆಯನ್ನು ಈ ಸದನ ತಿಳಿಯಬಯಸುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದಕ್ಕೆ ವಿವರಣೆ ಹೀಗಿದೆ; ಚಂದರ್‌ನಾಗೋರ್ ಮತ್ತು

---

* ಸಿ.ಎ.ಡಿ. ಸಂ. IX, ೧ನೇ ಆಗಸ್ಟ್ ೧೯೪೯, ಪುಟ ೬೫.

ಇತರ ವಸಾಹತುಗಳು ಭಾರತಕ್ಕೆ ಸೇರುವ ಸಾಧ್ಯತೆ ಇದೆ. ನಾವು ಈ ಬಗ್ಗೆ ಕೆಲವು ವ್ಯವಸ್ಥೆಗಳನ್ನು ಮಾಡಬೇಕಾಗಿದೆ. ಅಂತಹ ಉಪಬಂಧಗಳು ಅಥವಾ ವ್ಯವಸ್ಥೆಗೆ ಇದು ಸೂಕ್ತ ಸ್ಥಳವಾಗಿದೆ. ಅವುಗಳನ್ನು ಸರಿಯಾಗಿ ಅಳವಡಿಸಬೇಕೆಂದು ಮುಂತಾಗಿ ಈಗ ತಾನೇ ಸೂಚಿಸಲಾಗಿದೆ. ಸ್ವಾಭಾವಿಕವಾಗಿಯೇ ಈ ಪ್ರಶ್ನೆಯನ್ನು ಪರಿಶೀಲಿಸಲು ನಮಗೆ ಸ್ವಲ್ಪ ಕಾಲಾವಕಾಶ ಬೇಕಾಗಿದೆ. ಬಹುಶಃ ನಾವು ಈ ವಿಧಿಗಳನ್ನು ಇಂದೇ ತೆಗೆದುಕೊಳ್ಳಬಹುದಾಗಿದೆ.

**ಮಾನ್ಯ ಸಭಾಧ್ಯಕ್ಷ:** ಹಾಗಾದರೆ ನಾವು ೧೮೮ನೆಯ ವಿಧಿಯನ್ನು ತೆಗೆದುಕೊಂಡು ಈ ಸಂದರ್ಭದಲ್ಲಿ ಇತರ ತುರ್ತು ಉಪಬಂಧಗಳನ್ನು ತೆಗೆದುಕೊಳ್ಳಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹಾಗಾದರೆ ತುರ್ತು ಸ್ವರೂಪದ್ದಾಗಿರುವ ೨೭೫ನೆಯ ವಿಧಿಯನ್ನೂ ಸಹ ತೆಗೆದುಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷ:** ೨೭೫ನೆಯ ವಿಧಿಯನ್ನು ತೆಗೆದುಕೊಳ್ಳೋಣ.

**ಶ್ರೀ ನಜಿರುದ್ದೀನ್ ಅಹ್ಮದ್:** ಮಾನ್ಯರೆ, ನಾನು ಒಂದು ವಿಧಿಬಿಂದುವನ್ನು ಎತ್ತಬಹುದೇ? ಈ ಸದನದಲ್ಲಿ ಅನುಸರಿಸಲಾಗುತ್ತಿರುವ ವಿಧಾನವನ್ನು ತಿಳಿದುಕೊಳ್ಳಲು ಕೆಲವು ಸದಸ್ಯರಿಗೆ ಬಹಳ ಅನಾನುಕೂಲವಾಗುತ್ತಿದೆ. ಇಂದಿನ ಕಾರ್ಯಕ್ರಮ ಪಟ್ಟಿಯಲ್ಲಿ ಸಂಖ್ಯಾನುಕ್ರಮ ಪಟ್ಟಿ ಮಾಡಲಾದ ವಿಧಿಗಳಿವೆ. ಅವುಗಳನ್ನು ಆಜ್ಞಾಪತ್ರದಲ್ಲಿ ಕೊಡಲಾದ ಸರದಿಯಂತೆ ತೆಗೆದುಕೊಳ್ಳಲಾಗುವುದೆಂದು ಈ ಹಿಂದೆ ತಿಳಿಯಲಾಗಿತ್ತು. ನಾನು ಯಾವುದೇ ತಾಂತ್ರಿಕ ಅಭ್ಯಂತರವನ್ನೂ ಎತ್ತ ಬಯಸುವುದಿಲ್ಲ. ಆದರೆ, ಚರ್ಚೆಯಲ್ಲಿ ಬುದ್ಧಿವಂತಿಕೆಯಿಂದ ಭಾಗವಹಿಸಲು ಸದಸ್ಯರುಗಳು ಸಿದ್ಧತೆ ಮಾಡಿಕೊಂಡು ಬರಬೇಕಾಗುತ್ತದೆ. ನಾವು ಈಗಾಗಲೇ ಹೊಂದಿದ್ದ ವಿರಾಮದ ಕಾಲಾನಂತರವೂ ಒಂದು ಗೊತ್ತಾದ ವಿಧಾನವನ್ನನುಸರಿಸದೆ, ಸದನವು ಒಂದು ವಿಧಿಯಿಂದ ಇನ್ನೊಂದಕ್ಕೆ ಹಿಂದಕ್ಕೆ ಮುಂದಕ್ಕೆ ಹೋಗಬೇಕಾಗಿದೆ. ಈ ವಿಧಾನದಿಂದ ಬಹಳಷ್ಟು ಅನಾನುಕೂಲ ಉಂಟಾಗಿದ್ದು, ಸದನವು ಒಂದು ವ್ಯವಸ್ಥಿತ ರೀತಿಯಲ್ಲಿ ಮುಂದುವರಿಯುವಂತೆ ನೋಡಿಕೊಳ್ಳಬೇಕೆಂದು ಕೋರುತ್ತೇನೆ. ಇಲ್ಲದೆ ಹೋದರೆ ಅರ್ಥಪೂರ್ಣ ಚರ್ಚೆ ಸಾಧ್ಯವಾಗದು.

**ಮಾನ್ಯ ಸಭಾಧ್ಯಕ್ಷ:** ನಾನು ಮಾನ್ಯ ನಜಿರುದ್ದೀನ್ ಅಹ್ಮದ್‌ರವರ ವಾದದೊಂದಿಗೆ ಸಮ್ಮತಿಸ ಬಯಸುತ್ತೇನೆ. ಸದಸ್ಯರುಗಳಿಗೆ ೨೧೧ನೆಯ ವಿಧಿಯ ನಂತರ ೨೭೫ನೆಯ ವಿಧಿಯನ್ನು ಕೈಗೆತ್ತಿಕೊಳ್ಳುವುದು ಕಷ್ಟವಾಗುವುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ೨೧೨ನೆಯ ವಿಧಿಯಿಂದಲೇ ಮುಂದುವರಿಯಲು ನಾನು ಸಿದ್ಧನಿದ್ದೇನೆ.

**ಮಾನ್ಯ ಸಭಾಧ್ಯಕ್ಷ:** ಅದು ಹೆಚ್ಚು ಸೂಕ್ತ ಎಂದು ನನಗನಿಸುತ್ತದೆ. ಚಂದರ್‌ನಾಗೋರ್ ವಿಷಯದಲ್ಲಿ ಏನಾದರೂ ಸಂಭವಿಸಿದರೆ, ನಂತರ ಅದನ್ನು ವಿಚಾರಿಸಿ ವ್ಯವಸ್ಥೆ ಮಾಡಬಹುದು. ಈಗ ೨೧೨ನೆಯ ವಿಧಿಯನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುವುದೇನೆಂದರೆ,

"ತಿದ್ದುಪಡಿಗಳ ಪಟ್ಟಿಯಲ್ಲಿರುವ ಸಂಖ್ಯೆ ೨೭೧೩ನೆಯ ತಿದ್ದುಪಡಿಯ ಸಂಬಂಧದ ೨೧೨ನೆಯ ವಿಧಿಯ ಕಲಮು (೨)ನ್ನು ಕೈಬಿಡಬೇಕು."

ಈ ತಿದ್ದುಪಡಿಯನ್ನು ಸೂಚಿಸುವ ಉದ್ದೇಶವೆಂದರೆ ರಾಜ್ಯಗಳಿಗೆ ಸಂಬಂಧಿಸಿದಂತೆ ಭಾಗ IIIರಲ್ಲಿ ಹೇಳಲಾದ ಎಲ್ಲಾ ಉಪಬಂಧಗಳನ್ನು ಪ್ರತ್ಯೇಕವಾಗಿ ಎರಡನೆಯ ಅನುಸೂಚಿಯಲ್ಲಿ ಹೇಳಲಾಗಿದೆ.

ಆದ್ದರಿಂದ ಇಲ್ಲಿ (೨)ನೆಯ ಕಲಮನ್ನು ಉಳಿಸಿಕೊಳ್ಳುವುದು ಅನವಶ್ಯ.

ನಾನು ವಿಷಯವನ್ನು ಹೀಗೆ ಸೂಚಿಸುತ್ತಿದ್ದೇನೆ.

"೨೧೨ನೆಯ ವಿಧಿಯ ಕಲಮು (೧)ನೆಯ ಉಪಬಂಧ ಮತ್ತು ಕಲಮು (೧)ರಲ್ಲಿ ಎಲ್ಲೆಲ್ಲಿ 'ರಾಜ್ಯಪಾಲ ಅಥವಾ ಆಡಳಿತಗಾರ' ಎಂಬ ಪದಗಳು ಬಂದಿವೆಯೋ ಅಲ್ಲಲ್ಲಿ 'ಸರಕಾರ' ಎಂಬ ಪದವನ್ನು ಸೇರಿಸತಕ್ಕದ್ದು."

**ಮಾನ್ಯ ಸಭಾಧ್ಯಕ್ಷ**: ಈ ವಿಧಿಗೆ ಅನೇಕ ತಿದ್ದುಪಡಿಗಳಿವೆ. ಅವುಗಳನ್ನು ಒಂದೊಂದಾಗಿ ಕೈಗೆತ್ತಿಕೊಳ್ಳುತ್ತೇನೆ.

* * *

[**೨೧೨ನೆಯ ವಿಧಿಗೆ ಸೂಚಿಸಲಾದ ವಿವಿಧ ತಿದ್ದುಪಡಿಗಳ ಚರ್ಚೆಯ ನಂತರ ಡಾ. ಅಂಬೇಡ್ಕರರ ತಿದ್ದುಪಡಿಯಂತೆ ತಿದ್ದುಪಡಿಯೊಂದಿಗೆ ಅಂಗೀಕರಿಸಿ ಸಂವಿಧಾನದಲ್ಲಿ ಸೇರಿಸಲಾಯಿತು.**]

## ವಿಧಿ ೨೧೩

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತಿರುವುದೇನೆಂದರೆ

"ತಿದ್ದುಪಡಿಗಳ ಪಟ್ಟಿಯ ಸಂಖ್ಯೆ ೨೭೨೨ನೆಯ ತಿದ್ದುಪಡಿಗೆ ಸಂಬಂಧಿಸಿದಂತೆ ೨೧೩ನೆಯ ವಿಧಿಯ ಬದಲಿಗೆ ಈ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು.

'೨೧೩ (೧) ಈ ಸಂವಿಧಾನದಲ್ಲಿ ಏನೇ ಹೇಳಲಾಗಿದ್ದರೂ ಸಂಸತ್ತು ಒಂದನೆಯ ಅನುಸೂಚಿಯ ಎರಡನೆಯ ಭಾಗದಲ್ಲಿ ಸದ್ಯದಲ್ಲಿ ಅಸ್ತಿತ್ವದಲ್ಲಿರುವಂತೆ ಯಾವುದೇ ರಾಜ್ಯದಲ್ಲಿ ಚೀಫ್ ಕಮಿಶನರ್ ಅಥವಾ ಲೆಫ್ಟಿನೆಂಟ್ ಗವರ್ನರ್‌ರವರ ಮೂಲಕ ಆಡಳಿತಕ್ಕೆ ಕಾನೂನಿನ ಮೂಲಕ ಸೃಷ್ಟಿಸಬಹುದಾದ ಅಥವಾ ಮುಂದುವರಿಸಲಾಗುವ:

(ಎ) ಒಂದು ನಾಮಕರಣ ಮಾಡಲಾದ ಅಥವಾ ಚುನಾಯಿತ ಅಥವಾ ಭಾಗಶಃ ನಾಮಕರಣ ಚುನಾಯಿತ ಸಂಸ್ಥೆಯ ಆ ರಾಜ್ಯದ ಶಾಸಕಾಂಗವಾಗಿ ಕಾರ್ಯನಿರ್ವಹಿಸತಕ್ಕದ್ದು. ಅಥವಾ

(ಬಿ) ಸಲಹಾಕಾರರ ಅಥವಾ ಸಚಿವರ ಅಥವಾ ಎರಡೂ ವಿಧದ ಪರಿಷತ್ತನ್ನೂ ಕಾನೂನಿನಲ್ಲಿ ಗೊತ್ತುಪಡಿಸಲಾದ ಸಂವಿಧಾನ, ಅಧಿಕಾರಗಳು ಮತ್ತು ಕೆಲಸ ಕಾರ್ಯಗಳನ್ನು ಹೊಂದಿರುವ ಸಂಸ್ಥೆಯನ್ನು ಸ್ಥಾಪಿಸುವುದು.

(೨) ಈ ವಿಧಿಯ ಕಲಮು (೧)ರಲ್ಲಿ ಹೇಳಲಾದ ಯಾವುದೇ ಕಾನೂನನ್ನು ೩೦೪ನೆಯ ವಿಧಿಯ ಉದ್ದೇಶಕ್ಕಾಗಿ ಸಂವಿಧಾನದ ತಿದ್ದುಪಡಿ ಎಂದು ಪರಿಗಣಿಸಲಾಗದು.

ಮಾನ್ಯರೆ, ಈ ತಿದ್ದುಪಡಿಯ ಮೂಲಕ ಮಾಡಲುದ್ದೇಶಿಸುವ ಪ್ರಮುಖ ಬದಲಾವಣೆ ಎಂದರೆ ಮೂಲ ಕರಡಿನಲ್ಲಿ ಯಾವುದೇ ಸಂಸ್ಥೆಯನ್ನು ಸೃಷ್ಟಿಸುವ, ಅದು ನಾಮಕರಣದ ಮೂಲಕವಾಗಲಿ, ಇಲ್ಲವೆ ಚುನಾವಣೆಯ ಮೂಲಕವಾಗಲಿ ಅಥವಾ ಪ್ರಾತಿನಿಧ್ಯ ನೀಡುವುದಕ್ಕಾಗಲಿ ಇಲ್ಲವೆ ಒಂದು ಸಲಹಾಕಾರರ ಪರಿಷತ್ತಿಗಾಗಲಿ ಇಲ್ಲವೆ ಸಚಿವರನ್ನೊಳಗೊಂಡ ಸಂಸ್ಥೆಗಾಗಲಿ, ಅದು ರಾಷ್ಟ್ರಪತಿಗಳಿಗೆ ಸೇರಿದ ಅಧಿಕಾರವಾಗಿತ್ತು. ಈ ಹೊಸ ಕರಡಿನಲ್ಲಿ ಆ ಅಧಿಕಾರವನ್ನು ಸಂಸತ್ತಿಗೆ ನೀಡಲಾಗಿದೆ ಹೊರತು ರಾಷ್ಟ್ರಪತಿಗಲ್ಲ. ಈ ವಿಧಿಯಲ್ಲಿ ಮಾಡಲಾಗಿರುವ ಪ್ರಮುಖ ಬದಲಾವಣೆ ಇದಾಗಿದೆ. ಇದೊಂದರ ಹೊರತು ಈ ವಿಧಿಯಲ್ಲಿ ಇತರ ಯಾವ ಬದಲಾವಣೆಯನ್ನು ಮಾಡಲಾಗಿಲ್ಲ.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ, ಸಾಮಾನ್ಯ): ಮಾನ್ಯ ಸಭಾಧ್ಯಕ್ಷರೆ, ನನ್ನ ಮಿತ್ರ ಲಾಲಾ ದೇಶಬಂಧು ಗುಪ್ತಾರವರು ಮಂಡಿಸಿರುವ ತಿದ್ದುಪಡಿಗೆ ಇದು ಸರಿಯಾದ ಸ್ಥಳವಲ್ಲ. ಈ ತಿದ್ದುಪಡಿಯು ಒಂದು ಸಿದ್ಧಾಂತದ ಪ್ರಶ್ನೆ ಎತ್ತಿದೆ. ಅದೇನೆಂದರೆ, ಅದು ಕೆಲವು ಕ್ಷೇತ್ರಗಳಲ್ಲಿ ಪ್ರಾತಿನಿಧ್ಯಕ್ಕೆ ಅಧಿಕ ಮಾನ್ಯತೆ ನೀಡಿದೆ. ಸದನಕ್ಕೆ ನೆನಪಿರುವಂತೆ ಒಂದು ಘಟ್ಟದಲ್ಲಿ ಅಧಿಕ ಮಾನ್ಯತೆ ನೀಡುವಂತಹ ಪ್ರಾತಿನಿಧ್ಯ ನೀಡುವ ವಿಷಯದಲ್ಲಿ ಈ ಸದನ ವಿರೋಧ ವ್ಯಕ್ತಪಡಿಸಿತ್ತು. ಆದಾಗ್ಯೂ ೬೭ನೆಯ ವಿಧಿಯಲ್ಲಿ ಪ್ರಾತಿನಿಧ್ಯ ಕುರಿತು ಹೇಳಲಾದ ಕೆಲವು ಅಂಶಗಳಿಗಾಗಿ ಭಾರತದಲ್ಲಿ ಯಾವುದೇ ಪ್ರದೇಶದಿಂದ ಕನಿಷ್ಠ ಒಬ್ಬ ಪ್ರತಿನಿಧಿಯನ್ನಾದರೂ ಪಡೆಯಲಾಗದೇ ಹೋದಾಗ, ನಾವು ಕೆಲ ವಿಶೇಷ ವ್ಯವಸ್ಥೆ ಮಾಡಬೇಕಾಗುತ್ತದೆ. ಕೇವಲ ಗಣಿತ ಲೆಖ್ಖಾಚಾರದ ಕಾರಣ ರಾಜ್ಯದಲ್ಲಿ ಯಾವುದೇ ಪ್ರದೇಶಕ್ಕೆ ಪ್ರಾತಿನಿಧ್ಯವಿಲ್ಲದಂತೆ ಮಾಡಲಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಈ ಪ್ರಶ್ನೆಯನ್ನು ಪರಿಶೀಲಿಸಬೇಕಾಗುತ್ತದೆ. ಅಂತಹ ಪ್ರದೇಶಗಳು ಅಸ್ತಿತ್ವಕ್ಕೆ ಬಂದಾಗ ಅವುಗಳ ಪ್ರಾತಿನಿಧ್ಯಕ್ಕಾಗಿ ಕರಡು ಸಮಿತಿ ಯಾವುದಾದರೂ ವ್ಯವಸ್ಥೆ ಮಾಡಬೇಕಾಗುತ್ತದೆ. ಆಗ ಇಡೀ ವಿಷಯವನ್ನು ಪುನರ್ಪರಿಶೀಲಿಸಿ, ಏನಾದರೂ ವ್ಯವಸ್ಥೆ ಮಾಡಬೇಕಾಗುತ್ತದೆ. ಬಹುಶಃ ೬೭ನೆಯ ವಿಧಿಯ ನಂತರ, ಎಂದರೆ ೬೭–ಎ ವಿಧಿಯನ್ನು ಸೇರಿಸಬೇಕಾಗಬಹುದು. ಈ ಹಂತದಲ್ಲಿ ನಾನು ಇದಕ್ಕಿಂತ ಹೆಚ್ಚಾಗಿ ಏನನ್ನೂ ಹೇಳಲಾರೆ.

**ಮಾನ್ಯ ಸಭಾಧ್ಯಕ್ಷ:** ಈಗ ನಾನು ತಿದ್ದುಪಡಿಯನ್ನು ಮತಕ್ಕೆ ಹಾಕುವೆ.

**[ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾರವರು ಸೂಚಿಸಿದ ತಿದ್ದುಪಡಿಯೊಂದಿಗೆ ೨೧೩ನೆಯ ವಿಧಿ ಅಂಗೀಕೃತವಾಗಿ ಸಂವಿಧಾನದಲ್ಲಿ ಸೇರ್ಪಡೆಯಾಯಿತು.**

* * *

## ವಿಧಿ ೨೧೩ಎ**

**ಮಾನ್ಯ ಸಭಾಧ್ಯಕ್ಷ:** ಇನ್ನು ೨೧೩–ಎ ವಿಧಿಯನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ೨೧೩–ಎ ವಿಧಿಯನ್ನು ಹೀಗೆ ಮಂಡಿಸುತ್ತಿದ್ದೇನೆ.

“೨೧೩ನೆಯ ವಿಧಿಯ ನಂತರ ಈ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು:

**ಒಂದನೆಯ ಅನುಸೂಚಿಯಲ್ಲಿ ಭಾಗ IIರಲ್ಲಿರುವ ರಾಜ್ಯಗಳಲ್ಲಿ ಉಚ್ಚ ನ್ಯಾಯಾಲಯಗಳನ್ನು ಸ್ಥಾಪಿಸುವುದು.**

“೨೧೩(೧)– ಒಂದನೆಯ ಅನುಸೂಚಿಯ ಭಾಗ IIರಲ್ಲಿ ನಮೂದಿಸಲಾದ ರಾಜ್ಯದಲ್ಲಿ ಸಂಸತ್ತು ಕಾನೂನಿನ ಮೂಲಕ ಒಂದು ಉಚ್ಚ ನ್ಯಾಯಾಲಯವನ್ನು ಸ್ಥಾಪಿಸಬಹುದು ಇಲ್ಲವೆ ಅಂತಹ ಇನ್ನಾವುದೇ ರಾಜ್ಯದ ಉಚ್ಚ ನ್ಯಾಯಾಲಯವನ್ನು ಸಂವಿಧಾನದನ್ವಯ ಅಂತಹ ರಾಜ್ಯದ ಉಚ್ಚ ನ್ಯಾಯಾಲಯವೆಂದು ಸಾರಬಹುದು.

---

* ಸಿ.ಎ.ಡಿ. ಸಂ. IX, ೧ನೇ ಆಗಸ್ಟ್ ೧೯೪೯, ಪುಟ ೧೦೧–೦೧.

** ಅದೇ, ಪುಟ ೧೦೨.

(೨) ಈ ಸಂವಿಧಾನದ ಭಾಗ VIರ VIIನೆಯ ಅಧ್ಯಾಯದ ಉಪಬಂಧಗಳು ಈ ವಿಧಿಯ ಕಲಮು (೧)ರಲ್ಲಿ ಹೇಳಲಾದ ಪ್ರತಿಯೊಂದು ಉಚ್ಚ ನ್ಯಾಯಾಲಯಕ್ಕೆ ಅವು ಈ ಸಂವಿಧಾನದ ೧೯೧ನೆಯ ವಿಧಿಯಲ್ಲಿ ಹೇಳಲಾದ ಅಂಶಗಳು ಉಚ್ಚ ನ್ಯಾಯಾಲಯಕ್ಕೆ ಅನ್ವಯಿಸುತ್ತದೆ. ಪರಂತು ಸಂಸತ್ತು ಗೊತ್ತುಪಡಿಸಬಹುದಾದಂತಹ ಕೆಲವು ಬದಲಾವಣೆಗಳು ಇಲ್ಲವೆ ಅಪವಾದಕ್ಕೊಳಪಟ್ಟಿರುತ್ತವೆ.

(೩) ಈ ಸಂವಿಧಾನದ ಉಪಬಂಧಗಳಿಗೊಳಗಾದ ಮತ್ತು ಯಾವುದೇ ಸಂಬಂಧಪಟ್ಟ ಶಾಸಕಾಂಗವು ಸಂವಿಧಾನದತ್ತವಾದ ಅಧಿಕಾರದಿಂದ ಪಾಸು ಮಾಡಿದ ಕಾನೂನುಗಳ ಪ್ರಕಾರ ಪ್ರತಿಯೊಂದು ಉಚ್ಚ ನ್ಯಾಯಾಲಯವು ಈ ಸಂವಿಧಾನದ ಒಂದನೆಯ ಅನುಸೂಚಿಯ ಭಾಗ IIರಲ್ಲಿ ನಮೂದಿಸಲಾದ ಯಾವುದೇ ರಾಜ್ಯ ಅಥವಾ ಪ್ರದೇಶದಲ್ಲಿ ಈ ಸಂವಿಧಾನ ಜಾರಿಗೆ ಬರುವ ಮುನ್ನ ಚಲಾಯಿಸುತ್ತಿದ್ದ ಅಧಿಕಾರಗಳನ್ನು ಆ ರಾಜ್ಯಕ್ಕೆ ಅಥವಾ ಪ್ರದೇಶಕ್ಕೆ ಸಂಬಂಧಪಟ್ಟ ಸಂವಿಧಾನದ ಜಾರಿಯ ನಂತರವೂ ಚಲಾಯಿಸುತ್ತದೆ.

(೪) ಈ ವಿಧಿಯಲ್ಲಿ ಹೇಳಲಾದ ಯಾವುದೂ ಸದ್ಯಕ್ಕೆ ಒಂದನೆಯ ಅನುಸೂಚಿಯ ಭಾಗ I ಅಥವಾ ಭಾಗ IIIರಲ್ಲಿ ಹೇಳಲಾದ ಯಾವುದೇ ರಾಜ್ಯದ ಅಥವಾ ರಾಜ್ಯದಿಂದ ಅಥವಾ ಸದ್ಯದಲ್ಲಿ ಭಾಗ IIರಲ್ಲಿ ಆ ರಾಜ್ಯ ಅಥವಾ ಪ್ರದೇಶಕ್ಕೆ ಸಂಬಂಧಿಸಿದಂತೆ ಹೇಳಲಾದಂತೆ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸುವ ಇಲ್ಲವೆ ಕೈಬಿಡುವ ಸಂಸತ್ತಿನ ಅಧಿಕಾರಕ್ಕೆ ಯಾವ ಕುಂದುಂಟುಮಾಡುವುದಿಲ್ಲ.

ಮಾನ್ಯರೆ, ಈ ಸದನ ಭಾಗ Iರಲ್ಲಿ ರಾಜ್ಯಗಳ ಸ್ಥಾಪನೆಯ ವಿಷಯವನ್ನು ಚರ್ಚಿಸಿದಾಗ ಪ್ರತಿಯೊಂದು ರಾಜ್ಯವು ಒಂದು ಉಚ್ಚ ನ್ಯಾಯಾಲಯವನ್ನು ಹೊಂದಿರಬೇಕೆಂಬ ನಿರ್ಣಯ ಮಾಡಿದ್ದು ಈ ಸದನಕ್ಕೆ ನೆನಪಿರಬಹುದು. ಭಾಗ Iರಲ್ಲಿರುವ ರಾಜ್ಯಗಳೂ ರಾಜ್ಯಗಳೇ, ಹೀಗಾಗಿ ಭಾಗ IIರಲ್ಲಿರುವ ರಾಜ್ಯಗಳಿಗೂ ಭಾಗ Iರಲ್ಲಿರುವ ಉಪಬಂಧಗಳು ಅನ್ವಯವಾಗುತ್ತವೆ. ಎಂದರೆ, ಪ್ರತಿಯೊಂದು ರಾಜ್ಯವೂ ಒಂದು ಉಚ್ಚ ನ್ಯಾಯಾಲಯವನ್ನು ಹೊಂದಿರಬೇಕೆಂಬುದು ಭಾಗ Iರಲ್ಲಿರುವ ರಾಜ್ಯಗಳಿಗೂ ಅನ್ವಯಿಸುತ್ತದೆ. ದುರ್ದೈವದಿಂದ ಈ ಉಪಬಂಧವನ್ನು ಈಗಿರುವ ಕರಡು ಸಂವಿಧಾನದಲ್ಲಿ ಸೇರಿಸಿಲ್ಲ. ತತ್ಪರಿಣಾಮವಾಗಿ, ಭಾಗ Iರಲ್ಲಿರುವ ಪ್ರತಿಯೊಂದು ರಾಜ್ಯಕ್ಕೂ ಒಂದು ಉಚ್ಚ ನ್ಯಾಯಾಲಯವಿರಬೇಕು, ಮತ್ತು ಅಂತಹ ಉಚ್ಚ ನ್ಯಾಯಾಲಯವಿದ್ದರೆ, ಅದನ್ನು ಉನ್ನತ ನ್ಯಾಯಾಲಯವೆಂದು ಪರಿಗಣಿಸತಕ್ಕದ್ದೆಂದು ಹೇಳಲು ಈ ೨೧೩–ಎ ಎಂಬ ವಿಧಿಯನ್ನು ಮಂಡಿಸುವ ಅವಶ್ಯವೆನಿಸಿದೆ. ಈ ವಿಧಿಯ ಕಲಮು (೮)ರಲ್ಲಿ ಒಂದು ಉನ್ನತ ನ್ಯಾಯಾಲಯವಿರದಿದ್ದರೆ ಮತ್ತು ಅಂತಹ ಭಾಗ IIರಲ್ಲಿರುವ ರಾಜ್ಯಗಳಲ್ಲಿ ಪ್ರತ್ಯೇಕವಾಗಿ ಉನ್ನತ ನ್ಯಾಯಾಲಯವನ್ನು ಸ್ಥಾಪಿಸಲು ಸಾಧ್ಯವಿಲ್ಲದಿದ್ದರೆ, ಆಗ ಆ ರಾಜ್ಯಕ್ಕೆ ಹೊಂದಿಕೊಂಡಿರುವ ಇನ್ನೊಂದು ರಾಜ್ಯದ ಉನ್ನತ ನ್ಯಾಯಾಲಯವನ್ನೇ ಆ ರಾಜ್ಯದ ಅಥವಾ ಪ್ರದೇಶಕ್ಕೆ ಉನ್ನತ ನ್ಯಾಯಾಲಯವೆಂದು ಘೋಷಿಸುವ ಅಧಿಕಾರ ಸಂಸತ್ತಿಗಿದೆ ಎಂದು ಹೇಳಲಾಗಿದೆ.

**ಮಾನ್ಯ ಸಭಾಧ್ಯಕ್ಷ:** ಈ ವಿಧಿಗೆ ಯಾವ ತಿದ್ದುಪಡಿಯೂ ಇರುವುದಿಲ್ಲ. ಅದರ ಬಗ್ಗೆ ಯಾರಾದರೂ ಏನನ್ನಾದರೂ ಹೇಳುವುದಿದೆಯೇ? ಹಾಗಾದರೆ ಅದನ್ನು ಮತಕ್ಕೆ ಹಾಕುವೆ

ಇರುವ ಪ್ರಶ್ನೆ ಎಂದರೆ

"೨೧೩–ಎ ಹೊಸ ವಿಧಿಯ ಸಂವಿಧಾನಕ್ಕೆ ಸೇರಿದೆ"

ಸೂಚನೆ ಅಂಗೀಕೃತವಾಯಿತು.

**೨೧೩–ಎ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

## ವಿಧಿ ೨೧೪*

**ಮಾನ್ಯ ಸಭಾಧ್ಯಕ್ಷರು:** ಇನ್ನೂ ಡಾ. ಅಂಬೇಡ್ಕರರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೫೫ನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ವಿಷಯವನ್ನು ಹೀಗೆ ಮಂಡಿಸುತ್ತಿದ್ದೇನೆ.

"ತಿದ್ದುಪಡಿಗಳ ಪಟ್ಟಿಯಲ್ಲಿ ೨೧೪ನೆಯ ವಿಧಿಗೆ ಸಂಬಂಧಿಸಿದ ತಿದ್ದುಪಡಿ ಸಂಖ್ಯೆ ೨೭೨೮ರಲ್ಲಿ ಈ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು.

'೨೧೪ (೧) ಸಂಸತ್ತು ತನ್ನ ಕಾನೂನಿನ ಮೂಲಕ ಇನ್ನೇನನ್ನಾದರೂ ಹೇಳುವವರೆಗೆ ಕೊಡಗಿನ ವಿಧಾನ ಪರಿಷತ್ತಿನ ರಚನೆ, ಅಧಿಕಾರ ಮತ್ತು ಕೆಲಸ ಕಾರ್ಯಗಳು ಈ ಸಂವಿಧಾನ ಜಾರಿಯಾಗುವುದಕ್ಕೆ ಮುಂಚೆ ಇದ್ದ ಹಾಗೆಯೇ ಮುಂದುವರಿಯುವವು.

(೨) ಕೊಡಗಿ(ಕೂರ್ಗ್)ನಲ್ಲಿ ಸಂಗ್ರಹಿಸಲಾದ ತೆರಿಗೆಗಳು ಮತ್ತು ಮಾಡಲಾಗುವ ಖರ್ಚುಗಳು, ರಾಷ್ಟ್ರಪತಿಗಳ ಬೇರೆ ವ್ಯವಸ್ಥೆ ಮಾಡುವವರೆಗೆ ಮೊದಲಿನಂತೆಯೇ ಇರುವುವು."

ಈ ವಿಧಿಯಲ್ಲಿ ಹೊಸತೇನೂ ಇಲ್ಲ. ಮುಖ ವಿಧಿಯಲ್ಲಿ ಈ ಎರಡೂ ಭಾಗಗಳನ್ನು ಒಂದರಲ್ಲೇ ಸೇರಿಸಲಾಗಿತ್ತು.

**(೨೧೪ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.)**

* * *

## ವಿಧಿ ೨೭೫**

**ಮಾನ್ಯ ಸಭಾಧ್ಯಕ್ಷರು:** ಇನ್ನು ೨೭೫ನೆಯ ವಿಧಿಯನ್ನು ತೆಗೆದುಕೊಳ್ಳೋಣ. ತಿದ್ದುಪಡಿ ಸಂಖ್ಯೆ III ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಇದನ್ನು ಮಂಡಿಸುತ್ತಿದ್ದೇನೆ.

"೨೭೫ನೆಯ ವಿಧಿಯ ಬದಲಾಗಿ ಈ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು:

### ತುರ್ತು ಪರಿಸ್ಥಿತಿಯ ಉದ್ಘೋಷಣೆ

'೨೭೫ (೧) ಭಾರತ ಅಥವಾ ಅದರ ಯಾವುದೇ ಪ್ರದೇಶದಲ್ಲಿ ಅದರ ಭದ್ರತೆಗೆ ಯುದ್ಧ ಅಥವಾ ಬಾಹ್ಯ ಆಕ್ರಮಣ ಅಥವಾ ಆಂತರಿಕ ಗಲಭೆಗಳ ಕಾರಣ ಗಂಭೀರ ತುರ್ತು ಪರಿಸ್ಥಿತಿ ಉಂಟಾಗಿದೆ ಎಂದು ರಾಷ್ಟ್ರಪತಿಗಳಿಗೆ ಮನವರಿಕೆಯಾದರೆ ಅವರು ಆ ಬಗ್ಗೆ ತುರ್ತುಪರಿಸ್ಥಿತಿಯ ಉದ್ಘೋಷಣೆ ಮಾಡಬಹುದು.

(೨) ಈ ವಿಧಿಯ ಕಲಮು (೧)ರ ಪ್ರಕಾರ ಹೊರಡಿಸುವ ಉದ್ಘೋಷಣೆಯ (ಈ ಸಂವಿಧಾನದಲ್ಲಿ 'ತುರ್ತು ಪರಿಸ್ಥಿತಿಯ ಉದ್ಘೋಷಣೆ' ಎಂದು ಕರೆಯಲಾದ)

---

* ಸಿ.ಎ.ಡಿ. ಸಂ. IX, ೧ನೇ ಆಗಸ್ಟ್ ೧೯೪೯, ಪುಟ ೧೧೩.

** ಅದೇ, ಪುಟ ೧೧೩–೦೪.

(ಎ) ಅದನ್ನು ನಂತರ ಉದ್ಘೋಷಣೆಯಿಂದ ರದ್ದುಪಡಿಸಬಹುದು.

(ಬಿ) ಅದನ್ನು ಸಂಸತ್ತಿನ ಪ್ರತಿಯೊಂದು ಸದನದಲ್ಲಿ ಮಂಡಿಸತಕ್ಕದ್ದು.

(ಸಿ) ಅದರ ಘೋಷಣೆಯ ಎರಡು ತಿಂಗಳೊಳಗಾಗಿ, ಸಂಸತ್ತಿನ ಎರಡೂ ಸದನಗಳು ತಮ್ಮ ನಿರ್ಣಯಗಳ ಮೂಲಕ ಅದನ್ನು ಅಂಗೀಕರಿಸದೇ ಹೋದರೆ ಎರಡು ತಿಂಗಳ ನಂತರ ಅದು ಸಿಂಧುವಾಗಲಾರದು.

ಪರಂತು, ಲೋಕಸಭೆಯು ವಿಸರ್ಜಿತವಾದಾಗ ಅಥವಾ ಮೇಲೆ ಹೇಳಿದ ಈ ವಿಧಿಯ ಉಪಕಲಮು (ಸಿ)ಯಲ್ಲಿ ಹೇಳಲಾದ ಎರಡು ತಿಂಗಳೊಳಗಾಗಿ ಲೋಕಸಭೆಯ ವಿಸರ್ಜನೆಯಾದರೆ, ಎರಡು ತಿಂಗಳ ಅವಧಿಯಲ್ಲಿ ಉದ್ಘೋಷಣೆಯನ್ನು ಲೋಕಸಭೆಯು ತನ್ನ ನಿರ್ಣಯದ ಮೂಲಕ ಅಂಗೀಕರಿಸದಿದ್ದರೆ, ಉದ್ಘೋಷಣೆಯು ಲೋಕಸಭೆಯನ್ನು ಪುನರ್ ಘಟಿಸಿದ ನಂತರ ಅದರ ಅಧಿವೇಶನದ ಮೊದಲನೆಯ ದಿನದಿಂದ ಮೂವತ್ತು ದಿನಗಳೊಳಗಾಗಿ ಅಂಗೀಕೃತವಾಗಿರದಿದ್ದರೆ, ಇಲ್ಲವೆ ಅದರೊಳಗಾಗಿಯೇ ಉದ್ಘೋಷಣೆಯನ್ನು ಸಂಸತ್ತಿನ ಎರಡೂ ಸದನಗಳು ಅಂಗೀಕರಿಸದಿದ್ದರೆ ಆ ಉದ್ಘೋಷಣೆಯು ರದ್ದಾದಂತೆ ತಿಳಿಯತಕ್ಕದ್ದು.

(೩) ಭಾರತದ ಅಥವಾ ಅದರ ಯಾವುದೇ ಪ್ರದೇಶದ ಭದ್ರತೆ ಯುದ್ಧ ಅಥವಾ ಬಾಹ್ಯ ಆಕ್ರಮಣ ಅಥವಾ ಆಂತರಿಕ ಗಲಭೆಗಳ ಕಾರಣ ತುರ್ತು ಪರಿಸ್ಥಿತಿಯ ಘೋಷಣೆಯನ್ನು ಅಂತಹ ಯುದ್ಧ ಅಥವಾ ಬಾಹ್ಯ ಆಕ್ರಮಣ ಅಥವಾ ಆಂತರಿಕ ಗಲಭೆಗಳು ಸಂಭವಿಸುವ ಅಪಾಯ ಅಥವಾ ಸಾಧ್ಯತೆ ರಾಷ್ಟ್ರಪತಿಗಳಿಗೆ ಮನವರಿಕೆಯಾದರೆ ಅವರು ತುರ್ತು ಪರಿಸ್ಥಿತಿಯ ಘೋಷಣೆಯನ್ನು ಮುನ್ನೆಚ್ಚರಿಕೆಯ ರೂಪದಲ್ಲಿ ಮೊದಲೇ ಮಾಡಬಹುದು.

ಈ ವಿಧಿಯ ಕರಡು ಸಂವಿಧಾನದ ಹಳೆಯ ೨೭೫ನೆಯ ವಿಧಿಯ ತದ್ರೂಪವಾಗಿದೆ. ಈ ತಿದ್ದುಪಡಿಯ ಮೂಲಕ ಮಾಡಲಾದ ಬದಲಾವಣೆಗಳು ಅತ್ಯಲ್ಪ. ಕಲಮು (೧)ರಲ್ಲಿ ಮಾಡಲಾದ ಮೊದಲನೆಯ ಬದಲಾವಣೆ ಎಂದರೆ, ಮೂಲದಲ್ಲಿ "ಯುದ್ಧ ಅಥವಾ ಆಂತರಿಕ ಹಿಂಸಾಚಾರ" ಎಂಬ ಪದಗಳಿದ್ದವು. ಈಗ ತಿದ್ದುಪಡಿಯಾಗುವ ವಿಧಿಯಲ್ಲಿ "ಯುದ್ಧ ಅಥವಾ ಬಾಹ್ಯ ಆಕ್ರಮಣ ಅಥವಾ ಆಂತರಿಕ ಗಲಭೆ" ಎಂಬ ಪದಗಳ ಬದಲು ಈ ಪದಗಳನ್ನು ಉಪಯೋಗಿಸುವುದು ಹೆಚ್ಚು ಸೂಕ್ತವೆನಿಸಿತು, ಏಕೆಂದರೆ ಅದರಲ್ಲಿ ಯುದ್ಧ ಸ್ವರೂಪದ್ದಾಗಿರದ ಅಥವಾ ವಾಸ್ತವಿಕವಾಗಿ ಯುದ್ಧವಾಗಿರದ ಪರಿಸ್ಥಿತಿ ಸೇರಿರಲಾರದು.

ಕಲಮು (೨)ರ ಉಪಕಲಮು (ಸಿ)ನಲ್ಲಿ ಮಾಡಲಾದ ಬದಲಾವಣೆ ಎರಡನೆಯದು. ತಿಂಗಳ ಅವಧಿಯ ನಂತರ ಘೋಷಣೆಯು ರದ್ದಾಗುವುದೆಂದು ಮೂಲದಲ್ಲಿ ಹೇಳಲಾಗಿತ್ತು. ಈಗ ಇದರಲ್ಲಿ ಅದು ಎರಡು ತಿಂಗಳ ನಂತರ ರದ್ದಾಗುವುದೆಂದು ಹೇಳಲಾಗಿದೆ. ಆರು ತಿಂಗಳ ಅವಧಿ ಹೆಚ್ಚಾಗುವುದೆಂದು ಅನಿಸಿತು.

ಈ ಪರಂತುಕವೂ ಹೊಸದಾಗಿದ್ದು, ಇದರಲ್ಲಿ ಲೋಕಸಭೆಯು ವಿಸರ್ಜಿತವಾದಾಗ ಮತ್ತು ಘೋಷಣೆ ಮಾಡಬಹುದಾದ ಪ್ರಸಂಗವನ್ನು ಪರಿಗಣಿಸಿದೆ. ಇದರಲ್ಲಿ ಸದನದ ವಿಸರ್ಜನೆಯಾದಾಗ ಅಥವಾ ಹಳೆಯ ಸದನದ ವಿಸರ್ಜನೆ ಮತ್ತು ಹೊಸ ಸದನದ ಚುನಾವಣೆಯಾದಾಗ ಘೋಷಣೆ ಮಾಡಿದುದಾದರೆ ಹೊಸ ಸದನವು ಮೂವತ್ತು ದಿನಗಳೊಳಗಾಗಿ ಘೋಷಣೆಯನ್ನು ಅನುಸಮರ್ಥಿಸಬಹುದು.

ಕೊನೆಯ ಕಲಮು ಸ್ವಯಂ ಸ್ಪಷ್ಟವಿದೆ. ಅದು ಕಲಮು (೧)ರ ಉದ್ದೇಶವನ್ನು ಸ್ಪಷ್ಟಗೊಳಿಸುತ್ತದೆ.

ಅದೇನೆಂದರೆ ತುರ್ತು ಪರಿಸ್ಥಿತಿ ವಾಸ್ತವದಲ್ಲಿ ಉಂಟಾಗಿರದಿದ್ದರೂ ಅಂತಹ ಅಪಾಯ ಉಂಟಾಗಬಹುದೆಂಬ ಭೀತಿ ಇದ್ದಾಗಲೂ ರಾಷ್ಟ್ರಪತಿಗಳು ಈ ಕಲಮಿನನ್ವಯ ತಕ್ಕ ಕ್ರಮ ಕೈಗೊಳ್ಳಬಹುದಾಗಿದೆ.

* * *

***ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಆದ್ದರಿಂದ ಈ ಉಪಬಂಧಗಳ ಬಗ್ಗೆ ಎತ್ತಲಾದ ಸಂಗತಿಗಳು ಅಸಂಗತವಾಗಿವೆ. ಏಕೆಂದರೆ ಇದರಲ್ಲಿ ಸಂಸತ್ತಿನ ಅಧಿಕಾರಗಳನ್ನು ಸಂರಕ್ಷಿಸಲಾಗಿದೆ. ಈ ಚರ್ಚೆಯ ಮಧ್ಯ ಪ್ರವೇಶಿಸುವ ಮೂಲಕ ಇಂತಹ ಉಪಬಂಧಗಳನ್ನು ಸಂವಿಧಾನದಲ್ಲಿ ಸೇರಿಸಲು ಯಾರಿಗೂ ಸಂತೋಷವಾಗಲಾರದು. ಆದರೆ ಅದೇ ಕಾಲದಲ್ಲಿ ಇಂತಹ ಉಪಬಂಧಗಳನ್ನು ಸೇರಿಸದೇಹೋದರೆ, ನಮ್ಮ ಕರ್ತವ್ಯದಲ್ಲಿ ಚ್ಯುತಿಯುಂಟಾಗುವುದು. ಇವುಗಳು ಭವಿಷ್ಯದಲ್ಲಿ ದೇಶದ ವಿದ್ಯಮಾನಗಳ ಮೇಲೆ ನಿಯಂತ್ರಣ ಹೊಂದಬೇಕಾದವರಿಗೆ ಸಂವಿಧಾನ ರಕ್ಷಿಸಲು ಸಹಕಾರಿಯಾಗುತ್ತವೆ. ಆದ್ದರಿಂದ ಈ ಸದನದಲ್ಲಿ ಮತ್ತು ಇತರ ಕಡೆಗೆ ಇರುವವರಿಗೆ ಈ ತುರ್ತುಪರಿಸ್ಥಿತಿ ಘೋಷಣೆಯ ಉಪಬಂಧಗಳು ಅನಿವಾರ್ಯ ಪೀಡೆಗಳಾಗಿದ್ದು, ಇವುಗಳನ್ನು ಸಹಿಸಿಕೊಳ್ಳಬೇಕಾಗಿದೆ ಎಂದು ಅರ್ಥವಾಗದಿರದು. ಮತ್ತು ಈ ಉಪಬಂಧಗಳಿಲ್ಲದೇ ಹೋದರೆ ಸಂವಿಧಾನವನ್ನು ರಚಿಸುವ ನಮ್ಮ ಈ ಎಲ್ಲಾ ಪ್ರಯತ್ನ ವಿಫಲವಾಗುವುದಲ್ಲದೆ, ಕಾರ್ಯಾಂಗಕ್ಕೆ ಸಂವಿಧಾನವನ್ನು ರಕ್ಷಿಸುವಂತಹ ಈ ಅಧಿಕಾರ ಕೊಡದೆ ಇದ್ದಲ್ಲಿ ಸಂವಿಧಾನವೇ ಗಂಡಾಂತರಕ್ಕೊಳಗಾಗಬಹುದು. ಮಾನ್ಯರೆ, ನಾನು ಗೌರವಾನ್ವಿತ ಡಾ. ಅಂಬೇಡ್ಕರರು ಮಂಡಿಸಿರುವ ಈ ತಿದ್ದುಪಡಿಯನ್ನು ಅನುಮೋದಿಸುತ್ತೇನೆ.

**ಶ್ರೀ ಹೆಚ್. ವಿ. ಕಾಮತ್:** ನಾನು ಹೇಳಿದಂತೆ ಜರ್ಮನಿಯ ವೈಮಾರ್ ಸಂವಿಧಾನದ ೪೨ನೆಯ ವಿಧಿಯನ್ನೇ ಉಪಯೋಗಿಸಿಕೊಂಡು ಹಿಟ್ಲರನು ತನ್ನ ಸರ್ವಾಧಿಕಾರ ಸ್ಥಾಪಿಸಿದ ಎಂಬ ಅಂಶವನ್ನು ನನ್ನ ಮಿತ್ರ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರಿಗೆ ಹೇಳಬಹುದೇ?

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರರು ಮಾತನಾಡಬಯಸಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ನನಗೆ ತಿಳಿಯದು. ಈ ಚರ್ಚೆ ಸಾಕಷ್ಟು ಸಮಯ ತೆಗೆದುಕೊಂಡಿದೆ. ಈ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರು ನಾನು ಏನನ್ನಾದರೂ ಹೇಳಬೇಕು ಎಂದು ಬಯಸಿದರೆ, ಹಾಗೆ ಮಾಡಲು ನನಗೆ ಸಂತೋಷವೆನಿಸುವುದು. ಆದಾಗ್ಯೂ ನಾಳೆ ಅದನ್ನು ಹೇಳಬಹುದಾಗಿದೆ.

**ಮಾನ್ಯ ಸಭಾಧ್ಯಕ್ಷ:** ಸದಸ್ಯರು ಎತ್ತಿರುವ ಸಂಗತಿಗಳಿಗೆ ಈಗಾಗಲೇ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ವಿವರಣೆ ನೀಡಿದ್ದಾರೆ. ಆದ್ದರಿಂದ ಸದಸ್ಯರು ಎತ್ತಿರುವ ಅಂಶಗಳಿಗೆ ನೀವು ಉತ್ತರ ಕೊಡಬೇಕಾದ ಅವಶ್ಯಕತೆ ಇದೆ ಎಂದು ನನಗನಿಸುವುದಿಲ್ಲ.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ನಮಗೆ ಇನ್ನಾವ ವಿವರಣೆಯ ಆವಶ್ಯಕತೆ ಇಲ್ಲ.

**ಮಾನ್ಯ ಸಭಾಧ್ಯಕ್ಷರು:** ನೀವು ಉತ್ತರಿಸದಿದ್ದರೆ ಅದರಿಂದ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವ ಸದಸ್ಯರುಗಳಿಗೆ ಅಗೌರವ ತೋರಿದಂತಾಗುವುದು ಎಂದು ಅರ್ಥ. ಆದರೆ, ನೀವು ಉತ್ತರ ನೀಡಬಯಸುವುದಾದರೆ, ನಾನು ನಿಮ್ಮನ್ನು ತಡೆಯಲಾರೆ. ಉತ್ತರ ಕೊಡಲು ನೀವು ಹೆಚ್ಚು ಸಮಯ ತೆಗೆದುಕೊಳ್ಳುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಸ್ವಲ್ಪ ಸಮಯ ತೆಗೆದುಕೊಳ್ಳುವೆ. ಶ್ರೀ ಟಿ. ಟಿ.

---

* ಸಿ.ಎ.ಡಿ. ಸಂ. IX, ೧ನೇ ಆಗಸ್ಟ್ ೧೯೪೯, ಪುಟ ೧೨೫–೨೬.

ಕೃಷ್ಣಮಾಚಾರಿಯವರು ಈಗಾಗಲೇ ಎಲ್ಲಾ ಅಂಶಗಳಿಗೂ ಉತ್ತರ ಕೊಟ್ಟಿರುವವರಾದ್ದರಿಂದ ನನ್ನ ಉತ್ತರದ ಅವಶ್ಯ ಇಲ್ಲ ಎಂದುಕೊಂಡಿದ್ದೆ.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಅವರ ಉತ್ತರವನ್ನು ನಾಳೆ ಕೇಳಿದರಾಯಿತು. ಏನೇ ಆಗಲಿ, ನಾವು ಅವರ ಉತ್ತರ ಕೇಳಬಯಸುತ್ತೇವೆ.

**ಮಾನ್ಯ ಸಭಾಧ್ಯಕ್ಷರು:** ನಾನು ಸಮಯದ ಬಗ್ಗೆ ಯೋಚಿಸುತ್ತಿದ್ದೆ. ಯಾವುದೇ ಅಂಶಕ್ಕೆ ಉತ್ತರ ಪಡೆಯಬೇಕಾಗಿದೆ ಎಂದು ನನಗನಿಸುವುದಿಲ್ಲ. ಈಗ ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುವೆ.

**[ಎಲ್ಲಾ ೪ ತಿದ್ದುಪಡಿಗಳೂ ತಿರಸ್ಕೃತವಾದವು. ಡಾ. ಅಂಬೇಡ್ಕರರು ಮಂಡಿಸಿದ ೨೭೫ನೆಯ ವಿಧಿಯ ಅಂಗೀಕೃತವಾಗಿ ಸಂವಿಧಾನದಲ್ಲಿ ಸೇರಿಸಲಾಯಿತು.]**

* * *

## ವಿಧಿ ೨೭೬*

**ಶ್ರೀ ನಝಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ, ಮುಸ್ಲಿಂ): ೩೦೦೩ ಕೇವಲ ಕರಡು ರೂಪದಲ್ಲಿರುವ ತಿದ್ದುಪಡಿಯಾಗಿದೆ ಎಂದು ನಾನು ಹೇಳಬಹುದೇ? ಅದರಲ್ಲಿ ಪದಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸೇರಿಸಲಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ, ಸಾಮಾನ್ಯ): ಅದು ಹಾಗಿದ್ದರೆ, ನಾನು ಅದಕ್ಕೆ ಸಮ್ಮತಿಸುತ್ತೇನೆ.

(೩೦೦೪ ಮತ್ತು ೩೦೦೫ನೆಯ ತಿದ್ದುಪಡಿಗಳನ್ನು ಮಂಡಿಸಲಿಲ್ಲ)

**ಮಾನ್ಯ ಸಭಾಧ್ಯಕ್ಷರು:** ೩೦೦೬ ಕರಡು ರೂಪದಲ್ಲಿಲ್ಲ. ೩೦೦೬ನೆಯದು ೩೦೦೩ರ ಪರಿಮಾಣ ಸ್ವರೂಪದ್ದಾಗಿದೆ. ಆದ್ದರಿಂದ ಇವೆರಡನ್ನೂ ಮಂಡಿಸುವುದು ಒಳ್ಳೆಯದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಇದನ್ನು ಮಂಡಿಸಬಯಸುತ್ತೇನೆ.

"೨೭೬ನೆಯ ವಿಧಿಯಲ್ಲಿ 'ನಂತರ' ಎಂಬ ಪದದ ತರುವಾಯ ಬರುವ 'ಈ ಸಂವಿಧಾನದಲ್ಲಿ ಏನೇ ಹೇಳಿದ್ದಾಗ್ಯೂ, ಎಂಬ ಪದಗಳನ್ನು ಕೈಬಿಡಬೇಕು ಮತ್ತು ಇದೇ ವಿಧಿಯ ಕಲಮು (ಎ)ದ ಆರಂಭದಲ್ಲಿ 'ಈ ಸಂವಿಧಾನದಲ್ಲಿ ಏನೇ ಹೇಳಿದ್ದಾಗ್ಯೂ' ಎಂದಿರುವ ಪದಗಳನ್ನು ಸೇರಿಸತಕ್ಕದ್ದು."

ನಾನು ಇನ್ನೂ ಸೂಚಿಸುವುದೇನೆಂದರೆ:

"೨೭೬ನೆಯ ವಿಧಿಯ ಕಲಮು (ಬಿ)ಯಲ್ಲಿ 'ಅದು ಒಕ್ಕೂಟ ಪಟ್ಟಿ(ಯೂನಿಯನ್ ಲಿಸ್ಟ್)ಯಲ್ಲಿ ನಮೂದಿಸಿಲ್ಲವೆಂದಾಗ್ಯೂ ಎಂಬ ಪದಗಳನ್ನು ಕೊನೆಯಲ್ಲಿ ಸೇರಿಸತಕ್ಕದ್ದು."

(ಪೂರಕ ಪಟ್ಟಿಯಲ್ಲಿರುವ ತಿದ್ದುಪಡಿ ಸಂಖ್ಯೆ ೧೧೯ನ್ನು ಮಂಡಿಸಲಿಲ್ಲ)

**ಮಾನ್ಯ ಸಭಾಧ್ಯಕ್ಷರು:** ಇನ್ನಾವ ತಿದ್ದುಪಡಿಯೂ ಇಲ್ಲ.

* * *

---

* ಸಿ.ಎ.ಡಿ. ಸಂ. IX, ೧ನೇ ಆಗಸ್ಟ್ ೧೯೪೯, ಪುಟ ೧೨೯.

***ಶ್ರೀ ಟಿ. ಟಿ. ಕೃಷ್ಣಮಾಚಾರಿ** (ಮದ್ರಾಸು, ಸಾಮಾನ್ಯ): ಮಾನ್ಯ ಸಭಾಧ್ಯಕ್ಷರೆ, ನನ್ನ ಮಿತ್ರ ಶ್ರೀ ನಜಿರುದ್ದೀನ್ ಅಹ್ಮದ್‌ರವರು ಭಾರತ ಸರಕಾರ ಕಾಯ್ದೆಯ ೧೨೬–ಎ ವಿಭಾಗವನ್ನು ಇನ್ನೊಮ್ಮೆ ನೋಡಿದ್ದೇ ಆದರೆ ಡಾ. ಅಂಬೇಡ್ಕರರ ತಿದ್ದುಪಡಿಯ ಆವಶ್ಯಕತೆ ಏನು ಎಂಬುದು ಅವರಿಗೆ ತಿಳಿಯುವುದು. ಏಕೆಂದರೆ, ೨೭೬–ಬಿಯಲ್ಲಿ ತುರ್ತು ಪರಿಸ್ಥಿತಿಯ ಕಾಲದಲ್ಲಿ ಒಕ್ಕೂಟ(ಸರಕಾರ)ಕ್ಕೆ ಕಾರ್ಯಾಂಗದ ಅಧಿಕಾರವನ್ನು ನೀಡುತ್ತದೆ. ಇದನ್ನು ಸಂಪೂರ್ಣ ಸ್ಪಷ್ಟಪಡಿಸಲು ಈ ಪದಗಳ ಅಗತ್ಯವಿದೆ. ಭಾರತ ಸರಕಾರ ಕಾಯ್ದೆಯ ೧೨೬–ಎ ವಿಭಾಗದಲ್ಲಿರುವ ಮಾತುಗಳನ್ವಯವೇ ಇದನ್ನು ಸ್ಪಷ್ಟಪಡಿಸಲಾಗಿದೆ. ಈ ವಿಭಾಗವನ್ನು ಅವರು ಇನ್ನೊಮ್ಮೆ ಓದಿ ನೋಡಿದರೆ, ಈ ವಿಧಿಯಲ್ಲಿ ಬಳಸಲಾದ ಈ ಪದಗಳಿಗೆ ಅವರ ಅಭ್ಯಂತರವಿರಲಾರದು.

**ಮಾನ್ಯ ಸಭಾಧ್ಯಕ್ಷ:** ಡಾ. ಅಂಬೇಡ್ಕರ್‌ರವರೇ ನೀವು ಏನನ್ನು ಹೇಳಬಯಸುವುದಿಲ್ಲವೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಹೇಳುವ ಅವಶ್ಯತೆ ಏನೂ ಇಲ್ಲ.

**ಮಾನ್ಯ ಸಭಾಧ್ಯಕ್ಷ:** ಹಾಗಾದರೆ, ನಾನು ಈಗ ತಿದ್ದುಪಡಿಗಳನ್ನು ಮತಕ್ಕೆ ಹಾಕುವೆ.

[**ಡಾ. ಅಂಬೇಡ್ಕರರ ತಿದ್ದುಪಡಿ ಸ್ವೀಕೃತವಾಯಿತು. ತಿದ್ದುಪಡಿಯಾದ ೨೭೬–ಎ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**]

## ವಿಧಿಗಳು ೧೮೮, ೨೭೭ಎ, ೨೭೮ ಮತ್ತು ೨೭೮ಎ**

**ಮಾನ್ಯ ಸಭಾಧ್ಯಕ್ಷ:** ಇನ್ನೂ ನಾವು ೨೭೭ನೆಯ ವಿಧಿಯನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸದ್ಯಕ್ಕೆ ನಾನು ೨೭೭ನೆಯ ವಿಧಿಯನ್ನು ತಡೆಹಿಡಿಯ ಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಹಾಗಾದರೆ ೨೭೭–ಎ ವಿಧಿಯನ್ನು ತೆಗೆದುಕೊಳ್ಳೋಣವೇ? ಸದ್ಯಕ್ಕೆ ೨೭೭ನೆಯ ವಿಧಿಯನ್ನು ತಡೆಹಿಡಿಯಲಾಗಿದೆ. ಈಗ ನಾವು ೨೭೭–ಎ ವಿಧಿಯನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ಮೂರೂ ತಿದ್ದುಪಡಿಗಳನ್ನು ಒಟ್ಟಿಗೆ ತೆಗೆದುಕೊಳ್ಳುವುದು ಒಳ್ಳೆಯದೆಂದು ನನಗನಿಸುತ್ತದೆ. ಅವಾವುವೆಂದರೆ, ೧೮೮ನೆಯದನ್ನು ಕೈಬಿಡುವ ತಿದ್ದುಪಡಿ, ೨೭೭–ಎ ಎಂಬ ಹೊಸ ವಿಧಿಯನ್ನು ಮಂಡಿಸುವುದು, ಮತ್ತು ೨೭೮ನೆಯ ಹಳೆಯ ವಿಧಿಗೆ ಬದಲಾಗಿ ೨೭೮ ಮತ್ತು ೨೭೮–ಎ ಎಂಬ ಎರಡು ಹೊಸ ವಿಧಿಗಳನ್ನು ಸೇರಿಸುವುದು. ಏಕೆಂದರೆ, ಅವುಗಳು ಒಂದಕ್ಕೊಂದು ಸಂಬಂಧ ಹೊಂದಿವೆ. ಅವುಗಳನ್ನು ಪ್ರತ್ಯೇಕವಾಗಿ ಮತದಾನಕ್ಕೆ ಹಾಕಬಹುದು. ಆದರೆ, ಚರ್ಚೆಗಾಗಿ ಅವನ್ನು ಒಟ್ಟಿಗೆ ತೆಗೆದುಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು:** ೧೮೮, ೨೭೮ ಮತ್ತು ೨೭೮–ಎ ವಿಧಿಗಳನ್ನು ಒಟ್ಟಿಗೇ ತೆಗೆದುಕೊಳ್ಳಬಹುದು. ಏಕೆಂದರೆ ಅವು ಒಂದಕ್ಕೊಂದು ಸಂಬಂಧ ಹೊಂದಿವೆ. ಈ ಮೂರೂ ವಿಧಿಗಳ ಚರ್ಚೆಯನ್ನು ಒಟ್ಟಿಗೆ ತೆಗೆದುಕೊಂಡು ಅವುಗಳನ್ನು ಪ್ರತ್ಯೇಕವಾಗಿ ಮತಕ್ಕೆ ಹಾಕಬಹುದು.

---

* ಸಿ.ಎ.ಡಿ. ಸಂ. IX, ೧ನೇ ಆಗಸ್ಟ್ ೧೯೪೯, ಪುಟ ೧೩೦.

** ಅದೇ, ಪುಟ ೧೩೦–೩೫.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುವುದೇನೆಂದರೆ,

"೧೮೮ನೆಯ ವಿಧಿಯನ್ನು ಕೈಬಿಡತಕ್ಕದ್ದು" ಮತ್ತು "೨೭೭ನೆಯ ನಂತರ ಈ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು:

## ರಾಜ್ಯದಲ್ಲಿ ಸಂವಿಧಾನಾತ್ಮಕ ವ್ಯವಸ್ಥೆ ಕುಸಿದುಬಿದ್ದಾಗ

೨೭೭–ಎ. ಪ್ರತಿಯೊಂದು ರಾಜ್ಯವನ್ನು ಬಾಹ್ಯ ಆಕ್ರಮಣ ಮತ್ತು ಆಂತರಿಕ ಗಲಭೆಗಳಿಂದ ರಕ್ಷಿಸುವುದೆ ಮತ್ತು ಪ್ರತಿಯೊಂದು ರಾಜ್ಯ ಸರಕಾರವನ್ನು ಸಂವಿಧಾನದ ಉಪಬಂಧಗಳ ಪ್ರಕಾರ ನಡೆಸಿಕೊಂಡು ಹೋಗಲಾಗುತ್ತಿದೆ ಎಂದು ಖಾತ್ರಿ ಮಾಡಿಕೊಳ್ಳತಕ್ಕದ್ದು."

ಮಾನ್ಯರೆ, ಇದರ ನಂತರ ನಾನು ಎರಡನೆಯ ಪಟ್ಟಿಯಲ್ಲಿರುವ ತಿದ್ದುಪಡಿ ಸಂಖ್ಯೆ ೧೬೦ನ್ನು ಮಂಡಿಸುವೆ. ಅದು ಹೀಗಿದೆ:

"೨೭೮ನೆಯ ಬದಲು ಈ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು.

೨೭೮ (೧) ಯಾವುದೇ ರಾಜ್ಯದಲ್ಲಿ ಸರಕಾರವನ್ನು ಸಂವಿಧಾನದ ಉಪಬಂಧಗಳ ಪ್ರಕಾರ ನಡೆಸುವುದು ಸಾಧ್ಯವಿಲ್ಲ ಎಂದು ರಾಷ್ಟ್ರಪತಿಗಳಿಗೆ ಆ ರಾಜ್ಯದ ರಾಜ್ಯಪಾಲ ಅಥವಾ ಆಡಳಿತಗಾರ ಅಥವಾ ಇನ್ನಾವುದೇ ಮೂಲದ ವರದಿಯ ಪ್ರಕಾರ ಮನವರಿಕೆಯಾದರೆ ರಾಷ್ಟ್ರಪತಿಗಳು ತಮ್ಮ ಉದ್ಘೋಷಣೆಯ ಮೂಲಕ

(ಎ) ಆ ರಾಜ್ಯದ ಎಲ್ಲಾ ಅಥವಾ ಯಾವುದೇ ಕರ್ತವ್ಯಗಳನ್ನು ತಾವೇ ವಹಿಸಿಕೊಳ್ಳುವುದು ಮತ್ತು ರಾಜ್ಯಪಾಲ ಅಥವಾ ಆಡಳಿತಗಾರರಿಗೆ ನೀಡಲಾದ ಯಾವುದೇ ಅಧಿಕಾರ ಅಥವಾ ಅವರು ಚಲಾಯಿಸಬಹುದಾದ ಯಾವುದೇ ಅಧಿಕಾರಗಳನ್ನು ಆಥವಾ ರಾಜ್ಯದ ಶಾಸಕಾಂಗದ ಹೊರತು ಇನ್ನಾವುದೇ ಸಂಸ್ಥೆ ಅಥವಾ ಪ್ರಾಧಿಕಾರ ಹೊಂದಿರುವ ಅಧಿಕಾರಗಳನ್ನು ತಾವೇ ವಹಿಸಿಕೊಳ್ಳುವುದು.

(ಬಿ) ರಾಜ್ಯದ ಶಾಸಕಾಂಗದ ಅಧಿಕಾರಗಳನ್ನು ಸಂಸತ್ತು ಅಥವಾ ಸಂಸತ್ತಿನ ಅಧಿಕಾರದಡಿಯಲ್ಲಿ ಚಲಾಯಿಸತಕ್ಕದ್ದು ಎಂದು ಸಾರುವುದು.

(ಸಿ) ಈ ಸಂವಿಧಾನದಲ್ಲಿ ರಾಜ್ಯದ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಯಾವುದೇ ಉಪಬಂಧಗಳನ್ನು ಇಡಿಯಾಗಿ ಇಲ್ಲವೆ ಭಾಗಶಃ ಅಮಾನತ್ತಿರುವ ಮತ್ತು ತಮ್ಮ ಉದ್ಘೋಷಣೆಯ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಅವಶ್ಯವಿರುವ ಅಥವಾ ಅಪೇಕ್ಷಣೀಯವಾದ ಆನುಷಂಗಿಕ ಇಲ್ಲವೆ ಪ್ರಾಸಂಗಿಕ ಉಪಬಂಧಗಳನ್ನು ರಾಷ್ಟ್ರಪತಿಗಳು ಮಾಡುವುದು.

ಪರಂತು, ಈ ಕಲಮಿನಲ್ಲಿ ಹೇಳಿರುವ ಯಾವುದೂ ರಾಷ್ಟ್ರಪತಿಗಳು ಉಚ್ಚ ನ್ಯಾಯಾಲಯಕ್ಕೆ ನೀಡಲಾದ ಅಥವಾ ಚಲಾಯಿಸಬಹುದಾದ ಯಾವುದೇ ಅಧಿಕಾರಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳುವ ಅಥವಾ ಉಚ್ಚ ನ್ಯಾಯಾಲಯಗಳ ಯಾವುದೇ ಅಧಿಕಾರವನ್ನು ಇಡಿಯಾಗಿ ಅಥವಾ ಭಾಗಶಃ ಅಮಾನತ್ತಿನಲ್ಲಿಡುವ ಅಧಿಕಾರವನ್ನು ಅವರಿಗೆ ನೀಡುವುದಿಲ್ಲ. (೨) ಅಂತಹ ಯಾವುದೇ ಉದ್ಘೋಷಣೆಯ ತರುವಾಯದ ಉದ್ಘೋಷಣೆಯ ಮೂಲಕ ರದ್ದುಪಡಿಸಬಹುದು ಇಲ್ಲವೆ ಮಾರ್ಪಡಿಸಬಹುದು. (೩) ಈ ವಿಧಿಯನ್ವಯ ಹೊರಡಿಸಲಾದ, ಪ್ರತಿಯೊಂದು ಉದ್ಘೋಷಣೆಯನ್ನು ಸಂಸತ್ತಿಗೆ ಪ್ರತಿಯೊಂದು ಸದನದಲ್ಲಿ ಮಂಡಿಸತಕ್ಕದ್ದು. ಆ ಉದ್ಘೋಷಣೆಯು ಹಿಂದಿನ ಉದ್ಘೋಷಣೆಯನ್ನು ರದ್ದುಗೊಳಿಸಲಿಕ್ಕಾಗಿದ್ದರೆ ಅದನ್ನು ಹೊರತಾಗಿ ಇತರ ಉದ್ಘೋಷಣೆಗಳು ಅವುಗಳನ್ನು ಹೊರಡಿಸಿದ ಎರಡು ತಿಂಗಳುಗಳ ಒಳಗೆ ಸಂಸತ್ತಿನ ಎರಡೂ ಸದನಗಳು ತಮ್ಮ ನಿರ್ಣಯಗಳ ಮೂಲಕ ಸಮ್ಮತಿಸದಿದ್ದರೆ ಅಂತಹ ಉದ್ಘೋಷಣೆ ಜಾರಿಯಲ್ಲಿ ಉಳಿಯುವುದಿಲ್ಲ.

ಪರಂತು, ಅಂತಹ ಯಾವುದೇ ಉದ್ಘೋಷಣೆಯನ್ನು ಲೋಕಸಭೆಯು ವಿಸರ್ಜನೆಗೊಂಡಿರುವಾಗ ಹೊರಡಿಸಿದ್ದಾಗಿದ್ದರೆ ಅಥವಾ ಈ ಕಲಮಿನಲ್ಲಿ ಹೇಳಿರುವಂತೆ ಉದ್ಘೋಷಣೆಯಾದ ಎರಡು ತಿಂಗಳೊಳಗಡೆ ಲೋಕಸಭೆ ವಿಸರ್ಜಿತಗೊಂಡರೆ, ಮತ್ತು ಈ ಅವಧಿಯು ಮುಗಿಯುವದರೊಳಗೆ ಸಂಸತ್ತಿನ ಎರಡೂ ಸದನಗಳು ತಮ್ಮ ನಿರ್ಣಯದ ಮೂಲಕ ಉದ್ಘೋಷಣೆಗೆ ಸಮ್ಮತಿ ನೀಡಿದ್ದರೆ, ಅದು ಲೋಕಸಭೆಯು ಪುನರ್ಘಟಿತವಾದ ನಂತರದ ಅಧಿವೇಶನದ ಪ್ರಥಮ ದಿನದಿಂದ ಮೂವತ್ತು ದಿನಗಳೊಳಗಾಗಿ ಮತ್ತು ಈ ಅವಧಿ ಮುಗಿಯುವುದರೊಳಗಾಗಿ ಸಂಸತ್ತಿನ ಎರಡೂ ಸದನಗಳು ಆ ಉದ್ಘೋಷಣೆಯನ್ನು ಅಂಗೀಕರಿಸದಿದ್ದರೆ ಆ ಉದ್ಘೋಷಣೆಯು ರದ್ದಾಗುವುದು.

(೪) ಹಾಗೆ ಅಂಗೀಕರಿಸಲ್ಪಟ್ಟ ಉದ್ಘೋಷಣೆಯು, ರದ್ದಾಗಿರದಿದ್ದರೆ, ಈ ವಿಧಿಯ ಕಲಮು (೩)ರ ಪ್ರಕಾರ ಎರಡನೆಯ ನಿರ್ಣಯದ ಅಂಗೀಕಾರದ ದಿನದಿಂದ ಆರು ತಿಂಗಳುಗಳೊಳಗಾಗಿ ಅಂಗೀಕಾರ ವಾಗದಿದ್ದರೆ, ಆ ಉದ್ಘೋಷಣೆಯಾದ ಆರು ತಿಂಗಳ ಅವಧಿ ಮುಗಿದ ನಂತರ ಜಾರಿಯಲ್ಲಿರಲಾರದು.

ಪರಂತು ಅಂತಹ ಉದ್ಘೋಷಣೆಯನ್ನು ಸಂಸತ್ತಿನ ಎರಡೂ ಸದನಗಳು ಅದನ್ನು ಅಂಗೀಕರಿಸಿದ ದಿನದಿಂದ ಆರು ತಿಂಗಳಿಗೊಮ್ಮೆ ಅಂಗೀಕರಿಸುತ್ತಾ ಹೋದರೆ, ಅದು ಜಾರಿಯಲ್ಲಿರುತ್ತದೆ. ಆದರೆ ಅಂತಹ ಯಾವುದೇ ಉದ್ಘೋಷಣೆಯೂ ಮೂರು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಜಾರಿಯಲ್ಲಿ ಇರುವುದಿಲ್ಲ. ಭಾರತ ಸರಕಾರಕ್ಕೆ ಅಥವಾ ಅದರ ಅಧಿಕಾರಿಗಳು ಮತ್ತು ಪ್ರಾಧಿಕಾರಕ್ಕೆ ಕರ್ತವ್ಯಗಳನ್ನು ವಿಧಿಸುತ್ತವೆ.

(೨) ಸಂಸತ್ತಿನಿಂದ ಅಥವಾ ಅದು ನೀಡಿದ ಅಧಿಕಾರದಿಂದ ಮಾಡಲಾದ ಯಾವುದೇ ಕಾನೂನು ಮತ್ತು ಈ ವಿಧಿಯ ಕಲಮು (೧) ಉಪ–ಕಲಮು (ಎ)ರಲ್ಲಿ ಹೇಳಲಾದಂತೆ ಸಂಸತ್ತು ಅಥವಾ ರಾಷ್ಟ್ರಪತಿ ಅಥವಾ ಇನ್ನಾವುದೇ ಪ್ರಾಧಿಕಾರದಿಂದ ಮಾಡಲಾದ ಕಾನೂನು, ಈ ಸಂವಿಧಾನದ ೨೭೮ನೆಯ ವಿಧಿಯ ಪ್ರಕಾರ ಹೊರಡಿಸಿದ ಉದ್ಘೋಷಣೆಯಿಂದಾಗಿ ಅವರು ಮಾಡಲು ಹೊಂದಿದ ಅಧಿಕಾರವು ಉದ್ಘೋಷಣೆಯನ್ನು ಹೊರಡಿಸಿದ ಒಂದು ವರ್ಷದ ನಂತರ ಕಾನೂನಿನ ಅನರ್ಹತೆಯುಂಟಾದ ಕಾರಣ ಜಾರಿಯಲ್ಲುಳಿಯುವುದಿಲ್ಲ. ಈ ಅವಧಿಯು ಮುಗಿಯುವುದರೊಳಗಾಗಿಯೇ ಮಾಡಲಾದ ಅಥವಾ ಕೈಬಿಡಲಾದ ವಿಷಯಗಳಿಗೆ ರಾಜ್ಯದ ಶಾಸಕಾಂಗದಿಂದ ಮಾರ್ಪಾಡುಗಳೊಂದಿಗೆ ಅಥವಾ ಇದ್ದ ಹಾಗೆ ಪುನರಪಿ ಶಾಸನ ಮಾಡಿದ್ದರೆ ಪರಂತು ಇನ್ನೂ ಹೇಳುವುದೇನೆಂದರೆ ಯಾವುದೇ ಅಂತಹ ಆರು ತಿಂಗಳ ಅವಧಿಯಲ್ಲಿ ಲೋಕಸಭೆಯು ವಿಸರ್ಜನೆಯಾದರೆ ಮತ್ತು ಆ ಅವಧಿಯಲ್ಲಿ ಉದ್ಘೋಷಣೆಯನ್ನು ಸಂಸತ್ತಿನ ಎರಡೂ ಸದನಗಳು ಅಂಗೀಕರಿಸದಿದ್ದರೆ, ಆ ಉದ್ಘೋಷಣೆಯು ಲೋಕಸಭೆಯು ಪುನರ್ಘಟನೆಯಾದ ಅಧಿವೇಶನದ ಪ್ರಥಮ ದಿನದಿಂದ ಮೂವತ್ತು ದಿನಗಳೊಳಗಾಗಿ, ಈ ಅವಧಿಯು ಮುಗಿಯುವುದರೊಳಗಾಗಿ ಉದ್ಘೋಷಣೆಯನ್ನು ಸಂಸತ್ತಿನ ಎರಡೂ ಸದನಗಳು ಅಂಗೀಕರಿಸಿರದಿದ್ದರೆ ಆ ಅವಧಿಯ ನಂತರ ಉದ್ಘೋಷಣೆಯು ರದ್ದಾಗುತ್ತದೆ.

"೨೭೮–ಎ (೧) ಈ ಸಂವಿಧಾನದ ೨೭೮ನೆಯ ವಿಧಿಯ ಕಲಮು (೧)ರ ಪ್ರಕಾರ ಹೊರಡಿಸಲಾದ ಉದ್ಘೋಷಣೆಯಂತೆ ರಾಜ್ಯದ ಶಾಸಕಾಂಗದ ಅಧಿಕಾರಗಳನ್ನು ಸಂಸತ್ತು ನೀಡಿದ ಅಧಿಕಾರದನ್ವಯ ಚಲಾಯಿಸತಕ್ಕದ್ದು ಎಂದು ಘೋಷಿಸಿದ್ದರೆ. (ಎ) ಸಂಸತ್ತು ರಾಜ್ಯಕ್ಕೆ ಅವಶ್ಯವಾದ ಕಾನೂನುಗಳನ್ನು ಮಾಡಲು ರಾಷ್ಟ್ರಪತಿಗಳಿಗೆ ಅಥವಾ ಅವರು ಗೊತ್ತುಪಡಿಸಿದ ಇನ್ನಾವುದೇ ಪ್ರಾಧಿಕಾರಕ್ಕೆ ಅವರ ಪರವಾಗಿ ಕಾನೂನು ಮಾಡುವ ಅಧಿಕಾರವನ್ನು ಪ್ರತಿನಿಯೋಜಿಸಬಹುದು.

(ಬಿ) ಸಂಸತ್ತು ಅಥವಾ ರಾಷ್ಟ್ರಪತಿಗಳು ಅಥವಾ ಇನ್ನಾವುದೇ ಪ್ರಾಧಿಕಾರದ ಈ ಕಲಮಿನ ಉಪ–ಕಲಮು (ಎ)ನಲ್ಲಿ ನಿಯೋಜಿತವಾದ ಕಾನೂನುಗಳನ್ನು ಮಾಡುವ ಅಧಿಕಾರ ನೀಡುವ ಅಥವಾ ಅದನ್ನು ರದ್ದುಗೊಳಿಸಿರದಿದ್ದರೆ ಅಂತಹ ವಿಷಯಗಳಿಗೆ ಇದು ಅನ್ವಯಿಸುವುದಿಲ್ಲ." (ಸಿ) ಲೋಕಸಭೆಯ ಅಧಿವೇಶನ ಇಲ್ಲದಿರುವಾಗ ರಾಷ್ಟ್ರಪತಿಗಳು ರಾಜ್ಯದ ವೆಚ್ಚಗಳನ್ನು ಸಂಚಿತ ನಿಧಿಯಿಂದ ಮಾಡಲು ಅಧಿಕಾರ ನೀಡುತ್ತದೆ ಮತ್ತು ನಂತರ ಅದು ಸಂಸತ್ತಿನ ಮಂಜೂರಿಗೊಳಪಟ್ಟಿರುತ್ತದೆ. (ಡಿ) ಸಂಸತ್ತಿನ ಎರಡೂ ಸದನಗಳ ಅಧಿವೇಶನವಿಲ್ಲದಿರುವಾಗ ಈ ಸಂವಿಧಾನದ ೧೦೨ನೆಯ ವಿಧಿಯ ಪ್ರಕಾರ ವಿಶೇಷ ಆದೇಶಗಳನ್ನು ಹೊರಡಿಸುವ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ನೀಡಲಾಗಿದೆ.

**ಶ್ರೀ ಹೆಚ್. ವಿ. ಕಾಮತ್** (ಸಿ.ಪಿ. ಮತ್ತು ಬಿರಾರ್ ಸಾಮಾನ್ಯ): ೧೮೮ನೆಯ ವಿಧಿಯೂ ಕೂಡ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ೧೮೮ನೆಯ ವಿಧಿಯನ್ನು ಕೈ ಬಿಡಲಾಗುವುದೆಂದು ನಾನು ಈಗಾಗಲೇ ಹೇಳಿದ್ದೇನೆ. ಆ ತಿದ್ದುಪಡಿಯನ್ನು ಮಂಡಿಸುವ ಆವಶ್ಯಕತೆ ಇಲ್ಲ. ಆದರೆ ಈ ಸದನಕ್ಕೆ ಸ್ಪಷ್ಟ ಚಿತ್ರವನ್ನು ನೀಡುವುದಕ್ಕಾಗಿ ನಾವು ೧೮೮ನೆಯ ವಿಧಿಯನ್ನು ಕೈ ಬಿಡಲಿದ್ದೇವೆ ಎಂದು ನಾನು ಹೇಳಿದ್ದೇನೆ.

ಮಾನ್ಯರೆ, ಈ ವಿಧಿಯ ಮೇಲೆ ಸಂಪೂರ್ಣವಾದ ಚರ್ಚೆಯಾಗಲಿದೆ ಎಂದು ನನಗನಿಸುತ್ತದೆ. ಮತ್ತು ಈ ಚರ್ಚೆಯಲ್ಲಿ ಉದ್ಭವಿಸಬಹುದಾದ ಅನೇಕ ಅಂಶಗಳ ಬಗ್ಗೆ ವಿವರಣೆ ನೀಡಲು ನನ್ನನ್ನು ಕೇಳಬಹುದಾಗಿದೆ. ಈ ಹೊಸ ಯೋಜನೆಯ ಬಗ್ಗೆ ಈ ಹಂತದಲ್ಲಿ ನಾವು ೧೮೮ನೆಯ ವಿಧಿಯನ್ನು ಕೈಬಿಟ್ಟು ಅದರ ಬದಲಿಗೆ ೨೭೭–ಎ ವಿಧಿಯನ್ನು ಸೇರಿಸುವ ಮೂಲಕ ಹಳೆಯ ೨೭೮ನೆಯ ವಿಧಿಯ ಬದಲು ೨೭೮ ಮತ್ತು ೨೭೮–ಎ ಎಂಬ ಎರಡು ಹೊಸ ವಿಧಿಗಳ ಮೂಲಕ ತರಲು ಬಯಸಿರುವ ಬದಲಾವಣೆಗಳ ಸ್ಥೂಲ ಪರಿಚಯವನ್ನು ಮಾತ್ರ ಇಲ್ಲಿ ಕೊಡಬಯಸುತ್ತೇನೆ.

ನಾವು ಸಂವಿಧಾನದ ಸಾಮಾನ್ಯ ಸೂತ್ರಗಳನ್ನು ಪರಿಶೀಲಿಸುವಾಗ ಸಂವಿಧಾನ ಕುಸಿದುಬಿದ್ದಾಗ ಕ್ರಮ ತೆಗೆದುಕೊಳ್ಳುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಈ ಸದನದಲ್ಲಿ ಒಪ್ಪಲಾಗಿತ್ತು ಎಂಬ ಅಂಶವನ್ನು ಸದನಕ್ಕೆ ಜ್ಞಾಪಿಸಿಕೊಡುವ ಮೂಲಕ ಈ ಹೇಳಿಕೆಯನ್ನು ಆರಂಭಿಸುವುದು ಒಳ್ಳೆಯದೆಂದು ನನಗನಿಸುತ್ತದೆ. ಏಕೆಂದರೆ, ಭಾರತ ಸರ್ಕಾರ ಕಾಯ್ದೆ, ೧೯೩೫ರ ೯೩ನೆಯ ಸೆಕ್ಷನ್‌ಗೆ ಹೋಲುವಂತಹ ಉಪಬಂಧವನ್ನು ಈ ಸಂವಿಧಾನದಲ್ಲಿ ಮಾಡಬೇಕಾಗಿದೆ. ಈ ಸದನವು ಈ ತತ್ವವನ್ನು ಅಂಗೀಕರಿಸಿದಾಗ ಸಂವಿಧಾನದನ್ವಯ ಪ್ರಾಂತ್ಯದ ಆಡಳಿತವನ್ನು ನಡೆಸಲು ಸ್ಥಾಪಿಸಲಾದ ವ್ಯವಸ್ಥೆ ಕುಸಿದುಬಿದ್ದಿದೆ ಎಂದು ಆ ಪ್ರಾಂತ್ಯದ ರಾಜ್ಯಪಾಲರಿಗೆ ಮನವರಿಕೆಯಾದರೆ, ರಾಜ್ಯಪಾಲರು ತಮ್ಮ ಉದ್ಘೋಷಣೆಯ ಮೂಲಕ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡ ನಂತರ ಹದಿನೈದು ದಿನಗಳೊಳಗಾಗಿ ವಿಷಯವನ್ನು ರಾಷ್ಟ್ರಪತಿಗಳಿಗೆ ವರದಿ ಮಾಡತಕ್ಕದ್ದು ಮತ್ತು ೧೮೮ನೆಯ ಮೂಲ ವಿಧಿಯನ್ವಯ ರಾಜ್ಯಪಾಲರು ಮಾಡಿದ ವರದಿಯನ್ವಯ ರಾಷ್ಟ್ರಪತಿಗಳು ೨೭೮ನೆಯ ಪ್ರಕಾರ ಕ್ರಮ ಜರುಗಿಸಬಹುದು. ಇದು ಮೂಲ ಯೋಜನೆಯಾಗಿತ್ತು.

ಆದರೆ ತುರ್ತು ಪರಿಸ್ಥಿತಿ ವಾಸ್ತವಿಕವಾಗಿ ಉಂಟಾದಾಗ ಮತ್ತು ರಾಷ್ಟ್ರಪತಿಗಳು ಕ್ರಮ ಜರುಗಿಸಬೇಕಾದ ಪರಿಸ್ಥಿತಿಯಲ್ಲಿ ರಾಜ್ಯಪಾಲರಿಗೆ ಮೊದಲು ಸಂವಿಧಾನವನ್ನು ಹದಿನೈದು ದಿನ ಸ್ಥಗಿತಗೊಳಿಸುವ ಮೂಲಕ ಅಮಾನತ್ತಿನಲ್ಲಿಟ್ಟು ನಂತರ ವರದಿ ಕಳುಹಿಸಿಕೊಡುವುದರಿಂದ ಯಾವ ಉಪಯೋಗವಾಗಲಾರದೆಂದು ಈಗ ಅನಿಸಿದೆ. ರಾಷ್ಟ್ರಪತಿಗಳೇ ಅಂತಿಮ ಕ್ರಮ ಕೈಗೊಳ್ಳಬೇಕೆಂದರೆ, ಸಂವಿಧಾನ ವ್ಯವಸ್ಥೆಯನ್ನು ರಕ್ಷಿಸುವ ಜವಾಬ್ದಾರಿ ನಿರ್ವಹಿಸಬೇಕೆಂದರೆ ಅವರು ಪ್ರಾಂತೀಯ ಕ್ಷೇತ್ರದಲ್ಲಿ ಪರಿಸ್ಥಿತಿಯ ಆರಂಭದಲ್ಲಿಯೇ ಪ್ರವೇಶಿಸಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅನುಸರಿಸಬೇಕಾದ ಸರಿಯಾದ ಮಾರ್ಗವೆಂದರೆ ಮತ್ತು

ಅದು ರಾಷ್ಟ್ರಪತಿಯವರ ಜವಾಬ್ದಾರಿಯಾಗಿದ್ದರೆ ರಾಷ್ಟ್ರಪತಿಗಳು ಆರಂಭದಲ್ಲಿಯೇ ವಿಷಯವನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಆದ್ದರಿಂದ ೧೮೮ನೆಯ ವಿಧಿ ನಿರರ್ಥಕವೆನಿಸುತ್ತದೆ. ಅದರ ಆವಶ್ಯಕತೆಯೇ ಇರುವುದಿಲ್ಲ. ೧೮೮ನೆಯ ವಿಧಿಯನ್ನು ಕೈಬಿಡಬೇಕೆಂಬ ನನ್ನ ಸೂಚನೆಗೆ ಇದೇ ಕಾರಣ.

ಇನ್ನು ನಾನು ೨೭೭–ಎ ವಿಧಿಯನ್ನು ತೆಗೆದುಕೊಳ್ಳುತ್ತೇನೆ. ಈ ವಿಧಿಯು ಕೇವಲ ಧರ್ಮಶ್ರದ್ಧೆಯ ಘೋಷಣೆಯಂತಿದ್ದು, ಇದರ ಆವಶ್ಯಕತೆ ಇಲ್ಲ ಎಂಬುದು ಕೆಲವರ ವಿಚಾರವಾಗಿರಬಹುದು. ಆದರೆ ಕರಡು ಸಮಿತಿಯು ಭಿನ್ನ ನಿಲುವನ್ನು ತಳೆದಿದ್ದು ಅದನ್ನು ನಾನು ಇಲ್ಲಿ ವಿವರಿಸಬಯಸುತ್ತೇನೆ. ನಮ್ಮ ಸಂವಿಧಾನದಲ್ಲಿ ಕೇಂದ್ರಕ್ಕೆ ಪ್ರಾಂತ್ಯಗಳ ಮೇಲೆ ಅಧಿಕಾರ ಚಲಾಯಿಸುವ ವ್ಯವಸ್ಥೆ ಇದ್ದಾಗ್ಯೂ ಇದು ಒಂದು ಸಂಯುಕ್ತರಾಜ್ಯ ವ್ಯವಸ್ಥೆ ಎಂದು ಸಂವಿಧಾನದಲ್ಲಿ ಹೇಳಲಾಗಿದೆ. ಎಂದರೆ, ಸಂವಿಧಾನದನ್ವಯ ಪ್ರಾಂತ್ಯಗಳಿಗೆ ಬಿಟ್ಟುಕೊಡಲಾದ ಕ್ಷೇತ್ರದಲ್ಲಿ ಕೇಂದ್ರಕ್ಕೆ ತನ್ನ ಕ್ಷೇತ್ರದಲ್ಲಿ ಕೊಡಲಾದ ಅಧಿಕಾರ ಚಲಾಯಿಸುವ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ಪ್ರಾಂತ್ಯ ಸರಕಾರಗಳಿಗಿದೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಪ್ರಾಂತ್ಯಗಳು ಅಂಗೀಕರಿಸಿದ ಕೆಲವು ಕಾನೂನುಗಳನ್ನು ತಳ್ಳಿ ಹಾಕುವ ಅಧಿಕಾರ ಹೊರತುಪಡಿಸಿದರೆ, ಪ್ರಾಂತ್ಯಗಳು ತಮ್ಮ ಕ್ಷೇತ್ರದಲ್ಲಿ ಶಾಂತಿ, ಸುವ್ಯವಸ್ಥೆ ಮತ್ತು ಒಳ್ಳೆಯ ಆಡಳಿತ ಕಾಪಾಡಿಕೊಳ್ಳಲು ಅಗತ್ಯವಾದ ಪ್ರಾಥಮಿಕ ಅಧಿಕಾರ ಹೊಂದಿರುತ್ತವೆ. ಸಂವಿಧಾನದನ್ವಯ ಪ್ರಾಂತ್ಯಗಳ ಸಾರ್ವಭೌಮತೆಯನ್ನು ಪರಿಗಣಿಸಿ ಅವುಗಳಿಗೆ ಶಾಂತಿ, ಸುವ್ಯವಸ್ಥೆ ಮತ್ತು ಒಳ್ಳೆಯ ಸರಕಾರವನ್ನು ಕಲ್ಪಿಸುವ ದೃಷ್ಟಿಯಿಂದ ಅವುಗಳಿಗೆ ಅಧಿಕಾರ ನೀಡಲಾಗಿದೆ ಎಂದರೆ ಅವುಗಳ ವ್ಯವಹಾರಗಳಲ್ಲಿ ಕೇಂದ್ರ ಅಥವಾ ಇನ್ನಾವುದೇ ಪ್ರಾಧಿಕಾರದ ಹಸ್ತಕ್ಷೇಪವನ್ನು ನಿಷೇಧಿಸಲಾಗಿದೆ ಎಂದೇ ಅರ್ಥ. ಏಕೆಂದರೆ, ಹಾಗೆ ಮಾಡುವುದು ಪ್ರಾಂತ್ಯದ ಸ್ವಾಮ್ಯದ ಮೇಲೆ ದಾಳಿ ಎನಿಸುವುದು. ನಮ್ಮ ಸಂವಿಧಾನ ಸಂಯುಕ್ತ ರಾಜ್ಯ ಸ್ವರೂಪದ್ದಾಗಿದ್ದು, ನಾವು ಈ ಮೂಲಭೂತ ತತ್ವವನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ಪ್ರಾಂತೀಯ ವಿಷಯಗಳಲ್ಲಿ ೨೭೮ ಮತ್ತು ೨೭೮–ಎ ವಿಧಿಗಳ ಪ್ರಕಾರ ಹಸ್ತಕ್ಷೇಪ ಮಾಡುವುದಾದರೆ ಅದು ಸಂವಿಧಾನವು ಕೇಂದ್ರಕ್ಕೆ ವಿಧಿಸಲಾದ ಕೆಲವು ಬಾಧ್ಯತೆಗಳಿಗನ್ವಯವಾಗಿರಬೇಕಾಗುತ್ತದೆ. ಕೇಂದ್ರ ಪ್ರಾಂತ್ಯಗಳ ವಿಷಯಗಳಲ್ಲಿ ದಾಳಿ ಮಾಡುವುದಾದರೆ ಅದು ಉದ್ದೇಶಪೂರ್ವಕ, ನಿರಂಕುಶ ಮತ್ತು ಕಾನೂನುಬಾಹಿರವಾದುದಾಗಿರಬಾರದು. ಆದ್ದರಿಂದ ೨೭೮ ಮತ್ತು ೨೭೮–ಎ ವಿಧಿಗಳು ಪ್ರಾಂತ್ಯಗಳ ಮೇಲೆ ಕೇಂದ್ರದ ಸ್ವೇಚ್ಛಾಚಾರದ ದಾಳಿ ಅಥವಾ ಅತಿಕ್ರಮಣ ಎಂದು ಪರಿಗಣಿಸಲಾರದೆಂದು ನಾವು ೨೭೭–ಎ ಎಂಬ ವಿಧಿಯನ್ನು ಸೇರಿಸಬಯಸಿದ್ದೇವೆ. ಸದಸ್ಯರಿಗೆ ತಿಳಿದಂತೆ ಪ್ರತಿಯೊಂದು ಘಟಕವನ್ನು ಮತ್ತು ಸಂವಿಧಾನವನ್ನು ರಕ್ಷಿಸುವ ಹೊಣೆ ಒಕ್ಕೂಟ ಸರ್ಕಾರಕ್ಕಿದೆ ಎಂದು ೨೭೭–ಎ ವಿಧಿ ಹೇಳುತ್ತದೆ. ಅಂತಹ ಬಾಧ್ಯತೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ನಮ್ಮ ಸಂವಿಧಾನದಲ್ಲಿ ಮಾತ್ರ ಕರ್ತವ್ಯಗಳು ಮತ್ತು ಬಾಧ್ಯತೆಗಳನ್ನು ಹೇಳಲಾಗಿದೆಯೆಂದಲ್ಲ. ಇಂತಹ ಕಲಮುಗಳು ಅಮೆರಿಕ ಸಂವಿಧಾನದಲ್ಲಿಯೂ ಇವೆ. ಆಸ್ಟ್ರೇಲಿಯಾ ಸಂವಿಧಾನದಲ್ಲಿಯೂ ಇವೆ. ಆಸ್ಟ್ರೇಲಿಯಾ ಸಂವಿಧಾನದಲ್ಲಿ ಘಟಕಗಳು ಅಥವಾ ರಾಜ್ಯಗಳನ್ನು ಬಾಹ್ಯ ಆಕ್ರಮಣ ಇಲ್ಲವೆ ಆಂತರಿಕ ಗಲಭೆಗಳನ್ನು ತಡೆಯುವ ಕರ್ತವ್ಯ ಕೇಂದ್ರ ಸರಕಾರದ್ದು ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಲಾಗಿದೆ. ನಾವು ಈಗ ಮಾಡುತ್ತಿರುವುದಿಷ್ಟೆ. ಅಮೆರಿಕ ಮತ್ತು ಆಸ್ಟ್ರೇಲಿಯಾ ಸಂವಿಧಾನದಲ್ಲಿ ವಿವರಿಸಲಾದ ತತ್ವಗಳಿಗೆ ಇನ್ನೊಂದು ಹೆಚ್ಚಿನ ಕಲಮನ್ನು ಸೇರಿಸುವುದು. ಅದೇನೆಂದರೆ, ಈ ಕಾಯ್ದೆಯ ಪ್ರಕಾರ ಪ್ರಾಂತ್ಯಗಳಲ್ಲಿಯೂ ಸಂವಿಧಾನವನ್ನು ರಕ್ಷಿಸುವ ಜವಾಬ್ದಾರಿ ಒಕ್ಕೂಟ ಸರಕಾರದ್ದಾಗಿದೆ. ಇದರಲ್ಲಿ ಹೊಸದೇನೂ ಇಲ್ಲ. ನಾವು ಪ್ರಾಂತ್ಯಗಳಿಗೂ ತಮ್ಮ ತಮ್ಮ ಕ್ಷೇತ್ರದಲ್ಲಿ ಪ್ರಾಥಮಿಕ ಅಧಿಕಾರವನ್ನು ಕೊಡುತ್ತಿರುವ ದೃಷ್ಟಿಯಿಂದ ಅವುಗಳಿಗೆ ತಮ್ಮ ಕ್ಷೇತ್ರದಲ್ಲಿ ಸ್ವಾಯತ್ತತೆ ನೀಡುತ್ತಿದ್ದೇವೆ. ಆದ್ದರಿಂದ ಪ್ರಾಂತ್ಯಗಳ

ಕ್ಷೇತ್ರಗಳಲ್ಲಿ ಏನಾದರೂ ದಾಳಿ ಕೇಂದ್ರ ಸರಕಾರದಿಂದಾಗಿದ್ದೇ ಆದರೆ ಅದು ಈ ಬಾಧ್ಯತೆಯ ಕಾರಣಕ್ಕಾಗಿಯೇ, ಈ ಬಾಧ್ಯತೆಯನ್ನು ನಿಭಾಯಿಸುವ ಕಾರಣದಿಂದ ಉಂಟಾದ ದಾಳಿಯನ್ನು ಸ್ವೇಚ್ಛಾಚಾರದ, ಬುದ್ಧಿಪೂರ್ವಕ ಮತ್ತು ಅನಧಿಕೃತ ಕಾರ್ಯ ಎಂದು ಭಾವಿಸಬಾರದು. ನಾವು ೨೭೭–ಎ ವಿಧಿಯನ್ನು ಸೇರಿಸಲು ಇದೇ ಕಾರಣ.

೨೭೮ ಮತ್ತು ೨೭೮–ಎ ವಿಧಿಗಳು ಪ್ರತ್ಯೇಕ ವಿಧಿಗಳೆಂದು ತೋರಿದರೂ ಅವು ಮೂಲ ೨೭೮ನೆಯ ವಿಧಿಯ ಪ್ರತ್ಯೇಕ ಭಾಗಗಳು ಮಾತ್ರ. ೨೭೮ನೆಯ ವಿಧಿಯಲ್ಲಿ ಸುಮಾರು ಏಳು ಕಲಮುಗಳಿವೆ. ಅವುಗಳಲ್ಲಿ ಮೊದಲನೆಯ ನಾಲ್ಕು ಕಲಮುಗಳು ಹೊಸ ೨೭೮–ಎ ವಿಧಿಯಲ್ಲಿ ಸೇರಿಸಲಾಗಿದೆ. ಈ ರೀತಿಯ ವಿಭಜನೆ ಮಾಡಿರುವುದಕ್ಕೆ ಕಾರಣವೆಂದರೆ, ಹಾಗೆ ಮಾಡದೇ ಹೋದರೆ ೨೭೮ನೆಯ ವಿಧಿಯು ಅತಿ ವಿಸ್ತಾರವಾಗಿ ಅದರಲ್ಲಿರುವ ವಿವಿಧ ಉಪಬಂಧಗಳನ್ನು ತಿಳಿದುಕೊಳ್ಳುವುದು ಸದಸ್ಯರಿಗೆ ಕಷ್ಟವೆನಿಸುತ್ತಿತ್ತು. ಈ ಒಂದು ಕಷ್ಟವನ್ನು ನಿವಾರಿಸಲು ಈ ವಿಭಜನೆಯನ್ನು ಮಾಡಲಾಗಿದೆ.

೨೭೮ನೆಯ ವಿಧಿಯ ಸಂಬಂಧವಾಗಿ ಗಮನಿಸಬೇಕಾದ ಮೊದಲನೆಯ ಬದಲಾವಣೆ ಎಂದರೆ ರಾಷ್ಟ್ರಪತಿಗಳು ರಾಜ್ಯಪಾಲರ ಅಥವಾ ಇತರ ಮೂಲದ ವರದಿಯ ಮೇಲೆ ಕ್ರಮ ತೆಗೆದುಕೊಳ್ಳುವುದು. ಮೂಲ ೧೮೮ನೆಯ ವಿಧಿಯ ಪ್ರಕಾರ ರಾಷ್ಟ್ರಪತಿಗಳು ರಾಜ್ಯಪಾಲರ ವರದಿಯ ಮೇಲೆ ಕ್ರಮ ತೆಗೆದುಕೊಳ್ಳತಕ್ಕದ್ದು ಎಂದು ಮಾತ್ರ ಹೇಳಲಾಗಿತ್ತು. 'ಇತರ' ಎಂಬ ಪದ ಅದರಲ್ಲಿರಲಿಲ್ಲ. ೨೭೮ನೆಯ ವಿಧಿಯ ಮೊದಲು ಬರುವ ೨೭೭–ಎ ವಿಧಿಯು ಕೇಂದ್ರದ ಮೇಲೆ ಒಂದು ಬಾಧ್ಯತೆ ಮತ್ತು ಕರ್ತವ್ಯವನ್ನು ಹೇರುತ್ತಿರುವ ದೃಷ್ಟಿಯಿಂದ ಪ್ರಾಂತ್ಯದ ರಾಜ್ಯಪಾಲರು ಮಾಡಿದ ವರದಿಯ ಬಗ್ಗೆ ರಾಷ್ಟ್ರಪತಿಗಳಿಗಿರುವ ಕರ್ತವ್ಯವನ್ನು ನಿರ್ಬಂಧಿಸುವುದು ಸರಿಯಲ್ಲವೆಂದು ಈಗ ಅನಿಸಿದೆ. ರಾಜ್ಯಪಾಲರು ವರದಿ ಮಾಡದೇ ಇರಬಹುದು. ಆದಾಗ್ಯೂ ವಸ್ತುಸ್ಥಿತಿಯ ಆಧಾರದ ಮೇಲೆ ರಾಷ್ಟ್ರಪತಿಗಳಿಗೆ ತಮ್ಮ ಹಸ್ತಕ್ಷೇಪದ ಆವಶ್ಯಕತೆ ಇದೆ ಎಂದು ಅನಿಸಬಹುದು. ೨೭೭–ಎ ವಿಧಿಯ ಸೇರ್ಪಡೆಯಿಂದುಂಟಾಗುವ ಪರಿಣಾಮದಿಂದಾಗಿ ರಾಜ್ಯಪಾಲರು ವರದಿ ಮಾಡದೇ ಹೋದಾಗ ರಾಷ್ಟ್ರಪತಿಗಳ ಗಮನಕ್ಕೆ ಬಂದ ವಾಸ್ತವಿಕ ಸಂಗತಿಗಳಿಂದ ತಮ್ಮ ಕರ್ತವ್ಯ ನಿರ್ವಹಣೆಗಾಗಿ ತಾವು ಕೆಲ ಕ್ರಮ ತೆಗೆದುಕೊಳ್ಳಬೇಕಾಗಿದೆ ಎಂದು ಅವರಿಗೆ ಮನವರಿಕೆಯಾದರೆ ಅಂತಹ ಕ್ರಮ ತೆಗೆದುಕೊಳ್ಳಲು ಅವರಿಗೆ ಸ್ವಾತಂತ್ರ್ಯವಿರಬೇಕು.

೨೭೮ನೆಯ ವಿಧಿಯಲ್ಲಿ ಮಾಡಲಾದ ಎರಡನೆಯ ಬದಲಾವಣೆ ಎಂದರೆ, ಮೊದಲು ಶಾಸಕಾಂಗದ ಅಧಿಕಾರಗಳನ್ನು ಚಲಾಯಿಸುವ ಅಧಿಕಾರವನ್ನು ಸಂಸತ್ತಿಗೆ ಮಾತ್ರ ಕೊಡಲಾಗಿತ್ತು. ಈಗ ಆ ಅಧಿಕಾರ ಚಲಾಯಿಸಲು ರಾಷ್ಟ್ರಪತಿಗಳಿಂದ ನಿಯೋಜಿಸಲ್ಪಟ್ಟ ಇನ್ನಾವುದೇ ಪ್ರಾಧಿಕಾರಕ್ಕೂ ಕೊಡಬಹುದಾಗಿದೆ. ಪ್ರಾಂತೀಯ ಶಾಸಕಾಂಗದ ಶಾಸನೀಯ ಕರ್ತವ್ಯಗಳನ್ನು ನಿರ್ವಹಿಸಲು ಅಗತ್ಯವಾದ ವಿವರವಾದ ಮತ್ತು ವಾಸ್ತವಿಕ ಸಂಗತಿಗಳ ಮಾಹಿತಿ ಸಂಸತ್ತಿಗೆ ಇರಲಿಕ್ಕಿಲ್ಲ. ಮತ್ತು ಆ ಕಾರ್ಯಭಾರವನ್ನು ನಿರ್ವಹಿಸಲು ಅದಕ್ಕೆ ಸಾಧ್ಯವಾಗಲಿಕ್ಕಿಲ್ಲ. ಪ್ರಾಂತ್ಯದ ಶಾಸಕಾಂಗವನ್ನು ಅಮಾನತ್ತಿನಲ್ಲಿಟ್ಟಾಗ ಆ ಕಾರ್ಯದ ಹೊರೆ ಸಂಸತ್ತಿನ ಮೇಲೆ ಬೀಳುವುದು. ಅದನ್ನು ಸಮರ್ಪಕವಾಗಿ ನಿಭಾಯಿಸಲು ಸಂಸತ್ತಿಗೆ ಸಾಧ್ಯವಾಗಲಿಕ್ಕಿಲ್ಲ. ಆದ್ದರಿಂದ ಶಾಸಕಾಂಗದ ಕಾರ್ಯಗಳನ್ನು ಸಂಸತ್ತೇ ಮಾಡಬಹುದು ಅಥವಾ ಕೆಲವು ಕರಾರುಗಳು ಮತ್ತು ನಿರ್ಬಂಧಗಳಿಗೊಳಗಾಗಿ ನಿರ್ವಹಿಸಲು ಇತರ ಯಾವುದೇ ಪ್ರಾಧಿಕಾರಕ್ಕೆ ಸಂಸತ್ತು ವಹಿಸ ಬಹುದು.

ಇನ್ನೊಂದು ಬಹು ಮುಖ್ಯ ಬದಲಾವಣೆ ಎಂದರೆ ಉದ್ಘೋಷಣೆಯನ್ನು ಮಾಡಿರುವ ಎರಡು

ತಿಂಗಳುಗಳ ಅವಧಿ ಮುಗಿದ ನಂತರ ಮತ್ತು ಅದನ್ನು ಮುಂದುವರಿಸಲು ಸಂಸತ್ತು ತನ್ನ ನಿರ್ಣಯದ ಮೂಲಕ ಅದನ್ನು ಮುಂದುವರಿಸದೇ ಹೋದರೆ ಅದು ನಿಷ್ಕ್ರಿಯವಾಗುವುದು. ಈ ಮೂಲ ಉಪಬಂಧದ ಪ್ರಕಾರ ಉದ್ಘೋಷಣೆಯನ್ನು ಸಂಸತ್ತು ಅಂಗೀಕರಿಸದಿದ್ದರೆ ಅದು ಆರು ತಿಂಗಳ ಅವಧಿಯವರೆಗೆ ಜಾರಿಯಲ್ಲಿರುತ್ತದೆ. ಈ ಕರಡಿನಲ್ಲಿ ಅದನ್ನು ಮುಂದುವರಿಸದೇ ಹೋದರೆ ಅದು ಎರಡು ತಿಂಗಳು ಮಾತ್ರ ಜಾರಿಯಲ್ಲಿರುವುದು. ಅದರ ನಂತರ ಉದ್ಘೋಷಣೆಯನ್ನು ಮುಂದುವರಿಸಬೇಕಾದರೆ ಅದನ್ನು ಸಂಸತ್ತು ತನ್ನ ನಿರ್ಣಯದ ಮೂಲಕ ಮಾಡಬಹುದು.

ಮಾಡಲಾಗಿರುವ ಎರಡನೆಯ ಬದಲಾವಣೆ ಎಂದರೆ, ಮೂಲ ವಿಧಿಯ ಪ್ರಕಾರ ಉದ್ಘೋಷಣೆಯನ್ನು ಒಂದು ಸಾರಿ ದೃಢೀಕರಿಸಿದ್ದರೆ, ಆ ಉದ್ಘೋಷಣೆಯು ಸತತವಾಗಿ ಹನ್ನೆರಡು ತಿಂಗಳವರೆಗೆ ಜಾರಿಯಲ್ಲಿರುವುದು. ಇದನ್ನೂ ಬದಲಾಯಿಸಲಾಗಿದೆ. ಆ ಹನ್ನೆರಡು ತಿಂಗಳ ಅವಧಿಯನ್ನು ತಲಾ ಆರು ತಿಂಗಳುಗಳ ಎರಡು ಅವಧಿಗಳಲ್ಲಿ ವಿಭಜಿಸಲಾಗಿದೆ. ಉದ್ಘೋಷಣೆಯ ಮೊದಲ ದೃಢೀಕರಣದ ನಂತರ ಅದನ್ನು ಮೊದಲ ಆರು ತಿಂಗಳ ನಂತರ ಪುನಃ ದೃಢೀಕರಿಸಬೇಕಾಗುವುದು. ಸಂಸತ್ತು ಹಾಗೆ ಮಾಡಿದ ನಂತರ ಅದು ಪುನಃ ಆರು ತಿಂಗಳು ಮಾತ್ರ ಜಾರಿಯಲ್ಲಿರುವುದು. ಸಂಸತ್ತಿಗೆ ಉದ್ಘೋಷಣೆಯನ್ನು ಆರು ತಿಂಗಳಿಗೆ ಮಾತ್ರ ದೃಢೀಕರಿಸುವ ಅಧಿಕಾರವಿದೆ. ಅದನ್ನು ಪುನಃ ಮುಂದುವರಿಸಲು ಅದನ್ನು ಪುನಃ ದೃಢೀಕರಿಸಬೇಕಾಗುತ್ತದೆ. ಹಾಗೆ ಮಾಡಲು ಮೂರು ವರುಷಗಳ ಗರಿಷ್ಠ ಮಿತಿಯನ್ನು ಹಾಕಿದ್ದೇವೆ. ಮೂರು ವರುಷಗಳ ನಂತರ ಸಂಸತ್ತಿಗಾಗಲೀ, ರಾಷ್ಟ್ರಪತಿಗಳಿಗಾಗಲೀ ಪ್ರಾಂತ್ಯದಲ್ಲಿ ಉದ್ಘೋಷಣೆಯ ಕಾಲದಲ್ಲಿದ್ದ ಪರಿಸ್ಥಿತಿಯನ್ನು ಮುಂದುವರಿಸಲು ಸಾಧ್ಯವಿಲ್ಲ.

ಇನ್ನು ನಾನು ೨೭೮–ಎ ವಿಧಿಯ ಉಪಕಲಮು (ಎ) ಅನ್ನು ತೆಗೆದುಕೊಳ್ಳುತ್ತೇನೆ. ಅದರ ಪ್ರಕಾರ ಸಂಸತ್ತು ರಾಜ್ಯದಲ್ಲಿ ಅಗತ್ಯವಾದ ಕಾನೂನುಗಳನ್ನು ಮಾಡುವ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ಅಥವಾ ಅವರಿಂದ ನಿಯೋಜಿತವಾದ ಪ್ರಾಧಿಕಾರಕ್ಕೆ ವಹಿಸುವ ಹೊಸ ಉಪಬಂಧಕ್ಕೆ ಅವಕಾಶ ಮಾಡಲಾಗಿದೆ.

ಈ ವಿಧಿಯ ಉಪಕಲಮು (ಬಿ) ಕೇವಲ ಆನುಷಂಗಿಕ ಬದಲಾವಣೆಯಾಗಿದೆ. ಅದು ೨೭೮–ಎ ವಿಧಿಯ ಕಲಮು (೧) ಮತ್ತು ಉಪಕಲಮು (ಎ)ನ ಪರಿಣಾಮದ ಬದಲಾವಣೆಯಾಗಿದೆ. ಅದರ ಪ್ರಕಾರ ಸಂಸತ್ತು ಅಥವಾ ಸಂಸತ್ತಿನ ಪರವಾಗಿ ನೇಮಕ ಮಾಡಲಾದ ಯಾವುದೇ ಕಾನೂನನ್ನು ಜಾರಿಗೊಳಿಸುವ ಅಧಿಕಾರವನ್ನು ಭಾರತ ಸರಕಾರದ ಅಧಿಕಾರಿಗಳಿಗೆ ಅಥವಾ ಪ್ರಾಂತ್ಯ ಸರಕಾರದ ಅಧಿಕಾರಿಗಳಿಗೂ ಕೊಡಬಹುದು.

೨೭೮–ಎ ವಿಧಿಯ ಕಲಮು (೧) ಮತ್ತು ಉಪಕಲಮು (ಸಿ) ಒಂದು ಹೊಸ ಕಲಮಾಗಿದೆ. ಅದು ಆಯವ್ಯಯ ಪಟ್ಟಿಗೆ ಮಂಜೂರಾತಿ ನೀಡುವುದಕ್ಕೆ ಅವಕಾಶ ಮಾಡಿದೆ. ೨೭೮ನೆಯ ವಿಧಿಯ ಮೂಲ ಕರಡಿನಲ್ಲಿ, ಶಾಸಕಾಂಗವನ್ನು ಅಮಾನತ್ತಿಡಲಾದ ಪ್ರಾಂತ್ಯದ ಆಯ–ವ್ಯಯ ಪಟ್ಟಿಯನ್ನು ತಯಾರಿಸುವ ಬಗ್ಗೆಯಾಗಲೀ ಅಥವಾ ಅದಕ್ಕೆ ಮಂಜೂರಾತಿ ನೀಡುವ ಬಗ್ಗೆಯಾಗಲೀ ಯಾವ ಉಲ್ಲೇಖವೂ ಇರಲಿಲ್ಲ. ೨೭೮–ಎ ವಿಧಿಯ ಕಲಮು (೧) ಮತ್ತು ಉಪಕಲಮು (ಸಿ)ಯ ಮೂಲಕ ಈ ವಿಷಯವನ್ನು ಸ್ಪಷ್ಟೀಕರಿಸಲಾಗಿದೆ. ಇದರ ಪ್ರಕಾರ ಲೋಕಸಭೆಯು ಅಧಿವೇಶನದಲ್ಲಿಲ್ಲದಿರುವಾಗ ರಾಷ್ಟ್ರಪತಿಗಳು ರಾಜ್ಯದ ಸಮುಚ್ಚಯ ಸಂಚಿತ ನಿಧಿಯಿಂದ ಅಗತ್ಯವಾದ ಖರ್ಚನ್ನು ಮಾಡಲು ಸಂಸತ್ತಿನ ಮಂಜೂರಾತಿ ಪಡೆಯುವ ಮುಂಚೆ ಅದರ ಪರವಾಗಿ ತಾನೇ ಮಂಜೂರು ಮಾಡಬಹುದು.

ಉಪ–ಕಲಮು (ಡಿ)ಯ ಪ್ರಕಾರ ರಾಷ್ಟ್ರಪತಿಗಳು ೧೦೨ ವಿಧಿಯಲ್ಲಿ ನೀಡಲಾದ ಅಧಿಕಾರಗಳನ್ನು

ಚಲಾಯಿಸಿ ಸಂಸತ್ತಿನ ಎರಡೂ ಸದನಗಳು ಅಧಿವೇಶನದಲ್ಲಿ ಇರದಿರುವಾಗ ಯಾವುದೇ ಪ್ರಾಂತ್ಯದ ಆಡಳಿತವನ್ನು ನಡೆಸುವ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡಾಗ ಅವಶ್ಯವೆನಿಸಿದ ವಿಶೇಷ ಆಜ್ಞೆಗಳನ್ನು ಅಧ್ಯಾದೇಶಗಳನ್ನು ಹೊರಡಿಸುವ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ನೀಡುತ್ತದೆ. ಇದು ಪ್ರಾಯಶಃ ಈ ವಿಧಿಯಲ್ಲಿ ಇಂಗಿತವಾಗಿತ್ತು. ೧೦೨ನೆಯ ಮೂಲ ವಿಧಿಯ ಪ್ರಕಾರ ಅಧ್ಯಾದೇಶವನ್ನು ಹೊರಡಿಸುವ ಅಧಿಕಾರ ಕೇಂದ್ರ ಸರಕಾರದ ವಿಷಯಗಳಿಗೆ ಮಾತ್ರ ಸೀಮಿತವಾಗಿತ್ತು. ಈಗ ಉಪ–ಕಲಮು (ಡಿ)ಯ ಪ್ರಕಾರ ಅಧಿಕಾರ ವಹಿಸಿಕೊಂಡ ಯಾವುದೇ ಪ್ರಾಂತ್ಯದ ವಿಷಯಕ್ಕೂ ಸಂಬಂಧಿಸಿದಂತೆ ರಾಷ್ಟ್ರಪತಿಗಳು ಅಧ್ಯಾದೇಶಗಳನ್ನು ಹೊರಡಿಸಬಹುದಾಗಿದೆ.

* * *

***ಮಾನ್ಯ ಸಭಾಧ್ಯಕ್ಷರು:** ಇನ್ನೂ ಅನೇಕ ಸದಸ್ಯರು ಮಾತನಾಡಲಿದ್ದಾರೆ. ಸದನವು ಈ ಚರ್ಚೆಯನ್ನು ಈಗಾಗಲೇ ಐದು ತಾಸುಗಳವರೆಗೆ ಮಾಡಿದೆ. ಇನ್ನಾವುದೇ ಹೊಸ ವಾದಗಳನ್ನು ಮಂಡಿಸಲಾಗಲಿಕ್ಕಿಲ್ಲವೆಂದು ನನಗನಿಸುತ್ತದೆ. ಆದ್ದರಿಂದ ಚರ್ಚೆಯನ್ನು ಇಲ್ಲಿಗೇ ಮುಗಿಸುವುದು ಒಳ್ಳೆಯದು. ಇದುವರೆಗೆ ಮಂಡಿಸಲಾದ ವಾದಗಳನ್ನು ರೂಪಿಸಿಕೊಳ್ಳಲಾಗಿರದಿದ್ದರೆ, ಇನ್ನೂ ಕೆಲವು ಭಾಷಣಗಳನ್ನು ಕಳೆದ ನಂತರವೂ ಅವರಿಗೆ ಹಾಗೆ ಮಾಡಲು ಸಾಧ್ಯವಾಗಲಿಕ್ಕಿಲ್ಲ. ಸದನವು ಈ ಚರ್ಚೆಯನ್ನು ಇಲ್ಲಿಗೇ ಸಮಾಪ್ತಿ ಮಾಡಲು ಬಯಸುವುದೇ ಎಂದು ನಾನು ತಿಳಿಯಬಯಸುತ್ತೇನೆ.

**ಅನೇಕ ಗೌರವಾನ್ವಿತ ಸದಸ್ಯರು:** ಸಮಸ್ಯೆಯನ್ನು ಮಂಡಿಸಬಹುದು.

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ, ಸಾಮಾನ್ಯ)**:** ಈ ವಿಧಿಗಳನ್ನು ಕುರಿತು ಸುಮಾರು ಐದು ತಾಸು ಚರ್ಚೆಯಾಗಿದ್ದರೂ ಈ ವಿಧಿಗಳಲ್ಲಿ ಅಡಕವಾದ ತತ್ವಗಳ ಬಗ್ಗೆ ನನ್ನ ವಿಚಾರದಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳುವಂತಹ ಹೊಸ ವಿಚಾರಗಳು ವ್ಯಕ್ತವಾಗಿಲ್ಲ. ಆದ್ದರಿಂದ ನಾನು ದೀರ್ಘ ವಿವರಣೆ ನೀಡುವ ಮೂಲಕ ಈ ಸದನದ ವೇಳೆಯನ್ನು ತೆಗೆದುಕೊಳ್ಳಬಯಸುವುದಿಲ್ಲ.

ಮೊದಲನೆಯದಾಗಿ, ನಾನು ನನ್ನ ಮಿತ್ರ ಶ್ರೀ ಕಾಮತ್‌ರವರು ೨೭೭–ಎ ವಿಧಿಯ ಮೇಲೇ ಸೂಚಿಸಿರುವ ತಿದ್ದುಪಡಿಯನ್ನು ಒಂದು ಕ್ಷಣ ವಿವರಿಸಬಯಸುತ್ತೇನೆ. ಅವರು 'ಮತ್ತು' ಪದದ ಬದಲು 'ಅಥವಾ' ಎಂಬ ಪದವನ್ನು ಸೇರಿಸಬೇಕೆಂದು ಸೂಚಿಸಿದ್ದಾರೆ. ಇದರ ಆವಶ್ಯಕತೆ ಇದೆ ಎಂದು ನನಗನಿಸುವುದಿಲ್ಲ. ಏಕೆಂದರೆ 'ಮತ್ತು' ಎಂಬ ಪದವನ್ನು ಸಂದರ್ಭದಲ್ಲಿ ಕೂಡಿಸುವ ಮತ್ತು ಪ್ರತ್ಯೇಕಿಸುವ ಎಂಬ ಎರಡೂ ಅರ್ಥಗಳಲ್ಲಿ ಉಪಯೋಗಿಸಲಾಗಿದೆ. ಅವುಗಳನ್ನು ಸಂದರ್ಭಕ್ಕನುಗುಣವಾಗಿ 'ಮತ್ತು' ಇಲ್ಲವೆ 'ಅಥವಾ' ಎಂಬ ಎರಡೂ ಅರ್ಥಗಳಲ್ಲಿ ಉಪಯೋಗಿಸಬಹುದು. ಆದ್ದರಿಂದ ನಾನು ಅವರು ಮಂಡಿಸಿರುವ ತಿದ್ದುಪಡಿಯನ್ನು ಭಾವನೆಯನ್ನು ಮೆಚ್ಚುವೆನಾದರೂ ಅದನ್ನು ಒಪ್ಪಿಕೊಳ್ಳುವ ಆವಶ್ಯಕತೆ ಇಲ್ಲ ಎಂದು ನನಗನಿಸುತ್ತದೆ.

ನಾನು ವಿವರಿಸಬಯಸುವ ಎರಡನೆಯ ತಿದ್ದುಪಡಿ ಎಂದರೆ ನನ್ನ ಮಿತ್ರ ಪ್ರೊಫೆಸರ್ ಸಕ್ಸೇನಾ ಅವರು ಮಂಡಿಸಿರುವುದು. ಅವರು ಹೇಳುವುದೇನೆಂದರೆ, ಉದ್ಘೋಷಣೆ ಜಾರಿಯಲ್ಲಿರುವಾಗ ರಾಷ್ಟ್ರಪತಿಗಳು ಮಾಡಬಹುದಾದ ಒಂದು ಕೆಲಸವೆಂದರೆ ಶಾಸಕಾಂಗವನ್ನು ವಿಸರ್ಜಿಸುವುದು. ಇದು ಅವರ ತಿದ್ದುಪಡಿಯ ಮೂಲ ಅರ್ಥ. ಇದಕ್ಕೆ ಅವಕಾಶವಿರಬೇಕೆಂಬ ಬಗ್ಗೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಏಕೆಂದರೆ, ಪ್ರಾಂತ್ಯದ

---

* ಸಿ.ಎ.ಡಿ. ಸಂ. IX, ೪ನೇ ಆಗಸ್ಟ್ ೧೯೪೯, ಪುಟ ೨೭೫.

ಜನತೆಗೆ ತನ್ಮೂಲಕ ಪರಿಸ್ಥಿತಿಯನ್ನು ಸುಧಾರಿಸಲು ಅವಕಾಶವಿರಬೇಕು. ಆದರೆ ಅದಕ್ಕೆ ಈಗಾಗಲೇ ೨೭೮ನೆಯ ವಿಧಿಯ ಕಲಮು (೧) ಮತ್ತು ಉಪ–ಕಲಮು (ಎ)ನಲ್ಲಿ ಅವಕಾಶವಿದೆ. ಹೇಗೆಂದರೆ, ಉಪಕಲಮು (ಎ)ನಲ್ಲಿ ಪ್ರಾಂತ್ಯದ ರಾಜ್ಯಪಾಲರು ಅಥವಾ ಆಡಳಿತಗಾರರು ಚಲಾಯಿಸುತ್ತಿದ್ದ ಅಧಿಕಾರಗಳನ್ನು ರಾಷ್ಟ್ರಪತಿಗಳೇ ವಹಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸದನವನ್ನು ವಿಸರ್ಜಿಸುವುದು ರಾಜ್ಯಪಾಲರು ಚಲಾಯಿಸುವ ಅಧಿಕಾರಗಳಲ್ಲೊಂದಾಗಿದೆ. ಇದರ ಪರಿಣಾಮವಾಗಿ ರಾಷ್ಟ್ರಪತಿಗಳು ಉದ್ಘೋಷಣೆಯನ್ನು ಹೊರಡಿಸಿ ಉಪ–ಕಲಮು (ಎ)ರ ಪ್ರಕಾರ ಈ ಅಧಿಕಾರಗಳನ್ನು ವಹಿಸಿಕೊಂಡಾಗ, ಶಾಸನಸಭೆಯನ್ನು ವಿಸರ್ಜಿಸಿ ಹೊಸದಾಗಿ ಚುನಾವಣೆ ನಡೆಸುವ ಅಧಿಕಾರವು ರಾಷ್ಟ್ರಪತಿಗೆ ತಾನಾಗಿಯೇ ವರ್ಗವಾಗುತ್ತದೆ. ಆದರೆ ಆ ಅಧಿಕಾರವನ್ನು ತಮ್ಮ ಸಚಿವರ ಸಲಹೆಯಂತೆ ಚಲಾಯಿಸುತ್ತಾರೆಂಬುದೇನೋ ನಿಜ. ಹೀಗಾಗಿ, ನನ್ನ ಮಿತ್ರ ಪ್ರೊಫೆಸರ್ ಸಕ್ಸೇನಾರವರು ಪ್ರತಿಪಾದಿಸಿರುವ ತತ್ವವು ಉಪ–ಕಲಮು (ಎ)ನಲ್ಲಿ ಈಗಾಗಲೇ ಅಡಕವಾಗಿದೆ ಎಂದು ನಾನು ಹೇಳಬಯಸುತ್ತೇನೆ. ಆದ್ದರಿಂದ ಈ ರೀತಿಯ ಪ್ರತ್ಯೇಕ ಉಪಬಂಧವನ್ನು ಮಾಡುವ ಅವಶ್ಯಕತೆ ಇಲ್ಲ.

ಇದು ನನ್ನ ಮಿತ್ರ ಪಂಡಿತ್ ಹೃದಯನಾಥ್ ಕುಂಝ್ರುರವರು ಮಾಡಿರುವ ಹೇಳಿಕೆಯನ್ನು ತೆಗೆದು ಕೊಳ್ಳುತ್ತೇನೆ. ನನ್ನ ನೆನಪು ಸರಿಯಾಗಿದ್ದರೆ, ಅವರು ಎತ್ತಿರುವ ಮೊದಲನೆಯ ಅಂಶವೆಂದರೆ, ಸಂವಿಧಾನ ವ್ಯವಸ್ಥೆ ಕುಸಿದುಬಿದ್ದಾಗ ಆಡಳಿತವನ್ನು ವಹಿಸಿಕೊಳ್ಳುವುದು ಒಂದು ಹೊಸ ಸಂಗತಿಯಾಗಿದ್ದು ಇದು ಇನ್ನಾವುದೇ ಸಂವಿಧಾನದಲ್ಲಿ ಇರುವುದಿಲ್ಲ. ನಾನು ಇದನ್ನು ಒಪ್ಪಿಕೊಳ್ಳುವುದಿಲ್ಲ. ನಾನು ಅವರ ಗಮನವನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಸಂವಿಧಾನದತ್ತ ಸೆಳೆಯಬಯಸುತ್ತೇನೆ. ಅದರಲ್ಲಿ ಅಮೆರಿಕದ ಗಣತಂತ್ರಾತ್ಮಕ ಸಂವಿಧಾನ ವ್ಯವಸ್ಥೆಯನ್ನು ಸಂರಕ್ಷಿಸುವುದು ಅಮೆರಿಕ ಸರಕಾರದ ಕರ್ತವ್ಯವಾಗಿದೆ ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಲಾಗಿದೆ. ಈ ಸಂವಿಧಾನದ ಉಪಬಂಧಗಳ ಪ್ರಕಾರ ಸಂವಿಧಾನವನ್ನು ರಕ್ಷಿಸಿಕೊಂಡು ಬರಬೇಕೆಂದು ನಾವು ಹೇಳುವಾಗ ನಾವು ಅಮೆರಿಕದ ಸಂವಿಧಾನದಲ್ಲಿ ಹೇಳಲಾದ ಮಾತುಗಳನ್ನೇ ಹೇಳುತ್ತಿದ್ದೇವೆ. ಅದೇನೆಂದರೆ, ಈ ಸಂವಿಧಾನದಲ್ಲಿ ಹೇಳಲಾದ ಸ್ವರೂಪವನ್ನು ರಕ್ಷಿಸಿಕೊಂಡು ಬರುವುದು. ಆದ್ದರಿಂದ ಈ ವಿಷಯದಲ್ಲಿ ಕರಡು ಸಮಿತಿಯು ಸುಸ್ಥಾಪಿತವಾದ ಯಾವುದೇ ತತ್ವವನ್ನು ಬಿಟ್ಟುಹೋಗಿಲ್ಲ ಎಂದು ನಮಗನಿಸುತ್ತದೆ.

ಟೀಕೆಗೊಳಗಾಗಿರುವ ಇನ್ನೊಂದು ಅಂಶವೆಂದರೆ ಸಂವಿಧಾನದಲ್ಲಿ ಈಗಾಗಲೇ ೨೭೫ ಮತ್ತು ೨೭೬ನೆಯ ವಿಧಿಗಳಿರುವ ಕಾರಣ ೨೭೮ ಮತ್ತು ೨೭೮–ಎ ವಿಧಿಗಳ ಆವಶ್ಯಕತೆ ಇರುವುದಿಲ್ಲ. ಅವರು (ಪಂಡಿತ್ ಕುಂಝ್ರು) ೨೭೫ನೆಯ ಮತ್ತು ಈಗಿನ ೨೭೮ನೆಯ ವಿಧಿಗಳ ಉದ್ದೇಶವನ್ನು ಸಂಪೂರ್ಣ ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ ಎಂದು ಅತ್ಯಂತ ಗೌರವಪೂರ್ವಕವಾಗಿ ಹೇಳಬಯಸುತ್ತೇನೆ. ಪ್ರಾಂತೀಯ ವಿಷಯದಲ್ಲಿ ಶಾಸನ ಮಾಡುವ ಅಧಿಕಾರವಿರಬೇಕೆಂಬುದು ನಮ್ಮ ಇಚ್ಛೆಯಾಗಿದೆ ಎನ್ನುವುದು ಅವರ ವಾದವಾಗಿದೆ. ಆ ಹಕ್ಕನ್ನು ನೀವು ೨೭೬ನೆಯ ವಿಧಿಯ ಪ್ರಕಾರ ಪಡೆದುಕೊಳ್ಳುವಿರಿ. ಏಕೆಂದರೆ, ಈ ವಿಧಿಯ ಪ್ರಕಾರ ಕೇಂದ್ರಕ್ಕೆ ಈ ಅಧಿಕಾರವಿದೆ. ಉದ್ಘೋಷಣೆಯನ್ನು ಹೊರಡಿಸಿದ ಕೂಡಲೇ ಎರಡನೆಯ ಪಟ್ಟಿಯಲ್ಲಿರುವ ಎಲ್ಲಾ ವಿಷಯಗಳ ಮೇಲೆ ಕಾನೂನು ಮಾಡುವ ಅಧಿಕಾರ ದೊರೆಯುತ್ತದೆ ಎಂದು ಹೇಳುವುದು ೨೭೫ ಮತ್ತು ೨೭೬ನೆಯ ಅಥವಾ ೨೭೮ ಮತ್ತು ೨೭೮–ಎ ವಿಧಿಗಳಲ್ಲಿನ ಉಪಬಂಧಗಳ ಸೀಮಿತ ಅರ್ಥವೆನಿಸುವುದು.

ಈ ವಿಧದ ವಿಧಿಗಳು ಕಾರ್ಯಾಚರಣೆಯಲ್ಲಿ ಬರುವ ಸಂದರ್ಭಗಳು, ವಿಭಿನ್ನವಾದವು ಎಂದು

ನಾನು ಮೊದಲು ಈ ಸದನದ ಗಮನಕ್ಕೆ ತರಬಯಸುತ್ತೇನೆ. ೨೭೫ನೆಯ ವಿಧಿಯ ಪ್ರಕಾರ ಕೇಂದ್ರ ಸರಕಾರದ ಹಸ್ತಕ್ಷೇಪವನ್ನು ಯುದ್ಧ ಅಥವಾ ಆಕ್ರಮಣ, ಆಂತರಿಕ ಅಥವಾ ಬಾಹ್ಯ ಪರಿಸ್ಥಿತಿಗಳಿಗೆ ಮಾತ್ರ ಸೀಮಿತಗೊಳಿಸುತ್ತದೆ. ೨೭೮ನೆಯ ವಿಧಿಯು ಯುದ್ಧ ಅಥವಾ ಅತಿಕ್ರಮಣಕ್ಕೆ ಸಂಬಂಧಿಸಿದ ಕಾರಣಗಳಿಂದ ವ್ಯವಸ್ಥೆ ಕುಸಿದು ಬೀಳುವುದಕ್ಕೆ ಸಂಬಂಧಿಸಿದೆ. ಆದ್ದರಿಂದ ನಾನು ಹೇಳಿರುವಂತೆ ಇದರಲ್ಲಿರುವ ಕಾರ್ಯಕಾರಿ ಸೂತ್ರಗಳು ಬೇರೆಯೇ ಆಗಿವೆ. ಉದಾಹರಣೆಗಾಗಿ, ೨೭೫ನೆಯ ವಿಧಿಯ ಪ್ರಕಾರ ಯುದ್ಧಕ್ಕೆ ಸಂಬಂಧಿಸಿದ ಉದ್ಘೋಷಣೆಯನ್ನು ಹೊರಡಿಸಿದಾಗ ಪ್ರಾಂತೀಯ ಸಂವಿಧಾನವನ್ನು ಅಮಾನತ್ತಿನಲ್ಲಿಡುವ ಅಧಿಕಾರ ಇರುವುದಿಲ್ಲ. ಸರಕಾರವು ಆಚರಣೆಯಲ್ಲಿರುವುದು, ಶಾಸಕಾಂಗವೂ ಜಾರಿಯಲ್ಲಿರುವುದು ಮತ್ತು ಅದರ ಸಂವಿಧಾನದತ್ತವಾಗಿರುವ ಅಧಿಕಾರಗಳೂ ಮುಂದುವರಿಯುವವು. ಅದರ ಕಾರ್ಯಾಂಗವೂ ತನ್ನ ಕಾರ್ಯಾಂಗ ಅಧಿಕಾರಗಳನ್ನು ಉಳಿಸಿಕೊಳ್ಳುವುದು ಮತ್ತು ಪ್ರಾಂತ್ಯದ ಕಾನೂನುಗಳ ಪ್ರಕಾರ ಪ್ರಾಂತ್ಯದ ಆಡಳಿತವನ್ನು ಮುಂದುವರೆಸಿಕೊಂಡು ಹೋಗುವುದು. ೨೭೬ನೆಯ ವಿಧಿಯ ಪ್ರಕಾರ ಸಂಭವಿಸುವುದೇನೆಂದರೆ ಕೇಂದ್ರವೂ ಸಹ ಶಾಸಕಾಂಗ ಮತ್ತು ಕಾರ್ಯಾಂಗದ ಜೊತೆಗೆ ಆಡಳಿತದಲ್ಲಿ ಸಹಗಾಮಿ ಅಧಿಕಾರಗಳನ್ನು ಹೊಂದುತ್ತದೆ. ೨೭೬ನೆಯ ವಿಧಿಯಡಿ ಈ ಸ್ಥಿತಿ ಉಂಟಾಗುತ್ತದೆ. ಆದರೆ ೨೭೮ನೆಯ ವಿಧಿಯು ಆಚರಣೆಗೆ ಬಂದಾಗ ಪರಿಸ್ಥಿತಿ ಸಂಪೂರ್ಣ ಭಿನ್ನವಾಗಿರುತ್ತದೆ. ಪ್ರಾಂತ್ಯದಲ್ಲಿ ಶಾಸಕಾಂಗವಿರುವುದಿಲ್ಲ. ಏಕೆಂದರೆ, ಶಾಸಕಾಂಗವನ್ನು ಅಮಾನತ್ತಿನಲ್ಲಿಡಲಾಗುವುದು. ವಸ್ತುತಃ ಕಾರ್ಯಾಂಗ ಅಸ್ತಿತ್ವದಲ್ಲಿರುವುದಿಲ್ಲ. ಉದ್ಘೋಷಣೆಯ ಫಲವಾಗಿ ರಾಷ್ಟ್ರಪತಿ ಇಲ್ಲವೆ ಸಂಸತ್ತು, ಇಲ್ಲವೆ ರಾಜ್ಯಪಾಲರಿಂದ ಕೊಡಮಾಡಬಹುದಾದ ಅಧಿಕಾರಗಳನ್ನು ಹೊರತುಪಡಿಸಿ ಇತರ ಯಾವುದೇ ಕಾರ್ಯಾಂಗದ ಅಧಿಕಾರಗಳನ್ನು ಚಲಾಯಿಸುವಂತಿಲ್ಲ. ಈ ಎರಡೂ ಸನ್ನಿವೇಶಗಳು ಸಂಪೂರ್ಣ ಭಿನ್ನವಾಗಿವೆ. ನಾವು ೨೭೫ನೆಯ ವಿಧಿ ಮತ್ತು ೨೭೮ನೆಯ ವಿಧಿಗಳಲ್ಲಿ ಮಾಡಿರುವ ಸಂಯೋಜಕ ಪದಗಳ ಮೂಲಕ ಮಾಡಿರುವ ವಿಭಜನೆಯನ್ನು ಉಳಿಸಿಕೊಳ್ಳಲೇಬೇಕೆಂದು ನನಗನಿಸುತ್ತದೆ. ಎರಡನ್ನೂ ಒಟ್ಟಿಗೆ ಸೇರಿಸುವುದರಿಂದ ಬಹಳಷ್ಟು ಗೊಂದಲ ಉಂಟಾಗುತ್ತದೆ.

**ಪಂಡಿತ್ ಹೃದಯನಾಥ್ ಕುಂಝ್ರು** (ಸಂಯುಕ್ತ ಪ್ರಾಂತ್ಯಗಳು, ಸಾಮಾನ್ಯ): ಒಂದು ಸಂಗತಿಯನ್ನು ಸ್ಪಷ್ಟಪಡಿಸಬೇಕೆಂಬ ನನ್ನ ಗೌರವಾನ್ವಿತ ಮಿತ್ರರನ್ನು ನಾನು ಕೇಳಬಹುದೇ? ಪ್ರಾಂತ್ಯಗಳಲ್ಲಿ ಒಳ್ಳೆಯ ಸರಕಾರವನ್ನು ಕಲ್ಪಿಸಲು ಪ್ರಾಂತೀಯ ವಿಷಯಗಳಲ್ಲಿ ಕೇಂದ್ರ ಸರಕಾರದ ಹಸ್ತಕ್ಷೇಪ ಮಾಡಲು ಅವಕಾಶ ಕೊಡುವುದು ೨೭೮ ಮತ್ತು ೨೭೮-ಎ ವಿಧಿಗಳ ಉದ್ದೇಶವಾಗಿದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ, ಇಲ್ಲ, ಕೇಂದ್ರಕ್ಕೆ ಆ ಅಧಿಕಾರ ನೀಡಿಲ್ಲ.

**ಪಂಡಿತ್ ಹೃದಯನಾಥ್ ಕುಂಝ್ರು:** ಅಥವಾ ಪ್ರಾಂತ್ಯದಲ್ಲಿ ಸಾರ್ವಜನಿಕ ಶಾಂತಿಗೆ ಧಕ್ಕೆಯುಂಟು ಮಾಡುವಂತಹ ದುರಾಡಳಿತವಿದ್ದಾಗ ಮಾತ್ರವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಪ್ರಾಂತ್ಯಗಳಲ್ಲಿ ಸಂವಿಧಾನಾತ್ಮಕ ತತ್ವಗಳ ಮೇಲೆ ಸರಕಾರವನ್ನು ನಡೆಸಲಾಗುತ್ತಿಲ್ಲವಾದಾಗ ಮಾತ್ರ. ಪ್ರಾಂತ್ಯದಲ್ಲಿ ಒಳ್ಳೆಯ ಸರಕಾರವಿದೆಯೇ ಇಲ್ಲವೇ ಎಂಬುದನ್ನು ಕೇಂದ್ರ ಸರಕಾರ ನಿರ್ಧರಿಸುತ್ತದೆ. ಈ ವಿಷಯದಲ್ಲಿ ಇದು ನನ್ನ ಸ್ಪಷ್ಟ ಅಭಿಪ್ರಾಯ.

**ಪಂಡಿತ್ ಹೃದಯನಾಥ್ ಕುಂಝ್ರು:** "ಈ ಸಂವಿಧಾನದ ಉಪಬಂಧಗಳು" ಎಂದು ಹೇಳಿದಾಗ ಅದರ ಒಟ್ಟರ್ಥವಾದರೂ ಏನು? 'ಈ ಸಂವಿಧಾನದ ಉಪಬಂಧಗಳಂತೆ' ಎಂಬ ಪದಸಮುಚ್ಚಯದ ಅರ್ಥವನ್ನು ಕುರಿತ ಗೌರವಾನ್ವಿತ ಸದಸ್ಯರ ವಿಚಾರವಾದರೂ ಏನು ಎಂಬುದನ್ನು ತಿಳಿದುಕೊಳ್ಳುವುದು ಈ ಸಭೆಯ ಹಕ್ಕಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಡೀ ವಿಷಯದ ಬಗ್ಗೆ ವಿವರವಾಗಿ ವಿಶ್ಲೇಷಿಸಲು ಬಹಳ ಸಮಯ ಬೇಕಾಗುತ್ತದೆ. ಪ್ರತಿಯೊಂದು ವಿಧಿಯನ್ನು ಕೈಗೆತ್ತಿಕೊಂಡು ಅದು ಇಂತಹದೇ ಸೂತ್ರ ಅಥವಾ ತತ್ವವನ್ನು ಪ್ರತಿಪಾದಿಸುತ್ತದೆ ಎಂದು ಹೇಳುವುದು ಮತ್ತು ಒಂದು ಪ್ರಾಂತ್ಯದ ಯಾವುದೇ ಸರಕಾರ ಅಥವಾ ಶಾಸಕಾಂಗ ಅದರ ಅನ್ವಯ ಕಾರ್ಯ ಮಾಡುತ್ತಿಲ್ಲ ಎಂದು ಹೇಳುವುದು ವ್ಯವಸ್ಥೆಯು ಕುಸಿದುಬಿದ್ದಿದೆ ಎಂದು ಹೇಳಿದಂತಾಗುವುದು. 'ವ್ಯವಸ್ಥೆಯ ಕುಸಿದುಬೀಳುವಿಕೆ' ಎಂಬ ಮಾತುಗಳನ್ನು ಭಾರತ ಸರಕಾರ ಕಾಯ್ದೆ, ೧೯೩೫ರಲ್ಲಿ ಬಳಸಲಾಗಿದೆ ಎಂಬುದು ನನಗೆ ಗೊತ್ತು. ಆದ್ದರಿಂದ ಪ್ರತಿಯೊಬ್ಬರಿಗೂ ಇದರ ಕಾನೂನಾತ್ಮಕ ಮತ್ತು ವಾಸ್ತವಿಕ ಅರ್ಥ ಪರಿಚಯ ಇರಲೇಬೇಕು. ಹೆಚ್ಚಿನ ಇನ್ನಾವ ವಿವರಣೆಯ ಆವಶ್ಯಕತೆ ಇಲ್ಲ.

**ಶ್ರೀ ಹೆಚ್. ವಿ. ಕಾಮತ್** (ಸಿ.ಪಿ. ಮತ್ತು ಬಿರಾರ್ ಸಾಮಾನ್ಯ): ನಾನು ಮತ್ತು ಪ್ರೊಫೆಸರ್ ಸಕ್ಸೇನಾರವರು ಮಂಡಿಸಿರುವ ಇತರ ತಿದ್ದುಪಡಿಗಳ ಸ್ಥಿತಿ ಏನು? ಡಾ. ಅಂಬೇಡ್ಕರ್‌ರವರು ಅವುಗಳಿಗೆ ಉತ್ತರ ನೀಡುವುದಿಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅವುಗಳನ್ನು ಒಪ್ಪಿಕೊಳ್ಳುವುದಿಲ್ಲ. ನಾನು ನಿಜವಾದ ಭಾವವಿರುವ ತಿದ್ದುಪಡಿಗಳಿಗೆ ಮಾತ್ರ ಉತ್ತರ ಕೊಡುತ್ತಿದ್ದೇನೆ. ಮಂಡಿಸಲಾದ ಪ್ರತಿಯೊಂದು ತಿದ್ದುಪಡಿಗೂ ಉತ್ತರ ಕೊಡುತ್ತಾ ಹೋಗಲಾರೆ.

**ಶ್ರೀ ಹೆಚ್. ವಿ. ಕಾಮತ್:** ಡಾ. ಅಂಬೇಡ್ಕರ್‌ರವರು ಪದಶಃ ತಿದ್ದುಪಡಿಗಳಿಗೆ ಮಾತ್ರ ಉತ್ತರಿಸುತ್ತಿದ್ದಾರೆ. ಅವರು ಮಂಡಿಸಲಾದ ಎಲ್ಲಾ ತಿದ್ದುಪಡಿಗಳಿಗೂ ಉತ್ತರ ನೀಡಬೇಡವೇ?

**ಮಾನ್ಯ ಸಭಾಧ್ಯಕ್ಷರು:** ಹೀಗೇ ಉತ್ತರ ನೀಡಬೇಕೆಂದು ಡಾ. ಅಂಬೇಡ್ಕರ್‌ರವರನ್ನು ನಾನು ಒತ್ತಾಯಿಸಲಾರೆ. ತಮ್ಮದೇ ಆದ ರೀತಿಯಲ್ಲಿ ಉತ್ತರ ಕೊಡುವ ಹಕ್ಕು ಅವರದಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದುವರೆಗೆ ನಡೆದ ಸಾಮಾನ್ಯ ಚರ್ಚೆಯಲ್ಲಿ ಈ ವಿಧಿಗಳನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಈ ವಿಧಿಗಳ ದುರುಪಯೋಗ ಮತ್ತು ಅವುಗಳನ್ನು ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಳ್ಳುವ ಸಾಧ್ಯತೆ ಇದೆ ಎಂಬುದನ್ನು ನಾನು ಸಂಪೂರ್ಣವಾಗಿ ಅಲ್ಲಗಳೆಯುವುದಿಲ್ಲ. ಆದರೆ ಇಂತಹ ಅಭ್ಯಂತರ ಕೇಂದ್ರಕ್ಕೆ ಪ್ರಾಂತ್ಯಗಳ ಮೇಲೆ ಅಧಿಕಾರ ಚಲಾಯಿಸುವ ಅವಕಾಶ ಕೊಡುವ ಈ ಸಂವಿಧಾನದ ಎಲ್ಲಾ ವಿಧಿಗಳಿಗೂ ಅನ್ವಯಿಸುತ್ತದೆ. ನಿನ್ನೆಯ ದಿವಸ ನನ್ನ ಗೌರವಾನ್ವಿತ ಮಿತ್ರ ಶ್ರೀ ಗುಪ್ತೆಯವರು ಹೇಳಿದಂತೆ ಅಂತಹ ವಿಧಿಗಳನ್ನು ಯಾವಾಗಲೂ ಕಾರ್ಯರೂಪದಲ್ಲಿ ತರಲಾಗುವುದಿಲ್ಲ ಮತ್ತು ಅವು ನಿರ್ಜೀವವಾಗುತ್ತೆ ಎಂಬ ಮಾತುಗಳನ್ನು ನಾನು ಸಂಪೂರ್ಣವಾಗಿ ಸಹಮತಿಸುತ್ತೇನೆ. ಅಂತಹವುಗಳನ್ನು ಕಾರ್ಯರೂಪಕ್ಕೆ ತಂದಿದ್ದೇ ಆದಲ್ಲಿ ರಾಷ್ಟ್ರಪತಿಗಳು ಪ್ರಾಂತ್ಯಗಳ ಆಡಳಿತ ಆದಲ್ಲಿ ರಾಷ್ಟ್ರಪತಿಗಳು ಪ್ರಾಂತ್ಯಗಳ ಆಡಳಿತವನ್ನು ಅಮಾನತ್ತುಗೊಳಿಸುವ ಮೊದಲು ಸಾಕಷ್ಟು ಮುನ್ನೆಚ್ಚರಿಕೆ ವಹಿಸುವರೆಂದು ನಾನು ಆಶಿಸುತ್ತೇನೆ. ಅವರು ಮಾಡಬಹುದಾದ ಮೊದಲೇ ಕೆಲಸವೆಂದರೆ ತಪ್ಪು ಮಾಡುತ್ತಿರುವ ಪ್ರಾಂತ್ಯಕ್ಕೆ ಸಂವಿಧಾನದ ಪ್ರಕಾರ ಆಡಳಿತ ನಡೆಯುತ್ತಿಲ್ಲ ಎಂದು ಎಚ್ಚರಿಕೆ ನೀಡುವುದು. ಆ ಎಚ್ಚರಿಕೆಯೂ ಫಲಕಾರಿಯಾಗದಿದ್ದಾಗ ಪ್ರಾಂತ್ಯದ ಜನರಿಗೆ ಪರಿಸ್ಥಿತಿಯನ್ನು ಸುಧಾರಿಸಲು ಅವಕಾಶ ನೀಡುವಂತೆ ಚುನಾವಣೆಗೆ ಆಜ್ಞಾಪಿಸುವುದು ಎರಡನೆಯ ಸಾಧ್ಯತೆ. ಎರಡೂ ವಿಧಾನಗಳು ವಿಫಲಗೊಂಡಾಗ ಅವರು ಈ ವಿಧಿಯ ಉಪಯೋಗ ಮಾಡುವರು. ಇಂತಹ ಸಂದರ್ಭಗಳಲ್ಲಿ ಮಾತ್ರ ಅವರು ಈ ವಿಧಿಯನ್ನು ಉಪಯೋಗಿಸುವರು. ಅಂತಹ ಸಂದರ್ಭದಲ್ಲಿ ನಾವು ಈ ವಿಧಿಗಳನ್ನು

ನಿರರ್ಥಕವಾಗಿ ಸೇರಿಸಿದ್ದೇವೆ ಅಥವಾ ರಾಷ್ಟ್ರಪತಿಗಳು ಬುದ್ಧಿಪೂರ್ವಕವಾಗಿ ಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಲು ಬರುವುದಿಲ್ಲ ಎಂದು ನನಗನಿಸುತ್ತದೆ.

**ಶ್ರೀ ಹೆಚ್. ವಿ. ಕಾಮತ್:** ೧೪೩ನೆಯ ವಿಧಿಯನ್ನು ಈಗ ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಲಾಗುವುದು ಎಂದು ಡಾ. ಅಂಬೇಡ್ಕರರು ಈ ಸದನಕ್ಕೆ ಭರವಸೆ ನೀಡಬಲ್ಲರೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ನಾನು ಈಗಾಗಲೇ ಹೇಳಿದ್ದೇನೆ ಮತ್ತು ಮಸೂದೆಯ ಎರಡನೆಯ ಪಠಣದ ನಂತರ ಸಭೆ ಸೇರಲಿರುವ ಕರಡು ಸಮಿತಿಯು ಈ ಉಪಬಂಧಗಳೆಲ್ಲವನ್ನೂ ಒಟ್ಟಾಗಿ ಪರಿಶೀಲಿಸಿದ ನಂತರ ಅವಶ್ಯವೆನಿಸಿದರೆ ೧೪೩ನೆಯ ತಿದ್ದುಪಡಿ ಮಾಡಲಾಗುವುದು.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ತಿದ್ದುಪಡಿಗಳನ್ನು ಒಂದೊಂದಾಗಿ ಮತಕ್ಕೆ ಹಾಕುವೆ.

ನನ್ನ ಮುಂದಿರುವ ಪ್ರಶ್ನೆ ಏನೆಂದರೆ

"೧೮೮ನೆಯ ವಿಧಿಯನ್ನು ಕೈಬಿಡಬೇಕು"

ಸೂಚನೆ ಸ್ವೀಕೃತವಾಯಿತು

**೧೮೮ನೆಯ ವಿಧಿಯನ್ನು ಸಂವಿಧಾನದಿಂದ ಕೈಬಿಡಲಾಯಿತು.**

## ವಿಧಿ ೨೭೯*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಸಭಾಧ್ಯಕ್ಷರೆ, ಈ ಚರ್ಚೆಯಲ್ಲಿ ಪ್ರಸ್ತಾಪಿಸಲಾದ ಎರಡು ಪ್ರಶ್ನೆಗಳಿಗೆ ಮಾತ್ರ ಉತ್ತರ ಕೊಡುವ ಆವಶ್ಯಕತೆ ಇದೆ ಎಂದು ನನಗನಿಸುತ್ತದೆ. ನನ್ನ ಮಿತ್ರ ಪ್ರೊಫೆಸರ್ ಸಕ್ಸೇನಾರವರು ಮಂಡಿಸುವ ತಿದ್ದುಪಡಿಯಲ್ಲಿ ತುರ್ತು ಪರಿಸ್ಥಿತಿಯ ಕಾಲದಲ್ಲಿ ಮೂಲಭೂತ ಹಕ್ಕುಗಳಲ್ಲಿ ಯಾವುದೇ ಬದಲಾವಣೆಯನ್ನು ಸಂಸತ್ತು ಮಾಡಬಹುದೇ ಹೊರತು ರಾಜ್ಯವಲ್ಲ. ನನ್ನ ಮಿತ್ರರು, ೧೩ನೆಯ ವಿಧಿಯ ಉಪಬಂಧಗಳನ್ನು ಪರಿಶೀಲಿಸಿದಲ್ಲಿ ನಾವು ಕೇಂದ್ರ ಮತ್ತು ಪ್ರಾಂತ್ಯಗಳೆರಡರ ಮೂಲಭೂತ ಹಕ್ಕುಗಳಿಗೆ ನ್ಯಾಯಸಮ್ಮತವಾದ ಅಥವಾ ವಿವೇಕಯುತ ಬದಲಾವಣೆಗಳನ್ನು ಮಾಡಲು ಅನುಮತಿ ಕೊಟ್ಟಿದ್ದೇವೆ ಎಂಬ ಅಂಶಗಳು ಅವರಿಗೇ ತಿಳಿಯುತ್ತವೆ. ಆದ್ದರಿಂದ ಸಹಜ ಸ್ಥಿತಿ ಇರುವ ಕಾಲದಲ್ಲಿ ಮೂಲಭೂತ ಹಕ್ಕುಗಳ ಮೇಲೆ ಪರಿಣಾಮ ಬೀರುವಂತಹ ಕಾನೂನುಗಳನ್ನು ಮಾಡುವ ಅಧಿಕಾರವನ್ನು ಎರಡೂ ಸರಕಾರಗಳಿಗೆ ಕೊಟ್ಟಿರುವಾಗ ಈ ಸಹಜವಾದ ಅಧಿಕಾರವನ್ನು ತುರ್ತು ಪರಿಸ್ಥಿತಿಯಲ್ಲಿ ರಾಜ್ಯದಿಂದ ಏಕೆ ಕಿತ್ತುಕೊಳ್ಳಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಆದರೆ ತುರ್ತು ಪರಿಸ್ಥಿತಿಯಲ್ಲಿ ಅವುಗಳನ್ನು ಅಮಾನತ್ತಿನಲ್ಲಿ ಇಡಲಾಗುತ್ತದೆಯಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಮಾನತ್ತಿನಲ್ಲಿಡುವುದು ಇನ್ನೊಂದು ವಿಧಿಯಲ್ಲಿ ಬರುತ್ತದೆ. ಈ ಅಧಿಕಾರವನ್ನು ಎರಡೂ, ಎಂದರೆ ಸಂಸತ್ತು ಮತ್ತು ಪ್ರಾಂತ್ಯಗಳು, ೧೩ನೆಯ ವಿಧಿಯಲ್ಲಿ ಏನೇ ಹೇಳಿದ್ದರೂ, ಅವುಗಳನ್ನು ಚಲಾಯಿಸಬಹುದು.

**ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ:** ತುರ್ತು ಪರಿಸ್ಥಿತಿಯ ಕಾಲದಲ್ಲಿ?

---

* ಸಿ.ಎ.ಡಿ. ಸಂ. IX, ೪ನೇ ಆಗಸ್ಟ್ ೧೯೪೯, ಪುಟ ೧೮೫.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ಏಕೆಂದರೆ ಅದು ಇತರ ಪ್ರಸಂಗಗಳಲ್ಲಿಯೂ ಸಹಜವಾಗಿರುತ್ತದೆ. ತುರ್ತು ಪರಿಸ್ಥಿತಿ ಇಲ್ಲದಿರುವಾಗ ಎರಡೂ ಸರಕಾರಗಳು ಆ ವಿಷಯದಲ್ಲಿ ಕಾನೂನು ಮಾಡುವ ಅಧಿಕಾರ ಹೊಂದಿರುತ್ತವೆ. ಆದ್ದರಿಂದ ತುರ್ತು ಪರಿಸ್ಥಿತಿಯಲ್ಲಿ ಆ ಅಧಿಕಾರವನ್ನು ಏಕೆ ಕಿತ್ತುಕೊಳ್ಳಬೇಕೆಂಬುದಕ್ಕೆ ಯಾವ ಕಾರಣವೂ ಇಲ್ಲವೆಂದು ನನಗನಿಸುತ್ತದೆ. ಇಂತಹ ಅಧಿಕಾರವನ್ನು ರಾಜ್ಯಕ್ಕೆ ಏಕೆ ಕೊಡಬೇಕೆಂಬುದಕ್ಕೆ ತುರ್ತು ಪರಿಸ್ಥಿತಿಯೂ ಒಂದು ಕಾರಣವೆನಿಸಬಹುದು. ಇನ್ನು ನನ್ನ ಮಿತ್ರ ಶ್ರೀ ಕಾಮತ್‌ರವರ ಟೀಕೆಗೆ ಸಂಬಂಧಿಸಿದಂತೆ, ಈ ಉದ್ದೇಶಕ್ಕೆ ೨೮೦ನೆಯ ವಿಧಿಯೇ ಸಾಕಾಗುತ್ತದೆ ಎಂಬ ಅವರ ಹೇಳಿಕೆ ಪರಿಸ್ಥಿತಿಯ ಅಪಾರ್ಥದಿಂದುಂಟಾಗಿದೆ. ಏಕೆಂದರೆ ಮಾರ್ಪಡಿಸುವ ಅಧಿಕಾರವನ್ನು ಕೊಡದೇ ಹೋದರೆ ಅಮಾನತ್ತಿನಲ್ಲಿರುವ ಯಾವ ಪರಿಣಾಮವೂ ಆಗುವುದಿಲ್ಲ. ೨೮೦ನೆಯ ವಿಧಿಯು ಬೇರೆ ವಿಷಯಕ್ಕೆ ಸಂಬಂಧಿಸಿದೆಯಾದ್ದರಿಂದ ಈ ವಿಧಿಗೆ ಯಾವ ಸಂಬಂಧವೂ ಇಲ್ಲ. ಈ ವಿಧಿಯನ್ನು ಅದು ಯಾವ ರೀತಿಯಲ್ಲಿ ಸೂಚಿತವಾಗಿದೆಯೋ ಅದೇ ರೀತಿ ಅಂಗೀಕರಿಸಬೇಕು ಎಂದು ಕೇಳಿಕೊಳ್ಳುತ್ತೇವೆ.

**ಮಾನ್ಯ ಸಭಾಧ್ಯಕ್ಷರು:** ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುವೆ.

[**ಮೂರು ತಿದ್ದುಪಡಿಗಳು ತಿರಸ್ಕೃತವಾದವು. ೨೭೯ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**]

## ವಿಧಿ ೨೮೦*

**ಮಾನ್ಯ ಸಭಾಧ್ಯಕ್ಷರು:** ಈಗ ೨೮೦ನೆಯ ವಿಧಿಯನ್ನು ತೆಗೆದುಕೊಳ್ಳೋಣ.

ತಿದ್ದುಪಡಿ ಸಂಖ್ಯೆ ೩೦೨೮, ಡಾ. ಅಂಬೇಡ್ಕರ್

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಈಗ ಮಂಡಿಸುತ್ತಿರುವುದೇನೆಂದರೆ,

"ಈಗಿರುವ ೨೮೦ನೆಯ ವಿಧಿಯ ಬದಲು ಈ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು:

'೨೮೦, ತುರ್ತು ಪರಿಸ್ಥಿತಿಯ ಘೋಷಣೆ ಜಾರಿಯಲ್ಲಿರುವಾಗ ರಾಷ್ಟ್ರಪತಿಗಳು ತಮ್ಮ ಆಜ್ಞೆಯ ಮೂಲಕ ಸಂವಿಧಾನದ ಭಾಗ IIIರಲ್ಲಿ ಕೊಡಲಾದ ಯಾವುದೇ ಹಕ್ಕುಗಳನ್ನು ಜಾರಿಗೊಳಿಸುವಂತೆ ಕೋರಿ ಮತ್ತು ಹಾಗೆ ಕೊಡಮಾಡಲಾದ ಯಾವುದೇ ಹಕ್ಕನ್ನು ಜಾರಿಗೊಳಿಸಬೇಕೆಂದು ಯಾವುದೇ ನ್ಯಾಯಾಲಯದಲ್ಲಿ ಕೊಡದ ಯಾವುದೇ ನಡಾವಳಿಗಳು, ತುರ್ತು ಪರಿಸ್ಥಿತಿಯ ಉದ್ಘೋಷಣೆಯ ಕಾಲದಲ್ಲಿ ಅಥವಾ ಆಜ್ಞೆಯಲ್ಲಿ ನಿಗದಿಪಡಿಸಲಾದ ಒಂದು ಗೊತ್ತಾದ ಕಡಿಮೆ ಅವಧಿಯಲ್ಲಿ ಅಮಾನತ್ತಿನಲ್ಲಿಡಲಾಗುವುದು."

ಈ ೨೮೦ನೆಯ ವಿಧಿಯು ಮೂಲ ೨೮೦ನೆಯ ವಿಧಿಯ ಸುಧಾರಿತ ವಿಧಿಯಾಗಿದೆ ಎಂಬುದನ್ನು ಈ ಸದನ ಗಮನಿಸಬಹುದು. ಮೂಲ ೨೮೦ನೆಯ ವಿಧಿಯನ್ನು ೨೫೫ನೆಯ ವಿಧಿಯ ಕಾರ್ಯಾಚರಣೆಯನ್ನು ಅಮಾನತ್ತಿನಲ್ಲಿಡುವ ರಾಷ್ಟ್ರಪತಿಗಳ ಆಜ್ಞೆಯು ತುರ್ತು ಪರಿಸ್ಥಿತಿಯ ಘೋಷಣೆ ಮುಗಿದುಹೋದ ಆರು ತಿಂಗಳವರೆಗೆ ಜಾರಿಯಲ್ಲಿರುವುದು. ಎಂದರೆ, ಬಂದೀಪ್ರತ್ಯಕ್ಷೀಕರಣ (ಹೇಬಿಯಸ್ ಕಾರ್ಪಾಸ್) ಮುಂತಾದ ರಿಟ್(ಆದೇಶ)ಗಳನ್ನು ಹೊರಡಿಸುವಂತಹ ರಕ್ಷಣೆ ಹೊಂದಿರುವಂತಹ ಆದೇಶಗಳ ಆವಶ್ಯಕತೆ ಇಲ್ಲದಿದ್ದರೂ ಅಮಾನತ್ತಿನಲ್ಲಿ ಮುಂದುವರಿಯುವುವು. ಅನಗತ್ಯವಾದಾಗ್ಯೂ ಅವು ಏಕೆ ಮುಂದುವರಿಯಬೇಕೆಂಬ ಬಗ್ಗೆ

---

* ಸಿ.ಎ.ಡಿ. ಸಂ. IX, ೪ನೇ ಆಗಸ್ಟ್ ೧೯೪೯, ಪುಟ ೧೮೬.

ಸಂಶಯ ವ್ಯಕ್ತಪಡಿಸಲಾಗಿದೆ. ಉದ್ಘೋಷಣೆಯನ್ನು ಹಿಂತೆಗೆದುಕೊಂಡ ನಂತರವೂ ರಕ್ಷಣೆಗಳು ಅನಾವಶ್ಯಕವಾಗುವಂತಹ ಸುಧಾರಣಾ ಪರಿಸ್ಥಿತಿಯು ಉಂಟಾಗಬಹುದು. ಅದು ಉದ್ಘೋಷಣೆಯನ್ನು ಹಿಂತೆಗೆದುಕೊಳ್ಳುವ ಮುಂಚೆಯೇ ಸುಧಾರಿಸಬಹುದು. ಆದ್ದರಿಂದಲೇ ಈ ಹೊಸ ವಿಧಿಯನ್ನು ಮಂಡಿಸಲಾಗಿದೆ. ಇದನ್ನು ಅಂಗೀಕರಿಸುವಲ್ಲಿ ಸಭೆಗೆ ಯಾವ ಆತಂಕವೂ ಇರಲಾರದೆಂದು ಆಶಿಸುತ್ತೇನೆ.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಒಂದು ಮಾತನ್ನು ನಾನು ಹೇಳಬಹುದೇ? ನಡಾವಳಿಗಳ ಅಮಾನತ್ತು ರಾಷ್ಟ್ರಪತಿಗಳ ಆಜ್ಞೆಯ ಮೂಲಕ ಆಗಬೇಕೇ ಎಂಬ ಅಂಶವನ್ನು ಎತ್ತಲಾಗಿರುವುದರಿಂದ ವಿವರಣೆ ನೀಡಬೇಕಾಗಿದೆ. ರಾಷ್ಟ್ರಪತಿಗಳ ಆಜ್ಞೆ ಎಂದರೆ ಕಾರ್ಯಾಂಗದ ಸಲಹೆಯ ಮೇರೆಗೆ ಎಂದರ್ಥ. ಹಾಗೆಂದರೆ, ಕಾರ್ಯಾಂಗವು ಶಾಸಕಾಂಗದ ವಿಶ್ವಾಸ ಹೊಂದಿದೆ ಎಂದು ಅರ್ಥವಾಗುವುದು. ಅಮಾನತ್ತನ್ನು ಕಾರ್ಯಾಂಗ ಮಾಡಬೇಕೇ ಇಲ್ಲವೇ ಸಂಸತ್ತು ಕಾನೂನು ಮಾಡುವ ಮೂಲಕ ಮಾಡಬೇಕೆ ಎಂಬ ಬಗ್ಗೆ ಸಂಶಯ ಉಂಟಾಗುವುದು ಸಹಜ. ಆದ್ದರಿಂದ ಈ ವಿಷಯವನ್ನು ಪರಿಶೀಲಿಸಲು ಕರಡು ಸಮಿತಿಗೆ ಅವಕಾಶ ನೀಡಲು ಈ ವಿಧಿಯನ್ನು ತಡೆಹಿಡಿಯಬೇಕೆಂದು ಅಪೇಕ್ಷಿಸುತ್ತೇನೆ. ನಾವು ಇತರ ವಿಧಿಗಳ ಪರಿಶೀಲನೆಯನ್ನು ಕೈಗೆತ್ತಿಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು:** ಈ ವಿಧಿಯನ್ನು ತಡೆಹಿಡಿಯಬಹುದು.

ಹಾಗಾದರೆ ನಾವು ೨೪೭ನೆಯ ವಿಧಿಯನ್ನು ತೆಗೆದುಕೊಳ್ಳಬಹುದು.

## ವಿಧಿ ೨೪೭**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತಿರುವುದೇನೆಂದರೆ

"೨೪೭ನೆಯ ವಿಧಿಯ ಆರಂಭದಲ್ಲಿರುವ ಶಿರೋನಾಮೆಯ ಬದಲು ಈ ಕೆಳಗಿನ ಶಿರೋನಾಮೆಯನ್ನು ಸೇರಿಸತಕ್ಕದ್ದು.

**"ಸಾಮಾನ್ಯ"**

**ಮಾನ್ಯ ಸಭಾಧ್ಯಕ್ಷರು:** ಇದರ ಮೇಲೆ ಯಾವ ಚರ್ಚೆಯ ಆವಶ್ಯಕತೆಯೂ ಇಲ್ಲ ಎಂದು ನನಗನಿಸುತ್ತದೆ.

ಇರುವ ಪ್ರಶ್ನೆ ಎಂದರೆ

"೨೪೭ನೆಯ ವಿಧಿಯ ಆರಂಭದ ಶಿರೋನಾಮೆಯ ಬದಲು ಈ ಕೆಳಗಿನ ಶಿರೋನಾಮೆಯನ್ನು ಸೇರಿಸತಕ್ಕದ್ದು:

"ಸಾಮಾನ್ಯ"

**ಸೂಚನೆಯನ್ನು ಅಂಗೀಕರಿಸಲಾಯಿತು.**

* * *

**ಮಾನ್ಯ ಸಭಾಧ್ಯಕ್ಷರು:** ಇನ್ನಾರಾದರೂ ಮಾತನಾಡಬಯಸುವರೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೇಳಬೇಕಾದುದ್ದಿಷ್ಟೇ. 'ಅತ್ಯಂತ ಜಾಗರೂಕತೆ'ಯಿಂದ

---

* ಸಿ.ಎ.ಡಿ. ಸಂ. IX, ೪ನೇ ಆಗಸ್ಟ್ ೧೯೪೯, ಪುಟ ೧೯೮.

** ಅದೇ, ಪುಟ ೧೯೮–೯೯.

ಎಂಬ ಪದಗಳನ್ನು ಬಳಸಲಾಗಿದೆ. ಅವು ಈಗ ಅನಾವಶ್ಯಕವಾಗಿರಬಹುದು, ಆದರೂ ಮುಂದೆ ಅವುಗಳ ಆವಶ್ಯಕತೆ ಉಂಟಾಗಬಹುದು. ಈ ಪದಗಳನ್ನು ನಾವು ಇಟ್ಟುಕೊಳ್ಳಬಯಸುತ್ತೇವೆ.

**೨೪೭ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

* * *

## ವಿಧಿ ೨೪೮*

*__ಮಾನ್ಯ ಸಭಾಧ್ಯಕ್ಷರು:__ ಇನ್ನು ೨೪೮ನೆಯ ವಿಧಿಯನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಈಗ ನಾನು ಮಂಡಿಸುತ್ತಿರುವುದೇನೆಂದರೆ

**ಕಾನೂನಿನ ಅಧಿಕಾರವಿಲ್ಲದೇ ಯಾವ ತೆರಿಗೆಗಳನ್ನು ಹೇರುವಂತಿಲ್ಲ.**

"೨೪೮ನೆಯ ವಿಧಿಯ ಬದಲು ಈ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು.

"೨೪೮, ಕಾನೂನಿನಿಂದ ಅಧಿಕೃತವಲ್ಲದ ಯಾವ ತೆರಿಗೆಯನ್ನೂ ಸಂಗ್ರಹಿಸುವಂತಿಲ್ಲ.

'೨೪೮–ಎ (೧) ರಾಜ್ಯಗಳಿಗೆ ಇಡಿಯಾಗಿ ಇಲ್ಲವೆ ಭಾಗಶಃ ನಿಗದಿಪಡಿಸಲಾಗುವ ಕೆಲವು ತೆರಿಗೆಗಳು ಅಥವಾ ಕರಗಳಿಗೆ ಸಂಬಂಧಿಸಿದ ಈ ಅಧ್ಯಾಯದ ಉಪಬಂಧಗಳಿಗೊಳಗಾಗಿರುವಂತೆ ಭಾರತ ಸರಕಾರವು ಎತ್ತಲಾದ ಅಥವಾ ಪಡೆದುಕೊಂಡ ಎಲ್ಲಾ ಕಂದಾಯಗಳು ಅಥವಾ ಸಾರ್ವಜನಿಕ ಹಣಕಾಸುಗಳು "ಭಾರತದ ಸಂಚಿತ ನಿಧಿ" ಎಂದು ಕರೆಯಲಾಗುವ ಸಂಚಿತ ನಿಧಿಯಲ್ಲಿ ಇಡತಕ್ಕದ್ದು. ಮತ್ತು ರಾಜ್ಯ ಸರಕಾರ ಎತ್ತಲಾದ ಅಥವಾ ಪಡೆದುಕೊಂಡ ಕಂದಾಯಗಳು ಅಥವಾ ಸಾರ್ವಜನಿಕ ಹಣಕಾಸುಗಳನ್ನು "ರಾಜ್ಯದ ಸಂಚಿತ ನಿಧಿ" ಎಂಬ ಸಂಚಿತ ನಿಧಿಯಲ್ಲಿ ಇಡತಕ್ಕದ್ದು" (೨) ಭಾರತ ಅಥವಾ ಒಂದು ರಾಜ್ಯದ ಸಂಚಿತ ನಿಧಿಯಿಂದ ಸಂವಿಧಾನದಲ್ಲಿ ಹೇಳಲಾದ ಮತ್ತು ಆ ಸಂಬಂಧದ ಕಾನೂನಿನಲ್ಲಿ ಹೇಳಲಾದ ರೀತಿಯ ಹೊರತು ಅದರಿಂದ ಯಾವುದೇ ಬಾಬತ್ತಿನ ಖರ್ಚಿಗೆ ವಿನಿಯೋಗಿಸತಕ್ಕದ್ದಲ್ಲ."

ಈ ತಿದ್ದುಪಡಿಗಳು ನಾವು ಈಗಾಗಲೇ ಅಂಗೀಕರಿಸಿರುವ ತಿದ್ದುಪಡಿಗಳ ಪರಿಣಾಮವಾದವುಗಳಾಗಿವೆ.

[**ಈ ವಿಧಿಯನ್ನು ಮೇಲೆ ಹೇಳಲಾದ ತಿದ್ದುಪಡಿಯನ್ವಯ ತಿದ್ದುಪಡಿಯೊಂದಿಗೆ ಸ್ವೀಕರಿಸಿ ಸಂವಿಧಾನದಲ್ಲಿ ಸೇರಿಸಲಾಯಿತು.**]

* * *

## ವಿಧಿ ೨೪೯**

**ಮಾನ್ಯ ಸಭಾಧ್ಯಕ್ಷರು:** ಇನ್ನಾರಾದರೂ ಮಾತನಾಡಬಯಸುವಿರಾ? (ಯಾವ ಸದಸ್ಯರೂ ಏಳಲಿಲ್ಲ)

ಡಾ. ಅಂಬೇಡ್ಕರ್, ನೀವೇನಾದರೂ ಹೇಳಬಯಸುವಿರಾ?

---

* ಸಿ.ಎ.ಡಿ. ಸಂ. IX, ೪ನೇ ಆಗಸ್ಟ್ ೧೯೪೯, ಪುಟ ೧೯೯.

** ಅದೇ, ಪುಟ ೧೯೯.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ, ಸಾಮಾನ್ಯ): ನಾನು ಹೇಳುವುದಿನ್ನೇನೂ ಇಲ್ಲ.

**ಮಾನ್ಯ ಸಭಾಧ್ಯಕ್ಷರು:** ಈಗ ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತಿದ್ದೇನೆ. ಇರುವ ಪ್ರಶ್ನೆ ಎಂದರೆ

"೨೪೯ನೆಯ ವಿಧಿಯ ಕಲಮು (೨)ರಲ್ಲಿರುವ 'ವರ್ಷದಲ್ಲಿ' ಎಂಬ ಪದಗಳನ್ನು ಕೈಬಿಡತಕ್ಕದ್ದು."

ತಿದ್ದುಪಡಿಯು ಸ್ವೀಕೃತವಾಯಿತು.

**ಮಾನ್ಯ ಸಭಾಧ್ಯಕ್ಷರು:** ಇರುವ ಪ್ರಶ್ನೆ ಎಂದರೆ

"೨೪೯ನೆಯ ವಿಧಿಯ ಕಲಮು (೧)ರಲ್ಲಿ 'ಅಂತಹ ಸ್ಟ್ಯಾಂಪುಕರಗಳನ್ನು' ಎಂಬ ಪದಗಳ ನಂತರ 'ಸಂಸತ್ತಿನಿಂದ ಪಾಸಾದ ಯಾವುದೇ ಕಾನೂನಿನನ್ವಯ ಹೇಳಲಾದ' ಎಂಬ ಪದಗಳನ್ನು ಸೇರಿಸತಕ್ಕದ್ದು."

ತಿದ್ದುಪಡಿ ಸ್ವೀಕೃತವಾಯಿತು.

**ಮಾನ್ಯ ಸಭಾಧ್ಯಕ್ಷರು:** ಇರುವ ಪ್ರಶ್ನೆ ಎಂದರೆ,

"೨೪೯ನೆಯ ವಿಧಿಯ ಕಲಮು (೨)ರಲ್ಲಿ 'ಭಾರತದ ಕಂದಾಯ' ಎಂಬ ಪದಗಳ ಬದಲು 'ಭಾರತದ ಸಂಚಿತ ನಿಧಿ' ಎಂಬ ಪದಗಳನ್ನು ಸೇರಿಸತಕ್ಕದ್ದು."

ತಿದ್ದುಪಡಿ ಸ್ವೀಕೃತವಾಯಿತು.

**ಮಾನ್ಯ ಸಭಾಧ್ಯಕ್ಷರು:** ಇರುವ ಪ್ರಶ್ನೆ ಎಂದರೆ

**"ತಿದ್ದುಪಡಿಯಾದ ೨೪೯ನೆಯ ವಿಧಿಯು ಸಂವಿಧಾನದ ಅಂಗವಾಗುತ್ತದೆ."**

ಸೂಚನೆ ಅಂಗೀಕೃತವಾಯಿತು.

**(ತಿದ್ದುಪಡಿಯಾದ ೨೪೯ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು)**

## ವಿಧಿ ೨೫೦*

**ಮಾನ್ಯ ಸಭಾಧ್ಯಕ್ಷರು:** ಇರುವ ಸೂಚನೆ ಎಂದರೆ,

"೨೫೦ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಬೇಕು."

(ತಿದ್ದುಪಡಿ ಸಂಖ್ಯೆ ೨೮೪೨ರಿಂದ ೨೮೫೦ರವರೆಗಿನ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.)

**ಶ್ರೀ ಆರ್. ಕೆ. ಸಿಧ್ವ:** (ಸಿ.ಪಿ. ಮತ್ತು ಬಿರಾರ್ ಸಾಮಾನ್ಯ)

"೨೫೦ನೆಯ ವಿಧಿಯ ಕೊನೆಯಲ್ಲಿ ಈ ಕೆಳಗಿನದನ್ನು ಸೇರಿಸತಕ್ಕದ್ದು.

'ಹಾಗೆ ಹಂಚಲಾದ ನಿವ್ವಳ ಉತ್ಪತ್ತಿಯನ್ನು ರಾಜ್ಯ ಸರಕಾರಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸರಕಾರಗಳಿಗೆ ಹಂಚತಕ್ಕದ್ದು."

[ತಮ್ಮ ಭಾಷಣದ ಕೊನೆಯಲ್ಲಿ ಶ್ರೀ ಸಿಧ್ವರವರು ಇನ್ನೊಂದು ತಿದ್ದುಪಡಿಯನ್ನು ಮಂಡಿಸಿದರು]

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ ನಾನು ಈ ಮುಂಚೆಯೇ ಈ ವಿಧಿಯನ್ನು ತಡೆಹಿಡಿಯಬೇಕೆಂದು ಕೋರಬೇಕಾಗಿತ್ತು. ಇದಕ್ಕಾಗಿ ವಿಷಾದಿಸುತ್ತೇನೆ.

---

* ಸಿ.ಎ.ಡಿ. ಸಂ. IX, ೪ನೇ ಆಗಸ್ಟ್ ೧೯೪೯, ಪುಟ ೨೦೮.

** ಅದೇ, ಪುಟ ೨೦೯.

**ಮಾನ್ಯ ಸಭಾಧ್ಯಕ್ಷರು:** ಈ ವಿಧಿಯನ್ನು ತಡೆಹಿಡಿಯಬೇಕೆಂದು ಸೂಚಿಸಲಾಗಿದೆ.

* * *

## ವಿಧಿ ೨೫೧*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತಿರುವುದೇನೆಂದರೆ

"೨೫೧ನೆಯ ವಿಧಿಯ ಕಲಮು (೨)ರಲ್ಲಿ 'ಭಾರತದ ಕಂದಾಯಗಳು' ಎಂಬ ಪದಗಳಿಗೆ ಬದಲಾಗಿ 'ಭಾರತದ ಸಂಚಿತ ನಿಧಿ' ಎಂಬ ಪದಗಳನ್ನು ಸೇರಿಸತಕ್ಕದ್ದು."

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಈಗ ವಿಷಯವನ್ನು ವಿವರಿಸಬಹುದಾಗಿದೆ. ಹಾಗೆ ಮಾಡುವ ಮೊದಲು ನಾನು ಇತರ ತಿದ್ದುಪಡಿಗಳನ್ನು ತೆಗೆದುಕೊಳ್ಳಬಹುದು.

ಶ್ರೀ ಬರ್ಮನ್‌ರವರ ಒಂದು ಮತ್ತು ಪ್ರೊಫೆಸರ್ ಸಕ್ಸೇನಾರವರ ಇನ್ನೊಂದು ತಿದ್ದುಪಡಿ ಇವೆ. ಇವಾವನ್ನೂ ಸ್ವೀಕರಿಸಲು ಸಾಧ್ಯವಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ.

ಸಂಗ್ರಹಿಸಲಾದ ಆದಾಯಕರದ ಪ್ರಮಾಣವನ್ನು ಶೇಕಡಾ ಅರವತ್ತು ಅಥವಾ ಇನ್ನಾವುದೇ ಪ್ರಮಾಣವನ್ನು ಸಂವಿಧಾನದಲ್ಲಿಯೇ ನಿಗದಿಗೊಳಿಸಬೇಕೇ ಇಲ್ಲವೇ ರಾಷ್ಟ್ರಪತಿಗಳ ನಿರ್ಧಾರಕ್ಕೆ ಬಿಡಬೇಕೆ ಎಂಬ ವಿಷಯದ ಮೇಲೆ ಚರ್ಚೆ ಮಾಡಲು ನಿನ್ನೆ ಕರೆಯಲಾಗಿದ್ದ ಸಭೆಯಲ್ಲಿ ಕೇಂದ್ರ ಸರಕಾರ ಮತ್ತು ಪ್ರಾಂತ್ಯ ಸರಕಾರಗಳು ಸಾಕಷ್ಟು ವಿಚಾರ ಮಾಡಿದೆ. ಸಂವಿಧಾನದಲ್ಲಿ ಯಾವುದೇ ಪ್ರಮಾಣವನ್ನು ನಿಗದಿಪಡಿಸದೆ, ಅದನ್ನು ರಾಷ್ಟ್ರಪತಿಗಳ ನಿರ್ಣಯಕ್ಕೆ ಬಿಡುವುದೇ ಸರಿಯಾದ ಮಾರ್ಗವೆಂದು ಒಪ್ಪಲಾಯಿತು.

ಪ್ರೊಫೆಸರ್ ಸಕ್ಸೇನಾರವರು ಎತ್ತಿರುವ ಇನ್ನೊಂದು ಪ್ರಶ್ನೆಯ ವಿಷಯ, ಅದೇನೆಂದರೆ 'ವಿಧಿಸು' ಎಂಬ ಪದದ ಬದಲು 'ಸಂಸತ್ತಿನಿಂದ ವಿಧಿಸುವ ಎಂಬ ಪದಗಳನ್ನು ಒಳತಕ್ಕದ್ದು.'

ಈ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲಾರೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಮೊದಲು ರಾಷ್ಟ್ರಪತಿಗಳ ಪ್ರಮಾಣವನ್ನು ವಿಧಿಸತಕ್ಕದ್ದು ಮತ್ತು ಎರಡನೆಯದಾಗಿ ಹಣಕಾಸು ಆಯೋಗದ ಶಿಫಾರಸ್ಸನ್ನು ಪರಿಗಣಿಸಿದ ನಂತರ ವಿಧಿಸತಕ್ಕದ್ದು ಎಂಬುದು ನಮ್ಮ ಯೋಜನೆಯಾಗಿದೆ. ನಾವು ಸಂಸತ್ತನ್ನು ಇದರಲ್ಲಿ ತರಲಿಚ್ಛಿಸುವುದಿಲ್ಲ. ಏಕೆಂದರೆ, ಹಾಗೆ ಮಾಡಿದಲ್ಲಿ ವಿವಿಧ ಪ್ರಾಂತ್ಯಗಳ ಪ್ರತಿನಿಧಿಗಳಲ್ಲಿ ಬಹಳಷ್ಟು ಕಚ್ಚಾಟ, ಸೆಣಸಾಟ ಉಂಟಾಗಿ ಕೆಲವು ಪ್ರಾಂತ್ಯಗಳು ಸಂಸತ್ತಿನಲ್ಲಿ ಹೆಚ್ಚು ಸಂಖ್ಯೆ ಮತ್ತು ಕೆಲವು ಪ್ರಾಂತ್ಯಗಳು ಕಡಿಮೆ ಸಂಖ್ಯೆಯಲ್ಲಿರುವ ಕಾರಣ ಬಹಳಷ್ಟು ಅನ್ಯಾಯವಾಗಬಹುದು. ಅದರ ಪರಿಣಾಮವಾಗಿ, ಈ ವಿಷಯವನ್ನು ಸಂಸತ್ತಿಗೆ ಬಿಡುವುದೆಂದರೆ ಕೇಂದ್ರದಲ್ಲಿ ಹೆಚ್ಚು ಬಹುಮತದ ಸಂಖ್ಯೆಯನ್ನು ಹೊಂದಿರುವ ಪ್ರಾಂತ್ಯಗಳ ನಿರ್ಣಯಕ್ಕೆ ಬಿಟ್ಟಂತಾಗುವುದು ಮತ್ತು ಇದರ ಅರ್ಥ ವಿವಿಧ ಪ್ರಾಂತ್ಯಗಳಿಗೆ ನ್ಯಾಯ ಒದಗಿಸಬೇಕೆಂಬ ನಮ್ಮ ಇಚ್ಛೆಯ ಬುಡಕ್ಕೇ ಕೊಡಲಿ ಹಾಕಿದಂತಾಗುತ್ತದೆ.

ಮಾನ್ಯರೆ, ಈಗ ತಾವು ಎತ್ತಿರುವ ಸಮಸ್ಯೆಯ ಬಗ್ಗೆ ಹೇಳುವುದಾದರೆ, "ಆ ವರ್ಷದಲ್ಲಿ ತೆರಿಗೆ ಹೇರಬಹುದಾದ ರಾಜ್ಯಗಳಲ್ಲಿ" ಎಂಬ ಪದಗಳ ಅವಶ್ಯಕತೆ ಇದೆ. ಅವುಗಳನ್ನು ಭಾರತ ಸರಕಾರ ಕಾಯ್ದೆ ೧೯೩೫ರಲ್ಲೂ ಬಳಸಲಾಗಿದೆ. ಈ ಪದಗಳನ್ನು ಆಗ ಏಕೆ ಬಳಸಲಾಯಿತೆಂದರೆ, ಆಗ ಭಾರತ ಒಕ್ಕೂಟದಲ್ಲಿ ಬರಲಿರುವ ರಾಜ್ಯಗಳ ಆದಾಯ ಕರವನ್ನು ಹೇರುವಂತಿರಲಿಲ್ಲ. ಆದಾಯ ಕರದ ಬದಲು ಭಾರತ

* ಸಿ.ಎ.ಡಿ. ಸಂ. IX, ೪ನೇ ಆಗಸ್ಟ್ ೧೯೪೯, ಪುಟ ೨೧೧

ರಾಜ್ಯಗಳು ಕೆಲವು ದೇಣಿಗೆಗಳನ್ನು ಕೊಡಬೇಕಾಗುತ್ತಿತ್ತು. ಆದ್ದರಿಂದ ಆ ಕರವನ್ನು ಆ ರಾಜ್ಯದಲ್ಲಿ ಹೇರುವಂತಿರಲಿಲ್ಲವಾದಾಗ ಆ ರಾಜ್ಯಕ್ಕೆ ತನ್ನ ಭಾಗವನ್ನು ಕೇಳುವ ಹಕ್ಕು ಇರಲಿಲ್ಲ. ಈ ಸಂವಿಧಾನದಲ್ಲಿ ಯಾವ ವಿಧಾನವನ್ನು ಅನುಸರಿಸಲಾಗುವುದೆಂಬುದು ನಮಗೆ ಗೊತ್ತಿಲ್ಲ. ಈ ವಿಷಯವನ್ನು ಭಾರತದ ರಾಜ್ಯಗಳ ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸಲು ನೇಮಕವಾಗಲಿರುವ ಒಂದು ಸಮಿತಿಯ ಪರಿಶೀಲನೆಗೆ ಬಿಡಲಾಗಿದೆ. ಆದಾಯಕರವನ್ನು ಪ್ರತಿ ರಾಜ್ಯವೂ ಅದು ಮೂಲತಃ ಭಾರತದ ಪ್ರಾಂತ್ಯ ಅಥವಾ ರಾಜ್ಯವಾಗಿರಲಿ ಅಥವಾ ಇಲ್ಲದಿರಲಿ, ಹೇರಬಹುದಾಗಿದೆಯೆ ಎಂದು ಸಮಿತಿ ಶಿಫಾರಸು ಮಾಡಿದರೆ, ಆಗ ಸ್ವಾಭಾವಿಕವಾಗಿ ಈ ಪದಗಳನ್ನು ಬದಲಾಯಿಸಬೇಕಾಗುತ್ತದೆ. ಈ ವಿಧಿಯನ್ನು ಮಂಡಿಸುವಾಗ, ಮುಂದೆ ಆ ಸಮಿತಿಯ ವರದಿ ಬಂದಾಗ ಕರಡು ಸಮಿತಿಗೆ ಸೂಕ್ತವಾದ ತಿದ್ದುಪಡಿ ಸೂಚಿಸುವ ಸ್ವಾತಂತ್ರ್ಯವನ್ನು ಕಾಯ್ದಿಡಬಯಸುತ್ತೇನೆ. ಆದ್ದರಿಂದಲೇ ಈ ಪದಗಳನ್ನು ಇಲ್ಲಿ ಉಳಿಸಿಕೊಳ್ಳಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಇನ್ನೊಂದು ವಿಷಯ ಇದು 'ಬ್ರಿಟಿಷ್ ಭಾರತ' ಕರೆಯಲಾಗುತ್ತಿದ್ದ ಭಾಗಗಳಿಗೂ ಅನ್ವಯವಾಗುತ್ತದೆ ಎಂದು ನಾನು ತಿಳಿದುಕೊಳ್ಳಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ, ಇಲ್ಲ. ಭಾಗ IIIರಲ್ಲಿಯ ರಾಜ್ಯಗಳು ಮಾತ್ರ.

**ಶ್ರೀ ಬಿ. ದಾಸ್:** ಪ್ರಾಂತ್ಯಗಳ ಪ್ರಧಾನಮಂತ್ರಿಗಳು ಮತ್ತು ಕರಡು ಸಮಿತಿಯ ನಡುವೆ ಒಂದು ಸಮ್ಮೇಳನದಲ್ಲಿ ಕೈಗೊಳ್ಳಲಾದ ನಿರ್ಣಯಗಳನ್ನು ಡಾ. ಅಂಬೇಡ್ಕರರು ಪ್ರಸ್ತಾಪಿಸಿದ್ದಾರೆ. ಅವರುಗಳ ನಡುವೆ ಏನು ನಡೆಯಿತು ಮತ್ತು ಅವರ ಚರ್ಚೆಗಳ ಫಲಿತಾಂಶ ಏನು ಎಂಬುದರ ಬಗ್ಗೆ ಈ ಸದನಕ್ಕೆ ಯಾವ ಮಾಹಿತಿಯೂ ಇರುವುದಿಲ್ಲ. ಈ ಚರ್ಚೆಗಳ ನಡಾವಳಿಗಳನ್ನು ಒಂದು ಟಿಪ್ಪಣಿ ರೂಪದಲ್ಲಿ ಅಥವಾ ಇನ್ನಾವುದೇ ರೀತಿಯಲ್ಲಿ ಈ ಸದನದಲ್ಲಿ ಮಂಡಿಸದೆ ಹೋದರೆ ನಾವು ಕರಡು ಸಮಿತಿಯ ತೀರ್ಮಾನದ ಬಗ್ಗೆ ಯಾವುದೇ ಅಭಿಪ್ರಾಯ ತಳೆಯಲಾರೆವು.

**ಮಾನ್ಯ ಸಭಾಧ್ಯಕ್ಷರು:** ಯಾವುದೇ ಪ್ರಾಂತ್ಯದ ಪ್ರಧಾನಿಯು ಎತ್ತಿರಬಹುದಾದ ಪ್ರಶ್ನೆಯ ಬಗ್ಗೆ ಅವರು ಕರಡಿನೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರೆ ಅವರು ಇಲ್ಲಿ ಅದನ್ನು ಎತ್ತಬಹುದು ಎಂದು ನಾನು ತಿಳಿಯುತ್ತೇನೆ. ಆದ್ದರಿಂದ ಈಗ ಸದನದಲ್ಲಿ ಮಂಡಿಸಲಾಗಿರುವ ಕರಡಿಗೆ ಪ್ರಧಾನಿಗಳ ಸಹಮತಿ ಇದೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಬಿ. ದಾಸ್:** ಪ್ರಧಾನಿಗಳು ಮತ್ತು ಹಣಕಾಸು ಸಚಿವರುಗಳ ನಡುವೆ ಈ ಸದನದ ಹೊರಗಡೆ ಏನು ನಡೆದಿದೆಯೋ ಅದಕ್ಕೆ ಸದನ ಬದ್ಧವಲ್ಲ. ಯಾವುದೇ ನಿರ್ಣಯವನ್ನು ತೆಗೆದುಕೊಂಡಿರುವುದಾದರೆ, ಆ ದಸ್ತಾವೇಜುಗಳ ಪ್ರತಿಗಳನ್ನು ಪಡೆಯುವುದು ಈ ಸದನದ ವಿಶೇಷ ಹಕ್ಕು.

**ಮಾನ್ಯ ಸಭಾಧ್ಯಕ್ಷ:** ಪ್ರಧಾನಿಗಳು ಮತ್ತು ಕರಡು ಸಮಿತಿಯ ನಡುವೆ ಕೈಗೊಳ್ಳಲಾದ ಯಾವುದೇ ನಿರ್ಣಯಕ್ಕೆ ಇಲ್ಲಿ ಯಾರೂ ಬದ್ಧರಲ್ಲ. ಸದನವು ತನ್ನ ಇಚ್ಛೆಯ ಪ್ರಕಾರ ಮತ ನೀಡಲು ಸ್ವತಂತ್ರವಿದೆ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರಾ:** ಒಂದು ಅಂಶದ ಬಗ್ಗೆ ನಾನು ಡಾ. ಅಂಬೇಡ್ಕರರಿಂದ ಸ್ಪಷ್ಟೀಕರಣ ಬಯಸುತ್ತೇನೆ. ಅದು ಹೀಗಿದೆ. ಈ ವಿಧಿಯ ಪ್ರಕಾರ ಕಂದಾಯವನ್ನು ರಾಜ್ಯಗಳ ನಡುವೆ ಒಂದು ನಿಗದಿಪಡಿಸಲಾದ ಕಾಲ ಮತ್ತು ವಿಧಾನದಲ್ಲಿ ಹಂಚತಕ್ಕದ್ದು. ಮಧ್ಯಂತರ ಹಂಚಿಕೆಯನ್ನು ಹಣಕಾಸು ಆಯೋಗದ ಶಿಫಾರಸ್ಸಿನ ಮೇಲೆ ಮಾಡಲಾಗುವುದೇ? ಈ ಸಂವಿಧಾನ ಕಾರ್ಯಾಚರಣೆಗೆ ಬಂದ ತಕ್ಷಣ ಮತ್ತು ನಂತರ ನೇಮಕವಾಗಲಿರುವ ಆಯೋಗಕ್ಕೆ ಮೊದಲಿನ ಅವಧಿಯಲ್ಲಿನ ಪರಿಸ್ಥಿತಿಯ ಬಗ್ಗೆ ಯಾವ ಸ್ಪಷ್ಟೀಕರಣವೂ ಇಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಇದಕ್ಕೆ ನೀಡುವ ವಿವರಣೆ ಸರಳವಾಗಿದೆ. ರಾಷ್ಟ್ರಪತಿಗಳು ನಿಗದಿಗೊಳಿಸುವ ಆಜ್ಞೆಯನ್ನು ಹೊರಡಿಸುವುದಕ್ಕೂ ಮುಂಚೆ ಯಾವ ಮಧ್ಯಂತರ ವಿಚಾರವೂ ಇರಕೂಡದೆಂದು ನಾವು ಬಯಸಿದ್ದರೆ ಆಯೋಗದ ಶಿಫಾರಸಿನ ಮೇಲೆ ರಾಷ್ಟ್ರಪತಿಗಳು ಪುನರ್ ನಿಗದಿಗೊಳಿಸುವ ತನಕ ಸಂವಿಧಾನ ಜಾರಿಯಾಗುವ ಮುಂಚೆ ಇದ್ದ ಸ್ಥಿತಿಯೇ ಮುಂದುವರಿಯುವುದೆಂದು ಹೇಳಿಬಿಡುತ್ತಿದ್ದೆವು. ನಾವು ಹಾಗೆ ಹೇಳಿಲ್ಲ. ಮತ್ತು ಉದ್ದೇಶಪೂರ್ವಕವಾಗಿಯೇ ಅದನ್ನು ಹೇಳಿಲ್ಲ. ಏಕೆಂದರೆ, ಮೊದಲು ವಿಚಾರಣೆ ಮಾಡಬೇಕು. ಆ ನಂತರವೇ ಅದರ ಆಧಾರದ ಮೇಲೆ ರಾಷ್ಟ್ರಪತಿಗಳು ತಮ್ಮ ಆಜ್ಞೆಯ ಮೂಲಕ ಅದನ್ನು ನಿಗದಿಗೊಳಿಸಬೇಕು. ಭಾಷೆಯಲ್ಲಿರುವ ವ್ಯತ್ಯಾಸಕ್ಕೆ ಇದೇ ಕಾರಣ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರಾ:** ಹಾಗೆಂದರೆ, ಈ ಕೂಡಲೇ ಮಧ್ಯಂತರ ಆಯೋಗವನ್ನು ನೇಮಿಸಲಾಗುವುದು ಮತ್ತು ಆಯೋಗದ ಶಿಫಾರಸ್ಸಿನಂತೆ ರಾಷ್ಟ್ರಪತಿಗಳು ಹೊಸ ಆಜ್ಞೆಯನ್ನು ಹೊರಡಿಸುವರು ಎಂದು ಅರ್ಥವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು ಹಾಗಿಲ್ಲದಿದ್ದರೆ ಅಲ್ಲಿಯವರೆಗೂ ಈಗ ಮಾಡಲಾಗಿರುವ ಹಂಚಿಕೆಯೇ ಮುಂದುವರಿಯುವುದು ಎಂದು ಹೇಳುತ್ತಿದ್ದೆವು.

**ಮಾನ್ಯ ಸಭಾಧ್ಯಕ್ಷರು:** ಈಗ ನಾನು ವಿವಿಧ ತಿದ್ದುಪಡಿಗಳನ್ನು ಮತಕ್ಕೆ ಹಾಕುವೆ. ಮೊದಲು ಶ್ರೀ ಉಪೇಂದ್ರನಾಥ್ ಬರ್ಮನ್‌ರವರು ಮಂಡಿಸುವ ತಿದ್ದುಪಡಿ ಸಂಖ್ಯೆ ೨೮೫೮ನ್ನು ಮತಕ್ಕೆ ಹಾಕುವೆ.

**ಶ್ರೀ ಉಪೇಂದ್ರನಾಥ್ ಬರ್ಮನ್:** ಮಾನ್ಯರೆ ಡಾ. ಬಿ.ಆರ್. ಅಂಬೇಡ್ಕರರು ನೀಡಿರುವ ಹೇಳಿಕೆಯ ದೃಷ್ಟಿಯಿಂದ ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಬಯಸುತ್ತೇನೆ.

ಸದನದ ಅನುಮತಿಯೊಂದಿಗೆ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು:** ಇನ್ನು ನಾನು ಡಾ. ಅಂಬೇಡ್ಕರ್‌ರವರು ಮಂಡಿಸಿರುವ ತಿದ್ದುಪಡಿ ಸಂಖ್ಯೆ ೭೬ನ್ನು ಮತಕ್ಕೆ ಹಾಕುತ್ತೇನೆ. ಅದು ಪದಶಃ ತಿದ್ದುಪಡಿ ಮಾತ್ರ.

ಇರುವ ಪ್ರಶ್ನೆ ಎಂದರೆ

"೨೫೧ನೇ ವಿಧಿಯ ಕಲಮು (೨)ರಲ್ಲಿ 'ಭಾರತದ ಕಂದಾಯ' ಎಂಬ ಪದಗಳ ಬದಲು 'ಭಾರತದ ಸಂಚಿತ ನಿಧಿ' ಎಂಬ ಪದಗಳನ್ನು ಸೇರಿಸತಕ್ಕದ್ದು." ತಿದ್ದುಪಡಿ ಸ್ವೀಕೃತವಾಯಿತು.

**ಮಾನ್ಯ ಸಭಾಧ್ಯಕ್ಷರು:** ಇನ್ನು ಶ್ರೀ ಟಿ. ಟಿ. ಕೃಷ್ಣಮಾಚಾರಿಯವರ ತಿದ್ದುಪಡಿ ಇದೆ. ಇರುವ ಪ್ರಶ್ನೆ ಎಂದರೆ,

"೨೫೧ನೆಯ ವಿಧಿಯ ಕಲಮು (೪) ಉಪಕಲಮು (ಸಿ)ಯಲ್ಲಿ ಭಾರತದ ಕಂದಾಯಗಳು ಎಂಬ ಪದಗಳ ಬದಲು 'ಭಾರತದ ಸಂಚಿತ ನಿಧಿ' ಎಂಬ ಪದಗಳನ್ನು ಸೇರಿಸತಕ್ಕದ್ದು.

"ತಿದ್ದುಪಡಿ ಸ್ವೀಕೃತವಾಯಿತು.

[ಪ್ರೊಫೆಸರ್ ಸಕ್ಸೇನಾರವರ ತಿದ್ದುಪಡಿ ತಿರಸ್ಕೃತವಾಯಿತು]

**ತಿದ್ದುಪಡಿಯೊಂದಿಗೆ ೨೫೧ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

## ವಿಧಿ ೨೫೩*

**ಮಾನ್ಯ ಸಭಾಧ್ಯಕ್ಷರು:** ಇನ್ನು ೨೫೩ನೆಯ ವಿಧಿಯನ್ನು ತೆಗೆದುಕೊಳ್ಳೋಣ.

(ತಿದ್ದುಪಡಿಸಂಖ್ಯೆ ೨೮೮೩ ಮತ್ತು ೨೮೮೪ ಇವುಗಳನ್ನು ಮಂಡಿಸಲಾಗಲಿಲ್ಲ.)

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿ ಸಂಖ್ಯೆ ೨೮೮೫ರ ಬಗ್ಗೆ ಡಾ. ಅಂಬೇಡ್ಕರ್ ನೀವು ಅದನ್ನು ಮಂಡಿಸಬಯಸುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ, ಶ್ರೀ ತ್ಯಾಗಿಯವರು ತಮ್ಮ ತಿದ್ದುಪಡಿಯನ್ನು ಮಂಡಿಸುವರು.

(ತಿದ್ದುಪಡಿ ಸಂಖ್ಯೆ ೨೮೮೬ರಿಂದ ೨೮೯೬ರವರೆಗಿನ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.)

**ಮಾನ್ಯ ಸಭಾಧ್ಯಕ್ಷರು:** ಶ್ರೀ ಬಾರ್ದೋಲೊಯೊ ನಿಮ್ಮ ತಿದ್ದುಪಡಿ ಸಂಖ್ಯೆ ೨೮೯೭ ಅನ್ನು ಮಂಡಿಸುವಿರಾ?

**ಗೌರವಾನ್ವಿತ ಶ್ರೀ ಗೋಪೀನಾಥ್ ಬಾರ್ದೋಲೊಯ್** (ಅಸ್ಸಾಂ ಸಾಮಾನ್ಯ): ನಾನು ತಿದ್ದುಪಡಿಯನ್ನು ಮಂಡಿಸಬಯಸುವುದಿಲ್ಲ. ಆದರೆ ಈ ವಿಧಿಯ ಮೇಲೆ ಮಾತನಾಡಬಯಸುತ್ತೇನೆ.

(ತಿದ್ದುಪಡಿಗಳ ಸಂಖ್ಯೆ ೨೮೯೮ರಿಂದ ೨೯೦೨ರವರೆಗಿನ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.)

**ಶ್ರೀ ಮಹಾವೀರ್ ತ್ಯಾಗಿ** (ಸಂಯುಕ್ತ ಸಂಸ್ಥಾನಗಳು, ಸಾಮಾನ್ಯ): ಮಾನ್ಯರೆ, ನನ್ನದೊಂದು ತಿದ್ದುಪಡಿ ಇದೆ.

**ಮಾನ್ಯ ಸಭಾಧ್ಯಕ್ಷರು:** ನಾನು ಇನ್ನೂ ಎಲ್ಲಾ ತಿದ್ದುಪಡಿಗಳನ್ನು ಮುಗಿಸಿಲ್ಲ. ಅವುಗಳನ್ನು ಸರದಿಯ ಪ್ರಕಾರ ತೆಗೆದುಕೊಳ್ಳುತ್ತಿದ್ದು ನಿಮ್ಮ ತಿದ್ದುಪಡಿಯನ್ನು ನಂತರ ತೆಗೆದುಕೊಳ್ಳುವೆ. ತಿದ್ದುಪಡಿ ಸಂಖ್ಯೆ ೮೧.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು "೨೫೩ನೆಯ ವಿಧಿಯ ಕಲಮು (೨)ರಲ್ಲಿ ಭಾರತದ ಕಂದಾಯಗಳು ಎಂಬ ಪದಗಳಿಗೆ ಬದಲಾಗಿ ಭಾರತದ 'ಸಂಚಿತ ನಿಧಿ' ಎಂದು ಸೇರಿಸತಕ್ಕದ್ದು.

**ಮಾನ್ಯ ಸಭಾಧ್ಯಕ್ಷರು:** ಇನ್ನು ಶ್ರೀ ಮಹಾವೀರ ತ್ಯಾಗಿಯವರ ಹೆಸರಿನಲ್ಲಿ ತಿದ್ದುಪಡಿ ಸಂಖ್ಯೆ ೨೧೪.

**ಶ್ರೀ ಮಹಾವೀರ್ ತ್ಯಾಗಿ:** ಮಾನ್ಯರೆ, ನಾನು ಮಂಡಿಸುವುದೇನೆಂದರೆ

"ತಿದ್ದುಪಡಿಗಳ ಪಟ್ಟಿಯಲ್ಲಿರುವ ತಿದ್ದುಪಡಿ ೨೮೮೬ ಸಂಬಂಧವಾಗಿ ೨೫೩ನೆಯ ವಿಧಿಯ ಕಲಮು (೧)ನ್ನು ಕೈಬಿಡತಕ್ಕದ್ದು.

* * *

****ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್‌ರವರೆ, ನೀವೇನಾದರೂ ಹೇಳಬಯಸುತ್ತೀರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಶ್ರೀ ಮಹಾವೀರ ತ್ಯಾಗಿಯವರು ಮಂಡಿಸಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ. ಮತ್ತು ಕರಡು ಸಮಿತಿಯು ಇದನ್ನು ಏಕೆ ಒಪ್ಪಿಕೊಳ್ಳಬಯಸುತ್ತದೆ ಎಂಬುದಕ್ಕೆ ಕರಡು ಸಮಿತಿಯ ಪರವಾಗಿ ವಿವರಣೆ ನೀಡಬಯಸುತ್ತೇನೆ. ಈ ತಿದ್ದುಪಡಿಯನ್ನು ಸ್ವೀಕರಿಸಲು ಇರುವಂತಹ ಸಮರ್ಥನೆಯನ್ನು ನೀಡುವ ಮುಖ್ಯ ವಿಷಯಗಳ ಕುರಿತು ಆರಂಭಿಸುವ ಮುನ್ನ ನಾನು

* ಸಿ.ಎ.ಡಿ. ಸಂ. IX, ೫ನೇ ಆಗಸ್ಟ್ ೧೯೪೯, ಪುಟ ೨೨೪.

** ಅದೇ, ಪುಟ ೨೩೮–೩೯.

ನನ್ನ ಮಿತ್ರ ಪ್ರೊಫೆಸರ್ ಸಕ್ಸೇನಾರವರು ಕರಡು ಸಮಿತಿಯ ಮೇಲೆ ಹೊರಿಸಿರುವ ಆರೋಪಗಳ ಬಗ್ಗೆ ವಿವರಣೆ ನೀಡಬಯಸುತ್ತೇನೆ.

ಕರಡು ಸಮಿತಿಯ ಮೂಲ ವಿಧಿಯಲ್ಲಿ ಕಲಮು (೧)ನ್ನು ಸೇರಿಸಿದ್ದು, ಈಗ ಅದಕ್ಕೆ ಶ್ರೀ ತ್ಯಾಗಿಯವರು ಸೂಚಿಸಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು ಸರಿಯಲ್ಲ ಎಂದು ಪ್ರೊಫೆಸರ್ ಸಕ್ಸೇನಾರವರು ಹೇಳಿದ್ದಾರೆ. ಕರಡು ಸಮಿತಿ ಸೇರಿಸಿರುವ ಕಲಮು (೧) ಕರಡು ಸಮಿತಿಯ ನಡಾವಳಿಯಲ್ಲಿಯೇ ಉದ್ಭವಿಸಿಲ್ಲ. ಈ ಕಲಮನ್ನು ನನಗೆ ಸರಿಯಾಗಿ ನೆನಪಿರುವಂತೆ ಉಪ್ಪಿನ ಮೇಲೆ ಯಾವುದೇ ಕರವನ್ನು ಹೇರಬಾರದು ಎಂದು ಶಿಫಾರಸು ಮಾಡಿರುವ ಒಕ್ಕೂಟದ ಅಧಿಕಾರಗಳ ಸಮಿತಿಯ ವರದಿಯಲ್ಲಿ ಸೂಚಿಸಲಾಗಿದೆ. ಕರಡು ಸಮಿತಿಯು ಒಕ್ಕೂಟದ ಅಧಿಕಾರಗಳ ಸಮಿತಿಯ ನಿರ್ದೇಶನಗಳು ಮತ್ತು ಅದರ ವರದಿಯಲ್ಲಿರುವ ತತ್ವಗಳಿಗೆ ಬದ್ಧವಾಗಿರುವುದರಿಂದ ಈ ಸಲಹೆಯನ್ನು ಸ್ವೀಕರಿಸಿ ಅದನ್ನು ಸಂಬಂಧಪಟ್ಟ ವಿಧಿಯಲ್ಲಿ ಅಳವಡಿಸದೇ ಬೇರೆ ಮಾರ್ಗವೇ ಇರಲಿಲ್ಲ. ಆದ್ದರಿಂದ ಈ ವಿಷಯದಲ್ಲಿ ಕರಡು ಸಮಿತಿಗೆ ಯಾವುದೇ ರೀತಿಯ ಹೊಯ್ದಾಟದ ಪ್ರಶ್ನೆಯೇ ಇಲ್ಲ.

ನಾನು ಈಗ ಈ ಕಲಮನ್ನು ಉಳಿಸಿಕೊಳ್ಳುವುದರಿಂದ ಉಂಟಾಗುವ ವಾಸ್ತವಿಕ ತೊಂದರೆಗಳನ್ನು ವಿವರಿಸಬಯಸುತ್ತೇನೆ. ಲಿಸ್ಟ್ Iರಲ್ಲೇ ಎರಡು ದಾಖಲೆಗಳನ್ನು ನಮೂದಿಸಲಾಗಿದೆ ಎಂಬುದನ್ನು ಜ್ಞಾಪಿಸಿಕೊಳ್ಳಬಹುದು. ಕೇಂದ್ರ ಸರಕಾರವು ಹೇಳುವ ಅಬ್ಕಾರಿ ತೆರಿಗೆಗೆ ಅವಕಾಶ ನೀಡುವ ದಾಖಲೆ ಸಂಖ್ಯೆ ೮೬ ಒಂದಾಗಿದ್ದು ಸುಂಕವನ್ನು ವಿಧಿಸಬಹುದಾದ ದಾಖಲೆ ೮೫ ಸಹ ಇದೆ. ಈಗ ೨೫೩ನೆಯ ವಿಧಿಯ ಉಪ ಕಲಮು (೧) ಸಂವಿಧಾನದ ಅಂಗವಾಗಿಯೇ ಉಳಿದರೆ ಕೇಂದ್ರ ಸರ್ಕಾರಕ್ಕೆ ೮೬ ಇಲ್ಲವೆ ೮೫ನೆಯ ದಾಖಲೆಗಳನ್ನು ಉಪ್ಪಿನ ಮೇಲೆ ಅಬ್ಕಾರಿ ತೆರಿಗೆ ಇಲ್ಲವೆ ಸುಂಕವನ್ನು ಹೇರಲು ಉಪಯೋಗಿಸಲು ಬರುವುದಿಲ್ಲ ಎಂಬುದು ಸುಸ್ಪಷ್ಟ. ಏಕೆಂದರೆ, ಕಲಮು (೧) ದಾಖಲೆ ೮೬ ಮತ್ತು ೮೫ರನ್ವಯ ಹೇರಬಹುದಾದ ಉಪ್ಪಿನ ತೆರಿಗೆಯ ಶಾಸನೀಯ ಅಧಿಕಾರವನ್ನು ಕಿತ್ತುಕೊಳ್ಳುತ್ತದೆ. ೮೬ನೆಯ ದಾಖಲಾತಿಯ ಪ್ರಕಾರ ಅಬ್ಕಾರಿ ಸುಂಕ ಹೇರುವ ಅಧಿಕಾರವನ್ನು ಉಪಯೋಗಿಸದೇ ಹೋದಾಗ ದೇಶಕ್ಕೆ ಅಂತಹ ಹಾನಿ ಏನೂ ಆಗಲಾರದು. ಆದರೆ ೮೫ನೆಯ ದಾಖಲಾತಿ ಪ್ರಕಾರ ಹೇರಬಹುದಾದ ಸುಂಕದ ಮೇಲೆ ನಿಷೇಧ ಹೇರಿದರೆ ಅದರಿಂದ ಬಹಳ ತೊಂದರೆಯುಂಟಾಗುತ್ತದೆ ಎಂದು ಈಗ ಹೇಳಲಾಗುತ್ತಿದೆ. ಏಕೆಂದರೆ, ಅದರಿಂದ ಉಪ್ಪನ್ನು ಆಮದು ಮಾಡಿಕೊಳ್ಳುವ ಮೂಲಕ ಕೇಂದ್ರ ಸರ್ಕಾರವು ಯಾವುದೇ ರೀತಿಯ ಶಾಸನೀಯ ಅಧಿಕಾರವಿಲ್ಲದೆ ವಿದೇಶಿ ಉಪ್ಪಿನ ಅಗಾಧ ಬರುವಿಕೆಯನ್ನು ತಡೆಯಲಾರದು. ಇದರಿಂದ ಭಾರತದ ಉಪ್ಪಿನ ಕೈಗಾರಿಕೆ ವಿನಾಶಗೊಳ್ಳುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಆದ್ದರಿಂದ ಪ್ರತಿಬಂಧವನ್ನು ತೆಗೆದುಹಾಕಿ ಸಮಸ್ಯೆಗೆ ಮುಂದೆ ಸೂಕ್ತ ಸಂದರ್ಭದಲ್ಲಿ ನಿರ್ಣಯ ತೆಗೆದುಕೊಳ್ಳಲು ಸಂಸತ್ತಿಗೆ ಬಿಡುವುದು ಒಳ್ಳೆಯದು ಎಂದು ನಿರ್ಣಯಿಸಲಾಯಿತು. ಈ ಕಾರಣದಿಂದಲೇ ಕರಡು ಸಮಿತಿಯು ಶ್ರೀ ಮಹಾವೀರ್ ತ್ಯಾಗಿಯವರ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ತೀರ್ಮಾನಿಸಿತು.

**ಶ್ರೀ ಆರ್. ಕೆ. ಸಿಧ್ವ:** ನಿರ್ದೇಶನ ಸೂತ್ರಗಳಲ್ಲಿ ಪ್ರತಿಬಂಧಕ್ಕೆ ಸಂಬಂಧಿಸಿದಂತೆ ಕಲಮನ್ನು ಏಕೆ ಸೇರಿಸಲಾಗಿದೆ ಎಂಬುದನ್ನು ನಾನು ತಿಳಿಯಬಹುದೇ? ಈ ವಿಧಿಯ ಕಲಮು (೧) ಅನ್ನು ಕೈಬಿಡುವುದಾದರೆ ಪ್ರತಿಬಂಧದ ಕಲಮನ್ನು ಸರಕಾರದ ನಿರ್ದೇಶನ ಸೂತ್ರಗಳಲ್ಲಿ ಏಕೆ ಸೇರಿಸಲಾಯಿತೆಂದು ತಿಳಿದುಕೊಳ್ಳಬಹುದೇ? ಮತ್ತು ಕಿರ್ಪಾಣ್ ಧರಿಸುವುದನ್ನು ಮೂಲಭೂತ ಹಕ್ಕುಗಳಲ್ಲಿ ಏಕೆ ಸೇರಿಸಲಾಯಿತೆಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಓ ಕಿರ್ಪಾಣ್‌ಗಳ ಪ್ರಶ್ನೆ ಬೇರೆ ಆಧಾರವನ್ನು ಹೊಂದಿದೆ.

* * *

***ಅನೇಕ ಗೌರವಾನ್ವಿತ ಸದಸ್ಯನು:** ಈಗ ಯಾವ ಭಾಷಣಗಳು ಬೇಡ.

**ಮಾನ್ಯ ಸಭಾಧ್ಯಕ್ಷ:** ಯಾವ ಭಾಷಣಗಳೂ ಇರುವುದಿಲ್ಲ. ಸದಸ್ಯರು ಹಾಗೆ ಅಪೇಕ್ಷಿಸಿದಲ್ಲಿ ಈ ವಿಧಿಯನ್ನು ಇನ್ನೂ ಹೆಚ್ಚಿನ ಪರಿಗಣನೆಗಾಗಿ ತಡೆಹಿಡಿಯುತ್ತೇನೆ.

**ಗೌರವಾನ್ವಿತ ಶ್ರೀ ಕೆ. ಸಂತಾನಮ್:** ವಿಧಿಯನ್ನು ತಡೆಹಿಡಿಯಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ವಿಧಿಯನ್ನು ತಡೆಹಿಡಿಯಬಹುದು.

**ಶ್ರೀ ಮಹಾವೀರ್ ತ್ಯಾಗಿ:** ಈ ವಿಧಿಯನ್ನು ತಡೆಹಿಡಿಯಬಹುದು.

**ಮಾನ್ಯ ಸಭಾಧ್ಯಕ್ಷ:** ಈ ವಿಧಿಯನ್ನು ತಡೆಹಿಡಿಯಲಾಗಿದೆ.

## ವಿಧಿ ೨೫೩**

**ಮಾನ್ಯ ಸಭಾಧ್ಯಕ್ಷ:** ಆರಂಭದಲ್ಲಿ ನಾವು ೨೫೪ನೆಯ (ಮುಂದುವರೆದ) ವಿಧಿಯನ್ನು ಕೈಗೆತ್ತಿಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ, ಸಾಮಾನ್ಯ): ಮಾನ್ಯರೆ, ೨೫೪ನೆಯ ವಿಧಿಯ ಮೇಲೆ ಚರ್ಚೆಯನ್ನು ಆರಂಭಿಸುವ ಮುಂಚೆ, ಶ್ರೀ ಮಹಾವೀರ್ ತ್ಯಾಗಿಯವರು ೨೫೩ನೆಯ ವಿಧಿಗೆ ಸೂಚಿಸಿರುವ ತಿದ್ದುಪಡಿಯನ್ನು ತೆಗೆದುಕೊಳ್ಳೋಣ. ಏಕೆಂದರೆ ಪ್ರಧಾನಮಂತ್ರಿಗಳು ಅದರ ಮೇಲೆ ಮಾತನಾಡಬಯಸುತ್ತಾರೆ. ಈಗಾಗಲೇ ಚರ್ಚೆ ಮುಗಿದಿದ್ದರೂ ಈ ತಿದ್ದುಪಡಿಯನ್ನು ಮತಕ್ಕೆ ಹಾಕುವ ಮುಂಚೆ ಪ್ರಧಾನ ಮಂತ್ರಿಗಳ ಭಾಷಣಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಹಾಗೆಯೇ ಆಗಲಿ, ಗೌರವಾನ್ವಿತ ಪಂಡಿತ್ ಜವಹರಲಾಲ್ ನೆಹರೂ.

**[ಡಾ. ಅಂಬೇಡ್ಕರ್‌ರವರ ತಿದ್ದುಪಡಿಯಂತೆ ತಿದ್ದುಪಡಿ ಮಾಡಲಾದ ೨೫೩ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.]**

## ವಿಧಿ ೨೫೪***

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಸಭಾಧ್ಯಕ್ಷರೆ, ಈಗ ನಾನು ಮಂಡಿಸುತ್ತಿರುವುದೇನೆಂದರೆ, "೨೫೪ನೆಯ ವಿಧಿಯ ಬದಲು ಈ ಕೆಳಗಿನದನ್ನು ಸೇರಿಸತಕ್ಕದ್ದು.

**ಸೆಣಬು ಮತ್ತು ಸೆಣಬಿನ ಉತ್ಪನ್ನಗಳ ಮೇಲೆ ನಿರ್ಯಾತ ಸುಂಕದ ಬದಲು ಅನುದಾನ.**

೨೫೪ (೧) ಪ್ರತಿವರ್ಷ ಬಂಗಾಳ, ಬಿಹಾರ, ಅಸ್ಸಾಂ ಮತ್ತು ಒರಿಸ್ಸಾ ರಾಜ್ಯಗಳ ಕಂದಾಯಗಳಿಗೆ ಸೆಣಬು ಮತ್ತು ಸೆಣಬಿನ ಉತ್ಪನ್ನಗಳ ಮೇಲೆ ಪ್ರತಿ ವರ್ಷ ಹೇರಲಾದ ೧ರಷ್ಟು ಸುಂಕದಿಂದ ಬಂದ ನಿವ್ವಳ

* ಸಿ.ಎ.ಡಿ. ಸಂ. IX, ೫ನೇ ಆಗಸ್ಟ್ ೧೯೪೯, ಪುಟ ೨೪೦.

** ಅದೇ, ಪುಟ ೨೪೧.

*** ಅದೇ, ಪುಟ ೨೪೨–೪೩.

ಆದಾಯಗಳ ಯಾವುದೇ ಪಾಲನ್ನು ಈ ರಾಜ್ಯಗಳಿಗೆ ರಾಷ್ಟ್ರಪತಿಗಳು ನಿಗದಿಪಡಿಸಬಹುದಾದ ಪ್ರಮಾಣದಲ್ಲಿ ಅನುದಾನವಾಗಿ ಕೊಡತಕ್ಕದ್ದು ಮತ್ತು ಅದನ್ನು ಪ್ರತಿ ವರ್ಷ ಭಾರತದ ಸಂಚಿತ ನಿಧಿಯಿಂದ ಕೊಡತಕ್ಕದ್ದು.

(೨) ಹೀಗೆ ನಿಗದಿಪಡಿಸಲಾದ ಹಣವನ್ನು ಎಲ್ಲಿಯವರೆಗೆ ಭಾರತ ಸರ್ಕಾರವು ಸೆಣಬು ಮತ್ತು ಸೆಣಬಿನ ಉತ್ಪನ್ನಗಳ ಮೇಲೆ ರಫ್ತು ಸುಂಕವನ್ನು ಹೇರಲಾಗುವುದೋ ಅಥವಾ ಹತ್ತು ವರ್ಷಗಳು ಮುಗಿಯುವವರೆಗೆ ಇದರಲ್ಲಿ ಯಾವುದು ಮೊದಲೋ ಅದರಂತೆ ಆ ಹಣವನ್ನು ಭಾರತದ ಸಂಚಿತ ನಿಧಿಯಿಂದ ಕೊಡುವುದು ಮುಂದುವರೆಯುವುದು.

(೩) ಈ ವಿಧಿಯಲ್ಲಿ ಹೇಳಲಾದ 'ವಿಧಿಸು' ಎಂಬ ಪದವು ಈ ಸಂವಿಧಾನದ ೨೫೧ನೆಯ ವಿಧಿಯಲ್ಲಿರುವ ಪದದ ಅರ್ಥವನ್ನೇ ಹೊಂದಿದೆ.

ಮಾನ್ಯರೆ, ಈ ತಿದ್ದುಪಡಿಯು ಸೆಣಬು ಮತ್ತು ಸೆಣಬಿನ ಉತ್ಪನ್ನಗಳ ಮೇಲಿನ ನಿರ್ಯಾತ ಸುಂಕದ ಪಾಲಿಗೆ ಸಂಬಂಧಿಸಿದ ಸದ್ಯದ ವ್ಯವಸ್ಥೆಯಲ್ಲಿ ಒಂದು ಪ್ರಮುಖ ಬದಲಾವಣೆಯನ್ನುಂಟುಮಾಡುವುದು. ಭಾರತ ಸರಕಾರ ಕಾಯ್ದೆ ೧೯೩೫ರನ್ವಯ ಈ ವಿಧಿಯಲ್ಲಿ ಹೆಸರಿಸಲಾದ ಕೆಲವು ಪ್ರಾಂತ್ಯಗಳು ಸೆಣಬು ಮತ್ತು ಸೆಣಬು ಉತ್ಪನ್ನಗಳ ಮೇಲಿನ ನಿರ್ಯಾತ ಸುಂಕದಿಂದ ಬಂದ ಉತ್ಪತ್ತಿಯಲ್ಲಿ ಒಂದು ಭಾಗವನ್ನು ಪಡೆಯುವ ಹಕ್ಕನ್ನು ಹೊಂದಿವೆ. ಏಕೆಂದರೆ ಅದು ಈ ಪ್ರಾಂತ್ಯಗಳ ಆರ್ಥಿಕ ವ್ಯವಸ್ಥೆಯಲ್ಲಿ ಒಂದು ಪ್ರಮುಖ ವಸ್ತುವಾಗಿದೆ. ತಿದ್ದುಪಡಿಗೊಂಡ ಈ ವಿಧಿಯ ಸೆಣಬು ಮತ್ತು ಅದರ ಉತ್ಪನ್ನಗಳ ಮೇಲಿನ ನಿರ್ಯಾತ ಸುಂಕದಲ್ಲಿ ಕೆಲವು ಭಾಗವನ್ನು ಕೇಳುವ ಕೆಲವು ಪ್ರಾಂತ್ಯಗಳ ಹಕ್ಕನ್ನು ನಿರಾಕರಿಸಲಾಗುವುದು. ಇದಕ್ಕೆ ಕಾರಣ ಅತ್ಯಂತ ಸರಳವಾಗಿದೆ. ಸಾಮಾನ್ಯವಾಗಿ ಎಲ್ಲಾ ವಿಧದ ಆಯಾತ ಮತ್ತು ನಿರ್ಯಾತ ಸುಂಕಗಳು ಕೇಂದ್ರ ಸರಕಾರಕ್ಕೆ ಸೇರಿರುತ್ತವೆ. ಮತ್ತು ಯಾವುದೇ ಒಂದು ವಸ್ತುವಿನ ಮೇಲೆ ಹೇರಲಾದ ಸುಂಕದಲ್ಲಿ ಪಾಲು ಕೇಳುವ ಹಕ್ಕು ಯಾವ ಪ್ರಾಂತ್ಯಕ್ಕೂ ಇರುವುದಿಲ್ಲ. ಆದಾಗ್ಯೂ ಬಂಗಾಳ ಪ್ರಾಂತ್ಯದ ಹಣಕಾಸು ಪರಿಸ್ಥಿತಿಯನ್ನು ನಿರ್ಯಾತ ಸುಂಕದಲ್ಲಿ ಒಂದು ಪಾಲು ಕೊಡದೆ ಸರಿಯಾಗಿಸಲು ಸಾಧ್ಯವಿಲ್ಲವಾದ್ದರಿಂದ ಈ ಪ್ರಾಂತ್ಯಕ್ಕೆ ಭಾರತ ಸರಕಾರ ಕಾಯ್ದೆ, ೧೯೩೫ರಲ್ಲಿ ವಿನಾಯಿತಿ ಕೊಡಲಾಗಿತ್ತು. ಇದರಿಂದಾಗಿ ಬಂಗಾಳ ಸರಕಾರ ಮತ್ತು ಇತರ ಪ್ರಾಂತ್ಯಗಳಿಗೆ ನಿರ್ಯಾತ ಸುಂಕದಲ್ಲಿ ಒಂದು ಪಾಲು ಕೇಳುವ ಶಾಸನಬದ್ಧ ಹಕ್ಕು ಪ್ರಾಪ್ತವಾಯಿತು. ಇದು ಎಲ್ಲಾ ಆಯಾತ ಮತ್ತು ನಿರ್ಯಾತ ಸುಂಕಗಳು ಕೇಂದ್ರ ಸರಕಾರಕ್ಕೆ ಸೇರುತ್ತವೆ ಎಂಬ ಸಾಮಾನ್ಯ ತತ್ವಕ್ಕೆ ವಿರೋಧವಾಗಿದೆ. ಆದ್ದರಿಂದ ಭಾರತ ಸರ್ಕಾರ ಕಾಯ್ದೆ, ೧೯೩೫ರಲ್ಲಿ ನೀಡಲಾದ ಈ ವಿನಾಯಿತಿಯನ್ನು ಮುಂದುವರಿಸಬಾರದೆಂದು ನಿರ್ಣಯಿಸಲಾಯಿತು. ಈ ಅಸಂಗತ ತತ್ವವನ್ನು ಏಕೆ ಕೈಬಿಡಬೇಕೆಂಬುದಕ್ಕೆ ಕಾರಣವೆಂದರೆ ಇದೇ ರೀತಿ ಬೇರೆ ಇನ್ನಾವುದಾದರೂ ವಸ್ತುವನ್ನು ಉತ್ಪಾದಿಸುವ ಇತರ ಪ್ರಾಂತ್ಯಗಳು ಇದೇ ರೀತಿಯ ವಿನಾಯಿತಿಯನ್ನು ಕೇಳಲು ಅವಕಾಶವಾಗಬಹುದು. ಇಂತಹ ಪ್ರವೃತ್ತಿ ಬೆಳೆದರೆ ಅದು ಭಾರತ ಸರಕಾರಕ್ಕೆ ಕಠಿಣ ಪರಿಸ್ಥಿತಿಯನ್ನುಂಟು ಮಾಡಬಹುದು. ಆದುದರಿಂದ ಈ ತತ್ವವನ್ನು ನಿಶ್ಚಿತವಾಗಿ ರದ್ದುಗೊಳಿಸಬೇಕೆಂದು ನಿರ್ಧರಿಸಲಾಯಿತು. ಆದರೆ, ನಿರ್ಯಾತ ಸುಂಕದಲ್ಲಿ ಪಾಲು ಕೊಡುವ ತತ್ವವನ್ನು ಹಿಂತೆಗೆದುಕೊಂಡಲ್ಲಿ ಅದು ಅನೇಕ ಪ್ರಾಂತ್ಯಗಳ ಆಯ–ವ್ಯಯ ಪಟ್ಟಿಯನ್ನು ಸರಿದೂಗಿಸುವುದು ಕಠಿಣವಾಗಬಹುದೆಂಬ ಕಾರಣದಿಂದ, ನಿರ್ಯಾತ ಸುಂಕದಲ್ಲಿ ಒಂದು ನಿರ್ದಿಷ್ಟ ಪಾಲನ್ನು ನೀಡುವ ಬದಲು ರಾಷ್ಟ್ರಪತಿಗಳು ನಿಗದಿಪಡಿಸಬಹುದಾದ ಒಂದು ಮೊತ್ತವನ್ನು ಸಂಗ್ರಹಿಸಲಾಗುವುದೋ ಅಥವಾ ಹತ್ತು ವರ್ಷಗಳ ಅವಧಿ ಇದರಲ್ಲಿ ಯಾವುದು ಮೊದಲು ಬರುವುದೋ

ಅಲ್ಲಿಯವರೆಗೆ ಅಂತಹ ಪ್ರಾಂತ್ಯಗಳಿಗೆ ಕೊಡಬಹುದು. ಆ ಪ್ರಾಂತ್ಯಗಳು ತಮ್ಮ ಆಯ-ವ್ಯಯ ಪಟ್ಟಿಯಲ್ಲಿ ಸಮತೋಲನ ಸಾಧಿಸುವುದಕ್ಕೆ ಅವಕಾಶ ಕೊಡುವ ಉದ್ದೇಶದಿಂದ ಈ ಅವಧಿಯನ್ನು ನಿಗದಿ ಪಡಿಸಲಾಗಿದೆ.

ಮಾನ್ಯರೆ, ತಿದ್ದುಪಡಿಗೊಂಡ ಈ ೨೫೪ನೆಯ ವಿಧಿಯಲ್ಲಿರುವ ಸತ್ಪರಿಣಾಮಕಾರಿ ತತ್ವವು ಈ ಸದನಕ್ಕೆ ಗ್ರಾಹ್ಯವಾಗಬಹುದೆಂದು ನಾನು ಭಾವಿಸುತ್ತೇನೆ.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ, ಸಾಮಾನ್ಯ): ಮಾನ್ಯ ಸಭಾಧ್ಯಕ್ಷರೆ, ಈ ಚರ್ಚೆಗೆ ನನ್ನ ಉತ್ತರದಲ್ಲಿ ಈ ಸದನದಲ್ಲಿ ವಿವಿಧ ಪ್ರಾಂತ್ಯಗಳ ಸದಸ್ಯರು ಭಾರತ ಸರಕಾರ ಕಾಯ್ದೆ ೧೯೩೫ರನ್ವಯ ಮಾಡಲಾದ ಕಂದಾಯ ಹಂಚಿಕೆಯಲ್ಲಿ ತಮ್ಮ ತಮ್ಮ ಪ್ರಾಂತ್ಯಗಳಿಗೆ ಅನ್ಯಾಯವಾಗಿದೆ ಎಂದು ನೊಂದುಕೊಂಡು ಆಡಿದ ಮಾತುಗಳಿಗೆ ನಾನು ಉತ್ತರಿಸಬಯಸುವುದಿಲ್ಲ. ಉತ್ತರ ನೀಡಲು ನಾನು ಇನ್ನೂ ಕೆಲವು ನಿರ್ದಿಷ್ಟವಾದ ಸಂಗತಿಗಳನ್ನು ತೆಗೆದುಕೊಳ್ಳುವೆ.

* * *

ಮೊದಲನೆಯದಾಗಿ, ನಾನು ನನ್ನ ಮಿತ್ರ ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾರವರ ತಿದ್ದುಪಡಿಯ ಬಗ್ಗೆ ಒಂದು ಮಾತು ಹೇಳಬಯಸುತ್ತೇನೆ. ಅನುದಾನಗಳನ್ನು ರಾಷ್ಟ್ರಪತಿಗಳು ಗೊತ್ತುಪಡಿಸುವ ಬದಲು ಸಂಸತ್ತು ಗೊತ್ತುಪಡಿಸಬೇಕೆಂದು ಅವರು ಹೇಳಿದ್ದಾರೆ. ಹಿಂದಿನ ಸಾರಿ ಹಣಕಾಸು ವಿಷಯಗಳಿಗೆ ಸಂಬಂಧಿಸಿದ ಚರ್ಚೆಯಲ್ಲಿ ಹಂಚಿಕೆಯ ವಿಷಯದಲ್ಲಿ ಸಂಸತ್ತನ್ನು ತರುವುದು ನಮ್ಮ ಉದ್ದೇಶವಲ್ಲ ಎಂದು ಹೇಳಿದ್ದೆ. ಏಕೆಂದರೆ ಕಂದಾಯಗಳ ಹಂಚಿಕೆಯಲ್ಲಿ ಅದು ವಿವಿಧ ಪ್ರಾಂತ್ಯಗಳ ನಡುವೆ ದೀರ್ಘವಾದ ಮತ್ತು ಕಾದಾಟದ ಪ್ರಶ್ನೆಯಾಗಬಾರದು. ಈ ವಿಷಯವನ್ನು ರಾಷ್ಟ್ರಪತಿಗಳು ಇಲ್ಲವೆ ಹಣಕಾಸು ಆಯೋಗದ ಸಲಹೆ ಮೇರೆಗೆ ರಾಷ್ಟ್ರಪತಿಗಳೇ ನಿರ್ಣಯಿಸಬೇಕೆಂಬುದು ನಮ್ಮ ಬಯಕೆ. ಈ ಕಾರಣಕ್ಕಾಗಿಯೇ ನಾನು ಪ್ರೊಫೆಸರ್ ಸಕ್ಸೇನಾರವರ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಿದ್ಧನಿಲ್ಲ. ಇನ್ನು ನನ್ನ ಮಿತ್ರ ಶ್ರೀ ಮೈತ್ರಾರವರು ಎತ್ತಿರುವ ಸಂಗತಿಯನ್ನು ತೆಗದುಕೊಳ್ಳುತ್ತೇನೆ. ಮೂಲ ವಿಧಿಯನ್ನು ಬದಲಾಯಿಸುವಂತಹ ತಿದ್ದುಪಡಿಯನ್ನು ಕರಡು ಸಮಿತಿ ಮಂಡಿಸುವ ಅವಶ್ಯಕತೆ ಇಲ್ಲ ಎಂಬುದು ಅವರ ಮೊದಲನೆಯ ವಾದ. ಹಣಕಾಸಿನ ಬಗ್ಗೆ ಇರುವ ತಜ್ಞರ ಸಮಿತಿಯ ಶಿಫಾರಸ್ಸುಗಳನ್ನು ಅವರು ಮರೆತಿದ್ದಾರೆ ಎಂಬುದು ನಿಶ್ಚಿತ. ಅವರು ಅದನ್ನು ನೋಡಿದ್ದರೆ ಸೆಣಬು ಮತ್ತು ಅದರ ಉತ್ಪನ್ನಗಳ ಮೇಲೆ ಸುಂಕದ ಹಂಚಿಕೆಯ ಪದ್ಧತಿಯಲ್ಲಿ ಬದಲಾವಣೆ ಬರಬೇಕೆಂಬುದು ತಜ್ಞರ ಸಮಿತಿಯ ಶಿಫಾರಸಾಗಿದೆ ಎಂಬುದನ್ನು ಅವರು ಒಪ್ಪಿಕೊಳ್ಳಬಹುದು. ಆದ್ದರಿಂದ ಮೂಲ ವಿಧಿಯಲ್ಲಿ ಬದಲಾವಣೆ ತರುವ ಅಥವಾ ಅದನ್ನು ಉಲ್ಲಂಘಿಸುವ ಯಾವ ಉದ್ದೇಶವನ್ನು ಕರಡು ಸಮಿತಿ ಹೊಂದಿಲ್ಲ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರಾ:** ಅವರು ಪರಿಹಾರದ ಬಗ್ಗೆಯೂ ಹೇಳಿದ್ದರು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅದಕ್ಕೆ ಬರುತ್ತೇನೆ. ಕರಡು ಸಮಿತಿಯು ಶಿಫಾರಸ್ಸುಗಳಲ್ಲಿ ಒಪ್ಪಿಕೊಳ್ಳದಿರುವ ಒಂದೇ ವಿಷಯವೆಂದರೆ ಸೆಣಬಿನ ಮೇಲಿನ ನಿರ್ಯಾತ ಸುಂಕದಲ್ಲಿ ಪಾಲನ್ನು ಕಳೆದುಕೊಳ್ಳುವ, ಪ್ರಾಂತ್ಯಗಳಿಗೆ ಕೊಡಬೇಕಾದ ಹಣದ ಬಗ್ಗೆ ಮಾಡಿದ ಶಿಫಾರಸ್ಸು. ಹಣಕಾಸು ವಿಷಯದ

---

* ಸಿ.ಎ.ಡಿ. ಸಂ. IX, ೮ನೇ ಆಗಸ್ಟ್ ೧೯೪೯, ಪುಟ ೨೫೯-೬೧.

ತಜ್ಞರ ಸಮಿತಿ ಸೂಚಿಸುವ ಅಂಕಿಗಳ ಬಗ್ಗೆ ಇನ್ನು ಹೆಚ್ಚಿನ ಪರಿಶೀಲನೆಯ ಅಗತ್ಯವಿದೆ ಎಂದು ಕರಡು ಸಮಿತಿಯು ಸಮಯದ ಅಭಾವದ ಕಾರಣ ಅದು ಮಾಡಿರುವ ಶಿಫಾರಸ್ಸುಗಳನ್ನು ಇನ್ನೂ ಹೆಚ್ಚಿನ ಪರಿಶೀಲನೆ ಮಾಡದೆ ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂಬುದು ಕರಡು ಸಮಿತಿಯ ಅಭಿಪ್ರಾಯವಾಗಿದೆ. ಈ ಒಂದು ಭಯದಿಂದ ಕರಡು ಸಮಿತಿಯು, ತಜ್ಞರ ಸಮಿತಿಯು ಶಿಫಾರಸ್ಸು ಮಾಡಿದ ಅಂಕಿಗಳ ಬದಲಾಗಿ ಈ ವಿಧಿಯಲ್ಲಿ ಅಳವಡಿಸಲಾಗಿರುವ ತನ್ನದೇ ಆದ ಸೂತ್ರವನ್ನು ರೂಪಿಸಿಕೊಂಡಿದೆ. ಅದೇನೆಂದರೆ ಸೆಣಬಿನ ಮೇಲಿನ ಸುಂಕದಲ್ಲಿ ಆಗುವ ನಷ್ಟವನ್ನು ಭರಿಸಲು ರಾಷ್ಟ್ರಪತಿಗಳು ನಿಗದಿಪಡಿಸುವ ಅನುದಾನವನ್ನು ನೀಡುವುದು. ಆದ್ದರಿಂದ ಈ ವಿಧಿಯಲ್ಲಿ ಹೆಸರಿಸಲಾದ ನಾಲ್ಕು ಪ್ರಾಂತ್ಯಗಳ ಆದಾಯದ ನ್ಯಾಯಯುತ ಮೂಲಗಳನ್ನು ಕಿತ್ತುಕೊಳ್ಳುವ ಇಚ್ಛೆಯಾಗಲಿ, ಇಲ್ಲವೆ ತಜ್ಞರ ಸಮಿತಿಯು ಮಾಡಿರುವ ಶಿಫಾರಸ್ಸುಗಳ ಅಂಕಿಯಲ್ಲಿ ಯಾವುದೇ ಮೂಲಭೂತ ಬದಲಾವಣೆಯನ್ನು ಮಾಡುವುದು ಕರಡು ಸಮಿತಿಯ ಉದ್ದೇಶವಾಗಿಲ್ಲ. ಅವರು ಮಾಡಿರುವುದೇನೆಂದರೆ ಈ ವಿಷಯವನ್ನು ರಾಷ್ಟ್ರಪತಿಗಳಿಗೆ ಬಿಟ್ಟುಬಿಡುವುದು.

ಇನ್ನು ನನ್ನ ಸ್ನೇಹಿತ ಪಂಡಿತ್ ಹೃದಯನಾಥ್ ಕುಂಝ್ರುರವರು ಈಗ ಸದನದ ಮುಂದಿರುವ ವಿಧಿಯಲ್ಲಿ 'ವಿಧಿಸುವ' ಎಂಬ ಪದದ ನಿರ್ದಿಷ್ಟ ಅರ್ಥವನ್ನು ಸೇರಿಸುವುದು ಕರಡು ಸಮಿತಿಯು ಮಾಡಿರುವ ತಪ್ಪು ಎಂದು ಹೇಳಿದ್ದಾರೆ. ಇದೂ ಅಲ್ಲದೆ, ನಾವು ಈಗಾಗಲೇ ಅಂಗೀಕರಿಸಿರುವ ೨೬೧ನೆಯ ವಿಧಿಯಲ್ಲೂ 'ವಿಧಿಸಲಾಗಿದೆ' ಎಂಬ ಪದವು ಇರಬಾರದಾಗಿತ್ತೆಂದೂ ಅವರು ಹೇಳಿದ್ದಾರೆ. ಅವರ ಸೂಚನೆ ಎಷ್ಟೇ ಅಪೇಕ್ಷಣೀಯವೆನಿಸಿದರೂ ಈಗ ಆ ಪದದ ವಿವರಣೆಯನ್ನು ಕೈಬಿಡುವುದು ಕಷ್ಟವಾಗಬಹುದು. ಅನುದಾನವು ಗೊತ್ತುಪಡಿಸಿದಂತೆ ಅಥವಾ ವಿಧಿಸಲಾಗಿರುವಂತೆ ಎಂದು ನಾವು ಈಗಾಗಲೇ ೨೫೪ನೆಯ ವಿಧಿಯ ಮುಖ್ಯಭಾಗದಲ್ಲಿ ಹೇಳಿದ್ದೇವೆ. ಈಗ ನಾವು 'ವಿಧಿಸಲಾದ' ಎಂಬ ಪದಕ್ಕೆ ಸೀಮಿತವಾದಂತಹ ಇಲ್ಲವೆ ೨೫೪ನೆಯ ವಿಧಿಯ ಅನುಬಂಧಗಳಿಗೆ ಹೊಂದಿಕೊಳ್ಳುವಂತಹ ಅರ್ಥನಿರೂಪಣೆ ನೀಡಬೇಕು. ಇಲ್ಲವೆ 'ವಿಧಿಸಲಾದ' ಎಂಬ ಪದಕ್ಕೆ ಅರ್ಥನಿರೂಪಣೆ ಕೊಟ್ಟಿರುವ ೨೬೦ನೆಯ ವಿಧಿಯಲ್ಲಿರುವ ಅನುಬಂಧಗಳಲ್ಲಿ ಬದಲಾವಣೆ ಮಾಡಬೇಕು.

**ಮಾನ್ಯ ಸಭಾಧ್ಯಕ್ಷ:** ಬಹುಶಃ ನೀವು ೨೫೧ರ ವಿಧಿಗೆ ಅನ್ವಯಿಸುತ್ತಿರುವಿರಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಕ್ಷಮಿಸಿ, ಹೌದು ಅದು ೨೫೧ನೆಯ ವಿಧಿ ಹಂಚಿಕೆಯನ್ನು ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಕರಡು ಸಮಿತಿಯು ಎರಡು ವಿಧದ ಅರ್ಥನಿರೂಪಣೆ ಮಾಡಿತ್ತು. 'ವಿಧಿಸು' ಎಂಬ ಪದದ ಮೊದಲನೆಯ ಅರ್ಥನಿರೂಪಣೆಯಂತೆ ಹಣಕಾಸು ಆಯೋಗದ ವರದಿ ತಮ್ಮ ಮುಂದೆ ಇರದೆ ಹೋದಾಗ ರಾಷ್ಟ್ರಪತಿಗಳು ನಿಗದಿಪಡಿಸಿದುದು ಎಂದು ಮತ್ತು ಎರಡನೆಯದೆಂದರೆ ರಾಷ್ಟ್ರಪತಿಗಳು ತಮ್ಮ ಮುಂದೆ ಹಣಕಾಸು ಸಮಿತಿಯ ವರದಿಯ ಶಿಫಾರಸ್ಸುಗಳನ್ನು ಇಟ್ಟುಕೊಂಡಾಗ ಕರಡು ಸಮಿತಿಯು 'ವಿಧಿಸು' ಎಂಬ ಪದಕ್ಕೆ ಎರಡು ವಿಧದ ಅರ್ಥ ನಿರೂಪಣೆ ಕೊಟ್ಟಿರುವುದಕ್ಕೆ ಕಾರಣವೆಂದರೆ ಪ್ರಾಂತ್ಯಗಳು ಸದ್ಯ ಜಾರಿಯಲ್ಲಿರುವ ಸೆಣಬಿನ ಮೇಲಿನ ಸುಂಕ ಮಾತ್ರವಲ್ಲದೆ, ಸಂವಿಧಾನದ ಇತರ ವಿಧಿಗಳಲ್ಲಿ ಹೇಳಲಾದ ಆದಾಯದ ಇತರ ಮೂಲಗಳಿಂದಲೂ ಕೊಡಲಾಗುತ್ತಿರುವ ಪಾಲಿನ ಪ್ರಮಾಣವನ್ನು ಹೆಚ್ಚು ಮಾಡಬೇಕು. ಏಕೆಂದರೆ ಈಗ ಅವುಗಳಿಗೆ ಕೊಡಲಾಗುತ್ತಿರುವ ಮೊತ್ತ ನ್ಯಾಯಯುತವೂ ಅಲ್ಲ ಮತ್ತು ಸಾಕಷ್ಟು ಪ್ರಮಾಣದಲ್ಲಿಯೂ ಇಲ್ಲ ಎಂಬುದು ಅವುಗಳ ದೂರು. ಆದ್ದರಿಂದ ಹಂಚಿಕೆಯ ಪರಿಷ್ಕರಣೆ ಅಗತ್ಯ ಎಂಬುದು ಅವುಗಳ ವಾದ. ಹಂಚಿಕೆಯ ಪರಿಷ್ಕರಣೆ ಈ ಕೂಡಲೆ ಎಂದರೆ ಸಂವಿಧಾನದ ಜಾರಿಯಾದ ಕೂಡಲೆ ಜಾರಿಗೆ ಬರಬೇಕೆಂದರೆ, ಹಣಕಾಸು ಆಯೋಗದ ಶಿಫಾರಸ್ಸಿಗೆ ಕಾಯದೆ ರಾಷ್ಟ್ರಪತಿಗಳು

ಹಂಚಿಕೆಯನ್ನು ನಿಗದಿಪಡಿಸಬೇಕಾಗುತ್ತದೆ ಎಂಬುದು ಸುಸ್ಪಷ್ಟ. ಏಕೆಂದರೆ, ಕೇಂದ್ರ ಸರಕಾರ ಎಷ್ಟೇ ಆತುರದಿಂದ ಕ್ರಮ ತೆಗೆದುಕೊಂಡರೂ ಸಂವಿಧಾನ ಜಾರಿಗೆ ಬರುವ ಹೊತ್ತಿಗೆ ಹಣಕಾಸು ಆಯೋಗವನ್ನು ನೇಮಿಸಿ ಅಷ್ಟರೊಳಗೆ ವರದಿ ತರಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಇದರ ಪರಿಣಾಮವಾಗಿ 'ವಿಧಿಸು' ಎಂಬ ಪದದ ಎರಡು ವಿಧದ ಅರ್ಥ ನಿರೂಪಣೆಯನ್ನು ನಿರೂಪಿಸಬೇಕಾಯಿತು. ಮೊದಲನೆಯದಾಗಿ ಹಣಕಾಸು ಆಯೋಗದ ಶಿಫಾರಸುಗಳಿಲ್ಲದೆಯೇ ರಾಷ್ಟ್ರಪತಿಗಳು ಹಂಚಿಕೆ ನಿಗದಿಪಡಿಸುವುದು. ಇದರಿಂದ ರಾಷ್ಟ್ರಪತಿಗಳು ಸ್ವೇಚ್ಛಾಚಾರದಿಂದ ನಿಗದಿಪಡಿಸುವುದು ಎಂದು ಅರ್ಥವಲ್ಲ ಮತ್ತು ಅವರು ಸಚಿವ ಸಂಪುಟದ ಸಲಹೆಯ ಮೇರೆಗೆ ಕ್ರಮ ಕೈಗೊಳ್ಳುವರೆಂದೂ ಅರ್ಥವಲ್ಲ. ಸಚಿವ ಸಂಪುಟವು ಕೇಂದ್ರ ಮತ್ತು ಪ್ರಾಂತ್ಯಗಳ ನಡುವಣ ಸಂಬಂಧಗಳಲ್ಲಿ ಕೇಂದ್ರಕ್ಕೆ ಭದ್ರ ಸ್ಥಾನ ಒದಗಿಸಿಕೊಳ್ಳುವಲ್ಲಿ ಆಸಕ್ತಿ ಹೊಂದುವುದು ಸಹಜ. ಇದು ಕೇಂದ್ರ ಸರಕಾರದ ಮನಸ್ಸಿರುವ ಸಂಗತಿ ಎಂದು ನನಗನಿಸುತ್ತದೆ. ಕೇಂದ್ರ ಸರಕಾರವು ಯಾವುದೇ ತಜ್ಞರ ಸಮಿತಿಯನ್ನಾಗಲೀ ಇಲ್ಲವೆ ತಜ್ಞ ಅಧಿಕಾರಿಯನ್ನು ಸೆಣಬು ಮತ್ತು ಅದರ ಉತ್ಪನ್ನಗಳ ಮೇಲಣ ಸುಂಕವೂ ಅಲ್ಲದೆ ಆದಾಯದ ಇತರ ಮೂಲಗಳಿಂದಲೂ ಈಗ ಹಂಚಲಾಗುತ್ತಿರುವ ಮೊತ್ತ ಸಾಕಷ್ಟಾಗಿದೆಯೇ ಇಲ್ಲವೆ ಎಂಬುದನ್ನು ಹಾಗೂ ಪ್ರಾಂತ್ಯ ಪ್ರಾಂತ್ಯಗಳ ನಡುವೆ ಮತ್ತು ಕೇಂದ್ರ ಮತ್ತು ಪ್ರಾಂತ್ಯಗಳ ನಡುವಣ ಹಂಚಿಕೆ ನ್ಯಾಯಯುತವಾಗಿದೆಯೆ ಎಂಬುದನ್ನು ಪರಿಶೀಲಿಸಲು ಕೇಂದ್ರ ಸರಕಾರವು ನೇಮಿಸುವ ಉದ್ದೇಶವನ್ನೊಳಗೊಂಡಿದೆ. ಆದರೆ ಅಂತಹ ನೇಮಕ ಸಂವಿಧಾನದ ಅರ್ಥ ವ್ಯಾಪ್ತಿಯಲ್ಲಿ ಆಯೋಗ ಎನಿಸಿಕೊಳ್ಳಲಾರದು. ತತ್ಪರಿಣಾಮವಾಗಿ, ರಾಷ್ಟ್ರಪತಿಗಳು ಹೊರಡಿಸುವ ಮೊದಲನೆಯ ಆಜ್ಞೆ ನಾನು ಈಗಾಗಲೇ ಹೇಳಿರುವಂತೆ, ಸ್ವೇಚ್ಛೆಯಿಂದ ಹೊರಡಿಸದಾಗಿರದೆ ಮತ್ತು ಕೇಂದ್ರ ಕಾರ್ಯಾಂಗದ ಸಲಹೆಯಿಂದಲೂ ಹೊರಡಿಸಿದುದಾಗಿರುವುದಿಲ್ಲ. ಆದರೆ ಅವರಿಗೆ ಮಾರ್ಗದರ್ಶನ ಮಾಡಲು ಅವರು ತಮ್ಮದೇ ಆದ ಸ್ವತಂತ್ರ ತಜ್ಞ ಅಭಿಪ್ರಾಯ ನೀಡುವಂತಹ ವ್ಯವಸ್ಥೆ ಹೊಂದಿರಬಹುದು. ನಂತರ ಏಳುವ ಪ್ರಶ್ನೆ ಎಂದರೆ ರಾಷ್ಟ್ರಪತಿಗಳು ಸಂಸತ್ತಿನ ಸಲಹೆಯ ಪ್ರಕಾರ ನಡೆದುಕೊಳ್ಳಬೇಕೇ ಅಥವಾ ತಮ್ಮ ಸ್ವಂತ ಸಲಹೆಯ ಮೇಲೆ ನಡೆದುಕೊಳ್ಳಬೇಕೇ ಇಲ್ಲವೆ ಅವರು ಸಂವಿಧಾನದನ್ವಯ ನೇಮಕಗೊಳ್ಳಲಿರುವ ಹಣಕಾಸು ಸಮಿತಿಯ ಶಿಫಾರಸ್ಸಿನಂತೆ ನಡೆದುಕೊಳ್ಳಬೇಕೇ? ನಾನು ಹೇಳಿರುವಂತೆ ಇದಕ್ಕೆ ಮೂರು ಪ್ರತ್ಯೇಕ ಮಾರ್ಗಗಳಿವೆ. ನನ್ನ ಮಿತ್ರ ಪಂಡಿತ್ ಕುಂಝ್ರುರವರು ಸದುದ್ದೇಶದಿಂದಲೇ ರಾಷ್ಟ್ರಪತಿಗಳು ಹಣಕಾಸು ಆಯೋಗದ ಶಿಫಾರಸ್ಸುಗಳಿಂದಲ್ಲದೆ ತಾವೇ ಸ್ವತಂತ್ರವಾಗಿ ನಿರ್ಣಯ ತೆಗೆದುಕೊಳ್ಳಬೇಕು ಎಂದು ಹೇಳುವರೆಂದು ನನಗೆ ಗೊತ್ತು. ಹಣಕಾಸು ಸಮಿತಿಯ ಶಿಫಾರಸ್ಸಿನ ಮೇಲೂ ಅಲ್ಲದೆ ರಾಷ್ಟ್ರಪತಿಗಳು ಸಂಸತ್ತಿನ ಮಂಜೂರಾತಿ ಇಲ್ಲದೆ ಯಾವ ಹಂಚಿಕೆಯನ್ನು ಮಾಡಕೂಡದೆಂದು ಹೇಳುವ ನನ್ನ ಗೌರವಾನ್ವಿತ ಮಿತ್ರ ಪ್ರೊಫೆಸರ್ ಸಕ್ಸೇನಾರವರನ್ನೊಳಗೊಂಡ ಇನ್ನೊಂದು ಅಭಿಪ್ರಾಯವಿದೆಯೆಂಬುದೂ ನನಗೆ ಗೊತ್ತಿದೆ. ನಾನು ಹೇಳಿದಂತೆ, ಈ ಎರಡೂ ಅಭಿಪ್ರಾಯಗಳೂ ದೋಷಮುಕ್ತವಲ್ಲ. ರಾಷ್ಟ್ರಪತಿಗಳು ಈ ವಿಷಯದಲ್ಲಿ ಶಿಫಾರಸು ಮಾಡಲು ಆಯೋಗ ಒಂದನ್ನು ನೇಮಿಸಿದ ನಂತರ ಅದರ ಶಿಫಾರಸ್ಸುಗಳನ್ನು ಕಡೆಗಣಿಸಿ ಹಂಚಿಕೆಯ ವಿಷಯದಲ್ಲಿ ತಮ್ಮದೇ ವಿಚಾರದ ಪ್ರಕಾರ ನಡೆದುಕೊಳ್ಳುವುದೂ ಸರಿಯಲ್ಲ. ಅದರಿಂದ ಆಯೋಗಕ್ಕೆ ಅಗೌರವ ಮಾಡಿದಂತಾಗುತ್ತದೆ. ನಾನು ಈಗಾಗಲೇ ಹೇಳಿರುವಂತೆ ಈ ವಿಷಯವನ್ನು ಸಂಸತ್ತಿಗೆ ಬಿಡುವ ಮೂರನೆಯ ಮಾರ್ಗವು ಅತ್ಯಂತ ಅಪಾಯಕಾರಿ ಎಂದು ನನಗನಿಸುತ್ತದೆ. ಆದ್ದರಿಂದ ಪ್ರಾಂತೀಯ ವೈಮನಸ್ಸು ಮತ್ತು ಈರ್ಷೆಗಳಿಗೆ ಅವಕಾಶ ಕೊಟ್ಟಂತಾಗುತ್ತದೆ. ಆದ್ದರಿಂದ ಕರಡು ಸಮಿತಿಯು ಈ ವಿಷಯದಲ್ಲಿ ಒಂದು ಮಧ್ಯಮ ಮಾರ್ಗವನ್ನನುಸರಿಸಿದೆ. ಅದೇನೆಂದರೆ, ವಿಷಯವನ್ನು ಸಂಸತ್ತು ಚರ್ಚಿಸಬಹುದು. ಆದರೆ

ರಾಷ್ಟ್ರಪತಿಗಳು ಕ್ರಮ ಕೈಗೊಂಡಾಗ ಅದು ಹಣಕಾಸು ಆಯೋಗದ ಶಿಫಾರಸ್ಸಿನಂತೆ ಇರಬೇಕೇ ಹೊರತು ಸ್ವೇಚ್ಛೆಯಾಗಿಯಲ್ಲ. ಸದನವು ಇದನ್ನು ಒಪ್ಪಿಕೊಳ್ಳುವುದೆಂದು ಭಾವಿಸುತ್ತೇನೆ. ಇರುವ ಮೂರೂ ವಿಧಾನಗಳಲ್ಲಿ ಇದು ಅತ್ಯಂತ ಸೂಕ್ತವಾದ ಒಪ್ಪಂದವಾಗಿದ್ದು, ಸಮಸ್ಯೆಯನ್ನು ಬಗೆಹರಿಸುವ ಅತ್ಯಂತ ಸಮಾಧಾನಕರ ಮಾರ್ಗವಾಗಿದೆ.

**[ಮೇಲೆ ಹೇಳಲಾದ ಡಾ. ಅಂಬೇಡ್ಕರರ ತಿದ್ದುಪಡಿ ಸ್ವೀಕೃತವಾಯಿತು.]**

**೨೫೪ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

* * *

## ಹೊಸ ವಿಧಿ ೨೫೪ಎ*

**ಮಾನ್ಯ ಸಭಾಧ್ಯಕ್ಷರು:** ಇನ್ನು ೨೫೪–ಎ ವಿಧಿಯನ್ನು ತೆಗೆದುಕೊಳ್ಳೋಣ.

**ಶ್ರೀ ನಜೀರುದ್ದೀನ್ ಅಹ್ಮದ್:** ಮಾನ್ಯರೆ ನನ್ನದೊಂದು ವಿಧಿ ಬಿಂದು ಇದೆ. ಅದೇನೆಂದರೆ ೨೫೪–ಎ ವಿಧಿಯನ್ನು ಮಂಡಿಸಬಯಸುವ ತಿದ್ದುಪಡಿ ಸಂಖ್ಯೆ ೮೨ ಸಂಪೂರ್ಣ ಹೊಸ ಸಂಗತಿಯಾಗಿದೆ. ಸಂವಿಧಾನಕ್ಕೆ ಸೂಚಿಸುವ ತಿದ್ದುಪಡಿಗಳನ್ನು ಒಂದು ನಿಗದಿತ ದಿನಾಂಕದೊಳಗಡೆ ಸೂಚಿಸಬೇಕೆಂದು ನಾವು ಈಗಾಗಲೇ ತೀರ್ಮಾನಿಸಿದ್ದೇವೆ. ನಾವು ನಮ್ಮ ನಮ್ಮ ತಿದ್ದುಪಡಿಗಳನ್ನು ಸೂಚಿಸಿದ್ದೇವೆ. ನಿಯಮಗಳ ಪ್ರಕಾರ ಇನ್ನಾವುದೇ ಹೆಚ್ಚಿನ ತಿದ್ದುಪಡಿಗಳಿಗೆ ತಿದ್ದುಪಡಿ ಸೂಚಿಸುವ ಮತ್ತು ಕ್ರಮಬದ್ಧವಾದ ತಿದ್ದುಪಡಿಗಳಿಗೆ ತಿದ್ದುಪಡಿಗಳನ್ನು ಮಾತ್ರ ಸೂಚಿಸಬಹುದು. ಪ್ರಸ್ತುತ ತಿದ್ದುಪಡಿಯು ಯಾವುದೇ ತಿದ್ದುಪಡಿಗೆ ಸಂಬಂಧಿಸಿಲ್ಲ ಎಂದು ನಾನು ಹೇಳಬಯಸುತ್ತೇನೆ. ಅದು "೨೫೪ನೆಯ ವಿಧಿಯ ನಂತರ ಈ ಕೆಳಗಣ ವಿಧಿಯನ್ನು ಸೇರಿಸತಕ್ಕದ್ದು" ಎಂದು ಹೇಳುತ್ತದೆ. ಇದು ಯಾವುದೇ ತಿದ್ದುಪಡಿಗೆ ಸಂಬಂಧಿಸಿದ ಅಥವಾ ಯಾವುದೇ ತಿದ್ದುಪಡಿಗೆ ಹೋಲಿಕೆಯಾಗುವುದೆಂದು ಹೇಳುವ ಪ್ರಯತ್ನ ಇಲ್ಲಿಲ್ಲ. ಮಾನ್ಯರೆ, ಈ ವಿಧಿಯನ್ನು ಈ ರೀತಿ ಸೇರಿಸಲಾಗದು ಎಂದು ನಾನು ಹೇಳಬಯಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಗೌರವಾನ್ವಿತ ಮಿತ್ರರು ಎತ್ತಿರುವ ಅಂಶ ನಿಸ್ಸಂಶಯವಾಗಿ ಸಮಂಜಸವಾಗಿದೆ. ಆದರೆ ಯಾವುದೇ ತಿದ್ದುಪಡಿಯು ಮುಖ್ಯವಾದುದೆಂದು ತೋರಿದರೆ ಅವನ್ನು ಮಂಡಿಸಲು ಅವಕಾಶ ನೀಡುವ ನಿರ್ವಿವಾದವಾದ ಹಕ್ಕು ತಮಗಿದೆ.

**ಮಾನ್ಯ ಸಭಾಧ್ಯಕ್ಷರು:** ಹಿಂದೆ ಕೆಲವು ಸಂದರ್ಭಗಳಲ್ಲಿ ಹೊಸ ವಿಧಿಗಳನ್ನು ಸೇರಿಸುವುದಕ್ಕೆ ಅವಕಾಶ ನೀಡಿದ್ದೇವೆ ಎಂದು ನನಗನಿಸುತ್ತದೆ. ಇದು ೨೫೪ನೆಯ ವಿಧಿಯ ನಂತರ ಸೇರಿಸಬೇಕೆಂದು ಕೇಳುವ ಹೊಸ ವಿಧಿಯಾಗಿದೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ನೀವು ಕರಡು ಸಮಿತಿಯನ್ನು ಕೆಲಸ ಮಾಡಲು ಹಚ್ಚಿರುವುದರಿಂದ, ಅದಕ್ಕೆ ಕರಡು ಸಂವಿಧಾನದಲ್ಲಿ ಏನಾದರೂ ಕೊರತೆ ಕಂಡುಬಂದರೆ ಆ ಕೊರತೆಯನ್ನು ನೀಗಿಸಲು ಅವಶ್ಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಆ ಸಮಿತಿಯು ಅಸ್ತಿತ್ವದಲ್ಲಿದ್ದು ಇನ್ನೂ ಕೆಲಸ ಮಾಡುತ್ತಿದೆ. ಪ್ರಸ್ತುತ ತಿದ್ದುಪಡಿಯು ಅಂತಹ ಅವಶ್ಯಕತೆಯಿಂದ ಉದ್ಭವಿಸಿದೆ.

---

* ಸಿ.ಎ.ಡಿ. ಸಂ. IX, ೮ನೇ ಆಗಸ್ಟ್ ೧೯೪೯, ಪುಟ ೨೬೧–೬೪.

**ಮಾನ್ಯ ಸಭಾಧ್ಯಕ್ಷರು:** ಈ ಹಿಂದೆ ಕೆಲವು ಸಂದರ್ಭಗಳಲ್ಲಿ ನಾನು ಹೊಸ ವಿಧಿಗಳನ್ನು ಸೇರಿಸುವುದಕ್ಕೆ ಅವಕಾಶ ನೀಡಿದ್ದೇನೆ. ಇದು ೨೫೪ನೆಯ ವಿಧಿಯ ನಂತರ ಸೇರಿಸಬೇಕೆಂದು ಕೇಳುವ ಹೊಸ ವಿಧಿಯಾಗಿದೆಯಾದ್ದರಿಂದ ನಾನು ಇದಕ್ಕೆ ಅವಕಾಶ ಕೊಡುತ್ತೇನೆ.

ಡಾ. ಅಂಬೇಡ್ಕರ್, ಈಗ ನೀವು ನಿಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಮಂಡಿಸುತ್ತಿರುವುದೇನೆಂದರೆ:

೨೫೪ನೇ ವಿಧಿಯ ನಂತರ ಈ ವಿಧಿಯನ್ನು ಸೇರಿಸತಕ್ಕದ್ದು:

**[ರಾಜ್ಯಗಳ ಮೇಲೆ ಪರಿಣಾಮ ಬೀರುವಂತಹ ತೆರಿಗೆಗಳನ್ನು ಹೇರುವಂತಹ ಮಸೂದೆಗಳನ್ನು ಮಂಡಿಸುವ ಮುಂಚೆ ರಾಷ್ಟ್ರಪತಿಗಳ ಶಿಫಾರಸ್ಸಿನ ಅಗತ್ಯ.]**

೩೫೪-ಎ (೧) ರಾಜ್ಯಗಳ ಆಸಕ್ತಿ ಇರುವ ಯಾವುದೇ ರೀತಿಯ ತೆರಿಗೆ ಅಥವ ಸುಂಕವನ್ನು ಹೇರುವ ಅಥವಾ ಬದಲಾವಣೆ ಮಾಡುವಂತಹ ಅಥವಾ ಕೃಷಿ ಆದಾಯ ಎಂಬ ಪದದ ಅರ್ಥದಲ್ಲಿ ಬದಲಾವಣೆ ಉಂಟುಮಾಡುವ ಭಾರತ ಆದಾಯ ಕರಕ್ಕೆ ಸಂಬಂಧಿಸಿದ ಕಾಯ್ದೆಯ ಉದ್ದೇಶಕ್ಕಾಗಿ ಅರ್ಥೈಸಲಾದ, ಅಥವಾ ಈ ಅಧ್ಯಯನದಲ್ಲಿ ಮೇಲೆ ಹೇಳಲಾದ ಅನುಬಂಧಗಳ ಪ್ರಕಾರ ರಾಜ್ಯಗಳಿಗೆ ಕೊಡಬಹುದಾದ ಇಲ್ಲವೆ ಹಂಚಬಹುದಾದ ತತ್ವಗಳ ಮೇಲೆ ಪರಿಣಾಮ ಬೀರುವಂತಹ, ಅಥವಾ ಈ ಅಧ್ಯಯನದಲ್ಲಿ ಮೇಲೆ ಹೇಳಲಾದ ಅನುಬಂಧಗಳಲ್ಲಿ ಒಕ್ಕೂಟದ ಸಲುವಾಗಿ ಯಾವುದೇ ಹೆಚ್ಚಿನ ಬೆಲೆ ಅಥವಾ ತೆರಿಗೆಯನ್ನು ಹೇರುವಂತಹ ಯಾವುದೇ ಮಸೂದೆ ಅಥವಾ ತಿದ್ದುಪಡಿಯನ್ನು ರಾಷ್ಟ್ರಪತಿಗಳ ಶಿಫಾರಸಿಲ್ಲದೆ ಸಂಸತ್ತಿನ ಯಾವುದೇ ಸದನದಲ್ಲಿ ಮಂಡಿಸುವಂತಿಲ್ಲ ಇಲ್ಲವೆ ಸೂಚಿಸುವಂತಿಲ್ಲ.

(೨) ಈ ವಿಧಿಯಲ್ಲಿರುವ ರಾಜ್ಯಗಳು ಆಸಕ್ತಿ ಹೊಂದಿರುವ ತೆರಿಗೆ ಅಥವಾ ಸುಂಕ ಎಂದರೆ

(ಎ) ಯಾವುದೇ ರಾಜ್ಯಕ್ಕೆ ನಿಗದಿಪಡಿಸಲಾದ ತೆರಿಗೆ ಅಥವಾ ಸುಂಕದ ನಿವ್ವಳ ವರಮಾನದ ಇಡೀ ಇಲ್ಲವೆ ಒಂದು ಭಾಗ ಅಥವಾ (ಬಿ) ಯಾವುದೇ ರಾಜ್ಯಕ್ಕೆ ಭಾರತದ ಸಂಚಿತ ನಿಧಿಯಿಂದ ಸದ್ಯದಲ್ಲಿ ಕೊಡಬಹುದಾದ ತೆರಿಗೆ ಅಥವಾ ಸುಂಕದಿಂದ ಬರುವ ನಿವ್ವಳ ಆದಾಯಕ್ಕೆ ಸಂಬಂಧಿಸಿದ್ದು.

ಮಾನ್ಯರೆ, ನಾವು ಇಷ್ಟು ತಡವಾಗಿ ಸಂವಿಧಾನದಲ್ಲಿ ಈ ವಿಧಿಯನ್ನು ಏಕೆ ಸೇರಿಸಬಯಸುತ್ತೇವೆ ಎಂಬುದಕ್ಕೆ ಒಂದೆರಡು ಕಾರಣಗಳನ್ನು ಕೊಡಬಹುದಾಗಿದೆ. ಇಂಥದೇ ಒಂದು ವಿಧಿ ಭಾರತ ಸರ್ಕಾರ ಕಾಯ್ದೆಯಲ್ಲಿದೆ. ಆ ವಿಷಯವನ್ನು ಕರಡು ಸಮಿತಿ ಪರಿಗಣಿಸಿತು. ಈ ವಿಧಿಯನ್ನು ಹೊಸ ಸಂವಿಧಾನಕ್ಕೆ ವರ್ಗಾಯಿಸುವುದಕ್ಕಾಗಲೀ ಅಥವಾ ಸೇರಿಸುವುದಕ್ಕಾಗಲೀ ಕರಡು ಸಮಿತಿ ಇಚ್ಛೆಪಡಲಿಲ್ಲ. ಆದಾಗ್ಯೂ ಎಲ್ಲಾ ಪ್ರಧಾನಿಗಳ ಸಮ್ಮೇಳನ ಒಂದರಲ್ಲಿ ಇಂತಹ ಒಂದು ವಿಧಿ ಉಪಯುಕ್ತ ಮತ್ತು ಅವಶ್ಯಕ ಎಂದು ಸಲಹೆ ಮಾಡಲಾಯಿತು. ಏಕೆಂದರೆ ಒಮ್ಮೆ ಸಂಸತ್ತು ಪ್ರಾಂತ್ಯಗಳು ಮತ್ತು ರಾಜ್ಯಗಳ ನಡುವೆ ಹಂಚಿಕೆಯನ್ನು ಮಾಡಿದ ಮೇಲೆ ಯಾರೇ ಅಧಿಕಾರೇತರ ಸದಸ್ಯನೂ ತನ್ನದೇ ಆದ ಮಸೂದೆಯನ್ನು ಮಂಡಿಸುವ ಮೂಲಕ ಸಂಸತ್ತು ಆಗಲೇ ನಿಗದಿಪಡಿಸಿದ ಹಂಚಿಕೆಯಲ್ಲಿ ಬದಲಾವಣೆ ತರುವುದಕ್ಕೆ ಅವಕಾಶವಿರಬಾರದು. ಆ ಕಾರಣಕ್ಕಾಗಿಯೇ ಕರಡು ಸಮಿತಿಯು ಆಗ ಆ ತಿದ್ದುಪಡಿಯ ಮೂಲಕ ಈಗಾಗಲೇ ನಿಗದಿಪಡಿಸಲಾದ ಹಂಚಿಕೆಯಲ್ಲಿ ರಾಷ್ಟ್ರಪತಿಗಳ ಶಿಫಾರಸ್ಸಿನ ಹೊರತು ಬದಲಾವಣೆ ಮಾಡುವಂತಹ ಯಾವುದೇ ಮಸೂದೆಯನ್ನು ತರುವುದಿಲ್ಲ ಎಂಬ ಆಶ್ವಾಸನೆಯನ್ನು ಕೊಡುವುದಕ್ಕಾಗಿ ಈ ವಿಧಿಯನ್ನು ತರಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಈ ವಿಧಿಗೆ ಯಾವ ತಿದ್ದುಪಡಿಯೂ ಇರುವುದಿಲ್ಲ.

* * *

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ನೀವೇನಾದರೂ ಮಾತನಾಡಬಯಸುತ್ತೀರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದಕ್ಕೆ ಏನೇ ಉತ್ತರ ನೀಡುವ ಆವಶ್ಯಕತೆ ಇದೆ ಎಂದು ನನಗನಿಸುವುದಿಲ್ಲ.

* * *

**೨೫೪–ಎ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

## ವಿಧಿ ೨೫೫* (ಮುಂದುವರಿದುದು)

**ಮಾನ್ಯ ಸಭಾಧ್ಯಕ್ಷರು:** ಈಗ ೨೫೫ನೆಯ ವಿಧಿಯನ್ನು ತೆಗೆದುಕೊಳ್ಳೋಣ.

(ತಿದ್ದುಪಡಿ ಸಂಖ್ಯೆ ೮೩ ಅನ್ನು ಮಂಡಿಸಲಾಗಲಿಲ್ಲ.)

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಮಂಡಿಸುವುದೇನೆಂದರೆ:

"೨೫೫ನೆಯ ವಿಧಿಯಲ್ಲಿ ಭಾರತದ ಆದಾಯ ಎಂಬ ಪದ ಎಲ್ಲೆಲ್ಲಿ ಬರುತ್ತದೆಯೋ ಅಲ್ಲಲ್ಲಿ ಭಾರತದ ಸಂಚಿತ ನಿಧಿ ಎಂದು ಸೇರಿಸತಕ್ಕದ್ದು.

"೨೫೫ನೆಯ ವಿಧಿಯ ಮೊದಲಿನ ಅನುಬಂಧಗಳಲ್ಲಿ ಹೇಳಲಾದ ಮೊದಲನೆಯ ಅನುಬಂಧದಲ್ಲಿ ಭಾಗ ೧ರಲ್ಲಿ ಸದ್ಯಕ್ಕೆ ಎಂಬ ಪದಗಳನ್ನು ಕೈಬಿಡತಕ್ಕದ್ದು.

"೨೫೫ನೇ ವಿಧಿಯ ಎರಡನೆಯ ಅನುಬಂಧದಲ್ಲಿ ಮೂರು ವರ್ಷಗಳು ಎಂಬ ಪದಕ್ಕೆ ಬದಲಾಗಿ ಎರಡು ವರ್ಷಗಳು ಎಂದು ಸೇರಿಸತಕ್ಕದ್ದು."

ಮೊದಲನೆಯ ಎರಡು ತಿದ್ದುಪಡಿಗಳು ಔಪಚಾರಿಕವಾಗಿವೆ. ಮಾತ್ರ...

**ಶ್ರೀ ನಜೀರುದ್ದೀನ್ ಅಹ್ಮದ್:** ನನ್ನದೊಂದು ವಿಧಿ ಇದೆ. ೮೬ನೆಯ ತಿದ್ದುಪಡಿ ಸಂಪೂರ್ಣವಾಗಿ ಹೊಸದಾಗಿದ್ದು, ಅದು ಯಾವುದಕ್ಕೂ ಸಂಬಂಧಿಸಿದ್ದಲ್ಲ. ಅದು ಔಪಚಾರಿಕ ವಿಷಯವಲ್ಲ. ಅದು ಗಂಭೀರ ಸ್ವರೂಪದ್ದಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನೇ ನಾನು ವಿವರಿಸಲು ಪ್ರಯತ್ನಿಸುತ್ತಿದ್ದೇನೆ.

**ಶ್ರೀ ನಜೀರುದ್ದೀನ್ ಅಹ್ಮದ್:** ಅದು ತಿದ್ದುಪಡಿಗೆ ತಿದ್ದುಪಡಿಯಾಗಿಲ್ಲ. ಅದು ಸಂವಿಧಾನಕ್ಕೆ ತಿದ್ದುಪಡಿಯಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅಧ್ಯಕ್ಷರ ಅನುಮತಿಯಿಂದ ಸೂಚಿಸುತ್ತಿದ್ದೇನೆ.

**ಶ್ರೀ ನಜೀರುದ್ದೀನ್ ಅಹ್ಮದ್:** ಅದನ್ನು ಸೂಚಿಸಲು ಅಧ್ಯಕ್ಷರ ಅನುಮತಿ ಪಡೆದುಕೊಳ್ಳುವಂತೆ ಅಂಬೇಡ್ಕರ್‌ರವರ ಮೇಲೆ ಒತ್ತಡ ಹಾಕಲು ನಾನು ಹಾಗೆ ಹೇಳಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅವರ ಅನುಮತಿ ಪಡೆದುಕೊಂಡಿದ್ದೇನೆ. ಅಧ್ಯಕ್ಷರು ಸೂಚನೆಯನ್ನು ಮಂಡಿಸುವ ಮುಂಚೆಯಾಗಲೀ ಅಥವಾ ನಂತರವಾಗಲೀ ಅನುಮತಿ ನೀಡಬಹುದು.

ಈ ವಿಷಯ ಅನುದಾನಕ್ಕೆ ಸಂಬಂಧಿಸಿದೆ. ಮತ್ತು ಮೂಲ ವಿಧಿಯಲ್ಲಿಯೇ ಅಸ್ಸಾಂ ರಾಜ್ಯಕ್ಕೆ

---

* ಸಿ.ಎ.ಡಿ. ಸಂ. IX, ೫ನೇ ಆಗಸ್ಟ್ ೧೯೪೯, ಪುಟ ೨೬೪–೬೫.

ಮೂರು ವರ್ಷಗಳ ಸರಾಸರಿಯನ್ನು ಕೊಡಬೇಕೆಂದು ಹೇಳಲಾಗಿದೆ. ಮೂರು ವರ್ಷಗಳ ಸರಾಸರಿಯನ್ನು ತೆಗೆದುಕೊಂಡರೆ ಅಸ್ಸಾಂ ಸರಕಾರವು ಅತೀ ಕಡಿಮೆ ಅನುದಾನ ಪಡೆಯುವುದು ಎಂದು ನಮಗೆ ಮನವಿ ಮಾಡಿಕೊಡಲಾಯಿತು. ಏಕೆಂದರೆ, ಮೊದಲನೆಯ ವರ್ಷ ಅವರು ಏನನ್ನೂ ಖರ್ಚು ಮಾಡಲಿಲ್ಲ. ಆದರೆ ನಾವು ಎರಡು ವರ್ಷಗಳ ಸರಾಸರಿ ತೆಗೆದುಕೊಂಡರೆ ಅವರಿಗೆ ಹೆಚ್ಚು ದೊರಕುವುದು. ಈ ಸಮಸ್ಯೆಯನ್ನು ಬಗೆಹರಿಸಲೆಂದೇ ಕರಡು ಸಮಿತಿಯು ಮೂರು ವರ್ಷಗಳ ಬದಲಾಗಿ ಎರಡು ವರ್ಷ ಎಂದು ಸೇರಿಸಿದೆ.

* * *

## ವಿಧಿ ೨೫೫** (ಮುಂದುವರಿದುದು)

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ ಸಾಮಾನ್ಯ): ಮಾನ್ಯ ಸಭಾಧ್ಯಕ್ಷರೇ, ಮಿತ್ರ ಶ್ರೀ ನಿಕೋಲ್ಸ್ ರಾಯ್‌ರವರು ಮಂಡಿಸಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ ಎಂದು ನಾನು ಹೇಳಲಾರೆ. ಈ ವಿಧಿಯ ಕರಡಿನಲ್ಲಿ ಪ್ರತಿ ವರ್ಷವೂ ಸಂಸತ್ತು ಎಷ್ಟು ಅನುದಾನವನ್ನು ಕೊಡಬೇಕೆಂದು ನಿರ್ಣಯಿಸುವವರೆಗೂ ರಾಷ್ಟ್ರಪತಿಗಳು ಏನೂ ಮಾಡುವಂತಿಲ್ಲ ಎಂಬ ಅಭಿಪ್ರಾಯವನ್ನು ಕೊಡುತ್ತದೆ ಎಂದು ತೋರುತ್ತದೆ. ಖಂಡಿತವಾಗಿಯೂ ಇದು ಕರಡು ಸಮಿತಿಯ ಉದ್ದೇಶವಾಗಿಲ್ಲ. ರಾಷ್ಟ್ರಪತಿಗಳು ೨೫೫ನೆಯ ವಿಧಿಯ ಪ್ರಕಾರ ಸಂಸತ್ತು ಈ ವಿಷಯದಲ್ಲಿ ಯಾವುದೇ ನಿರ್ಣಯ ತೆಗೆದುಕೊಳ್ಳುವ ಮೊದಲೇ ರಾಷ್ಟ್ರಪತಿಗಳು ಅನುದಾನವನ್ನು ಮಾಡುವ ಅಧಿಕಾರವನ್ನು ಚಲಾಯಿಸಬೇಕೆಂಬುದು ಕರಡು ಸಮಿತಿಯ ಅಪೇಕ್ಷೆಯಾಗಿದೆ. ಈ ವಿಷಯವನ್ನು ಸ್ಪಷ್ಟಪಡಿಸುವುದಕ್ಕಾಗಿಯೇ ನಾನು ಮೊದಲೇ ಹೇಳಿರುವಂತೆ ಶ್ರೀ ನಿಕೋಲ್ಸ್ ರಾಯ್ ಅವರ ತಿದ್ದುಪಡಿಯನ್ನೂ ಸ್ವೀಕರಿಸಬಯಸುತ್ತೇನೆ. ಆದಾಗ್ಯೂ ಈ ಹಂತದಲ್ಲಿ ನಾನು ಹೇಳಬಯಸುವುದೇನೆಂದರೆ ಅವರ ಈ ತಿದ್ದುಪಡಿಯಲ್ಲಿರುವ ಭಾಷೆಯನ್ನು ಪರಿಶೀಲಿಸಲು ನನಗೆ ಸಾಕಷ್ಟು ಸಮಯ ಸಿಕ್ಕಿಲ್ಲ. ಆದ್ದರಿಂದ ಈ ತಿದ್ದುಪಡಿಯ ಭಾಷೆಯಲ್ಲಿ ೨೫೫ನೆಯ ವಿಧಿಗೆ ಹೊಂದುವಂತಹ ಬದಲಾವಣೆ ಮಾಡುವ ಸ್ವಾತಂತ್ರ್ಯವು ಕರಡು ಸಮಿತಿಗೆ ಇರುವುದೆಂಬ ಷರತ್ತಿನ ಮೇಲೆ ನಾನು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ತಿದ್ದುಪಡಿಯನ್ನು ಮತಕ್ಕೆ ಹಾಕುವೆ.

[**ಡಾ. ಅಂಬೇಡ್ಕರ್‌ರವರ ಮೇಲೆ ಹೇಳಿದ ಎಲ್ಲಾ ತಿದ್ದುಪಡಿಗಳೂ ಸ್ವೀಕೃತವಾದುವು.**]

ಮಾನ್ಯ ಸಭಾಧ್ಯಕ್ಷ: ನಂತರ ಈಗ ನಾನು ಶ್ರೀ ನಿಕೋಲ್ಸ್ ರಾಯ್‌ರವರ ತಿದ್ದುಪಡಿಯನ್ನು ಮತಕ್ಕೆ ಹಾಕುವೆ.

ಇರುವ ಪ್ರಶ್ನೆ ಎಂದರೆ,

"೨೫೫ನೆಯ ವಿಧಿಯಲ್ಲಿ":

(ಎ) 'ಸಂಸತ್ತು ಕಾನೂನಿನ ಮೂಲಕ' ವಿಧಿಸುವುದು ಎಂಬ ಪದಗಳ ಬದಲು 'ರಾಷ್ಟ್ರಪತಿಗಳು ವಿಧಿಸಬಹುದಾದ ಇಲ್ಲವೆ ಸಂಸತ್ತು ಹಾಗೆ ವಿಧಿಸುವ ತನಕ' ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) 'ಸಂಸತ್ತು ನಿರ್ಧರಿಸಬಹುದಾದ' ಎಂಬ ಪದಗಳ ಬದಲು ಅಥವಾ 'ಸಂಸತ್ತು ನಿರ್ಣಯಿಸುವ

---

** ಸಿ.ಎ.ಡಿ. ಸಂ. IX, ೯ನೇ ಆಗಸ್ಟ್ ೧೯೪೯, ಪುಟ ೨೯೩–೯೪.

ತನಕ ರಾಷ್ಟ್ರಪತಿಗಳು ನಿರ್ಣಯಿಸಬಹುದಾದ' ಎಂಬ ಪದಗಳನ್ನು ಸೇರಿಸತಕ್ಕದ್ದು. ಮತ್ತು

(ಸಿ) ವಿಧಿಯ ಕೊನೆಯಲ್ಲಿ ಕೆಳಗಿನ ವಿವರಣೆಯನ್ನು ಸೇರಿಸತಕ್ಕದ್ದು.

'ವಿವರಣೆ'– 'ವಿಧಿಸು' ಎಂಬ ಪದಕ್ಕೆ ವಿಧಿ ೨೫೧ (೪) (ಬಿ)ಯಲ್ಲಿನ ಅರ್ಥವನ್ನೇ ಹೊಂದಿರುತ್ತದೆ.

ತಿದ್ದುಪಡಿಯು ಸ್ವೀಕೃತವಾಯಿತು.

**[ತಿದ್ದುಪಡಿಗೊಂಡ ೨೫೫ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.]**

* * *

## ವಿಧಿ ೨೫೬*

**ಮಾನ್ಯ ಸಭಾಧ್ಯಕ್ಷರು:** ಈಗ ೨೫೬ನೆಯದನ್ನು ತೆಗೆದುಕೊಳ್ಳೋಣ. ಮುದ್ರಿತ ಪಟ್ಟಿಯ ಎರಡನೆಯ ಸಂಪುಟದಲ್ಲಿರುವ ಡಾ. ಅಂಬೇಡ್ಕರ್‌ರವರ ತಿದ್ದುಪಡಿ ಸಂಖ್ಯೆ ೨೯೨೫.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುವುದೇನೆಂದರೆ

"೨೫೬ನೆಯ ವಿಧಿಯ ಕಲಮು (೧)ರ ಬದಲಾಗಿ ಈ ಕಲಮನ್ನು ಸೇರಿಸತಕ್ಕದ್ದು:"

(೧) ಈ ಸಂವಿಧಾನದ ೨೧೭ನೆಯ ವಿಧಿಯಲ್ಲಿ ಏನೇ ಹೇಳಿದ್ದರೂ, ರಾಜ್ಯದ ಹಿತದೃಷ್ಟಿಯಿಂದ, ಅಥವಾ ನಗರಸಭೆ, ಜಿಲ್ಲಾ ಮಂಡಳಿ, ಸ್ಥಳೀಯ ಮಂಡಳಿ ಅಥವಾ ಅದರ ಸ್ಥಳೀಯ ಪ್ರಾಧಿಕಾರ ಮುಂತಾದವುಗಳಲ್ಲಿ ಉದ್ಯೋಗ, ವ್ಯಾಪಾರ, ಕಸುಬು ಅಥವಾ ನೇಮಕ ಇವುಗಳು ಆದಾಯದ ಮೇಲಿನ ಕರಕ್ಕೆ ಸಂಬಂಧಿಸಿವೆ ಎಂಬ ಕಾರಣದಿಂದ ರಾಜ್ಯದ ಶಾಸಕಾಂಗದಿಂದ ಹೇರಲಾದ ಯಾವುದೇ ಕರಗಳು ಅನೂರ್ಜಿತವಾಗುವುವು.

ಮಾನ್ಯರೆ, ಇನ್ನು ಮುಂದೆ ಬರಲಿರುವ ವಿಧಿಯಲ್ಲಿ ಸ್ಥಳೀಯ ಪ್ರಾಧಿಕಾರಗಳಿಗೆ ಉದ್ಯೋಗ ವ್ಯಾಪಾರ, ಕಸುಬು, ಮತ್ತು ನೇಮಕಗಳ ಮೇಲೆ ಕೆಲವು ಮಿತಿಗಳಲ್ಲಿ ಕೆಲವು ತೆರಿಗೆಗಳನ್ನು ಹೇರುವುದಕ್ಕೆ ಅನುಮತಿ ನೀಡಲು ಉದ್ದೇಶಿಸಲಾಗಿದೆ. ರಾಜ್ಯಗಳು ಅಂತಹ ತೆರಿಗೆಗಳನ್ನು ಹಾಕಿದರೆ ಅದನ್ನು ಆದಾಯದ ಮೇಲಣ ತೆರಿಗೆ ಎಂದು ಪರಿಗಣಿಸಿ ಅಂತಹ ತೆರಿಗೆ ಕೇಂದ್ರದ ಅಧಿಕಾರ ವ್ಯಾಪ್ತಿಯಲ್ಲಿ ಬರುವುದೆಂದು ಅದನ್ನು ಪ್ರಶ್ನಿಸಬಹುದು. ಈ ಉದ್ದೇಶಕ್ಕಾಗಿ ಉಪಕಲಮು (೧)ರಲ್ಲಿ ಮಾಡಲಾದ ಯಾವುದೇ ಕಾನೂನನ್ನು ಪ್ರಶ್ನಿಸಬಾರದೆಂಬ ಕಾರಣದಿಂದ ಇಂತಹ ಒಂದು ಕಲಮು ಅವಶ್ಯವಾಗಿದೆ ಎಂದು ಕರಡು ಸಮಿತಿಯು ಭಾವಿಸಿತು. ಆದ್ದರಿಂದ ಅದಕ್ಕನುಗುಣವಾಗಿ ನಾನು ಈ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

* * *

**ಮಾನ್ಯ ಸಭಾಧ್ಯಕ್ಷರು:** ಇನ್ನೂ ಶ್ರೀ ಪಿ.ಡಿ. ಹಿಮಾತ್‌ಸಿಂಗ್‌ರವರ ಹೆಸರಿನಲ್ಲಿರುವ ಸಂಖ್ಯೆ ೮೯ ಮತ್ತು ೯೦. ಅವರು ಅವುಗಳನ್ನು ಮಂಡಿಸುತ್ತಿಲ್ಲ. ಡಾ. ಅಂಬೇಡ್ಕರ್‌ರವರ ಹೆಸರಿನಲ್ಲಿರುವ ಸಂಖ್ಯೆ. ೯೧.

---

* ಸಿ.ಎ.ಡಿ. ಸಂ. IX, ೯ನೇ ಆಗಸ್ಟ್ ೧೯೪೯, ಪುಟ ೩೦೧.

* ಅದೇ, ಪುಟ ೩೦೧.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ಅದನ್ನು ಮಂಡಿಸಬಯಸುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಇದಕ್ಕೆ ಯಾವುದೇ ವಿವರವಾದ ಉತ್ತರ ನೀಡುವ ಅವಶ್ಯಕತೆ ಇರುವುದಿಲ್ಲ ಎಂದು ನನಗನಿಸುತ್ತದೆ. ವಸ್ತುಸ್ಥಿತಿ ಹೀಗಿದೆ. ಪ್ರತಿಯೊಂದು ಸಂವಿಧಾನದಲ್ಲಿ ಒಂದು ರಾಜ್ಯದ ತೆರಿಗೆ ಸಂಪನ್ಮೂಲಗಳನ್ನು ಕೇಂದ್ರ ಮತ್ತು ರಾಜ್ಯಗಳಲ್ಲಿ ಹಂಚಲಾಗುತ್ತದೆ. ರಾಜ್ಯಗಳು ಮತ್ತು ಸ್ಥಳೀಯ ಸಂಸ್ಥೆಗಳ ನಡುವಣ ಸಂಪನ್ಮೂಲಗಳ ಹಂಚಿಕೆಯನ್ನು ರಾಜ್ಯದ ಕಾನೂನು ಮಾಡುತ್ತದೆ. ಏಕೆಂದರೆ, ಸ್ಥಳೀಯ ಸಂಸ್ಥೆ ರಾಜ್ಯದ ಸೃಷ್ಟಿಯಾಗಿರುತ್ತದೆ. ಅದಕ್ಕೆ ಪ್ರಾಥಮಿಕ ಅಧಿಕಾರ ಕಕ್ಷೆ ಇರುವುದಿಲ್ಲ. ಅದನ್ನು ಕೆಲವು ಉದ್ದೇಶಗಳಿಂದ ಸೃಷ್ಟಿಸಲಾಗಿರುತ್ತದೆ. ಆ ಉದ್ದೇಶಗಳು ಸಮರ್ಪಕವಾಗಿ ಈಡೇರದಿದ್ದರೆ, ಅದನ್ನು ರದ್ದುಪಡಿಸಬಹುದಾಗಿದೆ. ನಾನು ಈಗ ಸೂಚಿಸುತ್ತಿರುವ ವಿಧಿಯು ರಾಜ್ಯಕ್ಕೆ ಅಧೀನವಾಗಿರುವ ಸ್ಥಳೀಯ ಸಂಸ್ಥೆಗಳ ಹಣಕಾಸು ಸಂಪನ್ಮೂಲಗಳ ವಿಷಯಗಳಿಗೆ ಸಂಬಂದಿಸುವ ಯಾವುದೇ ಅನುಬಂಧಗಳು ಸಂವಿಧಾನದಲ್ಲಿರಕೂಡದೆಂಬ ಸಾಮಾನ್ಯ ನಿಯಮಕ್ಕೆ ಅಪವಾದವಾಗಿದೆ. ಆದರೆ ಸದ್ಯದಲ್ಲಿ ಕೆಲವು ಸ್ಥಳೀಯ ಸಂಸ್ಥೆಗಳು ಅಸ್ತಿತ್ವದಲ್ಲಿದ್ದು, ಅವುಗಳ ಆಡಳಿತವು ಅವು ಹಾಕುತ್ತಿರುವ ತೆರಿಗೆಗಳನ್ನೇ ಅವಲಂಬಿಸಿರುವುದರಿಂದ, ಅವುಗಳು ಆದಾಯಕರ ಕಾನೂನಿಗೆ ವ್ಯತಿರಿಕ್ತವಾಗಿದ್ದಾಗ್ಯೂ, ಕರಡು ಸಮಿತಿಯು ಸದ್ಯದ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಸದ್ಯದ ಪರಿಸ್ಥಿತಿಯನ್ನು ಮುಂದುವರಿಸಲು ಸಿದ್ಧವಿದೆ. ವಾಸ್ತವಿಕವಾಗಿ ತಜ್ಞರ ಸಮಿತಿಯು ಗೊತ್ತುಪಡಿಸಿದ ರೂ. ೨೫೦ರ ಮಿತಿಯ ಬಗ್ಗೆ ಆಕ್ಷೇಪಣೆ ಮಾಡಲಾಗಿತ್ತು. ಅದನ್ನು ರೂ. ೧೫೦ಕ್ಕೆ ಇಳಿಸಬೇಕೆಂದು ಸೂಚನೆ ಮಾಡಲಾಗಿತ್ತು. ವಿಷಯವನ್ನು ಪರಿಗಣಿಸಿದ ಕರಡು ಸಮಿತಿಯು ಹಾಗೆ ಮಾಡುವ ಅವಶ್ಯಕತೆ ಇಲ್ಲ ಮತ್ತು ಸದ್ಯದ ಪರಿಸ್ಥಿತಿಯಲ್ಲಿ ಆ ಮಿತಿಯನ್ನೇ ಮುಂದುವರೆಸಿಕೊಂಡು ಹೋಗಬೇಕೆಂದು ತೀರ್ಮಾನಿಸಿತು. ಆದ್ದರಿಂದ ಇದು ಒಂದು ಅಪವಾದವಾಗಿದೆ. ಮತ್ತು ತಾತ್ವಿಕವಾಗಿ ನಾನು ಇದಕ್ಕೆ ವಿರೋಧವಾಗಿರುವುದರಿಂದ ನಾನು ನನ್ನ ಮಿತ್ರರು ಸೂಚಿಸಿರುವ ಯಾವುದೇ ತಿದ್ದುಪಡಿಯನ್ನು ಒಪಿಕೊಳ್ಳಲು ಸಿದ್ಧನಿಲ್ಲ.

[**ಮೇಲೆ ಹೇಳಲಾದ ಡಾ. ಅಂಬೇಡ್ಕರ್‌ರವರ ತಿದ್ದುಪಡಿ ಅಂಗೀಕೃತವಾಯಿತು ಮತ್ತು ೨೫೬ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**]

## ವಿಧಿ ೨೫೭*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತಿರುವುದೇನೆಂದರೆ,

"ಕಾನೂನಿನಿಂದ ಎಂಬ ಪದವನ್ನು ೨೫೭ನೆಯ ವಿಧಿಯ ಕೊನೆಯಲ್ಲಿ ಸೇರಿಸತಕ್ಕದ್ದು." ಇದು ಸ್ವಲ್ಪ ಅಚಾತುರ್ಯದಿಂದ ಬಿಟ್ಟುಹೋಗಿತ್ತು.

**ಮಾನ್ಯ ಸಭಾಧ್ಯಕ್ಷ:** ಇನ್ನೂ ಎರಡು ತಿದ್ದುಪಡಿಗಳಿದ್ದು ಡಾ. ಅಂಬೇಡ್ಕರ್‌ರವರ ತಿದ್ದುಪಡಿಯ ನಂತರ ಅವು ಉದ್ಭವಿಸುವುದಿಲ್ಲ.

**ಮೇಲ್ಕಂಡ ತಿದ್ದುಪಡಿಯು ಸ್ವೀಕೃತವಾಯಿತು. ತಿದ್ದುಪಡಿಯೊಂದಿಗೆ ೨೫೭ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

---

* ಸಿ.ಎ.ಡಿ. ಸಂ. IX, ೬ನೇ ಆಗಸ್ಟ್ ೧೯೪೯, ಪುಟ ೩೦೨.

# ವಿಧಿ ೨೫೯*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತಿರುವುದೇನೆಂದರೆ,

೨೫೯ನೆಯ ವಿಧಿಯಲ್ಲಿ ಕಲಮು (೧)ರಲ್ಲಿ 'ಆಡಿಟರ್ ಜನರಲ್ ಎಂಬ ಪದದ ಬದಲು' ಕಂಟ್ರೋಲರ್ ಮತ್ತು ಆಡಿಟರ್ ಜನರಲ್' ಎಂಬ ಪದಗಳನ್ನು ಸೇರಿಸತಕ್ಕದ್ದು.

ಈ ಸಭೆಯು ಈಗಾಗಲೇ ಅಂಗೀಕರಿಸಿರುವ ಹಿಂದಿನ ವಿಧಿಯಲ್ಲಿ ಈ ಅಧಿಕಾರಿಗೆ ಕೊಡಲಾದ ಹೆಸರನ್ನೇ ೨೫೯ನೆಯ ವಿಧಿಯಲ್ಲಿ ಕೊಡುವುದಕ್ಕಾಗಿ ಹೀಗೆ ಮಾಡಲಾಗಿದೆ.

ತಿದ್ದುಪಡಿ ಸ್ವೀಕೃತವಾಯಿತು.

**೨೫೯ನೆಯ ವಿಧಿಯನ್ನು ಈ ತಿದ್ದುಪಡಿಯೊಂದಿಗೆ ಸಂವಿಧಾನದಲ್ಲಿ ಸೇರಿಸಲಾಯಿತು.**

* * *

# ವಿಧಿ ೨೬೦**

**ಮಾನ್ಯ ಸಭಾಧ್ಯಕ್ಷರು:** ಇನ್ನು ೨೬೦ನೆಯ ವಿಧಿಯನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನಾನು ಮಂಡಿಸುವುದೇನೆಂದರೆ, ತಿದ್ದುಪಡಿಗಳ ಪಟ್ಟಿಯಲ್ಲಿರುವ ತಿದ್ದುಪಡಿ ಸಂಖ್ಯೆ ೨೯೪೩ರಲ್ಲಿ ಈ ಕೆಳಗಿನದನ್ನು ಸೇರಿಸತಕ್ಕದ್ದು:

"೨೬೦ನೆಯ ವಿಧಿಯ ಕಲಮು (೧) ಬದಲಾಗಿ ಈ ಕೆಳಗಿನಂತೆ ಸೇರಿಸತಕ್ಕದ್ದು:

(೧) ಈ ಸಂವಿಧಾನ ಜಾರಿಗೆ ಬಂದ ಎರಡು ವರ್ಷಗಳಲ್ಲಿ ಮತ್ತು ತದನಂತರದ ಮುಗಿಯುವ ಪ್ರತಿ ಐದು ವರ್ಷಗಳಿಗೊಮ್ಮೆ ಅಥವಾ ರಾಷ್ಟ್ರಪತಿಗಳಿಗೆ ಅವಶ್ಯ ತೋರಿದ ಈ ಅವಧಿಯ ಮುಂಚೆಯೇ ತಮ್ಮ ಆಜ್ಞೆಯ ಮೂಲಕ ಒಬ್ಬ ಅಧ್ಯಕ್ಷ ಮತ್ತು ಇತರ ನಾಲ್ಕು ಸದಸ್ಯರುಳ್ಳ ರಾಷ್ಟ್ರಪತಿಗಳಿಂದ ನೇಮಕಗೊಳ್ಳುವ ಹಣಕಾಸು ಆಯೋಗವನ್ನು ನೇಮಿಸತಕ್ಕದ್ದು."

ಮಾನ್ಯರೆ, ಈ ತಿದ್ದುಪಡಿಯ ಸಂಗತಿ ಹೀಗಿದೆ. ಮೂಲತಃ ಈ ವಿಧಿಯಲ್ಲಿ ಆಯೋಗವನ್ನು ಐದು ವರ್ಷಗಳ ಕೊನೆಯಲ್ಲಿ ರಚಿಸಬೇಕೆಂದು ಹೇಳಲಾಗಿತ್ತು. ಇದಕ್ಕೂ ಮುಂಚೆಯೇ ಆಯೋಗವನ್ನು ರಚಿಸಲು ರಾಷ್ಟ್ರಪತಿಗಳಿಗೆ ಅವಕಾಶ ಮಾಡಿಕೊಡಬೇಕೆಂದು ಈಗ ಅನಿಸಿದೆ. ತತ್ಪರಿಣಾಮವಾಗಿ ಅದನ್ನು ಸಂವಿಧಾನ ಆಚರಣೆಯಲ್ಲಿ ಬಂದ ಎರಡು ವರ್ಷಗಳೊಳಗೆ ನೇಮಕ ಮಾಡಲು ಈಗ ಅವಕಾಶ ಮಾಡಿದ್ದೇವೆ.

**ಮಾನ್ಯ ಸಭಾಧ್ಯಕ್ಷರು:** ನೀವು ತಿದ್ದುಪಡಿ ಸಂಖ್ಯೆ ೯೬ನ್ನೂ ಸಹ ಮಂಡಿಸಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನಾನು ಮಂಡಿಸುವುದೇನೆಂದರೆ,

"೨೬೦ನೆಯ ವಿಧಿಯ ಕಲಮು (೩) ಉಪಕಲಮು (ಬಿ)ನಲ್ಲಿ 'ಭಾರತದ ಕಂದಾಯಗಳು' ಎಂಬ ಪದಗಳ ಬದಲಾಗಿ 'ಭಾರತದ ಸಂಚಿತ ನಿಧಿ' ಎಂಬ ಪದಗಳನ್ನು ಸೇರಿಸತಕ್ಕದ್ದು." ಇದು ಒಂದು ಔಪಚಾರಿಕ ಬದಲಾವಣೆಯಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಈ ವಿಧಿಗೆ ತಿದ್ದುಪಡಿಗಳಿದೆ. ಅವನ್ನು ಪುಸ್ತಕದಲ್ಲಿ ಮುದ್ರಿಸಲಾಗಿದೆ.

---

* ಸಿ.ಎ.ಡಿ. ಸಂ. IX, ೬ನೇ ಆಗಸ್ಟ್ ೧೯೪೯, ಪುಟ ೩೦೩.

** ಅದೇ, ಪುಟ ೩೦೨.

**ಪಂಡಿತ್ ಹೃದಯನಾಥ್ ಕುಂಝ್ರು:** ಈ ವಿಧಿ ತೋರಿಸುವುದೇನೆಂದರೆ, ಸಂವಿಧಾನದ ಕರ್ತೃಗಳು ವಿಧಿ ಅಡಿಯಲ್ಲಿ...

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ಇನ್ನೂ ಅಂಗೀಕರಿಸಿಲ್ಲ.

**ಪಂಡಿತ್ ಹೃದಯನಾಥ್ ಕುಂಝ್ರು:** ಆ ಕಾರಣದಿಂದಲೇ ನಾನು ಅದನ್ನು ಪ್ರಸ್ತಾಪಿಸುತ್ತಿದ್ದೇನೆ. ಇಲ್ಲದಿದ್ದರೆ, ಅದನ್ನು ಪ್ರಸ್ತಾಪಿಸುವ ಆವಶ್ಯಕತೆಯೇ ಇರಲಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ಹಿಂತೆಗೆದುಕೊಳ್ಳುವ ಹಕ್ಕು ನನಗಿದೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಅದನ್ನು ಹಿಂತೆಗೆದುಕೊಳ್ಳುವ ಹಕ್ಕು ತಮಗಿದೆ ಎಂದು ಡಾ. ಅಂಬೇಡ್ಕರ್‌ರವರು ಹೇಳುತ್ತಿದ್ದಾರೆ. ಅವರು ಅದನ್ನು ಹಿಂತೆಗೆದುಕೊಳ್ಳುವ ಜಾಣತನ ತೋರುವರೆಂದು ನಾನು ಭಾವಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ, ಅದನ್ನು ಮಾರ್ಪಡಿಸಬಹುದು.

* * *

*****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನನ್ನ ಗೌರವಾನ್ವಿತ ಮಿತ್ರ ಡಾ. ಕುಂಝ್ರುರವರ ತಿದ್ದುಪಡಿಯು ಹಣಕಾಸು ಆಯೋಗದ ಕಾರ್ಯಗಳನ್ನು ವಿವರಿಸುವ ೧೯೦ನೆಯ ವಿಧಿಯ ಕಲಮು (೩)ಕ್ಕೆ ಸಂಬಂಧಿಸಿದುದಾಗಿದೆ ಎಂಬ ಅಂಶ ಈ ಸದನಕ್ಕೆ ತಿಳಿದಿದೆ. ಆದರೆ ಈಗ ಮಂಡಿಸಲಾಗಿರುವ ಅವರ ತಿದ್ದುಪಡಿಯ ಮಹತ್ವವನ್ನು ತಿಳಿದುಕೊಳ್ಳಲು ಈಗಾಗಲೇ ನಾವು ಅಂಗೀಕರಿಸಿರುವ ವಿಧಿ ೨೫೧ ಮತ್ತು ೨೫೩ರನ್ವಯ ಮಾಡಲಾಗಿರುವ ಆದಾಯಗಳ ಹಂಚಿಕೆಯ ಪದ್ಧತಿಯನ್ನು ತಿಳಿದುಕೊಳ್ಳುವುದು ಅವಶ್ಯವೆಂದು ನನಗನಿಸುತ್ತದೆ. ಕರಡು ಸಂವಿಧಾನದಲ್ಲಿ ಆದಾಯ ಕರದ ಹಂಚಿಕೆಯನ್ನು ಕೇಂದ್ರದ ಅಬ್ಕಾರಿ ಸುಂಕದ ಹಂಚಿಕೆಯಿಂದ ಪ್ರತ್ಯೇಕಿಸಲಾಗಿದೆ. ಆದಾಯಕರದ ಹಂಚಿಕೆಯ ವಿಷಯವನ್ನು ನಿರ್ಣಯಿಸಲು ರಾಷ್ಟ್ರಪತಿಗಳಿಗೆ ಬಿಡಲಾಗಿದೆ. ಇದು ೨೫೧ (೧)ನೆಯ ವಿಧಿಯನ್ನು ಕಲಮು (೪) (ಬಿ) (i) ಮತ್ತು (ii)ರೊಂದಿಗೆ ಓದಿದಾಗ ಗೊತ್ತಾಗುತ್ತದೆ. ಅದೇ ಕೇಂದ್ರದ ಅಬ್ಕಾರಿ ಸುಂಕದ ವರಮಾನದ ಹಂಚಿಕೆಯನ್ನು ಸಂಸತ್ತು ಮಾಡಬಹುದಾದ ಕಾನೂನಿಗೆ ಬಿಡಲಾಗಿದೆ. ಈ ವಿಷಯವನ್ನು ೨೫೩ನೆಯ ವಿಧಿಯಲ್ಲಿ ಸ್ಪಷ್ಟಪಡಿಸಲಾಗಿದೆ.

ಈಗ ಮಧ್ಯಾಹ್ನ ಒಂದು ಘಂಟೆಯಾಗಿರುವುದರಿಂದ ನನ್ನ ಭಾಷಣವನ್ನು ನಾಳೆ ಮುಂದುವರೆಸುವೆ.

ನಂತರ ಸಭೆಯನ್ನು ಆಗಸ್ಟ್ ೧೦, ೧೯೪೯ರ ಬೆಳಗ್ಗೆ ೯ ಘಂಟೆಗೆ ಮುಂದೂಡಲಾಯಿತು.

* * *

## ವಿಧಿ ೨೬೦ (ಮುಂದುವರಿದಿದೆ)**

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿಯ ಸಾಮಾನ್ಯ)**:** ಮಾನ್ಯರೆ, ನಿನ್ನೆಯ ಅಧಿವೇಶನ ಮುಗಿಯುವಾಗ ನಾನು ನನ್ನ ಮಿತ್ರ ಪಂಡಿತ್ ಹೃದಯನಾಥ್ ಕುಂಝ್ರುರವರು ತಮ್ಮ

---

* ಸಿ.ಎ.ಡಿ. ಸಂ. IX, ೬ನೇ ಆಗಸ್ಟ್ ೧೯೪೯, ಪುಟ ೨೧೧.

** ಸಿ.ಎ.ಡಿ. ಸಂ. IX, ೧೦ನೇ ಆಗಸ್ಟ್ ೧೯೪೯, ಪುಟ ೩೧೩–೧೫.

ತಿದ್ದುಪಡಿಯ ಪರವಾಗಿ ಪ್ರಸ್ತುತಪಡಿಸಿದ ವಾದವನ್ನು ಪರಿಶೀಲಿಸುತ್ತಿದ್ದೆ. ಈ ಸದನದ ಗೌರವಾನ್ವಿತ ಸದಸ್ಯರು ೨೫೧ (೨) ಮತ್ತು ೨೫೩ನೆಯ ವಿಧಿಗಳಲ್ಲಿ ಮಾಡಲಾದ ವ್ಯವಸ್ಥೆಯನ್ನು ಪಂಡಿತ ಕುಂಝ್ರುರವರು ತಮ್ಮ ತಿದ್ದುಪಡಿಯ ಮೂಲಕ ಏನು ಹೇಳುತ್ತಿರುವುದೆಂಬುದನ್ನು ಅರಿತುಕೊಳ್ಳಲು ಹಿನ್ನೆಲೆಯಾಗಿ ತಿಳಿದುಕೊಳ್ಳಬೇಕೆಂದು ನನ್ನ ಭಾಷಣವನ್ನು ಆರಂಭಿಸಿದ್ದೆ.

ನಾನು ನಿನ್ನೆ ಏನು ಹೇಳಿದ್ದೆ ಎಂಬುದನ್ನು ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ. ವಸ್ತುಸ್ಥಿತಿ ಏನೆಂದರೆ ಆದಾಯ ಕರದಿಂದ ಬರುವ ವರಮಾನದ ಹಂಚಿಕೆಯ ನಿರ್ಣಯವನ್ನು ರಾಷ್ಟ್ರಪತಿಗಳಿಗೆ ಬಿಡಲಾಗಿದ್ದು ಕೇಂದ್ರ ಅಬ್ಕಾರಿ ಸುಂಕದ ಹಂಚಿಕೆಯನ್ನು ಸಂಸತ್ತಿನ ಕಾನೂನಿಗೆ ಬಿಡಲಾಗಿದೆ.

ಮನಸ್ಸಿನಲ್ಲಿರಬೇಕಾದ ಮುಂದಿನ ಅಂಶವೆಂದರೆ, ಹಣಕಾಸು ಆಯೋಗಕ್ಕೆ ಸಂಬಂಧಿಸಿದ ೨೬೦ನೆಯ ವಿಧಿಯಲ್ಲಿ ಹೇಳಲಾದ ಸಂಗತಿಗಳು ೧೬೦ನೆಯ ವಿಧಿಯ ಕಲಮು (೩)ರಲ್ಲಿ ಹಣಕಾಸು ಆಯೋಗವು ಸಂಸತ್ತು ತನ್ನ ಕಾನೂನಿನ ಪ್ರಕಾರ ತೆರಿಗೆಗಳನ್ನು ನಿಗದಿಪಡಿಸುವ ಮತ್ತು ಹಂಚಿಕೆ ಮಾಡುವ ತೆರಿಗೆಗಳನ್ನು ಅಲ್ಲದೆ, ಆದಾಯಕರದ ಗೊತ್ತುಪಡಿಸುವಿಕೆ ಮತ್ತು ಹಂಚುವಿಕೆ ಬಗ್ಗೆ ಕೂಡ ಸಲಹೆ ಮತ್ತು ಶಿಫಾರಸು ಮಾಡಬಹುದೆಂದು ಹೇಳಲಾಗಿದೆ. ಈಗ ನನ್ನ ಮಿತ್ರ ಪಂಡಿತ್ ಕುಂಝ್ರುರವರು ಹೇಳಿದ್ದನ್ನು ನಾನು ಸರಿಯಾಗಿ ತಿಳಿದುಕೊಂಡಿರುವುದಾಗಿದ್ದರೆ, ಅವರು ಆದಾಯ ಕರದ ಸಂಗ್ರಹ, ನಿಗದಿಪಡಿಸುವಿಕೆ ಮತ್ತು ಹಂಚಿಕೆಯನ್ನು ಹಣಕಾಸು ಆಯೋಗದ ಕಾರ್ಯದಿಂದ ತೆಗೆದುಹಾಕಬೇಕೆಂದು ಅವರು ಬಯಸುತ್ತಾರೆ. ರಾಷ್ಟ್ರಪತಿಗಳು ಕೇಂದ್ರ ಅಬ್ಕಾರಿ ಸುಂಕದ ಹಂಚಿಕೆ ಮಾಡುವಾಗ ಹಣಕಾಸು ಆಯೋಗದ ಸಲಹೆಯನ್ನು ಪಡೆಯಬಹುದಾದರೂ ಆದಾಯ ಕರದ ವಿಷಯದಲ್ಲಿ ಅವರು ಹಣಕಾಸು ಆಯೋಗದಿಂದ ಸ್ವತಂತ್ರವಾಗಿರಬೇಕು. ಅದರಲ್ಲಿ ಅವರು ಒತ್ತಾಯಿಸುವ ಏಕೈಕ ಅಂಶವೆಂದರೆ, ಆದಾಯಕರದ ಹಂಚಿಕೆಯ ಮೊದಲನೆ ಹಂತದಲ್ಲಿ ರಾಷ್ಟ್ರಪತಿಗಳು ಹಣಕಾಸು ಆಯೋಗದೊಂದಿಗೆ ಸಮಾಲೋಚಿಸಬಹುದು. ಮತ್ತು ಆಯೋಗದ ಶಿಫಾರಸುಗಳನ್ನು ಪರಿಗಣಿಸುವ ಮುನ್ನ ಅಥವಾ ನಂತರ ಆದಾಯಕರದ ಹಂಚಿಕೆಯಲ್ಲಿ ಮಾಡಬಹುದಾದ ಯಾವುದೇ ಬದಲಾವಣೆಯನ್ನು ಹಣಕಾಸು ಆಯೋಗದಿಂದ ಸ್ವತಂತ್ರವಾಗಿ ಮಾಡಲು ರಾಷ್ಟ್ರಪತಿಗಳಿಗೆ ಬಿಡಬೇಕು. ಅವರು ತಮ್ಮ ತಿದ್ದುಪಡಿಯ ಮುಖಾಂತರ ಏನು ಮಾಡಬಯಸುತ್ತಾರೆಂಬುದನ್ನು ನಾನು ಸರಿಯಾಗಿ ಅರ್ಥೈಸಿದ್ದೇನೆ ಎಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ಈಗಿರುವ ಪ್ರಶ್ನೆ ಅತ್ಯಂತ ಸರಳ ಮತ್ತು ಸಣ್ಣ ಪ್ರಶ್ನೆಯಾಗಿದೆ. ಪ್ರಾಂತ್ಯಗಳು ಮತ್ತು ಕೇಂದ್ರಗಳ ನಡುವೆ ಆದಾಯ ಕರದಲ್ಲಿ ಮಾಡಲಾದ ಹಂಚಿಕೆಯಲ್ಲಿ ಹಣಕಾಸು ಆಯೋಗ ಮಾಡಲಾದದ್ದನ್ನು ಬದಲಾಯಿಸುವುದರಲ್ಲಿ ಮತ್ತು ಆದಾಯ ಕರದ ವರಮಾನದಲ್ಲಿ ವಿವಿಧ ಪ್ರಾಂತ್ಯಗಳ ನಡುವೆ ಹಂಚಲು ತೆಗೆದಿಟ್ಟಿರುವ ವರಮಾನದಲ್ಲಿ ರಾಷ್ಟ್ರಪತಿಗಳು ಹಣಕಾಸು ಆಯೋಗದಿಂದ ಸಂಪೂರ್ಣ ಸ್ವತಂತ್ರರಾಗಬೇಕೆ? ನಾನು ಮಂಡಿಸಿರುವ ಕರಡು ತಿದ್ದುಪಡಿಯಲ್ಲಿ ಆದಾಯಕರದ ಹಂಚಿಕೆಯಲ್ಲಿ ರಾಷ್ಟ್ರಪತಿಗಳು ಏನಾದರೂ ಬದಲಾವಣೆ ಮಾಡಬಯಸಿದರೆ, ಅವರು ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಪರಿಗಣಿಸತಕ್ಕದ್ದು ಎಂದು ಹೇಳಲಾಗಿದೆ. ನಾನು ಅವರ ಅಭಿಪ್ರಾಯವನ್ನು ಮಾನ್ಯ ಮಾಡುತ್ತೇನೆ. ಅದೇನೆಂದರೆ, ಇದನ್ನು ಹಣಕಾಸು ಆಯೋಗದ ಶಿಫಾರಸ್ಸಿನ ಪ್ರಕಾರ ಮಾಡಲು ಅವಕಾಶ ಕೊಟ್ಟರೆ ರಾಷ್ಟ್ರಪತಿಗಳು ಹಣಕಾಸು ಆಯೋಗದ ಶಿಫಾರಸ್ಸುಗಳಿಗೆ ತಲೆಬಾಗಬೇಕಾಗುತ್ತದೆ. ಅಥವಾ ಪ್ರಾಂತ್ಯಗಳು ಮಾಡಬಹುದಾದ ತಗಾದೆಗೆ ಮಣಿಯಬೇಕಾಗುತ್ತದೆ. ತತ್ಪರಿಣಾಮವಾಗಿ ಅವರು ಕೇಂದ್ರದ ಹಣಕಾಸು ಸ್ಥಿತಿಗೆ ಧಕ್ಕೆಯುಂಟುಮಾಡುವಂತಹ ಒತ್ತಾಯ ಕ್ಕೊಳಪಡಬಹುದು. ಹಣಕಾಸಿಗೆ ಸಂಬಂಧಿಸಿದಂತೆ ಕೇಂದ್ರವು ಸಾಧ್ಯವಾದಷ್ಟು ಸ್ವತಂತ್ರವಾಗಿರಬೇಕೆಂಬ

ಅವರ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ನಾವು ಸಂವಿಧಾನದಲ್ಲಿ ಕೇಂದ್ರ ಸರ್ಕಾರದ ರಾಜಕೀಯ ಇಲ್ಲವೆ ಆರ್ಥಿಕ ಅಸ್ತಿತ್ವಕ್ಕೆ ಧಕ್ಕೆಯುಂಟುಮಾಡುವಂತಹದೇನನ್ನೂ ಮಾಡಬಾರದು. ಆದರೆ ಇದರ ಇನ್ನೊಂದು ಮುಖವೂ ಇದೆ. ಅದೇನೆಂದರೆ, ಎಲ್ಲಾ ಪ್ರಾಂತ್ಯಗಳೂ ಒಟ್ಟಾಗಿ ರಾಷ್ಟ್ರಪತಿಗಳ ಮೇಲೆ ತಮ್ಮ ತಮ್ಮ ಪ್ರಾಂತ್ಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಂಚಿಕೆ ಮಾಡಬೇಕೆಂದು ಒತ್ತಾಯ ತಂದರೆ ರಾಷ್ಟ್ರಪತಿಗಳು ಪ್ರಾಂತ್ಯಗಳ ಒತ್ತಾಯದೆದುರು ನಿಸ್ಸಹಾಯಕರಾಗುವುದಿಲ್ಲವೇ? ಇದು ಯಾರಾದರೂ ಊಹಿಸಬಹುದಾದ ಸಂಗತಿ. ಅದೇ ಇನ್ನೊಂದೆಡೆ, ಕೇಂದ್ರವು ಪ್ರಾಂತ್ಯಗಳಿಗೆ ಆದಾಯಕರದ ಆದಾಯದಲ್ಲಿ ಹೆಚ್ಚು ಮೊತ್ತವನ್ನು ಕೊಡಕೂಡದೆಂದು ಶಿಫಾರಸು ಮಾಡುವ ಆಯೋಗದ ವರದಿ ಇದ್ದಿದ್ದರೆ, ಅದು ನನ್ನ ಅಭಿಪ್ರಾಯದಲ್ಲಿ ಪ್ರಾಂತ್ಯಗಳ ತಗಾದೆಗೆ ಮಣಿಯದಂತೆ ರಾಷ್ಟ್ರಪತಿಗಳ ಕೈಗಳನ್ನು ಬಲಪಡಿಸುತ್ತದೆ. ಈಗ ನಮಗೆಲ್ಲರಿಗೂ ಸುಪರಿಚಿತವಾಗಿರುವ ಭಾರತ ಸರ್ಕಾರ ಕಾಯ್ದೆಯ ಭಾಷೆಯನ್ನು ಉಪಯೋಗಿಸಿ ಹೇಳುವುದಾದರೆ, ಈಗಿರುವ ನಮ್ಮ ಕರಡು ವಿಧಿಯ ಮತ್ತು ಪಂಡಿತ್ ಕುಂಝ್ರುರವರು ಸೂಚಿಸಿರುವ ತಿದ್ದುಪಡಿಯ ನಡುವೆ ಇರುವ ವ್ಯತ್ಯಾಸವೆಂದರೆ ರಾಷ್ಟ್ರಪತಿಗಳು ತಮ್ಮ ವಿವೇಚನೆಯಿಂದ ನಡೆಸಿಕೊಳ್ಳಲು ಸ್ವತಂತ್ರರಾಗಿರಬೇಕು. ಆದರೆ ನಾನು ಸೂಚಿಸಿರುವ ಕರಡಿನಲ್ಲಿ ಅವರು ತಮ್ಮ ವೈಯಕ್ತಿಕ ತೀರ್ಮಾನದಂತೆ ನಡೆದುಕೊಳ್ಳಬೇಕು. ಹಾಗೆಂದರೆ,

**ಪಂಡಿತ್ ಹೃದಯನಾಥ್ ಕುಂಝ್ರು** (ಸಂಯುಕ್ತ ಪ್ರಾಂತ್ಯಗಳು, ಸಾಮಾನ್ಯ): ನಾನು ನನ್ನ ವಿಚಾರವನ್ನು ಸ್ಪಷ್ಟಪಡಿಸಲು ಗೌರವಾನ್ವಿತ ಸದಸ್ಯರು (ಡಾ. ಅಂಬೇಡ್ಕರ್) ಅವಕಾಶ ಕೊಡುವರೇ? ಏಕೆಂದರೆ ನಾನು ಏನು ಹೇಳಿರುವೆ ಎಂಬುದನ್ನು ಅವರು ಸರಿಯಾಗಿ ತಿಳಿದುಕೊಂಡಿಲ್ಲವೆಂದು ತೋರುತ್ತದೆ. ನಾನು ಹೇಳಿದ್ದೇನು ಎಂಬುದನ್ನು ಒಂದೆರಡು ವಾಕ್ಯಗಳಲ್ಲಿ ಸ್ಪಷ್ಟಪಡಿಸಬಹುದೇ? ೨೬೦ನೆಯ ವಿಧಿಯ ಕಲಮು (೩)ರನ್ವಯ ರಾಷ್ಟ್ರಪತಿಗಳು ತಮಗೆ ಸರಿಕಂಡ ಯಾವುದೇ ವಿಷಯವನ್ನು ಹಣಕಾಸು ಆಯೋಗದ ಅಭಿಪ್ರಾಯಕ್ಕೆ ಕಳುಹಿಸಿಕೊಡಬಹುದು. ಆದ್ದರಿಂದ ರಾಷ್ಟ್ರಪತಿಗಳು ತಮಗೆ ಅವಶ್ಯವೆನಿಸಿದ ಯಾವುದೇ ವಿಷಯದಲ್ಲಿ ಆಯೋಗದ ಅಭಿಪ್ರಾಯ ಪಡೆಯುವ ಅವಕಾಶದಿಂದ ನಿಷೇಧಿಸಲು ನಾನು ಇಷ್ಟಪಡುವುದಿಲ್ಲ. ನಾನು ವಿರೋಧಿಸುತ್ತಿರುವ ಸಂಗತಿ ಎಂದರೆ ಹಣಕಾಸು ಆಯೋಗವು ರಾಷ್ಟ್ರಪತಿಗಳ ಕೋರಿಕೆ ಇಲ್ಲದೆ, ಕೇಂದ್ರ ಮತ್ತು ಪ್ರಾಂತ್ಯಗಳ ನಡುವೆ ಆದಾಯಕರದಿಂದ ಬರುವ ನಿವ್ವಳ ವರಮಾನವು ಈಗಿರುವಂತಿರದೆ ತಾನು ಶಿಫಾರಸ್ಸು ಮಾಡುವ ಶೇಕಡಾವಾರು ಮೊತ್ತವನ್ನು ನಿಗದಿಪಡಿಸುವುದು. ನಿನ್ನೆಯ ದಿನ ನಾನು ಹೇಳಿದಷ್ಟೇ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದರಿಂದ ಪರಿಸ್ಥಿತಿ ಇನ್ನು ಹೆಚ್ಚು ಕ್ಲಿಷ್ಟವಾಗುತ್ತದೆ. ಏಕೆಂದರೆ, ರಾಷ್ಟ್ರಪತಿಗಳು ಯಾವುದೇ ನಿರ್ದಿಷ್ಟ ಅಂಶದಲ್ಲಿ ಹಣಕಾಸು ಆಯೋಗದ ಶಿಫಾರಸ್ಸಿಗೆ ಕಳುಹಿಸಿ ಕೊಟ್ಟಿಲ್ಲದಿರುವಾಗ ಮತ್ತು ವಿಚಾರಣೆಯ ನಿರ್ಬಂಧಗಳಲ್ಲಿರುವ ವಿಷಯದಲ್ಲಿಲ್ಲದಿರುವಾಗ ಆಯೋಗವು ಶಿಫಾರಸ್ಸು ಮಾಡುವುದಾದರೂ ಹೇಗೆ ಎಂಬುದು ನನಗೆ ತಿಳಿಯುತ್ತಿಲ್ಲ.

**ಪಂಡಿತ್ ಹೃದಯನಾಥ್ ಕುಂಝ್ರು:** ೨೬೦ನೆಯ ವಿಧಿಯ ಕಲಮು (೩)ರ ಉಪಕಲಮು (ಎ) ಪ್ರಕಾರ ಆಯೋಗವು ಆ ವಿಷಯದಲ್ಲಿ ತನ್ನ ಉಪಕ್ರಮದಿಂದ ಶಿಫಾರಸ್ಸು ಮಾಡಬಹುದು. ಇದರ ಅರ್ಥವನ್ನು ತಿಳಿದುಕೊಳ್ಳಲು ನನ್ನ ಮಿತ್ರ ಆ ಉಪಕಲಮನ್ನು ಓದಲಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** "ಸುಭದ್ರ ಹಣಕಾಸಿನ ದೃಷ್ಟಿಯಿಂದ ರಾಷ್ಟ್ರಪತಿಗಳು ಆಯೋಗಕ್ಕೆ ಕಳುಹಿಸಿಕೊಡುವ ಯಾವುದೇ ವಿಷಯದಲ್ಲಿ."

**ಪಂಡಿತ್ ಹೃದಯನಾಥ್ ಕುಂಝ್ರು:** ಅದು (ಡಿ) ಉಪಕಲಮು. ನಾವು ಈಗ ಚರ್ಚಿಸುತ್ತಿರುವ ವಿಧೇಯಕವನ್ನು ಗೌರವಾನ್ವಿತ ಸದಸ್ಯರು ನೋಡುವರೇ, ಅದರಲ್ಲಿಯೂ ನಾನು ನಿನ್ನೆ ಪರಿಶೀಲಿಸಿದ ಕಲಮನ್ನು ನೋಡುವರೇ? ೨೬೦ನೇ ವಿಧಿಯ ಕಲಮು (೩)ರ ಉಪಕಲಮು (ಎ)ನಲ್ಲಿ ಹೇಳಿರುವುದೇನೆಂದರೆ ಒಕ್ಕೂಟ ಮತ್ತು ರಾಜ್ಯಗಳ ನಡುವೆ ಇರುವ ಅಥವಾ ಇರಬಹುದಾದ ತೆರಿಗೆಗಳಿಂದ ಬರುವ ನಿವ್ವಳ ವರಮಾನವನ್ನು ಅವುಗಳ ನಡುವೆ ಹಂಚಿಕೊಡುವುದರ ಬಗ್ಗೆ ರಾಷ್ಟ್ರಪತಿಗಳಿಗೆ ಶಿಫಾರಸು ಮಾಡುವುದು ಆಯೋಗದ ಕರ್ತವ್ಯ...

ನಾನು ಆಕ್ಷೇಪಿಸುತ್ತಿರುವುದು ಇದನ್ನೇ. ಕಲಮು (೩)ರ ಉಪಕಲಮು (ಡಿ)ನಲ್ಲಿರುವ ತಾವು ಬಯಸಿದ ಯಾವುದೇ ಇತರ ವಿಷಯದಲ್ಲಿ ರಾಷ್ಟ್ರಪತಿಗಳು ಹಣಕಾಸು ಆಯೋಗಕ್ಕೆ ಕಳುಹಿಸಿಕೊಡುವ ಅಧಿಕಾರದಲ್ಲಿ ನನ್ನ ತಿದ್ದುಪಡಿಯಿಂದ ಯಾವುದೇ ವ್ಯತ್ಯಯ ಉಂಟಾಗುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ನನಗೆ ಗೊತ್ತಿಲ್ಲ. ಆದಾಯ ಕರದಿಂದ ಮಾಡುವ ಹಂಚಿಕೆಯನ್ನು ರಾಷ್ಟ್ರಪತಿಗಳ ಸಂಪೂರ್ಣ ವಿವೇಚನೆಗೆ ಬಿಡಬೇಕೇ ಇಲ್ಲವೇ ಆಯೋಗದ ಶಿಫಾರಸ್ಸಿನಂತೆ ನಡೆದುಕೊಳ್ಳಬೇಕೇ ಎಂಬ ವಿಷಯ ಸ್ಪಷ್ಟವಿದೆ. ನನಗೆ ತಿಳಿದ ಮಟ್ಟಿಗೆ ರಾಷ್ಟ್ರಪತಿಗಳು ತಮ್ಮ ನಿರ್ಣಯಕ್ಕೆ ಆಯೋಗದ ಶಿಫಾರಸ್ಸಿನ ಬಲದಿಂದ ಸಮರ್ಥಿಸಿಕೊಳ್ಳಲು ಅವಕಾಶವಿದ್ದರೆ ಅದು ಅವರ ಕೈಗಳನ್ನು ಬಲಪಡಿಸುತ್ತದೆ. ಅದು ರಾಷ್ಟ್ರಪತಿಗಳು ಮತ್ತು ಆದಾಯಕರದಿಂದ ಹೆಚ್ಚು ಆದಾಯಕ್ಕಾಗಿ ಒತ್ತಾಯಿಸುತ್ತಿರುವ ಪ್ರಾಂತ್ಯಗಳ ನಡುವೆ ಎರಡು ವೇಗತಡೆ ತಡೆಯೋಪಾದಿಯಲ್ಲಿರುತ್ತದೆ. ಆದ್ದರಿಂದ ನನ್ನ ಮಿತ್ರ ಶ್ರೀ ಕುಂಝ್ರುರವರು ಮಂಡಿಸಿರುವ ತಿದ್ದುಪಡಿಯ್ನು ಒಪ್ಪಿಕೊಳ್ಳುವುದಕ್ಕೆ ಯಾವ ಕಾರಣವೂ ಇಲ್ಲ ಎಂದು ನನಗನಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಈಗ ನಾನು ಎರಡು ತಿದ್ದುಪಡಿಗಳನ್ನು ಮತಕ್ಕೆ ಹಾಕಬೇಕಾಗಿದೆ. ಮೊದಲನೆಯದಾಗಿ ಡಾ. ಅಂಬೇಡ್ಕರ್‌ರವರು ಮಂಡಿಸಿರುವ ತಿದ್ದುಪಡಿ ಸಂಖ್ಯೆ ೯೫.

[**೨೬೦ನೆಯ ವಿಧಿಗೆ ಡಾ. ಅಂಬೇಡ್ಕರ್‌ರವರು ಸೂಚಿಸಿರುವ ತಿದ್ದುಪಡಿ ಸ್ವೀಕೃತವಾಯಿತು. ೨೬೦ನೆಯ ವಿಧಿಯನ್ನು ತಿದ್ದುಪಡಿಯೊಂದಿಗೆ ಸಂವಿಧಾನದಲ್ಲಿ ಸೇರಿಸಲಾಯಿತು.**]

* * *

## ವಿಧಿ ೨೬೧*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುವುದೇನೆಂದರೆ,

"೨೬೧ನೆಯ ವಿಧಿಯಲ್ಲಿ ಸಂಸತ್ತು ಎಂಬ ಪದದ ಬದಲಾಗಿ ಸಂಸತ್ತಿನ ಪ್ರತಿಯೊಂದು ಸದನ" ಎಂದು ಸೇರಿಸತಕ್ಕದ್ದು.

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಸಭಾಧ್ಯಕ್ಷರೆ ಈ ವಿಧಿಗೆ ಸೂಚಿಸಲಾಗಿರುವ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದಿರುವುದಕ್ಕೆ ವಿಷಾದಿಸುತ್ತೇನೆ. ಈ ತಿದ್ದುಪಡಿಗಳು ೨೬೧ನೆಯ

---

* ಸಿ.ಎ.ಡಿ. ಸಂ. IX, ೧೦ನೇ ಆಗಸ್ಟ್ ೧೯೪೯, ಪುಟ ೩೧೫.

** ಅದೇ, ಪುಟ ೩೨೮–೨೯.

ವಿಧಿಯ ತಿಳುವಳಿಕೆಯಿಂದ ಸೂಚಿತವಾಗಿವೆ ಎಂದು ನನಗನಿಸುತ್ತದೆ, ಮತ್ತು ಇಂತಹ ಯಾವ ತಿದ್ದುಪಡಿಯ ಆವಶ್ಯಕತೆಯೂ ಇರುವುದಿಲ್ಲ. ೨೬೧ನೆಯ ವಿಧಿಯ ಸರಿಯಾದ ಅರ್ಥವನ್ನು ತಿಳಿದುಕೊಳ್ಳಲು ನೀವು ಆದಾಯಕರದ ಹಂಚುವಿಕೆ ಮತ್ತು ಕೇಂದ್ರದಿಂದ ಸಂಗ್ರಹಿಸಲಾದ ಅಬ್ಕಾರಿ ಕರಗಳ ಹಂಚುವಿಕೆ ಮತ್ತು ಕೇಂದ್ರದಿಂದ ಸಂಗ್ರಹಿಸಲಾದ ಅಬ್ಕಾರಿ ಕರಗಳ ಹಂಚುವಿಕೆಗೆ ಸಂಬಂಧಿಸಿದ ಹಿಂದಿನ ವಿಧಿಗಳನ್ನು ನೋಡಬೇಕಾಗುತ್ತದೆ. ಆದಾಯಕರದ ವಿತರಣೆಯ ಬಗ್ಗೆ ನಾವು ಇದುವರೆಗೆ ಅಂಗೀಕರಿಸಿದ ವಿಧಿಯಲ್ಲಿ ರಾಷ್ಟ್ರಪತಿಗಳು ಹಣಕಾಸು ಆಯೋಗದ ಶಿಫಾರಸ್ಸಿನಂತೆ ನಡೆದುಕೊಳ್ಳತಕ್ಕದ್ದು ಎಂಬುದು ಸ್ಪಷ್ಟವಿದೆ. ಸ್ಥಿತಿ ಹೀಗಿರುವಾಗ ಒಂದು ತಿದ್ದುಪಡಿಯ ಮೂಲಕ ಈ ವಿಷಯವನ್ನು ಸಂಸತ್ತಿಗೆ ಬಿಡಬೇಕು ಎಂದು ಈಗ ಹೇಳುವುದು ಸಾಧ್ಯವಿಲ್ಲ. ನಾನು ಹೇಳುವುದಿಷ್ಟೇ. ಇದು ಈಗ ಮುಗಿದುಹೋಗಿರುವ ವಿಷಯ. ಈ ಆದಾಯಕರದ ವಿತರಣೆಯನ್ನು ಆರಂಭದಲ್ಲಾಗಲೀ ಇಲ್ಲವೇ ನಂತರದಲ್ಲಾಗಲೀ ರಾಷ್ಟ್ರಪತಿಗಳಿಗೆ ಬಿಡಬೇಕೆಂದು ಹೇಳುವ ಒಂದು ವಿಧಿಯನ್ನು ಈಗಾಗಲೇ ನಾವು ಪಾಸು ಮಾಡಿದ್ದೇವೆ.

ಇನ್ನು ೨೬೧ನೆಯ ವಿಧಿಯಲ್ಲಿ ಅಳವಡಿಸಲಾದ ಇನ್ನೊಂದು ವಿಷಯವೆಂದರೆ ಕೇಂದ್ರದಿಂದ ಹಾಕಲಾದ ಅಬ್ಕಾರಿ ಸುಂಕಗಳ ಆದಾಯದ ವಿತರಣೆಗೆ ಸಂಬಂಧಿಸಿದ್ದಾಗಿದೆ. ಈ ವಿಷಯವು ಸಂಸತ್ತಿನಿಂದ ಪಾಸಾದ ಕಾನೂನಿಗೊಳಪಡುತ್ತದೆ ಎಂದು ಈ ವಿಧಿಯಲ್ಲಿ ಸ್ಪಷ್ಟಪಡಿಸಲಾಗಿದೆ. ರಾಷ್ಟ್ರಪತಿಗಳು ಅದನ್ನು ಸ್ವತಃ ತಾವೇ ಮಾಡಲಾರರು. ಆದ್ದರಿಂದ 'ತೆಗೆದುಕೊಳ್ಳಲಾದ ಕ್ರಮದ ಬಗ್ಗೆ ಸಂಸತ್ತಿನಲ್ಲಿ ಒಂದು ಜ್ಞಾಪಕ ಪತ್ರವನ್ನು ಮಂಡಿಸತಕ್ಕದ್ದು' ಎಂಬ ಪದಗಳ ಅರ್ಥವೆಂದರೆ ರಾಷ್ಟ್ರಪತಿಗಳ ಅಬ್ಕಾರಿ ಸುಂಕದ ಆದಾಯದ ಕ್ರಮಪಡಿಸುವಿಕೆ ಮತ್ತು ಮಂಜೂರಾತಿ ಹಾಗೂ ವಿತರಣೆಯನ್ನು ಮಾಡುವ ಸಂಬಂಧದಲ್ಲಿ ಸಂಸತ್ತಿನ ಒಂದು ಮಸೂದೆಯನ್ನು ಮಂಡಿಸುವ ವ್ಯವಸ್ಥೆ ಮಾಡಬೇಕು. ತತ್ಪರಿಣಾಮವಾಗಿ ನನ್ನ ಮಿತ್ರ ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾರವರು ನಾವು ಅಂಗೀಕರಿಸಿರುವ ಇತರ ವಿಧಿಗಳೊಂದಿಗೆ ೨೬೧ನೆಯ ವಿಧಿಯನ್ನು ಓದಿದರೆ ಅಬ್ಕಾರಿ ಸುಂಕಗಳ ವಿತರಣೆಗೆ ಸಂಬಂಧಿಸಿದಂತೆ ಅವರು ತಮ್ಮ ತಿದ್ದುಪಡಿಯ ಮೂಲಕ ತರಬಯಸಿದ ಪರಿಣಾಮ ಅದೇ ಆಗಿರುತ್ತದೆ. ಆದ್ದರಿಂದ ಅವರ ತಿದ್ದುಪಡಿಯ ಅವಶ್ಯಕತೆ ಇಲ್ಲವೆಂದು ನನಗನಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಈಗ ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

**[ಡಾ. ಅಂಬೇಡ್ಕರ್‌ರವರ ತಿದ್ದುಪಡಿಯನ್ನು ತಿದ್ದುಪಡಿಗೊಂಡ ೨೬೧ನೆಯ ವಿಧಿ ಅಂಗೀಕೃತವಾಗಿ ಸಂವಿಧಾನಕ್ಕೆ ಸೇರಿಸಲಾಗಿತ್ತು.]**

* * *

## ವಿಧಿ ೨೬೩*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನಾನು ಮಂಡಿಸುವುದೇನೆಂದರೆ,

"೨೬೩ನೆಯ ವಿಧಿಗೆ ಬದಲಾಗಿ ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು."

---

* ಸಿ.ಎ.ಡಿ. ಸಂ. IX, ೧೦ನೇ ಆಗಸ್ಟ್ ೧೯೪೯, ಪುಟ ೩೩೦.

## ಸಂಚಿತ ನಿರ್ವಹಣೆಯ ನಿಧಿ
## ಅದಕ್ಕೆ ನೀಡುವ ಹಣಗಳು ಅದರಿಂದ ಪಡೆಯುವ ಹಣಗಳು

೨೬೩ (೧) ಭಾರತ ಸಂಚಿತ ನಿಧಿಯ ನಿರ್ವಹಣೆ ಆ ನಿಧಿಗೆ ಜಮಾ ಮಾಡಲಾಗುವ ಹಣಕಾಸುಗಳು, ಅದರಿಂದ ತೆಗೆದುಕೊಳ್ಳುವ ಹಣಗಳು ಮತ್ತು ಮೇಲೆ ಹೇಳಿದ ವಿಷಯಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಸಂಸತ್ತು ಪಾಸು ಮಾಡಿದ ಕಾನೂನು ಕ್ರಮಪಡಿಸುತ್ತದೆ. ಮತ್ತು ಈ ಬಗ್ಗೆ ಸಂಸತ್ತು ಕಾನೂನು ಮಾಡುವವರೆಗೆ ರಾಷ್ಟ್ರಪತಿಗಳು ಮಾಡುವ ನಿಯಮಗಳಿಗೆ ಒಳಪಡುತ್ತದೆ. (೨) ಒಂದು ರಾಜ್ಯದ ಸಂಚಿತ ನಿಧಿಯ ನಿರ್ವಹಣೆ ಅದಕ್ಕೆ ಕೊಡಲಾದ ಹಣಕಾಸು ಮತ್ತು ಅದರಿಂದ ತೆಗೆದುಕೊಳ್ಳುವ ಹಣಗಳು ಮತ್ತು ಈ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟ ವಿಷಯಗಳು ರಾಜ್ಯದ ಶಾಸನ ಸಭೆಯು ಮಾಡಿದ ಕಾನೂನಿಗೊಳಪಟ್ಟಿರುತ್ತವೆ. ಮತ್ತು ರಾಜ್ಯದ ಶಾಸನಸಭೆಯು ಈ ವಿಷಯದ ಬಗ್ಗೆ ಕಾನೂನು ಮಾಡುವವರೆಗೂ ಅವು ರಾಜ್ಯದ ರಾಜ್ಯಪಾಲರು ಮಾಡುವ ನಿಯಮಗಳಿಗೊಳಪಟ್ಟಿರುತ್ತವೆ.

ಈ ವಿಷಯದಲ್ಲಿ ಯಾವ ವಿವರಣೆಯ ಅವಶ್ಯವಿಲ್ಲವೆಂದು ನನಗನಿಸುತ್ತದೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸುವುದೇನೆಂದರೆ,

ಈಗ ತಾನೇ ಡಾ. ಅಂಬೇಡ್ಕರ್‌ರವರು ಮಂಡಿಸಿದ ತಿದ್ದುಪಡಿಯಲ್ಲಿ 'ಸಂಚಿತ ನಿಧಿ' ಎಂಬ ಪದಗಳು ಎಲ್ಲೆಲ್ಲಿ ಬರುತ್ತವೆಯೋ ಅವುಗಳ ನಂತರ ಮತ್ತು ಸಾದಿಲ್ವಾರು ನಿಧಿ ಎಂಬ ಪದಗಳನ್ನು ಸೇರಿಸತಕ್ಕದ್ದು. ಮತ್ತು ಅಂತಹ ನಿಧಿ ಎಂಬ ಪದಗಳು ಎಲ್ಲೆಲ್ಲಿ ಬರುತ್ತವೆಯೋ ಅಲ್ಲಲ್ಲಿ 'ಅಂತಹ ನಿಧಿಗಳು'ಎಂಬ ಪದಗಳನ್ನು ಸೇರಿಸತಕ್ಕದ್ದು.

ಈ ಸದನವು ಈಗಾಗಲೇ ಸಂಚಿತ ನಿಧಿಯ ಸ್ಥಾಪನೆಗೆ ಒಪ್ಪಿಗೆ ನೀಡಿದೆ. ಆದ್ದರಿಂದ ಅದಕ್ಕೆ ನೀಡಲಾಗುವ ಹಣಕಾಸಿನ ವಿಧಾನ ಮತ್ತು ಅದರಿಂದ ಹಣ ತೆಗೆದುಕೊಳ್ಳುವ ವಿಧಾನವನ್ನು ಹೇಳಲೇಬೇಕಾಗುತ್ತದೆ. ಇದೊಂದು ಔಪಚಾರಿಕ ತಿದ್ದುಪಡಿ ಮಾತ್ರ. ಸದನವು ಇದಕ್ಕೆ ಒಪ್ಪಿಗೆ ನೀಡುವುದೆಂದು ನಾನು ನಂಬುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್‌ರವರು ಪಂಡಿತ್ ಕುಂಝ್ರುರವರ ತಿದ್ದುಪಡಿಯನ್ನು ಒಪ್ಪಿಕೊಳ್ಳುವರೆಂದು ನಾನು ಭಾವಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ತಿದ್ದುಪಡಿಗೆ ನನ್ನ ಒಪ್ಪಿಗೆ ಇದೆ.

**ತಿದ್ದುಪಡಿಯೊಂದಿಗೆ ೨೬೩ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

* * *

## ವಿಧಿ ೨೬೭*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಮಂಡಿಸುವುದೇನೆಂದರೆ,

೨೬೭ನೆಯ ವಿಧಿಯಲ್ಲಿ–

---

* ಸಿ.ಎ.ಡಿ. ಸಂ. IX, ೧ನೇ ಆಗಸ್ಟ್ ೧೯೪೯, ಪುಟ ೩೩೦–೩೪.

(i) ಭಾರತದ ಪ್ರಭುತ್ವ ಎಂಬ ಪದಗಳ ನಂತರ 'ಒಕ್ಕೂಟದ ಅಥವಾ ರಾಜ್ಯದ ವಿಷಯಗಳ ಸಂಬಂಧ' ಆರಂಭದ ನಂತರ ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) 'ಭಾರತದ ಕಂದಾಯಗಳು' ಎಂಬ ಪದಗಳು ಎಲ್ಲೆಲ್ಲಿ ಇರುತ್ತದೆಯೋ ಅಲ್ಲಿ ಅವುಗಳ ಬದಲು 'ಭಾರತದ ಸಂಚಿತ ನಿಧಿ' ಎಂಬ ಪದಗಳನ್ನು ಸೇರಿಸತಕ್ಕದ್ದು.

(iii) 'ರಾಜ್ಯದ ಕಂದಾಯಗಳು' ಎಂಬ ಪದಗಳು ಎಲ್ಲೆಲ್ಲಿ ಬರುತ್ತವೆಯೋ ಅಲ್ಲಿ ಅವುಗಳ ಬದಲು 'ರಾಜ್ಯದ ಸಂಚಿತ ನಿಧಿ' ಎಂದು ಸೇರಿಸತಕ್ಕದ್ದು.

(iv) ಮೊದಲನೆಯ ಅನುಸೂಚಿಯ ಭಾಗ Iರಲ್ಲಿ 'ಸದ್ಯದಲ್ಲಿ ಹೇಳಲಾದ' ಎಂಬ ಪದಗಳು ಮತ್ತು ಸಂಖ್ಯೆಗಳನ್ನು ಕೈಬಿಡತಕ್ಕದ್ದು. ಮತ್ತು

(v) 'ರಾಜ್ಯದ ಕಂದಾಯಗಳು' ಎಂಬ ಪದಗಳ ಬದಲು 'ರಾಜ್ಯದ ಸಂಚಿತ ನಿಧಿ' ಎಂದು ಸೇರಿಸತಕ್ಕದ್ದು. ಇದು ಅನುಗಾಮಿ ಬದಲಾವಣೆ ಮಾತ್ರವಾಗಿದೆ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಇನ್ನು ಯಾವ ತಿದ್ದುಪಡಿಗಳನ್ನು ಸ್ವೀಕರಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುವೆ.

ಡಾ. ಅಂಬೇಡ್ಕರ್‌ರವರ ತಿದ್ದುಪಡಿ ಸ್ವೀಕೃತವಾಯಿತು. ಪ್ರೊಫೆಸರ್ ಎಸ್.ಎಲ್. ಸಕ್ಸೇನಾ, ಹೆಚ್. ವಿ. ಕಾಮತ್ ಮತ್ತು ಡಾ. ಪಿ. ಎಸ್. ದೇಶ್‌ಮುಖ್ ಅವರು ಮಂಡಿಸಿದ ಇತರ ಎಲ್ಲಾ ತಿದ್ದುಪಡಿಗಳು ತಿರಸ್ಕೃತವಾದವು.

**ತಿದ್ದುಪಡಿಗೊಂಡ ೨೬೭ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

## ವಿಧಿ ೨೬೮*

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನನ್ನ ಮಿತ್ರ ಪ್ರೊಫೆಸರ್ ಕೆ.ಟಿ. ಶಹಾರವರು ಸೂಚಿಸಿದಂತೆ ಸಾಲಗಳನ್ನು ಮಂಜೂರು ಮಾಡುವ ಸಂಸತ್ತಿನ ಅಧಿಕಾರದ ಮೇಲೆ ಮಿತಿ ಹಾಕಬೇಕೆಂಬ ಸಲಹೆಯೊಂದನ್ನು ಬಿಟ್ಟರೆ ೨೬೮ನೆಯ ವಿಧಿಯ ಅನುಬಂಧಗಳ ಬಗ್ಗೆ ಇತರ ಭಾಷಣಕಾರರು ವ್ಯಕ್ತಪಡಿಸಿದ ಭಿನ್ನಾಭಿಪ್ರಾಯಗಳನ್ನು ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ. ಸಾಲ ಪಡೆಯುವುದಕ್ಕಾಗಿ ದೇಶದ ವಿಶ್ವಾಸವನ್ನು ಒತ್ತೆ ಇಡುವುದು ಕಾರ್ಯಾಂಗಕ್ಕೆ ಮಾತ್ರ ಸೇರಿದ ವಿಷಯ. ಇದು ಪ್ರಕರಣದ ಒಂದು ಮುಖ. ಆದರೆ ಈ ವಿಧಿಯಲ್ಲಿ ಸಾಲ ಪಡೆಯುವ ಕಾರ್ಯಾಂಗದ ಅಧಿಕಾರದ ಮೇಲೆ ಸಂಸತ್ತು ಮಾಡಲಿರುವ ಯಾವುದೇ ಕಾನೂನಿಂದ ಬಂಧಿತವಾಗಿಲ್ಲವೆಂದು ಈ ವಿಧಿಯಲ್ಲಿ ಹೇಳಲಾಗಿಲ್ಲ. ಸಾಲ ಮಾಡುವ ಕಾರ್ಯಾಂಗದ ಅಧಿಕಾರವು ಸಂಸತ್ತು ತನ್ನ ಕಾನೂನಿನ ಮೂಲಕ ಹೇರುವ ಮಿತಿಗಳಿಗೊಳಪಡುತ್ತದೆ ಎಂದು ಈ ವಿಧಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅಂತಹ ಯಾವುದೇ ಕಾನೂನನ್ನು ಸಂಸತ್ತು ಮಾಡದೇ ಹೋದರೆ ಅದು ಅದರ ತಪ್ಪು. ಮತ್ತು ಭವಿಷ್ಯದಲ್ಲಿ ಸಂಸತ್ತು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುವ

---

* ಸಿ.ಎ.ಡಿ. ಸಂ. IX, ೧೦ನೇ ಆಗಸ್ಟ್ ೧೯೪೯, ಪುಟ ೩೯–೪೦.

ಅಗತ್ಯ ಕಾನೂನು ಮಾಡದಿರಬಹುದು ಎಂದು ಊಹಿಸುವುದು ಕಷ್ಟ. ೨೬೮ನೆಯ ವಿಧಿಯಲ್ಲಿ ವಾರ್ಷಿಕ ಸಾಲ ಕಾಯ್ದೆಯನ್ನು ಸಂಸತ್ತು ಮಾಡಬಹುದಾದ ಸಂದರ್ಭವನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಂದು ವರ್ಷದಲ್ಲಿ ಕಾರ್ಯಾಂಗವು ಎಷ್ಟು ಸಾಲ ಪಡೆಯಬಹುದೆಂಬುದರ ಮೇಲೆ ಮಿತಿ ಹಾಕಲು ಇದರಿಂದ ಸಾಧ್ಯವಾಗಬಹುದು. ಆದ್ದರಿಂದ ೨೬೮ನೆಯ ವಿಧಿಯ ಅನುಬಂಧಗಳಿಂದ ಇದಕ್ಕಿಂತ ಹೆಚ್ಚನ್ನು ನಿರೀಕ್ಷಿಸುತ್ತಾರೆಂಬುದು ನನಗೆ ತೋರದು. ಆದಾಗ್ಯೂ ದೇಶದ ವಿಶ್ವಾಸವನ್ನು ಒತ್ತೆ ಇಡುವ ಸಂಸತ್ತಿನ ಅಧಿಕಾರದ ಮೇಲೆ ಇನ್ನೂ ಹೆಚ್ಚಿನ ಮಿತಿ ಹೇರಬಹುದೇ ಎಂಬುದು ಬೇರೆಯ ಪ್ರಶ್ನೆಯಾಗಿದೆ. ಈ ವಿಷಯವನ್ನು ಸಹ ಸಂಸತ್ತಿಗೆ ಬಿಡಬೇಕೆಂದು ನನಗನಿಸುತ್ತದೆ. ಏಕೆಂದರೆ ದೇಶದ ಕೆಲವು ನಿರ್ದಿಷ್ಟ ಸಂಪನ್ಮೂಲಗಳನ್ನು ಒತ್ತೆ ಇಟ್ಟು ಸಾಲ ತೆಗೆಯುವುದನ್ನು ನಿರ್ಬಂಧಿಸುವ ಅಧಿಕಾರ ಸಂಸತ್ತಿಗೆ ಇರುತ್ತದೆ. ಸಾಲ ತೆಗೆಯುವುದಕ್ಕಾಗಿ ಸಂಸತ್ತು ಕೊಡಬೇಕಾದ ಜಾಮೀನಿನ ಬಗ್ಗೆ ತನ್ನ ಮೇಲೆ ವಿಧಿಸಿಕೊಳ್ಳಬಹುದಾದ ಮಿತಿಗಳಿಗೆ ಈ ವಿಧಿ ಹೇಗೆ ಅಡ್ಡಿಯಾಗುವುದೆಂದು ನನಗೆ ತೋಚುತ್ತಿಲ್ಲ. ಆದ್ದರಿಂದ ಈ ವಿಧಿಯು ಆ ಎಲ್ಲಾ ದೃಷ್ಟಿಗಳಿಂದ ಸಂಭವಿಸಬಹುದಾದ ಎಲ್ಲಾ ಪ್ರಸಂಗಗಳನ್ನು ಗಣನೆಗೆ ತೆಗೆದುಕೊಳ್ಳುವಂತಿದೆ. ಮತ್ತು ನನ್ನ ಮಿತ್ರ ಅನಂತಶಯನಂ ಅಯ್ಯಂಗಾರ್ ಅವರು ಹೇಳಿದಂತೆ, ಸಂಸತ್ತು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಒಕ್ಕೂಟವು ಸಾಲ ಪಡೆಯುವ ಅಧಿಕಾರದ ಮೇಲೆ ಮಿತಿ ಹೇರುವಂತಹ ಕಾನೂನುಗಳನ್ನು ಮಾಡುತ್ತಾ ಹೋಗುತ್ತದೆ ಎಂಬುದರಲ್ಲಿ ನನಗೆ ಸಂದೇಹವಿಲ್ಲ. ಮತ್ತು ನಾನು ಇನ್ನೂ ಮುಂದೆ ಹೋಗಿ ಹೇಳುವುದೇನೆಂದರೆ, ಸಂಸತ್ತು ವಿಧಿಯನ್ವಯ ತನ್ನ ಕರ್ತವ್ಯಗಳನ್ನು ನಿರ್ವಹಿಸುವುದೆಂದು ಅದರಿಂದ ನಾನು ಆಶಿಸುವುದು ಮಾತ್ರವಲ್ಲ ಅದನ್ನೂ ನಿರೀಕ್ಷಿಸುತ್ತೇನೆ.

**ಶ್ರೀ ಹೆಚ್. ವಿ. ಕಾಮತ್:** ಡಾ. ಅಂಬೇಡ್ಕರ್‌ರವರು 'ಯಾವುದಾದರೂ' ಎಂಬ ಪದವನ್ನು ಕೈಬಿಡುವುದಕ್ಕೆ ಒಪ್ಪುವುದಿಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ಪರಿಶೀಲಿಸುತ್ತಿದ್ದೇನೆ. ಆದರೆ ಅದರಿಂದ ಪರಿಸ್ಥಿತಿಯಲ್ಲಿ ಯಾವ ಸುಧಾರಣೆಯು ಆಗಲಾರದು. ಏಕೆಂದರೆ ಇರುವ ಪದಗಳು 'ಕಾಲ ಕಾಲಕ್ಕೆ' ಇರಬಹುದಾದ ಎಂದಿವೆ.

**ಮಾನ್ಯ ಸಭಾಧ್ಯಕ್ಷರು:** 'ಭಾರತದ ಸಂಚಿತ ನಿಧಿ' ಎಂಬ ಪದಗಳನ್ನು ಸೇರಿಸುವ ತಿದ್ದುಪಡಿ ಅಂಗೀಕೃತವಾಗಿದೆ ಎಂದು ನಾನು ತಿಳಿಯುತ್ತೇನೆ.

**ತಿದ್ದುಪಡಿಯೊಂದಿಗೆ ೨೬೮ನೆಯ ವಿಧಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

***ಮಾನ್ಯ ಸಭಾಧ್ಯಕ್ಷರು:** ಮುದ್ರಿಸಲಾದ ತಿದ್ದುಪಡಿಗಳ ಎರಡನೆಯ ಸಂಪುಟದ ಪುಟ ೩೧೩ರಲ್ಲಿ ಮುದ್ರಿಸಲಾದ ಕೆಲವು ತಿದ್ದುಪಡಿಗಳಿರುತ್ತವೆ.

ಹಾಗಾದರೆ ಡಾ. ಅಂಬೇಡ್ಕರ್ ಅವರ ತಿದ್ದುಪಡಿ ಸಂಖ್ಯೆ ೧೧೦೭ನ್ನು ತೆಗೆದುಕೊಳ್ಳೋಣ.

---

* ಸಿ.ಎ.ಡಿ. ಸಂ. IX, ೧೧ನೇ ಆಗಸ್ಟ್ ೧೯೪೯, ಪುಟ ೩೪೦–೪೨.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಈ ರೀತಿ ಮಂಡಿಸುತ್ತೇನೆ:

"೨೬೯ನೆಯ ವಿಧಿ ಖಂಡ (೧)ರಲ್ಲಿಯ "ಮೊದಲನೆಯ ಪರಿಶಿಷ್ಟ ಭಾಗ Iರಲ್ಲಿ 'ಸದ್ಯಕ್ಕೆ ನಮೂದಿಸಲಾದ' ಎಂಬ ಶಬ್ದಗಳನ್ನು ಮತ್ತು ಸಂಖ್ಯೆಗಳನ್ನು ಕೈಬಿಡಬೇಕು."

"ವಿಧಿ ೨೬೯ರ (೧)ರಲ್ಲಿ "ರಾಜ್ಯದ ಕಂದಾಯಗಳು" ಎಂಬ ಶಬ್ದಗಳಿಗೆ ಬದಲಾಗಿ "ರಾಜ್ಯದ ಸಂಚಿತ ನಿಧಿ" ಎಂಬ ಶಬ್ದಗಳನ್ನು ಸೇರಿಸಬೇಕು."

"ತಿದ್ದುಪಡಿ ಯಾದಿಯಲ್ಲಿಯ ತಿದ್ದುಪಡಿ ಸಂಖ್ಯೆ ೨೦೭೨ಕ್ಕೆ ಸಂಬಂಧಿಸಿದಂತೆ, ವಿಧಿ ೨೬೯ರ ಖಂಡ (೨)ಕ್ಕೆ ಕೆಳಗಿನ ಖಂಡವನ್ನು ಸೇರಿಸಬೇಕು.

"(೨) ಭಾರತ ಸರ್ಕಾರವು, ಸಂಸತ್ತಿನಿಂದ ಮಾಡಲಾದ ಯಾವುದೇ ಕಾನೂನಿನಡಿಯಲ್ಲಿ ಅಥವಾ ಕಾನೂನು ವಿಧಿಸಿದಂತಹ ನಿಬಂಧನೆಗಳಿಗೆ ಒಳಪಟ್ಟು, ಯಾವುದೇ ರಾಜ್ಯಕ್ಕೆ ಸಾಲ ನೀಡಬಹುದಾಗಿದೆ ಅಥವಾ ಎಲ್ಲಿಯವರೆಗೆ ಸಂವಿಧಾನದ ೨೬೮ನೆಯ ವಿಧಿಯಲ್ಲಿ ನಿಗದಿಪಡಿಸಲಾದ ಯಾವುದೇ ಮಿತಿಗಳನ್ನು ಮೀರಿರುವುದಿಲ್ಲವೊ ಅಲ್ಲಿಯವರೆಗೆ, ಯಾವುದೇ ರಾಜ್ಯ ಕ್ರೋಡೀಕರಿಸಿದ ಸಾಲಗಳಿಗೆ ಭದ್ರತೆಗಳನ್ನು ನೀಡಬಹುದಾಗಿದೆ, ಮತ್ತು ಅಂಥ ಸಾಲಗಳನ್ನು ಮಾಡಲು ಬೇಕಾದ ಯಾವುದೇ ಮೊಬಲಗನ್ನು ಭಾರತೀಯ ಸಂಚಿತ ನಿಧಿಗೆ ಭರಿಸಬಹುದಾಗಿದೆ."

ನನ್ನ ತಿದ್ದುಪಡಿ ಸಂಖ್ಯೆ ೧೦೭ರಿಂದಾಗುವ ಮುಖ್ಯ ಬದಲಾವಣೆ ಎಂದರೆ ಮೊದಲು ಭಾರತ ಸರ್ಕಾರಕ್ಕೆ ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ವತಂತ್ರ ಹಸ್ತವನ್ನು ನೀಡಲಾಗಿತ್ತು; ಈಗ ಭಾರತ ಸರ್ಕಾರದ ಕ್ರಮವು ಸಂಸತ್ತು ಮಾಡಿದ ಕಾನೂನು ಅಥವಾ ಕಾನೂನಿನಡಿಯಲ್ಲಿ ವಿಧಿಸಲಾದ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ವಿಧಿ ೨೬೯ರ ಕಲಮು (೩)ರಲ್ಲಿ 'ಮೊದಲನೆಯ ಪರಿಶಿಷ್ಟದ ಭಾಗ I ಅಥವಾ ಭಾಗ IIIರಲ್ಲಿ ಸದ್ಯಕ್ಕೆ ನಮೂದಿಸಲಾದ" ಎಂಬ ಶಬ್ದಗಳನ್ನು ಮತ್ತು ಸಂಖ್ಯೆಗಳನ್ನು ಕೈಬಿಡಬೇಕು."

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಯಾವುದೇ ಪ್ರತ್ಯುತ್ತರ ನೀಡಬೇಕೆಂದು ನನಗೆ ಅನ್ನಿಸುವುದಿಲ್ಲ.

**[ಡಾ. ಅಂಬೇಡ್ಕರ್ ಅವರು ತಿದ್ದುಪಡಿ ಸೂಚಿಸಿದಂತೆ ವಿಧಿ ೨೬೯ನ್ನು ತಿದ್ದುಪಡಿ ಮಾಡಿ ಸಂವಿಧಾನಕ್ಕೆ ಅಳವಡಿಸಿಕೊಳ್ಳಲಾಯಿತು.]**

## ವಿಧಿಗಳು ೫ ಮತ್ತು ೬

**ಸಭಾಧ್ಯಕ್ಷರು:** ಈಗ ನಾವು ಮೂಲ ಕರಡಿನ ವಿಧಿ ೫ ಮತ್ತು ೬ನ್ನು ತೆಗೆದುಕೊಳ್ಳಬೇಕು. ಇಲ್ಲಿ ನಿಜವಾಗಿಯೂ ತಿದ್ದುಪಡಿಗಳ ಒಂದು ಅರಣ್ಯವೇ ಇರುವುದು ನನಗೆ ಕಂಡುಬರುತ್ತಿದೆ. ಈ ಎರಡು ವಿಧಿಗಳಿಗೆ ಸುಮಾರು ೧೩೦ ಅಥವಾ ೧೪೦ ತಿದ್ದುಪಡಿಗಳಿವೆ. ಡಾ. ಅಂಬೇಡ್ಕರ್ ಅವರು ತಾವು ಅಂತಿಮವಾಗಿ ಅವುಗಳನ್ನು ರಚಿಸಿದ ರೂಪದಲ್ಲಿ ಈ ವಿಧಿಗಳನ್ನು ಮಂಡಿಸಬೇಕು ಮತ್ತು ನಂತರ ನಾನು ಈ ತಿದ್ದುಪಡಿ ಮಾಡಿದ ಕರಡಿಗೆ ಸಂಬಂಧಿಸಿದ ತಿದ್ದುಪಡಿಗಳನ್ನು ತೆಗೆದುಕೊಳ್ಳುತ್ತೇನೆ. ಇದೇ ಒಳ್ಳೆಯ

ದಾರಿ ಎನ್ನುವುದು ನನ್ನ ಸಲಹೆ. ಡಾ. ಅಂಬೇಡ್ಕರ್ ಅವರೇ, ವಿಧಿ ೫ ಮತ್ತು ೬ನ್ನು ನನಗೆ ತಿಳಿದ ಹಾಗೆ ಒಟ್ಟಿಗೆ ತೆಗೆದುಕೊಳ್ಳೋಣ.

**ಪ್ರೊ. ಕೆ. ಟಿ. ಶಹಾ:** ಮುದ್ರಿತ ಯಾದಿಯಲ್ಲಿರುವ ತಿದ್ದುಪಡಿಗಳಿಗೆ ಏನಾಗುವುದೆಂಬುದನ್ನು ನಾನು ತಿಳಿದುಕೊಳ್ಳಬಹುದೇ? ಅವೆಲ್ಲವುಗಳನ್ನು ಮೂಲ ಕರಡಿಗೆ ತಿದ್ದುಪಡಿಗಳೆಂದು ಇಡಲಾಗಿದೆ. ತಿದ್ದುಪಡಿಗಳನ್ನು ಈಗ ತೆಗೆದುಕೊಳ್ಳಲು ತಾವು ನೀಡಿದ ಸಲಹೆಯು ನನಗೆ ಅರ್ಥವಾಗುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಕರಡು ಸಮಿತಿಯು ಪ್ರಸ್ತಾಪಿಸಿದ ಯಾವುದೇ ತಿದ್ದುಪಡಿ ಮಾಡಿದ ಕರಡುಗಳಿಗೆ ಸಂಬಂಧಿಸಿದಂತೆ ಗಣನೀಯ ಸ್ವರೂಪದ ತಿದ್ದುಪಡಿ ಇದ್ದರೆ, ಅದನ್ನು ಖಂಡಿತವಾಗಿಯೂ ತೆಗೆದುಕೊಳ್ಳುತ್ತೇನೆ. ಆದರೆ, ತಾವು ಯಾವ ಒಂದು ತಿದ್ದುಪಡಿಯನ್ನು ಮಂಡಿಸಲು ಬಯಸುತ್ತಾರೆಂಬುದನ್ನು ತಿಳಿಸಲು ಸದಸ್ಯರಿಗೇ ಬಿಟ್ಟುಕೊಡುತ್ತೇನೆ.

**ಡಾ. ಪಿ. ಎಸ್. ದೇಶ್‌ಮುಖ್:** ಮೂಲ ಕರಡನ್ನು ಮಂಡಿಸದಿದ್ದರೆ, ಆ ಕರಡಿನ ಜೊತೆಗೆ ಇಡಲಾದ ಎಲ್ಲ ತಿದ್ದುಪಡಿಗಳು ಗಾಳಿಗೆ ತೂರಿದಂತಾಗುತ್ತವೆ.

**ಮಾನ್ಯ ಸಭಾಧ್ಯಕ್ಷರು:** ಮೂಲ ಕರಡನ್ನು ನಾವು ಮಂಡಿಸುವುದಿಲ್ಲ, ಆದರೆ ಅದನ್ನು ಮಂಡಿಸಲಾಗಿದೆ ಎಂದು ತೆಗೆದುಕೊಳ್ಳಲಾಗುತ್ತದೆ ಹಾಗೂ ನಂತರ ಇತರ ತಿದ್ದುಪಡಿಗಳು ಬರುತ್ತವೆ.

ಸದಸ್ಯರುಗಳಿಗೆ ವಿತರಿಸಲಾದ ಕೆಲವು ತಿದ್ದುಪಡಿಗಳ ಬಗ್ಗೆ ಡಾ. ಅಂಬೇಡ್ಕರರು ಸೂಚನೆ ನೀಡಿರುವುದನ್ನು ಸದಸ್ಯರು ಗಮನಿಸಬಹುದಾಗಿದೆ. ಮೊದಲನೆಯದು ಯಾದಿ Iರಲ್ಲಿಯ ಸಂಖ್ಯೆ ೧.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಕೆಲವು ಉಲ್ಲೇಖಗಳನ್ನು ನೀಡಬಹುದೇ? ನಾಗರಿಕತ್ವಕ್ಕೆ ಸಂಬಂಧಿಸಿದಂತೆ ಸೂಚನೆಯನ್ನು ನೀಡಲಾದ ತಿದ್ದುಪಡಿಗಳು ವಿವಿಧ ಯಾದಿಗಳಲ್ಲಿ ಪಸರಿಸಿವೆ, ಮತ್ತು ನಾನು ಸದಸ್ಯರಿಗೆ ಪ್ರಾರಂಭದಲ್ಲಿ ವಿವಿಧ ಯಾದಿಗಳಿಗೆ ಉಲ್ಲೇಖ ನೀಡಲು ಬಯಸುತ್ತೇನೆ. ಮೊದಲನೆಯ ತಿದ್ದುಪಡಿಯ ಯಾದಿ Iರಲ್ಲಿಯ ಸಂಖ್ಯೆ ೧. ನಂತರ ಯಾದಿ IVರಲ್ಲಿಯ ತಿದ್ದುಪಡಿ ಸಂಖ್ಯೆಗಳಾದ ೧೨೮, ೧೨೯, ೧೩೦, ೧೩೧, ೧೩೨ ಮತ್ತು ೧೩೩ ಬರುತ್ತವೆ. ಇವುಗಳು ವಿಧಿಗೆ ಸಂಬಂಧಿಸಿದಂತೆ ಕರಡು ಸಮಿತಿಯ ವಿವಿಧ ಪ್ರಸ್ತಾವನೆಗಳಿರುತ್ತವೆ. ಈ ತಿದ್ದುಪಡಿಗಳನ್ನು ಒಂದೊಂದಾಗಿ ಪ್ರತ್ಯೇಕವಾಗಿ ಮಂಡಿಸಿದರೆ ಸದನವು ಸ್ಪಷ್ಟವಾದ ಮತ್ತು ಸಂಪೂರ್ಣವಾದ ಪರಿಕಲ್ಪನೆಯನ್ನು ಪಡೆಯುವ ಸ್ಥಿತಿಯಲ್ಲಿರುವುದಿಲ್ಲ ಎನ್ನುವುದು ನನ್ನ ಅನಿಸಿಕೆ. ಆದ್ದರಿಂದ ನಾನು ಏನನ್ನು ಮಾಡಲು ಬಯಸುತ್ತೇನೆಂದರೆ, ಕ್ರೋಡೀಕೃತಗೊಳಿಸಿದ ತಿದ್ದುಪಡಿಯನ್ನು, ಅಂದರೆ ನಾನು ತಯಾರಿಸಿದ ತಿದ್ದುಪಡಿ ಸಂಖ್ಯೆ ೧, ೧೨೮, ೧೨೯, ೧೩೦ ಮತ್ತು ೧೩೩ಗಳನ್ನೊಳಗೊಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ. ನಂತರ ನನ್ನ ಮಿತ್ರರಾದ ಶ್ರೀ ಟಿ. ಟಿ. ಕೃಷ್ಣಮಾಚಾರಿ ಯವರು ಯಾದಿ IVರಲ್ಲಿಯ ತಿದ್ದುಪಡಿ ಸಂಖ್ಯೆ ೧೩೧ ಮತ್ತು ೧೩೨ನ್ನು ಮಂಡಿಸುತ್ತಾರೆ. ತಿದ್ದುಪಡಿ ಸಂಖ್ಯೆ ೧೨೯ರಲ್ಲಿ "ಪ್ರಸ್ತಾವಿತ ವಿಧಿ–೫ರ" ಬದಲಾಗಿ "ಪ್ರಸ್ತಾವಿತ ವಿಧಿ ೫ಎ" ಎಂದು ಓದಬೇಕು. ಇದು ಮುದ್ರಣ ದೋಷವಾಗಿರುತ್ತದೆ. ಈ ಕೆಲವು ಪೂರ್ವಭಾವಿ ಅವಲೋಕನಗಳೊಂದಿಗೆ ನಾನು ನನ್ನ ತಿದ್ದುಪಡಿಯನ್ನು ಮಂಡಿಸುತ್ತೇನೆ:

"ವಿಧಿ ೫ ಮತ್ತು ೬ಗಳಿಗೆ ಕೆಳಗಿನ ಪ್ರಕರಣಗಳನ್ನು ಬದಲಿಸಬೇಕು.

**ಈ ಸಂವಿಧಾನದ ಪ್ರಾರಂಭದ ದಿನಾಂಕದಂದು ನಾಗರಿಕತ್ವ**

೫. ಈ ಸಂವಿಧಾನ ಪ್ರಾರಂಭವಾಗುವ ದಿನಾಂಕದಂದು, ಭಾರತದ ಭೂಕ್ಷೇತ್ರದಲ್ಲಿ ವಾಸಸ್ಥಳವನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯೂ, ಮತ್ತು

ಎ. ಭಾರತದ ಭೂ ಕ್ಷೇತ್ರದಲ್ಲಿ ಹುಟ್ಟಿದವನು; ಅಥವಾ

ಬಿ. ಯಾರ ತಂದೆ–ತಾಯಂದಿರಲ್ಲಿ ಯಾರಾದರೊಬ್ಬರು ಭಾರತದ ಭೂಕ್ಷೇತ್ರದಲ್ಲಿ ಹುಟ್ಟಿದರೆ; ಅಥವಾ

ಸಿ. ಅಂಥ ಪ್ರಾರಂಭದ ದಿನಾಂಕದ ಹಿಂದಿನ ಕನಿಷ್ಠ ಐದು ವರ್ಷಗಳವರೆಗೆ ಭಾರತದ ಭೂಕ್ಷೇತ್ರದಲ್ಲಿ ಸಾಮಾನ್ಯವಾಗಿ ವಾಸವಾಗಿರುವನು,

ಭಾರತೀಯ ನಾಗರಿಕನಾಗಿರುತ್ತಾನೆ, ಆದರೆ ಅವನು ಸ್ವ ಇಚ್ಛೆಯಿಂದ ಯಾವುದೇ ಹೊರದೇಶದ ನಾಗರಿಕತ್ವವನ್ನು ಹೊಂದಿರತಕ್ಕದ್ದಲ್ಲ.

**ಪಾಕಿಸ್ತಾನದಿಂದ ಭಾರತಕ್ಕೆ ವಲಸೆಯಾದ ವ್ಯಕ್ತಿಗಳ ನಾಗರಿಕತ್ವದ ಹಕ್ಕುಗಳು**

೫. ಎ. ಈ ಸಂವಿಧಾನದ ವಿಧಿ ೫ರಲ್ಲಿ ಯಾವುದೇ ವಿಷಯಗಳನ್ನು ಅಳವಡಿಸದಿದ್ದರೂ ಸಹ, ಈಗ ಪಾಕಿಸ್ತಾನದಲ್ಲಿ ಸೇರಿಸಲ್ಪಟ್ಟ ಭೂಕ್ಷೇತ್ರದಿಂದ ಈ ಸಂವಿಧಾನವು ಪ್ರಾರಂಭದ ದಿನಾಂಕದಂದು ಭಾರತದ ಪ್ರದೇಶಕ್ಕೆ ವಲಸೆ ಬಂದ ವ್ಯಕ್ತಿಯನ್ನು ಒಂದು ವೇಳೆ–

ಎ. ಅವನು ಅಥವಾ ಅವನ ತಂದೆ–ತಾಯಂದಿರಲ್ಲಿ ಯಾರಾದರೊಬ್ಬರು ಅಥವಾ ಅವನ ಅಜ್ಜ–ಅಜ್ಜಿಯರಲ್ಲಿ ಯಾರಾದರೊಬ್ಬರು, ಭಾರತೀಯ ಸರ್ಕಾರ ಅಧಿನಿಯಮ, ೧೯೩೫ (ಮೂಲ ಅಧಿಶಾಸನದ ಪ್ರಕಾರ)ರಲ್ಲಿ ವ್ಯಾಖ್ಯಾನಿಸಿದ ಹಾಗೆ ಭಾರತದಲ್ಲಿ ಜನ್ಮ ಹೊಂದಿದ್ದರೆ; ಮತ್ತು

ಬಿ. (i) ಅಂಥ ವ್ಯಕ್ತಿಯು ೧೯ನೇ ಜುಲೈ ೧೯೪೮ಕ್ಕೆ ಮುಂಚೆ ಹಾಗೆ ವಲಸೆ ಬಂದ ಪ್ರಕರಣದಲ್ಲಿ, ಅವನು ವಲಸೆ ಬಂದ ದಿನಾಂಕದಿಂದ ಭಾರತದ ಭೂಕ್ಷೇತ್ರದಲ್ಲಿ ಸಾಮಾನ್ಯವಾಗಿ ವಾಸವಾಗಿದ್ದರೆ; ಮತ್ತು

(ii) ಅಂಥ ವ್ಯಕ್ತಿಯು ೧೯ನೇ ಜುಲೈ ೧೯೪೮ರ ನಂತರ ವಲಸೆ ಬಂದಿದ್ದ ಪ್ರಕರಣದಲ್ಲಿ, ಈ ಸಂವಿಧಾನವು ಪ್ರಾರಂಭವಾಗುವ ದಿನಾಂಕಕ್ಕಿಂತ ಮುಂಚೆ ಭಾರತದ ಅಧೀನ ಸರಕಾರವು ನೇಮಕಾತಿ ಮಾಡಿದ ಅಧಿಕಾರಿಯಿಂದ, ಆ ಸರ್ಕಾರವು ಈ ಉದ್ದೇಶಕ್ಕಾಗಿ ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿ ಅಂಥ ಅಧಿಕಾರಿಯ ಮುಂದೆ ಸಲ್ಲಿಸಿದ ಅರ್ಜಿಯನ್ನಾಧರಿಸಿ, ಭಾರತದ ನಾಗರಿಕನೆಂದು ನೋಂದಣಿ ಮಾಡಿಸಿದ್ದರೆ,

ಅವನನ್ನು ಭಾರತದ ನಾಗರಿಕನೆಂದು ಭಾವಿಸತಕ್ಕದ್ದು;

ಆದರೆ ಅಂಥ ಅರ್ಜಿಯನ್ನು ಹಾಕುವ ವ್ಯಕ್ತಿಯು ತನ್ನ ಅರ್ಜಿಯ ದಿನಾಂಕಕ್ಕಿಂತ ಮುಂಚೆ ಕನಿಷ್ಠ ಆರು ತಿಂಗಳು ಭಾರತದ ಭೂಕ್ಷೇತ್ರದಲ್ಲಿ ವಾಸವಾಗಿರದ ಹೊರತು ಅಂಥ ನೋಂದಣಿಯನ್ನು ಮಾಡತಕ್ಕದ್ದಲ್ಲ.

**ಪಾಕಿಸ್ತಾನಕ್ಕೆ ವಲಸೆ ಹೋದ ವ್ಯಕ್ತಿಗಳ ನಾಗರಿಕ ಹಕ್ಕುಗಳು**

೫. ಎ.ಎ. ಈ ಸಂವಿಧಾನವು ವಿಧಿ ೫ ಮತ್ತು ೫ಎ ರಲ್ಲಿ ಯಾವುದೇ ವಿಷಯಗಳನ್ನು ಒಳಗೊಂಡಿದ್ದರೂ ಸಹ, ೧ನೇ ಮಾರ್ಚ್ ೧೯೪೭ರ ನಂತರ ಭಾರತದ ಭೂಕ್ಷೇತ್ರದಿಂದ ಈಗ ಪಾಕಿಸ್ತಾನದಲ್ಲಿ ಸೇರಿಸಲಾದ ಭೂಕ್ಷೇತ್ರಕ್ಕೆ ವಲಸೆ ಹೋದ ವ್ಯಕ್ತಿಯನ್ನು ಭಾರತದ ನಾಗರಿಕನೆಂದು ಭಾವಿಸತಕ್ಕದ್ದಲ್ಲ;

ಆದರೆ, ಹಾಗೆ ಈಗ ಪಾಕಿಸ್ತಾನದಲ್ಲಿ ಸೇರಿಸಲಾದ ಭೂಕ್ಷೇತ್ರಕ್ಕೆ ವಲಸೆ ಹೋದ ವ್ಯಕ್ತಿಯು ಯಾವುದೇ ಕಾನೂನಿನ ಪ್ರಾಧಿಕಾರದಿಂದ ಅಥವಾ ಅದರ ಅಡಿಯಲ್ಲಿ ನೀಡಲಾದ ಪುನರ್ವಸತಿ ಅಥವಾ ಖಾಯಂ ಹಿಂತಿರುಗುವಿಕೆಯ ಪರವಾನಿಗೆಯಡಿಯಲ್ಲಿ, ಭಾರತದ ಭೂಕ್ಷೇತ್ರಕ್ಕೆ ಮರಳಿದರೆ ಆ ವ್ಯಕ್ತಿಯನ್ನು, ಈ ಸಂವಿಧಾನದ ವಿಧಿ ೫–ಎ ಕಲಮು (ಬಿ)ಯ ಉದ್ದೇಶಗಳಿಂದಾಗಿ ೧೯ನೇ ಜುಲೈ ೧೯೪೮ರ ನಂತರ ಭಾರತದ ಭೂಕ್ಷೇತ್ರಕ್ಕೆ ವಲಸೆ ಬಂದವರೆಂದು ಭಾವಿಸತಕ್ಕದ್ದು.

**ಶ್ರೀರೀ ಜಸ್ಪತ್‌ರಾಯ್ ಕಪೂರ್** (ಸಂಯುಕ್ತ ಪ್ರಾಂತಗಳು: ಸಾಮಾನ್ಯ): ಇದನ್ನು ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಮಂಡಿಸುತ್ತಾರೆಂದು ನೀವು ಹೇಳಿದ್ದೀರಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ಮಂಡಿಸುವ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲು ಯೋಜಿಸಿರುವುದರಿಂದ ಅದನ್ನು ಕ್ರೋಡೀಕೃತ ವಿಧಿಯಲ್ಲಿ ಸೇರಿಸಿದ್ದೇನೆ.

**ಭಾರತದಿಂದ ಹೊರಗೆ ವಾಸಿಸುತ್ತಿರುವ ಭಾರತೀಯ ಮೂಲಗಳ ವ್ಯಕ್ತಿಗಳ ನಾಗರಿಕ ಹಕ್ಕು**

೫. ಬಿ. ಈ ಸಂವಿಧಾನದ ವಿಧಿ ೫ ಮತ್ತು ೫ಎಗಳಲ್ಲಿ ಯಾವುದೇ ವಿಷಯಗಳನ್ನು ಒಳಗೊಂಡಿದ್ದರೂ ಸಹ, ಯಾವುದೇ ವ್ಯಕ್ತಿ ಅಥವಾ ಅವನ ತಂದೆ–ತಾಯಂದಿರಲ್ಲಿ ಯಾರಾದರೊಬ್ಬರು ಅಥವಾ ಅಜ್ಜ–ಅಜ್ಜಿಯರಲ್ಲಿ ಯಾರಾದರೊಬ್ಬರು ಭಾರತೀಯ ಸರ್ಕಾರದ ಅಧಿನಿಯಮ, ೧೯೩೫ (ಮೂಲ ಅಧಿಶಾಸನದ ಪ್ರಕಾರ) ಇಲ್ಲಿ ವ್ಯಾಖ್ಯಾನಿಸಿದ ಪ್ರಕಾರ ಭಾರತದಲ್ಲಿ ಜನಿಸಿದ್ದರೆ ಮತ್ತು ಅದರಲ್ಲಿ ವ್ಯಾಖ್ಯಾನಿಸಿದ ಪ್ರಕಾರ ಭಾರತದಿಂದ ಹೊರಗಿರುವ ಭೂಕ್ಷೇತ್ರದಲ್ಲಿ ವಾಸಿಸುತ್ತಿದ್ದರೆ, ಅವನು ಭಾರತೀಯ ರಾಯಭಾರಿಯ ಪ್ರತಿನಿಧಿಯ ಮುಖಾಂತರ, ಅದಕ್ಕಾಗಿ ಅವನ ಮುಂದೆ ಈ ಸಂವಿಧಾನವು ಪ್ರಾರಂಭವಾಗುವುದಕ್ಕಿಂತ ಮುಂಚೆ ಅಥವಾ ನಂತರ ಭಾರತೀಯ ಅಧೀನ ಸರ್ಕಾರ ಅಥವಾ ಭಾರತೀಯ ಸರ್ಕಾರ, ಈ ಉದ್ದೇಶಕ್ಕಾಗಿ ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಹಾಕುವ ಮೂಲಕ ನೋಂದಣಿ ಮಾಡಿಸಿದ್ದರೆ, ಅವನನ್ನು ಭಾರತೀಯ ನಾಗರಿಕನೆಂದು ಭಾವಿಸತಕ್ಕದ್ದು.

**ನಾಗರಿಕತ್ವ ಹಕ್ಕುಗಳ ಮುಂದುವರಿಕೆ**

೫. ಸಿ. ಸಂಸತ್ತು ಮಾಡಬಹುದಾದ ಯಾವುದೇ ಕಾನೂನಿಗೆ ಒಳಪಟ್ಟು, ಈ ಭಾಗದಲ್ಲಿಯ ಮೇಲಿನ ಯಾವುದೇ ನಿಯಮಗಳಡಿಯಲ್ಲಿ ಭಾರತದ ನಾಗರಿಕನಾಗಿರುವ ಪ್ರತಿಯೊಬ್ಬ ವ್ಯಕ್ತಿ ಅಂಥ ನಾಗರಿಕನಾಗಿ ಮುಂದುವರೆಯತಕ್ಕದ್ದು.

**ನಾಗರಿಕತ್ವ ಹಕ್ಕಿನ ಮೇಲೆ ಕಾನೂನಿನಿಂದ ಸಂಸತ್ತಿನ ನಿಯಂತ್ರಣ**

೬. ಈ ಭಾಗದಲ್ಲಿರುವ ಮೇಲಿನ ಯಾವುದೇ ನಿಯಮಗಳಲ್ಲಿಯ ಯಾವುದೇ ಅಂಶವು ನಾಗರಿಕತ್ವವನ್ನು ಪಡೆಯುವಿಕೆ ಮತ್ತು ಅಂತ್ಯಗೊಳಿಸುವಿಕೆ ಮತ್ತು ನಾಗರಿಕತ್ವಕ್ಕೆ ಸಂಬಂಧಿಸಿದ ಇತರ

ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಸಂಸತ್ತು ನಿಯಮಗಳನ್ನು ಮಾಡುವ ಅಧಿಕಾರಕ್ಕೆ, ವಿರೋಧವಾಗಿರುವುದಿಲ್ಲ.

ಮಾನ್ಯರೆ, ನನ್ನ ಕರಡಿಗೆ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ತಿದ್ದುಪಡಿಗಳನ್ನು ಮಂಡಿಸುವವರೆಗೆ ನನ್ನ ಟಿಪ್ಪಣಿಗಳನ್ನು ಕಾಯ್ದಿರಿಸುತ್ತೇನೆ ಮತ್ತು ಅದರಿಂದ ವಿಷಯ ಪೂರ್ತಿಗೊಳಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಇತರ ಎಲ್ಲಾ ತಿದ್ದುಪಡಿಗಳನ್ನು ನಾವು ತೆಗೆದುಕೊಂಡರೆ, ಅದಕ್ಕೆ ಯಾವುದೇ ಕೊನೆ ಇರುವುದಿಲ್ಲವೆಂಬುದು ನನ್ನ ಅನಿಸಿಕೆ. ಮೊದಲು ಡಾ. ಅಂಬೇಡ್ಕರ್ ತಮ್ಮ ಪ್ರಸ್ತಾವನೆಯನ್ನು ವಿವರಿಸಲಿ, ನಂತರ ಇತರ ತಿದ್ದುಪಡಿಗಳನ್ನು ಮಂಡಿಸಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೇ, ಕರಡು ಸಂವಿಧಾನದಲ್ಲಿಯ ಇನ್ನೊಂದು ಪ್ರಕರಣವನ್ನು ಹೊರತುಪಡಿಸಿ, ಕರಡು ಸಮಿತಿಗೆ ಈ ಒಂದು ವಿಧಿ ಕೊಟ್ಟಷ್ಟು ತಲೆನೋವನ್ನು ಇನ್ನಾವುದೇ ವಿಧಿ ಕೊಟ್ಟಿರುವುದೆಂದು ನನಗೆ ಅನ್ನಿಸುವುದಿಲ್ಲ. ಇದರಲ್ಲಿ ಸೇರಿಸಲು ಅವಶ್ಯಕವೆಂದು ಮತ್ತು ಉಚಿತವೆಂದು ಯೋಚಿಸಲಾದ ಎಲ್ಲಾ ವಿಷಯಗಳನ್ನು ಅಳವಡಿಸಿಕೊಳ್ಳಲು ಅಸಮರ್ಪಕವೆಂದು ಪರಿಗಣಿಸಿ ಎಷ್ಟು ಕರಡುಗಳನ್ನು ತಯಾರಿಸಲಾಯಿತೋ ಮತ್ತು ಎಷ್ಟನ್ನು ನಾಶಪಡಿಸಲಾಯಿತೋ ನನಗೆ ಗೊತ್ತಿಲ್ಲ. ನಾನು ಮಂಡಿಸಿದ ಕರಡನ್ನು ಅಂತಿಮವಾಗಿ ಒಪ್ಪಿಕೊಂಡಿರುವುದು ಕರಡು ಸಮಿತಿಯ ಸುಯೋಗವೆಂದು ನನಗನ್ನಿಸುತ್ತದೆ. ಏಕೆಂದರೆ, ನನಗೆ ಅನಿಸಿದ ಹಾಗೆ ಈ ಕರಡು ಎಲ್ಲರನ್ನು ಸಂತುಷ್ಟಪಡಿಸದಿದ್ದರೂ ಬಹುತೇಕ ಜನರನ್ನು ಸಂತುಷ್ಟಪಡಿಸಿದೆ.

**ಒಬ್ಬ ಗೌರವಾನ್ವಿತ ಸದಸ್ಯ:** ಪ್ರಶ್ನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈಗ, ಮಾನ್ಯರೇ ಈ ಪ್ರಕರಣವು ಯಾವುದೇ ಸಾಮಾನ್ಯ ಅರ್ಥದಲ್ಲಿ ನಾಗರಿಕತ್ವವನ್ನು ಉಲ್ಲೇಖಿಸುವುದಿಲ್ಲ. ಆದರೆ, ಈ ಸಂವಿಧಾನ ಪ್ರಾರಂಭವಾಗುವ ದಿನಾಂಕದಂದು ನಾಗರಿಕತ್ವವನ್ನು ಉಲ್ಲೇಖಿಸುತ್ತದೆ. ಈ ಒಂದು ವಿಧಿಯ ಗುರಿಯು ಈ ದೇಶದ ನಾಗರಿಕತ್ವದ ಶಾಶ್ವತ ಕಾನೂನನ್ನು ರಚಿಸುವುದು ಆಗಿರುವುದಿಲ್ಲ. ನಾಗರಿಕತ್ವದ ಶಾಶ್ವತ ಕಾನೂನನ್ನು ರಚಿಸುವ ಕಾರ್ಯವನ್ನು ಸಂಸತ್ತಿಗೆ ಬಿಟ್ಟುಕೊಡಲಾಗಿದೆ. ಮತ್ತು ನಾನು ಮಂಡಿಸಿದ ವಿಧಿ ೬ರ ಪದರಚನೆಯನ್ನು ಸದಸ್ಯರು ನೋಡಿದರೆ, ನಾಗರಿಕತ್ವದ ಸಂಪೂರ್ಣ ವಿಷಯವನ್ನು ತಾನು ಸೂಕ್ತವೆಂದು ಭಾವಿಸಿದ ಯಾವುದೇ ಕಾನೂನಿನ ಮೂಲಕ ನಿರ್ಧರಿಸಲು ಸಂಸತ್ತಿಗೆ ಬಿಡಲಾಗಿದೆ. ಈ ವಿಧಿ ಈ ರೀತಿ ಇದೆ:–

"ಈ ಭಾಗದಲ್ಲಿರುವ ಮೇಲಿನ ಯಾವುದೇ ನಿಯಮಗಳಲ್ಲಿಯ ಯಾವುದೇ ಅಂಶವು ನಾಗರಿಕತ್ವವನ್ನು ಪಡೆಯುವಿಕೆ ಮತ್ತು ಅಂತ್ಯಗೊಳಿಸುವಿಕೆ ಮತ್ತು ನಾಗರಿಕತ್ವಕ್ಕೆ ಸಂಬಂಧಿಸಿದ ಇತರ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಸಂಸತ್ತು ನಿಯಮಗಳನ್ನು ಮಾಡುವ ಅಧಿಕಾರಕ್ಕೆ ವಿರೋಧವಾಗಿರುವುದಿಲ್ಲ."

ವಿಧಿ ೬ರ ಪರಿಣಾಮವು ಹೀಗಿರುತ್ತದೆ, ವಿಧಿ ೫ ಮತ್ತು ಅದರ ಮುಂದಿನ ವಿಧಿಗಳು ಈ ಸಂವಿಧಾನವು ಆರಂಭವಾಗುವ ದಿನಾಂಕದಂದು ನಾಗರಿಕರೆಂದು ಘೋಷಿಸಲಾದವರ ನಾಗರಿಕತ್ವವನ್ನು ಸಂಸತ್ತು ತೆಗೆದುಹಾಕಲಾರದಷ್ಟೇ ಅಲ್ಲ, ಹೊಸ ತತ್ವಗಳನ್ನೊಳಗೊಂಡ ಪೂರ್ತಿ ಹೊಸ ಕಾನೂನನ್ನು ಸಹ ಸಂಸತ್ತು ಮಾಡಬಹುದಾಗಿದೆ. ಈ ವಿಧಿಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸುವವರು ಈ ಮೊದಲು ಪ್ರಾರಂಭವಾಗುವ ದಿನಾಂಕದಂದು ನಾಗರಿಕತ್ವಕ್ಕೆ ಸಂಬಂಧಿಸಿದಂತೆ ನಾವು ಮಾಡುತ್ತಿರುವ ನಿಯಮಗಳು ಶಾಶ್ವತವಾದವುಗಳು ಮತ್ತು ಬದಲಾವಣೆಯಾಗಲಾರದಂತಹವು ಎಂದು ಅವರು ತಿಳಿದುಕೊಳ್ಳಬಾರದು. ಸದ್ಯಕ್ಕೆ ತಾತ್ಪೂರ್ವಕವಾಗಿ ಏನು ಮಾಡಬೇಕೆಂಬುದನ್ನು ನಿರ್ಧರಿಸುವುದನ್ನು ಮಾತ್ರ ನಾವು ಮಾಡುತ್ತಿದ್ದೇವೆ.

ಇದನ್ನು ಹೇಳಿದ ನಂತರ, ನಾನು ಸದಸ್ಯರ ಗಮನವನ್ನು ಈ ಸಂವಿಧಾನವು ಪ್ರಾರಂಭವಾಗುವ ದಿನಾಂಕದಂದು ನಾಗರಿಕತ್ವವನ್ನು ನೀಡುವಲ್ಲಿ, ಕರಡು ಸಮಿತಿಯು ಐದು ವಿವಿಧ ವರ್ಗಗಳ ಜನರಿಗೆ, ಈ ಪ್ರಕರಣದಲ್ಲಿ ಹಾಕಲಾದ ನಿಬಂಧನೆಗಳು ಮತ್ತು ಷರತ್ತುಗಳು ಪೂರೈಸುವುದಕ್ಕೆ ಒಳಪಟ್ಟು, ಈ ಸಂವಿಧಾನವು ಪ್ರಾರಂಭವಾಗುವ ದಿನಾಂಕದಂದು ನಾಯಕರಾಗಬಹುದೆಂದು ಯೋಜಿಸಿದೆ.

ಈ ಐದು ವರ್ಗಗಳಾವುವೆಂದರೆ:

೧. ಭಾರತದಲ್ಲಿ ವಾಸಿಸುತ್ತಿರುವ ಮತ್ತು ಭಾರತದಲ್ಲಿ ಜನ್ಮಿಸಿದ ವ್ಯಕ್ತಿಗಳು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಈ ಸಂವಿಧಾನವು ವ್ಯಾಖ್ಯಾನಿಸಿದ ಹಾಗೆ ಭಾರತದ ಜನಸಂಖ್ಯೆಯ ಮೊತ್ತದ ಅಂಶವಾಗಿರುವವರು;

೨. ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗಳು, ಆದರೆ ಭಾರತದಲ್ಲಿ ಜನಿಸದಿರುವವರು, ಆದರೆ ಭಾರತದಲ್ಲಿ ವಾಸಿಸುತ್ತಿದ್ದವರು. ಉದಾಹರಣೆಗೆ, ಭಾರತದಲ್ಲಿ ಪೋರ್ಚುಗೀಸರ ವಾಸಸ್ಥಳಗಳಲ್ಲಿರುವವರು ಅಥವಾ ಚಂದ್ರನಗರ, ಪಾಂಡಿಚೇರಿಯಂಥ ಭಾರತದಲ್ಲಿ ಫ್ರೆಂಚರ ವಾಸಸ್ಥಳಗಳಲ್ಲಿರುವವರು, ಅಥವಾ ಪರ್ಶಿಯಾದಿಂದ ಬಂದಿರುವ ಇರಾಣಿಯರು ಮತ್ತು ಅವರು ಇಲ್ಲಿ ಜನಿಸದಿದ್ದರೂ, ಬಹಳ ಸಮಯದವರೆಗೆ ವಾಸಿಸುತ್ತಿದ್ದು, ನಿಸ್ಸಂದೇಹವಾಗಿ ಭಾರತೀಯ ನಾಗರಿಕತ್ವವನ್ನು ಹೊಂದುವ ಉದ್ದೇಶವನ್ನು ಹೊಂದಿರುವವರು.

ಈ ವಿಧಿಯ ಚೌಕಟ್ಟಿನಲ್ಲಿ ಕರಡು ಸಮಿತಿಯು ತರಬಯಸಿದ ಇತರ ಮೂರು ವರ್ಗಗಳ ಜನರೆಂದರೆ:

೩. ಭಾರತದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳು ಆದರೆ ಪಾಕಿಸ್ತಾನಕ್ಕೆ ವಲಸೆ ಹೋಗಿರುವಂಥವರು;

೪. ಪಾಕಿಸ್ತಾನದಲ್ಲಿ ವಾಸಿಸುತ್ತಿದ್ದವರು ಮತ್ತು ಭಾರತಕ್ಕೆ ವಲಸೆ ಬಂದವರು;

೫. ಭಾರತದಿಂದ ಹೊರಗೆ ವಾಸಿಸುತ್ತಿರುವ ಆದರೆ ಅವರ ತಂದೆ–ತಾಯಂದಿರು ಭಾರತದಲ್ಲಿ ಜನಿಸಿರುವ ವ್ಯಕ್ತಿಗಳು.

ಈ ಐದು ವರ್ಗಗಳ ಜನರನ್ನು ಈ ವಿಧಿಯ ಅಂಶಗಳಲ್ಲಿ ತರಲಾಗಿದೆ. ಈಗ ಮೊದಲನೇ ವರ್ಗದ ಜನರು, ಅಂದರೆ, ಭಾರತೀಯ ಭೂಕ್ಷೇತ್ರದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳು ಮತ್ತು ಭಾರತೀಯ ಭೂ ಕ್ಷೇತ್ರದಲ್ಲಿ ಜನಿಸಿದವರು ಅಥವಾ ಅವರ ತಂದೆ–ತಾಯಂದಿರು ಭಾರತದ ಭೂ ಕ್ಷೇತ್ರದಲ್ಲಿ ಜನಿಸಿದವರು ಇವರೆಲ್ಲರನ್ನು ೫ರ ಖಂಡ (ಎ) ಮತ್ತು (ಬಿ)ಯಲ್ಲಿ ವಿವರಿಸಲಾಗಿದೆ. ಈ ಅಂಶಗಳಲ್ಲಿ ನಿಗದಿಪಡಿಸಲಾದ ನಿಬಂಧನೆಗಳನ್ನು ಸಂತುಷ್ಟಪಡಿಸಿದರೆ ಅವರು ಈ ನಿಯಮಗಳಡಿಯಲ್ಲಿ ನಾಗರಿಕರಾಗುತ್ತಾರೆ.

ನಾನು ಉಲ್ಲೇಖಿಸಿದ ಎರಡನೇ ವರ್ಗದ ಜನರು, ಅಂದರೆ, ಭಾರತದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳು ಆದರೆ ಭಾರತದಲ್ಲಿ ಹುಟ್ಟದಿರುವವರು ಮತ್ತು ಅಂಥ ಪ್ರಾರಂಭದ ದಿನಾಂಕಕ್ಕಿಂತ ಮುಂಚಿನ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗೆ ಭಾರತದ ಭೂ ಕ್ಷೇತ್ರದಲ್ಲಿ ಸಾಮಾನ್ಯವಾಗಿ ವಾಸಿಸುತ್ತಿದ್ದವರು ವಿಧಿ ೫ರ ಕಲಮು (ಸಿ)ಯಲ್ಲಿ ಬರುತ್ತಾರೆ. ಇದು ಹೇರುವ ನಿಬಂಧನೆಯೆಂದರೆ, ಅವರು ಐದು ವರ್ಷಗಳವರೆಗೆ ಭಾರತದ ನಿವಾಸಿಯಾಗಿರಬೇಕು. ಈ ಎಲ್ಲ ಕಲಮುಗಳು ಒಂದು ಸಾಮಾನ್ಯ ಮಿತಿಗೆ ಒಳಪಟ್ಟಿರುತ್ತವೆ; ಅದೇನೆಂದರೆ, ಅವರು ಸ್ವ–ಇಚ್ಛೆಯಿಂದ ಬೇರಾವುದೇ ಹೊರದೇಶದ ನಾಗರಿಕತ್ವವನ್ನು ಪಡೆದಿರಕೂಡದು.

ಕೊನೆಯ ವರ್ಗಕ್ಕೆ ಸಂಬಂಧಿಸಿದಂತೆ, ಅಂದರೆ ಹೊರದೇಶಗಳಲ್ಲಿ ವಾಸಿಸುತ್ತಿರುವ ವ್ಯಕ್ತಿಗಳು, ಆದರೆ ಅವರ ತಂದೆ–ತಾಯಂದಿರು ಭಾರತದಲ್ಲಿ ಜನ್ಮಿಸಿದವರು ನನ್ನ ೫–ಬಿಯಲ್ಲಿ ಬರುತ್ತಾರೆ. ಅದು ಭಾರತದ ಭೂಕ್ಷೇತ್ರದ ಹೊರಗೆ ಸಾಮಾನ್ಯವಾಗಿ ವಾಸಿಸುತ್ತಿರುವ ಆದರೆ ಅವರ ತಂದೆ–ತಾಯಂದಿರು ಅಥವಾ ಅಜ್ಜ–ಅಜ್ಜಿಯರು ಭಾರತೀಯ ಸರ್ಕಾರ ಅಧಿನಿಯಮ ೧೯೩೫ರಲ್ಲಿ ವ್ಯಾಖ್ಯಾನಿಸಿದಂತೆ ಭಾರತದಲ್ಲಿ ಜನಿಸಿದ್ದರೆ– ಅಂಥವರನ್ನು ಹೊರದೇಶಗಳಲ್ಲಿರುವ ಭಾರತೀಯನೆಂದು ಕರೆಯಲಾಗುತ್ತದೆ. ಅವರ ಮೇಲೆ ಹೇರಲಾದ ಒಂದೇ ಮಿತಿ ಏನೆಂದರೆ, ಅವರು ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಭಾರತೀಯ ನಾಗರಿಕರಾಗಬಯಸಿದ್ದರೆ ಭಾರತ ಸರ್ಕಾರದ ರಾಯಭಾರಿ ಅಥವಾ ದೂತರ ಅಧಿಕಾರಿಯ ಮುಂದೆ ಈ ಉದ್ದೇಶಕ್ಕಾಗಿ ಭಾರತ ಸರ್ಕಾರ ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿ ಅರ್ಜಿ ಹಾಕಿರಬೇಕು ಮತ್ತು ಅವರನ್ನು ನಾಗರಿಕರೆಂದು ನೋಂದಣಿ ಮಾಡಿರಬೇಕು. ಅವರಿಗೆ ಎರಡು ನಿಬಂಧನೆಗಳನ್ನು ವಿಧಿಸಲಾಗಿದೆ– ಒಂದನೆಯದು, ಅರ್ಜಿಯನ್ನು ಹಾಕುವುದು ಮತ್ತು ಎರಡನೆಯದು, ಅವನು ವಾಸಿಸುತ್ತಿರುವ ದೇಶದಲ್ಲಿಯ ಭಾರತೀಯ ರಾಯಭಾರಿ ಅಥವಾ ದೂತ ಅಧಿಕಾರಿಯಿಂದ ಅವನ ನೋಂದಣಿಯಾಗಿರಬೇಕು. ನಾನು ಹೇಳಿದ ಹಾಗೆ ಇವು ಸರಳ ವಿಷಯಗಳಾಗಿರುತ್ತವೆ.

ಈಗ ನಾವು ಭಾರತದ ನಿವಾಸಿಗಳಿದ್ದು, ಪಾಕಿಸ್ತಾನಕ್ಕೆ ವಲಸೆ ಹೋದ ಮತ್ತು ಪಾಕಿಸ್ತಾನದ ನಿವಾಸಿಗಳಿದ್ದು ಭಾರತಕ್ಕೆ ವಲಸೆ ಬಂದ ಎರಡು ವರ್ಗದ ವ್ಯಕ್ತಿಗಳಿಗೆ ಬರೋಣ. ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದವರ ವಿಷಯವನ್ನು ವಿಧಿ ೫–ಎರಲ್ಲಿ ವಿವರಿಸಲಾಗಿದೆ. ವಿಧಿ ೫–ಎರಲ್ಲಿಯ ಅಂಶಗಳು ಹೀಗಿರುತ್ತವೆ–

ಪಾಕಿಸ್ತಾನದಿಂದ ಭಾರತಕ್ಕೆ ಬಂದ ವ್ಯಕ್ತಿಗಳನ್ನು ಎರಡು ವರ್ಗಗಳಲ್ಲಿ ವಿಂಗಡಿಸಲಾಗಿದೆ–

ಎ. ೧೯ನೇ ಜುಲೈ ೧೯೪೮ಕ್ಕಿಂತಲೂ ಮುಂಚೆ ಬಂದವರು, ಮತ್ತು

ಬಿ. ೧೯ನೇ ಜುಲೈ ೧೯೪೮ರ ನಂತರ ಪಾಕಿಸ್ತಾನದಿಂದ ಭಾರತಕ್ಕೆ ಬಂದವರು.

ಸಿ. ೧೯ನೇ ಜುಲೈ ೧೯೪೮ಕ್ಕಿಂತಲೂ ಮುಂಚೆ ಬಂದವರು ತಾವಾಗಿಯೇ ಭಾರತದ ನಾಗರಿಕರಾಗುವರು.

೧೯ನೇ ಜುಲೈ ೧೯೪೮ರ ನಂತರ ಬಂದವರಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಪ್ರಕ್ರಿಯೆಯನ್ನು ಪಾಲಿಸುವ ಮೂಲಕ, ಅವರು ಸಹ ಸಂವಿಧಾನದ ಪ್ರಾರಂಭದ ದಿನಾಂಕದಂದು ನಾಗರಿಕತ್ವಕ್ಕೆ ಬಾಧ್ಯಸ್ತರಾಗಿರುತ್ತಾರೆ, ಅದೇನೆಂದರೆ ಅವರು ಪುನಃ ಭಾರತೀಯ ಅಧೀನ ಸರ್ಕಾರದಿಂದ ನೇಮಿಸಲ್ಪಟ್ಟ ಅಧಿಕಾರಿಗೆ ಅರ್ಜಿಯನ್ನು ಹಾಕಬೇಕಾಗುತ್ತದೆ ಮತ್ತು ಆ ಅಧಿಕಾರಿಯು ಹಾಗೆ ಹಾಕಲಾದ ಅರ್ಜಿಯನ್ನಾಧರಿಸಿ ಆ ವ್ಯಕ್ತಿಯನ್ನು ನೋಂದಾಯಿಸಿಕೊಂಡಿರಬೇಕಾಗುತ್ತದೆ.

ಸಂವಿಧಾನವು ಪ್ರಾರಂಭವಾಗುವ ದಿನಾಂಕದಂದು ತಮ್ಮ ನಾಗರಿಕತ್ವವನ್ನು ಪಡೆದುಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನದಿಂದ ಭಾರತಕ್ಕೆ ಬರುವ ವ್ಯಕ್ತಿಗಳನ್ನು ಎರಡು ವರ್ಗದಲ್ಲಿಡಲಾಗಿದೆ. ೧೯ನೇ ಜುಲೈ ೧೯೪೮ಕ್ಕಿಂತ ಮುಂಚೆ ಬಂದವರು ಮತ್ತು ನಂತರ ಬಂದವರು. ೧೯ನೇ ಜುಲೈ ೧೯೪೮ಕ್ಕಿಂತ ಮುಂಚೆ ಬಂದವರಿಗೆ ನಾಗರಿಕತ್ವವು ತಾನಾಗಿಯೇ ಬರುತ್ತದೆ. ಅವರಿಗೆ ಸಂಬಂಧಿಸಿದಂತೆ ಯಾವುದೇ ನಿಬಂಧನೆಗಳು, ಪ್ರಕ್ರಿಯೆಗಳನ್ನು ಹಾಕಿರುವುದಿಲ್ಲ. ಅದರ ನಂತರ ಬಂದಿರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಕ್ರಿಯಾತ್ಮಕ ನಿಬಂಧನೆಗಳನ್ನು ಹಾಕಲಾಗಿದೆ. ಮತ್ತು ಆ ನಿಬಂಧನೆಗಳನ್ನು ಸಂತುಷ್ಟಪಡಿಸಿದಾಗ ನಾವು ಈಗ ಪ್ರಸ್ತಾಪಿಸಿದ ಪ್ರಕರಣದಡಿಯಲ್ಲಿ ನಾಗರಿಕರಾಗಲು ಅವರು ಸಹ ಬಾಧ್ಯಸ್ತರಾಗಿರುತ್ತಾರೆ.

ಈಗ ನಾನು ಪಾಕಿಸ್ತಾನಕ್ಕೆ ವಲಸೆ ಹೋಗಿರುವ ಆದರೆ ಪಾಕಿಸ್ತಾನಕ್ಕೆ ಹೋದ ನಂತರ ಭಾರತಕ್ಕೆ ಮರಳಿದವರ ವಿಷಯಕ್ಕೆ ಬರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ಪರಿಸ್ಥಿತಿಯು ಹೀಗಿರುತ್ತದೆ. ಈ ವಿಷಯದಲ್ಲಿ ನಾನು ಬಹುಶಃ ಈ ವಿಷಯವನ್ನು ನಿರ್ವಹಿಸುತ್ತಿರುವ ಮಂತ್ರಿಗಳು ಹೊಂದಿರುವಷ್ಟು ಪೂರ್ತಿ ಪರಿಣತಿಯನ್ನು ಹೊಂದಿಲ್ಲ. ಆದರೆ ನಾವು ಇಟ್ಟಿರುವ ಪ್ರಸ್ತಾವನೆ ಏನೆಂದರೆ, ಪಾಕಿಸ್ತಾನಕ್ಕೆ ವಲಸೆ ಹೋಗಿರುವ ಮತ್ತು, ಅಲ್ಲಿಗೆ ಹೋದ ನಂತರ, ಭಾರತ ಸರ್ಕಾರವು ಭಾರತವನ್ನು ಪ್ರವೇಶಿಸಲು ಮಾತ್ರವಲ್ಲದೇ ಅಲ್ಲಿ ಮರುವಸತಿ ಅಥವಾ ಶಾಶ್ವತ ಮರಳುವಿಕೆಯ ಸಲುವಾಗಿ ನೀಡಿದ ಪರವಾನಿಗೆಯ ಆಧಾರದ ಮೇಲೆ ಭಾರತಕ್ಕೆ ಮರಳಿರುವಂಥ ವ್ಯಕ್ತಿಗಳು ಮಾತ್ರ ಈ ಸಂವಿಧಾನದ ಪ್ರಾರಂಭದಿಂದ ಭಾರತದ ನಾಗರಿಕರಾಗಲು ಬಾಧ್ಯಸ್ಥರಾಗಿರುತ್ತಾರೆ. ಈ ನಿಯಮವನ್ನು ಏಕೆ ಅಳವಡಿಸಬೇಕಾಗುತ್ತದೆಂದರೆ, ಭಾರತ ಸರ್ಕಾರವು ಭಾರತದಿಂದ ಪಾಕಿಸ್ತಾನಕ್ಕೆ ಹೋದವರು ನಂತರ ಪಾಕಿಸ್ತಾನದಿಂದ ಭಾರತಕ್ಕೆ ಮರಳಿದಾಗ, ಅವರನ್ನು ಬರಲು ಮತ್ತು ಶಾಶ್ವತವಾಗಿ ನೆಲಸಲು 'ಪರವಾನಿಗೆ ವ್ಯವಸ್ಥೆ' ಎಂಬ ವ್ಯವಸ್ಥೆಯಡಿಯಲ್ಲಿ ಅನುಮತಿಸಿದೆ. ಈ ಪರವಾನಿಗೆ ವ್ಯವಸ್ಥೆಯನ್ನು ೧೯ನೇ ಜುಲೈ ೧೯೪೮ರಿಂದ ಜಾರಿಯಲ್ಲಿ ತರಲಾಗಿದೆ. ಆದ್ದರಿಂದ ವಿಧಿ ೫–ಬಿರಲ್ಲಿಯ ನಿಯಮವು ಪಾಕಿಸ್ತಾನದಿಂದ ಬಂದು ಪುನಃ ಪಾಕಿಸ್ತಾನಕ್ಕೆ ಹೋಗಿ ಮತ್ತೆ ಭಾರತಕ್ಕೆ ಮರಳಿ ಬಂದ ವ್ಯಕ್ತಿಗಳ ನಾಗರಿಕತ್ವಕ್ಕೆ ಸಂಬಂಧಿಸಿರುತ್ತದೆ. ಒಂದು ವೇಳೆ ವ್ಯಕ್ತಿಯು ತನಗೆ ನೀಡಲಾದ ಮರುವಸತಿ ಅಥವಾ ಶಾಶ್ವತ ಮರಳುವಿಕೆಯ ಪರವಾನಿಗೆಯನ್ನಾಧರಿಸಿ ಬಂದಿದ್ದರೆ, ಅವನು ಮಾತ್ರ ಸಂವಿಧಾನವು ಪ್ರಾರಂಭವಾಗುವ ದಿನಾಂಕದಂದು ನಾಗರಿಕನಾಗಲು ಹಕ್ಕುದಾರನಾಗಿರುತ್ತಾನೆಂದು ನಿಯಮವನ್ನು ಮಾಡಲಾಗಿದೆ.

ಮಾನ್ಯರೇ, ನಾನು ಹೇಳಬಹುದಾದರೆ, ನಿಯಮಿತ ಉದ್ದೇಶಕ್ಕಾಗಿ, ಅಂದರೆ ಸಂವಿಧಾನ ಪ್ರಾರಂಭವಾಗುವ ದಿನಾಂಕದಂದು ನಾಗರಿಕತ್ವವನ್ನು ನೀಡುವ ಉದ್ದೇಶಕ್ಕಾಗಿ, ಪ್ರತಿಯೊಂದು ತರಹದ ವಿಷಯವನ್ನು ಒಳಪಡಿಸುವುದು ಸಾಧ್ಯವಿಲ್ಲ. ಈ ತಿದ್ದುಪಡಿಯಲ್ಲಿ ಅಳವಡಿಸಲಾದ ಅಂಶಗಳಿಂದ ಯಾವುದೇ ವರ್ಗದ ಜನರು ಬಿಟ್ಟುಹೋಗಿದ್ದರೆ, ಅವರ ಸಲುವಾಗಿ ನಂತರ ನಿಯಮಗಳನ್ನು ಮಾಡಲು ನಾವು ಸಂಸತ್ತಿಗೆ ಅಧಿಕಾರವನ್ನು ನೀಡಿದ್ದೇವೆ. ನಾನು ಪ್ರಸ್ತಾಪಿಸಿದ ತಿದ್ದುಪಡಿಗಳು ಉದ್ದೇಶಕ್ಕೆ ಮತ್ತು ಸದ್ಯಕ್ಕೆ ಸಮರ್ಪಕವಾಗಿವೆ ಎಂದು ನಾನು ಸದನಕ್ಕೆ ಸಲಹೆ ಮಾಡುತ್ತೇನೆ ಮತ್ತು ಸದನವು ಈ ತಿದ್ದುಪಡಿಗಳನ್ನು ಒಪ್ಪಿಕೊಳ್ಳುವುದೆಂದು ನಾನು ಆಶಿಸುತ್ತೇನೆ.

**ಶ್ರೀ ಬಿ.ಎಮ್. ಗುಪ್ತ** (ಮುಂಬಯಿ: ಸಾಮಾನ್ಯ): ಪರವಾನಿಗೆ ವ್ಯವಸ್ಥೆಯನ್ನು ೧೯ನೇ ಜುಲೈ ೧೯೪೮ರಂದು ಜಾರಿಗೊಳಿಸಲಾಯಿತೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ೧೯ನೇ ಜುಲೈ ೧೯೪೮ರಂದು ಪರವಾನಿಗೆ ಇಲ್ಲದೆ ಯಾವುದೇ ವ್ಯಕ್ತಿ ಬರತಕ್ಕದ್ದಲ್ಲ ಎಂದು ಅಧ್ಯಾದೇಶವನ್ನು ಜಾರಿಗೊಳಿಸಲಾಯಿತು, ಮತ್ತು ಅದರಡಿಯಲ್ಲಿ ೧೯ನೇ ಜುಲೈ ೧೯೪೮ರಂದು ಭಾರತೀಯ ಸರ್ಕಾರದಿಂದ ಕೆಲವು ನಿಯಮಗಳನ್ನು ರಚಿಸಲಾಯಿತು. ಪಾಕಿಸ್ತಾನದಿಂದ ಭಾರತಕ್ಕೆ ಬರುವ ಯಾವುದೇ ವ್ಯಕ್ತಿಗೆ ಅವನು ಬರಲು ಹಕ್ಕುದಾರನಾಗಿರುತ್ತಾನೆ ಎಂದು ವಿಶೇಷವಾಗಿ ಹೇಳುವ ಪರವಾನಿಗೆಯನ್ನು ನೀಡಬಹುದೆಂದು ಅದರಲ್ಲಿ ಹೇಳಿಕೊಳ್ಳಲಾಯಿತು. ಇದರಲ್ಲಿ ಮೂರು ತರಹದ ಪರವಾನಿಗೆಗಳು ಇರುತ್ತವೆ. ತಾತ್ಕಾಲಿಕ ಪರವಾನಿಗೆ, ಶಾಶ್ವತ ಪರವಾನಿಗೆ ಮತ್ತು ಮರುವಸತಿ ಅಥವಾ ಶಾಶ್ವತ ಮರಳುವಿಕೆಯ ಪರವಾನಿಗೆ, ಕೊನೆಯ ವರ್ಗದ ವ್ಯಕ್ತಿಗಳು ಮಾತ್ರ ಮರುವಸತಿ ಮತ್ತು ಶಾಶ್ವತ ಮರಳುವಿಕೆಯ ವ್ಯಕ್ತ ಗುರಿಯೊಂದಿಗೆ ಮರಳಿ ಬರಲು ಅನುಮತಿಯನ್ನು

ಹೊಂದಿರುತ್ತಾರೆ. ಅಂಥ ವ್ಯಕ್ತಿಗಳನ್ನು ಮಾತ್ರ ಈ ಪ್ರಕರಣದಲ್ಲಿ ಸೇರಿಸಲು ಪ್ರಸ್ತಾಪಿಸಲಾಗಿದೆ, ಮತ್ತು ಬೇರೆಯವರನ್ನಲ್ಲ.

**ಸಭಾಧ್ಯಕ್ಷರು:** ತಿದ್ದುಪಡಿಗಳನ್ನು ನಾಳೆಗೆ ತೆಗೆದುಕೊಳ್ಳೋಣ ಎಂದು ನನಗೆ ಅನ್ನಿಸುತ್ತದೆ.

* * *

***ಸಭಾಧ್ಯಕ್ಷರು:** ಮುಂದುವರಿದ ಭಾಷಣಗಳಿಂದ ಯಾವುದೇ ಉಪಯುಕ್ತ ಉದ್ದೇಶವನ್ನು ಈಡೇರಿಸಿದಂತೆ ಆಗುವುದೆಂದು ನನಗೆ ಅನ್ನಿಸುವುದಿಲ್ಲ. ತಿದ್ದುಪಡಿಗಳೆಲ್ಲ ಸದಸ್ಯರ ಮುಂದಿವೆ; ಅವರು ಬಯಸಿದ ಯಾವುದೇ ತಿದ್ದುಪಡಿಯ ಪರವಾಗಿ ಮತ ಹಾಕಲು ಅವರು ಸ್ವತಂತ್ರರು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ)**:** ಮಾನ್ಯ ಸಭಾಧ್ಯಕ್ಷರೇ, ನಾನು ಮಂಡಿಸಿದ ಕರಡು ವಿಧಿಗಳನ್ನು ಟೀಕಿಸಿದವರು ಮಾಡಲಾದ ಪ್ರತಿಯೊಂದು ಅಂಶವನ್ನು ಟಿಪ್ಪಣಿ ಮಾಡಿಕೊಳ್ಳಲು ನನಗೆ ಸಾಧ್ಯವಾಗಿಲ್ಲ. ಟೀಕೆಯ ಪ್ರತಿಯೊಂದು ಸಾಲನ್ನು ತೆಗೆದುಕೊಳ್ಳುವುದು ಆವಶ್ಯಕವೆಂದು ನನಗನ್ನಿಸುವುದಿಲ್ಲ. ಹೆಚ್ಚು ಪ್ರಮುಖವಾದ ಅಂಶಗಳನ್ನು ತೆಗೆದುಕೊಂಡು ಉತ್ತರಿಸುವುದು ಸಾಕೆನಿಸುತ್ತದೆ.

ಕರಡು ಪ್ರಕರಣಗಳಿಂದ ನಾವು ನಮ್ಮ ನಾಗರಿಕತ್ವವನ್ನು ಬಹಳ ಅಗ್ಗವಾದದ್ದನ್ನಾಗಿ ಮಾಡಿದ್ದೇವೆಂದು ನನ್ನ ಮಿತ್ರ ಡಾ. ದೇಶಮುಖ್ ಹೇಳಿದ್ದಾರೆ. ನಾಗರಿಕತ್ವ ಕಾನೂನಿಗೆ ಸಂಬಂಧಿಸಿದ ನಿಯಮಗಳ ತಿಳುವಳಿಕೆ ಅವರಿಗೆ ಇದ್ದಿದ್ದರೆ, ನಮ್ಮ ನಾಗರಿಕತ್ವವು ಬೇರಾವುದೇ ರಾಷ್ಟ್ರವು ಅಳವಡಿಸಿದ ಕಾನೂನಿಗಿಂತ ಅಗ್ಗವಾಗಿಯೇನೂ ಇಲ್ಲ ಎಂದು ಮನಗಾಣುತ್ತಿದ್ದರೆಂದು ನನಗೆ ಅನಿಸುತ್ತದೆ.

ನನ್ನ ಮಿತ್ರ ಪ್ರೊ. ಕೆ.ಟಿ. ಶಹಾ ಅವರು ಮಾಡಿದ, ತಮ್ಮ ದೇಶದಲ್ಲಿ ವಾಸವಾಗಿರುವ ಭಾರತೀಯರಿಗೆ ನಾಗರಿಕತ್ವವನ್ನು ನಿರಾಕರಿಸುವ ದೇಶದ ನಿವಾಸಿಗಳಿಗೆ ನಾಗರಿಕತ್ವವನ್ನು ನೀಡದಂತೆ ವಿಧಿ ೬ರಡಿಯಲ್ಲಿ ಸಂಸತ್ತಿನ ಪ್ರಾಧಿಕಾರವನ್ನು ಮಿತಿಗೊಳಿಸುವ ಸಕಾರಾತ್ಮಕ ನಿರ್ಬಂಧನೆ ಈ ಪ್ರಕರಣಗಳಲ್ಲಿರಬೇಕೆನ್ನುವ ಪ್ರತಿಪಾದನೆಗೆ ಸಂಬಂಧಿಸಿದಂತೆ, ಅಂಥ ಸಂದರ್ಭಗಳು ಯಾವ ಯಾವ ಸಂದರ್ಭದಲ್ಲಿ ಉದ್ಭವಿಸುತ್ತವೆಯೋ ಅದಕ್ಕನುಗುಣವಾಗಿ ನಿರ್ಧರಿಸಲು ಆ ವಿಷಯವನ್ನು ಸಂಸತ್ತಿನ ನಿರ್ಧಾರಕ್ಕೆ ಬಿಟ್ಟುಕೊಡಬೇಕೆನ್ನುವುದು ನನ್ನ ಅನಿಸಿಕೆ.

ನಾನು ಹೆಚ್ಚು ಆಸಕ್ತಿ ಹೊಂದಿರುವ ಟೀಕಾತ್ಮಕ ಅಂಶಗಳೆಂದರೆ, ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದ ಮತ್ತು ಭಾರತದಿಂದ ಪಾಕಿಸ್ತಾನಕ್ಕೆ ವಲಸೆ ಹೋದವರಿಗೆ ಸಂಬಂಧಿಸಿದ ವಿಧಿಗಳ ಕೆಲವು ಭಾಗಗಳ ಮೇಲೆ ಮಾಡಲಾದವುಗಳಾಗಿವೆ. ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದವರಿಗೆ ಸಂಬಂಧಿಸಿದ ನಿಯಮಾಂಶಗಳ ಬಗ್ಗೆ ಬಂದ ಟೀಕೆಗಳು ಪ್ರಧಾನವಾಗಿ ಅಸ್ಸಾಮಿನ ಪ್ರತಿನಿಧಿಗಳಿಂದ, ವಿಶೇಷವಾಗಿ ನನ್ನ ಮಿತ್ರ ಶ್ರೀ ರೋಹಿಣಿ ಕುಮಾರ ಚೌಧುರಿ ಧ್ವನಿಸಿದಂತೆ, ಬಂದವುಗಳಾಗಿವೆ. ಅವರನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ, ಅವರ ವಾದವೇನೆಂದರೆ ಈ ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬರುವವರಿಗೆ ಸಂಬಂಧಿಸಿದ ಪ್ರಕರಣಗಳು ಪೂರ್ವ ಬಂಗಾಳದಿಂದ ಅಸ್ಸಾಂನೊಳಗೆ ಬರುವ ಬಂಗಾಳಿ ಹಾಗೂ ಮುಸಲ್ಮಾನರಿಗೆ ಬಾಗಿಲನ್ನು ತೆರೆದಿಟ್ಟಿವೆ ಮತ್ತು ಅವರ ಆರ್ಥಿಕತೆಯನ್ನು ಕೆಡಿಸುತ್ತವೆ ಅಥವಾ ಆ ಪ್ರಾಂತ್ಯದಲ್ಲಿ ಮತೀಯ ಸಮತೋಲನವನ್ನು ಕೆಡಿಸುತ್ತವೆ. ಮಾನ್ಯರೇ, ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬರುವವರಿಗೆ ಸಂಬಂಧಿಸಿದ ವಿಧಿಗಳ ಉದ್ದೇಶವನ್ನು ಅವರು ಸಂಪೂರ್ಣವಾಗಿ ತಪ್ಪಾಗಿ ಗ್ರಹಿಸಿದ್ದಾರೆಂದು ನನಗೆ ಅನಿಸುತ್ತದೆ.

* ಸಿ.ಎ.ಡಿ. ಸಂ. IX, ೧೨ನೇ ಆಗಸ್ಟ್ ೧೯೪೯, ಪುಟ ೪೨೨–೨೪.

ಅವರು ಈ ನಿಯಮಾಂಶಗಳನ್ನು ಮತ್ತೊಮ್ಮೆ ಓದಿದರೆ, ೧೯ನೇ ಜುಲೈ ೧೯೪೮ಕ್ಕಿಂತ ಮುಂಚೆ ಅಸ್ಸಾಂನ್ನು ಪ್ರವೇಶಿಸಿದವರನ್ನು ಮಾತ್ರ. ಅವರು ಭಾರತದ ಭೂಕ್ಷೇತ್ರದಲ್ಲಿ ವಾಸಿಸುತ್ತಿದ್ದರೆ, ಅವರು ತಾನಾಗಿಯೇ ಅಸ್ಸಾಂನ ನಾಗರಿಕರಾಗುತ್ತಾರೆಂದು ಘೋಷಿಸಲಾಗಿರುವುದನ್ನು ಅವರು ಕಾಣಬಹುದು. ಆದರೆ ೧೯ನೇ ಜುಲೈ ೧೯೪೮ರ ನಂತರ ಅಸ್ಸಾಂನ್ನು ಪ್ರವೇಶಿಸಿದವರು, ಅವರು ಬಂಗಾಳಿ ಹಿಂದುಗಳಾಗಿರಲಿ ಅಥವಾ ಮುಸಲ್ಮಾನರಾಗಿರಲಿ, ನಾಗರಿಕತ್ವವು ತಾನಾಗಿಯೇ ಬರುವ ವ್ಯವಹಾರವೇ ಅಲ್ಲ ಎನ್ನುವುದನ್ನು ಅವರು ಕಾಣಬಹುದು. ೧೯ನೇ ಜುಲೈ ೧೯೪೮ರ ನಂತರ ಅಸ್ಸಾಂನ್ನು ಪ್ರವೇಶಿಸಿದವರಿಗೆ ಮೂರು ನಿಬಂಧನೆಗಳನ್ನು ಹೇರಲಾಗಿದೆ. ಮೊದಲನೆ ನಿಬಂಧನೆ ಏನೆಂದರೆ, ಅಂಥ ವ್ಯಕ್ತಿಯು ನಾಗರಿಕತ್ವಕ್ಕಾಗಿ ಅರ್ಜಿಯನ್ನು ಹಾಕಬೇಕು. ಅವನು ಅಸ್ಸಾಂನಲ್ಲಿ ಆರು ತಿಂಗಳವರೆಗೆ ವಾಸಿಸಿದ್ದಾಗಿ ರುಜುವಾತುಪಡಿಸಬೇಕು ಮತ್ತು ಮೂರನೆಯದಾಗಿ, ಅತ್ಯಂತ ಕಠಿಣವಾದ ನಿಬಂಧನೆಯಿದೆ. ಅದೇನೆಂದರೆ, ಭಾರತದ ಅಧೀನ ಸರ್ಕಾರದಿಂದ ನೇಮಿಸಲಾದ ಅಧಿಕಾರಿಯಿಂದ ಅವನು ನೋಂದಾವಣಿ ಹೊಂದಿರಬೇಕು. ನಾನು ಅತ್ಯಂತ ಕಟಿಬದ್ಧನಾಗಿ ಹೇಳಬಯಸುವುದೇನೆಂದರೆ, ಈ ನೋಂದಾವಣಿಯ ಅಧಿಕಾರವು ಪರಮಾಧಿಕಾರವಾಗಿರುತ್ತದೆ. ಒಬ್ಬ ವ್ಯಕ್ತಿಯು ಅರ್ಜಿಯನ್ನು ಹಾಕಿದ್ದಾನೆ ಎಂದ ಮಾತ್ರಕ್ಕೆ, ಅವನು ಅಸ್ಸಾಂನಲ್ಲಿ ಆರು ತಿಂಗಳು ವಾಸವಾಗಿದ್ದನೆಂದ ಮಾತ್ರಕ್ಕೆ ನೋಂದಾವಣಿ ಅಧಿಕಾರಿಯು ಅವನನ್ನು ನೋಂದಾವಣಿ ಮಾಡಿಕೊಳ್ಳಲೇಬೇಕೆಂಬ ಜವಾಬ್ದಾರಿ ಅಥವಾ ಕರ್ತವ್ಯ ಅಥವಾ ಬಾಧ್ಯತೆಯನ್ನು ಹೊಂದಿರುವುದಿಲ್ಲ. ಅರ್ಜಿ ಇದ್ದಾಗ್ಯೂ, ಅವನು ಆರು ತಿಂಗಳು ವಾಸಿಸಿದ್ದಾಗ್ಯೂ, ಅವನನ್ನು ನೋಂದಾಯಿಸಬೇಕೋ ಅಥವಾ ನೋಂದಾಯಿಸಕೂಡದೋ ಎನ್ನುವ ಸ್ವಾತಂತ್ರ್ಯವನ್ನು ಅಧಿಕಾರಿಯು ಹೊಂದಿರುತ್ತಾನೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ತನ್ನ ಮುಂದಿರುವ ಮಾಹಿತಿಯನ್ನು ಆಧರಿಸಿ, ಅಧಿಕಾರಿಯು ಅಂಥ ವ್ಯಕ್ತಿಯು ಭಾರತದ ಶಾಶ್ವತ ನಾಗರಿಕನಾಗಬೇಕೆನ್ನುವ ಸದುದ್ದೇಶದಿಂದ ಬಂದಿದ್ದಾನೆಯೇ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ಬಂದಿದ್ದಾನೆಯೇ ಎಂಬ ವಿಷಯಗಳನ್ನು ಪರೀಕ್ಷಿಸುವ ಅಧಿಕಾರವನ್ನು ಹೊಂದಿರುತ್ತಾನೆ. ಈಗ, ನನಗೆ ತೋರುವುದೇನೆಂದರೆ ೧೯ನೇ ಜುಲೈ ೧೯೪೮ರ ನಂತರ ಅಸ್ಸಾಂ ಪ್ರವೇಶಿಸಿದವರಿಗೆ ಅನ್ವಯವಾಗುವ ಈ ಮೂರು ನಿಬಂಧನೆಗಳನ್ನು ಪರಿಗಣಿಸಿದ ನಂತರ, ನನ್ನ ಮಿತ್ರ ಶ್ರೀ ರೋಹಿಣಿ ಕುಮಾರ ಚೌಧುರಿ ವ್ಯಕ್ತಪಡಿಸಿದ, ಬಂಗಾಳಿಯರಿಂದ ಅಥವಾ ಮುಸಲ್ಮಾನರಿಂದ ಅಸ್ಸಾಂ ಜನತೆಯನ್ನು ಕೊಚ್ಚಿಹಾಕುವ ಪ್ರವಾಹ ಬಾಗಿಲುಗಳನ್ನು ತೆಗೆದಂತಾಗುತ್ತದೆ ಎಂಬ ಭೀತಿಯು ನಿರಾಧಾರವಾದುದು ಎಂದು ನನಗನಿಸುತ್ತದೆ. ೧೯ನೇ ಜುಲೈ ೧೯೪೮ಕ್ಕಿಂತ ಮುಂಚೆ ಬಂಗಾಳವನ್ನು ಪ್ರವೇಶಿಸಿದವರ ಬಗ್ಗೆ ಏನಾದರೂ ಅವರ ತಕರಾರು ಇದ್ದರೆ,– ಈ ವಿಷಯದಲ್ಲಿ ಅವನು ಭಾರತದಲ್ಲಿ ವಾಸವಾಗಿದ್ದನೆಂದು ತೋರಿಸಿದರೆ ನಾಗರಿಕತ್ವವು ತಾನಾಗಿಯೇ ಬರುತ್ತದೆ. ನಿಸ್ಸಂದೇಹವಾಗಿಯೂ ಆ ವಿಷಯವನ್ನು ಸಂಸತ್ತು ವಿಧಿ ೬ರಡಿಯಲ್ಲಿ ಮಾಡುವ ಯಾವುದೇ ಕಾನೂನಿನಡಿಯಲ್ಲಿ ನಿರ್ವಹಿಸುತ್ತದೆ. ಅಸ್ಸಾಂನಿಂದ ಬಂದ ನನ್ನ ಮಿತ್ರರು ೧೯ನೇ ಜುಲೈ ೧೯೪೮ಕ್ಕಿಂತ ಮುಂಚೆ ಅಸ್ಸಾಂನ್ನು ಪ್ರವೇಶಿಸಿದವರನ್ನು, ತಮ್ಮ ಮನಸ್ಸಿನಲ್ಲಿರುವ ಯಾವುದೇ ಕಾರಣಕ್ಕಾಗಿ ಅಥವಾ ಸಂಸತ್ತಿನ ಮುಂದೆ ತಾವು ಇಡಬಯಸುವ ಕಾರಣಕ್ಕಾಗಿ, ಅನರ್ಹಗೊಳಿಸಬೇಕೆಂದು ಸಂಸತ್ತಿಗೆ ಮನವರಿಕೆ ಮಾಡಿಕೊಳ್ಳುವಲ್ಲಿ ಸಮರ್ಥವಾದಲ್ಲಿ, ಆ ವಿಷಯವನ್ನು ಸಂಸತ್ತು ಪರಿಗಣನೆಗೆ ತೆಗೆದುಕೊಳ್ಳುವುದರಲ್ಲಿ ನನಗೆ ಯಾವುದೇ ಸಂದೇಹವಿಲ್ಲ. ಆದ್ದರಿಂದ ಪಾಕಿಸ್ತಾನದಿಂದ ಅಸ್ಸಾಂಗೆ ವಲಸೆ ಬಂದವರಿಗೆ ಸಂಬಂಧಿಸಿದ ಈ ವಿಧಿಗಳ ಮೇಲಿನ ಟೀಕೆಗಳು ಸಂಪೂರ್ಣವಾಗಿ ಆಧಾರರಹಿತವಾಗಿವೆ ಎಂದು ಅರಿಕೆ ಮಾಡುತ್ತೇನೆ.

ನಂತರ ನಾನು ಭಾರತದಿಂದ ಪಾಕಿಸ್ತಾನಕ್ಕೆ ವಲಸೆ ಹೋದವರಿಗೆ ಸಂಬಂಧಿಸಿದ ನಿಯಮಾಂಶಗಳ

ಮೇಲೆ ಮಾಡಲಾದ ಟೀಕೆಗಳಿಗೆ ಬರುತ್ತೇನೆ. ಈ ವಿಧಿಗಳನ್ನು ಟೀಕಿಸಿದವರೂ ಸಹ ಏನನ್ನು ನಿರ್ದಿಷ್ಟವಾಗಿ ಮಾಡಲು ಪ್ರಸ್ತಾಪಿಸಲಾಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡಿಲ್ಲವೆಂದು ನನಗೆ ಅನಿಸುತ್ತದೆ. ಆದ್ದರಿಂದ, ಈ ವಿಧಿಗಳು ಏನು ಹೇಳುತ್ತವೆಂಬುದನ್ನು ನಾನು ಮತ್ತೊಮ್ಮೆ ತಿಳಿಸಬಯಸುತ್ತೇನೆ. ಭಾರತದಿಂದ ಪಾಕಿಸ್ತಾನಕ್ಕೆ ವಲಸೆ ಹೋಗುವವರಿಗೆ ಸಂಬಂಧಿಸಿದ ನಿಯಮಾಂಶಗಳ ಪ್ರಕಾರ, ಒಂದು ಸಣ್ಣ ಅಪರಾಧವನ್ನು ಹೊರತುಪಡಿಸಿ, ೧ನೇ ಮಾರ್ಚ್ ೧೯೪೭ರ ನಂತರ ಭಾರತವನ್ನು ಬಿಟ್ಟ ಯಾವುದೇ ವ್ಯಕ್ತಿಯನ್ನು ಭಾರತದ ನಾಗರಿಕನಲ್ಲವೆಂದು ಘೋಷಿಸಲಾಗಿರುತ್ತದೆ. ಅದನ್ನು ಬಹಳ ಜಾಗರೂಕವಾಗಿ ಅರ್ಥ ಮಾಡಿಕೊಳ್ಳಬೇಕೆಂದು ನನಗನಿಸುತ್ತದೆ. ಇದೊಂದು ನಾವು ನಿರೂಪಿಸುವ ಸಾಮಾನ್ಯ ಮತ್ತು ಸಾರ್ವತ್ರಿಕ ಪ್ರಸ್ತಾವನೆಯಾಗಿರುತ್ತದೆ. ಈ ಪ್ರಸ್ತಾವನೆಯನ್ನು ನಿರೂಪಿಸುವುದು ಅವಶ್ಯವಾಗಿದೆ. ಏಕೆಂದರೆ, ಅಂತರರಾಷ್ಟ್ರೀಯ ಕಾನೂನಿನ ನಿಯಮದ ಪ್ರಕಾರ ಜನ್ಮವು ವಾಸಸ್ಥಳವನ್ನು ನಿಗದಿಪಡಿಸುತ್ತದೆ, ಒಬ್ಬ ವ್ಯಕ್ತಿಯು ತನ್ನ ಮೂಲ ವಾಸಸ್ಥಳವನ್ನು ಯಾವುದೇ ವಿಶೇಷ ಪ್ರಯತ್ನಗಳಿಂದ, ಅರ್ಜಿ ಹಾಕುವುದರಿಂದಾಗಲೀ ಅಥವಾ ಇತರ ಯಾವುದೇ ವಿಧಾನಗಳಿಂದಾಗಲೀ ಅಥವಾ ಒಂದು ತರಹದ ದಯಾಳುತನದಿಂದಾಗಲೀ ಪಡೆಯಬೇಕಾಗಿಲ್ಲ. ಮೂಲ ವಾಸಸ್ಥಳವು ಜನ್ಮದ ಜೊತೆಗೇ ಹೋಗುತ್ತದೆ. ಭಾರತವನ್ನು ಬಿಟ್ಟಂಥ ಆದರೆ ಭಾರತದಲ್ಲಿ ಜನ್ಮಿಸಿದ ವ್ಯಕ್ತಿಗಳು ಪಾಕಿಸ್ತಾನಕ್ಕೆ ಹೋಗಿದ್ದರೂ ಸಹಿತ, ಅಂತಾರಾಷ್ಟ್ರೀಯ ಕಾನೂನಿನ ನಿಯಮವನ್ನಾಧರಿಸಿ, ತಮ್ಮ ಮೂಲ ಜನ್ಮಸ್ಥಳವು ಸುಭದ್ರವಾಗಿದೆ ಎಂದು ಇನ್ನೂ ಸಹ ಕ್ಲೇಮು ಮಾಡಬಹುದೆಂದು ಎನಿಸುತ್ತದೆ. ಅವರು ಅಂಥ ಯಾವುದೇ ಪ್ರತಿರಕ್ಷಣೆಯನ್ನು ಹೊಂದಕೂಡದೆಂಬ ದೃಷ್ಟಿಯಿಂದ ಇದನ್ನು ಖಡಾಖಂಡಿತವಾಗಿ ಸ್ಪಷ್ಟ ಮಾಡುವುದು ಜಾಣತನವೆಂದೆನಿಸಿತು. ಅಂದರೆ ಯಾರು ೧ನೇ ಮೇ ನಂತರ ಪಾಕಿಸ್ತಾನಕ್ಕೆ ಹೋಗಿರುತ್ತಾರೋ– ಮೇ ೧ನೇ ತಾರೀಖನ್ನು ಬೇಕೆಂದು ತೆಗೆದುಕೊಂಡಿರುವುದು ನಿಮಗೆಲ್ಲಾ ಗೊತ್ತು, ಏಕೆಂದರೆ ಈ ತಾರೀಖಿನಂದೇ ತೊಂದರೆಗಳು ಪ್ರಾರಂಭವಾದವು ಮತ್ತು ತಂಡೋಪತಂಡ ವಲಸೆ ಪ್ರಾರಂಭವಾಯಿತು ಮತ್ತು ತೊಂದರೆಗಳ ಫಲಿತಾಂಶದಿಂದಾಗಿ ಯಾವುದೇ ವ್ಯಕ್ತಿಯು ಪಾಕಿಸ್ತಾನಕ್ಕೆ ಶಾಶ್ವತವಾಗಿ ನೆಲೆಸುವ ಉದ್ದೇಶದಿಂದ ಹೋಗಿದ್ದರೆ ಅವನು ತನ್ನ ಭಾರತದ ನಾಗರಿಕತ್ವವನ್ನು ಕಳೆದುಕೊಳ್ಳುತ್ತಾನೆಂದು ಕಲ್ಪಿಸಿಕೊಳ್ಳುವುದರಿಂದ ಯಾವುದೇ ಅಂತಾರಾಷ್ಟ್ರೀಯ ನಾಯಕತ್ವದ ಉಲ್ಲಂಘನೆಯಾಗುವುದಿಲ್ಲ ಎಂದು ನಾವು ಯೋಚಿಸಿದೆವು. ಈ ಎರಡು ವಿಷಯಗಳನ್ನು ನಿರೂಪಿಸುವುದಕ್ಕಾಗಿ ನಾವು ಈ ಒಂದು ಸ್ವಾಭಾವಿಕ ಊಹೆಯನ್ನು ಕಾನೂನು ನಿಯಮವನ್ನಾಗಿ ಪರಿವರ್ತಿಸಿದೆವು ಮತ್ತು ೧ನೇ ಮೇ ನಂತರ ಪಾಕಿಸ್ತಾನಕ್ಕೆ ಹೋದ ಯಾವುದೇ ವ್ಯಕ್ತಿಯು ತಾನು ಇನ್ನೂ ಸಹ ಭಾರತದ ವಾಸಸ್ಥಳವನ್ನು ಹೊಂದಿರುತ್ತೇನೆಂದು ಹೇಳಲು ಬಾಧ್ಯಸ್ತನಿರುವುದಿಲ್ಲ ಎಂದು ಅಳವಡಿಸಿಕೊಂಡೆವು. ವಿಧಿ ೫ರ ಪ್ರಕಾರ ಯಾವುದರಲ್ಲಿ ವಾಸಸ್ಥಳವು ನಾಗರಿಕತ್ವಕ್ಕೆ ಒಂದು ಆವಶ್ಯಕ ಅಂಶವಾಗಿರುವುದೋ, ಪಾಕಿಸ್ತಾನಕ್ಕೆ ಹೋದಂಥ ವ್ಯಕ್ತಿಗಳು ತಮ್ಮ ವಾಸಸ್ಥಳವನ್ನು ಮತ್ತು ನಾಗರಿಕತ್ವವನ್ನು ಕಳೆದುಕೊಂಡಿರುತ್ತಾರೆ.

ಈಗ ನಾನು ಅಪವಾದದ ಅಂಶಕ್ಕೆ ಬರುತ್ತೇನೆ. ಭಾರತ ಬಿಟ್ಟು ಪಾಕಿಸ್ತಾನಕ್ಕೆ ಹೋದವರಲ್ಲಿ ನಂತರ ಭಾರತಕ್ಕೆ ಮರಳಿದ ಜನರೂ ಇದ್ದಾರೆ. ಇಲ್ಲಿಯೂ ಸಹ ನಮ್ಮ ನಿಯಮವೇನೆಂದರೆ, ಅವನು ಕೆಲವು ವಿಶೇಷ ಸಂದರ್ಭಗಳನ್ನು ಸಂತುಷ್ಟಿಪಡಿಸದಿದ್ದರೆ ಭಾರತಕ್ಕೆ ಮರಳಿದ ಯಾವುದೇ ವ್ಯಕ್ತಿಯನ್ನು ನಾಗರಿಕನೆಂದು ಪರಿಗಣಿಸಲಾಗುವುದಿಲ್ಲ. ಪಾಕಿಸ್ತಾನಕ್ಕೆ ಹೋಗುವುದು ಮತ್ತು ಭಾರತಕ್ಕೆ ಮರಳುವುದು ನಾನು ಅಳವಡಿಸಲಾದ ಸಾಮಾನ್ಯ ನಿಯಮದಲ್ಲಿ ಯಾವುದೇ ಬದಲಾವಣೆಯನ್ನು ಮಾಡುವುದಿಲ್ಲ, ಅಂದರೆ ಅಂಥ ವ್ಯಕ್ತಿಯು ನಾಗರಿಕನಾಗುವುದಿಲ್ಲ. ಅಪವಾದವು ಹೀಗಿರುತ್ತದೆ: ನನ್ನ ಗೌರವಾನ್ವಿತ ಮಿತ್ರ

ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಹೇಳಿದಂತೆ, ಭಾರತ ಸರ್ಕಾರ ಮತ್ತು ಪಾಕಿಸ್ತಾನ ಸರ್ಕಾರಗಳ ಮಧ್ಯೆ ನಡೆದ ಚರ್ಚೆಯ ಸಂದರ್ಭದಲ್ಲಿ, ಅವರು ಒಂದು ವ್ಯವಸ್ಥೆಗೆ ಬಂದರು, ಅದರಂತೆ ಭಾರತ ಸರ್ಕಾರವು ಭಾರತದಿಂದ ಪಾಕಿಸ್ತಾನಕ್ಕೆ ಹೋದ ಕೆಲವು ವ್ಯಕ್ತಿಗಳಿಗೆ ಭಾರತಕ್ಕೆ ಮರಳಲು ಪರವಾನಿಗೆ ನೀಡಲು ಒಪ್ಪಿಕೊಂಡಿತು ಮತ್ತು ಅವರನ್ನು ಕೇವಲ ತಾತ್ಕಾಲಿಕ ಪ್ರವಾಸಿಗರೆಂದು ಅಥವಾ ವ್ಯಾಪಾರಿಗಳೆಂದು ಅಥವಾ ತಮ್ಮ ರೋಗಪೀಡಿತ ಸಂಬಂಧಿಕೆಯನ್ನು ನೋಡಲು ಇತರ ಯಾವುದೇ ತಾತ್ಕಾಲಿಕ ಸ್ವರೂಪದ ಉದ್ದೇಶಗಳಿಗಾಗಿ ಮಾತ್ರ ಮರಳಲು ಅನುಮತಿ ನೀಡದೇ, ಭಾರತಕ್ಕೆ ಮರಳಲು ಮತ್ತು ಶಾಶ್ವತವಾಗಿ ನೆಲಸಲು ಮತ್ತು ಶಾಶ್ವತವಾಗಿ ಅಲ್ಲಿ ಉಳಿಯಲು ವ್ಯಕ್ತವಾಗಿ ಪರವಾನಿಗೆಯನ್ನು ನೀಡಲು ಒಪ್ಪಿಕೊಂಡಿತು. ಅಂಥ ವ್ಯಕ್ತಿಗಳನ್ನು ನಾವೀಗ ಭಾರತದಲ್ಲಿ ಹೊಂದಿದ್ದೇವೆ. ಆದ್ದರಿಂದ ಪ್ರಶ್ನೆ ಏನೆಂದರೆ, ನಾನು ಹೇಳಲಾದ ಈ ಪ್ರಕರಣದಲ್ಲಿ ನಾವು ನಿರೂಪಿಸಿದ ೧ನೇ ಮಾರ್ಚ್ ೧೯೪೭ರ ನಂತರ ಪಾಕಿಸ್ತಾನಕ್ಕೆ ಹೋದ ಯಾವುದೇ ವ್ಯಕ್ತಿಗೆ ಪರವಾನಿಗೆ ನೀಡಕೂಡದು ಎಂಬ ನಿಯಮಕ್ಕೆ ಅಪವಾದ ಇರಬೇಕೇ ಅಥವಾ ಬೇಡವೇ ಎನ್ನುವುದು. ಇಲ್ಲಿ ಅನಿಸಿದ್ದೇನೆಂದರೆ ಮತ್ತು ನನ್ನ ವೈಯಕ್ತಿಕ ಪರವಾಗಿ ಮಾತನಾಡುವುದಾದರೆ ನನ್ನ ವಿನಂತಿ ಅತಿ ಸಮರ್ಪಕವಾಗಿ ಅನ್ನಿಸಿದ್ದೇನೆಂದರೆ, ಯಾವಾಗ ಸರ್ಕಾರವು ಒಬ್ಬ ವ್ಯಕ್ತಿಗೆ ತನ್ನ ಹಳೆಯ ವಾಸಸ್ಥಳಕ್ಕೆ ಮರಳಲು ಮತ್ತು ಅಲ್ಲಿ ಶಾಶ್ವತವಾಗಿ ನೆಲಸಲು ಪರವಾನಿಗೆ ನೀಡಲು ವಾಗ್ದಾನ ಮಾಡಿರುತ್ತಾನೆಯೋ, ಅಂಥ ವ್ಯಕ್ತಿಯಿಂದ ನಾಗರಿಕನಾಗುವ ಅರ್ಹತೆಯನ್ನು ಕಸಿದುಕೊಳ್ಳುವುದು ಸರಿಯಾಗಿರುವುದಿಲ್ಲ. ನನ್ನ ಮಿತ್ರ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಹೇಳಿದ ಹಾಗೆ, ಈ ವಿಭಾಗದಲ್ಲಿ ಬರುವ ವರ್ಗದ ಜನತೆ, ನಾವು ಹೊಂದಿರುವ ಅತಿ ಹೆಚ್ಚಿನ ಹಿಂದು ಮತ್ತು ಮುಸಲ್ಮಾನ ಜನಸಂಖ್ಯೆಯ ಪರಿಗಣನೆಯಲ್ಲಿ ಬಹಳ ಚಿಕ್ಕದಾಗಿರುತ್ತದೆ, ಅಂದರೆ ಸುಮಾರು ಎರಡರಿಂದ ಮೂರು ಸಾವಿರದವರೆಗೆ ನಮ್ಮ ಸರ್ಕಾರವೇ, ಸರಿಯಾಗಲೀ ಅಥವಾ ತಪ್ಪಾಗಿಯಾಗಲೀ, ಶಾಶ್ವತ ವಾಸದ ಉದ್ದೇಶಕ್ಕಾಗಿ ಪಾಕಿಸ್ತಾನದಿಂದ ಬರಲು ಅನುಮತಿ ನೀಡಿ, ನಂತರ ಈ ವಿಶೇಷಾಧಿಕಾರವನ್ನು ಹೊಂದಲು ಈ ಜನರಿಗೆ ನಾವು ಅನುಮತಿ ನೀಡಬಾರದೆನ್ನುವುದು ನನ್ನ ನಿರ್ಣಯದಲ್ಲಿ ಅದು ಅತ್ಯಂತ ವೈಯಕ್ತಿಕವಾದದ್ದು. ನನ್ನ ನಿರ್ಣಯದಲ್ಲಿ ಅದು ವಿಶ್ವಾಸಘಾತುಕತನ ಎಂದು ಕಾಣುತ್ತದೆ. ಇನ್ನು ಮುಂದೆ ಪರವಾನಿಗೆ ಪದ್ಧತಿಯನ್ನು ಭಾರತ ಸರ್ಕಾರವು ಮುಂದುವರೆಸುವುದನ್ನು ನಿಲ್ಲಿಸುವ ಮಸೂದೆಯನ್ನು ತರಲು ಈ ಸದನವು ಮುಕ್ತವಾಗಿರುತ್ತದೆ. ಅದು ಈ ಸದನದ ಅಧಿಕಾರ ಮತ್ತು ವಿಶೇಷಾಧಿಕಾರದ ಒಳಗಡೆಗೆ ಬರುತ್ತದೆ. ಆದರೆ, ಇಲ್ಲಿ ತಮ್ಮ ಮನೆಯನ್ನು ಮಾಡಲು ನಮ್ಮದೇ ಸರ್ಕಾರದ ಆಶ್ವಾಸನೆಯ ಮೇರೆಗೆ ಬಂದಿರುವ, ನಾನು ಹೇಳಿದ ಹಾಗೆ ಬಹಳ ಕಡಿಮೆ ಸಂಖ್ಯೆಯಲ್ಲಿರುವ, ಈ ಜನತೆಗೆ ನಾಗರಿಕತ್ವದ ಹಕ್ಕನ್ನು ತಿರಸ್ಕರಿಸುವುದರಿಂದ ಈ ಸದನವು ಸರಿಯಾಗಿ ಅಥವಾ ಲೋಕ ವಿವೇಚನೆಗೆ ಅನುಗುಣವಾಗಿ ಕಾರ್ಯ ಮಾಡಿದಂತಾಗುತ್ತದೆಂದು ನನಗನ್ನಿಸುವುದಿಲ್ಲ. ಮಾನ್ಯರೇ, ಆದ್ದರಿಂದ ಈ ವಿಧಿಗಳ ವಿರುದ್ಧ ಮಾಡಿದ ಟೀಕೆಗಳಲ್ಲಿ ಯಾವುದೇ ಸಾರವಿದೆ ಎಂದು ನನಗನ್ನಿಸುವುದಿಲ್ಲ ಮತ್ತು ಸದನವು ಅವುಗಳನ್ನು ಇದ್ದಂತೆಯೇ ಒಪ್ಪಿಕೊಳ್ಳುತ್ತದೆ ಎಂದು ನಾನು ಭಾವಿಸಿದ್ದೇನೆ.

# ಭಾರತೀಯ ಸರ್ಕಾರ ಅಧಿನಿಯಮ, ೧೯೩೫ರ
# ವಿಭಾಗ – ೨೯೧
# (ತಿದ್ದುಪಡಿ) ಮಸೂದೆ

*ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಉಪಾಧ್ಯಕ್ಷರೆ, ಇಲ್ಲಿಯವರೆಗೆ ನಾನು ಕೇಳಿದ ಭಾಷಣಗಳಲ್ಲಿ ನನಗೆ ಕಂಡುಬರುವುದೇನೆಂದರೆ ಈ ಮಸೂದೆಯು ಅದರಲ್ಲಿ ವಿಶೇಷವಾಗಿ ಕಲಮು ೪ ಏನನ್ನು ಮಾಡಲು ಪ್ರಸ್ತಾಪಿಸುತ್ತದೆನ್ನುವ ಬಗ್ಗೆ ಬಹಳಷ್ಟು ತಪ್ಪು ಗ್ರಹಿಕೆ ಇರುತ್ತದೆ. ಕಲಮು ೪ರಿಂದ ಏನನ್ನು ಮಾಡಲು ಉದ್ದೇಶಿಸಲಾಗಿದೆ ಎಂಬುದನ್ನು ಮೊದಲು ಸದನಕ್ಕೆ ಹೇಳುವುದು ಆವಶ್ಯಕವೆಂದು ನನಗನಿಸುತ್ತದೆ.

ಸದನದ ಮನಸ್ಸನ್ನು ಸರಿಯಾದ ಚೌಕಟ್ಟಿನಲ್ಲಿರಿಸಲು– ಹಾಗೆ ಹೇಳುವಲ್ಲಿ ಯಾವುದೇ ಅಗೌರವದ ಅಪಾರ್ಥವನ್ನು ನಾನು ಹೊಂದಿರುವುದಿಲ್ಲ– ನಾನು ಸದನದ ಗಮನವನ್ನು ಭಾರತೀಯ ಸರ್ಕಾರ ಅಧಿನಿಯಮದ ವಿಭಾಗ ೨೯೧ಕ್ಕೆ, ಸ್ವಾತಂತ್ರ್ಯ ಅಧಿನಿಯಮದ ನಂತರ ಅದನ್ನು ಅಳವಡಿಸಿಕೊಳ್ಳುವುದಕ್ಕಿಂತ ಮುಂಚೆ ಕಾರ್ಯಾಚರಣೆಯಲ್ಲಿರುವಂತೆ, ಸೆಳೆಯಲು ಇಚ್ಛಿಸುತ್ತೇನೆ. ಆ ವಿಭಾಗದ ಕೆಲವು ಸಾಲುಗಳನ್ನು ಮಾತ್ರ ನಾನು ಈಗ ಓದುತ್ತೇನೆ.

"ಈ ನಂತರ ನಮೂದಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿ ನಿಯಮಾಂಶವನ್ನು ಮಾಡದಿರುವ ಬಗ್ಗೆ, ಪರಿಷತ್ತಿನಲ್ಲಿಯ ಅರಸನು (ಪರಿಷತ್ತಿನಲ್ಲಿಯ ಅರಸನು ಎಂಬ ಶಬ್ದಗಳನ್ನು ನಾನು ಒತ್ತಿ ಹೇಳಬಯಸುತ್ತೇನೆ) ಆ ವಿಷಯಗಳಿಗೆ ಅಥವಾ ಅವುಗಳಲ್ಲಿಯ ಯಾವುದಕ್ಕಾದರೂ ಸಂಬಂಧಿಸಿದಂತೆ ಸಮಯ, ಸಮಯಕ್ಕೆ ನಿಯಮಾಂಶಗಳನ್ನು ಮಾಡಬಹುದು, ಇತ್ಯಾದಿ, ಇತ್ಯಾದಿ."

ಈ ಸದನದ ಗಮನಕ್ಕೆ ನಾನು ಮೊದಲು ತರಬಯಸುವ ವಿಷಯವೆಂದರೆ, ಈ ಮಸೂದೆಯ ಕಲಮು ೪ರಲ್ಲಿ (ಬಿ)ದಿಂದ (ಜೆ)ವರೆಗೆ ನಮೂದಿಸಿದ ಈ ಖಂಡವು, ಖಂಡ ೪, ಮೂಲ ಕಲಂ ೨೯೧ರಲ್ಲಿ ಒಳಗೊಂಡ ನಿಯಮಾಂಶಗಳಲ್ಲಿ ಯಾವುದೇ ಮೂಲಭೂತ ಬದಲಾವಣೆ ಮಾಡಿಲ್ಲವೆಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಮಸೂದೆಯಲ್ಲಿ ಅಳವಡಿಸಿರುವಂತೆ ಹೊಸ ಕಲಂ ೨೯೧ರಲ್ಲಿ ಗವರ್ನರ್ ಜನರಲ್ಲನಿಗೆ ಯಾವ ವಿಷಯಗಳ ಮೇಲೆ ಅಧಿಕಾರವನ್ನು ನೀಡಲು ಹೊರಡಿಸಲಾಗಿದೆಯೋ, ಅವು ಮೂಲ ವಿಭಾಗ ೨೯೧ರಲ್ಲಿ ಪರಿಷತ್ತಿನಲ್ಲಿಯ ಅರಸನಿಗೆ ನೀಡಿದಂಥವುಗಳೇ ಆಗಿವೆ. (ಒಬ್ಬ ಗೌರವಾನ್ವಿತ ಸದಸ್ಯ: ಇಲ್ಲ) ಇದು ಈಗ ಎಲ್ಲರಿಗೂ ಸ್ಪಷ್ಟವಾಗಿದೆ ಎಂದು ನಾನು ಭಾವಿಸಿದ್ದೇನೆ ಮತ್ತು ಇದರ ಮೇಲೆ ಯಾವುದೇ ಸಂದೇಹವಿದೆ ಎಂದು ನನಗೆ ಅನಿಸುವುದಿಲ್ಲ. ಈ ಮಸೂದೆಯಲ್ಲಿನ ವಿವಿಧ ವಿಭಾಗಗಳನ್ನು ಮೂಲ ವಿಭಾಗ ೨೯೧ರಲ್ಲಿರುವುವುಗಳೊಂದಿಗೆ ತುಲನೆ ಮಾಡುವ ಮೂಲಕ ಯಾರೇ ಆಗಲಿ ತಮ್ಮ ಎಲ್ಲ ಸಂದೇಹಗಳನ್ನು ನಿವಾರಿಸಿಕೊಳ್ಳಬಹುದು.

ಗವರ್ನರ್ ಜನರಲ್ಲನಿಗೆ ಈಗ ಏಕೆ ನಾವು ಅಧಿಕಾರವನ್ನು ಕೊಡುತ್ತಿದ್ದೇವೆ ಎಂಬ ಪ್ರಶ್ನೆಯನ್ನು ಕೇಳಬಹುದು. ನಾನು ಹಾಗೆ ಹೇಳಬಹುದಾದರೆ, ಇವರ ಬಿಕ್ಕಟ್ಟು ಹೀಗಿದೆ. ಸ್ವಾತಂತ್ರ್ಯ ಅಧಿನಿಯಮದ

* ಸಿ.ಎ.ಡಿ. ಸಂ. IX, ೧೮ನೇ ಆಗಸ್ಟ್ ೧೯೪೯, ಪುಟ ೪೬೩೫–೩೮.

ನಂತರ ಭಾರತೀಯ ಸರ್ಕಾರಿ ಅಧಿನಿಯಮ ೧೯೩೫ನ್ನು ಅಳವಡಿಸಿಕೊಳ್ಳುವುದು ಬಂದಾಗ, ನಮ್ಮ ನಿರ್ಣಯದಲ್ಲಿ, ಒಂದು ರೀತಿಯಲ್ಲಿ ದಾರಿ ತಪ್ಪಿದೆವು. ಅದೇನೆಂದರೆ, ಪರಿಷತ್ತಿನಲ್ಲಿಯ ಅರಸನಲ್ಲಿ ಮೂಲವಾಗಿ ನಿಹಿತವಾದ ಅಧಿಕಾರವು ತಾರ್ಕಿಕವಾಗಿ ಹೇಳುವುದಾಧರೆ, ಗವರ್ನರ್–ಜನರಲ್ಲನಿಗೆ ವರ್ಗಾವಣೆಯಾಗಬೇಕಾಗಿತ್ತು. ಏಕೆಂದರೆ ಗವರ್ನರ್–ಜನರಲ್ಲನು ಅಧೀನ ಕಾನೂನಿನಡಿಯಲ್ಲಿ ಪರಿಷತ್ತಿನಲ್ಲಿಯ ಅರಸನ ಸ್ಥಳದಲ್ಲಿ ಹೆಜ್ಜೆಯಿರಿಸುತ್ತಾನೆ. ಆದರೆ ದುರದೃಷ್ಟದಿಂದ ನಾನು ಹೇಳಿದ ಹಾಗೆ, ಏನಾಯಿತೆಂದರೆ ಈ ವಿಭಾಗ ೨೯೧ನ್ನು ಅಳವಡಿಸಿಕೊಳ್ಳುವಲ್ಲಿ ಗವರ್ನರ್ ಜನರಲ್ಲನಿಗೆ ನಾವು ಈಗ ಕೊಡುತ್ತಿರುವ ಅಧಿಕಾರವನ್ನು ಸ್ಥಳೀಯ ಶಾಸಕಾಂಗಕ್ಕೆ ಕೊಡಲಾಯಿತು. ಹಾಗೆ ಅಳವಡಿಸಲಾದ ವಿಭಾಗ ೨೯೧ನ್ನು ನಾನು ಈಗ ಓದುತ್ತೇನೆ. ಉತ್ತೇಜಿತಗೊಂಡ ನನ್ನ ಮಿತ್ರರಿಗೆ ಈ ವಿಭಾಗವನ್ನು ಅಳವಡಿಸಿಕೊಂಡಂತೆಯೇ ಓದಲು ನಾನು ಕೇಳುತ್ತೇನೆ. ಅದರ ಒಕ್ಕಣೆಯು ಹೀಗಿದೆ:

"ಇದರಲ್ಲಿ ನಮೂದಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿ ಯಾವುದೇ ಪ್ರಾಂತೀಯ ಶಾಸಕಾಂಗಕ್ಕೆ ಸಂಬಂಧಿಸಿದಂತೆ ನಿಯಮಾಂಶವನ್ನು ಮಾಡಿರದಿದ್ದರೆ, ಆ ವಿಷಯಗಳಿಗೆ ಅಥವಾ ಅವುಗಳಲ್ಲಿಯ ಯಾವುದಕ್ಕಾದರೂ ಸಂಬಂಧಿಸಿದಂತೆ ಆ ಶಾಸಕಾಂಗದ ಅಧಿನಿಯಮದ ಮೂಲಕ ನಿಯಮಾಂಶವನ್ನು ಮಾಡಬಹುದು, ಇತ್ಯಾದಿ, ಇತ್ಯಾದಿ."

ಅದು ಈಗ ತಪ್ಪೆಂದು ಕಂಡುಕೊಳ್ಳಲಾಗಿದೆ. ನಿಜವಾಗಿ ಹೇಳುವುದಾದರೆ ಈ ವಿಭಾಗವನ್ನು ಅಳವಡಿಸಿಕೊಂಡ ಆ ಹಂತದಲ್ಲಿ, ಗವರ್ನರ್ ಜನರಲ್ಲನಿಗೆ ಈ ಅಧಿಕಾರಗಳನ್ನು ವಹಿಸಬೇಕಾಗಿತ್ತು. ಏಕೆಂದರೆ, ಈ ಅಧಿಕಾರಿಗಳು ವಿಭಾಗ ೨೯೧ರ ನಿಯಮಾಂಶಗಳಡಿಯಲ್ಲಿ ಪರಿಷತ್ತಿನಲ್ಲಿಯ ಅರಸನಲ್ಲಿ ನಿಹಿತವಾಗಿರುತ್ತವೆ ಮತ್ತು ಯಾವುದೇ ಸ್ಥಳೀಯ ಶಾಸಕಾಂಗದಲ್ಲಿಯಲ್ಲ. ಈ ಮಸೂದೆಯ ಮೂಲಕ ನಾವು ಏನನ್ನು ಮಾಡುತ್ತಿದ್ದೇವೆ ಎಂದರೆ ಅಳವಡಿಸಿಕೊಳ್ಳದೇ ಇರುವ ವಿಭಾಗ ೨೯೧ರಡಿಯಲ್ಲಿದ್ದ ಹಳೆಯ ಪರಿಸ್ಥಿತಿಯನ್ನು ಮರುಸ್ಥಾಪನೆ ಮಾತ್ರ ಮಾಡುತ್ತಿದ್ದೇವೆ. ಆದ್ದರಿಂದ, ನಾನು ವಿನಂತಿಸುವುದೇನೆಂದರೆ, ರಾಜಕೀಯ ಕಾರಣಗಳಿಗಾಗಿ ಸಂವಿಧಾನವನ್ನು ಪಲ್ಲಟಗೊಳಿಸುವ ಒಂದು ವಿಧದ ಆಳವಾದ ತಂತ್ರವನ್ನು ರೂಪಿಸಲಾಗಿದೆ ಎಂದು ಸದನದ ಯಾವುದೇ ಸದಸ್ಯ ಮಾಡಿದ ಟೀಕೆಯು ಖಂಡಿತವಾಗಿಯೂ ನಿರಾಧಾರವಾಗಿರುತ್ತದೆ. ಆಗ ಜಾರಿದ ಹೆಜ್ಜೆಯನ್ನು ಸರಿಪಡಿಸುವುದನ್ನು ಮಾತ್ರ ನಾವು ಈಗ ಪ್ರಯತ್ನಿಸುತ್ತಿದ್ದೇವೆ.

ನಾನೀಗ ಮುಂದಿನ ಅಂಶಕ್ಕೆ ಬರುತ್ತೇನೆ. ಅದೇನೆಂದರೆ ಈ ಶಬ್ದಗಳನ್ನು ಸೇರಿಸುವುದಕ್ಕೆ "ಶಾಸಕಾಂಗದ ಸದನ ಅಥವಾ ಸದನಗಳ ಸಂಘಟನೆ." ನಾನು ಒಪ್ಪುತ್ತೇನೆ.........*

**ಡಾ. ಪಿ. ಎಸ್. ದೇಶ್‌ಮುಖ್:** ಮಾನ್ಯರೇ, ನಾನೊಂದು ಪ್ರಶ್ನೆಯನ್ನು ಕೇಳಬಹುದೆ? "ಈ ನಂತರ ನಮೂದಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿ ನಿಯಮಾಂಶವನ್ನು ಮಾಡದಿರುವ ಬಗ್ಗೆ" ಎಂಬ ಶಬ್ದಗಳನ್ನು ಬದಲಾಯಿಸುವುದರಿಂದ, ಈ ಶಬ್ದಗಳನ್ನು ತೆಗೆದುಹಾಕುವುದು ಮತ್ತು ಈ ನಿಯಮಾಂಶಗಳನ್ನು ಅನ್ವಯವಾಗುವಂತೆ ಮಾಡುವುದು................

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಖರವಾಗಿ ಅದನ್ನೇ ನಾನು ವಿವರಿಸುತ್ತಿದ್ದೇನೆ. ನಾನು ಹೇಳಿದಂತೆ, ಅಳವಡಿಸಿಕೊಳ್ಳದೇ ಇರುವ ಮೂಲ ವಿಭಾಗ ೨೯೧ ಮತ್ತು ಪ್ರಸ್ತಾವಿತ ಹೊಸ ಕಲಮಿನ

---

* ಚುಕ್ಕೆಗಳು ಮಧ್ಯಪ್ರವೇಶವನ್ನು ಸೂಚಿಸುತ್ತವೆ.

ನಡುವೆ ಈಗ ಕಂಡುಬರುವ ಒಂದೇ ವ್ಯತ್ಯಾಸವೆಂದರೆ, ಈ ಹೊಸ ಪ್ರಕರಣದ ಮೂಲಕ ಗವರ್ನರ್–ಜನರಲ್ಲನಿಗೆ ಶಾಸಕಾಂಗದ ಸಂಘಟನೆಗೆ ಸಂಬಂಧಿಸಿದ ನಿಯಮಾಂಶಗಳನ್ನು ಬದಲಾಯಿಸುವ ಅಧಿಕಾರವನ್ನು ನೀಡಲು ಪ್ರಸ್ತಾಪಿಸಲಾಗಿದೆ. ಅದು ಬದಲಾವಣೆ ಎಂದು ನಾನು ಒಪ್ಪಿಕೊಳ್ಳುತ್ತೇನೆ.

**ಡಾ. ಪಿ. ಎಸ್. ದೇಶ್‌ಮುಖ್:** ಯಾವುದು ಪರಿಶಿಷ್ಟ ೫ ಮತ್ತು ೬ ಅನ್ನು ಒಳಗೊಂಡಿರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಓ ಹೌದು, ಇದು ನಿಜವಾಗಿದೆ. ಆ ಬದಲಾವಣೆಯನ್ನು ಮಾಡಲಾಗುತ್ತಿದೆ ಎಂದು ಯಾವುದೇ ತರಹದ ಅಭ್ಯಂತರವಿಲ್ಲದೇ ಒಪ್ಪಿಕೊಳ್ಳುತ್ತೇನೆ. ಈಗ ಪ್ರಶ್ನೆ ಏನೆಂದರೆ ನಾವು ಏಕೆ ಆ ಬದಲಾವಣೆಯನ್ನು ಮಾಡಬೇಕೆನ್ನುವುದು. ಗವರ್ನರ್–ಜನರಲ್ಲನಿಗೆ ರಚನೆಯನ್ನು ಸಹ ಬದಲಾವಣೆ ಮಾಡುವ ಅಧಿಕಾರವನ್ನು ಕೊಡುವುದಕ್ಕಾಗಿ ನಾವು ಏಕೆ ಬದಲಾವಣೆ ಮಾಡಬೇಕು ಎನ್ನುವುದಕ್ಕೆ ಕಾರಣವನ್ನು ನಾವಿರುವ ಸಂದರ್ಭದಲ್ಲಿ ಕಾಣಬಹುದು. ವಿಭಜನೆಯಿಂದಾಗಿ ಜನಸಂಖ್ಯೆಯು ಗಣನಾತ್ಮಕ ಸ್ಥಳಾಂತರ ಆಗಿರುವುದನ್ನು ಗೌರವಾನ್ವಿತ ಸದಸ್ಯರು ನೆನಪಿಸಿಕೊಳ್ಳಬೇಕು. "ಪೂರ್ವ ಪಂಜಾಬಿನ ಜನತೆ ಖಂಡಿತವಾಗಿಯೂ ಯಾವುದೇ ಒಂದೇ ಪ್ರಕಾರದ ಪರಿಸ್ಥಿತಿಯಲ್ಲಿಲ್ಲ. ಶರಣಾರ್ಥಿಗಳು ಬರುತ್ತಿದ್ದಾರೆ ಮತ್ತು ಹೋಗುತ್ತಿದ್ದಾರೆ. ೧ನೇ ಏಪ್ರಿಲ್‌ರಂದು ಜನಸಂಖ್ಯೆಯು ಅಷ್ಟು ಹೆಚ್ಚಾಗಿತ್ತು; ಆರು ತಿಂಗಳ ನಂತರ ಆ ಸಂಖ್ಯೆಯು ಆಗಿರುವುದಕ್ಕಿಂತ ಅತ್ಯಂತ ವಿಭಿನ್ನವಾಗಿರಬಹುದು. ಅದೇ ರೀತಿ ಪೂರ್ವ ಬಂಗಾಳಕ್ಕೆ ಸಂಬಂಧಿಸಿದಂತೆ ಮತ್ತು ಶರಣಾರ್ಥಿಗಳನ್ನು ಭಾರತೀಯ ಸರ್ಕಾರದ ಪುನರ್ವಸತಿ ಯೋಜನೆಯಡಿಯಲ್ಲಿ ತೆಗೆದುಕೊಂಡ ಪ್ರಾಂತ್ಯಗಳು ಅಥವಾ ಶರಣಾರ್ಥಿಗಳು ತಾವೇ ಸ್ವ ಇಚ್ಛೆಯಿಂದ ಒಂದು ಕ್ಷೇತ್ರದಿಂದ ಇನ್ನೊಂದೆಡೆ ಪ್ರವಾಸಿಸಿದ್ದಾರೆ. ನಿಸ್ಸಂಶಯವಾಗಿ ೫ ಮತ್ತು ೬ನೇ ಪರಿಶಿಷ್ಟದಲ್ಲಿ ಶಾಸಕಾಂಗದ ಸಂಖ್ಯೆಯ ಬಗ್ಗೆ ಇರುವ ನಿಯಮಾಂಶಗಳನ್ನು, ವಾಸ್ತವಿಕವಾಗಿ ಆಗ ಪರಿಶಿಷ್ಟಗಳಲ್ಲಿ ನಿಗದಿಪಡಿಸಿದ ಸಂಖ್ಯೆ ಜನಸಂಖ್ಯೆಯೊಂದಿಗೆ ತನ್ನೆಲ್ಲ ಸಂಬಂಧವನ್ನು ಕಳೆದುಕೊಂಡಿದೆ ಎಂದು ನಮಗೆ ಗೊತ್ತಿರುವಾಗ, ಅವುಗಳನ್ನು ಇದ್ದ ಹಾಗೆಯೇ ಇಡಲು ನೀವು ಅನುಮತಿಸಲು ಆಗುವುದಿಲ್ಲ. ಆದ್ದರಿಂದ ಜನಸಂಖ್ಯೆಯ ಸ್ಥಳಾಂತರವನ್ನು ಗಣನೆಗೆ ತೆಗೆದುಕೊಳ್ಳುವುದಕ್ಕಾಗಿ ಗವರ್ನರ್–ಜನರಲ್ಲನಿಗೆ ಶಾಸಕಾಂಗದ ಸಂಘಟನೆಯನ್ನು ನಿರೂಪಿಸುವ ಪರಿಶಿಷ್ಟಗಳನ್ನು ಸಹ ಬದಲಾವಣೆ ಮಾಡುವ ಅಧಿಕಾರವನ್ನು ಕೊಡಲಾಗಿದೆ.

ಈಗ ನನ್ನ ಗೌರವಾನ್ವಿತ ಮಿತ್ರರು, ಸದನ ಅಥವಾ ಸದನಗಳ ಸಂಘಟನೆಗೆ ಸಂಬಂಧಿಸಿದಂತೆ ಆದೇಶವನ್ನು ಮಾಡುವ ಹೆಚ್ಚಿನ ಅಧಿಕಾರವನ್ನು ಕೊಡುವಲ್ಲಿನ ಉದ್ದೇಶವು ಗವರ್ನರ್–ಜನರಲ್ಲನಿಗೆ ಅಂಥ ಆದೇಶವನ್ನು ನೀಡುವ ಅನುಮತಿಯು ಪ್ರಯತ್ನಗಳಲ್ಲಿಯ ವಿವಿಧ ಶಾಸಕಾಂಗಗಳ ಒಲವು ಆ ಪ್ರಾಂತ್ಯಗಳ ಜನಸಂಖ್ಯೆಗೆ ಅನುಗುಣವಾಗಿಯೇ ಇರಿಸುವ ಉದ್ದೇಶವನ್ನು ಹೊಂದಿರುವುದನ್ನು ಅರ್ಥ ಮಾಡಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ.

**ಡಾ. ಪಿ. ಎಸ್. ದೇಶ್‌ಮುಖ್:** ಈ ಪರಿಸ್ಥಿತಿಯನ್ನು ಸರಿಪಡಿಸಿಕೊಳ್ಳಲು ತಮಗೆ ಎರಡು ಪೂರ್ತಿ ವರ್ಷಗಳಿದ್ದವು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಬೇರೆ ವಿಷಯ. ಈ ಹೊಸ ಉಪಬಂಧದ ಮೂಲಕ ಈ ನಿಯಮಾಂಶಗಳನ್ನು ಏಕೆ ತರಲಾಗಿದೆ ಎಂಬುದನ್ನು ಮಾತ್ರ ನಾನು ವಿವರಿಸುತ್ತಿದ್ದೇನೆ.

ಉಳಿದ ನಿಯಮಾಂಶಗಳ ಮೂಲ ವಿಭಾಗ ೨೯೧ರಲ್ಲಿದ್ದವುಗಳ ಪುನರಾವರ್ತನೆ ಮಾತ್ರವಾಗಿದೆ ಎಂದು ನಾನು ಹೇಳಿದ್ದೇನೆ. ಅಧಿಕಾರವನ್ನು ಬೇಕೆಂತಲೇ ಅಥವಾ ಅನಾವಶ್ಯಕ ಉದ್ದೇಶಕ್ಕಾಗಿ ತೆಗೆದುಕೊಳ್ಳಲಾಗುತ್ತಿಲ್ಲ ಮತ್ತು ವಿಶ್ವಸನೀಯ ಉದ್ದೇಶವಲ್ಲದೆ ಬೇರಾವುದಕ್ಕೇ ಆಗಲಿ ಉಪಯೋಗಿಸುವ

ಉದ್ದೇಶವನ್ನು ಹೊಂದಿರುವುದಿಲ್ಲ. ಆದ್ದರಿಂದ ಈ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ನನ್ನ ವಿನಂತಿ ಏನೆಂದರೆ, ಮೂಲವಾಗಿ ಪರಿಷತ್ತಿನಲ್ಲಿಯ– ಅರಸನಲ್ಲಿ ನಿಹಿತವಾಗಿದ್ದ ಈ ಹಕ್ಕುಗಳನ್ನು ಅವನ ವಾರಸುದಾರನಾದ ಗವರ್ನರ್–ಜನರಲ್ಲನಿಗೆ ವಹಿಸಿಕೊಟ್ಟ ಮತ್ತು ೧೫ನೇ ಆಗಸ್ಟ್ ೧೯೪೭ರಿಂದ ವಿವಿಧ ಪ್ರಾಂತ್ಯಗಳಲ್ಲಿ ಸಂಖ್ಯೆಯು ಬದಲಾಗಿರುವುದರಿಂದ ಸಂಘಟನೆಯಲ್ಲಿ ಬದಲಾವಣೆ ಮಾಡುವ ಹೆಚ್ಚಿನ ಅಧಿಕಾರವನ್ನು ನೀಡಿರುವ ಈ ಎರಡೂ ದೃಷ್ಟಿಕೋನಗಳಿಂದ ಉಪಬಂಧ ೪ ಸಂಪೂರ್ಣವಾಗಿ ನ್ಯಾಯಸಮ್ಮತವಾದ ಪ್ರಸ್ತಾವನೆಯಾಗಿದೆ. ಉದ್ದೇಶಗಳು ಮತ್ತು ಕಾರಣಗಳ ಪತ್ರದಲ್ಲಿ ದುರದೃಷ್ಟದಿಂದ ಪಶ್ಚಿಮ ಬಂಗಾಳಕ್ಕೆ ಮಾತ್ರ ವಿಶೇಷ ಉಲ್ಲೇಖ ಮಾಡಿರುವುದು ತಪ್ಪು ಎನ್ನುವುದು ನನಗೆ ಮನವರಿಕೆಯಾಗಿದೆ. ನಾನು ಇಲ್ಲಿ ಒತ್ತಿ ಹೇಳಬಯಸುವುದೇನೆಂದರೆ, ಈ ಉಪಬಂಧ ವಿಶೇಷವಾಗಿ ಪಶ್ಚಿಮ ಬಂಗಾಳಕ್ಕೆ ಮಾತ್ರವಲ್ಲದೆ, ಯಾವುದೇ ಪ್ರಾಂತದ ಯಾವುದೇ ವಿಷಯಗಳನ್ನು ಸರಿಪಡಿಸಲು ಗವರ್ನರ್ ಜನರಲ್ಲನು ಉಪಯೋಗಿಸಬಹುದಾದ ಸಾಮಾನ್ಯ ನಿಯಮಾಂಶವನ್ನಾಗಿ ಮಾಡಲು ಉದ್ದೇಶಿಸಲಾಗಿದೆ; ಮತ್ತು ನನಗನಿಸಿದಂತೆ ಅದು ಆಗಬಾರದಂಥ ವಿಷಯದ ವಿರುದ್ಧವಾಗಿರುತ್ತದೆ. ಸದನದ ಸದಸ್ಯರು ಪಶ್ಚಿಮ ಬಂಗಾಳದ ಬಗ್ಗೆ ಉಲ್ಲೇಖ ಮಾಡಿರುವ ಈ ಒಂದು ಕಲಮಿನಲ್ಲಿರುವ ಆ ವಿಶೇಷ ಶಬ್ದಗಳನ್ನು ತೆಗೆದುಕೊಂಡು, ಪಶ್ಚಿಮಬಂಗಾಳದ ಶಾಸಕಾಂಗದ ವಿರುದ್ಧ ಒಂದು ರೀತಿಯ ಕೆಟ್ಟ ಗುರಿ ಇಟ್ಟುಕೊಂಡು, ಸರ್ಕಾರವು ದುರುದ್ದೇಶವನ್ನು ಹೊಂದಿ ಹೀಗೆ ಮಾಡಿದೆ ಎಂದು ಆರೋಪವನ್ನು ಮಾಡಿದ್ದಾರೆ. ನಾನು ಹೇಳಿದ ಹಾಗೆ, ಆ ರೀತಿ ಏನೂ ಇರುವುದಿಲ್ಲ. ಈ ಕಲಮುಗಳು ಸಾಮಾನ್ಯವಾದವುಗಳು. ಅವುಗಳನ್ನು ಉಪಯೋಗಿಸುವಂಥ ಸಂದರ್ಭ ಪಶ್ಚಿಮ ಬಂಗಾಳದಲ್ಲಿ ಉದ್ಭವಿಸಿದರೆ ಅವುಗಳನ್ನು ಉಪಯೋಗಿಸಬಹುದು. ಅವುಗಳನ್ನು ನನ್ನ ಪ್ರಾಂತ್ಯವಾದ ಮುಂಬಯಿಯಲ್ಲಿಯೂ ಉಪಯೋಗಿಸಬಹುದು, ಆದರೆ ಇಂದು ಬಹುಶಃ ಯಾವುದೇ ಅಂಥ ಪರಿಸ್ಥಿತಿಯು ಅಲ್ಲಿ ತೋರುತ್ತಿಲ್ಲ. ಆದ್ದರಿಂದ ಆ ಒಂದು ದುರದೃಷ್ಟಕರ ಹೇಳಿಕೆಯಿಂದ ನಾನು ಹಾಗೆ ಹೇಳಬಹುದಾದರೆ– ಈ ಕಲಮಿಗೆ ಸಂಬಂಧಿಸಿದಂತೆ ಯಾವುದೇ ವಿಧದ ಅವ್ಯವಹಾರ ನಡೆದಿದೆ ಎಂಬ ನಿರ್ಣಯವನ್ನು ತೆಗೆದುಕೊಳ್ಳಬಾರದು.

**ಶ್ರೀ ಸುರೇಶಚಂದ್ರ ಮುಜಮದಾರ** (ಪಶ್ಚಿಮ ಬಂಗಾಳ: ಸಾಮಾನ್ಯ): "ಪಶ್ಚಿಮ ಬಂಗಾಳ" ಎಂಬ ಪದಗಳನ್ನು ತೆಗೆದುಹಾಕಲು ಸಾಧ್ಯವಿಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ನನ್ನ ಗೌರವಾನ್ವಿತ ಮಿತ್ರರಿಗೆ ಹೇಳುತ್ತಲಿರುವುದೇನೆಂದರೆ, ಉದ್ದೇಶಗಳು ಮತ್ತು ಕಾರಣಗಳ ಪತ್ರವು ಅಧಿನಿಯಮದ ಭಾಗವಾಗಿರುವುದಿಲ್ಲ ಮತ್ತು ಆದ್ದರಿಂದ ಉದ್ದೇಶಗಳು ಮತ್ತು ಕಾರಣಗಳ ಪತ್ರದಲ್ಲಿಯ ಯಾವುದೇ ಪದ ಅಥವಾ ಕಲಮು ಅಥವಾ ವ್ಯಾಖ್ಯೆಯನ್ನು ತೆಗೆಯಲು ತಿದ್ದುಪಡಿಯನ್ನು ಮಂಡಿಸಲಾಗುವುದಿಲ್ಲ. ಮಸೂದೆಯ ಅಧಿನಿಯಮವಾಗುತ್ತಿದ್ದಂತೆಯೇ ಉದ್ದೇಶಗಳು ಮತ್ತು ಕಾರಣಗಳ ಪತ್ರವನ್ನು ಕಸದ ಬುಟ್ಟಿಗೆ ಎಸೆಯಲಾಗುತ್ತದೆ. ಪೀಠಿಕೆಯಿಂದ ಅದು ಭಿನ್ನವಾಗಿರುತ್ತದೆ ಮತ್ತು ನಾನು ಸದನದ ಸದಸ್ಯರು ಪಶ್ಚಿಮ ಬಂಗಾಳದ ಬಗ್ಗೆ ಅಂಥ ಯಾವುದೇ ಉಲ್ಲೇಖ ಇಲ್ಲದೇ ಇರುವ ಪೀಠಿಕೆಯ ಮೇಲೆ ತಮ್ಮ ಗಮನವನ್ನು ಕೇಂದ್ರೀಕೃತಗೊಳಿಸಲು ಬಯಸುತ್ತೇನೆ. ಆದ್ದರಿಂದ ನನ್ನ ವಿನಂತಿ ಏನೆಂದರೆ ಈ ಒಂದು ಕಲಮಿನಲ್ಲಿ ನಿಜವಾಗಿಯೂ ವಾಗ್ವಾದ ಮಾಡುವಂಥದ್ದು ಏನೂ ಇಲ್ಲ. ಮೊದಲನೆಯದಾಗಿ, ಭಾರತೀಯ ಸರ್ಕಾರ ಕಾಯ್ದೆ, ೧೯೩೫ ಉಪಬಂಧಗಳನ್ನು ಅಳವಡಿಸಿಕೊಳ್ಳದೇ ಇದ್ದ ಪರಿಸ್ಥಿತಿಯಲ್ಲಿಯ ಮೂಲ ನಿಯಮಾಂಶವನ್ನು ಇದು ಮರುಸ್ಥಾಪಿಸುತ್ತದೆ ಮತ್ತು ಎರಡನೆಯದಾಗಿ, ಪ್ರಾಂತ್ಯಗಳಲ್ಲಿಯ ಬದಲಾದ ಪರಿಸ್ಥಿತಿಯ ಕಾರಣಕ್ಕಾಗಿ

ಆವಶ್ಯಕವಾಗಿರುವುದರಿಂದ ಅಧಿಕಾರವನ್ನು ಕೊಡಲು ಇದು ಪ್ರಸ್ತಾಪಿಸುತ್ತದೆ.

**ಒಬ್ಬ ಗೌರವಾನ್ವಿತ ಸದಸ್ಯ:** ಮಾನ್ಯರೇ, ನಾನು ಈಗ ಪ್ರಶ್ನೆಯನ್ನು ಮಂಡಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ಹೆಚ್. ವಿ. ಕಾಮತ್:** ಮಾನ್ಯರೇ, ಕ್ರಮಬದ್ಧತೆಯ ಅಂಶದ ಮೇಲೆ, ಡಾ. ಅಂಬೇಡ್ಕರವರು ಹೊಸ ಅಂಶಗಳನ್ನು ಎತ್ತಿರುವುದರಿಂದ ನಾವು ಅವುಗಳನ್ನು ಚರ್ಚಿಸಬಯಸುತ್ತೇವೆ ಮತ್ತು ನಮ್ಮ ನಿಯಮಗಳ ನಿಯಮ ೩೩ರಡಿಯಲ್ಲಿ ತಾವು ಸಮರ್ಪಕ ಚರ್ಚೆಯಾಗಿಲ್ಲವೆಂದು ತೀರ್ಮಾನಿಸಬಹುದು. ಮತ್ತು ಈ ಗೊತ್ತುವಳಿಯನ್ನು ಅಂತ್ಯಗೊಳಿಸಲು ಒಪ್ಪಿಕೊಳ್ಳಲು ನಿರಾಕರಿಸಬಹುದು.

**ಡಾ. ಪಿ. ಎಸ್. ದೇಶ್‌ಮುಖ್:** ಆದರೆ ಡಾ. ಅಂಬೇಡ್ಕರರು ಸಂಬಂಧಿಸಿದ ಮಂತ್ರಿಯಲ್ಲ.

**ಉಪ–ಸಭಾಪತಿ:** ಹೌದು, ಅದು ನಿಜ. ಮತ್ತು ಗೌರವಾನ್ವಿತ ಸದಸ್ಯ ಶ್ರೀ ಕಾಮತ್ ಅವರು ಈ ಕಲಮಿನ ಮೇಲೆ ಮಾತನಾಡಲು ಸಾಕಷ್ಟು ಅವಕಾಶವನ್ನು ಹೊಂದಿದ್ದರು. ಆದ್ದರಿಂದ ನಾನು ಗೊತ್ತುವಳಿಯನ್ನು ಅಂತ್ಯಗೊಳಿಸಲು ಒಪ್ಪಿಕೊಳ್ಳುತ್ತೇನೆ.

ಪ್ರಶ್ನೆಯು ಏನೆಂದರೆ:

"ಪ್ರಶ್ನೆಯನ್ನು ಈಗ ಮತಕ್ಕೆ ಇಡಲಾಗಿದೆ."

**ಗೊತ್ತುವಳಿಯನ್ನು ಸ್ವೀಕರಿಸಲಾಯಿತು.**

* * *

## ವಿಧಿ–೧೫೦ (ಮುಂದುವರಿಕೆ)

***ಉಪ–ಸಭಾಪತಿ** (ಶ್ರೀ ಟಿ.ಟಿ.ಕೃಷ್ಣಮಾಚಾರಿ): ಇಂದು ನಾವು ೧೫೦ನೆಯ ವಿಧಿಯಿಂದ ಪ್ರಾರಂಭಿಸೋಣ. ಈ ವಿಧಿಯ ಮೇಲೆ ಅದರ ಮೂಲ ರೂಪದಲ್ಲಿರುವಂತೆ ಚರ್ಚೆ ನಡೆಯಿತು ಮತ್ತು ಮೂರು ತಿದ್ದುಪಡಿಗಳನ್ನು ಮಂಡಿಸಿದ ನಂತರ ಅದನ್ನು ಕರಡು ಸಮಿತಿಗೆ ಮರಳಿಸಲಾಯಿತು ಎಂಬುದನ್ನು ಸದನದ ನೆನಪಿನಲ್ಲಿರಬೇಕು. ಡಾ. ಅಂಬೇಡ್ಕರರು ಈಗ ಹೊಸ ವಿಧಿಯ ಸೂಚನೆಯನ್ನು ನೀಡಿದ್ದಾರೆ. ಈ ವಿಧಿಯನ್ನು ಮಂಡಿಸಲು ಅವರಿಗೆ ನಾನು ವಿನಂತಿಸುತ್ತೇನೆ, ಯಾದಿ Iರ ತಿದ್ದುಪಡಿ ೧ (ನಾಲ್ಕನೇ ವಾರ).

**ಶ್ರೀ ನಝಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ: ಮುಸಲ್ಮಾನ): ಮಾನ್ಯರೇ, ನಾನು ಕ್ರಮಬದ್ಧತೆಯ ಅಂಶವನ್ನು ಎತ್ತುತ್ತೇನೆ. ನಾನು ಅದನ್ನು ಈಗಲೇ ಮಂಡಿಸಲೇ ಅಥವಾ ತಿದ್ದುಪಡಿಯನ್ನು ಮಂಡಿಸಿದ ನಂತರ ಮಂಡಿಸಲೇ?

**ಉಪ–ಸಭಾಪತಿ:** ಅದನ್ನು ನೀವು ಈಗಲೇ ಮಂಡಿಸಬಹುದು.

**ಶ್ರೀ ನಝಿರುದ್ದೀನ್ ಅಹ್ಮದ್:** ಮಾನ್ಯ ಉಪಾಧ್ಯಕ್ಷರೇ, ನಾನು ಕೆಲಕಾಲದಿಂದ ಗಮನಿಸುತ್ತಲೇ ಇದ್ದೇನೆ, ಕರಡು ಸಮಿತಿಯು ಸದಸ್ಯರ ಮೇಲೆ ಆಕಸ್ಮಿಕತೆಯ ಮೇಲೆ ಆಕಸ್ಮಿಕತೆಯನ್ನು ಹೇರುತ್ತಿದೆ. ಪ್ರತಿ ದಿನವೂ ಆಮೂಲಾಗ್ರ ಸ್ವರೂಪದ ಹೊಸ ತಿದ್ದುಪಡಿಗಳನ್ನು ಕರಡು ಸಮಿತಿಯು ಕೇಳಿಸುತ್ತಿದೆ. ಅವು ಗಾಳಿಯ ಆಕ್ರಮಣದಂತೆ ಇದ್ದಕ್ಕಿದ್ದ ಹಾಗೆಯೇ ಬರುತ್ತಲಿವೆ.

---

* ಸಿ.ಎ.ಡಿ. ಸಂ. IX, ೧೯ನೇ ಆಗಸ್ಟ್ ೧೯೪೯, ಪುಟ ೪೭೩–೭೪.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಇದರಲ್ಲಿ ಕ್ರಮಬದ್ಧತೆಯ ಅಂಶವೆಲ್ಲಿದೆ?

**ಉಪ–ಸಭಾಪತಿ:** ನಾನು ಗೌರವಾನ್ವಿತ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಈ ತಿದ್ದುಪಡಿ ಸದನದ ಮುಂದೆ ಡಾ. ಅಂಬೇಡ್ಕರ್ ಮತ್ತು ಕರಡು ಸಮಿತಿಯು, ಸದನವು ಸಾರ್ವತ್ರಿಕವಾಗಿ ವ್ಯಕ್ತಪಡಿಸಿದ ಆಶಯದ ಮೇರೆಗೆ ತರಲಾಗಿದೆ. ಈ ಕಾರಣಕ್ಕಾಗಿ, ನಾನು ಈ ಕ್ರಮಬದ್ಧತೆಯ ಅಂಶವನ್ನು ವಜಾ ಮಾಡುತ್ತೇನೆ. ನಾನು ಈಗ ಅಂಬೇಡ್ಕರ್‌ರವರಿಗೆ ತಮ್ಮ ತಿದ್ದುಪಡಿಯನ್ನು ಮಂಡಿಸಲು ಕೇಳಿಕೊಳ್ಳುತ್ತೇನೆ.

**ವಿಧಾನ ಪರಿಷತ್ತಿನ ರಚನೆ**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಉಪಾಧ್ಯಕ್ಷರೇ, ನಾನು ಹೀಗೆ ಮಂಡಿಸುತ್ತೇನೆ:

"ವಿಧಿ ೧೫೦ರ ಬದಲು ಈ ರೀತಿ ಸೇರಿಸಬೇಕು."

೧೫೦ (೧) ಅಂಥ ಪರಿಷತ್ತನ್ನು ಹೊಂದಿರುವ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆಯು ಆ ರಾಜ್ಯದ ವಿಧಾನಸಭೆಯ ಸದಸ್ಯರ ಒಟ್ಟು ಸಂಖ್ಯೆಯ ಒಂದು–ನಾಲ್ಕು ಅಂಶವನ್ನು ಮೀರತಕ್ಕದ್ದಲ್ಲ;

ಆದರೆ ಒಂದು ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆಯು ಯಾವುದೇ ಪ್ರಕರಣದಲ್ಲಿ ನಲವತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

(೨) ಕಾನೂನಿನ ಮೂಲಕ ಸಂಸತ್ತು ಬೇರೆಯದನ್ನು ನಿರೂಪಿಸುವವರೆಗೆ, ರಾಜ್ಯದ ವಿಧಾನ ಪರಿಷತ್ತಿನ ರಚನೆ ಈ ವಿಧಿಯ ಕಲಮು (೩)ರಲ್ಲಿ ನಿರೂಪಿಸಿದ ಹಾಗೆ ಇರತಕ್ಕದ್ದು.

(೩) ಒಂದು ರಾಜ್ಯದ ವಿಧಾನಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆಯಲ್ಲಿ–

ಎ. ಅದಕ್ಕೆ ಎಷ್ಟು ಸಮೀಪವೋ ಅಷ್ಟು, ಒಂದು–ಮೂರರಷ್ಟು ಸದಸ್ಯರು, ಸಂಸತ್ತು ಕಾನೂನಿನ ಮೂಲಕ ನಿಗದಿಪಡಿಸಿದ ಮುನಿಸಿಪಾಲಿಟಿಗಳ, ಜಿಲ್ಲಾ ಮಂಡಳಿಗಳ ಮತ್ತು ಅಂಥ ಇತರ ಸ್ಥಾನಿಕ ಸದಸ್ಯರುಗಳನ್ನೊಂಡ ಕ್ಷೇತ್ರದಿಂದ ಚುನಾಯಿತರಾಗಿರತಕ್ಕದ್ದು;

ಬಿ. ಅದಕ್ಕೆ ಎಷ್ಟು ಸಮೀಪವೋ ಅಷ್ಟು, ಒಂದು–ಹನ್ನೆರಡರಷ್ಟು ಸದಸ್ಯರು, ಕಳೆದ ಮೂರು ವರ್ಷಗಳಿಂದ ರಾಜ್ಯದ ಯಾವುದೇ ವಿಶ್ವವಿದ್ಯಾಲಯದ ಪದವೀಧರರಾದ ಮತ್ತು ಸಂಸತ್ತಿನಿಂದ ಅಥವಾ ಅದರಡಿಯಲ್ಲಿ ಮಾಡಲಾದ ಕಾನೂನಿನಲ್ಲಿ ವಿಧಿಸಲಾದ ಅಂಥ ಯಾವುದೇ ವಿಶ್ವವಿದ್ಯಾಲಯದ ಪದವೀಧರನಿಗೆ ಸಮಾನವಾದ ಅರ್ಹತೆಯನ್ನು ಕಳೆದ ಮೂರು ವರ್ಷಗಳಿಂದ ಹೊಂದಿರುವ ವ್ಯಕ್ತಿಗಳನ್ನೊಳಗೊಂಡ ಕ್ಷೇತ್ರದಿಂದ ಚುನಾಯಿತರಾಗಿರತಕ್ಕದ್ದು.

ಸಿ. ಅದಕ್ಕೆ ಎಷ್ಟು ಸಮೀಪವೋ ಅಷ್ಟು, ಒಂದು–ಹನ್ನೆರಡರಷ್ಟು ಸದಸ್ಯರು, ಸಂಸತ್ತಿನಿಂದ ಅಥವಾ ಅದರಡಿಯಲ್ಲಿ ಮಾಡಲಾದ ಕಾನೂನಿನಲ್ಲಿ ವಿಧಿಸಿದಂತೆ ಕನಿಷ್ಠ ಮೂರು ವರ್ಷಗಳವರೆಗೆ ಮಾಧ್ಯಮಿಕ ಶಾಲೆಗೆ ಕಡಿಮೆಯಿಲ್ಲದಂಥ ರಾಜ್ಯದಲ್ಲಿಯ ಶಿಕ್ಷಣ ಸಂಸ್ಥೆಯಲ್ಲಿ ಕನಿಷ್ಠ ಮೂರು ವರ್ಷಗಳಿಂದ ಬೋಧನೆಯಲ್ಲಿ ತೊಡಗಿದ ವ್ಯಕ್ತಿಗಳನ್ನೊಳಗೊಂಡ ಕ್ಷೇತ್ರದಿಂದ ಚುನಾಯಿತರಾಗಿರತಕ್ಕದ್ದು;

ಡಿ. ಅದಕ್ಕೆ ಎಷ್ಟು ಸಮೀಪವೋ ಅಷ್ಟು, ಒಂದು–ಮೂರರಷ್ಟು ಸದಸ್ಯರು ವಿಧಾನಸಭೆಯ ಸದಸ್ಯರಿಂದ, ವಿಧಾನಸಭೆಯ ಸದಸ್ಯರಲ್ಲದಂಥ ವ್ಯಕ್ತಿಗಳೊಳಗಿನಿಂದ, ಚುನಾಯಿತರಾಗಿರತಕ್ಕದ್ದು;

ಇ. ಉಳಿದವರನ್ನು ರಾಜ್ಯಪಾಲನು ಈ ವಿಧಿಯ ಕಲಮು ನಿರೂಪಿಸಿದಂತೆ ನಾಮಕರಣ ಮಾಡತಕ್ಕದ್ದು.

೪. ಈ ವಿಧಿಯ ಕಲಮು (೩)ರ ಉಪಕಲಮು (ಎ), (ಬಿ) ಮತ್ತು (ಸಿ)ಗಳಡಿಯಲ್ಲಿ ಚುನಾಯಿತರಾಗುವ ಸದಸ್ಯರನ್ನು ಸಂಸತ್ತಿನಿಂದ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ಕಾನೂನಿನಡಿಯಲ್ಲಿ ವಿಧಿಸಲಾದಂಥ ಕ್ಷೇತ್ರವಾರು ಮತಕ್ಷೇತ್ರಗಳಿಂದ ಆರಿಸತಕ್ಕದ್ದು, ಮತ್ತು ಆ ಉಪಕಲಮುಗಳಲ್ಲಿಯ ಮತ್ತು ಆ ಕಲಮಿನ ಉಪಕಲಮು (ಡಿ) ಅಲ್ಲಿಯ ಚುನಾವಣೆಗಳು ಏಕ ವರ್ಗಾವಣೆಗೊಳ್ಳುವ ಮತದ ಮೂಲಕ ಸಂಖ್ಯಾನುಗುಣ ಪ್ರತಿನಿಧಿತ್ವದ ವ್ಯವಸ್ಥೆಗೆ ಅನುಗುಣವಾಗಿರತಕ್ಕದ್ದು.

೫. ಈ ವಿಧಿಯ ಕಲಮು (೩)ರ ಉಪಕಲಮು (ಇ) ಅಡಿಯಲ್ಲಿ ರಾಜ್ಯಪಾಲನು ನಾಮಕರಣ ಮಾಡುವ ಸದಸ್ಯರು ಈ ಕೆಳಗೆ ನಮೂದಿಸಿದಂಥ ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವವನ್ನು ಹೊಂದಿರುವ ವ್ಯಕ್ತಿಗಳನ್ನೊಳಗೊಂಡಿರತಕ್ಕದ್ದು, ಅವುಗಳಾವುವೆಂದರೆ:–

**"ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರಿ ಚಳುವಳಿ ಮತ್ತು ಸಾಮಾಜಿಕ ಸೇವೆ."**

ಮಾನ್ಯರೆ, ತಾವು ಹೇಳಿದಂತೆ, ಹಿಂದೆ ಈ ವಿಧಿಯು ಸದನದ ಮುಂದೆ ಬೇರೆ ನಮೂನೆಯಲ್ಲಿತ್ತು. ವಿಧಿಯು ಆಗಿದ್ದ ಪ್ರಕಾರ, ಮೇಲ್ಮನೆಯ ರಚನೆ ಸಂಸತ್ತು ಮಾಡಿದ ಕಾನೂನು ವಿಧಿಸಿದ ರೀತಿ ಇರತಕ್ಕದೆಂದು ರಚನೆಯ ಪ್ರಮುಖ ಭಾಗವನ್ನು ನಿರೂಪಿಸುವ ಆ ರೀತಿಯು ಸಮಂಜಸವಾದದ್ದಲ್ಲವೆಂದು, ಮತ್ತು ಮೇಲ್ಮನೆಯ ಸಂಘಟನೆಯ ವಿಷಯದಲ್ಲಿ ನಿರ್ದಿಷ್ಟವಾದ ಮತ್ತು ವಿಶಿಷ್ಟವಾದಂಥದ್ದು ಇರತಕ್ಕದ್ದೆಂದು ಸದನವು ಯೋಚಿಸಿತು. ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ತಾವು ಈ ಧೋರಣೆಯನ್ನು ಹೊಂದಿರುವ ಸದನದ ಸದಸ್ಯರ ಅನಿಸಿಕೆಗಳನ್ನು ಹಂಚಿಕೊಳ್ಳುವುದಾಗಿ ಹೇಳಿದರು, ಮತ್ತು ಈ ಟೀಕಾರೇಖೆಯನ್ನು ಅನುಸರಿಸಿದ ಸದಸ್ಯರಿಗೆ ಹೆಚ್ಚು ಒಪ್ಪಿಗೆಯಾಗುವ ಹಾಗೆ ಕರಡನ್ನು ಸಲ್ಲಿಸುವ ದೃಷ್ಟಿಯಿಂದ ಕರಡು ಸಮಿತಿಯು ವಿಷಯವನ್ನು ಮುಂದೆ ಪರಿಗಣಿಸಬೇಕೆಂದು ಸಲಹೆ ಮಾಡಿದರು. ಇಲ್ಲಿ ಸಲ್ಲಿಸಲಾದ ಕರಡು ಈ ಎರಡು ಧೋರಣೆಗಳ ನಡುವೆ ಸಮನ್ವಯ ರೂಪಿಸಿರುವುದನ್ನು ಗೌರವಾನ್ವಿತ ಸದಸ್ಯರು ನೋಡಬಹುದು. ಈ ಕರಡು ವಿವಿಧ ಪ್ರಾಂತ್ಯಗಳಲ್ಲಿಯ ಮೇಲ್ಮನೆಯ ಸಂಘಟನೆಯನ್ನು ನಿರ್ದಿಷ್ಟ ಪರಿಭಾಷೆಯಲ್ಲಿಡುತ್ತದೆ. ಇದು ಮಾಡುವ ಒಂದೇ ಸಂಗತಿ ಎಂದರೆ, ಈ ಹೊಸ ವಿಧಿ ೧೯೫೦ರಲ್ಲಿ ಅಳವಡಿಸಲಾದ ಸಂಘಟನೆಯನ್ನು ಸಂಸತ್ತು ಕಾನೂನಿನ ಮೂಲಕ ಯಾವ ಸಮಯದಲ್ಲಿ ಬೇಕಾದರೂ ಬದಲಾವಣೆ ಮಾಡಬಹುದು ಎಂದು ಸಹ ನಿರೂಪಿಸಲಾಗಿದೆ. ಈ ಸಮನ್ವಯವು ಸದನಕ್ಕೆ ಸ್ವೀಕಾರಾರ್ಹವೆಂದು ಮತ್ತು ಸದನವು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿದೆ ಎಂದು ನಾನು ಭಾವಿಸಿದ್ದೇನೆ.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಉಪಾಧ್ಯಕ್ಷರೇ, ಮಂಡಿಸಲಾದ ತಿದ್ದುಪಡಿಗಳಲ್ಲಿ, ಶ್ರೀ ಸರ್ವಟೆಯವರು ಮಂಡಿಸಿದ ತಿದ್ದುಪಡಿಗಳನ್ನು ಸ್ವೀಕರಿಸಲು ನಾನು ತಯಾರಾಗಿದ್ದೇನೆ. ಈಗಿನ ಸ್ಥಿತಿಯಲ್ಲಿರುವ ಕರಡಿನಲ್ಲಿ ಅವರು ನಿಜವಾದ ಬಿಕ್ಕಟ್ಟನ್ನು ಗುರುತಿಸಿದ್ದಾರೆಂದು ನನಗನಿಸುತ್ತದೆ. 'ರಾಜ್ಯದಲ್ಲಿರುವ ವಿಶ್ವವಿದ್ಯಾಲಯ' ಎಂದು ಕರಡು ಹೇಳುತ್ತದೆ. ಸದ್ಯದಲ್ಲಿ ವಿಶ್ವವಿದ್ಯಾಲಯವಿಲ್ಲದಿರುವ ಅನೇಕ ರಾಜ್ಯಗಳಿರುವುದು ಸ್ಪಷ್ಟವಾಗಿದೆ. ಅದರಂತೆ ಬೇರೆ ವಿಶ್ವವಿದ್ಯಾಲಯಗಳ ಪದವೀಧರರು ಆ ರಾಜ್ಯದಲ್ಲಿ ನೆಲೆಸಿರುತ್ತಾರೆ. ಅವನು ಆ ರಾಜ್ಯದ ವಿಶ್ವವಿದ್ಯಾಲಯದ ಪದವೀಧರನಲ್ಲನೆಂಬ ಕಾರಣ ಮಾತ್ರಕ್ಕೆ ಆ ರಾಜ್ಯದಲ್ಲಿ ನೆಲೆಸಿರುವ ಪದವೀಧರರನ್ನು ಮೇಲ್ಮನೆಯ ಚುನಾವಣೆಯಲ್ಲಿ ಭಾಗವಹಿಸುವ ಹಕ್ಕನ್ನು ತೆಗೆದು ಹಾಕುವುದು

* ಸಿ.ಎ.ಡಿ. ಸಂ. IX, ೧೯ನೇ ಆಗಸ್ಟ್ ೧೯೪೯, ಪುಟ ೪೯೦–೯೧.

ನಿರ್ದಿಷ್ಟವಾಗಿಯೂ ಇದರ ಉದ್ದೇಶವಾಗಿರುವುದಿಲ್ಲ. ಆದ್ದರಿಂದ ಒಂದು ರಾಜ್ಯದಲ್ಲಿ ನೆಲೆಸಿರುವ ಪದವೀಧರರ ಹಾದಿಯನ್ನು ಸುಗಮಗೊಳಿಸುವ ಸಲುವಾಗಿ, ಈ ತಿದ್ದುಪಡಿಯು ಅವಶ್ಯಕವೆಂದು ನನಗನಿಸುತ್ತದೆ ಮತ್ತು ಅದನ್ನು ಒಪ್ಪಿಕೊಳ್ಳಲು ನಾನು ಪ್ರಸ್ತಾಪಿಸುತ್ತೇನೆ. ನಾನು ಒಂದನ್ನು ಹೇಳುವುದೆಂದರೆ 'ಹವ್ಯಾಸಪೂರ್ವಕವಾಗಿ' ಎಂಬ ಶಬ್ದವು ಬಹುಶಃ ಆವಶ್ಯಕವಲ್ಲ. ಏಕೆಂದರೆ ವಾಸಸ್ಥಳವನ್ನು ಒಂದು ಅರ್ಹತೆಯನ್ನಾಗಿ ವಿಧಿ ೧೪೯ರ ನಿಯಮಾಂಶಗಳಲ್ಲಿ ವ್ಯಾಖ್ಯಾನಿಸಲಾಗುವುದು ಮತ್ತು ಅಲ್ಲಿ ನಮಗೆ ಅರ್ಹತೆ ಮತ್ತು ಅನರ್ಹತೆಗಳನ್ನು ವಿವರಿಸುವ ಅಧಿಕಾರವಿರುತ್ತದೆ.

ಟೀಕೆಗಳ ಇತರ ಅಂಶಗಳಿಗೆ ಸಂಬಂಧಿಸಿದಂತೆ, ಅತ್ಯುಕ್ತಿಯ ಪದಬಂಧವನ್ನು ಉಪಯೋಗಿಸಿ, ಈ ವಿಧಿಯನ್ನು ದೂಷಿಸಿದವರು ತಮಗೆ ತಾವೇ ಅಥವಾ ಈ ಸದನಕ್ಕೆ ಯಾವುದೇ ಸೇವೆಯನ್ನು ಮಾಡಿದ್ದಾರೆಯೇ ಎಂಬುದು ನನಗೆ ಗೊತ್ತಿಲ್ಲ. ಈ ವಿಷಯವನ್ನು ಒಂದಕ್ಕಿಂತಲೂ ಹೆಚ್ಚಿನ ಸಲ ಚರ್ಚಿಸಲಾಗಿದೆ. ಪ್ರಾಂತ್ಯದಲ್ಲಿ ದ್ವಿತೀಯ ಮನೆ ಇರಬೇಕೇ ಅಥವಾ ಬೇಡವೇ ಎಂಬ ವಿಷಯವನ್ನು ಚರ್ಚಿಸಲಾಗಿದೆ ಮತ್ತು ದ್ವಿತೀಯ ಮನೆಯನ್ನು ಬಯಸುವ ಪ್ರಾಂತ್ಯಗಳಿಗೆ ಅದನ್ನು ಹೊಂದಲು ಅನುಮತಿಸಬೇಕೆಂಬ ಪ್ರಸ್ತಾವನೆಯನ್ನು ಒಪ್ಪಿಕೊಳ್ಳಲಾಗಿದೆ. ಆ ವಿಷಯವನ್ನು ಚರ್ಚಿಸಿದಾಗ ಸದಸ್ಯರು ಎತ್ತಲಾದ ವಾದಗಳನ್ನು ಪುನಃ ಎತ್ತುವುದರಿಂದ ಯಾವುದೇ ಸದುದ್ದೇಶವನ್ನು ಪೂರೈಸಿದಂತಾಗುವುದೇ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ.

ಸದನದ ಮುಂದಿಡಲಾದ ಪ್ರಸ್ತಾವನೆಯ ಯೋಗ್ಯತೆಗೆ ಸಂಬಂಧಿಸಿದಂತೆ, ಮೇಲ್ಮನೆಯ ಸಂಘಟನೆಯ ಪರ್ಯಾಯವೇನು ಎಂಬುದರ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿದ ಯಾವುದೇ ಸದಸ್ಯನ ಮಟ್ಟಿಗೆ ಯಾವುದೇ ಒಂದು ಸಕಾರಾತ್ಮಕ ಸಲಹೆಯನ್ನು ನಾನು ನೋಡಿಲ್ಲ. ಅಲ್ಲೊಂದು ಇಲ್ಲೊಂದು ತುಣುಕುಗಳನ್ನು ತೆಗೆದುಕೊಳ್ಳಲಾಯಿತು. ಮತ್ತು ಅದೊಂದು ಉಪಯುಕ್ತ ನಿಯಮಾಂಶ ಅಥವಾ ಅಪಾಯಕರ ನಿಯಮಾಂಶ ಎಂದು ಎತ್ತಿ ತೋರಿಸುವ ದೂಷಣೆಗಳಲ್ಲಿ ತೊಡಗಲಾಯಿತು. ಈ ವಿಷಯವು ಎರಡು ಅಭಿಮತಗಳಿರುವಂಥದ್ದಾಗಿದೆ ಎಂದು ಹೇಳಲು ನಾನು ಸಿದ್ಧನಿದ್ದೇನೆ, ಮತ್ತು ನಾನು ಹೊಂದಿರುವ ಅಭಿಮತ ಅಥವಾ ಕರಡು ಸಮಿತಿಯ ಅಭಿಮತವೇ ಈ ವಿಷಯದಲ್ಲಿ ಸರಿಯಾದದ್ದು ಎಂದು ಹೇಳಲು ನಾನು ತಯಾರಾಗಿಲ್ಲ. ನಾವು ಯಾವುದೇ ಒಂದು ತರಹದ ಸಂಘಟನೆಯನ್ನು ನೀಡಬೇಕಾಗುತ್ತದೆ. ಹಾಗೂ ಈಗ ನಿರೂಪಿಸಿದ ಸಂಘಟನೆಯು ಸದ್ಯದ ಪರಿಸ್ಥಿತಿಗಳಲ್ಲಿ ಅತ್ಯಂತ ಸಮಂಜಸವಾದದ್ದು ಮತ್ತು ವ್ಯಾವಹಾರಿಕವಾದದ್ದು ಎಂದು ಹೇಳಲು ನಾನು ತಯಾರಾಗಿದ್ದೇನೆ.

ನಂತರ ಎರಡು ಅಂಶಗಳನ್ನು ಸೂಚಿಸಲಾಯಿತು, ಅವುಗಳಲ್ಲೊಂದು ನನ್ನ ಮಿತ್ರ ಶ್ರೀ ನಾಗಪ್ಪನವರಿಂದ ಮಾಡಲಾಯಿತು. ಕೃಷಿ ಕಾರ್ಮಿಕರ ಪ್ರತಿನಿಧಿತ್ವಕ್ಕಾಗಿ ನಿಯಮಾಂಶವನ್ನು ಮಾಡಬೇಕೆಂದು ಅವರು ಬಯಸಿದರು. ಮೇಲ್ಮನೆಯಲ್ಲಿ ಕೃಷಿ ಕಾರ್ಮಿಕರ ಪ್ರತಿನಿಧಿತ್ವಕ್ಕೆ ಯಾವುದೇ ನಿಯಮಾಂಶದ ಆವಶ್ಯಕತೆ ಇದೆ ಎಂದು ನನಗೆ ತಿಳಿಯುತ್ತಿಲ್ಲ. ಏಕೆಂದರೆ ನನ್ನ ನಿರ್ಣಯದಲ್ಲಿ ಕೆಳಮನೆಯ ಅತಿ ಹೆಚ್ಚು ಕೃಷಿ ಕಾರ್ಮಿಕರ ಪ್ರತಿನಿಧಿತ್ವವನ್ನು, ಕೆಳಮನೆಯ ಚುನಾವಣೆಯ ಪ್ರೌಢರ ಮತದಾನದ ಮೂಲಕ ಚುನಾಯಿಸುವ ಸಂಗತಿಯ ದೃಷ್ಟಿಯಿಂದ ಹೊಂದಿರುತ್ತದೆ ಮತ್ತು ನನಗೆ ತಿಳಿಯುತ್ತಿಲ್ಲ.........

**ಶ್ರೀ ಎಸ್. ನಾಗಪ್ಪ:** ಸಂದರ್ಭ ಹೀಗಿದ್ದರೆ ಉಳಿದ ವಿಭಾಗಗಳಿಗೆ ..........................

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಬೇರೆ ಕಾರಣಗಳಿಗಾಗಿ ಅವರಿಗೆ ನೀಡಲಾಗಿದೆ. ಆದರೆ ಕೃಷಿ ಕಾರ್ಮಿಕರಿಗೆ ಕೆಳಮನೆಯಲ್ಲಿ ಹೆಚ್ಚಿಗೆ ನೀಡಲಾಗುವುದು.

ನನ್ನ ಮಿತ್ರ ಶ್ರೀ ಮುನಿಸ್ವಾಮಿ ಪಿಳ್ಳೈ ತಮ್ಮ ತಿದ್ದುಪಡಿಯ ಮೂಲಕ ಮೇಲ್ಮನೆಯಲ್ಲಿ ಪರಿಶಿಷ್ಟ

ಜಾತಿಯವರಿಗೆ ವಿಶೇಷ ಪ್ರಾತಿನಿಧಿತ್ವ ಇರಬೇಕೆಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಕರಡು ಸಮಿತಿಗೆ ಸಂಬಂಧಿಸಿದಂತೆ, ಈ ವಿಷಯವನ್ನು ವಿಚಾರ ಮಾಡಿದ ಸಲಹಾ ಸಮಿತಿಯ ವರದಿಗೆ ಅದು ಬದ್ಧವಾಗಿರುತ್ತದೆ. ಈ ಸದನದ ಮುಂದೆ ಆಗಸ್ಟ್ ೧೯೪೭ರಲ್ಲಿಡಲಾದ ಸಲಹಾ ಸಮಿತಿಯ ವರದಿಯಲ್ಲಿ ಈ ಕೆಳಗಿನ ನಿಯಮಾಂಶವು ಸ್ಥಾನವನ್ನು ಕಂಡುಕೊಂಡಿದೆ:–

"(ಸಿ) ಕೇಂದ್ರೀಯ ಮತ್ತು ಪ್ರಾಂತೀಯ ಶಾಸಕಾಂಗಗಳಲ್ಲಿ ಮುಸಲ್ಮಾನರಿಗೆ ತಮ್ಮ ಜನಸಂಖ್ಯೆಯನ್ನು ಆಧರಿಸಿದ ಸ್ಥಳಗಳ ಮೀಸಲಾತಿ ಇರತಕ್ಕದ್ದು."

"೩ (ಎ) ಪರಿಶಿಷ್ಟ ಜಾತಿ ಎಂದು ಉಲ್ಲೇಖಿಸಲಾದ ಮತ್ತು ಭಾರತೀಯ ಸರ್ಕಾರ ಕಾಯ್ದೆ ೧೯೩೫ರ ಪರಿಶಿಷ್ಟದಲ್ಲಿ ವ್ಯಾಖ್ಯಾನಿಸಲಾದ ಹಿಂದೂ ಸಮಾಜದ ಒಂದು ವರ್ಗವು, ಇದರಲ್ಲಿ ನಿರೂಪಣೆ ಮಾಡಲಾದ ಹಕ್ಕುಗಳು ಮತ್ತು ಲಾಭಗಳನ್ನು ಹೊಂದಿರತಕ್ಕದ್ದು, ಮುಂತಾಗಿ....."

ಇದರ ಅರ್ಥವೇನೆಂದರೆ ಪರಿಶಿಷ್ಟ ಜಾತಿಯವರಿಗೆ ಭದ್ರಪಡಿಸಬೇಕಾದ ಪ್ರತಿನಿಧಿತ್ವವನ್ನು ಕೇಂದ್ರೀಯ ಮತ್ತು ಪ್ರಾಂತೀಯ ಶಾಸಕಾಂಗಗಳ ಕೆಳಮನೆಗಳಲ್ಲಿ ಮಾತ್ರ ಮಾಡತಕ್ಕದ್ದು. ಸಂವಿಧಾನ ರಚನಾ ಸಭೆಯ ನಿರ್ಣಯ ಅದಾಗಿರುವುದರಿಂದ, ಕರಡು ಸಮಿತಿಯು ಯಾವುದೇ ಪ್ರಸ್ತಾವನೆಯನ್ನು ಅಂಗೀಕರಿಸುವ ಸಾಮರ್ಥ್ಯ ಹೊಂದಿದೆ ಎಂದು ನನಗನಿಸುವುದಿಲ್ಲ. ನಾನು ಯಾರ ಭಾವನೆಗಳನ್ನು ನೋಯಿಸಬಯಸುವುದಿಲ್ಲ. ಈ ನಿರ್ಣಯಕ್ಕೆ ಪರವಾಗಿ ಅಭಿಪ್ರಾಯದಿಂದ ವ್ಯಕ್ತಪಡಿಸಿದವರು ಯಾರಾದರೂ ಇದ್ದರೆ ಅವರು ನನ್ನ ಮಿತ್ರ ಶ್ರೀ ಮುನಿಸ್ವಾಮಿ ಹಾಗೂ ಅವರು ಆಗ ಯಾವುದಕ್ಕೆ ಒಪ್ಪಿಕೊಂಡಿರುವರೋ ಅದರಿಂದಲೇ ತೃಪ್ತಿ ಹೊಂದಬೇಕೆಂದು ನನಗನಿಸುತ್ತದೆ.

**ಉಪಾ ಸಭಾಪತಿ:** ಡಾ. ಅಂಬೇಡ್ಕರವರೇ ತಾವು ತಿದ್ದುಪಡಿ ಸಂ. ೨ನ್ನು ವಿಧಿವತ್ತಾಗಿ ಹಿಂದಕ್ಕೆ ಪಡೆಯಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ನಾನು ಅದನ್ನು ಹಿಂತೆಗೆದುಕೊಳ್ಳಬೇಕು.

ಸಭೆಯ ಅನುಮತಿಯ ಮೇರೆಗೆ, ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

[೬ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು ಮತ್ತು ಡಾ. ಅಂಬೇಡ್ಕರ್‌ರವರದ್ದೂ ಸೇರಿದಂತೆ ಐದನ್ನು ಹಿಂತೆಗೆದುಕೊಳ್ಳಲಾಯಿತು]

* * *

***ಉಪಸಭಾಪತಿ:** ಈಗ ನಾನು ಶ್ರೀ ಸರ್ವತೆಯವರ ತಿದ್ದುಪಡಿಯನ್ನು ಸದನದ ಮುಂದಿಡುತ್ತಿದ್ದೇನೆ.

ಪ್ರಶ್ನೆಯು ಹೀಗಿರುತ್ತದೆ:

"ಪ್ರಸ್ತಾವಿತ ವಿಧಿ ೧೫೦ರ ಕಲಮು (೩)ರ ಉಪ–ಕಲಮು (ಬಿ)ಯಲ್ಲಿ "ವ್ಯಕ್ತಿಗಳನ್ನು ಹೊಂದಿರುವ ಶಬ್ದಗಳ ನಂತರ "ರಾಜ್ಯದಲ್ಲಿ ನೆಲಸಿದ" ಎಂಬ ಶಬ್ದಗಳನ್ನು ಸೇರಿಸಬೇಕು ಮತ್ತು "ರಾಜ್ಯದಲ್ಲಿ" ಎಂಬ ಶಬ್ದಗಳಿಗೆ "ಭಾರತೀಯ ಭೂಕ್ಷೇತ್ರದಲ್ಲಿ" ಎಂಬ ಶಬ್ದಗಳನ್ನು ಬದಲಿಸಬೇಕು."

ತಿದ್ದುಪಡಿಯನ್ನು ಅನುಮೋದಿಸಲಾಯಿತು.

**[ತಿದ್ದುಪಡಿಯಾದ ಪ್ರಕರಣ ೧೫೦ನ್ನೂ ಸಂವಿಧಾನಕ್ಕೆ ಸೇರಿಸಲಾಯಿತು.]**

---

* ಸಿ.ಎ.ಡಿ. ಸಂ. IX, ೧೯ನೇ ಆಗಸ್ಟ್ ೧೯೪೯, ಪುಟ ೪೯೨.

### ಭಾಗ VIII–ಎ
## ವಿಧಿ ೨೧೫–ಎ

*__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಮಾನ್ಯರೇ, ನಾನು ನನ್ನ ತಿದ್ದುಪಡಿ ಸಂಖ್ಯೆ ೬, ಯಾದಿ ೧, ನಾಲ್ಕನೇ ವಾರ, ಇದನ್ನು ಮಂಡಿಸುತ್ತೇನೆ.

"ಭಾಗ IIIರ ನಂತರ ಕೆಳಗಿನ ಹೊಸ ಭಾಗವನ್ನು ಸೇರಿಸಬೇಕು:–

### ಭಾಗ– IIIಎ
## ಪರಿಶಿಷ್ಟ ಮತ್ತು ಆದಿವಾಸಿ ಪ್ರದೇಶಗಳು

೨೧೫–ಎ ಈ ಸಂವಿಧಾನದಲ್ಲಿ–

ಎ. "ಪರಿಶಿಷ್ಟ ಪ್ರದೇಶಗಳು" ಎಂದರೆ ಐದನೇ ಪರಿಶಿಷ್ಟದ ೧೮ನೇ ಪ್ರಾಂತ್ಯಕ್ಕೆ ಲಗತ್ತಿಸಲಾದ ಟೇಬಲ್ಲಿನ ಭಾಗ Iರಿಂದ VIIರ ವ್ಯಾಖ್ಯೆಗಳಲ್ಲಿ ನಮೂದಿಸಲಾದ, ಆ ಪ್ಯಾರಾದ (೨)ನೇ ಉಪ–ಪ್ಯಾರಾದಲ್ಲಿ ಮಾಡಲಾದ ಯಾವುದೇ ಆದೇಶಕ್ಕೆ ಒಳಪಟ್ಟು ಆಯಾ ಭಾಗಗಳು ಅನುಕ್ರಮವಾಗಿ ಸಂಬಂಧಿಸಿದ ರಾಜ್ಯಗಳಿಗೆ ಸಂಬಂಧಿಸಿದ ಪ್ರದೇಶಗಳೆಂದು ಅರ್ಥ.

ಬಿ. "ಆದಿವಾಸಿ ಪ್ರದೇಶಗಳು" ಎಂದರೆ ಆರನೇ ಪರಿಶಿಷ್ಟದ ೧೯ನೇ ಪ್ಯಾರಾಕ್ಕೆ ಲಗತ್ತಿಸಲಾದ ಟೇಬಲ್ಲಿನ ಭಾಗ I ಮತ್ತು IIರಲ್ಲಿ ನಮೂದಿಸಲಾದ ಆ ಪರಿಶಿಷ್ಟದ ಪ್ಯಾರಾ ೧೭ರ ಉಪ–ಪ್ಯಾರಾ (೧)ರ ಕಲಮು (ಬಿ) ಅಥವಾ ಪ್ಯಾರಾ ೧ರ ಉಪ–ಪ್ಯಾರಾ (೩)ರಡಿಯಲ್ಲಿ ಮಾಡಲಾದ ಯಾವುದೇ ಆದೇಶಕ್ಕೆ ಒಳಪಟ್ಟ ಕ್ಷೇತ್ರಗಳೆಂದು ಅರ್ಥ.

೨೧೫–ಬಿ (೧) ಐದನೇ ಪರಿಶಿಷ್ಟದಲ್ಲಿಯ ನಿಯಮಾಂಶಗಳು ಅಸ್ಸಾಂ ರಾಜ್ಯವನ್ನು ಹೊರತುಪಡಿಸಿ ಒಂದನೇ ಪರಿಶಿಷ್ಟದ ಭಾಗ I ಅಥವಾ IIIರಲ್ಲಿ ಸದ್ಯಕ್ಕೆ ನಮೂದಿಸಲಾದ ಯಾವುದೇ ರಾಜ್ಯದಲ್ಲಿಯ ಪರಿಶಿಷ್ಟ ಕ್ಷೇತ್ರಗಳ ಮತ್ತು ಪರಿಶಿಷ್ಟ ಪಂಗಡಗಳ ಆಡಳಿತ ಮತ್ತು ನಿಯಂತ್ರಣಕ್ಕೆ ಅನ್ವಯವಾಗತಕ್ಕದ್ದು.

(೨) ಅಸ್ಸಾಂ ರಾಜ್ಯದಲ್ಲಿಯ ಪಂಗಡಗಳ ಕ್ಷೇತ್ರದಲ್ಲಿ ಆಡಳಿತಕ್ಕೆ ಐದನೇ ಪರಿಶಿಷ್ಟದಲ್ಲಿಯ ನಿಯಮಾಂಶಗಳು ಅನ್ವಯವಾಗತಕ್ಕದ್ದು.

ಮಾನ್ಯರೇ, ನನ್ನ ತಿದ್ದುಪಡಿಯು ಕೇವಲ ಮೂಲ ವಿಧಿ ೧೮೯ ಮತ್ತು ೧೯೦ನ್ನು ಮರು ಸ್ಥಾಪಿಸುತ್ತಿದೆ. ನಾವು ವಿಧಿ ೧೮೯ ಮತ್ತು ೧೯೦ಗಳು ಒಳಗೊಂಡಿರುವ ನಿಯಮಾಂಶಗಳನ್ನು ಇನ್ನೊಂದು ಮತ್ತು ಹೊಸ ಭಾಗಕ್ಕೆ ವರ್ಗಾಯಿಸುವುದನ್ನು ಮಾತ್ರ ಮಾಡುತ್ತಿದ್ದೇವೆ. ಈ ವರ್ಗಾವಣೆಯ ಕಾರಣಕ್ಕಾಗಿ ಅವುಗಳನ್ನು ಹೊಸ ಭಾಗದಲ್ಲಿ ಆವಶ್ಯಕ ತಾರ್ಕಿಕ ಜೋಡಣೆಯಲ್ಲಿಡುವುದಕ್ಕಾಗಿ ಹೊಸ ಕ್ರಮ ಸಂಖ್ಯೆ ಹಾಕುವುದು ಆವಶ್ಯಕವಾಗಿದೆ. ಕೆಲವು ಚಿಕ್ಕ ಪುಟ್ಟ ಬದಲಾವಣೆಗಳನ್ನು ಹೊರತುಪಡಿಸಿ, ನಾನು ಪ್ರಸ್ತಾಪಿಸಿದ ಹೊಸ ವಿಧಿಗಳಲ್ಲಿ ವಿಧಿ ೨೧೫–ಎ ಮತ್ತು ವಿಧಿ ೨೧೫–ಬಿ ಯಾವುದೇ ಸಾರಭೂತ ಬದಲಾವಣೆಗಳು ಇಲ್ಲವೇ ಇಲ್ಲ.

* * *

---

* ಸಿ.ಎ.ಡಿ. ಸಂ. IX, ೧೯ನೇ ಆಗಸ್ಟ್ ೧೯೪೯, ಪುಟ ೪೯೨–೯೩.

*ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್: ಯಾವುದೇ ಉತ್ತರಗಳನ್ನು ನೀಡುವುದು ಆವಶ್ಯಕವೆಂದು ನನಗನಿಸುವುದಿಲ್ಲ.

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

**[ಭಾಗ VIIಎ ಮತ್ತು ವಿಧಿ ೨೧೫ ಎ ಮತ್ತು ೨೧೫ ಬಿ ಅನ್ನು ಸಂವಿಧಾನಕ್ಕೆ ಸೇರಿಸಲಾಯಿತು.]**

## ವಿಧಿ ೨೫೦

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:–

"ವಿಧಿ ೨೫೦ರ ಕಲಮು (೧)ರ ಉಪ–ಕಲಮು (ಸಿ)ಯಲ್ಲಿ 'ರೈಲ್ವೆ ಶಬ್ದದ ನಂತರ, 'ಸಮುದ್ರ' ಶಬ್ದವನ್ನು ಸೇರಿಸಬೇಕು."

ಮಾನ್ಯರೇ ನಾನು ಮುಂದಿನ ತಿದ್ದುಪಡಿಯನ್ನು ಸಹ ಮಂಡಿಸುತ್ತೇನೆ.

"ವಿಧಿ ೨೫೦ ಕಲಮು (೨)ರಲ್ಲಿ 'ಭಾರತದ ಕಂದಾಯಗಳು' ಎಂಬ ಶಬ್ದಗಳಿಗೆ 'ಭಾರತದ ಸಂಚಿತ ನಿಧಿ' ಎಂದು ಬದಲಿಸಬೇಕು."

**ಶ್ರೀ ನಜಿರುದ್ದೀನ್ ಅಹ್ಮದ್:** .....ಸದ್ಯ ಶಾಸಕಾಂಗದ ಮುಂದೆ ಎಸ್ಟೇಟ್ ಕಂದಾಯವನ್ನು ಹೇರುವ ಮಸೂದೆ ಇದೆ. ಇಲ್ಲಿ ನಾವು ದೀರ್ಘಾವಧಿಗೆ ಶಾಸನ ಮಾಡುತ್ತಿದ್ದೇವೆ. ಆದ್ದರಿಂದ ನಾವು ಎಸ್ಟೇಟ್ ಮತ್ತು ವಾರಸು ಕಂದಾಯ ಎರಡನ್ನೂ ಹೊಂದಿರಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ವಾರಸು ಕಂದಾಯವನ್ನು (ಎ)ಯು ಒಳಗೊಂಡಿದೆ, ಅದು "ಸ್ವತ್ತಿನ ವಾರಸುಗೆ ಸಂಬಂಧಿಸಿದ ಕಂದಾಯಗಳು" ಎಂದು ಹೇಳುತ್ತದೆ. ಅದನ್ನು (೫)ರಲ್ಲಿ ಯಾಕೆ ಪುನಾವರ್ತಿಸಬೇಕು?"

**ಶ್ರೀ ನಜಿರುದ್ದೀನ್ ಅಹ್ಮದ್:** ಎರಡನ್ನೂ ಕೂಡಿಸಬಹುದಾಗಿತ್ತು.

* * *

***ಉಪಸಭಾಪತಿ: ಹೇಗೇ ಆಗಲಿ, ಡಾ. ಅಂಬೇಡ್ಕರ್ ಅವರು ಏನನ್ನಾದರೂ ಹೇಳಲು ಬಯಸುತ್ತಾರೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಏನನ್ನೂ ಹೇಳಬಯಸುವುದಿಲ್ಲ.

**ಉಪಸಭಾಪತಿ:** ತಿದ್ದುಪಡಿಗಳನ್ನು ನಾನು ಸದನದ ಮುಂದಿಡುವುದಿಲ್ಲ.

**[ಡಾ. ಅಂಬೇಡ್ಕರ್ ಮಂಡಿಸಿದ, ಮೇಲೆ ತಿಳಿಸಿದ, ಎರಡೂ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು. ಉಳಿದ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು. ತಿದ್ದುಪಡಿಯಾದ ವಿಧಿ ೨೫೦ನ್ನು ಸಂವಿಧಾನಕ್ಕೆ ಸೇರಿಸಲಾಯಿತು.]**

---

* ಸಿ.ಎ.ಡಿ. ಸಂ. IX, ೧೯ನೇ ಆಗಸ್ಟ್ ೧೯೪೯, ಪುಟ ೪೯೫.

** ಅದೇ, ಪುಟಗಳು ೪೯೯–೫೦೦.

*** ಅದೇ, ಪುಟ ೫೦೪.

# ವಿಧಿ ೨೭೭

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಮಂಡಿಸಲು ವಿನಂತಿಸುವುದೇನೆಂದರೆ:

"ವಿಧಿ ೨೭೭ನ್ನು ವಿಧಿ ೨೭೭ರ ಕಲಮು (೧) ಎಂದು ಹೊಸ ಕ್ರಮಸಂಖ್ಯೆ ಹಾಕಬೇಕು, ಮತ್ತು ಹಾಗೆ ಹೊಸ ಕ್ರಮ ಸಂಖ್ಯೆ ಹಾಕಿದ ಆ ವಿಧಿಗೆ ಈ ಮುಂದಿನ ಕಲಮು ಸೇರಿಸಬೇಕು:–

(೨) "ಈ ವಿಧಿಯ ಕಲಮು (೧)ರಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ನಂತರ ಸಾಧ್ಯವಾದಷ್ಟು ಬೇಗ, ಸಂಸತ್ತಿನ ಎರಡೂ ಸದನಗಳ ಮುಂದೆ ಇಡಬೇಕು."

ಈ ವಿಧಿಯ ೨೭೭ ಪರಿಣಾಮಾತ್ಮಕ ವಿಧಿಯಾಗಿದೆ. ರಾಷ್ಟ್ರಪತಿಯಿಂದ ತುರ್ತು ಪರಿಸ್ಥಿತಿಯ ಘೋಷಣೆಯಿಂದಾಗುವ ಆರ್ಥಿಕ ಪರಿಣಾಮಗಳೇನು ಎನ್ನುವುದನ್ನು ಇದು ಹೇಳುತ್ತದೆ. ವಿಧಿಯ ಕಲಮು (೧) ಹೇಳುವಂತೆ ಕೇಂದ್ರ ಮತ್ತು ಪ್ರಾಂತ್ಯಗಳ ನಡುವಿನ ವ್ಯವಸ್ಥೆಗಳಿಗೆ ಸಂಬಂಧಿಸಿದ ನಿಯಮಾಂಶಗಳನ್ನು ತುರ್ತು ಪರಿಸ್ಥಿತಿಯ ಅವಧಿಯ ಸಮಯದಲ್ಲಿ ರಾಷ್ಟ್ರಪತಿಯ ಆದೇಶದ ಮೂಲಕ ಬದಲಾವಣೆ ಮಾಡಬಹುದು. ಇಂಥ ಖಡಾಖಂಡಿತವಾದ ಮತ್ತು ಯಾವುದೇ ನಿರ್ಬಂಧನೆಗಳಿಲ್ಲದ ಪ್ರಾಂತ್ಯ ಮತ್ತು ರಾಜ್ಯಗಳ ನಡುವಿನ ಆರ್ಥಿಕ ವ್ಯವಸ್ಥೆಗಳನ್ನು ಬದಲಾವಣೆ ಮಾಡುವ ಅಧಿಕಾರವನ್ನು ರಾಷ್ಟ್ರಪತಿಗೆ ನೀಡುವುದು ಉಚಿತವಲ್ಲವೆಂದೂ ಮತ್ತು ಈ ವಿಷಯದಲ್ಲಿ ಸಂಸತ್ತಿಗೂ ತನ್ನ ನಿಲುವನ್ನು ತಿಳಿಸುವ ಅಧಿಕಾರವಿರಬೇಕೆಂಬ ಅನಿಸಿಕೆಯನ್ನು ವ್ಯಕ್ತಪಡಿಸಲಾಯಿತು. ತತ್‌ಪರಿಣಾಮವಾಗಿ ವಿಧಿ ೨೭೭ಕ್ಕೆ ಕಲಮು (೨)ನ್ನು ಸೇರಿಸಲು ಈಗ ಪ್ರಸ್ತಾಪಿಸಿ, ಅದರಲ್ಲಿ ಎರಡೂ ಸದನಗಳ ಮುಂದಿಡಬೇಕೆಂದು ನಿರೂಪಿಸಲಾಗಿದೆ. ಸಂಸತ್ತಿನ ಮುಂದೆ ವಿಷಯವನ್ನು ಇಟ್ಟ ನಂತರ, ತನಗೆ ಸೂಕ್ತವೆನಿಸಿದ ಕ್ರಮವನ್ನು ಸಂಸತ್ತು ತೆಗೆದುಕೊಳ್ಳುತ್ತದೆ, ಅದನ್ನು ಕಾರ್ಯಗತಗೊಳಿಸಲು ರಾಷ್ಟ್ರಪತಿಯು ಬದ್ಧರಾಗಿರುತ್ತಾರೆ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಮಾನ್ಯ ಉಪಾಧ್ಯಕ್ಷರೇ, ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಕುಂಝ್ರು ಅವರು ಮಂಡಿಸಿದ ತಿದ್ದುಪಡಿಗೆ ಎಷ್ಟು ಗಮನವನ್ನು ಹರಿಸಲು ಸಾಧ್ಯವೋ ಅಷ್ಟನ್ನು ನಾನು ಕೊಟ್ಟಿದ್ದೇನೆ. ಮತ್ತು ಅವರ ದೃಷ್ಟಿಯಲ್ಲಿ ನೋಡಲು ನನಗೆ ಸಾಧ್ಯವಿಲ್ಲವೆಂದು ಹೇಳಲು ವಿಷಾದಿಸುತ್ತೇನೆ. ಏಕೆಂದರೆ ಅವರ ತಿದ್ದುಪಡಿಯ ಹೆಚ್ಚಿನ ಅಂಶವು ಅನಾವಶ್ಯಕ ಎಂದು ನನಗನಿಸುತ್ತದೆ.

ಯಾವ ರೀತಿಯ ಆರ್ಥಿಕ ಸಂಬಂಧಗಳು ಕೇಂದ್ರ ಮತ್ತು ಪ್ರಾಂತಗಳ ನಡುವೆ ಸಾಮಾನ್ಯವಾಗಿ ಇರುತ್ತವೆಂಬ ವಿಚಾರದೊಂದಿಗೆ ಪ್ರಾರಂಭಿಸೋಣ. ಈಗಾಗಲೇ ಅಂಗೀಕರಿಸಿದ ವಿಧಿಗಳಿಂದ ನನಗೆ ತಿಳಿದಂತೆ ಸ್ಪಷ್ಟವಾಗುವುದೇನೆಂದರೆ, ಸಾಮಾನ್ಯ ಸಂದರ್ಭಗಳಲ್ಲಿ ಪ್ರಾಂತ್ಯಗಳು ಕೇಂದ್ರದಿಂದ ಪಡೆಯಬಹುದಾದವುಗಳು.,

೧. ವಿಧಿ ೨೫೧ರಡಿಯಲ್ಲಿ ವರಮಾನ ತೆರಿಗೆಯ ವರಮಾನಗಳು.

೨. ವಿಧಿ ೨೫೩ರಡಿಯಲ್ಲಿ ಕೇಂದ್ರ ಸುಂಕದಲ್ಲಿಯ ಪಾಲು; ಮತ್ತು

೩. ವಿಧಿ ೨೫೫ರಡಿಯಲ್ಲಿ ಕೆಲವು ಅನುದಾನಗಳು ಮತ್ತು ಕೊಡುಗೆಗಳು.

ಸೆಣಬಿನ ಸುಂಕದ ಬಗ್ಗೆ ನಾನು ಹೇಳುತ್ತಿಲ್ಲ. ಏಕೆಂದರೆ ಅದು ಪ್ರತ್ಯೇಕ ನೆಲೆಗಟ್ಟಿನ ಮೇಲೆ ನಿಂತಿರುತ್ತದೆ ಮತ್ತು ಅದಕ್ಕೆ ಶಾಸನಾತ್ಮಕ ಭದ್ರತೆಯನ್ನು ನೀಡಲಾಗಿದೆ.

ನಾನು ಪ್ರಸ್ತಾಪಿಸಿದ ರೂಪದಲ್ಲಿರುವ ವಿಧಿಯು ಏನನ್ನು ಪ್ರಸ್ತಾಪಿಸುತ್ತದೆ ಎಂಬ ವಿಚಾರವನ್ನು ಸಹ

ಮಾಡೋಣ. ವಿಧಿಯು ಏನನ್ನು ಪ್ರಸ್ತಾಪಿಸುತ್ತದೆ ಎಂದರೆ, ತುರ್ತು ಪರಿಸ್ಥಿತಿಯನ್ನು ಘೋಷಿಸಿದಾಗ ರಾಷ್ಟ್ರಪತಿಗೆ ವರಮಾನ ತೆರಿಗೆಯ ವರಮಾನ, ಸುಂಕ ಮತ್ತು ವಿಧಿ ೨೫೫ರಡಿಯಲ್ಲಿ ಕೇಂದ್ರ ನೀಡುವ ಅನುದಾನಗಳನ್ನು ಮರುಹಂಚುವ ಅಧಿಕಾರ ಹೊಂದುವ ಮುಕ್ತತೆ ಇರಬೇಕು. ನಾನು ಪ್ರಸ್ತಾಪಿಸಿದ ರೀತಿಯಲ್ಲಿರುವ ವಿಧಿಯು ರಾಷ್ಟ್ರಪತಿಗೆ ಈ ಮೂರು ಬಾಬತ್ತುಗಳಲ್ಲಿಯ ಹಂಚಿಕೆಗಳನ್ನು ಬದಲಾವಣೆ ಮಾಡುವ ಸ್ವಾತಂತ್ರ್ಯವನ್ನು ಕೊಡುತ್ತದೆ. ಅದೇ ಸ್ಥಿತಿಯು ಕರಡು ಸಮಿತಿಯಿಂದ ಸದನಕ್ಕೆ ಸಲ್ಲಿಸಲಾದ ಕರಡು ವಿಧಿಯದೂ ಆಗಿರುತ್ತದೆ.

ಈಗ, ನನ್ನ ಮಿತ್ರ ಪಂಡಿತ್ ಕುಂಝ್ರು ತಮ್ಮ ತಿದ್ದುಪಡಿಯ ಮೂಲಕ ಏನನ್ನು ಮಾಡಲು ಬಯಸುತ್ತಾರೆ? ಅವರನ್ನು ನಾನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ, ನಾನು ಉಲ್ಲೇಖ ಮಾಡಿದ ಮೂರರಲ್ಲಿಯ ಎರಡು ವಿಷಯಗಳನ್ನು ಬದಲಾವಣೆ ಮಾಡುವ ಪೂರ್ತಿ ಸ್ವಾತಂತ್ರ್ಯವನ್ನು ರಾಷ್ಟ್ರಪತಿಯವರಿಗೆ ಬಿಟ್ಟುಕೊಡುವುದರಲ್ಲಿ ಕರಡು ಸಮಿತಿಯಿಂದ ಅವೆರಡು ಭಿನ್ನವಾಗಿಲ್ಲ. ಅಂದರೆ, ಅವರು ರಾಷ್ಟ್ರಪತಿಯವರಿಗೆ, ಕೇಂದ್ರವು ಪ್ರಾಂತಗಳಿಗೆ ಸುಂಕದ ವರಮಾನದಲ್ಲಿ ಮಾಡಿದ ಮತ್ತು ಕೇಂದ್ರವು ಪ್ರಕರಣ ೨೫೫ನೇ ವಿಧಿಯ ಅಡಿಯಲ್ಲಿ ಮಾಡಿದ ಅನುದಾನದ ಯಾವುದೇ ಹಂಚಿಕೆಯ ಬದಲಾವಣೆ ಮಾಡುವ ಸಂಪೂರ್ಣ ಸ್ವಾತಂತ್ರ್ಯವನ್ನು ಬಿಟ್ಟುಕೊಡಲು ತಯಾರಾಗಿದ್ದಾರೆ. ನಾನು ಅವರನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ, ಕೇಂದ್ರದ ಅನುದಾನ ಮತ್ತು ಸುಂಕದ ವರಮಾನಗಳಿಂದ ಸಹಜವಾದ ಸಮಯದಲ್ಲಿ ಪ್ರಾಂತ್ಯಗಳಿಗೆ ಕೇಂದ್ರವು ಕೊಡಲು ಪ್ರತಿಬದ್ಧವಾದ ಯಾವುದೇ ಪಾಲನ್ನು ರಾಷ್ಟ್ರಪತಿಯು, ಆದೇಶದ ಮೂಲಕ, ಪೂರ್ತಿಯಾಗಿ ಅಳಿಸಿಹಾಕಿದರೆ ಅವರಿಗೆ ಯಾವುದೇ ತೊಂದರೆಯಿಲ್ಲ.

**ಪಂಡಿತ್ ಹೃದಯನಾಥ್ ಕುಂಝ್ರು** (ಸಂಯುಕ್ತ ಪ್ರಾಂತಗಳು: ಸಾಮಾನ್ಯ): ನಾನು ಅಂಥ ಯಾವುದೇ ಸಂಗತಿಯನ್ನು ಹೇಳಲೇ ಇಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ತಮ್ಮ ತಿದ್ದುಪಡಿಯು ವರಮಾನ ತೆರಿಗೆಗೆ ಮಾತ್ರ ಸೀಮಿತವಾಗಿದೆ. ಅದನ್ನೇ ಎತ್ತಿ ತೋರಿಸಲು ನಾನು ಪ್ರಯತ್ನಿಸುತ್ತಿದ್ದೇನೆ. ನಿಮ್ಮ ತಿದ್ದುಪಡಿಯ ಮೂಲಕ, ಸುಂಕದ ವರಮಾನ ಅಥವಾ ವಿಧಿ ೨೫೫ರಡಿಯಲ್ಲಿ ಕೇಂದ್ರವು ಮಾಡುವ ಅನುದಾನವನ್ನು ಬೇರಾವುದೇ ಸೂತ್ರದ ಮೂಲಕ ನಿರ್ವಹಿಸಲು ನೀವು ಯಾವುದೇ ಸಲಹೆಯನ್ನು ಮಾಡಿಲ್ಲ.

**ಪಂಡಿತ್ ಹೃದಯನಾಥ್ ಕುಂಝ್ರು:** ನಾನು ನನ್ನ ತಿದ್ದುಪಡಿಯನ್ನು ಆ ರೀತಿಯಲ್ಲಿ ರೂಪಿಸುವುದಕ್ಕಿರುವ ಕಾರಣ ಇದಾಗಿದೆ. ಎಲ್ಲಿಯವರೆಗೆ ಯಾವುದೇ ತೆರಿಗೆಯ ವರಮಾನದ ಹಂಚಿಕೆಯು ಸಂಸತ್ತು ಮಾಡಿದ ಶಾಸನದ ಮೇಲೆ ಅವಲಂಬಿತವಾಗಿರುತ್ತದೆಯೋ ಆ ಅಧಿಕಾರವನ್ನು ಸಂಸತ್ತಿನಿಂದ ಕಿತ್ತುಕೊಳ್ಳಲು ಬರುವುದಿಲ್ಲ. ಆದರೆ ಅದು ರಾಷ್ಟ್ರಪತಿಯವರದಾಗಿರುವುದಿಲ್ಲ. ಆದರೆ ವರಮಾನ ತೆರಿಗೆಗೆ ಸಂಬಂಧಿಸಿದಂತೆ, ಭಾರತೀಯ ಸರ್ಕಾರ ಕಾಯ್ದೆ ೧೯೩೫ರ ಪ್ರಕಾರ ಪ್ರಾಂತಗಳ ಸಂಪೂರ್ಣ ಪಾಲನ್ನು ನಿಗದಿತ ಸಮಯದೊಳಗೆ ಅವುಗಳಿಗೆ ವರ್ಗಾವಣೆ ಮಾಡಬೇಕೆಂದು ವಿಚಾರ ಮಾಡಲಾಗಿತ್ತು. ಮತ್ತು ತುರ್ತು ಪರಿಸ್ಥಿತಿಯ ಸಂದರ್ಭವಿದ್ದರೆ, ಪ್ರಾಂತ್ಯಗಳಿಗೆ ವರ್ಗಾವಣೆ ಮಾಡುವುದನ್ನು ತಡ ಮಾಡಲು ಮತ್ತು ಹಾಗಾಗಿ ಪ್ರಾಂತ್ಯಗಳು ತಮ್ಮ ಸಂಪೂರ್ಣ ಪಾಲನ್ನು ಪಡೆಯುವ ಒಟ್ಟು ಅವಧಿಯನ್ನು ಹೆಚ್ಚಿಸಲು ಗವರ್ನರ್–ಜನರಲ್ಲನಿಗೆ ಅನುಮತಿಸಲಾಗಿತ್ತು. ಅದೊಂದೇ ಕಾರಣವಾಗಿರುತ್ತದೆ. ನನ್ನ ಗೌರವಾನ್ವಿತ ಮಿತ್ರನು ಮಾಡಿದ ಊಹೆಯು ಸಂಪೂರ್ಣವಾಗಿ ಅಸಮರ್ಪಕವಾಗಿರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸದನದ ಮುಂದೆ ಇಟ್ಟಿರುವ ತಿದ್ದುಪಡಿಯನ್ನಾಧರಿಸಿ

ಅತ್ಯಂತ ಸ್ವಾಭಾವಿಕ ಊಹೆಯನ್ನು ಮಾಡಲು ನಾನು ಬಾಧ್ಯಸ್ತನಾಗಿರುತ್ತೇನೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಗೌರವಾನ್ವಿತ ಸದಸ್ಯರು ನನ್ನನ್ನು ಸಂಪೂರ್ಣ ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ನನ್ನ ತಿದ್ದುಪಡಿಯಲ್ಲಿ ರಾಷ್ಟ್ರಪತಿಯು ಕೇಂದ್ರ ಸುಂಕದ ವರಮಾನದ ಹಂಚಿಕೆಯನ್ನು ಬದಲಾವಣೆ ಮಾಡುವ ಅಧಿಕಾರವನ್ನು ಹೊಂದಿರುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಕ್ಷಮಿಸಿ, ಗೌರವಾನ್ವಿತ ಸದಸ್ಯರು ತಮ್ಮ ತಿದ್ದುಪಡಿಯಲ್ಲಿ ವಿಷಯವನ್ನು ಸ್ಪಷ್ಟಪಡಿಸಿಲ್ಲ. ಮತ್ತು ಅವರ ಹೊಸ ಅರ್ಥವಿವರಣೆಯನ್ನು ಕೊಟ್ಟರೆ ಮತ್ತು ಮೂಲಭೂತ ಬದಲಾವಣೆ ಮಾಡಿದರೆ, ತಿದ್ದುಪಡಿಯು ಯಾವ ಉದ್ದೇಶವನ್ನು ಹೊಂದಿದೆ ಎನ್ನುವುದರ ಬಗ್ಗೆ ನನಗೆ ಸ್ಪಷ್ಟ ಸೂಚನೆಯನ್ನು ಕೊಡುವಂಥದ್ದಾಗಿರಬೇಕಾಗಿತ್ತು. ಗೌರವಾನ್ವಿತ ಸದಸ್ಯರು ೨೫೩ ಮತ್ತು ೨೫೫ನೇ ವಿಧಿಗಳಲ್ಲಿನ ನಿಯಮಾಂಶಗಳನ್ನು ಬದಲಾವಣೆ ಮಾಡಬಯಸಿದ್ದಾರೆಂದು ಸಲಹೆ ಮಾಡುವಂಥದ್ದೇನೂ ತಿದ್ದುಪಡಿಯಲ್ಲಿ ಇಲ್ಲ; ತಿದ್ದುಪಡಿಯನ್ನು ಹೇಗೆ ಇಡಲಾಗಿದೆಯೋ ಹಾಗೆಯೇ ನಾನು ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ನಾನು ತಿದ್ದುಪಡಿಯನ್ನು ಓದಿದಂತೆ ನನ್ನ ಅರ್ಥವಿಮರ್ಶೆಯು ಅತ್ಯಂತ ಸ್ವಾಭಾವಿಕವಾಗಿದೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಗೌರವಾನ್ವಿತ ಸದಸ್ಯರು ನನ್ನನ್ನು ತಪ್ಪಾಗಿ ಪ್ರತಿಬಿಂಬಿಸುತ್ತಿದ್ದಾರೆ ಹಾಗೂ ಅವರು ಹಾಗೆ ಮಾಡುತ್ತಿದ್ದಾರೆಂದು ಅವರಿಗೆ ಗೊತ್ತಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಗೌರವಾನ್ವಿತ ಸದಸ್ಯರು ತಮ್ಮ ವಿಚಾರಗಳನ್ನು ತಾವೇ ತಪ್ಪಾಗಿ ಪ್ರತಿಬಿಂಬಿಸುತ್ತಿದ್ದಾರೆ. ಆದ್ದರಿಂದ, ನನಗೆ ತಿಳಿದ ಹಾಗೆ, ನನ್ನ ಗೌರವಾನ್ವಿತ ಮಿತ್ರರು, ಸುಂಕ ವರಮಾನ ಮತ್ತು ಅನುದಾನಗಳನ್ನು ಬದಲಾಯಿಸುವ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಯನ್ನು ಸೂಚಿಸಿರುವ ಪ್ರಶ್ನೆಯೇ ಇಲ್ಲ. ಅವರು ಎತ್ತಿದ ಒಂದೇ ಪ್ರಶ್ನೆ ಎಂದರೆ, ತುರ್ತು ಪರಿಸ್ಥಿತಿಯಲ್ಲಿ ವರಮಾನ ತೆರಿಗೆಯ ಹಂಚಿಕೆಯ ಬದಲಾವಣೆಯ ಪ್ರಶ್ನೆ. ಅಲ್ಲಿ ಸಹಿತ ನಾವು ಏನನ್ನು ಕಾಣುತ್ತೇವೆ? ನಾನು ಅವರ ತಿದ್ದುಪಡಿಯನ್ನು ಮತ್ತೊಮ್ಮೆ ಸರಿಯಾಗಿ ಓದಿದ್ದಾದರೆ, ಅವರೇ ರಾಷ್ಟ್ರಪತಿಯವರಿಗೆ ವರಮಾನ ತೆರಿಗೆ ಹಂಚಿಕೆಯ ಬದಲಾವಣೆಯ ವಿಷಯದಲ್ಲಿರುವ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ತೆಗೆದುಹಾಕುತ್ತಿಲ್ಲ. ಅವರು ಏನನ್ನು ಮಾಡುತ್ತಿದ್ದಾರೆ ಎಂದರೆ, ಒಂದು ವೇಳೆ ರಾಷ್ಟ್ರಪತಿಯವರು ಹಿಂದಿನ ಆದೇಶದಲ್ಲಿ ಮಾಡಲಾದ ವರಮಾನ ತೆರಿಗೆಯ ಹಂಚಿಕೆಯನ್ನು ಬದಲಾವಣೆ ಮಾಡಬೇಕಿದ್ದರೆ, ಇವರು ತಮ್ಮ ತಿದ್ದುಪಡಿಯಲ್ಲಿ ತಿಳಿಸಿದ ನಿರ್ದಿಷ್ಟ ರೀತಿಯಲ್ಲಿಯೇ ರಾಷ್ಟ್ರಪತಿಯವರು ಮುಂದುವರಿಯಬೇಕು.

ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ನಾನು ಮಂಡಿಸಿರುವ ಕರಡು ಕಲಮು ಮತ್ತು ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಕುಂಝ್ರು ಅವರ ತಿದ್ದುಪಡಿಯ ನಡುವೆ ಇರುವ ಒಂದು ವ್ಯತ್ಯಾಸವೆಂದರೆ, ರಾಷ್ಟ್ರಪತಿಯವರ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ, ಅದನ್ನು ಸಕ್ರಮಕ್ಕೆ ಒಳಪಡಿಸದೇ ಬಿಡಕೂಡದು, ಅದನ್ನು ಅವರು ಸಲಹೆ ಮಾಡಿದ ರೀತಿಯಲ್ಲಿ ಸಕ್ರಮಕ್ಕೆ ಒಳಪಡಿಸಬೇಕು.

**ಅದಕ್ಕೆ ನನ್ನ ಉತ್ತರ ಹೀಗಿರುತ್ತದೆ:** ರಾಷ್ಟ್ರಪತಿಯು ವರಮಾನ ತೆರಿಗೆಯ ಹಂಚಿಕೆಗೆ ಸಂಬಂಧಿಸಿದ ನಿಯಮಾಂಶಗಳನ್ನು ಬದಲಾವಣೆ ಮಾಡುವ ಅಧಿಕಾರವನ್ನು ಬದಲಿಸುವಾಗ ಅಥವಾ ಚಲಾಯಿಸುವಾಗ ವರಮಾನ ತೆರಿಗೆಯ ವರಮಾನವನ್ನು ಸಂಪೂರ್ಣವಾಗಿ ಕಿತ್ತುಕೊಳ್ಳುವಂಥ ಸ್ವೇಚ್ಛೆಯು ಕ್ರಮ ಕೈಗೊಳ್ಳುತ್ತಾನೆಂದು ನಂಬಲು ಯಾವ ಕಾರಣವಿದೆ? ರಾಷ್ಟ್ರಪತಿಯು ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಕುಂಝ್ರು, ತಾವು ಮಂಡಿಸಿದ ತಿದ್ದುಪಡಿಯಲ್ಲಿ ಮಾಡಿದ ಸಲಹೆಯನ್ನು ಸಹ ಅಳವಡಿಸಿಕೊಳ್ಳುವುದಿಲ್ಲ ಎಂದು ನಂಬಲು

ಯಾವ ಆಧಾರವಿದೆ? ಹಂಚಿಕೆಯಲ್ಲಿ ಪ್ರಾಂತ್ಯಗಳು ಪಡೆಯಲು ಬಾಧ್ಯಸ್ಥೆಯನ್ನು ಹೊಂದಿರುವ ಒಟ್ಟು ವರಮಾನವನ್ನು ರಾಷ್ಟ್ರಪತಿಯು ಅಳಿಸಿಹಾಕುತ್ತಾರೆಂದು ನಂಬಲು ಅಥವಾ ಅಂಥ ಸ್ವೇಚ್ಛೆಯ ಸಲಹೆಯನ್ನು ಮಾಡಲು ಯಾವುದೇ ಕಾರಣವಿಲ್ಲ. ಎಷ್ಟೇ ಆಗಲಿ ರಾಷ್ಟ್ರಪತಿಯು ಒಬ್ಬ ವಿಚಾರವಂತ ವ್ಯಕ್ತಿಯಾಗಿರುತ್ತಾನೆ; ವರಮಾನ ತೆರಿಗೆಯ ವರಮಾನದಲ್ಲಿಯ ಬಹುತೇಕ ಭಾಗವು ಪ್ರಾಂತ್ಯಗಳ ಕಂದಾಯದ ಭಾಗವಾಗಿದೆ ಎಂಬುದನ್ನು ರಾಷ್ಟ್ರಪತಿಯವರು ತಿಳಿದುಕೊಂಡಿರುತ್ತಾರೆ; ಮತ್ತು ತುರ್ತು ಪರಿಸ್ಥಿತಿಯು ಇದ್ದಾಗ್ಯೂ ಸಹ ಕೇಂದ್ರಕ್ಕೆ ಸಹಾಯ ಮಾಡುವುದು ಎಷ್ಟು ಆವಶ್ಯಕವೋ ಪ್ರಾಂತ್ಯಗಳೂ ಕಾರ್ಯೋನ್ಮುಖವಾಗುವಂತೆ ನೋಡಿಕೊಳ್ಳುವುದು ಅಷ್ಟೇ ಆವಶ್ಯಕವೆನ್ನುವುದನ್ನು ಸಹ ಅವರು ತಿಳಿದುಕೊಂಡಿದ್ದಾರೆ.

ಆದ್ದರಿಂದ ನನ್ನ ನಿರ್ಣಯದಲ್ಲಿ ನನ್ನ ಮಿತ್ರ ಪಂಡಿತ್ ಕುಂಝ್ರು ಅವರು ತಮ್ಮ ತಿದ್ದುಪಡಿಯಲ್ಲಿ ಸಲಹೆ ಮಾಡಿದ ಹಾಗೆ ಒಂದು ನಿರ್ದಿಷ್ಟ ರೀತಿಯಲ್ಲಿ ಕ್ರಮ ಕೈಗೊಳ್ಳಲು ರಾಷ್ಟ್ರಪತಿಯವರ ಕೈಗಳನ್ನು ಕಟ್ಟಿಹಾಕುವ ಆವಶ್ಯಕತೆ ಇರುವುದಿಲ್ಲ. ರಾಷ್ಟ್ರಪತಿಯು ಪ್ರಾಂತ್ಯಗಳ ಸಂಪರ್ಕದೊಂದಿಗೆ ಅಥವಾ ಹಣಕಾಸು ಆಯೋಗದ ಅಥವಾ ಇತರ ಪರಿಣಿತ ಪ್ರಾಧಿಕಾರದ ಸಂಪರ್ಕದೊಂದಿಗೆ ತುರ್ತು ಪರಿಸ್ಥಿತಿಯಲ್ಲಿ ವರಮಾನ ತೆರಿಗೆಯ ವರಮಾನವನ್ನು ನಿರ್ವಹಿಸುವ ಇತರ ಯಾವುದೇ ಸೂತ್ರವನ್ನು ಕಂಡುಕೊಳ್ಳಬಹುದು, ಮತ್ತು ಅವರು ಹಾಗೆ ಪಡೆಯಬಹುದಾದಂಥ ಸಲಹೆಗಳು ನನ್ನ ಮಿತ್ರ ಪಂಡಿತ್ ಕುಂಝ್ರು ಅವರು ಮಾಡಿದ ಸಲಹೆಗಳಿಗಿಂತ ಬಹಳ ಉತ್ತಮವಾದವುಗಳೆಂದು ರುಜುವಾತಾಗಬಹುದು. ಆದ್ದರಿಂದ, ಒಂದು ನಿರ್ದಿಷ್ಟ ರೀತಿಯಲ್ಲಿ ನಡೆದುಕೊಳ್ಳುವಂತೆ ರಾಷ್ಟ್ರಪತಿಯವರ ಕೈಗಳನ್ನು ಕಟ್ಟಿಹಾಕುವುದು ಮತ್ತು ಅವರಿಗೆ ಬರಬಹುದಾದಂಥ ಸಲಹೆ ಮೂಲಕ ಇತರ ಅನೇಕ ರೀತಿಗಳಲ್ಲಿ ನಡೆದುಕೊಳ್ಳುವ ಸ್ವಾತಂತ್ರ್ಯ ಹಾಗೂ ವಿಚಕ್ಷಣೆಯನ್ನು ಅವರಿಗೆ ಬಿಟ್ಟುಕೊಡದಿರುವುದು ಅತ್ಯಂತ ತಪ್ಪಾದದ್ದೆಂದು ನನಗನಿಸುತ್ತದೆ. ಕರಡನ್ನು ಕರಡು ಸಮಿತಿಯು ಮಾಡಿದ ಪ್ರಸ್ತಾವನೆಯಲ್ಲಿರುವಷ್ಟು ಹಿಗ್ಗಿಸುವ ರೀತಿಯಲ್ಲಿಯೇ ಬಿಡುವುದು ಉತ್ತಮ ಎಂಬುದು ನನ್ನ ಸಲಹೆ; ನನ್ನ ಮಿತ್ರ ಪಂಡಿತ್ ಕುಂಝ್ರು ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದರಿಂದ ಯಾವುದೇ ಲಾಭವನ್ನು ಪಡೆದಂತಾಗುವುದಿಲ್ಲ.

ನಾನು ಹೇಳಿದ ಹಾಗೆ, ಮೂಲ ಕರಡಿನಲ್ಲಿ ನಾನು ಇನ್ನೊಂದು ತಿದ್ದುಪಡಿಯನ್ನು ಮಾಡಿದ್ದೇನೆ. ಅದರಲ್ಲಿ ವಿಷಯವನ್ನು ಸಂಪೂರ್ಣವಾಗಿ ರಾಷ್ಟ್ರಪತಿಯ ವಿಚಕ್ಷಣೆಗೆ ಬಿಡಲಾಗಿತ್ತು. ಮತ್ತು ಸಂಸತ್ತು ಈ ವಿಷಯದಲ್ಲಿ ಏನನ್ನೂ ಹೇಳುವ ಹಾಗಿರಲಿಲ್ಲ. ನಾನು ಪ್ರಸ್ತಾಪಿಸಿದ ಹೊಸ ತಿದ್ದುಪಡಿಯ ಮೂಲಕ, ರಾಷ್ಟ್ರಪತಿಯು ಕಂದಾಯಗಳ ಹಂಚಿಕೆಗೆ ಸಂಬಂಧಿಸಿದಂತೆ ಮಾಡಿದ ಯಾವುದೇ ಆದೇಶವನ್ನು ಸಂಸತ್ತು ಪರಿಗಣಿಸುವ ಸಾಧ್ಯತೆಯಿದೆ; ಮತ್ತು ಅದರಿಂದ ಒಂದು ವೇಳೆ ರಾಷ್ಟ್ರಪತಿಯು ಪ್ರಾಂತ್ಯಗಳ ಹಿತಾಸಕ್ತಿಗಳಿಗೆ ಹಾನಿಕಾರಕ ಅಥವಾ ಅಪಾಯಕಾರಕವಾಗಬಹುದಾದದ್ದನ್ನು ಮಾಡಿದ್ದರೆ, ಖಂಡಿತವಾಗಿಯೂ ಆ ಪ್ರಾಂತ್ಯಗಳಿಂದ ಸಂಸತ್ತಿಗೆ ಬಂದಿರುವ ಅನೇಕ ಪ್ರತಿನಿಧಿಗಳು ಮತ್ತು ಯಾರು ನಿಸ್ಸಂದೇಹವಾಗಿಯೂ ತಮ್ಮ ಪ್ರಾಂತ್ಯಗಳ ಹಿತಾಸಕ್ತಿಗಳನ್ನು ಮರೆಯುವುದಿಲ್ಲವೋ, ಅವರು ವಿಷಯವನ್ನು ಸರಿಪಡಿಸುವ ಸ್ಥಿತಿಯಲ್ಲಿರುತ್ತಾರೆ. ಆದ್ದರಿಂದ ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಕುಂಝ್ರು ಅವರು ಸೂಚಿಸಿರುವುದಕ್ಕಿಂತಲೂ ಹೆಚ್ಚು ಹಿಗ್ಗುವ ಸ್ವರೂಪದ್ದಾದ್ದರಿಂದ ಮೂಲ ವ್ಯವಸ್ಥೆಯನ್ನೇ ಕಾಪಾಡಿಕೊಳ್ಳಬೇಕೆಂದು ನನಗನಿಸುತ್ತದೆ.

**[ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು ಮತ್ತು ಪಂಡಿತ್ ಕುಂಝ್ರು ಅವರದನ್ನು ತಿರಸ್ಕರಿಸಲಾಯಿತು. ತಿದ್ದುಪಡಿಯ ವಿಧಿ ೨೭೭ನ್ನು ಸಂವಿಧಾನಕ್ಕೆ ಸೇರಿಸಲಾಯಿತು.]**

# ವಿಧಿ ೨೮೦

**ತುರ್ತು ಪರಿಸ್ಥಿತಿಯಲ್ಲಿ ೨೫೦ರಿಂದ ಭದ್ರತೆಗೊಳಿಸಿದ ಹಕ್ಕುಗಳ ಅಮಾನತ್ತು.**

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"೨೮೦ನೆಯ ವಿಧಿಯ ಬದಲಿಗೆ ವಿಧಿಯನ್ನು ಸೇರಿಸಬೇಕು:–

'೨೮೦. (೧) ತುರ್ತು ಪರಿಸ್ಥಿತಿಯ ಘೋಷಣೆಯು ಕಾರ್ಯಾಚರಣೆಯಲ್ಲಿರುವಾಗ, ರಾಷ್ಟ್ರಪತಿಯು ಹಕ್ಕುಗಳನ್ನು ಅಮಾನತ್ತುಗೊಳಿಸುವ ಆದೇಶದ ಮೂಲಕ ಸಂವಿಧಾನದ ಭಾಗ IIIರಲ್ಲಿ ನೀಡಲಾದ ಆದೇಶದಲ್ಲಿ ನಮೂದಿಸಿದಂಥ ಹಕ್ಕುಗಳನ್ನು ಅಮಲ್ ಜಾರಿಗೊಳಿಸಲು ಯಾವುದೇ ನ್ಯಾಯಾಲಯಕ್ಕೆ ಹೋಗುವ ಹಕ್ಕು ಮತ್ತು ಹಾಗೆ ನಮೂದಿಸಲಾದ ಹಕ್ಕುಗಳ ಅಮಲ್ಜಾರಿಗಾಗಿ ಯಾವುದೇ ನ್ಯಾಯಾಲಯದ ಮುಂದಿರುವ ಎಲ್ಲ ವ್ಯಾಜ್ಯಗಳು ಘೋಷಣೆಯು ಜಾರಿಯಲ್ಲಿರುವ ಅವಧಿಯವರೆಗೆ ಅಥವಾ ಆದೇಶದಲ್ಲಿ ನಿಗದಿಪಡಿಸಿದಂಥ ಕಡಿಮೆ ಅವಧಿಯವರೆಗೆ ಅಮಾನತ್ತಿನಲ್ಲಿರತಕ್ಕದ್ದೆಂದು ಘೋಷಿಸಬಹುದಾಗಿದೆ.

(೨) ಮೇಲೆ ಹೇಳಿದಂತೆ ಮಾಡಿದ ಆದೇಶವನ್ನು ಭಾರತದ ಭೂ ಕ್ಷೇತ್ರದ ಪೂರ್ತಿ ಅಥವಾ ಯಾವುದೇ ಭಾಗಕ್ಕೆ ವಿಸ್ತರಿಸಬಹುದಾಗಿದೆ.

(೩) ಈ ವಿಧಿಯ ಕಲಮು (೧)ರಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ನಂತರ ಸಾಧ್ಯವಾದಷ್ಟು ಬೇಗ ಸಂಸತ್ತಿನ ಎರಡೂ ಸದನಗಳ ಮುಂದೆ ಇಡತಕ್ಕದ್ದು.

ಮಾನ್ಯರೆ, ಕಲಮು (೨) ಮತ್ತು (೩) ಹಳೆಯ ವಿಧಿಗೆ ಹೆಚ್ಚಿನ ಸೇರಿಕೆಗಳಾಗಿವೆ ಎನ್ನುವುದನ್ನು ಸದನವು ಮನಗಾಣಬೇಕು. ಹಳೆಯ ವಿಧಿ ಪ್ರಕರಣದಲ್ಲಿ ತುರ್ತು ಪರಿಸ್ಥಿತಿಯ ಘೋಷಣೆಯು ಜಾರಿಯಲ್ಲಿರುವಾಗ ರಾಷ್ಟ್ರಪತಿಯು ಭಾಗ IIIರಲ್ಲಿರುವ ಹಕ್ಕುಗಳ ನಿಯಮಾಂಶಗಳನ್ನು ಇಡೀ ಭಾರತದಲ್ಲಿ ಅಮಾನತ್ತುಗೊಳಿಸಬಹುದು ಎಂಬ ನಿಯಮಾಂಶವಿತ್ತು. ಈಗ ನಿರ್ಣಯಿಸಿದ್ದೆಂದರೆ, ತುರ್ತು ಪರಿಸ್ಥಿತಿಯು ಇದ್ದಾಗ್ಯೂ ಸಹ ಕೆಲವು ಕ್ಷೇತ್ರಗಳಲ್ಲಿ ಭಾಗ IIIರಲ್ಲಿಯ ಹಕ್ಕುಗಳ ಅಮಲ್ಜಾರಿಯನ್ನು ಸುರಕ್ಷಿತವಾಗಿಡಲು ಸಾಧ್ಯವಿರಬಹುದಾಗಿದೆ ಹಾಗೂ ಘೋಷಣೆಯ ಮಾತ್ರದ ಕಾರಣಕ್ಕಾಗಿ ಇಡೀ ಭಾರತದಲ್ಲಿ ಸಾರ್ವತ್ರಿಕವಾಗಿ ಅಮಾನತ್ತಿನಲ್ಲಿಡಬೇಕಾಗಿಲ್ಲ. ಈ ಕಾರಣಕ್ಕಾಗಿ ಕರಡು ವಿಧಿ ಆ ನಿಯಮಾಂಶವನ್ನು ಮಾಡುವುದಕ್ಕಾಗಿ ಕಲಮು (೨)ನ್ನು ಸೇರಿಸಲಾಗಿದೆ.

ಮೂರನೆಯದಾಗಿ, ಮೂಲ ಪ್ರಕರಣವು ಕಲಮು (೧)ರಲ್ಲಿ ನೀಡಿದ ಯಾವುದೇ ಆದೇಶದ ವಿಷಯದಲ್ಲಿ ಸಂಸತ್ತು ವ್ಯಕ್ತಪಡಿಸಲು ಅನುಮತಿಸುವ ಯಾವುದೇ ನಿಯಮಾಂಶವನ್ನು ಒಳಗೊಂಡಿರಲಿಲ್ಲ. ಅಮಾನತ್ತುಗೊಳಿಸುವ ಅದೇಶವನ್ನು ರಾಷ್ಟ್ರಪತಿಯ ಕೈಯಲ್ಲಿ ಯಾವುದೇ ರೀತಿಯ ಸಂಕೋಲೆಗಳಿಲ್ಲದೇ ಬಿಡಕೂಡದೆಂಬುದು ಸದನದ ಅಪೇಕ್ಷೆಯಾಗಿರುತ್ತದೆ. ಮತ್ತು ತತ್ಪರಿಣಾಮವಾಗಿ ಈಗ ಅಂಥ ಆದೇಶವನ್ನು ಸಂಸತ್ತಿನ ಮುಂದಿಡಬೇಕೆಂದು ನಿರೂಪಿಸಲಾಗಿದೆ ಹಾಗೂ ಸಂಸತ್ತು ತನಗಿಷ್ಟವಾದ ಕ್ರಮವನ್ನು ತೆಗೆದುಕೊಳ್ಳಲು ಸ್ವತಂತ್ರವಾಗಿರುತ್ತದೆಂಬ ಪರಿಣಾಮಾತ್ಮಕ ನಿಯಮಾಂಶವೂ ಅದರೊಂದಿಗಿದೆ.

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಈ ಪ್ರಕರಣದ ಮೇಲಿನ ಚರ್ಚೆಯಲ್ಲಿ

---

* ಸಿ.ಎ.ಡಿ. ಸಂ. IX, ೧೯ನೇ ಆಗಸ್ಟ್ ೧೯೪೯, ಪುಟ ೫೨೩.

** ಸಿ.ಎ.ಡಿ. ಸಂ. IX, ೨೦ನೇ ಆಗಸ್ಟ್ ೧೯೪೯, ಪುಟ ೫೪೮–೫೧.

ಭಾಗವಹಿಸಿದ ಕೆಲವು ಭಾಷಣಕಾರರು ನಾನು ಪ್ರತಿಪಾದಿಸಿದ ಹಾಗೆ ಈ ಕಲಮು ಒಳಗೊಂಡಿರುವ ನಿಯಮಾಂಶಗಳ ವಿರುದ್ಧ ತೀವ್ರವಾದ ಭಾವನೆಗಳನ್ನು ವ್ಯಕ್ತಪಡಿಸುವುದರಿಂದ ನನಗೆ ಯಾವುದೇ ರೀತಿಯ ಆಶ್ಚರ್ಯವಾಗಿಲ್ಲ. ಈ ವಿಧಿಯು ಜನತೆಯ ಹಕ್ಕುಗಳಿಗೆ ಸಂಬಂಧಿಸಿದ ಮೂಲಭೂತ ವಿಷಯಗಳ ಬಗ್ಗೆ ಮತ್ತು ಅತ್ಯಾವಶ್ಯಕ ವಿಷಯಗಳ ಬಗ್ಗೆ ವ್ಯವಹರಿಸುತ್ತದೆ, ಮತ್ತು ಆದ್ದರಿಂದ ಈ ವಿಷಯವನ್ನು ಎಚ್ಚರಿಕೆಯಿಂದಷ್ಟೇ ಅಲ್ಲ– ನಾನು ಹೇಳುವುದಾದರೆ– ಭಾವನಾತ್ಮಕವಾಗಿಯೂ ಪರಿಗಣಿಸುವುದು ಸೂಕ್ತವಾಗಿರುತ್ತದೆ. ನಾವು ಈಗಾಗಲೇ ಕೆಲವು ಮೂಲಭೂತ ಹಕ್ಕುಗಳನ್ನು ಮಂಜೂರು ಮಾಡಿದ್ದೇವೆ ಮತ್ತು ಅವುಗಳನ್ನು ಕುಂಠಿತಗೊಳಿಸುವ ಅಥವಾ ಅಮಾನತ್ತುಗೊಳಿಸುವ ವಿಧಿ–ವಿಧಾನಗಳ ಬಗ್ಗೆ ನಾವು ಅತ್ಯಂತ ಜಾಗರೂಕರಾಗಿರಬೇಕಾಗುತ್ತದೆ.

ಆದ್ದರಿಂದ ಆ ವಿಧಿಯ ವಿರುದ್ಧ ಮಾತನಾಡಿದ ನನ್ನ ಮಿತ್ರರು, ಅವರು ಏನನ್ನು ಹೇಳಿರುವರೋ ಅದಕ್ಕೆ ನಾನು ಯಾವುದೇ ಅರ್ಥದಲ್ಲಿ ವಿರೋಧಿಯಲ್ಲ ಎಂಬುದನ್ನು ತಿಳಿದುಕೊಳ್ಳುತ್ತಾರೆಂದು ಭಾವಿಸಿದ್ದೇನೆ. ವಾಸ್ತವಿಕವಾಗಿ ನಾನು ಅವರ ಭಾವನೆಗಳನ್ನು ಬಹಳಷ್ಟು ಗೌರವಿಸುತ್ತೇನೆ. ಆದಾಗ್ಯೂ ನಾನು ಅವರ ಕ್ಷಮೆಯಾಚಿಸಿ ಹೇಳುವುದೆಂದರೆ ಅವರು ಮಂಡಿಸಿದ ಯಾವುದೇ ತಿದ್ದುಪಡಿಗಳನ್ನು ಅಥವಾ ಅವರು ಮಾಡಿದ ಸಲಹೆಗಳನ್ನು ಒಪ್ಪಲು ಸಾಧ್ಯವೆಂದು ನನಗೆ ಕಂಡುಬರುವುದಿಲ್ಲ. ಹಾಗೆ ಹೇಳುವುದಾದರೆ, ನಾನು ಪೂರ್ತಿ ಮನವರಿಕೆಯಾಗದೇ ಉಳಿದಿದ್ದೇನೆ. ಅದೇ ಸಮಯದಲ್ಲಿ, ನಾನು ಮೂಲಭೂತ ಹಕ್ಕುಗಳ ಬಗ್ಗೆ ಅವರಿಗಿಂತಲೂ ಕಡಿಮೆಯಿಲ್ಲದ ಒಲವನ್ನು ಹೊಂದಿರುವುದನ್ನು ಹೇಳಬಯಸುತ್ತೇನೆ.

ನನ್ನ ಮಾರುತ್ತರ ನೀಡುವಲ್ಲಿ ನಾನು ಕೆಲವು ಸಾಮಾನ್ಯ ಪ್ರಶ್ನೆಗಳನ್ನು ಪರಿಗಣಿಸಲು ಪ್ರಸ್ತಾಪಿಸುತ್ತೇನೆ. ಆದರೆ ಹಲವಾರು ಭಾಷಣಕಾರರು ಒತ್ತಾಯಿಸಿದ ಎಲ್ಲ ವಿವರವಾದ ಅಂಶಗಳನ್ನು ಪರಿಗಣಿಸುವುದು ಸಾಧ್ಯವಿಲ್ಲ. ಮೊದಲನೆಯ ಪ್ರಶ್ನೆ ಎಂದರೆ, ತುರ್ತು ಪರಿಸ್ಥಿತಿಯಲ್ಲಿ ಮೂಲಭೂತ ಹಕ್ಕುಗಳನ್ನು ಅಮಾನತ್ತುಗೊಳಿಸಬೇಕೇ ಅಥವಾ ಅಮಾನತ್ತು ಮಾಡಲೇಕೂಡದೇ ಎನ್ನುವುದು; ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ನಮ್ಮ ಮೂಲಭೂತ ಹಕ್ಕುಗಳು ಖಂಡಿತವಾದವುಗಳಾಗಿದ್ದು, ಅವುಗಳನ್ನು ಬದಲಾಯಿಸುವ, ಅಮಾನತ್ತುಗೊಳಿಸುವ ಅಥವಾ ರದ್ದುಗೊಳಿಸುವುದು ಸಾಧ್ಯವೇ ಇಲ್ಲದಂಥವುಗಳಾಗಿರಬೇಕೇ, ಅಥವಾ ನಮ್ಮ ಮೂಲಭೂತ ಹಕ್ಕುಗಳು ಕೆಲವು ತುರ್ತು ಪರಿಸ್ಥಿತಿಗಳಿಗೆ ಒಳಪಡಬೇಕೇ ಎನ್ನುವುದು. ಸದನದ ಅತಿಹೆಚ್ಚು ಜನ ತುರ್ತು ಪರಿಸ್ಥಿತಿಯಲ್ಲಿ ಈ ಹಕ್ಕುಗಳನ್ನು ಅಮಾನತ್ತುಗೊಳಿಸುವ ಆವಶ್ಯಕತೆಯನ್ನು ಮನಗಂಡಿದ್ದಾರೆ ಎಂದು ಹೇಳುವಲ್ಲಿ ನಾನು ಸರಿ ಎಂದು ಭಾವಿಸಿದ್ದೇನೆ; ಇರುವ ಒಂದು ಪ್ರಶ್ನೆ ಎಂದರೆ ಇದನ್ನು ಮಾಡುವ ವಿಧಿ–ವಿಧಾನದ ಬಗೆಗಿನದು.

ಈಗ ಒಂದು ವೇಳೆ ತುರ್ತು ಪರಿಸ್ಥಿತಿಯಲ್ಲಿ ಈ ಹಕ್ಕುಗಳ ಅಮಾನತ್ತುಗೊಳಿಸಲು ನಿರೂಪಿಸುವುದು ಆವಶ್ಯಕವೆಂದು ಒಪ್ಪಿದ್ದಾದರೆ, ಪರಿಗಣನೆಗಾಗಿ ನ್ಯಾಯಯುತವಾದ ಉದ್ಭವಿಸುವ ಮುಂದಿನ ಪ್ರಶ್ನೆಯು ಅವುಗಳನ್ನು ಅಮಾನತ್ತುಗೊಳಿಸುವ ಅಧಿಕಾರವು ಸಂಪೂರ್ಣವಾಗಿ ರಾಷ್ಟ್ರಪತಿಯಲ್ಲಿ ನಿಹಿತವಾಗಿರಬೇಕೇ ಅಥವಾ ಅದನ್ನು ಸಂಸತ್ತಿಗೆ ನಿರ್ಧರಿಸಲು ಬಿಡಬೇಕೇ ಎನ್ನುವುದು. ಬೇರೆ ದೇಶಗಳಲ್ಲಿ ಏನು ಮಾಡಲಾಗುತ್ತಿದೆ ಎಂಬುದನ್ನು ಪರಿಗಣಿಸಿದರೆ– ಮತ್ತು ಈ ಸದನದಲ್ಲಿರುವ ಪ್ರತಿಯೊಬ್ಬರೂ, ನಾವು ಬೇರೆ ದೇಶಗಳ ಸಂವಿಧಾನಗಳಲ್ಲಿರುವ ನಿಯಮಾಂಶಗಳು ಮತ್ತು ಅನುಭವದ ಮೇಲೆ ನಮ್ಮದನ್ನು ರೂಪಿಸಬೇಕೆಂದು ಒಪ್ಪುತ್ತಾರೆಂದು ನನಗೆ ವಿಶ್ವಾಸವಿದೆ– ಸ್ಥಿತಿಯು ಹೀಗಿರುತ್ತದೆ. **ಹೇಬಿಯಸ್ ಕಾರ್ಪಸ್** ಎಂದು ಕರೆಯಲಾಗುವ ಹಕ್ಕಿನ ಅಮಾನತ್ತಿಗೆ ಸಂಬಂಧಿಸಿದಂತೆ ಆಂಗ್ಲ ಕಾನೂನಿನಲ್ಲಿ ಈ ವಿಷಯವನ್ನು ಕಾನೂನಿನಿಂದಲೇ

ನಿರೂಪಿಸಬೇಕಾಗುತ್ತದೆ. **ಹೇಬಿಯಸ್ ಕಾರ್ಪಸ್** ಹಕ್ಕನ್ನು ಅಮಾನತ್ತುಗೊಳಿಸಲು ಕಾರ್ಯಾಂಗಕ್ಕೆ ಮುಕ್ತತೆ ಇರುವುದಿಲ್ಲ. ಗ್ರೇಟ್ ಬ್ರಿಟನ್‌ನಲ್ಲಿ ಪರಿಸ್ಥಿತಿಯು ಹಾಗಿರುತ್ತದೆ. ನಂತರ ಅಮೆರಿಕೆಯ ಪರಿಸ್ಥಿತಿಗೆ ಬರುವುದಾದರೆ, ನಾವು ಕಾಣುವುದೆಂದರೆ **ಹೇಬಿಯಸ್ ಕಾರ್ಪಸ್** ರಿಟ್‌ನ ಅಮಾನತ್ತನ್ನೊಳಗೊಂಡಂತೆ ಸಂವಿಧಾನಿಕ ಭದ್ರತೆಗಳೆಂದು ಕರೆಯಲ್ಪಡುವವುಗಳನ್ನು ನಿರೂಪಿಸುವ ಅಧಿಕಾರವು ಕಾಂಗ್ರೆಸ್ಸಿಗೆ (ಶಾಸಕಾಂಗಕ್ಕೆ) ಇರುತ್ತದೆ. ರಾಷ್ಟ್ರಪತಿಯು ಈ ವಿಷಯವನ್ನು ನಿರೂಪಿಸುವ ಯಾವುದೇ ಅಧಿಕಾರವಿಲ್ಲದೇ ಬಿಟ್ಟುಬಿಡಲಾಗಿಲ್ಲ. ಆದರೆ ನನಗೆ ತಿಳಿದಂತೆ ಅಧಿಕಾರವನ್ನು ಕಾಂಗ್ರೆಸ್ಸಿಗೆ ಬಿಡಲಾಗಿದ್ದರೂ, ರಾಷ್ಟ್ರಪತಿಯು ಸಹ ರಿಟ್‌ನ ಅಮಾನತ್ತುಗೊಳಿಸುವ ತಾತ್ಕಾಲಿಕವೆಂದು ಕರೆಯಬಹುದಾದ ಅಧಿಕಾರವನ್ನು ಹೊಂದಿರುತ್ತಾನೆ ಎಂದು ಹೇಳುವಲ್ಲಿ ನಾನು ಸರಿಯಾಗಿದ್ದೇನೆ. ನನ್ನ ಮಿತ್ರರು ತಲೆ ಅಲ್ಲಾಡಿಸುತ್ತಿದ್ದಾರೆ. ಆದರೆ ಒಂದು ವೇಳೆ ಅವರು ಉತ್ತಮ ಪ್ರಮಾಣ ಗ್ರಂಥವಾದ ಕಾರ್ವಿನ್‌ರ 'ರಾಷ್ಟ್ರಪತಿ' ಎಂಬ ಪುಸ್ತಕ ಓದಿದರೆ ಇದೇ ಪರಿಸ್ಥಿತಿ ಇರುವುದನ್ನು ಅವರು ಕಾಣುತ್ತಾರೆಂದು ನಾನು ತಿಳಿದಿದ್ದೇನೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಮಾನ್ಯರೇ, ನಾನು ಮಧ್ಯೆ ಪ್ರವೇಶಿಸಲು ಅನುಮತಿಸುತ್ತೀರಾ? ಅವರು ಓಗ್‌ರವರ 'ಅಮೆರಿಕೆಯ ಸರ್ಕಾರ' ಎಂಬ ಪುಸ್ತಕದೊಂದಿಗೆ ಪರಿಚಿತರಿದ್ದಾರೆಂಬ ವಿಶ್ವಾಸ ನನಗಿದೆ. ಬಹುಶಃ ಈ ಪುಸ್ತಕವನ್ನು ಉತ್ತಮ ಉತ್ತಮವೆಂದು ಅವರು ಪರಿಗಣಿಸಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು. ಅದೊಂದೇ ಪುಸ್ತಕವಲ್ಲ. ಅಮೆರಿಕೆಯ ಸಂವಿಧಾನದ ಮೇಲೆ ಒಂದು ನೂರು ಪುಸ್ತಕಗಳಿವೆ. ನಾವು ಅವುಗಳಲ್ಲಿ ಸುಮಾರು ಐವತ್ತು ಪುಸ್ತಕಗಳೊಂದಿಗೆ ಖಂಡಿತವಾಗಿಯೂ ಪರಿಚಿತನಿದ್ದೇನೆ.

**ಪಂಡಿತ ಹೃದಯನಾಥ್ ಕುಂಝ್ರು:** ಅದರಲ್ಲಿ ಹೇಳಿದ ಪ್ರಕಾರ ಅತಿ ಉತ್ತಮವಾದ ಕಾನೂನು ಅಭಿಮತವು, **ಹೇಬಿಯಸ್ ಕಾರ್ಪಸ್** ರಿಟ್‌ನ ವಿಶೇಷಾಧಿಕಾರದ ಅಮಾನತ್ತುಗೊಳಿಸುವ ಹಕ್ಕು ಕಾಂಗ್ರೆಸಿನಲ್ಲಿ ನಿಹಿತವಾಗಿರುತ್ತದೆ ಮತ್ತು ರಾಷ್ಟ್ರಪತಿಯು ಸಶಸ್ತ್ರ ಪಡೆಗಳ ಪ್ರಧಾನ ದಂಡಾಧಿಕಾರಿಯಾಗಿ ಪಡೆಗಳ ಕಾರ್ಯಾಚರಣೆಯು ಭದ್ರತೆಗಾಗಿ ಆವಶ್ಯಕವೆಂದು ಅವರು ಪರಿಗಣಿಸಿದ ಸಂದರ್ಭದಲ್ಲಿ ಮಾತ್ರ ಇದನ್ನು ಚಲಾಯಿಸಬಹುದಾಗಿದೆ, ಎಂಬುದಾಗಿರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ನನ್ನ ಮನವಿ ಏನೆಂದರೆ, ಅಮೆರಿಕೆಯಲ್ಲಿ ಕಾಂಗ್ರೆಸ್ಸು ಅಧಿಕಾರವನ್ನು ಹೊಂದಿದ್ದರೆ, ರಾಷ್ಟ್ರಪತಿಯು ಕಾರ್ಯಾಂಗದ ಮುಖ್ಯಸ್ಥನಾಗಿ ಅಮಾನತ್ತುಗೊಳಿಸುವ ತಾತ್ಕಾಲಿಕ ಅಧಿಕಾರವನ್ನು ಹೊಂದಿರುತ್ತಾನೆ.

ಈಗ ನಮ್ಮ ಸಂವಿಧಾನವನ್ನು ರಚಿಸುವಾಗ, ಹೆಚ್ಚು ಕಡಿಮೆ ನಾವು ಅಮೆರಿಕೆಯ ಪೂರ್ವನಿದರ್ಶನವನ್ನು ಪಾಲಿಸಿದ್ದೇವೆ. ನಾನು ಮಾಡಿರುವ ತಿದ್ದುಪಡಿಯ ಮೂಲಕ, ಈಗ ಸಂಸತ್ತು ಈ ವಿಷಯದಲ್ಲಿ ವ್ಯವಹರಿಸುವ ಅಧಿಕಾರವನ್ನು ಹೊಂದಿರುತ್ತದೆ. ಸಂವಿಧಾನಾತ್ಮಕ ಭದ್ರತೆಗಳ ವಿಷಯಗಳಲ್ಲಿ ತಾನು ಅವಶ್ಯವೆಂದು ಯೋಚಿಸಿದಂಥ ಕ್ರಮವನ್ನು ತೆಗೆದುಕೊಳ್ಳುವ ತಾತ್ಕಾಲಿಕ ಅಧಿಕಾರವನ್ನು ರಾಷ್ಟ್ರಪತಿಗೆ ಕೊಡಲು ಸಹ ನಾವು ಪ್ರಸ್ತಾಪಿಸಿದ್ದೇವೆ.

ಆದ್ದರಿಂದ, ಕರಡು ವಿಧಿಯನ್ನು ಅಮೆರಿಕೆಯಲ್ಲಿ ನೀವು ಕಾಣುವ ಪರಿಸ್ಥಿತಿಗೆ ಹೋಲಿಸಿದಾಗ, ಎರಡರಲ್ಲಿ ಖಂಡಿತವಾಗಿಯೂ ಅತಿ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಇಲ್ಲಿಯೂ ಸಹ ರಾಷ್ಟ್ರಪತಿಯು ತನ್ನ ವೈಯಕ್ತಿಕ ಸಾಮರ್ಥ್ಯದಲ್ಲಿ ಕ್ರಮ ಕೈಗೊಳ್ಳುವುದಿಲ್ಲ. ಅಮೆರಿಕೆಯ ಸಂವಿಧಾನದಲ್ಲಿ ಇಲ್ಲದಿರುವ ಇನ್ನೊಂದು ರಕ್ಷಣೆಯನ್ನು ನಾವು ಹೊಂದಿದ್ದೇವೆ, ಅದೆಂದರೆ, ನಮ್ಮ ರಾಷ್ಟ್ರಪತಿಯು ಕಾರ್ಯಾಂಗದ ಸಲಹೆಯಿಂದ

ನಿರ್ದೇಶಿತನಾಗಿರುತ್ತಾನೆ ಮತ್ತು ನಮ್ಮ ಕಾರ್ಯಾಂಗವು ಸಂಸತ್ತಿನ ಪ್ರಾಧಿಕಾರತ್ವಕ್ಕೆ ಒಳಪಟ್ಟಿರುತ್ತದೆ. ಆದ್ದರಿಂದ, ಭದ್ರತೆಗಳನ್ನು ಅಮಾನತ್ತುಗೊಳಿಸುವ ಅಧಿಕಾರವನ್ನು ನಿಹಿತಗೊಳಿಸುವ ಪ್ರಶ್ನೆಗೆ ಸಂಬಂಧಿಸಿದಂತೆ, ನನ್ನ ವಿನಂತಿ ಎಂದರೆ, ನಮ್ಮದು ಯಾವುದೇ ಪೂರ್ವ ನಿದರ್ಶನಕ್ಕೆ ಉಲ್ಲೇಖ ಮಾಡದೇ ಇರುವ ಪೂರ್ತಿಯಾಗಿ ಹೊಸ ಪ್ರಸ್ತಾವನೆ ಅಥವಾ ಮೂಲಭೂತ ಹಕ್ಕುಗಳಿಗೆ ಏನಾಗುತ್ತದೆಂಬ ಕಾಳಜಿ ವಹಿಸದೇ ಬೇಕಂತಲೇ ಯೋಜಿಸಿದ್ದೂ ಆಗಿರುವುದಿಲ್ಲ.

ಈ ಪ್ರಶ್ನೆಯನ್ನು ಪರಿಶೀಲಿಸಿದ ನಂತರ, ನಾನು ಈಗ ಶ್ರೀ ಭಾರ್ಗವರ ತಿದ್ದುಪಡಿ ಸಂಖ್ಯೆ ೭೪ಕ್ಕೆ ಬರುತ್ತೇನೆ. ಅದೊಂದು ಮುಖ್ಯವಾದ ವಿಷಯವೆಂದು ನನಗನಿಸುತ್ತದೆ ಮತ್ತು ಆದ್ದರಿಂದ ನಿಯಮಾಂಶ ವೇನೆಂಬುದನ್ನು ನಿರ್ದಿಷ್ಟವಾಗಿ ವಿವರಿಸಬೇಕಾಗುತ್ತದೆ. ಅವರ ತಿದ್ದುಪಡಿಯು ವಿಧಿ ೨೮೦ಕ್ಕೆ ಮಾಡಿದ್ದೆಂದು ಅವರು ತಿಳಿಸಿದ್ದರೂ, ನಿಜವಾಗಿ ಅದು ವಿಧಿ ೨೭೯ಕ್ಕೆ ಸಂಬಂಧಿಸಿರುತ್ತದೆ. ಅದರಲ್ಲಿ ಅವರು ಬಯಸುವುದೇನೆಂದರೆ, ಮೂಲಭೂತ ಹಕ್ಕುಗಳನ್ನು ಅಮಾನತ್ತುಗೊಳಿಸುವ ತುರ್ತು ನಿಯಮಾಂಶಗಳ ಮೂಲಕ ತನಗೆ ವಹಿಸಲಾದ ವಿಶೇಷಾಧಿಕಾರದಡಿಯಲ್ಲಿ ರಾಜ್ಯದಿಂದ ತೆಗೆದುಕೊಂಡ ಯಾವುದೇ ಕ್ರಮವು ತುರ್ತು ಪರಿಸ್ಥಿತಿ ಘೋಷಣೆಯು ಅಂತ್ಯಗೊಳ್ಳುತ್ತಿದ್ದಂತೆಯೇ ತಾನಾಗಿಯೇ ಅಂತ್ಯಗೊಳ್ಳಬೇಕು. ಅವರ ತಿದ್ದುಪಡಿ ಸಂಖ್ಯೆ ೭೪ಕ್ಕೆ ಸಂಬಂಧಿಸಿದಂತೆ ಅವರು ಇದನ್ನೇ ಬಯಸುತ್ತಾರೆಂದು ನಾನು ತಿಳಿದಿದ್ದೇನೆ. ನನ್ನ ವಿನಂತಿ ಏನೆಂದರೆ ಈ ವಿಧಿಯನ್ನು ಸರಿಯಾಗಿ ಓದಿದ್ದರೆ ಅದರ ಅರ್ಥವೂ ಸಹ ಇದೇ ಆಗಿರುತ್ತದೆ. ನಾನು ಅವರ ಗಮನವನ್ನು ವಿಧಿ ೨೭೯ಕ್ಕೇ ಸೆಳೆಯಬಯಸುತ್ತೇನೆ. ತುರ್ತು ಪರಿಸ್ಥಿತಿಯಲ್ಲಿ ಕೊಡಲಾದ ಅಧಿಕಾರದಡಿಯಲ್ಲಿ ಮಾಡಿದ ಯಾವುದೇ ಕಾನೂನಿನಡಿಯಲ್ಲಿ ಮಾಡಿದ ಯಾವುದನ್ನೇ ಆಗಲಿ ಈ ವಿಧಿಯು ಉಳಿಸುವುದಿಲ್ಲವೆಂಬುದನ್ನು ಅವರು ಕಾಣಬಹುದಾಗಿದೆ. ಅವರಿಗೆ ವಿಷಯವನ್ನು ಸ್ಪಷ್ಟ ಮಾಡುವುದಕ್ಕಾಗಿ ನಾನು ಅವರ ಗಮನವನ್ನು ವಿಧಿ ೨೨೭ಕ್ಕೆ ಸೆಳೆಯಬಯಸುತ್ತೇನೆ. ಇವೆರಡನ್ನೂ ಅವರು ತುಲನೆ ಮಾಡಿದಾಗ, ಎರಡು ವಿಧಿಗಳ ನಡುವೆ ಮೂಲಭೂತ ವ್ಯತ್ಯಾಸವಿರುವುದನ್ನು ಅವರು ಕಾಣುತ್ತಾರೆ. ೨೨೭ನೆಯ ವಿಧಿ ಸಹ ಕೇಂದ್ರಕ್ಕೆ ರಾಜ್ಯದ ಯಾದಿಯ ಮೇಲಿನ ಪರಿಣಾಮ ಮಾಡುವುದನ್ನೊಳಗೊಂಡಂತೆ ತುರ್ತು ಪರಿಸ್ಥಿತಿಯಲ್ಲಿ ಕೆಲವು ಕಾನೂನುಗಳನ್ನು ರಚಿಸುವ ಅಧಿಕಾರವನ್ನು ನೀಡುತ್ತದೆ. ಅವರ ಗಮನವನ್ನು ನಾನು ವಿಧಿ ೨೨೭ರ ಕಲಮು (೨)ಕ್ಕೆ ಸೆಳೆಯುತ್ತೇನೆ. ಅದರ ಕೊನೆಯಲ್ಲಿ, ತುರ್ತು ಪರಿಸ್ಥಿತಿಯ ಆಚರಣೆಯು ಅಂತ್ಯಗೊಂಡ ನಂತರ ಆರು ತಿಂಗಳ ಅವಧಿಯು ಮುಗಿದ ಕೂಡಲೇ, ಅದೇ ಅವಧಿಯು ಮುಗಿಯುವುದಕ್ಕಿಂತ ಮುಂಚೆ ಮಾಡಿದ ಅಥವಾ ಮಾಡುವ ಲೋಪವೆಸಗಿದ ವಿಷಯಗಳಿಗೆ ಸಂಬಂಧಿಸಿದಂತೆ ಹೊರತುಪಡಿಸಿ, ಎಲ್ಲ ಕಾರ್ಯಗಳ ಪರಿಣಾಮವು ಅಂತ್ಯಗೊಳ್ಳುತ್ತದೆ. ಈ ಕಲಮು ೨೭೯ನೆಯ ವಿಧಿಯಲ್ಲಿ ಇರುವುದಿಲ್ಲ. ವಿಧಿ ೨೭೯ರ ನಿಯಮಾಂಶಗಳಡಿಯಲ್ಲಿ ಮಾಡಿದ ಯಾವುದೇ ಕಾನೂನು ಅಂತ್ಯಗೊಳ್ಳುವುದಷ್ಟೇ ಅಲ್ಲ. ಮಾಡಿದ ಯಾವುದೇ ಕಾರ್ಯವು ಸಹ ಸಿಂಧುವಾಗಿರುವುದಿಲ್ಲ. ೨೭೯ನೆಯ ವಿಧಿಯಡಿಯಲ್ಲಿ ಮಾಡಿದ ಯಾವುದೇ ಕಾನೂನಿನ ನಿಯಮಾಂಶಗಳಡಿಯಲ್ಲಿ ಬಂಧನಕ್ಕೊಳಗಾದ ವ್ಯಕ್ತಿಯು, ಆ ಕಾನೂನು ಜಾರಿಯಲ್ಲಿರುವುದನ್ನು ರದ್ದು ಮಾಡಿದಾಗ, ಆ ಪ್ರಕರಣದಡಿಯಲ್ಲಿ ಮಾಡಿದ ಯಾವುದೇ ಕಾನೂನಿನಡಿಯಲ್ಲಿ ಅದನ್ನು ಮಾಡಿದ ಕಾರಣ ಮಾತ್ರಕ್ಕಾಗಿ, ಆ ಕಾನೂನಿನಿಂದ ನಿರ್ವಹಿಸಲ್ಪಡುವುದಿಲ್ಲ. ಈ ವಿಧಿ ೨೭೯ರಡಿಯಲ್ಲಿ, ಕಾನೂನು ಮಾತ್ರ ಹೋಗುವುದಿಲ್ಲ, ಕೈಗೊಂಡ ಕ್ರಮವೂ ಹೋಗುತ್ತದೆ.

ನಂತರ ನಾನು ವಿಧಿ ೮ರ ಕಲಮು (೨)ಕ್ಕೆ ಗಮನವನ್ನು ಸೆಳೆಯುತ್ತೇನೆ. ಇದೂ ಸಹ ಮುಖ್ಯವಾದ ವಿಧಿಯಾಗಿದ್ದು ಅದನ್ನು ವಿಧಿ ೨೭೯ರೊಂದಿಗೆ ಓದಬೇಕು. ವಿಧಿ ೮ ಈ ಸಂವಿಧಾನ ಒಳಗೊಂಡಿರುವ

ಸಾಮಾನ್ಯ ನಿಯಮಾಂಶಗಳಾದ ಚಾಲ್ತಿಯಲ್ಲಿರುವ ಕಾನೂನು ಮುಂದುವರೆಯುತ್ತದೆ ಎನ್ನುವುದಕ್ಕೆ ಅಪವಾದವಾಗಿರುತ್ತದೆ. ವಿಧಿ ೮ ಏನನ್ನು ಹೇಳುತ್ತದೆಂದರೆ, ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿರುವ ಯಾವುದೇ ಚಾಲ್ತಿಯಲ್ಲಿರುವ ಕಾನೂನು ಸ್ಥಗಿತಗೊಳ್ಳುತ್ತದೆ. ವಿಧಿ ೮ ಕಲಮು (೧) ಚಾಲ್ತಿ ಕಾನೂನಿಗೆ ಸಂಬಂಧಿಸಿರುತ್ತದೆ ಮತ್ತು ಕಲಮು (೨) ಭವಿಷ್ಯತ್ತಿನ ಕಾನೂನುಗಳಿಗೆ ಸಂಬಂಧಿಸಿರುತ್ತದೆ. ಕಾರಣ, '೨೭೯ನೆಯ ವಿಧಿಯಡಿಯಲ್ಲಿ ಮಾಡಿದ ಯಾವುದೇ ಕಾನೂನು' ಭವಿಷ್ಯತ್ತಿನ ಕಾನೂನು ಆಗುತ್ತದೆ. ತುರ್ತು ಪರಿಸ್ಥಿತಿಯು ಅಂತ್ಯಗೊಂಡಾಗ ವಿಧಿ ೨೭೯ರಡಿಯಲ್ಲಿ ಮಾಡಿದ ಯಾವುದೇ ಕಾನೂನು ವಿಧಿ ೮ರ ಕಲಮು (೨)ರಡಿಯಲ್ಲಿ ಬರುತ್ತದೆಯಾದ್ದರಿಂದ ಅದು ಮೂಲಭೂತ ಹಕ್ಕುಗಳಿಗೆ ವಿರುದ್ಧವಾದರೆ ತಾನಾಗಿಯೇ ರದ್ದಾಗುತ್ತದೆ.

ಆದ್ದರಿಂದ ನನ್ನ ವಿನಂತಿ ಏನೆಂದರೆ, ತಿದ್ದುಪಡಿ ೭೪ಕ್ಕೆ ಸಂಬಂಧಿಸಿದಂತೆ ವ್ಯಕ್ತಪಡಿಸಲಾದ ಭಯ ಆಧಾರರಹಿತವಾದದ್ದು. ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಠಾಕೂರ್‌ದಾಸ್ ಭಾರ್ಗವ ಅವರು ಯೋಚಿಸುತ್ತಿರುವ ಎಲ್ಲ ವಿಷಯಗಳನ್ನು ನಿರ್ವಹಿಸಲು ಚಾಲ್ತಿಯಲ್ಲಿರುವ ಕಾನೂನಿನಲ್ಲಿ ಸಾಕಷ್ಟು ನಿಯಮಾಂಶಗಳಿರುತ್ತವೆ.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ವಿಧಿ ೨೭೭ (೨)ರಲ್ಲಿ ಉಲ್ಲೇಖವು ಸಂಸತ್ತು ಮಾಡಿದ ಕಾನೂನಿಗೆ ಇರುತ್ತದೆ. ಕಾರ್ಯಾಂಗ ತೆಗೆದುಕೊಂಡ ಯಾವುದೇ ಕ್ರಮಕ್ಕೆ ಅದರಲ್ಲಿ ಉಲ್ಲೇಖವಿಲ್ಲ. ಎರಡನೆಯದಾಗಿ, ಅದು ಸಂಸತ್ತು ಮಾಡಿದ ಕಾನೂನು ಎಂಬುದಾಗಿ ಹೇಳುತ್ತದೆ. ಆದರೆ ವಿಧಿ ೧೩ರಡಿಯಲ್ಲಿ ರಾಜ್ಯವು (ಅದರಲ್ಲಿಯೇ ವ್ಯಾಖ್ಯಾನಿಸಿದಂತೆ) ಮಾಡಿದ ಕಾನೂನಿಗೆ ಉಲ್ಲೇಖವಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಲ್ಲಿ ರಾಜ್ಯವೆಂದರೆ ಎರಡೂ ಎಂದರ್ಥ. ಏಕೆಂದರೆ ವಿಧಿ ೨೭೯ರಲ್ಲಿ ಉಪಯೋಗಿಸಲಾದ 'ರಾಜ್ಯ' ಎಂಬ ಪದವನ್ನು ಭಾಗ IIIರಲ್ಲಿಯ ಅರ್ಥದಲ್ಲಿಯೇ, ಅಂದರೆ ಅದರ ಅರ್ಥ 'ಕೇಂದ್ರ, ಪ್ರಾಂತ್ಯಗಳು ಮತ್ತು ಮುನಿಸಿಪಾಲಿಟಿಗಳು ಸಹ' ಎಂದು ಉಪಯೋಗಿಸಲಾಗಿದೆ.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ಆದರೆ ವಿಧಿ ೨೨೭ (೧)ರಲ್ಲಿನ ಉಲ್ಲೇಖವು ಸಂಸತ್ತಿಗೆ ಮಾತ್ರವಿರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನೇ ನಾನು ಹೇಳುತ್ತಿದ್ದೇನೆ. ೨೭೯ ಸಹ ೮ರಿಂದ ನಿರ್ವಹಿಸಲ್ಪಡುತ್ತದೆ. ಆದ್ದರಿಂದ ನೀಡಲಾದ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿರುವ ಯಾವುದೇ ಕಾನೂನು ಆಚರಣೆಯಿಂದ ರದ್ದಾಗುತ್ತದೆ.

ಈಗ, ನಾನು ಪಂಡಿತ್ ಠಾಕೂರ್‌ದಾಸ್ ಭಾರ್ಗವರ ತಿದ್ದುಪಡಿ ಸಂ. ೭೮ನ್ನು ತೆಗೆದುಕೊಳ್ಳುತ್ತೇನೆ. ಆ ತಿದ್ದುಪಡಿಯಲ್ಲಿ ಅವರು ಹೇಳುವುದೆಂದರೆ, ಇವುಗಳಲ್ಲಿ ಯಾವುದೇ ಮೂಲಭೂತ ಹಕ್ಕುಗಳನ್ನು ಅಮಾನತ್ತುಗೊಳಿಸುವ ರಾಷ್ಟ್ರಪತಿಯವರು ನೀಡಿದ ಆದೇಶವನ್ನು ವ್ಯಕ್ತವಾಗಿ ಅಂಗೀಕರಿಸಿರಬೇಕು. ರಾಷ್ಟ್ರಪತಿಯವರು ನೀಡಿದ ಆದೇಶವನ್ನು ಸಂಸತ್ತು ವ್ಯಕ್ತರೂಪದಲ್ಲಿ ಅಂಗೀಕರಿಸಿರತಕ್ಕದ್ದೆಂದು ಅವರು ಹೇಳುತ್ತಾರೆ. ಕರಡು ಸಮಿತಿಯಿಂದ ಪ್ರಸ್ತಾಪಿಸಲಾದ ಕರಡು ವಿಧಿ ಸಂಸತ್ತು ಸಕಾರಾತ್ಮಕ ಕ್ರಮದಿಂದ ರಾಷ್ಟ್ರಪತಿಯ ಆದೇಶವನ್ನು ರದ್ದುಪಡಿಸದ ಹೊರತು ಅಂಗೀಕಾರವಿದೆ ಎಂದು ಊಹಿಸಬಹುದೆಂದು ಹೇಳುತ್ತದೆ. ಇದೇ ಅವರ ತಿದ್ದುಪಡಿ ಮತ್ತು ನಾನು ರೂಪಿಸಿದ ರೀತಿಯಲ್ಲಿರುವ ವಿಧಿಯ ನಡುವಿನ ನಿಜವಾದ ವ್ಯತ್ಯಾಸವಾಗಿರುತ್ತದೆ.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ಆದರೆ ಇದು ಅತ್ಯಂತ ಮೂಲಭೂತ ವ್ಯತ್ಯಾಸವಾಗಿರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಅತ್ಯಂತ ಮೂಲಭೂತ ವಿಷಯವಾಗಿರುತ್ತದೆ. ಒಂದು ಅರ್ಥದಲ್ಲಿ ಅದು ಮೂಲಭೂತವಾಗಿರುತ್ತದೆ ಮತ್ತು ಇನ್ನೊಂದು ಅರ್ಥದಲ್ಲಿ ಅದು ಮೂಲಭೂತ ವಾಗಿರುವುದಿಲ್ಲ. ಏಕೆಂದರೆ ಘೋಷಣೆಯನ್ನು ಸಂಸತ್ತಿನ ಮುಂದಿಡಬೇಕೆಂಬ ಬಾಧ್ಯತೆಯನ್ನು ನಾನು ಈಗ ಹೇರಿದ್ದೇನೆ. ಸ್ವಾಭಾವಿಕವಾಗಿ ಒಂದು ವೇಳೆ ಸಂಸತ್ತನ್ನು ಕರೆದರೆ ಹಾಗೂ ಘೋಷಣೆಯನ್ನು ಅದರ ಮುಂದೆ ಇಟ್ಟಾಗ, ಸಂಸತ್ತಿಗೆ ಬಂದ ಜನರು ಸಕಾರಾತ್ಮಕ ಕ್ರಮವನ್ನು ತೆಗೆದುಕೊಳ್ಳದಿದ್ದರೆ, ಅದು ಮೂರ್ಖತನದ ವಿಷಯವಾಗುತ್ತದೆ ಮತ್ತು ಅಂಥ ಸಂಸತ್ತು ಅನವಶ್ಯಕವಾದದ್ದು ಮತ್ತು ಅದರ ಅಗತ್ಯವಿರುವುದಿಲ್ಲ.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ಆ ಕಾನೂನು ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಮಾತ್ರ ಅನ್ವಯವಾಗುತ್ತದೆ, ಕಡಿಮೆ ಅವಧಿಗೆ ಅಲ್ಲ ಮತ್ತು ಘೋಷಣೆಯ ನಂತರ ಆರು ತಿಂಗಳುಗಳಿಗೆ ಅಲ್ಲ ಎಂದು ಹೇಳುವ ಆವಶ್ಯಕತೆ ಇಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅದಕ್ಕೆ ಬರುತ್ತಿದ್ದೇನೆ. ಆದರೆ ಈ ಪ್ರಶ್ನೆಗೆ ಸಂಬಂಧಿಸಿದಂತೆ, ಸಂಸತ್ತು ವ್ಯಕ್ತಪಡಿಸಲಾದ ಗೊತ್ತುವಳಿಯ ಮೂಲಕ, ರಾಷ್ಟ್ರಪತಿಯು ಅದನ್ನು ಹಿಂತೆಗೆದುಕೊಳ್ಳಬೇಕೆಂದು ನಾವು ಬಯಸುತ್ತೇವೆಯೇ, ಅಥವಾ ರಾಷ್ಟ್ರಪತಿಯು ಅದನ್ನು ಬದಲಾವಣೆ ಮಾಡಿದ ರೂಪದಲ್ಲಿ ಮುಂದುವರೆಸಲು ನಾವು ಬಯಸುತ್ತೇವೆಯೇ, ಎಂದು ಹೇಳಬೇಕೆ ಎನ್ನುವುದು ವಿವರದ ವಿಷಯ ಮಾತ್ರವಾಗಿರುತ್ತದೆ. ಒಂದು ಸಲ ಸಂಸತ್ತನ್ನು ಕರೆದಾಗ ಮತ್ತು ಸಂಸತ್ತು ವಿಷಯವನ್ನು ಪರಿಗಣಿಸುತ್ತಿರುವಾಗ, ಸಂಸತ್ತಿಗೆ ವಿಷಯವನ್ನು ಬಿಟ್ಟುಕೊಡಬೇಕು ಮತ್ತು ಅದು ಬೇರೆ ರೀತಿ ನಿರ್ಣಯಿಸದ ಹೊರತು ಅದು ತನ್ನ ಒಪ್ಪಿಗೆಯನ್ನು ನೀಡಿದೆ ಎಂದು ಪೂರ್ವಕಲ್ಪನೆ ಮಾಡುವುದು ಸೂಕ್ತವಲ್ಲವೇ? ಇದರಲ್ಲಿ ತೊಂದರೆ ಎಲ್ಲಿದೆ? ತಿದ್ದುಪಡಿಗೆ ಸಂಬಂಧಿಸಿದಂತೆ ನನಗೆ ಯಾವುದೂ ಕಾಣುತ್ತಿಲ್ಲ.

**ಒಬ್ಬ ಗೌರವಾನ್ವಿತ ಸದಸ್ಯ:** ಈಗ ಒಂದು ಗಂಟೆಯಾಗಿದೆ.

**ಉಪಾಧ್ಯಕ್ಷರು:** ನಾವು ಈ ವಿಧಿಯನ್ನು ಮುಗಿಸುತ್ತಿದ್ದೇವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಪಂಡಿತ್ ಭಾರ್ಗವರ ತಿದ್ದುಪಡಿ ಸಂ. ೭೮ಕ್ಕೆ ತಿದ್ದುಪಡಿಯಾಗಿರುವಂಥ ಒಂದು ತಿದ್ದುಪಡಿಯನ್ನು ಶ್ರೀ ಗುಪ್ತ ಅವರು ಮಂಡಿಸಿದ್ದಾರೆ. ಘೋಷಣೆಯನ್ನು ಸಂಸತ್ತಿನ ಮುಂದೆ ಎರಡು ತಿಂಗಳೊಳಗೆ ಇಡಬೇಕೆನ್ನುವ, ನಿರ್ದಿಷ್ಟ ಸಮಯವನ್ನು ನಮೂದಿಸಬೇಕೆಂದು ಅವರು ಬಯಸುತ್ತಾರೆ. ನಾನು ತಪ್ಪದಿದ್ದಲ್ಲಿ ಪಂಡಿತ್ ಭಾರ್ಗವರ ತಿದ್ದುಪಡಿ ಒಂದು ತಿಂಗಳು ಎಂದು ನಾನು ತಿಳಿದುಕೊಂಡಿದ್ದೇನೆ, ಮತ್ತು ನನ್ನ ಮೂಲ ಪ್ರಸ್ತಾವನೆ "ಸಾಧ್ಯವಾದಷ್ಟು ಬೇಗ" ಎಂದಿದೆ. ಯಾರಾದರೂ ಇದನ್ನು ಆತ್ಮಸಾಕ್ಷಿಯ ವಿಷಯವನ್ನಾಗಿ ಮಾಡುತ್ತಾರೆಂದಾಗಲೀ ಹಾಗೂ ಈ ವಿಷಯವನ್ನು ಭದ್ರಗೊಳಿಸದಿದ್ದರೆ ನಾವು ಆಮರಣ ಉಪವಾಸ ಮಾಡುತ್ತೇವೆ ಎಂದಾಗಲೀ ಬಯಸುತ್ತಾರೆಯೇ ಎಂಬುದು ನನಗೆ ತಿಳಿದಿರುವುದಿಲ್ಲ. ನನಗೆ ತಿಳಿದಂತೆ "ಸಾಧ್ಯವಾದಷ್ಟು ಬೇಗ" ಎಂಬುದನ್ನು ವಿಷಯವನ್ನು ಸಂಸತ್ತಿನ ಮುಂದೆ ಒಂದು ತಿಂಗಳೊಳಗೆ ಇಡಬೇಕು, ಎರಡು ತಿಂಗಳೊಳಗೆ ಇಡಬೇಕು ಅಥವಾ ಹದಿನೈದು ದಿನಗಳೊಳಗೆ ಸಹಿತ ಇಡಬೇಕು ಎನ್ನುವ ರೀತಿಯಲ್ಲಿ ಕೆಲಸ ಮಾಡುವ ಹಾಗೆ ಮಾಡಬಹುದು. ಇದು ಅತ್ಯಂತ ಹಿಗ್ಗಿಸಿದ ಸ್ವರೂಪದ ನುಡಿಯಾಗಿದೆ ಮತ್ತು ಆದ್ದರಿಂದ, ಈಗಿನ ಪರಿಸ್ಥಿತಿಯಲ್ಲಿ ಕರಡು ಒಳಗೊಂಡಿರುವ ನಿಯಮಾಂಶವು ಅತ್ಯುತ್ತಮವಾದದ್ದು ಎಂದು ನಾನು ವಿನಂತಿಸುತ್ತೇನೆ ಮತ್ತು ಸದನವು ಅದನ್ನು ಅಂಗೀಕರಿಸುವುದೆಂದು ನಾನು ಭಾವಿಸಿದ್ದೇನೆ.

**ಉಪಾಧ್ಯಕ್ಷರು:** ಈಗ ನಾನು ತಿದ್ದುಪಡಿಗಳನ್ನು ಸದನದ ಮುಂದೆ ಅಂಗೀಕಾರಕ್ಕೆ ಇಡುತ್ತೇನೆ.

**[ಡಾ. ಅಂಬೇಡ್ಕರ್ ಅವರದನ್ನು ಹೊರತುಪಡಿಸಿ, ಎಲ್ಲ ತಿದ್ದುಪಡಿಗಳನ್ನು ಹಿಂದಕ್ಕೆ ಪಡೆಯಲಾಯಿತು ಇಲ್ಲವೇ ತಿರಸ್ಕರಿಸಲಾಯಿತು. ತಿದ್ದುಪಡಿ ಮಾಡಿದಂತೆ ೨೮೦ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.]**

* * *

**ಕೇಂದ್ರ ಮತ್ತು ರಾಜ್ಯಗಳಿಗೆ ಲೋಕಸೇವಾ ಆಯೋಗಗಳು**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಮಾನ್ಯರೇ, ನಾನು ಈ ರೀತಿ ಮಂಡಿಸುತ್ತಿದ್ದೇನೆ:

"ವಿಧಿ ೨೫೪ಕ್ಕೆ ಬದಲಾಗಿ ಕೆಳಗಿನ ವಿಧಿಯನ್ನು ಸೇರಿಸಬೇಕು:–

೨೮೪. (೧) ಈ ವಿಧಿಯ ನಿಯಮಾಂಶಗಳಿಗೆ ಒಳಪಟ್ಟು, ಕೇಂದ್ರಕ್ಕೆ ಒಂದು ಲೋಕಸೇವಾ ಆಯೋಗ ಮತ್ತು ಪ್ರತಿಯೊಂದು ರಾಜ್ಯಕ್ಕೆ ಒಂದು ಲೋಕಸೇವಾ ಆಯೋಗ ಇರತಕ್ಕದ್ದು.

(೨) ಎರಡು ಅಥವಾ ಹೆಚ್ಚು ರಾಜ್ಯಗಳು, ಆ ರಾಜ್ಯಗಳ ಗುಂಪಿಗೆ ಒಂದೇ ಲೋಕಸೇವಾ ಆಯೋಗ ಇರತಕ್ಕದ್ದೆಂದು ಒಪ್ಪಬಹುದು, ಮತ್ತು ಒಂದು ವೇಳೆ ಹಾಗೆ ಸದನವು ಗೊತ್ತುವಳಿಯನ್ನು ಮಾಡಿದರೆ, ಅಥವಾ ಎಲ್ಲಿ ಎರಡು ಸದನಗಳಿರುತ್ತವೆಯೋ, ಪ್ರತಿಯೊಂದು ಸದನದಿಂದ, ಅಂಥ ರಾಜ್ಯಗಳ ಪ್ರತಿಯೊಂದು ಸದನ ನಿರ್ಣಯ ಮಾಡಿದರೆ, ಸಂಸತ್ತು ಕಾನೂನಿನ ಮೂಲಕ ಆ ರಾಜ್ಯಗಳ ಆವಶ್ಯಕತೆಗಳನ್ನು ಪೂರೈಸಲು ಜಂಟಿ ಲೋಕಸೇವಾ ಆಯೋಗವನ್ನು (ಈ ಅಧ್ಯಾಯದಲ್ಲಿ ಜಂಟಿ ಆಯೋಗ ಎಂದು ಉಲ್ಲೇಖಿಸಲಾಗಿದೆ) ನೇಮಿಸಲು ನಿರೂಪಿಸಬಹುದಾಗಿದೆ.

೨ (ಎ) ಮೇಲೆ ಹೇಳಿದಂಥ ಯಾವುದೇ ಕಾನೂನು ಈ ವಿಧಿಯ ಕಲಮು (೨)ರಲ್ಲಿಯ ಉದ್ದೇಶಗಳನ್ನು ಈಡೇರಿಸಲು ಆವಶ್ಯಕವಾದ ಅಥವಾ ಅಪೇಕ್ಷಣೀಯವಾದವೆಂದು ತೋರಬಹುದಾದ ಸಾಂದರ್ಭಿಕ ಮತ್ತು ತತ್ಪರಿಣಾಮವಾದಂಥ ನಿಯಮಾಂಶಗಳನ್ನು ಒಳಗೊಂಡಿರಬಹುದಾಗಿದೆ.

(೩) ಕೇಂದ್ರ ಲೋಕಸೇವಾ ಆಯೋಗವು, ಒಂದು ರಾಜ್ಯದ ರಾಜ್ಯಪಾಲ ಅಥವಾ ಆಡಳಿತಗಾರ ಹಾಗೆ ಮಾಡಲು ಒಂದು ವೇಳೆ ವಿನಂತಿಸಿದರೆ, ರಾಷ್ಟ್ರಪತಿಯ ಅಂಕಿತದೊಂದಿಗೆ ಆ ರಾಜ್ಯದ ಎಲ್ಲಾ ಅಥವಾ ಯಾವುದೇ ಆವಶ್ಯಕತೆಗಳನ್ನು ಪೂರೈಸಲು ಒಪ್ಪಬಹುದಾಗಿದೆ.

(೪) ಈ ಸಂವಿಧಾನದಲ್ಲಿ ಕೇಂದ್ರ ಲೋಕಸೇವಾ ಆಯೋಗ ಅಥವಾ ರಾಜ್ಯ ಲೋಕಸೇವಾ ಆಯೋಗಕ್ಕೆ ಉಲ್ಲೇಖಗಳನ್ನು ಸಂದರ್ಭವು ಬೇರೆಯದನ್ನು ಆವಶ್ಯಕಪಡಿಸದಿದ್ದರೆ, ಪರಿಗಣನೆಯಲ್ಲಿರುವ ವಿಷಯಕ್ಕೆ ಸಂಬಂಧಿಸಿದಂತೆ, ಸಂಬಂಧಿಸಿದ ಕೇಂದ್ರದ ಅಥವಾ ರಾಜ್ಯದ ಆವಶ್ಯಕತೆಗಳನ್ನು ಪೂರೈಸುವ ಆಯೋಗಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

ಈ ವಿಧಿ ಸ್ವಯಂ ವಿವರಣಾತ್ಮಕವಾಗಿರುತ್ತದೆ ಮತ್ತು ಈ ಪ್ರಕರಣದಲ್ಲಿಯ ಯಾವುದೇ ಅಂಶವನ್ನು ಸ್ಪಷ್ಟಪಡಿಸಲು ಯಾವುದೇ ವಿವರಣೆ ಆವಶ್ಯಕವೆಂದು ನನಗನಿಸುವುದಿಲ್ಲ. ಆದ್ದರಿಂದ ನಾನು ಟಿಪ್ಪಣಿಗಳನ್ನು ಮಾಡಬಹುದಾದ ಯಾವುದೇ ಟೀಕೆಗಳಿಗೆ ಉತ್ತರಿಸಲು ನನ್ನನ್ನು ಕೇಳಬಹುದಾದಾಗ ಮಾಡುವುದಕ್ಕಾಗಿ ಕಾಯ್ದಿರಿಸುತ್ತೇನೆ.

**ಶ್ರೀ ಲಕ್ಷ್ಮೀನಾರಾಯಣ ಸಾಹು** (ಒರಿಸ್ಸಾ: ಸಾಮಾನ್ಯ): ಮಾನ್ಯರೇ, ಸಂಸತ್ತಿನಿಂದ ಅಂಥ ಯಾವುದೇ

ಕಾನೂನು ಎಂಬ ನಿಯಮಾಂಶವನ್ನು ಏಕೆ ಸೇರಿಸಲಾಗಿದೆ ಮತ್ತು ಈ ನಿಯಮಗಳಲ್ಲಿ ಆಡಳಿತಗಾರನನ್ನು ಏಕೆ ನಮೂದಿಸಲಾಗಿದೆ ಎಂದು ನಾನು ತಿಳಿದುಕೊಳ್ಳಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ನನ್ನ ಮಿತ್ರ ಶ್ರೀ ಸಾಹು ಅವರನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ, ನಾವು ಸಂಸತ್ತು ಕಾನೂನನ್ನು ಮಾಡುವ ನಿಯಮಾಂಶವನ್ನು ಏಕೆ ಸೇರಿಸಿದ್ದೇವೆ ಎಂದು ತಿಳಿಯಬಯಸಿದ್ದಾರೆ. ಪ್ರತಿಯೊಂದು ರಾಜ್ಯವು ತನ್ನದೇ ತತ್ವವಾಗಿದೆ ಎನ್ನುವುದನ್ನು ಅವರು ತಿಳಿದುಕೊಳ್ಳುತ್ತಾರೆ. ಆದರೆ, ಆಡಳಿತಾತ್ಮಕ ಉದ್ದೇಶಗಳಿಗಾಗಿ ಅಥವಾ ಹಣಕಾಸಿನ ಉದ್ದೇಶಗಳಿಗಾಗಿ ಪ್ರತಿಯೊಂದು ರಾಜ್ಯವು ತನ್ನದೇ ಆದ ಲೋಕಸೇವಾ ಆಯೋಗವನ್ನು ಹೊಂದುವುದು ಒಂದು ವೇಳೆ ಸಾಧ್ಯವಿಲ್ಲದಿದ್ದರೆ, ಒಂದು ಗೊತ್ತುವಳಿಯ ಮೂಲಕ ಅಂಥ ಎರಡು ರಾಜ್ಯಗಳು, ಯಾವುದಕ್ಕೆ ನಾನು ಹೇಳಿದ ಹಾಗೆ, ಆಡಳಿತಾತ್ಮಕ ಅಥವಾ ಹಣಕಾಸಿನ ಕಾರಣಗಳಿಗಾಗಿ ಪ್ರತ್ಯೇಕ ಸ್ವತಂತ್ರ ಆಯೋಗಗಳನ್ನು ಹೊಂದುವ ಸ್ಥಿತಿ ಇಲ್ಲವೋ ಅವುಗಳ ಆವಶ್ಯಕತೆಗಳನ್ನು ಪೂರೈಸುವ ಸಲುವಾಗಿ, ಜಂಟಿ ಪ್ರಾಂತೀಯ ಆಯೋಗವನ್ನು ಮಾಡುವ ನಿಯಮಾಂಶವನ್ನು ಮಾಡಲು ಅಧಿಕಾರವನ್ನು ಕೇಂದ್ರಕ್ಕೆ ನೀಡುವ ಅಧಿಕಾರವನ್ನು ಹೊಂದಿರುತ್ತದೆ. ಸ್ವಾಭಾವಿಕವಾಗಿ ಅಂಥ ಅಧಿಕಾರವನ್ನು ಕೇಂದ್ರಕ್ಕೆ ನೀಡಿದಾಗ, ಅಂಥ ಅಧಿಕಾರವನ್ನು ಸಂಸತ್ತು ಮಾಡಿದ ಕಾನೂನಿನ ಮೂಲಕ ನಿರ್ವಹಿಸತಕ್ಕದ್ದು ಮತ್ತು ಒಂದು ಆಡಳಿತಾತ್ಮಕ ಆದೇಶ ಮಾತ್ರದ ಮೂಲಕ ಎರಡು ರಾಜ್ಯಗಳಿಗೆ ಜಂಟಿ ಆಯೋಗವನ್ನು ರಚಿಸುವುದಕ್ಕಾಗಿ ರಾಷ್ಟ್ರಪತಿಗೆ ಮುಕ್ತತೆ ಇರಕೂಡದು. ಆ ಉದ್ದೇಶಕ್ಕಾಗಿಯೇ ಎರಡು ರಾಜ್ಯಗಳ ಸೇವೆಗೈಯುವಂಥ ಯಾವುದೇ ಆಯೋಗದ ಸಂಘಟನೆಯನ್ನು ನಿರ್ವಹಿಸುವ ಅಧಿಕಾರವನ್ನು ಸಂಸತ್ತಿಗೆ ಕೊಡಲಾಗಿದೆ.

**ಶ್ರೀ ಲಕ್ಷ್ಮೀನಾರಾಯಣ ಸಾಹು:** ಇನ್ನೊಂದು ಅಂಶ, ಯಾಕೆ 'ಆಡಳಿತಗಾರ' ಎಂಬುದನ್ನು ನಮೂದಿಸಲಾಗಿದೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಏಕೆಂದರೆ, ಭಾಗ IIIರಲ್ಲಿರುವ ರಾಜ್ಯ ಸಹ ತನ್ನದೇ ಆದ ಸ್ವತಂತ್ರ ಲೋಕಸೇವಾ ಆಯೋಗವನ್ನು ಹೊಂದುವುದು ಅನಾವಶ್ಯಕವೆಂದು ಕಾಣಬಹುದು. ಪರಿಣಾಮವಾಗಿ, ಭಾಗ IIIರಲ್ಲಿಯ ರಾಜ್ಯಕ್ಕೆ ಸಹ ಭಾಗ Iರಲ್ಲಿಯ ಯಾವುದೇ ರಾಜ್ಯದೊಂದಿಗೆ ಜಂಟಿಯಾಗಿ ರಾಷ್ಟ್ರಪತಿಗೆ ಒಂದು ಜಂಟಿ ಆಯೋಗವನ್ನು ರಚಿಸಲು ವಿನಂತಿ ಮಾಡಲು ಒಪ್ಪಂದ ಮಾಡಿಕೊಳ್ಳಲು ಬಾಗಿಲನ್ನು ಮುಚ್ಚಕೂಡದು. ಈ ಕಾರಣಕ್ಕಾಗಿ ಈ ಪ್ರಕರಣದ ನಿಯಮಾಂಶಗಳಲ್ಲಿ 'ಆಡಳಿತಗಾರ' ಎಂಬುದನ್ನು ಸೇರಿಸಲಾಗಿದೆ.

**ಶ್ರೀ ಆರ್. ಕೆ. ಸಿಧ್ವ** (ಕೇಂದ್ರ ಪ್ರಾಂತ್ಯ ಮತ್ತು ಬೆರಾರ್: ಸಾಮಾನ್ಯ): ನನಗೆ ಒಂದು ಸ್ಪಷ್ಟನೆ ಬೇಕಾಗಿದೆ. ಕಲಮು (೩)ರಲ್ಲಿ "ರಾಷ್ಟ್ರಪತಿಯ ಅನುಮತಿಯ ಮೇರೆಗೆ, ರಾಜ್ಯದ ಎಲ್ಲಾ ಅಥವಾ ಯಾವುದೇ ಆವಶ್ಯಕತೆಗಳನ್ನು ಪೂರೈಸಲು ಒಪ್ಪಲಾಗಿದೆ" ಎಂದು ಹೇಳಲಾಗಿದೆ. ಒಂದು ವೇಳೆ ಯಾವುದೇ ಸ್ಥಳೀಯ ಸಂಸ್ಥೆ ಸೇವಾ ಆಯೋಗದ ಸೇವೆಯನ್ನು ಬಳಸಿಕೊಳ್ಳಲು ಬಯಸಿದರೆ, ಅದನ್ನು ಅನುಮತಿಸಲಾಗುವುದೇಕೆ ಎಂಬುದನ್ನು ನಾನು ತಿಳಿಯಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ಒಂದು ವೇಳೆ ಸ್ಥಳೀಯ ಪ್ರಾಧಿಕಾರವು ತನ್ನ ಆವಶ್ಯಕತೆಗಳನ್ನು ಲೋಕಸೇವಾ ಆಯೋಗದ ಮೂಲಕ ಪೂರೈಸಿಕೊಳ್ಳಬಯಸಿದ್ದರೆ, ಲೋಕಸೇವಾ ಆಯೋಗಕ್ಕೆ ಅಂಥ ಸ್ಥಳೀಯ ಪ್ರಾಧಿಕಾರದ ಆವಶ್ಯಕತೆಗಳನ್ನೂ ಸಹ ಪೂರೈಸುವಂಥ ವಿಶೇಷಾಧಿಕಾರವನ್ನು ನೀಡಲು ಸಂಸತ್ತಿಗೆ ಸಾಧ್ಯವಿದೆ ಎಂಬ ನಿಯಮಾಂಶವನ್ನು ಮಾಡುವ ಪ್ರತ್ಯೇಕ ಪ್ರಕರಣವಿರುತ್ತದೆ.

(ತಿದ್ದುಪಡಿ ಸಂ. ೨ನ್ನು ಮಂಡಿಸಲಿಲ್ಲ.)

* * *

***ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರೇ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೇಳಬೇಕಾದಂಥ ಯಾವುದೇ ವಿಷಯವಿದೆ ಎಂದು ನನಗನಿಸುವುದಿಲ್ಲ.

[**ಡಾ. ಅಂಬೇಡ್ಕರ್ ಅವರದನ್ನು ಹೊರತುಪಡಿಸಿ ಉಳಿದೆಲ್ಲ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು. ತಿದ್ದುಪಡಿ ಮಾಡಿದ ವಿಧಿ ೨೮೪ನ್ನು ಸಂವಿಧಾನಕ್ಕೆ ಸೇರಿಸಲಾಯಿತು.**]

## ವಿಧಿ ೨೮೫

**ಶ್ರೀ ನಜೀರುದ್ದೀನ್ ಅಹ್ಮದ್:** ನನಗೆ ತಿಳಿದಂತೆ ಈ ಬದಲಾವಣೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದು ಯಾರೊಬ್ಬರಿಗೇ ಆಗಲಿ ಕಷ್ಟಕರವಾಗಿದೆ. ಅದ್ದರಿಂದ ಅವುಗಳು ನಿಯಮಗಳ ಉಲ್ಲಂಘನೆಗೆ ಒಳಪಟ್ಟಿವೆ ಎಂಬ ಕಾರಣಕ್ಕೆ ಅಷ್ಟೇ ಅಲ್ಲ, ಅವುಗಳು ನೇರವಾಗಿ ಅರ್ಥವಾಗುವ ನಮೂನೆಯಲ್ಲಿಯೂ ಇಲ್ಲ ಹಾಗೂ ಅವುಗಳನ್ನು ಸಂವಿಧಾನಕ್ಕೆ ತಿದ್ದುಪಡಿಗಳೆಂದು ವ್ಯಕ್ತಪಡಿಸಬೇಕಾಗಿತ್ತು ಎಂಬ ಕಾರಣಗಳಿಗಾಗಿ ಸಹ ನಾನು ತಕರಾರು ಮಾಡುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಕ್ರಮಬದ್ಧತೆಯ ಅಂಶವನ್ನು ನನ್ನ ಮಿತ್ರರು ಎತ್ತುತ್ತಿರುವುದು ಇದು ಮೊದಲ ಸಲವಲ್ಲ. ಪ್ರಕ್ರಿಯಾ ನಿಯಮಗಳ ತಾಂತ್ರಿಕತೆಗಳಿಂದ ದೂರ ಸರಿಯಲು ಕರಡು ಸಮಿತಿಗೆ ಅನುಮತಿಸುವ ಒಳ್ಳೆ ಮನಸ್ಸನ್ನು ನೀವು ಮಾಡಿದ್ದೀರಿ. ಮತ್ತು ನಾನು ಆದ್ದರಿಂದ ಈ ವಿಧಿಯಲ್ಲಿಯೂ ಸಹ ನೀವು ನಮ್ಮನ್ನು ಮುಂದುವರೆಯಲು ಸಂತೋಷದಿಂದ ಅನುಮತಿಸುವಿರೆಂದು ನಾನು ವಿನಂತಿಸುತ್ತೇನೆ.

* * *

**ಸದಸ್ಯರ ನೇಮಕಾತಿ ಹಾಗೂ ಅವಧಿ.**

**ಅಧ್ಯಕ್ಷರು:** ......ಡಾ. ಅಂಬೇಡ್ಕರ್ ಅವರು ಹೇಗೆ ಪ್ರತ್ಯೇಕ ವಿಧಿಗಳು ಅಸ್ತಿತ್ವಕ್ಕೆ ಬಂದವೆಂಬುದನ್ನು ವಿವರಿಸಬೇಕು. ಅವುಗಳನ್ನು ನೀವು ಒಟ್ಟಿಗೆ ಮಂಡಿಸಿರಿ ಮತ್ತು ಮತದಾನದ ಸಮಯದಲ್ಲಿ ನಾವು ಅವುಗಳನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು. ಅವುಗಳನ್ನು ಪ್ರತ್ಯೇಕವಾಗಿ ಮತಕ್ಕೆ ಹಾಕಬಹುದು.

ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ:

"೨೮೫ನೆಯ ವಿಧಿಗೆ ಈ ಕೆಳಗಿನ ಈ ವಿಧಿಯನ್ನು ಸೇರಿಸಬೇಕು.

೨೮೫. (೧) ಲೋಕಸೇವಾ ಆಯೋಗದ ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿಯನ್ನು, ಕೇಂದ್ರ ಆಯೋಗ ಅಥವಾ ಜಂಟಿ ಆಯೋಗದ ವಿಷಯದಲ್ಲಿ, ರಾಷ್ಟ್ರಪತಿಯಿಂದ, ಮತ್ತು ರಾಜ್ಯ ಆಯೋಗದ

---

* ಸಿ.ಎ.ಡಿ. ಸಂ. IX, ೨೨ನೇ ಆಗಸ್ಟ್ ೧೯೪೯, ಪುಟ ೫೭೧.

ವಿಷಯದಲ್ಲಿ ರಾಜ್ಯದ ರಾಜ್ಯಪಾಲ ಅಥವಾ ಆಡಳಿತಗಾರರಿಂದ ಮಾಡತಕ್ಕದ್ದು; ಆದರೆ ಪ್ರತಿಯೊಂದು ಲೋಕಸೇವಾ ಆಯೋಗದ ಕನಿಷ್ಠ ಒಂದು ಅರ್ಧದಷ್ಟು ಸದಸ್ಯರು ಅವರ ನಿಯಮಿತ ನೇಮಕಾತಿಯ ದಿನಾಂಕದಂದು ಕೇಂದ್ರ ಸರ್ಕಾರದಡಿಯಲ್ಲಿ ಅಥವಾ ರಾಜ್ಯ ಸರ್ಕಾರದಡಿಯಲ್ಲಿ ಕನಿಷ್ಠ ಹತ್ತು ವರ್ಷಗಳವರೆಗೆ ಹುದ್ದೆಯನ್ನು ಹೊಂದಿದಂಥ ವ್ಯಕ್ತಿಗಳಾಗಿರತಕ್ಕದ್ದು, ಮತ್ತು ಅಂಥ ಹತ್ತು ವರ್ಷಗಳ ಅವಧಿಯನ್ನು ಲೆಕ್ಕಿಸುವಾಗ ಸಂವಿಧಾನ ಪ್ರಾರಂಭವಾಗುವುದಕ್ಕಿಂತ ಮುಂಚೆ ಅರಸನಡಿಯಲ್ಲಿ ವ್ಯಕ್ತಿಯು ಹೊಂದಿದ ಹುದ್ದೆಯ ಯಾವುದೇ ಅವಧಿಯನ್ನು ಸೇರಿಸಿಕೊಳ್ಳತಕ್ಕದ್ದು.

(೨) ಲೋಕಸೇವಾ ಆಯೋಗದ ಸದಸ್ಯನು ತನ್ನ ಹುದ್ದೆಯನ್ನು ವಹಿಸಿಕೊಂಡ ದಿನಾಂಕದಿಂದ ಆರು ವರ್ಷಗಳವರೆಗೆ ಅಥವಾ ಕೇಂದ್ರ ಆಯೋಗದ ವಿಷಯದಲ್ಲಿ ಅರವತ್ತೈದು ವರ್ಷಗಳ ವಯಸ್ಸು ಆಗುವವರೆಗೆ, ಮತ್ತು ರಾಜ್ಯ ಆಯೋಗ ಅಥವಾ ಜಂಟಿ ಆಯೋಗದ ವಿಷಯದಲ್ಲಿ ಅರವತ್ತು ವರ್ಷಗಳ ವಯಸ್ಸು ಆಗುವವರೆಗೆ, ಇವುಗಳಲ್ಲಿ ಯಾವುದು ಮೊದಲು ಬರುತ್ತದೆಯೋ ಆ ಅವಧಿಗೆ ಹುದ್ದೆಯನ್ನು ಹೊಂದಿರತಕ್ಕದ್ದು.

ಆದರೆ–

(ಎ) ಲೋಕಸೇವಾ ಆಯೋಗದ ಸದಸ್ಯನು ತನ್ನ ಹಸ್ತಾಕ್ಷರದಲ್ಲಿಯೇ ಲಿಖಿತದ ಮೂಲಕ, ಕೇಂದ್ರ ಆಯೋಗ ಅಥವಾ ಜಂಟಿ ಆಯೋಗದ ವಿಷಯದಲ್ಲಿ ರಾಷ್ಟ್ರಪತಿಯವರಿಗೆ, ರಾಜ್ಯ ಆಯೋಗದ ವಿಷಯದಲ್ಲಿ ರಾಜ್ಯಪಾಲನಿಗೆ ಅಥವಾ ಆಡಳಿತಗಾರನಿಗೆ ತನ್ನ ರಾಜೀನಾಮೆ ನೀಡಬಹುದು.

(ಬಿ) ಲೋಕಸೇವಾ ಆಯೋಗದ ಸದಸ್ಯನನ್ನು ಈ ಸಂವಿಧಾನದ ವಿಧಿ ೨೮೫–ಎ ರ ಕಲಮು (೧) ಅಥವಾ (೩)ರಲ್ಲಿ ನಿರೂಪಿಸಲಾದ ರೀತಿಯಲ್ಲಿ ಹುದ್ದೆಯಿಂದ ತೆಗೆದುಹಾಕಬಹುದು.

(೩) ಲೋಕಸೇವಾ ಆಯೋಗದ ಸದಸ್ಯನ ಹುದ್ದೆಯನ್ನು ಹೊಂದಿರುವ ಯಾವುದೇ ವ್ಯಕ್ತಿಯು, ತನ್ನ ಹುದ್ದೆಯ ಅವಧಿಯು ಮುಗಿದ ನಂತರ, ಆ ಹುದ್ದೆಗೆ ಮರುನೇಮಕಾತಿಗೆ ಅನರ್ಹನಾಗಿರುತ್ತಾನೆ.

**ಲೋಕಸೇವಾ ಆಯೋಗದ ಸದಸ್ಯನ ತೆಗೆಯುವಿಕೆ ಮತ್ತು ಅಮಾನತ್ತುಗೊಳಿಸುವಿಕೆ**

೨೮೫ (೧) ಈ ಪ್ರಕರಣದ ಖಂಡ (೩)ರ ನಿಯಮಾಂಶಗಳಿಗೆ ಒಳಪಟ್ಟು, ಲೋಕಸೇವಾ ಆಯೋಗದ ಅಧ್ಯಕ್ಷ ಯಾವುದೇ ಸದಸ್ಯನನ್ನು ತನ್ನ ಹುದ್ದೆಯಿಂದ, ರಾಷ್ಟ್ರಪತಿಯ ಆದೇಶದ ಮೂಲಕ ಮಾತ್ರ ದುರ್ನಡತೆಯ ಆಧಾರದ ಮೇಲೆ, ಸರ್ವೋಚ್ಚ ನ್ಯಾಯಾಲಯವು, ರಾಷ್ಟ್ರಪತಿಯು ಉಲ್ಲೇಖ ಮಾಡಿದಾಗ, ಈ ಸಂವಿಧಾನದ ವಿಧಿ ೧೯೯ರಡಿಯಲ್ಲಿ ಇದಕ್ಕಾಗಿ ನಿಗದಿಪಡಿಸಿದ ಪ್ರಕ್ರಿಯೆಗೆ ಅನುಗುಣವಾಗಿ ವಿಚಾರಣೆ ನಡೆಸಿ, ವಿಷಯಾನ್ವಯ ಅಧ್ಯಕ್ಷ ಅಥವಾ ಅಂಥ ಇತರ ಸದಸ್ಯನು, ಅಂಥ ಯಾವುದೇ ಆಧಾರದ ಮೇಲೆ ತೆಗೆಯಲ್ಪಡಬೇಕು ಎಂದು ವರದಿ ಮಾಡಿದಾಗ, ತೆಗೆದುಹಾಕಬಹುದಾಗಿದೆ.

(೨) ಕೇಂದ್ರ ಅಥವಾ ಜಂಟಿ ಆಯೋಗದ ವಿಷಯದಲ್ಲಿ ರಾಷ್ಟ್ರಪತಿಯು ಮತ್ತು ರಾಜ್ಯ ಆಯೋಗದ ವಿಷಯದಲ್ಲಿ ರಾಜ್ಯಪಾಲನು ಅಥವಾ ಆಡಳಿತಗಾರನು, ಈ ವಿಧಿಯ ಕಲಮು (೧)ರಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಉಲ್ಲೇಖ ಮಾಡಲಾದ ನ್ಯಾಯಾಲಯದ ವರದಿಯನ್ನು ಪಡೆದು ರಾಷ್ಟ್ರಪತಿಯು ಆದೇಶವನ್ನು ನೀಡುವವರೆಗೆ, ಅಮಾನತ್ತಿನಲ್ಲಿಡಬಹುದಾಗಿದೆ.

(೩) ಈ ವಿಧಿಯ ಕಲಮು (೧) ಯಾವುದೇ ವಿಷಯವನ್ನು ಒಳಗೊಂಡಿದ್ದರೂ ಸಹ, ರಾಷ್ಟ್ರಪತಿಯು, ತನ್ನ ಆದೇಶದ ಮೂಲಕ, ಲೋಕಸೇವಾ ಆಯೋಗದ ಅಧ್ಯಕ್ಷ ಅಥವಾ ಯಾವುದೇ ಸದಸ್ಯನನ್ನು, ಒಂದು

ವೇಳೆ ಅಧ್ಯಕ್ಷ ಅಥವಾ ಅಂಥ ಇತರ ಸದಸ್ಯನು–

(ಎ) ದಿವಾಳಿಖೋರನೆಂದು ತೀರ್ಮಾನಿಸಲ್ಪಟ್ಟಿದ್ದರೆ; ಅಥವಾ

(ಬಿ) ತನ್ನ ಹುದ್ದೆಯ ಅವಧಿಯಲ್ಲಿ ತನ್ನ ಹುದ್ದೆಯ ಕರ್ತವ್ಯಕ್ಕೆ ಹೊರತುಪಡಿಸಿದ ಯಾವುದೇ ವೇತನದ ಉದ್ಯೋಗದಲ್ಲಿ ತೊಡಗಿದ್ದರೆ;

ಮತ್ತು ಇಲ್ಲಿ ನಾನು (ಸಿ) ಎಂಬ ಮೂರನೆಯ ಉಪ ಕಲಮನ್ನು ಸೇರಿಸಬಯಸುತ್ತೇನೆ.

"(ಸಿ) ರಾಷ್ಟ್ರಪತಿಯ ದೃಷ್ಟಿಯಲ್ಲಿ ಮನಸ್ಸು ಅಥವಾ ದೇಹದ ವಿಕಲತೆಯ ಕಾರಣಕ್ಕಾಗಿ ಹುದ್ದೆಯಲ್ಲಿ ಮುಂದುವರೆಯಲು ಅನರ್ಹನೆಂದೆನಿಸಿದರೆ, ಹುದ್ದೆಯಿಂದ ತೆಗೆದುಹಾಕಬಹುದಾಗಿದೆ.

(೪) ಈ ವಿಧಿಯ ಕಲಮು (೧)ರ ಉದ್ದೇಶಕ್ಕಾಗಿ, ಲೋಕಸೇವಾ ಆಯೋಗದ ಅಧ್ಯಕ್ಷ ಅಥವಾ ಯಾವುದೇ ಸದಸ್ಯನು ಯಾವುದೇ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಪರವಾಗಿ ಮಾಡಿದ ಯಾವುದೇ ಕರಾರು ಅಥವಾ ಒಪ್ಪಂದದಲ್ಲಿ ಯಾವುದೇ ರೀತಿಯ ಸಂಬಂಧ ಅಥವಾ ಹಿತಾಸಕ್ತಿ ಇದ್ದರೆ ಅಥವಾ ಮಾಡಿಕೊಂಡರೆ ಅಥವಾ ಅದರಲ್ಲಿಯ ಲಾಭದಲ್ಲಿ ಅಥವಾ ಸದಸ್ಯನಲ್ಲದ ಮತ್ತು ಯಾವುದೇ ನಿಗಮದ ಇತರ ಸದಸ್ಯರೊಂದಿಗೆ ಸಮಾನವಾಗಿ ಬರುವ ಯಾವುದೇ ವೇತನದ ಲಾಭದಲ್ಲಿ ಯಾವುದೇ ರೀತಿ ಭಾಗವಹಿಸಿದರೆ, ಅಂಥವರನ್ನು ದುರ್ನಡತೆಯ ತಪ್ಪಿತಸ್ಥರೆಂದು ಭಾವಿಸಬಹುದಾಗಿದೆ.

**ಆಯೋಗದ ಸದಸ್ಯರ ಮತ್ತು ಸಿಬ್ಬಂದಿಯ ಸೇವಾ ನಿಯಮಗಳ ಕ್ರಮ ನಿಯಮಾವಳಿ ಮಾಡುವ ಅಧಿಕಾರ.**

೨೮೫–ಬಿ ಕೇಂದ್ರ ಆಯೋಗ ಅಥವಾ ಜಂಟಿ ಆಯೋಗದ ವಿಷಯದಲ್ಲಿ ರಾಷ್ಟ್ರಪತಿ ಮತ್ತು ರಾಜ್ಯ ಆಯೋಗದ ವಿಷಯದಲ್ಲಿ ರಾಜ್ಯಪಾಲ ಅಥವಾ ಆಡಳಿತಗಾರ, ಕ್ರಮ ನಿಯಮಾವಳಿ ಮೂಲಕ–

(ಎ) ಆಯೋಗದ ಸದಸ್ಯರ ಸಂಖ್ಯೆ, ಮತ್ತು ಅವರ ಸೇವಾ ನಿಬಂಧನೆಗಳ ಬಗ್ಗೆ ನಿರ್ಧರಿಸುವುದು;

(ಬಿ) ಆಯೋಗದ ಸಿಬ್ಬಂದಿಯು ನಿಯಮಾಂಶಗಳನ್ನು ಮಾಡುವುದು; ಅಲ್ಲದೆ– ಇವುಗಳನ್ನು ಮಾಡಬಹುದಾಗಿದೆ.

ಆದರೆ ಲೋಕಸೇವಾ ಆಯೋಗದ ಸದಸ್ಯರ ಸೇವಾ ನಿಬಂಧನೆಗಳನ್ನು ಅವನ ನೇಮಕಾತಿಯ ನಂತರ ಅವನಿಗೆ ಹಾನಿಕಾರಕವಾಗುವಂತೆ ಬದಲಾಯಿಸುವ ಹಾಗಿಲ್ಲ.

**ಸದಸ್ಯತ್ವ ರದ್ದಾದ ನಂತರ ಆಯೋಗಗಳ ಸದಸ್ಯರು ಹುದ್ದೆಗಳನ್ನು ಹೊಂದಿರುವುದಕ್ಕೆ ನಿಷೇಧ.**

೨೮೫. ಸಿ. ಹುದ್ದೆಯಲ್ಲಿರುವುದು ಮುಗಿದ ನಂತರ–

(ಎ) ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷನು ಮುಂದೆ ಭಾರತೀಯ ಸರ್ಕಾರದಡಿಯಲ್ಲಿ ಅಥವಾ ರಾಜ್ಯ ಸರ್ಕಾರದಡಿಯಲ್ಲಿ ಉದ್ಯೋಗವನ್ನು ಹೊಂದಲು ಅನರ್ಹನಾಗಿರುತ್ತಾನೆ;

(ಬಿ) ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷನು ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷ ಅಥವಾ ಯಾವುದೇ ಇತರ ಸದಸ್ಯನಾಗಿ ಅಥವಾ ಯಾವುದೇ ಇತರ ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷನಾಗಿ ನೇಮಕಾತಿಯಾಗಲು ಅರ್ಹನಿರುತ್ತಾನೆ. ಆದರೆ ಕೇಂದ್ರ ಸರ್ಕಾರದಡಿಯಲ್ಲಿ ಅಥವಾ ರಾಜ್ಯ ಸರ್ಕಾರದಡಿಯಲ್ಲಿ ಯಾವುದೇ ಇತರ ಸೇವೆಗಾಗಿ ಅಲ್ಲ;

(ಸಿ) ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷನಲ್ಲದ ಇತರ ಸದಸ್ಯನು, ಕೇಂದ್ರ ಲೋಕಸೇವಾ

ಆಯೋಗದ ಅಧ್ಯಕ್ಷನಾಗಿ ಅಥವಾ ರಾಜ್ಯ ಸೇವಾ ಆಯೋಗದ ಅಧ್ಯಕ್ಷನಾಗಿ ನೇಮಕಾತಿ ಹೊಂದಲು ಅರ್ಹನಾಗಿರುತ್ತಾನೆ. ಆದರೆ, ಕೇಂದ್ರ ಸರ್ಕಾರದಡಿಯಲ್ಲಿ ಅಥವಾ ರಾಜ್ಯ ಸರ್ಕಾರದಡಿಯಲ್ಲಿ ಯಾವುದೇ ಇತರ ಸೇವೆಗಾಗಿ ಅಲ್ಲ.

ಮಾನ್ಯರೇ, ಈ ಕಲಮುಗಳು ಲೋಕಸೇವಾ ಆಯೋಗಗಳು, ಅವುಗಳ ಅವಧಿ, ಅರ್ಹತೆಗಳು ಮತ್ತು ಅನರ್ಹತೆಗಳು ಮತ್ತು ಅವುಗಳ ತೆಗೆದುಹಾಕುವಿಕೆ ಮತ್ತು ವಜಾ ಮಾಡುವಿಕೆ ಮುಂತಾದವುಗಳನ್ನು ನಿರೂಪಿಸುತ್ತವೆ. ಇಲ್ಲಿ ಅಳವಡಿಸಲಾದ ವಿಷಯಗಳು, ಅಂದರೆ ಈ ವಿಧಿಗಳಲ್ಲಿ ಅಳವಡಿಸಲಾದ ಪ್ರಮುಖ ವಿಷಯಗಳನ್ನು ಸದನಕ್ಕೆ ಅತ್ಯಂತ ಸಂಕ್ಷಿಪ್ತವಾಗಿ ವಿವರಿಸಲು ಇಚ್ಛಿಸುತ್ತೇನೆ.

ಮೊದಲನೆಯ ಅಂಶವು ಲೋಕಸೇವಾ ಆಯೋಗದ ಅವಧಿಗೆ ಸಂಬಂಧಿಸಿದ್ದಾಗಿರುತ್ತದೆ. ಅದನ್ನು ೨೮೫ನೆಯ ವಿಧಿಯಲ್ಲಿ ನಿರೂಪಿಸಲಾಗಿದೆ. ಆ ವಿಧಿಯಲ್ಲಿ ಅಳವಡಿಸಿದ ಅಂಶಗಳ ಪ್ರಕಾರ ಲೋಕಸೇವಾ ಆಯೋಗದ ಸದಸ್ಯನ ಹುದ್ದೆಯ ಅವಧಿಯು ಆರು ವರ್ಷಗಳಿರುತ್ತದೆ ಅಥವಾ ಕೇಂದ್ರ ಆಯೋಗಕ್ಕೆ ಸಂಬಂಧಿಸಿದಂತೆ ಅವನು ೬೫ ವರ್ಷಗಳನ್ನು ತುಂಬುವವರೆಗೆ ಮತ್ತು ರಾಜ್ಯ ಆಯೋಗಕ್ಕೆ ಸಂಬಂಧಿಸಿದಂತೆ ಅವನು ೬೦ ವರ್ಷಗಳನ್ನು ತುಂಬುವವರೆಗೆ ಇರುತ್ತದೆ. ಇದು ಹುದ್ದೆಯ ಅವಧಿಗೆ ಸಂಬಂಧಿಸಿದ್ದಾಗಿರುತ್ತದೆ.

ನಂತರ ನಾನು ಲೋಕಸೇವಾ ಆಯೋಗದ ಸದಸ್ಯರನ್ನು ತೆಗೆದುಹಾಕುವುದಕ್ಕೆ ಬರುತ್ತೇನೆ. ಈ ವಿಷಯವನ್ನು ವಿಧಿ ೨೮೫–ಎನಲ್ಲಿ ನಿರೂಪಿಸಲಾಗಿದೆ. ಆ ವಿಧಿಯ ಅಂಶಗಳಡಿಯಲ್ಲಿ, ದುರ್ನಡತೆಯ ಆಧಾರದ ಮೇಲೆ ರಾಷ್ಟ್ರಪತಿಯು ಲೋಕಸೇವಾ ಆಯೋಗದ ಸದಸ್ಯನನ್ನು ತೆಗೆದುಹಾಕಬಹುದು. ಸ್ವಯಂ ನಿರ್ಮಿತ ಅನರ್ಹತೆಗಳ ಕಾರಣಗಳಿಗಾಗಿಯೂ ಅವನನ್ನು ಅನರ್ಹಗೊಳಿಸಬಹುದು. ಈ ತಂತಾನೇ ಉಂಟಾದ ಅನರ್ಹತೆಯು ಮೂರು ಕಾರಣಗಳಿಂದಾಗಿ ಬರಬಹುದು. ಮೊದಲನೆಯದು ದಿವಾಳಿಖೋರತನ. ಎರಡನೆಯದು, ಇತರ ಯಾವುದೇ ಹುದ್ದೆಯಲ್ಲಿ ತೊಡಗಿರುವುದು ಮತ್ತು ಮೂರನೆಯದು, ಅವನು ದೈಹಿಕವಾಗಿ ಅಥವಾ ಮಾನಸಿಕವಾಗಿ ವಿಕಲನಾಗುವುದು. ದುರ್ನಡತೆಗೆ ಸಂಬಂಧಿಸಿದಂತೆ ನಿಯಮಾಂಶವು ಸ್ವಲ್ಪ ವಿಚಿತ್ರವಾಗಿದೆ. ಶ್ರೇಷ್ಠ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳ ನ್ಯಾಯಾಧೀಶರನ್ನು ತೆಗೆದುಹಾಕುವ ವಿಷಯಕ್ಕೆ ಸಂಬಂಧಿಸಿದಂತೆ ನಾವು ಈಗಾಗಲೇ ಅನುಮೋದಿಸಿದ ವಿಧಿಗಳಲ್ಲಿ ಅವರು ತಮ್ಮ ಹುದ್ದೆಗಳನ್ನು ಒಳ್ಳೆಯ ನಡತೆಯ ಅವಧಿಯಲ್ಲಿ ಹೊಂದಿರುತ್ತಾರೆ, ಮತ್ತು ಸಂಸತ್ತಿನ ಎರಡೂ ಸದನಗಳು ಒಂದು ಗೊತ್ತುವಳಿಯ ಮೂಲಕ ಅನುಮೋದಿಸಿದ ಹೊರತು ಅವರನ್ನು ತೆಗೆದುಹಾಕಲು ಸಾಧ್ಯವಾಗುವುದಿಲ್ಲ ಎಂದು ನಿರೂಪಿಸಿರುವುದನ್ನು ಗೌರವಾನ್ವಿತ ಸದನವು ನೆನಪಿಸಿಕೊಳ್ಳಬೇಕು. ಲೋಕಸೇವಾ ಆಯೋಗದ ಸದಸ್ಯರನ್ನು ತೆಗೆದುಹಾಕುವುದಕ್ಕಾಗಿ ಅಂಥ ಗಡುಸಾದ ಮತ್ತು ತೀಕ್ಷ್ಣವಾದ ನಿಯಮಾಂಶವನ್ನು ನಿರೂಪಿಸುವುದು ಅನಾವಶ್ಯಕವೆಂದು ಅನಿಸಿರುತ್ತದೆ. ತತ್ಪರಿಣಾಮವಾಗಿ ಈ ವಿಧಿಯಲ್ಲಿ, ಭಾರತೀಯ ಸರ್ಕಾರ ಅಧಿನಿಯಮದಡಿಯಲ್ಲಿ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರನ್ನು ತೆಗೆದುಹಾಕಲು ಮಾಡಲಾದ ನಿಯಮಾಂಶಗಳು ಲೋಕಸೇವಾ ಆಯೋಗದ ಸದಸ್ಯರಿಗೆ ಸಮರ್ಪಕವಾದ ಭದ್ರತೆ ಮತ್ತು ಸಂರಕ್ಷಣೆಯನ್ನು ನೀಡುತ್ತವೆಂದು ನಿರೂಪಿಸಲಾಗಿದೆ. ಭಾರತೀಯ ಸರ್ಕಾರ ಕಾಯ್ದೆಯ ನಿಯಮಾಂಶಗಳು ಒಳಗೊಂಡಿರುವ ಹಾಗೆ, ಸಂಯುಕ್ತ ನ್ಯಾಯಾಲಯದ ಒಬ್ಬ ನ್ಯಾಯಾಧೀಶನನ್ನು ಅಥವಾ ಶ್ರೇಷ್ಠ ನ್ಯಾಯಾಲಯದ ಒಬ್ಬ ನ್ಯಾಯಾಧೀಶನ ವಿಷಯದಲ್ಲಿ ಸಂಯುಕ್ತ ನ್ಯಾಯಾಲಯದಿಂದ ಮತ್ತು ಸಂಯುಕ್ತ ನ್ಯಾಯಾಲಯದ ನ್ಯಾಯಾಧೀಶನ ವಿಷಯದಲ್ಲಿ ಪ್ರಿವಿ ಕೌನ್ಸಿಲ್‌ನಿಂದ ವಿಚಾರಣೆಯನ್ನು ನಡೆಸುವುದು, ಮತ್ತು ದುರ್ನಡತೆಯ ಪ್ರಕರಣವಿರುತ್ತದೆ ಎಂದು ಮಾಡಲಾದ ವರದಿಯ ಮೇಲೆ ಗವರ್ನರ್–ಜನರಲ್‌ನಿಗೆ ಸಂಯುಕ್ತ

ನ್ಯಾಯಾಲಯದ ನ್ಯಾಯಾಧೀಶ ಅಥವಾ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶನನ್ನು ತೆಗೆಯುವ ಸ್ವಾತಂತ್ರ್ಯ ಇರುತ್ತದೆ ಎಂಬುದು ಸದನದ ಗಮನದಲ್ಲಿದೆ ಎಂದು ನನಗನಿಸುತ್ತದೆ. ಇದೇ ನಿಯಮಾಂಶವನ್ನು ನಾವು ಲೋಕಸೇವಾ ಆಯೋಗದ ಸದಸ್ಯರನ್ನು ದುರ್ನಡತೆಯ ಪ್ರಕರಣಗಳಲ್ಲಿ ತೆಗೆದುಹಾಕುವುದಕ್ಕೆ ಸಂಬಂಧಿಸಿದ ವಿಷಯಕ್ಕಾಗಿ ನಿರೂಪಿಸಿದ್ದೇವೆ.

ಸ್ವಯಂ ನಿರ್ಮಿತ ಅನರ್ಹತೆಗಳಿಗೆ ಸಂಬಂಧಿಸಿದಂತೆ, ಯಾವುದೇ ರೀತಿಯ ವಿವಾದವಿದೆ ಎಂದು ನನಗನ್ನಿಸುವುದಿಲ್ಲ. ಏಕೆಂದರೆ ಲೋಕಸೇವಾ ಆಯೋಗದ ಸದಸ್ಯನು ದಿವಾಳಿ ಹೊಂದಿದರೆ ಅವನ ಪ್ರಾಮಾಣಿಕತೆಯ ಮೇಲೆ ಪೂರ್ತಿಯಾಗಿ ಅವಲಂಬಿಸಲು ಆಗುವುದಿಲ್ಲವಾದ್ದರಿಂದ ಅದು ಸ್ವಯಂನಿರ್ಮಿತ ಅನರ್ಹತೆಯಾಗಿ ಕೆಲಸ ಮಾಡುವುದು ಸ್ವಾಭಾವಿಕವಾಗಿರುತ್ತದೆ. ಅದೇ ರೀತಿ, ನಿಸ್ಸಂಶಯವಾಗಿಯೂ ರಾಜ್ಯದ ಪೂರ್ಣಾವಧಿ ಅಧಿಕಾರಿಯಾದ ಲೋಕಸೇವಾ ಆಯೋಗದ ಸದಸ್ಯನು, ತನ್ನ ಕರ್ತವ್ಯಗಳನ್ನು ಸಾಧ್ಯವಾದಷ್ಟು ಪೂರ್ತಿಯಾಗಿ ನೆರವೇರಿಸುವುದು ಮತ್ತು ತನ್ನ ಎಲ್ಲ ಸಮಯವನ್ನು ವಿನಿಯೋಗಿಸುವುದರ ಬದಲಾಗಿ ತನ್ನ ಸಮಯದ ಕೆಲ ಭಾಗವನ್ನು ಇತರ ಉದ್ಯೋಗಕ್ಕಾಗಿ ವಿನಿಯೋಗಿಸಿದರೆ, ಅದು ಸಹ ಸ್ವಯಂ ನಿರ್ಮಿತ ಅನರ್ಹತೆಗೆ ಒಂದು ಕಾರಣವಾಗುತ್ತದೆ. ಅದೇ ರೀತಿ ಮೂರನೆಯ ಅನರ್ಹತೆ, ಅಂದರೆ, ದೈಹಿಕವಾಗಿ ಅಥವಾ ಮಾನಸಿಕವಾಗಿ ವಿಕಲತೆಯನ್ನು ಹೊಂದಿದ್ದರೆ, ಅದನ್ನು ಸಹ ಯಾವುದೇ ರೀತಿಯ ವಿವಾದವಿಲ್ಲದೇ ಸ್ವಯಂ ನಿರ್ಮಿತ ಅನರ್ಹತೆಗೆ ಸೂಕ್ತ ಪ್ರಕರಣವೆಂದು ಪರಿಗಣಿಸಬಹುದಾಗಿದೆ. ವಿಧಿ ೨೮೫–ಎ ಅನ್ನು ಓದುವಾಗ, ಸರ್ವೋಚ್ಚ ನ್ಯಾಯಾಲಯದಿಂದ ವಿಚಾರಣೆ ನಡೆಸುವಾಗ ಲೋಕಸೇವಾ ಆಯೋಗದ ಸದಸ್ಯನನ್ನು ಅಮಾನತ್ತಿನಲ್ಲಿಡುವ ನಿಯಮಾಂಶವನ್ನು ಮಾಡಿರುವುದನ್ನು ಸಹ ಸದನದ ಸದಸ್ಯರು ಗಮನದಲ್ಲಿಡಬೇಕು. ನನಗೆ ಅನಿಸಿದೆ, ಹಾಗೆ ಆ ನಿಯಮಾಂಶವು ಆವಶ್ಯಕವಾಗಿರುತ್ತದೆ. ಒಬ್ಬ ಸದಸ್ಯನು ದುರ್ನಡತೆಯ ತಪ್ಪಿತಸ್ಥನೆಂದು ರಾಷ್ಟ್ರಪತಿಗೆ ಅನ್ನಿಸಿದರೆ, ಅವನ ನಡತೆಯ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ವರದಿಯ ಮೂಲಕ ಅವನ ಪರವಾಗಿ ಸ್ಪಷ್ಟೀಕರಣ ಬರದಿದ್ದರೆ, ಅವನು ಲೋಕಸೇವಾ ಆಯೋಗದ ಸದಸ್ಯನಾಗಿ ಕಾರ್ಯ ಮುಂದುವರೆಸುವುದು ಅಪೇಕ್ಷಣೀಯವಾದದ್ದಲ್ಲ.

ನಾನೀಗ ಇನ್ನೊಂದು ಮುಖ್ಯ ವಿಷಯವಾದ, ಕೇಂದ್ರ ಹಾಗೂ ರಾಜ್ಯ ಲೋಕಸೇವಾ ಆಯೋಗ, ಈ ಎರಡೂ ಆಯೋಗಗಳ ಸದಸ್ಯರ ಸೇವೆ ಅಥವಾ ಸೇವಾರ್ಹತೆಗೆ ಸಂಬಂಧಿಸಿದ ವಿಷಯಕ್ಕೆ ಬರುತ್ತೇನೆ. ವಿಧಿ ೨೮೫ರ ಕಲಮು (೩)ರ ಪ್ರಕಾರ, ನಾನು ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು, ಅಲ್ಲದೇ ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರನ್ನು ಮತ್ತು ರಾಜ್ಯ ಆಯೋಗದ ಸದಸ್ಯರನ್ನು ಅದೇ ಹುದ್ದೆಗೆ ಮರುನೇಮಕಾತಿಗೆ ಅನರ್ಹರಾಗಿಸಿರುವುದನ್ನು ಸದಸ್ಯರು ನೋಡಬೇಕು; ಅಂದರೆ, ಅಧ್ಯಕ್ಷ ಅಥವಾ ಸದಸ್ಯನ ಹುದ್ದೆಯ ಅವಧಿಯು ಒಂದು ಸಲ ಮುಗಿಯಿತೆಂದರೆ, ಅವನು ಕೇಂದ್ರ ಆಯೋಗದ ಅಧ್ಯಕ್ಷನಾಗಿರಲಿ ಅಥವಾ ರಾಜ್ಯ ಆಯೋಗದ ಅಧ್ಯಕ್ಷನಾಗಿರಲಿ, ಅವನನ್ನು ಮರು ನೇಮಕಾತಿ ಮಾಡಬಾರದೆಂದು ನಾವು ಹೇಳಿದ್ದೇವೆ. ಇದೊಂದು ಉಪಯುಕ್ತ ನಿಯಮಾಂಶವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಮರುನೇಮಕಾತಿಗಾಗಿ ಅಥವಾ ಅದೇ ನೇಮಕಾತಿಯಲ್ಲಿ ಮುಂದುವರಿಕೆಗಾಗಿ ಇಟ್ಟುಕೊಂಡ ಯಾವುದೇ ಭರವಸೆಯು, ಆ ಸದಸ್ಯನು ತನ್ನ ಕರ್ತವ್ಯವನ್ನು ನಿರ್ವಹಿಸುವಾಗ ಪಾಲಿಸಬೇಕಾದ ಪಕ್ಷಾತೀತತೆಯನ್ನು ಅದೇ ರೀತಿಯಲ್ಲಿ ನಿರ್ವಹಿಸದೇ ಇರುವಂತೆ ಪ್ರೇರೇಪಿಸಬಹುದು. ಆದ್ದರಿಂದ, ಇಂಥ ಮೂಲಭೂತ ನಿರ್ಬಂಧನೆಯನ್ನು ಕರಡು ವಿಧಿಯಲ್ಲಿ ನಿರೂಪಿಸಲಾಗಿದೆ.

ನಂತರ, ಎರಡನೆಯ ವಿಷಯವೆಂದರೆ, ಈ ವಿಧಿ ೨೮೫–ಸಿಯ ಪ್ರಕಾರ ಇವರಾರೂ ಇತರ

ಯಾವುದೇ ಹುದ್ದೆಗಳಿಗೆ ಅರ್ಹರಿರುವುದಿಲ್ಲ ಎಂಬ ನಿಯಮಾಂಶವು ಸಹ ಇರುತ್ತದೆ. ಆದ್ದರಿಂದ ಇಲ್ಲಿ ಎರಡು ಬಗೆಯ ಅನರ್ಹತೆಗಳಿರುತ್ತವೆ. ಅವರನ್ನು ಅವರ ಹುದ್ದೆಯಲ್ಲಿ ಮುಂದುವರೆಸಲು ಪರವಾನಗಿ ಇರುವುದಿಲ್ಲ. ಹಾಗೂ ಇತರ ಯಾವುದೇ ಹುದ್ದೆಗಳಿಗೆ ಅವರನ್ನು ನೇಮಕಾತಿ ಮಾಡಲು ನಿಯಮಾಂಶವಿರುವುದಿಲ್ಲ. ಈಗ ಕೆಲವೇ ಅಪವಾದಗಳು ಅಂದರೆ, ಅವರನ್ನು ನೇಮಕಾತಿ ಮಾಡಬಹುದಾದ ಪ್ರಕರಣಗಳು ಕೆಳಗಿನಂತಿರುತ್ತವೆ:

ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷನು ಕೇಂದ್ರ ಆಯೋಗದ ಅಧ್ಯಕ್ಷ ಅಥವಾ ಸದಸ್ಯನಾಗಲೂ ಅಥವಾ ಇತರ ಯಾವುದೇ ರಾಜ್ಯ ಆಯೋಗದ ಅಧ್ಯಕ್ಷನಾಗಲು ಅನುಮತಿಸಲಾಗಿದೆ.

ಎರಡನೆಯದಾಗಿ, ಕೆಂದ್ರ ಆಯೋಗದ ಸದಸ್ಯರು ಕೇಂದ್ರ ಆಯೋಗದ ಅಥವಾ ಇತರ ಯಾವುದೇ ರಾಜ್ಯ ಆಯೋಗದ ಅಧ್ಯಕ್ಷರಾಗಬಹುದಾಗಿದೆ.

ಮೂರನೆಯದಾಗಿ, ರಾಜ್ಯ ಆಯೋಗದ ಸದಸ್ಯರುಗಳು ಕೇಂದ್ರ ಆಯೋಗದ ಅಧ್ಯಕ್ಷ ಅಥವಾ ಸದಸ್ಯ, ಅಥವಾ ರಾಜ್ಯ ಆಯೋಗದ ಅಧ್ಯಕ್ಷರಾಗಬಹುದಾಗಿದೆ.

ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅಪವಾದಗಳು, ಹೀಗಿರುತ್ತವೆ: ಅಂದರೆ, ಕೇಂದ್ರ ಲೋಕಸೇವಾ ಆಯೋಗದ ಸದಸ್ಯನಾಗಿರುವ ವ್ಯಕ್ತಿಯು, ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷನಾಗಬಹುದಾಗಿದೆ, ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷನಾಗಬಹುದಾಗಿದೆ, ಅಥವಾ ಕೇಂದ್ರ ಲೋಕಸೇವಾ ಆಯೋಗದ ಸದಸ್ಯನಾಗಬಹುದಾಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಒಂದು ರಾಜ್ಯ ಆಯೋಗದ ಅಧ್ಯಕ್ಷ ಅಥವಾ ಸದಸ್ಯ ಅದೇ ರಾಜ್ಯದಡಿಯಲ್ಲಿ ನೇಮಕಾತಿ ಹೊಂದುವ ಹಾಗಿಲ್ಲ. ಅವನನ್ನು ಇನ್ನೊಂದು ರಾಜ್ಯದ ಅಧ್ಯಕ್ಷನನ್ನಾಗಿ ನೇಮಕಾತಿ ಮಾಡಬಹುದು ಅಥವಾ ಕೇಂದ್ರ ಲೋಕಸೇವಾ ಆಯೊಗದ ಸದಸ್ಯನಾಗಿ ನೇಮಿಸಬಹುದು, ಇದರ ಗುರಿಯು ರಾಜ್ಯ ಸರ್ಕಾರವು ಅದೇ ಹುದ್ದೆಯಲ್ಲಿ ಅಥವಾ ಬೇರಾವುದೇ ಹುದ್ದೆಯಲ್ಲಿ ಮುಂದುವರಿಕೆಯ ನೇಮಕಾತಿ ನೀಡುವ ವಿಷಯದಲ್ಲಿ ಆಶ್ರಯ ಅಥವಾ ಸಂರಕ್ಷಣೆಯನ್ನು ನಿರ್ವಹಿಸುವುದನ್ನು ತಡೆಯುವುದಾಗಿರುತ್ತದೆ, ಮತ್ತು ಈ ನಿಯಮಾಂಶಗಳಿಂದಾಗಿ ಆಯೋಗದ ಸದಸ್ಯರುಗಳು ಇರಬೇಕಾದಷ್ಟು ಸ್ವತಂತ್ರರಾಗಿರುತ್ತಾರೆಂದು ಭಾವಿಸಲಾಗಿದೆ.

ಇದಲ್ಲದೇ ಇನ್ನಾವುದೇ ಅಂಶದ ಮೇಲೆ ವಿವರಣೆಯ ಅವಶ್ಯಕತೆಯಿದೆ ಎಂದು ನನಗನಿಸುವುದಿಲ್ಲ.

**ಶ್ರೀ ಲಕ್ಷ್ಮೀನಾರಾಯಣ ಸಾಹು:** ಜಂಟಿ ಆಯೋಗಗಳ ಸದಸ್ಯರ ಪರಿಸ್ಥಿತಿ ಏನು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಜಂಟಿ ಆಯೋಗವು ಒಂದು ರಾಜ್ಯ ಆಯೋಗವಾಗಿರುತ್ತದೆ. ಇದನ್ನು ವಿಧಿ ೨೮೪ರ ಕಲಮು (೪)ರಲ್ಲಿ ವ್ಯಾಖ್ಯಾನಿಸಲಾಗಿದೆ.

**ಡಾ. ಮನಮೋಹನ ದಾಸ** (ಪಶ್ಚಿಮಬಂಗಾಳ, ಸಾಮಾನ್ಯ): ವಿಧಿ ೨೮೫–ಎ ದ ಕೆಲವು ಅಂಶಗಳ ಬಗ್ಗೆ ನಾನು ಸ್ಪಷ್ಟೀಕರಣ ಬಯಸುತ್ತೇನೆ. ರಾಷ್ಟ್ರಪತಿಯ ಉಲ್ಲೇಖದ ನಂತರ ಸರ್ವೋಚ್ಚ ನ್ಯಾಯಾಲಯವು ಲೋಕಸೇವಾ ಆಯೋಗದ ಅಧ್ಯಕ್ಷ ಅಥವಾ ಇತರ ಯಾವುದೇ ಸದಸ್ಯನನ್ನು ತೆಗೆಯಬೇಕೆಂದು ವರದಿ ಸಲ್ಲಿಸಿದ ನಂತರ, ರಾಷ್ಟ್ರಪತಿ ಅವನನ್ನು ತೆಗೆಯುವುದು ನಿರ್ಬಂಧನಾತ್ಮಕವಾಗಿರುತ್ತದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಖಂಡಿತವಾಗಿಯೂ.

**ಶ್ರೀ ನಜೀರುದ್ದೀನ್ ಅಹ್ಮದ್:** ಹೊಸ ಕರಡು ಮತ್ತು ಮೂಲ ಕರಡಿನ ನಡುವಿನ ವ್ಯತ್ಯಾಸವನ್ನು ಸದನಕ್ಕೆ ವಿವರಿಸಲು ಗೌರವಾನ್ವಿತ ಸದಸ್ಯರಿಗೆ ನೀವು ಕೇಳಿದ್ದೀರಿ. ನಿಜವಾದ ಬದಲಾವಣೆಗಳನ್ನು ಸೂಕ್ತವಾಗಿ ಅರ್ಥ ಮಾಡಿಕೊಳ್ಳಲು ಅದು ಸಹಾಯಕವಾಗುತ್ತಿತ್ತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಚರ್ಚೆಯ ಸಂದರ್ಭದಲ್ಲಿ ಯಾವುದಾದರೂ ಅಂಶವು ತಪ್ಪಿ ಹೋಗಿದ್ದರೆ, ಅದನ್ನು ನಾನು ನನ್ನ ಉತ್ತರದಲ್ಲಿ ವಿವರಿಸುತ್ತೇನೆ.

**ಶ್ರೀ ನಜೀರುದ್ದೀನ್ ಅಹ್ಮದ್:** ನಾನು ವಿರೋಧಿಸಬೇಕೇ ಅಥವಾ ವಿರೋಧಿಸಬಾರದೇ ಎನ್ನುವುದು ಗೊತ್ತಾಗುತ್ತಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಎರಡೂ ಕರಡುಗಳನ್ನು ನೀವು ಓದಿರಬೇಕು. ಅಲ್ಪ ವಿರಾಮ ಮತ್ತು ಅರ್ಧವಿರಾಮ ಚಿಹ್ನೆಗಳನ್ನು ಮಾತ್ರ ನೀವು ಓದಿರಲಿಕ್ಕಿಲ್ಲ.

**ಸಭಾಧ್ಯಕ್ಷರು:** ನಾನು ಈಗ ತಿದ್ದುಪಡಿಗಳನ್ನು ತೆಗೆದುಕೊಳ್ಳುತ್ತೇನೆ.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೇ, ನಾನು ಸದನದಲ್ಲಿ ಮಂಡಿಸಿದ ವಿಧಿಗಳ ಮೇಲೆ ಮಾಡಿದ ಟೀಕೆಗಳಿಗೆ ಉತ್ತರವಾಗಿ ಕೆಲವೇ ಅಂಶಗಳ ಮೇಲೆ ಒಂದೆರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ.

ಮೊದಲನೆಯ ಟೀಕೆಯು, ಲೋಕಸೇವಾ ಆಯೋಗದ ರಚನೆಗೆ ಸಂಬಂಧಿಸಿರುತ್ತದೆ. ಲೋಕಸೇವಾ ಆಯೋಗದ ಸದಸ್ಯರಲ್ಲಿ ಅರ್ಧದಷ್ಟು ಜನರು ಅರಸನ ಸೇವಕರಾಗಿರಬೇಕೆಂದು ಅದರಲ್ಲಿ ಮಾಡಲಾದ ಮೀಸಲಾತಿಯು ನಿಜವಾಗಿಯೂ ಐ.ಸಿ.ಎಸ್. ಅಧಿಕಾರಿಗಳಿಗೆ ತಯಾರಿಸಲಾದ ನಂದನವನವೆಂದು ತಕರಾರು ಮಾಡಲಾಗಿದೆ. ಈ ಟೀಕೆಯನ್ನು ಮಾಡಿದವರು ಲೋಕಸೇವಾ ಆಯೋಗದ ಉದ್ದೇಶ, ಪ್ರಾಮುಖ್ಯತೆ ಮತ್ತು ಕಾರ್ಯಗಳನ್ನು ಅರ್ಥ ಮಾಡಿಕೊಂಡಿಲ್ಲವೆಂದು ಕ್ಷಮಾಪೂರ್ವಕವಾಗಿ ಹೇಳುತ್ತೇನೆ. ಲೋಕಸೇವಾ ಆಯೋಗದ ಕಾರ್ಯವು ಲೋಕಸೇವೆಗೆ ಅರ್ಹ ವ್ಯಕ್ತಿಗಳನ್ನು ಆರಿಸುವುದಾಗಿರುತ್ತದೆ. ಅರ್ಹತೆಯ ಪ್ರಶ್ನೆಯ ಮೇಲೆ ತೀರ್ಮಾನಕ್ಕೆ ಬರಲು ಅವಶ್ಯಕವಾದ ನಿರ್ಣಯವು ಅಂಥ ನಿರ್ಣಯವನ್ನು ಮಾಡಲು ಕೇಳಲಾದ ವ್ಯಕ್ತಿಯಲ್ಲಿ ನಿರ್ದಿಷ್ಟ ಪ್ರಮಾಣಿತ ಅನುಭವ ಇರುವುದನ್ನು ಪೂರ್ವಭಾವಿಸುತ್ತದೆ. ಸ್ಪಷ್ಟವಾಗಿಯೇ ಈಗಾಗಲೇ ಅರಸನ ಸೇವೆಯಲ್ಲಿರುವ ವ್ಯಕ್ತಿಗಿಂತ ಉತ್ತಮ ತೀರ್ಪುಗಾರ ಈ ವಿಷಯದಲ್ಲಿ ಬೇರೆ ಯಾರೂ ಇರುವುದಿಲ್ಲ. ಆದ್ದರಿಂದ ಸೇವೆಯಲ್ಲಿರುವ ವ್ಯಕ್ತಿಗಳಿಗೆ ನಿರ್ದಿಷ್ಟ ಭಾಗವನ್ನು ಏಕೆ ಮೀಸಲಾಗಿಡಲಾಗಿದೆ ಎನ್ನುವುದಕ್ಕೆ ಕಾರಣವು ಅರಸನ ಸೇವೆಯಲ್ಲಿ ಈಗಾಗಲೇ ಇರುವ ವ್ಯಕ್ತಿಗಳಿಗೆ ಉಪಕರಿಸುವ ಯಾವುದೇ ಅಪೇಕ್ಷೆಯಿಂದ ಕೂಡಿದ್ದಾಗಿರುವುದಿಲ್ಲ, ಆದರೆ ಅಪೇಕ್ಷೆಯು ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ನೆರವೇರಿಸುವುದಕ್ಕೆ ಆವಶ್ಯಕ ಅನುಭವವನ್ನು ಹೊಂದಿರುವ ವ್ಯಕ್ತಿಗಳನ್ನು ಪಡೆಯುವುದಾಗಿರುತ್ತದೆ. ಹೇಗೇ ಆದರೂ ನನ್ನ ಮಿತ್ರ ಶ್ರೀ ಕಪೂರರು ಅದಕ್ಕೆ ತಯಾರಾಗಿದ್ದಾರೆ, ನಾನು ತಿದ್ದುಪಡಿಯನ್ನು ಸ್ವೀಕರಿಸಲು ತಯಾರಾಗಿದ್ದೇನೆ. "ಕನಿಷ್ಠ ಅರ್ಧದಷ್ಟು" ಎನ್ನುವುದರ ಬದಲಾಗಿ "ಅರ್ಧಕ್ಕೆ ಸಮೀಪವಾಗುವಷ್ಟು" ಎಂದು ಹೇಳಲು ನಾನು ತಯಾರಾಗಿದ್ದೇನೆ.

**ಶ್ರೀ ಹೆಚ್. ವಿ. ಕಾಮತ್:** "ಅರ್ಧಕ್ಕಿಂತಲೂ ಹೆಚ್ಚಾಗದಂತೆ" ಎಂದು ಏಕೆ ಹೇಳಕೂಡದು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ, ನನಗೆ ಸಾಧ್ಯವಾದಷ್ಟು ಉತ್ತಮವಾದದ್ದನ್ನು ಮಾಡಿದ್ದೇನೆ.

ಎರಡನೆಯ ಪ್ರಶ್ನೆಗೆ ಸಂಬಂಧಿಸಿದಂತೆ, ಲೋಕಸೇವಾ ಆಯೋಗದಲ್ಲಿರುವ ವ್ಯಕ್ತಿಗಳಿಗೆ ರಾಜ್ಯದಡಿಯಲ್ಲಿ

---

* ಸಿ.ಎ.ಡಿ. ಸಂ. IX, ೨೨ನೇ ಆಗಸ್ಟ್ ೧೯೪೯, ಪುಟ ೫೯೨–೫೯೩.

ಗೌರವ ಹುದ್ದೆಯನ್ನು ಸ್ವೀಕರಿಸಲು ಅನುಮತಿಸಬೇಕು ಎನ್ನುವುದೇಕೆ, ವೈಯಕ್ತಿಕವಾಗಿ ಆ ಸಲಹೆಯನ್ನು ಒಪ್ಪಲು ನಾನೀಗ ಸಿದ್ಧವಾಗಿಲ್ಲ. ನಮ್ಮ ಸಂಪೂರ್ಣ ಗುರಿಯು ಲೋಕಸೇವಾ ಆಯೋಗದ ಸದಸ್ಯರನ್ನು ಕಾರ್ಯಾಂಗದಿಂದ ಸ್ವತಂತ್ರವಾಗಿಡುವುದಾಗಿರುತ್ತದೆ. ಅವರನ್ನು ಕಾರ್ಯಾಂಗದಿಂದ ಸ್ವತಂತ್ರವಾಗಿಡುವ ಒಂದು ದಾರಿಯೆಂದರೆ, ಕಾರ್ಯಾಂಗವು ಯಾವುದೇ ಹುದ್ದೆಯ ಮೂಲಕ ಅವರು ತಮ್ಮ ಕರ್ತವ್ಯದಿಂದ ವಿಮುಖರಾಗುವಂತೆ ಉತ್ತೇಜಿಸುವಂಥ ಹುದ್ದೆಗಳಿಂದ ಅವರನ್ನು ವಂಚಿತರನ್ನಾಗಿಸುವುದಾಗಿರುತ್ತದೆ. ಯಾವ ಹುದ್ದೆಯು ಲಾಭದಾಯಕ ಹುದ್ದೆಯಾಗಿರುವುದಿಲ್ಲವೋ ಆದರೆ ಗೌರವ ಹುದ್ದೆಯಾಗಿರುತ್ತದೆಯೋ ಅದು ವೇತನವನ್ನು ಒಳಗೊಂಡಿರುವುದಿಲ್ಲ ಎನ್ನುವುದು ನಿಜವಾಗಿರುತ್ತದೆ. ಆದರೆ ಎಲ್ಲರಿಗೂ ಗೊತ್ತಿರುವ ಹಾಗೆ ತನ್ನ ಹುದ್ದೆಯ ಕಾರಣದಿಂದಾಗಿ ಒಬ್ಬ ವ್ಯಕ್ತಿಯು ವೇತನ ಒಂದನ್ನೇ ಪಡೆಯುವುದಿಲ್ಲ. "ವೇತನ, ಪುಡಿಕಾಸು ಮತ್ತು ಎತ್ತಿ ಹಾಕುವುದು" ಎನ್ನುವಂತದ್ದು ಇರುತ್ತದೆ. ಅಂಥದ್ದು ಇಲ್ಲದಿದ್ದರೂ ಸಹ, ಒಂದು ಹುದ್ದೆಯು ಒಬ್ಬ ವ್ಯಕ್ತಿಗೆ ನಿರ್ದಿಷ್ಟವಾದ ಪ್ರಭಾವವನ್ನು ಕೊಡುತ್ತದೆ. ಮತ್ತು ಅಂಥ ವ್ಯಕ್ತಿಯು ವೇತನವನ್ನು ಪಡೆಯದಿದ್ದರೂ ನಿರ್ದಿಷ್ಟವಾದ ಪ್ರಭಾವವನ್ನು ಪಡೆಯುವಂಥ ಹುದ್ದೆಯಲ್ಲಿ ಇಡುವ ಸಾಧ್ಯತೆಯಿಂದಲೂ ಹೊರತುಪಡಿಸುವುದು ಅಪೇಕ್ಷಣೀಯವಾದದ್ದು ಎಂದು ನನ್ನ ಅನಿಸಿಕೆಯಾಗಿದೆ.

ಈಗ ನಾನು ನನ್ನ ಮಿತ್ರ ಶ್ರೀ ಕುಂಝುರವರ ತಿದ್ದುಪಡಿಗೆ ಬರುತ್ತೇನೆ. ಲೋಕಸೇವಾ ಆಯೋಗದಡಿಯಲ್ಲಿ ನೇಮಿಸಬಹುದಾದ ಸೇವೆಗಳು ಮತ್ತು ಶ್ರೇಷ್ಠ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯ ಮತ್ತು ಪ್ರಧಾನ ಲೆಕ್ಕ ಪರಿಶೋಧಕ ಇವುಗಳಡಿಯಲ್ಲಿ ನೇಮಿಸಬಹುದಾದ ಸೇವೆಗಳ ನಡುವೆ ಸ್ಪಷ್ಟವಾದ ವ್ಯತ್ಯಾಸವಿದೆ ಎನ್ನುವ ಬಗ್ಗೆ ಅವರೊಂದಿಗೆ ನನ್ನ ಸಹಮತವಿದೆ. ಈ ವ್ಯತ್ಯಾಸವನ್ನು ನಾವು ಏಕೆ ಮಾಡಿದ್ದೇವೆ ಎನ್ನುವುದನ್ನು ವಿವರಿಸಲು ನಾನು ಇಚ್ಛಿಸುತ್ತೇನೆ. ಶ್ರೇಷ್ಠ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ಸಿಬ್ಬಂದಿಗೆ ಸಂಬಂಧಿಸಿದ ಹಾಗೆ, ಯಾರು ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸುವರೋ ಅವರು ನಿರ್ದಿಷ್ಟ ಅಂಶದ ನ್ಯಾಯಿಕ ಸ್ವಾತಂತ್ರ್ಯವನ್ನು ಚಲಾಯಿಸಬೇಕಾಗುತ್ತದೆ. ಇದರ ಪರಿಣಾಮವಾಗಿ ಅವರ ವೇತನ ಮತ್ತು ಪಿಂಚಣಿಯನ್ನು ರಾಷ್ಟ್ರಪತಿಯ ಅನುಮೋದನೆ ಮೇರೆಗೆ ಮುಖ್ಯ ನ್ಯಾಯಾಧೀಶರೇ ನಿರ್ದಿಷ್ಟಪಡಿಸಬೇಕಷ್ಟೇ ಅಲ್ಲ, ಅವರ ಸೇವಾ ನಿಬಂಧನೆಗಳನ್ನು ಸಹ ಮುಖ್ಯ ನ್ಯಾಯಾಧೀಶರಿಂದಲೇ ನಿರ್ದಿಷ್ಟಪಡಿಸಲು ಬಿಡಬೇಕೆನ್ನುವುದು ನಮ್ಮ ಅನಿಸಿಕೆಯಾಗಿದೆ. ಲೋಕಸೇವಾ ಆಯೋಗದ ವಿಷಯದಲ್ಲಿ ಹೆಚ್ಚಿನ ಸಿಬ್ಬಂದಿಯು ವಾಸ್ತವವಾಗಿ ಎಲ್ಲ ಸಿಬ್ಬಂದಿಯು– ಯಾವುದೇ ಪ್ರಾಧಿಕಾರತ್ವವಿಲ್ಲದಂಥ ಮತ್ತು ಯಾವುದೇ ಸ್ವತಂತ್ರತೆ ಇಲ್ಲದಂಥ "ಸಹಾಯಕ ಕರ್ತವ್ಯಗಳು" ಎಂದು ನಾವು ಕರೆಯಲ್ಪಡುವುದಕ್ಕೆ ಮಾತ್ರ ಸಂಬಂಧಿಸಿರುತ್ತದೆ. ಈ ಕಾರಣಕ್ಕಾಗಿ ನಾವು ಈ ವ್ಯತ್ಯಾಸವನ್ನು ಮಾಡಿದ್ದೇವೆ. ಆದರೆ ನನ್ನ ವಾದವು ಅದು ಕಾಣುವಷ್ಟು ಸೂಕ್ತವಾಗಿಲ್ಲ ಎನ್ನುವುದು ನನಗೆ ಕಂಡುಬರುತ್ತಿದೆ. ಆದರೂ ಸಹ ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಕುಂಝು ಅವರಿಗೆ ನನ್ನ ಸಲಹೆ ಏನೆಂದರೆ ಈ ಪ್ರಕರಣದಲ್ಲಿ ಬದಲಾವಣೆಯನ್ನು ಮಾಡುವ ಆವಶ್ಯಕತೆ ನನಗೆ ಕಂಡುಬಂದರೆ ಅವಶ್ಯ ತಿದ್ದುಪಡಿಯೊಂದಿಗೆ ಸದನದ ಮುಂದೆ ನಾನು ಬರುತ್ತೇನೆ ಎನ್ನುವ ವಾಗ್ದಾನದೊಂದಿಗೆ ಇದರ ಅನುಮೋದನೆಗೆ ಅನುಮತಿಸಬೇಕು ಎಂದು.

ಮಾನ್ಯರೇ, ನನ್ನ ಗಮನವನ್ನು ಸೈಕ್ಲೊಸ್ಟೈಲ್ ಮಾಡಿದ ವಿಧಿ ೨೮೫–ಎ ಗೆ ನನ್ನ ತಿದ್ದುಪಡಿಯ ವಾಸ್ತವಾಂಶಕ್ಕೆ ಸೆಳೆಯಲಾಗಿದೆ, ಉಪಕಲಮು (೨) (ಬಿ)ನಲ್ಲಿ ಪದಗಳು "ಯಾವುದೇ ವೇತನ ಪಾವತಿಸುವ ಸೇವೆಯಲ್ಲಿ" ಎಂದು ತಪ್ಪಾಗಿ ಬೆರಳಚ್ಚು ಮಾಡಲಾಗಿದೆ. ಇದನ್ನು ಸರಿಪಡಿಸುವಿರೆಂದು ನಾನು

ಭಾವಿಸುತ್ತೇನೆ.

ನಾನು ಪಂಡಿತ್ ಕುಂಝ್ರು ಅವರಿಗೆ ಹೇಳಿದ ಹಾಗೆ, ಕರಡು ಸಮಿತಿಯು ಈ ವಿಷಯವನ್ನು ಪರಿಗಣಿಸುತ್ತದೆ ಮತ್ತು ಬದಲಾವಣೆ ಮಾಡಲು ಯಾವುದಾದರೂ ಆಧಾರಗಳಿವೆ ಎಂದು ಅದು ಭಾವಿಸಿದರೆ, ಅದು ಸದನದ ಅನುಮತಿಯನ್ನು ಪಡೆದು, ಸ್ಥಿತಿಯನ್ನು ಸರಿಪಡಿಸಲು ಬದಲಾವಣೆಯನ್ನು ತೆಗೆದುಕೊಂಡು ಬರುತ್ತದೆ.

**ಮಾನ್ಯ ಸಭಾಧ್ಯಕ್ಷರು:** ನಾನು ತಿದ್ದುಪಡಿಗಳನ್ನು ಮೊದಲು ಮತಕ್ಕೆ ಹಾಕುತ್ತೇನೆ. ಪ್ರಶ್ನೆಯು ಏನೆಂದರೆ:

"ಮೇಲಿನ ತಿದ್ದುಪಡಿ ಸಂಖ್ಯೆ ೩ರಲ್ಲಿ, ಪ್ರಸ್ತಾವಿತ ವಿಧಿ ೨೮೫ರ ಕಲಮು (೧)ಕ್ಕೆ ಇರುವ ನಿಬಂಧನೆಯಲ್ಲಿ ''ಅರ್ಧ'' ಎಂಬ ಪದಕ್ಕೆ ಬದಲಾಗಿ ''ಒಂದು ಮೂರಾಂಶ'' ಎಂಬ ಪದವನ್ನು ಸೇರಿಸಬೇಕು.

**ಶ್ರೀ ಜಸ್ಪತ್‌ರಾಯ್ ಕಪೂರ್:** ಇದರ ಸ್ಥಳದಲ್ಲಿ ನಾನು ಅಂಬೇಡ್ಕರ್ ಸಲಹೆ ಮಾಡಿದ "ಅರ್ಧಕ್ಕೆ ಸಮೀಪವಾದ" ಪದಗಳನ್ನು ಅಳವಡಿಸಬೇಕೆನ್ನುವುದನ್ನು ಒಪ್ಪುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಹಾಗಾದರೆ ನಾನು ಅದನ್ನು ಮತಕ್ಕೆ ಹಾಕುತ್ತೇನೆ. ಪ್ರಶ್ನೆಯು ಏನೆಂದರೆ:–

"ಮೇಲಿನ ತಿದ್ದುಪಡಿ ಸಂಖ್ಯೆ ೩ರಲ್ಲಿ, ಪ್ರಸ್ತಾಪಿತ ವಿಧಿ ೨೮೫ರ ಖಂಡ (೧)ಕ್ಕೆ ಇರುವ ನಿಬಂಧನೆಯಲ್ಲಿ "ಕನಿಷ್ಠ ಅರ್ಧ" ಎಂಬ ಪದಗಳ ಬದಲಾಗಿ "ಅರ್ಧಕ್ಕೆ ಸಮೀಪವಾದ" ಎಂಬ ಪದಗಳನ್ನು ಸೇರಿಸಬೇಕು.

**[ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ವಿಧಿ ೨೮೫ ಅನ್ನು, ತಿದ್ದುಪಡಿ ಮಾಡಿದ ರೀತಿಯಲ್ಲಿ, ಸಂವಿಧಾನಕ್ಕೆ ಸೇರಿಸಲಾಯಿತು.]**

* * *

## ವಿಧಿ ೨೮೬ರಿಂದ ೨೮೮–ಎ ವರೆಗೆ

***ಮಾನ್ಯ ಸಭಾಧ್ಯಕ್ಷರು:** ನಾವು ಈಗ ವಿಧಿ ೨೮೬ರ ಮತ್ತು ಅದರ ನಂತರದ ಪ್ರಕರಣಗಳನ್ನು ಪರಿಗಣಿಸೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಮಾನ್ಯರೇ, ನಾನು ತಮ್ಮ ಅನುಮತಿಯ ಮೇರೆಗೆ, ತಿದ್ದುಪಡಿ ಸಂಖ್ಯೆ ೧೨, ೧೬, ೧೭ ಮತ್ತು ೧೯ ಇವುಗಳನ್ನು ಒಟ್ಟಿಗೇ ಮಂಡಿಸಬಹುದೇ? ಅವೆಲ್ಲವೂ ಒಂದೇ ವಿಷಯಕ್ಕೆ ಸಂಬಂಧಿಸಿರುತ್ತದೆ. ಇವುಗಳ ಮೇಲೆ ಒಟ್ಟಿಗೆ ಚರ್ಚೆ ನಡೆಸಬಹುದು ಮತ್ತು ನಂತರ ತಾವು ಪ್ರತಿಯೊಂದು ತಿದ್ದುಪಡಿಯನ್ನು ಪ್ರತ್ಯೇಕವಾಗಿ ಮತಕ್ಕೆ ಹಾಕಬಹುದು.

**ಮಾನ್ಯ ಸಭಾಧ್ಯಕ್ಷರು:** ಹೌದು, ಅದಕ್ಕೆ ನನ್ನ ಒಪ್ಪಿಗೆ ಇದೆ.

**ಲೋಕಸೇವಾ ಆಯೋಗದ ಕಾರ್ಯಗಳು**

---

* ಸಿ.ಎ.ಡಿ. ಸಂ. IX, ೨೩ನೇ ಆಗಸ್ಟ್ ೧೯೪೯, ಪುಟ ೫೯೭–೫೯೮.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಇದನ್ನು ಹೀಗೆ ಮಂಡಿಸುತ್ತೇನೆ:–

"ವಿಧಿ ೨೮೬ಕ್ಕೆ ಬದಲಾಗಿ ಈ ಕೆಳಗಿನ ವಿಧಿಗಳನ್ನು ಸೇರಿಸಬೇಕು:–

೨೮೬. (೧) ಕೇಂದ್ರದ ಸೇವೆಗಳಿಗೆ ಮತ್ತು ರಾಜ್ಯದ ಸೇವೆಗಳಿಗೆ ನೇಮಕಾತಿಗಳ ಸಲುವಾಗಿ ಪರೀಕ್ಷೆಗಳನ್ನು ನಡೆಸುವುದು ಅನುಕ್ರಮವಾಗಿ ಕೇಂದ್ರ ಮತ್ತು ರಾಜ್ಯ ಲೋಕಸೇವಾ ಆಯೋಗಗಳ ಕರ್ತವ್ಯವಾಗಿರುತ್ತದೆ.

(೨) ಒಂದು ವೇಳೆ ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳು, ವಿಶೇಷ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ಬೇಕಾದ ಯಾವುದೇ ಸೇವೆಗಳಿಗೆ ಜಂಟಿ ನೇಮಕಾತಿಯ ಸಲುವಾಗಿ ಯೋಜನೆಗಳನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು ಸಹಾಯಕ್ಕಾಗಿ ವಿನಂತಿಸಿದರೆ, ಹಾಗೆ ಮಾಡುವುದು ಸಹ ಕೇಂದ್ರ ಲೋಕಸೇವಾ ಆಯೋಗದ ಕರ್ತವ್ಯವಾಗಿರುತ್ತದೆ.

(೩) ಕೇಂದ್ರ ಲೋಕಸೇವಾ ಆಯೋಗವನ್ನು ಅಥವಾ ರಾಜ್ಯ ಲೋಕಸೇವಾ ಆಯೋಗವನ್ನು ಪ್ರಕರಣಕ್ಕೆ ಸಂಬಂಧಪಟ್ಟಂತೆ, ಕೆಳಗಿನವುಗಳಿಗಾಗಿ ಸಂಪರ್ಕಿಸತಕ್ಕದ್ದು:–

(ಎ) ನಾಗರಿಕ ಸೇವೆಗಳಿಗೆ ಮತ್ತು ನಾಗರಿಕ ಹುದ್ದೆಗಳಿಗೆ ನೇಮಕಾತಿಯ ವಿಧಾನಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳು.

(ಬಿ) ನಾಗರಿಕ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ನೇಮಕಾತಿಗಳನ್ನು ಮಾಡಲು ಅನುಸರಿಸಬೇಕಾದ ತತ್ವಗಳು ಮತ್ತು ಒಂದು ಸೇವೆಯಿಂದ ಇನ್ನೊಂದಕ್ಕೆ ವರ್ಗಾವಣೆಗಳನ್ನು ಮಾಡುವುದು ಮತ್ತು ಪದೋನ್ನತಿಗಳನ್ನು ನೀಡುವುದು ಮತ್ತು ಅಂಥ ನೇಮಕಾತಿ, ಪದೋನ್ನತಿ ಅಥವಾ ವರ್ಗಾವಣೆಗಳಿಗೆ ಅಭ್ಯರ್ಥಿಗಳ ಸಮರ್ಪಕತೆ;

(ಸಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಡಿಯಲ್ಲಿ ನಾಗರಿಕ ಖಾತೆಯಲ್ಲಿ ಸೇವೆಗೈಯ್ಯುತ್ತಿರುವ ವ್ಯಕ್ತಿಗೆ ಸಂಬಂಧಿಸಿದ ಎಲ್ಲ ಶಿಸ್ತು ಕ್ರಮದ ವಿಷಯಗಳು, ಅಂಥ ವಿಷಯಗಳಿಗೆ ಸಂಬಂಧಿಸಿದ ಜ್ಞಾಪಕ ಪತ್ರಗಳು ಮತ್ತು ದಾವೆ ಪತ್ರಗಳನ್ನು ಒಳಗೊಂಡು;

(ಡಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಅರಸನಡಿಯಲ್ಲಿ ನಾಗರಿಕ ಖಾತೆಯಲ್ಲಿ ಸೇವೆಗೈಯ್ಯುತ್ತಿರುವ ಅಥವಾ ಸೇವೆಗೈದ ವ್ಯಕ್ತಿಯು ತನ್ನ ಕರ್ತವ್ಯವನ್ನು ನಿರ್ವಹಿಸುವಾಗ ಮಾಡಿದ ಅಥವಾ ಮಾಡಿದ್ದಾಗಿ ರೂಪಿಸಿದವುಗಳ ವಿರುದ್ಧ ಮಾಡಲಾದ ಖಟ್ಲೆಗಳಲ್ಲಿ ತನ್ನನ್ನು ಸಂರಕ್ಷಿಸಿಕೊಳ್ಳಲು ಮಾಡಿದ ಯಾವುದೇ ವೆಚ್ಚವನ್ನು ಭಾರತೀಯ ಕ್ರೋಡೀಕೃತ ನಿಧಿ ಅಥವಾ ರಾಜ್ಯದ ನಿಧಿಯಿಂದ, ಪ್ರಕರಣಕ್ಕೆ ಸಂಬಂಧಿಸಿದಂತೆ, ನೀಡಬೇಕೆನ್ನುವ, ಅಂಥ ವ್ಯಕ್ತಿಯಿಂದ ಅಥವಾ ವ್ಯಕ್ತಿಗೆ ಸಂಬಂಧಿಸಿದಂತೆ ಮಾಡಲಾದ ಬೇಡಿಕೆಗಳು.

(ಇ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಅರಸನಡಿಯಲ್ಲಿ ನಾಗರಿಕ ಖಾತೆಯಲ್ಲಿ ಸೇವೆಗೈಯ್ಯುತ್ತಿರುವಾಗ ಹೊಂದಿದ ಕೃತಿಗೆ ಸಂಬಂಧಿಸಿದಂತೆ ಆ ವ್ಯಕ್ತಿಯು ಪಿಂಚಣಿಯನ್ನು ನೀಡಬೇಕೆಂದು ಮಾಡಿದ ಯಾವುದೇ ಬೇಡಿಕೆ ಮತ್ತು ಅಂಥ ಮೊಬಲಗಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆ.

ತಮಗೆ ಉಲ್ಲೇಖ ಮಾಡಿದ ಯಾವುದೇ ವಿಷಯಗಳ ಬಗ್ಗೆ ಮತ್ತು ರಾಷ್ಟ್ರಪತಿ, ರಾಜ್ಯಪಾಲ ಅಥವಾ ರಾಜ್ಯದ ಆಡಳಿತಗಾರ ಇವರುಗಳು ಯಾರೇ ಉಲ್ಲೇಖ ಮಾಡಿದ ವಿಷಯಗಳ ಮೇಲೆ ಲೋಕಸೇವಾ ಆಯೋಗವು ಸಲಹೆ ನೀಡುವುದು ಅದರ ಕರ್ತವ್ಯವಾಗಿರುತ್ತದೆ.

ಆದರೆ, ಭಾರತೀಯ ಸೇವೆಗಳು ಮತ್ತು ಕೇಂದ್ರದ ವಿಷಯಗಳಿಗೆ ಸಂಬಂಧಿಸಿದ ಇತರ ಸೇವೆಗಳು

ಅಥವಾ ಹುದ್ದೆಗಳಿಗೆ ಸಹ ಸಂಬಂಧಿಸಿದಂತೆ ರಾಷ್ಟ್ರಪತಿಗಳು, ಮತ್ತು ರಾಜ್ಯದ ವಿಷಯಗಳಿಗೆ ಸಂಬಂಧಿಸಿದ ಇತರ ಸೇವೆಗಳು ಮತ್ತು ಹುದ್ದೆಗಳಿಗೆ ಸಂಬಂಧಿಸಿದಂತೆ ರಾಜ್ಯಪಾಲರು ಅಥವಾ ಆಡಳಿತಗಾರರು, ಸಾಮಾನ್ಯವಾಗಿಯಾಗಲೀ ಅಥವಾ ಯಾವುದೇ ನಿರ್ದಿಷ್ಟ ವರ್ಗಕ್ಕೆ ಆಗಲೀ ಅಥವಾ ಯಾವುದೇ ನಿರ್ದಿಷ್ಟ ಸಂದರ್ಭಗಳಲ್ಲಿಯಾಗಲೀ, ಲೋಕಸೇವಾ ಆಯೋಗವನ್ನು ಸಂಪರ್ಕಿಸುವ ಆವಶ್ಯಕತೆ ಇಲ್ಲವೆಂದು ಅಂಥ ವಿಷಯಗಳನ್ನು ವಿಶದಪಡಿಸಿ ಕ್ರಮನಿಯಮಾವಳಿಗಳನ್ನು ಮಾಡಬಹುದಾಗಿದೆ.

(೪) ಈ ವಿಧಿಯ ಕಲಮು (೩)ರಲ್ಲಿಯ ಯಾವುದೇ ವಿಷಯವು ಕೇಂದ್ರ ಅಥವಾ ರಾಜ್ಯದಲ್ಲಿ ಹಿಂದುಳಿದ ವರ್ಗದ ನಾಗರಿಕರಿಗೆ ಮೀಸಲಾತಿ ಬೇಕಾದ ನೇಮಕಾತಿಗಳು ಹಾಗೂ ಹುದ್ದೆಗಳ ವಿಧಾನಕ್ಕೆ ಸಂಬಂಧಿಸಿದಂತೆ ಲೋಕಸೇವಾ ಆಯೋಗವನ್ನು ಸಂಪರ್ಕಿಸುವುದು ಆವಶ್ಯಕಪಡಿಸುವುದಿಲ್ಲ.

(೫) ಈ ವಿಧಿ ಕಲಮು (೩)ನ್ನು ಉಳಿಸುವಿಕೆಯಲ್ಲಿ ರಾಷ್ಟ್ರಪತಿ ಅಥವಾ ರಾಜ್ಯಪಾಲ ಅಥವಾ ರಾಜ್ಯದ ಆಡಳಿತಗಾರ ಮಾಡಲಾದ ಎಲ್ಲ ಕ್ರಮನಿಯಮಾವಳಿಗಳನ್ನು ಅವುಗಳನ್ನು ಮಾಡಿದ ನಂತರ ಸಾಧ್ಯವಾದಷ್ಟು ಬೇಗ ಸಂಬಂಧಪಟ್ಟ ಸಂಸತ್ತಿನ ಪ್ರತಿ ಸದನದ ಮುಂದೆ ಅಥವಾ ರಾಜ್ಯದ ಅಥವಾ ಪ್ರತಿ ಸದನದ ಮುಂದೆ ಹದಿನಾಲ್ಕು ದಿನಗಳಿಗೆ ಕಡಿಮೆಯಿಲ್ಲದ ಅವಧಿಯವರೆಗೆ ಇಡತಕ್ಕದ್ದು, ಮತ್ತು ಸಂಸತ್ತಿನ ಎರಡೂ ಸದನಗಳು ಅಥವಾ ರಾಜ್ಯದ ಸದನ ಅಥವಾ ಎರಡೂ ಸದನಗಳು, ತೆಗೆದುಹಾಕುವಿಕೆ ಅಥವಾ ತಿದ್ದುಪಡಿಯ ಮೂಲಕ, ಈ ಸದನಗಳ ಮುಂದೆ ಇಡಲಾದ ವಿಷಯಗಳಿಗೆ ಮಾಡಲಾದ ಬದಲಾವಣೆಗಳಿಗೆ ಒಳಪಟ್ಟಿರತಕ್ಕದ್ದು."

"ವಿಧಿ ೨೮೭ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**ಲೋಕಸೇವಾ ಆಯೋಗದ ಕಾರ್ಯಗಳನ್ನು ವಿಸ್ತರಿಸುವ ಅಧಿಕಾರ**

೨೮೭. ಸಂಸತ್ತಿನಿಂದ ಅಥವಾ, ಪ್ರಕರಣಕ್ಕೆ ಸಂಬಂಧಿಸಿದಂತೆ, ಒಂದು ರಾಜ್ಯದ ಶಾಸಕಾಂಗದಿಂದ ಮಾಡಲಾದ ಅಧಿನಿಯಮವು ಕೇಂದ್ರ ಲೋಕಸೇವಾ ಆಯೋಗ ಅಥವಾ ರಾಜ್ಯ ಲೋಕಸೇವಾ ಆಯೋಗವು ಕೇಂದ್ರ ಅಥವಾ ರಾಜ್ಯದ ಸೇವೆಗಳಿಗೆ ಹಾಗೂ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಕಾನೂನಿನ ಮೂಲಕ ಘಟಿತವಾದ ನಿಗಮೀಕರಣಗೊಂಡ ಸಂಸ್ಥೆ ಅಥವಾ ಸಾರ್ವಜನಿಕ ಸಂಸ್ಥೆಯು ಸೇವೆಗಳಿಗೂ ಸಹ ಸಂಬಂಧಿಸಿದಂತೆ ಹೆಚ್ಚುವರಿ ಕಾರ್ಯಗಳನ್ನು ನಿರ್ವಹಿಸಲು ಕಲ್ಪಿಸಬಹುದಾಗಿದೆ."

**ಲೋಕಸೇವಾ ಆಯೋಗದ ವೆಚ್ಚಗಳು**

"ವಿಧಿ ೨೮೮ರ ಬದಲಾಗಿ ಕೆಳಗಿನದನ್ನು ಸೇರಿಸಬೇಕು:

೨೮೮ ಕೇಂದ್ರ ಅಥವಾ ಒಂದು ರಾಜ್ಯ ಲೋಕಸೇವಾ ಆಯೋಗದ ವೆಚ್ಚಗಳನ್ನು, ಆಯೋಗದ ಸದಸ್ಯರು ಅಥವಾ ಸಿಬ್ಬಂದಿಗೆ ಅಥವಾ ಅವರಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ವೇತನ, ಭತ್ಯೆ ಮತ್ತು ಪಿಂಚಣಿಗಳನ್ನು ಒಳಗೊಂಡಂತೆ ಭಾರತೀಯ ಕ್ರೋಢೀಕೃತ ನಿಧಿ ಅಥವಾ ಸಂಬಂಧಿಸಿದ ರಾಜ್ಯದ ನಿಧಿಯಿಂದ ಭರಿಸತಕ್ಕದ್ದು."

"ತಿದ್ದುಪಡಿ ಸಂಖ್ಯೆ ೩೦೭೫ರಲ್ಲಿಯ ತಿದ್ದುಪಡಿಗಳ ಯಾದಿಗೆ ಬದಲಾಗಿ ಕೆಳಗಿನವುಗಳನ್ನು ಸೇರಿಸಬೇಕು:–

"ವಿಧಿ ೨೮೮ರ ನಂತರ, ಕೆಳಗಿನ ಹೊಸ ವಿಧಿಯನ್ನು ಸೇರಿಸಬೇಕು:–

**ಲೋಕಸೇವಾ ಆಯೋಗದ ವರದಿಗಳು**

೨೮೮. (೧) ಆಯೋಗವು ಮಾಡಿದ ಕಾರ್ಯದ ಬಗ್ಗೆ ಕೇಂದ್ರ ಆಯೋಗವು ವರ್ಷಕ್ಕೊಮ್ಮೆ ರಾಷ್ಟ್ರಪತಿಗೆ ವರದಿಯನ್ನು ಸಲ್ಲಿಸುವ ಕರ್ತವ್ಯವನ್ನು ಹೊಂದಿರತಕ್ಕದ್ದು ಮತ್ತು ಅಂಥ ವರದಿಯನ್ನು ಪಡೆದ ನಂತರ ರಾಷ್ಟ್ರಪತಿಯು ಅದರ ಪ್ರತಿಯನ್ನು ಯಾವುದೇ ವಿಷಯಗಳಲ್ಲಿ ಆಯೋಗದ ಸಲಹೆಗಳನ್ನು ಒಪ್ಪಿಕೊಳ್ಳದಿದ್ದಂಥ ಪ್ರಕಟಣೆಗಳಿದ್ದರೆ ಅಂಥ ಅಸ್ವೀಕೃತಿ ಕಾರಣಗಳನ್ನು ವಿವರಿಸಲಾದ ಜ್ಞಾಪಕ ಪತ್ರದೊಂದಿಗೆ ರಾಜ್ಯದ ಶಾಸಕಾಂಗದ ಮುಂದೆ ಮಂಡಿಸಲು ರವಾನಿಸತಕ್ಕದ್ದು."

ಮೇಲಿನ ವಿಧಿಗಳು ಸ್ವಯಂ ವಿವರಣಾತ್ಮಕವಾಗಿರುತ್ತವೆ ಮತ್ತು ಈ ಹಂತದಲ್ಲಿ ಯಾವುದೇ ಅಂಶಗಳನ್ನು ವಿವರಿಸಲು ಟಿಪ್ಪಣಿಯನ್ನು ಮಾಡುವುದು ಆವಶ್ಯಕವೆಂದು ನನಗೆ ಅನ್ನಿಸುವುದಿಲ್ಲ. ಏಕೆಂದರೆ ಎಲ್ಲ ಅಂಶಗಳು ತುಂಬಾ ಸರಳವಾಗಿರುತ್ತವೆ. ಆದ್ದರಿಂದ ನಾನು ನನ್ನ ಟಿಪ್ಪಣಿಗಳನ್ನು ಕೊನೆಗಾಗಿ ಮೀಸಲಿಡುತ್ತೇನೆ, ಆಗ ಬಹುಶಃ ಚರ್ಚೆಯ ನಂತರ ಎತ್ತಲಾದ ಕೆಲವು ಅಂಶಗಳಿಗೆ ವಿವರಣೆ ನೀಡುವ ಆವಶ್ಯಕತೆ ನನಗೆ ಬೀಳಬಹುದು.

ಮಾನ್ಯರೇ, ನಾನು ಮಂಡಿಸುತ್ತೇನೆ.

* * *

**ಮಾನ್ಯ ಅಧ್ಯಕ್ಷರು:** ಡಾ. ಅಂಬೇಡ್ಕರ್ ಅವರೇ,

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೇ, ನನ್ನ ಮಿತ್ರರಾದ ಶ್ರೀ ಅನಂತಶಯನಂ ಅಯ್ಯಂಗಾರ್ ಮತ್ತು ಶ್ರೀ ಕುಂಝ್ರು ಅವರು ಮಾಡಿದ ಭಾಷಣಗಳ ನಂತರ ವಿವಿಧ ಅಂಶಗಳ ಬಗ್ಗೆ, ನನಗೆ ಉತ್ತರ ನೀಡಲು ಬಹಳ ಕಡಿಮೆ ವಿಷಯ ಉಳಿದಿರುತ್ತದೆ. ಶ್ರೀ ಜಸ್ಪತ್‌ರಾಯ್ ಕಪೂರ್ ಅವರು ಕಲಮು (೨) ಅನಾವಶ್ಯಕವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪಲಾರೆ. ಏಕೆಂದರೆ ಕಲಮು (೨)ರಲ್ಲಿಯ ವಿಷಯವು ಮೂಲ ವಿಧಿಯ ೨೮೪ರಲ್ಲಿಯ ವಿಷಯಕ್ಕಿಂತ ತೀರ ಭಿನ್ನವಾಗಿದೆ. ಆದ್ದರಿಂದ ಎರಡೂ ಕಲಮುಗಳನ್ನು ಇಟ್ಟುಕೊಳ್ಳುವುದು ಆವಶ್ಯಕವಾಗಿರುತ್ತದೆ.

ನಾನು ಹೇಳುವುದು ಇನ್ನೇನಾದರೂ ಉಳಿದಿದ್ದರೆ ಅದು ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ಬಗ್ಗೆ ಎತ್ತಲಾದ ಪ್ರಶ್ನೆಯ ಬಗ್ಗೆ ಮಾತ್ರ. ನನಗೆ ಅನಿಸಿದ ಹಾಗೆ ನಾವು ಮುಂದಿನ ಹಂತದಲ್ಲಿ ಪರಿಗಣಿಸಬೇಕಾದ ವಿಧಿ ೨೯೬ ಮತ್ತು ವಿಧಿ ೧೦ ಎರಡರಲ್ಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಹಿತಾಸಕ್ತಿಗಳ ರಕ್ಷಣೆಗಾಗಿ ಸಾಕಷ್ಟು ನಿಯಮಾಂಶಗಳನ್ನು ಮಾಡಲಾಗಿದೆ ಎನ್ನಬಹುದು. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದಿಂದ ಸದಸ್ಯನನ್ನು ಅಥವಾ ಹಿಂದುಳಿದ ವರ್ಗಗಳಿಂದ ಸದಸ್ಯನನ್ನು ನೇಮಕಾತಿ ಮಾಡಲು ರಾಷ್ಟ್ರಪತಿಯನ್ನು ಬಾಧ್ಯಸ್ತನನ್ನಾಗಿ ಮಾಡುವ ನಿಯಮಾಂಶವನ್ನೂ ಮಾಡುವುದರಿಂದ ಯಾವುದೇ ಉದ್ದೇಶ ಈಡೇರಿಸಿದಂತೆ ಆಗುವುದೆಂದು ನನಗೆ ಅನ್ನಿಸುವುದಿಲ್ಲ.

**ಶ್ರೀ ಎ.ವಿ. ಠಕ್ಕರ್** (ಸೌರಾಷ್ಟ್ರ): ಇತರ ಹಿಂದುಳಿದ ವರ್ಗಗಳು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಲೋಕಸೇವಾ ಆಯೋಗದ ಸದಸ್ಯನ ಕಾರ್ಯ ಸರ್ವಸಾಮಾನ್ಯವಾದದ್ದಾಗಿರುತ್ತದೆ. ಯಾವುದೇ ಒಂದು ವರ್ಗದ ಹಿತಾಸಕ್ತಿಗಳನ್ನು ರಕ್ಷಿಸಲು ಅವನು ಇರಬೇಕಾಗಿಲ್ಲ. ಅವನು ತನ್ನ ಬುದ್ಧಿಯನ್ನು ಸರ್ವಸಾಮಾನ್ಯ ಪ್ರಶ್ನೆಯಾದ ಯಾವ ಅಭ್ಯರ್ಥಿಯು ನೇಮಕಾತಿಗೆ ಶ್ರೇಷ್ಠ ಮತ್ತು ಹೆಚ್ಚು ಸಮರ್ಥ ಎನ್ನುವುದಕ್ಕೆ ಅನ್ವಯಿಸಬೇಕಾಗುತ್ತದೆ. ನಿಜವಾದ ರಕ್ಷಣೆ ಮತ್ತು ನಿಜವಾದ ರಕ್ಷಣೆಯ ವಿಧಾನವನ್ನು ಈಗ ಅಳವಡಿಸಿಕೊಂಡದ್ದಾಗಿದೆ. ಅಂದರೆ, ಶಾಸಕಾಂಗಕ್ಕೆ ಈ ವರ್ಗಗಳಿಂದ

ತುಂಬಿಕೊಳ್ಳಲು ನಿರ್ದಿಷ್ಟ ಸ್ಥಾನಗಳನ್ನು ನಿಗದೀಕರಿಸಲು ಅನುಮತಿಸುವುದು, ಹಿಂದುಳಿದ ವರ್ಗಗಳು ಎಂದರೇನು ಎನ್ನುವುದನ್ನು ವ್ಯಾಖ್ಯಾನಿಸಲು ಸಹ ನನ್ನನ್ನು ಕೇಳಲಾಗಿದೆ. ನನ್ನ ದೇಶಕ್ಕೆ ಸಂಬಂಧಿಸಿದ ಹಾಗೆ "ಹಿಂದುಳಿದ ವರ್ಗಗಳು" ಎಂಬ ಶಬ್ದಗಳು ಬಹುತೇಕ ಪ್ರಾಥಮಿಕವಾದವುಗಳಾಗಿವೆ. "ಹಿಂದುಳಿದ ವರ್ಗಗಳು" ಎನ್ನುವ ಶಬ್ದಕ್ಕಿಂತಲೂ ಸರಳವಾದ ಶಬ್ದವನ್ನು ನಾನು ಉಪಯೋಗಿಸಬಹುದೆಂದು ನನಗೆ ಅನ್ನಿಸುವುದಿಲ್ಲ. ಪ್ರಾಂತ್ಯದಲ್ಲಿರುವ ಪ್ರತಿಯೊಬ್ಬನೂ ಹಿಂದುಳಿದ ವರ್ಗಗಳು ಯಾರು ಎಂಬುದನ್ನು ಅರಿತಿರುತ್ತಾನೆ. ಆದ್ದರಿಂದ ಸಂವಿಧಾನದಲ್ಲಿ ಮಾಡಿರುವ ಹಾಗೆ ನೇಮಕ ಮಾಡಲಾಗುವ ಆಯೋಗಕ್ಕೆ ಸಮಾಜದ ಪರಿಸ್ಥಿತಿಯ ಸಂಶೋಧನೆ ಮಾಡಿ ಈ ರಾಷ್ಟ್ರದಲ್ಲಿ ಯಾರನ್ನು ಹಿಂದುಳಿದ ವರ್ಗಗಳೆಂದು ಪರಿಗಣಿಸಬೇಕು ಎನ್ನುವುದನ್ನು ಕಂಡುಕೊಳ್ಳುವ ವಿಷಯವನ್ನು ಬಿಟ್ಟುಕೊಡುವುದು ಸೂಕ್ತವೆಂಬುದು ನನ್ನ ವಿಚಾರವಾಗಿರುತ್ತದೆ.

**ಶ್ರೀ ಎ. ವಿ. ಠಕ್ಕರ್:** ಅದನ್ನು ಮಾಡುವುದಕ್ಕೆ ಮುಂಚೆ ಹಲವಾರು ವರ್ಷಗಳು ಆಗುವುದಿಲ್ಲವೇ ಎಂದು ನಾನು ಕೇಳಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ಆದರೆ ಸಮಯದಲ್ಲಿ, ಯಾವುದೋ ಪ್ರಾಂತೀಯ ಸರ್ಕಾರವು ಹಿಂದುಳಿದ ವರ್ಗಗಳು ಯಾವುವು ಎಂಬ ನಿಯಮಾಂಶಗಳನ್ನು ಮಾಡಲು ಪ್ರತಿಬಂಧ ಇರುವುದಿಲ್ಲ. ವಿಧಿ ೧೦ರಲ್ಲಿ ಅವರಿಗೆ ಪೂರ್ತಿ ಸ್ವಾತಂತ್ರ್ಯವನ್ನು ಕೊಡಲಾಗಿದೆ. ಆದ್ದರಿಂದ ಸೇವೆಗಳ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಹಿಂದುಗಳ ವರ್ಗಗಳ ಹಿತಾಸಕ್ತಿಗಳನ್ನು ಕಡೆಗಣಿಸಲಾಗುವುದೆಂಬ ಹೆದರಿಕೆ ಇಲ್ಲವೆಂದು ನಾನು ಹೇಳಬಯಸುತ್ತೇನೆ. ನನ್ನ ಮಿತ್ರ ಪಂಡಿತ್ ಕುಂಝ್ರು ಅವರು ಹೇಳಿದ ಹಾಗೆ ನಾನು ಸದನದ ಮುಂದೆ ಮಂಡಿಸಿದ ವಿಧಿಗಳ ಈ ಮೊದಲು ಕರಡು ಸಂವಿಧಾನದಲ್ಲಿದ್ದ ವಿಧಿಗಳಿಗಿಂತಲೂ ಖಂಡಿತವಾಗಿಯೂ ಬಹಳ ಹೆಚ್ಚಿನ ಮಟ್ಟದ ಸುಧಾರಣೆಯನ್ನು ಹೊಂದಿದವುಗಳಾಗಿರುತ್ತವೆ. ನಾವು, ನನ್ನ ಮಟ್ಟಿಗೆ ಹೇಳುವುದಾದರೆ, ಕೆನಡಾದ ಕಾನೂನಿನಲ್ಲಿಯ ನಿಯಮಾಂಶಗಳನ್ನು ಮತ್ತು ಆಸ್ಟ್ರೇಲಿಯಾದ ಕಾನೂನಿನಲ್ಲಿಯ ನಿಯಮಾಂಶಗಳನ್ನು ಸವಿಸ್ತಾರವಾಗಿ ಅಧ್ಯಯನ ನಡೆಸಿದ್ದೇನೆ, ಹಾಗೂ ಈ ಸದನವು ಒಪ್ಪಿಕೊಳ್ಳಲು ಯಾವುದೇ ತೊಂದರೆಯಿಲ್ಲದಂಥ ಮಧ್ಯ ಮಾರ್ಗವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ಹೇಳಬಯಸುತ್ತೇನೆ.

**[ವಿಧಿ ೨೮೬ ಅನ್ನು, ಡಾ. ಬಿ.ಆರ್. ಅಂಬೇಡ್ಕರ್ ಅವರು ಪ್ರತ್ಯಾಯೋಜಿಸಿದಂತೆ ಅಂಗೀಕರಿಸಲಾಯಿತು ಮತ್ತು ಸಂವಿಧಾನಕ್ಕೆ ಸೇರಿಸಲಾಯಿತು.]**

# ವಿಧಿ ೨೯೨

**ಲೋಕಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸ್ಥಳಗಳ ಮೀಸಲಾತಿ.**

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ವಿಧಿ ೨೯೨ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕೆಂದು ನಾನು ಮಂಡಿಸುತ್ತೇನೆ:

"೨೯೨. (೧) ಲೋಕಸಭೆಯಲ್ಲಿ ಈ ಕೆಳಗಿನವರಿಗೆ ಸ್ಥಾನಗಳನ್ನು ಮೀಸಲಿಡತಕ್ಕದ್ದು:–

(ಎ) ಪರಿಶಿಷ್ಟ ಜಾತಿಗಳು.

(ಬಿ) ಪರಿಶಿಷ್ಟ ಪಂಗಡಗಳು, ಅಸ್ಸಾಂನ ಪರಿಶಿಷ್ಟ ಕ್ಷೇತ್ರಗಳಲ್ಲಿಯ ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿ,

(ಸಿ) ಅಸ್ಸಾಂ ಸ್ವಯಮಾಧಿಕಾರ ಹೊಂದಿದ ಜಿಲ್ಲೆಗಳಲ್ಲಿಯ ಪರಿಶಿಷ್ಟ ಪಂಗಡಗಳು

(೨) ಈ ವಿಧಿಯನ್ವಯ ಕಲಮು (೧)ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಯಾವುದೇ ರಾಜ್ಯದಲ್ಲಿ ಮೀಸಲಿಡಲಾದ ಸ್ಥಾನಗಳು, ಸಾಧ್ಯವಾದಷ್ಟು ಮಟ್ಟಿಗೆ, ಆ ರಾಜ್ಯಕ್ಕೆ ಲೋಕಸಭೆಯಲ್ಲಿ ನಿಗದೀಕರಿಸಲಾದ ಸ್ಥಾನಗಳ ಒಟ್ಟು ಸಂಖ್ಯೆಯ ಪ್ರಮಾಣವು ಆ ರಾಜ್ಯದ ಪರಿಶಿಷ್ಟ ಜಾತಿಯ ಜನಸಂಖ್ಯೆ ಅಥವಾ ಆ ರಾಜ್ಯದ ಅಥವಾ ಅದರ ಒಂದು ಭಾಗದ ಪರಿಶಿಷ್ಟ ಪಂಗಡದ ಜನಸಂಖ್ಯೆಯನ್ನು ಆಧರಿಸಿ, ಯಾವ ಸ್ಥಾನಗಳನ್ನು ಆ ರಾಜ್ಯದ ಒಟ್ಟು ಜನಸಂಖ್ಯೆಗೆ ಸಂಬಂಧಿಸಿದ ಹಾಗೆ ಮೀಸಲಿಡಲಾಗಿರುತ್ತದೆಯೋ, ಅದಕ್ಕೇ ಅನುಗುಣವಾಗಿರತಕ್ಕದ್ದು."

ಈ ವಿಧಿ ೨೯೨ ಈ ವಿಷಯಕ್ಕೆ ಸಂಬಂಧಿಸಿದಂತೆ ಸಲಹಾ ಸಮಿತಿಯ ನಿರ್ಣಯದ ನಿಖರವಾದ ಪ್ರತಿರೂಪವಾಗಿರುತ್ತದೆ ಹಾಗೂ ಇದರ ಬಗ್ಗೆ ಯಾವುದೇ ವಿಮರ್ಶೆಯು ಆವಶ್ಯಕವೆಂದು ನನಗೆ ಅನ್ನಿಸುವುದಿಲ್ಲ.

**ಮಾನ್ಯ ಅಧ್ಯಕ್ಷರು:** ಇದು ನಾವು ಸಲಹಾ ಸಮಿತಿಯ ವರದಿಯನ್ನು ಪರಿಗಣಿಸಿದ ಸದನದ ಇನ್ನೊಂದು ಸಭೆಯಲ್ಲಿ ತೆಗೆದುಕೊಂಡ ನಿರ್ಣಯ ಪ್ರತಿನಿಧಿಸುತ್ತದೆ. ಇದು ಆಗ ತೆಗೆದುಕೊಂಡ ನಿರ್ಣಯವನ್ನು ಸರಿಯಾದ ರೂಪದಲ್ಲಿರಿಸುತ್ತದೆ.

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ರೆ॥ ನಿಕೋಲ್ಸ್ ರಾಯ್ ಅವರ ಹೆಸರಿನಲ್ಲಿರುವ ತಿದ್ದುಪಡಿಗೆ ಸಂಬಂಧಿಸಿದಂತೆ ನಾನು ಸಲಹೆ ಮಾಡುವುದೆಂದರೆ ಇದು ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಾಂಗವನ್ನು ವ್ಯಾಖ್ಯಾನಿಸುವ ಅರ್ಥ ವಿವರಣೆಯ ಕಲಮಿಗೆ ಹೆಚ್ಚು ಸಂಬಂಧಿಸಿದ್ದಾಗಿರುತ್ತದೆ. ನನ್ನ ಮಿತ್ರರು ಈ ತಿದ್ದುಪಡಿಯನ್ನು ಮಂಡಿಸಲು ಉತ್ಸುಕರಾಗಿದ್ದರೆ, ನಾವು ಸಂವಿಧಾನದ ಆ ಭಾಗಕ್ಕೆ ಬರುವ ತನಕ ವಿಧಿ ೩೦೩ರವರೆಗೆ ತಡೆಯಬೇಕೆಂದು ನನಗೆ ಅನ್ನಿಸುತ್ತದೆ.

**ಮಾನ್ಯ ಅಧ್ಯಕ್ಷರು:** ನೀವು ಡಾ. ಅಂಬೇಡ್ಕರ್ ಅವರ ವಿಚಾರವನ್ನು ತಿಳಿದುಕೊಂಡಿರುವಿರೋ?

**ಗೌರವಾನ್ವಿತ ರೆ॥ ಜೆ. ಜೆ. ಎಂ. ನಿಕೋಲ್ಸ್–ರಾಯ್** (ಅಸ್ಸಾಂ: ಸಾಮಾನ್ಯ): ಹೌದು, ತಿಳಿದುಕೊಂಡಿದ್ದೇನೆ. ನನ್ನ ತಿದ್ದುಪಡಿಯು ಶ್ರೀ ಠಕ್ಕರ್ ಅವರು ಮುಂದೆ ಮಂಡಿಸಲಾಗುವ ತಿದ್ದುಪಡಿ ಸಂ. ೩೧೦೮ ಮೇಲೆ ಆಧರಿಸಲಾಗಿದೆ, ಮತ್ತು ಅವರು ಈಗ ಮಂಡಿಸುತ್ತಿರುವ ತಿದ್ದುಪಡಿ (ಸಂ. ೨೮) ಬೇರೆ ರೀತಿಯಲ್ಲಿದೆ ಎಂದು ನಾನು ಕಂಡುಕೊಂಡಿದ್ದೇನೆ. ಏನಿದ್ದರೂ, ಠಕ್ಕರ್ ಅವರು ಒಂದು ವೇಳೆ ತಮ್ಮ ಈ ತಿದ್ದುಪಡಿಯನ್ನು ಮಂಡಿಸದಿದ್ದರೆ, ನಾನು ಸಹ ನನ್ನ ತಿದ್ದುಪಡಿಯನ್ನು ಈಗ ಮಂಡಿಸುವುದಿಲ್ಲ. ಆದರೆ ವಿಧಿ ೩೦೩ರಡಿಯಲ್ಲಿ ಈ ವಿಷಯವನ್ನು ಚರ್ಚಿಸುವ ಸಮಯದಲ್ಲಿ ನನ್ನ ತಿದ್ದುಪಡಿಯನ್ನು ಮಂಡಿಸುವ ಹಕ್ಕನ್ನು ನಾನು ಕಾಯ್ದಿರಿಸಿಕೊಂಡಿರುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಸಹ ಶ್ರೀ ಠಕ್ಕರ್ ಅವರ ಹೆಸರಿನಲ್ಲಿರುವ ತಿದ್ದುಪಡಿಗಳನ್ನು ತಡೆಯಬೇಕು ಮತ್ತು ವಿಧಿ ೩೦೩ನ್ನು ಚರ್ಚಿಸುವ ಸಮಯದಲ್ಲಿಯೇ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

**ಗೌರವಾನ್ವಿತ ರೆ॥ ಜೆ.ಜೆ.ಎಂ. ನಿಕೋಲ್ಸ್–ರಾಯ್:** ಒಂದು ವೇಳೆ ಶ್ರೀ ಠಕ್ಕರ್ ಅವರು ಒಪ್ಪಿಕೊಂಡರೆ, ನಾನು ಸಹ ಒಪ್ಪುತ್ತೇನೆ.

* ಸಿ.ಎ.ಡಿ. ಸಂ. IX, ೨೩ನೇ ಆಗಸ್ಟ್ ೧೯೪೯, ಪುಟ ೬೪೩.

** ಸಿ.ಎ.ಡಿ. ಸಂ. IX, ೨೪ನೇ ಆಗಸ್ಟ್ ೧೯೪೯, ಪುಟ ೬೪೩–೬೪೪.

**ಶ್ರೀ ಎ.ವಿ. ಠಕ್ಕರ್** (ಸೌರಾಷ್ಟ್ರ): ನಾನು ಸಂಪೂರ್ಣವಾಗಿ ಒಪ್ಪುತ್ತೇನೆ.

* * *

***ಸರ್ದಾರ್ ಭೂಪಿಂದರ್ ಸಿಂಗ್ ಮಾನ್** (ಪೂರ್ವ ಪಂಜಾಬ: ಸಿಕ್ಕಿಂ): ಅನೇಕ ತಿದ್ದುಪಡಿಗಳನ್ನು ಮಂಡಿಸಿರುವುದರಿಂದ ಅವುಗಳನ್ನು ವಿರೋಧಿಸಲು ಕೆಲ ಸಮಯವನ್ನು ಕೊಡಬೇಕೆಂದು ನನಗೆ ತೋರುತ್ತದೆ.

**ಮಾನ್ಯ ಅಧ್ಯಕ್ಷರು:** ನಾನು ಹೇಳಿದ ಹಾಗೆ ಈ ಒಂದು ಪ್ರಮೇಯವನ್ನು ಪೂರ್ತಿ ಎರಡು ದಿನಗಳವರೆಗೆ ಈ ಸದನದಲ್ಲಿ ನಾವು ಚರ್ಚಿಸಿದ್ದೇವೆ ಮತ್ತು ಸಾಮಾನ್ಯ ತತ್ವಗಳ ಮೇಲೆ ಅಭಿವ್ಯಕ್ತಪಡಿಸಲು ಸದನದ ಪ್ರತಿಯೊಂದು ಭಾಗದವರಿಗೂ ಪೂರ್ತಿ ಅವಕಾಶವಿತ್ತು. ಈಗ ಅದೇ ತತ್ವಗಳನ್ನೇ ಡಾ. ಅಂಬೇಡ್ಕರ್ ಅವರು ಸದನದ ಮುಂದೆ ಇಡಲಾದ ಗೊತ್ತುವಳಿಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಯಾವುದೇ ಮುಂದಿನ ಚರ್ಚೆಯು ಸದಸ್ಯರಿಗೆ ಸಹಾಯಕವಾಗುವುದೆಂದು ನನಗೆ ಅನ್ನಿಸುವುದಿಲ್ಲ. ಆದ್ದರಿಂದ ನಾನು ಡಾ. ಅಂಬೇಡ್ಕರ್ ಅವರನ್ನು ಮಾತನಾಡಲು ಆಹ್ವಾನಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೇ, ಈ ಪ್ರಕರಣದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಎತ್ತಲಾದ ಅನೇಕ ಅಂಶಗಳು ಮತ್ತು ವಿವಿಧ ತಿದ್ದುಪಡಿಗಳು, ನನ್ನ ಅಭಿಪ್ರಾಯದಲ್ಲಿ ಈ ವಿಧಿಯ ವಿಷಯಕ್ಕೆ ಅಸಂಬದ್ಧವಾಗಿರುತ್ತವೆ. ಅವುಗಳನ್ನು ನಾವು ಚುನಾವಣೆಯ ಕಾನೂನುಗಳು ಹಾಗೂ ಮತಕ್ಷೇತ್ರಗಳ ರಚನೆಯನ್ನು ಚರ್ಚಿಸುವಾಗ ಎತ್ತಬಹುದು. ಆದ್ದರಿಂದ, ಅವುಗಳನ್ನು ಈ ಹಂತದಲ್ಲಿ ನಾನು ತೆಗೆದುಕೊಳ್ಳಲು ಬಯಸುವುದಿಲ್ಲ.

ನನಗೆ ಅನ್ನಿಸಿದ ಹಾಗೆ ಕೇವಲ ಮೂರು ಅಂಶಗಳು ಮಾತ್ರ ಉತ್ತರಿಸಲು ಯೋಗ್ಯವಾಗಿವೆ. ಒಂದನೆಯ ಅಂಶವು, ಶ್ರೀ ಲಸ್ಕರ್ ಅವರು ತಮ್ಮ ತಿದ್ದುಪಡಿಯ ಮೂಲಕ ಎತ್ತಿರುವುದಾಗಿರುತ್ತದೆ. ಅವರ ತಿದ್ದುಪಡಿಯು "ಅಸ್ಸಾಂನಲ್ಲಿರುವ ಪರಿಶಿಷ್ಟ ಜಾತಿಗಳ ಪ್ರಕರಣವನ್ನುಳಿದು" ಎಂಬ ಪದಗಳನ್ನು ಅಳವಡಿಸುವುದಾಗಿರುತ್ತದೆ. ಈ ಪದಗಳನ್ನು ಅಳವಡಿಸುವುದರ ಮೂಲಕ ಅವರು ಏನು ಮಾಡಲು ಉದ್ದೇಶಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ನಾನು ಪೂರ್ತಿಯಾಗಿ ವಿಫಲನಾಗಿದ್ದೇನೆ. ಒಂದು ವೇಳೆ ಈ ಪದಗಳನ್ನು ಅಳವಡಿಸಿಕೊಂಡದ್ದೇ ಆದರೆ ಅಸ್ಸಾಂನಲ್ಲಿಯ ಪರಿಶಿಷ್ಟ ಜಾತಿಗಳು ಈ ವಿಧಿಯು ಅವರಿಗೆ ಕೇಂದ್ರ ಸಂಸತ್ತಿನ ಲೋಕಸಭೆಯಲ್ಲಿ ಕೊಡುವ ಪ್ರಾತಿನಿಧಿತ್ವಕ್ಕೆ ಅವರು ಬಾಧ್ಯರಲ್ಲ ಎಂದು ಅರ್ಥವಾಗುತ್ತದೆ. ಏಕೆಂದರೆ, "ಅಸ್ಸಾಂನಲ್ಲಿಯ ಪರಿಶಿಷ್ಟ ಜಾತಿಗಳು ಪ್ರಕರಣಗಳನ್ನುಳಿದು" ಎಂಬ ಪದಗಳು ಇದ್ದಂತೆಯೇ, ಇತರ ಯಾವುದೇ ನಿಯಮಾಂಶವು ಅದರ ಜೊತೆಗಿರದಿದ್ದಾಗ, ಅಸ್ಸಾಂನಲ್ಲಿಯ ಪರಿಶಿಷ್ಟ ಜಾತಿಯವರಿಗೆ ಅವರಿಗೆ ನೀಡಲಾದ ಪ್ರಾತಿನಿಧಿತ್ವದ ಹಕ್ಕನ್ನು ಇಲ್ಲವಾಗಿಸುವುದನ್ನುಳಿದು ಬೇರೆ ಯಾವ ಪರಿಣಾಮವನ್ನು ಬೀರುತ್ತದೆಂಬುದು ನನಗೆ ಕಾಣಿಸುವುದಿಲ್ಲ. ಅವರನ್ನು ನಾನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ, ಅವರು ಎತ್ತಲಾದ ವಿಷಯವು ಈಗಾಗಲೇ ಅನುಮೋದಿಸಲಾದ ಸಂವಿಧಾನದ ವಿಧಿ ೨೭ಬಿ ಗೆ ಸಂಜಾತವಾಗಿ ಉಲ್ಲೇಖಿಸುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆ ಪ್ರಕರಣದಲ್ಲಿ ಶಾಸಕಾಂಗದಲ್ಲಿಯ ಪ್ರತಿನಿಧಿತ್ವದ ಪ್ರಮಾಣವು ಜನಸಂಖ್ಯೆಗೆ ನಿರ್ದಿಷ್ಟವಾದ ಸಂಬಂಧವನ್ನು ಹೊಂದಿರಬೇಕೆಂದು ನಿರೂಪಿಸಲಾಗಿದೆ. ಕೇಂದ್ರದ ಕೆಳಮನೆಯಲ್ಲಿನ ಪ್ರತಿನಿಧಿತ್ವವು ಪ್ರತಿ ೭,೫೦,೦೦೦ ಜನಸಂಖ್ಯೆಗೆ ಒಬ್ಬ ಪ್ರತಿನಿಧಿಗಿಂತ ಕಡಿಮೆಯಲ್ಲದಷ್ಟು,

---

* ಸಿ.ಎ.ಡಿ. ಸಂ. IX, ೨೪ನೇ ಆಗಸ್ಟ್ ೧೯೪೯, ಪು. ೬೫೮–೬೫೯.

ಅಥವಾ ೫,೦೦,೦೦೦ ಜನಸಂಖ್ಯೆಗೆ ಒಬ್ಬ ಪ್ರತಿನಿಧಿಗಿಂತ ಹೆಚ್ಚಿಲ್ಲದಷ್ಟು ಇರತಕ್ಕದ್ದೆಂದು ನಿರೂಪಿಸಲಾಗಿದೆ. ಅವರು ಹೇಳುತ್ತಿರುವ ಪ್ರಕಾರ ಮತ್ತು ಅವರು ಹೇಳುವುದರಲ್ಲಿ ಏನನ್ನು ಕೇಳಿಸಿಕೊಳ್ಳಲು ನನಗೆ ಪೂರ್ತಿ ಅಸಾಧ್ಯವಾಗಿದೆಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು. ಆದರೆ, ಅದರ ಉದ್ದೇಶವನ್ನು ನಾನು ಕ್ರೋಡೀಕರಿಸಿಕೊಂಡಂತೆ, ಸಿಲ್ಹೆಟ್ ಜಿಲ್ಲೆಯನ್ನು ವಿಭಜಿಸಿದ ಕಾರಣಕ್ಕಾಗಿ ಅಸ್ಸಾಂನಲ್ಲಿಯ ಪರಿಶಿಷ್ಟ ಜಾತಿಗಳ ಜನಸಂಖ್ಯೆಯು ಬಹಳಷ್ಟು ಕಡಿಮೆಯಾಗುತ್ತದೆ ಮತ್ತು ನಾವು ನಿರೂಪಿಸಲಾದ ಯಾವುದೇ ಜನಸಂಖ್ಯೆಯ ಮೊತ್ತ, ಅಂದರೆ ೭,೫೦,೦೦೦ ಅಥವಾ ೫,೦೦,೦೦೦ ಅಲ್ಲಿರಲಿಕ್ಕಿಲ್ಲ ಎಂಬ ಭಾವನೆಗೆ ಅವರು ಒಳಗಾಗಿರುವಂತೆ ತೋರುತ್ತದೆ. ಇದರ ಪರಿಣಾಮವಾಗಿ ಅಸ್ಸಾಂನಲ್ಲಿಯ ಪರಿಶಿಷ್ಟ ಜಾತಿಗಳು ಯಾವುದೇ ಪ್ರತಿನಿಧಿತ್ವವನ್ನು ಪಡೆಯುವುದಿಲ್ಲವೆಂದು ಅವರು ಭಾವಿಸಿದ್ದಾರೆ. ಆದರೆ ಅವರಿಗೆ ನಾನು ಹೇಳಬಯಸುವುದೇನೆಂದರೆ ವಿಧಿ ೬೭ (ಬಿ)ರಲ್ಲಿಯ ನಿಯಮಾಂಶವು ಪರಿಶಿಷ್ಟ ಜಾತಿಗಳವರಿಗೆ ಅನ್ವಯಿಸುವುದಿಲ್ಲ. ಅದು ಮತಕ್ಷೇತ್ರಕ್ಕೆ ಅನ್ವಯಿಸುತ್ತದೆ. ಅದರ ಅರ್ಥ ಏನೆಂದರೆ ಒಂದು ಮತಕ್ಷೇತ್ರವು ೭,೫೦,೦೦೦ ಜನಸಂಖ್ಯೆಯನ್ನು ಹೊಂದಿದ್ದರೆ, ಆ ಮತಕ್ಷೇತ್ರವು ಒಂದು ಸ್ಥಾನವನ್ನು ಹೊಂದಿರುತ್ತದೆ. ಆ ಮತಕ್ಷೇತ್ರದಲ್ಲಿಯ ಪರಿಶಿಷ್ಟ ಜಾತಿಗಳವರ ಜನಸಂಖ್ಯೆಯು ಬಹಳಷ್ಟು ಕಡಿಮೆ ಇರಬಹುದು, ಆದರೆ ಅದು ಕ್ಷೇತ್ರ ನಿರ್ಧಾರ ಸಮಿತಿ ಅಥವಾ ಸಂಸತ್ತು ಅಂಥ ಒಂದು ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಯವರಿಗೆ ಸ್ಥಾನ ನೀಡುವುದನ್ನು ತಡೆಯುವುದಿಲ್ಲ. ಆದ್ದರಿಂದ, ಅವರ ಹೆದರಿಕೆಯು ನನ್ನ ವಿಚಾರದಲ್ಲಿ ಆಧಾರ ರಹಿತವಾದದ್ದಾಗಿದೆ.

ನಂತರ ನಾನು ಸರ್ದಾರ್ ಹುಕುಂ ಸಿಂಗ್ ಅವರು ಮಂಡಿಸಿದ ತಿದ್ದುಪಡಿಗೆ ಬರುತ್ತೇನೆ, ಅದರಲ್ಲಿ ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಾಮಾನ್ಯವಾಗಿ ಮೀಸಲಿಡದೇ ಇರದ ಸ್ಥಾನಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಸ್ಪರ್ಧಿಸಲು ಬಾಧ್ಯಸ್ತರಾಗಿರುತ್ತಾರೆಂಬ ನಿಯಮಾಂಶವನ್ನು ಮಾಡಬೇಕೆಂದು ಸಲಹೆ ಮಾಡಿರುತ್ತಾರೆ. ಕರಡು ಸಮಿತಿಯು ಬೇಕೆಂತಲೇ ಈ ಲೋಪವನ್ನು ಎಸಗಿದ್ದಾರೆಂದು ಅವರು ಹೇಳಿದ್ದಾರೆ. ಅದು ಸರಿಯೆಂದು ನನಗೆ ಅನ್ನಿಸುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮೀಸಲಿಡಲಾರದ ಸ್ಥಾನಗಳಿಗೆ ಸ್ಪರ್ಧಿಸಲು ಬಾಧ್ಯಸ್ತರಾಗಿರುತ್ತಾರೆಂಬುದನ್ನು ಒಪ್ಪಿಕೊಳ್ಳಲಾಗಿದೆ. ಸದನವು ಈಗಾಗಲೇ ಒಪ್ಪಿದ ಸಲಹಾ ಸಮಿತಿಯ ವರದಿಯಲ್ಲಿ ಇದು ಇರುತ್ತದೆ. ಈ ಒಂದು ನಿಯಮಾಂಶವನ್ನು ವಿಧಿ ೨೯೨ರಲ್ಲಿ ಯಾಕೆ ಸೇರಿಸಲಾಗಿಲ್ಲವೆಂದರೆ ಅದು ಈ ಸ್ಥಳದಲ್ಲಿ ಸಂಗತವಾಗಿರುವುದಿಲ್ಲ. ಈ ವಿಷಯವು ಈ ಸದನ ಅಥವಾ ತನ್ನ ಅನುಶಾಸನದ ಸಾಮರ್ಥ್ಯದಲ್ಲಿ ಸದನವು ವಿಚಾರ ಮಾಡಬೇಕಾದ ಚುನಾವಣೆಗೆ ಸಂಬಂಧಿಸಿದ ಕಾನೂನಲ್ಲಿ ಸ್ಥಾನವನ್ನು ಪಡೆಯುತ್ತದೆ. ಆದ್ದರಿಂದ ಈ ಕಾರಣಕ್ಕಾಗಿ ಅವರು ಭಯ ಪಡಬೇಕಾಗಿಲ್ಲ.

ನನ್ನ ಮಿತ್ರ ಶ್ರೀ ಪಿಳ್ಳೆ ಅವರು ಎತ್ತಲಾದ ಯಾವ ಜನಸಂಖ್ಯೆಯನ್ನು ಆಧರಿಸಿ ಸ್ಥಾನಗಳನ್ನು ಮೀಸಲಿಡಬೇಕೆನ್ನುವುದನ್ನು ಹೊಸ ಜನಗಣತಿಯ ಮೂಲಕ ಅಂದಾಜು ಮಾಡಬೇಕು ಎಂಬ ವಿಷಯದ ಬಗ್ಗೆ ಸದನದಲ್ಲಿ ಬಹಳಷ್ಟು ಸಂದರ್ಭಗಳಲ್ಲಿ ಬಿಸಿ ಚರ್ಚೆ ಆಗಿರುತ್ತದೆ. ಆಗ ನಾನು ಸರ್ಕಾರವು ಹೊಸ ಜನಗಣತಿ ಮಾಡುತ್ತದೆ ಎಂಬ ಭರವಸೆ ನೀಡುವುದು ಸರ್ಕಾರಕ್ಕೆ ಅಸಾಧ್ಯ ಎಂದು ಹೇಳಿದ್ದೆ. ಆದರೆ ಸರ್ಕಾರವು ತೆರೆದ ಮನಸ್ಸನ್ನು ಹೊಂದಿರುತ್ತದೆ. ಸರ್ಕಾರಕ್ಕೆ ಅದು ಸಾಧ್ಯವಿದ್ದರೆ ವಿಧಿ ೨೯೨ರ ನಿಯಮಾಂಶಗಳ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಬಾಧ್ಯಸ್ತರಾಗಿರುವ ಒಟ್ಟು ಪ್ರತಿನಿಧಿತ್ವವನ್ನು ಲೆಕ್ಕ ಹಾಕಲು ಅವರ ಜನಸಂಖ್ಯೆಯನ್ನು ಅಂದಾಜು ಮಾಡಲು ಹೊಸ ಜನಗಣತಿಯನ್ನು ತೆಗೆದುಕೊಳ್ಳಬಹುದು.

ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಹೊಸ ಜನಗಣತಿ ಮಾಡಲು ಸಾಧ್ಯವಿಲ್ಲದಿದ್ದರೆ, ಸರ್ಕಾರ ಮಾಡಿದ ಸಲಹೆ ಏನೆಂದರೆ, ಅವರು ಈ ಸಮುದಾಯಗಳ ಜನಸಂಖ್ಯೆಯನ್ನು ಅವರು ಲೆಕ್ಕಹಾಕಬಹುದಾದ ಮತದಾರರ ಬಲದ ಆಧಾರದ ಮೇಲೆ ಅಂದಾಜು ಮಾಡಲಾಗುವುದು, ಆಗ ನಾವು ಜನಸಂಖ್ಯೆಯ ತೀಕ್ಷ್ಣ ಹಾಗೂ ಸಿದ್ಧವಾದದ್ದೆಂದು ಕರೆಯಬಹುದಾದ ಅಂದಾಜಿಗೆ ಬರಲು ಸಾಧ್ಯವಾಗಬಹುದು. ಅದಕ್ಕಿಂತಲೂ ಮುಂದಕ್ಕೆ ಹೋಗುವುದು ನನಗೆ ಸಾಧ್ಯವೆಂದು ಅನ್ನಿಸುವುದಿಲ್ಲ.

ಉಳಿದ ಎಲ್ಲಾ ತಿದ್ದುಪಡಿಗಳನ್ನು ನಾನು ವಿರೋಧಿಸುತ್ತೇನೆ.

**[ವಿಧಿ ೨೯೨ನ್ನು ಡಾ. ಅಂಬೇಡ್ಕರ್ ಅವರ ಗೊತ್ತುವಳಿಯ ತಿದ್ದುಪಡಿ ಮಾಡಿದಂತೆ ಸಂವಿಧಾನಕ್ಕೆ ಸೇರಿಸಲಾಯಿತು.]**

* * *

## ವಿಧಿ ೨೯೩

**ಮಾನ್ಯ ಅಧ್ಯಕ್ಷರು:** ಡಾ. ಅಂಬೇಡ್ಕರ್ ಅವರೇ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಏನನ್ನಾದರೂ ಹೇಳುವುದು ಆವಶ್ಯಕವೆಂದು ನನಗೆ ಅನ್ನಿಸುವುದಿಲ್ಲ.

**[ವಿಧಿ ೨೯೩ನ್ನು ಯಾವುದೇ ತಿದ್ದುಪಡಿ ಇಲ್ಲದೆ ಸಂವಿಧಾನಕ್ಕೆ ಸೇರಿಸಲಾಯಿತು.]**

## ವಿಧಿ ೨೯೪

**ರಾಜ್ಯ ವಿಧಾನಸಭೆಗಳಲ್ಲಿ ಅಲ್ಪಸಂಖ್ಯಾತರಿಗೆ ಸ್ಥಾನಗಳ ಮೀಸಲು.**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:–

"ವಿದಿ ೨೯೪ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

೨೯೩. (೧) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ, ಅಸ್ಸಾಂನಲ್ಲಿಯ ಗುಡ್ಡಗಾಡು ಕ್ಷೇತ್ರಗಳಲ್ಲಿಯ ಪರಿಶಿಷ್ಟ ಪಂಗಡಗಳನ್ನು ಬಿಟ್ಟು, ಸದ್ಯಕ್ಕೆ ಪರಿಶಿಷ್ಟ ಒಂದರ ಭಾಗ I ಅಥವಾ ಭಾಗ IIIರಲ್ಲಿ ನಮೂದಿಸಿದ ಹಾಗೆ ಪ್ರತಿಯೊಂದು ರಾಜ್ಯದ ಶಾಸನ ಸಭೆಗಳಲ್ಲಿ ಸ್ಥಾನಗಳನ್ನು ಮೀಸಲಿಡತಕ್ಕದ್ದು.

(೨) ಅಸ್ಸಾಂ ರಾಜ್ಯದ ಸ್ವಯಂ ಆಡಳಿತ ಜಿಲ್ಲೆಗಳಿಗೂ ಸಹ ಸ್ಥಾನಗಳನ್ನು ಮೀಸಲಿಡತಕ್ಕದ್ದು.

(೩) ಈ ವಿಧಿಯ ಕಲಮು (೧)ರಡಿಯಲ್ಲಿ ಯಾವುದೇ ರಾಜ್ಯದ ಶಾಸನಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ ಮೀಸಲಿಟ್ಟ ಸ್ಥಾನಗಳ ಸಂಖ್ಯೆಯು, ಸಾಧ್ಯವಾದಷ್ಟು ಮಟ್ಟಿಗೆ, ವಿಧಾನಸಭೆಯಲ್ಲಿ ನಿಗದೀಕರಿಸಲಾದ ಸ್ಥಾನಗಳ ಒಟ್ಟು ಸಂಖ್ಯೆಯ ಪ್ರಮಾಣವು ಆ ರಾಜ್ಯದ ಪರಿಶಿಷ್ಟ ಜಾತಿಯ ಜನಸಂಖ್ಯೆ ಅಥವಾ ಆ ರಾಜ್ಯದ ಅಥವಾ ಅದರ ಒಂದು ಭಾಗದ ಪರಿಶಿಷ್ಟ ಪಂಗಡದ ಜನಸಂಖ್ಯೆಯನ್ನು ಆಧರಿಸಿ, ಯಾವ ಸ್ಥಾನಗಳನ್ನು ಆ ರಾಜ್ಯದ ಒಟ್ಟು ಜನಸಂಖ್ಯೆಗೆ ಸಂಬಂಧಿಸಿದ ಹಾಗೆ ಮೀಸಲಿಡಲಾಗಿರುತ್ತದೆಯೋ, ಅದಕ್ಕೆ ಅನುಗುಣವಾಗಿರತಕ್ಕದ್ದು."

(೪) ಅಸ್ಸಾಂ ರಾಜ್ಯದ ವಿಧಾನಸಭೆಯಲ್ಲಿ ಸ್ವಯಂ ಆಡಳಿತ ಜಿಲ್ಲೆಗಳಿಗೆ ಮೀಸಲಿಡಲಾದ ಸ್ಥಾನಗಳು ಆ ವಿಧಾನಸಭೆಯಲ್ಲಿಯ ಒಟ್ಟು ಸ್ಥಾನಗಳ ಪ್ರಮಾಣದಲ್ಲಿ ಆ ಜಿಲ್ಲೆಯ ಜನಸಂಖ್ಯೆಯನ್ನಾಧರಿಸಿ ರಾಜ್ಯದ ಜನಸಂಖ್ಯೆಯದಕ್ಕಿಂತ ಕಡಿಮೆಯಿಲ್ಲದಷ್ಟು ಇರತಕ್ಕದ್ದು.

(೫) ಶಿಲ್ಲಾಂಗ್‌ನ ನಗರಪಾಲಿಕೆ ಮತ್ತು ದಂಡುಗಳನ್ನೊಳಗೊಂಡ ಮತಕ್ಷೇತ್ರವನ್ನು ಹೊರತುಪಡಿಸಿ ಅಸ್ಸಾಂ ರಾಜ್ಯದ ಯಾವುದೇ ಸ್ವಯಂ ಆಡಳಿತ ಜಿಲ್ಲೆಗಳಿಗೆ ಮೀಸಲಿಡಲಾದ ಸ್ಥಾನಗಳ ಮತಕ್ಷೇತ್ರಗಳು ಜಿಲ್ಲೆಯ ಹೊರಗಿನ ಯಾವುದೇ ಕ್ಷೇತ್ರವನ್ನು ಹೊಂದಿರತಕ್ಕದ್ದಲ್ಲ."

(೬) ಶಿಲ್ಲಾಂಗ್‌ನ ನಗರಪಾಲಿಕೆ ಮತ್ತು ದಂಡುಗಳನ್ನೊಳಗೊಂಡ ಮತಕ್ಷೇತ್ರವನ್ನು ಹೊರತುಪಡಿಸಿ ಅಸ್ಸಾಂ ರಾಜ್ಯದ ಯಾವುದೇ ಸ್ವಯಂ ಆಡಳಿತ ಜಿಲ್ಲೆಯ ಪರಿಶಿಷ್ಟ ಪಂಗಡದ ಸದಸ್ಯನಲ್ಲದ ಯಾವುದೇ ವ್ಯಕ್ತಿಯು ಆ ಜಿಲ್ಲೆಯ ಯಾವುದೇ ಮತಕ್ಷೇತ್ರದಿಂದ ರಾಜ್ಯದ ವಿಧಾನಸಭೆಗೆ ಅರ್ಹನಾಗಿರುವುದಿಲ್ಲ.

ಈ ವಿಧಿಯು ಕರಡು ಸಂವಿಧಾನದಲ್ಲಿ ಮೂಲ ವಿಧಿ ಇದ್ದಂಥ ರೀತಿಯಲ್ಲಿಯೇ ಇರುತ್ತದೆ. ಇದಕ್ಕೆ ಒಂದೇ ತಿದ್ದುಪಡಿ ಎಂದರೆ ವಿಧಿ ೨೯೪ರ ಕಲಮು (೧)ರಿಂದ ಮುಸಲ್ಮಾನರು ಮತ್ತು ಕ್ರಿಶ್ಚಿಯನ್‌ರಿಗೆ ಸ್ಥಾನಗಳನ್ನು ಮೀಸಲಿರಿಸುವ ನಿಯಮಾಂಶವನ್ನು ಕೈಬಿಟ್ಟಿರುವುದಾಗಿರುತ್ತದೆ. ಅದು ಈ ಪದವು ಆ ವಿಷಯದ ಬಗ್ಗೆ ತೆಗೆದುಕೊಂಡ ನಿರ್ಧಾರಕ್ಕೆ ಅನುಗುಣವಾಗಿರುತ್ತದೆ.

## ವಿಧಿ ೨೯೫–ಎ

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಸಂವಿಧಾನ ಪ್ರಾರಂಭವಾಗುವ ಹತ್ತು ವರ್ಷಗಳು ಮುಗಿದ ನಂತರ ರದ್ದು.**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ.

"ವಿಧಿ ೨೯೫ರ ನಂತರ, ಕೆಳಗಿನ ಹೊಸ ಪ್ರಕರಣವನ್ನು ಸೇರಿಸಬೇಕು:–

೨೯೫–ಎ. ಈ ಭಾಗದಲ್ಲಿಯ ಈ ಮೇಲಿನ ನಿಯಮಾಂಶಗಳಲ್ಲಿ ಯಾವುದೇ ವಿಷಯ ಒಳಗೊಂಡಿದ್ದರೂ ಸಹ, ಈ ಸಂವಿಧಾನದಲ್ಲಿಯ ಲೋಕಸಭೆಯಲ್ಲಿ ಅಥವಾ ರಾಜ್ಯದ ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳನ್ನು ಮೀಸಲಾತಿಗೆ ಸಂಬಂಧಿಸಿದ ನಿಯಮಾಂಶಗಳು ಈ ಸಂವಿಧಾನದ ಪ್ರಾರಂಭವಾದ ಮತ್ತು ವರ್ಷಗಳು ಮುಗಿದನಂತರ ಜಾರಿಯಿಂದ ರದ್ದಾಗುತ್ತವೆ."

ಇದು ಸಹ ಸದನದ ನಿರ್ಣಯಕ್ಕೆ ಅನುಗುಣವಾಗಿರುತ್ತದೆ. ಯಾವುದೇ ವಿವರಣೆಯು ಅವಶ್ಯವೆಂದು ನನಗೆ ಅನ್ನಿಸುವುದಿಲ್ಲ.

* * *

***ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಮಾನ್ಯ ಅಧ್ಯಕ್ಷರೆ, ನಾನು ನಾಲ್ಕು ತಿದ್ದುಪಡಿಗಳ ಬಗ್ಗೆ ಮಾತ್ರ ಕೆಲವು ಶಬ್ದಗಳನ್ನು ಹೇಳಲು ಬಯಸುತ್ತೇನೆ. ನಾನು ಮೊದಲು ನನ್ನ ಮಿತ್ರ ಶ್ರೀ ಭಾರ್ಗವರ ತಿದ್ದುಪಡಿಯನ್ನು ತೆಗೆದುಕೊಳ್ಳುತ್ತೇನೆ. ಏಕೆಂದರೆ, ಈ ಸದನಕ್ಕೆ ಮಾಡಲಾದ ವರದಿಯ ಸಾಮಾನ್ಯ ಭಾಗದಲ್ಲಿ ನಾಮಕರಣದ ಮೂಲಕ ಆಂಗ್ಲೋ–ಇಂಡಿಯನ್‌ರಿಗೆ ಪ್ರತಿನಿಧಿತ್ವವನ್ನು ಅನುಮತಿಸುವ ಪ್ರಸ್ತಾವನೆ ಸಮಯ–ಮಿತಿಯನ್ನು ಮಾಡಿದ ಬಗ್ಗೆ ನಮೂದಿಸದಿದ್ದರೂ ಸಹ, ಆ ವರದಿಯ ಮೇಲೆ ನಂತರ ನಡೆದ ಚರ್ಚೆಯಲ್ಲಿ, ನನ್ನ ಮಿತ್ರ ಪಂಡಿತ್ ಭಾರ್ಗವರು ತಿದ್ದುಪಡಿಯನ್ನು ಮಂಡಿಸಿದ್ದು,

ಅದು ಅವರು ಈಗ ಮಂಡಿಸಲಾದ ತಿದ್ದುಪಡಿಯನ್ನು ಬಹಳಷ್ಟು ಹೋಲುತ್ತದೆ ಎಂಬುದನ್ನು ನಾನು ಕಂಡಿದ್ದೇನೆ. ಮತ್ತು ಅವರ ಆ ತಿದ್ದುಪಡಿಯನ್ನು ಸದನವು ಒಪ್ಪಿಕೊಂಡಿರುವುದನ್ನು ನಾನು ಕಂಡಿದ್ದೇನೆ. ಆದ್ದರಿಂದ, ಅವರು ಈಗ ಮಂಡಿಸಿದ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ನಾನು ಬಾಧ್ಯಸ್ತನಾಗಿದ್ದೇನೆ.

ನಂತರ, ಶ್ರೀ ನಜೀರುದ್ದೀನ್ ಅಹ್ಮದ್ ಅವರು ಎತ್ತಲಾದ ಪ್ರಶ್ನೆಗೆ ಸಂಬಂಧಿಸಿದಂತೆ, ಅದರ ಒಂದು ಭಾಗವು, ನನಗೆ ತಿಳಿದಂತೆ, ನನ್ನ ಮಿತ್ರ ಶ್ರೀ ಕೃಷ್ಣಮಾಚಾರಿಯವರು ಮಂಡಿಸಿದ ತಿದ್ದುಪಡಿಯು ಪೂರೈಸುತ್ತದೆ, ಅದನ್ನು ನಾನು ಸಹ ಒಪ್ಪುತ್ತೇನೆ. ಈ ಹಂತದಲ್ಲಿ ಈ ಪ್ರಕರಣದ ಕಲಮಿನಲ್ಲಿಯ ಪದಗಳು ಸಮಯದ ಗಣನೆಯು ಸಂವಿಧಾನ ಪ್ರಾರಂಭವಾದಾಗಿನಿಂದ ಅಥವಾ ಹೊಸ ಸಂಸತ್ತಿಗೆ ಮೊದಲನೇ ಚುನಾವಣೆಯಾದ ದಿನಾಂಕದಿಂದ ಪ್ರಾರಂಭವಾಗುತ್ತದೆಯೋ ಎಂಬುದು ನನ್ನ ಮನಸ್ಸಿನಲ್ಲಿ ನನಗೇ ಸ್ಪಷ್ಟವಾಗಿಲ್ಲ. ಆದರೆ ಈ ಹಂತದಲ್ಲಿ ನಾನು ಏನು ಹೇಳಬಹುದೆಂದರೆ, ಆ ವಿಷಯವನ್ನು ಕರಡು ಸಮಿತಿಯು ಪರಿಗಣಿಸುತ್ತದೆ, ಮತ್ತು ಆವಶ್ಯಕವಿದ್ದರೆ, ಅವಧಿಯು ಮೊದಲ ಸಂಸತ್ತಿನ ಮೊದಲ ಸಭೆಯಿಂದ ಪ್ರಾರಂಭವಾಗುತ್ತದೆಂಬ ಉದ್ದೇಶವನ್ನು ಕಾರ್ಯರೂಪಗೊಳಿಸಲು ಅವರು ತಿದ್ದುಪಡಿಯನ್ನು ತರುತ್ತಾರೆ.

ನನ್ನ ಮಿತ್ರರಾದ ಶ್ರೀ ಮುನಿಸ್ವಾಮಿ ಪಿಳ್ಳೈ ಮತ್ತು ಮನಮೋಹನ ದಾಸ್ ಅವರು ಮಾಡಿದ ಇತರ ವಾದಗಳಿಗೆ ಸಂಬಂಧಿಸಿದಂತೆ, ಆ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ಕ್ಷಮಾಪೂರ್ವಕವಾಗಿ ಹೇಳುತ್ತೇನೆ. ಅವರ ಪ್ರಸ್ತಾಪವೇನೆಂದರೆ ಅವರು ಈ ಕಲಮನ್ನು ಅದೇ ರೀತಿ ಬಿಡಲು ತಯಾರಾಗಿದ್ದರೂ, ಹತ್ತು ವರ್ಷದ ಅವಧಿಯನ್ನು ಮುಂದಕ್ಕೆ ವಿಸ್ತರಿಸುವ ತಿದ್ದುಪಡಿಯನ್ನು ಕಲಮಿಗೆ ಮಾಡುವ ಅಧಿಕಾರವನ್ನು ಸಂಸತ್ತಿನಲ್ಲಿ ನಿಹಿತಗೊಳಿಸಲು ಪ್ರಸ್ತಾಪಿಸಿದ್ದಾರೆ. ಈಗ ಮೊಟ್ಟಮೊದಲಿಗೆ ನಾನು ಹೇಳಿದ ಹಾಗೆ, ನಾವು ಈ ವಿಷಯವನ್ನು ಸಂವಿಧಾನದಲ್ಲಿಯೇ ಸೇರಿಸುತ್ತಿದ್ದೇವೆ, ಮತ್ತು ಸಂವಿಧಾನದ ತಿದ್ದುಪಡಿಯನ್ನು ಹೊರತುಪಡಿಸಿ, ಇದರಲ್ಲಿ ಯಾವುದೇ ಬದಲಾವಣೆಯನ್ನು ಮಾಡುವುದಕ್ಕೆ ಅನುಮತಿ ಬೇಕೆಂದು ಅನ್ನಿಸುವುದಿಲ್ಲ.

ಈ ವಿಧಿಯು ಹೇರಿದ ಮಿತಿಗಳ ಬಗ್ಗೆ ಪರಿಶಿಷ್ಟ ಜಾತಿಯ ಸದಸ್ಯರು ಭಾವನಾತ್ಮಕವಾಗಿ ಮತ್ತು ತೀಕ್ಷ್ಣವಾಗಿ ಮಾತನಾಡಿದ ಬಗ್ಗೆ ಒಂದು ಅಥವಾ ಎರಡು ಶಬ್ದಗಳನ್ನು ಹೇಳಬಯಸುತ್ತೇನೆ. ಅವರು ಫಿರ್ಯಾದಿ ಮಾಡಲು ಯಾವುದೇ ನಿಜವಾದ ಕಾರಣಗಳಿಲ್ಲ ಎಂದು ನಾನು ಹೇಳಬೇಕು. ಏಕೆಂದರೆ ವಿಷಯವನ್ನು ಹತ್ತು ವರ್ಷಕ್ಕೆ ಮಿತಿಗೊಳಿಸುವ ನಿರ್ಣಯವನ್ನು ಅವರ ಸಮ್ಮತಿಯನ್ನು ತೆಗೆದುಕೊಂಡೇ ಮಾಡಲಾಗಿದೆ. ನಾನು ವೈಯಕ್ತಿಕವಾಗಿ ಹೆಚ್ಚಿನ ಸಮಯಕ್ಕಾಗಿ ಒತ್ತಾಯಿಸಲು ತಯಾರಾಗಿದ್ದೇನೆ, ಏಕೆಂದರೆ, ಪರಿಶಿಷ್ಟ ಜಾತಿಯವರಿಗೆ ಸಂಬಂಧಿಸಿದಂತೆ ಅವರನ್ನು ಇತರ ಅಲ್ಪಸಂಖ್ಯಾತರಿಗೆ ಸಮನಾಗಿ ಪರಿಗಣಿಸಲಾಗಿಲ್ಲ ಎಂದು ನನಗೆ ಅನ್ನಿಸುತ್ತದೆ. ಉದಾಹರಣೆಗೆ, ನನಗೆ ಗೊತ್ತಿರುವ ಹಾಗೆ ಮುಸಲ್ಮಾನರಿಗೆ ವಿಶೇಷ ಮೀಸಲಾತಿಯು ೧೮೯೨ನೇ ವರ್ಷದಲ್ಲಿ ಪ್ರಾರಂಭವಾಯಿತು. ಅಂದರೆ ಆಗ ಪ್ರಾರಂಭವನ್ನು ಮಾಡಲಾಯಿತು. ಆದ್ದರಿಂದ ಮುಸಲ್ಮಾನರು ಈ ವಿಶೇಷಾಧಿಕಾರವನ್ನು ಹೆಚ್ಚು ಕಡಿಮೆ ಅರವತ್ತು ವರ್ಷಗಳವರೆಗೆ ವ್ಯಾವಹಾರಿಕವಾಗಿ ಅನುಭವಿಸಿದ್ದಾರೆ. ಕ್ರಿಶ್ಚಿಯನ್ನರು ಈ ವಿಶೇಷಾಧಿಕಾರವನ್ನು ೧೯೨೦ನೆಯ ಸಂವಿಧಾನದಡಿಯಲ್ಲಿ ಪಡೆದರು ಹಾಗೂ ಅವರು ಇದನ್ನು ೨೮ ವರ್ಷಗಳವರೆಗೆ ಅನುಭವಿಸಿದ್ದಾರೆ. ಪರಿಶಿಷ್ಟ ಜಾತಿಗಳವರು ಇದನ್ನು ೧೯೩೫ರ ಸಂವಿಧಾನದಿಂದ ಮಾತ್ರ ಪಡೆದಿದ್ದಾರೆ. ವಿಶೇಷ ಮೀಸಲಾತಿಯ ಈ ಲಾಭದ ಪ್ರಾರಂಭವು ವ್ಯಾವಹಾರಿಕವಾಗಿ ಈ ಅಧಿನಿಯಮವು ೧೯೩೭ರಲ್ಲಿ ಕಾರ್ಯಾಚರಣೆಯಲ್ಲಿ ಬಂದನಂತರ ಪ್ರಾರಂಭವಾಯಿತು.

---

* ಸಿ.ಎ.ಡಿ. ಸಂ. IX, ೨೫ನೇ ಆಗಸ್ಟ್ ೧೯೪೯, ಪುಟ ೬೯೬–೬೯೭.

ಅವರ ದುರಾದೃಷ್ಟಕ್ಕೆ, ಅವರು ಇದರ ಲಾಭವನ್ನು ಕೇವಲ ಎರಡು ವರ್ಷಗಳವರೆಗೆ ಮಾತ್ರ ಪಡೆದಿದ್ದಾರೆ. ಏಕೆಂದರೆ ೧೯೩೫ರಿಂದ ವ್ಯಾವಹಾರಿಕವಾಗಿ ಸದ್ಯದ ಸಮಯದವರೆಗೆ, ಅಥವಾ ೧೯೪೬ರವರೆಗೆ ಸಂವಿಧಾನವನ್ನು ಅಮಾನತ್ತಿನಲ್ಲಿಡಲಾಯಿತು ಮತ್ತು ಪರಿಶಿಷ್ಟ ಜಾತಿಗಳವರು ೧೯೩೫ರ ಅಧಿನಿಯಮದಲ್ಲಿ ನೀಡಲಾದ ವಿಶೇಷಾಧಿಕಾರದ ಲಾಭವನ್ನು ಅನುಭವಿಸುವ ಪರಿಸ್ಥಿತಿಯಲ್ಲಿರಲಿಲ್ಲ, ಮತ್ತು ಪರಿಶಿಷ್ಟ ಜಾತಿಗಳವರಿಗೆ ಈ ಮೀಸಲಾತಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಅವಧಿಯನ್ನು ನೀಡುವ ಉದಾರತನವನ್ನು ಈ ಸದನವು ಮಾಡುವುದು ಅತಿ ಸೂಕ್ತವಾಗಿತ್ತೆಂದು ನನಗೆ ಅನ್ನಿಸುತ್ತದೆ. ಆದರೆ ನಾನು ಹೇಳಿದ ಹಾಗೆ, ಎಲ್ಲವನ್ನೂ ಸದನದಲ್ಲಿ ಈಗಾಗಲೇ ಒಪ್ಪಿಕೊಳ್ಳಲಾಗಿದೆ. ಅದನ್ನು ಶ್ರೀ ನಾಗಪ್ಪ ಮತ್ತು ಶ್ರೀ ಮುನಿಸ್ವಾಮಿ ಪಿಳ್ಳೈ ಒಪ್ಪಿಕೊಂಡಿದ್ದಾರೆ, ಮತ್ತು ಒಂದು ವೇಳೆ ನಾನು ಹಾಗೆ ಹೇಳುವುದಾದರೆ– ನಾನು ಯಾವುದೇ ಫಿರ್ಯಾದಿ ಮಾಡುತ್ತಿಲ್ಲ– ಈ ಎಲ್ಲ ಸದಸ್ಯರು ಇನ್ನೊಂದು ಕಡೆಗೆ ಕ್ರಿಯಾಶೀಲರಾಗಿದ್ದರು, ಮತ್ತು ಈಗ ಈ ನಿಯಮಾಂಶಗಳಿಂದ ಹಿಂದಕ್ಕೆ ಹೋಗುವುದು ಸರಿ ಎಂದು ನನಗೆ ಅನ್ನಿಸುವುದಿಲ್ಲ. ಒಂದು ವೇಳೆ ಹತ್ತು ವರ್ಷಗಳ ಕೊನೆಯಲ್ಲಿ, ಪರಿಶಿಷ್ಟ ಜಾತಿಯವರಿಗೆ ತಮ್ಮ ಸ್ಥಿತಿಯು ಸುಧಾರಿಸಿಲ್ಲವೆಂದು ಕಂಡುಬಂದರೆ ಅಥವಾ ಅವರು ಈ ಅವಧಿಯನ್ನು ಮುಂದೆ ವಿಸ್ತರಿಸುವುದನ್ನು ಬಯಸಿದರೆ, ಈಗ ಪ್ರಸ್ತಾಪಿಸಲಾದಂಥದ್ದೇ ಸಂರಕ್ಷಣೆಯನ್ನು ಪಡೆಯುವ ಹೊಸ ದಾರಿಗಳನ್ನು ಕಂಡುಹಿಡಿಯುವ ಅವರ ಸಾಮರ್ಥ್ಯ ಅಥವಾ ಅವರ ಬುದ್ಧಿಮತ್ತೆಗೆ ಅದು ಮೀರಿದ್ದಾಗಿರುವುದಿಲ್ಲ.

**ಶ್ರೀ ಎ.ವಿ. ಠಕ್ಕರ್** (ಸೌರಾಷ್ಟ್ರ): ತುಲನೆಯಲ್ಲಿ ಇನ್ನೂ ಕೆಳಗಡೆ ಇರುವ ಪರಿಶಿಷ್ಟ ಪಂಗಡದವರ ಬಗ್ಗೆ ಏನು?

ಪರಿಶಿಷ್ಟ ಪಂಗಡದವರಿಗೆ ಇನ್ನೂ ಹೆಚ್ಚಿನ ಸಮಯದವರೆಗೆ ಕೊಡಲು ನಾನು ತಯಾರಾಗಿದ್ದೇನೆ. ಆದರೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳವರಿಗೆ ಮೀಸಲಾತಿಯ ಬಗ್ಗೆ ಮಾತನಾಡಿದ ಎಲ್ಲರೂ ಅದು ಹತ್ತು ವರ್ಷಗಳಲ್ಲಿ ಮುಗಿಯಬೇಕೆನ್ನುವುದರ ಬಗ್ಗೆ ಬಹಳ ತೀಕ್ಷ್ಣತೆಯನ್ನು ವಹಿಸಿದ್ದಾರೆ. ಅವರಿಗೆ ನಾನು ಹೇಳಬಯಸುವುದಿಷ್ಟೇ, ಎಡ್ಮಂಡ್ ಬರ್ಕ್ ಅವರ ಪದಗಳಲ್ಲಿ ,"ದೊಡ್ಡ ಸಾಮ್ರಾಜ್ಯಗಳು ಹಾಗೂ ಸಣ್ಣ ಮನಸ್ಸುಗಳು ಒಟ್ಟಿಗೆ ಹೋಗಲಾರವು."

**ಮಾನ್ಯ ಅಧ್ಯಕ್ಷರು:** ನಾನು ಈಗ ತಿದ್ದುಪಡಿಗಳನ್ನು ಒಂದೊಂದಾಗಿ ತೆಗೆದುಕೊಳ್ಳುತ್ತೇನೆ...

**ಶ್ರೀ ಯುಧಿಷ್ಠಿರ ಮಿಶ್ರ** (ಒರಿಸ್ಸಾ ರಾಜ್ಯಗಳು): ಮಾನ್ಯರೆ, ನನ್ನ ತಿದ್ದುಪಡಿಗಳನ್ನು ನಾನು ಹಿಂದಕ್ಕೆ ಪಡೆಯಬಯಸುತ್ತೇನೆ.

(ಸದನದ ಅನುಮತಿಯ ಮೇರೆಗೆ, ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲಾಯಿತು.)

**ಮಾನ್ಯ ಅಧ್ಯಕ್ಷರು:** ತಿದ್ದುಪಡಿ ಸಂ. ೪೦ (ಯಾದಿ I – ಐದನೇ ವಾರ.)–

**ಶ್ರೀ ಎಸ್. ನಾಗಪ್ಪ:** ಡಾ. ಅಂಬೇಡ್ಕರ್ ಅವರು ನೀಡಲಾದ ವಿವರಣೆಯ ಹಿನ್ನೆಲೆಯಲ್ಲಿ ನಾನು ನನ್ನ ತಿದ್ದುಪಡಿಗೆ ಒತ್ತಾಯಪಡಿಸಬಯಸುವುದಿಲ್ಲ.

(ಸದನದ ಅನುಮತಿಯ ಮೇರೆಗೆ, ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲಾಯಿತು.)

**ಮಾನ್ಯ ಅಧ್ಯಕ್ಷರು:** ತಿದ್ದುಪಡಿ ಸಂ. ೯ (ಯಾದಿ III – ಐದನೇ ವಾರ.)–

**ಶ್ರೀ ವಿ. ಆಯ್. ಮುನಿಸ್ವಾಮಿ ಪಿಳ್ಳೈ:** ಅಲ್ಪಸಂಖ್ಯಾತರ ಸಮಿತಿಯ ಎರಡನೆಯ ವರದಿಯನ್ನು ಸದನವು ಪರಿಗಣಿಸಿದ ೨೫ನೇ ಮೇ ದಿನದಂದು ನಾನು ಹಾಜರಿರಲಿಲ್ಲ. ಆದರೂ, ಡಾ. ಅಂಬೇಡ್ಕರ್ ಅವರು ಹೇಳಿರುವುದರ ಹಿನ್ನೆಲೆಯಲ್ಲಿ ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಬಯಸುತ್ತೇನೆ.

(ಸದನದ ಅನುಮತಿಯ ಮೇರೆಗೆ, ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲಾಯಿತು.)

**ಶ್ರೀ ನಝಿರುದ್ದೀನ್ ಅಹ್ಮದ್:** ನನ್ನ ತಿದ್ದುಪಡಿಯ ತತ್ವವನ್ನು ಶ್ರೀ ಟಿ. ಟಿ. ಕೃಷ್ಣಮಾಚಾರಿಯವರ ತಿದ್ದುಪಡಿಯಲ್ಲಿ ಸಾರಭೂತವಾಗಿ ಒಪ್ಪಿಕೊಳ್ಳಲಾಗಿದೆ. ಆದ್ದರಿಂದ ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಬಯಸುತ್ತೇನೆ.

(ಸದನದ ಅನುಮತಿಯ ಮೇರೆಗೆ, ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲಾಯಿತು.)

**ಮಾನ್ಯ ಅಧ್ಯಕ್ಷರು:** ಮುಂದಿನ ತಿದ್ದುಪಡಿ ಸಂ. ೧೧೩ ಪಂಡಿತ್ ಠಾಕುರ್ ದಾಸ್ ಭಾರ್ಗವ ಅವರದು. ಇದನ್ನು ಡಾ. ಅಂಬೇಡ್ಕರ್ ಅವರು ಒಪ್ಪಿಕೊಂಡಿದ್ದಾರೆ.

ಪ್ರಶ್ನೆಯು ಹೀಗಿರುತ್ತದೆ:

"ತಿದ್ದುಪಡಿ ಸಂ. ೩೮, ಯಾದಿ I(ಐದನೇ ವಾರ)ರ ತಿದ್ದುಪಡಿಗಳಲ್ಲಿಯ ತಿದ್ದುಪಡಿಗಳು, ಪ್ರಸ್ತಾವಿತ ಹೊಸ ವಿಧಿ ೨೯೫–ಎದಲ್ಲಿ, ಪದ 'ಸಂವಿಧಾನ'ದ ನಂತರ ಕಂಸಗಳು ಮತ್ತು ಅಕ್ಷರ '(ಎ)' ಸೇರಿಸತಕ್ಕದ್ದು ಮತ್ತು 'ರಾಜ್ಯ' ಪದದ ನಂತರ ಕೆಳಗಿನದನ್ನು ಸೇರಿಸತಕ್ಕದ್ದು:–

'(ಬಿ) ನಾಮಕರಣದ ಮೂಲಕ ಲೋಕಸಭೆಗೆ ಅಥವಾ ರಾಜ್ಯಗಳ ವಿಧಾನಸಭೆಗಳಿಗೆ ಆಂಗ್ಲೋ–ಇಂಡಿಯನ್ ಸಮುದಾಯದವರ ಪ್ರತಿನಿಧಿತ್ವಕ್ಕೆ ಸಂಬಂಧಿಸಿದಂತೆ.'

(ತಿದ್ದುಪಡಿಯನ್ನು ಅಳವಡಿಸಲಾಯಿತು.)

**ಮಾನ್ಯ ಅಧ್ಯಕ್ಷರು:** ಮುಂದಿನ ತಿದ್ದುಪಡಿಯು ಕರಡು ಸಮಿತಿಯ ತಿದ್ದುಪಡಿ ಸಂ. ೧೧೪ ಪ್ರಶ್ನೆಯು ಹೀಗಿರುತ್ತದೆ.

"ತಿದ್ದುಪಡಿ ಸಂ. ೩೮, ಯಾದಿ I(ಐದನೇ ವಾರ)ರ ತಿದ್ದುಪಡಿಗಳಲ್ಲಿಯ ತಿದ್ದುಪಡಿಗಳು, ಪ್ರಸ್ತಾವಿತ ವಿಧಿ ೨೯೫–ಎ ಗೆ, ಕೆಳಗಿನ ಷರತ್ತನ್ನು ಸೇರಿಸಬೇಕು:–

"ಆದರೆ ಈ ವಿಧಿಯಲ್ಲಿಯ ಯಾವುದೇ ವಿಷಯವು ಲೋಕಸಭೆಯಲ್ಲಿಯೇ ಆಗಲಿ ಅಥವಾ ರಾಜ್ಯದ ವಿಧಾನಸಭೆಯಲ್ಲಿಯೇ ಆಗಲಿ ಪ್ರತಿನಿಧಿತ್ವವನ್ನು ಆಗ ಅಸ್ತಿತ್ವದಲ್ಲಿರುವ ಸದನ ಅಥವಾ ಸಭೆಯು ವಿಸರ್ಜನೆಯಾಗುವವರೆಗೆ ಬಾಧಿಸತಕ್ಕದ್ದಲ್ಲ."

[**ತಿದ್ದುಪಡಿಯನ್ನು ಅಳವಡಿಸಲಾಯಿತು ವಿಧಿ ೨೯೫–ಎ ಅನ್ನು ತಿದ್ದುಪಡಿ ಮಾಡಿದ ರೀತಿಯಲ್ಲಿ, ಸಂವಿಧಾನಕ್ಕೆ ಸೇರಿಸಲಾಯಿತು.**]

* * *

## ವಿಧಿ ೨೯೬

***ಶ್ರೀ ನಝಿರುದ್ದೀನ್ ಅಹ್ಮದ್:** .........ತಾಂತ್ರಿಕ ಹಾಗೂ ಸಾರಭೂತ ಕಾರಣಗಳನ್ನು ಆಧರಿಸಿ ತಿದ್ದುಪಡಿಯನ್ನು ತಿರಸ್ಕರಿಸಬೇಕೆನ್ನುವುದು ನನ್ನ ವಾದವಾಗಿರುತ್ತದೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ** (ಮದ್ರಾಸು: ಸಾಮಾನ್ಯ): ಮಾನ್ಯರೇ, ನನ್ನ ಅರಿಕೆ ಏನೆಂದರೆ ನನ್ನ ಮಿತ್ರರು ಈ ಕ್ರಮಬದ್ಧತೆಯ ಅಂಶವನ್ನು ಎತ್ತುವಲ್ಲಿ ಸಂಪೂರ್ಣವಾಗಿ ಕ್ರಮರಹಿತವಾಗಿದ್ದಾರೆ. ಏಕೆಂದರೆ, ಈ ವಿಷಯವನ್ನು ಸದನವು ಒಪ್ಪಿಕೊಂಡಿದೆ. ಗೌರವಾನ್ವಿತ ಸದಸ್ಯರು ಇದರ ಪೂರ್ತಿ ಎರಡು ದಿನಗಳ ಸೂಚನೆಯನ್ನು ಹೊಂದಿದ್ದರು ಮತ್ತು ಅವರು ಎರಡು ದಿನಗಳಲ್ಲಿ ತಿದ್ದುಪಡಿಯ ತಾತ್ಪರ್ಯವನ್ನು ಅರ್ಥ

ಮಾಡಿಕೊಳ್ಳಲಾಗದಿದ್ದರೆ, ಅವರು ಎರಡು ತಿಂಗಳಲ್ಲಿಯೂ ಅದನ್ನು ಅರ್ಥ ಮಾಡಿಕೊಳ್ಳಲಾರರು.

**ಮಾನ್ಯ ಅಧ್ಯಕ್ಷರು:** ಕಳೆದ ಸಲ ಸ್ಥಾನಗಳ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಪುನಃ ಎತ್ತಿಕೊಂಡಾಗ ಈ ಅಂಶವೂ ಪರಿಗಣಿಸಲ್ಪಟ್ಟವುಗಳಲ್ಲಿ ಒಂದಾಗಿತ್ತು ಮತ್ತು ಈ ಅಂಶದ ಮೇಲೆಯೂ ಆಗ ನಿರ್ಣಯ ತೆಗೆದುಕೊಳ್ಳಲಾಯಿತು ಎಂದು ಸೂಚಿಸಲಾಗುತ್ತಿದೆಯೇ?

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ನನ್ನ ಸಲಹೆ ಏನೆಂದರೆ ಮುಸಲ್ಮಾನರು ಮತ್ತು ಭಾರತೀಯ ಕ್ರಿಶ್ಚಿಯನ್ನರನ್ನು ಇನ್ನು ಮುಂದೆ ಅಲ್ಪಸಂಖ್ಯಾತರೆಂದು ಪರಿಗಣಿಸಬೇಕಾಗಿಲ್ಲವಾದ್ದರಿಂದ ಈ ಅಂಶವು ಉದ್ಭವಿಸುವುದಿಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್:** ಅಲ್ಲವೇ ಅಲ್ಲ. ನನ್ನ ಅರಿಕೆ ಏನೆಂದರೆ ಶಾಸಕಾಂಗದಲ್ಲಿ ಅಲ್ಪಸಂಖ್ಯಾತರ ಪ್ರತಿನಿಧಿತ್ವದ ಪ್ರಶ್ನೆಯನ್ನು ಮಾತ್ರ ಪರಿಗಣಿಸಲಾಗಿದೆ. ಆದರೆ ಈ ಹೊಸ ವಿಧಿಯು ಬೇರೆ ವಿಷಯಕ್ಕೆ ಸಂಬಂಧಿಸಿರುತ್ತದೆ. ಅದೇನೆಂದರೆ, ಕಚೇರಿ ಮತ್ತು ಜಿಲ್ಲೆ ಮುಂತಾದವುಗಳಲ್ಲಿ ಚಿಕ್ಕಪುಟ್ಟ ಹುದ್ದೆಗಳನ್ನು ಪಡೆಯಲು ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುವುದು. ಶಾಸಕಾಂಗದಲ್ಲಿ ಪ್ರತಿನಿಧಿತ್ವಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಸರ್ದಾರ ಪಟೇಲರು ನಮ್ಮನ್ನು ಸಂಪರ್ಕಿಸುವ ದಯಾಳುತನವನ್ನು ತೋರಿಸಿದ್ದರು ಮತ್ತು ಶಾಸಕಾಂಗದಲ್ಲಿ ಯಾವುದೇ ಮೀಸಲಾತಿಯನ್ನು ಹೊಂದದಿರಲು ನಾವು ಒಪ್ಪಿಕೊಂಡಿದ್ದೆವು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಮಾನ್ಯರೇ ಪರಿಸ್ಥಿತಿಯು ಹೀಗಿರುತ್ತದೆ. ಅಲ್ಪಸಂಖ್ಯಾತರ ಸಮಿತಿಯ ವರದಿಯಲ್ಲಿ ಎಲ್ಲ ಅಲ್ಪಸಂಖ್ಯಾತರು ಎರಡು ಲಾಭ ಅಥವಾ ವಿಶೇಷಾಧಿಕಾರಗಳನ್ನು ಹೊಂದಿರಬೇಕೆಂದು ಹೇಳಲಾಗಿದೆ. ಅವೆಂದರೆ, ಶಾಸಕಾಂಗಗಳಲ್ಲಿ ಪ್ರತಿನಿಧಿತ್ವ ಹಾಗೂ ಸೇವೆಗಳಲ್ಲಿ ಪ್ರತಿನಿಧಿತ್ವ. ಈ ಸದನವು ಒಪ್ಪಿಕೊಳ್ಳಲಾದ ವರದಿಯ ಪ್ಯಾರಾ ೯ ಕೆಳಗಿನದನ್ನು ಒಳಗೊಂಡಿರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಮಾನ್ಯರೇ, ಪರಿಸ್ಥಿತಿಯು ಹೀಗಿರುತ್ತದೆ. ಅಲ್ಪಸಂಖ್ಯಾತರ ಸಮಿತಿಯ ವರದಿಯಲ್ಲಿ ಎಲ್ಲ ಅಲ್ಪಸಂಖ್ಯಾತರು ಎರಡು ಲಾಭ ಅಥವಾ ವಿಶೇಷಾಧಿಕಾರಗಳನ್ನು ಹೊಂದಿರಬೇಕೆಂದು ಹೇಳಲಾಗಿದೆ. ಅವೆಂದರೆ, ಶಾಸಕಾಂಗಗಳಲ್ಲಿ ಪ್ರತಿನಿಧಿತ್ವ ಹಾಗೂ ಸೇವೆಗಳಲ್ಲಿ ಪ್ರತಿನಿಧಿತ್ವ. ಈ ಸದನವು ಒಪ್ಪಿಕೊಳ್ಳಲಾದ ವರದಿಯ ಪ್ಯಾರಾ ೯ ಕೆಳಗಿನದನ್ನು ಒಳಗೊಂಡಿರುತ್ತದೆ:

"ಭಾರತೀಯ ಮತ್ತು ಪ್ರಾಂತೀಯ ಸೇವೆಗಳಲ್ಲಿ, ಈ ಸೇವೆಗಳಿಗೆ ಆಡಳಿತಾತ್ಮಕ ಸಮರ್ಪಕತೆಯ ಪರಿಗಣನೆಗೆ ಅನುಗುಣವಾಗಿ ನೇಮಕಾತಿಗಳನ್ನು ಮಾಡುವಾಗ, ಅಲ್ಪಸಂಖ್ಯಾತರ ಬೇಡಿಕೆಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡಿರತಕ್ಕದ್ದು."

ಅದು ಸದನವು ಅಂಗೀಕರಿಸಿದ ಮೂಲ ಪ್ರಸ್ತಾವನೆಯಾಗಿರುತ್ತದೆ. ನಂತರ ಸಲಹಾ ಸಮಿತಿಯು ಎರಡು ಅಲ್ಪಸಂಖ್ಯಾತ ವರ್ಗಗಳ ಸಮ್ಮತಿಯ ಮೇರೆಗೆ ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಕೂಡದೆಂಬ ನಿರ್ಣಯಕ್ಕೆ ಬಂದಿತು. ಯಾವಾಗ ಸದನವು ಈ ರೀತಿಯಲ್ಲಿ ನೀಡಬೇಕಾದ ಅಲ್ಪಸಂಖ್ಯಾತರು ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮಾತ್ರ ಎನ್ನುವುದನ್ನು ಈಗ ಒಪ್ಪಿಕೊಂಡಿರುವಾಗ ಸ್ವಾಭಾವಿಕವಾಗಿ ಕರಡು ಸಮಿತಿಯು ಸದನದ ಆ ನಿರ್ಣಯಕ್ಕೆ ಬದ್ಧವಾಗಿರುತ್ತದೆ ಮತ್ತು ಆ ನಿರ್ಣಯಕ್ಕೆ ಅನುಗುಣವಾಗಿ ವಿಧಿಯನ್ನು ಬದಲಾಯಿಸಬೇಕಾಗುತ್ತದೆ.

---

* ಸಿ.ಎ.ಡಿ. ಸಂ. IX, ೨೬ನೇ ಆಗಸ್ಟ್ ೧೯೪೯, ಪುಟ ೭೦೨.

**ಮಾನ್ಯ ಸಭಾಧ್ಯಕ್ಷರು:** ತೆಗೆದುಕೊಳ್ಳಲಾದ ಕ್ರಮಬದ್ಧತೆಯ ಅಂಶವೇನೆಂದರೆ ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ವಿಧಿಗಳನ್ನು ಮರು ಪರಿಗಣಿಸುವ ಸಮಯದಲ್ಲಿ ಸ್ಥಾನಗಳ ಮೀಸಲಾತಿಯ ಬಗ್ಗೆ ಮಾತ್ರ ಉಲ್ಲೇಖಿಸಿ ನಿರ್ಣಯ ತೆಗೆದುಕೊಳ್ಳಲಾಯಿತು ಮತ್ತು ಸೇವೆಗಳ ಪ್ರಶ್ನೆಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಲಿಲ್ಲ ಹಾಗೂ ಆ ಅಂಶವನ್ನು ನಿರ್ಣಯಿಸಲಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ತಿಳಿದುಕೊಂಡ ಹಾಗೆ, ನಿರ್ಣಯವು ಅವರು ಅಲ್ಪಸಂಖ್ಯಾತರಲ್ಲ ಮತ್ತು ಆದ್ದರಿಂದ ಅವರು ಈ ಎರಡರಲ್ಲಿ ಯಾವುದೇ ವಿಶೇಷಾಧಿಕಾರವನ್ನು ಹೊಂದಬೇಕಾಗಿಲ್ಲ ಎಂಬುದಾಗಿತ್ತು.

* * *

## ವಿಧಿ ೨೯೯

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸಲು ಬಯಸುತ್ತೇನೆ:

"ವಿಧಿ ೨೯೯ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**ಅಲ್ಪಸಂಖ್ಯಾತರಿಗೆ ವಿಶೇಷ ಅಧಿಕಾರಿ**

೨೯೯ (೧) ಅಲ್ಪಸಂಖ್ಯಾತರಿಗಾಗಿ ರಾಷ್ಟ್ರಪತಿಯಿಂದ ನೇಮಕ ಹೊಂದಬೇಕಾದ ಒಬ್ಬ ವಿಶೇಷ ಅಧಿಕಾರಿಯು ಇರತಕ್ಕದ್ದು;

೨. ಈ ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ನೀಡಲಾದ ರಕ್ಷಣೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಂಶೋಧಿಸುವುದು ಮತ್ತು ರಾಷ್ಟ್ರಪತಿಯು ನಿರ್ದೇಶಿಸಿದಂತೆ ಆಗಿಂದಾಗ್ಗೆ ರಕ್ಷಣೆಗಳ ಕಾರ್ಯಾಚರಣೆಯ ಬಗ್ಗೆ ರಾಷ್ಟ್ರಪತಿಗೆ ವರದಿ ಸಲ್ಲಿಸುವುದು ವಿಶೇಷ ಅಧಿಕಾರಿಯ ಕರ್ತವ್ಯವಾಗಿರುತ್ತದೆ ಮತ್ತು ರಾಷ್ಟ್ರಪತಿಯು ಅಂಥ ವರದಿಗಳನ್ನು ಸಂಸತ್ತಿನ ಎರಡೂ ಸದನಗಳ ಮುಂದೆ ಇಡುವ ವ್ಯವಸ್ಥೆ ಮಾಡತಕ್ಕದ್ದು."

ಮೂಲ ವಿಧಿಯಲ್ಲಿ ಕೇಂದ್ರ ಮತ್ತು ಪ್ರತಿಯೊಂದು ಪ್ರಾಂತ್ಯದಲ್ಲಿ ಒಬ್ಬ ಅಲ್ಪಸಂಖ್ಯಾತ ಅಧಿಕಾರಿ ಇರಬೇಕೆಂದು ನಿರೂಪಿಸಲಾಗಿತ್ತು. ಅಲ್ಪಸಂಖ್ಯಾತರ ಸಂಖ್ಯೆಯು ಬಹಳಷ್ಟು ಕಡಿಮೆಯಾಗಿರುವುದರಿಂದ, ಪ್ರತಿಯೊಂದು ಪ್ರಾಂತ್ಯದಲ್ಲಿ ಅಧಿಕಾರಿ ಇರುವಂಥ ತೊಡಕಿನ ನಿಯಮಾಂಶವನ್ನು ಹೊಂದುವುದು ಅಪೇಕ್ಷಾರ್ಹವಲ್ಲ ಎಂದು ಈಗ ತಿಳಿಯಲಾಗಿದೆ. ಒಂದು ವೇಳೆ ಕೇಂದ್ರವು ಅಧಿಕಾರಿಯನ್ನು ನೇಮಕ ಮಾಡಿದರೆ ಹಾಗೂ ಅವನು ರಾಷ್ಟ್ರಪತಿಗೆ ವರದಿಯನ್ನು ನೀಡುವಂತೆ ಮಾಡಿದರೆ ಮೂಲ ಪ್ರಕರಣದ ಉದ್ದೇಶವನ್ನು ಈಡೇರಿಸಿದಂತಾಗುತ್ತದೆ.

* * *

---

* ಸಿ.ಎ.ಡಿ. ಸಂ. IX, ೨೬ನೇ ಆಗಸ್ಟ್ ೧೯೪೯, ಪುಟ ೭೦೩.

# ಮೂರನೇ ಪರಿಶಿಷ್ಟ

*ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಮೂರನೆಯ ಪರಿಶಿಷ್ಟದಲ್ಲಿ, ಘೋಷಣೆ ಪತ್ರಗಳ ನಮೂನೆ Iರಲ್ಲಿ, ವಿಧಿ ವಿಹಿತವಾಗಿ ದೃಢೀಕರಿಸು (ಅಥವಾ ಶಪಥ ಮಾಡು)' ಎಂಬ ಪದಗಳ ಹಾಗೂ ಕಂಸಗಳ ಬದಲಾಗಿ ಕೆಳಗಿನವುಗಳನ್ನು ಸೇರಿಸಬೇಕು:–

**'ವಿಧಿ ವಿಹಿತವಾಗಿ ದೃಢೀಕರಿಸು**

ದೇವರ ಹೆಸರಿನಲ್ಲಿ ಶಪಥ ಮಾಡು' "

ಮಾನ್ಯರೇ, ನಾನು ಹೀಗೆ ಸಹ ಮಂಡಿಸುತ್ತೇನೆ:

"ಮೂರನೆಯ ಪರಿಶಿಷ್ಟದಲ್ಲಿ, ಘೋಷಣೆ ಪತ್ರಗಳ ನಮೂನೆ IIರಲ್ಲಿ 'ವಿಧಿ ವಿಹಿತವಾಗಿ ದೃಢೀಕರಿಸು (ಅಥವಾ ಶಪಥ ಮಾಡು) ಎಂಬ ಪದಗಳ ಹಾಗೂ ಕಂಸಗಳ ಬದಲಾಗಿ ಕೆಳಗಿನವುಗಳನ್ನು ಸೇರಿಸಬೇಕು:–

**'ವಿಧಿವಿಹಿತವಾಗಿ ದೃಢೀಕರಿಸು**

ದೇವರ ಹೆಸರಿನಲ್ಲಿ ಶಪಥ ಮಾಡು' "

"ಮೂರನೆಯ ಪರಿಶಿಷ್ಟದಲ್ಲಿ, ಘೋಷಣೆ ಪತ್ರಗಳ ನಮೂನೆ IIIರಲ್ಲಿ,

(ಎ) 'ಘೋಷಣೆ' ಎಂಬ ಪದಕ್ಕೆ ಬದಲಾಗಿ 'ದೃಢೀಕರಣ ಅಥವಾ ಶಪಥ' ಎಂಬ ಪದಗಳನ್ನು ಸೇರಿಸಬೇಕು;

(ಬಿ) 'ವಿಧಿ ವಿಹಿತವಾಗಿ ಹಾಗೂ ಪ್ರಾಮಾಣಿಕಾಗಿ ವಾಗ್ದಾನಿಸು ಹಾಗೂ ಪೋಷಿಸು' ಎಂಬ ಪದಗಳಿಗೆ ಬದಲಾಗಿ ಕೆಳಗಿನವುಗಳನ್ನು ಸೇರಿಸಬೇಕು:–

**'ವಿಧಿವಿಹಿತವಾಗಿ ದೃಢೀಕರಿಸು**

ದೇವರ ಹೆಸರಿನಲ್ಲಿ ಶಪಥ ಮಾಡು' "

"ಮೂರನೆಯ ಪರಿಶಿಷ್ಟದಲ್ಲಿ ಘೋಷಣೆ ಪತ್ರಗಳ ನಮೂನೆ IVರಲ್ಲಿ–

(ಎ) 'ಘೋಷಣೆ' ಎಂಬ ಪದಕ್ಕೆ ಬದಲಾಗಿ 'ದೃಢೀಕರಣ' ಅಥವಾ 'ಶಪಥ' ಎಂಬ ಪದಗಳನ್ನು ಸೇರಿಸಬೇಕು:

(ಬಿ) 'ವಿಧಿ ವಿಹಿತವಾಗಿ ಹಾಗೂ ಪ್ರಾಮಾಣಿಕವಾಗಿ ವಾಗ್ದಾನಿಸು ಹಾಗೂ ಘೋಷಿಸು' ಎಂಬ ಪದಗಳಿಗೆ ಬದಲಾಗಿ ಕೆಳಗಿನವುಗಳನ್ನು ಸೇರಿಸಬೇಕು:–

**'ವಿಧಿ ವಿಹಿತವಾಗಿ ದೃಢೀಕರಿಸು**

ದೇವರ ಹೆಸರಿನಲ್ಲಿ ಶಪಥ ಮಾಡು'

"ಮೂರನೆಯ ಪರಿಶಿಷ್ಟದಲ್ಲಿ, ಘೋಷಣೆ ಪತ್ರಗಳ ನಮೂನೆ Vರಲ್ಲಿ–

(ಎ) 'ಸದ್ಯಕ್ಕೆ ಒಂದನೇ ಪರಿಶಿಷ್ಟದ ಭಾಗ Iರಲ್ಲಿ' ಎಂಬ ಪದಗಳನ್ನು ಹಾಗೂ ಸಂಖ್ಯೆಯನ್ನು ತೆಗೆಯಬೇಕು;

(ಬಿ) 'ವಿಧಿ ವಿಹಿತವಾಗಿ ದೃಢೀಕರಿಸು (ಅಥವಾ ಶಪಥ ಮಾಡು)' ಎಂಬ ಪದಗಳು ಹಾಗೂ ಕಂಸಗಳಿಗೆ ಬದಲಾಗಿ ಕೆಳಗಿನವುಗಳನ್ನು ಸೇರಿಸಬೇಕು:–

* ಸಿ.ಎ.ಡಿ. ಸಂ. IX, ೨೬ನೇ ಆಗಸ್ಟ್ ೧೯೪೯, ಪುಟ ೭೦೬–೭೦೭.

**'ವಿಧಿ ವಿಹಿತವಾಗಿ ದೃಢೀಕರಿಸು**

ದೇವರ ಹೆಸರಿನಲ್ಲಿ ಶಪಥ ಮಾಡು.'

"ಮೂರನೆಯ ಪರಿಶಿಷ್ಟದಲ್ಲಿ, ಘೋಷಣೆ ಪತ್ರಗಳ ನಮೂನೆ VIರಲ್ಲಿ–

(ಎ) 'ಸದ್ಯಕ್ಕೆ ಒಂದನೆಯ ಪರಿಶಿಷ್ಟದ ಭಾಗ Iರಲ್ಲಿ' ಎಂಬ ಪದಗಳನ್ನು ಹಾಗೂ ಸಂಖ್ಯೆಯನ್ನು ತೆಗೆಯಬೇಕು;

(ಬಿ) 'ವಿಧಿ ವಿಹಿತವಾಗಿ ದೃಢೀಕರಿಸಲು (ಅಥವಾ ಶಪಥ ಮಾಡು)' ಎಂಬ ಪದಗಳು ಹಾಗೂ ಕಂಸಗಳಿಗೆ ಬದಲಾಗಿ ಕೆಳಗಿನವುಗಳನ್ನು ಸೇರಿಸಬೇಕು:–

**'ವಿಧಿ ವಿಹಿತವಾಗಿ ದೃಢೀಕರಿಸು**

ದೇವರ ಹೆಸರಿನಲ್ಲಿ ಶಪಥ ಮಾಡು.'

"ಮೂರನೇ ಪರಿಶಿಷ್ಟದಲ್ಲಿ, ಘೋಷಣೆ ಪತ್ರಗಳ ನಮೂನೆ VIIರಲ್ಲಿ–

(ಎ) 'ಘೋಷಣೆ' ಎಂಬ ಪದಕ್ಕೆ ಬದಲಾಗಿ 'ದೃಢೀಕರಣ ಅಥವಾ ಶಪಥ' ಎಂಬ ಪದಗಳನ್ನು ಸೇರಿಸಬೇಕು.

(ಬಿ) 'ಸದ್ಯಕ್ಕೆ ಒಂದನೆಯ ಪರಿಶಿಷ್ಟದ ಭಾಗ Iರಲ್ಲಿ' ಎಂಬ ಪದಗಳನ್ನು ಹಾಗೂ ಸಂಖ್ಯೆಯನ್ನು ತೆಗೆಯಬೇಕು;

(ಸಿ) 'ವಿಧಿ ವಿಹಿತವಾಗಿ ಹಾಗೂ ಪ್ರಾಮಾಣಿಕವಾಗಿ ವಾಗ್ದಾನಿಸು ಹಾಗೂ ಘೋಷಿಸು' ಎಂಬ ಪದಗಳಿಗೆ ಬದಲಾಗಿ ಕೆಳಗಿನವುಗಳನ್ನು ಸೇರಿಸಬೇಕು:–

**'ವಿಧಿ ವಿಹಿತವಾಗಿ ದೃಢೀಕರಿಸು**

ದೇವರ ಹೆಸರಿನಲ್ಲಿ ಶಪಥ ಮಾಡು."

"ಮೂರನೆಯ ಪರಿಶಿಷ್ಟದಲ್ಲಿ, ಘೋಷಣೆಯ ಪತ್ರ ನಮೂನೆ VIIIರಲ್ಲಿ–

(ಎ) 'ಘೋಷಣೆ' ಎಂಬ ಪದಕ್ಕೆ ಬದಲಾಗಿ 'ದೃಢೀಕರಣ ಅಥವಾ ಶಪಥ' ಎಂಬ ಪದಗಳನ್ನು ಸೇರಿಸಬೇಕು;

(ಬಿ) 'ವಿಧಿ ವಿಹಿತವಾಗಿ ಹಾಗೂ ಪ್ರಾಮಾಣಿಕವಾಗಿ ವಾಗ್ದಾನಿಸು ಹಾಗೂ ಘೋಷಿಸು' ಎಂಬ ಪದಗಳಿಗೆ ಬದಲಾಗಿ ಕೆಳಗಿನವುಗಳನ್ನು ಸೇರಿಸಬೇಕು:–

**'ವಿಧಿ ವಿಹಿತವಾಗಿ ದೃಢೀಕರಿಸು**

ದೇವರ ಹೆಸರಿನಲ್ಲಿ ಶಪಥ ಮಾಡು.' "

ಮಾನ್ಯರೇ, ನಾನು ಹೀಗೆ ಸಹ ಮಂಡಿಸುತ್ತೇನೆ:

"ಮೂರನೆಯ ಪರಿಶಿಷ್ಟದಲ್ಲಿ 'ಘೋಷಣೆಗಳ ನಮೂನೆಗಳು' ಎಂಬ ತಲೆಬರಹಕ್ಕೆ ಬದಲಾಗಿ 'ದೃಢೀಕರಣಗಳ ಅಥವಾ ಶಪಥಗಳ ನಮೂನೆಗಳು' ಎಂಬ ತಲೆಬರಹವನ್ನು ಸೇರಿಸಬೇಕು."

**ಮಾನ್ಯ ಸಭಾಧ್ಯಕ್ಷರು:** ತಲೆಬರಹವನ್ನು ಬದಲಾಯಿಸುವುದಕ್ಕೆ ಯಾವುದೇ ತಕರಾರು ಇಲ್ಲವೆಂದು ನಾನು ತಿಳಿಯುತ್ತೇನೆ.

**ಶ್ರೀ ನಜೀರುದ್ದೀನ್ ಅಹ್ಮದ್:** ಮಾನ್ಯರೇ, ಯಾವುದೇ ತಕರಾರು ಇಲ್ಲ.

**ಮಾನ್ಯ ಸಭಾಧ್ಯಕ್ಷರು:** ತಲೆಬರಹವನ್ನು ಬದಲಾಯಿಸಲಾಯಿತು.......

* * *

*__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ.

"ಮೂರನೇ ಪರಿಶಿಷ್ಟದ ಘೋಷಣೆಗಳ ನಮೂನೆಗಳ ನಮೂನೆ VIರಲ್ಲಿ 'ಅಥವಾ ಸ್ವತಂತ್ರವಾಗಿ ತಾನು ನಿರ್ವಹಿಸುವ ಕಾರ್ಯಗಳಿಗೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ ರಾಜ್ಯಪಾಲರಿಂದ ವಿಶೇಷವಾಗಿ ಅನುಮತಿಸಬಹುದಾದ' ಎಂಬ ಪದಗಳನ್ನು ತೆಗೆದುಹಾಕಬೇಕು."

ಈ ಪದಗಳು ಅನಾವಶ್ಯಕವಾಗಿವೆ, ಏಕೆಂದರೆ ನಾವು ರಾಜ್ಯಪಾಲರಿಗೆ ಯಾವುದೇ ಸ್ವಾತಂತ್ರ್ಯವನ್ನು ಬಿಟ್ಟುಕೊಡಲು ಪ್ರಸ್ತಾಪಿಸುತ್ತಲೇ ಇಲ್ಲ.

**ಶ್ರೀ ಹೆಚ್. ವಿ. ಕಾಮತ್:** ೧೪೩ನ್ನು ಇನ್ನೂ ತಿದ್ದುಪಡಿ ಮಾಡಿಲ್ಲವೆಂಬುದನ್ನು ಡಾ. ಅಂಬೇಡ್ಕರ್ ಅವರ ಗಮನಕ್ಕೆ ನಾನು ತರಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ಅದನ್ನು ನಾನು ನೆನಪಿನಲ್ಲಿ ಇಟ್ಟುಕೊಂಡಿದ್ದೇನೆ.

* * *

**ಮಾನ್ಯ ಸಭಾಧ್ಯಕ್ಷರು:** ನಾವು ಎಲ್ಲ ಸ್ವಾತಂತ್ರ್ಯವನ್ನೂ ತೆಗೆದುಹಾಕಿದ್ದೇವೆ.

**ಶ್ರೀ ನಜೀರುದ್ದೀನ್ ಅಹ್ಮದ್:** ನಮೂನೆ VIರ ಕೊನೆಯಲ್ಲಿ ಬರುವ ಪದಗಳಿಗೆ ಸಂಬಂಧಿಸಿದಂತೆ ತೊಂದರೆ ಉದ್ಭವಿಸುತ್ತದೆ.

* * *

**ಮಾನ್ಯ ಸಭಾಧ್ಯಕ್ಷರು:** ಆದ್ದರಿಂದಲೇ ಡಾ. ಅಂಬೇಡ್ಕರ್ ಅವರು ಅದನ್ನು ತೆಗೆದುಹಾಕಬೇಕೆಂದು ಮಂಡಿಸಿದ್ದಾರೆ.

**__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಈ ತಿದ್ದುಪಡಿಯನ್ನು ಪ್ರಸ್ತಾಪಿಸುವಲ್ಲಿ, ದೇವರನ್ನು ಗೆರೆಯ ಕೆಳಗೆ ಹಾಕಲಾಗಿದೆ ಎಂಬ ಆಧಾರದ ಮೇಲೆ ಕರಡಿನ ವಿರುದ್ಧ ಮಾತನಾಡಿದ ಕೆಲವು ಸದಸ್ಯರ ಭಾವನೆಗಳನ್ನು ನೋಯಿಸುವ ಕಿಂಚಿತ್ತೂ ಉದ್ದೇಶವನ್ನು ಹೊಂದಿರುವುದಿಲ್ಲ. ಮಾನ್ಯರೇ, ಈ ವಿಷಯದಲ್ಲಿ ನಿಜವಾಗಿಯೂ ನಾವು ಒಂದು ಸ್ಥಿರವಾದ ನೀತಿಯನ್ನು ಪಾಲಿಸಿಕೊಂಡು ಬಂದಿಲ್ಲ. ಉದಾಹರಣೆಗೆ, ಅನುಮೋದಿಸುವ ವಿಧಿ ೪೯ರಲ್ಲಿ ನನಗೆ ತಿಳಿದಂತೆ, ದೇವರು ಪದವನ್ನು ಗೆರೆಯ ಮೇಲಿರಿಸಲಾಗಿದೆ ಮತ್ತು ದೃಢೀಕರಣವನ್ನು ಗೆರೆಯ ಕೆಳಗಿರಿಸಲಾಗಿದೆ. ವಿಧಿ ೮೧ರಲ್ಲಿ, ನಾವು ದೃಢೀಕರಣವನ್ನು ಮೊದಲಿರಿಸಿ ನಂತರ ಶಪಥವನ್ನು ಇರಿಸಿದ್ದೇವೆ. ಈ ವಿಧಿಯಲ್ಲಿ, ಯಾವುದಕ್ಕೆ ನಾವು ತಿದ್ದುಪಡಿಗಳನ್ನು ಮಂಡಿಸಿದ್ದೇವೆಯೋ, "ದೃಢೀಕರಿಸು ಅಥವಾ ಶಪಥ ಮಾಡು" ಎಂದಿರುವ ಪ್ರಧಾನ ಕಲಮಿನಲ್ಲಿರುವ ಪದಜೋಡಣೆಯನ್ನು ಪಾಲಿಸಿದ್ದೇವೆ. ಅದು ಪ್ರಧಾನ ಕಲಮಿನ ಭಾಷೆಯಾಗಿರುವುದರಿಂದ, ದೃಢೀಕರಣವನ್ನು ಗೆರೆಯ ಮೇಲಿರಿಸುವುದು ಹಾಗೂ ಶಪಥವನ್ನು ಕೆಳಗಿರಿಸುವುದು ತಾರ್ಕಿಕ ಅನುಕ್ರಮವಾಗಿದೆ. ಇದು ಕೇವಲ ತಾರ್ಕಿಕ ವಿಷಯವಾಗಿದೆ. ಈಗ, ನಾವು ದೃಢೀಕರಣವನ್ನು ಮೊದಲು ಹಾಗೂ ಶಪಥವನ್ನು ನಂತರ ಇಡುವುದು ಅಪೇಕ್ಷಿತವೆಂದು ಯಾಕೆ ವಿಚಾರ ಮಾಡಿದವೆಂದರೆ, ಈ ದೇಶದಲ್ಲಿ, ಯಾವುದಕ್ಕೂ, ಹಿಂದೂವಿಗೆ ಸಾಕ್ಷಿ ನೀಡಲು ಯಾವುದೇ ನ್ಯಾಯಾಲಯದಿಂದ ಕರೆ ಬಂದಾಗ, ಸಾಮಾನ್ಯವಾಗಿ ಅವನು ದೃಢೀಕರಣದಿಂದ ಪ್ರಾರಂಭಿಸುತ್ತಾನೆ. ಕ್ರಿಶ್ಚಿಯನ್ನರು, ಆಂಗ್ಲೋ-ಇಂಡಿಯನ್ನರು ಮತ್ತು ಮುಸಲ್ಮಾನರು ಶಪಥ ಮಾಡುತ್ತಾರೆ. ಹಿಂದೂಗಳು

---

* ಸಿ.ಎ.ಡಿ. ಸಂ. IX, ೨೬ನೇ ಆಗಸ್ಟ್ ೧೯೪೯, ಪುಟ ೭೧೧-೭೧೨.

** ಸಿ.ಎ.ಡಿ. ಸಂ. IX, ೨೬ನೇ ಆಗಸ್ಟ್ ೧೯೪೯, ಪುಟ ೭೧೮-೭೧೫.

ದೇವರ ಹೆಸರನ್ನು ಉಚ್ಚರಿಸಲು ಬಯಸುವುದಿಲ್ಲ. ಆದ್ದರಿಂದ, ಇಂಥ ವಿಷಯಗಳಲ್ಲಿ ಬಹುಸಂಖ್ಯಾತ ಸಮುದಾಯದ ಭಾವನೆಗಳಿಗೆ ಹಾಗು ಪದ್ಧತಿಗೆ ಗೌರವ ನೀಡಬೇಕೆಂದು ನಾನು ಭಾವಿಸಿರುವೆನು, ಹಾಗೂ ತತ್ಪರಿಣಾಮವಾಗಿ ದೃಢೀಕರಣ ಹಾಗು ಶಪಥದ ಸ್ಥಿತಿಯನ್ನು ಹೇಳುವ ಈ ವಿಧಾನವನ್ನು ನಾವು ಅಳವಡಿಸಿಕೊಂಡಿದ್ದೇವೆ. ನಾನು ಹೇಳಿದ ಹಾಗೆ, ನಾನು ಈ ಧೋರಣೆ ಅಥವಾ ಇನ್ನೊಂದು ಧೋರಣೆಯನ್ನು ಹೊಂದಿರುವುದಿಲ್ಲ. ಸದನದ ಇಚ್ಛೆಯನ್ನು ಕಾರ್ಯಗತಗೊಳಿಸಲು ನಾನು ಸಂಪೂರ್ಣವಾಗಿ ತಯಾರಾಗಿದ್ದೇನೆ. ಒಂದು ವೇಳೆ ಸದನದ ಅಭಿಮತವು ಶ್ರೀ ಕಾಮತ್ ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಇದ್ದರೆ– ಮತ್ತು ನಾನಿಲ್ಲಿ ಅರಿಕೆ ಮಾಡುವುದೇನೆಂದರೆ ಅದು ಹಿಂದೂಗಳಿಗೆ ಸಂಬಂಧಿಸಿದಂತೆ ಈ ದೇಶದಲ್ಲಿ ಉಪಸ್ಥಿತಿಯಲ್ಲಿರುವ ಪದ್ಧತಿಗೆ ವಿರುದ್ಧವಾಗುತ್ತದೆ– ಆಗ ನಾನು ಸಲಹೆ ಮಾಡುವುದೇನೆಂದರೆ, ಕರಡು ಸಮಿತಿಯು ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾದ ಇತರ ಎಲ್ಲ ವಿಧಿಗಳನ್ನು ಪರಿಗಣನೆಗೆ ತೆಗೆದುಕೊಂಡು ಪೂರ್ತಿ ವಿಷಯವನ್ನು ಏಕರೂಪಕ್ಕೆ ತರುವ ಸ್ವಾತಂತ್ರ್ಯದೊಂದಿಗೆ, ನನ್ನ ತಿದ್ದುಪಡಿಗಳನ್ನು ಈ ಹಂತದಲ್ಲಿ ಒಪ್ಪಿಕೊಳ್ಳಬೇಕು. ಇಲ್ಲಿ ಬದಲಾವಣೆಯನ್ನು ತಂದು ಇತರ ವಿಧಿಗಳನ್ನು ಅವು ಇದ್ದಂತೆಯೇ ಬಿಡುವುದು ಸೂಕ್ತವಾಗಿರುವುದಿಲ್ಲ.

**ಶ್ರೀ ಮಹಾವೀರ್ ತ್ಯಾಗಿ:** ವ್ಯಾಕರಣವು ದೇವರ ಹಾದಿಯಲ್ಲಿ ಅಡ್ಡ ಬರದಂತಿರಲಿ.

**ಶ್ರೀ ಹೆಚ್. ವಿ. ಕಾಮತ್:** ವಿಧಿ ೮೧ಕ್ಕೆ ಸಂಬಂಧಿಸಿದಂತೆ, ಸದನದ ಮುಂದೆ ತಿದ್ದುಪಡಿ ಇರುವುದಿಲ್ಲ. ಸಂಸತ್ತಿನ ಪ್ರತಿಯೊಂದು ಸದನದ ಪ್ರತಿಯೊಬ್ಬ ಸದಸ್ಯನು ಮೂರನೆಯ ಪರಿಶಿಷ್ಟದ ಪ್ರಕಾರ ದೃಢೀಕರಣ ಹಾಗೂ ಶಪಥವನ್ನು ಮಾಡಬೇಕೆಂದು ಹೇಳಲಾಗಿದೆ. ಆದರೆ ಸದನವು ಈಗಾಗಲೇ ಅಂಗೀಕರಿಸಿದ್ದೇನೆಂದರೆ, ರಾಷ್ಟ್ರಪತಿ ಹಾಗೂ ರಾಜ್ಯಪಾಲರುಗಳಿಗಾಗಿ ಶಪಥ ಅಥವಾ ದೃಢೀಕರಣ, ಮತ್ತು ಅದು ಇಂದಿನ ನನ್ನ ತಿದ್ದುಪಡಿಯಲ್ಲಿ ನಾನು ರಚಿಸಲಾದ ನಮೂನೆಯಲ್ಲಿರುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಈ ವಿಷಯದ ಮೇಲಿನ ಚರ್ಚೆ ಮಾಡುವ ಅವಶ್ಯಕತೆ ಇರುವುದಿಲ್ಲ. ಇದನ್ನು ಮತಕ್ಕೆ ಹಾಕುವುದು ಉತ್ತಮ. ಹೆಚ್ಚಿನ ಚರ್ಚೆಗೆ ಅವಕಾಶವಿರುವ ಪ್ರಶ್ನೆಯು ಇದಾಗಿರುವುದಿಲ್ಲ. ಡಾ. ಅಂಬೇಡ್ಕರ್ ಅವರು ಹೇಳಿದ ಹಾಗೆ, ಅವರು ಈ ವಿಷಯದಲ್ಲಿ ಯಾವುದೇ ನಿರ್ದಿಷ್ಟ ಅನಿಸಿಕೆಯನ್ನು ಹೊಂದಿರುವುದಿಲ್ಲ. ಮತ್ತು ಒಂದು ವೇಳೆ ಸದನವು ಒಂದು ರೀತಿಯಲ್ಲಿ ನಿರ್ಧರಿಸಿದರೆ, ಅದೇ ನಮೂನೆಯಲ್ಲಿ ಎಲ್ಲ ಪ್ರಕರಣಗಳನ್ನು ಇಡಲು ಅವರು ಸ್ವಾತಂತ್ರ್ಯವನ್ನು ಕೇಳುತ್ತಾರೆ. ಹಾಗಾಗಿ ನಾನು ತಿದ್ದುಪಡಿಯನ್ನು ಮತಕ್ಕೆ ಹಾಕುತ್ತಿದ್ದೇನೆ.

**ಶ್ರೀ ನಜೀರುದ್ದೀನ್ ಅಹ್ಮದ್:** ನನ್ನ ತಿದ್ದುಪಡಿಗಳನ್ನು ಡಾ. ಅಂಬೇಡ್ಕರ್ ಅವರು ಮುಟ್ಟಲೇ ಇಲ್ಲ.

**ಮಾನ್ಯ ಸಭಾಧ್ಯಕ್ಷರು:** ಅದು ಬೇರೆಯ ವಿಷಯವಾಗಿರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** "ಪ್ರಾಮಾಣಿಕವಾಗಿ" ಪದದ ನಂತರ? "ಪ್ರಾಮಾಣಿಕವಾಗಿ" ಪದದ ನಂತರ ನಾನು ಇನ್ನಷ್ಟು ಸೇರಿಸಲು ಇಚ್ಛಿಸುತ್ತೇನೆ. ಅದಷ್ಟೇ ಸಾಕಾಗುವುದಿಲ್ಲ.

ಮಾನ್ಯ ಅಧ್ಯಕ್ಷರು: ಅವರು "ಮಮತೆ' ಎಂಬ ಪದವನ್ನು ತೆಗೆಯಬಯಸುತ್ತಾರೆ.

(ಒಂದು ಕ್ಷಣ ತಡೆದು) ಸರಿ, ನಾನು ತಿದ್ದುಪಡಿಯನ್ನು ತೆಗೆದುಕೊಳ್ಳುತ್ತೇನೆ.

**(ಕೆಳಗಿನ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.)**

"ಯಾದಿ I(ಐದನೇ ವಾರ)ರ ತಿದ್ದುಪಡಿಗಳ ತಿದ್ದುಪಡಿಗಳಲ್ಲಿ ಸಂ. ೫೬ರಿಂದ ೬೩ರವರೆಗಿನ ತಿದ್ದುಪಡಿಗಳಲ್ಲಿ ಮೂರನೇ ಪರಿಶಿಷ್ಟದಲ್ಲಿಯ ಶಪಥ ಅಥವಾ ದೃಢೀಕರಣದ ನಮೂನೆಯಲ್ಲಿ

**'ವಿಧಿ ವಿಹಿತವಾಗಿ ದೃಢೀಕರಿಸು**

ದೇವರ ಹೆಸರಿನಲ್ಲಿ ಶಪಥ ಮಾಡು' "

(ಪ್ರಸ್ತಾಪಿತ ಬದಲಾವಣೆ) ಎಂಬ ಪದಗಳಿಗೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**'ದೇವರ ಹೆಸರಿನಲ್ಲಿ ಶಪಥ ಮಾಡು**

ವಿಧಿ ವಿಹಿತವಾಗಿ ದೃಢೀಕರಿಸು' "

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು.)**

**ಮಾನ್ಯ ಸಭಾಧ್ಯಕ್ಷರು:** ಎಲ್ಲೆಲ್ಲಿ ಇಂಥ ಅಭಿವ್ಯಕ್ತಿಗಳು ಬರುತ್ತವೆಯೋ ಅಂಥ ಇತರ ಪ್ರಕರಣಗಳಲ್ಲಿ ಇದೇ ರೀತಿಯಲ್ಲಿ ಡಾ. ಅಂಬೇಡ್ಕರ್ ಅವರಿಗೆ ಸದನವು ಅನುಮತಿ ನೀಡಿದೆ ಎಂದು ನಾನು ತಿಳಿದುಕೊಳ್ಳುತ್ತೇನೆ.

**ಗೌರವಾನ್ವಿತ ಸದಸ್ಯ:** ಹೌದು.

**ಶ್ರೀ ಜಸ್ವತ್‌ರಾಯ್ ಕಪೂರ್:** ಎಲ್ಲ ಸ್ಥಳಗಳಲ್ಲಿ ಎಲ್ಲೆಲ್ಲಿ "ದೃಢೀಕರಣ ಅಥವಾ ಶಪಥ" ಎಂಬ ಪದಗಳನ್ನು ನಾವು ಹೊಂದಿದ್ದೇವೆಯೋ ಅಲ್ಲೆಲ್ಲ ನಾವು "ಶಪಥ"ವನ್ನು ಮೊದಲು ಹಾಗೂ "ದೃಢೀಕರಣ"ನನ್ನು ನಂತರ ಹೊಂದಬೇಕೆಂದು ನಾನು ಸಲಹೆ ಮಾಡಬಹುದೇ? ಸಾರಭೂತ ಕಲಮುಗಳಲ್ಲಿ ಸಹ ಅದು ಹಾಗೆಯೇ ಇರಬೇಕು.

**ಮಾನ್ಯ ಸಭಾಧ್ಯಕ್ಷರು:** ಅದು ಹಾಗೆಯೇ ಇರಬೇಕು. ಈ ಅಭಿವ್ಯಕ್ತಿಯು ಎಲ್ಲೆಲ್ಲಿ ಬರುತ್ತದೆಯೋ ಅದನ್ನು ಇದೇ ಅನುಕ್ರಮದಲ್ಲಿಡಬೇಕು.

* * *

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆಯು ಹೀಗಿರುತ್ತದೆ:

"ಯಾದಿ I(ಐದನೇ ವಾರ)ರ ತಿದ್ದುಪಡಿಗಳಲ್ಲಿ, ತಿದ್ದುಪಡಿ ಸಂಖ್ಯೆ ೫೬ಕ್ಕೆ ಸಂಬಂಧಿಸಿದಂತೆ, ಘೋಷಣೆಗಳ ನಮೂನೆ Iರಲ್ಲಿ 'ಎಲ್ಲ ರೀತಿಯ ಜನರು ಎಂಬ ಪದಗಳಿಗೆ ಬದಲಾಗಿ 'ಎಲ್ಲ ಜನರು' ಎಂಬ ವಾಕ್ಯಗಳನ್ನು ಸೇರಿಸಬೇಕು."

**ಶ್ರೀ ನಜೀರುದ್ದೀನ್ ಅಹ್ಮದ್:** ಇದನ್ನು ಕರಡು ಸಮಿತಿಗೆ ಬಿಡಬಹುದು.

**ಮಾನ್ಯ ಸಭಾಧ್ಯಕ್ಷರು:** ಇದನ್ನು ಒತ್ತಾಯಪಡಿಸಲಾಗಲಿಲ್ಲ. ಆದ್ದರಿಂದ ಇದನ್ನು ಕೈಬಿಡಲಾಯಿತೆಂದು ನಾನು ತಿಳಿದುಕೊಳ್ಳುತ್ತೇನೆ.

* * *

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆಯು ಹೀಗಿರುತ್ತದೆ:

"ಮೂರನೆಯ ಪರಿಶಿಷ್ಟದ ಘೋಷಣೆ ಪತ್ರಗಳ ನಮೂನೆಗಳ ನಮೂನೆ VIರಲ್ಲಿ ತನ್ನ ಅಥವಾ ವಿವೇಚನೆಯಲ್ಲಿ ಅವರು ನಿರ್ವಹಿಸಬಹುದಾದ ಕಾರ್ಯಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಪ್ರಕರಣಗಳಲ್ಲಿ ರಾಜ್ಯಪಾಲರು ವಿಶೇಷವಾಗಿ ಅನುಮತಿಸಬಹುದಾದ" ಎಂಬ ಪದಗಳನ್ನು ತೆಗೆದು ಹಾಕಬೇಕು.

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು.)**

**ಮಾನ್ಯ ಅಧ್ಯಕ್ಷರು:** ಇತರ ತಿದ್ದುಪಡಿಗಳನ್ನು ಮತಕ್ಕೆ ಹಾಕುವುದು ಆವಶ್ಯಕವೆಂದು ನನಗೆ ಅನ್ನಿಸುವುದಿಲ್ಲ. ಏಕೆಂದರೆ ಮತ ಚಲಾವಣೆಯ ಇತರ ತಿದ್ದುಪಡಿಗಳಿಗೆ ಸಂಬಂಧಿಸಿದಂತೆಯೇ ಇರುತ್ತದೆ.

**ಶ್ರೀ ನಜಿರುದ್ದೀನ್ ಅಹ್ಮದ್:** ಅವುಗಳನ್ನು ಔಪಚಾರಿಕವಾಗಿ ಮಂಡಿಸಿ ಸದನದಿಂದ ತಿರಸ್ಕರಿಸ ಬಹುದು.

* * *

*__ಅಧ್ಯಕ್ಷರು:__ ಹಾಗಾದರೆ ಈ ಎಲ್ಲ ನಮೂನೆಗಳಿಗೆ ಸಂಬಂಧಿಸಿದಂತೆ ಡಾ. ಅಂಬೇಡ್ಕರ್ ಅವರು ಮಂಡಿಸಿದ ಪ್ರಸ್ತಾವನೆಯನ್ನು ಶ್ರೀ ಕಾಮತ್ ಅವರ ತಿದ್ದುಪಡಿಯ ತಿದ್ದುಪಡಿ ಮಾಡಿದಂತೆ ಮತ್ತು ಡಾ. ಅಂಬೇಡ್ಕರ್ ಅವರೇ ತಿದ್ದುಪಡಿ ಮಾಡಿದಂತೆ, ನಾನು ಇಡುತ್ತೇನೆ. ಅವುಗಳನ್ನು ಪ್ರತ್ಯೇಕವಾಗಿ ಓದುವ ಆವಶ್ಯಕತೆ ಇದೆ ಎಂದು ನನಗೆ ಅನ್ನಿಸುವುದಿಲ್ಲ.

**(ಗೊತ್ತುವಳಿಯನ್ನು ಅಂಗೀಕರಿಸಲಾಯಿತು)**

**ಮಾನ್ಯ ಅಧ್ಯಕ್ಷರು:** ಪ್ರಶ್ನೆಯು ಹೀಗಿರುತ್ತದೆ:

"ಮೂರನೇಯ ಪರಿಶಿಷ್ಟವು, ತಿದ್ದುಪಡಿ ಮಾಡಿದಂತೆ, ಸಂವಿಧಾನದ ಭಾಗವಾಗಿರುತ್ತದೆ."

**ಗೊತ್ತುವಳಿಯನ್ನು ಅಂಗೀಕರಿಸಲಾಯಿತು.**

**ಮೂರನೇ ಪರಿಶಿಷ್ಟವನ್ನು, ತಿದ್ದುಪಡಿ ಮಾಡಿದಂತೆ, ಸಂವಿಧಾನಕ್ಕೆ ಸೇರಿಸಲಾಯಿತು.**

* * *

**ಮಾನ್ಯ ಅಧ್ಯಕ್ಷರು:** ಬೇರೆ ಸದಸ್ಯರು ತಿದ್ದುಪಡಿಗಳನ್ನು ಅಭ್ಯಸಿಸುವುದಿಲ್ಲ ಎಂದು ಸದಸ್ಯನು ಊಹಿಸುವುದಕ್ಕೆ ಯಾವುದೇ ಆಧಾರವಿದೆ ಎಂದು ನನಗೆ ಅನ್ನಿಸುವುದಿಲ್ಲ.

**ಶ್ರೀ ನಜಿರುದ್ದೀನ್ ಅಹ್ಮದ್:** ಕೆಲವು ಗಂಭೀರ ಸ್ವಭಾವದ ಸದಸ್ಯರಿಂದಲೇ ಅವರು ತಿದ್ದುಪಡಿಗಳನ್ನು ಓದಿಲ್ಲವೆಂದು ನನಗೆ ಆಶ್ವಾಶಿಸಲಾಗಿದೆ. ಆದ್ದರಿಂದ, ತಿದ್ದುಪಡಿಗಳ ಗಂಭೀರತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸದನವು ಅವುಗಳನ್ನು ಪರಿಗಣಿಸಲು ಸಮಯ ಬೇಕು ಎಂದು ನಾನು ಹೇಳುತ್ತೇನೆ...

**ಮಾನ್ಯ ಅಧ್ಯಕ್ಷರು:** ಯಾವುದೇ ಒಂದು ವಿಷಯದ ಬಗ್ಗೆ ಅಥವಾ ತಿದ್ದುಪಡಿಯ ಬಗ್ಗೆ ಯಾವುದೇ ಪ್ರಶ್ನೆಯನ್ನು ಎತ್ತಿದರೆ ಹಾಗೂ ಸದಸ್ಯರು ಸಮಯ ಬಯಸಿದರೆ, ಅದನ್ನು ಆ ಸಮಯದಲ್ಲಿ ಪರಿಗಣಿಸೋಣ. ಈಗ ಒಂದೊಂದಾಗಿ ವಿಷಯಗಳನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಈ ತಿದ್ದುಪಡಿಗಳನ್ನು ಮೊನ್ನೆಯ ದಿನ, ಅಂದರೆ ಶನಿವಾರ ವಿಚಾರಿಸಲಾಗಿದೆ ಎಂದು ನಾನು ಹೇಳಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು:** ಅವುಗಳನ್ನು ಶನಿವಾರ ವಿವರಿಸಲಾಗಿದೆಯೇ?

**ಕೆಲವು ಗೌರವಾನ್ವಿತ ಸದಸ್ಯರು:** ಹೌದು ಮಾನ್ಯರೇ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಶನಿವಾರ ಸಾಯಂಕಾಲ ಎಂದು ನಾನು ತಿಳಿದಿದ್ದೇನೆ. ಶ್ರೀ ನಜಿರುದ್ದೀನ್ ಅಹ್ಮದ್ ಅವರಿಗೆ ಸಂಬಂಧಿಸಿದಂತೆ ಅವರ ಹೆಸರಿನಲ್ಲಿ ಸುಮಾರು ನಲವತ್ತು ತಿದ್ದುಪಡಿಗಳಿವೆ.

---

* ಸಿ.ಎ.ಡಿ. ಸಂ. IX, ೨೬ನೇ ಆಗಸ್ಟ್ ೧೯೪೯, ಪುಟ ೭೦೭.

**ಶ್ರೀ ನಜೀರುದ್ದೀನ್ ಅಹ್ಮದ್:** ಕೇವಲ ಇಪ್ಪತ್ತು ಮಾತ್ರ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವು ಪೂರ್ತಿ ಯಾದಿ Iನ್ನು ತಮ್ಮ ಪರಿವಿಧಿಯಲ್ಲಿ ತೆಗೆದುಕೊಳ್ಳುತ್ತವೆ. ಆದ್ದರಿಂದ ನನ್ನ ವಿನಂತಿ ಏನೆಂದರೆ ಅವರ ಫಿರ್ಯಾದಿಯು ಅವರ ವೈಯಕ್ತಿಕಕ್ಕೆ ಸಂಬಂಧಿಸಿದಂತೆ, ಅವರಿಗೆ ಸಮಯ ಸಿಗಲಿಲ್ಲವೆನ್ನುವುದು, ಖಂಡಿತವಾಗಿಯೂ ಆಧಾರರಹಿತವಾದದ್ದು ಎಂದು ಪರಿಗಣಿಸಬೇಕು.

## ಕೇಂದ್ರ ಯಾದಿ ಪಟ್ಟಿ–ದಾಖಲಾತಿ ೧

***ಮಾನ್ಯ ಅಧ್ಯಕ್ಷರು:** ನೀವು (ಡಾ. ಪಿ. ಎಸ್. ದೇಶ್‌ಮುಖ್) ಮೂಲವಾಗಿ ಈ ತಿದ್ದುಪಡಿಯ ಸೂಚನೆಯನ್ನು ನೀಡಿಲ್ಲ, ಮೊದಲನೆಯ ಸಂದರ್ಭದಲ್ಲಿಯೂ ಸಹ ಇಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದು ತಿದ್ದುಪಡಿಗೆ ತಿದ್ದುಪಡಿ ಆಗಿರುವುದಿಲ್ಲ.

**ಮಾನ್ಯ ಅಧ್ಯಕ್ಷರು:** ಇದು ಪೂರ್ತಿಯಾಗಿ ಹೊಸ ತಿದ್ದುಪಡಿಯೇ ಆಗಿರುತ್ತದೆ.

**ಡಾ. ಪಿ. ಎಸ್. ದೇಶ್‌ಮುಖ್:** ವಿಧಿಗಳಿಗೆ ಸಂಬಂಧಿಸಿದಂತೆ ಡಾ. ಅಂಬೇಡ್ಕರ್ ಅವರು ತಿದ್ದುಪಡಿಗಳನ್ನು ಯಾವ ತತ್ವವನ್ನಾಧರಿಸಿ ಮಂಡಿಸುತ್ತಿದ್ದಾರೆಯೋ ಅದೇ ತತ್ವದ ಆಧಾರದ ಮೇಲೆ ನಾನು ತಿದ್ದುಪಡಿಗಳನ್ನು ಮಂಡಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು:** ದಾಖಲಾತಿ ೧ಕ್ಕೆ ತಿದ್ದುಪಡಿಗಳಿರುವ ಸೂಚನೆಯನ್ನು ಈ ಮೊದಲು ನೀಡಲಾಗಿಲ್ಲ. ಈ ದಾಖಲಾತಿಯ ಮೇಲೆ ಇದೇ ಮೊದಲ ಸಲ ತಿದ್ದುಪಡಿಯನ್ನು ನಾವು ಹೊಂದಿದ್ದೇವೆ.

**ಡಾ. ಪಿ. ಎಸ್. ದೇಶ್‌ಮುಖ್:** ಮಾನ್ಯರೇ, ಅದು ಸತ್ಯಸಂಗತಿ. ಒಂದು ವೇಳೆ ಡಾ. ಅಂಬೇಡ್ಕರ್ ಅವರು ಈ ದಾಖಲಾತಿಯ ಪದಗಳ ಮರುಜೋಡಣೆಯ ಆವಶ್ಯಕತೆ ಇದೆ ಎಂದುಕೊಂಡರೆ, ಅವರು ಇದನ್ನು ಬಹುಶಃ ಒಪ್ಪಿಕೊಳ್ಳಬಹುದು, ಇಲ್ಲದಿದ್ದರೆ ನಾವು ಇದನ್ನು ಹಿಂದಕ್ಕೆ ಪಡೆಯಲು ತಯಾರಾಗಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದು ದಾಖಲಾಗಿ ೧೮ ಪದಗಳಿಗೆ ಮಾತ್ರ ಸಂಬಂಧಿಸಿದೆ. ನಾವು ಒಂದು ದಾಖಲಾತಿಯ ಮೇಲೆ ಐದು ನಿಮಿಷಗಳಿಗಿಂತ ಹೆಚ್ಚು ಸಮಯವನ್ನು ತೆಗೆದುಕೊಳ್ಳ ಕೂಡದೆಂದು ನೀವು ನಿರ್ಣಯ ಕೊಟ್ಟಿರುವಿರಿ, ಮತ್ತು ಈಗಾಗಲೇ ಐದು ನಿಮಿಷಗಳಿಗಿಂತ ಹೆಚ್ಚು ಸಮಯವಾಗಿದೆ.

**ಅಧ್ಯಕ್ಷರು:** ಡಾ. ಅಂಬೇಡ್ಕರ್ ಅವರು ಹೇಳಿದ ಹಾಗೆ, ಇದು ದಾಖಲಾತಿಯ ಪದಗಳಿಗೆ ಮಾತ್ರ ಸಂಬಂಧಿಸಿರುವುದರಿಂದ, ಅದನ್ನು ಪರಿಗಣಿಸಲು ನಾವು ಅವರಿಗೇ ಬಿಡಬಹುದು. ನಾವು ಇಂಥ ವಿಷಯಗಳ ಮೇಲೆ, ಅದರಲ್ಲೂ ಅವುಗಳ ಯಾವುದೇ ಹೊಸ ವಿಚಾರವನ್ನು ಹೊಂದಿದ್ದಾಗ ನಾವು ಹೆಚ್ಚು ಚರ್ಚೆಯನ್ನು ಮಾಡಬಾರದು.

[**ಕೇಂದ್ರ ಯಾದಿಗೆ ದಾಖಲಾತಿ ೧ನ್ನು ಸೇರಿಸಲಾಯಿತು.**]

* * *

---

* ಸಿ.ಎ.ಡಿ. ಸಂ. IX, ೨೯ನೇ ಆಗಸ್ಟ್ ೧೯೪೯, ಪುಟ ೭೨೧.

# ದಾಖಲಾತಿ ೨

*ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ Iರ ದಾಖಲಾತಿ ೨ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:

'೨ ಸೆಂಟ್ರಲ್ ಬ್ಯೂರೋ ಆಫ್ ಇಂಟೆಲಿಜೆನ್ಸ್ ಮತ್ತು ಇನ್‌ವೆಸ್ಟಿಗೇಶನ್.'

"ಮತ್ತು ಇನ್‌ವೆಸ್ಟಿಗೇಶನ್" ಎಂಬ ಶಬ್ದಗಳನ್ನು ಮಾತ್ರ ಸೇರಿಸಲಾಗಿದೆ. ಇಲ್ಲದಿದ್ದರೆ ದಾಖಲಾತಿಯು ಕರಡಿನಲ್ಲಿ ಇದ್ದಂತೆಯೇ ಇರುತ್ತದೆ.

**ಶ್ರೀ ಮಹಾವೀರ್ ತ್ಯಾಗಿ:** ಈ ಸೇರಿಸುವಿಕೆಯ ಪ್ರಾಮುಖ್ಯತೆ ಏನು? ಈ ಶಬ್ದಗಳನ್ನು ನೀವು ಯಾಕೆ ಸೇರಿಸಿದ್ದೀರಿ ಎನ್ನುವುದರ ಬಗ್ಗೆ ದಯವಿಟ್ಟು ನೀವು ಬೆಳಕು ಚೆಲ್ಲುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದರ ವಿಚಾರವೇನೆಂದರೆ, ಕೇಂದ್ರ ಕಚೇರಿಯಲ್ಲಿ ದೇಶದಾದ್ಯಂತ ಜನರಿಂದ ಎಸಗಲಾಗುವ ಅಪರಾಧಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಣೆ ಮಾಡುವ ಒಂದು ರೀತಿಯ ಬ್ಯೂರೋ ಇರಬೇಕು ಮತ್ತು ಅವರಿಗೆ ಕೊಡಲಾದ ಮಾಹಿತಿಯು ಸರಿಯಾಗಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ತಿಳಿದುಕೊಂಡು ಹಾಗೂ ತನ್ಮೂಲಕ ಪ್ರಾಂತೀಯ ಸರ್ಕಾರಗಳಿಗೆ ಭಾರತದ ವಿವಿಧ ಭಾಗಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿಸಲು ಶಕ್ತವಾಗಿರಬೇಕು. ಇದರಿಂದ ಆ ಸರ್ಕಾರಗಳು ತಮ್ಮ ಆರಕ್ಷಕ ಅಧಿಕಾರಗಳನ್ನು ಇನ್ನೂ ಹೆಚ್ಚಿನ ಉತ್ತಮ ರೀತಿಯಲ್ಲಿ ಅಂಥ ಮಾಹಿತಿಯ ಅನುಪಸ್ಥಿತಿಯಲ್ಲಿ ಅವರಿಗೆ ಚಲಾಯಿಸಲು ಸಾಧ್ಯವಿಲ್ಲವೋ, ಹಾಗೆ ಚಲಾಯಿಸಲು ಅನುಕೂಲವಾಗುತ್ತದೆ.

* * *

****ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರೇ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ನನ್ನ ಮಿತ್ರರಾದ ಶ್ರೀ ನಜಿರುದ್ದೀನ್ ಅಹ್ಮದ್ ಅವರು ಮಂಡಿಸಿದ ಯಾವುದೇ ತಿದ್ದುಪಡಿಗಳನ್ನು ಒಪ್ಪುವ ಸ್ಥಿತಿಯಲ್ಲಿಲ್ಲ. ಈ ತಿದ್ದುಪಡಿಗಳು ಗಡಿಬಿಡಿಯ ಮನಸ್ಸಿನ ಫಲಿತಾಂಶಗಳೆಂದು ತೋರುತ್ತದೆ...

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರು ಹರಿತವಾದ ಭಾಷೆಯನ್ನು ಉಪಯೋಗಿಸಬೇಕಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ತಿದ್ದುಪಡಿ ಸಂಖ್ಯೆ ೧೪೬ 'ಮತ್ತು ತನಿಖೆ' ಎಂಬ ಶಬ್ದಗಳನ್ನು ತೆಗೆದುಹಾಕಬಯಸುತ್ತದೆ. 'ತನಿಖೆ' ಎಂಬ ಶಬ್ದವನ್ನು ತೆಗೆದು ಹಾಕುವ ಆಧಾರವು ನನ್ನ ಮಿತ್ರ ಶ್ರೀ ನಜಿರುದ್ದೀನ್ ಅಹ್ಮದ್ ಅವರ ಸಲಹೆಯಂತೆ, ಕೇಂದ್ರ ಹಾಗೂ ಪ್ರಾಂತ್ಯಗಳ ವ್ಯಾಪ್ತಿಯ ನಡುವೆ ತೊಡಕುಂಟಾಗುತ್ತದೆ ಎನ್ನುವುದು. ನಾನು ಮಂಡಿಸಿದ ದಾಖಲಾತಿಯನ್ನು ಅವರು ಹಾಗೆ ತಿಳಿದುಕೊಂಡಿದ್ದರೆ, ಅವರು 'ತನಿಖೆ' ಎಂಬ ಶಬ್ದವು ತಾವೇ ಮಂಡಿಸಿದ ನಂತರದ ಎರಡು ತಿದ್ದುಪಡಿಗಳಲ್ಲಿ, ತಿದ್ದುಪಡಿ ಸಂಖ್ಯೆ ೧೪೭ ಮತ್ತು ೧೪೮, ಉಳಿಯಲು ಹೇಗೆ ಸಮ್ಮತಿಸಿದರೆಂದು ನಾನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ.

---

* ಸಿ.ಎ.ಡಿ. ಸಂ. IX, ೨೯ನೇ ಆಗಸ್ಟ್ ೧೯೪೯, ಪುಟ ೭೨೪.

** ಅದೇ, ಪುಟ ೭೨೬.

**ಮಾನ್ಯ ಸಭಾಧ್ಯಕ್ಷರು:** ೧೪೭ ಮಾತ್ರ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ಇನ್ನೊಂದನ್ನು ಹೊಂದಿದ್ದಾರೆ.

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿ ಸಂಖ್ಯೆ ೧೪೮ನ್ನು ಮಂಡಿಸಲಾಗಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ವಿಷಯದ ಅಂಶವೇನೆಂದರೆ, 'ತನಿಖೆ' ಎಂಬ ಶಬ್ದವು ಇಲ್ಲಿ ಅಪರಾಧದ ತನಿಖೆಯನ್ನು ಮಾಡಲು ಅನುಮತಿಸುವುದಿಲ್ಲ. ಏಕೆಂದರೆ ಆ ವಿಷಯವು ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಪ್ರತ್ಯೇಕವಾಗಿ ಆರಕ್ಷಕ ಅಧಿಕಾರಿಗೆ ಬಿಡಲಾಗಿದೆ. ಆರಕ್ಷಣೆಯು ಪ್ರತ್ಯೇಕವಾಗಿ ರಾಜ್ಯ ವಿಷಯವಾಗಿದೆ. ಅದಕ್ಕೆ ಕೇಂದ್ರ ಯಾದಿಯಲ್ಲಿ ಸ್ಥಾನವಿಲ್ಲ. ಆದ್ದರಿಂದ "ತನಿಖೆ" ಎಂಬ ಶಬ್ದದ ಉದ್ದೇಶವು ಏನು ನಡೆಯುತ್ತಲಿದೆ ಎಂಬುದನ್ನು ಕಂಡುಕೊಳ್ಳುವ ಉದ್ದೇಶದಿಂದ ಮಾಡುವ ಸಾಮಾನ್ಯ ವಿಚಾರಣೆಯಾಗಿರುತ್ತದೆ. ಈ ತನಿಖೆಯು ಅಪರಾಧಿಯ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸುವುದಕ್ಕೆ ಪೂರ್ವಸಿದ್ಧತೆಯ ತನಿಖೆಯಾಗಿರುವುದಲ್ಲ. ಅದನ್ನು ದಂಡ ಪ್ರಕ್ರಿಯಾ ಸಂಹಿತೆಯಡಿಯಲ್ಲಿ ಆರಕ್ಷಕ ಮಾತ್ರ ಮಾಡಲು ಅರ್ಹನಿರುತ್ತಾನೆ.

[**ದಾಖಲಾತಿ ೨ ಇದನ್ನು ಡಾ. ಅಂಬೇಡ್ಕರ್ ತಿದ್ದುಪಡಿ ಮಾಡಿದ ಹಾಗೆ, ಕೇಂದ್ರ ಯಾದಿಗೆ ಸೇರಿಸಲಾಯಿತು.**]

* * *

## ದಾಖಲಾತಿ ೩

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಈ ರೀತಿ ಮಂಡಿಸಲು ಬೇಡಿಕೊಳ್ಳುತ್ತೇನೆ:

"ಯಾದಿ Iರ ದಾಖಲಾತಿ ೩ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**'೩. ದೇಶದ ರಕ್ಷಣೆ, ವಿದೇಶ ವ್ಯವಹಾರಗಳು ಮತ್ತು ಭದ್ರತೆಗೆ ಸಂಬಂಧಿಸಿದ ಕಾರಣಗಳಿಗಾಗಿ ಭಾರತ ಗಡಿ ಕ್ಷೇತ್ರದಲ್ಲಿ ತಡೆಯಾತ್ಮಕ ಬಂಧನ; ಅಂಥ ಬಂಧನಕ್ಕೆ ಒಳಪಟ್ಟ ವ್ಯಕ್ತಿಗಳು.'**

ಕರಡು ಸಂವಿಧಾನದಲ್ಲಿಯ ಮೂಲ ದಾಖಲಾತಿಯೊಂದಿಗೆ ಈ ದಾಖಲಾತಿಯನ್ನು ಹೋಲಿಸಿದಾಗ, ಎರಡು ಬದಲಾವಣೆಗಳನ್ನು ಮಾತ್ರ ಗಮನಿಸಬಹುದು: "ಬಾಹ್ಯ ವ್ಯವಹಾರಗಳು" ಎಂಬ ಪದಗಳಿಗೆ ಬದಲಾಗಿ ಈಗ ನಾವು "ವಿದೇಶ ವ್ಯವಹಾರಗಳು" ಎಂಬ ಪದಗಳನ್ನು ಉಪಯೋಗಿಸಿದ್ದೇನೆ. "ಅಂಥ ಬಂಧನಕ್ಕೆ ಒಳಪಟ್ಟ ವ್ಯಕ್ತಿಗಳು" ಎಂಬುದನ್ನು ಹೊಸದಾಗಿ ಸೇರಿಸಲಾಗಿದೆ; ಮೊದಲಿದ್ದ ಹಾಗಿನ ದಾಖಲಾತಿ ೩ರಲ್ಲಿ ಇದು ಇರಲಿಲ್ಲ. ಆದರೆ, ಭಾರತೀಯ ಸರ್ಕಾರ ಕಾಯ್ದೆ ತಿದ್ದುಪಡಿಯಲ್ಲಿ ಇದನ್ನು ಸದನವು ಈಗಾಗಲೇ ಅಂಗೀಕರಿಸಿದೆ. ಆದ್ದರಿಂದ, ಸಾರಭೂತವಾಗಿ, ನಾನು ಪ್ರಸ್ತಾಪಿಸುತ್ತಿರುವ ತಿದ್ದುಪಡಿಯಲ್ಲಿ ಬದಲಾವಣೆಯಿರುವುದಿಲ್ಲ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಿತ್ರ ಶ್ರೀ ಕಾಮತ್ ಅವರು ನನಗೆ ಹಾಕಿದ ಪ್ರಶ್ನೆಗೆ ಉತ್ತರವಾಗಿ ನಾನು ಅವರಿಗೆ ಹೇಳಬಯಸುವುದೇನೆಂದರೆ ನಾಗರಿಕನ ಗಡಿಪಾರಿಗೆ ನಿಯಮಾಂಶವಿರಬೇಕಾಗಿಲ್ಲ. ಬಂಧನವಿರಬಹುದು, ಆದರೆ ಗಡಿಪಾರು ಅಲ್ಲ. ಗಡಿಪಾರು ಕಾನೂನನ್ನು ವಿದೇಶಿಯರಿಗೆ ಮಾತ್ರ ಅನ್ವಯ ಮಾಡಲಾಗುವುದು, ಮತ್ತು ವಿದೇಶಿಯರು ಮುಂತಾದವುಗಳ ಬಗ್ಗೆ ನಮ್ಮ ಯಾದಿಯಲ್ಲಿ ದಾಖಲಾತಿ ಇದೆ. ಅದರ ಪ್ರಕಾರ, ವಿದೇಶಿಯನ ಜೊತೆ ರಾಷ್ಟ್ರವು ನಿರ್ವಹಿಸಲು ಶಕ್ತವಾಗಿದೆ, ಅದು ಅವನನ್ನು ಗಡಿಪಾರು ಮಾಡಲು ಬಯಸಿದರೆ, ಮಾಡಬಹುದು.

**ಶ್ರೀ ಹೆಚ್.ಇ. ಕಾಮತ್:** ಯಾದಿಯಲ್ಲಿ ದಾಖಲಾತಿ ಎಲ್ಲಿದೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ದಾಖಲಾತಿ ಸಂಖ್ಯೆ ೧೯. ಈಗ, ನನ್ನ ಮಿತ್ರ ಶ್ರೀ ದೇಶಮುಖ್ ಅವರು ನನಗೆ ಹಾಕಿದ ಪ್ರಶ್ನೆಗೆ ಸಂಬಂಧಿಸಿದಂತೆ, "ರಾಜ್ಯಕ್ಕೆ ಸಂಬಂಧಿಸಿದ ಕಾರಣಗಳಿಗಾಗಿ" ಎಂಬ ಪದಗಳನ್ನು ಬದಲಾಯಿಸಬೇಕೆಂದು ಅವರು ಬಯಸುತ್ತಾರೆ. ನನ್ನ ನಿರ್ಣಯದಲ್ಲಿ, ಅದು ಮಿತಿಯುಳ್ಳ ದಾಖಲಾತಿಯಾಗುತ್ತಿದೆ; ಮತ್ತು ನಮ್ಮದು ಹೆಚ್ಚು ಉತ್ತಮವಾದದ್ದಾಗಿರುತ್ತದೆ, ಏಕೆಂದರೆ ಅದು ಯಾವ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ತಡೆಯಾತ್ಮಕ ಬಂಧನವನ್ನು ಆದೇಶಿಸಬಹುದೆಂದು ನಿರ್ದಿಷ್ಟಪಡಿಸುತ್ತದೆ.

ಮತ್ತು ನಂತರ ಶ್ರೀ ಬ್ರಜೇಶ್ವರ್ ಪ್ರಸಾದ್ ಅವರು ಸಾರ್ವಜನಿಕ ಹಿತಾಸಕ್ತಿಯನ್ನು ಸೇರಿಸ ಬಯಸುತ್ತಾರೆ.

**ಶ್ರೀ ಬ್ರಜೇಶ್ವರ್ ಪ್ರಸಾದ್:** ನಾನು ಅದನ್ನು ಬಯಸಲಿಲ್ಲ. "ಸಂರಕ್ಷಣೆ ಮುಂತಾದವುಗಳಿಗೆ ಸಂಬಂಧಿಸಿದ ಕಾರಣಗಳು" ಎಂಬ ಪದಗಳು "ಸಾರ್ವಜನಿಕ ಭದ್ರತೆ ಅಥವಾ ಹಿತಾಸಕ್ತಿ"ಯನ್ನು ಒಳಗೊಂಡಿವೆಯೇ ಎಂಬುದನ್ನು ಮಾತ್ರ ತಿಳಿಯಬಯಸಿದ್ದೇವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು. "ಭಾರತದ ಭದ್ರತೆ" ಎಂಬ ಪದವು ಬಹಳ ವಿಸ್ತಾರವಾದದ್ದಾಗಿದೆ.

**ಶ್ರೀ ಬ್ರಜೇಶ್ವರ್ ಪ್ರಸಾದ್:** ನಾನು "ಭಾರತದ ಭದ್ರತೆ"ಯನ್ನು ಉಲ್ಲೇಖಿಸುತ್ತಿಲ್ಲ. ಆದರೆ "ಸಾರ್ವಜನಿಕ ಭದ್ರತೆ ಅಥವಾ ಹಿತಾಸಕ್ತಿ"ಯನ್ನು ಉಲ್ಲೇಖಿಸುತ್ತಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈಗ, ಶ್ರೀ ನಜೀರುದ್ದೀನ್ ಅಹ್ಮದ್ ಅವರ ಪ್ರಶ್ನೆಗೆ ಸಂಬಂಧಿಸಿದಂತೆ, ಅವರು "ಅಂಥ ಬಂಧನಕ್ಕೆ ಒಳಪಟ್ಟ ವ್ಯಕ್ತಿಗಳು" ಎಂಬ ಶಬ್ದಗಳನ್ನು ತೆಗೆದುಹಾಕಲು ಬಯಸುತ್ತಾರೆ.

**ಮಾನ್ಯ ಸಭಾಧ್ಯಕ್ಷರು:** ಇಲ್ಲ, ಅವರು ಆ ತಿದ್ದುಪಡಿಯನ್ನು ಮಂಡಿಸಿಲ್ಲ. ಅವರು "ವಿದೇಶಿ" ಎಂಬ ಶಬ್ದಕ್ಕೆ "ಬಾಹ್ಯ" ಎಂಬ ಶಬ್ದವನ್ನು ಬದಲಾಯಿಸುವುದನ್ನು ಮಾತ್ರ ಬಯಸುತ್ತಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾವು ಇಲ್ಲಿಯವರೆಗೆ "ವಿದೇಶಿ" ಎಂಬ ಪದವನ್ನೇ ಬಳಸುತ್ತ ಬಂದಿದ್ದೇವೆ, ಮತ್ತದು ಅದೇ ಶಬ್ದವನ್ನು ಇಟ್ಟುಕೊಳ್ಳುವುದು ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ.

**ಶ್ರೀ ಹೆಚ್. ವಿ. ಕಾಮತ್:** ಭಾರತದ ಭದ್ರತೆಯು ಅದರ ಯಾವುದೇ ಒಂದು ಭಾಗದ ಭದ್ರತೆಯು ಒಂದೇ ಆಗಿರುತ್ತದೆಯೇ? ಮತ್ತು ಈ ದಾಖಲಾತಿಯು ವಿಧಿ ೨೭೫ಕ್ಕೆ ಅನುಗುಣವಾಗಿದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು. ನಿಸ್ಸಂದೇಹವಾಗಿಯೂ.

**ಮಾನ್ಯ ಸಭಾಧ್ಯಕ್ಷರು:** ಶ್ರೀ ನಜೀರುದ್ದೀನ್ ಅಹ್ಮದ್‌ರ ತಿದ್ದುಪಡಿ ಸಂಖ್ಯೆ ೧೪೯ನ್ನು ನಾನು ಮತಕ್ಕೆ ಹಾಕುತ್ತೇನೆ.

(ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.)

**ಮಾನ್ಯ ಅಧ್ಯಕ್ಷರು:** ನಂತರ ನಾನು ಡಾ. ದೇಶ್‌ಮುಖ್‌ರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

(ಈ ತಿದ್ದುಪಡಿಯನ್ನು ಸಹ ತಿರಸ್ಕರಿಸಲಾಯಿತು)

**ಮಾನ್ಯ ಅಧ್ಯಕ್ಷರು:** ನಂತರ ನಾನು ಡಾ. ಅಂಬೇಡ್ಕರ್ ಅವರು ಮಂಡಿಸಿದ ದಾಖಲಾತಿಯನ್ನು ಮತಕ್ಕೆ ಹಾಕುತ್ತೇನೆ.

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು.)**

## ದಾಖಲಾತಿ ೪

***ಮಾನ್ಯ ಸಭಾಧ್ಯಕ್ಷರು:** ನಂತರ ನಾವು ದಾಖಲಾತಿ ೪ಕ್ಕೆ ಬರೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೀಗೆ ಮಂಡಿಸುತ್ತೇನೆ:

"ಯಾದಿ Iರ ದಾಖಲಾತಿ ೪ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**"೪ ನೌಕಾಪಡೆ, ಭೂ ಮತ್ತು ವಾಯುಪಡೆಗಳು, ಕೇಂದ್ರದ ಯಾವುದೇ ಇತರ ಶಸ್ತ್ರಧಾರಿ ಪಡೆಗಳು.' "**

ಗೌರವಾನ್ವಿತ ಸದಸ್ಯರು ಈ ದಾಖಲಾತಿಯು ಬಹಳ ದೊಡ್ಡದಾಗಿರುವುದನ್ನು ಕಾಣಬಹುದು. ಮತ್ತು ಇದು ಎರಡು ಭಾಗಗಳನ್ನು ಹೊಂದಿರುತ್ತದೆ. ದಾಖಲಾತಿಯ ಒಂದು ಭಾಗ ಕೇಂದ್ರದಿಂದ ಪಡೆಗಳನ್ನು ರೂಪಿಸುವುದಕ್ಕೆ ಸಂಬಂಧಿಸಿದೆ. ಎರಡನೇ ಭಾಗವು. ಭಾಗ IIIರಲ್ಲಿ ನಮೂದಿಸಿದ ರಾಜ್ಯಗಳ ಪಡೆಗಳಿಗೆ ಸಂಬಂಧಿಸಿರುತ್ತದೆ. ಭಾಗ IIIರಲ್ಲಿಯ ರಾಜ್ಯಗಳನ್ನು ಭಾಗ Iರಲ್ಲಿಯ ರಾಜ್ಯಗಳ ತಳಹದಿಯಲ್ಲಿಯೇ ಇಡಲು ನಿರ್ಧರಿಸಿರುವುದರಿಂದ, ಈ ದಾಖಲಾತಿಯ ಎರಡನೇ ಭಾಗವನ್ನು ತೆಗೆದುಹಾಕುವುದು ಅಪೇಕ್ಷಣೀಯವಾಗಿರುತ್ತದೆ ಮತ್ತು ಯಾವುದೇ ರಾಜ್ಯಗಳು ಯಾವುದೇ ಪಡೆಗಳನ್ನು ಈಗ ಹೊಂದಿರುವುದಕ್ಕೆ ಸಂಬಂಧಿಸಿದಂತೆ, ಈ ಸಂವಿಧಾನದ ಬದಲಾವಣೆಗೊಳಬಹುದಾದ ನಿಯಮಾಂಶಗಳನ್ನು ನಿರ್ವಹಿಸುವ ಭಾಗದಲ್ಲಿ ಒಂದು ನಿಯಮಾಂಶದ ಮೂಲಕ ಸ್ಥಾನ ಕಲ್ಪಿಸಲಾಗುವುದು.

ದಾಖಲಾತಿಯ ಮೊದಲನೆಯ ಭಾಗಕ್ಕೆ ಸಂಬಂಧಿಸಿದಂತೆ, ಇದು ಸ್ಪಷ್ಟವಾಗಿದೆ ಎಂದು ಅನ್ನಿಸಿದೆ, ಮತ್ತು ಅನೇಕ ಶಬ್ದಗಳ ಅವಶ್ಯಕತೆ ಇರುವುದಿಲ್ಲ, ಹಾಗೂ ಈ ಪ್ರಸ್ತಾಪಿಸಿದ ಸಣ್ಣ ಪದಪುಂಜವು– "ನೌಕಾ, ಭೂ ಮತ್ತು ವಾಯುಪಡೆಗಳು"– ಕೇಂದ್ರಕ್ಕೆ ಭೂ, ನೌಕಾ ಹಾಗೂ ವಾಯು ಸೇನಾಪಡೆಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ ಆವಶ್ಯಕ ಅಧಿಕಾರವನ್ನು ಕೊಡಲು ಸಾಕಾಗಿರುತ್ತದೆ.

* * *

---

* ಸಿ.ಎ.ಡಿ. ಸಂ. IX, ೨೯ನೇ ಆಗಸ್ಟ್ ೧೯೪೯, ಪುಟ ೭೩೧.

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** "ಕೇಂದ್ರದ ಇತರ ಯಾವುದೇ ಸಶಸ್ತ್ರ ಪಡೆಗಳು" ಎಂಬುದನ್ನು ಇಟ್ಟುಕೊಳ್ಳುವುದು ಆವಶ್ಯಕವಾಗಿರುತ್ತದೆ. ಏಕೆಂದರೆ, ನಿಯಮಿತ ಸೇನಾಪಡೆಗಳಲ್ಲದೇ, ಇತರ ಕೆಲವು ಪಡೆಗಳು ಸಹ ಸಶಸ್ತ್ರ ಪಡೆಗಳಡಿಯಲ್ಲಿ ಬರುತ್ತವೆ ಹಾಗೂ ಅವು ಕೇಂದ್ರದ ನಿರ್ವಹಣೆಯಲ್ಲಿ ಬರುತ್ತವೆ. ಉದಾಹರಣೆಗೆ, "ಅಸ್ಸಾಂ ರೈಫಲ್ಸ್" ಎಂದು ಕರೆಯಲ್ಪಡುವ ಗಡಿ ರಕ್ಷಣೆ ಮಾಡುವ ಪಡೆಗಳು. ಭಾರತದ ಕೆಲವು ರಾಜ್ಯಗಳಿಗೆ ಸಂಬಂಧಿಸಿದಂತೆ ಕೇಂದ್ರದಿಂದ ನಿರ್ವಹಿಸಲ್ಪಡುವ ಕೆಲವು ಸಶಸ್ತ್ರ ಆರಕ್ಷಕ ಪಡೆಗಳು ಇರುತ್ತವೆ. ಆದ್ದರಿಂದ, ಅವುಗಳಿಗೆ ಕಾನೂನಾತ್ಮಕ ನೆಲೆಯನ್ನು ನೀಡಲು ದಾಖಲಾತಿ ೪ರಲ್ಲಿ ಸೇರಿಸುವುದು ಅಪೇಕ್ಷಾರ್ಹವಾಗಿರುತ್ತದೆ. ಅವುಗಳನ್ನು ಭಾರತೀಯ ಸರ್ಕಾರ ಕಾಯ್ದೆ, ೧೯೩೫ರ ದಾಖಲಾತಿ ೧ರಲ್ಲಿ ಸಹ ನೌಕಾ, ಭೂ ಹಾಗೂ ವಾಯುಪಡೆಗಳಿಂದ ಪ್ರತ್ಯೇಕವಾಗಿ ಗುರುತಿಸಲಾಗಿದೆ ಎಂಬುದನ್ನು ಸಹ ನಮೂದಿಸಬಹುದು.

**ಮಾನ್ಯ ಅಧ್ಯಕ್ಷರು:** ನಾನು ಸರ್ದಾರ ಹುಕುಂ ಸಿಂಗ್ ಅವರ ತಿದ್ದುಪಡಿಯನ್ನು ಸದನದ ಮುಂದೆ ಇಡುತ್ತೇನೆ.

(ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.)

**ಮಾನ್ಯ ಅಧ್ಯಕ್ಷರು:** ನಂತರ ನಾನು ಡಾ. ಅಂಬೇಡ್ಕರ್ ಅವರು ಮಂಡಿಸಿದ ದಾಖಲಾತಿಯನ್ನು ಇಡುತ್ತೇನೆ.

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ದಾಖಲಾತಿ ೪ನ್ನು, ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.)**

* * *

## ದಾಖಲಾತಿ ೫

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ದಾಖಲಾತಿ ೫ನ್ನು ಸಂಖ್ಯೆ ೬೪ರೊಂದಿಗೆ ಓದಿಕೊಳ್ಳಬೇಕು. ದಾಖಲಾತಿ ೬೪ ಸಾರ್ವಜನಿಕ ಹಿತಾಸಕ್ತಿಗಳಿಗೆ ಆವಶ್ಯಕವಾದ ಉದ್ಯಮಗಳೆಂದು ಸಂಸತ್ತು ಘೋಷಿಸಿದ ಉದ್ಯಮಗಳ ನಿಯಂತ್ರಣವನ್ನು ನಿರ್ವಹಿಸುತ್ತದೆ. ಈ ದಾಖಲಾತಿ ೫ ರಕ್ಷಣಾ ಉದ್ದೇಶಗಳಿಗಾಗಿ ಅಥವಾ ಯುದ್ಧವನ್ನು ಮಾಡುವ ಸಲುವಾಗಿ ಉದ್ಯಮಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿರುತ್ತದೆ. ಅದು ಮುಖ್ಯ ವ್ಯತ್ಯಾಸವಾಗಿರುವುದರಿಂದ, ದಾಖಲಾತಿ ೫ನ್ನು ದಾಖಲಾತಿ ೬೪ಕ್ಕೆ ಹೋಲುವಂತೆ ಮಾಡುವುದರಿಂದ ಅದು ಯುದ್ಧದ ಪ್ರಯತ್ನಕ್ಕೆ ತೊಡಕು ಉಂಟು ಮಾಡುವುದೆಂದು ನನಗೆ ಅನಿಸುತ್ತದೆ. ಎರಡೂ ವಿಧಿಗಳಲ್ಲಿ ಸಂಸತ್ತಿನ ಘೋಷಣೆ ಆವಶ್ಯಕವಾಗಿರುತ್ತದೆ. ಬೇರೆ ಬೇರೆ ಗುರಿಗಳು ಹಾಗೂ ಉದ್ದೇಶಗಳನ್ನು ಗಮನದಲ್ಲಿ ಇಟ್ಟುಕೊಂಡು, ದಾಖಲಾತಿ ೫ನ್ನು ದಾಖಲಾತಿ ೬೪ರಿಂದ ಬೇರೆ ಮಾಡಲಾಗಿದೆ.

**(ದಾಖಲಾತಿ ೫ನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.)**

---

* ಸಿ.ಎ.ಡಿ. ಸಂ. IX, ೨೯ನೇ ಆಗಸ್ಟ್ ೧೯೪೯, ಪುಟ ೭೩೨.

## ದಾಖಲಾತಿ ೬

**(ದಾಖಲಾತಿ ೬ನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.)**

## ದಾಖಲಾತಿ ೭

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ IIರ ದಾಖಲಾತಿ ೭ಕ್ಕೆ ಬದಲಾಗಿ, ಕೆಳಗಿನದನ್ನು ಸೇರಿಸಬೇಕು:–

**'೭ ದಂಡು ಕ್ಷೇತ್ರಗಳ ನಿರ್ದಿಷ್ಟತೆ, ಅಂಥ ಕ್ಷೇತ್ರಗಳ ಸ್ಥಳೀಯ ಸ್ವ–ಸರ್ಕಾರ, ದಂಡು ಪ್ರಾಧಿಕಾರಗಳ ರಚನೆ ಹಾಗೂ ಅಧಿಕಾರಗಳು ಮತ್ತು ಅಂಥ ಕ್ಷೇತ್ರಗಳಲ್ಲಿ ಮನೆಗಳ ವಸತಿ ಸೌಕರ್ಯದ (ಬಾಡಿಗೆಯ ನಿಯಂತ್ರಣವನ್ನು ಒಳಗೊಂಡು ನಿರ್ವಹಣೆ.' "**

ಇದಕ್ಕೆ ನನ್ನ ಮಿತ್ರ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರ ಹೆಸರಿನಲ್ಲಿ ಒಂದು ತಿದ್ದುಪಡಿ ಇರುತ್ತದೆ, ಅದರ ಪರಿಣಾಮವು "ಸ್ಥಳೀಯ ಸ್ವ–ಸರ್ಕಾರ"ದಲ್ಲಿ "ಸ್ವ" ಎಂಬ ಶಬ್ದವನ್ನು ಬಿಟ್ಟು "ಸ್ಥಳೀಯ ಸರ್ಕಾರ" ಎಂದು ಓದುವಂತೆ ಮಾಡುವುದು.

* * *

**ಶ್ರೀ ಮಹಾವೀರ್ ತ್ಯಾಗಿ:** ಮಾನ್ಯರೇ, ನಾನು ದಾಖಲಾತಿಯನ್ನು ತಡೆ ಹಿಡಿಯಬೇಕೆಂದು ಸಲಹೆ ಮಾಡಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಏಕೆ? ನನಗೆ ಅರ್ಥವಾಗುತ್ತಿಲ್ಲ. ನೀವು ಏನಾದರೂ ಟಿಪ್ಪಣಿ ಮಾಡುವುದಿದ್ದರೆ ಅದನ್ನು ಕೇಳಲು ಮತ್ತು ನಿಮಗೆ ಉತ್ತರಿಸಲು ನಾವು ತಯಾರಿದ್ದೇವೆ.

**ಶ್ರೀ ಮಹಾವೀರ್ ತ್ಯಾಗಿ:** ನಮ್ಮ ತಿದ್ದುಪಡಿಗಳನ್ನು ಅಥವಾ ನಮ್ಮ ವಾದವನ್ನು ಸದನದ ಮುಂದಿಡಲು ನಮಗೆ ಪೂರ್ತಿ ಅವಕಾಶವನ್ನು ಕೊಡಬೇಕು, ಅಥವಾ ಇಂಥ ವಿವಾದಾತ್ಮಕ ಪ್ರಕರಣಗಳನ್ನು ತಡೆಹಿಡಿಯುವ ಆದೇಶವನ್ನು ನೀಡಬೇಕು ಎಂದು ನನಗೆ ಅನ್ನಿಸುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಶ್ರೀ ಸಿಧ್ವ ಅವರ ಹೆಸರಿನಲ್ಲಿರುವ ಈ ತಿದ್ದುಪಡಿಯು ಜನವರಿ ೨೬ರಿಂದ ಇಲ್ಲಿರುತ್ತದೆ. ನಮ್ಮ ಮಿತ್ರ ಈಗ ಪರಿಸ್ಥಿತಿಯ ಬಗ್ಗೆ ಎಚ್ಚೆತ್ತುಕೊಂಡಿದ್ದಾರೆ ಅವರಿಗೆ ತಮ್ಮ ತಿದ್ದುಪಡಿಯನ್ನು ಕೊಡಲು ಸಾಕಷ್ಟು ಸಮಯವಿತ್ತು ಹಾಗೂ ನಾನು ಈಗಲೂ ಸಹ ಅವರು ಏನು ಬದಲಾವಣೆ ತರಲು ಬಯಸುತ್ತಾರೆಂದು ವಿವರಿಸಿದರೆ ಅದನ್ನು ಕೇಳಲು ಹಾಗೂ ಅವರನ್ನು ಸಂತುಷ್ಟಪಡಿಸಲು ತಯಾರಾಗಿದ್ದೇನೆ.

**ಶ್ರೀ ಮಹಾವೀರ್ ತ್ಯಾಗಿ:** ಮಾನ್ಯರೇ, ನಾವು ಡಾ. ಅಂಬೇಡ್ಕರ್ ಅವರ ವೇಗವನ್ನು ಒಪ್ಪಿಕೊಂಡಿದ್ದೇವೆ– ಅವರು ಬಹಳ ತೀವ್ರಗತಿಯವರು– ಅದಕ್ಕೆ ನಾವು ಯಾವ ತಕರಾರನ್ನು ತೆಗೆದುಕೊಂಡಿಲ್ಲ. ಆದರೆ ಇಂಥ ವಿಷಯಗಳಲ್ಲಿ ಅವರು ಒಪ್ಪಬಹುದು...

**ಮಾನ್ಯ ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನೀವು ಏನನ್ನು ಹೇಳಬೇಕು ಎನ್ನುತ್ತೀರಿ ಎನ್ನುವುದನ್ನು ಏಕೆ ಹೇಳುವುದಿಲ್ಲ?

---

* ಸಿ.ಎ.ಡಿ. ಸಂ. IX, ೨೯ನೇ ಆಗಸ್ಟ್ ೧೯೪೯, ಪುಟ ೭೩೫.

**ಶ್ರೀ ಮಹಾವೀರ್ ತ್ಯಾಗಿ:** ನನ್ನ ವಿನಂತಿ ಏನೆಂದರೆ, ವಿವಾದಾತ್ಮಕವಾದ ವಿಷಯಗಳು ಅಥವಾ ಗೌರವಾನ್ವಿತ ಸದಸ್ಯರು ಪ್ರಮುಖವಾದ ತಿದ್ದುಪಡಿಗಳನ್ನು ಮಂಡಿಸಲು ಬಯಸಿದ್ದಾಗಿ ಹೇಳುವ ಅಥವಾ ಅನ್ನಿಸುವ ವಿಷಯಗಳನ್ನು ದಯಮಾಡಿ ತಡೆಹಿಡಿಯಬೇಕು. ಅದು ದಾರಿಯನ್ನು ಸುಗಮಗೊಳಿಸುತ್ತದೆ, ಅದು ಕಾರ್ಯವನ್ನು ತೀವ್ರಗೊಳಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಸದನವನ್ನು ನಾಳೆ ಒಂಬತ್ತು ಗಂಟೆಯವರೆಗೆ ಮುಂದೂಡಲಾಗಿದೆ. ನಾವು ಎಲ್ಲ ತಿದ್ದುಪಡಿಗಳನ್ನು ನಾಳೆ ಅವುಗಳನ್ನು ಬಂದಂತೆ ತೆಗೆದುಕೊಳ್ಳೋಣ. ಆದರೆ, ನಾನು ಇನ್ನೂ ಹೆಚ್ಚು ಸಮಯವನ್ನು ಕೊಡುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಈ ತಿದ್ದುಪಡಿಗೆ ಸಂಬಂಧಿಸಿದಂತೆ, ನಾನು ಸಂಪೂರ್ಣವಾಗಿ ತಮ್ಮ ಕೈಯಲ್ಲಿದ್ದೇನೆ. ನನ್ನ ಮಿತ್ರ ತ್ಯಾಗಿಯವರು ಏನು ತಕರಾರುಗಳನ್ನು ಹೊಂದಿದ್ದಾರೆಂದು ನನಗೆ ತಿಳಿಸಿದರೆ, ನಾನು ಅವರ ವಿಷಯವನ್ನು ಈಗಲೇ ಸದನದಲ್ಲಿ ಸ್ಪಷ್ಟಪಡಿಸಲು ತಯಾರಾಗಿದ್ದೇನೆ.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಮಾನ್ಯರೇ ನನ್ನ ಮಿತ್ರ ಶ್ರೀ ತ್ಯಾಗಿಯವರು ಮಂಡಿಸಿದ ತಿದ್ದುಪಡಿಗಳಿಗೆ ಮಾತ್ರ ಉತ್ತರಿಸಬೇಕಾದವುಗಳು ಆಗಿರುತ್ತವೆ. ಅವರ ತಿದ್ದುಪಡಿಗಳು ಪರ್ಯಾಯ ನಮೂನೆಯಲ್ಲಿರುತ್ತವೆ. ಮೊದಲನೆಯದಾಗಿ, ಅವರು ಬಾಡಿಗೆ ನಿಯಂತ್ರಣವನ್ನೊಳಗೊಂಡಂತೆ ವಸತಿ ಸೌಕರ್ಯದ ನಿರ್ವಹಣೆಯ ಪೂರ್ತಿ ಭಾಗವನ್ನು ತೆಗೆದು ಹಾಕಬಯಸುತ್ತಾರೆ. ಅವರ ಪರ್ಯಾಯ ತಿದ್ದುಪಡಿಯಲ್ಲಿ, ವಸತಿ ಸೌಕರ್ಯದ ನಿರ್ವಹಣೆ ಮತ್ತು ನಿಯಂತ್ರಣವನ್ನು ಇಟ್ಟುಕೊಳ್ಳಲು ತಯಾರಾಗಿದ್ದು, 'ಬಾಡಿಗೆ ನಿಯಂತ್ರಣ' ಎಂಬ ಪದಗಳನ್ನು ತೆಗೆದುಹಾಕಲು ಇಚ್ಛಿಸುತ್ತಾರೆ. ಈ ವಿಷಯವು ನಿಜವಾಗಿಯೂ ಸಾಮಾನ್ಯ ತಿಳುವಳಿಕೆಯದೆಂದು ನನಗೆ ತೋರುತ್ತದೆ. ಒಂದು ವೇಳೆ ನನ್ನ ಮಿತ್ರರು 'ವಸತಿ ಸೌಕರ್ಯದ ನಿರ್ವಹಣೆ' ಎಂಬ ಪದಗಳನ್ನು ಇಟ್ಟುಕೊಳ್ಳುವುದಕ್ಕೆ, ಅವರ ಪರ್ಯಾಯ ತಿದ್ದುಪಡಿಯಲ್ಲಿ ಸ್ಪಷ್ಟವಾಗಿ ಹೇಳಿದಂತೆ, ಯಾವುದೇ ತಕರಾರು ಹೊಂದಿಲ್ಲದಿದ್ದರೆ, ಬಾಡಿಗೆ ನಿಯಂತ್ರಣವು ವಸತಿ ಸೌಕರ್ಯ ನಿರ್ವಹಣೆಯ ಅಧಿಕಾರಕ್ಕೆ ಸಹಾಯಕ್ಕೆ ಮಾತ್ರವಾಗಿರುತ್ತದೆಂದು ನನಗೆ ತೋರುತ್ತದೆ. ವಸತಿ ಸೌಕರ್ಯದ ನಿರ್ವಹಣೆಯನ್ನು ಮಾಡುವ ಪ್ರಾಧಿಕಾರವು ಈ ಅಧಿಕಾರದ ಜೊತೆಗೆ ಬಾಡಿಗೆ ನಿಯಂತ್ರಣದ ಅಧಿಕಾರವನ್ನು ಸಹ ಹೊಂದಿರದಿದ್ದರೆ, ತನ್ನ ಉದ್ದೇಶವನ್ನು ಕಾರ್ಯಗತಗೊಳಿಸಲು ಅಸಾಧ್ಯವಾಗುತ್ತದೆ. ಆದ್ದರಿಂದ ನಾನು ವಿನಂತಿಸುವುದೆಂದರೆ, ಬಾಡಿಗೆ ನಿಯಂತ್ರಣವು ವಸತಿ ಸೌಕರ್ಯದ ನಿರ್ವಹಣೆಗೆ ಸಹಾಯಕವಾಗಿರುತ್ತದೆ. ಒಂದು ವೇಳೆ ಶ್ರೀ ತ್ಯಾಗಿಯವರು ವಸತಿ ಸೌಕರ್ಯವನ್ನು ನಿರ್ವಹಿಸುವ ಅಧಿಕಾರವನ್ನು ಇಟ್ಟುಕೊಳ್ಳುವುದಕ್ಕೆ ಮೂಲಭೂತವಾಗಿ ತಕರಾರನ್ನು ಹೊಂದಿರದಿದ್ದರೆ ಅವರು ನಿಯಂತ್ರಣದ ವರ್ಗಾವಣೆಗೂ ಸಹ ಯಾವುದೇ ತಕರಾರನ್ನು ಹೊಂದಿರಕೂಡದೆಂದು ನನಗೆ ಅನ್ನಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

ಮೊದಲನೆಯದು ಡಾ. ದೇಶ್‌ಮುಖ್ ಅವರದ್ದು.

**ಡಾ. ಪಿ. ಎಸ್. ದೇಶ್‌ಮುಖ್:** ಒಂದು ವೇಳೆ ಕರಡು ಸಮಿತಿಯು ಅಂತಿಮ ಕರಡಿನ ಸಂದರ್ಭದಲ್ಲಿ ಪರಿಗಣಿಸಿದರೆ ನಾನು ಸಂತುಷ್ಟನಾಗುತ್ತೇನೆ.

* ಸಿ.ಎ.ಡಿ. ಸಂ. IX, ೨೯ನೇ ಆಗಸ್ಟ್ ೧೯೪೯, ಪುಟ ೭೩೯.

**ಮಾನ್ಯ ಅಧ್ಯಕ್ಷರು:** ನಾನು ನೋಡುವಂತೆ ಇದು ಕರಡು ತಯಾರಿಸುವ ವಿಷಯ ಮಾತ್ರವಾಗಿದೆ. ಆದ್ದರಿಂದ ನಾವು ಇದನ್ನು ಕರಡು ಸಮಿತಿಗೆ ಬಿಡಬಹುದು.

(ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.)

**[ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಮಾತ್ರ ಅಂಗೀಕರಿಸಲಾಯಿತು. ದಾಖಲಾತಿ ೭ನ್ನು ತಿದ್ದುಪಡಿ ಮಾಡಿದಂತೆ ಕೇಂದ್ರ ಯಾದಿಗೆ ಸೇರಿಸಲಾಯಿತು.]**

* * *

## ದಾಖಲಾತಿ ೧೨

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಈ ತಿದ್ದುಪಡಿಗೆ ಸಂಬಂಧಿಸಿದಂತೆ ಹಲವಾರು ವಿಷಯಗಳು ಉದ್ಭವಿಸುತ್ತೆ. ನನ್ನ ಮಿತ್ರ ಶ್ರೀ ಕಾಮತ್ ನೋಡುವಂತೆ ಇದೊಂದೇ ದಾಖಲಾತಿಯು ವಿದೇಶಗಳಿಗೆ ಸಂಬಂಧಿಸಿದ್ದು ಆಗಿರುವುದಿಲ್ಲ. ಮೊದಲಿಗೆ, ವಿದೇಶಿ ವ್ಯವಹಾರಗಳು ಎಂಬ ದಾಖಲಾತಿಯು ಇರುತ್ತದೆ. ಹಾಗೂ ಅದು ಈ ದೇಶವು ಯಾವುದೇ ಅಂತಾರಾಷ್ಟ್ರೀಯ ಸಂಸ್ಥೆಯ ಸದಸ್ಯನಾಗಿ ತನ್ನನ್ನು ತಾನೇ ಪರಿಗಣಿಸಿಕೊಳ್ಳಲು ಬಯಸಿದರೆ ಇದನ್ನು ಉಪಯೋಗಿಸಿಕೊಳ್ಳುವಷ್ಟು ವಿಶಾಲವಾಗಿದೆ. ನಾವು ಈಗ ಪರಿಗಣಿಸುತ್ತಿರುವ ನಂತರದ ದಾಖಲಾತಿಯು ಯಾವುದೇ ಅಂತಾರಾಷ್ಟ್ರೀಯ ಸಮ್ಮೇಳನ ಅಥವಾ ಅಂತಾರಾಷ್ಟ್ರೀಯ ಸಂಸ್ಥೆಯಲ್ಲಿ ಭಾಗವಹಿಸಲು ಸಂಬಂಧಿಸಿದಂತೆ ಶಾಸನವನ್ನು ಅನುಮತಿಸುತ್ತದೆ. ಈ ಕಾರಣಕ್ಕಾಗಿ ನನ್ನ ಗೌರವಾನ್ವಿತ ಮಿತ್ರ ಶ್ರೀ ಕಾಮತ್ ಅವರು ಮಂಡಿಸಿದ ತಿದ್ದುಪಡಿಯು ಅನಾವಶ್ಯಕವೆಂದು ನಾನು ಭಾವಿಸಿಕೊಳ್ಳುತ್ತೇನೆ. ಎರಡನೆಯದಾಗಿ, ಇದೊಂದು ಶಾಸನಾತ್ಮಕ ದಾಖಲಾತಿ ಮಾತ್ರ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಇದು ಯಾದಿ ೧ರಲ್ಲಿ ಸೇರಿಸಲಾದ ಯಾವುದೇ ದಾಖಲಾತಿಗಳಿಗೆ ಸಂಬಂಧಿಸಿದಂತೆ ಶಾಸನವನ್ನು ರಚಿಸಲು ರಾಜ್ಯಕ್ಕೆ ಅನುಕೂಲ ಮಾಡಿಕೊಡುತ್ತದೆ. ಈ ದಾಖಲಾತಿಗಳಲ್ಲಿಯ ಯಾವುದೇ ಒಂದು ರಾಜ್ಯಕ್ಕೇ ನೀಡಿದ ಶಾಸನಾತ್ಮಕ ಅಧಿಕಾರವನ್ನು ಮಿತಿಗೊಳಪಡಿಸುವ ವಿಧಿಯು ಕರಡು ಸಂವಿಧಾನದಲ್ಲಿ ಇದ್ದಿದ್ದರೆ, ನನ್ನ ಗೌರವಾನ್ವಿತ ಮಿತ್ರ ಶ್ರೀ ಕಾಮತ್ ಅವರು ಎತ್ತಿದಂಥ ಪ್ರಶ್ನೆಯು ಬಹಳ ಸುಸಂಬದ್ಧವಾಗಿರುತ್ತಿತ್ತು, ಆದರೆ ಸಂವಿಧಾನದಲ್ಲಿಯೇ ಈ ದಾಖಲಾತಿಯಲ್ಲಿ ನೀಡಲಾದ ಶಾಸನಾತ್ಮಕ ಅಧಿಕಾರವನ್ನು ವಿಶ್ವ ಸಂಸ್ಥೆಯ ಸದಸ್ಯತ್ವಕ್ಕೆ ಮಾತ್ರ ಸೀಮಿತಗೊಳಿಸುವ ಯಾವುದೇ ವಿಧಿಯು ನನಗೆ ಕಾಣಿಸುತ್ತಿಲ್ಲ ಮತ್ತು ಈ ವಿಧಿಯಲ್ಲಿ ಅಂಥ ದಾಖಲಾತಿ ಇಲ್ಲವೇ ಇಲ್ಲ. ಆದ್ದರಿಂದ ರಾಜ್ಯವು ಯಾವುದೇ ಇತರ ಅಂತಾರಾಷ್ಟ್ರೀಯ ಸಂಸ್ಥೆಯ ಸದಸ್ಯನಾಗಿರಬಹುದು. ಆದರೆ ಸದನವು ಇದರ ಬಗ್ಗೆ ಜಾಗರೂಕವಾಗಿದ್ದರೆ, ಶ್ರೀ ಕಾಮತ್ ಅವರ ತಿದ್ದುಪಡಿಯನ್ನು ಸ್ವೀಕರಿಸುವುದರಿಂದ ಯಾವುದೇ ಅಪಾಯವಿಲ್ಲ. ಆದ್ದರಿಂದ, ನಾನು ಈ ವಿಷಯವನ್ನು ನಿರ್ಧರಿಸಲು ಸದನಕ್ಕೆ ಬಿಡುತ್ತೇನೆ.

**[ದಾಖಲಾತಿ ೧೨ನ್ನು ಯಾದಿಗೆ ಸೇರಿಸಲಾಯಿತು.]**

---

* ಸಿ.ಎ.ಡಿ. ಸಂ. IX, ೨೯ನೇ ಆಗಸ್ಟ್ ೧೯೪೯, ಪುಟ ೭೪೩.

## ಹೊಸ ದಾಖಲಾತಿ ೯–ಎ

*__ಮಾನ್ಯ ಸಭಾಧ್ಯಕ್ಷರು:__ ಇನ್ನೊಂದು ದಾಖಲಾತಿಯನ್ನು ಸೇರಿಸಲು ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ ಅವರಿಂದ ತಿದ್ದುಪಡಿಯ ಸೂಚನೆ ಇರುತ್ತದೆ: "ವಿಶ್ವದ ಇಂಧನ... ಮತ್ತು ವೈಜ್ಞಾನಿಕ ಹಾಗೂ ಔದ್ಯಮಿಕ ಸಂಶೋಧನೆ ಹಾಗೂ ಅದರ ಉತ್ಪಾದನೆ, ಅಭಿವೃದ್ಧಿ ಹಾಗೂ ಬಳಕೆಗೆ ಬೇಕಾದ ಇತರ ಸಂಪನ್ಮೂಲಗಳು"…….

ನೀವು ಅದನ್ನು ಮಂಡಿಸಬಯಸುತ್ತೀರಾ ಶ್ರೀ ಶಿಬ್ಬನ್‌ಲಾಲ್ ಸಕ್ಸೇನಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದರ ಅರ್ಥವೇನೆಂದು ನನಗೆ ಗೊತ್ತಾಗುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು:** ನಾವು ಅಣುಶಕ್ತಿಯನ್ನು ಸೇರಿಸಿದ್ದೇವೆ; ಅವರು ವಿಶ್ವದ ಶಕ್ತಿಯನ್ನು ಸಹ ಸೇರಿಸಬಯಸಿದ್ದಾರೆ.

* * *

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಈ ಲೋಪವನ್ನು ಹೋಗಲಾಡಿಸಲು ಡಾ. ಅಂಬೇಡ್ಕರ್ ಅವರು ಯತ್ನಿಸುವರೆಂದು ನಾನು ಭಾವಿಸಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೇಳಬಯಸುವುದೇನೆಂದರೆ, ನನ್ನ ಮಿತ್ರ ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ ಅವರು ಮಂಡಿಸಿದ ತಿದ್ದುಪಡಿಯು ಆವಶ್ಯಕವೇ ಇದ್ದರೆ, ನಮಗೆ ಯಾದಿ ೧ರ ದಾಖಲಾತಿ ೯೧ರಡಿಯಲ್ಲಿ ಅದನ್ನು ನಿರ್ವಹಿಸಲು ಸಾಕಷ್ಟು ಅಧಿಕಾರವಿರುತ್ತದೆ: 'ಯಾದಿ ೨ ಅಥವಾ ಯಾದಿ ೩ರಲ್ಲಿ ನಿರೂಪಿಸದ, ಆ ಯಾದಿಗಳಲ್ಲಿ ನಮೂದಿಸದ ಯಾವುದೇ ಕಂದಾಯವನ್ನೊಳಗೊಂಡು, ಯಾವುದೇ ಇತರ ವಿಷಯ.' ಆ ವಿಷಯವನ್ನು ಇದರ ವ್ಯಾಪ್ತಿಯಲ್ಲಿ ಪರಿಗಣಿಸಬಹುದು.

**ಶ್ರೀ ಹೆಚ್. ವಿ. ಕಾಮತ್:** ಯಾದಿಯಲ್ಲಿಯೇ ಇರುವ ಅನೇಕ ದಾಖಲಾತಿಗಳನ್ನು ಅದು ತನ್ನ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುತ್ತದೆ.

(ಗೊತ್ತುವಳಿಯನ್ನು ತಿರಸ್ಕರಿಸಲಾಯಿತು.)

**__ಮಾನ್ಯ ಸಭಾಧ್ಯಕ್ಷರು:__ ದಾಖಲಾತಿ ೧೪. ಡಾ. ಅಂಬೇಡ್ಕರ್ ಅವರೇ, ಉತ್ತರವಾಗಿ ತಾವು ಏನನ್ನಾದರೂ ಹೇಳಲು ಬಯಸುವಿರೋ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ವಿವರಣೆಯ ಅವಶ್ಯಕತೆ ಇರುವುದಿಲ್ಲ.

**(ದಾಖಲಾತಿ ೧೪ನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.)**

## ದಾಖಲಾತಿ ೨೨

***__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

'ಯಾದಿ I ದಾಖಲಾತಿ ೨೨ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

---

* ಸಿ.ಎ.ಡಿ. ಸಂ. IX, ೩೦ನೇ ಆಗಸ್ಟ್ ೧೯೪೯, ಪುಟ ೭೪೪.

** ಅದೇ, ಪುಟ ೭೪೫.

*** ಅದೇ, ಪುಟ ೭೪೭–೭೪೮.

**'೨೨. ಆಕಾಶದಲ್ಲಿ ಅಥವಾ ಸಮುದ್ರದಲ್ಲಿ ಕಡಲುಗಳ್ಳತನಗಳನ್ನು ಅಥವಾ ಅಪರಾಧಗಳನ್ನು ಎಸಗುವುದು; ಆಕಾಶ ಅಥವಾ ಸಮುದ್ರ ಅಥವಾ ಭೂಮಿಯ ಮೇಲೆ ಅಂತಾರಾಷ್ಟ್ರೀಯ ಕಾನೂನಿಗೆ ವಿರುದ್ಧವಾದ ಅಪರಾಧಗಳನ್ನು ಎಸಗುವುದು.''**

**ಈ ದಾಖಲಾತಿಯ ಎರಡನೇ ಭಾಗ– ''ಆಕಾಶ ಅಥವಾ ಸಮುದ್ರ ಅಥವಾ ಭೂಮಿಯ ಮೇಲೆ ಅಂತಾರಾಷ್ಟ್ರೀಯ ಕಾನೂನಿಗೆ ವಿರುದ್ಧವಾದ ಅಪರಾಧಗಳನ್ನು ಎಸಗುವುದು''–** ಎಂಬುದು ಹೊಸದಾಗಿರುತ್ತದೆ. ಕರಡಿನ ಹಿಂದಿನ ಭಾಗದಲ್ಲಿಯ ಲೋಪವು ಇದಾಗಿರುತ್ತದೆ. ಮೊದಲನೆಯ ಭಾಗಕ್ಕೆ ಸಂಬಂಧಿಸಿದಂತೆ, ''ಮಹಾಪರಾಧಗಳು ಮತ್ತು ಅಪರಾಧಗಳು'' ಎಂಬ ಶಬ್ದಗಳಿಗೆ ಬದಲಾಗಿ ''ಅಪರಾಧಗಳು'' ಎಂಬ ಶಬ್ದವನ್ನು ಸೇರಿಸಿದ್ದೇವೆ. ಏಕೆಂದರೆ, ಇದು ಭಾರತದಲ್ಲಿ ಉಪಯೋಗಿಸುವ ಸಾಮಾನ್ಯ ಶಬ್ದವಾಗಿರುತ್ತದೆ. ''ಮಹಾಪರಾಧಗಳು ಹಾಗೂ ಅಪರಾಧಗಳು'' (ಫೆಲೆನೀಸ್ ಆಂಡ್ ಅಫೆನ್ಸಸ್) ಇವು ಆಂಗ್ಲ ತಾಂತ್ರಿಕ ಶಬ್ದಗಳಾಗಿರುತ್ತವೆ. ''ಅಂತಾರಾಷ್ಟ್ರೀಯ ಕಾನೂನಿನ ವಿರುದ್ಧ'' ಎಂಬ ಶಬ್ದಗಳನ್ನು ಸಹ ಮೊದಲನೇ ಭಾಗದಿಂದ ತೆಗೆಯುತ್ತಿದ್ದೇವೆ, ಏಕೆಂದರೆ ಕಡಲ್ಗಳ್ಳತನ ಹಾಗೂ ಅಪರಾಧಗಳು ತನ್ನದೇ ಆದ ಕಾನೂನಾತ್ಮಕ ಕ್ಷೇತ್ರ ವ್ಯಾಪ್ತಿ ಹಾಗೂ ಪ್ರಾಧಿಕಾರದ ಕಾರಣದಿಂದಾಗಿ ಯಾವುದೇ ರಾಷ್ಟ್ರವು ನಿರ್ವಹಿಸ ಬಹುದಾದ ವಿಷಯಗಳಾಗಿರುತ್ತವೆ. ಇದು ಅಂತಾರಾಷ್ಟ್ರೀಯ ಕಾನೂನಿಗೆ ಯಾವುದೇ ಸಂಬಂಧವನ್ನು ಹೊಂದಿರುವುದಿಲ್ಲ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನನ್ನ ಗೌರವಾನ್ವಿತ ಮಿತ್ರ ಶ್ರೀ ನಝಿರುದ್ದೀನ್ ಅಹ್ಮದ್ ಅವರು ಹೇಳಿದ್ದನ್ನು ಕೇಳಿದ ನಂತರ, ದಾಖಲಾತಿ ೨೨ ಏನನ್ನು ಮಾಡಲು ಪ್ರಸ್ತಾಪಿಸುತ್ತದೆಂಬುದರ ಬಗ್ಗೆ ಬಹಳ ಸ್ಪಷ್ಟವಾದ ವಿಚಾರವನ್ನು ಅವರು ಪಡೆದಿಲ್ಲವೆಂದು ನಾನು ಪುನಃ ಹೇಳಬೇಕಾಗುತ್ತದೆ.

**ಶ್ರೀ ನಝಿರುದ್ದೀನ್ ಅಹ್ಮದ್:** ತೊಂದರೆ ಏನೆಂದರೆ ಡಾ. ಅಂಬೇಡ್ಕರ್ ಅವರು ಚರ್ಚೆಯಲ್ಲಿ ಮಗ್ನರಾಗಿದ್ದು, ನನ್ನನ್ನು ಕೇಳಿಕೊಳ್ಳಲಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ನಿಸ್ಸಂದೇಹವಾಗಿಯೂ ಚರ್ಚೆಯಲ್ಲಿ ಮಗ್ನನಾಗಿದ್ದೆ; ಆದರೆ ಅವರು ಹೇಳುವುದಕ್ಕೆ ತುಂಬಾ ಸಾವಧಾನವಾಗಿದ್ದೆ.

ನನ್ನ ಮಿತ್ರ ಮೊದಲು ಎತ್ತಿದ ಪ್ರಶ್ನೆಯು ನಾವು ಏಕೆ ''ಕಡಲ್ಗಳ್ಳತನ ಹಾಗು ಅಪರಾಧ'' ಎಂಬ ಪದವನ್ನು ಬಹುವಚನದಲ್ಲಿ ಏಕೆ ಉಪಯೋಗಿಸಬೇಕೆನ್ನುವುದು. ಒಳ್ಳೆಯದು, ಇನ್ನೊಂದು ರೀತಿಯಲ್ಲಿ ಕಡಲ್ಗಳ್ಳತನ ಹಾಗೂ ಅಪರಾಧವನ್ನು ನಾವು ಸಾಮೂಹಿಕವಾಗಿ ಉಪಯೋಗಿಸಬಹುದು. ಇಂಥ ವಿಷಯಗಳಲ್ಲಿ, ಯಾವುದಕ್ಕೆ ಅಪರಾಧಿಕ ಶಾಸನವನ್ನು ಮಾಡಲಾಗಿರುತ್ತದೆಯೋ, ಆ ಪದವನ್ನು ಸಾಮೂಹಿಕವಾಗಿ ಉಪಯೋಗಿಸದಿರುವುದು ಉತ್ತಮವಾಗಿರುತ್ತದೆ. ಅವರು ಕೆಲವು ಉದಾಹರಣೆಗಳನ್ನು ಉಲ್ಲೇಖಿಸಿದರು. ಆದರೆ, ಕೆಲವು ಪ್ರಕರಣಗಳಲ್ಲಿ ಪದದ ಸರ್ವೇಸಾಮಾನ್ಯ ಬಳಕೆಯಲ್ಲಿ ಸಾಕಷ್ಟು ಸಮರ್ಪಕವಾಗಿರುತ್ತದೆ ಎಂಬ ವಾಸ್ತವಾಂಶವನ್ನು ಅವರು ಮರೆಯುತ್ತಾರೆ; ಇನ್ನೂ ಕೆಲವು ಪ್ರಕರಣಗಳಲ್ಲಿ ಅದು ಸಾಕಾಗುವುದಿಲ್ಲ. ಆದ್ದರಿಂದ, ಕರಡು ಸಮಿತಿಯು ಬೇಕಂತಲೇ ''ಕಡಲ್ಗಳ್ಳತನಗಳು ಹಾಗೂ ಅಪರಾಧಗಳು'' ಎಂಬ ಪದವನ್ನು ಬಹುವಚನದಲ್ಲಿ ಉಪಯೋಗಿಸಿದೆ, ಏಕೆಂದರೆ ಅದನ್ನು ಉಪಯೋಗಿಸಿದ ಸಂದರ್ಭದಲ್ಲಿ ಅದು ಸಮರ್ಪಕವಾಗಿದೆ.

ನನ್ನ ಮಿತ್ರ ಶ್ರೀ ನಜೀರುದ್ದೀನ್ ಅಹ್ಮದ್, ಎರಡನೆಯದಾಗಿ ಈ ದಾಖಲಾತಿಯ ವಿರುದ್ಧ ಹೇಳಿದ್ದೆಂದರೆ "ಕಡಲ್ಗಳ್ಳತನಗಳು" ನಂತರ ಅಲ್ಪವಿರಾಮವಿರಬೇಕಾಗಿತ್ತು ಎನ್ನುವುದು. ಈಗ ಅದು ದಾಖಲಾತಿಯ ೨೨ರ ಉದ್ದೇಶ ಮತ್ತು ಅರ್ಥವನ್ನು ವಿರೂಪಗೊಳಿಸುತ್ತದೆ ಎಂದು ನನಗೆ ಅನ್ನಿಸುತ್ತದೆ. 'ಕಡಲ್ಗಳ್ಳತನ'ದ ನಂತರ ಅಲ್ಪವಿರಾಮವನ್ನು ನಾವು ಇಟ್ಟುಕೊಂಡರೆ, ದಾಖಲಾತಿ ೨೨ರಲ್ಲಿ 'ಕಡಲ್ಗಳ್ಳತನ' ಇತರ ದಾಖಲಾತಿಯಿಂದ ಬೇರ್ಪಡುತ್ತದೆ. ಈಗ ಕಡಲ್ಗಳ್ಳತನಗಳನ್ನು ಇತರ ದಾಖಲಾತಿಗಳಿಂದ ಬೇರ್ಪಡಿಸಿದರೆ, ಕೇಂದ್ರವು ಒಳನಾಡಿನ ನದಿಗಳಲ್ಲಿಯ ಕಡಲ್ಗಳ್ಳತನಗಳನ್ನು ಸಹ ಒಳಗೊಂಡಂತೆ, ಎಲ್ಲ ಕಡಲ್ಗಳ್ಳತನಗಳಿಗೆ ಸಂಬಂಧಿಸಿದಂತೆ ಕಾನೂನನ್ನು ಮಾಡುವ ಹಕ್ಕನ್ನು ಹೊಂದಿರುತ್ತದೆಂದು ಅರ್ಥವಾಗುತ್ತದೆ. ಎಲ್ಲ ತರಹದ ಕಡಲ್ಗಳ್ಳತನಗಳಿಗೆ ಶಾಸನ ಮಾಡುವ ಅಧಿಕಾರವನ್ನು ಕೇಂದ್ರ ಶಾಸಕಾಂಗಕ್ಕೆ ನೀಡುವುದು ಈ ದಾಖಲಾತಿಯ ಉದ್ದೇಶವಾಗಿರುವುದಿಲ್ಲ. "ಸಮುದ್ರದಲ್ಲಿ ಅಥವಾ ಆಕಾಶದಲ್ಲಿ ಎಸಗಿದ" ಎಂಬ ಪದಗಳು "ಅಪರಾಧ" ಎಂಬ ಪದವನ್ನಷ್ಟೇ ಸೀಮಿತಗೊಳಿಸದೇ, "ಕಡಲ್ಗಳ್ಳತನ" ಎಂಬ ಪದವನ್ನು ಸಹ ಸೀಮಿತಗೊಳಿಸುವ ಉದ್ದೇಶವನ್ನು ಹೊಂದಿರುತ್ತವೆ.

ಮೂರನೆಯದಾಗಿ ನನ್ನ ಮಿತ್ರರ ವಾದವೆಂದರೆ, "ಅಂತಾರಾಷ್ಟ್ರೀಯ ಕಾನೂನಿನ ವಿರುದ್ಧ ಅಪರಾಧಗಳು" ಎಂಬ ಪದಗಳ ನಂತರ ಬರುವ "ಭೂಮಿಯ ಮೇಲೆ, ಸಮುದ್ರದ ಮೇಲೆ ಹಾಗೂ ಆಕಾಶದಲ್ಲಿ" ಎಂಬ ಪದಗಳನ್ನು ನಾವು ಬಿಟ್ಟುಬಿಡಬೇಕು ಎನ್ನುವುದು. ಅದು ಎರಡನೆಯ ದಾಖಲಾತಿಯ ಎಲ್ಲ ರೀತಿಯಿಂದ ಸಮಗ್ರವಾದ ದಾಖಲಾತಿ ಎಂದು ಸ್ಪಷ್ಟಪಡಿಸುವುದಿಲ್ಲ ಮತ್ತು ಕೇಂದ್ರ ಶಾಸಕಾಂಗಕ್ಕೆ ಈ ದಾಖಲಾತಿಯ ಮೊದಲನೇ ಭಾಗಕ್ಕೆ ವಿರುದ್ಧವಾಗಿ ಅಂತಾರಾಷ್ಟ್ರೀಯ ಕಾನೂನಿನ ವಿರುದ್ಧ ಸಮುದ್ರ ಹಾಗೂ ಆಕಾಶದಲಿಲಯ ಅಪರಾಧಗಳಷ್ಟೇ ಅಲ್ಲ, ಭೂಮಿಯ ಮೇಲಿನವುಗಳನ್ನು ಸಹ ನಿರ್ವಹಿಸಲು ಅಧಿಕಾರವನ್ನು ನೀಡುತ್ತದೆ. ಬೇರೆ ರೀತಿಯಲ್ಲಿ ಹೇಳಬೇಕೆಂದರೆ, ದಾಖಲಾತಿಯ ಎರಡನೇ ಭಾಗಕ್ಕೆ ಸಂಬಂಧಿಸಿದಂತೆ ರಾಜ್ಯಗಳು ಯಾವುದೇ ವಿಧದ ಅಧಿಕಾರವನ್ನು ಹೊಂದಿರುವುದಿಲ್ಲ. ಆದ್ದರಿಂದ, ನಾನು ವಿನಂತಿಸುವುದೆಂದರೆ ಪ್ರಸ್ತಾವಿತ ದಾಖಲಾತಿಯು ಕರಡು ತಯಾರಕನ ಉದ್ದೇಶವನ್ನು ಪ್ರತಿಬಿಂಬಿಸುತ್ತದೆ ಮತ್ತು ಅದಕ್ಕೆ ತಿದ್ದುಪಡಿಯ ಆವಶ್ಯಕತೆ ಇರುವುದಿಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್:** ಗೌರವಾನ್ವಿತ ಸದಸ್ಯರು ನನ್ನನ್ನು ಕೇಳಿಸಿಕೊಂಡಿಲ್ಲ. ಭೂಮಿಯ ಮೇಲೂ, ಆಕಾಶದಲ್ಲಿಯೂ, ಸಮುದ್ರದ ಮೇಲೆಯೂ ಅಲ್ಲದ ಆದರೆ ಕೆಳ ಸಮುದ್ರದಲ್ಲಿ ಅಂತಾರಾಷ್ಟ್ರೀಯ ಕಾನೂನಿನ ವಿರುದ್ಧ ಎಸಗಿದ ಅಪರಾಧಗಳಿಗೆ ಸಂಬಂಧಿಸಿದಂತೆ ಏನು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಅವರ ಊಹೆಯಲ್ಲಿ ಮಾತ್ರ, ಮತ್ತೆಲ್ಲಿಯೂ ಅದು ಸಾಧ್ಯವಿಲ್ಲ.

**ಸರ್ದಾರ್ ಹುಕುಂ ಸಿಂಗ್** (ಪೂರ್ವ ಪಂಜಾಬ: ಸಿಕ್): ಒಂದು ವೇಳೆ ಕಡಲ್ಗಳ್ಳತನಗಳನ್ನು ಇತರ ಅಂಶಗಳಿಂದ ಬೇರ್ಪಡಿಸದಿದ್ದರೆ, 'ಆಕಾಶದಲ್ಲಿ' ಎಂಬ ಪದಗಳು ಸಹ 'ಕಡಲ್ಗಳ್ಳತನ' ಎಂಬ ಪದವನ್ನು ನಿರ್ಬಂಧಿಸುತ್ತವೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆಕಾಶದಲ್ಲಿಯೂ ಕಡಲ್ಗಳ್ಳತನ ಇರಬಹುದು.

**ಶ್ರೀ ನಜೀರುದ್ದೀನ್ ಅಹ್ಮದ್:** ಕಡಲ್ಗಳ್ಳತನಗಳು ಯಾವಾಗಲೂ ನೀರಿನಲ್ಲಿ ಮಾತ್ರ ನಡೆಯುತ್ತವೆ, ಭೂಮಿ ಮತ್ತು ಆಕಾಶದಲ್ಲಿ ಸಾಧ್ಯವಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಈಗ ನಾನು ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

**ಶ್ರೀ ನಜೀರುದ್ದೀನ್ ಅಹ್ಮದ್:** ನಾನು ಕೊನೆಯದನ್ನು ಮಾತ್ರ ಮತಕ್ಕೆ ಹಾಕಲು ಇಚ್ಛಿಸುತ್ತೇನೆ.

**[ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಬಿಟ್ಟು ಮಿಕ್ಕೆಲ್ಲ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು. ತಿದ್ದುಪಡಿ ಮಾಡಿದ ದಾಖಲಾತಿ ೨೨ನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೨೬

*__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ.

"ಯಾದಿ ೧ರ ದಾಖಲಾತಿ ೨೬ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**'೨೬ ಸುಂಕದ ಗಡಿಗಳಾಚೆ ರಫ್ತು ಮತ್ತು ಆಚೆಯಿಂದ ಆಮದು, ಸುಂಕದ ಗಡಿಗಳ ವ್ಯಾಖ್ಯೆ.' "**

ಇದು ಮೂಲ ದಾಖಲಾತಿಯ ಮರುಜೋಡಣೆ ಮಾತ್ರವಾಗಿರುತ್ತದೆ.

**ಶ್ರೀ ನಜೀರುದ್ದೀನ್ ಅಹ್ಮದ್:** ನನ್ನ ತಿದ್ದುಪಡಿಯಲ್ಲಿಯ "ಆಮದು ಮತ್ತು ರಫ್ತು"ಗಳಲ್ಲಿಯ "ಮತ್ತು" ಎಂಬ ಶಬ್ದವು ಅತ್ಯಂತ ಮುಖ್ಯವಾದದ್ದು. ನಾನು ಆಗಲೇ ಹೇಳಿದಂತೆ ಇದು ಹೆಚ್ಚು ಕಡಿಮೆ ರಚನಾ ಸ್ವರೂಪದ್ದು, ಆದ್ದರಿಂದ ನನ್ನ ಗೊತ್ತುವಳಿಯನ್ನು ಸದನದ ಮುಂದಿಡದೇ ಅದನ್ನು ಕರಡು ಸಮಿತಿಗೆ ಬಿಟ್ಟುಕೊಡುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಸ್ಪಷ್ಟತೆಯಿಂದ ನಾನು ಸಂತುಷ್ಟನಿದ್ದೇನೆ, ಹಾಗೂ ಅಂದಂತೆಯೆ ಹಿಂದೆ ಓಡಬಯಸುವುದಿಲ್ಲ.

**[ತಿದ್ದುಪಡಿಯನ್ನು ಸ್ವೀಕರಿಸಲಾಯಿತು, ದಾಖಲಾತಿ ೨೬, ಇದನ್ನು ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.]**

* * *

## ದಾಖಲಾತಿ ೨೬–ಎ

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಮಾನ್ಯರೇ, ಈ ವಿಷಯದ ಮೇಲೆ ಅಮೆರಿಕೆಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳಿವೆ ಮತ್ತು ಇದನ್ನು ಸ್ಪಷ್ಟವಾಗಿ ಹೇಳಬೇಕೆಂದು ನಾನು ಬಯಸುತ್ತೇನೆ. ಆದ್ದರಿಂದ ನಾನು ನನ್ನ ತಿದ್ದುಪಡಿಯನ್ನು ಮಂಡಿಸುತ್ತೇನೆ. ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೨೬ರ ನಂತರ ಕೆಳಗಿನದನ್ನು ಸೇರಿಸಬೇಕು:–

**'೨೬–ಎ ಕಡಲು ತೀರದ ಸಾಮಾನ್ಯ ಕೆಳನೀರಿನ ಗುರುತಿನಿಂದ ಮೂರು ಸಮುದ್ರ ಮೈಲುಗಳಿಗೆ ಮೇಲ್ಪಟ್ಟ ಕಡಲಿನಲ್ಲಿ ಸಮುದ್ರದೆಡೆಗಿರುವ ಭೂಮಿ, ಖನಿಜಗಳು ಮತ್ತು ಬೆಲೆಯುಳ್ಳ ಇತರ ವಸ್ತುಗಳ ಮೇಲೆ ಒಡೆತನ ಹಾಗೂ ಆಧಿಪತ್ಯ.' "**

---

* ಸಿ.ಎ.ಡಿ. ಸಂ. IX, ೩೦ನೇ ಆಗಸ್ಟ್ ೧೯೪೯, ಪುಟ ೭೫೨.

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ವಿಷಯವನ್ನು ಆಗಲೇ ವಿಧಿ ೨೭೧ – ಎದಲ್ಲಿ ತೆಗೆದುಕೊಳ್ಳಲಾಗಿದೆ. ನನ್ನ ತೊಂದರೆ ಏನೆಂದರೆ, ನನ್ನ ಮಿತ್ರ ಪ್ರೊ. ಶಿಬ್ಬನ್‌ಲಾಲರ ತಿದ್ದುಪಡಿಯು ಒಡೆತನದ ಬಗ್ಗೆ ಹೇಳುತ್ತದೆ. ಈಗ, ಈ ಎಲ್ಲ ಶಾಸನಾತ್ಮಕ ಯಾದಿಗಳಲ್ಲಿ ಕಾನೂನು ಮಾಡುವ ಅಧಿಕಾರದ ಬಗ್ಗೆ ನಾವು ಹೇಳುತ್ತೇವೆ, ಸ್ವಾಧೀನಪಡಿಸಿಕೊಳ್ಳುವ ಅಧಿಕಾರದ ಬಗ್ಗೆ ಅಲ್ಲ. ಆ ವಿಷಯವನ್ನು ಬೇರೆ ಕಾನೂನಿನ ಮೂಲಕ ನಿರ್ವಹಿಸಲ್ಪಡುತ್ತಿದೆಯೇ ಹೊರತು ಶಾಸನಾತ್ಮಕ ದಾಖಲಾತಿಗಳ ಮೂಲಕವಿಲ್ಲ. ಆದ್ದರಿಂದ ನಾನು ಇದನ್ನು ಒಪ್ಪುವ ಹಾಗಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಅವರು ಅಮೆರಿಕೆಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಉಲ್ಲೇಖಿಸಿದ್ದಾರೆ, ಆದರೆ ಅದು ನಮ್ಮ ಸಂವಿಧಾನದಲ್ಲಿಯ ವಿಧಿ ೨೭೧–ಎ ದಂತಹವರ ಅನುಪಸ್ಥಿತಿಯನ್ನೂ ಆಧರಿಸಿದೆ ಎಂದು ನನಗೆ ಅನ್ನಿಸುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ದಾಖಲಾತಿ ಇಲ್ಲವೆಂದು ನಾವು ಶೋಧಿಸಿದ್ದೇವೆ ಹಾಗೂ ಇದೊಂದು ಸಂಶಯಾತ್ಮಕವಾದ ವಿಷಯವಾದ್ದರಿಂದ ಆ ಸಂಶಯವನ್ನು ತೆಗೆದುಹಾಕಲು ನಾವು ವಿಧಿ ೨೭೧–ಎ ಅನ್ನು ಇಟ್ಟಿದ್ದೇವೆ. ಅದು ಶ್ರೀ ಶಿಬ್ಬನ್‌ಲಾಲರ ತಿದ್ದುಪಡಿಯ ಯಾಥಾವತ್ ಪುನರುತ್ಪತ್ತಿಯಾಗಿರುತ್ತದೆ.

* * *

## ದಾಖಲಾತಿ ೩೧

***ಮಾನ್ಯ ಸಭಾಧ್ಯಕ್ಷರು:** ದಾಖಲಾತಿ ೩೧ಕ್ಕೆ ಕೆಲವು ತಿದ್ದುಪಡಿಗಳಿರುವುದು ನನಗೆ ಕಂಡುಬರುತ್ತಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೩೧ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**'೩೧. ಸಂಸತ್ತಿನಿಂದ ಮಾಡಲಾದ ಕಾನೂನಿನಡಿಯಲ್ಲಿ ಅಥವಾ ರಾಷ್ಟ್ರೀಯ ಹೆದ್ದಾರಿಗಳೆಂದು ಘೋಷಿಸಲಾದ ಹೆದ್ದಾರಿಗಳು.' "**

ಇದು ವಿಷಯವನ್ನು ಸ್ಪಷ್ಟಪಡಿಸಲು ಪದಗಳ ಕ್ರಮ ಬದಲಾವಣೆ ಮಾತ್ರವಾಗಿರುತ್ತದೆ.

[**ದಾಖಲಾತಿ ೩೧, ತಿದ್ದುಪಡಿ ಮಾಡಿದಂತೆ, ಯಾದಿಗೆ ಸೇರಿಸಲಾಯಿತು.**]

## ದಾಖಲಾತಿ ೩೭

*** **ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ Iರ ತಿದ್ದುಪಡಿ ೧೨ರಲ್ಲಿ, ದಾಖಲಾತಿ ೩೭ರಲ್ಲಿ, 'ಆಕಾಶದ ಮೂಲಕ ಅಥವಾ ಸಮುದ್ರದ ಮೂಲಕ' ಎನ್ನುವ ಪದಗಳಿಗೆ ಬದಲಾಗಿ 'ರೈಲ್ವೆ ಮೂಲಕ, ಸಮುದ್ರದ ಮೂಲಕ ಅಥವಾ ಆಕಾಶದ ಮೂಲಕ' ಎನ್ನುವ ಪದಗಳನ್ನು ಸೇರಿಸಬೇಕು."

ಇದು ಕೇವಲ ಬಿಟ್ಟುಹೋದ ಕಾರಣದಿಂದಾದದ್ದು.

**ಡಾ. ಪಿ. ಎಸ್. ದೇಶ್‌ಮುಖ್:** ಮಾನ್ಯರೇ, ನಾನು ಹೀಗೆ ಮಂಡಿಸಲು ಬೇಡಿಕೊಳ್ಳುತ್ತೇನೆ:

---

* ಸಿ.ಎ.ಡಿ. ಸಂ. IX, ೩೦ನೇ ಆಗಸ್ಟ್ ೧೯೪೯, ಪುಟ ೭೫೩–೭೫೪.

** ಸಿ.ಎ.ಡಿ. ಸಂ. IX, ೩೦ನೇ ಆಗಸ್ಟ್ ೧೯೪೯, ಪುಟ ೭೫೪.

*** ಅದೇ, ಪುಟ ೭೫೫.

"ಯಾದಿ ೧(ಆರನೇ ವಾರ)ರ ತಿದ್ದುಪಡಿ ಸಂಖ್ಯೆ ೧೨ರಲ್ಲಿ, ಯಾದಿ ೧ರ ೩೭ನೇ ದಾಖಲಾತಿಯಲ್ಲಿ "ರೈಲ್ವೆ, ಸಮುದ್ರ ಅಥವಾ ಆಕಾಶದ ಮೂಲಕ" ಎನ್ನುವ (ಬದಲಾಯಿಸಲು ಪ್ರಸ್ತಾಪಿಸಿದ) ಪದಗಳಿಗೆ ಬದಲಾಗಿ "ಭೂಮಿ, ಸಮುದ್ರ ಅಥವಾ ಆಕಾಶದ ಮೂಲಕ" ಎಂಬ ಪದಗಳನ್ನು ಸೇರಿಸಬೇಕು.

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಡಾ. ದೇಶ್‌ಮುಖ್ ಅವರು ಮಂಡಿಸಲಾದ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲಾಗುವುದಿಲ್ಲ, ಏಕೆಂದರೆ ನಾವು ಇದನ್ನು ಸ್ವೀಕರಿಸಿದರೆ, ಇದು ಕೇಂದ್ರದ ವಿಷಯವಾಗುತ್ತದೆ.

**ಡಾ. ಪಿ. ಎಸ್. ದೇಶ್‌ಮುಖ್:** ಒಂದು ವೇಳೆ ಇದು ಎರಡು ಪ್ರಾಂತ್ಯಗಳ ನಡುವೆ ಆಗಿದ್ದರೆ?

**ಗೌರವಾನ್ವಿತ ಬಿ.ಆರ್. ಅಂಬೇಡ್ಕರ್:** ಅದು ಅಂತರ ರಾಜ್ಯ ರಸ್ತೆಗಳಡಿಯಲ್ಲಿ ಬರುತ್ತದೆ.

**ಡಾ. ಪಿ. ಎಸ್. ದೇಶ್‌ಮುಖ್:** ನಾನು ನನ್ನ ತಿದ್ದುಪಡಿಯನ್ನು ಹಿಂದೆ ಪಡೆಯಲು ತಯಾರಾಗಿದ್ದೇನೆ.

(ತಿದ್ದುಪಡಿಯನ್ನು, ಸದನದ ಅನುಮತಿಯ ಮೇರೆಗೆ, ಹಿಂತೆಗೆದುಕೊಳ್ಳಲಾಯಿತು.)

(ಶ್ರೀ ಎಚ್. ವಿ. ಕಾಮತ್ ಅವರು ತಮ್ಮ ತಿದ್ದುಪಡಿಯನ್ನು ಒತ್ತಾಯಪಡಿಸಲಿಲ್ಲ.)

## ದಾಖಲಾತಿ ೩೮

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೩೮ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**'೩೮. ರೈಲ್ವೆಗಳು.' "**

ಈ ಬದಲಾವಣೆಗೆ ಸ್ವಲ್ಪ ವಿವರಣೆಯ ಆವಶ್ಯಕತೆ ಇದೆಯೆಂದು ನನಗೆ ಅನ್ನಿಸುತ್ತದೆ. ಗೌರವಾನ್ವಿತ ಸದಸ್ಯರು ಕರಡು ಸಂವಿಧಾನದಲ್ಲಿರುವಂತೆ ದಾಖಲಾತಿ ೩೮ನ್ನು ನೋಡಿದರೆ, ಮೊದಲನೆಯದಾಗಿ ಕೇಂದ್ರ ರೈಲ್ವೆಗಳು ಮತ್ತು ಪ್ರಮುಖವಲ್ಲದ ರೈಲ್ವೆಗಳ ನಡುವೆ ವ್ಯತ್ಯಾಸ ಮಾಡಿರುವುದನ್ನು ಗುರುತಿಸಬಹುದು. ಈ ವ್ಯತ್ಯಾಸವು ಏಕೆ ಆವಶ್ಯಕವೆಂದರೆ, ಕೇಂದ್ರ ರೈಲ್ವೆಗಳಿಗೆ ಸಂಬಂಧಿಸಿದಂತೆ ಭದ್ರತೆ, ಕನಿಷ್ಠ ಹಾಗೂ ಗರಿಷ್ಠ ದರಗಳು ಹಾಗೂ ಶುಲ್ಕಗಳು, ಮುಂತಾದವುಗಳ ಬಗ್ಗೆ ಶಾಸನ ರಚಿಸುವ ಅಧಿಕಾರವನ್ನು ಕೇಂದ್ರ ಸರ್ಕಾರವು ಹೊಂದಿರುತ್ತದೆ. ಪ್ರಮುಖವಲ್ಲದ ರೈಲ್ವೆಗಳ ಸರಕುಗಳ ಸಾಗಾಣಿಕೆ ಹಾಗೂ ಯಾತ್ರಿಕರ ನಿರ್ವಹಣೆಯ ಜವಾಬ್ದಾರಿಯು ಮಿತಿಯುಳ್ಳದ್ದಾಗಿರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಗರಿಷ್ಠ ಹಾಗೂ ಕನಿಷ್ಠ ದರಗಳೂ, ನಿಲ್ದಾಣ ಮತ್ತು ನಿಲ್ದಾಣ ಶುಲ್ಕಗಳು, ಮುಂತಾದವುಗಳಿಗೆ ಸಂಬಂಧಿಸಿದಂತೆ, ಅವುಗಳನ್ನು ಕೇಂದ್ರ ಶಾಸಕಾಂಗದ ವ್ಯಾಪ್ತಿಯಿಂದ ಹೊರಗೆ ತೆಗೆದುಕೊಳ್ಳಲಾಗಿದೆ. ರೈಲ್ವೆಗಳ ಸೇವೆಯು ಇಡೀ ಭಾರತದಲ್ಲಿ ಏಕಸ್ವರೂಪದ್ದಾಗಿರುವುದರಿಂದ ರೈಲ್ವೆಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ ಒಂದೇ ತಳಹದಿಯ ಮೇಲೆ ನಿರ್ವಹಣೆ ಮಾಡುವ ಒಂದೇ ಶಾಸನಾತ್ಮಕ ಪ್ರಾಧಿಕಾರವಿರಬೇಕೆಂದು ಇಚ್ಛಿಸಲಾಗಿದೆ. ತತ್ಪರಿಣಾಮವಾಗಿ ಮೊದಲನೇ ಭಾಗದಲ್ಲಿಯ ದಾಖಲಾತಿಯನ್ನು ಈಗ ಪ್ರಮುಖವಲ್ಲದ ರೈಲ್ವೆಗಳನ್ನೊಳಗೊಂಡಂತೆ ಎಲ್ಲ ರೈಲ್ವೆಗಳಿಗೆ ವಿಸ್ತರಿಸಲಾಗಿದೆ. ಹಾಗೆಯೇ ಏಕರೂಪದ ಶಾಸನವನ್ನು ಉದ್ದೇಶಿಸಿರುವುದರಿಂದ ಕೇಂದ್ರ ರೈಲ್ವೆಗಳು ಮತ್ತು ಪ್ರಮುಖವಲ್ಲದ ರೈಲ್ವೆಗಳ ನಡುವೆ ವ್ಯತ್ಯಾಸ ಮಾಡುವ ದಾಖಲಾತಿಯ ಎರಡನೇ ಭಾಗವನ್ನು ಇಟ್ಟುಕೊಳ್ಳುವುದು ಅನಾವಶ್ಯಕವೆಂದು ತಿಳಿಯಲಾಗಿದೆ.

* ಸಿ.ಎ.ಡಿ. ಸಂ. IX, ೩೦ನೇ ಆಗಸ್ಟ್ ೧೯೪೯, ಪುಟ ೭೫೭.

** ಅದೇ, ಪುಟ ೭೫೭.

ಇದೊಂದು ಪೂರ್ಣವಾಗಿ ಶಾಸನಾತ್ಮಕ ದಾಖಲಾತಿ ಎಂದು ನಾನು ಹೇಳಬಹುದಾಗಿದೆ. ಇದು ಕೇವಲ ಒಡೆತನದ ಬಗೆಗಿನ ದಾಖಲಾತಿಯಾಗಿರುವುದಿಲ್ಲ. ಅಂದರೆ ಕೇಂದ್ರವು ಕನಿಷ್ಠ ಹಾಗೂ ಗರಿಷ್ಠ ದರಗಳು, ನಿಲ್ದಾಣ ಶುಲ್ಕಗಳು ಮುಂತಾದವುಗಳನ್ನು ನಿರ್ವಹಿಸುವ ಅಧಿಕಾರವನ್ನು ಹೊಂದಿದ್ದರೂ ಸಹ, ಪ್ರಮುಖವಲ್ಲದ ರೈಲ್ವೆಗಳ ಒಡೆತನವನ್ನು ಹೊಂದಿರುವ ಪ್ರತಿಯೊಂದು ರಾಜ್ಯವು, ಅದು ಭಾಗ Iದಲ್ಲಿಯ ಅಥವಾ ಭಾಗ IIIದಲ್ಲಿಯ ಯಾವುದೇ ರಾಜ್ಯವಾಗಿದ್ದರೂ ಸಹ, ಅದು ಒಂದು ನಿರ್ದಿಷ್ಟ ರೈಲ್ವೆಯ ಒಡೆಯನಾಗಿದ್ದರೆ, ಕೇಂದ್ರದಿಂದ ನಿಗದಿಪಡಿಸಿದ ದರ ಹಾಗೂ ಶುಲ್ಕಗಳಿಂದ ಬಂದ ಮೊತ್ತವನ್ನು ಸ್ವೀಕರಿಸಲು ಹಾಗೂ ಇಟ್ಟುಕೊಳ್ಳಲು ಬಾಧ್ಯಸ್ತವಾಗಿರುತ್ತದೆ. ಇದು ಒಡೆತನದ ಹಕ್ಕುಗಳ ಮೇಲೆ ಯಾವುದೇ ಪರಿಣಾಮವನ್ನು ಬೀರುವುದಿಲ್ಲ. ಅವುಗಳು ಇದ್ದಂತೆಯೇ ಇರುತ್ತವೆ. ಕೇಂದ್ರವು ಭಾಗ I ಅಥವಾ ಭಾಗ IIIರಲ್ಲಿಯ ಯಾವುದೇ ರಾಜ್ಯದ ಒಡೆತನದಲ್ಲಿರುವ ಯಾವುದೇ ಪ್ರಮುಖವಲ್ಲದ ರೈಲ್ವೆಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಲು ಬಯಸಿದರೆ, ಅದನ್ನು ಸಾಮಾನ್ಯ ರೀತಿಯಲ್ಲಿಯೇ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಇದೊಂದು ಶಾಸನಾತ್ಮಕವಾಧ ದಾಖಲಾತಿ ಮಾತ್ರವಾಗಿರುತ್ತದೆ. ತಿದ್ದುಪಡಿಯ ಗುರಿಯು ರೈಲ್ವೆಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ಏಕರೂಪದ ಕಾನೂನನ್ನು ಹೊಂದುವುದಾಗಿದ್ದು ಒಡೆತನದ ಪ್ರಶ್ನೆಯನ್ನು ಅದು ಮುಟ್ಟುವುದೇ ಇಲ್ಲ.

ಆದರೆ ಟ್ರಾಮುಗಳ ಪ್ರಶ್ನೆಯನ್ನು ರೈಲ್ವೆಗಳ ಪ್ರಶ್ನೆಯಿಂದ ಪ್ರತ್ಯೇಕಿಸಲಾಗಿದೆ. ಅರ್ಥ ವಿವರಣೆಯ ಖಂಡದಲ್ಲಿ ಭಾಗ I ಮತ್ತು ಭಾಗ IIIರಲ್ಲಿ ಬರುವ ರಾಜ್ಯಗಳು ಟ್ರಾಮುಗಳನ್ನು ಎಲ್ಲ ರೀತಿಯಲ್ಲಿ ನಿಯಂತ್ರಿಸುವ ಅಧಿಕಾರವನ್ನು, ಎಲ್ಲ ಅವುಗಳನ್ನು ರೈಲ್ವೆಗಳಲ್ಲಿ ಸೇರಿಸಿಲ್ಲವೇನೋ ಎಂಬಂತೆ, ಇಟ್ಟುಕೊಳ್ಳುವಂತೆ, ಟ್ರಾಮುಗಳನ್ನು ರೈಲ್ವೆಗಳ ವ್ಯಾಖ್ಯೆಯಿಂದ ಹೊರಗಿಡುವಂತೆ ಮಾಡಲು ನಾವು ಪ್ರಸ್ತಾಪಿಸುತ್ತಿದ್ದೇವೆ.

**ಶ್ರೀ ಆರ್. ಕೆ. ಸಿಧ್ವ:** ಪ್ರಾಂತೀಯ ಸರ್ಕಾರಗಳು ಕಾರ್ಯನಿರ್ವಹಿಸುವ ಪ್ರಮುಖವಲ್ಲದ ರೈಲ್ವೆಗಳ ಅಧಿನಿಯಮವಿರುತ್ತದೆ. ಇದು ಆ ಅಧಿನಿಯಮವನ್ನು ವರ್ಜಿಸುವ ಹಾಗೂ ಅದನ್ನು ಕೇಂದ್ರದಲ್ಲಿ ತರುವ ಉದ್ದೇಶವನ್ನು ಹೊಂದಿದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ಕೇಂದ್ರವು ಆ ಅಧಿನಿಯಮವನ್ನು ವರ್ಜಿಸುವ, ಬೇರೆ ಕಾನೂನನ್ನು ಮಾಡುವ ಅಥವಾ ತನಗೆ ಹಾಗೆ ಅನ್ನಿಸಿದರೆ ಅದನ್ನೇ ಇಟ್ಟುಕೊಳ್ಳುವ ಅಧಿಕಾರವನ್ನು ಹೊಂದಿರುತ್ತದೆ. ಇದೊಂದು ಅಧಿಕಾರ ಕೊಡುವ ದಾಖಲಾತಿ ಮಾತ್ರವಾಗಿದ್ದು, ಕೇಂದ್ರಕ್ಕೆ ಪ್ರಮುಖ ಹಾಗೂ ಪ್ರಮುಖವಲ್ಲದ ರೈಲುಗಳನ್ನು ನಿಯಂತ್ರಿಸಲು ಬೇರೆ ಬೇರೆ ಕಾನೂನುಗಳನ್ನು ಮಾಡುವ ಅಥವಾ ಅವು ಪ್ರಮುಖ ರೈಲ್ವೆಗಳೇ ಇರಬಹುದು ಅಥವಾ ಪ್ರಮುಖವಲ್ಲದ ರೈಲ್ವೆಗಳೇ ಇರಬಹುದು, ಎಲ್ಲಾ ರೈಲ್ವೆಗಳನ್ನು ನಿಯಂತ್ರಿಸಲು ಒಂದೇ ಕಾನೂನನ್ನು ಮಾಡುವ ಅಧಿಕಾರವನ್ನು ನೀಡುತ್ತದೆ.

**ಶ್ರೀ ಆರ್. ಕೆ. ಸಿಧ್ವ:** ಅಂದರೆ ಪ್ರಮುಖವಲ್ಲದ ರೈಲ್ವೆಗಳು ಪ್ರಮುಖವಲ್ಲದ ರೈಲ್ವೆಗಳ ಅಧಿನಿಯಮದ ಮೂಲಕವೇ ನಿಯಂತ್ರಿಸಲ್ಪಡುತ್ತವೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ಸಂಸತ್ತು ಬದಲಾವಣೆ ಮಾಡುವವರೆಗೆ ಉಪಸ್ಥಿತಿಯಲ್ಲಿರುವ ಕಾನೂನು ಮುಂದುವರೆಯುತ್ತದೆ. ಇದು ಬದಲಾವಣೆ ಮಾಡಲು ಸಂಸತ್ತಿಗೆ ಅಧಿಕಾರವನ್ನು ನೀಡುವುದು ಮಾತ್ರವಾಗಿರುತ್ತದೆ.

**ಮಾನ್ಯ ಅಧ್ಯಕ್ಷರು:** ನಾನು ಈಗ ದಾಖಲಾತಿ ೩೮ನ್ನು ಮತಕ್ಕೆ ಹಾಕುತ್ತೇನೆ. ಇಂದು ಬೆಳಿಗ್ಗೆ ಒಂಬತ್ತು ಗಂಟೆಯ ನಂತರ ನಾನು ಸ್ವೀಕರಿಸಿದ ಒಂದು ತಿದ್ದುಪಡಿ ಇದೆ ಎಂದು ನನಗೆ ಹೇಳಲಾಗಿದೆ. ಅದನ್ನು ಸ್ವೀಕರಿಸಲು ಆಗುವುದಿಲ್ಲ ಎಂದು ಹೇಳಲು ವಿಷಾದಿಸುತ್ತೇನೆ.

**[ದಾಖಲಾತಿ ೩೮, ಡಾ. ಅಂಬೇಡ್ಕರ್ ಅವರ ತಿದ್ದುಪಡಿಯ ಮೂಲಕ ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೩೯

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ Iರ ದಾಖಲಾತಿ ೩೯ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**'೩೯. ಈ ಸಂವಿಧಾನವು ಪ್ರಾರಂಭವಾಗುವ ದಿನಾಂಕದಂದು ರಾಷ್ಟ್ರೀಯ ವಿಕ್ಟೋರಿಯಾ ಸ್ಮಾರಕ, ಭಾರತೀಯ ಯುದ್ಧ ಸ್ಮಾರಕ ಮತ್ತು ಭಾರತೀಯ ಸರ್ಕಾರದಿಂದ ಪೂರ್ತಿ ಅಥವಾ ಭಾಗಶಃ ಹಣಕಾಸು ಒದಗಿಸಿದ ಹಾಗೂ ರಾಷ್ಟ್ರಿಯ ಪ್ರಾಮುಖ್ಯತೆಯ ಸಂಸ್ಥೆ ಎಂದು ಕಾನೂನಿನ ಮೂಲಕ ಸಂಸತ್ತಿನಿಂದ ಘೋಷಿಸಲಾದ ಯಾವುದೇ ಇತರ ಸಂಸ್ಥೆ ಎಂದು ಗುರುತಿಸಲಾದ ಸಂಸ್ಥೆ.' "**

೧೫ನೇ ಆಗಸ್ಟ್ ೧೯೪೭ರ ನಂತರ ಕೆಲವು ಸಂಸ್ಥೆಗಳ ಹೆಸರುಗಳಲ್ಲಿ ಆದ ಕೆಲವು ಬದಲಾವಣೆಯನ್ನು ಬಿಟ್ಟರೆ, ಈ ದಾಖಲಾತಿಯ ಸಾರವು ಈಗ ಇರುವುದರಂತೆಯೇ ಇರುತ್ತದೆ.

**ಶ್ರೀ ಬಿ. ದಾಸ್** (ಒರಿಸ್ಸಾ: ಸಾಮಾನ್ಯ): ಸಂವಿಧಾನವು ಜಾರಿಯಲ್ಲಿ ಬಂದಾಗ, ಯಾವ ರೀತಿ "ಅರಸೊತ್ತಿಗೆಯ ಗ್ರಂಥಾಲಯ"ವನ್ನು "ರಾಷ್ಟ್ರೀಯ ಗ್ರಂಥಾಲಯ" ಎಂದು ಬದಲಾಯಿಸಲಾಗಿದೆಯೋ ಅದೇ ರೀತಿ "ಅರಸೊತ್ತಿಗೆಯ ಯುದ್ಧ ಸ್ಮಾರಕ"ವನ್ನು "ರಾಷ್ಟ್ರೀಯ ಯುದ್ಧ ಸ್ಮಾರಕ" ಎಂದು ಬದಲಾಯಿಸಲಾಗುತ್ತದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನಗೆ ತಿಳಿದಂತೆ "ಅರಸೊತ್ತಿಗೆಯ ಗ್ರಂಥಾಲಯ"ವನ್ನು "ರಾಷ್ಟ್ರೀಯ ಗ್ರಂಥಾಲಯ"ವೆಂದು ಬದಲಾಯಿಸಲಾಗಿದೆ. ಆದರೆ ಅರಸೊತ್ತಿಗೆಯ ಯುದ್ಧ ಸ್ಮಾರಕ ತನ್ನ ಈಗಿನ ಹೆಸರನ್ನು ಉಳಿಸಿಕೊಳ್ಳುತ್ತದೆ. ಈ ಹೆಸರುಗಳು ಸಂಸ್ಥೆಗಳನ್ನು ಗುರುತಿಸುವ ಉದ್ದೇಶವನ್ನು ಮಾತ್ರ ಹೊಂದಿರುತ್ತದೆ, ಸಂಸತ್ತು ಬಯಸಿದಾಗ ಅವುಗಳ ಬಗ್ಗೆ ಕಾನೂನು ಮಾಡಬಹುದಾಗಿದೆ.

**ಶ್ರೀ ಬಿ. ದಾಸ್:** ನಾನು ತಿಳಿಯಬಯಸಿರುವುದೇನೆಂದರೆ ಸಂವಿಧಾನವು ಜಾರಿಯಲ್ಲಿ ಬಂದನಂತರ ಹಾಗೂ ಅಳವಡಿಕೆಗಳನ್ನು ಮಾಡಿದಾಗ "ಅರಸೊತ್ತಿಗೆ" ಎಂಬ ಪದವು ಹೋಗುತ್ತದೆಯೇ ಎಂದು "ಹಿಸ್ ಮೆಜೆಸ್ಟಿಯ ಸರ್ಕಾರ", "ಕ್ರೌನ್" ಮುಂತಾದ ಪದಗಳು ಹೋಗುತ್ತವೆ ಎಂದು ನಾನು ನಿರೀಕ್ಷಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಳವಡಿಕೆಗಳು ಕಾನೂನಿಗೆ ಮಾತ್ರ ಅನ್ವಯವಾಗುತ್ತವೆ, ಹೆಸರುಗಳಿಗಲ್ಲ.

**ಮಾನ್ಯ ಅಧ್ಯಕ್ಷರು:** ಈ ದಾಖಲಾತಿಯು ಕೇಂದ್ರ ಶಾಸಕಾಂಗಕ್ಕೆ ಹೆಸರುಗಳನ್ನು ಬದಲಾವಣೆ ಮಾಡುವ ಹಕ್ಕನ್ನು ನೀಡುತ್ತದೆ.

ಇದಕ್ಕೆ ಶ್ರೀ ನಜೀರುದ್ದೀನ್ ಅಹ್ಮದರ ತಿದ್ದುಪಡಿ ಇರುತ್ತದೆ. ಸಂಖ್ಯೆ ೧೬೦

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಶ್ರೀ ನಜೀರುದ್ದೀನ್ ಅಹ್ಮದರ ತಿದ್ದುಪಡಿಯನ್ನು ನಾನು ಏಕೆ ಒಪ್ಪುವುದಿಲ್ಲ ಎನ್ನುವುದಕ್ಕೆ ಹೆಚ್ಚಿನ ವಿವರಣೆಯ ಆವಶ್ಯಕತೆ ಇದೆ ಎಂದು ನನಗೆ ಅನ್ನಿಸುವುದಿಲ್ಲ. ಈ ದಾಖಲಾತಿಯು ನಿಜವಾಗಿಯೂ ಎರಡು ಭಾಗಗಳಲ್ಲಿರುವುದನ್ನು ನೀವು ನೋಡಬಹುದು. ಮೊದಲನೆಯ ಭಾಗದಲ್ಲಿ ಅಲ್ಲಿ ನಮೂದಿಸಲಾದ ಕೆಲವು ನಿರ್ದಿಷ್ಟ ಸಂಸ್ಥೆಗಳ ಬಗ್ಗೆ ಅದು ನಿರ್ವಹಿಸುತ್ತದೆ. ಎರಡನೆಯ ಭಾಗದಲ್ಲಿ ಭಾರತೀಯ ಸರ್ಕಾರದಿಂದ ಪೂರ್ತಿಯಾಗಿ ಅಥವಾ ಭಾಗಶಃ ಹಣಕಾಸು ಒದಗಿಸಲಾದ ಸಂಸ್ಥೆಗಳ ಬಗ್ಗೆ ಹೇಳುತ್ತದೆ, ಆದರಿಂದ "ಅದೇ ರೀತಿಯ" ಎಂಬ ಪದವನ್ನು ಬಳಸಲಾಗುವುದಿಲ್ಲ. ಏಕೆಂದರೆ, ಅದು ಕೇಂದ್ರ ಸರ್ಕಾರದ ತನ್ನಿಂದ ಹಣಕಾಸು ಒದಗಿಸಲಾದ ಅಥವಾ ಭಾಗಶಃ ತನ್ನಿಂದ ಹಾಗೂ ಭಾಗಶಃ ಪ್ರಾಂತಗಳಿಂದ ಹಣಕಾಸು ಒದಗಿಸಲಾದ ಸಂಸ್ಥೆಗಳನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರವನ್ನು ಸಂದರ್ಭೀಕರಣಗೊಳಿಸಿದಂತಾಗುತ್ತದೆ.

**[ಶ್ರೀ ನಜೀರುದ್ದೀನ್ ಅಹ್ಮದರ ೩ ತಿದ್ದುಪಡಿಗಳಲ್ಲಿ, ಎರಡನ್ನು ಅವರು ಮುಂದಿಡಲಿಲ್ಲ ಮತ್ತು ಇನ್ನೊಂದನ್ನು ಡಾ. ಅಂಬೇಡ್ಕರ್ ಅವರ ತಿದ್ದುಪಡಿಯ ಮೂಲಕ ತಿರಸ್ಕರಿಸಲಾಯಿತು. ದಾಖಲಾತಿ ೩೯ನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.]**

* * *

## ದಾಖಲಾತಿ ೪೦

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೪೦ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**'೪೦. ಈ ಸಂವಿಧಾನದ ಪ್ರಾರಂಭದ ದಿನಾಂಕದಂದು ಬನಾರಸ ಹಿಂದೂ ವಿಶ್ವವಿದ್ಯಾಲಯ, ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯ, ಮತ್ತು ದೆಹಲಿ ವಿಶ್ವವಿದ್ಯಾಲಯ ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ ಎಂದು ಸಂಸತ್ತಿನ ಕಾನೂನಿನ ಮೂಲಕ ಘೋಷಿಸಲಾದ ಇತರ ಯಾವುದೇ ಸಂಸ್ಥೆ ಎಂದು ತಿಳಿಯಲಾದ ಸಂಸ್ಥೆಗಳು.' "**

"ವಿಶ್ವವಿದ್ಯಾಲಯ" ಎಂಬ ಪದವು ತಪ್ಪಾಗಿದ್ದು, ಅದು "ಸಂಸ್ಥೆ" ಎಂದು ಆಗಬೇಕಾಗಿತ್ತು ಎಂದು ನಾನು ತಮ್ಮ ಮುಂದೆ ವಿನಂತಿಸುತ್ತೇನೆ ಮತ್ತು ಅದನ್ನು ಬದಲಾಯಿಸಲು ತಾವು ನನಗೆ ಅನುಮತಿ ನೀಡುವಿರೆಂದು ಭಾವಿಸುತ್ತೇನೆ."

ನಂತರದ ಭಾಗದಲ್ಲಿ ಇದು ಸಂಸತ್ತಿಗೆ ಅದು ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ ಎಂದು ಯೋಚಿಸುವ ಯಾವುದೇ ಸಂಸ್ಥೆಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಅನುಮತಿ ನೀಡುವುದನ್ನು ಬಿಟ್ಟರೆ, ಇದರಲ್ಲಿ ಯಾವುದೇ ಮೂಲಭೂತ ಬದಲಾವಣೆ ಇರುವುದಿಲ್ಲ.

**ಡಾ. ಪಿ. ಎಸ್. ದೇಶ್‌ಮುಖ್:** ೪೦–ಎ ಅನ್ನು ಸಹ ಒಟ್ಟಿಗೇ ತೆಗೆದುಕೊಳ್ಳಬಹುದೆಂದು ನಾನು ಸಲಹೆ ಮಾಡಬಹುದೇ? ಅದು ಇದೇ ವಿಷಯದ ಒಂದು ಅಂಗವಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರಲ್ಲಿ ದಾಖಲಾತಿ ೪೦ರ ನಂತರ ಕೆಳಗಿನ ಹೊಸ ದಾಖಲಾತಿಯನ್ನು ಸೇರಿಸಬೇಕು:–

'೪೦ ಎ. ಪೂರ್ತಿ ಅಥವಾ ಭಾಗಶಃ ಭಾರತೀಯ ಸರ್ಕಾರದಿಂದ ಹಣಕಾಸು ಒದಗಿಸಲಾದ ಹಾಗೂ ಸಂಸತ್ತಿನಿಂದ ಕಾನೂನಿನ ಮೂಲಕ ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಗಳೆಂದು ಘೋಷಿಸಿದ ವೈಜ್ಞಾನಿಕ ಅಥವಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳು.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನನ್ನ ಮಿತ್ರರಾದ ಶ್ರೀ ನಜ಼ಿರುದ್ದೀನ್ ಅಹ್ಮದ್ ಮತ್ತು ಡಾ. ದೇಶ್‌ಮುಖ್ ಅವರು ವಿರೋಧಾಭಾಸದ ಉದ್ದೇಶಗಳನ್ನು ಹೊಂದಿದ್ದಾರೆ. ಒಬ್ಬರು– "ಅಕಾಡೆಮಿ" ಎಂಬ ಪದವನ್ನು ಸೇರಿಸುವ ಮೂಲಕ ವಿಧಿಯ ವ್ಯಾಪ್ತಿಯನ್ನು ವಿಸ್ತರಿಸಬಯಸುತ್ತಾರೆ. ಇನ್ನೊಬ್ಬರು "ದೆಹಲಿ ವಿಶ್ವವಿದ್ಯಾಲಯ ಮತ್ತು ರಾಷ್ಟ್ರೀಯ ಹಿತಾಸಕ್ತಿಯ ಸಂಸ್ಥೆ ಎಂದು ಕಾನೂನಿನ ಮೂಲ ಸಂಸತ್ತು ಘೋಷಿಸಿದ ಇತರ ಯಾವುದೇ ಸಂಸ್ಥೆ" ಎಂಬ ಪದಗಳನ್ನು ತೆಗೆದುಹಾಕುವ ಮೂಲಕ ವಿಧಿಯ ವ್ಯಾಪ್ತಿಯನ್ನು ಮಿತಿಗೊಳಿಸಬಯಸುತ್ತಾರೆ.

ಡಾ. ದೇಶ್‌ಮುಖ್ ಅವರ ತಿದ್ದುಪಡಿಗೆ ಸಂಬಂಧಿಸಿದಂತೆ, "ಅಕಾಡೆಮಿ" ಎಂಬ ಪದವನ್ನು ಸೇರಿಸುವುದು ಅನಾವಶ್ಯಕವೆಂದು ನನಗೆ ಅನ್ನಿಸುತ್ತದೆ. ಏಕೆಂದರೆ "ಸಂಸ್ಥೆ" ಎಂಬ ಪದವು ವಿಶ್ವವಿದ್ಯಾಲಯ ಹಾಗೂ ಅಕಾಡೆಮಿ ಎರಡನ್ನೂ ಒಳಗೊಳ್ಳುವಷ್ಟು ದೊಡ್ಡದಾಗಿದೆ. ಆದ್ದರಿಂದ ಅದು ಅನಾವಶ್ಯಕವಾಗಿದೆ.

ನನ್ನ ಗೌರವಾನ್ವಿತ ಮಿತ್ರ ಶ್ರೀ ನಜ಼ಿರುದ್ದೀನ್ ಅಹ್ಮದರ ತಿದ್ದುಪಡಿಗೆ ಸಂಬಂಧಿಸಿದಂತೆ, ಅವರು ಈಗಾಗಲೇ ಎತ್ತಿ ತೋರಿಸಿದಂತೆ ದೆಹಲಿ ವಿಶ್ವವಿದ್ಯಾಲಯವು ಕಮೀಷನರರ ಪ್ರಾಂತ್ಯದಲ್ಲಿರುವುದರಿಂದ ಹಾಗೂ ಕೇಂದ್ರ ಶಾಸಕಾಂಗಕ್ಕೆ ಒಳಪಟ್ಟಿರುವ ಕಾರಣಕ್ಕಾಗಿ ಅದು ಕೇಂದ್ರ ಶಾಸಕಾಂಗದಡಿಯಲ್ಲಿ ಬರುತ್ತದೆ. ಆದ್ದರಿಂದ "ದೆಹಲಿ ವಿಶ್ವವಿದ್ಯಾಲಯ" ಎಂಬ ಪದಗಳನ್ನು ಸೇರಿಸುವುದರಿಂದ ನಾವು ಉಪಸ್ಥಿತ ಪರಿಸ್ಥಿತಿಯಿಂದ ನಿಜವಾಗಿಯೂ ದೂರ ಹೋಗುತ್ತಿಲ್ಲ. ಸಂಸತ್ತಿನ ಕಾನೂನಿನ ಮೂಲಕ ಘೋಷಿಸಲಾದ ಇತರ ಯಾವುದೇ ಸಂಸ್ಥೆ ಎಂಬ ದಾಖಲಾತಿಯ ನಂತರದ ಭಾಗಕ್ಕೆ ಸಂಬಂಧಿಸಿದಂತೆ, ನನಗೆ ತೋರುವುದೇನೆಂದರೆ, ಈ ಪದಗಳನ್ನು ಇಟ್ಟುಕೊಳ್ಳುವುದು ಅಪೇಕ್ಷಣೀಯ. ಏಕೆಂದರೆ ಸಾಂಸ್ಕೃತಿಕ ಹಾಗೂ ರಾಷ್ಟ್ರೀಯ ದೃಷ್ಟಿಕೋನದಿಂದ ಅಂಥ ಪ್ರಾಮುಖ್ಯತೆಯುಳ್ಳ ಕೆಲವು ಸಂಸ್ಥೆಗಳಿರಬಹುದು ಮತ್ತು ಅವುಗಳ ಆರ್ಥಿಕ ಪರಿಸ್ಥಿತಿಯು ಇತರ ಯಾವುದೇ ಸಂಸ್ಥೆಯಷ್ಟು ಸಮರ್ಪಕವಾಗಿಲ್ಲದಿರಬಹುದು ಹಾಗೂ ಕೇಂದ್ರದ ಸಹಾಯ ಬೇಕಾಗಬಹುದು. ಈ ಕಾರಣಕ್ಕಾಗಿ ದಾಖಲಾತಿಯ ಕೊನೆಯ ಭಾಗವು ಆವಶ್ಯಕವೆಂದು ನನಗೆ ಅನ್ನಿಸುತ್ತದೆ, ಮತ್ತು ನಾನು ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಿದ್ಧನಿಲ್ಲ.

ಈಗ ನನ್ನ ಗೌರವಾನ್ವಿತ ಮಿತ್ರ ಶ್ರೀ ಕಾಮತರ ಬಗ್ಗೆ, ಅವರು "ಸಂಶೋಧನಾ ಸಂಸ್ಥೆಗಳು" ಎಂಬ ಪದಗಳನ್ನು ಸೇರಿಸಬಯಸುತ್ತಾರೆ. ಸಂಶೋಧನಾ ಸಂಸ್ಥೆಗಳ ಬಗೆಗಿನ ನನ್ನ ದಾಖಲಾತಿನ ಸಂಖ್ಯೆ ೫೭–ಎ ಗೆ ಸಂಬಂಧಿಸಿದ ನನ್ನ ತಿದ್ದುಪಡಿಯನ್ನು ಅವರು ಮರೆತಿದ್ದಾರೆ ಅಥವಾ ಬಹುಶಃ ಅವರ ಗಮನವನ್ನು ಸೆಳೆಯಲಾಗಿಲ್ಲ. ಆ ದಾಖಲಾತಿಯು ಸುಸಂಘಟನೆ ಮತ್ತು ಉನ್ನತ ಮಟ್ಟವನ್ನು ಕಾಪಾಡುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಶ್ರೀ ಕಾಮತ್ ಅವರು ಬಹುಶಃ ಪ್ರಾಂತ್ಯಗಳು ಸ್ಥಾಪಿಸಿದ ಸಂಸ್ಥೆಗಳು ಹಾಗೂ ಕೇಂದ್ರವು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಪೇಕ್ಷಾರ್ಹ ಸಂಸ್ಥೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರಬಹುದು. ಎಲ್ಲ ತರಹದ ಸಂಸ್ಥೆಗಳಿಂದ ಕೇಂದ್ರವನ್ನು ಅತಿಯಾದ ಭಾರಕ್ಕೆ ಒಳಪಡಿಸುವುದರಿಂದ ಯಾವುದೇ

* ಸಿ.ಎ.ಡಿ. ಸಂ. IX, ೩೦ನೇ ಆಗಸ್ಟ್ ೧೯೪೯, ಪುಟ ೭೬೭.

ಉಪಯೋಗವಿಲ್ಲವೆಂದು ತೋರುತ್ತದೆ. ನಾನು ಹೇಳಿದಂತೆ ೫೭–ಎ ನಲ್ಲಿರುವ ನಿಯಮಾಂಶಗಳನ್ನು ಅನುಮೋದಿಸಿದರೆ ಸಾಕಾಗಿರುತ್ತದೆ. ಏಕೆಂದರೆ ಅದು ವೈಜ್ಞಾನಿಕ ಮತ್ತು ತಂತ್ರಜ್ಞಾನದ ಶಿಕ್ಷಣ ಸಂಸ್ಥೆಗಳಲ್ಲಿ ಕಾನೂನಿನ ಮೂಲಕ ಉಚ್ಚ ಶಿಕ್ಷಣದ ಉತ್ತಮತೆಯನ್ನು ಕಾಪಾಡಲು ಮತ್ತು ಸುಸಂಘಟನೆಯನ್ನು ಮಾಡಲು ಕೇಂದ್ರಕ್ಕೆ ಸಾಕಷ್ಟು ಅಧಿಕಾರವನ್ನು ನೀಡುತ್ತದೆ.

**ಮಾನ್ಯ ಅಧ್ಯಕ್ಷರು:** ನಾನು ಈ ತಿದ್ದುಪಡಿಗಳನ್ನು ಮತಕ್ಕೆ ಇಡುತ್ತೇನೆ.

**[ದಾಖಲಾತಿ ೪೦, ಡಾ. ಅಂಬೇಡ್ಕರ್‌ರ ತಿದ್ದುಪಡಿಯಿಂದ ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.]**

* * *

## ದಾಖಲಾತಿ ೪೧

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ.

**"ಯಾದಿ ೧ರ ದಾಖಲಾತಿ ೪೧ರಲ್ಲಿ "ಮತ್ತು ಪ್ರಾಣಿ ಶಾಸ್ತ್ರೀಯ" ಎಂಬ ಪದಗಳಿಗೆ ಬದಲಾಗಿ "ಪ್ರಾಣಿ ಶಾಸ್ತ್ರೀಯ ಮತ್ತು ಮಾನವ ಶಾಸ್ತ್ರೀಯ" ಎಂಬ ಪದಗಳನ್ನು ಸೇರಿಸಬೇಕು."**

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** "ಮಾನವ ಶಾಸ್ತ್ರೀಯ" ಎಂಬ ಪದವನ್ನು ಬಹಳ ವಿಶಾಲವಾಗಿದ್ದು, ಅದು "ಜನಾಂಗಶಾಸ್ತ್ರ"ವನ್ನು ಸಹ ಒಳಗೊಂಡಿರುತ್ತದೆ.

* * *

*****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನನ್ನ ಮಿತ್ರ ಶ್ರೀ ಸಿದ್ವ ಅವರು ಹಿಂದೆ ಕೇಂದ್ರ ಸರ್ಕಾರವು ಭಾರತೀಯ ಭೂವಿಜ್ಞಾನ ಇಲಾಖೆಯ ಬಗ್ಗೆ ನಿರ್ಲಕ್ಷ್ಯ ಹಾಗೂ ಅಲಕ್ಷ್ಯ ಮನೋಭಾವನೆಯನ್ನು ಹೊಂದಿರುವುದರ ಮೇಲೆ ಅತಿರೇಕವಾದ ಚಿತ್ರಣವನ್ನು ನೀಡಿದ್ದಾರೆ. ಈ ವಿಷಯ ಕೇಂದ್ರ ಸರ್ಕಾರದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿತ್ತೆಂಬುದನ್ನು ನಾನು ಒಪ್ಪುತ್ತೇನೆ. ಆದರೆ, ಕೇಂದ್ರ ಇಲ್ಲಿಯವರೆಗೆ ತೆಗೆದುಕೊಂಡಿರುವುದಕ್ಕಿಂತ ಹೆಚ್ಚಿನ ಆಸಕ್ತಿಯನ್ನು ಪ್ರಾಂತ್ಯಗಳು ತೆಗೆದುಕೊಳ್ಳುತ್ತವೆ ಎಂಬುದನ್ನು ಇದರಿಂದ ಕಂಡುಕೊಳ್ಳಲಾಗುವುದಿಲ್ಲ.

ಎಲ್ಲದಕ್ಕೂ ಮುಂಚೆ ಇದೊಂದು ಅತ್ಯಂತ ಪ್ರಾಮುಖ್ಯತೆಯುಳ್ಳ ವಿಷಯವಾಗಿದ್ದು, ಅತಿ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುತ್ತದೆ ಮತ್ತು ಪ್ರಾಂತ್ಯಗಳು ತಮ್ಮ ಕ್ಷೇತ್ರದಲ್ಲಿರುವ ಖನಿಜಗಳನ್ನು ವೃದ್ಧಿಸಲು ಆವಶ್ಯಕ ಸಂಪನ್ಮೂಲಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆಂದು ನನಗೆ ಅನ್ನಿಸುವುದಿಲ್ಲ. ಆ ದೃಷ್ಟಿಕೋನದಿಂದ ಭೂ ವಿಜ್ಞಾನವನ್ನು ಸಮವರ್ತಿ ಯಾದಿಗೆ ವರ್ಗಾಯಿಸಿ ಅದರ ಬಗ್ಗೆ ಶಾಸನ ರಚಿಸುವ ಅವಕಾಶವನ್ನು ಪ್ರಾಂತ್ಯಗಳಿಗೆ ನೀಡುವುದರಿಂದ ಯಾವುದೇ ಲಾಭವಿಲ್ಲವೆಂದು ನನಗನ್ನಿಸುತ್ತದೆ.

---

* ಸಿ.ಎ.ಡಿ. ಸಂ. IX, ೩೦ನೇ ಆಗಸ್ಟ್ ೧೯೪೯, ಪುಟ ೭೬೯.

** ಅದೇ, ಪುಟ ೭೬೯.

*** ಅದೇ, ಪುಟ ೭೭೦.

ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಇರುವ ಎರಡನೆಯ ತೊಂದರೆ ನಾವು ಕೇಂದ್ರ ಯಾದಿಯಲ್ಲಿ ಕೇಂದ್ರವು ಭಾರತೀಯ ಖನಿಜ ಸಂಪನ್ಮೂಲಗಳನ್ನು ವೃದ್ಧಿಪಡಿಸಬಹುದು ಎಂದು ಹೇಳಲು ದಾಖಲಾತಿಯನ್ನು ಹೊಂದಿದ್ದೇವೆ. ದೇಶದ ಖನಿಜ ಅಭಿವೃದ್ಧಿಯು ಕೇಂದ್ರ ವಿಷಯವೆಂಬ ಸಂಸತ್ತು ಕಾನೂನು ಮಾಡಬೇಕಾದರೆ, ಪ್ರಾಂತ್ಯಗಳು ತಮ್ಮಲ್ಲಿ ಇಟ್ಟುಕೊಂಡ ಶಾಸನ ಮಾಡುವ ಸಮವರ್ತಿ ಅಧಿಕಾರವು, ಸ್ಪಷ್ಟವಾಗಿ ಆ ಕಾನೂನನ್ನು ಕಾರ್ಯಗತಗೊಳಿಸುವ ಅಥವಾ ಖನಿಜ ಸಂಪನ್ಮೂಲಗಳನ್ನು ವೃದ್ಧಿಪಡಿಸುವ ಸಂಸತ್ತಿನ ದಾರಿಯಲ್ಲಿ ಅತಿ ದೊಡ್ಡ ತೊಂದರೆಯನ್ನು ನಿರ್ಮಿಸಿದಂತಾಗುತ್ತದೆ. ಆದ್ದರಿಂದ, ದಾಖಲಾತಿಯನ್ನು ಇದ್ದಂತೆಯೇ ಉಳಿಯಲು ಬಿಡುವಂತೆ ಶ್ರೀ ಸಿಧ್ವ ಅವರನ್ನು ನಾನು ವಿನಂತಿಸುತ್ತೇನೆ.

**ಮಾನ್ಯ ಅಧ್ಯಕ್ಷರು:** ಹಾಗಾದರೆ ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಮೊದಲು ತಿದ್ದುಪಡಿ ಶ್ರೀ ಕಾಮತ್ ಅವರು ಮಂಡಿಸಿದ್ದು...

**ಶ್ರೀ ಹೆಚ್. ವಿ. ಕಾಮತ್:** "ಮಾನವ ಶಾಸ್ತ್ರೀಯ" ಎಂಬ ಪದವು "ಜನಾಂಗ ಶಾಸ್ತ್ರೀಯ" ಎಂಬುದನ್ನು ಒಳಗೊಂಡಿದೆ ಎಂಬ ಆಶ್ವಾಸನೆಯನ್ನು ಡಾ. ಅಂಬೇಡ್ಕರ್ ನೀಡಿರುವುದರಿಂದ, ನಾನು ಅವರ ಉನ್ನತ ವಿವೇಚನೆಯನ್ನು ಒಪ್ಪಿಕೊಳ್ಳುತ್ತೇನೆ ಹಾಗೂ ನನ್ನ ತಿದ್ದುಪಡಿಗೆ ಒತ್ತಾಯಪಡಿಸುವುದಿಲ್ಲ.

(ತಿದ್ದುಪಡಿಯನ್ನು, ಸದನದ ಅನುಮತಿಯ ಮೇರೆಗೆ, ಹಿಂದೆ ಪಡೆಯಲಾಯಿತು.)

**ಮಾನ್ಯ ಅಧ್ಯಕ್ಷರು:** ನಂತರ ಶ್ರೀ ಸಿಧ್ವ ಅವರ ತಿದ್ದುಪಡಿ.

**ಶ್ರೀ ಆರ್. ಕೆ. ಸಿಧ್ವ:** ನೀಡಿರುವ ಆಶ್ವಾಸನೆಯ ಹಿನ್ನೆಲೆಯಲ್ಲಿ ನನ್ನ ತಿದ್ದುಪಡಿಯನ್ನು ಸದನದ ಅನುಮತಿಯ ಮೇರೆ, ಹಿಂದೆ ಪಡೆಯಲು ವಿನಂತಿಸುತ್ತೇನೆ.

ತಿದ್ದುಪಡಿಯನ್ನು ಸದನದ ಅನುಮತಿಯ ಮೇರೆ ಹಿಂದೆ ಪಡೆಯಲಾಯಿತು.

**(ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.)**

**[ದಾಖಲಾತಿ ೪೧ನ್ನು, ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.]**

* * *

## ದಾಖಲಾತಿ ೪೩

**ಮಾನ್ಯ ಅಧ್ಯಕ್ಷರು:** ಈಗ ನಾವು ದಾಖಲಾತಿ ೪೩ನ್ನು ತೆಗೆದುಕೊಳ್ಳೋಣ. ಡಾ. ಅಂಬೇಡ್ಕರ್ ಅವರು ಒಂದು ತಿದ್ದುಪಡಿಯನ್ನು ಮಂಡಿಸಬೇಕಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೪೩ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**'೪೩. ಕೇಂದ್ರದ ಉದ್ದೇಶಗಳಿಗಾಗಿ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳುವುದು ಅಥವಾ ಕಡ್ಡಾಯವಾಗಿ ಕೋರುವುದು."**

ಈ ದಾಖಲಾತಿಯ ಮೂಲ ಸ್ವರೂಪದಲ್ಲಿ ಪರಿಹಾರದ ತತ್ವಗಳು ಮುಂ., ಎಂಬ ಇತರ ಪದಗಳು ಇದರೊಂದಿಗೆ ಇರುವುದನ್ನು ಸದಸ್ಯರು ನೋಡಬಹುದು. ಆ ಪದಗಳನ್ನು ಪ್ರತ್ಯೇಕ ದಾಖಲಾತಿಯಲ್ಲಿ ಸಮವರ್ತಿ ಯಾದಿಯಲ್ಲಿ ಇಡಲು ಪ್ರಸ್ತಾಪಿಸಲಾಗಿದೆ. ಆದ್ದರಿಂದ ಆ ಶಬ್ದಗಳನ್ನು ಇಲ್ಲಿ ಉಳಿಸಿ

ಕೊಳ್ಳುವ ಆವಶ್ಯಕತೆ ಇರುವುದಿಲ್ಲ. ಆ ದಾಖಲಾತಿಯು ಸಮವರ್ತಿ ಯಾದಿಯಲ್ಲಿ ದಾಖಲಾತಿ ೩೫ ಆಗಿರುತ್ತದೆ.

**ಶ್ರೀ ಶ್ಯಾಮನಂದನ ಸಹಾಯ್** (ಬಿಹಾರ: ಸಾಮಾನ್ಯ): ಮಾನ್ಯರೇ, ನಾನು ಒಂದು ಸಲಹೆಯನ್ನು ಮಾಡಲು ಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು:** ಸ್ವಲ್ಪ ತಡೆಯಿರಿ. ಮಂಡಿಸಬೇಕಾದ ಒಂದು ತಿದ್ದುಪಡಿ ಇರುತ್ತದೆ.

**ಶ್ರೀ ಶ್ಯಾಮನಂದನ ಸಹಾಯ್:** ತಿದ್ದುಪಡಿಯನ್ನು ಮಂಡಿಸುವುದಕ್ಕಿಂತ ಮುಂಚೆ ನಾನು ಹಾಗೆ ಮಾಡಬಯಸುತ್ತೇನೆ. ಡಾ. ಅಂಬೇಡ್ಕರ್ ಅವರು ಪ್ರಸ್ತಾಪಿಸಿದ ಯಾದಿಯ ಮೇಲಿನ ಈ ದಾಖಲಾತಿಯು ವಿಧಿ ೨೪೮ ರ ಭಾಷೆಯ ಜೊತೆಗೆ ವ್ಯವಹರಿಸಬೇಕಾಗುತ್ತದೆ. ಹಾಗೂ ಈ ಕಾರಣಕ್ಕಾಗಿ ನಾವು ವಿಧಿ ೨೪೮ನ್ನು ಅನುಮೋದಿಸುವವರೆಗೆ ಈ ಅಂಶವನ್ನು ತಡೆಹಿಡಿಯಬೇಕೆಂದು ನಾನು ಸಲಹೆ ಮಾಡುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಅನಾವಶ್ಯಕವೆಂದು ನಾನು ಬಿನ್ನವಿಸುತ್ತೇನೆ, ಏಕೆಂದರೆ ಯಾವುದೇ ಪ್ರಕರಣದಲ್ಲಿ ತತ್ವಗಳನ್ನು ರೂಪಿಸುವ ಅಧಿಕಾರವನ್ನು ಶಾಸಕಾಂಗಕ್ಕೆ ಕೊಡಬೇಕು. ಈಗಿರುವ ಪ್ರಶ್ನೆ ಎಂದರೆ ಸ್ವಾಧೀನಪಡಿಸಿಕೊಳ್ಳುವಿಕೆಯ ತತ್ವಗಳನ್ನು ರೂಪಿಸಲು ಕೇಂದ್ರವು ಪ್ರತ್ಯೇಕವಾದ ದಾಖಲಾತಿ ಮತ್ತು ಪ್ರಾಂತ್ಯವು ಪ್ರತ್ಯೇಕವಾದ ದಾಖಲಾತಿಯನ್ನು ಹೊಂದಿರಬೇಕೇ ಎನ್ನುವುದು. ಇಲ್ಲಿ ಏನನ್ನು ಪ್ರಸ್ತಾಪಿಸಲಾಗಿದೆ ಎಂದರೆ, ಕೇಂದ್ರ ಹಾಗೂ ಪ್ರಾಂತ್ಯ ಎರಡಕ್ಕೂ ಸಮವರ್ತಿ ಯಾದಿಯಲ್ಲಿ ಒಂದೇ ದಾಖಲಾತಿ ಇರಬೇಕೆನ್ನುವುದು. ಆದ್ದರಿಂದ, ವಿಧಿ ೨೪೮ಕ್ಕೆ ಏನೇ ಆಗಲಿ, ತತ್ವಗಳಿಗೆ ಸಂಬಂಧಿಸಿದ ಈ ದಾಖಲಾತಿಯನ್ನು ಎಲ್ಲಾದರೂ ಒಂದೆಡೆ ಇಡಬೇಕು. ಈ ವಿಷಯವನ್ನು ಸಮವರ್ತಿ ಯಾದಿಯಲ್ಲಿ ಇಡುವುದಕ್ಕೆ ನನ್ನ ಮಿತ್ರ ಯಾವುದೇ ತಕರಾರು ಹೊಂದಿರದಿದ್ದ ಪಕ್ಷದಲ್ಲಿ, ಈ ದಾಖಲಾತಿಯ ಪರಿಗಣನೆಯ ಮುಂದೂಡುವಿಕೆಯು ಯಾವುದೇ ಉದ್ದೇಶವನ್ನು ಈಡೇರಿಸುವುದಿಲ್ಲ.

**ಶ್ರೀ ಶ್ಯಾಮನಂದನ ಸಹಾಯ್:** ರಾಜ್ಯಗಳು ಸ್ವಾಧೀನಪಡಿಸಿಕೊಳ್ಳುವ ವಿಷಯದಲ್ಲಿಯೂ ಸಹ ಕೇಂದ್ರ ಸಂಸತ್ತು ತತ್ವವನ್ನು ನಿರ್ಧರಿಸಬೇಕಾದಂಥ ಪ್ರಕರಣದ ಬಗ್ಗೆ ನಾನು ವಿಚಾರ ಮಾಡುತ್ತಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿರ್ದಿಷ್ಟವಾಗಿ ಅದೇ ಅಂಶವಾಗಿರುತ್ತದೆ. ನನ್ನ ಮಿತ್ರ ಅರ್ಥ ಮಾಡಿಕೊಳ್ಳುವುದಾದರೆ, ಇದನ್ನು ನಾವು ಸಮವರ್ತಿ ಯಾದಿಯ ದಾಖಲಾತಿ ೩೫ರಲ್ಲಿ ನಾವು ಹಾಕುತ್ತಿದ್ದೇವೆ. ನನ್ನ ಮಿತ್ರ ಎರಡು ದಾಖಲಾತಿಗಳನ್ನು ಉಲ್ಲೇಖಿಸಿದರೆ, ಒಂದು ಕೇಂದ್ರ ಯಾದಿಯ ಉಲ್ಲೇಖ ೪೩ ಇನ್ನೊಂದು ರಾಜ್ಯ ಯಾದಿಯ ಉಲ್ಲೇಖ ೯, ಅವೆರಡೂ ನಿರ್ದಿಷ್ಟವಾಗಿ ಒಂದೇ ರೀತಿ ಇರುವುದನ್ನು ಅವರು ಕಾಣಬಹುದು. ಇನ್ನೊಂದು ರೀತಿ ಹೇಳಬೇಕೆಂದರೆ, ಅವೆರಡೂ ಕಡ್ಡಾಯವಾಗಿ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರವನ್ನು ನೀಡುವುದಲ್ಲದೇ ತತ್ವಗಳನ್ನು ರೂಪಿಸುವ ಅಧಿಕಾರವನ್ನು ಸಹ ನೀಡುತ್ತವೆ. ತತ್ವಗಳಿಗೆ ಸಂಬಂಧಿಸಿದ ದಾಖಲಾತಿಯನ್ನು ಕೇಂದ್ರ ಹಾಗೂ ಪ್ರಾಂತ್ಯಗಳ ನಡುವೆ ಒಂದರಿಂದ ಇನ್ನೊಂದನ್ನು ಸ್ವತಂತ್ರವಾಗಿ ವಿತರಿಸುವ ಬದಲಾಗಿ, "ತತ್ವಗಳು" ಮುಂ. ಶಬ್ದಗಳನ್ನು ಇಲ್ಲಿಂದ ತೆಗೆದು ಸಮವರ್ತಿ ಯಾದಿಯ ದಾಖಲಾತಿ ೩೫ರಲ್ಲಿಡಲು ಈಗ ಪ್ರಸ್ತಾಪಿಸಲಾಗಿದೆ.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಆ ವಿಧಿಯನ್ನು ಅನುಮೋದಿಸುವವರೆಗೆ ಈ ವಿಷಯವನ್ನು ಮುಂದೂಡಿದರೆ ಏನಾದರೂ ಚ್ಯುತಿಯುಂಟಾಗುತ್ತದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮುಂದೂಡುವುದರಿಂದ ಯಾವ ಒಳ್ಳೆಯದನ್ನೂ

ಈಡೇರಿಸಿದಂತಾಗುವುದಿಲ್ಲ. ನಾನು ಈ ವಿಷಯವನ್ನು ಮುಂದೂಡುವುದರ ಪರವಾಗಿಲ್ಲ. ಈ ವಿಷಯವನ್ನು ಪರಿಗಣಿಸುವಲ್ಲಿ ಈಗಾಗಲೇ ಸಾಕಷ್ಟು ಸಮಯವನ್ನು ವಿನಿಯೋಗಿಸಲಾಗಿದೆ.

**ಡಾ. ಪಿ. ಎಸ್. ದೇಶ್‌ಮುಖ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧(ಆರನೇ ವಾರ)ರ ತಿದ್ದುಪಡಿ ಸಂ. ೨೧ರಲ್ಲಿ, ಯಾದಿ ೧ರ ಪ್ರಸ್ತಾಪಿತ ದಾಖಲಾತಿ ೪೩ರಲ್ಲಿ "ಸ್ವತ್ತಿನ" ಶಬ್ದಗಳ ನಂತರ "ಕೇಂದ್ರದ ಕಾನೂನಿನಂತೆ" ಎಂಬ ಪದಗಳನ್ನು ಸೇರಿಸಬೇಕು."

ನಾನು ಪ್ರಸ್ತಾಪಿಸಿದ ತಿದ್ದುಪಡಿಯಾದ ಸ್ವತ್ತಿನ ಯಾವುದೇ ಸ್ವಾಧೀನಪಡಿಸಿಕೊಳ್ಳುವಿಕೆ ಅಥವಾ ಕಡ್ಡಾಯವಾಗಿ ಕೋರುವಿಕೆಯು ಸಂಸತ್ತಿನಿಂದ ರಚಿಸಲಾದ ಕಾನೂನಿನ ಮೂಲಕವೇ ಇರತಕ್ಕದ್ದು ಹಾಗೂ ಅದನ್ನು ಸ್ವೇಚ್ಛೆಯಿಂದ ತೆಗೆದುಕೊಳ್ಳತಕ್ಕದಲ್ಲ ಎಂಬುದನ್ನು ಒಪ್ಪಿಕೊಳ್ಳಲಾಗುವುದೆಂದು ನಾನು ಭಾವಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದು ಅನಾವಶ್ಯಕವಾಗಿರುತ್ತದೆ. ಈ ದಾಖಲಾತಿಗಳು ಶಾಸನಾತ್ಮಕ ಅಧಿಕಾರದ ಬಗ್ಗೆಯೂ ಹೇಳುತ್ತವೆ. ಕೇಂದ್ರದ ಕಾನೂನಿನ ಮೂಲಕ ಎಂಬ ಶಬ್ದಗಳನ್ನು ಸೇರಿಸುವುದರ ಪ್ರಯೋಜನವೇನು? ದಾಖಲಾತಿಯು ಸದ್ಯಕ್ಕೆ ಇರುವ ರೀತಿಯಲ್ಲಿಯೇ ಕೇಂದ್ರದ ಕಾನೂನು ಮಾಡುವ ಅಧಿಕಾರವನ್ನು ಹೊಂದಿರುತ್ತದೆ. ಅದು ಇನ್ನಾವುದೇ ಅರ್ಥವನ್ನು ಹೊಂದಿರುವುದಿಲ್ಲ.

**ಡಾ. ಪಿ. ಎಸ್. ದೇಶ್‌ಮುಖ್:** ನನ್ನ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲು ನಾನು ವಿನಂತಿಸುತ್ತೇನೆ.

**[ತಿದ್ದುಪಡಿಯನ್ನು, ಸದನದ ಅನುಮತಿಯ ಮೇರೆಗೆ, ಹಿಂದೆ ಪಡೆಯಲಾಯಿತು. ದಾಖಲಾತಿ ೩೪ನ್ನು, ಡಾ. ಅಂಬೇಡ್ಕರ್ ಅವರ ತಿದ್ದುಪಡಿಯ ಮೂಲಕ ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.]**

* * *

## ದಾಖಲಾತಿ ೫೦

***ಶ್ರೀ ಜಗತ್ ನಾರಾಯಣ್ ಲಾಲ್:** .....ಇದು ಅರ್ಥವನ್ನು ತುಂಬಾ ಸ್ಪಷ್ಟಪಡಿಸುತ್ತಿದೆ. ಯಾವುದೇ ದ್ವಂದ್ವಾರ್ಥತೆ ಇರುವುದಿಲ್ಲ. ನಾನು ಶ್ರೀ ಟಿ. ಟಿ. ಕೃಷ್ಣಮಾಚಾರಿಯವರಿಗೆ ಈ ಸಲಹೆಯನ್ನು ಮಾಡುತ್ತೇನೆ. ನನ್ನ ಸಲಹೆಯನ್ನು ಅಳವಡಿಸಿಕೊಳ್ಳುವ ಮೂಲಕ ಅವರು ತಮ್ಮ ದೃಷ್ಟಿಯಲ್ಲಿ ಇಟ್ಟುಕೊಂಡಿರುವ ಗುರಿಯನ್ನು ಈಡೇರಿಸಬಹುದಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ವಿಷಯವನ್ನು ಪರಿಗಣಿಸುತ್ತೇನೆ. ಸದ್ಯಕ್ಕೆ ಶ್ರೀ ಟಿ. ಟಿ. ಕೃಷ್ಣಮಾಚಾರಿ ಪ್ರಸ್ತಾಪಿಸಿದ ದಾಖಲಾತಿ ಒಳಗೆ ಸೇರಲಿ.

[ಕೆಳಗಿನ ಶ್ರೀ ಕೃಷ್ಣಮಾಚಾರಿಯವರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.]

---

* ಸಿ.ಎ.ಡಿ. ಸಂ. IX, ೩೦ನೇ ಆಗಸ್ಟ್ ೧೯೪೯, ಪುಟ ೭೭೩–೭೭೪.

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆಯು ಹೀಗಿರುತ್ತದೆ:

"ಯಾದಿ ೧ರ ದಾಖಲಾತಿ ೫೦ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:

**'೫೦. ಬ್ಯಾಂಕಿಂಗ್, ವಿಮೆ ಮತ್ತು ಹಣಕಾಸು ನಿಗಮಗಳನ್ನೊಳಗೊಂಡಂತೆ, ಆದರೆ ಸಹಕಾರಿ ಸಂಘಗಳನ್ನು ಒಳಗೊಳ್ಳದಂತೆ, ವಾಣಿಜ್ಯ ನಿಗಮಗಳ ನಿಗಮೀಕರಣ, ನಿಯಂತ್ರಣ ಮತ್ತು ಮುಚ್ಚುವಿಕೆ.'**

**೫೦–ಎ ಒಂದೇ ರಾಜ್ಯಕ್ಕೆ ಸೀಮಿತಗೊಳ್ಳದ ಉದ್ದೇಶಗಳನ್ನೊಂದಿದ ಆದರೆ ವಿಶ್ವವಿದ್ಯಾಲಯಗಳನ್ನು ಒಳಗೊಳ್ಳದ, ವಾಣಿಜ್ಯ ಅಥವಾ ವಾಣಿಜ್ಯೇತರ ನಿಗಮಗಳ ನಿಗಮೀಕರಣ, ನಿಯಂತ್ರಣ ಮತ್ತು ಮುಚ್ಚುವಿಕೆ.' "**

**[ದಾಖಲಾತಿ ೫೦ ಹಾಗೂ ೫೦–ಎ ಗಳನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.]**

* * *

## ದಾಖಲಾತಿ ೫೨

*__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೫೨ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

'೫೨. ಸರ್ವೋಚ್ಚ ನ್ಯಾಯಾಲಯ ಹಾಗೂ ಶ್ರೇಷ್ಠ ನ್ಯಾಯಾಲಯಗಳ ಘಟನೆ ಹಾಗೂ ಸಂಘಟನೆ, ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿ ಹಾಗೂ ಅಧಿಕಾರಗಳು ಹಾಗು ಅದರಲ್ಲಿ ತೆಗೆದುಕೊಳ್ಳಲಾದ ಶುಲ್ಕಗಳು, ಸರ್ವೋಚ್ಚ ನ್ಯಾಯಾಲಯ ಅಥವಾ ಯಾವುದೇ ಶ್ರೇಷ್ಠ ನ್ಯಾಯಾಲಯದ ಮುಂದೆ ವೃತ್ತಿ ಕೈಗೊಳ್ಳಲು ಬಾಧ್ಯಸ್ಥರಾದ ವ್ಯಕ್ತಿಗಳು.' "

ಕೊನೆಯ ಶಬ್ದಗಳು ಸೇರಿಸಿದವುಗಳಾಗಿವೆ. ಅವುಗಳನ್ನು ಹೊಂದುವುದು ಆವಶ್ಯಕವೆಂದೆನಿಸಿದೆ. ಏಕೆಂದರೆ ಸರ್ವೋಚ್ಚ ನ್ಯಾಯಾಲಯ ಹಾಗೂ ಶ್ರೇಷ್ಠ ನ್ಯಾಯಾಲಯ ಎರಡರಲ್ಲಿಯೂ ವೃತ್ತಿ ಕೈಗೊಳ್ಳುವ ವ್ಯಕ್ತಿಗಳ ವೃತ್ತಿ ಕೈಗೊಳ್ಳುವ ಹಕ್ಕನ್ನು ನಿರ್ವಹಿಸುವ ಸಮಯ ಬಂದಿರುತ್ತದೆ.

* * *

**__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ನಾನು ಚರ್ಚೆಗೆ ಅಡ್ಡಿಯುಂಟು ಮಾಡಬಯಸುವುದಿಲ್ಲ. ಆದರೆ ಶ್ರೇಷ್ಠ ನ್ಯಾಯಾಲಯಗಳು ಘಟನೆಗೆ ಸಂಬಂಧಿಸಿದ ೧೯೨ಎ, ೧೯೩, ೧೯೭, ೨೦೧ ಹಾಗೂ ೨೦೭ ವಿಧಿಗಳನ್ನು ನಾವು ಈಗಾಗಲೇ ಅನುಮೋದಿಸಿರುವುದನ್ನು ಎತ್ತಿ ತೋರಿಸಬಯಸುತ್ತೇನೆ. ಆ ವಿಧಿಗಳಲ್ಲಿ, ಹಣಕಾಸಿನ ವ್ಯಾಪ್ತಿಯನ್ನು ಹೊರತುಪಡಿಸಿ, ಅವುಗಳ ಘಟನೆ, ಸಂಘಟನೆ ಹಾಗೂ ಕ್ಷೇತ್ರೀಯ ವ್ಯಾಪ್ತಿಗೆ ಸಂಬಂಧಿಸಿದಂತೆ ಎಲ್ಲ ಶ್ರೇಷ್ಠ ನ್ಯಾಯಾಲಯಗಳನ್ನು ಕೇಂದ್ರದಲ್ಲಿಡಲಾಗಿದೆ. ಆದ್ದರಿಂದ ಈ ತಿದ್ದುಪಡಿಯು ಕ್ರಮಬದ್ಧವಾಗಿಲ್ಲ ಎಂದು ನನಗೆ ತೋರುತ್ತದೆ.

* * *

***__ಶ್ರೀ ನಜೀರುದ್ದೀನ್ ಅಹ್ಮದ್:__ ......ಮೂಲ ದಾಖಲಾತಿಯು ಸರ್ವೋಚ್ಚ ನ್ಯಾಯಾಲಯದ ಬಗ್ಗೆ ಮಾತ್ರ ಹೇಳುತ್ತದೆ. ಡಾ. ಅಂಬೇಡ್ಕರ್ ಪ್ರಸ್ತಾಪಿಸಿದ ಹೊಸ ದಾಖಲಾತಿ ಹೀಗೆ ಹೇಳುತ್ತದೆ: "ಸರ್ವೋಚ್ಚ

* ಸಿ.ಎ.ಡಿ. ಸಂ. IX, ૩೦ನೇ ಆಗಸ್ಟ್ ೧೯೪೯, ಪುಟ ೭೭೪.

** ಅದೇ, ಪುಟ ೭೭೫.

*** ಅದೇ, ಪುಟ ೭೭೮.

ನ್ಯಾಯಾಲಯ ಹಾಗೂ ಶ್ರೇಷ್ಠ ನ್ಯಾಯಾಲಯಗಳ ಘಟನೆ ಹಾಗೂ ಸಂಘಟನೆ." ನಂತರ ಮತ್ತೆ ಅವರು "ಸರ್ವೋಚ್ಚ ನ್ಯಾಯಾಲಯ ಹಾಗೂ ಯಾವುದೇ ಶ್ರೇಷ್ಠ ನ್ಯಾಯಾಲಯದ ಮುಂದೆ ವೃತ್ತಿ ಕೈಗೊಳ್ಳಲು ಬಾಧ್ಯಸ್ತ ವ್ಯಕ್ತಿಗಳು" ಎಂದು ಸೇರಿಸಿದ್ದಾರೆ.

ನನ್ನ ಮೊದಲ ತಕರಾರು ಏನೆಂದರೆ ಅಂತಹ ಪ್ರಮುಖ ವಿಷಯಗಳನ್ನು ದಾಖಲಾತಿಗಳಲ್ಲಿ ಮುಚ್ಚುಮರೆಯ ರೀತಿಯಲ್ಲಿ ನಡುವೆ ಸೇರಿಸಿರುವುದು. ನಾನು ನಿಜವಾಗಿಯೂ ಅರ್ಥ ಮಾಡಿಕೊಳ್ಳಬಹುದಾಗಿತ್ತು...

(ಮಧ್ಯಪ್ರವೇಶ)

**ಶ್ರೀ ಮಹಾವೀರ್ ತ್ಯಾಗಿ:** ಕ್ರಮಬದ್ಧತೆಯ ಬಗ್ಗೆ ಮಾನ್ಯರೇ, "ಮುಚ್ಚು ಮರೆಯ ರೀತಿಯಲ್ಲಿ" ಎಂಬ ಪದವು ಸಭ್ಯವಾದದ್ದೇ?

*__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಮಾನ್ಯರೇ, ಕರಡು ಸಮಿತಿಯ ಯಾವುದೇ ವಿಷಯವನ್ನು ಮುಚ್ಚುಮರೆಯ ರೀತಿಯಲ್ಲಿ ಸೇರಿಸಲು ಪ್ರಯತ್ನಿಸಿದೆ ಎಂದು ಹೇಳುವುದು ಸೂಕ್ತವಾದವೇ? ನನ್ನ ಗೌರವಾನ್ವಿತ ಮಿತ್ರ ನಾನು ದಾಖಲಾತಿಯನ್ನು ಏಕೆ ಬದಲಾವಣೆ ಮಾಡಿದೆ ಎಂದು ವಿವರಣೆ ಕೇಳಲು ಬಾಧ್ಯಸ್ತರಾಗಿದ್ದಾರೆ. ಇಲ್ಲ, ಯಾವುದೇ ಮುಚ್ಚುಮರೆ ಇಲ್ಲ. ನಾನು ಪ್ರತಿಯೊಂದು ಅಂಶ ಮತ್ತು ಅದರ ಪ್ರತಿಯೊಂದು ಭಾಗವನ್ನು ಋಜುಪಡಿಸಲು ಪೂರ್ತಿ ತಯಾರಾಗಿದ್ದೇನೆ.

**ಶ್ರೀ ಮಹಾವೀರ್ ತ್ಯಾಗಿ:** ಮಾನ್ಯರೇ, ತಮ್ಮ ನಿರ್ಣಯವನ್ನು ನಾನು ಬಯಸುತ್ತೇನೆ, "ಮುಚ್ಚು ಮರೆಯಲ್ಲಿ" ಎಂಬ ಶಬ್ದವು ಸಭ್ಯವೇ?

**ಮಾನ್ಯ ಸಭಾಧ್ಯಕ್ಷರು:** "ಮುಚ್ಚು ಮರೆಯಲ್ಲಿ" ಎಂಬ ಶಬ್ದವು ಸಭ್ಯವೇ ಅಥವಾ ಅಲ್ಲವೇ ಎಂದು ಹೇಳುವಷ್ಟರ ಮಟ್ಟಿಗೆ ಸಂಸತ್ತಿನ ವ್ಯವಹಾರಗಳ ಬಗ್ಗೆ ನಾನು ಪರಿಚಿತನಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಮನನೋಯಿಸಬಹುದಾದ ಅಭಿವ್ಯಕ್ತಿಗಳನ್ನು ಉಪಯೋಗಿಸಿಕೂಡದೆಂದು ನಾನು ಗೌರವಾನ್ವಿತ ಸದಸ್ಯರನ್ನು ಕೇಳುತ್ತೇನೆ.

**ಶ್ರೀ ನಝೀರುದ್ದೀನ್ ಅಹ್ಮದ್:** ಮಾನ್ಯರೇ, ತಮ್ಮ ನಿರ್ಣಯಕ್ಕೆ ನಾನು ತಲೆ ಬಾಗುತ್ತೇನೆ.

* * *

**__ಶ್ರೀ ಟಿ. ಟಿ. ಕೃಷ್ಣಮಾಚಾರಿ:__ ಡಾ. ಅಂಬೇಡ್ಕರ್ ಅವರಿಂದ ವಿಧಿ ೨೦೭ಕ್ಕೆ ಸದನದ ಸದಸ್ಯರ ಗಮನವನ್ನು ಸೆಳೆಯಲಾಗಿದೆ. ಮಾನ್ಯರೇ, ಅದರ ಕಾರಣದಿಂದಾಗಿ ಗೌರವಾನ್ವಿತ ಸದಸ್ಯರು ಈ ಅಂಶದ ಬಗ್ಗೆ ಕಷ್ಟಪಡಬೇಕಿಲ್ಲ ಎಂದು ನಾನು ಹೇಳಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಉತ್ತರಿಸಬಲ್ಲೆ. ನನಗೆ ಕೇವಲ ಹತ್ತು ನಿಮಿಷಗಳು ಬೇಕು. ಅವರು ಏನು ಹೇಳಬೇಕೆನ್ನುತ್ತಾರೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ.

**ಶ್ರೀ ನಝೀರುದ್ದೀನ್ ಅಹ್ಮದ್:** ಉತ್ತರಿಸಲು ವಾಗ್ದಾನವನ್ನು ಮಾಡಲಾಗಿದೆ, ಆದರೆ ಡಾ. ಅಂಬೇಡ್ಕರ್ ಅವರಿಂದ ಉತ್ತರ ಪಡೆಯುವುದು ನನಗೆ ನಿಜವಾಗಿಯೂ ಅಸಾಮಾನ್ಯವಾದ ಅದೃಷ್ಟಕರ ಸಂಗತಿಯಾಗಿದೆ... ಹಗುರವಾಗಿ ಪರಿಗಣಿಸಲು ಇದು ಅತ್ಯಂತ ಪ್ರಮುಖವಾದ ವಿಷಯವಾಗಿರುತ್ತದೆ. ನನ್ನ ನಿವೇದನೆ ಏನೆಂದರೆ ತನ್ನ ಮನಸ್ಸಿಗೆ ಬಂದದ್ದನ್ನು ಕರಡು ಸಮಿತಿಯು ಮಾಡಲು ಬಾಧ್ಯಸ್ಥವಾಗಿರುತ್ತದೆ ಎಂದು ನಾವು

* ಸಿ.ಎ.ಡಿ. ಸಂ. IX, ೩೦ನೇ ಆಗಸ್ಟ್ ೧೯೪೯, ಪುಟ ೭೮೦–೭೮೨.

** ಸಿ.ಎ.ಡಿ. ಸಂ. IX, ೩೦ನೇ ಆಗಸ್ಟ್ ೧೯೪೯, ಪುಟ ೭೮೦–೭೮೨.

ಭಾವಿಸಿದರೆ, ನಾನು ಪೂರ್ತಿಯಾಗಿ ನ್ಯಾಯಾಲಯದಿಂದ ಹೊರಗೆ ಇರುತ್ತೇನೆ. ಕಾರಣದ ಸಂಬಂಧ ಇಲ್ಲದೇ ನಾನು ನಿರ್ದಿಷ್ಟ ಸೋಲನ್ನು ಎದುರಿಸುತ್ತಿದ್ದೇನೆಂದು ನನಗೆ ಭಾಸವಾಗುತ್ತಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹಲವಾರು ಸಂದರ್ಭಗಳಲ್ಲಿ ನನ್ನ ಮಿತ್ರ ಶ್ರೀ ನಜೀರುದ್ದೀನ್ ಅಹ್ಮದ್ ಅವರು ಕರಡು ಸಮಿತಿಯ ಬಗ್ಗೆ ಅತ್ಯಂತ ಅಪಹಾಸ್ಯಕರ ಪದಗಳನ್ನು ಬಳಸಿ ಮಾತನಾಡುವ ಹವ್ಯಾಸಕ್ಕೆ ಒಳಗಾಗಿರುವುದನ್ನು ಗಮನಿಸಿದ್ದೇನೆ ಎಂದು ಹೇಳುವ ಮೂಲಕ ಪ್ರಾರಂಭಿಸಲು ನಿರ್ಬಂಧಿತನಾಗಿದ್ದೇನೆ. ಅವರಿಗೆ ಉತ್ತರಿಸಲು ನಾನು ಅವರ ಮಟ್ಟಕ್ಕೆ ಇಳಿಯುತ್ತಿಲ್ಲ, ಆದರೆ ಅವರು ಇದೇ ರೀತಿ ಮಾಡುವುದನ್ನು ಮುಂದುವರೆಸಿದರೆ ನಾನು ಅವರಿಗೆ ಅದೇ ರೀತಿ ತಿರುಗೇಟು ಕೊಡಲು ಖಂಡಿತವಾಗಿಯೂ ಹಿಂಜರಿಯುವುದಿಲ್ಲ ಎಂದು ಎಚ್ಚರಿಕೆಯನ್ನು ಕೊಡಬಯಸುತ್ತೇನೆ.

**ಶ್ರೀ ನಜೀರುದ್ದೀನ್ ಅಹ್ಮದ್:** ಸದಸ್ಯರನ್ನು ಈ ರೀತಿ ಹೆದರಿಸಬಹುದೇ? ಆದರೆ ಇದು ನನ್ನ ಮೇಲೆ ಯಾವುದೇ ಪರಿಣಾಮವನ್ನು ಬೀರುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದು ಹೆದರಿಕೆ ಒಡ್ಡುವುದಾಗಿರುವುದಿಲ್ಲ. ಇದು ಎಚ್ಚರಿಕೆಯಾಗಿರುತ್ತದೆ.

ಈಗ ನನ್ನ ಮಿತ್ರ ಡಾ. ಪಂಜಾಬರಾವ್ ದೇಶಮುಖ್ ಎತ್ತಿದ ಅಂಶಗಳಿಗೆ ಬರುತ್ತಾ, ನನಗೆ ಅವರ ಸಲಹೆಯನ್ನು ಸ್ವೀಕರಿಸಲಾಗುವುದಿಲ್ಲ ಎಂದು ವಿಷಾದಿಸುತ್ತೇನೆ. ಏಕೆಂದರೆ ಅವರು ಈ ರಾಷ್ಟ್ರದಲ್ಲಿರುವ ಪ್ರತಿಯೊಂದು ನ್ಯಾಯಾಲಯವನ್ನು ಅದರಡಿಯಲ್ಲಿ ತರುವ ರೀತಿಯಲ್ಲಿ ದಾಖಲಾತಿ ೫೨ನ್ನು ವಿಸ್ತರಿಸ ಬಯಸುತ್ತಾರೆ. ಇದೊಂದು ಅಸಾಧ್ಯ ಪ್ರಸ್ತಾವನೆ ಮತ್ತು ಇದನ್ನು ನಾನು ಒಪ್ಪಿಕೊಳ್ಳಲಾಗುವುದಿಲ್ಲ.

ನಾನು ಈಗ ನನ್ನ ಮಿತ್ರ ಶ್ರೀ ನಜೀರುದ್ದೀನ್ ಅಹ್ಮದರ ವಾದಗಳನ್ನು ತೆಗೆದುಕೊಳ್ಳುತ್ತೇನೆ. ಎಲ್ಲದಕ್ಕೂ ಮೊದಲು, ಈ ದಾಖಲಾತಿ ೫೨ರಲ್ಲಿ ಶ್ರೇಷ್ಠ ನ್ಯಾಯಾಲಯವನ್ನು ಕಳ್ಳತನದಿಂದ ಒಳಸೇರಿಸಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ. ಏಕೆಂದರೆ, ದಾಖಲಾತಿಯ ಮೊದಲಿನ ರೂಪದಲ್ಲಿ ಇದಕ್ಕೆ ಸ್ಥಾನವಿರಲಿಲ್ಲ. ಕರಡು ಸಮಿತಿಯು ಸಮಯ ಸಮಯಕ್ಕೆ ದಾಖಲಾತಿಗಳನ್ನಷ್ಟೇ ಅಲ್ಲ, ವಿಧಿಗಳನ್ನು ಸಹ ಪರಿಷ್ಕರಿಸಿರುವುದನ್ನು ಸದನವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ನಾನು ಇಲ್ಲಿ ಕರಡು ಸಮಿತಿಯ ಪರವಾಗಿ ಯಾವುದೇ ವಿಶಾಲ ಜ್ಞಾನದ ಹಕ್ಕು ಪ್ರತಿಪಾದನೆಗಾಗಿ ಉಪಸ್ಥಿತನಿಲ್ಲ. ಒಂದು ವೇಳೆ ಕರಡು ಸಮಿತಿಯು ಒಂದೇ ಗ್ರಹಿಕೆಯಲ್ಲಿ ಪೂರ್ತಿ ವಿಷಯವನ್ನು ಗ್ರಹಿಸಲು ವಿಫಲವಾದಲ್ಲಿ ನಾನು ಕರಡು ಸಮಿತಿಯನ್ನು ನಿಂದಿಸಲು ತಯಾರಾಗಿಲ್ಲ. ಅಲ್ಲದೇ ಯಾರಿಗೂ ಸಹ ಮೀಸಲು ಅದರ ಮೇಲೆ ನಿರ್ಣಯ ಮತ್ತು ಕರಡು ಸಮಿತಿಯ ಮೇಲೆ ವಾಗ್ದಂಡನೆ ಜಾರಿಗೊಳಿಸಲು ಅನುಮತಿ ನೀಡಲು ನಾನು ತಯಾರಾಗಿಲ್ಲ. ಇದೊಂದು ಬೃಹತ್ ಕಾರ್ಯವಾಗಿದ್ದು ನಾವು ನಮ್ಮದೇ ಆದ ರೀತಿಯಲ್ಲಿ ಸಾವಧಾನದಿಂದ ಹೋಗುವ ಜವಾಬ್ದಾರಿಯನ್ನು ಹೊಂದಿದ್ದೇವೆ.

**ಶ್ರೀ ಹೆಚ್. ವಿ. ಕಾಮತ್:** ಸದನವು ಕರಡು ಸಮಿತಿಯ ಮೇಲೆ ನಿರ್ಣಯ ಮಾಡಲು ಕುಳಿತುಕೊಳ್ಳ ಕೂಡದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆದರೆ ಸದನವು ನಾನು ಏನನ್ನು ಹೇಳುತ್ತಿದ್ದೇನೆ ಎನ್ನುವುದನ್ನು ಗುರುತಿಸಬೇಕು. ಅದೇನೆಂದರೆ ಯಾವುದೇ ಪುನರ್‌ಪರಿಶೀಲನೆ ಬೇಕಾದಾಗ ವ್ಯವಸ್ಥಿತ ಹಾಗೂ ಸಂಪೂರ್ಣ ಸೂತ್ರವನ್ನು ಸದನದ ಮುಂದೆ ತರುವುದು ಕರಡು ಸಮಿತಿಗೆ ಸಾಧ್ಯವಾಗುವುದಿಲ್ಲ. ಈಗ ಮಾನ್ಯರೇ, ನನ್ನ ಮಿತ್ರ ನಾವು ಶ್ರೇಷ್ಠ ನ್ಯಾಯಾಲಯಗಳನ್ನು ಒಳಗೆ ತಂದಿದ್ದೇವೆ ಎಂದು ಹೇಳುತ್ತಾರೆ. ಸರಿ, ನಾವು ಶ್ರೇಷ್ಠ ನ್ಯಾಯಾಲಯಗಳನ್ನು ಬೇಕಂತಲೇ ಒಳಗೆ ತಂದಿದ್ದೇವೆ. ಏಕೆಂದರೆ ಈಗಾಗಲೇ

ಅನುಮೋದಿಸಿದ ಕೆಲವು ವಿಧಿಗಳ ದೃಷ್ಟಿಕೋನದಿಂದ ಶ್ರೇಷ್ಠ ನ್ಯಾಯಾಲಯಗಳನ್ನು ಒಳಗೆ ತರುವುದು ಆವಶ್ಯಕವೆಂದು ನಮಗೆ ಅನ್ನಿಸಿದೆ. ನನ್ನ ಮಿತ್ರ ಶ್ರೀ ನಜ಼ಿರುದ್ದೀನ್ ಅಹ್ಮದ್ ಅವರು ಶ್ರೇಷ್ಠ ನ್ಯಾಯಾಲಯದ ಬಗೆಗಿನ ವಿಧಿಗಳಾದ ೧೯೨ಎ, ೧೯೩, ೧೯೭, ೨೦೧ ಮತ್ತು ೨೦೭ನ್ನು ಮರೆತಿದ್ದಾರೆ ಮತ್ತು ಅವರು ಈ ವಿಧಿಗಳಿಗೆ ಸಾವಧಾನವಾಗಿ ತಮ್ಮ ವಿಚಾರವನ್ನು ಅನ್ವಯ ಮಾಡಿದರೆ, ಪ್ರಾಂತೀಯ ಶಾಸಕಾಂಗಗಳಿಗೆ ಕೇವಲ ಶ್ರೇಷ್ಠ ನ್ಯಾಯಾಲಯಗಳ ಹಣಕಾಸಿನ ರೀತಿಯ ಅಥವಾ ವಸ್ತು ವಿಷಯಕ್ಕೆ ಸಂಬಂಧಿಸಿದ ವ್ಯಾಪ್ತಿಯನ್ನು ನಿಗದಿಪಡಿಸುವ ವಿಷಯವನ್ನು ಮಾತ್ರ ಬಿಟ್ಟುಕೊಟ್ಟಿರುವುದನ್ನು ಗಮನಿಸಬಹುದಾಗಿದೆ. ಶ್ರೇಷ್ಠ ನ್ಯಾಯಾಲಯದ ಇತರ ವಿಷಯಗಳನ್ನು ಕೇಂದ್ರದ ವ್ಯಾಪ್ತಿಯಲ್ಲಿಡಲಾಗಿದೆ. ಸ್ವಾಭಾವಿಕವಾಗಿ ಕೇಂದ್ರಕ್ಕೆ ಸಂಪೂರ್ಣ ಅಧಿಕಾರವನ್ನು ನೀಡುವ ಸಲುವಾಗಿರುವ ಕೇಂದ್ರ ಯಾದಿಯಲ್ಲಿನ ದಾಖಲಾತಿಗಳನ್ನು ಪರಿಗಣಿಸುವಾಗ, ಈ ಲೋಪವನ್ನು ಸರಿಪಡಿಸುವ ಜವಾಬ್ದಾರಿಯನ್ನು ನಾವು ಹೊಂದಿರುತ್ತೇವೆ ಮತ್ತು ನಾನು ಹೇಳಿದಂತೆ, ಈ ವಿಧಿಗಳನ್ವಯ ಎರಡು ವಿಷಯಗಳನ್ನು ಹೊರತುಪಡಿಸಿ ಸಂಪೂರ್ಣವಾಗಿ ಸಂಸತ್ತಿನ ಚೌಕಟ್ಟಿನಲ್ಲಿ ಇಟ್ಟಿರುವುದರಿಂದ ಶ್ರೇಷ್ಠ ನ್ಯಾಯಾಲಯಗಳನ್ನು ಒಳತರಲಾಗಿದೆ. ಇದರ ಬಗ್ಗೆ ಯಾವುದೇ ಮುಚ್ಚುಮರೆ ಎಂಬುದು ಇರುವುದಿಲ್ಲ. ಇದು ದಾಖಲಾತಿ ಹಾಗು ವಿಧಿಯನ್ನು ಸರಿಯಾಗಿ ರಚಿಸದೇ ಇರುವ ಕಾರಣದಿಂದಾದ ಮೂಲ ತಪ್ಪನ್ನು ಸರಿಪಡಿಸುವುದು ಮಾತ್ರವಾಗಿರುತ್ತದೆ. ಈ ಕಾರಣಕ್ಕಾಗಿ ಶ್ರೇಷ್ಠ ನ್ಯಾಯಾಲಯಗಳನ್ನು ಒಳಕ್ಕೆ ತರಲಾಗಿದೆ.

ನಾವು ಏಕೆ ಈ ದಾಖಲಾತಿಯಲ್ಲಿ "ಸರ್ವೋಚ್ಚ ನ್ಯಾಯಾಲಯ ಹಾಗೂ ಶ್ರೇಷ್ಠ ನ್ಯಾಯಾಲಯದ ಮುಂದೆ ವೃತ್ತಿ ಕೈಗೊಳ್ಳಲು ಬಾಧ್ಯರಿರುವ ವ್ಯಕ್ತಿಗಳು" ಎಂಬುದನ್ನು ತಂದಿದ್ದೇವೆ ಎನ್ನುವ ಪ್ರಶ್ನೆಗೆ ಬರುತ್ತಾ, ಸ್ಥಿತಿಯನ್ನು ಈಗಾಗಲೇ ನನ್ನ ಮಿತ್ರ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ವಿವರಿಸಿದ್ದಾರೆ. ಈ ಶಬ್ದಗಳನ್ನು ಸರ್ವೋಚ್ಚ ನ್ಯಾಯಾಲಯ ಹಾಗೂ ಶ್ರೇಷ್ಠ ನ್ಯಾಯಾಲಯದ ಮುಂದೆ ವೃತ್ತಿ ಕೈಗೊಳ್ಳಲು ಬಾಧ್ಯರಿರುವ ವ್ಯಕ್ತಿಗಳು– ಇವರನ್ನು ಒಳತರುವಲ್ಲಿ ಯಾವುದೇ ಅಸಾಮಾನ್ಯತೆ ಇರುವುದಿಲ್ಲ, ಸದಸ್ಯರು ನೋಡುವಂತೆ ವಿಧಿ ೧೨೧ ಸಂಸತ್ತಿಗೆ ಸರ್ವೋಚ್ಚ ನ್ಯಾಯಾಲಯದ ಮುಂದೆ ವೃತ್ತಿ ಕೈಗೊಳ್ಳುವ ವ್ಯಕ್ತಿಗಳ ಬಗ್ಗೆ ಯಾವುದೇ ಕಾನೂನು ಮಾಡುವ ಅಧಿಕಾರವನ್ನು ಕೊಡುತ್ತದೆ. ಆದ್ದರಿಂದ ಆ ಅಧಿಕಾರವು ಈಗಾಗಲೇ ಇರುತ್ತದೆ ಮತ್ತು ಸರ್ವೋಚ್ಚ ನ್ಯಾಯಾಲಯದ ಮುಂದೆ ವೃತ್ತಿ ಕೈಗೊಳ್ಳುವ ವ್ಯಕ್ತಿಗಳ ಬಗ್ಗೆ ಉಲ್ಲೇಖಿಸುವುದಕ್ಕೆ ಸಂಬಂಧಿಸಿದಂತೆ ಉಲ್ಲೇಖದಲ್ಲಿ ಯಾವುದೇ ಹೊಸತನವಿರುವುದಿಲ್ಲ.

ಈಗ ಶ್ರೇಷ್ಠ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ಸ್ಥಿತಿಯು ಹೀಗಿರುತ್ತದೆ. ಇಂದು ಕೇಂದ್ರವು ಹೊಂದಿರುವ ಅಧಿಕಾರವನ್ನು ಸಮವರ್ತಿ ಯಾದಿಯ ವೃತ್ತಿಗಳ ಬಗೆಗಿನ ದಾಖಲಾತಿ ೧೭ ಒಳಗೊಂಡಿರುತ್ತದೆ ಹಾಗೂ ಕಾನೂನು ವೃತ್ತಿಯು ವೃತ್ತಿಗಳಲ್ಲಿ ಒಂದಾಗಿರುತ್ತದೆ. ಆದ್ದರಿಂದ, ಸಮವರ್ತಿ ಯಾದಿಯಲ್ಲಿಯ ದಾಖಲಾತಿ ೧೭ರಲ್ಲಿ ಅದಕ್ಕೆ ನೀಡಲಾದ ಅಧಿಕಾರದ ಮೂಲಕ ಸಂಸತ್ತು ಶ್ರೇಷ್ಠ ನ್ಯಾಯಾಲಯದ ಮುಂದೆ ಹಾಜರಾಗುವ ವ್ಯಕ್ತಿಗಳ ವೃತ್ತಿಯನ್ನು ನಿರ್ವಹಣೆ ಮಾಡುವ ಕಾನೂನನ್ನು ಮಾಡಲು ಸಂಪೂರ್ಣವಾಗಿ ಸಾಧ್ಯವಿದೆ. ಆದರೆ ಅದಕ್ಕಿರುವ ತೊಂದರೆಯು ಹೀಗಿರುತ್ತದೆ. ಸಮವರ್ತಿ ಯಾದಿ ಎಂದರೆ ಎರಡೂ ಪಕ್ಷಗಳು ಶಾಸನವನ್ನು ಮಾಡಬಹುದಾಗಿದೆ. ಕೇಂದ್ರವು ಶಾಸನವನ್ನು ಮಾಡಬಹುದು ಮತ್ತು ಪ್ರಾಂತ್ಯಗಳೂ ಶಾಸನವನ್ನು ಮಾಡಬಹುದು ಮತ್ತು ಶಾಸನಗಳು ಒಂದಕ್ಕೊಂದು ಹೊಂದಿಕೊಳ್ಳದೇ ಇರಬಹುದು. ಆದ್ದರಿಂದ, ಸಮವರ್ತಿ ಯಾದಿಯಲ್ಲಿರುವ ದಾಖಲಾತಿಯನ್ನು ಎಲ್ಲ ವೃತ್ತಿಗಳನ್ನು ನಿರ್ವಹಿಸಲು ಹಾಗೆಯೇ ಬಿಡುವುದರೊಂದಿಗೆ, ವಕೀಲಿ ವೃತ್ತಿಯ ಒಂದು ಭಾಗವನ್ನು ಮಾತ್ರ ತೆಗೆದುಕೊಂಡು ಇದರಲ್ಲಿ ಸೇರಿಸುವುದರ ಮೂಲಕ ಶ್ರೇಷ್ಠ ನ್ಯಾಯಾಲಯಗಳ

ಮುಂದೆ ವೃತ್ತಿ ಕೈಗೊಳ್ಳುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕಾನೂನು ವೃತ್ತಿಗೆ ಸಂಬಂಧಿಸಿದ ಯಾವುದೇ ಶಾಸನವನ್ನು ಕೇಂದ್ರದಿಂದ ಶಾಸನಗೊಳಿಸಬಹುದಾದ ಪ್ರತ್ಯೇಕ ವಿಷಯವನ್ನಾಗಿ ಮಾಡುವುದು ಒಳಿತೆಂದು ತಿಳಿಯಲಾಗಿದೆ ಮತ್ತು ನಾವು ಇದನ್ನು ಏಕೆ ಮಾಡಿದ್ದೇವೆಂದರೆ ನನ್ನ ಮಿತ್ರ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಉಲ್ಲೇಖಿಸಿದ ಕ್ಲಿಷ್ಟ, ಪ್ರಕರಣಗಳ ಕಾರಣಕ್ಕಾಗಿ ಹಾಗೂ ಅವುಗಳಲ್ಲಿ ಒಂದನ್ನು ನಾನು ಪುನರುಚ್ಚರಿಸುತ್ತೇನೆ. ಬಹುಶಃ ಅವರು ಏನು ಹೇಳಿದರು ಎಂಬುದನ್ನು ನೀವು ಕೇಳಿಸಿಕೊಂಡಿರಲಿಕ್ಕಿಲ್ಲ. ಉದಾಹರಣೆಗೆ, ಮದ್ರಾಸಿನ ಒಬ್ಬ ವಕೀಲನು ಅಥವಾ ಬ್ಯಾರಿಸ್ಟರನು ಒಂದು ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಹಾಜರಾಗುತ್ತಾನೆ ಎಂದುಕೊಳ್ಳೋಣ ಮತ್ತು ಸರ್ವೋಚ್ಚ ನ್ಯಾಯಾಲಯವು ಪ್ರಕರಣವನ್ನು ಇತ್ಯರ್ಥಗೊಳಿಸದೇ ಮುಂಬಯಿ ಶ್ರೇಷ್ಠ ನ್ಯಾಯಾಲಯಕ್ಕೆ ಆ ಪ್ರಕರಣವನ್ನು ವಾಪಸ್ಸು ಕಳಿಸುತ್ತದೆ. ಆಗ ಏನಾಗುತ್ತದೆ? ಮುಂಬಯಿ ಸರ್ಕಾರ ಅಥವಾ ಮುಂಬಯಿ ಕಾನೂನು ದಾಖಲಾತಿ ೧೭ರಡಿಯಲ್ಲಿ ಕಾನೂನು ರಚಿಸಿದರೆ ಮದ್ರಾಸಿನ ಒಬ್ಬ ವ್ಯಕ್ತಿಯನ್ನು ಮುಂಬಯಿ ಶ್ರೇಷ್ಠ ನ್ಯಾಯಾಲಯದ ಮುಂದೆ ಹಾಜರಾಗಲು ಅನುಮತಿ ನೀಡಲಿಕ್ಕಿಲ್ಲ. ಇದರ ಪರಿಣಾಮವಾಗಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಹಾಜರಾದ ಪೂರ್ತಿ ಪ್ರಕರಣವನ್ನು ನಡೆಸಿದ್ದರೂ, ಒಂದು ವೇಳೆ ಪ್ರಕರಣವನ್ನು ಮುಂಬಯಿ ಶ್ರೇಷ್ಠ ನ್ಯಾಯಲಯಕ್ಕೆ ವಾಪಸ್ಸು ಕಳಿಸಿದರೆ, ಆ ಶ್ರೇಷ್ಠ ನ್ಯಾಯಾಲಯವು ಕಾನೂನಿನ ಮೂಲಕ ತನ್ನ ಮುಂದೆ ಹಾಜರಾಗುವುದನ್ನು ತಡೆಯಬಹುದು. ಇದು ಬಹಳ ತೊಂದರೆಯನ್ನು ಉಂಟುಮಾಡುವುದೆಂದು ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. ಆದ್ದರಿಂದ ವಿವಿಧ ಶ್ರೇಷ್ಠ ನ್ಯಾಯಾಲಯಗಳ ಮುಂದೆ ವೃತ್ತಿ ನಡೆಸುತ್ತಿರುವ ವ್ಯಕ್ತಿಗಳ ಬಗ್ಗೆ ಏಕರೂಪದ ಸ್ಥಿತಿಯನ್ನು ಹೊಂದಲು ಈ ದಾಖಲಾತಿಯು ಏನನ್ನು ಮಾಡಲು ಪ್ರಸ್ತಾಪಿಸುತ್ತದೆಂದರೆ, ನಿರ್ವಹಿಸುವ ದಾಖಲಾತಿ ೧೭ರಿಂದ ಇದನ್ನು ಕತ್ತರಿಸುವುದು ಮತ್ತು ಇಲ್ಲಿ ಅದನ್ನು ಸೇರಿಸುವುದು. ಹಾಗಾಗಿ ಶ್ರೇಷ್ಠ ನ್ಯಾಯಾಲಯದ ಮುಂದೆ ಹಾಜರಾಗುವ ವ್ಯಕ್ತಿಗಳ ವೃತ್ತಿಯನ್ನು ಏಕರೂಪದ ಕಾನೂನಿನಿಂದ ನಿರ್ವಹಿಸಿದಂತಾಗುತ್ತದೆ. ಕರಡು ಸಮಿತಿ ಪ್ರಸ್ತಾಪಿಸಿದ ದಾಖಲಾತಿ ೫೨ರಲ್ಲಿ ಯಾವುದೇ ಕ್ರಾಂತಿಕಾರಕ ಅಂಶ ಅಥವಾ ಮುಚ್ಚುಮರೆಯ ಅಂಶ ಇರುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಈಗ ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

(ಈಗಾಗಲೇ ಕೊಟ್ಟಂತಹ ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಹೊರತುಪಡಿಸಿ ಎಲ್ಲ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು.)

[**ದಾಖಲಾತಿ ೫೨ನ್ನು, ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.**]

* * *

## ದಾಖಲಾತಿ ೫೩

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ)**:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೫೩ರಲ್ಲಿ 'ಸದ್ಯಕ್ಕೆ ಒಂದನೇ ಪರಿಶಿಷ್ಟದ ಭಾಗ IIIರಲ್ಲಿ ನಮೂದಿಸಿದ ರಾಜ್ಯಗಳನ್ನು ಹೊರತುಪಡಿಸಿ' ಎಂಬ ಪದಗಳನ್ನು ಹಾಗೂ ಅಂಕಗಳನ್ನು ಬಿಟ್ಟುಬಿಡಬೇಕು."

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೭೮೩–೭೮೪.

ಇದು ಏಕೆಂದರೆ ನಾವು ಭಾಗ I ಹಾಗೂ ಭಾಗ IIIರಲ್ಲಿಯ ರಾಜ್ಯದ ನಡುವೆ ವ್ಯತ್ಯಾಸ ಮಾಡದಿರಲು ಪ್ರಸ್ತಾಪಿಸುತ್ತೇವೆ.

**ಶ್ರೀ ಹೆಚ್. ವಿ. ಕಾಮತ್** (ಸಿ. ಪಿ. ಮತ್ತು ಬೆರಾರ್: ಸಾಮಾನ್ಯ): ಇದಕ್ಕೆ ಸ್ವಲ್ಪ ನನ್ನ ತಿದ್ದುಪಡಿ ಇರುತ್ತದೆ, ತಿದ್ದುಪಡಿ ಸಂ. ೧೯೮. ಮಾನ್ಯರೇ, ನಾನು ಅದನ್ನು ಮಂಡಿಸುತ್ತೇನೆ:

"ಯಾದಿ I(ಆರನೇ ವಾರ)ದ ತಿದ್ದುಪಡಿ ಸಂ. ೨೫ಕ್ಕೆ ಸಂಬಂಧಿಸಿದಂತೆ, ಯಾದಿ ೧ರ ದಾಖಲಾತಿ ೫೩ರಲ್ಲಿ 'ಮತ್ತು ಅಂಥ ಯಾವುದೇ ಶ್ರೇಷ್ಠ ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗೆ' ಎಂಬ ಪದಗಳಿಗೆ ಬದಲಾಗಿ 'ಮತ್ತು ಅಂಥ ಯಾವುದೇ ಶ್ರೇಷ್ಠ ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗೆ' ಎಂಬ ಪದಗಳನ್ನು ಸೇರಿಸಬೇಕು."

ಇದು ಶಬ್ದಗಳ ಮರುಜೋಡಣೆ ಮಾತ್ರವಾಗಿರುತ್ತದೆ ಎಂಬುದು ನನಗೆ ಗೊತ್ತು, ಆದರೆ ಇದು ಅರ್ಥವನ್ನು ಸ್ವಲ್ಪ ಬದಲಾಯಿಸುತ್ತದೆ ಮತ್ತು ದಾಖಲಾತಿಯಲ್ಲಿ ಏನನ್ನು ಉದ್ದೇಶಿಸಲಾಗಿದೆಯೋ ಅದನ್ನು ತರುತ್ತದೆ. ಈ ಉಲ್ಲೇಖವು ಕೆಲವು ಕ್ಷೇತ್ರಗಳನ್ನು ಯಾವುದೇ ಶ್ರೇಷ್ಠ ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗಿಡುವ ಉದ್ದೇಶ ಹೊಂದಿದೆ.....

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಶ್ರೀ ಕಾಮತ್ ಅವರ ತಿದ್ದುಪಡಿಯು ಪೂರ್ತಿಯಾಗಿ ಅನಾವಶ್ಯಕವಾಗಿರುತ್ತದೆ, ಏಕೆಂದರೆ ನನ್ನ ತಿದ್ದುಪಡಿಯ ಉದ್ದೇಶವು ದಾಖಲಾತಿ ೫೩ರಲ್ಲಿಯ "ಹೊರತುಪಡಿಸಿ" ಎಂಬ ಶಬ್ದದಿಂದ ಪ್ರಾರಂಭವಾಗಿ ಕೊನೆಯವರೆಗಿನದನ್ನು ಪೂರ್ತಿಯಾಗಿ ತೆಗೆದುಹಾಕುವುದಾಗಿರುತ್ತದೆ. ಒಂದು ವೇಳೆ ನಾನು ದಾಖಲಾತಿಯ ಯಾವುದೇ ಭಾಗವನ್ನು ಉಳಿಸಿಕೊಳ್ಳುತ್ತಿದ್ದರೆ, ಆಗ ದಾಖಲಾತಿಯಲ್ಲಿ ಉಪಯೋಗಿಸಲಾದ ಪದ ಜೋಡಣೆಯು ಶ್ರೀ ಕಾಮತ್ ಅವರು ಸಲಹೆ ಮಾಡಿದ್ದಕ್ಕಿಂತ ಉತ್ತಮವಾಗಿದೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆ ಉದ್ಭವಿಸಬಹುದು.

**ಶ್ರೀ ಹೆಚ್. ವಿ. ಕಾಮತ್:** ನನ್ನ ತಿದ್ದುಪಡಿಯು ದಾಖಲಾತಿಗೆ ಸಂಬಂಧಪಟ್ಟಿರುತ್ತದೆ ಅದರ ತಿದ್ದುಪಡಿಗಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಉದ್ಭವಿಸುವುದಿಲ್ಲ ಎಂದು ನನಗೆ ಅನ್ನಿಸುತ್ತದೆ, ಏಕೆಂದರೆ ನಾನು ಇಡೀ ವಿಷಯವನ್ನು ಕೈ ಬಿಡುತ್ತಿದ್ದೇನೆ. ಎರಡನೆಯ ಅಂಶವೆಂದರೆ ದಾಖಲಾತಿ ೫೩ರಲ್ಲಿ ಉಪಯೋಗಿಸಿದ ಭಾಷೆಯು ವಿಧಿ ೨೦೭ರಲ್ಲಿ ಬಳಸಲಾದ ಭಾಷೆಗೆ ಅನುಗುಣವಾಗಿರಬೇಕು.

**ಶ್ರೀ ಹೆಚ್. ವಿ. ಕಾಮತ್:** ಇದನ್ನು ಒಂದು ವೇಳೆ ಸ್ವೀಕರಿಸಿದರೆ ಈಗಾಗಲೇ ಅಂಗೀಕರಿಸಿದ ವಿಧಿಯ ಭಾಷೆಯನ್ನು ತಿದ್ದುಪಡಿ ಮಾಡಬೇಕು– ಮೂರನೇ ಸುತ್ತಿನಲ್ಲಿ ಪರಿಗಣಿಸುವ ಸಂದರ್ಭದಲ್ಲಿ.

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರ ತಿದ್ದುಪಡಿಯು ಈ ದಾಖಲಾತಿಯ ಒಂದು ಭಾಗಕ್ಕೆ ಮಾತ್ರ ಅನ್ವಯಿಸುತ್ತದೆ ಎಂದು ನನಗೆ ಕಾಣುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಕೊನೆಯ ಭಾಗವಾದ "ಒಂದನೇ ಪರಿಶಿಷ್ಟದ ಭಾಗ IIIರಲ್ಲಿ ಸದ್ಯಕ್ಕೆ ನಮೂದಿಸಿದ ರಾಜ್ಯಗಳನ್ನು ಹೊರತುಪಡಿಸಿ" ಎಂಬುದನ್ನೂ ಕೈಬಿಡುತ್ತಿದ್ದೇನೆ. ದಾಖಲಾತಿಯು ತಿದ್ದುಪಡಿ ಮಾಡಿದ ನಂತರ ಹೀಗಿರುತ್ತದೆ:

"ಭಾರತೀಯ ಕ್ಷೇತ್ರದಲ್ಲಿ ಯಾವುದೇ ರಾಜ್ಯದಲ್ಲಿ ತನ್ನ ಪ್ರಧಾನ ಸ್ಥಾನವನ್ನು ಹೊಂದಿರುವ ಶ್ರೇಷ್ಠ ನ್ಯಾಯಾಲಯದ ವ್ಯಾಪ್ತಿಯನ್ನು ಆ ರಾಜ್ಯದ ಹೊರಗಿನ ಯಾವುದೇ ಕ್ಷೇತ್ರಕ್ಕೆ ವಿಸ್ತರಿಸುವುದು ಹಾಗೂ ಅಂಥ ಕ್ಷೇತ್ರವನ್ನು ಯಾವುದೇ ಅಂಥ ಶ್ರೇಷ್ಠ ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗಿಡುವುದು."

ದಾಖಲಾತಿಯು ಕೇವಲ ವ್ಯಾಪ್ತಿಯ ವಿಸ್ತರಣೆ ಅಥವಾ ವ್ಯಾಪ್ತಿಯಿಂದ ಹೊರಗಿಡುವುದಕ್ಕೆ ಮಾತ್ರ ನಿಯಮಿಸುತ್ತದೆ.

**ಶ್ರೀ ಹೆಚ್. ವಿ. ಕಾಮತ್:** ನನ್ನ ತಿದ್ದುಪಡಿಯು ಎರಡನೆಯ ಭಾಗಕ್ಕೆ ಸಂಬಂಧಿಸಿರುತ್ತದೆ, "ರಾಜ್ಯದ ಹೊರಗಿನ ಯಾವುದೇ ಕ್ಷೇತ್ರವನ್ನು ಅಂಥ ಯಾವುದೇ ಶ್ರೇಷ್ಠ ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗಿಡುವುದು."

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಮ್ಮ ಕುತರ್ಕವನ್ನು ನಾನು ಒಪ್ಪಿಕೊಳ್ಳುತ್ತಿಲ್ಲ.

**ಶ್ರೀ ಹೆಚ್. ವಿ. ಕಾಮತ್:** ಇದು ಕುತರ್ಕವಲ್ಲ. ಇದು ಸರಿಯಾದ ಇಂಗ್ಲೀಷಿನ ಪ್ರಶ್ನೆಯಾಗಿರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಒಂದು ವೇಳೆ ಇದು ಕೇವಲ ಇಂಗ್ಲೀಷಿನ ವಿಷಯವಾಗಿದ್ದರೆ ಮುಂದಿನ ಹಂತದಲ್ಲಿ ನಾವು ಇದನ್ನು ತೆಗೆದುಕೊಳ್ಳಬಹುದು.

**ಮಾನ್ಯ ಅಧ್ಯಕ್ಷರು:** ಹಾಗಾದರೆ ನಾನು ಶ್ರೀ ಕಾಮತ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

(ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.)

**ಮಾನ್ಯ ಅಧ್ಯಕ್ಷರು:** ನಾನು ಈಗ ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು.)**

* * *

## ದಾಖಲಾತಿ ೫೬

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೫೬ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

'೫೬. ಈ ಯಾದಿಯಲ್ಲಿಯ ಯಾವುದೇ ವಿಷಯಗಳ ಉದ್ದೇಶಕ್ಕಾಗಿ ವಿಚಾರಣೆಗಳು, ಸಮೀಕ್ಷೆಗಳು ಹಾಗೂ ಅಂಕಿ ಅಂಶಗಳು.' "

ಇದರಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. "ಈ ಯಾದಿಯಲ್ಲಿಯ ಯಾವುದೇ ವಿಷಯಗಳ ಉದ್ದೇಶಕ್ಕಾಗಿ" ಎಂದು ಮಾತ್ರ ನಾವು ಮಾಡಿದ್ದೇವೆ.

**ಶ್ರೀ ನಝೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ: ಮುಸಲ್ಮಾನ): ನನ್ನ ತಿದ್ದುಪಡಿ ಸಂ. ೧೬೭ ಭಾಷೆಯನ್ನು ಸುಧಾರಿಸುವುದಾದರೂ, ನಾನು ಅದನ್ನು ಮಂಡಿಸಲು ಬಯಸುವುದಿಲ್ಲ.

(ತಿದ್ದುಪಡಿ ಸಂ. ೨೫೪ನ್ನು ಮಂಡಿಸಲಾಗಿಲ್ಲ.)

**ಶ್ರೀ ಫೂರ್ ಸಿಂಗ್** (ಸಂಯುಕ್ತ ಪ್ರಾಂತಗಳು: ಸಾಮಾನ್ಯ): ಮಾನ್ಯ ಅಧ್ಯಕ್ಷರೇ, ಡಾ. ಅಂಬೇಡ್ಕರ್ ಅವರು ಸಲಹೆ ಮಾಡಿದ ತಿದ್ದುಪಡಿಯು ಈ ದಾಖಲಾತಿಯ ವ್ಯಾಪ್ತಿಯನ್ನು ಮಿತಗೊಳಿಸುತ್ತದೆ... ಈ ಕೆಲವು ಶಬ್ದಗಳೊಂದಿಗೆ ನಾನು ಡಾ. ಅಂಬೇಡ್ಕರ್ ಅವರನ್ನು ಪರಿಸ್ಥಿತಿಯನ್ನು ಪುನರ್ ಪರಿಶೀಲಿಸಲು ವಿನಂತಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನನ್ನ ಮಿತ್ರ ವ್ಯಕ್ತಪಡಿಸಿದ ಭಯ ಕೆಲಮಟ್ಟಿಗೆ ಆಧಾರರಹಿತವಾದದ್ದು, ಮತ್ತು ಅದು ರಾಜ್ಯಕ್ಕೆ ಸಂಬಂಧಿಸಿದ ಇತರ ಎಲ್ಲ ವಿಚಾರಣೆಗಳು, ಮುಂತಾದವುಗಳು ಮತ್ತು ಇತರ ವಿಷಯಗಳನ್ನು ಈಗ ಸಮವರ್ತಿ ಯಾದಿಯಲ್ಲಿಡಲಾಗಿದೆ ಎಂಬ ವಾಸ್ತವತೆಗೆ ಅವರು ತಮ್ಮ ಗಮನವನ್ನು ಹರಿಸಿಲ್ಲ ಎಂಬ ವಾಸ್ತವಾಂಶದಿಂದ ಉದ್ಭವಿಸಿರುತ್ತದೆ. ಅವರು ಬಯಸುವ ಅಂಥ ಯಾವುದೇ ಉದ್ದೇಶ ಇಲ್ಲದಿಲ್ಲ.

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೭೮೪–೭೮೫

**(ದಾಖಲಾತಿ ೫೬, ತಿದ್ದುಪಡಿ ಮಾಡಿದಂತೆ ಕೇಂದ್ರ ಯಾದಿಗೆ ಸೇರಿಸಲಾಯಿತು.)**

## ದಾಖಲಾತಿ ೫೭

*__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೫೭ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

'೫೭. ಕೆಳಗಿನ ಉದ್ದೇಶಗಳಿಗಾಗಿ ಕೇಂದ್ರ ನಿಯೋಗಗಳು ಹಾಗೂ ಕೇಂದ್ರ ಸಂಸ್ಥೆಗಳು, ಅಂದರೆ, ಸಂಶೋಧನೆಗಾಗಿ, ವೃತ್ತಿಗಳ, ವ್ಯವಸಾಯಗಳ ಅಥವಾ ತಾಂತ್ರಿಕ ಸಹಾಯಕ್ಕಾಗಿ, ಆರಕ್ಷಕ ಅಧಿಕಾರಿಗಳ ತರಬೇತಿಗಾಗಿ, ಅಥವಾ ವಿಶೇಷ ಅಧ್ಯಯನಗಳ ಪ್ರಗತಿಗಾಗಿ.' "

"ವೃತ್ತಿ ತರಬೇತಿ" ಮತ್ತು "ಅಪರಾಧಗಳ ತನಿಖೆ ಅಥವಾ ಪತ್ತೆ, ಆರಕ್ಷಕ ಅಧಿಕಾರಿಗಳ ತರಬೇತಿಗಾಗಿ" ಮುಂತಾದ ಪದಗಳ ಸೇರಿಸುವಿಕೆಯಿಂದ ದಾಖಲಾತಿಯನ್ನು ಕೆಲಮಟ್ಟಿಗೆ ವಿಸ್ತರಿಸಲಾಗಿದೆ.

* * *

**__ಮಾನ್ಯ ಸಭಾಧ್ಯಕ್ಷರು:__ ಈ ದಾಖಲಾತಿ ೫೭ಕ್ಕೆ ಶ್ರೀ ಕರೀಮುದ್ದೀನ್ ಅವರ ಹೆಸರಿನಲ್ಲಿ ಒಂದು ತಿದ್ದುಪಡಿ ಇರುತ್ತದೆ (ಸಂ. ೩೫೪೪). ಅದನ್ನು ಮಂಡಿಸಿರುವುದರಿಂದ ಈಗ ಡಾ. ಅಂಬೇಡ್ಕರ್ ಅವರು ಉತ್ತರಿಸಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೇ, ನಾನು ನನ್ನ ಗೌರವಾನ್ವಿತ ಮಿತ್ರ ಶ್ರೀ ಕಾಮತ್ ಅವರು ಮಂಡಿಸಿದ ತಿದ್ದುಪಡಿಯನ್ನು ಪ್ರಸ್ತಾಪಿಸಿದ ದಾಖಲಾತಿಯೊಂದಿಗೆ ತುಲನೆ ಮಾಡಿದ್ದೇನೆ. ನನಗೆ ತೋಚಿದಂತೆ ಒಂದು ವಿಷಯವನ್ನು ಹೊರತುಪಡಿಸಿ, ನನ್ನ ಗೌರವಾನ್ವಿತ ಮಿತ್ರ ಶ್ರೀ ಕಾಮತ್ ಅವರು ತಮ್ಮ ಮನಸ್ಸಿನಲ್ಲಿ ಹೊಂದಿರುವ ಉದ್ದೇಶವನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರಕ್ಕೆ ಸಾಕಷ್ಟು ಅವಕಾಶವಿದೆ. ಕೇಂದ್ರ ಸರ್ಕಾರವು ದಾಖಲಾತಿ ೫೭ರಲ್ಲಿ ಕಾರ್ಯಗತಗೊಳಿಸಲಾಗದ ಒಂದೇ ವಿಷಯವೆಂದರೆ ಆಧ್ಯಾತ್ಮಿಕ ಸಂಶೋಧನೆ, ಈಗಿನ ದಿನಗಳಲ್ಲಿ ಕೇಂದ್ರ ಸರ್ಕಾರವು ಎದುರಿಸಬೇಕಾದ ವಿವಿಧ ಸಮಸ್ಯೆಗಳನ್ನು ಪೂರ್ತಿಯಾಗಿ ತಿಳಿದುಕೊಳ್ಳುವುದರಿಂದ, ಆಧ್ಯಾತ್ಮಿಕ ಸಂಶೋಧನೆಯಂಥ ಕಾರ್ಯದ ಭಾರವನ್ನು ಈ ಸದನವು ಅದರ ಮೇಲೆ ಹೇರುವುದೆಂದು ನನಗೆ ಅನ್ನಿಸುವುದಿಲ್ಲ. ತಿದ್ದುಪಡಿಯ ಉಳಿದ ಉದ್ದೇಶಗಳನ್ನು ದಾಖಲಾತಿ ೫೭ ಒಳಗೊಂಡಿರುತ್ತದೆ.

**ಶ್ರೀ ಹೆಚ್. ವಿ. ಕಾಮತ್:** ನನಗೆ ಹಾಗೆ ಅನ್ನಿಸುತ್ತದೆ. ಏಕೆಂದರೆ ತರಬೇತಿಯು ಆರಕ್ಷಕ ಅಧಿಕಾರಿಗಳಿಗೆ ಮಾತ್ರವಲ್ಲ, ಉಪಯೋಗಿಸಲಾದ ಭಾಷೆಯು "ವೃತ್ತಿಪರ, ವ್ಯಾವಸಾಯಿಕ ಅಥವಾ ತಾಂತ್ರಿಕ ತರಬೇತಿಗಾಗಿ ಸಂಶೋಧನೆ" ಎಂದಿರುತ್ತದೆ. ಇದರಲ್ಲಿ ಯಾವುದೇ ವಿಷಯವನ್ನು ತರಬಹುದು.

* * *

**ಮಾನ್ಯ ಸಭಾಧ್ಯಕ್ಷರು:** ನಾನೀಗ ತಿದ್ದುಪಡಿ ಮಾಡಿದ ನಮೂನೆಯಲ್ಲಿ ಡಾ. ಅಂಬೇಡ್ಕರ್ ಅವರು ಮಂಡಿಸಿದ ದಾಖಲಾತಿಯನ್ನು ಇಡುತ್ತಿದ್ದೇನೆ. ಪ್ರಶ್ನೆಯು ಹೀಗಿರುತ್ತದೆ:

"ಯಾದಿ Iರ ದಾಖಲಾತಿ ೫೭ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

"೫೭. ಕೆಳಗಿನ ಉದ್ದೇಶಗಳಿಗಾಗಿ ಕೇಂದ್ರ ನಿಯೋಗಗಳು ಹಾಗೂ ಕೇಂದ್ರ ಸಂಸ್ಥೆಗಳು, ಅಂದರೆ ಸಂಶೋಧನೆಗಾಗಿ, ವೃತ್ತಿಪರ, ವ್ಯಾವಸಾಯಿಕ ಅಥವಾ ತಾಂತ್ರಿಕ ತರಬೇತಿಗಾಗಿ, ಅಪರಾಧದ ತನಿಖೆ

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೭೮೫.

** ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೭೮೭–೭೮೮.

ಅಥವಾ ಕಂಡುಹಿಡಿಯುವಿಕೆಯಲ್ಲಿ ವೈಜ್ಞಾನಿಕ ಅಥವಾ ತಾಂತ್ರಿಕ ಸಹಾಯಕ್ಕಾಗಿ ಆರಕ್ಷಕ ಅಧಿಕಾರಗಳ ತರಬೇತಿಗಾಗಿ, ಅಥವಾ ವಿಶೇಷ ಅಧ್ಯಯನಗಳ ಪ್ರಗತಿಗಾಗಿ.''

(ತಿದ್ದುಪಡಿಯನ್ನು ಅನುಮೋದಿಸಲಾಯಿತು)

**(ದಾಖಲಾತಿ ೫೭ನ್ನು, ತಿದ್ದುಪಡಿ ಮಾಡಿದಂತೆ ಕೇಂದ್ರ ಯಾದಿಗೆ ಸೇರಿಸಲಾಯಿತು.)**

## ದಾಖಲಾತಿ ೫೭ (ಎ)– (ಮುಂದುವರೆಯುವುದು)

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ.

"ಯಾದಿ Iರ ದಾಖಲಾತಿ ೫೭ರ ನಂತರ, ಕೆಳಗಿನ ಹೊಸ ದಾಖಲಾತಿಯನ್ನು ಸೇರಿಸಬೇಕು:–

'೫೭ ಎ. ಉನ್ನತ ಶಿಕ್ಷಣದ ಸಂಸ್ಥೆಗಳು, ವೈಜ್ಞಾನಿಕ ಹಾಗೂ ತಾಂತ್ರಿಕ ಸಂಸ್ಥೆಗಳು ಮತ್ತು ಸಂಶೋಧನೆಯ ಸಂಸ್ಥೆಗಳಲ್ಲಿ ಅನ್ಯೋನ್ಯತೆ ಹಾಗೂ ಉಚ್ಚ ಮಟ್ಟವನ್ನು ಕಾಪಾಡುವಿಕೆ.' "

ಈ ದಾಖಲಾತಿಯ ದಾಖಲಾತಿ ಸಂ. ೫೭ಕ್ಕೆ ಪೂರಕ ಮಾತ್ರವಾಗಿರುತ್ತದೆ. ಪ್ರಾಂತ್ಯಗಳು ನಡೆಸುತ್ತಿರುವ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ದಾಖಲಾತಿ ೫೭ಎ ಕೇಂದ್ರಕ್ಕೆ ಸಂಶೋಧನೆ ಸಂಸ್ಥೆಗಳನ್ನು ಸುಸಂಘಟಿಸುವ ಹಾಗೂ ಉಚ್ಚ ಮಟ್ಟವನ್ನು ಕಾಪಾಡುವುದಕ್ಕಾಗಿ ಹಾಗೂ ಅವುಗಳನ್ನು ಕೆಳಮಟ್ಟಕ್ಕೆ ಹೋಗದಂತೆ ತಡೆಯಲು ಮಿತಿಯುಳ್ಳ ಅಧಿಕಾರವನ್ನು ನೀಡಲು ಪ್ರಸ್ತಾಪಿಸುತ್ತದೆ.

ಮಾನ್ಯರೇ, ನಾನು ಇದನ್ನೂ ಮಂಡಿಸುತ್ತೇನೆ:

"ಯಾದಿ I(ಆರನೇ ವಾರ)ದ ತಿದ್ದುಪಡಿ ಸಂ. ೨೮ರಲ್ಲಿ, ಯಾದಿ Iರ ಪ್ರಸ್ತಾವಿತ ಹೊಸ ದಾಖಲಾತಿ ೫೭ಎದಲ್ಲಿ, 'ಕಾಪಾಡುವಿಕೆ' ಎಂಬ ಶಬ್ದಕ್ಕೆ ಬದಲಾಗಿ 'ನಿರ್ಧರಿಸುವಿಕೆ' ಎಂಬ ಶಬ್ದವನ್ನು ಸೇರಿಸಬೇಕು.''

***ಶ್ರೀ ಬಸಂತಕುಮಾರ ದಾಸ್** (ಪಶ್ಚಿಮ ಬಂಗಾಳ: ಸಾಮಾನ್ಯ): ನಾನು ತಿದ್ದುಪಡಿ ಸಂ. ೨೯ ಅನ್ನು ಹೊಂದಿದ್ದೇನೆ.

**ಮಾನ್ಯ ಉಪಾಧ್ಯಕ್ಷರು:** ಅವುಗಳನ್ನು ಹೊಸ ವಿಧಿಗಳೆಂದು ನಾನು ತಿಳಿದಿದ್ದೆ. ಡಾ. ಅಂಬೇಡ್ಕರ್ ಅವರೇ, ನೀವು ಮಾತನಾಡುವುದಕ್ಕಿಂತ ಮೊದಲು ಅದನ್ನು ಮಂಡಿಸುವುದನ್ನು ನೀವು ಇಷ್ಟಪಡುತ್ತೀರೋ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು.

**ಮಾನ್ಯ ಉಪಾಧ್ಯಕ್ಷರು:** ಶ್ರೀ ದಾಸ್ ಅವರೇ, ನೀವು ಸಂ. ೨೯ನ್ನು ಮಂಡಿಸಬಹುದು.

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೇ, ದಾಖಲಾತಿ ೫೭ಎ ದ ಮೇಲೆ ಮಾತನಾಡಿದ ನನ್ನ ಮಿತ್ರರು ವಿಷಯವನ್ನು ಕೆಲಮಟ್ಟಿಗೆ ಕಲಬೆರಕೆ ಮಾಡಿದ್ದಾರೆಂದು ನನಗೆ ಅನ್ನಿಸುತ್ತಿದೆ. ನಾನು ತಿಳಿದುಕೊಂಡಂತೆ, ಕೇಂದ್ರವು ಒಂದು ವೇಳೆ ಪ್ರಾಂತ್ಯಗಳಿಗೆ ಕೆಲ ಅನುದಾನವನ್ನು ಮಾಡಿದ್ದರೆ ಮಾತ್ರ ಈ ದಾಖಲಾತಿ ೫೭ಎ ಅನ್ನು ಅನುಮತಿಸಬೇಕು ಎನ್ನುವುದು ಅವರ ವಾದವಾಗಿರುತ್ತದೆ. ಈ ಎರಡು ವಿಷಯಗಳನ್ನು ಬೆರೆಸುವುದು ಅನಾವಶ್ಯಕವೆಂದು ನನಗೆ ಅನ್ನಿಸುತ್ತದೆ. ಕೇಂದ್ರದಿಂದ ಪ್ರಾಂತ್ಯಗಳಿಗೆ ಅನುದಾನದ ಪ್ರಶ್ನೆಯನ್ನು ಎರಡು ಪ್ರತ್ಯೇಕ ವಿಧಿಗಳಲ್ಲಿ– ೨೫೫ ಮತ್ತು ೨೬೨– ತೆಗೆದುಕೊಳ್ಳಲಾಗಿದೆ. ವಿಧಿ ೨೫೫

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೭೯೩.

** ಅದೇ, ಪು. ೭೯೬.

ಕೇಂದ್ರವು ಪ್ರಾಂತ್ಯಗಳಿಗೆ ಸಹಾಯಕ್ಕಾಗಿ ನೀಡುವ ಅನುದಾನದ ಬಗ್ಗೆ ಹೇಳುತ್ತದೆ:

"ಸಂಸತ್ತು ಕಾನೂನಿನ ಮೂಲಕ ನೀಡಲಾದಂತಹ ಮೊಬಲಗನ್ನು, ಭಾರತದ ಸಂಚಿತ ನಿಧಿಯಿಂದ ಪ್ರತಿ ವರ್ಷದಲ್ಲಿ ಅಂಥ ರಾಜ್ಯಗಳ ಸಂಚಿತ ನಿಧಿಯ ಸಹಾಯಕ ಅನುದಾನವೆಂದು ಸಂಸತ್ತು ಸಹಾಯಕ್ಕೆ ಆವಶ್ಯಕವೆಂದು ನಿರ್ಧರಿಸಿದಂತೆ..."

ಆದ್ದರಿಂದ, ಹಣಕಾಸಿನ ಸಹಾಯದ ಮೂಲಕ ರಾಜ್ಯಗಳಿಗೆ ಸಮರ್ಥನೆ ನೀಡುವುದು ಈಗಾಗಲೇ ವಿಧಿ ೨೫೫ರಲ್ಲಿ ಇರುತ್ತದೆ. ನಾನು ಸದನದ ಸದಸ್ಯರ ಗಮನವನ್ನು ಇನ್ನೊಂದು ಪ್ರಮುಖ ವಿಧಿಯಾದ ಹಾಗೂ ಇನ್ನೂ ಹೆಚ್ಚಿನ ವ್ಯಾಪ್ತಿಯುಳ್ಳ ವಿಧಿ ೨೬೨ಕ್ಕೆ ಸಹ ಸೆಳೆಯಲು ಬಯಸುತ್ತೇನೆ. ಅದು ಹೀಗೆ ಹೇಳುತ್ತದೆ:–

"ಕೇಂದ್ರ ಅಥವಾ ರಾಜ್ಯವು ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ, ಅಂಥ ಉದ್ದೇಶಕ್ಕೆ ಸಂಬಂಧಿಸಿದಂತೆ ಸಂಬಂಧಿಸಿದ ಸಂಸತ್ತು ಅಥವಾ ರಾಜ್ಯದ ಶಾಸಕಾಂಗವು ಕಾನೂನು ಮಾಡಬಹುದಾದಂತಹ ವಿಷಯವಲ್ಲದಿದ್ದರೂ ಸಹ, ಯಾವುದೇ ಅನುದಾನವನ್ನು ಮಾಡಬಹುದಾಗಿದೆ.

ಸದನವು ಗಮನಿಸುವುದಾದರೆ, ಇದು ಹೆಚ್ಚು ವಿಶಾಲ ವ್ಯಾಪ್ತಿಯನ್ನು ಹೊಂದಿರುತ್ತದೆ. ಒಂದು ವಿಷಯವು ಯಾದಿ ೧ರಲ್ಲಿ ಇಲ್ಲದಿದ್ದರೂ ಸಹ ಸಂಸತ್ತು ಅನುದಾನವನ್ನು ನೀಡಲು ಸ್ವತಂತ್ರವಾಗಿರುತ್ತದೆಂದು ಅದು ಹೇಳುತ್ತದೆ. ಆದ್ದರಿಂದ, ಈ ಪ್ರಶ್ನೆಯನ್ನೂ ಪ್ರತ್ಯೇಕವಾಗಿ ತೆಗೆದುಕೊಂಡಿರುವುದರಿಂದ ಅದನ್ನು ದಾಖಲಾತಿ ೫೭ಎದೊಂದಿಗೆ ಬೆರೆಸುವ ಆವಶ್ಯಕತೆ ಇಲ್ಲವೆಂದು ನನಗೆ ಅನ್ನಿಸುತ್ತದೆ.

ದಾಖಲಾತಿ ೫೭ಎ ಕೆಲವು ವರ್ಗದ ಸಂಸ್ಥೆಗಳಲ್ಲಿ, ಅಂದರೆ ಉಚ್ಚ ಶಿಕ್ಷಣ ನೀಡುವ ಸಂಸ್ಥೆಗಳು, ವೈಜ್ಞಾನಿಕ ಹಾಗೂ ತಂತ್ರಜ್ಞಾನದ ಸಂಸ್ಥೆಗಳು, ಸಂಶೋಧನೆಯ ಸಂಸ್ಥೆಗಳು, ಮುಂ., ಉನ್ನತ ಮಟ್ಟವನ್ನು ಕಾಪಾಡುವುದನ್ನು ಮಾತ್ರ ಹೇಳುತ್ತದೆ. ಈ ದಾಖಲಾತಿ ಏತಕ್ಕೆ?" ಎಂದು ನೀವು ಕೇಳಬಹುದು. ಅದು ಏಕೆ ಆವಶ್ಯಕವೆಂಬುದನ್ನು ನಾನು ತೋರಿಸುತ್ತೇನೆ. ಉದಾಹರಣೆಗೆಂದು ಭಾರತದಲ್ಲಿಯ ವಿವಿಧ ವಿಶ್ವವಿದ್ಯಾಲಯಗಳು ನಡೆಸುವ ಬಿ.ಎ. ಪದವಿ ಪರೀಕ್ಷೆಗಳನ್ನು ತೆಗೆದುಕೊಳ್ಳೋಣ. ಅನೇಕ ಪ್ರಾಂತ್ಯಗಳು ಹಾಗೂ ಕೇಂದ್ರವು ಅಭ್ಯರ್ಥಿಗಳಿಗಾಗಿ ಪ್ರಕಟಣೆ ನೀಡುವಾಗ, ಅಭ್ಯರ್ಥಿಯು ಯಾವುದೇ ವಿಶ್ವವಿದ್ಯಾಲಯದ ಪದವೀಧರನಿರಬೇಕೆಂದು ಮಾತ್ರ ಹೇಳುತ್ತವೆ. ಈಗ, ಮದ್ರಾಸು ವಿಶ್ವವಿದ್ಯಾಲಯವು ಬಿ.ಎ. ಪರೀಕ್ಷೆಯಲ್ಲಿನ ಅಭ್ಯರ್ಥಿಯು ಒಟ್ಟು ಅಂಕಗಳ ಪ್ರತಿಶತ ೧೫ ಅಂಕಗಳನ್ನು ತೆಗೆದುಕೊಂಡರೆ ಪರೀಕ್ಷೆಯಲ್ಲಿ ಉತ್ತೀರ್ಣನೆಂದು ಪರಿಗಣಿಸಲಾಗುತ್ತದೆ ಎಂದು ಹೇಳುತ್ತದೆಂದು ಊಹಿಸೋಣ. ಹಾಗೆಯೇ ಬಿಹಾರ ವಿಶ್ವವಿದ್ಯಾಲಯವು ಪ್ರತಿಶತ ೨೦ ಅಂಕಗಳನ್ನು ಪಡೆದ ಅಭ್ಯರ್ಥಿಯು ಬಿ.ಎ. ಪದವಿ ಪರೀಕ್ಷೆಯಲ್ಲಿ ಉತ್ತೀರ್ಣನೆಂದು ಪರಿಗಣಿಸುತ್ತದೆಂದು ಹೇಳಿದರೆ; ಮತ್ತು ಇನ್ನೊಂದು ವಿಶ್ವವಿದ್ಯಾಲಯ ಬೇರೆ ಯಾವುದೋ ಅಳತೆಗೋಲನ್ನು ನಿಗದಿಪಡಿಸಿದ್ದೇ ಆದರೆ, ಇದು ಅತ್ಯಂತ ಗೊಂದಲಮಯ ಸ್ಥಿತಿಯನ್ನು ಉಂಟುಮಾಡುತ್ತದೆ, ಮತ್ತು ಸಾಮಾನ್ಯವಾಗಿ ಉಪಯೋಗಿಸುವ ಅಭಿವ್ಯಕ್ತಿಯಾದ, ಅಭ್ಯರ್ಥಿಯು ಪದವೀಧರನಾಗಿರಬೇಕು, ಎನ್ನುವುದು ಅರ್ಥರಹಿತವಾಗುತ್ತದೆ ಎಂದು ನನಗೆ ಅನ್ನಿಸುತ್ತದೆ. ಅದೇ ರೀತಿ, ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳು ಅನೇಕ ಕಾರ್ಯಕಲಾಪಗಳು ಅವುಗಳ ಫಲಿತಾಂಶಗಳ ಮೇಲೆ ಅವಲಂಬಿತವಾಗಿರುವ ಕೆಲವು ಸಂಶೋಧನಾ ಸಂಸ್ಥೆಗಳಿರುತ್ತವೆ. ಸ್ವಾಭಾವಿಕವಾಗಿಯೇ ನೀವು ಈ ಚಾರಿತ್ರಿಕ ಹಾಗೂ ವೈಜ್ಞಾನಿಕ ಸಂಸ್ಥೆಗಳ ಫಲಿತಾಂಶಗಳು ಸಾಮಾನ್ಯ ಗುಣಮಟ್ಟಕ್ಕಿಂತ ಕೆಳಗೆ ಮತ್ತು ಹಾಗೆ ಆದಾಗ್ಯೂ ಅವುಗಳನ್ನು ಕೇಂದ್ರದ ಉದ್ದೇಶಗಳಿಗಾಗಿ, ಅಖಿಲ ಭಾರತೀಯ ಉದ್ದೇಶಗಳಿಗಾಗಿ ಅಥವಾ ರಾಜ್ಯದ ಉದ್ದೇಶಗಳಿಗಾಗಿ ಗುರುತಿಸುವುದನ್ನು ಅನುಮತಿಸುವುದಿಲ್ಲ.

ತತ್ಪರಿಣಾಮವಾಗಿ, ಹಣಕಾಸಿನ ಸಹಾಯದ ಪ್ರಶ್ನೆಯಲ್ಲದೇ, ಕೇಂದ್ರ ಹಾಗೂ ಪ್ರಾಂತ್ಯಗಳ

ಹಿತದೃಷ್ಟಿಯಿಂದ, ಅಖಿಲ ಭಾರತದ ಆಧಾರದ ಮೇಲೆ ಗುಣಮಟ್ಟವನ್ನು ಕಾಪಾಡುವುದು ಬೇಕಾಗುತ್ತದೆ. ಇದು ಈ ದಾಖಲಾತಿಯ ಉದ್ದೇಶಿತವಾಗಿರುತ್ತದೆ ಮತ್ತು ನನ್ನ ನಿರ್ಣಯದಲ್ಲಿ ಇದೊಂದು ಪ್ರಮುಖವಾದ ಹಾಗೂ ಗೌರವಾತ್ಮಕ ಅಂಶವಾಗಿರುತ್ತದೆ. ಏಕೆಂದರೆ ಅನೇಕ ಪ್ರಾಂತ್ಯಗಳು ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಲು ಅಥವಾ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಆತುರಪಡುತ್ತವೆ ಅಥವಾ ತಾವು ಮೊದಲಿಗಿಂತಲೂ ಹೆಚ್ಚು ಉತ್ತಮ ಫಲಿತಾಂಶವನ್ನು ನೀಡುತ್ತಿದ್ದೇವೆ ಎಂಬ ಭಾವನೆಯನ್ನು ಜಗತ್ತಿನಾದ್ಯಂತ ಮೂಡಿಸಲು ಹಗುರವಾಗಿ ಗುಣಮಟ್ಟವನ್ನು ಕೆಳಗಿಳಿಸುತ್ತಿವೆ.

**ಡಾ. ಪಿ. ಎಸ್. ದೇಶ್‌ಮುಖ್:** ಉತ್ತೀರ್ಣತೆಗೆ ಶತಾಂಶ ಅಥವಾ ಅಂಕಗಳನ್ನು ನಿಗದಿಪಡಿಸುವುದು ಸರ್ಕಾರದ ಉದ್ದೇಶವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ಹಾಗೆ ಮಾಡಬಹುದಾಗಿದೆ. ತಮಗೆ ಸೂಕ್ತವೆನಿಸಿದ ರೀತಿಯಲ್ಲಿ ಗುಣಮಟ್ಟವನ್ನು ಕಾಪಾಡುವುದು ಸರಕಾರಕ್ಕೆ ಬಿಟ್ಟ ವಿಷಯವಾಗಿರುತ್ತದೆ. ಒಂದು ಸರ್ಕಾರವು ಏನನ್ನು ಮಾಡಬಹುದು ಎಂಬುದನ್ನು ನಾನು ಹೇಳಲು ಆಗುವುದಿಲ್ಲ.

**[ಶ್ರೀ ಬಿ.ಕೆ.ದಾಸ್ ಅವರು ಮಂಡಿಸಿದ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲಾಯಿತು. ಡಾ. ಅಂಬೇಡ್ಕರ್ ಅವರ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ದಾಖಲಾತಿ ೫೭ಎ ಅನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೫೮

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ Iರ ದಾಖಲಾತಿ ೫೮ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**'೫೮. ಕೇಂದ್ರ ಲೋಕಸೇವೆಗಳು, ಅಖಿಲ ಭಾರತ ಸೇವೆಗಳು: ಕೇಂದ್ರ ಲೋಕಸೇವಾ ಆಯೋಗ.' "**

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಿತ್ರ ಡಾ. ದೇಶ್‌ಮುಖ್ ಅವರ ಅಖಿಲ ಭಾರತ ಸೇವೆಗಳನ್ನು ತೆಗೆದುಹಾಕಬೇಕೆನ್ನುವ ತಿದ್ದುಪಡಿಗೆ ಸಂಬಂಧಿಸಿದಂತೆ, ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂಬುದಕ್ಕೆ ಸರಳ ಕಾರಣವೆಂದರೆ ಇಲ್ಲಿಯವರೆಗೆ ಅಖಿಲ ಭಾರತ ಸೇವೆಗಳು ಹಾಗೂ ಅವುಗಳ ನಿರ್ವಹಣೆ ಭಾರತ ಸರ್ಕಾರಿ ಅಧಿನಿಯಮದಲ್ಲಿ ಕಾಣಿಸಿಕೊಂಡಿರಲಿಲ್ಲ. ಏಕೆಂದರೆ ಆ ವಿಷಯವನ್ನು ಪೂರ್ತಿಯಾಗಿ ರಾಜ್ಯದ ಕಾರ್ಯದರ್ಶಿಯವರಿಗೆ ಇಡಲಾಗಿತ್ತು. ರಾಜ್ಯದ ಕಾರ್ಯದರ್ಶಿ ಹುದ್ದೆಯು ಹೋದನಂತರ, ಸಂವಿಧಾನದಲ್ಲಿ ಯಾವುದೇ ನಿಯೋಗಕ್ಕೆ ಹಾಗೂ ಕೇಂದ್ರದಲ್ಲಿ ಅತ್ಯಂತ ಸೂಕ್ತ ನಿಯೋಗಕ್ಕೆ ಅಖಿಲ ಭಾರತ ಸೇವೆಗಳ ನಿರ್ವಹಣೆಯು ಆವಶ್ಯಕವಾಗಿರುತ್ತದೆ. ಯಾದಿ ೧ ಕೇಂದ್ರದ ಪರಿವಿಧಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಿಸಿರುತ್ತದೆ. ಅಖಿಲ ಭಾರತ ಸೇವೆಗಳಿಗೆ ಸ್ವಾಭಾವಿಕ ಸ್ಥಾನವು ಆದ್ದರಿಂದ ಯಾದಿ ೧ರಲ್ಲಿರುತ್ತದೆ. ಇದು ಒಂದು ವಾದವಾಗಿರುತ್ತದೆ.

ಎರಡನೇ ವಾದವು ಹೀಗಿರುತ್ತದೆ. ಅದೆಂದರೆ ಈಗಾಗಲೇ ಎರಡು ತರಹದ ಅಖಿಲ ಭಾರತ

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೭೯೭.

** ಅದೇ, ಪುಟ ೭೯೮–೭೯೯.

ಸೇವೆಗಳು ಅಸ್ತಿತ್ವದಲ್ಲಿವೆ. ಹಳೆಯ ಆಯ್.ಸಿ.ಎಸ್.ನ ಪಳೆಯುಳಿಕೆಗಳು ಈಗಲೂ ಭಾರತ ಸರ್ಕಾರದ ಸೇವೆಯಲ್ಲಿ ಮುಂದುವರಿದಿವೆ. ಎರಡನೆಯದಾಗಿ, ಕಳೆದ ಎರಡು ವರ್ಷಗಳ ಅವಧಿಯಲ್ಲಿ ಅಖಿಲ ಭಾರತ ಆಡಳಿತಾತ್ಮಕ ಸೇವೆಗಳು ಮತ್ತು ಅಖಿಲ ಭಾರತ ಆರಕ್ಷಕ ಸೇವೆಗಳು ಎಂದು ಕರೆಯಲ್ಪಡುವವುಗಳನ್ನು ಸ್ಥಾಪಿಸಲಾಯಿತು. ಕೇಂದ್ರವು ನಾಗರಿಕ ಅಧಿಕಾರಿಗಳನ್ನು ಅಖಿಲ ಭಾರತ ಆಡಳಿತಾತ್ಮಕ ಸೇವೆ ಮತ್ತು ಅಖಿಲ ಭಾರತ ಆರಕ್ಷಕ ಸೇವೆಗಳನ್ನು ಆಧರಿಸಿ ನೇಮಕಾತಿ ಮಾಡುವುದನ್ನು ಮುಂದುವರೆಸಿದೆಯೋ ಅಥವಾ ಇಲ್ಲವೋ ಎಂಬ ವಿಷಯವನ್ನು ನಮಗೆ ಸಂಬಂಧಿಸಿರುವ ನಂತರದ ವಿಧಿಯ ಮೂಲಕ ನಿರ್ಧರಿಸಬೇಕು. ಆದರೆ ಈ ಸೇವೆಗಳನ್ನು ಪ್ರಾಂತ್ಯಗಳ ಸಮ್ಮತಿಯ ಮೇರೆಗೆ ಅಸ್ತಿತ್ವದಲ್ಲಿ ತರಲಾಗಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಎರಡನೆಯದಾಗಿ, ಅವು ಅಲ್ಲಿರುವುದರಿಂದ, ಅವುಗಳ ನಿರ್ವಹಣೆಗೆ ನಿಯಮಗಳನ್ನು ಮಾಡುವುದು ಈ ನಿಯಮಗಳನ್ನು ಮಾಡಲು ಸೂಕ್ತ ಯಾದಿಯಾಗಿದೆ ಎಂಬುದು ನನ್ನ ನಿವೇದನೆ.

ಈ ದಾಖಲಾತಿಯಲ್ಲಿ ಜಂಟಿ ಆಯೋಗವನ್ನು ನಮೂದಿಸಬೇಕೆನ್ನುವ ನನ್ನ ಮಿತ್ರ ಶ್ರೀ ಕಾಮತ್ ಅವರ ಸಲಹೆಗೆ ಸಂಬಂಧಿಸಿದಂತೆ, ನನ್ನ ನಿವೇದನೆ ಏನೆಂದರೆ ಆಳವಾದ ಪರಿಗಣನೆಯಲ್ಲಿ ಅದು ಕ್ಲಿಷ್ಟತೆಗಳನ್ನು ಸೃಷ್ಟಿಸುತ್ತವೆ. ಜಂಟಿ ಆಯೋಗವು, ಅದರ ರಚನೆ, ಅದರ ಸದಸ್ಯರ ನೇಮಕಾತಿ ಮತ್ತು ಅವರ ತೆಗೆದು ಹಾಕುವಿಕೆಗೆ ಸಂಬಂಧಿಸಿದಂತೆ ಮತ್ತು ಈ ಮೂರು ವಿಷಯಗಳಲ್ಲಿ ಮಾತ್ರ– ಅಖಿಲ ಭಾರತ ವಿಷಯವಾಗಿರುತ್ತದೆ, ಮತ್ತು ಈ ಮೂರು ವಿಷಯಗಳಿಗೆ ನಿಯಮಗಳನ್ನು ಈಗಾಗಲೇ ವಿಧಿ ೨೮೪ರಲ್ಲಿ ಮಾಡಲಾಗಿದೆ. ಇನ್ನು ಉಳಿದಂತೆ ಅದು ನಿಜವಾಗಿಯೂ ರಾಜ್ಯ ಲೋಕಸೇವಾ ಆಯೋಗವಾಗಿರುತ್ತದೆ; ಉದಾಹರಣೆಗೆ ಹೇಳುವುದಾದರೆ, ಕೆಲವು ಸೇವೆಗಳನ್ನು ಹೊರಗಿಡುವ ಉದ್ದೇಶಕ್ಕಾಗಿ ಅಥವಾ ಕೆಲವು ವಿಷಯಗಳಲ್ಲಿ ಅವರನ್ನು ಸಂಪರ್ಕಿಸುವುದಕ್ಕಾಗಿ ಅದು ಇನ್ನು ರಾಜ್ಯ ಲೋಕಸೇವಾ ಆಯೋಗವಾಗಿರುತ್ತದೆ. ಮತ್ತು ದಾಖಲಾತಿ ೫೮ರಲ್ಲಿ ಜಂಟಿ ಆಯೋಗವನ್ನು ನಮೂದಿಸುವುದರ ಪರಿಣಾಮವಾಗಿ ಈ ವಿಷಯಗಳಲ್ಲಿ ರಾಜ್ಯದ ವ್ಯಾಪ್ತಿಯನ್ನು ತೆಗೆದು ಹಾಕಿದಂತಾಗುವುದರಿಂದ ಇದು ಅಪೇಕ್ಷಾರ್ಹವಲ್ಲ. ಆ ಉದ್ದೇಶಕ್ಕಾಗಿ ನಾನು ಶ್ರೀ ಕಾಮತ್ ಅವರ ಪ್ರಸ್ತಾವನೆಯನ್ನು ವಿರೋಧಿಸುತ್ತೇನೆ.

**ಶ್ರೀ ಹೆಚ್. ವಿ. ಕಾಮತ್:** ಇದು ಸಮವರ್ತಿ ಯಾದಿಗೆ ಹೋಗುತ್ತದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ.

**ಶ್ರೀ ಹೆಚ್. ವಿ. ಕಾಮತ್:** ಅದು ಎಲ್ಲಿಗೆ ಹೋಗುತ್ತದೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಕೆಲವು ವಿಷಯಗಳಲ್ಲಿ ಅದು ಕೇಂದ್ರ ಮಾತ್ರವಾಗಿರುತ್ತದೆ: ಉದಾಹರಣೆಗೆ, ಒಂದು ವೇಳೆ ರಾಜ್ಯಗಳು ಒಟ್ಟಿಗೆ ಜಂಟಿ ಲೋಕಸೇವಾ ಆಯೋಗವನ್ನು ರಚಿಸಬೇಕು ಎಂದು ಹೇಳಿದರೆ, ನಂತರ ಗೊತ್ತುವಳಿಯ ಪರಿಣಾಮವಾಗಿ ಕೇಂದ್ರವು ವ್ಯಾಪ್ತಿಯನ್ನು ಪಡೆಯುತ್ತದೆ. ನಾನು ಹೀಗೆ ಹೇಳಬಹುದಾದರೆ, ಅದು ವಿಂಗಡನಾತ್ಮಕವಾಗಿ ರಾಜ್ಯ ಲೋಕಸೇವಾ ಆಯೋಗವಾಗಿರುತ್ತದೆ.

**ಡಾ. ಪಿ. ಎಸ್. ದೇಶ್‌ಮುಖ್:** ನನ್ನ ತಿದ್ದುಪಡಿಯನ್ನು ಹಿಂದೆ ಪಡೆಯಲು ನಾನು ಅನುಮತಿಗಾಗಿ ಬೇಡುತ್ತೇನೆ.

(ತಿದ್ದುಪಡಿಯನ್ನು, ಸದನದ ಅನುಮತಿಯ ಮೇರೆಗೆ, ಹಿಂದೆ ಪಡೆಯಲಾಯಿತು.)

**ಮಾನ್ಯ ಸಭಾಧ್ಯಕ್ಷರು:** ಶ್ರೀ ಕಾಮತ್ ಅವರ ತಿದ್ದುಪಡಿಯನ್ನು ನಾನು ಮತಕ್ಕೆ ಹಾಕುತ್ತೇನೆ.

**[ಅದನ್ನು ಹಿಂದೆ ಪಡೆಯಲಾಯಿತು. ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ತೆಗೆದುಕೊಳ್ಳಲಾಯಿತು. ದಾಖಲಾತಿ ೫೮, ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೫೮–ಎ

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೀಗೆ ಮಂಡಿಸುತ್ತೇನೆ:

"ಯಾದಿ Iರ ದಾಖಲಾತಿ ೫೮ರ ನಂತರ, ಕೆಳಗಿನ ದಾಖಲಾತಿಯನ್ನು ಸೇರಿಸಬೇಕು:–

**'೫೮–ಎ. ಕೇಂದ್ರ ಪಿಂಚಣಿಗಳು, ಹಾಗೆಂದರೆ, ಭಾರತೀಯ ಸರ್ಕಾರದಿಂದ ಅಥವಾ ಭಾರತದ ಕ್ರೋಡೀಕೃತ ನಿಧಿಯಿಂದ ಸಂದಾಯ ಮಾಡಬೇಕಾದ ಪಿಂಚಣಿಗಳು.' "**

ಕರಡಿನಲ್ಲಿ ಈ ದಾಖಲಾತಿ ಇರಲಿಲ್ಲ. ಜಾಗರೂಕತೆಯ ಕಾರಣಕ್ಕಾಗಿ ಅಂಥ ದಾಖಲಾತಿಯನ್ನು ಹೊಂದಿರುವುದು ಅವಶ್ಯವೆಂದು ನಾವು ತಿಳಿದಿದ್ದೇವೆ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಿತ್ರ ಡಾ. ದೇಶ್‌ಮುಖ್ ಅವರು ಸಲಹೆ ಮಾಡಿದ ತಿದ್ದುಪಡಿಯು ನಾನು ಮಂಡಿಸಿದ ತಿದ್ದುಪಡಿಗಿಂತ ಯಾವುದೇ ಉತ್ತಮತೆಯನ್ನು ಹೊಂದಿದೆ ಅಥವಾ ಯಾವುದೇ ಸಾರಭೂತ ವ್ಯತ್ಯಾಸವನ್ನು ಹೊಂದಿದೆ ಎಂದು ನನಗೆ ಅನ್ನಿಸುವುದಿಲ್ಲ. ಅವರು ಮಾಡಬಯಸಿದ ವ್ಯತ್ಯಾಸವು ಇದಾಗಿರುತ್ತದೆ. ಅದೇನೆಂದರೆ, ಭಾರತದ ಕ್ರೋಡೀಕೃತ ನಿಧಿಯಿಂದ ಅಂದರೆ ಕಂದಾಯದ ಆದಾಯದಿಂದ ಸಂದಾಯ ಮಾಡಬೇಕಾದ ಕೆಲವು ಪಿಂಚಣಿಗಳಿರಬಹುದು, ವಂತಿಗೆಯಾಧಾರಿತ ಪಿಂಚಣಿಗಳನ್ನು ಸ್ಥಾಪಿಸಲು ಭಾರತ ಸರ್ಕಾರಕ್ಕೆ ಸಂಪೂರ್ಣವಾಗಿ ಸಾಧ್ಯವಿರುತ್ತದೆ. ಹಾಗೂ ಅವುಗಳು ದತ್ತಾಂಶದ ಸ್ವರೂಪದವುಗಳಾಗಿದ್ದು, ಅದರ ಭಾರವು ಕ್ರೋಡೀಕೃತ ನಿಧಿಯ ಮೇಲಿರದೇ ನಿಧಿಗೆ ಈಗಾಗಲೇ ಕೊಡುಗೆ ನೀಡಿದ ವ್ಯಕ್ತಿಯ ಮೇಲಿರುತ್ತದೆ. ಅದು ಒಂದು ವ್ಯತ್ಯಾಸವಾಗಿರುತ್ತದೆ. ಮತ್ತು ಅದಕ್ಕಾಗಿಯೇ ಈ ದಾಖಲಾತಿಯನ್ನು ನಾನು ಶಬ್ದರಚನೆ ಮಾಡಿದಂತೆ ರಚಿಸಲಾಗಿದೆ.

**ಡಾ. ಪಿ. ಎಸ್. ದೇಶ್‌ಮುಖ್:** ನನ್ನ ತಿದ್ದುಪಡಿಯನ್ನು ಹಿಂದೆ ಪಡೆಯಲು ಬಯಸುತ್ತೇನೆ.

(ತಿದ್ದುಪಡಿಯನ್ನು, ಸದನದ ಅನುಮತಿಯ ಮೇರೆಗೆ, ಹಿಂತೆಗೆದುಕೊಳ್ಳಲಾಯಿತು.)

**[ಡಾ. ಅಂಬೇಡ್ಕರ್ ಅವರ ಗೊತ್ತುವಳಿಯನ್ನು ಅಂಗೀಕರಿಸಲಾಯಿತು ಮತ್ತು ದಾಖಲಾತಿ ೫೮ಎ ಅನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೬೦

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೬೦ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**'೬೦. (ಪ್ರಾಚೀನ ಹಾಗೂ ಐತಿಹಾಸಿಕ ಸ್ಮಾರಕಗಳು ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಹೊಂದಿವೆ ಎಂದು ಕಾನೂನಿನ ಮೂಲಕ ಸಂಸತ್ತು ಘೋಷಿಸಲಾದ ದಸ್ತಾವೇಜುಗಳು.' "**

ಮೂಲ ರೂಪದಲ್ಲಿಯ ಉಳಿದ ದಾಖಲಾತಿಯು, ಅಂದರೆ "ಪ್ರಾಚ್ಯ ಶಾಸ್ತ್ರೀಯ ನಿವೇಶನಗಳು

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೭೯೯–೮೦೧.

** ಅದೇ, ಪುಟ ೮೦೦.

ಹಾಗೂ ಉಳಿಕೆಗಳು" ಇದನ್ನು ಸಮವರ್ತಿ ಯಾದಿಗೆ ವರ್ಗಾಯಿಸಲು ಪ್ರಸ್ತಾಪಿಸಲಾಗಿದೆ.

**ಶ್ರೀ ಹೆಚ್. ವಿ. ಕಾಮತ್:** ....ಈಗ ಈ ದಾಖಲಾತಿಯಲ್ಲಿ ಅಳವಡಿಸಿಕೊಂಡಿರುವ ವಿಧಿ ೩೯ರ ಭಾಷೆಯನ್ನು ಬದಲಾಯಿಸಲು ಡಾ. ಅಂಬೇಡ್ಕರ್ ಅವರು ಸೂಕ್ತ ಕಾರಣಗಳನ್ನು ಮುಂದಿಟ್ಟಿಲ್ಲ. ಆದ್ದರಿಂದ ನಾನು ತಿದ್ದುಪಡಿ ಸಂ. ೨೦೬ನ್ನು ಮಂಡಿಸುತ್ತೇನೆ ಮತ್ತು ಅದನ್ನು ಸ್ವೀಕರಿಸಲು ಸದನಕ್ಕೆ ಒತ್ತಾಯ ಪಡಿಸುತ್ತೇನೆ.

**ಮಾನ್ಯ ಅಧ್ಯಕ್ಷರು:** ತಿದ್ದುಪಡಿ ಸಂ. ೨೦೬ರ ಮೇಲೆ ನೀವು ಏನಾದರೂ ಹೇಳಬಯಸುತ್ತೀರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ ಮಾನ್ಯರೇ, ಈ ವಿಷಯದ ಮೇಲೆ ಏನನ್ನಾದರೂ ಹೇಳುವುದು ಅನಾವಶ್ಯಕವಾಗಿರುತ್ತದೆ.

**ಮಾನ್ಯ ಅಧ್ಯಕ್ಷರು:** ಹಾಗಾದರೆ ನಾನು ಶ್ರೀ ಕಾಮತ್ ಅವರು ಮಂಡಿಸಿದ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

**[ತಿದ್ದುಪಡಿಯನ್ನು ತಿರಸ್ಕರಿಸಲಾಯಿತು. ಡಾ. ಅಂಬೇಡ್ಕರ್ ಅವರ ಗೊತ್ತುವಳಿಯನ್ನು ಅಂಗೀಕರಿಸಲಾಯಿತು ಮತ್ತು ದಾಖಲಾತಿ ೬೦, ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.]**

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಮಾನ್ಯರೇ, ನನ್ನ ತಿದ್ದುಪಡಿಗಳನ್ನು ಮಂಡಿಸಲು ನನಗೆ ಅನುಮತಿಯನ್ನು ನೀಡಲಾಗುವುದೇ?

**ಮಾನ್ಯ ಅಧ್ಯಕ್ಷರು:** ನಾನು ಅವುಗಳನ್ನು ಕರೆದಾಗ ನೀವು ಇಲ್ಲಿರಲಿಲ್ಲ. ಕ್ಷಮಿಸಿ ಈಗ ತುಂಬಾ ತಡವಾಗಿದೆ.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಮಾನ್ಯರೇ, ಅವು ಬಹಳ ಪ್ರಮುಖವಾದ ತಿದ್ದುಪಡಿಗಳಾಗಿವೆ ಮತ್ತು ಅವು ಸ್ವತಂತ್ರವಾಗಿ ಸಹ ಇರುತ್ತವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನ್ಯಾಯ ನಿಮ್ಮ ಪರವಾಗಿಲ್ಲ.

* * *

## ದಾಖಲಾತಿ ೬೧

***ಮಾನ್ಯ ಅಧ್ಯಕ್ಷರು:** ನನಗೆ ಯಾದಿಯನ್ನು ಮುಗಿಸಲು ಬಿಡಿ, ನಂತರ ನೋಡೋಣ. ಈಗ, ದಾಖಲಾತಿ ಸಂ. ೬೧. ಡಾ. ಅಂಬೇಡ್ಕರ್ ಸೂಚನೆ ನೀಡಿದ ತಿದ್ದುಪಡಿಯು ಮುದ್ರಿತ ಯಾದಿಯಲ್ಲಿದೆ. ಸಂ. ೩೫೪೮.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಅದನ್ನು ಮಂಡಿಸುತ್ತಿಲ್ಲ.

**ಮಾನ್ಯ ಅಧ್ಯಕ್ಷರು:** ನಂತರ ಶ್ರೀ ಸಂತಾನಮ್ ಅವರ ಹೆಸರಿನಲ್ಲಿ ಎರಡು ತಿದ್ದುಪಡಿಗಳಿವೆ.

**ಗೌರವಾನ್ವಿತ ಶ್ರೀ ಕೆ. ಸಂತಾನಮ್:** ನಾನು ಅವುಗಳನ್ನು ಮಂಡಿಸುತ್ತಿಲ್ಲ.

**ಮಾನ್ಯ ಅಧ್ಯಕ್ಷರು:** ಹಾಗಾದರೆ ನಾನು ದಾಖಲಾತಿ ಸಂ. ೬೧ನ್ನು ಮತಕ್ಕೆ ಹಾಕುತ್ತೇನೆ.

**(ದಾಖಲಾತಿ ೬೧ನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.)**

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೦೨.

## ದಾಖಲಾತಿ ೬೧–ಎ

*__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೬೧ರ ನಂತರ, ಕೆಳಗಿನ ದಾಖಲಾತಿಯನ್ನು ಸೇರಿಸಬೇಕು:–

"೬೧–ಎ. ಕಂದಾಯ ಕ್ಷೇತ್ರದ ಆಚೆಯಿಂದ ರಫ್ತು ಮಾಡಿದ ಅಥವಾ ಒಂದು ರಾಜ್ಯದಿಂದ ಇನ್ನೊಂದಕ್ಕೆ ವರ್ಗಾಯಿಸುವ ಸರಕುಗಳ ಗುಣಮಟ್ಟವನ್ನು ಸ್ಥಾಪಿಸುವುದು.'

ತೂಕ ಮತ್ತು ಅಳತೆಯ ಗುಣಮಟ್ಟದ ಬಗ್ಗೆ ಈಗಾಗಲೇ ದಾಖಲಾತಿ ೬೧ನ್ನು ಹೊಂದಿದ್ದೇವೆ. ಮತ್ತು ಸರಕುಗಳಿಗೆ ಗುಣಮಟ್ಟದ ಸ್ಥಾಪನೆ ಇರಬೇಕೆಂದು ಅನ್ನಿಸಿದೆ.

* * *

**__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಮಾನ್ಯರೆ, ನನ್ನ ಮಿತ್ರ ಡಾ. ದೇಶ್‌ಮುಖ್ ಅವರು ಎತ್ತಿದ ಅಂಶವನ್ನು ಯಾದಿ ೨ರಲ್ಲಿಯ ದಾಖಲಾತಿಗಳನ್ನು ನಾವು ಚರ್ಚಿಸುವಾಗ ಎತ್ತಬಹುದಾಗಿದೆ. ಅವು ರಾಜ್ಯದ ವ್ಯಾಪ್ತಿಯಲ್ಲಿಯ ವಿಷಯಗಳಾಗಿರುತ್ತವೆ. ಇಲ್ಲಿ ನಾವು ರಾಜ್ಯಗಳ ಆಂತರಿಕ ವಿಷಯಗಳಲ್ಲಿ ಮಧ್ಯೆ ಪ್ರವೇಶಿಸದಂತೆ ಕೇಂದ್ರದ ಅಧಿಕಾರವನ್ನು ಸಂದರ್ಭೀಕರಣಗೊಳಿಸಲು ಉದ್ದೇಶಿಸಿರುವ, ಯಾದಿ ೧ನ್ನು ನೋಡುತ್ತಿದ್ದೇವೆ. ಅದರ ಪರಿಣಾಮವಾಗಿ ಈ ದಾಖಲಾತಿಯನ್ನು ಬಹಳ ಜಾಗರೂಕವಾದ ರೀತಿಯಲ್ಲಿ ರಚಿಸಲಾಗಿದೆ. ನನ್ನ ಮಿತ್ರ ನೋಡುವಂತೆ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವರ್ಗ ಮಾಡುವ ಸರಕುಗಳ ಗುಣಮಟ್ಟದ ಬಗ್ಗೆ ಈ ದಾಖಲಾತಿಯು ಹೇಳುತ್ತದೆ. ಇವುಗಳಿಗೆ ಸಂಬಂಧಿಸಿದಂತೆ, ರಾಜ್ಯಗಳ ಆಡಳಿತದಲ್ಲಿ ಕೇಂದ್ರವು ಮಧ್ಯೆ ಪ್ರವೇಶಿಸುವ ಅಧಿಕಾರವನ್ನು ಕೊಡುವ ಉದ್ದೇಶವನ್ನು ಹೊಂದಲಾಗಿಲ್ಲ. ಒಂದು ವೇಳೆ ಅವರು ಈ ಪ್ರಶ್ನೆಯನ್ನು ಎತ್ತಲು ಬಯಸಿದರೆ ನಾವು ರಾಜ್ಯ ಯಾದಿಯನ್ನು ಚರ್ಚಿಸುವಾಗ ಅವರು ಹಾಗೆ ಮಾಡಬಹುದು.

**ಡಾ. ಪಿ. ಎಸ್. ದೇಶ್‌ಮುಖ್:** ಈ ದಾಖಲಾತಿಯನ್ನು ತಡೆಹಿಡಿಯಬೇಕು ಮತ್ತು ಈ ಯಾದಿಯನ್ನು ಅಂತಿಮಗೊಳಿಸುವುದಕ್ಕಿಂತ ಮುಂಚೆ ಕೃಷಿ ಮಂತ್ರಾಲಯವನ್ನು ಸಂಪರ್ಕಿಸಬೇಕು ಎಂದು ನಾನು ಸಲಹೆ ನೀಡಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾವು ಯಾದಿ ೨ಕ್ಕೆ ಬಂದಾಗ, ಈ ವಿಷಯವನ್ನು ನಾವು ಚರ್ಚಿಸಬಹುದು.

**ಮಾನ್ಯ ಅಧ್ಯಕ್ಷರು:** ತಿದ್ದುಪಡಿಯನ್ನು ನಾನು ಮತಕ್ಕೆ ಹಾಕುತ್ತೇನೆ.

(ಡಾ. ದೇಶ್‌ಮುಖ್ ಅವರ ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.)

**ಮಾನ್ಯ ಅಧ್ಯಕ್ಷರು:** ಈಗ ನಾನು ಹೊಸ ದಾಖಲಾತಿ ೬೧–ಎ ಅನ್ನು ಮತಕ್ಕೆ ಹಾಕುತ್ತೇನೆ.

(ಡಾ. ಅಂಬೇಡ್ಕರ್ ಅವರ ಗೊತ್ತುವಳಿಯನ್ನು ಮತಕ್ಕೆ ಹಾಕಲಾಯಿತು.)

* * *

***__ಶ್ರೀ ವಿ.ಎಸ್. ಸರ್ವತೆ:__ "ಕಂದಾಯ ಕ್ಷೇತ್ರದಾಚೆಯಿಂದ ರಫ್ತು ಮಾಡುವುದು" ಎಂಬ ಪದಗಳ ಅರ್ಥವೇನು ಎಂಬುದನ್ನು ನಾನು ಡಾ. ಅಂಬೇಡ್ಕರ್ ಅವರಿಂದ ತಿಳಿಯಬಯಸುತ್ತೇನೆ.

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೦೩.

** ಅದೇ, ಪುಟ ೮೦೪.

** ಅದೇ, ಪುಟ ೮೦೪.

**ಮಾನ್ಯ ಅಧ್ಯಕ್ಷರು:** ಪ್ರಶ್ನೆಯು ಬಹಳ ತಡವಾಗಿ ಬಂದಿರುತ್ತದೆ, ಮತ ಚಲಾವಣೆ ಆದ ನಂತರ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ನಂತರ ನನ್ನಲ್ಲಿ ಬಂದರೆ ಗೌರವಾನ್ವಿತ ಸದಸ್ಯರಿಗೆ ನಾನು ಅದನ್ನು ವಿವರಿಸುತ್ತೇನೆ.

**ಮಾನ್ಯ ಅಧ್ಯಕ್ಷರು:** ಪ್ರಶ್ನೆಯನ್ನು ಇಡಲಾಗಿದೆ.

**(ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ದಾಖಲಾತಿ ೬೧–ಎ ಕೇಂದ್ರ ಯಾದಿಗೆ ಸೇರಿಸಲಾಯಿತು.)**

## ದಾಖಲಾತಿ ೬೩

*__ಮಾನ್ಯ ಅಧ್ಯಕ್ಷರು:__ .....ನಾವು ಈಗ ದಾಖಲಾತಿ ೬೩ನ್ನು ತೆಗೆದುಕೊಳ್ಳಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಧ್ಯಕ್ಷರೇ, ನಾನು ಮೂಲ ದಾಖಲಾತಿಗೆ ತಿದ್ದುಪಡಿ ಸಂ. ೩೫೫೧ನ್ನು ಮಂಡಿಸುತ್ತಿಲ್ಲ. ನಾನು ಮಂಡಿಸುತ್ತಿರುವ ತಿದ್ದುಪಡಿ ೩೪ಕ್ಕೆ ಸಂಬಂಧಿಸಿದಂತೆ, ಹಾಗೆ ಮಾಡುವ ಮೂಲಕ ಅದರಲ್ಲಿ ತಿದ್ದುಪಡಿ ಸಂ. ೨೧೨ನ್ನು ಸಹ ಅಳವಡಿಸುತ್ತಿದ್ದೇನೆ. ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೬೩ಕ್ಕೆ ಬದಲಾಗಿ, ಕೆಳಗಿನದನ್ನು ಸೇರಿಸಬೇಕು:–

**'೬೩. ತೈಲಕ್ಷೇತ್ರ ಮತ್ತು ಖನಿಜ ತೈಲ ಸಂಪನ್ಮೂಲಗಳು; ಕಲ್ಲೆಣ್ಣೆ ಮತ್ತು ಕಲ್ಲೆಣ್ಣೆಯ ಉತ್ಪಾದನೆಗಳು; ಅಪಾಯಕಾರಕವಾಗಿ ಉಳಿಯುವವುಗಳೆಂದು ಕಾನೂನಿನ ಮೂಲಕದ ಸಂಸತ್ತು ಘೋಷಿಸಿದ ಇತರ ದ್ರವಗಳು ಮತ್ತು ಪದಾರ್ಥಗಳು; ಮುಂತಾದವುಗಳ ನಿರ್ವಹಣೆ ಮತ್ತು ಅಭಿವೃದ್ಧಿ.' "**

* * *

**__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಈ ಎರಡು ತಿದ್ದುಪಡಿಗಳಲ್ಲಿ ಯಾವುದೂ ಅವಶ್ಯವೆಂದು ನನಗೆ ಅನ್ನಿಸುವುದಿಲ್ಲ. ನನ್ನ ಮಿತ್ರ ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ ಅವರು ದೃಷ್ಟಿಯಲ್ಲಿ ೬೩ ತೈಲ ಪ್ರತೀಕ್ಷೆ ಮುಂತಾದವುಗಳ ನಿರ್ವಹಣೆಯ ಅಧಿಕಾರವನ್ನು ಸಹ ಕೇಂದ್ರಕ್ಕೆ ನೀಡಬೇಕೆನ್ನುವುದು, ನಾವು ಉಪಯೋಗಿಸಲಾದ "ನಿರ್ವಹಣೆ ಮತ್ತು ಅಭಿವೃದ್ಧಿ" ಎಂಬ ಪದಗಳಿಂದ ಪೂರೈಸಲಾಗುತ್ತದೆ. "ನಾಶಕಾರಿ" ಎಂಬ ಶಬ್ದವನ್ನು ಸೇರಿಸುವುದಕ್ಕೆ ಸಂಬಂಧಿಸಿದಂತೆ, ಅಂಥ ಯಾವುದೇ ಅಧಿಕಾರವನ್ನು ಹೊಂದುವ ಆವಶ್ಯಕತೆಯೇ ಇಲ್ಲವೆಂದು ನನಗೆ ಅನ್ನಿಸುತ್ತದೆ.

[**ಡಾ. ಅಂಬೇಡ್ಕರ್ ಅವರ ಒಂದೇ ತಿದ್ದುಪಡಿಯೊಂದಿಗೆ, ದಾಖಲಾತಿ ೬೩ನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.**]

## ದಾಖಲಾತಿ ೬೪

***__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೬೪ಕ್ಕೆ ಬದಲಾಗಿ, ಕೆಳಗಿನದನ್ನು ಸೇರಿಸಬೇಕು:–

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೦೪.

** ಅದೇ, ಪುಟ ೮೦೫.

*** ಅದೇ, ಪುಟ ೮೦೬.

**'೬೪. ಉದ್ಯಮಗಳು, ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಕೇಂದ್ರದಿಂದ ನಿಯಂತ್ರಿಸಲ್ಪಡುವುವುಗಳೆಂದು ಕಾನೂನಿನ ಮೂಲಕ ಸಂಪತ್ತು ಘೋಷಿಸಿದವುಗಳು."**

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಈ ದಾಖಲಾತಿಯು ಇರುವಂತೆಯೇ ಪೂರ್ತಿಯಾಗಿ ಸರಿಯಾಗಿದೆ ಮತ್ತು ಕರಡು ಸಮಿತಿಯ ಮನಸ್ಸಿನಲ್ಲಿರುವ ಉದ್ದೇಶವನ್ನು ಹೊರತರುತ್ತದೆ. ನನ್ನ ನಿವೇದನೆಯೆಂದರೆ, ಒಂದು ಸಲ ಕೇಂದ್ರವು ಒಂದು ಉದ್ಯಮದ ಮೇಲೆ ಈ ದಾಖಲಾತಿಯನ್ನು ಹೇಳಿದಂತೆ ವ್ಯಾಪ್ತಿಯನ್ನು ಪಡೆದುಕೊಂಡರೆ, ಆ ಉದ್ಯಮವು ಎಲ್ಲ ವಿಷಯಗಳಲ್ಲಿ ಸಂಸತ್ತಿನ ವ್ಯಾಪ್ತಿಗೆ ಒಳಪಡುತ್ತದೆ, ಕೇವಲ ಅಭಿವೃದ್ಧಿಗೆ ಮಾತ್ರವಲ್ಲ, ಇತರ ವಿಷಯಗಳಿಗೂ ಸಹ. ತತ್ಪರಿಣಾಮವಾಗಿ, ಕೇವಲ ಅಭಿವೃದ್ಧಿಗೆ ಅಷ್ಟೇ ಅಲ್ಲದೇ, ತನ್ನ ಮನಸ್ಸಿಗೆ ಬಂದಂತೆ ಅದರೊಂದಿಗೆ ವ್ಯವಹರಿಸಲು ಶಂಕೆರಹಿತವಾದ ವ್ಯಾಪ್ತಿಯನ್ನು ಸಂಸತ್ತಿಗೆ ಕೊಡಲು ಉದ್ಯಮವನ್ನು ಮೊದಲು ಇಡುವುದು ಅತ್ಯಂತ ಒಳ್ಳೆಯದೆಂದು ನಾವು ಯೋಚಿಸಿದ್ದೇವೆ. ಆದ್ದರಿಂದ ಈ ದಾಖಲಾತಿಯು ಶ್ರೀ ಕಾಮತ್ ಅವರು ಉದ್ದೇಶಿಸಿರುವುದಕ್ಕಿಂತಲೂ ಬಹಳ ವಿಶಾಲವಾಗಿದೆ.

ಎರಡೂ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು.

**[ಡಾ. ಅಂಬೇಡ್ಕರ್ ಅವರ ಮೇಲಿನ ಗೊತ್ತುವಳಿಯನ್ನು ಅಂಗೀಕರಿಸಲಾಯಿತು, ದಾಖಲಾತಿ ೬೪, ತಿದ್ದುಪಡಿ ಮಾಡಿದಂತೆ ಕೇಂದ್ರ ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೬೪–ಎ

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಹೊಸ ದಾಖಲಾತಿ ೬೪–ಎ ಅನ್ನು ಹೊಂದುವ ತಿದ್ದುಪಡಿಗೆ ಸಂಬಂಧಿಸಿದಂತೆ, ನಾನು ಹೇಳುವುದೇನೆಂದರೆ ಈ ವಿಷಯವನ್ನು ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಇಡಲಾಗಿತ್ತು. ಮತ್ತು ಮುಖ್ಯ ಮಂತ್ರಿಗಳ ಸಮ್ಮೇಳನವು ಈ ಪ್ರಸ್ತಾವನೆಗೆ ಒಪ್ಪಿಕೊಳ್ಳಲಿಲ್ಲ.

ಆಹಾರದ ವಿತರಣೆಯ ಪ್ರಶ್ನೆಗೆ ಸಂಬಂಧಿಸಿದಂತೆ, ವಿಧಿ ೨೦೬ರಲ್ಲಿ ಐದು ವರ್ಷಗಳವರೆಗೆ ಕೇಂದ್ರವು ಆಹಾರದ ವಿತರಣೆಯ ಮೇಲೆ ನಿಯಂತ್ರಣ ಹೊಂದಬಹುದೆಂದು ನಾವು ಹೇಳಿದ್ದೇವೆ.

ಎರಡನೆಯ ತಿದ್ದುಪಡಿಗೆ ಸಂಬಂಧಿಸಿದಂತೆ, ಅಂದರೆ, ಹೊಸ ದಾಖಲಾತಿ ೬೪–ಬಿ ಯನ್ನು ಸೇರಿಸುವುದು.....

**ಮಾನ್ಯ ಸಭಾಧ್ಯಕ್ಷರು:** ಅದನ್ನು ಮಂಡಿಸಲಾಗಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಮಂಡಿಸಲಾದ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ನಾನು ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ, ಪ್ರಶ್ನೆಯು ಹೀಗಿರುತ್ತದೆ:

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೦೭.

** ಅದೇ, ಪುಟ ೮೦೬–೮೧೦.

"ಯಾದಿ ೧ರ ದಾಖಲಾತಿ ೬೪ರ ನಂತರ, ಕೆಳಗಿನ ಹೊಸ ದಾಖಲಾತಿಯನ್ನು ಸೇರಿಸಬೇಕು:–

**'೬೪–ಎ. ಪಶು ಸಂಗೋಪನ, ಅರಣ್ಯೀಕರಣ ಮತ್ತು ಮೀನುಗಾರಿಕೆಯನ್ನು ಒಳಗೊಂಡಂತೆ ಕೃಷಿಯ ಸುಸಂಘಟನೆ ಮತ್ತು ಅಭಿವೃದ್ಧಿ ಮತ್ತು ಆಹಾರದ ಸರಬರಾಜು ಹಾಗೂ ವಿತರಣೆ.' "**

(ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.)

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ತಿದ್ದುಪಡಿಯ ಮೊದಲ ಭಾಗಕ್ಕೆ ಸಂಬಂಧಿಸಿದಂತೆ, ಈ ವಿಷಯವನ್ನು ಸಮವರ್ತಿ ಯಾದಿಯಲ್ಲಿಡಲು ಕರಡು ಸಮಿತಿಯ ಪ್ರಸ್ತಾವನೆ ಇರುತ್ತದೆ, ಮತ್ತು ನನ್ನ ಮಿತ್ರ ಪ್ರೊ. ಸಕ್ಸೇನಾ ಸಮವರ್ತಿ ಯಾದಿಯನ್ನು ಪರೀಕ್ಷಿಸುವುದಾದರೆ, ದಾಖಲಾತಿ ೬೪ ಬಿ, (ಎ)ಗೆ ಸಮಾನಾಂತರವಾಗಿ ಸಮವರ್ತಿ ಯಾದಿಯ ದಾಖಲಾತಿ ೩೫ಎ ದಲ್ಲಿ ದಾಖಲಾತಿ ಇರುವುದನ್ನು ಅವರು ಕಾಣುತ್ತಾರೆ.

(ಬಿ)ಗೆ ಸಂಬಂಧಿಸಿದಂತೆ ಅದು ವಿವಾದಾತ್ಮಕ ವಿಷಯವಾಗಿರುತ್ತದೆ ಮತ್ತು ಈ ಪ್ರಶ್ನೆಯ ಮೇಲೆ ಕರಡು ಸಮಿತಿಯು ಇನ್ನೂ ಯಾವುದೇ ನಿರ್ಣಯಕ್ಕೆ ಬಂದಿರುವುದಿಲ್ಲ. ಕೆಲವು ಉದ್ಯಮಗಳನ್ನು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಹೊಂದಿದವುಗಳೆಂದು ಘೋಷಿಸಲು (ಎ) ಆಗಿರುತ್ತದೆ ಎಂದು ಕರಡು ಸಮಿತಿಯು ತಿಳಿದಿರುತ್ತದೆ. ಒಂದು ವೇಳೆ ಸಂಸತ್ತು ಕೆಲವು ಉದ್ಯಮಗಳನ್ನು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಹೊಂದಿದವುಗಳೆಂದು ಘೋಷಿಸಲು ಅಧಿಕಾರವನ್ನು ಹೊಂದಿದ್ದರೆ, ಅಂಥ ಉದ್ಯಮಗಳ ಸರಕುಗಳನ್ನು ಹಾಗೂ ಉತ್ಪಾದನೆಗಳನ್ನು ನಿಯಂತ್ರಿಸುವ ಅಧಿಕಾರವನ್ನು ಸಹ ಸಂಸತ್ತು ಹೊಂದಿರಬೇಕು. ಆದರೆ (ಬಿ)ಯ ಸಂಸತ್ತು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಹೊಂದಿದವುಗಳೆಂದು ಘೋಷಿಸಿದವುಗಳಲ್ಲದ ಇತರ ಉದ್ಯಮಗಳ ಸರಕುಗಳ ಬಗ್ಗೆ ಇರುತ್ತದೆ. ನಾನು ಹೇಳಿದಂತೆ, ಅದು ಸ್ವಲ್ಪ ವಿವಾದಾತ್ಮಕ ವಿಷಯವಾಗಿರುತ್ತದೆ, ಮತ್ತು ಕರಡು ಸಮಿತಿಯು ಯಾವುದೇ ತೀರ್ಮಾನಕ್ಕೆ ಬಂದಿರುವುದಿಲ್ಲ. ನಾನು ಪ್ರೊ. ಸಕ್ಸೇನಾ ಅವರಿಗೆ ಸಮವರ್ತಿ ಯಾದಿಯಲ್ಲಿಯ ದಾಖಲಾತಿ ೩೫ನ್ನು ನಾವು ತೆಗೆದುಕೊಳ್ಳುವವರೆಗೆ ಈ ವಿಷಯವನ್ನು ತಡೆಹಿಡಿಯಲು ಅನುಮತಿಸಬೇಕೆಂದು ಸಲಹೆ ಮಾಡುತ್ತೇನೆ.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಕಾಯುವುದಕ್ಕೆ ನನಗೆ ಯಾವುದೇ ತಕರಾರು ಇಲ್ಲ.

**ಮಾನ್ಯ ಸಭಾಧ್ಯಕ್ಷರು:** ಹಾಗಾದರೆ ಇದನ್ನು ತಡೆಹಿಡಿಯಲಾಗಿದೆ.

* * *

## ದಾಖಲಾತಿ ೬೫

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಶ್ರೀ ಕಾಮತ್ ಅವರ ತಿದ್ದುಪಡಿಗೆ ಸಂಬಂಧಿಸಿದಂತೆ, ಅದು ಅನಾವಶ್ಯಕವೆಂದು ನನಗೆ ತೋರುತ್ತದೆ. ಏಕೆಂದರೆ "ತೈಲ ಕ್ಷೇತ್ರಗಳು" ಎಂಬ ಶಬ್ದವನ್ನು ಸರ್ವಸಾಮಾನ್ಯ ರೀತಿಯಲ್ಲಿ ಬಳಸಲಾಗಿದೆ. ಅದು ಎಲ್ಲೆಲ್ಲಿ ಬರುತ್ತದೆಯೋ, ಕೇಂದ್ರವು ವ್ಯಾಪ್ತಿಯನ್ನು ಹೊಂದಿರುತ್ತದೆ. ಒಂದು ವೇಳೆ ತೈಲ ಕ್ಷೇತ್ರವು ನೀರಿನ ಕೆಳಗೆ ಬಂದರೆ...

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೧೧.

** ಅದೇ, ಪುಟ ೮೧೩.

**ಮಾನ್ಯ ಸಭಾಧ್ಯಕ್ಷರು:** "ಮತ್ತು ನೀರಿನೊಳಗಿನ ಪ್ರದೇಶಗಳು" ಎಂದು ಅವರು ಹೇಳುತ್ತಾರೆ.

**ಶ್ರೀ ಹೆಚ್. ವಿ. ಕಾಮತ್:** "ಖನಿಜಗಳು, ತೈಲಕ್ಷೇತ್ರಗಳು ಮತ್ತು ನೀರಿನೊಳಗಿನ ಪ್ರದೇಶಗಳು" ಎಂದು ನಾನು ಹೇಳುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಿತ್ರರ ಮನಸ್ಸಿನಲ್ಲಿ ಇರುವುದು ಜಲಾಂತರ್ಗಾಮಿ ಕಾರ್ಯಾಚರಣೆಗಳು.

**ಶ್ರೀ ಹೆಚ್. ವಿ. ಕಾಮತ್:** ಅಲ್ಲ, ಮುತ್ತುಗಳ ಉದ್ಯಮ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆ ವಿಷಯವನ್ನು ನಾನು ಪರಿಗಣಿಸುತ್ತೇನೆ ಎಂದು ಮಾತ್ರ ನಾನು ಹೇಳಬಲ್ಲೆ.

**ಮಾನ್ಯ ಸಭಾಧ್ಯಕ್ಷರು:** ಹಾಗಾದರೆ ನಾನು ಪ್ರೊ. ಸಕ್ಸೇನಾ ಅವರು ಮಂಡಿಸಿದ ತಿದ್ದುಪಡಿಯನ್ನು ಮೊದಲು ಇಡುತ್ತೇನೆ. ಪ್ರಶ್ನೆಯು ಹೀಗಿರುತ್ತದೆ:

"ಯಾದಿ ೧ರ ದಾಖಲಾತಿ ೬೫ರಲ್ಲಿ, 'ನಿಯಂತ್ರಣ' ಮತ್ತು ಶಬ್ದದ ನಂತರ 'ಮತ್ತು ಕಲ್ಯಾಣ' ಎಂಬ ಶಬ್ದಗಳನ್ನು ಸೇರಿಸಬೇಕು."

(ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.)

**ಶ್ರೀ ಹೆಚ್. ವಿ. ಕಾಮತ್:** ಡಾ. ಅಂಬೇಡ್ಕರ್ ಅವರ ಆಶ್ವಾಸನೆಯ ಹಿನ್ನೆಲೆಯಲ್ಲಿ, ನಾನು ನನ್ನ ತಿದ್ದುಪಡಿಯನ್ನು ಈಗ ಒತ್ತಾಯ ಪಡಿಸುವುದಿಲ್ಲ. ಅದನ್ನು ಕರಡು ಸಮಿತಿಯು ಪರಿಗಣಿಸಬಹುದು.

**[ಗೊತ್ತುವಳಿಯುನ್ನು ಅಂಗೀಕರಿಸಲಾಯಿತು. ದಾಖಲಾತಿ ೬೫ನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೬೬

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೬೬ರಲ್ಲಿ, 'ಮತ್ತು ತೈಲಕ್ಷೇತ್ರಗಳು' ಎಂಬ ಶಬ್ದಗಳನ್ನು ತೆಗೆಯಬೇಕು."

ಅದನ್ನು ಈಗಾಗಲೇ ದಾಖಲಾತಿ ೬೩ಕ್ಕೆ ವರ್ಗಾಯಿಸಲಾಗಿದೆ.

* * *

****ಶ್ರೀ ಜಗತ್ ನಾರಾಯಣ್ ಲಾಲ್** (ಬಿಹಾರ್: ಸಾಮಾನ್ಯ): ಅಧ್ಯಕ್ಷರೇ..... ನಾನು ಶ್ರೀ ಬ್ರಜೇಶ್ವರ್ ಪ್ರಸಾದ್ ಮಂಡಿಸಿದ ತಿದ್ದುಪಡಿಯನ್ನು ವಿರೋಧಿಸಲು ಬಯಸಿದ್ದೇನೆ... ನನ್ನನ್ನು ಕ್ಷಮಿಸಿ... ನಾನು ಡಾ. ಅಂಬೇಡ್ಕರ್ ಅವರು ಮಂಡಿಸಿದ ತಿದ್ದುಪಡಿಯನ್ನು ಪುಷ್ಟೀಕರಿಸುತ್ತೇನೆ ಮತ್ತು ಅದಕ್ಕೆ ಮಂಡಿಸಲಾದ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ.

**ಶ್ರೀ ಬ್ರಜೇಶ್ವರ್ ಪ್ರಸಾದ್:** ಡಾ. ಅಂಬೇಡ್ಕರ್ ಅವರ ತಿದ್ದುಪಡಿಯು "ತೈಲ ಕ್ಷೇತ್ರಗಳು" ಎಂಬ ಪದವನ್ನು ತೆಗೆದುಹಾಕುತ್ತದೆ."

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೧೩.

** ಅದೇ, ಪುಟ ೮೧೬.

**ಶ್ರೀ ಜಗತ್ ನಾರಾಯಣ್ ಲಾಲ್:** "ತೈಲ ಕ್ಷೇತ್ರಗಳು" ಎಂಬ ಶಬ್ದಗಳು ಮೊದಲೇ ಬಂದಿರುವುದರಿಂದ ಅವುಗಳನ್ನು ತೆಗೆದುಹಾಕಬೇಕು."

**ಮಾನ್ಯ ಸಭಾಧ್ಯಕ್ಷರು:** ನೀವು ಏನನ್ನಾದರೂ ಹೇಳಲು ಬಯಸುತ್ತೀರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ ಮಾನ್ಯರೇ, ನಾನು ಯಾವುದೇ ತಿದ್ದುಪಡಿಯನ್ನು ಸ್ವೀಕರಿಸಲು ಬಯಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಶ್ರೀ ಬ್ರಜೇಶ್ವರ್ ಪ್ರಸಾದ್ ಅವರ ತಿದ್ದುಪಡಿಯನ್ನು ನಾವು ತೆಗೆದುಕೊಳ್ಳೋಣ.

**ಶ್ರೀ ಬ್ರಜೇಶ್ವರ್ ಪ್ರಸಾದ್:** ಮಾನ್ಯರೇ, ನಾನು ಅದನ್ನು ಹಿಂದೆ ಪಡೆಯಲು ಬೇಡಿಕೊಳ್ಳುತ್ತೇನೆ.

(ತಿದ್ದುಪಡಿಯನ್ನು, ಸದನದ ತಿದ್ದುಪಡಿಯ ಮೇರೆಗೆ, ಹಿಂದೆ ಪಡೆಯಲಾಯಿತು.)

[ಶ್ರೀ ಕಾಮತ್‌ರ ತಿದ್ದುಪಡಿಯನ್ನು ಹಿಂದೆ ಪಡೆಯಲಾಯಿತು, **ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಸ್ವೀಕರಿಸಲಾಯಿತು. ದಾಖಲಾತಿ ೬೬, ತಿದ್ದುಪಡಿ ಮಾಡಿದಂತೆ ಕೇಂದ್ರ ಯಾದಿಗೆ ಸೇರಿಸಲಾಯಿತು.**]

## ದಾಖಲಾತಿ ೬೭

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೬೭ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**'೬೭. ಯಾವುದೇ ರಾಜ್ಯದ ಆರಕ್ಷಕ ಪಡೆಯ ಅಧಿಕಾರ ಮತ್ತು ವ್ಯಾಪ್ತಿಯನ್ನು ಅಂಥ ರಾಜ್ಯದಲ್ಲಿ ಇರದ ಯಾವುದೇ ಕ್ಷೇತ್ರಕ್ಕೆ ವಿಸ್ತರಿಸುವುದು, ಆದರೆ ಅಂಥ ಕ್ಷೇತ್ರವು ಉಪಸ್ಥಿತವಿರುವ ರಾಜ್ಯ ಸರ್ಕಾರದ ಅನುಮತಿ ಇಲ್ಲದೇ ಒಂದು ರಾಜ್ಯದ ಆರಕ್ಷಕರು ತನ್ನ ರಾಜ್ಯದಲ್ಲಿ ಇಲ್ಲದ ಯಾವುದೇ ಕ್ಷೇತ್ರದಲ್ಲಿ ಅಧಿಕಾರ ಹಾಗೂ ವ್ಯಾಪ್ತಿಯನ್ನು ಚಲಾಯಿಸಲು ಶಕ್ತವಾಗದಂತೆ; ಯಾವುದೇ ರಾಜ್ಯದ ಆರಕ್ಷಕ ಸದಸ್ಯರ ಅಧಿಕಾರ ಮತ್ತು ವ್ಯಾಪ್ತಿಯನ್ನು ಆ ರಾಜ್ಯದ ಹೊರಗಿನ ರೈಲ್ವೆ ಕ್ಷೇತ್ರಗಳಿಗೆ ವಿಸ್ತರಿಸುವುದು.' "**

**ಮಾನ್ಯ ಸಭಾಧ್ಯಕ್ಷರು:** ಸರ್ದಾರ್ ಹುಕುಂಸಿಂಗ್‌ರ ಒಂದು ತಿದ್ದುಪಡಿಯು ಕೆಲ ವಿಷಯ ತೆಗೆದು ಹಾಕುವುದಕ್ಕಾಗಿ ಇರುತ್ತದೆ. ಅದನ್ನು ಮಂಡಿಸಬೇಕಾಗಿಲ್ಲ. ಡಾ. ದೇಶ್‌ಮುಖ್‌ರು ಈ ದಾಖಲಾತಿಗೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅವರು ಅದನ್ನು ಮಂಡಿಸುತ್ತಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗಾಗಿ ನಾನು ಗೊತ್ತುವಳಿಯನ್ನು ಮತಕ್ಕೆ ಹಾಕುತ್ತೇನೆ.

(ತಿದ್ದುಪಡಿಯನ್ನು ಅಂಗೀಕರಿಸಲಾಯಿತು.)

[**ದಾಖಲಾತಿ ೬೭, ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.**]

## ದಾಖಲಾತಿ ೬೮

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೬೮ಕ್ಕೆ ಬದಲಾಗಿ, ಕೆಳಗಿನದನ್ನು ಸೇರಿಸಬೇಕು:–

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೧೭.

** ಅದೇ, ಪುಟ ೮೧೮.

**'೬೮. ಸಂಸತ್ತಿಗೆ ಹಾಗೂ ರಾಜ್ಯಗಳ ಶಾಸಕಾಂಗಗಳಿಗೆ ಮತ್ತು ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಹುದ್ದೆಗೆ ಚುನಾವಣೆಗಳು ಮತ್ತು ಚುನಾವಣೆ ಆಯೋಗ ಅಂಥ ಚುನಾವಣೆಗಳನ್ನು ಮೇಲ್ವಿಚಾರಿಸುವುದು, ನಿರ್ದೇಶಿಸುವುದು ಮತ್ತು ನಿಯಂತ್ರಿಸುವುದು.' "**

* * *

**ಮಾನ್ಯ ಸಭಾಧ್ಯಕ್ಷರು:** ಇದಕ್ಕೆ ಶ್ರೀ ಸಂತಾನಮ್ ಅವರ ಹೆಸರಿನಲ್ಲಿರುವ ಒಂದು ತಿದ್ದುಪಡಿಯು ಇರುತ್ತದೆ. ಕೆಲವು ಇತರ ವಿಧಿಗಳ ಬಗ್ಗೆ ನಾವು ತೆಗೆದುಕೊಂಡ ನಿರ್ಣಯದನ್ವಯ ಅದು ಉದ್ಭವಿಸುವುದಿಲ್ಲ ಎಂದು ನಾನು ತಿಳಿದಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ತಿದ್ದುಪಡಿಯನ್ನು ಸ್ವೀಕರಿಸುವುದು ಅವಶ್ಯವಾಗಿರುತ್ತದೆ. ಏಕೆಂದರೆ, ಚುನಾವಣಾ ಆಯೋಗವು ಪ್ರಾಂತೀಯ ಅಧಿಕಾರಿಗಳನ್ನು ಒಳಗೊಂಡಿರುತ್ತದೆ.

**[ತಿದ್ದುಪಡಿಯನ್ನು ತಿರಸ್ಕರಿಸಲಾಯಿತು. ದಾಖಲಾತಿ ೬೮, ಡಾ. ಅಂಬೇಡ್ಕರರ ಗೊತ್ತುವಳಿಯ ಮೂಲಕ ತಿದ್ದುಪಡಿ ಮಾಡಿದಂತೆ, ಅಂಗೀಕರಿಸಲಾಯಿತು ಮತ್ತು ಕೇಂದ್ರ ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೬೯

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೬೯ಕ್ಕೆ ಬದಲಾಗಿ, ಕೆಳಗಿನದನ್ನು ಸೇರಿಸಬೇಕು:–

**'೬೯. ರಾಷ್ಟ್ರಪತಿ ಮತ್ತು ರಾಜ್ಯಪಾಲರ ವೇತನ ಮತ್ತು ಭತ್ಯೆ ಮತ್ತು ಅನುಪಸ್ಥಿತಿಯ ಅನುಮತಿಗೆ ಸಂಬಂಧಿಸಿದ ಹಕ್ಕುಗಳು: ಕೇಂದ್ರದ ಮಂತ್ರಿಗಳು ಮತ್ತು ರಾಜ್ಯಗಳ ಪರಿಷತ್ತುಗಳ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಮತ್ತು ಲೋಕಸಭೆಯ ಸ್ಪೀಕರು ಹಾಗೂ ಉಪ ಸ್ಪೀಕರುಗಳು. ಇವರುಗಳ ವೇತನ ಮತ್ತು ಭತ್ಯೆ; ಸಂಸತ್ ಸದಸ್ಯರ ವೇತನ ಮತ್ತು ಭತ್ಯೆ; ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ಲನ ವೇತನ, ಭತ್ಯೆ ಹಾಗೂ ಸೇವಾ ನಿಬಂಧನೆಗಳು.**

೬೯ಎ. ಪ್ರತಿಯೊಂದು ಸದನದ ಮತ್ತು ಅದರ ಸದಸ್ಯರ ಮತ್ತು ಸಮಿತಿಗಳ ವಿಶೇಷಾಧಿಕಾರಗಳು, ಉನ್ಮುಕ್ತಿಗಳು ಹಾಗೂ ಅಧಿಕಾರಗಳು.'

**ಮಾನ್ಯ ಸಭಾಧ್ಯಕ್ಷರು:** ಇದಕ್ಕೆ ಶ್ರೀ ಕಾಮತ್ ಅವರ ಹೆಸರಿನಲ್ಲಿರುವ ತಿದ್ದುಪಡಿ ಸಂ. ೨೧೯ ಇರುತ್ತದೆ.

**ಶ್ರೀ ಹೆಚ್. ವಿ. ಕಾಮತ್:** ನನ್ನ ತಿದ್ದುಪಡಿಯನ್ನು ನಾನು ಮಂಡಿಸಲು ಬಯಸುವುದಿಲ್ಲ. ಆದರೆ ಹೇಗೆ ಡಾ. ಅಂಬೇಡ್ಕರ್ ಅವರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಮರೆತರು ಅಥವಾ ಕಾಣಲಿಲ್ಲ ಎಂದು ನಾನು ಕೇಳುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರ ವೇತನ ಮುಂ. ಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ. ಅವರ ವೇತನಗಳು ಪರಿಶಿಷ್ಟದಲ್ಲಿ ವಿಶದಪಡಿಸಿದಂತೆ ಎಂದು ನಾವು ಹೇಳಿದ್ದೇವೆ.

**ಮಾನ್ಯ ಅಧ್ಯಕ್ಷರು:** ನಂತರ ಡಾ. ದೇಶ್‌ಮುಖ್‌ರಿಂದ ತಿದ್ದುಪಡಿ ಸಂ. ೨೨೦. ಅದು ಹೆಚ್ಚು ಸೂಕ್ತವಾಗಿ ರಾಜ್ಯ ಯಾದಿಗೆ ಹೋಗುವುದಿಲ್ಲವೇ?

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೧೯–೮೨೦.

**ಡಾ. ಪಿ. ಎಸ್. ದೇಶ್‌ಮುಖ್:** ಇಲ್ಲ ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧(ಆರನೇ ವಾರ)ರ ತಿದ್ದುಪಡಿ ಸಂ. ೩೯ರಲ್ಲಿ, ಯಾದಿ ೧ರ ಪ್ರಸ್ತಾವಿತ ದಾಖಲಾತಿ ೬೯ರ ನಂತರ, ಕೆಳಗಿನ ಹೊಸ ದಾಖಲಾತಿಯನ್ನು ಸೇರಿಸಬೇಕು:–

'೬೯–ಎ. ರಾಜ್ಯ ಶಾಸಕಾಂಗಗಳ ಹಾಗೂ ಅವುಗಳ ಸಮಿತಿಗಳ ವಿಶೇಷಾಧಿಕಾರಗಳು, ಉನ್ಮುಕ್ತಿಗಳು ಹಾಗೂ ಅಧಿಕಾರಿಗಳು"

.....ವಿಶೇಷಾಧಿಕಾರಗಳು ಏಕ ರೂಪದವುಗಳಾಗಿರಬೇಕು ಮತ್ತು ಅವು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಬೇರೆಯಾಗಿರಕೂಡದು ಎಂಬುದು ಅತ್ಯಂತ ಆವಶ್ಯಕವಾಗಿದೆ ಎಂದು ನಾನು ತಿಳಿದಿದ್ದೇನೆ.

**ಶ್ರೀ ಬ್ರಜೇಶ್ವರ್ ಪ್ರಸಾದ್:** ಕೇಳಿ ಕೇಳಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಪ್ರತಿಯೊಂದು ಶಾಸಕಾಂಗವು ತನ್ನ ವಿಶೇಷಾಧಿಕಾರಗಳು, ಉನ್ಮುಕ್ತಿಗಳು ಹಾಗೂ ಅಧಿಕಾರಗಳನ್ನು ವ್ಯಾಖ್ಯಾನಿಸುವ ಪ್ರಾಧಿಕಾರವನ್ನು ಹೊಂದಿರುವುದು ಸೂಕ್ತವಾಗಿರುತ್ತದೆ. ಮತ್ತು ಈ ಕಾರಣಕ್ಕಾಗಿ ನಾವು ಸಂಸತ್ತು ತನ್ನ ಸದಸ್ಯರ ವಿಶೇಷಾಧಿಕಾರಗಳು, ಉನ್ಮುಕ್ತಿಗಳು ಹಾಗೂ ಅಧಿಕಾರಗಳನ್ನು ನಿರ್ದಿಷ್ಟಪಡಿಸುವ ಅಧಿಕಾರವನ್ನು ಹೊಂದಿರಬೇಕು ಎಂದು ಹೇಳಿದ್ದೇವೆ, ಮತ್ತು ರಾಜ್ಯ ಶಾಸಕಾಂಗಗಳು ಸಹ ಅದೇ ರೀತಿಯ ಅಧಿಕಾರವನ್ನು ತನ್ನ ಸದಸ್ಯರಿಗೆ ಸಂಬಂಧಿಸಿದಂತೆ ಹೊಂದಿರಬೇಕು. ಇಡೀ ಅಧಿಕಾರವು ಕೇಂದ್ರದಲ್ಲಿ ಕೇಂದ್ರೀಕೃತವಾಗಿರಬೇಕೆಂದು ನನಗೆ ಅನ್ನಿಸುವುದಿಲ್ಲ. ಒಂದು ವೇಳೆ ಸಂಸತ್ತು ತನ್ನ ಸದಸ್ಯರ ವಿಶೇಷಾಧಿಕಾರಗಳು ಉನ್ಮುಕ್ತಿಗಳು ಹಾಗೂ ಅಧಿಕಾರಗಳನ್ನು ವ್ಯಾಖ್ಯಾನಿಸಿ ಸದಸ್ಯರ ಅಧಿನಿಯಮವನ್ನು ರಚಿಸಿದರೆ, ಬಹುಶಃ ರಾಜ್ಯ ಸರ್ಕಾರಗಳು ಸಹ ಅದನ್ನು ಪಾಲಿಸುತ್ತವೆ ಹಾಗು ತಮ್ಮ ಇಚ್ಛೆಯನುಸಾರ ಕೆಲವು ಅಲ್ಪ ತಿದ್ದುಪಡಿಗಳೊಂದಿಗೆ ಅದನ್ನು ಅಕ್ಷರಶಃ ಅಚ್ಚು ಮಾಡಬಹುದೆಂದು ನಾನು ಯೋಚಿಸಿರಬೇಕು.

**[ಡಾ. ಅಂಬೇಡ್ಕರ್ ಅವರ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಡಾ. ದೇಶ್‌ಮುಖ್ ತಿದ್ದುಪಡಿಯನ್ನು ತಿರಸ್ಕರಿಸಲಾಯಿತು. ದಾಖಲಾತಿ ೬೯ ಮತ್ತು ೬೯–ಎ ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೭೦

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೭೦ರ ಕೊನೆಯಲ್ಲಿ ಅಥವಾ ಸಂಸತ್ತಿನಿಂದ ನೇಮಿಸಿದ ಆಯೋಗಗಳು' ಎಂಬ ಶಬ್ದಗಳನ್ನು ಸೇರಿಸಬೇಕು."

ಈಗಿರುವಂತೆ ದಾಖಲಾತಿಯು ಸಮಿತಿಗಳನ್ನು ಮಾತ್ರ ಉಲ್ಲೇಖ ಮಾಡುತ್ತದೆ.

ಮಾನ್ಯ ಅಧ್ಯಕ್ಷರು: ಇತರ ಯಾವುದೇ ತಿದ್ದುಪಡಿ ಇದೆ ಎಂದು ನನಗೆ ಅನ್ನಿಸುವುದಿಲ್ಲ.

**[ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ದಾಖಲಾತಿ ೭೦ನ್ನು, ತಿದ್ದುಪಡಿ ಮಾಡಿವಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.]**

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೭೦.

## ದಾಖಲಾತಿ ೭೦–ಎ

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೭೦ರ ನಂತರ, ದಾಖಲಾತಿಯನ್ನು ಸೇರಿಸಬೇಕು:–

**'೭೦ಎ. ಪ್ರದರ್ಶನಕ್ಕೆ ಚಲನಚಿತ್ರಗಳನ್ನು ಅನುಮತಿಸುವುದು.' "**

ಈ ದಾಖಲಾತಿಯನ್ನು ಮೂಲವಾಗಿ ಸಹಗಾಮಿ ಯಾದಿಯಲ್ಲಿಡಲಾಗಿತ್ತು. ಇದನ್ನು ಈಗ ಯಾದಿ Iರಲ್ಲಿಡಲು ಪ್ರಸ್ತಾಪಿಸಲಾಗಿದೆ.

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೇ, ಮೂಲವಾಗಿ ಸಮವರ್ತಿ ಯಾದಿಯಲ್ಲಿರುವ ಈ ದಾಖಲಾತಿಯನ್ನು ಕೇಂದ್ರ ಯಾದಿಗೆ ತರುವುದು ಎರಡು ತರಹದ್ದಾಗಿದೆ. ಮೊದಲನೆಯದಾಗಿ ಚಲನಚಿತ್ರಗಳ ಅನುಮತಿಗೆ ಸಾಧ್ಯವಾದಷ್ಟು ಮಟ್ಟಿಗೆ ಏಕರೂಪದ ಅಳತೆಗೋಲನ್ನು ವಿಧಿಸುವುದು; ಎರಡನೆಯದಾಗಿ, ಯಾವುದೇ ನಿರ್ಮಾಪಕನಿಗೆ ತನ್ನ ಚಲನಚಿತ್ರಕ್ಕೆ ಯಾವುದೇ ಒಂದು ಪ್ರಾಂತ್ಯದಿಂದ ಅದರ ಮೂರ್ಖತನದ ಕಾರಣದಿಂದಾಗಿ ಅಥವಾ ಅಸಾಧಾರಣ ಸ್ವರೂಪದ ಅಳತೆಗೋಲಿನ ಕಾರಣಕ್ಕಾಗಿ ಹಾಗೂ ಚಲನಚಿತ್ರದ ಅನುಮತಿಯ ವಿಷಯದಲ್ಲಿ ಜಾರಿಯಲ್ಲಿರುವ ಸಾಮಾನ್ಯ ಅಳತೆಗೋಲಿಗೆ ಅವು ಪೂರಕವಾಗಿರದಿದ್ದಲ್ಲಿ, ಅವನಿಗೆ ಅನುಮತಿ ನೀಡದಿರುವುದಕ್ಕಾಗಿ ಆಗುವ ಕ್ಷತಿಯನ್ನು ತಡೆಯುವುದು. ಆದ್ದರಿಂದ, ಅನುಮತಿ ನೀಡುವ ಈ ವಿಷಯವು ಕೇಂದ್ರ ಮತ್ತು ಪ್ರಾಂತ್ಯಗಳ ನಡುವೆ ವಿತರಿಸಿ ಅದರಿಂದಾಗಿ ಪ್ರತಿಯೊಂದು ಪ್ರಾಂತ್ಯವು ತನ್ನದೇ ಆದ ಅಳತೆಗೋಲನ್ನು ಪುನರ್‌ಪರೀಕ್ಷಿಸಲು ಪ್ರೋತ್ಸಾಹಿಸುವ ಹಾಗೂ ಅಳತೆಗೋಲು ಉತ್ತಮವಾಗಿದೆಯೇ ಅಥವಾ ಕೆಟ್ಟದಾಗಿದೆಯೇ ಎಂದು ಎತ್ತಿ ತೋರಿಸುವ ಬದಲಾಗಿ, ಅದನ್ನು ಕೇಂದ್ರ ಯಾದಿಗೆ ತರುವುದು ಹೆಚ್ಚು ಉತ್ತಮವಾಗಿರುತ್ತದೆ. ಈ ವಿಷಯದ ಇನ್ನುಳಿದದ್ದಕ್ಕೆ ಸಂಬಂಧಿಸಿದಂತೆ ಯಾದಿ ೨ರಲ್ಲಿಯ ದಾಖಲಾತಿ ೪೩ನ್ನು ಇದ್ದಂತೆಯೇ ಬಿಡಲು ಪ್ರಸ್ತಾಪಿಸಲಾಗಿದೆ. ಹಾಗಾಗಿ, ಅನುಮತಿ ನೀಡುವುದೊಂದನ್ನು ಬಿಟ್ಟು ಥಿಯೇಟರುಗಳು, ನಾಟಕದ ಪ್ರದರ್ಶನಗಳು ಮತ್ತು ಸಿನೇಮಾಗಳ ವಿಷಯಗಳಲ್ಲಿ ಪ್ರಾಂತ್ಯಗಳು ತಮ್ಮ ನಿಯಂತ್ರಣವನ್ನು ಇಟ್ಟುಕೊಂಡಿರುತ್ತವೆ. ನಾನು ಮಾಡಿದ ಪ್ರಸ್ತಾವನೆಯಿಂದ ಯಾವುದೇ ಹಿತಾಸಕ್ತಿಗೆ ಯಾವುದೇ ರೀತಿಯ ಕ್ಷತಿಯುಂಟಾಗುವುದೆಂದು ನನಗೆ ಅನ್ನಿಸುವುದಿಲ್ಲ. ಅದಕ್ಕೆ ಬದಲಾಗಿ, ನಾನು ಹೇಳಿದಂತೆ ಕೇಂದ್ರದಂಥ ಒಂದೇ ಸಂಸ್ಥೆಯಲ್ಲಿ ಅನುಮತಿ ನೀಡುವ ಅಧಿಕಾರವನ್ನು ಕೇಂದ್ರೀಕರಿಸುವುದರಿಂದ ಉತ್ತಮವಾದ ಲಾಭಗಳಿರುತ್ತದೆ.

**ಶ್ರೀ ರಾಜ ಬಹಾದ್ದೂರ್:** ಅನುಮತಿ ನೀಡುವುದು ಮಾತ್ರವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಒಂದು ಸಲ ಚಲನಚಿತ್ರ ಒಳ್ಳೆಯದು ಮತ್ತು ಮೌಲಿಕ ಗುಣಮಟ್ಟಕ್ಕೆ ಅನುಗುಣವಾಗಿದೆ ಎಂದು ಕೇಂದ್ರವು ಅನುಮತಿ ನೀಡಿದ ಮೇಲೆ, ಪುನಃ ಪ್ರದರ್ಶನಕ್ಕೆ ನಿಯಮಗಳು ಏಕಿರಬೇಕೆಂದು ನನಗೆ ತೋಚುತ್ತಿಲ್ಲ. ವಿಷಯವು ಅಲ್ಲಿಗೆ ಮುಗಿಯುತ್ತದೆ.

**ಮಾನ್ಯ ಸಭಾಧ್ಯಕ್ಷರು:** ನಾನು ತಿದ್ದುಪಡಿ ಸಂ. ೨೨೨ನ್ನು ಮತಕ್ಕೆ ಹಾಕುತ್ತೇನೆ.

**ಡಾ. ಪಿ. ಎಸ್. ದೇಶ್‌ಮುಖ್:** ನಾನು ಅದನ್ನು ಹಿಂದಕ್ಕೆ ಪಡೆಯಲು ಬಯಸುತ್ತೇನೆ.

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೨೧.

** ಅದೇ, ಪುಟ ೮೨೪.

(ತಿದ್ದುಪಡಿಯನ್ನು, ಸದನದ ಅನುಮತಿಯ ಮೇರೆಗೆ, ಹಿಂದಕ್ಕೆ ಪಡೆಯಲಾಯಿತು.)

**[ದಾಖಲಾತಿ ೭೦ಎ ಅನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೭೩

***ಮಾನ್ಯ ಸಭಾಧ್ಯಕ್ಷರು:** ನಂತರ ದಾಖಲಾತಿ ೭೩ ಬರುತ್ತದೆ, ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ.

"ಯಾದಿ ೧ರ ದಾಖಲಾತಿ ೭೩ಕ್ಕೆ ಬದಲಾಗಿ, ಕೆಳಗಿನದನ್ನು ಸೇರಿಸಬೇಕು:–

**'೭೩. ಅಂತಾರಾಜ್ಯ ವ್ಯಾಪಾರ ಮತ್ತು ವಾಣಿಜ್ಯ.'** "

ದಾಖಲಾತಿ ೭೩ರಲ್ಲಿ ಈ ಶಬ್ದಗಳ ಮುಂದಿರುವ ಶಬ್ದಗಳು ಅನಾವಶ್ಯಕವಾಗಿರುತ್ತವೆ. ಏಕೆಂದರೆ, ಯಾದಿ ೨ರ ದಾಖಲಾತಿ ೩೩ನ್ನು ಬಿಟ್ಟುಬಿಡಲು ಪ್ರಸ್ತಾವನೆ ಇರುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಇದಕ್ಕೆ ಶ್ರೀ ನಜಿರುದ್ದೀನ್ ಅಹ್ಮದ್‌ರ ಒಂದು ತಿದ್ದುಪಡಿ ಇರುತ್ತದೆ, ತಿದ್ದುಪಡಿ ಸಂ. ೨೨೬.

**ಶ್ರೀ ನಜಿರುದ್ದೀನ್ ಅಹ್ಮದ್:** ನಾನು ಅದನ್ನು ಮಂಡಿಸುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಹಾಗಾದರೆ ಈ ದಾಖಲಾತಿಗೆ ತಿದ್ದುಪಡಿಗಳಿಲ್ಲ. ನಾನು ದಾಖಲಾತಿಯನ್ನು, ಡಾ. ಅಂಬೇಡ್ಕರ್ ಮಂಡಿಸಿದಂತೆ, ಸದನದ ಮುಂದೆ ಇಡುತ್ತಿದ್ದೇನೆ.

**[ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ದಾಖಲಾತಿ ೭೩, ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು. ಇಲ್ಲಿ ನಮೂದಿಸಲಾದ ದಾಖಲಾತಿಗಳ ಮೇಲೆ ಚರ್ಚೆಯಲ್ಲಿ ಡಾ. ಅಂಬೇಡ್ಕರ್ ಅವರ ಟಿಪ್ಪಣಿಗಳು ಇರುವುದಿಲ್ಲ. ಬಹುತೇಕ ಎಲ್ಲವೂ ಯಾವುದೇ ಚರ್ಚೆ ಇಲ್ಲದೇ ಅಂಗೀಕೃತವಾಗಿರುತ್ತದೆ.]**

## ದಾಖಲಾತಿ ೭೩–ಎ

****ಶ್ರೀ ನಜಿರುದ್ದೀನ್ ಅಹ್ಮದ್:** .....ಹಾಗಾಗಿ ಅಂತರ-ಗ್ರಹಗಳ ಪ್ರವಾಸವನ್ನು ಯಾದಿಯಲ್ಲಿ ಸೇರಿಸಬೇಕಾದರೆ ಹಾಗೂ ಅದನ್ನು ಮಾಡಲೇಬೇಕಾಗಿರುವುದರಿಂದ, ಈ ತಿದ್ದುಪಡಿಯನ್ನು ಸಹ ಅಂಗೀಕರಿಸಬೇಕು. ಭೂಮಿಯಿಂದ ಚಂದ್ರನವರೆಗೆ ಮತ್ತು ವಾಪಸಾತಿ ಬಹು ಬೇಗ ಯಶಸ್ವಿಯಾಗಲಿದೆ. ಆದರೆ ಶ್ರೀ ಕಾಮತ್ ಅವರ ತಿದ್ದುಪಡಿಯು ಅದನ್ನು ಸಾಧ್ಯ ಮಾಡುವುದಿಲ್ಲ. ಮೂಲ ತಿದ್ದುಪಡಿಯನ್ನು ಪೂರ್ತಿಗೊಳಿಸಲು ನನ್ನ ತಿದ್ದುಪಡಿಯನ್ನು ಅಂಗೀಕರಿಸಬೇಕು. ಮಾನ್ಯರೇ, ಒಂದು ವೇಳೆ ಈ ತಿದ್ದುಪಡಿಯನ್ನು ತಿರಸ್ಕರಿಸುವುದಿದ್ದರೆ, ಅದನ್ನು ಮತ ಚಲಾವಣೆಯ ಮೂಲಕ ಹೆಚ್ಚಿನ ಸಂತುಷ್ಟತೆಯಿಂದ ತಿರಸ್ಕರಿಸಬೇಕೆಂಬುದು ನನ್ನ ಭಾವನೆ.

**ಮಾನ್ಯ ಸಭಾಧ್ಯಕ್ಷರು:** ಮುಂದೆ ಯಾವುದೇ ಭಾಷಣವು ಅವಶ್ಯವೆಂದು ನಾನು ಊಹಿಸುವುದಿಲ್ಲ.

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೨೫.

** ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೨೮.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಿತ್ರರ ಪ್ರಸ್ತಾವನೆಗಳು ತಿಳಿಯಲಾರದಂಥ ವಿಷಯಗಳಿಗೆ ಅಥವಾ ತಿಳಿಯದೇ ಇದ್ದ ವಿಷಯಗಳಿಗೆ ಸಂಭವಿಸಿವೆಯೇ ಎಂದು ನಾನು ಸರಿಯಾಗಿ ಅರ್ಥ ಮಾಡಿಕೊಳ್ಳಲಾರೆ. ಒಂದು ವೇಳೆ ಅವು ತಿಳಿಯದೇ ಇದ್ದವುಗಳಾಗಿದ್ದರೆ, ನಾವು ನಮ್ಮ ಸಮಯವನ್ನು ಹಾಳು ಮಾಡಿದ್ದೇವೆ. ಆದರೆ ಅವು ತಿಳಿಯದೇ ಇದ್ದವುಗಳು ಮತ್ತು ತಿಳಿಯಲಾರದಂಥವುಗಳು ಅಲ್ಲದಿದ್ದರೆ, ಅವುಗಳನ್ನು ನಿರ್ವಹಿಸಲು ನಮಗೆ ಸಾಕಷ್ಟು ಅಧಿಕಾರಗಳಿವೆ. ಯಾವುದೇ ದಾಖಲಾತಿಯೊಂದಿಗೆ ಕಾಳಜಿ ವಹಿಸುವುದೇಕೆ?

**ಮಾನ್ಯ ಸಭಾಧ್ಯಕ್ಷರು:** ನಾನು ಶ್ರೀ ನಜೀರುದ್ದೀನ್ ಅಹ್ಮದ್‌ರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

(ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.)

## ಯಾದಿ ೧– ದಾಖಲಾತಿ ೭೪

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ)**:** ಮಾನ್ಯರೇ ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೭೪ಕ್ಕೆ ಬದಲಾಗಿ, ಕೆಳಗಿನದನ್ನು ಸೇರಿಸಬೇಕು:–

**'೭೪. ಸಾರ್ವಜನಿಕ ಹಿತಾಸಕ್ತಿಗೆ ಅನುಕೂಲವೆಂದು ಕಾನೂನಿನ ಮೂಲಕ ಅಂಥ ನಿರ್ವಹಣೆ ಮತ್ತು ಅಭಿವೃದ್ಧಿಯು ಕೇಂದ್ರದ ನಿಯಂತ್ರಣದಲ್ಲಿರಬೇಕೆಂದು ಸಂಸತ್ತಿನಿಂದ ಘೋಷಣೆ ಮಾಡಿದ ವಿಸ್ತೃತೆಯವರೆಗೆ ಅಂತರ–ರಾಜ್ಯ ನದಿಗಳ ಮತ್ತು ನದಿ ಕೊಲ್ಲಿಗಳ ನಿರ್ವಹಣೆ ಮತ್ತು ಅಭಿವೃದ್ಧಿ.**

**ಶ್ರೀ ಬ್ರಜೇಶ್ವರ್ ಪ್ರಸಾದ್** (ಬಿಹಾರ: ಸಾಮಾನ್ಯ): ಅಧ್ಯಕ್ಷರೇ, ತಮ್ಮ ಅನುಮತಿಯ ಮೇರೆಗೆ, ನನ್ನ ತಿದ್ದುಪಡಿಯನ್ನು ಮಂಡಿಸುವುದಕ್ಕಿಂತ ಮುಂಚೆ ಒಂದು ಮಾತನ್ನು ಹೇಳಬಹುದೇ? ಹೇಗೋ, ಬಹುಶಃ ನನ್ನ ತಪ್ಪಿನಿಂದ ಒಂದು ಶಬ್ದವು ಈ ತಿದ್ದುಪಡಿಯಿಂದ ತಪ್ಪಿಸಿಕೊಂಡಿದೆ. "ನಿರ್ವಹಣೆ" ಎಂಬ ಶಬ್ದವನ್ನು ಸೇರಿಸಬೇಕೆಂದು ನಾನು ಬಯಸುತ್ತೇನೆ. ಮಾನ್ಯರೇ, ನಾನು ವಿನಂತಿಪೂರ್ವಕವಾಗಿ ಹೀಗೆ ಮಂಡಿಸುತ್ತೇನೆ:–

"ತಿದ್ದುಪಡಿಗಳ ಯಾದಿಯ ತಿದ್ದುಪಡಿ ೩೫೬೩ರಲ್ಲಿ ಯಾದಿ ೧ರ ಪ್ರಸ್ತಾವಿತ ದಾಖಲಾತಿ ೭೪ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

'೭೪. ಅಂತಾರಾಜ್ಯ ನದಿಗಳ ಮತ್ತು ಅಂತಾರಾಜ್ಯ ನೌಕಾಮಾರ್ಗ ನಿರ್ವಹಣೆ ಮತ್ತು ಅಭಿವೃದ್ಧಿ, ಪ್ರವಾಹ ನಿಯಂತ್ರಣ, ನೀರಾವರಿ, ನೌಕಾಸಾರಿಗೆ ಮತ್ತು ಜಲ ವಿದ್ಯುಚ್ಛಕ್ತಿಗಳನ್ನು ಒಳಗೊಂಡು ಮತ್ತು ಇತರ ಉದ್ದೇಶಗಳಿಗಾಗಿ, ಎಲ್ಲಿ ಅಂಥ ಅಭಿವೃದ್ಧಿ ಕೇಂದ್ರದ ನಿಯಂತ್ರಣದಲ್ಲಿರುವುದನ್ನು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಆವಶ್ಯಕವೆಂದು ಸಂಸತ್ತು ಕಾನೂನಿನ ಮೂಲಕ ಘೋಷಣೆ ಮಾಡಿರುತ್ತದೆಯೋ ಅವುಗಳಿಗೆ ಮಾತ್ರ."

ಮಾನ್ಯರೇ, ನಾನು ಒಂದೇ ಟಿಪ್ಪಣಿಯನ್ನು ಮಂಡಿಸುತ್ತೇನೆ. ಅದೇನೆಂದರೆ ನನ್ನ ಈ ತಿದ್ದುಪಡಿಯು ಡಾ. ಅಂಬೇಡ್ಕರ್ ಅವರು ಮಂಡಿಸಿದ ತಿದ್ದುಪಡಿಗಿಂತ ಹೆಚ್ಚು ಸಮಗ್ರವಾಗಿದೆ.

* * *

---

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೩೦.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೇಳಬಯಸುವುದೇನೆಂದರೆ, ಶ್ರೀ ಬ್ರಜೇಶ್ವರ್ ಪ್ರಸಾದ್ ಅವರು ಏನೇನೆಲ್ಲಾ ಸೇರಿಸಲು ಬಯಸುತ್ತಾರೆಯೋ ಅದನ್ನೆಲ್ಲ ನನ್ನ ತಿದ್ದುಪಡಿಯಲ್ಲಿ ಸೇರಿಸಲಾಗಿದೆ. ಆದ್ದರಿಂದ ಅದನ್ನು ಸ್ವೀಕರಿಸುವ ಅಗತ್ಯವಿಲ್ಲ.

**[ಶ್ರೀ ಬ್ರಜೇಶ್ವರ್ ಪ್ರಸಾದ್ ತಿದ್ದುಪಡಿಯನ್ನು ಹಿಂದಕ್ಕೆ ಪಡೆದರು. ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ದಾಖಲಾತಿ ೭೪, ತಿದ್ದುಪಡಿ ಮಾಡಿದಂತೆ, ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೭೫

**[ದಾಖಲಾತಿ ೭೫ಕ್ಕೆ ಶ್ರೀ ನಜೀರುದ್ದೀನ್ ಅಹ್ಮದ್‌ರು ಮಂಡಿಸಿದ ತಿದ್ದುಪಡಿಯನ್ನು ಡಾ. ಅಂಬೇಡ್ಕರ್ ಅವರು ಒಪ್ಪಿಕೊಳ್ಳಲಿಲ್ಲ. ಆದ್ದರಿಂದ ಅದು ಸದನದಿಂದ ತಿರಸ್ಕೃತಗೊಂಡಿತು. ದಾಖಲಾತಿ ೭೫, ತಿದ್ದುಪಡಿ ಮಾಡಿದಂತೆ, ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೭೬

*__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ:

"ಯಾದಿ ೧ರ ದಾಖಲಾತಿ ೭೬ಕ್ಕೆ ಬದಲಾಗಿ, ಕೆಳಗಿನ ದಾಖಲಾತಿಯನ್ನು ಸೇರಿಸಬೇಕು:–

**'೭೬. ಕೇಂದ್ರ ನಿಯೋಗಗಳಿಂದ ಉಪ್ಪಿನ ತಯಾರಿಕೆ, ಸರಬರಾಜು ಹಾಗೂ ವಿತರಣೆ, ಇತರ ನಿಯೋಗಗಳಿಂದ ಉಪ್ಪಿನ ತಯಾರಿಕೆ, ಸರಬರಾಜು ಹಾಗೂ ವಿತರಣೆಯ ನಿರ್ವಹಣೆ ಹಾಗೂ ನಿಯಂತ್ರಣ.' "**

**[ದಾಖಲಾತಿ ೭೬ನ್ನು, ತಿದ್ದುಪಡಿ ಮಾಡಿದಂತೆ, ಕೇಂದ್ರ ಯಾದಿಗೆ ಸೇರಿಸಲಾಯಿತು.]**

**ಶ್ರೀ ಮಹಾವೀರ್ ತ್ಯಾಗಿ** (ಸಂಯುಕ್ತ ಪ್ರಾಂತ; ಸಾಮಾನ್ಯ): ಮಾನ್ಯರೆ, ನೀವು ಪ್ರಶ್ನೆಯನ್ನು ಮತಕ್ಕೆ ಇಟ್ಟಾಗ, ಡಾ. ಅಂಬೇಡ್ಕರ್ ಅವರು 'ಆಯ್ಸ್'ನ್ನು ಧ್ವನಿವರ್ಧಕದ ಮೇಲೆಯೇ ಹೇಳುತ್ತಾರೆ; ಹಾಗಾಗಿ 'ಆಯ್ಸ್' ಅನಾವಶ್ಯಕವಾಗಿ ಹೆಚ್ಚಿನ ಧ್ವನಿಯನ್ನು ಹೊಂದುತ್ತಿವೆ.

## ದಾಖಲಾತಿ ೭೯

**__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಮಾನ್ಯರೇ, ದಾಖಲಾತಿ ೭೯ಕ್ಕೆ ಸಂಬಂಧಿಸಿದಂತೆ, ನಾನು ಒಂದು ಅವಗಾಹನೆಯನ್ನು ಮಾಡಬೇಕಾಗಿದೆ. ಒಂದು ವೇಳೆ ದಾಖಲಾತಿ ೭೯ ಯಾದಿ ೧ರಲ್ಲಿ ಉಳಿದರೆ ಕೇಂದ್ರವು ಸ್ಟಾಕ್ ಮಾರುಕಟ್ಟೆಯ ಮತ್ತು ಭವಿಷ್ಯತ್ತಿನ ಮಾರುಕಟ್ಟೆಯ ಮೇಲೆ ವಿಧಿಸಲಾದ ಕಂದಾಯ ಮತ್ತು ಸ್ಟ್ಯಾಂಪು ಕಂದಾಯವನ್ನು ಹೊರತುಪಡಿಸಿ, ಅವುಗಳ ವ್ಯಾಪಾರ–ವ್ಯವಹಾರಗಳ ಮೇಲಿನ ಕಂದಾಯಗಳ ಮೊಬಲಗನ್ನು ಬಳಸಿಕೊಳ್ಳಲು ತೆರೆದಿಟ್ಟಂತೆ ಆಗುತ್ತದೆ ಎಂಬ ಭಾವನೆಯನ್ನು ಸದನದ ಕೆಲವು ಸದಸ್ಯರು ಹೊಂದಿದ್ದಾರೆ. ಸ್ಟಾಕ್ ಮಾರುಕಟ್ಟೆ ಹಾಗೂ ಭವಿಷ್ಯತ್ತಿನ ಮಾರುಕಟ್ಟೆಯನ್ನು ಯಾದಿ Iರಲ್ಲಿಡುವುದರಿಂದ, ಈ ದಾಖಲಾತಿಯಲ್ಲಿ ವಿಧಿಸಲಾದ ಕಂದಾಯದ ಯಾವುದೇ ಭಾಗವನ್ನು

* ಸಿ.ಎ.ಡಿ. ಸಂ. IX, ೩೧ನೇ ಆಗಸ್ಟ್ ೧೯೪೯, ಪುಟ ೮೩೧.

** ಅದೇ ಪುಟ ೮೩೨.

ಕೇಂದ್ರವು ಬಳಸಿಕೊಳ್ಳುವ ಹಕ್ಕನ್ನು ಹೊಂದಿರಬೇಕೆನ್ನುವ ಯಾವುದೇ ಉದ್ದೇಶವನ್ನು ಕರಡು ಸಮಿತಿಯು ಹೊಂದಿಲ್ಲವೆಂದು ನಾನು ಸ್ಪಷ್ಟಪಡಿಸಬಯಸುತ್ತೇನೆ. ತತ್ಪರಿಣಾಮವಾಗಿ, ಎಲ್ಲ ತರಹದ ಸಂದೇಹಗಳನ್ನು ನಿವಾರಿಸುವ ಸಲುವಾಗಿ, ಕರಡು ಸಮಿತಿಯು ವಿಧಿ ೨೫೦ನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸುತ್ತದೆ, ಮತ್ತು ಅದರಲ್ಲಿ ಕಂದಾಯದ ಕೆಲ ವರಮಾನವನ್ನು ಪ್ರಾಂತ್ಯಗಳಿಗೆ ವಿತರಿಸಬೇಕೆಂದು ಹೇಳಲಾಗಿದೆ. ನಾವು ಏನನ್ನು ಮಾಡಲು ಪ್ರಸ್ತಾಪಿಸುತ್ತೇವೆಂದರೆ, ಪರಿಣಾಮಾತ್ಮಕ ನಿಯಮಾಂಶವಾಗಿ, (ಎ)ದಿಂದ (ಡಿ)ವರೆಗೆ ಕಂದಾಯದ ವಿತರಣೆಯನ್ನು ವಿವರಿಸುವುದನ್ನು ಒಳಗೊಂಡಿರುವ ವಿಧಿ ೨೫೦ಕ್ಕೆ 'ಸ್ಟಾಕ್ ಮಾರುಕಟ್ಟೆಯ ಹಾಗೂ ಭವಿಷ್ಯತ್ತಿನ ಮಾರುಕಟ್ಟೆಯ ಯಾವುದೇ ಕಂದಾಯದ ವರಮಾನಗಳು' ಎಂಬುದನ್ನು ಸೇರಿಸುವುದು. ಇದರಿಂದಾಗಿ ಅವುಗಳೂ ಸಹ ಪ್ರಾಂತ್ಯಗಳಲ್ಲಿ ವಿತರಣೆಗೆ ಒಳಪಟ್ಟಿರುತ್ತವೆ. ಅದು ಖಂಡಿತವಾಗಿಯೂ ಕೆಲವು ಸದಸ್ಯರು ಹೊಂದಿರುವ ಶಂಕೆಯಾದ ಈ ದಾಖಲಾತಿಯು ಒಂದು ವೇಳೆ ಯಾದಿ ೧ರಲ್ಲಿ ಉಳಿದರೆ ಕಂದಾಯಗಳನ್ನು ಬಳಸಲು ಕೇಂದ್ರಕ್ಕೆ ಅಧಿಕಾರ ನೀಡಿದಂತಾಗುತ್ತದೆ ಎಂಬುದನ್ನು ನಿವಾರಿಸುತ್ತದೆ. ಅದು ಉದ್ದೇಶವಾಗಿರುವುದಿಲ್ಲ. ಅಲ್ಲಿ ದಾಖಲಾತಿಯು ಪೂರ್ತಿ ಶಾಸನಾತ್ಮಕವಾಗಿರುತ್ತದೆ. ಅದು ಯಾವುದೇ ರೀತಿಯ ಹಣಕಾಸಿನ ಆಂತರಿಕತೆಗಳನ್ನು ಹೊಂದಿರುವುದಿಲ್ಲ.

**ಪಂಡಿತ್ ಹೃದಯನಾಥ್ ಕುಂಝ್ರು** (ಸಂಯುಕ್ತ ಪ್ರಾಂತಗಳು: ಸಾಮಾನ್ಯ): ಇದಕ್ಕೆ ಸಂಬಂಧಿಸಿದಂತೆ ಡಾ. ಅಂಬೇಡ್ಕರ್ ಅವರು ವಿಧಿ ೨೭೭ಕ್ಕೆ ಬದಲಾವಣೆಯನ್ನು ತರಲು ಉದ್ದೇಶಿಸಿದ್ದಾರೆಯೇ ಎಂದು ನಾನು ಕೇಳಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸರಿ, ವಿಷಯವನ್ನು ಅನ್ಯೋನ್ಯಗೊಳಿಸಲು ಪರಿಣಾಮಾತ್ಮಕ ನಿಯಮಾಂಶವನ್ನು ತರುವುದರ ಆವಶ್ಯಕತೆಯ ಬಗ್ಗೆ ನಾನು ಪರಿಗಣಿಸುತ್ತೇನೆ.

[**ದಾಖಲಾತಿ ೭೯ನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.**]

## ದಾಖಲಾತಿ ೮೧

*ಶ್ರೀ ಬ್ರಜೇಶ್ವರ್ ಪ್ರಸಾದ್:** ಮಾನ್ಯ ಅಧ್ಯಕ್ಷರೇ, ನಾನು ಹೀಗೆ ಮಂಡಿಸಲು ಬೇಡುತ್ತೇನೆ:

"ತಿದ್ದುಪಡಿಗಳ ಯಾದಿಯ ತಿದ್ದುಪಡಿ ಸಂ. ३೫೭೨ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

"ಯಾದಿ Iರ ದಾಖಲಾತಿ ೮೧ಕ್ಕೆ ಬದಲಾಗಿ ಕೆಳಗಿನದನ್ನು ಸೇರಿಸಬೇಕು:–

**"೮೧. ಕೃಷಿ ಭೂಮಿಯನ್ನು ಒಳಗೊಂಡಂತೆ, ಸ್ವತ್ತಿನ ವಾರಸಿಗೆ ಸಂಬಂಧಿಸಿದ ಕರ್ತವ್ಯಗಳು."**

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಪ್ರಾಂತೀಯ ಪ್ರಧಾನಿಗಳ ಸಮ್ಮೇಳನದಲ್ಲಿ ಈ ವಿಷಯವನ್ನು ಪರಿಗಣಿಸಲಾಗಿದೆ ಎಂದು ನಾನು ಹೇಳಲು ಬಯಸುತ್ತೇನೆ. ಅವರ ಅಭಿಮತವೇನೆಂದರೆ, ತತ್ವವು ಒಳ್ಳೆಯದಾಗಿದ್ದರೂ ಸಹಿತ ಸದ್ಯಕ್ಕೆ ಅಂಥ ತೀಕ್ಷ್ಣ ಬದಲಾವಣೆಯನ್ನು ಮಾಡಲು ಅವರು ತಯಾರಾಗಿಲ್ಲ.

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೩೫.

** ಅದೇ, ಪುಟ ೮೩೬.

**[ಶ್ರೀ ಬ್ರಜೇಶ್ವರ್ ಪ್ರಸಾದ್‌ರ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲಾಯಿತು, ಮತ್ತು ದಾಖಲಾತಿ ೮೧ನ್ನು ಕೇಂದ್ರ ಯಾದಿಗೆ ಸೇರಿಸಲಾಯಿತು.]**

## ದಾಖಲಾತಿ ೮೩

**ಮಾನ್ಯ ಅಧ್ಯಕ್ಷರು:** ಇದಕ್ಕೆ ಎರಡು ತಿದ್ದುಪಡಿಗಳಿರುತ್ತವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ.

"ಯಾದಿ ೧ರ ದಾಖಲಾತಿ ೮೩ರಲ್ಲಿ 'ರೈಲ್ವೆ' ಶಬ್ದದ ನಂತರ ಅಲ್ಪವಿರಾಮ ಮತ್ತು 'ಸಮುದ್ರ' ಎಂಬ ಪದವನ್ನು ಸೇರಿಸಬೇಕು."

ಉದ್ದೇಶವೇನೆಂದರೆ, ಅಲಕ್ಷ್ಯತೆಯಿಂದ ಬಿಟ್ಟು ಬಿಟ್ಟ "ಸಮುದ್ರ" ಎಂಬ ಪದವನ್ನು ಸೇರಿಸುವುದರಿಂದ ದಾಖಲಾತಿಯನ್ನು ಸಂಪೂರ್ಣಗೊಳಿಸುವುದಾಗಿದೆ.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಡಾ. ದೇಸ್‌ಮುಖ್ ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳಲಾರೆನು. ಕಾರಣವೆಂದರೆ, 'ಭೂಮಿ' ಎಂಬ ಪದವನ್ನು ಸೇರಿಸಿದ ಪಕ್ಷದಲ್ಲಿ 'ರಸ್ತೆ' ಮೂಲಕ ಒಯ್ಯುವಾಗ ಸರಕುಗಳು ಮತ್ತು ಪ್ರಯಾಣಿಕರ ಮೇಲೆ ಸಹ ಸೀಮಾಂತ ತೆರಿಗೆಯನ್ನು ವಿಧಿಸಲು ಕೇಂದ್ರ ಸರ್ಕಾರಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ನಮ್ಮ ಯೋಜನೆಯ ಪ್ರಕಾರ ಸೀಮಾಂತ ತೆರಿಗೆಯು ರಸ್ತೆ ಮೂಲಕ ಸಾಗಿಸಲಾಗುವ ಸರಕುಗಳ ಮತ್ತು ಪ್ರಯಾಣಿಕರ ಮೇಲೆ ವಿಧಿಸಲಾಗುವ ಸೀಮಾಂತ ತೆರಿಗೆಯು ಆಕಸ್ಮಿಕವಾಗಿ ವಿವಿಧ ರಾಜ್ಯಗಳ ಅಧಿಕಾರ ಕ್ಷೇತ್ರಕ್ಕೆ ಸೇರಿದ ವಿಷಯ. ಆದ್ದರಿಂದ ಅವರ ತಿದ್ದುಪಡಿಯನ್ನು ಈ ಪ್ರಮುಖ ಕಾರಣಕ್ಕಾಗಿಯೇ ನಾನು ಒಪ್ಪಿಕೊಳ್ಳುವುದಿಲ್ಲ. ಅವರು ಇನ್ನೊಂದು ಸಂದರ್ಭದಲ್ಲಿ ಇದೇ ಬಗೆಯ ತಿದ್ದುಪಡಿಯನ್ನು ಮಂಡಿಸಲು ಪ್ರಯತ್ನಿಸಿದ್ದು ನಿಮಗೆ ನೆನಪಿರಬಹುದು. ಆ ತಿದ್ದುಪಡಿಯನ್ನು ಸದನವು ತಿರಸ್ಕರಿಸಿದ್ದುಂಟು.

ಇನ್ನು ಶ್ರೀ ಸಿಧ್ವ ಅವರಿಗೆ ಸಂಬಂಧಿಸಿದ ವಿಚಾರ, ಹೋದ ಸಲ ಆ ವಿಷಯವನ್ನು ಪುನಃ ಚರ್ಚಿಸಿದ್ದುಂಟು. ಆ ತೆರಿಗೆಗಳನ್ನು ಕೇಂದ್ರ ಸರ್ಕಾರವು ವಿಧಿಸಲು ಅವಕಾಶವಿದ್ದಾಗ್ಯೂ, ಆ ಎಲ್ಲ ತೆರಿಗೆಗಳಿಂದ ಬರತಕ್ಕ ಹುಟ್ಟುವಳಿಯನ್ನು ವಿವಿಧ ಪ್ರಾಂತ್ಯಗಳಲ್ಲಿ ವಿತರಣೆ ಮಾಡಬೇಕಾಗುತ್ತದೆ ಎಂದು ನಾನು ಹೇಳಿದ್ದೆನು. ಕೇಂದ್ರ ಸರ್ಕಾರವು ತನಗೆ ಯಾವುದೇ ಹಿತಾಸಕ್ತಿ ಇದೆ ಎಂದು ಕ್ಲೇಮು ಮಾಡುವಂತಿಲ್ಲ. ಪ್ರಾಂತ್ಯಗಳ ಈ ಹುಟ್ಟುವಳಿಗಳನ್ನು ತಮಗೆ ಪ್ರಾಪ್ತವಾದ ತರುವಾಯ ಅವುಗಳ ಯಾವುದೇ ಭಾಗವನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಬೇಕೆಂದು ಇಷ್ಟಪಟ್ಟರೆ, ಆ ವಿಚಾರದಲ್ಲಿ ಆ ಸರ್ಕಾರಗಳಿಗೆ ಸ್ವಾತಂತ್ರ್ಯ ಇರುತ್ತದೆ. ಸ್ಥಳೀಯ ಪ್ರಾಧಿಕಾರಕ್ಕೆ ಲಭ್ಯವಾಗಬಹುದಾದ ತೆರಿಗೆಯನ್ನು ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಈ ಸಂವಿಧಾನದಲ್ಲಿ ಯಾವ ವ್ಯವಸ್ಥೆಯನ್ನು ಮಾಡಲು ಸಾಧ್ಯವಾಗಲಾರದು.

ಈ ವಿಚಾರ ರಾಜ್ಯ ಮತ್ತು ಸ್ಥಳೀಯ ಪ್ರಾಧಿಕಾರ ಇವುಗಳಿಗೆ ಪರಸ್ಪರವಾಗಿ ಸಂಬಂಧಪಟ್ಟ ವಿಚಾರ. ಆದಕಾರಣ ಈಗ ಈ ನಮೂದನ್ನು ತಿದ್ದುಪಡಿ ಮಾಡುವ ಮೂಲಕವಾಗಲಿ ಅಥವಾ ಅದನ್ನು ಪಟ್ಟಿ IIಕ್ಕೆ ವರ್ಗಾಯಿಸುವ ಮೂಲಕವಾಗಲಿ ಅದನ್ನು ವ್ಯತ್ಯಾಸಗೊಳಿಸಲು ಸಾಧ್ಯವಿಲ್ಲ.

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೩೭.

(ಶ್ರೀ ಸಿಧ್ವ ಮತ್ತು ಶ್ರೀ ದೇಶ್‌ಮುಖ್ ಅವರಿಬ್ಬರೂ ತಮ್ಮ ತಿದ್ದುಪಡಿಯನ್ನು ಹಿಂತೆಗೆದುಕೊಂಡರು)

'ಪಟ್ಟಿ Iರ ೮೩ನೆಯ ನಮೂದಿನಲ್ಲಿ 'ರೈಲ್ವೆ' ಎಂಬ ಪದವನ್ನೂ ಒಂದು ಅಲ್ಪ ವಿರಾಮವನ್ನು ಮತ್ತು 'ಸಮುದ್ರ' ಎಂಬುದನ್ನು ಸೇರಿಸಬೇಕೆಂಬ"

**[ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು ಮತ್ತು ಹಾಗೆ ತಿದ್ದುಪಡಿಯಾದ ನಮೂದು ೮೩ನ್ನು ಒಕ್ಕೂಟದ ಪಟ್ಟಿಯಲ್ಲಿ ಸೇರಿಸಲಾಯಿತು.]**

## ನಮೂದು ೮೬

(ತಿದ್ದುಪಡಿ ೫೪ನ್ನು ಮಂಡಿಸಲಿಲ್ಲ)

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮೀ, ನಾನು "ಪಟ್ಟಿ Iರ ೮೬ನೆಯ ನಮೂದಿನಲ್ಲಿರುವ" ಎಂಬ ಪದಗಳನ್ನು ತೆಗೆದುಹಾಕಬೇಕು ಎಂಬ ಪ್ರಸ್ತಾಪವನ್ನು ಮಂಡಿಸುತ್ತೇನೆ.

ಪ್ರಸ್ತಾವಿತ ತಿದ್ದುಪಡಿ ಮೂಲಕ ನಿದ್ರಾಜನಕ ಮಾದಕೇತರ ದ್ರವ್ಯಗಳನ್ನು ಒಕ್ಕೂಟದ ಪಟ್ಟಿಯಲ್ಲಿ ಸೇರಿಸಲಾಯಿತು.

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ಸದ್ಯಕ್ಕೆ ಈ ನಮೂದು ಪ್ರಾಂತೀಯ ಪಟ್ಟಿಯಲ್ಲಿ ಇರುವುದು ನಿಜವೇ. ಈ ಸಂಬಂಧದಲ್ಲಿ ಎರಡು ಸಂಗತಿಗಳನ್ನು ಗಮನಿಸಬೇಕಾಗುತ್ತದೆ. ಒಂದನೆಯ ಸಂಗತಿ ಎಂದರೆ, ಈವರೆಗೆ ಯಾವ ಪ್ರಾಂತ್ಯವೂ ಈ ಬಾಬುಗಳ ಮೇಲೆ ತೆರಿಗೆ ವಿಧಿಸಿಲ್ಲ. ಆದ್ದರಿಂದ ಪ್ರಾಂತ್ಯಗಳು ತಮ್ಮ ಉದ್ದೇಶಗಳಿಗಾಗಿ ಇವುಗಳ ಪ್ರಯೋಜನವನ್ನು ಪಡೆದುಕೊಂಡಿಲ್ಲ. ಇನ್ನು ಎರಡನೆಯ ಸಂಗತಿಯೆಂದರೆ, ಈ ವಿಷಯವು ಸಮವರ್ತಿ ಪಟ್ಟಿಗೆ ಸೇರಿಸಿದರೂ ಮತ್ತು ಆ ಬಗ್ಗೆ ರೆವಿನ್ಯೂ ಅಂತರವಿರುವ ಆ ವಿಷಯದ ಬಗ್ಗೆ ಕೇಂದ್ರ ಸರ್ಕಾರವು ಶಾಸನ ರಚನೆ ಮಾಡಿದರೂ, ಸಂವಿಧಾನದ ಅನುಚ್ಛೇದ ೨೫೩ರ (೨)ನೆಯ ಖಂಡದ ಅಡಿಯಲ್ಲಿ ಅದನ್ನು ವಿತರಣೆ ಮಾಡಲು ಅವಕಾಶವಿರುತ್ತದೆ. ಪರಿಣಾಮವಾಗಿ, ಪ್ರಾಂತ್ಯಗಳ ಮಟ್ಟಿಗೆ ಆ ಮೂಲಕ ಯಾವುದೇ ಹಣಕಾಸು ವಿಚಾರದಲ್ಲಿ ಯಾವುದೇ ನಷ್ಟವಾಗಲಾರದು. ಆಗ, ನಮಗೆ ಇಡೀ ದೇಶದಲ್ಲಿ ಜಾರಿಯಾಗಬೇಕಾದ ಅಖಿಲ ಭಾರತ ಮಟ್ಟದ ಕಾಯಿದೆಯು ನಮಗೆ ಅಗತ್ಯವಾಗುತ್ತದೆ. ಆದರೆ ನಾನ್ ನಾರ್ಕೋಟಿಕ್ ಡ್ರಗ್ಸ್‌ಗಳನ್ನು ಸಮವರ್ತಿ ಪಟ್ಟಿಯಲ್ಲಿ..... ಸೇರಿಸಿದ ಹೊರತು ಅಂಥ ಕಾನೂನು ರಚನೆ ಸಾಧ್ಯವಾಗಲಾರದು. ಆ ಮೂಲಕ, ಪ್ರಾಂತ್ಯಗಳು ತಮ್ಮ ಇಷ್ಟಾನುಸಾರ ಕುರಿತು ಅಂಥ ಈ ಡ್ರಗ್ಸ್‌ಗಳನ್ನು ಸ್ಥಳೀಯ ಶಾಸನ ರಚನೆ ಮಾಡುವ ಆ ಸರ್ಕಾರಗಳ ಅಧಿಕಾರವನ್ನು ಉಳಿಸಿದಂತೆ ಆಗುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಗೌರವಾನ್ವಿತ ಡಾ. ಅಂಬೇಡ್ಕರ್ ಅವರು ಮಂಡಿಸಿದ ತಿದ್ದುಪಡಿಯನ್ನು ನಾನು ಮತಕ್ಕೆ ಹಾಕುತ್ತೇನೆ. ವಿಷಯವೆಂದರೆ:

**[ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ಹಾಗೆ ತಿದ್ದುಪಡಿಯಾದ ನಮೂದು ೮೪ ಅನ್ನು ಒಕ್ಕೂಟದ ಪಟ್ಟಿಗೆ ಸೇರಿಸಲಾಯಿತು.]**

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೩೮.

** ಅದೇ, ಪು. ೮೩೯.

## ನಮೂದು ೮೬–ಎ

*ಶ್ರೀ **ಎಚ್. ವಿ. ಕಾಮತ್:** ನಾನು ಬಳಸಿದ ವೈದ್ಯಕೀಯ ಹಾಗೂ ವೈಜ್ಞಾನಿಕ ಪದಾವಳಿಯನ್ನು ತಪ್ಪಾಗಿ ತಿಳಿದುಕೊಳ್ಳಲಾಗಿದೆಯೇ ಹೇಗೆ ಎಂದು ನನಗೆ ಗೊತ್ತಾಗಲಿಲ್ಲ. ಈ ಪದಾವಳಿಯನ್ನು ಮೇಲಣ ಔಷಧೋಪಚಾರದ ಶಾಸ್ತ್ರ ಮಾನಕ ಗ್ರಂಥದಲ್ಲಿ ನೋಡಬಹುದಾಗಿದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ನಮಗೆ ಅಧಿಕಾರವುಂಟು. ಅದು ನಮೂದು ೨೦ರ ಅಡಿಯಲ್ಲಿ ಬರುತ್ತದೆ. ಈ ನಮೂದನ್ನು ನಾವು ಸಮವರ್ತಿ ಪಟ್ಟಿಯಲ್ಲಿ ಸೇರಿಸಿದ್ದೇವೆ.

**(ಶ್ರೀ ಎಚ್. ವಿ. ಕಾಮತ್ ಅವರ ತಿದ್ದುಪಡಿಯನ್ನು ನಕಾರಗೊಳಿಸಲಾಯಿತು.)**

## ನಮೂದು ೮೮ಎ

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಿತ್ರರು ಯುನೈಟೆಡ್ ಸ್ಟೇಟ್ಸ್‌ನ ಸುಪ್ರೀಂ ಕೋರ್ಟ್‌ನ ೪ ಪುಟಗಳ ಮುದ್ರಿತ ತೀರ್ಪನ್ನು ಓದುವುದಿಲ್ಲ ಎಂದು ನಾನು ಆಶಿಸುತ್ತೇನೆ. ಅದನ್ನು ಪ್ರತಿಯೊಬ್ಬರಿಗೂ ತೋರಿಸಲಾಗಿದೆ.

**ಶ್ರೀ ದೇಶಬಂಧು ಗುಪ್ತ:** ನನ್ನ ಸ್ನೇಹಿತರು ಇಡೀ ತೀರ್ಪನ್ನು ಓದಲಾಗುವುದು ಎಂದು ಪೂರ್ವಭಾವನೆ ಮಾಡುವುದು ಸರಿಯಲ್ಲ. ಇನ್ನು, ಕೆಲವು ಉದ್ಧರಣಗಳನ್ನು ಓದುವುದು ಅಗತ್ಯವಾದರೆ, ನಾನು ಓದಿಯೇ ಬಿಡುತ್ತೇನೆ. ನಾನು ಎತ್ತಿದ ಅಂಶಕ್ಕೆ ಸಂಬಂಧಪಟ್ಟ ಭಾಗಗಳನ್ನು ಕುರಿತು ಮಾತ್ರವೇ ನಾನು ಉಲ್ಲೇಖಿಸುತ್ತಿದ್ದೇನೆ. ಆ ತೆರಿಗೆಯು ಫೆಡರಲ್ ಸಂವಿಧಾನವನ್ನು ಎರಡು ವಿವರಗಳಲ್ಲಿ ಉಲ್ಲಂಘಿಸುವುದು ಎಂಬ ಕಾರಣಕ್ಕಾಗಿ ಆ ಪ್ರಕಾಶಕರು ಆಕ್ಷೇಪಿಸಿದ್ದುಂಟು ಎಂದು ನಾನು ಹೇಳಬಯಸುತ್ತೇನೆ. ಕಾರಣಗಳ ಪೈಕಿ (೧)ನೆಯದೆಂದರೆ, ಅದು ಹದಿನಾಲ್ಕನೆಯ ತಿದ್ದುಪಡಿಯಲ್ಲಿ ಒಳಗೊಂಡ ಯಥಾವಿಧಿ ಪ್ರಕ್ರಿಯಾ ಖಂಡವನ್ನು ಉಲ್ಲಂಘಿಸಿ ಪತ್ರಿಕಾ ಸ್ವಾತಂತ್ರ್ಯವನ್ನು ಸಂಕ್ಷೇಪಗೊಳಿಸುತ್ತದೆ ಮತ್ತು (೨)ನೆಯ ಕಾರಣವೆಂದರೆ ಅದೇ ತಿದ್ದುಪಡಿಯನ್ನು ಉಲ್ಲಂಘಿಸಿ ಅಪೀಲುದಾರರಿಗೆ ಕಾನೂನಿನ ಸಮಾನ ರಕ್ಷಣೆಯನ್ನು ನಿರಾಕರಿಸುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನೂ ಸಹ ಒಂದು ಕ್ರಿಯಾಲೋಪವನ್ನು.....

**ಮಿ. ನಜೀರುದ್ದೀನ್ ಅಹ್ಮದ್:** ಏಕ ಕಾಲಕ್ಕೆ ಎರಡು ಕ್ರಿಯಾಲೋಪಗಳು ಇರುವುದು ಸಾಧ್ಯವಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಕ್ರಿಯಾಲೋಪವು ಸಾಮಾನ್ಯವಾದುದು. ನನ್ನ ಸ್ನೇಹಿತರು ಈ ತಿದ್ದುಪಡಿಗೆ ಸಹಿ ಹಾಕಿದ್ದಾರಲ್ಲ. ಅವರ ಹೆಸರನ್ನು ಇಲ್ಲಿ ಶ್ರೀ ಸೀತಾರಾಮ ಜಾಜೂ ಅವರ ಹೆಸರಿನ ಕೆಳಗೆ ನಮೂದಿಸಲಾಗಿದೆ. ಆ ನನ್ನ ಸ್ನೇಹಿತರು ತಿದ್ದುಪಡಿಯ ಬಗ್ಗೆ ಈಗಾಗಲೇ ನೋಟೀಸು ಕೊಟ್ಟಿದ್ದು ಈಗ ಅದು ಕ್ರಮಬದ್ಧ ಆಗಿಲ್ಲ ಎಂದು ಹೇಳಬಹುದೇ ಹೇಗೆ?

**ಶ್ರೀ ದೇಶಬಂಧು ಗುಪ್ತ:** ನನ್ನ ಸ್ನೇಹಿತರು ತಮ್ಮ ತಿದ್ದುಪಡಿಯನ್ನು ತಾವೇ ನೂರು ಸಲ ತಿದ್ದುಪಡಿ ಮಾಡಿದ್ದಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ತಮ್ಮ ತಿದ್ದುಪಡಿಗೆ ಒಂದು ತಿದ್ದುಪಡಿಯನ್ನು ಸೂಚಿಸುವುದಾದರೆ, ಅದು ಕ್ರಮಬದ್ಧವಾಗುತ್ತದೆ.

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೪೦.

** ಅದೇ, ಪು. ೮೪೧.

**ಶ್ರೀ ದೇಶಬಂಧು ಗುಪ್ತ:** ನನ್ನ ಸ್ನೇಹಿತರು ತಮ್ಮ ಅಭಿಪ್ರಾಯವನ್ನು ಅನೇಕ ಬಾರಿ ಬದಲಾಯಿಸಿದ್ದಾರಲ್ಲ, ಹಾಗೆಯೇ ನನಗೂ ಹಕ್ಕುಂಟು ನನ್ನ ಅಭಿಪ್ರಾಯವನ್ನು ಬದಲಾಯಿಸಲು.

**ಮಾನ್ಯ ಸಭಾಧ್ಯಕ್ಷರು:** ಅವರು ನೋಟೀಸಿಗೆ ಸಹಿ ಹಾಕಿದರೋ ಅವರು ೮೮ಎ ಬಗ್ಗೆ ಸಹಿ ಹಾಕಿದರೋ ಹೇಗೆ? ನನಗೆ ಗೊತ್ತಾಗಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರ ಹೆಸರು ಶ್ರೀ ದೇಶಬಂಧು ಗುಪ್ತ.

* * *

***ಮಾನ್ಯ ಸಭಾಧ್ಯಕ್ಷರು:** ಪ್ರಧಾನ ಪ್ರಶ್ನೆಯನ್ನು ಕುರಿತು ನಾನು ಮಾನ್ಯ ಸದಸ್ಯರ ಅಭಿಪ್ರಾಯವನ್ನು ಕೇಳಲು ಇಷ್ಟಪಡುತ್ತೇನೆ. ಅದಕ್ಕೆ ಮುನ್ನ, ಕರಡು ಸಮಿತಿಯು ಈ ಬಾಬನ್ನು ಪುನಃ ಪರಿಶೀಲಿಸಬಹುದೇ ಎಂದು ತಿಳಿಯಲು ಇಷ್ಟಪಡುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ಸದನದಲ್ಲಿ ವ್ಯಕ್ತಗೊಳಿಸಬಹುದಾದ ವಿಭಿನ್ನ ಅಭಿಪ್ರಾಯಗಳನ್ನು ಕೇಳಬಯಸುತ್ತೇವೆ. ತರುವಾಯ ಸದನವು ಅಥವಾ ಸ್ವಾಮೀ, ತಾವು, ಆ ಕೂಡಲೇ ಯಾವುದೇ ನಿರ್ದಿಷ್ಟ ನಿರ್ಣಯವನ್ನು ತಲುಪುವುದು ಸಾಧ್ಯವಿಲ್ಲ ಎಂದು ಮನಗಂಡರೆ, ಆಗ ವ್ಯಕ್ತವಾದ ವಿಭಿನ್ನ ಅಭಿಪ್ರಾಯಗಳ ನಿಮಿತ್ತ, ಇಡೀ ಸದನಕ್ಕೆ ಒಪ್ಪಿಗೆಯಾಗುವಂತಹ ಒಂದು ಸೂಕ್ತಕ್ರಮವನ್ನು ಕರಡು ಸಮಿತಿಯು ಕಂಡುಹಿಡಿಯಬಹುದು ಎಂಬ ಆಶಯದಿಂದ ಈ ವಿಷಯವನ್ನು ಕರಡು ಸಮಿತಿಗೆ ಒಪ್ಪಿಸಬಹುದು ಎಂಬ ಆಶಯದಿಂದ ಈ ವಿಷಯವನ್ನು ಕರಡು ಸಮಿತಿಗೆ ಒಪ್ಪಿಸಬಹುದು. ಆದರೆ ಈಗಿರುವ ರೂಪದಲ್ಲಿರುವ ಅದನ್ನು, ಪುನರ್ ರೂಪಿಸಲು ಪ್ರಯತ್ನಿಸುವುದರಲ್ಲಿ ಅರ್ಥವಿಲ್ಲ ಎಂದು ನನ್ನ ಅನಿಸಿಕೆ. ಇಲ್ಲಿ ನಮ್ಮ ಮುಂದೆ ಖಚಿತವಾದ ತಿದ್ದುಪಡಿಗಳಿವೆ. ಒಂದು ನನ್ನ ಸ್ನೇಹಿತರ ತಿದ್ದುಪಡಿ. ಇನ್ನೊಂದು ನನ್ನ ಸ್ನೇಹಿತ ಮಿ. ಜುಂಜನವಾಲಾರ ತಿದ್ದುಪಡಿ. ಇವೆರಡೂ ನಿರ್ದಿಷ್ಟವಾದ, ಖಚಿತವಾದ ತಿದ್ದುಪಡಿಗಳು.

**ಮಾನ್ಯ ಸಭಾಧ್ಯಕ್ಷರು:** ಪರಿಶೀಲಿಸಬೇಕಾದ ವಿಷಯಗಳು ಅಂಶಗಳು ನಿಜವಾಗಿಯೂ ಎರಡು. ಮೊದಲನೆಯ ಅಂಶವೆಂದರೆ, ಶ್ರೀ ಗೋಯೆಂಕಾ ಅವರು ಪ್ರಸ್ತಾಪಿಸಿದ ತಿದ್ದುಪಡಿಯು ಕ್ರಮಬದ್ಧವಾಗಿದೆಯೇ ಹೇಗೆ ಎಂಬ ಅಂಶ, ನಾವು ಅಂಗೀಕರಿಸಿರುವ ಈ ಹಿಂದಿನ ಅನುಚ್ಛೇದದ ಹಿನ್ನೆಲೆಯಲ್ಲಿ ಕ್ರಮಬದ್ಧವೋ ಹೇಗೆ ಎಂಬ ಅಂಶ. ಇನ್ನು ಎರಡನೆಯ ಅಂಶವೆಂದರೆ...

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ಯಾವುದೇ ಸಂಗತಿಯು ಆಗಲಿಕ್ಕಿಲ್ಲವೆ ಅಥವಾ ಯಾವುದೇ ಸಂಗತಿಯು ಆಗಬಹುದೆ ಎಂಬುದನ್ನು ಆಧರಿಸಿ ಯಾವುದೇ ವಿಷಯವನ್ನು ತೀರ್ಮಾನಿಸುವಂತಿಲ್ಲ ಎಂದು ನಾನು ಹೇಳಬಹುದೇನೋ. ಅದನ್ನು ತೀರ್ಮಾನಿಸಲು ಈ ಸದನವು ಸಕ್ಷಮವಲ್ಲ. ಅದು ನ್ಯಾಯಿಕ ವಿಷಯ. ಈ ಸದನವು ತೀರ್ಮಾನಿಸತಕ್ಕ ವಿಷಯ ಎಂದರೆ ಒಂದೇ. ಪಟ್ಟಿ I, ಪಟ್ಟಿ II ಅಥವಾ ಪಟ್ಟಿ III– ಈ ಪೈಕಿ ಯಾವುದೇ ಪಟ್ಟಿಯಲ್ಲಿ ಸೇರಿಸಲಾದ ನಮೂದುಗಳ ಮೂಲಕ ವೃತ್ತ ಪತ್ರಿಕೆಗಳಿಗೆ ರಕ್ಷಣೆ ಒದಗಿಸಬಹುದೆ ಹೇಗೆ ಎಂಬ ವಿಚಾರ ಅಷ್ಟೇ. ಅವುಗಳಿಗೆ ನಾವು ಈ ನಮೂದುಗಳಿಂದ ವಿನಾಯಿತಿ ಒದಗಿಸಬಯಸುವುದಾದರೆ, ಎಷ್ಟರಮಟ್ಟಿಗೆ ಎಂಬುದು ಸ್ಪಷ್ಟವಾಗಿಲ್ಲ. ಇನ್ನು, ಆ ಬಗ್ಗೆ ಭರವಸೆ; ಯಾರೇ ಪತ್ರಕರ್ತರಿಗೆ ಯಾವುದೇ ಭರವಸೆಯನ್ನು, ಇಲ್ಲಿಯೇ ಈಗಲೇ ಕೊಡಲು ಸಾಧ್ಯವಿಲ್ಲ. ಹಾಗೆಯೇ ಅವರ ಬಗ್ಗೆ ಸಕಲ ವಿಧದಲ್ಲಿ ದೋಷರಹಿತವಾದ ವ್ಯವಸ್ಥೆಯನ್ನು ಒದಗಿಸುವ ವ್ಯವಸ್ಥೆ ಮಾಡಿರುವುದಾಗಿ ಸಹ

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೪೪.

ಭರವಸೆ ಕೊಡಲು ಸಾಧ್ಯವಿಲ್ಲ. ಆದ ಕಾರಣ ನಾವು ನಿರ್ದಿಷ್ಟವಾದ ವಿಷಯವನ್ನು ಕುರಿತು ತೀರ್ಮಾನ ಕೈಗೊಳ್ಳಬೇಕು. ಪತ್ರಕರ್ತರಿಗೆ ಈ ವಿಭಿನ್ನ ನಮೂದುಗಳ ಅಮಲ್ಜಾರಿಯಿಂದ ರಕ್ಷಣೆ ಒದಗಿಸುವುದು ನಿಜವಾಗಿಯೂ ನಮಗೆ ಇಷ್ಟವೆ ಹೇಗೆ ಎಂಬ ಪ್ರಶ್ನೆಯನ್ನು ನಾವು ತೀರ್ಮಾನಿಸಬೇಕು. ಅದೇ ಮುಖ್ಯ ಪ್ರಶ್ನೆ.

* * *

***ಮಾನ್ಯ ಸಭಾಧ್ಯಕ್ಷರು:** ಅದು ಅನುಚ್ಛೇದ ೧೩ನ್ನು ಉಲ್ಲಂಘಿಸುತ್ತದೆಯೇ ಹೇಗೆ ಎಂಬ ಪ್ರಶ್ನೆಯನ್ನು ಸಹ ನೀವು ಪರಿಶೀಲಿಸಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆ ಬಗ್ಗೆ ನಮ್ಮಲ್ಲಿ ಕೆಲವು ಅಭಿಪ್ರಾಯಗಳುಂಟು. ಅವುಗಳನ್ನು ನೀವು ಕೇಳಬಯಸುವುದಾದರೆ, ನಾನು ಅವುಗಳನ್ನು ಸಾದರಪಡಿಸುತ್ತೇನೆ.

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ಕ್ರಿಯಾಲೋಪ ಎಂದರೇನು ಎಂದು ಪ್ರಾರಂಭದಲ್ಲಿಯೇ ಹೇಳಲು ಇಷ್ಟಪಡುತ್ತೇನೆ ಅಥವಾ ನಾನು ಅದನ್ನು ತಿಳಿದುಕೊಂಡಿರುವುದು ಹೇಗೆ ಎಂಬುದನ್ನು. ಕಾರಣವೆಂದರೆ ಪ್ರಾರಂಭದಲ್ಲಿಯೇ, ನನ್ನ ತಪ್ಪುಗಳೇನಾದರೂ ಅವುಗಳನ್ನು ಸರಿಪಡಿಸಬೇಕು ಎಂದು ಕೋರುತ್ತೇನೆ. ಕ್ರಿಯಾಲೋಪವು ಹೀಗೆ ಇರಬಹುದು, ಇದಾಗಿರಬಹುದು ಎಂದು ತೋರುತ್ತದೆ. ಈ ಸಭೆಯು ಮೂಲಭೂತ ಹಕ್ಕುಗಳ ಭಾಗವಾಗಿರತಕ್ಕ ಅನುಚ್ಛೇದ ೧೩ನ್ನು ತೀರ್ಣಗೊಳಿಸಿರುವ ನಿಮಿತ್ತ ಮತ್ತು ಆ ಪ್ರಕಾರ ಸಕಲ ನಾಗರಿಕರಿಗೂ ವಾಕ್ ಸ್ವಾತಂತ್ರ್ಯ ಅಥವಾ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಇರುವ ನಿಮಿತ್ತ ಈ ೧೩ನೆಯ ಅನುಚ್ಛೇದದ ಮೂಲಕ ಒದಗಿಸಲಾದ ಸ್ವಾತಂತ್ರ್ಯವನ್ನು, ಮೂಲಭೂತ ಹಕ್ಕನ್ನು ಮೊಟಕುಗೊಳಿಸುವಂಥ ಅನುಚ್ಛೇದವನ್ನು ಅಂಗೀಕರಿಸಲು ಈ ಸಭೆಗೆ ಅಧಿಕಾರವಿದೆಯೇ, ಅವಕಾಶವಿದೆಯೆ? ಈ ಅಂಶವನ್ನೇ ನಾವೀಗ ಪರಿಶೀಲಿಸಬೇಕು ಎಂದು ನನ್ನ ಅನಿಸಿಕೆಯಾಗಿದೆ.

ಇನ್ನು ವಾಕ್ ಸ್ವಾತಂತ್ರ್ಯವನ್ನು ಪರಿಮಿತಗೊಳಿಸುವ ಪರಿಣಾಮವುಳ್ಳ ಯಾವುದೇ ಪ್ರಸ್ತಾಪವನ್ನು ಪರಿಶೀಲಿಸದಂತೆ ಈ ಸದನವನ್ನು ಪ್ರತಿನಿಷೇಧಿಸಲಾಗಿದೆ ಎಂಬ ಅಂಶದ ಸಮರ್ಥನೆಯಲ್ಲಿ ಯುನೈಟೆಡ್ ಸ್ಟೇಟ್ಸ್‌ನ ಸುಪ್ರೀಂಕೋರ್ಟ್‌ನ ಒಂದು ತೀರ್ಪನ್ನು ಉದಾಹರಿಸಲಾಗಿದೆ. ನಾನು ಆ ಇಡೀ ವಿಷಯವನ್ನು ಓದಿ ನೋಡಿಲ್ಲ. ಆ ತೀರ್ಪಿನಲ್ಲಿ ಪತ್ರಿಕೆಗಳ ಮೇಲೆ ವಿಧಿಸಲಾಗುವ ತೆರಿಗೆಯು ಅಧಿಕಾರಾತೀತ ಆಗುವುದೆಂದು ಹೇಳಲಾಗಿದೆ. ನಾನು ಈ ಸಂಬಂಧದಲ್ಲಿ ಯುನೈಟೆಡ್ ಸ್ಟೇಟ್ಸ್‌ನ ಭಾಷೆಯನ್ನೇ ಬಳಸುತ್ತಿದ್ದೇನೆ. ಅಂದರೆ ಅಂಥ ತೆರಿಗೆಯು ಪತ್ರಿಕಾ ಸ್ವಾತಂತ್ರ್ಯವನ್ನು ಸಂಕ್ಷೇಪಗೊಳಿಸುತ್ತದೆಯೆಂದು ಹೇಳಲಾಗಿದೆ.

**ಶ್ರೀ ದೇಶಬಂಧು ಗುಪ್ತ:** ಆದಾಯ ತೆರಿಗೆಯನ್ನು ಹೊರತುಪಡಿಸಿ ಅದನ್ನು (ಆ ಮಾತನ್ನು) ತೀರ್ಪಿನಲ್ಲಿಯೇ ಹೇಳಲಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ಈಗ ಆ ನಿರ್ದಿಷ್ಟ ಪ್ರಕರಣದ ವಸ್ತುಸ್ಥಿತಿ ನಿರೂಪಣೆಯ ಮೂಲಕ ಆಕ್ಷೇಪಿಸಲಾದ ಆ ತೆರಿಗೆಯ ಸ್ವರೂಪ ಏನಿತ್ತು ಎಂದು ಸ್ಪಷ್ಟವಾಗುತ್ತಿಲ್ಲ. ಅಥವಾ ಆಕ್ಷೇಪಿಸಲಾದ ಆ ತೆರಿಗೆಯ ತೀವ್ರತೆ ಎಷ್ಟಿತ್ತು ಎಂಬ ವಿಚಾರವೂ ಸ್ಪಷ್ಟವಾಗುತ್ತಿಲ್ಲ. ತೆರಿಗೆಯ ತೀವ್ರತೆಯು

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೪೫.

** ಅದೇ, ಪುಟ ೮೪೮–೮೫೧

ಕೂಡ, ಅದು (ಆ ತೆರಿಗೆಯು) ಅಧಿಕಾರಾತೀತ ಆಗಿತ್ತೆ ಇಲ್ಲವೆ ಎಂಬ ಪ್ರಶ್ನೆಯನ್ನು ಪರಿಶೀಲಿಸುವಲ್ಲಿ ಒಂದು ಅಂಶವಾಗುತ್ತದೆ. ನಾನು ಹೇಳಿದ ಪ್ರಕಾರ ಈ ತೀರ್ಪಿನಲ್ಲಿ ಈ ಮಹತ್ವಪೂರ್ಣ ಸಂಗತಿಗೆ ಸಂಬಂಧಪಟ್ಟ ಹಾಗೆ ಯಾವುದೇ ಉಲ್ಲೇಖವಿಲ್ಲ.

ನಾವೀಗ ನನ್ನ ಅಭಿಪ್ರಾಯದಲ್ಲಿ ಪ್ರಮುಖವಾಗಿರುವ ಕೆಲವು ವಾದಗಳ ಸೂತ್ರವನ್ನು ಅನುಸರಿಸಿ ಮುಂದುವರಿಯುತ್ತೇನೆ. ನಾನು ಸಾದರಪಡಿಸಬಯಸಿದ ಮೊದಲನೆಯ ಅಂಶವೆಂದರೆ, ಅಮೆರಿಕದ ಸಂವಿಧಾನದಲ್ಲಿ ಒದಗಿಸಲಾದ ಸಂವೈಧಾನಿಕ ಗ್ಯಾರಂಟಿಗಳು ಇದ್ದಾಗ್ಯೂ, ಅಮೆರಿಕದ ಸರ್ವೋಚ್ಚ ನ್ಯಾಯಾಲಯವೇ ಸಂವಿಧಾನದ ಮೂಲಕ ಗ್ಯಾರಂಟಿ ನೀಡಲಾದ ಈ ಮೂಲಭೂತ ಹಕ್ಕುಗಳು ನಿರುಪಾಧಿಕ ಆಗಿಲ್ಲವೆಂದು ಮತ್ತು ಸಂವಿಧಾನದಲ್ಲಿ ಹಾಗೆ ಒಳಪಡಿಸಲಾದ ಭಾಷೆ ಇದ್ದಾಗ್ಯೂ ಅಮೆರಿಕದ ಕಾಂಗ್ರೆಸ್‌ಗೆ ಈ ಮೂಲಭೂತ ಹಕ್ಕುಗಳ ಮೇಲೆ ತರ್ಕಸಂಗತ ನಿರ್ಬಂಧಗಳನ್ನು ವಿಧಿಸುವ ಹಕ್ಕು ಹೊಂದಿದೆ ಎಂದು ನಿರ್ಣಯಿಸಿದ್ದುಂಟು. ನಿಜವೆಂದರೆ, ಈ ಸದನವು ಕರಡು ಸಂವಿಧಾನವನ್ನು ಪರಿಶೀಲಿಸುವ ಕ್ರಮವನ್ನು ಪ್ರಾರಂಭಿಸಬೇಕು ಎಂದು ಕೋರುತ್ತ ನಾನು ಮಂಡಿಸಿದ ಠರಾವನ್ನು ಸಮರ್ಥಿಸುತ್ತ ನಾನು ಮಾಡಿದ ಪ್ರಾರಂಭಿಕ ಭಾಷಣದಲ್ಲಿ ಅಧಿಕಾಂಶ ಭಾಗವನ್ನು ಈ ವಿಷಯದ ಪರಿಶೀಲನೆಗೆ ಎಂಬುದನ್ನು ಸದನದ ಸ್ಮರಣೆಗೆ ತರಬಯಸುತ್ತೇನೆ. ಕಾರಣವೆಂದರೆ, ನಾನು ಪತ್ರಿಕೆಗಳಲ್ಲಿ ಮತ್ತು ಯಾವ ವ್ಯಕ್ತಿ ವಿಶೇಷ ವಿಚಾರದಲ್ಲಿ ಗೌರವ ಮತ್ತು ಲಕ್ಷ್ಯವನ್ನು ಸಲ್ಲಿಸುವೆನೋ ಆ ವ್ಯಕ್ತಿಗಳಿಂದ ಈ ಬಗ್ಗೆ ವ್ಯಕ್ತಗೊಳಿಸಲಾದ ಟೀಕೆ ಟಿಪ್ಪಣಿಗಳನ್ನು ಗಮನಿಸಿದ್ದೇನೆ. ಅವರ ಪ್ರಕಾರ ನಮ್ಮ ಮೂಲಭೂತ ಹಕ್ಕುಗಳು, ಅನುಚ್ಛೇದ ೧೩ರಲ್ಲಿ ಬರುವ, ಅಂದರೆ (೨), (೩), (೪) ಮತ್ತು (೫) ಈ ಖಂಡಗಳಲ್ಲಿ ಪಟ್ಟಿ ಮಾಡಲಾದ ವಿವಿಧ ಪರಿಮಿತಿಗಳಿಗೆ ಒಳಪಟ್ಟಿರುವ ಕಾರಣ, ಅವುಗಳಿಗೆ ಮೌಲ್ಯವಿದೆ ಎಂದು ಅಭಿಪ್ರಾಯವುಂಟು.

ಈ ಟೀಕೆ ಟಿಪ್ಪಣಿಗಳಿಗೆ ಸರಿಯಾದ ಉತ್ತರವನ್ನು ಕೊಡುವ ಉದ್ದೇಶದಿಂದ, ಈ ವಿಷಯದ ಮೇಲೆ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಮಾನಗಳನ್ನು ಪರೀಕ್ಷಿಸಿ ನೋಡುವ ಕ್ರಮ ವಹಿಸಿದೆನು. ಮೂಲಭೂತ ಹಕ್ಕುಗಳು ಎಂದು ಕರೆಯಲಾಗುವ ಸಂವೈಧಾನಿಕ ಗ್ಯಾರಂಟಿಗಳನ್ನು, ಅಮೆರಿಕದ ಸಂವಿಧಾನದಲ್ಲಿ ಯಾವುದೇ ನಿರ್ಬಂಧಗಳಿಗೆ ಗುರಿಪಡಿಸದೆಯೇ ನಿರೂಪಿಸಿರುವ ನಿಮಿತ್ತ, ಆ ಉಪಬಂಧಗಳನ್ನು (ವ್ಯವಸ್ಥೆಯನ್ನು) ಪರಿಮಿತಗೊಳಿಸಲು ಅಮೆರಿಕದ ಸರ್ವೋಚ್ಚ ನ್ಯಾಯಾಲಯಕ್ಕೆ ಅವಕಾಶವಿಲ್ಲ ಎಂದು ನನ್ನ ಎಣಿಕೆಯಾಗಿತ್ತು. ಆದರೆ ನನಗೆ ಅಚ್ಚರಿಯಾಗುವ ಹಾಗೆ, ಅಮೆರಿಕದ ಸರ್ವೋಚ್ಚ ನ್ಯಾಯಾಲಯವು ನಾವು ನಮ್ಮ ಸಂವಿಧಾನವನ್ನು ರೂಪಿಸುವಾಗ ಈ ನಿಲುವನ್ನು ತಳೆದುದ್ದುಂಟು. ಅಂದರೆ ಮೂಲಭೂತ ಹಕ್ಕುಗಳು, ಎಷ್ಟು ಮೂಲಭೂತವಾಗಿದ್ದರೂ ಸರಿಯೆ, ಅವುಗಳು ಹಕ್ಕುಗಳಾಗಲು ಸಾಧ್ಯವಿಲ್ಲ. ಅವು ಕೆಲವು ನಿರ್ದಿಷ್ಟ ಪರಿಮಿತಿಗಳಿಗೆ ಒಳಪಡಿಸಬೇಕಾದದ್ದು ಅನಿವಾರ್ಯ.

ಸದನವು ಅನುಮತಿ ಕೊಟ್ಟರೆ, ನಾನು ನನ್ನ ಭಾಷಣದಿಂದ ಒಂದು ಭಾಗವನ್ನು ಓದಿ ಹೇಳುತ್ತೇನೆ. ನಾನು ಹೇಳಿದ್ದು ಹೀಗೆ:

"ಗಿಟ್ಲೊ ವಿ. ನ್ಯೂಯಾರ್ಕ್" ಎಂಬ ಪ್ರಕರಣದಲ್ಲಿ ಎಂದರೆ ಹಿಂಸಾತ್ಮಕ ಬದಲಾವಣೆಯನ್ನು ತರುವ ಗುರಿಯುಳ್ಳವುಗಳೆಂದು ಉಕ್ತಿಗಳನ್ನು ಶಿಕ್ಷಿಸುವುದೆಂದು ಭಾವವಾಗುವ ನ್ಯೂಯಾರ್ಕ್‌ನ "ಅಪರಾಧಿಕ ಅರಾಜಕತೆ" ಕಾನೂನಿನ ಸಂವೈಧಾನಿಕತೆಯು ವಿವಾದಾಂಶವಾಗಿರುವ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಹೀಗೆ ಹೇಳಿದ್ದುಂಟು.

"ಬಹುಸಮುದಾಯದಿಂದಲೇ ಸಂಸ್ಥಾಪಿತವಾದ ಮೂಲಭೂತ ಸಿದ್ಧಾಂತವೆಂದರೆ, ವಾಕ್ ಸ್ವಾತಂತ್ರ್ಯ

ಮತ್ತು ಪತ್ರಿಕಾ ಸ್ವಾತಂತ್ರ್ಯ ಇವುಗಳಿಗೆ ಸಂವಿಧಾನವು ಭದ್ರತೆ ಒದಗಿಸಿದ್ದರೂ, ಅವು ಬೇಜವಾಬ್ದಾರಿ ಅನಿರ್ಬಂಧಿತ ಸ್ವಾತಂತ್ರ್ಯವನ್ನು ನೀಡುವುದಿಲ್ಲ.

ಹಾಗೆಯೇ ನಾನು ಅನೇಕ ಪ್ರಕರಣಗಳನ್ನು ಉದಾಹರಿಸಿದೆನು. ಈ ವಿಚಾರದಲ್ಲಿ ನನ್ನ ಸಂಪೂರ್ಣ ನಿಲುವು ಇಷ್ಟೆ: ಅಮೆರಿಕದಲ್ಲಿ ಕೂಡ, ಮೂಲಭೂತ ಹಕ್ಕುಗಳು ಪರಿಮಿತಿಗಳಿಗೆ ಒಳಪಡಬೇಕು ಎಂಬುದು ಮನ್ನಣೆ ಪಡೆದ ಸಿದ್ಧಾಂತ. ನನ್ನ ಅಭಿಪ್ರಾಯದಲ್ಲಿ, ಈ ವಿಷಯದ ಬಗ್ಗೆ ಯಾವ ಸಂದೇಹಕ್ಕೂ ಎಡೆಯಿಲ್ಲ. ಆದ್ದರಿಂದ, ನಮ್ಮ ನಮೂದಿಗೆ ಸಂಬಂಧಿಸಿದಂತೆ ಹೇಳುವುದಾದರೆ– ಸದ್ಯ ನಾನು ತಿದ್ದುಪಡಿಗಳನ್ನು ಕುರಿತ ಪರಿಶೀಲನೆಗೆ ತೊಡಗುವುದಿಲ್ಲ– ಅಂದರೆ ಜಾಹಿರಾತುಗಳ ಮೇಲಿನ ತೆರಿಗೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಆ ನಮೂದು ಈ ಸದನದಲ್ಲಿ... ಎಂಬುದಾಗಿ ಆ ಕುರಿತು ಯಾವುದೇ ಆಕ್ಷೇಪ ಎತ್ತಲು ಅವಕಾಶವಿಲ್ಲ ಎಂದು ನಾನು ನಿವೇದಿಸುತ್ತೇನೆ. ಕಾರಣವೆಂದರೆ ಅದರ ಬಗ್ಗೆ ಪ್ರಾಂತೀಯ ಸರ್ಕಾರಗಳು ಕ್ರಮ ಕೈಗೊಂಡರೆ ಪತ್ರಿಕಾ ಸ್ವಾತಂತ್ರ್ಯದ ಮೇಲೆ ಪರಿಮಿತಿಯನ್ನು ಹೇರುವ ಸಂಭವವುಂಟು. "ಜಾಹಿರಾತುಗಳು" ಎಂಬ ಶೀರ್ಷಿಕೆಯ ಅಡಿಯಲ್ಲಿ ವಿಧಿಸಲಾಗುವ ತೆರಿಗೆಯು ಅನುಚ್ಛೇದ ೧೩ ಆಗುವುದು ಎಂಬ ಅರ್ಥ ವಿವರಣೆಯನ್ನು ಒಪ್ಪಿಕೊಳ್ಳಲು ನಾನು ಖಂಡಿತವಾಗಿಯೂ ಸಿದ್ಧನಿಲ್ಲ.

ನಾನು ಸಾದರಪಡಿಸಬಯಸುವ ಮತ್ತು ಸಂಭಾವ್ಯವಾಗಿದ್ದು, ಒಪ್ಪಿಕೊಳ್ಳಬಹುದಾದ ಸಿದ್ಧಾಂತ ಇಷ್ಟೆ. ವೃತ್ತಪತ್ರಿಕೆಯನ್ನು ಪೂರ್ಣವಾಗಿ ತೊಡೆದು ಹಾಕುವಂಥ ಸ್ವರೂಪದ ತೀವ್ರ ತೆರಿಗೆಯನ್ನು ವೃತ್ತಪತ್ರಿಕೆಗಳ ಮೇಲೆ ಹೇರುವುದೆಂದರೆ, ಹಾಗೆ ತೆರಿಗೆ ವಿಧಿಸುವ ಅಧಿಕಾರವನ್ನು ಚಲಾಯಿಸುವುದೆಂದರೆ, ಅಧಿಕಾರ ರಹಿತ ಆಗುತ್ತದೆ. ಕಾರಣವೆಂದರೆ ಆ ತೆರಿಗೆಯು ಅನುಚ್ಛೇದ ೧೩ರ ಮೂಲಕ ಗ್ಯಾರಂಟಿ ನೀಡಲಾದ ವಾಕ್ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ತೊಡೆದುಹಾಕುತ್ತದೆ. ವೃತ್ತಪತ್ರಿಕೆಗಳಿಗೆ ಜಾಹಿರಾತುಗಳ ಮೇಲೆ ವಿಧಿಸಲಾಗುವ ತೆರಿಗೆಯು ತರ್ಕಸಂಗತ ಸ್ವರೂಪದ ತೆರಿಗೆಯಾಗಿಲ್ಲದುದು ಮತ್ತು ತಾರತಮ್ಯದ ತೆರಿಗೆ ಆಗಿರುವ ವೃತ್ತಪತ್ರಿಕೆಗಳಿಗೆ ಮಾತ್ರವೇ ಸೀಮಿತವಾಗಿದ್ದರೆ, ಸಕಲರಿಗೂ ಸಮಾನ ರಕ್ಷಣೆಯನ್ನು ಒದಗಿಸುವ ಉದ್ದೇಶದಿಂದ ನಾವು ಪ್ರಸ್ತಾವಿಸಿರುವ ೧೫ನೆಯ ಅನುಚ್ಛೇದವನ್ನು ಉಲ್ಲಂಘಿಸುವ ಸಂಭವವುಂಟು ಎಂದು ನನ್ನ ಭಾವನೆಯಾಗಿದೆ. ಆದ್ದರಿಂದ ನಾನು ಈ ಸಂಬಂಧದಲ್ಲಿ ಸಾದರಪಡಿಸುವುದಿಷ್ಟೆ. ವೃತ್ತ ಪತ್ರಿಕೆಗಳು ಮತ್ತು ವಾಕ್ ಸ್ವಾತಂತ್ರ್ಯ ಅಥವಾ ವೃತ್ತಪತ್ರಿಕೆಗಳಲ್ಲಿನ ಬರಹಗಳು ಇವುಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಯಾವ ಸಂಗತಿಯಾದರೂ ಸರಿಯೆ. ಅಧಿಕಾರದಿಂದ ಆಗುತ್ತದೆ ಎಂದು ಹೇಳುವವರೆಗೂ ಯಾವುದೇ ತರ್ಕವು ವಾದವು ಹೋಗುವುದಾದರೆ, ಆ ವಾದವು ನಾನು ಒಪ್ಪಿಕೊಳ್ಳಲು ಸಿದ್ಧನಿಲ್ಲದ ವಾದವೆಂದೂ ಹಾಗೆಯೇ ಈ ಸದನವು ಸಹ ಒಪ್ಪಿಕೊಳ್ಳಲಿಕ್ಕಿಲ್ಲ ಎಂದು ನನ್ನ ಭಾವನೆ. ನಾನು ನನ್ನ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಇಷ್ಟಪಡುತ್ತೇನೆ.

ನಾನು ಈಗ ಇನ್ನೊಂದು ಪ್ರಶ್ನೆಯನ್ನು ಗಮನಿಸುವೆನು. ಕೆಲವು ಪ್ರಾಂತ್ಯಗಳಲ್ಲಿ ಇತ್ತೀಚೆಗೆ ತಲೆದೋರಿರುವ ಪರಿಸ್ಥಿತಿಗಳ ದೆಸೆಯಿಂದಾಗಿ, ವೃತ್ತಪತ್ರಿಕೆಗಳಿಗೆ ಸಂಬಂಧಪಟ್ಟ ಈ ನಿರ್ದಿಷ್ಟ ನಮೂದನ್ನು Iನೆಯ ಪಟ್ಟಿಯಿಂದ IIನೆಯ ಪಟ್ಟಿಗೆ ವರ್ಗಾಯಿಸುವುದು ಅಥವಾ ಅದನ್ನು IIIನೆಯ ಪಟ್ಟಿಗೆ ಸೇರಿಸುವುದು ಅಗತ್ಯವಾದೀತು. ನಿಜವೇ. ಅದು ಸಂವೈಧಾನಿಕ ಕಾನೂನಿಗೆ ಸಂಬಂಧಪಟ್ಟ ವಿಷಯವಲ್ಲ. ಅದು ಕಾರ್ಯನೀತಿಯ ವಿಷಯ ಮತ್ತು ಭರವಸೆಯ ವಿಶ್ವಾಸದ ವಿಚಾರ. ನೀವು ಕೇಂದ್ರ ಸರ್ಕಾರದಲ್ಲಿ ಹೆಚ್ಚಿನ ವಿಶ್ವಾಸವನ್ನು ಇಡಲು ಸಿದ್ಧರಿದ್ದೀರಾ? ಅಥವಾ ಪ್ರಾಂತ್ಯಗಳಲ್ಲಿ ವಿಶ್ವಾಸವನ್ನಿಡಲು ಸಿದ್ಧರಿದ್ದು ಕೇಂದ್ರ ಸರ್ಕಾರಕ್ಕೆ ಒಂದಿಷ್ಟು ಸ್ವಾತಂತ್ರ್ಯವನ್ನು, ಅಂದರೆ ಪ್ರಾಂತ್ಯಗಳು ತಪ್ಪೇನಾದರೂ ಮಾಡಿದರೆ, ಅದನ್ನು ಸರಿಪಡಿಸುವ ಅಧಿಕಾರವನ್ನು

ಮೀಸಲಿಡಲು ಸಿದ್ಧರಿದ್ದೀರೋ ಹೇಗೆ ಎಂಬ ವಿಷಯವು ನಿಜವಾಗಿಯೂ ಚರ್ಚೆಗೆ ತೆರೆದಿಟ್ಟ ವಿಷಯ. ಅದನ್ನೇ ಯಾವುದೇ ನಿರ್ದಿಷ್ಟ ನಮೂದನ್ನು ೧ನೆಯ ಪಟ್ಟಿಯಲ್ಲಿ ಅಥವಾ Iನೆಯ ಪಟ್ಟಿಯಲ್ಲಿ ಒಂದು ಭಾಗವನ್ನು ಮತ್ತು IIನೆಯ ಪಟ್ಟಿಯಲ್ಲಿ ಇನ್ನೊಂದು ಅಥವಾ IIIನೆಯ ಪಟ್ಟಿಯಲ್ಲಿ ಉಳಿಸಬೇಕೇ ಎಂಬ ವಿಚಾರವನ್ನು ನಾವು ಈವರೆಗೂ ಚರ್ಚಿಸುತ್ತ ಬಂದಿದ್ದೇವೆ.

ಈ ವಿಚಾರದಲ್ಲಿ ತೀರ್ಮಾನ ಕೈಗೊಳ್ಳಲು ಸದನಕ್ಕೆ ಪರಿಪೂರ್ಣ ಸ್ವಾತಂತ್ರ್ಯ ಉಂಟು. ಕಾರಣವೆಂದರೆ, ಆ ವಿಷಯವು ಸದನವು ಸಂಪೂರ್ಣ ಸ್ವತಂತ್ರವಾಗಿ ಪರಿಶೀಲಿಸಿ ನೋಡಬಹುದಾದ, ನಿರ್ಣಯ ತೆಗೆದುಕೊಳ್ಳಬಹುದಾದ ವಿಷಯ. ಮತ್ತು ಯಾರೇ ಆಗಲಿ, ೧೩ನೆಯ ಅನುಚ್ಛೇದ ದ್ವಾರಾ ಸದನದ ಕೈಗಳನ್ನು ಕಟ್ಟಿಹಾಕಲಾಗಿದೆಯೆಂದು ಆ ಕಾರಣ ಅದು ವೃತ್ತಪತ್ರಿಕೆಗಳ ಮೇಲೆ ಯಾವುದೇ ಪರಿಮಿತಿಯನ್ನು ಹೇರುವ ದಿಶೆಯಲ್ಲಿ ಏನನ್ನು ಮಾಡುವ ಹಾಗಿಲ್ಲ ಎಂದು ಹೇಳುವಂತಿಲ್ಲ. ಅಂಥ ವಾದವೇನಾದರೂ ಇದ್ದರೆ, ನಾನು ಅದನ್ನು ಕಟ್ಟುನಿಟ್ಟಾಗಿ ಖಂಡಿಸುತ್ತೇನೆ.

ಇನ್ನು ಮುಂದಿನ ವಿಚಾರ. ಸ್ವಾಮಿ, ನಾನೀಗ, ತಾವು ಅನುಮತಿ ಕೊಟ್ಟರೆ, ವಿವಿಧ ತಿದ್ದುಪಡಿಗಳನ್ನು ಕುರಿತು ವಿವರಿಸಬಯಸುತ್ತೇನೆ. ಹಾಗೆ ನಾನು ವಿವರಿಸಲು ಕಾರಣವೆಂದರೆ ನನ್ನ ಮಾತನ್ನು ಕೇಳಿದವರು ನನ್ನನ್ನು ಟೀಕೆ ಮಾಡುವ ಸಂಭವ ಉಂಟು. ವೃತ್ತಪತ್ರಿಕೆಗಳಲ್ಲಿ ಆಸಕ್ತಿಯುಳ್ಳ ಸ್ನೇಹಿತರು ನಿಜವಾಗಿಯೂ ಸಮಗ್ರ ಉನ್ಮುಕ್ತಿಯನ್ನು ಪಡೆಯಲು ಪ್ರಯತ್ನ ನಡೆಸಿದ್ದಾರೆ. ಅಂದರೆ ಪ್ರಾಂತ್ಯಗಳು ವಿಧಿಸಬಹುದಾದ ಯಾವುದೇ ಬಗೆಯ ತೆರಿಗೆಯಿಂದ ವಿನಾಯಿತಿಯನ್ನು ಅಪೇಕ್ಷಿಸುತ್ತಾರೆ ಎಂದು ನನ್ನ ಅನಿಸಿಕೆ. ನನ್ನ ಮಿತ್ರರಾದ ಶ್ರೀ ಗೊಯೆಂಕಾ ಮತ್ತು ಇನ್ನು ಅನೇಕರು ಸರಿಸುಮಾರು ಐವತ್ತು ಅರವತ್ತು ಜನ ಮೊದಲನೆಯ ತಿದ್ದುಪಡಿಯನ್ನು ಮಂಡಿಸಿದ್ದು, ಈ ವಿಷಯವನ್ನು Iನೆಯ ಪಟ್ಟಿಗೆ ವರ್ಗಾಯಿಸಬೇಕು ಎಂದು ಬಯಸುತ್ತಾರೆ. ಅವರು ಹಾಗೆ ಅಪೇಕ್ಷಿಸುತ್ತ, ನಾವು ಏನನ್ನು ಮಾಡಿರಲಿಲ್ಲವೊ ಅದನ್ನು ಮಾಡಿದ್ದಾರೆ. ನಮ್ಮ ವೃತ್ತಪತ್ರಿಕೆಗಳ ನಮೂದು ತೆರಿಗೆ ವಿಧಿಸುವುದಕ್ಕೆ ಸಂಬಂಧಪಟ್ಟ ನಮೂದು ಅಲ್ಲ. Iನೆಯ ಮತ್ತು IIನೆಯ ಪಟ್ಟಿಗಳಲ್ಲಿನ ನಮೂದುಗಳ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದ ನಮ್ಮ ಮಾನ್ಯ ಸದಸ್ಯರು ನಾವು, ಆ ನಮೂದುಗಳನ್ನು ಪೂರ್ಣವಾಗಿ ಶಾಸನ ರಚನೆಗೆ ಸಂಬಂಧಪಟ್ಟ ನಮೂದುಗಳು ಮತ್ತು ಪೂರ್ಣವಾಗಿ ತೆರಿಗೆ ವಿಧಿಸುವುದಕ್ಕೆ ಸಂಬಂಧಪಟ್ಟ ನಮೂದುಗಳು ಎಂದು ಪ್ರತ್ಯೇಕಿಸಿರುವುದನ್ನೂ ಮನಗಾಣಬಹುದು. ವೃತ್ತಪತ್ರಿಕೆಗಳನ್ನು IIIನೆಯ ಪಟ್ಟಿಯಲ್ಲಿ ನಮೂದಿಸಲಾಗಿದ್ದರೂ, ಅವುಗಳನ್ನು ಶಾಸನ ರಚನಾ ನಮೂದುಗಳಲ್ಲಿ ಮಾತ್ರ ಸೇರಿಸಿದ್ದುಂಟು. ಇನ್ನು ನನ್ನ ಸ್ನೇಹಿತ ಗೊಯೆಂಕಾ ಅವರು ಮಂಡಿಸಿದ ತಿದ್ದುಪಡಿ ಅವರ ನಿಲುವಿನ ದೃಷ್ಟಿಯಲ್ಲಿ ಅತ್ಯಂತ ಕೇಡನ್ನೇ ಉಂಟುಮಾಡಿದೆ. ಪಟ್ಟಿ Iರ ಯಾವ ಭಾಗದಲ್ಲಿ ತೆರಿಗೆ ವಿಧಿಸುವುದಕ್ಕೆ ಸಂಬಂಧಪಟ್ಟ ನಮೂದೆಗಳು ಇವೆಯೋ ಆ ಭಾಗಕ್ಕೆ ಸೇರಿಸಿದ್ದಾರೆ. ವೃತ್ತಪತ್ರಿಕೆಗಳನ್ನು, ಅಂದರೆ ಆ ಮೂಲಕ ಕೇಂದ್ರ ಸರ್ಕಾರವು ವೃತ್ತಪತ್ರಿಕೆಗಳ ಮೇಲೆ ತೆರಿಗೆ ವಿಧಿಸುವ ಅವಕಾಶವು ಪ್ರಾಪ್ತವಾಗುತ್ತದೆ. (ಕೇಳಿರಿ, ಕೇಳಿರಿ) ನನಗೆ ವೃತ್ತಪತ್ರಿಕೆಗಳ ಬಗ್ಗೆ ರುಚಿಯಿಲ್ಲ ಮತ್ತು ವೃತ್ತಪತ್ರಿಕೆಗಳಿಗೆ ನೋವುಂಟುಮಾಡುವ ವಿಚಾರದಲ್ಲಾಗಲಿ ಅಥವಾ ಅವುಗಳನ್ನು ರಕ್ಷಿಸುವ ವಿಚಾರದಲ್ಲಾಗಲಿ ನನಗೆ ಆಸಕ್ತಿಯಿಲ್ಲ. ಆ ವಿಷಯದ ಬಗ್ಗೆ ಸದನವು ಏನನ್ನು ಮಾಡಲು ಇಷ್ಟಪಡುವುದೋ ಹಾಗೆ ಮಾಡುವಂತೆ ಕೋರಿ, ಅದನ್ನು ಸದನದ ಕೈಗೆ ಒಪ್ಪಿಸಲು ನಾನು ಸಿದ್ಧನಿದ್ದೇನೆ.

ನನ್ನ ಸ್ನೇಹಿತ ಮಿ. ಜುಂಜನವಾಲಾ ಅವರು ಮಂಡಿಸಿದ ಎರಡನೆಯ ತಿದ್ದುಪಡಿಯಿಂದ ಒದಗುವ ಪರಿಣಾಮವೇನು? ಅವರ ಪ್ರಕಾರ, ವೃತ್ತಪತ್ರಿಕೆಗಳನ್ನು Iನೆಯ ಪಟ್ಟಿಗೆ ವರ್ಗಾಯಿಸಬಹುದಾದರೂ, ವೃತ್ತ

ಪತ್ರಿಕೆಗಳು ಸರಕುಗಳ ಹಾಗೆ ಮಾರಾಟಕ್ಕೆ ಒಳಪಡುವ ಕಾರಣ, IIನೆಯ ಪಟ್ಟಿಯಲ್ಲಿಯೇ ನಮೂದು ವಿಶಾಲ ನಮೂದು ಆಗಿರುವುದರಿಂದ ವೃತ್ತಪತ್ರಿಕೆಗಳು ಸರಕುಗಳಂತೆ ಅದರಲ್ಲಿ ಸೇರುತ್ತವೆ. ಆದ್ದರಿಂದ ಶ್ರೀ ಗೊಯಂಕಾ ಅವರ ತಿದ್ದುಪಡಿಯನ್ನು ಅಂಗೀಕರಿಸುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ ಎಂದು ಅವರು ಅಭಿಪ್ರಾಯಪಡುತ್ತಾರೆ. ಯಾಕೆಂದರೆ ಪ್ರಾಂತೀಯ ಸರ್ಕಾರಗಳು ಸರಕುಗಳ ಮಾರಾಟದ ಮೇಲಣ ತೆರಿಗೆಗೆ ಈ ಸಂಬಂಧಪಡುವ ನಮೂದಿನ ಅಡಿಯಲ್ಲಿ ವೃತ್ತಪತ್ರಿಕೆಗಳ ಮೇಲೆ ತೆರಿಗೆ ವಿಧಿಸುವ ಅವಕಾಶ ಪಡೆಯುತ್ತವೆ. ಆದಕಾರಣ, ಅವರು ವೃತ್ತಪತ್ರಿಕೆಗಳನ್ನು ಮಾರಾಟ ತೆರಿಗೆ ಅಧಿನಿಯಮದ ವ್ಯಾಪ್ತಿಯಿಂದ ಹೊರಕ್ಕೆ ತೆಗೆಯುವ ಆಶಯವುಳ್ಳ ತಮ್ಮ ತಿದ್ದುಪಡಿಯನ್ನು ಮಂಡಿಸಿದ್ದಾರೆ.

ಈಗ ಗಮನಿಸಬೇಕಾದ ಪ್ರಶ್ನೆ ಎಂದರೆ, ವೃತ್ತ ಪತ್ರಿಕೆಗಳ ಮೂಲಕ ಬರಬಹುದಾದ ತೆರಿಗೆಯು ಪ್ರಾಂತ್ಯ ಸರ್ಕಾರಗಳ ತೆರಿಗೆ ವ್ಯವಸ್ಥೆಯ ಪ್ರಧಾನ ಆಧಾರವಾಗಿರುವಾಗ ಅದನ್ನು ಪ್ರಾಂತೀಯ ತೆರಿಗೆ ಕ್ಷೇತ್ರದ ವ್ಯಾಪ್ತಿಯಿಂದ ಸಾರಾ ಸಗಟಾಗಿ ತೊಡೆದುಹಾಕಲು ಆ ಸರ್ಕಾರಗಳು ಒಪ್ಪುತ್ತವೆಯೇ ಹೇಗೆ? ಅದು ಪರಿಶೀಲಿಸಿ ನೋಡಬೇಕಾದ ವಿಷಯ. ಕರಡು ರಚನಾ ಸಮಿತಿಯು, ವಿತ್ತ ಮಂತ್ರಾಲಯದವರೊಡನೆ ಆಗಲಿ ಅಥವಾ ಪ್ರಾಂತ್ಯಗಳ ಅರ್ಥ ಮಂತ್ರಿಗಳ ಜತೆಗಾಗಲಿ ಸಮಾಲೋಚನೆ ಮಾಡದೆಯೇ, ತಾವಾಗಿಯೇ ಈ ಹೊಣೆಗಾರಿಕೆಯನ್ನು ತನ್ನ ಹೆಗಲ ಮೇಲೆ ಹೇರಿಕೊಳ್ಳಲು ಸಿದ್ಧವಿರಲಾರದು ಎಂದು ನನಗನ್ನಿಸುತ್ತದೆ. ನಾವು ಈ ಶಾಸನರಚನಾ ನಮೂದುಗಳಿಗೆ ಸಂಬಂಧಪಟ್ಟ ಹಾಗೆ ಬಹಳಷ್ಟು ಹೊಣೆಗಾರಿಕೆಯನ್ನು ವಹಿಸಿಕೊಳ್ಳುತ್ತ ಬಂದಿದ್ದೇವೆ. ಹಣಕಾಸು ವಿಚಾರ ಬಂದಾಗಲೆಲ್ಲ ಕೇಂದ್ರದ ವಿತ್ತ ಮಂತ್ರಾಲಯ ಅಥವಾ ಪ್ರಾಂತ್ಯ ಸರ್ಕಾರಗಳ ಹಣಕಾಸು ಮಂತ್ರಿಗಳ ಜತೆ ಸಮಾಲೋಚನೆ ನಡೆಸಬೇಕು ಎಂಬುದು ನಮ್ಮ ಸ್ಥಾಯೀ ಸಂಪ್ರದಾಯವಾಗಿದೆ.

ಆದಕಾರಣ ಇವೆಲ್ಲ ಈ ತಿದ್ದುಪಡಿಗಳಲ್ಲಿ ಒಳಗೊಂಡ ತೊಂದರೆಗಳು. ಇನ್ನು ನೀವು ವೃತ್ತಪತ್ರಿಕೆಗಳಿಗೆ ಸಂಬಂಧಪಟ್ಟ ನಮೂದನ್ನು ಒಕ್ಕೂಟದ ಪಟ್ಟಿಗೆ ವರ್ಗಾಯಿಸಿದರೆ, ಕೇಂದ್ರ ಸರ್ಕಾರವು ವೃತ್ತಪತ್ರಿಕೆಗಳು ತಯಾರಿಕೆದಾರರೆಂದು ಅವುಗಳ ಮೇಲೆ ತೆರಿಗೆ ವಿಧಿಸಬಹುದೇನೋ. ಕಾರಣವೆಂದರೆ, ಭಾರತದಲ್ಲಿ ಯಾವುದೇ ಭಾಗದಲ್ಲಿ ತಯಾರಾದ ಯಾವುದೇ ಸರಕುಗಳ ಮೇಲೆ ತೆರಿಗೆ ವಿಧಿಸುವ ಹಕ್ಕು ಹೊಂದಿದೆ ಕೇಂದ್ರ ಸರ್ಕಾರ. ಆದ್ದರಿಂದ, ವೃತ್ತಪತ್ರಿಕೆಗಳಿಗೆ ತೆರಿಗೆಯಿಂದ ತಪ್ಪಿಸಿಕೊಳ್ಳುವುದು ಕಷ್ಟಸಾಧ್ಯ ಎಂದು ನನಗೆ ತೋರುತ್ತದೆ. ಈ ಎಲ್ಲ ಸಂಗತಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅಂದರೆ, ಈ ಎಲ್ಲ ಬಾಹ್ಯ ವಿಷಯಗಳನ್ನು ಈ ಹಂತದಲ್ಲಿ ವ್ಯಕ್ತಗೊಳಿಸಿದ್ದೇನೆ. ಯಾಕೆಂದರೆ ಚರ್ಚೆಯಲ್ಲಿ ಭಾಗವಹಿಸಲು ಇಚ್ಛಿಸುವ ಪ್ರತಿಯೊಂದು ಸದಸ್ಯನು ಇದಿರಿಸಬೇಕಾದ ತೊಂದರೆಗಳೇನು ಎಂದು ತಿಳಿದಿರಬೇಕು ಎಂದು ನನ್ನ ಭಾವನೆ. ಈ ಸಮಯಕ್ಕೆ ನಾನು ಆಸಕ್ತಿ ವಹಿಸುವ ಸಂಗತಿಯೆಂದರೆ ಇಷ್ಟೆ. ನಾವು ೧೩ನೆಯ ಅನುಚ್ಛೇದವನ್ನು ತೀರ್ಣಗೊಳಿಸಿದ್ದರೂ, ಸದನವು ಯಾವುದೇ ಪರಿಮಿತಿಯನ್ನು ಕುರಿತು ಚರ್ಚಿಸದಂತೆ (ಪರ್ಯಾಲೋಚಿಸಿದ ಹಾಗೆ) ಯಾವುದೇ ಪ್ರತಿಷೇಧ ಇಲ್ಲ ಎಂದು ಭಾವಿಸುತ್ತೇನೆ. ಸದನದ ಅಂಗೀಕಾರ ಕೋರಿ ಅದರ ಮುಂದೆ ಮಂಡಿಸಲು ಉದ್ದೇಶಿಸಿರುವುದು ನನ್ನ ಅಭಿಪ್ರಾಯದಲ್ಲಿ ಅಪಾಯಕಾರಿ ಆಗಿವೆ. ಅದು ತೆರಿಗೆ ವಿಧಿಸುವ ವ್ಯವಸ್ಥೆಯನ್ನೇ ಸಂಪೂರ್ಣವಾಗಿ ತೊಡೆದುಹಾಕುವ ಸಂಭವವುಂಟು. ಅನುಚ್ಛೇದ ೨೪ ಕೂಡ ಇರಲಾರದು. ಇನ್ನೂ ಅನೇಕ ಕ್ಲಿಷ್ಟತೆಗಳು ಉದ್ಭವಿಸಬಹುದು. ಮೂಲಭೂತ ಹಕ್ಕುಗಳಿಗೆ ಭರವಸೆ ಒದಗಿಸಿರುವ (ಗ್ಯಾರಂಟಿಸಿರುವ ನಿಮಿತ್ತ) ಕಾರಣ, ತೆರಿಗೆ ವಿಧಿಸುವ ಅಧಿಕಾರವನ್ನು ಕೂಡ ಚಲಾಯಿಸಕೂಡದು. ಯಾಕೆಂದರೆ ಆ ಮೂಲಕ ಮೂಲಭೂತ ಹಕ್ಕುಗಳು ಪರಿಮಿತಿಗೆ ಒಳಪಡುತ್ತವೆ ಅಥವಾ ವಿನಾಶಗೊಳ್ಳುತ್ತವೆ

ಎಂದು ಮುಂತಾಗಿ ನೀವು ಹೇಳುವುದಾದರೆ, ಅದು ಅತಿಶಯವಾಗಿ ವ್ಯಾಪಕವಾದ ಪ್ರಸ್ತಾವನೆ ಆಗುತ್ತದೆ. ಅಂಥವನ್ನು ಯಾರೇ ಆಗಲಿ ಎಂದಾದರೂ ಆಗಲಿ ಅಂಗೀಕರಿಸಬಹುದು ಎಂದು ನಾನು ಭಾವಿಸುವಂತಿಲ್ಲ.

* * *

**ಪಂಡಿತ ಠಾಕೂರ್‌ದಾಸ್ ಭಾರ್ಗವ:** ಈ ಹಕ್ಕಿನ ಪೂರ್ಣ ನಾಶ ಆಗಿಲ್ಲ. ಆದರೆ ಬಹುಮಟ್ಟಿಗೆ ಮೊಟಕುಗೊಳಿಸಲಾಗಿದೆ ಅಥವಾ ಸಂಕ್ಷೇಪಿಸಲಾಗಿದೆ ಎಂದು ಭಾವಿಸೋಣ. ಆಗ ಅದು ಇದರ ವ್ಯಾಪ್ತಿಗೆ ಬರುವುದಿಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಯಾವುದು ಸಮಂಜಸವೋ ಅದನ್ನು ನ್ಯಾಯಾಲಯವು ತೀರ್ಮಾನಿಸುತ್ತದೆ.

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್:** ನನ್ನ ಭಾಷಣಕ್ಕೆ ಹೆಚ್ಚಿಗೆ ಆಗಿ ಏನನ್ನೂ ಸೇರಿಸುವುದಿಲ್ಲ.

(ಈ ಹಂತದಲ್ಲಿ ಶ್ರೀ ದೇಶಬಂಧು ಗುಪ್ತ ಅವರು ಮಾತನಾಡಲು ಎದ್ದು ನಿಂತರು.)

**ಮಾನ್ಯ ಸಭಾಧ್ಯಕ್ಷರು:** ಇಂಥ ವಿಚಾರದಲ್ಲಿ ಉತ್ತರ ನೀಡುವ ಹಕ್ಕು ಇದೆ ಎಂದು ನನಗನಿಸುವುದಿಲ್ಲ.

**ಶ್ರೀ ದೇಶಬಂಧು ಗುಪ್ತ:** ಕ್ರಿಯಾಲೋಪವನ್ನೆತ್ತಿ, ನಾನು ಗೊಂದಲಕ್ಕೆ ಎಡೆಮಾಡಿಕೊಟ್ಟಿರುವೆನೆಂದು ತೋರುವ ಎರಡು ಅಂಶಗಳನ್ನು ಕುರಿತು ಸ್ಪಷ್ಟೀಕರಣ ನೀಡಲು ಇಷ್ಟಪಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಆಗದು, ನಿಮಗೆ ಉತ್ತರ ನೀಡುವ ಹಕ್ಕು ಇದೆಯೊ ಇಲ್ಲವೋ ಎನ್ನುವುದೇ ಪ್ರಶ್ನೆ.

**ಒಬ್ಬ ಮಾನ್ಯ ಸದಸ್ಯರು:** ಮಾನ್ಯ ಸದಸ್ಯರಿಗೆ ಉತ್ತರ ನೀಡುವ ಹಕ್ಕು ಇಲ್ಲ ಎಂದು ಮಾನ್ಯ ಅಧ್ಯಕ್ಷರು ಈಗಾಗಲೇ ಹೇಳಿದ್ದಾರೆ.

**ಶ್ರೀ ದೇಶಬಂಧು ಗುಪ್ತ:** ಸ್ವಾಮೀ, ಕೆಲವು ಅಂಶಗಳನ್ನು ಎತ್ತಿರುವ ಕಾರಣ ಮತ್ತು ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಈ ಅಂಶಗಳನ್ನು ಎತ್ತಿದ ತರುವಾಯ ಈ ಕಡೆಯವರು ಯಾರೂ ಮಾತನಾಡಿಲ್ಲವಾದ ಕಾರಣ ಈ ಅಂಶಗಳನ್ನು ವಿವರಿಸಬೇಕಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ನಿಮ್ಮ ಕಡೆಯಿಂದ ಅನೇಕರು ಮಾತನಾಡಿದ್ದಾರೆ ಮತ್ತು ನಿಮ್ಮ ದೃಷ್ಟಿಕೋನದಿಂದಲೇ ಮಾತನಾಡಿದ್ದಾರೆ ಎಂದು ನನ್ನ ಭಾವನೆ.

ಎತ್ತಲಾದ ಕ್ರಿಯಾಲೋಪವೇನು ಎಂದು ತಿಳಿದಿದ್ದೇನೆ. ಅದನ್ನು ನಾನು ಪರ್ಯಾಲೋಚಿಸಬೇಕು. ಆಮೇಲೆ ನನ್ನ ರೂಲಿಂಗ್ ಕೊಡುತ್ತೇನೆ. ಅವರೆಗೆ, ಡಾ. ಅಂಬೇಡ್ಕರ್ ಅವರು ಎತ್ತಿದ ಕ್ರಿಯಾಲೋಪ ಇನ್ನೊಂದು ಅಂಶದ ಬಗ್ಗೆ ಪರ್ಯಾಲೋಚಿಸುವಂತೆ ಕೇಳಿಕೊಳ್ಳುತ್ತೇನೆ. ಇನ್ನು, ಆಮೇಲೆ ಅದು ಕ್ರಮಬದ್ಧವಾಗಿದೆ ಎಂದು ರೂಲಿಂಗ್ ಕೊಟ್ಟರೆ, ಆ ಸಂದರ್ಭದಲ್ಲಿ ಅದರ ಬಗ್ಗೆ ಸಿದ್ಧರಾಗಿರಬೇಕೆಂದು ಮತ್ತು ಅದನ್ನು ಶ್ರೀ ಗೊಯೆಂಕಾ ಅವರು ಮಂಡಿಸಬಯಸುವ ರೂಪದಲ್ಲಿ ಇರಬೇಕೆಂದು ಇಷ್ಟಪಡುತ್ತೀರೋ ಅಥವಾ ಶ್ರೀ ಜುಂಜನವಾಲಾ ಅವರು ಮಂಡಿಸಬಯಸುವ ರೂಪದಲ್ಲಿ ಇರಬೇಕೆಂದು ಇಷ್ಟಪಡುತ್ತೀರೋ ಎಂದು ತಿಳಿಸಲು ಸಿದ್ಧರಾಗಿರಬೇಕು ಎಂದು ಅವರನ್ನು ಕೇಳಿಕೊಳ್ಳುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹಾಗಿದ್ದ ಪಕ್ಷದಲ್ಲಿ, ಅವರು ತಿದ್ದುಪಡಿಯನ್ನು ಹಿಂತೆಗೆದು ಕೊಳ್ಳಬೇಕು.

**ಶ್ರೀ ದೇಶಬಂಧು ಗುಪ್ತ:** ತಿದ್ದುಪಡಿಯನ್ನು ಮಂಡಿಸಿಲ್ಲ. ನಾನು ತಿದ್ದುಪಡಿಯನ್ನು ಮಂಡಿಸದಂತೆ ಆಕ್ಷೇಪವೆತ್ತಿದ್ದೆನು.

**ಮಾನ್ಯ ಸಭಾಧ್ಯಕ್ಷರು:** ನನ್ನ ರೂಲಿಂಗ್ ಅನ್ನು ಆಮೇಲೆ ಕೊಡುತ್ತೇನೆ. ಈಗ ನಾವು ಉಳಿದ ಬಾಬುಗಳನ್ನು ಪರಿಶೀಲನೆಗೆ ತೆಗೆದುಕೊಳ್ಳೋಣ. ಕೆಲವು ಹೊಸ ಬಾಬುಗಳನ್ನು ಪ್ರಸ್ತಾವಿಸಲಾಗಿದೆ. ಕೆಲವು ಮುದ್ರಿತ ಪಟ್ಟಿಯಲ್ಲಿವೆ. ಅವುಗಳನ್ನು ನೋಡುವುದಕ್ಕೆ ಮುನ್ನ, ನಾವು ಇತರ ಬಾಬುಗಳನ್ನು ಪರಿಶೀಲಿಸಿ ನೋಡೋಣ.

## ನಮೂದು ೯೧

*ಮಿ. ನಜೀರುದ್ದೀನ್ ಅಹ್ಮದ್:** ನಾನು ತಿದ್ದುಪಡಿಯನ್ನು ಮಂಡಿಸುವುದಿಲ್ಲ, ಆದರೆ ನಮೂದನ್ನು ಕುರಿತೇ ಮಾತನಾಡುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಗುವನ್ನು ಹಾಡಿನ ಸಮೇತ ಏಕೆ ತೋರಿಸುವುದಿಲ್ಲ? ಹಾಡು ಮಾತ್ರ ಏಕೆ? ನೀವು ತಿದ್ದುಪಡಿಯನ್ನು ಮಂಡಿಸಿ, ಆ ತರುವಾಯ ಭಾಷಣ ಮಾಡ ಬಹುದಲ್ಲ.

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಧ್ಯಕ್ಷ ಮಹಾಶಯರೆ, ನಾನು ಸರ್ದಾರ್ ಹುಕುಂ ಸಿಂಘ್ ಅವರು ಎತ್ತಿದ ಆಕ್ಷೇಪವನ್ನು ಕುರಿತು ಮಾತನಾಡಬಯಸುತ್ತೇನೆ. ಅವರಿಗೆ ನಮೂದು ೯೧ರ ಉದ್ದೇಶವು ಅರ್ಥವಾಗಿದೆ ಎಂದು ನನಗೆ ಅನ್ನಿಸುವುದಿಲ್ಲ. ಆದ್ದರಿಂದ ಪಟ್ಟಿಯಲ್ಲಿರುವ ನಮೂದು ೯೧ರ ಉದ್ದೇಶ ಏನು ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಬಯಸುತ್ತೇನೆ. ಪಟ್ಟಿ Iರ ಪರಿಮಿತಿಯನ್ನು ಅಥವಾ ಅವಕಾಶಮಿತಿಯನ್ನು ವ್ಯಾಖ್ಯಾನಿಸುವುದೇ ಅದರ ಉದ್ದೇಶ. ನಾವು ಈ ವಿಷಯವನ್ನು ಅಂದರೆ ಪಟ್ಟಿ II ಮತ್ತು ಪಟ್ಟಿ III ಇವುಗಳ ವ್ಯಾಖ್ಯೆ ಮತ್ತು ಪರಿಮಿತಿ ಇವುಗಳನ್ನು ನಿರೂಪಿಸುವ ಕೆಲಸವನ್ನು ೬೭ರಂಥ ಒಂದು ನಮೂದನ್ನು ಹೆಚ್ಚಿಗೆಯಾಗಿ ಸೇರಿಸಿ ಪೂರೈಸಬಹುದಾಗಿತ್ತು ಎಂದು ಭಾವಿಸುತ್ತೇನೆ. ಅಂಥ ನಮೂದು ಕೆಳಕಂಡಂತೆ ಇರಬಹುದು ಎಂದರೆ;

ಪಟ್ಟಿ II ಅಥವಾ ಪಟ್ಟಿ III ಇವುಗಳಲ್ಲಿ ಸೇರಿಸಬರುವ ಯಾವುದೇ ಸಂಗತಿಯು (ಬಾಬು) ಪಟ್ಟಿ Iರಲ್ಲಿ ಸೇರ್ಪಡೆ ಆಗಿದೆ ಎಂದು ಭಾವಿಸುತ್ತೇನೆ. ಅಂಥ ನಮೂದು ಕೆಳಕಂಡಂತೆ ಇರಬಹುದು ಎಂದರೆ;

ಅದೇ ಅದರ ನಿಜವಾದ ಉದ್ದೇಶ. ಅದನ್ನು ಎರಡು ವಿಧದಲ್ಲಿ ಈಡೇರಿಸಿಕೊಳ್ಳಬಹುದಾಗಿತ್ತು. ಒಂದನೆಯದಾಗಿ ಪಟ್ಟಿ Iರಲ್ಲಿ ಸೇರಿಸಲಾದ ೯೧ರಂಥ ನಮೂದನ್ನಾಗಲಿ ಅಥವಾ ನಾನು ಸೂಚಿಸಿದಂಥ ಅಂದರೆ "ಪಟ್ಟಿ II ಅಥವಾ ಪಟ್ಟಿ III ಇವುಗಳಲ್ಲಿ ಸೇರಿಸದಿರುವ ಯಾವುದೇ ಸಂಗತಿಯು (ಬಾಬು) ಪಟ್ಟಿ Iರಲ್ಲಿ ಸೇರ್ಪಡೆ ಆಗಿದೆ ಎಂದು ಭಾವಿಸತಕ್ಕದ್ದು ಎಂಬ ನಮೂದನ್ನು ಇಟ್ಟುಕೊಳ್ಳುವ ಈ ಉದ್ದೇಶವನ್ನು ಈಡೇರಿಸಿಕೊಳ್ಳಬಹುದಾಗಿತ್ತು. ಅದೇ ಅದರ ಉದ್ದೇಶ. ಆದರೆ ಅಂತ ನಮೂದು ಅಗತ್ಯವಾಗಿ ಬೇಕು. ಆ ಬಗ್ಗೆ ಬೇರೆ ಮಾತೇ ಇಲ್ಲ. ನಾನೀಗ ಇನ್ನೊಂದು ಆಕ್ಷೇಪವನ್ನು ತೆಗೆದುಕೊಳ್ಳುತ್ತೇನೆ. ಅದನ್ನು ಪುನಃ ಪುನಃ ಎತ್ತಿದ್ದುಂಟು. ಬಹಿರಂಗವಾಗಿ ಹೇಳಿರದಿದ್ದರೂ ಪಿಸುಮಾತುಗಳಲ್ಲಿ ಮತ್ತೆ ಮತ್ತೆ ಸೂಚಿಸಿದ್ದುಂಟು.

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೫೪.

** ಅದೇ, ಪುಟ ೮೫೬–೮೫೭.

ನಿಜವಾಗಿಯೂ ವಸ್ತುಸ್ಥಿತಿ ಎಂದರೆ ನಮ್ಮಲ್ಲಿ ಶೇಷ ಅನುಚ್ಛೇದ ಎಂದು ಕರೆಯಲಾಗುವ ಮತ್ತು "ಸಮವರ್ತಿ ಪಟ್ಟಿಯಲ್ಲಾಗಲಿ ಅಥವಾ ರಾಜ್ಯ ಪಟ್ಟಿಯಲ್ಲಾಗಲಿ ಸೇರಿಸದಿರುವ ಯಾವುದೇ ವಿಷಯವನ್ನು ಕುರಿತು ಯಾವುದೇ ಶಾಸನರಚನೆ ಮಾಡಲು ಸಂಸತ್ತಿಗೆ ಅನನ್ಯ ಅಧಿಕಾರವಿರುತ್ತದೆ" ಎಂಬ ಆಶಯವುಳ್ಳ ೨೨೩ನೆಯ ವಿಧಿ ಇರುವಾಗ ಪಟ್ಟಿ Iರಲ್ಲಿ ನಮೂದನ್ನು ಸೇರಿಸುವ ಅಗತ್ಯವಾದರೂ ಏನು? ತತ್ವಶಃ ನಾನು ಈ ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತೇನೆ. ಪಟ್ಟಿ I ಅಥವಾ ಪಟ್ಟಿ II ಇವುಗಳಲ್ಲಿ ಸೇರಿಸದಿರುವ ಯವುದೇ ಬಾಬನ್ನೂ ಸಂವಿಧಾನದ ಒಂದು ನಿರ್ದಿಷ್ಟ ವಿಧಿ ದ್ವಾರಾ ಕೇಂದ್ರ ಸರ್ಕಾರಕ್ಕೆ ವಹಿಸಿಕೊಟ್ಟಿರುವಾಗ, ಪಟ್ಟಿ Iರಲ್ಲಿ ನಿರ್ದಿಷ್ಟಪಡಿಸಿರುವ ಈ ಪ್ರವರ್ಗಗಳನ್ನು ಪಟ್ಟಿ ಮಾಡಿ ದಾಖಲಿಸುವುದು ಅನಗತ್ಯವೇ. ಇದನ್ನು ಹೀಗೆ ಯಾಕೆ ಮಾಡಿದ್ದಾರೆ ಎಂಬುದಕ್ಕೆ ಕಾರಣವಿದೆ. ಸಂವಿಧಾನ ರಚನಾ ಸಭೆಯ ಕಾರ್ಯನಿರ್ವಹಣೆಯ ಮೊದಲ ದಿನಗಳಲ್ಲಿ ಅನೇಕ ರಾಜ್ಯಗಳ ಜನಸಮುದಾಯವು, ಮುಖ್ಯವಾಗಿ ದೇಶೀಯ ಸಂಸ್ಥಾನಗಳು, ಕೇಂದ್ರ ಸರ್ಕಾರದ ಶಾಸನ ರಚನಾ ಅಧಿಕಾರಗಳೇನು ಎಂದು ತಿಳಿದುಕೊಳ್ಳಲು ವಿಶೇಷ ಆಸಕ್ತಿ ಹೊಂದಿದ್ದರು. ಇದು ಸ್ಪಷ್ಟವಾಗಿ ಮತ್ತು ನಿರ್ದಿಷ್ಟವಾಗಿ ಬೇಕಾಗಿತ್ತು. ಕೇಂದ್ರ ಸರ್ಕಾರವು ಕೇವಲ ಶೇಷ ಅಧಿಕಾರಗಳನ್ನು ಮಾತ್ರ ಹೊಂದಿರುತ್ತದೆ ಎಂದು ಸ್ಥೂಲವಾಗಿ ಹೇಳಿದರೆ ಅವರಿಗೆ ಸಮಾಧಾನವಾಗುತ್ತಿರಲಿಲ್ಲ. ಪ್ರಾಂತ್ಯಗಳ ಆಶಂಕೆಗಳನ್ನು ಮತ್ತು ದೇಶೀಯ ಸಂಸ್ಥಾನಗಳವರ ಆಶಂಕೆಗಳನ್ನು ಹೋಗಲಾಡಿಸುವ ಸಲುವಾಗಿಯೇ "ಶೇಷ ಅಧಿಕಾರಿಗಳು" ಎಂಬ ಸಾಂಸ್ಕೃತಿಕ ಪದಾವಳಿಯಲ್ಲಿ ಒಳಗೊಂಡಿರುವುದನ್ನು ನಿರ್ದಿಷ್ಟಪಡಿಸಿ ನಿರೂಪಿಸಬೇಕಾಯಿತು. ಆದ ಕಾರಣವೇ ನಮ್ಮಲ್ಲಿ ೨೨೩ನೆಯ ವಿಧಿ ಇದ್ದಾಗ್ಯೂ, ನಾವು ಇಂತು ಪರಿಶ್ರಮ ಪಡಬೇಕಾಯಿತು.

ನಮ್ಮ ಸಂವಿಧಾನಕ್ಕೆ ಈ ಸಂಬಂಧ ಪಡುವಷ್ಟರ ಮಟ್ಟಿಗೆ ಈ ವಿಚಾರದಲ್ಲಿ ಅತಿ ಹಾಸ್ಯಾಸ್ಪದವಾದುದು ಏನೂ ಇಲ್ಲ ಎಂದು ಕೂಡ ನಾನು ಹೇಳಬಯಸುತ್ತೇನೆ. ಕಾರಣ ಸರಳವೇ. ಎಲ್ಲ ಫೆಡರಲ್ ಸಂವಿಧಾನಗಳಲ್ಲಿ, ಶೇಷ ಅಧಿಕಾರಗಳನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಟ್ಟಿರುವ ಸಂವಿಧಾನಗಳಲ್ಲಿ ಸಹ, ಕೇಂದ್ರ ಸರ್ಕಾರದ ಅಧಿಕಾರಗಳನ್ನು ಪಟ್ಟಿ ಮಾಡಿ ದಾಖಲಿಸುವ ರೂಢಿಯುಂಟು. ಉದಾಹರಣೆಗೆ ಕೆನಡಾ ದೇಶದ ಸಂವಿಧಾನವನ್ನು ತೆಗೆದುಕೊಳ್ಳೋಣ. ಭಾರತದ ಸಂವಿಧಾನದಂತೆಯೇ ಕೆನಡಾ ದೇಶದ ಸಂವಿಧಾನವು ಶೇಷ ಅಧಿಕಾರಗಳನ್ನು ಕೇಂದ್ರ ಕೆನಡಾದ ಸಂಸತ್ತಿಗೆ ಕೊಟ್ಟಿದೆ. ನಿರ್ದಿಷ್ಟಪಡಿಸಿ ಪಟ್ಟಿ ಮಾಡಲಾದ ಕೆಲವು ಅಧಿಕಾರಗಳನ್ನು ಪ್ರಾಂತ್ಯಗಳಿಗೆ ಕೊಟ್ಟಿದೆ. ವಾಸ್ತವ ಸಂಗತಿಯು ಹೀಗಿದ್ದರೂ, ಕೆನಡಾ ಸಂವಿಧಾನವು, ವಿಧಿ ೯೯ ಇದರ ಮೂಲಕ, ಕೆನಡಾ ಸಂಸತ್ತು ಶಾಸನ ರಚನೆ ಮಾಡಲು ಅವಕಾಶವಿರತಕ್ಕ ಕೆಲವು ಪ್ರವರ್ಗಗಳನ್ನು ಮತ್ತು ನಮೂದುಗಳನ್ನು ಪಟ್ಟಿ ಮಾಡಿ ದಾಖಲಿಸಲು ಕ್ರಮ ಕೈಗೊಂಡದ್ದುಂಟು. ಈ ಸಂದರ್ಭದಲ್ಲಿ ಕೂಡ ಕೆನಡಾ ದೇಶದ ಅವಿಭಾಜ್ಯ ಅಂಗವಾಗಲಿರುವ ಫ್ರೆಂಚ್ ಪ್ರಾಂತ್ಯಗಳ ಆಶಂಕೆಗಳನ್ನು ಸಮಾಧಾನಪಡಿಸುವುದಕ್ಕಾಗಿಯೇ ಹಾಗೆ ಮಾಡಿದ್ದು. ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟ್‌ನಲ್ಲೂ ಹಾಗೆಯೇ. ಅದೇ ಬಗೆಯ ವ್ಯವಸ್ಥೆಯನ್ನು ಗೊತ್ತುಪಡಿಸಲಾಗಿದೆ. ಮತ್ತು ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ೧೯೩೫ ಇದರ ಪ್ರಕಾರ ೧೦೪ ಇಲ್ಲಿರುವ ವಿಧಿ ೨೨೩ಕ್ಕೆ ಸರಿಸಮವಾದದ್ದು ಮಾತ್ರವಲ್ಲದೆ, ಕೇಂದ್ರ ಸರ್ಕಾರವು ಶೇಷ ಅಧಿಕಾರಗಳನ್ನು ಹೊಂದಿರತಕ್ಕದ್ದು ಎಂದು ಗೊತ್ತುಪಡಿಸುತ್ತದೆ. ಅದು ಇದ್ದರೂ, ಅದು ತನ್ನ ಪಟ್ಟಿ I ಅನ್ನು ಹೊಂದಿತ್ತು. ಆದ್ದರಿಂದ ಈ ವಿಷಯದಲ್ಲಿ ಅತಿಯಾದ ವಿಮರ್ಶೆಗೆ ಒಳಪಡಿಸಲು ಯಾವುದೇ ಆಧಾರವಾಗಲಿ ಕಾರಣವಾಗಲಿ ಇಲ್ಲ. ಹೀಗೆ ಮಾಡುವಾಗ ನಾನು ಈಗಾಗಲೇ ಹೇಳಿರುವ ಪ್ರಕಾರ ನಾವು ಈ ಶೇಷ ಅಧಿಕಾರಗಳು ಎಂದರೆ ನಿರ್ದಿಷ್ಟವಾಗಿಯೂ ಏನು ಎಂಬ ಬಗ್ಗೆ ವಿವಿಧ

ಪ್ರಾಂತ್ಯಗಳ ಅಗತ್ಯಗಳನ್ನು ಮಾತ್ರ ಅನುಸರಿಸಿದ್ದೇವೆ. ಇಷ್ಟೇ ಅಲ್ಲದೆ, ಯಾವುದೇ ಇತರ ಫೆಡರಲ್ ಸಂವಿಧಾನಗಳಲ್ಲಿ ಅನುಸರಿಸಲಾದ ಸುಪರಿಚಿತವಾದ ಸಂಪ್ರದಾಯಗಳನ್ನು ಅನುಸರಿಸಿದ್ದೇವೆ. ಆದ್ದರಿಂದ ಈ ಸದನವು ನನ್ನ ಸ್ನೇಹಿತ ಸರ್ದಾರ್ ಹುಕುಂ ಸಿಂಗ್ ಅವರ ತಿದ್ದುಪಡಿಯನ್ನು ಅಂಗೀಕರಿಸಲಿಕ್ಕಿಲ್ಲವೆಂದು ಮತ್ತು ನನ್ನ ಸ್ನೇಹಿತ ಮಿ. ನಜ಼ಿರುದ್ದೀನ್ ಅಹ್ಮದ್ ಅವರ ಮಾತುಗಳನ್ನು ಗಂಭೀರವಾಗಿ ಪರಿಗಣಿಸಲಿಕ್ಕಿಲ್ಲವೆಂದು ಆಶಿಸುತ್ತೇನೆ.

**(ಎಲ್ಲ ತಿದ್ದುಪಡಿಗಳನ್ನು ನಿರಾಕರಿಸಲಾಯಿತು. ನಮೂದು ೯೧ನ್ನು ಒಕ್ಕೂಟ ಪಟ್ಟಿಗೆ ಹೆಚ್ಚಿಗೆಯಾಗಿ ಸೇರಿಸಲಾಯಿತು.)**

**ಮಾನ್ಯ ಸಭಾಧ್ಯಕ್ಷರು:** ಈ ವಿಷಯವನ್ನು ಕುರಿತ ಇನ್ನೇನೂ ಚರ್ಚೆ ಅಗತ್ಯವಿಲ್ಲ ಎಂದು ಭಾವಿಸುತ್ತೇನೆ. ಡಾ. ಅಂಬೇಡ್ಕರ್ ಅವರು ಏನಾದರೂ ಹೇಳುವುದಿದ್ದರೆ, ನಾನು ಅದನ್ನು ಕೇಳುತ್ತೇನೆ. ಹೊರತಾಗಿ, ಈ ಇಂಥ ಅಂಶದ ಬಗ್ಗೆ ಯಾವುದೇ ಚರ್ಚೆ ಅಗತ್ಯ ಎಂದು ನಾನು ಭಾವಿಸುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಯಾವುದೇ ಚರ್ಚೆಗೆ ಅಗತ್ಯವಿಲ್ಲ. ನಾನು ಏನನ್ನೂ ಮಾತನಾಡಬಯಸುವುದಿಲ್ಲ.

**ಶ್ರೀ ಬ್ರಜೇಶ್ವರ್ ಪ್ರಸಾದ್:** ನಾನು ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಬಯಸುತ್ತೇನೆ.

**(ಶ್ರೀ ಬ್ರಜೇಶ್ವರ್ ಪ್ರಸಾದ್ ಅವರ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಲಿಲ್ಲ. ಅದನ್ನು ಮತಕ್ಕೆ ಹಾಕಿ ನಕಾರ ಸೂಚಿಸಲಾಯಿತು.)**

## ಪಟ್ಟಿ I

## ನಮೂದು ೭೦–ಎ

*__ಮಾನ್ಯ ಸಭಾಧ್ಯಕ್ಷರು:__ ಡಾ. ಅಂಬೇಡ್ಕರ್ ಅವರು ಈ ಬಗ್ಗೆ ಏನಾದರೂ ಹೇಳುವುದಿದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ ಸ್ವಾಮೀ, ನಾನು ಏನನ್ನೂ ಹೇಳಬಯಸುವುದಿಲ್ಲ. ಯುವಕರು, ಯುವತಿಯರು ತಮ್ಮ ಯೋಗಕ್ಷೇಮವನ್ನು ತಾವೇ ನೋಡಿಕೊಳ್ಳಲು ಸಮರ್ಥರಿದ್ದಾರೆ. ಅವರ ಬಗ್ಗೆ ನಾವು ಚಿಂತೆ ಮಾಡುವುದೇಕೆ?

(ಆ ತಿದ್ದುಪಡಿಯನ್ನು ನಿರಾಕರಿಸಲಾಯಿತು. ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ ಅವರು ಮಂಡಿಸಿದ ಅದೇ ಬಗೆಯ ತಿದ್ದುಪಡಿಗಳನ್ನು ಸಹ ನಿರಾಕರಿಸಲಾಯಿತು.)

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೬೦–೮೬೧.

## ನಮೂದು ೫೯

***ಶ್ರೀ ರಾಜಬಹದ್ದೂರ್:** ...ಈ ಸಮಸ್ಯೆಯ ಗಂಭೀರ ಸ್ವರೂಪವನ್ನು ನಾವು ಮನವರಿಕೆ ಮಾಡಿಕೊಳ್ಳಬೇಕು. ನಾನು ಹೇಳುವಂತೆ, ನಾನು ಇತರ ತಿದ್ದುಪಡಿಗಳ ಪೈಕಿ ಯಾವುದೇ ತಿದ್ದುಪಡಿಯನ್ನು ಮಂಡಿಸಬಯಸುವುದಿಲ್ಲ. ಏಕೆಂದರೆ ಕರಡು ಸಮಿತಿಯ ಮಾನ್ಯ ಅಧ್ಯಕ್ಷರು, ಹೊಸ ನಮೂದುಗಳನ್ನು ಸೂಚಿಸಿ ಇತರ ಸದಸ್ಯರು ಮಂಡಿಸಿದ ತಿದ್ದುಪಡಿಗಳ ಬಗ್ಗೆ ಉತ್ತರ ನೀಡುವ ತೊಂದರೆಯನ್ನು ತೆಗೆದುಕೊಳ್ಳುತ್ತಿಲ್ಲ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಅವರು ನೀವು ಮಂಡಿಸಿದ ತಿದ್ದುಪಡಿಗಳ ಅಧ್ಯಯನದಲ್ಲಿ ತೊಡಗಿದ್ದಾರೆ.

**ಶ್ರಿ ರಾಜಬಹದ್ದೂರ್:** ನನ್ನ ತಿದ್ದುಪಡಿಗೆ ಉತ್ತರ ದೊರೆತರೆ ನಾನು ಧನ್ಯನಾದೆನೆಂದು ಭಾವಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮೀ, ನನ್ನ ಸ್ನೇಹಿತರು ನನ್ನಿಂದ ಒಂದು ಉತ್ತರವನ್ನು ಅಪೇಕ್ಷಿಸುತ್ತಿದ್ದಾರೆ. ನಾನು ಒಂದೆರಡು ಮಾತುಗಳನ್ನು ಮಾತ್ರ ಹೇಳಲು ಇಷ್ಟಪಡುತ್ತೇನೆ.

ಭಿಕ್ಷಾಟನದ ನಿಯಂತ್ರಣ ಮತ್ತು ನಿರ್ಮೂಲನ ಪ್ರಶ್ನೆಯು, ನಾವು ಪಟ್ಟಿ IIIರ ನಮೂದು ೨೪..... ಇದರ ಅಡಿಯಲ್ಲಿ ಏರ್ಪಡಿಸಲಾದ ವಿಷಯದಲ್ಲಿ ಭಿಕ್ಷಾಟನವೂ ಸೇರ್ಪಡೆಯಾಗುತ್ತದೆ. ಅದು ಅಲ್ಲಿಯೇ ಉಳಿಯಬೇಕೆ ಅಥವಾ ಅದನ್ನು ಪಟ್ಟಿಯ ಅಡಿಯಲ್ಲಿ ತರಬೇಕೆ ಎನ್ನುವುದೊಂದೇ ಈ ಸಂದರ್ಭದಲ್ಲಿ ಪರಿಶೀಲಿಸಬೇಕಾದ ಪ್ರಶ್ನೆ. ಅದನ್ನು ಪಟ್ಟಿ IIIರ ಅಡಿಯಲ್ಲಿ ಉಳಿಸುವುದೇ ಉತ್ತಮ ಎಂದು ನಾನು ಭಾವಿಸುತ್ತೇನೆ.

ಕಾರಣವೇನೆಂದರೆ ಆ ಮೂಲಕ ಪ್ರಾಂತ್ಯಗಳು ಮತ್ತು ಕೇಂದ್ರ ಸರ್ಕಾರ ಇವೆರಡೂ ಆ ನಮೂದಿನ ಬಗ್ಗೆ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ.

**(ಶ್ರೀ ರಾಜಬಹದ್ದೂರ್ ಅವರ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.)**

## ಪಟ್ಟಿ II
## ನಮೂದು ೧

***ಮಾನ್ಯ ಸಭಾಧ್ಯಕ್ಷರು:** ಡಾ. ಬಿ.ಆರ್. ಅಂಬೇಡ್ಕರ್ ತಾವು ಏನನ್ನಾದರೂ ಹೇಳಬಯಸುತ್ತೀರ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಏನನ್ನೂ ಹೇಳಬಯಸುವುದಿಲ್ಲ.

**ಶ್ರೀ ಬ್ರಜೇಶ್ವರ ಪ್ರಸಾದ್:** ನಾನು ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಸದನವು ಈ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡುವ ಮನಸ್ಸಿನಲ್ಲಿ ಇಲ್ಲ. ನಾನು ಅದನ್ನು ಮತಕ್ಕೆ ಹಾಕುತ್ತೇನೆ.

"ಪಟ್ಟಿ IIರ ನಮೂದು ೧ ಅನ್ನು ಹೊಸ ೨ಎ ನಮೂದು ಆಗಿ ಪಟ್ಟಿ Iಕ್ಕೆ ವರ್ಗಾಯಿಸಬೇಕು.

**ಮಾನ್ಯ ಸಭಾಧ್ಯಕ್ಷರು:** ಡಾ. ಬಿ.ಆರ್. ಅಂಬೇಡ್ಕರ್ ಅವರು ಮಂಡಿಸಿದ ಒಂದು ತಿದ್ದುಪಡಿ ಇದೆ. ತಿದ್ದುಪಡಿ ಸಂಖ್ಯೆ ೬೩.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, "ಪಟ್ಟಿ IIರಿಂದ ಕೆಳಕಂಡ ಪದಗಳನ್ನು ತೆಗೆದುಹಾಕಬೇಕೆಂದು ನಾನು ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಸಾರ್ವಜನಿಕ ಸುವ್ಯವಸ್ಥೆಯ ನಿರ್ವಹಣೆಗೆ ಸಂಬಂಧಪಟ್ಟ ನಿವಾರಕ ನಿರೋಧ, ಅಂಥ ನಿರೋಧಕ್ಕೆ ಗುರಿಪಡಿಸಲಾದ ವ್ಯಕ್ತಿಗಳು.

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೬೩.

ಈ ನಮೂದನ್ನು ಪಟ್ಟಿ IIIರಲ್ಲಿ ಇಡಬೇಕು ಎಂದು ಪ್ರಸ್ತಾಪಿಸಲಾಗಿದೆ. ಈ ಪದಗಳನ್ನು ತೆಗೆದುಹಾಕತಕ್ಕದ್ದು ಎಂದು ನಾನು ಪ್ರಸ್ತಾವಿಸಲು ಇದೇ ಕಾರಣ.

**ಸರ್ದಾರ್ ಹುಕುಂ ಸಿಂಘ್:** ಸ್ವಾಮಿ, ನಾನು ಕೆಳಕಂಡಂತೆ ತಿದ್ದುಪಡಿ ಮಂಡಿಸುತ್ತೇನೆ.

"ಪಟ್ಟಿ IIರ ನಮೂದು ೧ರಲ್ಲಿ ನೌಕಾಬಲ, ಸೇನಾಬಲ ಅಥವಾ ವಾಯುಬಲ" ಎಂಬ ಪದಗಳ ತರುವಾಯ "ಒಕ್ಕೂಟದ ಯಾವುದೇ ಇತರ ಬಲ" ಎಂಬ ಪದಗಳನ್ನು ಸೇರಿಸಬೇಕು.

ಈ ತಿದ್ದುಪಡಿಸಲು ನನ್ನ ಮುಖ್ಯ ಉದ್ದೇಶವೆಂದರೆ, ಆ ಪದಗಳು ಇಲ್ಲದಿರುವುದು ಒಂದು ನ್ಯೂನತೆ ಎಂದು ಭಾವಿಸಿದ್ದೇನೆ. ಕರಡು ಸಮಿತಿಯೇ ಅದನ್ನು ಬಿಟ್ಟುಬಿಟ್ಟಿದೆಯೆಂದು ಮತ್ತು ಅದನ್ನು ಬೇಕೆಂತಲೇ ಬಿಟ್ಟುಬಿಡಲಾಗಿದೆ ಎಂದು ನನಗೆ ತಿಳಿದುಬಂದಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈ ತಿದ್ದುಪಡಿಯನ್ನು ಅಂಗೀಕರಿಸಲು ಸಿದ್ಧನಿದ್ದೇನೆ.

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ತಿದ್ದುಪಡಿಯಾದ ರೂಪದಲ್ಲಿ ನಮೂದು ೧ ಅನ್ನು ರಾಜ್ಯ ಪಟ್ಟಿ ಹೆಚ್ಚಿಗೆಯಾಗಿ ಸೇರಿಸಲಾಯಿತು.)**

## ನಮೂದು ೨

*‌**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ನಾನು ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIರ ನಮೂದು ೨ಕ್ಕೆ ಬದಲಾಗಿ ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು ಎಂದರೆ,

"೨ ನ್ಯಾಯಾಡಳಿತ: ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳನ್ನು ಹೊರತುಪಡಿಸಿ, ಎಲ್ಲ ನ್ಯಾಯಾಲಯಗಳ ರಚನೆ ಮತ್ತು ಸಂಘಟನೆ, ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ, ಎಲ್ಲ ನ್ಯಾಯಾಲಯಗಳಲ್ಲಿ ತೆಗೆದುಕೊಳ್ಳಲಾಗುವ ನ್ಯಾಯಾಲಯ ಫೀಜುಗಳು" ಮಾಡಲಾಗಿರುವ ಒಂದೇ ಒಂದು ಬದಲಾವಣೆ ಎಂದರೆ ಉಚ್ಚ ನ್ಯಾಯಾಲಯಗಳನ್ನು ಇದರೊಳಗೆ ಸೇರಿಸಿದ್ದು. ಕಾರಣವೆಂದರೆ ನಾನು ನಿನ್ನೆ ವಿವರಿಸಿರುವ ಪ್ರಕಾರ, ಉಚ್ಚ ನ್ಯಾಯಾಲಯಗಳ ರಚನೆ ಮತ್ತು ಸಂಘಟನೆಗಳಿಗೆ ಸಂಬಂಧಪಡುವಷ್ಟು ಅವು (ಉಚ್ಚ ನ್ಯಾಯಾಲಯಗಳು) ಕೇಂದ್ರ ಸರ್ಕಾರದ ಸಂಪೂರ್ಣ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ.

**(ನಮೂದು ೨ನ್ನು ತಿದ್ದುಪಡಿಯಾದ ರೂಪದಲ್ಲಿ ರಾಜ್ಯ ಪಟ್ಟಿಗೆ ಸೇರಿಸಲಾಯಿತು.)**

## ನಮೂದು ೪

**(**ಶ್ರೀ ಬ್ರಜೇಶ್ವರ್ ಪ್ರಸಾದ್:** ನನ್ನ ತಿದ್ದುಪಡಿಯನ್ನು ಯಾವುದೇ ಟೀಕೆ ಟಿಪ್ಪಣಿ ಇಲ್ಲದೆ ನಾನು ಮಂಡಿಸುತ್ತೇನೆ. ಅಂದರೆ ಭಾಷಣವೇನೂ ಮಾಡುವುದಿಲ್ಲ.

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೬೬.

** ಅದೇ, ಪುಟ ೮೬೭–೮೬೮.

ಸ್ವಾಮಿ, ನನ್ನ ತಿದ್ದುಪಡಿಯನ್ನು ಮಂಡಿಸುತ್ತೇನೆ. ಎಂದರೆ,

ತಿದ್ದುಪಟ್ಟಿಗಳ ಪಟ್ಟಿಯ ೩೫೪೮ ಸಂಖ್ಯೆಯುಳ್ಳ ತಿದ್ದುಪಡಿಗೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು:

"ಪಟ್ಟಿ IIರ ನಮೂದು ೪ನ್ನು ಅಲ್ಲಿಂದ ಬಿಟ್ಟುಬಿಡತಕ್ಕದ್ದು ಮತ್ತು ಅದನ್ನು ಪಟ್ಟಿ Iರಲ್ಲಿ ಸೇರಿಸತಕ್ಕದ್ದು.

ಸ್ವಾಮಿ, ತಮ್ಮ ಅನುಮತಿ ಪಡೆದು, ಪಟ್ಟಿ Iರಲ್ಲಿ ಇರುವ ನಮೂದನ್ನು ಪಟ್ಟಿ IIIಕ್ಕೆ ಸೇರಿಸತಕ್ಕದ್ದು. ಆ ಮೂಲಕ ಶ್ರೀ ಟಿ. ಟಿ. ಕೃಷ್ಣಮಾಚಾರಿ ಅವರ ಆಕ್ಷೇಪಕ್ಕೆ ಸಮಾಧಾನ ಒದಗಿಸಿದಂತಾಗುತ್ತದೆ. ಸ್ವಾಮೀ, 'ಪೊಲೀಸ್' ಅನ್ನು ನಾನು ಜೀವಾಳದ ವಿಷಯ ಎಂದು ಪರಿಗಣಿಸುತ್ತೇನೆ ಮತ್ತು ಆ ಕಾರಣ ಅದನ್ನು ಸಮವರ್ತಿ ಅಧಿಕಾರಿಗಳ ಅಡಿಯಲ್ಲಿ ಸೇರಿಸಿ, ಕೇಂದ್ರ ಸರ್ಕಾರದ ಅಧೀನಕ್ಕೆ ತರಬೇಕು.

**ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿ** (ಯುನೈಟೆಡ್ ಪ್ರಾವಿನ್ಸ್–ಸಾಮಾನ್ಯ): 'ಪೊಲೀಸ್' ಎಂಬ ಮಾತಿನಲ್ಲಿ ಗೃಹರಕ್ಷಕ ದಳ ಮತ್ತು ಪ್ರಾಂತೀಯ ರಕ್ಷಾದಳ ಇವೆರಡೂ ಸೇರುತ್ತವೆ ಎಂದು ಮನವರಿಕೆ ಆಗಿದೆಯೇ ಹೇಗೆ ಎಂದು ತಮ್ಮನ್ನು ಕೇಳಬಯಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಪ್ರಾಂತ್ಯ ಸರ್ಕಾರವು ರಚಿಸುವ ಯಾವುದೇ ಶಾಸನವನ್ನು ಅವಲಂಬಿಸಿರುತ್ತದೆ. ಅವರು ಪೊಲೀಸ್ ಅಧಿನಿಯಮದ ಅಡಿಯಲ್ಲಿ ಒಬ್ಬ ವ್ಯಕ್ತಿಯನ್ನು ಕೆಲಸಕ್ಕೆ ಸೇರಿಸಿಕೊಂಡರೆ ಆ ಉದ್ದೇಶಕ್ಕಾಗಿ ಅವನು ಪೊಲೀಸ್ ಆಗುತ್ತಾನೆ. ಅಥವಾ ಇತರ ಯಾವುದೇ ಅಧಿನಿಯಮದ ಅಡಿಯಲ್ಲಿ ಕೆಲಸಕ್ಕೆ ಸೇರಿಸಿಕೊಂಡು ಅವನಿಗೆ ಪೊಲೀಸ್ ಅಧಿಕಾರಗಳನ್ನು ಕೊಟ್ಟರೆ, ಅವನೂ ಸಹ ಪೊಲೀಸ್ ಆಗುತ್ತಾನೆ.

**ಶ್ರೀ ಮಹಾವೀರ್ ತ್ಯಾಗಿ:** ಗೃಹರಕ್ಷಕದಳದವರು ಮತ್ತು ಪ್ರಾಂತೀಯ ರಕ್ಷಾದಳದವರು ಇದು ಭಾರತ ಸರ್ಕಾರದ ಶೇಷ ಅಧಿಕಾರಿಗಳ ಅಡಿಯಲ್ಲಿ ಬರುತ್ತಾರೋ ಅಥವಾ ಪ್ರಾಂತೀಯ ಸರ್ಕಾರಗಳ ನಿಯಂತ್ರಣಕ್ಕೆ ಒಳಪಡುತ್ತಾರೋ ಎಂದು ಕೇಳಬಹುದೇ? ಅವರು ಎಲ್ಲಿ ಸೇರುತ್ತಾರೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಪೊಲೀಸ್ ಅಲ್ಲದಿದ್ದರೆ, ಕೇಂದ್ರ ಸರ್ಕಾರದ ಅಡಿಯಲ್ಲಿ ಹೋಗುತ್ತದೆ. 'ಪೊಲೀಸ್' ಎಂಬುದನ್ನು 'ಸೇವೆ'ಗೆ ಇರುವ ವ್ಯವಸ್ಥೆ ಎಂಬ ಅರ್ಥದಲ್ಲಿ ಬಳಸಲಾಗಿದೆ. ಹೀಗಾಗಿ, ಯಾವುದು 'ಸೇವೆ' ಅಲ್ಲವೋ ಅದು ಪೊಲೀಸ್.

**ಶ್ರೀ ಮಹಾವೀರ್ ತ್ಯಾಗಿ:** ಇದು ನಿಮ್ಮ ರೂಲಿಂಗ್ ಪ್ರಶ್ನೆಗಳ ಒಳಗೆ ಸೇರಿಹೋಗಲಿ.

**ಪಂಡಿತ್ ಹೃದಯನಾಥ್ ಕುಂಝ್ರು:** ಡಾ. ಅಂಬೇಡ್ಕರ್ ಅವರ ಅರ್ಥ ವಿವರಣೆಯು ಸರಿ ಆಗಿದ್ದರೆ, ಪ್ರಾಂತೀಯ ಸರ್ಕಾರವು ಸೇನೆ ಎಂಬ ಹೆಸರನ್ನು ಇಡದೆ ಸೇನೆಯನ್ನು ಸಂಘಟಿಸಬಹುದಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ, ಪ್ರಾಂತೀಯ ಸರ್ಕಾರಗಳು ಹಾಗೆ ಮಾಡಲು ಸಾಧ್ಯ ಎಂದು ನನಗನ್ನಿಸುವುದಿಲ್ಲ.

**ಡಾ. ಪಿ. ಎಸ್. ದೇಶ್‌ಮುಖ್:** ಈಗಾಗಲೇ ಆಗುತ್ತಿರುವುದು ಹಾಗೆಯೇ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸೇನೆಯನ್ನು ಭಾರತೀಯ ಸೇನಾ ಅಧಿನಿಯಮ ೧೯೪೧ ಇದರ ಅಡಿಯಲ್ಲಿ ಸಂಘಟಿಸಲಾಗುತ್ತದೆ. ಮತ್ತು ಆ ಅಧಿನಿಯಮದ ಅಡಿಯಲ್ಲಿ ಸೇನಾಭರ್ತಿಗೆ ಸಂಬಂಧಿಸಿ ಕಠಿಣವಾದ ನಿಯಮ ನಿಬಂಧನೆಗಳನ್ನು ಗೊತ್ತುಪಡಿಸಿದ್ದುಂಟು. ಆ ನಮೂದಿನ ಅಡಿಯಲ್ಲಿ ಶಾಸನ ರಚಿಸಲು ಪ್ರಾಂತೀಯ ಸರ್ಕಾರಕ್ಕೆ ಸರ್ವಥಾ ಯಾವ ಹಕ್ಕೂ ಇಲ್ಲ.

**ಪಂಡಿತ್ ಹೃದಯನಾಥ್ ಕುಂಝ್ರು:** ಪ್ರಾಂತೀಯ ಸರ್ಕಾರವು ಸೇನಾ ಸಂಘಟನೆಯ ಬಗ್ಗೆ ಯಾವುದೇ

ಶಾಸನ ರಚನೆ ಮಾಡಲಿಕ್ಕಿಲ್ಲ. ಆದರೆ ಒಂದು ಬಲವನ್ನು ಸಂಘಟಿಸಿ ಅದಕ್ಕೆ ಸೇನೆ ಎಂಬ ಹೆಸರನ್ನು ಇಡದೆ ಮಿಲಿಟರಿ ತರಬೇತಿಯನ್ನು ನೀಡಬಹುದಲ್ಲ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಪ್ರಾಂತ್ಯಗಳಲ್ಲಿ ವಿಶೇಷ ಸಶಸ್ತ್ರ ಬಲಗಳು ಇರುತ್ತವೆ ಎಂದು ನಾನು ನಮೂದಿಸಬಹುದಲ್ಲವೆ? ಅವರನ್ನು ಪೊಲೀಸ್ ಅಧಿನಿಯಮದ ಅಡಿಯಲ್ಲಿ ಭರ್ತಿಪಡಿಸಿಕೊಳ್ಳಲಾಗುತ್ತದೆ. ಆ ವಿಶೇಷ ಬಲಕ್ಕೆ ಸೇರಿದವರು ಸೇವೆಗೆ ಸರಿಸಮವಾದ ಸ್ಥಾನಮಾನವನ್ನು ಹೊಂದಿದವರಾಗಿದ್ದರೂ ಅವರನ್ನು ಪೊಲೀಸ್ ಎಂದೇ ಪರಿಗಣಿಸಲಾಗುತ್ತದೆ.

**ಶ್ರೀ ಮಹಾವೀರ್ ತ್ಯಾಗಿ:** ಗೃಹರಕ್ಷಕ ಎಂಬ ಪದವನ್ನು ಸೇರಿಸಿ ಅದನ್ನು ಯಾಕೆ ಸ್ಪಷ್ಟಪಡಿಸುತ್ತಿಲ್ಲ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸಶಸ್ತ್ರ ಪೊಲೀಸ್ ಇದ್ದಾರೆ. ಅಶಸ್ತ್ರ ಪೊಲೀಸ್ ಇದ್ದಾರೆ.

**ಮಾನ್ಯ ಸಭಾಧ್ಯಕ್ಷರು:** ಪಂಡಿತ್ ಕುಂಝ್ರು ಅವರು ಎತ್ತಿದ ಪ್ರಶ್ನೆಯೆಂದರೆ ಒಂದು ಪ್ರಾಂತೀಯ ಸರ್ಕಾರವು ಸೇವೆಗೆ ಸೇನೆ ಎಂದು ಕರೆಯದೆ ಪೊಲೀಸ್ ಎಂದು ಕರೆಯುತ್ತ ಸೇನೆಯನ್ನು ಸಂಘಟಿಸಬಹುದೆ ಹೇಗೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಪ್ರಾಂತೀಯ ಸರ್ಕಾರವು ಸಂವಿಧಾನದ ವಿಷಯದಲ್ಲಿ ಅಂಥ ವಂಚನೆಗೆ ತೊಡಗಿದರೆ ಹಾಗೆ ತಡೆಯಲು ಕೇಂದ್ರ ಸರ್ಕಾರ ಸಾಕಷ್ಟು ಬಲಿಷ್ಠವಾಗಿದೆಯೆಂಬ ಬಗ್ಗೆ ನನಗೆ ಭರವಸೆಯುಂಟು.

(ಶ್ರೀ ಬ್ರಜೇಶ್ವರ್ ಪ್ರಸಾದ್ ಅವರ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು ಮತ್ತು ನಮೂದು ೪ ಅನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)

* * *

## ನಮೂದು ೭ಎ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ನಾನು ಈ ಮುಂದಿನ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIರ ನಮೂದು ೭ರ ತರುವಾಯ ಈ ಮುಂದಿನ ನಮೂದನ್ನು ಸೇರಿಸಬೇಕು?

**"೭ಎ ರಾಜ್ಯ ನಿವೃತ್ತಿ ವೇತನಗಳು ಅಂದರೆ ರಾಜ್ಯ ಸರ್ಕಾರವು ರಾಜ್ಯದ ಸಂಚಿತ ನಿಧಿಯಿಂದ ಸಂದಾಯ ಮಾಡಬೇಕಾದ ನಿವೃತ್ತಿ ವೇತನಗಳು.**

ಇದು ಪಟ್ಟಿ Iಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ನಾವು ಈಗಾಗಲೇ ಮಾಡಿರುವುದಕ್ಕೆ ಸಂವಾದಿಯಾದ ನಮೂದು ಮಾತ್ರ.

**(ಪಟ್ಟಿ ೭ಎ ಅನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)**

* * *

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೬೯.

## ನಮೂದು ೯

*__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಸ್ವಾಮಿ, ತಮ್ಮ ಅನುಮತಿ ಕೋರಿ ನಾನು ಕೇಳಿಕೊಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ. ಅಂದರೆ,

"ಪಟ್ಟಿ IIರ ನಮೂದು ೯ಕ್ಕೆ ಬದಲಾಗಿ ಈ ಮುಂದಿನ ನಮೂದನ್ನು ಸೇರಿಸಬೇಕು.

"೯ ಪಟ್ಟಿ IIIರ ನಮೂದು ೩೫ರ ಉಪಬಂಧಗಳಿಗೆ ಒಳಪಟ್ಟು, ಒಕ್ಕೂಟ ಸರ್ಕಾರವು ಉದ್ದೇಶಗಳಿಗೆ ಹೊರತಾಗಿ ಸ್ವತ್ತಿನ ಆರ್ಜನೆ ಅಥವಾ ಕಡ್ಡಾಯ ಕೋರಿಕೆ.

ಒಂದೇ ಒಂದು ಬದಲಾವಣೆ ಅಂದರೆ ಅಡಿಗೆರೆ ಹಾಕಿದ ಪದಗಳನ್ನು ಈಗ ಸಮವರ್ತಿ ಪಟ್ಟಿಯಲ್ಲಿ ಇಡಲಾಗಿದೆ. ಆದ್ದರಿಂದ ಅವುಗಳನ್ನು ಈ ನಮೂದಿನಿಂದ ಬಿಟ್ಟುಬಿಡುವುದು ಅಗತ್ಯವಾಗಿದೆ. ಪಟ್ಟಿ Iರಲ್ಲಿನ ಅದೇ ಬಗೆಯ ನಮೂದಿಸಿದ ಸಂಬಂಧದಲ್ಲಿ ನಾವು ಮಾಡಿರುವುದು ಕೂಡ ಅದನ್ನೇ.

**(ಡಾ. ಅಂಬೇಡ್ಕರ್, ಅವರ ಪ್ರಸ್ತಾಪವನ್ನು ಅಂಗೀಕರಿಸಲಾಯಿತು. ಹಾಗೆ ತಿದ್ದುಪಡಿಯಾದ ನಮೂದು ೯ ಅನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)**

## ನಮೂದು ೧೦ಎ

ಸ್ವಾಮಿ, ತಮ್ಮ ಅನುಮತಿ ಕೋರಿ ನಾನು ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIರ ನಮೂದು ೧೦ರ ತರುವಾಯ ಈ ಮುಂದಿನ ನಮೂದನ್ನು ಸೇರಿಸಬೇಕು. ಅಂದರೆ,

**"೧೦ಎ ಪಟ್ಟಿ I ನಮೂದು ೬೦ರ ನಿರ್ದಿಷ್ಟಪಡಿಸಲಾದವುಗಳಿಗೆ ಹೊರತಾಗಿ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು"**

**__ಗೌರವಾನ್ವಿತ ಡಾ. ಅಂಬೇಡ್ಕರ್:__ ನಾವು ಈ ನಮೂದನ್ನು ಹಂಚಿಹಾಕಿದ್ದೇವೆ. ಒಂದು ಭಾಗವನ್ನು ಪಟ್ಟಿ Iರಲ್ಲಿ ಮತ್ತು ಇನ್ನೊಂದು ಭಾಗವನ್ನು ಪಟ್ಟಿ IIರಲ್ಲಿ ಇಡಲಾಗಿದೆ.

**(ನಮೂದು ೧೦ಎ ಅನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)**

## ನಮೂದು ೧೨

***__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಸ್ವಾಮಿ, ತಮ್ಮ ಅನುಮತಿ ಕೋರಿ, ನಾನು ಈ ತಿದ್ದುಪಡಿಯನ್ನು ಮಂಡಿಸುತ್ತೇನೆ. "ಪಟ್ಟಿ IIರ ನಮೂದು ೧೨ಕ್ಕೆ ಬದಲಾಗಿ ಮುಂದಿನ ನಮೂದುಗಳನ್ನು ಸೇರಿಸಬೇಕು.

"೧೨ ರಾಜ್ಯದ ಸಚಿವರು, ವಿಧಾನಸಭೆಯ ಸಭಾಪತಿಯವರ ಮತ್ತು ಉಪಸಭಾಪತಿಯವರ ಮತ್ತು ವಿಧಾನಪರಿಷತ್ತು ಇದ್ದರೆ ವಿಧಾನಪರಿಷತ್ತಿನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ವೇತನಗಳು ಮತ್ತು ಭತ್ಯೆಗಳು ಮತ್ತು ರಾಜ್ಯದ ವಿಧಾನಮಂಡಲದ ಸದಸ್ಯರ ವೇತನಗಳು ಮತ್ತು ಭತ್ಯೆಗಳು.

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೬೯–೮೭೦.

** ಅದೇ, ಪುಟ ೮೭೧.

*** ಅದೇ, ಪುಟ ೮೭೧.

"೧೨–ಎ ವಿಧಾನಸಭೆಯ ಮತ್ತು ಅದರ ಸಮಿತಿಗಳ ಸದಸ್ಯರ ವಿಶೇಷಾಧಿಕಾರಿಗಳು ಮತ್ತು ಸೌಲಭ್ಯಾಧಿಕಾರಗಳು ಉನ್ಮುಕ್ತಿಗಳು ಮತ್ತು ವಿಧಾನಪರಿಷತ್ತು ಇದ್ದರೆ, ಅದರ (ವಿಧಾನಪರಿಷತ್ತಿನ) ಮತ್ತು ಅವರ ಸದಸ್ಯರ ಮತ್ತು ಸಮಿತಿಗಳ ವಿಶೇಷಾಧಿಕಾರಿಗಳು, ಉನ್ಮುಕ್ತಿಗಳು ಮತ್ತು ಅಧಿಕಾರಗಳು."

ಇದು ಕೇಂದ್ರ ಸರ್ಕಾರದ ವಿಚಾರದಲ್ಲಿ ಪಟ್ಟಿ ೧ಕ್ಕೆ ಸಂಬಂಧಪಡುವಷ್ಟು ಮಟ್ಟಿಗೆ ನಾವು ಮಾಡಿಸುವ ವ್ಯವಸ್ಥೆಗೆ ಸಮಾನವಾದ ವ್ಯವಸ್ಥೆ ಮಾತ್ರ.

**(ನಮೂದು ೧೨ ಮತ್ತು ೧೨ಎ ಇವುಗಳನ್ನು ರಾಜ್ಯಪಟ್ಟಿಗೆ ಸೇರಿಸಲಾಯಿತು.)**

## ನಮೂದು ೧೪

*__ಮಾನ್ಯ ಸಭಾಧ್ಯಕ್ಷರು:__ ಈಗಿನ ಪ್ರಶ್ನೆಯೆಂದರೆ "ಮನೆಗಳು ಮತ್ತು ಬಾಡಿಗೆಗಳ ವಿಧಿ ನಿಯಮ ಮತ್ತು ನಿಯಂತ್ರಣ" ಎಂಬ ಹೆಚ್ಚಿನ ನಮೂದನ್ನು ಹೊಂದಿರಬೇಕೆ ಹೇಗೆ, ಮಾನ್ಯ ತ್ಯಾಗಿಯವರೆ, ನೀವು ಅದನ್ನು ಪ್ರತ್ಯೇಕ ನಮೂದಾಗಿ ಮಂಡಿಸಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸರಿ, ಅವರು ಅದನ್ನು ಪ್ರತ್ಯೇಕ ನಮೂದಾಗಿ ಮಂಡಿಸಬಹುದು.

**ಶ್ರೀ ಮಹಾವೀರ್ ತ್ಯಾಗಿ:** ನಾನು ನಿಮಗೆ ಮತ್ತು ಡಾ. ಅಂಬೇಡ್ಕರ್ ಅವರಿಗೆ ಸಹ ಕೃತಜ್ಞನಾಗಿದ್ದೇನೆ. ಅವರು ನನ್ನ ಮೇಲೆ ಔದಾರ್ಯ ತೋರುತ್ತಿರುವುದು ಇದೇ ಮೊದಲ ಸಲ.

ಸ್ವಾಮಿ, ಕರಡು ಸಮಿತಿಯು ಸಾದರಪಡಿಸಿದ ಪಟ್ಟಿಗೆ ತಿದ್ದುಪಡಿಯನ್ನು ಮಂಡಿಸುವುದೆಂದರೆ... ವಿಚಾರ ಯಾಕೆಂದರೆ ಕರಡು ರಚನಾ ಸಮಿತಿಯು ಆಗಿರುವ ಕಾರಣ ಅವರ ಜತೆ 'ಹೆಣಗಾಡಿ ಯಶಸ್ವಿ ಆಗುವುದು ಕಷ್ಟ ಸಾಧ್ಯವೇ?

**ಮಾನ್ಯ ಸಭಾಧ್ಯಕ್ಷರು:** ನೀವು ಮಂಡಿಸುತ್ತಿರುವುದು ಹೆಚ್ಚಿನ ನಮೂದನ್ನು ಅಲ್ಲವೇ?

**ಶ್ರೀ ಮಹಾವೀರ್ ತ್ಯಾಗಿ:** ಸರಿ ಸ್ವಾಮಿ, ಆದರೆ ಕರಡು ರಚನಾ ಸಮಿತಿಯ ಒಪ್ಪಿಗೆಯನ್ನು ಪಡೆಯಬೇಕಲ್ಲವೆ? ಏನೆಂದರೂ ಮುಖ್ಯವಾಗಿ ಸಲಹೆಗಳನ್ನು ಅಂಗೀಕರಿಸಬೇಕಾದವರು ಕರಡು ರಚನಾ ಸಮಿತಿಯವರು. ಅವರು ಒಪ್ಪಿದರೆ ಇಡೀ ಸದನವು ಮರುಮಾತಿಲ್ಲದೆ ಒಪ್ಪಿಕೊಳ್ಳುತ್ತದೆ. ಸದನವು ಈಗಾಗಲೇ ಒಂದು ನಮುದನ್ನು ಅಂಗೀಕರಿಸಿದೆ. ಆ ಪ್ರಕಾರ ಎಲ್ಲ ಶೇಷ ಅಧಿಕಾರಗಳು ಅಂದರೆ ಪಟ್ಟಿ II ಅಥವಾ ಪಟ್ಟಿ III ಇವುಗಳಲ್ಲಿ ಯಾವುದು ನಮೂದಾಗಿಲ್ಲವೊ ಅದೆಲ್ಲವೂ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ನಗರ ಪ್ರದೇಶಗಳಲ್ಲಿನ ಮನೆಗಳ ಮೇಲಣ ನಿಯಂತ್ರಣ ಮತ್ತು ಆ ಮನೆಗಳ ಬಾಡಿಗೆ ನಿಯಂತ್ರಣ ಇವೆರಡೂ ಇಂದಿಗೆ ಮಹತ್ವದ ವಿಷಯವಾಗಿದೆ. ಈ ವಿಷಯವು ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್, ೧೯೩೫ ಇದರ ಮೂಲ ಆವೃತ್ತಿಯಲ್ಲಿ ಇದ್ದಿರಲಿಲ್ಲ. ಯಾಕೆಂದರೆ ಆ ಸಮಯದಲ್ಲಿ ಮನೆಗಳು ಮತ್ತು ಅವುಗಳ ಬಾಡಿಗೆಗಳ ಮೇಲಣ ನಿಯಂತ್ರಣವು ಅಗತ್ಯವಾಗಿರಲಿಲ್ಲ. ಆಗ ಅದು ಚಾಲ್ತಿಯಲ್ಲಿ ಇರಲಿಲ್ಲ, ಎಂದು ನನ್ನ ಅರಿಕೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಮಾನ್ಯ ಸದಸ್ಯರ ವಾದವನ್ನು ಅರ್ಥ ಮಾಡಿಕೊಂಡೆನು. ಅವರಿಗೆ ನಾನು ಕೆಲವು ನಿಮಿಷಗಳಲ್ಲಿ ಉತ್ತರ ಕೊಡಬಲ್ಲೆನು.

**ಶ್ರೀ ಮಹಾವೀರ್ ತ್ಯಾಗಿ:** ಸರಿ, ಆದ ಕಾರಣವೇ ನಾನು ಅರಿಕೆ ಮಾಡಿಕೊಂಡದ್ದು ಈಗಿನ ಸಮಯದಲ್ಲಿ

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೩೩–೮೭೪.

ಮನೆಗಳ ನಿಯಂತ್ರಣ ಮತ್ತು ಅವುಗಳ ಬಾಡಿಗೆ ನಿಯಂತ್ರಣ ಅಗತ್ಯವಾಗಿ ಎಂಬುದಾಗಿದೆ. ಇಷ್ಟೇ ಅಲ್ಲದೆ, ಉತ್ತಮ ಧಾನ್ಯಗಳ ನಿಯಂತ್ರಣ ಸಹ ಅಗತ್ಯ ಎಂದು ಹೇಳಬಯಸುತ್ತೇನೆ. ಸದನವು ಒಪ್ಪಿಗೆ ಕೊಟ್ಟರೆ ಅದನ್ನು ಸಹ ಒಂದು ಸ್ವತಂತ್ರ ಬಾಬು ಆಗಿ ಸೇರಿಸಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಶ್ರೀ ಮಹಾವೀರ್ ತ್ಯಾಗಿಯವರು ಹೇಳಿರದಿದ್ದರೂ ಇದರಲ್ಲಿ ಮೂರು ವಿಭಿನ್ನ ಪ್ರಶ್ನೆಗಳು ಇವೆ ಎಂದು ಭಾವಿಸುತ್ತೇನೆ. ಮೊದಲನೆಯ ಪ್ರಶ್ನೆ ಎಂದರೆ, ಮನೆಗಳು ಮತ್ತು ಅವುಗಳ ಬಾಡಿಗೆಗಳ ವಿನಿಯಮನ ಮತ್ತು ನಿಯಂತ್ರಣದ ಅಧಿಕಾರವನ್ನು ಸದನವು ಹೊಂದಿರಬೇಕೆ ಬೇಡವೇ? ನನ್ನ ಅಭಿಪ್ರಾಯದಲ್ಲಿ, ಪ್ರಾಂತೀಯ ಸರ್ಕಾರಗಳಿಗೆ ಅಂಥ ಅಧಿಕಾರ ಇರಬೇಕು ಎಂಬ ಬಗ್ಗೆ ಪ್ರಶ್ನೆಗೆ ಅವಕಾಶವಿಲ್ಲ. ಆದ್ದರಿಂದ ತರುವಾಯದ ಪ್ರಶ್ನೆ ಎಂದರೆ, ಕರಡು ಸಂವಿಧಾನ ಮತ್ತು ಪಟ್ಟಿಯಲ್ಲಿನ ನಮೂದುಗಳು. ಮನೆಗಳನ್ನು ಮತ್ತು ಬಾಡಿಗೆಗಳನ್ನು ನಿಯಂತ್ರಣ ಮಾಡುವ ಉದ್ದೇಶಕ್ಕಾಗಿ ಪ್ರಾಂತೀಯ ಸರ್ಕಾರಗಳು ಅಧಿಕಾರಗಳನ್ನು ಚಲಾಯಿಸಲು ಏನಾದರೂ ಅವಕಾಶವನ್ನು ಏರ್ಪಡಿಸುತ್ತವೆಯೋ ಹೇಗೆ? ಈಗ, ಶ್ರೀ ತ್ಯಾಗಿಯವರು ಪ್ರಸ್ತಾಪಿಸಿದ ನಿರ್ದಿಷ್ಟ ನಮೂದು ಖಂಡಿತವಾಗಿಯೂ ಅನಗತ್ಯ ಎಂದು ಅರಿಕೆ ಮಾಡುತ್ತೇನೆ. ಕಾರಣವಿಷ್ಟೆ. ಎರಡು ನಮೂದುಗಳು ಎಂದರೆ ಪಟ್ಟಿ IIIರ ನಮೂದು ೨೪ ಭೂಮಾಲೀಕ ಮತ್ತು ಗೇಣಿದಾರರ ಸಂಬಂಧಗಳೂ ಸೇರಿದಂತೆ ಭೂಮಿ, ಭೂಮಿಯಲ್ಲಿನ ಅಥವಾ ಮೇಲಣ ಹಕ್ಕು ಭೂ ಹಿಡುವಳಿಗಳು ಗೇಣಿ ವಸೂಲಿ ಇತ್ಯಾದಿಗಳನ್ನು ವ್ಯವಹರಿಸುತ್ತದೆ. ಹೀಗೆ ಅದು ಒಂದು ನಮೂದು. ಇದರ ಹೊರತಾಗಿ, ಎರಡನೆಯ ನಮೂದು ಅಂದರೆ ಪಟ್ಟಿ IIIರ ೮ನೇ ನಂಬರಿನ ನಮೂದು. ಕೃಷಿ, ಭೂಮಿಯ ಹೊರತಾಗಿ ಇತರ ಸ್ವತ್ತಿನ ಹಸ್ತಾಂತರ, ಪತ್ರಗಳ ಮತ್ತು ದಸ್ತಾವೇಜುಗಳ ನೋಂದಣಿ ಇವುಗಳಿಗೆ ಸಂಬಂಧಿಸಿದ್ದು. ಈ ಎರಡು ನಮೂದುಗಳು ಪ್ರಾಂತೀಯ ಸರ್ಕಾರಗಳಿಗೆ ಮನೆಗಳು ಮತ್ತು ಬಾಡಿಗೆಗಳ ವಿನಿಯಮನ ಮತ್ತು ನಿಯಂತ್ರಣ ಇವುಗಳಿಗೆ ಸಂಬಂಧಪಟ್ಟಂಥ ಕಾನೂನುಗಳನ್ನು ರಚಿಸಲು ಪರ್ಯಾಪ್ತವಾಗಿವೆ ಎಂದು ಕಂಡುಬಂದಿದೆ. ಅಂಥ ನಮೂದು ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ಪಟ್ಟಿ IIರಲ್ಲಿ ಇಲ್ಲದಿದಾಗ್ಯೂ, ಪ್ರಾಂತೀಯ ಸರ್ಕಾರಗಳು ಈ ವಿಷಯದ ಬಗ್ಗೆ ಕಾನೂನುಗಳನ್ನು ರಚಿಸಿದೆ ಎಂಬ ಸಂಗತಿಯು ಶ್ರೀ ತ್ಯಾಗಿಯವರಿಗೆ ಗೊತ್ತುಂಟು. ಆದ್ದರಿಂದ, ಭೂಮಿಗೆ ಸಂಬಂಧಪಟ್ಟ ನಮೂದು ೨೪ ಮತ್ತು ಸ್ವತ್ತಿನ ವರ್ಗಾವಣೆಗೆ ಸಂಬಂಧಪಟ್ಟ ಇನ್ನೊಂದು ನಮೂದು ನಂಬರು ೮ ಇವೆರಡು, ಯಾವ ಅಧಿಕಾರವು ಪ್ರಾಂತೀಯ ಸರ್ಕಾರಗಳಿಗೆ ಇರಬೇಕು ಎಂದು ಶ್ರೀ ತ್ಯಾಗಿಯವರು ಇಚ್ಛಿಸುವರೋ ಆ ಅಧಿಕಾರವನ್ನು ಒದಗಿಸಲು ಪರ್ಯಾಪ್ತವಾಗಿವೆ.

ಶ್ರೀ ತ್ಯಾಗಿಯವರ ತಿದ್ದುಪಡಿಯನ್ನು ಅಂಗೀಕರಿಸಲು ಇನ್ನೊಂದು ತೊಂದರೆಯುಂಟು. ಈ ನಮೂದನ್ನು ನಾವು ಸೇರಿಸಿದೆವು ಎಂದು ಇಟ್ಟುಕೊಳ್ಳೋಣ. ಅದರಿಂದಾಗಿ, ಪ್ರಾಂತೀಯ ಸರ್ಕಾರಗಳು ಮನೆಗಳ ವಿನಿಯಮನ ಮತ್ತು ಬಾಡಿಗೆಗಳ ನಿಯಂತ್ರಣ ಇವುಗಳ ಉದ್ದೇಶಕ್ಕಾಗಿ ಈಗಾಗಲೇ ರಚಿಸಿರುವ ಕಾನೂನುಗಳ ಮೇಲೆ ಸಂದೇಹದ ನೆರಳು ಬೀಳುವಂತಾಗುತ್ತದೆ. ಈಗಾಗಲೇ ಅಸ್ತಿತ್ವದಲ್ಲಿ ಇರುವ ನಮೂದು ಈ ಉದ್ದೇಶಕ್ಕಾಗಿ ಕಾನೂನುಗಳನ್ನು ರಚಿಸಲು ವಿಧಾನಮಂಡಲಕ್ಕೆ ಅಧಿಕಾರವನ್ನು ಒದಗಿಸಲು ಪರ್ಯಾಪ್ತ ಆಗಿಲ್ಲ ಎಂದು ವಿಧಾನಮಂಡಲಕ್ಕೇ ಅನಿಸಿರಬೇಕು ಎಂದು ತೋರಬಹುದು. ಅದು ಕಾರಣವೇ ಈ ಅಧಿಕಾರವನ್ನು ನಿರ್ದಿಷ್ಟವಾಗಿ ಒದಗಿಸಬೇಕಾಯಿತು. ಹೀಗಾಗಿ ನಾವು ಈಗಾಗಲೇ ರಚಿತವಾಗಿರುವ ಕಾನೂನುಗಳ ಅನಗತ್ಯವಾದ ಸಂದೇಹಕ್ಕೆ ಎಡೆಮಾಡಿಕೊಟ್ಟಂತೆ ಆದೀತು ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಈ ತಿದ್ದುಪಡಿಯನ್ನು ಅಂಗೀಕರಿಸದಿರಲು ಅದು ಇನ್ನೊಂದು ಹೆಚ್ಚಿನ ಆಧಾರ. ಆದ್ದರಿಂದ,

ನಾನು ಹೇಳಿರುವ ಪ್ರಕಾರ ಈ ತಿದ್ದುಪಡಿಯು ಅನಗತ್ಯ. ಮೊದಲನೆಯದಾಗಿ ಅಂಥ ಕಾನೂನುಗಳನ್ನು ರಚಿಸಲು ಪ್ರಾಂತೀಯ ಸರ್ಕಾರಗಳು ಸಾಕಷ್ಟು ಅಧಿಕಾರವನ್ನು ಹೊಂದಿರುತ್ತವೆ ಮತ್ತು ಎರಡನೆಯ ಕಾರಣವೆಂದರೆ, ಈಗಾಗಲೇ ರಚಿತವಾದ ಕಾನೂನುಗಳ ಸಿಂಧುತ್ವ ಪ್ರಶ್ನೆ.

ಈಗ ನಾನು ಮೂರನೆಯ ಭಾಗಕ್ಕೆ ಬರುತ್ತೇನೆ. ನಾನು ಕಂಟೋನ್ಮೆಂಟುಗಳು ತಮ್ಮ ಪ್ರದೇಶದಲ್ಲಿರುವ ಆವರಣಗಳು ಮತ್ತು ಅವುಗಳ ಬಾಡಿಗೆಗಳನ್ನು ನಿಯಮಿಸುವ ಬಗೆಗಿನ ಅಧಿಕಾರವನ್ನು ತೆಗೆದುಹಾಕುವ ಪ್ರಶ್ನೆಯನ್ನು ಪರಿಶೀಲಿಸುತ್ತಿದ್ದಾಗ, ಶ್ರೀ ತ್ಯಾಗಿಯವರು ಒಂದಿಷ್ಟು ಕಸಿವಿಸಿಪಡುತ್ತಿರುವುದನ್ನು ಕಂಡೆನು. ಪ್ರಾಂತೀಯ ಸರ್ಕಾರಗಳಿಗೆ ಈಗಾಗಲೇ ಪಟ್ಟಿ Iರ ನಮೂದು ದ್ವಾರಾ ಕೊಡಲಾದ ಮತ್ತು ಈಗಾಗಲೇ ತೀಕ್ಷ್ಣಗೊಳಿಸಲಾದ ಅಧಿಕಾರವನ್ನು, ಈ ನಮೂದನ್ನು ಅಂಗೀಕೃತಗೊಳಿಸುವ ಮೂಲಕ ಶೂನ್ಯಗೊಳಿಸಬಹುದು ಎಂಬುದು ನನ್ನ ಸ್ನೇಹಿತ ಶ್ರೀ ತ್ಯಾಗಿಯವರ ಉದ್ದೇಶವಾಗಿದ್ದರೆ, ಅವರಿಗೆ ಖಂಡಿತವಾಗಿಯೂ ಆ ಬಗ್ಗೆ ತಪ್ಪು ಕಲ್ಪನೆಯಾಗಿದೆಯೆಂದು ಭಾವಿಸುತ್ತೇವೆ. ಈ ನಮೂದು ಆಖೈರಾಗಿ ಸಂವಿಧಾನದ ಭಾಗವಾಗಬಹುದಾದರೂ, ನಾವು ಈಗಾಗಲೇ ತೀಕ್ಷ್ಣಗೊಳಿಸಿರುವ ನಮೂದು ಸಿಂಧು ಆಗಿಯೇ ಉಳಿಯುತ್ತದೆ. ಪ್ರಾಂತೀಯ ಸರ್ಕಾರಗಳಲ್ಲಿ ಏನೇ ಅಧಿಕಾರವು ವಿಹಿತವಾಗಿದ್ದರೂ, ಕಂಟೋನ್ಮೆಂಟುಗಳು ತಮ್ಮ ಪ್ರದೇಶದಲ್ಲಿರುವ ಆವರಣಗಳ ಮತ್ತು ಆ ಆವರಣಗಳ ಬಾಡಿಗೆಗಳಿಗೆ ಸಂಬಂಧಿಸಿದಂತೆ ವಿನಿಮಯಗಳನ್ನು ರಚಿಸುವ ಅಧಿಕಾರವನ್ನು ಹೊಂದಿರುತ್ತವೆ. ಆದ್ದರಿಂದ, ನನ್ನ ಸ್ನೇಹಿತ ಶ್ರೀ ತ್ಯಾಗಿಯವರಿಗೆ, ಅವರ ಉದ್ದೇಶವು ಈಗಾಗಲೇ ಪೂರೈಸಿದಂತಾಗಿದೆಯೆಂದೂ ಆದ ಕಾರಣ ಈ ನಮೂದು ಅನಗತ್ಯವೆಂದೂ ತಿಳಿಯಬಯಸುತ್ತೇನೆ. ಇಷ್ಟೇ ಅಲ್ಲದೆ, ಈಗಿರುವ ಈ ನಮೂದುಗಳ ಅಡಿಯಲ್ಲಿ ರಚಿಸಲಾದ ಕಾನೂನುಗಳ ಬಗ್ಗೆ ಸಂದೇಹಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ.

* * *

***ಶ್ರೀ ಮಹಾವೀರ್ ತ್ಯಾಗಿ:** ಒಂದು ಮನೆಯ ಮಾಲೀಕರು ಪ್ರಾಂತೀಯ ಸರ್ಕಾರಗಳಿಗೆ ಬಾಡಿಗೆಗಳನ್ನು ನಿಯಂತ್ರಣ ಮಾಡುವ ಹಕ್ಕು ಇಲ್ಲ ಎಂದು ಆಕ್ಷೇಪವಿತ್ತರೆ, ಆಗ ಏನಾಗುವುದು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ ಅವರು ಹಾಗೆ ಆಕ್ಷೇಪ ಎತ್ತಲಾರರು. ಕಾರಣವೆಂದರೆ, ಸಾಮಾನ್ಯ ಖಂಡಗಳ ಅಧಿನಿಯಮದ ಅಡಿಯಲ್ಲಿ ಭೂಮಿ ಎಂಬ ಮಾತಿನಲ್ಲಿ ಕಟ್ಟಡಗಳು ಸೇರುತ್ತವೆ.

**ಶ್ರೀ ಮಹಾವೀರ್ ತ್ಯಾಗಿ:** ಭೂಮಿಯು ಕಟ್ಟಡಗಳನ್ನು ಒಳಗೊಳ್ಳುತ್ತದೆ ಎನ್ನುವುದು ಆ ಕಾನೂನಿನ ಹೊಸ ಅರ್ಥವಿವರಣೆ ಆಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೊಸ ಅರ್ಥವಿವರಣೆ ಯಾಕೆಂದರೆ ಕಾನೂನು ಶ್ರೀ ತ್ಯಾಗಿಯವರ ವೃತ್ತಿಯಲ್ಲವಷ್ಟೆ.

## ನಮೂದು ೧೫

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

---

* ಸಿ.ಎ.ಡಿ. ಸಂ. IX, ೧ನೇ ಸೆಪ್ಟೆಂಬರ್ ೧೯೪೯, ಪುಟ ೮೭೪–೮೭೫.

* ಅದೇ, ಪುಟ ೮೭೫.

ಪಟ್ಟಿ IIರ ನಮುದು ೧೫ರಲ್ಲಿ ಇರುವ "ಜನನಗಳು ಮತ್ತು ಮರಣಗಳು" ಎಂಬ ಪದಗಳನ್ನು ತೆಗೆದುಹಾಕಬೇಕು.

ಇದನ್ನು ಸಮವರ್ತಿ ಪಟ್ಟಿಗೆ ವರ್ಗಾಯಿಸಲಾಗಿದೆ.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

**(ಶ್ರೀ ಕಾಮತ್ ಮತ್ತು ಬ್ರಜೇಶ್ವರ್ ಪ್ರಸಾದ್ ಅವರ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು. ಡಾ. ಅಂಬೇಡ್ಕರ್ ಅವರ ಪ್ರಸ್ತಾಪವನ್ನು ಅಂಗೀಕರಿಸಲಾಯಿತು. ನಮೂದು ೧೫ ಅನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)**

## ನಮೂದು ೧೮

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ಈ ಪ್ರಸ್ತಾವವನ್ನು ಮಂಡಿಸುತ್ತೇನೆ.

"ಪಟ್ಟಿ IIರ ನಮೂದು ೧೮ರ ಬದಲಾಗಿ ಕೆಳಕಂಡ ನಮೂದನ್ನು ಸೇರಿಸಬೇಕು."

"೧೮ ಶಿಕ್ಷಣ, ವಿಶ್ವವಿದ್ಯಾನಿಲಯಗಳೂ ಸೇರಿದಂತೆ ಪಟ್ಟಿ Iರ ನಮೂದುಗಳು ೪೦, ೪೦ಎ ಮತ್ತು ೫೭ ಮತ್ತು ೫೭ಎ ಮತ್ತು ಪಟ್ಟಿ IIIರ ನಮೂದು ೧೭–ಎ ಇವುಗಳಿಗೆ ಉಪಬಂಧಗಳಿಗೆ ಒಳಪಟ್ಟು.

(ನಮೂದು ೨೪ಕ್ಕೆ ಪ್ರಸ್ತಾವಿಸಲಾದ ಎಲ್ಲ ತಿದ್ದುಪಡಿಗಳನ್ನು ಡಾ. ಅಂಬೇಡ್ಕರ್ ಅವರು ತಿರಸ್ಕರಿಸಿದರು ಮತ್ತು ಸದನವು ನಿರಾಕರಿಸಿತು. **ನಮೂದು ೨೪ ಅನ್ನು ರಾಜ್ಯ ಪಟ್ಟಿ ಸೇರಿಸಲಾಯಿತು.**)

* * *

**ಸರ್ದಾರ್ ಹುಕುಂ ಸಿಂಗ್** (ಪೂರ್ವ ಪಂಜಾಬಿ ಸಿಖ್): ಸ್ವಾಮಿ, ಈಗ ಪಂಡಿತ ಭಾರ್ಗವ ಅವರು ಈ ನಮೂದನ್ನು ಸಮವರ್ತಿ ಪಟ್ಟಿಗೆ ವರ್ಗಾಯಿಸಬೇಕು ಎಂದು ಕೋರಿ ಈ ತಿದ್ದುಪಡಿಯನ್ನು ಮಂಡಿಸಿರುವ ನಿಮಿತ್ತ ನನಗೆ ನನ್ನ ತಿದ್ದುಪಡಿಯನ್ನು ಮಂಡಿಸುವ ಅಗತ್ಯವಿಲ್ಲ. ನಾನು ಪಂಡಿತ ಭಾರ್ಗವ ತಿದ್ದುಪಡಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

*****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಕೆಳಕಂಡಂತೆ ಪಂಡಿತ ಭಾರ್ಗವ ಅವರ ತಿದ್ದುಪಡಿಯನ್ನು ಅಂಗೀಕರಿಸಲು ಸಿದ್ಧನಿದ್ದೇನೆ.

"ತಿದ್ದುಪಡಿಗಳ ಪಟ್ಟಿಯಲ್ಲಿರುವ ೩೬೨೬ ನಂಬರಿನ ತಿದ್ದುಪಡಿಗೆ ಸಂಬಂಧಿಸಿದ ಹಾಗೆ, ಪಟ್ಟಿ IIರ ನಮೂದು ೪೩ ಅನ್ನು, ಪಟ್ಟಿ IIIರ ನಮೂದು ೯–ಎ ಆಗಿ ವರ್ಗಾಯಿಸಬೇಕು."

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

**[ಪಟ್ಟಿ IIರ ನಮೂದು ೪೩ ಅನ್ನು ಸಮವರ್ತಿ ಪಟ್ಟಿಗೆ ವರ್ಗಾಯಿಸಲಾಯಿತು.]**

---

* ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೮೮೦.

** ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೮೮೧.

*** ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೯೧೪.

# ನಮೂದು ೪೫

*ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ನನ್ನ ಸ್ನೇಹಿತರಾದ ಶ್ರೀ ಶಿಬ್ಬನ್‌ಲಾಲ್ ಮತ್ತು ಶ್ರೀ ಸಾಹು ಇವರಿಬ್ಬರೂ ನಮೂದು ೪೫ರ ಆಶಯವನ್ನು ತಪ್ಪಾಗಿ ತಿಳಿದುಕೊಂಡಿದ್ದಾರೆ ಮತ್ತು ಅಷ್ಟೇ ಅಲ್ಲದೆ ಈ ನಮೂದನ್ನು ಬಿಟ್ಟುಬಿಟ್ಟರೆ ದೇಶದಲ್ಲಿರುವ ಜೂಜಾಟವಾಗಲಿ ಬಾಜಿ ಕಟ್ಟುವುದಾಗಲಿ ತೊಲಗಿ ಹೋಗುತ್ತವೆ ಎಂಬ ಭ್ರಾಮಕ ಕಲ್ಪನೆಗೆ ಒಳಗಾದ ಹಾಗೆ ತೋರುತ್ತದೆ ಎಂಬ ಸಂದೇಹವುಂಟಾಗಿದೆ ನನಗೆ. ನಾನು ಅವರಲ್ಲಿ ಅರಿಕೆ ಮಾಡಿಕೊಳ್ಳುವುದಿಷ್ಟೆ. ಈ ನಮೂದನ್ನು ಬಿಟ್ಟುಬಿಟ್ಟ ಪಕ್ಷದಲ್ಲಿ ಜೂಜಾಟದ ಮೇಲಾಗಲಿ, ಬಾಜಿ ಕಟ್ಟುವುದರ ಮೇಲಾಗಲಿ ಕಿಂಚಿತ್ತೂ ನಿಯಂತ್ರಣ ಉಳಿಯಲಾರದು. ಕಾರಣವೆಂದರೆ ನಮೂದು ೪೫ ಇದ್ದ ಪಕ್ಷದಲ್ಲಿ ಅದನ್ನು ಜೂಜಾಟಕ್ಕೆ ಅಥವಾ ಬಾಜಿ ಕಟ್ಟುವುದಕ್ಕೆ ಅನುಮತಿ ನೀಡುವ ಉದ್ದೇಶಕ್ಕಾಗಿ ಬಳಸಿಕೊಳ್ಳಬಹುದು. ಅಥವಾ ಅವುಗಳನ್ನು ನಿಷೇಧಿಸುವ ಸಲುವಾಗಿವೂ ಬಳಸಿಕೊಳ್ಳಬಹುದು. ಈ ನಮೂದು ಇಲ್ಲದೆ ಹೋದರೆ ಈ ವಿಚಾರದಲ್ಲಿ ಪ್ರಾಂತೀಯ ಸರ್ಕಾರಗಳು ಸಂಪೂರ್ಣವಾಗಿ ಅಸಹಾಯಕವಾಗುತ್ತವೆ.

ತಾವು ಏನು ಮಾಡುತ್ತಿದ್ದೇವೆ ಎಂಬುದನ್ನು ಮನಗಾಣಲಿ ಎಂದು ನಾನು ಆಶಿಸುತ್ತೇನೆ. ಈ ನಮೂದನ್ನು ಬಿಟ್ಟುಬಿಟ್ಟರೆ ಸಂಭವಿಸುವ ಇನ್ನೊಂದು ಪರಿಣಾಮ ಎಂದರೆ ಈ ವಿಷಯವು ನಮೂದು ೯೧ರ ಅಡಿಯಲ್ಲಿ ಪಟ್ಟಿ Iಕ್ಕೆ ತಾನಾಗಿಯೇ ವರ್ಗಾವಣೆಯಾಗಿ ಬರುತ್ತದೆ. ಪರಿಣಾಮ ಒಂದೇ, ಕೇಂದ್ರ ಸರ್ಕಾರವು ಜೂಜಾಟಕ್ಕೆ ಅನುಮತಿ ನೀಡಬಹುದು ಅಥವಾ ಅದನ್ನು ನಿಷೇಧಿಸಬಹುದು. ಆದಕಾರಣ ಉದ್ಭವಿಸುವ ಪ್ರಶ್ನೆ ಎಂದರೆ ಈ ನಮೂದು ಇಲ್ಲಿಯೇ ಉಳಿಯಬೇಕೇ ಅಥವಾ ಇಲ್ಲಿಂದ ಬಿಟ್ಟುಬಿಟ್ಟು ಪಟ್ಟಿ Iರಲ್ಲಿ ನಿರ್ದಿಷ್ಟ ಬಾಬು ಆಗಿ ಸೇರಿ ಹೋಗಬೇಕೇ ಅಥವಾ ನಮೂದು ೯೧ರಲ್ಲಿ ಸೇರ್ಪಡೆ ಆಗಿದೆಯೆಂದು ಭಾವಿಸಬೇಕೆ ಹೇಗೆ? ನಮ್ಮ ಸ್ನೇಹಿತರಿಗೆ ಜೂಜಾಟ ಅಥವಾ ಬಾಜಿ ಕಟ್ಟುವುದು ಇರಕೂಡದು ಎಂಬ ಬಗ್ಗೆ ಕಳಕಳಿ ಇದ್ದರೆ ಆಗ, ಜೂಜಾಟ ಅಥವಾ ಬಾಜಿ ಕಟ್ಟುವುದು ಇವೆರಡೂ ಸರ್ಕಾರವು ಸಹಿಸಲಾಗದ ಅಪರಾಧ ಎಂದು ಪರಿಗಣಿಸಿ, ಸಂವಿಧಾನದಲ್ಲಿಯೇ ಒಂದು ಅನುಚ್ಛೇದವಾಗಿ ಸೇರಿಸುವುದೇ ಸರಿಯಾದ ಕ್ರಮವಾಗುತ್ತದೆ. ಈಗಿರುವ ಹಾಗೆ ಅದು ಪ್ರತಿದಿನಕ್ಕೆ ಒಳಪಡತಕ್ಕ ಸಂಗತಿಯಾಗಿದ್ದು, ಅದನ್ನು (ಜೂಜಾಟವನ್ನು) ನಿಷೇಧಿಸಲು ಸರ್ಕಾರವು ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ. ಈ ವಿವರಣೆಯನ್ನು ಗಮನಿಸಿ ಅವರಿಬ್ಬರೂ ಈ ನಮೂದಿಗೆ ಸಂಬಂಧಿಸಿದ ಎತ್ತಿದ ಆಕ್ಷೇಪವನ್ನು ಹಿಂತೆಗೆದುಕೊಳ್ಳುತ್ತಾರೆ ಎಂದು ಆಶಿಸುತ್ತೇನೆ.

(ಪ್ರಸ್ತಾಪವನ್ನು ಅಂಗೀಕರಿಸಲಾಯಿತು. ನಮೂದು ೪೫ ಅನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)

ನಮೂದು ೩೮ ಮುಂದುವರಿದುದು.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾವೀಗ ನಮೂದು ೩೮ ಮತ್ತು ಪಂಡಿತ ಲಕ್ಷ್ಮೀಕಾಂತ ಮೈತ್ರಾ ಅವರ ಹೆಸರಿನಲ್ಲಿರುವ ತಿದ್ದುಪಡಿ ನಂ. ೩೧೧ ಇವುಗಳನ್ನು ಗಮನಿಸೋಣ ಎಂದು ತಮ್ಮನ್ನು ಕೇಳಿಕೊಳ್ಳಲೆ? ಈ ನಮೂದನ್ನು ತಡೆಹಿಡಿಯಬೇಕೆಂದು ತಾವು ಶ್ರೀ ಟಿ. ಟಿ. ಕೃಷ್ಣಮಾಚಾರಿಯವರಿಗೆ

---

* ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೯೧೭–೯೧೮.

** ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೯೧೮.

ನಿರ್ದೇಶನ ನೀಡಿದ್ದಿರಿ ಎಂದು ಕೇಳಿದೆನು. ಪರಂತು, ನಾನು ನನ್ನ ಸ್ನೇಹಿತ ಪಂಡಿತ ಮೈತ್ರಾ ಅವರ ತಿದ್ದುಪಡಿಯನ್ನು ಅಂಗೀಕರಿಸಲು ಸಿದ್ಧನಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಒಳ್ಳೇದು, ಪ್ರಶ್ನೆ ಎಂದರೆ:

"ಪಟ್ಟಿ IIರ ನಮೂದು ૩೮ ಅನ್ನು ಪಟ್ಟಿ IIIಕ್ಕೆ ವರ್ಗಾಯಿಸಬೇಕು.

(ತಿದ್ದುಪಡಿಯನ್ನು ಅಂಗೀಕರಿಸಲಾಯಿತು)

**ನಮುದು ૩೮ ಅನ್ನು ಸಮವರ್ತಿ ಪಟ್ಟಿಗೆ ವರ್ಗಾಯಿಸಲಾಯಿತು.**

## ನಮೂದು ೪೬

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈ ತಿದ್ದುಪಡಿಯನ್ನು ಅಂಗೀಕರಿಸಲಾರೆನು. ಈಗಿರುವ ನಮ್ಮ ರಾಜಸ್ವ ನಿರ್ಧಾರಣ ಪದ್ಧತಿಯನ್ನು ವಿನಿಯಮನ ಮಾಡಿರುವ ರೀತಿಯಲ್ಲಿ, ಈ ತಿದ್ದುಪಡಿ ಮೂಲಕ ಇಡೀ ಪ್ರಾಂತೀಯ ಆಡಳಿತವು ಬುಡಮೇಲಾಗುವ ಸಂಭವವುಂಟು. ಈ ವಿಷಯವನ್ನು ತರುವಾಯದ ಹಂತದಲ್ಲಿ ಸಂಸತ್ತು ಅಥವಾ ವಿವಿಧ ಪ್ರಾಂತೀಯ ಸರ್ಕಾರಗಳು ತನಿಖೆ ಮಾಡಬಹುದು. ಮತ್ತು ಆಗ ಅವರು ಭೂಕಂದಾಯವನ್ನು ವಿಧಿಸುವ ವಿಷಯದಲ್ಲಿ ಯಾವುದೇ ಬಗೆಯ ಒಂದು ವ್ಯವಸ್ಥೆಯನ್ನು ನಿರ್ಣಯಿಸಿದರೆ ಮತ್ತು ಆದಾಯ ತೆರಿಗೆಯನ್ನು ವಿಧಿಸಲು ಅಂಗೀಕರಿಸುವಂಥ ತತ್ವಗಳನ್ನು ಅಂಗೀಕರಿಸಿದರೆ, ಆ ಮೇಲೆ ನಮೂದನ್ನು ಬದಲಾಯಿಸಿಕೊಳ್ಳಬಹುದು. ಆದರೆ, ಇಂದು ಅದನ್ನು ಬದಲಾಯಿಸುವಂತಿಲ್ಲ. ಅದು ಕಷ್ಟ ಸಾಧ್ಯ. ಈ ವಿಷಯವನ್ನು ಪ್ರಾಂತೀಯ ಪ್ರಧಾನಿಗಳ ಸಮ್ಮೇಳನದಲ್ಲಿ ಸುದೀರ್ಘವಾಗಿ ಪರಿಶೀಲಿಸಲಾಗಿತ್ತು ಮತ್ತು ಈ ನಮೂದಿನ ಈಗಿರುವ ಸ್ಥಾನವನ್ನು ಬದಲಾಯಿಸುವ ವಿಚಾರವನ್ನು ಎಲ್ಲರೂ ಒಮ್ಮತದಿಂದ ವಿರೋಧಿಸಿದ್ದರು.

**(ತಿದ್ದುಪಡಿಗಳನ್ನು ನಿರಾಕರಿಸಲಾಯಿತು. ಪ್ರಸ್ತಾವವನ್ನು ಅಂಗೀಕರಿಸಲಾಯಿತು. ನಮೂದು ೪೫ ಅನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)**

## ನಮೂದು ೪೮

**ಶ್ರೀ ಬ್ರಜೇಶ್ವರ್ ಪ್ರಸಾದ್:** ಸ್ವಾಮಿ, ತಮ್ಮ ಅನುಮತಿ ಕೋರಿ ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ತಿದ್ದುಪಡಿಗಳ ಪಟ್ಟಿಯ ૩೬૩೧ ನಂಬರಿನ ತಿದ್ದುಪಡಿಯಲ್ಲಿ "ಬಿಟ್ಟುಬಿಡಲಾಗಿದೆ" ಎಂಬ ಪದಕ್ಕೆ ಬದಲಾಗಿ "ಪಟ್ಟಿ Iಕ್ಕೆ ವರ್ಗಾಯಿಸಲಾಗಿದೆ" ಎಂಬ ಪದಗಳನ್ನು ಮತ್ತು ಅಂಕಿಯನ್ನು ಸೇರಿಸತಕ್ಕದ್ದು.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ನಾನು ಸಹ ನನ್ನ ૩೧೧ರ ನಂಬರಿನ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಪಟ್ಟಿ IIರ ನಮೂದು ೪೮ ಅನ್ನು ಪಟ್ಟಿ IIIಕ್ಕೆ ವರ್ಗಾಯಿಸಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ನಾನು ಅಂಗೀಕರಿಸುವುದಿಲ್ಲ.

**(ಎರಡೂ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು. ನಮುದು ೪೮ ಅನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)**

---

* ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೯೧೯.

## ನಮೂದು ೪೯

*ಮಾನ್ಯ ಸಭಾಧ್ಯಕ್ಷರು: ಪ್ರಶ್ನೆಯೆಂದರೆ

"ತಿದ್ದುಪಡಿಗೆ ಪಟ್ಟಿಯಲ್ಲಿರುವ ೩೬೩೨ ನಂಬರಿನ ತಿದ್ದುಪಡಿಯಲ್ಲಿ "ಬಿಟ್ಟುಬಿಡಲಾಗಿದೆ" ಎಂಬ ಪದಕ್ಕೆ ಬದಲಾಗಿ "ಪಟ್ಟಿ Iಕ್ಕೆ ವರ್ಗಾಯಿಸಲಾಗಿದೆ" ಎಂಬ ಪದಗಳು ಮತ್ತು ಅಂಕಿಯನ್ನು ಸೇರಿಸತಕ್ಕದ್ದು."

ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆಯೆಂದರೆ

"ಪಟ್ಟಿ IIರ ೪೯ನ್ನು ಪಟ್ಟಿ IIIಕ್ಕೆ ವರ್ಗಾಯಿಸತಕ್ಕದ್ದು.

**(ತಿದ್ದುಪಡಿಯನ್ನು ನಿರಾಕರಿಸಲಾಯಿತು. ನಮೂದು ೪೯ನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)**

## ನಮೂದು ೫೦

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ, ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIರ ನಮೂದು ೫೦ ಇದರಲ್ಲಿ "ಅಥವಾ ರಸ್ತೆಗಳು" ಎಂಬ ಪದವನ್ನು ಕೊನೆಯಲ್ಲಿ ಸೇರಿಸತಕ್ಕದ್ದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈ ತಿದ್ದುಪಡಿಯನ್ನು ಅಂಗೀಕರಿಸುವುದಿಲ್ಲ.

"ಪಟ್ಟಿ IIರ ನಮೂದು ೫೦ ಇದರಲ್ಲಿ "ಅಥವಾ ರಸ್ತೆಗಳು" ಎಂಬ ಪದಗಳನ್ನು ಕೊನೆಯಲ್ಲಿ ಸೇರಿಸತಕ್ಕದ್ದು.

**(ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ಪ್ರಸ್ತಾವವನ್ನು ಅಂಗೀಕರಿಸಲಾಯಿತು. ಹಾಗೆ ತಿದ್ದುಪಡಿಯಾದ ನಮೂದು ೫೦ನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)**

## ನಮೂದು ೫೨

*****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIರ ನಮೂದು ೫೨ರಲ್ಲಿನ... ದ್ರವ್ಯಗಳು ಎಂಬ ಪದಗಳನ್ನು ಬಿಟ್ಟು ಬಿಡತಕ್ಕದ್ದು.

ಇದು ಕೇವಲ ಪರಿಣಾಮ ಸ್ವರೂಪದ ಕ್ರಮ.

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ಪ್ರಸ್ತಾವವನ್ನು ಅಂಗೀಕರಿಸಲಾಯಿತು. ಹಾಗೆ ವರ್ಗಾಯಿಸಲಾದ ನಮೂದು ೫೨ನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)**

---

* ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೯೨೦.

** ಅದೇ, ಪುಟ ೯೨೦

** ಅದೇ, ಪುಟ ೯೨೨.

## ನಮೂದು ೫೬

* **ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIರ ನಮೂದು ೫೬ ಅನ್ನು ಪಟ್ಟಿ IIIಕ್ಕೆ ವರ್ಗಾಯಿಸತಕ್ಕದ್ದು ಮತ್ತು ಅದರ ಕೊನೆಯಲ್ಲಿ ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು.

**ವಿವರಣೆ:** ಈ ನಮೂದಿನಲ್ಲಿ ಇರುವುದು ಯಾವುದೇ ವೃತ್ತಿಗಳು, ಆಜೀವಿಕೆಗಳು, ವ್ಯಾಪಾರಗಳು ಮತ್ತು ಉದ್ಯೋಗಗಳಿಂದ ಪ್ರಾಪ್ತವಾಗುವ ಅಥವಾ ಉದ್ಭವಿಸುವ ಆದಾಯದ ಮೇಲೆ ವಿಧಿಸತಕ್ಕ ತೆರಿಗೆಗಳನ್ನು ಸಂಬಂಧಿಸಿದಂತೆ ಒಕ್ಕೂಟ ಸರ್ಕಾರವು ಹೊಂದಿರುವ ಪ್ರಾಧಿಕಾರವನ್ನು ಈ ನಮೂದಿನಲ್ಲಿರುವುದು ಯಾವುದೂ ಪರಿಮಿತಿಗಳಿಸುವುದು ಎಂಬುದಾಗಿ ಅರ್ಥೈಸತಕ್ಕದ್ದಲ್ಲ.

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ತಿದ್ದುಪಡಿಗೆ ಒಂದಿಷ್ಟು ಮಿಥ್ಯಾ ಪರಿಕಲ್ಪನೆಯು ಆಧಾರ ಆಗಿದೆಯೆಂದು ನಾನು ಭಾವಿಸುತ್ತೇನೆ. ಇದು ಅಪ್ಪಟ ಪ್ರಾಂತೀಯ ನಮೂದು. ಇದರ ಮೂಲಕ ಆದಾಯ ತೆರಿಗೆ ವಿಧಿಸಲು ಕೇಂದ್ರಕ್ಕೆ ಇರುವ ಅಧಿಕಾರವನ್ನು ಪರಿಮಿತಗೊಳಿಸಲು ಸಾಧ್ಯವಿಲ್ಲ. ಇನ್ನು, ಈ ತಿದ್ದುಪಡಿಯನ್ನು, ಕೇಂದ್ರ ಸರ್ಕಾರಕ್ಕೆ ಮಾತ್ರವೇ ವಿಧಿಸಲು ಅಧಿಕಾರವಿರುವ ಆದಾಯ ತೆರಿಗೆಯ ಮೇಲೆ ಅತಿಕ್ರಮಣ ಆಗುವ ರೀತಿ ಜಾರಿಗೊಳಿಸಲು ಅವಕಾಶವುಂಟು. ಸ್ಥಳೀಯ ಪ್ರಾಧಿಕಾರಗಳು ವಿಧಿಸುವ ಯಾವುದೇ ತೆರಿಗೆಯನ್ನು ಆದಾಯ ತೆರಿಗೆ ಎಂದು ಪರಿಗಣಿಸಕೂಡದು ಎಂಬ ಆಶಯವುಳ್ಳ ಒಂದು ತಿದ್ದುಪಡಿಯನ್ನು ನಾನು ಅನುಚ್ಛೇದ ೨೫೬ಕ್ಕೆ ಪ್ರಸ್ತಾವಿಸಿರುವುದನ್ನು ತಮಗೆ ನೆನಪಿಸಬಹುದಷ್ಟೆ. ನನ್ನ ಅಭಿಪ್ರಾಯದಲ್ಲಿ ಈ ತಿದ್ದುಪಡಿಯ ಅಗತ್ಯವಾಗಿಲ್ಲ.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಸ್ವಾಮಿ, ತಿದ್ದುಪಡಿಯನ್ನು ಅಂಗೀಕರಿಸಬೇಕೆಂದು ಆಗ್ರಹ ಪಡಿಸುವುದಿಲ್ಲ.

**(ಸಭೆಯ ಅನುಮತಿ ಪಡೆದು ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.)**

**(ನಮೂದು ೫೬ನ್ನು ರಾಜ್ಯ ಪಟ್ಟಿಗೆ ಸೇರಿಸಲಾಯಿತು.)**

## ನಮೂದು ೫೮

*****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಪಟ್ಟಿ IIರ ನಮೂದು ೩೮ಕ್ಕೆ ಬದಲಾಗಿ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು.

"೫೮ ಸರಕುಗಳ ಖರೀದಿ ಮತ್ತು ಮಾರಾಟದ ಮೇಲಣ ತೆರಿಗೆ

'ವಹಿವಾಟು' ಎಂಬ ಪದವನ್ನು ತೆಗೆದುಹಾಕುವ ಪ್ರಯತ್ನ ನಡೆಸಿದ್ದೇವೆ."

* * *

---

* ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೯೨೩

** ಅದೇ, ಪುಟ ೯೨೩.

*** ಅದೇ, ಪುಟ ೯೨೩

***ಶ್ರೀ ವಿ.ಆಯ್. ಮುನಿಸ್ವಾಮಿ ಪಿಳ್ಳೈ** (ಮದ್ರಾಸು: ಸಾಮಾನ್ಯ)**:** ಸ್ವಾಮಿ, ತಮ್ಮ ಅನುಮತಿ ಪಡೆದು ತಿದ್ದುಪಡಿಯನ್ನು ಮಂಡಿಸುತ್ತೇನೆ.

"ತಿದ್ದುಪಡಿಗಳ ಪಟ್ಟಿಯ ೩೬೮ ನಂಬರಿನ ತಿದ್ದುಪಡಿಗೆ ಸಂಬಂಧಪಟ್ಟ ಹಾಗೆ, ಪಟ್ಟಿ IIರ ನಮೂದು ೫೮ರಲ್ಲಿ "ಸರಕುಗಳ ಖರೀದಿ" ಎಂಬ ಪದಗಳ ತರುವಾಯ "ವೃತ್ತಪತ್ರಿಕೆಗಳ ಹೊರತು ಇತರ ಮತ್ತು ಜಾಹಿರಾತುಗಳ ಮೇಲಣ ತೆರಿಗೆ" ಎಂಬ ಪದಗಳ ತರುವಾಯ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುವ ಪದಗಳಿಗೆ ಹೊರತಾಗಿ ಇತರ ಎಂಟು ಪದಗಳನ್ನು ಅನುಕ್ರಮವಾಗಿ ಸೇರಿಸತಕ್ಕದ್ದು.

**ಶ್ರೀ ದೇಶಬಂಧು ಗುಪ್ತ** (ದಿಲ್ಲಿ): ಇದನ್ನು ಸಹ ತಡೆಹಿಡಿಯಬಹುದು ಎಂದು ಸೂಚಿಸುತ್ತೇನೆ.

**ಸಭಾಧಕ್ಷರು:** ಇದು ನಿನ್ನೆ ಎತ್ತಲಾದ ಪ್ರಶ್ನೆ. ಅದನ್ನು ನಮ್ಮ ರೂಲಿಂಗ್‌ಗಾಗಿ ತಡೆಹಿಡಿದಿದ್ದೆವು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ತಿದ್ದುಪಡಿ ನಂ. ೧೨೨ ಅನ್ನು ಒಂದು ಸ್ವತಂತ್ರ ಬಾಬು ಆಗಿ ಪರಿಗಣಿಸಬಹುದು. ಅದನ್ನು ಹೆಚ್ಚಿನ ನಮೂದಿನ ಮೂಲಕ ಸೇರ್ಪಡೆ ಮಾಡಬಹುದು. ಆ ತರುವಾಯ ಕರಡು ರಚನಾ ಸಮಿತಿಯಿಂದ, ಅಂಗೀಕೃತವಾದರೆ, ಆ ಎರಡನ್ನೂ ಒಟ್ಟಾಗಿ ನಿರ್ವಹಿಸಬಹುದು. ಅದಕ್ಕೆ ಒಳಪಟ್ಟು ಈ ನಮೂದು ಹೇಳಬಹುದು. ನಂ. ೧೨೨ರಲ್ಲಿ ಆಸಕ್ತಿಯುಳ್ಳವರು ಇದನ್ನು ಹೆಚ್ಚಿನ ನಮೂದಿನ ರೂಪದಲ್ಲಿ ಸೇರ್ಪಡೆ ಮಾಡಬಹುದು.

**ಸಭಾಧ್ಯಕ್ಷರು:** ವೃತ್ತಪತ್ರಿಕೆಗಳು ಮತ್ತು ಜಾಹಿರಾತುಗಳಿಗೆ ಸಂಬಂಧಪಟ್ಟ ಹಾಗೆ ನಿಮ್ಮ ಪ್ರಶ್ನೆಯನ್ನು ಪರಿಶೀಲಿಸಲಾಗಿಲ್ಲ.

**ಶ್ರೀ ದೇಶಬಂಧು ಗುಪ್ತ:** ಕರಡು ರಚನಾ ಸಮಿತಿಯು ಈ ಬಗ್ಗೆ ಇನ್ನೊಂದೆಡೆಯಲ್ಲಿ ಏರ್ಪಾಟು ಮಾಡಬೇಕು ಎಂದು ಅಭಿಪ್ರಾಯ. ಹಾಗಾದರೆ, ಸದನವು ಈ ನಮೂದಿನ ಮೇಲೆ ತೀರ್ಮಾನ ಕೈಗೊಂಡ ತರುವಾಯ ಹಿಂದಿನದನ್ನು ಪರಿಷ್ಕರಿಸಲು ಸಾಧ್ಯವಾಗುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾವು ಈ ಮೂರು ಪಟ್ಟಿಗಳ ಬಗೆಗಿನ ಚರ್ಚೆಯನ್ನು ಮುಕ್ತಾಯಗೊಳಿಸುವುದಕ್ಕೆ ಮುನ್ನ ಈ ವಿಷಯವನ್ನು ಪರಿಶೀಲನೆಗೆ ತೆಗೆದುಕೊಳ್ಳಬಹುದು.

**ಸಭಾಧ್ಯಕ್ಷರು:** ನಾವು ತಡೆಹಿಡಿದ ೮೮ಎ ಅನ್ನು ಪರಿಶೀಲನೆಗೆ ತೆಗೆದುಕೊಳ್ಳುವಾಗ, ಈ ವಿಷಯವನ್ನು ಪ್ರತ್ಯೇಕವಾಗಿ ಕೈಗೆತ್ತಿಕೊಳ್ಳಲು ಅವಕಾಶ ಕೊಡಲು ಸಿದ್ಧನಿದ್ದೇನೆ. ವಸ್ತುಸ್ಥಿತಿ ಎಂದರೆ ಜಾಹಿರಾತಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. ಆದರೆ ಅದಕ್ಕೆ ಹೊರತಾಗಿ ಡಾ. ಅಂಬೇಡ್ಕರ್ ಅವರು ತಿದ್ದುಪಡಿ ಮಾಡಲಾದಂತೆ, ಈ ನಮೂದನ್ನು ಮತಕ್ಕೆ ಹಾಕಬೇಕು.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ರೂಲಿಂಗ್‌ಗೆ ಇನ್ನೂ ಆಗಬೇಕಾಗಿರುವಾಗ ಅದನ್ನು ತೀರ್ಣಗೊಳಿಸುವುದು ಹೇಗೆ.

**ಶ್ರೀ ದೇಶಬಂಧು ಗುಪ್ತ:** ಅದನ್ನು ತಡೆಹಿಡಿಯುವುದು ಸುಲಭವೆಂದು ತೋರುತ್ತದೆ.

**ಸಭಾಧ್ಯಕ್ಷರು:** ಸರಿ. ಅದನ್ನು ತಡೆಹಿಡಿಯೋಣ. ಅದನ್ನು ನಾವು ನಿನ್ನೆ ತಡೆಹಿಡಿದಿರುವ ೮೮ಎ ಅದರ ಜತೆಗೆ ಪರಿಶೀಲನೆಗೆ ತೆಗೆದುಕೊಳ್ಳಬಹುದು.

ಪಟ್ಟಿ IIರ ನಮೂದು ೫೮ ಅನ್ನು ತಡೆಹಿಡಿಯಲಾಯಿತು.

---

* ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೯೨೪.

## ನಮೂದು ೫೯

***ಸಭಾಧ್ಯಕ್ಷರು:** ನಮೂದು ೫೯

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIರ ನಮೂದು ೫೯ರಲ್ಲಿ ಈ ಮುಂದಿನದನ್ನು ಕೊನೆಯಲ್ಲಿ ಸೇರಿಸಬೇಕು.

ಪಟ್ಟಿ IIIರ ನಮೂದು ೨೧ರ ಉಪಬಂಧಗಳಿಗೆ ಒಳಪಟ್ಟಿ ಪಟ್ಟಿ IIII ಇದರಲ್ಲಿ ಕೇಂದ್ರ ಸರ್ಕಾರವು ತೆರಿಗೆ ವಿಧಿಸುವ ತತ್ವಗಳನ್ನು ಗೊತ್ತುಪಡಿಸುವ ಅಧಿಕಾರವು ಹೊಂದಿರತಕ್ಕದ್ದು ಎಂದು ನಮೂದಿಸಲಿದ್ದೇವೆ.

**(ಡಾ. ಅಂಬೇಡ್ಕರ್ ಅವರ ಪ್ರಸ್ತಾವವನ್ನು ಅಂಗೀಕರಿಸಲಾಯಿತು. ಹಾಗೆ ತಿದ್ದುಪಡಿಯಾದ ನಮೂದು ೫೯ನ್ನು ರಾಜ್ಯ ಪಟ್ಟಿಗೆ ವರ್ಗಾಯಿಸಲಾಯಿತು.)**

## ನಮೂದು ೬೪

****ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIರ ನಮೂದು ೬೪ ಅನ್ನು ತೆಗೆದುಹಾಕಬೇಕು.

ಅದನ್ನು ಸಮವರ್ತಿ ಪಟ್ಟಿಗೆ ತೆಗೆದುಕೊಳ್ಳಲಾಗಿದೆ.

**(ಪ್ರಸ್ತಾವವನ್ನು ಅಂಗೀಕರಿಸಲಾಯಿತು. ಪಟ್ಟಿ IIರ ನಮೂದು ೬೪ ಅನ್ನು ರಾಜ್ಯ ಪಟ್ಟಿಯಿಂದ ತೆಗೆದು ಹಾಕಲಾಯಿತು.)**

## ನಮೂದು ೬೭

*****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ಈ ವಿಷಯವನ್ನು, ಸಂವಿಧಾನದಲ್ಲಿ ಈಗಿರುವ ಕರಡಿಗೆ ಸೇರಿಸಬೇಕೆಂದು ಪ್ರಸ್ತಾವಿಸುವ ಭಾಗದ ಅಡಿಯಲ್ಲಿ, ಅಂದರೆ ಸಂಸ್ಥಾನಿಕರಿಗೆ ಸಲ್ಲತಕ್ಕ ಎಲ್ಲ ಸಂದಾಯಗಳನ್ನು ಕುರಿತು ವಿವರಿಸಲಾಗುವುದೋ ಆ ಭಾಗದ ವ್ಯಾಪ್ತಿಗೆ ತರಲಾಗುವುದು ಮತ್ತು ಈಗ ಸದ್ಯಕ್ಕೆ ಅಂಥ ಯಾವುದೇ ತಿದ್ದುಪಡಿಯ ಅಗತ್ಯವಿಲ್ಲ ಎಂದು ನನ್ನ ಅನಿಸಿಕೆ. ನನ್ನ ಸ್ನೇಹಿತರು, ತಿದ್ದುಪಡಿಯ ಮೂಲಕ ನಾನು ಸೇರಿಸಬಯಸುವ ಆ ಭಾಗವನ್ನು ನೋಡಿದ ಅನಂತರ, ತಮ್ಮ ಉದ್ದೇಶವು ನಮ್ಮ ಪ್ರಸ್ತಾವದ ದ್ವಾರಾ ಪೂರೈಸಿದೆಯೇ ಹೇಗೆ ಎಂದು ಮನಗಾಣುತ್ತಾರೆ ಎಂದು ಭಾವಿಸಿದ್ದೇವೆ. ಇಲ್ಲದಿದ್ದರೆ, ಆ ಭಾಗವು ಸದನದ ಮುಂದೆ ಪರಿಶೀಲನೆಗೆ ಬಂದಾಗ, ಅವರು ಆ ಭಾಗಕ್ಕೆ ಒಂದು ತಿದ್ದುಪಡಿಯನ್ನು ಪ್ರಸ್ತಾವಿಸಿದರೆ ಅದು ಕ್ರಮಬದ್ಧವಾಗುತ್ತದೆ.

**ಕಾಕ ಭಗವಂತ ರಾಯ್:** ಸ್ವಾಮಿ ನಾನು ನನ್ನ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬಯಸುತ್ತೇನೆ.

**(ಸದನದ ಅನುಮತಿಯ ಮೇರೆಗೆ ತಿದ್ದುಪಡಿಯನ್ನು ಹಿಂದೆ ಪಡೆಯಲಾಯಿತು.)**

---

* ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೯೨೪.

** ಅದೇ, ಪುಟ ೯೨೫.

*** ಅದೇ, ಪುಟ ೯೨೬.

# ಪಟ್ಟಿ III
# ನಮೂದು ೨-ಎ

*ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ಇನ್ನು ನಾವು ೨ಎ ತಿದ್ದುಪಡಿಗೆ ಬರುತ್ತೇವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಪಡೆದು ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIರ ನಮೂದು ೨ರ ತರುವಾಯ ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು.

"೨ಎ ಕಾನೂನು ದ್ವಾರಾ ಸ್ಥಾಪಿತವಾದ ಸರ್ಕಾರದ ಸ್ಥಿರತೆಗೆ ಮತ್ತು ಸಾರ್ವಜನಿಕ ಸುವ್ಯವಸ್ಥೆ ಹಾಗೂ ಸಮುದಾಯದ ಜೀವನಕ್ಕೆ ಅಗತ್ಯವಾದ ಸೇವೆಗಳು ಮತ್ತು ಸರಬರಾಜುಗಳ ನಿರ್ವಹಣೆ ಇವುಗಳಿಗೆ ಸಂಬಂಧಪಟ್ಟ ಕಾರಣಗಳಿಗಾಗಿ ನಿವಾರಕ, ನಿರೋಧ, ಅಂತ ನಿರೋಧಕ್ಕೆ ಒಳಪಟ್ಟ ವ್ಯಕ್ತಿಗಳು."

* * *

**ಏಳನೆಯ ಅನುಸೂಚಿ** (ಮುಂದುವರಿದುದು)

**ಮಾನ್ಯ ಉಪಾಧ್ಯಕ್ಷರು** (ಶ್ರೀ ಟಿ.ಟಿ. ಕೃಷ್ಣಮಾಚಾರಿ): ನಾವು ಈಗ ಸಮವರ್ತಿ ಪಟ್ಟಿಯ ೨ಎ ನಮೂದನ್ನು ಪರಿಶೀಲಿಸುತ್ತಿದ್ದೇವೆ.

**ಮಿ. ನಜೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ-ಮುಸ್ಲಿಂ): ಮಾನ್ಯ ಉಪಾಧ್ಯಕ್ಷರೆ, ನನ್ನ ತಿದ್ದುಪಡಿ ಸಂಖ್ಯೆ ೨೯೦ರಲ್ಲಿ ಒಂದು ಶಾಬ್ದಿಕ ಬದಲಾವಣೆ ಮಾಡಲು ತಮ್ಮ ಅನುಮತಿ ಕೋರುತ್ತೇನೆ. ಶ್ರೀ ಕಾಮತ್ ಅವರು ಸಂಖ್ಯೆ ೨೮೯ ತಿದ್ದುಪಡಿಯನ್ನು ಮಂಡಿಸಿದ್ದಾರೆ. ನಾನು ಮುಂದಿನ ತಿದ್ದುಪಡಿಯನ್ನು ಮಂಡಿಸಬಯಸುತ್ತೇನೆ ಮತ್ತು ಅದರಲ್ಲಿ ಕೊಂಚ ಶಾಬ್ದಿಕ ವ್ಯತ್ಯಾಸವನ್ನು ಮಾಡಲು ತಮ್ಮ ಅನುಮತಿ ಕೋರುತ್ತೇನೆ. ಆ ತಿದ್ದುಪಡಿಯು ಖಂಡಿತವಾಗಿಯೂ ಅಂಗೀಕೃತವಾಗಲಿಕ್ಕಿಲ್ಲೆಂದು ನನಗೆ ಗೊತ್ತು. ಅದನ್ನು ಪರಿಶೀಲನೆಗೆ ಸಹ ತೆಗೆದುಕೊಳ್ಳಲಿಕ್ಕಿಲ್ಲ ಎಂದು ಸಹ ಬಲ್ಲೆನು. ಆದ ಕಾರಣ ತಿದ್ದುಪಡಿಯು ಇನ್ನಷ್ಟು ಅಂದವಾಗಿ ಕಾಣುವ ಹಾಗೆ ಮಾಡಿದರೆ ಅಪಾಯವೇನೂ ಇಲ್ಲ. ನನ್ನ ತಿದ್ದುಪಡಿಯಲ್ಲಿ ಇರುವ 'ಬಲಪ್ರಯೋಗ ದ್ವಾರಾ ಸರ್ಕಾರ'ವನ್ನು ಮಾಡುವುದು ಎಂಬ ಪದಗಳಿಗೆ ಬದಲಾಗಿ "ರಾಜ್ಯದ ಭದ್ರತೆ" ಎಂಬ ಪದಗಳನ್ನು ಸೇರಿಸಲು ತಮ್ಮ ಅನುಮತಿಯನ್ನು ಕೋರಬಹುದೆ? "ರಾಜ್ಯದ ಭದ್ರತೆ" ಎಂಬ ಪದಾವಳಿಯು ಹೆಚ್ಚು ಸೂಕ್ತವೆಂದು ತೋರುತ್ತದೆ. ಮತ್ತು ಈ ಬದಲಾವಣೆ ಕೇವಲ ಶಾಬ್ದಿಕ ಬದಲಾವಣೆ.

**ಮಾನ್ಯ ಉಪಾಧ್ಯಕ್ಷರು:** ಹೌದು

**ಮಿ. ನಜೀರುದ್ದೀನ್ ಅಹ್ಮದ್:** ಸ್ವಾಮೀ, ನಾನು...

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಸ್ವಾಮೀ, ನನ್ನ ಸ್ನೇಹಿತರು "ರಾಜ್ಯದ ಭದ್ರತೆಗೆ ಸಂಬಂಧಪಟ್ಟ" ಎಂಬ ಪದಗಳನ್ನು "ಕಾನೂನು ದ್ವಾರಾ ಸ್ಥಾಪಿತವಾದ ಸರ್ಕಾರದ ಸ್ಥಿರತೆಗೆ ಸಂಬಂಧಪಟ್ಟ" ಎಂಬ ಪದಗಳಿಗೆ ಬದಲಾಗಿ ಒಪ್ಪಿಕೊಳ್ಳಲು ಸಿದ್ಧರಿದ್ದರೆ, ನಾನು ಅದನ್ನು ಅಂಗೀಕರಿಸಲು ಸಿದ್ಧ ಎಂದು ಅವರಿಗೆ ಸಲಹೆ ಸೂಚಿಸಬಹುದೆ? ಕಾರಣವೆಂದರೆ ನಾವು ಪಟ್ಟಿ Iರ ನಮೂದು ೩ ಇದರಲ್ಲಿ ಬಳಸಿದ ಭಾಷೆ ಯಥಾವತ್ತಾಗಿ ಅದೇ ಆಗಿರುತ್ತದೆ. ನಾವು ಅಲ್ಲಿ ಭಾರತದ ಭದ್ರತೆ ಎಂಬ ಪದವನ್ನು ಬಳಸಿದ್ದೇವೆ. ನಾನೀಗ ಸೂಚಿಸಿದ ಪದ ಪ್ರಯೋಗವನ್ನು ಬಳಸಲು ನನ್ನ ಸ್ನೇಹಿತರು ಒಪ್ಪಿಗೆ ನೀಡಿದರೆ ನಾನು ಅದನ್ನು ಅಂಗೀಕರಿಸಲು ಸಿದ್ಧನಿದ್ದೇನೆ.

* ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೬೨೬.

* ಅದೇ, ಪುಟ ೬೨೯-೬೩೦.

**ಮಿ. ನಝಿರುದ್ದೀನ್ ಅಹ್ಮದ್:** ನಾನು ಡಾ. ಅಂಬೇಡ್ಕರ್ ಅವರಿಗೆ ಕೃತಜ್ಞನಾಗಿದ್ದೇನೆ. ಈ ಬದಲಾವಣೆಯನ್ನೇ ಮಾಡಲು ನಾನು ಉಪಾಧ್ಯಕ್ಷರ ಅನುಮತಿಯನ್ನು ಕೋರುತ್ತಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆದರೆ ನಿಮ್ಮ ಪದಗಳು ಬೇರೆ ಆಗಿದ್ದವು.

**ಮಿ. ನಝಿರುದ್ದೀನ್ ಅಹ್ಮದ್:** ನಾನು ತಿದ್ದುಪಡಿಯಾದ ತಿದ್ದುಪಡಿಯನ್ನು ಮಂಡಿಸುವವನಿದ್ದೆನು ಮತ್ತು ಅದು ಡಾ. ಅಂಬೇಡ್ಕರ್ ಅವರು ಈಗ ಸೂಚಿಸಿದ ಹಾಗೆಯೇ, ಶಬ್ದಕ್ಕೆ ಶಬ್ದ ಯಥಾವತ್ತಾಗಿತ್ತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹಾಗಾದರೆ, ಮಾನ್ಯರೇ ಚರ್ಚೆಗೆ ಎಡೆಯಿಲ್ಲ. ನನ್ನ ಮಾನ್ಯ ಸ್ನೇಹಿತರು ನಾನು ಸೂಚಿಸಿದ ಮೇರೆಗೆ ತಿದ್ದುಪಡಿಯನ್ನು ಮಂಡಿಸುವುದಾದರೆ ಅದನ್ನು ಅಂಗೀಕರಿಸಲು ಸಿದ್ಧನಿದ್ದೇನೆ.

**ಮಿ. ನಝಿರುದ್ದೀನ್ ಅಹ್ಮದ್:** ನಾನು ನನ್ನ ತಿದ್ದುಪಡಿಯನ್ನು ಮಂಡಿಸಬೇಕು.

**ಉಪಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರು ಅದನ್ನು ಅಂಗೀಕರಿಸುತ್ತಿರುವಾಗ, ಮಾನ್ಯ ಸದಸ್ಯರು ತಿದ್ದುಪಡಿಯನ್ನು ಮಂಡಿಸಿ ಆ ಬಗ್ಗೆ ಮಾತನಾಡುವುದು ಅಗತ್ಯವಿದೆಯೇ?

**ಮಿ. ನಝಿರುದ್ದೀನ್ ಅಹ್ಮದ್:** ನನ್ನ ಮಾನ್ಯ ಸ್ನೇಹಿತರು ನನ್ನ ತಿದ್ದುಪಡಿಯು ಸರಿಯಾಗಿದೆ ಎಂದು ಮತ್ತು ಅವರ ವಿಚಾರಗಳಿಗೆ ಸಂವಾದಿ ಆಗಿದೆ ಎಂದು ಅದಕ್ಕೆ ಮನ್ನಣೆ ನೀಡಲು ತಪ್ಪಿದರೆ, ನಾನು ತಿದ್ದುಪಡಿಯನ್ನು ಮಂಡಿಸಿ ಒಂದೆರಡು ಮಾತುಗಳನ್ನು ಆಡಬೇಕಾಗುತ್ತದೆ. ನನಗೆ ಅನುಮತಿ ನೀಡಬೇಕೆಂದು ಕೋರುತ್ತೇನೆ.

ಪಟ್ಟಿ Iರ (ಆರನೆಯ ವಾರ) ೨೪ನೇ ನಂಬರಿನ ತಿದ್ದುಪಡಿಯಲ್ಲಿ, ಪ್ರಸ್ತಾವಿತ III ಪಟ್ಟಿಯ ೨–ಎ ನಮೂದಿನಲ್ಲಿ "ಸರ್ಕಾರದ ಸ್ಥಿರತೆ" ಎಂಬ ಪದಗಳಿಗೆ ಬದಲಾಗಿ "ರಾಜ್ಯದ ಭದ್ರತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ತಿದ್ದುಪಡಿಯನ್ನು ಅಂಗೀಕರಿಸುತ್ತಿರುವ ಕಾರಣ ಯಾವುದೇ ಚರ್ಚೆಗೆ ಅವಕಾಶ ಇಲ್ಲವೆಂದು ಭಾವಿಸುತ್ತೇನೆ.

**ಮಿ. ನಝಿರುದ್ದೀನ್ ಅಹ್ಮದ್:** ಅದು ನನಗೆ ಗೊತ್ತು. ಆದರೆ ಸದನ ಇದೆಯಲ್ಲ. ನಾನು ಒಂದೆರಡು ಶಬ್ದಗಳನ್ನು ಮಾತ್ರ ಆಡುತ್ತೇನೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ಪ್ರಸ್ತಾವಿಸಿರುವ ಹೊಸ ನಮೂದಿನ ಸಂದರ್ಭದಲ್ಲಿ ಅಂದರೆ "ಸರ್ಕಾರದ ಸ್ಥಿರತೆಗೆ ಸಂಬಂಧಪಟ್ಟ ಕಾರಣಗಳಿಗಾಗಿ ನಿವಾರಕ ನಿರೋಧ" ಎಂಬ ನಮೂದಿನ ಸಂದರ್ಭದಲ್ಲಿ ಸರ್ಕಾರದ ಸ್ಥಿರತೆ ಎಂಬ ಪದಾವಳಿಯು ಒಂದಿಷ್ಟು ಅಸ್ಪಷ್ಟವಾಗಿರುತ್ತದೆ. "ಸರ್ಕಾರ" ಮತ್ತು "ರಾಜ್ಯ" ಇವೆರಡು ವಿಭಿನ್ನ ಸಂಗತಿಗಳಾಗಿರುತ್ತವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆ ಕಾರಣಕ್ಕಾಗಿಯೇ ನಾನು ಇದನ್ನು ಅಂಗೀಕರಿಸಿದ್ದು.

**ಮಿ. ನಝಿರುದ್ದೀನ್ ಅಹ್ಮದ್:** ಸ್ವಾಮಿ, ಆದರೆ ಯಾವ ಕಾರಣಕ್ಕಾಗಿ ಎಂದು ಸ್ಪಷ್ಟಪಡಿಸಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** "ರಾಜ್ಯದ ಭದ್ರತೆ" ಎಂಬ ಪದಾವಳಿಯೇ ಹೆಚ್ಚು ಸೂಕ್ತ ಎಂದು ನಾನು ವಿವರಿಸಿದ್ದೇನೆ. ಆದ ಕಾರಣ ಈ ಕುರಿತು ವಾದಕ್ಕೆ ಅವಕಾಶವಿಲ್ಲ.

**ಉಪಾಧ್ಯಕ್ಷರು:** ಮಾನ್ಯ ಸದಸ್ಯರು ಪ್ರಸ್ತಾವಿಸಿರುವ ತಿದ್ದುಪಡಿಯು ಅಂಗೀಕೃತವಾಗಿರುವ ಕಾರಣ ಸವಿಸ್ತಾರವಾದ ವಿವಾದಗಳು ಅಗತ್ಯವಿಲ್ಲ.

**ಮಿ. ನಝಿರುದ್ದೀನ್ ಅಹ್ಮದ್:** ಆದರೆ ಸದನಕ್ಕೆ ಗೊತ್ತಾಗಬೇಕು. ಕೆಟ್ಟ ಪ್ರಾರೂಪಣದ ಬಹಿರಂಗದ ವಿಷಯದಲ್ಲಿ ಅಳುಕಿಗೆ ಕಾರಣ ಏನು? ಅದು ನನ್ನ ಪ್ರಶ್ನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ತಪ್ಪು ಮಾಡಿದ್ದೇನೆ ಎಂದು ಒಪ್ಪಿಕೊಂಡ ಪಕ್ಷದಲ್ಲಿ ನನ್ನ ಸ್ನೇಹಿತರಿಗೆ ಸಮಾಧಾನ ಆಗುವುದಿದ್ದರೆ, ನಾನು ಹಾಗೆ ಒಪ್ಪಿಕೊಳ್ಳಲು ಸಿದ್ಧನಿದ್ದೇನೆ.

**ಮಿ. ನಝಿರುದ್ದೀನ್ ಅಹ್ಮದ್:** ಅದನ್ನು ಸದನವು ಮಾತ್ರ ಒಪ್ಪಿಕೊಂಡರೆ ಸಾಲದು. ವಿಶಾಲ ವಿಶ್ವವೇ ಒಪ್ಪಿಕೊಳ್ಳಬೇಕು. ಈ ಪ್ರಾರೂಪಣವಾಗಿರುವ ಹಾಗೆ "ಸರ್ಕಾರದ ಭದ್ರತೆ" ಎಂದರೆ ಮಂತ್ರಿಮಂಡಲದ ಭದ್ರತೆ ಎಂದು ಅರ್ಥವಾಗಬಹುದು ಮತ್ತು ಆ ಕಾರಣಕ್ಕಾಗಿ ಅವರು ವಿರೋಧ ಪಕ್ಷವನ್ನು ಕಾರಾವಾಸದಲ್ಲಿ ಇಡಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸರಿ ಸರಿ. ನಾವು ತಪ್ಪು ಮಾಡಿದ್ದುಂಟು ಒಪ್ಪಿಗೆಯೆ?

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಿದ್ದುಪಡಿ ಆದ ತಿದ್ದುಪಡಿಯನ್ನು ಮಂಡಿಸಬೇಕೇ ಹೊರತು ನೋಟೀಸ್ ಪೇಪರ್‌ನಲ್ಲಿ ಇಡುವ ರೂಪದಲ್ಲಿ ಅಲ್ಲ.

**ಉಪಾಧ್ಯಕ್ಷರು:** ನಾನು ಈಗ ಡಾ. ಅಂಬೇಡ್ಕರ್ ಅವರು ಪರಿಷ್ಕರಿಸಿದ ೧೨೪ ನಂಬರಿನ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIIರ ನಮೂದು ೨ರ ತರುವಾಯ ಈ ಮುಂದಿನ ನಮೂದನ್ನು ಸೇರಿಸಬೇಕು.

"೨–ಎ ರಾಜ್ಯದ ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆ ಮತ್ತು ಜನಸಮುದಾಯದ ಜೀವನಕ್ಕೆ ಅತ್ಯಗತ್ಯವಾದ ಸೇವೆ ಅಥವಾ ಸರಬರಾಜುಗಳಿಗೆ ಸಂಬಂಧಪಟ್ಟ ಕಾರಣಗಳಿಗಾಗಿ ನಿವಾರಕ ನಿರೋಧ ಅಂಥ ವಿರೋಧಕ್ಕೆ ಒಳಪಟ್ಟ ವ್ಯಕ್ತಿಗಳು.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

**ತಿದ್ದುಪಡಿಯಾದ ಹಾಗೆ ನಮೂದು ೨ಎ ಅನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಯಿತು.**

## ನಮೂದು ೩

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIIರ ನಮೂದು ೩ಕ್ಕೆ ಬದಲಾಗಿ ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು.

"೩. ಸೆರೆಯಾಳುಗಳನ್ನು, ಆಪಾದಿತ ವ್ಯಕ್ತಿಗಳನ್ನು ಮತ್ತು ಈ ಪಟ್ಟಿಯ ೨ಎ ನಮೂದಿನಲ್ಲಿ ನಿರ್ದಿಷ್ಟಪಡಿಸಲಾದ ಕಾರಣಗಳಿಗಾಗಿ ನಿವಾರಕ ನಿರೋಧಕ್ಕೆ ಒಳಪಡಿಸಲಾದ ವ್ಯಕ್ತಿಗಳನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾಗಿಸುವುದು.

**ಮಿ. ನಝಿರುದ್ದೀನ್ ಅಹ್ಮದ್:** ನಾನು ತಿದ್ದುಪಡಿ ನಂ. ೨೯೧ ಅನ್ನು ಮಂಡಿಸುತ್ತಿಲ್ಲ.

**ಉಪಾಧ್ಯಕ್ಷರು:** ತಿದ್ದುಪಡಿ ೨೯೨ ಸದಸ್ಯರು ಉಪಸ್ಥಿತರಿಲ್ಲ. ಆದಕಾರಣ ತಿದ್ದುಪಡಿಯನ್ನು ಮಂಡಿಸಿಲ್ಲ.

ನಾನು ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

**(ತಿದ್ದುಪಡಿಯನ್ನು ತಿದ್ದುಪಡಿಯಾದ ಹಾಗೆ ನಮೂದು ೩ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.)**

---

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೩೧.

** ಅದೇ, ಪುಟ ೯೩೧.

## ನಮೂದು ೪

*ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್: ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIIರ ನಮೂದು ೪ರಲ್ಲಿ ಇರುವ 'ಮೊದಲನೆಯ ಅನುಸೂಚಿಯ ಭಾಗ I ಅಥವಾ ಭಾಗ IIರಲ್ಲಿ ತತ್ಕಾಲದಲ್ಲಿ ನಿರ್ದಿಷ್ಟಪಡಿಸಿರುವ ಎಂಟು ಪದಗಳನ್ನು ಮತ್ತು ಅಂಕಿಯನ್ನು ತೆಗೆದುಹಾಕಬೇಕು.

**(ಡಾ. ಅಂಬೇಡ್ಕರ್ ಅವರಿಂದ ಹಾಗೆ ತಿದ್ದುಪಡಿಯಾದ ನಮೂದು ೪ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.)**

## ನಮೂದು ೬

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್: ಸ್ವಾಮಿ, ನನ್ನ ಮಾನ್ಯ ಮಿತ್ರರಾದ ಡಾ. ದೇಶ್‌ಮುಖ್ ಅವರ ತಿದ್ದುಪಡಿಯು, ನಮೂದು ೬ರಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಕೆಲವು ಪದಗಳನ್ನು ಮಧ್ಯೆ ಸೇರಿಸಲು ಉದ್ದೇಶಿಸಿರುವಷ್ಟರ ಮಟ್ಟಿಗೆ ಸಂದರ್ಭಕ್ಕೆ ಪ್ರಸ್ತುತ ಅಲ್ಲ. ಯಾಕೆಂದರೆ ನಮೂದು ೬ ಶಿಶುಗಳು ಮತ್ತು ಅಪ್ರಾಪ್ತವಯಸ್ಕರು ಇವರಿಗೆ ಸಂಬಂಧಪಡುವುದೇನೋ ನಿಜವೇ. ಆದರೆ, ಸಮಗ್ರ ನಮೂದನ್ನು ಪರಿಶೀಲಿಸಲಾಗಿ, ಸದರಿ ನಮೂದು ಸ್ಥಾನಮಾನವನ್ನು ಕುರಿತದ್ದು ಎಂಬ ಸಂಗತಿಯನ್ನು ಗಮನದಲ್ಲಿಡಬೇಕು. ಶಿಶುಗಳು ಮತ್ತು ಅಪ್ರಾಪ್ತ ವಯಸ್ಕರ ಸ್ಥಾನಮಾನಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಈ ಪ್ರವರ್ಗಗಳಲ್ಲಿ ನಮೂದು ೬ ಇದರಲ್ಲಿ ಸೇರಿಸಿದ್ದುಂಟು.

**ಡಾ. ಪಿ. ಎಸ್. ದೇಶ್‌ಮುಖ್:** ಅದಕ್ಕಾಗಿಯೇ ನಾನು ಒಂದು ಸ್ವತಂತ್ರ ನಮೂದನ್ನು ಪ್ರಸ್ತಾವಿಸಲು ಇಷ್ಟಪಟ್ಟಿದ್ದು ಒಂದು ಹೆಚ್ಚಿನ ಮತ್ತು ಪ್ರತ್ಯೇಕವಾದ ನಮೂದನ್ನು ಮಂಡಿಸುವ ಆಶಯವುಳ್ಳ ಒಂದು ತಿದ್ದುಪಡಿಯು ನನ್ನ ಹೆಸರಿನಲ್ಲಿ ಇದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅವರು ಮಂಡಿಸಿದ ನಮೂದನ್ನು ಪರಿಶೀಲಿಸುವವನಿದ್ದೆನು. ಈ ಪದಗಳನ್ನು ನಮೂದು ೬ ಇದರಲ್ಲಿ ಆ ನಮೂದಿನ (ನಂಬರು ೬) ರಚನೆಯನ್ನು ತೀವ್ರವಾದ ಹಾನಿಗೆ ಗುರಿಪಡಿಸದೆ ಮಧ್ಯೆ ಸೇರಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಈ ಹಂತದಲ್ಲಿ ಈ ಪದಗಳನ್ನು ಮಧ್ಯೆ ಸೇರಿಸುವ ಪ್ರಸ್ತಾವವನ್ನು ನಾನು ಖಂಡಿತವಾಗಿಯೂ ಒಪ್ಪಿಕೊಳ್ಳಲಾರೆನು.

ಸ್ವಾಮಿ, ನಾನೀಗ ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಸಾಮಾನ್ಯ ಪ್ರಶ್ನೆಯನ್ನು ಪರಿಶೀಲಿಸಲು ಇಷ್ಟಪಡುತ್ತೇನೆ. ಆ ಬಗ್ಗೆ ಅಂದರೆ ರಾಜ್ಯವು ಮಕ್ಕಳ ರಕ್ಷಣೆಯ ಬಗ್ಗೆ ವ್ಯವಸ್ಥೆ ಮಾಡಬೇಕು ಎಂಬ ವಿಚಾರದಲ್ಲಿ ನಾನೂ ಸೇರಿ ಕರಡು ರಚನಾ ಸಮಿತಿಯ ಪ್ರತಿಯೊಬ್ಬ ಸದಸ್ಯನು ಆಕ್ಷೇಪವೆತ್ತಲಿಕ್ಕಿಲ್ಲ ಎನ್ನುವುದು ಸಂದೇಹಾತೀತವಾದದ್ದು ಮತ್ತು ಆ ಬಗ್ಗೆ ಯಾವುದೇ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲ. ಆದರೆ ಪ್ರಶ್ನೆಯೆಂದರೆ, ಕರಡು ರಚನಾ ಸಮಿತಿಯು ರೂಪಿಸಿದ ಪಟ್ಟಿಯಲ್ಲಿ ಈ ವಿಷಯಕ್ಕೆ ಈಗಾಗಲೇ ಅವಕಾಶ ಒದಗಿಸಿಲ್ಲವೆ ಹೇಗೆ? ಈ ನಮೂದುಗಳನ್ನು ರಚಿಸುವಲ್ಲಿ, ನಾವು ಮಾಡಿರುವುದೆಂದರೆ, ಶಾಸನ ರಚನೆಯ ವಿಷಯಗಳನ್ನು ಮತ್ತು

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೮೩೧.

** ಅದೇ, ಪುಟ ೮೩೫–೯೩೬.

ಪ್ರವರ್ಗಗಳನ್ನು ನಮೂದಿಸಿದ್ದೇ ಹೊರತು ಶಾಸನ ರಚನೆಯ ಧ್ಯೇಯಗಳನ್ನಾಗಲಿ ಉದ್ದೇಶಗಳನ್ನಾಗಲಿ ನಾವು ನಮೂದಿಸಿಲ್ಲ.

ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಹಾಗೆ ಕೆಲವು ಪರಿಸ್ಥಿತಿಗಳಲ್ಲಿ ಶಾಸನ ರಚನೆ ಮಾಡಬೇಕು ಎಂದು ವಿಧಾನಮಂಡಳವು ಭಾವಿಸಿದರೆ, ಆ ವಿಷಯವು ವಿಧಾನಮಂಡಳವು ಸಾಧಿಸಲು ಹಕ್ಕುಳ್ಳಂಥ ಉದ್ದೇಶ ಆಗುತ್ತದೆ. ಪ್ರಶ್ನೆಯೆಂದರೆ, ಈ ನಮೂದುಗಳ ಪೈಕಿ ಯಾವುದೇ ನಮೂದಿನಲ್ಲಿ, ರಾಜ್ಯಕ್ಕೆ ಆ ಉದ್ದೇಶವನ್ನು ಅಂದರೆ ಮಕ್ಕಳ ರಕ್ಷಣೆಯನ್ನು ಸಾಧಿಸಲು ಸಾಧ್ಯವಾಗಲಿಕ್ಕಿಲ್ಲವೇ ಹೇಗೆ?

ಪಟ್ಟಿ IIರಲ್ಲಿ ಸೇರಿಸಲಾದ ನಮೂದುಗಳ ಪೈಕಿ ಯಾವುದೇ ನಮೂದನ್ನು ಮಕ್ಕಳ ರಕ್ಷಣೆಯ ಆಶಯವುಳ್ಳ ಕಾನೂನುಗಳನ್ನು ರಚಿಸುವ ಉದ್ದೇಶದ ಸಲುವಾಗಿ ಬೆಳೆಸಿಕೊಳ್ಳಬಹುದು ಎಂದು ತೋರುತ್ತದೆ. ಉದಾಹರಣೆಗೆ, ಪಟ್ಟಿ IIರ ನಮೂದು ೨ರ ಅಡಿಯಲ್ಲಿ, ನ್ಯಾಯಾಡಳಿತ ಎಂಬ ವಿಷಯಕ್ಕೆ ಸಂಬಂಧಿಸಿದ ಹಾಗೆ ಬಾಲಾಪರಾಧಿ ನ್ಯಾಯಾಲಯಗಳನ್ನು ಸ್ಥಾಪಿಸಲು ರಾಜ್ಯಕ್ಕೆ ಅವಕಾಶವುಂಟು.

**ಡಾ. ಪಿ. ಎಸ್. ದೇಶ್‌ಮುಖ್:** ಇದು ನನ್ನ ಪೂರ್ತಿ ಅರ್ಥವಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಉದಾರಹಣೆಗೆ ಕಾರಾಗೃಹಗಳನ್ನು ಸುಧಾರಣಾಲಯಗಳನ್ನು ಮತ್ತು ಬೋರ್‌ಸ್ಟಲ್ ಶಾಲೆಗಳನ್ನು ತೆಗೆದುಕೊಳ್ಳುವಂಥ ಸಂಸ್ಥೆಗಳನ್ನು ತೆಗೆದುಕೊಳ್ಳಿ. ಅವುಗಳಿಗೆ ವಿಶೇಷ ಕಾರಾಗೃಹಗಳನ್ನು ಸ್ಥಾಪಿಸಲು ಅಧಿಕಾರ ನೀಡಬಹುದು. ಅಂಥ ವಿಶೇಷ ಕಾರಾಗೃಹಗಳಿಗೆ ಶಿಕ್ಷೆ ತತ್ವವಲ್ಲ. ಸುಧಾರಣೆಯ, ಶಿಕ್ಷಣದ ತತ್ವವೇ ಮೂಲಾಧಾರವಾಗಿರುತ್ತದೆ.

**ಶ್ರೀಮತಿ ಜಿ. ದುರ್ಗಾಬಾಯಿ:** ಸ್ವಾಮಿ, ಬಾಲಾಪರಾಧಿಗಳ ಸಂದರ್ಭವೇ ಬೇರೆ ಮತ್ತು ನಿರ್ಗತಿಕ ಮತ್ತು ಪರಿತ್ಯಕ್ತ ಮಕ್ಕಳ ಸಂದರ್ಭವೇ ಬೇರೆ ಎಂದು ಅರಿಕೆ ಮಾಡಿಕೊಳ್ಳಬಹುದೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೇಳುತ್ತಿದ್ದ ಹಾಗೆ, ಪಟ್ಟಿ IIರಲ್ಲಿ ಶಿಕ್ಷಣಕ್ಕೆ ಸಂಬಂಧಪಡುವ ನಮೂದು ೧೮ ಅನ್ನು ರಾಜ್ಯವು ಪರಿತ್ಯಕ್ತ ಮಕ್ಕಳು ಸೇರಿದಂತೆ ಮಕ್ಕಳ ಸಲುವಾಗಿ ವಿಶೇಷ ಪ್ರಕಾರದ ಶಾಲೆಗಳನ್ನು ಸ್ಥಾಪಿಸಲು ಬಳಸಿಕೊಳ್ಳಬಹುದು. ಸೊಸೈಟಿಗಳ ಸಂಘಟನೆ ವಗೈರೆ ವಿಷಯಗಳಿಗೆ ಸಂಬಂಧಪಡುವ ನಮುದು ೪೨ರ ಅಡಿಯಲ್ಲಿ, ಮಕ್ಕಳ ಯೋಗಕ್ಷೇಮದ ಸಲುವಾಗಿ ಸೊಸೈಟಿಗಳನ್ನು ನೋಂದಣಿ ಮಾಡಲು ಅಥವಾ ತಾನೇ ಆ ಪ್ರಕಾರ ಕಾರ್ಪೋರೇಷನ್‌ಗಳನ್ನು ಸ್ಥಾಪಿಸಲು ರಾಜ್ಯಕ್ಕೆ ಅವಕಾಶವುಂಟು.

ಆದ್ದರಿಂದ ನಾನು ಅತ್ಯಂತ ನಿಷ್ಠೆಯಿಂದ ನೀಡುತ್ತಿರುವ ಹೇಳಿಕೆಯ ಪ್ರಕಾರ ಪಟ್ಟಿ IIರಲ್ಲಿ ಸೇರಿಸಲಾದ ನಮೂದುಗಳ ದ್ವಾರಾ ಸರ್ಕಾರವು ಮಕ್ಕಳ ಹಿತರಕ್ಷಣೆಯ ಉದ್ದೇಶಕ್ಕಾಗಿ ನಕಲು ರೀತಿಯ ವ್ಯವಸ್ಥೆಗಳನ್ನು ಮಾಡಬಹುದಾಗಿದೆ. ನನ್ನ ಮಾನ್ಯ ಮಿತ್ರರಿಗೆ ಮನವರಿಕೆಯಾದ ಪಕ್ಷದಲ್ಲಿ, ಮಕ್ಕಳ ರಕ್ಷಣೆಗೆ ಸಂಬಂಧಪಡುವ ಪ್ರತ್ಯೇಕ ನಮೂದನ್ನು ಸೇರಿಸುವ ಸಲಹೆ ಅರ್ಥಪೂರ್ಣವಲ್ಲ. ನಾನು ಹೇಳಿದ ಮೇರೆಗೆ ಮಕ್ಕಳ ರಕ್ಷಣೆಯ ಶಾಸನ ರಚನೆಯ ವಿಷಯವಾಗಬೇಕಿಲ್ಲ. ಅದು ಶಾಸನ ರಚನೆಯ ಧ್ಯೇಯವಾಗಬೇಕು, ಧ್ಯೇಯವೂ ಆಗಿರಬೇಕು.

**ಡಾ. ಪಿ. ಎಸ್. ದೇಶ್‌ಮುಖ್:** ನೀವು ಕಾಡುಹಕ್ಕಿಗಳ ರಕ್ಷಣೆಯ ಬಗ್ಗೆ ಸಹ ವ್ಯವಸ್ಥೆ ಮಾಡಿದ್ದುಂಟು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಾನ್ಯ ಸ್ನೇಹಿತರಿಬ್ಬರೂ ಈ ವಿಷಯದಲ್ಲಿ ಎಡೆಬಿಡದೆ ಆಗ್ರಹಪಡಿಸುತ್ತಿದ್ದಾರೆ. ಅವರಿಗೆ ಭರವಸೆ ನೀಡಿ ತಮ್ಮ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳುವಂತೆ ವಿನಂತಿ ಮಾಡಿಕೊಳ್ಳುತ್ತೇನೆ. ಕರಡು ರಚನಾ ಸಮಿತಿಯು ಪರಿಷ್ಕರಣದ ಹಂತದಲ್ಲಿ ಈ ವಿಷಯವನ್ನು

ಪರ್ಯಾಲೋಚಿಸಿ, ಅಂಥ ಯಾವುದೇ ನಮೂದನ್ನು ಯಾವುದೇ ಪಟ್ಟಿಯಲ್ಲಿ ಉಪಯುಕ್ತವಾಗಿ ಸೇರಿಸಲು ಸಾಧ್ಯವಿದ್ದರೆ, ಅವರು ಆ ವಿಷಯವನ್ನು ಪರಿಶೀಲಿಸುತ್ತಾರೆ ಮತ್ತು ಸದನದ ಮುಂದೆ ಆ ಸಂಬಂಧದಲ್ಲಿ ಪ್ರಸ್ತಾಪವನ್ನು ಮಂಡಿಸುತ್ತಾರೆ. ಈ ಹಂತದಲ್ಲಿ ಅದನ್ನು ಅಂಗೀಕರಿಸಲು ಒಂದಿಷ್ಟು ತೊಂದರೆಯುಂಟು. ಕಾರಣವೆಂದರೆ, ಅದನ್ನು ಪೂರ್ಣವಾಗಿ ಪರಿಶೀಲಿಸುವ ಸಲುವಾಗಿ ಅತ್ತ ಗಮನ ಕೊಡಲು ಸಾಕಷ್ಟು ಸಮಯಾವಕಾಶ ದೊರೆಯಲಿಲ್ಲ. ಇನ್ನು ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸದೆ ಯಾವುದೇ ನಮೂದನ್ನು ಮಂಡಿಸಲು ಸಾಧ್ಯವಿಲ್ಲವಷ್ಟೆ.

**ಮಾನ್ಯ ಉಪಾಧ್ಯಕ್ಷರು:** ಡಾ. ದೇಶಮುಖ್ ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಲು ಇಚ್ಛಿಸುತ್ತಾರೆಯೇ?

**ಡಾ. ಪಿ. ಎಸ್. ದೇಶ್‌ಮುಖ್:** ಪ್ರತ್ಯೇಕ ನಮೂದಿನ ಸಲುವಾಗಿ ನನ್ನ ಮುಂದಿನ ತಿದ್ದುಪಡಿಯು ತಲುಪುವ ಹೊತ್ತಿಗೆ, ಡಾ. ಅಂಬೇಡ್ಕರ್ ಅವರು ನನ್ನ ತಿದ್ದುಪಡಿಯ ಬಗ್ಗೆ ಈಗ ಹೇಳಿರುವುದಕ್ಕಿಂತ ಹೆಚ್ಚು ಅನುಕೂಲವಾದುದನ್ನು ಹೇಳಬಹುದೇ ಹೇಗೆ ಎಂಬುದನ್ನಾದರೂ ತಿಳಿಸಬೇಕಾಗಿ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಇಡೀ ವಿಷಯವನ್ನು ಪರಿಶೀಲಿಸಿ ನೋಡುವೆನು.

**(ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು. ನಮೂದನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.)**

## ನಮೂದು ೧೫

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಅವರಲ್ಲಿ ಮಂಡಿಸುತ್ತೇನೆ.

"ಪಟ್ಟಿ III ನಮೂದು ೧೫ಕ್ಕೆ ಬದಲಾಗಿ ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು.

"೧೫ ಕ್ರಮ ಯೋಗ್ಯ ತಪ್ಪುಗಳು.

ನಾನು ಬಿಟ್ಟುಬಿಡಬೇಕೆಂದು ಉದ್ದೇಶಿಸಿರುವ ಪದಗಳು ನಿಜವಾಗಿಯೂ ಅನಗತ್ಯವಾಗಿರುತ್ತದೆ.

**(ಪ್ರಸ್ತಾವವನ್ನು ಅಂಗೀಕರಿಸಲಾಯಿತು. ಹಾಗೆ ತಿದ್ದುಪಡಿಯಾದ ನಮೂದು ೧೫ ಅನ್ನು ಸಮವರ್ತಿ ಪಟ್ಟಿ ಸೇರಿಸಲಾಯಿತು.)**

* * *

## ಹೊಸ ನಮೂದು ೧೭ಎ

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿಯಿಂದ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಪಟ್ಟಿ IIIರ ನಮೂದು ೧೭ರ ತರುವಾಯ ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು.

೧೭ಎ ಕಾರ್ಮಿಕರಿಗೆ ವೃತ್ತಿ ಸಂಬಂಧವಾದ ಮತ್ತು ತಾಂತ್ರಿಕ ತರಬೇತಿ

**(ಹಾಗೆ ತಿದ್ದುಪಡಿಯಾದ ನಮೂದು ೧೭ಎ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.)**

---

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೩೭.

** ಅದೇ, ಪುಟ ೯೩೯.

## ನಮೂದು ೨೦

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

೨೦ ಔಷಧ ದ್ರವ್ಯಗಳನ್ನು ಮತ್ತು ವಿಷಗಳು, ಅಪೀಮಿಗೆ ಸಂಬಂಧಿಸಿದ ಪಟ್ಟಿ Iರ ನಮೂದು ೬ರ ಉಪಬಂಧಗಳಿಗೆ ಒಳಪಟ್ಟು

(ಶ್ರೀ ಕಾಮತ್ ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಲಿಲ್ಲ)

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು)**

(ಹಾಗೆ ತಿದ್ದುಪಡಿಯಾದ ನಮೂದನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.)

## ನಮೂದು ೨೧

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಪಟ್ಟಿ IIIರ ನಮೂದು ೨೧ಕ್ಕೆ ಬದಲಾಗಿ ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು.

“೨೧ ಯಂತ್ರಚಾಲಿತವಾದ ವಾಹನಗಳು ಮತ್ತು ಯಾವ ತತ್ವಗಳನ್ನು ಆಧರಿಸಿ ವಾಹನಗಳ ಮೇಲೆ ತೆರಿಗೆ ವಿಧಿಸಬಹುದೋ ಆ ತತ್ವಗಳೂ ಸೇರಿ.”

(ತಿದ್ದುಪಡಿಯನ್ನು ಅಂಗೀಕರಿಸಲಾಯಿತು)

**(೩. ಹಾಗೆ ತಿದ್ದುಪಡಿಯಾದ ನಮೂದು ೨೧ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.)**

## ಹೊಸ ನಮೂದು ೨೫ಎ

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಪಟ್ಟಿ IIIರ ನಮೂದು ೨೫ರ ತರುವಾಯ ಈ ಮುಂದಿನ ಹೊಸ ನಮೂದನ್ನು ಸೇರಿಸತಕ್ಕದ್ದು.

“೨೫ಎ ಜನನ ಮರಣಗಳ ನೋಂದಣಿಯೂ ಸೇರಿದಂತೆ ಜೀವಾಳದ ಅಂಕಿ ಅಂಶಗಳು.

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ನಮೂದು ೨೫ಎ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.)**

## ನಮೂದು ೨೬

*****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

“ಪಟ್ಟಿ IIIರ ನಮೂದು ೨೬ಕ್ಕೆ ಬದಲಾಗಿ ಮುಂದಿನ ನಮೂದನ್ನು ಸೇರಿಸತಕ್ಕದ್ದು.

---

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೫೯

** ಅದೇ, ಪುಟ ೯೬೦.

*** ಅದೇ, ಪುಟ ೯೬೦

"೨೬ರ ಕಾರ್ಮಿಕರ ಕಲ್ಯಾಣ, ಕೆಲಸದ ಪರಿಸ್ಥಿತಿಗಳು ಭವಿಷ್ಯ ನಿಧಿಗಳು, ಕಾರ್ಮಿಕರ ಪರಿಹಾರ, ಅಶಕ್ತತಾ ಮತ್ತು ವೃದ್ಧಾಪ್ಯ ವೇತನ ಮತ್ತು ಹೆರಿಗೆ ಪ್ರಯೋಜನಗಳೂ ಸೇರಿದಂತೆ" ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**(ಹಾಗೆ ತಿದ್ದುಪಡಿಯಾದ ನಮೂದು ೨೬ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.)**

## ಹೊಸ ನಮೂದು ೨೬ಎ

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIIರ ನಮೂದು ೨೬ರ ತರುವಾಯ ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು.

"೨೬ಎ ಸಾಮಾಜಿಕ ವಿಮೆ ಮತ್ತು ಸಾಮಾಜಿಕ ಭದ್ರತೆ **(ನಮೂದು ೨೬ಎ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.)**

## ಹೊಸ ನಮೂದು ೨೬ಬಿ

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ನಾನು ವಿವರಿಸಿ ಹೇಳಲೆ? ಈ ಪಟ್ಟಿಯಲ್ಲಿರುವ ನಮೂದುಗಳ ಬಗ್ಗೆ ಒಂದಿಷ್ಟು ಗೊಂದಲ ಮತ್ತು ತಪ್ಪು ತಿಳುವಳಿಕೆ ಉಂಟಾಗಿರುವ ಹಾಗೆ ತೋರುತ್ತದೆ. ನನ್ನ ಸ್ನೇಹಿತ ಡಾ. ದೇಶಮುಖ್ ಅವರ ತಿದ್ದುಪಡಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅವರು ಎಲ್ಲ ಬಗೆಯ ಒಕ್ಕಲಿಗರು, ರೈತರು ಮತ್ತು ಬೇಸಾಯಗಾರರ ಕಲ್ಯಾಣವನ್ನು ಅಪೇಕ್ಷಿಸುತ್ತಾರೆ. "ಎಲ್ಲ ದಿಸೆಯ ಬೇಸಾಯಗಾರರು" ಎಂಬ ಈ ಸರ್ವಗ್ರಾಹಿ ಪದಾವಳಿಯ ಸ್ಪಷ್ಟ ಪರಿಕಲ್ಪನೆ ಏನು ಎನ್ನುವುದನ್ನು ತಿಳಿಯಬಯಸುತ್ತೇನೆ. ಭೂಕಂದಾಯದ ರೂಪದಲ್ಲಿ ೫ ಲಕ್ಷ ರೂಪಾಯಿ ಸಂದಾಯ ಮಾಡುವ ಜಮೀನುದಾರರ ಕಲ್ಯಾಣ ಕಾರ್ಯವನ್ನು ರಾಜ್ಯವು ಕೈಗೆತ್ತಿಕೊಳ್ಳಬೇಕು ಎಂದು ಅವರು ಅಪೇಕ್ಷೆ ಪಡುತ್ತಾರೆಯೇ?

**ಶ್ರೀ ಆರ್. ಕೆ. ಸಿಧ್ವ:** ನೀವು ಆ ಪದಗಳನ್ನು ಬಿಟ್ಟು ಬಿಡಬಹುದು.

*****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಮಾಲಗುಜಾರ್ ಅವರನ್ನು ಸಹ ಒಳಗೊಳ್ಳಬಹುದು. ನಾನು ಯಾವುದೇ ನಮೂದನ್ನು ಸ್ವೀಕರಿಸುವುದಕ್ಕೆ ಮುಂಚೆ, ನನ್ನ ಮನಸ್ಸಿನಲ್ಲಿ ಆ ಬಗ್ಗೆ ನಿಚ್ಚಳವಾದ ಮತ್ತು ನಿಶ್ಚಿತವಾದ ಕಲ್ಪನೆ ಬರಬೇಕು. ಬೇಸಾಯಗಾರರು ಎಂಬ ಪದಕ್ಕೆ ಕಟ್ಟುನಿಟ್ಟಾದ ಅರ್ಥವಿಲ್ಲ. ಅದಕ್ಕೆ ಗೇಣಿದಾರ ಎಂದು ಅರ್ಥವಾಗಬಹುದು. ವಾಸ್ತವವಾಗಿ ಸಾಗುವಳಿ ಮಾಡುವವನು ಎಂದು ಸಹ ಅರ್ಥವಾಗಬಹುದು. ಎರಡು ಎಕರೆ ಜಮೀನು ಹೊಂದಿರುವವನು ಎಂದು ಅರ್ಥವಾಗದಿರಬಹುದು. ಹಾಗೆಯೇ ಐದು ಸಾವಿರ ಎಕರೆ ಜಮೀನು ಹೊಂದಿರುವುದನ್ನು ಅಥವಾ ಐದು ಲಕ್ಷ ಎಕರೆ ಜಮೀನು ಹೊಂದಿರುವವನು ಎಂದು ಸಹ ಅರ್ಥವಾಗಬಹುದು.

**ಡಾ. ಪಿ. ಎಸ್. ದೇಶ್‌ಮುಖ್:** ಆ ನಿರ್ದಿಷ್ಟ ಪದಾವಳಿಯನ್ನು ಬಿಟ್ಟುಬಿಡಲು ಸಿದ್ಧನಿದ್ದೇನೆ.

---

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೪೦.

** ಅದೇ, ಪುಟ ೯೪೪

*** ಅದೇ, ಪುಟ ೯೪೪–೯೪೬.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಮ್ಮ ಮಟ್ಟಿಗೆ ಅದು ಒಂದು ತೊಂದರೆ. ಎರಡನೆಯ ಅಂಶವೆಂದರೆ ನನ್ನ ಸ್ನೇಹಿತ ಶ್ರೀ ದೇಶಮುಖ್ ಅವರು ವಿಭಿನ್ನ ನಮೂದುಗಳತ್ತ ಮತ್ತು ಅವುಗಳ ಅರ್ಥಗಳತ್ತ ಸಾಕಷ್ಟು ಗಮನ ಕೊಡುತ್ತಿಲ್ಲವೆಂದು ತೋರುತ್ತದೆ. ಕೃಷಿಗೆ ಸಂಬಂಧಪಡುವಷ್ಟು ಮಟ್ಟಿಗೆ ಪಟ್ಟಿ I ಮತ್ತು II ಇವುಗಳಲ್ಲಿ ಎರಡು ನಿರ್ದಿಷ್ಟ ನಮೂದುಗಳು ಇವೆ. ನಂಬರು ೨೧ ಕೃಷಿ ಮತ್ತು ನಂಬರು ೨೪ ಭೂಮಿ ಹೀಗೆ. ಅವರು ಈ ನಮೂದುಗಳನ್ನು ನೋಡಿದರೆ ಅವರಿಗೆ...*

**ಡಾ. ಪಿ. ಎಸ್. ದೇಶ್‌ಮುಖ್:** ಎಂಥೆಂಥ ದೋಷಪೂರ್ಣ ವಾದಗಳನ್ನು ಸಾದರಪಡಿಸಲಾಗುತ್ತಿದೆಯಲ್ಲ! ಹಾಗೆ ಹೇಳುವುದಾದರೆ, ಕಾರ್ಮಿಕ ಕಲ್ಯಾಣ ಒಂದು ನಿರ್ದಿಷ್ಟ ನಮೂದು. ಆದರೂ ಅವರ ವೃತ್ತಿ ತರಬೇತಿಯ ಸಲುವಾಗಿ ನಿಮಗೆ ಪ್ರತ್ಯೇಕ ನಮೂದು ಬೇಕಾಯಿತಲ್ಲವೆ? ದೋಷಪೂರ್ಣ ವಾದಗಳನ್ನು ಮಂಡಿಸಬೇಡಿರಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆಡಳಿತಗಾರರ ತಪ್ಪುಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಉತ್ತರಿಸುವುದು ನನ್ನ ಕೆಲಸವಲ್ಲ. ನಮೂದುಗಳ ಅರ್ಥವೇನು ಎಂದು ವಿವರಿಸಲು ಪ್ರಯತ್ನಿಸುತ್ತಿದ್ದೇನೆ. ನಾನು ಹೇಳಿದ ಹಾಗೆ, ಪಟ್ಟಿ IIರಲ್ಲಿ ನಾವು ಈಗಾಗಲೇ ಎರಡು ನಮೂದುಗಳನ್ನು ಹೊಂದಿದ್ದೇವೆ. ನಮೂದು ೨೧ "ಕೃಷಿ, ಕೃಷಿ ಶಿಕ್ಷಣ ಮತ್ತು ಸಂಶೋಧನೆಗಳಿಂದ ರಕ್ಷಣೆ ಮತ್ತು ಸಸ್ಯರೋಗ ನಿವಾರಣೆ ಇವುಗಳೂ ಸೇರಿದಂತೆ."

**ಡಾ. ಪಿ. ಎಸ್. ದೇಶ್‌ಮುಖ್:** ಹಾಗಾದರೆ ನಿಮಗೆ ಕಾರ್ಮಿಕ ಕಲ್ಯಾಣ ಏಕೆ ಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಮಗೆ ಒಂದಿಷ್ಟು ಸಹನೆ ಬೇಡವೆ? ನನ್ನ ಕೆಲಸ ನಾನು ಬಲ್ಲೆನು. ನನಗೆ ಕೆಲಸ ಗೊತ್ತಿಲ್ಲ ಎಂದು ನಿಮ್ಮ ಭಾವನೆಯೆ?

**ಡಾ. ಪಿ. ಎಸ್. ದೇಶ್‌ಮುಖ್:** ನಿಮ್ಮ ಧೋರಣೆಯನ್ನು ಸಹ ಬಲ್ಲೆನು. ಪ್ರತಿಯೊಬ್ಬರನ್ನು ಮೂರ್ಖರನ್ನಾಗಿಸಲು ಪ್ರಯತ್ನಿಸಬೇಡಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈಗಾಗಲೇ ಕೃಷಿಗೆ ಸಂಬಂಧಿಸಿದ ಒಂದು ನಮೂದು ಉಂಟು. ಆ ಮೂಲಕ ಕೃಷಿಗೆ ಸಂಬಂಧಪಟ್ಟ ಕಲ್ಯಾಣ ಕಾರ್ಯವನ್ನಷ್ಟೇ ಅಲ್ಲದೆ ಕೃಷಿಕರಿಗೆ ಸಂಬಂಧಿಸಿದ ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳಲು ಯಾವುದೇ ರಾಜ್ಯಕ್ಕೆ ಅಧಿಕಾರ ಒದಗಿಸುತ್ತದೆ. ಈ ನಮೂದಿನ ಹೊರತಾಗಿ ನಮೂದು ೨೪ ಇದೆ. ಆ ಮೇರೆಗೆ ಭೂಮಿಯಲ್ಲಿ ಅಥವಾ ಅದರ ಮೇಲಣ ಹಕ್ಕುಗಳು, ಜಮೀನುದಾರ ಮತ್ತು ಗೇಣಿದಾರ ಇವರ ನಡುವಣ ಸಂಬಂಧಗಳೂ ಸೇರಿದಂತೆ ಭೂ ಹಿಡುವಳಿಗಳು ಇದಕ್ಕೆ ಸಂಬಂಧಪಟ್ಟಂತೆ ಸಹ ಕಾನೂನು ರಚಿಸುವ ಅಧಿಕಾರ ನೀಡಲಾಗಿದೆ. ಈ ನಮೂದಿನ ಅಡಿಯಲ್ಲಿ ಬೇಸಾಯಗಾರರ ಎಲ್ಲ ಆರ್ಥಿಕ ಹಿತಾಸಕ್ತಿಗಳ ಬಗ್ಗೆ ಕ್ರಮ ಕೈಗೊಳ್ಳಲು ಅವಕಾಶವಿದೆ. ಆದ್ದರಿಂದ ಕೃಷಿಕರ ವರ್ಗಗಳ ಹಿತರಕ್ಷಣೆಯ ಕಲ್ಯಾಣದ ವಿಚಾರದಲ್ಲಿ ಕ್ರಮಗೊಳ್ಳಲು ಪ್ರಾಂತೀಯ ಸರ್ಕಾರಗಳಿಗೆ ಅಗತ್ಯ ಅಧಿಕಾರಗಳನ್ನು ಒದಗಿಸಲು ಇರತಕ್ಕ ನಮೂದುಗಳ ಸಂಬಂಧದಲ್ಲಿ ಯಾವುದೇ ಕೊರತೆಯಿಲ್ಲ.

ಈಗ ನಾನು ನನ್ನ ಸ್ನೇಹಿತ ಸಿಧ್ವ ಅವರು ಎತ್ತಿದ ಪ್ರಶ್ನೆಗೆ ಗಮನ ಹರಿಸುತ್ತೇನೆ. ಶ್ರೀ ಸಿಧ್ವ ಅವರ ಪ್ರಶ್ನೆ ಸಮಂಜಸವೇ. ಕಾರ್ಮಿಕ ಪದದ ವ್ಯಾಖ್ಯೆ ಏನು ಅದರಲ್ಲಿ ಕೈಗಾರಿಕಾ ರಂಗದಂತೆಯೇ ಕೃಷಿ ಕಾರ್ಮಿಕರೂ ಕೂಡ ಒಳಗೊಳ್ಳುತ್ತಾರೆಯೇ ಎಂದು ಅವರು ನಿರ್ದಿಷ್ಟವಾದ ಪ್ರಶ್ನೆ ಕೇಳಿದ್ದಾರೆ. ಅದೇ ಅವರ ಪ್ರಶ್ನೆ ಎಂದು

* ಚುಕ್ಕಿಗಳು ಮೂಲ ದಾಖಲೆಯಲ್ಲಿನ ಅಡೆತಡೆಯನ್ನು ಸೂಚಿಸುತ್ತದೆ.

ಭಾವಿಸಿದ್ದೇನೆ. ನನ್ನ ಸ್ಪಷ್ಟವಾದ ಉತ್ತರ ಎಂದರೆ ಕಾರ್ಮಿಕ ಪದದಲ್ಲಿ ಎರಡೂ ವರ್ಗದ ಕಾರ್ಮಿಕರು ಒಳಗೊಳ್ಳುತ್ತಾರೆ. ಈ ನಮೂದು ಕೃಷಿ ಕಾರ್ಮಿಕರ ಕಲ್ಯಾಣಕ್ಕೆ ಪರಿಮಿತಗೊಳ್ಳುವಂಥ ಆಶಯವನ್ನು ಹೊಂದಿಲ್ಲ. ನಮೂದು ೨೬ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕಾಗಲಿ ಪ್ರಾಂತೀಯ ಸರ್ಕಾರಕ್ಕಾಗಲಿ ಕಾರ್ಮಿಕರಿಗೆ ಅಂದರೆ, ಕೃಷಿ ಕಾರ್ಮಿಕರಿಗೆ ಹಾಗೆಯೇ ಕೈಗಾರಿಕಾ ಕಾರ್ಮಿಕರಿಗೆ ಸಹ ಸಂಬಂಧಪಟ್ಟ ಯಾವುದೇ ಕಲ್ಯಾಣ ಕಾರ್ಯವನ್ನು ಕೈಗೊಳ್ಳಲು ಅವಕಾಶ ಒದಗಿಸುತ್ತದೆ.

ಅದೇ ರೀತಿ ಕೆಲಸದ ವಾತಾವರಣ (ಪರಿಸ್ಥಿತಿಗಳ) ವಿಚಾರ, ಭವಿಷ್ಯ ನಿಧಿ ನಿಯಮಗಳು, ಸಂಯೋಜಕರ ಹೊಣೆಗಾರಿಕೆ, ಕಾರ್ಮಿಕರ ಪರಿಹಾರ, ಆರೋಗ್ಯ ವಿಮೆ ಅಶಕ್ತತಾ ನಿವೃತ್ತಿ ವೇತನವೂ ಸೇರಿದೆ. ಎಲ್ಲ ವಿಷಯಗಳು ಎರಡು ಬಗೆಯ ಕಾರ್ಮಿಕರಿಗೆ ಲಭ್ಯವಾಗತಕ್ಕ ಪ್ರಯೋಜನಗಳನ್ನು ಒಳಗೊಳ್ಳುತ್ತವೆ. ಕೈಗಾರಿಕಾ ಕಾರ್ಮಿಕರಿಗೂ ಅಷ್ಟೇ. ಕೃಷಿ ಕಾರ್ಮಿಕರಿಗೂ ಅಷ್ಟೇ. ಆದ್ದರಿಂದ ಈ ನಮೂದು ೨೬ಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಈ ನಮೂದು ಈ ಯಾವ ಅರ್ಥದಲ್ಲೂ ಕೈಗಾರಿಕಾ ಕಾರ್ಮಿಕರಿಗೆ ಮಾತ್ರ ಸೀಮಿತವಾಗುವ ಹಾಗೆ ರಚಿತವಾದುದಲ್ಲ. ಆದಕಾರಣ, ನನ್ನ ಸ್ನೇಹಿತ ಡಾ॥ ದೇಶಮುಖ್ ಅವರು ಪ್ರಸ್ತಾಪಿಸಿದಂಥ ತಿದ್ದುಪಡಿಯು ಸರ್ವಥಾ ಅನಗತ್ಯ. ಮಾತ್ರವಲ್ಲದೆ, ಅದು ಅಸ್ಪಷ್ಟ ಮತ್ತು ಅನಿರ್ದಿಷ್ಟವಾಗಿದ್ದು ಅದಕ್ಕೆ ಯಾವುದೇ ಕಾನೂನುಸಮ್ಮತ ಆಧಾರವಿಲ್ಲ.

**ಡಾ. ಪಿ. ಎಸ್. ದೇಶ್‌ಮುಖ್:** ಕೃಷಿ ಕಾರ್ಮಿಕರ ಹೊರತಾಗಿ ಬೇರೆ ಯಾವುದೇ ಕಾರ್ಮಿಕರಿಲ್ಲವೆ ಈ ದೇಶದಲ್ಲಿ? ಡಾ. ಅಂಬೇಡ್ಕರ್ ಅವರು 'ಬೇಸಾಯಗಾರರು' ಮತ್ತು "ರೈತರು" ಎಂಬ ವರ್ಗದ ಹೆಸರನ್ನು ಕೇಳಿಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈಗಾಗಲೇ ಹೇಳಿರುವ ಅವರ ಕಲ್ಯಾಣದ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಪ್ರಾಂತೀಯ ಪಟ್ಟಿಯ ನಮೂದು ೨೧ ಮತ್ತು ೨೪ ಇವುಗಳ ಅಡಿಯಲ್ಲಿ ಪರ್ಯಾಪ್ತ ಅವಕಾಶವುಂಟು.

**ಡಾ. ಪಿ. ಎಸ್. ದೇಶ್‌ಮುಖ್ ಅವರ ತಿದ್ದುಪಡಿಯನ್ನು ನಿರಾಕರಿಸಲಾಯಿತು. ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ಮತ್ತು ಹಾಗೆ ತಿದ್ದುಪಡಿಯಾದ ನಮೂದು ೨೬ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.**

## ನಮೂದು ೨೭

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

**"೨೭ ಉದ್ಯೋಗ ಮತ್ತು ನಿರುದ್ಯೋಗ"**

"ಪಟ್ಟಿ IIIರ ನಮೂದು ೨೭ಕ್ಕೆ ಬದಲಾಗಿ ಮುಂದಿನ ನಮೂದನ್ನು ಸೇರಿಸತಕ್ಕದ್ದು."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಹಾಗೆ ತಿದ್ದುಪಡಿಯಾದ ನಮೂದು ೨೭ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.**

* * *

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೪೭.

## ನಮೂದು ೨೮

*ಮಾನ್ಯ ಉಪಾಧ್ಯಕ್ಷರು: ನಾವೀಗ ಪ್ರಶ್ನೆಯನ್ನು ಪರಿಶೀಲಿಸುವ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಪಟ್ಟ ಹಾಗೆ "ಟ್ರೇಡ್ ಯೂನಿಯನ್" ಈ ಪದಗಳಿಗೆ ವಿಶಾಲ ಅರ್ಥವ್ಯಾಪ್ತಿ ಉಂಟು. ಆದ್ದರಿಂದ ಅವುಗಳಲ್ಲಿ ಕೈಗಾರಿಕಾ ಸಂಘಟನೆಗಳ ಟ್ರೇಡ್ ಯೂನಿಯನ್‌ಗಳನ್ನು ಸಹ ಒಳಗೊಳ್ಳುತ್ತವೆ. ಹೀಗಿರುವಾಗ, ನಾವು ಇಲ್ಲಿ "ಕೈಗಾರಿಕಾ" ಎಂಬ ಪದವನ್ನು ಸೇರಿಸುವ ಮೂಲಕ "ಟ್ರೇಡ್ ಯೂನಿಯನ್" ಎಂಬ ಪದದ ಅರ್ಥ ಮತ್ತು ವ್ಯಾಪ್ತಿಯನ್ನು ಸೀಮಿತಗೊಳಿಸಲು ಪ್ರಯತ್ನಿಸುತ್ತಿಲ್ಲವೆ ಎಂದು ನನಗೆ ಸಂದೇಹವೆನಿಸುತ್ತದೆ. ಆದರೆ ನಾನು ತಿದ್ದುಪಡಿಯನ್ನು ಮಂಡಿಸುತ್ತಿಲ್ಲ. ಈ ಪದವನ್ನು ಪರೀಕ್ಷಿಸಿ, ಈ ಬಗೆಯ ಪರಿಶೀಲಿಸುವ ಅವಕಾಶದ ಕರಡು ರಚನಾ ಸಮಿತಿಗೆ ಒಂದು ಅವಕಾಶವನ್ನು ಕಾಯ್ದಿರಿಸಲು ಉದ್ದೇಶಿಸುತ್ತೇನೆ. ಈ ನಮೂದು ಈಗಿರುವಂತೆಯೇ ಇರಬೇಕು ಎಂದು ನನ್ನ ಇಚ್ಛೆ. ನನ್ನ ಸಂದೇಹವನ್ನು ವ್ಯಕ್ತಗೊಳಿಸಿರುವ ಪ್ರಕಾರ, ಟ್ರೇಡ್ ಯೂನಿಯನ್ ಪದಕ್ಕೆ ಮೂಲ ಅರ್ಥವ್ಯಾಪ್ತಿ ಇರುವ ನಿಮಿತ್ತ, ಈ ನಮೂದಿನ ಒಂದಿಷ್ಟು ಭಾಗಕ್ಕೆ ತಿದ್ದುಪಡಿಯ ಅಗತ್ಯವಾಗಬಹುದು.

**ಮಾನ್ಯ ಉಪಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರು ಹೇಳಿರುವುದಕ್ಕೆ ಒಳಪಟ್ಟು ನಾನು ಈ ನಮೂದನ್ನು ಮತಕ್ಕೆ ಹಾಕುತ್ತೇನೆ. ಪ್ರಶ್ನೆಯೆಂದರೆ:

"ನಮೂದು ೨೮ ಪಟ್ಟಿ IIIರ ಭಾಗವಾಗಿರಬೇಕು."

**(ಪ್ರಸ್ತಾವವನ್ನು ಅಂಗೀಕರಿಸಲಾಯಿತು)**

**ನಮೂದು ೨೮ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.**

## ಹೊಸ ನಮೂದು ೨೮ಎ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ III ನಮೂದು ೨೮ರ ತರುವಾಯ ಮುಂದಿನ ಹೊಸ ನಮೂದನ್ನು ಸೇರಿಸತಕ್ಕದ್ದು."

**"೨೮ಎ ವಾಣಿಜ್ಯ ಮತ್ತು ಕೈಗಾರಿಕಾ ಮೊನೋಪೊಲಿಗಳು ಕಂಬೈನುಗಳು ಮತ್ತು ಟ್ರಸ್ಟುಗಳು"**

**ಪ್ರಸ್ತಾವವನ್ನು ಅಂಗೀಕರಿಸಲಾಯಿತು. ನಮೂದು ೨೮ಎ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.**

## ನಮೂದು ೨೯

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಮೂದು ೨೯ಕ್ಕೆ ತಿದ್ದುಪಡಿಯನ್ನು ಪ್ರಸ್ತಾವಿಸಿಲ್ಲದ ಕಾರಣ, ನಾನು ಅದನ್ನು ಮತಕ್ಕೆ ಹಾಕುತ್ತೇನೆ.

ನಮೂದು ೨೯ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.

---

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೪೭

** ಅದೇ, ಪುಟ ೯೪೭.

*** ಅದೇ, ಪುಟ ೯೪೮

**ಡಾ. ಪಿ. ಎಸ್. ದೇಶ್‌ಮುಖ್:** ನನ್ನ ತಿದ್ದುಪಡಿಯ ಒಂದು ಭಾಗವನ್ನು ನಿನ್ನೆ ಔದಾರ್ಯದಿಂದ ಅಂಗೀಕರಿಸಲಾಯಿತು. ಆದರೆ ಪದದ ಬಳಕೆಗೆ ಸಂಬಂಧಪಟ್ಟ ಹಾಗೆ ನಾವು ಇನ್ನೂ ತೀರ್ಮಾನ ಕೈಗೊಳ್ಳಬೇಕಾಗಿದೆ. ನಾವು ರಾಜ್ಯ ಪಟ್ಟಿಯನ್ನು ಚರ್ಚಿಸುತ್ತಿದ್ದಾಗ **"ಆಹಾರದ ಕಲಬೆರಕೆ"** ಎಂಬುದನ್ನು ಪಟ್ಟಿ IIIಕ್ಕೆ ವರ್ಗಾಯಿಸಬೇಕೆಂದು ತೀರ್ಮಾನಿಸಲಾಗಿತ್ತು. ಆದ್ದರಿಂದ ನಾವು ಈ ಹಂತದಲ್ಲಿ ಆ ನಮೂದಿನ ಪದದ ವಿಚಾರವನ್ನು ತೆಗೆದುಕೊಂಡರೆ, ಬಹುಶಃ ಪ್ರಸ್ತುತವಾದೀತು. ಹಾಗೆಯೇ ನನ್ನ ಮೊದಲನೆಯ ತಿದ್ದುಪಡಿಯನ್ನು ಸಹ ಅಂಗೀಕರಿಸಬೇಕು ಎಂದು ಅಪೇಕ್ಷಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಮೂದು ೨೯ಎ ರ ಮಂಡನೆಯನ್ನು, ಸದನವು ವಿಷದವಾಗಿ ತೀರ್ಣಗೊಳಿಸಿರುವ ಪಟ್ಟಿ Iರ ನಮೂದು ೬೧ಎ ಮೂಲಕ ಪೂರೈಸಲಾಗಿದೆಯೆಂಬ ಸಂಗತಿಯತ್ತ ತಮ್ಮ ಗಮನವನ್ನು ಸೆಳೆಯಬಹುದೆ? ಬಳಸಲಾದ ಪದ "ಸರಕುಗಳು" ಅದರಲ್ಲಿ ಕೃಷಿ ಉತ್ಪನ್ನಗಳು ಸಹ ಸೇರುತ್ತವೆ. ಅದೇ ರೀತಿ ಮೈತ್ರಾ ಅವರ ಪ್ರಸ್ತಾವಿನ ಮೇಲೆ ನಮೂದು ೨೯ಬಿ ಅನ್ನು ಅಂಗೀಕರಿಸಲಾಯಿತು. ಈಗ ಪಟ್ಟಿ IIIರ ನಮೂದು ೨೦ಎ ಆಗಿರುತ್ತದೆ.

**ಡಾ. ಪಿ. ಎಸ್. ದೇಶ್‌ಮುಖ್:** ನನ್ನ ಸ್ನೇಹಿತರ ಸೂಚನೆಯ ಮೊದಲನೆಯ ಭಾಗವನ್ನು ಒಪ್ಪಿಕೊಳ್ಳುತ್ತೇನೆ. ನಮೂದು ೨೯ಎ ಬಗ್ಗೆ ಪ್ರಸ್ತಾಪ ಮಂಡಿಸುತ್ತಿಲ್ಲ. ಆದರೆ ಪ್ರಸ್ತಾಪಿಸಿರುವುದು ಪಟ್ಟಿ IIರಲ್ಲಿರುವಂಥ ನಮೂದಿನ ಸ್ಥಾನಾಂತರಣ ಮಾತ್ರವೇ ನನಗೆ ಸ್ಪಷ್ಟವಾಗಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ಸಮವರ್ತಿ ಪಟ್ಟಿಗೆ ನಮೂದು ೪೪೨ಎ ಆಗಿ ವರ್ಗಾಯಿಸಲಾಯಿತು. ಸದನವು ತೀರ್ಣಗೊಳಿಸಿದ್ದು ಆ ಪ್ರಸ್ತಾಪವನ್ನೇ.

**ಡಾ. ಪಿ. ಎಸ್. ದೇಶ್‌ಮುಖ್:** ಅದರ ವ್ಯಾಪ್ತಿಯನ್ನು ಇನ್ನಷ್ಟು ವಿಶಾಲಗೊಳಿಸುವುದು ಲೇಸಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** 'ಅಹಾರದ ಕಲಬೆರಕೆ' ಎಂದರೆ ಪ್ರತಿಯೊಂದನ್ನು ಒಳಗೊಳ್ಳುತ್ತದೆ ಎಂದು ಭಾವಿಸಿದ್ದೇನೆ.

**ಡಾ. ಪಿ. ಎಸ್. ದೇಶ್‌ಮುಖ್:** ಹಾಗಾದರೆ, ನಾನು ಈ ತಿದ್ದುಪಡಿಯನ್ನು ಮಂಡಿಸುವುದಿಲ್ಲ.

**ಮಾನ್ಯ ಉಪಾಧ್ಯಕ್ಷರು:** ಸರಿ, ನಾನು ನಮುದು ೩೦ ಮತ್ತು ನಮುದು ೨೩೧ ಇವುಗಳನ್ನು ಮತಕ್ಕೆ ಹಾಕುತ್ತೇನೆ.

**(ನಮೂದು ೩೦ ಮತ್ತು ೩೧ ಇವುಗಳನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.)**

## ಹೊಸ ನಮೂದು ೩೧ಎ

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ನಮೂದು ೩೧ರ ತರುವಾಯ ಈ ಮುಂದಿನ ಹೊಸ ನಮೂದನ್ನು ಸೇರಿಸತಕ್ಕದ್ದು."

"೩೧ಎ ಬಂದರುಗಳು. ದೊಡ್ಡ ಬಂದರುಗಳಿಗೆ ಸಂಬಂಧಿಸಿದಂತೆ ಪಟ್ಟಿ Iರ ಉಪಬಂಧಗಳಿಗೆ ಒಳಪಟ್ಟು."

[**"ಪ್ರಸ್ತಾವವನ್ನು ಅಂಗೀಕರಿಸಲಾಯಿತು. ನಮೂದು ೩೧ಎ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.**]

---

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೪೮.

## ನಮೂದು ೩೨

*ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್: ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIIರ ನಮೂದು ೨೧ ಅನ್ನು ತೆಗೆದು ಹಾಕತಕ್ಕದ್ದು."

ಇದನ್ನು ಪಟ್ಟಿ Iಕ್ಕೆ ವರ್ಗಾಯಿಸಲಾಗಿದೆ.

ನಮೂದು ೩೨ ಅನ್ನು ಸಮವರ್ತಿ ಪಟ್ಟಿಯಿಂದ ತೆಗೆದುಹಾಕಲಾಯಿತು.

## ನಮೂದು ೩೩

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್: ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

'ಪಟ್ಟಿ IIIರ ನಮೂದು ೩೩ ಅನ್ನು ತೆಗೆದುಹಾಕತಕ್ಕದ್ದು.'

ನಾನು ಹೇಳಿದಂತೆ, ಇದನ್ನು ಸಹ ಪಟ್ಟಿ Iಕ್ಕೆ ವರ್ಗಾಯಿಸಲಾಗಿದೆ.

ನಮೂದು ೩೩ ಅನ್ನು ಸಮವರ್ತಿ ಪಟ್ಟಿಯಿಂದ ತೆಗೆದುಹಾಕಲಾಯಿತು.

## ನಮೂದು ೩೩ಎ ಮತ್ತು ೩೩ಬಿ

**"೩೩ಎ ನಿರ್ವಾಸಿತರ ಆಸ್ತಿಯೆಂದು ಕಾನೂನು ದ್ವಾರಾ ಘೋಷಿಸಲಾದ ಆಸ್ತಿಯ (ಕೃಷಿ ಭೂಮಿಯೂ ಸೇರಿದಂತೆ) ಅಭಿರಕ್ಷೆ, ವ್ಯವಸ್ಥಾಪನ ಮತ್ತು ವಿಲೆ."**

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್: ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ III ನಮೂದು ೩೩ರ ತರುವಾಯ ಮುಂದಿನ ಹೊಸ ನಮೂದುಗಳನ್ನು ಸೇರಿಸತಕ್ಕದ್ದು."

೩೩ಬಿ ಇಂಡಿಯಾ ಮತ್ತು ಪಾಕಿಸ್ತಾನ ಎಂಬೆರಡು ಡೊಮಿನಿಯನ್‌ಗಳನ್ನು ಸ್ಥಾಪಿಸಿದ್ದರ ಕಾರಣ ಗಳಿಂದಾಗಿ ತಮ್ಮ ಮೂಲ ನಿವಾಸ ಸ್ಥಳದಿಂದ ನಿರ್ವಾಸಿತರಾದ ವ್ಯಕ್ತಿಗಳಿಗೆ ಪರಿಹಾರ ಮತ್ತು ಪುನರ್ವಸತಿ."

(೨೯೬ನೇ ನಂಬರಿನ ತಿದ್ದುಪಡಿಯನ್ನು ಮಂಡಿಸಲಿಲ್ಲ)

**[ನಮೂದು ೩೩ಎ ಮತ್ತು ೩೩ಬಿ ಇವುಗಳನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.]**

## ನಮೂದು ೩೪

**"ಆರ್ಥಿಕ ಮತ್ತು ಸಾಮಾಜಿಕ ಯೋಜನೆ"**

****ಶ್ರೀ ಬ್ರಜೇಶ್ವರ್ ಪ್ರಸಾದ್: ಈ ಪ್ರಶ್ನೆಗೆ ಇನ್ನೊಂದು ಅಂಶವುಂಟು. ಮಾನ್ಯ ಸದನದ ಗಮನವನ್ನು ಅದರತ್ತ ಸೆಳೆಯಬಯಸುತ್ತೇನೆ. ನಮೂದು ೩೪ ಹೀಗೆ ಉಂಟು.

ರಾಜಕೀಯ ಯೋಜನೆಯ ವಿಚಾರವೇನು?

---

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೪೯.

** ಅದೇ, ಪುಟ ೯೪೯.

*** ಅದೇ, ಪುಟ ೯೪೯.

**** ಅದೇ, ಪುಟ ೯೫೦.

**ಒಬ್ಬ ಮಾನ್ಯ ಸದಸ್ಯರು:** ಅದು ಅತ್ಯಂತ ಘಾತಕವಾದೀತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ಸಂವಿಧಾನದ ತಿದ್ದುಪಡಿಯ ಮೂಲಕ ಪೂರೈಸಬಹುದು.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನಗೆ ಅತ್ಯಂತ ದುಃಖವೆನಿಸುತ್ತಿದೆ. ನಾನು ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿ ಅವರ ಈ ತಿದ್ದುಪಡಿಯನ್ನು ಅಂಗೀಕರಿಸಲಾರೆನು. "ಶಿಕ್ಷಣ" ಎಂಬ ಪದದ ಸೇರ್ಪಡೆಯು ಖಂಡಿತವಾಗಿಯೂ ಅನಗತ್ಯ ಎಂದು ಭಾವಿಸುತ್ತೇನೆ. "ಸಾಮಾಜಿಕ" ಎಂಬ ಪದವು ಸಮಗ್ರ ಸಮಾಜಕ್ಕೆ ಸಂಬಂಧಪಟ್ಟ ಯಾವುದೇ ಸಂಗತಿಗೆ ಉಲ್ಲೇಖಿಸಬಹುದಾದಷ್ಟು ದೊಡ್ಡ ದೊಡ್ಡ ಪದವಾಗಿದೆ. ಆದರೆ, ಅದು ಮತೀಯ ಯೋಜನೆಯನ್ನು ಒಳಗೊಳ್ಳುವಂತಿಲ್ಲ. "ಸಾಮಾಜಿಕ" ಮತ್ತು 'ಮತೀಯ' ಎಂಬ ಎರಡು ಪದಗಳ ನಡುವೆ ಮಾತ್ರ ವಿರೋಧ ಇರುವ ಸಂಬಂಧವುಂಟು. ರಾಜ್ಯವು (ಸರ್ಕಾರವು) ಮತೀಯ ವಿಷಯದ ಬಗ್ಗೆ ಯೋಜನೆ ರೂಪಿಸಲು ಹಕ್ಕು ಹೊಂದಿಲ್ಲ. ರಾಜ್ಯ ಉಳಿದೆಲ್ಲ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಅವಕಾಶವಿರುತ್ತದೆ.

ನನ್ನ ಸ್ನೇಹಿತ ಶ್ರೀ ಮಾನ್ಯ ರೋಹಿತ್‌ಕುಮಾರ್ ಚೌಧುರಿ ಅವರ ಅಭಿಪ್ರಾಯೋಕ್ತಿಗೆ ಸಂಬಂಧಿಸಿ ಹೇಳುವುದಾದರೆ, ಈ ನಮೂದಿಗೆ ಸಮವರ್ತಿ ಪಟ್ಟಿಯಲ್ಲಿ ಎಡೆಮಾಡಿಕೊಡಲಾಗಿದೆ ಎಂದು ಅವರು ಮನಗಾಣುತ್ತಾರೆ ಎಂದು ಭಾವಿಸುತ್ತೇನೆ. ರಾಜ್ಯವು ಸಹ ತನ್ನದೇ ಆದ ರೀತಿಯಲ್ಲಿ ಯೋಜನೆಯನ್ನು ರೂಪಿಸಿಕೊಳ್ಳಲು ಸ್ವಾತಂತ್ರ್ಯವು ಪ್ರಾಪ್ತವಾಗುತ್ತದೆ. ಕೇಂದ್ರ ಸರ್ಕಾರವು ತನ್ನ ಯೋಜನೆಯನ್ನು ರೂಪಿಸಲು ತೊಡಗಿದಾಗ ಮತ್ತು ರಾಜ್ಯ ಸರ್ಕಾರವು ರೂಪಿಸಿದ ಯೋಜನೆಗೂ ಅದಕ್ಕೂ ಉಂಟಾದ ಸಂದರ್ಭದಲ್ಲಿ ಮಾತ್ರವೇ ರಾಜ್ಯ ಸರ್ಕಾರವು ತನ್ನ ಅಧಿಕಾರವನ್ನು ಬಿಟ್ಟುಕೊಡಬೇಕಾಗುತ್ತದೆ. ಅಂದರೆ ರಾಜ್ಯ ಸರ್ಕಾರದ ಅಧಿಕಾರದ ಮೇಲೆ ಅತಿಕ್ರಮಣ ಆಗುತ್ತದೆ ಎಂದು ಅರ್ಥವಲ್ಲ. ಆದ್ದರಿಂದ ಈ ನಮೂದು ಯಾವ ಪದಗಳನ್ನು ಒಳಗೊಂಡು ರಚಿತವಾಗಿದೆಯೋ ಅದೇ ರೂಪದಲ್ಲಿ ಇರುವುದು ಯಥಾ ಯೋಗ್ಯ ಎಂದು ನಾನು ಕೋರುತ್ತೇನೆ.

**ಮಾನ್ಯ ಉಪಾಧ್ಯಕ್ಷರು:** ಪ್ರಶ್ನೆಯೆಂದರೆ:

"ಪಟ್ಟಿ IIIರ ನಮೂದು ೩೪ಕ್ಕೆ ಬದಲಾಗಿ ಮುಂದಿನ ನಮೂದನ್ನು ಸೇರಿಸತಕ್ಕದ್ದು.

"೩೪– ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಯೋಜನೆ" ತಿದ್ದುಪಡಿಯನ್ನು ನಿರಾಕರಿಸಲಾಯಿತು.

**[ನಮೂದು ೩೪ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.]**

## ನಮೂದು ೩೪ಎ

**"೩೪ಎ ಪುರಾತತ್ವ ಸ್ಥಳಗಳು, ನಿವೇಶನಗಳು ಮತ್ತು ಅವಶೇಷಗಳು"**

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIIರ ೩೪ರ ತರುವಾಯ ಮುಂದಿನ ಹೊಸ ನಮೂದನ್ನು ಸೇರಿಸತಕ್ಕದ್ದು"

---

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೫೨.

** ಅದೇ, ಪುಟ ೯೫೩.

ಇದು ಸಮವರ್ತಿ ಆಗುತ್ತದೆ.

**[ನಮೂದು ೩೪ಎ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.]**

## ನಮೂದು ೩೫

*__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIIರ ೩೫ಕ್ಕೆ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು."

೩೫ ಒಕ್ಕೂಟದ ಅಥವಾ ರಾಜ್ಯದ ಉದ್ದೇಶಗಳಿಗಾಗಿ ಅಥವಾ ಯಾವುದೇ ಇತರ ಸಾರ್ವಜನಿಕ ಉದ್ದೇಶಕ್ಕಾಗಿ ಆರ್ಜಿತವಾದ ಅಥವಾ ಕಡ್ಡಾಯವಾಗಿ ವಶಪಡಿಸಿಕೊಳ್ಳಲಾದ ಆಸ್ತಿಯ ಸಂಬಂಧದಲ್ಲಿ ನಷ್ಟ ಪರಿಹಾರವನ್ನು ಯಾವ ತತ್ವವನ್ನು ಆಧರಿಸಿ ನಿರ್ಧರಿಸಬೇಕು ಮತ್ತು ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಅದನ್ನು ಕೊಡಬೇಕು.

**(ಪ್ರಸ್ತಾವವನ್ನು ಅಂಗೀಕರಿಸಲಾಯಿತು)**

**[ತಿದ್ದುಪಡಿಯಂತೆ ನಮೂದು ೩೫ನ್ನು ಸಮವರ್ತಿಗೆ ಸೇರಿಸಲಾಯಿತು.]**

## ನಮೂದು ೩೫ಎ

**೩೫ಎ ಒಕ್ಕೂಟದ ದ್ವಾರಾ ಕೈಗಾರಿಕೆಗಳ ನಿಯಂತ್ರಣವು ಸಾರ್ವಜನಿಕ ಹಿತದೃಷ್ಟಿಯಿಂದ ವಿಹಿತವೆಂದು ಸಂಪತ್ತು ಘೋಷಿಸಿರುವಲ್ಲಿ ಅಂಥ ಕೈಗಾರಿಕೆಗಳ ಉತ್ಪನ್ನಗಳ ಉತ್ಪಾದನೆ, ಸರಬರಾಜು ಮತ್ತು ವಿತರಣೆ"**

**__ಡಾ. ಬಿ. ಆರ್. ಅಂಬೇಡ್ಕರ್:__ ಸ್ವಾಮಿ, ತಮ್ಮ ಅಪ್ಪಣೆ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIIರ ನಮೂದು ೩೫ರ ತರುವಾಯ ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು."

**(ಪ್ರಸ್ತಾವವನ್ನು ಅಂಗೀಕರಿಸಲಾಯಿತು)**

**ನಮೂದು ೩೫ಎ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.**

## ನಮೂದು ೩೬

***__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

IIIರ ನಮೂದು ೩೬ರ ಬದಲಾಗಿ ಮುಂದಿನ ನಮೂದನ್ನು ಸೇರಿಸತಕ್ಕದ್ದು.

"೩೬ ಪಟ್ಟಿ ಅಥವಾ ಪಟ್ಟಿ IIIರಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳ ಪೈಕಿ ಯಾವುದೇ ವಿಷಯದ ಉದ್ದೇಶದ ಸಲುವಾಗಿ ಕೈಗಾರಿಕೆಗಳು ಮತ್ತು ಅಂಕಿ ಅಂಶಗಳು"

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿಯೇನೂ ಇಲ್ಲ.

**(ನಮೂದು ೩೬ ಅನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು.)**

---

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೫೩.

** ಅದೇ, ಪುಟ ೯೫೩.

*** ಅದೇ, ಪುಟ ೯೫೩.

# ಹೊಸ ನಮೂದು

*__ಮಾನ್ಯ ಸಭಾಧ್ಯಕ್ಷರು:__ ಪಂಡಿತ ಗೋವಿಂದ ವಲ್ಲಭ ಪಂತ್ ಅವರು ಪ್ರಸ್ತಾವಿಸಿದ ಒಂದು ಹೊಸ ತಿದ್ದುಪಡಿಯುಂಟು.

(ತಿದ್ದುಪಡಿ ೧೪೪ ಅನ್ನು ಮಂಡಿಸಲಿಲ್ಲ)

**__ಡಾ. ಪಿ. ಎಸ್. ದೇಶ್‌ಮುಖ್:__ ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪಟ್ಟಿ IIIರಲ್ಲಿ ಈ ಮುಂದಿನ ಹೊಸ ನಮೂದನ್ನು ಸೇರಿಸತಕ್ಕದ್ದು.

**ಶೋಷಣೆ ಮತ್ತು ಪರಿತ್ಯಾಗದಿಂದ ಮಕ್ಕಳ ಮತ್ತು ಯುವಜನರ ರಕ್ಷಣೆ.**

(VI)ರ ಅನುಚ್ಛೇದದ ಪ್ರಕಾರ

ಸ್ವಾಮಿ, ನಾನು ಎರಡು ಸಂದರ್ಭಗಳಲ್ಲಿ ಇದೇ ಬಗೆಯ ತಿದ್ದುಪಡಿಗಳನ್ನು ಮಂಡಿಸಿದ್ದೆನು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ತಿದ್ದುಪಡಿಯನ್ನು ಇತರ ತಿದ್ದುಪಡಿಗಳ ಜತೆ ಪಡಿಶೀಲಿಸಲಾಗಿತ್ತು ಮತ್ತು ಅದನ್ನು ಕರಡು ರಚನಾ ಸಮಿತಿಯು ಪರಿಶೀಲನೆಗೆ ತೆಗೆದುಕೊಳ್ಳುವುದು ಎಂದು ನನ್ನ ಸ್ನೇಹಿತರಿಗೆ ನನ್ನ ಉತ್ತರದಲ್ಲಿ ತಿಳಿಸಿದ್ದೆನು. ಆಗ ಅವರು ಒಪ್ಪಿಕೊಂಡಿದ್ದರು.

**ಡಾ. ಪಿ. ಎಸ್. ದೇಶ್‌ಮುಖ್:** ನನ್ನ ಅರಿಕೆಯೆಂದರೆ ಅದರ ಪದ ಬಳಕೆಯ ಕರಡು ರಚನಾ ಸಮಿತಿಯು ತೀರ್ಮಾನಿಸುವಂತೆ ಬದಲಾಯಿಸಿಕೊಳ್ಳಬಹುದು. ಆದರೆ ತಾತ್ಕಾಲಿಕವಾಗಿ ಈ ನಮೂದು ನಾನು ಪ್ರಸ್ತಾಪಿಸಿರುವಂತೆ ಎಂಬುದಾಗಿ ಸ್ವೀಕರಿಸಬೇಕು. ಸೂಕ್ತವಾದ ಯಾವುದೇ ಪದಗಳನ್ನು ಬಳಸಿಕೊಳ್ಳಬಹುದು. ಆದರೆ "ಶೋಷಣೆ ಮತ್ತು ಪರಿತ್ಯಾಗ ಇವುಗಳಿಂದ ಮಕ್ಕಳನ್ನು ಮತ್ತು ಯುವಜನರನ್ನು ರಕ್ಷಣೆ." ಇದನ್ನು ಉಲ್ಲೇಖಿಸುವ ಒಂದು ನಮೂದು ಇರಬೇಕು. ಮಾನ್ಯ ಡಾ. ಅಂಬೇಡ್ಕರ್ ಅವರು ಇದನ್ನು ಅಂಗೀಕರಿಸುವರೆಂದು ಆಶಿಸುತ್ತೇವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಮ್ಮ ಸ್ನೇಹಿತರ ಮನಸ್ಸಿನಲ್ಲಿ ಇರುವ ಉದ್ದೇಶವು ಇನ್ನಾವುದೇ ನಮೂದಿತ ವ್ಯಾಪ್ತಿಯಲ್ಲಿ ಬಾರದಿದ್ದರೆ, ನಾನು ಅಂಥ ನಮೂದನ್ನು ಸೇರಿಸಲು ಸರ್ವ ಪ್ರಯತ್ನ ಮಾಡುವೆನು ಎಂದು ನನ್ನ ಸ್ನೇಹಿತರಿಗೆ ಹೇಳಿದ್ದೇನೆ. ಹಾಗೆ ಅವರಿಗೆ ಭರವಸೆ ಕೊಟ್ಟಿದ್ದೇನೆ.

**ಡಾ. ಪಿ. ಎಸ್. ದೇಶ್‌ಮುಖ್:** ಈ ವಿಷಯದಲ್ಲಿ ಸದನದ ಕೆಲವರಾದರು ಸದಸ್ಯರು ವಿಶೇಷ ಮಹತ್ವ ನೀಡುವ ವಿಷಯವಾಗಿದೆ. ಮಕ್ಕಳ ವಿಚಾರದಲ್ಲಿ ನಾನು ಪ್ರಸ್ತಾವಿಸಿರುವಂಥ ಒಂದು ನಮೂದು ಇದ್ದ ಪಕ್ಷದಲ್ಲಿ, ಆ ಮೂಲಕ ತೊಂದರೆಯೇನೂ ಇಲ್ಲ ಎಂದು ನಾನು ಭಾವಿಸಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸಾಧ್ಯವಾದಷ್ಟು ಮಟ್ಟಿಗೆ ಅದಕ್ಕೆ ಹೆಚ್ಚಿನ ಗಮನ ನೀಡುತ್ತೇನೆ. ಅದರ ಉದ್ದೇಶದ ಬಗ್ಗೆ ನನ್ನ ಸಂಪೂರ್ಣ ಸಹಾನುಭೂತಿ ಉಂಟು. ಹೆಚ್ಚಿಗೆ ಇನ್ನೇನು ಹೇಳಲಿ?

* * *

*__ಮಿ. ನಜಿರುದ್ದೀನ್ ಅಹ್ಮದ್:__ ಈಗ ಭಾಷಣಕಾರರು ವೇಶ್ಯಾವೃತ್ತಿಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಎಂದು ಹೇಳಿದ್ದಾರೆ.

---

* ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೫೪

** ಅದೇ, ೯೫೪

*** ಅದೇ, ೯೫೭–೯೫೮

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದು ನಾವು ಚರ್ಚಿಸಬೇಕಾದ ವಿಷಯವೆ? ಚರ್ಚಿಸಬೇಕಾದ ಒಂದೇ ವಿಷಯವೆಂದರೆ ಈ ಬಗ್ಗೆ ರಾಜ್ಯಕ್ಕೆ ಅಧಿಕಾರವಿದೆಯೋ ಅಥವಾ ಕೇಂದ್ರ ಸರ್ಕಾರಕ್ಕೆ ಅಧಿಕಾರವಿದೆಯೋ ಅಥವಾ ಇದನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಬೇಕೆ? ಅಧಿಕಾರವನ್ನು ಹೇಗೆ ಚಲಾಯಿಸಬೇಕು. ಭಾಗಶಃ ಅನುಮತಿಸಬಹುದೇ ಅಥವಾ ಸಂಪೂರ್ಣವಾಗಿ ನಿಷೇಧಿಸಬೇಕೇ ಎನ್ನುವುದು ಪ್ರತಿಯೊಂದು ವಿಧಾನಮಂಡಲವು ತೀರ್ಮಾನಿಸಬೇಕಾದ ಅಂಶ. ಅದನ್ನು ವಿಧಾನಮಂಡಲಕ್ಕೆ ಬಿಟ್ಟುಕೊಡುತ್ತೇವೆ.

**ಮಿ. ನಜೀರುದ್ದೀನ್ ಅಹ್ಮದ್:** ಅದು ಪ್ರಸ್ತುತ ಎಂದೇ ನನ್ನ ಅರಿಕೆ. ನಮೂದಿನಲ್ಲಿ 'ವೇಶ್ಯಾವೃತ್ತಿಯ ವಿಷಯ ಮತ್ತು ನಿಯಂತ್ರಣ' ಎಂದು ಹೇಳಿದ್ದುಂಟು.

**ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ** (ಮದ್ರಾಸು–ಸಾಮಾನ್ಯ): ನಾನು ಮಾತನಾಡಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಸಮಾಪ್ತಿಯನ್ನು ಪ್ರಸ್ತಾವಿಸಲಾಯಿತು. ಪ್ರಶ್ನೆಯನ್ನು ಮತಕ್ಕೆ ಹಾಕಲಾಗಿದೆ.

[**ಪ್ರಸ್ತಾವವನ್ನು ಅಂಗೀಕರಿಸಲಾಯಿತು.**]

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ಈ ನಮೂದುಗಳ ಅಡಿಯಲ್ಲಿ ಈ ವಿಷಯಗಳ ಬಗ್ಗೆ ಅಂದರೆ.....ಗಳ ಸಂಬಂಧದಲ್ಲಿ ವ್ಯವಹರಿಸಲು ಅಂಥ ದೊಡ್ಡ ಪ್ರಮಾಣದ ಬೇಸಾಯವನ್ನು ಹೊಂದಿರಲು ರಾಜ್ಯಗಳಿಗೆ ಸಾಕಷ್ಟು ಅಧಿಕಾರಗಳನ್ನು ಕೊಡಲಾಗಿದೆ. ನನ್ನ ಸ್ನೇಹಿತ ಡಾ. ದೇಶ್‌ಮುಖ್ ಅವರು ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದ ಪಟ್ಟಿ IIರ ನಮೂದು ೧ ಅನ್ನು ಗಮನಿಸಿದರೆ ಮತ್ತು ಪೊಲೀಸಿಗೆ ಸಂಬಂಧಿಸಿದ ನಮೂದು ೪ ಅನ್ನು ಮತ್ತು ಕ್ರಿಮಿನಲ್ ಕಾನೂನಿಗೆ ಸಂಬಂಧಿಸಿದ ಸಮವರ್ತಿ ನಮೂದನ್ನು ಗಮನಿಸಿದರೆ, ಆ ವಿಷಯಗಳನ್ನು ವಿನಿಮಯಗೊಳಿಸಲು ಸಾಕಷ್ಟಕ್ಕಿಂತ ಹೆಚ್ಚಿನ ಅಧಿಕಾರಗಳನ್ನು ನೀಡಲಾಗಿದೆ ಎಂದು ಅವರಿಗೆ ಕಂಡುಬರುತ್ತದೆ. ಹಾಗೆಯೇ ಅವರು ರಾಜ್ಯ ಪಟ್ಟಿಯಲ್ಲಿ ಇರುವ ಭೂಮಿಗೆ ಸಂಬಂಧಿಸಿದ ನಮೂದು ೨೪ ಅನ್ನು ಮತ್ತು ಕೃಷಿಗೆ ಸಂಬಂಧಿಸಿದ ನಮೂದು ೨೧ ಅನ್ನು ಗಮನಿಸಿದರೆ ರಾಜ್ಯಗಳು ಸ್ಟೇಟ್ ಫಾರಂ ಅಥವಾ ಇನ್ನೇನಾದರೂ ಹೊಂದಿರಲು ಅವುಗಳಿಗೆ ಸಾಕಷ್ಟಕ್ಕಿಂತ ಅಧಿಕವಾದ ಅಧಿಕಾರಗಳನ್ನು ನೀಡಲಾಗಿದೆಯೆಂದು ಅವರಿಗೆ ಕಂಡುಬರುತ್ತದೆ.

ಆದ್ದರಿಂದ ಉಳಿದಿರುವ ಪ್ರಶ್ನೆಯೆಂದರೆ ಇದೊಂದೇ. ಫಾರಂಗಳನ್ನು ರಚಿಸುವುದಕ್ಕೆ ಅಥವಾ ಪಬ್ಲಿಕ್ ಹೌಸ್‌ಗಳನ್ನು ವಿನಿಯಮಿಸುವುದಕ್ಕೆ ಸಂಬಂಧಿಸಿದ ವಿಷಯವು ಸಮವರ್ತಿ ಪಟ್ಟಿಯಲ್ಲಿ ಇರಬೇಕೇ ಹೇಗೆ ಎಂಬ ಪ್ರಶ್ನೆ. ನನ್ನ ದೃಷ್ಟಿಯಲ್ಲಿ, ಈ ವಿಷಯಗಳು ಸಮವರ್ತಿ ಪಟ್ಟಿಯಲ್ಲಿ ಇರಬೇಕೇ ಅಥವಾ ರಾಜ್ಯ ಪಟ್ಟಿಯಲ್ಲಿ ಇರಬೇಕೇ ಎಂದು ತೀರ್ಮಾನಿಸಲು ಆಧಾರಾಂಶ ಎಂದರೆ, ವಿಷಯವು ಅಖಿಲ ಭಾರತ ಯೋಗಕ್ಷೇಮಕ್ಕೆ ಸಂಬಂಧಿಸಿದ ವಿಷಯವೇ ಅಥವಾ ಕೇವಲ ಪ್ರಾಂತೀಯ ಯೋಗಕ್ಷೇಮಕ್ಕೆ ಸಂಬಂಧಿಸಿದ ವಿಷಯವೆ. ನನ್ನ ದೃಷ್ಟಿಯಲ್ಲಿ ಪಬ್ಲಿಕ್ ಹೌಸ್‌ಗಳ ವಿನಿಮಯದ, ಫಾರಂಗಳ ರಚನೆ ಪ್ರಾಂತೀಯ ಕಾಳಜಿಗೆ ಸಂಬಂಧಪಟ್ಟ ನಮೂದುಗಳು. ಆದ ಕಾರಣ ಅವುಗಳನ್ನು ರಾಜ್ಯಗಳ ಆಡಳಿತಕ್ಕೆ ಒಪ್ಪಿಸುವುದೇ ಸೂಕ್ತವಾಗಿದೆ. ಆ ಬಗ್ಗೆ ಅವು ಸಾಕಷ್ಟಕ್ಕಿಂತ ಅಧಿಕವಾದ ಅಧಿಕಾರಗಳನ್ನು ಹೊಂದಿವೆ. ಆ ಕಾರ್ಯವನ್ನು ಕೇಂದ್ರ ಸರ್ಕಾರ ಹೇಗೆ ನಿರ್ವಹಿಸಬಹುದೋ ನಾನರಿಯೆನು. ಕೇಂದ್ರ ಸರ್ಕಾರದ ಅಧಿಕಾರಕ್ಕೆ ಯಾವುದೇ ಕೃಷಿ ಭೂಮಿಯು ಒಳಪಟ್ಟಿಲ್ಲ. ಕೇಂದ್ರ ಸರ್ಕಾರವು ಫಾರಂ ಅನ್ನು ಸ್ಥಾಪಿಸಬಯಸಿದರೆ, ಅದು ರೈತರ ಕಡೆಯಿಂದ ಭೂಮಿಯನ್ನು ಆರ್ಜಿಸಿಕೊಳ್ಳಬೇಕಾಗುತ್ತದೆ. ಈ ನಮೂದುಗಳನ್ನು ಸಮವರ್ತಿ ಪಟ್ಟಿಗೆ ಸೇರಿಸುವ ಮೂಲಕ ಯಾವ ಉದ್ದೇಶವು ನೆರವೇರಬಹುದೋ ನನಗೆ ಗೊತ್ತಿಲ್ಲ. ಇಲ್ಲಿ ನಾವು ಒಂದು ಸಂಗತಿಯನ್ನು ನೆನಪಿಡಬೇಕು. ನಾವು ರಾಜ್ಯಗಳು ಎಂದು ಕರೆಯುವ ರಾಜ್ಯಗಳು ಯುರೋಪು ಖಂಡದ ಅನೇಕ ರಾಷ್ಟ್ರಗಳಿಗಿಂತ ದೊಡ್ಡದಾಗಿರುತ್ತವೆ.

**ಶ್ರೀಮತಿ ಜಿ. ದುರ್ಗಾಬಾಯಿ:** ಡಾ. ಅಂಬೇಡ್ಕರ್ ಅವರು ಒಂದು ಅಂಶವನ್ನು ಸ್ಪಷ್ಟಗೊಳಿಸುವರೆ? ನಮೂದು ವೇಶ್ಯಾವೃತ್ತಿಯ "ವಿನಿಯಮನ ಅಥವಾ ನಿಯಂತ್ರಣ" ಎಂದು ಹೇಳುತ್ತದೆ. ಇಲ್ಲಿರುವ ವಿನಿಯಮನ ಎಂಬ ಪದದ ಅರ್ಥ ನನಗೆ ಸ್ಪಷ್ಟವಾಗಿ ಅರ್ಥವಾಗುತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಅದು ಸಂಪೂರ್ಣ ನಿಷೇಧವೇ ಆಗಬೇಕು.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ರಾಜ್ಯಗಳು ಅವುಗಳನ್ನು ವಿನಿಯಮನ ಮಾಡಬಹುದು ಹಾಗೆಯೇ ನಿಷೇಧಿಸಲೂಬಹುದು. ರಾಜ್ಯಗಳು ಈ ಕಾರ್ಯವನ್ನು ನಿರ್ವಹಿಸಬಲ್ಲವು.

**(ಎಲ್ಲ ತಿದ್ದುಪಡಿಗಳನ್ನು ನಿರಾಕರಿಸಲಾಯಿತು)**

## ಹೊಸ ನಮೂದು ೮೮ಎ

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ೫೮ ಜನ ಸಭ್ಯರು ಪ್ರಸ್ತಾವಿಸಿ ಮಂಡಿಸಿರುವ ತಿದ್ದುಪಡಿಯನ್ನು ಅಂಗೀಕರಿಸಲು ಸಿದ್ಧನಿದ್ದೇನೆ.

**ಶ್ರೀ ಮಹಾವೀರ್ ತ್ಯಾಗಿ:** ನಮ್ಮ ಸದನದ ಒಂದು ದೊಡ್ಡ ಸಮೂಹವು ಈ ನಮೂದನ್ನು ಬಿಟ್ಟು ಬಿಡಬೇಕು ಎಂದು ಬಯಸುತ್ತಾರೆ. ಆದ್ದರಿಂದ ಈ ವಿಷಯವನ್ನು ಕರಡು ರಚನಾ ಸಮಿತಿಯ ಮೂಲಕ ಇನ್ನಷ್ಟು ಪರಿಶೀಲನೆಗಾಗಿ ತಡೆಹಿಡಿಯಬಹುದಲ್ಲ ಎಂದು ಕೇಳಬಹುದೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ತಿದ್ದುಪಡಿಯ ಸೂಚಕರು ಅದನ್ನು ಮಂಡಿಸಬಯಸುವುದಾದರೆ ನಾನು ಅದನ್ನು ಸ್ವೀಕರಿಸಲು ಸಿದ್ಧನಿದ್ದೇನೆ.

**ಶ್ರೀ ರಾಮನಾಥ ಗೋಯೆಂಕಾ** (ಮದ್ರಾಸು: ಸಾಮಾನ್ಯ)

ಸ್ವಾಮಿ, ಆ ದಿನ ಒಂದು ಪರ್ಯಾಯ ಪ್ರಸ್ತಾವದೊಡನೆ ಸಿದ್ಧರಿರಬೇಕು ಎಂದ ಡಾ. ಅಂಬೇಡ್ಕರ್ ಅವರಿಗೆ ತಿಳಿಸಿದ್ದಿರಲ್ಲವೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ಅಂಥ ಯಾವುದೇ ವಿಷಯವನ್ನು ತಿಳಿಸಲಿಲ್ಲ.

**ರಾಮನಾಥ ಗೊಯೆಂಕಾ:** ಸ್ವಾಮಿ, ಈ ಬಾಬಿಗೆ ಇನ್ನಷ್ಟು ಸಮಯ ಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ಆ ತಿದ್ದುಪಡಿ ಇಲ್ಲಿದೆ.

**ಶ್ರೀ ರಾಮನಾಥ ಗೊಯೆಂಕಾ:** ನನ್ನ ಸಲಹೆ ಎಂದರೆ ನಾವು ಕರಡು ರಚನಾ ಸಮಿತಿಯನ್ನು ಸಂಪರ್ಕಿಸಬೇಕು ಮತ್ತು ಎಲ್ಲರಿಗೂ ಒಪ್ಪಿಗೆಯಾಗುವ ಒಂದು ಸೂತ್ರವನ್ನು ಒಪ್ಪಿಕೊಳ್ಳಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ಅವರು ನಮೂದು ೮೮ಎ ಮಂಡಿಸಿದರೆ, ಅದನ್ನು ಸ್ವೀಕರಿಸಲು ಸಿದ್ಧನಿದ್ದೇನೆ.

**ಶ್ರೀ ಎಸ್. ನಾಗಪ್ಪ:** ಅದನ್ನು ಮಂಡಿಸಲಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ಇನ್ನೂ ಮಂಡಿಸಿಲ್ಲ. ಅದು ಪಟ್ಟಿ I ರ ನಮುದು ೮೮ಎ, ರಾಜ್ಯ ಪಟ್ಟಿಯಲ್ಲಿ ನಮೂದಲ್ಲ. ಆ ಬಗ್ಗೆ ಆಕ್ಷೇಪ ಎತ್ತಲಾಗಿತ್ತು. ಆದ್ದರಿಂದ ಮಂಡಿಸಿರಲಿಲ್ಲ. ಆದ್ದರಿಂದ ಈಗ ಶ್ರೀ ಗೊಯೆಂಕಾ ಅವರು ಅದನ್ನು ಮಂಡಿಸಬಯಸುತ್ತಾರೆ.........**

---

* ಸಿ.ಎ.ಡಿ. ಸಂ. IX, ೨ನೇ ಸೆಪ್ಟೆಂಬರ್ ೧೯೪೯, ಪುಟ ೯೬೦–೯೬೩.

** ಚುಕ್ಕಿಗಳು ತಡೆಯನ್ನು ಸೂಚಿಸುತ್ತದೆ.

**ಶ್ರೀ ದೇಶಬಂಧು ಗುಪ್ತ:** ಸ್ವಾಮಿ, ಈ ವಿಷಯವನ್ನು ತಡೆಹಿಡಿಯಬೇಕು ಎಂದು ಸೂಚಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಯಾಕೆ? ನಾವು ಇಡೀ ಪಟ್ಟಿಯನ್ನು ಪೂರ್ತಿಗೊಳಿಸಲು ಪ್ರಯತ್ನಿಸಿದ್ದೆವು. ಅದಕ್ಕಾಗಿಯೇ ನಾವು ಅವಸರ ಮಾಡಿದ್ದು, ಅನೇಕ ಸದಸ್ಯರು ವಾಡಿಕೆಯಾಗಿ ಮಾತನಾಡುವಷ್ಟು ಮಟ್ಟಿಗೆ ಅವರಿಗೆ ಮಾತನಾಡಲು ಅವಕಾಶ ಕೊಡಲಿಲ್ಲ. ಈಗ ಅನೇಕ ಸದಸ್ಯರು ಸಹಿ ಮಾಡಿದ ಒಂದು ನಿಖರವಾದ ತಿದ್ದುಪಡಿಯು ನಮ್ಮ ಬಳಿಗೆ ಬಂದಿರುವಾಗ, ಅದನ್ನು ಏಕೆ ತಡೆಹಿಡಿಯಬೇಕು ಎಂದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ದೇಶಬಂಧು ಗುಪ್ತ:** ಅದು ನಿಖರವಾಗಿ, ಸುಸ್ಪಷ್ಟವಾಗಿ ಖಚಿತವಾದ ರೀತಿಯಲ್ಲಿ ರೂಪಿತವಾಗಿಲ್ಲ. ಮಾನ್ಯ ಡಾ. ಅಂಬೇಡ್ಕರ್ ಅವರೇ ಅವರ ಕರಡಿನಲ್ಲಿ ಒಂದು ಆಕ್ಷೇಪಾರ್ಹ ಸಂಗತಿಯನ್ನು ಗಮನಿಸಿದ್ದಾರೆ. ಅದನ್ನು ಸರಿಪಡಿಸಿ ಉತ್ತಮಗೊಳಿಸುವಲ್ಲಿ ನಮಗೆ ನೆರವಾಗಲು ಸಿದ್ಧರಿದ್ದರು.

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರೆ, ನಾವು ಅಂದು ತಿಳಿದುಕೊಂಡ ಮಟ್ಟಿಗೆ, ಅದನ್ನು ಪಟ್ಟಿ Iರಲ್ಲಿ ಇಡಬೇಕೇ ಅಥವಾ ಪಟ್ಟಿ IIರಲ್ಲಿ ಇಡಬೇಕೇ ಎನ್ನುವುದೊಂದೇ ಗಮನಿಸತಕ್ಕ ಅಂಶವಾಗಿತ್ತು. ಕಾರ್ಯನೀತಿಯ ಪ್ರಶ್ನೆಯನ್ನು ತೀರ್ಮಾನಿಸಬೇಕಾಗಿತ್ತು ಎಂದು ಅವರು ಹೇಳಿದ್ದರು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನೀವು ಅದನ್ನು ಪಟ್ಟಿ Iರಲ್ಲಿ ಸೇರಿಸ ಬಯಸುವುದಾದರೆ, ನಾನು ಅಂಗೀಕರಿಸಲು ಸಿದ್ಧನಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಈ ನಮೂದು ಪಟ್ಟಿಯ ಮಾನ ನಿರ್ದಿಷ್ಟ ಸ್ಥಳದಲ್ಲಿ ಇರಬೇಕು ಎಂಬ ವಿಷಯವನ್ನು ಕಂಡು ರಚನಾ ಸಮಿತಿಗೇ ಬಿಡುವುದು ಸೂಕ್ತ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ಇಡೀ ತೊಂದರೆಗೆ ಕಾರಣವೆಂದರೆ ಹೀಗೆ: ಈ ನಮೂದು ಮೊದಲು ಪಟ್ಟಿ IIರಲ್ಲಿ ಇತ್ತು. ಅವರ ಆಕ್ಷೇಪವೆಂದರೆ ಅದು ಪಟ್ಟಿ IIರಲ್ಲಿ ಇರಕೂಡದು. ಅದನ್ನು ಪಟ್ಟಿ Iಕ್ಕೆ ವರ್ಗಾಯಿಸಬೇಕು. ಅವರು ಹಾಗೆ ಬಯಸುವುದಾದರೆ ಅದನ್ನು ಅಂಗೀಕರಿಸಲು ಸಿದ್ಧನಿದ್ದೇನೆ.

* * *

**ಶ್ರೀ ದೇಶಬಂಧು ಗುಪ್ತ:** ಸ್ವಾಮಿ, ಒಂದು ಮಾಹಿತಿಯನ್ನು ಕೇಳಬಯಸುತ್ತ, ನಿನ್ನೆ ತಡೆಹಿಡಿಯಲಾಗಿದ್ದ ಎರಡನೇ ಪಟ್ಟಿಯ ನಮೂದು ೫೮ರ ವಿಷಯದಲ್ಲಿ ಮುಂದೇನು ಎಂದು ವಿಚಾರಿಸಬಹುದೆ?

**ಮಾನ್ಯ ಸಭಾಧ್ಯಕ್ಷರು:** ಅದು ಹೋಗುತ್ತದೆ.

**ಶ್ರೀ ದೇಶಬಂಧು ಗುಪ್ತ:** ಇವೆರಡೂ ಜತೆಗೆ ಹೋಗಬೇಕು. ಆದ ಕಾರಣ ಅದನ್ನು ನಿನ್ನೆ ತಡೆ ಹಿಡಿಯಲಾಗಿತ್ತು.

**ಮಾನ್ಯ ಸಭಾಧ್ಯಕ್ಷರು:** ಅದನ್ನು ಪಟ್ಟಿ IIಕ್ಕೆ ವರ್ಗಾಯಿಸುವ ಬಗ್ಗೆ ತಿದ್ದುಪಡಿ ಮಂಡಿಸಲಾಗಿತ್ತು ಆ ಕಾರಣವೇ ಅದನ್ನು ತಡೆಹಿಡಿಯಲಾಗಿತ್ತು. ಅದನ್ನು ಪಟ್ಟಿ Iಕ್ಕೆ ಕಳಿಸಿದರೆ, ಆ ತಿದ್ದುಪಡಿಯು ಕ್ರಮಬಾಹಿರವಾಗುತ್ತದೆ.

**ಶ್ರೀ ದೇಶಬಂಧು ಗುಪ್ತ:** ಈಗ ಎರಡು ತಿದ್ದುಪಡಿಗಳಿವೆ. ಇದನ್ನು ಪಟ್ಟಿ Iಕ್ಕೆ ವರ್ಗಾಯಿಸಲು ಎಂಬುದಾಗಿ ಒಂದು ತಿದ್ದುಪಡಿ, ನಮೂದು ೫೮ರ ವ್ಯಾಪ್ತಿಯನ್ನು ವ್ಯಾಖ್ಯಾನಿಸುವ ತಿದ್ದುಪಡಿ ಇನ್ನೊಂದು. ಈ ವಿಷಯವು ಆ ಸಮಯಕ್ಕೆ ನಿನ್ನೆ ಸದನದ ಮುಂದೆ ಇರಲಿಲ್ಲ. ಅದಕ್ಕಾಗಿ ತಿದ್ದುಪಡಿಯನ್ನು ತಡೆಹಿಡಿಯಲಾಗಿತ್ತು. ಇವೆರಡೂ ಜತೆಯಲ್ಲಿಯೇ ಹೋಗಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ಸ್ವೀಕರಿಸಲು ನಾನು ಸಿದ್ಧನಿಲ್ಲ. ಇವೆರಡೂ ಜತೆಯಲ್ಲಿ ಹೋಗುವುದಿಲ್ಲ. ನಾನು ಅದನ್ನು ಸ್ವೀಕರಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ೧೨೨ ನಂಬರಿನ ಒಂದು ತಿದ್ದುಪಡಿ ಇತ್ತು. ಅದರ ಪರಿಶೀಲನೆಯನ್ನು ಈ ತಿದ್ದುಪಡಿಯ ಕಾರಣ ತಡೆಹಿಡಿಯಲಾಯಿತು. ಇದೀಗ ಮಂಡಿಸಲಾದ ತಿದ್ದುಪಡಿಯನ್ನು ಸ್ವೀಕರಿಸಿದ ಪಕ್ಷದಲ್ಲಿ, ತಿದ್ದುಪಡಿ ೧೨೨ ಕ್ರಮಬಾಹಿರವಾಗುತ್ತದೆ. ಹೀಗಾಗಿ, ಸದನದ ಮುಂದಿರುವ ಒಂದೇ ಒಂದು ಪ್ರಸ್ತಾಪ ಎಂದರೆ ಡಾ. ಅಂಬೇಡ್ಕರ್ ಅವರ ಪ್ರಸ್ತಾವ, ಅಂದರೆ ತಿದ್ದುಪಡಿ ೧೨೧.

**ಶ್ರೀ ರಾಮನಾಥ ಗೊಯೆಂಕಾ:** ಪಟ್ಟಿ IIರಲ್ಲಿ ಪರಿಣಾಮ ಸ್ವರೂಪದ ಯಾವುದೇ ತಿದ್ದುಪಡಿ ಇರಲಿಕ್ಕಿಲ್ಲವೆ? ರಾಜ್ಯ ಪಟ್ಟಿಯಲ್ಲಿ ಮಾರಾಟದ ಮೇಲೆ ಮತ್ತು ಜಾಹಿರಾತುಗಳ ಮೇಲೆ ತೆರಿಗೆ ವಿಧಿಸಲು ರಾಜ್ಯ ಸರ್ಕಾರಕ್ಕೆ ಕೆಲವು ಅಧಿಕಾರಗಳನ್ನು ಕೊಡಲಾಗಿದೆ. ಇದನ್ನು ಪಟ್ಟಿ Iಕ್ಕೆ ವರ್ಗಾಯಿಸಿದ ಪಕ್ಷದಲ್ಲಿ ನಾವು ನೋಟೀಸು ಕೊಟ್ಟಿರುವ ಪರಿಣಾಮ ಸ್ವರೂಪಿ ತಿದ್ದುಪಡಿ...

**ಮಾನ್ಯ ಸಭಾಧ್ಯಕ್ಷರು:** ನೋಟೀಸು ಎಂದರೆ ಅದು ಪಟ್ಟಿ Iಕ್ಕೆ ಸೇರುತ್ತದೆ. ಅದನ್ನು ಪಟ್ಟಿ Iರಲ್ಲಿ ತೆಗೆದುಕೊಂಡರೆ ಅದು ಹೊರಗೆ ಹೋಗುತ್ತದೆ.

**ಶ್ರೀ ರಾಮನಾಥ ಗೊಯೆಂಕಾ:** ಆದರೆ ಪಟ್ಟಿ IIರಲ್ಲಿರುವ ನಮೂದಿನಲ್ಲಿ ವಿನಾಯಿತಿಯನ್ನು ಒದಗಿಸ ಬೇಕಾಗುತ್ತದೆ. ಅಂದರೆ, ಸರಕುಗಳ ಮಾರಾಟ, ವೃತ್ತ ಪತ್ರಿಕೆಗಳನ್ನು ಹೊರತುಪಡಿಸಿ.

**ಮಾನ್ಯ ಸಭಾಧ್ಯಕ್ಷರು:** ಅದು ಅಗತ್ಯವಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಪರಿಣಾಮ ಸ್ವರೂಪದ ತಿದ್ದುಪಡಿ ಅಲ್ಲವೇ ಅಲ್ಲ. ಎರಡೂ ತಿದ್ದುಪಡಿಗಳು ಸಾಕಷ್ಟು ಸ್ವತಂತ್ರವಾಗಿವೆ. ಒಂದು ತಿದ್ದುಪಡಿ ಎಂದರೆ, ೮೦ಎ ಎಂಬ ಹೊಸ ನಮೂದನ್ನು ಸೇರಿಸಿ ಆ ನಮೂದಿನ ವ್ಯಾಪ್ತಿಯನ್ನು ವಿಸ್ತರಿಸಬೇಕು. ಇನ್ನೊಂದು ತಿದ್ದುಪಡಿ ಎಂದರೆ, ಪಟ್ಟಿ IIರಲ್ಲಿರುವ ಮತ್ತು ಮಾರಾಟ ತೆರಿಗೆಗೆ ಸಂಬಂಧಪಡುವ ನಮೂದು ೫೮ಕ್ಕೆ ನಾನು ಮಂಡಿಸಿದ ತಿದ್ದುಪಡಿಗೆ ಸೂಚಿಸಲಾದ ತಿದ್ದುಪಡಿ. ಆ ತಿದ್ದುಪಡಿಯ ಆಶಯವೆಂದರೆ "ಸರಕುಗಳು" ಎಂಬ ಪದವನ್ನು ವೃತ್ತಪತ್ರಿಕೆಗಳನ್ನು ಹೊರತುಪಡಿಸುವ ಹಾಗೆ ಅದನ್ನು ಮಿತಗೊಳಿಸಬೇಕು. ಆ ತಿದ್ದುಪಡಿಯ ಗುಣಾವಗುಣಗಳನ್ನು ಆಧರಿಸಿ ಆ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು. ಜರೂರಾಗಿ ಪರಿಶೀಲಿಸಬೇಕಾದ ಪ್ರಸ್ತುತ ಪ್ರಶ್ನೆ ಎಂದರೆ ಇಲ್ಲಿ ಮಂಡಿಸಲಾದ ಅರ್ಥದಲ್ಲಿ ೮೮ಎ ಎಂಬ ನಮೂದನ್ನು ಸೇರಿಸಿ ಪಟ್ಟಿ I ಅನ್ನು ವಿಸ್ತರಿಸಬೇಕೆ ಹೇಗೆ?

**ಶ್ರೀ ರಾಮನಾಥ ಗೊಯೆಂಕಾ:** ಪರಿಸ್ಥಿತಿ ಹೀಗುಂಟು. ನಾವು ಪಟ್ಟಿ Iರಲ್ಲಿ ಒಂದು ನಮೂದನ್ನು ಪ್ರಸ್ತಾವಿಸಿದ್ದೇವೆ. ಆ ಪ್ರಕಾರ ವೃತ್ತಪತ್ರಿಕೆಗಳನ್ನು, ಅದರಲ್ಲಿ ಬರುವ ಜಾಹಿರಾತುಗಳನ್ನೂ ಸೇರಿದಂತೆ ಪಟ್ಟಿ Iಕ್ಕೆ ವರ್ಗಾಯಿಸಬೇಕು ಮತ್ತು ಪ್ರಾಂತ್ಯ ಸರ್ಕಾರಗಳಿಗೆ ವೃತ್ತಪತ್ರಿಕೆಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರವು ಇರಬಾರದು. ಆದ್ದರಿಂದ ನಮೂದು ನಂಬರು ೫೭ ಪಟ್ಟಿ IIರಲ್ಲಿರುವ ನಂಬರು ೧೨೨ ನಮೂದಿಸಿದ ಪರಿಣಾಮಸ್ವರೂಪಿ ನಮೂದು ಆಗಿರುತ್ತದೆ. ಆದ್ದರಿಂದ ಈ ಎರಡೂ ತಿದ್ದುಪಡಿಗಳನ್ನು ಜತೆಯಾಗಿ ತೆಗೆದುಕೊಳ್ಳಬೇಕಾಗುತ್ತದೆ. ನಿನ್ನೆ, ಪಟ್ಟಿ IIರಲ್ಲಿನ ನಮೂದು ೫೮ರ ಪ್ರಶ್ನೆಯು ನಮ್ಮೆದುರು ಬಂದಾಗ, ನಿಮ್ಮ ರೂಲಿಂಗ್ ಕೊಡುವವರೆಗೆ ಅದನ್ನು ಮುಂದೆ ಹಾಕಿ ಈ ಎರಡೂ ನಮೂದುಗಳನ್ನು ಕುರಿತು ಒಟ್ಟಾಗಿ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಹೇಳಿದ್ದೀರಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವುಗಳನ್ನು ಒಂದೊಂದಾಗಿ ತೆಗೆದುಕೊಳ್ಳಿ. ಎರಡೂ

ತಿದ್ದುಪಡಿಗಳನ್ನು ಒಂದರ ತರುವಾಯ ಒಂದಾಗಿ ಇಡಬಹುದು.

**ಶ್ರೀ ರಾಮನಾಥ ಗೊಯೆಂಕಾ:** ಸ್ವಾಮಿ, ನಾವು ನಮೂದು ೫೮ ಅನ್ನು ಪಟ್ಟಿ IIರಲ್ಲಿ ಮೊದಲು ಸೇರಿಸೋಣವೆ? ಮತ್ತು ಆ ತರುವಾಯ ೮೮ಎ ಅನ್ನು ಸೇರಿಸೋಣವೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಮ್ಮ ಇಷ್ಟದಂತೆ ಹೇಗಾದರೂ ಇರಬಹುದು. ಆದರೆ ಒಂದು ಮಾತನ್ನು ಹೇಳಬಯಸುತ್ತೇನೆ. ಎರಡನೆಯ ತಿದ್ದುಪಡಿಯ ಮೇಲೆ ಒಂದು ರೀತಿಯಲ್ಲಿ ಮತ ಹಾಕುವ ಮತ್ತು ಒಂದನೆಯ ತಿದ್ದುಪಡಿಯ ಮೇಲೆ ಇನ್ನೊಂದು ರೀತಿಯಲ್ಲಿ ಮತ ಹಾಕಿದರೆ ಅಸಂಗತವಾಗುತ್ತದೆ. ಆಗ ಒಂದನ್ನು ಅಂಗೀಕರಿಸುವುದು ಇನ್ನೊಂದು ತಿರಸ್ಕರಿಸುವುದು ಸದನದ ವಿವೇಚನೆಗೆ ಒಳಪಟ್ಟ ವಿಷಯವಾಗುತ್ತದೆ.

**ಶ್ರೀ ರಾಮನಾಥ ಗೊಯೆಂಕಾ:** ಈ ವಿಷಯದ ಮೇಲೆ ನಿಮ್ಮ ರೂಲಿಂಗ್ ಅನ್ನು ಅಪೇಕ್ಷಿಸುತ್ತೇನೆ. ವೃತ್ತಪತ್ರಿಕೆಗಳ ಮೇಲಣ ತೆರಿಗೆಯನ್ನು ನೀವು ಪಟ್ಟಿ Iಕ್ಕೆ ವರ್ಗಾಯಿಸಿದರೆ, ಅದನ್ನು ಪಟ್ಟಿ IIಕ್ಕೆ ಸಹ ಸೇರಿಸುವಂತಿಲ್ಲ. ಅದಕ್ಕೆ ಪಟ್ಟಿ Iರಲ್ಲಿ ಎಡೆ ಮಾಡಿಕೊಟ್ಟಾಗ, ಅದು ಪಟ್ಟಿ IIಕ್ಕೆ ಹೋಗುವಂತಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ತೆರಿಗೆಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಮಾತ್ರವೇ ಅದು ಪಟ್ಟಿ IIರ ಆಚೆಗೆ ಹೋಗುತ್ತದೆ. ಆದರೆ ಸರಕುಗಳ ಮಾರಾಟಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಅಲ್ಲಿಯೇ ಉಳಿಯುತ್ತದೆ. ಅದನ್ನು ಸಹ ತೆಗೆಯಬೇಕು ಎಂದು ಬಯಸುತ್ತೀರ? ನಾನು ತಿಳಿದುಕೊಂಡಂತೆ ನಿಮ್ಮ ಉದ್ದೇಶ ಇಬ್ಬಗೆಯದು: ಅಂದರೆ ವೃತ್ತಪತ್ರಿಕೆಗಳ ಮೇಲೆ ಯಾವುದೇ ಶುಲ್ಕವನ್ನು ವಿಧಿಸುವ ಅವಕಾಶವಿರತಕ್ಕದ್ದಲ್ಲ. ಮಾತ್ರವಲ್ಲದೆ, ಯಾವುದೇ ಮಾರಾಟ ತೆರಿಗೆಯನ್ನು ವಿಧಿಸಲು ಸಹ ಅವಕಾಶವಿರತಕ್ಕದ್ದಲ್ಲ. ನಾನು ಪ್ರಾಮಾಣಿಕವಾಗಿ ಹೇಳಬೇಕಾದರೆ, ನಾನು ನಿಮಗೆ ಎರಡೂ ಬಗೆಯ ಪ್ರಯೋಜನಗಳನ್ನು ಕೊಡಲು ಸಿದ್ಧನಿಲ್ಲ.

**ಶ್ರೀ ರಾಮನಾಥ ಗೊಯೆಂಕಾ:** ಸ್ವಾಮಿ, ಈ ವಿಷಯವನ್ನು ಸೋಮವಾರ ಬೆಳಗಿನವರೆಗೆ ತಡೆ ಹಿಡಿಯುವಂತೆ ವಿನಂತಿಸಿಕೊಳ್ಳಬಹುದೆ? ಅಂದರೆ ನಾವು ನಮ್ಮೆಲ್ಲರ ಅಭಿಪ್ರಾಯಗಳನ್ನು ಒಟ್ಟಾಗಿ ಸೇರಿಸಿಕೊಂಡು ತಮ್ಮ ಬಳಿಗೆ ಬರಲು ಸಾಧ್ಯವಾಗುತ್ತದೆ. ಕಾರಣವೆಂದರೆ, ಅರ್ಥವಿವರಣೆ ಏನಿದ್ದರೂ ಸರಿಯೆ, ನಾವೆಲ್ಲರೂ ಹೇಳುವುದು ನಮ್ಮ ತಿದ್ದುಪಡಿಯ ಉದ್ದೇಶ ಆಗಿರುತ್ತದೆ. ನಮ್ಮ ಉದ್ದೇಶವು ನೆರವೇರದಿದ್ದರೆ, ನಾವು ಹೊಸ ತಿದ್ದುಪಡಿಯನ್ನು ಮಂಡಿಸಬೇಕಾಗುತ್ತದೆ. ಆದರೆ ಅದೇ ನಮ್ಮ ಉದ್ದೇಶ. ನಾವು ತಜ್ಞರಲ್ಲ. ಆದ ಕಾರಣ ಈ ವಿಷಯದಲ್ಲಿ ಡಾ. ಅಂಬೇಡ್ಕರ್ ಅವರ ಮಾರ್ಗದರ್ಶನವನ್ನು ಅನುಸರಿಸುತ್ತೇವೆ. ಇಡೀ ತೆರಿಗೆ ಬಾಬನ್ನು ಪ್ರಾಂತ್ಯಗಳಿಂದ ತೆಗೆದುಹಾಕಿ ಕೇಂದ್ರಕ್ಕೆ ಒಯ್ಯಬೇಕು. ನಮ್ಮ ಈ ಉದ್ದೇಶ ಈಡೇರದೆ ಹೋದ ಪಕ್ಷದಲ್ಲಿ, ನಾವು ನಮ್ಮ ಆಶಯಗಳನ್ನು ಈಡೇರಿಸಲು ಸಮರ್ಥವಾದ ಹೊಸ ತಿದ್ದುಪಡಿಗಳನ್ನು ಮಂಡಿಸಬೇಕಾಗುತ್ತದೆಯೆಂದು ಅನಿಸುತ್ತದೆ. ಇವು ನಮ್ಮ ಉದ್ದೇಶಗಳು.

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ಈ ವಿಷಯವನ್ನು ತಡೆಹಿಡಿಯಲು ನಿಮ್ಮ ಆಕ್ಷೇಪವೇನಾದರೂ ಇದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈ ಕುರಿತು ನಿಷ್ಕಪಟವಾಗಿ ಹೇಳಬಯಸುತ್ತೇನೆ. ನಮೂದು ೮೮ಎ ಅನ್ನು ಅಂಗೀಕರಿಸುವಂತೆ ನನಗೊಂದು ಮೆಂಡೇಟ್ ಉಂಟು. ನಾನು ಮೆಂಡೇಟ್ ಅನ್ನು ಅನುಸರಿಸಿ, ನಮೂದು ೮೮ಎ ಅನ್ನೂ ಅಂಗೀಕರಿಸಲು ಸಿದ್ಧನಿದ್ದೇನೆ. ಅಂಗೀಕರಿಸುತ್ತೇನೆ. ಇನ್ನು, ಇನ್ನೊಂದನ್ನು ಅಂದರೆ (ನಮೂದು ನಂ. ೧೨೨ ಅನ್ನು) ಅಂಗೀಕರಿಸಲು ನಾನು ಯಾವುದೇ ಮೆಂಡೇಟ್

ಪಾಲಿಸಬೇಕಾಗಿಲ್ಲ. ಅದನ್ನು ಅಂಗೀಕರಿಸುವುದು ಕಷ್ಟಸಾಧ್ಯವೆಂದು ಖಚಿತ ಅಭಿಪ್ರಾಯ. ಯಾವುದೇ ಬಗೆಯ ತೆರಿಗೆಗಳಿಂದ ವೃತ್ತಪತ್ರಿಕೆಗಳಿಗೆ ಪೂರ್ಣ ವಿನಾಯಿತಿ ಕೊಡುವ ಪ್ರಸ್ತಾವವು ಅಸಾಧ್ಯವೆಂದೇ ನನ್ನ ಅಭಿಪ್ರಾಯ.

**ಶ್ರೀ ರಾಮನಾಥ ಗೊಯೆಂಕಾ:** ಹಾಗಲ್ಲ, ನಮ್ಮ ನಿಲುವು. ತೆರಿಗೆ ವಿಧಿಸುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಬೇಕು. ಪ್ರಾಂತಗಳಿಗಲ್ಲ ಎನ್ನುವುದೇ ನಮ್ಮ ಅಭಿಪ್ರಾಯ. ತೆರಿಗೆ ವಿಧಿಸುವ ಅಧಿಕಾರವನ್ನು ಪ್ರಾಂತ್ಯ ಪ್ರಾಂತ್ಯಗಳಿಂದ ತೆಗೆದುಹಾಕಬೇಕೆನ್ನುವುದೇ ಮೆಂಡೇಟ್ ಅಗಿತ್ತು ಎಂದು ನಾನು ಡಾ. ಅಂಬೇಡ್ಕರ್ ಅವರಿಗೆ ನೆನಪಿಸಲೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನೀವು ಆ ಮೆಂಡೇಟ್ ಅನ್ನು ಅರ್ಥೈಸಿ ನನಗೆ ಹೇಳಬೇಕಾಗಿಲ್ಲ. ಅದೇನು ಎನ್ನುವುದು ನನಗೆ ಚೆನ್ನಾಗಿ ಗೊತ್ತು. ಆ ಬಗ್ಗೆ ನನಗೆ ಸ್ಪಷ್ಟ ಕಲ್ಪನೆಯುಂಟು.

**ಶ್ರೀ ರಾಮಾನಾಥ ಗೊಯೆಂಕಾ:** ನಾನು ಅದು ಇರುವ ಹಾಗೆಯೇ ನಿಮಗೆ ಅರ್ಥೈಸಿ ಹೇಳುತ್ತಿರುವುದು.

**ಶ್ರೀ ದೇಶಬಂಧು ಗುಪ್ತ:** ಡಾ. ಅಂಬೇಡ್ಕರ್ ಅವರು ಮೆಂಡೇಟ್ ಅನ್ನು ಕುರಿತು ಉಲ್ಲೇಖಿಸಿರುವ ಕಾರಣ, ಮೆಂಡೇಟ್ ಅನ್ನು ಕೊಟ್ಟಿರುವ ಪ್ರಾಧಿಕಾರದ ಜತೆ ವಿಷಯವನ್ನು ಚರ್ಚಿಸಿದಾಗ, ಆ ಎರಡೂ ತಿದ್ದುಪಡಿಗಳು ಜತೆಗೂಡಿಯೇ ಹೋಗುತ್ತವೆ ಎಂದು ಅತ್ಯಂತ ಸ್ಪಷ್ಟವಾಗಿತ್ತು. ಈ ತೆರಿಗೆಯು ಕೇವಲ ಕೇಂದ್ರೀಯ ತೆರಿಗೆ ಯಾಗಿರಬೇಕು. ಕೇಂದ್ರೀಯ ಹಾಗು ಪ್ರಾಂತೀಯ ತೆರಿಗೆ ಆಗಿರಕೂಡದು ಎಂದು ನಮ್ಮ ಇಚ್ಛೆಯಾಗಿತ್ತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಬೇರೆ ಎಲ್ಲೋ ಚರ್ಚೆಯಾದ ವಿಷಯಗಳನ್ನು ಇಲ್ಲಿ ಉಲ್ಲೇಖಿಸುವುದು ಸರಿಯಲ್ಲ. ನಾನು ಆ ಮೆಂಡೇಟ್ ಅನ್ನು ಪಾಲಿಸಲು ಸಿದ್ಧನಿದ್ದೇನೆ. ಈ ತಿದ್ದುಪಡಿಯನ್ನು ತರುವ ಮೂಲಕ ಗೊಂದಲಕ್ಕೆ ಎಡೆಯುಂಟಾಗಿದೆ ಎಂದು ನಾನು ಬೇರೆಲ್ಲೋ ಹೇಳಿರುವುದನ್ನು ಕೇಳಿದ ನನ್ನ ಈ ಸ್ನೇಹಿತರು ಈ ವಿಷಯವನ್ನು ಗೊತ್ತಾಗದ ರೀತಿಯಲ್ಲಿ ತರ್ಕಿಸಿದ್ದಾರೆ.

**ಶ್ರೀ ರಾಮನಾಥ ಗೊಯೆಂಕಾ:** ಡಾ. ಅಂಬೇಡ್ಕರ್ ಅವರು ಹೇಳಿರುವ ಹಾಗೆ ನಾವು ಗೊಂದಲಕ್ಕೆ ಅವಕಾಶ ಮಾಡಿಕೊಟ್ಟಿದ್ದರೆ, ಈ ಗೊಂದಲದಿಂದ ಪಾರಾಗುವ ದಾರಿಯನ್ನು ಹುಡುಕಿಕೊಳ್ಳಬೇಕು.

(ತಡೆ)

**ಮಾನ್ಯ ಸಭಾಧ್ಯಕ್ಷರು:** ಈ ವಿಷಯದ ಬಗ್ಗೆ ತೀವ್ರ ಭಾವಾವೇಶ ಇರುವಂತೆ ಕಾಣುತ್ತದೆ. ಆದ ಕಾರಣ ಭಾವನೆಗಳು ಒಂದಿಷ್ಟು ತಣ್ಣಗಾದ ತರುವಾಯ, ಇನ್ನೊಂದಾದರೂ ಈ ವಿಷಯವನ್ನು ಕೈಗೆತ್ತಿಕೊಳ್ಳುವುದು ಕ್ಷೇಮವೆಂದು ತೋರುತ್ತದೆ.

## ಐದನೆಯ ಅನುಸೂಚಿ

***ಮಾನ್ಯ ಸಭಾಧ್ಯಕ್ಷರು:** ನಾವು ಈಗ ಐದನೆಯ ಅನುಸೂಚಿಯನ್ನು ತೆಗೆದುಕೊಳ್ಳುವ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಐದನೆಯ ಅನುಸೂಚಿಗೆ ಬದಲಾಗಿ ಈ ಮುಂದಿನ ಅನುಸೂಚಿಯನ್ನು ಸೇರಿಸಬೇಕು.**

---

* ಸಿ.ಎ.ಡಿ. ಸಂ. IX, ೫ನೇ ಸೆಪ್ಟೆಂಬರ್ ೧೯೪೯, ಪುಟ ೯೬೫–೯೬೭.

# ಐದನೆಯ ಅನುಸೂಚಿ
# ಅನುಸೂಚಿತ ಪ್ರದೇಶಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಡಳಿತ ಮತ್ತು ನಿಯಂತ್ರಣ
# ಭಾಗ I ಸಾಮಾನ್ಯ

೧. **ಅರ್ಥ ವಿವರಣೆ:** ಈ ಅನುಸೂಚಿಯಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು 'ರಾಜ್ಯ' ಎಂದರೆ ಮೊದಲನೆಯ ಅನುಸೂಚಿಯ ಭಾಗ I ಅಥವಾ ಭಾಗ IIರಲ್ಲಿ ತತ್ಕಾಲದಲ್ಲಿ ನಿರ್ದಿಷ್ಟಪಡಿಸಿರುವ "ರಾಜ್ಯ"

೨. **ಅನುಸೂಚಿತ ಪ್ರದೇಶಗಳಲ್ಲಿ ರಾಜ್ಯದ ಕಾರ್ಯನಿರ್ವಾಹಕ ಅಧಿಕಾರ:** ಈ ಅನುಸೂಚಿಯ ಉಪಬಂಧಗಳಿಗೆ ಒಳಪಟ್ಟು, ಒಂದು ರಾಜ್ಯದ ಕಾರ್ಯನಿರ್ವಾಹಕ ಅಧಿಕಾರವು ಅದರಲ್ಲಿರುವ ಬುಡಕಟ್ಟು ಪ್ರದೇಶಗಳಿಗೆ ವ್ಯಾಪ್ತವಾಗುತ್ತದೆ.

೩. **ರಾಜ್ಯಪಾಲರು ಅಥವಾ ಆಡಳಿತಗಾರನು ಅನುಸೂಚಿತ ಪ್ರದೇಶಗಳ ಆಡಳಿತವನ್ನು ಕುರಿತು ಭಾರತ ಸರ್ಕಾರಕ್ಕೆ ಸಲ್ಲಿಸುವ ವರದಿ:** ಅನುಸೂಚಿತ ಪ್ರದೇಶಗಳನ್ನು ಹೊಂದಿರುವ ಪ್ರತಿಯೊಂದು ರಾಜ್ಯದ ರಾಜ್ಯಪಾಲರು ಅಥವಾ ಆಡಳಿತಗಾರನು, ಪ್ರತಿ ವರ್ಷಕ್ಕೊಮ್ಮೆ, ಅಥವಾ ಭಾರತ ಸರ್ಕಾರವು ಅಗತ್ಯಪಡಿಸಿದಾಗಲೆಲ್ಲ, ರಾಜ್ಯದಲ್ಲಿರುವ ಅನುಸೂಚಿತ ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿದಂತೆ ಆ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಒಕ್ಕೂಟದ ಕಾರ್ಯನಿರ್ವಾಹಕ ಅಧಿಕಾರವು ಸದರಿ ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿದ ಹಾಗೆ ಆ ರಾಜ್ಯಗಳಿಗೆ ನಿರ್ದೇಶನಗಳನ್ನು ನೀಡಲು ವ್ಯಾಪ್ತವಾಗತಕ್ಕದ್ದು.

# ಭಾಗ II
# ಅನುಸೂಚಿತ ಪ್ರದೇಶಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಡಳಿತ ಮತ್ತು ನಿಯಂತ್ರಣ

೪. **ಬುಡಕಟ್ಟು ಜನಾಂಗಗಳ ಸಲಹಾ ಪರಿಷತ್ತು:** ಅನುಸೂಚಿತ ಪ್ರದೇಶಗಳನ್ನು ಹೊಂದಿರುವ ಪ್ರತಿಯೊಂದು ರಾಜ್ಯದಲ್ಲಿ ಮತ್ತು ರಾಷ್ಟ್ರಪತಿಯು ನಿರ್ದೇಶಿಸಿದರೆ ಬುಡಕಟ್ಟು ಜನಾಂಗಗಳನ್ನು ಹೊಂದಿರುವ ಆದರೆ ಅನುಸೂಚಿತ ಪ್ರದೇಶಗಳನ್ನು ಹೊಂದಿಲ್ಲದಿರುವ ರಾಜ್ಯಗಳಲ್ಲಿ ಸಹ ಇಪ್ಪತ್ತಕ್ಕಿಂತ ಹೆಚ್ಚು ಜನ ಸದಸ್ಯರನ್ನು ಒಳಗೊಂಡಿಲ್ಲದ ಮತ್ತು ಆ ಪೈಕಿ ಸಾಧ್ಯವಿದ್ದಷ್ಟು ಮಟ್ಟಿಗೆ ರಾಜ್ಯದ ವಿಧಾನಸಭೆಯಲ್ಲಿ ಅನುಸೂಚಿತ ಬುಡಕಟ್ಟುಗಳ ಪ್ರತಿನಿಧಿಗಳಾಗಿರುವ ನಾಲ್ಕರ ಮೂರರಷ್ಟು ಜನ ಸದಸ್ಯರನ್ನು ಒಳಗೊಂಡ ಒಂದು ಬುಡಕಟ್ಟು ಜನಾಂಗಗಳ ಸಲಹಾ ಪರಿಷತ್ತು ಸ್ಥಾಪಿತವಾಗತಕ್ಕದ್ದು.

ಪರಂತು ಯಾವುದೇ ರಾಜ್ಯದ ವಿಧಾನಸಭೆಯಲ್ಲಿ ಬುಡಕಟ್ಟು ಜನಾಂಗಗಳ ಜನಪ್ರತಿನಿಧಿಗಳ ಸಂಖ್ಯೆಯು ಬುಡಕಟ್ಟು ಜನಾಂಗಗಳ ಪರಿಷತ್ತಿನಲ್ಲಿ ರಾಜ್ಯ ಅಂಥ ಪ್ರತಿನಿಧಿಗಳಿಂದ ತುಂಬತಕ್ಕ ಸ್ಥಾನಗಳ ಸಂಖ್ಯೆಗಿಂತ ಕಡಿಮೆಯಾಗಿರುವಲ್ಲಿ, ಉಳಿದ ಸ್ಥಾನಗಳನ್ನು ಆ ಜನಾಂಗಗಳ ಇತರ ಪ್ರತಿನಿಧಿಗಳಿಂದ ತುಂಬತಕ್ಕದ್ದು.

೨. ರಾಜ್ಯದ ರಾಜ್ಯಪಾಲರು ಅಥವಾ ಸಂದರ್ಭಾನುಸಾರ ಆಡಳಿತಗಾರನು, ರಾಜ್ಯದ ಬುಡಕಟ್ಟು ಜನಾಂಗಗಳವರ ಕಲ್ಯಾಣ ಮತ್ತು ಉನ್ನತಿಗಳಿಗೆ ಸಂಬಂಧಪಟ್ಟ ಹಾಗೆ ಬುಡಕಟ್ಟು ಜನಾಂಗಗಳ ಪರಿಷತ್ತಿಗೆ ಉಲ್ಲೇಖಿಸಬಹುದಾದಂಥ ತಿದ್ದುಪಡಿ ಮಾಡಲಾದಂತೆ ಐದನೆಯ ಅನುಸೂಚಿಯಲ್ಲಿ ಮಾಡಲಾದ ಪ್ರಮುಖ ಬದಲಾವಣೆಗಳನ್ನು ಅತಿ ಸಂಕ್ಷಿಪ್ತವಾಗಿ ವಿವರಿಸುತ್ತ ಅದನ್ನು ಸದನದ ಮುಂದೆ ಇಡಬಯಸುತ್ತೇನೆ.

ಪ್ಯಾರಾ ೪ರಲ್ಲಿ ಕಂಡುಬರುವುದು ಮೊದಲನೆಯ ಪ್ರಮುಖ ಬದಲಾವಣೆ. ಆ ಪ್ಯಾರಾವು ಬುಡಕಟ್ಟು ಪ್ರದೇಶಗಳ ಪರಿಷತ್ತನ್ನು ರಚಿಸುವುದಕ್ಕೆ ಸಂಬಂಧಿಸಿದ್ದು. ಕರಡು ಸಂವಿಧಾನದಲ್ಲಿ ಆ ಪ್ಯಾರಾ ಮೊದಲಲ್ಲಿ ಇದ್ದ ಪ್ರಕಾರ, ಬುಡಕಟ್ಟು ಪ್ರದೇಶಗಳನ್ನು ಅಥವಾ ಬುಡಕಟ್ಟು ಜನಾಂಗಗಳನ್ನು ಹೊಂದಿರುವ ಪ್ರತಿಯೊಂದು ರಾಜ್ಯವು ಒಂದು ಬುಡಕಟ್ಟು ಸಲಹಾ ಪರಿಷತ್ತನ್ನು ರಚಿಸುವುದು ಅಗತ್ಯ ಕರ್ತವ್ಯವಾಗಿತ್ತು. ರಾಜ್ಯದ ಯಾವುದೇ ಭಾಗದಲ್ಲಿ ಬುಡಕಟ್ಟು ಜನಾಂಗಗಳವರು ವಾಸಿಸುತ್ತಿರುವ ಆದರೆ ಅನುಸೂಚಿತ ಪ್ರದೇಶಗಳನ್ನು ಹೊಂದಿಲ್ಲದ ರಾಜ್ಯದಲ್ಲಿ ಬುಡಕಟ್ಟು ಸಲಹಾ ಪರಿಷತ್ತನ್ನು ರಚಿಸುವುದು ಅಗತ್ಯ ಎಂದು ಸಂವಿಧಾನಕರ್ತರು ಅಭಿಪ್ರಾಯಪಟ್ಟರು. ಆದರೆ ಅನುಸೂಚಿತ ಪ್ರದೇಶಗಳಲ್ಲಿ ವಾಸವಾಗಿಲ್ಲದ ಬುಡಕಟ್ಟು ಜನಾಂಗಗಳವರ ಉದ್ದೇಶಕ್ಕಾಗಿ ಬುಡಕಟ್ಟು ಸಲಹಾ ಪರಿಷತ್ತನ್ನು ರಚಿಸುವ ಅಗತ್ಯವಿದೆಯೆಂದು ಭಾವಿಸಿದ ಪಕ್ಷದಲ್ಲಿ, ಅಂಥ ಬುಡಕಟ್ಟು ಸಲಹಾ ಪರಿಷತ್ತನ್ನು ರಚಿಸಬೇಕೇ ಅಥವಾ ರಚಿಸುವುದು ಬೇಡವೇ ಎಂಬ ವಿಚಾರವನ್ನು ರಾಷ್ಟ್ರಪತಿಯ ನಿರ್ಧಾರಕ್ಕೆ ಬಿಡುವುದು ಕ್ಷೇಮ. ಪರಿಣಾಮ ಸ್ವರೂಪವಾಗಿ, ರಾಷ್ಟ್ರಪತಿಯು ಹಾಗೆ ಇಷ್ಟಪಟ್ಟರೆ ಬುಡಕಟ್ಟು ಜನಾಂಗಗಳನ್ನು ಹೊಂದಿರುವ ಆದರೆ ಅನುಸೂಚಿತ ಪ್ರದೇಶಗಳನ್ನು ಹೊಂದಿರುವ ಒಂದು ಬುಡಕಟ್ಟು ಸಲಹಾ ಪರಿಷತ್ತು ಎಂಬೀ ಪದಗಳು ಅನುಸೂಚಿತ ಪ್ರದೇಶಗಳ ಸಂಬಂಧದಲ್ಲಿ ಬುಡಕಟ್ಟು ಸಲಹಾ ಪರಿಷತ್ತಿನ ರಚನೆಯು ಅಗತ್ಯ ಕರ್ತವ್ಯವಾಗುತ್ತದೆ. ಬುಡಕಟ್ಟು ಜನಾಂಗಗಳವರ ಸಂಬಂಧದಲ್ಲಿ ಸಂವಿಧಾನ ದ್ವಾರಾ ಬುಡಕಟ್ಟು ಸಲಹಾ ಪರಿಷತ್ತಿನ ರಚನೆ ಅಗತ್ಯ ಕರ್ತವ್ಯವಲ್ಲ. ಅದನ್ನು ರಾಷ್ಟ್ರಪತಿಯ ವಿವೇಚನಾಧಿಕಾರಕ್ಕೆ ಒಪ್ಪಿಸಲಾಗಿದೆ.

ಪ್ರಮುಖ ಬದಲಾವಣೆಗೆ ಒಳಪಟ್ಟಿರುವ ಇನ್ನೊಂದು ಪ್ಯಾರ ೫ನೆಯ ಪ್ಯಾರಾ. ಈ ಪ್ಯಾರಾ, ಬುಡಕಟ್ಟು ಪ್ರದೇಶಗಳಿಗೆ ಸಂಸತ್ತು ಮತ್ತು ಸ್ಥಳೀಯ ವಿಧಾನಮಂಡಲವು ಮಾಡಿದ ಕಾನೂನುಗಳನ್ನು ಅನ್ವಯಿಸುವ ವಿಚಾರಕ್ಕೆ ಸಂಬಂಧಿಸಿದ್ದು. ಪ್ಯಾರಾ ೫ ಮೊದಲಲ್ಲಿ ಇದ್ದ ಪ್ರಕಾರ, ಸಂಸತ್ತು ಮಾಡಿದ ಕಾನೂನು ಅಥವಾ ಸ್ಥಳೀಯ ವಿಧಾನಮಂಡಲವು ಮಾಡಿದ ಕಾನೂನು ಅನುಸೂಚಿತ ಪ್ರದೇಶಗಳಿಗೆ ಮಾರ್ಪಾಟಾದ ರೀತಿಯಲ್ಲಿ ಅನ್ವಯವಾಗಬೇಕು ಎಂದು ಬುಡಕಟ್ಟು ಸಲಹಾ ಪರಿಷತ್ತು ನಿರ್ದೇಶಿಸಿದ ಸಂದರ್ಭದಲ್ಲಿ, ರಾಜ್ಯಪಾಲರು ಬುಡಕಟ್ಟು ಸಲಹಾ ಪರಿಷತ್ತಿನ ನಿರ್ದೇಶನವನ್ನು ಅಥವಾ ಆದೇಶವನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕಾಗುತ್ತದೆ. ಬುಡಕಟ್ಟು ಪ್ರದೇಶಗಳಿಗೆ ಸಂಸತ್ತು ಅಥವಾ ವಿಧಾನಮಂಡಲವು ಮಾಡಿದ ಕಾನೂನುಗಳ ವಿಷಯದಲ್ಲಿ ವಿವೇಚನಾಧಿಕಾರವನ್ನು ರಾಜ್ಯಪಾಲರಿಗೆ ವಹಿಸಿಕೊಡುವುದು ಹೆಚ್ಚು ಸೂಕ್ತವೆಂದು ಮತ್ತು ಅವರ ವಿವೇಚನಾಧಿಕಾರವನ್ನು ಅನನ್ಯವಾಗಿ ನಿಯಂತ್ರಿಸುವುದು ಸೂಕ್ತವಲ್ಲವೆಂದು ಅಂದರೆ ಪ್ಯಾರಾ ೫ರಲ್ಲಿ ಒಳಗೊಂಡಿರುವ ಮೂಲ ಉಪಬಂಧದ ದ್ವಾರಾ ಮಾಡಲು ಉದ್ದೇಶಿಸುವುದು ವಿಹಿತವಲ್ಲವೆಂದು ಭಾವಿಸಲಾಯಿತು.

ಇನ್ನು, ಪ್ಯಾರಾ ೬ರಲ್ಲಿ ಮಾಡಲಾದ ಪ್ರಮುಖ ಬದಲಾವಣೆಯನ್ನು ಸದನದ ಮಾನ್ಯ ಸದಸ್ಯರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಮೂಲದಲ್ಲಿ ರಚಿಸಿದ ಪ್ಯಾರಾ ೬ರ ಪ್ರಕಾರ, ಯಾವ ಪ್ರದೇಶಗಳು ಅನುಸೂಚಿತ ಪ್ರದೇಶಗಳಾಗಬೇಕು ಎಂಬ ಒಂದು ಅನುಸೂಚಿಯನ್ನು ಗೊತ್ತುಪಡಿಸಲಾಗಿತ್ತು. ಮುಖ್ಯವಾಗಿ ಈ ಹಂತದಲ್ಲಿ ಭಾಗ IIIರಲ್ಲಿರುವ ರಾಜ್ಯಗಳಲ್ಲಿ ಯಾವ ಪ್ರದೇಶಗಳು ಅನುಸೂಚಿತ ಪ್ರದೇಶಗಳಲ್ಲಿ ಸೇರಲಿವೆ ಎಂಬುದನ್ನು ತಿಳಿದುಕೊಳ್ಳುವುದು ಸಾಧ್ಯವಿಲ್ಲದ ಕಾರಣ ಈ ಉಪಬಂಧವು ಅಗತ್ಯವಾಗಿದೆ. ನಾವು ಈಗ ಉಲ್ಲೇಖಿಸಿರುವ ತೊಂದರೆಯನ್ನು ನಿವಾರಿಸಲು ಮತ್ತು ಈ ಉಪಬಂಧವನ್ನು ಸಮ್ಮತಗೊಳಿಸಲು, ಅನುಸೂಚಿತ ಪ್ರದೇಶಗಳಿಗೆ ಸಂಬಂಧಿಸಿದ ನಿರ್ದಿಷ್ಟ ಭಾಗವನ್ನು ಏರ್ಪಡಿಸುವುದಕ್ಕಿಂತ, ಈ ವಿಷಯಕ್ಕೆ

ಸಂಬಂಧಿಸಿದ ಅಧಿಕಾರವನ್ನು ರಾಷ್ಟ್ರಪತಿಯ ವಿವೇಚನಾಧಿಕಾರಕ್ಕೆ ವಹಿಸಿಕೊಡುವುದೇ ಕ್ಷೇಮವೆಂದು ತೋರುತ್ತದೆ.

ತಮ್ಮ ಗಮನ ಸೆಳೆಯಲು ಇಷ್ಟಪಡುವ ಇನ್ನೊಂದು ಪ್ಯಾರಾ ೭ ಭಾಗ IVರಲ್ಲಿ ಒಳಗೊಂಡಿದ್ದು, ಐದನೆಯ ಅನುಸೂಚಿಯ ತಿದ್ದುಪಡಿಗೆ ಸಂಬಂಧಿಸಿರುತ್ತವೆ. ಆ ಪ್ಯಾರಾ ಇದ್ದ ಹಾಗೆ, ಮೂಲದಲ್ಲಿ, Vನೆಯ ಅನುಸೂಚಿಯ ತಿದ್ದುಪಡಿಯ ಬಗ್ಗೆ ಯಾವುದೇ ಉಪಬಂಧ ಇದ್ದಿರಲಿಲ್ಲ. ಸಂಸತ್ತು ಈ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು ಎಂದು ಅವಕಾಶ ಒದಗಿಸಿದ್ದುಂಟು. ಸಂಸತ್ತಿಗೆ ಅಧಿಕಾರವಿರುವುದೇ ಕ್ಷೇಮ ಎಂದು ನಾನು ಭಾವಿಸಿದ್ದೇನೆ. ರಾಜ್ಯದ ಒಳಗೆ ರಾಜ್ಯದಂಥ ಇನ್ನೊಂದನ್ನು ರಚಿಸುವುದು ಸಮಂಜಸವಲ್ಲ. ಹಾಗೆಯೇ ಈ ಬಗೆಯ ವಿಶೇಷ ಉಪಬಂಧವು ಎಂದರೆ ಯಾವುದರ ಅಡಿಯಲ್ಲಿ ಕೆಲವು ನಿರ್ದಿಷ್ಟ ಬುಡಕಟ್ಟು ಜನಾಂಗಗಳನ್ನು ಸಂಸತ್ತು ರಚಿಸಿದ ಮತ್ತು ವಿಧಾನ ಮಂಡಲವು ರಚಿಸಿದ ಕಾನೂನುಗಳ ಸಾಮಾನ್ಯ ಅಮಲ್ಜಾರಿಯಿಂದ ವಿನಾಯಿಸಲಾಗುವುದೋ ಅದನ್ನು ಮತ್ತು ಪ್ಯಾರಾ ೫ರ ಉಪಪ್ಯಾರಾ (೨)ರಲ್ಲಿ ಒಳಗೊಂಡಂತಹ ಉಪಬಂಧ ಅಂದರೆ "ರಾಜ್ಯಪಾಲರು (ಎ), (ಬಿ) ಮತ್ತು (ಸಿ) ನಮೂದಿಸಿರುವ ನಿರ್ದಿಷ್ಟ ಸ್ವರೂಪದ ವಿನಿಯಮಗಳನ್ನು ರಚಿಸಿದ್ದು, ಆ ವಿನಿಯಮಗಳು, ಈ ವಿಷಯಗಳಿಗೆ ಸಂಬಂಧಿಸುವಷ್ಟರ ಮಟ್ಟಿಗೆ, ಸಂಸತ್ತು ಅಥವಾ ವಿಧಾನಮಂಡಲ ದ್ವಾರಾ ರಚಿಸಲಾದ ಯಾವುದೇ ಕಾನೂನಿನ ಮೇಲೆ ಅಧ್ಯಾರೋಹಿ ಪರಿಣಾಮವನ್ನು ಹೊಂದಿರುತ್ತದೆ ಎಂದು ಅರ್ಥವಾಗುವ ಉಪಬಂಧ ಇವುಗಳನ್ನು ಹಾಗೆಯೇ ಯಥಾವತ್ತಾಗಿ ಸರ್ವಕಾಲಗಳ ಬಗ್ಗೆ ಅಮಲ್ಜಾರಿ ಯೋಗ್ಯವಾಗುವ ಹಾಗೆ ಮಾಡತಕ್ಕದ್ದಲ್ಲ. ಮತ್ತು ಸಮಯ ಸಂದರ್ಭಗಳನ್ನು ಅನುಸರಿಸಿ ಅಗತ್ಯವಾಗತಕ್ಕ ಬದಲಾವಣೆಗಳನ್ನು ಮಾಡಲು ಸಂಸತ್ತಿಗೆ ಅವಕಾಶವಿರತಕ್ಕದ್ದು ಎಂದು ಭಾವಿಸಿದ್ದೇನೆ. ಪರಿಣಾಮಸ್ವರೂಪವಾಗಿ ಭಾಗ V ಪ್ಯಾರ VIIರಲ್ಲಿ, ಸಂಸತ್ತು, ಅವಶ್ಯವೆಂದು ಮನಗಂಡಾಗೆಲ್ಲ, ಅಂಥ ಬದಲಾವಣೆಗಳನ್ನು ಮಾಡಲು ಅಂಥ ಅಧಿಕಾರವನ್ನು ಹೊಂದಿರತಕ್ಕದ್ದು ಎಂದು ಏರ್ಪಾಟು ಮಾಡಿದ್ದುಂಟು ಮತ್ತು ಅನುಸೂಚಿಯ ಅಂಥ ಯಾವುದೇ ತಿದ್ದುಪಡಿಯನ್ನು ಸಂವಿಧಾನದ ತಿದ್ದುಪಡಿ ಎಂಬುದಾಗಿ ಭಾವಿಸತಕ್ಕದ್ದಲ್ಲ. ಪರಂತು ಅದನ್ನು ಕಾನೂನಿನ ಸಾಮಾನ್ಯ ಪ್ರಕ್ರಿಯೆಯ ಮೂಲಕ ಮಾಡತಕ್ಕದ್ದು.

ಕರಡು ರಚನಾ ಸಮಿತಿಯು ಈ ಹೊಸ ಅನುಸೂಚಿಯನ್ನು ಮುಂದಿಡುವಾಗ, ಈ ನಿರ್ದಿಷ್ಟ ವಿಷಯ ಎಂದರೆ ಬುಡಕಟ್ಟು ಪ್ರದೇಶಗಳ ಮತ್ತು ಬುಡುಕಟ್ಟು ಜನಾಂಗಗಳ ವಿಷಯವು ಯಾರಿಗೆ ಸಂಬಂಧಿಸಿದೆಯೋ ಆ ಪ್ರಾಂತ್ಯಗಳ ಪ್ರತಿನಿಧಿಗಳ ಜತೆ ಅದನ್ನು ಚರ್ಚಿಸಿತ್ತು ಎಂಬ ಸಂಗತಿಯನ್ನು ಇಲ್ಲಿ ನಮೂದಿಸಲು ಇಷ್ಟಪಡುತ್ತೇನೆ. ಮಾತ್ರವಲ್ಲದೆ, ನಮ್ಮ ಸ್ನೇಹಿತ ಶ್ರೀ ಠಕ್ಕರ್ ಅವರ ಅಭಿಪ್ರಾಯವನ್ನು ಪರ್ಯಾಲೋಚನೆಗೆ ತೆಗೆದುಕೊಂಡದ್ದುಂಟು. ಶ್ರೀ ಠಕ್ಕರ್ ಆ ವಿಚಾರದಲ್ಲಿ ಬಹಳಷ್ಟು ವಿಷಯವನ್ನು ತಿಳಿದುಕೊಂಡ ಮಹನೀಯರು. ಇನ್ನು, ಯಾವುದೇ ವಿರೋಧಕ್ಕೆ ಎಡೆಯುಂಟಾಗದ ಹಾಗೆ ನಾನು ಹೇಳಬಯಸುವುದಿಷ್ಟೆ. ಈ ವಿಚಾರದಲ್ಲಿ ಆಸಕ್ತಿಯುಳ್ಳ ಸಕಲರ ಒಪ್ಪಿಗೆಯನ್ನು ಪಡೆದುಕೊಂಡಿದ್ದೇವೆ. ಮಾನ್ಯ ಸದನವು ಯಾವುದೇ ತೊಂದರೆಯಿಲ್ಲದೆ ಹಳೆಯದರ ಸ್ಥಳದಲ್ಲಿ ಈ ಹೊಸ ಅನುಸೂಚಿಯನ್ನು ಅಂಗೀಕರಿಸಬಹುದು ಎಂದು ಆಶಿಸುತ್ತೇನೆ.

* * *

****ಮಾನ್ಯ ಸಭಾಧ್ಯಕ್ಷರು:** ನಾನು ಕಂಡ ಹಾಗೆ, ಐದನೆಯ ಅನುಸೂಚಿಗೆ ಈಗ ಪ್ರಸ್ತಾಪಿಸಿರುವ ಯಾವುದೇ ತಿದ್ದುಪಡಿಯಿಲ್ಲ.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ನನ್ನ ಬಳಿ ಕೆಲವು ತಿದ್ದುಪಡಿಗಳಿವೆ.

**ಮಾನ್ಯ ಸಭಾಧ್ಯಕ್ಷರು:** ಈ ತಿದ್ದುಪಡಿಗಳು ಕೊನೆಯ ಗಳಿಗೆಯಲ್ಲಿ ಬಂದಿರುವ ಕಾರಣ ಎಲ್ಲ ಸದಸ್ಯರಿಗೆ ಅವುಗಳನ್ನು ತಲುಪಿಸಲು ಸಾಧ್ಯವಾಗಲಿಲ್ಲ. ಅವು ಬಂದದ್ದು ಇಂದು ಬೆಳಿಗ್ಗೆ ೮.೫೮ ಹೊತ್ತಿಗೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆ ಬಗ್ಗೆ ನನಗೆ ಕಲ್ಪನೆಯೇ ಇಲ್ಲ. ಅವುಗಳಿಗೆ ಅವಕಾಶ ಕೂಡದು.

**ಮಾನ್ಯ ಸಭಾಧ್ಯಕ್ಷರು:** ನಿಮ್ಮಲ್ಲಿ ಸಹ ತಿದ್ದುಪಡಿಗಳು ಇದ್ದರೆ, ಅವುಗಳನ್ನು ನೀವು ಕಳಿಸಬಹುದು. ಈಗ ನನ್ನ ಬಳಿ ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ ಮತ್ತು ಡಾ. ದೇಶ್‌ಮುಖ್ ಅವರು ಕಳಿಸಿರುವ ಕೆಲವು ತಿದ್ದುಪಡಿಗಳುಂಟು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಬಳಿ ಪ್ರತಿಗಳಿಲ್ಲ. ಆ ತಿದ್ದುಪಡಿಗಳ ಬಗ್ಗೆ ಏನು ಮಾತಾಡುತ್ತಿದ್ದಾರೆ ನನಗೆ ಗೊತ್ತಾಗುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಡಾ. ದೇಶ್‌ಮುಖ್ ಅವರ ತಿದ್ದುಪಡಿ ಬೆಳಿಗ್ಗೆ ೯.೦೦ ಗಂಟೆಗೆ ಬಂತು. ಪ್ರೊಫೆಸರ್ ಸಕ್ಸೇನಾ ಅವರ ತಿದ್ದುಪಡಿಗಳು ಬಂದದ್ದು ಬೆಳಿಗ್ಗೆ ೮.೫೮ಕ್ಕೆ. ತಾಂತ್ರಿಕವಾಗಿ ಅಧಿವೇಶನ ಪ್ರಾರಂಭವಾಗುವ ಮುನ್ನವೇ ಬಂದಿವೆ. ಆದರೆ ಅದರಿಂದ ಇತರ ಸದಸ್ಯರಿಗೆ ಅತ್ಯಂತ ಅನಾನುಕೂಲವಾಯಿತು ಎಂದು ನನಗೆ ಭಾವನೆ.

**ಡಾ. ಪಿ. ಎಸ್. ದೇಶ್‌ಮುಖ್ (ಪಿ. ವಿ. ಮತ್ತು ಬೀರಾರ್):** ನನ್ನ ತಿದ್ದುಪಡಿಗಳು ಪ್ರಾರೂಪಣ ಕರಡು ಸ್ವರೂಪದ್ದಾಗಿವೆ.

**ಮಾನ್ಯ ಸಭಾಧ್ಯಕ್ಷರು:** ಸರಿ. ಅವುಗಳನ್ನು ಕರಡು ರಚನಾ ಸಮಿತಿಗೆ ಕಳಿಸಿಕೊಡಲಾಗುವುದು. ನಿಮ್ಮ ತಿದ್ದುಪಡಿಗಳಿಗೆ ಸತ್ವವೇನೂ ಇಲ್ಲ ಎಂದು ನನ್ನ ಎಣಿಕೆ, ಅಲ್ಲವೇ ಪ್ರೊ. ಸಕ್ಸೇನಾ?

****ಮಾನ್ಯ ಸಭಾಧ್ಯಕ್ಷರು:** ನಾನೀಗ ಚರ್ಚೆಯನ್ನು ಮುಕ್ತಾಯಗೊಳಿಸಬಯಸುತ್ತೇನೆ. ಡಾ. ಅಂಬೇಡ್ಕರ್ ನೀವು ಏನಾದರೂ ಹೇಳುವುದಿದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ಬಗ್ಗೆ ಏನೆಲ್ಲ ಅಗತ್ಯವಾಗಿ ಹೇಳಬಹುದೋ ಅದೆಲ್ಲವನ್ನೂ ಶ್ರೀ ಮುನ್ಷಿಯವರು ಹೇಳಿಬಿಟ್ಟಿದ್ದಾರೆ. ನಾನು ಆ ಕುರಿತು ಹೆಚ್ಚಿಗೆಯಾಗಿ ಹೇಳುವುದೇನೂ ಉಳಿದಿಲ್ಲ ಎಂದು ಭಾವಿಸಿದೇನೆ.

**ಮಾನ್ಯ ಸಭಾಧ್ಯಕ್ಷರು:** ನಾನೀಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

**ಮಿ. ನಜೀರುದ್ದೀನ್ ಅಹ್ಮದ್:** ನನ್ನ ತಿದ್ದುಪಡಿಗಳನ್ನು ಮತಕ್ಕೆ ಹಾಕಬೇಕಾಗಿಲ್ಲ. ಅವುಗಳನ್ನು ಕರಡು ರಚನಾ ಸಮಿತಿಯು ಪರ್ಯಾಲೋಚಿಸಬಹುದು.

* * *

---

* ಸಿ.ಎ.ಡಿ. ಸಂ. IX, ೫ನೇ ಸೆಪ್ಟೆಂಬರ್ ೧೯೪೯, ಪುಟ ೯೭೮–೯೭೯.

** ಸಿ.ಎ.ಡಿ. ಸಂ. IX, ೩ನೇ ಸೆಪ್ಟೆಂಬರ್ ೧೯೪೯, ಪುಟ ೯೯೯.

# ಆರನೆಯ ಅನುಸೂಚಿ

***ಮಾನ್ಯ ಸಭಾಧ್ಯಕ್ಷರು:** ನಾವೀಗ ಆರನೆಯ ಅನುಸೂಚಿಗೆ ಹೋಗುತ್ತೇವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪ್ಯಾರಾ Iರ ಉಪ ಪ್ಯಾರಾ (೧)ರಲ್ಲಿ ಬುಡಕಟ್ಟು ಪ್ರದೇಶಗಳು" ಎಂಬ ಪದಗಳಿಗೆ ಮೊದಲು "ಈ ಪ್ಯಾರಾದ ಉಪಬಂಧಗಳಿಗೆ ಒಳಪಟ್ಟು" ಎಂಬ ಪದಗಳನ್ನು ಸೇರಿಸತಕ್ಕದ್ದು.

ಮೂಲದಲ್ಲಿ, ಕರಡಿನ ಪ್ರಕಾರ ಬುಡಕಟ್ಟು ಪ್ರದೇಶಗಳು ಎಂದರೆ, ಈ ಅನುಸೂಚಿಗೆ ಜೋಡಿಸಿದ ತಃಖ್ತೆಯಲ್ಲಿ ಸೇರಿಸಲಾದ ಪ್ರದೇಶಗಳು ಎಂದು ಮಾತ್ರ ಹೇಳಲಾಗಿತ್ತು. ತಃಖ್ತೆಯಲ್ಲಿ ಸೇರಿಸಲಾದ ಪ್ರದೇಶಗಳನ್ನು ನಿರೂಪಿಸಿ ಪರಿಭಾಷಿಸಲು ಯಾವುದೇ ಅಧಿಕಾರವನ್ನು ಕೊಟ್ಟಿರಲಿಲ್ಲ. ಈ ತಃಖ್ತೆಯಲ್ಲಿ ಸೇರಿಸಲಾದ ಪ್ರದೇಶಗಳ ಎಲ್ಲೆಗಳನ್ನು ನಿರೂಪಿಸಿ ಪರಿಭಾಷಿಸಲು ರಾಜ್ಯಪಾಲರಿಗೆ ಅಧಿಕಾರವನ್ನು ಕೊಡುವುದು ಅಗತ್ಯವೆಂದು ಭಾವಿಸಲಾಯಿತು. ಆದ್ದರಿಂದ, ರಾಜ್ಯಪಾಲರಿಗೆ ಈ ಅಧಿಕಾರವನ್ನು ಒದಗಿಸುವ ಸಲುವಾಗಿ, ಈ ತಿದ್ದುಪಡಿಯಲ್ಲಿ ಅಡಕವಾಗಿರುವ ಪದಗಳನ್ನು ಸೇರಿಸುವುದು ಅಗತ್ಯವಾಯಿತು.

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿ ೯೮ ಕೂಡ ಈ ಪ್ಯಾರಾಕ್ಕೆ ಸಂಬಂಧಪಟ್ಟಿರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ನಾನು ಮಂಡಿಸಲೆ?

**ಮಾನ್ಯ ಸಭಾಧ್ಯಕ್ಷರು:** ಆಗಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"೧ನೆಯ ಪ್ಯಾರಾದ ಉಪಪ್ಯಾರಾ (೩)ಕ್ಕೆ ಬದಲಾಗಿ ಮುಂದಿನ ಪ್ಯಾರಾವನ್ನು ಸೇರಿಸತಕ್ಕದ್ದು. ಎಂದರೆ, ರಾಜ್ಯಪಾಲರು ಸಾರ್ವಜನಿಕ ಅಧಿಸೂಚನೆ ಹೊರಡಿಸಿ,

(ಎ) ಸದರಿ ತಃಖ್ತೆಯ ಭಾಗ Iರಲ್ಲಿ ಯಾವುದೇ ಕ್ಷೇತ್ರವನ್ನು ಸೇರಿಸಬಹುದು.

(ಬಿ) ಹೊಸ ಸ್ವಾಯತ್ತ ಜಿಲ್ಲೆಯನ್ನು ರಚಿಸಬಹುದು.

(ಸಿ) ಯಾವುದೇ ಸ್ವಾಯತ್ತ ಜಿಲ್ಲೆಯ ಕ್ಷೇತ್ರವನ್ನು ಹೆಚ್ಚಿಸಬಹುದು.

(ಡಿ) ಯಾವುದೇ ಸ್ವಾಯತ್ತ ಜಿಲ್ಲೆಯ ಕ್ಷೇತ್ರವನ್ನು ಕಡಿಮೆ ಮಾಡಬಹುದು.

(ಇ) ಒಂದು ಸ್ವಾಯತ್ತ ಜಿಲ್ಲೆ ಆಗುವ ಹಾಗೆ ಎರಡು ಅಥವಾ ಹೆಚ್ಚು ಸ್ವಾಯತ್ತ ಜಿಲ್ಲೆಗಳನ್ನು ಅಥವಾ ಅವುಗಳ ಭಾಗಗಳನ್ನು ಒಂದುಗೂಡಿಸಬಹುದು.

(ಎಫ್) ಯಾವುದೇ ಸ್ವಾಯತ್ತ ಜಿಲ್ಲೆಯ ಎಲ್ಲೆಗಳನ್ನು ನಿರ್ಧರಿಸಬಹುದು.

ಪರಂತು, ರಾಜ್ಯಪಾಲರು ಈ ಅನುಸೂಚಿಯಲ್ಲಿ ಪ್ಯಾರಾ ೧೪ರ ಉಪಪ್ಯಾರಾ (೧)ರ ಅಡಿಯಲ್ಲಿ ನೇಮಿಸಲಾದ ಆಯೋಗವು ಸಲ್ಲಿಸುವ ವರದಿಯನ್ನು ಪರಿಶೀಲಿಸಿದ ತರುವಾಯದ ಹೊರತು, ಈ ಉಪ ಪ್ಯಾರಾದ (ಬಿ), (ಸಿ), (ಡಿ) ಮತ್ತು (ಇ) ಈ ಖಂಡಗಳ ಅಡಿಯಲ್ಲಿ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

ಈ ತಿದ್ದುಪಡಿಯಲ್ಲಿ, ಗಮನವನ್ನು ಸೆಳೆಯತಕ್ಕ ಹೊಸ ಸಂಗತಿಗಳನ್ನು ಉಪಪ್ಯಾರಾ (೩)ರ (ಇ) ಮತ್ತು (ಎಫ್) ಈ ಖಂಡಗಳಲ್ಲಿ ಸೇರಿಸಲಾಗಿದೆ. ಯಾಕೆಂದರೆ ಯಾವುದೇ ಒಂದು ವಿಶೇಷ ಪರಿಸ್ಥಿತಿಯಲ್ಲಿ

---

* ಸಿ.ಎ.ಡಿ. ಸಂ. IX, ೫ನೇ ಸೆಪ್ಟೆಂಬರ್ ೧೯೪೯, ಪುಟ ೧೦೦೧–೧೦೦೨.

ಎರಡು ಅಥವಾ ಹೆಚ್ಚು ಸ್ವಾಯತ್ತ ಜಿಲ್ಲೆಗಳನ್ನು ಒಂದುಗೂಡಿಸುವುದು ಅಗತ್ಯವಾಗಬಹುದು. ಉಪಖಂಡ (ಎಫ್)ರಲ್ಲಿ ಸೇರಿಸಲಾದ ಅಧಿಕಾರವು ಸಹ ಅಗತ್ಯವಾಗಬಹುದು. ಯಾಕೆಂದರೆ ವಿವಿಧ ಜಿಲ್ಲೆಗಳ ನಡುವೆ ಎಲ್ಲೆಗಳಿಗೆ ಸಂಬಂಧಿಸಿದಂತೆ ಯಾವುದೇ ವಿಶೇಷ ವಿವಾದವುಂಟಾದ ಸಂದರ್ಭದಲ್ಲಿ ಅಂಥ ಅಧಿಕಾರವು ಅಪೇಕ್ಷಣೀಯವಾಗುತ್ತದೆ.

ಈ ಪರಂತುಕವು ಒಂದು ಬದಲಾವಣೆಗೆ ಅವಕಾಶ ಮಾಡಿಕೊಡುತ್ತದೆ. ಈ ಪರಂತುಕವನ್ನು ಮೂಲ ಪರಂತುಕದೊಡನೆ ಹೋಲಿಸಿ ನೋಡಿದರೆ ಉಪಪ್ಯಾರಾ (೩)ಕ್ಕೆ ಎರಡು ಪರಂತುಕಗಳು ಇರುವುದು ಕಂಡುಬರುತ್ತದೆ. ಮೊದಲನೆಯ ಪರಂತುಕದಲ್ಲಿ ರಾಜ್ಯಪಾಲನು ಆಯೋಗದ ಶಿಫಾರಸುಗಳ ಮೇಲೆ ಖಂಡ (ಬಿ) ಅಥವಾ ಉಪ ಖಂಡ (ಸಿ) ಮೇರೆಗೆ ಕ್ರಮ ಕೈಗೊಳ್ಳಬಹುದು. ಆದರೆ ಅವನು ಖಂಡ (ಡಿ) ಅಥವಾ ಖಂಡ (ಇ) ಅಡಿಯಲ್ಲಿ ಕ್ರಮ ಕೈಗೊಳ್ಳಬಯಸಿದ ಪಕ್ಷದಲ್ಲಿ, ಅವನಿಗೆ ಸಂಬಂಧಪಟ್ಟ ಸ್ವಾಯತ್ತ ಜಿಲ್ಲೆಗಳ ಜಿಲ್ಲಾ ಪರಿಷತ್ತುಗಳಿಂದ ಪಾಸು ಮಾಡಿದ ನಿರ್ಣಯವು ಅಗತ್ಯವಾಗುತ್ತದೆ. ಈ ತಃಖ್ತೆಯ ಪ್ಯಾರಾ ೧೪ರ ಅಡಿಯಲ್ಲಿ ನೇಮಿಸಬೇಕೆಂದು ಪ್ರಸ್ತಾಪಿಸಲಾದ ಆಯೋಗವು ಸಲ್ಲಿಸುವ ವರದಿಯನ್ನು ಪರಿಶೀಲಿಸಿದ ತರುವಾಯ ರಾಜ್ಯಪಾಲರು ಕ್ರಮ ಕೈಗೊಳ್ಳಬೇಕು ಎಂದು ಅಗತ್ಯಪಡಿಸುವ ಮೂಲಕ ಈ ಏರ್ಪಾಟನ್ನು ಏಕರೂಪಗೊಳಿಸಬಹುದು.

**ಮಾನ್ಯ ಸಭಾಧ್ಯಕ್ಷರು:** ಈ ಅನುಸೂಚಿಗೆ ಸಂಬಂಧಸಿದಂತೆ, ಈ ಇಡೀ ಅನುಸೂಚಿಯನ್ನು ಬದಲಾಯಿಸಿಲ್ಲ. ಅದರೆ ಕೆಲವು ಪ್ಯಾರಾಗಳಿಗೆ ಮಾತ್ರ ಕೆಲವು ತಿದ್ದುಪಡಿಗಳನ್ನು ಸೂಚಿಸಲಾಗಿದೆ. ಈ ಪ್ಯಾರಾಗಳನ್ನು ಒಂದೊಂದಾಗಿ ತೆಗೆದುಕೊಳ್ಳಬಯಸುತ್ತೇನೆ. ಮೊದಲನೆಯ ಪ್ಯಾರಾದ ಬಗ್ಗೆ ಹೇಳುವುದಾದರೆ, ಈ ತಿದ್ದುಪಡಿಗಳೆರಡೂ ಕರಡು ರಚನಾ ಸಮಿತಿಯ ಪರವಾಗಿ ಮಂಡಿಸಲಾದವುಗಳು. ಈಗ ನೋಟೀಸು ಕೊಡಲಾದ ಇತರ ತಿದ್ದುಪಡಿಗಳನ್ನು ತೆಗೆದುಕೊಳ್ಳುತ್ತೇನೆ. ಕೆಲವನ್ನು ತಿದ್ದುಪಡಿಗಳ ಪಟ್ಟಿಯ ಎರಡನೆಯ ಸಂಪುಟದಲ್ಲಿ ಮುದ್ರಿಸಲಾಗಿದೆ.

(ತಿದ್ದುಪಡಿಗಳು ೩೪೮೯, ೩೪೯೦ ಮತ್ತು ೩೪೯೧ ಇವುಗಳನ್ನು ಮಂಡಿಸಲಿಲ್ಲ)

ಪ್ಯಾರಾ ೧ರಿಂದ ೧೬ ಇವುಗಳನ್ನು ತೆಗೆದುಹಾಕಬೇಕು ಎಂಬ ಒಂದು ತಿದ್ದುಪಡಿ ಇದೆ. ಅದನ್ನು ತೆಗೆದುಕೊಳ್ಳಬೇಕೇ ಇಲ್ಲವೆ ನನಗೆ ಗೊತ್ತಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ತೆಗೆದುಕೊಳ್ಳುವ ಅಗತ್ಯವಿಲ್ಲ.

* * *

***ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರೆ, ತಾವೇನಾದರೂ ಹೇಳುವುದಿದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ಈ ತಿದ್ದುಪಡಿಗಳ ಮೇಲಣ ಚರ್ಚೆಯ ಅವಧಿಯಲ್ಲಿ ಎತ್ತಲಾದ ಎರಡು ಅಂಶಗಳಿಗೆ ಮಾತ್ರ ಉತ್ತರ ಕೊಡುವುದು ಅಗತ್ಯವಾಗಿದೆ. ಮೊದಲನೆಯ ಪ್ರಶ್ನೆಯನ್ನು ಎತ್ತಿದವರು ಮಿ. ಚಾಲಿಹಾ ಅವರು. ಅವರು ಎತ್ತಿದ ಈ ಅಂಶವನ್ನು ಕುರಿತು ನನಗೆ ಅಚ್ಚರಿ ಆಯಿತು ಎಂದು ಹೇಳದೆ ವಿಧಿಯಿಲ್ಲ. ಯಾಕೆಂದರೆ, ಐದನೆಯ ಅನುಸೂಚಿಯ ಹಾಗೆಯೇ ಆರನೆಯ ಅನುಸೂಚಿಯು, ಕರಡು ರಚನಾ ಸಮಿತಿ ಮತ್ತು ಅಸ್ಸಾಂನ ಪ್ರಧಾನಿ (ಪ್ರಿಮಿಯರ್) ನಿಕೋಲ್ಸ್‌ರಾಯ್ ಇವರ ನಡುವಿನ ಒಪ್ಪಂದದ ಮೂಲಕ ಏರ್ಪಟ್ಟ ಅನುಸೂಚಿ ಎಂದು ಹೇಳಬಹುದಾಗಿದೆ ಮತ್ತು ಆ

* ಸಿ.ಎ.ಡಿ. ಸಂ. IX, ೫ನೇ ಸೆಪ್ಟೆಂಬರ್ ೧೯೪೯, ಪುಟ ೧೦೦೪–೧೦೦೫.

ಸಭೆಯಲ್ಲಿ ಚಾಲಿಹಾ ಅವರು ಸಹ ಹಾಜರಿದ್ದರು ಮತ್ತು ಅವರು ಕರಡು ರಚನಾ ಸಮಿತಿಯು ತಿದ್ದುಪಡಿ ಮಾಡಿದ ಹೊಸ ಅನುಸೂಚಿಯನ್ನು ಒಪ್ಪಿಕೊಂಡಿದ್ದರು. ಅದೇನೇ ಇರಲಿ, ಅವರ ಮನಸ್ಸಿನಲ್ಲಿ ಮೂಡಿದ ಸಂದೇಹವನ್ನು, ಈ ಆಯೋಗವನ್ನು ಯಾರು ರಚಿಸುತ್ತಾರೆ, ಅದರ ಸದಸ್ಯರಾಗತಕ್ಕವರು ಯಾರು, ಹಾಗೆಯೇ ಆಯೋಗಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳು ಇದನ್ನು ಪರಿಹರಿಸಲು ಬಹಳ ಸಮಯ ಬೇಕಾಗಿಲ್ಲ. ಮಿ. ಚಾಲಿಹಾ ಅವರು ಆರನೇ ಅನುಸೂಚಿಯ ಪದರಚನೆಯನ್ನು ಪರಿಶೀಲಿಸಿ ನೋಡಿದರೆ, ಆಯೋಗವನ್ನು ರಚಿಸುವಲ್ಲಿ ರಾಜ್ಯಪಾಲನು ತನ್ನ ವಿವೇಚನಾಧಿಕಾರವನ್ನು ಚಲಾಯಿಸುವುದಿಲ್ಲ ಎಂದು ಮನಗಾಣಬಹುದಾಗಿತ್ತು. ಈ ಬಗ್ಗೆ ರಾಜ್ಯಪಾಲರಿಗೆ ಯಾವುದೇ ವಿವೇಚನಾಧಿಕಾರವನ್ನು ವಹಿಸಿಕೊಟ್ಟಿಲ್ಲ. ವಸ್ತುಸ್ಥಿತಿ ಹೀಗಿರುವಾಗ, ಆಯೋಗದೊಡನೆ ಸಮಾಲೋಚಿಸುವಾಗ, ಪರಿಶೀಲನಾಂಶಗಳನ್ನು ನಿರ್ಧರಿಸುವಾಗ, ರಾಜ್ಯಪಾಲರು ಸ್ಥಳೀಯ ಮಂತ್ರಿಗಳ ಸಲಹೆಗಳ ದ್ವಾರಾ ಮಾರ್ಗದರ್ಶನ ಪಡೆಯಬೇಕು ಎನ್ನುವುದು ಸ್ವಯಂ ಸ್ಪಷ್ಟವೇ. ಆದ ಕಾರಣ ಮಿ. ಚಾಲಿಹಾ ಅವರು ವ್ಯಕ್ತಗೊಳಿಸಿದಂಥ ಯಾವುದೇ ಬಗೆಯ ಭೀತಿಗೆ ಎಡೆಯಿಲ್ಲ ಎಂದು ನಾನು ಭಾವಿಸಿದ್ದೇನೆ.

ಇನ್ನು ನನ್ನ ಸ್ನೇಹಿತ ಬ್ರಜೇಶ್ವರ್ ಪ್ರಸಾದ್ ಅವರ ತಿದ್ದುಪಡಿಯ ವಿಚಾರ. ನನ್ನ ಮಟ್ಟಿಗೆ ಹೇಳುವುದಾದರೆ, ಅವರು ಗಂಭೀರವಾದ ಚರ್ಚೆಗೆ ಅಗತ್ಯವಾಗುವಂಥ ಒಂದು ತಿದ್ದುಪಡಿಯನ್ನು ಮಂಡಿಸಿದ್ದಾರೆ. ಅವರ ಪ್ರಕಾರ ಇಡೀ ಬುಡಕಟ್ಟು ಪ್ರದೇಶವನ್ನು ಅಸ್ಸಾಂ ಪ್ರಾಂತ್ಯದಿಂದ ಪ್ರತ್ಯೇಕವಾಗಿ ಬೇರ್ಪಡಿಸಿ, ಅದನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಬೇಕು. ನಾನೀಗ ಸೂಚಿಸಿದ್ದೇ ಅವರು ತಿದ್ದುಪಡಿಯಲ್ಲಿ ಸಾದರಪಡಿಸಿದ ಸಲಹೆ ಹೊರತಾಗಿ ಇತರ ಯಾವುದೇ ಪರಿಣಾಮವನ್ನು ಉಂಟುಮಾಡುವುದಿಲ್ಲ. ಅವರು ಮಂಡಿಸಿದ ಈ ತಿದ್ದುಪಡಿ ಎಂದು ನಾನು ಭಾವಿಸಿದ್ದೇನೆ. ಆ ಪ್ರದೇಶವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ರಚಿಸಬೇಕೆನ್ನುವುದೇ ಅದರ ಅರ್ಥ. ಅದರೆ ಅವರು ಎರಡು ಸಂಗತಿಗಳನ್ನು ಮರೆತ ಹಾಗೆ ತೋರುತ್ತದೆ. ಒಂದನೇ ಸಂಗತಿ ಹೀಗೆ. ಆ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಜನರ ತೃಪ್ತಿಗಾಗಿ, ಅಂದರೆ ಮೊದಲ ಹತ್ತು ವರ್ಷಗಳವರೆಗಾದರೂ, ತಮ್ಮ ಪ್ರದೇಶಗಳ ಸರ್ಕಾರಕ್ಕೆ (ಆಡಳಿತಕ್ಕೆ) ಸಂಬಂಧಪಟ್ಟ ಹಾಗೆ ಸ್ವಾಯತ್ತತೆಯನ್ನು ಹೊಂದಿರುವ ಹಾಗೆ, ನಾವು ಆ ಪ್ರದೇಶಗಳಲ್ಲಿ ಸ್ವಾಯತ್ತ ಜಿಲ್ಲೆಗಳನ್ನು ರಚಿಸಿರುವೆವಾದರೂ, ಈಗ ಆ ಸ್ವಾಯತ್ತ ಜಿಲ್ಲೆಗಳು, ಅಸ್ಸಾಂ ಪ್ರಾಂತ್ಯದ ಭಾಗವಾಗಿರತಕ್ಕದ್ದಲ್ಲ ಎಂದು ವ್ಯವಸ್ಥೆ ಮಾಡಿರುತ್ತೇವೆ. ಹೀಗಿರುವಾಗ, ಪ್ರಾಂತ್ಯದ ಒಂದು ಭಾಗದ ಆಡಳಿತವನ್ನು ರಾಜ್ಯಪಾಲರು ನಡೆಸಬೇಕು ಮತ್ತು ಪ್ರಾಂತ್ಯದ ಇನ್ನೊಂದು ಭಾಗವು ಕೇಂದ್ರಾಡಳಿತ ಪ್ರದೇಶವಾಗಿರಬೇಕು ಎಂದು ನಿರ್ಧರಿಸುವುದು ಕಷ್ಟ ಸಾಧ್ಯವಾಗುತ್ತದೆ. ಅವರು ಮರೆತಿರುವ ಇನ್ನೊಂದು ಅಂಶ ಹೀಗಿದೆ. ಸ್ವಾಯತ್ತ ಪ್ರದೇಶಗಳನ್ನು ರಚಿಸುವಲ್ಲಿ ಸಹ ಸ್ವಾಯತ್ತ ಜಿಲ್ಲೆಗಳ ಗಡಿಯಲ್ಲಿರುವ ಮತ್ತು "ಸರಹದ್ದು ಪ್ರದೇಶಗಳೆಂದು ಕರೆಯಲಾಗುವ ಕೆಲವು ಪ್ರದೇಶಗಳು ಇರುತ್ತವೆ" ಎಂಬ ಸಂಗತಿಯನ್ನು ಕರಡು ರಚನಾ ಸಮಿತಿಯು ಮರೆತಿಲ್ಲ.

ಅಸ್ಸಾಂನ ಈ ಸರಹದ್ದು ಪ್ರದೇಶಗಳ ಆಡಳಿತಕ್ಕೆ ಸಂಬಂಧಪಡುವಷ್ಟು ಮಟ್ಟಿಗೆ, ರಾಜ್ಯಪಾಲನು ರಾಷ್ಟ್ರಪತಿಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಾನೆ. ಪರಿಣಾಮ ಸ್ವರೂಪವಾಗಿ, ಸರಹದ್ದು ಪ್ರದೇಶಗಳ ಆಯಕಟ್ಟಿನ ಮಹತ್ವವೇನಿದ್ದರೂ ಕೂಡ, ಆ ಸಂಬಂಧದಲ್ಲಿ ಕೇಂದ್ರ ಸರ್ಕಾರವು ವಿಪುಲ ಕ್ಷೇತ್ರಾಧಿಕಾರವನ್ನು ಹೊಂದಿರುತ್ತದೆ ಮತ್ತು ಅವರು ಉಲ್ಲೇಖಿಸಿರುವ ಬಗೆಯ ಯಾವುದೇ ಉಪದ್ರವಕಾರೀ ಅಂಶಗಳಿಗೆ ಎಡೆಕೊಡದಷ್ಟು ಕ್ಷೇತ್ರಾಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ ಈ ಎಲ್ಲ ತಿದ್ದುಪಡಿಗಳು ಅನಾವಶ್ಯಕವೆಂದೂ ಅಪ್ರಸ್ತುತವೆಂದೂ ನಾನು ಭಾವಿಸುತ್ತೇನೆ.

**ಶ್ರೀ ಕುಲಧರ ಚಾಲಿಹಾ:** ತಿದ್ದುಪಡಿ ೧೩೯ನ್ನು ಅಂಗೀಕರಿಸಲಾಗಿದೆಯೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈಗ, ಒಡನೆಯೇ ಹೇಳಲಾರೆ. ನಾನು ಈಗ ನಿಮ್ಮ ತಿದ್ದುಪಡಿ ಮತ್ತು ಶ್ರೀ ಬ್ರಜೇಶ್ವರ್ ಪ್ರಸಾದ್ ಅವರ ತಿದ್ದುಪಡಿ ಇವೆರಡನ್ನು ಮಾತ್ರ ಪಡಿಶೀಲಿಸುತ್ತಿರುವೆನು. ಎರಡೂ ಅನಗತ್ಯ ಎಂದು ಭಾವಿಸಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿ ೧೩೯ ಅನ್ನು ಮಂಡಿಸಿಯೇ ಇಲ್ಲವಲ್ಲ. ಅದು ಪ್ಯಾರಾ ೧೪ಕ್ಕೆ ಸಂಬಂಧಿಸಿದ್ದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾವು ಪ್ಯಾರಾ ೧೪ಕ್ಕೆ ತಲುಪಿದಾಗ, ಅದನ್ನು ಪರಿಶೀಲಿಸೋಣ.

**(ಮೇಲೆ ನಮೂದಿಸಿದಂತೆ, ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ಉಳಿದವುಗಳನ್ನು ತಿರಸ್ಕರಿಸಲಾಯಿತು. ತಿದ್ದುಪಡಿಯಾದಂತೆ ಪ್ಯಾರಾ I ಅನ್ನು ಆರನೆಯ ಅನುಸೂಚಿಕೆಗೆ ಸೇರಿಸಲಾಯಿತು.)**

## ಆರನೆಯ ಅನುಸೂಚಿ

### (ಮುಂದುವರಿದುದು) (ಪ್ಯಾರಾ ೨)

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ ಸಾಮಾನ್ಯ): ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪ್ಯಾರಾ ೨ರ ಉಪಪ್ಯಾರಾ (೧)ರಲ್ಲಿ ಇಪ್ಪತ್ತಕ್ಕೆ ಕಡಿಮೆಯಿಲ್ಲದಷ್ಟು ಆದರೆ ನಲ್ವತ್ತಕ್ಕೆ ಮೀರದಷ್ಟು ಸದಸ್ಯರು ಎಂಬ ಪದಗಳಿಗೆ ಬದಲಾಗಿ ಇಪ್ಪತ್ನಾಲ್ಕಕ್ಕೆ ಮೀರದಷ್ಟು ಸದಸ್ಯರು ಎಂಬ ಪದಗಳನ್ನು ಸೇರಿಸತಕ್ಕದ್ದು."

ಮೂಲ ಸಂಖ್ಯೆಯಾದ ನಲ್ವತ್ತು ಬಹಳ ದೊಡ್ಡದಾಗಬಹುದು ಎಂಬ ಕಾರಣಕ್ಕಾಗಿ ಈ ತಿದ್ದುಪಡಿಯನ್ನು ಮಂಡಿಸಲಾಗಿದೆ.

ಸ್ವಾಮಿ, ಕೆಳಕಂಡಂತೆ ಮಂಡಿಸುತ್ತೇನೆ.

"ಉಪ ಪ್ಯಾರಾ (೨) ಅನ್ನು ತೆಗೆದುಹಾಕತಕ್ಕದ್ದು."

ಹಾಗೆ ತೆಗೆದುಹಾಕಿರುವುದಕ್ಕೆ ಕಾರಣವೆಂದರೆ, ಚುನಾವಣಾ ಕ್ಷೇತ್ರಗಳ ಸೀಮಾನಿರ್ಣಯವನ್ನು ಸಂವಿಧಾನದಲ್ಲಿಯೇ ಉಪಬಂಧಿಸುವುದಕ್ಕೆ ಬದಲಾಗಿ ನಿಯಮಗಳಲ್ಲಿ ಸೇರಿಸಲು ಪ್ರಸ್ತಾಪಿಸಿದ್ದೇವೆ.

ಸ್ವಾಮಿ, ಕೆಳಕಂಡಂತೆ ಮಂಡಿಸುತ್ತೇನೆ.

"ಪ್ಯಾರಾ ೨ರ ಉಪಪ್ಯಾರಾ (೭)ರ ಖಂಡ (ಡಿ)ದ ತರುವಾಯ ಈ ಮುಂದಿನ ಪ್ಯಾರಾವನ್ನು ಸೇರಿಸತಕ್ಕದ್ದು."

ಇದನ್ನು ನಿಯಮ ರಚನಾಧಿಕಾರಿಗಳಿಂದ ಬಿಟ್ಟುಬಿಡಲಾಯಿತು.

* * *

---

* ಸಿ.ಎ.ಡಿ. ಸಂ. IX, ೬ನೇ ಸೆಪ್ಟೆಂಬರ್ ೧೯೪೯, ಪುಟ ೧೦೦೭.

*ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್: ಸ್ವಾಮಿ, ತಾವು ಇಷ್ಟಪಡುವುದಾದರೆ ನಾನು ಈ ಹಂತದಲ್ಲಿ ಒಂದೆರಡು ಅಭಿಪ್ರಾಯೋಕ್ತಿಗಳನ್ನು ಹೇಳಲಿಚ್ಛಿಸುತ್ತೇನೆ. ಅಂದರೆ ಅನೇಕರಿಗೆ ಈ ಸಂಬಂಧದಲ್ಲಿ ಮಾತನಾಡುವುದು ಅಗತ್ಯ ಎಂದು ತೋರಲಿಕ್ಕಿಲ್ಲ. ಮಾತ್ರವಲ್ಲದೆ, ಈ ಎಲ್ಲ ಸಂದೇಹಗಳೂ ಮರೆಯಾಗುತ್ತವೆ.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಈ ವ್ಯವಸ್ಥೆಯನ್ನು ಖಾಯಂ ಸಂವಿಧಾನದಲ್ಲಿ ಸೇರಿಸುವುದಿದ್ದ ಪಕ್ಷದಲ್ಲಿ, ಅಸ್ಸಾಂದ ಕೆಲವು ಭಾಗಗಳು ಖಾಯಂ ಆಗಿ ಸಂಸತ್ತಿನ ನಿಯಂತ್ರಣದ ಆಚೆಗೆ ಉಳಿಯತಕ್ಕದ್ದು ಎಂದು ಅರ್ಥವಾಗುವುದೇ ಎಂದು ಕೇಳಬಯಸಿದ್ದೆನು.

**ಮಾನ್ಯ ಸಭಾಧ್ಯಕ್ಷರು:** ಸಂಸತ್ತು, ಈ ಇಡೀ ಅನುಸೂಚಿಯನ್ನು ರದ್ದುಗೊಳಿಸುವುದು ಅಗತ್ಯ ಎಂದು ಭಾವಿಸಿದರೆ, ಹಾಗೆ ರದ್ದುಗೊಳಿಸಲು ಪ್ಯಾರಾ ೨೦ರ ಅಡಿಯಲ್ಲಿ ಸಂಸತ್ತಿಗೆ ಅಧಿಕಾರ ನೀಡಲಾಗಿದೆ. ಇನ್ನೇನಾದರೂ ಕೇಳುವುದಿದೆಯೇ?

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಸ್ವಾಮಿ, ನಾನು ಈ ವಿಷಯವನ್ನು ನನ್ನ ಭಾಷಣದಲ್ಲಿ ಉಲ್ಲೇಖಿಸಿದ್ದುಂಟು.

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರು ಈ ಹಂತದಲ್ಲಿ ಏನನ್ನಾದರೂ ಹೇಳ ಬಯಸುವರೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಾವು ಇಷ್ಟಪಟ್ಟರೆ ಮಾತ್ರ. ಇನ್ನು ಮಾನ್ಯ ಸದಸ್ಯರು ಮಾತಾಡಲು ಇಷ್ಟಪಡುವುದರಿಂದ ಅವರು ಮಾತಾಡಲಿ.

* * *

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ಡಾ. ಅಂಬೇಡ್ಕರ್ ಅವರನ್ನು ಉತ್ತರ ಕೊಡಬೇಕಾಗಿ ಕೇಳಿ ಕೊಳ್ಳುತ್ತೇನೆ. ಈ ವಿಷಯವನ್ನು ನಾವೀಗ ಪೂರ್ತಿಗೊಳಿಸುವುದೇ ಕ್ಷೇಮ. ಈ ಕುರಿತು ಸಾಕಷ್ಟು ಚರ್ಚೆಯಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾವು ಈ ವಿಷಯದ ಬಗ್ಗೆ ಎರಡು ಗಂಟೆ ಕಾಲ ಚರ್ಚೆ ನಡೆಸಿದ್ದೇವೆ. ನನ್ನ ಅನಿಸಿಕೆಯಂತೆ ಚರ್ಚೆಯ ಬಹುಪಾಲ ಅನುಸೂಚಿಗೆ ವಾಸ್ತವವಾಗಿ ಸಂಬಂಧಿಸಿಲ್ಲದ ಅಂಶಗಳನ್ನೇ ಕುರಿತು. ಈಗ ನಾವು ಮುಖ್ಯವಾಗಿ ಅನುಸೂಚಿಯನ್ನೇ ಕುರಿತು ಗಮನ ಹರಿಸಬೇಕಾಗಿದೆ. ಇನ್ನು ಯಾರಾದರೂ ಸದಸ್ಯರು ಹೊಸದಾಗಿ ಏನನ್ನಾದರೂ ಹೇಳುವುದಿಲ್ಲದೆ ಹೋದರೆ, ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸೋಣ.

**ಮಾನ್ಯ ಸಭಾಧ್ಯಕ್ಷರು:** ಉತ್ತರ ನೀಡುವಂತೆ ಈಗಾಗಲೇ ಕೇಳಿಕೊಂಡಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ತಮಗೆ ಬಹಳ ಆಭಾರಿಯಾಗಿದ್ದೇನೆ. ಸ್ವಾಮಿ, ತಮ್ಮೆದುರು ಎರಡು ತಿದ್ದುಪಡಿಗಳಿವೆ. ಸಾಮಾನ್ಯ ಚರ್ಚೆಗೆ ಉತ್ತರ ನೀಡುವುದಕ್ಕೆ ಮುನ್ನ ಈ ತಿದ್ದುಪಡಿಗಳನ್ನು ಪರಿಶೀಲಿಸಲು ಇಷ್ಟಪಡುತ್ತೇನೆ.

ಮೊದಲನೆಯ ತಿದ್ದುಪಡಿ ಸಂಖ್ಯೆ ೧೦೦ ಅನ್ನು ಮಂಡಿಸಿದವರು ಮಿ. ಚಾಲಿಹಾ. ಇದಕ್ಕೆ ಸಂಬಂಧಿಸಿ ಹೇಳುವುದೆಂದರೆ, ಇದು ಪ್ಯಾರಾ ೨ರ ಉಪ ಪ್ಯಾರಾ (೫)ರ ಒಳಗೆ ಹೇಗೆ ಯಥೋಚಿತ ಆದೀತು

* ಸಿ.ಎ.ಡಿ. ಸಂ. IX, ೬ನೇ ಸೆಪ್ಟೆಂಬರ್ ೧೯೪೯, ಪುಟ ೧೦೧೩.

** ಅದೇ, ಪುಟ ೧೦೨೪–೧೦೨೮.

ಎಂಬುದು ನನಗೆ ಗೊತ್ತಾಗುತ್ತಿಲ್ಲ. ಉಪಪ್ಯಾರಾ (೫) ಪ್ರಾದೇಶಿಕ ಮತ್ತು ಜಿಲ್ಲಾ ಪರಿಷತ್ತುಗಳ ಅಧಿಕಾರ ಕ್ಷೇತ್ರವನ್ನು ಕುರಿತು ಮಾತ್ರ ವ್ಯವಹರಿಸುತ್ತದೆ. ರಾಜ್ಯಪಾಲರಾಗಲಿ ರಾಜ್ಯದ ವಿಧಾನಮಂಡಲವೇ ಆಗಲಿ ಕೊಡತಕ್ಕ ಯಾವುದೇ ನಿರ್ದೇಶನಗಳಿಗೆ ಸಂಬಂಧಪಟ್ಟಿಲ್ಲ. ನಾವು ಕೇವಲ ಒಂದು ಪ್ರಾದೇಶಿಕ ಮತ್ತು ಜಿಲ್ಲಾ ಪರಿಷತ್ತನ್ನು ಸೃಷ್ಟಿಸುತ್ತಿದ್ದೇವೆ. ಮಾನ್ಯ ಸದಸ್ಯರು ಅಂಥ ಯಾವುದೇ ತಿದ್ದುಪಡಿಯನ್ನು ಮಂಡಿಸ ಬಯಸಿದ್ದರೆ, ಅವರು ಅದನ್ನು ಯಥೋಚಿತ ಉಪಬಂಧವನ್ನು ಕುರಿತಂತೆ ಪ್ರಸ್ತಾಪಿಸಬೇಕಾಗಿತ್ತು. ಈ ಅನುಸೂಚಿಯು ಜಿಲ್ಲಾ ಪರಿಷತ್ತು ಮತ್ತು ಪ್ರಾದೇಶಿಕ ಪರಿಷತ್ತು ಇವುಗಳಿಗೆ ಸಂಬಂಧಪಡುವ ವಿಷಯ ವಸ್ತುವನ್ನು ಕುರಿತು ವ್ಯವಹರಿಸುತ್ತದೆ. ಆದ್ದರಿಂದ ಈ ನಿರ್ದಿಷ್ಟ ಸ್ಥಳದಲ್ಲಿ ಈ ತಿದ್ದುಪಡಿಯ ಔಚಿತ್ಯವು ನನಗೆ ಕಿಂಚಿತ್ತೂ ಅರ್ಥವಾಗುತ್ತಿಲ್ಲ.

ಇನ್ನು ಮಾನ್ಯ ಸದಸ್ಯರು ತಿದ್ದುಪಡಿ ಸಂಖ್ಯೆ ೨೫೭ ಇದರ ಮೂಲಕ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಹದಿನೈದಕ್ಕೆ ಪರಿಮಿತಗೊಳಿಸಲು ಇಷ್ಟಪಡುತ್ತಾರೆ. ಇದು ಕೂಡ ಅನಗತ್ಯ ಎಂದು ನನ್ನ ಎಣಿಕೆ. ಕಾರಣವೆಂದರೆ, ನಾನು ಮಂಡಿಸಿದ ತಿದ್ದುಪಡಿಯಲ್ಲಿಯೇ ಇಪ್ಪತ್ತನಾಲ್ಕಕ್ಕೆ ಮೀರದಷ್ಟು ಎಂದು ನಮೂದಿಸಿದ್ದುಂಟು. ಇಪ್ಪತ್ತನಾಲ್ಕೇ ಗರಿಷ್ಠ ಸಂಖ್ಯೆ. ಪರಿಣಾಮ ಸ್ವರೂಪವಾಗಿ, ಹದಿನೈದಕ್ಕಿಂತ ಕಡಿಮೆ ಸದಸ್ಯರನ್ನುಳ್ಳ ಪರಿಷತ್ತನ್ನು ರಚಿಸಬಯಸುವುದಾದ ಪಕ್ಷದಲ್ಲಿ, ನನ್ನ ತಿದ್ದುಪಡಿಯು ಸಾಕಷ್ಟು ಪರ್ಯಾಪ್ತವಾಗುತ್ತದೆ. ಆದ್ದರಿಂದ ತಿದ್ದುಪಡಿ ಸಂಖ್ಯೆ ೨೫೭ ನಿಜವಾಗಿಯೂ ಅನಗತ್ಯವೇ.

ಈಗ, ಈ ತಿದ್ದುಪಡಿಗಳನ್ನು ಇತ್ಯರ್ಥಪಡಿಸಿದ್ದಾಯಿತು. ಅಸ್ಸಾಂನಲ್ಲಿ ವಾಸಿಸುವ ಬುಡಕಟ್ಟು ಜನಾಂಗಗಳ ಉದ್ದೇಶಕ್ಕಾಗಿ ಪ್ರಯೋಜನಕ್ಕಾಗಿ ಪ್ರಾದೇಶಿಕ ಮತ್ತು ಜಿಲ್ಲಾ ಪರಿಷತ್ತುಗಳು ಇರಬೇಕೇ ಹೇಗೆ ಎಂಬ ಪ್ರಶ್ನೆಯ ಮೇಲಣ ಸಾರ್ವತ್ರಿಕ ಚರ್ಚೆಗೆ ಹೋಗುತ್ತೇನೆ. ಈ ವಿಷಯವನ್ನು ಕುರಿತು ವ್ಯವಹರಿಸುವಲ್ಲಿ, ನಾನು ದುಃಖದಿಂದ ಹೇಳಬೇಕಾದ ಸಂಗತಿಯೆಂದರೆ, ಚರ್ಚೆಯಲ್ಲಿ ಪಾಲ್ಗೊಂಡ ಅನೇಕ ಸದಸ್ಯರು ಆರನೆಯ ಅನುಸೂಚಿಯಲ್ಲಿ ಒಳಗೊಂಡ ಉಪಬಂಧಗಳನ್ನು ಕುರಿತು ಸರಿಯಾಗಿ ಅಧ್ಯಯನ ನಡೆಸಿರಲಿಲ್ಲ. ಆ ಬಗ್ಗೆ ನನಗೆ ಸಂದೇಹವಿಲ್ಲ. ಕಾರಣವೆಂದರೆ ಅವರು, ಈ ಅನುಸೂಚಿಯ ಉಪಬಂಧಗಳನ್ನು ಯಥಾ ರೀತಿ ಅಧ್ಯಯನ ಮಾಡಿದರೆ, ಅವರು ಎತ್ತಿದ ಪ್ರಶ್ನೆಯನ್ನು ಎಂದರೆ ಈ ಪ್ರಾದೇಶಿಕ ಮತ್ತು ಜಿಲ್ಲಾ ಪರಿಷತ್ತುಗಳನ್ನು ಸೃಜಿಸುವ ಮೂಲಕ ನಾವು ಒಂದು ಪ್ರತ್ಯೇಕಿತ ಜನಸಮುದಾಯವನ್ನು ಸೃಜಿಸುತ್ತಿದ್ದೇವೆ ಎಂಬ ಪ್ರಶ್ನೆಯನ್ನು ಎತ್ತುತ್ತಿರಲಿಲ್ಲ. ಆ ಅನುಸೂಚಿಯ ಮೂಲಕ ಅಂಥ ಯಾವುದೇ ಅಂಶ ಸೃಷ್ಟಿ ಆಗುತ್ತಿಲ್ಲ.

ಇನ್ನು, ಅಸ್ಸಾಂ ಬುಡಕಟ್ಟು ಜನಾಂಗಗಳ ಸ್ಥಾನಮಾನವು, ಭಾರತದ ಇತರ ಭಾಗಗಳಲ್ಲಿನ ಬುಡಕಟ್ಟು ಜನಾಂಗಗಳ ಸ್ಥಾನಮಾನಕ್ಕಿಂತ ಒಂದಿಷ್ಟು ಭಿನ್ನವಾಗಿರುತ್ತದೆ.

**ಶ್ರೀ ಎ.ವಿ. ಠಕ್ಕರ್:** ಗುಡ್ಡಗಾಡು ಜನಾಂಗಗಳು ಎನ್ನಿರಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಪದ ಪ್ರಯೋಗದ ಬಗ್ಗೆ ನಾನು ವಿಶೇಷ ಗಮನ ಕೊಡುತ್ತಿಲ್ಲ. ಸದ್ಯ ನಾನು ಮಾತನಾಡುತ್ತಿರುವುದು ಅಸ್ಸಾಂ ಮತ್ತು ಇತರ ಪ್ರದೇಶಗಳನ್ನು ಕುರಿತು. ಭೇದವು ಇಷ್ಟೆ ಎಂದು ತೋರುತ್ತದೆ. ಅಸ್ಸಾಂ ಹೊರತಾಗಿ ಇತರ ಪ್ರದೇಶಗಳಲ್ಲಿರುವ ಬುಡಕಟ್ಟು ಜನಾಂಗಗಳು ಹೆಚ್ಚು ಕಡಿಮೆ ಹಿಂದೂಕರಣಕ್ಕೆ ಒಳಗಾಗಿದ್ದಾರೆ. ಮತ್ತು ಯಾವ ಬಹುಸಂಖ್ಯಾತ ಸಮುದಾಯಗಳ ನಡುವೆ ಅವರು ವಾಸಿಸುತ್ತಿದ್ದಾರೆಯೋ ಆ ಜನಗಳ ನಾಗರಿಕತೆ ಮತ್ತು ಸಂಸ್ಕೃತಿಯೊಂದಿಗೆ ಏಕರೂಪವಾಗಿರುತ್ತವೆ. ಆದರೆ ಅಸ್ಸಾಂನ ಬುಡಕಟ್ಟು ಜನಾಂಗಗಳ ಪರಿಸ್ಥಿತಿಯು ವಿಭಿನ್ನವಾಗಿದೆ. ಆ

ಜನಾಂಗಗಳವರ ಬೇರುಗಳು ಈವರೆಗೂ ತಮ್ಮದೇ ಆದ ನಾಗರಿಕತೆ ಮತ್ತು ಸಂಸ್ಕೃತಿಗಳಲ್ಲಿ ಬೆರೆತಿವೆ. ಅವರು ತಮ್ಮನ್ನು ಸುತ್ತುವರಿದಿರುವ ಹಿಂದೂಗಳ ರೀತಿ ನೀತಿಗಳನ್ನಾಗಲಿ ರೂಢಿ ರಿವಾಜುಗಳನ್ನಾಗಲಿ ಪ್ರಧಾನವಾಗಿ ಅಥವಾ ಬಹುಮಟ್ಟಿಗೆ ಅಂಗೀಕರಿಸಿಲ್ಲ. ಅವರ ವಿವಾಹ ವಿಧಿಗಳು, ವಾರಸಾ ಕಾನೂನುಗಳು, ಆಚರಣೆಗಳೇ ಮುಂತಾದವುಗಳು ಹಿಂದುಗಳಿಗಿಂತ ವಿಭಿನ್ನವಾಗಿವೆ. ಆ ಕಾರಣಕ್ಕಾಗಿಯೇ, ನಾವು ಇತರ ಪ್ರದೇಶಗಳಿಗಾಗಿ ಏರ್ಪಡಿಸಿದ ವ್ಯವಸ್ಥೆಗಿಂತ ವಿಭಿನ್ನ ಸ್ವರೂಪದ ವ್ಯವಸ್ಥೆಯನ್ನು ಅಸ್ಸಾಂನ ಬುಡಕಟ್ಟು ಜನಾಂಗಗಳ ಸಲುವಾಗಿ ಏರ್ಪಡಿಸಿದ್ದು ಎಂದು ಭಾವಿಸುತ್ತೇನೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಯಾವ ಕಾರಣವೊ ಏನೋ ಅಸ್ಸಾಂನ ಬುಡಕಟ್ಟು ಜನಾಂಗಗಳ ಸ್ಥಾನಮಾನವು, ಯುನೈಟೆಡ್ ಸ್ಟೇಟ್ಸ್‌ನಲ್ಲಿ, ಅಲ್ಲಿಗೆ ವಲಸೆ ಹೋದ ಬಿಳಿಯರ ಜನಾಂಗಗಳಿಗೆ ಹೋಲಿಸಲಾಗಿ ರೆಡ್ ಇಂಡಿಯನ್ ಜನಾಂಗಗಳು ಹೊಂದಿರುವ ಸ್ಥಾನಮಾನಕ್ಕೆ ಒಂದಿಷ್ಟು ಸದೃಶವಾಗಿವೆ ಎನ್ನಬಹುದೇನೋ. ಇನ್ನು, ರೆಡ್ ಇಂಡಿಯನ್ ಅವರ ವಿಷಯದಲ್ಲಿ ಯು.ಎನ್.ಎ.ರವರು ಮಾಡಿದ್ದೇನು? ನನಗೆ ಗೊತ್ತಿರುವ ಮಟ್ಟಿಗೆ, ಅವರು ಮಾಡಿದ್ದೇನೆಂದರೆ, ಅವರು ರೆಡ್ ಇಂಡಿಯನ್ ಸಮುದಾಯಗಳು ಯಾವ ಎಲ್ಲೆಗಳೊಳಗೆ ವಾಸಿಸುವರೋ ಅಂಥ ಎಲ್ಲೆಗಳನ್ನು ಸೃಜಿಸಿ ಅವುಗಳನ್ನು ರಿಜರ್ವೇಷನ್ಸ್ ಅಥವಾ ಬ್ಂಡರೀಸ್ ಎಂದು ಕರೆದರು. ಅವರೇ ಒಂದು ಸ್ವತಂತ್ರ ಗಣರಾಜ್ಯ, ಅಮೆರಿಕದ ಯು.ಎಸ್.ಎ. ಕಾನೂನು ಮೂಲಕ ಅವರು ಅಮೆರಿಕಾದ ಪ್ರಜೆಗಳೇ. ಸಂದೇಹಕ್ಕೆಡೆಯಿಲ್ಲ. ಆದರೆ ಯು.ಎಸ್.ಎ.ದ ಸಂವಿಧಾನಕ್ಕೆ ನಾಮಮಾತ್ರದ ರಾಜನಿಷ್ಠೆ, ವಾಸ್ತವವಾಗಿ ಅವರು ಒಂದು ಸ್ವತಂತ್ರ ಪ್ರತ್ಯೇಕ ಜನಸಮುದಾಯ. ಅವರ ಜೀವನದ ಶಾಸನಗಳು, ಉಪಜೀವನ ರೀತಿಗಳು, ಜೀವನ ಪದ್ಧತಿಗಳು ಮತ್ತು ರೂಢಿ ರಿವಾಜುಗಳು ಅತ್ಯಂತ ವಿಭಿನ್ನವಾಗಿರುವ ನಿಮಿತ್ತ ಆ ಸಮುದಾಯಗಳನ್ನು ಬಿಳಿಯರು, ಬಿಳಿಯರ ಸಲುವಾಗಿ ಮತ್ತು ಬಿಳಿಯರ ನಾಗರಿಕತೆಯ ಪ್ರಯೋಜನಕ್ಕಾಗಿ ರಚಿಸಿದ ಕಾನೂನುಗಳ ಆಡಳಿತ ಕ್ಷೇತ್ರಕ್ಕೆ ಒಡನೆಯೇ, ಒಂದೇ ಬಾರಿಗೆ ಒಳಪಡಿಸಲು ಕಷ್ಟಸಾಧ್ಯ ಎಂದು ಯುನೈಟೆಡ್ ಸ್ಟೇಟ್ಸ್ ಸರ್ಕಾರವು ನಿರ್ಧರಿಸಿತು.

ಯುನೈಟೆಡ್ ಸ್ಟೇಟ್ಸ್‌ನಲ್ಲಿ ರೆಡ್ ಇಂಡಿಯನ್ ಸಮುದಾಯಗಳ ಪ್ರಯೋಜನಾರ್ಥ ಅಂಗೀಕರಿಸಲಾದ, ಅಳವಡಿಸಲಾದ ಸೂತ್ರಗಳನ್ನು ಒಂದಿಷ್ಟು ಮಟ್ಟಿಗೆ ಅನುಸರಿಸಿಯೇ ನಾವು ಈ ಪ್ರಾದೇಶಿಕ ಮತ್ತು ಜಿಲ್ಲಾ ಪರಿಷತ್ತುಗಳನ್ನು ಸೃಜಿಸುತ್ತಿರುವುದು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಈ ಸಂಬಂಧದಲ್ಲಿ ನನ್ನ ಅನಿಸಿಕೆಯೇನೆಂದರೆ, ಈ ಸಂಗತಿಗಾಗಿ ಅಂದರೆ ನಾವು ಪ್ರಾದೇಶಿಕ ಮತ್ತು ಜಿಲ್ಲಾ ಪರಿಷತ್ತುಗಳನ್ನು ಸೃಜಿಸುತ್ತಿದ್ದೇವೆ ಎಂಬ ಕಾರಣಕ್ಕಾಗಿ, ಆರನೆಯ ಅನುಸೂಚಿಯನ್ನು ಟೀಕಿಸುವವರು, ನಾವು ಸಂವಿಧಾನದಲ್ಲಿ ಸೇರಿಸಿರತಕ್ಕ ಸಂಬಂಧಕಾರಿ ಅಂಶಗಳನ್ನು ಗಮನಿಸುವಲ್ಲಿ ವಿಫಲರಾಗಿದ್ದಾರೆ ಎಂದು ನನ್ನ ಅಭಿಪ್ರಾಯ. ಆದ್ದರಿಂದ, ಈ ಪ್ರತ್ಯೇಕೀಕರಣ ಎಂದು ಹೇಳುತ್ತಾರಲ್ಲ ಅದನ್ನು ಸ್ವಲ್ಪಮಟ್ಟಿಗೆ ಶೂನ್ಯಗೊಳಿಸುವ ದಿಶೆಯಲ್ಲಿ ನಾವು ಸಂವಿಧಾನದಲ್ಲಿ ಅಡಕಗೊಳಿಸಿರತಕ್ಕ ಕೆಲವು ಉಪಬಂಧಗಳತ್ತ ಅವರ ಗಮನ ಸೆಳೆಯಬಯಸುತ್ತೇನೆ.

ನಾವು ಮಾಡಿರುವ ಮೊದಲನೆಯ ವ್ಯವಸ್ಥೆ ಹೀಗೆ: ಅಸ್ಸಾಂ ಸರ್ಕಾರದ ಕಾರ್ಯಾಂಗ ಅಧಿಕಾರವು, ಅಸ್ಸಾಂನ ಬುಡಕಟ್ಟು ಪ್ರದೇಶಗಳಲ್ಲದ ಕ್ಷೇತ್ರಗಳಿಗೆ ವ್ಯಾಪ್ತವಾಗುವುದು ಮಾತ್ರವಲ್ಲದೆ, ಬುಡಕಟ್ಟು ಪ್ರದೇಶಗಳಿಗೂ ವ್ಯಾಪ್ತವಾಗತಕ್ಕದ್ದು ಎಂದು ಉಪಬಂಧ ಕಲ್ಪಿಸಿದ್ದುಂಟು. ಅರ್ಥಾತ್, ಅಸ್ಸಾಂ ಸರ್ಕಾರದ ಕಾರ್ಯಾಂಗ ಅಧಿಕಾರವು, ಸ್ವಾಯತ್ತ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರಗಳಲ್ಲಿಯೂ ಜಾರಿಯಾಗತಕ್ಕದ್ದು. ಇದು ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ೧೯೩೫ ಇದರಲ್ಲಿ ಅಡಕಗೊಂಡ ಉಪಬಂಧಗಳಿಗೆ ಹೋಲಿಸಲಾಗಿ, ಭಾರೀ ಸುಧಾರಣೆ ಎಂದು ಕಂಡುಬರಬಹುದು. ಆ ಆಕ್ಟ್‌ನಲ್ಲಿ ಅಡಕವಾಗಿರುವ ಉಪಬಂಧಗಳಲ್ಲಿ

ಕಾರ್ಯಾಂಗವನ್ನು ಎರಡು ಪ್ರವರ್ಗಗಳಲ್ಲಿ ವಿಭಜಿಸಲಾಗಿತ್ತು. ಒಂದರ ಹೆಸರು ಪ್ರಾಂತ್ಯಗಳ ಸರ್ಕಾರ, ಇನ್ನೊಂದು ಕಾರ್ಯಾಂಗವು ಬುಡಕಟ್ಟು ಪ್ರದೇಶಗಳಿಗೆ ಸಂಬಂಧಪಡುವಷ್ಟು ಮಟ್ಟಿಗೆ ವಿವೇಚನಾಧಿಕಾರ ಚಲಾಯಿಸುವ ರಾಜ್ಯಪಾಲರು. ಇದು ಅಸ್ಸಾಂನಲ್ಲಿರುವ ಬುಡಕಟ್ಟು ಪ್ರದೇಶಗಳಿಗೆ ಅನ್ವಯವಾಗುವುದೇ ಅಲ್ಲದೆ, ಉಳಿದ ಕ್ಷೇತ್ರಗಳಲ್ಲಿನ ಸಂಪೂರ್ಣವಾಗಿ ಹೊರತುಪಡಿಸಲಾದ ಪ್ರದೇಶಗಳಿಗೂ ಅನ್ವಯವಾಗುತ್ತಿತ್ತು. ಈ ಪ್ರದೇಶಗಳ ಮೇಲೆ ಜಾರಿಯಾಗುತ್ತಿದ್ದ ಕಾರ್ಯಾಂಗ ಪ್ರಾಧಿಕಾರವು ಪ್ರಾಂತ್ಯಗಳ ಕಾರ್ಯಾಂಗವಲ್ಲ. ಆದರೆ ವಿವೇಚನಾಧಿಕಾರ ಚಲಾಯಿಸತಕ್ಕ ರಾಜ್ಯಪಾಲರು. ನಾವು ಈ ವಿಭಿನ್ನತೆಯನ್ನು ರದ್ದುಪಡಿಸಿದ್ದೇವೆ. ಫಲಿತಾಂಶವಾಗಿ, ಸ್ವಾಯತ್ತ ಜಿಲ್ಲೆಗಳಲ್ಲಿರುವ ಬುಡಕಟ್ಟು ಪ್ರದೇಶಗಳೂ ಸೇರಿದಂತೆ, ಇಡೀ ಬುಡಕಟ್ಟು ಪ್ರದೇಶವು, ಈ ಪ್ರಾಂತ್ಯ ಸರ್ಕಾರದ ಅಧೀನದಲ್ಲಿ ಇರುತ್ತದೆ. ಈ ಬಂಧನಕಾರಿ ಅಂಶದತ್ತ ನಮ್ಮ ಮಾನ್ಯ ಸದಸ್ಯರು ಗಮನ ಹರಿಸಿದಂತಿಲ್ಲ.

ಈ ಅಂಶವೆಂದರೆ, ಸಂಗತಿಯೆಂದರೆ, ಕಾನೂನು ರಚನೆ, ಹಣ ಸಾಲ ಕೊಡುವುದು, ಭೂಮಿ ಮುಂತಾದ ಕೆಲವು ನಿರ್ದಿಷ್ಟ ಕ್ಷೇತ್ರಗಳ ಪ್ರಕಾರ್ಯಗಳನ್ನು ಹೊರತುಪಡಿಸಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ, ಪ್ರಾದೇಶಿಕ ಪರಿಷತ್ತುಗಳಲ್ಲಿ ಮತ್ತು ಜಿಲ್ಲಾ ಪರಿಷತ್ತುಗಳಲ್ಲಿ ಚಲಾಯಿಸತಕ್ಕ ಕೆಲವು ನಿರ್ದಿಷ್ಟ ನ್ಯಾಯಿಕ ಕ್ಷೇತ್ರಗಳ ಪ್ರಕಾರ್ಯಗಳನ್ನು ಹೊರತುಪಡಿಸಿ ಸಂಸತ್ತಿನ ಪ್ರಾಧಿಕಾರ, ಹಾಗೆಯೇ ಅಸ್ಸಾಂ ಸರ್ಕಾರದ ಪ್ರಾಧಿಕಾರವು ಪ್ರಾದೇಶಿಕ ಪರಿಷತ್ತುಗಳಿಗೂ ಜಿಲ್ಲಾ ಪರಿಷತ್ತುಗಳಿಗೂ ವ್ಯಾಪ್ತವಾಗತಕ್ಕದ್ದು. ಕಾನೂನು ರಚನೆಯ ಕ್ಷೇತ್ರದಲ್ಲಿ ಅವು ಸಂಸತ್ತಿನ ಪ್ರಾಧಿಕಾರದಿಂದ ಉನ್ಮುಕ್ತಿ ಹೊಂದಿರುವುದಿಲ್ಲ. ಹಾಗೆಯೇ ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಿಂದ ಉನ್ಮುಕ್ತಿ ಹೊಂದಿರುವುದಿಲ್ಲ ಮತ್ತು ಅದೇ ಹೊಸ ತಿದ್ದುಪಡಿಯ ಧ್ಯೇಯವಾಗದೆ, ಇದುವೇ ಒಂದು ಬಂಧನಕಾರಿ ಪ್ರಭಾವ ಎಂದು ಹೇಳಬಯಸುತ್ತೇನೆ.

ಬಂಧನಕಾರಿ ಆದ ಇನ್ನೊಂದು ಪ್ರಭಾವ ಹೀಗೆ. ಸಂಸತ್ತು ರಚಿಸಿದ ಕಾನೂನುಗಳು ಮತ್ತು ಅಸ್ಸಾಂ ವಿಧಾನಮಂಡಲ ರಚಿಸಿದ ಕಾನೂನುಗಳು ಅನ್ವಯವಾಗತಕ್ಕದ್ದಲ್ಲ ಎಂದು ರಾಜ್ಯಪಾಲರು ಭಾವಿಸಿದ ಹೊರತು ಆ ಪ್ರಾದೇಶಿಕ ಪರಿಷತ್ತುಗಳಿಗೂ ಜಿಲ್ಲಾ ಪರಿಷತ್ತುಗಳಿಗೂ ಸಹಜವಾಗಿಯೇ ಅನ್ವಯವಾಗುತ್ತದೆ. ಅರ್ಥಾತ್, ಅಸ್ಸಾಂನ ವಿಧಾನಮಂಡಳವು ಅಥವಾ ಸಂಸತ್ತು ರಚಿಸಿದ ಕಾನೂನು ಏಕೆ ಅನ್ವಯವಾಗಕೂಡದು ಎಂದು ತೋರಿಸುವ ಭಾರವನ್ನು ರಾಜ್ಯಪಾಲರ ಮೇಲೆ ಹೊರಿಸಿದ್ದುಂಟು. ಸಾಮಾನ್ಯವಾಗಿ, ಸ್ಥಳೀಯ ವಿಧಾನಮಂಡಳ ಮತ್ತು ಸಂಸತ್ತು ರಚಿಸಿದ ಕಾನೂನುಗಳು ಸಹ ಈ ಪ್ರದೇಶಗಳಿಗೆ ಅನ್ವಯವಾಗುತ್ತದೆ. ನನ್ನ ಪ್ರಕಾರ ಇದು ಒಂದುಗೂಡಿಸುವ ಇನ್ನೊಂದು ಪ್ರಭಾವ ಮಾತ್ರವಲ್ಲದೆ, ನಾನು ಉಲ್ಲೇಖಿಸಬಯಸುವ ಒಂದುಗೂಡಿಸುವ ಇನ್ನೂ ಒಂದು ಪ್ರಭಾವ ಉಂಟು. ಬುಡಕಟ್ಟು ಜನಾಂಗಗಳಿಗೆ ನಾವು ಪ್ರಾದೇಶಿಕ ಪರಿಷತ್ತುಗಳನ್ನು ಮತ್ತು ಜಿಲ್ಲಾ ಪರಿಷತ್ತುಗಳನ್ನು ಸೃಜಿಸುವ ಮೂಲಕ ನಾವು ಕೊಟ್ಟಿರುವ ರಾಜಕೀಯ ಅಧಿಕಾರವು, ಅವರು ಹಕ್ಕುದಾರರಾಗಬಹುದಾದ ಸಮಗ್ರ ಪ್ರಭಾವ ವಲಯ ಎಂದು ನಾವು ಹೇಳುತ್ತಿಲ್ಲ. ಇದಕ್ಕೂ ಮಿಗಿಲಾಗಿ, ಪ್ರಾದೇಶಿಕ ಪರಿಷತ್ತುಗಳನ್ನು ಮತ್ತು ಜಿಲ್ಲಾ ಪರಿಷತ್ತುಗಳನ್ನು ಹೊಂದಲಿರುವ ಈ ಜನಸಮುದಾಯವು, ಅಸ್ಸಾಂ ಸಲುವಾಗಿ ಕಾನೂನುಗಳನ್ನು ರಚಿಸುವಲ್ಲಿ ಹಾಗೆಯೇ ಇಡೀ ಭಾರತದ ಸಲುವಾಗಿ ಕಾನೂನುಗಳನ್ನು ರಚಿಸುವಲ್ಲಿ ತಮ್ಮ ಪಾತ್ರವನ್ನು ವಹಿಸಲು ಶಕ್ತರಾಗಬೇಕು ಎಂಬ ಉದ್ದೇಶದಿಂದ, ಅಸ್ಸಾಂ ವಿಧಾನ ಮಂಡಲದಲ್ಲಿ ಹಾಗೆಯೇ ಸಂಸತ್ತಿನಲ್ಲಿ ಸಾಕಷ್ಟು ಪ್ರಾತಿನಿಧ್ಯ ಪಡೆಯುವ ಬಗ್ಗೆ ವ್ಯವಸ್ಥೆ ಮಾಡಿದ್ದೇವೆ. ಇನ್ನು, ಕಾನೂನು ರಚನೆಯಲ್ಲಿ ಪಾಲ್ಗೊಳ್ಳುವಿಕೆಯ ಈ ಚಕ್ರಗಳು, ಹಾಗೆಂದು ನಾನು

ಕರೆಯಬಹುದಾದರೆ, ನಾನು ಉಲ್ಲೇಖಿಸಿರುವ ಈ ವ್ಯವಸ್ಥೆಯು ಅಂದರೆ, ಅಸ್ಸಾಂ ವಿಧಾನಮಂಡಲದಲ್ಲಿ ಪ್ರಾತಿನಿಧ್ಯ ಮತ್ತು ಸಂಸತ್ತಿನಲ್ಲಿ ಪ್ರಾತಿನಿಧ್ಯ ಮತ್ತು ಸಂಸತ್ತು ರಚಿಸಿದ ಕಾನೂನುಗಳ ಅನ್ವಯವು ಮತ್ತು ಅಸ್ಸಾಂ ವಿಧಾನಮಂಡಲವು ರಚಿಸಿದ ಕಾನೂನುಗಳ ಅನ್ವಯವು ಇವೆಲ್ಲ ಬಂಧನಕಾರಿ ಶಕ್ತಿಗಳು ಅಲ್ಲ ಎನ್ನುವುದಾದರೆ, ಪ್ರಾಂತ್ಯದ ಸಮಗ್ರ ಜೀವನದೊಂದಿಗೆ ಪ್ರಾದೇಶಿಕ ಪರಿಷತ್ತುಗಳನ್ನು ಮತ್ತು ಜಿಲ್ಲಾ ಪರಿಷತ್ತುಗಳನ್ನು ಏಕೀಕರಿಸುವ ಸಲುವಾಗಿ ಇದಕ್ಕಿಂತಲೂ ಮಿಗಿಲಾದ ಯಾವ ವ್ಯವಸ್ಥೆಯನ್ನು ಏರ್ಪಡಿಸೋಣ ಎಂಬ ಪ್ರಶ್ನೆಯನ್ನು ಕೇಳಬಯಸುತ್ತೇನೆ.

ಆದ್ದರಿಂದ ನಾವು ಪ್ರಾದೇಶಿಕ ಪರಿಷತ್ತುಗಳು ಮತ್ತು ಜಿಲ್ಲಾ ಪರಿಷತ್ತುಗಳನ್ನು ಸೃಜಿಸಿ, ನಾವು ಅಸ್ಸಾಂನ ಜನಸಮುದಾಯವನ್ನು ಬುಡಕಟ್ಟಿನವರು ಮತ್ತು ಬುಡಕಟ್ಟಿಗೆ ಸೇರಿಲ್ಲದವರು ಎಂಬುದಾಗಿ ಎರಡು ಪ್ರತ್ಯೇಕವಾದ ಖಂಡಗಳಾಗಿ ಭಾಗ ಮಾಡಿದ್ದೇವೆ ಎಂಬ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಇದಕ್ಕೆ ವಿಪರೀತವಾಗಿ, ನಾವು ಈ ಎರಡೂ ಭಾಗಗಳು ರಾಜಕೀಯವಾಗಿ ಒಂದೆಡೆ ಸೇರುವ ಹಾಗೆ, ಪರಸ್ಪರರ ಮೇಲೆ ಪ್ರಭಾವ ಬೀರುವ ಹಾಗೆ, ಒಂದುಗೂಡಿ, ಒಡನಾಟವಾಡಿ ಪರಸ್ಪರರಿಂದ ಕಲಿತುಕೊಳ್ಳುವ ಹಾಗೆ, ನಾನು ಈಗಾಗಲೇ ಹೇಳಿರುವ ಪ್ರಕಾರ ಪಾಲ್ಗೊಳ್ಳುವಿಕೆಯ ಅನೇಕ ಚಕ್ರಗಳನ್ನು ವ್ಯವಸ್ಥೆಗೊಳಿಸಿದ್ದೇವೆ. ಆದ್ದರಿಂದ ಜಿಲ್ಲಾ ಪರಿಷತ್ತು ಮತ್ತು ಪ್ರಾದೇಶಿಕ ಪರಿಷತ್ತು ಇವುಗಳ ಉಪಬಂಧದ ವ್ಯವಸ್ಥೆಯ ವಿರುದ್ಧ ಒಡ್ಡಲಾದ ವಾದವು ಸಂಪೂರ್ಣವಾಗಿ ತಪ್ಪು ತಿಳಿವಳಿಕೆಯಿಂದ ಮತ್ತು ಈ ಅನುಸೂಚಿಯಲ್ಲಿ ಒಳಗೊಂಡ ಇತರ ಅಪೂರ್ಣ ಅಧ್ಯಯನ ಇವುಗಳನ್ನು ಆಧರಿಸಿ ಉಂಟಾದದ್ದು ಎಂದು ನನಗೆ ಭರವಸೆಯುಂಟು.

ಸ್ವಾಮಿ, ನನ್ನ ಸ್ನೇಹಿತ ಶ್ರೀ ಚಾಲಿಹಾ ಅವರು ತಮ್ಮ ತಿದ್ದುಪಡಿಯನ್ನು ಮಂಡಿಸುವಾಗ ತಳೆದ ಮನೋಭಾವದಿಂದ ಮತ್ತು ಅದೇ ರೀತಿ ನನ್ನ ಸ್ನೇಹಿತ ರೋಹಿಣಿಕುಮಾರ್ ಅವರ ಮನೋಭಾವದಿಂದ ನನಗೆ ಆಶ್ಚರ್ಯವಾಗಿದೆ. ಅವರು ಈಗ ಒಗ್ಗಟ್ಟಾಗಿರುವ ಮತ್ತು ಸುಖ ಶಾಂತಿ ನೆಲೆಸಿದ ಕುಟುಂಬವಾಗಿ ಉಳಿದಿಲ್ಲ ಎಂದು ನನ್ನ ಭಾವನೆ. ಇದಕ್ಕೆ ಕಾರಣವೇನು? ನನಗೆ ಅರ್ಥವಾಗುತ್ತಿಲ್ಲ. ಆದರೆ ಈ ತಿದ್ದುಪಡಿಗಳನ್ನು ಮಾಡಿದಾಗ, ಶ್ರೀ ಚಾಲಿಹಾ ಅವರ ಸಮ್ಮತಿ ಪಡೆದು ಮಾಡಲಾಗಿತ್ತು. ಅಸ್ಸಾಂ ಪ್ರಧಾನಿಯ ಸಮ್ಮತಿ ಪಡೆದು ಮಾಡಲಾಗಿತ್ತು. ಮತ್ತು ಈ ಸಂಬಂಧದಲ್ಲಿ ಪ್ರಧಾನ ಪಕ್ಷಕಾರರಾಗಿದ್ದ ನನ್ನ ಸ್ನೇಹಿತ ಮಿ. ನಿಕೋಲ್ಸ್ ರಾಯ್ ಅವರ ಸಮ್ಮತಿ ಪಡೆದು ಮಾಡಲಾಗಿತ್ತು. ಆದರೆ ಈಗ ಅವರು ಈ ಅನುಸೂಚಿಯ ಹೊರಗಿನ ಅಂಶಗಳ ಬಗ್ಗೆ ಪರಸ್ಪರ ಟೀಕೆ ಮಾಡುವುದರಲ್ಲಿ ತೊಡಗಿರುವುದನ್ನು ಕಂಡೆ. ಈ ಮತಭೇದಕ್ಕೆ ಒಬ್ಬರ ವಿರುದ್ಧ ಇನ್ನೊಬ್ಬರು ತೋರುವ ಈ ಬಹಿರಂಗ ಮತಭೇದಕ್ಕೆ (ಸಂಗತಿಗೆ) ಮತ್ತು ಉದ್ವೇಗಕ್ಕೆ ಇನ್ನಾವ ಕಾರಣವೂ ನನಗೆ ಕಾಣುತ್ತಿಲ್ಲ. ಆದ್ದರಿಂದ ವಿಶುದ್ಧ ಗೃಹಕಲಹವಾಗಿರುವ ಈ ಪ್ರಸಂಗದಲ್ಲಿ ನಾನು ಆಸಕ್ತಿ ತೋರಲು ಇಷ್ಟಪಡುವುದಿಲ್ಲ.

**ಶ್ರೀ ರೋಹಿಣಿಕುಮಾರ್ ಚೌಧುರಿ:** ನನ್ನ ವಿರುದ್ಧ ಈ ರೀತಿ ವ್ಯಂಗ್ಯೋಕ್ತಿಗಳನ್ನು ನುಡಿಯಲು ಡಾ. ಅಂಬೇಡ್ಕರ್ ಅವರಿಗೆ ಹಕ್ಕು ಇದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ವ್ಯಂಗ್ಯೋಕ್ತಿಯನ್ನು ಹೇಳಿಲ್ಲ. ಅದೊಂದು ಮನೆ ಜಗಳ. ನಾನು ಅದರಲ್ಲಿ ಮಧ್ಯಪ್ರವೇಶ ಮಾಡಲು ಬಯಸುವುದಿಲ್ಲ ಎಂದು ಮಾತ್ರ ಹೇಳುತ್ತಿದ್ದೇನೆ. ಇನ್ನು ಉಪಬಂಧದ ವಿಷಯದಲ್ಲಿ ಹೇಳುವುದಾದರೆ, ಅದಕ್ಕಿಂತ ಉತ್ತಮವಾದ ಉಪಬಂಧ.....*

---

* ಚುಕ್ಕಿಗಳು ತಡೆಯನ್ನು ಸೂಚಿಸುತ್ತದೆ.

**ಶ್ರೀ ಕುಲಧರ ಚಾಲಿಹಾ:** ಪ್ರಾಮಾಣಿಕವಾಗಿ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ ಡಾ. ಅಂಬೇಡ್ಕರ್ ಅವರು ಉದ್ದೇಶವನ್ನು ಆರೋಪಿಸುತ್ತಿರುವುದನ್ನು ನಾನು ಆಕ್ಷೇಪಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಉದ್ದೇಶವನ್ನು ಆರೋಪಿಸುತ್ತಿಲ್ಲ. ಈ ಅನುಸೂಚಿಯಲ್ಲಿ ಮಾಡಲಾದ ಪ್ರತಿಯೊಂದು ಬದಲಾವಣೆಯಲ್ಲಿ ಶ್ರೀ ಚಾಲಿಹಾ ಅವರು ಭಾಗಿಯಾಗಿದ್ದರು. ಆ ಸಂಗತಿಯನ್ನು ಅವರು ನಿರಾಕರಿಸಲಿ ಎಂದು ನನ್ನ ಅಪೇಕ್ಷೆ. ಹಾಗೆ ಅವರು ನಿರಾಕರಿಸಬಹುದೆ?

**ಶ್ರೀ ಕುಲಧರ ಚಾಲಿಹಾ:** ಹೌದು, ನಾನು ನಿರಾಕರಿಸುತ್ತೇನೆ. ಕೆಲವು ವಿಷಯಗಳು ನನಗೆ ಒಪ್ಪಿಗೆಯಾಗಲಿಲ್ಲ ಎಂದು ಶ್ರೀ ಬಾರ್ದೋರ್‌ಲೊಯ್ ಅವರಿಗೆ ಹೇಳಿದ್ದುಂಟು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ಶ್ರೀ ಬಾರ್ದೊರ್‌ಲೊಯ್ ಅವರ ಕಿವಿಯಲ್ಲಿ ಪಿಸುಮಾತಿನಲ್ಲಿ ಹೇಳಿರಬಹುದೇನೋ. ಅವರು ಕರಡು ರಚನಾ ಸಮಿತಿಯ ಸಭೆಯಲ್ಲಿ ಈ ಬದಲಾವಣೆಗಳ ಬಗ್ಗೆ ಚಕಾರವೆತ್ತಲಿಲ್ಲ. ಕೆಲವು ಇತರ ಸಂದರ್ಭಗಳಲ್ಲಿ ತೆಗೆದುಕೊಂಡ ಹಾಗೆ ನಾನು ಅವರ ಸಹಿ ತೆಗೆದುಕೊಳ್ಳಲಿಲ್ಲ. ಯಾರೇ ಸದಸ್ಯರು ಆಮೇಲೆ ತಾವು ಹೇಳಿದ್ದನ್ನು ಅಲ್ಲಗಳೆಯಬಾರದಲ್ಲ ಎಂದು ನಾನು ಸಹಿ ತೆಗೆದುಕೊಳ್ಳುತ್ತೇನೆ. ಆದಾಗ್ಯೂ, ನಾನು ಹೇಳುತ್ತಿರುವುದೇನೆಂದರೆ, ಜಿಲ್ಲಾ ಪರಿಷತ್ತುಗಳಿಗೆ ಮತ್ತು ಪ್ರಾದೇಶಿಕ ಪರಿಷತ್ತುಗಳಿಗೆ ನಿರ್ದಿಷ್ಟ ಉದ್ದೇಶಗಳಿಗಾಗಿ ನಿರ್ದಿಷ್ಟ ಸ್ವಾಯತ್ತತೆಯನ್ನು ಕೊಡಲಾಗಿದೆ ಮತ್ತು ಅದೇ ಹೊತ್ತಿಗೆ ಪ್ರಾಂತ್ಯದ ಜೀವನದೊಂದಿಗೆ ಮತ್ತೆ ಸಮಗ್ರವಾಗಿ ದೇಶದ ಜೀವನದೊಂದಿಗೆ ಒಂದುಗೂಡಿಸಲಾಗಿದೆ. ಬೆಸೆಯುವ ಸ್ವಭಾವದ ಈ ಪರಿಸ್ಥಿತಿಗಳು ಬುಡಕಟ್ಟು ಜನಸಮುದಾಯಗಳನ್ನು ಅಸ್ಸಾಂನ ಉಳಿದ ಬಯಲು ಪ್ರದೇಶಗಳ ಜನಸಮುದಾಯಗಳ ಜತೆ ಬೆಸೆಯದೆ ಹೋದರೆ, ಅಂಥ ದೌರ್ಭಾಗ್ಯ ಪೂರ್ಣ ಸನ್ನಿವೇಶಕ್ಕೆ ಆಧಾರವಾದ ಕಾರಣವನ್ನು ಇನ್ನೆಲ್ಲೋ ಇನ್ನಾವುದರಲ್ಲೋ ಹುಡುಕಬೇಕಾಗುತ್ತದೆ. ನನ್ನ ಸ್ನೇಹಿತ ಶ್ರೀ ರೋಹಿಣಿಕುಮಾರ್ ಅವರ ಹೇಳಿಕೆಯ ಪ್ರಕಾರ, ನೀವು ಪ್ರಾದೇಶಿಕ ಪರಿಷತ್ತುಗಳನ್ನು ಸೃಜಿಸಿದರೆ ಬುಡಕಟ್ಟು ಜನಗಳು ಟಿಬೇಟ್ ಹೋದ ದಾರಿಯಲ್ಲೇ ಹೋಗುವ ಸಂಭವವುಂಟಂತೆ. ಆ ಭವಿಷ್ಯವಾಣಿಯು ಬುಡಕಟ್ಟು ಜನಗಳಿಗೆ ಮಾತ್ರ ಸೀಮಿತವಾಗಿರುವುದೋ ಹೇಗೆ ನನಗೆ ಗೊತ್ತಾಗುವುದಿಲ್ಲ. ಇಡೀ ಅಸ್ಸಾಂ ಪ್ರಾಂತ್ಯವೇ ಹಾಗೆ ಹೋಗಬಹುದೇನೋ ಎಂಬ ಭಯ ನನಗೆ. ಆ ಸಂಬಂಧದಲ್ಲಿ ನಾವು ಸಂವಿಧಾನದಲ್ಲಿ ಯಾವುದೇ ಉಪಬಂಧ ಏರ್ಪಡಿಸುವಂತಿಲ್ಲ. ಅದು ನನಗೆ ಚೆನ್ನಾಗಿ ಗೊತ್ತು.

**ಶ್ರೀ ಬಿ. ದಾಸ್** (ಒರಿಸ್ಸಾ ಸಾಮಾನ್ಯ): ಬ್ರಿಟಿಷ್ ಏಜೆಂಟರು ಅಸ್ಸಾಂ ಬರ್ಮಾ ಗಡಿಯಲ್ಲಿ ತಮ್ಮ ಚಟುವಟಿಕೆಗಳನ್ನು ನಡೆಸಿದ್ದಾರೆ ಮತ್ತು ಕರೇನರು ಮತ್ತು ಜರ್ಮೀಯರ ನಡುವಣ ಘರ್ಷಣೆಗೆ ಅವರೇ ಕಾರಣರಾಗಿದ್ದಾರೆ ಮತ್ತು ಆ ಬ್ರಿಟಿಷ್ ಏಜೆಂಟರೇ ಅಸ್ಸಾಂನ ಬುಡಕಟ್ಟು ಪ್ರದೇಶಗಳಲ್ಲಿ ತಮ್ಮ ಕಾಯಕವನ್ನು ನಡೆಸಿದ್ದಾರೆ ಎಂಬ ಸಂಗತಿ ಗಮನಕ್ಕೆ ಬಂದಿಲ್ಲವೆ ಎಂದು ಡಾ. ಅಂಬೇಡ್ಕರ್ ಅವರನ್ನು ಪ್ರಶ್ನಿಸಬಹುದೆ? ನನ್ನ ಸ್ನೇಹಿತ ರೆವರೆಂಡ್ ನಿಕೋಲ್ಸ್ ರಾಯ್ ಅವರ ಭಾಷಣವನ್ನು ಕೇಳಿದ ತರುವಾಯ ಬುಡಕಟ್ಟು ಪ್ರದೇಶಗಳು ಪ್ರತ್ಯೇಕ ಸತ್ತೆ ಆದರೆ ಆ ಮೂಲಕ ಬ್ರಿಟಿಷ್ ಪ್ರಭಾವವು ಆ ಬುಡಕಟ್ಟು ಪ್ರದೇಶಗಳಲ್ಲಿ ಸೇರಿಹೋಗಬಹುದೆಂಬ ಕಾರಣ ಅವು ಪ್ರತ್ಯೇಕ ಸತ್ತೆ ಆಗಬೇಕೆಂದು ಬಯಸುತ್ತಾರೆ ಎಂದು ನನಗೆ ಅನಿಸುತ್ತದೆ. ಸರ್ಕಾರದ ಒಬ್ಬ ಸದಸ್ಯರಾಗಿದ್ದು ಡಾ. ಅಂಬೇಡ್ಕರ್ ಬುಡಕಟ್ಟು ಪ್ರದೇಶಗಳಿಗೆ ಸಂಬಂಧಿಸಿದಂತೆ ಇವೆಲ್ಲ ವಿಚಾರಗಳು ಚೆನ್ನಾಗಿ ಗೊತ್ತು. ನನಗೂ ಒಂದಿಷ್ಟು ಗೊತ್ತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ಬಗ್ಗೆ ಇಷ್ಟೇ ಹೇಳಬಲ್ಲೆನು. ಈ ವಿದೇಶೀ ಪ್ರಭಾವವನ್ನೂ ಸಂಪೂರ್ಣವಾಗಿ ತೊಲಗಿಸಲು ಉಪಾಯಗಳನ್ನು ಯೋಜಿಸಲು ಖಂಡಿತವಾಗಿಯೂ ಸಾಧ್ಯವುಂಟು.

**ಶ್ರೀ ಬಿ. ದಾಸ್:** ಕರಡು ರಚನಾ ಸಮಿತಿಯು......

**ಶ್ರೀ ಕುಲಧರ ಚಾಲಿಹಾ:** ಕರಡು ರಚನಾ ಸಮಿತಿಗೂ ಈ ವಿದೇಶೀ ಪ್ರಭಾವಗಳನ್ನು ನಿರ್ಮೂಲ ಗೊಳಿಸುವುದಕ್ಕೂ ಯಾವುದೇ ಸಂಬಂಧವಿಲ್ಲ. ಅದು ಬೇರೆ ಸಂಸ್ಥೆಯ ಕಾರ್ಯ. ಆದರೆ, ನನ್ನ ಮಾನ್ಯ ಸ್ನೇಹಿತರಿಗೆ ಇಷ್ಟು ಭರವಸೆ ಕೊಡಬಲ್ಲೆನು. ಈ ವಿದೇಶೀ ಪ್ರಭಾವಗಳ ನಿರ್ಮೂಲನ ಕಾಯಿದೆ ಕಷ್ಟ ಸಾಧ್ಯವೇನೂ ಅಲ್ಲ.

**(ಹಾಗೆ ತಿದ್ದುಪಡಿಯಾದ ಪ್ಯಾರಾ ೨ ಅನ್ನು ಅನುಸೂಚಿಗೆ ಸೇರಿಸಲಾಯಿತು.)**

## ಪ್ಯಾರಾ ೩

**ಶ್ರೀ ಕುಲಧರ ಚಾಲಿಹಾ:** ನಿಜವಾಗಿಯೂ ಈ ತಿದ್ದುಪಡಿಯು ನನ್ನ ತಿದ್ದುಪಡಿಯಂತೆಯೇ. ಆದ ಕಾರಣ, ಡಾ. ಅಂಬೇಡ್ಕರ್ ಅವರು ನನ್ನ ತಿದ್ದುಪಡಿಯನ್ನು ಸ್ವೀಕರಿಸಬೇಕಾಗಿತ್ತು. ಹೊರತು, ಹೀಗೆ ಸೇರಿಸಿ, ತೆಳುಗೊಳಿಸಿ ಕಾನೂನು ರಚನೆಯಲ್ಲಿ ಗೋಜಲು ಕೆಲಸ ಮಾಡಬಾರದಿತ್ತು. ಕರಡು ರಚನಾ ಸಮಿತಿಯ ತಿದ್ದುಪಡಿಯನ್ನು ಸ್ವೀಕರಿಸುವುದಕ್ಕಿಂತ ಸಂಖ್ಯೆ ೧೧೩ರ ತಿದ್ದುಪಡಿಯನ್ನು ಸ್ವೀಕರಿಸುವುದೇ ಉತ್ತಮ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಸದಸ್ಯರು ನನ್ನ ಸಲುವಾಗಿ ಅದನ್ನು ಈಗಾಗಲೇ ಮಂಡಿಸಿದ್ದಾರೆ. ನಾನು ಮಂಡಿಸಿದ ಹಾಗೆ ಎಂದು ಒಪ್ಪಿಕೊಳ್ಳುವುದಾದರೆ ಸಮಯ ಉಳಿಯುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಅವರು ಮಂಡಿಸಿದ್ದಾರೆ ಎಂದು ಇಟ್ಟುಕೊಳ್ಳುತ್ತೇವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅದನ್ನು ಔಪಚಾರಿಕವಾಗಿ ಮಂಡಿಸಲೆ?

**ಮಾನ್ಯ ಸಭಾಧ್ಯಕ್ಷರು:** ಆಗಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪ್ಯಾರಾ ೩ರ ಉಪಪ್ಯಾರಾ (೨)ರ ತರುವಾಯ ಮುಂದಿನ ಉಪಪ್ಯಾರಾವನ್ನು ಸೇರಿಸತಕ್ಕದ್ದು. ಈ ಪ್ಯಾರಾದ ಅಡಿಯಲ್ಲಿ ರಚಿಸಲಾದ ಎಲ್ಲ ಕಾನೂನುಗಳನ್ನು ಆ ಕೂಡಲೇ ರಾಜ್ಯಪಾಲರಿಗೆ ಸಲ್ಲಿಸತಕ್ಕದ್ದು ಮತ್ತು ಅವರು ಅದಕ್ಕೆ ಸಮ್ಮತಿ ಕೊಡುವ ತನಕ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ."

**ಶ್ರೀ ರೋಹಿಣಿಕುಮಾರ್ ಚೌಧುರಿ:** ಅಧ್ಯಕ್ಷರೆ, ತಮ್ಮ ಅನುಮತಿ ಕೋರಿ ತಿದ್ದುಪಡಿ ಮಂಡಿಸುತ್ತೇನೆ.

"ಪಟ್ಟಿ Iರ (ಏಳನೆಯ ಪ್ಯಾರಾದ ಅಡಿಯಲ್ಲಿ ರಚಿಸಲಾದ ಎಲ್ಲ ಕಾನೂನುಗಳನ್ನು ರಾಜ್ಯಪಾಲರಿಗೆ ಸಲ್ಲಿಸತಕ್ಕದ್ದು ಮತ್ತು ಆ ಕೂಡಲೇ ಅವುಗಳನ್ನು ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕದ್ದು ಮತ್ತು ವಿಧಾನಮಂಡಲವು ತನ್ನ ಒಪ್ಪಿಗೆ ಪಡೆದು ರಾಜ್ಯಪಾಲರ ಸಮ್ಮತಿ ಪಡೆಯುವ ತನಕ ಅವು ಪರಿಣಾಮಕಾರಿಯಾಗತಕ್ಕದ್ದಲ್ಲ."

(ತಿದ್ದುಪಡಿಯನ್ನು ನಿರಾಕರಿಸಲಾಯಿತು.)

* * *

---

* ಸಿ.ಎ.ಡಿ. ಸಂ. IX, ೬ನೇ ಸೆಪ್ಟೆಂಬರ್ ೧೯೪೯, ಪುಟ ೧೦೨೯.

***ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ನೀವು ಏನನ್ನಾದರೂ ಹೇಳುವುದಿದೆಯೇ? ಇದರಲ್ಲಿ ಚರ್ಚೆ ಮಾಡುವಂಥ ಸಂಗತಿಯೇನೂ ಇಲ್ಲ ಎಂದು ನಾನು ಭಾವಿಸಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ನನ್ನ ಸ್ನೇಹಿತ ಶ್ರೀ ಚಾಲಿಹಾ ಅವರ ತಿದ್ದುಪಡಿ ೧೧೩ ಇದಕ್ಕೆ ಸಂಬಂಧಪಟ್ಟ ಹಾಗೆ, ನಿಜವಾಗಿಯೂ ಅದು ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಅದು ಹೀಗೆ ಹೇಳುತ್ತದೆ: "ರಾಜ್ಯಪಾಲರು ವಿನಿಯಮಗಳನ್ನು ಮತ್ತು ಕಾನೂನುಗಳನ್ನು ಮಾಡತಕ್ಕದ್ದು ಮತ್ತು ಜಿಲ್ಲಾ ಪರಿಷತ್ತುಗಳಿಗೆ ಮತ್ತು ಪ್ರಾದೇಶಿಕ ಪರಿಷತ್ತುಗಳಿಗೆ ವಿಧಾನಮಂಡಳವು ಅನುಮೋದಿಸಬಹುದಾದಂಥ ಅಧಿಕಾರಗಳನ್ನು ವಹಿಸಿಕೊಡತಕ್ಕದ್ದು." ಅದರ ಅರ್ಥವೇನು ಎಂದು ನನಗೆ ತಿಳಿಯುತ್ತಿಲ್ಲ.

ನನ್ನ ತಿದ್ದುಪಡಿಗೆ ಮತ್ತು ನನ್ನ ಮಾನ್ಯ ಸ್ನೇಹಿತ ರೋಹಿಣಿಕುಮಾರ್ ಅವರು ಮಂಡಿಸಿದ ತಿದ್ದುಪಡಿಗೆ ಸಂಬಂಧಿಸಿದಂತೆ, ನನ್ನ ಸ್ನೇಹಿತರಿಗೆ 'ರಾಜ್ಯಪಾಲ' ಎಂಬ ಪದದ ಅರ್ಥವನ್ನು ಅರಿಯಲು ಆಗದಿರುವುದನ್ನು ಹೊರತುಪಡಿಸಿದರೆ ಅವೆರಡೂ ತಿದ್ದುಪಡಿಗಳಲ್ಲಿ ಏನೂ ವ್ಯತ್ಯಾಸವಿಲ್ಲ. ಕಾನೂನುಗಳನ್ನು ಅಸ್ಸಾಂ ವಿಧಾನಮಂಡಳವು ಅನುಮೋದಿಸುವುದು ಎಂದು ಅವರು ಹೇಳುತ್ತಾರೆ. ನನ್ನ ತಿದ್ದುಪಡಿಯ ಪ್ರಕಾರ ರಾಜ್ಯಪಾಲರು ಮಂತ್ರಿಮಂಡಳದ ಸಲಹೆಗನುಸಾರ ಕಾನೂನುಗಳನ್ನು ಅನುಮೋದಿಸುತ್ತಾರೆ. ಯಾಕೆಂದರೆ, ಈ ಎಲ್ಲ ವ್ಯವಸ್ಥೆಯಲ್ಲಿ ನಾವು "ಅವರ ವಿವೇಚನಾಧಿಕಾರದಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡುತ್ತಿದ್ದೇವೆ. ರಾಜ್ಯಪಾಲ ಎಂಬ ಪದವು ಬರುವಲ್ಲೆಲ್ಲ ಮಂತ್ರಿಮಂಡಳದ ಸಲಹೆಗನುಸಾರ ಕಾರ್ಯನಿರ್ವಹಿಸುವ ರಾಜ್ಯಪಾಲ ಎಂದು ಅರ್ಥ. ನಾನು ಅವರಿಗೆ ಒಂದು ಪ್ರಶ್ನೆ ಕೇಳಬಯಸುತ್ತೇನೆ. ರಾಜ್ಯಪಾಲರ ಮಂತ್ರಿಮಂಡಳದ ಸಲಹೆಗನುಸಾರ ತೀರ್ಣಗೊಳಿಸಿದ ಕಾನೂನು ಮತ್ತು ಅಸ್ಸಾಂನ ವಿಧಾನಮಂಡಳವು ತಾನೇ ಅನುಮೋದಿತ ಕಾನೂನು ಇವೆರಡರಲ್ಲಿ ವ್ಯತ್ಯಾಸವೇನಾದರೂ ಇದೆ ಎಂದು ಅವರು ಭಾವಿಸುತ್ತಾರೆಯೇ? ನನ್ನ ಕಾರ್ಯ ಯೋಜನೆಯು, ಮೂಲ ಕಾರ್ಯಾಲೋಚನೆಯ ಅಂಶಗಳು ಎಂದರೆ ಬುಡಕಟ್ಟು ಜನಗಳಿಗೆ ನಿರ್ದಿಷ್ಟ ವಿಷಯಗಳಲ್ಲಿ ಕೆಲವು ಕಾನೂನುಗಳನ್ನು ರಚಿಸಿಕೊಳ್ಳಲು ಸಂವಿಧಾನ ದ್ವಾರಾ ಪ್ರದತ್ತವಾದ ಅಂತರ್ನಿಹಿತವಾದ ಒಂದು ಹಕ್ಕು ಇರಬೇಕು ಎಂಬ ಅಂಶಗಳಿಗೆ ಸುಸಂಗತ ಆಗಿದೆಯೆಂದು ನಾನು ಭಾವಿಸಿದ್ದೇನೆ. ವಸ್ತು ಸ್ಥಿತಿ ಹಾಗೆ ಇರುವಾಗ, ನನ್ನ ಪ್ಯಾರಾ (೩) ಮೂಲ ಕಾರ್ಯಯೋಜನೆಗೆ ಹೆಚ್ಚು ಸುಸಂಗತವಾಗಿರುತ್ತದೆ ಮತ್ತು ರಾಜ್ಯಪಾಲರು ಯಾವುದೇ ಕಾನೂನನ್ನು ಅಂಗೀಕರಿಸಬೇಕೋ ಅಥವಾ ಅಂಗೀಕರಿಸಬಾರದೋ ಎಂಬ ವಿಚಾರದಲ್ಲಿ ಅವರಿಗೆ ಸಲಹೆ ನೀಡುವ ಅಧಿಕಾರವನ್ನು ಅಸ್ಸಾಂ ಮಂತ್ರಿಮಂಡಳಕ್ಕೇ ಕೊಡುತ್ತದೆ. ಇದರಲ್ಲಿ ವಿಧಾನಮಂಡಳದ ಮಧ್ಯಪ್ರದೇಶವು ಅನಾವಶ್ಯಕ.

**ಶ್ರೀ ರೋಹಿಣಿಕುಮಾರ್ ಚೌಧುರಿ:** ನಾನು ಡಾ. ಅಂಬೇಡ್ಕರ್ ಅವರ ವಿವರಣೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ, ನಾನು ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಸಿದ್ಧನಿದ್ದೇನೆ. ನನ್ನ ಅರ್ಥವೆಂದರೆ, ರಾಜ್ಯಪಾಲರು ಮಂತ್ರಿಮಂಡಳದ ಸಲಹೆಯನ್ನು ಪಡೆಯಬೇಕಾಗಿರುವಲ್ಲಿ ಆಗ ನನ್ನ ಆಕ್ಷೇಪವೇನೂ ಇಲ್ಲ. ಮಂತ್ರಿಮಂಡಳದ ಸಲಹೆ ಎಂದರೆ, ಸದನಕ್ಕೆ ವಿಷಯವನ್ನು ಚರ್ಚಿಸಲು ಅವಕಾಶವನ್ನು ಕೊಟ್ಟ ಹೊರತು ಮಂಡಳವು ಅಂಥ ಯಾವುದೇ ಕ್ರಮ ಕೈಗೊಳ್ಳುವಂತಿಲ್ಲ ಎಂದು ಅರ್ಥವಾಗುವುದಾದರೆ, ಆಗ, ನಾನು ಬಯಸುವುದೂ ಒಂದೇ. ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್ ಅವರು ಬಯಸುವುದೂ ಒಂದೇ ಎಂದು ಭಾವಿಸುತ್ತೇನೆ. ಆ ಸಂದರ್ಭದಲ್ಲಿ ನಾನು ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತೇನೆ.

---

* ಸಿ.ಎ.ಡಿ. ಸಂ. IX, ೬ನೇ ಸೆಪ್ಟೆಂಬರ್ ೧೯೪೯, ಪುಟ ೧೦೩೧.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ನಾನು ಹೇಳಿದ್ದಕ್ಕಿಂತ ಹೆಚ್ಚಾಗಿ ತಿಳಿದುಕೊಂಡಿರುವ ಹಾಗೆ ಕಾಣುತ್ತದೆ. ಅವರಿಗೆ ಆ ಭರವಸೆಯನ್ನು ನಾನು ಕೊಡಲು ಸಿದ್ಧನಿಲ್ಲ.

**(ತಿದ್ದುಪಡಿಯನ್ನು ನಿರಾಕರಿಸಲಾಯಿತು. ಹಾಗೆ ತಿದ್ದುಪಡಿಯಾದ ಪ್ಯಾರಾ ೩ ಅನ್ನು ಅನುಸೂಚಿಗೆ ಸೇರಿಸಲಾಯಿತು.)**

## ಪ್ಯಾರಾ ೪

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪ್ಯಾರಾ ೪ರ ಉಪಪ್ಯಾರಾ (೧)ರಲ್ಲಿ "ಅಥವಾ ಈ ಅನುಸೂಚಿಯ ಪ್ಯಾರಾ ೩ರ ಅಡಿಯಲ್ಲಿ ಮಾಡಲಾದ ಕಾನೂನು ದ್ವಾರಾ ಉದ್ಭವಿಸಬಹುದಾದಂಥ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು.

ಅವು ಅನಗತ್ಯವಾಗಿರುತ್ತವೆ.

ಸ್ವಾಮಿ, ಇನ್ನೂ ಮಂಡಿಸುತ್ತೇನೆ.

**ಪ್ಯಾರಾ ೪ರ ಉಪಪ್ಯಾರಾ (೨)ರ ತರುವಾಯ ಈ ಮುಂದಿನ ಪ್ಯಾರಾವನ್ನು ಸೇರಿಸತಕ್ಕದ್ದು.**

(೩) ಅಸ್ಸಾಂನ ಉಚ್ಚನ್ಯಾಯಾಲಯವು ರಾಜ್ಯಪಾಲರು ಆದೇಶದ್ವಾರಾ ಕಾಲಕಾಲಕ್ಕೆ ನಿರ್ದಿಷ್ಟಪಡಿಸ ಬಹುದಾದಂತೆ ಈ ಪ್ಯಾರಾದ (೨) ಉಪಪ್ಯಾರಾ (೨)ರ ಉಪಬಂಧಗಳು ಅನ್ವಯವಾಗುವಂಥ ದಾವೆಗಳಲ್ಲಿ ಮತ್ತು ಪ್ರಕರಣಗಳಲ್ಲಿ ಕ್ಷೇತ್ರಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು."

ಈ ತಿದ್ದುಪಡಿಯು ಒಂದು ಮಹತ್ವಪೂರ್ಣ ಬದಲಾವಣೆಯನ್ನು ಮಾಡುತ್ತದೆ. ಮೂಲದಲ್ಲಿ, ಪ್ಯಾರಾ ೪ರ ಉಪಪ್ಯಾರಾ (೨)ರ ಅಡಿಯಲ್ಲಿ ಜಿಲ್ಲಾ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿತ್ತು. ಈಗ, ಆ ತೀರ್ಮಾನಗಳು ಉಚ್ಚ ನ್ಯಾಯಾಲಯದ ಮತ್ತು ಸರ್ವೋಚ್ಚ ನ್ಯಾಯಾಲಯದ ಕ್ಷೇತ್ರಾಧಿಕಾರಕ್ಕೆ ಒಳಪಟ್ಟಿರತಕ್ಕದ್ದು ಎಂದು ಉಪಬಂಧ ಕಲ್ಪಿಸಿದ್ದೇನೆ. ಮತ್ತು ಈ ಉಪಬಂಧವು ಅಗತ್ಯವಾಗಿತ್ತು.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ನನ್ನ ಮಾನ್ಯ ಸ್ನೇಹಿತರು ನನಗೆ ಈ ಪ್ರಶ್ನೆಗಳನ್ನು ಹಾಕಿದ್ದರಿಂದ ನಾನು ಒಂದಿಷ್ಟು ಚಕಿತನಾಗಿದ್ದೆನು. ಅವರು ಆ ಪ್ರಶ್ನೆಗಳಿಗೆ ತಾವೇ ಉತ್ತರ ಕಂಡುಕೊಳ್ಳ ಬಹುದಾಗಿತ್ತು ಎಂದು ನನ್ನ ಅನಿಸಿಕೆ. ಆದರೆ ಈಗ ಅವರು ಆ ಪ್ರಶ್ನೆಗಳನ್ನು ನನಗೆ ಹಾಕಿದ್ದಾರೆ. ನಾನು ಉತ್ತರ ಕೊಡುತ್ತೇನೆ. ಬುಡಕಟ್ಟು ಪ್ರದೇಶಗಳಲ್ಲಿ ಸ್ಥಾಪಿಸಲಾಗುವ ನ್ಯಾಯಾಲಯಗಳಲ್ಲಿ ಲಾಯರುಗಳಿಗೆ ಹಾಜರಾಗಲು ಅನುಮತಿ ನೀಡಲಾಗುವುದೋ ಹೇಗೆ ಎಂಬ ಮೊದಲನೆಯ ಪ್ರಶ್ನೆಗೆ ಸಂಬಂಧಿಸಿದಂತೆ, ಉತ್ತರ ಸರಳವಾಗಿದೆ. ಮೊದಲಲ್ಲಿ, ಪ್ರಾಂತೀಯ ಸರ್ಕಾರಗಳು, ವೃತ್ತಿಗಳಿಗೆ ಸಂಬಂಧಪಟ್ಟ ಪಟ್ಟಿ IIIರ ನಮೂದಿನ ಅಡಿಯಲ್ಲಿ ಕಾನೂನು ವೃತ್ತಿಗೆ ಸಂಬಂಧಪಟ್ಟ ಹಾಗೆ ಯಾವುದೇ ಕಾನೂನು ರಚಿಸಲು ಅಧಿಕಾರ ಹೊಂದಿರುತ್ತೆ ಮತ್ತು ಆ ಸರ್ಕಾರಗಳು ಆ ಕಾನೂನಿನ ಅಡಿಯಲ್ಲಿ, ಸ್ವಾಯತ್ತ ಜಿಲ್ಲೆಗಳು ಎಂದು

---

* ಸಿ.ಎ.ಡಿ. ಸಂ. IX, ೬ನೇ ಸೆಪ್ಟೆಂಬರ್ ೧೯೪೯, ಪುಟ ೧೦೩೩.

** ಅದೇ, ಪುಟ ೧೦೩೫–೧೦೩೬.

ಕರೆಯಲಾಗುವ ಜಿಲ್ಲೆಗಳಲ್ಲಿನ ನ್ಯಾಯಾಲಯಗಳಲ್ಲಿ ಲಾಯರುಗಳು ಹಾಜರಿರಲು ಹಕ್ಕು ಇರತಕ್ಕದ್ದು ಎಂದು ಉಪಬಂಧಿಸಿದರೆ (ವ್ಯವಸ್ಥೆ ಮಾಡಿದರೆ) ಆಗ ಆ ಕಾನೂನು, ಅದು ಅನ್ವಯವಾಗಬಾರದು ಎಂದು ರಾಜ್ಯಪಾಲರು ಆಲೋಚಿಸದ ಹೊರತು, ಅನ್ವಯವಾಗತಕ್ಕದ್ದು. ಆದ್ದರಿಂದ, ಆ ವಿಷಯ ಸ್ಪಷ್ಟವಾಗಿದೆ.

ಈ ಪ್ಯಾರಾದ ಅಡಿಯಲ್ಲಿ ಸೃಜಿಸಲಾದ ನ್ಯಾಯ ಮಂಡಳಿಗಳ ತೀರ್ಮಾನಗಳ ವಿರುದ್ಧ ಸಲ್ಲಿಸಬಹುದಾದ ಅಪೀಲುಗಳಿಗೆ ಸಂಬಂಧಪಟ್ಟ ಹಾಗೆ ಉತ್ತರವು ಸರಳವಾಗಿದೆ. ಈ ಪ್ಯಾರಾದಲ್ಲಿ, ಅಪೀಲು ನ್ಯಾಯಾಲಯವನ್ನು ಏರ್ಪಡಿಸಬೇಕು ಎಂದು ಉಪಬಂಧ ಕಲ್ಪಿಸಲಾಗಿದೆ. ಈ ರಾಜ್ಯಪಾಲರು ಅಥವಾ ಪ್ರಾಂತೀಯ ಮಂತ್ರಿಮಂಡಳವು ಹೊಸ ಅಪೀಲು ನ್ಯಾಯಾಲಯವನ್ನು ಸ್ಥಾಪಿಸಬಹುದು ಮತ್ತು ಅಂಥ ಪ್ರಸಂಗದಲ್ಲಿ ಅಪೀಲುಗಳು ಅಂಥ ನ್ಯಾಯಾಲಯಕ್ಕೆ ಹೋಗುತ್ತವೆ ಅಥವಾ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯವು ಅಪೀಲು ನ್ಯಾಯಾಲಯ ಎಂದು ಘೋಷಿಸಬಹುದು. ಮತ್ತು ಆ ಪ್ರಸಂಗದಲ್ಲಿ ಆ ನ್ಯಾಯಾಲಯವು IIIನೆಯ ಪಂಚಾಯತಿಗಳು ಮತ್ತು ಇತರ ನ್ಯಾಯಾಲಯಗಳು ಮಾಡಿದ ತೀರ್ಮಾನಗಳ ವಿರುದ್ಧ ಸಲ್ಲಿಸಲಾಗುವ ಅಪೀಲುಗಳನ್ನು ಸುನಾವಣೆ ಮಾಡಬಹುದು. ಆದ್ದರಿಂದ ಅಲ್ಲಿ ಕೂಡ ಅಪೀಲಿಗೆ ಅವಕಾಶವುಂಟು. ಈಗ ನನ್ನ ತಿದ್ದುಪಡಿಯ ಪ್ರಕಾರ ಜಿಲ್ಲಾ ಅಪೀಲು ನ್ಯಾಯಾಲಯದ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಥವಾ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

**ಶ್ರೀ ರೋಹಿಣಿಕುಮಾರ್ ಚೌಧುರಿ:** ಈಗ ನಾನು ನಿರ್ದಿಷ್ಟವಾಗಿ ಉಪಪ್ಯಾರಾ (೨)ರ ಈ ಸಾಲುಗಳನ್ನು ಓದಿ ಹೇಳುತ್ತೇನೆ.

"ಸ್ವಾಯತ್ತ ಪ್ರದೇಶದ ಸಲುವಾಗಿ ಪ್ರಾದೇಶಿಕ ಪರಿಷತ್ತು ಅಥವಾ ಪ್ರಾದೇಶಿಕ ಪರಿಷತ್ತು ಈ ಸಂಬಂಧದಲ್ಲಿ ರಚಿಸಿದ ಯಾವುದೇ ನ್ಯಾಯಾಲಯವು ಅಥವಾ ಒಂದು ಸ್ವಾಯತ್ತ ಜಿಲ್ಲೆಯಲ್ಲಿರುವ ಯಾವುದೇ ನ್ಯಾಯಾಲಯವು ಅಥವಾ ಒಂದು ಸ್ವಾಯತ್ತ ಜಿಲ್ಲೆಯಲ್ಲಿರುವ ಯಾವುದೇ ಪ್ರದೇಶದ ಸಂಬಂಧದಲ್ಲಿ ಪ್ರಾದೇಶಿಕ ಪರಿಷತ್ತು ಇಲ್ಲದಿರುವಾಗ ಅಂಥ ಜಿಲ್ಲೆಗಾಗಿ ಜಿಲ್ಲಾ ಪರಿಷತ್ತು ಅಥವಾ ಜಿಲ್ಲಾ ಪರಿಷತ್ತು ಈ ಸಂಬಂಧದಲ್ಲಿ ಸ್ಥಾಪಿಸಿದ ಯಾವುದೇ ನ್ಯಾಯಾಲಯವು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಪಕ್ಷಕಾರರ ನಡುವಣ ದಾವೆಗಳು ಮತ್ತು ಪ್ರಕರಣಗಳ ಸಂಬಂಧದಲ್ಲಿ ಅಪೀಲು ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸತಕ್ಕದ್ದು."

ಪಕ್ಷಕಾರರ ಪೈಕಿ ಒಬ್ಬರು ಪಕ್ಷಕಾರರು ಅನುಸೂಚಿತ ಬುಡಕಟ್ಟುಗಳ ಸದಸ್ಯರಾಗಿಲ್ಲದಿದ್ದ ಸಂದರ್ಭದಲ್ಲಿ ಏನಾಗುವುದು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಒಬ್ಬ ಪಕ್ಷಕಾರ ಬುಡಕಟ್ಟಿಗೆ ಸೇರಿದವನು, ಇನ್ನೊಬ್ಬ ಪಕ್ಷಕಾರನು ಬುಡಕಟ್ಟಿನ ಇತರ ಸಮುದಾಯಕ್ಕೆ ಸೇರಿದವನು. ಇಂಥ ಪಕ್ಷಕಾರನು ಇರುವಾಗ, ಸರ್ವ ಸಾಧಾರಣ ಕಾನೂನು ಅನ್ವಯವಾಗುತ್ತದೆ.

**ಶ್ರೀ ರೋಹಿಣಿಕುಮಾರ್ ಚೌಧುರಿ:** ಹಾಗೆಂದು ಎಲ್ಲಿ ಉಪಬಂಧ ಕಲ್ಪಿಸಿದ್ದೀರ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆ ಮೂಲಕವೇ ಹಾಗೆ ಅರ್ಥವಾಗುತ್ತದೆ. ಈಗಲೂ ಸಹ "ಪಕ್ಷಕಾರರು... ಆಗಿರುವಾಗ"* ಎಂದು ಹೇಳುತ್ತದೆ. ಈ ವಿಚಾರ ನನ್ನ ಸ್ನೇಹಿತರಿಗೆ ಅರ್ಥವಾಗಿದೆ ಎಂದು ಭಾವಿಸಿದ್ದೇನೆ.

---

* ಚುಕ್ಕಿಗಳು ತಡೆಯನ್ನು ಸೂಚಿಸುತ್ತದೆ.

**ಶ್ರೀ ರೋಹಿಣಿಕುಮಾರ್ ಚೌಧುರಿ:** ಎಲ್ಲಿಯೂ ಅಂಥ ಉಪಬಂಧವನ್ನು ಏರ್ಪಡಿಸಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸರ್ವಸಾಧಾರಣ (ಸಾಮಾನ್ಯ) ನ್ಯಾಯಾಲಯದ ಕ್ಷೇತ್ರಾಧಿಕಾರವನ್ನು ಪ್ಯಾರಾ ೪ರಲ್ಲಿ ಉಪಬಂಧಿಸಿರುವ ಮಟ್ಟಿಗೆ ಮಾತ್ರ ತೆಗೆದುಹಾಕಲಾಗಿದೆ. ಇಲ್ಲದಿದ್ದರೆ, ಸಾಮಾನ್ಯ ನ್ಯಾಯಾಲಯಗಳು ಕ್ಷೇತ್ರಾಧಿಕಾರವು ಮುಂದುವರಿಯುತ್ತದೆ. ಆ ಪ್ರದೇಶದಲ್ಲಿ ಇವಷ್ಟೇ ನ್ಯಾಯಾಲಯಗಳಲ್ಲ. ಅಲ್ಲಿ ಪ್ರಾಂತ್ಯದ ಸಾಮಾನ್ಯ ಕಾನೂನಿನ ಆಡಳಿತದ ಸಲುವಾಗಿ ಪ್ರಾಂತ್ಯ ಸರ್ಕಾರಗಳು ಸ್ಥಾಪಿಸಿದ ಇತರ ನ್ಯಾಯಾಲಯಗಳು ಇರುತ್ತವೆ.

**(ಹಾಗೆ ತಿದ್ದುಪಡಿಯಾದ ಪ್ಯಾರಾ ೪ ಅನ್ನು ಅನುಸೂಚಿಗೆ ಸೇರಿಸಲಾಯಿತು.)**

## ಪ್ಯಾರಾ ೯

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿ ಮಂಡಿಸುತ್ತೇನೆ.

"ಪ್ಯಾರಾ ೯ರ ಉಪಪ್ಯಾರಾ (೧)ನ್ನು ಲೋಪಿಸತಕ್ಕದ್ದು."

'ಈ ಪ್ಯಾರಾ ಖನಿಜಗಳ ಪೂರ್ವೇಕ್ಷಣ ಮತ್ತು ನಿಷ್ಕಷಣಗಳ ಸಲುವಾಗಿ ಅಸ್ಸಾಂ ಸರ್ಕಾರವು ನೀಡಿದ ಲೈಸೆನ್ಸುಗಳಿಗೆ ಅಥವಾ ಗುತ್ತಿಗೆಗಳಿಗೆ ಸಂಬಂಧಿಸಿದೆ. ಈ ವಿಷಯವು ಕೇಂದ್ರ ಸರ್ಕಾರ ಬಳಿಯಲ್ಲಿ ಇದೆ. ಆದಕಾರಣ ಈ ಉಪಪ್ಯಾರಾವನ್ನು ಇಲ್ಲಿ ಇಡುವ ಅಗತ್ಯವಿಲ್ಲ.

## ಪ್ಯಾರಾ ೧೦

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪ್ಯಾರಾ ೧೦ರ ಉಪಪ್ಯಾರಾ (೨) ಇದರಲ್ಲಿ ಅಂಥ ವಿನಿಮಯವು ಎಂಬ ಪದಗಳ ಬದಲಾಗಿ ಹಿಂದೆ ಹೇಳಿ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗುವ ಹಾಗೆ ಅಂಥ ವಿನಿಯಮಗಳು ಎಂಬ ಪದಗಳನ್ನು ಸೇರಿಸತಕ್ಕದ್ದು."

ಇದು ಕೇವಲ ಕರಡು ಪ್ರಾರೂಪಣ ಸಂಬಂಧವಾದ ಬದಲಾವಣೆ. ಹಾಗೆಯೇ ಮಂಡಿಸುತ್ತೇನೆ.

"ಪ್ಯಾರಾ ೧೦ರ ಉಪಪ್ಯಾರಾ (೨)ರ ತರುವಾಯ, ಮುಂದಿನ ಉಪಪ್ಯಾರಾವನ್ನು ಸೇರಿಸತಕ್ಕದ್ದು."

"(೩) ಈ ಪ್ಯಾರಾದ ಅಡಿಯಲ್ಲಿ ಮಾಡಲಾದ ಎಲ್ಲ ವಿನಿಮಯಗಳನ್ನು ಆ ಕೂಡಲೇ ರಾಜ್ಯಪಾಲನಿಗೆ ಸಲ್ಲಿಸತಕ್ಕದ್ದು ಮತ್ತು ಅವನ ಸಮ್ಮತಿ ದೊರೆಯುವವರೆಗೆ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ.

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು.)**

* * *

*****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಾನ್ಯ ಸ್ನೇಹಿತರು ಭಯಂಕರವಾಗಿ ಉತ್ತೇಜಿತರಾಗುವಂಥ ವಿಷಯಗಳಿಗೆ ಸಂಬಂಧಿಸಿ ನಾನು ಒಂದೆರಡು ಮಾತುಗಳನ್ನು ಹೇಳಬಹುದೆ? ರಕ್ಷಣೆಗಳ ರೂಪದಲ್ಲಿ ಮೂರು ಸಂಗತಿಗಳಿವೆ. ಅವುಗಳನ್ನು ನನ್ನ ಸ್ನೇಹಿತರು ಗಮನಕ್ಕೆ ತೆಗೆದುಕೊಂಡಿಲ್ಲ.

---

* ಸಿ.ಎ.ಡಿ. ಸಂ. IX, ೬ನೇ ಸೆಪ್ಟೆಂಬರ್ ೧೯೪೯, ಪುಟ ೧೦೩೯.

** ಅದೇ, ಪುಟ ೧೦೪೧.

*** ಅದೇ, ಪುಟ ೧೦೪೦–೧೦೪೨.

ಪ್ಯಾರಾ ೧೦ರ ಮೊದಲನೆಯ ಉಪಬಂಧ ಹೀಗೆ ಹೇಳುತ್ತದೆ. ಪರಂತು ಈ ಪ್ಯಾರಾದ ಅಡಿಯಲ್ಲಿ ಅಂಥ ಯಾವುದೇ ನಿಯಮಗಳನ್ನು ಜಿಲ್ಲಾ ಪರಿಷತ್ತಿನ ಸದಸ್ಯ ಸಂಖ್ಯೆಯ ನಾಲ್ಕರ ಮೂರಕ್ಕೆ ಕಡಿಮೆಯಿಲ್ಲದಷ್ಟು ಬಹುಮತ ದ್ವಾರಾ ತೀರ್ಣಗೊಳಿಸಲಾದ ಹೊರತು, ಮಾಡತಕ್ಕದ್ದಲ್ಲ. ಇದು ಒಂದು ರಕ್ಷೆ. ಎರಡನೆಯ ರಕ್ಷೆಯು ಕೂಡ ಸಂವಿಧಾನದ ೧೮೪ನೇ ಪುಟದಲ್ಲಿ ಇದೆ. ಅದು ಹೀಗೆ ಹೇಳುತ್ತದೆ. "ಅಲ್ಲದೆ ಪರಂತು ಅಂಥ ಯಾವುದೇ ವಿನಿಯಮಗಳನ್ನು ರಚಿಸುವುದಕ್ಕೆ ಮುಂಚಿನ ಕಾಲದಿಂದಲೂ ಜಿಲ್ಲೆಯಲ್ಲಿ ತಮ್ಮ ದಂಧೆಯನ್ನು ನಡೆಸುತ್ತ ಬಂದಿರುವ ಹಣಸಾಲ ಕೊಡುವವನಿಗೆ ಅಥವಾ ವ್ಯಾಪಾರಿಗೆ ಲೈಸೆನ್ಸು ನೀಡಿಕೆಯನ್ನು ಆ ವಿನಿಯಮಗಳ ಪೈಕಿ ಯಾವುದೇ ವಿನಿಯಮದ ಅಡಿಯಲ್ಲಿ ನಿರಾಕರಿಸುವುದು. ಕಾನೂನು ಸಮ್ಮತವಾಗತಕ್ಕದ್ದಲ್ಲ. ಆದ್ದರಿಂದ ಅಸ್ತಿತ್ವದಲ್ಲಿರುವ ಹಕ್ಕುಗಳಿಗೆ ಯಾವುದೇ ಹಾನಿಯುಂಟಾಗಲಿಲ್ಲ.

ನನ್ನ ಸ್ನೇಹಿತರು ಯಾವುದೇ ಗಮನ ನೀಡಲು ನಿರ್ಲಕ್ಷಿಸಿರುವ ಮೂರನೆಯ ಸಂಗತಿ ನಾನು ಮಂಡಿಸಿರುವ ತಿದ್ದುಪಡಿ. ಅಂದರೆ ಈ ಪ್ಯಾರಾದ ಅಡಿಯಲ್ಲಿ ಮಾಡಲಾದ ಎಲ್ಲ ವಿನಿಯಮಗಳನ್ನು ಆ ಕೂಡಲೇ ರಾಜ್ಯಪಾಲರಿಗೆ ಸಲ್ಲಿಸತಕ್ಕದ್ದು ಮತ್ತು ಅದಕ್ಕೆ ಅವರ ಸಮ್ಮತಿ ದೊರೆಯುವ ತನಕ ಅವು ಪರಿಣಾಮಕಾರಿಯಾಗತಕ್ಕದ್ದಲ್ಲ. ಈ ರಕ್ಷೆಗಳು ಇದ್ದೇ ಇವೆ.

ಇನ್ನು, ಕರಡು ರಚನಾ ಸಮಿತಿಯು, ಬ್ರಿಟಿಷ್ ಸರ್ಕಾರವು ಸಹ ಮಾಡಿಲ್ಲದಂಥ ಬರ್ಬರ ಕೃತ್ಯವನ್ನು ಎಸಗಿದ್ದಾರೆ ಎಂಬ ಅವರ ಟಿಪ್ಪಣಿಗಳನ್ನು ಕುರಿತಂತೆ, ಅವರು ಹೊರತುಪಡಿಸಲಾದ ಈ ಪ್ರದೇಶವು ಸಂಪೂರ್ಣವಾಗಿ ರಾಜ್ಯಪಾಲರ ವಿವೇಚನಾಧಿಕಾರದ ವ್ಯಾಪ್ತಿಯಲ್ಲಿ ಇದ್ದಿತು ಎಂಬ ಸಂಗತಿಯನ್ನು ಮರೆತಿದ್ದಾರೆ ಎಂದು ಎತ್ತಿ ತೋರಿಸುತ್ತೇನೆ. ಅದು ಅವರ ತಪ್ಪು. ನಾವು ರಾಜ್ಯಪಾಲರ ವಿವೇಚನಾಧಿಕಾರವನ್ನು ತೆಗೆದು ಹಾಕಿದ್ದೇವೆ. ಈ ರಾಜ್ಯಪಾಲರು ಮಂತ್ರಿಮಂಡಳದ ಸಲಹೆಯ ಮೇರೆಗೆ ಕ್ರಮ ಕೈಗೊಳ್ಳಬೇಕಾಗುತ್ತದೆ. ನಾನು ಕೊಟ್ಟಿರುವ ಈ ವಿವರಣೆಯಿಂದ ನನ್ನ ಸ್ನೇಹಿತ ರೋಹಿಣಿಕುಮಾರ್ ಅವರಿಗೆ ಸಮಾಧಾನ ಆಗಿದೆಯೋ ಇಲ್ಲವೋ?

**ಮಾನ್ಯ ಸದಸ್ಯರು:** ಖಂಡಿತವಾಗಿಯೂ ಸಮಾಧಾನವಾಗಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಏನನ್ನು ಕೊಡಬಹುದೋ ಅದಕ್ಕಿಂತಲೂ ಮಿಗಿಲಾದುದು ನಿಮಗೆ ಬೇಕು ಎಂದು ನಾನು ಬಲ್ಲೆನು. ನೀವು ಹಸಿದ ಡೇವಿಡ್ ಕಾಪರ್ ಫೀಲ್ಡ್‌ನ ಹಾಗೆ ಇನ್ನೂ ಬೇಕು ಗಂಜಿ ಎಂದು ಕೇಳುತ್ತೀರ.

**(ಮೇಲೆ ನಮೂದಿಸಿದ ಡಾ. ಅಂಬೇಡ್ಕರ್ ಅವರ ತಿದ್ದುಪಡಿಯ ಮೂಲಕ ತಿದ್ದುಪಡಿಯಾದ ಪ್ಯಾರಾ ೧೦ನ್ನು ಅನುಸೂಚಿಗೆ ಸೇರಿಸಲಾಯಿತು.)**

* * *

## ಪ್ಯಾರಾ ೧೨

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆದೇಶ ತಪ್ಪಿದ ಮೇಲಣ ನನ್ನ ತಿದ್ದುಪಡಿ ಸಂಖ್ಯೆ ೧೨೮ರ ಕಡೆಗೆ ಸದನದ ಗಮನವನ್ನು ಸೆಳೆಯಬಹುದೆ? ಅದನ್ನು ನಾನು ಮಂಡಿಸಲಿರುವ ನಿಮಿತ್ತ, ನನ್ನ ಸ್ನೇಹಿತರ ತಿದ್ದುಪಡಿಯು ಅನಗತ್ಯವಾಗುತ್ತವೆ.

---

* ಸಿ.ಎ.ಡಿ. ಸಂ. IX, ೬ನೇ ಸೆಪ್ಟೆಂಬರ್ ೧೯೪೯, ಪುಟ ೧೦೪೩.

**ಶ್ರೀ ಕುಲಧರ ಚಾಲಿಹಾ:** ಮೊಟ್ಟ ಮೊದಲ ಬಾರಿಗೆ ಕರಡು ರಚನಾ ಸಮಿತಿಗೆ ಒಂದಿಷ್ಟು ತಿಳಿವಕೆಗೆ ಮೂಡಿತಲ್ಲ ಎಂದು ನನಗೆ ಸಂತೋಷ. ಕಿಂಚಿತ್ ಜ್ಞಾನೋದಯವಾಗಿರುವುದು ಭಾಗ್ಯವೆನ್ನಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಮ್ಮ ವಾದಗಳ ಮೂಲಕ ನಮಗೆ ಮನವರಿಕೆ ಮಾಡಿಕೊಟ್ಟಿದ್ದೇ ಅದಕ್ಕೆ ಕಾರಣ.

ಸ್ವಾಮಿ, ನಾನು ಈಗ ನನ್ನ ತಿದ್ದುಪಡಿ ಸಂಖ್ಯೆ ೧೨೮ ಇದನ್ನು ಮಂಡಿಸುತ್ತೇವೆ.

ಪ್ಯಾರಾ ೧೨ರ (ಬಿ) ಖಂಡದಲ್ಲಿ ಅಂಥ ಜಿಲ್ಲೆಯ ಜಿಲ್ಲಾ ಪರಿಷತ್ತಿನ ಅಥವಾ ಅಂಥ ಪ್ರದೇಶದ ಪ್ರಾದೇಶಿಕ ಪರಿಷತ್ತಿನ ಅನುಮೋದನೆ ಪಡೆದು, ಅಂಥ ನಿರ್ದೇಶನವನ್ನು ಹೊರಡಿಸುವ ಸಲುವಾಗಿ ಸಂದರ್ಭಾನುಸಾರ ಅಂಥ ಜಿಲ್ಲಾ ಪರಿಷತ್ತು ಅಥವಾ ಪ್ರಾದೇಶಿಕ ಪರಿಷತ್ತು ಶಿಫಾರಸ್ಸು ಮಾಡಿ ಗೊತ್ತುವಳಿಯನ್ನು (ನಿರ್ಣಯವನ್ನು) ತೀರ್ಣಗೊಳಿಸಿದ್ದರೆ ಅಧಿಸೂಚನೆಯಲ್ಲಿ "ನಿರ್ದಿಷ್ಟಪಡಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ರಾಜ್ಯಪಾಲರು, ಈ ತಿದ್ದುಪಡಿಯ ಮೂಲಕ, ಜಿಲ್ಲಾ ಪರಿಷತ್ತು ಅಥವಾ ಪ್ರಾದೇಶಿಕ ಪರಿಷತ್ತು ತೀರ್ಣಗೊಳಿಸಬಹುದಾದ ನಿರ್ಣಯಗಳ ಸಂಕೋಲೆಗಳಿಂದ ಬಿಡುಗಡೆ ಪಡೆಯುತ್ತಾನೆ. ಅವರು (ರಾಜ್ಯಪಾಲರು) ಈಗ ಸಂಸತ್ತು ಅಥವಾ ಅಸ್ಸಾಂ ವಿಧಾನಮಂಡಳ ದ್ವಾರಾ ತೀರ್ಣಗೊಂಡ ಯಾವುದೇ ನಿರ್ದಿಷ್ಟ ಕಾನೂನು ಆ ಪ್ರದೇಶಕ್ಕೆ ಅನ್ವಯವಾಗಬೇಕೋ ಅಥವಾ ಅನ್ವಯವಾಗಕೂಡದೋ ಎಂಬ ಬಗ್ಗೆ ಮಂತ್ರಿ ಮಂಡಳದ ಸಲಹೆ ಪಡೆದು ಆ ಮೇರೆಗೆ ಕ್ರಮ ಕೈಗೊಳ್ಳಬಹುದು.

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ಹಾಗೆ ತಿದ್ದುಪಡಿಯಾದ ಪ್ಯಾರಾ ೧೨ನ್ನು ಅನುಸೂಚಿಗೆ ಸೇರಿಸಲಾಯಿತು.)**

## ಪ್ಯಾರಾ ೧೩

*__ಮಾನ್ಯ ಸಭಾಧ್ಯಕ್ಷರು:__ ತಿದ್ದುಪಡಿ ಸಂಖ್ಯೆ ೧೨೯

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ, ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪ್ಯಾರಾ ೧೩ ಇದರಲ್ಲಿ "ಅಸ್ಸಾಂ ರಾಜ್ಯವು..." ಎಂಬ ಪದಗಳ ತರುವಾಯ "ಅಂಥ ವಿಚಾರ ವಿಮರ್ಶೆಗಾಗಿ ಮೊದಲು ಜಿಲ್ಲಾ ಪರಿಷತ್ತಿನ ಮುಂದೆ ಅಂಥ ವಿಚಾರವಿಮರ್ಶೆಯ ತರುವಾಯ ಎಂಬ ಪದಗಳನ್ನು ಸೇರಿಸತಕ್ಕದ್ದು."

* * *

**ಶ್ರೀ ರೋಹಿಣಿಕುಮಾರ್ ಚೌಧುರಿ:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿ ಮಂಡಿಸಲೆ?

ಮೇಲ್ಕಂಡ ತಿದ್ದುಪಡಿ ಸಂಖ್ಯೆ ೧೨೯ರಲ್ಲಿ, ಪ್ಯಾರಾ ೧೩ ಇದರಲ್ಲಿ "ಮತ್ತು ಅಂಥ ವಿಚಾರ ವಿಮರ್ಶೆಯ ತರುವಾಯ (ಸೇರಿಸಲು ಪ್ರಸ್ತಾವಿಸಿರುವ) "ಸ್ವಾಯತ್ತ ಜಿಲ್ಲೆಗಳಿಗೆ ಸಂಬಂಧಿಸಿದ ಅಂಥ ಪ್ರತ್ಯೇಕ ವಿವರಣೆಯು ರಾಜ್ಯ ವಿಧಾನಮಂಡಳವು ಮಾಡಬಹುದಾದಂಥ ಮಾರ್ಪಾಟುಗಳಿಗೆ ಮತ್ತು ವ್ಯತ್ಯಾಸಗಳಿಗೆ ಒಳಪಟ್ಟಿರತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು.

* * *

---

* ಸಿ.ಎ.ಡಿ. ಸಂ. IX, ೬ನೇ ಸೆಪ್ಟೆಂಬರ್ ೧೯೪೯, ಪುಟ ೧೦೪೪.

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್, ಶ್ರೀ ರೋಹಿಣಿಕುಮಾರ್ ಅವರ ತಿದ್ದುಪಡಿಯ ಬಗ್ಗೆ ನೀವು ಏನನ್ನಾದರೂ ಹೇಳಬಯಸುತ್ತೀರ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ದೂರು ಸಲ್ಲಿಸಬೇಕಾಗಿದೆ. ಮೂಲ ಕರಡಿನಲ್ಲಿ "ಪ್ರಕರಣ ೧೭೭" ಎಂಬ ಪದಗಳಿದ್ದರೂ, ನನ್ನ ಸ್ನೇಹಿತ ರೋಹಿಣಿಕುಮಾರ್ ಚೌಧುರಿ ಅವರು ಸಂಖ್ಯೆ ೧೩೦ ಈ ತಿದ್ದುಪಡಿಯನ್ನು ಮಂಡಿಸುವುದು ಯಥೋಚಿತ ಎಂದು ಭಾವಿಸಿದ್ದಾರೆ. ಆ ತಿದ್ದುಪಡಿಯನ್ನು ೧೭೭ರ ಅರ್ಥವ್ಯಾಪ್ತಿಯಲ್ಲಿ ವಿತ್ತವಿವರಣೆ ಎಂದು ಭಾವಿಸುವುದರ ಪರಿಣಾಮವೆಂದರೆ ಅದನ್ನು ಅಸ್ಸಾಂ ವಿಧಾನಮಂಡಳವು ಚರ್ಚಿಸುತ್ತದೆ ಮತ್ತು ಅದರ ಮೇಲೆ ಮತ ನೀಡುತ್ತದೆ. ತಿದ್ದುಪಡಿಗಳನ್ನು ಮಂಡಿಸಬಹುದು ಮತ್ತು ಅವುಗಳಿಗೆ ಯಥೋಚಿತ (ಸಮುಚಿತ) ಕಾನೂನು ಅನ್ವಯಿಸುವುದು. ಆದರೆ ಅಸ್ಸಾಂ ವಿಧಾನಮಂಡಳವು ಅದನ್ನು ಪರ್ಯಾಲೋಚಿಸುವುದಕ್ಕೆ ಮುನ್ನ, ಜಿಲ್ಲಾ ಪರಿಷತ್ತುಗಳಿಗೆ ಆ ಹಣವನ್ನು ಹೇಗೆ ಹಂಚಬೇಕು ಎಂಬ ಬಗ್ಗೆ ತಮ್ಮ ನಿಲುವನ್ನು ಹೇಳಲು ಒಂದು ಅವಕಾಶವನ್ನು ಕೊಡುವುದು ಸಮಂಜಸವಾದ ಸಂಗತಿಯಷ್ಟೆ. ಮಾನ್ಯ ಸ್ನೇಹಿತರಿಗೆ ಸಮಾಧಾನ (ತೃಪ್ತಿ) ಆಗಿದೆಯೆಂದು ಭಾವಿಸುತ್ತೇನೆ.

**(ಹಾಗೆ ತಿದ್ದುಪಡಿಯಾದ ಪ್ಯಾರಾ ೧೩ನ್ನು ಅನುಸೂಚಿಗೆ ಸೇರಿಸಲಾಯಿತು.)**

* * *

## ಪ್ಯಾರಾ ೧೪

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ಈ ತಿದ್ದುಪಡಿಯು ಅಗತ್ಯ ಎಂದು ನಾನು ಭಾವಿಸುವುದಿಲ್ಲ...

**ಮಾನ್ಯ ಸಭಾಧ್ಯಕ್ಷರು:** ಮೊದಲು ನಿಮ್ಮದೇ ಕೆಲವು ತಿದ್ದುಪಡಿಗಳನ್ನು ಮಂಡಿಸಬೇಕಾಗಿದೆಯಲ್ಲವೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು ಸ್ವಾಮಿ, ನಾನು ಅವುಗಳನ್ನು ಮೊದಲು ಮಂಡಿಸುತ್ತೇನೆ.

"ಪ್ಯಾರಾ ೧೪ರ ಉಪಪ್ಯಾರಾ (೧)ರಲ್ಲಿ "ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗಳು" ಎಂಬ ಪದಗಳ ತರುವಾಯ "ಈ ಅನುಸೂಚಿಯ ಪ್ಯಾರಾ (೧) ಉಪಪ್ಯಾರಾ (೩)ರ (ಎ), (ಸಿ) (ಎಫ್) (ಇ) ಈ ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳೂ ಸೇರಿದಂತೆ" ಎಂಬ ಪದಗಳ, ಆವರಣಗಳನ್ನು ಅಕ್ಷರಗಳನ್ನು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು."

"ಪ್ಯಾರಾ ೧೪ರ ಉಪಪ್ಯಾರಾ (೧)ರಲ್ಲಿ "ಸ್ವಾಯತ್ತ ಜಿಲ್ಲೆಗಳು" ಎಂಬ ಪದಗಳ ತರುವಾಯ, ಅವು ಬರುವ ಎರಡು ಸ್ಥಳಗಳಲ್ಲಿ ಮತ್ತು ಸ್ವಾಯತ್ತ ಜಿಲ್ಲೆಗಳು ಎಂಬ ಪದಗಳನ್ನು ಸೇರಿಸತಕ್ಕದ್ದು.

"ಪ್ಯಾರಾ ೧೪ರ ಉಪಪ್ಯಾರಾ ೯೧)ರ (ಎ) ಮತ್ತು (ಬಿ) ಖಂಡಗಳಲ್ಲಿ "ಜಿಲ್ಲೆಗಳು" ಎಂಬ ಪದಗಳ ತರುವಾಯ, ಅದು ಬರುವ ಎರಡು ಸ್ಥಳಗಳಲ್ಲಿ ಮತ್ತು ಪ್ರದೇಶಗಳು ಎಂಬ ಪದಗಳನ್ನು ಸೇರಿಸತಕ್ಕದ್ದು.

"ಪ್ಯಾರಾ ೧೪ರ ಉಪಪ್ಯಾರಾ (೩) ಇದರಲ್ಲಿ "ಸ್ವಾಯತ್ತ ಜಿಲ್ಲೆಗಳು" ಎಂಬ ಪದಗಳ ತರುವಾಯ ಮತ್ತು 'ಸ್ವಾಯತ್ತ ಪ್ರದೇಶಗಳು' ಎಂಬ ಪದಗಳನ್ನು ಸೇರಿಸತಕ್ಕದ್ದು.

ಈ ತಿದ್ದುಪಡಿಗಳ ಪೈಕಿ ಕೆಲವು ಪರಿಣಾಮ ಸ್ವರೂಪದವುಗಳು. ಉಳಿದವುಗಳು ಕೇವಲ

---

* ಸಿ.ಎ.ಡಿ. ಸಂ. IX, ೬ನೇ ಸೆಪ್ಟೆಂಬರ್ ೧೯೪೯, ಪುಟ ೧೦೪೬–೧೦೪೮.

ಶಾಬ್ದಿಕವಾಗಿರುತ್ತವೆ.

**ಶ್ರೀ ಕುಲಧರ ಚಾಲಿಹಾ:** ಅಧ್ಯಕ್ಷರೆ, ತಮ್ಮ ಅನುಮತಿ ಕೋರಿ ತಿದ್ದುಪಡಿ ಮಂಡಿಸುತ್ತೇನೆ.

ತಿದ್ದುಪಡಿಗಳ ಪಟ್ಟಿ(ಸಂಪುಟ II)ಯ ತಿದ್ದುಪಡಿಗಳು ಸಂಖ್ಯೆ ೩೫೦೦ ಮತ್ತು ೩೫೦೧ ಇವುಗಳ ಸಂಬಂಧದಲ್ಲಿ, ಪ್ಯಾರಾ ೧೪ರ ಉಪಪ್ಯಾರಾ (೧)ರ ಖಂಡ (ಸಿ)ದ ತರುವಾಯ, ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು.

(ಡಿ) ಯಾವುದೇ ಜಿಲ್ಲಾ ಅಥವಾ ಪ್ರಾದೇಶಿಕ ಪರಿಷತ್ತಿನಲ್ಲಿ ಯಾವುದೇ ಬುಡಕಟ್ಟು ಪ್ರದೇಶದ ಸೇರ್ಪಡೆ ಮಾಡುವುದು ಅಥವಾ ಅಲ್ಲಿಂದ ಯಾವುದೇ ಬುಡಕಟ್ಟು ಪ್ರದೇಶವನ್ನು ಹೊರತುಪಡಿಸುವುದು... ಕರಡು ರಚನಾ ಸಮಿತಿಯು, ಇದನ್ನು ಅಂಗೀಕರಿಸಿ ನನ್ನ ತಿದ್ದುಪಡಿಯನ್ನು (ಡಿ) ಖಂಡದಲ್ಲಿ ಸೇರಿಸುವುದೆಂದು ಮತ್ತು ಆ ಮೂಲಕ ಆ ಖಂಡವು ಬಹಳಷ್ಟು ಸುಧಾರಿಸುವುದೆಂದು ನಾನು ನಂಬಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ಅನುಸೂಚಿಯ ಪ್ಯಾರಾ ೧೪ಕ್ಕೆ ನಾನು ಮಂಡಿಸಿದ ತಿದ್ದುಪಡಿಗೆ ನನ್ನ ಮಾನ್ಯ ಸ್ನೇಹಿತರ ಗಮನ ಸೆಳೆಯಬಯಸುತ್ತೇನೆ. ಅದರಲ್ಲಿ ಉಪಪ್ಯಾರಾ (೩) ಇದರ ಉಪಬಂಧಗಳನ್ನು ಕೆಲವು ವಿಚಾರಗಳಲ್ಲಿ ವ್ಯತ್ಯಾಸಗೊಳಿಸಲಾಗಿದೆ. ಈಗ ಅವರು ಉಪಬಂಧಿಸಲು ಉದ್ದೇಶಿಸಿರುವ ವಿಷಯವನ್ನು ಆಯೋಗದ ಶಿಫಾರಸುಗಳ ಮೇಲೆ ವಿನಿಯಮಿಸಬೇಕಾಗುತ್ತದೆ. ಈ ಪ್ಯಾರಾವನ್ನು ಈಗಾಗಲೇ ತೀರ್ಣಗೊಳಿಸಲಾಗಿದೆ. ಈಗ ಅದು ಅಗತ್ಯವಿಲ್ಲ.

**ಶ್ರೀ ಕುಲಧರ ಚಾಲಿಹಾ:** ಅದು ತಿದ್ದುಪಡಿ ಸಂಖ್ಯೆ ೯೯ ಅಲ್ಲವೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ಅದು ತಿದ್ದುಪಡಿ ಸಂಖ್ಯೆ ೯೯.

**ಶ್ರೀ ಕುಲಧರ ಚಾಲಿಹಾ:** ಆದರೂ ನೀವು ಇಲ್ಲಿ ಪ್ಯಾರಾ ೧೪ರ (ಎ), (ಬಿ) ಮತ್ತು (ಸಿ) ಖಂಡಗಳಿಗೆ ಆಯೋಗವನ್ನು ಪರಿಮಿತಗೊಳಿಸಿದ್ದೀರಿ. ಇದೇ ನನಗೆ ಸಮಸ್ಯೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ತೀರ್ಣವಾಗಿರುವ ಸಮಸ್ಯೆ.

**ಶ್ರೀ ಕುಲಧರ ಚಾಲಿಹಾ:** ಅದನ್ನು ಈಗಾಗಲೇ ತೀರ್ಣಗೊಳಿಸಲಾಗಿದೆ. ಆದರೆ ನೀವು ಅದನ್ನು (ಎ), (ಬಿ) ಮತ್ತು (ಸಿ)ಗಳಲ್ಲಿ ಪರಿಮಿತಗೊಳಿಸಿದ್ದೀರಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಸ್ನೇಹಿತರಿಗೆ ವಿವರಿಸಿ ಹೇಳುವುದಾದರೆ, ಬುಡಕಟ್ಟು ಪ್ರದೇಶಗಳಲ್ಲಿ ಸೇರಿಸುವ ಮೂಲಕವಾಗಲಿ ಅಥವಾ ಹೊರತುಪಡಿಸುವ ಮೂಲಕವಾಗಲಿ ಆಗತಕ್ಕ ವ್ಯತ್ಯಾಸಗಳನ್ನು ಕುರಿತು ವ್ಯವಹರಿಸುವ ಉಪಪ್ಯಾರಾ (೩)ರ ಕಾರ್ಯಾಚರಣೆಯು ಎರಡು ಪ್ರವರ್ಗಗಳಲ್ಲಿ ವಿಂಗಡಿಸಲ್ಪಟ್ಟಿದೆ. ಮೊದಲನೆಯದು: ಸದರಿ ತಃಖ್ತೆಯ ಯಾವುದೇ ಭಾಗದಲ್ಲಿ ಸೇರ್ಪಡೆ, ಅದು (ಎ). ಅದನ್ನು ಪ್ರಾರಂಭದಲ್ಲಿಯೇ ರಾಜ್ಯಪಾಲನು ಮಾಡಬಹುದು. ಆ ಬಗ್ಗೆ ಆಯೋಗದ ಯಾವುದೇ ಶಿಫಾರಸು ಅಗತ್ಯವಿಲ್ಲ. ಆದರೆ, ನನ್ನ ತಿದ್ದುಪಡಿಯ ಪ್ರಕಾರ (ಬಿ), (ಸಿ) ಮತ್ತು (ಇ) ಇವುಗಳ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕಾದರೆ, ಆಗ ಆಯೋಗದ ಶಿಫಾರಸ್ಸು ಅಗತ್ಯವಿರುತ್ತದೆ. ಮತ್ತು ನಾನು ಹೇಳಿದ ಹಾಗೆ ಸದನದಲ್ಲಿ ಆ ಭಾಗವನ್ನು ಈಗಾಗಲೇ ತೀರ್ಣಗೊಳಿಸಲಾಗಿದೆ. ಆ ವಿಷಯವನ್ನು ಪುನಃ ತೆರೆಯಲು ಸಾಧ್ಯವಿಲ್ಲ.

**ಶ್ರೀ ಕುಲಧರ ಚಾಲಿಹಾ:** ನೀವು, ಈ ಅನುಸೂಚಿಯ ಪ್ಯಾರಾ ೧೪ರ ಉಪಪ್ಯಾರಾ (೧)ರ ಅಡಿಯಲ್ಲಿ ನೇಮಕಗೊಂಡ ಆಯೋಗದ ಶಿಫಾರಸ್ಸಿಗೆ ಒಳಪಡಿಸಿ, ಅದನ್ನು ಪುನಃ ಪರಿಮಿತಗೊಳಿಸಿದ್ದೀರಿ.

ಹೌದು, ನೀವು ತಿದ್ದುಪಡಿ ಸಂಖ್ಯೆ ೯೯ ಅನ್ನು ಒದಗಿಸಿದ್ದೀರಿ. ಆದರೆ ಅದನ್ನು ಪುನಃ ಪರಿಮಿತಿಗೊಳಿಸಿದ್ದೀರಿ. ಡಾ. ಅಂಬೇಡ್ಕರ್ ಅವರು ಆ ಬಗ್ಗೆ ಏನು ಹೇಳುತ್ತಾರೆ ಕೇಳಬಯಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಪ್ಯಾರಾ ೧೪ರ ಮೂಲಕ ಪರಿಮಿತವಾಗಿಲ್ಲ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಮಾನ್ಯ ಸದಸ್ಯರು ೧೩೪ ಸಂಖ್ಯೆಯ ತಿದ್ದುಪಡಿಯನ್ನು ಗಮನಿಸಬೇಕು. ಆ ತಿದ್ದುಪಡಿಯು, ಪ್ಯಾರಾ ೧೪ರ ಉಪಪ್ಯಾರಾ (೧)ರಲ್ಲಿ "ರಾಜ್ಯಗಳಲ್ಲಿನ ಸ್ವಾಯತ್ತ ಜಿಲ್ಲೆಗಳು" ಎಂಬ ಪದಗಳ ತರುವಾಯ "ಈ ಅನುಸೂಚಿಯ ಪ್ಯಾರಾ ೧ರ ಉಪಪ್ಯಾರಾ (೧)ರ (ಬಿ), (ಸಿ), (ಡಿ) ಮತ್ತು (ಇ) ಈ ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳೂ ಸೇರಿದಂತೆ ಎಂಬ ಪದಗಳನ್ನು ಸೇರಿಸಲು ಉದ್ದೇಶಿಸುತ್ತದೆ. ಅಂದರೆ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಇರುವ ಉದ್ದೇಶವು ಈ ತಿದ್ದುಪಡಿಯ ಮೂಲಕ ಈಡೇರಿದಂತಾಗಿದೆ ಎಂದು ಅವರಿಗೆ ಕಂಡುಬರುತ್ತದೆ.

**ಪಂಡಿತ್ ಹೃದಯನಾಥ್ ಕುಂಝ್ರು** (ಯು.ಪಿ. ಸಾಮಾನ್ಯ): ಇದನ್ನು ಅರ್ಥ ಮಾಡಿಕೊಳ್ಳುವಲ್ಲಿ ನನಗೆ ಸ್ವಲ್ಪ ತೊಂದರೆಯಾಗುತ್ತಿದೆ. ಶ್ರೀ ಚಾಲಿಹಾ ಅವರು ಮಂಡಿಸಿದ ತಿದ್ದುಪಡಿಯ ಪ್ರಕಾರ ರಾಜ್ಯಪಾಲರಿಂದ ನೇಮಕಗೊಳ್ಳುವ ಆಯೋಗವು ಯಾವುದೇ ಹೊಸ ಬುಡಕಟ್ಟು ಪ್ರದೇಶದ ಸೇರ್ಪಡೆಯನ್ನಷ್ಟೇ ಅಲ್ಲದೆ, ಅಂಥ ಪ್ರದೇಶವನ್ನು ಹೊರತುಪಡಿಸುವುದನ್ನು ಸಹ ಪರ್ಯಾಲೋಚಿಸಬೇಕು. ಒಂದು ಪ್ರದೇಶವನ್ನು ಇನ್ನೊಂದು ಬುಡಕಟ್ಟು ಪ್ರದೇಶದಲ್ಲಿ ಸೇರಿಸದೆ ಅಸ್ತಿತ್ವದಲ್ಲಿರುವ ಬುಡಕಟ್ಟು ಪ್ರದೇಶದಿಂದ ಹೊರತುಪಡಿಸಬಹುದು. ಆ ಬಗ್ಗೆ ಇಲ್ಲಿ ಯಾವುದೇ ಉಪಬಂಧವಿಲ್ಲ. ಡಾ. ಅಂಬೇಡ್ಕರ್ ಅವರ ೯೯ ಸಂಖ್ಯೆಯ ತಿದ್ದುಪಡಿಯ ಮೂಲಕ ಉಪಬಂಧಿಸಲಾಗುವುದಿಲ್ಲ. ಏಕೆಂದರೆ ಒಂದು ಪ್ರದೇಶವನ್ನು ಒಂದು ಬುಡಕಟ್ಟು ಪ್ರದೇಶದಿಂದ ಹೊರತುಪಡಿಸಿ ಇನ್ನೊಂದು ಬುಡಕಟ್ಟು ಪ್ರದೇಶದಲ್ಲಿ ಸೇರಿಸಬಹುದು. ಆದರೆ ಒಂದು ಪ್ರದೇಶವನ್ನು ಪೂರ್ಣವಾಗಿ ಹೊರತುಪಡಿಸುವ ವಿಷಯದಲ್ಲಿ ವಿಚಾರಣೆ ನಡೆಸಿ ವರದಿ ಮಾಡುವ ಅಧಿಕಾರವನ್ನು ಆಯೋಗಕ್ಕೆ ಕೊಟ್ಟಿಲ್ಲ. ಸಂಸತ್ತಿಗೆ ಮಾತ್ರ ಒಂದು ಪ್ರದೇಶವನ್ನು ಬುಡಕಟ್ಟು ಪ್ರದೇಶದಿಂದ ಹೊರತುಪಡಿಸಲು ಅಧಿಕಾರವಿರುತ್ತದೆ. ಆಯೋಗವು ಸಲ್ಲಿಸುವ ಪರಿಣತ ಶಿಫಾರಸ್ಸುಗಳು ತನ್ನ ಸಮಕ್ಷಮ ಪರಿಶೀಲನೆಗೆ ಇಲ್ಲದೆಯೇ ಹಾಗೆ ಮಾಡಬಹುದು. ಕಾರಣವೆಂದರೆ ಆಯೋಗವು ಈ ವಿಷಯವನ್ನು ಕುರಿತು ವ್ಯವಹರಿಸುವ ಅಧಿಕಾರ ಪಡೆಯುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ನನ್ನ ಮಾನ್ಯ ಸ್ನೇಹಿತ ಪಂಡಿತ ಅವರ ತೊಂದರೆಯ ಬಗ್ಗೆ ಹೇಳುವುದಾದರೆ ನನ್ನ ಮಾನ್ಯ ಸ್ನೇಹಿತರು ಶ್ರೀ ಚಾಲಿಹಾ ಅವರ ತಿದ್ದುಪಡಿಯ ಉದ್ದೇಶವನ್ನು ಅರ್ಥ ಮಾಡಿಕೊಂಡಿಲ್ಲ. ಶ್ರೀ ಚಾಲಿಹಾ ಅವರ ತಿದ್ದುಪಡಿಯು ಹೀಗೆ ಹೇಳುತ್ತದೆ: "ಯಾವುದೇ ಜಿಲ್ಲಾ ಪರಿಷತ್ತಿನಿಂದ ಅಥವಾ ಪ್ರಾದೇಶಿಕ ಪರಿಷತ್ತಿನಿಂದ ಯಾವುದೇ ಬುಡಕಟ್ಟು ಪ್ರದೇಶವನ್ನು ಹೊರತುಪಡಿಸುವುದು ಅಥವಾ ಅಲ್ಲಿ ಸೇರಿಸುವುದು" ಅಂದರೆ ಜಿಲ್ಲಾ ಪರಿಷತ್ತಿನ ಅಥವಾ ಪ್ರಾದೇಶಿಕ ಪರಿಷತ್ತಿನ ಅಧಿಕಾರ ಕ್ಷೇತ್ರದ ವ್ಯಾಪ್ತಿಯನ್ನು ಕಡಿಮೆ ಮಾಡುವುದು. ಶ್ರೀ ಚಾಲಿಹಾ ಅವರು ಮಾತನಾಡುತ್ತಿರುವ ವಿಷಯ ಅದೇ. ನನ್ನ ಮಾನ್ಯ ಸ್ನೇಹಿತರು ಮಾತನಾಡುತ್ತಿರುವ ವಿಷಯವೇನೆಂದರೆ, ಒಂದು ಸ್ವಾಯತ್ತ ಜಿಲ್ಲೆಯಿಂದ ಯಾವುದೇ ಪ್ರದೇಶವನ್ನು ಹೊರತುಪಡಿಸಿ ಅದನ್ನು ಅಸ್ಸಾಂನ ಸಾಮಾನ್ಯ ರಾಜ್ಯ ಕ್ಷೇತ್ರಕ್ಕೆ ಸೇರಿಸುವ ವಿಚಾರ. ಇವೆರಡೂ ಸ್ಪಷ್ಟವಾಗಿ ವಿಭಿನ್ನವಾದ ವಿಷಯಗಳಾಗಿವೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಆ ವಿಷಯದ ಬಗ್ಗೆ ವರದಿ ಮಾಡುವಂತೆ ಆಯೋಗವನ್ನು ಕೇಳಬಾರದೇಕೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆಯೋಗವು ವರದಿ ಮಾಡುವ ಅಧಿಕಾರವನ್ನು ಹೊಂದಿರುತ್ತದೆ. ನನ್ನ ಮಾನ್ಯ ಸ್ನೇಹಿತರು ಆ ಉಪಬಂಧವನ್ನು ಓದಿದರೆ ಅವರಿಗೆ ಮುಂದಿನ ವಿಷಯವು ಕಂಡುಬರುತ್ತದೆ. ಅಂದರೆ, "ಅಸ್ಸಾಂ ಸರ್ಕಾರವು ಯಾವುದೇ ವಿಷಯವನ್ನು ಪರೀಕ್ಷಿಸಿ ಅದರ ಬಗ್ಗೆ ವರದಿ ಮಾಡಲು ಯಾವುದೇ ಕಾಲಕ್ಕೆ ಒಂದು ಆಯೋಗವನ್ನು ನೇಮಕಮಾಡಬಹುದು. "ಯಾವುದೇ ವಿಷಯ" ಎಂದರೆ ಅದರಲ್ಲಿ ೧ನೆಯ ಪ್ಯಾರಾದಲ್ಲಿ ಒಳಗೊಂಡ ಉಪಬಂಧಗಳು ಸಹ ಸೇರಬಹುದು ಮತ್ತು ಅವುಗಳನ್ನು ನಿರ್ದಿಷ್ಟವಾಗಿ ನಮೂದಿಸಿದ್ದುಂಟು. "ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗಳ ಆಡಳಿತಕ್ಕೆ ಸಂಬಂಧಿಸಿದಂತೆ ಅವರು ನಿರ್ದಿಷ್ಟಪಡಿಸಬಹುದಾದಂತೆ ಮತ್ತು ಸ್ವಾಯತ್ತ ಜಿಲ್ಲೆಗಳ ಆಡಳಿತದ ಬಗ್ಗೆ ವಿಚಾರಣೆ ನಡೆಸಿ ಆ ಬಗ್ಗೆ ವರದಿ ಮಾಡಲು ಯಾವುದೇ ಕಾಲಕ್ಕೆ ಒಂದು ಆಯೋಗವನ್ನು ನೇಮಕ ಮಾಡಬಹುದು." ಇದು ನಿರ್ದಿಷ್ಟಪಡಿಸಲಾದ ವಿಷಯಗಳನ್ನು ಅಂದರೆ ಯಾವುದೇ ವಿಷಯವನ್ನು ಒಳಗೊಳ್ಳುತ್ತದೆ. ನನ್ನ ೧೩೪ ಸಂಖ್ಯೆಯ ತಿದ್ದುಪಡಿಯನ್ನು ಆ ವಿಚಾರವನ್ನು ಸ್ಪಷ್ಟಗೊಳಿಸುವ ಮತ್ತು "ಯಾವುದೇ ವಿಷಯ" ಎಂಬ ಪದಗಳ ಅರ್ಥ ವಿವರಣೆಯ ಪ್ರಸಂಗವನ್ನು ತಪ್ಪಿಸುವ ಉದ್ದೇಶ ಮಂಡಿಸಿದ್ದೇನೆ. ಈಗ ನಾನು ಇವುಗಳಲ್ಲಿ "ಈ ಅನುಸೂಚಿಯ ಪ್ಯಾರಾ ೧ರ ಉಪಪ್ಯಾರಾ (೧)ರ (ಬಿ), (ಸಿ), (ಡಿ) ಮತ್ತು (ಇ) ಈ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳು ಸೇರಬಹುದು ಎಂದು ನಿರ್ದಿಷ್ಟವಾಗಿ ನಮೂದಿಸಿದ್ದೇನೆ. ಮತ್ತು ಅವುಗಳನ್ನು ಆಯೋಗಕ್ಕೆ ಉಲ್ಲೇಖಿಸಲಾಗುವುದು. ಅದೇ ನನ್ನ ೧೩೪ ಸಂಖ್ಯೆಯ ತಿದ್ದುಪಡಿಯ ಭಾವ.

**ಪಂಡಿತ್ ಹೃದಯನಾಥ್ ಕುಂರ್ಝು:** ತಿದ್ದುಪಡಿಯ ಭಾವವು ನನಗೆ ಸರಿಯಾಗಿ ಅರ್ಥವಾಗುತ್ತದೆ ಮತ್ತು ಆ ಪ್ಯಾರಾದ (ಬಿ), (ಸಿ), (ಡಿ) ಮತ್ತು (ಇ) ಈ ಖಂಡಗಳ ಒಳಾಂಶಗಳನ್ನು ಚೆನ್ನಾಗಿ ತಿಳಿದಿದ್ದೇನೆ. ಆದರೆ ಸ್ವಾಯತ್ತ ಜಿಲ್ಲೆಗಳ ಆಡಳಿತಕ್ಕೆ ಸಂಬಂಧಪಟ್ಟ ಯಾವುದೇ ವಿಷಯವನ್ನು ಕುರಿತಂತೆ ವ್ಯವಹರಿಸಲು ನೇಮಕಗೊಳ್ಳಲಿರುವ ಆಯೋಗವು ಬುಡಕಟ್ಟು ಪ್ರದೇಶದಲ್ಲಿ ಈಗಾಗಲೇ ಸೇರಿಸಲಾದ ಯಾವುದೇ ಪ್ರದೇಶವನ್ನು ಅಲ್ಲಿಂದ ಹೊರತುಪಡಿಸಿ ಸಾಮಾನ್ಯ ಆಡಳಿತದಲ್ಲಿರುವ ಪ್ರದೇಶದಲ್ಲಿ ಅಧಿವಿಲೀನಗೊಳಿಸುವ ಹಾಗೆ ವರದಿ ಮಾಡುವ ಅಧಿಕಾರ ಹೊಂದಿಲ್ಲ ಎಂದು ನಾನು ಹೇಳುತ್ತಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಮ್ಮ ಮಾನ್ಯ ಸ್ನೇಹಿತರು ಆ ತಃಖ್ತೆಯ ಪ್ಯಾರಾ (೩)ರ ಖಂಡ (ಡಿ) ಅನ್ನು ಪರಿಶೀಲಿಸಿ ನೋಡಬೇಕು.

**ಪಂಡಿತ್ ಹೃದಯನಾಥ್ ಕುಂರ್ಝು:** ಅದನ್ನು ನಿಮ್ಮದೇ ತಿದ್ದುಪಡಿಯ ಮೂಲಕ ತೆಗೆದು ಹಾಕಲಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ಸಂಸತ್ತು ಕಾನೂನು ದ್ವಾರಾ ಮಾಡಬೇಕಾಗುತ್ತದೆ.

**ಪಂಡಿತ್ ಹೃದಯನಾಥ್ ಕುಂರ್ಝು:** ಆಯೋಗದ ಪರಿಣತ ಶಿಫಾರಸ್ಸುಗಳು ಇಲ್ಲದೆಯೇ ಸಂಸತ್ತಿನ ಮುಂದೆ ಆಯೋಗದ ವರದಿ ಇರಬೇಕು. ಆದರೆ ಅದು ತನ್ನಲ್ಲಿ ಲಭ್ಯವಿರುವ ಮಾಹಿತಿಯನ್ನು ಮಾತ್ರವೇ ಆಧರಿಸಿ ಈ ವಿಷಯವನ್ನು ಕುರಿತಂತೆ ವ್ಯವಹರಿಸಬೇಕಾಗುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ವಿಷಯವು ರಾಜ್ಯಪಾಲರ ಸಕ್ಷಮತಾ ಕ್ಷೇತ್ರದಲ್ಲಿ ಬರುವ ವಿಷಯವಲ್ಲ. ಈಗ ತೀರ್ಣಗೊಳಿಸಲಾದ ಮೇರೆಗೆ, ಬುಡಕಟ್ಟು ಪ್ರದೇಶಗಳಿಂದ ಯಾವುದೇ ಪ್ರದೇಶವನ್ನು ಹೊರತುಪಡಿಸುವ ವಿಷಯವು ರಾಜ್ಯಪಾಲರ ಕಕ್ಷೆಯಿಂದ ತೆಗೆದುಹಾಕಲಾದ ವಿಷಯವಾಗಿದೆ. ಆ ಕುರಿತ ತೀರ್ಮಾನದ ಅಧಿಕಾರವನ್ನು ಸಂಸತ್ತಿಗೆ ಬಿಟ್ಟುಕೊಡಲಾಗಿದೆ. ಆಯೋಗವು ಉಪಪ್ಯಾರಾ

(೩)ರ (ಬಿ), (ಸಿ), (ಡಿ) ಮತ್ತು (ಇ) ಈ ಖಂಡಗಳಲ್ಲಿ ನಮೂದಿಸಲಾದಂಥ ವಿಷಯಗಳ ಬಗ್ಗೆ ವ್ಯವಹರಿಸುವಲ್ಲಿ ಮಾರ್ಗದರ್ಶನ ನೀಡುವ ಕಾರ್ಯ ನಿರ್ವಹಿಸಬೇಕು. ಅದರ ಆಚೆಗಿನ ಯಾವುದೇ ವಿಷಯವು ಸಂಸತ್ತು ನೋಡಿಕೊಳ್ಳಬೇಕಾದ ವಿಷಯ. ಸಂಸತ್ತು ಈ ಆಯೋಗದಿಂದ ಸ್ವತಂತ್ರವಾದ ಇನ್ನೊಂದು ಆಯೋಗವನ್ನು ನೇಮಕ ಮಾಡಬಹುದು ಮತ್ತು ಆ ತರುವಾಯ ಶಾಸನ ರಚಿಸಬಹುದು.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಆ ಬಗ್ಗೆ ಯಾವುದೇ ಉಪಬಂಧವಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಉಪಬಂಧದ ಅಗತ್ಯವಿಲ್ಲ. ಸಂಸತ್ತು ಅಸ್ಸಾಂ ಮಂತ್ರಿ ಮಂಡಳದ ಸಲಹೆಯ ಮೇರೆಗೆ ಕ್ರಮ ಕೈಗೊಳ್ಳಬಹುದು. ಆ ಸಲಹೆಯು ಸ್ವತಂತ್ರವಾಗಿಲ್ಲ ಎಂದು ಸಂಸತ್ತು ಭಾವಿಸಿದರೆ, ಮತ್ತು ಸ್ವತಂತ್ರ ಸಾಕ್ಷ್ಯ ಬೇಕು ಎಂದು ಆಲೋಚಿಸಿದರೆ, ಹಾಗೆ ಆಯೋಗವನ್ನು ನೇಮಕ ಮಾಡಿ ತನ್ನದೇ ಆದ ವಿಚಾರಣೆಯನ್ನು ನಡೆಸಬಹುದು.

* * *

*ಶ್ರೀ **ರೋಹಿಣಿಕುಮಾರ್ ಚೌಧುರಿ:** ಮುಖ್ಯವಾಗಿ ಅಸ್ಸಾಂಗೆ ಸಂಬಂಧಪಡುವ ಈ ಆರನೆಯ ಅನುಸೂಚಿಯ ಮೇಲಣ ಚರ್ಚೆಯಲ್ಲಿ ಬರುವ ಯಾವುದೇ ವಿಷಯದ ಬಗ್ಗೆ ಅಸ್ಸಾಂ ಪ್ರಾಂತ್ಯದ ಸದಸ್ಯರ ಇಚ್ಛೆಯು ಗಮನಿಸತಕ್ಕ ಸಂಗತಿ ಆಗಿದ್ದರ ಪಕ್ಷದಲ್ಲಿ, ಡಾ. ಅಂಬೇಡ್ಕರ್ ಅವರು ಯಾವುದೇ ತಿದ್ದುಪಡಿಯನ್ನು ಸ್ವೀಕರಿಸಲು ಸಿದ್ಧರಿದ್ದಾರೆ ಎಂದು ನಾನು ಭಾವಿಸುತ್ತೇನೆ. ಈ ತಿದ್ದುಪಡಿಯನ್ನು ಅಂಗೀಕರಿಸುವ ವಿಚಾರದಲ್ಲಿ ಇಬ್ಬರು ಮಂತ್ರಿಗಳ ನಿಲುವು ಏನೋ ನನಗೆ ಗೊತ್ತಿಲ್ಲ. ಆದರೆ ಇತರ ನಾವೆಲ್ಲರೂ ಒಮ್ಮತ ಹೊಂದಿದ್ದೇವೆ.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ರಾಜ್ಯಪಾಲರು ಆಯೋಗಕ್ಕೆ ಯಾರನ್ನಾದರೂ ನೇಮಿಸಿಕೊಳ್ಳಲು ಸ್ವಾತಂತ್ರ್ಯ ಹೊಂದಿರುತ್ತಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ರಾಜ್ಯಪಾಲರ ಮೇಲೆ ಯಾವ ನಿರ್ಬಂಧಗಳೂ (ಪರಿಮಿತಿಗಳು) ಇಲ್ಲ.

**ಶ್ರೀ ರೋಹಿಣಿಕುಮಾರ ಚೌಧುರಿ:** ಇಬ್ಬರು ಸದಸ್ಯರು ವಿಧಾನಮಂಡಳದಿಂದ ಚುನಾಯಿಸಲ್ಪಡಬೇಕು ಎಂದು ನನ್ನ ಸಲಹೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹಾಗೆ ಮಾಡದಂತೆ ಅವರಿಗೆ ಯಾವ ಪ್ರತಿಬಂಧವೂ ಇಲ್ಲ.

**ಶ್ರೀ ರೋಹಿಣಿಕುಮಾರ್ ಚೌಧುರಿ:** ಹಾಗೆ ಹೇಳುವಲ್ಲಿ ಹಾನಿಯೇನೂ ಇಲ್ಲ. ಒಬ್ಬ ಮನುಷ್ಯನು ಸಾಯಬಹುದು ಅಥವಾ ಬದುಕಿ ಉಳಿಯಬಹುದು. ಸಾಯಲಿ ಎಂದು ನೀವು ಹೇಳಬೇಕೆ? ನಾನು ಬದುಕಿ ಉಳಿಯಲಿ ಎಂದು ಹೇಳಬಯಸುತ್ತೇನೆ. ದಯವಿಟ್ಟು ನನ್ನ ತಿದ್ದುಪಡಿಯನ್ನು ಸ್ವೀಕರಿಸಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ರಾಜ್ಯಪಾಲರು ಮಂತ್ರಿಮಂಡಳದ ಸಲಹೆಯ ಮೇರೆಗೆ ಆಯೋಗವನ್ನು ನೇಮಿಸಲು ಉಪಕ್ರಮಿಸುತ್ತಾರೆ. ನಿಮ್ಮ ಮಂತ್ರಿ ಮಂಡಳವು ವಿಧಾನಮಂಡಳದಿಂದ ಇಬ್ಬರನ್ನು ನೇಮಿಸಲಿಕ್ಕಿಲ್ಲ ಎಂದು ನಿಮಗೆ ಅನಿಸುತ್ತದೆಯೇ?

---

* ಸಿ.ಎ.ಡಿ. ಸಂ. IX, ೬ನೇ ಸೆಪ್ಟೆಂಬರ್ ೧೯೪೯, ಪುಟ ೧೦೪೯.

**ಶ್ರೀ ರೋಹಿಣಿಕುಮಾರ್ ಚೌಧುರಿ:** ವಿಧಾನಮಂಡಳದಿಂದ ಅವರು ಚುನಾವಣೆ ಆಗಬೇಕು ಎಂದು ನನ್ನ ಇಚ್ಛೆ. ವಿಧಾನಸಭೆಯ ಮೂಲಕ ನಡೆಯುವ ಚುನಾವಣೆಗೆ ನಾನು ನಿರ್ದಿಷ್ಟ ಮಹತ್ವ ಕೊಡುತ್ತೇನೆ. ಮಾನ್ಯ ಡಾ. ಅಂಬೇಡ್ಕರ್ ಅವರು ಸಹ ಅಂಥ ಮಹತ್ವ ಕೊಡುತ್ತಿದ್ದರು ಎಂದು ನನ್ನ ಅನಿಸಿಕೆ. ಆದರೆ ಈಗ ಅವರು ತಮ್ಮ ಮನಸ್ಸನ್ನು ಬದಲಾಯಿಸಿರಬಹುದು.

**ಮಾನ್ಯ ಸಭಾಧ್ಯಕ್ಷರು:** ಶ್ರೀ ಬ್ರಜೇಶ್ವರ್ ಪ್ರಸಾದ್ ಅವರು ಪ್ರಸ್ತಾವಿಸಿದ ಇತರ ಕೆಲವು ತಿದ್ದುಪಡಿಗಳು ಇವೆ. ೨೦೭ "ರಾಜ್ಯಪಾಲ" ಪದಕ್ಕೆ ಬದಲಾಗಿ 'ಅಧ್ಯಕ್ಷ' ೨೦೮– 'ರಾಜ್ಯಪಾಲ' ಪದಕ್ಕೆ ಬದಲಾಗಿ 'ಅಧ್ಯಕ್ಷ' ೨೦೯– "ರಾಜ್ಯ ವಿಧಾನ ಮಂಡಳ" ಪದಕ್ಕೆ ಬದಲಾಗಿ "ಸಂಸತ್ತು" ೨೧೦– "ಅಸ್ಸಾಂ" ಪದಕ್ಕೆ ಬದಲಾಗಿ "ಒಕ್ಕೂಟ" ೨೨೨– "ರಾಜ್ಯ" ಪದಕ್ಕೆ ಬದಲಾಗಿ "ಒಕ್ಕೂಟ" ೨೧೨– "ರಾಜ್ಯಪಾಲ" ಪದಕ್ಕೆ ಬದಲಾಗಿ ೨೧೩– "ರಾಜ್ಯದಲ್ಲಿ" ಪದಕ್ಕೆ ಬದಲಾಗಿ "ಅಸ್ಸಾಂ ರಾಜ್ಯದಲ್ಲಿ".

**ಶ್ರೀ ಬ್ರಜೇಶ್ವರ್ ಪ್ರಸಾದ್:** ನಾನು ಇವುಗಳನ್ನು ಮಂಡಿಸಲು ಇಷ್ಟಪಡುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಈ ಪ್ಯಾರಾಕ್ಕೆ ಪ್ರಸ್ತಾವಿಸಲಾದ ಎಲ್ಲ ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಡಾ. ಅಂಬೇಡ್ಕರ್ ನೀವು ಏನಾದರೂ ಹೇಳಬಯಸುತ್ತೀರ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ.

**ಮಾನ್ಯ ಸಭಾಧ್ಯಕ್ಷರು:** ನಾನು ಈ ತಿದ್ದುಪಡಿಗಳನ್ನು ಇಡುತ್ತೇನೆ.

(ಮುಂದಿನ ತಿದ್ದುಪಡಿಗಳನ್ನು ಸ್ವೀಕರಿಸಲಾಯಿತು.)

೧. ತಿದ್ದುಪಡಿಗಳ ಪಟ್ಟಿಯ (ಸಂಪುಟ II) ಪೈಕಿ ೩೫೦೦, ೩೫೦೧ ಮತ್ತು ೩೫೦೨ ಈ ಸಂಖ್ಯೆಗಳ ತಿದ್ದುಪಡಿಗಳಿಗೆ ಈ ಮುಂದಿನದವುಗಳನ್ನು ಪ್ರತಿಸ್ಥಾಪಿಸತಕ್ಕದ್ದು.

"ಆರನೆಯ ಅನುಸೂಚಿಯ ಪ್ಯಾರಾ ೧೪ರ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು.

"ಅಸ್ಸಾಂನ ರಾಜ್ಯಪಾಲರು ರಾಷ್ಟ್ರಪತಿಯ ಏಜೆಂಟನಾಗಿ ಯಾವುದೇ ಸಮಯದಲ್ಲಿ ಏಳಕ್ಕೆ ಕಡಿಮೆಯಿಲ್ಲದಷ್ಟು ಜನ ಸದಸ್ಯರನ್ನು ಒಳಗೊಂಡ ಒಂದು ಆಯೋಗವನ್ನು ನೇಮಕ ಮಾಡಬಹುದು. ಆ ಸದಸ್ಯರ ಪೈಕಿ ಮೂರಕ್ಕೆ ಕಡಿಮೆಯಿಲ್ಲದಷ್ಟು ಜನ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರಾಗಿರತಕ್ಕದ್ದು ಮತ್ತು ಉಳಿದವರು ಸುಪ್ರಸಿದ್ಧ ಮಾನವ ಶಾಸ್ತ್ರಜ್ಞರು ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಿಗೆ ನಿವೃತ್ತ ನ್ಯಾಯಾಧೀಶರು ಮತ್ತು ವಿಜ್ಞಾನಿಗಳು ಮತ್ತು ಸಾಹಿತಿಗಳು ಇವರುಗಳ ದರ್ಜೆಯಿಂದ ಆಯ್ಕೆಯಾದವರು ಇರತಕ್ಕದ್ದು– ಹೀಗೆ ಏಳು ಜನ ಸದಸ್ಯರನ್ನು ಒಳಗೊಂಡು ಒಂದು ಆಯೋಗವನ್ನು, ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗಳ ಮತ್ತು ಸ್ವಾಯತ್ತ ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿ ತಾನು ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ವಿಷಯವನ್ನು ಪರೀಕ್ಷಿಸಿ ಆ ಬಗ್ಗೆ ವರದಿ ಮಾಡಲು ಒಂದು ಆಯೋಗವನ್ನು ನೇಮಿಸಬಹುದು ಅಥವಾ ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗಳ ಮತ್ತು ಸ್ವಾಯತ್ತ ಪ್ರದೇಶಗಳ ಆಡಳಿತದ ಬಗ್ಗೆ ಸಾಮಾನ್ಯವಾಗಿ ಮತ್ತು ಕೆಳಕಂಡ ವಿಷಯಗಳ ಬಗ್ಗೆ ಮುಖ್ಯವಾಗಿ ವಿಚಾರಣೆ ನಡೆಸಿ ಕಾಲಕಾಲಕ್ಕೆ ವರದಿ ಮಾಡಲು ಅದೇ ಬಗೆಯ ಆಯೋಗವನ್ನು ನೇಮಿಸಬಹುದು.

(ಎ) ಅಂಥ ಜಿಲ್ಲೆಗಳಲ್ಲಿ ಮತ್ತು ಪ್ರದೇಶಗಳಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ, ವೈದ್ಯಕೀಯ, ಆರ್ಥಿಕ ಮತ್ತು ಮತ ಸಂಬಂಧವಾದ ಸೌಕರ್ಯಗಳ ಹಾಗೂ ಸಂಪರ್ಕ ಸಾಧನಗಳ ಏರ್ಪಾಟು.

(ಬಿ) ಅಂಥ ಜಿಲ್ಲೆಗಳ ಮತ್ತು ಪ್ರದೇಶಗಳ ಸಂಬಂಧದಲ್ಲಿ ಹೊಸ ಅಥವಾ ವಿಶೇಷ ಶಾಸನ ರಚನೆಯ ಅಗತ್ಯ.

(ಸಿ) ಜಿಲ್ಲಾ ಪರಿಷತ್ತು ಮತ್ತು ಪ್ರಾದೇಶಿಕ ಪರಿಷತ್ತು ರಚಿಸಿದ ಕಾನೂನುಗಳು, ವಿನಿಯಮಗಳು ಮತ್ತು ನಿಯಮಗಳ ಆಡಳಿತ ಮತ್ತು ಅಂಥ ಆಯೋಗವು ಅನುಸರಿಸತಕ್ಕ ಕಾರ್ಯವಿಧಾನವನ್ನು ನಿರ್ಧರಿಸಬಹುದು.

೨. ಪ್ಯಾರಾ ೧೪ರ ಉಪಪ್ಯಾರಾ (೧)ರಲ್ಲಿ "ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗಳು" ಎಂಬ ಪದಗಳ ತರುವಾಯ "ಈ ಅನುಸೂಚಿಯ ಪ್ಯಾರಾ (೧)ರ ಉಪಪ್ಯಾರಾ (೩)ರ (ಬಿ), (ಸಿ), (ಡಿ) ಮತ್ತು (ಇ) ಈ ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳೂ ಸೇರಿದಂತೆ ಎಂಬ ಪದಗಳನ್ನು ಆವರಣಗಳನ್ನು ಮತ್ತು ಅಕ್ಷರಗಳನ್ನು, ಹಾಗೂ ಅಂಕಿಗಳನ್ನು ಸೇರಿಸತಕ್ಕದ್ದು.

೩. ಪ್ಯಾರಾ ೧೪ರ ಉಪಪ್ಯಾರಾ (೧)ರಲ್ಲಿ "ಸ್ವಾಯತ್ತ ಜಿಲ್ಲೆಗಳು" ಎಂಬ ಪದಗಳ ತರುವಾಯ, ಅವು ಬರುವ ಎರಡು ಸ್ಥಳಗಳಲ್ಲಿ "ಮತ್ತು ಸ್ವಾಯತ್ತ ಪ್ರದೇಶಗಳ" ಎಂಬ ಪದಗಳನ್ನು ಸೇರಿಸತಕ್ಕದ್ದು.

೪. ಪ್ಯಾರಾ ೧೪ರ ಉಪಪ್ಯಾರಾ (೧)ರ (ಎ) ಮತ್ತು (ಬಿ) ಈ ಖಂಡಗಳಲ್ಲಿ "ಜಿಲ್ಲೆಗಳು" ಎಂಬ ಪದದ ತರುವಾಯ, ಅದು ಬರುವ ಎರಡು ಸ್ಥಳಗಳಲ್ಲಿ "ಮತ್ತು ಪ್ರದೇಶಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

೫. ಪ್ಯಾರಾ ೧೪ರ ಉಪಪ್ಯಾರಾ (೩)ರಲ್ಲಿ "ಸ್ವಾಯತ್ತ ಜಿಲ್ಲೆಗಳು" ಎಂಬ ಪದಗಳ ತರುವಾಯ "ಮತ್ತು ಸ್ವಾಯತ್ತ ಪ್ರದೇಶಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**(ಹಾಗೆ ತಿದ್ದುಪಡಿಯಾದ ಪ್ಯಾರಾ ೧೪ ಅನ್ನು ಅನುಸೂಚಿಗೆ ಸೇರಿಸಲಾಯಿತು.)**

## ಪ್ಯಾರಾ ೧೫

(ತಿದ್ದುಪಡಿ ೧೪ ಅನ್ನು ಮಂಡಿಸಲಿಲ್ಲ)

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪ್ಯಾರಾ ೧೫ರ ಉಪಪ್ಯಾರಾ(೩)ವನ್ನು ಬಿಟ್ಟುಬಿಡತಕ್ಕತದ್ದು."

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿ ಸಂಖ್ಯೆ ೧೪೨: ನಿರ್ದೇಶನದ ವಿಷಯವನ್ನು ನಾವು ಅನೇಕ ಸಲ ಪರಿಶೀಲಿಸಿದ್ದುಂಟು. ಅದನ್ನು ಮಂಡಿಸುವ ಅಗತ್ಯವಿದೆಯೆ?

**ಶ್ರೀ ಬ್ರಜೇಶ್ವರ್ ಪ್ರಸಾದ್:** ಸ್ವಾಮಿ, ತಾವು ಹೇಗೆ ನಿರ್ದೇಶಿಸುತ್ತೀರೋ ಹಾಗೆ.

**ಮಾನ್ಯ ಸಭಾಧ್ಯಕ್ಷರು:** ಅದು ಅಗತ್ಯವೆಂದು ನಾನು ಭಾವಿಸುವುದಿಲ್ಲ. ಇನ್ನು ತಿದ್ದುಪಡಿ ೨೧೪: ಪುನಃ "ರಾಜ್ಯಪಾಲ" ಅದಕ್ಕೆ ಬದಲಾಗಿ "ರಾಷ್ಟ್ರಪತಿ" ತಿದ್ದುಪಡಿ ೨೧೫ "ರಾಜ್ಯದ ವಿಧಾನ ಮಂಡಳ" ಪದಕ್ಕೆ ಬದಲಾಗಿ "ಸಂಸತ್ತು" ತಿದ್ದುಪಡಿ ೨೧೬ ಅದು ಡಾ. ಅಂಬೇಡ್ಕರ್ ತಾವು ಏನನ್ನಾದರೂ ಹೇಳಲು ಇಷ್ಟಪಡುತ್ತೀರ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ. ನಾನು ಹೇಳಿದ ಹಾಗೆ, ನಾವು ಮೊದಲಲ್ಲಿ ರಾಜ್ಯಪಾಲರ ಬಳಿಯಲ್ಲಿ ಇಟ್ಟಿದ್ದ ವಿವೇಚನಾಧಿಕಾರವನ್ನು ತೆಗೆದುಹಾಕುತ್ತಿದ್ದೇವೆ. ಆದ ಕಾರಣ ಈ ಉಪಪ್ಯಾರಾ (೩) ಅನ್ನು ಬಿಟ್ಟುಬಿಡುವುದು ಅಗತ್ಯ.

**(ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು)**

**(ಹಾಗೆ ತಿದ್ದುಪಡಿಯಾದ ಪ್ಯಾರಾ ೧೫ ಅನ್ನು ಅನುಸೂಚಿಗೆ ಸೇರಿಸಲಾಯಿತು)**

* ಸಿ.ಎ.ಡಿ. ಸಂ. IX, ೬ನೇ ಸೆಪ್ಟೆಂಬರ್ ೧೯೪೯, ಪುಟ ೧೦೫೧.

**ಶ್ರೀ ಬ್ರಜೇಶ್ವರ್ ಪ್ರಸಾದ್:** ಸ್ವಾಮಿ, ನಾವು ಇನ್ನೂ ಕೆಲವು ನಿಮಿಷ ಕುಳಿತುಕೊಂಡು ಈ ಅನುಸೂಚಿಯನ್ನು ಪೂರ್ತಿಗೊಳಿಸೋಣ ಎಂದು ನನ್ನ ಸಲಹೆ.

**ಮಾನ್ಯ ಸಭಾಧ್ಯಕ್ಷರು:** ಅದಕ್ಕೆ ಸಮಯ ಹಿಡಿಯುತ್ತದೆ. ಅದನ್ನು ಪೂರ್ತಿಗೊಳಿಸಲು ಆಗಲಿಕ್ಕಿಲ್ಲ. ನಮ್ಮ ನಿಗದಿ ವೇಳೆಗಿಂತ ನಾನು ಬಹಳಷ್ಟು ಹಿಂದೆ ಬಿದ್ದಿದ್ದೇನೆ ಎಂಬ ಸಂಗತಿಯನ್ನು ಮಾನ್ಯ ಸದನದ ಗಮನಕ್ಕೆ ತರಬಯಸುತ್ತೇನೆ. ಸ್ಪಷ್ಟವಾದ ವೇಳೆಯನ್ನು ತುಂಬಿಕೊಳ್ಳಲು ನಾವು ಏನನ್ನಾದರೂ ಮಾಡಬೇಕು.

**ಶ್ರೀ ಆರ್. ಕೆ. ಸಿಧ್ವ** (ಸಿ.ಪಿ. ಮತ್ತು ಬಿರಾರ್: ಸಾಮಾನ್ಯ): ಇಂದು ನಮಗೆ ಬೇರೆ ಯಾವ ಕೆಲಸವೂ ಇಲ್ಲ. ನಾವು ಅಪರಾಹ್ನ ಈ ಕೆಲಸಕ್ಕೆ ಕುಳಿತುಕೊಳ್ಳಬಹುದು.)

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಮಗೆ ಬೇಕಾದರೆ ನಾಳೆ ಕುಳಿತುಕೊಳ್ಳಬಹುದು. ಇಂದು ನಾವು ಕರಡು ರಚನಾ ಸಮಿತಿಯ ಸಭೆ ಕರೆದಿದ್ದೇವೆ. ಇನ್ನು ಪರಿಶೀಲನೆ ಬಾಕಿಯಿರುವ ಕೆಲವು ಅನುಚ್ಛೇದಗಳನ್ನು ಪರಿಶೀಲಿಸುವ ಕೆಲಸವುಂಟು.

* * *

## ಪ್ಯಾರಾ ೧೬

***ಮಾನ್ಯ ಸಭಾಧ್ಯಕ್ಷರು:** ಇನ್ನೂ ಎರಡು ತಿದ್ದುಪಡಿಗಳಿವೆ. ಅವು ಬೇಡ ಎಂದು ನಾನು ನಿರ್ಣಯಿಸಿದ್ದೇನೆ. ಕಾರಣವೆಂದರೆ, ಶ್ರೀ ಬ್ರಜೇಶ್ವರ್ ಅವರ ಇನ್ನೊಂದು ತಿದ್ದುಪಡಿಯಂತೆಯೇ ಇವೆ. ಡಾ. ಅಂಬೇಡ್ಕರ್, ತಾವು ಈ ಕುರಿತು ಏನಾದರೂ ಹೇಳಬಯಸುತ್ತೀರ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ ಸಾಮಾನ್ಯ): ಅಸ್ಸಾಂ ಪ್ರಧಾನಿ ಈ ಬಗ್ಗೆ ಏನಾದರೂ ಹೇಳುವುದಾದರೆ, ಅದನ್ನು ಕೇಳಬಯಸುತ್ತೇನೆ.

**ಮಾನ್ಯ ಶ್ರೀ ಗೋಪಿನಾಥ ಬಾರ್ದೋಲೊಯ್** (ಅಸ್ಸಾಂ: ಸಾಮಾನ್ಯ): ಸ್ವಾಮಿ, ಪ್ಯಾರಾ ೧೬ರ ಎರಡನೆಯ ಪರಂತುಕವನ್ನು ತೆಗೆದುಹಾಕುವ ಬಗ್ಗೆ ಇದೀಗ ಶ್ರೀಯುತ ಚಾಲಿಹಾ ಅವರು ಮಂಡಿಸಿದ ತಿದ್ದುಪಡಿಗೆ ಸಂಬಂಧಿಸಿದ ಹಾಗೆ ನಾನು ಹೇಳುವುದಿಷ್ಟೆ. ಈ ಬಗೆಯ ಕ್ರಮವನ್ನು ತೆಗೆದುಕೊಂಡ ಪ್ರತಿಯೊಂದು ಸಂದರ್ಭದಲ್ಲಿ (ಪ್ರಕರಣದಲ್ಲಿ)– ಆ ಮೂಲಕ ಬಾಧಿತರಾಗುವ ಪಕ್ಷಕಾರರಿಗೆ ಚುನಾವಣೆಯ ಅವಕಾಶವನ್ನು ಒದಗಿಸಬೇಕು. ಈ ಪರಂತುಕದಲ್ಲಿ, ಇದನ್ನು ಹೇಗೆ ನೆರವೇರಿಸಬಹುದು ಎಂಬ ಬಗ್ಗೆ ಯಾವುದೇ ಏರ್ಪಾಟು ಇಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಶ್ರೀಯುತ ಚಾಲಿಹಾ ಅವರು ತಮ್ಮ ತಿದ್ದುಪಡಿಯನ್ನು ಈ ಮುಂದಿನಂತೆ ಅಂದರೆ "ವಿಧಾನ ಮಂಡಳದ ದ್ವಾರಾ ಕೇಳಿಕೆಯ ಅವಕಾಶ" ಎಂಬ ಪದಗಳಿಗೆ ಬದಲಾಗಿ "ಪ್ರಾದೇಶಿಕ ಪರಿಷತ್ತಿನ ಅಭಿಪ್ರಾಯಗಳನ್ನು ಸಾದರಪಡಿಸುವ ಅವಕಾಶ" ಎಂಬ ಪದಗಳನ್ನು ಸೇರಿಸತಕ್ಕದ್ದು ಎಂಬುದಾಗಿ ಮಾರ್ಪಾಟುಗೊಳಿಸುವುದಾದ ಪಕ್ಷದಲ್ಲಿ, ಆಗ ಅವರ ತಿದ್ದುಪಡಿಯ ಉದ್ದೇಶವೂ ನೆರವೇರುತ್ತದೆ.

**ಶ್ರೀ ಕುಲಧರ ಚಾಲಿಹಾ:** ಹಾಗೆ ಮಾಡಲು ಸಿದ್ಧನಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಶ್ರೀ ಬಾರ್ದೋಲೊಯ್ ಅವರು ಶ್ರೀ ಚಾಲಿಹಾ ಅವರ ತಿದ್ದುಪಡಿಗೆ ಸೂಚಿಸಿದ ತಿದ್ದುಪಡಿಯನ್ನು ಶ್ರೀ ಚಾಲಹಾ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ. ಇನ್ನೂ ಆ ಪರಂತುಕವು ಕೆಳಕಂಡಂತೆ ಓದುತ್ತದೆ.

* ಸಿ.ಎ.ಡಿ. ಸಂ. IX, ೭ನೇ ಸೆಪ್ಟೆಂಬರ್ ೧೯೪೯, ಪುಟ ೧೧೦೫.

"ಇನ್ನೂ ಪರಂತು, ಸಂದರ್ಭಾನುಸಾರ ಜಿಲ್ಲಾ ಪರಿಷತ್ತಿಗೆ ಅಥವಾ ಪ್ರಾದೇಶಿಕ ಪರಿಷತ್ತಿಗೆ ರಾಜ್ಯದ ವಿಧಾನ ಮಂಡಳದ ಮುಂದೆ ತನ್ನ ಅಭಿಪ್ರಾಯಗಳನ್ನು ಸಾದರಪಡಿಸಲು ಒಂದು ಅವಕಾಶವನ್ನು ಕೊಟ್ಟ ಹೊರತು, ಈ ಪ್ಯಾರಾದ (ಬಿ) ಖಂಡದ ಅಡಿಯಲ್ಲಿ ಯಾವುದೇ ಕ್ರಮ ಕೈಗೊಳ್ಳತಕ್ಕದ್ದಲ್ಲ."

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆ ಎಂದರೆ:

ಆರನೆಯ ಅನುಸೂಚಿಯ ೧೬ನೆಯ ಪ್ಯಾರಾದ ಎರಡನೆಯ ಪರಂತುಕಕ್ಕೆ ಬದಲಾಗಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು.

"ಇನ್ನೂ ಪರಂತು, ಸಂದರ್ಭಾನುಸಾರ ಜಿಲ್ಲಾ ಪರಿಷತ್ತಿಗೆ ಅಥವಾ ಪ್ರಾದೇಶಿಕ ಪರಿಷತ್ತಿಗೆ, ರಾಜ್ಯದ ವಿಧಾನ ಮಂಡಳದ ಮುಂದೆ ತಮ್ಮ ಅಭಿಪ್ರಾಯಗಳನ್ನು ಸಾದರಪಡಿಸಲು ಒಂದು ಅವಕಾಶವನ್ನು ಕೊಟ್ಟ ಹೊರತು, ಈ ಪ್ಯಾರಾದ (ಬಿ) ಖಂಡದ ಅಡಿಯಲ್ಲಿ ಯಾವುದೇ ಕ್ರಮ ಕೈಗೊಳ್ಳತಕ್ಕದ್ದಲ್ಲ.

**ತಿದ್ದುಪಡಿಯನ್ನು ಅಂಗೀಕರಿಸಲಾಯಿತು.**

**(ಹಾಗೆ ತಿದ್ದುಪಡಿಯಾದ ಪ್ಯಾರಾ ೧೬ ಅನ್ನು ಆರನೆಯ ಅನುಸೂಚಿಗೆ ಸೇರಿಸಲಾಯಿತು.)**

## ಹೊಸ ಪ್ಯಾರಾ ೧೬ಎ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಪ್ಯಾರಾ ೧೬ರ ತರುವಾಯ ಈ ಮುಂದಿನ ಪ್ಯಾರಾವನ್ನು ಸೇರಿಸತಕ್ಕದ್ದು.

**೧೬ಎ ಸ್ವಾಯತ್ತ ಜಿಲ್ಲೆಗಳಲ್ಲಿ ಚುನಾವಣಾ ಕ್ಷೇತ್ರಗಳನ್ನು ರೂಪಿಸುವ ಸಲುವಾಗಿ ಅಂಥ ಜಿಲ್ಲೆಗಳಿಂದ ಪ್ರದೇಶಗಳನ್ನು ಹೊರತುಪಡಿಸುವುದು.**

ಅಸ್ಸಾಂನ ವಿಧಾನಸಭೆಗೆ ಚುನಾವಣೆಗಳನ್ನು ನಡೆಸುವ ಸಲುವಾಗಿ ರಾಜ್ಯಪಾಲರು ಯಾವುದೇ ಸ್ವಾಯತ್ತ ಜಿಲ್ಲೆಗಳ ಯಾವುದೇ ಪ್ರದೇಶವು ಅಂಥ ಯಾವುದೇ ಜಿಲ್ಲೆಗಳ ಸಲುವಾಗಿ ವಿಧಾನಸಭೆಯಲ್ಲಿ ಮೀಸಲಿಟ್ಟ ಸ್ಥಾನವನ್ನು ಅಥವಾ ಸ್ಥಾನಗಳನ್ನು ತುಂಬಲು ಇರುವ ಯಾವುದೇ ಚುನಾವಣಾ ಕ್ಷೇತ್ರದ ಭಾಗವಾಗತಕ್ಕದ್ದಲ್ಲವೆಂದು ಆದರೆ, ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕ ಮತ್ತು ವಿಧಾನಸಭೆಯಲ್ಲಿ ಹಾಗೆ ಮೀಸಲಿಟ್ಟಿಲ್ಲದ ಸ್ಥಾನವನ್ನು ಅಥವಾ ಸ್ಥಾನಗಳನ್ನು ತುಂಬಲು ಇರುವ ಚುನಾವಣಾ ಕ್ಷೇತ್ರದ ಭಾಗವಾಗತಕ್ಕದ್ದು ಎಂದು ಆದೇಶದ್ವಾರಾ ಘೋಷಿಸಬಹುದು."

ಈ ಪ್ಯಾರಾದ ಉದ್ದೇಶವಿಷ್ಟೆ. ಸ್ವಾಯತ್ತ ಜಿಲ್ಲೆಗಳಲ್ಲಿ ಸೇರಿಸಲಾದ ಆದರೆ ವಾಸ್ತವವಾಗಿ ಆ ಜಿಲ್ಲೆಗಳ ಜನಗಳ ಅಂಗಭಾಗವಾಗಿಲ್ಲದ ಜನಗಳಿಗೆ, ಅವರದೇ ಆಗಿರುವಂತೆ ಗುರುತು ಮಾಡಿದ ಚುನಾವಣಾ ಕ್ಷೇತ್ರಗಳನ್ನು ಒದಗಿಸಿ ವಿಧಾನಸಭೆಯಲ್ಲಿ ಸ್ಥಾನವನ್ನು ಪಡೆಯುವ ಅವಕಾಶವನ್ನು ಏರ್ಪಡಿಸುವುದು ಇದೇ ಆ ಪ್ಯಾರಾದ ಉದ್ದೇಶ.

**(ಪ್ಯಾರಾ ೧೬ಎ ಅನ್ನು ಆರನೆಯ ಅನುಸೂಚಿಗೆ ಸೇರಿಸಲಾಯಿತು.)**

* * *

## ಪ್ಯಾರಾ ೧೭

*ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್: ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪ್ಯಾರಾ ೧೭ರ ತರುವಾಯ ಈ ಮುಂದಿನ ಉಪಪ್ಯಾರಾವನ್ನು ಸೇರಿಸತಕ್ಕದ್ದು.

(೩) ಈ ಪ್ಯಾರಾದ ಉಪಪ್ಯಾರಾ (೨)ರ ಅಡಿಯಲ್ಲಿ ರಾಷ್ಟ್ರಪತಿಯ ಏಜೆಂಟನಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ರಾಜ್ಯಪಾಲರು ತನ್ನ ವಿವೇಚನಾಧಿಕಾರವನ್ನು ಚಲಾಯಿಸತಕ್ಕದ್ದು.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ನಾನು ಒಪ್ಪಿಕೊಳ್ಳಲಾರೆ.

**ಮಾನ್ಯ ಸಭಾಧ್ಯಕ್ಷರು:** ಹಾಗಾದರೆ ನಾನು ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಮೊದಲು ಇಡುತ್ತೇನೆ. ಪ್ರಶ್ನೆಯೆಂದರೆ,

"ಪ್ಯಾರಾ ೧೭ರ ಉಪಪ್ಯಾರಾ (೨)ರ ತರುವಾಯ ಈ ಮುಂದಿನ ಉಪಪ್ಯಾರಾವನ್ನು ಸೇರಿಸತಕ್ಕದ್ದು.

(೩) ಈ ಪ್ಯಾರಾದ ಉಪಪ್ಯಾರಾ (೨)ರ ಅಡಿಯಲ್ಲಿ ರಾಷ್ಟ್ರಪತಿಯು ಏಜೆಂಟನಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ರಾಜ್ಯಪಾಲರು ತನ್ನ ವಿವೇಚನಾಧಿಕಾರವನ್ನು ಚಲಾಯಿಸತಕ್ಕದ್ದು.

* * *

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ನಾನು ಒಪ್ಪಿಕೊಳ್ಳಲಾರೆ.

**ಮಾನ್ಯ ಅಧ್ಯಕ್ಷರು:** ಹಾಗಾದರೆ ನಾನು ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಮೊದಲು ಇಡುತ್ತೇನೆ. ಪ್ರಶ್ನೆಯೆಂದರೆ,

"ಪ್ಯಾರಾ ೧೭ರ ಉಪಪ್ಯಾರಾ (೨)ರ ತರುವಾಯ ಈ ಮುಂದಿನ ಉಪಪ್ಯಾರಾವನ್ನು ಸೇರಿಸ ತಕ್ಕದ್ದು.

"(೩) ಈ ಪ್ಯಾರಾದ ಉಪಪ್ಯಾರಾ (೨)ರ ಅಡಿಯಲ್ಲಿ ರಾಷ್ಟ್ರಪತಿಯ ಏಜೆಂಟನಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ರಾಜ್ಯಪಾಲರು ತನ್ನ ವಿವೇಚನಾಧಿಕಾರವನ್ನು ಚಲಾಯಿಸತಕ್ಕದ್ದು."

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು)**

(ಬ್ರಜೇಶ್ವರ್ ಪ್ರಸಾದ್ ಅವರ ತಿದ್ದುಪಡಿಯನ್ನು ತಿರಸ್ಕರಿಸಲಾಯಿತು)

**(ಹಾಗೆ ತಿದ್ದುಪಡಿಯಾದ ಪ್ಯಾರಾ ೧೭ ಅನ್ನು ಆರನೆಯ ಅನುಸೂಚಿಗೆ ಸೇರಿಸಲಾಯಿತು.)**

## ಪ್ಯಾರಾ ೧೮

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪ್ಯಾರಾ ೧೮ರ ಖಂಡ (ಸಿ) ಅನ್ನು ಬಿಟ್ಟುಬಿಡತಕ್ಕದ್ದು.

**ಮಾನ್ಯ ಅಧ್ಯಕ್ಷರು:** ತಿದ್ದುಪಡಿ ಸಂಖ್ಯೆ ೧೪೮ ಮತ್ತು ಸಂಖ್ಯೆ ೧೪೯ ಇವುಗಳನ್ನು ಬೇಡವೆಂದು ನಿರ್ಣಯಿಸಲಾಗಿದೆ. ಮೇಲೆ ಅದೇ ಬಗೆಯ ಭಾವವಾಗುವ ಸಂಖ್ಯೆ ೨೨೩, ೨೨೪, ೨೨೫ ಮತ್ತು

* ಸಿ.ಎ.ಡಿ. ಸಂ. IX, ೭ನೇ ಸೆಪ್ಟೆಂಬರ್ ೧೯೪೯, ಪುಟ ೧೦೫೫.

** ಅದೇ, ಪುಡ ೧೦೫೬.

೨೨೬ ಈ ತಿದ್ದುಪಡಿಯನ್ನು ಮಂಡಿಸಬಯಸುತ್ತೀರ? ಇತರ ಮೂರನ್ನು ಬೇಡವೆಂದು ನಿರ್ಣಯಿಸಲಾಗಿದೆ.

**ಶ್ರೀ ಬ್ರಜೇಶ್ವರ್ ಪ್ರಸಾದ್:** ಸ್ವಾಮಿ, ನನ್ನ ತಿದ್ದುಪಡಿಗಳ ಪೈಕಿ ಯಾವುದನ್ನೂ ಮಂಡಿಸಲು ಇಷ್ಟಪಡುವುದಿಲ್ಲ.

**ಮಾನ್ಯ ಅಧ್ಯಕ್ಷರು:** ಹಾಗಾದರೆ, ನಾನು ಡಾ. ಅಂಬೇಡ್ಕರ್ ಅವರ ತಿದ್ದುಪಡಿ ಸಂಖ್ಯೆ ೧೪೬ ಮತ್ತು ೧೪೭ ಇವುಗಳನ್ನು ತೆಗೆದುಕೊಳ್ಳುತ್ತೇನೆ.

**(ಆ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು)**

**(ಹಾಗೆ ತಿದ್ದುಪಡಿಯಾದ ಪ್ಯಾರಾ ೧೮ ಅನ್ನು ಆರನೆಯ ಅನುಸೂಚಿಗೆ ಸೇರಿಸಲಾಯಿತು)**

## ಪ್ಯಾರಾ ೧೯

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಪಟ್ಟಿ Iರ (ಏಳನೆಯ ವಾರ) ಸಂಖ್ಯೆ ೧೫೦ ಮತ್ತು ೧೫೧ ಈ ತಿದ್ದುಪಡಿಗಳಿಗೆ ಸಂಬಂಧಪಟ್ಟ ಹಾಗೆ, ಪ್ಯಾರಾ ೧೯ ಮತ್ತು ಅದಕ್ಕೆ ಜೋಡಿಸಲಾದ ತಃಖ್ತೆಯ ಬದಲಾಗಿ, ಈ ಮುಂದಿನ ಪ್ಯಾರಾ ಮತ್ತು ತಃಖ್ತೆಯನ್ನು ಸೇರಿಸತಕ್ಕದ್ದು.

"೧೯ ಬುಡಕಟ್ಟು ಪ್ರದೇಶಗಳು– (೧) ಕೆಳಕಂಡ ತಃಖ್ತೆಯ ಭಾಗ I ಮತ್ತು ಭಾಗ II ಇವುಗಳಲ್ಲಿ ನಿರ್ದಿಷ್ಟಪಡಿಸಲಾದ ಪ್ರದೇಶಗಳು ಅಸ್ಸಾಂ ರಾಜ್ಯದ ಬುಡಕಟ್ಟು ಪ್ರದೇಶಗಳಾಗಿರತಕ್ಕದ್ದು.

(೨) ಯುನೈಟೆಡ್ ಖಾಸಿ ಜೈಂತಿಯಾ ಹಿಲ್ಸ್ ಜಿಲ್ಲೆಯು ಈ ಸಂವಿಧಾನದ ಪ್ರಾರಂಭಕ್ಕೆ ಮುನ್ನ ಖಾಸಿ ರಾಜ್ಯಗಳು ಮತ್ತು ಜೈಂತಿಯಾ ಹಿಲ್ಸ್ ಜಿಲ್ಲೆಗಳೆಂದು ಕರೆಯಲಾಗುತ್ತಿದ್ದ ಪ್ರದೇಶಗಳನ್ನು ಒಳಗೊಂಡಿರತಕ್ಕದ್ದು, ಶಿಲ್ಲಾಂಗ್‌ನ ಕಂಟೋನ್ಮೆಂಟ್ ಮತ್ತು ಮುನಿಸಿಪಾಲಿಟಿ ಇವುಗಳಲ್ಲಿ ತತ್ಕಾಲದಲ್ಲಿ ಒಳಗೊಂಡಿರತಕ್ಕ ಯಾವುದೇ ಪ್ರದೇಶಗಳನ್ನು ಹೊರತುಪಡಿಸಿ, ಆದರೆ ಶಿಲ್ಲಾಂಗ್‌ನ ಮುನಿಸಿಪಾಲಿಟಿಯಲ್ಲಿ ಒಳಗೊಂಡಿರತಕ್ಕ ಪ್ರದೇಶದ ಪೈಕಿ ಮಿಲಿಯಂ ಖಾಸಿ ಸಂಸ್ಥಾನದ ಭಾಗವಾಗಿರುವಷ್ಟನ್ನು ಹೊರತುಪಡಿಸಿ.

ಪರಂತು, ಈ ಅನುಸೂಚಿಯ ಪ್ಯಾರಾ ೩ರ (೧) ಉಪಪ್ಯಾರಾದ (ಇ) ಮತ್ತು (ಎಫ್) ಈ ಖಂಡಗಳ, ಪ್ಯಾರಾ ೪ ಮತ್ತು ಪ್ಯಾರಾ ೫ ಮತ್ತು ಉಪಪ್ಯಾರಾ (೨) ಪ್ಯಾರಾ (೩)ರ ಖಂಡಗಳು (ಎ), (ಬಿ) ಮತ್ತು (ಡಿ) ಮತ್ತು ಪ್ಯಾರಾ ೮ರ ಉಪಪ್ಯಾರಾ (೪) ಇವುಗಳ ಉದ್ದೇಶಗಳಿಗಾಗಿ, ಶಿಲ್ಲಾಂಗ್ ಮುನಿಸಿಪಾಲಿಟಿಯಲ್ಲಿ ಒಳಗೊಂಡಿರತಕ್ಕ ಪ್ರದೇಶದ ಯಾವುದೇ ಭಾಗವನ್ನು ಜಿಲ್ಲೆಯಲ್ಲಿ ಒಳಗೊಂಡಿರುವುದಾಗಿ ಭಾವಿಸತಕ್ಕದ್ದಲ್ಲ.

(೩) (ಯುನೈಟೆಡ್ ಖಾಸಿ–ಜೈಂತಿಯಾ ಹಿಲ್ಸ್ ಜಿಲ್ಲೆಯ ಹೊರತಾಗಿ) ಕೆಳಕಂಡ ಯಾವುದೇ ಜಿಲ್ಲೆಯ ತಃಖ್ತೆಯಲ್ಲಿನ ಯಾವುದೇ ಉಲ್ಲೇಖವನ್ನು, ಈ ಸಂವಿಧಾನದ ಪ್ರಾರಂಭದ ದಿನಾಂಕದಂದು ಆ ಜಿಲ್ಲೆಗೆ ಅಥವಾ ಪ್ರದೇಶಕ್ಕೆ ಮಾಡಲಾದ ಉಲ್ಲೇಖ ಎಂದು ಭಾವಿಸತಕ್ಕದ್ದಲ್ಲ.

ಪರಂತು ಕೆಳಕಂಡ ತಃಖ್ತೆಯ IIನೆಯ ಭಾಗದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಬುಡಕಟ್ಟು ಪ್ರದೇಶಗಳು, ಅಸ್ಸಾಂ ರಾಜ್ಯಪಾಲನು ಈ ಸಂಬಂಧದಲ್ಲಿ, ರಾಷ್ಟ್ರಪತಿಯ ಪೂರ್ವಾನುಮತಿಯನ್ನು ಪಡೆದು ಸೂಚಿಸಬಹುದಾದಂಥ ಬಯಲು ನಾಡಿನಲ್ಲಿ, ಅಂಥ ಯಾವುದೇ ಪ್ರದೇಶಗಳನ್ನು ಒಳಗೊಳ್ಳತಕ್ಕದ್ದಲ್ಲ.

---

* ಸಿ.ಎ.ಡಿ. ಸಂ. IX, ೭ನೇ ಸೆಪ್ಟೆಂಬರ್ ೧೯೪೯, ಪುಟ ೧೦೫೬–೧೦೫೭.

## ತಃಖ್ತೆ

**ಭಾಗ–I**

೧. ಯುನೈಟೆಡ್ ಖಾಸಿ ಜೈಂತಿಯಾ ಹಿಲ್ಸ್ ಜಿಲ್ಲೆ
೨. ಗಾರೋ ಹಿಲ್ಸ್ ಜಿಲ್ಲೆ
೩. ಲುದಾಯಿ ಹಿಲ್ಸ್ ಜಿಲ್ಲೆ
೪. ನಾಗಾ ಹಿಲ್ಸ್ ಜಿಲ್ಲೆ
೫. ನಾರ್ತ್ ಕಾಚಾರ್ ಹಿಲ್ಸ್
೬. ಮಿಕಿರ್ ಹಿಲ್ಸ್ ಜಿಲ್ಲೆ

**ಭಾಗ–II**

೧. **ಈಶಾನ್ಯ ಸರಹದ್ದು:** ಬಲಿಪಾರಾ ಫ್ರಂಟಿಯರ್ ಟ್ರಾಕ್ ಅನ್ನು ಒಳಗೊಂಡ ಟ್ರಾಕ್, ತಿರಪ್ ಫ್ರಂಟಿಯರ್ ಟ್ರಾಕ್ಸ್, ಅಬೋರ್ ಹಿಲ್ಸ್ ಜಿಲ್ಲೆ, ಮಿಸಿಮಿ ಹಿಲ್ಸ್ ಜಿಲ್ಲೆ.

೨. ನಾಗಾ ಬುಡಕಟ್ಟು ಪ್ರದೇಶ

* * *

**ಶ್ರೀ ರೋಹಿಣಿಕುಮಾರ್ ಚೌಧುರಿ:** ಆದರೆ ಡಾ. ಅಂಬೇಡ್ಕರ್ ಅವರು ಮಂಡಿಸಿದ ತಿದ್ದುಪಡಿಯು ಒಂದು ಛದ್ಮ ಎಂದು ನನ್ನ ಅನಿಸಿಕೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಯಾತಕ್ಕಾಗಿ ಛದ್ಮ?

**ಶ್ರೀ ರೋಹಿಣಿಕುಮಾರ್ ಚೌಧುರಿ:** ಏತಕ್ಕೆ ಅಂದರೆ ಈ ತಿದ್ದುಪಡಿಯ ಮೂಲಕ ಡಾ. ಅಂಬೇಡ್ಕರ್ ಅವರು, ಸ್ವಾಯತ್ತ ಜಿಲ್ಲೆಯಲ್ಲಿ ಶಿಲ್ಲಾಂಗ್ ಮುನಿಸಿಪಾಲಿಟಿಯ ಯಾವುದೇ ಭಾಗವನ್ನು ಸೇರ್ಪಡೆ ಮಾಡುವುದಕ್ಕೆ ಸಂಬಂಧಪಟ್ಟಂತೆ ತಮ್ಮ ನಿಲುವನ್ನು ಬದಲಾಯಿಸಿರುವ ಹಾಗೆ ಸೂಚಿಸಲು ಬಯಸುತ್ತಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ನನ್ನ ನಿಲುವನ್ನು ಬದಲಾಯಿಸಿಲ್ಲ.

**ಶ್ರೀ ರೋಹಿಣಿಕುಮಾರ್ ಚೌಧುರಿ:** ಈಗಿರುವಂತೆ ತಿದ್ದುಪಡಿಯ ಪ್ಯಾರಾ (೨)ನಲ್ಲಿ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ನಮಗೆ ಈ ವಿಷಯದಲ್ಲಿ ಎಳ್ಳಷ್ಟೂ ಹಿತಾಸಕ್ತಿ ಇಲ್ಲ ಎಂದು ಮತ್ತು ಆ ಬಗ್ಗೆ ಯಾವುದೇ ಛದ್ಮ ತಂತ್ರದ ಅಗತ್ಯ ಇಲ್ಲ ಎಂದು ಹೇಳಲೆ?

**ಮಾನ್ಯ ಸಭಾಧ್ಯಕ್ಷರು:** ಛದ್ಮ ತಂತ್ರದ ಪ್ರಶ್ನೆಯೇ ಇಲ್ಲ. ಆ ಪ್ಯಾರಾ ಅರ್ಥವು ಅತ್ಯಂತ ಸ್ಪಷ್ಟವಾಗಿದೆ. ಮಿಲಿಯಂ ಸಂಸ್ಥಾನದ ಭಾಗವಾಗಿರತಕ್ಕ ಪ್ರದೇಶವನ್ನು ಹೊರತುಪಡಿಸಿ ಶಿಲ್ಲಾಂಗ್ ಮುನಿಸಿಪಾಲಿಟಿಯನ್ನು ಹೊರತುಪಡಿಸುವುದೇ ಆ ಉದ್ದೇಶ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ಪ್ಯಾರಾ ೧೯ರ ಹೊಸ ಪ್ಯಾರಾವನ್ನು ಪ್ರತಿಸ್ಥಾಪಿಸುವ ನನ್ನ ಸಂಖ್ಯೆ ೩೩೧ ಈ ತಿದ್ದುಪಡಿಯು, ಈಗ ನಾನು ಕಾಣುತ್ತಿರುವಂಥ ಬಗೆಯ ತೊಂದರೆಗೆ ಎಡೆಮಾಡಿ

---

* ಸಿ.ಎ.ಡಿ. ಸಂ. IX, ೭ನೇ ಸೆಪ್ಟೆಂಬರ್ ೧೯೪೯, ಪುಟ ೧೦೬೩–೧೦೬೪.

* ಅದೇ, ಪುಟ ೧೦೭೦–೧೦೭೪.

ಕೊಡಬಹುದು ಎಂದು ಎಣಿಸಿರಲಿಲ್ಲ. ಆದ್ದರಿಂದ ಪ್ಯಾರಾ ೧೯ರಲ್ಲಿ ಒಳಗೊಂಡ ಉಪಬಂಧಗಳನ್ನು ವಿವರಿಸಲು ಹೆಚ್ಚಿನ ಸಮಯ ತೆಗೆದುಕೊಳ್ಳಲಿಲ್ಲ. ಆದರೆ ಈಗ ನಡೆದ ಒಂದು ರೀತಿ ಚರ್ಚೆಯ ಕಾರಣ, ನಾನು ಹೊಸ ಪ್ಯಾರಾ ೧೯ರಲ್ಲಿ ಒಳಗೊಂಡ ಉಪಬಂಧಗಳನ್ನು ವಿವರಿಸಲು ಕರ್ತವ್ಯಬದ್ಧನಾಗಿದ್ದೇನೆ. ಇದರ ಅರ್ಥ ಏನು ಎಂದು ವಿವರಿಸಲು ಇಷ್ಟಪಡುತ್ತೇನೆ. ಯುನೈಟ್ ಖಾಸಿ ಜೈಂತಿಯಾ ಹಿಲ್ಸ್ ಜಿಲ್ಲೆಗೆ ಸಂಬಂಧಪಡುವಷ್ಟರ ಮಟ್ಟಿಗೆ (ತಃಖ್ತೆಯ ಭಾಗ Iರ ನಮೂದು ೧ರಲ್ಲಿ ನಮೂದಿಸಲಾದ) ಶಿಲ್ಲಾಂಗ್ ಮುನಿಸಿಪಾಲಿಟಿ ಒಳಗೊಂಡಿರತಕ್ಕ ಮತ್ತು ಖಾಸಿ ಮಿಲಿಯಂ ಸಂಸ್ಥಾನದ ಭಾಗವಾಗಿರತಕ್ಕ ಪ್ರದೇಶವು ಯುನೈಟೆಡ್ ಖಾಸಿ ಜೈಂತಿಯಾ ಹಿಲ್ಸ್ ಜಿಲ್ಲೆ ಅಂಗಭೂತ ಭಾಗವಾಗಿರತಕ್ಕದ್ದು. ಅಂದರೆ ಶಿಲ್ಲಾಂಗ್‌ನಲ್ಲಿ ಸೇರಿಸಲಾದ ಮಿಲಿಯಂ ಸಂಸ್ಥಾನದ ಈ ಭಾಗವು ಯುನೈಟೆಡ್ ಖಾಸಿ ಜೈಂತಿಯಾ ಹಿಲ್ಸ್ ಜಿಲ್ಲೆಯ ಭಾಗವಾಗುತ್ತದೆ. ಮಿಲಿಯಂ ಸಂಸ್ಥಾನವು ಹೊಸ ಪ್ಯಾರಾ ೧೯ರ ಉಪಬಂಧಗಳ ಅಡಿಯಲ್ಲಿ ಎರಡು ಪ್ರತ್ಯೇಕ ಅಧಿಕಾರ ಕ್ಷೇತ್ರಗಳಿಗೆ ಒಳಪಡುತ್ತದೆ ಎಂದು ಮನಗಾಣಬಹುದು. ಅದು ಶಿಲ್ಲಾಂಗ್ ಮುನಿಸಿಪಾಲಿಟಿಯ ಅಧಿಕಾರ ಕ್ಷೇತ್ರಕ್ಕೆ ಒಳಪಡುತ್ತದೆ. ಯಾಕೆಂದರೆ, ಈ ಉಪಬಂಧದ್ವಾರಾ ನಾವು ಅಸ್ಸಾಂ ವಿಧಾನಮಂಡಳವು ತೀರ್ಣಗೊಳಿಸಿದ ಮುನಿಸಿಪಲ್ ಅಧಿನಿಯಮದ ಮೂಲಕ ನಿರ್ಧರಿಸಲಾದಂಥ ಶಿಲ್ಲಾಂಗ್ ಮುನಿಸಿಪಾಲಿಟಿಯ ಎಲ್ಲೆಗಳನ್ನು ಬದಲಾಯಿಸುತ್ತಿಲ್ಲ. ಆ ಅಧಿನಿಯಮದ ಪ್ರಕಾರ ಮಿಲಿಯಂ ಸಂಸ್ಥಾನದ ಈ ನಿರ್ದಿಷ್ಟ ಭಾಗವು ಮುನಿಸಿಪಾಲಿಟಿಯಲ್ಲಿ ಒಳಗೊಂಡಿರುತ್ತದೆ.

ಇಮ್ಮಡಿ ಕ್ಷೇತ್ರಾಧಿಕಾರದ ಮೂಲಕ ಯುನೈಟೆಡ್ ಖಾಸಿ ಜೈಂತಿಯಾ ಹಿಲ್ಸ್ ಜಿಲ್ಲೆ ಮತ್ತು ಮುನಿಸಿಪಾಲಿಟಿಯ ನಡುವೆ ಘರ್ಷಣೆ ಉಂಟಾಗುವ ಸಂಭವವುಂಟು. ಅಂಥ ಘರ್ಷಣೆಯನ್ನು ನಿವಾರಿಸುವ ಸಲುವಾಗಿ ನಾನು ಉಪಖಂಡ (೨)ಕ್ಕೆ ಒಂದು ಪರಂತುಕವನ್ನು ಜೋಡಿಸಿದ್ದೇನೆ. ಈ ಪರಂತುಕದ ಪರಿಣಾಮ ಹೀಗಾಗುತ್ತದೆ. ಯುನೈಟೆಡ್ ಖಾಸಿ ಜೈಂತಿಯಾ ಹಿಲ್ಸ್ ಜಿಲ್ಲೆಯ ಜಿಲ್ಲಾ ಪರಿಷತ್ತಿನ ಕ್ಷೇತ್ರಾಧಿಕಾರವು ಇಲ್ಲದಂತಾಗುತ್ತದೆ ಮತ್ತು ಆ ಮಟ್ಟಿಗೆ ಮುನಿಸಿಪಾಲಿಟಿಯ ಕ್ಷೇತ್ರಾಧಿಕಾರವು ನಿರ್ಬಂಧಿತವಾಗುತ್ತದೆ ಮತ್ತು ಪರಂತುಕದಲ್ಲಿ ನಮೂದಿಸಲಾದ ಉದ್ದೇಶಕ್ಕಾಗಿ ಈ ಪ್ರದೇಶದ ಮೇಲೆ ಜಿಲ್ಲಾ ಪರಿಷತ್ತಿನ ಕ್ಷೇತ್ರಾಧಿಕಾರವು ಮುಂದುವರಿಯುತ್ತದೆ. ಕ್ಷೇತ್ರಾಧಿಕಾರದ ಘರ್ಷಣೆಯನ್ನು ತಪ್ಪಿಸುವುದೇ ಈ ಪರಂತುಕದ ಉದ್ದೇಶ. ಇದಿರು ಪಕ್ಷದವರು ಮಿಲಿಯಂ ಸಂಸ್ಥಾನದ ಪ್ರದೇಶವನ್ನು ಯುನೈಟೆಡ್ ಖಾಸಿ ಜೈಂತಿಯಾ ಹಿಲ್ಸ್ ಜಿಲ್ಲೆಯ ಅಧಿಕಾರ ಕ್ಷೇತ್ರದಿಂದ ಸಂಪೂರ್ಣವಾಗಿ ಹೊರತುಪಡಿಸಬೇಕು ಎಂದು ಮತ್ತು ಶಿಲ್ಲಾಂಗ್ ಮುನಿಸಿಪಾಲಿಟಿಯ ಅನನ್ಯ ಅಂಗಭಾಗವಾಗಿ ಮಾಡಬೇಕೆಂದು ಹೇಳುತ್ತಾರೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಈಗ ಇರುವಂತೆಯೇ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹಾಗೆ ಇದೆಯೊ ಹೇಗೆ ನನಗೆ ಗೊತ್ತಿಲ್ಲ. ಪ್ರಶ್ನೆಯೆಂದರೆ ಇಷ್ಟೆ. ಆ ಕಡೆಯ ಪೈಕಿ ಒಬ್ಬರು ನನ್ನ ಸ್ನೇಹಿತ ಶ್ರೀ ರೋಹಿಣಿಕುಮಾರ್ ಎಂದು ತೋರುತ್ತದೆ. ಅವರು ಹೇಳುವ ಹಾಗೆ ಮುನಿಸಿಪಾಲಿಟಿಯ ನಾಲ್ಕರ ಮೂರು ಭಾಗವು ವಾಸ್ತವವಾಗಿ ಈ ಪ್ರದೇಶದಿಂದ ಆವೃತವಾಗಿದೆ. ಇನ್ನು, ವಿವಾಹ ವಿಧಿಗಳು, ವಾರಸಾ ಕಾನೂನುಗಳು ಮತ್ತು ಇತರ ರೂಢಿ ರಿವಾಜುಗಳು ಮತ್ತು ರೀತಿ ನೀತಿಗಳು ಇವುಗಳಿಗೆ ಸಂಬಂಧಪಟ್ಟ ಹಾಗೆ ಮಿಲಿಯಂ ಸಂಸ್ಥಾನದ ಭಾಗದ ನಿವಾಸಿಗಳು ಅವೇ ಕಾನೂನುಗಳಿಗೆ ಒಳಪಡುತ್ತಾರೆ. ಇಡೀ ಜಿಲ್ಲೆಯಲ್ಲಿ ಪ್ರಚಲಿತವಿರುವ ಅದೇ ಕಾನೂನುಗಳನ್ನು ಅವೇ ರೂಢಿ ರಿವಾಜುಗಳನ್ನು ಮತ್ತು ಸಮಾರಂಭಗಳನ್ನು ಅನುಸರಿಸುತ್ತಾರೆ. ಪರಿಣಾಮಸ್ವರೂಪವಾಗಿ ಒದಗುವ ಪರಿಸ್ಥಿತಿ ಎಂದರೆ ಹೀಗೆ: ಈ ಪ್ರದೇಶವನ್ನು ಯುನೈಟೆಡ್ ಖಾಸಿ ಜೈಂತಿಯಾ ಹಿಲ್ಸ್ ಜಿಲ್ಲೆಯಿಂದ

ಸಂಪೂರ್ಣವಾಗಿ ಹೊರತುಪಡಿಸಲಾಯಿತು ಎಂದು ಭಾವಿಸೋಣ. ಈ ಜನರು ವಿವಾಹ ವಿಧಿಗಳು, ವಾರಸಾ ಕಾನೂನು, ಇತರ ರೂಢಿ ರಿವಾಜು, ರೀತಿ–ನೀತಿಗಳೇ ಮುಂತಾದವುಗಳ ವಿಚಾರದಲ್ಲಿ ವಿಲಿಯಂ ಸಂಸ್ಥಾನದ ಇತರ ಭಾಗದ ಸೋದರರಂತೆಯೇ ಇದ್ದಾಗ್ಯೂ ಅವರು ಒಮ್ಮಿಂದೊಮ್ಮೆಯೆ, ಸಂಸತ್ತು ಮತ್ತು ಅಸ್ಸಾಂ ವಿಧಾನಮಂಡಳವು ರಚಿಸಬಹುದಾದ, ಸಾರ್ವತ್ರಿಕ ವಿವಾಹ ವಿಧಿಗಳು ವಾರಸಾ ಕಾನೂನುಗಳು, ಎಲ್ಲ ಸಾರ್ವತ್ರಿಕ ಕಾನೂನುಗಳು ವ್ಯಾಪ್ತಿಗೆ ಸೇರುತ್ತಾರೆ. ಕೆಲವು ನಿರ್ದಿಷ್ಟ ವಿಷಯಗಳಲ್ಲಿ ಏಕರೂಪವಾಗಿರುವ ಜನಸಮುದಾಯಗಳನ್ನು ಈ ರೀತಿ ವಿಚ್ಛೇದಿಸುವುದು ತರವಲ್ಲ ಎಂದು ನನ್ನ ಅನಿಸಿಕೆ. ಸಮುದಾಯದ ಒಂದು ಭಾಗವು ತಮ್ಮ ಬುಡಕಟ್ಟು ಜೀವನಕ್ಕೆ ಸಂಬಂಧಪಟ್ಟ ಹಾಗೆ, ಸ್ವಾಯತ್ತತೆಯನ್ನು ಪಡೆಯುತ್ತದೆ. ಇನ್ನೊಂದು ಭಾಗವು ಇತರ ಜನಸಮುದಾಯ ಒಳಪಡುವ ಸಾರ್ವತ್ರಿಕ ಕಾನೂನುಗಳಿಗೆ ಒಳಪಡುತ್ತದೆ. ಈ ಕಾರಣಕ್ಕಾಗಿಯೇ ಕರಡು ರಚನಾ ಸಮಿತಿಯು, ಉಪಖಂಡ (೨)ರಲ್ಲಿ ಒಳಗೊಂಡ ಉಪಬಂಧವು ಮತ್ತು ಅದಕ್ಕೆ ಲಗತ್ತಾಗಿ ಬರುವ ಪರಂತುಕವು ಈ ಸಮಸ್ಯೆಗೆ ಸೂಕ್ತ ಪರಿಹಾರ ಮಾರ್ಗ ಎಂದು ಭಾವಿಸಿತ್ತು. ಅಂದರೆ, ಪರಂತುಕದಲ್ಲಿ ವಿವರಣಾತ್ಮಕವಾಗಿ ಪರಿಭಾಷಿಸಲಾದಂತೆ, ಮುನಿಸಿಪಾಲಿಟಿಯ ಉದ್ದೇಶಕ್ಕಾಗಿ, ಮುನಿಸಿಪಾಲಿಟಿಯ ಭಾಗವಾಗಿರುಂಥ ವಿಲಿಯಂ ಸಂಸ್ಥಾನದ ಭಾಗವು, ಮುನಿಸಿಪಾಲಿಟಿಯ ಅಧಿಕಾರ ವ್ಯಾಪ್ತಿಯ ಅಧೀನದಲ್ಲಿ ಇರಬೇಕು ಮತ್ತು ಜಿಲ್ಲಾ ಪರಿಷತ್ತನ್ನು ಯಾವ ಉದ್ದೇಶಕ್ಕಾಗಿ ರಚಿಸಲಾಗಿದೆಯೋ ಆ ಸಂಬಂಧದಲ್ಲಿ ಜಿಲ್ಲಾ ಪರಿಷತ್ತಿನ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರಬೇಕು. ಹಾಗಾದರೆ ಘರ್ಷಣೆಗೆ ಅವಕಾಶವಿಲ್ಲ. ಹಾಗೆಯೇ ಆ ಮೂಲಕ ಮೂಲಭೂತ ಉದ್ದೇಶದ ನೆರವೇರಿಕೆಗೆ ಅನುಕೂಲವಾಗುತ್ತದೆ. ಅರ್ಥಾತ್ ಒಂದೇ ತರಹದ ಜನಸಮುದಾಯವು ಒಂದೇ ಬಗೆಯ ಕಾನೂನುಗಳಿಗೆ, ಒಂದೇ ಬಗೆಯ ಆಡಳಿತ ವ್ಯವಸ್ಥೆಗೆ ಒಳಪಡಬೇಕು ಎಂಬ ಉದ್ದೇಶವು ಈಡೇರಲು ಅನುಕೂಲವಾಗುತ್ತದೆ.

ಇನ್ನು ಈ ಸಂಬಂಧದಲ್ಲಿ ವಿವಾದಕ್ಕೆ ಎಡೆಯುಂಟಾಗುವ ಸಂಭವವುಂಟು. ಏನೆಲ್ಲ ವಿಷಯಗಳನ್ನು ಅಡಕಗೊಳಿಸಬೇಕೋ ಆ ಎಲ್ಲಾ ವಿಷಯಗಳನ್ನು ಅಡಕಗೊಳಿಸುವಷ್ಟು ವಿಶಾಲವಾಗಿದೆಯೇ ಈ ಪರಂತುಕ? ಅಥವಾ ಸಂಕುಚಿತವಾಗಿದೆಯೇ? ಆ ಬಗ್ಗೆ ನಾನು ಯಾವುದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಲಾರೆನು. ಈ ವಿಚಾರದಲ್ಲಿ ಕರಡು ರಚನಾ ಸಮಿತಿಯವರು ಇಬ್ಬರು ಪ್ರಧಾನ ಪ್ರತಿನಿಧಿಗಳ ದ್ವಾರಾ ಮಾರ್ಗದರ್ಶನ ಪಡೆದಿದ್ದಾರೆ. ಅಸ್ಸಾಂನ ಪ್ರಧಾನಿ ಮತ್ತು ಅವರ ಸಹೋದ್ಯೋಗಿ ನಿಕೋಲ್ಸ್‌ರಾಯ್ ಇವರಿಬ್ಬರೂ ವಿಷಯದ ಬಗ್ಗೆ ಸಾಕಷ್ಟು ಜ್ಞಾನವನ್ನು ಮಾಹಿತಿಯನ್ನು ಪಡೆದವರು. ಅವರು ತಿಳಿವಳಿಕೆ ತೋರುವ ಪ್ರಕಾರ ಇನ್ನೂ ಇತರ ವಿಷಯಗಳನ್ನು ಅಡಕಗೊಳಿಸಬೇಕು ಎಂದು ಇಷ್ಟಪಟ್ಟರೆ, ಕರಡು ರಚನಾ ಸಮಿತಿಯು ಖಂಡಿತವಾಗಿಯೂ ಯಾವುದೇ ಆಕ್ಷೇಪವೆತ್ತಲಿಕ್ಕಿಲ್ಲ. ಕಾರಣವೆಂದರೆ ಕರಡು ರಚನಾ ಸಮಿತಿಗೂ ಈ ವಿಷಯಕ್ಕೂ ಯಾವುದೇ ಸಂಬಂಧವಿಲ್ಲ.

**ಶ್ರೀ ರೋಹಿಣಿಕುಮಾರ್ ಚೌಧುರಿ:** ಶಿಲ್ಲಾಂಗ್‌ನಲ್ಲಿ ವಾಸಿಸುವ ಬುಡಕಟ್ಟು ಜನಾಂಗದವರಲ್ಲದ ಜನ ಸಮುದಾಯಗಳಿಗೆ ಈ ವಿಷಯದಲ್ಲಿ ತಮ್ಮ ನಿಲುವನ್ನು ಹೇಳಿಕೊಳ್ಳುವ ಅವಕಾಶವಿಲ್ಲವೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಯಾವ ವಿಷಯದಲ್ಲಿ?

**ಶ್ರೀ ರೋಹಿಣಿಕುಮಾರ್ ಚೌಧುರಿ:** ನೀವು ಯಾವೆಲ್ಲ ವಿಷಯಗಳನ್ನು ಕುರಿತು ಪರಿಶೀಲಿಸುತ್ತಿರುವಿರೋ ಆ ಪ್ರತಿಯೊಂದು ವಿಷಯದಲ್ಲಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಮ್ಮ ವಿಚಾರ ನನಗೆ ಅರ್ಥವಾಗಲಿಲ್ಲ. ನಾವು ಮಾಡಿರುವುದೇನೆಂದರೆ ಈ ಭಾಗದಲ್ಲಿ ವಾಸಿಸುವ ಜನಗಳ ಸಲುವಾಗಿ ಇಮ್ಮಡಿ ಹಕ್ಕುಗಳ ವ್ಯವಸ್ಥೆ.

ಅವರು ಶಿಲ್ಲಾಂಗ್ ಮುನಿಸಿಪಾಲಿಟಿಯ ಅಧೀನದಲ್ಲಿ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕು ಹೊಂದಿರುತ್ತಾರೆ. ಮಾತ್ರವಲ್ಲದೆ, ಜಿಲ್ಲಾ ಪರಿಷತ್ತುಗಳಲ್ಲಿ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕು ಹೊಂದಿರುತ್ತಾರೆ. ಅದರ ಆಚೆ ಅಧಿಕಾರವ್ಯಾಪ್ತಿಯು ನಿಖರವಾಗಿ ಪ್ರತ್ಯೇಕವಾಗಿರುತ್ತದೆ. ಈ ಹೊಸ ೧೯ನೇ ಪ್ಯಾರಾಕ್ಕೆ ಸಂಬಂಧಪಟ್ಟ ಹಾಗೆ ಯಾವುದೇ ಇತರ ವಿಚಾರಾಂಶ ಇದೆಯೆಂದು ನನಗೆ ಅನ್ನಿಸುವುದಿಲ್ಲ.

**ಶ್ರೀ ರೋಹಿಣಿಕುಮಾರ್ ಚೌಧುರಿ:** ಮಾಹಿತಿ ಪ್ರಶ್ನೆಯನ್ನೆತ್ತಿ ನಾನು ಕೇಳುವುದೇನೆಂದರೆ, ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರ ಪ್ರಕಾರ ಒಬ್ಬನೇ ಒಬ್ಬ ಬುಡಕಟ್ಟು ಜನಾಂಗದ ವ್ಯಕ್ತಿಯು ಇಲ್ಲದಿರುವ ದಿಮಾಪುರದಲ್ಲಿ ಇರುವ ಜನಗಳಿಗೂ ಶಿಲ್ಲಾಂಗ್‌ನಲ್ಲಿರುವ ಆ ಜನಗಳಿಗೂ ಸಂಪೂರ್ಣವಾಗಿ ರೆವರೆಂಡ್ ನಿಕೋಲ್ಸ್‌ರಾಯ್ ಅವರ ಅಭಿಪ್ರಾಯಗಳ ಮೂಲಕವೇ ಮಾರ್ಗದರ್ಶನ ಸಿಗಬೇಕು ಎಂದು ಅರ್ಥವೆ?

**ಮಾನ್ಯ ಸಭಾಧ್ಯಕ್ಷರು:** ಅವರು ದಿಮಾಪುರ್ ಬಗ್ಗೆ ಏನನ್ನೂ ಹೇಳಿಲ್ಲ. ಅವರು ಪ್ಯಾರಾ ೧೦, ಉಪಪ್ಯಾರಾ (೨)ದ (ಡಿ) ಉಪಖಂಡವನ್ನು ಪರಂತುಕದಲ್ಲಿ ಸೇರಿಸಬಹುದೋ ಹೇಗೆ ಎಂದು ಶ್ರೀ ಬಾರ್ದೊಲೊಯ್ ಅವರು ಕೇಳಿದ ಪ್ರಶ್ನೆಯನ್ನು ಪರಿಶೀಲಿಸುತ್ತಿದ್ದಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಆಕ್ಷೇಪಣೆಯೇನೂ ಇಲ್ಲ. ವಿಷಯವನ್ನು ಅವರ ನಿರ್ಧಾರಕ್ಕೆ ಬಿಟ್ಟುಕೊಡುತ್ತೇವೆ. ಕೆಲವು ವಿಷಯಗಳು ಸೇರ್ಪಡೆ ಆಗಬೇಕು ಎಂದು ಅವರು ಭಾವಿಸಿದರೆ, ನಾವೇಕೆ ಆಕ್ಷೇಪ ಎತ್ತಬೇಕು. ನಾವು ಅವರ ಸಲಹೆಯ ಮೇರೆಗೆ ಕ್ರಮ ಕೈಗೊಳ್ಳುತ್ತೇವೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಈ ಅಂಶವನ್ನು ಕುರಿತು ನಾನು ಡಾ. ಅಂಬೇಡ್ಕರ್ ಅವರಿಂದ ಮಾಹಿತಿಯನ್ನು ಕೇಳಲೆ? ಕರಡು ರಚನಾ ಸಮಿತಿಗೆ ಅಥವಾ ಅಸ್ಸಾಂ ಬುಡಕಟ್ಟು ಜನಾಂಗಗಳ ಸಮಿತಿಯ ವರದಿಗೆ ಸಹಿ ಹಾಕಿರುವ ಶ್ರೀ ಬಾರ್ದೊಲೊಯ್ ಮತ್ತು ರೆವರೆಂಡ್ ನಿಕೋಲ್ಸ್‌ರಾಯ್ ಅವರಿಗೆ ಶಿಲ್ಲಾಂಗ್ ಮುನಿಸಿಪಾಲಿಟಿಯ ಕಾರ್ಯಕ್ಷೇತ್ರದ ಎಲ್ಲೆಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಗಳ ಸ್ಥಾನಮಾನಕ್ಕೆ ಸಂಬಂಧಿಸಿದ ಹಾಗೆ ಬದಲಾವಣೆ ಆಗಬೇಕೆಂದು ಕೋರುವ ಯಾವುದೇ ಮನವಿಗಳೇನಾದರೂ ಬಂದಿದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರ ವಿಶ್ವಾಸಾರ್ಹತೆಯನ್ನು ಕುರಿತು ಪ್ರಶ್ನಿಸಿಲ್ಲ. ಅಥವಾ ಅಂತಹ ಯಾವುದೇ ಮನವಿಯ ಮೂಲಕ ತಮ್ಮ ನಿಲುವನ್ನು ಗಟ್ಟಿಗೊಳಿಸಿಕೊಂಡಿದ್ದಾರೆಯೇ ಹೇಗೆ ಎಂಬುದನ್ನು ಸಹ ಪರೀಕ್ಷಿಸಿಲ್ಲ.

**ಪಂಡಿತ್ ಹೃದಯನಾಥ್ ಕುಂಝ್ರು:** ನಾನು ಈ ಪ್ರಶ್ನೆಯನ್ನು ಕೇಳಿದ್ದಕ್ಕೆ ಕಾರಣವೆಂದರೆ, ನನ್ನ ಮಾನ್ಯ ಸ್ನೇಹಿತರು ಅಸ್ಸಾಂ ಪ್ರಧಾನಿ ಮತ್ತು ರೆವರೆಂಡ್ ನಿಕೋಲ್ಸ್‌ರಾಯ್ ಅವರ ಪ್ರಾಧಿಕಾರವನ್ನು ಕುರಿತು ಉಲ್ಲೇಖಿಸಿದ್ದು, ಆದರೆ ನಾನು ಉಲ್ಲೇಖಿಸಿದ ಸಮಿತಿಯ ವರದಿಗೆ ಈ ಇಬ್ಬರೂ ಸಭ್ಯ ಗೃಹಸ್ಥರು ಸಹಿ ಹಾಕಿದ್ದಾರೆ ಮತ್ತು ಆ ಸಮಿತಿಯ ಪ್ರಕಾರ ಶಿಲ್ಲಾಂಗ್ ಮುನಿಸಿಪಾಲಿಟಿಯ ಎಲ್ಲೆಗಳು ಈಗ ಇರುವ ಹಾಗೆಯೇ ಮುಂದುವರಿಯಬೇಕು. ಇದಲ್ಲದೆ, ಸಮಿತಿಯು ಆ ಪ್ರದೇಶದಲ್ಲಿ ವಾಸಿಸುತ್ತಿರುವ ಜನಗಳ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆ ಆಗಬೇಕೆಂದು ಸಲಹೆ ಮಾಡಿರುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ಹಾಗೇನೋ ಮಾಡಿರಬಹುದು. ಆದರೆ, ಆ ಮೂಲಕ ಇನ್ನಷ್ಟು ಮರುಪರೀಕ್ಷೆ ಕೂಡದು ಎಂದು ಅರ್ಥವಾಗುವುದಿಲ್ಲವಲ್ಲ. ನಾನು ಹೇಳಿದ ಪ್ರಕಾರ, ಕರಡು ರಚನಾ ಸಮಿತಿಯು, ಈ ವಿಷಯವು ಸ್ಥಳೀಯ ವಿಷಯವೆಂದು ಪರಿಗಣಿಸಿತ್ತು ಮತ್ತು ಆ ಕಾರಣ

ಆ ವಿಷಯದಲ್ಲಿ ಪ್ರಧಾನವಾಗಿ ಪಾಲ್ಗೊಳ್ಳುವವರ ಪ್ರಾಧಿಕಾರ ಅಥವಾ ಸಲಹೆ ಪಡೆಯದೆ ಕ್ರಮ ಕೈಗೊಳ್ಳುವುದು ಸರಿಯಲ್ಲ ಎಂದು ಭಾವಿಸಿತ್ತು. ಅವರು ಹಾಗೆ...*

**ಶ್ರೀ ಕುಲಧರ ಚಾಲಿಹಾ:** ದಿಮಾಪುರ್‌ನಲ್ಲಿ ಭಾರತ ದೇಶದ ಎಲ್ಲೆಡೆಗಳಿಂದ ಬಂದ ಜನಗಳು ವಾಸ ಮಾಡುತ್ತಾರೆ.

**ಮಾನ್ಯ ಸಭಾಧ್ಯಕ್ಷರು:** ದಿಮಾಪುರ್ ಬಗ್ಗೆ ಏನನ್ನು ಹೇಳುವುದರಿಂದಲೂ ಪ್ರಯೋಜನವಿಲ್ಲ. ಅವರು ದಿಮಾಪುರ್ ಬಗ್ಗೆ ಏನನ್ನು ಹೇಳಿರುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಆ ವಿಷಯದ ಬಗ್ಗೆ ಈವರೆಗೆ ಏನನ್ನೂ ಹೇಳಿಲ್ಲ. ನಾನು ಈಗ ಆ ವಿಷಯಕ್ಕೆ ಬರುತ್ತಿದ್ದೇನೆ.

ನಾನೀಗ ಸ್ವಾಯತ್ತ ಜಿಲ್ಲೆಗಳಿಂದ ಕೆಲವು ನಿರ್ದಿಷ್ಟ ಪ್ರದೇಶಗಳನ್ನು ಹೊರತುಪಡಿಸುವ ವಿಷಯಕ್ಕೆ ಬರುತ್ತೇನೆ.

ಈ ಸಂಬಂಧದಲ್ಲಿ, ಇದೀಗ ತೀರ್ಣಗೊಂಡಿರುವ ಅನುಚ್ಛೇದ ೧೬ಎ ದ ಗಮನ ಸೆಳೆಯಬಯಸುತ್ತೇನೆ. ಆ ಅನುಚ್ಛೇದವನ್ನು ಉಲ್ಲೇಖಿಸಬೇಕು ಎಂದು ನನ್ನ ಅಪೇಕ್ಷೆ. ಇದರೊಂದಿಗೆ ಒಂದು ಪ್ರಶ್ನೆ ಸಂಬಂಧಿಸಿದ್ದು, ಗಾರೋಹಿಲ್ಸ್‌ಗಳೆಂದು ಕರೆಯಲಾಗುವ ಎರಡು ಮೌಜಾಗಳಿಗೆ. ಈ ಪ್ರಶ್ನೆಯ ಜತೆಗೆ ದಿಮಾಪುರ್ ಪ್ರದೇಶದ ಪ್ರಶ್ನೆಯನ್ನು ಸಹ ನಮ್ಮ ಸ್ನೇಹಿತ ಶ್ರೀ ಚಾಲಿಹಾ ಅವರು ಎತ್ತಿದ್ದರು. ಅವರು ಆ ಸಮ್ಮೇಳನದಲ್ಲಿ ಹಾಜರಿದ್ದರು ಎಂದು ನಾನು ಹೇಳಿದರೆ ಸಮರ್ಥನೀಯ ಎಂದು ನಾನು ಭಾವಿಸಿದ್ದೇನೆ. ಈ ಸಮ್ಮೇಳನದಲ್ಲಿ ಅಸ್ಸಾಂನ ಇನ್ನೂ ಮೂವರು ಪ್ರತಿನಿಧಿಗಳು ಉಪಸ್ಥಿತರಿದ್ದರು. ಅವರೊಂದಿಗೆ ಶ್ರೀ ಬಾರ್ದೊಲೊಯ್ ರೆವರೆಂಡ್ ನಿಕೋಲ್ಸ್ ರಾಯ್ ಮತ್ತು ಶ್ರೀ ಚಾಲಿಹಾ ಮತ್ತು ಆ ಸಮ್ಮೇಳನದಲ್ಲಿ ಗಾರೋ ಹಿಲ್ಸ್‌ಗಳ ಈ ಮೌಜುಗಳನ್ನು ಮತ್ತು ದಿಮಾಪುರ್ ಪ್ರದೇಶವನ್ನು ಸ್ವಾಯತ್ತ ಜಿಲ್ಲೆಗಳಿಂದ ಬೇರ್ಪಡಿಸಬಹುದೋ ಹೇಗೆ ಎಂಬ ವಿಚಾರವನ್ನು ಪರ್ಯಾಲೋಚಿಸಲಾಯಿತು. ಅದೇ ಸಮ್ಮೇಳನದಲ್ಲಿ, ಆ ಪ್ರದೇಶಗಳ ಮೌಜುಗಳ ಜೀವನವು ಅವರ ಆರ್ಥಿಕ ಜೀವನವು ಸ್ವಾಯತ್ತ ಜಿಲ್ಲೆಗಳ ಜನಸಮುದಾಯದ ಜೀವನದೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿರುವ ಕಾರಣ, ಅವುಗಳನ್ನು ಆ ಸ್ವಾಯತ್ತ ಜಿಲ್ಲೆಗಳಿಂದ ಬೇರ್ಪಡಿಸುವುದು ಅಪೇಕ್ಷಣೀಯವಲ್ಲ ಎಂದು ಅಭಿಪ್ರಾಯ ವ್ಯಕ್ತಗೊಳಿಸಲಾಯಿತು. ಆದಕಾರಣ, ಆ ಪ್ರದೇಶಗಳನ್ನು ಅಂದರೆ, ಗಾರೋಹಿಲ್ಸ್ ಮತ್ತು ದಿಮಾಪುರ ಪ್ರದೇಶದ ಮೂರು ಮೌಜಗಳನ್ನು, ಅಲ್ಲಿನ ಜನಗಳಿಗೆ ವಿಧಾನಸಭೆಯಲ್ಲಿ ರಾಜಕೀಯ ಪ್ರಾತಿನಿಧ್ಯವನ್ನು ಒದಗಿಸುವ ಸಲುವಾಗಿ ಮಾತ್ರವೇ ಬೇರ್ಪಡಿಸಿದರೆ ಸಾಕು ಎಂದು ಹೇಳಲಾಯಿತು. ಅದನ್ನು ಹೇಳಿದವರು ನಿಜವಾಗಿಯೂ ನನ್ನ ಸ್ನೇಹಿತ ಶ್ರೀ ಚಾಲಿಹಾ ಮತ್ತು ಈಗ ಅವರೇ ದಿಮಾಪುರ ಪ್ರದೇಶವನ್ನು ಕುರಿತಂತೆ ಆಕ್ಷೇಪ ಎತ್ತಿದ್ದಾರೆ. ಅವರ ವಿನಂತಿಯ ಮೇರೆಗೆ, ಈ ಮೂವರು ಅಸ್ಸಾಂ ಪ್ರತಿನಿಧಿಗಳ ಕೋರಿಕೆಯ ಮೇರೆಗೆ, ಈಗ ರೂಪಿಸಿರತಕ್ಕ ಪದಸಮುಚ್ಚಯದಲ್ಲಿ ಪ್ಯಾರಾ ೧೬ಎ ರೂಪಿಸಿದ್ದು. ಅವರ ಆ ಸಮುಚ್ಚಯದಲ್ಲಿ, ಅವುಗಳನ್ನು ಸಂಪೂರ್ಣವಾಗಿ ಬೇರ್ಪಡಿಸಬೇಕೆಂದು ಮತ್ತು ಅವು ಸ್ವಾಯತ್ತ ಜಿಲ್ಲೆಗಳ ಭಾಗವಾಗಿರಕೂಡದೆಂದು ಒಪ್ಪಿಕೊಂಡಿದ್ದರೆ, ಅವರ ಆಶೋತ್ತರವನ್ನು ಈಡೇರಿಸುವಲ್ಲಿ ನಾವು ಆಕ್ಷೇಪವೆತ್ತುತ್ತಿರಲಿಲ್ಲ. ಆದಕಾರಣ, ಕರಡು ರಚನಾ ಸಮಿತಿಯು ಯಾವುದನ್ನು ಮಾಡಬೇಕು ಎಂದು ಅದಕ್ಕೆ ಸಲಹೆ ಮಾಡಿಲ್ಲವೋ, ಅದನ್ನು ಮಾಡಿದ್ದುಂಟು ಎಂದು ಅದರ ಮೇಲೆ ತಪ್ಪು ಹೊರಿಸುವುದರಲ್ಲಿ

---

* ಚುಕ್ಕಿಗಳು ತಡೆಯನ್ನು ಸೂಚಿಸುತ್ತದೆ.

ಅರ್ಥವಿಲ್ಲ. ಅದು ನನ್ನ ಅಭಿಪ್ರಾಯ, ನಿವೇದನೆ. ಪ್ಯಾರಾ ೧೬ಎ ಕರಡು ರಚನಾ ಸಮಿತಿಯವರ ಮತ್ತು ಮೊದಲ ಬಾರಿಗೆ ದಿಮಾಪುರ ವಿಷಯವನ್ನು ಪ್ರಸ್ತಾವಿಸಿದ ಶ್ರೀ ಚಾಲಿಹಾ ಅವರೂ ಸೇರಿದಂತೆ ಅಸ್ಸಾಂನ ಮೂವರು ಪ್ರತಿನಿಧಿಗಳವರ ಯಥಾರ್ಥ ನಿರ್ಣಯಗಳು ಒಳಗೊಂಡಿರುತ್ತದೆ.

**ಶ್ರೀ ಕುಲಧರ ಚಾಲಿಹಾ:** ಅಲ್ಲಿ ನನ್ನನ್ನು ಒಬ್ಬ ಸಲಹೆಗಾರನಾಗಿ ನಿರೀಕ್ಷಿಸಲು ಮಾತ್ರ ಕಳಿಸಲಾಗಿತ್ತು ಎಂದು ನಾನು ತಿಳಿಸಬಹುದೆ? ನಾನು ಆ ಸಮಿತಿಯ ಸದಸ್ಯನಾಗಿದ್ದೇನೆಂದು ಎಂದೂ ಅನಿಸಿದ್ದಿಲ್ಲ. ಮಾತ್ರವಲ್ಲದೆ, ಸಮಿತಿಯಲ್ಲಿ ನನ್ನ ಹೆಸರು ಕಂಡುಬರುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ನೀವು ಕರಡು ರಚನಾ ಸಮಿತಿಯ ಸದಸ್ಯರಾಗಿದ್ದೀರಿ ಎಂದು ಯಾರೂ ಹೇಳಿಲ್ಲ. ನೀವು ಸಭೆಯಲ್ಲಿ ಹಾಜರಿದ್ದೀರಿ ಎಂದು ಮಾತ್ರ ಅವರು ಹೇಳಿದ್ದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಅವರ ಅಭಿಪ್ರಾಯ. ಇನ್ನೂ ಒಂದು ಅಂಶವನ್ನು ಗಮನಿಸಲಿಕ್ಕುಂಟು. ಅಂದರೆ ತಿದ್ದುಪಡಿ ಸಂಖ್ಯೆ ೯೯ರ ಅಡಿಯಲ್ಲಿ ಅದು ರಾಜ್ಯಪಾಲನಿಗೆ ಎಲ್ಲೆಗಳನ್ನು ಬದಲಾಯಿಸಲು, ಪ್ರದೇಶಗಳನ್ನು ಕುಗ್ಗಿಸಲು ಮುಂತಾದ ಅಧಿಕಾರವನ್ನು ಪ್ರದಾನ ಮಾಡುತ್ತವೆ. ಹಾಗೆ ರಾಜ್ಯಪಾಲರು ಈಗ ಸ್ವಾಯತ್ತ ಪ್ರದೇಶದಲ್ಲಿ ಸೇರಿಸಲಿರುವ ಯಾವುದೇ ಪ್ರದೇಶದಿಂದ ಯಾವುದೇ ಪ್ರದೇಶವನ್ನು ಬೇರ್ಪಡಿಸಲು (ವಿಚ್ಛೇದಿಸಲು) ಯಾವುದೇ ಪ್ರದೇಶವನ್ನು ಹೊರತುಪಡಿಸಲು ಸಕಲ ರೀತಿಯಲ್ಲಿ ಸಾಧ್ಯವಾಗುತ್ತದೆ. ಅದು ಸ್ಪಷ್ಟವಾಗದಿದ್ದರೆ, ಕರಡು ರಚನಾ ಸಮಿತಿಯು, ಹಾಗೆ ಅರ್ಥವಾಗುವ ಸುಸ್ಪಷ್ಟ ಖಂಡವನ್ನು ಸೇರಿಸಲು ಸರ್ವಥಾ ಸಿದ್ಧವುಂಟು. ಪ್ರತಿನಿಧಿಗಳು ಸಮ್ಮೇಳನಕ್ಕೆ ಬಂದು, ಒಂದು ನಿದಿಷ್ಟ ಒಪ್ಪಂದಕ್ಕೆ ಒಪ್ಪಿಕೊಂಡು, ಮತ್ತು ಆ ತರುವಾಯ ಆ ಒಪ್ಪಂದದಿಂದ ಹಿಂದಕ್ಕೆ ಸರಿದು, ಮತ್ತು ಆ ಬಗ್ಗೆ ತಿದ್ದುಪಡಿ ತಂದು ಕರಡು ರಚನಾ ಸಮಿತಿಯ ವಿರುದ್ಧ ಟೀಕೆ ಮಾಡಲು ನಿಮಿತ್ತ ಹುಡುಕುತ್ತ, ಆ ಸಮಿತಿಯವರು ಪ್ರತಿನಿಧಿಗಳ ಆಶೋತ್ತರಗಳಿಗೆ ಪ್ರತಿಕೂಲವಾಗಿ ಏನೋ ಮಾಡಿದ್ದಾರೆ ಎಂದು ಹೇಳುವುದು. ಸೌಮ್ಯವಾದ ಪದಗಳಲ್ಲಿ ಹೇಳಿದರೂ ಅತ್ಯಂತ ದೌರ್ಭಾಗ್ಯಪೂರ್ಣ ಸಂಗತಿ ಎಂದು ಹೇಳಬಯಸುತ್ತೇನೆ....*

**ಶ್ರೀ ಕುಲಧರ ಚಾಲಿಹಾ:** ಅಲ್ಲ, ಹಾಗಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನಗೆ ಬಹಳ ದುಃಖವಾಗಿದೆ.

**ಶ್ರಿ ಕುಲಧರ ಚಾಲಿಹಾ:** ಅಲ್ಲ, ಹಾಗಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನಗೆ ಬಹಳ ದುಃಖವಾಗಿದೆ. ಇನ್ನು, ಪ್ಯಾರಾ ೧೬ಎಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಹೇಳುವುದಾದರೆ, ಅದು ರಾಜಕೀಯ ಅಗತ್ಯಗಳಿಗಾಗಿ ಪ್ರತ್ಯೇಕೀಕರಣದ ವ್ಯವಸ್ಥೆ ಮಾಡಿದೆ. ಸಂಪೂರ್ಣ ಪ್ರತ್ಯೇಕೀಕರಣವನ್ನು ನಾವು ತೀರ್ಣಗೊಳಿಸಿರುವ ಪ್ಯಾರಾದಲ್ಲಿ ಈಗಾಗಲೇ ಏರ್ಪಾಟು ಮಾಡಿದ್ದುಂಟು ಎಂದು ನಿವೇದಿಸಲು ಇಷ್ಟಪಡುತ್ತೇನೆ. ಆ ಮೂಲಕ ಉದ್ದೇಶ ಈಡೇರದಿದ್ದರೆ, ರಾಜ್ಯಪಾಲರಿಗೆ ಸೂಕ್ತವೆಂದು ಯಥಾಯೋಗ್ಯವೆಂದು ಕಂಡುಬಂದ ಪಕ್ಷದಲ್ಲಿ ಅವರು ಯಾವುದೇ ಪ್ರದೇಶವನ್ನು ಹೊರತುಪಡಿಸುವ ಅಧಿಕಾರ ಹೊಂದಿರತಕ್ಕದ್ದು ಎಂದು ಸ್ಪಷ್ಟ ಅರ್ಥವಾಗುವ ಹಾಗೆ ಒಂದು ಖಂಡವನ್ನು ಸೇರಿಸಲು ಸಿದ್ಧನಿದ್ದೇನೆ. ಹೊಸ ಪ್ಯಾರಾ ೧೯ರಲ್ಲಿ ಅಡಕವಾದ ನನ್ನ ತಿದ್ದುಪಡಿಯ ಮಟ್ಟಿಗೆ ಹೇಳುವುದಾದರೆ, ವಿವಾದದ ಎಲ್ಲ ಅಂಶಗಳಿಗೆ ಉತ್ತರ ಒದಗಿಸಲಾಗಿದೆ ಎಂದು ನಂಬಿದ್ದೇನೆ.

* ಚುಕ್ಕಿಗಳು ಮೂಲದಲ್ಲಿ ತೋರಿಸಿದಂತೆ ತಡೆಯನ್ನು ಸೂಚಿಸುತ್ತದೆ.

ಸ್ವಾಮಿ, ನಾನೀಗ ನನ್ನ ಮಾನ್ಯ ಸ್ನೇಹಿತ ಶ್ರೀ ಕುಂಝ್ರು ಅವರ ತಿದ್ದುಪಡಿಯನ್ನು ತೆಗೆದುಕೊಳ್ಳುತ್ತೇನೆ. ಇನ್ನೊಂದು ಪ್ಯಾರಾವನ್ನು ಸೇರಿಸುವುದು ಆ ತಿದ್ದುಪಡಿಯ ಉದ್ದೇಶ. ಆದರೆ ಅದು ಈಗಾಗಲೇ ತೀರ್ಮಾನಗೊಳಿಸಲಾದ ಮತ್ತು ಅಸ್ಸಾಂನ ಹೊರತಾಗಿ ಇತರ ಬುಡಕಟ್ಟು ಪ್ರದೇಶಗಳ ಅಥವಾ ಅನುಸೂಚಿತ ಪ್ರದೇಶಗಳಿಗೆ ಸಂಬಂಧಪಟ್ಟ ಆರನೆಯ ಅನುಸೂಚಿಯ ಪ್ಯಾರಾ ೫ರ ಪುನರಾವೃತ್ತಿ ಎಂದು ಕಂಡು ಬರಬಹುದು. ಅವರ ತಿದ್ದುಪಡಿಯಲ್ಲಿ ಅದರ ಹೊರತಾಗಿ ಇನ್ನೇನೂ ಅಲ್ಲ. ತಿದ್ದುಪಡಿಯ ವಿರುದ್ಧ ನನ್ನ ನಿವೇದನೆ ಇಷ್ಟೆ. ಅವರ ಹೊಸ ಪ್ಯಾರಾದ ಉಪಖಂಡ (೧)ಕ್ಕೆ ಸಂಬಂಧಪಡುವಷ್ಟು ಮಟ್ಟಿಗೆ. ಅದು ಸರ್ವಥಾ ಅನಗತ್ಯ. ಅದು ಆರನೆಯ ಅನುಸೂಚಿಯ ಪ್ಯಾರಾ ೧೨(ಬಿ)ಗೆ ಅಧೀನವಾಗಿದ್ದು, ಸಂಸತ್ತು ರಚಿಸಿದ ಕಾನೂನುಗಳನ್ನು ಅಥವಾ ಅಸ್ಸಾಂ ವಿಧಾನಮಂಡಳವು ರಚಿಸಿದ ಕಾನೂನುಗಳನ್ನು ಅನ್ವಯಿಸುವ ಅಥವಾ ಅನ್ವಯಿಸದಿರುವ ಅಥವಾ ಅನ್ವಯಿಸಿದ ಪಕ್ಷದಲ್ಲಿ, ಮಾರ್ಪಾಟುಗಳೊಂದಿಗೆ ಅನ್ವಯಿಸುವ ಅಧಿಕಾರವನ್ನು ರಾಜ್ಯಪಾಲರಿಗೆ ಕೊಡುತ್ತದೆ. ಆದ್ದರಿಂದ ಉಪಬಂಧವು ಖಂಡಿತವಾಗಿಯೂ ಅನಗತ್ಯ. ಅದನ್ನು ಈಗಾಗಲೇ ನಮ್ಮ ಕರಡು ಸಂವಿಧಾನದಲ್ಲಿ ಸೇರಿಸಿದ್ದುಂಟು.

ಇನ್ನು ಎರಡನೇ ಉಪಖಂಡ (೨) ಇದರ ವಸ್ತುಸ್ಥಿತಿ ಹೀಗಿದೆ: ಐದನೆಯ ಅನುಸೂಚಿಗೆ ಸಂಬಂಧಪಡುವಷ್ಟರ ಮಟ್ಟಿಗೆ ರಾಜ್ಯಪಾಲರಿಗೆ ಆ ಪ್ರದೇಶಗಳಿಗೆ ಸಂಬಂಧಿಸಿ ವಿನಿಮಯಗಳನ್ನು ರಚಿಸಲು ಅಧಿಕಾರ ನೀಡುತ್ತಿರುವ ಸಂಗತಿಯು ನಿಜವೇ. ಆದರೆ ಆರನೆಯ ಅನುಸೂಚಿಯ ಸಂಬಂಧದಲ್ಲಿ ರಾಜ್ಯಪಾಲರಿಗೆ ಆ ಅಧಿಕಾರವನ್ನು ಕೊಡಲು ಇಷ್ಟಪಡುವುದಿಲ್ಲ. ಈ ಕಾರಣಕ್ಕಾಗಿಯೇ ಐದನೆಯ ಅನುಸೂಚಿಗೆ ಸಂಬಂಧಿಸಿದಂತೆ, ಬುಡಕಟ್ಟು ಜನಾಂಗಗಳು ತಮಗಾಗಿ ತಾವೇ ಯಾವುದೇ ವಿನಿಯಮಗಳನ್ನು ರಚಿಸಿಕೊಳ್ಳುವ ಪ್ರಾಧಿಕಾರವನ್ನು ಹೊಂದಿರುವುದಿಲ್ಲ. ಆದರೆ, ಆರನೆಯ ಅನುಸೂಚಿಗೆ ಸಂಬಂಧಿಸಿದಂತೆ, ಕೆಲವು ನಿರ್ದಿಷ್ಟ ವಿಚಾರಗಳಲ್ಲಿ ಕಾನೂನುಗಳನ್ನು ರಚಿಸಿಕೊಳ್ಳಲು ಜಿಲ್ಲಾ ಪರಿಷತ್ತಿಗೆ ಮತ್ತು ಪ್ರಾದೇಶಿಕ ಪರಿಷತ್ತಿಗೆ ಹಕ್ಕು ಕೊಟ್ಟಿರುತ್ತೇವೆ. ಆದಕಾರಣ, ವಿನಿಯಮಗಳನ್ನು ರಚಿಸಿಕೊಳ್ಳಲು ಬುಡಕಟ್ಟು ಜನಾಂಗಗಳಿಗೆ ಅಧಿಕಾರವನ್ನು ಕೊಡದಿರುವ ಸಂದರ್ಭಗಳಲ್ಲಿ, ರಾಜ್ಯಪಾಲರಿಗೆ ಅಂಥ ವಿನಿಯಮಗಳನ್ನು ರಚಿಸುವ ಅಧಿಕಾರವನ್ನು ಪ್ರದಾನ ಮಾಡುವುದು ಅವಶ್ಯವೆಂದು ನನಗೆ ತೋರುತ್ತದೆ. ಆದರೆ ಬುಡಕಟ್ಟು ಪರಿಷತ್ತುಗಳಿಗೆ ವಿನಿಯಮಗಳನ್ನು ರಚಿಸಲು ಅಧಿಕಾರವನ್ನು ಕೊಟ್ಟಿರುವ ಸಂದರ್ಭಗಳಲ್ಲಿ, ಅದೇ ಬಗೆಯ ವಿನಿಯಮಗಳನ್ನು ರಚಿಸಲು ರಾಜ್ಯಪಾಲರಿಗೆ ಅಧಿಕಾರ ಪ್ರದಾನ ಮಾಡುವುದೆಂದರೆ, ಮತ್ತು ಆ ಕಾರಣಕ್ಕಾಗಿಯೇ ನಾವು ರಾಜ್ಯಪಾಲರಿಗೆ ಆ ಅಧಿಕಾರವನ್ನು ಪ್ರಧಾನ ಮಾಡಲು ಉದ್ದೇಶಿಸಿಲ್ಲ. ಆದ್ದರಿಂದ ಈ ತಿದ್ದುಪಡಿಯು ಸರ್ವಥಾ ಅನಾವಶ್ಯಕ ಎಂದು ನಿವೇದಿಸುತ್ತೇನೆ.

ಇನ್ನೊಂದು ಅಂಶವುಂಟು. ನಾನು ಅದನ್ನು ಸ್ಪಷ್ಟಗೊಳಿಸಬೇಕಾಗಿದೆ. ಆರನೆಯ ಅನುಸೂಚಿಯ ಅಡಿಯಲ್ಲಿ ಜಿಲ್ಲಾ ಪರಿಷತ್ತಿಗೆ ಕೊಡಲು ಪ್ರಸ್ತಾವಿಸಿರುವ ವಿನಿಯಮಗಳನ್ನು ರಚನಾಧಿಕಾರವು ಹೊಸ ಅಧಿಕಾರವೇನೂ ಅಲ್ಲ. ವಸ್ತುಸ್ಥಿತಿಯೆಂದರೆ, ನಾವೀಗ ಆರನೆಯ ಅನುಸೂಚಿಯ ಅಡಿಯಲ್ಲಿ ಕೊಡಲು ಪ್ರಸ್ತಾವಿಸಿರುವ ವಿನಿಯಮ ರಚನಾಧಿಕಾರವನ್ನು ಹೋಲುವಂಥ ಕೆಲವು ನಿರ್ದಿಷ್ಟ ನಿಯಮಗಳನ್ನು ರಚಿಸುವ ಅಧಿಕಾರವು ಅಸ್ಸಾಂನಲ್ಲಿ ಅಸ್ತಿತ್ವದಲ್ಲಿ ಇದೆ. ಆದಕಾರಣ ಈ ಅನುಸೂಚಿಯು ಹೊಸ ಸಂಗತಿಯೇನೂ ಅಲ್ಲ. ಈಗಿರುವ ಸ್ಥಿತಿಯ ಮುಂದುವರಿಕೆ ಅಷ್ಟೆ. ಅರ್ಥಾತ್ ಬುಡಕಟ್ಟು ಜನಾಂಗಗಳು ಕೆಲವು ನಿರ್ದಿಷ್ಟ ವಿಷಯಗಳಲ್ಲಿ ವಿನಿಯಮಗಳನ್ನು ರಚಿಸಲು ಅಧಿಕಾರ ಹೊಂದಿರುತ್ತವೆ. ಆದ ಕಾರಣ ನಾನು ವಿವರಿಸಿರುವ ಕಾರಣಗಳಿಗಾಗಿ ಅವರ ತಿದ್ದುಪಡಿಯು ಅನಗತ್ಯವಾಗಿರುವುದರಿಂದಲೇ ನಾನು ಅದನ್ನು ವಿರೋಧಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ನಾವು ಈ ತನಕ ನಡೆಸಿರುವ ಚರ್ಚೆಗಳಿಂದ ಕಂಡುಬರುವುದೆಂದರೆ, ಇಲ್ಲಿ ವ್ಯಕ್ತಗೊಳಿಸಲಾದ ಅಭಿಪ್ರಾಯಗಳಲ್ಲಿ ನಿಜವಾಗಿಯೂ ವಿಶೇಷ ಭೇದವೂ ಕಂಡುಬರುವುದಿಲ್ಲ ಎಂದು ನಾನು ಸೂಚಿಸಬಯಸುತ್ತೇನೆ. ಡಾ. ಅಂಬೇಡ್ಕರ್ ಅವರ ಹೇಳಿಕೆಯನ್ನು ನಾನು ಅನುಸರಿಸಿರುವ ಪ್ರಕಾರ, ಎರಡು ಸಲಹೆಗಳನ್ನು ಒಪ್ಪಿಕೊಂಡ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳ ಅಧಿಕಾಂಶವು ಮರೆಯಾಗುತ್ತದೆ ಎಂದು ನಾನು ನಂಬಿದ್ದೇನೆ. ಆದ್ದರಿಂದ ಅವರು ಪ್ಯಾರಾ ೧೦ರ ಉಪಪ್ಯಾರಾ (೨)ರ (ಡಿ) ಖಂಡವನ್ನು ಪರಂತುಕದಲ್ಲಿ ಸೇರಿಸಬೇಕೆಂದು ನಾನು ಸೂಚಿಸುವವನಿದ್ದೆನು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ಕರಡು ರಚನಾ ಸಮಿತಿಯ ನಿರ್ಧಾರಕ್ಕೆ ಬಿಡೋಣ. ಸಮಿತಿಯು ಆ ಕೆಲಸವನ್ನು ಮಾಡುತ್ತದೆ.

**ಮಾನ್ಯ ಅಧ್ಯಕ್ಷರು:** ತಿದ್ದುಪಡಿ ಸಂಖ್ಯೆ ೯೯ರಲ್ಲಿ ಉಪಪ್ಯಾರಾ (೩)ರ (ಡಿ) ಖಂಡದಲ್ಲಿ "ಸ್ವಾಯತ್ತ ಜಿಲ್ಲೆಯ ಪ್ರದೇಶವನ್ನು ಕುಗ್ಗಿಸುವುದು" ಎಂಬ ಪದಗಳಿಗೆ ಬದಲಾಗಿ "ಅಥವಾ ಸ್ವಾಯತ್ತ ಜಿಲ್ಲೆಯಿಂದ ಯಾವುದೇ ಪ್ರದೇಶವನ್ನು ಹೊರತುಪಡಿಸುವುದು" ಎಂಬ ಪದಗಳನ್ನು ಸೇರಿಸಬೇಕು ಎಂದು ಸೂಚಿಸುವವನಿದ್ದೆನು. ಆ ಮೂಲಕ ಎಲ್ಲ ಅಂಶಗಳು ಒಳಗೊಂಡಂತಾಗುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹಾಗೆ ಮಾಡಲು ನಾವು ಸಿದ್ಧರಿದ್ದೇವೆ.

**ಮಾನ್ಯ ಸಭಾಧ್ಯಕ್ಷರು:** ನನಗೆ ಒಂದು ತೊಂದರೆ ಇದಿರಾಗುತ್ತಿದೆ. ನಾನೂ ಸೇರಿದಂತೆ, ನಮ್ಮ ಸದನದ ಅಧಿಕಾಂಶ ಸದಸ್ಯರಿಗೆ ಸ್ಥಳೀಯ ಪರಿಸ್ಥಿತಿಯ ಬಗ್ಗೆ ಪರಿಚಯವಿಲ್ಲ. ಆದ್ದರಿಂದ ನಾವು ಅಸ್ಸಾಂಗೆ ಸಂಬಂಧಿಸಿ ನಮ್ಮದೇ ಆದ ನಿಲುವನ್ನು ತಳೆಯುವ ಸ್ಥಿತಿಯಲ್ಲಿಲ್ಲ. ಅಲ್ಲಿನ ಸ್ನೇಹಿತರಿಂದ ನಾವು ಮಾರ್ಗದರ್ಶನ ಪಡೆಯಬೇಕಾಗುತ್ತದೆ. ಅವರಲ್ಲಿ ಕೆಲವು ವಿಷಯಗಳ ಸಂಬಂಧದಲ್ಲಿ ಭಿನ್ನಾಭಿಪ್ರಾಯಗಳಿರುವ ನಿಮಿತ್ತ, ನಮ್ಮ ದುಃಸ್ಥಿತಿ ಇನ್ನಷ್ಟು ಕಷ್ಟದಾಯಕವಾಗುತ್ತದೆ. ಆದ್ದರಿಂದ, ಆ ವಿಷಯವನ್ನು ವ್ಯವಹರಿಸುವ ಅಧಿಕಾರವನ್ನು ಸ್ಥಳೀಯ ಸರ್ಕಾರಕ್ಕೆ ಬಿಟ್ಟುಕೊಡುವುದೇ ಉತ್ತಮ ಎಂದು ಸೂಚಿಸಬಯಸುತ್ತೇನೆ. ನಾನು ಸಾದರಪಡಿಸಿದ ಈ ಎರಡು ಸೂಚನೆಗಳ ಬಗ್ಗೆ ಡಾ. ಅಂಬೇಡ್ಕರ್ ಅವರ ಆಕ್ಷೇಪ ಇರಲಾರದು ಎಂದು ಭಾವಿಸಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ನನ್ನ ಆಕ್ಷೇಪವೇನೂ ಇಲ್ಲ. ಉಪಬಂಧಕ್ಕೆ ೧೦(೨)(ಡಿ) ಖಂಡವನ್ನು ಸೇರಿಸಲು ಮತ್ತು ಇನ್ನೊಂದು ಸಂದರ್ಭದಲ್ಲಿ "ಹೊರತುಪಡಿಸುವ ಅಧಿಕಾರ" ಎಂಬುದನ್ನು ಸಹ ಸೇರಿಸಲು ಸಿದ್ಧನಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಇದರಿಂದಾಗಿ ಅಸ್ಸಾಂನ ನಮ್ಮ ಸ್ನೇಹಿತರಿಗೆ ಸಮಾಧಾನವಾದೀತು ಎಂದು ಭಾವಿಸಿದ್ದೇನೆ.

* * *

***ಮಾನ್ಯ ಸಭಾಧ್ಯಕ್ಷರು:** ಪ್ಯಾರಾ ೧೯ರ ಅಡಿಯಲ್ಲಿ ಪ್ರಸ್ತಾವವು ಭಿನ್ನಾಗಿದೆ.

**ರೆವರೆಂಡ್ ಜೆ. ಜೆ. ಎಂ. ನಿಕೋಲ್ಸ್‌ರಾಯ್:** ಈಗಾಗಲೇ ಪ್ಯಾರಾ ೧೦ರ ಅಡಿಯಲ್ಲಿ ಸೇರಿದ ವಿಷಯವನ್ನು ಪ್ಯಾರಾ ೧೯ರ ಅಡಿಯಲ್ಲಿ ಸೇರಿಸಲು ಕಾರಣವೇನು ಎಂದು ನನಗೆ ಅರ್ಥವಾಗುತ್ತಿಲ್ಲ.

**ಮಾನ್ಯ ಅಧ್ಯಕ್ಷರು:** ಇಡೀ ಪ್ಯಾರಾ ೧೦ ಅನ್ನು ಸೇರಿಸುವ ಪ್ರಸ್ತಾಪವಿಲ್ಲ. ಪ್ಯಾರಾ ೧೦ರ ಉಪಪ್ಯಾರಾ (೨)ರ (ಡಿ) ಉಪಖಂಡವನ್ನು ಸೇರಿಸುವ ವಿಚಾರ ಮಾತ್ರ.

---

* ಸಿ.ಎ.ಡಿ. ಸಂ. IX, ೭ನೇ ಸೆಪ್ಟೆಂಬರ್ ೧೯೪೯, ಪುಟ ೧೦೭೫–೧೦೭೬.

**ರೆವರೆಂಡ್ ಜೆ. ಜೆ. ಎಂ. ನಿಕೋಲ್ಸ್ ರಾಯ್:** ಅದನ್ನು ಇಲ್ಲಿ ಈ ಪರಂತುಕದಲ್ಲಿ ಸೇರಿಸುವುದರಿಂದ ಪ್ರಯೋಜನವೇನು? ಅದು ಈಗಾಗಲೇ ಪ್ಯಾರಾ ೧೦ರ ಅಡಿಯಲ್ಲಿ ಇದೆಯಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಪ್ಯಾರಾ ೧೦ರ ಉಪಪ್ಯಾರಾ (೨)ರ (ಡಿ) ಉಪಖಂಡವು ವ್ಯಾಪಾರ ವಿಷಯಕ್ಕೆ ಮಾತ್ರ ಸಂಬಂಧಿಸಿದ್ದು, ಹಣ ಸಾಲ ಕೊಡುವುದಕ್ಕೆ ಸಂಬಂಧಿಸಿಲ್ಲ. ಅದನ್ನು ಸೇರಿಸುವುದೇ ಉದ್ದೇಶ.

**ಮಾನ್ಯ ಅಧ್ಯಕ್ಷರು:** ಹೊರತುಪಡಿಸುವ ಪ್ರಶ್ನೆಗೆ ಸಂಬಂಧಪಟ್ಟಂತೆ, ವಿಷಯವು ಮೂಲ ಕರಡಿನಲ್ಲಿ ಇತ್ತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಿ. ನಿಕೋಲ್ಸ್‌ರಾಯ್ ಅವರೆ, ಇದೆಲ್ಲವೂ ಸರಿಯಾಗಿದೆ. ಇದರಲ್ಲಿ ನಿಮಗೇನೂ ನಷ್ಟ ಸಂಭವಿಸಿರಲಿಕ್ಕಿಲ್ಲ ಎಂದು ನಂಬಿದ್ದೇನೆ.

**ರೆವರೆಂಡ್ ಜೆ. ಜೆ. ಎಂ. ನಿಕೋಲ್ಸ್‌ರಾಯ್:** ಸಂವಿಧಾನದ ಪಾಠದಲ್ಲಿ, ಸ್ವಾಯತ್ತ ಜಿಲ್ಲೆಯ ಯಾವುದೇ ಪ್ರದೇಶವನ್ನು ಹೊರತುಪಡಿಸಲು ರಾಜ್ಯಪಾಲರಿಗೆ ಅಧಿಕಾರ ಪ್ರದಾನ ಮಾಡುವುದಾಗಿ ಅರ್ಥವಾಗುವ ಒಂದು ತಿದ್ದುಪಡಿಯನ್ನು ಸೇರಿಸಲಿದ್ದೀರೋ ಇಲ್ಲವೋ ಎಂದು ನಿಮ್ಮನ್ನು ಕೇಳಬಯಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೊರತುಪಡಿಸುವ "ಅಧಿಕಾರ"ವನ್ನು ಸಹ ಕೊಡುತ್ತಿದ್ದೇವೆ. ಕುಗ್ಗಿಸುವ ಅಧಿಕಾರ ಅಂದರೂ "ಹೊರತುಪಡಿಸುವ" ಅಧಿಕಾರವೆ.

**ಮಾನ್ಯ ಅಧ್ಯಕ್ಷರು:** ಕುಗ್ಗಿಸು ಅಂದರೆ "ಹೊರತುಪಡಿಸು"

**"ಹಾಗೆ ತಿದ್ದುಪಡಿಯಾದ ಪ್ಯಾರಾ ೧೯ ಅನ್ನು ಮತ್ತು ತಃಖ್ತೆ ಭಾಗ I ಮತ್ತು II ಇವುಗಳನ್ನು ಆರನೆಯ ಅನುಸೂಚಿಗೆ ಸೇರಿಸಲಾಯಿತು.**

## ಪ್ಯಾರಾ ೨೦

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಪ್ಯಾರಾ ೧೯ರ ತರುವಾಯ ಮುಂದಿನ ಪ್ಯಾರಾವನ್ನು ಸೇರಿಸತಕ್ಕದ್ದು.

"೨೦ ಅನುಸೂಚಿಯ ತಿದ್ದುಪಡಿ: (೧) ಸಂಸತ್ತು ಕಾಲಕಾಲಕ್ಕೆ ಹೆಚ್ಚಿದ ಸೇರ್ಪಡೆ, ವ್ಯತ್ಯಾಸ ಅಥವಾ ರದ್ದಿಯಾತಿ ದ್ವಾರಾ ಅನುಸೂಚಿಯ ಉಪಬಂಧಗಳ ಪೈಕಿ ಯಾವುದೇ ಉಪಬಂಧವನ್ನು ಕಾನೂನು ಮೂಲಕ ತಿದ್ದುಪಡಿ ಮಾಡಬಹುದು ಮತ್ತು ಅನುಸೂಚಿಯನ್ನು ಹಾಗೆ ತಿದ್ದುಪಡಿ ಮಾಡಿದಾಗ, ಈ ಸಂವಿಧಾನದಲ್ಲಿ ಈ ಅನುಸೂಚಿಗೆ ಮಾಡಲಾದ ಯಾವುದೇ ಉಲ್ಲೇಖವು ಹಾಗೆ ತಿದ್ದುಪಡಿಯಾದ ಅಂಥ ಅನುಸೂಚಿಗೆ ಮಾಡಲಾದ ಉಲ್ಲೇಖ ಎಂದು ಅರ್ಥೈಸತಕ್ಕದ್ದು.

(೨) ಈ ಪ್ಯಾರಾದ (೧)ನೆಯ ಉಪಪ್ಯಾರಾದಲ್ಲಿ ನಮೂದಿಸಲಾದಂಥ ಯಾವುದೇ ಕಾನೂನು ಸಂವಿಧಾನದ ೩೦೪ನೆಯ ಅನುಚ್ಛೇದದ ಉದ್ದೇಶಕ್ಕಾಗಿ ಅದರ ಒಂದು ತಿದ್ದುಪಡಿ ಎಂದು ಭಾವಿಸ ತಕ್ಕದ್ದಲ್ಲ.

* * *

---

* ಸಿ.ಎ.ಡಿ. ಸಂ. IX, ೭ನೇ ಸೆಪ್ಟೆಂಬರ್ ೧೯೪೯, ಪುಟ ೧೦೭೬.

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ ಅವರ ಪ್ಯಾರಾ ೨೦ರ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವುದಿಲ್ಲ.

**(ಡಾ. ಅಂಬೇಡ್ಕರ್ ಅವರ ಪ್ರಸ್ತಾಪವನ್ನು ಅಂಗೀಕರಿಸಲಾಯಿತು. ಪ್ಯಾರಾ ೨೦ ಅನ್ನು ಆರನೆಯ ಅನುಸೂಚಿಗೆ ಸೇರಿಸಲಾಯಿತು. ಹಾಗೆ ತಿದ್ದುಪಡಿಯಾದ ಅನುಸೂಚಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)**

## ವಿಧಿ (ಅನುಚ್ಛೇದ) ೨೮೧

****ಮಾನ್ಯ ಅಧ್ಯಕ್ಷರು:** ನಾವು ಈಗ ವಿಧಿ (ಅನುಚ್ಛೇದ) ೨೮೧ ಅನ್ನು ಪರಿಶೀಲಿಸೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

ವಿಧಿ (ಅನುಚ್ಛೇದ) ೨೮೧ರ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು.

**ಅರ್ಥ ವಿವರಣೆ:** ೨೮೧ ಈ ಭಾಗದಲ್ಲಿ ಸಂದರ್ಭಾನುಸಾರ ಅನ್ಯಥಾ ಅರ್ಥವಾಗುವ ಹೊರತು, 'ರಾಜ್ಯ' ಎಂಬ ಪದಕ್ಕೆ ತತ್ಕಾಲದಲ್ಲಿ ಅನುಸೂಚಿಯ ಭಾಗ I ಮತ್ತು II ಇವುಗಳಲ್ಲಿ ನಿರ್ದಿಷ್ಟಪಡಿಸಿದ ರಾಜ್ಯ ಎಂದು ಅರ್ಥ.

**(ವಿಧಿ ೨೮೧ ಅನ್ನು ಸಂವಿಧಾನಕ್ಕೆ ಸೇರಿಸಲಾಯಿತು)**

## ವಿಧಿ ೨೮೨ರಿಂದ ೨೮೨–ಸಿ

ಒಕ್ಕೂಟದ ಅಥವಾ ಒಂದು ರಾಜ್ಯದ ಅಧೀನದಲ್ಲಿ ಸೇವೆ ಸಲ್ಲಿಸುವ ವ್ಯಕ್ತಿಗಳ ಸೇವಾಭರ್ತಿ ಮತ್ತು ಸೇವಾಷರತ್ತುಗಳು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ತಿದ್ದುಪಡಿಗಳ ಪಟ್ಟಿ (ಸಂಪುಟ II)ಯ ತಿದ್ದುಪಡಿ ಸಂಖ್ಯೆ ೩೦೩೪ ಇದಕ್ಕೆ ಸಂಬಂಧಿಸಿದಂತೆ, ವಿಧಿ ೨೮೨ಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು.

"೨೮೨ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಸಮುಚಿತ ವಿಧಾನಮಂಡಳಗಳ ಅಧಿನಿಯಮಗಳು, ಲೋಕಸೇವೆಗಳಿಗೆ ಮತ್ತು ಒಕ್ಕೂಟದ ಅಥವಾ ಯಾವುದೇ ರಾಜ್ಯದ ಹುದ್ದೆಗಳಿಗೆ ನೇಮಿಸಲಾದ ವ್ಯಕ್ತಿಗಳ ಸೇವಾಭರ್ತಿಯನ್ನು ಮತ್ತು ಸೇವಾಷರತ್ತುಗಳನ್ನು ವಿನಿಯಮಿಸಬಹುದು.

ಪರಂತು, ರಾಷ್ಟ್ರಪತಿಯವರು ಒಕ್ಕೂಟದ ವ್ಯವಹಾರಗಳಿಗೆ ಸಂಬಂಧಪಟ್ಟ ಸೇವೆಗಳ ಮತ್ತು ಹುದ್ದೆಗಳ ಸಂದರ್ಭದಲ್ಲಿ ಮತ್ತು ರಾಜ್ಯಪಾಲರು ಅಥವಾ ಸಂದರ್ಭಾನುಸಾರ ಒಂದು ಸಂಸ್ಥಾನದ ಅಧಿಪತಿಯು, ರಾಜ್ಯದ ವ್ಯವಹಾರಗಳಿಗೆ ಸಂಬಂಧಪಟ್ಟ ಸೇವೆಗಳ ಮತ್ತು ಹುದ್ದೆಗಳ ಸಂದರ್ಭದಲ್ಲಿ, ಆ ಬಗ್ಗೆ ವ್ಯವಸ್ಥೆಯಾಗುವವರೆಗೆ ಅಥವಾ ಈ ಅನುಚ್ಛೇದದ ಅಡಿಯಲ್ಲಿ ಸಮುಚಿತ ರಾಜ್ಯ ವಿಧಾನಮಂಡಳವು ಅಧಿನಿಯಮದ ಮೇರೆಗೆ ಅಂಥ ಸೇವೆಗಳಿಗೆ ಅಥವಾ ಹುದ್ದೆಗಳಿಗೆ ನೇಮಿಸಲಾಗುವ ಸೇವಾಭರ್ತಿಯನ್ನು

---

* ಸಿ.ಎ.ಡಿ. ಸಂ. IX, ೭ನೇ ಸೆಪ್ಟೆಂಬರ್ ೧೯೪೯, ಪುಟ ೧೦೮೧–೧೦೮೨.

** ಅದೇ, ಪುಟ ೧೦೮೨.

ಮತ್ತು ಸೇವಾಷರತ್ತುಗಳನ್ನು ವಿನಿಯಮಿಸುವ ನಿಯಮಗಳನ್ನು ಸಕ್ಷಮವಾಗಿ ರಚಿಸಬಹುದು. ಮತ್ತು ಹಾಗೆ ರಚಿಸಲಾದ ನಿಯಮಗಳು ಅಂಥ ಯಾವುದೇ ನಿಯಮದ ಉಪಬಂಧಗಳಿಗೆ ಒಳಪಟ್ಟು ಪರಿಣಾಮಕಾರಿಯಾಗತಕ್ಕದ್ದು.

೨೮೨ಎ (೧)

**ಒಕ್ಕೂಟದ ಅಥವಾ ಒಂದು ರಾಜ್ಯದ ಅಧೀನದಲ್ಲಿ ಸೇವೆ ಸಲ್ಲಿಸುವ ವ್ಯಕ್ತಿಗಳ ಪದಾವಧಿ**

ಈ ಸಂವಿಧಾನದ ದ್ವಾರಾ ಸ್ಪಷ್ಟವಾಗಿ ಉಪಬಂಧಿಸಲಾದ ಹಾಗೆ ಹೊರತು ಅಥವಾ ಒಕ್ಕೂಟದ ಅಧೀನದಲ್ಲಿ ಯಾವುದೇ ಸೇನಾ ಸೇವೆಯ ಅಥವಾ ನಾಗರಿಕ ಸೇವೆಯ ಹುದ್ದೆಯನ್ನು ಧಾರಣ ಮಾಡಿರುವ ಪ್ರತಿಯೊಬ್ಬ ವ್ಯಕ್ತಿಯು ರಾಷ್ಟ್ರಪತಿಯ ಇಷ್ಟಪರ್ಯಂತ ಪದಧಾರಣ ಮಾಡಿರತಕ್ಕದ್ದು ಮತ್ತು ಒಂದು ರಾಜ್ಯದ ನಾಗರಿಕ ಸೇವೆಯ ಸದಸ್ಯನಾಗಿರುವ ಅಥವಾ ಒಂದು ರಾಜ್ಯದ ಅಧೀನದಲ್ಲಿ ಯಾವುದೇ ನಾಗರಿಕ ಹುದ್ದೆಯನ್ನು ಧಾರಣ ಮಾಡಿರುವ ಪ್ರತಿಯೊಬ್ಬ ವ್ಯಕ್ತಿಯು, ಸಂದರ್ಭಾನುಸಾರ ರಾಜ್ಯದ ರಾಜ್ಯಪಾಲರ ಅಥವಾ ಆ ಸಂಸ್ಥಾನದ ಅಧಿಪತಿಯ ಇಷ್ಟಪರ್ಯಂತ ಪದಧಾರಣ ಮಾಡಿರತಕ್ಕದ್ದು.

(೨) ಒಕ್ಕೂಟದ ಅಥವಾ ಒಂದು ರಾಜ್ಯದ ಅಧೀನದಲ್ಲಿ ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿಯು, ಸಂದರ್ಭಾನುಸಾರ ರಾಷ್ಟ್ರಪತಿಯ ಅಥವಾ ರಾಜ್ಯದ ರಾಜ್ಯಪಾಲರ ಅಥವಾ ಅಧಿಪತಿಯ ಇಷ್ಟಪರ್ಯಂತ ಪದಧಾರಣ ಮಾಡುವುದಾದರೂ, ಸೇವೆಯ ಅಥವಾ ಒಂದು ಅಖಿಲ ಭಾರತ ಸೇವೆಯ ಅಥವಾ ಒಕ್ಕೂಟದ ಅಥವಾ ರಾಜ್ಯದ ಸಿವಿಲ್ ಸೇವೆಯ ಸದಸ್ಯನಾಗಿಲ್ಲದ ಯಾರೇ ವ್ಯಕ್ತಿಯು ಈ ಸಂವಿಧಾನದ ಅಡಿಯಲ್ಲಿ ಅಂಥ ಹುದ್ದೆಯನ್ನು ಧಾರಣ ಮಾಡಲು ಯಾವ ಕರಾರಿನ ಅಡಿಯಲ್ಲಿ ನೇಮಕಗೊಂಡಿರುವನೋ ಸಂದರ್ಭಾನುಸಾರ, ರಾಷ್ಟ್ರಪತಿಯು ಅಥವಾ ರಾಜ್ಯದ ರಾಜ್ಯಪಾಲರು ಅಥವಾ ಅಧಿಪತಿಯು, ಅಗತ್ಯವೆಂದು ಭಾವಿಸಿದರೆ, ವಿಶೇಷ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಯ ಸೇವೆಯನ್ನು ಖಚಿತಗೊಳಿಸುವ ಸಲುವಾಗಿ, ಅವಶ್ಯವೆಂದು ಭಾವಿಸಿದರೆ, ಒಪ್ಪಿಕೊಂಡ ಅವಧಿಯು ಮುಕ್ತಾಯ ವಾಗುವುದಕ್ಕೆ ಮುಂಚೆ, ಆ ಹುದ್ದೆಯು ರದ್ದಾದ ಸಂದರ್ಭದಲ್ಲಿ ಅಥವಾ ಅವನ ಯಾವುದೇ ದುರ್ನಡತೆಗೆ ಸಂಬಂಧವಿಲ್ಲದ ಕಾರಣದಿಂದಾಗಿ ಆ ಹುದ್ದೆಯನ್ನು ಅವನು ಖಾಲಿ ಮಾಡಬೇಕಾದ ಸಂದರ್ಭದಲ್ಲಿ, ಅವನಿಗೆ ನಷ್ಟ ಪರಿಹಾರದ ಸಂದಾಯವಾಗುವ ಬಗ್ಗೆ ಉಪಬಂಧ ಕಲ್ಪಿಸಬಹುದು (ವ್ಯವಸ್ಥೆ ಮಾಡಬಹುದು).

೨೮೨–ಬಿ (೧)

**ಒಕ್ಕೂಟದ ಅಥವಾ ರಾಜ್ಯದ ಅಧೀನದಲ್ಲಿ ಸಿವಿಲ್ ಸಾಮರ್ಥ್ಯದಲ್ಲಿ ನೇಮಕಗೊಂಡ ವ್ಯಕ್ತಿಗಳನ್ನು ವಜಾ ಮಾಡುವುದು, ತೆಗೆದುಹಾಕುವುದು ಅಥವಾ ಕೆಳದರ್ಜೆಗೆ ಇಳಿಸುವುದು.**

ಒಕ್ಕೂಟದ ಸಿವಿಲ್ ಸೇವೆಯ ಅಥವಾ ಅಖಿಲ ಭಾರತ ಸೇವೆಯ ಅಥವಾ ರಾಜ್ಯದ ಸಿವಿಲ್ ಸೇವೆಯ ಸದಸ್ಯನಾಗಿರುವ ಅಥವಾ ಒಕ್ಕೂಟದ ಅಥವಾ ರಾಜ್ಯದ ಅಧೀನದಲ್ಲಿ ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ ಯಾರೇ ವ್ಯಕ್ತಿಯನ್ನು, ಯಾವ ಪ್ರಾಧಿಕಾರವು ಅವನನ್ನು ನೇಮಿಸಿತ್ತೋ ಅದಕ್ಕೆ ಅಧೀನವಾದ ಯಾವುದೇ ಪ್ರಾಧಿಕಾರವು ವಜಾ ಮಾಡತಕ್ಕದ್ದಲ್ಲ. ತೆಗೆದುಹಾಕತಕ್ಕದ್ದಲ್ಲ ಅಥವಾ ಕೆಳದರ್ಜೆಗೆ ಇಳಿಸತಕ್ಕದ್ದಲ್ಲ.

(೨) ಹಿಂದೆ ಹೇಳಿದ ಯಾವುದೇ ವ್ಯಕ್ತಿಗೆ, ಅವನಿಗೆ ಸಂಬಂಧಿಸಿದಂತೆ ಅವನು ವಿರುದ್ಧ ಕೈಗೊಳ್ಳಲು ಪ್ರಸ್ತಾವಿಸಿರುವ ಕ್ರಮದ ವಿರುದ್ಧ ಕಾರಣ ತೋರಿಸಲು ಸಮಂಜಸ ಅವಕಾಶವನ್ನು

ಕೊಟ್ಟ ಹೊರತು ಅವನನ್ನು ವಜಾ ಮಾಡತಕ್ಕದ್ದಲ್ಲ. ಅಥವಾ ತೆಗೆದುಹಾಕತಕ್ಕದ್ದಲ್ಲ. ಅಥವಾ ಕೆಳದರ್ಜೆಗೆ ಇಳಿಸತಕ್ಕದ್ದಲ್ಲ.

ಪರಂತು ಈ ಕಾರಣವು ಕೆಳಕಂಡ ಸಂದರ್ಭಗಳಲ್ಲಿ ಅನ್ವಯವಾಗತಕ್ಕದ್ದಲ್ಲ.

(ಎ) ಕ್ರಿಮಿನಲ್ ಆರೋಪದ ಮೇಲೆ ಅವನ ದೋಷಸ್ಥಿತಿಗೆ ಕಾರಣವಾದ ಅವನ ನಡತೆಯನ್ನು ಆಧರಿಸಿ ಅವನನ್ನು ವಜಾ ಮಾಡಿರುವ ಅಥವಾ ತೆಗೆದುಹಾಕಿರುವ ಅಥವಾ ಕೆಳದರ್ಜೆಗೆ ಇಳಿಸಿರುವ ಸಂದರ್ಭ.

(ಬಿ) ಅದನ್ನು ವಜಾ ಮಾಡಲು ಅಥವಾ ತೆಗೆದುಹಾಕಲು ಅಥವಾ ಕೆಳದರ್ಜೆಗೆ ಇಳಿಸಲು ಅಧಿಕಾರ ಹೊಂದಿರತಕ್ಕ ಪ್ರಾಧಿಕಾರವು, ಆ ವ್ಯಕ್ತಿಗೆ ಕಾರಣ ತೋರಿಸಲು ಅವಕಾಶವನ್ನು ಕೊಡುವುದು ಸಮಂಜಸವಾಗಿ ಕಾರ್ಯಸಾಧ್ಯವಲ್ಲ ಎಂದು ತಾನು ಆ ಬಗ್ಗೆ ಕಾರಣಗಳನ್ನು ದಾಖಲಿಸಿ ಮನಗಂಡಿರುವ ಸಂದರ್ಭ.

(ಸಿ) ಸಂದರ್ಭಾನುಸಾರ ರಾಷ್ಟ್ರಪತಿಯು ರಾಜ್ಯಪಾಲರು ಅಥವಾ ಅಧಿಪತಿಯು ಆ ವ್ಯಕ್ತಿಗೆ ಅಂಥ ಅವಕಾಶವನ್ನು ಕೊಡುವುದು ರಾಜ್ಯದ ಭದ್ರತೆಯ ದೃಷ್ಟಿಯಿಂದ ವಿಹಿತವಲ್ಲ ಎಂದು ಮನಗಂಡಿರುವ ಸಂದರ್ಭ.

(೩) ಈ ವಿದಾಯ (೨)ನೆಯ ಖಂಡದ (ಬಿ) ಉಪಖಂಡದ ಅಡಿಯಲ್ಲಿ ಯಾರೇ ವ್ಯಕ್ತಿಗೆ ನೋಟೀಸು ಕೊಡುವ ಸಮಂಜಸವಾಗಿ ಕಾರ್ಯಸಾಧ್ಯವೆ ಅಲ್ಲವೆ ಎಂಬ ಬಗ್ಗೆ ಪ್ರಶ್ನೆ ಉದ್ಭವಿಸಿದ ಪ್ರಸಂಗದಲ್ಲಿ, ಸಂದರ್ಭಾನುಸಾರ ವಜಾಮಾಡಲು ಅಥವಾ ತೆಗೆದುಹಾಕಲು ಅಥವಾ ಕೆಳದರ್ಜೆಗೆ ಇಳಿಸಲು ಅಧಿಕಾರ ಹೊಂದಿರತಕ್ಕ ಪ್ರಾಧಿಕಾರದ ತೀರ್ಮಾನವು ಅಖೈರಾಗಿರತಕ್ಕದ್ದು.

## ಅಖಿಲ ಭಾರತ ಸೇವೆಗಳು

**೨೮೨ಸಿ:** (೧) ಸಂವಿಧಾನದ ಭಾಗ IXರಲ್ಲಿ ಏನೇ ಇದ್ದರೂ ರಾಜ್ಯಸಭೆಯು ಹಾಜರಿದ್ದು ಮತ ನೀಡುವ ಮೂರನೆಯ ಎರಡಕ್ಕೆ ಕಡಿಮೆಯಲ್ಲದಷ್ಟು ಸದಸ್ಯರ ಬೆಂಬಲ ಪಡೆದ ನಿರ್ಣಯ ದ್ವಾರಾ, ರಾಷ್ಟ್ರೀಯ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅಗತ್ಯವೆಂದು ಅಥವಾ ವಿಹಿತವೆಂದು ಘೋಷಿಸಿದ್ದರೆ, ಸಂಸತ್ತು ಒಕ್ಕೂಟಕ್ಕೆ ಮತ್ತು ರಾಜ್ಯಗಳಿಗೆ ಸಮಾನವಾಗಿರತಕ್ಕ ಅಖಿಲ ಭಾರತ ಸೇವೆಯನ್ನು ಸೃಜಿಸಲು ಕಾನೂನು ಮೂಲಕ ವ್ಯವಸ್ಥೆಯನ್ನು ಮಾಡಬಹುದು. ಮತ್ತು ಈ ಅಧ್ಯಾಯದ ಇತರ ಉಪಬಂಧಗಳಿಗೆ ಒಳಪಟ್ಟು ಅಂಥ ಯಾವುದೇ ಸೇವೆಗೆ ನೇಮಕಗೊಂಡ ವ್ಯಕ್ತಿಗಳ ಸೇವಾಭರ್ತಿಯನ್ನು ಮತ್ತು ಸೇವಾ ಷರತ್ತುಗಳನ್ನು ವಿನಿಯಮಗೊಳಿಸಬಹುದು.

(೨) ಈ ಸಂವಿಧಾನದ ಪ್ರಾರಂಭದ ದಿನಾಂಕದಂದು ಭಾರತೀಯ ಆಡಳಿತ ಸೇವೆ ಮತ್ತು ಭಾರತೀಯ ಪೊಲೀಸ್ ಸೇವೆ ಎಂದು ಕರೆಯಲಾಗುವ ಸೇವೆಗಳನ್ನು ಈ ಅನುಚ್ಛೇದದ ಅಡಿಯಲ್ಲಿ ಸಂಸತ್ತು ಸೃಜಿಸಿದ ಸೇವೆಗಳು ಎಂದು ಭಾವಿಸತಕ್ಕದ್ದು.

ಸ್ವಾಮಿ, ಈ ವಿಧಿಗಳೇ ಸಾಕಷ್ಟು ಸ್ಪಷ್ಟವಾಗಿರುವ ನಿಮಿತ್ತ, ಈ ಹಂತದಲ್ಲಿ ನಾನು ಮಂಡಿಸಿದ ತಿದ್ದುಪಡಿಗಳನ್ನು ಕುರಿತಂತೆ ಏನನ್ನೂ ಹೇಳಬಯಸುವುದಿಲ್ಲ. ಕೆಲವು ಟೀಕಾಂಶಗಳನ್ನು ಎತ್ತಬಹುದಾದ ಅನೇಕ ತಿದ್ದುಪಡಿಗಳು ಇವೆ. ಆಗ ಆ ತಿದ್ದುಪಡಿಗಳನ್ನು ಇತ್ಯರ್ಥಗೊಳಿಸಲು ಸದನಕ್ಕೆ ನನ್ನ ವಿವರಣೆಯನ್ನು

ಸಾದರಪಡಿಸಲು ಅನುಕೂಲವಾದೀತೆಂದು ಭಾವಿಸಿದ್ದೇನೆ.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಸ್ನೇಹಿತರು ಸಾಕಷ್ಟನ್ನು ಹೇಳಿದ್ದಾರೆ. ಅವರು ಈ ಅಂಶದ ಮೇಲೆ ತಮ್ಮ ಮಾತನ್ನು ಮುಂದುವರಿಸುವ ಅಗತ್ಯವಿಲ್ಲ ಎಂದು ಭಾವಿಸಿದ್ದೇನೆ.

**ಡಾ. ಮನಮೋಹನ ದಾಸ:** ಹಾಗಿದ್ದ ಪಕ್ಷದಲ್ಲಿ ನನ್ನ ಮಾತನ್ನು ನಿಲ್ಲಿಸುತ್ತೇನೆ.

* * *

****ಮಾನ್ಯ ಸಭಾಧ್ಯಕ್ಷರು:** ಮಾನ್ಯ ಸದಸ್ಯರು (ಶ್ರೀ ಕಾಮತ್) ತಮ್ಮ ಕಾಲಮಿತಿಯನ್ನು ಮೀರಿದ್ದಾರೆ. ಡಾ. ಅಂಬೇಡ್ಕರ್, ನೀವೇನಾದರೂ ಮಾತನಾಡಬಯಸುತ್ತೀರ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ತಿದ್ದುಪಡಿಗಳಲ್ಲಿ ಯಾವುದನ್ನೂ ಅಂಗೀಕರಿಸುವುದಿಲ್ಲ.

(ಎಲ್ಲ ತಿದ್ದುಪಡಿಗಳನ್ನು ನಿರಾಕರಿಸಲಾಯಿತು.)

* * *

## ವಿಧಿ ೨೮೨ಬಿ

*****ಶ್ರೀ ಆರ್. ಕೆ. ಸಿಧ್ವ:** ನಾವು ಇನ್ನಷ್ಟು ಕುಳಿತು ಪೂರೈಸಲು ಸಿದ್ಧರಿದ್ದೇವೆ. ನಾನು ಏಳೆಂಟು ತಾಸು ಕುಳಿತುಕೊಳ್ಳಬಲ್ಲೆನು.

**ಮಾನ್ಯ ಸಭಾಧ್ಯಕ್ಷರು:** ಸಾಧ್ಯವಿಲ್ಲ. ನಾವು ಎಂಟು ತಾಸು ಕುಳಿತುಕೊಳ್ಳಲಾರೆವು. ಏನೆಂದರೂ ನಾವು ಮನುಷ್ಯರಂತೆ ಕೆಲಸ ಮಾಡುತ್ತೇವಲ್ಲ. ಯಂತ್ರಗಳ ಹಾಗೆ ಕೆಲಸ ಮಾಡುವುದುಂಟೆ? ಅದು ಸಾಧ್ಯ ಎಂದು ನನಗನಿಸುವುದಿಲ್ಲ. ಡಾ. ಅಂಬೇಡ್ಕರ್ ನೀವೇನು ಹೇಳುತ್ತೀರ? ಇದು ಅಪರಾಹ್ನ ಅಧಿವೇಶನ ಸೇರುವುದು ಸಾಧ್ಯವೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಕ್ಯಾಬಿನೆಟ್ ಸಭೆಯಿಂದ ಸರಿಸುಮಾರು ಐದೂವರೆ ಘಂಟೆಗೆ ವಾಪಸ್ಸು ಬರಬಹುದೇನೋ, ಸದನವು, ಆ ತರುವಾಯ, ಎರಡು ಗಂಟೆ ಕಾಲ ಕುಳಿತುಕೊಳ್ಳಲು ತಯಾರಿದ್ದರೆ, ನಾನಂತೂ ಸಿದ್ಧನಿದ್ದೇನೆ. ಆದರೆ ಐದೂವರೆ ಘಂಟೆಯಿಂದ ಪ್ರಾರಂಭವಾಗುವ ಕರಡು ರಚನಾ ಸಮಿತಿಗೆ ನಾನು ಹೋಗಲಿಕ್ಕುಂಟು. ಈಗಾಗಲೇ ತಡೆಹಿಡಿದ ಅನುಚ್ಛೇದಗಳನ್ನು ಸಿದ್ಧಗೊಳಿಸಿದ ಹೊರತು, ಕೆಲಸವನ್ನು ಮುಂದುವರಿಸಲು ಕಷ್ಟವಾಗುತ್ತದೆ. ನಾವು ಇನ್ನೊಂದು ಸ್ಥಳಕ್ಕೆ ಹೋಗಿ ತೀರ್ಮಾನ ಪಡೆಯಬೇಕು. ಆಮೇಲೆ ಇಲ್ಲಿಗೆ ವಾಪಸ್ಸು ಬರಬೇಕು. ಸದನವು ಇಷ್ಟಪಟ್ಟರೆ ನಾವು ಕರಡು ರಚನಾ ಸಮಿತಿಯ ಸಭೆಯನ್ನು ಇನ್ನೊಂದು ಸಮಯಕ್ಕೆ ಬದಲಾಯಿಸಿಕೊಳ್ಳಬಹುದು.

* * *

---

* ಸಿ.ಎ.ಡಿ. ಸಂ. IX, ೭ನೇ ಸೆಪ್ಟೆಂಬರ್ ೧೯೪೯, ಪುಟ ೧೦೮೮.

** ಅದೇ ಪು. ೧೦೯೦

*** ಅದೇ, ಪುಟ ೧೦೯೪

*__ಮಿ. ನಜೀರುದ್ದೀನ್ ಅಹ್ಮದ್:__ ಹಲ್ಲೆ, ಅತಿಕ್ರಮಣ, ತಾಂತ್ರಿಕ ಮತ್ತು ಅದೇ ಬಗೆಯ ಅಪರಾಧಗಳನ್ನು ಒಟ್ಟಾರೆಯಾಗಿ ನೈತಿಕ ಅಧಃಪತನವನ್ನು ಒಳಗೊಂಡಿಲ್ಲದ ಅಪರಾಧಗಳು ಎಂದು ಬಣ್ಣಿಸುವುದುಂಟು. ಅಂಥ ಎಲ್ಲ ಪ್ರಕರಣಗಳಲ್ಲಿ ಕಚೇರಿಯ ಮುಖ್ಯಸ್ಥನು ಅವನನ್ನು ತೊಲಗಿಸಲು ಪ್ರಯತ್ನಿಸಿದರೆ, ಅಂಥ ಪ್ರಸಂಗದಲ್ಲಿ ಅವನಿಗೆ ಕಾರಣ ತೋರಿಸಲು ಒಂದು ಅವಕಾಶ ಕೊಡಬೇಕು ಎಂದೇ ನಾವು ಕೇಳುತ್ತಿರುವುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಖಂಡ (೩) ಅನ್ನು ಲೋಪಿಸಲು ಯಾವುದೇ ತಿದ್ದುಪಡಿಯಿಲ್ಲ. ನಿಮ್ಮ ತಿದ್ದುಪಡಿ ಖಂಡ (ಬಿ) ಅನ್ನು ಲೋಪಿಸುವ ಸಲುವಾಗಿ ಮಂಡಿಸಿದ್ದು.

**ಮಿ. ನಜೀರುದ್ದೀನ್ ಅಹ್ಮದ್:** ನಾನು ಈ ತಿದ್ದುಪಡಿಯ ನೋಟೀಸನ್ನು ಸಹ ಕೊಟ್ಟಿದ್ದೇನೆ. ತಿದ್ದುಪಡಿ ಸಂಖ್ಯೆ ೨೪೬ ನೋಡಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅನುಚ್ಛೇದ ೨೮೨ಬಿ ನ ಖಂಡ (೩) ಅನ್ನು ಲೋಪಿಸುವ ಸಲುವಾಗಿ ಶ್ರೀ ಜಸ್ಪತ್‌ರಾಯ್ ಕಪೂರ್ ಅವರು ಮಂಡಿಸಿದ ತಿದ್ದುಪಡಿ ಇದೆ.

**ಮಾನ್ಯ ಸಭಾಧ್ಯಕ್ಷರು;** ಮಾನ್ಯ ಸದಸ್ಯರ (ಮಿ. ನಜೀರುದ್ದೀನ್ ಅಹ್ಮದ್) ಅವರ ತಿದ್ದುಪಡಿ ಸಹ ಇದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ಮುಂದುವರಿಯಬಹುದು. ನಾನು ಅವರ ಗಮನ ಸೆಳೆಯಲು ಬಯಸಿದ್ದೆ ಅಷ್ಟೆ.

* * *

**__ಮಾನ್ಯ ಸಭಾಧ್ಯಕ್ಷರು:__ ನಾನೀಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಡಾ. ಅಂಬೇಡ್ಕರ್ ನೀವೇನಾದರೂ ಹೇಳುವುದಿದೆಯೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ತಮ್ಮ ತಿದ್ದುಪಡಿಗಳನ್ನು ಮಂಡಿಸಿದ ವಿವಿಧ ಭಾಷಣಕಾರರು ಮಾಡಿದ ಟೀಕೆಗಳನ್ನು ಆಲಿಸುತ್ತಿದ್ದ ಹಾಗೆ ನನಗೆ ಒಂದು ಸಂಗತಿ ಖಚಿತವಾಯಿತು. ಸ್ಪಷ್ಟವಾಗಿ, ಪ್ರತ್ಯೇಕವಾಗಿರುವ, ವಿಭಿನ್ನವಾಗಿರುವ ಎರಡು ವಿಷಯಗಳ ನಡುವಣ ವಿಭಿನ್ನತೆಯು ಅವರಿಗೆ ಹೊಳೆದಂತೆ ತೋರುವುದಿಲ್ಲ. ಅವರು ಅರ್ಥೈಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ನನ್ನ ಭಾವನೆ. ಕಾರಣವೆಂದರೆ, ಈ ವಿಷಯಗಳು ವಜಾ ಮಾಡಲು ಆಧಾರಗಳೇ ಹೊರತು ನೋಟೀಸು ನೀಡುವುದಕ್ಕೆ ಸಂಬಂಧಿಸಿದ ಆಧಾರಗಳಲ್ಲ. ಈ ೨೮೨–ಬಿ ವಿಧಿಯು ವಜಾದ ಆಧಾರಗಳನ್ನು ಕುರಿತು ವ್ಯವಹರಿಸುವುದಿಲ್ಲ. ವಿಧಿ ೨೮೨ರ ಉಪಭೇದಗಳ ಅಡಿಯಲ್ಲಿ ಸಮುಚಿತ ವಿಧಾನಮಂಡಳವು ರಚಿಸುವ ಕಾನೂನು ಮೂಲಕ ಈ ವಿಷಯವನ್ನು ಕುರಿತು ವ್ಯವಹರಿಸುವುದು. ಸಿವಿಲ್ ಸೇವೆಗೆ ನೇಮಕಗೊಂಡ ವ್ಯಕ್ತಿಯನ್ನು ಯಾವ ಪ್ರಕರಣಗಳಲ್ಲಿ ಸೇವೆಯಿಂದ ವಜಾ ಮಾಡಬೇಕು ಎಂಬ ವಿಷಯವನ್ನು ಸಂಸತ್ತು ರಚಿಸಿದ ಕಾನೂನು ವಿನಿಯಮಿಸುವುದು. ಆ ವಿಷಯವನ್ನು ಕುರಿತು ವ್ಯವಹರಿಸುವುದು ಈ ೨೨೮–ಬಿ ವಿಧಿಯ ಉದ್ದೇಶವಲ್ಲ.

ಈ ೨೮೨ಬಿ ವಿಧಿಯು ನಾನು ಹೇಳಿದ ಪ್ರಕಾರ, ಒಬ್ಬ ವ್ಯಕ್ತಿಗೆ ಅವನ ವಿರುದ್ಧ ತೆಗೆದುಕೊಳ್ಳಬೇಕೆಂದು

---

* ಸಿ.ಎ.ಡಿ. ಸಂ. IX, ೮ನೇ ಸೆಪ್ಟೆಂಬರ್ ೧೯೪೯, ಪುಟ ೧೧೦೪.

** ಅದೇ, ಪುಟ ೧೧೧೨–೧೧೧೪.

ಪ್ರಸ್ತಾವಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವಕಾಶವು ಒದಗುವ ಹಾಗೆ, ಸೇವೆಯಿಂದ ವಜಾ ಮಾಡುವ ಮುನ್ನ ನೋಟೀಸು ಕೊಡದಿರಲು ಇರುವ ಆಧಾರಗಳನ್ನು ಕುರಿತು ಮಾತ್ರ ವ್ಯವಹರಿಸುತ್ತದೆ. ಈ ಖಂಡದ ಉದ್ದೇಶವೆಂದರೆ ಒಂದು ಸಾಮಾನ್ಯ ಸಿದ್ಧಾಂತವನ್ನು ಗೊತ್ತುಪಡಿಸುವುದು ಅಂದರೆ ಪ್ರತಿಯೊಂದು ಪ್ರಕರಣದಲ್ಲಿ ನೋಟೀಸು ಕೊಡತಕ್ಕದ್ದು ಮತ್ತು (ಎ), (ಬಿ) ಮತ್ತು (ಸಿ) ಈ ಉಪಖಂಡಗಳಲ್ಲಿ ನಮೂದಿಸಲಾದ ಪ್ರಕರಣಗಳಲ್ಲಿ ನೋಟೀಸು ಕೊಡಬೇಕಾಗಿಲ್ಲ. ಆ ಅನುಚ್ಛೇದವು ಹೇಳುವುದೆಲ್ಲ ಅಷ್ಟೆ. ನನ್ನ ಮಾನ್ಯ ಸ್ನೇಹಿತರಾದ ಶ್ರೀ ಕಾಮತ್ ಅವರು ಇದು ಸಂವಿಧಾನಕ್ಕೆ ಅಪಕೀರ್ತಿಕರವಾದ ಲಜ್ಜಾಸ್ಪದವಾದ ಕಲಂಕಪ್ರಾಯ ಎಂದು ಟೀಕೆ ಮಾಡಿರುವುದು ಸರ್ವಥಾ ತಪ್ಪು ಎಂದು ನನ್ನ ಅಭಿಪ್ರಾಯ.

**ಶ್ರೀ ಎಚ್. ವಿ. ಕಾಮತ್:** (ಚರ್ಚೆಗೆ ತಡೆ)

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸಿವಿಲ್ ಸೇವೆಯ ಸುರಕ್ಷೆ ಮತ್ತು ಭದ್ರತೆಗೆ ನಮ್ಮಲ್ಲಿರುವ ಅತ್ಯಂತ ಶ್ರೇಷ್ಠ ಉಪಬಂಧ ಎಂದು ನಾನು ಯೋಚಿಸಿದ್ದಿರಬೇಕು. ಕಾರಣವೆಂದರೆ ಆ ಉಪಬಂಧವು ಸೇವೆಯಿಂದ ವಜಾ ಮಾಡುವ ಪ್ರಾಧಿಕಾರದ ಮೇಲೆ ಒಂದು ಮೂಲಭೂತ ಪರಿಮಿತಿಯನ್ನು ವಿಧಿಸುತ್ತದೆ. ಯಾರೇ ವ್ಯಕ್ತಿಗೆ, ಅವನನ್ನು ಸೇವೆಯಿಂದ ವಜಾ ಮಾಡಬಾರದೇಕೆ ಎಂದು ಕಾರಣ ತೋರಿಸಲು ವಿವರಿಸಿ ಹೇಳಲು ಒಂದು ಅವಕಾಶವನ್ನು ಒದಗಿಸುತ್ತದೆ. ಇನ್ನು ಈ ಉಪಬಂಧವು ಅಪಕೀರ್ತಿಕರ ವಿಷಯವೆಂದಾದರೆ, ನಾನು ಮಾನ್ಯ ಸ್ನೇಹಿತರಾದ ಶ್ರೀ ಕಾಮತ್ ಅವರಿಗೆ ಔಚಿತ್ಯ ಪ್ರಜ್ಞೆಯ ಸಂಬಂಧದಲ್ಲಿ ನಾನು ಭಿನ್ನಾಭಿಪ್ರಾಯ ಉಳ್ಳವನೆಂದು ಹೇಳಬಯಸುತ್ತೇನೆ.

**ಶ್ರೀ ಎಚ್. ವಿ. ಕಾಮತ್:** ನಾನು ಉಲ್ಲೇಖಿಸುತ್ತಿರುವುದು ಅನುಚ್ಛೇದದ ಪರಂತುಕಗಳ ಸಂಬಂಧದಲ್ಲಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಆ ಪರಂತುಕಗಳಿಗೆ ಬರುತ್ತಿದ್ದೇನೆ. ಖಂಡ (೨)ರ ಸಂಬಂಧದಲ್ಲಿ ಹೇಳುವುದಾದರೆ, ರಾಜ್ಯದ ಸೇವೆಯಲ್ಲಿ ನಿರತರಾಗಿರುವ ವ್ಯಕ್ತಿಗಳಿಗೆ ರಕ್ಷಣೆ ಒದಗಿಸಲು ರೂಪಿಸಲಾದ ಈ ಉಪಬಂಧವು ಅತ್ಯಂತ ಶ್ರೇಷ್ಠವಾದ ಉಪಬಂಧ ಎಂದು ಸಾಮಾನ್ಯ ತಿಳುವಳಿಕೆಯುಳ್ಳ ಪ್ರತಿಯೊಬ್ಬನೂ ಒಪ್ಪಿಕೊಳ್ಳುತ್ತಾನೆ. ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಸಿದ್ಧದೋಷಿಯಾದ ಯಾರೇ ವ್ಯಕ್ತಿಗೆ ನೋಟೀಸು ಕೊಡಬೇಕಾಗಿಲ್ಲ ಎಂಬ ಬಗ್ಗೆ ಸಹ ಪ್ರಶ್ನೆ ಎತ್ತಿದ್ದಾರೆ. ಈ ಸಂಬಂಧದಲ್ಲಿ ನನ್ನ ನಿವೇದನೆಯಿಷ್ಟೆ. ಇಲ್ಲಿಯೂ ಒಂದು ತಪ್ಪಾಗಿದೆ. ಕಾರಣವೆಂದರೆ, ಒಬ್ಬ ವ್ಯಕ್ತಿಯು ಕ್ರಿಮಿನಲ್ ಅಪರಾಧಕ್ಕಾಗಿ ಸಿದ್ಧದೋಷಿಯಾಗಿದ್ದರೂ, ಆ ಅಪರಾಧವು ನೈತಿಕ ಅಧಃಪತನವನ್ನು ಒಳಗೊಂಡಿರದಿದ್ದರೆ, ಅವನನ್ನು ರಾಜ್ಯದ ಸಿವಿಲ್ ಸೇವೆಯಿಂದ ವಜಾ ಮಾಡಬೇಕಾಗಿಲ್ಲ ಎಂದು ರಾಜ್ಯ ಶಾಸನವು ರೂಪಿಸಿದ ವಿನಿಯಮಗಳು ಉಪಬಂಧಿಸಬಹುದು (ವ್ಯವಸ್ಥೆ ಮಾಡಬಹುದು). ಸಂಸತ್ತು ಅಂಥ ಕಾನೂನು ರಚನೆ ಮಾಡಲು ಅವಕಾಶ ಹೊಂದಿರುತ್ತದೆ. ಪ್ರತಿಯೊಂದು ಕ್ರಿಮಿನಲ್ ಪ್ರಕರಣದಲ್ಲಿ, ಉದಾಹರಣೆಗೆ ಸಂಸತ್ತು ಅಥವಾ ರಾಜ್ಯವು ಮಾಡಿದ ಮೊಟಾರಿಂಗ್ ಅಥವಾ ಮೋಟಾರು ವಾಹನ ಕಾನೂನು ಅಡಿಯಲ್ಲಿ ಅಥವಾ ಯಾವುದೇ ಕ್ಷುದ್ರ ಕಾನೂನು ಅಡಿಯಲ್ಲಿ ಯಾವುದೇ ನಿರ್ದಿಷ್ಟ ಕೃತ್ಯವನ್ನು ಅಪರಾಧವೆಂದು ಪರಿಗಣಿಸುವುದರ ಪಕ್ಷದಲ್ಲಿ ಅದು ಸೇವೆಯಿಂದ ವಜಾ ಮಾಡಲು ಒಂದು ಆಧಾರವಾಗಬಹುದು. ಯಾವ ಯಾವ ಪ್ರಕರಣಗಳಲ್ಲಿ ಸೇವೆಯಿಂದ ವಜಾ ಮಾಡಕೂಡದು ಎಂದು ನಿರ್ಧರಿಸುವ ಅಧಿಕಾರ ಸಂಸತ್ತಿಗೆ ಸೇರಿದ್ದು. ರಾಜಕೀಯ ಅಪರಾಧಗಳನ್ನು ಹೊರತುಪಡಿಸಲು ಸಂಸತ್ತಿಗೆ ಪೂರ್ಣ ಸ್ವಾತಂತ್ರ್ಯ ಉಂಟು. ಈ ಖಂಡವು ಇಷ್ಟೆಲ್ಲ ಪದಗಳಲ್ಲಿ ನೋಟೀಸು ಕೊಡುವ ಪ್ರಶ್ನೆಯನ್ನು ಕುರಿತು ವ್ಯವಹರಿಸುತ್ತದೆ. ಸಂಸತ್ತು ರಾಜಕೀಯ ಸ್ವರೂಪದ ಅಪರಾಧಗಳನ್ನು ಶಿಕ್ಷೆಯಿಂದ ವಿನಾಯಿಸಬಹುದು. ನೈತಿಕ ಅಧಃಪತನವನ್ನು ಒಳಗೊಂಡಿಲ್ಲದ ಅಪರಾಧಗಳನ್ನು

ಶಿಕ್ಷೆಯಿಂದ ವಿನಾಯಿಸಬಹುದು. ಉಪಖಂಡ(ಎ)ದ ಮೂಲಕ ಸಂಸತ್ತಿನ ಸ್ವಾತಂತ್ರ್ಯಕ್ಕೆ ಧಕ್ಕೆಯಿಲ್ಲ ಅಥವಾ ಅದನ್ನು ನಿರ್ಬಂಧಿಸಿಲ್ಲ. ಇದನ್ನು ಸ್ಪಷ್ಟಗೊಳಿಸಬಯಸುತ್ತೇನೆ.

ಇನ್ನು (ಬಿ) ಉಪಖಂಡದ ವಿಚಾರ. ಇದನ್ನು ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್‌ನ ೨೪೦ನೇ ಪ್ರಕರಣದಿಂದ ಹಾಗೆಯೇ ಎತ್ತಿಕೊಳ್ಳಲಾಗಿದೆ. ಈ ಆಕ್ಟ್‌ನ ೨೪೦ನೇ ಪ್ರಕರಣವನ್ನು ಸೇವೆಗಳಿಗೆ ರಕ್ಷಣೆ ಒದಗಿಸುವ ಸಲುವಾಗಿ ಇಲ್ಲಿ ಸೇರಿಸಿದ್ದುಂಟು. ಬ್ರಿಟಿಷ್ ಜನತೆಯು ಕೂಡ, ಸಿವಿಲ್ ಸೇವೆಗಳಿಗೆ ರಕ್ಷಣೆ ಒದಗಿಸಲು ಉತ್ಕಟ ಆಸಕ್ತಿ ಉಳ್ಳವರಾಗಿದ್ದ ಕಾರಣ (ಬಿ) ಉಪಖಂಡದಂಥ ಪರಂತುಕವನ್ನು ಸೇರಿಸುವುದು ಅಗತ್ಯವೆಂದು ಆಲೋಚಿಸಿದ್ದಾರೆ. ನಾವು ಈವರೆಗೂ ಅಸ್ತಿತ್ವದಲ್ಲಿ ಇಲ್ಲದ ಯಾವುದೇ ಹೊಸ ಸಂಗತಿಯನ್ನು ತಂದು ಸೇರಿಸಿಲ್ಲ. ಉಪಖಂಡ (ಸಿ)ಗೆ ಸಂಬಂಧಿಸಿದಂತೆ, ಹೇಳುವುದಾದರೆ ಒಂದು ನಿರ್ದಿಷ್ಟ ಆರೋಪವನ್ನು ಬಹಿರಂಗಗೊಳಿಸಿದ ಮಾತ್ರಕ್ಕೆ ರಾಜ್ಯಶಾಸನದ ಭದ್ರತೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾದೀತು ಎಂದು ಭಾವಿಸಲಾಗಿದೆ. ಆದ್ದರಿಂದ ಉಪಖಂಡ (ಸಿ)ನ ಅಡಿಯಲ್ಲಿ, ರಾಷ್ಟ್ರಪತಿಯು ಕೇಂದ್ರ ನಿರ್ದಿಷ್ಟ ಪ್ರಕರಣಗಳಲ್ಲಿ ನೋಟೀಸು ಜಾರಿ ಮಾಡಬೇಕಾಗಿಲ್ಲ ಎಂದು ಉಪಬಂಧಿಸಿದ್ದುಂಟು. ಅದೊಂದು ಹಿತಕಾರಿಯಾದ ಉಪಬಂಧ ಎಂದು ನಾನು ಭಾವಿಸಿದ್ದೇನೆ. ಖಂಡ (೨) ಇದರಲ್ಲಿ ಒಳಗೊಂಡ ಉಪಬಂಧಗಳನ್ನು ರದ್ದುಗೊಳಿಸಲು ರಾಷ್ಟ್ರಪತಿಗೆ ಮುಕ್ತ ಅವಕಾಶವನ್ನು ಒದಗಿಸಿದಂತಾಗುತ್ತದೆ ಎಂದು ಬರಬಹುದಾಗಿರುವ ಟೀಕೆಗಳೇನೇ ಇದ್ದರೂ ರಾಜ್ಯದ ಹಿತದೃಷ್ಟಿಯನ್ನು ಅನುಲಕ್ಷಿಸಿ ಇದನ್ನು (ಉಪಬಂಧವನ್ನು) ಉಳಿಸಿಕೊಳ್ಳುವದೇ ಕ್ಷೇಮಕರ ಎಂದು ನಾನು ಭಾವಿಸಿದ್ದೇನೆ.

ಇನ್ನು ಖಂಡ (೩)ರ ವಿಚಾರ. ಇದನ್ನು ಉದ್ದೇಶಪೂರ್ವಕವಾಗಿಯೇ ಸೇರಿಸಲಾಗಿದೆ. ಈ ಖಂಡ (೩) ಇದ್ದಿಲ್ಲ ಎಂದು ಇಟ್ಟುಕೊಳ್ಳಿ. ಆಗ ಪರಿಸ್ಥಿತಿ ಏನಾಗುತ್ತದೆ? ಸಂಭವಿಸುವ ಪರಿಸ್ಥಿತಿ ಇಷ್ಟೆ. (ಎ) ಅಥವಾ (ಬಿ) ಅಥವಾ (ಸಿ) ಈ ಖಂಡಗಳ ಅಡಿಯಲ್ಲಿ ಯಾರಿಗೆ ನೋಟೀಸು ಕೊಟ್ಟಿಲ್ಲವೋ ಅಂಥ ಪ್ರತಿಯೊಬ್ಬ ವ್ಯಕ್ತಿಯು ನ್ಯಾಯಾಲಯಕ್ಕೆ ಮೊರೆ ಹೋಗಿ, ತನಗೆ ಕಾರಣ ತೋರಿಸಲು ಅವಕಾಶ ಕೊಡದೆ, ತನ್ನನ್ನು ಸೇವೆಯಿಂದ ವಜಾ ಮಾಡಲಾಗಿದೆ ಎಂದು ಅರಿಕೆ ಸಲ್ಲಿಸಲು ಹಕ್ಕುಳ್ಳವನಾಗುತ್ತಾನೆ. ಇನ್ನು "ಸಮಾಧಾನ" ಎಂಬ ಪದಕ್ಕೆ ಸಂಬಂಧಪಟ್ಟ ಹಾಗೆ ನ್ಯಾಯಾಲಯಗಳು ಎರಡು ವಿಭಿನ್ನ ನಿಲುವುಗಳನ್ನು ತಳೆದಿವೆ. ಅಂದರೆ ಪ್ರಕರಣದ ಪರಿಸ್ಥಿತಿಗಳನ್ನು ಆಧರಿಸಿ, 'ಸಮಾಧಾನವು' ಆ ಅಧಿಕಾರಿಯದೇ ವಸ್ತುನಿಷ್ಠ ಮನೋಭಾವನೆಯೋ ಅಥವಾ ವಸ್ತುನಿಷ್ಠ ನಿರ್ಧಾರವೋ ಹೇಗೆ. ಈ ಬಗೆಯ ವಿಷಯದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುವ ಅಧಿಕಾರವನ್ನು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಿಂದ ಹೊರತುಪಡಿಸಿ, ಅಧಿಕಾರಿಯ ತೀರ್ಮಾನಕ್ಕೆ ಬಿಡುವುದೇ ಕ್ಷೇಮ ಎಂದು ಭಾವಿಸಲಾಗಿದೆ. ಆ ಕಾರಣಕ್ಕಾಗಿಯೇ ಈ ಖಂಡ (೩) ಅನ್ನು ಸೇರಿಸಿದ್ದು. ಅಂದರೆ ನೋಟೀಸು ಕೊಡುವುದು ಕಾರ್ಯಸಾಧ್ಯವಲ್ಲ ಎಂದು ಅಧಿಕಾರಿಯು ಭಾವಿಸಿದರೆ ಅಥವಾ ನೋಟೀಸು ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ನೋಟೀಸು ಜಾರಿ ಮಾಡಬೇಕಾಗಿಲ್ಲ ಎಂದು ರಾಷ್ಟ್ರಪತಿಯು ಆಲೋಚಿಸಿದರೆ, ಯಾವ ನ್ಯಾಯಾಲಯಕ್ಕೂ ಆ ತೀರ್ಮಾನವನ್ನು ಪ್ರಶ್ನಿಸಲು ಅವಕಾಶವಿರತಕ್ಕದ್ದಲ್ಲ.

ಇನ್ನು, ಇನ್ನೂ ಒಂದು ತಪ್ಪು ತಿಳಿವಳಿಕೆ ಇದೆ. ಅದನ್ನು ತಿಳಿಗೊಳಿಸಲು ಇಚ್ಛಿಸುತ್ತೇನೆ. ಸಿವಿಲ್ ಸೇವೆಗಳಿಗೆ ಸಂಬಂಧಿಸಿದಂತೆ ನಾನು ಸಾದರಪಡಿಸಿದ ಉಪಬಂಧಗಳ ಅಡಿಯಲ್ಲಿ ಯಾರೇ ಸಿವಿಲ್ ಸೇವಕನನ್ನು ಸೇವೆಯಿಂದ ವಜಾ ಮಾಡಲು ಸರ್ಕಾರ ಅನನ್ಯ ಮತ್ತು ಅನಿರ್ಬಂಧ ಅಧಿಕಾರ ಹೊಂದಿದೆಯೆಂದು ಮತ್ತು (೨)ನೇ ಖಂಡದ (ಎ), (ಬಿ) ಮತ್ತು (ಸಿ) ಈ ಉಪಖಂಡಗಳನ್ನು ಸೇರಿಸಿರುವ ಕಾರಣ ಈ

ಅಧಿಕಾರವು ಇನ್ನಷ್ಟು ತೀವ್ರವಾಗಿ ಎಂದು ಕೆಲವರು ಭಾವಿಸಿರುತ್ತಾರೆ. ಇದೂ ಸಹ ಒಂದು ತಪ್ಪು ತಿಳುವಳಿಕೆ ಎಂದು ನಿವೇದಿಸಬಯಸುತ್ತೇನೆ. ಯಾಕೆಂದರೆ ನಾವು ಈಗಾಗಲೇ ತೀರ್ಣಗೊಳಿಸಿರುವ ಲೋಕ ಸೇವಾ ಆಯೋಗಕ್ಕೆ ಸಂಬಂಧಿಸಿದ ಉಪಬಂಧಗಳಲ್ಲಿ ಒಂದು ಉಪಬಂಧವುಂಟು. ಅದರ ಪ್ರಕಾರ, ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಯಾರೇ ಅಧಿಕಾರಿಯೂ ಕೈಕೊಂಡ ಕ್ರಮದ ಪರಿಣಾಮವಾಗಿ ಬಾಧಿತನಾದ ಸಿವಿಲ್ ಸೇವಕನು ಲೋಕಸೇವಾ ಆಯೋಗಕ್ಕೆ ಅಪೀಲು ಸಲ್ಲಿಸಲು ಹಕ್ಕು ಹೊಂದಿರುತ್ತಾನೆ. ಆದ್ದರಿಂದ, ಸರ್ಕಾರವು ಯಾರೇ ಅಧಿಕಾರಿಗೆ ಕಾರಣ ತೋರಿಸಲು ಅವಕಾಶವನ್ನು ಕೊಟ್ಟಿಲ್ಲದ ಪ್ರಸಂಗಗಳಲ್ಲಿ ಕೂಡ, ಅಂಥ ಅಧಿಕಾರಿಯು ಸಹ, ತನ್ನ ಸೇವೆಗೆ ಸಂಬಂಧಿಸಿ ರಚಿಸಲಾದ ನಿಯಮಗಳಲ್ಲಿ ಒಳಗೊಂಡ ಉಪಬಂಧಗಳಿಗೆ ವಿರುದ್ಧವಾಗಿ ತನ್ನನ್ನು ಅಕ್ರಮವಾಗಿ ಸೇವೆಯಿಂದ ವಜಾ ಮಾಡಲಾಗಿದೆ ಎಂದು ಲೋಕಸೇವಾ ಆಯೋಗಕ್ಕೆ ಅಪೀಲು ಸಲ್ಲಿಸುವ ಹಕ್ಕು ಹೊಂದಿರುತ್ತಾನೆ. ಆದ್ದರಿಂದ ಮಾನ್ಯ ಸದಸ್ಯರು ಈ ಅನುಚ್ಛೇದದಲ್ಲಿ ಒಳಗೊಂಡ ಉಪಬಂಧಗಳಿಗೆ ಸಂಬಂಧಿಸಿದಂತೆ ವ್ಯಕ್ತಗೊಳಿಸಿದ ಭೀತಿಯ ಶಂಕೆಗಳು ಆಧಾರ ರಹಿತವೆಂದು ಮತ್ತು ಈ ಅಧಿನಿಯಮದ ಉಪಬಂಧಗಳು, ವಿಧಿ ೨೮೨ರ ಉಪಬಂಧಗಳು ಮತ್ತು ಲೋಕಸೇವಾ ಆಯೋಗಕ್ಕೆ ಸಂಬಂಧಿಸಿದ ಉಪಬಂಧಗಳು ಇವುಗಳ ಬಗೆಗಿನ ತಪ್ಪು ತಿಳುವಳಿಕೆಯಿಂದ ಉಂಟಾದುವೆಂದೂ ನಾನು ಭಾವಿಸುತ್ತೇನೆ.

(ಒಟ್ಟು ೧೫ ತಿದ್ದುಪಡಿಗಳನ್ನು ನಿರಾಕರಿಸಲಾಯಿತು.)

**[ಡಾ. ಅಂಬೇಡ್ಕರ್ ಅವರ ಮೂಲ ತಿದ್ದುಪಡಿಯನ್ನು– ೨೮೨–ಬಿ ವಿಧಿಯನ್ನು ಅಂಗೀಕರಿಸಲಾಯಿತು ಮತ್ತು ಸಂವಿಧಾನಕ್ಕೆ ಸೇರಿಸಲಾಯಿತು.]**

## ವಿಧಿ ೨೮೨ಸಿ

***ಮಾನ್ಯ ಸಭಾಧ್ಯಕ್ಷರು:** ಈ ವಿಧಿಗೆ ಸಂಬಂಧಿಸಿದಂತೆ ಇನ್ನಾವುದೇ ತಿದ್ದುಪಡಿಯಿಲ್ಲ. ಡಾ. ದೇಶಮುಖ್, ನೀವು ಮಾತಾಡಬಯಸಿದ್ದೀರಲ್ಲ?

**ಡಾ. ಪಿ. ಎಸ್. ದೇಶ್‌ಮುಖ್:** ಸ್ವಾಮಿ, ಕೆಳಕಂಡ ಪದಗಳನ್ನು ಕೈಬಿಡುವುದಕ್ಕೆ ಸಂಬಂಧಿಸಿದಂತೆ, ನನ್ನ ಸ್ನೇಹಿತ ಶ್ರೀ ಬ್ರಜೇಶ್ವರ್ ಅವರು ಮಂಡಿಸಿದ ತಿದ್ದುಪಡಿಯನ್ನು ನಾನು ಬೆಂಬಲಿಸುತ್ತೇನೆ.

"ಹಾಗೆ ಮಾಡುವುದು ರಾಷ್ಟ್ರೀಯ ಹಿತದೃಷ್ಟಿಯಲ್ಲಿ ಅಗತ್ಯವೆಂದು ಅಥವಾ ವಿಹಿತವೆಂದು ರಾಜ್ಯಸಭೆಯು ಹಾಜರಿದ್ದು ಮತ ನೀಡುವ ಮೂರನೆಯ ಎರಡರಷ್ಟು ಸದಸ್ಯರಿಂದ ಬೆಂಬಲಿಸಲಾದ ನಿರ್ಣಯದ್ವಾರಾ ಘೋಷಿಸಿದರೆ"

ನಾನು ಅದೇ ಬಗೆಯ ತಿದ್ದುಪಡಿಯನ್ನು ಮಂಡಿಸಲು ಇಷ್ಟಪಟ್ಟಿದ್ದೆನು. ಅಂದರೆ ಸಂಖ್ಯೆ ೨೫೦ ಈ ತಿದ್ದುಪಡಿಯನ್ನು ಮಂಡಿಸಬೇಕೆಂದಿದ್ದೆನು. ಆದರೆ ಈಗ ಅದೇ ಬಗೆಯ ತಿದ್ದುಪಡಿಯನ್ನು ಮಂಡಿಸಲಾಗಿರುವ ಕಾರಣ, ನನ್ನ ತಿದ್ದುಪಡಿಯನ್ನು ಮಂಡಿಸಬಯಸುವುದಿಲ್ಲ. ಉಪಬಂಧವು ನನಗೆ ಅರ್ಥವಾಗುತ್ತಿಲ್ಲ. ಯಾವುದೇ ಮಹತ್ವಪೂರ್ಣ ವಿಷಯದಲ್ಲಿ ಪ್ರಾರಂಭಿಕ ಕ್ರಮದ ಅವಕಾಶವನ್ನು ಕೇಂದ್ರೀಯ ಸಂಸತ್ತಿನ ಲೋಕಸಭೆಯನ್ನು ಹೊರತುಪಡಿಸಿ ಇನ್ನಾವುದೇ ಇತರ ಸದನಕ್ಕೆ ಬಿಟ್ಟುಕೊಟ್ಟಿರುವುದು ಎಲ್ಲಿಯೂ ಇಲ್ಲ. ಆದರೆ, ನಾವು ಇಲ್ಲಿ ಮೊಟ್ಟ ಮೊದಲಿಗೆ, ನನಗೆ ಬಂದ ತಿಳಿವಳಿಕೆ ಮತ್ತು ಮಾಹಿತಿಯ ಪ್ರಕಾರ ಈ

* ಸಿ.ಎ.ಡಿ. ಸಂ. IX, ೮ನೇ ಸೆಪ್ಟೆಂಬರ್ ೧೯೪೯, ಪುಟ ೧೧೧೮.

ಪ್ರಾರಂಭಿಕ ಕ್ರಮದ ಈ ಅವಕಾಶವನ್ನು ರಾಜ್ಯಸಭೆಗೆ ಕೊಡುತ್ತಿದ್ದೇವೆ. ಸ್ವಾಮಿ, ಕೇಂದ್ರೀಯ ಸೇವೆಗಳು ಅಪೇಕ್ಷಣೀಯ ಅಥವಾ ಅಪೇಕ್ಷಣೀಯ ಅಲ್ಲ. ಇನ್ನು, ಅಪೇಕ್ಷಣೀಯವಾಗಿದ್ದ ಪಕ್ಷದಲ್ಲಿ, ಅವುಗಳನ್ನು ಪ್ರಾರಂಭಿಸುವ ಹಾದಿಯಲ್ಲಿಯೇ ಅನೇಕಾನೇಕ ಅಡ್ಡಿ ಅಡಚಣೆಗಳನ್ನು ಸೃಜಿಸಿ ಅವುಗಳನ್ನು ಅಕುಂಚನಗೊಳ್ಳುವ ಹಾಗೆ ಮಾಡುವುದಾದರೂ ಏಕೆ? ಆ ಸೇವೆಗಳ ಅಪೇಕ್ಷಣೀಯವಾಗಿಲ್ಲದಿದ್ದರೆ, ಆ ಬಗ್ಗೆ ಯಾವುದೇ ಬಗೆಯ ಉಪಬಂಧವನ್ನು ಏರ್ಪಡಿಸುವ ಅಗತ್ಯವಿರಲಿಲ್ಲ. ಅಖಿಲ ಭಾರತೀಯ ಸೇವೆಗಳನ್ನು ಹೆಚ್ಚು ಹೆಚ್ಚಾಗಿ ಸೃಜಿಸುವ ಪ್ರವೃತ್ತಿಯು ಅಧಿಕವಾಗಲಿದೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಆ ಸೇವೆಗಳ ಸೇರಿಸುವಿಕೆಯನ್ನು ಇಷ್ಟೊಂದು ಕಷ್ಟಸಾಧ್ಯಗೊಳಿಸಿದ್ದು ಅರ್ಥವಿಲ್ಲದ ಕ್ರಮ. ಪ್ರಸ್ತಾವಕ್ಕೆ ಮೇಲ್ಮನೆಯಲ್ಲಿ ಹಾಜರಿದ್ದು, ಮತ ನೀಡುವ ಮೂರನೆಯ ಎರಡರಷ್ಟು ಸದಸ್ಯರ ಬೆಂಬಲ ಯಾಕೆ ಬೇಕು? ನಿರುಪಯೋಗಿ ರಾಜ್ಯಸಭೆಗೆ ಒಂದಿಷ್ಟು ಘನತೆಯನ್ನು ಒದಗಿಸುವ ಅಥವಾ ಒಂದು ಪ್ರಕಾರ್ಯ ವಿಶೇಷವನ್ನು ಪ್ರದಾನ ಮಾಡುವ ಉದ್ದೇಶವಿದ್ದ ಹೊರತು, ನಾನು ಉಲ್ಲೇಖಿಸಿದ ಈ ಪದಗಳು ಸರ್ವಥಾ ಅನಗತ್ಯವಾಗಿರುತ್ತವೆ ಎಂದು ಭಾವಿಸಿದ್ದೇನೆ. ರಾಜ್ಯಸಭೆಗೆ ಅಂಥ ಮಹತ್ವಪೂರ್ಣ ವಿಷಯದಲ್ಲಿ ಪ್ರಾರಂಭಿಕ ಕ್ರಮದ ಅವಕಾಶವನ್ನು ಕೊಡಲು ಉದ್ದೇಶಿಸಿರುವ ಆತುರವೇ ಕಾರಣ ಎಂದು ಭಾವಿಸಿದ್ದೇನೆ. ಈ ಪದಗಳಿಂದ ಯಾವುದೇ ಪ್ರಯೋಜನವಿಲ್ಲ (ಅವುಗಳಿಗೆ ಯಾವುದೇ ಗೊತ್ತುಗುರಿಯಿಲ್ಲ) ಆ ಕಾರಣ ಅವುಗಳನ್ನು ಕೈಬಿಡಬೇಕು ಎಂದು ಸೂಚಿಸುತ್ತೇನೆ.

**ಅಧ್ಯಕ್ಷರು:** ಡಾ. ನೀವು ಏನನ್ನಾದರೂ ಹೇಳಬಯಸುತ್ತೀರ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಒಂದೇ ಒಂದು ಮಾತು. ಶ್ರೀ ಬ್ರಜೇಶ್ವರ್ ಪ್ರಸಾದ್ ಅವರೇ ಆಗಲಿ, ನನ್ನ ಸ್ನೇಹಿತ ಡಾ. ದೇಶಮುಖ್ ಅವರೇ ಆಗಲಿ, ತಿದ್ದುಪಡಿಯನ್ನು ಮಂಡಿಸುವಲ್ಲಿ ಅಥವಾ ಅದನ್ನು ಸಮರ್ಥಿಸುವಲ್ಲಿ ವಿಧಿ ೨೮೨ರ ಉಪಬಂಧಗಳನ್ನು ಲಕ್ಷ್ಯಪೂರ್ವಕವಾಗಿ ಓದಿದ ಹಾಗಿಲ್ಲ ಎಂದು ನಾನು ಭಾವಿಸುತ್ತೇನೆ. ವಿಧಿ ೨೮೨ ಕೇಂದ್ರದ ಅಧೀನದಲ್ಲಿರುವ ಸೇವೆಗಳಿಗೆ ಸೇವಾಭರ್ತಿ ಮಾಡುವ ಅಧಿಕಾರವನ್ನು ಕೇಂದ್ರ ಸರ್ಕಾರವು ರಾಜ್ಯದ ಅಧೀನದಲ್ಲಿರುವ ಸೇವೆಗಳಿಗೆ ವ್ಯಕ್ತಿಗಳನ್ನು ಸೇವಾಭರ್ತಿ ಮಾಡುವ ಮತ್ತು ಅವರ ಸೇವಾಷರತ್ತುಗಳನ್ನು ಗೊತ್ತುಪಡಿಸುವ ಪ್ರಸ್ತಾವವನ್ನು ನಿರೂಪಿಸುತ್ತ ಮುಂದುವರಿಯುತ್ತದೆ. ಆದ್ದರಿಂದ, ನಾವು ಅನುಚ್ಛೇದ ೨೮೨ರ ಮೂಲಕ ಅಧಿಕಾರವ್ಯಾಪ್ತಿಯನ್ನು ಪ್ರದಾನ ಮಾಡಿದ್ದುಂಟು. ಆದರೆ ಅನುಚ್ಛೇದ ೨೮೨ಸಿ ರಾಜ್ಯಗಳಿಗೆ ಕೊಡಲಾದ ಸ್ವಾಯತ್ತತೆಯನ್ನು ಸ್ವಲ್ಪಮಟ್ಟಿಗೆ ತೆಗೆದುಹಾಕುತ್ತದೆ. ಮತ್ತು ಈ ಸ್ವಾಯತ್ತತೆಯ ಮೇಲೆ ಆ ತರುವಾಯ ಆಕ್ರಮಣವಾಗಬೇಕಾಗಿದ್ದ ಪಕ್ಷದಲ್ಲಿ, ಹಾಗೆ ಮಾಡಲು ಕೇಂದ್ರ ಸರ್ಕರಕ್ಕೆ ಒಂದಿಷ್ಟು ಪ್ರಾಧಿಕಾರವನ್ನು ಪ್ರದಾನ ಮಾಡಬೇಕಾಗುತ್ತದೆ. ಇನ್ನು ಮಾಡಿಕೊಡಲು ಒಂದೇ ಒಂದು ಪದ್ಧತಿ ಎಂದರೆ, ಮೇಲ್ಮನೆಯ ಸದಸ್ಯರ ಮೂರನೆಯ ಎರಡರಷ್ಟು ಸದಸ್ಯರ ಸಮ್ಮತಿಯನ್ನು ಖಚಿತಪಡಿಸಿಕೊಳ್ಳುವುದೊಂದೇ ಮಾರ್ಗ. ಅನುಚ್ಛೇದ ೨೮೨ರಲ್ಲಿ ನಮೂದಿಸಲಾದ ಒಂದೇ ಒಂದು ಸಂಸ್ಥೆ ಎಂದರೆ ಮೇಲ್ಮನೆ. ಇನ್ನು, ಮೇಲ್ಮನೆಯು ರಾಜ್ಯಗಳನ್ನು ಪ್ರತಿನಿಧಿಸುತ್ತದೆ. ಆದಕಾರಣ ಅವರು ತೀರ್ಣಗೊಳಿಸಿದ ನಿರ್ಣಯ ಎಂದರೆ ರಾಜ್ಯಗಳು ಕೊಟ್ಟ ಪ್ರಾಧಿಕಾರ ಎಂದೇ ಅರ್ಥವಾಗುತ್ತದೆ. ಆದ್ದರಿಂದ ಈ ಪದಗಳನ್ನು ಅನುಚ್ಛೇದ ೨೮೨ಸಿ ರಲ್ಲಿ ಸೇರಿಸಿದ್ದುಂಟು.

**(ಡಾ. ಅಂಬೇಡ್ಕರ್ ಅವರ ಪ್ರಸ್ತಾವವನ್ನು ಅಂಗೀಕರಿಸಲಾಯಿತು. ಶ್ರೀ ಬ್ರಜೇಶ್ವರ್ ಪ್ರಸಾದ್ ಅವರ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು. ವಿಧಿ ೨೮೨ಸಿ ಅನ್ನು ಸಂವಿಧಾನಕ್ಕೆ ಸೇರಿಸಲಾಯಿತು)**

## ವಿಧಿ ೨೮೩

***ಮಾನ್ಯ ಸಭಾಧ್ಯಕ್ಷರು:** ನಾವೀಗ ವಿಧಿ ೨೮೩ಕ್ಕೆ ಬರುತ್ತೇವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇವೆ.

"ತಿದ್ದುಪಡಿಗಳ ಪಟ್ಟಿ (ಸಂಪುಟ II)ಯ ಸಂಖ್ಯೆ ೩೦೩೭ ಈ ತಿದ್ದುಪಡಿಗೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು.

"ವಿಧಿ ೨೮೩ ಇದಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು.

೨೮೩. ಈ ಸಂವಿಧಾನದ ಅಡಿಯಲ್ಲಿ ಇತರ ಉಪಬಂಧಗಳನ್ನು ರಚಿಸುವವರೆಗೆ, ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಮತ್ತು ಅಖಿಲ ಭಾರತ ಸೇವೆ ಆಗಿ ಅಥವಾ ಹುದ್ದೆ ಆಗಿ ಅಸ್ತಿತ್ವದಲ್ಲಿ ಮುಂದುವರಿಯುತ್ತಿರುವ ಯಾವುದೇ ಸೇವೆಗೆ ಅಥವಾ ಹುದ್ದೆಗೆ ಅನ್ವಯವಾಗುತ್ತಿದ್ದ ಕಾನೂನುಗಳು ಈ ಸಂವಿಧಾನದ ಉಪಬಂಧಗಳಿಗೆ ಸುಸಂಗತವಾಗಿರುವಷ್ಟರ ಮಟ್ಟಿಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

ಇದು ಪೂರ್ಣವಾಗಿ ಸಂಕ್ರಮಣ ಕಾಲೀನ ಉಪಬಂಧ ಆಗಿರುತ್ತದೆ.

**(ಪ್ರಸ್ತಾವವನ್ನು ಅಂಗೀಕರಿಸಲಾಯಿತು. ಅನುಚ್ಛೇದ ೨೮೩ ಅನ್ನು ಸಂವಿಧಾನಕ್ಕೆ ಸೇರಿಸಲಾಯಿತು.)**

## ವಿಧಿ ೩೦೨

**ಮಾನ್ಯ ಅಧ್ಯಕ್ಷರು:** ಈಗ ನಾವು ಅನುಚ್ಛೇದ ೩೦೨ ಅನ್ನು ತೆಗೆದುಕೊಳ್ಳುವ ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯಲ್ಲಿ ಮಂಡಿಸುತ್ತೇನೆ.

"ವಿಧಿ ೩೦೨ರ ಖಂಡ (೧)ರಲ್ಲಿ "ರಾಜ್ಯಪಾಲ" ಎಂಬ ಪದಕ್ಕೆ ಬದಲಾಗಿ "ರಾಜ" ಎಂಬ ಪದವನ್ನು ಸೇರಿಸತಕ್ಕದ್ದು.

"ವಿಧಿ ೩೦೨ರ ಖಂಡ (೧)ರ ಎರಡನೆಯ ಪರಂತುಕದಲ್ಲಿ ಭಾರತ ಸರ್ಕಾರದ ಅಥವಾ ಒಂದು ರಾಜ್ಯ ಸರ್ಕಾರದ ವಿರುದ್ಧ ಈ ಸಂವಿಧಾನದ Xರ IIIನೆಯ ಅಧ್ಯಾಯದಲ್ಲಿ ನಮೂದಿಸಲಾದಂಥ ವ್ಯವಹರಣೆಗಳನ್ನು ತರಬಹುದು ಎಂಬ ಪದಗಳ ಬದಲಾಗಿ ಭಾರತ ಸರ್ಕಾರದ ಅಥವಾ ಒಂದು ರಾಜ್ಯ ಸರ್ಕಾರದ ವಿರುದ್ಧ ಸಮುಚಿತ ವ್ಯವಹರಣೆಗಳನ್ನು ತರುವುದು ಎಂಬ ಪದಗಳನ್ನು ಸೇರಿಸತಕ್ಕದ್ದು.

ವಿಧಿ ೩೦೨ರ ಖಂಡ (೨)ರಲ್ಲಿ "ರಾಜ್ಯಪಾಲ" ಎಂಬ ಪದಕ್ಕೆ ಬದಲಾಗಿ "ರಾಜ" ಎಂಬ ಪದವನ್ನು ಸೇರಿಸತಕ್ಕದ್ದು.

ವಿಧಿ ೩೦೨ರ ಖಂಡ (೩)ರಲ್ಲಿ "ರಾಜ್ಯಪಾಲ" ಪದದ ತರುವಾಯ "ರಾಜ" ಎಂಬ ಪದವನ್ನು ಸೇರಿಸತಕ್ಕದ್ದು.

ವಿಧಿ ೩೦೨ರ ಖಂಡ (೪)ರಲ್ಲಿ

(ಎ) "ರಾಜ್ಯಪಾಲ" ಎಂಬ ಪದವು ಮೊದಲಲ್ಲಿ ಬರುವ ಸ್ಥಳದಲ್ಲಿ ಅಥವಾ "ರಾಜ" ಎಂಬ ಪದಗಳನ್ನು ಸೇರಿಸತಕ್ಕದ್ದು.

---

* ಸಿ.ಎ.ಡಿ. ಸಂ. IX, ೮ನೇ ಸೆಪ್ಟೆಂಬರ್ ೧೯೪೯, ಪುಟ ೧೧೧೯.

(ಬಿ) ಎರಡನೆಯ ಸ್ಥಳದಲ್ಲಿ ಬರುವ "ರಾಜ್ಯಪಾಲ" ಎಂಬ ಪದಕ್ಕೆ ಬದಲಾಗಿ "ರಾಜ್ಯಪಾಲನಾಗಿ ಅಥವಾ ರಾಜನಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಸಿ) ಮೂರನೆಯ ಸ್ಥಳದಲ್ಲಿ ಬರುವ "ರಾಜ್ಯಪಾಲ" ಎಂಬ ಪದಕ್ಕೆ ಬದಲಾಗಿ ಅಥವಾ "ರಾಜ" ಎಂಬ ಸೇರಿಸತಕ್ಕದ್ದು.

**ಒಬ್ಬ ಮಾನ್ಯ ಸದಸ್ಯರು:** ಸ್ವಾಮಿ, ೧೩ರ ವಿಚಾರವೇನು?

**ಮಾನ್ಯ ಸಭಾಧ್ಯಕ್ಷರು:** ಅದು ಆದೇಶ ಪತ್ರದಲ್ಲಿ ಇಲ್ಲ. ಅದು ತಡೆಹಿಡಿಯಲಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ತಿದ್ದುಪಡಿ ೧೪, ೧೬, ೧೭ ಮತ್ತು ೧೮ ಇವು ಪೂರ್ಣವಾಗಿ ಕರಡು ರಚನಾ ತಿದ್ದುಪಡಿಗಳಾಗಿರುತ್ತವೆ. ವಿವರಣೆಯು ಅಗತ್ಯವಿರುವ ಒಂದೇ ಒಂದು ತಿದ್ದುಪಡಿಯೆಂದರೆ ತಿದ್ದುಪಡಿ ಸಂಖ್ಯೆ ೧೫. ಈ ತಿದ್ದುಪಡಿಯನ್ನು ತರಲು ಕಾರಣವೆಂದರೆ ಅಧ್ಯಾಯ IIIಕ್ಕೆ ಮಾಡಲಾದ ಉಲ್ಲೇಖವು ನಿಜವಾಗಿಯೂ ವಿಧಿ ೨೬೪ಕ್ಕೆ ಮಾಡಲಾದ ಉಲ್ಲೇಖವಾಗಿರುತ್ತದೆ. ವಿಧಿ ೨೭೪ ಸರ್ಕಾರದ ವಿರುದ್ಧ ದಾವೆ ಹೂಡಲು ಇರುವ ಹಕ್ಕನ್ನು ಕುರಿತು ವ್ಯವಹರಿಸುತ್ತದೆ. ಒಂದು ಭಾಗವು ಸಂವಿಧಾನ ಪ್ರಾರಂಭದಂದು ಇದ್ದ ದಾವೆ ಹೂಡುವ ಹಕ್ಕನ್ನು ಕುರಿತು ವ್ಯವಹರಿಸುತ್ತದೆ. ಇನ್ನೊಂದು ಭಾಗವು ಸರ್ಕಾರದ ವಿರುದ್ಧ ದಾವೆ ಹೂಡುವ ಹಕ್ಕಿಗೆ ಸಂಬಂಧಿಸಿ ಇನ್ನಷ್ಟು ಉಪಬಂಧಗಳನ್ನು ರಚಿಸುವ ಸಂಸತ್ತಿನ ಅಧಿಕಾರಕ್ಕೆ ಸಂಬಂಧಿಸಿದ್ದು. ಅಲ್ಲಿ ಉಳಿದಿರುವ ಪದಗಳ ಪ್ರಕಾರ ಈ ಅಧಿನಿಯಮದ ಪ್ರಾರಂಭಕ್ಕೆ ಆಗಲಿರುವ ವಿಧಿ ೨೭೪ರ ಅರ್ಥದಲ್ಲಿ ಸರ್ಕಾರದ ವಿರುದ್ಧ ದಾವೆ ಹೂಡುವ ಹಕ್ಕು ಎಂದು ಮಾತ್ರ ಅರ್ಥವಾಗುತ್ತದೆ. ಆದ್ದರಿಂದ, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿ ಇರಲಿರುವ ದಾವೆ ಹೂಡುವ ಹಕ್ಕು ಮಾತ್ರವಲ್ಲದೆ, ಅಂದಿನ ಸರ್ಕಾರದ ವಿರುದ್ಧ ಸಂಸತ್ತು ಕಾನೂನು ದ್ವಾರಾ ಉಪಬಂಧಿಸಬಹುದಾದ ಆ ತರುವಾಯ ವ್ಯವಹರಣೆಗಳು ಸಹ ಒಳಗೊಳ್ಳುವ ಹಾಗೆ ಏರ್ಪಡಿಸುವುದೇ "ಸಮುಚಿತ ವ್ಯವಹರಣೆಗಳು" ಎಂಬ ಪದಗಳ ಪ್ರತಿಸ್ಥಾಪನೆಯ ಉದ್ದೇಶ. ಈ ತಿದ್ದುಪಡಿಗೆ ಅದೇ ಕಾರಣ. ಇಷ್ಟೇ ಅಲ್ಲದೆ, ಈ ತಿದ್ದುಪಡಿಯು ಅಂಗೀಕೃತವಾದರೆ, ಅನುಚ್ಛೇದ ೨೦೨ ಇದರಲ್ಲಿ ಏನೋ ಒಂದಿಷ್ಟು ಬಿಟ್ಟುಬಿಡಲಾದ ಹಾಗೆ ಕಾಣುವ ನಿಮಿತ್ತ, ಪರಿಣಾಮಸ್ವರೂಪಿಯಾದ ಇನ್ನೊಂದು ಚಿಕ್ಕ ತಿದ್ದುಪಡಿಯನ್ನು ತರಬೇಕಾದೀತು ಎಂದು ಸದನದ ಗಮನಕ್ಕೆ ತಿಳಿಸಲು ಬಯಸುತ್ತೇನೆ.

* * *

***ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್, ವಿಧಿ ೩೦೨ ಇದರ ಖಂಡ (೧)ರಲ್ಲಿ 'ಕರ್ತವ್ಯಗಳು' ಎಂಬ ಪದಕ್ಕೆ ಬದಲಾಗಿ 'ಪ್ರಕಾರ್ಯಗಳು' ಎಂಬ ಪದವನ್ನು ಸೇರಿಸತಕ್ಕದ್ದು ಎಂಬ ತಿದ್ದುಪಡಿಯನ್ನು ಶ್ರೀ ಕಾಮತ್ ಅವರು ಮಂಡಿಸಿದ್ದಾರೆ.

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆಯೆಂದರೆ:

ವಿಧಿ ೩೦೨ರ ಖಂಡ (೧)ರಲ್ಲಿರುವ "ಕರ್ತವ್ಯಗಳು" ಎಂಬ ಪದಕ್ಕೆ ಬದಲಾಗಿ "ಪ್ರಕಾರ್ಯಗಳು" ಎಂಬ ಪದವನ್ನು ಸೇರಿಸತಕ್ಕದ್ದು.

ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಆ ಇಡೀ ಗುಂಪನ್ನು ಒಟ್ಟಾಗಿ ಸೇರಿಸಬಹುದು.

---

* ಸಿ.ಎ.ಡಿ. ಸಂ. IX, ೮ನೇ ಸೆಪ್ಟೆಂಬರ್ ೧೯೪೯, ಪುಟ ೧೧೨೨.

**ಮಾನ್ಯ ಅಧ್ಯಕ್ಷರು:** ಸದಸ್ಯರು ಬಯಸುವುದಾದರೆ, ನಾನು ಪ್ರತ್ಯೇಕವಾಗಿ ಇಡುತ್ತೇನೆ. ಸರಿ, ನಾನು ಒಂದುಗೂಡಿಸಿ ಇಡುತ್ತೇನೆ.

* * *

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ವಿಧಿ ೨೪೩ರ ಮೇಲಿನ ತಲೆಬರಹವನ್ನು, ಮತ್ತು ೨೪೩, ೨೪೪ ಮತ್ತು ೨೪೫ ಈ ವಿಧಿಗಳನ್ನು ಬಿಟ್ಟುಬಿಡತಕ್ಕದ್ದು." ಅದನ್ನು ಹಾಗೆ ಇಡಬಹುದು. ಅಂದರೆ ಉಳಿದವುಗಳನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಲು ಬರುತ್ತದೆ. ಅದೊಂದು ಸ್ವತಂತ್ರ ಬಾಬು.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

ವಿಧಿ ೨೪೩ ತಲೆಬರಹವನ್ನು ಮತ್ತು ೨೪೩, ೨೪೪ ಮತ್ತು ೨೪೫ ಈ ವಿಧಿಗಳನ್ನು ಬಿಟ್ಟುಬಿಡಲಾಯಿತು.

## ಭಾಗ Xಎ

**ಭಾರತದ ರಾಜ್ಯ ಕ್ಷೇತ್ರದಲ್ಲಿ, ವ್ಯಾಪಾರ, ವಾಣಿಜ್ಯ ಮತ್ತು ಸಂಪರ್ಕ**

**ವ್ಯಾಪಾರ, ವಾಣಿಜ್ಯ ಮತ್ತು ಸಂಪರ್ಕದ ಸ್ವಾತಂತ್ರ್ಯ**

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ. ಭಾಗ Xರ ತರುವಾಯ, ಈ ಮುಂದಿನ ಹೊಸ ಭಾಗವನ್ನು ಸೇರಿಸತಕ್ಕದ್ದು ಎಂದರೆ

"ಭಾಗ Xಎ

**ವ್ಯಾಪಾರ, ವಾಣಿಜ್ಯ ಮತ್ತು ಸಂಪರ್ಕಗಳ ಮೇಲೆ ಕಾನೂನು ದ್ವಾರಾ ನಿರ್ಬಂಧಗಳನ್ನು ವಿಧಿಸಲು ಸಂಸತ್ತಿನ ಅಧಿಕಾರ**

೨೭೪ಎ ಈ ಭಾಗದ ಉಪಬಂಧಗಳಿಗೆ ಒಳಪಟ್ಟು ಭಾರತದ ರಾಜ್ಯ ಭಾರತದ ರಾಜ್ಯ ಕ್ಷೇತ್ರದಾದ್ಯಂತ ವ್ಯಾಪಾರ ಕ್ಷೇತ್ರದಾದ್ಯಂತ ವಾಣಿಜ್ಯ ಮತ್ತು ಸಂಪರ್ಕಗಳು ಮುಕ್ತವಾಗಿರತಕ್ಕದ್ದು.

**ವ್ಯಾಪಾರ ಮತ್ತು ವಾಣಿಜ್ಯಕ್ಕೆ ಸಂಬಂಧಪಟ್ಟಂತೆ ಒಕ್ಕೂಟದ ಮತ್ತು ರಾಜ್ಯ ಕಾನೂನು ರಚನಾ ಅಧಿಕಾರಗಳ ಮೇಲೆ ನಿರ್ಬಂಧಗಳು**

೨೭೪–ಎ ಸಂಸತ್ತು ಈ ಸಂವಿಧಾನದಿಂದ ಪ್ರದತ್ತವಾದ ಅಧಿಕಾರಗಳ ನಿಮಿತ್ತ ಅಧಿನಿಯಮಿಸಲಾದ ಕಾನೂನು ದ್ವಾರಾ, ಒಂದು ರಾಜ್ಯ ಮತ್ತು ಇನ್ನೊಂದು ರಾಜ್ಯದ ನಡುವೆ ಅಥವಾ ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗದ ಒಳಗೆ ವ್ಯಾಪಾರ, ವಾಣಿಜ್ಯ ಮತ್ತು ಸಂಪರ್ಕಗಳ ಮೇಲೆ ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಗತ್ಯವಾಗಿರುವಂಥ ನಿರ್ಬಂಧಗಳನ್ನು ವಿಧಿಸಬಹುದು.

**೨೭೪–**ಸಿ (೧) ಈ ಸಂವಿಧಾನ ೨೭೪–ಬಿ ವಿಧಿಯಲ್ಲಿ ಏನೇ ಒಳಗೊಂಡಿದ್ದರೂ, ಸಂಸತ್ತೇ ಆಗಲಿ ಒಂದು ರಾಜ್ಯದ ವಿಧಾನಮಂಡಳವೇ ಆಗಲಿ, ಏಳನೆಯ ಅನುಸೂಚಿಯ ಪಟ್ಟಿಗಳ ಪೈಕಿ ಯಾವುದೇ ಪಟ್ಟಿಯಲ್ಲಿ ವ್ಯಾಪಾರ ಅಥವಾ ವಾಣಿಜ್ಯಕ್ಕೆ ಸಂಬಂಧಪಟ್ಟ ನಮೂದು ಇರುವ ನಿಮಿತ್ತ (ಕಾರಣದಿಂದಾಗಿ) ಒಂದು ರಾಜ್ಯದ ಮೇಲೆ ಇನ್ನೊಂದು ರಾಜ್ಯಕ್ಕೆ ಪ್ರಾಶಸ್ತ್ಯ ನೀಡಲು ನೀಡುವಂತೆ ಅಧಿಕೃತಗೊಳಿಸಲು

* ಸಿ.ಎ.ಡಿ. ಸಂ. IX, ೮ನೇ ಸೆಪ್ಟೆಂಬರ್ ೧೯೪೯, ಪುಟ ೧೧೨೩.

** ಅದೇ, ಪುಟ ೧೧೨೩–೧೧೨೪.

ಅಥವಾ ಒಂದು ರಾಜ್ಯ ಮತ್ತು ಇನ್ನೊಂದು ರಾಜ್ಯದ ನಡುವೆ ತಾರತಮ್ಯ ಮಾಡಲು ಅಥವಾ ಮಾಡುವಂತೆ ಅಧಿಕೃತಗೊಳಿಸಲು ಅಧಿಕಾರ ಹೊಂದಿರತಕ್ಕದ್ದಲ್ಲ.

(೨) ಭಾರತದ ರಾಜ್ಯಕ್ಷೇತ್ರದಲ್ಲಿ ಸರಕುಗಳ ಕೊರತೆಯಿಂದ ಉಂಟಾದ ಪರಿಸ್ಥಿತಿಯನ್ನು ಕುರಿತು ವ್ಯವಹರಿಸುವ ಉದ್ದೇಶಕ್ಕಾಗಿ, ಹಿಂದೆ ಹೇಳಿದಂತೆ ಯಾವುದೇ ಆದ್ಯತೆಯನ್ನು ಕೊಡುವ ಅಥವಾ ತಾರತಮ್ಯ ಮಾಡುವ ಕಾನೂನು ಅಗತ್ಯವೆಂದು ಘೋಷಿಸಿ, ಅಂಥ ಯಾವುದೇ ಕಾನೂನು ಮಾಡದಂತೆ, ಈ ವಿಧಿ ಖಂಡ (೧)ರಲ್ಲಿ ಇರುವುದಾದರೂ ಸಂಸತ್ತನ್ನು ಪ್ರತಿಬಂಧಿಸತಕ್ಕದ್ದಲ್ಲ.

**ರಾಜ್ಯಗಳ ನಡುವಣ ವ್ಯಾಪಾರ ವಾಣಿಜ್ಯ ಮತ್ತು ಸಂಪರ್ಕ ಇವುಗಳ ಮೇಲೆ ನಿರ್ಬಂಧ**

**೨೭೪–ಡಿ** ಈ ಸಂವಿಧಾನದ ವಿಧಿ ೨೭೪ ಅಥವಾ ೨೭೪ಸಿ ಇವುಗಳಲ್ಲಿ ಏನೇ ಒಳಗೊಂಡಿದ್ದರೂ ಒಂದು ರಾಜ್ಯದ ವಿಧಾನಮಂಡಳವು ಕಾನೂನು ದ್ವಾರಾ:

(ಎ) ಇತರ ರಾಜ್ಯಗಳಿಂದ ಆಮದು ಮಾಡಲಾದ ಸರಕುಗಳ ಮೇಲೆ, ಆ ರಾಜ್ಯದಲ್ಲಿ ತಯಾರಿಸಲಾದ ಅಥವಾ ಉತ್ಪಾದಿಸಲಾದ ಅದೇ ಬಗೆಯ ಸರಕುಗಳ ಯಾವ ತೆರಿಗೆಗೆ ಗುರಿಯಾಗುತ್ತದೆಯೋ ಆ ತೆರಿಗೆಯನ್ನು ವಿಧಿಸಬಹುದು. ಹಾಗೆ ಆಮದು ಮಾಡಲಾದ ಸರಕುಗಳು ಮತ್ತು ಹಾಗೆ ತಯಾರಿಸಲಾದ ಅಥವಾ ಉತ್ಪಾದಿಸಲಾದ ಸರಕುಗಳ ನಡುವೆ ತಾರತಮ್ಯ ಮಾಡದ ಹಾಗೆ ವಿಧಿಸಬಹುದು.

(ಬಿ) ಆ ರಾಜ್ಯದೊಂದಿಗೆ ಅಥವಾ ಆ ರಾಜ್ಯದ ಒಳಗೆ ವ್ಯಾಪಾರ, ವಾಣಿಜ್ಯ ಅಥವಾ ಸಂಪರ್ಕಗಳ ಮೇಲೆ ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಗತ್ಯವಾಗಬಹುದಾದಂಥ ಸಮಂಜಸ ನಿರ್ಬಂಧಗಳನ್ನು ವಿಧಿಸಬಹುದು.

ಪರಂತು ರಾಷ್ಟ್ರಪತಿಯ ಪೂರ್ವ ಮಂಜೂರಾತಿ ಪಡೆಯದೆ ಈ ಅನುಚ್ಛೇದದ (ಬಿ) ಖಂಡದ ಉದ್ದೇಶಕ್ಕಾಗಿ ರಾಜ್ಯದ ವಿಧಾನಮಂಡಳದಲ್ಲಿ ಯಾವುದೇ ವಿಧೇಯಕವನ್ನು ಅಥವಾ ತಿದ್ದುಪಡಿಯನ್ನು ಮಂಡಿಸತಕ್ಕದ್ದಲ್ಲ ಅಥವಾ ರಾಜ್ಯದ ರಾಜ್ಯಪಾಲನು ಅಥವಾ ರಾಜನು ಯಾವುದೇ ಅಧ್ಯಾದೇಶವನ್ನು ಜಾರಿಗೊಳಿಸತಕ್ಕದ್ದಲ್ಲ.

**೨೭೪ಎ ರಿಂದ ೨೭೪ಡಿ ವರೆಗಿನ ಅನುಚ್ಛೇದಗಳ ಉಪಬಂಧಗಳನ್ನು ಜಾರಿಗೊಳಿಸಲು ಪ್ರಾಧಿಕಾರದ ನೇಮಕ**

**೨೭೪–ಇ** ಸಂಸತ್ತು ಕಾನೂನು ದ್ವಾರಾ ಈ ಸಂವಿಧಾನದ ಅನುಚ್ಛೇದ ೨೭೪ಎ, ೨೭೪ಬಿ, ೨೭೪ಸಿ ಮತ್ತು ೨೭೪ಡಿ ಈ ಅನುಚ್ಛೇದಗಳ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿ, ತಾನು ಯಥೋಚಿತವೆಂದು ಪರಿಗಣಿಸುವಂಥ ಪ್ರಾಧಿಕಾರವನ್ನು ನೇಮಕ ಮಾಡಬಹುದು ಮತ್ತು ಅಂಥ ಪ್ರಾಧಿಕಾರಕ್ಕೆ ತಾನು ಅಗತ್ಯವೆಂದು ಭಾವಿಸುವಂಥ ಅಧಿಕಾರಗಳನ್ನು ಮತ್ತು ಅಂಥ ಕರ್ತವ್ಯಗಳನ್ನು ಪ್ರದಾನ ಮಾಡಬಹುದು.

ಸ್ವಾಮಿ, ಈ ಹಂತದಲ್ಲಿ ನಾನು ಸದನಕ್ಕೆ ತಿಳಿಸಬೇಕಾದದ್ದು ಇಷ್ಟೆ. ಮೊದಲಲ್ಲಿ, ವ್ಯಾಪಾರ ಮತ್ತು ವಾಣಿಜ್ಯಗಳ ಸಂಬಂಧದಲ್ಲಿ ವ್ಯವಹರಿಸುವ ಅನುಚ್ಛೇದಗಳು ಕರಡು ಸಂವಿಧಾನದ ವಿವಿಧ ಭಾಗಗಳಲ್ಲಿ ಹರಡಿದ್ದವು. ಒಂದು ವಿಧಿಯು ಮೂಲಭೂತ ಹಕ್ಕುಗಳಲ್ಲಿ ಸೇರಿಕೊಂಡಿತು. ಅದೆಂದರೆ ವಿಧಿಯು ೧೬– ಆ ಮೇರೆಗೆ ವ್ಯಾಪಾರ ಮತ್ತು ವಾಣಿಜ್ಯಗಳು ಸಂಸತ್ತು ರಚಿಸಿದ ಯಾವುದೇ ಕಾನೂನಿಗೆ ಒಳಪಟ್ಟು ಭಾರತದ ರಾಜ್ಯ ಕ್ಷೇತ್ರದಾದ್ಯಂತ ಮುಕ್ತವಾಗಿರತಕ್ಕದ್ದು. ಇತರ ವಿಧಿಗಳು ಎಂದರೆ ೨೪೩, ೨೪೪ ಮತ್ತು ೨೪೫ ಈ ವಿಧಿಗಳನ್ನು ಕರಡು ಸಂವಿಧಾನದ ಇನ್ನೊಂದು ಭಾಗದಲ್ಲಿ ಸೇರಿಸಲಾಯಿತು. ಚರ್ಚೆಯು ನಡೆಯುತ್ತಿದ್ದ ಅವಧಿಯಲ್ಲಿ, ಸದನದ ಅಧಿಕಾಂಶ ಸದಸ್ಯರಿಗೆ, ಅನುಚ್ಛೇದ, ೨೪೩, ೨೪೪ ಮತ್ತು ೨೪೫

ಇವುಗಳನ್ನು ವಿಧಿ ೧೬ರಿಂದ ಬೇರ್ಪಡಿಸಿದ ಕಾರಣ, ಆ ವಿಧಿಗಳ ಇಂಗಿತವನ್ನು ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ ಎಂದು ಕಂಡುಬಂದಿತು. ಆದಕಾರಣ, ವ್ಯಾಪಾರ ಮತ್ತು ವಾಣಿಜ್ಯಗಳ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ಎಲ್ಲ ಉಪಬಂಧಗಳ ಸಮಗ್ರ ಚಿತ್ರವನ್ನು ಸದನಕ್ಕೆ ಒದಗಿಸುವ ಸಲುವಾಗಿ, ಕರಡು ರಚನಾ ಸಮಿತಿಯು, ಕರಡು ಸಂವಿಧಾನದ ವಿವಿಧ ಭಾಗಗಳಲ್ಲಿ ಹರಡಿದಂತಿರುವ ಈ ಎಲ್ಲ ವಿಭಿನ್ನ ಅನುಚ್ಛೇದಗಳನ್ನು ಒಂದೇ ಒಂದು ಭಾಗದಲ್ಲಿ ಮೇಳವಿಸಿ, ಭಾರತದಾದ್ಯಂತ ವ್ಯಾಪಾರ ಮತ್ತು ವಾಣಿಜ್ಯಗಳ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಉಪಬಂಧಗಳು ಯಾವುವು ಎಂದು ಒಂದೇ ನೋಟಕ್ಕೆ ಗೊತ್ತಾಗುವ ಹಾಗೆ ವ್ಯವಸ್ಥೆಗೊಳಿಸುವುದು ಉತ್ತಮ ಎಂದು ಭಾವಿಸಿತು. ಮಾತ್ರವಲ್ಲದೆ, ಈ ಭಾಗದಲ್ಲಿ ಒಳಗೊಂಡ ಉಪಬಂಧಗಳ ಪ್ರಕಾರ ವ್ಯಾಪಾರ ಮತ್ತು ವಾಣಿಜ್ಯಗಳನ್ನು ಸಂಪೂರ್ಣವಾಗಿ ಅನಿರ್ಬಂಧಗೊಳಿಸುವುದು ಎಂದರೆ ವ್ಯಾಪಾರ ಮತ್ತು ವಾಣಿಜ್ಯಗಳು ಭಾರತದಾದ್ಯಂತ ಅನಿರ್ಬಂಧವಾಗಿರಬೇಕು ಎಂಬ ಮೂಲಭೂತ ಉಪಬಂಧದಿಂದ ವಿಭಿನ್ನವಾದ ಕ್ರಮ ಕೈಗೊಳ್ಳಲು ಇರತಕ್ಕ ಸಂಸತ್ತಿನ ಹಾಗೆಯೇ ರಾಜ್ಯದ ವಿಧಾನಮಂಡಳದ ಅಧಿಕಾರವನ್ನು ಕಸಿದುಕೊಳ್ಳುವುದು ನಮ್ಮ ಉದ್ದೇಶವಲ್ಲ ಎಂದು ಹೇಳಬಯಸುತ್ತೇನೆ. ವ್ಯಾಪಾರ ಮತ್ತು ವಾಣಿಜ್ಯಗಳ ಸ್ವಾತಂತ್ರ್ಯವನ್ನು ಸಂಸತ್ತು ವಿಧಿಸಬಹುದು ಅಥವಾ ವಿಭಿನ್ನ ರಾಜ್ಯಗಳ ವಿಧಾನಮಂಡಳಗಳು ವಿಧಿಸಬಹುದು. ವ್ಯಾಪಾರ ಮತ್ತು ವ್ಯಾಪಾರ ಸ್ವಾತಂತ್ರ್ಯದ ಮೇಲೆ ಆಕ್ರಮಣ ಮಾಡುವ, ಆದರೆ ಸಂಸತ್ತಿನ ಅಂಥ ಅಧಿಕಾರದಲ್ಲಿ ಒಳಗೊಂಡ ಪರಿಮಿತಿಯು ಭಾರತದ ರಾಜ್ಯ ಕ್ಷೇತ್ರದಲ್ಲಿ ಯಾವುದೇ ಭಾಗದಲ್ಲಿ ಸರಕುಗಳ ಕೊರತೆಯಿಂದ ಉಂಟಾಗುವ ಪ್ರಕರಣಗಳಿಗೆ ಸೀಮಿತವಾಗಿರಬೇಕು ಎಂಬ ವಾಸ್ತವ ಸಂಗತಿಗೆ ಒಳಪಟ್ಟಿರಬೇಕು ಮತ್ತು ರಾಜ್ಯಗಳ ಸಂದರ್ಭದಲ್ಲಿ ಆ ಅಧಿಕಾರವು ಸಾರ್ವಜನಿಕ ಹಿತಾಸಕ್ತಿಯ ಆಧಾರದ ಮೇಲೆ ಸಮರ್ಥನೀಯವಾಗಿರಬೇಕು. ವ್ಯಾಪಾರ ಮತ್ತು ವಾಣಿಜ್ಯ ಸ್ವಾತಂತ್ರ್ಯದ ಮೇಲೆ ಆಕ್ರಮಣ ಮಾಡುವ ರಾಜ್ಯಗಳ ಕ್ರಮವನ್ನು ಕೂಡ, ವಾಣಿಜ್ಯ ಮತ್ತು ವಾಣಿಜ್ಯ ಸ್ವಾತಂತ್ರ್ಯವನ್ನು ಬಾಧಿಸುವ ಯಾವುದೇ ವಿಧೇಯಕಕ್ಕೆ ರಾಷ್ಟ್ರಪತಿಯ ಪೂರ್ವ ಮಂಜೂರಾತಿ ಅಗತ್ಯ ಎಂಬ ಷರತ್ತಿಗೆ ಒಳಪಡಿಸಿದ್ದುಂಟು. ಹಾಗೆ ಮಂಜೂರಾತಿ ಪಡೆಯದೆ ಹೋದರೆ ರಾಜ್ಯಗಳಿಗೆ ಅಂಥ ಕಾನೂನು ರಚಿಸಲು ಸಾಧ್ಯವಾಗಲಾರದು. ಅನುಚ್ಛೇದ ೨೭೪ಇ ಸಂಸತ್ತಿಗೆ, ಯುನೈಟೆಡ್ ಸ್ಟೇಟ್ಸ್‌ನಲ್ಲಿ ಇರುವ ಅಂತರ ರಾಜ್ಯ ಆಯೋಗದಂಥ ಪ್ರಾಧಿಕಾರವನ್ನು ಸ್ಥಾಪಿಸಲು ಅನುಕೂಲ ಮಾಡಿಕೊಡುವ ಅನುಚ್ಛೇದ ಮಾತ್ರ. ಅಂಥ ಯಾವುದೇ ಪ್ರಾಧಿಕಾರವನ್ನು ನಿರ್ದಿಷ್ಟವಾಗಿ ನಮೂದಿಸಿ, ಸಂಸತ್ತು ತಾನು ಸೂಕ್ತವೆಂದು ಪರಿಗಣಿಸುವಂಥ ಪ್ರಾಧಿಕಾರವನ್ನು ಸ್ಥಾಪಿಸಲು ಅದಕ್ಕೆ ಸ್ವಾತಂತ್ರ್ಯವನ್ನು ಕೊಡುವುದು ಅಪೇಕ್ಷಣೀಯ ಎಂದು ಭಾವಿಸಿದ್ದೇವೆ.

ಚರ್ಚೆಯ ಅವಧಿಯಲ್ಲಿ ಇನ್ನೂ ಏನಾದರೂ ಅಂಶಗಳನ್ನು ಎತ್ತಿದ ಪಕ್ಷದಲ್ಲಿ, ನಾನು ಸಂತೋಷದಿಂದ ವಿವರಣೆ ನೀಡಲು ಸಿದ್ಧನಿದ್ದೇನೆ.

* * *

## ವಿಧಿ ೨೭೪ಎ

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಧ್ಯಕ್ಷರೆ, ನನ್ನ ಸ್ನೇಹಿತರಾದ ಶ್ರೀ ಟಿ. ಟಿ. ಕೃಷ್ಣಮಾಚಾರಿ ಮತ್ತು ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವಾಗ, ಅದಕ್ಕೆ ಹೆಚ್ಚಾಗಿ ನಾನು ಉಪಯುಕ್ತವಾದ ಏನನ್ನೂ ಸೇರಿಸಲಾರೆ ಎಂದು ಭಾವಿಸಿದ್ದೇನೆ.

**(ಎಲ್ಲ ೩ ತಿದ್ದುಪಡಿಗಳನ್ನು ನಿರಾಕರಿಸಲಾಯಿತು.)**

**ಎಲ್ಲ ೨೭೪ಎ ಅನ್ನು ಸಂವಿಧಾನಕ್ಕೆ ಸೇರಿಸಲಾಯಿತು.)**

## ವಿಧಿ ೨೬೪

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ವಿಧಿ ೨೬೪ರ ಬದಲಾಗಿ ಈ ಮುಂದಿನ ವಿಧಿಯನ್ನು ಸೇರಿಸತಕ್ಕದ್ದು."

**ರಾಜ್ಯ ತೆರಿಗೆಗಳಿಂದ ಒಕ್ಕೂಟದ ಆಸ್ತಿಗೆ ವಿನಾಯಿತಿ**

೨೬೪ಡಿ ಒಕ್ಕೂಟದ ಆಸ್ತಿಗೆ ರಾಜ್ಯವು ಅಥವಾ ರಾಜ್ಯದೊಳಗಿನ ಯಾವುದೇ ಪ್ರಾಧಿಕಾರವು ವಿಧಿಸುವ ಎಲ್ಲ ತೆರಿಗೆಗಳಿಂದ ವಿನಾಯಿತಿ ಇರತಕ್ಕದ್ದು.

(೨) ಈ ಖಂಡದಲ್ಲಿ ಇರುವುದು ಯಾವುದೂ ಸಂಸತ್ತು ಕಾನೂನುದ್ವಾರಾ ಅನ್ಯಥಾ ಉಪಬಂಧೀಸುವವರೆಗೆ, ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಒಕ್ಕೂಟದ ಆಸ್ತಿಯು ಗುರಿಯಾಗತಕ್ಕ ಅಥವಾ ಗುರಿಯಾಗುವುದಾಗಿ ಪರಿಗಣಿಸಿರತಕ್ಕ ತೆರಿಗೆಯನ್ನು, ಆ ತೆರಿಗೆಯನ್ನು ಆ ರಾಜ್ಯದಲ್ಲಿ ವಿಧಿಸುವುದು ಮುಂದುವರಿಯುವ ತನಕ, ಅಂಥ ಆಸ್ತಿಯ ಮೇಲೆ ಆ ರಾಜ್ಯದಲ್ಲಿನ ಯಾವುದೇ ಸ್ಥಳೀಯ ಪ್ರಾಧಿಕಾರವು ವಿಧಿಸದ ಹಾಗೆ ತಡೆಯತಕ್ಕದ್ದಲ್ಲ (ಪ್ರತಿಬಂಧಿಸತಕ್ಕದ್ದಲ್ಲ).

ತಿದ್ದುಪಡಿಗಳನ್ನು ಮಂಡಿಸಿದ ಅನಂತರ, ಚರ್ಚೆಯೇನಾದರೂ ನಡೆದರೆ, ಆಗ ನಾನು ಮಾತನಾಡುತ್ತೇನೆ.

* * *

*****ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಅಧಿನಿಯಮ ೧೯೪೧ರ ಪ್ರಕಾರ, ಸರ್ಕಾರವು ಹಾಗೆಂದು ಅಧಿಸೂಚನೆ ಹೊರಡಿಸಿದ ಪಕ್ಷದಲ್ಲಿ, ಅವುಗಳ ಸಂಬಂಧದಲ್ಲಿ ಸ್ಥಳೀಯ ತೆರಿಗೆಗಳನ್ನು ವಸೂಲ್ಮಾಡಬಹುದು. ಆದರೆ ಆ ತೆರಿಗೆಗಳು ಮಾರ್ಪಾಡಾದ ರೂಪದಲ್ಲಿ ಇರುತ್ತವೆ. ಅಲ್ಲಿ ಆಧಾರವೆಂದರೆ ಸಲ್ಲಿಸಲಾದ ಸೇವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನೀವು ಐದು ನಿಮಿಷಗಳಿಗಿಂತ ಹೆಚ್ಚು ಸಮಯ ತೆಗೆದುಕೊಂಡಿದ್ದೀರ.

* * *

---

* ಸಿ.ಎ.ಡಿ. ಸಂ. IX, ೮ನೇ ಸೆಪ್ಟೆಂಬರ್ ೧೯೪೯, ಪುಟ ೧೧೪೫.

** ಅದೇ, ಪುಟ ೧೧೪೭.

*** ಅದೇ, ಪುಟ ೧೧೫೩.

*ಶ್ರೀ ಬಿಮಣಲಾಲ ಚಕುಭಾಯಿ ಶಾಹ: ಆದ್ದರಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರು ಎರಡು ಅಂಶಗಳನ್ನು ಪರಿಶೀಲಿಸಬೇಕು ಎಂದು ಅವರನ್ನು ಕೇಳಿಕೊಳ್ಳುತ್ತೇನೆ. ಅಂದರೆ (೧) ವಿಧಿ ೨೬೬ರಲ್ಲಿ ಅದು ಅಗತ್ಯವಿಲ್ಲವೆ.

* * *

**ಮಾನ್ಯ ಸಭಾಧ್ಯಕ್ಷರು: ಅಭಿಪ್ರಾಯಗಳನ್ನು ಸದನದ ಮುಂದೆ ಇಡಲಾಗಿದೆ. ಈಗ ಡಾ. ಅಂಬೇಡ್ಕರ್ ಅವರು ಉತ್ತರ ಕೊಡುತ್ತಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ನಾನು ಮೊದಲು ಪ್ರಸ್ತಾವಿಸಲಾದ ವಿಧಿ ೨೬೪ರ (೨)ನೇ ಖಂಡದ ಉಪಬಂಧಗಳನ್ನು ಉಲ್ಲೇಖಿಸುತ್ತೇನೆ. ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವುದೇ (೨)ನೇ ಖಂಡದ ಉದ್ದೇಶ ಎಂದು ತಾವು ಒಪ್ಪುತ್ತೀರಿ ಎಂದು ನಾನು ಭಾವಿಸಿದ್ದೇನೆ. ಪರಿಣಾಮಸ್ವರೂಪವಾಗಿ ಖಂಡ (೨)ರ ಉಪಬಂಧಗಳ ಅಡಿಯಲ್ಲಿ ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಒಕ್ಕೂಟದ ಆಸ್ತಿಗಳ ಮೇಲೆ ಅಥವಾ ಈ ತೆರಿಗೆಗಳಿಗೆ ಗುರಿಯಾಗತಕ್ಕ ಅಥವಾ ಗುರಿಯಾಗತಕ್ಕವು ಎಂದು ಪರಿಗಣಿಸಲಾದಂಥ ಆಸ್ತಿಯ ಮೇಲೆ ಅಂಥ ನಿರ್ದಿಷ್ಟ ತೆರಿಗೆಯನ್ನು ವಿಧಿಸುವುದನ್ನು ಮುಂದುವರಿಸುತ್ತವೆ. ಖಂಡ (೨) ಮಾಡುವ ಒಟ್ಟು ಕೆಲಸವೆಂದರೆ, ಈಗ ಸದ್ಯಕ್ಕೆ ವಿಧಿಸಲಾಗುತ್ತಿರುವ ತೆರಿಗೆಗಳ ಸ್ವರೂಪವನ್ನು ಪರೀಕ್ಷಿಸಲು ಸಂಸತ್ತಿಗೆ ಅಧಿಕಾರ ನೀಡುವ ವ್ಯವಸ್ಥೆ. ಖಂಡವನ್ನುಳಿದು ಖಂಡ (೨)ರಲ್ಲಿ ಹೆಚ್ಚಿನ ಸಂಗತಿಯೇನೂ ಇಲ್ಲ. ಅರ್ಥಾತ್ "ಸಂಸತ್ತು ಕಾನೂನುದ್ವಾರಾ ಅನ್ಯಥಾ ಉಪಬಂಧಿಸುವವರೆಗೆ" ಸಂಸತ್ತು ಅನ್ಯಥಾ ಉಪಬಂಧಿಸುವವರೆಗೆ ಅಸ್ತಿತ್ವದಲ್ಲಿರುವ ಸ್ಥಳೀಯ ಪ್ರಾಧಿಕಾರಗಳು ಅವು ಮುನಿಸಿಪಾಲಿಟಿಗಳೇ ಆಗಿರಲಿ ಅಥವಾ ಲೋಕಲ್ ಬೋರ್ಡ್‌ಗಳೇ ಆಗಿರಲಿ, ಕೇಂದ್ರ ಸರ್ಕಾರದ ಆಸ್ತಿಗಳ ಮೇಲೆ ತೆರಿಗೆ ವಿಧಿಸುವುದನ್ನು ಮುಂದುವರಿಸುತ್ತವೆ. ಆದ್ದರಿಂದ, ಯಥಾಸ್ಥಿತಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅನುಚ್ಛೇದ ೨೬೪ರಲ್ಲಿ ಒಳಗೊಂಡಿರತಕ್ಕ ಉಪಬಂಧಗಳ ಬಗ್ಗೆ ಯಾವುದೇ ಆಕ್ಷೇಪಕ್ಕೆ ಅವಕಾಶವಿರುವುದಿಲ್ಲ.

ಇನ್ನು ಉದ್ಭವಿಸಬಹುದಾದ ಒಂದೇ ಒಂದು ಪ್ರಶ್ನೆಯೆಂದರೆ ಖಂಡ (೨)ರ ಮೂಲಕ ಕೊಡಲಾದ ಹಕ್ಕು ನಿರುಪಾಧಿಕವಾಗಿರಬೇಕೆ ಅಥವಾ ಅದರಲ್ಲಿ ಒಳಗೊಂಡಿರುವ ಸಂಸತ್ತು ಅನ್ಯಥಾ ಉಪಬಂಧಿಸುವವರೆಗೆ ಎಂಬ ಪರಂತುಕಕ್ಕೆ ಒಳಪಟ್ಟಿರಬೇಕೆ. ಇನ್ನೊಂದು ಸ್ಥಳದಲ್ಲಿ ಈ ವಿಷಯವನ್ನು ಚರ್ಚಿಸುತ್ತಿರುವಾಗ ಸದನದ ಪರ್ಯಾಲೋಚನೆ ಕೋರಿ ನಾನು ಕೆಲವು ವಾದಗಳನ್ನು ನಿವೇದಿಸಿಕೊಂಡಿದ್ದೆನು.

**ಪಂಡಿತ್ ಹೃದಯನಾಥ್ ಕುಂಝ್ರು** (ಸಂಯುಕ್ತ ಪ್ರಾಂತಗಳು: ಸಾಮಾನ್ಯ): ನನ್ನ ಮಾನ್ಯ ಸ್ನೇಹಿತರು ಉಲ್ಲೇಖಿಸುತ್ತಿರುವ ಆ ಇನ್ನೊಂದು ಸ್ಥಳ ಯಾವುದು? ಸಭೆಯ ಇನ್ನೊಂದು ಸದನವೇನಾದರೂ ಇದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನು ನಮೂದಿಸುವಂತಿಲ್ಲ. ಅದಕ್ಕಾಗಿಯೇ ನಾನು "ಇನ್ನೊಂದು ಸ್ಥಳ" ಎಂದು ಹೇಳುತ್ತಿರುವುದು. ಅದಕ್ಕೆ ಕಾರಣವುಂಟು. ನಾನು ಅಲ್ಲಿ ಸಾದರಪಡಿಸಿದ

---

* ಸಿ.ಎ.ಡಿ. ಸಂ. IX, ೮ನೇ ಸೆಪ್ಟೆಂಬರ್ ೧೯೪೯, ಪುಟ ೧೧೫೫.

** ಅದೇ, ಪುಟ ೧೧೫೭–೧೧೬೦.

ವಾದಗಳನ್ನು ಬೇಕಾದ ರೀತಿಯಲ್ಲಿ ಪುನಃ ಉದ್ಧರಿಸಿರುವ ನಿಮಿತ್ತ ಅವುಗಳ ಮಹತ್ವದ ಬಗ್ಗೆ ಸದನದ ಮೇಲೆ ಪ್ರಭಾವಗಳು ನನ್ನವೇ, ಆದಕಾರಣ ಅವುಗಳನ್ನು ಪುನಃ ಉಚ್ಚರಿಸಲು ಇಷ್ಟಪಡುತ್ತೇನೆ. ಯಾವ ರೀತಿಯಲ್ಲಿ ವ್ಯಕ್ತಗೊಳಿಸಿದರೆ ಸದನಕ್ಕೆ ಅರ್ಥವಾಗಬಹುದೋ ಆ ರೀತಿಯಲ್ಲಿ.

ಸ್ಥಳೀಯ ಪ್ರಾಧಿಕಾರಕ್ಕೆ ಯಾವುದೇ ಬಗೆಯ ಮಿತಿಗೆ ಅಥವಾ ಷರತ್ತಿಗೆ ಒಳಪಡಿಸದೆ ತೆರಿಗೆ ವಿಧಿಸಲು ಅನಿರ್ಬಂಧ ಅವಕಾಶವನ್ನು ಕೊಡುವುದು ಕಷ್ಟವಾಗುತ್ತದೆ ಎಂದು ನಾನು ಆಗ ಹೇಳಿದ್ದೆನು. ನನ್ನ ವಾದಗಳು ಇಬ್ಬಗೆಯವುಗಳಾಗಿದ್ದವು. ಮೊಟ್ಟಮೊದಲಿಗೆ ನಾನು ಹೇಳಿದ್ದು ಮತ್ತು ಈಗಲೂ ಬೇಕಾದರೆ ಅದನ್ನೇ ಹೇಳುತ್ತೇನೆ. ಯಾವ ನಿರ್ದಿಷ್ಟ ಸಂಘಟನೆಯಲ್ಲಿ ಯಾವ ವ್ಯಕ್ತಿಯು ಅಥವಾ ಅವನ ಹಿತಾಸಕ್ತಿಯ ಪ್ರಾತಿನಿಧ್ಯ ಪಡೆದಿಲ್ಲವೋ ಆ ವ್ಯಕ್ತಿಯ ಆಸ್ತಿಯ ಮೇಲೆ ಆ ಸಂಘಟನೆಗೆ ತೆರಿಗೆ ವಿಧಿಸಲು ಹಕ್ಕು ಕೊಡುವ ವಿಚಾರವನ್ನು ಊಹಿಸಲಿಕ್ಕೂ ಸಾಧ್ಯವಿಲ್ಲ. ಹಾಗಾದರೆ ಆ ತತ್ವವು ಸಹಜ ನ್ಯಾಯದ ತತ್ವಕ್ಕೆ ವಿರುದ್ಧವಾಗುತ್ತದೆ. ನಾನು ಇನ್ನೂ ಹೇಳಿದ್ದೇನೆಂದರೆ, ಸ್ಥಳೀಯ ಪ್ರಾಧಿಕಾರಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅವು ಮುನಿಸಿಪಾಲಿಟಿಗಳೇ ಆಗಿರಲಿ ಅಥವಾ ಲೋಕಲ್ ಬೋರ್ಡ್‌ಗಳೇ ಆಗಿರಲಿ, ಆ ಸಂಸ್ಥೆಗಳಲ್ಲಿ ಕೇಂದ್ರ ಸರ್ಕಾರವು ವಾಸ್ತವವಾಗಿ ಕಿಂಚಿತ್ತೂ ಪ್ರಾತಿನಿಧ್ಯ ಹೊಂದಿರುವುದಿಲ್ಲ. ಇನ್ನೊಂದೆಡೆಯಲ್ಲಿ ಅದನ್ನೇ ಹೇಳಿದ್ದು. ಇನ್ನು ಎರಡನೆಯದಾಗಿ ನಾನು ಹೇಳಿದ್ದೇನೆಂದರೆ, ಸ್ಥಳೀಯ ಪ್ರಾಧಿಕಾರವು ತೆರಿಗೆ ವಿಧಿಸಲು ಹೊಂದಿರುವ ಅಧಿಕಾರವು ಸ್ಥಳೀಯ ವಿಧಾನಮಂಡಳದಿಂದ ಅಂದರೆ ಆ ರಾಜ್ಯದ ವಿಧಾನಮಂಡಳದಿಂದ ಪ್ರಾಪ್ತವಾಗಿರುತ್ತದೆ. ಸಂವಿಧಾನವು ರಾಜ್ಯಕ್ಕೆ ವಹಿಸಿಕೊಟ್ಟಿರುವ ಯಾವ ತೆರಿಗೆ ಮೂಲವನ್ನು ಅಂಥ ರಾಜ್ಯ ವಿಧಾನ ಮಂಡಲವು ಆ ಸ್ಥಳೀಯ ಪ್ರಾಧಿಕಾರಕ್ಕೆ ವರ್ಗಾಯಿಸುವುದು ಎಂಬುದನ್ನು ತಿಳಿದುಕೊಳ್ಳಲು ಕೇಂದ್ರ ಸರ್ಕಾರಕ್ಕೆ ಸರ್ವಥಾ ಅಸಾಧ್ಯವಾಗುತ್ತದೆ. ವಾಸ್ತವವಾಗಿ, ಸ್ಥಳೀಯ ಪ್ರಾಧಿಕಾರದ ತೆರಿಗೆ ವಿಧಿಸುವ ಅಧಿಕಾರವು ರಾಜ್ಯ ವಿಧಾನಮಂಡಳವು ರಚಿಸಿದ ಕಾನೂನು ದ್ವಾರಾ ಪ್ರಾಪ್ತವಾಗುತ್ತದೆ. ಸದ್ಯದಲ್ಲಿ ಯಾವ ನಿರ್ದಿಷ್ಟ ತೆರಿಗೆಯನ್ನು ಕೇಂದ್ರ ಸರ್ಕಾರದ ಆಸ್ತಿಯ ಮೇಲೆ ವಿಧಿಸಲು ರಾಜ್ಯ ವಿಧಾನಮಂಡಳವು ಸ್ಥಳೀಯ ಪ್ರಾಧಿಕಾರವನ್ನು ಅಧಿಕೃತಗೊಳಿಸಬಹುದು ಎಂದು ತಿಳಿದುಕೊಳ್ಳಲು ಸರ್ವಥಾ ಅಸಾಧ್ಯವಾಗುತ್ತದೆ. ತತ್‌ಪರಿಣಾಮ ಸ್ವರೂಪವಾಗಿ, ತೆರಿಗೆಯ ಸ್ವರೂಪವೇನು, ತೆರಿಗೆಯ ವ್ಯಾಪ್ತಿ ಎಷ್ಟು ಎಂಬುದೇನೂ ತಿಳಿಯದೆ, ಕೇಂದ್ರ ಸರ್ಕಾರವು ಆ ತೆರಿಗೆಗೆ ಒಳಪಡಬೇಕು, ಸ್ಥಳೀಯ ಸಂಸ್ಥೆಯ ಪ್ರಾಧಿಕಾರಕ್ಕೆ ಅಧೀನವಾಗಬೇಕು ಎಂದು ಅಪೇಕ್ಷಿಸುವುದು ಸರ್ವಥಾ ಅಸಾಧ್ಯವಾದ ಸಂಗತಿ.

ಆದ ಕಾರಣವೇ, ಸಂಸತ್ತು ತನ್ನ ಆಸ್ತಿಯ ಮೇಲೆ ತೆರಿಗೆ ವಿಧಿಸಲು ಸ್ಥಳೀಯ ಪ್ರಾಧಿಕಾರಕ್ಕೆ ಅನುಮತಿ ನೀಡಲು ಒಪ್ಪಿಕೊಳ್ಳುವುದಕ್ಕೆ ಮುಂಚೆ, ಸ್ಥಳೀಯ ಪ್ರಾಧಿಕಾರದ ತೆರಿಗೆ ವಿಧಿಸುವ ಅಧಿಕಾರವನ್ನು, ಅವರು ವಿಧಿಸಲು ಪ್ರಸ್ತಾವಿಸಿರುವ ತೆರಿಗೆಯ ಮೊಬಲಗನ್ನು ಪರೀಕ್ಷಿಸಲು ಸಂಸತ್ತಿಗೆ ಅವಕಾಶ ಒದಗಿಸಬೇಕು ಎಂಬ ಷರತ್ತನ್ನು ಈ ಖಂಡ (೨)ರಲ್ಲಿ ಸೇರಿಸಲು ಪ್ರಸ್ತಾವಿಸಲಾಗಿದೆ. ನಾನು ಹೇಳಿದ ಮೇರೆಗೆ, ಸಂಸತ್ತೇ ಆಗಲಿ ಅಥವಾ ಈ ಅನುಚ್ಛೇದವನ್ನು ಪ್ರಸ್ತಾವಿಸಿದವರೇ ಆಗಲಿ, ಸಂಸತ್ತಿಗೆ (ತನಗೆ) ಈ ಖಂಡ (೨)ರ ಮೂಲಕ ಕೊಡಲಾಗುವ ಈ ಅಧಿಕಾರವನ್ನು ಚಲಾಯಿಸುವಲ್ಲಿ ಸ್ಥಳೀಯ ಪ್ರಾಧಿಕಾರವು ವಿಧಿಸುವ ತೆರಿಗೆಯಿಂದ ತನ್ನನ್ನು ಸಂಪೂರ್ಣವಾಗಿ ವಿನಾಯಿಸಿಕೊಳ್ಳುವುದು ಎಂಬ ಆಶಯವನ್ನು ಹೊಂದಿರಲಿಲ್ಲ. ತೆರಿಗೆಗೆ ಒಳಪಡುವುದಕ್ಕೆ ಮುನ್ನ ಆ ತೆರಿಗೆಯ ಪ್ರಸ್ತಾಪಗಳನ್ನು ಪರೀಕ್ಷಿಸಲು ಒಂದು ಅವಕಾಶವನ್ನು ಸಂಸತ್ತಿಗೆ ಒದಗಿಸುವ ಸಲುವಾಗಿಯೇ ಈ ಪರಂತುಕವನ್ನು ಸೇರಿಸಿದ್ದು. ಖಂಡ (೨)ಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಈ ಯಾವುದೇ ಆಗಿದೆ ಎಂದು ನಾನು ಭಾವಿಸುವುದಿಲ್ಲ. ಎರಡನೆಯದಾಗಿ, ಸ್ಥಳೀಯ ಪ್ರಾಧಿಕಾರಗಳು

ಈಗ ಹೊಂದಿರತಕ್ಕ ಆರ್ಥಿಕ ಸಂಪನ್ಮೂಲಗಳಿಂದ ಈ ಖಂಡ (೨) ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ.

ಆದರೆ ಈಗ ನನ್ನ ಗಮನಕ್ಕೆ ಬಂದ ಒಂದು ಅಂಶವುಂಟು. ಖಂಡ (೧)ರಲ್ಲಿ ಇರುವ ಒಂದು ಲೋಪ. ಅದನ್ನು ಸರಿಪಡಿಸಲು ನಾನು ಸಿದ್ಧನಿದ್ದೇನೆ. ಖಂಡ (೨) ಆ ತೆರಿಗೆಯನ್ನು ವಿಧಿಸುವ ಮುನಿಸಿಪಾಲಿಟಿಗಳ ಅಥವಾ ಸ್ಥಳೀಯ ಪ್ರಾಧಿಕಾರಗಳ ಪ್ರಕರಣಗಳನ್ನು ಕುರಿತು ವ್ಯವಹರಿಸುವ ಖಂಡ. ಇದಲ್ಲದೆ, ತೆರಿಗೆ ವಿಧಿಸುವ ಈ ಹಕ್ಕು ಈಗ ಅದನ್ನು ಚಲಾಯಿಸುತ್ತಿರುವ ಮುನಿಸಿಪಾಲಿಟಿಗಳಿಗೆ ಅಥವಾ ಸ್ಥಳೀಯ ಪ್ರಾಧಿಕಾರಗಳಿಗೆ ಸೀಮಿತವಾಗಿರಕೂಡದು. ಆದರೆ ಸಂಸತ್ತು, ಯಾವ ಮುನಿಸಿಪಾಲಿಟಿಗಳು ಅಥವಾ ಲೋಕಲ್ ಬೋರ್ಡ್‌ಗಳು ಕೇಂದ್ರ ಸರ್ಕಾರದ ಆಸ್ತಿಯ ಮೇಲೆ ತೆರಿಗೆ ವಿಧಿಸುವ ಈ ವಿಶೇಷಾಧಿಕಾರವನ್ನು ಚಲಾಯಿಸಲಿಲ್ಲವೋ ಅಥವಾ ಚಲಾಯಿಸಲು ತಪ್ಪಿವೆಯೋ ಆ ಮುನಿಸಿಪಾಲಿಟಿಗಳಿಗೆ ಮತ್ತು ಲೋಕಲ್ ಬೋರ್ಡ್‌ಗಳಿಗೆ ಸಹ ವಿಸ್ತರಿಸುವುದು ಅಪೇಕ್ಷಣೀಯ ಎಂದು ನಾವು ಭಾವಿಸುತ್ತೇವೆ. ಆದ್ದರಿಂದ ನಾನು ಖಂಡ (೧)ರಲ್ಲಿ ಈ ಪದಗಳನ್ನು ಸೇರಿಸಲು ಸಿದ್ಧನಿದ್ದೇನೆ.

"ಒಕ್ಕೂಟದ ಆಸ್ತಿ" ಎಂಬ ಪದಗಳ ತರುವಾಯ ಸಂಸತ್ತು ಕಾನೂನು ಮೂಲಕ ಅನ್ಯಥಾ ಉಪಬಂಧಬಹುದಾಗಿರುವುದನ್ನು ಹೊರತುಪಡಿಸುವಷ್ಟು ಮಟ್ಟಿಗೆ ಎಂಬ ಪದಗಳನ್ನು ಸೇರಿಸತಕ್ಕದ್ದು.

ಅಂದರೆ ಈ ಖಂಡವು ಸಂಸತ್ತು ಈವರೆಗೆ ಮನ್ನಣೆ ಪಡೆದಿಲ್ಲದ ಮುನಿಸಿಪಾಲಿಟಿಗಳು ಮತ್ತು ಇತರ ಲೋಕಲ್ ಬೋರ್ಡ್‌ಗಳಿಗೆ ಮನ್ನಣೆಯನ್ನು ಪ್ರದಾನ ಮಾಡಬಹುದು ಅಥವಾ ಅವು ವಿಧಿಸುವ ತೆರಿಗೆಗಳಿಗೆ ಮನ್ನಣೆ ನೀಡಬಹುದು.

**ಶ್ರೀ ಶ್ಯಾಮಸುಂದರ ಸಹಾಯ** (ಬಿಹಾರ: ಸಾಮಾನ್ಯ): ಈಗ ಅಸ್ತಿತ್ವದಲ್ಲಿ ಇರುವ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ೧೯೩೫ ಅನ್ವಯ ಕೂಡ ಮುನಿಸಿಪಾಲಿಟಿಗಳಿಗೆ ಭಾರತ ಸರ್ಕಾರಕ್ಕೆ ಸೇರಿದ ಕಟ್ಟಡಗಳ ಮೇಲೆ ತೆರಿಗೆ ವಿಧಿಸಲು ಅನುಮತಿಯಿರಲಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದನ್ನೇ ನಾನು ಹೇಳಿದ್ದು, ನನ್ನ ವಾದವನ್ನು ಇನ್ನಷ್ಟು ವಿವರವಾಗಿ ನಿರೂಪಿಸಬಹುದಾಗಿತ್ತು. ಆದರೆ ನಾನು ಇಷ್ಟಪಡುವುದಿಲ್ಲ. ಕಾರಣವೆಂದರೆ, ಯಥಾಸ್ಥಿತಿ ಮುಂದುವರಿಯಬೇಕು ಎಂದು ನಾನು ಒಪ್ಪಿದ್ದೇನೆ. ಪೂರ್ಣವಾಗಿ ಸಂವೈಧಾನಿಕ ನಿಲುವಿನಿಂದ ನಾನು ಖಂಡ (೨) ಅನ್ನು ಪ್ರಬಲವಾಗಿ ಆಕ್ಷೇಪಿಸುತ್ತಿದ್ದೆನು. ಅದಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಆದರೆ ನಮ್ಮದು ಖಾಲಿ ಹಲಗೆಯಲ್ಲ. ಅದರ ಮೇಲೆ ಎಷ್ಟೆಲ್ಲ ಬರೆದದ್ದುಂಟು. ಆದ್ದರಿಂದ, ಅದನ್ನೆಲ್ಲ ತೊಡೆದುಹಾಕಲು ಇಷ್ಟವಿಲ್ಲ. ಆ ಕಾರಣಕ್ಕಾಗಿಯೇ ನನಗೆ ಖಂಡ (೨) ಬೇಕು, ಮಾತ್ರವಲ್ಲದೆ, ಈವರೆಗೆ ಕೇಂದ್ರ ಸರ್ಕಾರದ ಆಸ್ತಿಯ ಮೇಲೆ ತೆರಿಗೆ ವಿಧಿಸದಿರುವ ಮುನಿಸಿಪಾಲಿಟಿಗಳಿಗೆ, ಅವುಗಳ ಮೇಲೆ ತೆರಿಗೆ ವಿಧಿಸಲು ಶಕ್ತಗೊಳಿಸುವ ಬಗ್ಗೆ ಸಂಸತ್ತಿಗೆ ಅನುಮತಿ ನೀಡಲು ಖಂಡ (೧) ಅನ್ನು ಮಾರ್ಪಾಟುಗೊಳಿಸುತ್ತಿದ್ದೇನೆ.

**ಬಾಬು ರಾಮನಾರಾಯಣ ಸಿಂಘ್:** ಸ್ಥಳೀಯ ಸಂಸ್ಥೆಗಳ ಸಂಬಂಧಪಟ್ಟ ಕ್ಲೇಮುಗಳನ್ನು ಆ ತರುವಾಯ ಪರಿಶೀಲಿಸಲಾಗುವುದು ಎಂದು ಡಾ. ಅಂಬೇಡ್ಕರ್ ಹೇಳುತ್ತಾರೆ. ಈ ಸಂವಿಧಾನವನ್ನು ಪೂರ್ಣಗೊಳಿಸಿದ ತರುವಾಯ ತತ್‌ಕ್ಷಣದ ಪರಿಣಾಮವೇನು ಎಂದು ತಿಳಿಯಬಯಸುತ್ತಿದ್ದೇನೆ. ಉದಾಹರಣೆಗೆ, ನನ್ನ ಪ್ರಾಂತ್ಯ ಬಿಹಾರ್‌ನಲ್ಲಿ ಕೆಲವು ಜಿಲ್ಲಾ ಬೋರ್ಡ್‌ಗಳು ವಿಶೇಷವಾಗಿ ಹಜಾರಿಬಾಗ್ ಜಿಲ್ಲಾ ಬೋರ್ಡ್ ಸರ್ಕಾರಿ ಕಲ್ಲಿದ್ದಲು ಗಣಿಯಿಂದ ರಸ್ತೆ ಉಪಕರದ ರೂಪದಲ್ಲಿ ಯಾವಾಗಲೂ ದೊಡ್ಡ ಪ್ರಮಾಣದಲ್ಲಿ ಹಣದ ಮೊತ್ತವನ್ನು ಪಡೆಯುತ್ತದೆ. ಈ ಸಂವಿಧಾನವೂ ಪೂರ್ಣವಾದೊಡನೆ ಆ ಹಣ ಸಂದಾಯವನ್ನು

ನಿಲ್ಲಿಸಲಾಗುವುದೇ ಅಥವಾ ಆ ಬಗ್ಗೆ ಸಂಸತ್ತು ತೀರ್ಮಾನ ಕೈಗೊಳ್ಳುವ ತನಕ ಮುಂದುವರಿಯುವುದೇ ಎಂದು ಕೇಳಬಯಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ನಿರ್ದಿಷ್ಟವಾಗಿ ವಿಧಿಸಲಾಗುತ್ತಿರುವ ಯಾವುದೇ ನಿರ್ದಿಷ್ಟ ತೆರಿಗೆಯನ್ನು ಕುರಿತು ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಗೊಳಿಸಲಾರೆನು. ಇನ್ನು ಸರ್ವಸಾಧಾರಣ ಸಿದ್ಧಾಂತ ಎಂದರೆ, ಯಾವುದೇ ಮುನಿಸಿಪಾಲಿಟಿ ಅಥವಾ ಲೋಕಲ್ ಬೋರ್ಡ್ ಕೇಂದ್ರ ಸರ್ಕಾರದ ಆಸ್ತಿಯ ಮೇಲೆ ಅಥವಾ ತೆರಿಗೆಗೆ ಗುರಿಯಾಗಿರತಕ್ಕದ್ದು ಎಂದು ನಿರ್ಣಯಿಸಲಾಗುವ ಇತರ ಆಸ್ತಿಯ ಮೇಲೆ ತೆರಿಗೆಯನ್ನು ವಿಧಿಸುತ್ತಿದ್ದರೆ, ತೆರಿಗೆ ವಿಧಿಸುವುದು ಮುಂದುವರಿಯುತ್ತದೆ. ಆ ತೆರಿಗೆಗಳನ್ನು ವಿಧಿಸುತ್ತಿರುವ ಆ ಸ್ಥಳೀಯ ಮುನಿಸಿಪಾಲಿಟಿಗಳ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆ ಆಗಲಿಕ್ಕಿಲ್ಲ.

**ಶ್ರೀ ಆರ್.ಕೆ. ಸಿಧ್ವ:** ಸದ್ಯಕ್ಕೆ ಭಾರತೀಯ ರೈಲ್ವೆ ತೆರಿಗೆ ವಿಧಿಸುವ ಅಧಿನಿಯಮನ ಇದರ ಅಡಿಯಲ್ಲಿ, ಸ್ಥಳೀಯ ಸಂಸ್ಥೆಗಳು ತೆರಿಗೆ ಸಂದಾಯವನ್ನು ಕೊಡುವ ಸಂದರ್ಭಗಳಲ್ಲಿ, ಒಂದು ಅಧಿಸೂಚನೆಯನ್ನು ಹೊರಡಿಸಬೇಕಾಗುತ್ತದೆ. ಡಾ. ಅಂಬೇಡ್ಕರ್ ಅವರು ಈ ಪ್ರಕರಣವನ್ನು ತಿದ್ದುಪಡಿ ಮಾಡುವ ವಿಷಯವನ್ನು ಪರಿಶೀಲಿಸಲು ಸಿದ್ಧರಿದ್ದಾರೆಯೇ? ವಾಸ್ತವವಾಗಿ ಅದನ್ನು ಇಲ್ಲಿ ತಿದ್ದುಪಡಿ ಮಾಡುವಂತಿಲ್ಲ. ಆದರೆ ಅದನ್ನು ಸಂಸತ್ತಿನಲ್ಲಿ ತಿದ್ದುಪಡಿ ಮಾಡಲಾಗುವುದು ಎಂಬ ಬಗ್ಗೆ ರೈಲ್ವೆ ಮಂತ್ರಿಗಳು ಭರವಸೆಯೇನಾದರೂ ಕೊಟ್ಟಿದ್ದಾರೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಸ್ನೇಹಿತ ಶ್ರೀ ಸಿಧ್ವ ಅವರು ರೈಲ್ವೆ ತೆರಿಗೆ ವಿಧಿಸುವ ನಿಯಮದಿಂದ ಸೂಕ್ತ ತಿಳುವಳಿಕೆಯನ್ನು ಪಡೆದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ನನ್ನ ಅನಿಸಿಕೆ. ಸಂಸತ್ತು ಸ್ವಯಂ ಪ್ರೇರಣೆಯಿಂದ ರೈಲ್ವೆ ಆಸ್ತಿಗಳ ಮೇಲೆ ಸ್ಥಳೀಯ ಪ್ರಾಧಿಕಾರಗಳು ತೆರಿಗೆಯನ್ನು ವಿಧಿಸಲು ಅನುಮತಿ ನೀಡುವ ಅಧಿನಿಯಮವನ್ನು ತೀರ್ಣಗೊಳಿಸಿ ಸ್ವಯಂ ಪ್ರೇರಣೆಯಿಂದ ಈ ತೆರಿಗೆಗೆ ಒಳಪಟ್ಟಿವೆ. ಯಾವುದೇ ಸಂಸತ್ತು ತನ್ನ ಆಸ್ತಿಗಳ ಮೇಲೆ ಸ್ಥಳೀಯ ಸಂಸ್ಥೆಗಳು (ಪ್ರಾಧಿಕಾರಗಳು) ತೆರಿಗೆ ವಿಧಿಸಲು ಸ್ವಯಂ ಪ್ರೇರಣೆಯಿಂದ ಅವಕಾಶ ಮಾಡಬಹುದು. ಸಂಸತ್ತು ತನ್ನ ಇತರ ಆಸ್ತಿಗಳ ಮೇಲೆ ಅದೇ ರೀತಿ ತೆರಿಗೆ ವಿಧಿಸಲು ಸ್ವಯಂ ಪ್ರೇರಣೆಯಿಂದ ಅವಕಾಶ ಮಾಡಿಕೊಡಲಿಕ್ಕಿಲ್ಲ ಎಂದು ಸಂದೇಹಪಡಲು ಯಾವುದೇ ಕಾರಣವಿಲ್ಲ. ರೈಲ್ವೆ ಅಧಿನಿಯಮವು ಸರಿಯಾಗಿ ಜಾರಿಯಾಗದಿದ್ದಲ್ಲಿ ಅಥವಾ ಅದರಲ್ಲಿ ಲೋಪವಿದ್ದಲ್ಲಿ ಸಂಸತ್ತಿಗೆ ಅದನ್ನು ತಿದ್ದುಪಡಿ ಮಾಡುವ ಅವಕಾಶವುಂಟು. ಇಷ್ಟೇ ಅಲ್ಲದೆ, ಶ್ರೀ ಸಿಧ್ವ ಅವರು ನ್ಯಾಯಾಲಯಕ್ಕೆ ಹೋಗಲು ರೈಲ್ವೆ ಆಸ್ತಿಗಳ ಮೇಲೆ ತೆರಿಗೆ ವಿಧಿಸುವ ಅಧಿನಿಯಮದ ಅಡಿಯಲ್ಲಿ ಅದು ಸಂದಾಯವಾಗಿದ್ದು ಬಾಕಿಯಾಗಿದ್ದ ಸಂದರ್ಭದಲ್ಲಿ ಅದು ಸಂದಾಯವಾಗುವ ಹಾಗೆ ಮಂಡಿಸಲು ಅವಕಾಶವುಂಟು.

**(ಶ್ರೀ ಸಿಧ್ವ ಅವರು ತಮ್ಮ ತಿದ್ದುಪಡಿಯನ್ನು ಹಿಂತೆಗೆದುಕೊಂಡರು. ಡಾ. ಅಂಬೇಡ್ಕರ್ ಅವರು ಹಾಗೆ ಮಾರ್ಪಾಟುಗೊಳಿಸಿದ ವಿಧಿಯ ೨೬೪ ಅನ್ನು ಅಂಗೀಕರಿಸಲಾಯಿತು ಮತ್ತು ಸಂವಿಧಾನಕ್ಕೆ ಸೇರಿಸಲಾಯಿತು.)**

* * *

## ವಿಧಿ ೨೬೫

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

ವಿಧಿ ೨೬೫ರಲ್ಲಿ "ಒಕ್ಕೂಟ ರೈಲ್ವೆ" ಎಂಬ ಪದವು ಬರುವ ಕಡೆಗಳಲ್ಲೆಲ್ಲ ಅದಕ್ಕೆ ಬದಲಾಗಿ "ಯಾವುದೇ ರೈಲ್ವೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಇದು ನಾವು ಅನುಸೂಚಿ VIIರ ಪಟ್ಟಿ Iರಲ್ಲಿ ಮಾಡಿದ ಬದಲಾವಣೆಗಳಿಂದ ಉಂಟಾದದ್ದು.

**(ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ಹಾಗೆ ತಿದ್ದುಪಡಿಯಾದ ವಿಧಿ ೨೬೫ ಅನ್ನು ಸಂವಿಧಾನಕ್ಕೆ ಸೇರಿಸಲಾಯಿತು.)**

## ವಿಧಿ ೨೬೫ಎ

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಕೆಲವು ಪ್ರಾಧಿಕಾರಗಳ ಸಂದರ್ಭದಲ್ಲಿ ನೀರು ಅಥವಾ ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ತೆರಿಗೆ ವಿಧಿಸುವುದರಿಂದ ವಿನಾಯಿತಿ**

ವಿಧಿ ೨೬೫ಕ್ಕೆ ಬದಲಾಗಿ ಮುಂದಿನ ವಿಧಿಯನ್ನು ಸೇರಿಸತಕ್ಕದ್ದು

೨೬೫ಎ (೧) ರಾಷ್ಟ್ರಪತಿಯ ಆದೇಶದ್ವಾರಾ ಅನ್ಯಥಾ ಉಪಬಂಧಿಸುವುದಷ್ಟರ ಮಟ್ಟಿಗೆ ಹೊರತು ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ರಾಜ್ಯದ ಯಾವುದೇ ಕಾನೂನು, ಯಾವುದೇ ಅಂತರರಾಜ್ಯ ನದಿ ಅಥವಾ ನದಿ ಕಣಿವೆಯನ್ನು ವಿನಿಮಯಗೊಳಿಸಲು ಅಥವಾ ಅಭಿವೃದ್ಧಿಪಡಿಸಲು ಅಸ್ತಿತ್ವದಲ್ಲಿರುವ ಯಾವುದೇ ಕಾನೂನು ದ್ವಾರಾ ಅಥವಾ ಸಂಸತ್ತು ರಚಿಸಿದ ಯಾವುದೇ ಕಾನೂನು ದ್ವಾರಾ ಸ್ಥಾಪಿತವಾದ ಯಾವುದೇ ಪ್ರಾಧಿಕಾರವು ಸಂಗ್ರಹಿಸಿದ, ಉತ್ಪಾದಿಸಿದ, ಬಳಸಿದ, ವಿತರಿಸಿದ ಅಥವಾ ಮಾರಾಟ ಮಾಡಿದ ಯಾವುದೇ ನೀರಿನ ಅಥವಾ ವಿದ್ಯುಚ್ಛಕ್ತಿಯ ಸಂಬಂಧದಲ್ಲಿ ತೆರಿಗೆ ವಿಧಿಸತಕ್ಕದ್ದಲ್ಲ ಅಥವಾ ತೆರಿಗೆ ವಿಧಿಸಲು ಅಧಿಕೃತಗೊಳಿಸತಕ್ಕದ್ದಲ್ಲ.

**ವಿವರಣೆ:** ಈ ಖಂಡದಲ್ಲಿ "ಜಾರಿಯಲ್ಲಿರುವ ಕಾನೂನು" ಎಂಬ ಪದ ಸಮುಚ್ಚಯಕ್ಕೆ ಸಂವಿಧಾನದ ವಿಧಿ ೩೦೭ರಲ್ಲಿ ಇರುವ ಅರ್ಥವೇ ಇರುತ್ತದೆ.

ವಿಧಿಯ ಮುಂದಿನ ಪ್ಯಾರಾದಲ್ಲಿ ನಾನು ತಮ್ಮ ಅನುಮತಿ ಕೋರಿ ಕೆಲವು ಹೊಸ ಪದಗಳನ್ನು ಸೇರಿಸಿ ಅದನ್ನು ಅವುಗಳ ಜತೆಗೆ ಮಂಡಿಸಲು ಇಷ್ಟಪಡುತ್ತೇನೆ.

(೨) ಒಂದು ರಾಜ್ಯದ ವಿಧಾನಮಂಡಳವು, ಈ ಅನುಚ್ಛೇದದ ಖಂಡ (೧)ರಲ್ಲಿ ನಮೂದಿಸಲಾದಂಥ ಯಾವುದೇ ತೆರಿಗೆಯನ್ನು ಕಾನೂನು ಮೂಲಕ ವಿಧಿಸಬಹುದು ಅಥವಾ ವಿಧಿಸಲು ಅಧಿಕೃತಗೊಳಿಸಬಹುದು. ಆದರೆ, ಅಂಥ ಯಾವುದೇ ಕಾನೂನು, ಅದನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾದಿರಿಸಿದ್ದು, ಅದಕ್ಕೆ ಅವರ ಸಮ್ಮತಿಯನ್ನು ಪಡೆದಿದ್ದ ಹೊರತು, ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ ಮತ್ತು

---

* ಸಿ.ಎ.ಡಿ. ಸಂ. IX, ೯ನೇ ಸೆಪ್ಟೆಂಬರ್ ೧೯೪೯, ಪುಟ ೧೧೬೦.

** ಅದೇ, ಪುಟ ೧೧೬೧.

ಅಂಥ ಯಾವುದೇ ಕಾನೂನು ಯಾವುದೇ ಪ್ರಾಧಿಕಾರವು ಕಾನೂನು ಅಡಿಯಲ್ಲಿ ಮಾಡಬೇಕಾದ ನಿಯಮಗಳ ಅಥವಾ ಆದೇಶಗಳ ಮೂಲಕ ಅಂಥ ತೆರಿಗೆಯ ದರಗಳನ್ನು ಅಥವಾ ಇತರ ತೆರಿಗೆಗಳನ್ನು ತರುವಾಯ ನಿಗದಿಪಡಿಸಲು ಉಪಬಂಧಿಸಿದರೆ, ಆ ಕಾನೂನು ಅಂಥ ಯಾವುದೇ ನಿಯಮವನ್ನು ಅಥವಾ ಆದೇಶವನ್ನು ಮಾಡಲು ರಾಷ್ಟ್ರಪತಿಯ ಸಮ್ಮತಿ ಪಡೆಯುವ ಬಗ್ಗೆ ಉಪಬಂಧಿಸತಕ್ಕದ್ದು.

ವಿಧಿ ೨೬೫ಎ ಅನ್ನು ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ ೨೬೬

**ಒಕ್ಕೂಟದ ತೆರಿಗೆಯನ್ನು ವಿಧಿಸುವ ಸಂಬಂಧದಲ್ಲಿ ರಾಜ್ಯ ಸರ್ಕಾರಗಳಿಗೆ ವಿನಾಯಿತಿ**

***ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

ವಿಧಿ ೨೬೬ಕ್ಕೆ ಬದಲಾಗಿ ಈ ಮುಂದಿನ ವಿಧಿಯನ್ನು ಸೇರಿಸತಕ್ಕದ್ದು.

೨೬೬ (೧) ರಾಜ್ಯದ ಆಸ್ತಿ ಮತ್ತು ವರಮಾನ ಇವುಗಳಿಗೆ ಒಕ್ಕೂಟವು ವಿಧಿಸುವ ತೆರಿಗೆಯಿಂದ ವಿನಾಯಿತಿ ಇರತಕ್ಕದ್ದು.

(೨) ಈ ವಿಧಿಯ ಖಂಡ (೧)ರಲ್ಲಿ ಇರುವುದಾದರೂ ಸಂಸತ್ತು ರಾಜ್ಯ ಸರ್ಕಾರದಿಂದ ಅಥವಾ ಅದರ ಪರವಾಗಿ ಸಂಬಂಧದಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ಕಾರ್ಯಾಚರಣೆಯ ಅಥವಾ ಅದರ ಯಾವುದೇ ಉದ್ದೇಶಕ್ಕಾಗಿ ಬಳಸಲಾದ ಅಥವಾ ಅಧಿಭೋಗಿಸಲಾದ ಯಾವುದೇ ಆಸ್ತಿಯ ಸಂಬಂಧದಲ್ಲಿ ಅಥವಾ ಆ ಮೂಲಕ ಒದಗುವ ಅಥವಾ ಉಂಟಾಗುವ ಯಾವುದೇ ಆದಾಯ ಸಂಬಂಧದಲ್ಲಿ ಸಂಸತ್ತು ಕಾನೂನು ಮೂಲಕ ಉಪಬಂಧಿಸಬಹುದಾದಷ್ಟು ಮಟ್ಟಿಗೆ ಯಾವುದೇ ತೆರಿಗೆಯೇನಾದರೂ ಇದ್ದರೆ, ಆ ಯಾವುದೇ ತೆರಿಗೆಯನ್ನು ಅಷ್ಟು ಮಟ್ಟಿಗೆ ವಿಧಿಸದ ಹಾಗೆ ಅಥವಾ ವಿಧಿಸಲು ಅಧಿಕೃತಗೊಳಿಸದ ಹಾಗೆ ಒಕ್ಕೂಟವನ್ನು ಪ್ರತಿಬಂಧಿಸತಕ್ಕದ್ದಲ್ಲ.

(೩) ಈ ವಿಧಿಯ ಖಂಡ (೩)ರಲ್ಲಿ ಇರುವುದು ಯಾವುದೂ ಸಂಸತ್ತು ಸರ್ಕಾರದ ಸಾಮಾನ್ಯ ಪ್ರಕಾರ್ಯಗಳಿಗೆ ಅನುಷಂಗಿಕವೆಂದು ಕಾನೂನು ಮೂಲಕ ಘೋಷಿಸಬಹುದಾದಂಥ ಯಾವುದೇ ವರ್ಗಕ್ಕೆ ಅನ್ವಯವಾಗತಕ್ಕದ್ದಲ್ಲ.

* * *

## ಅನುಸೂಚಿ: ೭

## ವಿಧಿ ೨೫೦ (ಮುಂದುವರಿದುದು)

****ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ತಮ್ಮ ಅನುಮತಿ ಕೋರಿ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಏಳನೆಯ ಅನುಸೂಚಿಯ ೮೮ನೆಯ ನಮೂದಿನ ತರುವಾಯ ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು.

---

* ಸಿ.ಎ.ಡಿ. ಸಂ. IX, ೯ನೇ ಸೆಪ್ಟೆಂಬರ್ ೧೯೪೯, ಪುಟ ೧೧೬೧.

** ಸಿ.ಎ.ಡಿ. ಸಂ. IX, ೯ನೇ ಸೆಪ್ಟೆಂಬರ್ ೧೯೪೯, ಪುಟ ೧೧೭೨–೧೧೭೩.

**೮೮ಎ ವೃತ್ತಪತ್ರಿಕೆಗಳ ಮಾರಾಟ ಅಥವಾ ಖರೀದಿಯ ಮೇಲೆ ಅಥವಾ ಅವುಗಳಲ್ಲಿ ಜಾಹಿರಾತುಗಳ ಮೇಲೆ ತೆರಿಗೆಗಳು**

ಹಾಗೆಯೇ ಇದನ್ನೂ ಮಂಡಿಸುತ್ತೇನೆ.

ಏಳನೆಯ ಅನುಸೂಚಿಯ ನಮೂದು ೫೮ರ ಬದಲಾಗಿ ಮುಂದಿನ ನಮೂದುಗಳನ್ನು ಸೇರಿಸ ತಕ್ಕದ್ದು.

೫೮ ವೃತ್ತಪತ್ರಿಕೆಗಳಿಗೆ ಹೊರತಾಗಿ ಇತರ ಸರಕುಗಳ ಮಾರಾಟ ಮತ್ತು ಖರೀದಿಯ ಮೇಲೆ ೬೮ಎ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲಾದ ಜಾಹಿರಾತುಗಳಿಗೆ ಹೊರತಾದ ಜಾಹಿರಾತುಗಳ ಮೇಲೆ ತೆರಿಗೆ.

ಸ್ವಾಮಿ, ತಮ್ಮ ಅನುಮತಿ ಕೋರಿ ಇನ್ನೊಂದು ತಿದ್ದುಪಡಿಯನ್ನು ಮಂಡಿಸುತ್ತೇನೆ. ಸಂಖ್ಯೆ ೩೭೪ ವಿಧಿ ೨೫೦ ನಿಜವಾಗಿಯೂ ಅದರ ಭಾಗವಾಗಿರುವ ಕಾರಣ ಅದಕ್ಕೆ ತಿದ್ದುಪಡಿ ಮಂಡಿಸುತ್ತೇನೆ.

(ಎ) ವಿಧಿ ೨೫೦ರ ಖಂಡ (೧)ರಲ್ಲಿ ಉಪಖಂಡ (ಬಿ) ತರುವಾಯ ಮುಂದಿನ ಖಂಡಗಳನ್ನು ಸೇರಿಸತಕ್ಕದ್ದು.

(ಇ) ಸ್ಟಾಕ್ ಎಕ್ಸ್‌ಚೇಂಜ್ ಮತ್ತು ಫ್ಯೂಚರ್ ಮಾರ್ಕೆಟ್‌ಗಳ ವಹಿವಾಟುಗಳ ಮೇಲೆ ಸ್ಟಾಂಪು ಶುಲ್ಕ ಹೊರತಾದ ತೆರಿಗೆ

(ಎಫ್) ವೃತ್ತಪತ್ರಿಕೆಗಳ ಮಾರಾಟ ಅಥವಾ ಖರೀದಿಯ ಮೇಲೆ ಅಥವಾ ಅವುಗಳಲ್ಲಿ ಪ್ರಕಟಿಸಲಾದ ಜಾಹಿರಾತುಗಳ ಮೇಲೆ ತೆರಿಗೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ತಿದ್ದುಪಡಿ ೩೭೪, ಇದರ ಅನ್ವಯ ವಿಧಿ ೨೫೦ ಇದನ್ನು ಪುನಃ ಚರ್ಚೆಗೆ ಪ್ರಾರಂಭಿಸಬೇಕಾದರೆ, ಸಂಸತ್ತಿನ ಔಪಚಾರಿಕ ಅನುಮತಿಯನ್ನು ಅವಶ್ಯವಾಗಿ ಪಡೆಯಬೇಕಾಗುತ್ತದೆ ಎಂದು ಹೇಳಬಯಸುತ್ತೇನೆ.

**ಶ್ರೀ ಆರ್. ಕೆ. ಸಿಧ್ವ:** ಯಾವ ಒಂದು ಪರಿಚ್ಛೇದದ ಚರ್ಚೆ ಮುಕ್ತಾಯವಾಗಿ ಅದನ್ನು ಸಂಸತ್ತು ಅಂಗೀಕರಿಸಿದ ನಂತರ ಆ ಪರಿಚ್ಛೇದ ಚರ್ಚೆಯನ್ನು ಪುನಃ ಪ್ರಾರಂಭಿಸಲಿಕ್ಕೆ ಬರುವುದಿಲ್ಲವೆಂಬ ವಿಧಿಬಿಂದುವನ್ನು ನಾನು ಎತ್ತುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಇದೇ ವಿಷಯವನ್ನು ಶ್ರೀ ಟಿ. ಟಿ. ಕೃಷ್ಣಮಾಚಾರಿ ಅವರು ಎತ್ತಿದ್ದಾರೆ.

**ಶ್ರೀ ಆರ್. ಕೆ. ಸಿಧ್ವ:** ಮಾನ್ಯರೇ ಹಾಗೆ ಆಗುವುದಿಲ್ಲ. ಅವರು ಆ ವಿಷಯವನ್ನು ಪುನಃ ಕೈಗೆತ್ತಿಕೊಳ್ಳಲು ತಿದ್ದುಪಡಿಯನ್ನು ತಂದಿರುವರು. ನಾನು ಒಂದು ವಿಧಿಬಿಂದುವನ್ನು ಎತ್ತುತ್ತೇನೆ. ಅದನ್ನು ಪುನಃ ಪ್ರಾರಂಭಿಸಲಿಕ್ಕೆ ಬರುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನೀವು ಹೇಳುವುದು ಸರಿಯೋ ಅಥವಾ ಅವರು ಹೇಳುವುದು ಸರಿಯೋ? ಎಂಬುದನ್ನು ಅಧ್ಯಕ್ಷರು ನಿರ್ಣಯಿಸುವರು.

**ಶ್ರೀ ನಝಿರುದ್ದೀನ್ ಅಹ್ಮದ್:** ಅದರಲ್ಲಿ ಮತ್ತೊಂದು ವಿಷಯ ಇದೆ. ಅದನ್ನು ತಮ್ಮ ಗಮನಕ್ಕೆ ನಾನು ತರಬಯಸುತ್ತೇನೆ. ನಮ್ಮದು ೮೮ಎ ಈ ತಿದ್ದುಪಡಿಗೆ ಜುನ್‌ಜುನ್‌ವಾಲಾ ಅವರು ತಂದ ತಿದ್ದುಪಡಿಯಂತಿದೆ. ಇದನ್ನು ಈಗ ಕರಡು ಸಮಿತಿಯವರು ಕದ್ದುಕೊಂಡಿದ್ದಾರೆ. ಈಗ ಅದು ಅವರದೇ ಅನ್ನುವಂತೆ ಪಾಸಾಗಿದೆ. ಡಾ. ಅಂಬೇಡ್ಕರ್ ಅವರ ತಿದ್ದುಪಡಿ ಸಂಖ್ಯೆ ೩೭೯, ಇದು ಭಾರತ ದಂಡಸಮಿತಿಯ ಕಲಮು ಇದು ಕಳ್ಳತನಕ್ಕೆ ಸಂಬಂಧಿಸಿದ್ದು ಇರುತ್ತದೆ. ಸಾಕಷ್ಟು ಕುತೂಹಲಕಾರಿಯೂ ಆಗಿದೆ. ಇದರಲ್ಲಿ ಸಾಹಿತ್ಯಿಕ ಶಬ್ದಗಳು

ಕಡಿಮೆ ಎಂಬ ಕಾರಣದಿಂದ ಈ ಹಗಲುಗಳ್ಳತನಕ್ಕೆ ಅನುಮತಿ ಕೊಡಬಹುದೆ?

**ಮಾನ್ಯ ಸಭಾಧ್ಯಕ್ಷರು:** ಇದನ್ನು ಬಹಿರಂಗಪಡಿಸಿದ ಕೀರ್ತಿ ತಮ್ಮದಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದರಿಂದ ಅವರಿಗೆ ತೃಪ್ತಿಯಾಗಿದೆ. ಅವರು ಕಳ್ಳತನದ ಇಲ್ಲವೆ ದರೋಡೆಯ ಫಿರ್ಯಾದಿಯನ್ನು ಕೊಟ್ಟಿಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್:** ಕಳ್ಳತನವು ಸಂಜ್ಞೇಯ ಕಲ್ಪನೆಯಾಗಿದೆ ಮತ್ತು ಅದು ರಾಜೀಯಾಗಬಾರದಂತಹ ಅಪರಾಧವಾಗಿದೆ. ಯಾರೊಬ್ಬರ ಫಿರ್ಯಾದಿಯ ಮೇಲೆ ಅದು ಅವಲಂಬಿಸಿರುವುದಿಲ್ಲ. ತಕರಾರು ಇಲ್ಲದಿರುವುದು ಅದನ್ನು ಕ್ಷಮಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಮೊದಲು ನಾವು ನಮೂದು(ಎಂಟ್ರಿ)ಗಳನ್ನು ಕೈಗೆತ್ತಿಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಸಂಸತ್ತಿನಲ್ಲಿ ಹೋದಸಲ ಪ್ರಸ್ತಾಪಕ್ಕೆ ಬಂದಾಗ ಸರಿಯಾದ ಉದ್ದೇಶದ ಬಗ್ಗೆ ಚರ್ಚೆಗೆ ಬಂದಿತ್ತು. ಆಗ ಸಂಸತ್ತು ಮಾಡಬೇಕಾಗಿದ್ದ ಮತ್ತು ನಾನು ಯಾವುದನ್ನು ಸ್ವೀಕರಿಸಲು ಸಿದ್ಧನಿದ್ದೆನೆಂದು ಹೇಳಿದನು. ಆಗ ನೀವು ದಯವಿಟ್ಟು ಈ ವಿಷಯವನ್ನು ಪುನಃ ಕರಡು ಸಮಿತಿಗೆ ಒಪ್ಪಿಸಬಹುದೆಂದು ಹೇಳಿದಿರಿ. ಕರಡು ಸಮಿತಿಯು ಆ ವಿಷಯದ ಬಗೆಗೆ ಆಲೋಚಿಸಿ ಈಗ ಹೊಸ ಪ್ರಸ್ತಾವನೆಯನ್ನು ತಂದಿದೆ. ಈ ಪ್ರಸ್ತಾವನೆಗಳು ಹೀಗಿವೆ:

ಸುದ್ದಿ ಪತ್ರಿಕೆಗಳು ಮತ್ತು ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗುವ ಜಾಹಿರಾತುಗಳ ಮೇಲಿನ ಕರವನ್ನು ಲಿಸ್ಟ್ (ಪಟ್ಟಿ) ೧ರಲ್ಲಿ ಹಾಕತಕ್ಕದ್ದು. ಈ ವಿಷಯದ ಬಗೆಗೆ ಕರಡು ಸಮಿತಿಯು ಈಗ ಒಪ್ಪಿರುತ್ತದೆ. ಎರಡನೆಯ ತಿದ್ದುಪಡಿ ಸಂಖ್ಯೆ ೩೭೯. ಇದು ಕೇವಲ ಅದರ ಪರಿಣಾಮವಾದುದು. ಯಾಕೆಂದರೆ ಸುದ್ದಿ ಪತ್ರಿಕೆಗಳ ಮಾರಾಟದ ಮೇಲಿನ ತೆರಿಗೆ ಮತ್ತು ಅದರಲ್ಲಿಯ ಜಾಹಿರಾತಿನ ಮೇಲಿನ ಕರ ಇವುಗಳನ್ನು ಲಿಸ್ಟ್ (ಪಟ್ಟಿ) ೧ರಲ್ಲಿ ತರಲಾಗಿದೆ. ಸುದ್ದಿ ಪತ್ರಿಕೆಗಳ ಮೇಲೆ ಹೇರುವ ಕರ ಮತ್ತು ಅವುಗಳಲ್ಲಿಯ ಜಾಹಿರಾತುಗಳ ಮೇಲೆ ಹೇರುವ ಕರ ಇವುಗಳ ಮಾರಾಟಕರ ಅಧಿನಿಯಮದ ವ್ಯಾಪ್ತಿಯಿಂದ ಹೊರಗೆ ಇಡಬೇಕು ಮತ್ತು ರಾಜ್ಯ ಸರಕಾರಗಳ ವ್ಯಾಪ್ತಿಯಿಂದ ಹೊರಗೆ ಇಡುವುದು ಅವಶ್ಯವಿದೆ. ಸುದ್ದಿ ಪತ್ರಿಕೆಗಳ ಮೇಲಿನ ಕರ ಮತ್ತು ಅವುಗಳಲ್ಲಿಯ ಜಾಹಿರಾತುಗಳ ಮೇಲೆ ವಿಧಿಸುವ ಕರ ಇವುಗಳನ್ನು ಮಾರಾಟಕರ ಅಧಿನಿಯಮದ ವ್ಯಾಪ್ತಿಯಿಂದ ಹೊರಗೆ ಇಟ್ಟು ರಾಜ್ಯ ಸರಕಾರಗಳಿಗೆ ಈ ಅಧಿಕಾರ ವ್ಯಾಪ್ತಿಯಿಂದ ಹೊರಗೆ ಇಡುವುದು ಅವಶ್ಯವಿದೆ.

## ನಮೂದು ೫೮

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನನ್ನ ಸನ್ಮಿತ್ರರಾದ ಸಿಧ್ವ ಅವರು ನಾನು ನಮೂದುಗಳಿಗೆ ಅಸಂಗತವಾದ ವರ್ತನೆಯನ್ನು ಹೊಂದಿದ್ದೇನೆಂದು ಹೇಳಿದ್ದಾರೆ. ನಾನು ಇವುಗಳಿಗೆ ಒಂದು ಇಲ್ಲವೆ ಎರಡು ವಿವರಣೆಗಳನ್ನು ಕೊಡಬಯಸುವೆನು. ಹೋದ ಸಲ ಸಂಸತ್ತಿನಲ್ಲಿ ಚರ್ಚೆ ನಡೆದಾಗ ಸುದ್ದಿಪತ್ರಿಕೆಗಳು ಸಂವಿಧಾನದ ಪರಿಚ್ಛೇದ ೧೩ ಮೂಲಭೂತ ಹಕ್ಕುಗಳಿಗೆ ಅತೀ ನಿಕಟವಾಗಿ ಸಂಬಂಧ ಹೊಂದಿವೆಯೆಂದು ಹೇಳಿದ್ದೆನು. ಆದ್ದರಿಂದ ಈ ಸುದ್ದಿಪತ್ರಿಕೆಗಳಿಗೆ ಯಾವುದೇ ಉಪಬಂಧ ಮಾಡುವಾಗ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದ್ದರು.

ಎರಡನೆಯ ಸಂಗತಿಯೆಂದರೆ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ನಿಯಮಗಳಿಗೆ ಈಗಾಗಲೇ ಸಂವಿಧಾನದ ೨೭ನೆಯ ಪರಿಚ್ಛೇದದಲ್ಲಿ ಸಂವಿಧಾನ ಪಾಸು ಮಾಡುವಾಗ ಈ ಮೂಲಭೂತ ಹಕ್ಕುಗಳಿಗೆ

ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಂಸತ್ತಿಗೆ ಬಿಟ್ಟುಕೊಟ್ಟಿದ್ದೇವೆ. ರಾಜ್ಯಗಳಿಗೆ ಯಾವುದೇ ಅಧಿಕಾರ ಕೊಟ್ಟಿರುವುದಿಲ್ಲ. ಆದ್ದರಿಂದ ನನಗೆ ಹಾಗೂ ಕರಡು ಸಮಿತಿಯವರಿಗೆ ಅನಿಸುವುದೇನೆಂದರೆ ಸುದ್ದಿ ಪತ್ರಿಕೆಗಳು ಮೂಲಭೂತ ಹಕ್ಕುಗಳಲ್ಲಿ ಬರುತ್ತದೆ ಮತ್ತು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಕಾನೂನುಗಳ ಬಗ್ಗೆ ಸಂವಿಧಾನಕ್ಕೆ ಕೊಡಲಾಗಿದೆ. ಇದರ ಪರಿಣಾಮವಾಗಿ ತೆರಿಗೆಯ ಉದ್ದೇಶಕ್ಕಾಗಿ ಕೇಂದ್ರ ಸರಕಾರದ ಅಧೀನಕ್ಕೆ ಒಳಪಡತಕ್ಕದ್ದೆಂದು ಹೇಳಿದ್ದು ಸಾಮಾನ್ಯವಾಗಿ ಕಾಕತಾಳೀಯವಾಗಿದೆ.

ಇದರ ಮೇಲೆ ಮೂರನೆಯ ವಿಚಾರ, ನನಗೆ ಹಾಗೂ ಕರಡು ಸಮಿತಿಯವರಿಗೆ ಹೊಳೆದದ್ದು ಸುದ್ದಿ ಪತ್ರಿಕೆಗಳು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ್ದು, ಅವುಗಳೆಂದರೆ ವಾಕ್ ಸ್ವಾತಂತ್ರ್ಯ ಮತ್ತು ವಿಚಾರ ಸ್ವಾತಂತ್ರ್ಯ ಅವುಗಳ ಮೇಲೆ ಹಾಕಬಹುದಾದ ನಿರ್ಬಂಧಗಳು ಏಕರೂಪವಾಗಿರಬೇಕು ಮತ್ತು ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಭಿನ್ನವಾಗಿರಬಾರದೆಂಬುದು ಉಚಿತವೆನಿಸುತ್ತದೆ. ಸಂಸತ್ತಿಗೆ ಕಾನೂನು ರಚಿಸುವ ಅಧಿಕಾರ ಕೊಟ್ಟರೆ ಮಾತ್ರ ಈ ರೀತಿ ಏಕರೂಪತೆಯನ್ನು ತರಬಲ್ಲದು. ಈ ದೃಷ್ಟಿಯಲ್ಲಿ ನನಗೆ ಹಾಗೂ ಕರಡು ಸಮಿತಿಗೆ ಮೂರು ವಿಚಾರಗಳು ಹೊಳೆದವು.

ಇನ್ನೊಂದು ವಿಷಯದ ಮಹತ್ವ ಏನೆಂದರೆ ಇದು ಒಂದೇ ಕೇವಲ ಕಾನೂನು ರಚನೆಗೆ ಸಂಬಂಧಿಸಿದ್ದು ಇರಲಿಲ್ಲ. ಇದರ ಜೊತೆಗೆ ನಮೂದು ಸಂಖ್ಯೆ ೫೮ (ಪಟ್ಟಿ) ೨ರಲ್ಲಿ ತೋರಿಸಿದ ಸರಕುಗಳು ಸೇರಿದವುಗಳ ಬಗ್ಗೆ ಅವುಗಳ ಮೇಲೆ ತೆರಿಗೆ ವಿಧಿಸುವಂತೆ ಸುದ್ದಿ ಪತ್ರಿಕೆಗಳಿಗೆ ಅನ್ವಯವಾಗುವಂತೆ ಸಂಬಂಧಿಸಿದ್ದು ಸಹ ಇತ್ತು. ಆದ್ದರಿಂದ ನಾವು ಸುದ್ದಿ ಪತ್ರಿಕೆಗಳ ಮಾರಾಟದ ಮೇಲೆ ಮಾರಾಟ ತೆರಿಗೆ ಕಾನೂನಿನ ಅಡಿಯಲ್ಲಿ ಮಾರಾಟ ತೆರಿಗೆ ವಿಧಿಸುವ ಬಗ್ಗೆ ಮತ್ತು ಸರಕಾರಕ್ಕೆ ಬರುವ ಆದಾಯವನ್ನು ಕಡಿಮೆ ಮಾಡುವ ಇಚ್ಛೆಯಿಂದ ಸುದ್ದಿ ಪತ್ರಿಕೆಗಳ ಮೇಲೆ ಮಾರಾಟ ತೆರಿಗೆಯನ್ನು ಪರಿಚ್ಛೇದ ೨೫೦ರಲ್ಲೇ ಸೇರಿಸುವುದು ಒಳಿತೆಂದು ಭಾವಿಸಿದೆವು ಹಾಗೂ ಇನ್ನು ಅನೇಕ ಸರಕುಗಳನ್ನು ಒಳಗೊಂಡಿದ್ದು ಅವುಗಳ ಮೇಲೆ ವಿಧಿಸಿದ ತೆರಿಗೆಯಿಂದ ಬರತಕ್ಕ ಆದಾಯವನ್ನು ಬೇರೆ ಬೇರೆ ಪ್ರಾಂತ್ಯಗಳಿಗೆ ಹಂಚಬಹುದು. ಆದ್ದರಿಂದ ಈ ಉಪಬಂಧವನ್ನು ೨ನೆಯ ಲಿಸ್ಟಿನಿಂದ ೧ನೆಯ ಲಿಸ್ಟಿಗೆ ವರ್ಗಾಯಿಸಿದರೆ ಪ್ರಾಂತ್ಯಗಳಿಗೆ ಬರುವ ಆದಾಯದ ಹಣಕಾಸಿಗೆ ಧಕ್ಕೆ ಬರುತ್ತದೆಯೋ ಎಂಬುದು ನಮ್ಮ ಮುಂದೆ ಇರುವ ಪ್ರಶ್ನೆ. ಅದಕ್ಕೆ ನನ್ನ ಉತ್ತರವು ನಾವು ಯಾವುದೇ ಪ್ರಾಂತ್ಯಗಳ ಹಣಕಾಸಿಗೆ ಧಕ್ಕೆ ಉಂಟುಮಾಡುವುದಿಲ್ಲ. ಯಾಕೆಂದರೆ, ಒಂದು ವೇಳೆ ಈ ಸಂಸತ್ತು ತಿದ್ದುಪಡಿ ಸಂಖ್ಯೆ ೩೭೪ಕ್ಕೆ ತಿದ್ದುಪಡಿ ಮಾಡಲು ಒಪ್ಪಿದರೆ ಪ್ರಾಂತ್ಯಗಳು ತಿದ್ದುಪಡಿ ನಂ. ೩೭೪ರ ಅಡಿಯಲ್ಲಿ ಈಗ ಪಡೆಯುತ್ತಿರುವ ಸುದ್ದಿಪತ್ರಿಕೆಯ ಮಾರಾಟ ತೆರಿಗೆಯ ಭಾಗವನ್ನು ತಿದ್ದುಪಡಿಯ ನಂತರವೂ ಸಹ ಪಡೆಯುತ್ತಾರೆ. ಆದ್ದರಿಂದ ಈ ಪ್ರಸ್ತಾವನೆಯನ್ನು ಮಂಡಿಸುವಾಗ ನಾವು ಈ ಒಳಗಾಗಿ ನಾನು ಹೇಳಿದಂತೆ ಸುದ್ದಿಪತ್ರಿಕೆಗಳು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ್ದುದರಿಂದ ಅವು ಕೇಂದ್ರ ಸರಕಾರದ ಅಧೀನಕ್ಕೆ ಒಳಪಡಬೇಕೆಂದು ಮತ್ತು ಯಾವುದೇ ಪ್ರಾಂತ್ಯಕ್ಕೆ ಬರತಕ್ಕ ಹಣಕಾಸಿನ ಲಾಭ ಕಳೆದುಕೊಳ್ಳದಂತೆ ಸಂಪೂರ್ಣ ಗಣನೆಗೆ ತೆಗೆದುಕೊಂಡಿದ್ದೇವೆ. ಈ ಎರಡೂ ಸಂಗತಿಗಳನ್ನು ಕರಡು ಸಮಿತಿಯು ತನ್ನ ಗಣನೆಗೆ ತೆಗೆದುಕೊಂಡು ಈ ಬದಲಾವಣೆ ಮಾಡಿದ್ದಾರೆ.

ನಾನು ವಿನಮ್ರಪೂರ್ವಕ ಹೇಳುವುದೇನೆಂದರೆ, ನನ್ನ ಸನ್ಮಿತ್ರರಾದ ಶ್ರೀ ಸಿದ್ವ ಅವರು ಘೋಷಿಸಿದ್ದು, ಏನೇ ಇದ್ದರೂ ನನಗೆ ತಿಳಿದಂತೆ ಅವರು ಬೇರೊಂದು ಸ್ಥಳದಲ್ಲಿ ಆ ನೋವು ಅನುಭವಿಸಿದ್ದಾರೆ. ನಾವು ಸೂಚಿಸಿದಂತೆ ನಮೂದು ಮಾಡಲು ತಕರಾರು ಇಲ್ಲವೆಂದು ನಾನು ಹೇಳುತ್ತೇನೆ.

**ಶ್ರೀ ಆರ್. ಕೆ. ಸಿಧ್ವ:** ಮಾನ್ಯರೇ, ನಾನು ಮಾನ್ಯ ಅಂಬೇಡ್ಕರ್ ಅವರು ಮಾಡಿದ ಟೀಕೆಗಳಿಗೆ ಆಕ್ಷೇಪ ವ್ಯಕ್ತಪಡಿಸುತ್ತೇನೆ. ನಾನು... ನೋವು ಅನುಭವಿಸಿದ್ದೇನೆಂದು ಅವರು ಹೇಳಿದರೆ ನಾನು ಅವರದೇ ಮಾತಿನಂತೆ ಪ್ರತಿಯಾಗಿ ಹೇಳಬೇಕಾಗುತ್ತದೆ. ಆದರೆ, ಅವರು ಆ ಟೀಕೆಯನ್ನು ತಿರುಗಿ ತೆಗೆದುಕೊಳ್ಳಲು ಹೇಳದಿದ್ದರೆ, ನಾನು ಅದೇ ಮಾತಿನಲ್ಲಿ ಅವರಿಗೆ ಉತ್ತರ ಕೊಡಬೇಕಾಗುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅವುಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ಸಿದ್ಧನಿದ್ದೇನೆ. ಆದರೆ ಅದು ನನಗೆ ಚೆನ್ನಾಗಿ ಗೊತ್ತಿದೆ.

**ಮಾನ್ಯ ಅಧ್ಯಕ್ಷರು:** ಅದು ವಿಷಯವನ್ನು ಮುಕ್ತಾಯಗೊಳಿಸುತ್ತದೆ.

ಈ ಮೇಲೆ ತೋರಿಸಿದಂತೆ ಡಾ. ಅಂಬೇಡ್ಕರ್ ಅವರ ಮೂಲ ತಿದ್ದುಪಡಿಯು ಸ್ವೀಕಾರವಾಯಿತು ಮತ್ತು ಇತರ ತಿದ್ದುಪಡಿಗಳು ತಿರಸ್ಕಾರಗೊಂಡವು.

**(ನಮೂದು ೫೮ ಮತ್ತು ೫೮ಎ ತಿದ್ದುಪಡಿಯಾದಂತೆ ಏಳನೆಯ ಪರಿಶಿಷ್ಟದ ರಾಜ್ಯದ ಪಟ್ಟಿಗೆ ಸೇರಿಸಲಾಯಿತು.)**

## ವಿಧಿ ೨೫೦

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಡಾ. ಅಂಬೇಡ್ಕರರು ಈಗಾಗಲೇ ಮಂಡಿಸಿದ್ದಾರೆ. ಇದು ಕೇವಲ ಔಪಚಾರಿಕ. ಇದನ್ನು ಮತಕ್ಕೆ ಹಾಕಬಹುದು.

**ಮಾನ್ಯ ಅಧ್ಯಕ್ಷರು:** ಯಾರಾದರೂ ಡಾ. ಅಂಬೇಡ್ಕರರು ಮಂಡಿಸಿದ ತಿದ್ದುಪಡಿ ಸಂಖ್ಯೆ ೩೭೪ರ ಮೇಲೆ ಏನಾದರೂ ಹೇಳಬಯಸುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದು ಕೇವಲ ಅಸಂಗತವಾದ ವಿಷಯವಿರುತ್ತದೆ.

**ಮಾನ್ಯ ಅಧ್ಯಕ್ಷರು:** ಇದಕ್ಕೆ ಯಾವುದೇ ತಿದ್ದುಪಡಿಯೂ ಇರುವುದಿಲ್ಲ. ಇದನ್ನು ಮತಕ್ಕೆ ಹಾಕುತ್ತೇನೆ.

ಪ್ರಶ್ನೆಯು ಈ ಕೆಳಗಿನಂತೆ ಇರುತ್ತದೆ.

ಪರಿಚ್ಛೇದ ೨೫೦ ಇದರ (೧)ರಲ್ಲಿ ೧ರ ಉಪಬಂಧ (ಡಿ) ನಂತರ ಈ ಕೆಳಗಣ ಉಪಬಂಧವನ್ನು ಸೇರಿಸತಕ್ಕದ್ದು.

(ಇ) ಸ್ಟಾಕ್ ಎಕ್ಸ್‌ಚೇಂಜ್ ವ್ಯವಹಾರಗಳ ಮತ್ತು ಭವಿಷ್ಯದ ಮಾರ್ಕೆಟ್ ಮೇಲಿನ ಸ್ಟಾಂಪ್ ಡ್ಯೂಟಿ ಹಾಕುವ ತೆರಿಗೆಯನ್ನು ಹೊರತುಪಡಿಸಿ ಹಾಕುವ ತೆರಿಗೆ:

**(ಎಫ್) ಸುದ್ದಿಪತ್ರಿಕೆಗಳ ಮಾರಾಟದ ಮೇಲಿನ ತೆರಿಗೆ ಮತ್ತು ಅವುಗಳನ್ನು ಖರೀದಿಸುವುದರ ಮೇಲಿನ ತೆರಿಗೆ ಮತ್ತು ಅವುಗಳಲ್ಲಿ ಪ್ರಕಟಿಸಿರುವ ಜಾಹಿರಾತಿನ ತೆರಿಗೆ (ಈ ತಿದ್ದುಪಡಿಯನ್ನು ಸ್ವೀಕರಿಸಲಾಯಿತು).**

# ವಿಧಿ ೨೦೨

**ಮಾನ್ಯ ಅಧ್ಯಕ್ಷರು:** ವಿಧಿ ೨೦೨

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಈಗ ಪರಿಚ್ಛೇದ ೨೦೨ (೧)ರಲ್ಲಿ ಈ ಪದದ ನಂತರ ಯಾವುದೇ ವ್ಯಕ್ತಿ ಅಥವಾ ಅಧಿಕಾರಿ ಯೋಗ್ಯ ಸಂದರ್ಭಗಳಲ್ಲಿ ಯಾವುದೇ ಸರಕಾರದ ಅಧಿಕಾರ ವ್ಯಾಪ್ತಿಯಲ್ಲಿ ಇದನ್ನು ಒಳಗೊಂಡಿದ್ದು ಇದನ್ನು ಸೇರಿಸತಕ್ಕದ್ದು. ನಾನು ಈಗ ಪರಿಚ್ಛೇದ ೩೦೨ಕ್ಕೆ ತಿದ್ದುಪಡಿ ಮಂಡಿಸುವಾಗ ಪರಿಚ್ಛೇದ ೨೦೨ಕ್ಕೆ ಆನುಷಂಗಿಕವಾಗಿ ಪರಿಚ್ಛೇದ ೨೦೨ಕ್ಕೆ ತಿದ್ದುಪಡಿ ತರುವುದು ಅವಶ್ಯವಿದೆ ಎಂದು ಹೇಳಿದ್ದೆನು. ಆದ್ದರಿಂದ ನಾನು ಈಗ ಪರಿಚ್ಛೇದ ೨೦೨ ತಿದ್ದುಪಡಿಯಾದಂತೆ ಮಂಡಿಸುತ್ತೇನೆ. ಅದು ಕೆಳಗಿನಂತೆ ಇರುತ್ತದೆ.

ಈ ಸಂವಿಧಾನ ಪರಿಚ್ಛೇದ ೨೫ರಲ್ಲಿ ಏನೇ ಹೇಳಿದ್ದರೂ ಅದರಲ್ಲಿ ಏನೇ ಇದ್ದರೂ ರಾಷ್ಟ್ರದಲ್ಲಿರುವ ಎಲ್ಲ ಉಚ್ಚ ನ್ಯಾಯಾಲಯಗಳಿಗೆ ರಾಷ್ಟ್ರದಲ್ಲಿ ತನ್ನ ಅಧಿಕಾರ ವ್ಯಾಪ್ತಿಯುಳ್ಳ ಅಧಿಕಾರದನ್ವಯ ಯಾವುದೇ ವ್ಯಕ್ತಿ ಇಲ್ಲವೆ ಅಧಿಕಾರಿ ಯೋಗ್ಯ ಕಂಡ ಪ್ರಕರಣದಲ್ಲಿ ಯಾವುದೇ ಸರಕಾರ ಅದರ ಅಧಿಕಾರ ವ್ಯಾಪ್ತಿಯಲ್ಲಿ ಹೇಬಿಯಸ್ ಕಾರ್ಪಸ್, ಮೆಂಡಮಸ್, ಪ್ರೊಹಿಬಿಶನ್, ಕೋವಾರಂಟೊ ಹಾಗೂ ಸೆರ್ಶಿರಿಯೋ ರಿಟ್‌ಗಳನ್ನು ಹೊರಡಿಸಬಹುದು.

ಸಂವಿಧಾನದ ೩ನೆಯ ಭಾಗದಲ್ಲಿ ಸ್ಥಿರೀಕರಿಸಿದ ಮೂಲಭೂತ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಥವಾ ಬೇರೆ ಯಾವುದೇ ಉದ್ದೇಶಗಳಿಗೆ ರಿಟ್‌ಗಳನ್ನು ಹೊರಡಿಸಬಹುದು.

ಇದು ಕೇವಲ ಆನುಷಂಗಿಕವಾದುದು.

**ಪಂಡಿತ್ ಠಾಕೂರದಾಸ್ ಭಾರ್ಗವ** (ಪೂರ್ವ, ಪಂಜಾಬ, ಜನರಲ್): ಯೋಗ್ಯ ಪ್ರಕರಣಗಳಲ್ಲಿ ಅಂತ ಯಾಕೆ ಹೇಳುತ್ತೀರಿ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಯಾಕೆಂದರೆ ಸಂಸತ್ತು ಯೋಗ್ಯ ಪ್ರಕರಣಗಳು ಯಾವುವು ಎಂದು ಹೇಳುತ್ತದೆ. (ತಿದ್ದುಪಡಿಯನ್ನು ಸ್ವೀಕರಿಸಲಾಯಿತು.)

# ವಿಧಿ ೨೩೪ಎ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ ಈಗ ನಾನು ಮಂಡಿಸುತ್ತೇನೆ.

ಪರಿಚ್ಛೇದ ೨೩೪ರ ನಂತರ ಕೆಳಗಿನ ಪರಿಚ್ಛೇದವನ್ನು ಸೇರಿಸಬೇಕು.

೨೩೪–ಎ (೧) ಕೇಂದ್ರ ಸರಕಾರದ ಆಡಳಿತಾತ್ಮಕ ಅಧಿಕಾರಗಳನ್ನು ವಿಸ್ತರಿಸಿ ರಾಜ್ಯ ಸರಕಾರಗಳಿಗೆ ನಿರ್ದೇಶನವನ್ನು ರಾಜ್ಯಗಳು ರೈಲ್ವೆಗೆ ಆಸ್ತಿಯನ್ನು ಸಂರಕ್ಷಿಸುವುದರ ಸಲುವಾಗಿ ರೈಲ್ವೆ ಆಸ್ತಿ ಕುರಿತು ಆ ರಾಜ್ಯದಲ್ಲಿರುವ ಆಸ್ತಿ ಸಂರಕ್ಷಿಸುವುದರ ಸಲುವಾಗಿ ಯೋಗ್ಯ ನಿರ್ದೇಶನಗಳನ್ನು ಕೊಡುವ ಅಧಿಕಾರವನ್ನು ವಿಸ್ತರಿಸತಕ್ಕದ್ದು.

(೨) ರಾಜ್ಯ ಸರಕಾರಗಳಿಗೆ ಈ ಪರಿಚ್ಛೇದದ (೧)ರ ಅನ್ವಯ ಕೊಡುವ ನಿರ್ದೇಶನಗಳನ್ನು ಕಾರ್ಯಾಚರಣೆಯಲ್ಲಿ ಖರ್ಚಾಗುವ ಹಣಕ್ಕಿಂತ ಹೆಚ್ಚಿನ ಹಣ ರಾಜ್ಯ ಸರಕಾರಗಳು ಸಾಮಾನ್ಯ ಪರಿಸ್ಥಿತಿಗಿಂತ ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದರೆ ಆಗ ಕೇಂದ್ರ ಸರಕಾರವು ಸರಕಾರಕ್ಕೆ ಅಂತಹ ಹಣವನ್ನು ಒಪ್ಪಂದದ ಅನ್ವಯ ಇಲ್ಲವೆ ಒಪ್ಪಂದಕ್ಕೆ ತಪ್ಪಿದರೆ, ಆಗ ಸಂಧಾನಕಾರರಾದ ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳನ್ನು ಸಂಧಾನಕಾರರಾಗಿ ನೇಮಿಸಿ ಅವರು ಗೊತ್ತುಪಡಿಸಿದ

ಆ ಹೆಚ್ಚಿನ ಹಣವನ್ನು ರಾಜ್ಯ ಸರಕಾರ ಖರ್ಚು ಮಾಡಿದ್ದನ್ನು ಕೊಡಬಹುದು.

ಮಾನ್ಯರೆ, ಎಲ್ಲ ಪೊಲೀಸರು ಮೊದಲು ಪ್ರಾಂತೀಯ ಲಿಸ್ಟಿನಲ್ಲಿ ಇದ್ದರು. ಇದರ ಪರಿಣಾಮವಾಗಿ ರೈಲ್ವೆ ಆಸ್ತಿಗಳನ್ನು ಸಂರಕ್ಷಿಸುವ ಹೊಣೆಗಾರಿಕೆಯು ಪ್ರಾಂತೀಯ ಸರಕಾರಕ್ಕೆ ಇರುತ್ತದೆ. ಅದರಲ್ಲಿಯೂ ವಿಶೇಷವಾಗಿ ಕೇಂದ್ರ ಸರಕಾರವು ರೈಲ್ವೆ ಆಸ್ತಿಗಳನ್ನು ಸಂರಕ್ಷಿಸುವುದಕ್ಕಾಗಿ ರಾಜ್ಯ ಸರಕಾರವು ವಿಶೇಷ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡುವ ಅಧಿಕಾರವು ಈಗ ಕೇಂದ್ರಕ್ಕೆ ಉಂಟಾಗುತ್ತದೆ. ಆದ್ದರಿಂದ ಅದರ ವತಿಯಿಂದಲೂ ಇಂತಹ ಅಧಿಕಾರ ಕೊಡುವುದು ಹೆಚ್ಚಿನ ವಿಶೇಷ ಜವಾಬ್ದಾರಿಯನ್ನು ನಿರ್ವಹಿಸಲು ಸಾಮಾನ್ಯ ವೆಚ್ಚಕ್ಕಿಂತ ಸ್ವಲ್ಪ ಹೆಚ್ಚಿನ ವೆಚ್ಚವನ್ನು ಭರಿಸಬೇಕಾಗುತ್ತದೆ. ಇಂತಹ ವೇಳೆಯಲ್ಲಿ ಆ ಹೆಚ್ಚಿನ ಮೊತ್ತ ಯಾವುದೆಂಬುದನ್ನು ಆದ ಒಪ್ಪಂದದ ಮೇರೆಗೆ ಇಲ್ಲವೆ ಅಂತಹ ಒಪ್ಪಂದ ಇರದಿದ್ದರೆ ಭಾರತದ ಸರ್ವೋಚ್ಚ ನ್ಯಾಯಾಧೀಶರಿಂದ ಆರಿಸಲ್ಪಟ್ಟ ಸಂಧಾನಕಾರರು ಗೊತ್ತುಪಡಿಸಬೇಕು. ಎರಡನೆಯ ಖಂಡವು, ಈ ಹೆಚ್ಚಿನ ವೆಚ್ಚಗಳಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ಪ್ರಾಂತ್ಯಗಳ ನಡುವಿನ ತಂಟೆ ತಕರಾರುಗಳನ್ನೇ ನಿರ್ಣಯಿಸುವುದಕ್ಕಾಗಿ ನಾವು ಸಂವಿಧಾನದಲ್ಲಿ ಪಾಸು ಮಾಡಿದ ಅನೇಕ ಖಂಡಗಳಿಗೆ ಅನುರೂಪವಾಗಿದೆ.

**ಡಾ. ಪಿ. ಎಸ್. ದೇಶ್‌ಮುಖ್:** ಮಾನ್ಯ ಅಧ್ಯಕ್ಷರೇ, ಕೇವಲ ರೈಲ್ವೆ ಆಸ್ತಿಗೆ ಮಾತ್ರ ಸಂಬಂಧಿಸಿದ ಈ ಉಪಬಂಧದ ಆವಶ್ಯಕತೆ ಏನು ಎಂಬುದು ನನಗೆ ಅರ್ಥವಾಗುವುದಿಲ್ಲ.

**ಶ್ರೀ ಬ್ರಜೇಶ್ವರ್ ಪ್ರಸಾದ್:** ಮಾನ್ಯ ಅಧ್ಯಕ್ಷರೆ, ನಾನು ಖಂಡ (೧) ಇದನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಆದರೆ ಖಂಡ (೨) ಇದನ್ನು ಕಟುವಾಗಿ ಖಂಡಿಸುತ್ತೇನೆ. ಆದ್ದರಿಂದ ಕೇಂದ್ರ ಮತ್ತು ಪ್ರಾಂತ್ಯಗಳ ನಡುವೆ ಖರ್ಚಿನ ಬಗೆಗೆ ಭಿನ್ನಾಭಿಪ್ರಾಯ ಬಂದಲ್ಲಿ ಆ ವಿಷಯವನ್ನು ಸಂಪೂರ್ಣವಾಗಿ ಅಧ್ಯಕ್ಷರ ವಿವೇಚನೆಗೆ ಬಿಡಬೇಕೆಂದು ನನ್ನ ಅಭಿಮತ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಆ ಖಂಡವು ಅತ್ಯವಶ್ಯವಿದೆ. ನನ್ನ ಸನ್ಮಿತ್ರರಾದ ಶ್ರೀ ದೇಶಮುಖ್ ಈಗ ಇರುವ ಪರಿಚ್ಛೇದವನ್ನು ಮಾಡುವಾಗ ಸಾಕಷ್ಟು ಉಪಬಂಧಗಳು ಇವೆಯೆಂದು ಹೇಳುವುದಾದರೆ, ನನಗೆ ವಿಷಾದವೆನಿಸುತ್ತದೆ. ಅವರು ಮೂಲಭೂತವಾಗಿ ತಪ್ಪು ತಿಳಿದಿದ್ದಾರೆ. ರೈಲ್ವೆ ಪೊಲೀಸ್ ವಿಷಯವು ರಾಜ್ಯಕ್ಕೆ ಸೇರಿದ ವಿಷಯವಾಗಿರುತ್ತದೆ. ಪೊಲೀಸ್ ಇದು ನಮೂದು ಸಂಖ್ಯೆ ೧ನೆಯ ಲಿಸ್ಟಿನಲ್ಲಿ ಸ್ಥಾನ ಪಡೆದಿಲ್ಲ. ಆದ್ದರಿಂದ ಕೇಂದ್ರ ಸರಕಾರಕ್ಕೆ ಪೊಲೀಸರನ್ನು ಕುರಿತು ಯಾವುದೇ ಕಾನೂನು ಮಾಡುವ ಅಧಿಕಾರ ಇರುವುದಿಲ್ಲ. ಕಾನೂನುಬದ್ಧವಾದ ಅಧಿಕಾರ ಇಲ್ಲವೆ ಕಾರ್ಯನಿರ್ವಾಹಕ ಅಧಿಕಾರವು ಸಹ ಇರುವುದಿಲ್ಲ. ಆದ್ದರಿಂದ ರೈಲ್ವೆ ಆಸ್ತಿಗಳ ಸಂರಕ್ಷಣೆ ಸಂಬಂಧಿಸಿದಂತೆ ಅದು ರಾಜ್ಯ ಸರಕಾರದ ಕಾರ್ಯ ವ್ಯಾಪ್ತಿ ಅಧಿಕಾರದಲ್ಲಿ ಬರುತ್ತದೆ. ಅದು ಹೀಗಿದ್ದ ಕಾರಣ ಅದನ್ನು ಎರಡು ರೀತಿಯಿಂದ ಮಾಡಬಹುದು. ಕೇಂದ್ರ ಸರಕಾರವು ತನ್ನ ಆಸ್ತಿಗಳ ಸಂರಕ್ಷಣೆಗಾಗಿ ಪೊಲೀಸ್ ಅಧಿಕಾರವನ್ನು ಹೊಂದಬಹುದು. ಹಾಗೆ ಆದ ಪಕ್ಷದಲ್ಲಿ ನಾನು ಈಗ ಮಂಡಿಸಿದ ಖಂಡವು ಅನಾವಶ್ಯಕ ಅಥವಾ ನಾನು ಈಗ ಸೂಚಿಸಿದಂತೆ ಉಪಬಂಧವನ್ನು ಕಲ್ಪಿಸಬಹುದು. ಅಂದರೆ, ನಿರ್ದೇಶನಗಳನ್ನು ನೀಡುವುದು. ಒಂದು ವೇಳೆ ಕೇಂದ್ರ ಸರಕಾರವು ರೈಲ್ವೆ ಆಸ್ತಿಗಳ ಸಂರಕ್ಷಣೆಗಾಗಿ ಪೊಲೀಸರನ್ನು ನೇಮಿಸಿದರೆ ಆ ಪೊಲೀಸರಿಗೂ ಹಾಗೂ ರಾಜ್ಯದ ಪೊಲೀಸ್ ಅಧಿಕಾರಿಗಳಿಗೂ ನಡುವೆ ತಕರಾರುಗಳು ಏಳಬಹುದು. ಆದ್ದರಿಂದ ನಾನು ಮಂಡಿಸಿದ ಈ ಯೋಜನೆಯಿಂದ ಎರಡು ಅಧಿಕಾರ ವ್ಯಾಪ್ತಿಗಳನ್ನು ತಪ್ಪಿಸಲಾಗಿದೆ. ಅದೆಂದರೆ ಕೇಂದ್ರವು ರೈಲ್ವೆ ಆಸ್ತಿ ಸಂರಕ್ಷಣೆಗೆ ಹೆಚ್ಚಿನ ಪೊಲೀಸರನ್ನು ನೇಮಿಸಲು ನಿರ್ದೇಶನ ಕೊಡುವ ಅಧಿಕಾರ ಹೊಂದಬಹುದು. ಹಾಗೂ ಒಂದು ವೇಳೆ ಹೆಚ್ಚಿನ ಖರ್ಚು ಬಂದರೆ ಕೇಂದ್ರವು ಅದನ್ನು ಭರಿಸಲು ತಯಾರು ಇರಬೇಕಾಗುತ್ತದೆ.

ಡಾ. ದೇಶಮುಖ್‌ರು ಹೇಳುವಂತೆ ಈ ವಿಷಯವನ್ನು ಈಗಾಗಲೇ ಉಪಬಂಧಗಳಲ್ಲಿ ಒದಗಿಸಲಾಗಿದೆಯೆಂದು ಹೇಳುವುದು ಸಂಪೂರ್ಣ ತಪ್ಪು. ಅಲ್ಲಿ ಯಾವ ತೊಂದರೆ ಇದೆಯೆಂಬುದು ನನಗೆ ತಿಳಿಯದಾಗಿದೆ.

**ಡಾ. ಪಿ. ಎಸ್. ದೇಶ್‌ಮುಖ್:** ಕೇಂದ್ರದ ಉಳಿದ ಆಸ್ತಿಗಳ ಸಂರಕ್ಷಣೆ ಕುರಿತು ಯಾವ ಉಪಬಂಧವೂ ಅವಶ್ಯವಿಲ್ಲ ಅನ್ನುವುದಕ್ಕೆ ಕಾರಣವೇನು? ನೀವು ರೈಲ್ವೆ ಆಸ್ತಿ ಹಾಗೂ ಇತರರ ಆಸ್ತಿಗಳನ್ನು ಹೇಗೆ ವಿಂಗಡಿಸುತ್ತೀರಿ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಯಾಕೆಂದರೆ ರೈಲ್ವೆ ಆಸ್ತಿಗಳಿಗೆ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ಅದರಲ್ಲೇ ಪ್ರಯಾಣಿಕರ ಸುರಕ್ಷತೆಯು ಇರುತ್ತದೆ.

**(ಡಾ. ಅಂಬೇಡ್ಕರ್ ಅವರು ಮಂಡಿಸಿದ ತಿದ್ದುಪಡಿಯು ಸ್ವೀಕೃತವಾಯಿತು. ಹೊಸ ಅನುಚ್ಛೇದ ೨೩೪ ಅನ್ನು ಸಂವಿಧಾನದಲ್ಲಿ ಸೇರಿಸಲಾಗಿದೆ.)**

## ಹೊಸ ವಿಧಿ ೨೪೨ಎ

**ಮಾನ್ಯ ಅಧ್ಯಕ್ಷರು:** ಮಾನ್ಯ ಅಂಬೇಡ್ಕರ್ ಅವರೆ ನೀವು ತಿದ್ದುಪಡಿ ಸಂಖ್ಯೆ ೩೭೨ರ ಸಲುವಾಗಿ ಮಂಡಿಸಿರಿ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಒಂದು ವೇಳೆ ತಿದ್ದುಪಡಿ ಸಂಖ್ಯೆ ೩೭೩ ಪಾಸಾದರೆ ಶೀರ್ಷಿಕೆ ತಾನಾಗಿಯೇ ಅಳಿಸಿಹೋಗುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಈಗ ತಿದ್ದುಪಡಿ ಸಂಖ್ಯೆ ೩೭೩ ಇದನ್ನು ಮಂಡಿಸುತ್ತೇನೆ.

ಅನುಚ್ಛೇದ ೨೪೨ರ ನಂತರ ಈ ಕೆಳಗಿನ ಹೊಸ ಅನುಚ್ಛೇದವನ್ನು ಸೇರಿಸಬೇಕು– ೨೪೨ಎ (೧) ಸಂಸತ್ತು ನೀರಿನ ಉಪಯೋಗಕ್ಕಾಗಿ ಇಲ್ಲವೆ ಹೆಚ್ಚಿಗೆಗಾಗಿ ನಿಯಂತ್ರಣಕ್ಕಾಗಿ ಎರಡು ಇಲ್ಲವೆ ಹೆಚ್ಚಿನ ರಾಜ್ಯಗಳ ನದಿಗಳ ಹಾಗೂ ಕೊಳ್ಳಗಳ, ನ್ಯಾಯಗಳ ನಿರ್ಣಯಕ್ಕಾಗಿ ಸಂಸತ್ತು ಕಾನೂನು ರಚಿಸಬಹುದು. ಅಂತರರಾಜ್ಯ ನದಿಗಳ ಇಲ್ಲವೆ ನದಿಗಳ ಕೊಳ್ಳಗಳ ನೀರಿನ ಬಗ್ಗೆ ತಕರಾರುಗಳನ್ನು ನಿರ್ಣಯಿಸುವ ಕುರಿತು.

ಉಪಖಂಡ (೨) ಈ ಸಂವಿಧಾನದಲ್ಲಿ ಏನೇ ಹೇಳಿದ್ದರೂ ಈ ಅನುಚ್ಛೇದದ ಉಪಬಂಧ (ಎ)ರಲ್ಲಿ ಹೇಳಿರುವಂತೆ ಯಾವುದೇ ತಂಟೆ ತಕರಾರು ಅಥವಾ ದೂರುಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಇಲ್ಲವೆ ಇತರ ನ್ಯಾಯಾಲಯಗಳು ತಮ್ಮ ಅಧಿಕಾರ ಚಲಾಯಿಸದಂತೆ ಸಂಸತ್ತು ಕಾನೂನು ರಚಿಸಬಹುದು.

ಮಾನ್ಯರೆ, ಮೂಲತಃ ಈ ಅನುಚ್ಛೇದವು ಅಧ್ಯಕ್ಷರಿಗೆ ಈ ಅಧಿಕಾರ ಕ್ರಮ ಕೈಗೊಳ್ಳಲು ಅಧಿಕಾರವನ್ನು ನೀಡಿತು. ಇಂತಹ ನೀರಿನ ಬಗೆಗೆ ವಿವಾದಗಳು ಕಡಿಮೆ ಮತ್ತು ಆ ಕಾರಣಕ್ಕಾಗಿ ಇವುಗಳನ್ನು ವಿಶೇಷವಾದ ಒಂದು ಸಮಿತಿಯನ್ನು ನೇಮಿಸಿ ನಿಕಾಲೆ ಮಾಡಬಹುದೆಂದು ಉದ್ದೇಶ ಹೊಂದಿತ್ತು. ಆದರೆ ಈಗ ನಾವು ಅನೇಕ ಕಾರ್ಪೋರೇಷನ್ (ನಿಯಮಗಳನ್ನು) ರಚಿಸುವುದರಿಂದ ಈ ನಿಗಮಗಳು ನೀರನ್ನು ತೆಗೆದುಕೊಳ್ಳುವ ಹಾಗೂ ಇತರ ಅಧಿಕಾರಗಳನ್ನು ಹೊಂದಬಹುದು. ಆದ್ದರಿಂದ ಅನೇಕ ತಕರಾರುಗಳು ಉಂಟಾಗಬಹುದು. ಆ ಕಾರಣಕ್ಕಾಗಿ ನಾವು ಒಂದು ಖಾಯಂ ನಿಗಮವನ್ನು ಇಂತಹ ವಿವಾದಗಳನ್ನು ಬಗೆಹರಿಸುವುದಕ್ಕಾಗಿ ನೇಮಿಸಬಹುದು. ಮೊದಲಿನ ಕರಡು ಇಲ್ಲವೆ ಪ್ರಸ್ತಾವನೆ ಬಹಳಷ್ಟು ಒಂದೇ ಸ್ವರೂಪದ್ದು ಇದ್ದು, ಅದು

ಯಾವುದೇ ಅಂತಹ ಸಮಸ್ಯೆಗಳನ್ನು ಬಗೆಹರಿಸಲು ಬಾರದಂತೆ ಇತ್ತು. ಅದಕ್ಕೆ ಅವಕಾಶವಿರಲಿಲ್ಲ. ಕಾರಣ ನಾನು ಇಂತಹ ವಿವಾದಗಳನ್ನು ನಿವಾರಿಸುವುದಕ್ಕಾಗಿ ಈ ಹೊಸ ಅನುಚ್ಛೇದವನ್ನು ಮಂಡಿಸಿದ್ದೇನೆ. ಇದರಿಂದ ಸಂಸತ್ತಿನ ಈ ಕುರಿತು ಕಾನೂನು ಮಾಡುವ ಅಧಿಕಾರ ಹೊಂದಿರುತ್ತದೆ.

**ಶ್ರೀ ಆರ್. ಕೆ. ಸಿಧ್ವ:** ಈಗ ಅನುಚ್ಛೇದ ೨೪೨ ಇದನ್ನು ತೆಗೆದುಹಾಕಲು ಪ್ರಸ್ತಾಪಿಸಿದ್ದು ಮತ್ತು ಈ ಹೊಸ ಅನುಚ್ಛೇದ ೨೪೨ ಅದು ಅನುಚ್ಛೇದ ೨೪೨ರ ನಂತರ ಹೇಗೆ ಬರುತ್ತದೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದು ಒಂದೇ ಒಂದು ಸ್ಥಾನವನ್ನು ಸೂಚಿಸುತ್ತದೆ.

**(ತಿದ್ದುಪಡಿಯನ್ನು ಸ್ವೀಕರಿಸಲಾಯಿತು. ಹೊಸ ಅನುಚ್ಛೇದ ೨೪೨ಎ ಇದನ್ನು ಸಂವಿಧಾನದಲ್ಲಿ ಅಳವಡಿಸಿತು.)**

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿ ಸಂಖ್ಯೆ ೩೭೨ಎ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಈಗ ನಾನು ಮಂಡಿಸುತ್ತೇನೆ.

ಅನುಚ್ಛೇದ ೨೩೯ ಮತ್ತು ಅನುಚ್ಛೇದಗಳಾದ ೨೩೯, ೨೪೦, ೨೪೧ ಮತ್ತು ೨೪೨ ಇವುಗಳ ಶೀರ್ಷಿಕೆ ಇವುಗಳನ್ನು ತೆಗೆದುಹಾಕಬೇಕು.

ಇವು ಅನುಚ್ಛೇದ ೨೪೨ಎ. ಇದರಲ್ಲಿ ಒಳಗೊಂಡವುಗಳಾಗಿವೆ. ಆದ್ದರಿಂದ ಅವುಗಳ ಅವಶ್ಯ ಇರುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಈ ತಿದುಪಡಿಯ ಬಗ್ಗೆ ಯಾರಿಗಾದರೂ ಏನಾದರೂ ಹೇಳುವುದಿದೆಯೆ?

ಯಾವ ತಿದ್ದುಪಡಿಯೂ ಇರುವುದಿಲ್ಲ. ಈಗ ನಾನು ಇದನ್ನು ಸಂಸತ್ತಿನ ಮತಕ್ಕೆ ಹಾಕುತ್ತೇನೆ.

(ಈ ತಿದ್ದುಪಡಿಯೂ ಸ್ವೀಕರಿಸಲ್ಪಟ್ಟಿತು.)

**ಅನುಚ್ಛೇದ ೨೩೯ ಮತ್ತು ೨೪೦, ೨೪೧ ಮತ್ತು ೨೪೨ ಇವುಗಳ ಶೀರ್ಷಿಕೆಗಳನ್ನು ತೆಗೆದು ಹಾಕಲಾಯಿತು.)**

## ಅನುಚ್ಛೇದ ೨೪೮–ಎ, ೨೬೩ ಮತ್ತು ೨೬೩–ಎ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ತಿದ್ದುಪಡಿ ಸಂಖ್ಯೆ ೩೮೦, ೩೮೧ ಮತ್ತು ೩೮೨ ಈ ಮೂರು ತಿದ್ದುಪಡಿಗಳನ್ನು ಎಂದರೆ, ಈ ಮೂರು ಪರಿಚ್ಛೇದಗಳನ್ನು ಮಂಡಿಸಬಯಸುತ್ತೇನೆ. ಮೊದಲಿಗೆ ತಿದ್ದುಪಡಿ ಸಂಖ್ಯೆ ೩೮೨ರಿಂದ ಪ್ರಾರಂಭಿಸುತ್ತೇನೆ. ಯಾಕೆಂದರೆ, ಉಳಿದವುಗಳು ಅನುಷಂಗಿಕವಾಗಿವೆ.

**ಮಾನ್ಯ ಸಭಾಧ್ಯಕ್ಷರು:** ಒಳ್ಳೆಯದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈಗ ಮಂಡಿಸುತ್ತೇನೆ. ಅನುಚ್ಛೇದ ೨೬೩ರ ನಂತರ ಕೆಳಗಣ ಹೊಸ ಪರಿಚ್ಛೇದವನ್ನು ಸೇರಿಸಬೇಕು.

೨೬೩ಎ ಸ್ವೀಕರಿಸಿದ ಎಲ್ಲ ಹಣವನ್ನು ಇಲ್ಲವೆ ಠೇವಣಿ ಇಟ್ಟ ಎಲ್ಲ ಹಣ.

(ಎ) ಕೇಂದ್ರ ಸರಕಾರದಲ್ಲಿ ನೇಮಕಗೊಂಡ ಯಾವುದೇ ಅಧಿಕಾರಿ ಇಲ್ಲವೆ ಯಾವುದೇ ಕೋರ್ಟಿನಲ್ಲಿ ದಾವೆಗಾರರು ಠೇವಣಿ ಇಟ್ಟ ಠೇವಣಿಗಳ ಹಣ, ಸಾರ್ವಜನಿಕ ಅಧಿಕಾರಿಗಳು ಸ್ವೀಕರಿಸಿದ ಇತರ ಎಲ್ಲ ಹಣಗಳು ಇಂದು ರಾಜ್ಯವು ತನ್ನ ಭೂಕಂದಾಯವನ್ನು ಹೊರತುಪಡಿಸಿ ಬಂದ ಹಣ ಇಲ್ಲವೆ ಸಾರ್ವಜನಿಕ ಹಣ, ಸಾರ್ವಜನಿಕರಿಂದ ಎತ್ತಿದ್ದು, ಇಲ್ಲವೆ ಭಾರತ ಸರಕಾರ ಸ್ವೀಕರಿಸಿದ್ದು, ಇಲ್ಲವೆ ರಾಜ್ಯ ಸರಕಾರ ಸ್ವೀಕರಿಸಿದ ಹಣ ಯಾವುದೇ ಇರಲಿ.

(ಬಿ) ಭಾರತ ದೇಶದಲ್ಲಿರುವ ಯಾವುದೇ ನ್ಯಾಯಾಲಯ ಯಾವುದೇ ಕಾರಣಕ್ಕಾಗಿ ವಿಷಯಕ್ಕಾಗಿ ಲೆಕ್ಕ ಕೊಡುವುದಕ್ಕಾಗಿ ಇಲ್ಲವೆ ಯಾವುದೇ ವ್ಯಕ್ತಿಗಳು ಭಾರತದ ಸಾರ್ವಜನಿಕ ಖಾತೆಗೆ ಹಣ ಸಲ್ಲಿಸುವುದು ಇಲ್ಲವೆ ರಾಜ್ಯ ಸರಕಾರದ್ದು ಯಾವುದೇ ಇರಲಿ.

ಮಾನ್ಯರೇ, ನೀವು ನನಗೆ ಅವಕಾಶ ಕೊಟ್ಟರೆ ನಾನು ಈಗ ಉಳಿದ ತಿದ್ದುಪಡಿಗಳನ್ನು ಸಹ ಮಂಡಿಸುತ್ತೇನೆ. ಆಮೇಲೆ ನನ್ನ ಕೆಲವು ಸಾಮಾನ್ಯ ಅಭಿಪ್ರಾಯೋಕ್ತಿಗಳನ್ನು ಮಾನ್ಯ ಸದಸ್ಯರಿಗೆ ನಾವು ಬದಲಾಯಿಸಲು ತಂದ ಪ್ರಸ್ತಾವನೆಗಳನ್ನು ತಿಳಿದುಕೊಳ್ಳಲು ಅನುಕೂಲವಾಗುವಂತೆ ಮಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಆಗಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈಗ ತಿದ್ದುಪಡಿ ಸಂಖ್ಯೆ ೩೮೦ ಮತ್ತು ತಿದ್ದುಪಡಿ ಸಂಖ್ಯೆ ೩೮೧ ಇವುಗಳನ್ನು ಮಂಡಿಸುತ್ತೇನೆ.

ಅನುಚ್ಛೇದ ೨೪೮ಎ, ಇದರ ಸ್ಥಾನದಲ್ಲಿ ಕೆಳಗಣ ಅನುಚ್ಛೇದ ಸೇರಿಸಬೇಕು.

೨೪೮(ಎ) (೧) ಇದರ ಉಪಬಂಧಗಳಿಗೆ ಒಳಪಟ್ಟು ಮತ್ತು ಸಂಚಿತಗೊಳಿಸಿದ ನಿಧಿಗಳು ಮತ್ತು ಭಾರತ ಸರಕಾರದ ಸಾರ್ವಜನಿಕ ಖಾತೆಯ ಮತ್ತು ರಾಜ್ಯಗಳು ಈ ಅಧ್ಯಾಯದ ಉಪಬಂಧಗಳಿಗೆ ಸಂಪೂರ್ಣ ಹಸ್ತಾಂತರ ವಹಿಸಿಕೊಡುವುದು ಇಲ್ಲವೆ ಅದರ ಉತ್ಪನ್ನದ ಕೆಲವು ತೆರಿಗೆಗಳನ್ನು ಮತ್ತು ಸುಂಕಗಳನ್ನು ರಾಜ್ಯಗಳಿಗೆ ಹಂಚಿಕೊಡುವುದು, ಭಾರತ ಸರಕಾರವು ಸ್ವೀಕರಿಸಿದ ಎಲ್ಲ ರಾಜಸ್ವಗಳನ್ನು ಮತ್ತು ಅವರು ಎತ್ತಿದ ಎಲ್ಲ ಸಾಲಗಳನ್ನು ಟ್ರೆಝುರಿ ಚೆಕ್ಕುಗಳನ್ನು ಕೊಡುವುದು, ಬಿಲ್ಲುಗಳು ಮತ್ತು ಎಲ್ಲ ರೀತಿಯಿಂದ ಬಂದ ಮುಂಗಡ ಹಣ ಮತ್ತು ಸಾಲ ಕೊಟ್ಟದ್ದು, ತಿರುಗಿ ಬಂದ ಹಣ, ಸಾಲ ಮರುಪಾವತಿ ಮಾಡಿದ್ದು ಇವೆಲ್ಲವೂ ಒಂದು ಸಂಚಿತಗೊಳಿಸಿದ ನಿಧಿಯನ್ನು ಭಾರತದ ಸಂಚಿತಗೊಳಿಸಿದ ನಿಧಿಯೆಂದು ಕರೆಯತಕ್ಕದ್ದು ಮತ್ತು ಎಲ್ಲ ರಾಜ್ಯಗಳು ಸ್ವೀಕರಿಸಿದ ರಾಜಸ್ವಗಳು, ರಾಜ್ಯ ಸರಕಾರಗಳು ಎತ್ತಿದ ಸಾಲಗಳು, ರಾಜ್ಯ ಸರಕಾರವು ಕೊಟ್ಟ ಟ್ರೆಝುರಿ ಬಿಲ್ಲುಗಳು ಹಾಗೂ ಸಾಲಗಳು ಮತ್ತು ಮುಂಗಡ ಹಣದ ರೂಪದಲ್ಲಿ ಯಾವುದೇ ರೀತಿ ಹಾಗೂ ಮಾರ್ಗದಿಂದ ಬಂದದ್ದು ರಾಜ್ಯ ಸರಕಾರಗಳು ತಿರುಗಿ ಕೊಡುವ ಸಾಲದ ಮರು ಪಾವತಿಗಾಗಿ ಹಣ ರಾಜ್ಯದ ಸಂಚಿತಗೊಳಿಸಿದ ನಿಧಿಯೆಂದು ಕರೆಯತಕ್ಕದ್ದು.

(೨) ಒಟ್ಟಾರೆ ಸಾರ್ವಜನಿಕ ಹಣ ಸ್ವೀಕರಿಸಿದ್ದು, ಇಲ್ಲವೆ ಭಾರತ ಸರಕಾರದ ಪರವಾಗಿ ಸ್ವೀಕರಿಸಿದ್ದು ಇಲ್ಲವೆ ರಾಜ್ಯದ ಪರವಾಗಿ ಸ್ವೀಕರಿಸಿದ್ದು ಯಾವುದೇ ಇರಲಿ,

(೩) ಭಾರತ ಸರಕಾರದ ಸಂಚಿತಗೊಳಿಸಿದ ನಿಧಿಯಿಂದ ಇಲ್ಲವೆ ರಾಜ್ಯ ಸರಕಾರದ ಸಂಚಿತಗೊಳಿಸಿದ ನಿಧಿಯಿಂದ ಯಾವುದೇ ಹಣವನ್ನು ಕಾನೂನುಬದ್ಧವಾಗಿ ಸಂವಿಧಾನದಲ್ಲಿ ಕಾಣಿಸಿದ ಹೊರತು ವಿನಿಯೋಗಿಸತಕ್ಕದ್ದಲ್ಲ.

ತಿದ್ದುಪಡಿ ಸಂಖ್ಯೆ ೩೮೧:

ಪರಿಚ್ಛೇದ ೨೬೩ರ ಬದಲು ಕೆಳಗಣ ಪರಿಚ್ಛೇದವನ್ನು ಸೇರಿಸತಕ್ಕದ್ದು.

೨೬೩(ಎ) ಸಂಚಿತಗೊಳಿಸಿದ ನಿಧಿ ಮತ್ತು ಸಾದಿಲ್ವಾರ್ ನಿಧಿ, ಸಂಚಿತಗೊಳಿಸಿದ ನಿಧಿ, ಸಾದಿಲ್ವಾರ್ ಫಂಡುಗಳು ಮತ್ತು ಸಾರ್ವಜನಿಕ ಖಾತೆಗೆ ಜಮಾ ಮಾಡಿದ ಹಣ, ಅಂತಹ ನಿಧಿಯಿಂದ ತಿರುಗಿ ತೆಗೆದುಕೊಂಡ ಹಾಗೂ ಇಲ್ಲವೆ ಜಮೆ ಮಾಡಿದ ಹಣ ಮತ್ತು ಸಾರ್ವಜನಿಕ ಖಾತೆಯ ಹಣ, ಭಾರತ ಸರಕಾರದ ಸಂಚಿತಗೊಳಿಸಿದ ಹಣ, ಇಂತಹ ನಿಧಿಯಿಂದ ಹಣವನ್ನು ಸಂದಯ ಮಾಡುವುದು, ಕೊಡುವುದು ಇಲ್ಲವೆ ಸಾದಿಲ್ವಾರ್ ಹಣವನ್ನು ಕೊಡುವುದು ಇಲ್ಲವೆ ತಿರುಗಿ ತೆಗೆದುಕೊಳ್ಳುವುದು, ಹೀಗೆ ಜಮೆ ಮಾಡಿದುದನ್ನು

ಹೊರತುಪಡಿಸಿ ಜಮೆ ಮಾಡಿದ ಸಾರ್ವಜನಿಕರಿಂದ ಭಾರತ ಸರಕಾರ ಇಲ್ಲವೆ ರಾಜ್ಯ ಸರಕಾರದ ವತಿಯಿಂದ ಸ್ವೀಕರಿಸಿದ ಹಣ ಒಟ್ಟಾರೆ ವ್ಯವಹರಣೆ ಉಪಯೋಗ ಹೀಗೆ ಜಮಾ ಮಾಡಿದ ಹಣವನ್ನು ಹೊರತುಪಡಿಸಿ ಸಂದಾಯ ಮಾಡುವುದು ಕೊಡುವುದು, ಹೀಗೆ ಈ ಹಣವನ್ನು ಭಾರತ ಸರಕಾರ ಇಲ್ಲವೆ ರಾಜ್ಯ ಸರಕಾರದ ವತಿಯಿಂದ ಸ್ವೀಕರಿಸಿದ ಹಣ, ಒಟ್ಟಾರೆ ಸ್ವೀಕರಿಸುವುದನ್ನು ಹಾಗೂ ಇದಕ್ಕೆ ಅನುಗತ ಸಹಾಯಕ ವಿಷಯಗಳ ಬಗ್ಗೆ ಮೇಲೆ ಹೇಳಿದ ವಿಷಯಗಳ ಬಗೆಗೆ ಸಂಸತ್ತು ಈ ಬಗ್ಗೆ ಕಾನೂನು ಮಾಡುವವರೆಗೆ ಅದನ್ನು ರಾಷ್ಟ್ರಾಧ್ಯಕ್ಷರು ನಿಯಂತ್ರಿಸಬೇಕು.

(೨) ರಾಜ್ಯ ಸರಕಾರದ ಈ ಸಂಚಿತ ನಿಧಿ ಹಾಗೂ ಸಾದಿಲ್ವಾರ್ ನಿಧಿಯ ಖಾತೆಗೆ ಹಣವನ್ನು ಜಮೆ ಮಾಡುವುದು ಅದರಿಂದ ಹಾಗೂ ಪರತ ಪಡೆಯುವದು. ಈ ನಿಧಿಯ ಕಬಜಿಯನ್ನು ಸಾರ್ವಜನಿಕ ನಿಧಿ ಉಳಿದ ಹಣವನ್ನು ಹೊರತುಪಡಿಸಿ ಉಳಿದ ಹಣ, ರಾಜ್ಯ ಸರಕಾರ ಖಾತೆಗೆ ಜಮೆ ಮಾಡಿದ ಹಣ ಮತ್ತು ಅದಕ್ಕೆ ಸಂಬಂಧಿಸಿದ ವಿಷಯ ಮೇಲೆ ಹೇಳಿದ ಎಲ್ಲಾ ವಿಷಯ ಕುರಿತು ರಾಜ್ಯ ವಿಧಾನಸಭೆಯು ನಿಯಮಗಳನ್ನು ಮಾಡಿ ಅದನ್ನು ನಿಯಂತ್ರಿಸತಕ್ಕದ್ದು. ಈ ಬದಲಾವಣೆಗಳೆಲ್ಲ ಎರಡು ವಿಧವಾಗಿವೆ; ಮೂಲ ಪರಿಚ್ಛೇದ ಸಂಖ್ಯೆ ೨೪೮ಎ ಮೊದಲು ಇದ್ದಂತೆ ಸಂಚಿತಗೊಳಿಸಿ ನಿಧಿ ಸಾಲದ ಮರುಪಾವತಿ ಹಣವನ್ನು ಮಾತ್ರ ಜಮೆ ಮಾಡುವುದರ ಮಟ್ಟಿಗೆ ಸೀಮಿತವಾಗಿತ್ತು. ವಿಶೇಷವಾಗಿ ಸಂಚಿತಗೊಳಿಸಿದ ನಿಧಿಯಲ್ಲಿ ಸಾಲದ ಮರುಪಾವತಿ ಟ್ರೆಝುರಿ ಬಿಲ್ಲು ಮತ್ತು ಮುಂಗಡ ಹಣದ ಮಾರ್ಗ ಹಾಗೂ ರೀತಿ ಇವುಗಳ ಬಗೆಗೆ ಉಲ್ಲೇಖ ಇರಲಿಲ್ಲ. ನಾವು ಈಗ ಅವುಗಳ ಬಗೆಗೆ ವಿಶೇಷವಾಗಿ ಪ್ರಸ್ತಾಪಿಸಿ ಅವು ಸಂಚಿತಗೊಳಿಸಿದ ನಿಧಿಯ ಭಾಗವಾಗುತ್ತವೆ.

ಎರಡನೆಯದಾಗಿ, ಸಂಚಿತಗೊಳಿಸಿದ ನಿಧಿಯ ವ್ಯಾಖ್ಯೆಯಲ್ಲಿ ಕೆಲವು ಬೇರೆ ಹಣವನ್ನು ಸರಕಾರವು ಸ್ವೀಕರಿಸಿದ್ದನ್ನು ಇದರೊಂದಿಗೆ ಸೇರಿಸಿರುತ್ತವೆ. ಆದರೆ ಇದು ಕೇವಲ ಕರ ಹಾಗೂ ಸಾಲ ಇವುಗಳ ಬಾಬತ್ತಿನ ಹಣವಲ್ಲ. ಆದ್ದರಿಂದ ರಾಜಸ್ವದ ಹೊರತಾಗಿ ಸರಕಾರ ಸ್ವೀಕರಿಸಿದ ಸಾರ್ವಜನಿಕ ಹಣ ಇಲ್ಲವೆ ಯೋಗ್ಯ ಕಾನೂನಿನಿಂದ ಮಾಡಿದ ಸಾಲದ ಮರುಪಾವತಿ ಅಂದರೆ ಪರಿಚ್ಛೇದ ೨೪೮ಎ ಮತ್ತು (೩) ಇದರ ಉಪಬಂಧದಲ್ಲಿ ಕಾಣಿಸಿದವು, ಮೇಲುನೋಟಕ್ಕೆ ಸಂಚಿತಗೊಳಿಸಿದ ನಿಧಿ ಎಂದು ನಿಜವಾಗಿ ಕಂಡು ಬರದೇ ಇದ್ದರೂ ಅದರಲ್ಲಿಯ ಹಣವನ್ನು ಪರತ ಪಡೆಯುವುದರ ಸಲುವಾಗಿ ಅದು ವಿನಿಯೋಜನ ಅಧಿನಿಯಮದ ವಿಷಯವಾಗುವುದಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಕಾಲಕಾಲಕ್ಕೆ ಯಾವ ಉದ್ದೇಶಗಳಿಗೆ ಹಾಗೂ ಕರಾರುಗಳಿಗೆ ಒಳಗೊಂಡು ಆ ಹಣವನ್ನು ಪರತು ಪಡೆಯಲು ಸಂಸತ್ತಿಗೆ ಅಧಿಕಾರ ಕೊಡಲಾಗಿತ್ತು. ಆದ್ದರಿಂದ ಸಂಚಿತಗೊಳಿಸಿದ ನಿಧಿಯ ವ್ಯಾಖ್ಯೆಯನ್ನು ವಿಸ್ತರಿಸುವುದು ಮತ್ತು ಸಂಚಿತಗೊಳಿಸಿದ ನಿಧಿಯನ್ನು ಬೇರೆ ನಿಧಿಯಿಂದ ಬೇರ್ಪಡಿಸುವುದು, ಅಂದರೆ ಸಾರ್ವಜನಿಕ ನಿಧಿಗೆ ಅವಶ್ಯವಾಗಿ ಇದು ಕೂಡುತ್ತದೆ. ಆದ್ದರಿಂದ ಈ ಬದಲಾವಣೆ ಮಾಡಿದೆ. ವಿನಿಯೋಗ ಮಾಡಿದ ಹಣವು ಉಳಿದ ಹಣಕ್ಕೂ ಅನ್ವಯಿಸುತ್ತದೆಂದೂ ಅದು ಸಾಮಾನ್ಯವಾಗಿ ಸಾರ್ವಜನಿಕ ಖಾತೆಗೆ ಕೂಡುತ್ತದೆ. ಆದ್ದರಿಂದ ತೊಂದರೆಗಳು ಉದ್ಭವಿಸುವುವೆಂದು ಹಣಕಾಸಿನ ಮಂತ್ರಾಲಯವು ನಮ್ಮ ಗಮನವನ್ನು ಹರಿಸಿತು. ಈ ತೊಂದರೆಯನ್ನು ನೀಗಿಸುವುದಕ್ಕಾಗಿ ಮೂಲ ಅನುಚ್ಛೇದದಲ್ಲಿ ಈ ಅನುಬಂಧಗಳನ್ನು ಸೇರಿಸಲೇಬೇಕಾಯಿತು.

**(ಈ ತಿದ್ದುಪಡಿಯನ್ನು ಸ್ವೀಕರಿಸಲಾಯಿತು, ಹೊಸ ಅನುಚ್ಛೇದ ೨೬೩ಎ ಇದನ್ನು ಸಂವಿಧಾನದಲ್ಲಿ ಸೇರಿಸಲಾಯಿತು.)**

**ಪ್ರಿವಿಕೌನ್ಸಿಲ್ಲಿನ ಅಧಿಕಾರ ವ್ಯಾಪ್ತಿಯನ್ನು ರದ್ದುಗೊಳಿಸುವ ಮಸೂದೆ**

**ಮಾನ್ಯ ಅಧ್ಯಕ್ಷರು:** ಈ ಹೊತ್ತಿನ ಸಂಸತ್ತಿನ ನಮ್ಮ ವಿಷಯ ಪಟ್ಟಿಯಲ್ಲಿ ಮೊದಲನೆಯದು ಹಿಜ್ ಮೆಜೆಸ್ಟಿ ಇನ್ ಕೌನ್ಸಿಲ್ ಇವರ ಅಧಿಕಾರವನ್ನು ರದ್ದುಗೊಳಿಸುವ ಮಸೂದೆಯನ್ನು ಡಾ. ಬಿ. ಆರ್. ಅಂಬೇಡ್ಕರ್ ಅವರು ಮಂಡಿಸುತ್ತಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬಾಂಬೆ, ಜನರಲ್): ಮಾನ್ಯರೆ, ನಾನು ಈಗ "ಹಿಸ್ ಮೆಜೆಸ್ಟಿ" ಇವರಿಗೆ ಭಾರತದ ಅಪೀಲು (ಮೇಲ್ಮನವಿ) ಹಾಗೂ ಅರ್ಜಿಗಳನ್ನು ಸ್ವೀಕರಿಸಲು ಇರುವ ಅಧಿಕಾರ ವ್ಯಾಪ್ತಿಯನ್ನು ರದ್ದುಗೊಳಿಸುವ ಮಸೂದೆಯನ್ನು ಮಂಡಿಸಲು ಪರವಾನಗಿ ಕೇಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆಯೆಂದರೆ, "ಭಾರತದ ಮೇಲ್ಮನವಿ ಹಾಗೂ ಅರ್ಜಿಗಳನ್ನು "ಹಿಸ್ ಮೆಜೆಸ್ಟಿ ಇನ್ ಕೌನ್ಸಿಲ್" ಇವರಿಗೆ ಇರುವ ಅಧಿಕಾರ ವ್ಯಾಪ್ತಿಯನ್ನು ರದ್ದುಗೊಳಿಸುವ ಮಸೂದೆಯನ್ನು ಕುರಿತು ಮಂಡಿಸುವ ಪರವಾನಗಿಯನ್ನು ಕೊಡಲಾಗಿದೆ."

**(ಈ ಗೊತ್ತುವಳಿಯನ್ನು ಸ್ವೀಕರಿಸಲಾಗಿದೆ)**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈಗ ಮಸೂದೆಯನ್ನು ಮಂಡಿಸುತ್ತೇನೆ.

## ಸಂವಿಧಾನದ ಕರಡು
## (ಹೊಸ ಭಾಗ XIVಎ ಮುಂದುವರಿದುದು)

**ಮಾನ್ಯ ಅಧ್ಯಕ್ಷರು:** ಇವೆಲ್ಲವುಗಳು ತಿದ್ದುಪಡಿಗಳೆಂದು ನಾನು ಭಾವಿಸುತ್ತೇನೆ. ಒಂದು ವೇಳೆ ನಾನು ಯಾವುದಾದರೊಂದನ್ನು ಬಿಟ್ಟಿದ್ದರೆ, ಮಾನ್ಯ ಸದಸ್ಯರು ತಿದ್ದುಪಡಿಗಳಿಗೆ ಯಾವುದೇ ನೋಟೀಸು ಕೊಟ್ಟಿದ್ದರೆ ಅದನ್ನು ನನ್ನ ಗಮನಕ್ಕೆ ತರಬಹುದು. ಹಾಗೆ ಮಾಡದಿದ್ದರೆ, ಅವುಗಳನ್ನು ಈ ಸಂಸತ್ತಿನ ಪರವಾನಗಿಯೊಂದಿಗೆ ಹಿಂದಕ್ಕೆ ತೆಗೆದುಕೊಳ್ಳಲಾಗುವುದೆಂದು ಭಾವಿಸಲಾಗುವುದು.

ನಾನು ಈಗ ಶ್ರೀ ಮುನ್ಷಿ ಅವರು ತಂದ ತಿದ್ದುಪಡಿಯನ್ನು ಸದನದ ಮುಂದೆ ಇಡುತ್ತೇನೆ. ಆದರೆ ಅದಕ್ಕೆ ಶ್ರೀ ತ್ಯಾಗಿ ಅವರು ಅನೇಕ ಪ್ಯಾರಾಗಳಿಗೆ ತಿದ್ದುಪಡಿ ತಂದಿದ್ದಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆ ವಿಷಯವನ್ನು ನಾವು ನಂತರ ವಿಚಾರಿಸೋಣ.

**ಶ್ರೀ ಮಹಾವೀರ್ ತ್ಯಾಗಿ:** ಮಾನ್ಯರೆ, ನಾನು ಇದನ್ನು ಒಪ್ಪಿದ್ದೇನೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ತಾವು ಸದನವನ್ನು ಮುಂದೂಡಿಸುವ ಪೂರ್ವದಲ್ಲಿ ಅನುಚ್ಛೇದ ೯೯ ಹಾಗೂ ೧೮೪ ಇವು ಈ ಅಧ್ಯಾಯದ ಮೇಲೆ ಬಂದು ಕೂಡುವಂತಹವಾಗಿದ್ದು ಅವುಗಳನ್ನು ಮತಕ್ಕೆ ಹಾಕುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ, ಇದು ಇಂದಿನ ವಿಷಯಪಟ್ಟಿಯಲ್ಲಿ ಇರುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಈ ಸದನದ ಸಂಜೆಯ ಕಾರ್ಯಕಲಾಪಗಳು ಈಗ ಮುಕ್ತಾಯವಾಗುತ್ತವೆ. ಆದರೆ ಸದನವನ್ನು ಮುಂದೂಡುವ ಪೂರ್ವದಲ್ಲಿ ನಾನು ಮಾನ್ಯ ಸದಸ್ಯರಿಗೆ ಅಭಿನಂದನೆಯ ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಈ ದೇಶವನ್ನು ಬಹುದೂರ ತೆಗೆದುಕೊಂಡು ಹೋಗಿ ದೇಶವನ್ನು ಒಟ್ಟಾಗಿ ಕಟ್ಟುವ ನಿಟ್ಟಿನಲ್ಲಿ ಈ ಅಧ್ಯಾಯವನ್ನು ನಾವು ನಮ್ಮ ಸಂವಿಧಾನಕ್ಕೆ ಸೇರಿಸಿಕೊಂಡಿದ್ದೇವೆ ಎಂದು ನನಗೆ ಅನಿಸುತ್ತದೆ. ನಮ್ಮ ದೇಶದ ಇತಿಹಾಸದಲ್ಲಿ ಎಂದೂ ಒಂದೇ ಭಾಷೆಯ ಆಡಳಿತ, ಒಂದೇ ಭಾಷೆಯ ನಿಯಮವೂ ಇರಲಿಲ್ಲ.

# ಹೊಸ ವಿಧಿ ೧೧೨ಬಿ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೆ, ನಾನು ಈಗ ಮಂಡಿಸುತ್ತೇನೆ. ಅನುಚ್ಛೇದ ೧೧೨ರ ನಂತರ ಈ ಕೆಳಗಿನ ಅನುಚ್ಛೇದವನ್ನು ಸೇರಿಸಬೇಕು.

ಈ ಸಂವಿಧಾನವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಈ ಅಧ್ಯಾಯದಲ್ಲಿ ಮತ್ತು ಹೇಳಿದ ಉಪಬಂಧಗಳಿಗೆ ಸಂಬಂಧಿಸಿದಂತೆ "ಹಿಸ್ ಮೆಜೆಸ್ಟಿ ಇನ್ ಕೌನ್ಸಿಲ್" ಇವರು ಚಲಾಯಿಸತಕ್ಕ ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರ ಇವುಗಳಿಗೆ ಇನ್ನು ಮೇಲೆ ಸಂಸತ್ತು ಕಾನೂನು ಮಾಡುವವರೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರ ಹಾಗೂ ಅಧಿಕಾರ ವ್ಯಾಪ್ತಿ ಇರುತ್ತದೆ.

ಮಾನ್ಯರೆ, ಪ್ರಿವಿ ಕೌನ್ಸಿಲ್ಲಿನ ರೂಲಿಂಗಿನ ಪ್ರಕಾರ ದಿವಾಣಿ (ಸಿವ್ಹಿಲ್) ಪ್ರಕರಣಗಳು ಹಾಗೂ ಆದಾಯ ತೆರಿಗೆ ಪ್ರಕರಣಗಳು ಸೇರಿರುತ್ತವೆ. ಇದು ನಿಜಸ್ಥಿತಿ. ಉದಾರಹಣೆಗೆ, ಭೂಸ್ವಾಧೀನ ಪ್ರಕರಣಗಳು ಆದಾಯ ತೆರಿಗೆ ಮತ್ತು ಭೂಸ್ವಾಧೀನ ಎರಡೂ ದಿವಾಣಿ (ಸಿವಿಲ್) ಪ್ರಕರಣದ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ನಿರ್ಣಯಿಸಲಾಗಿದೆ. ವಿಶೇಷವಾದ ಉಪಬಂಧಗಳನ್ನು ಕಲ್ಪಿಸದಿದ್ದರೆ, ಸರ್ವೋಚ್ಚ ನ್ಯಾಯಾಲಯಕ್ಕೆ ಕೇವಲ ಸಿವ್ಹಿಲ್ ಪ್ರಕ್ರಿಯಾ ಸಂಹಿತೆಗೆ ಮಾತ್ರ ಅದರ ಅಧಿಕಾರವು ಸೀಮಿತವಾಗಿರುತ್ತದೆ. ಈ ಸಂಶಯವನ್ನು ನಿವಾರಿಸಲು ಈಗ ಪರಿಚ್ಛೇದ ೧೧೨ಬಿ ಇದನ್ನು ಮಂಡಿಸಲು ನಿರ್ಧರಿಸಿ ಸುಪ್ರೀಂ ಕೋರ್ಟಿಗೆ ಪೂರ್ಣ ಪ್ರಕರಣಗಳ ಮೇಲೆ ದಿವಾಣಿ ಪ್ರಕರಣಗಳು ಮತ್ತು ಯಾವವು ದಿವಾಣಿ ಪ್ರಕರಣಗಳಿರುವುದಿಲ್ಲವೋ ಅವುಗಳ ಮೇಲೆ ಈಗ ಸರ್ವೋಚ್ಚ ನ್ಯಾಯಾಲಯವು ಸಂಪೂರ್ಣ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ.

ಆ ಕಾರಣಕ್ಕಾಗಿಯೇ ಈ ಅನುಚ್ಛೇದವನ್ನು ಮಂಡಿಸಲು ಇಚ್ಛಿಸಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಡಾ. ಬಿ.ಆರ್. ಅಂಬೇಡ್ಕರ್‌ರವರೇ ನಿಮಗೆ ಮತ್ತೆ ಏನಾದರೂ ಹೇಳುವುದಿದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಗೆಳೆಯರಾದ ಪಂಡಿತ ಠಾಕೂರದಾಸ್ ಭಾರ್ಗವ ಇವರು ತಂದ ತಿದ್ದುಪಡಿಯು ನನ್ನ ದೃಷ್ಟಿಯಲ್ಲಿ ಆವಶ್ಯವಿಲ್ಲ. ಯಾಕೆಂದರೆ ಅವರು ನಿಜವಾಗಿಯೂ ಅದರ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಲು ಉದ್ದೇಶಿಸಿದ್ದರೆ ನನ್ನ ದೃಷ್ಟಿಯಲ್ಲಿ ತಿದ್ದುಪಡಿಯು ಆವಶ್ಯವೆನಿಸುವುದಿಲ್ಲ. ಪ್ರಾಕ್ಟಿಸ್ ಎಂಬ ಪದವು ಸಾಮಾನ್ಯವಾಗಿ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ. ಆದರೆ, ನಾನು ಮಂಡಿಸಿದ ೧೧೨ನೆಯ ಅನುಚ್ಛೇದ ಪ್ರಕ್ರಿಯೆಗಳ ಬಗೆಗೆ ಹೇಳುವುದಿಲ್ಲ. ಆದರೆ ಅಧಿಕಾರ ವ್ಯಾಪ್ತಿಯ ಮೂಲ ವಿಷಯಗಳ ವ್ಯಾಪ್ತಿಯ ಬಗೆಗೆ ಹೇಳುತ್ತದೆ. ಆದ್ದರಿಂದ ಅವರು ತಂದ ತಿದ್ದುಪಡಿ (ಪ್ರಾಕ್ಟೀಸ್) ಇದು ಅನಾವಶ್ಯಕವಿರುತ್ತದೆ. ನನ್ನ ಮಿತ್ರರಾದ ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ ಅವರು ತಂದ ತಿದ್ದುಪಡಿಯಲ್ಲಿ ಎರಡು ವಿಷಯಗಳಿವೆ. ಅವುಗಳಿಗೆ ನಾನು ಉತ್ತರಿಸಬಯಸುತ್ತೇನೆ. ಮೊದಲನೆಯದು, ಕೋರ್ಟ್ ಮಾರ್ಶಲ್ ಒಬ್ಬ ವ್ಯಕ್ತಿಗೆ ಮರಣದಂಡನೆ ವಿಧಿಸಿದರೆ ಅದರ ವಿರುದ್ಧ ಅವನು ಮೇಲ್ಮನವಿ ಸಲ್ಲಿಸುವಂತೆ ಇದ್ದರೆ ಅಂತಹ ಉಪಬಂಧವನ್ನು ಭಾರತೀಯ ಸೈನ್ಯ ಅಧಿನಿಯಮದಲ್ಲಿ ಆರೋಪಿಗೆ ಮೇಲ್ಮನವಿ ಸಲ್ಲಿಸುವ ಹಕ್ಕು ನೀಡಬಹುದು ಮತ್ತು ಇದನ್ನು ಕೊಡಲಾಗುತ್ತದೆ. ಇದರ ಬಗ್ಗೆ ನನ್ನ ಗೆಳೆಯರ ಗಮನವನ್ನು ಸೆಳೆಯಬಯಸುತ್ತೇನೆ. ಅದೇನೆಂದರೆ ಅನುಚ್ಛೇದ ೧೧೪ ಖಂಡ ೧ ಇದರಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಯೂನಿಯನ್ ಲಿಸ್ಟಿನಲ್ಲಿ ಇರುವ ಯಾವುದೇ ವಿಷಯ ಕುರಿತು ಅಂತಹ ಹೆಚ್ಚಿನ ಅಧಿಕಾರ ವ್ಯಾಪ್ತಿ ಹಾಗೂ ಅಧಿಕಾರ ಇರುತ್ತದೆ. ಅದು ಹೀಗೆ ಇದೆ: "೧೧೪ (೧) ಸರ್ವೋಚ್ಚ ನ್ಯಾಯಾಲಯಕ್ಕೆ ಯೂನಿಯನ್ ಲಿಸ್ಟಿನಲ್ಲಿರುವ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ

ನ್ಯಾಯಾಲಯಕ್ಕೆ ಅಂತಹ ಹೆಚ್ಚಿನ ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರ ಇರುತ್ತದೆ ಎಂದು ಹೇಳಿ ಸಂಸತ್ತು ಕಾನೂನು ಮಾಡಿ ಇದನ್ನು ಸ್ಥಿರೀಕರಿಸಬಹುದು. "ಒಂದು ವೇಳೆ ಸಂಸತ್ತು ಅಂತಹ ಅಧಿಕಾರಿಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಇರಬೇಕೆಂದು ಅನಿಸಿದರೆ, ಸಂಸತ್ತು ಸೈನಿಕ ಅಧಿನಿಯಮದಲ್ಲಿ ಸೂಕ್ತ ಉಪಬಂಧಗಳನ್ನು ರಚಿಸಿ ಅಂತಹ ಅಧಿಕಾರವನ್ನು ಅವರಿಗೆ ದಯಪಾಲಿಸಲು ಅವರಿಂದ ಯಾವುದೇ ಅಡಚಣೆ ಇರುವುದಿಲ್ಲ.

ಪುನಃ ಅನುಚ್ಛೇದ ೧೧೨ ವಿಶೇಷವಾದ ವಿಷಯಗಳಿಗೆ ಸಂಬಂಧಿಸಿದ್ದು, ನಾನು ಅದರ ಗಮನ ಸೆಳೆಯಬಯಸುತ್ತೇನೆ. ಇದರ ಅಡಿಯಲ್ಲಿ ಸರ್ವೋಚ್ಚ ನ್ಯಾಯಾಲಯ ಕೋರ್ಟ್ ಮಾರ್ಷಲ್ ವಿರುದ್ಧ ಮೇಲ್ಮನವಿಯನ್ನು ಸ್ವೀಕರಿಸಬಹುದು. ಯಾಕೆಂದರೆ, ಅಲ್ಲಿ ಉಪಯೋಗಿಸುವ ಶಬ್ದಗಳು "ಯಾವುದೇ ಕಾರಣ ಇಲ್ಲವೆ ಯಾವುದೇ ನ್ಯಾಯಾಲಯವು ಮಾಡಿದ ವಿಷಯ ಇಲ್ಲವೆ ಟ್ರಿಬ್ಯುನಲ್ (ನ್ಯಾಯ ಮಂಡಳಿ) ಈ ಪದಗಳು ಇಷ್ಟು ವಿಶಾಲವಾಗಿದೆಯೆಂದರೆ ಯಾವುದೇ ನ್ಯಾಯಾಲಯ ಇಲ್ಲವೆ ನ್ಯಾಯಮಂಡಳಿಯು "ಅನುಚ್ಛೇದ ೧೧೨ರ ಪ್ರಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ಕೊಟ್ಟ ಅಧಿಕಾರ ವ್ಯಾಪ್ತಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ನನ್ನ ದೃಷ್ಟಿಯಲ್ಲಿ ಅವರು ತಂದ ತಿದ್ದುಪಡಿಯು ಸಹ ಅನಾವಶ್ಯಕ, ನನ್ನ ಸ್ನೇಹಿತರಾದ ಶ್ರೀ ನಝಿರುದ್ದೀನ್ ಅಹ್ಮದ್ ಅವರು ತಂದ ತಿದ್ದುಪಡಿ ಸಹ ಅನಾವಶ್ಯಕ.

**ಶ್ರೀ ನಝಿರುದ್ದೀನ್ ಅಹ್ಮದ್:** ನಾನು ಅದನ್ನು ಮಂಡಿಸಿರುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಅವರು ಅದನ್ನು ಮಂಡಿಸಿರುವುದಿಲ್ಲ. ಅವರು ಅದನ್ನು ಕರಡು ಸಮಿತಿಗೆ ಬಿಟ್ಟಿದ್ದಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ಒಂದು ವೇಳೆ ಅದನ್ನು ಕರಡು ಸಮಿತಿಗೆ ಬಿಟ್ಟಿದ್ದರೆ, ನನಗೆ ಅದು ಸಂತೋಷವಾಗಿದೆ. ನಿಜವಾಗಿಯೂ ನಾವು ಅದಕ್ಕೆ ಹೆಚ್ಚು ಲಕ್ಷ್ಯ ಕೊಟ್ಟು ಪೂರೈಸುತ್ತೇವೆ. ಯಾಕೆಂದರೆ ನಾವು ಅದಕ್ಕೆ ತಕ್ಕ ಮಹತ್ವ ಕೊಡುತ್ತೇವೆ.

**ಮಾನ್ಯ ಸಭಾಧ್ಯಕ್ಷರು:** ನಾನು ಹಾಗಾದರೆ ತಿದ್ದುಪಡಿಗಳನ್ನು ಇಡುತ್ತೇನೆ.

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ತಾವು ಕೊಟ್ಟ ಭರವಸೆಯ ಮೇಲೆ ನಾನು ನನ್ನ ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ.

**ಪಂಡಿತ್ ಠಾಕೂರದಾಸ್ ಭಾರ್ಗವ:** ನಾನೂ ಸಹ ನನ್ನ ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದೇನೆ. (ಸದನದ ಅನುಮತಿಯೊಂದಿಗೆ ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು.)

**ಅನುಚ್ಛೇದ ೧೭೨ ಬಿ ಇದನ್ನು ಸಂವಿಧಾನದಲ್ಲಿ ಸೇರಿಸಲಾಯಿತು.**

## ಹೊಸ ವಿಧಿ ೧೫ಎ

**ಮಾನ್ಯ ಸಭಾಧ್ಯಕ್ಷರು:** ಹಾಗಾದರೆ ನಾವು ಈಗ ಹೊಸ ಅನುಚ್ಛೇದ ೧೫ಎ ಇದನ್ನು ಕೈಗೆತ್ತಿಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈಗ ಮಂಡಿಸುತ್ತೇನೆ: ಅನುಚ್ಛೇದ ೧೫ರ ನಂತರ ಈ ಅನುಚ್ಛೇದವನ್ನು ಸೇರಿಸಬೇಕು.

೧೫ಎ (೧) ಯಾವುದೇ ವ್ಯಕ್ತಿಯನ್ನು ಬಂಧಿಸಿದರೆ ಅವನನ್ನು ಬಂಧಿಸಿದ ತಕ್ಷಣ ಅವನಿಗೆ ಅವನನ್ನು ಬಂಧಿಸಿದ ಕಾರಣವನ್ನು ಹೇಳದೆ ಅವನನ್ನು ಬಂಧನದಲ್ಲಿಟ್ಟುಕೊಳ್ಳಲು ಬರುವುದಿಲ್ಲ. ಮತ್ತು ಅವನಿಗೆ ತನಗೆ ಬೇಕಾದ ವಕೀಲರ ಸಲಹೆಯನ್ನು ಪಡೆಯುವ ಹಕ್ಕನ್ನು ತಿರಸ್ಕರಿಸಲು ಬರುವುದಿಲ್ಲ.

(೨) ಯಾವುದೇ ಬಂಧಿತ ವ್ಯಕ್ತಿಯನ್ನು ಆತನನ್ನು ಬಂಧಿಸಿದ ವೇಳೆಯಿಂದ ೨೪ ತಾಸುಗಳ ಅವಧಿಯಲ್ಲಿ ಯಾವುದೇ ಸಮೀಪದ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಬೇಕು. ಬಂಧಿಸಿದ ಸ್ಥಳದಿಂದ ಆ ವ್ಯಕ್ತಿಯನ್ನು ನ್ಯಾಯಾಧೀಶರವರಿಗೆ ಹಾಜರುಪಡಿಸಲು ಬೇಕಾಗುವ ಪ್ರಯಾಣದ ಅವಧಿಯನ್ನು ಕಳೆದು ಅವನನ್ನು ೨೪ ತಾಸುಗಳಲ್ಲಿ ಹಾಜರುಪಡಿಸಬೇಕು. ಮತ್ತು ನ್ಯಾಯಾಲಯದ ಪರವಾನಗಿ ಪಡೆಯದ ಹೊರತು ಅಂತಹ ವ್ಯಕ್ತಿಯನ್ನು ೨೪ ತಾಸಿಗಿಂತ ಹೆಚ್ಚಿಗೆ ಬಂಧನದಲ್ಲಿಟ್ಟುಕೊಳ್ಳಲು ಬರುವುದಿಲ್ಲ.

(೩) ಈ ಅನುಚ್ಛೇದವು ಕೆಳಗಿನ ವ್ಯಕ್ತಿಗಳಿಗೆ ಅನ್ವಯಿಸುವುದಿಲ್ಲ.

(ಎ) ಯಾವುದೇ ವ್ಯಕ್ತಿ ಸದ್ಯಕ್ಕೆ ವೈರಿ ರಾಷ್ಟ್ರದ ವ್ಯಕ್ತಿಯಾಗಿದ್ದರೆ.

(ಬಿ) ಯಾವುದೇ ವ್ಯಕ್ತಿಯನ್ನು ಅಪರಾಧ ತಡೆಗಟ್ಟುವ ದೃಷ್ಟಿಯಿಂದ ಆ ಕಾನೂನಿನ ಅನ್ವಯ ಬಂಧಿಸಿದ್ದರೆ, ಪರಂತು ಖಂಡ (೩) ಉಪಖಂಡ (ಬ) ಇದರಲ್ಲಿ ಹೇಳಿದ ಯವುದು ೩ ತಿಂಗಳಿಗಿಂತ ಹೆಚ್ಚಿಗೆ ಇಟ್ಟುಕೊಳ್ಳಲು ಬರುವುದಿಲ್ಲ. ಅದರೆ

(ಎ) ಅವರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಅರ್ಹರಾದ ಸಲಹಾ ಸಮಿತಿಯ ಒಬ್ಬ ಸದಸ್ಯರು ೩ ತಿಂಗಳ ಅವಧಿಯು ಮುಕ್ತಾಯವಾಗುವ ಪೂರ್ವದಲ್ಲಿ ಅವರ ಅಭಿಪ್ರಾಯದಲ್ಲಿ ೩ ತಿಂಗಳಿಗಿಂತ ಹೆಚ್ಚಿನ ಅವಧಿಗೆ ಅವನನ್ನು ಬಂಧನದಲ್ಲಿಟ್ಟುಕೊಳ್ಳಲು ಸಕಾರಣಗಳು ಸಾಕಷ್ಟು ಇವೆ ಎಂದು ಅಭಿಪ್ರಾಯಪಟ್ಟರೆ ಇಲ್ಲವೆ

(ಬಿ) ಸಂಸತ್ತು ಈ ಅನುಚ್ಛೇದದ ಉಪಬಂಧ (೪)ರ ಅನ್ವಯ ಮಾಡಿದ ಕಾನೂನಿನ ಪ್ರಕಾರ ಅಂತಹ ವ್ಯಕ್ತಿಯನ್ನು ಬಂಧಿಸಿದ್ದರೆ

(೪) ಸಂಸತ್ತು ಕಾನೂನು ಮಾಡಿ ಯಾವುದೇ ಒಬ್ಬ ವ್ಯಕ್ತಿಯನ್ನು ಯಾವುದೇ ಸ್ವರೂಪದ ಪ್ರಕರಣಗಳಲ್ಲಿ ಅಥವಾ ಯಾವ ವರ್ಗದ ಪ್ರಕರಣದಲ್ಲಿ ಬಂಧಿಸಿದರೆ ೩ ತಿಂಗಳಿಗಿಂತ ಹೆಚ್ಚಿನ ಅವಧಿಗೆ ಅಥವಾ ಅತಿ ಹೆಚ್ಚಿನ ಅವಧಿಯವರೆಗೆ ಬಂಧಿಸಿಡಬಹುದು ಎಂಬುದರ ಬಗೆಗೆ ಅಪರಾಧ ತಡೆಗಟ್ಟುವ ಕಾನೂನು ಅಡಿಯಲ್ಲಿ ಅವಕಾಶ ಒದಗಿಸಬಹುದು.

ಮಾನ್ಯರೇ, ಈ ಹಿಂದಿನ ಸಂಸತ್ತಿನ ಅಧಿವೇಶನದಲ್ಲಿ ನಾವು ಈ ಅನುಚ್ಛೇದವನ್ನು ಚರ್ಚಿಸುವಾಗ ನಿರ್ದಿಷ್ಟಪಡಿಸಿದ ಪ್ರಕ್ರಿಯೆಗಳನ್ನು ಹೊರತುಪಡಿಸಿ ಅಥವಾ ಕಾನೂನುಯುಕ್ತ ಕ್ರಮ ಈ ಶಬ್ದಗಳ ಬಗೆಗೆ ಸಾಕಷ್ಟು ವಿರೋಧಾಭಾಸವು ಕಂಡುಬಂದಿತ್ತು. ಮಾನ್ಯ ಸದಸ್ಯರು ಹಾಗೂ ನನ್ನನ್ನೂ ಒಳಗೊಂಡು ಈ ಅನುಚ್ಛೇದದ ಬಗೆಗೆ ಅತೃಪ್ತಿ ಹೊಂದಿದ್ದೆವು ಎಂಬುದನ್ನು ತಮಗೆ ನೆನಪು ಮಾಡಿ ಕೊಡಬಯಸುತ್ತೇನೆ. ತಮಗೆ ಇನ್ನೂ ನೆನಪು ಮಾಡಿಕೊಡುವುದೇನೆಂದರೆ ನಮ್ಮ ಕರಡು ಸಂವಿಧಾನದ ಯಾವುದೇ ಭಾಗವು ಈ ಅನುಚ್ಛೇದ ೧೫ರಂತೆ ಬಹುವಾಗಿ ಟೀಕೆಗೆ ಒಳಗಾಗಿರಲಿಲ್ಲ. ಯಾಕೆಂದರೆ ಅನುಚ್ಛೇದ ೧೫ ಇದು ಮಾಡುವುದು ಇಷ್ಟೇ. ಇದು ಕಾರ್ಯನಿರ್ವಾಹಕರನ್ನು ಬಂಧಿಸುವುದನ್ನು ಪ್ರತಿಬಂಧಿಸುತ್ತದೆ. ಈಗ ಆವಶ್ಯವಿರುವುದು ಕಾನೂನು ಯಾವುದೇ ಕರಾರಿಗೆ ಅಥವಾ ಕಟ್ಟಳೆಗಳಿಗೆ ಸೀಮಿತವಾಗಿರಬಾರದು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಮೂಲಭೂತ ಹಕ್ಕುಗಳಲ್ಲಿನ ಅಧ್ಯಾಯಗಳನ್ನು ಚರ್ಚಿಸುವಾಗ ಇದನ್ನು ಅದರಲ್ಲಿ ಸೇರಿಸುವ ಉದ್ದೇಶವಿತ್ತು. ನಾವು ಯಾವುದೇ ವ್ಯಕ್ತಿಯನ್ನು ಯಾವುದೇ ಸಂದರ್ಭದಲ್ಲಿ ಬಂಧಿಸುವುದನ್ನು ಕುರಿತು ಸಂಸತ್ತಿಗೆ ಯೋಗ್ಯವೆಂದು ಕಂಡುಬಂದ ಕಾರಣಕ್ಕೆ ಸಂಸತ್ತಿಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದೆವು. ಈಗ ನಾವು ಅನುಚ್ಛೇದ ೧೫ ಇದನ್ನು ಸೇರಿಸುವುದರಿಂದ, ೧೫ನೆಯ ಅನುಚ್ಛೇದ ಪಾಸು ಮಾಡುವಾಗ ಪರಿಹಾರ ಏನು ಮಾಡಿತ್ತು. ಈ ಅನುಚ್ಛೇದ ೧೫ ಮಂಡಿಸಿದರೆ ಅದೇ ರೀತಿಯಾಗುತ್ತದೆ. ಬೇರೆ

ಶಬ್ದಗಳಲ್ಲಿ ಹೇಳುವುದಾದರೆ, ಅನುಚ್ಛೇದ ೧೫ಎ ಇದನ್ನು ಮಂಡಿಸುವುದರಿಂದ ನಾವು ಕಾನೂನುಯುಕ್ತ ಕ್ರಮವನ್ನು ಅನುಚ್ಛೇದ ೧೫ಎ ಕೆಳಗೆ ಮಂಡಿಸಿದಂತಾಗುತ್ತದೆ.

ಅನುಚ್ಛೇದ ೧೫ ಇದನ್ನು ದಂಡಪ್ರಕ್ರಿಯಾ ಸಂಹಿತೆಯಿಂದ ತೆಗೆದುಕೊಂಡಿದ್ದೇವೆ. ಎರಡು ಬಹು ಮೂಲಭೂತ ತತ್ವಗಳನ್ನು ಸುಧಾರಿಸಿದ ದೇಶಗಳು ಅಂತಾರಾಷ್ಟ್ರೀಯ ನ್ಯಾಯದಾನ ತತ್ವಗಳನ್ನು ಸುಧಾರಿಸಿದ ದೇಶಗಳು ಅಂತರಾಷ್ಟ್ರೀಯ ನ್ಯಾಯದಾನ ತತ್ವಗಳೆಂದು ಅನುಸರಿಸುತ್ತಾರೆ. ಖಂಡ (೧) ಹಾಗೂ ೨ ಇವೆರಡು ಈಗಾಗಲೇ ದಂಡ ಪ್ರಕ್ರಿಯಾ ಸಂಹಿತೆಯಲ್ಲಿರುತ್ತವೆ. ಆದ್ದರಿಂದ ನಾವು ಬಹಳಷ್ಟು ಯಾವುದೇ ಮೂಲಭೂತ ಬದಲಾವಣೆ ಮಾಡುತ್ತಿಲ್ಲವೆಂದು ಹೇಳಬಹುದು. ಆದರೆ ನನಗೆ ಅನಿಸಿದಂತೆ ಈ ಅನುಚ್ಛೇದ ೧೫ಎ ಇದನ್ನು ಮಂಡಿಸುವುದರಿಂದ ಸಂಸತ್ತಿನ ಅಧಿಕಾರದ ಮೇಲೆ ಹಾಗೂ ರಾಜ್ಯಗಳು ಕಾನೂನು ಮಾಡುವ ಅಧಿಕಾರಗಳನ್ನು ಕಡಿಮೆ ಮಾಡುವುದಿಲ್ಲ.

ಯಾಕೆಂದರೆ ನಮ್ಮ ಸಂವಿಧಾನದಲ್ಲಿ ಅವುಗಳನ್ನು ಈಗಾಗಲೇ ಅಳವಡಿಸಿಕೊಳ್ಳಲಾಗಿದೆ.

ವೈಯಕ್ತಿಕ ಸ್ವಾತಂತ್ರ್ಯ ಬೇಕೆಂಬ ಉತ್ಸಾಹಿಗಳು ಈ ಖಂಡ (೧) ಹಾಗೂ (೨)ರಿಂದ ತೃಪ್ತಿಯಾಗಿಲ್ಲವೆಂಬುದು ಸತ್ಯ ಸಂಗತಿ. ಬಹುತರವಾಗಿ ಅವರಿಗೆ ವೈಯಕ್ತಿಕ ಸ್ವಾತಂತ್ರ್ಯದಲ್ಲಿ ಹೆಚ್ಚಿನ ಕಾನೂನು ಮಾಡುವ ಸಂಸದರು ಹಾಗೂ ಅಧಿಕಾರಿಗಳಿಂದ ಇನ್ನೂ ಹೆಚ್ಚಿನ ಸಂರಕ್ಷಣೆಯನ್ನು ಅಪೇಕ್ಷಿಸುತ್ತಾರೆ. ಅವರ ಬಗೆಗೆ ನನಗೆ ಸಹಾನುಭೂತಿ ಇದೆ. ಈ ಅನುಚ್ಛೇದವು ಬಹುತರವಾಗಿ ಇನ್ನೂ ಹೆಚ್ಚಿನ ಸಂರಕ್ಷಣೆಯನ್ನು ಕೊಡುವುದಕ್ಕೆ ವಿಸ್ತರಿಸಿದೆ ಎಂದು ಹೇಳಬಹುದು. ಈ ಕಾಯಿದೆ ಬಾಹಿರ ಮತ್ತು ಮನಬಂದಂತೆ ಬಂಧಿಸುವುದರ ಬಗ್ಗೆ ಇದರಲ್ಲಿಯ ಉಪಬಂಧಗಳು ಸಾಕಷ್ಟು ಇವೆಯೆಂದು ನನಗೆ ಸಮಾಧಾನವಾಗಿದೆ.

ಸನ್ಮಾನ್ಯ ಸದಸ್ಯರು ಅನುಚ್ಛೇದ ೧೫ (ಎ) ಇದರ ಖಂಡ (೧) ಹಾಗೂ (೨)ರಲ್ಲಿ ಒಳಗೊಂಡ ಉಪಬಂಧಗಳು ಕೆಲವು ನಿಬಂಧಗಳಿಗೆ ಒಳಪಟ್ಟು ಮಾಡಿದ್ದು ಎಂದು ಖಂಡ (೩)ರಲ್ಲಿ ತೋರಿಸಲಾಗಿದೆ. ಅದು ಹೇಳುವುದೇನೆಂದರೆ, ಅನುಚ್ಛೇದ ೧೫ಎ ಇದರ ಖಂಡ (೧) ಮತ್ತು ೨ ಉಪಬಂಧಗಳಲ್ಲಿ ಹೇಳಿದ್ದು ಒಬ್ಬ ವ್ಯಕ್ತಿ ಈಗ ಸದ್ಯಕ್ಕೆ ವೈರಿ ದೇಶದ ಪ್ರಜೆಯಾಗಿದ್ದರೆ, ಅದು ಅನ್ವಯಿಸುವುದಿಲ್ಲ ಎಂದು ಹೇಳುತ್ತದೆ. ಖಂಡ (೩) ವೈರಿರಾಷ್ಟ್ರದ ಬಗೆಗೆ ಕಾಯ್ದಿರಿಸಿದ ಬಗೆಗೆ ಇನ್ನೂ ಹೆಚ್ಚಿನ ತಕರಾರು ಇವೆಯೆಂದು ನನಗೆ ಅನಿಸುವುದಿಲ್ಲ.

ಖಂಡ (೩) ಉಪಕಲಮು (ಬಿ)ಕ್ಕೆ ಸಂಬಂಧಿಸಿದಂತೆ ಯಾವ ವ್ಯಕ್ತಿಯು ಸಾರ್ವಜನಿಕ ಸುರಕ್ಷತೆ ಸಂಯುಕ್ತ ಪಟ್ಟಿಯಲ್ಲಿ ಇಲ್ಲವೇ ದೇಶ ರಕ್ಷಣಾ ಸೇವೆಗಳ ಬಗ್ಗೆ ಸುರಕ್ಷತೆ, ಸಾರ್ವಜನಿಕ ಸುರಕ್ಷತೆಯ ಸಲುವಾಗಿ ಕಾರ್ಯನಿರ್ವಾಹಕರು ಯಾವನೊಬ್ಬ ವ್ಯಕ್ತಿಯನ್ನು ಬಂಧನದಲ್ಲಿ ಇಡುವುದಕ್ಕಾಗಿ ರಾಷ್ಟ್ರದ ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿ ಖಂಡ (೩) ಅದರ ಉಪ ಖಂಡ (ಬಿ) ಇದನ್ನು ಮಾನ್ಯ ಮಾಡಬೇಕು. ಇಂತಹ ಸಂದರ್ಭದಲ್ಲಿ ವ್ಯಕ್ತಿಯ ಸ್ವಾತಂತ್ರ್ಯಗಳನ್ನು ದೇಶದ ಹಿತದ ದೃಷ್ಟಿಗಿಂತ ಹೆಚ್ಚಿನ ಸ್ಥಾನದಲ್ಲಿಡುವುದು ಯುಕ್ತವೆಂದು ನನಗೆ ಅನಿಸುವುದಿಲ್ಲ. ಈ ಆಧಾರದ ಮೇಲೆ ಈ ಖಂಡ (೩)ರ ಉಪ ಖಂಡ(ಬಿ)ವನ್ನು ಸೇರಿಸಲಾಗಿದೆ.

ಸಂಪೂರ್ಣ ವ್ಯಕ್ತಿ ಸ್ವಾತಂತ್ರ್ಯದಲ್ಲಿ ಯಾವ ವ್ಯಕ್ತಿಗಳು ವಿಶ್ವಾಸ ಇಟ್ಟಿರುವರೋ ಅವರು ಈ ಅಪರಾಧ ನಿರೋಧ ಕಾನೂನು ಇದನ್ನು ಎರಡು ವಿಧದಲ್ಲಿ ಸೀಮಿತಗೊಳಿಸಿದುದನ್ನು ಮನ್ನಿಸುತ್ತಾರೆ. ಮೊದಲನೆಯದೆಂದರೆ ಸರಕಾರವು ೩ ತಿಂಗಳವರೆಗೆ ಮಾತ್ರ ಬಂಧನದಲ್ಲಿಟ್ಟುಕೊಳ್ಳಲು ಖಂಡ (೩)ರಲ್ಲಿ ಅಧಿಕಾರ ಹೊಂದಿದೆ.

ಅವರು ೩ ತಿಂಗಳಿಗಿಂತ ಹೆಚ್ಚಿಗೆ ಬಂಧನದಲ್ಲಿ ಇಟ್ಟುಕೊಳ್ಳಲು ಒಂದು ವೇಳೆ ಬಯಸಿದರೆ ಅವರು ಸಲಹಾ ಸಮಿತಿಯವರಿಂದ ಪಡೆದ ವರದಿಯನ್ನು ಹೊಂದಿರಬೇಕು. ಅವರಲ್ಲಿ ಸಮಿತಿಯವರು ಕಾರ್ಯ ನಿರ್ವಾಹಕರು ಸಲ್ಲಿಸಿದ ದಸ್ತಾವೇಜುಗಳನ್ನು ಪರೀಕ್ಷಿಸಬೇಕು ಮತ್ತು ಆರೋಪಿಗೆ ತನ್ನ ಪರವಾಗಿ ತನ್ನ ಕೇಸನ್ನು ಪ್ರತಿಪಾದಿಸಲು ಈ ಸಮಿತಿಯು ಅವಕಾಶ ಕೊಟ್ಟು ಅಂತಹ ವ್ಯಕ್ತಿಯ ಬಂಧನವು ಯೋಗ್ಯವೆಂದು ನಿರ್ಣಯಕ್ಕೆ ಬಂದಿರಬೇಕು.

ಇಂತಹ ಸಂದರ್ಭದಲ್ಲಿ ಮಾತ್ರ ಕಾರ್ಯನಿರ್ವಾಹಕರು ೩ ತಿಂಗಳಿಗಿಂತ ಹೆಚ್ಚಿನ ಅವಧಿಗೆ ಅವನನ್ನು ಬಂಧನದಲ್ಲಿಟ್ಟುಕೊಳ್ಳಬಹುದು. ಎರಡನೆಯದಾಗಿ, ಸಂಸತ್ತು ಎಂತಹ ಪ್ರಕರಣಗಳಲ್ಲಿ ಇಲ್ಲವೆ ಎಂತಹ ವರ್ಗದ ಪ್ರಕರಣಗಳಲ್ಲಿ ಆರೋಪಿಗಳನ್ನು ೩ ತಿಂಗಳಿಗಿಂತ ಹೆಚ್ಚಿನ ಅವಧಿಗೆ ಬಂಧನದಲ್ಲಿಟ್ಟುಕೊಳ್ಳಬೇಕೆಂಬುದರ ಬಗೆಗೆ ಸಂಸತ್ತು ಸಾಮಾನ್ಯ ಕಾನೂನು ಮಾಡಿ ಬಂಧನದ ಅವಧಿಯನ್ನು ವಿಸ್ತರಿಸಬಹುದು.

ಒಟ್ಟಾರೆ ನನ್ನ ಅಭಿಪ್ರಾಯದಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಹೋರಾಡುವವರು ತಮ್ಮನ್ನು ತಾವೇ ಅಭಿನಂದಿಸಿಕೊಳ್ಳಬೇಕು. ಆದರೂ ಸಹಿತ ಯಾರೂ ವ್ಯಕ್ತಿ ಸ್ವಾತಂತ್ರ್ಯದ ಬಗೆಗೆ ಸಂಪೂರ್ಣವಾಗಿ ತೃಪ್ತಿ ಪಡದೆ ಹೋದರೂ ಕಾನೂನಿನ ಯುಕ್ತ ಕ್ರಮ ಈ ಪದಗಳನ್ನು ಸೇರಿಸದೆ ಹೋಗಿದ್ದರೆ, ಏನು ಕಳೆದುಕೊಳ್ಳುತ್ತಿತ್ತೊ. ಅದನ್ನು ಇದು ಉಳಿಸಿದೆ, ಮಾನ್ಯರೆ ನಾನು ಅನುಚ್ಛೇದವನ್ನು ಸಭೆಗೆ ಒಪ್ಪಿಸುತ್ತೇನೆ.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ಈಗ ಸಂಸತ್ತು ಮುಖ್ಯವಾಗಿ ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್ ಅವರ ಭಾಷಣ ಕೇಳಿದೆ. ನಾನು ಕಾನೂನುಯುಕ್ತ ಕ್ರಮ ಈ ಪದಗಳ ಬಗೆಗೆ ಇಂದಿಗೆ ೧ ವರ್ಷ ೩ ತಿಂಗಳ ಹಿಂದೆ ತುಂಬಾ ಬಿರುಸಿನ ಚರ್ಚೆ ಆದದ್ದನ್ನು ನಿಮಗೆ ನೆನಪು ಮಾಡಿಕೊಳ್ಳಬೇಕಾಗಿಲ್ಲ. ಈಗ ಕಾನೂನು ಯುಕ್ತ ಕ್ರಮ ಈ ಪದಗಳ ಮೂಲಭಾಗವನ್ನು ಬಿಟ್ಟಂತಾಗಿದೆ. ಅನುಚ್ಛೇದ ೧೩ರಲ್ಲೇ ೧೦೦ಕ್ಕೆ ೭೦ ಪ್ರಮಾಣದಲ್ಲಿ ತೆಗೆದುಕೊಂಡು ಬಿಟ್ಟಂತಾಗಿದೆ. ನಮ್ಮ ದೇಶದ ಪರಿಸ್ಥಿತಿಗೆ ಅನುಸಾರವಾಗಿ ಕಾನೂನುಯುಕ್ತ ಕ್ರಮ ೧೦೦ಕ್ಕೆ ೧೦೦ ಪ್ರಮಾಣದಲ್ಲಿ ಅವಶ್ಯವೆಂದು ನಾನು ಭಾವಿಸುತ್ತೇನೆ. ಇದೊಂದು ಈ ದೇಶಕ್ಕೆ ಸರಿಯಾದ ಮಾರ್ಗ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ ನಾನು ಒಂದು ಮಾತನ್ನು ಹೇಳಬಹುದೆ? ನನ್ನ ಮಿತ್ರರು ಸೂಚಿಸಿದ ತಿದ್ದುಪಡಿಗಳಲ್ಲಿ ಒಂದು ತಿದ್ದುಪಡಿಯನ್ನು ಒಪ್ಪಲು ನಾನು ತಯಾರಿದ್ದೇನೆ. ಅದು ಹೇಳುವುದೇನೆಂದರೆ, ಆರೋಪಿಗೆ ತನ್ನನ್ನು ರಕ್ಷಿಸಿಕೊಳ್ಳುವ ಹಕ್ಕು ಇರಬೇಕು. ನಾನು ಇದನ್ನು ಅನುಚ್ಛೇದ ೧೫ಎ ಇದರ ಖಂಡ (೧) ಕೊನೆಯ ಸಾಲಿನಲ್ಲಿ ಸೇರಿಸಬಲ್ಲೆನು.

ಅದು ಹೀಗೆ ಇರುತ್ತದೆ.

ಅವನಿಗೆ ಇರತಕ್ಕ ಸಮಾಲೋಚನೆಯ ಹಕ್ಕು ತನ್ನ ಇಚ್ಛಾನುಸಾರ ತನಗೆ ಬೇಕಾದ ವಕೀಲರನ್ನು ನೇಮಿಸಿಕೊಳ್ಳುವ ಹಕ್ಕು ಮಾನ್ಯ ಸದಸ್ಯರ ಇಚ್ಛೆಯನ್ನು ಪೂರೈಸಿದಂತೆ ಆಗುತ್ತೆಂದು ನನಗೆ ಅನಿಸುತ್ತದೆ.

**ಪಂಡಿತ್ ಠಾಕೂರದಾಸ್ ಭಾರ್ಗವ:** ವಿಚಾರಣೆಯಲ್ಲಿ ಅದರಂತೆ ಫೌಜದಾರಿ ಪ್ರಕರಣಗಳಲ್ಲಿ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸಂರಕ್ಷಿಸಿಕೊಳ್ಳುವುದು ಅನ್ನುವ ಬಗ್ಗೆ ನಾವು ಈ ಚರ್ಚೆಯನ್ನು ಇಲ್ಲಿಗೆ ಮೊಟಕುಗೊಳಿಸಬಹುದೆ?

**ಶ್ರೀ ಎಚ್. ವಿ. ಕಾಮತ್:** ಕಾನೂನಿಗೆ ವಿರುದ್ಧವಾಗಿ ಯಾವನೊಬ್ಬ ವ್ಯಕ್ತಿಯನ್ನು ಪೊಲೀಸರು ಇಲ್ಲವೆ ಯಾವುದೇ ಅಧಿಕಾರಿ ಬಂಧಿಸಿದರೆ, ಅದರಿಂದ ಉಂಟಾಗುವ ದುಷ್ಟ ಪರಿಣಾಮ ಇಲ್ಲವೆ ತೊಂದರೆಗಳನ್ನು ನಿವಾರಿಸಲು ಈ ತಿದ್ದುಪಡಿಯ ಮೂಲಕ ನಾನು ವಿಶೇಷವಾಗಿ ಬಂಧಿತ ವ್ಯಕ್ತಿಗೆ ಆತನನ್ನು ಯಾಕೆ

ಬಂಧಿಸಲಾಗಿದೆ ಎಂಬುದರ ಕಾರಣಗಳನ್ನು ಅವನನ್ನು ಬಂಧಿಸಿದ ಏಳು ದಿನಗಳಲ್ಲಿ ಅವನಿಗೆ ತಿಳಿಸಬೇಕು ಎಂಬುದನ್ನು ಈ ತಿದ್ದುಪಡಿಯ ಮೂಲಕ ತರಬಯಸುತ್ತೇನೆ. ಡಾ. ಅಂಬೇಡ್ಕರರು ಮಂಡಿಸಿದ ಅನುಚ್ಛೇದದಲ್ಲಿ ಮಂಡಿಸಿದ ಶಬ್ದಗಳು ಸಾಧ್ಯವಾದಷ್ಟು ಬೇಗನೆ ಬಂದಾಗ ವ್ಯಕ್ತಿಯನ್ನು ಬಂಧಿಸುವಾಗ ಅವನ ಬಂಧನದ ಕಾರಣಗಳನ್ನು ತಿಳಿಸಿದರೆ ನನಗೆ ಸಂತೋಷವಾಗುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದೇ ಉದ್ದೇಶವಿರುತ್ತದೆ. ನಿಮ್ಮ ತಿದ್ದುಪಡಿಯಿಂದ ಅದರ ಸ್ಥಿತಿಯನ್ನು ಕೆಡಿಸುತ್ತಿದ್ದಾರೆ.

**ಶ್ರೀ ಎಚ್. ವಿ. ಕಾಮತ್:** ಮತ್ತೆ ಯಾಕೆ ಇದನ್ನು ಸ್ಪಷ್ಟ ಮಾಡಲೊಲ್ಲರಿ. ನಾನು ತಕ್ಷಣ ಶಬ್ದದ ಬದಲಾಗಿ ಸಾಧ್ಯವಾದಷ್ಟು ಬೇಗನೆ ಎಂದು ಸೇರಿಸುವುದನ್ನು ಸ್ವಾಗತಿಸುತ್ತೇನೆ. ನನ್ನ ಮಿತ್ರರಾದ ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿಯವರು ಇದೇ ಅನುಚ್ಛೇದಕ್ಕೆ ಆದಷ್ಟು ಬೇಗನೆ ಈ ಪದಗಳ ಬದಲಾಗಿ ಹದಿನೈದು ದಿನಗಳಿಗಿಂತ ಕಡಿಮೆ. ಈ ಪದಗಳನ್ನು ಸೇರಿಸಲು ಇಚ್ಛೆಪಟ್ಟು ತಿದ್ದುಪಡಿಯನ್ನು ತಂದಿದ್ದರು. ನನ್ನ ತಿಳುವಳಿಕೆ ಮಟ್ಟಿಗೆ ೨೪ ತಾಸುಗಳು ಅವಧಿಯು ಅತ್ಯುತ್ತಮವಾದುದು. ಯಾವುದೇ ಸಂದರ್ಭದಲ್ಲಿ ಯಾವುದೇ ಪ್ರಕರಣದಲ್ಲಿ ಬಂಧಿಸಿದ ವ್ಯಕ್ತಿಯ ವಿರುದ್ಧ ದ್ವೇಷವಿದ್ದರೆ ಅವನಿಗೆ ಕಾರಣ ತಿಳಿಸಲು ಒಂದು ವಾರಕ್ಕಿಂತ ಹೆಚ್ಚಿನ ಅವಧಿಯಾಗಬಾರದು.

ಮುಂದಿನ ತಿದ್ದುಪಡಿ ಸಂಖ್ಯೆ ೧೦೮ ಇದನ್ನು ನಾನು ಮಂಡಿಸಲು ಇಚ್ಛಿಸುತ್ತೇನೆ.

ತಿದ್ದುಪಡಿ ನಂ. ೧ ಲಿಸ್ಟ್ ೧೮ನೆಯ ವಾರ ಸೂಚಿಸಿದ ತಿದ್ದುಪಡಿ ಅನುಚ್ಛೇದ ೧೫ಎ ಇದರ ಉಪಬಂಧ (೨)ರಲ್ಲಿ ಮ್ಯಾಜಿಸ್ಟ್ರೇಟ್ ಶಬ್ದದ ನಂತರ ಕೊನೆಗೆ ಬರುವ ಅವನ ಹೇಳಿಕೆಯನ್ನು ಕೇಳುವ ಅವಕಾಶ ಇವುಗಳನ್ನು ಸೇರಿಸಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಗೆಳೆಯರಾದ ಶ್ರೀ ಕಾಮತ್ ಅವರಿಗೆ ನಾನು ಹೇಳುವುದೇನೆಂದರೆ ಅವರು ಸ್ಥಿತಿಯನ್ನು ಮತ್ತಷ್ಟು ಕೆಡಿಸುತ್ತಿದ್ದಾರೆ. ನಮ್ಮ ಉದ್ದೇಶವು ಆದಷ್ಟು ಬೇಗನೆ ಎಂಬ ಶಬ್ದಕ್ಕೆ ನಿಜವಾಗಿಯೂ ನಾವು ಅರ್ಥೈಯಿಸಿದ್ದು, ಬಂಧನ ಮಾಡಿದ ತಕ್ಷಣ ಎಂಬ ಉದ್ದೇಶವುಳ್ಳವರಾಗಿದ್ದೇವೆ. ಒಂದು ವೇಳೆ ಬಂಧನಕ್ಕಿಂತ ಮೊದಲು ತಿಳಿಸಿದಿದ್ದರೆ ಉಪಬಂಧ (೨)ರ ಅನ್ವಯ ಬಂಧಿಸಿದ ಪ್ರತಿಯೊಬ್ಬ ವ್ಯಕ್ತಿ ಯಾರನ್ನು ಬಂಧನದಲ್ಲಿ ಇಟ್ಟುಕೊಂಡಿರುತ್ತಾರೋ ಅವರನ್ನು ಬಂಧಿಸಿದ ೨೪ ತಾಸುಗಳಲ್ಲಿ ಸಮೀಪದ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಬೇಕೆಂದು ಹೇಳುತ್ತದೆ. ಯಾವುದೇ ಮ್ಯಾಜಿಸ್ಟ್ರೇಟರು ಬಂಧಿಸಿದ ವ್ಯಕ್ತಿಯ ಮೇಲಿನ ಆರೋಪ ತಿಳಿದುಕೊಳ್ಳುವ ಹೆಚ್ಚಿನ ಅವಧಿಯವರೆಗೆ ಅವನನ್ನು ಬಂಧನದಲ್ಲಿ ಇಟ್ಟುಕೊಳ್ಳುವ ಅಧಿಕಾರವನ್ನು ಚಲಾಯಿಸಲು ಬರುವುದಿಲ್ಲ.

**ಶ್ರೀ ಎಚ್. ವಿ. ಕಾಮತ್:** ನನಗೆ ದಂಡಪ್ರಕ್ರಿಯಾ ಸಂಹಿತೆಯ ಬಗೆಗೆ ಸ್ವಲ್ಪ ಜ್ಞಾನವಿದೆ. ಮ್ಯಾಜಿಸ್ಟ್ರೇಟರು ಕೆಲವು ಪ್ರಕರಣಗಳಲ್ಲಿ ಒಮ್ಮೆಲೆ ಪೊಲೀಸರ ದೋಷಾರೋಪಣ ಪಟ್ಟಿಯನ್ನು ಅವನ ವಿರುದ್ಧ ಸಲ್ಲಿಸದೆ ಇದ್ದರೂ, ಅಂತಹ ವ್ಯಕ್ತಿಯನ್ನು ೧೫ ದಿನಗಳವರೆಗೆ ರಿಮಾಂಡ್ ಮಾಡಿದ್ದು ನನಗೆ ಗೊತ್ತಿದೆ, ಮೇಲ್ನೋಟಕ್ಕೆ ಒಬ್ಬನ ವಿರುದ್ಧ ಪ್ರಕರಣ ಇರದಿದ್ದರೂ ಅವನು ಒಳಹೊಕ್ಕು ನೋಡದೆ ಅಂಥವರನ್ನು ರಿಮಾಂಡ್ ಮಾಡಿದ ಮ್ಯಾಜಿಸ್ಟ್ರೇಟರು ಇರುವುದು ನನಗೆ ಗೊತ್ತಿದೆ. ಇನ್ನೊಂದು ಸಂಗತಿಯನ್ನು ಡಾ. ಅಂಬೇಡ್ಕರರು ಹೇಳಿದರು, ಅದೇನೆಂದರೆ ಆದಷ್ಟು ಬೇಗನೆ ಅಂದರೆ ನಿಜವಾದ ಅರ್ಥ ಎಂದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹಾಗೆಂದರೆ ಯಾವುದೇ ಸಂದರ್ಭದಲ್ಲಿ ೨೪ ತಾಸುಗಳ ಒಳಗಾಗಿ.

**ಶ್ರೀ ಎಚ್. ವಿ. ಕಾಮತ್:** ನಾನು ಅವರ ಗಮನವನ್ನು ಸೆಳೆಯುವುದಕ್ಕಾಗಿಯೇ ತುರ್ತು ಪರಿಸ್ಥಿತಿಯಲ್ಲಿ ಅಧ್ಯಕ್ಷರ ಕುರಿತು ಕೆಲವು ಅನುಚ್ಛೇದದಲ್ಲಿ ಆದಷ್ಟು ಬೇಗನೆ ಶಬ್ದ ಉಪಯೋಗಿಸಿದ್ದು. ಅದಕ್ಕೆ ಯಾವುದೇ ವಿಶೇಷವಾದ ಒಳ ಅರ್ಥ ಇಲ್ಲದೆ, ಉಪಯೋಗಿಸಿದ್ದರ ಬಗ್ಗೆ ಗಮನ ಸೆಳೆಯುತ್ತೇನೆ. ಉದಾಹರಣೆಗಾಗಿ ಅನುಚ್ಛೇದ ೨೮೦ ಅಧ್ಯಕ್ಷರ ತುರ್ತು ಪರಿಸ್ಥಿತಿಯ ಅಧಿಕಾರದ ಬಗ್ಗೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸಂದರ್ಭಕ್ಕೆ ಅನುಸಾರವಾಗಿ ಆದಷ್ಟು ಬೇಗನೆ ಶಬ್ದಗಳಿಗೆ ನಾವು ಬೇರೆ ಬೇರೆ ರೀತಿ ಅರ್ಥೈಸಬೇಕಾಗುತ್ತದೆ.

**ಶ್ರೀ ಎಚ್. ವಿ. ಕಾಮತ್:** ಡಾ. ಅಂಬೇಡ್ಕರ್ ಅವರು ಯಾವಾಗಲೂ ಭಾರತದಲ್ಲಿದ್ದು, ವಕೀಲರು ಮತ್ತು ನ್ಯಾಯಾಧೀಶರು ಈ ಸಂವಿಧಾನದಲ್ಲಿ ಬಳಸಿದ ಶಬ್ದ ಮತ್ತು ಪದಗಳ ಗುಚ್ಛ. ಸಂಶಯವಿದ್ದಲ್ಲಿ ಅವುಗಳನ್ನು ಯಾವ ರೀತಿ ಅರ್ಥೈಸಬೇಕೆಂದು ಅವರೊಂದಿಗೆ ವಾದ ಮಾಡಲು ಇರುತ್ತಾರೆಂದು ನನಗೆ ಗೊತ್ತಿಲ್ಲ. ನನಗೆ ಹೀಗೆ ಹೇಳಲು ವಿಷಾದವೆನಿಸುತ್ತದೆ.

ಡಾ. ಅಂಬೇಡ್ಕರ್ ಅವರು ಈ ದೇಶದಲ್ಲಿ ಅಮರರಲ್ಲ. ವಕೀಲರಿಗೆ ಹಾಗೂ ನ್ಯಾಯಾಧೀಶರಿಗೆ ಮಾರ್ಗದರ್ಶನ ಮಾಡಲು ಅಮರರಲ್ಲ. ಈ ಸಂವಿಧಾನವನ್ನು ಡಾ. ಅಂಬೇಡ್ಕರ್ ಅವರು ಜೀವನಾವಧಿಗೆ ಮಾತ್ರ ಪಾಸು ಮಾಡಿಲ್ಲ. ಆದರೆ ಅದನ್ನು ಮುಂಬರುವ ಪೀಳಿಗೆಗಾಗಿ ಮಾಡಿದೆ. ನಾವು ಹೇಳುವುದರಲ್ಲಿ ನಿರ್ದಿಷ್ಟತೆಯು ಇರಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ತಿದ್ದುಪಡಿಯನ್ನು ನೀವು ತಂದುದು ತಪ್ಪೆಂದು ನೀವು ಒಪ್ಪಲೇಬೇಕು.

**ಶ್ರೀ ಎಚ್. ವಿ. ಕಾಮತ್:** ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಸಂಪೂರ್ಣ ವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಹೋರಾಡುವವರ ಬಗೆಗೆ ಉಲ್ಲೇಖಿಸಿದ್ದಾರೆ. ಆದರೆ ನಾನು ಸಂಪೂರ್ಣ ವ್ಯಕ್ತಿ ಸ್ವಾತಂತ್ರ್ಯದ ಬಗೆಗೆ ಹೇಳಲಿಲ್ಲ.

ಮಾನ್ಯರೆ, ಅವರು ಹಾಗೆ ಹೇಳಿದರು. ನನಗೆ ನೆನಪು ಇದ್ದಂತೆ ಅದು ಸರಿ ಇದೆ. (ಸನ್ಮಾನ್ಯ ಡಾ. ಅಂಬೇಡ್ಕರ್ ಅವರು ಅಹುದು ಅಂತಾ ತಲೆ ಅಲ್ಲಾಡಿಸಿದರು) ಅವರು ಸಂಪೂರ್ಣ ವ್ಯಕ್ತಿ, ಹೋರಾಡುವ ವ್ಯಕ್ತಿ, ಮಲ್ಲ, ಮಟ್ಟಿ ಇಲ್ಲವೆ ವಕೀಲನಲ್ಲ.

**ಶ್ರೀ ಮಹಾವೀರ್ ತ್ಯಾಗಿ** (ಯುನೈಟೆಡ್ ಪ್ರಾಂತ, ಜನರಲ್): ಮಾನ್ಯರೇ, ಡಾ. ಅಂಬೇಡ್ಕರ್ ಅವರು ನನ್ನನ್ನು ಕ್ಷಮಿಸುವರೆಂದು ಭಾವಿಸುವೆನು. ನಾನು ಯಾವಾಗಲೂ ನನಗೆ ಮೆಚ್ಚಿಗೆಯಾದ ಉದ್ದೇಶವನ್ನು ಹೇಳಿದಾಗ ಅವರು ಹಾಗೂ ಕರಡು ಸಮಿತಿಯ ಉಳಿದ ಸದಸ್ಯರು, ಯಾರಿಗೆ ಬಂಧನದ ಅನುಭವ ಜೇಲಿನಲ್ಲಿರುವ ಅನುಭವ ಇದೆಯೋ– ಅಂದರೆ ಕರಡು ಸಮಿತಿಯ ಸದಸ್ಯರಾಗುವ ಮೊದಲು ಜೇಲಿನಲ್ಲಿರುವ ಬಂಧನ ಅನುಭವ ಇದೆಯೋ ಅಂಥವರು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಇನ್ನು ಮೇಲೆ ಅನುಭವವನ್ನು ಪಡೆಯಲು ಪ್ರಯತ್ನಿಸುವೆನು.

**ಶ್ರೀ ಮಹಾವೀರ್ ತ್ಯಾಗಿ:** ನಾನು ಡಾ. ಅಂಬೇಡ್ಕರ್ ಅವರಿಗೆ ಭರವಸೆಯನ್ನು ಕೊಡುವುದೇನೆಂದರೆ ಬ್ರಿಟಿಷ್ ಸರಕಾರವು ಅವರಿಗೆ ಈ ವಿಶೇಷ ಅಧಿಕಾರವನ್ನು ಅವರು ತಮ್ಮ ಕೈಯಿಂದ ಮಾಡುವ ಈ ಸಂವಿಧಾನವು ಅವರಿಗೆ ಆ ವಿಶೇಷ ಅಧಿಕಾರ ಸವಲತ್ತು ಕೊಡುತ್ತದೆ. ಈಗವರು ಮಾಡುತ್ತಿರುವ ಖಂಡದ ಅಡಿಯಲ್ಲಿ ಯಾವುದಾದರೊಂದು ದಿನ ಅವೇ ಉಪಬಂಧದ ಅನ್ವಯ ಬಂಧಿಸಿ ಇಡುವ ದಿನ ಬರಬಹುದು (ಅಡೆ ತಡೆಯುಂಟಾಯಿತು).

**ಶ್ರೀಮತಿ ಜಿ. ದುರ್ಗಾಬಾಯಿ:** ಈ ಅನುಚ್ಛೇದವನ್ನು ಸ್ವೀಕರಿಸಬೇಕೆಂದು ಈ ಸಭೆಗೆ ವಿನಂತಿಸುತ್ತೇನೆ.

**ಮಾನ್ಯ ಅಧ್ಯಕ್ಷರು:** ಈ ಅನುಚ್ಛೇದದ ಬಗೆಗೆ ಮಾಡಿದ ಟೀಕೆಗಳಿಗೆ ಡಾ. ಅಂಬೇಡ್ಕರ್ ಅವರು ಸರಿಯಾಗಿ ಉತ್ತರಿಸುವ ಸೂಚನೆಗಳನ್ನು ಮಾಡುವುದು ನನಗೆ ಗೊತ್ತಿದೆ. ಆದ್ದರಿಂದ ನಾನು ಅವರಿಗೆ ಈ ಹಂತದಲ್ಲಿ ಮಾತನಾಡಲು ಅವಕಾಶ ಕೊಡುತ್ತೇನೆ. ಮುಂದೆ ಯಾವುದಾದರೂ ಪ್ರಶ್ನೆ ಬಂದರೆ, ಅವುಗಳನ್ನು ನಾವು ವಿಚಾರಿಸಬಹುದು.

**ಶ್ರೀ ಬಾಬು ರಾಮನಾರಾಯಣ ಸಿಂಗ್** (ಬಿಹಾರ, ಜನರಲ್): ಅವರು ಅನುಸೂಚಿಯನ್ನು ಪೂರ್ತಿಯಾಗಿ ತೆಗೆದುಹಾಕಲು ಒಪ್ಪುತ್ತಾರೆಯೇ?

**ಮಾನ್ಯ ಸಭಾಧ್ಯಕ್ಷರು:** ಇಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಈ ಅನುಚ್ಛೇದ ೧೫ಎ ಚರ್ಚೆಗೆ ಈ ಸಭೆ ಇಷ್ಟೊಂದು ಸಮಯ ತೆಗೆದುಕೊಳ್ಳುತ್ತದೆಂದು ನನಗೆ ಅನಿಸಿರಲಿಲ್ಲ. ನಾನು ಮತ್ತು ಬಹುತೇಕ ಕರಡು ಸಮಿತಿಯ ಸದಸ್ಯರು ಹಾಗೂ ಅದರಂತೆ ಸಾರ್ವಜನಿಕರು ಕಾನೂನು ಪ್ರಕಾರ ಬಂಧನವಾಗುವುದೆಂದು ಅನುಚ್ಛೇದ ೧೫ರಲ್ಲಿ ಬಳಸಿದ ಭಾಷೆಯ ಹಿನ್ನೆಲೆಯಲ್ಲಿ ತಿಳಿದುಕೊಂಡಿದ್ದೆವು. ನಾವು ವ್ಯಕ್ತಿಯ ವೈಯಕ್ತಿಕ ಸುರಕ್ಷತೆ ಹಾಗೂ ಸ್ವಾತಂತ್ರ್ಯದ ಬಗೆಗೆ ಸಾಕಷ್ಟು ಲಕ್ಷ್ಯ ವಹಿಸಿರಲಿಲ್ಲ ಎಂದು ಅನುಚ್ಛೇದವನ್ನು ಸ್ವೀಕರಿಸಲಾಯಿತೋ ಅಂದಿನಿಂದ ನಾನು ಹಾಗೂ ನನ್ನ ಗೆಳೆಯರು ಕಾನೂನುಯುಕ್ತ ಪದಗಳನ್ನು ಬಳಸದೆ ಕಾನೂನುಯುಕ್ತ ಪ್ರಕ್ರಿಯೆಯ ಒಳಾಂಶಗಳನ್ನು ಅದರ ಮೂಲ ರೂಪದಲ್ಲಿ ಹೇಗಾದರೂ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆವು. ಅನುಚ್ಛೇದ ೧೫ಎ ಇದರಲ್ಲಿ ಇರುವ ಮುಂದಿನ ಸುಳಿವು ನುಡಿಯ ಮೇಲಿಂದ ಯಾವ ಸದಸ್ಯರು, ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯದ ಬಗ್ಗೆ ಆಸಕ್ತಿಯುಳ್ಳವರು, ಅತೀವ ಸಂತೋಷ ಹೊಂದುತ್ತಾರೆಂದು ನಾನು ತಿಳಿದುಕೊಳ್ಳಬಹುದು ಮತ್ತು ಅದನ್ನು ಅವರು ಸಂತೋಷದಿಂದ ಗೌರವಪೂರ್ವಕವಾಗಿ ಸ್ವೀಕರಿಸುತ್ತಾರೆಂದು ತಿಳಿಯಬಹುದಿತ್ತು. ಆದರೆ ನನಗೆ ಖೇದವೆನಿಸುತ್ತದೆ. ಈ ಚರ್ಚೆಯಲ್ಲಿ ಭಾಗವಹಿಸಿದವರು ಈ ಅನುಚ್ಛೇದವನ್ನು ಕಟುವಾಗಿ ಟೀಕಿಸಿದರಲ್ಲದೆ ಈ ಅನುಚ್ಛೇದವನ್ನು ವಿರೋಧಿಸಿದರು. ಅವರ ಅತ್ಯಂತ ಸ್ವಾತಂತ್ರ್ಯದ ಪ್ರೀತಿ ಯಾವ ಮಟ್ಟಕ್ಕೆ ಹೋಯಿತೆಂದರೆ ಅವರು ನನಗೆ ಈ ಅನುಚ್ಛೇದವನ್ನು ಹಿಂತೆಗೆದುಕೊಳ್ಳಲು ಹೇಳಿದರು. ಆದ್ದರಿಂದ ಇದು ನನಗೆ ಖೇದವೆನಿಸುತ್ತದೆ.

ಮಾನ್ಯರೆ, ಇಂತಹ ಸಲಹೆಯನ್ನು ನಾನು ಸ್ವೀಕರಿಸಲು ಸಿದ್ಧನಿಲ್ಲ. ಯಾಕೆಂದರೆ, ನನ್ನ ಬುದ್ಧಿಮತ್ತತೆಯಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಆದ್ದರಿಂದ ನಾನು ಅನುಚ್ಛೇದ ೧೫ಎ ಇದಕ್ಕೆ ಅಂಟಿಕೊಂಡಿದ್ದೇನೆ. ನಾನು ಕೆಲವು ವಿಮರ್ಶಕರು ಕೆಲವು ವಿಷಯಗಳ ಬಗ್ಗೆ ಟೀಕಿಸುವುದನ್ನು ಪ್ರಶಂಸಿಸುತ್ತೇನೆ. ಅವುಗಳ ಬಗೆಗೆ ನಾನು ಸೌಜನ್ಯದಿಂದ ಅನುಕಂಪನೆಯ ರೀತಿಯಲ್ಲಿ ವಿಚಾರಿಸಬಹುದು. ನಾನು ಅಂತಹ ವಿಚಾರಗಳನ್ನು ವಿಚಾರಿಸಲು ತಯಾರಿದ್ದೇನೆ. ಮತ್ತು ಅವುಗಳಿಗೆ ತಿದ್ದುಪಡಿಗಳನ್ನು ವಿಚಾರಿಸಲು ತಯಾರಿದ್ದೇನೆ. ಇದರಿಂದ ಕೆಲವು ಟೀಕೆಗಳನ್ನು ನಿವಾರಿಸಬಹುದು. ಅದರಿಂದ ಅನುಚ್ಛೇದ ೧೫–ಎ ದಲ್ಲಿ ಮೂಲಭೂತ ತತ್ವ ಬಿಟ್ಟಿದೆಯೆಂಬ ಟೀಕೆಯನ್ನು ತೆಗೆದುಹಾಕುತ್ತದೆ. ಟೀಕೆಗೆ ಉತ್ತರರೂಪವಾಗಿ ನಾನು ಹೇಳುವುದೆಂದರೆ ನಾನು ಅನುಚ್ಛೇದದ ಸಾಮಾನ್ಯ ಭಾಗವನ್ನು ಅಪರಾಧವನ್ನು ತಡೆಗಟ್ಟುವ ವಿಷಯವನ್ನು ವಿಶೇಷ ಭಾಗವನ್ನು ಬೇರ್ಪಡಿಸಲು ಸೂಚಿಸುತ್ತೇನೆ. ಅಪರಾಧ ತಡೆಗಟ್ಟಲು ನಾನು ಪ್ರತ್ಯೇಕವಾಗಿ ಹೇಳುತ್ತೇನೆ.

ಅನುಚ್ಛೇದ ೧೫ಎ (ಖಂಡ ೧) ಇದಕ್ಕೆ ನನ್ನ ತಿಳುವಳಿಕೆಯ ಮಟ್ಟಿಗೆ ಮೂರು ಸೂಚನೆಗಳನ್ನು ಮಾಡಿದ್ದಾರೆ. ಒಂದು ಆದಷ್ಟು ಬೇಗನೆ ಎಂಬ ಈ ಶಬ್ದಕ್ಕೆ ಸಂಬಂಧಿಸಿದ್ದು, ಈ ಶಬ್ದಗಳನ್ನು ತೆಗೆದುಹಾಕಿ

ಕೆಲವು ಸದಸ್ಯರು ಅದರ ಸ್ಥಳದಲ್ಲಿ ೧೫ ದಿನಗಳು ಈ ಪದಗಳನ್ನೇ ಹಾಕಬೇಕೆಂದೂ, ಮತ್ತು ಕೆಲ ಸ್ಥಳದಲ್ಲಿ "ಏಳು ದಿನಗಳು" ಎಂದು ತಿದ್ದುಪಡಿ ತರಲು ಸೂಚಿಸಿದ್ದಾರೆ. ನನ್ನ ದೃಷ್ಟಿಯಲ್ಲಿ ಆ ತಿದ್ದುಪಡಿಗಳು ಆದಷ್ಟು ಬೇಗನೆ ಈ ಪದಗಳಿಗೆ ಅದರ ಮೂಲ ಉದ್ದೇಶ, ಯಾವ ಮೂಲ ಉದ್ದೇಶಕ್ಕಾಗಿ ಬಳಸಿದೆಯೋ ಅದರ ತಪ್ಪು ತಿಳುವಳಿಕೆಗೆ ದಾರಿ ಮಾಡಿಕೊಡುತ್ತದೆ. ಈ ಪದಗಳ ಖಂಡ (೨) ಇದರ ಉಪಬಂಧಕ್ಕೆ ಹೊರತುಪಡಿಸಿ ಬೇರೆ ಯಾವುದೇ ರೀತಿಯಲ್ಲಿ ಇದನ್ನು ಓದಲು ಬರುವುದಿಲ್ಲ. ಈ ಖಂಡವು ನಿಶ್ಚಿತವಾಗಿ ಹೇಳುವುದೇನೆಂದರೆ ಯಾವನೊಬ್ಬ ವ್ಯಕ್ತಿಯನ್ನು ಬಂಧಿಸಿದರೆ ಅವನನ್ನು ೨೪ ತಾಸುಗಳಿಗಿಂತ ಹೆಚ್ಚು ಅವಧಿಗೆ ಬಂಧನದಲ್ಲಿಟ್ಟುಕೊಳ್ಳಲು ಬರುವುದಿಲ್ಲ. ಒಂದು ವೇಳೆ ಬಂಧನದಲ್ಲಿ ಇಟ್ಟುಕೊಳ್ಳುವುದಾದರೆ ೨೪ ತಾಸುಗಳ ಅವಧಿ ಮುಗಿಯುವ ಪೂರ್ವದಲ್ಲಿ ಬಂಧನ ಮಾಡಿ ಬಂಧನದಲ್ಲಿಟ್ಟುಕೊಂಡ ಅಧಿಕಾರಿ ಮ್ಯಾಜಿಸ್ಟ್ರೇಟರ ಪರವಾನಗಿ ಪಡೆಯದ ಹೊರತು ಬಂಧನದಲ್ಲಿ ಇಟ್ಟುಕೊಳ್ಳಲು ಬರುವುದಿಲ್ಲ. ಆದ್ದರಿಂದ ಆ ಅನುಚ್ಛೇದವನ್ನು ಆ ರೀತಿ ಓದಬೇಕು. ಆದ್ದರಿಂದ ಪೊಲೀಸ್ ಅಧಿಕಾರಿ ಯಾವನೊಬ್ಬ ವ್ಯಕ್ತಿಯನ್ನು ೨೪ ತಾಸುಗಳಿಗೆ ಮೀರಿ ಬಂಧನದಲ್ಲಿಟ್ಟುಕೊಳ್ಳುವುದಾದರೆ ನ್ಯಾಯಾಧೀಶರ ಪರವಾನಗಿ ಪಡೆಯಬೇಕಾಗುತ್ತದೆ. ಆದ್ದರಿಂದ ಆ ರೀತಿ ಮಾಡಲು ಮ್ಯಾಜಿಸ್ಟ್ರೇಟ್ ಅವರಿಗೆ ವ್ಯಕ್ತಿಯನ್ನು ಯಾವ ಅಪರಾಧಗಳಿಗಾಗಿ ಬಂಧಿಸಲಾಗಿದೆ ಅನ್ನುವುದರ ಬಗೆಗೆ ಬೇರೆ ಮಾರ್ಗವಿಲ್ಲದೆ ಕನಿಷ್ಠ ಮ್ಯಾಜಿಸ್ಟ್ರೇಟ್ ಅವರಿಗಾದರೂ ತಿಳಿಸಬೇಕೆಂದು ಹೇಳುತ್ತದೆ. ಅಂದರೆ ಸಾಧ್ಯವಾದಷ್ಟು ಬೇಗನೆ ಇದು ೨೪ ತಾಸುಗಳಿಗೆ ಹೆಚ್ಚು ವಿಸ್ತರಿಸುವುದಿಲ್ಲ.

ಈ ಎಲ್ಲ ತಿದ್ದುಪಡಿಗಳು ೧೫ ದಿವಸ ಇಲ್ಲವೆ ಏಳು ದಿನಗಳು ಎಂದು ಸೂಚಿಸುವ ತಿದ್ದುಪಡಿಗಳು ಅವು ನಿಜವಾಗಿಯೂ ವ್ಯಕ್ತಿಯ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತವೆ. ಆದ್ದರಿಂದ ಆ ತಿದ್ದುಪಡಿಗಳು ಸಂಪೂರ್ಣವಾಗಿ ಯೋಗ್ಯವಾಗಿಲ್ಲ ಹಾಗೂ ಅವು ಬೇಕಾಗಿಲ್ಲ ಎಂಬುದು ನನ್ನ ಅನಿಸಿಕೆ.

ಅನುಚ್ಛೇದ ೧೫–ಎ ಖಂಡ (೧)ರಲ್ಲಿ ನಾವು ಆರೋಪಿಗೆ ತನಗೆ ಬೇಕಾದ ವಕೀಲರೊಂದಿಗೆ ವಿಚಾರಿಸುವ ಅಧಿಕಾರ ಕೊಟ್ಟಿದ್ದೇವೆ. ನಾನು ಅವನಿಗೆ ಉಚ್ಚ ನ್ಯಾಯಾಲಯಕ್ಕೆ ಹೋಗಲು ಅವಕಾಶ ಕಲ್ಪಿಸಿ, ಅವನಿಗೆ ಪರಿಷ್ಕರಣದ ಸಲುವಾಗಿ ಉಚ್ಚ ನ್ಯಾಯಾಲಯಕ್ಕೆ ಹೋಗಲು ಅವಕಾಶವನ್ನು ಕಲ್ಪಿಸಿಲ್ಲ ಮತ್ತು ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗವಾಗಿದೆಯೆಂದು ಹೇಳಿದ್ದೀರಿ. ಈ ಕಾರಣದಿಂದ ಪೊಲೀಸರು ಆರೋಪಿಯನ್ನು ಬಹಳ ಅವಧಿಯವರೆಗೆ ಇಟ್ಟುಕೊಳ್ಳಲು ಅನುಕೂಲವಾಗುತ್ತದೆ ಮತ್ತು ಈ ಕಾರಣದಿಂದ ಪೊಲೀಸರಿಗೆ ತಮ್ಮ ಬಂಧನದಲ್ಲಿಟ್ಟುಕೊಳ್ಳಲು ಅವರಿಗೆ ಅದು ಯೋಗ್ಯ ಕಾರಣವಾಗುತ್ತದೆ. ಅಂತಹ ವಾದವಿವಾದಗಳನ್ನು ತೆಗೆದುಹಾಕಲು ನಾವು ಸಮೀಪದ ಮ್ಯಾಜಿಸ್ಟ್ರೇಟ್ ಈ ಪದಗಳನ್ನು ಉಪಯೋಗಿಸಿದ್ದೆವು. ಈಗ ನಾವು ಸಮೀಪದ ೧ನೆಯ ವರ್ಗ ಮ್ಯಾಜಿಸ್ಟ್ರೇಟ್ ಅಂತಾ ಸೇರಿಸಿದೆವೆಂದು ತಿಳಿದರೆ ಆಗ ಪರಿಸ್ಥಿತಿಯು ತುಂಬಾ ಕಠಿಣವಾಗುತ್ತದೆ. ಅಲ್ಲಿ ಸಮೀಪದ ಮ್ಯಾಜಿಸ್ಟ್ರೇಟ್ ಇರಬಹುದು. ಅವರನ್ನು ಪೊಲೀಸರು ಆರೋಪಿ ಹಿತ ದೃಷ್ಟಿಯಿಂದ ಹಾಗೂ ಪ್ರಕರಣವನ್ನು ನ್ಯಾಯಸಮ್ಮತವಾಗಿ ವಿಚಾರಿಸಲು ತಾವೇ ಖುದ್ದಾಗಿ ಕಾಣಬಹುದು. ಆದರೆ ಅಲ್ಲಿ ೧ನೆಯ ವರ್ಗದ ಮ್ಯಾಜಿಸ್ಟ್ರೇಟ್ ಇರಲಿಕ್ಕಿಲ್ಲ. ಆದ್ದರಿಂದ ನಾವು ನಿಜವಾಗಿ ಇಲ್ಲಿ ಆಯ್ಕೆ ಮಾಡಬೇಕಾದ ಸಂಗತಿಯೆಂದರೆ ಆರೋಪಿಯ ಪ್ರಕರಣವು ಬೇಗನೆ ಮುಗಿಯಬೇಕು. ಸಮೀಪದ ಮ್ಯಾಜಿಸ್ಟ್ರೇಟರಿಂದ ಆದಷ್ಟು ಬೇಗನೆ ಮುಗಿಯಬೇಕೆ? ಇಲ್ಲವೆ ೧ನೆಯ ವರ್ಗದ ಮ್ಯಾಜಿಸ್ಟ್ರೇಟನನ್ನು ಹುಡುಕುತ್ತ ಹೋಗಬೇಕೆ? ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಬೇಕಾಗಿದೆ. ನಾನು ತಿಳಿದುಕೊಂಡಂತೆ ಸಮೀಪದ ಮ್ಯಾಜಿಸ್ಟ್ರೇಟರೇ ಉಪಬಂಧವು ಆರೋಪಿಯ ಸ್ವಾತಂತ್ರ್ಯದ ದೃಷ್ಟಿಯಿಂದ ಅತ್ಯುತ್ತಮವಾದ ಉಪಬಂಧವಾಗಿದೆ.

ಎರಡನೆಯ ವಿಷಯ, ಏನೆಂದರೆ ಖಂಡ (೧) (೨) ಅನುಚ್ಛೇದ ೧೫–ಎ ಇದರಲ್ಲಿ ಬಂಧಿತ ಆರೋಪಿಯು ತನಗೆ ಬೇಕಾದ ವೃತ್ತಿ ನಡೆಯಿಸುವ ವಕೀಲನನ್ನು ಸಮಾಲೋಚಿಸುವ ಹಕ್ಕು ಕೊಟ್ಟಿಲ್ಲ. ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ ಇದು ಎರಡು ವಿಧವಾಗಿದೆ. (೧) ಸಮಾಲೋಚಿಸುವುದು, (೨) ಪ್ರತಿರಕ್ಷಿಸುವುದು. ನನ್ನ ವೈಯಕ್ತಿಕ ವಿಚಾರದಲ್ಲಿ ಸಮಾಲೋಚಿಸುವುದು. ಇದು ಪ್ರತಿರಕ್ಷಿಸು ಇದನ್ನು ಸಹ ಒಳಗೊಂಡಿದೆ. ಯಾಕೆಂದರೆ, ಅವನನ್ನು ಪ್ರತಿರಕ್ಷಿಸದಿದ್ದರೆ ಸಮಾಲೋಚನೆಯ ಉದ್ದೇಶವೇ ವ್ಯರ್ಥವಾಗುತ್ತದೆ. ಆದಾಗ್ಯೂ ಯಾವುದೇ ಸಂಶಯಕ್ಕೆ ಹಾಗೂ ವಾದ ಪ್ರತಿವಾದಕ್ಕೆ ಆಸ್ಪದ ಕೊಡದೆ ಸೀಮಿತ ಅರ್ಥದಲ್ಲಿ ಸಮಾಲೋಚನೆ ಈ ಪದವನ್ನು ಬಳಸಲಾಗಿದೆ. ನಾನು ಸಮಾಲೋಚಿಸು ಈ ಪದದ ನಂತರ ವೃತ್ತಿನಿರತ ವಕೀಲರು, ರಕ್ಷಿಸುವವರು ಎಂಬ ಪದವನ್ನು ಸೇರಿಸುತ್ತೇನೆ. ಇದರಿಂದ ಸಮಾಲೋಚಿಸು ಹಾಗೂ ಪ್ರತಿರಕ್ಷಿಸು ಈ ಎರಡೂ ಪದಗಳನ್ನು ಬಳಸಿದಂತಾಗುತ್ತದೆ.

ಕೊನೆಯ ಭಾಷಣಕಾರರು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಅದೆಂದರೆ ವೃತ್ತಿನಿರತ ವಕೀಲ ತನ್ನ ಮನಸ್ಸಿಗೆ ಬಂದ ಪದಗಳು ಮಹತ್ವವೆಂಬುದರಲ್ಲಿ ಸಂಶಯವಿಲ್ಲ. ಉದ್ದೇಶಪೂರ್ವಕವಾಗಿಯೇ ಅವುಗಳನ್ನು ಉಪಯೋಗಿಸಲಾಗಿದೆ. ಆರೋಪಿಗೆ ಈ ರೀತಿ ಸವಲತ್ತು ಕೊಡಲಾಗಿದೆ. ಸರಕಾರಕ್ಕೆ ಯೋಗ್ಯವೆಂದು ಕಂಡುಬಂದ ವಕೀಲನನ್ನು ಆರೋಪಿಯ ಪರವಾಗಿ ಹಾಜರಾಗಲು ಪರವಾನಗಿ ಕೊಟ್ಟಿದೆ. ಯಾಕೆಂದರೆ, ಆರೋಪಿಗೆ ತನ್ನನ್ನು ತಾನೇ ರಕ್ಷಿಸಿಕೊಳ್ಳುವ ಆತ್ಮವಿಶ್ವಾಸ ಇರದೆ ಇರಬಹುದು. ಆದ್ದರಿಂದಲೇ ನಾವು ಅವನಿಗೆ ಬೇಕಾದ ಈ ಪದಗಳನ್ನು ಉಪಯೋಗಿಸಲಾಗಿದೆ. ಆದರೆ ಅವನಿಗೆ ಬೇಕಾದ ಈ ಪದಗಳು ವೃತ್ತಿನಿರತ ವಕೀಲ ಈ ಪದಗಳಿಂದ ಪರಿಮಿತವಾಗಿವೆ. ಕಾನೂನು ವೃತ್ತಿ ನಡೆಯಿಸುವವ ಈ ಪದಗುಚ್ಛಗಳ ಅರ್ಥವು ಸಾಮಾನ್ಯವಾಗಿ ತಿಳಿದುಕೊಂಡಂತೆ ಉದಾಹರಣೆ ವೃತ್ತಿ ನಡೆಯಿಸುವವರು, ಅಂದರೆ ಉಚ್ಚ ನ್ಯಾಯಾಲಯದಲ್ಲಿ ಇಲ್ಲವೆ ಸಂಬಂಧಿಸಿದ ನ್ಯಾಯಾಲಯದಲ್ಲಿ ತನ್ನ ವೃತ್ತಿಯನ್ನು ನಡೆಯಿಸುವವನು.

ಮಾನ್ಯರೇ, ಈಗ (೨)ನೆಯ ಖಂಡಕ್ಕೆ ಬರುತ್ತೇನೆ. ಮುಖ್ಯ ವಿಷಯವೆಂದರೆ ಅದನ್ನು ತನ್ನ ಗೆಳೆಯರಾದ ಶ್ರೀ ಪಾಠಸ್ಕರ ಅವರು ಎತ್ತಿದ್ದು ಅವರನ್ನು ಸಾಧ್ಯವಾದಷ್ಟು ಮಟ್ಟಿಗೆ ನಾನು ತಿಳಿದುಕೊಂಡಂತೆ ಅವರು ಮ್ಯಾಜಿಸ್ಟ್ರೇಟ್ ಇದರ ಬದಲು ೧ನೆಯ ವರ್ಗದ ಮ್ಯಾಜಿಸ್ಟ್ರೇಟರ ಎಂದು ಸೇರಿಸಬೇಕೆಂದು ಸೂಚಿಸಿದರು. ಒಳ್ಳೆಯದು ಅವರು ಸೂಚಿಸಿದನ್ನು ನಾನು ಸ್ವೀಕರಿಸಲು ಎರಡು ಕಾರಣಗಳಿಂದ ತೊಂದರೆ ಇದೆ. ನಾವು ಖಂಡ (೨)ರಲ್ಲಿ ಒಂದು ಮಹತ್ವದ ಶಬ್ದವನ್ನು ಉಪಯೋಗಿಸಿದ್ದೇವೆ. ಅದೆಂದರೆ ಅತೀ ಸಮೀಪದ ಮ್ಯಾಜಿಸ್ಟ್ರೇಟ್ ಮತ್ತು ನಾನು ತಿಳಿದುಕೊಂಡಂತೆ ಅದು ಅತಿ ಅವಶ್ಯ, ಆ ರೀತಿ ಇರದಿದ್ದರೆ ಪೊಲೀಸರು ಬಹಳ ಅವಧಿಯವರೆಗೆ ಆರೋಪಿಯನ್ನು ವಿಶೇಷವಾದ ಮ್ಯಾಜಿಸ್ಟ್ರೇಟ್ ಇಲ್ಲವೆ ಯಾವ ಮ್ಯಾಜಿಸ್ಟ್ರೇಟನು ಆ ಪ್ರಕರಣ ಚೌಕಾಸಿ ಮಾಡಬೇಕು. ಅಂತಹ ಮ್ಯಾಜಿಸ್ಟ್ರೇಟರು ದೂರ ಬಹಳ ದೂರ ವಾಸಿಸುತ್ತಾರೆಂಬ ಕಾರಣದಿಂದ ವಿಳಂಬ ಮಾಡಬಹುದು. ಒಂದು ವೇಳೆ ಅವರ ತಿದ್ದುಪಡಿ ಸಮೀಪದ ೧ನೆಯ ವರ್ಗದ ಮ್ಯಾಜಿಸ್ಟ್ರೇಟ್ ಎಂಬುದನ್ನು ಒಪ್ಪಿದರೆ, ಈ ಇಂದಿನ ಸರಕಾರವು ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ೧ನೇ ವರ್ಗದ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ತಮಗೆ ಬೇಕಾದ ಯಾವುದೇ ಮ್ಯಾಜಿಸ್ಟ್ರೇಟರಿಗೆ ಕೊಡಲು ತಿದ್ದುಪಡಿ ಮಾಡಿ ಆರೋಪಿಗೆ ವಂಚಿಸಬಹುದು. ಆದ್ದರಿಂದ ಈ ತಿದ್ದುಪಡಿಯು ಸರಿಯಾದುದಲ್ಲ. ನಾನು ಇದನ್ನು ಸ್ವೀಕರಿಸುವುದಿಲ್ಲ. ಈಗ ಈ ಸಾಮಾನ್ಯ ಉಪಬಂಧಗಳು ಅನುಚ್ಛೇದ ೧೫ಎರಲ್ಲಿ ಒಳಗೊಂಡಿವೆ ಮತ್ತು ನನಗೆ ಅದು ಖಾತರಿ ಇದೆ.

**ಪಂಡಿತ್ ಠಾಕೂರದಾಸ್ ಭಾರ್ಗವ:** ದಯವಿಟ್ಟು ವಿಚಾರಿಸಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈಗ ನನ್ನ ಗೆಳೆಯರಾದ ಶ್ರೀ ಪಂಡಿತ್ ಠಾಕೂರದಾಸ್ ಭಾರ್ಗವ ಅವರು ಪಾಟೀ ಸವಾಲಿನ ಹಕ್ಕಿನ ಪ್ರಶ್ನೆ ಎತ್ತಿರುತ್ತಾರೆ.

**ಪಂಡಿತ್ ಠಾಕೂರದಾಸ್ ಭಾರ್ಗವ:** ಕಾರಣಗಳನ್ನು ಲಿಖಿತ ದಾಖಲೆಯಲ್ಲಿ ಕೊಡುವುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಒಳ್ಳೆಯದು, ಅದು ಒಂದೇ ಉಪಬಂಧವೆಂದು ನನಗೆ ಅನಿಸುತ್ತದೆ. ಯಾಕೆಂದರೆ, ಈ ಉಪಬಂಧವು ದಂಡ ಪ್ರಕ್ರಿಯಾ ಸಂಹಿತೆಯ ಅನೇಕ ಉಪಬಂಧಗಳಲ್ಲಿ ಬಂದಿದ್ದು ಅದು ಮ್ಯಾಜಿಸ್ಟ್ರೇಟ್ ಅವರಿಗೆ ತಮ್ಮ ಕಾರಣಗಳನ್ನು ಲಿಖಿತದಲ್ಲಿ ಕಾಣಿಸಬೇಕೆಂದೂ ಅದರಿಂದ ಮ್ಯಾಜಿಸ್ಟ್ರೇಟರು ಅವರಿಗೆ ಬಿಟ್ಟುಕೊಟ್ಟ ವಿವೇಚನೆಯನ್ನು ನ್ಯಾಯಯುತವಾಗಿ ಚಲಾಯಿಸಿದ್ದಾರೆಯೋ? ಎಂಬುದನ್ನು ತಿಳಿದುಕೊಳ್ಳಲು ಉಚ್ಚ ನ್ಯಾಯಾಲಯಕ್ಕೆ ಸಹಾಯಕವಾಗುತ್ತದೆ. ಅದೊಂದೇ ಏಕೈಕ ಉಪಬಂಧವೆಂದು ನಾನು ಸಹ ಒಪ್ಪಿಕೊಳ್ಳುತ್ತೇನೆ. ಆದರೆ ನನ್ನ ಗೆಳೆಯರು ಈ ತರಹದ ವಿಷಯಗಳಿಗೆ ಸಂಬಂಧಿಸಿದಂತೆ ಮ್ಯಾಜಿಸ್ಟ್ರೇಟನು ಯಾಕೆ ಹೆಚ್ಚಿನ ಅವಧಿಗೆ ರಿಮಾಂಡ್ ಮಾಡಿದನು ಅನ್ನುವ ಕುರಿತು ಮ್ಯಾಜಿಸ್ಟ್ರೇಟರು, ಪೊಲೀಸರು ಮಾಡಿದ ದೋಷಾರೋಪಣೆ ಮೇಲುನೋಟಕ್ಕೆ ಸರಿ ಇದೆಯೋ? ಇಲ್ಲವೋ ಎಂದು ನೋಡುವ ಅಧಿಕಾರ ಇರುವುದಿಲ್ಲ.

**ಪಂಡಿತ್ ಠಾಕೂರದಾಸ್ ಭಾರ್ಗವ:** ಪ್ರಸ್ತುತ ಕಲಂ ೧೬೭ ಉಪಕಲಮು (೩)ರಲ್ಲಿ ಈ ಪದಗಳು ಇರುತ್ತವೆ. ಇಂದಿನ ದಿನಗಳಲ್ಲಿ ಪ್ರತಿಯೊಬ್ಬ ಮ್ಯಾಜಿಸ್ಟ್ರೇಟರು ಯಾರು ಎದುರಿಗೆ ಆರೋಪಿಯನ್ನು ತೆಗೆದು ಹೋಗಿರುತ್ತಾರೆಯೋ ಅವರನ್ನು ಬಂಧನದಲ್ಲಿ ಮುಂದುವರೆಯಿಸಲು ಪರವಾನಗಿ ಕೊಟ್ಟರೆ ಕಾರಣಗಳನ್ನು ಬರೆಯುವುದು ಕಡ್ಡಾಯವಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ಅದು ನಿಜವಿದೆ. ಅವು ಅಲ್ಲಿ ಇರುತ್ತವೆ, ಆದರೆ ಅವು ಅತಿ ಅವಶ್ಯವೆ?

**ಪಂಡಿತ್ ಠಾಕೂರದಾಸ್ ಭಾರ್ಗವ:** ಅತ್ಯವಶ್ಯವಿರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ವೈಯಕ್ತಿಕವಾಗಿ ಆವಶ್ಯವಿದೆಯೆಂದು ನನಗೆ ಅನಿಸುವುದಿಲ್ಲ. ಅತ್ಯಂತ ಕೆಟ್ಟ ಪ್ರಕರಣವನ್ನು ತೆಗೆದುಕೊಳ್ಳೋಣ. ಮ್ಯಾಜಿಸ್ಟ್ರೇಟರು ಪೊಲೀಸರನ್ನು ಸಂತೋಷಗೊಳಿಸಲು ಒಂದೇ ಸಮನೆ ರಿಮಾಂಡ್ ಕೊಡುತ್ತಾ ಹೋಗುತ್ತಾರೆ. ಒಂದರ ನಂತರ ಒಂದು, ಇದರಿಂದ ಪೊಲೀಸರಿಗೆ ಆರೋಪಿಯನ್ನು ಬಂಧನದಲ್ಲಿ ಇಟ್ಟುಕೊಳ್ಳಲು ಸಹಕಾರಿಯಾಗುತ್ತದೆ. ಇಂತಹ ಪ್ರಕರಣದಲ್ಲಿ ಆರೋಪಿಗೆ ಉಚ್ಚ ನ್ಯಾಯಾಲಯಕ್ಕೆ ಹೋಗಿ ಪರಿಷ್ಕರಣ ಅರ್ಜಿ ಮಾಡಿ ಕಾನೂನಿನ ಪ್ರಕ್ರಿಯೆಯು ದುರುಪಯೋಗವಾಗಿದೆಯೆಂದು ಹೇಳಲು ಅವಕಾಶ ಇರುವುದಿಲ್ಲ.

**ಪಂಡಿತ್ ಠಾಕೂರದಾಸ್ ಭಾರ್ಗವ:** ಬಡವರಿಗೆ ಉಚ್ಚ ನ್ಯಾಯಾಲಯಕ್ಕೆ ಹೋಗುವುದು ಹೇಗೆ ಸಾಧ್ಯ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈ ವಿಷಯದ ಬಗೆಗೆ ನನ್ನ ಮನಸ್ಸನ್ನು ಮುಚ್ಚಲು ಒಪ್ಪುವುದಿಲ್ಲ. ಒಂದು ವೇಳೆ ಅದರ ಆವಶ್ಯಕತೆಯು ಇದ್ದರೆ ಈ ಶಬ್ದಗಳನ್ನು ಸೇರಿಸುವ ಆವಶ್ಯಕತೆಯ ಬಗ್ಗೆ ಕರಡು ಸಮಿತಿಯ ವಿವೇಚನೆಗೆ ಬಿಡುವುದು ಸೂಕ್ತ. ಈಗ ಸದ್ಯಕ್ಕೆ ಈ ಪದಗಳ ಆವಶ್ಯವಿಲ್ಲವೆಂದು ನಮಗೆ ಅನಿಸುತ್ತದೆ.

ನಾನು ಈಗ ಅನುಚ್ಛೇದ ೧೫ (೩) ಇದರ ಎರಡನೆಯ ಭಾಗ ಅಪರಾಧ ನಿವಾರಣೆ ತಡೆಗಟ್ಟುವ ಸಂಬಂಧಿಸಿದಂತೆ ಹೇಳುವ ಎರಡನೆಯ ಭಾಗಕ್ಕೆ ಬರುತ್ತೇನೆ. ನನ್ನ ಗೆಳೆಯ ಶ್ರೀ ತ್ಯಾಗಿ ಅವರು ಈ

ಅನುಚ್ಛೇದದ ವಿರುದ್ಧ ಬಹಳ ಸಿಟ್ಟಿಗೆದ್ದಿದ್ದಾರೆ, ಒಳ್ಳೆಯದು, ನಾನು ನನ್ನ ಗೆಳೆಯರನ್ನು ಕ್ಷಮಿಸಿದ್ದೇನೆ. ಯಾಕೆಂದರೆ ಅವರು ವಕೀಲರಲ್ಲ ಮತ್ತು ಅವರಿಗೆ ನಿಜವಾಗಿ ಕೋರ್ಟ್‌ನಲ್ಲಿ ಏನು ನಡೆಯುತ್ತದೆಂಬುದು ಗೊತ್ತಿಲ್ಲ. ಯಾವುದೊಂದು ವಿಷಯ, ಸಾಮಾನ್ಯವಾಗಿ ತಿಳಿಯುವಂತಹ ವಿಷಯದ ಬಗ್ಗೆ ಅದು ಯಾವುದೆಂದು ತಿಳಿದುಕೊಳ್ಳದೆ ಒಮ್ಮೆಲೇ ಎದ್ದು ನಿಂತು ಅದರ ಪರಿಣಾಮ ತಿಳಿದುಕೊಳ್ಳದೆ ಮಾತನಾಡುತ್ತಾರೆ. ಆದರೆ ವಕೀಲರಾದಂತಹ ಸಂಸತ್ತು ಸದಸ್ಯರು ಈ ಅನುಚ್ಛೇದದ ಬಗೆಗೆ ತೆಗೆದುಕೊಂಡ ನಿಲುವನ್ನು ನಾನು ಕ್ಷಮಿಸಲಾರೆ.

ನಾವು ಮಾಡುತ್ತಿರುವುದು ಏನು? ನಾವು ಏನು ಮಾಡುತ್ತಿದ್ದೇವೆಂಬುದನ್ನು ಈಗ ಸಂಸತ್ತಿಗೆ ವಿವರಿಸುತ್ತೇನೆ, ಸಂವಿಧಾನದ ಏಳನೆಯ ಪರಿಶಿಷ್ಟದಲ್ಲಿ ಮೂರು ಲಿಸ್ಟ್‌ಗಳು ನಮ್ಮ ಮುಂದೆ ಇವೆ. ಈ ಮೂರು ಲಿಸ್ಟ್‌ಗಳಲ್ಲಿ ಅಪರಾಧ ತಡೆಗಟ್ಟುವಕ್ಕೆ ಎರಡು ಎಂಟ್ರಿಗಳನ್ನು ಒಳಗೊಂಡಿದೆ. ಒಂದು ಮೊದಲಿನ ಲಿಸ್ಟಿನಲ್ಲಿ ಮತ್ತೊಂದು ಮೂರನೆಯ ಲಿಸ್ಟಿನಲ್ಲಿ. ಒಂದು ವೇಳೆ ಅಪರಾಧ ತಡೆಗಟ್ಟುವ ವಿಷಯ ಕುರಿತು ಅನುಚ್ಛೇದವನ್ನು ಕೈಬಿಟ್ಟರೆ ಅದರ ಪರಿಣಾಮ ಏನಾಗುತ್ತದೆ? ಅದರ ಪರಿಣಾಮವೇನೆಂದರೆ ಪ್ರಾಂತ್ಯಗಳು ಮತ್ತು ಕೇಂದ್ರ ಸಂಸತ್ತುಗಳು ತಮ್ಮ ಮನಸ್ಸಿಗೆ ಬಂದಂತೆ ಸ್ವತಂತ್ರ್ಯವಾಗಿ ಅಪರಾಧ ತಡೆಗಟ್ಟುವ ಕಾನೂನು ತಮಗೆ ಬೇಕಾದಂತೆ ರಚಿಸಬಹುದು. ನಾವು ಈಗ ಇಂತಹ ನಿಯಂತ್ರಣವನ್ನು ಕೇಂದ್ರ ಹಾಗೂ ಪ್ರಾಂತ್ಯಗಳಿಗೆ ಹೇರದಿದ್ದರೆ ಅವರು ಹಾಗೆ ಮಾಡುತ್ತ ಹೋಗುತ್ತಾರೆ. ನಾವು ಈಗ ಈ ಅನುಚ್ಛೇದದ ಮೂಲಕ ಕಾನೂನು ಮಾಡಲು ನಿರ್ಬಂಧ ಹೇರಿದಲ್ಲಿ ಆಗ ಕೇಂದ್ರ ಹಾಗೂ ಪ್ರಾಂತ್ಯಗಳಿಗೆ ಅಂತಹ ಸ್ವಾತಂತ್ರ್ಯವಿಲ್ಲ. ವಕೀಲ ಸಂಸದರು, ಈ ರೀತಿಯ ಸ್ವಾತಂತ್ರ್ಯವನ್ನು ಸಂಸತ್ತಿಗೆ ಮತ್ತು ರಾಜ್ಯಗಳಿಗೆ ಕೊಡಬೇಕೆಂದು ಇಚ್ಛಿಸುತ್ತಾರೆಯೇ? ನನ್ನ ವಿನಂತಿ ಇಷ್ಟೇ. ಇಂದು ಅವರು ತೋರಿದ ನಡತೆಯ ಬಗ್ಗೆ ಒಂದು ವೇಳೆ ಅವರು ತಕರಾರು ಮಾಡಿದ್ದರೆ ನಮಗೆ ಇಂತಹ ಉಪಬಂಧಗಳು ಇಂದು ಬರುತ್ತಿರಲಿಲ್ಲ. ನಾವು ಇವುಗಳನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ನಾವು ಸಂಸತ್ತಿಗೆ ಮತ್ತು ರಾಜ್ಯಗಳಿಗೆ ಅಪರಾಧ ತಡೆಗಟ್ಟುವ ಕಾನೂನು ರಚಿಸಲು ಅಧಿಕಾರ ನೀಡಿದ್ದೇವೆ. ನಾನು ಈಗ ಈ ಅಧಿಕಾರವನ್ನು ಮೊಟುಕುಗೊಳಿಸಿ ಸೀಮಿತಗೊಳಿಸಲು ಪ್ರಯತ್ನ ಮಾಡುತ್ತಿದ್ದೇನೆ. ಆದರೆ ನಾನು ಅದಕ್ಕಿಂತ ಕೆಟ್ಟದ್ದನ್ನು ಮಾಡಿರುವುದಿಲ್ಲ. ಆದರೆ ನೀವು ಕೆಟ್ಟದ್ದನ್ನು ಮಾಡಿದ್ದೀರಿ, ಎರಡನೆಯ ಭಾಗದಲ್ಲಿ ನಿರ್ದಿಷ್ಟ ಉಪಬಂಧಗಳನ್ನು ಹೇಳಬೇಕೆಂದರೆ ನಾನು ಮೊದಲನೆಯದಾಗಿ (ಮಧ್ಯದಲ್ಲಿ ತಡೆ)

**ಪಂಡಿತ್ ಠಾಕೂರದಾಸ್ ಭಾರ್ಗವ:** ಈ ಲಿಸ್ಟುಗಳನ್ನು ಯಾರು ಮಾಡಿದರು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅವುಗಳನ್ನು ಮಾಡಿದೆನು, ನೀವು ಅವುಗಳನ್ನು ಪಾಸು ಮಾಡಿದಿರಿ.

ನನ್ನ ಮನಸ್ಸಿನಲ್ಲಿ ಮಿತಿಗಳಿವೆ. ಈಗ ಉಪಬಂಧ (೩)ಬಿ ದ ಬಗ್ಗೆ ಹೇಳುತ್ತೇನೆ.

**ಶ್ರೀ ಮಹಾವೀರ್ ತ್ಯಾಗಿ:** ಸಾಮಾನ್ಯ ಮನುಷ್ಯನ ತಿಳುವಳಿಕೆಗೆ ಸಾಧ್ಯವಾಗುವಂತೆ ನೀವು ಉಪಬಂಧ (೪)ರ ಅಡಿಯಲ್ಲಿ ಪ್ರಕರಣಗಳಿಗೆ ಸಲಹಾ ಮಂಡಳಿಗೆ ಪುನರ್ ವಿಮರ್ಶೆಯ ಸಲುವಾಗಿ ಅವಕಾಶವನ್ನು ಯಾಕೆ ಕಲ್ಪಿಸಿಲ್ಲ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರಿಗೆ ನಾನು ಕಾನೂನಿನ ಬಗ್ಗೆ ಈ ಸಭೆಯಲ್ಲಿ ವಿವರಿಸಲು ಸಾಧ್ಯವಿಲ್ಲ. ಈ ಸದನವು ಕಾನೂನಿನ ತರಗತಿಯಲ್ಲ ಮತ್ತು ನಾನು ಈ ರೀತಿ ವಿವರಣೆಯನ್ನು ಕೊಡಲು ತೊಡಗಲಾರೆನು. ಗೌರವಾನ್ವಿತ ಸದಸ್ಯರು ನನ್ನ ಗೆಳೆಯರಿರುತ್ತಾರೆ. ಅವರಿಗೆ ತಿಳಿಯದಿದ್ದರೆ

ಅವರು ನಂತರ ಬಂದು ನನ್ನ ಕೇಳಬಹುದು.

ಈಗ ನಾನು ಎರಡು ರೀತಿ ಟೀಕೆಗೆ ಒಳಗಾಗಿರುವ ಪರಂತುಕದ ಬಗೆಗೆ ಹೇಳಬಯಸುತ್ತೇನೆ. ಒಂದು ಟೀಕೆ ಹೀಗಿದೆ. ಒಬ್ಬ ವ್ಯಕ್ತಿಯನ್ನು ಅಪರಾಧ ತಡೆಗಟ್ಟುವ ಕಾನೂನನ್ನು ಹೊರತುಪಡಿಸಿ ಇತರ ಸಾಮಾನ್ಯ ಕಾನೂನಿನ ಅಡಿಯಲ್ಲಿ ಬಂಧಿಸಿ ಬಂಧನದಲ್ಲಿ ಇಟ್ಟಿದ್ದರೆ ಆಗ ನಾವು ಪರಿಚ್ಛೇದ ೧೫ಎ ಉಪಬಂಧ ೧ರಲ್ಲಿ ಈ ಬಗ್ಗೆ ಅವಕಾಶ ಕಲ್ಪಿಸಿದ್ದೇವೆ. ಅಂದರೆ, ಆರೋಪಿಯು ಬಂಧನದ ಬಗ್ಗೆ ಅವನಿಗೆ ತಿಳಿಸಬೇಕು. ಆದರೆ ಯಾವ ವ್ಯಕ್ತಿಯನ್ನು ಅಪರಾಧ ತಡೆಗಟ್ಟುವ ಕ್ರಮವಾಗಿ ಬಂಧಿಸಿಟ್ಟಿದ್ದರೆ, ಅವನಿಗೆ ಇಂತಹ ಯಾವ ಅವಕಾಶವನ್ನು ಕಲ್ಪಿಸಿಲ್ಲವೆಂದು ಹೇಳಿದ್ದೆನು. ಅದು ಸರಿಯಾದ ಟೀಕೆಯೆಂದು ನಾನು ಭಾವಿಸುತ್ತೇನೆ. ನಾನು ಅದನ್ನು ಸರಿಪಡಿಸಲು ಸಿದ್ಧನಿದ್ದೇನೆ. ಯಾಕೆಂದರೆ ಈಗ ಇರುವ ಕಾನೂನಿನ ಪ್ರಕಾರ ಬೇರೆ ಬೇರೆ ಪ್ರಾಂತ್ಯಗಳು ಅಪರಾಧ ತಡೆಗಟ್ಟುವ ಕಾನೂನಿಗೆ ಸಂಬಂಧಿಸಿದಂತೆ ಅವರು ಬಂಧಿಸಿದ ವ್ಯಕ್ತಿಗೆ ಅವನನ್ನು ಯಾವ ಕಾರಣಗಳಿಗೆ ಬಂಧಿಸಲಾಗಿದೆ ಎಂದು ತಿಳಿಸಲು ಅವಕಾಶ ಕಲ್ಪಿಸಿವೆ. ಈ ಬಗ್ಗೆ ಯಾವ ಪ್ರಾಂತ್ಯದಲ್ಲಿ ಅಪರಾಧ ತಡೆಗಟ್ಟಿದ ಕಾಯಿದೆ ಮಾಡಿದೆ ಎಂಬುದನ್ನು ತಿಳಿದುಕೊಳ್ಳಲು ನಾನು ವೈಯಕ್ತಿಕವಾಗಿ ಉತ್ಸುಕನಾಗಿಲ್ಲ. ಸಂವಿಧಾನವು ಇದನ್ನು ಅಳವಡಿಸಿಕೊಳ್ಳತಕ್ಕದ್ದಲ್ಲ. ಆದ್ದರಿಂದ ನಾನು ಈ ಕೆಳಗಣ ಉಪಬಂಧವನ್ನು ಅನುಚ್ಛೇದ ೧೫ರ ಉಪಬಂಧ (೩)ರ ನಂತರ ಸೇರಿಸಲು ಸಿದ್ಧನಿದ್ದೇನೆ. ಖಂಡ ೩ ಉಪಖಂಡ ಬಿ ಇದರ ಅಡಿಯಲ್ಲಿ ಯಾವುದೇ ವ್ಯಕ್ತಿ ಬಗ್ಗೆ ಒಂದು ಆದೇಶವನ್ನು ಮಾಡಿದರೆ ಅಂತಹ ಅದೇಶ ಮಾಡಿದ ಅಧಿಕಾರಿಯು......

**ಬಾಬು ರಾಮನಾರಾಯಣ ಸಿಂಗ್:** ಮಾನ್ಯರೇ ಪ್ರಾಂತ್ಯಗಳು ಇಂತಹ ಉಪಬಂಧ ಸೇರಿಸಲು ಇಚ್ಛಿಸುತ್ತವೆಂದು ಡಾ. ಅಂಬೇಡ್ಕರ್ ಅವರು ಹೇಳುತ್ತಾರೆ.

**ಮಾನ್ಯ ಸಭಾಧ್ಯಕ್ಷರು:** ಅವರು ಆ ರೀತಿ ಏನನ್ನು ಹೇಳಿಲ್ಲ. ಅವರು ಹೇಳಿದ್ದೇನೆಂದರೆ ಪ್ರಾಂತ್ಯಗಳು ಮಾಡಿದ ಅಪರಾಧ ತಡೆಗಟ್ಟುವ ಕಾನೂನಿನಲ್ಲಿ ಕೆಲವು ಉಪಬಂಧಗಳು ಒಳಗೊಂಡಿವೆ. ಅವರು ಇಂತಹ ಉಪಬಂಧಗಳನ್ನು ಈ ಅನುಚ್ಛೇದದಲ್ಲಿ ಸೇರಿಸಲು ಇಚ್ಛಿಸುತ್ತಾರೆ.

**ಶ್ರೀ ಬಾಬು ನಾರಾಯಣ ಸಿಂಗ್:** ನಾವು ಪ್ರಾಂತ್ಯಗಳು ಹೇಳಿದಂತೆ ಕಾನೂನು ರಚಿಸುತ್ತಿದ್ದೇವೆಯೆ? ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಅಂತಹದ್ದು ಏನೂ ಇಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಶ್ರೀ ರಾಮನಾರಾಯಣ ಸಿಂಗ್ ಅವರು ತಮ್ಮ ಪ್ರಾಂತೀಯ ಸರಕಾರವನ್ನು ಕುರಿತು ಸ್ವಲ್ಪ ಅಸಮಾಧಾನಗೊಂಡಿರುವಂತೆ ಕಂಡುಬರುತ್ತದೆ. ನಾನು ಹೇಳುತ್ತಿದ್ದ ಈ ಉಪಬಂಧವು ಹೀಗೆ ಇರಬೇಕಾಗಿತ್ತು.

ಅನುಚ್ಛೇದ ೧೫ (ಎ)ರ ಖಂಡ ೩ರ ನಂತರ ಕೆಳಗಿನದನ್ನು ಸೇರಿಸಬೇಕು.

(೩ಎ) ಅನುಚ್ಛೇದದ ಖಂಡ (೩) ಉಪಖಂಡ (ಬಿ)ದ ಕೆಳಗೆ ಒಂದು ಆದೇಶವನ್ನು ಮಾಡಿದಾಗ ಅಂತಹ ಆದೇಶವನ್ನು ಮಾಡುವ ಅಧಿಕಾರಿಯು ಸಾಧ್ಯವಾದಷ್ಟು ಬೇಗ ಯಾವ ಕಾರಣಗಳಿಗಾಗಿ ಆ ಆದೇಶವನ್ನು ಮಾಡಲಾಗಿದೆಯೆಂಬುದನ್ನು ಬಂಧಿತನಾದವನಿಗೆ ತಿಳಿಸತಕ್ಕದ್ದು ಮತ್ತು ಅವನಿಗೆ ಸಾಧ್ಯವಾದಷ್ಟು ಬೇಗ ಆದೇಶದ ವಿರುದ್ಧ ತನ್ನ ಹೇಳಿಕೆಯನ್ನು ಕೊಡುವ ಅವಕಾಶವನ್ನು ಕಲ್ಪಿಸಿ ಕೊಡಬೇಕು.

(ಬಿ) ಈ ಅನುಚ್ಛೇದದ ಖಂಡ (೩) ಉಪಖಂಡ (ಬಿ)ದಲ್ಲಿ ಯಾವುದೇ ಆದೇಶ ಮಾಡುವ ಅಧಿಕಾರವನ್ನು ಹೊಂದಿದ ಅಧಿಕಾರಿಯು ಸಾರ್ವಜನಿಕ ಹಿತದೃಷ್ಟಿಯಿಂದ ಅವನನ್ನು ಬಂಧಿಸಿದ ಕಾರಣವನ್ನು

ಬಹಿರಂಗಪಡಿಸಬಾರದೆಂದು ಅವನಿಗೆ ಅನಿಸಿದರೆ ಅವನು ಹಾಗೆ ಮಾಡಬಹುದು.

ಇಂತಹವುಗಳೇ ಕೆಲವು ಉಪಬಂಧಗಳು ಪ್ರಾಂತೀಯ ಸರಕಾರದ ಕಾನೂನಿನಲ್ಲಿ ಇರುತ್ತವೆ. ಆದ್ದರಿಂದ ಅವುಗಳನ್ನು ಇದರಲ್ಲಿ ಏಕೆ ಸೇರ್ಪಡಿಸಬಾರದೆಂಬುದಕ್ಕೆ ಕಾರಣಗಳು ಇರುವುದಿಲ್ಲ. ಆದ್ದರಿಂದ ಈ ರೀತಿಯ ಟೀಕೆ ನಾವು ಕೇವಲ ಬಂಧಿಸಿದ ವ್ಯಕ್ತಿಯನ್ನು ಅಪರಾಧ ತಡೆಗಟ್ಟುವ ಕಾನೂನಿನ ಕಾರಣವನ್ನು ತಿಳಿಸದೆ ಅವನನ್ನು ಬಂಧನದಲ್ಲಿಡುತ್ತೇವೆ ಎಂಬ ಟೀಕೆಗೆ ನಾವು ಸೂಚಿಸಿದ ತಿದ್ದುಪಡಿಯು ಉತ್ತರವಾಗಿದೆ.

ಇನ್ನೊಂದು ಪ್ರಶ್ನೆಯೆಂದರೆ:

**ಸನ್ಮಾನ್ಯ ಶ್ರೀ ಕೆ. ಸಂತಾನಮ್:** ಈಗಾಗಲೇ ಖಂಡ (೧) ಇದಕ್ಕೆ ಹೆಚ್ಚಿನ ಖಂಡವು ಇದಾಗಿದೆ. ಈಗಾಗಲೇ ಒಂದು ಉಪಬಂಧವಿದ್ದು, ಅದರಲ್ಲಿ ಯಾವುದೇ ವ್ಯಕ್ತಿಯನ್ನು ಬಂಧಿಸಿದರೆ ಅವನಿಗೆ ಬಂಧನದ ಕಾರಣ ತಿಳಿಸದೆ ಅವನನ್ನು ಬಂಧನದಲ್ಲಿಟ್ಟುಕೊಳ್ಳಲು ಬರುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಅಪರಾಧ ತಡೆಗಟ್ಟುವ ಕಾನೂನಿನ ಅಡಿಯಲ್ಲಿ ಬಂಧಿಸಿದವರ ಬಗ್ಗೆ ಹೇಳುವುದಿಲ್ಲ.

**ಸನ್ಮಾನ್ಯ ಶ್ರೀ ಸಂತಾನಮ್:** ಅದು ಅಪರಾಧ ತಡೆಗಟ್ಟುವುದಕ್ಕಾಗಿ ಬಂಧಿಸುವುದರ ಬಗ್ಗೆ ಒಳಗೊಂಡಿದೆಯೆ? ಖಂಡ (೧) ಎಲ್ಲ ಬಗೆಯ ಬಂಧನವನ್ನು ಒಳಗೊಂಡಿದೆಯೆಂದು ನಾನು ತಿಳಿದುಕೊಂಡಿದ್ದೆನು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ, ನಮ್ಮ ತಿಳುವಳಿಕೆಯ ಹಾಗೆ ಇಲ್ಲ. ಪ್ರಕರಣಗಳನ್ನು ಎರಡು ರೀತಿಯಾಗಿ ವಿಂಗಡಿಸಲಾಗಿದೆ.

**ಶ್ರೀ ಮಹಾವೀರ್ ತ್ಯಾಗಿ:** ಅವರು ವಕೀಲರಿದ್ದಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ನ್ಯಾಯಾಲಯದಲ್ಲಿ. ಇಲ್ಲಿ ಅಲ್ಲ.

**ಮಾನ್ಯ ಸಭಾಧ್ಯಕ್ಷರು:** ಅವರು ವಕೀಲರಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಖಂಡ (೧) ಹಾಗೂ (೨)ರಲ್ಲಿ ಹೇಳಿದ್ದು ಯಾವುದೂ ಖಂಡ (೩)ಕ್ಕೆ ಅನ್ವಯಿಸುವುದಿಲ್ಲವೆಂದು ಹೇಳುವುದು ಬಹಳ ಉಚಿತವೆಂದು ನನಗೆ ಅನಿಸುತ್ತದೆ. ಆ ಟೀಕೆಯ ಭಾಗಕ್ಕೆ ಉತ್ತರಿಸುವ ಉದ್ದೇಶದಿಂದ ಇದನ್ನು ಹೇಳಿದ್ದೇನೆ.

ಈಗ ನಾನು ಯಾವುದೇ ವಿಚಾರಣೆ ಅಥವಾ ಚೌಕಾಸಿ ಇಲ್ಲದೆ, ವ್ಯಕ್ತಿಯನ್ನು ಬಂಧನದಲ್ಲಿ ೩ ತಿಂಗಳು ಇಡುವ ಬಗ್ಗೆ ಹೇಳುತ್ತೇನೆ. ಕೆಲವು ಸನ್ಮಾನ್ಯ ಸದಸ್ಯರು ಬೇರೆ ಬೇರೆ ಅವಧಿಗಳನ್ನು ಸೂಚಿಸಿದ್ದಾರೆ. ನಾನು ಯಾಕೆ ೩ ತಿಂಗಳು ಅವಧಿ ಸಹಿಸತಕ್ಕದ್ದು ೧೫ ತಿಂಗಳ ಅವಧಿ ಬಹಳವಾಗುತ್ತದೆಂಬುದರ ಬಗ್ಗೆ ಈ ಸದನಕ್ಕೆ ಹೇಳಬಯಸುತ್ತೇನೆ. ನಮಗೆ ಬಂಧಿತರ ಪ್ರಕರಣಗಳನ್ನು ವಿಚಾರಿಸುವ ದಾರಿಯಲ್ಲಿ ಬಂದ ನಂತರ ಈ ದೇಶದಲ್ಲಿ ಯಾವ ರೀತಿ ಬೆಳವಣಿಗೆಯಾಗುವುದೆಂದು ಗೊತ್ತಿಲ್ಲ. ಅದರಂತೆ ಜನರು ಹಾಗೂ ಪಕ್ಷಗಳು ಸಂವಿಧಾನಕ್ಕೆ ಅನುಗುಣವಾಗಿ ಅಧಿಕಾರಕ್ಕೆ ಬರುತ್ತಾರೆ. ಅಥವಾ ಸಂವಿಧಾನಬಾಹಿರ ಅಧಿಕಾರಕ್ಕೆ ಬಂದು ತಮ್ಮ ಉದ್ದೇಶ ಈಡೇರಿಸಿಕೊಳ್ಳುತ್ತಾರೋ ನಮಗೆ ಗೊತ್ತಿರುವುದಿಲ್ಲ. ನಮ್ಮ ಗುರಿ ಸಾಧಿಸಬೇಕಾದರೆ ನಾವೆಲ್ಲರೂ ಸಂಪೂರ್ಣವಾಗಿ ಹಾಗೂ ಸಂವಿಧಾನಾತ್ಮಕವಾಗಿ ನಡೆದುಕೊಂಡರೆ ಪರಿಸ್ಥಿತಿಯು ಬೇರೆ ಇರುತ್ತಿತ್ತು. ಮತ್ತು ಈ ಅಪರಾಧ ತಡೆಗಟ್ಟುವ ಕುರಿತು ಬಂಧಿಸುವ ಪ್ರಶ್ನೆಯೇ ಇರುತ್ತಿರಲಿಲ್ಲ.

ನಾವು ಕಾನೂನು ರಚಿಸುವಾಗ ಒಳ್ಳೆಯದಕ್ಕಿಂತ ಕೆಟ್ಟದ್ದನ್ನೇ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಅನೇಕ ಪಕ್ಷಗಳು ಇರುತ್ತವೆ ಮತ್ತು ಜನರಿಗೆ ಸಹನೆ ಇರುವುದಿಲ್ಲ ಎನ್ನುವ ಪರಿಸ್ಥಿತಿ ಇದೆಯೆಂದು ತಿಳಿದುಕೊಂಡು ನಾವು ಈ ಅನುಚ್ಛೇದವನ್ನು ಸೇರಿಸಿದ್ದೇವೆ. ಅಂತಹ ಪ್ರಸಂಗದಲ್ಲಿ ಬಹಳ ಜನರನ್ನು

ಕಾರ್ಯನಿರ್ವಾಹಕರು ಬಂಧಿಸಬೇಕಾಗುತ್ತದೆ. ಒಂದು ವೇಳೆ ಬಹಳ ಜನರು ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸಿದರೆ ಮತ್ತು ಖಂಡ (ಎ) ಪರಂತುಕ ಹೇಳಿರುವುದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸದಿದ್ದರೆ ಪರಿಸ್ಥಿತಿ ಏನಾಗಬಹುದು?

ಕಾರ್ಯನಿರ್ವಾಹಕರು ನೂರಾರು ಜನರನ್ನು ಬಂಧಿಸಿ ಬಂಧನದಲ್ಲಿಟ್ಟಿದ್ದರೆ ಅವರೆಲ್ಲರ ಬಗ್ಗೆ ಮಾಹಿತಿ ತೆಗೆದು ಪ್ರಕರಣವನ್ನು ತಯಾರಿಸಿ, ಸಲಹಾ ಸಮಿತಿ ಎದುರಿಗೆ ಒಪ್ಪಿಸಲು ಸಾಧ್ಯವೇ? ಅದು ಪ್ರಾಯೋಗಿಕವಾಗಿ ಸಾಧ್ಯವೇ? ಸಲಹಾ ಸಮಿತಿಯವರು ೩ ತಿಂಗಳಲ್ಲಿ ಪ್ರಾಯೋಗಿಕವಾಗಿ ನಿರ್ಣಯಿಸಲು ಸಾಧ್ಯವಾಗಬಹುದೆ? ಯಾಕೆಂದರೆ, ಅವರ ಬಂಧನದ ಅವಧಿಯನ್ನು ಹೆಚ್ಚಿಸಬೇಕಾದರೆ ಉಪಬಂಧ 'ಎ' ಅನ್ವಯ ಅವರು ಸಲಹಾ ಸಮಿತಿ ಪರವಾನಗಿ ತೆಗೆದುಕೊಂಡೇ ೩ ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಬಂಧ ವಿಸ್ತರಿಸಲು ಅವಕಾಶವಿದೆ. ಆದ್ದರಿಂದ ಆಡಳಿತಾತ್ಮಕ ಗಣನೆಗೆ ತೆಗೆದುಕೊಂಡು ಕರಡು ಸಮಿತಿ ಇಂತಹ ಪ್ರಸಂಗವನ್ನು ಎದುರಿಸಲು ಈ ೩ ತಿಂಗಳ ಅವಧಿ ಗೊತ್ತುಪಡಿಸಿದೆ. ಕರಡು ಸಮಿತಿಯವರಿಗೆ ಈ ಅವಧಿ ಸೀಮಿತಗೊಳಿಸಲು ಬೇರೆ ಯಾವುದೇ ಉದ್ದೇಶವಿರಲಿಲ್ಲ. ಆದ್ದರಿಂದ ಮಾನ್ಯರೆ ಈ ಸಭೆಯು ೩ ತಿಂಗಳ ಅವಧಿಯು ಈ ಸಂದರ್ಭದಲ್ಲಿ ನಾನು ಹೇಳಿರುವಂತೆ ಯೋಗ್ಯವಾದದ್ದೆಂದು ಮತ್ತು ಈ ಉಪಬಂಧ ಕಲ್ಪಿಸಲು ಸಭೆ ಒಪ್ಪುವುದೆಂದು ನಾನು ಆಶಿಸುತ್ತೇನೆ.

ಈಗ ನಾನು ಸಲಹಾ ಸಮಿತಿಗೆ ಬರುತ್ತೇನೆ. ಎರಡು ವಿಷಯಗಳನ್ನು ಎತ್ತಲಾಗಿದೆ. ಮೊದಲನೆಯದೆಂದರೆ ಈ ಸಲಹಾ ಸಮಿತಿಯು ಪ್ರಕ್ರಿಯೆಯನ್ನು ಯಾವುದೇ ಉಪಬಂಧದಲ್ಲಿ ಉಲ್ಲೇಖಿಸಿಲ್ಲ. ಕಾರ್ಯನಿರ್ವಾಹಕರು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಕಾಗದ ಪತ್ರಗಳನ್ನು ತಯಾರಿಸಿ ಸಲಹಾ ಸಮಿತಿಯ ಮುಂದೆ ಇಡಬೇಕಾಗುತ್ತದೆ. ಯಾವ ಕಾರಣಕ್ಕೆ ಆರೋಪಿಯನ್ನು ಅಪರಾಧ ತಡೆಗಟ್ಟುವ ಕಾರಣದಿಂದ ಬಂಧನದಲ್ಲಿ ಇಡಬೇಕಾಯಿತೆಂದು ತೋರಿಸುವ ಕಾಗದಗಳನ್ನು ತಯಾರಿಸುವುದು.

ಗಮನ ಸೆಳೆಯುವ ಒಂದು ಪ್ರಶ್ನೆಯನ್ನು ಕೇಳಲಾಗಿದೆ. ಆರೋಪಿಗೆ ಸಲಹಾ ಸಮಿತಿಯ ಮುಂದೆ ಹಾಜರಾಗಲು ಹಕ್ಕಿದೆಯೇ ಮತ್ತು ಅವನು ಸಾಕ್ಷಿಗಳ ಪಾಟೀ ಸವಾಲು ಮಾಡಬಹುದೇ? ಮತ್ತು ಅವನು ತನ್ನ ಹೇಳಿಕೆಯನ್ನು ಕೊಡಬಹುದೆಂಬುದರ ಬಗೆಗೆ ಅರಿವು ಇದೆ. ಈ ಉಪಖಂಡ (ಎ) ಇದರ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಕುರಿತು ಏನನ್ನೂ ಹೇಳಿಲ್ಲವೆಂಬುದು ನಿಜ. ಸಲಹಾ ಸಮಿತಿಯು ನಡೆಸಬೇಕಾದ ವಿಚಾರಣೆಯನ್ನು ಕುರಿತು ಏನೂ ಹೇಳಿಲ್ಲ. ಉಪಖಂಡ (ಎ) ಇದನ್ನು ಸುಧಾರಿಸದೆ ಇದ್ದರೆ, ಮತ್ತು ಅದನ್ನು ಈಗ ಇದ್ದಂತೆ ಇಟ್ಟರೆ ಅದರ ಪರಿಣಾಮ ಏನಾಗುತ್ತದೆ. ನಾನು ತಿಳಿದುಕೊಂಡಂತೆ, ಆದೇಶ ಮಾಡಿದ್ದು ಸರಿಯೆಂಬುದಕ್ಕೆ ವರದಿಯನ್ನು ಪಡೆದುಕೊಳ್ಳುವುದು ಅದರ ಕರ್ತವ್ಯವಾಗಿದೆಯೆಂದು ಉಪಬಂಧ ಹೇಳುತ್ತದೆ. ಇಲ್ಲವಾದರೆ, ೩ ತಿಂಗಳಿಗಿಂತ ಹೆಚ್ಚಿನ ಅವಧಿಗೆ ಒಬ್ಬನನ್ನು ಬಂಧನದಲ್ಲಿರಿಸಿಕೊಂಡರೆ ಕಾರ್ಯನಿರ್ವಾಹಕ ಅಧಿಕಾರಿಗಳ ಕಾನೂನುಬಾಹಿರ ಕೃತ್ಯವಾದಂತಾಗುತ್ತದೆ. ಕಾರಣ ಯಾವ ದಿನಾಂಕದಂದು ಅವರದು ಮೂರು ತಿಂಗಳು ಬಂಧನದ ಅವಧಿಯು ಈ ಪ್ರಕ್ರಿಯೆಯಲ್ಲಿ ಕೊನೆಗೊಳ್ಳುವುದೋ ಅಂದು ಸಲಹಾ ಸಮಿತಿಯ ಶಿಫಾರಸ್ಸನ್ನು ಪಡೆದುಕೊಳ್ಳತಕ್ಕದ್ದು. ಆದ್ದರಿಂದ ಸರಕಾರದ ಕಾರ್ಯನಿರ್ವಾಹಕ ಅಧಿಕಾರಿಗಳು ಸಲಹಾ ಸಮಿತಿಯ ಮುಂದೆ ಕಾಗದ ಪತ್ರಗಳನ್ನು ಅಂದರೆ ಯಾವ ಕಾರಣಕ್ಕಾಗಿ ಆರೋಪಿಯನ್ನು ಬಂಧಿಸಲಾಯಿತು ಹಾಗೂ ಯಾವ ದಾಖಲೆಗಳ ಮೇಲೆ ಅವರು ಅವಲಂಬಿಸುವರು ಮತ್ತು ಯಾವ ದಾಖಲೆಗಳ ಮೇಲೆ ಅವರು ಈ ಪ್ರಕರಣದಲ್ಲಿ ತಮ್ಮ ಕೃತ್ಯಕ್ಕೆ ಸೋಲಾಗುವುದೆಂಬ ಕಾಗದಪತ್ರಗಳನ್ನು ಹಾಜರುಮಾಡದಿದ್ದರೆ ೩ ತಿಂಗಳಿಗಿಂತ ಹೆಚ್ಚಿಗೆ ಅವನನ್ನು ಬಂಧನದಲ್ಲಿಟ್ಟುಕೊಳ್ಳುವ

ಅಧಿಕಾರವನ್ನು ಅವರು ಕಳೆದುಕೊಳ್ಳುತ್ತಾರೆ.

ಆದ್ದರಿಂದ ಅವರ ಹಿತದೃಷ್ಟಿಯಿಂದ, ನನಗೆ ತಿಳಿದಂತೆ ಸರಕಾರಿ ಕಾರ್ಯನಿರ್ವಹಣೆಗೆ ಈ ಸಲಹಾ ಸಮಿತಿಯ ಮುಂದೆ ತಾವು ಯಾವ ಕಾಗದ ಪತ್ರಗಳ ಮೇಲೆ ಅವಲಂಬಿಸಿರುವರೋ ಆ ಕಾಗದ ಪತ್ರಗಳನ್ನು ಹಾಜರಮಾಡಬೇಕು, ಅವರು ಹಾಗೆ ಮಾಡಲು ತಪ್ಪಿದರೆ ಅವರು ಅಪರಾಧ ತಡೆಗಟ್ಟುವ ಆಡಳಿತದ ವಿಷಯದಲ್ಲಿ ಗುರುತರವಾದ ಗಂಡಾಂತರಕ್ಕೆ ಸಿಕ್ಕಿಕೊಳ್ಳುತ್ತಾರೆ. ಇದು ಇಷ್ಟೇ ನನ್ನ ದೃಷ್ಟಿಯಲ್ಲಿ ಸಾಕಾಗುವುದರಿಂದ ಕಾರ್ಯನಿರ್ವಾಹಕರು ಅದನ್ನು ಸಲಹಾ ಸಮಿತಿಯ ಮುಂದೆ ಇಡುವರು.

ನನ್ನ ಗೆಳೆಯರು ಇದರಿಂದ ಸಮಾಧಾನಗೊಳ್ಳದಿದ್ದರೆ, ನನ್ನದು ಮತ್ತೊಂದು ಪ್ರಸ್ತಾವನೆ ಇದೆ. ಅದೆಂದರೆ, ಯಾವುದೇ ನಿರ್ದಿಷ್ಟ ಉಪಬಂಧಗಳನ್ನು ಉಪಖಂಡ (ಎ)ದಲ್ಲಿ ಮಾಡದೆ ಅದರ ಉಪಖಂಡ (೪)ರ ಕೊನೆಯಲ್ಲಿ ಕೆಳಗಣ ಶಬ್ದಗಳನ್ನು ಕೂಡಿಸಬೇಕು. ಸಂಸತ್ತು ಸಹ ಈ ಬಗ್ಗೆ ಸಲಹಾ ಸಮಿತಿಯು ಅನುಸರಿಸಬೇಕಾದ ಪ್ರಕ್ರಿಯೆಯನ್ನು ಈ ಅನುಚ್ಛೇದದ ಖಂಡ (ಎ)ದ ೩ನೆಯ ಉಪಬಂಧದ ಅನ್ವಯ ವಿಚಾರಣೆ ಮಾಡುವ ಕಾಲಕ್ಕೆ ಅನುಸರಿಸುವ ಪ್ರಕ್ರಿಯೆಯನ್ನು ಗೊತ್ತುಪಡಿಸಬಹುದು. ಸಲಹಾ ಸಮಿತಿ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಗೊತ್ತುಪಡಿಸುವ ಅಧಿಕಾರವನ್ನು ಸಂಸತ್ತಿಗೆ ಕೊಡಲು ಸಿದ್ಧನಿದ್ದೇನೆ. ಅಂದರೆ ಇಂತಹ ಪ್ರಸಂಗದಲ್ಲಿ ಯಾವ ಪ್ರಕ್ರಿಯೆಯನ್ನು ಅನುಸರಿಸಬೇಕೆಂಬ ಬಗ್ಗೆ ಬರುವ ಸಂದರ್ಭಕ್ಕೆ ಮಾರ್ಗದರ್ಶಿಯಾಗುತ್ತದೆ. ಮಾನ್ಯರೆ, ನಾನು ಉತ್ತರಿಸಬಯಸುತ್ತೇನೆ.

ಮಾನ್ಯರೇ,

ಅನುಚ್ಛೇದ ೧೫೫ (ಎ)ದ ತಿದ್ದುಪಡಿಗೆ ಬೇರೆ ಬೇರೆ ದೃಷ್ಟಿಯಿಂದ ಮಾಡಿದ ಟೀಕೆಗಳಿಗೆ ನಾನು ಉತ್ತರಿಸಲು ಸಿದ್ಧನಿದ್ದೇನೆ.

ಈಗ ನಾನು ಕೆಲವು ಸಂಕೀರ್ಣ ಉಪಬಂಧಗಳ ಬಗೆಗೆ ಚರ್ಚಿಸುತ್ತೇನೆ.

**ಶ್ರೀ ಜಸ್ಪತ್‌ರಾಯ್ ಕಪೂರ್:** ಹಾಗಿದ್ದಲ್ಲಿ ಬಹುತರವಾಗಿ ಉಪಕಲಮ (ಬಿ) ಖಂಡ (೨) ಇದರ ಉಪಬಂಧವು ಹೋಗುವುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಯಾವುದೂ ಹೋಗುವುದಿಲ್ಲ.

**ಡಾ. ಬಕ್ಷಿ ಟೇಕಚಂದ** (ಪೂರ್ವ ಪಂಜಾಬ ಜನರಲ್): ಬಂಧಿಸಿದ ಕಾರಣವನ್ನು ಬಂಧಿತ ವ್ಯಕ್ತಿಗೆ ತಿಳಿಸುವುದಾಗಿಯೂ ಮತ್ತು ಅವನ ಕೊಟ್ಟ ವಿವರಣೆಯನ್ನು ತೆಗೆದುಕೊಳ್ಳುತ್ತೇವೆ ಎಂದು ನೀವು ಒಪ್ಪಿದ್ದೀರಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವನು ಲಿಖಿತದಲ್ಲಿ ತನ್ನ ಹೇಳಿಕೆಯನ್ನು ಕೊಡಲು ಅವಕಾಶವನ್ನು ಕಲ್ಪಿಸಿ ಕೊಡಲಾಗುವುದು.

**ಡಾ. ಬಕ್ಷಿ ಟೇಕಚಂದ:** ನಾನು ನಿಮ್ಮ ಗಮನ ಸೆಳೆದು ಉಳಿದ ವಿಷಯಗಳ ಬಗ್ಗೆ ಅಂದರೆ– ಮದ್ರಾಸ್ ಅಧಿನಿಯಮದಲ್ಲಿ ಆರೋಪಿಯ ವಿವರಣೆಯನ್ನು ಸಲಹಾ ಸಮಿತಿಯ ಮುಂದೆ ಇಡಲಾಗುವುದೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಎಲ್ಲ ಕಾಗದಪತ್ರಗಳನ್ನು ಅವನ ಮುಂದೆ ಇಡಲಾಗುವುದು ಇಷ್ಟೇ ನಾನು ಹೇಳಿದ್ದು.

**ಡಾ. ಬಕ್ಷಿ ಟೇಕಚಂದ:** ಎಲ್ಲ ಕಾಗದಪತ್ರಗಳನ್ನು ಅವನ ಮುಂದೆ ಇಡಲಿಕ್ಕಿಲ್ಲ. ನನಗೆ ಸ್ವಲ್ಪ ಅನುಭವವಿದೆ. ಇದು ಒಂದು ಸಣ್ಣ ವಿಷಯ ಎಂದು ಅವರು ಹೇಳುತ್ತಾರೆ. ಅವನಿಗೆ ತನ್ನ ವಿವರಣೆಯನ್ನು ಒಂದು ನಿರ್ದಿಷ್ಟ ಅವಧಿಯಲ್ಲಿ ಒಪ್ಪಿಸಲು ಹೇಳಿದರೆ ಈ ಉಪಬಂಧ ಸೇರಿಸಲು ನೀವು ಯಾಕೆ ಅಂಜುತ್ತೀರಿ. ಮದ್ರಾಸ್ ಅಧಿನಿಯಮದ ಕಲಂ ೩ ಉಪಖಂಡ (೨) ಉಪಕಲಂ (೧) ಇದರಲ್ಲಿ ಆರೋಪ ವಿವರಣೆಯನ್ನು

ಸಮಿತಿಯ ಮುಂದೆ ಇಡಲಾಗುವುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನೀವು ಹೇಳಿದ್ದರ ಒಳ ಅರ್ಥವನ್ನು ನಾನು ಗಮನಕ್ಕೆ ತೆಗೆದುಕೊಳ್ಳುತ್ತೇನೆ.

**ಡಾ. ಬಕ್ಷಿ ಟೇಕಚಂದ:** ನೀವು ಅದನ್ನು ಸ್ಪಷ್ಟವಾಗಿ ಯಾಕೆ ಹೇಳುತ್ತಿಲ್ಲ. ಇಂತಹದ್ದು ಬಾಂಬೆ ಅಧಿನಿಯಮದಲ್ಲಿ ಅಥವಾ ಯುನೈಟೆಡ್ ಪ್ರೊವಿನ್ಸಿಸ್ ಅಧಿನಿಯಮದಲ್ಲಿಯೂ ಇರುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಉಪಖಂಡ (ಎ)ದ ಅನ್ವಯ ನಾನು ಹೇಳಿದಂತೆ ಕಾಗದ ಪತ್ರಗಳನ್ನು ಸಲಹಾ ಸಮಿತಿಯ ಮುಂದೆ ಹಾಜರು ಮಾಡಿದಾಗ, ಆರೋಪಿಯು ತನ್ನ ಹೇಳಿಕೆಯನ್ನು ಸಲ್ಲಿಸಲು ಬರುವ ಒಳ ಅರ್ಥ ಇದರಲ್ಲಿದೆ, ಅದು ಹಾಗೆ ಇರದಿದ್ದರೆ, ನಾನು ಈಗ ಹೆಚ್ಚಿನ ಉಪಬಂಧವನ್ನು ರಚಿಸಬಯಸುವೆನು. ಸಂಸತ್ತು ಕಾನೂನಿನ ಮೂಲಕ ಈ ಬಗ್ಗೆ ಪ್ರಕ್ರಿಯೆಯನ್ನು ಗೊತ್ತುಪಡಿಸಬಹುದು. ಅಂಥ ಪ್ರಸಂಗ ಸಂಸತ್ತು ನಿರ್ದಿಷ್ಟವಾಗಿ ಈ ಕಾಗದ ಪತ್ರಗಳನ್ನು ಸಲಹಾ ಸಮಿತಿಗೆ ಒಪ್ಪಿಸಲೇಬೇಕೆಂದು ನಿಶ್ಚಯವಾಗಿ ಹೇಳುತ್ತದೆ. ಈಗ ನಾನು ಈ ಬಗೆಗೆ ಹೆಚ್ಚಿನ ಯಾವ ವಿನಾಯಿತಿಯನ್ನು ಕೊಡಲು ಇಚ್ಛಿಸುವುದಿಲ್ಲ.

**ಶ್ರೀ ಮಹಾವೀರ್ ತ್ಯಾಗಿ:** ಡಾ. ಅಂಬೇಡ್ಕರ್ ದಯವಿಟ್ಟು ನನಗೆ ಮಾತನಾಡಲು ಒಂದು ನಿಮಿಷ ಕೊಡುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆದರೆ ಈಗ ಸದ್ಯಕ್ಕೆ ಇಲ್ಲ.

**ಶ್ರೀ ಮಹಾವೀರ್ ತ್ಯಾಗಿ:** ಖಂಡ (೪)ರ ಅನ್ವಯ ಬಂಧಿತನಾದ ವ್ಯಕ್ತಿಗೆ ಸಂಸತ್ತು ಮಾಡಿದ ಕಾನೂನಿನ ಅನ್ವಯ ಇಲ್ಲವೆ ಪ್ರಾಂತೀಯ ಕಾನೂನಿನ ಅನ್ವಯ, ಆ ಪ್ರಕರಣಗಳನ್ನು ನ್ಯಾಯಾಧಿಕರಣವು ಪುನರ್ ಪರಿಶೀಲಿಸಬಹುದೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಗೆಳೆಯರಾದ ಶ್ರೀ ತ್ಯಾಗಿಯವರು ತಾವೇ ಎಲ್ಲಿ ಬಂಧಿತರಾಗಿರುವರೋ ಎಂಬ ಅಂಜಿಕೆಯಿಂದ ಗಾಬರಿಯಾಗಿದ್ದಾರೆ. ನನಗೆ ಆ ರೀತಿ ಏನೂ ಅನಿಸುವುದಿಲ್ಲ.

**ಶ್ರೀ ಮಹಾವೀರ್ ತ್ಯಾಗಿ:** ನಾನು ನಿಮ್ಮ ಸ್ಥಾನವನ್ನು ರಕ್ಷಿಸಲು ಹೆಣಗುತ್ತಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈಗ ನಾನು ಕೆಲವು ನಿರ್ದಿಷ್ಟ ಸಂಕೀರ್ಣಗಳ ಸಲಹೆಗಳನ್ನು ಕುರಿತು ಚರ್ಚಿಸಿದ್ದೇನೆ.

**ಪಂಡಿತ್ ಠಾಕೂರದಾಸ್ ಭಾರ್ಗವ:** ಪಾಟೀಸವಾಲು ಹಾಗೂ ಪ್ರತಿರಕ್ಷಣೆ ಇವುಗಳ ಸಂರಕ್ಷಣೆಯ ಬಗೆಗೆ ಏನು ಮಾಡಿದ್ದೀರಿ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಪಾಟೀ ಸವಾಲು ಮಾಡುವ ಹಕ್ಕು ಈಗಾಗಲೇ ದಂಡ ಪ್ರಕ್ರಿಯಾ ಸಂಹಿತೆಯಲ್ಲಿದೆ ಮತ್ತು ಸಾಕ್ಷಿ ಅಧಿನಿಯಮದಲ್ಲಿದೆ. ಯಾವುದಾದರೊಂದು ಪ್ರಾಂತೀಯ ಸರಕಾರ ಹುಚ್ಚರಂತೆ ಈ ಕಲಂಗಳನ್ನು ತೆಗೆದು ಹಾಕಿದರೆ, ಉಪಬಂಧವನ್ನು ಕಿತ್ತುಹಾಕಿದರೆ ಅಂತಹ ಪ್ರಸಂಗದಲ್ಲಿ ಏನನ್ನೂ ಮಾಡಲು ಸಾಧ್ಯವಿಲ್ಲ. ಅದು ವಿನಾಕಾರಣವಾಗುತ್ತದೆ. ಪ್ರತಿರಕ್ಷಣೆ ಪಾಟೀಸವಾಲನ್ನೂ ಒಳಗೊಳ್ಳುತ್ತದೆ.

**ಪಂಡಿತ್ ಠಾಕೂರದಾಸ್ ಭಾರ್ಗವ:** ಅವರು ಈ ಅಧಿಕಾರವನ್ನು ಸಹ ಕಸಿದುಕೊಂಡು ಹೋಗುವ ಮಟ್ಟಿಗೆ ಯತ್ನಿಸಿದರೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಭಾರತದಲ್ಲಿ ಎಲ್ಲಿಯಾದರೂ ಪಾಟೀ ಸವಾಲು ಮಾಡುವ

ಹಕ್ಕನ್ನು ಕಸಿದುಕೊಂಡು ಹೋದ ಬಗೆಗೆ ಒಂದಾದರೂ ಉದಾಹರಣೆಯನ್ನು ಕೊಡಬಲ್ಲಿರಾ? ನಾನು ಇಂತಹ ಪ್ರಕರಣವನ್ನೇ ಕಂಡಿಲ್ಲ.

ಮಾನ್ಯರೇ,

ಅತಿ ಹೆಚ್ಚಿನ ಶಿಕ್ಷೆ ವಿಧಿಸುವ ಬಗ್ಗೆ, ಅದರಂತೆ ಕನಿಷ್ಠ ಶಿಕ್ಷೆಯನ್ನೂ ಗೊತ್ತುಪಡಿಸಬೇಕೆಂದು ಹೇಳುವವರು ಖಂಡ (೪) ಇದರ ಉಪಬಂಧಗಳನ್ನು ದಯವಿಟ್ಟು ಗಮನಿಸಿರಿ. ಇಂತಹ ಕಾನೂನು ಮಾಡುವಾಗ ನಿರ್ದಿಷ್ಟವಾಗಿ ಹೇಳಲಾಗಿದೆ. ಇಂತಹ ಕಾನೂನನ್ನು ಮಾಡುವಾಗ ಸಂಸತ್ತು ಸಹ ಅತಿ ಹೆಚ್ಚಿನ ಶಿಕ್ಷೆಯ ಅವಧಿಯನ್ನು ಗೊತ್ತುಪಡಿಸುತ್ತದೆ. ಅಂದರೆ ಗರಿಷ್ಠ ಅವಧಿಯನ್ನು ಗೊತ್ತುಪಡಿಸುತ್ತದೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಬಹುದು ಈ ಪದವು......

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಬಹುದು ಎಂದು ಇದರ ಅರ್ಥವು ಆಗುತ್ತದೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಸಂಸತ್ತು ಅದನ್ನು ಮಾಡಬಹುದು ಇಲ್ಲವೆ ಮಾಡದೆ ಇರಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ನಿಜವಿದೆ, ಆದರೆ ಅದು ಹಾಗೆ ಮಾಡಿದರೆ ಅದರ ಅತಿ ಗರಿಷ್ಠ ಶಿಕ್ಷೆಯ ಅವಧಿಯನ್ನು ಗೊತ್ತುಪಡಿಸುತ್ತದೆ. ಇನ್ನೊಂದು ಪ್ರಶ್ನೆ ಎತ್ತಿದ್ದು, ಅದೆಂದರೆ ಬಂಧಿತನ ಹಾಗೂ ಆತನ ಕುಟುಂಬ ನಿರ್ವಹಣೆ ಉಪಜೀವನ ಪ್ರಶ್ನೆಯು ಬರುತ್ತದೆ.

**ಶ್ರೀ ಜಸ್ವತ್‌ರಾಯ ಕಪೂರ್:** ಕಾಲಕಾಲಕ್ಕೆ ಪುನರ್ ಅವಲೋಕನ ಮಾಡುವ ಬಗೆ ಯಾವುದು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಆ ವಿಷಯಕ್ಕೆ ಬರುತ್ತೇನೆ, ಅದನ್ನು ನಾವು ಸಂವಿಧಾನದಲ್ಲಿ ಅಳವಡಿಸುವ ವಿಷಯದಲ್ಲಿ ಉದಾ: ಕೆಲವು ಪ್ರಸಂಗದಲ್ಲಿ ಅದು ಅವಶ್ಯವಿದೆ. ಇನ್ನು ಕೆಲವು ಪ್ರಸಂಗದಲ್ಲಿ ಅದರ ಆವಶ್ಯಕತೆಯು ಇರಲಿಕ್ಕಿಲ್ಲ. ಖಂಡ (೪) ಇದು ಅವನ ಉಪಜೀವನಕ್ಕೆ ಕೊಡುವ ಬಗ್ಗೆ ಸಂಸತ್ತು ಹೇಳುತ್ತದೆ.

ನನ್ನ ವೈಯಕ್ತಿಕ ದೃಷ್ಟಿಯಲ್ಲಿ ಉಪಜೀವನ ತುಂಬಾ ಸಣ್ಣ ವಿಷಯ. ಇದು ಬಲಹೀನವಾದ ವಾದ ಪ್ರತಿವಾದವಾಗಿದೆ. ಒಬ್ಬನು ರಾಜ್ಯ ಸರಕಾರವನ್ನು ಕಿತ್ತೊಗೆಯಲು ಪ್ರಯತ್ನಿಸಿದರೆ (ಆಗ) ಅವನನ್ನು ಬಂಧಿಸಿದರೆ, ಆಗ ಅವನನ್ನು ಜೇಲಿನಲ್ಲಿ ಇಟ್ಟಾಗ ಸರಕಾರವು ಅವನಿಗೆ ಊಟ ಉಪಚಾರ ಮಾಡಿಸಬೇಕು, ಆದರೆ ಅವನು ತನ್ನ ಉಪಜೀವನಕ್ಕೆ ನಿರ್ವಹಣೆ ಕೇಳಲು ಅಲ್ಪ ಪ್ರಮಾಣದ ಹಕ್ಕು ಇದೆ. ಆದರೂ ಸಂಸತ್ತು ಹಾಗೂ ರಾಜ್ಯ ಶಾಸನಸಭೆಗಳು ಅನುಗ್ರಹಪೂರ್ವಕವಾದ ಉಪಬಂಧಗಳನ್ನು ಮಾಡಬಹುದು. ಇಂತಹ ಉಪಬಂಧವನ್ನು ಸಂಸತ್ತು ತನ್ನ ಯಾವುದೇ ಕಾನೂನಿನಲ್ಲಿ ಖಂಡ (೪)ರಲ್ಲಿ ಕಾಣಿಸಿದಂತೆ ಮಾಡಬಹುದು.

ಬಂಧಿತ ವ್ಯಕ್ತಿಗಳ ಪ್ರಕರಣಗಳ ಪುನರ್ ಪರಿಶೀಲನೆಯು ಯಾಕೆ ಸಾಧ್ಯವಿಲ್ಲ. ಅಲ್ಲೇ ಪುನಃ ಪ್ರಾಂತೀಯ ಸರಕಾರವು ತನ್ನ ಕಾನೂನಿನ ಅಡಿಯಲ್ಲಿ ಇಂತಹ ಉಪಬಂಧ ಅಂದರೆ ಕಾಲಕಾಲಕ್ಕೆ ಪುನರ್ ಪರಿಶೀಲನೆ ಮಾಡಲು ಇಲ್ಲವೆ ಸಂಸತ್ತು ಖಂಡ ೪ರ ಕೆಳಗೆ ಕಾನೂನು ಮಾಡುವಾಗ ಕಾಲಕಾಲಕ್ಕೆ ಪುನರ್ ಪರಿಶೀಲಿಸುವ ಅವಕಾಶವನ್ನು ಕಲ್ಪಿಸುವುದು, ನನಗೆ ತಿಳಿದಂತೆ ಇದು ಸಂಪೂರ್ಣ ಆಡಳಿತಾತ್ಮಕ ವಿಷಯವಾಗಿದ್ದು, ಇದನ್ನು ಕಾಯಿದೆಯಿಂದ ಸರಿಪಡಿಸಬಹುದು.

ನನ್ನ ಗೆಳೆಯರಾದ ಶ್ರೀ ಅನಂತಶಯನಂ ಅಯ್ಯಂಗಾರ್ ಅವರು ಹೇಳಿದುದೇನೆಂದರೆ ಬಂಧಿತರ ಬಗೆಗೆ ನನಗೆ ವಿಶೇಷವಾದ ಆಸಕ್ತಿ ಇರುವುದಿಲ್ಲ. ಯಾಕೆಂದರೆ ನಾನು ಎಂದೂ ಜೇಲಿನಲ್ಲಿ ಇರಲಿಲ್ಲ. ಆದರೆ ಹಿಂದಿನ ಕ್ಯಾಬಿನೆಟ್‌ನಲ್ಲಿ ಪುನರ್ ಪರಿಶೀಲನೆ ಕಾನೂನು ಜಾರಿಯಲ್ಲಿ ತರುವುದಕ್ಕೆ ನಾನೇ ಕಾರಣ.

ಬಹಳ ಜನ ಕ್ಯಾಬಿನೆಟ್ ಸದಸ್ಯರೇ ಅದಕ್ಕೆ ವಿರೋಧವಿದ್ದರು. ನಾನು ಹಾಗೂ ಇನ್ನೊಬ್ಬ ಯುರೋಪಿಯನ್ ಕ್ಯಾಬಿನೆಟ್ ಸದಸ್ಯರೆ ಅದಕ್ಕಾಗಿ ಹೋರಾಡಿ ಅದರಲ್ಲಿ ಯಶಸ್ವಿಯಾದರು. ಸ್ವಾತಂತ್ರ್ಯ ಮತ್ತು ಹಕ್ಕುಗಳ ಬಗೆಗೆ ಗೊತ್ತಾಗಲು ಜೇಲಿಗೆ ಹೋಗುವ ಆವಶ್ಯಕತೆ ಇರುವುದಿಲ್ಲ.

ನನ್ನ ಗೆಳೆಯರಾದ ಶ್ರೀ ಕಾಮತ್ ಅವರು ಇನ್ನೊಂದು ವಿಷಯ ಎತ್ತಿದ್ದಾರೆ. ಆರೋಪಿಯ ಅನುಕೂಲಕ್ಕಾಗಿ ಉಚ್ಚ ನ್ಯಾಯಾಲಯವು ರಿಟ್‌ನ್ನು ಹೊರಡಿಸಬಹುದೇ? ಅದೂ ಅಪರಾಧ ತಡೆಗಟ್ಟುವ ಕಾನೂನಿನ ಅಡಿಯಲ್ಲಿ ಅಂತಾ ಕೇಳಿದ್ದಾರೆ. ಮೇಲುನೋಟಕ್ಕೆ ಹೇಬಿಯಸ್ ಕಾರ್ಪಸ್ ರಿಟ್‌ನ್ನು ಹೊರಡಿಸಲು ಕೇಳಬಹುದು. ಅದನ್ನು ಉಚ್ಚ ನ್ಯಾಯಾಲಯವು ದಯಪಾಲಿಸಬಹುದು. ಆದರೆ ಉಳಿದ ರಿಟ್ಟುಗಳು ಬೇರೆ ಬೇರೆ ಸಂದರ್ಭಗಳ ಮೇಲೆ ಆಯಾ ವ್ಯಕ್ತಿಗಳಿಗೆ ಸಂಬಂಧಿಸಿದವು ಇರುತ್ತವೆ. ಹೇಬಿಯಸ್ ಕಾರ್ಪಸ್ಸಿನ ಉದ್ದೇಶವು ಬಹು ಸೀಮಿತ ಇರುತ್ತದೆ. ಕೋರ್ಟಿನ ಉದ್ದೇಶವು ಆ ಮನುಷ್ಯನನ್ನು ಕಾನೂನಿನ ರೀತಿ ಬಂಧಿಸಿದರೋ ಇಲ್ಲವೇ ಅಪರಾಧ ತಡೆಗಟ್ಟುವ ಕಾನೂನಿನ ಅಡಿಯಲ್ಲಿ ಬಂಧಿಸಿರುವರೋ? ಎಂಬುದನ್ನು ತಿಳಿಯಲು ಹಾಗೂ ಅವನನ್ನು ಕೇವಲ ಕಾರ್ಯ ನಿರ್ವಾಹಕರು ಬಂಧಿಸಿರುವರೋ ಎಂಬುದನ್ನು ಕೋರ್ಟ್ ತಿಳಿಯಬಯಸುತ್ತದೆ. ಒಮ್ಮೆ ಉಚ್ಚ ನ್ಯಾಯಾಲಯವು ಅವನನ್ನು ಒಂದು ಕಾನೂನಿನ ಅಡಿಯಲ್ಲಿ ಬಂಧಿಸಲಾಗಿದೆಯೆಂದು ಕಂಡುಬಂದರೆ, ಹೇಬಿಯಸ್ ಕಾರ್ಪಸ್ ಅಲ್ಲಿಗೆ ಮುಕ್ತಾಯವಾಗುತ್ತದೆ. ಯಾವುದೇ ಕಾನೂನಿನ ಅಡಿಯಲ್ಲಿ ಅವನನ್ನು ಬಂಧಿಸಿರದಿದ್ದರೆ, ಮೇಲುನೋಟಕ್ಕೆ ಬಂಧಿತ ವ್ಯಕ್ತಿಯು ಬೇರೆ ರಿಟ್ಟುಗಳಿಗಾಗಿ ವಿನಂತಿಸಿಕೊಳ್ಳಬೇಕು. ಅವನಿಗೆ ಯೋಗ್ಯ ಪರಿಹಾರ ಕೊಡಲು ಸೂಕ್ತವಾದ ಆವಶ್ಯವಾದ ರಿಟ್ ಕೇಳಬಹುದು ಎಂಬುದು ಶ್ರೀ ಕಾಮತ್ ಅವರಿಗೆ ನನ್ನ ಉತ್ತರವಾಗಿದೆ.

ಮಾನ್ಯರೇ,

ನಾನು ಸೂಚಿಸಿದ ತಿದ್ದುಪಡಿಗಳನ್ನು ಸಂಸತ್ತು ಸ್ವೀಕರಿಸುವುದೆಂದು ನಾನು ಆಶಿಸುತ್ತೇನೆ ಮತ್ತು ಅನುಚ್ಛೇದ ೧೫ಎ ಇದನ್ನು ಸ್ವೀಕರಿಸುವುದೆಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ನಾನು ತಿದ್ದುಪಡಿಗಳನ್ನು ಈಗ ಮತಕ್ಕೆ ಹಾಕುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವೆಲ್ಲವುಗಳನ್ನು ತಿರುಗಿ ತೆಗೆದುಹಾಕಬೇಕು.

**ಶ್ರೀ ನಜಿರುದ್ದೀನ್ ಅಹ್ಮದ್** (ವೆಸ್ಟ್ ಬೆಂಗಾಲ, ಮುಸ್ಲಿಂ): ಹೊಸ ಖಂಡವನ್ನು ಈಗ ಸೇರಿಸಲಾಗಿದೆ. ಅವುಗಳನ್ನು ಸಹ ಮತಕ್ಕೆ ಹಾಕುವಿರಾ?

**ಮಾನ್ಯ ಸಭಾಧ್ಯಕ್ಷರು:** ಹೌದು ಈಗಲೆ.

**ಮಾನ್ಯ ಸಭಾಧ್ಯಕ್ಷರು;** ಪ್ರಶ್ನೆಯೆಂದರೆ, ಮೇಲಿನ ತಿದ್ದುಪಡಿ ಸಂಖ್ಯೆ ೧ ಖಂಡ (೧) ಹೊಸ ಪ್ರಸ್ತಾವನೆಯ ಪರಿಚ್ಛೇದ ೧೫ಎ, ಇದರಲ್ಲೇ ತನಗೆ ಬೇಕಾದ ವಕೀಲ ವೃತ್ತಿಯನ್ನು ನಡೆಯಿಸುವವನು ಇವುಗಳ ಬದಲು ತನಗೆ ಬೇಕಾದ ಕಾನೂನಿನ ವೃತ್ತಿ ನಡೆಯಿಸುವ ಲೀಗಲ್ ಪ್ರಾಕ್ಟೀಶನರ್, ಎಲ್ಲ ಕ್ರಿಮಿನಲ್ ಪ್ರಕರಣಗಳಲ್ಲಿ ಹಾಗೂ ವಿಚಾರಣೆಯಲ್ಲಿ ಸೇರಿಸತಕ್ಕದ್ದು.

**ಮಾನ್ಯ ಸಭಾಧ್ಯಕ್ಷರು:** ಈಗ ಸಂಖ್ಯೆ ೭

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಡಾ. ಅಂಬೇಡ್ಕರ್ ಅವರು ಈ ತಿದ್ದುಪಡಿಯ ಒಂದು ಭಾಗವನ್ನು ಸ್ವೀಕರಿಸಿದ್ದಾರೆ. ಇದನ್ನು ಮತಕ್ಕೆ ಹಾಕುವ ಆವಶ್ಯಕತೆ ಇರುವುದಿಲ್ಲ. ಅದನ್ನು ತಿರಸ್ಕರಿಸಿದರೆ ಆಗ ಡಾ. ಅಂಬೇಡ್ಕರ್ ಅವರು ಅದರ ಒಂದು ಭಾಗವನ್ನು ಸ್ವೀಕರಿಸಲು ಸಾಧ್ಯವಾಗಲಿಕ್ಕಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಎಲ್ಲ ತಿದ್ದುಪಡಿಗಳೂ ಸ್ವತಂತ್ರವಾದವು.

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರು ಇಂದು ಮಂಡಿಸಿದ ಕೆಲವು ತಿದ್ದುಪಡಿಗಳು ಹಾಗೂ ನಿನ್ನೆಯ ದಿನ ಮಂಡಿಸಿದ ಈ ಎಲ್ಲ ತಿದ್ದುಪಡಿಗಳನ್ನು ನಾನು ಈಗ ಮಂಡಿಸಲು ಇಚ್ಛಿಸುತ್ತೇನೆ. (ಆರು ತಿದ್ದುಪಡಿಗಳು ತಿರಸ್ಕೃತವಾದವು) ಕೆಳಗಣ ತಿದ್ದುಪಡಿಗಳು ಸ್ವೀಕೃತವಾದವು:

ಅನುಚ್ಛೇದ ೧೫ಎ ಖಂಡ (೧)ರಲ್ಲಿ ಸಮಾಲೋಚನೆಯ ಪದದ ನಂತರ 'ಸಂರಕ್ಷಿಸಲ್ಪಡು' ಎಂಬ ಈ ಪದವನ್ನು ಸೇರಿಸತಕ್ಕದ್ದು.

ಅನುಚ್ಛೇದ ೧೫ಎ ಖಂಡ (೩)ರಲ್ಲಿ ಅನುಚ್ಛೇದದಲ್ಲಿ ಯಾವುದೋ ಎಂಬ ಈ ಪದಗಳನ್ನು ಕಂಸಿನಲ್ಲಿ ಹಾಕಿ ಮತ್ತು ಸಂಖ್ಯೆಗಳು ಅನುಚ್ಛೇದ ಖಂಡಗಳಲ್ಲಿ (೧) ಮತ್ತು (೨) ಇವುಗಳನ್ನು ಸೇರಿಸತಕ್ಕದ್ದು.

ಅನುಚ್ಛೇದ ೧೫-ಎ ಖಂಡ (೩)ರ ನಂತರ ಕೆಳಗಣ ಖಂಡವನ್ನು ಸೇರಿಸಬೇಕು.

(೩ಎ) ಖಂಡ (೩) ಉಪಖಂಡ (ಬಿ)ದ ಕೆಳಗೆ ಯಾವುದೇ ವ್ಯಕ್ತಿಗೆ ಸಂಬಂಧಿಸಿದಂತೆ ಒಂದು ಆದೇಶವನ್ನು ಒಬ್ಬ ಅಧಿಕಾರಿಯು ಮಾಡಿದರೆ, ಆ ಆದೇಶವನ್ನು ಮಾಡುವ ಅಧಿಕಾರಿಯು ಸಾಧ್ಯವಾದಷ್ಟು ಬೇಗನೆ ಅವನಿಗೆ ಯಾವ ಕಾರಣಗಳ ಮೇಲೆ ಇಂತಹ ಈ ಆದೇಶವನ್ನು ಮಾಡಲಾಗಿದೆ, ಮತ್ತು ಆದಷ್ಟು ಶೀಘ್ರ ಅವನಿಗೆ ತನ್ನ ಆ ಆದೇಶದ ವಿರುದ್ಧ ತನ್ನ ಮನವಿ ಸಲ್ಲಿಸುವ ಅವಕಾಶವನ್ನು ಕಲ್ಪಿಸಿಕೊಡಲಾಗುವುದು, (೨ಬಿ) ಈ ಅನುಚ್ಛೇದ ಖಂಡ (೨ಎ)ದಲ್ಲಿ ಉಪಖಂಡ (ಬಿ)ದ ಕೆಳಗೆ ಆದೇಶ ಮಾಡುವ ಯಾವುದೇ ಅಧಿಕಾರಿಯು, ಯಾವುದೇ ಸಂಗತಿಯನ್ನು ಸಾರ್ವಜನಿಕ ಹಿತದ ದೃಷ್ಟಿಯಿಂದ ಬಹಿರಂಗಪಡಿಸುವುದು ಯೋಗ್ಯವಲ್ಲವೆಂದು ಅನಿಸಿದರೆ ಅದನ್ನು ಅವನು ಬಹಿರಂಗಪಡಿಸುವ ಆವಶ್ಯಕತೆಯು ಇರುವುದಿಲ್ಲ. ಅನುಚ್ಛೇದ ೧೫ (ಎ) ಇದರ ಖಂಡ ೯ಳ ಇದರ ಕೊನೆಯಲ್ಲಿ ಕೆಳಗಿನವುಗಳನ್ನು ಸೇರಿಸತಕ್ಕದ್ದು.

"ಈ ಅನುಚ್ಛೇದ ಖಂಡ ೨ಅ ಕೆಳಗೆ ವಿಚಾರ ಮಾಡಲು ಸಲಹಾ ಸಮಿತಿಯು ಅನುಸರಿಸಬೇಕಾದ ಪ್ರಕ್ರಿಯೆಯನ್ನು ಕುರಿತು ಸಂಸತ್ತು ಕಾನೂನು ಮಾಡಬಹುದು."

**(ಅನುಚ್ಛೇದ ೧೫-ಎ ತಿದ್ದುಪಡಿಯಾದಂತೆ ಸಂವಿಧಾನದಲ್ಲಿ ಸೇರಿಸಲಾಯಿತು.)**

**ಮಾನ್ಯ ಸಭಾಧ್ಯಕ್ಷರು:** ನನಗೆ ವಿಷಾದವೆನಿಸುತ್ತದೆ ನಾನು ಡಾ. ಬಕ್ಷಿ ಟೇಕಚಂದ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುವುದನ್ನು ಮರೆತೆನು. ನಿಜವಾಗಿಯೂ ಇದರ ಆವಶ್ಯಕತೆಯು ಇರಲಿಲ್ಲ. ಇದು ಡಾ. ಅಂಬೇಡ್ಕರ್ ಅವರ ತಿದ್ದುಪಡಿಯಲ್ಲಿ ಬಂದಿದೆ.

# ವಿಧಿ ೨೦೯ಎ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಅನುಚ್ಛೇದ III ಮತ್ತು IX ಭಾಗ ೬ರ ನಂತರ ಕೆಳಗಣವನ್ನು ಸೇರಿಸತಕ್ಕದ್ದು ಎಂದು ಮಂಡಿಸುತ್ತೇನೆ.

## ಅಧ್ಯಾಯ ೮
## ಕೆಳಗಿನ ನ್ಯಾಯಾಲಯಗಳು

೨೦೯–ಎ ಜಿಲ್ಲಾ ನ್ಯಾಯಾಧೀಶನ ನೇಮಕ (೧) ಯಾವುದೇ ರಾಜ್ಯದ ಜಿಲ್ಲಾ ನ್ಯಾಯಾಧೀಶನನ್ನು ಆಯಾ ರಾಜ್ಯದ ರಾಜ್ಯಪಾಲರು ಆ ರಾಜ್ಯದ ಅಧಿಕಾರ ವ್ಯಾಪ್ತಿಯುಳ್ಳ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚನೆ ನಡೆಯಿಸಿ ನೇಮಕ ಮಾಡತಕ್ಕದ್ದು ಹಾಗೂ ಅವುಗಳನ್ನು ಪ್ರಕಟಿಸತಕ್ಕದ್ದು.

(೨) ಒಂದು ರಾಜ್ಯದ ಇಲ್ಲವೆ ಕೇಂದ್ರಾಡಳಿತ ಪ್ರದೇಶದಲ್ಲಿ ಈಗಾಗಲೇ ಸೇವೆಯಲ್ಲಿರದ ವ್ಯಕ್ತಿಯು ಅವನು ಏಳು ವರ್ಷಕ್ಕಿಂತ ಕಡಿಮೆ ವಕೀಲನಾಗಿ ಇಲ್ಲವೆ ಪ್ಲೀಡರ್ ಆಗಿದ್ದು ಉಚ್ಚ ನ್ಯಾಯಾಲಯವು ಅವನ ನೇಮಕಕ್ಕಾಗಿ ಶಿಫಾರಸು ಮಾಡಿರಬೇಕು. ಅಂತಹ ವ್ಯಕ್ತಿಗಳು ಜಿಲ್ಲಾ ನ್ಯಾಯಾಧೀಶರಾಗಿ ನೇಮಕ ಮಾಡಲು ಅರ್ಹರಿರುತ್ತಾರೆ.

೨೦೯ಬಿ. ನ್ಯಾಯಾಂಗಕ್ಕೆ ಜಿಲ್ಲಾ ನ್ಯಾಯಾಧೀಶರ ನೇಮಕವನ್ನು ಹೊರತುಪಡಿಸಿ ಇತರರ ನೇಮಕ ಕುರಿತು.

ರಾಜ್ಯದ ನ್ಯಾಯಾಂಗ ಸೇವೆಯಲ್ಲಿ ಜಿಲ್ಲಾ ನ್ಯಾಯಾಧೀಶರನ್ನು ಇತರರ ನೇಮಕಕ್ಕಾಗಿ ರಾಜ್ಯಪಾಲರು ಇದಕ್ಕಾಗಿ ಮಾಡಿದ ನೇಮಕಗಳಿಗನುಗುಣವಾಗಿ ಪಬ್ಲಿಕ್ ಸರ್ವಿಸ್ ಕಮೀಶನದೊಂದಿಗೆ ಹಾಗೂ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ನೇಮಕ ಮಾಡತಕ್ಕದ್ದು.

೨೦೯ಸಿ. ಅಧೀನ ನ್ಯಾಯಾಲಯಗಳ ಮೇಲೆ ನಿಯಂತ್ರಣ ಉಚ್ಚ ನ್ಯಾಯಾಲಯದ ಅಧೀನದಲ್ಲಿರುವ ಜಿಲ್ಲಾ ನ್ಯಾಯಾಲಯ ಹಾಗೂ ಅದರ ಅಧೀನ ನ್ಯಾಯಾಲಯಗಳ ಮೇಲಣ ನಿಯಂತ್ರಣ ಮತ್ತು ರಾಜ್ಯ ಸರಕಾರದ ನ್ಯಾಯಾಂಗ ಸೇವೆಯಲ್ಲಿರುವ ವ್ಯಕ್ತಿಗಳನ್ನು ನಿರ್ದಿಷ್ಟ ಸ್ಥಳಕ್ಕೆ ನೇಮಕ ಮಾಡುವುದು ಮತ್ತು ಅವರ ಪದೋನ್ನತಿ ಮತ್ತು ಜಿಲ್ಲಾ ನ್ಯಾಯಾಧೀಶರ ಹುದ್ದೆಗಿಂತ ಕಡಿಮೆ ಹುದ್ದೆ ಹೊಂದಿದವರ ಬಗ್ಗೆ ಇವುಗಳನ್ನೊಳಗೊಂಡ ನಿಯಂತ್ರಣವು ಉಚ್ಚ ನ್ಯಾಯಾಲಯಕ್ಕೆ ಇರುತ್ತದೆ. ಆದರೆ ಈ ಅನುಚ್ಛೇದ ಯಾವುದೇ ವ್ಯಕ್ತಿಯನ್ನು ಕಾನೂನುಬದ್ಧವಾಗಿ ಸೇವಾ ನಿಯಮಾವಳಿಗೆ ನಿಯಂತ್ರಿಸುವ ಕಾನೂನಿನಲ್ಲಿ ಅವನಿಗೆ ಇರುವ ಮೇಲ್ಮನವಿ ಹಕ್ಕನ್ನು ಕಸಿದುಕೊಳ್ಳುತ್ತದೆ ಎಂದು ತಿಳಿಯಬಾರದು. ಇಲ್ಲವೆ ಆ ಸೇವಾ ನಿಯಮಾವಳಿಗಳಲ್ಲಿ ಹೇಳಿದವುಗಳನ್ನು ಹೊರತುಪಡಿಸಿ ಆತನ ವಿಚಾರಣೆ ಮಾಡಲು ಉಚ್ಚ ನ್ಯಾಯಾಲಯಕ್ಕೆ ಅಧಿಕಾರವಿದೆಯೆಂದು ತಿಳಿಯಬಾರದು.

೨೦೯ಡಿ. (೧) ಈ ಅಧ್ಯಾಯದಲ್ಲಿ–

(ಎ) 'ಜಿಲ್ಲಾ ನ್ಯಾಯಾಧೀಶ' ಈ ಪದವು ಸಿಟಿ ಸಿವ್ಹಿಲ್ ಕೋರ್ಟ್ ನ್ಯಾಯಾಧೀಶರ ಹಾಗೂ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರನ್ನು ಜಂಟೀ ಜಿಲ್ಲಾ ನ್ಯಾಯಾಧೀಶರ ಸಹಾಯಕ ಜಿಲ್ಲಾ ನ್ಯಾಯಧೀಶನ ಸ್ಮಾಲ್ ಕಾಸ್ ಕೋರ್ಟ್‌ನ ಮುಖ್ಯ ನ್ಯಾಯಾಧೀಶ, ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್, ಹೆಚ್ಚುವರಿ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಮತ್ತು ಸತ್ರ ನ್ಯಾಯಾಧೀಶ, ಹೆಚ್ಚುವರಿ ಸತ್ರ ನ್ಯಾಯಾಧೀಶ ಮತ್ತು ಸಹಾಯಕ ಸತ್ರ ನ್ಯಾಯಧೀಶ ಇವರನ್ನು ಒಳಗೊಂಡಿದ್ದು ಇರುತ್ತದೆ.

(ಬಿ) 'ನ್ಯಾಯಾಂಗ ಸೇವೆ' ಈ ಪದವು ಜಿಲ್ಲಾ ನ್ಯಾಯಾಧೀಶರ ಸ್ಥಳ ತುಂಬುವ ಉದ್ದೇಶಿತ ವ್ಯಕ್ತಿಗಳು ಮತ್ತು ಜಿಲ್ಲಾ ನ್ಯಾಯಾಧೀಶ ಹುದ್ದೆಗಿಂತ ಕೆಳಗಿನ ದರ್ಜೆಯ ನ್ಯಾಯಾಲಯದ ಹುದ್ದೆ ಈ ಸೇವೆಗಳನ್ನು ಒಳಗೊಂಡಿದ್ದು ಇರುತ್ತದೆ.

೨೦೯ ಎಫ್: ಕೆಲವು ವರ್ಗದ ಮ್ಯಾಜಿಸ್ಟ್ರೇಟರುಗಳಿಗೆ ಅನ್ವಯವಾಗುವ ಈ ಅಧ್ಯಾಯದ ಕೆಲವು ಉಪಬಂಧಗಳು.

ರಾಜ್ಯಪಾಲರು ಒಂದು ಸಾರ್ವಜನಿಕ ಅಧಿಸೂಚನೆಯನ್ನು ಹೊರಡಿಸಿ ಈ ಮುಂದಿನ ಉಪಬಂಧಗಳು ಹಾಗೂ ಅದರ ಅಡಿ ಮಾಡಿದ ನಿಯಮಗಳು ಕೆಲವು ವರ್ಗಗಳಿಗೆ ಹಾಗೂ ರಾಜ್ಯದ ಯಾವುದೇ ವರ್ಗ ಅಥವಾ ಯಾವುದೇ ವರ್ಗದ ಮ್ಯಾಜಿಸ್ಟ್ರೇಟ್ ಇವರಿಗೆ ರಾಜ್ಯ ನ್ಯಾಯಾಂಗ ಸೇವೆಗೆ ನೇಮಕವಾದವರಿಗೆ ಅನ್ವಯಿಸುವಂತೆ ಕೆಲವು ತಿದ್ದುಪಡಿಗಳನ್ನು ಆ ಅಧಿಸೂಚನೆಯಲ್ಲಿ ಕಾಣಿಸಿದಂತೆ ಹಾಗೂ ಅಪವಾದಗಳೊಂದಿಗೆ ಇಂತಹ ದಿನಾಂಕದಿಂದ ಜಾರಿಯಲ್ಲಿ ಬರುತ್ತವೆ ಎಂದು ನಿರ್ದೇಶಿಸಬೇಕು.

ಮಾನ್ಯರೆ, ಈ ಉಪಬಂಧಗಳ ಉದ್ದೇಶವು ಎರಡು ವಿಧವಾಗಿದೆ. ಜಿಲ್ಲಾ ನ್ಯಾಯಾಧೀಶರ ಹಾಗೂ ಅಧೀನ ನ್ಯಾಯಾಧೀಶರ ನೇಮಕ ಕುರಿತಂತೆ ಮತ್ತು ಅವರ ವಿದ್ಯಾರ್ಹತೆಯನ್ನು ಕುರಿತಂತೆ ನಿಯಮಗಳನ್ನು ರಚಿಸುವುದು. ಎರಡನೆಯ ಉದ್ದೇಶವು ದಿವಾಣಿ ನ್ಯಾಯಾಂಗವನ್ನು ಸಂಪೂರ್ಣವಾಗಿ ಉಚ್ಚ ನ್ಯಾಯಾಲಯದ ನಿಯಂತ್ರಣದಲ್ಲಿಡುವುದು ಇದನ್ನು ಸಾರ್ವಜನಿಕ ಉಪಬಂಧಗಳಿಂದ ಹೊರತು ಪಡಿಸಲಾಗಿದೆ.

ಅನುಚ್ಛೇದ ೨೦೯–ಎ, ೨೦೯–ಬಿ ಮತ್ತು ೨೦೯–ಸಿ ಇವುಗಳನ್ನು ಮ್ಯಾಜಿಸ್ಟ್ರೇಟ್ ಸಾರ್ವಜನಿಕ ಉಪಬಂಧಗಳಿಂದ ಹೊರತುಪಡಿಸಲಾಗಿದೆ. ಇದನ್ನು ಅನುಚ್ಛೇದ ೨೦೯–ಇ ದಲ್ಲಿ ಅಳವಡಿಸಲಾಗಿದೆ. ಈ ಸಂವಿಧಾನವು ಜಾರಿಯಲ್ಲಿ ಬಂದ ಕೂಡಲೆ ಉಚ್ಚ ನ್ಯಾಯಾಲಯದ ಮೂಲಕ ಕೆಳಗಣ ನ್ಯಾಯಾಂಗದಲ್ಲಿ ನೇಮಕ ಹಾಗು ಕೆಳಗಿನ ನ್ಯಾಯಾಂಗ ನಿಯಂತ್ರಣದ ಬಗೆಗೆ ಇರುವ ಉಪಬಂಧಗಳು ಸಹ ಮ್ಯಾಜಿಸ್ಟ್ರೇಟ್ ಅವರಿಗೂ ಅನ್ವಯಿಸುವಂತೆ ಮಾಡಿದರೆ ಸಲಹಾ ಸಮಿತಿಗೆ ತುಂಬಾ ಸಂತೋಷವಾಗುತ್ತದೆ. ಆದರೆ ಮ್ಯಾಜಿಸ್ಟ್ರೇಟ್ ಅಧಿಕಾರ ಸಾಮಾನ್ಯ ಆಡಳಿತಕ್ಕೆ ಅತೀವ ಸಂಬಂಧ ಹೊಂದಿದೆಂಬುದು ಕಂಡುಬಂದಿದೆ. ಈಗ ಕೆಲವು ಪ್ರಾಂತ್ಯಗಳು ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವ ಪ್ರಸ್ತಾವನೆಯನ್ನು ಉಳಿದ ಪ್ರಾಂತ್ಯಗಳೂ ಸ್ವೀಕರಿಸುತ್ತವೆ. ಅದರಿಂದ ಅನುಚ್ಛೇದ ೨೦೯–ಇ ಇದರ ಉಪಬಂಧಗಳನ್ನು ಮ್ಯಾಜಿಸ್ಟ್ರೇಟರಿಗೂ ಹಾಗೂ ದಿವಾಣಿ ನ್ಯಾಯಾಲಯ ಇವುಗಳಿಗೆ ಅನ್ವಯಿಸುವಂತೆ ಪ್ರಸ್ತಾವನೆಯನ್ನು ಮಾಡಲಾಗಿದೆ. ಆದರೆ ಕೆಲವೊಂದು ವೇಳೆ ಅವು ಕಾರ್ಯಾಂಗ ಹಾಗೂ ನ್ಯಾಯಾಂಗ ಬೇರೆಯಾಗದಂತೆ ಅವುಗಳಿಗೆ ಪ್ರಸ್ತಾವನೆಗೆ ಪರಿಣಾಮ ಕೊಡದಂತೆ ಮಾಡಬೇಕು. ನಮಗೆ ಅನಿಸಿದ್ದೇನೆಂದರೆ ರಾಜ್ಯಪಾಲರ ವಿವೇಚನೆಗೆ ಈ ವಿಷಯವನ್ನು ಬಿಟ್ಟುಕೊಡುವುದು ಅತ್ಯುತ್ತಮ. ಯಾವುದೇ ರಾಜ್ಯದಲ್ಲಿ ನ್ಯಾಯಾಂಗ ಹಾಗೂ ಕಾರ್ಯಾಂಗ ಇವುಗಳನ್ನು ಬೇರ್ಪಡಿಸಿದರೆ, ಅದನ್ನು ಸಾರ್ವಜನಿಕ ಅಧಿಸೂಚನೆಯ ಮೂಲಕ ಸಾಧ್ಯವಾದಷ್ಟು ಬೇಗನೆ ಯುಕ್ತ ಬದಲಾವಣೆಗಳನ್ನು ತಿಳಿಸತಕ್ಕದ್ದು. ಇಷ್ಟನ್ನು ಮಾತ್ರ ನಾನು ಹೇಳಬಲ್ಲೆ. ಇದರಲ್ಲಿ ಯಾವುದೂ ಕ್ರಾಂತಿಕಾರಕ ಆಗಿರುವುದಿಲ್ಲ. ೧೯೩೫ರ ಅಧಿನಿಯಮದಲ್ಲಿಯೂ ಸಹ ದಿವಾಣಿ ನ್ಯಾಯಾಲಯದ ನೇಮಕ ಹಾಗೂ ನಿಯಂತ್ರಣಗಳನ್ನು ಉಚ್ಚ ನ್ಯಾಯಾಲಯದ ನಿಯಂತ್ರಣಕ್ಕೆ ಕೊಡಲಾಗಿತ್ತು. ಈ ಕರಡಿನಲ್ಲಿ ನಾವು ಅದನ್ನೇ ಮುಂದುವರೆಯಿಸಿದ್ದೇವೆ.

* * *

**ಶ್ರೀ ಆರ್. ಕೆ. ಸಿಧ್ವ** (ಸಿಪಿ ಮತ್ತು ಬಿಹಾರ, ಜನರಲ್): ಮಾನ್ಯರೆ, ತಾವು ದಯವಿಟ್ಟು ನನ್ನನ್ನು ಪುನಃ ಕರೆಯುವಿರಾ? ನನ್ನ ಹೆಸರನ್ನು ಕರೆದಾಗ ನಾನು ನನ್ನ ಕಚೇರಿಯ ವ್ಯವಹಾರದ ಕೆಲಸಕ್ಕೆ ಹೊರಕ್ಕೆ ಹೋಗಿದ್ದೆನು. ನಾನು ಒಂದು ಮಹತ್ವದ ತಿದ್ದುಪಡಿಯನ್ನು ಮಂಡಿಸಬೇಕಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಕರೆದಾಗ ಇಲ್ಲದಿರುವುದು ಕ್ಷಮಾರ್ಹವಲ್ಲ.

**ಮಾನ್ಯ ಅಧ್ಯಕ್ಷರು:** ಈಗ ಬಹಳ ತಡವಾಗಿದೆ ಎಂದು ನನ್ನ ಅಂಜಿಕೆ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಕೊನೆಯ ಭಾಷಣಕಾರರ ಗ್ರಹಿಕೆಯನ್ನು ಕುರಿತು ನಾನು ಹೇಳಬಯಸುವುದೇನೆಂದರೆ, ಈ ಅಧ್ಯಾಯವು ರಾಜ್ಯಗಳ ಸಂವಿಧಾನಕ್ಕೆ ಸಂಬಂಧಿಸಿದ್ದಾಗಿದೆ. ಈ ಹಂತದಲ್ಲಿ ಈ ಭಾಷೆಯನ್ನು ರಾಜ್ಯಗಳಿಗೆ ಸಂಬಂಧಿಸಿದ ಭಾಗ ೩ರಲ್ಲಿ ವಿಶೇಷ ಅಳವಡಿಕೆಯ ಮೂಲಕ ಮಾಡಲು ಪ್ರಯತ್ನಿಸುತ್ತೇವೆ.

ಇಲ್ಲಿ ಎರಡು ತಿದ್ದುಪಡಿಗಳಿವೆ. ಒಂದು ತಿದ್ದುಪಡಿಯು ಶ್ರೀ ಚಾಲಿಹಾ ಅವರಿಂದ ಹಾಗೂ ಇನ್ನೊಂದು ಪಂಡಿತ್ ಕುಂಝ್ರು ಅವರಿಂದ. ಅವುಗಳಿಗೆ ಸ್ವಲ್ಪ ಸ್ಪಷ್ಟೀಕರಣ ಕೊಡುವುದು ಅವಶ್ಯವಿದೆ.

ಶ್ರೀ ಚಾಲಿಹಾ ಅವರು ತಂದ ತಿದ್ದುಪಡಿಯ ಮಂಡನೆಯಲ್ಲಿ, ನಾನು ಅದನ್ನು ಎರಡು ಕಾರಣಕ್ಕಾಗಿ ಸ್ವೀಕರಿಸುವುದಿಲ್ಲ ಎಂದು ವಿಷಾದದಿಂದ ಹೇಳುತ್ತೇನೆ, ಮೊದಲನೆಯದಾಗಿ, ಕಾನೂನಿನ ಮೂಲಕ ಅವರು ಮಾಡಿದಂತೆ ನಾವು ಮಾಡಬಯಸುವುದಿಲ್ಲ. ಎರಡನೆಯದಾಗಿ, ಅವರ ತಿದ್ದುಪಡಿಯನ್ನು ಸ್ವೀಕರಿಸಿದರೆ, ರಾಜ್ಯದಲ್ಲಿಯೇ ತೊಂದರೆಗಳು ಉದ್ಭವಿಸುತ್ತವೆ. ಯಾಕೆಂದರೆ, ತಾಂತ್ರಿಕವಾಗಿ ಅಂತಹ ಅರ್ಹತೆಯುಳ್ಳ ಪ್ಲೀಡರನನ್ನು ಹುಡುಕುವುದು ಸಾಧ್ಯವಿಲ್ಲ. ಆದರೆ ಒಟ್ಟಾರೆ ಅವರನ್ನು ಉಚ್ಚ ನ್ಯಾಯಾಲಯಕ್ಕೆ ನೇಮಿಸುವುದು ಸೂಕ್ತವಾಗುವುದಿಲ್ಲ ಮತ್ತು ಈ ವಿಷಯವನ್ನು ಸಂಪೂರ್ಣವಾಗಿ ಸಂಬಂಧಿಸಿದ ಅಧಿಕಾರಿಗಳಿಗೆ ಬಿಟ್ಟುಕೊಡುವುದು ಅತ್ಯುತ್ತಮವೆಂದು ನನಗೆ ಅನಿಸುತ್ತದೆ. ಇಂತಹ ನೇಮಕಾತಿಯನ್ನು ಅರ್ಹವ್ಯಕ್ತಿಗೆ ವಿದ್ಯಾರ್ಹತೆಯು ಇದ್ದರೆ ಅವನನ್ನು ನೇಮಕ ಮಾಡಿಕೊಳ್ಳಬಹುದು. ಆದ್ದರಿಂದ ನಾನು ಈ ತಿದ್ದುಪಡಿಯನ್ನು ಸ್ವೀಕರಿಸಲಾರೆನು.

ನನ್ನ ಗೆಳೆಯರಾದ ಪಂಡಿತ್ ಕುಂಝ್ರು ಅವರು ತಂದ ತಿದ್ದುಪಡಿಯು ನನ್ನ ದೃಷ್ಟಿಯಲ್ಲಿ ಬಹಳ ಸಣ್ಣ ವಿಷಯವಾಗಿದೆ. ಆ ವಿಷಯವು ಏನೆಂದರೆ ಜಿಲ್ಲಾ ನ್ಯಾಯಾಧೀಶರನ್ನು ಬೇರೆ ಬೇರೆ ಸ್ಥಳಗಳಿಗೆ ನೇಮಿಸುವುದು ಹಾಗೂ ಅವರಿಗೆ ಬಡ್ತಿ ಕೊಡುವ ವಿಷಯವು ರಾಜ್ಯಪಾಲರಿಗೆ ಸೇರಿದ್ದು. ಹೇಳಬೇಕೆಂದರೆ ಅಂದಿನ ಸರಕಾರವು ಅದನ್ನು ಅನುಚ್ಛೇದ ೨೦೯ರ ಅಡಿಯಲ್ಲಿ ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸ ಬಹುದು. ಭಾರತ ಸರಕಾರದ ಅಧಿನಿಯಮ ೯೩೫ರಲ್ಲಿಯ ಉಪಬಂಧಗಳು ಹೀಗೆ ಇವೆ. ಜಿಲ್ಲಾ ನ್ಯಾಯಾಧೀಶರ ನೇಮಕಾತಿಗೆ, ಅವರನ್ನು ಬೇರೆ ಬೇರೆ ಸ್ಥಳಕ್ಕೆ ವರ್ಗಾಯಿಸುವ ಮತ್ತು ಅವರಿಗೆ ಬಡ್ತಿ ನೀಡುವುದು ಸಂಪೂರ್ಣವಾಗಿ ರಾಜ್ಯಪಾಲರ ಕೈಯಲ್ಲಿದೆ. ಜಿಲ್ಲಾ ನ್ಯಾಯಾಧೀಶನ ನೇಮಕಾತಿ ಅವರನ್ನು ಬೇರೆ ಬೇರೆ ಸ್ಥಳಗಳಿಗೆ ನೇಮಿಸುವುದು ಮತ್ತು ಅವರಿಗೆ ಬಡ್ತಿ ಕೊಡುವುದರಲ್ಲಿ ಉಚ್ಚ ನ್ಯಾಯಾಲಯಕ್ಕೆ ಯಾವ ಅಧಿಕಾರ (ಸ್ಥಾನ) ಇರುವುದಿಲ್ಲ. ನನ್ನ ಗೆಳೆಯರಾದ ಶ್ರೀ ಕುಂಝ್ರು ಅವರು ನಾವು ಭಾರತ ಸರಕಾರದ ಅಧಿನಿಯಮ ೧೯೩೫ ಇದನ್ನು ಬಹಳಷ್ಟು ಬದಲಾವಣೆ ಮಾಡಿರುವುದನ್ನು ನೋಡಿಕೊಳ್ಳಬಹುದು. ಯಾಕೆಂದರೆ, ನಾವು ಅದಕ್ಕೆ ಕರಾರುಗಳನ್ನು ಹಾಕಿದ್ದೇವೆ. ಉದಾಹರಣೆಗೆ, ಜಿಲ್ಲಾ ನ್ಯಾಯಾಧೀಶರ ನೇಮಕ ಹಾಗೂ ಅವರನ್ನು ಬೇರೆ ಬೇರೆ ಕಡೆಗೆ ನೇಮಿಸುವುದು ಮತ್ತು ಬಡ್ತಿ ವಿಷಯಗಳಲ್ಲಿ ಉಚ್ಚ

ನ್ಯಾಯಾಲಯದೊಂದಿಗೆ ಸಮಾಲೋಚನೆ ಮಾಡತಕ್ಕದ್ದು. ಆದ್ದರಿಂದ ಇಲ್ಲಿ ಇರುವ ಒಂದೇ ಅಂಶವೆಂದರೆ, ಉಚ್ಚ ನ್ಯಾಯಾಲಯಕ್ಕೆ ಸಂಪೂರ್ಣವಾದ ಅಧಿಕಾರ ವ್ಯಾಪ್ತಿಯು ಉಂಟೆ? ಇದನ್ನೇ ನಾವು ಅವರನ್ನು ಬೇರೆ ಬೇರೆ ಸ್ಥಳಗಳಿಗೆ ನೇಮಿಸುವುದು, ಕೆಳಗಿನ ನ್ಯಾಯಾಧೀಶರಿಗೆ ಬಡ್ತಿ ಕೊಡುವುದು, ರಜೆ ಕೊಡುವುದು ಮುಂತಾದವುಗಳಲ್ಲಿ ಜಿಲ್ಲಾ ನ್ಯಾಯಾಧೀಶರನ್ನು ಒಳಗೊಂಡ ಎಲ್ಲ ಅಧೀನ ನ್ಯಾಯಾಧೀಶರು ಈ ವಿಷಯದಲ್ಲಿ ಉಚ್ಚ ನ್ಯಾಯಾಲಯಕ್ಕೆ ಅಧಿಕಾರವಿರಬೇಕೆ? ನನ್ನ ಅಭಿಪ್ರಾಯದಲ್ಲಿ ಈಗ ಮಾಡಿದ ರಾಜಿಯು ಬಹಳ ಸೂಕ್ತವಾಗಿದೆ. ಅಂತರವೆಂದರೆ ಉಚ್ಚ ನ್ಯಾಯಾಲಯವು ಅಧೀನ ನ್ಯಾಯಾಧೀಶರ ಹುದ್ದೆ, ಹುದ್ದೆಯ ಸ್ಥಳ, ಪದೋನ್ನತಿ, ರಜೆಗಳ ಬಗ್ಗೆ ಅಧಿಸೂಚನೆಯನ್ನು ಹೊರಡಿಸುತ್ತದೆ. ಆದರೆ ಜಿಲ್ಲಾ ನ್ಯಾಯಾಧೀಶರನ್ನು ಕುರಿತು ಅಧಿಸೂಚನೆಯನ್ನು ಮಂತ್ರಾಲಯದಿಂದ ಹೊರಡಿಸುತ್ತಾರೆ. ಮೂಲಭೂತವಾಗಿ ಮತ್ತು ಮುಖ್ಯವಾಗಿ ಅದರಲ್ಲಿ ಯಾವುದೇ ಬದಲಾವಣೆಯು ಇರುವುದಿಲ್ಲ. ಜಿಲ್ಲಾ ನ್ಯಾಯಾಧೀಶರಿಗೆ ಉಚ್ಚ ನ್ಯಾಯಾಲಯದ ರಕ್ಷಣೆ ಇರುತ್ತದೆ. ಯಾಕೆಂದರೆ, ಸಮಾಲೋಚನೆ ಮಾಡುವುದು ಕಡ್ಡಾಯವಾಗಿದೆ ಮತ್ತು ಸಂದರ್ಭಕ್ಕೆ ತಕ್ಕಂತೆ ಉಂಟಾದ ಆವಶ್ಯಕತೆಯನ್ನು ಪೂರೈಸತಕ್ಕದ್ದೆಂದು ನನ್ನ ಅಭಿಪ್ರಾಯ.

## ವಿಧಿ ೨೧೫

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನಗೆ ಹೇಳುವುದು ಏನೂ ಇಲ್ಲ.

**ಸರದಾರ ಹುಕುಂ ಸಿಂಗ್:** ಮಾನ್ಯರೇ, ನನ್ನ ಯಾವ ತಿದ್ದುಪಡಿಯೂ ಇಲ್ಲ. ನನ್ನದು ಒಂದು ತಕರಾರು ಇದೆ. ಈ ಅನುಚ್ಛೇದದ ಖಂಡ (೨)ಕ್ಕೆ ನನ್ನ ತಕರಾರು ಪ್ರತಿರೋಧವಿದೆ. ಅದಕ್ಕಾಗಿ ನಾನು ಕರಡು ಸಮಿತಿಯ ಅಧ್ಯಕ್ಷರ ಗಮನವನ್ನು ಸೆಳೆಯಬಯಸುತ್ತೇನೆ. ಈ ಪದಗಳ ಸಮೂಹ ಸಂಸತ್ತಿನ ಅಧಿಕಾರ ಹಾಗೂ ಸಾರ್ವಭೌಮತ್ವವನ್ನು ಅವಲಕ್ಷಿಸುತ್ತದೆ. ನಾನು ಅವರಿಗೆ ಹೀಗೆ ವಿನಂತಿಸಿಕೊಳ್ಳುತ್ತೇನೆ– ಸಾಧ್ಯವಾದರೆ, ಪದಗಳನ್ನು ಬದಲಾಯಿಸಲು ಕೇಳಿಕೊಳ್ಳುತ್ತೇನೆ. ಕರಡು ಸಮಿತಿಯ ಅಧ್ಯಕ್ಷರ ಗಮನಕ್ಕೆ ಈ ವಿಷಯವನ್ನು ತರಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಪ್ಯಾರಾಗ್ರಾಫ್ ಎರಡರ ಬಗೆಗೆ ಶ್ರೀ ಹುಕುಂಸಿಂಗ್ ಅವರು ಕೆಲವು ನಿರ್ದಿಷ್ಟ ಸೂಚನೆಗಳನ್ನು ಕೊಟ್ಟಿದ್ದಾರೆ. ಅವರು ಹೇಳುವುದೇನೆಂದರೆ ಸಂಸತ್ತಿನ ಘನತೆ ಸಾರ್ವಭೌಮಕ್ಕೆ ಅದು ಧಕ್ಕೆ ತರುತ್ತದೆ. ಯಾಕೆಂದರೆ ರಾಷ್ಟ್ರಪತಿಯು ಸಂಸತ್ತು ಪಾಸು ಮಾಡಿದ ಕಾಯಿದೆಯನ್ನು ನಿರಸನಗೊಳಿಸಬಹುದು, ಇಲ್ಲವೆ ತಿದ್ದುಪಡಿ ಮಾಡಬಹುದೆಂದು. ಆದ್ದರಿಂದ ಆ ಪದಗಳ ಮಾರ್ಪಾಡನ್ನು ಹೀಗೆ ಮಾಡಬೇಕಿಲ್ಲ. ಸಂಸತ್ತಿನ ಸಾರ್ವಭೌಮತ್ವವು ಯಾವುದೇ ರೀತಿಯಿಂದ ಕುಗ್ಗಬಾರದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಹೇಗಿದ್ದಲ್ಲಿ ಒಂದು ರೀತಿಯಲ್ಲಿ ಅದನ್ನು ಅಳವಡಿಸಿಕೊಳ್ಳಬಹುದು. ಅಸ್ಸಾಂನಂತಹ ಸ್ವಾಯತ್ತ ಜಿಲ್ಲೆಗಳು ಅಸ್ಸಾಂನ ರಾಜ್ಯಪಾಲರು ಸಂಸತ್ತು ಮಾಡಿದ ಕಾನೂನುಗಳನ್ನು ಅಳವಡಿಸಿಕೊಳ್ಳುವುದು ಯೋಗ್ಯವೆನಿಸಿದಾಗ ಅವರು ಅವುಗಳನ್ನು ಅಳವಡಿಸಿಕೊಳ್ಳಬಹುದು. ಸಂಸತ್ತು ಪಾಸು ಮಾಡಿದ ಕಾನೂನುಗಳು ಕೆಲವು ವಿಶಿಷ್ಟವಾಗಿ ರಚಿಸಿದ ಕ್ಷೇತ್ರಗಳಿಗೆ ಅವುಗಳನ್ನು ಅಳವಡಿಸಿಕೊಳ್ಳದೆ ಅವುಗಳನ್ನು ಜಾರಿ ಮಾಡಲು ಬರುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಸೂಚನೆಯು ಒಂದು ಶಬ್ದಕ್ಕೆ ಮಾತ್ರ ಸಂಬಂಧಿಸಿದ್ದು, ಅದು ಅಧಿಕಾರ ಕುರಿತು ಇರುವುದಿಲ್ಲ.

**(ತಿದ್ದುಪಡಿಗಳು ತಿರಸ್ಕೃತವಾದವು. ಅನುಚ್ಛೇದ ೨೧೫ ಇದನ್ನು ಸಂವಿಧಾನಕ್ಕೆ ಸೇರಿಸಲಾಯಿತು.)**

## ವಿಧಿ ೩೦೩

**ಮಾನ್ಯ ಸಭಾಧ್ಯಕ್ಷರು:** ಈಗ ನಾವು ಅನುಚ್ಛೇದ ೩೦೩ರ ವ್ಯಾಖ್ಯೆಯನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೆ, ನಾನು ಈಗ ಮಂಡಿಸುವುದೇನೆಂದರೆ, ಅನುಚ್ಛೇದ ೩೦೩ ಖಂಡ (೧) ಉಪಖಂಡ (ಕೆ) ವಿಭಾಗ ಕೈಬಿಡಲಾಗಿದೆ.

ಸೂಚನೆಯನ್ನು ಸ್ವೀಕರಿಸಲಾಯಿತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** (ಬಿ)ಕ್ಕೆ ಸಂಬಂಧಿಸಿದಂತೆ ನಾನು ಒಂದು ವಿಷಯವನ್ನು ಹೇಳಲಿಚ್ಛಿಸುತ್ತೇನೆ. ನಾವು ಮೂಲತಃ ಸಂವಿಧಾನದಲ್ಲಿ ಕೆಲವು ಜಾತಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವೆಂದು ಸೇರಿಸಲು ಸೂಚಿಸಿದ್ದೆವು. ಅವುಗಳನ್ನು ಈಗ ನಾವು ಸಂವಿಧಾನದಿಂದ ಕೈ ಬಿಡಲು ಸೂಚಿಸಿದ್ದೇವೆ. ಅದು ಸಂವಿಧಾನಕ್ಕೆ ಬಹಳ ಬಾಧಕವಾಗುತ್ತದೆ ಮತ್ತು ರಾಷ್ಟ್ರಪತಿಗಳೇ ಅದನ್ನು ಆದೇಶ ಹೊರಡಿಸಿ ಮಾಡಬಹುದೆಂದು ನಾವು ತಿಳಿದಿದ್ದೆವು, ಈಗ ಇದು ನಮ್ಮ ಪ್ರಸ್ತಾವನೆಯಾಗಿದೆ. ಅಂತಹ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗ ಇವುಗಳ ವ್ಯಾಖ್ಯೆಗಳನ್ನು ಸಂವಿಧಾನದ ಬೇರೆ ಭಾಗಕ್ಕೆ ವರ್ಗಾಯಿಸುವುದು ಆವಶ್ಯವೆಂದು ನನಗೆ ಅನಿಸುತ್ತದೆ ಮತ್ತು ಅವುಗಳ ಬಗೆಗೆ ವಿಶೇಷವಾಗಿ ಅನುಚ್ಛೇದದ ಮೂಲಕ ಉಪಬಂಧಗಳನ್ನು ಕಲ್ಪಿಸಬೇಕು. ಅದಾವುದೆಂದರೆ ರಾಷ್ಟ್ರಪತಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಂದರೆ ಯಾರು ಎಂಬುದನ್ನು ವ್ಯಾಖ್ಯಾನಿಸಬೇಕು, ಈಗ ಅನುಚ್ಛೇದ ೨೯೬ ಮತ್ತು ೨೯೯ ಇವುಗಳ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ನನಗೆ ಅನಿಸಿದ ಮಟ್ಟಿಗೆ ಅವು ಮುಗಿದುಹೋಗಿವೆ. ಈಗ ಆಂಗ್ಲೋ ಇಂಡಿಯನ್ ಮತ್ತು ಇಂಡಿಯನ್ ಕ್ರಿಶ್ಚಿಯನ್ ಬಗೆಗೆ (ಬಿ) ಮತ್ತು (ಕೆ)ದಲ್ಲಿ ಕಾಣಿಸಲಾಗಿದೆ. ಅವುಗಳ ಬಗ್ಗೆ ಪ್ರಸ್ತಾಪಿಸಿದಂತೆ ಈಗ ಪುನಃ ಅವುಗಳನ್ನು ವಿಚಾರಿಸಬೇಕಾಗಿದೆ. ಸದ್ಯಕ್ಕೆ ಆ ಪ್ರಶ್ನೆಯನ್ನು ಅಲ್ಲಿಗೆ ಬಿಡಿರಿ ಎಂದು ನನ್ನ ವಿನಂತಿ.

**ಶ್ರೀ ವಿ. ಅಯ್. ಮುನಿಸ್ವಾಮಿ ಪಿಳ್ಳೈ** (ಮದ್ರಾಸ್ ಜನರಲ್): ಪರಿಶಿಷ್ಟ ಜಾತಿ ಮುಂತಾದವುಗಳ ಬಗೆಗೆ ಎಲ್ಲವನೂ ತಡೆಹಿಡಿಯಿರಿ.

**ಮಾನ್ಯ ಸಭಾಧ್ಯಕ್ಷರು:** ವಿಷಯ (ಬಿ) ಮತ್ತು (ಕೆ) ಇವುಗಳ ದರ್ಜೆಯ ವಿಚಾರಣೆಯನ್ನು ಇಲ್ಲಿಗೆ ನಿಲ್ಲಿಸಿ ಬಿಡುತ್ತೇನೆ. ಇದಕ್ಕೆ ಸದನ ಒಪ್ಪುವುದೆಂದು ಭಾವಿಸುತ್ತೇನೆ.

[ಉಪಖಂಡ (ಬಿ) ಮತ್ತು (ಕೆ) ಇವುಗಳನ್ನು ಮುಂದಕ್ಕೆ ಹಾಕಲಾಯಿತು.]

**ಮಾನ್ಯ ಸಭಾಧ್ಯಕ್ಷರು:** ಖಂಡ (ಡಿ) ಈ ವಿಷಯಕ್ಕೆ ಯಾವ ತಿದ್ದುಪಡಿಯೂ ಇರುವುದಿಲ್ಲ. ಆದ್ದರಿಂದ ಪ್ರಶ್ನೆ ಏನೆಂದರೆ ಉಪಖಂಡ (ಡಿ) ಇದನ್ನು ಸ್ವೀಕರಿಸಲಾಯಿತು.

ಸೂಚನೆಯನ್ನು ಸ್ವೀಕರಿಸಲಾಯಿತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಈಗ ನಾನು ಮಂಡಿಸುತ್ತಿದ್ದೇನೆ. ಅನುಚ್ಛೇದ ೩೦೩ ಖಂಡ (೧) ಉಪಖಂಡ (ಇ) ಇದನ್ನು ಕೈ ಬಿಡಬೇಕು.

**ಮಾನ್ಯ ಸಭಾಧ್ಯಕ್ಷರು:** ಈಗ ಮುಖ್ಯ ನ್ಯಾಯಾಧೀಶರು ಇರುವುದಿಲ್ಲ. ಮೊದಲು ಅಧೀನ ಉಚ್ಚ ನ್ಯಾಯಾಲಯಗಳು ಇರುತ್ತಿದ್ದವು. ಅವುಗಳಿಗೆ ಮುಖ್ಯ ನ್ಯಾಯಾಲಯಗಳೆಂದು ಕರೆಯುತ್ತಿದ್ದರು ಮತ್ತು

ಅವುಗಳಿಗೆ ಮುಖ್ಯ ನ್ಯಾಯಾಧೀಶರುಗಳು ಇರುತ್ತಿದ್ದರು.

* * *

ತಿದ್ದುಪಡಿಯನ್ನು ಸ್ವೀಕರಿಸಲಾಯಿತು. ಅನುಚೇದ ೩೦೩ರಲ್ಲಿಯ ಖಂಡ ೧ ಉಪಖಂಡ (ಇ) ಇದನ್ನು ಕೈಬಿಡಲಾಯಿತು.

(ತಿದ್ದುಪಡಿ ಸಂಖ್ಯೆ ೩೨೧೯ ಇದನ್ನು ಮಂಡಿಸಲಿಲ್ಲ)

**ಮಾನ್ಯ ಸಭಾಧ್ಯಕ್ಷರು:** ಆಮೇಲೆ (ಎಫ್) ಇದಕ್ಕೆ ಯಾವ ತಿದ್ದುಪಡಿಯೂ ಇರುವುದಿಲ್ಲ.

ಈಗ ಪ್ರಶ್ನೆಯೆಂದರೆ:

"ಖಂಡ (೧) ಉಪಖಂಡ (ಎಫ್) ಇದು ಅನುಚ್ಛೇದ ೩೦೩ರ ಒಂದು ಭಾಗವಾಗಿರುತ್ತದೆ. ಸೂಚನೆಯನ್ನು ಸ್ವೀಕರಿಸಲಾಯಿತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ಈಗ ನಾನು ಮಂಡಿಸುವೆನು.

"ಅನುಚ್ಛೇದ ೩೦೩ರ ಖಂಡ (೧)ರ ಉಪಕಲಮು (೧)ರಲ್ಲಿ ಕೆಳಗಿನ ಖಂಡವನ್ನು ಸೇರಿಸಬೇಕು. (ಜಿ) ಅನುರೂಪ ಪ್ರಾಂತ್ಯ "ಅನುರೂಪ ಭಾರತೀಯ ರಾಜ್ಯ" ಇಲ್ಲವೆ "ಅನುರೂಪ ರಾಜ್ಯ" ಅದು ಅಂತಹ ಪ್ರಾಂತ್ಯವೆನ್ನಲು ಭಾರತೀಯ ರಾಜ್ಯವೆನ್ನಲು ಇಲ್ಲವೆ ರಾಜ್ಯ ಯಾವುದೇ ಇರಲಿ, ಸಂಶಯವನ್ನುಂಟು ಮಾಡಿದರೆ, ಆಗ ರಾಷ್ಟ್ರಪತಿಗಳು ಅದು ಅನುರೂಪ ಪ್ರಾಂತ್ಯ ಅನುರೂಪವಾದ ಭಾರತದ ರಾಜ್ಯ ಇಲ್ಲವೆ ಅನುರೂಪ ರಾಜ್ಯ ಯಾವುದೇ ಇರಲಿ ಯಾವುದೇ ನಿರ್ದಿಷ್ಟವಾದ ಉದ್ದೇಶದ ಪ್ರಶ್ನೆಗಾಗಿ ನಾವು ಭಾರತೀಯ ರಾಜ್ಯಗಳನ್ನು ಮಾತ್ರ ಸೇರಿಸಿದ್ದೇವೆ.

**ಶ್ರೀ ಎಚ್. ವಿ. ಕಾಮತ್:** ರಾಜ್ಯ ಮತ್ತು ಭಾರತದ ರಾಜ್ಯಗಳ ನಡುವಿನ ಅಂತರವನ್ನು ನಾವು ಇನ್ನು ಇಟ್ಟಿರುತ್ತೇವೆಯೊ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಂತರವು ಹೀಗೆ ಇದೆ. ಆ ರಾಜ್ಯಗಳು ಅಂದರೆ, ಈಗ ಭಾರತ ಸಂವಿಧಾನದ ಕೇಂದ್ರ ಸರಕಾರದ ಒಂದು ಭಾಗ. ಭಾರತೀಯ ರಾಜ್ಯ ಅಂದರೆ ಭಾರತ ಸರಕಾರದ ಹೊರಗಿನ ರಾಜ್ಯ. ಆದರೆ ಸಾರ್ವಭೌಮತ್ವ ಇಲ್ಲ. ಅವು ಕೇಂದ್ರ ಸರಕಾರದ ನಿಯಂತ್ರಣ ದಲ್ಲಿರುವುವು.

**ಶ್ರೀ ಆರ್. ಕೆ. ಸಿಧ್ವ:** ಕಛ್ ರಾಜ್ಯವು ಈಗ ಕೇಂದ್ರಾಡಳಿತದಲ್ಲಿರುವುದು. ಅದೂ ಒಂದು ಭಾರತೀಯ ರಾಜ್ಯವೆ? ಅದರಂತೆ ಭೂಪಾಲವು ಸಹ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಭಾರತೀಯ ರಾಜ್ಯ ಎಂಬುದಕ್ಕೆ ವ್ಯಾಖ್ಯೆಯನ್ನು ನಂತರದಲ್ಲಿ ಕೊಡಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಭಾರತೀಯ ರಾಜ್ಯ ಇದಕ್ಕೆ ಒಂದು ವ್ಯಾಖ್ಯೆಯನ್ನು ನಂತರದ ತಿದ್ದುಪಡಿ ಸಂಖ್ಯೆ ೧೪೦ರಲ್ಲಿ ಕೊಡಲಾಗಿದೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಸದಸ್ಯರ ಮನಸ್ಸಿನಲ್ಲಿ ಸ್ವಲ್ಪ ಗೊಂದಲವಿದ್ದಂತೆ ಕಂಡುಬರುತ್ತದೆ. 'ಅನುರೂಪ ಪ್ರಾಂತ್ಯ' ಈ ಪದವು ಮತ್ತು 'ಅನುರೂಪ ಭಾರತೀಯ ರಾಜ್ಯ' ಇವು ಸಂವಿಧಾನಕ್ಕಿಂತ ಮೊದಲಿನ ಅವಧಿಗೆ ಸಂಬಂಧಪಟ್ಟವು. 'ಅನುರೂಪ ರಾಜ್ಯ' ಇದು ಸಂವಿಧಾನ ಜಾರಿಗೆ ಬಂದ ನಂತರ ಅಸ್ತಿತ್ವಕ್ಕೆ ಬಂದಿತು. ಇವೆರಡರ ನಡುವಿನ ಅಂತರವು ಇಷ್ಟೇ. ಈ ವಿಷಯದಲ್ಲಿ ಈಗ ಮನಸ್ಸಿನಲ್ಲಿ ಯಾವ ಗೊಂದಲವು ಇಲ್ಲವೆಂದು ನಾನು ಭಾವಿಸುವೆನು.

(ಡಾ. ಅಂಬೇಡ್ಕರ್ ಅವರು ತಂದ ತಿದ್ದುಪಡಿಯು ಅನುಚ್ಛೇದ ೩೦೩ ಖಂಡ (೧) ಇದರ ಉಪಖಂಡ (ಬಿ) ಸ್ವೀಕೃತವಾಯಿತು.

**ಮಾನ್ಯ ಅಧ್ಯಕ್ಷರು:** ಈಗ (ಎಚ್) ಇದಕ್ಕೆ ತಿದ್ದುಪಡಿಯು ಇರುವುದಿಲ್ಲ.

ಅನುಚ್ಛೇದ ೩೦೩ ಇದರ ಖಂಡ (೧) ಇದರ ಉಪಖಂಡ (ಎಚ್) ಇದನ್ನು ಅನುಚ್ಛೇದ ೩೦೩ಕ್ಕೆ ಸೇರಿಸಲಾಯಿತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಈಗ ಮಂಡಿಸುತ್ತೇನೆ.

ಪರಿಚ್ಛೇದ ೩೦೩ ಖಂಡ (೧) ಉಪಖಂಡ (ಐ) ಇದರಲ್ಲಿ ಈ ಪದಗಳನ್ನು ಆದರೆ ಯುನೈಟೆಡ್ ಕಿಂಗ್‌ಡಂನ ಸಂಸತ್ತಿನಲ್ಲಿಯ ಅಧಿನಿಯಮಗಳನ್ನು ಇಲ್ಲವೆ ಆರ್ಡರ್ ಇನ್ ಕೌನ್ಸಿಲ್ ಅವರು ಯಾವುದೇ ಕಾನೂನಿನಲ್ಲಿ ಮಾಡಿದ್ದಾಗಲಿ ಇದರಲ್ಲಿ ಒಳಪಡುವುದಿಲ್ಲ. ಇದನ್ನು ಬಿಡಬೇಕು.

ಮರ್ಚೆಂಟ್ ಶಿಪ್ಪಿಂಗ್ ಆಕ್ಟ್‌ನಂತಹ ಅಧಿನಿಯಮಗಳನ್ನು ಸಂಸತ್ತು ಮಾಡುವ ಅಧಿನಿಯಮ ಮಾಡುವವರೆಗೆ ಇಟ್ಟುಕೊಳ್ಳಲಾಗುವುದು.

**ಶ್ರೀ ಎಚ್. ವಿ. ಕಾಮತ್:** (೧) ಇದನ್ನು ಕುರಿತು ಇದರಲ್ಲೆ ಸ್ಪಷ್ಟವಾಗಿ ಸ್ವಲ್ಪ ದೋಷವಿದೆ. ಇದು ಅಧಿನಿಯಮಗಳನ್ನು ಹಾಗೂ ನ್ಯಾಯಾಲಯಗಳನ್ನು ಒಳಗೊಂಡಿರುತ್ತದೆ. ಆದರೆ 'ನಿಯಮ' ಇದನ್ನು ಮಾತ್ರ ಕಾಣಿಸಲಾಗಿದೆ. ಉಪನಿಯಮ ಅದರಂತೆ ಯಾಕೆ ಬೇಡ?

**ಶ್ರೀ ಕೆ. ಸಂತಾನಮ್:** ಇದಕ್ಕೆ ನನ್ನದು ಒಂದು ತಿದ್ದುಪಡಿಯು ಇದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಕಾನೂನು ಜಾರಿಯಲ್ಲಿದೆಯೇ? ಇಲ್ಲವೋ? ಅನ್ನುವುದು ಅನೇಕ ಸಂಗತಿಗಳ ಮೇಲೆ ಅವಲಂಬಿಸಿರುತ್ತದೆ. ಮೊಟ್ಟಮೊದಲಿಗೆ ಕೆಲವು ಕಾನೂನುಗಳನ್ನು ವಿಲೀನಗೊಳಿಸುವುದು, ಜಾರಿಯಲ್ಲಿರುವ ಉಪಬಂಧಗಳು ಇರತಕ್ಕದ್ದಲ್ಲ. ಮುಂಬೈ ಸರಕಾರವು ಅದರ ಕ್ಷೇತ್ರಗಳು ವಿಲೀನವಾದ ನಂತರ ಆ ನಿರ್ದಿಷ್ಟ ಕ್ಷೇತ್ರಕ್ಕೆ ಅಲ್ಲಿಯ ಕಾನೂನುಗಳನ್ನು ಇಟ್ಟುಕೊಂಡಿದೆ. ಅದಕ್ಕೆ ಬರೋಡಾ ಇಲ್ಲವೆ ಅದರ ವಿಧಾನಸಭೆಯು ಅದನ್ನು ಕಿತ್ತುಹಾಕಬಹುದು. ಆದ್ದರಿಂದ ಅಸ್ತಿತ್ವದಲ್ಲಿರುವ ಕಾನೂನು ಅಂದರೆ ಈ ಸಂವಿಧಾನವು ಜಾರಿಯಲ್ಲಿ ಬಂದ ದಿನ ಅಸ್ತಿತ್ವದಲ್ಲಿರುವ ಕಾನೂನು.

**ಶ್ರೀ ಕೆ. ಸಂತಾನಮ್:** ನಾನು ನನ್ನ ತಿದ್ದುಪಡಿಗೆ ಒತ್ತಾಯಿಸುವುದಿಲ್ಲ.

ಮೇಲಿನ ತಿದ್ದುಪಡಿಯು (ಡಾ. ಅಂಬೇಡ್ಕರ್ ಅವರು ತಂದದ್ದು) ಸ್ವೀಕೃತವಾಯಿತು.

ಖಂಡ (ಎಲ್) ಇದರ ಉಪಖಂಡ (ಐ) ತಿದ್ದುಪಡಿಯಾದಂತೆ ಅನುಚ್ಛೇದ ೩೦೩ಕ್ಕೆ ಸೇರಿಸಲಾಯಿತು.

**ಮಾನ್ಯ ಅಧ್ಯಕ್ಷರು:** ಈಗ (ಜಿ) ಇದಕ್ಕೆ ತಿದ್ದುಪಡಿಯು ಇರುವುದಿಲ್ಲ.

ಪ್ರಶ್ನೆಯು:–

ಖಂಡ (ಎಲ್) ಇದರ ಉಪಖಂಡ (ಜೆ) ಇದು ಅನುಚ್ಛೇದ ೩೦೩ರ ಭಾಗವಾಗಿದೆ.

**(ಸೂಚನೆಯು ಸ್ವೀಕೃತವಾಯಿತು)**

*__ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:__ ಮಾನ್ಯರೆ, ನಾನು ಈಗ ಮಂಡಿಸುತ್ತೇನೆ.

---

* ಸಿ.ಎ.ಡಿ. ಸಂ. IX, ೧೬ನೇ ಸೆಪ್ಟೆಂಬರ್ ೧೯೪೯, ಪುಟ ೧೫೮೬.

ಅನುಚ್ಛೇದ ೩೦೩ ಖಂಡ (ಎಲ್) ಉಪಖಂಡ (ಜೆ)ದ ನಂತರ ಕೆಳಗಣ ಉಪಖಂಡವನ್ನು ಸೇರಿಸತಕ್ಕದ್ದು. (ಜೆ) ಪರರಾಜ್ಯವೆಂದರೆ ಭಾರತದ ರಾಜ್ಯವನ್ನು ಹೊರತುಪಡಿಸಿದ ಇನ್ನಾವುದೇ ರಾಜ್ಯ. ಆದರೆ ರಾಷ್ಟ್ರಪತಿಗಳು ಈ ಬಗ್ಗೆ ಅಧಿಸೂಚನೆ ಹೊರಡಿಸಿದ ರಾಜ್ಯಗಳನ್ನು ಇದರಲ್ಲಿ ಸೇರಿಸಿರುವುದಿಲ್ಲ.

**ಶ್ರೀ ಕೆ. ಸಂತಾನಮ್:** ಉಪಕಲಮು (ಜೆ)ದಲ್ಲಿ ನಂತರದ ಭಾಗದ ಅರ್ಥವು ಏನಾಗುವುದೆಂದು ದಯವಿಟ್ಟು ಡಾ. ಅಂಬೇಡ್ಕರ್ ಅವರು ವಿವರಿಸುವರೊ? ಮತ್ತು ಅದಕ್ಕೆ ಉದಾಹರಣೆಗಳನ್ನು ಕೊಡುವರೆ?

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಸ್ಥಾನ ವ್ಯವಸ್ಥೆಯು ಹೀಗೆ ಇದೆ. ಒಬ್ಬನು ಭಾರತದ ಎಂಬ ಈ ಪದ ಬಳಸುವುದನ್ನು ನಿಲ್ಲಿಸಬೇಕಾದರೆ ಪರರಾಷ್ಟ್ರವೆಂದು ಸಾಮಾನ್ಯವಾಗಿ ಅರ್ಥವಾಗುತ್ತದೆ. ಪ್ರತಿಯೊಂದು ರಾಜ್ಯವು ಮತ್ತೊಂದು ರಾಜ್ಯಕ್ಕೆ ಮತ್ತೊಂದು ಪರರಾಜ್ಯವೆನಿಸುತ್ತದೆ. ಅದು ಮೊದಲನೆಯ ಭಾಗದ ವ್ಯಾಖ್ಯೆಯೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಆ ಭಾಗದ ವ್ಯಾಖ್ಯೆಯು ಅವಶ್ಯ ಇರಲಿಕ್ಕಿಲ್ಲ. ಆದರೆ ಸಂಗತಿಯ ಮೇಲೆ ಪರದೇಶ ರಾಜ್ಯ ಈ ಪದವನ್ನು ನಮ್ಮ ಸಂವಿಧಾನದ ಈ ದೃಷ್ಟಿಯಿಂದ ಕೆಲವು ಉದ್ದೇಶಕ್ಕಾಗಿ ನಿಶ್ಚಿತವಾಗಿ ಆ ಉದ್ದೇಶಕ್ಕಾಗಿ ಇದು ಅವಶ್ಯವಿದ್ದು, ಅದನ್ನು ಪರದೇಶ ರಾಜ್ಯವೆಂದು ಈ ವ್ಯಾಖ್ಯೆಯಲ್ಲಿಡುವುದು ಅವಶ್ಯವಿದೆ. ಇದನ್ನು ರಾಷ್ಟ್ರಪತಿಗಳು ಘೋಷಿಸಲು ಅಧಿಕಾರವನ್ನು ಕೊಡಲಾಗಿದೆ. ಕೆಲವು ಉದ್ದೇಶಗಳಿಗಾಗಿ ಈ ರೀತಿಯ ರಾಜ್ಯವು ಪರರಾಜ್ಯವಾಗುವುದಿಲ್ಲ. ಮಲಯಾ ಪ್ರಕರಣ ನಾನು ತಿಳಿದುಕೊಂಡಂತೆ ಬಹಳಷ್ಟು ಈ ವಿಷಯಕ್ಕೆ ನಿರ್ದಿಷ್ಟ ಉದ್ದೇಶಗಳಿಗಾಗಿ ರಾಷ್ಟ್ರಪತಿಗಳು ಅದನ್ನು ಘೋಷಿಸಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ಈ ವ್ಯಾಖ್ಯೆಯನ್ನು ಇದರಲ್ಲಿ ಕೊಡಲಾಗಿದೆ.

**ಶ್ರೀ ಕೆ. ಸಂತಾನಮ್:** ಈ ಉಪಖಂಡವು ರಾಷ್ಟ್ರಪತಿಗಳಿಗೆ ಕೆಲವು ಉದ್ದೇಶಗಳಿಗಾಗಿ ಅಧಿಸೂಚನೆಯ ಮೂಲಕ ಅಧಿಕಾರ ಕೊಡುವುದಿಲ್ಲ. ಇದು ಕೇವಲ ವ್ಯಾಖ್ಯೆಯನ್ನು ಕೊಡುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಜಕ್ಕೂ ರಾಷ್ಟ್ರಪತಿಗಳು ಅಧಿಸೂಚನೆ ಹೊರಡಿಸುವ ಕಾಲಕ್ಕೆ ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

**(ಡಾ. ಅಂಬೇಡ್ಕರ್ ಅವರು ಮೇಲೆ ಕಾಣಿಸಿದಂತೆ ತಂದ ತಿದ್ದುಪಡಿಯು ಸ್ವೀಕೃತವಾಯಿತು.)**

# ವಿಭಾಗ ಏಳು

## ೧೭ ಸೆಪ್ಟೆಂಬರ್ ೧೯೪೫ರಿಂದ ೧೬ ನವೆಂಬರ್ ೧೯೪೫

# ಪ್ರಿವಿ ಕೌನ್ಸಿಲ್ಲಿನ ಅಧಿಕಾರವ್ಯಾಪ್ತಿಯ ರದ್ದತಿ ಮಸೂದೆ

***ಮಾನ್ಯ ಅಧ್ಯಕ್ಷರು:** ಮೊದಲನೆಯ ವಿಷಯದ ಮಸೂದೆ. ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬಾಂಬೆ, ಸಾಮಾನ್ಯ): ಮಾನ್ಯ ಅಧ್ಯಕ್ಷರೆ, ನಾನು ಈಗ ಮಂಡಿಸುತ್ತೇನೆ.

'ಹಿಜ್ ಮೆಜೆಸ್ಟಿ ಇನ್ ಕೌನ್ಸಿಲ್' ಇವರಿಗೆ ಭಾರತೀಯ ಮೇಲ್ಮನವಿ ಮತ್ತು ಅರ್ಜಿಗಳನ್ನು ಕುರಿತು ಇರುವ ಅಧಿಕಾರ ವ್ಯಾಪ್ತಿಯನ್ನು ರದ್ದುಪಡಿಸುವ ಮಸೂದೆಯನ್ನು ೧೪ನೆಯ ಸೆಪ್ಟೆಂಬರ್ ೧೯೪೯ರಂದು ಸಂಸತ್ತು ಕೈಗೆತ್ತಿಕೊಂಡಿತು.

ನಾನು ಒಂದು ಇಲ್ಲವೆ ಎರಡು ಮಾತುಗಳಲ್ಲಿ ಏಕೆ ಈ ಮಸೂದೆಯನ್ನು ಮಂಡಿಸುತ್ತಿದ್ದೇನೆಂಬುದರ ಬಗೆಗೆ ಸಂಸತ್ತಿಗೆ ಹೇಳುವುದು ಅವಶ್ಯವಿದೆ. ಈ ಮಸೂದೆಯನ್ನು ಮಂಡಿಸುವ ಕಾರಣ ಮತ್ತು ಮಸೂದೆಯ ಒಟ್ಟಾರೆ ಉದ್ದೇಶದ ಬಗೆಗೆ ಹೇಳಬಯಸುತ್ತೇನೆ.

ಈ ಮಸೂದೆಯನ್ನು ಮಂಡಿಸಲು ಎರಡು ಕಾರಣಗಳು ಉದ್ಭವಿಸುತ್ತದೆ. ಒಂದನೆಯದು ಅನುಚ್ಛೇದ ೩೭೮ರಲ್ಲಿ ಪ್ರಸ್ತಾಪಿಸಿದ ಖಂಡ (೩)ರ ಉಪಬಂಧಗಳು ಅನುಚ್ಛೇದ ೩೭೮ ಇದರ ಮಧ್ಯದಲ್ಲಿ ಮಧ್ಯಕಾಲೀನ ಸಂಕ್ರಮಣಕಾಲೀನ ಉಪಬಂಧಗಳೆಂದು ಕರೆಯಲು ಬರುತ್ತವೆ. ಅನುಚ್ಛೇದ ೩೭೮ ಖಂಡ (೩) ಹೀಗೆ ಇದೆ.

ಆ ದಿನಾಂಕ ಮತ್ತು ಯಾವ ದಿನಾಂಕದಿಂದ ಸಂವಿಧಾನದ ಅಧಿಕಾರ ವ್ಯಾಪ್ತಿಯು ಪ್ರಾರಂಭವಾಗುವುದೋ ಹಿಜ್ ಮೆಜೆಸ್ಟಿ ಇನ್ ಕೌನ್ಸಿಲ್‌ದವರು ಯಾವುದೇ ಡಿಕ್ರಿ ಇಲ್ಲವೆ ಆದೇಶ, ಭಾರತದ ಕ್ಷೇತ್ರದಲ್ಲಿಯ ಹೊರಡಿಸಿದ ಯಾವುದೇ ನ್ಯಾಯಾಲಯವು ಮಾಡಿದ ಡಿಕ್ರಿ ಇಲ್ಲವೆ ಆದೇಶದ ವಿರುದ್ಧ ಕ್ರಿಮಿನಲ್ ವಿಷಯ ಹಾಗೂ ವ್ಯವಹಾರಗಳನ್ನೊಳಗೊಂಡ ವ್ಯವಹಾರಗಳ ಬಗೆಗೆ ಹಿಜ್ ಮೆಜೆಸ್ಟಿ ಇನ್ ಕೌನ್ಸಿಲ್ ಅವರಿಗೆ ಇರುವ ವಿಶಿಷ್ಟ ಅಧಿಕಾರವು ಮುಕ್ತಾಯವಾಗುತ್ತದೆ ಮತ್ತು ಎಲ್ಲ ಮೇಲ್ಮನವಿಗಳು ಹಾಗೂ ಉಳಿದ ವ್ಯವಹಾರಗಳು ಹಿಜ್ ಮೆಜೆಸ್ಟಿ ಇನ್ ಕೌನ್ಸಿಲ್ಲದ ಮುಂದೆ ಈ ದಿನಾಂಕದಂದು ಇರುತ್ತವೆಯೋ ಅವುಗಳನ್ನು ಸುಪ್ರೀಂಕೋರ್ಟಿಗೆ ವರ್ಗಾಯಿಸಬೇಕು ಮತ್ತು ಸುಪ್ರೀಂಕೋರ್ಟ್ ಅವುಗಳನ್ನು ನಿಕಾಲೆ ಮಾಡಬೇಕು.

ಅದೆಂದರೆ ಯಾವ ದಿನಾಂಕದಂದು ಸಂವಿಧಾನವು ಜಾರಿಯಲ್ಲಿ ಬಂದಿತೋ ಆ ದಿನಾಂಕದಂದು ಪ್ರಿವಿ ಕೌನ್ಸಿಲ್ಲಿನ ಅಧಿಕಾರ ವ್ಯಾಪ್ತಿಯು ಸಂಪೂರ್ಣವಾಗಿ ಮುಕ್ತಾಯವಾಗುತ್ತದೆ, ಅಂತ್ಯಗೊಳ್ಳುತ್ತದೆ. ಎರಡನೆಯ ಸಂದರ್ಭ, ಯಾವ ಕಾರಣಕ್ಕಾಗಿ ಈ ಮಸೂದೆಯನ್ನು ಮಂಡಿಸುವ ಆವಶ್ಯಕತೆಯು ಬಂದಿತೆಂದರೆ ಸಂವಿಧಾನವನ್ನು ದಿನಾಂಕ ೨೬ನೆಯ ಜನವರಿ ೧೯೫೦ರಂದು ಜಾರಿಯಲ್ಲಿ ತರುವ ಪ್ರಸ್ತಾಪ ಬಂದಿತೆಂದು ತಿಳಿದರೆ ಈ ಎರಡೂ ಸಂದರ್ಭಗಳ ಪರಿಣಾಮವಾಗಿ ೧೯೫೦ ಇಸ್ವಿ ಜನವರಿ ೨೬ನೆಯ ದಿನಾಂಕದಂದು ಪ್ರಿವಿ ಕೌನ್ಸಿಲದವರು ಯಾವುದೇ ಮೇಲ್ಮನವಿ ಅರ್ಜಿಗಳನ್ನು ಸ್ವೀಕರಿಸುವ ಅಧಿಕಾರ ವ್ಯಾಪ್ತಿ ಇರುವುದಿಲ್ಲ.

---

* ಸಿ.ಎ.ಡಿ. ಸಂ. IX, ೧೭ನೇ ಸೆಪ್ಟೆಂಬರ್ ೧೯೪೯, ಪುಟ ೧೫೮೯–೯೦.

ಆದರೆ ಮಹತ್ವದ ವಿಷಯವೇನೆಂದರೆ ಪ್ರಿವಿ ಕೌನ್ಸಿಲ್ಲದವರು ದಿನಾಂಕ ೨೬ ಜನವರಿ ೧೯೫೦ರಂದು ಇರುವ ಮೇಲ್ಮನವಿ ಇಲ್ಲವೆ ಇವುಗಳನ್ನು ನಿಕಾಲೆ ಮಾಡಲು ಬರುವುದಿಲ್ಲ.

೧೯೫೦ ಜನವರಿ ೨೬ರ ಸ್ಥಿತಿಗತಿಗಳನ್ನು ಗಮನಿಸಿದರೆ ಪರಿಸ್ಥಿತಿಯು ಹೀಗೆ ಇವೆ. ಈಗ ಪ್ರಿವಿ ಕೌನ್ಸಿಲ್ಲದ ಮುಂದೆ ೭೦ ದಿವಾಣಿ ಮೇಲ್ಮನವಿ, ೧೦ ಕ್ರಿಮಿನಲ್ ಅಪೀಲುಗಳು ವಿಚಾರಣೆ ಇರುತ್ತವೆ. ಪ್ರಿವಿ ಕೌನ್ಸಿಲ್ ತನ್ನ ಮುಂದಿನ ವಿಚಾರಣೆಗಾಗಿ ಸಿ. ಪಟ್ಟಿ ಪ್ರಕರಣದ ವಿಚಾರಣೆಗೆ ಪಟ್ಟಿ ತಯಾರಿಸಿದ್ದು, ಅದರಲ್ಲಿ ೨೦ ಮೇಲ್ಮನವಿಗಳನ್ನು ಇಟ್ಟಿದ್ದಾರೆ. ಬಹುತೇಕವಾಗಿ ಭಾರತ ಸಂವಿಧಾನ ಜಾರಿಯಲ್ಲಿ ಬರುವ ಪೂರ್ವದಲ್ಲಿ ಪ್ರಿವಿ ಕೌನ್ಸಿಲ್ ಭಾರತೀಯ ಮೇಲ್ಮನವಿಗಳನ್ನು ವಿಚಾರಣೆಗೆ ತೆಗೆದುಕೊಳ್ಳುವ ಕೊನೆಯ ಹಂತವೆನಿಸುತ್ತದೆ.

ನಮಗೆ ಬಂದ ಪ್ರಕರಣದ ವಿಷಯ ಪಟ್ಟಿ ಅನ್ವಯ ಪ್ರಿವಿ ಕೌನ್ಸಿಲಿನ ಮುಂದಿನ ಸಲದ ವಿಚಾರಣೆಯಲ್ಲಿ ೨೦ ಮೇಲ್ಮನವಿ ವಿಚಾರಣೆಗೆ ತಯಾರು ಮಾಡಿದ್ದಾರೆ. ಅದೆಂದರೆ, ೧೯೫೦ ಜನವರಿ ೨೬ರಂದು ೬೦ ಮೇಲ್ಮನವಿಗಳು ನಿಕಾಲೆ ಆಗದೆ ಹಾಗೆ ಬಾಕಿ ಉಳಿಯುತ್ತವೆ. ಈಗ ನಮ್ಮ ಮುಂದೆ ನಿಜವಾಗಿ ಇರುವ ಪ್ರಶ್ನೆ ನಾವು ವಿಚಾರಿಸಬೇಕಾದುದೆಂದರೆ ೧೯೫೦ ಜನವರಿ ೨೬ರಂದು ಪ್ರಿವಿ ಕೌನ್ಸಿಲದ ಮುಂದೆ ಬಾಕಿ ಉಳಿಯುವ ೬೦ ಮೇಲ್ಮನವಿಗಳು ಅವುಗಳ ಬಗೆಗೆ ಏನು ಮಾಡುವುದು? ಎಂದು ಇದೆ.

ಈ ವಿಷಯ ಕುರಿತು ಎರಡು ಬಗೆಯಿಂದ ವಿಚಾರ ಮಾಡಬಹುದು. ಒಂದು ಮಾರ್ಗವೆಂದರೆ, ಪ್ರಿವಿ ಕೌನ್ಸಿಲ್ಲದವರಿಗೆ ಅವರ ಮುಂದೆ ವಿಚಾರಣೆಗೆ ಇರುವ ಮೇಲ್ಮನವಿಗಳನ್ನು ನಿಕಾಲೆ ಮಾಡುವ ಕುರಿತು ಅಧಿಕಾರವ್ಯಾಪ್ತಿ ಮುಂದುವರೆಯಿಸುವುದು. ಇದೇ ರೀತಿ ಐರಿಷ್ ಸಂವಿಧಾನವು ಅನುಚ್ಛೇದ ೩೭ರ ಅನುಚ್ಛೇದದೊಂದಿಗೆ ಸಂವಿಧಾನ ಜಾರಿಗೆ ಬಂದ ದಿನ ಪ್ರಿವಿ ಕೌನ್ಸಿಲ್ಲಿನ ಮುಂದೆ ಆ ಸಂವಿಧಾನವು ಪ್ರಿವಿ ಕೌನ್ಸಿಲ್ಲಿನ ಮುಂದೆ ಚಾಲತಿ ವಿಚಾರಣೆಗೆ ಇರುವ ಪ್ರಕರಣಗಳನ್ನು ನಿಕಾಲೆ ಮಾಡಲು ಯಾವುದೇ ಬಾಧೆ ಬರುವುದಿಲ್ಲವೆಂದು ಹೇಳಿತು. ನಾನು ಅನುಚ್ಛೇದ ೩೦೮ ಖಂಡ (೩) ಸೂಚಿಸಿದಂತೆ ಪ್ರಿವಿ ಕೌನ್ಸಿಲ್ಲಿಗೆ ಯಾವುದೇ ಅಧಿಕಾರ ಕೊಡುವ ಇಚ್ಛೆಯಿಲ್ಲವೆಂದು ತೋರಿಸಿದ್ದೇನೆ. ೧೯೫೦ ಜನವರಿ ೨೬ರಂದು ಪ್ರಿವಿ ಕೌನ್ಸಿಲ್ ಅಧಿಕಾರವನ್ನು ಅಂತ್ಯಗೊಳಿಸಬೇಕೆಂದು ಸೂಚಿಸುತ್ತೇನೆ. ಈಗ ಇರುವ ಒಂದು ಮಾರ್ಗವೆಂದರೆ ಪ್ರಿವಿ ಕೌನ್ಸಿಲ್ ಅಧಿಕಾರವ್ಯಾಪ್ತಿ ಅಂತ್ಯಗೊಳಿಸುವುದು. ಅದರ ಅಧಿಕಾರವ್ಯಾಪ್ತಿಯನ್ನು ಫೆಡರಲ್ ಕೋರ್ಟಿಗೆ ಕೊಡುವುದು. ಪ್ರಿವಿ ಕೌನ್ಸಿಲ್ಲದವರು ಎಲ್ಲ ಪ್ರಕರಣಗಳನ್ನು ಅಕ್ಟೋಬರ್ ೧೦ ಮತ್ತು ೧೯೪೯ರಂದು ಫೆಡರಲ್ ಕೋರ್ಟಿಗೆ ವರ್ಗಾಯಿಸಬೇಕು. ಆದರೆ ೨೦ ಪ್ರಕರಣಗಳನ್ನು ಹೊರತುಪಡಿಸಿ ಅಧಿಕಾರ ವ್ಯಾಪ್ತಿ ಕುರಿತಂತೆ ಈ ಅಧಿಕಾರವು ಅಂತ್ಯಗೊಳ್ಳುತ್ತದೆ. ಇದನ್ನೇ ಈ ಮಸೂದೆಯು ಹೇಳುತ್ತದೆ.

ಮಸೂದೆಯ ವಿಶೇಷ ಉಪಬಂಧಕ್ಕೆ ಈಗ ಬರುತ್ತೇನೆ. ಖಂಡ (೨) ಇದು ಪ್ರಿವಿ ಕೌನ್ಸಿಲ್ಲಿನ ಭಾರತದ ಎಲ್ಲ ನ್ಯಾಯಾಲಯಗಳ ಮೇಲೆ ಇರುವ ಅಧಿಕಾರ ವ್ಯಾಪ್ತಿಯನ್ನು ಅಂತ್ಯಗೊಳಿಸಿತು. ಖಂಡ (೩) ಪ್ರಿವಿ ಕೌನ್ಸಿಲ್ಲಿಗೆ ಫೆಡರಲ್ ಕೋರ್ಟಿನ ಮೇಲಿರುವ ಅಧಿಕಾರ ವ್ಯಾಪ್ತಿಗಳು ರದ್ದುಗೊಳಿಸುತ್ತದೆ, ಖಂಡ ೫ ಇದು ಖಂಡ ೨ ಹಾಗೂ ೩ ಇವುಗಳ ವಿರುದ್ಧ ಇರುತ್ತದೆ. ಯಾಕೆಂದರೆ, ಇದು ಫೆಡರಲ್ ಕೋರ್ಟಿನ ಮೇಲೆ ಪ್ರಿವಿ ಕೌನ್ಸಿಲ್ಲಿನ ಅಧಿಕಾರ ವ್ಯಾಪ್ತಿಯನ್ನು ಕೊಡಲು ಸೂಚಿಸುತ್ತದೆ. ಹಾಗೂ ಪ್ರಿವಿ ಕೌನ್ಸಿಲ್ಲಿನವರು ಅಕ್ಟೋಬರ್ ೧೦ ಅವರ ಮುಂದೆ ವಿಚಾರಣೆಗಿರುವ ಎಲ್ಲ ಪ್ರಕರಣಗಳನ್ನು ವರ್ಗಾಯಿಸಲು, ಖಂಡ ೪ ಇದು ಪ್ರಿವಿ ಕೌನ್ಸಿಲ್ಲಿನ ಮುಂದೆ ಚೌಕಾಸಿಗೆ ಇರುವ ಪ್ರಕರಣಗಳ ಬಗ್ಗೆ ಹೇಳುತ್ತದೆ, ಖಂಡ ೫ ಇದು ಫೆಡರಲ್ ಕೋರ್ಟಿನ ಮೇಲೆ ಪ್ರಿವಿ ಕೌನ್ಸಿಲ್ಲದ ಮುಂದೆ ಈಗಿರುವ ಕೆಲವು ಅಪೀಲು ಹಾಗೂ ಅರ್ಜಿಗಳ

ಅಧಿಕಾರ ವ್ಯಾಪ್ತಿಯನ್ನು ಉಳಿಸುತ್ತದೆ. ಅವುಗಳನ್ನು ೪ ವಿಧದಲ್ಲಿ ವಿಭಾಗಿಸಬಹುದು: (೧) ಮೇಲ್ಮನವಿ ಹಾಗು ಅರ್ಜಿಗಳಲ್ಲಿ ತೀರ್ಪು ನೀಡಿದ್ದರೆ ಆದರೆ ಅಕ್ಟೋಬರ್ ೧೦ಕ್ಕಿಂತ ಮೊದಲು ಆರ್ಡರ್ ಇನ್ ಕೌನ್ಸಿಲ್ ಮಾಡಿರುವುದಿಲ್ಲ. (೨) ೨ನೆಯ ಅಕ್ಟೋಬರ್ ವಿಚಾರಣೆಯ ಪಟ್ಟಿಯಲ್ಲಿ ಕಾಣಿಸಿದ ಮೇಲ್ಮನವಿಗಳು ಈಗಾಗಲೇ ಸ್ವೀಕರಿಸಿದ ಮೇಲ್ಮನವಿ ಹಾಗೂ ಅರ್ಜಿ (೩) ಮೇಲ್ಮನವಿ ಹಾಗೂ ಅಕ್ಟೋಬರ್ ೧೦ರವರೆಗೆ ಸ್ವೀಕರಿಸಬಹುದಾದ ಮೇಲ್ಮನವಿ ಹಾಗೂ ಅರ್ಜಿ (೪) ಮೇಲ್ಮನವಿ ಹಾಗೂ ಅರ್ಜಿಗಳಲ್ಲಿ ವಾದ ವಿವಾದ ಮುಕ್ತಾಯವಾಗಿದ್ದರೂ ತೀರ್ಪನ್ನು ತಡೆಹಿಡಿದ ಪ್ರಕರಣಗಳು, ಖಂಡ ೬ ಇದರಲ್ಲಿ ಖಂಡ ೪ರಲ್ಲಿ ಬಾರದೆ ಇರುವ ಎಲ್ಲ ಪ್ರಕರಣಗಳು ಖಂಡ ೬ರ ಪ್ರಕಾರ ಪ್ರಿವಿ ಕೌನ್ಸಿಲ್ ಮುಂದೆ ಚಾಲತಿ ಇದ್ದರೂ ಸಹಿತ ಅವು ಫೆಡರಲ್ ಕೋರ್ಟಿಗೆ ವರ್ಗಾವಣೆಯಾಗುತ್ತವೆ. ಖಂಡ ೭ ಮತ್ತು ೮ ಇವು ಕೆಲವು ಅರ್ಥೈಸುವ ಉಪಬಂಧಗಳಾಗಿವೆ. ಪ್ರಿವಿ ಕೌನ್ಸಿಲ್ಲಿನ ಅಧಿಕಾರವನ್ನು ಮೊಟಕುಗೊಳಿಸುವಾಗ ಭಾರತ ಸರಕಾರ ಅಧಿನಿಯಮ ೧೯೩೫ ಇದರ ಕೆಲವು ಕಲಂಗಳನ್ನು ನಿರಸನಗೊಳಿಸಬೇಕು ಮತ್ತು ತಿದ್ದುಪಡಿ ಮಾಡುವುದು ಅಪೇಕ್ಷಣೀಯವೆಂದು ಅನಿಸುತ್ತದೆ. ಅದರ ಪರಿಣಾಮವಾಗಿ ಅವು ಫೆಡರಲ್ ಕೋರ್ಟಿನ ಅಧಿಕಾರಕ್ಕೆ ಸಂಬಂಧಿಸಿದಂತೆ ಭಾರತ ಸರಕಾರ ಅಧಿನಿಯಮದಲ್ಲಿರುವ ಕೆಲವು ನ್ಯೂನತೆಗಳನ್ನು ತೆಗೆದು ಹಾಕುವುದು ಅವಶ್ಯವೆನಿಸಿತು. ನಾನು ಮೊದಲು ಹೇಳಿದಂತೆ ಖಂಡ (೩) ಭಾರತ ಸರಕಾರ ಅಧಿನಿಯಮ ಕಲಂ ೨೦೮ ಹಾಗೂ ೨೧೮ ಇವುಗಳನ್ನು ನಿರಸನಗೊಳಿಸುತ್ತದೆ ಹಾಗೂ ಅದು ಪ್ರಿವಿ ಕೌನ್ಸಿಲ್ಲಿನ ಅಧಿಕಾರ ಕುರಿತಂತೆ ಮತ್ತು ಫೆರಡಲ್ ಕೋರ್ಟಿನ ಮೇಲ್ಮನವಿ ಕುರಿತು ಮತ್ತು ಭಾರತದ ಹೊರಗಿನ ನ್ಯಾಯಾಲಯಗಳಿಂದ ಬರುವ ಮೇಲ್ಮನವಿಯನ್ನು ಕುರಿತು ಹೇಳುತ್ತವೆ. ಇವೆರಡೂ ಬದಲಾವಣೆಗಳು ಪರಿಣಾಮಕಾರಿಯಾಗಿರುವುವು.

ಕಲಂ ೨೦೫ ಇದು ಫೆಡರಲ್ ಕೋರ್ಟಿನ ಮೇಲ್ಮನವಿ ಕುರಿತಂತೆ, ಕಲಂ ೨೦೯ ತೀರ್ಪಿನ ನಮೂನೆ ಹಾಗೂ ಡಿಕ್ರಿ ಯಾವ ರೀತಿ ಮಾಡಬೇಕೆಂಬುದರ ಬಗೆಗೆ, ಕಲಂ ೨೧೦ ಇದು ಫೆಡರಲ್ ಕೋರ್ಟಿಗೆ ಇತರ ನ್ಯಾಯಾಲಯಗಳಿಗೆ ಮೇಲೆ ಇರುವ ಅಧಿಕಾರವ್ಯಾಪ್ತಿ, ಕಲಂ ೨೧೪ ಇದು ಫೆಡರಲ್ ಕೋರ್ಟಿಗೆ ಭಾರತದ ಹೊರಗಿನ ನ್ಯಾಯಾಲಯದ ಮೇಲೆ ಇರುವ ಅಧಿಕಾರ ವ್ಯಾಪ್ತಿ ಕುರಿತಂತೆ ಇರುವುವುಗಳನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

ಪರಿಣಾಮವಾಗಿ, ಇದರಿಂದ ಅವಶ್ಯವಾದ ತಿದ್ದುಪಡಿಯೊಂದಿಗೆ ಫೆಡರಲ್ ಕೋರ್ಟಿಗೆ ಸ್ವತಂತ್ರವಾದ ಸಂಪೂರ್ಣ ಅಧಿಕಾರದ ಬಗ್ಗೆ ಪ್ರಸ್ತಾವನೆ ಮಾಡಿದೆ. ಈ ಪ್ರಸ್ತಾವನೆಯ ಕ್ರಮವು ಸಂಶಯಾತೀತವಾಗಿ ಮಧ್ಯಂತರ ಕ್ರಮವಾಗಿದೆ. ಯಾಕೆಂದರೆ, ಈ ಅಧಿಕಾರಿಗಳು ೧೯೫೦ ಜನವರಿ ೨೬ಕ್ಕೆ ಕೊನೆಗೊಳ್ಳುತ್ತದೆ. ೧೯೫೦ ಆ ದಿನ ಸಂವಿಧಾನ ಜಾರಿಗೆ ಬರುತ್ತದೆ. ೧೯೫೦ ಜನವರಿ ೨೬ನೆಯ ದಿನಾಂಕದಿಂದ ಫೆಡರಲ್ ಕೋರ್ಟಿನ ಅಧಿಕಾರಗಳು ಸಂವಿಧಾನದಲ್ಲಿ ಕಾಣಿಸಿದಂತೆ ಇರುತ್ತವೆ.

ಮಾನ್ಯರೇ ನಾನು ಮಂಡಿಸುತ್ತೇನೆ.

## ಖಂಡ ೨

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ೩ನೆಯ ಖಂಡದಲ್ಲಿ ಈ ರೀತಿ ಕಾಣಿಸಿದೆ. ಫೆಡರಲ್ ಕೋರ್ಟ್, ಇದನ್ನು ಖಂಡ ೩, ಉಪಖಂಡ (೨)ರಲ್ಲಿ ಹೇಳಲಾಗಿದೆ. ಆದ್ದರಿಂದ ಫೆಡರಲ್ ಕೋರ್ಟ್ ಹೊರತಾಗಿ ಎಂಬ ಶಬ್ದಗಳನ್ನು ಈ ಖಂಡ (೨)ರಲ್ಲಿ ಹೇಳಲಾಗಿದೆ.

**ಪಂಡಿತ್ ಠಾಕೂರದಾಸ್ ಭಾರ್ಗವ:** ಈ ಪಟ್ಟಿಯಲ್ಲಿನ ಖಂಡ ೨ ಮತ್ತು ನನ್ನ ತಿದ್ದುಪಡಿ ಇದಕ್ಕೆ ಮಾತ್ರ ಅನ್ವಯಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು:** ನೀವು ಇದನ್ನು ಪ್ರಸ್ತುತ ಬಿಟ್ಟುಕೊಡಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ತಿದ್ದುಪಡಿಯನ್ನು ಸ್ವೀಕರಿಸುವುದಿಲ್ಲ. ಇದು ಅನವಶ್ಯಕ.

**ಶ್ರೀ ಬಿ. ದಾಸ್** (ಒರಿಸ್ಸಾ ಜನರಲ್) ನಾನು ಮಂಡಿಸಲು ವಿನಂತಿಸಿಕೊಳ್ಳುತ್ತೇನೆ. ಮಾನ್ಯರೇ, ಇದು ನನಗೆ ಬಹುವಾಗಿ ಸಂಬಂಧಿಸಿದ್ದು, ಅವಕಾಶಕ್ಕಾಗಿ "ಖಂಡ ೨ರಲ್ಲಿನ ಉಪಖಂಡದಲ್ಲಿರುವ ಪದ 'ಅಥವಾ ಇನ್ನಾವುದೇ ರೀತಿ'ಯನ್ನು ಬಿಡುವುದು". ಮಾನ್ಯರೆ, ಇದು ನನಗೆ ಅವಹೇಳನಕಾರಿ...

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಈ ತಿದ್ದುಪಡಿಯು ಅತ್ಯವಶ್ಯವೆಂದು ನನಗೆ ಅನಿಸುವುದಿಲ್ಲ. ಯಾಕೆಂದರೆ ಪ್ರಿವಿ ಕೌನ್ಸಿಲ್ಲಿನ ಅಧಿಕಾರ ವ್ಯಾಪ್ತಿಯನ್ನೂ ಸಹ ಕಾನೂನಿನ ವಿಶೇಷ ಹಕ್ಕಿನ ಮೂಲಕ ಪಡೆದುಕೊಳ್ಳಲಾಗಿದೆ. ಆದ್ದರಿಂದ ಆ ಪದಗಳು ಅತ್ಯವಶ್ಯವಿರುತ್ತದೆ. ನಾವು ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ವಿಶಿಷ್ಟ ಹಕ್ಕಿನ ಅಧಿಕಾರದ ಮೂಲಕ ಹಾಗೂ ಇತರ ಅಧಿಕಾರ ಮೂಲದಿಂದ ಬಂದ ಅಧಿಕಾರಗಳನ್ನು ಸಂಪೂರ್ಣವಾಗಿ ಮುಕ್ತಾಯಗೊಳಿಸಲು ಇಚ್ಛಿಸಿದ್ದೇವೆ.

**ಮಾನ್ಯ ಸಭಾಧ್ಯಕ್ಷರು:** ಈಗ ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

**ಎಲ್ಲ ತಿದ್ದುಪಡಿಗಳು ತಿರಸ್ಕೃತವಾದವು, ಮಸೂದೆಗೆ ಖಂಡ (೨)ನ್ನು ಸೇರಿಸಲಾಯಿತು.**

## ಖಂಡ ೩

**ಶ್ರೀ ಟಿ.ಟಿ. ಕೃಷ್ಣಾಮಾಚಾರಿ:** ಫೆಡರಲ್ ಕೋರ್ಟಿನಿಂದ ಪ್ರಿವಿ ಕೌನ್ಸಿಲ್ ಎದುರಿಗೆ ಯಾವ ಮೇಲ್ಮನವಿಯೂ ವಿಚಾರಣೆಯಲ್ಲಿರುವುದಿಲ್ಲವೆಂದು ನಾನು ವಿವರಿಸಿದರೆ, ತಾವು ಈ ನನ್ನ ಮಿತ್ರರ ಹೇಳಿಕೆಯನ್ನು ಮೊಟಕುಗೊಳಿಸಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದರ ಮುಂದೆ ಮೇಲ್ಮನವಿಗಳೂ ವಿಚಾರಣೆಯಲ್ಲಿಲ್ಲ.

**ಪಂಡಿತ್ ಠಾಕೂರದಾಸ್ ಭಾರ್ಗವ:** ನಾನು ಡಾ. ಅಂಬೇಡ್ಕರ್ ಇವರಿಂದ ಹಾಗೂ ಶ್ರೀ ಬಕ್ಷಿ ಟೇಕಚಂದ ಇವರಿಂದ ಮೇಲ್ಮನವಿ ವಿಚಾರಣೆಗೆ ಇಲ್ಲವೆಂದು ಕೇಳಿದ್ದೇನೆ. ಆದರೆ ಬೇರೆ ಪ್ರಕರಣಗಳು ಅದರ ಮುಂದೆ ಇರಬಹುದು. ನನ್ನ ವಿನಂತಿ ಏನೆಂದರೆ, ಪ್ರಕರಣಗಳಿಗೆ ಸಂಬಂಧಿಸಿದ ವ್ಯಕ್ತಿಗಳಿಗೆ ಪರಿಹಾರವನ್ನು ಕೊಡುವ ಬಗ್ಗೆ ಅವರಿಗೆ ಇರುವ ಹಕ್ಕನ್ನು ನಾವು ಇಲ್ಲವೆಂದು ಮಾಡಬಾರದು. ಯಾಕೆಂದರೆ, ನಾವು ಪ್ರಿವಿ ಕೌನ್ಸಿಲ್ಲಿನ ಅಧಿಕಾರ ವ್ಯಾಪ್ತಿಯನ್ನು ಮುಕ್ತಾಯಗೊಳಿಸುವುದರಿಂದ ಅವರ ಹಕ್ಕು ನಷ್ಟವಾಗಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಗೆಳೆಯರಾದ ಠಾಕೂರದಾಸ್ ಭಾರ್ಗವ ಅವರು ಮಂಡಿಸಿದ ತಿದ್ದುಪಡಿಯನ್ನು ಸ್ವೀಕರಿಸುವುದು ಅವಶ್ಯವೆಂದು ನನಗೆ ಅನಿಸುವುದಿಲ್ಲ. ನನ್ನ ಗೆಳೆಯರಾದ ಶ್ರೀ ಕೃಷ್ಣಮಾಚಾರಿಯವರು ಫೆಡರಲ್ ಕೋರ್ಟಿನಿಂದ ಪ್ರಿವಿ ಕೌನ್ಸಿಲ್ಲಿನ ಮುಂದೆ ಯಾವ ಮೇಲ್ಮನವಿಯೂ ವಿಚಾರಣೆಗೆ ಇಲ್ಲವೆಂದು ಹೇಳಿದ್ದಾರೆ ಮತ್ತು ಆ ಪರಿಣಾಮವಾಗಿ ಆ ಬಗ್ಗೆ ಯಾವುದೇ ಉಳಿಸುವಿಕೆಯ ಬಗ್ಗೆ ಸೂಚಿಸಿದ್ದು ಅನಾವಶ್ಯವಾಗಿದೆ. ಶ್ರೀ ಠಾಕೂರದಾಸ್ ಭಾರ್ಗವ ಅವರು ಪ್ರಸ್ತಾಪಿಸಿದಂತೆ ಉಳಿಸುವಿಕೆಯನ್ನು ಕಲ್ಪಿಸುವುದು ಅವಶ್ಯವಿರುವುದಿಲ್ಲವೆಂದು ನನಗೆ ಅನ್ನಿಸುತ್ತದೆ. ಯಾಕೆಂದರೆ ಅಲ್ಲಿ ಯಾವುದೇ ಪ್ರಕರಣವು ವಿಚಾರಣೆಗೆ ಇರುವುದಿಲ್ಲ ಮತ್ತು ಯಾರ ಮೇಲೂ ಅದು ದುಷ್ಪರಿಣಾಮವನ್ನು ಉಂಟುಮಾಡುವುದಿಲ್ಲ.

ನನ್ನ ಗೆಳೆಯರಾದ ಶ್ರೀ ನಜ಼ಿರುದ್ದೀನ್ ಅಹ್ಮದ್ ಇವರು ತಂದ ತಿದ್ದುಪಡಿಗೆ ನಾನು ಹೇಳುವುದೇನೆಂದರೆ ಗೊತ್ತುಪಡಿಸಿದ ದಿನಾಂಕಕ್ಕಿಂತ ಮೊದಲು ಪ್ರಿವಿ ಕೌನ್ಸಿಲ್ಲಿನ ಮುಂದೆ ದಾಖಲು ಮಾಡಿದ ಕ್ರಿಮಿನಲ್ (ಫೌಜುದಾರಿ) ಪ್ರಕರಣಗಳನ್ನು ಅವರೇ ಅವುಗಳನ್ನು ವಿಚಾರಣೆಗೆ ಸ್ವೀಕರಿಸುವ ಉದ್ದೇಶದಿಂದ ಕೇಳಬಹುದು. ನಂತರ ಅವುಗಳನ್ನು ಅಂತಿಮವಾಗಿ ನಿಕಾಲೆ ಮಾಡಲು ಫೆಡರಲ್ ಕೋರ್ಟಿಗೆ ವರ್ಗಾಯಿಸಬಹುದು ಎಂಬುದು ಒಪ್ಪಿತವಾಗತಕ್ಕ ಅವರು ಈ ತತ್ವದಿಂದ ದೂರ ಸರಿಯ ಬಯಸುತ್ತಾರೆ. ಆದರೆ ಅವರು ಕೊಟ್ಟ ಕಾರಣಗಳು ನನಗೆ ಸೂಕ್ತವೆನಿಸುವುದಿಲ್ಲ. ಕಾರಣ ನಾನು ಅವರ ತಿದ್ದುಪಡಿಯನ್ನು ಸ್ವೀಕರಿಸಲಾರೆನು. ನಾವು ಈ ತತ್ವ ಬಿಟ್ಟು ಯಾಕೆ ಹೋಗಬೇಕು? ನನಗೆ ಇದು ತಿಳಿಯದು.

**ಪಂಡಿತ್ ಠಾಕೂರದಾಸ್ ಭಾರ್ಗವ:** ಇವರು ತಂದ ತಿದ್ದುಪಡಿಯು ತಿರಸ್ಕೃತವಾಯಿತು ಮತ್ತು ಶ್ರೀ ನಜ಼ಿರುದ್ದೀನ್ ಅಹ್ಮದ್ ಇವರು ತಂದ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲಾಯಿತು. **ಮಸೂದೆಗೆ ಖಂಡ ೩ ಇದನ್ನು ಸೇರಿಸಲಾಯಿತು.**

## ಖಂಡ ೪

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಈಗ ಮಂಡಿಸುತ್ತೇನೆ. ಖಂಡ ೪, ಉಪಖಂಡ (ಬಿ) ಬದಲಾಗಿ ಈ ಕೆಳಗಣ ಉಪಖಂಡವನ್ನು ಸೇರಿಸಬೇಕು.

(ಬಿ) ಜುಡಿಶಿಯಲ್ ಕಮಿಟಿಯವರು ಪಕ್ಷಗಾರರ ವಾದವಿವಾದ ಕೇಳಿದ ನಂತರ ಯಾವುದೇ ಭಾರತದ ಮೇಲ್ಮನವಿ ಇಲ್ಲವೆ ಅರ್ಜಿಯ ಮೇಲಿನ ತೀರ್ಪು ಇಲ್ಲವೇ ಆದೇಶಗಳನ್ನು ಕಾಯ್ದಿರಿಸಿದ್ದರೆ ಅಥವಾ

(ಕೆ) ಗೊತ್ತುಮಾಡಿದ ದಿನಾಂಕಕ್ಕಿಂತ ಮೊದಲು ಯಾವುದೇ ಭಾರತದ ಮೇಲ್ಮನವಿ ಕೋರ್ಟಿನ ಆ ವರ್ಷದ ೧೯೪೯ನೆಯ ಇಸ್ವಿ ಕಾರ್ಯ ಕಲಾಪಗಳ ಪಟ್ಟಿಯಲ್ಲಿ ಸೇರಿಸಿದ್ದರೆ ಮತ್ತು ಆ ದಿನಾಂಕದ ನಂತರ ಅದರಲ್ಲಿಂದ ತೆಗೆದು ಹಾಕದಂತೆ ಜ್ಯುಡಿಶಿಯಲ್ ಕಮಿಟಿಯವರಿಂದ ಇಲ್ಲವೆ ಇವರಿಂದ ಅಧಿಕಾರ ಪಡೆದವರಿಂದ ನಿರ್ದೇಶನವಿದ್ದರೆ ಇಲ್ಲವೆ ಮತ್ತು ಉಪಖಂಡ (ಸಿ) ಇದನ್ನು ತೆಗೆದುಹಾಕಬೇಕು.

ಉಪಖಂಡ (ಡಿ) ಅಂದರೆ (ಕೆ)ದ ಬದಲು (ಡಿ) ಮಾಡಬೇಕು. ಉಪಖಂಡ (ಕೆ) ಇದಕ್ಕೆ ಸ್ವಲ್ಪ ವಿವರಣೆ ಬೇಕಾಗಿದೆ. ನಾವು ಪ್ರಿವಿ ಕೌನ್ಸಿಲ್ಲಿನ ವಿಚಾರಣೆ ಪಟ್ಟಿಯಲ್ಲಿ ಕಾಣಿಸಿದ ಕಾರ್ಯಕಲಾಪಗಳ ಬಗ್ಗೆ ಇಲ್ಲವೆ ಪ್ರಕರಣಗಳ ಬಗೆಗೆ ಕಾಣಿಸಿದವುಗಳಲ್ಲಿ ಎಷ್ಟು ಪ್ರಕರಣವು ನಿಕಾಲೆಯಾಗುವುವು ನಮಗೆ ಗೊತ್ತಿಲ್ಲ. ಆದ್ದರಿಂದ ನಾವು ಪ್ರಸ್ತಾಪಿಸುವುದೇನೆಂದರೆ ಪ್ರಿವಿ ಕೌನ್ಸಿಲ್ಲಿಗೆ ನಾವು ಒಂದು ಅಧಿಕಾರ ಕೊಡುತ್ತೇವೆ. ಅದೇನೆಂದರೆ, ಈಗ ವಿಚಾರಣೆಗಾಗಿ ವಿಷಯಪಟ್ಟಿ ಪ್ರಕರಣಗಳನ್ನು ಕಾಣಿಸಿದ್ದರೂ ಸಹ, ಅವುಗಳಲ್ಲಿ ಕೆಲವನ್ನು ವಿಚಾರಣೆ ಮಾಡಲು ಆಗಲಿಕ್ಕಿಲ್ಲ. ಆದ್ದರಿಂದ ಅಲ್ಲಿ ಬಾಕಿ ಪ್ರಕರಣಗಳು ಇಲ್ಲವೆಂದೂ ಹೇಳಲು ಬರುವುದಿಲ್ಲ. ಇಂತಹ ಪ್ರಕರಣದಲ್ಲಿ ಪ್ರಿವಿ ಕೌನ್ಸಿಲ್‌ದವರು ತಮಗೆ ಅವುಗಳನ್ನು ವಿಚಾರಣೆ ಮಾಡಲು ಆಗುವುದಿಲ್ಲವೆಂದು ಹೇಳಿದರೆ ಅವು ತಮ್ಮಿಂದ ತಾವೇ ಫೆಡರಲ್ ಕೋರ್ಟಿಗೆ ವರ್ಗಾವಣೆಯಾಗುವುವು. ಅದಕ್ಕಾಗಿ ಈ ತರಹದ ಸಂದರ್ಭಕ್ಕೆ ಯೋಗ್ಯವಾಗುವಂತೆ ಈ ಉಪಖಂಡ (ಸಿ)ದ ಮೂಲಕ ತಿದ್ದುಪಡಿ ಸೇರಿಸಿದ್ದೇನೆ.

**ಪಂಡಿತ್ ಠಾಕೂರದಾಸ್ ಭಾರ್ಗವ:** ಮಾನ್ಯರೆ, ನಾನು ಮಂಡಿಸುತ್ತೇನೆ.

"ಉಪಖಂಡ (ಸಿ) ಖಂಡ ೪ಕ್ಕೆ ಇರುವುದನ್ನು ತೆಗೆದುಹಾಕಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಶ್ರೀ ಪಂಡಿತ್ ಠಾಕೂರದಾಸ್ ಭಾರ್ಗವ ಅವರ ತಿದ್ದುಪಡಿಯನ್ನು ಸ್ವೀಕರಿಸುವುದಿಲ್ಲ.

**(ಪಂಡಿತ್ ಭಾರ್ಗವದಾಸ್ ಇವರ ತಿದ್ದುಪಡಿಯು ತಿರಸ್ಕೃತವಾಯಿತು. ಡಾ. ಅಂಬೇಡ್ಕರ್ ಅವರ ತಿದ್ದುಪಡಿಯು ಸ್ವೀಕೃತವಾಯಿತು. ಖಂಡ ೪ ಇದನ್ನು ಮಸೂದೆಗೆ ಸೇರಿಸಲಾಯಿತು.)**

## ಖಂಡ ೫

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುವೆನು.

"ಖಂಡ ೫ ಉಪಖಂಡ (೩)ರಲ್ಲಿ ಬ್ರಾಕೆಟ್ಟಿನಲ್ಲಿರುವ (ಬಿ) ಅಥವಾ (ಡಿ) ಇದರ ಬದಲು ಬಿ, ಸಿ, ಅಥವಾ ಡಿ ಇದನ್ನು ಸೇರಿಸತಕ್ಕದ್ದು ಇವು ಕೇವಲ ಪರಿಣಾಮಕಾರಿಯಾಗಿರುತ್ತದೆ.

**(ತಿದ್ದುಪಡಿಯು ಸ್ವೀಕೃತವಾಯಿತು. ಮಸೂದೆಗೆ ಖಂಡ ೫ನ್ನು ಸೇರಿಸಲಾಯಿತು.)**

* * *

## ಖಂಡ ೬

* * *

## ಖಂಡ ೭

**ಶ್ರೀ ನಜೀರುದ್ದೀನ್ ಅಹ್ಮದ್:** ಮಾನ್ಯರೆ, ನಾನು ಮಂಡಿಸುತ್ತೇನೆ.

"೭ನೆಯ ಖಂಡದಲ್ಲಿ 'ಪರಿಣಾಮ' ಪದದಲ್ಲಿರುವ ಕಾಮಾವನ್ನು ತೆಗೆದು ಹಾಕಬೇಕು.

**ಮಾನ್ಯ ಸಭಾಧ್ಯಕ್ಷರು:** ಕಾಮಾದ ಪ್ರಶ್ನೆಯನ್ನು ಮತಕ್ಕೆ ಹಾಕುವುದು ಅವಶ್ಯವಿದೆಯೆಂದು ನನಗೆ ಅನಿಸುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದನ್ನು ವಿಚಾರಿಸುತ್ತೇನೆ. ಇದನ್ನು ಮತಕ್ಕೆ ಹಾಕುವ ಆವಶ್ಯಕತೆ ಇರುವುದಿಲ್ಲ.

**(ಮಸೂದೆಗೆ ಖಂಡ ೭ನ್ನು ಸೇರಿಸಲಾಯಿತು)**

## ಖಂಡ ೮

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ತಿದ್ದುಪಡಿಯನ್ನು ಸ್ವೀಕರಿಸುವುದಿಲ್ಲ.

**(ಶ್ರೀ ಬಿ.ದಾಸ್ ಇವರು ತಂದ ತಿದ್ದುಪಡಿಯು ತಿರಸ್ಕೃತವಾಯಿತು. ಖಂಡ ೮ ಇದನ್ನು ಮಸೂದೆಗೆ ಸೇರಿಸಲಾಯಿತು.)**

## ಖಂಡ ೯

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ತಮ್ಮ ಪರವಾನಿಗೆಯೊಂದಿಗೆ ಈ ಬದಲಾದ ರೂಪದಲ್ಲಿ ಈ ತಿದ್ದುಪಡಿಯನ್ನು ಮಂಡಿಸಬಯಸುವೆನು. ಯಾಕೆಂದರೆ, ನಾನು ತಂದ ತಿದ್ದುಪಡಿಯು

ಗೊಂದಲಕ್ಕೆ ಎಡೆಮಾಡಿಕೊಡುತ್ತದೆಂದು ನನಗೆ ಅನಿಸುತ್ತದೆ. ತಾವು ಪರವಾನಗಿ ಕೊಟ್ಟಿದ್ದಾದರೆ ನಾನು ಈ ಎಲ್ಲವುಗಳನ್ನು ಸಂಚಯಿಸಿದ ರೂಪದಲ್ಲಿ ಇಟ್ಟಿದ್ದೇನೆ. ಅಲ್ಲಿಯೂ ಯಾವುದೇ ಬದಲಾವಣೆ ಆಗಿರುವುದಿಲ್ಲ. ಅದು ಕೇವಲ ರೂಪದಲ್ಲಿ ಬದಲಾವಣೆಯಾಗಿದೆ. ಸದನ ನಾವು ಖಂಡ ೯ರಲ್ಲಿ ಏನು ಮಾಡುತ್ತಿದ್ದೇವೆ ಎಂಬ ವಿಚಾರ ತಿಳಿದುಕೊಳ್ಳಬಹುದೆಂದು ನನಗೆ ಅನಿಸಿತು.

**ಮಾನ್ಯ ಸಭಾಧ್ಯಕ್ಷರು:** ಹೌದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಮಂಡಿಸುತ್ತಿದ್ದೇನೆ.

"ಖಂಡ ೯ಕ್ಕೆ ಕೆಳಗಣ ಖಂಡವನ್ನು ಸೇರಿಸಬೇಕು"

"೯ (೧) ಭಾರತ ಸರಕಾರದ ಅಧಿನಿಯಮ ೧೯೩೫ ಇದರ ಕಲಂ ೨೦೫ ಇನ್ನು ಮುಂದೆ ಇದನ್ನು ಆ ಮೇಲೆ ಹೇಳಿದ ಅಧಿನಿಯಮವೆಂದು ಕರೆಯಲಾಗುವುದು. ಉಪಕಲಮು (೨) ಕೆಳಗಣ ಉಪಕಲಮೆಂದು ಕರೆಯಲಾಗುವುದು. ಉಪಕಲಮಿಗೆ (೨) ಕೆಳಗಣ ಉಪಕಲಮನ್ನು ಸೇರಿಸತಕ್ಕದ್ದು. ಭಾರತ ಸರಕಾರದ ಅಧಿನಿಯಮ ಅದೆಂದರೆ ೧೯೩೫ ಇದರ ತಿದ್ದುಪಡಿಯು

(೨) ಯಾವುದೇ ಒಂದು ಪ್ರಕರಣದಲ್ಲಿ ಯಾವುದೇ ಪಕ್ಷಕಾರನಿಗೆ ನ್ಯಾಯಾಲಯವು ಯಾವುದೇ ಪ್ರಕರಣವನ್ನು ತಪ್ಪಾಗಿ ನಿರ್ಣಯಿಸಲಾಗಿದೆ ಹಾಗೂ ಇನ್ನಾವುದೇ ಕಾರಣದಿಂದ ನ್ಯಾಯಾಲಯವು ಪಕ್ಷಕಾರನಿಗೆ ಫೆಡರಲ್ ಕೋರ್ಟಿಗೆ ಅಪೀಲು ಮಾಡಲು ಪರವಾನಗಿ ಕೇಳಿದರೆ.

"(೨) ಮೇಲಿನ ಅಧಿನಿಯಮ ೨೦೯ ಉಪಕಲಂ ೧ ಮತ್ತು ೨ ಕೆಳಗಣ ಉಪಕಲಮುಗಳನ್ನು ಸೇರಿಸತಕ್ಕದ್ದು. ಅವು ಯಾವುವೆಂದರೆ ೧೯೦೮ರ ೫ನೆಯ ಅಧಿನಿಯಮ.

(೩) ಫೆಡರಲ್ ಕೋರ್ಟು ಇದು ತನ್ನ ಮೇಲ್ಮನವಿ ಅಧಿಕಾರ ವ್ಯಾಪ್ತಿಯಲ್ಲಿ ಇಂತಹ ಡಿಕ್ರಿಯನ್ನು ಇಲ್ಲವೆ ಆದೇಶವನ್ನು ನ್ಯಾಯದಾನ ದೃಷ್ಟಿ ಯಾವುದೇ ಕಾರಣ ಹಾಗೂ ಯಾವುದೇ ವಿಷಯ ಅದರ ಮುಂದೆ ವಿಚಾರಣೆಗೆ ಇದ್ದರೂ ಅದರ ಖರ್ಚು ಕೊಡಿಸುವುದನ್ನೊಳಗೊಂಡು ಮತ್ತು ಯಾವುದೇ ಡಿಕ್ರಿ ಪಾಸು ಮಾಡಿದ್ದು, ಇಲ್ಲವೆ ಆದೇಶ ಮಾಡಿದ್ದುದನ್ನು ಇಡೀ ಭಾರತದಲ್ಲಿ ಪರಿಣಾಮಕಾರಿಯಾಗಿ ಜಾರಿ ಮಾಡಬಹುದು.

ನಾನು ಒಂದು ಅಥವಾ ಎರಡು ಶಬ್ದಗಳನ್ನು ಇದರಲ್ಲೆ ಸೇರಿಸಬಯಸುತ್ತೇನೆ– ಅವು ಬಿಟ್ಟು ಹೋಗಿವೆ. ಸಿವಿಲ್ ಪ್ರಕ್ರಿಯಾ ಸಂಹಿತೆ ೧೯೦೮ ಇದರಲ್ಲಿ ಉಪಬಂಧಿಸಿದಂತೆ, ಇಲ್ಲವೆ ಇನ್ನಾವುದೇ ರೀತಿಯಲ್ಲಿ ಬ್ರಿಟಿಷ್ ರಾಜ್ಯ ಕಾನೂನಿನಲ್ಲಿ ಇಲ್ಲವೆ ಇನ್ನಾವುದೇ ಕಾನೂನಿನ ವಿಷಯವಾಗಿ ಫೆಡರಲ್ ಕೋರ್ಟಿನವರು ನಿಯಮಗಳ ಮುಖಾಂತರ ನಿರ್ದಿಷ್ಟಪಡಿಸಿದಂತೆ ಮಾಡಬೇಕು.

(೩) ಈ ಅಧಿನಿಯಮದ ಕಲಂ ೨೧೧ ಇದರ ಉಪಖಂಡ (ಎ) ಉಪ ಕಲಂ ಇದರಲ್ಲಿ ಪದಗಳು, ಸಂಖ್ಯೆಗಳು, ಉಪ ಕಲಂ (೨) ಇದರಲ್ಲಿ ಬ್ರಾಕೆಟ್ ಹಾಗೂ ಸಂಖ್ಯೆ ಉಪಕಲಂ ೧ ಇದರ ಬದಲು ಸೇರಿಸತಕ್ಕದ್ದು.

(೪) ಈ ಅಧಿನಿಯಮ ಕಲಂ ೨೧೪ರಲ್ಲಿ ಉಪಕಲಂ (೧)ರ ನಂತರ ಕೆಳಗಣ ಉಪಕಲಂನ್ನು ಸೇರಿಸತಕ್ಕದ್ದು. ಅದು ಯಾವುದೆಂದರೆ ನಾನು ಪ್ರಾರಂಭದಲ್ಲಿಯೇ ಕೆಲವು ಶಬ್ದಗಳನ್ನು ಸೇರಿಸಬಯಸುತ್ತೇನೆ.

**೧೯೦೮ರ ೫ನೆಯ ಅಧಿನಿಯಮ**

(೧ಎ) ಸಿವಿಲ್ ಪ್ರಕ್ರಿಯಾ ಸಂಹಿತೆ ಉಪಬಂಧಗಳಿಗೆ ಒಳಪಟ್ಟು ೧೯೦೮ ಇಲ್ಲವೆ ಯಾವುದೇ

ಕಾನೂನು ಡೊಮಿನಿಯನ್ ಶಾಸಕಾಂಗವು ಮಾಡಿದ್ದು ಫೆಡರಲ್ ಕೋರ್ಟು ಸಹ ಕಾಲಕಾಲಕ್ಕೆ ಗವರ್ನರ್ ಜನರಲ್ ಅವರ ಒಪ್ಪಿಗೆಯಿಂದ ಕೋರ್ಟಿನ ನಿಯಮಗಳನ್ನು ಯಾವುದೇ ಡಿಕ್ರಿ ಪಾಸು ಮಾಡಿದ್ದು, ಇಲ್ಲವೆ ಆದೇಶಿಸಿದ್ದು, ಇವುಗಳನ್ನು ಫೆಡರಲ್ ಕೋರ್ಟ್ ತನ್ನ ಮೇಲ್ಮನವಿ ಅಧಿಕಾರ ವ್ಯಾಪ್ತಿಯಲ್ಲಿ ಕೊಟ್ಟ ಅಧಿಕಾರವನ್ನು ಚಲಾಯಿಸಲು ಮಾಡಿದ ಆದೇಶ ಇಲ್ಲವೆ ಡಿಕ್ರಿಯನ್ನು ಅಮಲಬಜಾವಣಿ ಮಾಡಬಹುದು.

ಖಂಡ ೯ರ ಉದ್ದೇಶವು ಫೆಡರಲ್ ಕೋರ್ಟಿಗೆ ಸಂಪೂರ್ಣ ಹಾಗೂ ಸ್ವತಂತ್ರ ಅಧಿಕಾರ ಕೊಡುವುದು. ಈಗ ಇರುವ ಭಾರತ ಸರಕಾರ ಅಧಿನಿಯಮ ೧೯೩೫ ಇದರಲ್ಲಿ ಕೆಲವು ಮಿತಿಗಳಿವೆ. ಇದರಿಂದ ಫೆಡರಲ್ ಕೋರ್ಟ್ ತಾನು ಮಾಡಿದ ಆದೇಶ ಇಲ್ಲವೆ ತೀರ್ಪಿನ ಡಿಕ್ರಿ ಮಾಡಲು ತಡೆಯೊಡ್ಡುತ್ತಿತ್ತು. ಅದು ತನ್ನ ತೀರ್ಪು ಆದೇಶ ಇದನ್ನು ವಿಚಾರಣೆಯ ನ್ಯಾಯಾಲಯಕ್ಕೆ ಕಳುಹಿಸುತ್ತಿತ್ತು. ಇವೆಲ್ಲ ಮಿತಿಗಳನ್ನು ತೆಗೆದುಹಾಕುವ ಆವಶ್ಯಕತೆ ಉಂಟಾಯಿತು. ಯಾಕೆಂದರೆ, ಫೆಡರಲ್ ಕೋರ್ಟ್ ಈಗ ಪ್ರಿವಿ ಕೌನ್ಸಿಲ್ಲಿನ ಸ್ಥಾನ ಪಡೆಯುತ್ತದೆ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆ ತಿದ್ದುಪಡಿಯು ಈ ಮಸೂದೆಯ ಉದ್ದೇಶದ ಹೊರಗೆ ಇದೆಯೆಂದು ನಾನು ವಿನಯಪೂರ್ವಕ ಹೇಳುತ್ತೇನೆ. ಈ ಮಸೂದೆಯು ಕೇವಲ ಅಧಿಕಾರ ವ್ಯಾಪ್ತಿಯ ವರ್ಗಾವಣೆ ಕುರಿತು ಇರುತ್ತದೆ.

**ಪಂಡಿತ್ ಠಾಕೂರದಾಸ್ ಭಾರ್ಗವ:** ಇದು ಕೇವಲ ಅಧಿಕಾರ ವ್ಯಾಪ್ತಿಯನ್ನು ವರ್ಗಾಯಿಸುವ ವಿಷಯವಲ್ಲ. ಖಂಡ ೫ರಲ್ಲಿ ಏನು ಹೇಳಿದೆ ಅನ್ನುವುದನ್ನು ನಾನು ತಿಳಿಸುತ್ತೇನೆ. ಯಾವ ಅಧಿಕಾರ ವ್ಯಾಪ್ತಿಯನ್ನು ದಯಪಾಲಿಸಬೇಕೆಂಬುದನ್ನು ತಪಾಸಣೆಗೆ ಬಿಡುವುದಿಲ್ಲ.

ಹೀಜ್ ಮೆಜೆಸ್ಟಿ ಅವರದು ವಿಶೇಷವಾದ ಹಕ್ಕು ಏನು ಇತ್ತು ಎಂಬುದನ್ನು ಹೇಳುತ್ತೇನೆ. ಈ ಅಧಿಕಾರಗಳನ್ನು ನಾನು ಅದನ್ನು ಒಂದು ನಿರ್ದಿಷ್ಟ ನಮೂನೆಯಲ್ಲಿ ಸಂಕ್ಷಿಪ್ತದಲ್ಲಿ ಹೇಳುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ಮಸೂದೆಯು ಫೆಡರಲ್ ಕೋರ್ಟಿಗೆ ಯಾವುದೇ ನಿರ್ದೇಶನವನ್ನು ಮತ್ತು ತನ್ನ ಅಧಿಕಾರ ವ್ಯಾಪ್ತಿಯನ್ನು ಹೇಗೆ ಉಪಯೋಗಿಸಬೇಕೆಂಬುದು ಈಗಿನ ಈ ಮಸೂದೆಯಲ್ಲಿ ನಿಹಿತವಾಗಿದೆ.

## ಖಂಡ ೧೧

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಆ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಿಲ್ಲ, ಅದು ತುಂಬಾ ಅನಾವಶ್ಯಕವಾಗಿದೆ.

(ಶ್ರೀ ನಜಿರುದ್ದೀನ್ ಅಹ್ಮದ್ ಅವರ ತಿದ್ದುಪಡಿಯು ತಿರಸ್ಕೃತವಾಯಿತು.)

* * *

**ಮಾನ್ಯ ಸಭಾಧ್ಯಕ್ಷರು:** ನೀವು ಇದರ ಬಗೆಗೆ ಏನಾದರೂ ಹೇಳಬಯಸುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಪ್ರಿವಿ ಕೌನ್ಸಿಲ್ಲಿನ ಅಧಿಕಾರ ವ್ಯಾಪ್ತಿಯನ್ನು ಅಂತ್ಯಗೊಳಿಸುವುದನ್ನು ಒತ್ತಿ ಹೇಳಲಾಗಿದೆ. ಸ್ಪಷ್ಟವಾಗಿ ಅದನ್ನು ವಾಪಸ್ಸು ಪಡೆಯಲಾಗುವುದಿಲ್ಲ. ಯಾಕೆಂದರೆ "ಅಧಿಕಾರ ವ್ಯಾಪ್ತಿ ಅಂತ್ಯಗೊಳಿಸುವುದು" ಈ ಪದಗಳನ್ನು ಬ್ರಾಕೆಟ್ಟಲ್ಲಿಟ್ಟರೆ, ಉದ್ದೇಶವು ಸಫಲವಾಗುವುದು.

**ಮಾನ್ಯ ಸಭಾಧ್ಯಕ್ಷರು:** ಸಂಖ್ಯೆ ೭ ಇದರ ಬಗೆಗೆ ತಮಗೆ ಏನಾದರೂ ಹೇಳುವುದಿದೆಯೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಸಮ್ಮತಿಸಿದ ರಾಜ್ಯಗಳು ಎಂದೂ ಪ್ರಿವಿ ಕೌನ್ಸಿಲ್ಲಿನ ಅಧಿಕಾರ ವ್ಯಾಪ್ತಿಯಲ್ಲಿರಲಿಲ್ಲ, ವಿಶೇಷ ಕ್ರಮದ ಅನುಕ್ರಮವಾಗಿ ಉಪಕಲಂ (೨)ರಲ್ಲಿ ಉಪಯೋಗಿಸಿದ ಪದಗಳು (ಭಾರತ ದೇಶದ ಕ್ಷೇತ್ರಗಳಲ್ಲಿ ಈ ಪದಗಳನ್ನು ಬಳಸಲಾಗಿದೆ.) ಆದ್ದರಿಂದ ಸಮ್ಮತಿಸಿದ ರಾಜ್ಯಗಳ ಬಗ್ಗೆ ಕಾಣಿಸುವುದು ಅವಶ್ಯವಿಲ್ಲ.

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿಯನ್ನು ನಾನು ಈಗ ಮತಕ್ಕೆ ಹಾಕುವೆನು.

**(ಎಲ್ಲ ತಿದ್ದುಪಡಿಗಳು ತಿರಸ್ಕೃತವಾದವು, ಖಂಡ ೧ ಇದನ್ನು ಮಸೂದೆಗೆ ಸೇರಿಸಲಾಯಿತು.)**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಈಗ ಮಂಡಿಸುತ್ತೇನೆ. "ತಿದ್ದುಪಡಿಯಾದ ಮಸೂದೆಯನ್ನು ಅಂಗೀಕರಿಸಬೇಕು."

**(ಸೂಚನೆಯು ಸ್ವೀಕೃತವಾಯಿತು)**

* * *

## ವಿಧಿ ೩೦೩ (ಮುಂದುವರಿದುದು)

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಮಂಡಿಸುತ್ತೇನೆ.

**ಅನುಚ್ಛೇದ ೩೦೩** ಖಂಡ (i) ಇದರ ಉಪಖಂಡ (i) ನಂತರ ಕೆಳಗಣ ಉಪಖಂಡವನ್ನು ಸೇರಿಸಬೇಕು. ಅದೆಂದರೆ:

(ii) 'ಉಚ್ಚ ನ್ಯಾಯಾಲಯ' ಅಂದರೆ ಯಾವುದೇ ನ್ಯಾಯಾಲಯ ಸಂವಿಧಾನದ ಅನ್ವಯ ಆ ರಾಜ್ಯದ ಉಚ್ಚ ನ್ಯಾಯಾಲಯ,

(i) ಭಾರತದಲ್ಲಿರುವ ಯಾವುದೇ ನ್ಯಾಯಾಲಯ ಈಗಾಗಲೇ ಇರುವ ನ್ಯಾಯಾಲಯವನ್ನು ಇಲ್ಲವೆ ಹೊಸದಾಗಿ ಸ್ಥಾಪಿಸಿದ ನ್ಯಾಯಾಲಯವನ್ನು ಸಂವಿಧಾನದ ಅಡಿಯಲ್ಲಿ ಉಚ್ಚ ನ್ಯಾಯಾಲಯವೆಂದು ಘೋಷಿಸಿದ್ದು ಮತ್ತು

(ii) ಇಲ್ಲವೆ ಇನ್ನಾವುದೇ ಕೋರ್ಟ್, ಭಾರತದಲ್ಲಿರುವ ಕೋರ್ಟ್ ಯಾವುದನ್ನು ಸಂಸತ್ತು ಕಾನೂನಿನ ಅನ್ವಯ 'ಉಚ್ಚ ನ್ಯಾಯಾಲಯ'ವೆಂದು ಸಂವಿಧಾನದ ಎಲ್ಲ ಇಲ್ಲವೆ ಯಾವುದೇ ಉದ್ದೇಶಕ್ಕಾಗಿ ಘೋಷಿಸಬಹುದು.

(iii) 'ಭಾರತೀಯ ರಾಜ್ಯ'ವೆಂದರೆ–

(i) ಈ ಸಂವಿಧಾನ ಜಾರಿಯಲ್ಲಿ ಬರುವ ಪೂರ್ವದಲ್ಲಿ ಇಂಡಿಯಾದ ಡೊಮಿಯನ್ನದವರು ಆ ಕ್ಷೇತ್ರವನ್ನು ರಾಜ್ಯವೆಂದು ಮನ್ನಿಸಿದ್ದು ಮತ್ತು

(ii) ಈ ಸಂವಿಧಾನ ಜಾರಿಯಲ್ಲಿ ಬಂದ ನಂತರ ರಾಷ್ಟ್ರಪತಿಗಳು ಭಾರತದ ಭಾಗವಾಗದಿರುವ ಎಂದು ಮಾನ್ಯತೆಯನ್ನು

(iii) ಯಾವ ರಾಜ್ಯವು ಭಾರತದ ಭಾಗವಾಗಿರುವುದಿಲ್ಲವೋ, ಆದರೆ ರಾಷ್ಟ್ರಪತಿಗಳು ಅದನ್ನು ರಾಜ್ಯವೆಂದು ಮನ್ನಣೆ ಕೊಡುತ್ತಾರೆಯೋ ಅಂತಹ ರಾಜ್ಯ.

**ಮಾನ್ಯ ಸಭಾಧ್ಯಕ್ಷರು:** ಇದಕ್ಕೆ ತಿದ್ದುಪಡಿಯೂ ಇಲ್ಲ, ಯಾರೂ ಇದರ ಬಗೆಗೆ ಹೇಳಲು ಇಚ್ಛಿಸುವುದಿಲ್ಲವಾದ್ದರಿಂದ ನಾನು ಇದನ್ನು ಮತಕ್ಕೆ ಹಾಕುತ್ತೇನೆ.

**(ಸೂಚನೆಯು ಸ್ವೀಕೃತವಾಯಿತು.)**

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ವಿನಯದಿಂದ ಮಂಡಿಸುತ್ತೇನೆ.

"ಅನುಚ್ಛೇದ ೩೦೩ ಖಂಡ (ಎಲ್) ಉಪಖಂಡ (ಎನ್) ಇದರ ನಂತರ ಕೆಳಗಿನ ಉಪಖಂಡವನ್ನು ಸೇರಿಸಬೇಕು.

(ಎನ್. ಎಸ್) ರಾಜ್ಯದ ಆಡಳಿತಗಾರನೆಂದು ೧ನೆಯ ಪರಿಶಿಷ್ಟದ ೩ನೆಯ ಭಾಗದಲ್ಲಿ ಕಾಣಿಸಲಾಗಿದೆ. ಸದ್ಯಕ್ಕೆ ರಾಷ್ಟ್ರಪತಿಗಳು ಮಾನ್ಯತೆ ಮಾಡಿದ ಯಾವತ್ತೂ ವ್ಯಕ್ತಿ ಆಡಳಿತಗಾರನೆಂದು ರಾಷ್ಟ್ರಪತಿಗಳು ತಮ್ಮ ಅಧಿಕಾರವನ್ನು ಚಲಾಯಿಸಿ ಮಾನ್ಯ ಮಾಡಿದ ವ್ಯಕ್ತಿಗಳು ಭಾರತೀಯ ರಾಜ್ಯ ಕುರಿತು ಪ್ರಾಮುಖ್ಯ ಇಲ್ಲವೆ ಯಾವುದೇ ವ್ಯಕ್ತಿಯನ್ನು ಇಂಡಿಯಾದ ಡೊಮಿನಿಯನ್ ಇಲ್ಲವೆ ರಾಷ್ಟ್ರಪತಿಗಳು ರಾಜ್ಯದ ಆಡಳಿತಗಾರನೆಂದು ನೇಮಿಸಿದವನು.

* * *

**ಮಾನ್ಯ ಅಧ್ಯಕ್ಷರು:** ಇದಕ್ಕೆ ತಿದ್ದುಪಡಿಯು ಇರುವುದಿಲ್ಲ. ನಾನು ಇದನ್ನು ಮತಕ್ಕೆ ಹಾಕುವೆನು.

**(ತಿದ್ದುಪಡಿಯು ಸ್ವೀಕೃತವಾಯಿತು.)**

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಈಗ ಮಂಡಿಸುತ್ತೇನೆ.

"ತಿದ್ದುಪಡಿ ಸಂಖ್ಯೆ ೧೪೭ಕ್ಕೆ ಸಂಬಂಧಿಸಿದಂತೆ ಲಿಸ್ಟ್ II ಇಂಗ್ಲೀಷ್ ಪದಗಳು

ಅನುಚ್ಛೇದ ೩೦೩ ಖಂಡ (ಎಲ್) ಇದರ ಉಪಖಂಡ (ಡಬ್ಲು) ಇದರ ಬದಲು ಕೆಳಗಣ ಉಪಖಂಡವನ್ನು ಸೇರಿಸಬೇಕು.

(ಡಬ್ಲು) ಪರಿಶಿಷ್ಟ ಜಾತಿಗಳು, ಜನಾಂಗ ಇಲ್ಲವೆ ಅದರ ಭಾಗಗಳು. ಆ ಸಮೂಹದಲ್ಲಿಯ ಅಂತಹ ಜಾತಿಗಳು ಸಂವಿಧಾನದ ಉದ್ದೇಶಕ್ಕಾಗಿ ಅನುಚ್ಛೇದ ೩೦೦ರ ಕೆಳಗೆ ಅವುಗಳನ್ನು ಪರಿಶಿಷ್ಟ ಜಾತಿಗಳೆಂದು ಗ್ರಹಿಸಲಾಗುವುದು.

'ನಿರ್ದೇಶಿಸಲಾಗಿದೆ' ಈ ಒಂದು ಶಬ್ದದ ಬದಲು ಗ್ರಹಿಸಲಾಗಿದೆಯೆಂಬ ಒಂದೇ ಬದಲಾವಣೆಯನ್ನು ಮಾಡಲಾಗಿದೆ.

ಮಾನ್ಯರೆ, ಈಗ ನಾನು ಮಂಡಿಸುತ್ತೇನೆ.

ತಿದ್ದುಪಡಿ ಸಂಖ್ಯೆ ೧೪೮ ಲಿಸ್ಟ್ IV (೮ನೆಯ ವಾರ) ಇದಕ್ಕೆ ಸಂಬಂಧಿಸಿದ ತಿದ್ದುಪಡಿ ಅನುಚ್ಛೇದ ೩೦೩ ಖಂಡ ಉಪಖಂಡ (ಎಕ್ಸ್) ಇದರ ಬದಲಾಗಿ ಈ ಕೆಳಗಣ ಉಪಖಂಡವನ್ನು ಸೇರಿಸಬೇಕು.

(ಎಕ್ಸ್) ಈ ಸಂವಿಧಾನದ ಉದ್ದೇಶ ಪರಿಶಿಷ್ಟ ಪಂಗಡವೆಂದರೆ ಅಂತಹ ಅನುಚ್ಛೇದ ೩೦೩ಬಿ ಇದರಲ್ಲಿ ಗ್ರಹಿಸಲಾದ, ಅಂತಹ ಪಂಗಡ, ಅಂತಹ ಪಂಗಡದ ಜಾತಿ ಅಥವಾ ಭಾಗಗಳ ಅಥವಾ ಗುಂಪು ಸಮೂಹದಲ್ಲಿ ಗುಂಪುಗಳು ಇಲ್ಲವೆ ಪಂಗಡದ ಜಾತಿಗಳ ಅಂಥ ಇವೆಲ್ಲವೂ ಪರಿಶಿಷ್ಟ ಪಂಗಡದಲ್ಲಿ ಬರುತ್ತವೆ. ಈಗ ಬೇರೆ ತಿದ್ದುಪಡಿಗಳನ್ನು ಇಂದಿನ ಈ ಲಿಸ್ಟಿನಲ್ಲಿ ತೆಗೆದುಕೊಳ್ಳಲಾಗಿದ್ದು, ಆ ಎರಡೂ ತಿದ್ದುಪಡಿಗಳನ್ನು ಒಂದೇ ವೇಳೆಗೆ ತೆಗೆದುಕೊಳ್ಳೋಣವೆ?

**ಮಾನ್ಯ ಅಧ್ಯಕ್ಷರು:** ಹೌದು, ತೆಗೆದುಕೊಳ್ಳಬಹುದು.

# ಹೊಸ ವಿಧಿ ೩೦೦ಎ ಮತ್ತು ೩೦೦ಬಿ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ ನಾನು ಮಂಡಿಸುತ್ತೇನೆ.

"ಅನುಚ್ಛೇದ ೩೦೦ ನಂತರ ಈ ಕೆಳಗಣ ಅನುಚ್ಛೇದಗಳನ್ನು ಸೇರಿಸಬೇಕು."

೩೦೦ಎ(೧) ರಾಜ್ಯಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿಗಳು, ರಾಜ್ಯಪಾಲರು ಇಲ್ಲವೆ ರಾಜ್ಯದ ಪ್ರಮುಖ ಆಡಳಿತಗಾರ ಇವರೊಂದಿಗೆ ಸಮಾಲೋಚಿಸಿ ಸಾರ್ವಜನಿಕ ಅಧಿಸೂಚನೆ ಹೊರಡಿಸಿ ಅದರಲ್ಲಿ ಪರಿಶಿಷ್ಟ ಜಾತಿಯವರೆಂದು ಸಂವಿಧಾನಕ್ಕೆ ಸಂಬಂಧಿಸಿದಂತೆ ಯಾರು ಜಾತಿ, ಜನಾಂಗ ಇಲ್ಲವೆ ಪಂಗಡಗಳು ಇವುಗಳಲ್ಲಿರುವ ಯಾವುವು ಪರಿಶಿಷ್ಟ ಜಾತಿ ಎಂದು ನಿರ್ದೇಶಿಸಿ ಸಾರ್ವಜನಿಕ ಅಧಿಸೂಚನೆಯ ಮೂಲಕ ನಿರ್ದೇಶಿಸಬೇಕು.

ಸಂಸತ್ತು, ರಾಷ್ಟ್ರಪತಿಗಳು ಈ ಅನುಚ್ಛೇದದ ಖಂಡ ೧ರಲ್ಲಿಯ ಯಾವುದೇ ಜಾತಿ, ಜನಾಂಗ ಇಲ್ಲವೆ ಪಂಗಡ, ಇಲ್ಲವೆ ಜಾತಿಯೊಳಗಿನ ಗುಂಪು, ಭಾಗ ಇಲ್ಲವೆ ಪಂಗಡ ಇವುಗಳ ಬಗ್ಗೆ ಹೊರಡಿಸಿದ ಅಧಿಸೂಚನೆಯಲ್ಲಿ ಸಂಸತ್ತು ಕಾನೂನು ರಚಿಸಿ ಈ ಪರಿಶಿಷ್ಟ ಪಂಗಡಗಳ ಬಗ್ಗೆ ನಿರ್ದೇಶಿಸಿ ಹೊರಡಿಸಿದ ಅಧಿಸೂಚನೆಯಲ್ಲಿ ಸಂಸತ್ತು ಕಾನೂನು ರಚಿಸಿ ಹೆಚ್ಚಿನವುಗಳನ್ನು ಕೊಡಿಸಬಹುದು. ಇಲ್ಲವೆ ಆ ಯಾದಿಯಿಂದ ಕಡಿಮೆ ಮಾಡಬಹುದು. ಆದರೆ ತದನಂತರ ಹೊರಡಿಸಿದ ಅಧಿಸೂಚನೆಯಿಂದ ಮೇಲೆ ಹೇಳಿದ ಅಧಿಸೂಚನೆಯಂತೆ ಈ ಖಂಡದ ಅನ್ವಯ ಬದಲಿಯಾಗಬಾರದು.

**(೧) ಪರಿಶಿಷ್ಟ ಪಂಗಡ ೩೦೦ಬಿ:** "ರಾಷ್ಟ್ರಪತಿಗಳು, ರಾಜ್ಯಪಾಲರು ಇಲ್ಲವೆ ರಾಜ್ಯ ಪ್ರಮುಖರು ಇವರೊಂದಿಗೆ ಸಮಾಲೋಚನೆ ಮಾಡಿ ಯಾವ ಪಂಗಡ ಇಲ್ಲವೆ ಜಾತಿಗಳು ಇಲ್ಲವೆ ಭಾಗಗಳು ಇಲ್ಲವೆ ಪಂಗಡದಲ್ಲಿ ಗುಂಪುಗಳು ಇಲ್ಲವೆ ಪಂಗಡದಲ್ಲಿ ಜಾತಿಗಳು ಇವು ಯಾವುವು ಸಂವಿಧಾನಕ್ಕೆ ಸಂಬಂಧಿಸಿದಂತೆ ಆ ರಾಜ್ಯದಲ್ಲಿ ಆ ರಾಜ್ಯಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಪಂಗಡಗಳು ಯಾವುವೆಂದು ಗ್ರಹಿಸಲು ಒಂದು ಅಧಿಸೂಚನೆಯನ್ನು ಹೊರಡಿಸಬೇಕು.

**(೨) ಸಂಸತ್ತು ಕಾನೂನು ರಚನೆ:** ರಾಷ್ಟ್ರಪತಿಗಳು ಖಂಡ ೧ರಲ್ಲಿ ಕಾಣಿಸಿದಂತೆ ಯಾವ ಪಂಗಡವು ಇಲ್ಲವೆ ಪಂಗಡದ ಜಾತಿ, ಇಲ್ಲವೆ ಭಾಗಶಃ ಇಲ್ಲವೆ ಪಂಗಡದಲ್ಲಿಯ ಗುಂಪು, ಇಲ್ಲವೆ ಪಂಗಡದಲ್ಲಿ ಜಾತಿ ಇವುಗಳ ಬಗೆಗೆ ಆ ಯಾದಿಯಲ್ಲಿ ಹೆಸರನ್ನು ಸೇರಿಸಬಹುದು ಇಲ್ಲವೆ ತೆಗೆದುಹಾಕಬಹುದು.

ಈ ರೀತಿ ತದನಂತರ ಹೊರಡಿಸಿದ ಅಧಿಸೂಚನೆ ಮೇಲೆ ಹೇಳಿದವುಗಳಲ್ಲಿ ಯಾವುದೇ ಬದಲಾವಣೆಯು ಆಗಕೂಡದು.

ಈ ಅನುಚ್ಛೇದದ ಉದ್ದೇಶ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಗ್ಗೆ ಉದ್ದವಾದ ಪಟ್ಟಿಯನ್ನು ಕಡಿಮೆ ಮಾಡುವುದಾಗಿತ್ತು ಎಂದು ನಾನು ಹೇಳಿದ್ದೆನು. ಈಗ ಅದನ್ನೇ ಪ್ರಸ್ತಾಪಿಸಿದ್ದೇನೆ.

ರಾಷ್ಟ್ರಪತಿಗಳು, ರಾಜ್ಯಪಾಲರು ಇಲ್ಲವೇ ರಾಜ್ಯ ಪ್ರಮುಖರು ಇವರೊಂದಿಗೆ ಸಮಾಲೋಚಿಸಿ ಸಂವಿಧಾನದಲ್ಲಿ ಅವರಿಗೆ ಕೊಟ್ಟ ವಿಶೇಷ ಸವಲತ್ತುಗಳನ್ನು ಉಲ್ಲೇಖಿಸಲಾಗಿದ್ದು, ಆ ಉದ್ದೇಶಕ್ಕಾಗಿ ಯಾವ ಜಾತಿ ಮತ್ತು ಪಂಗಡ ಇಲ್ಲವೇ ಗುಂಪುಗಳು ಇವುಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎಂದು ಗ್ರಹಿಸಬೇಕೆಂದು ನಿರ್ದೇಶಿಸಿ ಸಾಮಾನ್ಯ ಅಧಿಸೂಚನೆಯನ್ನು ಹೊರಡಿಸಿ ಅದನ್ನು ರಾಜ್ಯ ಪರಿಪತ್ರದಲ್ಲಿ ಪ್ರಕಟಿಸುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗೆ ಇರತಕ್ಕದ್ದು.

ಇದರಲ್ಲಿ ಒಂದು ನಿಯಂತ್ರಣವನ್ನು ಹೇರಿದ್ದು ಅದು ಹೀಗೆ ಇದೆ. ಒಮ್ಮೆ ರಾಷ್ಟ್ರಪತಿಗಳು ಅಧಿಸೂಚನೆ ಹೊರಡಿಸಿದರೆ ಅದನ್ನು ಅವರು ನಿಸ್ಸಂಶಯವಾಗಿ ಪ್ರತಿಯೊಂದು ರಾಜ್ಯ ಸರಕಾರದೊಂದಿಗೆ ಸಮಾಲೋಚಿಸಿ

ಅವರ ಸಲಹೆಯ ಮೇರೆಗೆ ಹೊರಡಿಸಿರುತ್ತಾರೆ. ಆಮೇಲೆ ಆ ಪಟ್ಟಿಯಲ್ಲಿ ಯಾವ ಹೆಸರನ್ನು ಕಡಿಮೆ ಮಾಡುವುದಾದರೂ, ಇಲ್ಲವೆ ಹೆಚ್ಚಿಗೆ ಸೇರಿಸುವುದಾದರೆ, ಅದನ್ನು ಸಂಸತ್ತು ಮಾಡಬೇಕು. ರಾಷ್ಟ್ರಪತಿಗಳಿಗೆ ಮಾಡಲು ಬರುವುದಿಲ್ಲ. ಇದರ ಉದ್ದೇಶವೆಂದರೆ, ಯಾವುದೇ ರೀತಿ ರಾಜಕೀಯ ಒತ್ತಡಗಳು ಹಾಗೂ ಕೈವಾಡದಿಂದ ರಾಷ್ಟ್ರಪತಿಗಳು ಹೊರಡಿಸಿದ ಪಟ್ಟಿ ಯಾವುದೇ ರೀತಿ ತೊಂದರೆ ಉಂಟಾಗುವುದನ್ನು ಕಡಿಮೆ ಮಾಡುವುದು.

* * *

**ಮಾನ್ಯ ಸಭಾಧ್ಯಕ್ಷರು:** ಮತ್ತೆ ಯಾರಾದರೂ ಮಾತನಾಡಲು ಇಚ್ಛಿಸುವಿರಾ? ಡಾ. ಅಂಬೇಡ್ಕರ್, ನೀವು ಏನನ್ನಾದರೂ ಹೇಳಲು ಇಚ್ಛಿಸುವಿರೋ?

**ಮಾನ್ಯ ಅಧ್ಯಕ್ಷರು:** ನಾನು ಈಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

**(ಪಂಡಿತ್ ಭಾರ್ಗವ ಅವರು ತಂದ ತಿದ್ದುಪಡಿಯು ತಿರಸ್ಕೃತವಾಗಿ ಡಾ. ಅಂಬೇಡ್ಕರ್ ಅವರ ತಿದ್ದುಪಡಿಗಳೆರಡೂ ಸ್ವೀಕೃತವಾದವು)**

* * *

೫ ಯಾದಿಯಲ್ಲಿನ ಖಂಡ (೨)ರಲ್ಲಿ ತಿದ್ದುಪಡಿ ಸಂಖ್ಯೆ ೨೦೧, ಇದರಲ್ಲೆ ಹೊಸ ಅನುಚ್ಛೇದ ೩೦೦ಎ ದಲ್ಲಿ ಈ ಕೆಳಗಿನದನ್ನು ಸೇರಿಸಬೇಕು.

"ಈ ಸಂವಿಧಾನವು ಜಾರಿಯಲ್ಲಿ ಬಂದ ನಂತರ ವರ್ಷಗಳವರೆಗೆ"

* * *

**ಮಾನ್ಯ ಸಭಾಧ್ಯಕ್ಷರು:** ನಾನು ಮಾನ್ಯ ಕೃಷ್ಣಮಾಚಾರಿಯವರು ತಂದ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. ಇದನ್ನು ಡಾ. ಅಂಬೇಡ್ಕರ್ ಅವರು ನಿಜವಾಗಿಯೂ ಒಪ್ಪಿಕೊಂಡಿದ್ದಾರೆ. ೨೧೮ಎ ಪ್ರಶ್ನೆ ಏನೆಂದರೆ?

ಅನುಚ್ಛೇದ ೩೦೦(ಬಿ) ಇದರಲ್ಲಿ ಪ್ರಸ್ತಾಪಿಸಿದಂತೆ ಯಾದಿ ೫ (೮ನೇ ವಾರ) ತಿದ್ದುಪಡಿಯಲ್ಲಿ (ಎ) ಈ ಖಂಡದಲ್ಲಿ ಜಾತಿಗಳು ಎಂದು ಎರಡು ಕಡೆ ಬಂದಿದ್ದು ಈ ಪದಗಳ ಬದಲು ಪರಿಶಿಷ್ಟ ಜಾತಿಗಳು ಈ ಪದಗಳನ್ನು ಸೇರಿಸಬೇಕು.

ಬಿ. ಖಂಡ ೨ರಲ್ಲಿ ಜಾತಿ ಈ ಪದವು ಎರಡು ಕಡೆಗೆ ಬರುತ್ತದೆ. ಈ ಪದಕ್ಕೆ ಬದಲಾಗಿ ಪರಿಶಿಷ್ಟ ಪಂಗಡ ಈ ಪದವನ್ನು ಸೇರಿಸಬೇಕು.

**(ತಿದ್ದುಪಡಿಯು ಸ್ವೀಕೃತವಾಯಿತು)**

**ಮಾನ್ಯ ಸಭಾಧ್ಯಕ್ಷರು:** ನಾನು ಡಾ. ಅಂಬೇಡ್ಕರರು ಪ್ರಸ್ತಾಪಿಸಿ ಅನುಚ್ಛೇದ ೩೦೦(ಬಿ) ಇದನ್ನು ಮತಕ್ಕೆ ಹಾಕುತ್ತೇನೆ.

[**ಅನುಚ್ಛೇದ ೩೦೦(ಬಿ) ಇದು ಸ್ವೀಕೃತವಾಯಿತು. ಇದನ್ನು ಸಂವಿಧಾನಕ್ಕೆ ಸೇರಿಸಲಾಯಿತು.**]

* * *

# ಪರಿಶಿಷ್ಟ ೮

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಈಗ ಮಂಡಿಸುತ್ತೇನೆ. "ಅನುಚ್ಛೇದ ೩೦೩ ಖಂಡ (೨) ಇದರ ಕೊನೆಗೆ ಈ ಕೆಳಗಿನವುಗಳನ್ನು ಸೇರಿಸಬೇಕು. ಭಾರತದ ಆಧಿಪತ್ಯದ ಕಾನೂನು ಮಾಡುವ ಅಧಿಕಾರ ಇದಕ್ಕೆ ಅರ್ಥೈಸುವುದಕ್ಕೆ ಇದು ಅನ್ವಯವಾಗುತ್ತದೆ.

ಇಲ್ಲಿ ಉಲ್ಲೇಖವು ಸಾಮಾನ್ಯ ಖಂಡಗಳ ಅಧಿನಿಯಮ.

**ಶ್ರೀ ಜಸ್ವತ್‌ರಾಯ್ ಕಪೂರ್:** ನನಗೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ. ಯಾಕೆಂದರೆ, ನಿಜವಾಗಿ ಇದನ್ನು ಮಾಡುವ ಆವಶ್ಯಕತೆಯು ಇದೆಯೆ? ಹಾಗಿದ್ದರೂ ಸಹಿತ ಈ ರೀತಿ ಇದ್ದರೆ ಅದು ಎಷ್ಟರ ಮಟ್ಟಿಗೆ ಸರಿ? ಎನ್ನುವುದು ನನಗೆ ಗೊತ್ತಿಲ್ಲ. ಯಾಕೆಂದರೆ, ಇದು ಭಾರತದ ಆಧಿಪತ್ಯ ಕಾನೂನು ಮಾಡುವ ಅರ್ಥೈಸುವ ಬಗ್ಗೆ ಅನ್ವಯಿಸುವಂತಿದೆ. ಯಾಕೆಂದರೆ, ಇನ್ನು ಮೇಲೆ ಸಂವಿಧಾನ ಯಾವಾಗ ಜಾರಿಗೆ ಬರುತ್ತದೆಯೋ ಅಂದಿನಿಂದ ಭಾರತದ ಆಧಿಪತ್ಯಕ್ಕೆ ಮಾಡಿದ ಕಾನೂನುಗಳು ಇರುವುದಿಲ್ಲ. ಆಗ ಭಾರತದ ಆಧಿಪತ್ಯವೇ ಕೊನೆಗೊಳ್ಳುತ್ತದೆ ಮತ್ತು ಅಲ್ಲಿ ಆಗ ಜಾರಿಯಲ್ಲಿರುವ ಎಲ್ಲ ಕಾನೂನುಗಳು ಈಗ ಭಾರತದಲ್ಲಿ ಜಾರಿ ಇರುವ ಎಲ್ಲ ಕಾನೂನುಗಳು ಕೇಂದ್ರದ ಒಕ್ಕೂಟದ ಕಾನೂನುಗಳಾಗುತ್ತವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದರಲ್ಲಿ ಸಾಮಾನ್ಯ ಖಂಡಗಳ ಅಧಿನಿಯಮಗಳು, ಇದರ ಅಧಿನಿಯಮ ರೆಗ್ಯುಲೇಶನ್ ನಿಯಮ ಮತ್ತು ಆಜ್ಞೆಗಳು ಇದಕ್ಕೂ ಅನ್ವಯಿಸುತ್ತವೆ. ಆದ್ದರಿಂದ ಯಾವ ವರ್ಗದ ಕಾನೂನುಗಳು ಇದಕ್ಕೂ ಅನ್ವಯವಾಗುತ್ತದೆಂದು ಹೇಳುವುದು ಅವಶ್ಯವಿದೆ. ಅದೇ ಕಾರಣಕ್ಕಾಗಿ ಈ ತಿದ್ದುಪಡಿಗಳನ್ನು ಪ್ರಸ್ತಾಪಿಸಲಾಗಿದೆ.

**ಶ್ರೀ ಜಸ್ವತ್‌ರಾಯ್ ಕಪೂರ್:** ನಾನು ಹೇಳಬಯಸುವುದೇನೆಂದರೆ ಸಂವಿಧಾನವು ಜಾರಿಯಲ್ಲಿ ಬಂದ ನಂತರ ಭಾರತದ ಡೊಮಿನಿಯನ್ ಆಧಿಪತ್ಯದ ಕಾನೂನುಗಳಾವುವೂ ಉಳಿಯಬಾರದೆಂದು, ಆದ್ದರಿಂದ ನಾವು ಒಂದು ವೇಳೆ ಯಾವುದೇ ಜಾರಿಯಲ್ಲಿದ್ದ ಕಾನೂನುಗಳನ್ನು ಅರ್ಥೈಸುವಂತೆ, ಅವುಗಳಿಗೆ ಅನ್ವಯವಾಗುತ್ತವೆ ಎಂದು ಹೇಳಿದರೆ ನಮ್ಮ ಉದ್ದೇಶವು ಸಾರ್ಥಕವಾಗುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನೀವು ಸಾಮಾನ್ಯ ಖಂಡಗಳ ಅಧಿನಿಯಮವನ್ನು ಓದಿಲ್ಲವೆಂದು ನನಗೆ ಅನಿಸುತ್ತದೆ.

**ಶ್ರೀ ಜಸ್ವತ್‌ರಾಯ್ ಕಪೂರ್:** ಕೆಲವು ಉಪಬಂಧಗಳನ್ನು ಕಾಳಜಿಪೂರ್ವಕವಾಗಿ ಪರಿಶೀಲಿಸದೆ ಇಲ್ಲಿ ಪ್ರಸ್ತಾಪಿಸುವುದು ಉಪಯೋಗವಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಯಾವುದು ಅವಶ್ಯ ಹಾಗೂ ಯಾವುದು ಅಲ್ಲ ಅನ್ನುವುದನ್ನು ಕರಡು ಸಮಿತಿಗೆ ಬಿಟ್ಟರೆ ಒಳ್ಳೆಯದಾಗುತ್ತಿತ್ತು.

**ಶ್ರೀ ಜಸ್ವತ್‌ರಾಯ್ ಕಪೂರ್:** ಯಾವುದೇ ತಪ್ಪನ್ನು ತಿದ್ದಲು ಕರಡು ಸಮಿತಿಗೆ ಬಿಡಲು ಒಪ್ಪುತ್ತೇನೆ. ಆದರೆ ತಪ್ಪು ಇದ್ದರೆ, ಆ ತಪ್ಪನ್ನು ತಪ್ಪೆಂದು ಹೇಳುವಲ್ಲಿ ಯಾವ ಹಾನಿಯೂ ಇರುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಇದು ತಪ್ಪೆಂದು ಒಪ್ಪುವುದಿಲ್ಲ.

**ಶ್ರೀ ಜಸ್ವತ್‌ರಾಯ್ ಕಪೂರ್:** ನಿಮಗೆ ಮನವರಿಕೆ ಮಾಡಿಕೊಡುವುದು ಅಷ್ಟು ಸರಳವಲ್ಲವೆಂದು ನನಗೆ ಗೊತ್ತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಹೇಳಬೇಕಾದುದನ್ನು ಹೇಳಿದ್ದೇನೆ ಮತ್ತು ಸಾಮಾನ್ಯ ಖಂಡಗಳ ಅಧಿನಿಯಮವನ್ನು ಇಲ್ಲಿ ನೋಡಿದ ನಂತರ ನನಗೆ ಈ ಅಂಶ ತುಂಬಾ ಮನವರಿಕೆಯಾಗಿದೆ.

ಅಂದರೆ ನಾನು ಮಂಡಿಸಿದ ಈ ತಿದ್ದುಪಡಿ ಅತ್ಯವಶ್ಯವಿದೆ ಎಂದು ನನಗೆ ಮನವರಿಕೆಯಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆ ಎಂದರೆ ಅನುಚ್ಛೇದ ೩೦೫ ಖಂಡ (೨) ಇದರ ನಂತರ ಕೊನೆಯಲ್ಲಿ ಈ ಪದಗಳನ್ನು ಸೇರಿಸಬೇಕು.

ಭಾರತದ ಅಧಿಪತ್ಯದ ಕಾನೂನನ್ನು ಅರ್ಥೈಸಲು ಅನ್ವಯವಾಗುವಂತೆ.

**(ತಿದ್ದುಪಡಿಯು ಸ್ವೀಕೃತವಾಯಿತು)**

**ಮಾನ್ಯ ಸಭಾಧ್ಯಕ್ಷರು:** ಖಂಡ (೩) ಇದಕ್ಕೆ ತಿದ್ದುಪಡಿ ಸಂಖ್ಯೆ ೧೫೬ ಇರುತ್ತವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಮಂಡಿಸುತ್ತೇನೆ.

"ಅನುಚ್ಛೇದ ೩೦೩ ಖಂಡ (೩)ರಲ್ಲಿ (೧) ಭಾಗ (೧) ಪದಗಳು ಮತ್ತು ಸಂಖ್ಯೆಗಳು ಆದ ನಂತರ ಅಥವಾ ಭಾಗ ೩ ಇವುಗಳನ್ನು ಸೇರಿಸಬೇಕು.

(೧೧) ರಾಜ್ಯಪಾಲರು ಹೊರಡಿಸಿದ ಸುಗ್ರೀವಾಜ್ಞೆ ಇದಕ್ಕೆ ಏನೇ ಇದ್ದರೂ ಇದರ ಬದಲಾಗಿ ರಾಜ್ಯಪಾಲರು ಇಲ್ಲವೆ ರಾಜ್ಯ ಪ್ರಮುಖರು ಯಾರೇ ಆದರೂ ಎಂಬ ಈ ಪದಗಳನ್ನು ಸೇರಿಸಬೇಕು.

ಇದು ಕೇವಲ ಪರಿಣಾಮಕಾರಿ ಇರುತ್ತದೆ.

**(ತಿದ್ದುಪಡಿಯು ಸ್ವೀಕೃತವಾಯಿತು– ಇದನ್ನು ಸಂವಿಧಾನದಲ್ಲಿ ಸೇರಿಸಲಾಯಿತು.)**

## ಅನುಚ್ಛೇದ ೩೦೪

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತೇನೆ.

ಅನುಚ್ಛೇದ ೩೦೪ಕ್ಕೆ ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು.

ಸಂವಿಧಾನ ತಿದ್ದುಪಡಿ ಕುರಿತು ಪ್ರಕ್ರಿಯೆಯು ೩೦೪ ಸಂವಿಧಾನಕ್ಕೆ ತಿದ್ದುಪಡಿಯ ಉದ್ದೇಶಕ್ಕಾಗಿ ಮಸೂದೆಯ ಮೂಲಕ ಸಂಸತ್ತಿನ ಯಾವುದೇ ಸದನದಲ್ಲಿ ಮಂಡಿಸಬಹುದು. ಆ ಮಸೂದೆಯು ಪ್ರತಿಯೊಂದು ಸದನದಲ್ಲಿಯ ಒಟ್ಟು ಸದಸ್ಯರ ೨/೩ರಷ್ಟು ಬಹುಮತದೊಂದಿಗೆ ಹಾಜರಿರುವ ಸದಸ್ಯರ ಮತದಿಂದ ಪಾಸಾಗತಕ್ಕದ್ದು. ಅದನ್ನು ರಾಷ್ಟ್ರಪತಿಗಳ ಒಪ್ಪಿಗೆಯ ಅಂಕಿತಕ್ಕೆ ಕಳುಹಿಸಬೇಕು. ಅಂತಹ ಒಪ್ಪಿಗೆಯು ಸಿಕ್ಕ ನಂತರ ಅಂತಹ ಮಸೂದೆಗೆ ಸಂವಿಧಾನ ಪ್ರಕಾರ ತಿದ್ದುಪಡಿಯಾದಂತೆ ಆಗುತ್ತದೆ. ಪರಂತು ಅಂತಹ ತಿದ್ದುಪಡಿಯು ಕೆಳಗಣ ವಿಷಯಗಳಿಗೆ ಬದಲಾವಣೆ ಮಾಡಬಹುದಾಗಿದ್ದರೆ,

(ಎ) ಏಳನೆಯ ಪರಿಶಿಷ್ಟದಲ್ಲಿಯ ಯಾವುದೇ ಪಟ್ಟಿಯು ಇಲ್ಲವೆ

(ಬಿ) ರಾಜ್ಯಗಳಿಂದ ಸಂಸತ್ತಿಗೆ ಪ್ರತಿನಿಧಿಸುವುದಿದ್ದರೆ ಇಲ್ಲವೆ

(ಸಿ) ಸಂವಿಧಾನದ ಅಧ್ಯಾಯ VI, ಭಾಗ ೫ ಅಧ್ಯಾಯ VII ಭಾಗ ೨ ಮತ್ತು ಅನುಚ್ಛೇದ ೨೧೩ಎ ಇವುಗಳ ಬಗ್ಗೆ ಮಾಡಿದ ತಿದ್ದುಪಡಿಗಳು ರಾಜ್ಯಗಳ ಶಾಸಕಾಂಗದ ೧/೨ಕ್ಕಿಂತ ಹೆಚ್ಚು ರಾಜ್ಯಗಳಿಂದ ಅದು ಸ್ವೀಕೃತವಾಗಬೇಕು. ಭಾಗ ೧ ಮತ್ತು ೩ ಐದನೆಯ ಪರಿಶಿಷ್ಟದಲ್ಲಿ ಸದ್ಯಕ್ಕೆ ಕಾಣಿಸಿದ ರಾಜ್ಯಗಳಿಂದ ನಾನು ಈಗ ಮತ್ತೊಂದು ತಿದ್ದುಪಡಿ ಸಂ. ೨೦೭ ಇದನ್ನು ಮಂಡಿಸುವೆನು. ಪಟ್ಟಿ (೩) ತಿದ್ದುಪಡಿ ಸಂಖ್ಯೆ ೧೧೮, ಅನುಚ್ಛೇದ ೩೦೪ ಅದರ ಉಪಬಂಧಕ್ಕೆ ಈ ಕೆಳಗಣ ಉಪಬಂಧವನ್ನು ಸೇರಿಸತಕ್ಕದ್ದು. ಪರಂತು, ಯಾವುದೇ ತಿದ್ದುಪಡಿಗಳನ್ನು ಈ ಕೆಳಗಿನವುಗಳಲ್ಲಿ ಬದಲಾವಣೆ ತಂದರೆ,

(ಎ) ಸಂವಿಧಾನದ ಅನುಚ್ಛೇದ ೪೩, ೪೪, ೬೦, ೧೪೨, ಇಲ್ಲವೆ ಅನುಚ್ಛೇದ ೨೧೩ಎ

(ಬಿ) ಈ ಸಂವಿಧಾನದ ಅಧ್ಯಾಯ IV ಭಾಗ ೫, ಅಧ್ಯಾಯ VII, ಭಾಗ ೧೧, ಇಲ್ಲವೆ ಅಧ್ಯಾಯ

ಒಂದು ಭಾಗ ೯.

(ಸಿ) ಏಳನೆಯ ಪರಿಶಿಷ್ಟದಲ್ಲಿ ಹೇಳಿದ ಯಾವುದೇ ಪಟ್ಟಿಗಳು ಇಲ್ಲವೆ

(ಡಿ) ಸಂಸತ್ತಿನಲ್ಲಿ ರಾಜ್ಯಗಳನ್ನು ಪ್ರತಿನಿಧಿಸುವುದು.

(ಇ) ಈ ಅನುಚ್ಛೇದದ ಅನುಬಂಧಗಳು.

ಈ ತಿದ್ದುಪಡಿಗಳು ೧ನೆಯ ಪರಿಶಿಷ್ಟ ಭಾಗ ೧ ಮತ್ತು ೩ ಇವುಗಳಲ್ಲಿ ಸದ್ಯಕ್ಕೆ ಕಾಣಿಸಿದ ರಾಜ್ಯಗಳ ಶಾಸಕಾಂಗದ ೧/೨ ಕಡಿಮೆ ಇಲ್ಲದಂತೆ ಸ್ವೀಕೃತವಾಗಬೇಕು. ಆ ಮಸೂದೆಯನ್ನು ರಾಷ್ಟ್ರಪತಿಗೆ ಅವರ ಒಪ್ಪಿಗೆಯ ಅಂಕಿತಕ್ಕೆ ಕಳುಹಿಸುವ ಪೂರ್ವದಲ್ಲಿ ಈ ತಿದ್ದುಪಡಿಯನ್ನು ಸ್ವೀಕರಿಸಬೇಕು. ಮಾನ್ಯರೆ, ಈ ಹಂತದಲ್ಲಿ ನಾನು ಏನನ್ನೂ ಹೇಳಬಯಸುವುದಿಲ್ಲ. ಯಾಕೆಂದರೆ, ಈ ಅನುಚ್ಛೇದದ ಮೇಲೆ ಸಾಕಷ್ಟು ಚರ್ಚೆ ಆಗಬಹುದೆಂದು ನಾನು ನಿರೀಕ್ಷಿಸಿದ್ದೇನೆ. ನಾನು ನನ್ನ ಹೇಳಿಕೆಯನ್ನು ಕೊನೆಗೆ ಕಾಯ್ದಿರಿಸುತ್ತೇನೆ. ಯಾಕೆಂದರೆ ಆಗ ತಿದ್ದುಪಡಿಯ ಮೇಲೆ ಬರತಕ್ಕಂತಹ ವಿಷಯಗಳನ್ನು ನನಗೆ ವಿವರಿಸಲು ಸಾಧ್ಯವಾಗಬಹುದು.

**ಶ್ರೀ ನಜೀರುದ್ದೀನ್ ಅಹ್ಮದ್:** ವಿನಾಕಾರಣ ಚರ್ಚೆಗೆ ಆಸ್ಪದ ಕೊಡುವುದನ್ನು ತಪ್ಪಿಸಲು ಮೊದಲೇ ವಾದವನ್ನು ಕೊಡಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಗೆಳೆಯರು ಹೆಚ್ಚು ವೇಳೆ ತೆಗೆದುಕೊಳ್ಳುವುದಿಲ್ಲವೆಂದು ನನಗೆ ಆಶ್ವಾಸನೆಯನ್ನು ಕೊಟ್ಟರೆ ನಾನು ಹಾಗೆ ಮಾಡುತ್ತೇನೆ. ಆದರೆ, ನನ್ನ ಗೆಳೆಯರು ಹಾಗೆ ಹೇಳುವರು. ಆದರೆ ಆ ರೀತಿ ನಡೆದುಕೊಳ್ಳುವುದಿಲ್ಲ. ಅದು ನನಗೆ ಗೊತ್ತಿದೆ.

**ಶ್ರೀ ನಜೀರುದ್ದೀನ್ ಅಹ್ಮದ್:** ಮಾನ್ಯರೆ, ಡಾ. ಅಂಬೇಡ್ಕರ್ ಅವರು ತಮ್ಮ ವಾದಗಳಿಗೆ ಕಾಯ್ದೆ ಉತ್ತರಿಸುತ್ತಾರೆ. ಆದರೆ ಮೊದಲಿಗೆ ವಾದವನ್ನು ಕೊಡುವುದಿಲ್ಲ.

ಆದರೆ ವಾದವನ್ನು ಕೇಳಿ ಮುಗಿದ ನಂತರ ಅವರು ನಾನು ತಿದ್ದುಪಡಿಯನ್ನು ವಿಧಿಸುತ್ತೇನೆ ಎಂದು ಹೇಳುತ್ತಾರೆ.

**ಮಾನ್ಯ ಸಭಾಧ್ಯಕ್ಷರು:** ನಾವು ಈಗ ತಿದ್ದುಪಡಿ ಸಂಖ್ಯೆ ೧೯೯ ಇದನ್ನು ತೆಗೆದುಕೊಳ್ಳೋಣ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಮಾನ್ಯರೆ, ನಾನು ತಿದ್ದುಪಡಿ ಸಂಖ್ಯೆ ೧೯೯ಯನ್ನು ಮಂಡಿಸುತ್ತಿಲ್ಲ. ಯಾಕೆಂದರೆ, ಇದು ಡಾ. ಅಂಬೇಡ್ಕರ್ ಅವರ ತಿದ್ದುಪಡಿ ಸಂಖ್ಯೆ ೨೦೩ಕ್ಕೆ ಅಡಕವಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೆ, ಅನೇಕ ತಿದ್ದುಪಡಿಗಳನ್ನು ತರಲಾಯಿತು ಮತ್ತು ಅವುಗಳ ಮೇಲೆ ಭಾಷಣ ಮಾಡಲಾಯಿತು. ಆದ್ದರಿಂದ ಭಾಷಣಕಾರರಿಗೆ ಅವರ ಭಾಷಣದ ಮೇಲೆ ಅವರ ಟೀಕೆಗೆ ಉತ್ತರಿಸಲು ಸಾಧ್ಯವಿಲ್ಲ. ಆದರೆ ನಾನು ಸಾಮಾನ್ಯವಾದ ಪರ್ಯಾಯ ಎಂದರೆ ಅನೇಕ ಭಾಷಣಕಾರರು ಸೂಚಿಸಿದಂತೆ ನಮ್ಮ ಸಂವಿಧಾನವನ್ನು ಮುಂದಿನ ಸಂಸತ್ತಿನಲ್ಲಿ ಅದರ ತಿದ್ದುಪಡಿಯನ್ನು ಸಾಮಾನ್ಯ ಬಹುಮತದಿಂದ ಇಲ್ಲವೆ ಅನುಚ್ಛೇದ ೩೦೪ರಲ್ಲಿ ಅಳವಡಿಸಿದಂತೆ ಹೆಚ್ಚು ಸುಲಭ ಮಾಡುವೆನು. ಮಾನ್ಯರೆ, ಅನುಚ್ಛೇದ ೩೦೪ ಉಪಬಂಧಗಳ ಬಗ್ಗೆ ವಿವರಿಸುವ ಮೊದಲು ಉಳಿದ ಸಂವಿಧಾನಗಳಲ್ಲಿ ಸಂವಿಧಾನವನ್ನು ತಿದ್ದುವ ರೀತಿಯ ಬಗ್ಗೆ ನಾನು ನಿಮ್ಮ ನೆನಪಿಗೆ ತರಬಯಸುವೆನು. ನಾನು ಈ ಸಂಸತ್ತಿಗೆ ತಿಳಿಯಪಡಿಸುವುದೇನೆಂದರೆ ಕೆನಡಿಯನ್ ಸಂವಿಧಾನದಲ್ಲಿ ಕೆನಡಿಯನ್ ಸಂವಿಧಾನವನ್ನು ತಿದ್ದುಪಡಿ ಮಾಡಲು ಯಾವುದೇ ಉಪಬಂಧ ಇರುವುದಿಲ್ಲ. ಇಂದು ಕೆನಡಾ ದೇಶದಲ್ಲಿ ಸಾರ್ವಭೌಮ ಆಧಿಪತ್ಯ ಸಂವಿಧಾನವನ್ನು ಬದಲು ಮಾಡುವ ಅಧಿಕಾರವಿದೆ. ಕೆನಡಾದವರು ಸಂವಿಧಾನ ತಿದ್ದುವ ಖಂಡವನ್ನು ಅದರಲ್ಲಿ ಇಂದಿಗೂ ಸೇರಿಸಿಲ್ಲ. ಆದರೆ ಈ ಸಂಸತ್ತಿಗೆ ಅದನ್ನು ತಿದ್ದುವ ಅಧಿಕಾರವು ಇದೆ. ಕೆನಡಾದ

ಸಂವಿಧಾನದಲ್ಲಿ ೧೮೬೭ರಲ್ಲಿಯೇ ಅದನ್ನು ಸ್ಪಷ್ಟಪಡಿಸಲಾಗಿದೆ. ಅದರ ಬಗೆಗೆ ಎಳ್ಳಷ್ಟು ಯಾರ ಮನಸ್ಸಿನಲ್ಲಿಯೂ ಸಂಶಯವಿಲ್ಲ. ಯಾರು ಕೆನಡಾದ ಸಂವಿಧಾನದ ಬಗ್ಗೆ ಬೇರೆ ಬೇರೆ ಪುಸ್ತಕಗಳನ್ನು ಓದಿರುವರೊ ಅವರಿಗೆ ಸ್ವಲ್ಪವೂ ಸಂಶಯ ಬರುವುದಿಲ್ಲ.

ಆದರೆ ಕೆನಡಾದ ಸಂವಿಧಾನದಲ್ಲಿಯ ಉಪಬಂಧಗಳ ಬಗೆಗೆ ಅಸಮಾಧಾನವಿದೆ. ಅವುಗಳ ಬಗೆಗೆ ಅರ್ಥೈಸುವ ಬಗೆಗೆ ಪ್ರಿವಿ ಕೌನ್ಸಿಲ್ ಅವರು ಕೆನಡಾದ ಸಂವಿಧಾನದ ಉಪಬಂಧಗಳ ಬಗ್ಗೆ ಅರ್ಥೈಸುತ್ತ ಉಪಬಂಧಗಳ ಬಗ್ಗೆ ಹೇಳುತ್ತಾರೆ. ಆದರೆ ಕೆನಡಾದ ಜನತೆಯು ಅದನ್ನು ಕೈಗೆತ್ತಿಕೊಳ್ಳುವ ಅಧಿಕಾರವನ್ನು ಅವರಿಗೆ ಕೊಟ್ಟ ಅಧಿಕಾರಕ್ಕೆ ಯೋಗ್ಯವಲ್ಲದೆಂದು ಅಭಿಪ್ರಾಯಪಡುತ್ತದೆ. ಮತ್ತು ಅದಕ್ಕಾಗಿ ಒಂದು ವರ್ಗವನ್ನು ಸೃಷ್ಟಿಸಲು ಇಚ್ಛಿಸಿಲ್ಲ.

ನಾನು ಐರಿಷ್ ಸಂವಿಧಾನಕ್ಕೆ ಬರುತ್ತೇನೆ. ಈ ಐರಿಷ್ ಸಂವಿಧಾನದಲ್ಲಿ ಒಂದು ಉಪಬಂಧವಿದೆ. ಅದರಲ್ಲಿ ಎರಡೂ ಸದನಗಳು ಸಾದಾ ಬಹುಮತದಿಂದ ಸಂವಿಧಾನವನ್ನು ತಿದ್ದುಪಡಿ ಮಾಡಬಹುದು, ಯಾವುದೇ ಭಾಗವನ್ನು ನಿರಸನಗೊಳಿಸಬಹುದು. ಪರಂತು ಸದನಗಳ ನಿರ್ಣಯ ತಿದ್ದುಪಡಿ ಮಾಡುವುದು, ನಿರಸನಗೊಳಿಸುವ ಇಲ್ಲವೆ, ಸಂವಿಧಾನವನ್ನು ಬದಲಿಸಬಹುದು, ಅದನ್ನು ಜನರ ಮುಂದೆ ಜನಮತ ಗಣನೆಗೆ ತೆಗೆದುಕೊಂಡು ಹೋಗಿ ಅದನ್ನು ಬಹುಮತದಿಂದ ಅಂಗೀಕರಿಸಿದರೆ ಅದು ಬದಲಾಗುತ್ತದೆ.

ಈಗ ಸ್ವಿಸ್ ದೇಶದ ಸಂವಿಧಾನವನ್ನು ತೆಗೆದುಕೊಳ್ಳೋಣ, ಸಂಸತ್ತು ತಿದ್ದುಪಡಿಯ ಮಸೂದೆಯನ್ನು ಬಹುಮತದಿಂದ ಪಾಸು ಮಾಡಬಹುದು. ಆದರೆ ಆ ತಿದ್ದುಪಡಿಯಿಂದ ಯಾವ ಪರಿಣಾಮವೂ ಆಗುವುದಿಲ್ಲ. ಮೊದಲಿಗೆ ಎರಡು ಕರಾರುಗಳನ್ನು ಪೂರೈಸಬೇಕಾಗುತ್ತದೆ. ಮೊದಲನೆಯದು, ಕ್ಯಾಂಟನ್ಸ್ ಅವರು ತಿದ್ದುಪಡಿಯನ್ನು ಅಂಗೀಕರಿಸುವುದು, ಎರಡನೆಯದಾಗಿ ಜನಮತ ಗಣನೆಯನ್ನು ಮಾಡುವುದು, ಅದರಲ್ಲಿ ಜನರು ತಿದ್ದುಪಡಿಯನ್ನು ಬಹುಮತದಿಂದ ಸ್ವೀಕರಿಸಿದರೆ ಮಾತ್ರ ಸಂವಿಧಾನ ತಿದ್ದುಪಡಿ ಸಾಧ್ಯ. ಕೇವಲ ಸಂಸತ್ತಿನಲ್ಲಿ ಒಂದು ತಿದ್ದುಪಡಿಯು ಪಾಸಾದರೆ ಅದು ಸಂವಿಧಾನವನ್ನು ತಿದ್ದುವುದಿಲ್ಲ. ಅದು ಅದರ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ.

ನಾವು ಈಗ ಆಸ್ಟ್ರೇಲಿಯಾದ ಸಂವಿಧಾನವನ್ನು ತೆಗೆದುಕೊಳ್ಳೋಣ. ಆ ಸಂವಿಧಾನದಲ್ಲಿ ಒಂದು ಉಪಬಂಧವಿದೆ. ಅದೇನೆಂದರೆ ತಿದ್ದುಪಡಿಯು ಅತ್ಯಧಿಕ ಬಹುಮತದಿಂದ ಸಂಸತ್ತಿನಲ್ಲಿ ಅಂಗೀಕೃತವಾಗತಕ್ಕದ್ದು. ಅದನ್ನು ಹೀಗೆ ಅಂಗೀಕೃತವಾದ ನಂತರ ಅದನ್ನು ಜನಮತ ಗಣನೆಗೆ ಕಳುಹಿಸಿ ಸಂಸತ್ತಿನ ಕೆಳಗಿನ ಮನೆಗೆ ಆರಿಸಲು ಅರ್ಹರಾದ ಮತದಾರರಿಂದ ಮಾನ್ಯತೆ ಪಡೆಯಬೇಕು. ಆಮೇಲೆ ಪುನಃ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಿದ ಜನರು ಅದನ್ನು ಅಂಗೀಕರಿಸಬೇಕು ಮತ್ತು ರಾಜ್ಯಗಳ ಬಹುಮತದೊಂದಿಗೆ ಅನುಮತಿ ಕೊಡಬೇಕು ಹಾಗೂ ಜನಮತ ಗಣನೆಯಲ್ಲಿ ಬಹುಮತದಿಂದ ಪಾಸಾಗತಕ್ಕದ್ದು.

ಯುನೈಟೆಡ್ ಸಂಸತ್ತಿನಲ್ಲಿ ಅಲ್ಲಿಯ ಉಪಬಂಧವು ತಿದ್ದುಪಡಿಯನ್ನು ೨/೩ರ ಬಹುಮತದಿಂದ ಎರಡೂ ಸದನಗಳಲ್ಲಿ ಉದಾಹರಣೆಗೆ ಅನುಚ್ಛೇದ ೨ ಮತ್ತು ೩, ಇವು ರಾಜ್ಯಗಳನ್ನು ಕುರಿತು ಹೇಳುತ್ತವೆ. ಹೊಸ ರಾಜ್ಯವನ್ನು ಕಟ್ಟುವ ಬಗೆ ಇಲ್ಲವೆ, ಇರುವ ರಾಜ್ಯಗಳ ಪುನರ್ ವಿಂಗಡನೆ ಕುರಿತು, ಸಂಸತ್ತು ಸರಳ ಬಹುಮತದಿಂದ ಪಾಸು ಮಾಡಬಹುದು. ಅದರಂತೆ ಅನುಚ್ಛೇದ ೩೪೮, ಇದು ವಿಧಾನಪರಿಷತ್ ಕುರಿತು ಹೇಳುತ್ತದೆ. ಪ್ರಾಂತ್ಯಗಳಲ್ಲಿ ವಿಧಾನಪರಿಷತ್ತು ಇರಬೇಕೆ? ಇಲ್ಲವೆ ಹೊಸದಾಗಿ ರಚಿಸಬೇಕೇ? ಈ ವಿಷಯವನ್ನು ಸಂಪೂರ್ಣವಾಗಿ ಸಂಸತ್ತಿಗೆ ಬಿಡಲಾಗಿದೆ. ಈಗ ಅವುಗಳನ್ನು ಸರಳ ಬಹುಮತದಿಂದ ಸ್ಥಾಪಿಸಲು ಬರುವುದಿಲ್ಲ. ಅನುಚ್ಛೇದ ೨೧೩ ಇದನ್ನು ತೆಗೆದುಕೊಳ್ಳೋಣ. ಇದು ರಾಜ್ಯಗಳನ್ನು ಕುರಿತು ಭಾಗ ೨ ಇದರಲ್ಲಿ

ಹೇಳಲಾಗಿದೆ. ರಾಜ್ಯಗಳ ಸಂವಿಧಾನ ಕುರಿತು ಕರಡು ಸಮಿತಿಗೆ ಅದನ್ನು ಬಿಡಲಾಗಿದೆ. ಎರಡೂ ಸದನಗಳ ನಿರ್ಣಯವು ೨/೩ದ ಬಹುಮತದಿಂದ ಹಾಗೂ ರಾಜ್ಯಗಳು ಸಹ ೨/೩ ಬಹುಮತದೊಂದಿಗೆ ತಿದ್ದುಪಡಿಯನ್ನು ಅಂಗೀಕರಿಸಬೇಕು. ನಾನು ಈ ಉದಾಹರಣೆಗಳನ್ನು ಯಾಕೆ ಕೊಡುತ್ತೇನೆ ಎಂದರೆ ಸಾದಾ ಬಹುಮತದಿಂದ ಸಂವಿಧಾನವನ್ನು ತಿದ್ದಬಹುದು.

ಈಗ ನಾವು ನಮ್ಮ ಸಂವಿಧಾನ ಉಪಬಂಧಗಳಿಗೆ ಬರೋಣ. ನಾವು ಯಾವ ಪ್ರಸ್ತಾಪವನ್ನು ಮಾಡಿದ್ದೇವೆ? ನಮ್ಮ ಸಂವಿಧಾನ ತಿದ್ದುಪಡಿ ಮಾಡಲು ನಾವು ಏನು ಮಾಡಿದ್ದೇವೆ? ನಾವು ಸಂವಿಧಾನದ ಎಲ್ಲ ಪರಿಚ್ಛೇದಗಳನ್ನು ಮೂರು ವರ್ಗಗಳಲ್ಲಿ ವಿಂಗಡಿಸಿದ್ದೇವೆ. ಒಂದನೆಯ ವರ್ಗದಲ್ಲಿ ಕೆಲವು ಅನುಚ್ಛೇದಗಳನ್ನು ಇಟ್ಟಿದ್ದೇವೆ. ಅವುಗಳನ್ನು ಸಂಸತ್ತಿನಲ್ಲಿ ಕೇವಲ ಬಹುಮತದಿಂದ ಪಾಸು ಮಾಡಬಹುದು. ಈ ಸಂಗತಿಯನ್ನು ದುರ್ದೈವದಿಂದ ಅನುಚ್ಛೇದ ೩೦೪ರಲ್ಲಿ ಗಮನಿಸಿಲ್ಲ. ಆದರೆ ಸಂವಿಧಾನದ ಉಳಿದ ಅನುಚ್ಛೇದಗಳಲ್ಲಿ ಇದನ್ನು ಕಾಣಿಸಲಾಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಪುನಃ ಪರಿಶಿಷ್ಟ V ಮತ್ತು VI ಇವುಗಳನ್ನು ಸಂಸತ್ತು ಸರಳ ಬಹುಮತದಿಂದ ಅಂಗೀಕರಿಸಬಲ್ಲದು. ಸಂವಿಧಾನದಲ್ಲಿಯ ಅನೇಕ ಇಂತಹ ಉದಾಹರಣೆಗಳನ್ನು ನಾನು ಹೇಳಬಲ್ಲೆ. ಉದಾಹರಣೆಗಾಗಿ ಅನುಚ್ಛೇದ ೨೫೫ ಇದು ಅನುದಾನ ಹಾಗೂ ಆರ್ಥಿಕ ಉಪಬಂಧಗಳನ್ನು ಕುರಿತು ಹೇಳುತ್ತದೆ. ಇದು ಸಂಸತ್ತು ಮಾಡಿದ ಕಾನೂನಿಗೆ ಒಳಪಟ್ಟಿರುತ್ತದೆ. ಅದರ ಉಪಬಂಧಗಳು ಇಲ್ಲವೆ ಸಂಸತ್ತು ವ್ಯವಸ್ಥೆಯನ್ನು ಮಾಡುವವರೆಗೆ ಎಂದು ಇವೆ. ಆದ್ದರಿಂದ ಅನೇಕ ವಿಷಯಗಳಲ್ಲಿ ಕರಡು ಸಂವಿಧಾನವನ್ನು ಸಂಪೂರ್ಣವಾಗಿ ಓದಲು ವೇಳೆಯೇ ಸಿಕ್ಕಿಲ್ಲ. ನಾನು ಕೇವಲ ನನ್ನ ವಿಷಯವನ್ನು ಉದಾಹರಣೆಗೆ ಕೊಡುತ್ತಿದ್ದೇನೆ. ಸಂವಿಧಾನದಲ್ಲಿಯ ವಿಷಯಗಳನ್ನು ಒಂದು ದೃಷ್ಟಿಯಿಂದ ತಿದ್ದುಪಡಿಯನ್ನು ಸರಳ ಬಹುಮತದಿಂದ ಅಂಗೀಕರಿಸಲು ಸಾಧ್ಯವಿದೆ. ಒಂದು ಜೀವಂತ ಪ್ರಕರಣವನ್ನು ನನಗೆ ಸೂಚಿಸಲಾಗಿತ್ತು. ಅನುಚ್ಛೇದದಲ್ಲಿಯ ವ್ಯಾಖ್ಯೆಯನ್ನು ಉಲ್ಲೇಖಿಸಿ ಅದನ್ನು ಸಹ ಅದೇ ವರ್ಗಕ್ಕೆ ಸೇರಿಸಬೇಕು. ಸಂವಿಧಾನ ಕರಡು ಸಮಿತಿಯು ಅದನ್ನು ಹೀಗೆ ಮುಕ್ತ ಸರಳ ಬಹುಮತದಿಂದ ಪಾಸು ಮಾಡಲು ಬರಬಹುದಾಗಿತ್ತು.

ವಿಮರ್ಶೆಯಲ್ಲಿ ತೊಡಗಿದ ನನ್ನ ಗೆಳೆಯರು, ಸಂಸತ್ತಿಗೆ ತಿದ್ದುಪಡಿಗಾಗಿ ಹೆಚ್ಚಿನ ಅಧಿಕಾರವನ್ನು ಕೊಡಬೇಕಾಗಿತ್ತು. ಇಲ್ಲವೆ ಸಂವಿಧಾನವನ್ನು ಸರಳ ಬಹುಮತದಿಂದ ತಿದ್ದುಪಡಿ ಮಾಡಬೇಕೆಂದು ನನಗೆ ಸೂಚಿಸಿದರು. ನನಗೆ ಒಂದು ನಿರ್ದಿಷ್ಟವಾದ ಪ್ರಕರಣ ಸೂಚಿಸಿದರೆ ಅದನ್ನು ಸಹ ಈ ವರ್ಗದಲ್ಲಿ ಸೇರಿಸಬಹುದಿತ್ತು. ಆಗ ಸಂವಿಧಾನ ಕರಡು ಸಮಿತಿಯು ಮುಕ್ತ ವಿಚಾರಣೆ ಮಾಡಬಹುದು. ಹಾಗೆ ಮಾಡುವುದರ ಬದಲಾಗಿ, ಸಂಪೂರ್ಣ ಸಂವಿಧಾನ ತಿದ್ದುಪಡಿ ಮಾಡುವುದು ಸಂಸತ್ತಿನ ಬಹುಮತದಿಂದ ಪಾಸು ಮಾಡಬೇಕೆಂದು ಅವರು ಹೇಳಿದರು. ನನ್ನ ದೃಷ್ಟಿಯಲ್ಲಿ ಸಂವಿಧಾನ ಕರಡು ರಚನೆಯ ಸದಸ್ಯರಿಗೆ ಇದನ್ನು ಸ್ವೀಕರಿಸಲು ತುಂಬಾ ತೊಂದರೆದಾಯಕ, ಖರ್ಚುದಾಯಕವಾಗಿದ್ದು, ಅದು ಅವರಿಗೆ ಸ್ವೀಕರಿಸಲು ನಿಲುಕದ್ದು. ಸಂಸತ್ತು ಸರಳ ಬಹುಮತದಿಂದ ಯಾವುದೇ ತಿದ್ದುಪಡಿಯನ್ನು ಸ್ವೀಕರಿಸಲು ಬರುವುದಿಲ್ಲವೆಂದು ಹೇಳುವ ಯಾವುದೇ ಅನುಚ್ಛೇದವು ಸಂವಿಧಾನದಲ್ಲಿ ಇರುವುದಿಲ್ಲವೆಂಬುದು ಸಂಪೂರ್ಣ ತಪ್ಪು ಗ್ರಹಿಕೆಯಿಂದ ಕೂಡಿದ್ದು ಎಂದು ನಾನು ಒತ್ತಿ ಹೇಳುತ್ತೇನೆ. ನಾನು ಹೇಳಿದಂತೆ ಸಂವಿಧಾನದಲ್ಲಿ ಅನೇಕ ಅನುಚ್ಛೇದಗಳು ಇರುತ್ತವೆ. ಅವುಗಳನ್ನು ಸಂಸತ್ತು ಸರಳ ಬಹುಮತದಿಂದ ತಿದ್ದುಪಡಿ ಮಾಡಬಹುದು.

ನಾನು ಈಗ ಏನು ಮಾಡಬೇಕಾಗಿದೆ? ನಾನು ಅನುಚ್ಛೇದಗಳನ್ನು ಮೂರು ವರ್ಗಗಳಲ್ಲಿ ವಿಭಾಗಿಸುತ್ತೇನೆ. ಮೊದಲನೆಯ ವರ್ಗವೆಂದರೆ ಸಂಸತ್ತು ಕೇವಲ ಬಹುಮತದಿಂದ ತಿದ್ದುಪಡಿ ಮಾಡಬಹುದಾದ ಅನುಚ್ಛೇದಗಳು

ಹಾಗೂ ಎರಡನೆಯದಾಗಿ ಯಾವ ಅನುಚ್ಛೇದಗಳಿಗೆ ತಿದ್ದುಪಡಿ ಮಾಡಲು ಎರಡು ಮೂರನೆಯ ಅಂಶದಷ್ಟು ಬಹುಮತವು ಅವಶ್ಯವಿದೆ. ಮುಂದಿನ ಸಂಸತ್ತು ಯಾವುದೇ ನಿರ್ದಿಷ್ಟ ಅನುಚ್ಛೇದವನ್ನು ತಿದ್ದುಪಡಿ ಮಾಡಲು ಇಚ್ಛಿಸಿದರೆ ಅದನ್ನು ಭಾಗ ೧೧೧ರಲ್ಲಿ ಕಾಣಿಸದಿದ್ದರೆ, ಇಲ್ಲವೆ ಅನುಚ್ಛೇದ ೩೦೪, ಅವರಿಗೆ ಅವಶ್ಯವೆನಿಸಿದರೆ ಎರಡು ಮೂರನೆಯ ಅಂಶದಷ್ಟು ಬಹುಮತವು ಬೇಕಾಗುತ್ತದೆ. ಆಮೇಲೆ ಅವರು ಆ ತಿದ್ದುಪಡಿಯನ್ನು ಮಾಡಬಹುದು.

**ಮಾನ್ಯ ಸಭಾಧ್ಯಕ್ಷರು:** ಹಾಜರಿದ್ದ ಸದಸ್ಯರ ಪೈಕಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು ನಾವು ಮೂರನೆಯ ವರ್ಗದಲ್ಲಿ ತಿದ್ದುಪಡಿಗಾಗಿ ಕೆಲವು ಅನುಚ್ಛೇದಗಳನ್ನು ಹಾಕಿದ್ದೇವೆ. ಅವುಗಳನ್ನು ತಿದ್ದುವ ಪದ್ಧತಿ ಭಿನ್ನವಾಗಿದೆ. ಇಲ್ಲವೆ ಎರಡು ಪಟ್ಟಿ ಆಗಿದೆ. ಅವುಗಳಿಗೆ ಎರಡು ಮೂರಾಂಶ ಬಹುಮತ ಬೇಕು. ಅದರ ಜೊತೆಗೆ ರಾಜ್ಯಗಳು ಮನ್ನಣೆ ಕೊಡಬೇಕು. ಈ ಪದ್ಧತಿಯನ್ನು ಅನುಸರಿಸುವುದು ಯಾಕೆ ಅಪೇಕ್ಷಣೀಯವೆಂದು ನಾನು ವಿವರಿಸುತ್ತೇನೆ. ಈ ಪರಂತುಕದಲ್ಲಿಯ ಅನುಚ್ಛೇದದ ವಿಷಯಗಳನ್ನು ಸಮಾಲೋಚಿಸಿದರೆ, ಕಂಡುಬರುವುದೇನೆಂದರೆ ಅವುಗಳನ್ನು ಕೇಂದ್ರಕ್ಕೆ ಮಾತ್ರ ಸೀಮಿತಗೊಳಿಸದೆ ಕೇಂದ್ರ ಮತ್ತು ಪ್ರಾಂತ್ಯಗಳ ನಡುವಿನ ಸಂಬಂಧ ಕುರಿತು ಇರುತ್ತವೆ. ನಾವು ಬಹಳಷ್ಟು ಪ್ರಕರಣಗಳಲ್ಲಿ ಪ್ರಾಂತೀಯ ಸ್ವಾಯತ್ತತೆಯ ಮೇಲೆ ಆಕ್ರಮಿಸಿದ್ದೇವೆಂದು ಮರೆಯುವಂತಿಲ್ಲ. ಸಂವಿಧಾನದ (ಫೆಡರಲ್ ರಚನೆ) ಸಂಯುಕ್ತ ರಚನೆಯನ್ನು ಅದು ಕಾಯ್ದುಕೊಂಡಿದೆ. ಅದನ್ನು ಉಳಿಸಿಕೊಳ್ಳಲು ಮೂಲತಃ ಬದಲಾವಣೆಯಾಗದಂತೆ ನಾವು ನೋಡಿಕೊಳ್ಳಬಯಸುತ್ತೇವೆ. ನಾವು ಪ್ರಾಂತ್ಯಗಳಿಗೆ ಕಾನೂನಿನ ಮೂಲಕ ಕೆಲವು ಹಕ್ಕುಗಳನ್ನು ಕೊಟ್ಟಿದ್ದೇವೆ. ಕೆಲವು ಹಕ್ಕುಗಳನ್ನು ಕೇಂದ್ರಕ್ಕೆ ಕಾಯ್ದಿಟ್ಟಿದೇವೆ. ಕಾನೂನು ಮಾಡುವ ಅಧಿಕಾರವನ್ನು ಹಂಚಿಕೊಂಡಿದ್ದೇವೆ. ಆಡಳಿತಾತ್ಮಕದ ಕಾರ್ಯಾಂಗದ ಅಧಿಕಾರಗಳನ್ನು ಹಂಚಿಕೊಟ್ಟಿದೆ. ಸ್ಪಷ್ಟವಾಗಿ ಹೇಳುವುದೇನೆಂದರೆ ಸಂವಿಧಾನದ ಆಡಳಿತಕ್ಕೆ ಸೇರಿದ ಅನುಷ್ಠಾನದ ಶಾಸಕಾಂಗ ಹಾಗೂ ಹಣಕಾಸಿನ ಮತ್ತು ಇತರ ಅಧಿಕಾರಗಳು ಪ್ರಾಂತದ ಕಾರ್ಯಾಂಗ ಅಧಿಕಾರಗಳನ್ನು ಕೇಂದ್ರ ಸರಕಾರವು ಎರಡು ಮೂರನೆಯ ಅಂಶ ಬಹುಮತದಿಂದ ಬದಲಾವಣೆ ಮಾಡುವುದನ್ನು ಇದು ಹೇಳುತ್ತದೆ.

ಪ್ರಾಂತ್ಯಗಳಿಗೆ ಇಲ್ಲವೆ ರಾಜ್ಯಗಳಿಗೆ ಅವರ ಹೇಳಿಕೆಯನ್ನು ಕೇಳದೆ ಮಾಡುವುದು ನನ್ನ ದೃಷ್ಟಿಯಿಂದ ಮೂಲಭೂತವಾಗಿ ಸಂಪೂರ್ಣ ಸಂವಿಧಾನವನ್ನೇ ನಿಷೇಧಿಸುತ್ತದೆ.

ಪರಂತು ನನ್ನ ಸನ್ಮಿತ್ರರು ಇದರಲ್ಲಿ ಹೇಳಿದ ಅನುಚ್ಛೇದಗಳನ್ನು ಉಲ್ಲೇಖಿಸಿದ್ದನ್ನು ನೋಡಿದರೆ, ನಾವು ಕೆಲವನ್ನು ಮಾತ್ರ ಆಯ್ಕೆ ಮಾಡಿದ್ದೇವೆಂದು ಅವರಿಗೆ ಕಂಡುಬರುತ್ತದೆ. ಅನುಚ್ಛೇದ ೪೩, ಇದು ರಾಷ್ಟ್ರಪತಿಗಳ ಚುನಾವಣೆಯನ್ನು ಕುರಿತು ಹೇಳುತ್ತದೆ. ಅನುಚ್ಛೇದ ೪೪ ರಾಷ್ಟ್ರಪತಿಗಳು ಕೇಂದ್ರದ ವ್ಯವಹಾರಗಳ ಅವರ ಕೈಯಲ್ಲಿರುತ್ತವೆನ್ನುವುದಕ್ಕೆ ಯಾವ ಸಂಶಯವೂ ಇಲ್ಲ. ಆದರೂ ಅವರು ಕೇಂದ್ರ ಸರಕಾರದ ಮುಖ್ಯಸ್ಥರು ಹೀಗಾಗಿ ಪ್ರಾಂತ್ಯಗಳು ರಾಷ್ಟ್ರಪತಿಗಳ ಚುನಾವಣೆಯ ವಿಷಯದಲ್ಲಿ ಕೇಂದ್ರ ಸರಕಾರದಷ್ಟೆ ಆಸಕ್ತಿ ಹೊಂದಿವೆ. ಇದರ ಪರಿಣಾಮವಾಗಿ ನಾವು ವಿಚಾರಿಸಿದ್ದೇನೆಂದರೆ ಈ ವಿಷಯವನ್ನು ಪ್ರಾಂತ್ಯಗಳು ತಮ್ಮ ಅನುಮತಿ ಕೊಡುವುದು ಅಗತ್ಯವೆಂದು ಭಾವಿಸಿದೆವು, ಅನುಚ್ಛೇದ ೬೦ ಹಾಗೂ ಅನುಚ್ಛೇದ ೧೪೨ ಇವುಗಳನ್ನು ತೆಗೆದುಕೊಳ್ಳಿರಿ. ಅನುಚ್ಛೇದ ೬೦ ಇದು ಕೇಂದ್ರ ಸರಕಾರದ ಕಾರ್ಯಾಂಗದ ವ್ಯಾಪ್ತಿಯನ್ನು ಕುರಿತು ಹೇಳುತ್ತದೆ. ನಮ್ಮ ಸಂವಿಧಾನದಲ್ಲಿ ಮೂಲಭೂತ ಪ್ರಸ್ತಾವನೆಯನ್ನು ಹೊಂದಿದ್ದೇವೆ. ಶಾಸಕಾಂಗ ಮತ್ತು ಕಾರ್ಯಾಂಗ ಒಂದಕ್ಕೊಂದು ಕೂಡಿಯೇ ಹೋಗಬೇಕು ಎಂದಿದೆ ಎಂದು ಸದ್ಯಕ್ಕೆ ತಿಳಿದುಕೊಳ್ಳೋಣ.

ಅನುಚ್ಛೇದಗಳನ್ನು ಸಹಿತ ಒಂದು ಬದಲಾವಣೆ ಮಾಡಲು ಸಂಸತ್ತಿಗೆ ಅಧಿಕಾರವಿದೆ. ಅನುಚ್ಛೇದ ೬೦ನ್ನು ಬದಲಾಯಿಸಲು ಅಧಿಕಾರ ಇರುತ್ತದೆ. ಅನುಚ್ಛೇದ ೬೦ ಇದು ಪ್ರಾಂತ್ಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಉಪಬಂಧಗಳಿಗಿಂತ ಹೆಚ್ಚಿಗೆ ವಿಸ್ತರಿಸುವುದನ್ನು ಕುರಿತು ಹೇಳುತ್ತದೆ. ಇಲ್ಲವೆ ಅದರ ನಿಯಂತ್ರಣವನ್ನು ಅನುಚ್ಛೇದ ೬೦ರಲ್ಲಿ ಕಾಣಿಸಲಾಗಿದೆ. ನಿಸ್ಸಂಶಯವಾಗಿ ರಾಜ್ಯದ ಕಾರ್ಯಾಂಗದ ಅಧಿಕಾರ ವ್ಯಾಪ್ತಿಯನ್ನು ಅನುಚ್ಛೇದ ೧೪೨ರಲ್ಲಿ ವ್ಯಾಖ್ಯಾನಿಸಿದಂತೆ ಮೊಟಕುಗೊಳಿಸುತ್ತದೆ. ಅದರ ಮಹತ್ವವನ್ನು ಕಡಿಮೆ ಮಾಡುತ್ತದೆ. ಆದ್ದರಿಂದ ನಾವು ವಿಚಾರ ಮಾಡಿದ್ದೇನೆಂದರೆ, ಆ ವಿಷಯದಲ್ಲಿಯೂ ಮೂಲಭೂತವಾಗಿ ರಾಜ್ಯಗಳು ಅನುಮತಿಯನ್ನು ಪಡೆದುಕೊಳ್ಳಲಿಕ್ಕೇ ಬೇಕು.

ಅಧ್ಯಾಯ IV ಭಾಗ ೫ ಇವು ಸುಪ್ರೀಂಕೋರ್ಟ್‌ನ ಬಗ್ಗೆ ಹೇಳುತ್ತವೆ. ಸುಪ್ರೀಂಕೋರ್ಟಿನಲ್ಲಿ ಕೇಂದ್ರ ಸರಕಾರ, ಪ್ರಾಂತ್ಯಗಳು ಇಲ್ಲವೆ ಯೂನಿಟ್‌ಗಳು ಮತ್ತು ಈ ದೇಶದ ನಾಗರಿಕರು ಅದರಲ್ಲೇ ಆಸಕ್ತಿ ಹೊಂದಿರುತ್ತಾರೆ ಎಂಬುದರಲ್ಲಿ ಸಂಶಯವೂ ಇಲ್ಲ ಮತ್ತು ಈ ವಿಷಯವನ್ನು ಕೇವಲ ಎರಡು ಮೂರಾಂಶ ಬಹುಮತದಿಂದ ನಿರ್ಧರಿಸಲು ಬಿಡತಕ್ಕದ್ದಲ್ಲ. ಅದೇ ರೀತಿ ಅಧ್ಯಾಯ VII ಭಾಗ ೬ ಇದರಲ್ಲಿ ಉಚ್ಚ ನ್ಯಾಯಾಲಯದ ಬಗೆಗೆ ಕಾಣಿಸಲಾಗಿದೆ. ೯ನೆಯ ಭಾಗದ ಅಧ್ಯಾಯ ೧ ಮೂರನೆಯ ವರ್ಗದಲ್ಲಿದ್ದು, ಶಾಸನ ಮಾಡುವ ಅಧಿಕಾರವನ್ನು ಕುರಿತು ಹೇಳುತ್ತದೆ. ಇವುಗಳಿಗೆ ಮೂಲಭೂತ ಸ್ವರೂಪವಿದೆಯೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಪ್ರಾಂತ್ಯಗಳಿಗೆ ಈ ಮೂಲಭೂತ ಸ್ವರೂಪದ ಬಗೆಗೆ ಆಸಕ್ತಿಯು ಇದೆ. ಆದ್ದರಿಂದ ಅವುಗಳ ಒಪ್ಪಿಗೆ ಪಡೆಯುವುದು ಮತ್ತು ರಾಜ್ಯಗಳ ಮನವಿಯನ್ನು ಕೇಳಿಕೊಳ್ಳುವುದು ಅವಶ್ಯವಿದೆ. ಅದರಂತೆ ರಾಜ್ಯಗಳ ಮನವಿಯನ್ನು ರಾಜ್ಯದ ಸಂವಿಧಾನದಲ್ಲಿ ಸೇರಿಸುವ ಕುರಿತು ಅನುಚ್ಛೇದ ೬೭ರಲ್ಲಿ ಕೇಳಲಾಗಿದೆ.

ಮಾನ್ಯ ಸದಸ್ಯರು ಇದರಲ್ಲಿ ಸಂವಿಧಾನ ಕರಡು ಸಮಿತಿಯು ಅಳವಡಿಸಿದ ತತ್ವಗಳನ್ನು ನೋಡಬಹುದು. ಈ ರೀತಿಯಲ್ಲದೆ, ಬೇರೆ ರೀತಿಯಿಂದ ತಿದ್ದುಪಡಿಯನ್ನು ಪ್ರತಿಯೊಂದು ಅನುಚ್ಛೇದವು ಸರಳ ಬಹುಮತದಿಂದ ಪಾಸು ಮಾಡಬಹುದು, ನಾನು ಈಗಾಗಲೇ ಹೇಳಿದಂತೆ ಆ ಸ್ಥಿತಿಯನ್ನು ಒಪ್ಪಲು ಸಾಧ್ಯವಿಲ್ಲ. ಸಂವಿಧಾನವು ಮೂಲಭೂತವಾದ ದಸ್ತಾವೇಜು ಆಗಿದೆ. ಈ ದಸ್ತಾವೇಜು ಸರಕಾರದ ಮೂರು ಅಂಗಗಳಾದ ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗ ಇವುಗಳ ಸ್ಥಾನ ಮತ್ತು ಅಧಿಕಾರಗಳನ್ನು ವ್ಯಾಖ್ಯಾನಿಸುತ್ತದೆ. ಇದು ಕಾರ್ಯಾಂಗದ ಅಧಿಕಾರಗಳನ್ನು ಮತ್ತು ಶಾಸಕಾಂಗದ ಅಧಿಕಾರಗಳನ್ನು ನಾಗರಿಕರ ವಿರುದ್ಧ ಇರುವುದನ್ನು ಸಹ ವ್ಯಾಖ್ಯಾನಿಸುತ್ತದೆ. ಆ ಪ್ರಕಾರ ನಮ್ಮ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ಕಲ್ಪಿಸಿದ್ದೇವೆ. ನಿಜವಾಗಿಯೂ ಸಂವಿಧಾನದ ಉದ್ದೇಶವು ಮೂರು ಅಂಗಗಳನ್ನು ರಚಿಸುವುದೇ ಅಲ್ಲ, ಆದರೆ ಅವುಗಳ ಅಧಿಕಾರವನ್ನು ಸೀಮಿತಗೊಳಿಸುವುದಾಗಿದೆ. ಯಾಕೆಂದರೆ ಅಧಿಕಾರದ ಮೇಲೆ ನಿಯಂತ್ರಣವನ್ನು ವಿಧಿಸದಿದ್ದರೆ ರಾಜ್ಯದ ಅಂಗಗಳು ನಿಯಂತ್ರಣವಿಲ್ಲದೆ ಅಲ್ಲೇ ದಬ್ಬಾಳಿಕೆ ಮತ್ತು ಸಂಪೂರ್ಣ ಘರ್ಷಣೆ ಉಂಟಾಗುತ್ತದೆ. ಶಾಸಕಾಂಗವು ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಬಹುದು. ಸುಪ್ರೀಂಕೋರ್ಟು ಕಾನೂನನ್ನು ಬೇಕಾದಂತೆ ಅರ್ಥೈಯಿಸಿ ತೀರ್ಪು ಕೊಡಬಹುದು. ಇದರಿಂದ ಸಂಪೂರ್ಣವಾದ, ಅವ್ಯವಸ್ಥೆಯ ಸ್ಥಿತಿಯುಂಟಾಗುತ್ತದೆ. ಮಾನ್ಯರೆ ಸಂವಿಧಾನವನ್ನು ಕೇವಲ ಸರಳ ಬಹುಮತದಿಂದ ತಿದ್ದುಪಡಿ ಮಾಡಬೇಕೆಂದು ಯಾವಾಗ ಹೇಳಲಾಗಿತ್ತೆಂಬುದು ನನಗೆ ತಿಳಿಯದಾಗಿದೆ. ನಾನು ಈ ರೀತಿಯ ಭಾವನೆಗೆ ಮೂರು ಕಾರಣಗಳನ್ನು ಕೊಡಬಲ್ಲೆನು. ಒಂದನೆಯದೆಂದರೆ ಸಂವಿಧಾನ ಕರಡು ಸಮಿತಿಯು ಈ ಕರಡು ತಯಾರಿಸಿದ ರೀತಿ ತುಂಬಾ ಕೆಟ್ಟದ್ದಾಗಿದೆ. ಅದು ಹಾಗಿದ್ದರೆ, ಅದರ ಸ್ಥಿತಿ ಏನಾಗುವುದೆಂದು ನಾನು ಚೆನ್ನಾಗಿ ಬಲ್ಲೆನು.

**ಶ್ರೀ ಮಹಾವೀರ್ ತ್ಯಾಗಿ:** ಅದು ಹಾಗಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಹಾಗಾಗಿರಲಿಕ್ಕಿಲ್ಲ. ಒಂದು ವೇಳೆ ಹಾಗಿದ್ದರೆ, ನಾನು ಕರಡು ಸಮಿತಿಯ ಅಧ್ಯಕ್ಷನಾಗಿ ಹಾಗೂ ಕರಡು ಸಮಿತಿಯ ಸಹೋದ್ಯೋಗಿಗಳು ಮತ್ತೊಂದು ಕರಡು ಸಮಿತಿ ರಚಿಸಲು ತಕರಾರು ಮಾಡುತ್ತಿರಲಿಲ್ಲ, ಸಂಸತ್ತಿನ ವ್ಯವಹಾರಗಳಲ್ಲಿ ಪರಿಣಿತನಾದವನನ್ನು ಪರದೇಶದಿಂದ ತರಿಸುತ್ತಿರಲಿಲ್ಲ ಮತ್ತು ಅವನಿಗೆ ಸಂಸತ್ತಿನ ಮುಂದೆ ಕರಡು ತಯಾರಿಯಲ್ಲಿ ಯಾವ ದೋಷಗಳಿವೆಯೆಂಬುದನ್ನು ಸಲಹೆ ಮಾಡಲು ಕೇಳುತ್ತಿದ್ದೆನು. ಅದು ಪ್ರಾಮಾಣಿಕವಾದ ಪ್ರಕ್ರಿಯೆಯಾಗಿದೆ. ಅದಕ್ಕೆ ನನ್ನದು ಯಾವ ತಕರಾರು ಇರುವುದಿಲ್ಲ. ಈ ವಾದ ಪ್ರತಿವಾದಕ್ಕೆ ಆ ವಿಷಯಕ್ಕೆ ಇದ್ದರೆ ಇನ್ನೊಂದು ವಿಷಯವೆಂದರೆ ಈ ಸಂವಿಧಾನವು ಕೆಲವು ತಪ್ಪು ತತ್ವಗಳ ಮೇಲೆ ನಿಂತಿದೆ.

ಮಾನ್ಯರೆ, ಇಲ್ಲಿಯವರೆಗೆ ಈ ವಿಷಯ ಕುರಿತು ನನಗೆ ಅನಿಸಿದ ಮಟ್ಟಿಗೆ ಆಧುನಿಕ ಸಂವಿಧಾನವನ್ನು ಎರಡು ತತ್ವಗಳ ಮೇಲೆ ರಚಿಸಬೇಕು. ಒಂದು ಪದ್ಧತಿಯೆಂದರೆ ಸಂಸದೀಯ ಪದ್ಧತಿಯ ಸರಕಾರ ಇನ್ನೊಂದು ರೀತಿಯದು ಅಂದರೆ, ಸರ್ವಾಧಿಕಾರ ಸರಕಾರ. ನಮ್ಮ ಸಂವಿಧಾನವು ಸರ್ವಾಧಿಕಾರಿಯಾಗಬಾರದು. ಆದರೆ ನಮ್ಮ ಸಂವಿಧಾನದಲ್ಲಿ ನಾವು ಒಪ್ಪಿಸಿದ ಸಂಸದೀಯ ಪದ್ಧತಿ ಪ್ರಜಾಪ್ರಭುತ್ವವನ್ನು ಉಳಿಸಿದರೆ ಸರಕಾರವು ಯಾವಾಗಲೂ ಕಬ್ಬಿಣದ ಅಡಿಗಲ್ಲಾಗುವುದು. ಹೇಳಬೇಕೆಂದರೆ ಅದರ ಕಾರ್ಯ ಪದ್ಧತಿಯು ಜನರಿಗೆ ಹೊಣೆಗಾರಿಕೆ, ನ್ಯಾಯಾಂಗಕ್ಕೆ ಹೊಣೆಗಾರಿಕೆ ತತ್ವಗಳನ್ನು ಆಧರಿಸಿದೆ. ಆದ್ದರಿಂದ ಈ ಸಂವಿಧಾನದಲ್ಲಿ ಅಳವಡಿಸಿದ ತತ್ವಗಳು ಯಾವುದೇ ದೇಶದ ಸಂಸದೀಯ ಪದ್ಧತಿಯ ಸಂವಿಧಾನದಲ್ಲಿಯ ತತ್ವಗಳು ಉಳಿದ ದೇಶದಂತೆ ಇಲ್ಲವೆ ಅದಕ್ಕಿಂತ ಉತ್ತಮವಾಗಿದೆ.

ಇನ್ನೊಂದು ರೀತಿ ವಾದವಿವಾದವನ್ನು ಬಹುತರವಾಗಿ ಒತ್ತಾಯ ಮಾಡಿದ್ದೀರಿ, ಮಾತನಾಡಿದ ಎಲ್ಲ ಸದಸ್ಯರ ಭಾಷಣವನ್ನು ನನಗೆ ಕೇಳಲು ಸಾಧ್ಯವಾಗಿಲ್ಲ. ಈ ಸದನವು ಪ್ರಜಾಪ್ರತಿನಿಧಿ ಸಂಸತ್ತು ಆಗಿರುವುದಿಲ್ಲ. ಯಾಕೆಂದರೆ, ಈ ಸದಸ್ಯರನ್ನು ವಯಸ್ಕ ಮತದಾರರು ಚುನಾಯಿಸಿರುವುದಿಲ್ಲ. ಬಹಳ ದೊಡ್ಡ ಸಂಖ್ಯೆಯ ಜನರು ಈ ಸಂಸತ್ತಿನಲ್ಲಿ ಪ್ರತಿನಿಧಿಸಿರುವುದಿಲ್ಲ. ಅದರ ಪರಿಣಾಮವಾಗಿ ಸಂಸತ್ತು ಸಂವಿಧಾನವನ್ನು ರಚಿಸುತ್ತಿರುವಾಗ ಈ ಸದನವೇ ಅಂತಿಮವಾದುದು ಎಂದು ಹೇಳಲು ಬರುವುದಿಲ್ಲ. ಅನುಚ್ಛೇದ ೩೦೪ರಲ್ಲಿ ಇದು ಪ್ರಸ್ತಾಪವಾಗಿದೆ. ಮಾನ್ಯರೆ, ಈ ಸಂಸತ್ತು ಜನ ಪ್ರಾತಿನಿಧ್ಯ ಸಂಸತ್ತು ಅಲ್ಲ. ಅಂದರೆ ಇವರನ್ನು ವಯಸ್ಕ ಮತದಾರರು ಚುನಾಯಿಸಿರುವುದಿಲ್ಲ. ಈ ವಾದವನ್ನು ನಾನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. ಆದರೆ ಮುಂದಿನ ವಾದವನ್ನು ಅದರ ಮೇಲಿಂದ ಊಹಿಸಬೇಕಾಗುತ್ತದೆ. ಅದನ್ನು ನಾನು ಒಪ್ಪಲು ಸಿದ್ಧನಿದ್ದೇನೆ. ಮುಂದಿನ ಊಹೆಯು ಯಾವುದನ್ನು ಹೇಳುತ್ತದೆಯೋ, ಅಂದರೆ (ವಾದಿಸಿದರೆ) ಈ ಸಂಸತ್ತಿನಲ್ಲಿ ವಯಸ್ಕ ಮತದಾರರಿಂದ ಆರಿಸಿ ಕಳುಹಿಸಿದ ಸದಸ್ಯರಿದ್ದರೆ ಆಗ ಅದಕ್ಕೆ ಹೆಚ್ಚಿನ ಘನತೆ ಹೆಚ್ಚಿನ ರಾಜಕೀಯ ತಿಳುವಳಿಕೆಯು ಇರುತ್ತಿತ್ತೆಂದು ನಾನು ಇದನ್ನು ಅಲ್ಲಗಳೆಯುತ್ತೇನೆ.

**ಶ್ರೀ ನಜೀರುದ್ದೀನ್ ಅಹ್ಮದ್:** ಇದು ಇನ್ನೂ ಕೆಟ್ಟುಹೋಗುತ್ತಿತ್ತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಇನ್ನಷ್ಟು ಕೆಡುವುದು ಸಹಜವಿದೆ ಎಂದು ನನ್ನ ಗೆಳೆಯರಾದ ಶ್ರೀ ನಜೀರುದ್ದೀನ್ ಅಹ್ಮದರು ಹೇಳಿದ ಅವರ ಹೇಳಿಕೆಗೆ ನನ್ನ ಸಹಮತವಿದೆ. ಅಧಿಕಾರ ಹಾಗೂ ಜ್ಞಾನ ಇವು ಎರಡೂ ಒಟ್ಟಿಗೆ ಸಾಗುವುದಿಲ್ಲ. ಎಷ್ಟೋ ಸಲ ಅವು ಒಂದಕ್ಕೊಂದು ಹೊಂದಿಕೊಂಡು ಹೋಗುವುದಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಸದನವು ಈಗ ಇದ್ದಂತೆ ಇದ್ದಲ್ಲಿ ಬಹುತರವಾಗಿ ಅಲ್ಪ ಪ್ರಮಾಣ ಹಾಗೂ ಅಪೇಕ್ಷಿತವಾದ ಜ್ಞಾನ ಹಾಗು ಮಾಹಿತಿಯು ಮುಂದಿನ ಸಂಸತ್ತಿಗೆ ದೊರೆಯಬಹುದು.

ಆದ್ದರಿಂದ ನಾನು ವಿನಯಪೂರ್ವಕ ಹೇಳುವುದೇನೆಂದರೆ, ಕರಡು ಸಮಿತಿಯವರು ರಚಿಸಿದ ಅನುಚ್ಛೇದವು ಈ ಸಂದರ್ಭದಲ್ಲಿ ಅತ್ಯುತ್ತಮವಾಗಿದೆ.

**ಮಾನ್ಯ ಸಭಾಧ್ಯಕ್ಷರು:** ನಾನು ತಿದ್ದುಪಡಿಗಳನ್ನು ಈಗ ಮತಕ್ಕೆ ಹಾಕುತ್ತಿದ್ದೇನೆ.

**(ತಿದ್ದುಪಡಿಗಳು ತಿರಸ್ಕೃತವಾದವು. ಡಾ. ಅಂಬೇಡ್ಕರ್ ಅವರ ತಿದ್ದುಪಡಿಯು ಸ್ವೀಕೃತವಾಯಿತು. ಅನುಚ್ಛೇದ ೩೦೪ ತಿದ್ದುಪಡಿಯಾದಂತೆ ಸಂವಿಧಾನಕ್ಕೆ ಸೇರಿಸಲಾಯಿತು.)**

**ಶ್ರೀ ಬ್ರಜೇಶ್ವರ್ ಪ್ರಸಾದ್:** ಮಾನ್ಯರೇ ಈಗ ವೇಳೆ ಏಳು ಗಂಟೆಯಾಗಿದೆ.

**ಶೇಟ್ ಗೋವಿಂದದಾಸ್:** ಇನ್ನೂ ಮಾಡುವುದು ಬಹಳವಿದೆ. ಅದನ್ನು ಮುಗಿಸುವುದು ಸಾಧ್ಯವಿಲ್ಲವೆನಿಸುತ್ತದೆ. ಆದ್ದರಿಂದ ನಾವು ಮತ್ತೆ ರಾತ್ರಿ ೯ ಗಂಟೆಗೆ ಕೂತು ೧೨ ಗಂಟೆಯವರೆಗೆ ಕೂಡೋಣ. ಇಲ್ಲವೆ ನಾಳೆ ಬೆಳಿಗ್ಗೆ ಕೂಡೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈಗ ನಮ್ಮ ಮುಂದೆ ಕೇವಲ ಮೂರು ಅನುಚ್ಛೇದಗಳಿವೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ನಮ್ಮ ಮುಂದೆ ಈಗ ಮೂರು ಅನುಚ್ಛೇದಗಳಿದ್ದು, ಅದರಲ್ಲಿ ಎರಡು ಔಪಚಾರಿಕ ರೀತಿಯವು ಇವೆ.

**ಮಾನ್ಯ ಸಭಾಧ್ಯಕ್ಷರು:** ಈಗ ಮುಂದೂಡುವುದು ತುಂಬಾ ಅನುಕೂಲ. ಏಕೆಂದರೆ ಪುನಃ ಸದನಕ್ಕೆ ಬರುವುದು ಕಷ್ಟಕರ. ಆದ್ದರಿಂದ ನಾವು ಇಂದು ಅದನ್ನು ಮುಗಿಸುವವರೆಗೆ ಕೂಡೋಣ ಇಲ್ಲವೆ ನಾಳೆ ಮುಂಜಾನೆ ಕೂಡೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಮಗೆ ಈಗ ೨–೩ ಅನುಚ್ಛೇದಗಳಿವೆ. ಅವು ವಿವಾದಾತ್ಮಕವಾದವು ಆಗಿರುವುದಿಲ್ಲ. ಅವುಗಳಿಗೆ ಅರ್ಧ ಗಂಟೆ ಸಹ ತೆಗೆದುಕೊಳ್ಳುವುದಿಲ್ಲ.

**ಶೇಟ್ ಗೋವಿಂದದಾಸ್:** ಒಂದು ತಾಸಿನಲ್ಲಿ ಮುಗಿಸುವುದು ಸಾಧ್ಯವಿದೆ ಎಂದು ನನಗೆ ಅನಿಸುವುದಿಲ್ಲ. ಅನುಚ್ಛೇದದಲ್ಲಿ ದೇಶದ ಹೆಸರು, ಇದನ್ನು ಗೊತ್ತುಪಡಿಸಬೇಕಾಗಿ ಅನುಚ್ಛೇದ ೧ರಲ್ಲಿಯದನ್ನು ನಿರ್ಧರಿಸತಕ್ಕದ್ದು ಇರುತ್ತದೆ. ಇವೆಲ್ಲವುಗಳನ್ನು ಮುಗಿಸುವುದು ಸಾಧ್ಯವಿಲ್ಲವೆಂದು ನನಗೆ ಅನಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಸದನದ ಬಹು ಸಂಖ್ಯೆಯ ಸದಸ್ಯರು ನಾವು ಚರ್ಚೆಯನ್ನು ಮುಂದುವರೆಸೋಣ ಅನ್ನುವರು ನಾವು ಹೇಳುವುದು ಸರಿಯೆ?

ಅನೇಕ ಮಾನ್ಯ ಸದಸ್ಯರು ಅಹುದು ಮಾನ್ಯರೇ ಅಂದರು.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ನಾವು ಕೆಲಸವನ್ನು ಮುಗಿಸಿಬಿಡೋಣ.

**ಶ್ರೀ ನಜಿರುದ್ದೀನ್ ಅಹ್ಮದ್:** ಹಾಗೆ ಮಾಡಲಿಕ್ಕೆ ಬರುವುದಿಲ್ಲ. ಇನ್ನೂ ಅನುಚ್ಛೇದ ೧ ಇದೆ.

ಡಾ. ಅಂಬೇಡ್ಕರ್ ಅವರು ಸಿಹಿಯನ್ನು ವ್ಯವಸ್ಥೆ ಮಾಡದಿದ್ದರೆ, ನಾಮಕರಣ ಸಮಾರಂಭವನ್ನು ಇಂದು ಮಾಡತಕ್ಕದ್ದಲ್ಲ.

* * *

## ವಿಧಿ ೯೯

**ಮಾನ್ಯ ಸಭಾಧ್ಯಕ್ಷರು:** ನಾವು ಈಗ ಅನುಚ್ಛೇದ ೯೯ ಮತ್ತು ೧೮೪ ಇವುಗಳನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತಿದ್ದೇನೆ.

"ಅನುಚ್ಛೇದ ೯೯ರ ಬದಲು ಕೆಳಗಣ ೯ನೆಯ ಅನುಚ್ಛೇದವನ್ನು ಸೇರಿಸತಕ್ಕದ್ದು. ಉಪಯೋಗಿಸುವ ಭಾಷೆಯು.

೧೯ (೧) ಭಾಗ ಈ ಸಂವಿಧಾನದ ಭಾಗ ೧೪ರಲ್ಲಿ ಏನೇ ಹೇಳಿದ್ದರೂ ಅನುಚ್ಛೇದ ೩೦೪ (ಎಫ್) ಇದಕ್ಕೆ ಒಳಪಟ್ಟು ಸಂಸದೀಯ ವ್ಯವಹರಣೆಗಳನ್ನು ಹಿಂದಿ ಇಲ್ಲ ಇಂಗ್ಲೀಷ್‌ನಲ್ಲಿ ನಡೆಯಿಸಬಹುದು.

ಪರಂತು ರಾಜ್ಯಸಭೆಯ ಛೇರ್‌ಮನ್ ಇಲ್ಲವೆ ಸಂಸತ್ತಿನ ಅಧ್ಯಕ್ಷ, ಇಲ್ಲವೆ ಯಾವುದೇ ವ್ಯಕ್ತಿಯು ಆ ಹುದ್ದೆಯಲ್ಲಿರುವ ಯಾರೇ ಇರಲಿ, ಯಾವುದೇ ಸದಸ್ಯನು ಆ ಎರಡೂ ಭಾಷೆಗಳಲ್ಲಿ ಸಾಕಷ್ಟು ಚೆನ್ನಾಗಿ ಹೇಳಲು ಬಾರದಿದ್ದರೆ, ಅಂತಹ ಸದಸ್ಯನು ತನ್ನ ಮಾತೃ ಭಾಷೆಯಲ್ಲಿ ಸಂಸತ್ತಿನಲ್ಲಿ ಮಾತನಾಡಬಹುದು.

(೨) ಸಂಸತ್ತು ಕಾನೂನಿನ ಮೂಲಕ ಮಾಡದ ಹೊರತು ಈ ಅನುಚ್ಛೇದವು ಸಂಸತ್ತು ಅಸ್ತಿತ್ವಕ್ಕೆ ಬಂದ ೧೫ ವರ್ಷಗಳವರೆಗೆ ಅದಕ್ಕೆ ಪರಿಣಾಮವಿದೆ. ಅದರಲ್ಲಿಯ ಇಂಗ್ಲೀಷ್ ಪದಗಳನ್ನು ಬಿಟ್ಟುಕೊಡಲಾಗಿದೆ. ನಾನು ಈಗ ಇನ್ನೊಂದನ್ನೂ ಸಹ ಮಂಡಿಸುತ್ತೇನೆ. ಇದು ಅದಕ್ಕೆ ಅನುರೂಪವಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಇವೆರಡರ ವಾದ–ವಿವಾದವು ಒಂದೇ ರೀತಿಯದು ಎಂದು ನಾನು ಭಾವಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವು ಎಲ್ಲರಲ್ಲೂ ಮುಖ್ಯವಾಗಿ ಒಂದೇ ಆಗಿವೆ.

**ಮಾನ್ಯ ಸಭಾಧ್ಯಕ್ಷರು:** ಅವುಗಳನ್ನು ನಾನು ಬೇರೆ ಬೇರೆಯಾಗಿ ಮತಕ್ಕೆ ಹಾಕುವೆನು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಮ್ಮ ಚರ್ಚೆಯು ಒಂದೇ ಆಗಿರುತ್ತದೆ. ಚರ್ಚೆಯನ್ನು ಕುರಿತು ವಾದ ವಿವಾದ ಮಾತ್ರ ಒಂದೇ ಆಗಿದೆ.

ಮಾನ್ಯರೆ ನಾನು ಮಂಡಿಸುತ್ತೇನೆ.

**ರಾಜ್ಯ ವಿಧಾನಸಭೆಯಲ್ಲಿ ಬಳಸುವ ಭಾಷೆ.**

"ಅನುಚ್ಛೇದ ೧೮೪ರ ಬದಲು ಕೆಳಗಣ ಅನುಚ್ಛೇದವನ್ನು ಸೇರಿಸಬೇಕು.

೧೮೪(೧) ಈ ಸಂವಿಧಾನದ ಭಾಗ ೧೪ಎ ದಲ್ಲಿ ಏನೇ ಹೇಳಿದ್ದರೂ ಅದು ಅನುಚ್ಛೇದ ೩೦೧ (ಎಫ್) ಇದಕ್ಕೆ ಒಳಪಟ್ಟಿದ್ದು, ರಾಜ್ಯದ ವಿಧಾನಸಭೆಯ ಕಲಾಪಗಳನ್ನು ವ್ಯವಹರಿಸುವ ಭಾಷೆಯು ಆ ರಾಜ್ಯದ ಭಾಷೆ ಇಲ್ಲವೆ ಹಿಂದಿ ಇಲ್ಲವೆ ಇಂಗ್ಲೀಷ್ ಆಗಿರುವುದು.

ಪರಂತು ವಿಧಾನಸಭೆಯ ಅಧ್ಯಕ್ಷ ಇಲ್ಲವೆ ವಿಧಾನಪರಿಷತ್ ಛೇರ್‌ಮನ್ ಇಲ್ಲವೇ ಆ ಹುದ್ದೆಯಲ್ಲಿರುವ ವ್ಯಕ್ತಿಯು ಯಾರೇ ಇರಲಿ ಅಂಥವರು ಯಾವುದೇ ಸದಸ್ಯನಿಗೆ ಮೇಲಿನ ಭಾಷೆಯಲ್ಲಿ ಚೆನ್ನಾಗಿ ಮಾತನಾಡಲು ಬರದಿದ್ದರೆ, ಅವನಿಗೆ ಅವನ ಮಾತೃಭಾಷೆಯಲ್ಲಿ ಮಾತನಾಡಲು ಅನುವು ಮಾಡಿಕೊಡಬೇಕು.

(೨) ರಾಜ್ಯದ ವಿಧಾನಸಭೆಯು ವ್ಯವಸ್ಥೆಯನ್ನು ಮಾಡದ ಹೊರತು ಈ ಸಂವಿಧಾನದಲ್ಲಿ ಜಾರಿಯಲ್ಲಿ ಬಂದ ೧೫ ವರ್ಷಗಳವರೆಗೆ ಪರಿಣಾಮಕಾರಿಯಾಗಿ ಈ ಪದಗಳಿಗೆ ಅರ್ಥವಿರುತ್ತದೆ. ಅದರಲ್ಲಿ ಇಂಗ್ಲೀಷ್ ಭಾಷೆಯನ್ನು ಅಲ್ಲಿಂದ ಬಿಟ್ಟುಬಿಡುವುದೆಂದು ಅರ್ಥೈಸಬೇಕು.

ಮಾನ್ಯರೆ ಇದಕ್ಕೆ ಯಾವ ವಿವರಣೆಯೂ ಬೇಕಾಗಿಲ್ಲ. ಅನುಚ್ಛೇದಗಳು ಸ್ವಯಂ ಸ್ಪಷ್ಟ ಇವೆ.

* * *

**ಶ್ರೀ ನಜೀರುದ್ದೀನ್ ಅಹ್ಮದ್:** ನೀವು ಪ್ರಾದೇಶಿಕ ಭಾಷೆ ಬೆಳವಣಿಗೆಗೆ ಆಸ್ಪದ ಕೊಡದಿದ್ದರೆ, ಅವುಗಳ ಕೊಡುಗೆ ಕಛೇರಿಯ ಭಾಷೆ–ಅಧಿಕೃತ ಭಾಷೆಗೆ ತುಂಬಾ ಅಡಚಣೆಯಾಗುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಅದನ್ನು ತಿದ್ದುಪಡಿಯಲ್ಲಿ ಪ್ರಸ್ತಾಪಿಸಿಲ್ಲವೇ?

**ಶ್ರೀ ನಜೀರುದ್ದೀನ್ ಅಹ್ಮದ್:** ನಾನು ಕರಡು ಸಮಿತಿಗೆ ಅದನ್ನು ಪರಿಗಣಿಸಲು ಕೇಳಿಕೊಳ್ಳುತ್ತೇನೆ.

ಇದು ಕೇವಲ ಒಂದು ಸೂಚನೆ ಆಗಿದೆ ಇದು ಹೇಗಾದರೂ ಅದರಲ್ಲಿ ಸೇರಬೇಕು. ಇದು ಒಂದು ಕೇವಲ ಮಾರ್ಮಿಕ ಭಾವನೆಯಾಗಿದೆ. ಯಾಕೆಂದರೆ ಇದನ್ನು ನೀವು ಸ್ವೀಕರಿಸುವುದಿಲ್ಲ.

**ಪಂಡಿತ್ ಲಕ್ಷ್ಮೀಕಾಂತ್ ಮೈತ್ರಾ:** ಭಾಷೆಯ ಮೇಲೆ ಚರ್ಚೆಗೆ ಅನುವು ಮಾಡಿಕೊಡುವಿರಾ? ಭಾಷೆಯ ಸಂಪೂರ್ಣ ಚರ್ಚೆ ಸದನದ ಮುಂದೆ ಬರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇಲ್ಲ, ಈ ವಿಷಯವನ್ನು ಚರ್ಚಿಸಿ ನಿರ್ಧರಿಸಲಾಗಿದೆ.

(ಡಾ. ಬಿ.ಆರ್. ಅಂಬೇಡ್ಕರರ ತಿದ್ದುಪಡಿಯು ಸ್ವೀಕೃತವಾಯಿತು.)

**(ಅನುಚ್ಛೇದ ೯೯ ಮತ್ತು ೧೮೪ ಇವುಗಳನ್ನು ತಿದ್ದುಪಡಿ ಮಾಡಿ ಸಂವಿಧಾನಕ್ಕೆ ಸೇರಿಸಲಾಯಿತು.)**

* * *

# ವಿಧಿ ೧

**ಮಾನ್ಯ ಅಧ್ಯಕ್ಷರು:** ಇನ್ನೊಂದು ಅನುಚ್ಛೇದ ೧ ಇದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ತಿದ್ದುಪಡಿ ಸಂಖ್ಯೆ ೧೩೦ನ್ನು ನನ್ನ ತಿದ್ದುಪಡಿ ಸಂಖ್ಯೆ ೧೯೭ರಲ್ಲಿ ಸೇರಿಸುತ್ತೇನೆ. ಇದರ ಶಬ್ದಗಳಲ್ಲಿ ಬದಲಾವಣೆಯು ಸ್ವಲ್ಪ ಉಪಕಲಂ (೨) ಆಗುತ್ತದೆ.

ಮಾನ್ಯರೇ ನಾನು ಮಂಡಿಸುತ್ತೇನೆ.

"ಅನುಚ್ಛೇದ ೧ರ ಖಂಡ (೧) ಮತ್ತು ೨ ಇವುಗಳಿಗೆ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು.

(೧) ಇಂಡಿಯಾ ಎಂದರೆ ಭಾರತ ಇದು ಸಂಯುಕ್ತ ರಾಜ್ಯಗಳ ಸರಕಾರ.

(೨) ರಾಜ್ಯಗಳು ಮತ್ತು ಕ್ಷೇತ್ರಗಳು ಅಂದರೆ ರಾಜ್ಯಗಳು ಹಾಗೂ ಅವುಗಳ ಕ್ಷೇತ್ರಗಳು ಸದ್ಯಕ್ಕೆ ಅವುಗಳನ್ನು ಭಾಗ ೧, ೨ ಹಾಗೂ ೩ರಲ್ಲಿ ಪರಿಶಿಷ್ಟ ೧ರಲ್ಲಿ ಕಾಣಿಸಿದಂತೆ.

**ಮಾನ್ಯ ಅಧ್ಯಕ್ಷರು:** ನಾನು ಈಗ ಸದನವನ್ನು ಮುಂದೂಡಿದರೆ ಅದನ್ನು ಮುಂದಿನ ಅಧಿವೇಶನದವರೆಗೆ ಮುಂದೂಡೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಇದನ್ನು ಸ್ವಲ್ಪವೇ ವೇಳೆಯಲ್ಲಿ ಮುಗಿಸಲಾಗುವುದು.

**ಮಾನ್ಯ ಅಧ್ಯಕ್ಷರು:** ನಾವು ಏನು ಮಾಡೋಣ? ಬೇಕಾದರೆ, ಈಗ ಸದಸ್ಯರು ತಡೆಯಬಹುದು.

೮೬ ಸದಸ್ಯರು ಹಾಜರಿರುವರು. ನಮ್ಮ ನಿಯಮದಲ್ಲಿ ೧/೩ದಷ್ಟು ಸಂಸದರು ಹಾಜರಿದ್ದರೆ ಕೋರಂ ಆಗುತ್ತದೆ. ಆಗ ೮೬ ಜನ ಸದಸ್ಯರಿರುತ್ತಾರೆ. ಕೋರಂ ಆಗಲು ೯೭ ಜನ ಸದಸ್ಯರು ಇರಬೇಕಾಗುತ್ತದೆ.

ಈಗ ಕೋರಂ ಇರುವುದಿಲ್ಲ. ಸದನವನ್ನು ಮುಂದೂಡದೆ ಬೇರೆ ಮಾರ್ಗವೇ ಇಲ್ಲ.

**ಒಬ್ಬ ಸನ್ಮಾನ್ಯ ಸದಸ್ಯ:** ಈ ಅನುಚ್ಛೇದವು ಮುಂದಿನ ಅಧಿವೇಶನಕ್ಕೆ ಹೋಗಲು.....

**ಇನ್ನೊಬ್ಬ ಸನ್ಮಾನ್ಯ ಸದಸ್ಯ:** ನಾವು ನಾಳೆ ದಿನ ಕೊಡೋಣ.

**ಮತ್ತೊಬ್ಬ ಸನ್ಮಾನ್ಯ ಸದಸ್ಯ:** ನಾಳೆಯೂ ಕೋರಂ ಆಗುವ ಭರವಸೆ ಇರುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೊರಗೆ ಇರುವ ಸದಸ್ಯರನ್ನು ನಾವು ಒಳಗೆ ಕರೆದು ತರೋಣ. ಗಂಟೆಯನ್ನು ಬಾರಿಸೋಣ.

* * *

**ಶ್ರೀ ಎಚ್. ವಿ. ಕಾಮತ್:** ಭಾರತ ಎಂಬ ಹೆಸರು ದುಷ್ಯಂತ ಮತ್ತು ಶಕುಂತಲೆಯ ಮಗ ಇವರಿಂದ ಬಂದುವೆಂದು ಹೇಳುತ್ತಾರೆ. ಅವನನ್ನು ಸರ್ವದಮನನಂತಲೂ, ಎಲ್ಲವನ್ನೂ ಜಯಿಸಿದವನು ಮತ್ತು ತನ್ನ ಸಾರ್ವಭೌಮತ್ವವನ್ನು ಈ ಭೂಮಿಯಲ್ಲಿ ಸ್ಥಾಪಿಸಿ ರಾಜ್ಯ ಕಟ್ಟಿದನು. ಅದರಿಂದ ಈ ದೇಶಕ್ಕೆ ಭಾರತವೆಂಬ ಹೆಸರು ಬಂದಿತು. ಇನ್ನೊಂದು ಪಂಡಿತವರ್ಗದ ಸಂಶೋಧನೆಯಿಂದ ಈ ಭರತನು ವೇದದ ಕಾಲಕ್ಕೆ ಇದ್ದನೆಂದು ಹೇಳಲಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬಾಂಬೆ, ಜನರಲ್): ಇದೆಲ್ಲವನ್ನು ಗುರುತಿಸುವುದು ಅವಶ್ಯ ಇದೆಯೇ? ನನಗೆ ಇದರ ಉದ್ದೇಶವು ತಿಳಿಯದಾಗಿದೆ. ಆದರೆ ಮತ್ತೊಂದು ಸ್ಥಳದಲ್ಲಿ ಇದು ತುಂಬಾ ರೋಚಕವಾಗಬಹುದು. ನನ್ನ ಗೆಳೆಯರು 'ಭಾರತ' ಈ ಪದವನ್ನು ಸ್ವೀಕರಿಸುತ್ತಾರೆ. ಒಂದೇ ವಿಷಯವೆಂದರೆ ಅವರು ಬದಲಿ ಪದವಿದೆ ಅದನ್ನು ಬಳಸುತ್ತಾರೆ. ಅದು ನನಗೆ ತುಂಬಾ ವಿಷಾದವೆನಿಸುತ್ತದೆ. ಆದರೆ ಸಂಸತ್ತಿಗೆ ಸೀಮಿತ ಅವಧಿಯು ಇರುವುದರ ದೃಷ್ಟಿಯಿಂದ ಸದಸ್ಯರಿಗೆ ಸಮಯದ ವಿವೇಕ ಇರಲಿಕ್ಕೇಬೇಕು.

**ಶ್ರೀ ಎಚ್. ವಿ. ಕಾಮತ್:** ಸದನದ ವ್ಯವಹರಣೆಗಳನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರು ನಡೆಯಿಸಬೇಕೆಂದು ನನಗೆ ಅನಿಸುವುದಿಲ್ಲ.

**ಮಾನ್ಯ ಅಧ್ಯಕ್ಷರು:** ನೀವು ಯಾವ ತಿದ್ದುಪಡಿಯನ್ನು ಮಂಡಿಸುತ್ತಿದ್ದೀರಿ?

* * *

**ಮಾನ್ಯ ಸಭಾಧ್ಯಕ್ಷರು:** ನೀವು ಒಂದನ್ನು ಮಂಡಿಸಿರಿ, ನಿಮಗೆ ಎರಡನ್ನು ಮಂಡಿಸಲು ಪರವಾನಗಿ ಕೊಟ್ಟಿದ್ದೇನೆ. ಆದರೆ ಎರಡೂ ತಿದ್ದುಪಡಿಗಳು ಒಂದಕ್ಕೊಂದು ವಿರುದ್ಧವಾಗಿದೆ.

**ಶ್ರೀ ಎಚ್. ವಿ. ಕಾಮತ್:** ಮಾನ್ಯರೆ, ಅವು ಒಂದಕ್ಕೊಂದು ವಿರುದ್ಧವಾಗಿದೆಯೇ? ಅವು ಒಂದಕ್ಕೊಂದು ವಿರುದ್ಧವಾಗಿವೆಯೆಂದು ನೀವು ಹೇಳಿದರೆ ನನಗೆ ಹೇಳುವುದೇನೂ ಇಲ್ಲ.

**ಮಾನ್ಯ ಅಧ್ಯಕ್ಷರು:** ಇದರಲ್ಲಿ ಒಂದನ್ನು ಸ್ವೀಕರಿಸಿದರೆ ಮತ್ತೊಂದನ್ನು ತಿರಸ್ಕರಿಸಬೇಕಾಗುತ್ತದೆ.

**ಶ್ರೀ ಎಚ್. ವಿ. ಕಾಮತ್:** ನನ್ನ ಉದ್ದೇಶ ಒಂದನ್ನು ಸ್ವೀಕರಿಸದಿದ್ದರೆ ಇನ್ನೊಂದನ್ನು ಸ್ವೀಕರಿಸಬೇಕೆಂಬುದಿತ್ತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದರ ಬಗೆಗೆ ಇಷ್ಟೊಂದು ಮಾತಿನ ಚಕಮಕಿ ಏಕೆ?

**ಶ್ರೀ ಸಂಕರರಾಮದೇವ** (ಬಾಂಬೆ, ಜನರಲ್): ಅಧ್ಯಕ್ಷರ ಸಂಗಡ ವಾದ ವಿವಾದವಿರಬಾರದು.

**ಶ್ರೀ ಎಚ್. ವಿ. ಕಾಮತ್:** ಶ್ರೀ ಶಂಕರರಾಮದೇವ ಅವರೇ ನನಗೆ ನಿಯಮಾವಳಿಗಳು ಗೊತ್ತು.

**ಮಾನ್ಯ ಅಧ್ಯಕ್ಷರು:** ನೀವು ಒಂದನ್ನು ಮಂಡಿಸಿರಿ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ರಾಜ್ಯಗಳ ಮತ್ತು ಪ್ರಾಂತ್ಯಗಳ ಪುನರ್ ರಚನೆಗೆ ಅನುಚ್ಛೇದ ೩ರ ಉಪಬಂಧಗಳನ್ನು ಬದಲಾಯಿಸಲು ಪ್ರಸ್ತಾವನೆಯನ್ನು ಮಾಡಲಾಗಿದೆ. ಸಂವಿಧಾನದ ಭಾಗ ೧ ಮತ್ತು ೩ರಲ್ಲಿಯ ರಾಜ್ಯಗಳನ್ನು ಒಂದೇ ಮಟ್ಟಕ್ಕೆ ತಂದಂತಾಗುತ್ತದೆ. ಈಗ ಈ ಅನುಚ್ಛೇದಕ್ಕೆ ತಿದ್ದುಪಡಿಯು ಇದ್ದು, ಅದರಲ್ಲಿಯ ಅಂತರವನ್ನು ಅದರಿಂದ ತೆಗೆದುಹಾಕಿದಂತಾಗುತ್ತದೆ. ಹಾಗೂ ಅದು ಇಲ್ಲದಂತಾಗುತ್ತದೆ.

**ಶ್ರೀ ಬಿ.ಎಂ. ಗುಪ್ತ:** ಒಳ್ಳೆಯದು, ನಾನು ಈ ಮೊದಲು ಹೇಳಿದಂತೆ ಕೇಂದ್ರವನ್ನು ಬಲಿಷ್ಠಗೊಳಿಸುವಲ್ಲಿ ನನಗೆ ಯಾವುದೇ ವಿರೋಧ ಇರುವುದಿಲ್ಲ. ಆದರೆ ಅದೇ ವೇಳೆಗೆ ಭಾಗಗಳಿಗೆ ವೈಭವಯುತ ಹೆಸರನ್ನು ಕೊಟ್ಟಿದ್ದೇವೆ. ನಾವು ರಾಜ್ಯದ ಅಧಿಕಾರವನ್ನು ತೆಗೆದು ಹಾಕುತ್ತಿದ್ದೇವೆ ಮತ್ತು ಅವುಗಳನ್ನು ಕೇಂದ್ರ ಇಲ್ಲವೆ

ಸಮವರ್ತಿ ಲಿಸ್ಟಿನಲ್ಲಿ ಇದಕ್ಕೆ ರಾಜ್ಯವೆಂದು ಪದವನ್ನು ಸ್ವೀಕರಿಸಿದ್ದೇವೆ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಈ ಅನುಚ್ಛೇದವು ಸದನದ ಮುಂದೆ ಬಂದಾಗ ಸುದೀರ್ಘವಾಗಿ ಚರ್ಚಿಸಿದ್ದೇವೆ. ಅದನ್ನು ಚರ್ಚೆಯ ಕೊನೆಯಲ್ಲಿ ಅದರ ಬಗೆಗೆ ಯಾವುದೇ ನಿರ್ಣಯ ತೆಗೆದುಕೊಳ್ಳದೆ ಹಿಂದಕ್ಕೆ ಇಡಲಾಯಿತು. ಯಾಕೆಂದರೆ ಆಗ 'ಭಾರತ' ಪದವು 'ಇಂಡಿಯಾ' ಈ ಪದದ ನಂತರ ಬಳಸಬೇಕೆ? ಇಲ್ಲವೆ ಬೇರೆ ಯಾವುದಾದರೂ ಪದ ಬಳಸಬೇಕೆಂಬುದರ ಬಗೆಗೆ ನಿರ್ಣಯ ತೆಗೆದುಕೊಳ್ಳಲಾಗಲಿಲ್ಲ. ಆ ಸಂಪೂರ್ಣ ಅನುಚ್ಛೇದ ಒಕ್ಕೂಟ ಎಂಬ ಪದವನ್ನು ಒಳಗೊಂಡಂತೆ ನನಗೆ ಸರಿಯಾಗಿ ನೆನಪು ಇದ್ದಂತೆ, ಬಹಳಷ್ಟು ಸುದೀರ್ಘವಾಗಿ ಚರ್ಚಿಸಿದೆವು. ಈಗ ನಾವು ಚರ್ಚಿಸುತ್ತಿರುವುದು ಕೇವಲ ಭಾರತ. ಈ ಪದವು ಇಂಡಿಯಾ ಈ ಪದದ ನಂತರ ಬರಬೇಕು ಎಂಬುದು ಮಾತ್ರವಿದೆ. ಅನುಚ್ಛೇದದ ಉಳಿದ ಭಾಗವನ್ನು ಸುದೀರ್ಘವಾಗಿ ಚರ್ಚಿಸಿದ್ದೇವೆ.

**ಶ್ರೀ ಬಿ. ಎಂ. ಗುಪ್ತ:** ನಾವು ಈಗಾಗಲೇ ಮಾಡಿದ್ದನ್ನು ಬಿಟ್ಟು ಬೇರೆ ರೀತಿಯಿಂದ ಹಿಂದಕ್ಕೆ ಹೋಗುವುದು ಬೇಡವೆಂದು ಹೇಳುವುದಿಲ್ಲ. ನಾನು ಇದರ ಪರಿಣಾಮವನ್ನು ಮತ್ತು ಅದರಲ್ಲಿರುವ ತೊಡಕುಗಳನ್ನು ಮಾತ್ರ ಎತ್ತಿ ತೋರಿಸುತ್ತಿದ್ದೇನೆ.

**ಶ್ರೀ ಕಮಲಾಪತಿ ತ್ರಿಪಾಠಿ:** ನಾವು ಭಾರತ ಈ ಪದವನ್ನು ಉಚ್ಚರಿಸುವಾಗ ಶ್ರೀ ಶಂಕರಾಚಾರ್ಯರ ನೆನಪು ಆಗುತ್ತದೆ. ಅವರು ಜಗತ್ತಿಗೆ ಹೊಸ ದೃಷ್ಟಿಯನ್ನು ನೀಡಿದರು, ಈ ಪದವನ್ನು ಉಚ್ಚರಿಸಿದಾಗ ನಮಗೆ ಶ್ರೀ ರಾಮಚಂದ್ರನ ಬಲಾಢ್ಯವಾದ ಆಯುಧಗಳು ನೆನಪಾಗಿ ಶ್ರೀ ರಾಮಚಂದ್ರನು ಹಿಮಾಲಯ ಹೊರಡಿಸಿದ ಬಿಲ್ಲಿನ ಎಡೆಯ ಪ್ರತಿಧ್ವನಿಯು ಹಿಮಾಲಯದ ಮೂಲಕ ಹೊರಡುತ್ತದೆ. ಅದು ಈ ಭೂಮಿ ಹಾಗೂ ಸ್ವರ್ಗವನ್ನು ಆವರಿಸುತ್ತದೆ. ಈ ಪದವನ್ನು ಉಚ್ಚರಿಸಿದಾಗ ನಮಗೆ ಶ್ರೀ ಕೃಷ್ಣನ ಚಕ್ರವು ಭಾರತದಲ್ಲಿ ಕ್ಷತ್ರಿಯರು ಕಟ್ಟಿದ ಭಯಾನಕ ಅಧಿಪತ್ಯವನ್ನು ನಾಶಪಡಿಸಿ ಆ ಹೊರೆಯಿಂದ ಭೂಮಿಯನ್ನು ಮುಕ್ತಗೊಳಿಸಿದುದು ನಮ್ಮ ಸ್ಮರಣೆಗೆ ಬರುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದೆಲ್ಲವೂ ಅವಶ್ಯವೆ?

**ಕಮಲಾಪತಿ ತ್ರಿಪಾಠಿ:** ಮಾನ್ಯರೆ, ನೀವು ಅವಶ್ಯ ಇರುವುದನ್ನು ಮಾತ್ರ ಕೇಳಿರೆಂದು ಹೇಳುತ್ತಿದ್ದೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇನ್ನೂ ಬಹಳ ಕೆಲಸ ಮಾಡುವುದಿದೆ.

**ಶ್ರೀ ಕಮಲಾಪತಿ ತ್ರಿಪಾಠಿ:** ಈ ಪದವನ್ನು ನಾವು ಉಚ್ಚರಿಸುವಾಗ ನಮಗೆ ಮಾನವ ಜನಾಂಗಕ್ಕೆ ಹೊಸ ಸಂದೇಶವನ್ನು ಕೊಟ್ಟಂತಹ ಬಾಪೂಜಿಯವರ ನೆನಪಾಗುತ್ತದೆ.

ಈ ಪದವನ್ನು ಬಳಸಿದ್ದಕ್ಕಾಗಿ ನನಗೆ ಸಂತೋಷವಾಗಿದೆ. ಅದಕ್ಕಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಅಭಿನಂದಿಸುತ್ತೇವೆ. ಶ್ರೀ ಕಾಮತ್ ಅವರು ತಂದ ತಿದ್ದುಪಡಿಯಾದ 'ಭಾರತ' ಪದವು ಇಂಗ್ಲೀಷ್ ಭಾಷೆಯಲ್ಲಿ ಪರಿಚಿತವಿರುವ 'ಇಂಡಿಯಾ' ಎಂಬ ತಿದ್ದುಪಡಿಯನ್ನು ಅವರು ಸ್ವೀಕರಿಸಿದ್ದರೆ ಅದು ಇನ್ನೂ ಹೆಚ್ಚು ಸಮಂಜಸವಾಗುತ್ತಿತ್ತು.

# ವಿಧಿ ೩೦೬

**ಮಾನ್ಯ ಸಭಾಧ್ಯಕ್ಷರು:** ನಾವು ಈಗ ತಾತ್ಕಾಲಿಕವಾದ ವಿಧಿ ೩೦೬ ಇದರ ಚರ್ಚೆಯನ್ನು ಕೈಗೆತ್ತಿ ಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬಾಂಬೆ, ಜನರಲ್): ಮಾನ್ಯರೆ, ನಾನು ಈಗ ಮಂಡಿಸುತ್ತೇನೆ. ವಿಧಿ ೩೦೬ರ ಉಪಖಂಡ (ಎ) (ಬಿ) ಮತ್ತು (ಕೆ) ಇವುಗಳ ಬದಲು ಕೆಳಗಿನದನ್ನು ಸೇರಿಸಬೇಕು.

(ಎ) ರಾಜ್ಯದಲ್ಲಿಯ ವ್ಯಾಪಾರ ಮತ್ತು ವಾಣಿಜ್ಯ ಮತ್ತು ಉತ್ಪಾದನೆ ಮತ್ತು ಪೂರೈಕೆ ಮತ್ತು ಹಂಚಿಕೆ, ಅರಳಿ ಮತ್ತು ಉಣ್ಣೆ, ನೂಲಿನ ಬಟ್ಟೆಗಳು ಬತ್ತಿ, ಜಿನ್ನಿಂಗ ಮಾಡಿದ ಹತ್ತಿ ಒಳಗೊಂಡು, ಜಿನ್ ಮಾಡದೆ ಇದ್ದ ಹತ್ತಿ ಇಲ್ಲವೆ ಅರಳಿ (ಕಾಪಸ) ಹತ್ತಿ ಕಾಳು, ಪೇಪರು ಸುದ್ದಿಪತ್ರಿಕೆ ಪ್ರಕಟಿಸುವ ಪೇಪರನ್ನು ಒಳಗೊಂಡ, ಆಹಾರ ಸಾಮಗ್ರಿಗಳು, ತಿನ್ನುವ ಎಣ್ಣೆಯನ್ನು ಒಳಗೊಂಡು, ಕಲ್ಲಿದ್ದಲು ಕೋಕ್ ಮತ್ತು ಕಲ್ಲಿದ್ದಲು ಇದರಿಂದ ತೆಗೆಯಬಹುದಾದ ಇತರ ವಸ್ತುಗಳು ಕಬ್ಬಿಣ ಉಕ್ಕು ಮೈಕಾ;

(ಬಿ) ಖಂಡ (ಎ)ದಲ್ಲಿ ಕಾಣಿಸಿದ ಯಾವುದೇ ವಿಷಯದ ಬಗೆಗೆ ಕಾನೂನಿನ ವಿರುದ್ಧ ಮಾಡಿದ ಗುನ್ಹೆಗಳ ಅಧಿಕಾರ ವ್ಯಾಪ್ತಿಯು ಸುಪ್ರೀಂ ಕೋರ್ಟನ್ನು ಹೊರತುಪಡಿಸಿ ಈ ವಿಷಯ ಕುರಿತು ಮತ್ತು ನ್ಯಾಯಾಲಯದಲ್ಲಿ ತೆಗೆದುಕೊಂಡ ನ್ಯಾಯಾಲಯ ಶುಲ್ಕವನ್ನು ಒಂದೇ ತಿದ್ದುಪಡಿಯು ಈ ಮೂಲ ಅನುಚ್ಛೇದ ೩೦೬ರಲ್ಲಿ ಇರುವುದೆಂದರೆ ಇವು ಉಪಖಂಡ (ಎ) ಇದನ್ನು ಕೈ ಬಿಡಲು ಪ್ರಸ್ತಾಪಿಸಲಾಗಿದೆ, ಪೆಟ್ರೋಲು ಮತ್ತು ಪೆಟ್ರೋಲಿಯಂದ ಸರಕುಗಳನ್ನು ವಾಹನಗಳನ್ನು ಕೈಬಿಡಲಾಗಿದೆ. ಯಾಕೆ ಈ ಉಪಖಂಡದಿಂದ ಅವುಗಳನ್ನು ಯಾಕೆ ಕೈ ಬಿಡಲಾಗಿದೆ ಎಂದರೆ ಈ ವಿಷಯವನ್ನು ಪರಿಶಿಷ್ಟ ಏಳರ ಪಟ್ಟಿ ೧ರಲ್ಲಿ ಸೇರಿಸಲಾಗಿದೆ. ಯಂತ್ರದಿಂದ ಎಳೆಯುವ ವಾಹನಗಳನ್ನು ಕೈಬಿಡಲಾಗಿದೆ. ಯಾಕೆಂದರೆ ಅವುಗಳನ್ನು ಸದ್ಯಕ್ಕೆ ನಿಯಂತ್ರಣದಿಂದ ತೆಗೆದುಹಾಕಲಾಗಿದೆ. ಅವುಗಳನ್ನು ಸಮವರ್ತಿ ಲಿಸ್ಟಿನಲ್ಲಿ ಸೇರಿಸಲಾಗಿದೆ. ಕೇಂದ್ರವು ಕಾನೂನು ಮಾಡಲು ಇಚ್ಛಿಸಿದರೆ, ಅದು ಹಾಗೆ ಕಾನೂನು ಮಾಡಬಹುದು. ಮೂಲ ಅನುಚ್ಛೇದದ ಖಂಡ (ಎ) ಪರಿಹಾರ ಸ್ಥಳಾಂತರಗೊಂಡ ವ್ಯಕ್ತಿಗಳಿಗೆ ಪರಿಹಾರ ಮತ್ತು ಮರುವಸತಿ ಕಲ್ಪಿಸುವುದು ಈಗ ಅವಶ್ಯವಿರುವುದಿಲ್ಲ. ಯಾಕೆಂದರೆ ಅದನ್ನು ಸಹ ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಉಪಖಂಡ (ಸಿ) ಕುರಿತು ವಿಚಾರಣೆ ಮತ್ತು ಅಂಕಿ ಸಂಖ್ಯೆಗಳನ್ನೊಳಗೊಂಡಂತೆ ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಆದ್ದರಿಂದ ಇದನ್ನು ಸಹ ತೆಗೆದು ಹಾಕಲಾಗಿದೆ. ಇದು ಕೇವಲ ಪರಿಣಾಮಕಾರಕವಾದುದಾಗಿದೆ. ನಾನು ಇವೆಲ್ಲ ಬದಲಾವಣೆಗಳನ್ನು ಮಾಡಬಯಸುತ್ತೇನೆ. ಈ ಅನುಚ್ಛೇದ ೩೦೬ ಇದರ ಮೂಲದಲ್ಲಿ ಇವೆಲ್ಲ ಬದಲಾವಣೆಗಳನ್ನು ಮಾಡಬೇಕಾಗುತ್ತದೆ.

**ಮಾನ್ಯ ಸಭಾಧ್ಯಕ್ಷರು:** ನಾನು ಡಾ. ಅಂಬೇಡ್ಕರ್ ಅವರನ್ನು ವಿಚಾರಿಸಬಹುದೆ?

ನನ್ನ ಮನಸ್ಸಿನ ಮೇಲೆ ಆದ ಪರಿಣಾಮದ ಭಾವನೆಯು ಏನೆಂದರೆ ಮೇವು, ದನಕ್ಕೆ ಹಾಕುವ ಹಿಂಡಿಯನ್ನೊಳಗೊಂಡು ಮತ್ತು ಉಳಿದ ಕೇಂದ್ರೀಕರಿಸುವ ಸಾಕಷ್ಟು ನಿಯಂತ್ರಣವು ಅವಶ್ಯವೆಂದು ಭಾವಿಸಲಾಗಿತ್ತು. ಭಾರತ ಸರಕಾರ ಅಧಿನಿಯಮ, ಯಾವುದನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿತ್ತೋ, ಆದರೆ ಆ ಕಾಲಕ್ಕೆ ಅದನ್ನು ತಿದ್ದುಪಡಿ ಮಾಡವುದಾಗಲಿಲ್ಲ. ಸಾಕಷ್ಟು ತೊಂದರೆಗಳು ಬಂದವು. ನೀವು ಇದನ್ನು ವಿಚಾರಿಸಿರುವಿರೋ ಹೇಗೋ ನನಗೆ ಗೊತ್ತಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ವಿಧಿಯನ್ನು ಕೈಗಾರಿಕೆ, ಔದ್ಯೋಗಿಕ ಮತ್ತು ಪೂರೈಕೆಯ

ಇಲಾಖೆಯೊಂದಿಗೆ ಸಮಾಲೋಚನೆ ಮಾಡಿ ಪುನಃ ರೂಪಿಸಲಾಗಿದೆ. ನಾವು ಇದರಲ್ಲಿ ಅವಶ್ಯವೆನಿಸಿದವುಗಳನ್ನು ಸೇರಿಸಿ ಕೇಂದ್ರ ಸರಕಾರವು ಯಾವುವುಗಳನ್ನು ಐದು ವರ್ಷಗಳವರೆಗೆ ನಿಯಂತ್ರಿಸುವುದು ಅವಶ್ಯವಿದೆಯೋ ಅವುಗಳನ್ನು ಸಂಸತ್ತಿಗೆ ಯಾವುದೊಂದು ನಿರ್ದಿಷ್ಟ ವಸ್ತುವನ್ನು ಸೇರಿಸುವುದು ಅವಶ್ಯವೆಂದು ಅನಿಸಿದರೆ ಅಂತಹ ವಿಷಯವನ್ನು ಉಪಖಂಡ(ಎ)ದಲ್ಲಿ ಸೇರಿಸಬಹುದು. ಅದಕ್ಕೆ ನನ್ನದು ನಿಶ್ಚಿತವಾಗಿ ಯಾವ ತಕರಾರು ಇರುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ನಾನು ನನ್ನ ಅನುಭವದಿಂದ ಹೇಳುತ್ತೇನೆ, ಇದು ಬಹುತರವಾಗಿ ಇಂದಿನ ಸಂದರ್ಭಕ್ಕೆ ಹಳೆಯದಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆ ವಿಷಯವನ್ನು ಅದರಲ್ಲೇ ಸೇರಿಸುವುದು ಅಪೇಕ್ಷಣೀಯವೆಂದು ನನ್ನ ಅಭಿಪ್ರಾಯವಾಗಿದೆ.

**ಡಾ. ಪಿ. ಎಸ್. ದೇಶ್‌ಮುಖ್** (ಸಿ. ಪಿ. ಅಂಡ್ ಬಿಹಾರ್ ಸಾಮಾನ್ಯ): ಕೃಷಿ ಇಲಾಖೆಯೊಂದಿಗೆ ಸಮಾಲೋಚಿಸಿ ಇದನ್ನು ಮಾಡಬಹುದು.

**ಮಾನ್ಯ ಸಭಾಧ್ಯಕ್ಷರು:** ನಾನು ಅದನ್ನೇ ಸೂಚಿಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾವು ಜನರ ಆಹಾರ ಮತ್ತು ದನದ ಮೇವು ಇವುಗಳನ್ನು ಅದರಲ್ಲಿ ಸೇರಿಸಬಹುದೆಂದು ನನಗೆ ಅನಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು:** ದನದ ಮೇವು ಹಾಕುವ ಹಿಂಡಿ ಮತ್ತು ಇಂತಹ ವಸ್ತುಗಳನ್ನು ಒಂದುಗೂಡಿಸುವಿಕೆ.

* * *

**ಮಾನ್ಯ ಸಭಾಧ್ಯಕ್ಷರು:** ಯಾರಾದರೂ ಮಾತನಾಡಲು ಇಚ್ಛಿಸುವಿರಾ ಡಾ. ಅಂಬೇಡ್ಕರ್?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಶ್ರೀ ಬ್ರಜೇಶ್ವರ್ ಪ್ರಸಾದ್ ಅವರು ತಂದ ತಿದ್ದುಪಡಿಯನ್ನು ನಾನು ಸ್ವೀಕರಿಸುವುದಿಲ್ಲವೆಂದು ಹೇಳುತ್ತೇನೆ. ಉಳಿದ ತಿದ್ದುಪಡಿಗಳು ತಾವು ಹಾಗೂ ನನ್ನ ಗೆಳೆಯರಾದ ಡಾ. ಕುಂಝ್ರು ತಂದ ತಿದ್ದುಪಡಿಗಳನ್ನು ಕುರಿತು ನನಗೆ ಮುಕ್ತ ಮನಸ್ಸಿದೆ ಮತ್ತು ನಾನು ಅವಶ್ಯವಾದ ತಿದ್ದುಪಡಿಗಳನ್ನು ಕೈಗಾರಿಕೆ, ಔದ್ಯೋಗಿಕ ಹಾಗೂ ಪೂರೈಕೆ ವಿಭಾಗದೊಡನೆ ಸಮಾಲೋಚಿಸಿ ತಿದ್ದುಪಡಿಯನ್ನು ಮಾಡುತ್ತೇನೆ. ಈಗ ತಾವು ನನ್ನ ತಿದ್ದುಪಡಿಯನ್ನು ಸ್ವೀಕರಿಸಿರಿ.

**ಮಾನ್ಯ ಸಭಾಧ್ಯಕ್ಷರು:** ಮತ್ತು ಇತರ ಇಲಾಖೆಯನ್ನು ಮತ್ತು ಕೃಷಿ ಮಂತ್ರಾಲಯವನ್ನು ಸಮಾಲೋಚಿಸಿರಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಹೌದು ನಾನು ಸಂಬಂಧಪಟ್ಟ ಮಂತ್ರಿಗಳ ಇಲಾಖೆಯೊಂದಿಗೆ ಸಮಾಲೋಚನೆ ಮಾಡುವೆನು.

**ಮಾನ್ಯ ಅಧ್ಯಕ್ಷರು:** ಡಾ. ಅಂಬೇಡ್ಕರ್ ಅವರು ಹೇಳಿದ ವಿಷಯವನ್ನು ಒಪ್ಪಿ ಅನುಚ್ಛೇದವನ್ನು ಮತಕ್ಕೆ ಹಾಕುತ್ತೇನೆ. ಮೊದಲು ತಿದ್ದುಪಡಿಗಳನ್ನು ಮತಕ್ಕೆ ಹಾಕುವೆನು. ತಿದ್ದುಪಡಿ ಸಂಖ್ಯೆ ೨ ಡಾ. ದೇಶಮುಖ್ ಅವರದು ಸ್ವಲ್ಪ ಹೆಚ್ಚು ಕಡಿಮೆ ಮೌಖಿಕವಾದುದು ಅವರು ಅದನ್ನು ಕರಡು ಸಮಿತಿಗೆ (ಸಂಖ್ಯೆ ೩) ಇದನ್ನು ಬಿಡಬಹುದು. ಸಂಖ್ಯೆ ೪ರ ಬಗೆಗೆ ಏನಾಯಿತು?

**ಡಾ. ಪಿ. ಎಸ್. ದೇಶ್‌ಮುಖ್:** ನಾನು ಮಂಡಿಸುತ್ತಿಲ್ಲ.

**(ಡಾ. ಅಂಬೇಡ್ಕರ್ ಅವರು ಮಂಡಿಸಿದ ಅನುಚ್ಛೇದ ೩೦೬, ತಿದ್ದುಪಡಿಯಾದಂತೆ ಸಂವಿಧಾನಕ್ಕೆ ಸೇರಿಸಲಾಯಿತು.)**

## ವಿಧಿ ೩೦೯

**ಮಾನ್ಯ ಸಭಾಧ್ಯಕ್ಷರು:** ಈಗ ನಾವು ಅನುಚ್ಛೇದ ೨೦೯ ಇದನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಶ್ರೀ ಬ್ರಜೇಶ್ವರ್ ಪ್ರಸಾದ್ ಅವರು ಸೇರಿಸಿದ ಹೊಸ ತಿದ್ದುಪಡಿ. ಅನುಚ್ಛೇದ ೩೦೭ಎ ಇದೆ.

**ಮಾನ್ಯ ಸಭಾಧ್ಯಕ್ಷರು:** ನಾವು ಈಗ ಇದನ್ನು ಕೈಗೆತ್ತಿಕೊಳ್ಳೋಣವೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದನ್ನು ಈಗ ತಡೆ ಹಿಡಿಯಿರಿ.

**(ಅನುಚ್ಛೇದ ೩೦೯ ಇದನ್ನು ಅಂಗೀಕರಿಸಲಾಯಿತು. ಹಾಗು ಅದನ್ನು ಸಂವಿಧಾನಕ್ಕೆ ಸೇರಿಸಲಾಯಿತು.)**

## ವಿಧಿ ೩೧೦ಎ ಮತ್ತು ೩೧೦ಬಿ

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಮುಂದಿನ ಅನುಚ್ಛೇದ ಅಂದರೆ ೩೧೦ ಇದು ಅನುಚ್ಛೇದ ೩೦೩ಕ್ಕೆ ಸಂಬಂಧಿಸಿದ್ದು ಇವೆರಡನ್ನು ಕೂಡಿ ಪರಿಗಣಿಸಬಹುದು.

**ಮಾನ್ಯ ಸಭಾಧ್ಯಕ್ಷರು:** ಅನುಚ್ಛೇದ ೩೧೦ ಇದರ ಪರಿಗಣನೆಯನ್ನು ಮುಂದೂಡಲಾಗಿದೆ. ಆದ್ದರಿಂದ ಸಂಸತ್ತು ಮುಂದಿನ ಅನುಚ್ಛೇದ ೩೧೦(ಎ) ಮತ್ತು ೩೧೦(ಬಿ) ಇವುಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಿಮ್ಮ ಅಪ್ಪಣೆಯಿಂದ, ಅನುಚ್ಛೇದ ತಿದ್ದುಪಡಿ ಸಂಖ್ಯೆ (೧೨), ಇದನ್ನು ಸ್ವಲ್ಪ ತಿದ್ದುಪಡಿಯೊಂದಿಗೆ ನಮೂನೆಯಲ್ಲಿ ಮಂಡಿಸುತ್ತೇನೆ. ಅದು ಹೀಗೆ ಇದೆ.

"ಅನುಚ್ಛೇದ ೩೧೦ರ ನಂತರ ಕೆಳಗಣ ಹೊಸ ಅನುಚ್ಛೇದಗಳನ್ನು ಸೇರಿಸತಕ್ಕದ್ದು."

## ವಿಧಿ ೩೧೦ಎ
## ಭಾರತ ಕಂಟ್ರೋಲರ್ ಹಾಗೂ ಆಡಿಟರ್ ಜನರಲ್ ಅವರನ್ನು ಕುರಿತು ಉಪಬಂಧ

ಭಾರತದ ಮಹಾಲೆಕ್ಕ ಪರಿಶೋಧ ೩೧೦ ವಿಧಿಯ ನಂತರ ಈ ಕೆಳಕಾಣಿಸಿದ ವಿಧಿಗಳನ್ನು ಸೇರಿಸಬಹುದು: ಈ ಸಂವಿಧಾನವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಆ ಹುದ್ದೆಯಲ್ಲಿದ್ದರೆ ಅವರು ಬೇರೊಂದು ರೀತಿಯಲ್ಲಿ ಆಯ್ಕೆ ಮಾಡಿಕೊಳ್ಳದಿದ್ದರೆ ಅವರು ಆ ದಿನದಂದು ಭಾರತದ ಕಂಟ್ರೋಲರ್ ಹಾಗೂ ಆಡಿಟರ್ ಜನರಲ್ ಆಫ್ ಇಂಡಿಯಾ ಆಗುವರು. ಮತ್ತು ಅವರು ಅಂತಹ ವೇತನ ಮತ್ತು ಬಡ್ತಿ ಮತ್ತು ರಜೆಗೆ, ಪೆನ್‌ಶನ್‌ಗೆ ಹಕ್ಕುದಾರನಾಗುವರು. ಅದು ಸಂವಿಧಾನದ ಪರಿಚ್ಛೇದ ೧೨೪, ಖಂಡ (೨)ರಲ್ಲಿ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಇವರನ್ನು ಕುರಿತು ಹೇಳಲಾಗಿದೆ.

ಅವರು ಆ ಹುದ್ದೆಯಲ್ಲಿ ನಿವೃತ್ತರಾಗುವ ಅವಧಿಯವರೆಗೆ ಆ ಹುದ್ದೆಯಲ್ಲಿನ ಉಪಬಂಧಗಳಿಗೆ ಅನುಗುಣವಾಗಿ ಮುಂದುವರೆಯಬಹುದು. ಯಾವ ನಿಯಮಗಳು ಈ ಸಂವಿಧಾನದ ಮೊದಲು ಅವರಿಗೆ ಅನ್ವಯಿಸುತ್ತಿದ್ದವೋ ಅವೇ ನಿಯಮಗಳು ಅವರಿಗೆ ಅನ್ವಯಿಸುತ್ತವೆ.

ಅನುಚ್ಛೇದ ೩೧೦ (ಬಿ) ಪಬ್ಲಿಕ್ ಸರ್ವೀಸ್ ಕಮೀಶನಿನ ಸದಸ್ಯರು ಭಾರತದ ಸಾರ್ವಭೌಮತ್ವಕ್ಕೆ ಒಳಪಟ್ಟು ಆ ಹುದ್ದೆಯಲ್ಲಿ ಈ ಸಂವಿಧಾನ ಜಾರಿಗೆ ಬರುವ ದಿನಾಂಕದಂದು ಅವರು ಆ ಹುದ್ದೆಯಲ್ಲಿದ್ದರೆ, ಅವರನ್ನು ಬೇರೆ ಹುದ್ದೆ ಆಯ್ಕೆ ಮಾಡಿರದಿದ್ದರೆ, ಆ ಸಂವಿಧಾನ ಜಾರಿಗೆ ಬರುವ ದಿನಾಂಕದಿಂದ ಅವರು ಪಬ್ಲಿಕ್ ಸಿವಿಲ್ ಕಮೀಶನ್ ಕೇಂದ್ರ ಸರಕಾರದ ಸದಸ್ಯರಾಗುವರು. ಸಂವಿಧಾನದ ಅನುಚ್ಛೇದದ ಖಂಡ

೨೮೬ ಖಂಡ (೧) ಮತ್ತು ೨ ಇವುಗಳಲ್ಲಿ ಏನೇ ಹೇಳಿದ್ದರೂ ಆ ಅನುಚ್ಛೇದದ ಖಂಡ ೨ರ ಪರಂತುಕದಂತೆ ಅವರು ಆ ಹುದ್ದೆಯಲ್ಲಿ ಅವರ ಸೇವಾ ಅವಧಿಯು ಮುಗಿಯುವವರೆಗೆ ಮುಂದುವರೆಯುತ್ತಾರೆ. ಯಾವ ನಿಯಮ ಅವರಿಗೆ ಈ ಸಂವಿಧಾನ ಜಾರಿಗೆ ಬರುವ ಪೂರ್ವದಲ್ಲಿ ಅನ್ವಯಿಸುತ್ತಿದ್ದವೋ ಅವೇ ಅವರಿಗೆ ಅನ್ವಯಿಸುವವು.

**ಪಬ್ಲಿಕ್ ಸರ್ವಿಸ್ ಕಮೀಶನರ್‌ನ ಉಪಬಂಧಗಳು**

(೧) ಒಂದು ಪ್ರಾಂತ್ಯದ ಪಬ್ಲಿಕ್ ಸರ್ವಿಸ್ ಕಮೀಶನ್ನಿನ ಸದಸ್ಯರು ಇಲ್ಲವೆ ಕೆಲ ಸಂಬಂಧದಲ್ಲಿ ರಚಿಸಿದ ಪಬ್ಲಿಕ್ ಸರ್ವಿಸ್ ಕಮೀಶನ್‌ರವರು ಈ ಸಂವಿಧಾನ ಜಾರಿಗೆ ಬರುವ ಪೂರ್ವದಲ್ಲಿ ಅಂತಹ ಹುದ್ದೆಯಲ್ಲಿದ್ದು, ಅವರು ಬೇರೆ ರೀತಿ ಆಯ್ಕೆಯಾಗಿರದಿದ್ದರೆ, ಆ ದಿನದಿಂದ ಅವರು ಪಬ್ಲಿಕ್ ಕಮೀಶನ್‌ನ ಸದಸ್ಯರಾಗಿ ಮುಂದುವರೆಯುವರು, ಆಯಾ ರಾಜ್ಯಗಳಿಗೆ ಅಥವಾ ಜಂಟೀ ಪಬ್ಲಿಕ್ ಸರ್ವೀಸ್ ಕಮೀಶನ್ ಅಥವಾ ಆಯಾ ರಾಜ್ಯದ ಸೇವೆಯಲ್ಲಿರುವವರ ಪ್ರಕರಣ ಏನೇ ಇರಲಿ ಅನುಚ್ಛೇದ ೨೮೫ ಖಂಡ (೧) ಮತ್ತು

(೨) ಇದರಲ್ಲಿ ಏನೇ ಹೇಳಿದ್ದರೂ ಆದರೆ ಅವರು ಆ ಅನುಚ್ಛೇದ (೨)ಕ್ಕೆ ಒಳಪಟ್ಟು ಅವರು ಆ ಹುದ್ದೆಯಿಂದ ನಿವೃತ್ತಿಯಾಗುವವರೆಗೂ ನಿಯಮಗಳಿಗೆ ಅನುಗುಣವಾಗಿ ಹಾಗೂ ಈ ಸಂವಿಧಾನ ಜಾರಿಗೆ ಬರುವ ಪೂರ್ವದಲ್ಲಿ ಅವರಿಗೆ ಅನ್ವಯಿಸುತ್ತಿದ್ದ ನಿಯಮಗಳು ಇಂದಿಗೂ ಅನ್ವಯಿಸುತ್ತದೆ.

ಮಾನ್ಯರೆ, ಈ ಉಪಬಂಧಗಳು ಕೇವಲ ಹುದ್ದೆಗಳಲ್ಲಿರುವವರ ಸ್ಥಾನಗಳನ್ನು ಮುಂದುವರೆಯಿಸುವ ಬಗ್ಗೆ ಇರುತ್ತವೆ. ಅವುಗಳನ್ನು ಸಂವಿಧಾನವು ನಿಯಂತ್ರಿಸುತ್ತದೆ. ಅಂದರೆ ಪಬ್ಲಿಕ್ ಸರ್ವಿಸ್ ಕಮೀಶನ್ ಮತ್ತು ಆಡಿಟರ್ ಜನರಲ್‌ರ ಬಗ್ಗೆ ಯಾವುದೇ ತತ್ವವು ಇರುವುದಿಲ್ಲ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಡಾ. ದೇಶ್‌ಮುಖ್ ಅವರು ತಂದು ತಿದ್ದುಪಡಿಯನ್ನು ನಾನು ಸ್ವೀಕರಿಸಲು ಇಚ್ಛಿಸುವುದಿಲ್ಲ. ಯಾಕೆಂದರೆ, ಅದು ಅನಾವಶ್ಯಕವಾಗಿದೆ.

**ಮಾನ್ಯ ಸಭಾಧ್ಯಕ್ಷರು:** ನಾನು ಮೊದಲು ದೇಶ್‌ಮುಖ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುವೆನು.

ಪ್ರಶ್ನೆಯೇನೆಂದರೆ:

ಪಟ್ಟಿ ೧ರ ತಿದ್ದುಪಡಿ ನಂ. ೧೨ (ಮೊದಲನೆಯ ವಾರ) ಪ್ರಸ್ತಾಪಿಸಿದ ಅನುಚ್ಛೇದದ ೩೧೦ (ಬಿ) ಈ ಪದಗಳ ನಂತರ ಈ ಸಂವಿಧಾನ ಜಾರಿಯಲ್ಲಿ ಬಂದ ನಂತರ ಅದು ಎಲ್ಲಿ ಎಲ್ಲಿ ಬರುತ್ತದೆಯೋ ಯಾವುದೇ ಕಾರಣಕ್ಕಾಗಿ ಯಾರ ಸರ್ವೀಸನ್ನು ತೆಗೆದುಹಾಕಿರದಿದ್ದರೆ ಈ ಪದಗಳನ್ನು ಸೇರಿಸತಕ್ಕದ್ದು.

(ಈ ತಿದ್ದುಪಡಿಯು ತಿರಸ್ಕೃತವಾಯಿತು)

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ಡಾ. ಬಿ.ಆರ್. ಅಂಬೇಡ್ಕರ್ ಅವರು ಮಂಡಿಸಿದ ಅನುಚ್ಛೇದದ ತಿದ್ದುಪಡಿಗಳನ್ನು ಒಂದರ ನಂತರ ಒಂದನ್ನು ಮತಕ್ಕೆ ಹಾಕುವೆನು.

**(ಡಾ. ಅಂಬೇಡ್ಕರ್ ಅವರು ತಂದ ತಿದ್ದುಪಡಿಗಳಂತೆ ಸ್ವೀಕೃತವಾದ ಅನುಚ್ಛೇದ ೩೧೦ (ಎ) ಮತ್ತು ೩೧೦ (ಬಿ) ಇವುಗಳನ್ನು ಸಂವಿಧಾನಕ್ಕೆ ಸೇರಿಸಲಾಯಿತು.**

# ವಿಧಿ ೩೧೧ಎ

**ತಾತ್ಕಾಲಿಕ ರಾಷ್ಟ್ರಗಳಿಗೆ ಸಂಬಂಧಿಸಿದ ಉಪಬಂಧ**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತೇನೆ.

"ಅನುಚ್ಛೇದ ೩೧೧ರ ನಂತರ ಕೆಳಗಣ ಹೊಸ ಅನುಚ್ಛೇದವನ್ನು ಸೇರಿಸತಕ್ಕದ್ದು.

೩೧೧ (ಎ) (೧) ಭಾರತದ ಅಧಿಪತ್ಯದ ಸಂವಿಧಾನ ಸಭೆಯು ಈ ಬಗ್ಗೆ ಒಬ್ಬ ಸದಸ್ಯನನ್ನು ಆಯ್ಕೆ ಮಾಡಬೇಕು. ಅಂತಹ ವ್ಯಕ್ತಿಯು ತಾತ್ಕಾಲಿಕವಾಗಿ ಭಾರತದ ರಾಷ್ಟ್ರಪತಿಯಾಗುವರು. ರಾಷ್ಟ್ರಪತಿಯನ್ನು ಕಾನೂನು ಪ್ರಕಾರ ಅಧ್ಯಾಯ ೧ ಭಾಗ ೫ರಲ್ಲಿ ಕಾಣಿಸಿದಂತೆ ಆಯ್ಕೆ ಮಾಡಿ ಅಂಥವರು ಅಧಿಕಾರ ಸ್ವೀಕರಿಸುವವರೆಗೆ ಮುಂದುವರೆಯತಕ್ಕದ್ದು.

(೨) ಈ ತಾತ್ಕಾಲಿಕ ರಾಷ್ಟ್ರಪತಿ ಹುದ್ದೆಯು ಯಾವುದೇ ಕಾರಣದಿಂದ ತೆರವಾದರೆ, ಅಂದರೆ ಅವನ ಮರಣದಿಂದ, ಇಲ್ಲವೆ ರಾಜೀನಾಮೆ ಕೊಡುವುದರಿಂದ, ಇಲ್ಲವೆ ಅವರನ್ನು ತೆಗೆದುಹಾಕುವುದರಿಂದ ಇಲ್ಲವೆ ಇನ್ನಾವುದೇ ರೀತಿಯಿಂದ ತೆಗೆದುಹಾಕಿದರೆ, ಅಂಥವರ ಜಾಗವನ್ನು ತಾತ್ಕಾಲಿಕ ಸಂಸತ್ತು ಅನುಚ್ಛೇದ ೩೧೧ರ ಅನ್ವಯ ಅಸ್ತಿತ್ವದಲ್ಲಿದ್ದು ಅಂತಹ ಒಬ್ಬನನ್ನು ತಾತ್ಕಾಲಿಕ ಅಧ್ಯಕ್ಷನೆಂದು ಆರಿಸಬಹುದು. ಹಾಗೆ ಆ ಮನುಷ್ಯನನ್ನು ಆಯ್ಕೆ ಮಾಡುವವರೆಗೆ ಭಾರತದ ಮುಖ್ಯ ನ್ಯಾಯಮೂರ್ತಿಯು ತಾತ್ಕಾಲಿಕ ರಾಷ್ಟ್ರಪತಿ ಆಗತಕ್ಕದ್ದು.

**ಮಾನ್ಯ ಸಭಾಧ್ಯಕ್ಷರು:** ಇದಕ್ಕೆ ಎರಡು ತಿದ್ದುಪಡಿಗಳು, ಒಂದನೆಯದು ತಾತ್ಕಾಲಿಕ ಈ ಪದವನ್ನು ರಾಷ್ಟ್ರಪತಿ ಈ ಪದದ ಮೊದಲು ಇದ್ದುದ್ದನ್ನು ತೆಗೆದುಹಾಕುವುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಮಂಡಿಸುತ್ತೇನೆ.

"ಪ್ರಸ್ತಾಪಿಸಿದ ಅನುಚ್ಛೇದ ೩೧೧ (ಎ) ಇದರಲ್ಲಿ ಖಂಡ ೧ ತಿದ್ದುಪಡಿ ೨೮ ಪಟ್ಟಿ ೨ (೧ನೆಯ ವಾರ ತಾತ್ಕಾಲಿಕ ಎಂಬ ಪದವನ್ನು ತೆಗೆದುಹಾಕಬೇಕು.)

"ಪಟ್ಟಿ ೨ರ ತಿದ್ದುಪಡಿ ಸಂಖ್ಯೆ ೨೮, ಖಂಡ (೨) ಅನುಚ್ಛೇದ ೨೧೧ ಇದರಲ್ಲಿ ತಾತ್ಕಾಲಿಕ ರಾಷ್ಟ್ರಪತಿಗಳು ಎಂಬ ಪದ ಎಲ್ಲಿ ಎಲ್ಲಿ ಬರುವವೋ ಅಲ್ಲೆಲ್ಲಾ ಭಾರತ ಸಂವಿಧಾನಾತ್ಮಕ ಸಂಸತ್ತು ಅಧಿಪತ್ಯದ ಈ ಪದಗಳನ್ನು ಸೇರಿಸತಕ್ಕದ್ದು.

"ಪ್ರಸ್ತಾಪಿಸಿದ ಅನುಚ್ಛೇದ ೩೧೧ (ಎ) ಖಂಡ ೨ ತಿದ್ದುಪಡಿ ಸಂಖ್ಯೆ ೨೮, ಲಿಸ್ಟ್ ೨ (ಮೊದಲನೆ ವಾರ) ತಾತ್ಕಾಲಿಕ ರಾಷ್ಟ್ರಪತಿ ಈ ಪದಗಳು ಎಲ್ಲಿ ಎಲ್ಲಿ ಬರುತ್ತವೆಯೋ ಅಲ್ಲಿ ರಾಷ್ಟ್ರಪತಿ ಪದವನ್ನು ಸೇರಿಸತಕ್ಕದ್ದು.

**ಡಾ. ಪಿ. ಎಸ್. ದೇಶ್‌ಮುಖ್:** ನನ್ನ ತಿದ್ದುಪಡಿಯ ತತ್ವವು ಸ್ವೀಕಾರ ಆದುದರಿಂದ ನನ್ನ ತಿದ್ದುಪಡಿ ಮಂಡಿಸುವ ಕಾರಣವಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಈಗ ಅನುಚ್ಛೇದ ಹಾಗೂ ತಿದ್ದುಪಡಿಗಳು ಚರ್ಚೆಗೆ ಮುಕ್ತವಾಗಿವೆ.

* * *

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ಮಾನ್ಯ ಅಧ್ಯಕ್ಷರೆ, ಡಾ. ಅಂಬೇಡ್ಕರ್ ಅವರು ಈ ಸೂಚನೆಯ ಒಪ್ಪಬಹುದಾದ ಸಲಹೆಯನ್ನು ಗಮನಿಸಿ ತಾತ್ಕಾಲಿಕ ಈ ಪದವನ್ನು ತಾತ್ಕಾಲಿಕ ಸಂಸತ್ತು ಅನ್ನುವಲ್ಲಿ ಪದಗಳನ್ನೇ ತೆಗೆದುಹಾಕಬೇಕು. ರಾಷ್ಟ್ರಪತಿ ಈ ಪದದ ಹಿಂದೆ ಇದ್ದುದ್ದನ್ನು ತೆಗೆದುಹಾಕಿದಂತೆ ಇಲ್ಲಿಯೂ ತೆಗೆದುಹಾಕಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** 'ತಾತ್ಕಾಲಿಕ ಸಂಸತ್ತು' ಎಂಬ ಪದವನ್ನು ಉಳಿಸಿಕೊಳ್ಳಲು ಮಹತ್ವದ ಆಕ್ಷೇಪ ಇದೆ ಎಂದು ನಾನು ಭಾವಿಸುವುದಿಲ್ಲ. ಇದರಲ್ಲಿ ನಾನು ಯಾವುದೇ ಬದಲಾವಣೆ ಮಾಡಲಿಚ್ಛಿಸುವುದಿಲ್ಲ. ಅದಕ್ಕೆ ತಾತ್ಕಾಲಿಕ ಸಂಸತ್ತು ಎನ್ನಲು ಬರುವುದಿಲ್ಲ. ಕಾನೂನು ಭಾಷೆಯ ಉದ್ದೇಶದಿಂದ ಈ ಅನುಚ್ಛೇದದ ಉದ್ದೇಶಕ್ಕಾಗಿ ಬಳಸಿದ ಈ ಪದವು ತಾತ್ಕಾಲಿಕ ಸಂಸತ್ತು ಎನ್ನಲಾಗಿದೆ.

**ಶ್ರೀ ಆರ್. ಕೆ. ಸಿಧ್ವ:** ಡಾ. ಅಂಬೇಡ್ಕರ್ ಅವರು ತಾತ್ಕಾಲಿಕ ಎಂಬ ಪದವನ್ನು ಕೈ ಬಿಡುವರೆಂದು ನಾನು ಭಾವಿಸಿದ್ದೆನು.

**ಮಾನ್ಯ ಸಭಾಧ್ಯಕ್ಷರು:** ಇದು ಸಂಸತ್ತಿಗೆ ಸಂಬಂಧಿಸಿತ್ತು. ಶ್ರೀ ಶಿಬ್ಬನ್‌ಲಾಲ್ ಸಕ್ಸೇನಾ ಅವರು ಸಂಸತ್ತು ಈ ಪದದ ಹಿಂದಿನ ತಾತ್ಕಾಲಿಕ ಈ ಪದವನ್ನು ಕೈ ಬಿಡಲು ಹೇಳಿದರು.

**ಶ್ರೀ ಪಿ. ಎಸ್. ದೇಶ್‌ಮುಖ್:** ಅದು ಹಾಗಿದ್ದಲ್ಲಿ ನಾನು ನನ್ನ ತಿದ್ದುಪಡಿಯಲ್ಲಿ ತಾತ್ಕಾಲಿಕ ಪದ ಎಲ್ಲಿ ಎಲ್ಲಿ ಬರುವುದೋ ಅದನ್ನು ಕೈಬಿಡಬೇಕೆಂದು ಸೂಚಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ನಿಮ್ಮ ತಿದ್ದುಪಡಿಯು "ಸಂಸತ್ತು" ಈ ಪದಕ್ಕೆ ಅನ್ವಯಿಸುವುದೇ?

**ಡಾ. ಪಿ. ಎಸ್. ದೇಶ್‌ಮುಖ್:** ಮಾನ್ಯರೇ ಅಹುದು.

**ಮಾನ್ಯ ಸಭಾಧ್ಯಕ್ಷರು:** ಶ್ರೀ ಶಿಬ್ಬನ್‌ಲಾಲ್ ಸಕ್ಸೇನಾ ಅವರು ಅದನ್ನು ಮಂಡಿಸಿದ್ದಾರೆ. ಅದನ್ನು ಮತಕ್ಕೆ ಹಾಕಲಾಗುವುದು. ನಾನು ಈಗ ಅನೇಕ ತಿದ್ದುಪಡಿಗಳನ್ನು ಮತಕ್ಕೆ ಹಾಕುವೆನು ಆ ಪ್ರಶ್ನೆಯೆಂದರೆ ಪ್ರಸ್ತಾಪಿಸಿದ ಅನುಚ್ಛೇದ ೩೧೧ (ಎ) ಖಂಡ ೧ ತಿದ್ದುಪಡಿ ಸಂಖ್ಯೆ ೨೩ ಲಿಸ್ಟ್ ೨ (ಮೊದಲವಾರ) ಇದರಲ್ಲಿ ತಾತ್ಕಾಲಿಕ ಈ ಪದವನ್ನು ತೆಗೆದುಹಾಕುವುದು.

**(ತಿದ್ದುಪಡಿ ಅಂಗೀಕೃತವಾಯಿತು)**

**ಶ್ರೀ ಸಂತಾನಮ್** (ಮದ್ರಾಸ್, ಜನರಲ್): ಸಂಸತ್ತಿನ ಹಿಂದಿನ ತಾತ್ಕಾಲಿಕ ಈ ಪದವೂ ಹೋಗುತ್ತದೆಂದು ಅರ್ಥವೋ?

**ಮಾನ್ಯ ಸಭಾಧ್ಯಕ್ಷರು:** ಇಲ್ಲ, ಅದು ನಂತರ ಬರುತ್ತದೆ.

ಪ್ರಶ್ನೆಯೆಂದರೆ–

"ಅನುಚ್ಛೇದ ೩೧೧ (ಎ) ಖಂಡ ೨ ತಿದ್ದುಪಡಿ ಸಂಖ್ಯೆ ೨೮ ಲಿಸ್ಟ್ ೨ (ಮೊದಲನೆಯ ವಾರ) ತಾತ್ಕಾಲಿಕ ರಾಷ್ಟ್ರಪತಿ ಮೊದಲನೆಯ ಸ್ಥಾನದಲ್ಲಿ ಅವು ಎಲ್ಲಿ ಬರುವವೋ ಅಲ್ಲಿ ಸಂವಿಧಾನಾತ್ಮಕವಾಗಿ ಆಯ್ಕೆಯಾದ ರಾಷ್ಟ್ರಪತಿ ಎಂಬ ಪದಗಳನ್ನು ಸೇರಿಸತಕ್ಕದ್ದು.

**ಮಾನ್ಯ ಸಭಾಧ್ಯಕ್ಷರು:** ಈಗ ನಾನು ಡಾ. ದೇಶ್‌ಮುಖ್ ಅವರು ಮಂಡಿಸಿದ್ದ ತಿದ್ದುಪಡಿಯನ್ನು ತೆಗೆದುಕೊಳ್ಳುತ್ತೇನೆ. ಆದರೆ ನಿಜವಾಗಿ ಅದನ್ನು ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ ಮಂಡಿಸಿದ್ದಾರೆ.

ಪ್ರಶ್ನೆಯೆಂದರೆ–

ಪ್ರಸ್ತಾಪಿಸಿದ ಅನುಚ್ಛೇದ ೩೧೧ (ಎ) ಇದರ ಖಂಡ ೨ರಲ್ಲಿ ಪ್ರಾಂತೀಯ, ಈ ಪದವು ಖಂಡ (೨)ರಲ್ಲಿಯ ಸಂಸತ್ತು ಈ ಪದದ ಮುಂದೆ ಇರುವುದನ್ನು ಕೈ ಬಿಡಬೇಕು.

ತಿದ್ದುಪಡಿಯು ತಿರಸ್ಕೃತವಾಯಿತು.

**(ಅನುಚ್ಛೇದ ೩೦೧ (ಎ) ತಿದ್ದುಪಡಿಯಾದಂತೆ ಸಂವಿಧಾನಕ್ಕೆ ಸೇರಿಸಲಾಯಿತು.)**

* * *

# ವಿಧಿ ೩೧೧ ಬಿ
# ತಾತ್ಕಾಲಿಕ ರಾಷ್ಟ್ರಪತಿಯ ಮಂತ್ರಿಮಂಡಲ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತೇನೆ.

ಅನುಚ್ಛೇದ ೩೧೧ (ಎ)ದಲ್ಲಿ ಕೆಳಗಣ ಹೊಸ ಅನುಚ್ಛೇದವನ್ನು ಸೇರಿಸತಕ್ಕದ್ದು.

ಅನುಚ್ಛೇದ ೩೧೧ (ಬಿ) ಅನ್ವಯ ತಾತ್ಕಾಲಿಕ ರಾಷ್ಟ್ರಪತಿಯು ಯಾವುದೇ ವ್ಯಕ್ತಿಯನ್ನು ಮಂತ್ರಿಮಂಡಲದ ಸದಸ್ಯರಾಗಿ ನೇಮಕ ಮಾಡಬಹುದು.

ತಾತ್ಕಾಲಿಕ ರಾಷ್ಟ್ರಪತಿಯು ಸಂವಿಧಾನದ ಅನ್ವಯ ಹೊಸ ರಾಷ್ಟ್ರಪತಿಯನ್ನು ಮಂತ್ರಿಮಂಡಲದ ಸದಸ್ಯರೆಂದು ಆರಿಸುವವರೆಗೆ ಕೆಲಸ ಮಾಡಲು ಅವರು ಆ ಪದದಲ್ಲಿ ಮುಂದುವರೆಯುವರು. ಭಾರತ ಸರಕಾರದ ಸಾರ್ವಭೌಮತ್ವವು ಜಾರಿಯಲ್ಲಿ ಬರುವ ತತ್‌ಪೂರ್ವದಲ್ಲೆ ಅಧಿಕಾರದಲ್ಲಿರುವವರು ತಾತ್ಕಾಲಿಕ ರಾಷ್ಟ್ರಪತಿಯ ಕೆಳಗೆ ಸಂವಿಧಾನದಲ್ಲಿ ಇವರ ನೇಮಕಾರಿ ಮುಂದುವರೆಯುತ್ತದೆ.

**ಡಾ. ಪಿ. ಎಸ್. ದೇಶ್‌ಮುಖ್:** ಮಾನ್ಯರೆ, ನನಗೆ ಈ ತಿದ್ದುಪಡಿ ಮಂಡಿಸಲು ಅವಕಾಶ ಕೊಟ್ಟದ್ದಕ್ಕಾಗಿ ನಾನು ಆಭಾರಿಯಾಗಿದ್ದೇನೆ. ನಾನು ಈಗ ಪ್ರಸ್ತಾವನೆ ಮಂಡಿಸುತ್ತೇನೆ.

ಹೊಸ ಅನುಚ್ಛೇದ ೩೧೧ (ಬಿ)ದಲ್ಲಿಯ ತಿದ್ದುಪಡಿ ಸಂಖ್ಯೆ ೧೩ರಲ್ಲಿಯ ಪದ 'ತಾತ್ಕಾಲಿಕ' ಅದು ಎಲ್ಲಿ ಎಲ್ಲಿ ಬರುತ್ತದೆಯೋ ಅಲ್ಲಿ ಅದನ್ನು ಕೈ ಬಿಡಬೇಕು.

ನಾನು ಇದಕ್ಕೆ ಇನ್ನೂ ಕೂಡಿಸಬಹುದೆ? ಅದೇನೆಂದರೆ, ಸನ್ಮಾನ್ಯ ಡಾ. ಅಂಬೇಡ್ಕರರು ಈ ತಿದ್ದುಪಡಿಯ ಹಿಂದಿನ ಭಾವನೆಯನ್ನು ಸ್ವೀಕರಿಸಿದ್ದಾರೆ. ಆದ್ದರಿಂದ ನಾನು ಸದನದ ವೇಳೆಯನ್ನು ತೆಗೆದುಕೊಳ್ಳುವುದಿಲ್ಲ. ಇದು ಸ್ವಲ್ಪ ಹೆಚ್ಚು ಕಡಿಮೆ ಪರಿಣಾಮಕಾರಿಯಾದ ತಿದ್ದುಪಡಿಯಾಗಿದೆ. ತಿದ್ದುಪಡಿ ಸಂಖ್ಯೆ ೧೫ ಇದನ್ನು ಮಂಡಿಸಲಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಡಾ. ಬಿ.ಆರ್. ಅಂಬೇಡ್ಕರ್ ಅವರು ತಿದ್ದುಪಡಿಯನ್ನು ಸ್ವೀಕರಿಸುವರೆಂದು ನಾನು ಭಾವಿಸುವೆನು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಹೌದು ನಾನು ಅದನ್ನು ಸ್ವೀಕರಿಸುವೆನು.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೆ, ಈ ಅನುಚ್ಛೇದ ೩೧೧ (ಬಿ) ಇದು ಕೇವಲ ಔಪಚಾರಿಕ ಅನುಚ್ಛೇದವಾಗಿದ್ದು, ರಾಷ್ಟ್ರಪತಿಗಳಿಗೆ ಅಧಿಕಾರ ಕೊಡುವುದು, ಅಂದರೆ, ಸಂವಿಧಾನವು ಜಾರಿಯಲ್ಲಿ ಬರುವ ಪೂರ್ವದಲ್ಲೇ ಅಸ್ತಿತ್ವದಲ್ಲಿರುವ ಮಂತ್ರಿಮಂಡಲವನ್ನು ಕಾರ್ಯಕಲಾಪಗಳನ್ನು ನಡೆಯಿಸಿಕೊಂಡು ಹೋಗಲು ಅನುಮತಿಯನ್ನು ಕೊಡುವುದು. ಈ ಅನುಚ್ಛೇದವು ಈಗಾಗಲೇ ಅಂಗೀಕೃತವಾದ ಅನುಚ್ಛೇದದ ರೀತಿಯಲ್ಲಿಯೇ ಇದೆ. ಪಬ್ಲಿಕ್ ಸರ್ವಿಸ್ ಕಮೀಶನ್ ಸದಸ್ಯರಿಗೆ ಮತ್ತು ಆಡಿಟರ್ ಜನರಲ್ ಸಂಬಂಧಿಸಿದಂತೆ ಅವರು ಇದರ ಪರಿಣಾಮವಾಗಿ ಮೂಲಭೂತವಾಗಿ ನಿಜವಾಗಿ ಯಾವ ಅಂತರವೂ ಹಾಗೂ ಅಂಗೀಕೃತವಾದ ಅನುಚ್ಛೇದಗಳಲ್ಲಿ ಯಾವ ಅಂತರವೂ ಇರುವುದಿಲ್ಲ. ಈ ಅನುಚ್ಛೇದ ೩೧೧ (ಬಿ) ಇದರ ಉಪಬಂಧಗಳನ್ನು ಟೀಕಿಸಿದವರದು ತಪ್ಪು ಗ್ರಹಿಕೆ. ಅದರ ಪ್ರಕಾರ ಮಂತ್ರಿಮಂಡಲವನ್ನು ನೇಮಿಸತಕ್ಕದ್ದಲ್ಲ, ಇಲ್ಲವೆ ೨೬ನೆಯ ಜನವರಿ ೧೯೫೦ ಆದ ನಂತರ ಕಾರ್ಯ ನಿರ್ವಹಿಸತಕ್ಕದ್ದಲ್ಲ. ಅಂದರೆ, ಸಂಸತ್ತಿನ ಮಂತ್ರಿಗಳಲ್ಲಿ ವಿಶ್ವಾಸ ಇರದ ಹೊರತು ಕಾರ್ಯ ನಿರ್ವಹಿಸತಕ್ಕದ್ದಲ್ಲ. ಆ ವಾದ ಸ್ವೀಕರಿಸಲು ನಾನು ಸಿದ್ಧನಿದ್ದೇನೆ. ಆದರೆ, ಈ ಅನುಚ್ಛೇದವು ಹೀಗೆಯೇ ಸಂವಿಧಾನಕ್ಕೆ ಸೇರಲು ಸಾಧ್ಯವಿಲ್ಲ.

ಇಲ್ಲವೆ ಮಂತ್ರಿಮಂಡಲಕ್ಕೆ ವಿಶ್ವಾಸಮತ ಪಡೆಯಲು ಹೇಗೆ ಅಸಾಧ್ಯ ಎಂಬುದು ನನಗೆ ತಿಳಿಯದಾಗಿದೆ. ಈಗಿರುವ ಮಂತ್ರಿ ಮಂಡಲವು ಸಾಕಷ್ಟು ಯೋಗ್ಯವಿಲ್ಲವೆಂದು ಹಾಗೂ ಅದು ಮಾಡಬೇಕಾದ ಕಾರ್ಯಗಳನ್ನು ಚೆನ್ನಾಗಿ ಮಾಡುವುದಿಲ್ಲವೆಂದು ಸಂಸತ್ತಿಗೆ ಅನಿಸಿದರೆ ಆಗ ಸಂಸತ್ತಿಗೆ ಜನವರಿ ೨೬ರ ಮೊದಲ ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ಗೊತ್ತುವಳಿ ಪಾಸು ಮಾಡಬಹುದು ಹಾಗೂ ಮಂತ್ರಿಮಂಡಲವನ್ನು ವಜಾ ಮಾಡಬಹುದು. ಅದರಂತೆ ಪ್ರಧಾನಿಯವರು ಕ್ಯಾಬಿನೆಟ್ ಸದಸ್ಯರ ಹೆಸರುಗಳನ್ನು ತಾತ್ಕಾಲಿಕ ರಾಷ್ಟ್ರಪತಿಗಳಿಗೆ ಸದಸ್ಯರ ಹೆಸರುಗಳನ್ನು ಸಲ್ಲಿಸುವ ಪೂರ್ವದಲ್ಲಿ ಸಂಸತ್ತಿನ ಸಕಾರಾತ್ಮಕವಾದ ವಿಶ್ವಾಸಮತ ಪಡೆಯಬೇಕು. ಪ್ರಧಾನಮಂತ್ರಿ ಇಲ್ಲವೆ ಸಂಸತ್ತು ಅವಿಶ್ವಾಸದ ಪರೀಕ್ಷೆಯನ್ನು ಇಚ್ಛಿಸಿದರೆ, ಇಲ್ಲವೆ ೧೯೫೦ ಜನವರಿ ೨೬ರ ಪೂರ್ವದಲ್ಲಿ ವಿಶ್ವಾಸಮತ ಪರೀಕ್ಷಿಸಲು ಇಚ್ಛಿಸಿದರೆ, ಅಂದಿನಿಂದ ಸಂವಿಧಾನವು ಜಾರಿಯಲ್ಲಿ ಬರುವುದೆಂದು ತಿಳಿದರೆ ಈ ಅನುಚ್ಛೇದ ೩೧೧ಬಿ ಇದು ಜನವರಿ ೨೬, ೧೯೫೦ರ ನಂತರವೂ ಸಂಸತ್ತು ಅವಿಶ್ವಾಸ ಮತ ಮಂಡಿಸುವ ಅಧಿಕಾರ ಕಿತ್ತುಕೊಳ್ಳುವುದಿಲ್ಲ ಮತ್ತು ಮಂತ್ರಿಮಂಡಲವನ್ನು ಕಿತ್ತುಹಾಕುವ ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಇಲ್ಲವೆ, ಪ್ರಧಾನಮಂತ್ರಿ ತಾನು ತನ್ನ ಮಂತ್ರಿಮಂಡಲದ ಮೇಲೆ ಇರುವ ವಿಶ್ವಾಸಮತ ಪಡೆಯಲು ಇರುವ ಅಧಿಕಾರವನ್ನು ಈ ಅನುಚ್ಛೇದ ಪ್ರಧಾನಮಂತ್ರಿಗೆ ಪ್ರತಿಬಂಧಿಸುವುದಿಲ್ಲ. ಆದ್ದರಿಂದ ಅನುಚ್ಛೇದ ೩೧೧ (ಬಿ) ಇದನ್ನು ಟೀಕಿಸಿದವರು ಒಂದು ರೀತಿ ಅಭಿಪ್ರಾಯದಲ್ಲಿದ್ದಾರೆ. ಅದೆಂದರೆ ಈಗ ಇರುವ ಮಂತ್ರಿ ಅಧಿಕಾರವನ್ನು ಕಿತ್ತುಕೊಳ್ಳಲು ಪ್ರಯತ್ನದಲ್ಲಿದ್ದಾರೆಂಬ ಭಾವನೆಯು ಇರಬಹುದು. ಹೇಳಬೇಕೆಂದರೆ ಅವರು ಹೊಸ ಸಂವಿಧಾನದಲ್ಲಿ ಹೊಂದಿರುವ ತಪ್ಪು ತಿಳುವಳಿಕೆಯಿಂದ ಹಾಗೆ ಭಾವಿಸಿದ್ದಾರೆ. ಸಂಸತ್ತು ಒಂದು ವೇಳೆ ಯಾವುದೇ ಮಂತ್ರಿಮಂಡಲವನ್ನು ಕಿತ್ತುಹಾಕಲು ಇಚ್ಛಿಸಿದರೆ, ಜನವರಿ ೨೬, ೧೯೫೦ರ ನಂತರವೂ ಸಹ ಅವರಿಗೆ ಮಂತ್ರಿಮಂಡಲ ಮನಸ್ಸಿಗೆ ಬರದಿದ್ದರೆ ಅದನ್ನು ಕಿತ್ತುಹಾಕಲು ತನಗೆ ಯೋಗ್ಯವೆನಿಸಿದ ಕ್ರಮ ಕೈಗೊಳ್ಳಲು ಈಗಲೂ ಬಾಗಿಲು ಸ್ಪಷ್ಟವಾಗಿ ತೆರೆದಿವೆ. ಈಗಲೂ ಇಲ್ಲವೆ ಜನವರಿ ೨೬, ೧೯೫೦ರ ನಂತರವೂ ಹಾಗೆ ಮಾಡಬಹುದು. ಆದ್ದರಿಂದ ಈ ಅನುಚ್ಛೇದವು ಕೇವಲ ಔಪಚಾರಿಕವಾಗಿದ್ದು, ಈಗಿದ್ದ ಮಂತ್ರಿಮಂಡಲವನ್ನು ಹೊಸ ಸಂವಿಧಾನಕ್ಕೆ ಕರೆದುಕೊಂಡು ಹೋಗುವುದಾಗಿದೆ.

**ಶ್ರೀ ಎಚ್. ವಿ. ಕಾಮತ್:** ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ ಅವರು ನಾನು ಎತ್ತಿದ ಪ್ರಶ್ನೆಗೆ ಉತ್ತರಿಸಿಲ್ಲ. ನಾನು ಹೇಳಿದ ಪ್ರಮಾಣವಚನ ಏನಾಯಿತು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಸ್ಸಂಶಯವಾಗಿ ಅದನ್ನು ತೆಗೆದುಕೊಳ್ಳಲಾಗುವುದು. ನೇಮಕಾತಿ ಅಂದರೆ ಪ್ರಮಾಣ ವಚನವನ್ನು ಆ ಹುದ್ದೆ ಸ್ವೀಕರಿಸಿದ ಬಗೆಗೆ ತೆಗೆದುಕೊಳ್ಳುವುದು. ಇಲ್ಲವಾದರೆ ಅದು ನೇಮಕಾತಿ ಆಗುವುದಿಲ್ಲ.

**ಶ್ರೀ ಎಚ್. ವಿ. ಕಾಮತ್:** ಎಂದರೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹೌದು, ನಿಜವಾಗಿಯೂ ಅದೇ ನೇಮಕಾತಿ ಪ್ರಮಾಣವಚನ ಸ್ವೀಕರಿಸುವ ಈ ಪದವನ್ನು ಒಳಗೊಂಡಿದೆ.

**ಮಾನ್ಯ ಸಭಾಧ್ಯಕ್ಷರು:** ನಾನು ಡಾ. ದೇಶ್‌ಮುಖ್ ಇವರ ತಿದ್ದುಪಡಿಯನ್ನು ಮತಕ್ಕೆ ಹಾಕುವೆನು. ಅವರು ಅದನ್ನು ಮಂಡಿಸಿದ್ದಾರೆಂದು ಗ್ರಹಿಸುತ್ತೇನೆ. ಮಂಡಿಸಿದವರು ಇದನ್ನು ಒಪ್ಪಿದ್ದಾರೆ ಎಂದು ನಾನು ಗ್ರಹಿಸುತ್ತೇನೆ.

**ತಿದ್ದುಪಡಿಯು ಸ್ವೀಕೃತವಾಯಿತು, ಅನುಚ್ಛೇದ ೩೧೧ (ಬಿ)**

**ಇದು ತಿದ್ದುಪಡಿಯಾದಂತೆ ಸಂವಿಧಾನಕ್ಕೆ ಸೇರಿಸಲಾಯಿತು.**

## ವಿಧಿ ೩೧೨

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತೇನೆ.

"ಅನುಚ್ಛೇದ ೩೧೨ರ ಬದಲು ಕೆಳಗಣ ಅನುಚ್ಛೇದವನ್ನು ಸೇರಿಸತಕ್ಕದ್ದು.

೩೧೨ (೧) ಪ್ರತಿಯೊಂದು ರಾಜ್ಯದ ವಿಧಾನಪರಿಷತ್ತು, ಇಲ್ಲವೆ ವಿಧಾನಸಭೆಯು ಸದ್ಯಕ್ಕೆ ಮೊದಲನೆಯ ಪರಿಶಿಷ್ಟದಲ್ಲಿ ನಿರ್ದಿಷ್ಟಪಡಿಸಿದಂತೆ ಕಾನೂನುಬದ್ಧವಾಗಿ ರಚಿತವಾಗಿ ಅದನ್ನು ಮೊದಲನೆಯ ಸಲ ಸಂವಿಧಾನದ ಅನ್ವಯ ಕರೆಯುವ ವಿಧಾನಸಭೆ ಇಲ್ಲವೆ, ವಿಧಾನಪರಿಷತ್ತು ಸಂವಿಧಾನವು ಜಾರಿಯಲ್ಲಿ ಬರುವ ನಿಕಟಪೂರ್ವದಲ್ಲಿ ಎಲ್ಲ ಅಧಿಕಾರಗಳನ್ನು ವಿಧಾನಸಭೆ ಇಲ್ಲವೆ ವಿಧಾನಪರಿಷತ್ತು ಚಲಾಯಿಸಬೇಕು.

(೨) ಈ ಅನುಚ್ಛೇದ ಖಂಡ (೧)ರಲ್ಲಿ ಏನೇ ಹೇಳಿದ್ದರೂ ಪ್ರಾಂತ್ಯದ ವಿಧಾನಸಭೆಗೆ ಸಾಮಾನ್ಯ ಚುನಾವಣೆ ಇಲ್ಲವೆ ರಾಜ್ಯದ ವಿಧಾನಸಭೆಯ ಚುನಾವಣೆಯು ಈ ಸಂವಿಧಾನವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಆ ಚುನಾವಣೆ ನಡೆದರೆ ಆ ಚುನಾವಣೆಯನ್ನು ಸಂವಿಧಾನವು ಜಾರಿಯಲ್ಲಿ ಬಂದ ನಂತರ ಮುಗಿಸತಕ್ಕದ್ದು ಮತ್ತು ಸಂವಿಧಾನವು ಜಾರಿಯಲ್ಲಿ ಇಲ್ಲವೆಂದು ಗ್ರಹಿಸತಕ್ಕದ್ದು. ಹಾಗೆ ರಚಿತವಾದ ರಾಜ್ಯ ವಿಧಾನಸಭೆಯು ಇಲ್ಲವೆ ಪ್ರಾಂತ್ಯದ ವಿಧಾನಸಭೆಯ ಈ ಉದ್ದೇಶಕ್ಕಾಗಿ ಈ ಖಂಡದಲ್ಲಿ ಕಾಣಿಸಲಾಗಿದೆ.

(೩) ಯಾರಾದರೊಬ್ಬರು ವಿಧಾನಸಭೆಯ ಅಧ್ಯಕ್ಷ ಇಲ್ಲವೆ ವಿಧಾನಪರಿಷತ್ತಿನ ಅಧ್ಯಕ್ಷ ಪ್ರಾಂತ್ಯದ ಇಲ್ಲವೆ ರಾಜ್ಯದ ಈ ಸಂವಿಧಾನವು ಜಾರಿಯಲ್ಲಿ ಬರುವ ನಿಕಟಪೂರ್ವದಲ್ಲಿ ಅಂತಹ ಹುದೆಯಲ್ಲಿದ್ದರೆ ಅವರು ಸಂವಿಧಾನವು ಜಾರಿಯಲ್ಲಿ ಬಂದ ನಂತರವೂ ಸಹ ಆ ರಾಜ್ಯದ ವಿಧಾನಸಭೆಯ ಸ್ಪೀಕರ್ ಅಧ್ಯಕ್ಷನೆಂದೂ ವಿಧಾನಸಭೆ ಇಲ್ಲವೆ ವಿಧಾನಪರಿಷತ್ತು ಅಸ್ತಿತ್ವದಲ್ಲಿದ್ದು ಈ ಅನುಚ್ಛೇದದ ಖಂಡ (ಎಲ್)ದ ಅನ್ವಯ ಕಾರ್ಯ ನಿರ್ವಹಿಸುವರು. ಪುನರ್ ರಚಿಸುವುದಕ್ಕಾಗಿ ಪರಂತು ಪ್ರಾಂತ್ಯ ವಿಧಾನಸಭೆಯ ಸಾಮಾನ್ಯ ಚುನಾವಣೆಯನ್ನು ಆದೇಶ ಮಾಡಿದರೆ, ಇನ್ನೂ ಸಂವಿಧಾನವು ಜಾರಿಗೆ ಬರುವ ಪೂರ್ವದಲ್ಲಿ ಇಂತಹ ಚುನಾವಣೆಯು ನಡೆದರೆ ಸಂವಿಧಾನದ ಉಪಬಂಧಗಳು ಇನ್ನೂ ಜಾರಿಗೊಳಿಸಿದರು. ಪುನರ್‌ರಚಿತ ವಿಧಾನಸಭೆಯು ಮೊದಲಸಲ ಸಭೆಯನ್ನು ಕರೆಯುವವರೆಗೆ ಅಂತಹ ವಿಧಾನಸಭೆಯು ತನ್ನ ಅಧ್ಯಕ್ಷ (ಸ್ಪೀಕರ್)ನನ್ನು ಆಯ್ಕೆ ಮಾಡುವವರೆಗೆ ಹಿಂದಿನ ಸ್ಪೀಕರ್ (ಅಧ್ಯಕ್ಷನು) ಮುಂದುವರೆಯುತ್ತಾನೆ.

ಇದರ ಉಪಬಂಧಗಳು ಬಹಳ ಸ್ಪಷ್ಟವಾಗಿದೆ. ಅವುಗಳಿಗೆ ಯಾವುದೇ ವಿವರಣೆ ಅವಶ್ಯವೆಂದು ನನಗೆ ಅನಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಇದಕ್ಕೆ ಯಾರದಾದರೂ ತಿದ್ದುಪಡಿಯು ಇದೆಯೆ? ನನಗೆ ಯಾರೂ ಕಾಣಲೊಲ್ಲರು.

* * *

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್:** ಈ ಮಧ್ಯಂತರ ಅವಧಿಯು ಎಲ್ಲಿಯವರೆಗೆ ಇರುತ್ತದೆ. ಅದರ ಮೇಲೆ ಇದು ಅವಲಂಬಿಸಿರುತ್ತದೆ. ಇದು ಅಲ್ಪ ಕಾಲದ್ದು ಆಗಿದೆ. ಅದನ್ನು ವಿಸರ್ಜಿಸುವ ಆವಶ್ಯಕತೆಯು ಇರಲಿಕ್ಕಿಲ್ಲ. ಒಂದು ವೇಳೆ ಅದು ಹಾಗೆ ಆಗದಿದ್ದರೆ ಏನಾಗುತ್ತದೆ. ಪ್ರತಿಯೊಬ್ಬ ಸಂಸತ್ತು ಸದಸ್ಯನು ತಾನು ಆ ಹುದ್ದೆಯಲ್ಲಿ ಮುಂದುವರೆಯಲು ಉತ್ಸುಕನಾಗಿರುತ್ತಾನೆ. ಉಳಿದ ಜನರು ಯಾರಿಗೆ ಒಂದು ಅವಕಾಶ ಸಿಕ್ಕರೆ ಸಭೆಯನ್ನು ಭಂಗಗೊಳಿಸಲು ಯತ್ನಿಸುತ್ತಾನೆಂಬುದು ನಮಗೆ ಗೊತ್ತಿದೆ. ನಾನು ನಿರ್ದಿಷ್ಟವಾಗಿ ಯಾವನೊಬ್ಬ ಸದಸ್ಯನ ಮೇಲೆ ಇಂತಹ ಆಪಾದನೆ ಮಾಡುತ್ತಿಲ್ಲ. ನಾನು ಕೇವಲ ಸಂದರ್ಭಗಳನ್ನು

ಕುರಿತು ಮಾತ್ರ ಹೇಳುತ್ತೇನೆ. ಆ ಬಗೆಗೆ ಕೆಲವು ಉಪಬಂಧಗಳು ಇರಲಿಕ್ಕೇ ಬೇಕು. ಇದರಿಂದ ಅವಶ್ಯವಿದ್ದರೆ, ಒಂದು ಅವಕಾಶವನ್ನು ಕಲ್ಪಿಸಿ, ವಿಧಾನಸಭೆಯನ್ನು ಬದಲಿಸುವ ಸಲುವಾಗಿ, ಚುನಾವಣೆಯ ಅನುಚ್ಛೇದ ತಿದ್ದುಪಡಿಯ ಯೋಗ್ಯತೆಯನ್ನು ಕುರಿತು ನಾನು ಉತ್ತರ ರೂಪವಾಗಿ ಏನೂ ಹೇಳುವುದಿಲ್ಲ.

**ಶ್ರೀ ಎಚ್. ವಿ. ಕಾಮತ್:** ಅಧ್ಯಕ್ಷರಿಗೆ ಸಂಬಂಧಿಸಿದ ಖಂಡ ಏನಾಯಿತು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಮೂಲ ಮಸೂದೆಯಲ್ಲಿದೆ.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ಅನುಚ್ಛೇದ ೩೧೨ ಇದನ್ನು ಮತಕ್ಕೆ ಹಾಕುತ್ತೇನೆ.

ಆ ಪ್ರಶ್ನೆಯು ಹೀಗಿದೆ.

"ಪ್ರಸ್ತಾಪಿಸಿದ ಅನುಚ್ಛೇದ ೩೧೨ ಇದು ಸಂವಿಧಾನದ ಒಂದು ಭಾಗವೆಂದು ಸೇರಿಸಲಾಯಿತು. ಮಂಡನೆಯು ಸ್ವೀಕೃತವಾಯಿತು.

**(ಅನುಚ್ಛೇದ ೩೧೨ವನ್ನು ಸಂವಿಧಾನಕ್ಕೆ ಸೇರಿಸಲಾಯಿತು.)**

* * *

## ಅನುಚ್ಛೇದಗಳು ೩೧೨(ಎ)ರಿಂದ ೩೧೨ ಮತ್ತು ೩೧೨ (ಎಚ್)

**ಪ್ರಾಂತೀಯ ಸರಕಾರಗಳ ರಾಜ್ಯಪಾಲರ ಅಧಿಕಾರ ಕುರಿತು ಉಪಬಂಧಗಳು.**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಹೀಗೆ ಮಂಡಿಸುತ್ತೇನೆ.

ಅನುಚ್ಛೇದ ೩೧೨ರ ನಂತರ ಕೆಳಗಿನ ಅನುಚ್ಛೇದವನ್ನು ಹೊಸದಾಗಿ ಸೇರಿಸತಕ್ಕದ್ದು.

"೩೧೨ (ಎ) ಸಂವಿಧಾನವು ಜಾರಿಯಲ್ಲಿ ಬರುವ ನಿಕಟಪೂರ್ವದಲ್ಲಿ ಯಾವುದೇ ವ್ಯಕ್ತಿಯು ಯಾವುದೇ ಪ್ರಾಂತ್ಯದ ರಾಜ್ಯಪಾಲ ಆಗಿದ್ದರೆ, ಈ ಸಂವಿಧಾನವು ಅಸ್ತಿತ್ವದಲ್ಲಿ ಬಂದ ನಂತರವೂ ಆ ವ್ಯಕ್ತಿಯು ಆ ರಾಜ್ಯದ ರಾಜ್ಯಪಾಲನಾಗಿ ಮುಂದುವರೆಯುವನು.

ಒಂದನೆಯ ಪರಿಶಿಷ್ಟ ಭಾಗ ೧ರಲ್ಲಿ ನಿರ್ದೇಶಿಸಿದಂತೆ ಆ ರಾಜ್ಯಕ್ಕೆ ಹೊಸ ರಾಜ್ಯಪಾಲರನ್ನು ನೇಮಿಸುವವರೆಗೆ ಮುಂದುವರೆಯುತ್ತಾನೆಂದು ಸಂವಿಧಾನದ ಅಧ್ಯಾಯ ೪ರ ಭಾಗ XIರಲ್ಲಿ ಅವನ ಅಧಿಕಾರದ ಬಗೆಗೆ ಹೇಳಲಾಗಿದೆ.

೩೧೨ (ಬಿ) ಇಂತಹ ವ್ಯಕ್ತಿಯನ್ನು ರಾಜ್ಯದ ತಾತ್ಕಾಲಿಕ ರಾಜ್ಯಪಾಲನನ್ನಾಗಿ ನೇಮಕ ಮಾಡಬಹುದು. ಅಂಥವರು ಆ ರಾಜ್ಯದ ಮಂತ್ರಿಮಂಡಲದ ಸದಸ್ಯರಾಗಿರುತ್ತಾರೆ. ಈ ಸಂವಿಧಾನ ಜಾರಿಯಲ್ಲಿ ಬರುವ ನಿಕಟಪೂರ್ವದಲ್ಲಿ ಈ ಮಂತ್ರಿಗಳು ಸಂವಿಧಾನವು ಜಾರಿಯಲ್ಲಿ ಬಂದ ನಂತರವೂ ಸಹ ಆ ರಾಜ್ಯದ ಮಂತ್ರಿ ಮಂಡಲದ ಸದಸ್ಯರಾಗಿ ಈ ಸಂವಿಧಾನದ ಅಡಿಯಲ್ಲಿಯೂ ಉಪಬಂಧಗಳ ಅನ್ವಯ ಮುಂದುವರೆಯುವರು.

೩೧೨ (ಕೆ) ರಾಜ್ಯಗಳ ಸದನ ಇಲ್ಲವೆ ಸದನಗಳು ಸದ್ಯಕ್ಕೆ ಮೊದಲನೆಯ ಪರಿಶಿಷ್ಟದ ಭಾಗ ೧೧೧ರಲ್ಲಿ ನಿರ್ದಿಷ್ಟಪಡಿಸಿದಂತೆ ಕಾನೂನು ಪ್ರಕಾರ ಪುನರ್ ರಚನೆಯಾಗಿ ಅವನ್ನು ಹಾಗೂ ಸದನ ಪ್ರಾರಂಭವಾಗುವವರೆಗೆ ಅವರಿಗೆ ಕೊಟ್ಟ ಅಧಿಕಾರವನ್ನು ಚಲಾಯಿಸಬಹುದು. ಮತ್ತು ತಮ್ಮ ಕಾರ್ಯಗಳನ್ನು ಮಾಡಬಹುದು.

೩೧೨ (ಡಿ) ಸದ್ಯಕ್ಕೆ ಯಾವುದೇ ರಾಜ್ಯದ ರಾಜಪ್ರಮುಖನಾಗಿ ಮೊದಲನೆಯ ಪರಿಶಿಷ್ಟದ ಭಾಗ ೩ರಲ್ಲಿ ನಿರ್ದಿಷ್ಟಪಡಿಸಿದಂತೆ ಅವನು ಮಂತ್ರಿಮಂಡಲದ ಸದಸ್ಯರನ್ನು ನೇಮಿಸಬಹುದು. ಆ ರಾಜಪ್ರಮುಖನು ಸಂವಿಧಾನದ ಅಡಿಯಲ್ಲೇ ನೇಮಕಾತಿ ಮಾಡುತ್ತಾನೆ. ಅವರು ಮಂತ್ರಿಮಂಡಲದ ಸದಸ್ಯರಾಗುವರು. ಇಂತಹ ನೇಮಕಗಳು ಇಂತಹ ಸ್ಥಾನವನ್ನು ಹೊಂದಿದ ಅಧಿಕಾರಿಗಳು ಈ ಸಂವಿಧಾನವು ಜಾರಿಗೆ ಬರುವ

ನಿಕಟಪೂರ್ವದಲ್ಲಿ ಆಗಿದ್ದರೆ, ಈ ಸಂವಿಧಾನವು ಜಾರಿಯಲ್ಲಿ ಬಂದ ನಂತರವೂ ಆ ಮಂತ್ರಿಗಳು ಆ ರಾಜ್ಯದ ಮಂತ್ರಿಗಳಾಗಿ ಮುಂದುವರೆಯುವರು, ಮತ್ತು ಅವರು ಈ ಸಂವಿಧಾನದ ಅಡಿಯಲ್ಲಿಯೂ ಆ ಹುದ್ದೆಯಲ್ಲಿ ಮಂತ್ರಿಮಂಡಲದ ಸದಸ್ಯರಾಗಿರುವರು.

ಅನುಚ್ಛೇದ ೩೧೨ (ಇ)ದ ಸಲುವಾಗಿ ನಾನು ತಿದ್ದುಪಡಿ ಸಂಖ್ಯೆ ೨೧ ಇದನ್ನು ಮಂಡಿಸುವೆನು:

ಆ ತಿದ್ದುಪಡಿ ಸಂಖ್ಯೆ ೧೬ರ ಮೇಲೆ, ಹೊಸ ಅನುಚ್ಛೇದ ೩೧೨ (ಇ) ಇದನ್ನು ಸೇರಿಸತಕ್ಕದ್ದು.

"೩೧೨ (ಎಫ್) ಸಂವಿಧಾನದ ಅಡಿಯಲ್ಲಿಯ ಉಪಬಂಧಗಳಿಗನುಸಾರವಾಗಿ ಮೂರು ವರ್ಷಗಳವರೆಗೆ ನಡೆಯಬೇಕಾದ ಚುನಾವಣೆಯು ಭಾರತದ ಜನಸಂಖ್ಯೆಯನ್ನು ಇಲ್ಲವೆ ಯಾವುದೇ ಭಾಗದಲ್ಲಿನ ಜನಸಂಖ್ಯೆಯನ್ನು ಗೊತ್ತುಪಡಿಸಲಾಗುವುದು. ಈ ಸಂವಿಧಾನದಲ್ಲಿ ಯಾವುದೇ ಭಾಗದಲ್ಲಿ ಏನೇ ಹೇಳಿದ್ದರೂ, ರಾಷ್ಟ್ರಪತಿಯು ಆದೇಶದ ಮೂಲಕ ನಿರ್ದೇಶನ ನೀಡಬಹುದು.

೩೧೨ (ಜಿ) ಸಂವಿಧಾನವು ಜಾರಿಗೆ ಬರುವ ನಿಕಟಪೂರ್ವದಲ್ಲಿ ಒಂದು ಕರಡು ರಾಜ್ಯದ ವಿಧಾನಸಭೆಯ ಮುಂದೆ ಇದ್ದರೆ, ಇಲ್ಲವೆ ಭಾರತದ ಸಾರ್ವಭೌಮತ್ವದ ಮುಂದೆ ಇಲ್ಲವೆ ಸಂಸತ್ತಿನ ಮುಂದೆ ಇದ್ದರೆ, ಇಲ್ಲವೆ ಭಾರತದ ಸಾರ್ವಭೌಮತ್ವದ ಮುಂದೆ ಇಲ್ಲವೆ, ಸಂಸತ್ತಿನ ಮುಂದೆ ಇದ್ದರೆ, ಅದನ್ನು ಸಂವಿಧಾನದ ನಿಯಮಗಳಲ್ಲಿ ಆ ರಾಜ್ಯದ ಅಡಿಯಲ್ಲಿ ಅಳವಡಿಸಿದ್ದರೆ ಇಲ್ಲವೆ ರಾಜ್ಯ ವಿಧಾನಸಭೆಯು ಈ ಸಂವಿಧಾನದ ಇಲ್ಲವೆ ಈ ಬಗ್ಗೆ ಸಂಸತ್ತು ಇಲ್ಲವೆ ವಿಧಾನಸಭೆಯು ಮಾಡಬಹುದಾದ ಉಪಬಂಧಗಳಿಗೆ ಒಳಪಟ್ಟು ಆ ರಾಜ್ಯಕ್ಕೆ ಸಂಬಂಧಿಸಿದಂತೆ ಈ ಸಂವಿಧಾನದ ಅಡಿಯಲ್ಲಿ ಸಂಸತ್ತು ಇಲ್ಲವೆ ವಿಧಾನಸಭೆಗಳು ಮುಂದುವರೆದು, ಭಾರತದ ಸಾರ್ವಭೌಮತ್ವದ ಶಾಸಕಾಂಗ ಇಲ್ಲವೆ ಪ್ರಾಂತಗಳ ವಿಧಾನಸಭೆಗಳನ್ನು ಉಲ್ಲೇಖಿಸಿ ಆಯಾ ರಾಜ್ಯಕ್ಕೆ ಮುಂದುವರೆಯುವವು ಮತ್ತು ಆ ವ್ಯವಹರಣೆಗಳು ಸಂಸತ್ತಿನಲ್ಲಿ ಇಲವೇ ವಿಧಾನಸಭೆಯಲ್ಲಿ ನಡೆದಿವೆಯೆಂದು ಗ್ರಹಿಸಲಾಗುವುದು.

೩೧೨ (ಎಚ್) ಭಾರತದ ಸಂಚಿತ ನಿಧಿಯನ್ನು ಕುರಿತು ಇಲ್ಲವೆ ಯಾವುದೇ ರಾಜ್ಯದ ಈ ಸಂವಿಧಾನದ ಉಪಬಂಧಗಳು ಮತ್ತು ಹಣ ವಿನಿಯೋಗವನ್ನು ಕುರಿತು, ಮತ್ತು ಹಣ ಸ್ವೀಕರಿಸಿದ್ದು, ಇಲ್ಲವೆ ಸಾಲದ ರೂಪದಲ್ಲಿ ಎತ್ತಿದ ಹಣ, ಇಲ್ಲವೆ ವ್ಯಯ ಮಾಡಿದ್ದು, ಭಾರತ ಸರಕಾರ ಖರ್ಚು ಮಾಡಿದ್ದು ಇಲ್ಲವೆ ರಾಜ್ಯ ಸರಕಾರವು ಖರ್ಚುಮಾಡಿದ್ದು, ಸಂವಿಧಾನವು ಜಾರಿಗೆ ಬರುವ ನಿಕಟಪೂರ್ವದಲ್ಲಿದ್ದುದಕ್ಕೆ ಇದು ಅನ್ವಯಿಸತಕ್ಕದ್ದಲ್ಲ. ಈ ಸಂವಿಧಾನದ ಜಾರಿಗೆ ಬಂದ ನಂತರ ಮತ್ತು ಮಾರ್ಚ್ ತಿಂಗಳ ಮೂವತ್ತೊಂದನೆಯ ದಿನಾಂಕದ ಈ ಅವಧಿಯಲ್ಲಿ ಕಾನೂನುಬದ್ಧವಾಗಿ ಖರ್ಚು ಮಾಡಲು ಅಧಿಕಾರ ಕೊಟ್ಟದ್ದೆಂದು ಗ್ರಹಿಸಲಾಗುವುದು.

ಖರ್ಚು ಪರಿಶಿಷ್ಟಗಳಲ್ಲಿ ಕಾಣಿಸಿದ ವಿಷಯಕ್ಕೆ ಅಧಿಕಾರ ಕೊಟ್ಟದ್ದು, ಕಾನೂನು ಪ್ರಕಾರ ಭಾರತ ಸರಕಾರದ ಅಧಿನಿಯಮ ೧೯೩೫ ಇದರ ಅನ್ವಯ ಪರವಾನಗಿ ಕೊಟ್ಟದ್ದು ಭಾರತದ ಗವರ್ನರ್ ಜನರಲ್ಲರು ಭಾರತ ಸರಕಾರದ ಸಾರ್ವಭೌಮ, ಆಯಾ ರಾಜ್ಯಪಾಲರು ಇಲ್ಲವೆ ರಾಜ್ಯದ ಪ್ರಮುಖರು, ಅಂತಹ ಕಾನೂನಿನ ನಿಯಮಗಳಿಗನುಸಾರವಾಗಿ, ಖರ್ಚಿಗೆ ಅನುಕೂಲ ಮಾಡಿಕೊಡುವ ನಿಯಮಗಳನ್ವಯ, ರಾಜ್ಯದ ರಾಜಸ್ವದಿಂದ ಅಂತಹ ಹಣವನ್ನು ತೆಗೆದುಕೊಳ್ಳಲು ಈ ಸಂವಿಧಾನ ಜಾರಿಗೆ ಬರುವ ಪೂರ್ವದಲ್ಲಿ ಘಟಿಸಿದ್ದರೆ, ಅವರಿಗೆ ಅಧಿಕಾರ ಕೊಡುವುದು."

ಈ ಅನುಚ್ಛೇದಗಳ ಬಗೆಗೆ ಏನಾದರೂ ಹೇಳುವುದಿದೆ ಎಂದು ನನಗೆ ಅನಿಸುವುದಿಲ್ಲ. ನೋಟೀಸಿನಲ್ಲಿ ಎರಡು ತಿದ್ದುಪಡಿಗಳಿವೆ. ಅವುಗಳ ಸಂಖ್ಯೆ ೧೮ ಹಾಗೂ ೧೯ ಇರುತ್ತವೆ. ಅದರಲ್ಲೇ ತಾತ್ಕಾಲಿಕ ಈ

ಪದವನ್ನು ಅನುಚ್ಛೇದ ೩೧೨(ಎ) ಮತ್ತು ೩೧೨(ಬಿ) ಇವುಗಳಿಂದ ಕೈ ಬಿಡುವುದು, ನಾನು ಈ ತಿದ್ದುಪಡಿಗಳನ್ನು ಅಂಗೀಕರಿಸಲು ಇಚ್ಛಿಸುತ್ತೇನೆ.

**ಡಾ. ಪಿ. ಎಸ್. ದೇಶ್‌ಮುಖ್:** ಮಾನ್ಯ ಅಧ್ಯಕ್ಷರೆ, ನಾನು ಮಂಡಿಸುವೆನು.

"ತಿದ್ದುಪಡಿ ಸಂಖ್ಯೆ ೧೬ ಪ್ರಸ್ತಾಪಿಸಲಿರುವ ಹೊಸ ಅನುಚ್ಛೇದ ೩೧೨(ಬಿ) ಇದರಲ್ಲಿ 'ತಾತ್ಕಾಲಿಕ' ಎಲ್ಲಿ ಎಲ್ಲಿ ಬರುತ್ತದೆಯೋ ಅಲ್ಲಿ ಅದನ್ನು ಕೈ ಬಿಡಬೇಕು."

"ಹೊಸ ತಿದ್ದುಪಡಿ ಅನುಚ್ಛೇದ ೩೧೨(ಬಿ) ಇದರಲ್ಲಿ 'ತಾತ್ಕಾಲಿಕ' ಎಂಬ ಪದ ಎಲ್ಲಿ ಇರುತ್ತದೆಯೋ ಅಲ್ಲಿ ಅದನ್ನು ಕೈಬಿಡಬೇಕು."

ಡಾ. ಬಿ.ಆರ್. ಅಂಬೇಡ್ಕರ್ ಅವರು ತಿದ್ದುಪಡಿಗಳನ್ನು ಸ್ವೀಕರಿಸಿದ್ದಕ್ಕಾಗಿ ನನಗೆ ಸಂತೋಷವಾಗಿದೆ. ನನ್ನ ಕಾರಣಗಳೇನೆಂದರೆ, ಇದು ರಾಷ್ಟ್ರಪತಿ ಇಲ್ಲವೆ ರಾಜ್ಯಪಾಲರ ಘನತೆ, ಗೌರವಕ್ಕೆ ಧಕ್ಕೆ ಬರುವಂತೆ ತಾತ್ಕಾಲಿಕ ಪದವನ್ನು ಸೇರಿಸಲಾಗಿದೆ. ಸಂಸತ್ತು ಇದನ್ನು ಸ್ವೀಕರಿಸಿದ್ದಕ್ಕಾಗಿ ಮತ್ತು ಸಂಸತ್ತು ಒಪ್ಪಿಸಿದ್ದಕ್ಕಾಗಿ ನಾನು ಧನ್ಯವಾದಗಳನ್ನು ಹೇಳುತ್ತೇನೆ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಿಲ್ಲ. ನನ್ನ ಗೆಳೆಯರಾದ ಶ್ರೀ ಕಾಮತ್ ಮತ್ತು ಪ್ರೊ. ಸಕ್ಸೇನಾ ಇವರು ಈ ಪರಿಚ್ಛೇದ ೩೧೨ (ಇ) ಇದನ್ನು ಆಳವಾಗಿ ಓದಿದ್ದರೆ, ನಿಜವಾಗಿ ಈ ಅನುಚ್ಛೇದಕ್ಕೆ ಸೀಮಿತ ಮಹತ್ವವಿದೆ ಎಂದು ಅರಿವಾಗುವುದು ಮತ್ತು ಈ ಅನುಚ್ಛೇದದಲ್ಲಿ ಎತ್ತಿದ ಪ್ರಶ್ನೆಯು ಏನೆಂದರೆ, ಯಾವುದೇ ಭಾಗದ ಜನಸಂಖ್ಯೆ ಕುರಿತು ಈ ಅನುಚ್ಛೇದದಲ್ಲಿ ಹೇಳಲಾಗಿದೆ ಎಂಬುದು ನನ್ನ ಗೆಳೆಯರಿಗೆ ಚೆನ್ನಾಗಿ ಗೊತ್ತಿದೆ. ನಾವು ಈ ಒಳಗಾಗಿ ಅಂಗೀಕರಿಸಿದ ಅನೇಕ ಅನುಚ್ಛೇದಗಳ ಅನ್ವಯ ಚುನಾವಣೆಯ ಸಲುವಾಗಿ ಜನಸಂಖ್ಯೆ ಇದನ್ನು ಕಳೆದ ಜನಗಣತಿಯ ಮೇಲಿಂದ ನಿರ್ಧರಿಸಬೇಕು. ಭಾರತ ಮತ್ತು ಪಾಕಿಸ್ತಾನ ಎಂದು ಭಾಗವಾಗಿದ್ದರಿಂದ, ೧೯೪೧ರ ಜನಗಣತಿಯನ್ನು ನಾವು ಪರಿಗಣಿಸಲು ಬರುವುದಿಲ್ಲ. ಅದರ ಪರಿಣಾಮವಾಗಿ ಮತಕ್ಷೇತ್ರಗಳನ್ನು ಬದಲಿ ಮಾಡಿದ್ದು, ಅವುಗಳಿಗೆ ಸದಸ್ಯರನ್ನು ಆರಿಸಿ ಕಳುಹಿಸುವುದು ಮುಂತಾದವು ಸಾಕಷ್ಟು ತೊಂದರೆಗಳಿಂದ ಕೂಡಿದೆ. ಆದ್ದರಿಂದ ಯಾರಾದರೊಬ್ಬರು ಅಧಿಕಾರದಲ್ಲಿ ಇರುವವರು ಇವುಗಳನ್ನು ಚಲಾಯಿಸತಕ್ಕದ್ದು. ಯಾವ ಜನಸಂಖ್ಯೆಯನ್ನು ತೆಗೆದುಕೊಳ್ಳಬೇಕು, ಆ ಜನಸಂಖ್ಯೆಯನ್ನು ಯಾವ ಆಧಾರದ ಮೇಲೆ ಪರಿಗಣಿಸಬೇಕು ಇಲ್ಲವೆ, ಹೊಸ ಜನಗಣತಿ ನಾನು ಮೇಲೆ ಹೇಳಿದಂತೆ ಕೇವಲ ಮತ ಚಲಾಯಿಸುವುದರ ಮೇಲೆ ಅವಲಂಬಿಸಿಲ್ಲ. ಈ ವಿಷಯಗಳನ್ನು ರಾಷ್ಟ್ರಪತಿಗಳ ವಿವೇಚನೆಗೆ ಬಿಡಲಾಗಿದೆ. ಆದ್ದರಿಂದ ಸಂಸತ್ತಿನ ಅನುಮತಿ ಯಾವ ರೀತಿ ಸಹಾಯವಾಗುತ್ತದೆ ನನಗೆ ತಿಳಿಯದಾಗಿದೆ. ಈ ರೀತಿ ಪ್ರಕರಣದಲ್ಲಿ ಅದು ಹೇಗೆ ಸಹಾಯ ಮಾಡುತ್ತದೆ ಎಂದು ತಿಳಿಯದಾಗಿದೆ. ಇದು ಕೇವಲ ಆಡಳಿತಾತ್ಮಕವಾದ ವಿಷಯ. ವಿಶೇಷ ಸಂದರ್ಭಗಳಲ್ಲಿ ಇದು ಅವಶ್ಯವಿದೆ. ಈ ವಿಷಯವನ್ನು ರಾಷ್ಟ್ರಪತಿಗಳಿಗೆ ಬಿಡುವುದು ಹೆಚ್ಚು ಅಪೇಕ್ಷಣೀಯವಾದುದು. ನಮಗೆ ನಿಜವಾಗಿ ಇದು ಆದಷ್ಟು ಬೇಗ ನಿಕಾಲೆಯಾಗಬೇಕು. ಆದ್ದರಿಂದ ಶ್ರೀ ಕಾಮತ್ ಅವರು ತಂದ ತಿದ್ದುಪಡಿಯನ್ನು ನಾನು ಸ್ವೀಕರಿಸುವುದಿಲ್ಲ.

**ಶ್ರೀ ಎಚ್. ವಿ. ಕಾಮತ್:** ನಾನು ತಂದ ತಿದ್ದುಪಡಿಗೆ ತಾತ್ವಿಕವಾಗಿ ಡಾ. ಅಂಬೇಡ್ಕರ್ ಅವರದು ಏನಾದರೂ ತಕರಾರು ಇದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅದನ್ನು ಸ್ವೀಕರಿಸುವುದಿಲ್ಲ. ಈ ಅನುಚ್ಛೇದದ ಒಳ

ಅರ್ಥ ಬಹು ಸೀಮಿತವಾಗಿದೆ. ಇದು ಜನಸಂಖ್ಯೆಯು ಗೊತ್ತುಪಡಿಸುವ ಆಧಾರದ ಮೇಲೆ ಇದೆ. ಆದರೆ ಮತಕ್ಷೇತ್ರಗಳನ್ನು ಒಡೆಯುವುದು ಅಲ್ಲ. ಸಂವಿಧಾನದ ಪ್ರಕಾರ ಮತದಾರರ ಕ್ಷೇತ್ರಗಳು ಬದಲಿಯಾಗುತ್ತವೆ.

**ಅನುಚ್ಛೇದ ೩೧೨ (ಎ), ೩೧೨ (ಇ), ೩೧೨ (ಜಿ) ಮತ್ತು ೩೧೨ (ಎಚ್) ಡಾ. ಅಂಬೇಡ್ಕರ್ ಅವರು ಸೂಚಿಸಿದಂತೆ ಮತ್ತು ತಿದ್ದುಪಡಿಯಾದ ಶ್ರೀ ಪಿ. ಎಸ್. ದೇಶ್‌ಮುಖ್ ಅವರ ತಿದ್ದುಪಡಿ ಸ್ವೀಕೃತವಾಯಿತು ಮತ್ತು ಸಂವಿಧಾನಕ್ಕೆ ಸೇರಿಸಲಾಯಿತು.**

## ವಿಧಿ ೩೧೩

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈಗ ಮಂಡಿಸುತ್ತೇನೆ.

"ಅನುಚ್ಛೇದ ೩೧೩ರ ಬದಲು ಕೆಳಗೆ ಕಾಣಿಸಿದಂತೆ ಸೇರಿಸಬೇಕು.

"೩೧೩ (೧) ಯಾವುದೇ ತೊಂದರೆಗಳನ್ನು ನಿವಾರಿಸುವುದಕ್ಕಾಗಿ ರಾಷ್ಟ್ರಪತಿಗಳು, ಅದರಲ್ಲಿಯೂ ವಿಶೇಷವಾಗಿ ಮಧ್ಯಕಾಲಿಕ ಉಪಬಂಧಗಳು ಭಾರತ ಸರಕಾರದ ಅಧಿನಿಯಮ ೧೯೩೫ ಇದರ ಅನ್ವಯ ಹಾಗೂ ಈ ಸಂವಿಧಾನವನ್ನು ಜಾರಿಗೆ ತರಲು ಆದೇಶದ ಮೂಲಕ ನಿರ್ದೇಶನ ಕೊಟ್ಟು ಅವಶ್ಯವಿರುವ ಅವಧಿಯವರೆಗೆ ಈ ಸಂವಿಧಾನವನ್ನು ಜಾರಿಗೆ ತರಲು ನಿರ್ದಿಷ್ಟಪಡಿಸಿದಂತೆ ಮಾಡಬೇಕು. ಹೀಗೆ ಅಳವಡಿಸುವುದರ ಪರಿಣಾಮವಾಗಿ ಇಲ್ಲವೆ ಅವುಗಳಿಗೆ ಹೆಚ್ಚಿನವುಗಳನ್ನು ಕೂಡಿಸುವುದರ ಮೂಲಕ ಇಲ್ಲವೆ ಅವುಗಳನ್ನು ಕೈಬಿಡುವ ಮೂಲಕ, ಯಾವುದು ಅವಶ್ಯವಿದೆಯೋ ಅದರ ಮೂಲಕ ಇಲ್ಲವೆ ಯಾವುದು ಸಮಯೋಚಿತವೋ ಹಾಗೆ ಮಾಡತಕ್ಕದ್ದು.

ಪರಂತು, ಕಾನೂನುಬದ್ಧವಾದ ಸಂಸತ್ತು ಸಂವಿಧಾನ ಭಾಗ V ಅಧ್ಯಾಯ ೧೧ರ ಅನ್ವಯ ರಚಿತವಾಗಿ ಸಂಸತ್ತಿನ ಮೊದಲಿನ ಅಧಿವೇಶನ ನಡೆದ ನಂತರ ಅಂತಹ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(೨) ಈ ಅನುಚ್ಛೇದದ (೧)ನೆಯ ಖಂಡದಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು ಸಂಸತ್ತಿನ ಮುಂದೆ ಇಡತಕ್ಕದ್ದು.

ಭಾರತ ಸರಕಾರದ ಅಧಿನಿಯಮದ ಉಪಬಂಧಗಳನ್ನು ಇಲ್ಲಿ ಪುನಃ ಸೇರಿಸಲಾಗಿದೆ. ಯಾಕೆಂದರೆ ಅವು ಈ ಮಧ್ಯಂತರ ಕಾಲದಲ್ಲಿ ಅವಶ್ಯಕವಾಗಿವೆ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಈ ಉಪಬಂಧಗಳ ಆವಶ್ಯಕತೆಯ ಬಗೆಗೆ ಸಾಕಷ್ಟು ತಪ್ಪು ಗ್ರಹಿಕೆ ಇದೆ. ಅಂದು ಈ ಅನುಚ್ಛೇದ ೩೧೩ರಲ್ಲಿಯ ಉಪಬಂಧಗಳನ್ನು ಕುರಿತು ನನ್ನ ಗೆಳೆಯರಾದ ಡಾ. ದೇಶ್‌ಮುಖ್ ಅವರು ಬಹಳ ವಿನಯದಿಂದ ಸಮರ್ಪಕ ಉತ್ತರವನ್ನು ಕೊಟ್ಟಿದ್ದಾರೆ, ಮತ್ತು ಅವರು ತಮ್ಮ ತಿದ್ದುಪಡಿಯನ್ನು ಒತ್ತಾಯಿಸುವುದಿಲ್ಲವೆಂದು ವಿನಯಪೂರ್ವಕ ಹೇಳಿದ್ದಾರೆ. ಅನುಚ್ಛೇದ ೩೧೩ಕ್ಕೆ ಕೆಲವು ವಸ್ತುಸ್ಥಿತಿಯನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆಂದು ಅನಿಸುತ್ತದೆ. ಮೊದಲನೆಯ ವಸ್ತುಸ್ಥಿತಿ ನಾನು ಎಲ್ಲ ರೀತಿಯಿಂದ ಒಪ್ಪಿಕೊಳ್ಳಬೇಕಾದುದು. ಮಧ್ಯಂತರ ಅವಧಿಯಲ್ಲಿ ಕೆಲವು ತೊಂದರೆಗಳು ಉದ್ಭವಿಸುವುದು ಸಹಜ. ನಿವಾರಣೆ ಕರಡು ಸಮಿತಿಗೆ ಅಸಾಧ್ಯವಾಗಬಹುದು. ಇಲ್ಲವೆ ಈ ಸದನದ ಯಾವುದೇ ಸದಸ್ಯನಿಗೆ ಆ ವಿಷಯ ತೊಂದರೆಯಾಗಲಿಕ್ಕಿಲ್ಲ. ಈಗಾಗಲೇ ಮುಂದಿನದೆಲ್ಲವನ್ನು ಊಹಿಸಲು ಸಾಧ್ಯವಿಲ್ಲ ಹಾಗೂ ಆ ಬಗ್ಗೆ ಯಾವುದೇ ಉಪಬಂಧ ಕಲ್ಪಿಸಲು ಸಾಧ್ಯವಿಲ್ಲ. ಆದ್ದರಿಂದ ಎಲ್ಲಿಯೋ ಒಂದೆಡೆ ಕೆಲವು ಅಧಿಕಾರಿಗಳನ್ನು ಇಂತಹ ಮುಂದೆ ಕಾಣದಂತಹ ಸಂದರ್ಭಕ್ಕೆ ಉಪಬಂಧಗಳನ್ನು

ಕಲ್ಪಿಸಲು ಅಧಿಕಾರ ಕೊಡಬೇಕು. ಅಂಥ ಅಧಿಕಾರಿಗೆ ಎಲ್ಲಿಯವರೆಗೆ ಮತ್ತು ಎಷ್ಟು ಅವಧಿಗೆ ಅಧಿಕಾರ ಕೊಡಬೇಕೆಂಬುದು ನಮ್ಮ ಮುಂದೆ ಇರುವ ಪ್ರಶ್ನೆಯಾಗಿದೆ. ನನ್ನ ಗೆಳೆಯರಾದ ಶ್ರೀ ದೇಶ್‌ಮುಖ್‌ರು ಅನುಚ್ಛೇದ ೩೧೦ ಭಾರತ ಸರಕಾರ ಅಧಿನಿಯಮ ೧೯೩೫ರ ಅನ್ವಯ ಆರು ತಿಂಗಳವರೆಗೆ ಇರಬೇಕೆಂದು ಹೇಳಿದ್ದಾರೆ. ಅವರು ತಪ್ಪು ಗ್ರಹಿಸಿದ್ದಾರೆಂದು ನನಗೆ ಅನಿಸುತ್ತದೆ. ಭಾಗ ೧೧೧ ಜಾರಿಗೆ ಬಂದನಂತರ ಈ ಅಧಿಕಾರವು ಆರು ತಿಂಗಳವರೆಗೆ ಇರುತ್ತದೆ. ಹೊಸ ಸಂಸತ್ತು ಜಾರಿಗೆ ಬಂದ ಕೂಡಲೇ ಹೊಸ ಸಂಸತ್ತಿನ ಹೊಸ ಉಪಬಂಧಗಳು ಜಾರಿಯಲ್ಲಿ ಬಂದನಂತರ ಅನುಚ್ಛೇದ ೩೧೩ರ ಅನ್ವಯ ಸಂವಿಧಾನದ ಉಪಬಂಧಗಳು ತಮ್ಮಷ್ಟಕ್ಕೆ ತಾವೇ ಅಂತ್ಯಗೊಳ್ಳುತ್ತವೆ. ಈ ಕಾರಣ ರಾಷ್ಟ್ರಪತಿಗಳು ಈ ಅನುಚ್ಛೇದ ೩೧೩ರಲ್ಲಿ ಕೊಟ್ಟ ಅಧಿಕಾರವನ್ನು ಒಂದು ದಿನವೂ ಸಹ ಹೆಚ್ಚಿಗೆ ಚಲಾಯಿಸಲು ಅನುಮತಿ ಕೊಡುವುದಿಲ್ಲ. ಸೂಕ್ತ ತಿದ್ದುಪಡಿ ಮಾಡಲು ಅಧಿಕಾರವುಳ್ಳ ಅಧಿಕಾರಗಳು ಮಾಡಿದ ನಿಯಮಗಳು ಜಾರಿಯಲ್ಲಿ ಬರುವವು. ಅನುಚ್ಛೇದ ೩೧೩ರಲ್ಲಿ ಇನ್ನೊಂದು ವಿಶೇಷವಾದ ತೊಂದರೆ ಉದ್ಭವಿಸಬಹುದು ಮತ್ತು ಅವುಗಳಿಗೆ ಪರಿಹಾರ ಕಂಡುಹಿಡಿಯುವುದು ಮತ್ತು ಅದಕ್ಕಾಗಿ ಯಾರೊಬ್ಬರಿಗಾದರೂ ಅಧಿಕಾರ ಕೊಡಬೇಕು ಈ ವಿಷಯವನ್ನು ಒಪ್ಪಿಕೊಳ್ಳೋಣ. ನಾವು ನಿಜವಾಗಿ ಗಮನಿಸಬೇಕಾದ ಪ್ರಶ್ನೆ ಎಂದರೆ, ಈ ಅಧಿಕಾರವು ರಾಷ್ಟ್ರಪತಿಗಳಲ್ಲಿ ಇರಬೇಕೇ? ಇಲ್ಲವೆ ತಾತ್ಕಾಲಿಕ ಸಂಸತ್ತಿಗೆ ಇರಬೇಕೇ? ಇದರ ಹೊರತು ಬೇರೆ ಪ್ರಶ್ನೆಯೇ ಇಲ್ಲ. ಈ ಕಾರಣಕ್ಕಾಗಿ, ಅನುಚ್ಛೇದ ೩೧೩ರ ಅನುಬಂಧಗಳನ್ನು, ಉಪಬಂಧಗಳನ್ನು ಸ್ವೀಕರಿಸಬೇಕೆಂದು ಕರಡು ಸಮಿತಿಗೆ ಅನಿಸಿತು. ಸಂಸತ್ತಿನ ತಾತ್ಕಾಲಿಕ ಅವಧಿ ಅತಿ ಕಡಿಮೆ ಇದ್ದುದರಿಂದ ಅದು ಇನ್ನಿತರ ಕೆಲಸದಲ್ಲಿ ತೊಡಗಿದ್ದು, ಈ ಅವಧಿಯಲ್ಲಿ ಇಂತಹ ಪರಿಸ್ಥಿತಿಯಲ್ಲಿ ತಕ್ಷಣ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ಕೊಡಬೇಕೆಂದು ಅನಿಸಿತು. ಇರುವ ತೊಂದರೆಗಳಿಗೆ ಎರಡು ಉದಾಹರಣೆಗಳನ್ನು ನಾನು ಕೊಡಬಯಸುತ್ತೇನೆ. ನಾವು ನಮ್ಮ ಸಂವಿಧಾನದಲ್ಲಿ ತೆರಿಗೆಯನ್ನು ಕುರಿತು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳ ಬಗ್ಗೆ ಅನೇಕ ಬದಲಾವಣೆಯನ್ನು ಮಾಡಿದ್ದೇವೆ. ಮುಂದಿನ ಜನವರಿ ೨೬, ೧೯೫೦ರ ನಂತರ ಸಂವಿಧಾನ ಜಾರಿಯಲ್ಲಿ ಬರುತ್ತದೆ. ಅನಂತರ ಈಗಿದ್ದ ಭಾರತ ಸರಕಾರ ಅಧಿನಿಯಮದಲ್ಲಿ ಇರುವ ಭಾರತದ ರಾಜ್ಯಗಳ ಅಧಿಕಾರವು ತನ್ನಷ್ಟಕ್ಕೇ ತಾನೇ ಅಂತ್ಯವಾಗುತ್ತದೆ. ಆದ್ದರಿಂದ ಅಲ್ಲೋಲ ಕಲ್ಲೋಲ ಉಂಟಾಗುತ್ತದೆ ಮತ್ತು ಈ ವಿಷಯವನ್ನು ಕ್ರಮಬದ್ಧವಾಗಿ ತಾತ್ಕಾಲಿಕ ಸಂಸತ್ತಿನ ಪ್ರಕ್ರಿಯೆಗೊಳಿಸಿದ್ದಾದರೆ ಅಂಥ ಅನಾಹುತಗಳು ಬಹಳ ದಿನಗಳವರೆಗೆ ಮುಂದುವರೆಯಬಹುದೆಂದೂ ಅವರು ಮನಗಾಣಬಹುದು. ಆದ್ದರಿಂದ ಒಂದು ಮಸೂದೆಯನ್ನು ಮಾಡಿ ಅದನ್ನು ಮೂರು ಸಲ ಓದಿ ನಂತರ ಆಯ್ಕೆ ಸಮಿತಿಗೆ ಕಳುಹಿಸಿತು. ವಿಚಾರಣೆಗೆ ಮಂಡಿಸುವುದು, ಪ್ರಚಾರಕ್ಕೆ ಹಂಚುವುದು ಇವೇ ಮುಂತಾದವುಗಳು ವೇಳೆಯನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ಈ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ. ಇದು ಅಪೇಕ್ಷಣೀಯವೆಂದು ನನಗೆ ಅನಿಸುತ್ತದೆ. ಯಾಕೆಂದರೆ ಈ ತೊಂದರೆಗಳನ್ನು ಎದುರಿಸುವುದರಿಂದ ಸಂವಿಧಾನವನ್ನು ಉಳಿಸಲು ರಾಷ್ಟ್ರಪತಿಗಳಿಗೆ ಈ ಅಧಿಕಾರ ಕೊಟ್ಟಿದ್ದು, ಅವರ ತ್ವರಿತವಾಗಿ ಈ ಬಗ್ಗೆ ಕಾರ್ಯನಿರತರಾಗಬಹುದು, ಆದ್ದರಿಂದ ಯೋಗ್ಯತೆಯ ಮೇಲೆ ಈ ಉಪಬಂಧ ಅವಶ್ಯವೆಂದು ನಾನು ಹೇಳಿದೆನು. ಅನುಚ್ಛೇದ ೩೧೦ಕ್ಕೆ ಇದನ್ನು ಹೋಲಿಸಿದಾಗ ನಮ್ಮದು ಅತಿಸೀಮಿತವಾದ ಪ್ರಸ್ತಾವನೆಯಾಗಿದೆ. ಈ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಯಾವ ಮೂಲಭೂತ ತಕರಾರುಗಳು ಇರುವುದಿಲ್ಲವೆಂದು ಭಾವಿಸುತ್ತೇನೆ.

ಅನುಚ್ಛೇದ ೩೧೩ಕ್ಕೆ ಸಂಬಂಧಿಸಿದಂತೆ ತೀವ್ರತರವಾದ ತಕರಾರು ಇರುವುದಿಲ್ಲ. ಹಾಗೆ ಇದ್ದಲ್ಲಿ

ಅದನ್ನು ಸ್ವೀಕರಿಸಲು ಸಂಸತ್ತಿಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಗೆಳೆಯರಾದ ಶ್ರೀ ಕಾಮತ್ ಇವರು ಎತ್ತಿದ ವಿಷಯಕ್ಕೆ ಸಂಬಂಧಿಸಿದಂತೆ ಕರಡು ಸಮಿತಿಯವರು ಭಾರತ ಸರಕಾರ ಅಧಿನಿಯಮ ೧೯೩೫ ಇದರಲ್ಲಿ ಯಾವುದೇ ಮೂಲ ನಿಯಮ ಹಾಗೂ ಈಗ ಸ್ವೀಕರಿಸಿದ ನಿಯಮಗಳಲ್ಲಿ ಯಾವುದೇ ವ್ಯತ್ಯಾಸ ಮಾಡದೆ ಉಲ್ಲೇಖಿಸಿ ತಪ್ಪು ಮಾಡಿದ್ದಾರೆಂದು ಅನಿಸುವುದಿಲ್ಲ. ಇದನ್ನು ನನ್ನ ಗೆಳೆಯರು ಮನಗಾಣಬಹುದೆಂದು ನನಗೆ ಅನಿಸುತ್ತದೆ. ಯಾಕೆಂದರೆ, ಈಗ ಸ್ವೀಕರಿಸಿದ ನಿಯಮವು ಅದರ ಚಿಕ್ಕ ಶಿರೋನಾಮೆಯಾಗಿದೆ. ಭಾರತ ಸರಕಾರದ ಅಧಿನಿಯಮ ೧೯೩೫ ಮತ್ತು ಆ ದೃಷ್ಟಿಯಿಂದ ನನಗೆ ಯಾವುದೇ ಸಂಶಯವಿಲ್ಲ.

**ಡಾ. ಪಿ. ಎಸ್. ದೇಶ್‌ಮುಖ್:** ನಾನು ಒಂದು ಪ್ರಶ್ನೆಯನ್ನು ಕೇಳಬಹುದೆ? ಒಂದು ವೇಳೆ ರಾಷ್ಟ್ರಪತಿಗಳು ಮಾಡಿದ ಆದೇಶವನ್ನು ಸಂಸತ್ತು ಕ್ರಮಬದ್ಧಗೊಳಿಸಬೇಕೆಂದು ಕೇಳಿದರೆ ಏನಾದರೂ ತಪ್ಪಾಗುವುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಆದರೆ ಕ್ರಮಬದ್ಧ ಅಂದರೇನು ರಾಷ್ಟ್ರಪತಿಗಳು ಮಾಡಿದ್ದನ್ನು ರದ್ದುಗೊಳಿಸುವುದು ಮತ್ತು ಈ ಅನುಬಂಧದ ಉದ್ದೇಶವು ಪರಿಣಾಮಕಾರಿಯಾದ ಪರಿಹಾರವನ್ನು ಒದಗಿಸುವುದು ಆಗಿದೆ. ಆದ್ದರಿಂದ ಅದು ತಕ್ಷಣ ಜಾರಿಯಲ್ಲಿ ಬರುವುದಿಲ್ಲ. ಆದರೆ ತಕ್ಷಣ ಜಾರಿ ಬರಬೇಕೆಂಬುದು ನಮ್ಮ ಇಚ್ಛೆಯಾಗಿದೆ.

**ಮಾನ್ಯ ಸಭಾಧ್ಯಕ್ಷರು:** ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

ಡಾ. ಅಂಬೇಡ್ಕರ್ ಅವರು ಮಂಡಿಸಿದ ಸಂಖ್ಯೆ ೩೭ ಪ್ರಶ್ನೆಯೆಂದರೆ ಲಿಸ್ಟ್ ೧ ತಿದ್ದುಪಡಿ ಸಂಖ್ಯೆ ೨೩ರಲ್ಲಿ (೧ನೆಯ ವಾರ) ಖಂಡ ೨ ಅನುಚ್ಛೇದ ೩೧೩ ಇದರಲ್ಲಿ ಪದಗಳು 'ಪ್ರತಿಯೊಂದು ಸದನದ' ಇವುಗಳನ್ನು ತೆಗೆದುಹಾಕತಕ್ಕದ್ದು. ತಿದ್ದುಪಡಿಯು ಸ್ವೀಕೃತವಾಯಿತು.

**ಡಾ. ಪಿ. ಎಸ್. ದೇಶ್‌ಮುಖ್:** ಮಾನ್ಯರೇ ನಾನು ನನ್ನ ತಿದ್ದುಪಡಿ ಸಂಖ್ಯೆ ೩೦, ೩೧ ಮತ್ತು ೩೨ ಇವುಗಳನ್ನು ಹಿಂದಕ್ಕೆ ಪಡೆಯಲು ಪರವಾನಿಗೆ ಕೇಳುತ್ತೇನೆ. ಆದರೆ ೩೩ ಅಲ್ಲ.

ತಿದ್ದುಪಡಿ ಸಂಖ್ಯೆ ೩೦, ೩೧ ಮತ್ತು ೩೨ ಇವುಗಳನ್ನು ಸಂಸತ್ತಿನ ಪರವಾನಗಿಯೊಂದಿಗೆ ಹಿಂದಕ್ಕೆ ತೆಗೆದುಕೊಳ್ಳಲಾಯಿತು. ಅನುಚ್ಛೇದ ೩೧೩ ತಿದ್ದುಪಡಿ ಆದಂತೆ ಸಂವಿಧಾನದಲ್ಲಿ ಸೇರಿಸಲಾಯಿತು.

* * *

## ವಿಧಿ ೩೦೭

**ಶ್ರೀ ಬಿಸ್ವಂತದಾಸ:** ಇವೆಲ್ಲವುಗಳ ಬಗೆಗೆ ನನ್ನ ತಕರಾರು ಏನೆಂದರೆ– ಕಾನೂನು ವಿಭಾಗವನ್ನಾಗಲಿ ಇಲ್ಲವೆ ಸಂವಿಧಾನ ಸಭೆಯ ಕಚೇರಿಯನ್ನಾಗಲಿ ಈ ಬಗೆಗೆ ಎಳ್ಳಷ್ಟೂ ವಿಚಾರಿಸಲಿಲ್ಲ. ಅವರಲ್ಲಿ ಈ ಬಗ್ಗೆ ಸಿದ್ಧವಾದ, ಅಂಗೀಕರಿಸಲು ಯೋಗ್ಯವಾದ ಕಾನೂನುಗಳನ್ನು ಪರೀಕ್ಷಿಸಿ ಇಡುತ್ತಿದ್ದರು.

**ಮಾನ್ಯ ಸಭಾಧ್ಯಕ್ಷರು:** ಸಂವಿಧಾನವು ಏನಾಗುವುದೆಂಬುದನ್ನು ತಿಳಿಯದೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬಾಂಬೆ, ಸಾಮಾನ್ಯ): ನನ್ನ ಗೆಳೆಯರಿಗೆ ಸಂಪೂರ್ಣವಾಗಿ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಇಲ್ಲಿ ಏನಾಗುತ್ತದೆಂಬುದು ಅವರಿಗೆ ಗೊತ್ತಿಲ್ಲ.

**(ಅನುಚ್ಛೇದ ೩೦೭ ಇದನ್ನು ತಿದ್ದುಪಡಿಯಾದಂತೆ ಸಂವಿಧಾನಕ್ಕೆ ಸೇರಿಸಲಾಯಿತು.)**

* * *

## ವಿಧಿ ೩೦೮

**ಮಾನ್ಯ ಸಭಾಧ್ಯಕ್ಷರು:** ನಾವು ಈಗ ಅನುಚ್ಛೇದ ೩೦೮ಕ್ಕೆ ಹೋಗೋಣ. ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ನಾನು ಮಂಡಿಸುತ್ತೇನೆ.

"ಅನುಚ್ಛೇದ ೩೦೮ ಖಂಡ (೩) ಇದರಲ್ಲಿ ಕೆಳಗಣ ಖಂಡವನ್ನು ಬದಲಿಯಾಗಿ ಸೇರಿಸಬೇಕು.

"(೩) ಈ ಸಂವಿಧಾನದಲ್ಲಿ ಯಾವುದೇ ಖಂಡವು ಹಿಜ್ ಮೆಜೆಸ್ಟಿ ಇನ್‌ಕೌನ್ಸಿಲ್ ಅವರಿಗೆ ಮೇಲ್ಮನವಿಗಳನ್ನು ವಿಚಾರಣೆ ಮಾಡಿ ನಿಕಾಲೆ ಮಾಡುವ ಮತ್ತು ಅರ್ಜಿಗಳನ್ನು ಭಾರತದಿಂದ ಇಲ್ಲವೆ ಭಾರತದಲ್ಲಿರುವ ಯಾವುದೇ ನ್ಯಾಯಾಲಯವು ಕೊಟ್ಟ ತೀರ್ಪು ಮಾಡಿದ ಡಿಕ್ರಿ ಇಲ್ಲವೆ ಮಾಡಿದ ಆದೇಶ ಕುರಿತು ಕಾನೂನಿನ ಅನ್ವಯ ಕೊಟ್ಟ ಅಧಿಕಾರವು ಇಲ್ಲವೆ "ಹಿಜ್ ಮೆಜೆಸ್ಟಿ ಇನ್‌ಕೌನ್ಸಿಲ್" ಅವರು ಯಾವುದೇ ಅಂತಹ ಮೇಲ್ಮನವಿಯಲ್ಲಿ ಇಲ್ಲವೆ ಅರ್ಜಿ ಮೇಲೆ ಈ ಸಂವಿಧಾನದ ಯಾವ ಖಂಡವೂ ಅಧಿಕಾರ ವ್ಯಾಪ್ತಿಯನ್ನು ಅಸಿಂಧುಗೊಳಿಸುವುದಿಲ್ಲ. "ಹಿಜ್ ಮೆಜೆಸ್ಟಿ ಇನ್‌ಕೌನ್ಸಿಲ್" ಅವರು ಮಾಡಿದ ಡಿಕ್ರಿ, ಆದೇಶಗಳು ಸುಪ್ರೀಂ ಕೋರ್ಟಿನವರು ತಮಗೆ ಕೊಟ್ಟ ಅಧಿಕಾರವನ್ನು ಚಲಾಯಿಸಿ ಸಂವಿಧಾನದಲ್ಲಿ ಹಾಗೆ ಅಂತಹ ಕೋರ್ಟಿನ ಮೇಲೆ ಅಧಿಕಾರ ಚಲಾಯಿಸಿದರೆ ಅದರ ಪರಿಣಾಮವೆಂದು ಗ್ರಹಿಸಲಾಗುವುದು. ಮತ್ತು ಅನುಚ್ಛೇದ ೩೦೮ರ ಖಂಡ (೩)ರ ನಂತರ ಕೆಳಗಣ ಹೊಸ ಖಂಡವನ್ನು ಸೇರಿಸತಕ್ಕದ್ದು. ಈ ಸಂವಿಧಾನವು ಜಾರಿಯಲ್ಲಿ ಬಂದ ದಿನಾಂಕದಂದು ಮತ್ತು ಆ ದಿನದಿಂದ ಪ್ರಿವಿ ಕೌನ್ಸಿಲದ ಅಧಿಕಾರ ವ್ಯಾಪ್ತಿಯನ್ನು ಮತ್ತು ಕೇಂದ್ರ ಸರಕಾರ ಇಲ್ಲವೆ ರಾಜ್ಯದಲ್ಲಿ ಸದ್ಯಕ್ಕೆ ಪರಿಶಿಷ್ಟ ಒಂದರ ಭಾಗ ೧೧೧ರಲ್ಲಿ ನಿರ್ದೇಶಿಸಿದಂತೆ ಮೇಲ್ಮನವಿಗಳನ್ನು ಸ್ವೀಕರಿಸುವುದು ಮತ್ತು ಅವುಗಳನ್ನು ನಿಕಾಲೆ ಮಾಡುವುದು ಹಾಗೂ ಅರ್ಜಿಗಳನ್ನು ಸ್ವೀಕರಿಸುವುದು ಯಾವುದೇ ಡಿಕ್ರಿ ತೀರ್ಪು ಇಲ್ಲವೆ ಆದೇಶದ ಮೇಲೆ ಭಾರತದಲ್ಲಿ ಯಾವುದೇ ರಾಜ್ಯದಲ್ಲಿಯ ನ್ಯಾಯಾಲಯವು ಮಾಡಿದ ತೀರ್ಪು ಡಿಕ್ರಿ ಇಲ್ಲವೆ ಆದೇಶದ ವಿರುದ್ಧ ಸ್ವೀಕರಿಸಲು ಇರುವ ಅಧಿಕಾರವನ್ನು ಸುಪ್ರೀಂ ಕೋರ್ಟಿಗೆ ವರ್ಗಾಯಿಸಲಾಗಿದೆ. ಅದಕ್ಕೆ ಅವುಗಳನ್ನು ಕಾನೂನಿನ ಪ್ರಕಾರ ನಿಕಾಲೆ ಮಾಡುವ ಅಧಿಕಾರ ಕೊಡಲಾಗಿದೆ.

ಮಾನ್ಯರೇ, ಮೊದಲನೆಯ ತಿದ್ದುಪಡಿಯ ಉದ್ದೇಶವು ಏನೆಂದರೆ ಪ್ರಿವಿ ಕೌನ್ಸಿಲ್ಲಿನ ಅಧಿಕಾರ ವಿಚಾರಣೆಗಾಗಿ ಇರುವ ಕೆಲವು ಮೇಲ್ಮನವಿಗಳನ್ನು ದಿನಾಂಕ ೨೬ನೆಯ ಜನವರಿ ೧೯೫೦ ರೊಳಗೆ ನಿಕಾಲೆ ಮಾಡಲಾಗದಿದ್ದರೆ ಆ ದಿನಾಂಕದಂದು ಸಂವಿಧಾನವು ಜಾರಿಯಲ್ಲಿ ಬರುವುದೆಂದು ಗ್ರಹಿಸಲಾಗಿದೆ. "ಮೇಲ್ಮನವಿಗಳನ್ನು ನಿಕಾಲೆ ಮಾಡುವುದು" ಈ ಪದಗಳಿಂದ ಒಂದು ಮೇಲ್ಮನವಿಯನ್ನು ಸ್ವೀಕರಿಸಲು ಅಧಿಕಾರ ಇರುವುದಿಲ್ಲ ಮತ್ತು ಉಳಿದ ಮಹತ್ವದ ಶಬ್ದಗಳು" ಇಂತಹ ಅಧಿಕಾರ ವ್ಯಾಪ್ತಿಯನ್ನು ಕಾನೂನಿನ ಮೂಲಕ ಕೊಟ್ಟದ್ದು, ಹೇಳಬೇಕೆಂದರೆ ಇತ್ತೀಚಿನ ಅಧಿನಿಯಮವನ್ನು ಉಲ್ಲೇಖಿಸಿ ಅಂಗೀಕರಿಸಲಾಗಿದೆ. ಪ್ರಿವಿ ಕೌನ್ಸಿಲ್ಲಿಗೆ ಬೇರೆ ಅಧಿಕಾರ ವ್ಯಾಪ್ತಿಯು ಇರುವುದಿಲ್ಲ.

ನಾವು ಕೊಟ್ಟ ಅಧಿಕಾರ ವ್ಯಾಪ್ತಿಗಿಂತ ಹೆಚ್ಚಿನ ಅಧಿಕಾರ ವ್ಯಾಪ್ತಿ ಇದಕ್ಕೆ ಇರುವುದಿಲ್ಲ. ಇದನ್ನು ಬಹುತರವಾಗಿ ಸಮಾಲೋಚನೆಯ ನಂತರ ವ್ಯವಸ್ಥೆ ಮಾಡಲಾಗಿದೆ. ಯಾವ ದಿನಾಂಕದಂದು ಈ ಸಮಾಲೋಚನೆಯು ಅಸ್ತಿತ್ವದಲ್ಲಿ ಬರುತ್ತದೆಯೋ ಆ ದಿನಾಂಕದಂದು ಪ್ರಿವಿ ಕೌನ್ಸಿಲ್ಲು ನಿರ್ದಿಷ್ಟ ಶಾಸನದ ಅಡಿಯಲ್ಲಿ ಅವುಗಳನ್ನು ನಿಕಾಲೆ ಮಾಡಿಬಿಡಬಹುದು. ಒಂದು ಮೇಲ್ಮನವಿ ಭಾಗಶಃವಾಗಿ ವಿಚಾರಣೆಯಾಯಿತು, ಇಲ್ಲವೆ ಒಂದು ಮೇಲ್ಮನವಿಯನ್ನು ಒಂದು ದೃಷ್ಟಿಯಲ್ಲಿ ನಿಕಾಲೆ ಮಾಡಲಾಗಿದೆ. ಅಂದರೆ ಅದರ ವಿಚಾರಣೆಯು ಮುಕ್ತಾಯವಾಗಿದೆ. ಆದರೆ ಡಿಕ್ರಿಯು ಇನ್ನೂ ಪಾಸಾಗಿಲ್ಲ ಮತ್ತು ಈ

ದೃಷ್ಟಿಯಿಂದ ಅವರ ಮುಂದೆ ಇರುವ ಪ್ರಕಾರಣಗಳನ್ನು ನಿಕಾಲೆಯಾಗದೆ ಇರುವ ಭಾಗಶಃ ವಿಚಾರಣೆಯಾದ ಪ್ರಕರಣಗಳನ್ನು ಸುಪ್ರೀಂ ಕೋರ್ಟಿಗೆ ವರ್ಗಾಯಿಸುವುದರಿಂದ ಬಹಳಷ್ಟು ಅನಾನುಕೂಲತೆಯು ಪಕ್ಷಕಾರರಿಗೆ ಆಗುತ್ತದೆ. ಆದ್ದರಿಂದ ನಮ್ಮ ಸಾಮಾನ್ಯ ನಿಯಮಕ್ಕೆ ಒಂದು ಅಪವಾದವನ್ನು ಕಲ್ಪಿಸುವುದು ಅಪೇಕ್ಷಣೀಯವೆಂದು ಅನಿಸಿತು. ಪ್ರಿವಿ ಕೌನ್ಸಿಲ್ಲಿನ ಅಧಿಕಾರ ವ್ಯಾಪ್ತಿಯು ಸಂವಿಧಾನವು ಜಾರಿಯಲ್ಲಿ ಬಂದ ದಿನದಂದು ಮುಕ್ತಾಯವಾಗುತ್ತದೆ. ಇದೇ ಉದ್ದೇಶದಿಂದ ೬ನೆಯ ತಿದ್ದುಪಡಿಯನ್ನು ತರಲಾಗಿದೆ.

ತಿದ್ದುಪಡಿ ೭ರ ಬಗೆಗೆ ಕೆಲವು ರಾಜ್ಯಗಳಲ್ಲಿ ಪ್ರಿವಿ ಕೌನ್ಸಿಲ್ಲು ಆ ರಾಜ್ಯದ ಉಚ್ಚ ನ್ಯಾಯಾಲಯದ ನಿರ್ಣಯಗಳ ಪರಿವೀಕ್ಷಣೆ ಮಾಡುತ್ತದೆ, ಯಾಕೆಂದರೆ ಅವರು ಪ್ರಿವಿ ಕೌನ್ಸಿಲ್ಲಿನ ಅಧಿಕಾರ ವ್ಯಾಪ್ತಿಯನ್ನು ಮಾನ್ಯ ಮಾಡಿಲ್ಲ ಇಲ್ಲವೆ ಪ್ರಿವಿ ಕೌನ್ಸಿಲ್ ಆಫ್ ಹಿಜ್ ಮೆಜೆಸ್ಟಿ ಇನ್ ಇಂಗ್ಲೆಂಡ್ ಆದ್ದರಿಂದ ಅವರಿಗೆ ಅವರದೇ ಆದ ಪ್ರಿವಿ ಕೌನ್ಸಿಲು ಇತ್ತು. ಈಗ ಸಂವಿಧಾನದಲ್ಲಿ ಮಾಡಿದ ಉಪಬಂಧಗಳ ಅನ್ವಯ ಈಗ ನೇರವಾಗಿ ಉಚ್ಚ ನ್ಯಾಯಾಲಯ ಹಾಗೂ ಸುಪ್ರೀಂ ಕೋರ್ಟ್ ಸಂಬಂಧ ಇರಬೇಕು. ಬೇರೆ ಬೇರೆ ರಾಜ್ಯಗಳಲ್ಲಿ ಭಾಗ ೩ ಮತ್ತು ಭಾಗ ೧೮ರಲ್ಲಿ ಮಧ್ಯಂತರ ಸಂಸ್ಥೆ ಭಾರತದ ಪ್ರಿವಿ ಕೌನ್ಸಿಲ ಭಾಗ ೩ ಇದನ್ನು ಶಾಸನದ ಮೂಲಕ ಅಂತ್ಯಗೊಳಿಸಬೇಕು. ಯಾಕೆಂದರೆ ಜನವರಿ ೨೬, ೧೯೫೦ರಂದು ಎಲ್ಲ ರಾಜ್ಯಗಳ ಉಚ್ಚ ನ್ಯಾಯಾಲಯಗಳ ತೀರ್ಪಿನ ವಿರುದ್ಧ ಅಪೀಲುಗಳು ಪಾರ್ಟ್ ೧೧೧, ಸುಪ್ರೀಂ ಕೋರ್ಟಿನಲ್ಲಿ ನಿಕಾಲೆಯಾಗುತ್ತವೆ.

ಬೇರೆ ಬೇರೆ ರಾಜ್ಯಗಳಲ್ಲಿ ಈ ಪ್ರಿವಿ ಕೌನ್ಸಿಲ್ಲನ್ನು ಬೇರೆ ಬೇರೆ ಹೆಸರಿನಿಂದ ಕರೆಯುವರೆಂದು ನನಗೆ ತಿಳಿದುಬಂದಿತು. ಅದು ಹಾಗಿದ್ದಲ್ಲಿ ಕರಡು ಸಮಿತಿಯು ಈ ತೊಂದರೆಯನ್ನು ನೀಗಿಸಲು ಪ್ರಿವಿ ಕೌನ್ಸಿಲ್ ಇದರ ವ್ಯಾಖ್ಯೆಯನ್ನು ಅನುಚ್ಛೇದ ೩೦೬ರಲ್ಲಿ ಕೊಡಲಾಗಿದೆ. ಯಾಕೆಂದರೆ ಬೇರೆ ಬೇರೆ ಹೆಸರಿನಲ್ಲಿ ಮತ್ತು ಈ ಸಂಸ್ಥೆಯಲ್ಲಿರುವ ವ್ಯತ್ಯಾಸಗಳನ್ನು ಕುರಿತು ಹೇಳಲಾಗಿದೆ.

* * *

**ಮಾನ್ಯ ಸಭಾಧ್ಯಕ್ಷರು:** ಡಾ.ಅಂಬೇಡ್ಕರ್ ನೀವು ಇನ್ನೂ ಏನನ್ನಾದರೂ ಹೇಳಬಯಸುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಅದರ ಬಗ್ಗೆ ಒತ್ತಾಯಪಡಿಸಿ ತಿದ್ದುಪಡಿಗೆ ಸಲಹೆ ಮಾಡಿದ ವಿಷಯದಲ್ಲಿ ಕೆಳಗಿನ ವಿಷಯಗಳು ಉದ್ಭವಿಸುವವು. ಇದು ಕೇವಲ ಭಾವನಾತ್ಮಕ ವಾದುದು. ಅನುಕೂಲತೆಯ ದೃಷ್ಟಿಯಿಂದ, ನಮಗೆ ಈ ಅನುಚ್ಛೇದ ಇರುವುದು ಅತ್ಯುತ್ತಮವಾದುದು. ಹಾಗೆ ಮಾಡುವಲ್ಲಿ ಯಾವುದೇ ಅವಮಾನ ಆಗುವುದಿಲ್ಲ. ಯಾಕೆಂದರೆ ಪ್ರಿವಿ ಕೌನ್ಸಿಲ್‌ನ ಅಧಿಕಾರ ವ್ಯಾಪ್ತಿಯು ಮುಂದುವರೆದರೆ ಅಂದರೆ ಸೀಮಿತ ಅವಧಿ ಖಂಡ (೩)ರಲ್ಲಿ ಕಾಣಿಸಿದಂತೆ ಮುಂದುವರೆದರೆ ಈ ತಿದ್ದುಪಡಿ ತಂದ ನನ್ನ ಗೆಳೆಯರ ಪ್ರಕಾರ ಪ್ರಿವಿ ಕೌನ್ಸಿಲ್ಲಿನ ಅಧಿಕಾರ ವ್ಯಾಪ್ತಿ ಅಂತರಗತವಾದುದಲ್ಲ. ಆದರೆ ಈ ಅಧಿಕಾರವ್ಯಾಪ್ತಿಯನ್ನು ಈ ಸಂಸತ್ತು ಅದಕ್ಕೆ ದಯಪಾಲಿಸಿದೆ. ನಿಜವಾಗಿ ಪ್ರಿವಿ ಕೌನ್ಸಿಲ್ಲು ಈ ಸಂಸತ್ತಿನ ಏಜೆಂಟನಂತೆ ಕೆಲಸ ಮಾಡುತ್ತದೆ, ಮತ್ತು ಅವಶ್ಯವಾದ ಹಾಗೂ ಮಹತ್ವದ ಕೆಲಸ ಮಾಡುತ್ತದೆ. ಆದ್ದರಿಂದ ಅಲ್ಲಿ ಯಾವುದೇ ಅಪಮಾನವಾಗುವುದಾಗಲೀ ಇಲ್ಲವೆ ನಮ್ಮ ಸ್ವಾತಂತ್ರ್ಯವನ್ನು ಅದಲು ಬದಲು ಮಾಡುವ ವಿಚಾರವಿಲ್ಲ.

ನನ್ನ ಗೆಳೆಯರಾದ ಪ್ರೊ. ಸಕ್ಸೇನಾ ಅವರು ಎತ್ತಿದ ವಿಷಯದ ಬಗೆಗೆ, ಅವರು ಅನುಚ್ಛೇದ ೩೦೮, ಇದಕ್ಕೆ ಇರುವ ಅಡಿಟಿಪ್ಪಣಿಯ ಬಗೆಗೆ ಉಲ್ಲೇಖಿಸುತ್ತಾರೆ, ಒಳ್ಳೇ ಉದ್ದೇಶಕ್ಕಾಗಿ ಕರಡು ಸಮಿತಿಯವರಿಗೆ ಅನಿಸಿದ್ದೇನೆಂದರೆ ತೊಂದರೆಗಳನ್ನು ನಿವಾರಿಸುವುದಕ್ಕಾಗಿ ಖಂಡವನ್ನು ಯೋಗ್ಯ ರೀತಿಯಿಂದ

ಬಳಸಲಿಕ್ಕಿಲ್ಲವೆಂದು ಹಾಗೆ ಮಾಡಲಾಗಿದ್ದೆಂದು ಒಪ್ಪಿಕೊಳ್ಳಲು ನಾನು ಸಿದ್ಧನಿದ್ದೇನೆ. ಎಲ್ಲ ತೊಂದರೆಗಳನ್ನು ನಿವಾರಿಸಲು ಇಂತಹದೊಂದು ಪ್ರತ್ಯೇಕ ಖಂಡವು ಅಧಿಕಾರ ವ್ಯಾಪ್ತಿಯನ್ನು ಸಂವಿಧಾನದಲ್ಲಿ ಕೊಡಲು ಇರಬೇಕೆಂದು ನಾವು ವಿಚಾರಿಸಿದೆವು.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

**(ಡಾ. ಅಂಬೇಡ್ಕರವರು ಮಂಡಿಸಿದ ಎರಡೂ ಮಸೂದೆಗಳ ತಿದ್ದುಪಡಿಗಳ ಮುಂದೆ ಸೂಚಿಸಿದಂತೆ ಸ್ವೀಕರಿಸಲಾಯಿತು. ಉಳಿದ ತಿದ್ದುಪಡಿಗಳು ತಿರಸ್ಕೃತವಾದವು, ಅನುಚ್ಛೇದ ೩೦೮ ತಿದ್ದುಪಡಿಯಾದಂತೆ ಸಂವಿಧಾನಕ್ಕೆ ಸೇರಿಸಲಾಯಿತು)**

## ವಿಧಿ ೩೧೦

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತೇನೆ. "ಅನುಚ್ಛೇದ ೩೧೦ರ ಬದಲು ಕೆಳಗಣ ಅನುಚ್ಛೇದವನ್ನು ಸೇರಿಸಬೇಕು.

೩೧೦ (೧) ಸಂವಿಧಾನದ ಅನುಚ್ಛೇದ ೧೯೩ ಖಂಡ (೨) ಇದರಲ್ಲಿ ಏನೇ ಹೇಳಿದ್ದರೂ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು, ಯಾವುದೇ ಪ್ರಾಂತ್ಯ ಇಲ್ಲವೆ ರಾಜ್ಯದಲ್ಲಿ ಅಧಿಕಾರದಲ್ಲಿರುವವರು ಈ ಸಂವಿಧಾನ ಜಾರಿಯಲ್ಲಿ ಬರುವ ದಿನಾಂಕಕ್ಕಿಂತ ಮೊದಲು ಅಂತಹ ಅಧಿಕಾರದಲ್ಲಿದ್ದರೆ, ಅವರು ಬೇರೊಂದು ರೀತಿಯಲ್ಲಿ ಆಯ್ಕೆಯಾಗಿರದಿದ್ದರೆ, ಈ ಸಂವಿಧಾನ ಜಾರಿಯಲ್ಲಿ ಬಂದ ನಂತರವೂ ಅವರು ಆ ಹುದ್ದೆಯಲ್ಲಿ ಆಯಾ ರಾಜ್ಯ ಇಲ್ಲವೆ ಪ್ರಾಂತ್ಯದಲ್ಲಿ ಮುಂದುವರೆಯುತ್ತಾರೆ. ಅಂತಹವರ ವೇತನ, ಭತ್ಯೆ ಮತ್ತು ಆ ಹುದ್ದೆಗೆ ಇರುವ ರಜೆ ಹಾಗೂ ಪಿಂಚಣಿ ಗೊತ್ತುಪಡಿಸಿದ ರೀತಿಯಲ್ಲಿ ಅಂದರೆ ಸಂವಿಧಾನದ ಅನುಚ್ಛೇದ ೧೯೭ರಲ್ಲಿ ಕಾಣಿಸಿದಂತೆ ಆಯಾ ರಾಜ್ಯದ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿಗಳಿಗೆ ವ್ಯವಸ್ಥೆ ಮಾಡಲಾಗಿದೆ.

(೨) ಭಾರತದ ಯಾವುದೇ ರಾಜ್ಯದಲ್ಲಿಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಆಯಾ ರಾಜ್ಯದ ಸದ್ಯಕ್ಕೆ ಭಾಗ ೩ರಲ್ಲಿ ಪರಿಶಿಷ್ಟ ೧ರಲ್ಲಿ ಕಾಣಿಸಿದಂತೆ ಈ ಸಂವಿಧಾನವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಅವರು ಬೇರೊಂದು ರೀತಿಯಿಂದ ಅವರು ಆಯ್ಕೆ ಆಗಿರದಿದ್ದರೆ ಈ ಸಂವಿಧಾನ ಜಾರಿಗೆ ಬಂದ ನಂತರವೂ ಅವರು ಆಯಾ ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಮುಂದುವರೆಸಲಾಗುವುದು. ಈ ಸಂವಿಧಾನದ ಅನುಚ್ಛೇದ ೧೯೩, ಖಂಡ (೧) ಮತ್ತು (೨) ಇವುಗಳಲ್ಲಿ ಏನೇ ಹೇಳಿದ್ದರೂ ಖಂಡ (೧)ಕ್ಕೆ ಇರುವ ಪರಂತುಕಕ್ಕೆ ಒಳಪಟ್ಟು, ಅವರು ಆ ಹುದ್ದೆಯಲ್ಲಿ ಮುಂದುವರೆಯುವರು, ಪರಂತು ರಾಷ್ಟ್ರಪತಿಯವರು ಆದೇಶದ ಮೂಲಕ ಅವರ ಅವಧಿಯನ್ನು ಗೊತ್ತುಪಡಿಸಬಹುದು.

(೩) ಈ ಅನುಚ್ಛೇದದಲ್ಲಿ ಬಿಟ್ಟ ಈ ಪದವು ಕಾರ್ಯನಿರ್ವಾಹಕ ನ್ಯಾಯಾಧೀಶ ಅಥವಾ ನ್ಯಾಯಾಧೀಶ ಇವರನ್ನು ಒಳಗೊಳ್ಳುವುದಿಲ್ಲ.

ಈ ಅನುಚ್ಛೇದವನ್ನು ನಾವು ಕೇವಲ ಮುಂದುವರಿದ ಅನುಚ್ಛೇದವೆಂದು ಕರೆಯುತ್ತೇವೆ. ಅಂದರೆ ಕೇವಲ ಆ ಹುದ್ದೆಯಲ್ಲಿರುವವರನ್ನು ಹೊಸ ಕಚೇರಿಗೆ, ಹೊಸ ಉಚ್ಚ ನ್ಯಾಯಾಲಯಕ್ಕೆ ಅವರು ಕೆಲಸ ಮಾಡಲು ಆಯ್ಕೆ ಮಾಡಿಕೊಂಡರೆ ಆಗ ಆ ಹುದ್ದೆಯಲ್ಲಿ ಮುಂದುವರೆಯುವರು.

**ಶ್ರೀ ನಜೀರುದ್ದೀನ್ ಅಹ್ಮದ್:** ಮಾನ್ಯರೇ ನಾನು ಮಂಡಿಸುತ್ತೇನೆ. ಪ್ರಸ್ತಾಪಿಸಲಿರುವ ಅನುಚ್ಛೇದ ೩೧೦ ಇದರ ಖಂಡ (೧) ಪಟ್ಟಿ ೧ರ (೨ನೇಯ ವಾರ)ದಲ್ಲಿ ಈ ಸಂವಿಧಾನವು ಅನುಚ್ಛೇದ ೧೯೭ರಲ್ಲಿ ಕಾಣಿಸಿದ ನ್ಯಾಯಾಧೀಶರನ್ನು ಕುರಿತು ಆಯಾ ಅಂತಹ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಕುರಿತು ಅವರಿಗೆ ಅಧಿಕಾರ ಹೊಂದಿದ ತಕ್ಷಣವೇ ಈ ಸಂವಿಧಾನವು ಜಾರಿಗೆ ಬಂದ ನಂತರವೂ ಈ ಪದಗಳನ್ನು ಸೇರಿಸತಕ್ಕದ್ದು.

ಈ ಅನುಚ್ಛೇದದ ಖಂಡ (೧) ಹೇಳುವುದೇನೆಂದರೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಈ ಸಂವಿಧಾನವು ೨೬ನೆಯ ಜನವರಿ ೧೯೫೦ರಂದು ಜಾರಿಯಲ್ಲಿ ಬಂದ ನಂತರ ತಾತ್ಕಾಲಿಕವಾಗಿ ಆಯಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಮುಂದುವರೆಯುತ್ತಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ತಿದ್ದುಪಡಿಯು ಪರಿಶಿಷ್ಟ ೨ ಇದನ್ನು ನಿರೀಕ್ಷಿಸುತ್ತದೆಂಬ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ವಿಷಯವನ್ನು ಪರಿಶಿಷ್ಟ ೨ನ್ನು ಸಂಸತ್ತಿನಲ್ಲಿ ಕೈಗೆತ್ತಿಕೊಳ್ಳುತ್ತವೆಯೋ ಆವಾಗ ಅದನ್ನು ಎತ್ತಿಕೊಳ್ಳಬಹುದು.

ಶ್ರೀ ಅಹ್ಮದ್ ಅವರ ತಿದ್ದುಪಡಿಯು ತಿರಸ್ಕೃತವಾಯಿತು. ಡಾ.ಅಂಬೇಡ್ಕರ್ ಅವರು ಮೊದಲು ಮಂಡಿಸಿದ್ದು ಸ್ವೀಕೃತವಾಯಿತು.

(ಅನುಚ್ಛೇದ ೩೧೦ ಇದನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

* * *

## ವಿಧಿ ೩೧೧

ಕೇಂದ್ರದ ಅಧ್ಯಕ್ಷ, ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಬಗೆಗೆ ಉಪಬಂಧಗಳು

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತೇನೆ. "ಅನುಚ್ಛೇದ ೩೧೧ ಇದರ ಬದಲು ಕೆಳಗಣ ಅನುಚ್ಛೇದವನ್ನು ಸೇರಿಸತಕ್ಕದ್ದು.

೩೧೧ (೧) ಸಂಸತ್ತಿನ ಉಭಯ ಸದನಗಳು ಕಾನೂನುಬದ್ಧವಾಗಿ ರಚನೆಯಾದರೆ ಮತ್ತು ಈ ಸಂವಿಧಾನದ ಅನುಚ್ಛೇದದಂತೆ ಮೊದಲನೆಯ ಸಂಸತ್ತು ಕೂಡುವವರೆಗೆ, ಭಾರತ ಸಂವಿಧಾನದ ಸಭೆಯು ಭಾರತದ ಸಾರ್ವಭೌಮತ್ವ, ಈ ಸಂವಿಧಾನವು ಜಾರಿಗೆ ಬರುವ ಪೂರ್ವದಲ್ಲಿ ತನ್ನ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಎಲ್ಲ ಕಾರ್ಯಗಳನ್ನು ನೇರವೇರಿಸತಕ್ಕದ್ದು ಅಂದರೆ ಈ ಸಂವಿಧಾನದ ಅನ್ವಯ ಕೊಟ್ಟ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ವಿವರಣೆ ಈ ಖಂಡ ಉದ್ದೇಶಗಳಿಗಾಗಿ ಭಾರತದ ಸಂವಿಧಾನದ ಸಭೆ ಭಾರತದ ಸಾರ್ವಭೌಮತ್ವವನ್ನು ಹೊಂದಿತ್ತು, ಇದನ್ನು ಸಹ ಒಳಗೊಂಡಿರುತ್ತದೆ.

(೧) ಈ ಅನುಚ್ಛೇದದ ಖಂಡ (೨)ರಲ್ಲಿ ಕಾಣಿಸಿದಂತೆ ಮತ್ತು (೨) ವಿಧಾನಸಭೆಯಲ್ಲಿ ಸ್ಥಾನ ಖಾಲಿಯಾದ ಸ್ಥಳವನ್ನು ತುಂಬಲು ಆರಿಸಲ್ಪಟ್ಟ ಸದಸ್ಯರಿಗೆ ಅನ್ವಯವಾಗುವಂತೆ ರಾಷ್ಟ್ರಪತಿಗಳು ನಿಯಮಗಳನ್ನು ಕೆಳಗಿನ ವಿಷಯಕ್ಕೆ ಮಾಡಬಹುದು.

(ಎ) ತಾತ್ಕಾಲಿಕ ಸಂಸತ್ತಿನಲ್ಲಿ ಈ ಅನುಚ್ಛೇದ ಖಂಡ (೧)ರಲ್ಲಿ ಕಾಣಿಸಿದಂತೆ ಯಾವುದೇ ರಾಜ್ಯ ಅಥವಾ ಉಳಿದ ಪ್ರದೇಶಗಳು ಯಾವುದರ ಬಗೆಗೆ ಭಾರತದ ಸಂವಿಧಾನದ ಸಭೆಯಲ್ಲಿ ಪ್ರಾತಿನಿಧ್ಯವಿಲ್ಲವೋ ಅಂತಹ ರಾಜ್ಯ ಇಲ್ಲವೆ ಪ್ರದೇಶ ಭಾರತದ ಸಾರ್ವಭೌಮತ್ವ ಹೊಂದಿದ್ದು, ಈ ಸಂವಿಧಾನವು ಪ್ರಾರಂಭವಾಗುವ ಪೂರ್ವದಲ್ಲಿಯೇ ಆರಿಸಿ ಬಂದವನು. ಬಿ) ಅಂತಹ ರಾಜ್ಯಗಳ ಇಲ್ಲವೆ ಪ್ರದೇಶಗಳಿಗೆ ಈ ತಾತ್ಕಾಲಿಕ

ಸಂಸತ್ತಿನಲ್ಲಿ ಆರಿಸಲ್ಪಡುವರು ಯಾವ ರೀತಿಯಲ್ಲಿ ಅಂತಹವರನ್ನು ಆರಿಸಬೇಕು ಮತ್ತು

ಕೆ) ಅಂತಹ ಪ್ರತಿನಿಧಿಗಳಿಗೆ ಇರಬೇಕಾದ ವಿದ್ಯಾರ್ಹತೆ.

೩. ಸಾರ್ವಭೌಮ ಭಾರತದ ಸಂವಿಧಾನ ಸಭೆಯ ಯಾವುದೇ ಸದಸ್ಯನು ಅಕ್ಟೋಬರ್ ೬ನೆಯ ದಿನಾಂಕ ೧೯೪೯ ರಂದು ಹಾಗೂ ವಿಧಾನಸಭೆಯ ಸದಸ್ಯನಾಗಿದ್ದರೆ ರಾಜ್ಯಪಾಲರ ರಾಜ್ಯ ಇಲ್ಲವೇ ಭಾರತೀಯ ರಾಜ್ಯದವನಾಗಿದ್ದರೆ, ಸಂವಿಧಾನವು ಜಾರಿಗೆ ಬಂದ ದಿನಾಂಕದಿಂದ ಆ ವ್ಯಕ್ತಿಯ ಆ ವಿಧಾನ ಸಭೆಯ ಸ್ಥಾನವು ಈ ಪೂರ್ವದಲ್ಲಿ ಖಾಲಿಯಾಗುತ್ತದೆ. ಈ ಸಂವಿಧಾನವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಯಾವುದೇ ವ್ಯಕ್ತಿಯು (ಸ್ಪೀಕರ) ಅಧ್ಯಕ್ಷ, ಉಪಾಧ್ಯಕ್ಷ (ಡೆಪ್ಯೂಟಿ ಸ್ಪೀಕರರೆಂದು) ಭಾರತದ ಸಂವಿಧಾನ ಸಭೆಯ ಕೆಲಸವನ್ನು ಭಾರತ ಸರಕಾರದ ಅಧಿನಿಯಮ ೧೯೩೫ರ ಅಡಿಯಲ್ಲಿ ಕೆಲಸ ಮಾಡುತ್ತಿದ್ದರೆ, ಅವರು ಖಂಡ (ಎಲ್)ದ ಉಪಬಂಧಗಳ ಅನ್ವಯ ತಾತ್ಕಾಲಿಕ ಸಂಸತ್ತಿನಲ್ಲಿ ಕೆಲಸ ಮಾಡುತ್ತಿರುವುದರಲ್ಲಿ ಸ್ಪೀಕರ (ಅಧ್ಯಕ್ಷ) ಮತ್ತು ಉಪಾಧ್ಯಕ್ಷ (ಡೆಪ್ಯೂಟಿ ಸ್ಪೀಕರ)ರೆಂದು ಮುಂದುವರೆಯತಕ್ಕದ್ದು.

ಮಾನ್ಯರೆ, ನಾನು ಈಗ ಮಂಡಿಸುತ್ತೇನೆ.

ಪ್ರಸ್ತಾಪಿಸಲಿರುವ ಅನುಚ್ಛೇದ ೩೧೧, ತಿದ್ದುಪಡಿ ಸಂಖ್ಯೆ ೯ ಲಿಸ್ಟ್ (೧) (ಎರಡನೆಯ ವಾರ) ಇದರಲ್ಲೆ ಕೆಳಗಿನದನ್ನು ಸೇರಿಸತಕ್ಕದ್ದು.

"(೩) ಭಾರತದ ಸಾರ್ವಭೌಮತ್ವದ ಸಂವಿಧಾನ ಸಭೆಯ ಯಾವುದೇ ಸದಸ್ಯನು ಅವರು ಅಕ್ಟೋಬರ್ ಆರನೆಯ ದಿನಾಂಕ ೧೯೪೯ರಂದು ಇಲ್ಲವೆ ತದನಂತರ ಈ ಸಂವಿಧಾನವು ಜಾರಿಯಲ್ಲಿ ಬರುವ ಪೂರ್ವದಲ್ಲಿ ರಾಜ್ಯಪಾಲರ ರಾಜ್ಯದ ಇಲ್ಲವೆ ಯಾವುದೇ ಪ್ರಾಂತ್ಯದ ಇಲ್ಲವೆ ಭಾರತದ ರಾಜ್ಯದ ಆಯಾ ರಾಜ್ಯಕ್ಕೆ ಸಂಬಂಧಿಸಿದಂತೆ ಮೊದಲನೆಯ ಪರಿಶಿಷ್ಟದ ಭಾಗ ೧೧೧ರಲ್ಲಿ ಕಾಣಿಸಿದಂತೆ ಅಂತಹ ರಾಜ್ಯದ ಮಂತ್ರಿಗಳಾದರೆ ಈ ಸಂವಿಧಾನವು ಜಾರಿಯಲ್ಲಿ ಬರುವ ದಿನಾಂಕದಂದು ಭಾರತದ ಸಂವಿಧಾನದ ಸಭೆಯ ಸದಸ್ಯತ್ವವು ಮುಕ್ತಾಯಗೊಳ್ಳದ ಹೊರತು ಇಲ್ಲವೆ ಅವನು ವಿಧಾನಸಭೆಯ ಸದಸ್ಯತ್ವವು ಇದಕ್ಕೂ ಮೊದಲು ಪೂರ್ವದಲ್ಲಿ ಆ ಸ್ಥಾನವು ತೆರವಾಗಿದ್ದರೆ ಅಂತಹ ತೆರವಾದ ಸ್ಥಾನವು ಆಕಸ್ಮಿಕವಾಗಿ ತೆರವಾದ ಸ್ಥಾನವೆಂದು ಗ್ರಹಿಸಬೇಕು. ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ:

ಪಟ್ಟಿ ೧ ತಿದ್ದುಪಡಿ ಸಂಖ್ಯೆ ೯ (ಎರಡನೆಯ ವಾರ) ಪ್ರಸ್ತಾವನೆ ಮಾಡಲಿರುವ ಅನುಚ್ಛೇದ ೩೧೧ ಖಂಡ (೩)ರ ನಂತರ ಕೆಳಗಣ ಹೊಸ ಖಂಡವನ್ನು ಸೇರಿಸತಕ್ಕದ್ದು.

"೩(ಎ) ಭಾರತದ ಸಂವಿಧಾನದ ಸದನ ಭಾರತದ ಸಾರ್ವಭೌಮತ್ವ ಹೊಂದಿದ್ದು ಅನುಚ್ಛೇದ (೩)ರಲ್ಲಿ ಹೇಳಿದಂತೆ ಆ ಸ್ಥಾನವು ಈ ಉಪಬಂಧದ ಕೆಳಗೆ ತೆರವು ಆಗದಿದ್ದರೆ ಸಂವಿಧಾನವು ಜಾರಿಗೆ ಬರುವ ಪೂರ್ವದಲ್ಲಿ ಇಂತಹ ತೆರವಾದ ಸ್ಥಾನವನ್ನು ತುಂಬುವುದಕ್ಕಾಗಿ ಕ್ರಮ ಕೈಗೊಳ್ಳಬೇಕು. ಆದರೂ ಯಾವ ವ್ಯಕ್ತಿಯನ್ನು ಆ ಸ್ಥಾನಕ್ಕೆ ತುಂಬಬೇಕೆಂದು ನಿರ್ಧರಿಸಿ ಈ ಸಂವಿಧಾನ ಜಾರಿಗೆ ಬರುವ ಪೂರ್ವದಲ್ಲಿ ತುಂಬಿದ್ದರೆ ಅಂತಹ ವ್ಯಕ್ತಿಗೆ ಆ ವಿಧಾನಸಭೆಯಲ್ಲಿ ಆ ರೀತಿ ಸ್ಥಾನ ತೆರವು ಆಗುವವರೆಗೆ ಕೂಡಲು ಹಕ್ಕಿಲ್ಲ."

ಈ ಉಪಬಂಧದ ಉದ್ದೇಶವೆಂದರೆ ತಾತ್ಕಾಲಿಕ ಸಂಸತ್ತು ರಚಿಸುವ ಕಾಲಕ್ಕೆ ದ್ವಿ ಸದಸ್ಯತ್ವವನ್ನು ಕೈ ಬಿಡಲು ಸೂಚಿಸಲಾಗಿದೆ.

ಉಳಿದ ಉಪಬಂಧಗಳು ಕೇವಲ ಪರಿಣಾಮಕಾರಿಯಾಗಿದೆ.

* * *

**ಮಾನ್ಯ ಅಧ್ಯಕ್ಷರು:** ಡಾ.ಅಂಬೇಡ್ಕರ್ ನಿಮಗೆ ಏನಾದರೂ ಹೇಳುವುದಿದೆಯೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬಾಂಬೆ ಜನರಲ್): ಮಾನ್ಯರೆ ನಾನು ಪ್ರಾರಂಭ ಮಾಡುವ ಪೂರ್ವದಲ್ಲಿ ತಮ್ಮ ಅನುಮತಿಯೊಂದಿಗೆ ಖಂಡ (೩)ರಲ್ಲಿ ತಿದ್ದುಪಡಿ ೧೯೫ ಇಲ್ಲಿ 'ಆಗುತ್ತದೆ' ಎಂಬ ಪದವನ್ನು ಕೈಬಿಡಬೇಕೆಂದು ಇದು ಮುಂದೆ ಯಾವುದೇ ವೇಳೆಗೆ ಈ ಮಧ್ಯದಲ್ಲೆ ಬರುವ ಪದವು ಅವಶ್ಯ ಇರುವುದಿಲ್ಲ.

ಅನೇಕ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಈಗ ನನಗೆ ಕೇವಲ ಮೂರು ಮಾತ್ರ ವಿಚಾರಣೆಗೆ ಯೋಗ್ಯ ಎಂದು ಅನಿಸುತ್ತದೆ. ಮೊದಲನೆಯದೆಂದರೆ ನನ್ನ ಗೆಳೆಯರಾದ ಶ್ರೀ ಕಾಮತ್ ಅವರು ತಂದ ತಿದ್ದುಪಡಿ. ಅವರ ಹೇಳುವುದೇನೆಂದರೆ ಈ ಅನುಚ್ಛೇದದ ಖಂಡ (೪)ರಲ್ಲಿ ಕೆಲವು ನ್ಯೂನ್ಯತೆಗಳಿವೆ. ಇವು ಯಾವ ಉಪಬಂಧಕ್ಕೆ ಸಂಬಂಧಿಸಿದ್ದು ಅಂದರೆ:

ಕೇಂದ್ರದಲ್ಲಿಯ ಡೆಪ್ಯೂಟಿ ಸ್ಪೀಕರ್ (ಉಪಾಧ್ಯಕ್ಷ) ಮತ್ತು ಪ್ರಾಂತ್ಯಗಳಲ್ಲಿ (ಸ್ಪೀಕರ) ಅಧ್ಯಕ್ಷರಿಗೆ ಸಂಬಂಧಿಸಿದಂತೆ ಅವರನ್ನು ಮುಂದುವರೆಸುವ ಕುರಿತು ವ್ಯತ್ಯಾಸವಿದೆ. ಅಲ್ಲಿ ಆ ಬಗ್ಗೆ ಯಾವುದೇ ಉಪಬಂಧ ಇರುವುದಿಲ್ಲ.

ವೈಯಕ್ತಿಕವಾಗಿ ಮತ್ತು ಕರಡು ಸಮಿತಿಯವರು ಈ ಎರಡು ಉಪಬಂಧಗಳಲ್ಲಿಯ ವ್ಯತ್ಯಾಸದ ಬಗ್ಗೆ ನಮಗೆ ಮನವರಿಕೆ ಇತ್ತು. ಮತ್ತು ಇಂತಹ ನ್ಯೂನ್ಯತೆಯನ್ನು ಸರಿಪಡಿಸಲು ನಂತರ ತಿದ್ದುಪಡಿ ತರಬಹುದೆಂದು ನಾವು ಉದ್ದೇಶಿಸಿದ್ದೆವು. ಶ್ರೀ ಕಾಮತ್ ಅವರಿಗೆ ಭರವಸೆ ಕೊಡುವುದೇನೆಂದರೆ ಕರಡು ಸಮಿತಿಯವರು ಈ ವ್ಯತ್ಯಾಸವನ್ನು ಮುಂದುವರೆಯಲು ಬಿಡುವುದಿಲ್ಲ. ತಿದ್ದುಪಡಿಯೊಂದಿಗೆ ಅದನ್ನು ಸರಿಪಡಿಸಲಾಗುವುದು.

ಇನ್ನೊಂದು ಮಹತ್ವದ ವಿಷಯವೆಂದರೆ ನನ್ನ ಗೆಳೆಯರಾದ ಶ್ರೀ ಮುನಿಸ್ವಾಮಿ ಪಿಳ್ಳೈಯವರು ತಾತ್ಕಾಲಿಕ ಸಂಸತ್ತಿನಲ್ಲಿ ಪರಿಶಿಷ್ಟ ಜಾತಿಯವರು ಪ್ರತಿನಿಧಿಸುವ ಬಗ್ಗೆ ಹೇಳಿದ್ದು ಅದರ ಸ್ಥಿತಿಯು ಹೀಗೆ ಇದೆ. ಈಗ ಸಂಸತ್ತಿನಲ್ಲಿ ೩೧೦ ಸದಸ್ಯರು ಇದ್ದಾರೆ ಮತ್ತು ತಾತ್ಕಾಲಿಕವಾಗಿ ಸಂಸತ್ತು ಸಹಿತ ೩೧೦ ಸದಸ್ಯರನ್ನು ಒಳಗೊಂಡಿದ್ದು ಅದು ಮುಂದುವರೆಯುತ್ತದೆ. ಜನಗಣತಿಯ ಮೇರೆಗೆ ಮುಂದೆ ರಚಿಸುವ ಸಂಸತ್ತು ಕೇವಲ ಜನಸಂಖ್ಯೆಯ ಮೇಲೆ ಒಟ್ಟು ೩೧೦ ರಷ್ಟು ಸ್ಥಾನಗಳು ಪರಿಶಿಷ್ಟ ಜಾತಿಯವರು ೪೫ ಸ್ಥಾನಗಳನ್ನು ಪಡೆಯುತ್ತಾರೆ. ಆದರೆ ಇಂದು ಅವರಿಗೆ ಕೇವಲ ೨೮ ಸ್ಥಾನಗಳಿವೆ. ಅವರಿಗೆ ಈ ೨೮ ಸ್ಥಾನಗಳ ಯಾವುದೇ ಕಾಲಕ್ಕೆ ಕಡಿಮೆಯಾಗದಂತೆ ನಿಶ್ಚಿತವಾಗಿ ಉಪಬಂಧವನ್ನು ಈ ಅನುಚ್ಛೇದದಲ್ಲಿ ಕಲ್ಪಿಸಿದೆ. ಈಗಿದ್ದ ೨೮ ಸ್ಥಾನಗಳು ಮತ್ತು ಮುಂದೆ ೪೫ ಸ್ಥಾನಗಳನ್ನು ಜನಸಂಖ್ಯೆಯ ಮೇಲೆ ಕೊಡತಕ್ಕದ್ದು. ಈ ವ್ಯತ್ಯಾಸವನ್ನು ಸರಿಪಡಿಸಲು ರಾಷ್ಟ್ರಪತಿಗಳಿಗೆ ನಿಯಮಾವಳಿಗಳನ್ನು ಮಾರ್ಪಾಡು ಮಾಡಿ ಸ್ವೀಕರಿಸಲು ಅಧಿಕಾರ ಕೊಡಲಾಗಿದೆ. ಈ ಅಧಿಕಾರವನ್ನು ಹೊಸ ಅನುಚ್ಛೇದ ೩೧೫ (ಎಫ್) ದನ್ವಯ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಅಧಿಕಾರವನ್ನು ಚಲಾಯಿಸಬಹುದು.

ಈಗ ನಾನು ಶ್ರೀ ಪಾಟಸ್ಕರ ಅವರ ತಿದ್ದುಪಡಿಗೆ ಬರುತ್ತೇನೆ. ನಾನು ಅವರನ್ನು ತಿಳಿದುಕೊಂಡಂತೆ ನಿಜವಾಗಿ ಕರಡು ಅನುಚ್ಛೇದಕ್ಕೂ ಮತ್ತು ಅವರು ಸೂಚಿಸಿದ ತಿದ್ದುಪಡಿ ಇವುಗಳಲ್ಲಿ ತಾತ್ವಿಕವಾಗಿ ಯಾವುದೇ ವ್ಯತ್ಯಾಸ ಇರುವುದಿಲ್ಲ.

ನಾನು ಮಂಡಿಸಿದ ಅನುಚ್ಛೇದ ೩೧೧ ಮತ್ತು ಪಾಟಸ್ಕರ ಅವರು ಮಂಡಿಸಿದ ತಿದ್ದುಪಡಿ ಇದರಲ್ಲಿ ದ್ವಿಸದಸ್ಯತ್ವ ರದ್ದುಮಾಡುವ ಉಪಬಂಧ ಮಾಡಬೇಕೆಂದು ಒಪ್ಪಿಕೊಳ್ಳುತ್ತೇವೆ. ನಮ್ಮ ಮುಂದೆ ಇರುವ ಒಂದೇ ಪ್ರಶ್ನೆಯೆಂದರೆ ಅದನ್ನು ಯಾವ ರೀತಿ ಮಾಡಬೇಕೆಂಬುದಾಗಿದೆ. ಅನುಚ್ಛೇದದ ಉಪಬಂಧಗಳಲ್ಲಿ

ಹೇಳಿದ್ದೇನೆಂದರೆ ಸಂವಿಧಾನ ಜಾರಿಯಲ್ಲಿ ಬಂದ ನಂತರ ಸ್ಥಾನವು ತೆರವಾಗಬೇಕೆಂದು. ಹಾಗೆಂದರೆ ಅವರು ತನ್ನ ಸ್ಥಾನದಲ್ಲಿ ಸದಸ್ಯರಾಗಿ ಕೂಡುವರು ಮತ್ತು ತಮ್ಮ ಕಾರ್ಯವನ್ನು ನಿರ್ವಹಿಸುವರು ಆದರೆ ೨೫ನೆಯ ಜನವರಿ ೧೯೫೦ರವರೆಗೆ– ಸಂವಿಧಾನವು ೨೬ನೆಯ ಜನವರಿ ೧೯೫೦ರಂದು ಬರುವುದೆಂದರೆ ಅಲ್ಲಿಯವರೆಗೆ ಅವನು ಮುಂದುವರೆಯುತ್ತಾರೆ. ಸಂವಿಧಾನ ಜಾರಿಗೆ ಬಂದನಂತರ ಆ ಸ್ಥಾನವು ತೆರವು ಆಗುತ್ತದೆ. ಹೀಗೆ ತೆರವಾದ ಸ್ಥಾನಗಳನ್ನು ತುಂಬಲು ಸಂವಿಧಾನ ಜಾರಿಗೆ ಬರುವ ಪೂರ್ವದಲ್ಲಿ ಬೇಕಾದಾಗ ಚುನಾವಣೆ ನಡೆಸಿ ಸ್ಥಾನ ತುಂಬಬಹುದು. ಆದ್ದರಿಂದ ಭಾರತದ ಸಂವಿಧಾನ ಸಭೆ ತಾತ್ಕಾಲಿಕ ಸಂಸತ್ತು ಆಗಿ ಕೂಡುತ್ತದೆ. ಅದರಲ್ಲಿ ಯಾವುದೇ ಸದಸ್ಯತ್ವದಲ್ಲಿ ಒಮ್ಮೆಲೆ ಹೆಚ್ಚು ಕಡಿಮೆಯಾಗುವುದಿಲ್ಲ. ನನ್ನ ಗೆಳೆಯರಾದ ಶ್ರೀ ಪಾಟಸ್ಕರ್ ಅವರಿಗೆ ಬೇಕಾದುದು ಏನೆಂದರೆ ಆ ತೆರವಾದ ಸ್ಥಾನವು ಸಂವಿಧಾನ ಜಾರಿಗೆ ಬಂದ ನಂತರ ಜಾರಿಗೆ ಬರುತ್ತದೆ. ಸ್ಥಾನ ತೆರವಾಗುವುದು ಅನಂತರ ಎಂದರೆ ಒಂದು ತಿಂಗಳ ನಂತರ. ಇದೊಂದೇ ಅದರಲ್ಲಿರುವ ವ್ಯತ್ಯಾಸ ನನಗೆ ತಿಳಿಸಿದಂತೆ. ಇದು ನಿಜವಾಗಿಯೂ ಯಾವ ದಿನಾಂಕದಿಂದ ಅದನ್ನು ಅಳವಡಿಸಿಕೊಳ್ಳದೆಂಬುದರ ಬಗೆಗೆ ವಿವರಗಳನ್ನು ಒದಗಿಸಿ, ಅದು ಯಾವಾಗ ತೆರವಾಗುತ್ತದೆ. ಮತ್ತು ಯಾವ ದಿನಾಂಕದಂದು ಅದು ಖಾಲಿ ಆಗುವುದೆಂದು ನಾನು ನಿರ್ಧರಿಸಬೇಕಾಗಿದೆ. ನಾವು ಅಳವಡಿಸಿಕೊಳ್ಳುವ ದಿನಾಂಕವನ್ನು ೬ನೆಯ ಅಕ್ಟೋಬರ್ ೧೯೪೯ ಎಂದು ಅಳವಡಿಸಿಕೊಂಡಿದ್ದರ ಕಾರಣವೇನೆಂದರೆ ಆ ದಿನಾಂಕವನ್ನು ನಾವು ಉಲ್ಲೇಖಿಸಿದ್ದೇವೆ. ಅದರಿಂದ ಸದಸ್ಯರ ಸದಸ್ಯತ್ವವು ಮುಂದುವರೆಯುವುದು ಮತ್ತು ಗೊತ್ತುಪಡಿಸುವುದಾಗಿದೆ. ಯಾಕೆಂದರೆ ಆ ದಿನಾಂಕದಂದು ನಾವು ಭಾರತದ ಸಂವಿಧಾನ ಸಭೆಯನ್ನು ಪ್ರಾರಂಭಿಸಿದೆವು. ನಾವು ಅದನ್ನು ಕೇವಲ ಬಾಯಿಂದ ಹೇಳುವುದು ಬೇಡ ಮತ್ತು ದಿನಾಂಕ ೬ನೆಯ ಅಕ್ಟೋಬರ್ ೧೯೪೯ರಲ್ಲಿ ಇನ್ನಾವುದೇ ನಿರ್ದಿಷ್ಟವಾದ ಸತ್ಯವಿದೆ ಎಂದು ನನಗೆ ಅನಿಸುವುದಿಲ್ಲ. ತಮ್ಮ ಉಪಬಂಧದಲ್ಲಿ ಅವರು ತಿದ್ದುಪಡಿಯನ್ನು ಮಂಡಿಸಿದ್ದಾರೆ. ನಾನು ಹೇಳಿದಂತೆ ತತ್ವದಲ್ಲಿ ಯಾವ ವಾದವು ಇರುವುದಿಲ್ಲ. ನಾವೆಲ್ಲರೂ ಒಪ್ಪಿರುವ ಹಾಗೆ ದ್ವಿ ಸದಸ್ಯತ್ವವನ್ನು ರದ್ದುಪಡಿಸಬೇಕು. ಆದ್ದರಿಂದ ನಾನು ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಎಚ್. ವಿ. ಪಾಟಸ್ಕರ್:** ನನ್ನ ತಿದ್ದುಪಡಿಯು ಸದಸ್ಯರಿಗೆ ಆಯ್ಕೆಯ ಅವಕಾಶವನ್ನು ಕಲ್ಪಿಸಿಕೊಡುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನಗೆ ಅನಿಸಿದಂತೆ ಒಬ್ಬ ಸದಸ್ಯನಿಗೆ ಆಯ್ಕೆ ಮಾಡುವ ಅವಕಾಶ ಕೊಟ್ಟಲ್ಲಿ ಅದು ಜಟಿಲತೆಯನ್ನುಂಟು ಮಾಡುತ್ತದೆ. ಯಾಕೆಂದರೆ ನಾವು ಯಾವುದನ್ನು ತಡೆಯಲು ಇಚ್ಛಿಸುತ್ತೇವೆಯೋ ಅದೇ ಅನಿಷ್ಟ ಪುನರಪಿಯಾಗುತ್ತದೆ. ಆದ್ದರಿಂದ ನಾನು ವಿನಯಪೂರ್ವಕ ಹೇಳುವುದೇನೆಂದರೆ ಈ ಉಪಬಂಧದ ಅನುಚ್ಛೇದ ೩೧೧ ಇದನ್ನು ಒಳಗೊಂಡ ಉಪಬಂಧಗಳನ್ನು ಸಂಸತ್ತಿಗೆ ಕಳುಹಿಸಿಕೊಡಬೇಕು.

**ಶ್ರೀ ರಾಮ ಸಹಾಯ** (ಮಧ್ಯಪ್ರದೇಶ): ಶ್ರೀ ಸೀತಾರಾಮ ಜಾಜೂ ಅವರು ಮಂಡಿಸಿದ ತಿದ್ದುಪಡಿ ಏನಾಯಿತು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ಎತ್ತಿದ ವಿಷಯ ಬರಬಹುದೆಂದು ನಾವು ನಿರೀಕ್ಷಿಸಿದ್ದೆವು. ನಾವು ಅದನ್ನು ತಿದ್ದುಪಡಿ ಸಂಖ್ಯೆ ೧೯೫೮ರ ಮೂಲಕ ಮಾರ್ಪಾಡು ಮಾಡಿದ್ದೇವೆ. ಅದರಲ್ಲಿ ನಾನು ಭಾರತದ ರಾಜ್ಯಗಳಿಗಾಗಿ ಉಪಬಂಧಗಳನ್ನು ಕಲ್ಪಿಸಿದ್ದೇನೆ. ನಾನು ಮಾಡದಿರುವ ಒಂದೇ ಸಂಗತಿ ಯೆಂದರೆ ಲಾಭದ ಅಧಿಕಾರ ಸ್ಥಾನವನ್ನು ಹೊಂದಿದ ಅಧಿಕಾರಿಗಳ ಬಗ್ಗೆ ಉಪಬಂಧವನ್ನು ಕಲ್ಪಿಸಿಲ್ಲ.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ತಿದ್ದುಪಡಿಗಳನ್ನು ಒಂದರ ನಂತರ ಒಂದನ್ನು ಮತಕ್ಕೆ ಹಾಕುವೆನು.

ಶ್ರೀ ಕಾಮತ್ ಅವರ ೬ ತಿದ್ದುಪಡಿಗಳು, ಶ್ರೀ ತ್ಯಾಗಿಯವರ ೨ ತಿದ್ದುಪಡಿಗಳು, ಶ್ರೀ ಮುನಿಸ್ವಾಮಿ ಪಿಳ್ಳೈ ಅವರ ೪ ತಿದ್ದುಪಡಿಗಳು ಶ್ರೀ ಸಕ್ಸೇನಾರವರ ೧ ಮತ್ತು ಉಳಿದವರು ಮಂಡಿಸಿದ ೪ ತಿದ್ದುಪಡಿಗಳು ತಿರಸ್ಕೃತವಾಯಿತು.

**ಅನುಚ್ಛೇದ ೩೧೧ ತಿದ್ದುಪಡಿ ಡಾ. ಅಂಬೇಡ್ಕರ ಅವರು ಮಂಡಿಸಿದಂತೆ ಸ್ವೀಕರಿಸಲಾಯಿತು ಮತ್ತು ಸಂವಿಧಾನಕ್ಕೆ ಸೇರಿಸಲಾಯಿತು.**

* * *

# ವಿಧಿ ೩೧೨ ಎಫ್

**ರಾಷ್ಟ್ರಪತಿಯ ಪ್ರಾಂತ್ಯಗಳಲ್ಲಿ ತಾತ್ಕಾಲಿಕ ವಿಧಾನಸಭೆಗಳಲ್ಲಿ ಅಕಸ್ಮಾತಾಗಿ ಖಾಲಿಯಾದ ಜಾಗಗಳು ತುಂಬಲು ಉಪಬಂಧಗಳು.**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ ನಾನು ಈಗ ಮಂಡಿಸುತ್ತೇನೆ.

ಅನುಚ್ಛೇದ ೩೧೨ ಆದನಂತರ ಕೆಳಗಣ ಹೊಸ ಅನುಚ್ಛೇದವನ್ನು ಸ್ವೀಕರಿಸತಕ್ಕದ್ದು.

"೩೧೨ ಎಫ್ (೧) ಸಂವಿಧಾನದಲ್ಲಿ ಅನುಚ್ಛೇದ ೩೧೧ ಖಂಡ (ಎಲ್)ರ ಅಡಿಯಲ್ಲಿ ಕಾರ್ಯನಿರ್ವಹಿಸುವ ತಾತ್ಕಾಲಿಕ ಸಂಸತ್ತಿನ ಕೆಲಸ ಮಾಡುವಲ್ಲಿ ಸದಸ್ಯರ ಸ್ಥಾನಗಳು ಆಕಸ್ಮಾತ್ ಖಾಲಿಯಾದರೆ ಆ ಅನುಚ್ಛೇದದಲ್ಲಿ ಉಲ್ಲೇಖಿಸಿದ ಖಂಡ (೩) ೩ಎ ಇವುಗಳನ್ನು ಒಳಗೊಂಡಂತೆ ಸ್ಥಾನ ಖಾಲಿಯಾದವುಗಳನ್ನು ತುಂಬತಕ್ಕದ್ದು. ಇಂತಹ ಸ್ಥಾನಗಳನ್ನು ತುಂಬಿದ ನಂತರ (ಸಂಶಯಗಳನ್ನೊಳಗೊಂಡು ಅದರಿಂದ ಉಂಟಾಗುವ ತಂಟೆ ತಕರಾರುಗಳನ್ನು ಇಲ್ಲವೆ ಚುನಾವಣೆಯನ್ನು ಕುರಿತು ಅಂತಹ ಸ್ಥಾನ ತುಂಬುವುದನ್ನು ಕ್ರಮಬದ್ಧಗೊಳಿಸತಕ್ಕದ್ದು.)

ಎ) ಕಾನೂನು ಪ್ರಕಾರ ರಾಷ್ಟ್ರಪತಿಗಳು ನಿಯಮಗಳಿಗನುಸಾರವಾಗಿ ಮತ್ತು

ಬಿ) ನಿಯಮಗಳನ್ನು ಹಾಗೆ ಆ ವಿಷಯಕ್ಕೆ ಮಾಡುವವರೆಗೆ ಸಂಸತ್ತಿನಲ್ಲಿ ಆಕಸ್ಮಿಕವಾಗಿ ಖಾಲಿಯಾದ ಜಾಗಗಳು ಭಾರತದ ಸಂವಿಧಾನಾತ್ಮಕ ಸಭೆಯಲ್ಲಿ ಭಾರತದ ಸಾರ್ವಭೌಮತ್ವ ಉಳ್ಳದ್ದು ಈ ಬಗ್ಗೆ ಚಾಲತಿಯಲ್ಲಿದ್ದ ನಿಯಮಗಳು ಆ ಸ್ಥಾನವನ್ನು ಚುನಾವಣೆಯ ಮೂಲಕ ತುಂಬುವ ಕಾಲಕ್ಕೆ ಇಲ್ಲವೆ ಈ ಸಂವಿಧಾನವು ಜಾರಿಯಲ್ಲಿ ಬರುವ ನಿಕಟಪೂರ್ವದಲ್ಲಿ ಪ್ರಕರಣವು ಯಾವುದೇ ಇರಲಿ ಅಪವಾದಗಳಿಗೆ ಒಳಪಟ್ಟು 'ಮತ್ತು ಅದರಲ್ಲಿ ಮಾಡಿದ ಮಾರ್ಪಾಡುಗಳಿಗೆ ಒಳಪಟ್ಟು' ಅಂತಹ ಕಾನೂನು ಜಾರಿಗೆ ಬರುವ ಪೂರ್ವದಲ್ಲಿ ಆ ವಿಧಾನಸಭೆಯ ಅಧ್ಯಕ್ಷ ಆಮೇಲೆ ಕೇಂದ್ರ ಸರಕಾರದ ರಾಷ್ಟ್ರಪತಿಗಳು ಪರಂತು ಯಾವುದೇ ಸ್ಥಾನವು ಈ ಖಂಡದ ಅಡಿಯಲ್ಲಿ ಖಾಲಿಯಾಗಿದ್ದರೆ ಆ ಸ್ಥಾನವನ್ನು ಹೊಂದಿದ ವ್ಯಕ್ತಿಯ ಪರಿಶಿಷ್ಟ ಜಾತಿಗೆ ಇಲ್ಲವೆ ಮುಸ್ಲಿಮ್ ಇಲ್ಲವೆ ಶಿಯಾ ಜಾತಿಗೆ ಆ ದೃಷ್ಟಿಯಿಂದ ಆ ರಾಜ್ಯವನ್ನು ಪ್ರತಿನಿಧಿಸುವುದಿದ್ದರೆ, ಅದರಂತೆ ಭಾಗ ೧ ಪರಿಶಿಷ್ಟ ಒಂದನೆಯದ್ದರಲ್ಲಿ ಯಾವ ವ್ಯಕ್ತಿಯನ್ನು ಅಂತಹ ಯಾವುದೇ ಸ್ಥಾನಕ್ಕೆ ನೇಮಿಸುವಾಗ ಭಾರತದ ಸಂವಿಧಾನ ಸಭೆಯ ಅಧ್ಯಕ್ಷ ಇಲ್ಲವೆ ಕೇಂದ್ರ, ರಾಷ್ಟ್ರಪತಿ ಪ್ರಕರಣ ಯಾವುದೇ ಇರಲಿ, ಅದು ಅವಶ್ಯವಿದ್ದರೆ ಮತ್ತು ಸಮಯೋಚಿತವಾದುದು ಹಾಗು ಅದೇ ಜಾತಿಯವನಾಗಿದ್ದರೆ ಇನ್ನೂ ಹೆಚ್ಚಿಗೆ ಹೇಳುವುದೇನೆಂದರೆ ಇಂತಹ ಖಾಲಿಯಾದ ಜಾಗವನ್ನು ಚುನಾವಣೆಯ ಮೂಲಕ ತುಂಬಲು ಅಂತಹ ವ್ಯಕ್ತಿಯು ಸದ್ಯಕ್ಕೆ ಒಂದು ರಾಜ್ಯವನ್ನು ಪ್ರತಿನಿಧಿಸುತ್ತಿದ್ದರೆ ಪರಿಶಿಷ್ಟ ಒಂದನೆಯದ ಭಾಗ ೧ರಲ್ಲಿ ಕಾಣಿಸಿದಂತೆ ರಾಜ್ಯದ ವಿಧಾನಸಭೆಯ ಸದಸ್ಯನು ಇದರಲ್ಲಿ ಭಾಗವಹಿಸಬಹುದು ಮತ್ತು ಮತ

ಚಲಾಯಿಸಬಹುದು. ಈಗ ನಾನು ನನ್ನ ತಿದ್ದುಪಡಿ ಸಂಖ್ಯೆ ೨೦೫ ಬೇರೊಂದು ವಿವರಣೆ ಕೊಡಲು ಸೇರಿಸಬಯಸುತ್ತೇನೆ.

ಪಟ್ಟಿ ೧೧೧ (ಎರಡೆಯ ವಾರ) ತಿದ್ದುಪಡಿ ಸಂಖ್ಯೆ ೧೬೪ ಖಂಡ (೧)ಕ್ಕೆ ಪ್ರಸ್ತಾಪಿಸಲಿರುವ ಅನುಚ್ಛೇದ ೩೧೨ (ಎಫ್) ಈ ಕೆಳಗಣ ವಿವರಣೆಯನ್ನು ಸೇರಿಸತಕ್ಕದ್ದು.

ವಿವರಣೆ–ಈ ಖಂಡಕ್ಕಾಗಿ ವಿವರಣೆ

(೧) ಎಲ್ಲ ಅಂತಹ ಜಾತಿ, ಜನಾಂಗ ಇಲ್ಲವೆ ಬುಡಕಟ್ಟು ಇಲ್ಲವೆ ಭಾಗಗಳು ಇಲ್ಲವೆ ಜಾತಿಯಲ್ಲಿ ಒಳಪಂಗಡ ಸಮೂಹಗಳು, ಜಾತಿಯಲ್ಲಿಯೇ ಜನಾಂಗಗಳು, ಇಲ್ಲಿ ಬುಡಕಟ್ಟು ಕೇಂದ್ರ ಸರಕಾರವು ಪರಿಶಿಷ್ಟ ಜಾತಿಗಳು ಅಧಿನಿಯಮ ೧೯೩೬ ಯಾವುದೇ ಪ್ರಾಂತ್ಯದಲ್ಲಿ ಒಬ್ಬನು ಆ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಅವನು ಪರಿಶಿಷ್ಟ ಜಾತಿಯವನೆಂದು ಗ್ರಹಿಸಲಾಗುವುದು, ಇಲ್ಲವೆ ಆಯಾ ರಾಜ್ಯಕ್ಕೆ ಆ ಬಗ್ಗೆ ಒಂದು ಅಧಿಸೂಚನೆಯನ್ನು ರಾಷ್ಟ್ರಗಳು ಅನುಚ್ಛೇದ ೩೦೦ (ಎ)ಖಂಡ ೧ ಇದರಲ್ಲಿ ಆ ರಾಜ್ಯದ ಪರಿಶಿಷ್ಟ ಜಾತಿಯವರನ್ನು ನಮೂದಿಸತಕ್ಕದ್ದು.

(ಬಿ) ಒಂದು ಪ್ರಾಂತ್ಯದ ಇಲ್ಲವೆ ರಾಜ್ಯದ ಎಲ್ಲ ಪರಿಶಿಷ್ಟ ಜಾತಿಯ ಜನರು ಒಂದೇ ಜಾತಿಯವರೆಂದು ಗ್ರಹಿಸಲಾಗುವುದು" ಈಗ ನಾನು ಉಪಖಂಡ (೨)ಕ್ಕೆ ಬರುತ್ತೇನೆ.

(೨) ಈ ಸಂವಿಧಾನದ ಖಂಡ ೩೧೨ ಇಲ್ಲವೆ ೩೧೨ ಇವುಗಳನ್ವಯ ಆಕಸ್ಮಿಕವಾಗಿ ತಾತ್ಪೂರ್ತಿಕವಾದ ವಿಧಾನಸಭೆಯಲ್ಲಿ ಉಂಟಾದ ಖಾಲಿ ಜಾಗಗಳನ್ನು ತುಂಬತಕ್ಕದ್ದು ಮತ್ತು ಆ ವಿಷಯಕ್ಕೆ ಸಂಬಂಧಿಸಿದಂತೆ ಹುಟ್ಟಬಹುದಿದ್ದ ಸಂಶಯಗಳ ಬಗಗೆ ನಿರ್ಣಯ ಹಾಗೂ ತಕರಾರು ಉಂಟಾಗಬಹುದಾದ್ದರಿಂದ ಮತ್ತು ಚುನಾವಣೆಯಿಂದ ಅಂತಹ ಖಾಲಿ ಹುದ್ದೆಗಳನ್ನು ತುಂಬುವುದು ಇಂತಹ ಹುದ್ದೆಗಳನ್ನು ಕ್ರಮಬದ್ಧಗೊಳಿಸುವುದು, ಈ ಹುದ್ದೆಗಳನ್ನು ತುಂಬಲು ಇಂತಹ ವಿಷಯ ಕ್ರಮಬದ್ಧಗೊಳಿಸಲು ಆ ನಿಯಮಗಳು ಜಾರಿಯಲ್ಲಿ ಇದ್ದವೆಂದು, ಅಂದರೆ ಸಂವಿಧಾನ ಜಾರಿಗೆ ಬರುವ ಪೂರ್ವದಲ್ಲಿ ಇದ್ದವೆಂದು ಇರುವ ಅಪವಾದಗಳಿಗೆ ಒಳಪಟ್ಟು ಇಲ್ಲವೆ ಅಂತಹ ಮಾರ್ಪಾಡಿಗೆ ಒಳಪಟ್ಟು ರಾಷ್ಟ್ರಪತಿಯು ನೇರ ಆದೇಶ ಮಾಡಬಹುದು. ಇಲ್ಲವೆ ನಿರ್ದೇಶಿಸಬಹುದು.

ನನಗೆ ಅನಿಸಿದಂತೆ ಯಾವುದೇ ವಿವರಣೆಯ ಆವಶ್ಯಕತೆ ಇರುವುದಿಲ್ಲ. ಉಪಬಂಧಗಳು ಸ್ಪಷ್ಟವಾಗಿದೆ. ಚರ್ಚೆಯಲ್ಲಿ ಯಾವುದೇ ವಿಷಯ ಎತ್ತಿದರೆ ನಾನು ಅದಕ್ಕೆ ನನ್ನ ಸ್ಪಷ್ಟನೆಯನ್ನು ಕೊಡುವೆನು.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಒಂದೆರಡು ವಿಷಯಗಳನ್ನು ಈ ಚರ್ಚೆಯಲ್ಲಿ ಎತ್ತಿದ್ದಾರೆ. ಮೊದಲನೆಯ ವಿಷಯವೆಂದರೆ ಶ್ರೀ ಸಕ್ಸೇನಾ ಹಾಗೂ ಪಂಡಿತ ಭಾರ್ಗವ ಅವರು ಮುಸಲ್ಮಾನರ, ಶಿಯಾಗಳ ಪ್ರತಿನಿಧಿತ್ವವನ್ನು ಈ ಮಧ್ಯಂತರ ಸಂಸತ್ತಿನಲ್ಲಿ ಮುಂದುವರೆಯಿಸುವ ಕುರಿತು ಇರುತ್ತದೆ. ಅವರು ಈಗ ಮುಂದುವರಿಸಿಕೊಂಡು ಹೋಗುವುದಕ್ಕೆ ವಿರೋಧಿಸುತ್ತಾರೆ. ಯಾಕೆಂದರೆ ಮುಸಲ್ಮಾನರು ಹಾಗೂ ಶಿಯಾಗಳು ತಮ್ಮ ಹಕ್ಕುಗಳನ್ನು ಬಿಟ್ಟುಕೊಟ್ಟಿದ್ದಾರೆ. ಈ ಭಾರತದ ಸಂವಿಧಾನ ಸಭೆಗೆ ತಮ್ಮ ವಿಶೇಷ ಪ್ರತಿನಿಧಿಯನ್ನು ಕಳುಹಿಸುವ ವ್ಯವಸ್ಥೆಯನ್ನು ಮಾತುಕತೆಯ ಮೂಲಕ ಮಾಡಿರುವದರಿಂದ ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿದ್ದಾರೆ. ಈ ಬಗೆಗೆ ನನ್ನ ವಿನಂತಿ ಏನೆಂದರೆ ನಾವು ಯಾವ ವ್ಯವಸ್ಥೆಯನ್ನು ಮಾಡಿರುವವೋ ಅದೇ ವ್ಯವಸ್ಥೆಗಳು ಖಾಯಂ ಸಂಸತ್ತಿನಲ್ಲಿಯೂ ಅವು ಮುಂದುವರೆಯುತ್ತವೆ. ಅಂದರೆ ಈಗ ಜಾರಿಯಲ್ಲಿ ಬರುವ ಸಂವಿಧಾನದಲ್ಲಿ ಮುಂದುವರೆಯುತ್ತವೆ. ಅದು ಹೀಗೆ ಇರುವುದರಿಂದ ಈ ಭಾರತ ಸಂವಿಧಾನದ

ಸಭೆಯ ರಚನೆಯನ್ನು ಬದಲಿಸುವುದು ಸರಿಯಲ್ಲ ಮತ್ತು ನ್ಯಾಯ ಸಮ್ಮತವಲ್ಲ, ಇಷ್ಟರಲ್ಲಿ ನಾವು ಇದನ್ನು ತಾತ್ಕಾಲಿಕ ಸಂಸತ್ತು ಎಂದು ರಚಿಸುತ್ತಿದ್ದೇವೆ.

ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿ ಅವರು ಮಂಡಿಸಿದ ತಿದ್ದುಪಡಿಯಲ್ಲಿ ಭಾರತದ ಸಂವಿಧಾನ ಸಭೆಯಲ್ಲಿ ಹೆಣ್ಣುಮಕ್ಕಳನ್ನು ಅದರಲ್ಲಿ ಉಳಿಸಿಕೊಳ್ಳಲು ವಿಶೇಷ ವ್ಯವಸ್ಥೆ ಮಾಡಬೇಕೆಂಬುದರ ಬಗೆಗೆ. ನನಗೆ ಅನಿಸಿದಂತೆ ಅದರ ಆವಶ್ಯಕತೆಯು ಇರುವುದಿಲ್ಲ. ನನಗೆ ಆ ಬಗೆಗೆ ಯಾವ ಸಂಶಯವೂ ಇಲ್ಲ. ರಾಷ್ಟ್ರಪತಿಗಳು ನಿಯಮಗಳನ್ನು ಮಾಡುವ ತಮ್ಮ ಅಧಿಕಾರವನ್ನು ಚಲಾಯಿಸುವ ಮೊದಲು ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ತಾತ್ಕಾಲಿಕ ಸಂಸತ್ತಿಗೆ ಒಂದು ನಿರ್ದಿಷ್ಟ ಸಂಖ್ಯೆಯ ಹೆಣ್ಣುಮಕ್ಕಳ ಪ್ರಾತಿನಿಧ್ಯಕ್ಕಾಗಿ ಇಲ್ಲವೆ ವಿವಿಧ ಪಕ್ಷಗಳ ಪ್ರತಿನಿಧಿಗಳನ್ನು ಒಳಗೊಳ್ಳುವಂತೆ ಮಾಡುವರು.

ಶ್ರೀ ಮುನಿಸ್ವಾಮಿ ಪಿಳ್ಳೈ ಅವರ ತಿದ್ದುಪಡಿಯಲ್ಲಿ ಪರಿಶಿಷ್ಟ ಜನಾಂಗದವರಿಗೆ ಪ್ರಾತಿನಿಧ್ಯ ಕಲ್ಪಿಸಲು ಹೊಸ ಉಪಬಂಧ ಕಲ್ಪಿಸಬೇಕೆಂದು ಕೇಳುತ್ತಾರೆ. ನಿಜವಾಗಿಯೂ, ಈ ವಿಷಯಕ್ಕೆ ಪರಿಶಿಷ್ಟ ಉಪಬಂಧವನ್ನು ಕಲ್ಪಿಸಲು ಯಾವ ವಿರೋಧವೂ ಇಲ್ಲ. ಆದರೆ ಸದ್ಯಕ್ಕೆ ಗಣತಿಯಲ್ಲಿ ಅವುಗಳ ನಮೂದು ಇರುವುದಿಲ್ಲ. ಯಾಕೆಂದರೆ ಭಾರತ ಸರಕಾರದ ಅಧಿನಿಯಮ ೧೯೩೫ ಅದರಲ್ಲಿ ಪರಿಶಿಷ್ಟ ಜನಾಂಗಕ್ಕೆ ಸದ್ಯಕ್ಕೆ ಮಾನ್ಯತೆ ಕೊಟ್ಟಿರುವುದಿಲ್ಲ. ೧೯೩೫ರ ಭಾರತ ಸರಕಾರದ ಅಧಿನಿಯಮದಲ್ಲಿ ಯಾವ ಯಾವ ಬುಡಕಟ್ಟುಗಳನ್ನು ಪ್ರಾತಿನಿಧ್ಯಕ್ಕಾಗಿ ಸೇರಿಸಲಾಗಿದೆಯೋ ಅವರೆಲ್ಲರನ್ನು ಹಿಂದುಳಿದ ಜನಾಂಗವೆಂದು ಕರೆಯಲಾಗಿದೆ. ಅದರ ಪರಿಣಾಮವಾಗಿ ನನ್ನ ಗೆಳೆಯರಾದ ಶ್ರೀ ಮುನಿಸ್ವಾಮಿ ಪಿಳ್ಳೈ ಅವರು ಈ ವಿಷಯವನ್ನು ಕರಡು ಸಮಿತಿಗೆ ಬಿಡಬೇಕು. ನಾವು ಬಹುತರವಾಗಿ ಕೆಲವು ಯೋಗ್ಯ ವ್ಯವಸ್ಥೆಯನ್ನು ಮಾಡಿ ಅವರ ತಿದ್ದುಪಡಿಗೆ ಪರಿಣಾಮ ಕೊಡುತ್ತೇವೆ.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

**(ಮೂರು ತಿದ್ದುಪಡಿಗಳು ತಿರಸ್ಕೃತವಾದವು ಅನುಚ್ಛೇದ ೩೧೨ (ಎಫ್) ಡಾ.ಅಂಬೇಡ್ಕರ ಅವರ ತಿದ್ದುಪಡಿಯಂತೆ ತಿದ್ದುಪಡಿಯಾದ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)**

* * *

**ಮಾನ್ಯ ಸಭಾಧ್ಯಕ್ಷರು:** ಈಗ ನಾವು ನಾಲ್ಕನೆಯ ಪರಿಶಿಷ್ಟವನ್ನು ತೆಗೆದುಕೊಳ್ಳೋಣ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಮಾನ್ಯರೇ ಪರಿಶಿಷ್ಟ ನಾಲ್ಕು ಇದನ್ನು ತೆಗೆದುಹಾಕಬೇಕೆಂದು ನಾನು ತಿದ್ದುಪಡಿ ತರುತ್ತೇನೆ.

**ಕೆಲವು ಮಾನ್ಯ ಸದಸ್ಯರು:** ಅದನ್ನು ಹೇಗೆ ತೆಗೆದುಹಾಕುತ್ತೀರಿ?

**ಮಾನ್ಯ ಸಭಾಧ್ಯಕ್ಷರು:** ಕರಡು ಸಮಿತಿಯು ನಿರ್ದಿಷ್ಟ ಅನುಚ್ಛೇದಗಳನ್ನು ತೆಗೆದುಹಾಕುವ ಕುರಿತು ಕ್ರಮ ಕೈಕೊಳ್ಳುತ್ತಾರೆ. ಈಗ ನಾಲ್ಕನೆಯ ಪರಿಶಿಷ್ಟಕ್ಕೆ ತಿದ್ದುಪಡಿಗಳಿವೆ. ಈಗ ಡಾ.ಅಂಬೇಡ್ಕರ ಅವರು ಪರಿಶಿಷ್ಟ ನಾಲ್ಕನ್ನು ಯಾಕೆ ಕೈಬಿಟ್ಟರೆಂಬುದನ್ನು ವಿವರಿಸಬೇಕು. ಯಾಕೆಂದರೆ, ಸದಸ್ಯರು ತಿದ್ದುಪಡಿಗಳಿಗಾಗಿ ನೋಟೀಸು ಕೊಟ್ಟಿದ್ದಾರೆ. ಇದರಿಂದ ವಿಷಯದ ಸ್ಪಷ್ಟಕಲ್ಪನೆಯು ಆಗುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಶ್ರೀ ಕೃಷ್ಣಮಾಚಾರಿ ಅವರು ಅದನ್ನು ವಿವರಿಸುವರು.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ಲಿಖಿತ ಸೂಚನೆಗಳಲ್ಲಿ ಎರಡು ಸಂಗತಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ಲಿಖಿತಸೂಚನೆಯು ಮೊದಲು ಬ್ರಿಟಿಷರ ಸಂಸತ್ತಿನಲ್ಲಿ ಬ್ರಿಟಿಷ್

ಸರಕಾರದ ವಸಾಹತುಗಳಿಗೆ ಕೆಲವು ನಿರ್ದಿಷ್ಟ ನಿರ್ದೇಶನಗಳನ್ನು ಆಯಾ ವಸಾಹತುವಿನ ಮುಖ್ಯಸ್ಥರಿಗೆ ಅವರಿಗೆ ಇರುವ ವಿವೇಚನೆಯ ಅಧಿಕಾರವನ್ನು ಹೇಗೆ ಉಪಯೋಗಿಸಬೇಕೆಂಬುದರ ಬಗೆಗೆ ಇರುತ್ತದೆ. ಈಗ ಲಿಖಿತ ಸೂಚನೆಗಳು ನಿರ್ದಿಷ್ಟ ರಾಜ್ಯಪಾಲರಿಗೆ ಇಲ್ಲವೆ ವೈಸ್‌ರಾಯರಿಗೆ ಯಾರಿಗೆ ಸೂಚನೆಗಳನ್ನು ಕೊಡಲಾಗಿದೆಯೋ ಅವರು ಅವುಗಳನ್ನು ಸೆಕ್ರೆಟರಿ–ಆಫ್–ಸ್ಟೇಟ್ ಅವರ ಅಧಿಕಾರಕ್ಕೆ ಒಳಪಟ್ಟು ಕೊಟ್ಟದ್ದು ಇರುತ್ತದೆ. ಯಾವುದೇ ವಿಷಯವು ಗಂಭೀರವಾಗಿ ಇದ್ದರೆ ರಾಜ್ಯಪಾಲರು ತಮಗೆ ಕೊಟ್ಟ ಆ ಲಿಖಿತ ಸೂಚನೆಗಳು ಸರಿಯಿಲ್ಲವೆಂದು ಪಟ್ಟು ಹಿಡಿದು ಅವುಗಳನ್ನು ಕಾರ್ಯರೂಪಕ್ಕೆ ತರಲು ನಿರಾಕರಿಸಿದರೆ, ಅಂಥವರನ್ನು ಅಧಿಕಾರದಿಂದ ಕಿತ್ತು ಹಾಕಲು ಸೆಕ್ರಟರಿ–ಆಫ್–ಸ್ಟೇಟ್ ಅವರಿಗೆ ಅಧಿಕಾರವಿತ್ತು ಮತ್ತು ಅವರ ಸ್ಥಾನದಲ್ಲಿ ಬೇರೊಬ್ಬನನ್ನು ನೇಮಿಸಲು ಸಹ ಅವರಿಗೆ ಅಧಿಕಾರವಿತ್ತು. ಇದರಿಂದ ಲಿಖಿತ ಸೂಚನೆಗಳ ಮೂಲಕ ಪರಿಣಾಮಕಾರಿಯಾಗಿ ಸಂವಿಧಾನವನ್ನು ಜಾರಿಗೆ ತರಲು ಅನುಕೂಲವಾಗುತ್ತಿತ್ತು. ನಮ್ಮ ಸಂವಿಧಾನವನ್ನು ಕುರಿತು ಈಗ ಇಲ್ಲಿ ರಾಜ್ಯಪಾಲರು ನಂಬಿಕೆಯಿಂದ ಈ ಲಿಖಿತ ಸೂಚನೆಗಳನ್ನು ಕಾರ್ಯರೂಪಕ್ಕೆ ತರುವರೆಂಬುದನ್ನು ನೋಡಲು ಯಾವ ಅಧಿಕಾರವೂ ಇರುವುದಿಲ್ಲ.

ಎರಡನೆಯದಾಗಿ, ಈ ಸಂವಿಧಾನದಲ್ಲಿ ರಾಜ್ಯಪಾಲರಿಗೆ ನಾವು ಕೊಡುವ ವಿವೇಚನಾ ಅಧಿಕಾರವು ಅತಿ ಸ್ವಲ್ಪ. ಅವನ ವಿವೇಚನೆಗೆ ಏನನ್ನೂ ಬಿಟ್ಟಿಲ್ಲ. ಪ್ರಧಾನಮಂತ್ರಿಗಳು ಕ್ಯಾಬಿನೆಟ್ ಸದಸ್ಯರನ್ನು ಆರಿಸಿಕೊಳ್ಳುವಾಗ ಅವರ ಸಲಹೆಯಂತೆ ನಡೆಯಬೇಕಾಗುತ್ತದೆ. ಪ್ರಧಾನ ಮಂತ್ರಿಗಳು ಹಾಗೂ ಅವರ ಮಂತ್ರಿಮಂಡಲದ ಸದಸ್ಯರು ರಾಷ್ಟ್ರಪತಿ ಸಲಹೆಯ ಮೇರೆಗೆ ನಡೆದುಕೊಳ್ಳಬೇಕು. ಯಾವುದೇ ನಿರ್ದಿಷ್ಟವಾದ ಕಾರ್ಯಾಂಗ ಇಲ್ಲವೆ ಶಾಸಕಾಂಗದ ಮೇಲೆ ಅವರು ಕ್ರಮ ಕೈಗೊಳ್ಳಬಹುದು. ಅದು ಹಾಗೆ ಇದ್ದುದರಿಂದ, ಪ್ರಧಾನ ಮಂತ್ರಿಗಳು ತಮ್ಮ ಮಂತ್ರಿಮಂಡಲದಲ್ಲಿ ಅಲ್ಪ ಸಂಖ್ಯಾತರನ್ನು ಸೇರಿಸಿಕೊಳ್ಳುವ ಪ್ರಸ್ತಾಪ ಮಾಡಿರದಿದ್ದರೆ ಆಗ ರಾಷ್ಟ್ರಪತಿಗಳು ಏನನ್ನು ಮಾಡಲು ಬರುವುದಿಲ್ಲ. ಕೇವಲ ನಾವು ಈ ಲಿಖಿತ ಸೂಚನೆಗಳಿಂದ ಈ ರೀತಿ ನಡೆದುಕೊಳ್ಳಬೇಕೆಂದು ಮಾತ್ರ ಹೇಳುತ್ತೇವೆ. ಆದ್ದರಿಂದ ಈ ಲಿಖಿತ ಸೂಚನೆಯನ್ನು ಕಾರ್ಯರೂಪಕ್ಕೆ ತರಲು ರಾಷ್ಟ್ರಪತಿಗಳಿಗಾಗಲಿ ಇಲ್ಲವೆ ರಾಜ್ಯಪಾಲರಿಗಾಗಲಿ ಇದನ್ನು ಜಾರಿಗೆ ತರಲು ನಿರ್ದೇಶನಗಳನ್ನು ಕೊಡಲು ಯಾವುದೇ ಅಧಿಕಾರಿಯೂ ಇರುವುದಿಲ್ಲ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಈ ಲಿಖಿತ ಸೂಚನೆಯು ಅಪೇಕ್ಷಣೀಯವಲ್ಲವೆಂದು ನಮಗೆ ಅನಿಸಿತು. ಯಾಕೆಂದರೆ ಬೇರೆ ಸಂದರ್ಭದಲ್ಲಿ ಇದು ಪರಿಣಾಮಕಾರಿಯಾಗುವುದಿಲ್ಲ. ಈ ಹೊಸ ಸಂವಿಧಾನವು ಜಾರಿಯಲ್ಲಿ ಬಂದ ಸಂದರ್ಭದಲ್ಲಿ ಇದು ಪರಿಣಾಮಕಾರಿಯಾಗುವುದಿಲ್ಲ. ಈ ಹೊಸ ಸಂವಿಧಾನವು ಜಾರಿಯಲ್ಲಿ ಬಂದ ನಂತರ ನಮ್ಮ ಕಲ್ಪನೆಯನ್ನು ಮೀರಿ ಈ ಲಿಖಿತ ಸೂಚನೆಯು ಅವಶ್ಯವಿಲ್ಲವೆಂದು ಕಂಡುಬರುತ್ತದೆ. ಇದೆ ಮೂಲ ತತ್ವದ ಮೇಲೆ ಲಿಖಿತ ಸೂಚನೆಗಳು ಅನಪೇಕ್ಷಣೀಯವೆಂದು ಕಂಡುಬಂದಿತು.

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆಯು ಹೀಗಿದೆ ನಾಲ್ಕನೆಯ ಪರಿಶಿಷ್ಟವನ್ನು ಕೈಬಿಡಬೇಕು"

ಸೂಚನೆಯು ಸ್ವೀಕೃತವಾಯಿತು.

ಸಂವಿಧಾನದಿಂದ ನಾಲ್ಕನೆಯ ಪರಿಶಿಷ್ಟವನ್ನು ಕೈಬಿಡಲಾಯಿತು.

* * *

## ಎರಡನೆಯ ಪರಿಶಿಷ್ಟ

**ಮಾನ್ಯ ಅಧ್ಯಕ್ಷರು:** ಸಂಸತ್ತು, ಈಗ ಎರಡನೆಯ ಪರಿಶಿಷ್ಟದ ಚರ್ಚೆಯನ್ನು ಕೈಗೆತ್ತಿಕೊಳ್ಳುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಈಗ ಮಂಡಿಸುತ್ತೇನೆ.

"ಎರಡನೆಯ ಪರಿಶಿಷ್ಟದ ಮೊದಲನೆಯ ಭಾಗದಲ್ಲಿ ಕೆಳಕಾಣಿಸಿದ ವಿಷಯವನ್ನು ಸೇರಿಸಬೇಕು."

## ಭಾಗ ೧

ರಾಷ್ಟ್ರಪತಿಗಳಿಗೆ ಹಾಗೂ ರಾಜ್ಯಪಾಲರನ್ನು ಕುರಿತು ಉಪಬಂಧಗಳು ಸದ್ಯಕ್ಕೆ ಭಾಗ ೧ ಪರಿಶಿಷ್ಟ ೧ನೆಯದರಿಂದ ನಿರ್ದಿಷ್ಟಪಡಿಸಿದಂತೆ.

(೧) ರಾಷ್ಟ್ರಪತಿಗಳಿಗೆ ರಾಜ್ಯಪಾಲರಿಗೆ ಅವರ ವೇತನವನ್ನು ಕೊಡಬೇಕು.

(೨) ಸದ್ಯಕ್ಕೆ ಒಂದನೆಯ ಪರಿಶಿಷ್ಟದ ೧ನೆಯ ಭಾಗದಲ್ಲಿ ನಮೂದಿಸಿದಂತೆ ಅವರ ವೇತನ ಕೊಡತಕ್ಕದ್ದು ಕೆಳಗೆ ಕಾಣಿಸಿದಂತೆ ಪ್ರತಿ ತಿಂಗಳಿಗೆ ರಾಷ್ಟ್ರಪತಿಗಳಿಗೆ ರೂ. ೧೦,೦೦೦.೦೦ ರೂಪಾಯಿಗಳನ್ನು ಕೊಡಬೇಕು. ರಾಜ್ಯದ ರಾಜ್ಯಪಾಲರಿಗೆ ೫,೫೦೦.೦೦ ಗಳಂತೆ ಪ್ರತಿ ತಿಂಗಳು ವೇತನ ಕೊಡಬೇಕು.

(೨) ರಾಷ್ಟ್ರಪತಿಗಳಿಗೆ ಹಾಗೂ ರಾಜ್ಯಪಾಲರುಗಳಿಗೆ ಈ ಸಂವಿಧಾನವು ಜಾರಿಗೆ ಬರುವ ನಿಕಟ ಪೂರ್ವದಲ್ಲಿ ಬ್ರಿಟಿಷ್ ವಸಹಾತು ಇದ್ದಾಗ ಗವರ್ನರ್ ಜನರಲ್ ಅವರಿಗೆ ಕೊಡತ್ತಿದ್ದ ಭತ್ಯೆಯನ್ನು ಇವರಿಗೂ ಕೊಡಬೇಕು, ಅದರಂತೆ ಆಯಾ ರಾಜ್ಯದ ರಾಜ್ಯಪಾಲರಿಗೂ ಈ ಭತ್ಯೆ ಕೊಡಬೇಕು.

(೩) ರಾಷ್ಟ್ರಪತಿ ಹಾಗೂ ರಾಜ್ಯಪಾಲರು ತಮ್ಮ ಅಧಿಕಾರ ಅವಧಿಯಲ್ಲಿ ಗವರ್ನರ್ ಜನರಲ್ಲರಿಗೆ ಹಾಗೂ ಆಯಾ ಪ್ರಾಂತದ ರಾಜ್ಯಪಾಲರಿಗೆ ಇದ್ದ ವಿಶೇಷ ಸವಲತ್ತುಗಳು ರಾಷ್ಟ್ರಪತಿಗಳಿಗೆ ಹಾಗೂ ಆಯಾ ಪ್ರಾಂತ್ಯದ ರಾಜ್ಯಪಾಲರಿಗೂ ಇರಬೇಕು.

(೪) ಉಪರಾಷ್ಟ್ರಪತಿ ಇಲ್ಲವೆ ಆ ಸ್ಥಾನದಲ್ಲಿ ಇರುವ ವ್ಯಕ್ತಿಯು ಇಲ್ಲವೆ ಅವರು ತಾತ್ಪೂರ್ತಿಕ ರಾಷ್ಟ್ರಪತಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದರೆ ಇಲ್ಲವೆ ಯಾವುದೇ ವ್ಯಕ್ತಿಯು ರಾಜ್ಯಪಾಲರ ಕಾರ್ಯವನ್ನು ನಿರ್ವಹಿಸುತ್ತಿದ್ದರೆ ಅಂಥ ರಾಷ್ಟ್ರಪತಿ ಸ್ಥಾನದ ಕಾರ್ಯ ಇಲ್ಲವೆ ರಾಜ್ಯಪಾಲರ ಕಾರ್ಯ ನಿರ್ವಹಿಸುತ್ತಿದ್ದರೆ ಅವರಿಗೆ ಕೊಡುವ ವೇತನ ಹಾಗೂ ಭತ್ಯೆಗಳನ್ನು ಹಾಗೂ ವಿಶೇಷ ಸವಲತ್ತುಗಳನ್ನು ಕೊಡಬೇಕು.

## ಭಾಗ ೨

ಶಿರೋನಾಮೆ ಭಾಗ ೨ ಇದರಲ್ಲಿ ಭಾಗ ೧ರ ನಂತರ ಈ ಪದಗಳು ಹಾಗೂ ಸಂಖ್ಯೆಗಳನ್ನು ಸೇರಿಸತಕ್ಕದ್ದು.

ಏಳನೆಯ ಪ್ಯಾರಾದ ಬದಲು ಕೆಳಗಣ ಪ್ಯಾರಾ ಸೇರಿಸತಕ್ಕದ್ದು.

೧ನೆಯ ಪರಿಶಿಷ್ಟ ಭಾಗ ೧ ಇಲ್ಲವೆ ಭಾಗ ೨ ಇವುಗಳಲ್ಲಿ ನಮೂದಿಸಿದಂತೆ, ಈ ಸಂವಿಧಾನವು ಜಾರಿಯಲ್ಲಿ ಬರುವ ನಿಕಟಪೂರ್ವದಲ್ಲಿ ಆಯಾ ಪ್ರಾಂತ್ಯದ ರಾಜ್ಯಪಾಲರಿಗೆ ಇಲ್ಲವೆ ಆಯಾ ಭಾರತದ ರಾಜ್ಯಗಳಲ್ಲಿ ಮಂತ್ರಿಗಳಿಗೆ ಕೊಡುತ್ತಿದ್ದ ವೇತನ ಹಾಗೂ ಭತ್ಯೆಗಳನ್ನು ಈಗ ರಾಜ್ಯಗಳ ಮಂತ್ರಿಗಳಿಗೆ ಕೊಡತಕ್ಕದ್ದು. ಪ್ಯಾರಾ ಸಂಖ್ಯೆ ೮ ಅನುಕ್ರಮವಾಗಿ ಉಪಸಭಾಪತಿ ವಿಧಾನಸಭೆಯ ಉಪಸಭಾಪತಿ ಮತ್ತು ರಾಜ್ಯ ವಿಧಾನಪರಿಷತ್ ಉಪಸಭಾಪತಿ ಇವರಿಗೆ ದಿನಾಂಕ ೧೫ ಆಗಸ್ಟ್ ೧೯೪೭ ಈ ದಿನಾಂಕಕ್ಕಿಂತ ಮೊದಲು ಭಾರತದ ಸಾರ್ವಭೌಮತ್ವದ ಸಂವಿಧಾನ ಸಭೆಯ ಉಪ-ಸಭಾಪತಿ ಈ ಪದಗಳನ್ನು ಸೇರಿಸತಕ್ಕದ್ದು.

## ಭಾಗ ೪

ಭಾಗ ೪ ಎರಡನೆಯ ಪರಿಶಿಷ್ಟ ಕೆಳಗಿನವನ್ನು ಸೇರಿಸತಕ್ಕದ್ದು.

## ಭಾಗ ೪

ಸುಪ್ರೀಮ್ ಕೋರ್ಟಿನ ಹಾಗೂ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ಬಗೆಗೆ ಪರಿಶಿಷ್ಟ ೧ ಭಾಗ ೧ ಇದರಲ್ಲಿ.

(೧೦) (೧) ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಗಳಿಗೆ ಅವರು ಕೆಲಸ ಮಾಡಿದ ಅವಧಿಯನ್ನು ಗಣನೆಗೆ ತೆಗೆದುಕೊಂಡು ಅಂದರೆ:

ಮುಖ್ಯ ನ್ಯಾಯಮೂರ್ತಿಗಳಿಗೆ ತಿಂಗಳಿಗೆ ೫೦೦೦ ರೂ. ಗಳು ಉಳಿದ ನ್ಯಾಯಮೂರ್ತಿಗಳಿಗೆ ಪ್ರತಿತಿಂಗಳಿಗೆ ೪೦೦೦ ರೂ. ಪರಂತು ಸುಪ್ರೀಂಕೋರ್ಟಿನ ನ್ಯಾಯಮೂರ್ತಿ, ಆತನ ನೇಮಕ ಆಗುವ ಪೂರ್ವದಲ್ಲಿ ಆತನ ಪೆನ್‌ಶನ್ (ಪಿಂಚಣಿ) (ಅಂಗವಿಕಲತೆ ಇಲ್ಲವೆ ಗಾಯದ ಪೆನ್‌ಶನ್) ಇವುಗಳನ್ನು ಹೊರತುಪಡಿಸಿ ಇಲ್ಲವೆ ಇನ್ನಾವುದೇ ವ್ಯಕ್ತಿಯು ಕೇಂದ್ರ ಸರಕಾರದಲ್ಲಿ ಕೆಲಸ ಮಾಡುತ್ತಿದ್ದರೆ ಆತನಿಗಿಂತ ಮೊದಲು ಆ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದರೆ, ಅವನು ರಾಜ್ಯ ಸರಕಾರದಲ್ಲಿ ಇಲ್ಲವೆ ಅದರ ಹಿಂದಿನ ಸರಕಾರದಲ್ಲಿ ಕೆಲಸ ಮಾಡುತ್ತಿದ್ದರೆ, ಆತನ ವೇತನ ಆತನ ಸೇವೆಯನ್ನು ಪರಿಗಣಿಸಿ ಆತನ ಸೇವೆಯನ್ನು ಸುಪ್ರೀಂಕೋರ್ಟಿಗೆ ತೆಗೆದುಕೊಂಡಿದ್ದರೆ ಆತನ ವೇತನದಲ್ಲಿ ಆತನ ಪೆನ್‌ಶನ್ ಕಳೆಯಲಾಗುವುದು.

೨. ಸುಪ್ರೀಂಕೋರ್ಟಿನ ಪ್ರತಿಯೊಬ್ಬ ನ್ಯಾಯಾಧೀಶರಿಗೆ ಅವರಿಗೆ ವಾಸವಾಗಿರಲು ಬಾಡಿಗೆ ಇಲ್ಲದ ಬಂಗ್ಲೆಯನ್ನು ಸರಕಾರವು ಕೊಡತಕ್ಕದ್ದು.

ಪ್ಯಾರಾಗ್ರಾಫಿನ ಉಪ ಪ್ಯಾರಾ ೨ರಲ್ಲಿ ಕಾಣಿಸಿದಂತೆ ದಿನಾಂಕ, ೩೧ ಅಕ್ಟೋಬರ್ ೧೯೪೮ರ ಮೊದಲು ಫೆಡರಲ್ ಕೋರ್ಟಿನ ನ್ಯಾಯಾಧೀಶರಾಗಿ ನೇಮಕ ಹೊಂದಿದವರಿಗೆ ಇದು ಅನ್ವಯಿಸುವುದಿಲ್ಲ. ಈ ಸಂವಿಧಾನವು ಜಾರಿಯಲ್ಲಿ ಬಂದ ದಿನಾಂಕದಿಂದ ಸುಪ್ರೀಂಕೋರ್ಟಿನ ನ್ಯಾಯಮೂರ್ತಿಯು ಈ ಸಂವಿಧಾನದ ಅನುಚ್ಛೇದ ೩೦೮ ಖಂಡ ೧ರಲ್ಲಿ ಕಾಣಿಸಿದಂತೆ ಪ್ರತಿಯೊಬ್ಬ ನ್ಯಾಯಮೂರ್ತಿಯು ಉಪ ಪ್ಯಾರಾ ೧ರಲ್ಲಿ ಕಾಣಿಸಿದಂತೆ ಈ ಸಂವಿಧಾನ ಜಾರಿಗೆ ಬರುವ ಪೂರ್ವದಲ್ಲಿ ತನ್ನ ವೇತನದೊಂದಿಗೆ ವಿಶೇಷ ವೇತನ ಅವನ ವೇತನ ಮತ್ತು ವಿಶೇಷ ವೇತನ ಇವುಗಳಲ್ಲಿಯ ಅಂತರದಷ್ಟು ವೇತನ ಮತ್ತು ಅವನು ಫೆಡರಲ್ ಕೋರ್ಟಿನ ನ್ಯಾಯಮೂರ್ತಿಯಾಗಿ ಕೆಲಸ ಮಾಡುವಾಗ ಪಡೆಯುತ್ತಿದ್ದ ವೇತನ ಇವುಗಳನ್ನು ಪಡೆಯಬೇಕು.

೪. ಸುಪ್ರಿಂಕೋರ್ಟಿನ ಪ್ರತಿಯೊಬ್ಬ ನ್ಯಾಯಮೂರ್ತಿಗೆ ಯೋಗ್ಯ ಭತ್ಯೆ ಆತನ ಪ್ರಯಾಣದ ಖರ್ಚು ಆತನು ಭಾರತದಲ್ಲಿ ಪ್ರವಾಸ ಮಾಡಿದ ಬಗ್ಗೆ ಮತ್ತು ಅವನ ಪ್ರಯಾಣ ಯೋಗ್ಯ ಅನುಕೂಲತೆಗಳನ್ನು ರಾಷ್ಟ್ರಪತಿಗಳು, ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂತೆ ಕೊಡಬೇಕು.

೫. ಅವರಿಗೆ ರಜೆಯ ಭತ್ಯೆ, ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ನಿವೃತ್ತ ವೇತನ, ಈ ಉಪಬಂಧಗಳು ಈ ಸಂವಿಧಾನ ಜಾರಿಯಲ್ಲಿ ಬರುವ ಪೂರ್ವದಲ್ಲಿ ಫೆಡರಲ್ ಕೋರ್ಟಿನ ನ್ಯಾಯಮೂರ್ತಿಗಳಿಗೆ ಅನ್ವಯಿಸುತ್ತಿದ್ದ ಉಪಬಂಧಗಳು ಅನ್ವಯಿಸುತ್ತವೆ.

೧೧ (೧) ಪ್ರತಿಯೊಂದು ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ೧ನೆಯ ಪರಿಶಿಷ್ಟದ ೧ನೆಯ ಭಾಗದಲ್ಲಿ ಕಾಣಿಸಿದಂತೆ ವೇತನ ಕೊಡತಕ್ಕದ್ದು ಅವರು ನಿಜವಾಗಿ ಸೇವೆಯಲ್ಲಿ ಕಳೆದ ಅವಧಿಗೆ

ವೇತನವನ್ನು ಕೆಳಗೆ ಕಾಣಿಸಿದಂತೆ ಅಂದರೆ:

ಮುಖ್ಯ ನ್ಯಾಯಮೂರ್ತಿಗಳಿಗೆ ಪ್ರತಿ ತಿಂಗಳಿಗೆ ೪೦೦೦ ರೂಪಾಯಿಗಳು. ಉಳಿದ ನ್ಯಾಯಮೂರ್ತಿಗಳಿಗೆ ೩೫೦೦ ರೂ. ಪ್ರತಿ ತಿಂಗಳಿಗೆ ಕೊಡಬೇಕು.

೨. ಉಚ್ಚ ನ್ಯಾಯಲಯ ಖಾಯಂ ನ್ಯಾಯಮೂರ್ತಿಗೆ ಯಾವುದೇ ನ್ಯಾಯಾಧೀಶನನ್ನು ಯಾವುದೇ ಪ್ರಾಂತ್ಯದಲ್ಲಿ ದಿನಾಂಕ ೧.೧೦.೧೯೪೮ರ ಮೊದಲು ನೇಮಿಸಿದ್ದರೆ ಈ ಸಂವಿಧಾನದ ಜಾರಿಗೆ ಬಂದ ದಿನ ಅವನು ಆ ರಾಜ್ಯದ ಖಾಯಂ ನ್ಯಾಯಮೂರ್ತಿ ಆಗುತ್ತಾನೆಂದು ಈ ಸಂವಿಧಾನವು ಅನುಚ್ಛೇದ ೩೧೦ ಖಂಡ ೧ರಲ್ಲಿ ಹೇಳಲಾಗಿದೆ. ಮತ್ತು ಈ ಸಂವಿಧಾನ ಜಾರಿಗೆ ಬರುವ ನಿಕಟ ಪೂರ್ವದಲ್ಲಿ ಆತನ ವೇತನವು ಈಗ ೧ನೆಯ ಪ್ಯಾರಾದಲ್ಲಿ ಕಾಣಿಸಿದ್ದಕ್ಕಿಂತ ಹೆಚ್ಚು ಇದ್ದರೆ ಅವನು ವಿಶೇಷ ವೇತನವೆಂದು ಆ ಹೆಚ್ಚಿನ ವೇತನ ಪಡೆಯುತ್ತಾನೆ.

೩. ಇಂತಹ ಪ್ರತಿಯೊಬ್ಬ ನ್ಯಾಯಮೂರ್ತಿಯು ಯೋಗ್ಯವಾದ ಭತ್ಯೆಗಳನ್ನು ಪಡೆಯತಕ್ಕದ್ದು. ತನ್ನ ಕೆಲಸದ ಮೇಲೆ ಇಡೀ ಭಾರತದ ಪ್ರಯಾಣ ಮಾಡಿದರೆ ಅವನ ಪ್ರಯಾಣದ ಖರ್ಚು ಕೊಡಬೇಕು.

ಅವಧಿಗೆ ಪ್ರಯಾಣಕ್ಕೆ ಅನುಕೂಲವಾಗುವಂತೆ ರಾಷ್ಟ್ರಪತಿಗಳು ಕಾಲಕಾಲಕ್ಕೆ ನಿರ್ಧರಿಸಿದಂತೆ ಅನುಕೂಲತೆಗಳನ್ನು ಒಗಿಸತಕ್ಕದ್ದು.

೪. ಕೆಲಸದಿಂದ ದೂರವಿರುವ ಭತ್ಯೆ (ರಜೆಯ ಭತ್ಯೆ) ಅಂತಹ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿಗಳ ನಿವೃತ್ತಿ ವೇತನವು ಈ ಸಂವಿಧಾನವು ಜಾರಿಗೆ ಬರುವ ಪೂರ್ವದಲ್ಲಿ ಇದ್ದ ಉಪಬಂಧಗಳ ಅನ್ವಯ ಇರುತ್ತದೆ.

೧೨. ಈ ಭಾಗದಲ್ಲಿ ಸಂದರ್ಭಕ್ಕೆ ವಿರುದ್ಧವಾಗಿ ಏನೂ ಇಲ್ಲದಿದ್ದರೆ.

(ಎ) ಮುಖ್ಯ ನ್ಯಾಯಮೂರ್ತಿ ಎಂಬ ಪದವು ಕಾರ್ಯನಿರ್ವಹಿಸುವ ಮುಖ್ಯ ನ್ಯಾಯಮೂರ್ತಿ ಈ ಪದವನ್ನು ಸಹ ಒಳಗೊಳ್ಳುತ್ತದೆ. ನ್ಯಾಯಮೂರ್ತಿ ಈ ಪದವು ತಾತ್ಪೂರ್ತಿಕ ನ್ಯಾಯಮೂರ್ತಿಯನ್ನು ಸಹ ಒಳಗೊಳ್ಳುವುದು, ಹಾಗೂ ವಾಸ್ತವಿಕ ಸೇವೆ ಈ ಪದವು ಒಳಗೊಂಡಿದೆ.

(೧) ಆ ನ್ಯಾಯಾಧೀಶನ ನ್ಯಾಯಾಲಯದಲ್ಲಿ ಕೆಲಸ ಮಾಡಿದ ಅವಧಿ ಹಾಗೂ ರಾಷ್ಟ್ರಪತಿಗಳು ಅವನಿಗೆ ಒಪ್ಪಿಸಿದ ಯಾವುದೇ ಕೆಲಸ ಕಾರ್ಯ ನಿರ್ವಹಿಸಲು ಸೂಚಿಸಿದಂತೆ ಆತನು ಮಾಡಿದ ಕೆಲಸದ ಅವಧಿಯು

(೨) ರಜೆಗಳು ಅಂದರೆ ನ್ಯಾಯಾಧೀಶನು ರಜೆ ಪಡೆದ ದಿನಗಳು ಮತ್ತು

(೩) ಉಚ್ಚ ನ್ಯಾಯಾಲಯದಿಂದ ಸುಪ್ರೀಂಕೋರ್ಟಿಗೆ ನೇಮಕವಾಗಿ ಇಲ್ಲವೆ ಒಂದು ಉಚ್ಚ ನ್ಯಾಯಾಲಯದಿಂದ ಇನ್ನೊಂದು ಉಚ್ಚ ನ್ಯಾಯಾಲಯಕ್ಕೆ ವರ್ಗವಾಗಿ ಹೋಗಿ ಹಾಜರಾಗುವ ದಿನಕ್ಕೂ.

## ಭಾಗ ೫

ಭಾಗ ೫ ಇದರ ತಲೆಬರಹದಲ್ಲಿಯ ಪದ 'ಆಡಿಟರ್–ಜನರಲ್' ಇದರ ಬದಲಾಗಿ 'ಕಂಟ್ರೋಲರ್ ಮತ್ತು ಆಡಿಟರ್ ಜನರಲ್' ಈ ಪದಗಳನ್ನು ಸೇರಿಸಬೇಕು.

ಪ್ಯಾರಾಗ್ರಾಫ್ ೧೪ ಇದರ ಬದಲಾಗಿ ಈ ಕೆಳಗಿನ ಪ್ಯಾರಾಗ್ರಾಫ್ ಇದನ್ನು ಸೇರಿಸಬೇಕು.

೧೪(೧) ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಇವರಿಗೆ ಪ್ರತಿ ತಿಂಗಳು ೪೦೦೦ ರೂಪಾಯಿ ವೇತನವನ್ನು ಕೊಡತಕ್ಕದ್ದು.

(೨) ಸಂವಿಧಾನ ಜಾರಿಯಲ್ಲಿ ಬರುವ ಪೂರ್ವದಲ್ಲಿ ಭಾರತದ ಆಡಿಟರ್ ಜನರಲ್ ಹುದ್ದೆ ಹೊಂದಿದ ವ್ಯಕ್ತಿ ಮತ್ತು ಸಂವಿಧಾನ ಜಾರಿ ಬಂದ ದಿನದಿಂದ ಸಂವಿಧಾನದ ಅನುಚ್ಛೇದ ೩೧೦ (ಎ) ಇದರನ್ವಯ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಹುದ್ದೆ ಹೊಂದಿದ ವ್ಯಕ್ತಿ ಈ ಮೇಲಿನ ಉಪ ಪ್ಯಾರಾ (ಎ)೧ರಲ್ಲಿ ಹೇಳಿದ ವೇತನದೊಂದಿಗೆ ಕಂಟ್ರೋಲರ ಮತ್ತು ಭಾರತದ ಆಡಿಟರ್ ಜನರಲ್ ಹುದ್ದೆಗೆ ಕೊಡುವ ವೇತನ ಮತ್ತು ಸಂವಿಧಾನ ಜಾರಿ ಬರುವ ಪೂರ್ವದಲ್ಲಿ ಭಾರತದ ಆಡಿಟರ್ ಜನರಲ್‌ಗೆ ಕೂಡುವ ವೇತನ ಇವರೆಡರ ನಡುವಿನ ಅಂತರದ ಸಮಾನ ವೇತನವನ್ನು ಹೆಚ್ಚಿಗೆ ಪಡೆಯ ತಕ್ಕವನಾಗಿದ್ದರೆ.

**"**ಪ್ಯಾರಾ ೧೫ರಲ್ಲಿ ಮೊದಲ ಸ್ಥನದಲ್ಲಿ ಎಲ್ಲಿ ಆಡಿಟರ್ ಜನರಲ್ ಈ ಪದ ಬರುತ್ತದೆಯೋ ಅಲ್ಲಿ ಅದರ ಬದಲಾಗಿ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಈ ಪದಗಳನ್ನು ಸೇರಿಸಬೇಕು.**"**

ತಮ್ಮ ಪರವಾನಿಗೆಯೊಂದಿಗೆ ನಾಳಿನ ದಿವಸ ನಾನು ಉಪಬಂಧಗಳನ್ನು ವಿವರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಸಂಸತ್ತು ನಾಳೆ ಮುಂಜಾನೆ ೧೦ ಗಂಟೆವರೆಗೆ ಮುಂದೂಡಲ್ಪಟ್ಟಿದೆ.

ಬುಧವಾರ ೧೩ನೆ ಅಕ್ಟೋಬರ್ ೧೯೪೯ ಭಾರತ ಸಂಸತ್ತಿನ ಸಭೆ ಹೊಸದಿಲ್ಲಿಯ ಸಂಸತ್ತಿನ ಸಭಾಭವನದಲ್ಲಿ ಬುಧವಾರ ೧೦ ಗಂಟೆಗೆ ೧೨ನೆ ಅಕ್ಟೋಬರ್ ೧೯೪೯ ರಂದು ಸಭೆ ಸೇರಿತು. (ಗೌರವಾನ್ವಿತ ಡಾ.ರಾಜೇಂದ್ರ ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು)

## ಎರಡನೆಯ ಪರಿಶಿಷ್ಟ (ಮುಂದುವರಿದುದು)

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬಾಂಬೆ, ಸಾಮಾನ್ಯ):

ಅಧ್ಯಕ್ಷ ಮಹೋದಯರೆ, ಎರಡನೆಯ ಪರಿಶಿಷ್ಟದಲ್ಲಿ ಕಾಣಿಸಿದ ಉಪಬಂಧಗಳ ಬಗ್ಗೆ ಕೆಲ ವಿವರಣೆಗಳನ್ನು ಹೇಳಬಯಸುತ್ತೇವೆ. ಮತ್ತು ಯಾವ ಭಾಗವು ನ್ಯಾಯಾಧೀಶರ ವೇತನ ಕುರಿತು ಹೇಳುತ್ತದೆಯೋ ಆ ಭಾಗದಿಂದ ಪ್ರಾರಂಭ ಮಾಡುತ್ತೇನೆ.

ಮೊಟ್ಟ ಮೊದಲು ಸರ್ವೋಚ್ಚ ನ್ಯಾಯಾಲಯ ಕುರಿತು ಸಂವಿಧಾನ ಜಾರಿಯಲ್ಲಿ ಬಂದ ನಂತರ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ವೇತನ ತಿಂಗಳಿಗೆ ೫೦೦೦ ರೂಪಾಯಿ, ಉಚಿತ ಮನೆ ಮತ್ತು ಇತರ ಸಹ ನ್ಯಾಯಾಧೀಶರಿಗೆ ಪ್ರತಿ ತಿಂಗಳಿಗೆ ವೇತನ ೪೦೦೦ ರೂಪಾಯಿ ಮತ್ತು ಉಚಿತ ಮನೆ ಸರ್ವೋಚ್ಚ ನ್ಯಾಯಾಲಯ ಕುರಿತಂತೆ ಸ್ಥಿತಿ ಈ ರೀತಿ ಇರುತ್ತದೆ. ಅದೇನೆಂದರೆ ಸಂವಿಧಾನದ ಪ್ರಕಾರ ಯಾವುದೇ ಫೆಡರಲ್ ನ್ಯಾಯಾಲಯದ ನ್ಯಾಯಾಧೀಶ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಲು ಇಚ್ಛಿಸಿದರೆ ಅವರನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನಾಗಿ ನೇಮಕ ಮಾಡಲಾಗುವುದು. ಪ್ರಶ್ನೆ ಏಳುವುದೆಂದರೆ ಆತನು ಸಂವಿಧಾನದಿಂದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ನಿಗದಿಯಾದ ವೇತನ ಪಡೆಯಬೇಕೋ ಇಲ್ಲವೆ ಈಗ ಆತನು ಫೆಡರಲ್ ನ್ಯಾಯಾಲಯದ ನ್ಯಾಯಾಧೀಶನಾಗಿ ಪಡೆಯುವ ವೇತನವು ಪಡೆಯುವಂತೆ ಮುಂದುವರಿಸಲು ಉಪಬಂಧಗಳನ್ನು ಕಲ್ಪಿಸಬೇಕೊ ಎಂಬುದರ ಬಗ್ಗೆ ಸಂವಿಧಾನ ಕರಡು ಸಮಿತಿಯ ನಿರ್ಣಯ ಈ ರೀತಿ ಇರುತ್ತದೆ. ಸಾಮಾನ್ಯವಾಗಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ವೇತನ ಪರಿಶಿಷ್ಟ ೨ರಲ್ಲಿ ಹೇಳಿದಂತೆ ಇದ್ದಾಗ ಫೆಡರಲ್ ನ್ಯಾಯಾಲಯದ ನ್ಯಾಯಾಧೀಶರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇಚ್ಛಿಸಿದರೆ ಅವರು ಈಗ ಪಡೆಯುತ್ತಿರುವ ವೇತನವನ್ನು ಪಡೆಯಲು ಉಪಬಂಧಗಳನ್ನು ಮಾಡಬೇಕು. ಈ ಉದ್ದೇಶದಿಂದ

ಫೆಡರಲ್ ನ್ಯಾಯಾಲಯದಿಂದ ನ್ಯಾಯಾಧೀಶರನ್ನು ೨ ವರ್ಗದಲ್ಲಿ ವರ್ಗೀಕರಿಸಲಾಗಿದೆ. ಯಾರು ದಿನಾಂಕ ೩೧ ಅಕ್ಟೋಬರ್ ೧೯೪೮ರ ಪೂರ್ವದಲ್ಲಿ ಖಾಯಂ ನ್ಯಾಯಾಧೀಶರಾಗಿ ನೇಮಕಗೊಂಡಿದ್ದಾರೋ ಮತ್ತು ೩೧ ಅಕ್ಟೋಬರ್ ೧೯೪೮ರ ನಂತರ ನೇಮಕಗೊಂಡವರು ಮೊದಲನೆ ವರ್ಗದವರ ಬಗ್ಗೆ ಅಂದರೆ ೧ ಅಕ್ಟೋಬರ್ ೧೯೪೮ರ ಪೂರ್ವದಲ್ಲಿ ನೇಮಕಗೊಂಡಿರುವವರು ಅವರ ವೈಯಕ್ತಿಕ ವೇತನ, ಈ ಸಂವಿಧಾನ ಜಾರಿಯ ಪೂರ್ವದಲ್ಲಿ ಪಡೆಯುತ್ತಿರುವ ವೇತನ ಮತ್ತು ೨ನೇ ಪರಿಶಿಷ್ಟದಲ್ಲಿ ನಿರ್ದಿಷ್ಟ ಪಡಿಸಿದ ವೇತನ ಇವೆರಡಲ್ಲಿಯ ಅಂತರಕ್ಕೆ ಸರಿಸಮಾನವಾದ ವೇತನ ಪಡೆಯುತ್ತಾರೆ. ಯಾರು ೩೧ ಅಕ್ಟೋಬರ್ ೧೯೪೮ರ ನಂತರ ನೇಮಕಗೊಂಡಿದ್ದಾರೋ ಅವರು ೨ನೆ ಪರಿಶಿಷ್ಟದಲ್ಲಿ ನಿರ್ದಿಷ್ಟ ಪಡಿಸಿದ ವೇತನವನ್ನು ಪಡೆಯುತ್ತಾರೆ. ಆದ್ದರಿಂದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಸಂವಿಧಾನದಲ್ಲಿ ಮುಖ್ಯ ನ್ಯಾಯಾಧೀಶರಿಗೆ ನಿಗದಿ ಮಾಡಿದ್ದಕ್ಕಿಂತ ಹೆಚ್ಚಿಗೆ ವೇತನ ಪಡೆಯುತ್ತಾರೆ.

ಫೆಡರಲ್ ನ್ಯಾಯಾಲಯದ ಸಹ ನ್ಯಾಯಾಧೀಶರು ಒಂದು ವೇಳೆ ಸರ್ವೋಚ್ಚ ನ್ಯಾಯಾಲಯಕ್ಕೆ ಹೋದರೆ ಅವರು ಸಾಮಾನ್ಯವಾಗಿ ಪಡೆಯುತ್ತಿರುವ ವೇತನಕ್ಕಿಂತ ಸರ್ವೋಚ್ಚ ನ್ಯಾಯಾಲಯದ ಸಹ ನ್ಯಾಯಾಧೀಶರಿಗೆ ನಿಗದಿ ಮಾಡಿದ ವೇತನಕ್ಕಿಂತ ರೂ. ೧೫೦೦ ಹೆಚ್ಚಿಗೆ ವೇತನ ಪಡೆಯುತ್ತಾರೆ.

ಶ್ರೇಷ್ಠ ನ್ಯಾಯಾಲಯಕ್ಕೆ ಬಂದರೆ ಸಾಮಾನ್ಯವಾಗಿ ಮುಖ್ಯ ನ್ಯಾಯಾಧೀಶರಿಗೆ ಸಂವಿಧಾನದಲ್ಲಿ ನಿಗದಿ ಮಾಡಿದ ವೇತನ ರೂಪಾಯಿ ೪೦೦೦ ಮತ್ತು ಸಹ ನ್ಯಾಯಾಧೀಶರಿಗೆ ವೇತನ ರೂಪಾಯಿ ೩೫೦೦ ಇದರಲ್ಲಿ ಕೂಡ ನಾವು ಮತ್ತು ಶ್ರೇಷ್ಠ ನ್ಯಾಯಾಲಯದ ಯಾವುದೇ ನ್ಯಾಯಾಧೀಶರು ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಾಗಲು ಇಚ್ಛಿಸಿದರೆ ರಾಷ್ಟ್ರಪತಿಯವರು ಅವರನ್ನು ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕ ಮಾಡಲೇಬೇಕೆಂದು ಸಂವಿಧಾನದಲ್ಲಿ ಉಪಬಂಧ ಮಾಡಿದ್ದೇವೆ. ಅದರ ಪರಿಣಾಮವಾಗಿ ಸರ್ವೋಚ್ಚ ನ್ಯಾಯಾಲಯದ ಬಗ್ಗೆ ಉದ್ಭವಿಸಿದ ಸಮಸ್ಯೆಯೇ ಶ್ರೇಷ್ಠ ನ್ಯಾಯಾಲಯಕ್ಕೆ ಉದ್ಭವಿಸುತ್ತದೆ. ಯಾಕೆಂದರೆ ಕೆಲವರು ಈಗ ಸದ್ಯ ನ್ಯಾಯಾಧೀಶರಾಗಿ ಇದ್ದವರು ಪರಿಶಿಷ್ಟ ೨ ರಲ್ಲಿ ನಿಗದಿಪಡಿಸಿದಕ್ಕಿಂತ ಹೆಚ್ಚಿಗೆ ವೇತನ ಪಡೆಯುತ್ತಿದ್ದಾರೆ. ಆದ್ದರಿಂದ ಈ ಸಾಧ್ಯವಾದ ತೊಂದರೆಗಳನ್ನು ತೆಗೆದು ಹಾಕಲು ಫೆಡರಲ್ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ಪ್ರಕ್ರಿಯೆಯನ್ನು ಇದಕ್ಕೂ ಅನುಸರಿಸಲು ನಿರ್ಧರಿಸಿದ್ದೇವೆ. ಅದೆಂದರೆ ನ್ಯಾಯಾಧೀಶರನ್ನು ೨ ವರ್ಗಗಳಾಗಿ ವರ್ಗೀಕರಿಸುವದು. ೩೧ ಅಕ್ಟೋಬರ್ ೧೯೪೮ ಪೂರ್ವದಲ್ಲಿ ನೇಮಕಗೊಂಡಿರುವವರು ಮತ್ತು ಆನಂತರ ನೇಮಕಗೊಂಡವರು. ಆದ್ದರಿಂದ ಮೊದಲನೇ ವರ್ಗದಲ್ಲಿ ನೇಮಕವಾದವರು ಅವರು ಈಗ ಪಡೆಯುತ್ತಿರುವ ವೇತನ ಮತ್ತು ಸಂವಿಧಾನದಲ್ಲಿ ವೈಯಕ್ತಿಕವಾಗಿ ನಿಗದಿ ಮಾಡಿದ ವೇತನ ಇವುಗಳಲ್ಲಿಯ ಅಂತರದಷ್ಟು ಸಮನಾಗಿ ಹೆಚ್ಚಿಗೆ ವೇತನವನ್ನು ಪಡೆಯುತ್ತಾರೆ ಮತ್ತು ೨ನೇ ವರ್ಗದಲ್ಲಿ ಬರುವವರು ಸಂವಿಧಾನದಲ್ಲಿ ನಿಗದಿ ಮಾಡಿದ ವೇತನವನ್ನು ಪಡೆಯುತ್ತಾರೆ.

ನಾವು ೩೧ ಅಕ್ಟೋಬರ್ ೧೯೪೮ನ್ನು ಏಕೆ ನಿಗದಿ ಮಾಡಿದ್ದೇವೆ ಎಂಬುದನ್ನು ವಿವರಿಸುವುದು ಅವಶ್ಯವಿದೆ. ಯಾಕೆಂದರೆ ಭಾರತ ಸರಕಾರವು ಅನೇಕ ಹೈ ಕೋರ್ಟ್ ಮತ್ತು ಫೆಡರಲ್ ಕೋರ್ಟ್‌ಗಳ ಯಾವುದೇ ನ್ಯಾಯಾಧೀಶರು ೩೧ ಅಕ್ಟೋಬರ್ ೧೯೪೮ರ ಪೂರ್ವದಲ್ಲಿ ನೇಮಕಗೊಂಡವರಿಗೆ ಈಗ ಪಡೆಯುತ್ತಿರುವ ವೇತನವನ್ನೇ ಪಡೆಯಲು ಮುಂದುವರೆಯುವಂತೆ ಮಾಡಲು ಭರವಸೆ ನೀಡಿದೆ. ಆದರೆ ಅದೇ ಭರವಸೆಯನ್ನು ೩೧ ಅಕ್ಟೋಬರ್ ೧೯೪೮ರ ನಂತರ ನೇಮಕಗೊಂಡ ನ್ಯಾಯಾಧೀಶರಿಗೆ ಕೊಡಲಿಕ್ಕ ಆಗಿರಲಿಲ್ಲ. ಆದ್ದರಿಂದ ಈ ರೀತಿ ಭರವಸೆ ಕೊಡುವ ಉದ್ದೇಶದಿಂದ ಈ ರೀತಿ ವರ್ಗೀಕರಿಸಿ ದಿನಾಂಕ ನಮೂದಿಸಲಾಗಿದೆ.

ಪರಿಶಿಷ್ಟ ೨ರಲ್ಲಿ ವೇತನ ಪ್ರಮಾಣ ನಿಗದಿ ಮಾಡಿದ್ದರ ಬಗ್ಗೆ ಮತ್ತು ಬೇರೆ ದೇಶದಲ್ಲಿ ವೇತನ ಪ್ರಮಾಣ ತೆಗೆದುಕೊಂಡ ಬಗ್ಗೆ ನಾನು ಒಂದೆರಡು ಮಾತು ಹೇಳಬಯಸುತ್ತೇನೆ. ಉದಾಹರಣೆ: ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಮುಖ್ಯ ನ್ಯಾಯಾಧೀಶರು ಪ್ರತಿತಿಂಗಳು ೭೦೮೪.೦೦ ರೂ. ವೇತನ ಪಡೆಯುತ್ತಾರೆ. ಆದರೆ ಸಹ ನ್ಯಾಯಾಧೀಶರು ಪ್ರತಿತಿಂಗಳು ೬೯೫೮.೦೦ ವೇತನ ಪಡೆಯುತ್ತಾರೆ. ಕೆನಡಾ ರಾಷ್ಟ್ರದಲ್ಲಿ ಮುಖ್ಯ ನ್ಯಾಯಾಧೀಶರು ರೂ. ೪೫೮೪.೦೦ ಮತ್ತು ಸಹ ನ್ಯಾಯಾಧೀಶರು ರೂ. ೩೬೬೨.೦೦ ರೂ. ವೇತನ ಪಡೆಯುತ್ತಾರೆ. ಆಸ್ಟ್ರೇಲಿಯಾದಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಾಧೀಶರು ರೂ. ೩೭೫೦.೦೦ ವೇತನ ಪಡೆಯುತ್ತಾರೆ ಮತ್ತು ಸಹ ನ್ಯಾಯಾಧೀಶರು ರೂ. ೩೩೩೩.೦೦ ವೇತನ ಪಡೆಯುತ್ತಾರೆ. ಮತ್ತು ದಕ್ಷಿಣ ಆಫ್ರಿಕಾದಲ್ಲಿ ಮುಖ್ಯ ನ್ಯಾಯಾಧೀಶರು ರೂ.೩೮೯೨ ಮತ್ತು ಸಹ ನ್ಯಾಯಾಧೀಶರು ರೂ. ೩೬೧೧.೦೦ ವೇತನ ಪಡೆಯುತ್ತಾರೆ ನಾವು ಪರಿಶಿಷ್ಟ ೨ ರಲ್ಲಿ ನಿಗದಿಪಡಿಸಿದ ವೇತನ ಮತ್ತು ಈಗ ನಾನು ಕೊಟ್ಟ ಅಂಕಿ ಅಂಶಗಳನ್ನು ಯಾರೇ ಅದರೂ ಹೋಲಿಸಿ ನೋಡಿದಾಗ ನಾವು ನಿಗದಿಪಡಿಸಿದ ವೇತನ ಅಮೆರಿಕ ಒಂದನ್ನು ಬಿಟ್ಟು ಬೇರೆ ಯಾವುದೇ ದೇಶದಲ್ಲಿ ಇದೇ ರೀತಿ ಕಾರ್ಯನಿರ್ವಹಿಸುತ್ತಿರುವವರಿಗೆ ನಿಗದಿಪಡಿಸಿದ ವೇತನಕ್ಕಿಂತ ಅದು ಬಹಳ ಉತ್ತಮ ಎಂದು ಹೇಳಬಹುದು.

ಈ ವೇತನವನ್ನು ನಿಗದಿಪಡಿಸುವಲ್ಲಿ ನಾವು ಎಷ್ಟು ಪ್ರಾಮಾಣಿಕವಾಗಿ ಇರಬೇಕಿತ್ತೊ ಅಷ್ಟೊ ಪ್ರಾಮಾಣಿಕವಾಗಿ ಇದ್ದೆವು. ಉದಾಹರಣೆಗೆ ಕರಡು ಸಮಿತಿಯವರು ಮುಕ್ತವಾಗಿ ಹೇಳಬಹುದಿತ್ತು. ಅದೇನೆಂದರೆ ನಿಯಮಾವಳಿಗಳನ್ನು ಅನುಸರಿಸಿ ಯಾರು ೩೧ ಅಕ್ಟೋಬರ್ ೧೯೪೮ರ ಪೂರ್ವದಲ್ಲಿ ನೇಮಕಗೊಂಡಿದ್ದಾರೊ ಅವರ ವೇತನ ಒಂದು ವೇಳೆ ನಾವು ಸಾಮಾನ್ಯವಾಗಿ ಸಂವಿಧಾನದಲ್ಲಿ ನಿಗದಿ ಮಾಡಿದ ವೇತನಕ್ಕಿಂತ ಹೆಚ್ಚಿಗಿದ್ದರೆ ನಾಗಪುರ ಹೈಕೋರ್ಟ್ ನ್ಯಾಯಾಧೀಶರು ನಿಗದಿಪಡಿಸಿದ ವೇತನಕ್ಕಿಂತ ಕಡಿಮೆ ವೇತನ ಪಡೆಯುವಂತೆ ಉಪಬಂಧ ಮಾಡುತ್ತಿದ್ದೆವು. ಯಾಕೆಂದರೆ ಈಗ ಸದ್ಯಕ್ಕೆ ಇದ್ದ ಅವರ ವೇತನಕ್ಕಿಂತ ಅದು ಕಡಿಮೆ ಆದರೆ ನಾವು ಅಂತಹ ಯಾವುದೇ ವಿವಾದಕ್ಕೆ ಅವಕಾಶ ಕೊಡುವುದಿಲ್ಲ. ಆದ್ದರಿಂದ ನಾವು ಅಂತಹ ವಿವಾದಾತ್ಮಕ ಉಪಬಂಧವನ್ನು ನ್ಯಾಯಸಮ್ಮತವಾಗಿ ಈ ಪ್ರಕರಣದಲ್ಲಿ ಕಾಣಿಸಿಲ್ಲ. ಕರಡು ಸಮಿತಿಯವರು ಈ ರೀತಿ ಮಾಡಿದ್ದು ನ್ಯಾಯಸಮ್ಮತವಾಗಿದೆ. ಆದ್ದರಿಂದ ನಾನು ಹೇಳುವುದೇನೆಂದರೆ ನ್ಯಾಯಾಧೀಶರ ವೇತನಕ್ಕೆ ಸಂಬಂಧಿಸಿದಂತೆ ತಕರಾರಿಗೆ ಯಾವುದೇ ಕಾರಣಗಳಿಲ್ಲ.

ಇನ್ನು ನಾನು ರಾಷ್ಟ್ರಪತಿಯವರ ಪ್ರಶ್ನೆಗೆ ಬರುತ್ತೇನೆ.

ರಾಷ್ಟ್ರಾಧ್ಯಕ್ಷರ ಸ್ಥಾನ ಹೆಚ್ಚು ಕಡಿಮೆ ಈಗ ಗವರ್ನರ್ ಜನರಲ್‌ರ ಸ್ಥಾನ ತುಂಬುವುದಾಗಿದೆ ಮತ್ತು ಅವರ ವೇತನ ನಿಗದಿಪಡಿಸುವದಕ್ಕೆ ಈಗ ನಾವು ನಿಗದಿಮಾಡದ್ದೇನೆಂದರೆ ೧೦,೦೦೦.೦೦ ರೂ. ಈಗ ನಾವು ವಿಚಾರಿಸಬೇಕಾದ್ದೇನೆಂದರೆ ಇದು ಈಗ ಗವರ್ನರ್ ಜನರಲ್ ಪಡೆಯುವುದಕ್ಕಿಂತ ಹೆಚ್ಚು ಕಡಿಮೆ ಇರಬೇಕು ಎಂಬುದರ ಬಗ್ಗೆ ನಿರ್ಧರಿಸಬೇಕಾಗಿದೆ.

ಈಗ ಎಲ್ಲರಿಗೂ ಗೊತ್ತಿದ್ದಂತೆ ಭಾರತ ಸರಕಾರ ಅಧಿನಿಯಮ ೧೯೩೫ರ ಅಡಿಯಲ್ಲಿ ಗವರ್ನರ್ ಜನರಲ್‌ರಿಗೆ ಒಂದು ವರ್ಷಕ್ಕೆ ರೂ. ೨,೫೬,೮೦೦ ಅಂದರೆ ಪ್ರತಿ ತಿಂಗಳು ೨೧೯೦೦.೦೦ ರೂ ವೇತನ ನಿಗದಿಮಾಡಲಾಗಿದೆ. ಈ ವೇತನ ವರಮಾನ ತೆರಿಗೆಗೆ ಒಳಪಟ್ಟಿದೆ. ಇತ್ತೀಚೆಗೆ ಸಂಸತ್ತು ಪಾಸು ಮಾಡಿದ ಅಧಿನಿಯಮದನ್ವಯ ಗವರ್ನರ್ ಜನರಲ್‌ರ ವೇತನವನ್ನು ರೂ. ೫೫೦೦.೦೦ ಎಂದು ನಿಗದಿಮಾಡಿದ್ದು ಅದು ವರಮಾನ ತೆರಿಗೆಯಿಂದ ಮುಕ್ತವಾಗಿದೆ. ಒಂದು ವೇಳೆ ಗವರ್ನರ್ ಜನರಲ್‌ರ ವೇತನವನ್ನು ವರಮಾನ ತೆರಿಗೆಗೆ ಒಳಪಡಿಸಿದರೆ ಅದು ೧೪೦೦೦.೦೦ ರೂ. ಆಗುತ್ತದೆ ಎಂದು ನನಗೆ ಹೇಳಿದ್ದಾರೆ.

ರಾಷ್ಟ್ರಪತಿಯವರ ವೇತನ ನಿಗದಿ ಮಾಡುವಾಗ ನಾವು ಎರಡು ಅಂಶಗಳನ್ನು ಗಣನೆಗೆ ತೆಗೆದುಕೊಂಡಿದ್ದೇವೆ. ಒಂದನೆ ಅಂಶ ರಾಷ್ಟ್ರಪತಿ ಅವರ ವೇತನವನ್ನು ವರಮಾನ ತೆರಿಗೆಗೆ ಒಳಪಡಿಸುವುದು ಸಂವಿಧಾನ ಕರಡು ಸಮಿತಿಯವರಿಗೆ ಮತ್ತು ಈ ಸಂಸತ್ತಿನ ಬಹುತೇಕ ಸದಸ್ಯರಿಗೆ ಅನಿಸಿದ್ದು. ಅಂದರೆ ಸಂವಿಧಾನದಡಿಯಲ್ಲಿ ಕೆಲಸ ಮಾಡುವವರು ಇಲ್ಲವೆ ಯಾವುದೇ ಸಿವಿಲ್ ಅಧಿಕಾರಿಯ ಜನಸಾಮಾನ್ಯರ ಸಲುವಾಗಿ ಅಂಥವುಗಳ ಕ್ರಮಗಳಿಂದ ಮುಕ್ತರಾಗಿರುವುದಿಲ್ಲ.

ಯಾರಿಗೂ ವಿನಾಯತಿ ಇರಬಾರದೆಂದೂ ಅದರ ಪರಿಣಾಮವಾಗಿ ರಾಷ್ಟ್ರಪತಿಯವರ ವೇತನವನ್ನು ಒಂದು ವೇಳೆ ವರಮಾನ ತೆರಿಗೆಗೆ ಒಳಪಡಿಸಿದ್ದರೆ ಅದನ್ನು ಹೆಚ್ಚಿಸಬೇಕೆಂದು ಅಭಿಪ್ರಾಯಪಟ್ಟಿಲ್ಲ.

ರೂ. ೧೦,೦೦೦.೦೦ ವೇತನ ನಿಗದಿ ಮಾಡಲು ಇನ್ನೊಂದು ಕಾರಣವೆಂದರೆ ಈಗಿರುವ ಸುಪ್ರೀಂಕೋರ್ಟ್ ಮುಖ್ಯನ್ಯಾಯಾಧೀಶರ ವೇತನ ೭೦೦೦.೦೦ ರಾಷ್ಟ್ರಪತಿಯವರು ರಾಷ್ಟ್ರದಲ್ಲಿಯೇ ಹೆಚ್ಚಿನ ಕಾರ್ಯ ನಿರ್ವಹಣೆ ಮಾಡುವವರೆಂದು ಅವರಿಗಿಂತ ಹೆಚ್ಚು ವೇತನ ಪಡೆಯುವ ಯಾವುದೇ ಒಬ್ಬ ವ್ಯಕ್ತಿ ಇರಬಾರದು ಎಂದು ಅಭಿಪ್ರಾಯಪಟ್ಟಿತು. ಮತ್ತು ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶರು ೭೦೦೦.೦೦ ವೇತನ ಪಡೆಯುತ್ತಿದ್ದಾರೆ. ಆ ಒಂದು ಅಂಶದ ದೃಷ್ಟಿಯಿಂದ ರಾಷ್ಟ್ರಪತಿಯ ವೇತನ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶರ ವೇತನಕ್ಕಿಂತ ಸ್ವಲ್ಪ ಹೆಚ್ಚಿಗೆ ಇರುವುದು ಅತಿ ಅವಶ್ಯವೆನಿಸಿತು. ಈ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ ೧೦೦೦೦.೦೦ ರೂ. ವೇತನವು ಯೋಗ್ಯ ವೇತನವೆನಿಸಿತು.

ಆ ಮೇಲೆ ರಾಷ್ಟ್ರಪತಿಯವರ ವೇತನ ಕೆಲವೊಂದು ಭತ್ಯೆಯನ್ನು ಹೊಂದಿರುತ್ತದೆ. ಭತ್ಯೆ ಕುರಿತು ನಾನು ಹೇಳುವುದೆಂದರೆ ಯಾವಾಗ ಭಾರತ ಸರ್ಕಾರ ಅಧಿನಿಯಮ ೧೯೩೫ ಭತ್ಯೆ ಅಂಗೀಕೃತವಾಯಿತು. ಆಗ ಅದರಲ್ಲಿ ಕೇವಲ ಗವರ್ನರ್ ಜನರಲ್‌ರ ವೇತನವನ್ನು ನಿಗದಿಪಡಿಸಿತು. ಆದರೆ ಭತ್ಯೆ ಕುರಿತು ಮೆಜೆಸ್ಟಿ–ಇನ್–ಕೌನ್ಸಿಲ್ ಮೂಲಕ ನಿಗದಿಪಡಿಸಬಹುದೆಂದು ಹೇಳಿತು. ಆದರೆ ದುರ್ದೈವವಶಾತ್ ಭಾರತ ಸರಕಾರ ಅಧಿನಿಯಮದ ೨ನೆ ಭಾಗದ ಉಪಬಂಧಗಳನ್ನು ಜಾರಿಯಲ್ಲಿ ತರಲೇ ಇಲ್ಲ. ಅದರ ಪರಿಣಾಮವಾಗಿ ೧೯೪೩ರಲ್ಲಿ ಆ ಆಜ್ಞೆಯ ಬಗ್ಗೆ ಕರಡು ತಯಾರು ಮಾಡಿದ್ದರೂ ಸಹಿತ ಹಿಜ್ ಮೆಜೆಸ್ಟಿ ಇನ್ ಕೌನ್ಸಿಲ್ ಇವರು ಅಂತಹ ಯಾವುದೇ ಆಜ್ಞೆ ಮಾಡಲಿಲ್ಲ. ಇಲ್ಲಿಯವರೆಗೆ ಭಾರತ ಸರಕಾರ ಅಧಿನಿಯಮಕ್ಕೆ ಸಂಬಂಧಿಸಿದಂತೆ ಅದರಲ್ಲಿ ಭತ್ಯೆ ಬಗ್ಗೆ ಏನೂ ಹೇಳಿಲ್ಲ ಮತ್ತು ಈ ಅಧಿನಿಯಮದ ಪರಿಣಾಮವಾಗಿ ಕರಡು ಸಮಿತಿಯವರು ರಾಷ್ಟ್ರಪತಿಯವರು ಸಂವಿಧಾನ ಜಾರಿಯಲ್ಲಿ ಬಂದಾಗ ಪಡೆಯುವ ಭತ್ಯೆಯನ್ನೇ ರಾಷ್ಟ್ರಪತಿಯವರು ಪಡೆಯುತ್ತ ಹೋಗಬೇಕೆಂದು ಉಪಬಂಧದಲ್ಲಿ ಹೇಳಲಾಗಿದೆ. ನಂತರ ಸಂಸತ್ತು ರಾಷ್ಟ್ರಪತಿ ಇವರ ವೇತನ ಮತ್ತು ಭತ್ಯೆ ಇವುಗಳನ್ನು ಸಂಬಂಧಿಸಿದ ರಾಷ್ಟ್ರಪತಿಗಳು ಅಧಿಕಾರ ಅವಧಿಗೆ ಒಳಪಟ್ಟು ಬದಲಾವಣೆ ಮಾಡಬಹುದು.

ಸಂವಿಧಾನ ಜಾರಿಗೆ ಬಂದ ನಂತರ ಗವರ್ನರ್ ಜನರಲ್‌ರು ಪಡೆಯುವ ಭತ್ಯೆ ಇವುಗಳು ರಾಷ್ಟ್ರಪತಿಯು ಪಡೆಯುತ್ತ ಹೋಗಬೇಕು. ರಾಷ್ಟ್ರಪತಿಯವರು ಅದನ್ನು ಪಡೆಯಲು ಹಕ್ಕುಳ್ಳವರು ಎನ್ನುವ ಭತ್ಯೆ ಯಾವುವು ಎಂಬುದರ ಬಗ್ಗೆ ನಾನು ಕೆಲ ವಿಚಾರಗಳನ್ನು ಈ ಸಂಸತ್ತಿಗೆ ತಿಳಿಸಬಯಸುತ್ತೇನೆ.

೧೯೪೯–೫೦ ಅಂದಾಜು ಆಯವ್ಯಯ ಪತ್ರಿಕೆಯಲ್ಲಿ ಭತ್ಯೆ ಗವರ್ನರ್ ಜನರಲ್ ತಲೆಬರಹದಡಿಯಲ್ಲಿ ಕೆಳಗಿನ ಅಂಕಿ ಅಂಶಗಳನ್ನು ಸೇರಿಸಿದ್ದನ್ನು ನಾನು ಕಂಡೆನು.

೧. ಆತಿಥ್ಯ ಭತ್ಯೆ ೪೫೦೦೦ ಪ್ರತಿ ವರ್ಷಕ್ಕೆ

೨. ಒಡಂಬಡಿಕೆಯ ಸಲುವಾಗಿ ಖರ್ಚುಮಾಡಿದ ಭತ್ಯೆಗಾಗಿ ೪,೭೫,೦೦೦.೦೦

೩. ರಾಜ್ಯವಾಹನ ಭತ್ಯೆ ಮೋಟರ್ ಕಾರ್ ರೂ ೭೩,೦೦೦.೦೦

೪. ಪ್ರಯಾಣ ಭತ್ಯೆ ೮೧,೦೦೦.೦೦

೧೯೪೯–೫೦ ಆಯವ್ಯಯ ಅಂದಾಜು ಪತ್ರಿಕೆ ಪ್ರಕಾರ ಪ್ರತಿ ವರ್ಷಕ್ಕೆ ೬,೬೪,೦೦೦

ನಾನು ಭತ್ಯೆ ಬಗ್ಗೆ ಏನೂ ಹೇಳುವ ಆವಶ್ಯಕತೆ ಇಲ್ಲ. ಯಾಕೆಂದರೆ ಭತ್ಯೆಗಳನ್ನು ಸಂಸತ್ತು ಯಾವಾಗ ಬೇಕಾದರೂ ಬದಲಾವಣೆ ಮಾಡಬಹುದು. ಮಹತ್ವದ ಪ್ರಶ್ನೆ ಎಂದರೆ ವೇತನ ಮತ್ತು ನನಗೆ ಹಾಗೂ ಕರಡು ಸಮಿತಿಯವರಿಗೆ ರಾಷ್ಟ್ರಪತಿ ಅವರ ವೇತನ ೧೦,೦೦೦ ನಿಗದಿ ಮಾಡಿದ್ದು ನಾನು ಇದರ ಬಗ್ಗೆ ವಿವರಿಸಿದ್ದರ ಹಿನ್ನೆಲೆಯಲ್ಲಿ ಇದು ಯೋಗ್ಯವೆಂದು ಅಭಿಪ್ರಾಯಪಟ್ಟಿದ್ದೇನೆಂದು ನಾನು ಹೇಳುತ್ತೇನೆ. ರಾಜ್ಯಪಾಲರ ವೇತನದ ಬಗ್ಗೆ ನಾನು ಹೆಚ್ಚಿಗೆ ಹೇಳುವ ಆವಶ್ಯಕತೆ ಇಲ್ಲ. ಅದನ್ನು ಗವರ್ನರ್ ಜನರಲ್ ಇತ್ತೀಚೆಗೆ ಮಾಡಿದ ಆಜ್ಞೆಯ ಮೇರೆಗೆ ನಿಗದಿ ಮಾಡಲಾಗಿದೆ. ಮತ್ತು ಅದು ಕೂಡ ಯೋಗ್ಯವಾಗಿದೆ ಎಂದು ನನಗೆ ಅನಿಸುತ್ತದೆ. ಅದೂ ಕೂಡ ಪ್ರಾಂತ್ಯಗಳಲ್ಲಿ ಮುಖ್ಯ ನ್ಯಾಯಾಧೀಶರು ಅತಿ ಹೆಚ್ಚಿನ ವೇತನ ಪಡೆಯುವ ಅಧಿಕಾರಿಯಾಗಿದ್ದಾರೆ. ಆದ್ದರಿಂದ ಗವರ್ನರ್ ಆ ಪ್ರಾಂತದ ಮುಖ್ಯ ನ್ಯಾಯಾಧೀಶರಿಗಿಂತ ಹೆಚ್ಚಿಗೆ ವೇತನ ಪಡೆಯಬೇಕೆಂಬ ತತ್ವದ ಹಿನ್ನೆಲೆಯಲ್ಲಿ ಈ ವೇತನ ನಿಗದಿ ಮಾಡಿದ್ದು ಇರುತ್ತದೆ.

ಬೇರೆ ಒಂದು ಉಪಬಂಧಕ್ಕೆ ನಾನು ಸಂಬಂಧಿಸಿದಂತೆ ಹೇಳಬಯಸುವುದೇನೆಂದರೆ ಮೂಲತಃ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರ ವೇತನದ ಬಗ್ಗೆ ಉಪಬಂಧ ಮಾಡಲು ಯಾವುದೇ ಪ್ರಸ್ತಾವನೆ ಇರಲಿಲ್ಲ. ಅದರಲ್ಲಿ ಕೂಡ ಪರಿಶಿಷ್ಟ ೧೧ರಲ್ಲಿ ಅವರ ವೇತನವನ್ನು ೪೦೦೦.೦೦ಗಳಿಗೆ ನಿಗದಿಪಡಿಸಲಾಗಿದೆ. ಈಗಿರುವ ವ್ಯಕ್ತಿಯೇ ಸಂವಿಧಾನ ಜಾರಿಯಲ್ಲಿ ಬಂದ ನಂತರ ಮುಂದುವರಿದರೆ ಈಗ ಅವರಿಗೆ ಇರುವ ವೇತನ ಮತ್ತು ಸಂವಿಧಾನದಲ್ಲಿ ೨ನೇ ಪರಿಶಿಷ್ಟದಲ್ಲಿ ಕಳಿಸಿದ ವೇತನ ಇವೆರಡರ ನಡುವಿನ ಅಂತರದ ವೇತನ ವಿಶೇಷ ವೇತನವೆಂದು ಪಡೆಯತಕ್ಕದ್ದು. ಈಗಿದ್ದ ಮತ್ತು ಹೋದರೆ ಮುಂದೆ ಆ ಹುದ್ದೆಗೆ ಬರುವ ವ್ಯಕ್ತಿ ಪರಿಶಿಷ್ಟದಲ್ಲಿ ಕಾಣಿಸಿದ ವೇತನ ಪಡೆಯುತ್ತಾನೆ.

ಈ ಪರಿಶಿಷ್ಟದಲ್ಲಿ ಕರಡು ಸಮಿತಿಯವರು ಕಾಣಿಸಿದ ವೇತನದ ಅಂಕಿಗಳು ಬೇರೆ ಬೇರೆ ಅಧಿಕಾರಿಗಳು ಪಡೆಯುವ ವೇತನ ಅವುಗಳನ್ನು ಸದನದ ವಿಚಾರಣೆಗೆ ಬಿಡುತ್ತೇನೆ.

**ಶ್ರೀ ಪ್ರಭು ದಯಾಳ ಹಿಮತ್ ಸಿಂಘ್:** ಮಾನ್ಯರೆ ಡಾ. ಬಿ. ಆರ್. ಅಂಬೇಡ್ಕರ್ ಅವರು ಮಂಡಿಸಿದ ವಿಧಿಯನ್ನು ನಾನು ಸಮ್ಮತಿಸುತ್ತೇನೆ.

**ಪಂಡಿತ್ ಹೃದಯನಾಥ್ ಕುಂಝ್ರು** (ಪ್ರಾಂತ್ಯಗಳ ಒಕ್ಕೂಟ ಜನರಲ್): ಮಾನ್ಯ ಅಧ್ಯಕ್ಷರೆ, ರಾಷ್ಟ್ರಪತಿಯವರು ತಿಂಗಳಿಗೆ ರೂ. ೫೦೦೦.೦೦ ವೇತನ ಪಡೆಯಬೇಕೆಂದೂ ಮತ್ತು ರಾಜ್ಯದ ಗವರ್ನರರು ತಿಂಗಳಿಗೆ ರೂ. ೪೫೦೦.೦೦ ವೇತನ ಪಡೆಯಬೇಕೆಂದು ಕರಡು ಸಮಿತಿಯವರು ಕಾಣಿಸಿದ್ದಾರೆ. ಇದನ್ನು ಮೊದಲೆ ಪ್ರಸ್ತಾಪಿಸಲಾಗಿತ್ತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ಈಗ ಎತ್ತಿದ ಒಟ್ಟು ೩ ಪ್ರಶ್ನೆಗಳನ್ನು ಅವುಗಳಿಗೆ ಉತ್ತರಿಸಬೇಕಾಗಿದೆ. ಮಾನ್ಯ ಕಾಮತರು ಪರಿಶಿಷ್ಟ ೨ರಲ್ಲಿ ಸುಪ್ರೀಂಕೋರ್ಟ್ ನ್ಯಾಯಾಧೀಶರಿಗೆ ಉಚಿತವಾಗಿ ಮನೆ ಕೊಡುವ ಬಗ್ಗೆ ಪ್ರಸ್ತಾಪಿಸಿದ್ದನ್ನು ಟೀಕಿಸಿದ್ದಾರೆ ಅಥವಾ ವಿರೋಧಿಸಿದ್ದಾರೆ. ಈ ರೀತಿ ಸುಪ್ರೀಂಕೋರ್ಟ್ ನ್ಯಾಯಾಧೀಶರಿಗೆ ಮನೆಯನ್ನು ಉಚಿತವಾಗಿ ಕೊಡುವ ಕುರಿತು ಕೂಲಂಕಷವಾಗಿ ವಿಚಾರಣೆ ಮಾಡಿದ ನಂತರ ನಿರ್ಧರಿಸಲಾಗಿದೆ. ಅನೇಕ ಸುಪ್ರೀಂಕೋರ್ಟ್ ನ್ಯಾಯಾಧೀಶರು ದೇಶದ ದೂರದ ತುದಿಯಿಂದ ರಾಜಧಾನಿಗೆ ಬರುತ್ತಾರೆಂದು ಅನ್ನಿಸಿತು. ಮತ್ತು ಅವರ ಮೂಲದಿಂದ ಅವರಿಗೆ ಮನೆ ಹುಡುಕಿಕೊಳ್ಳುವುದನ್ನು

ಅವರಿಗೆ ಬಿಟ್ಟುಕೊಡುವದು ಅವರು ಹೊಂದಿದ ಹುದ್ದೆಯ ಗೌರವಕ್ಕೆ ಸರಿ ಕಾಣುವುದಿಲ್ಲ ಎಂದು ಭಾವಿಸಲಾಯಿತು. ಆ ಒಂದು ತತ್ವದ ಮೇಲೆ ಕರಡು ಸಮಿತಿಯವರು ಸರ್ಕಾರವೇ ಅವರಿಗೆ ಮನೆ ಸೌಕರ್ಯ ಒದಗಿಸಿಕೊಡುವ ಹೊಣೆಗಾರಿಕೆಯಾಗಿದೆ ಎಂದು ಅಭಿಪ್ರಾಯಪಟ್ಟಿತು.

ಫೆಡರಲ್ ಕೋರ್ಟಿನ ನ್ಯಾಯಾಧೀಶರಿಗೆ ಕೊಡುವ ವೇತನವನ್ನು ಗಣನೆಗೆ ತೆಗೆದುಕೊಂಡು ನಾವು ಸುಪ್ರೀಂಕೋರ್ಟ್ ನ್ಯಾಯಾಧೀಶರಿಗೆ ಕೊಡುವ ವೇತನದಲ್ಲಿ ರಿಯಾಯಿತಿ ಕೊಟ್ಟಿದ್ದಕ್ಕೆ ಇದು ಒಂದು ರೀತಿಯಿಂದ ಪರಿಹಾರವೆಂದು ನಮಗೆ ಅನ್ನಿಸಿತು. ಈ ಒಂದು ವಿಶೇಷವಾದ ವಿಷಯದ ಮೇಲೆ ನಮ್ಮ ಮಿತ್ರರಾದ ಕಾಮತ್ ಅವರು ಟೀಕೆ ಮಾಡಿದ್ದನ್ನು ಕೇಳಿ ನಮಗೆ ಬಹಳ ಆಶ್ಚರ್ಯವಾಯಿತು. ಯಾಕೆಂದರೆ ನಾವು ರಾಷ್ಟ್ರಪತಿ ಮತ್ತು ಗವರ್ನರ್ ಜನರಲ್ ಇಬ್ಬರಿಗೂ ಉಚಿತ ಮನೆ ಕೊಡುವ ಬಗ್ಗೆ ಅವಕಾಶ ಕಲ್ಪಿಸಿದ್ದೇವೆ. ನಾವು ಬೇರೆ ಯಾರಿಗಾದರೂ ಮನೆ ಉಚಿತವಾಗಿ ಕೊಡುವದನ್ನು ಒಂದು ವೇಳೆ ವಿರೋಧಿಸುತ್ತಿದ್ದರೆ ಅವರು ಮಾತನಾಡಬಹುದಿತ್ತೆಂದು ನಾನು ಭಾವಿಸುತ್ತೇನೆ.

**ಶ್ರೀ ಎಚ್. ವಿ. ಕಾಮತ್:** ನಾನು ಬಾಡಿಗೆ ವಿಷಯ ಕುರಿತು ಹೇಳಲಿಲ್ಲ ಮತ್ತು ಇದು ಉಚಿತ ಮನೆ ಅಲ್ಲವೋ ನನಗೆ ಗೊತ್ತಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಕಾಮತ್ ಅವರು ಮಾಡಿದ ವಿಶೇಷ ಸಂಗತಿಯಲ್ಲಿ ಯಾವುದೇ ಅರ್ಥವಿಲ್ಲವೆಂದು ನನಗೆ ಅನ್ನಿಸುತ್ತದೆ.

ವೇತನದಲ್ಲಿನ ಹಣದ ಪ್ರಶ್ನೆಗೆ ಸಂಬಂಧಿಸಿದಂತೆ, ಸಂಸತ್ತಿನಲ್ಲಿ ವಿವಿಧ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ ನನ್ನ ಮಿತ್ರರಾದ ಮಾನ್ಯ ಶಿಬ್ಬನಲಾಲ್ ಸಕ್ಸೇನಾ. ಇವರು ರಾಷ್ಟ್ರಾಧ್ಯಕ್ಷರು ಒಂದು ರೂಪಾಯಿ ಕೂಡ ಹೆಚ್ಚು ತೆಗೆದುಕೊಳ್ಳಬಾರದಿತ್ತು ಎನ್ನುವ ಮಟ್ಟಿಗೆ ಹೇಳಿದ್ದಾರೆ. ಹಾಗಾದರೆ ಆ ವೇತನದ ಮೇಲೆ ರಾಷ್ಟ್ರಾಧ್ಯಕ್ಷರಾಗಿ ಕೆಲಸ ಮಾಡಲು ಸನ್ಯಾಸಿಯಾಗಿ ತಿರುಗಾಡುವವರ ಹೊರತಾಗಿ ಯಾರೂ ಸಿಗಲಿಕ್ಕಿಲ್ಲವೆಂದು ನನಗೆ ಅನ್ನಿಸುತ್ತದೆ. ಸನ್ಯಾಸಿಗೆ ಬೇರೆ ಇತರ ಯಾವುದೇ ಗುಣಗಳಿದ್ದರೂ ಸನ್ಯಾಸಿಯು ಒಕ್ಕೂಟದ ರಾಷ್ಟ್ರಾಧ್ಯಕ್ಷನಾಗಲು ಅನರ್ಹ ವ್ಯಕ್ತಿ. ನ್ಯಾಯಾಧೀಶರ ವೇತನ ಕುರಿತು ಅವರು ಎರಡು ಪ್ರಶ್ನೆಗಳನ್ನು ಎತ್ತಿದ್ದಾರೆ. ನ್ಯಾಯಾಧೀಶರ ವೇತನವು ಪರಿಶಿಷ್ಟದಲ್ಲಿ ನಿಗದಿಪಡಿಸಿದ ವೇತನಕ್ಕಿಂತ ಹೆಚ್ಚು ಇರಬೇಕೆಂದು ಈ ಸಭೆಯ ಕೆಲ ಸದಸ್ಯರು ಹೇಳಿದ್ದಾರೆ, ಬೇರೆ ಕೆಲ ಸದಸ್ಯರು ನಾವು ಕೊಡುವ ವೇತನಕ್ಕೂ ದೇಶದ ಆರ್ಥಿಕ ಶಕ್ತಿಗೂ ಯಾವುದೇ ಸಂಬಂಧವಿಲ್ಲವೆಂದು ಬೇರೆ ಕೆಲ ಸದಸ್ಯರು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ನಾವು ಈ ದೇಶದಲ್ಲಿ ಯಾವುದೇ ವೇತನ ನಿಗದಿ ಮಾಡಿದರೆ ಅದು ಜನರ ವರಮಾನಕ್ಕೆ ಸಂಬಂಧಿಸಿದಂತೆ ಇರಬೇಕು. ಆದರೆ ಅದು ಒಳ್ಳೆಯ ರಾಜಕೀಯ ಘೋಷಣೆ ಆಗುತ್ತದೆ. ಆದರೆ ಅದು ನಿಜವಾದ ರಾಜಕೀಯವೆಂದು ಹೇಳಲು ನಾನು ಸದ್ಯಕ್ಕೆ ತಯಾರಿಲ್ಲ. ಅದರಂತೆ ಈ ರಾಷ್ಟ್ರದಲ್ಲಿರುವ ವೇತನವು ಅದರಂತೆ ಬೇರೆ ಎಲ್ಲ ರಾಷ್ಟ್ರಗಳಲ್ಲಿ ಬಹುವಾಗಿ ಬೇಡಿಕೆ ಹಾಗೂ ಪೂರೈಕೆ ಕಾನೂನು ಮೇಲೆ ಅವಲಂಬಿತವಾಗಿರುತ್ತದೆ. ದೈವವಶಾತ್ ಅಥವಾ ದುರ್ದೈವವೋ ಬಹು ಸಂಖ್ಯೆ ಸದಸ್ಯರು ಶಾಸಕಾಂಗ ಸದಸ್ಯರಾಗಿ ಕೆಲಸ ಮಾಡಲು ಸೂಕ್ತ ವ್ಯಕ್ತಿಗಳಾಗಿದ್ದಾರೆ. ಪರಿಣಾಮವಾಗಿ ನಾವು ಅವರ ವೇತನವನ್ನು ಅತಿ ಕಡಿಮೆ ನಿಗದಿಪಡಿಸಿದ್ದೇವೆ. ದೈವವೋ ಇಲ್ಲವೋ ದುರ್ದೈವವೋ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುವ ವ್ಯಕ್ತಿಗಳ ಪೂರೈಕೆ ಬಹಳ ಕನಿಷ್ಠವಿದೆ. ಇದು ಆಕಸ್ಮಿಕವೆಂದು ನಾನು ಹೇಳಬಯಸುವುದಿಲ್ಲ. ಆದರೆ ನಿಜವಾಗಿಯೂ ಇಂತಹವರನ್ನು ದೊರಕಿಸಿಕೊಳ್ಳುವದು ಅತೀ ಕಠಿಣವಿದೆ ಮತ್ತು ಪರಿಣಾಮವಾಗಿ ನಾವು ಅದಕ್ಕೆ ಮಾರುಕಟ್ಟೆ ಬೆಲೆ ಕೊಡಲೇಬೇಕಾಗುತ್ತದೆ. ಪರಿಶಿಷ್ಟದಲ್ಲಿ ನಿಗದಿಪಡಿಸಿದ ವೇತನ ನನಗೆ ತಿಳಿದಂತೆ ಮಾರುಕಟ್ಟೆ ಬೆಲೆ ಏನೆಂಬುದನ್ನು ಸ್ಥಿರೀಕರಿಸುತ್ತಿದೆ.

ಅದರಿಂದ ನಾವು ನಿಗದಿಮಾಡಿದ ವೇತನದ ಬಗ್ಗೆ ಯಾವುದೇ ಗಂಭೀರವಾದ ಜಗಳ ಇಲ್ಲವೆಂದು ನನಗೆ ಅನಿಸುತ್ತದೆ.

ನಾನು ಈಗ ನಮ್ಮ ಮಿತ್ರರಾದ ಹಿಮತ್‌ಸಿಂಗ್ ಇವರು ಮಂಡಿಸಿದ ತಿದ್ದುಪಡಿಗೆ ಬರುತ್ತೇನೆ. ನನ್ನ ಹಾಗೂ ಅವರ ವಿಚಾರಗಳು ಒಂದೇ ಆಗಿವೆ ಎಂಬುದನ್ನು ನಾನು ಹೇಳಬಯಸುತ್ತೇನೆ. ಮತ್ತು ಅವರ ವಿಚಾರದಲ್ಲಿ ಇರತಕ್ಕ ಅನಿಸಿಕೆಗೆ ನನಗೆ ಅನುಕಂಪವಿದೆ. ಆದರೆ ಅವರು ಸರ್ವಸಾಮಾನ್ಯ ಪ್ರಸ್ತಾವನೆಯನ್ನು ನಾನು ಒಪ್ಪಿಕೊಳ್ಳಬೇಕೆಂದು ಬಯಸುತ್ತಾರೆ. ಆ ಪ್ರಸ್ತಾವನೆ ಹೇಳುವದೆಂದರೆ ಭಾಗ ೧ರಲ್ಲಿ ಹೇಳಿದ ಯಾವುದೇ ಕ್ಷೇತ್ರದಲ್ಲಿ ನೇಮಕವಾದ ನ್ಯಾಯಾಧೀಶರನ್ನು ಈ ಖಂಡದಲ್ಲಿ ತಿದ್ದುಪಡಿಗಳನ್ನು ಸಾಮಾನ್ಯ ಪದಗಳಲ್ಲಿ ಸೇರಿಸುವದು ಸೂಕ್ತವೆಂದು ನನಗೆ ಸರಿಕಾಣುವುದಿಲ್ಲ ಕಾರಣ ಇಷ್ಟೇ ೩೧ ಅಕ್ಟೋಬರ್ ೧೯೪೮ರ ನಂತರ ನಮ್ಮ ಸಂವಿಧಾನದ ಅನುಬಂಧಗಳ ಪ್ರಕಾರ ಪ್ರಾಂತ್ಯಾವಾರುಗಳ ಮೇಲೆ ನ್ಯಾಯಾಧೀಶರ ವೇತನದಲ್ಲಿ ಯಾವುದೇ ತಾರತಮ್ಯವಿರುವುದಿಲ್ಲ. ಎಲ್ಲ ನ್ಯಾಯಾಧೀಶರನ್ನು ಅವರು ಯಾವುದೇ ಹೈಕೋರ್ಟಿನಲ್ಲಿದ್ದರೂ, ಯಾವ ಕ್ಷೇತ್ರದಲ್ಲಿ ಇದ್ದರೂ ಅವರನ್ನು ಸಮನಾಗಿ ಇಡಲಾಗಿದೆ.

ಆದ್ದರಿಂದ ಯಾವುದೇ ವ್ಯತಿರಿಕ್ತತೆಯನ್ನು ತೆಗೆದು ಹಾಕಲು ಸಾಮಾನ್ಯ ಉಪಬಂಧ ಅವಶ್ಯವಿಲ್ಲ. ಯಾಕೆಂದರೆ ಅಂತಹ ವ್ಯತಿರಿಕ್ತತೆ ಬರುವ ಲಕ್ಷಣಗಳು ಇಲ್ಲ.

ಭಾರತ ಸರಕಾರ ಅಧಿನಿಯಮದಲ್ಲಿ ಕೆಲ ಉಪಬಂಧಗಳಲ್ಲಿ ನ್ಯಾಯಾಧೀಶರ ವೇತನದ ಬಗ್ಗೆ ಪ್ರಾಂತ್ಯ ಪ್ರಾಂತ್ಯಗಳಲ್ಲಿ ವಿಭಿನ್ನತೆಗಳಿದ್ದವು. ಅದರಿಂದ ಅಲ್ಲಿ ವ್ಯತಿರಿಕ್ತತೆ ಇತ್ತು. ನನ್ನ ಮಿತ್ರರಿಗೆ ನಾನು ಹೇಳಬಯಸುವುದೇನೆಂದರೆ ಈ ವಿಶೇಷ ಪ್ರಕರಣವನ್ನು ಇನ್ನೊಂದು ರೂಪದಲ್ಲಿ ಉಪಬಂಧಿಸಲು ಕರಡು ಸಮಿತಿಯವರು ಆಶಿಸುತ್ತಾರೆ. ಒಂದು ವೇಳೆ ಅದು ಆದರೆ ಈ ತಿದ್ದುಪಡಿಯನ್ನು ಸ್ವೀಕರಿಸುವ ಆವಶ್ಯಕತೆ ಇರುವುದಿಲ್ಲ. ಅದರಿಂದ ವೈಯಕ್ತಿಕವಾಗಿ ಯಾರಿಗಾದರೂ ಬಾಧಕವಾಗಿದ್ದರೆ ಅವರಿಗೂ ಪ್ರಯೋಜನವಾಗುವುದು. ಒಂದು ವೇಳೆ ಕರಡು ಸಮಿತಿಯವರು ಅದು ಆಗಲಿಕ್ಕಿಲ್ಲವೆಂದು ಅಭಿಪ್ರಾಯಪಟ್ಟರೆ ಆಗ ಕರಡು ಸಮಿತಿಯವರು ನಮಗೆ ಗೊತ್ತಿದ್ದಂತೆ ಯಾರಿಗಾದರೂ ವೈಯಕ್ತಿಕವಾಗಿ ಅಸಮಾಧಾನವಾಗಿದ್ದರೆ ಈ ಅಸಮಾಧಾನವನ್ನು ತೆಗೆದು ಹಾಕಲು ವಿಶೇಷವಾದ ತಿದ್ದುಪಡಿಯನ್ನು ತರುವ ಹಕ್ಕನ್ನು ತಮ್ಮಲ್ಲಿ ಇಟ್ಟುಕೊಳ್ಳುತ್ತಾರೆ.

ನಾನು ಮುಕ್ತಾಯಗೊಳಿಸುವ ಪೂರ್ವದಲ್ಲಿ ಈ ಖಂಡದಲ್ಲಿ ಕೆಲ ವಾಖ್ಯಾನಗಳನ್ನು ಸೇರಿಸುವುದನ್ನು ಕಣ್ತಪ್ಪಿ ಬಿಟ್ಟಿದ್ದ ಒಂದು ಅಥವಾ ಎರಡು ವಾಕ್ಯಗಳನ್ನು ತಮ್ಮ ಪರವಾನಿಗೆಯೊಂದಿಗೆ ಸೇರಿಸಲು ಬಯಸುತ್ತೇನೆ. ನಾನು ಭಾಗ ೩ರ ಪ್ಯಾರಾ ೧೧ರ ಉಪ ಪ್ಯಾರಾ (೨) ಇದನ್ನು ಉಲ್ಲೇಖಿಸುತ್ತೇನೆ. ಇದರಲ್ಲಿ ೭ನೇ ಸಾಲಿನಲ್ಲಿ 'ತಕ್ಕದ್ದು' ಪದದ ನಂತರ ಈ ಕೆಳಗಿನ ಪದಗಳನ್ನು ಸೇರಿಸಬಯಸುತ್ತೇನೆ.

ಈ ಪ್ಯಾರಾದ ಉಪಪ್ಯಾರಾದಲ್ಲಿ ವೇತನದ ಬಗ್ಗೆ ಹೇಳಿದ್ದೆ. ಅದರ ಜೊತೆಗೆ ಪ್ಯಾರಾ ೧೧, (೧)ರ ೩ನೇ ಉಪಪ್ಯಾರಾದಲ್ಲಿ ನಾನು ಒಂದು ತಿದ್ದುಪಡಿ ತಂದಿದ್ದೇನೆ. ನಾನು ಮೊದಲು ಇದನ್ನು 'ಅಂತಹ' ಇದನ್ನು ಕೈ ಬಿಡುತ್ತೇನೆ. ಮತ್ತು 'ನ್ಯಾಯಾಧೀಶ' ಈ ಪದದ ನಂತರ 'ಹೈಕೋರ್ಟ್' ಪದ ಸೇರಿಸುತ್ತೇನೆ.

**ಎಚ್. ವಿ. ಕಾಮತ್:** ಅದೇ ನಾನು ತಂದ ತಿದ್ದುಪಡಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಇದನ್ನು ಸ್ವೀಕರಿಸುತ್ತೇನೆ ಮತ್ತು ಈಗ ಈ ಸಭೆ ತಿದ್ದುಪಡಿಯಾದ ಪರಿಶಿಷ್ಟವನ್ನು ಸ್ವೀಕರಿಸುವುದೆಂದು ಆಶಿಸುತ್ತೇನೆ.

**ಮಾನ್ಯ ಶ್ರೀ ಆರ್.ಕೆ.ಸಿಧ್ವ:** ರಾಷ್ಟ್ರಾಧ್ಯಕ್ಷರ ಮತ್ತು ರಾಜ್ಯಪಾಲರ ವೇತನ ಹಾಗೂ ಭತ್ಯೆ ಬಗ್ಗೆ ನಾನು ತಂದ ತಿದ್ದುಪಡಿ ಬಗ್ಗೆ ಏನು ಹೇಳುತ್ತೀರಿ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸಂಸತ್ತು ಅದನ್ನು ತೀರ್ಮಾನಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು:** ನಾನು ಈ ತಿದ್ದುಪಡಿಗಳನ್ನು ಆಯಾ ಭಾಗಗಳ ಪರಿಶಿಷ್ಟಗಳಿಗೆ ಸೇರಿಸುತ್ತೇನೆ. ನಾವು ಈಗ ಪರಿಶಿಷ್ಟದ ೧ನೇ ಭಾಗದಲ್ಲಿ ಇದ್ದೇವೆ.

**ಮಾನ್ಯ ಸಭಾಧ್ಯಕ್ಷರು:** ೩ನೇ ಭಾಗದ ತಿದ್ದುಪಡಿ ೨೯೦ ಡಾ. ಬಿ. ಆರ್. ಅಂಬೇಡ್ಕರ್ ಇವರಿಂದ ಸ್ವೀಕೃತವಾಗಿದೆ. ಈಗಿದ್ದ ಹಾಗೆ ೩ ನೇ ಭಾಗ ಈ ರೀತಿ ಹೇಳುತ್ತದೆ.

ಪರಿಶಿಷ್ಟದಲ್ಲಿ ಪ್ರಸ್ತಾಪಿಸುವ ೪ನೇ ಭಾಗ ಪ್ಯಾರಾ ೧೧ರ ಉಪ ಪ್ಯಾರಾ (೨) ಇದರಲ್ಲಿ ಈ ಪ್ಯಾರಾದ ಉಪ ಪ್ಯಾರಾ (೪)ರಲ್ಲಿ ನಿರ್ದಿಷ್ಟಪಡಿಸಿ ಈ ಪದಗಳು ಆದಮೇಲೆ

'ಈ ಪ್ಯಾರಾದ ಉಪ ಪ್ಯಾರಾ (೧) ರಲ್ಲಿ 'ವೇತನ' ಇದರ ಜೊತೆಗೆ ಈ ಪದಗಳನ್ನು ಸೇರಿಸಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನಗೆ ನನ್ನದೇ ಆದ ಪದಗಳು ಇವೆ.

**(ಡಾ. ಅಂಬೇಡ್ಕರ್ ಅವರು ತಂದ ಎಲ್ಲ ತಿದ್ದುಪಡಿಗಳನ್ನು ಸ್ವೀಕರಿಸಲಾಯಿತು ಎರಡನೆ ಪರಿಶಿಷ್ಟ ತಿದ್ದುಪಡಿ ಆದಂತೆ ಸಂವಿಧಾನದಲ್ಲಿ ಸೇರಿಸಲಾಯಿತು.)**

## ಭಾಗ VI ಎ

ಡಾ॥ ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ, ಭೋಜನ ವಿರಾಮದ ನಂತರ ಸಭೆ ೪ ಘಂಟೆಗೆ ಪುನಃ ಸೇರಿತು.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುವೆ. VI ರ ನಂತರ ಈ ನೂತನ ಭಾಗವನ್ನು ಸೇರಿಸಬೇಕು.

## ಭಾಗ VI ಎ

IIIನೆಯ ಭಾಗದಲ್ಲಿಯ ಮೊದಲನೆಯ ಪರಿಚ್ಛೇದದಲ್ಲಿಯ ರಾಜ್ಯಗಳು

೨೧೧ಎ ಭಾಗ VIರಲ್ಲಿ ಸೂಚಿಸಲಾದ ಸಂವಿಧಾನದ ಅಂಶಗಳು ಭಾಗ III ಮೊದಲನೆಯ ಪರಿಚ್ಛೇದದಲ್ಲಿ ತಿಳಿಸಲಾದ ರಾಜ್ಯಗಳಿಗೆ ತಾತ್ಕಾಲಿಕವಾಗಿ ಅನ್ವಯಿಸುವ ವಿಷಯಕ್ಕೆ ಸಂಬಂಧಿಸಿದಂತೆ ಕೆಳಗೆ ಸೂಚಿಸಲಾದ ಮಾರ್ಪಾಡುಗಳನ್ನು ಸೂಚಿಸುತ್ತೇನೆ.

(೧) ಭಾಗ VI ಹಾಗೂ ಇತರ ಎಡೆಗಳಲ್ಲಿ ಎರಡನೆಯ ಬಾರಿ, ೨೦೯(ಬಿ)ಯಲ್ಲಿ 'ಗವರ್ನರ್' ಪದಕ್ಕೆ ಬದಲಿ 'ರಾಜ ಪ್ರಮುಖ' ಪದವನ್ನು ಬಳಸಬೇಕು.

(೨) ವಿಧಿ ೧೨೮ ರಲ್ಲಿಯ ಪದ ಮತ್ತು ಸಂಖ್ಯೆ ಭಾಗ Iರ ಬದಲು ಪದ ಮತ್ತು ಸಂಖ್ಯೆ ಭಾಗ III ಎಂಬುದನ್ನು ಸೇರಿಸಬೇಕು.

(೩) ವಿಧಿಗಳು ೧೩೧, ೧೩೨ ಹಾಗೂ ೧೩೪ನ್ನು ಕೈಬಿಡಬೇಕು.

(೪) ೧೩೫ನೆಯ ವಿಧಿಯಲ್ಲಿ:–

(ಎ) ಕಲಮು (೧) ರಲ್ಲಿ ಸೂಚಿಸಲಾದ ಪದಗಳು "ನೇಮಿಸುವ" ಬದಲು "ಸಂಭವಿಸುವ" ಪದವನ್ನು ಸೇರಿಸಬೇಕು.

(ಬಿ) ಕಲಮು ಮೂರರ ಬದಲು ಈ ಕೆಳಗೆ ಸೂಚಿಸಿದ ಕಲಮನ್ನು ಸೇರ್ಪಡಿಸಬೇಕು.

(೩) ಸಾಮಾನ್ಯವಾಗಿ ರಾಷ್ಟ್ರಪತಿಗೆ ನೀಡಬಹುದಾದ ಭತ್ಯೆಯನ್ನು ರಾಜ ಪ್ರಮುಖರಿಗೂ ನೀಡಬೇಕು. ಅಲ್ಲದೆ ರಾಜ ಪ್ರಮುಖರಿಗೆ ಮನೆ ಬಾಡಿಗೆಯನ್ನು ನೀಡಬೇಕು.

(ಇ) ಕಲಮು ೪ರಲ್ಲಿಯ ಪದ 'ವೇತನ' ಕೈ ಬಿಡಬೇಕು.

(೫) ೧೩೬ ನೆಯ ವಿಧಿಯಲ್ಲಿ ಸೂಚಿಸಲಾದ "ಅಧಿಕ ಸೇವಾ ಜ್ಯೇಷ್ಠತೆಯ ನ್ಯಾಯಾಧೀಶ"ರ ಬದಲು ಈ ದಿಶೆಯಲ್ಲಿ 'ರಾಷ್ಟ್ರಪತಿಯವರು ಸೂಚಿಸಬಹುದಾದ ವಿಧಾನ' ಎಂದು ಸೇರ್ಪಡಿಸಬೇಕು.

(೬) ೧೪೪ ನೆಯ ವಿಧಿಯ ಕಲಮು (೧) ಕೈ ಬಿಡಬೇಕು.

(೭) ೧೪೮ ನೆಯ ವಿಧಿಯ ಕಲಮು (೧) ರ ಬದಲು ಕೆಳಗಿನ ಕಲಮನ್ನು ಸೇರ್ಪಡಿಸಬೇಕು.

ಪ್ರತಿಯೊಂದು ರಾಜ್ಯದ ಶಾಸನ ಸಭೆಯು ರಾಜ ಪ್ರಮುಖದಿಂದ ಕೂಡಿರಬೇಕು.

ಹಾಗೂ

(ಎ) ಮೈಸೂರು ರಾಜ್ಯ ಎರಡು ಸದನಗಳನ್ನು ಮತ್ತು

(ಬಿ) ಬೇರೆ ರಾಜ್ಯಗಳು ಏಕ ಸದನವನ್ನು ಹೊಂದಿರಬೇಕು.

(೮) ೧೬೩ನೆಯ ವಿಧಿಯಲ್ಲಿ ಹೇಳಿದ "ಎರಡನೆಯ ಪರಿಚ್ಛೇದದಲ್ಲಿ ಖಚಿತಪಡಿಸಿದ" ಬದಲು "ರಾಜ ಪ್ರಮುಖರು ನಿರ್ಣಯಿಸಿದಂತೆ" ಸೇರ್ಪಡಿಸಬೇಕು.

(೯) ೧೭೦ನೆಯ ವಿಧಿಯಲ್ಲಿಯ ಪದಗಳಾದ "ಈ ಸಂವಿಧಾನ ಜಾರಿಗೆ ಬರುವ ಮುಂಚೆಯೇ ಪ್ರಾಂತೀಯ ಶಾಸನ ಸಭೆಗಳಿಗೆ" ಬದಲು "ರಾಜ ಪ್ರಮುಖರ ನಿರ್ಣಯದಂತೆ" ಎಂಬ ಪದಗಳನ್ನು ಸೇರ್ಪಡಿಸಬೇಕು.

(೧೦) ವಿಧಿ ೧೭೭ರ ೩ನೇ ಕಲಮಿನಲ್ಲಿ

(ಎ) ಉಪಕಲಮಿಗೆ ಈ ಕೆಳಕಂಡ ಉಪ ಕಲಮು ಸೇರ್ಪಡೆಯಾಗಬೇಕು. ಅದೆಂದರೆ ರಾಜಪ್ರಮುಖರ ಖರ್ಚು ವೆಚ್ಚ ಹಾಗೂ ಭತ್ಯೆಗಳಿಗೆ ಹಾಗೂ ಅವರ ಕಾರ್ಯಾಲಯದ ವೆಚ್ಚಗಳಿಗೆ ಸೇರಿದಂತೆ ರಾಷ್ಟ್ರಪತಿಯವರು ಸಾಮಾನ್ಯ ಅಥವಾ ವಿಶೇಷ ಆಜ್ಞೆಯ ನಿರ್ಣಯದಂತೆ.

(ಬಿ) ಉಪ ಕಲಮು ನಂತರ (ಇ)ಯಲ್ಲಿ ಈ ಉಪ ಕಲಮು ಸೇರಿಸಬೇಕು. ಅದೆಂದರೆ (ಇಇ) "ತಿರುವಾಂಕೂರು ಹಾಗೂ ಕೊಚ್ಚಿನ್ ರಾಜ್ಯಕ್ಕೆ ಪ್ರತಿವರ್ಷ ೫೧ ಲಕ್ಷ ರೂಪಾಯಿಗಳ ಮೊತ್ತವನ್ನು ನೀಡಬೇಕು. ಈ ಹಣ ದೇವಸ್ವಮ್‌ಗೆ ನಿಗದಿಯಾಗಿದೆ ಸಂವಿಧಾನ ಜಾರಿ ಪೂರ್ವದಲ್ಲಿ ಮಾಡಿಕೊಂಡ ತಿರುವಾಂಕೂರು ಕೊಚ್ಚಿನ್ ಸಂಯುಕ್ತ ರಾಜ್ಯ ನಿರ್ಮಾಣದ ಒಪ್ಪಂದದ ಮೇರೆಗೆ ಇದನ್ನು ನೀಡಲೇ ಬೇಕಾಗಿದೆ.

(೧೧) ೧೮೩ನೆಯ ವಿಧಿ ಎರಡನೆಯ ಕಲಮಿನ ಬದಲಾಗಿ ಈ ಕೆಳಗಿನ ಕಲಮು ಸೇರಿಸ ಬೇಕು.

(೨) ಈ ವಿಧಿಯ ೧ರ ಅಡಿಯಲ್ಲಿ ನಿಯಮಾವಳಿಗಳನ್ನು ರಚಿಸುವವರೆಗೂ, ಸಂವಿಧಾನ ಪೂರ್ವದಲ್ಲಿದ್ದ ನಿಯಮಾವಳಿ ಹಾಗೂ ವಿಧಾನಗಳನ್ನೇ ಆಯಾ ರಾಜ್ಯಗಳ ಶಾಸನ ಸಭೆ ಅಥವಾ ಯಾವ ರಾಜ್ಯದಲ್ಲಿ ಶಾಸನ ಸಭೆ ಇಲ್ಲವೋ, ಅಂತಹ ರಾಜ್ಯಗಳಲ್ಲಿ ಅಲ್ಲಿಯ ಶಾಸನ ಸಭೆಯ ಅಧ್ಯಕ್ಷರು ಅಥವಾ ವಿಧಾನ ಪರಿಷತ್ತಿನ ಅಧ್ಯಕ್ಷರು ಸೂಚಿಸಬಹುದಾದ ಬದಲಾವಣೆಗಳಂತೆ ನಡೆಯಬೇಕು.

(೧೨) ವಿಧಿ ೧೯೧(೨)ರಲ್ಲಿಯ ಪದ "ಪ್ರಾಂತ್ಯ"ದ ಬದಲಾಗಿ "ಭಾರತೀಯ ರಾಜ್ಯ" ಎಂಬ ಪದವಿರಬೇಕು.

(೧೩) ೧೯೭ ವಿಧಿಯನ್ನು ಈ ಕೆಳಕಂಡ ವಿಧಿಯಂತೆ ಮಾರ್ಪಡಿಸಬೇಕು.

"೧೯೭ ರಾಜ್ಯ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರ ವೇತನ, ಭತ್ಯೆ, ರಜೆ, ಪಿಂಚಣಿ ಮುಂತಾದ ಹಕ್ಕುಗಳ ಬಗೆಗೆ ಸಮಯ ಸಮಯಕ್ಕೆ ಆಗುವ ಬದಲಾವಣೆಗಳನ್ನು ರಾಷ್ಟ್ರಪತಿಯವರು ರಾಜ ಪ್ರಮುಖರೊಂದಿಗೆ ಸಮಾಲೋಚಿಸಿ ನಿರ್ಧರಿಸಬೇಕು. ಆದರೆ ಯಾವುದೇ ಪರಿಸ್ಥಿತಿಯಲ್ಲಿ ಅದು ನ್ಯಾಯಾಧೀಶರು ಪಡೆಯುತ್ತಿರುವ ವೇತನ ಹಕ್ಕುಗಳಿಗೆ ಧಕ್ಕೆಯಾಗದಂತಿರಬೇಕು.

ಇನ್ನುಳಿದ ತಿದ್ದುಪಡಿಗಳನ್ನು ನಂತರ ಮಂಡಿಸುವೆ.

ಈ ಸಂವಿಧಾನದ ಭಾಗ VI ಸಾರಾಂಶವೆಂದರೆ ಅಥವಾ ಅದರಲ್ಲಿ ಅಡಕವಾಗಿರುವ ವಿಷಯ ಎಂದರೆ, ಭಾಗ IIIರಲ್ಲಿಯ ರಾಜ್ಯಗಳಿಗೆ ಅನ್ವಯಿಸುವ ವಿಧಿ ೨೧೧ಎ ಈ ರಾಜ್ಯಗಳಿಗೂ ತಾನೇ ತಾನಾಗಿ ಅನ್ವಯಿಸುವುದು. ಆದರೆ VIರ ರಾಜ್ಯಗಳಿಗೆ ಭಾಗ IIIರಂತೆ ಅನ್ವಯಿಸಬೇಕಾದ ವಿಶೇಷ ಗುರಿಯನ್ನು ಗಮನಿಸಿ ಈ ೨೧೭ ತಿದ್ದುಪಡಿಯನ್ನು ಗಮನಿಸಬಹುದು. ಇಲ್ಲದೇ ಹೋದಲ್ಲಿ ಭಾಗ IIIರ ರಾಜ್ಯಗಳ ಸಂವಿಧಾನಗಳು

ಭಾಗ I ರಾಜ್ಯದ ಮಟ್ಟಕ್ಕೆ ಬರಬಹುದು. ಹೀಗಾಗಿ ಈ ತಿದ್ದುಪಡಿ.

* * *

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ನಾನು ೨೮೮ ನೆಯ ಪಟ್ಟಿಯ XII ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು:** ಅದು ನನಗೆ ಈಗ ತಾನೇ ತಲುಪಿದೆ. ನೀವು ಮಂಡಿಸಬಹುದು.

**ಶ್ರೀ ಟಿ.ಟಿ.ಕೃಷ್ಣಮಾಚಾರಿ:** ಆದರೆ ಅದನ್ನು ಇನ್ನೂ ಮಂಡಿಸಲಾಗಿಲ್ಲ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್:** ಅದನ್ನು ಹೇಗೆ ಮಂಡಿಸಲಾಗುವುದು?

**ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾ:** ನಾನು ಅಧ್ಯಕ್ಷರು ಓದಿದ ತಿದ್ದುಪಡಿ ಮಂಡಿಸುತ್ತಿಲ್ಲ. ನಾನು ನಂ. ೨೮೮ XII ಪಟ್ಟಿಯನ್ನು ಮಂಡಿಸುತ್ತಿರುವೆ.

ಭಾರತದ ಸಂವಿಧಾನ ಸಭೆಯು ಸಂವಿಧಾನ ಸಭೆಯ ಪ್ರಾಂಗಣದಲ್ಲಿ ಡಾ॥ ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಸೇರಿತ್ತು.

## ಭಾಗ VI–ಎ (ಮುಂದುವರಿದುದು)

**ಮಾನ್ಯ ಅಧ್ಯಕ್ಷರು:** ನನ್ನ ಸೂಚನೆ ಎಂದರೆ ರಾಜ್ಯಗಳಿಗೆ ಸಂಬಂಧಿಸಿದ ಎಲ್ಲ ತಿದ್ದುಪಡಿಗಳನ್ನು ಒಪ್ಪಿಗೆ ತೆಗೆದುಕೊಂಡು ಅದರ ಬಗೆಗೆ ಸಾಮಾನ್ಯ ಚರ್ಚೆ ನಡೆಸಬಹುದು. ಆದುದರಿಂದ ಡಾ॥ ಅಂಬೇಡ್ಕರರು ಎಲ್ಲವನ್ನೂ ಓದಬೇಕಾಗಿಲ್ಲ.

**ಗೌರವಾನ್ವಿತ ಡಾ. ಬಿ.ಆರ್.ಅಂಬೇಡ್ಕರ್** (ಬಾಂಬೆ ಸಾಮಾನ್ಯ): ಮಾನ್ಯರೆ, ನಾನು ಮಂಡಿಸುವ ೨೨೪ ವಿಧಿಯನ್ನು ಕೈ ಬಿಡಬೇಕು.

೨೨೫ ವಿಧಿಯನ್ನು ಕೈ ಬಿಡಬೇಕು.

೨೩೫ನೆಯ ವಿಧಿಯ ನಂತರ ಈ ಕೆಳಗೆ ಸೂಚಿಸಿದ್ದನ್ನು ಸೇರ್ಪಡಿಸಬೇಕು.

## ೨೩೫ಎ

**ರಾಜ್ಯಗಳಲ್ಲಿಯ ಸೇನಾಪಡೆ ಮೊದಲನೆಯ ಪರಿಚ್ಛೇದ ಭಾಗ III**

೧. ಈ ಸಂವಿಧಾನದಲ್ಲಿ ಯಾವ ನಿರ್ಬಂಧನೆಯಿಲ್ಲದಂತೆ ಭಾಗ III ಮೊದಲನೆಯ ಪರಿಚ್ಛೇದದಲ್ಲಿ ತಿಳಿಸಲಾದ ಯಾವುದೇ ರಾಜ್ಯ ಸೇನಾ ಪಡೆಗಳನ್ನು ಹೊಂದಿದ್ದರೆ ಸಂವಿಧಾನ ಪೂರ್ವದಲ್ಲಿ, ಕೇಂದ್ರ ಶಾಸನ ಸಭೆ ಸಂಸತ್ತು ನಿಯಮಗಳನ್ನು ರಚಿಸುವವರೆಗೂ ಅದನ್ನು ಮುಂದುವರಿಸಬಹುದು. ಅಥವಾ ಅದರ ಪರವಾಗಿ ಕಾಲ ಕಾಲಕ್ಕೆ ರಾಷ್ಟ್ರಪತಿಯು ಹೊರಡಿಸಿದ ಆಜ್ಞೆಯನ್ನು ಪಾಲಿಸಬಹುದು.

(೨) ಮೇಲೆ ತಿಳಿಸಿದ (೧)ರಲ್ಲಿ ಹೇಳಿದ ಸೇನಾ ಪಡೆಗಳು ರಾಷ್ಟ್ರದ ಸೇನಾ ಪಡೆಯ ಅಂಗವಾಗಿರುತ್ತವೆ.

೨೩೬ ನೆಯ ವಿಧಿಗೆ ಬದಲಾಗಿ ಈ ಕೆಳಗಿನ ವಿಧಿಯನ್ನು ಸೇರ್ಪಡಿಸಬೇಕು:

೨೩೬. ಭಾರತ ಸರಕಾರವು ಯಾವುದೇ ಅಂದರೆ ಭಾರತ ಪ್ರದೇಶಕ್ಕೆ ಸೇರಿರದ ಪ್ರದೇಶಗಳೊಂದಿಗೆ ಆಡಳಿತ, ಶಾಸನೀಯ ಅಥವಾ ನ್ಯಾಯಾಂಗೀಯ ವಿಷಯಗಳನ್ನು ಕುರಿತು, ಆದರೆ ಆ ವಿಧವಾದ ಒಪ್ಪಂದಗಳನ್ನು ಕಾಲ ಕಾಲಕ್ಕೆ ಜಾರಿಯಲ್ಲಿ ಬರಬಹುದಾದ ವಿದೇಶೀ ಅಧಿಕಾರ ವ್ಯಾಪ್ತಿಯಂತೆ ಜರುಗುವುವು.

೨೩೭ನೆ ವಿಧಿಯನ್ನು ಕೈ ಬಿಡಬೇಕು.

**೨೭೪ಡಿ**. ವಿಧಿಯ ನಂತರ ಈ ನೂತನ ವಿಧಿಯನ್ನು ಸೇರ್ಪಡಿಸಬೇಕು.

**೨೭೪ ಡಿ.ಡಿ**. ಮುಂದೆ ಹೇಳಬಹುದಾದ ಅಂಶಗಳ ಬಾಧೆ ಇಲ್ಲದೆ, ರಾಷ್ಟ್ರಪತಿಯವರು ಭಾಗ III ರಲ್ಲಿ ತಿಳಿಸಲಾದ ಯಾವುದೇ ರಾಜ್ಯದೊಂದಿಗೆ ತಾತ್ಕಾಲಿಕ ಒಪ್ಪಂದವನ್ನು ಕರಾಕರಣೆ ಹಾಗೂ ರಾಜ್ಯಗಳು ಆಮದು ಮಾಡಿಕೊಂಡ ವಸ್ತುಗಳ ಮೇಲೆ ವಿಧಿಸಬಹುದಾದ ಸುಂಕ ಮುಂತಾದ ಒಪ್ಪಂದದ ಅವಧಿ ಹತ್ತು ವರ್ಷಕ್ಕೆ ನಿಗದಿಯಾಗಿರಬೇಕು. ಆದರೆ ಐದು ವರ್ಷಗಳ ಅವಧಿಯ ನಂತರ ೨೬೦ನೆಯ ವಿಧಿಯಂತೆ ಹಣಕಾಸು ಆಯೋಗದ ಸಲಹೆ ಪಡೆದು ಅಂತಹ ಒಪ್ಪಂದವನ್ನು ರದ್ದು ಮಾಡಬಹುದು.

**೨೭೪ಡಿ.ಡಿ.ಡಿ. ೨೭೪ಎ** ಹಾಗೂ **೨೭೪ಸಿ** ಸಂವಿಧಾನ ವಿಧಿಗಳಲ್ಲಿ ಹೇಳಿದ ವಿಷಯ ಈಗ ಜಾರಿಯಲ್ಲಿರುವ ಕಾನೂನುಗಳಿಗೆ ಅನ್ವಯಿಸಲಾಗದು. ಆದರೆ ರಾಷ್ಟ್ರಪತಿಗಳು ಈ ದಿಶೆಯಲ್ಲಿ ತಾವು ನಿರ್ಣಯ ತೆಗೆದುಕೊಳ್ಳಬಹುದು.

ಸಂವಿಧಾನದ ೩೦೨ನೆಯ ವಿಧಿಯ ನಂತರ ಈ ನೂತನ ವಿಧಿಯನ್ನು ಸೇರಿಸಬೇಕು.

೩೦೨ಎ ಕೇಂದ್ರ ಹಾಗೂ ರಾಜ್ಯಗಳ ಶಾಸನಸಭೆಗೆ ಆಡಳಿತಾಧಿಕಾರದ ಬಗೆಗೆ ಶಾಸನ ರಚಿಸುವ ಅಧಿಕಾರದ ಬಗೆಗೆ ಸೂಕ್ತ ಗೌರವದಿಂದ ೨೬೭ಎ ರಲ್ಲಿ ಮಾಡಿಕೊಂಡಿರಬಹುದಾದ, ರಾಜಮಹಾರಾಜರಿಗೆ ನೀಡಿದ ವಚನಗಳನ್ನು, ಹಕ್ಕುಗಳನ್ನು ಪೂರೈಸಬೇಕು.

ಸಂವಿಧಾನದ ೨೦೬ನೆಯ ವಿಧಿಯ ನಂತರ ಈ ನೂತನ ವಿಧಿಯನ್ನು ಸೇರಿಸಬೇಕು. ೨೦೬ಬಿ ಈ ಸಂವಿಧಾನ ಜಾರಿ ಬಂದ ಹತ್ತು ವರ್ಷಗಳ ಅವಧಿಯಲ್ಲಿ ರಾಜ್ಯಗಳ ಬಗೆಗೆ ಸಂಸತ್ತು ಯಾವುದೇ ಬಗೆಯ ಕಾನೂನನ್ನು ರಚಿಸಬಹುದು. ಭಾಗ III ಪರಿಚ್ಛೇದ ಒಂದರಲ್ಲಿಯ ಎಲ್ಲಾ ರಾಜ್ಯಗಳೂ ಸಂಸತ್ತಿನ ಅಧಿಕಾರಕ್ಕೆ ಒಳಪಟ್ಟಿರಬೇಕು. ಕಾಲಕಾಲಕ್ಕೆ ಸಂಸತ್ತಿನಿಂದ ಹೊರಡಿಸಿದ ಆಜ್ಞೆಗಳನ್ನು ಗೌರವಿಸಬೇಕು. ಇದರಂತೆ ನಡೆಯದೇ ಹೋದಲ್ಲಿ ಸಂವಿಧಾನಾತ್ಮಕ ವಿಧಿಗಳಲ್ಲಿ ತಿಳಿಸಿದಂತೆ ಕ್ರಮ ತೆಗೆದುಕೊಳ್ಳಬಹುದು. ಅಧ್ಯಕ್ಷರು ತಮ್ಮ ಈ ವಿಧವಾದ ಆಜ್ಞೆ ಯಾವ ರಾಜ್ಯಕ್ಕೆ ಅನ್ವಯಿಸಲಾಗುವುದು ಎಂದು ತಿಳಿಸಬಹುದು.

ಸಂವಿಧಾನದ ೨೫೮ (೧) ಕ್ಕೆ ಬದಲು ಈ ಕೆಳಗಿನ ಕಲಮನ್ನು ಸೇರಿಸಬೇಕು.

(೧) ಈ ಅಧ್ಯಾಯದಲ್ಲಿ ಹೇಳಲಾದ ಯಾವ ವಿಷಯದ ನಿರ್ಬಂಧನೆಯಿಲ್ಲದೇ ಭಾರತ ಸರಕಾರವು ಈ ವಿಧಿಯ (೨) ನಲ್ಲಿ ತಿಳಿಸಿದಂತೆ ತಾತ್ಕಾಲಿಕವಾಗಿ III ಭಾಗ ಪರಿಚ್ಛೇದ ಒಂದರಲ್ಲಿ ತಿಳಿಸಿದ

ಯಾವುದೇ ರಾಜ್ಯಗಳೊಡನೆ ಒಪ್ಪಂದ ಮಾಡಿಕೊಳ್ಳಬಹುದು.

(ಎ) ಕರಹೇರುವ ಹಾಗೂ ಕರಾಕರಣೆ ಮಾಡುವ ಹಾಗೂ ಈ ವಿಧವಾಗಿ ಬಂದ ಹಣವನ್ನು ಹಂಚುವ

(ಬಿ) ಕರಾಕರಣೆಯ ವಿವಿಧ ಮೂಲಗಳಿಂದ ರಾಜ್ಯಕ್ಕೆ ಉಂಟಾದ ಹಣದ ಕೊರತೆಗೆ (ಅಭಾವಕ್ಕೆ) ಸಹಾಯಧನ ನೀಡಬಹುದು.

(ಸಿ) ಭಾರತ ಸರಕಾರದಿಂದ ೨೬೭ಎ (೧) ಅಡಿಯಲ್ಲಿ ರಾಜ್ಯವು ನೀಡಬೇಕಾದ ಮೊತ್ತ (ಒಪ್ಪಂದದಂತೆ)ವನ್ನು ಜಾರಿಗೊಳಿಸುವ ಬಗೆಗೆ

ಭಾಗ IX ಅಧ್ಯಾಯ I ೨೬೭ ನೆಯ ವಿಧಿಯ ನಂತರ ಈ ನೂತನ ವಿಧಿ ಸೇರಿಸಬೇಕು.

೨೬೭ಎ (೧) ಸಂವಿಧಾನ ಜಾರಿಗೆ ಬರುವ ಮುನ್ನ ಭಾರತೀಯ ರಾಜರುಗಳು ಮಾಡಿಕೊಂಡಿರ ಬಹುದಾದ ಒಪ್ಪಂದದಂತೆ, ಕರರಹಿತ ಮೊತ್ತದ ಬಗೆಗೆ ಭಾರತ ಸರಕಾರವು ಅವರ ಗೌರವಧನ ಮುಂತಾದ ವಿಷಯಗಳನ್ನು ಮಾನ್ಯ ಮಾಡಬೇಕು.

(ಎ) ಈ ವಿಧವಾದ ಸಹಾಯಧನವನ್ನು ಸಂಚಿತ ನಿಧಿಯಿಂದ ನೀಡಬೇಕು.

(ಬಿ) ಈ ವಿಧವಾಗಿ ನೀಡಿದ ಹಣ ಆದಾಯ ಕರದಿಂದ ಮುಕ್ತವಾಗಿರಬೇಕು.

(೨) ೨೫೮ (೧)ರ ಅಡಿಯಲ್ಲಿ, ಭಾಗ I ಅಥವಾ III ಪರಿಚ್ಛೇದ ಒಂದರಡಿಯಲ್ಲಿ ಬರಬಹುದಾದ ಎಲ್ಲಾ ರಾಜ್ಯಗಳಿಗೆ ನೀಡಿದ ಹಣವನ್ನು ಕನ್‌ಸಾಲಿಡೇಟ್ ಅಥವಾ ಸಂಚಿತ ನಿಧಿಯಿಂದ ವೆಚ್ಚ ಮಾಡಬಹುದು. ಈ ವಿಷಯಕ್ಕೆ ಸಂಬಂಧಿಸಿದ ನಿರ್ಣಯ ರಾಷ್ಟ್ರಪತಿಯವರ ಆಜ್ಞೆಗೆ ಒಳಪಟ್ಟಿದೆ.

೨೭೦ನೆಯ ವಿಧಿಯ ಬದಲಾಗಿ ಈ ನೂತನ ವಿಧಿಯನ್ನು ಅಳವಡಿಸಬೇಕು.

೨೭೦ಎ (೧) ಸಂವಿಧಾನದ ಜಾರಿಗೆ ಬಂದ ದಿನದಿಂದ

(ಎ) ಮೊದಲನೆಯ ಪರಿಚ್ಛೇದ ಭಾಗ III ರಲ್ಲಿ ಹೇಳಲಾದ ಎಲ್ಲಾ ರಾಜ್ಯಗಳ ಆಸ್ತಿ ಪಾಸ್ತಿಗಳು ಭಾರತ ರಾಜ್ಯಕ್ಕೆ ಸಲ್ಲುತ್ತವೆ.

(ಬಿ) ಸಾಲಗಳೂ ಭಾರತ ರಾಜ್ಯಕ್ಕೆ ಸೇರಿವೆ.

(೨) ಪರಿಚ್ಛೇದ ಒಂದು ಭಾಗ III ರಲ್ಲಿ ಹೇಳಿದ ರಾಜ್ಯಗಳ ಆಸ್ತಿ–ಪಾಸ್ತಿ, ಸಾಲ, ಮುಂತಾದ ಎಲ್ಲಾ ಜವಾಬ್ದಾರಿಗಳು ಸಂವಿಧಾನ ಜಾರಿಗೆ ಬಂದ ಮೇಲೆ ಭಾರತ ಸರಕಾರಕ್ಕೆ ಸೇರಿವೆ.

**ಶ್ರೀ ಬ್ರಜೇಶ್ವರ್ ಪ್ರಸಾದ್** (ಬಿಹಾರ–ಸಾಮಾನ್ಯ): ಮಾನ್ಯರೆ ನಂ. ೨೧೮–೨೧೯ ತಿದ್ದುಪಡಿಗಳನ್ನು ವಿಧಿ ೨೨೪–೨೨೫ರ ಬದಲು ತರಬಯಸುವೆ. ಆದುದರಿಂದ ಈ ವಿಧಿಗಳಿಗೆ ಸಂಬಂಧಿಸಿದ ಮಾನ್ಯ ಸದಸ್ಯರನ್ನೂ, ಮಂಡಿಸುವಂತೆ ಕೋರುವೆ.

**ಮಾನ್ಯ ಸಭಾಧ್ಯಕ್ಷರು:** ತಾವು ಸೂಚಿಸಿದಂತೆ ಆ ವಿಧಿಗಳನ್ನು ಕೈ ಬಿಡಬಹುದು. ಅದಕ್ಕೆ ಹೆಚ್ಚಿನ ಸಮಯ ಹಿಡಿಯಲಾರದು.

(ವಿಧಿ ೨೨೪ನ್ನು ಕೈ ಬಿಡಲಾಗಿದೆ)

## ವಿಧಿ ೩೦೬ಬಿ

**ಮಾನ್ಯ ಸಭಾಧ್ಯಕ್ಷರು:** ಡಾ॥ ಅಂಬೇಡ್ಕರ್ ತಿದ್ದುಪಡಿ ನಂ. ೨೨೨

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈಗಾಗಲೇ ಮಂಡಿಸಿರುವೆ.

* * *

**ದಿನಾಂಕ ೧೩ ಅಕ್ಟೋಬರ್ ೧೯೪೯ ರಂದು ಭೋಜನ ವಿರಾಮದ ನಂತರ ೪ ಗಂಟೆಗೆ ಡಾ॥ ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.**

ವಿಧಿ ೩ **(ಪುನಃ ತೆಗೆದುಕೊಳ್ಳಲಾಯಿತು)**

**ಮಾನ್ಯ ಸಭಾಧ್ಯಕ್ಷರು:** ನಂ. ೨೨೬ ಮುಂತಾದ ತಿದ್ದುಪಡಿಗಳನ್ನು ತೆಗೆದುಕೊಳ್ಳಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಪರವಾಗಿ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಈ ತಿದ್ದುಪಡಿಗಳನ್ನು ಮಂಡಿಸಲಿ ಎಂದು ಕೋರುವೆ.

## ವಿಧಿ ೨೯೬

**ಮಾನ್ಯ ಸಭಾಧ್ಯಕ್ಷರು:** ನಾವು ಈಗ ೨೯೬ ವಿಧಿ ಕೈಗೆತ್ತಿಕೊಳ್ಳೋಣ ನಂ.೧೫ ತಿದ್ದುಪಡಿಗೆ ಹಲವಾರು ತಿದ್ದುಪಡಿಗಳಿವೆ. ಕೆಲವು ತಿದ್ದುಪಡಿಗಳು, ತಿದ್ದುಪಡಿಯಂತಿದ್ದು ತಿದ್ದುಪಡಿಗಳಾಗಿವೆ. (ರಚನಾ ಸಮಿತಿಯಿಂದ) ಹಲವು ತಿದ್ದುಪಡಿಗಳು ಸದಸ್ಯರಿಂದ ಬಂದಿವೆ. ಹೀಗಾಗಿ ತಿದ್ದುಪಡಿಗಳ ಪುನರುಚ್ಚಾರಣೆಯಾಗಿದೆ. ಹೀಗಾಗಿ ಸದಸ್ಯರು ಅತಿಯಾಗಿ ಆಗ್ರಹಪಡಿಸಬಾರದೆಂದೇ ಸೂಚಿಸುವೆ.

**ಶ್ರೀ ಹೆಚ್. ವಿ. ಕಾಮತ್** (ಸಿ.ಪಿ.ಬಿರಾರ: ಸಾಮಾನ್ಯ): ನಿಮ್ಮ ಸೂಚನೆಯನ್ನು ನಾವು ಪಾಲಿಸುತ್ತೇವೆ.

**ಮಾನ್ಯ ಸಭಾಧ್ಯಕ್ಷರು:** ನಿಮಗೆಲ್ಲಾ ಸಹಕಾರಿಯಾಗಬಲ್ಲ ಈ ದಿಶೆಯಲ್ಲಿ, ನಾನು ಯಾವ ಆಜ್ಞೆ ಮಾಡುವುದಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬಾಂಬೆ: ಸಾಮಾನ್ಯ): ಮಾನ್ಯರೆ, ನಾನು ಮಂಡಿಸುವೆ. ತಿದ್ದುಪಡಿ ನಂ.೩೧೬೩ಗೆ ಸಂಬಂಧಿಸಿದಂತೆ ಹಲವಾರು ತಿದ್ದುಪಡಿಯ ಪಟ್ಟಿಯೇ ಇದೆ. ಹೀಗಾಗಿ ವಿಧಿ ೨೯೬ರ ಬದಲಿಗೆ ಈ ಕೆಳಗಿನ ವಿಧಿಯನ್ನು ಸೇರ್ಪಡಿಸಬೇಕು.

**ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಸೇವಾ ಅಧಿಕಾರ ಹುದ್ದೆಗಳ ಬಗೆಗಿನ ಹಕ್ಕು ಬಾಧ್ಯತೆಗಳು**

ಕೇಂದ್ರ ಹಾಗೂ ರಾಜ್ಯಗಳಲ್ಲಿಯ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಆಡಳಿತದ ದಕ್ಷತೆಯೊಂದಿಗೆ ಪರಿಶಿಷ್ಟ ಜಾತಿ ಪಂಗಡಗಳ ಹಕ್ಕು ಬಾಧ್ಯತೆಗಳನ್ನು ಪರಿಗಣಿಸಬೇಕು.

* * *

**ಮಾನ್ಯ ಸಭಾಧ್ಯಕ್ಷರು:** ಮುಂದಿನ ತಿದ್ದುಪಡಿ ನಂ. ೨೩ ಡಾ॥ ಅಂಬೇಡ್ಕರರ ಹೆಸರಿನಲ್ಲಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅದನ್ನು ಮಂಡಿಸಲು ಇಚ್ಚೆಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ತರುವಾಯ ನಂ. ೨೪

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಂಡಿಸಲಾಗದು.

(ಈ ತಿದ್ದುಪಡಿಯನ್ನು ವಿಧಿ ೨೯೬ ತಿದ್ದುಪಡಿಯೊಂದಿಗೆ ಸ್ವೀಕರಿಸಲಾಗಿದೆ.)

## ವಿಧಿ ೨೯೯

**ಸರ್ದಾರ್ ಹುಕುಂಸಿಂಗ್:** ನನ್ನ ಪ್ರಶ್ನೆಗೆ ಇನ್ನೂ ಉತ್ತರ ದೊರಕಿಲ್ಲ. ಸಿಖ್ ಜನಾಂಗದ ನಾಲ್ಕು ವರ್ಗಗಳನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಲಾಗಿದೆಯೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸಹಜವಾಗಿ ಅವನ್ನು ಸೇರಿಸಲಾಗಿದೆ.

**ಶ್ರೀ ಕೆ. ಎಮ್. ಮುನ್ಷಿ:** ೩೦೦ಎ ಪಟ್ಟಿಯಲ್ಲಿ ಈ ಎಲ್ಲಾ ಪಟ್ಟಿಯನ್ನು ಸೇರಿಸುವ ಅಧಿಕಾರ ಅಧ್ಯಕ್ಷರಿಗೆ ಇದೆ. ಹೀಗಾಗಿ ಆ ಪಟ್ಟಿಯಲ್ಲಿ ಈ ವರ್ಗಗಳು ತಮ್ಮ ಸ್ಥಾನ ಪಡೆಯಲಿವೆ.

**ಸರ್ದಾರ್ ಹುಕುಂ ಸಿಂಗ್:** ರಾಷ್ಟ್ರಪತಿಯವರು ಹಾಗೆ ಸೇರ್ಪಡೆ ಮಾಡುವರೆಂದು ಯಾವ ಭರವಸೆ? ಈ ಭರವಸೆಯನ್ನು ನಂಬಿಯೇ ನಾನು ನಮ್ಮ ಅನೇಕ ರಕ್ಷಣೆಗಳನ್ನು ಈ ಸಂವಿಧಾನದಲ್ಲಿ ಪಡೆಯಬಹುದೆಂದೇ ನಂಬಿದ್ದೆವು. ಆದರೆ ಅದು ಹಾಗೆ ಆಗಿಲ್ಲ.

**ಶ್ರೀ ಕೆ.ಎಮ್.ಮುನ್ಷಿ:** ಅಧ್ಯಕ್ಷರಿಗೆ ಆ ಅಧಿಕಾರ ಇದೆ. ಅವರು ಖಂಡಿತವಾಗಿ ತಮ್ಮ ವಚನ ಪಾಲಿಸುವರು. ಈ ಬಗೆಯ ನಿರ್ಣಯ ಈಗಾಗಲೇ ಸಲಹಾ ಸಮಿತಿಯ ವರದಿಯಲ್ಲಿದ್ದು, ಸಿಖ್ ಸಮೂಹವನ್ನು ೨೯೬ ಪರಿಶಿಷ್ಟ ಪಂಗಡಗಳೊಂದಿಗೆ ಶಾಮೀಲು ಮಾಡಲಾಗುವುದು. ವಚನ ಪಾಲನೆಯ ಬಗೆಗೆ ಯಾವ ಸಂದೇಹ ಬೇಡ. ನಾನು ನಿಮಗೆ ವಚನ ನೀಡುವೆ. ನಾನು ಪುನಃ ಹೇಳುವೆ. ಸಿಖ್ ಜನಾಂಗದ ಪರಿಶಿಷ್ಟ ವರ್ಗ ಮತ್ತು ಜಾತಿಗಳನ್ನು ಹಿಂದುಳಿದ ವರ್ಗವೆಂದೇ ಪರಿಗಣಿಸಲಾಗುವುದು.

**(೨೯೯ನೆಯ ವಿಧಿಯನ್ನು ತಿದ್ದಿ ಸಂವಿಧಾನದಲ್ಲಿ ಸೇರಿಸಲಾಗಿದೆ)**

## ವಿಧಿ ೪೮

**ಶ್ರೀ ಹೆಚ್. ವಿ. ಕಾಮತ್:** ಆ ದಿನ ಅಂಬೇಡ್ಕರರು ನನ್ನೊಡನೆ ಮಾತನಾಡಿದಾಗ ಸ್ಪಷ್ಟ ಕಲ್ಪನೆಯಿಂದ ಇದ್ದರು. ಆದರೆ ಈ ದಿನ ಅವರು ರಾಷ್ಟ್ರಪತಿ ರಾಜ ಪ್ರಮುಖರಿಗೆ ಬಾಡಿಗೆ ರಹಿತ ವಸತಿ ಸೌಕರ್ಯ ನೀಡಬೇಕೆಂಬ ತಿದ್ದುಪಡಿಯನ್ನು ಮಂಡಿಸಿದ್ದಾರೆ. ಈ ದಿಶೆಯಲ್ಲಿ ನಾವು ತರ್ಕಬದ್ಧರಾಗಿ ವಿಚಾರ ಮಾಡಿ ಮಂತ್ರಿಗಳಿಗೂ ಬಾಡಿಗೆ ರಹಿತ ವಸತಿ ಸೌಕರ್ಯ ಕಲ್ಪಿಸಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಒಂದು ಮಾತನ್ನು ಹೇಳಬಯಸುವೆ. ಈ ತಿದ್ದುಪಡಿಯು, ನಾವು ರಾಜ ಪ್ರಮುಖರ ಬಗೆಗೆ ತಂದ ತಿದ್ದುಪಡಿಗೆ ಆನುಷಂಗಿಕವಾಗಿ ತಲೆದೋರಿದೆ. ಏಕೆಂದರೆ ನಾವು ಅಂದು ಈ ಬಗೆಗೆ ಚರ್ಚಿಸಿದಾಗ ರಾಜ ಪ್ರಮುಖರಿಗೆ ಬಾಡಿಗೆರಹಿತ ನಿವಾಸವನ್ನು ಒದಗಿಸಬೇಕೆಂದೇ ಖಚಿತಪಡಿಸಿದ್ದೆವು. ಆದರೆ ರಾಜ್ಯಪಾಲರ ಬಗೆಗೆ ಈ ವಿಷಯದಲ್ಲಿ ಅದೇಕೋ ಕೈಬಿಟ್ಟು ಹೋಯಿತು. ಆ ಒಂದು ಕೊರತೆಯನ್ನು ನಿವಾರಿಸಲೆಂದೇ ಈ ತಿದ್ದುಪಡಿ. ಇದರಿಂದಾಗಿ ರಾಷ್ಟ್ರಪತಿ ರಾಜ ಪ್ರಮುಖರು. ರಾಜ್ಯಪಾಲರೆಲ್ಲರನ್ನೂ ಒಂದೇ ವಿಧದಿಂದ ಕಾಣಲಾಗಿದೆ.

ಇನ್ನು ಮಂತ್ರಿಗಳ ಬಗೆಗೆ ಹೇಳಬಹುದಾದರೆ, ಅದು ಸಂಸತ್ತಿಗೆ ಸೇರಿದ ವಿಷಯ. ಮಂತ್ರಿಗಳು ರಾಜಕೀಯ ಅಧಿಕಾರಿಗಳು. ಸಂಸತ್ತು ಅವರಿಗೆ ಯಾವ ವಿಧವಾದ ಸೌಕರ್ಯಗಳನ್ನು ನೀಡುವ ಅಧಿಕಾರ ಹೊಂದಿದೆ ಎಂಬುದು ಸದನ ಸಮಿತಿಗೆ ಸೇರಿದ ಸಂಗತಿ. ಸದನ ಕಾಲಕಾಲಕ್ಕೆ ಈ ದಿಶೆಯಲ್ಲಿ ನಿರ್ಣಯಿಸಬಹುದು. ಅಲ್ಲದೆ ಮಂತ್ರಿವರ್ಯರು ಈ ಸದನದ ಆಭಾದಿತ ಸದಸ್ಯರು. ಹೀಗಾಗಿ ಅವರನ್ನು ಸದನದಿಂದ ಬೇರ್ಪಡಿಸುವುದು ಸೂಕ್ತವಲ್ಲ.

**ಮಾನ್ಯ ಸಭಾಧ್ಯಕ್ಷರು:** ನಾನು ವಿಷಯವನ್ನು ಮತಕ್ಕೆ ಹಾಕುವೆ.

ಇಲ್ಲಿ ಉದ್ಭವಿಸುವ ಪ್ರಶ್ನೆ ಎಂದರೆ

ವಿಧಿ ೪೮ (೩)ರಲ್ಲಿಯ ಪದಗಳಾದ 'ರಾಷ್ಟ್ರಪತಿಗಳಿಗೆ ಅಧಿಕೃತ ನಿವಾಸ' ಹೊಂದಿರಬೇಕು. ಬದಲಿಗೆ 'ರಾಷ್ಟ್ರಪತಿಗಳು ಅಧಿಕೃತ ಸರಕಾರಿ ನಿವಾಸವನ್ನು ಯಾವುದೇ ಬಾಡಿಗೆ ನೀಡದೆ ಹೊಂದಿರಬೇಕೆಂದು' ಮಾರ್ಪಡಿಸಬೇಕು.

(ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು)

**ಮಾನ್ಯ ಸಭಾಧ್ಯಕ್ಷರು:** ನಾನು ಟಿ. ಟಿ. ಕೃಷ್ಣಮಾಚಾರ್ಯರ ತಿದ್ದುಪಡಿಯನ್ನು ಕೈಗೆತ್ತಿಕೊಳ್ಳುವೆ. ಇಲ್ಲಿ ಪ್ರಶ್ನೆ ಎಂದರೆ

ವಿಧಿ ೪೮ (೩)ರಲ್ಲಿ ಹೇಳಿದ 'ರಾಷ್ಟ್ರಪತಿಗಳು ಅಧಿಕೃತ ನಿವಾಸವನ್ನು ಹೊಂದಿರಬೇಕು.' ಬದಲಾಗಿ 'ರಾಷ್ಟ್ರಪತಿಗಳು ಬಾಡಿಗೆ ನೀಡದೆ ಅಧಿಕೃತ ನಿವಾಸವನ್ನು ಉಪಯೋಗಿಸಬಹುದು' ಎಂದು ಮಾರ್ಪಡಿಸಬೇಕು.

**(ಈ ತಿದ್ದುಪಡಿಯನ್ನು ಒಪ್ಪಲಾಯಿತು)**

**ಶ್ರೀ ಟಿ.ಟಿ.ಕೃಷ್ಣಮಾಚಾರಿ:** ೩೬೦ನೆಯ ತಿದ್ದುಪಡಿಯನ್ನು ಮಂಡಿಸುವೆ.

ವಿಧಿ ೬೨(೫ಎ) ಯನ್ನು ಕೈ ಬಿಡಬೇಕು.

ಇದಕ್ಕೆ ಕಾರಣ ಎಂದರೆ, ನಾನು ಅಂದು ಡಾ॥ ಅಂಬೇಡ್ಕರರ ಪರವಾಗಿ ಮಂಡಿಸಿದ ತಿದ್ದುಪಡಿಯಲ್ಲಿ ನಾವು ಪರಿಚ್ಛೇದ IIIಎ ಮತ್ತು ರಾಜ್ಯಪಾಲರಿಗೆ ನೀಡುವ ಸಲಹೆಯನ್ನು ಮಂಡಿಸುವುದಿಲ್ಲ ಎಂದೇ ಸ್ಪಷ್ಟಪಡಿಸಿರುವೆ. ಈಗ ಪ್ರಶ್ನೆಯಲ್ಲಿರುವ (೫ಎ) ಅಂಶ ಎಂದರೆ IIIಎ ಯಲ್ಲಿ ಹೇಳಲಾದಂತೆ ಸಾಮಾನ್ಯವಾಗಿ ರಾಷ್ಟ್ರಪತಿಯವರು ತಮ್ಮ ಮಂತ್ರಿಮಂಡಲದ ಸಲಹೆಯನ್ನು ಅಂಗೀಕರಿಸಬೇಕು. ಅದರಂತೆಯೇ ಕಾರ್ಯ ನಿರ್ವಹಿಸುವುದು. ವಿಷಯ ಹೀಗಿರುವುದರಿಂದ ಈ ತಿದ್ದುಪಡಿ ಅನಾವಶ್ಯಕ. ಆದುದರಿಂದ ಅದನ್ನು ಕೈ ಬಿಡಬೇಕು.

**ಶ್ರೀ ಹೆಚ್. ವಿ. ಕಾಮತ್:** ಮಾನ್ಯರೆ, ಹಲವಾರು ಮಾಸಗಳ ಹಿಂದೆ ತಾವು ಒಂದು ಪ್ರಮುಖ ವಿಷಯ ಪ್ರಸ್ತಾವಿಸಿದ್ದೀರಿ. ಅದೇನೆಂದರೆ ರಾಷ್ಟ್ರಪತಿಯು ಯಾವಾಗಲೂ ಮಂತ್ರಿ ಮಂಡಲದ ಸಲಹೆಯನ್ನೇ ಅಂಗೀಕರಿಸಬೇಕೆ? ಈ ಬಗೆಗೆ ನಮ್ಮ ಸಂವಿಧಾನ ಮೌನವಾಗಿದೆ. ಏಕೆಂದರೆ ಅದು ಕೇವಲ ರಾಷ್ಟ್ರಪತಿಗಳಿಗೆ ಸಲಹೆ ಸಹಕಾರ ನೀಡಲೆಂದೇ ಮಂತ್ರಿಮಂಡಲವಿದೆ. ಆಗ ಡಾ॥ ಅಂಬೇಡ್ಕರರು ಈ ಒಂದು ವಿಷಯವನ್ನು ಸ್ಪಷ್ಟಗೊಳಿಸಲು ಸಂವಿಧಾನದಲ್ಲಿ ಏನಾದರೊಂದು ಉಪಾಯ ನೀಡಬೇಕೆಂದು ಹೇಳಿದ್ದರೆಂದೇ ನನ್ನ ನೆನಪು. ಇದು ಸರಿಯೋ ತಪ್ಪೋ, ಅಧ್ಯಕ್ಷರಾದ ತಾವು ತಿಳಿಸಬಹುದು. ಆದರೆ ಈ ವಿಷಯವನ್ನು ಅಂಬೇಡ್ಕರರು ಈಗ ಸ್ಪಷ್ಟಪಡಿಸುವುದು ಸೂಕ್ತ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನನಗೆ ಈ ವಿಷಯದ ಬಗೆಗೆ ಸೂಚನೆ ನೀಡಿದ್ದರೆ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡು ಬರುತ್ತಿದ್ದೆ. ಆದರೆ ಈಗ ನಾನು ಸಾಮಾನ್ಯವಾದ ಒಂದು ಹೇಳಿಕೆಯನ್ನು ನೀಡಬಲ್ಲೆ. ರಾಷ್ಟ್ರಪತಿಗಳು ಮಂತ್ರಿಮಂಡಲದ ಸೂಚನೆಯನ್ನು ಒಪ್ಪಿಸಿಕೊಳ್ಳಲೇಬೇಕೆ ಎಂಬ ಸಂಗತಿಯನ್ನು ಇತರ ವಿಷಯಗಳೊಂದಿಗೆ ಹೋಲಿಸಿದಾಗ ಅದು ಗೌಣವೆಂದೇ ನನ್ನ ಭಾವನೆ. ಈಗ ಈ ವಿಷಯದ ಬಗೆಗೆ ನನಗೆ ತಿಳಿದಿರಬಹುದಾದ ಸಾಮಾನ್ಯ ವಿವರಣೆ ನೀಡುತ್ತೇನೆ.

ನಾವು, ಸಂಸದೀಯ ಸಂವಿಧಾನ ಎಂದು ಕರೆಯುವ ಪ್ರತಿ ಒಂದು ಸಂವಿಧಾನವೂ ಮೂರು ವಿವಿಧ ಅಂಗಗಳಿಂದ ಕೂಡಿರುತ್ತದೆ. ಅವುಗಳೆಂದರೆ, ಆಡಳಿತಾಂಗ, ಶಾಸಕಾಂಗ ಹಾಗೂ ನ್ಯಾಯಾಂಗ. ನನಗೆ ತೋರಿದಂತೆ ಯಾವ ಸಂವಿಧಾನದಲ್ಲಿಯೇ ಆಗಲಿ, ಆಡಳಿತಾಂಗ ಶಾಸಕಾಂಗದ ಹೇಳಿಕೆಯಂತೆಯೇ

ನಡೆಯಲೇಬೇಕೆಂದಾಗಲೀ, ಅಥವಾ ನ್ಯಾಯಾಂಗದ ಹೇಳಿಕೆಯಂತೆಯೇ ನಡೆಯಬೇಕೆಂದು ತಿಳಿಸಿಲ್ಲ. ಹೀಗೆಂದಾಗ ಅದನ್ನು ಅಪಾರ್ಥ ಮಾಡಿಕೊಳ್ಳಬಾರದು. ಏಕೆಂದರೆ ಈ ಮೂರೂ ಅಂಗಗಳು ತಮ್ಮ ಅಧಿಕಾರ ಹಾಗೂ ಕರ್ತವ್ಯಗಳನ್ನು ಅರಿತುಕೊಂಡು ತಮ್ಮ ವ್ಯಾಪ್ತಿಯಲ್ಲಿಯೇ ಕಾರ್ಯಾಚರಣೆ ಮಾಡಬೇಕೆಂಬುದೇ ಸಂವಿಧಾನದ ಸಾರಾಸಾರ. ಹೀಗಾಗಿ ಸಾಮಾನ್ಯವಾಗಿ ಆಡಳಿತಾಂಗವು ಶಾಸಕಾಂಗದ ನಿರ್ಣಯಗಳಂತೆ ಕರ್ತವ್ಯ ಪರಿಪಾಲಿಸಬೇಕಾಗುತ್ತದೆ. ಇದಕ್ಕಾಗಿ ಸಂವಿಧಾನದಲ್ಲಿ ಬಂಧನಕಾರಿ ಸೂತ್ರವಿರಬೇಕಾಗಿಲ್ಲ. ಏಕೆಂದರೆ ಶಾಸಕಾಂಗದ ನಿರ್ಣಯಗಳನ್ನು ಜಾರಿಗೊಳಿಸಲೆಂದೇ ಆಡಳಿತಾಂಗವಿದೆ. ಇದರಂತೆಯೇ ಆಡಳಿತಾಂಗವು, ಸರ್ವೋಚ್ಚ ನ್ಯಾಯಾಲಯವು ನೀಡಿದ ನ್ಯಾಯ ನಿರ್ಣಯಗಳನ್ನೂ ಜಾರಿಗೊಳಿಸಬೇಕು. ಹೀಗಾಗಿ ನನ್ನ ಅಭಿಪ್ರಾಯದಲ್ಲಿ ಸಂವಿಧಾನದಲ್ಲಿ ಹೇಳಿದಂತೆ ಯಾವುದೇ ಒಂದು ಅಂಗಕ್ಕೆ ನೀಡಿರಬಹುದಾದ ಅಧಿಕಾರವನ್ನು ಮಾತ್ರ ಪಾಲಿಸಬೇಕು. ಏಕೆಂದರೆ ಸಂಸದೀಯ ವ್ಯವಸ್ಥೆಯಲ್ಲಿ ಸಂಸತ್ತು ಪರಮಾಧಿಕಾರವನ್ನು ಹೊಂದಿದ್ದರೂ, ಅದು ಸಂವಿಧಾನಕ್ಕೆ ಬದ್ಧವಾಗಿದೆ ಎಂಬುದನ್ನು ಯಾರೂ ಮರೆಯಬಾರದು.

ನನಗೆ ತಿಳಿದಂತೆ, ತಾವು ಈ ಪ್ರಶ್ನೆ ಕುರಿತಂತೆ ಸಭೆಯಲ್ಲಿ ಪ್ರಸ್ತಾಪಿಸಿದ್ದೀರಿ. ಈ ದಿಶೆಯಲ್ಲಿ ಇಂಗ್ಲೆಂಡಿನ ರಾಜ ಪೀಠದ ಎರಡು ತೀರ್ಪುಗಳಿದ್ದು ಅವನ್ನು ಎಂದಾದರೂ ಸಭೆಗೆ ಅರುಹಬೇಕೆಂದಿದ್ದೆ. ಆದರೆ ನನಗೆ ಮುನ್ಸೂಚನೆ ಇರದೇ ಹೋದುದರಿಂದ ಅವನ್ನು ನಾನು ಇಂದು ತಂದಿಲ್ಲ. ಆದರೆ ಸಭೆಯಲ್ಲಿ ಎತ್ತಲಾದ ಈ ಪ್ರಶ್ನೆಗೆ ಉತ್ತರ ಹೀಗಿದೆ.

ಯಾವುದೇ ಸಂವಿಧಾನಬದ್ಧ ಸರಕಾರವು ತನ್ನ ಅಧಿಕಾರವು ಸಂವಿಧಾನದಿಂದ ಪಡೆದಿರಬಹುದಾದ ವಿಷಯ ಎಂಬುದನ್ನು ಮರೆಯಲಾಗದು. ಅಧಿಕಾರದ ಬಗೆಗೆ ಒಂದು ಅಥವಾ ಇನ್ನೊಂದು ಅಂಶದಲ್ಲಿ ಭಿನ್ನಾಭಿಪ್ರಾಯ ಬಂದಾಗ ಅದನ್ನು ನಿವಾರಿಸಲೆಂದೇ ಸೂಕ್ತ ವ್ಯವಸ್ಥೆ ಸಂವಿಧಾನದಲ್ಲಿಯೇ ಅಡಕವಾಗಿದೆ. ಹೀಗಾಗಿ ಸಂವಿಧಾನದಲ್ಲಿ ವಿವರಿಸಿದ್ದಂತೆ ಆಡಳಿತಾಂಗದ ಪ್ರಮುಖರಾದ ರಾಷ್ಟ್ರಪತಿಯವರು, ಮಂತ್ರಿ ಮಂಡಲದ ಸಲಹೆಯಂತೆಯೇ ಕಾರ್ಯ ಮಾಡಬೇಕು. ಸಂಸತ್ತನ್ನು ಮೀರಿ ನಡೆಯುವ ಪ್ರಶ್ನೆಯೇ ಇಲ್ಲ. ಏಕೆಂದರೆ ಕಾನೂನುಗಳನ್ನು ರಚಿಸುವುದು ಸಂಸತ್ತು. ಹೀಗಾಗಿ ಆ ಕಾನೂನುಗಳಿಗೆ ತನ್ನದೇ ಆದ ಅರ್ಥವನ್ನು ಕಲ್ಪಿಸುವ ಅಧಿಕಾರ ಆಡಳಿತಾಂಗಕ್ಕೆ ಇಲ್ಲ. ಅದು ನ್ಯಾಯಾಂಗದ ವಿಷಯ. ವಿಷಯ ಹೀಗಿದ್ದಾಗ ರಾಷ್ಟ್ರಪತಿಗಳಿಗೆ ಹೆಚ್ಚಿನ ಅಧಿಕಾರವೇ ಇರಲಾರದು.

**ಶ್ರೀ ಹೆಚ್. ವಿ. ಕಾಮತ್:** ಯಾವುದಾದರೂ ಒಂದು ಸಂದರ್ಭದಲ್ಲಿ ರಾಷ್ಟ್ರಪತಿಯವರು ಮಂತ್ರಿಮಂಡಲದ ಸಲಹೆಯಂತೆ ನಡೆಯದೇ ಹೋದರೆ, ಅವರಿಗೆ ವಾಗ್ದಂಡನೆಯನ್ನೇ ವಿಧಿಸಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಸ್ಸಂಶಯವಾಗಿ. ಇದರ ಬಗ್ಗೆ ಅನುಮಾನವೇ ಇಲ್ಲ.

**ಶ್ರೀ ಕೆ.ಸಂತಾನಮ್** (ಮದ್ರಾಸ್ ಸಾಮಾನ್ಯ): ನಾನು ಡಾ॥ ಅಂಬೇಡ್ಕರರು ಹೇಳಿದ್ದನ್ನು ಸಮರ್ಥಿಸುವೆ. ಆದರೆ ಕೆಲವು ಪ್ರಸಂಗಗಳಲ್ಲಿ ರಾಷ್ಟ್ರಪತಿಯವರು ಮಂತ್ರಿಮಂಡಲದ ಸಲಹೆಯನ್ನು ಒಪ್ಪದೇ ಇರಬಹುದು. ಉದಾ. ಮಂತ್ರಿಮಂಡಲವು ಸಂಸತ್ತಿನ ವಿಸರ್ಜನೆಗೆ ಸಲಹೆ ಮಾಡಿದಾಗ, ರಾಷ್ಟ್ರಪತಿಯವರು ತಮ್ಮ ವಿವೇಚನೆಯೊಂದಿಗೆ ಬೇರೆ ಬಹುಮತ ಬೆಂಬಲ ಹೊಂದಿರಬಹುದಾದ ನಾಯಕನಿದ್ದಲ್ಲಿ, ಅವನಿಂದ ಮಂತ್ರಿಮಂಡಲಯನ್ನು ರಚಿಸಬಹುದು. ಹೀಗಾಗಿ ಕೆಲವು ವಿಶೇಷ ಸಂದರ್ಭಗಳಲ್ಲಿ ಮಂತ್ರಿಮಂಡಲದ ಸಲಹೆ ಬಂಧನಕಾರಿಯಾಗಲಾರದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಒಂದು ಕಾಲದಲ್ಲಿದ್ದ ವಿಷಯ. ಉತ್ತರ ರೂಪದಲ್ಲಿ

ಹೇಳಬಹುದಾದರೆ, ಮೆಕಾಲೆಯವರು ಬರೆದಿರುವ ಇಂಗ್ಲೆಂಡ್ ದೇಶದ ಚರಿತ್ರೆಯಲ್ಲಿ ಇಂಗ್ಲೆಂಡ್ ದೇಶದ ಅರಸನ ಅಧಿಕಾರಗಳನ್ನು ಪ್ರಸ್ತಾವಿಸಿದ್ದಾರೆ. ಆದರೆ ಈ ವಿಷಯಗಳು ಸಂಪ್ರದಾಯಗಳನ್ನೇ ಆಧರಿಸಿವೆ. ಕೆನಡಾ ದೇಶದಲ್ಲಿ ಈ ಬಗೆಗೆ ಪ್ರಸ್ತಾಪ ಬಂದಾಗ, ಅಂದರೆ ಮೆಕೆಂಜಿಕಿಂಗ್ ಅವರು ವಿಸರ್ಜನೆಗೆ ಶಿಫಾರಸ್ಸು ಮಾಡಿದಾಗ, ಅಂದಿನ ಗವರ್ನರ್ ಜನರಲ್‌ರು ಸಂದೇಹ ವ್ಯಕ್ತಪಡಿಸಿದರು. ಆಗ ಈ ವಿಷಯವನ್ನು ಇಂಗ್ಲೆಂಡಿಗೆ ತಿಳಿಸಲಾಯಿತು. ಬ್ರಿಟಿಷ್ ಸರಕಾರವು ತನ್ನ ಸಂಪ್ರದಾಯವನ್ನು ಎತ್ತಿ ಹಿಡಿದು, ಸಂಸತ್ತನ್ನು ವಿಸರ್ಜಿಸುವಂತೆ ಸೂಚನೆ ನೀಡಿತು.

**ಶ್ರೀ ಹೆಚ್. ವಿ. ಕಾಮತ್:** ಡಾ. ಅಂಬೇಡ್ಕರರ ಉದಾಹರಣೆಗಿಂತ, ಸಂವಿಧಾನದಲ್ಲಿಯೇ ಈ ವಿಷಯವನ್ನು ನಾವು ಏಕೆ ಸ್ಪಷ್ಟಪಡಿಸಬಾರದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾವು ಈ ವಿಷಯವನ್ನು ಹೀಗೆ ಚರ್ಚಿಸಲಾಗದು.

[**ಟಿ. ಟಿ. ಕೃಷ್ಣಮಾಚಾರಿಯವರು ಈ ಮುಂಚೆ ಸೂಚಿಸಿದ ನಂ. ೩೬೦ ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ವಿಧಿ ೬೨(೫ಎ)ಕ್ಕೆ ಬಿಡಲಾಯಿತು.**]

## ವಿಧಿ ೩೦೩

**ಶ್ರೀ ಕೆ. ಸಂತಾನಮ್:** ಯಾವುದೇ ರಾಜ್ಯವು ಒಂದು ಪ್ರಾಂತ್ಯದಲ್ಲಿ ವಿಲೀನಗೊಂಡಾಗ ಆ ರಾಜ್ಯದ ಅರಸು ಮುಂದುವರಿಯಬಹುದೇ ಅಥವಾ ಅವನ ಉತ್ತರಾಧಿಕಾರಿ ಆಡಳಿತಕ್ಕೆ ಅರ್ಹನೇ ಎಂದು ತಿಳಿಯಬಯಸುವೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಇದೊಂದು ಜಟಿಲ ಸಮಸ್ಯೆ. ರಾಜ್ಯವನ್ನು ಕಳೆದುಕೊಂಡಿರಬಹುದಾದ ಅರಸು ವಿಧಿಯಂತೆ ಅರಸನೇ ಹಾಗೂ ವಿಧಿ ೨೬೭ಎ ಅವನನ್ನು ಗೌರವಧನದ ದೃಷ್ಟಿಯಿಂದ ಮಾಜಿ ಅರಸನೆಂದೇ ಪರಿಗಣಿಸುತ್ತದೆ.

**ಶ್ರೀ ಕೆ. ಸಂತಾನಮ್:** ಹಾಗಾದರೆ ಅವನ ಮಗನು ಅರಸನಾಗಿ ಮುಂದುವರಿಯಬಹುದೇ?

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಮುಂದುವರಿಯಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೇಳಬಹುದಾದರೆ ಈ ವಿಧವಾದ ಪ್ರಭು ಅಥವಾ ಅರಸುಗಳನ್ನು ಕೇವಲ ಗೌರವಧನಕ್ಕೆ ಮಾತ್ರ ಗುರುತಿಸಿದೆಯೆ ಹೊರತು ಬೇರೆ ವಿಷಯಗಳಿಗಲ್ಲ. ಹೀಗಾಗಿ ಬೇರೆ ವಿಷಯಗಳಿಗೆ ಇದು ಸಂಬಂಧಿಸಿಲ್ಲ.

**ಶ್ರೀ ಕೆ. ಸಂತಾನಮ್:** ನನ್ನ ಉದ್ದೇಶ ಎಂದರೆ ಗೌರವ ಹಣಕ್ಕೆ ವಾರಸುದಾರ ಒಬ್ಬನೇ ಇರಬೇಕೇ ಹೊರತು ಇಬ್ಬರಲ್ಲ.

**ಮಾನ್ಯ ಸಭಾಧ್ಯಕ್ಷರು:** ಯಾವ ವ್ಯಕ್ತಿಯನ್ನು ಪ್ರಭು ಎಂದು ಗುರುತಿಸಲಾಗುವುದೋ ಅವರೇ ಗೌರವಧನಕ್ಕೆ ಬಾಧ್ಯರು. ಅದು ಈಗ ನಿಮಗೆ ಮನವರಿಕೆಯಾಗಿರಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಯಾರನ್ನು ಪ್ರಭು ಎಂದು ಗುರುತಿಸಬೇಕೋ ಅದನ್ನು ಕುರಿತು ಅವಕಾಶಗಳಿವೆ. ನನಗೆ ತಿಳಿದಂತೆ ಅಧ್ಯಕ್ಷರು ಒಬ್ಬರಿಗಿಂತ ಹೆಚ್ಚಿನ ವ್ಯಕ್ತಿಗಳನ್ನು ಪ್ರಭು ಎಂದು ಪರಿಗಣಿಸಲಾರರು. ಆದುದರಿಂದಲೇ ಈ ಅಧಿಕಾರವನ್ನು ರಾಷ್ಟ್ರಪತಿಗೇ ಬಿಡಲಾಗಿದೆ.

**ಶ್ರೀ ಕೆ. ಸಂತಾನಮ್:** ಅವರನ್ನು ಪ್ರಭು ಅಥವಾ ವಾರಸುದಾರರೆಂದೇ ಕರೆಯಬಹುದೆ?

**ಮಾನ್ಯ ಸಭಾಧ್ಯಕ್ಷರು:** ಸಂತಾನಮ್ ಅವರೇ, ಈ ದಿಶೆಯಲ್ಲಿ ಹೆಚ್ಚಿನ ಚರ್ಚೆ ಬೇಕಾಗಿಲ್ಲ. ಎಲ್ಲವೂ

ಸರಿಯಾಗಿಯೇ ಇದೆ. ಆದುದರಿಂದ ಇದನ್ನು ಮತದಾನಕ್ಕೆ ಹಾಕುವೆ. (ಶ್ರೀ ಟಿ.ಟಿ.ಕೃಷ್ಣಮಾಚಾರಿಯವರ ೩೦೩(೧) ಉಪ ಕಲಮಿನ ಬದಲು ತಿದ್ದುಪಡಿಯನ್ನು ಅಂಗೀಕರಿಸಲಾಯಿತು)

**ಮಾನ್ಯ ಸಭಾಧ್ಯಕ್ಷರು:** ಇನ್ನು ಪರಿಚ್ಛೇದಗಳನ್ನು ಕೈಗೆತ್ತಿಕೊಳ್ಳುವ.

## ಮೊದಲನೆಯ ಪರಿಶಿಷ್ಟ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುವೆ. ಈ ಕೆಳಗಿನದನ್ನು ಮೊದಲನೆಯ ಪರಿಶಿಷ್ಟದ ಬದಲು ಸೇರಿಸಬೇಕು.

## ಮೊದಲನೆಯ ಪರಿಶಿಷ್ಟ

### ವಿಧಿಗಳು ೧ – ೪
### ರಾಜ್ಯಗಳು ಮತ್ತು ಭಾರತದ ಪ್ರದೇಶಗಳು
### ಭಾಗ ೧

| ರಾಜ್ಯಗಳ ಹೆಸರು | ಅನುಗುಣ ಪ್ರಾಂತ್ಯಗಳ ಹೆಸರು |
|---|---|
| ೧. ಅಸ್ಸಾಂ | ಅಸ್ಸಾಂ |
| ೨. ಬಂಗಾಲ | ಪಶ್ಚಿಮ ಬಂಗಾಲ |
| ೩. ಬಿಹಾರ | ಬಿಹಾರ |
| ೪. ಬೊಂಬಾಯಿ | ಬೊಂಬಾಯಿ |
| ೫. ಕೋಸಲ–ವಿದರ್ಭ | ಮಧ್ಯಪ್ರಾಂತ್ಯ ಮತ್ತು ಬಿಹಾರ್ |
| ೬. ಮದ್ರಾಸ್ | ಮದ್ರಾಸ್ |
| ೭. ಒರಿಸ್ಸಾ | ಒರಿಸ್ಸಾ |
| ೮. ಪಂಜಾಬ್ | ಪೂರ್ವ ಪಂಜಾಬ್ |
| ೯. ಸಂಯುಕ್ತ ಪ್ರಾಂತ್ಯಗಳು | ಸಂಯುಕ್ತ ಪ್ರಾಂತ್ಯಗಳು |

## ರಾಜ್ಯಗಳ ಪ್ರದೇಶಗಳು

ಸಂವಿಧಾನ ಜಾರಿಯ ಪೂರ್ವದಲ್ಲಿದ್ದ ಖಾಸಿ ರಾಜ್ಯ ಅಸ್ಸಾಮಿನ ಪಂಗಡಕ್ಕೆ ಸೇರಿದ ಪ್ರದೇಶ ಎಲ್ಲಾ ಪ್ರದೇಶಗಳೂ ಅಸ್ಸಾಂ ರಾಜ್ಯದಲ್ಲಿರುತ್ತವೆ.

ಬಂಗಾಲ ರಾಜ್ಯದ ಪ್ರದೇಶಗಳೆಂದರೆ, ಸಂವಿಧಾನ ಜಾರಿಗೆ ಬರುವ ಮುನ್ನದ ಪಶ್ಚಿಮ ಬಂಗಾಲದ ಎಲ್ಲಾ ಪ್ರದೇಶಗಳಿಂದ ಕೂಡಿದೆ.

**ಶ್ರೀ ಬಿ. ದಾಸ್:** (ಒರಿಸ್ಸಾ : ಸಾಮಾನ್ಯ) ನಮಗೆ ಒರಿಸ್ಸಾದ ಬದಲಾಗಿ ಉತ್ಕಲ್ ಹೆಸರು ಬೇಕಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನೀವು ಒಂದು ತಿದ್ದುಪಡಿಯನ್ನು ಮಂಡಿಸಿ.

ಬೊಂಬಾಯಿ ರಾಜ್ಯವು ೧೯೩೫ನೆ ಕಾಯ್ದೆ ೨೯೦ಎ ಆಜ್ಞೆಯಂತೆ ಸಂವಿಧಾನ ಜಾರಿಯ ಪೂರ್ವದಲ್ಲಿ ಎಲ್ಲಾ ಪ್ರದೇಶಗಳೂ ಹಾಗೂ ೧೯೪೭ರ ಕಾನೂನಿನಂತೆ ಆ ಪ್ರಾಂತ್ಯದ ಎಲ್ಲಾ ಪ್ರದೇಶಗಳಿಂದ ಕೂಡಿದೆ.

ಪ್ರತಿಯೊಂದು ರಾಜ್ಯದ ಪ್ರದೇಶವೂ ಸಂವಿಧಾನ ಜಾರಿ ಪೂರ್ವದಲ್ಲಿದ್ದ ಹಾಗೂ ೧೯೩೫ ಕಾನೂನಿನ ೨೯೦ಎ ನಂತೆ ಪ್ರದೇಶಗಳನ್ನೊಳಗೊಂಡಿರುತ್ತದೆ.

## ಭಾಗ ೨
## ರಾಜ್ಯಗಳ ಹೆಸರು

೧. ಅಜಮೀರ್, ೨. ಭೋಪಾಲ್ ೩. ಭಿಲಾಸ್‌ಪುರ, ೪. ಕೊಡಗು, ೫. ಕೂಚ್‌ಬಿಹಾರ್, ೬. ದೆಹಲಿ, ೭. ಹಿಮಾಚಲ ಪ್ರದೇಶ್, ೮. ಕಚ್, ೯.ಮಣಿಪುರ, ೧೦. ರಾಮಪುರ, ೧೧. ತ್ರಿಪುರ

## ಪ್ರಾಂತ್ಯಗಳ ಪ್ರದೇಶಗಳು

ಸಂವಿಧಾನ ಜಾರಿ ಪೂರ್ವದಲ್ಲಿದ್ದ ಮುಖ್ಯ ಆಯುಕ್ತರ ಪ್ರಾಂತ್ಯಗಳಾದ ಅಜಮೀರ್ ಮೇವಾರ ಮತ್ತು ಪಂತ್ ಪಿಪ್ಲೊಡಾ ಪ್ರದೇಶಗಳಿಂದ ಅಜಮೀರ್ ರಾಜ್ಯದ ಪ್ರದೇಶಗಳಾಗಿವೆ. ದೆಹಲಿ, ಕೊಡಗು ಪ್ರದೇಶಗಳೂ ಕೂಡಾ ಆಯಾ ಪ್ರಾಂತ್ಯ ಆಯುಕ್ತರ ಪ್ರದೇಶಗಳಿಂದ ಕೂಡಿದೆ. ಪ್ರತಿಯೊಂದು ಪ್ರಾಂತ್ಯದ ಪ್ರದೇಶವೂ ೧೯೩೫ನೆ ಕಾನೂನು ೨೯೦ಎ ದಲ್ಲಿಯ ಆದೇಶದಂತೆ, ಸಂವಿಧಾನ ಜಾರಿ ಪೂರ್ವದಲ್ಲಿಯ ಪ್ರದೇಶಗಳನ್ನೊಳಗೊಂಡಿರುತ್ತವೆ.

## ಭಾಗ ೩
## ರಾಜ್ಯಗಳ ಹೆಸರು

೧. ಹೈದರಾಬಾದ್, ೨. ಜಮ್ಮು-ಕಾಶ್ಮೀರ, ೩. ಮಧ್ಯಭಾರತ, ೪. ಮೈಸೂರು ೫. ಪಾಟಿಯಾಲ ಮತ್ತು ಪೂರ್ವ ಪಂಜಾಬ್ ಪ್ರಾಂತ್ಯಗಳ ಒಕ್ಕೂಟ ೬. ರಾಜಸ್ಥಾನ ೭. ಸೌರಾಷ್ಟ್ರ, ೮. ತಿರುವಾಂಕೂರ್‌ನ ಕೊಚ್ಚಿನ, ೯. ವಿಂಧ್ಯಪ್ರದೇಶ

## ರಾಜ್ಯದ ಪ್ರದೇಶಗಳು

ಸಂವಿಧಾನ ಜಾರಿ ಪೂರ್ವದಲ್ಲಿಯ ಹಾಗೂ ೧೯೪೭ನೆಯ ಕಾಯ್ದೆಯನ್ವಯ ಜಾರಿಯಲ್ಲಿ ಬಂದ ಪ್ರದೇಶಗಳಿಂದ ರಾಜಸ್ಥಾನ ರಾಜ್ಯದ ಪ್ರದೇಶಗಳು ಕೂಡಿವೆ.

ಸೌರಾಷ್ಟ್ರ ರಾಜ್ಯದ ಪ್ರದೇಶಗಳು, ಸಂವಿಧಾನ ಜಾರಿ ಪೂರ್ವದ ಸಂಯುಕ್ತ ಕಾಠೆವಾಡ ಮತ್ತು ೧೯೪೭ನೆಯ ಕಾನೂನಿನಲ್ಲಿ ತಿಳಿಸಿದ ಪ್ರದೇಶಗಳಿಂದ ಕೂಡಿದೆ. ಮಿಕ್ಕ ಎಲ್ಲಾ ಭಾರತೀಯ ರಾಜ್ಯಗಳ ಪ್ರದೇಶಗಳು ಆಯಾ ರಾಜ್ಯಕ್ಕೆ ಸೇರಿದ ಪ್ರದೇಶಗಳಿಂದ ಕೂಡಿದೆ.

## ಭಾಗ ೪
## ಅಂಡಮಾನ್ ನಿಕೋಬಾರ್

ಮಾನ್ಯರೆ, ನಾನು ಮಂಡಿಸಿದ ತಿದ್ದುಪಡಿಯ ಆವಶ್ಯಕತೆ ಇಲ್ಲ.

**ಶ್ರೀ ಜೈ ನಾರಾಯಣ ವ್ಯಾಸ:** ಸಿರೋಹಿ ಪ್ರಾಂತ್ಯವನ್ನು ಎಲ್ಲಿ ಸೇರ್ಪಡೆ ಮಾಡಿದೆ ಎಂಬುದನ್ನು ತಿಳಿಯಬಯಸುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನಗೆ ತಿಳಿದಂತೆ ಸಿರೋಹಿಯನ್ನು ೧೯೪೭ ನೆಯ ಕಾನೂನಿನಂತೆ ಅಂಶತಃ ಬೊಬಾಯಿ ಹಾಗೂ ರಾಜಸ್ಥಾನದ ಅಧಿಕಾರ ವ್ಯಾಪ್ತಿಯಲ್ಲಿದೆ. ಹೀಗಾಗಿ ಅದನ್ನು ಬೇರೆಯಾಗಿ ಹೇಳಿಲ್ಲ.

* * *

## ವಿಧಿ ೨೬೪ಎ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬೊಂಬಾಯಿ ಸಾಮಾನ್ಯ): ಮಾನ್ಯರೆ ನಂ. ೪೨೫ ತಿದ್ದುಪಡಿಯನ್ನು ಮಂಡಿಸುವೆ.

೨೬೪ಎ ಬದಲು ತಿದ್ದುಪಡಿ ಸಂಖ್ಯೆ ೩೦೭– XIII ಪಟ್ಟಿಯ (ಎರಡನೆ ವಾರ) ಈ ಕೆಳಕಂಡಂತೆ ಸೇರಿಸಬೇಕು.

೨೬೪ಎ (೧)ಯಾವುದೇ ರಾಜ್ಯವು ಸಾಮಗ್ರಿಗಳ ಮಾರಾಟ ಅಥವಾ ಖರೀದಿಯ ಮೇಲೆ ಕರ ವಿಧಿಸುವಂತಿಲ್ಲ.

(ಎ) ರಾಜ್ಯದ ಹೊರಗೆ ಅಥವಾ

(ಬಿ) ಭಾರತ ಪ್ರದೇಶದಿಂದ ರಫ್ತು ಅಥವಾ ಆಮದಿಗೆ ಸೇರಿದಂತೆ

**ವಿವರಣೆ:** ಒಂದನೆಯ ಕಲಮಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಖರೀದಿ ಮಾರಾಟಕ್ಕೆ ನೇರವಾಗಿ ಸಂಬಂಧಿಸಿದಂತೆ, ರಾಜ್ಯದಲ್ಲಿಯ ಗ್ರಾಹಕರಿಗೆ ಸಂಬಂಧಿಸಿದ, ಸಾಮಾನ್ಯ ಕಾನೂನಿನ ಅಡಿಯಲ್ಲಿ ಸಂಬಂಧಿಸಿದ ಮಾರಾಟ ಮತ್ತು ಖರೀದಿ ಕುರಿತಂತೆ ಬೇರೆ ರಾಜ್ಯದೊಂದಿಗೆ ನಡೆದ ಖರೀದಿ ಮಾರಾಟ.

(೨) ಸಂಸತ್ತು ನಿರ್ಮಿಸಿದ ಕಾನೂನಿನ ಹೊರತಾಗಿ, ರಾಜ್ಯಗಳು ಈ ದಿಶೆಯಲ್ಲಿ ಯಾವ ವಿಧವಾದ ಅಂತರ ರಾಜ್ಯಗಳಲ್ಲಿಯ ಮಾರಾಟ ಖರೀದಿಯ ಬಗೆಗೆ ಕಾನೂನಿನಂತೆ ಕರ ವಿಧಿಸುವಂತಿಲ್ಲ.

ರಾಷ್ಟ್ರಪತಿಗಳ ಆದೇಶದಂತೆ, ಹಾಗೂ ಸಂವಿಧಾನ ಜಾರಿ ಪೂರ್ವದಲ್ಲಿ ರಾಜ್ಯವು ವಿಧಿಸಿರಬಹುದಾದ ಮಾರಾಟ ಖರೀದಿಯ ಕರಗಳು ೩೧ ಮಾರ್ಚ್ ೧೯೫೧ರ ಅವಧಿಯವರೆಗೆ ಜಾರಿಯಲ್ಲಿರುತ್ತವೆ.

(೩) ರಾಜ್ಯಗಳಿಂದ ರಚಿಸಿದ ಕಾನೂನುಗಳಂತೆ ಖರೀದಿ ಮಾರಾಟ ಕರಗಳು ಕಾಯ್ದೆಗಳು ಸಂಸತ್ತು ಮಂಜೂರಿಯಿಂದ ಮಾತ್ರ ಜಾರಿಯಲ್ಲಿರಬಹುದು.

ಈ ವಿಷಯ ರಾಷ್ಟ್ರಪತಿಯವರ ವಿವೇಚನೆ ಹಾಗೂ ಒಪ್ಪಿಗೆಗೆ ಸೇರಿದೆ.

ಮಾನ್ಯರೇ, ಭಾರತದ ವ್ಯಾಪಾರ ಹಾಗೂ ವಾಣಿಜ್ಯ ವಲಯಕ್ಕೆ ಮಾರಾಟ ತೆರಿಗೆಯಿಂದ ಅಪಾರ ತೊಂದರೆ ಎಂಬ ಸಂಗತಿ ಎಲ್ಲರಿಗೂ ತಿಳಿದ ವಿಷಯವೇ. ವಿವಿಧ ರಾಜ್ಯಗಳಲ್ಲಿಯ ವಿವಿಧ ಮಾರಾಟ ತೆರಿಗೆಯಿಂದಾಗಿ ಅಂತರ ರಾಜ್ಯ ವ್ಯಾಪಾರಕ್ಕೆ ಅಪಾರ ಧಕ್ಕೆ ಉಂಟಾಗಿದೆ. ಈ ವಿಧವಾದ ಅಸಂಬದ್ಧತೆ ಇರಬಾರದು. ಆದರೆ ಪ್ರಾಂತ್ಯಗಳ ಮಾರಾಟ ತೆರಿಗೆಗೆ ಸಂಬಂಧಿಸಿದಂತೆ ಒಂದು ನಿಯಮಾವಳಿಯಿರಬೇಕು. ಆದುದರಿಂದ ಈ ದಿಶೆಯಲ್ಲಿ ಮಾರಾಟ ತೆರಿಗೆಗೆ ಸೂಕ್ತ ನಿಬಂಧನೆಗಳನ್ನು ಹಾಗೂ ಮಾರಾಟ ತೆರಿಗೆ ಹೇಳುವ ಅಧಿಕಾರದ ಬಗೆಗೆ ಏನಾದರೂ ಸೂಕ್ತ ವಿಧಾನವಿರಬೇಕು.

ಈ ದಿಶೆಯಲ್ಲಿ ಮೊದಲನೆಯ ವಿಷಯವೆಂದರೆ ೨೬೪ಎ ವಿಧಿಯ ಅನೇಕ ನಿಬಂಧನೆಗಳು. ಸಂವಿಧಾನದಲ್ಲಿ ಹೇಳಿರಬಹುದಾದ ನಿಬಂಧನೆಗಳ ಪುನರುಕ್ತಿಗಳೇ ಆಗಿವೆ. ಉದಾ. ೨೬೪ಎ ಯ(೧) ನಿಬಂಧನೆ ನನ್ನಿಂದ ಸೂಚಿತ ಉಪನಿಬಂಧನೆ (ಬಿ)ಯ ಪುನರುಕ್ತಿ. ಶಾಸನೀಯ ಪಟ್ಟಿಯ ಆಮದು

ಕರಗಳ ಮತ್ತು ರಫ್ತು ಕರಗಳು ಸಂಪೂರ್ಣವಾಗಿ ಕೇಂದ್ರಕ್ಕೆ ಸೇರಿದವು. ಆದುದರಿಂದ ಉಪನಿಬಂಧನೆಯ (೧) (ಬಿ) ಯ ಬಗೆಗೆ ಹೇಳಬಹುದಾದರೆ, ಪ್ರಾಂತೀಯ ಕರಾಕರಣೆಯ ಮೇಲೆ ಗದಾಪ್ರಹಾರ ಮಾಡಿದಂತೆ.

ಅದರಂತೆಯೇ ಉಪನಿಬಂಧನೆ (೨) ಈಚೆಗೆ ಅನುಮೋದಿಸಿರುವ ಭಾಗ Xಎ ರ ಪುನರುಕ್ತಿ. ಆದುದರಿಂದ ಉಪನಿಬಂಧನೆ (೨)ಯಲ್ಲಿ ಯಾವ ನೂತನ ವಿಧಾನವಿಲ್ಲ. ಏಕೆಂದರೆ ಅವರಲ್ಲಿ ಹೇಳಿದ ಸಂಗತಿ ಎಂದರೆ ಮಾರಾಟ ತೆರಿಗೆ ವಿಧಿಸಿದಲ್ಲಿ ಅದು ಭಾಗ Xಎ ಗೆ ವಿರೋಧವಾಗಿ ಕೂಡದು.

ಉಪನಿಬಂಧನೆ (೩) ಕುರಿತಂತೆ ಭಾರತಾದ್ಯಂತ ಹಲವಾರು ಜೀವನಾವಶ್ಯಕ ವಸ್ತುಗಳಿದ್ದು ಅವುಗಳ ಮೇಲೆ ಮಾರಾಟಕರವನ್ನು ಯಾವ ಪ್ರಾಂತ್ಯವೂ ಹೇರಬಾರದು. ಆದ್ದರಿಂದ ಈ ವಿಧವಾದ ಜೀವನಾವಶ್ಯಕ ವಸ್ತುವಿನ ಮೇಲೆ ಕರ ಹೇರಬಹುದಾದ ಸಂಗತಿಯು ರಾಷ್ಟ್ರಪತಿಗಳ ಗಮನಕ್ಕೆ ತರಲೇ ಬೇಕು. ಏಕೆಂದರೆ ಯಾವುದೇ ಪ್ರಾಂತ್ಯದಿಂದ ಆಗಬಹುದಾದ ತೊಂದರೆಯನ್ನು ನಿವಾರಿಸಬಹುದು.

ಉಪನಿಬಂಧನೆ (೨) ಕೂಡಾ ಪ್ರಮುಖವಾದದ್ದು. ಈ ದಿಶೆಯಲ್ಲಿ ಸದನದ ಗಮನ ಸೆಳೆಯಬೇಕು. ಅದೇನೆಂದರೆ ೨೬೪ಎ ಯಂತೆ ಹಲವು ಪ್ರಾಂತ್ಯಗಳು ಹೇರಿರುವ ಮಾರಾಟಕರ ಅನುಗುಣವಾಗಿಲ್ಲ. ಅವು ಈ ವಿಧಿಗೆ ಮೀರಿದವಾಗಿವೆ. ಆದುದರಿಂದ ಸಂವಿಧಾನದಿಂದ ಕಾನೂನಿನ ಆಡಳಿತ ಜಾರಿಗೆ ಬಂದ ನಂತರ ಈ ವಿಧವಾದ ಅಸಂವಿಧಾನಾತ್ಮಕ ಕಾನೂನುಗಳು ರದ್ದಾಗಬಲ್ಲವು. ಹೀಗಾಗಿ ಸಂವಿಧಾನ ಜಾರಿಗೆ ಬಂದ ದಿನದಿಂದ, ಈ ಬಗೆಯ ಕಾನೂನುಗಳನ್ನು ಹೊಂದಿರುವ ಪ್ರಾಂತ್ಯಗಳಿಗೆ ಹಣಕಾಸಿನ ತೊಂದರೆ ಉದ್ಭವಿಸಬಹುದು. ಏಕೆಂದರೆ ಆ ಪ್ರಾಂತ್ಯಗಳು ತಮ್ಮ ಆದಾಯಕ್ಕಾಗಿ ಈ ವಿಧವಾದ ಕಾನೂನುಗಳನ್ನೇ ಅವಲಂಬಿಸಿವೆ. ಹೀಗಾಗಿ ಈಗಲೇ ವಿವರಿಸಿದಂತೆ ಈ ಬಗೆಯ ಕಾನೂನುಗಳು ಮಾರಾಟಕರಕ್ಕೆ ಸಂಬಂಧಿಸಿದಂತೆ ೨೬೪ಎ ಅಡಿಯಲ್ಲಿ ಮಾರ್ಚ್ ೩೧, ೧೯೫೧ರ ವರೆಗೆ ಜಾರಿಯಲ್ಲಿರುತ್ತವೆ. ನಾವು ಸಂಬಂಧಿಸಿದ ಪ್ರಾಂತ್ಯಗಳಿಗೆ ತಮ್ಮ ಪರಿಸ್ಥಿತಿಯನ್ನು ಸರಿಪಡಿಸಿಕೊಳ್ಳಲು ಹಲವು ತಿಂಗಳ ಅವಕಾಶವನ್ನು ನೀಡಿದ್ದೇವೆ.

ಆದುದರಿಂದ ಈ ದಿಶೆಯಲ್ಲಿ ಹೆಚ್ಚಿನ ವಿವರಣೆ ಅಗತ್ಯವಿಲ್ಲ ಎಂದೇ ಭಾವಿಸಿರುವೆ. ಯಾರಾದರೂ ಇದರ ಬಗೆಗೆ ಕೇಳುವುದಿದ್ದರೆ ನಾನು ಅದಕ್ಕೆ ಉತ್ತರಿಸಲು ಸಿದ್ಧ.

* * *

**ಶ್ರೀ ಮಹಾವೀರ್ ತ್ಯಾಗಿ:** ಈಗ ಜಾರಿಯಲ್ಲಿರುವ ಮಾರಾಟ ಕರದಲ್ಲಿ ಅನೇಕ ಲೋಪದೋಷಗಳಿವೆ. ಈಗ ದೆಹಲಿಯಲ್ಲಿ ಮಾರಾಟ ಕರವಿಲ್ಲ. ಆದರೆ ಸಂಯುಕ್ತ ಪ್ರಾಂತ್ಯದಲ್ಲಿ ಮೋಟಾರು ವಾಹನಗಳ ರೇಡಿಯೋ ಬೈಸಿಕಲ್ ಮುಂತಾದವುಗಳ ಮೇಲೆ ಮಾರಾಟ ಕರವಿದೆ. ಹೀಗಾಗಿ ಯಾರಾದರೂ ಮೀರತ್ತಿನಲ್ಲಿ ಈ ವಸ್ತುಗಳನ್ನು ಕೊಳ್ಳದೇ ದೆಹಲಿಗೆ ಬಂದು ಕೊಳ್ಳುತ್ತಾರೆ. ಇದರಿಂದಾಗಿ ಸ್ಥಳೀಯ ವ್ಯಾಪಾರಿಗಳು ನಷ್ಟಕ್ಕೆ ಗುರಿಯಾಗುತಾರೆ. ಡಾ. ಅಂಬೇಡ್ಕರರು ನನಗೆ ಸಂಜ್ಞೆ ಮಾಡುತ್ತಿದ್ದಾರೆ. ಅವರು ಪ್ರಭಾವ ಬೀರುವಂತೆ ತೋರುತ್ತದೆ. ಇದು ಸೂಕ್ತವಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ತಮ್ಮ ವಿಷಯ ಬಲ್ಲೆ.

**ಶ್ರೀ ಮಹಾವೀರ್ ತ್ಯಾಗಿ:** ಹಾಗಾದರೆ ನಾನು ಹೇಳಿದ ಸಂಗತಿ ಅರಿತಿರುವಿರಾ? ಅದನ್ನು ಹೊಗಳಬಲ್ಲಿರಾ? ನನ್ನ ದೃಷ್ಟಿಕೋನಕ್ಕೆ ಆಸ್ಪದ ಒದಗಿಸುವಿರಾ? ತಮ್ಮ ಹಿಂದೆ ಜನ ಪ್ರತಿನಿಧಿಗಳಿದ್ದಾರೆ. ಡಾ. ಅಂಬೇಡ್ಕರ್, ನಾನು ಭರವಸೆ ನೀಡಬಲ್ಲೆ. ನೀವು ನ್ಯಾಯವನ್ನು ಗುರುತಿಸಿದ್ದೇ ಆದಲ್ಲಿ ನೀವು ಒಂದು ದಿನ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಬಲ್ಲಿರಿ. ಆದರೆ ನಾಗರಿಕರಿಗೆ ನ್ಯಾಯ .....

ನೀಡಬೇಕೆಂಬುದನ್ನು ಗಮನಿಸಿ. ಈ ವಿಧವಾಗಿ ಇಂದು ಮಾರಾಟ ಕರವನ್ನು ಹೇರಲಾಗಿದೆ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ಸದನದ ಮುಂದೆ ಮೂರು ತಿದ್ದುಪಡಿಗಳಿವೆ. ಮೊದಲನೆಯದು ನನ್ನ ಮಿತ್ರರಾದ ಪ್ರೊ.ಶಿಬ್ಬನ್‌ಲಾಲ್ ಸಕ್ಸೇನಾ ಅವರದು. ಅವರ ತಿದ್ದುಪಡಿಯು ಸೂಚಿಸುವಂತೆ, ಮಾರಾಟಕರ ವಿಧಿಸುವ ಅಧಿಕಾರ ಸಂಪೂರ್ಣವಾಗಿ ಸಂಸತ್ತಿಗೆ ಇರಬೇಕು. ಆದರೆ ಈ ಸೂಚನೆಗೆ ಮೂಲಭೂತವಾಗಿ ಎರಡು ವಿರೋಧಗಳಿವೆ. ಮೊದಲನೆಯದೆಂದರೆ ಈ ವಿಷಯದ ಬಗೆಗೆ ಪ್ರಾಂತ್ಯಗಳ ಪ್ರಧಾನಿಗಳ ಹಾಗೂ ಸರಕಾರದ ಹಣಕಾಸಿನ ವಿಭಾಗದ ಮಧ್ಯೆ ಸಾಕಷ್ಟು ಪ್ರಚಾರ ನಡೆದಿದೆ. ಅದರಂತೆ ಮಾರಾಟಕರದಲ್ಲಿರಬಹುದಾದ ತೊಂದರೆಗಳನ್ನು ನಿವಾರಿಸಲು, ಈ ಕರವನ್ನು ಕೇಂದ್ರವೇ ಸಂಗ್ರಹಿಸಿ ಸೂಕ್ತ ಆಯೋಗದ ಶಿಫಾರಸ್ಸಿನಂತೆ ಅದನ್ನು ವಿವಿಧ ರಾಜ್ಯಗಳಲ್ಲಿ ಹಂಚಬಹುದು. ಸುದೈವದಿಂದಲೋ ಅಥವಾ ದುರ್ದೈವದಿಂದಲೋ ಪ್ರಾಂತೀಯ ಪ್ರಧಾನಿಗಳು ಈ ಸೂಚನೆಯನ್ನು ಅಂಗೀಕರಿಸದೇ ಹೋದರು. ಅವರ ಈ ನಿರ್ಣಯ ನನಗೆ ಸೂಕ್ತವೆಂದೇ ತೋರಿದೆ.

ನಮ್ಮ ಸಂವಿಧಾನದಲ್ಲಿ ಸೂಚಿಸಿರುವ ಆರ್ಥಿಕ ವ್ಯವಸ್ಥೆ ನನಗೆ ತಿಳಿದಂತೆ ಯಾವುದೇ ಸಂವಿಧಾನಕ್ಕಿಂತಲೂ ಉತ್ತಮವಾಗಿದೆ. ಆದರೆ ಅದು ಒಂದೇ ಒಂದು ದೋಷದಿಂದಿದೆ. ಅದೇನೆಂದರೆ ಪ್ರಾಂತ್ಯಗಳು ತಮ್ಮ ಸಂಪನ್ಮೂಲಗಳಿಗಾಗಿ ವಿಶೇಷವಾಗಿ ಕೇಂದ್ರದಿಂದ ನೀಡುವ ಸಹಾಯ ಧನವನ್ನೇ ಅವಲಂಬಿಸಿವೆ. ಉತ್ತಮ ಸಂಪ್ರದಾಯಗಳಂತೆ ಶಾಸನಸಭೆಯಲ್ಲಿ ಮಂಡಿಸಿದ ಆರ್ಥಿಕ ಮಸೂದೆಗೆ ಅಥವಾ ಹಣಕಾಸಿನ ಮಸೂದೆಗೆ ತಿದ್ದುಪಡಿಯನ್ನು ಸೂಚಿಸಿದಲ್ಲಿ ಸರಕಾರ ಬಿದ್ದುಹೋಗಬಹುದು. ಇದು ಒಂದು ವಿಧವಾದ ಅವಿಶ್ವಾಸ ಸೂಚನೆ ಎಂದೇ ಹೇಳಿದರೆ ತಪ್ಪಾಗಲಾರದು. ಹೀಗಾಗಿ ವಿಶೇಷವಾಗಿ ಸಂಪನ್ಮೂಲಗಳಿಗೆ ಕೇಂದ್ರವನ್ನೇ ಆಶ್ರಯಿಸುವುದು ಪ್ರಜಾಸತ್ತಾತ್ಮಕವಾಗದೇ ಹೋಗಬಹುದು. ಆದುದರಿಂದ ಪ್ರಾಂತ್ಯಗಳಿಗೆ ಅಧಿಕ ಆರ್ಥಿಕ ಜವಾಬ್ದಾರಿ ನೀಡುವ ದೃಷ್ಟಿಯಿಂದ ಮಾರಾಟಕರವನ್ನು ಕೇಂದ್ರಕ್ಕೆ ವಹಿಸುವುದು ಸಮಂಜಸವಾಗಲಾರದು. ಹೀಗಾಗಿ ನನ್ನ ಮಿತ್ರರಾದ ಪ್ರೊ. ಶಿಬ್ಬನ್‌ಲಾಲ್ ಸಕ್ಸೇನಾರವರ ತಿದ್ದುಪಡಿ ನೆಲಕಚ್ಚಿದೆ.

ಇನ್ನು ನನ್ನ ಮಿತ್ರರಾದ ಮಹಾವೀರ್ ತ್ಯಾಗಿಯವರು ಮಂಡಿಸಿದ ತಿದ್ದುಪಡಿಗೆ ನನ್ನ ಅನುಕಂಪವಿದೆ.

೧೯೩೭ರಲ್ಲಿ ಮಾರಾಟ ಕರವನ್ನು ಜಾರಿಗೆ ತಂದಾಗ ಅದು ಮಹತ್ವದ ವಿಷಯವೇ ಆಗಿರಲಿಲ್ಲ ಎಂಬುದು ನಿಸ್ಸಂದೇಹ. ಆದರೆ ಇಂದಿನ ಅಂಕಿ ಸಂಖ್ಯೆಗಳನ್ನು ಪರಿಶೀಲಿಸಿದಾಗ ಮದ್ರಾಸ್ ಹಾಗೂ ಮುಂಬೈ ಪ್ರಾಂತ್ಯಗಳಲ್ಲಿ ಅದು ಅಗಾಧವಾಗಿ ಬೆಳೆದು ಬಂದಿದ್ದು ವರಮಾನದ ಪ್ರಮುಖ ಮೂಲವಾಗಿದೆ. ೧೯೩೭ರಲ್ಲಿ ಮದ್ರಾಸಿನಲ್ಲಿ ಮಾರಾಟಕರ ೨.೩೫ ಕೋಟಿಯದಾಗಿದ್ದರೆ ಇಂದು ೧೪ ಕೋಟಿಗೆ ತಲುಪಿದೆ. ಈ ವಿಧವಾಗಿ ಅಗಾಧ ಪ್ರಮಾಣದ ಮಾರಾಟಕರದ ವಿಷಯದಲ್ಲಿ ಚೆಲ್ಲಾಟ ಸಲ್ಲದು. ಕೇವಲ ಕರ ವ್ಯವಸ್ಥೆಯಲ್ಲಿ ಬದಲಾವಣೆಗೆಂದೇ ಭಾವಿಸುವುದಾದರೆ ನನಗೆ ತಿಳಿದಂತೆ ಎರಡು ಸೂತ್ರಗಳಿವೆ. ಒಂದನೆಯದೆಂದರೆ ವಿವಿಧ ವರ್ಗಗಳಲ್ಲಿ ಸಮಾನತೆಯನ್ನು ಕಲ್ಪಿಸುವುದು. ಎರಡನೆಯ ಪ್ರಮುಖ ಸೂತ್ರವೆಂದರೆ ವಿಶ್ವಾದ್ಯಂತ ಒಪ್ಪುವ ಸಂಗತಿ ಎಂದರೆ ಜನತೆಯ ಜೀವನ ಮಟ್ಟಕ್ಕೆ ಸಂಬಂಧಿಸಿದ್ದು. ಜನತೆಯ ಜೀವನ ಮಟ್ಟ ಕನಿಷ್ಠವಾಗಿದ್ದರೆ ಅವರು ಹೆಚ್ಚು ಕರಭಾರ ಸಹಿಸಲಾರರು. ಈ ಹಿನ್ನೆಲೆಯಲ್ಲಿ ಕರಕ್ಕೂ ಮತ್ತು ಜೀವನ ಮಟ್ಟಕ್ಕೂ ಇರಬಹುದಾದ ಸಂಬಂಧವನ್ನು ಅಲ್ಲಗಳೆಯದೆ ಕೃತಕ ಕರವಿಧಾನವನ್ನೇ ಅವಲಂಬಿಸಬೇಕಾಗುತ್ತದೆ. ನನ್ನ ಮಿತ್ರರ ಸಲಹೆಯನ್ನು ಅಂಗೀಕರಿಸಿದರೆ ಮಾರಾಟ ಕರ ವಿಧಿಸುವ ಅಧಿಕಾರ ಪ್ರಾಂತ್ಯಗಳಿಗೆ ಕೈ ತಪ್ಪಿ

ಹೋಗುತ್ತದೆ. ಆಗ ಕೇಂದ್ರವು ಈ ಕರವನ್ನು ಕುರಿತು ತನ್ನದೇ ಆದ ಇತಿಮಿತಿಗಳನ್ನು ಪ್ರಾಂತ್ಯಗಳ ಮೇಲೆ ಹೇರುವುದು ಅನಿವಾರ್ಯ. ಆದರೆ ನನ್ನ ಒಂದು ಸಲಹೆ ಎಂದರೆ, ಮಾರಾಟ ಕರವನ್ನು ಪ್ರಾಂತ್ಯಗಳಿಗೆ ಬಿಟ್ಟು ಅವು ಒಂದು ಹೊಂದಾಣಿಕೆಗೆ ಬರುವಂತೆ ಸೂಚಿಸುವುದು ಸೂಕ್ತ. ಕೇಂದ್ರದಿಂದ ಇತಿಮಿತಿ ಹೇರುವುದು ಒಂದು ದೋಷವೇ ಎಂದು ನನ್ನ ಭಾವನೆ. ಹೀಗಾಗಿ ನನ್ನ ಮಿತ್ರರು ಪ್ರಾಂತೀಯ ಆಡಳಿತಕ್ಕೆ ಮರಳಿದಾಗ ಈ ವಿಧವಾದ ಒಂದು ಸೂಕ್ತ ವ್ಯವಸ್ಥೆಗೆ ಅನುವು ಮಾಡಿ ಜೀವನ ಮಟ್ಟವನ್ನು ಕಾಪಾಡಿಕೊಂಡು ಬರುವರೆಂದೇ ನಂಬಿಕೆ.

**ಶ್ರೀ ಮಹಾವೀರ್ ತ್ಯಾಗಿ:** ನಾನು ಅಷ್ಟು ಉಪದ್ರವಕಾರಿಯಾಗಿರುವೆನೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಖಂಡಿತ ಅಲ್ಲ. ನಾನೂ ಪ್ರಧಾನಿಯಾಗಿದ್ದರೆ ನಿಮ್ಮ ನಿಲುವನ್ನೇ ತಾಳುತ್ತಿದ್ದೆ. ಈಗ ನನ್ನ ಪರಮ ಮಿತ್ರರಾದ ಪಂಡಿತ್ ಕುಂಝ್ರು ಅವರ ತಿದ್ದುಪಡಿಗೆ ಸೇರಿದಂತೆ ನನ್ನ ಭಾವನೆಯಂತೆ ಅವರ ತಿದ್ದುಪಡಿಯ ಉದ್ದೇಶವನ್ನು ಉಪನಿಬಂಧನೆ (೧)ರಲ್ಲಿ ವಿವರಿಸಲಾಗಿದೆ. ನಾವು ಒತ್ತಿ ಹೇಳಿರುವಂತೆ ಪ್ರಮುಖವಾಗಿ ಮಾರಾಟ ಕರವು ಬಳಕೆಯನ್ನೇ ಆಧರಿಸಿದೆ. ಅಥವಾ ಅವಲಂಬಿಸಿದೆ. ಹೀಗಾಗಿ ಅವರ ತಿದ್ದುಪಡಿ ಯಾವ ಅಧಿಕ ಬದಲಾವಣೆಯನ್ನು ತರಲಾರದು.

ಆದರೆ ಒಂದು ವಿಷಯ ಕುರಿತಂತೆ ನಾನು ಹೇಳಬಯಸುತ್ತೇನೆ. ಅದೇನೆಂದರೆ ನನ್ನ ಹಲವು ಮಿತ್ರರು ಉಪನಿಬಂಧನೆ (೧)ರಲ್ಲಿ ಉಪಯೋಗಿಸಿದ ಪದಗಳನ್ನು "ರಫ್ತಿಗೆ ಸಂಬಂಧಿಸಿದಂತೆ ಮತ್ತು ಆಮದನ್ನು ಕುರಿತಂತೆ" ಒಪ್ಪದೇ ಇರುವುದು. ಈ ವಿಷಯದಲ್ಲಿ ರಚನಾ ಸಮಿತಿಯು ಉತ್ತಮ ಪದಗಳನ್ನು ಸೂಚಿಸಬೇಕೆಂದೇ ತುಂಬಾ ಸಮಯ ವ್ಯಯಿಸಿದೆ. ಆದರೆ ರಚನಾ ಸಮಿತಿಯು ಈ ಪದಗಳಿಗೆ ಬದಲಾಗಿ, ಬೇರೆ ಸೂಕ್ತ ಪದಗಳ ಸೇರ್ಪಡೆಗೆ ಯತ್ನ ಮಾಡಿ, ಟೀಕೆಯನ್ನು ಸರಿಪಡಿಸುವುದೆಂಬ ಭರವಸೆ ನೀಡುವೆ. ಈಗಲಾದರೂ ಸದನ ತಿದ್ದುಪಡಿಗೆ ಮಂಜೂರಾತಿ ನೀಡಬಹುದು.

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್‌ರರು ಸೂಚಿಸಿದ ಸಂಗತಿಯನ್ನು ಮತದಾನಕ್ಕೆ ಹಾಕುವ ಮುಂಚೆ ನಾನು ಕೆಲವು ವಿಷಯಗಳನ್ನು ಹೇಳಬಯಸುವೆ. ಅಲ್ಲದೆ ನನ್ನ ಎದುರಿನಲ್ಲಿಯೇ ಆರ್ಥಿಕ ಮಂತ್ರಿಯವರು ಉಪಸ್ಥಿತರಿದ್ದಾರೆ. ಹೀಗಾಗಿ ನಾನು ವಿವರಿಸಲೇಬೇಕಾದ ವಿಷಯ ಹೀಗಿದೆ. ನಾನು ಸಭೆಯ ಮುಂದೆ ಮಂಡಿಸಲಾದ ಮಸೂದೆಯ ಪರ ಅಥವಾ ವಿರೋಧವಾಗಿ ಏನನ್ನೂ ಹೇಳುವುದಿಲ್ಲ. ಆದರೆ ಅನೇಕ ಪ್ರಾಂತ್ಯಗಳಲ್ಲಿಯ ಭಾವನೆ ಎಂದರೆ, ಅವರ ಸಂಪನ್ಮೂಲಗಳಿಗೆ ಆದಾಯಕಾರಿಯಾದ ಈ ತಿದ್ದುಪಡಿಯಿಂದ, ವಿಶೇಷವಾಗಿ ಹೆಚ್ಚು ಆರ್ಥಿಕ ಸಂಪನ್ಮೂಲಗಳನ್ನು ಹೊಂದದೇ ಇರುವ ಬಡ ಪ್ರಾಂತ್ಯಗಳಿಗೆ ಆದಾಯಕರ ಹಂಚಿಕೆಯ ಅತೃಪ್ತಿಯನ್ನು ಉಂಟು ಮಾಡಿದೆ. ಆದುದರಿಂದ ಆದಾಯಕರ ಹಂಚಿಕೆಯ ವಿಷಯದಲ್ಲಿ ಅರ್ಥ ಮಂತ್ರಿಯವರು ಈ ವಿಷಯವನ್ನು ಗಮನದಲ್ಲಿರಿಸಿಕೊಳ್ಳಬೇಕು.

ಅಲ್ಲದೆ ಭಾರತ ಸರಕಾರದ ಧೋರಣೆ ಹೆಚ್ಚು ನೀಡಿದವರಿಗೆ ಹೆಚ್ಚು, ಕಡಿಮೆ ನೀಡಿದ ಪ್ರಾಂತ್ಯಗಳಿಗೆ ಕಡಿಮೆ ಎಂಬ ಭಾವನೆಗೆ ಆಸ್ಪದ ನೀಡಬಾರದು. ಈಗ ನಾನು ವಿವಿಧ ತಿದ್ದುಪಡಿಗಳನ್ನು ಮತದಾನಕ್ಕೆ ಹಾಕುವೆ.

ಎಲ್ಲಾ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು.

**[ಡಾ. ಬಿ. ಆರ್. ಅಂಬೇಡ್ಕರ್‌ರು ಮಂಡಿಸಿದ ಮೂಲ ತಿದ್ದುಪಡಿ ೨೬೪ಎ ತಿದ್ದುಪಡಿಯೊಂದಿಗೆ ಸಂವಿಧಾನದಲ್ಲಿ ಸೇರಿಸಲಾಯಿತು.]**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈಗ ೨೮೦ಎ ತಿದ್ದುಪಡಿಯನ್ನು ಕೈಗೆತ್ತಿಕೊಳ್ಳುವೆ.

**ಪಂಡಿತ್ ಹೃದಯನಾಥ್ ಕುಂಝ್ರು:** ನಾನು ಅದನ್ನು ತೀವ್ರವಾಗಿ ವಿರೋಧಿಸುವೆ. ಏಕೆಂದರೆ ತಿದ್ದುಪಡಿ ಈ ದಿನ ಬೆಳಿಗ್ಗೆ ನನ್ನ ಕೈ ಸೇರಿದೆ. ಅದನ್ನು ಸಂಪೂರ್ಣವಾಗಿ ಓದಿದ ನಂತರವೇ ಅದರ ಬಗೆಗೆ ಚರ್ಚಿಸಬಹುದು. ಅಲ್ಲದೆ ಈ ತಿದ್ದುಪಡಿಯು ಮಹತ್ವದ್ದಾಗಿದೆ. ಇದರ ಬಗ್ಗೆ ನನಗೆ ಸಮಯ ಬೇಕು.

**ಶ್ರೀ ನಜೀರುದ್ದೀನ್ ಅಹ್ಮದ್:** ಅಲ್ಲದೆ, ಈ ತಿದ್ದುಪಡಿಯು ನೂತನ ವಿಧವಾದ ಬೇರೆ ಎಲ್ಲೂ ಕಾಣದ ತುರ್ತು ಪರಿಸ್ಥಿತಿಯ ಪ್ರಸ್ತಾವನೆ ಮಾಡಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಕೇವಲ ತಾಂತ್ರಿಕ ಕಾರಣಗಳಿಂದ ತಿದ್ದುಪಡಿಯನ್ನು ಮುಂದೂಡುವುದು ಸೂಕ್ತವಾಗಲಾರದು. ನನ್ನ ಜಾಣಮಿತ್ರರು ಮೊದಲನೇ ನೋಟದಲ್ಲಿಯೇ ವಿಷಯ ಗ್ರಹಣ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಅಲ್ಲದೆ ಕುಂಝ್ರು ಅವರಿಗೆ ಹೊಳೆಯಲಾರದಂಥ ಯಾವ ಗಹನವಾದ ವಿಷಯವನ್ನೂ ಈ ತಿದ್ದುಪಡಿ ಹೊಂದಿಲ್ಲ. ಹೀಗಾಗಿ ಸಮಯ ವ್ಯರ್ಥ ಮಾಡದೆ ಇದನ್ನು ಚರ್ಚೆಗೆ ಎತ್ತಿಕೊಳ್ಳಬಹುದು.

**ಪಂಡಿತ್ ಹೃದಯನಾಥ್ ಕುಂಝ್ರು:** ಸರ್, ಇದು ಅತಿ ಮುಖ್ಯವಾದ ವಿಷಯ. ಡಾ. ಅಂಬೇಡ್ಕರರ ಆತುರ ಹಾಗೂ ಅವರ ವರ್ತನೆಯು ಸದಸ್ಯರ ಸ್ವಾತಂತ್ರ್ಯಕ್ಕೆ ಅಡಚಣೆ ತರುವಂಥದು. ಇದನ್ನು ತಡೆಯಬೇಕು. ಸದನದ ಸದಸ್ಯರಿಗೆ ತಮ್ಮದೇ ಆದ ಹಕ್ಕುಗಳಿವೆ ಮತ್ತು ನಿಯಮಾವಳಿಗಳಿವೆ. ಹೀಗಾಗಿ ನಮಗೆ ಕಾಲಾವಧಿ ಬೇಕು. ಇದರ ಬಗೆಗೆ ನಾವು ಆಲೋಚಿಸಬೇಕಾದುದರಿಂದ, ಅಂಬೇಡ್ಕರ ಆತುರ ಸಲ್ಲದು.

**ಮಾನ್ಯ ಸಭಾಧ್ಯಕ್ಷರು:** ನನ್ನ ಸಲಹೆ ಎಂದರೆ ಕಾರ್ಯಕ್ರಮದ ಪಟ್ಟಿಯಂತೆ ವಿಧಿ ೨೭೪ಡಿ.ಡಿ.ಯನ್ನು ಕೈಗೆತ್ತಿಕೊಳ್ಳುವಾ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಅದಕ್ಕೆ ಸಿದ್ಧ. ಸರ್, ಆದರೆ ನಮಗೆ ಸಮಯದ ಅಭಾವವಿದೆ ಎಂದು ಹೇಳದೇ ಇರಲಾರೆ. ನನ್ನ ಅಭಿಪ್ರಾಯದಲ್ಲಿ ಈ ತಾಂತ್ರಿಕತೆಗಳಿಗಿಂತ ಮೂಲ ವಿಷಯವೇ ಪ್ರಮುಖವಾದುದು.

**ಪಂಡಿತ್ ಹೃದಯನಾಥ್ ಕುಂಝ್ರು:** ಶೋಚನೀಯ ಸಂಗತಿ ಎಂದರೆ ರಚನಾ ಸಮಿತಿಯ ಅಧ್ಯಕ್ಷರೇ ಸದಸ್ಯರ ಹಕ್ಕುಗಳನ್ನು ಅರಿಯದೇ ಇರುವುದು ವಿಷಾದನೀಯ.

## ವಿಧಿ ೨೭೪ಡಿಡಿ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ ನಾನು ಮಂಡಿಸುವೆ.

ಪಟ್ಟಿ XVII ಸಂ. ೪೦೦ (ಎರಡನೆ ವಾರ) ಕುರಿತಂತೆ ೨೭೪ಡಿಯ ನಂತರ ಇದನ್ನು ಸೇರ್ಪಡಿಸಬೇಕು.

೨೭೪ಡಿಡಿ ಈ ಭಾಗದಲ್ಲಿ ಮುಂದೆ ಹೇಳಬಹುದಾದ ಹಾಗು ಸಂವಿಧಾನದ ಇತರ ಭಾಗಗಳಲ್ಲಿ ಹೇಳಿರಬಹುದಾದ ಸಂಗತಿಗಳಿಗೆ ಆತಂಕವಾಗದಂತೆ ಯಾವುದೇ ರಾಜ್ಯ ಸಂವಿಧಾನ ಜಾರಿ ಪೂರ್ವದಲ್ಲಿ, ಬೇರೆ ರಾಜ್ಯಗಳಿಂದ ಆಮದು ಮಾಡಿದ ವಸ್ತುಗಳ ಮೇಲೆ ಅಥವಾ ರಫ್ತು ಮಾಡುವ ವಸ್ತುಗಳ ಮೇಲೆ ಕರ ವಿಧಿಸುವ ಕುರಿತು ಆ ರಾಜ್ಯ ಹಾಗೂ ಭಾರತ ಸರಕಾರದ ನಡುವೆ ಒಪ್ಪಂದವಾಗಿದ್ದಲ್ಲಿ ಮಾತ್ರ ಅಂತಹ ಕರವನ್ನು ಮುಂದುವರಿಸಬಹುದು. ಆದರೆ ಇದು ಕೇವಲ ಹತ್ತು ವರ್ಷಗಳಿಗೆ ಮಾತ್ರ ಸೀಮಿತವಾಗಿರತಕ್ಕದ್ದು (ಸಂವಿಧಾನ ಜಾರಿಗೆ ಬಂದ).

ಆದರೆ ಈ ಸಂವಿಧಾನದ ವಿಧಿ ೨೬೦ ರಡಿಯಲ್ಲಿ ರಾಷ್ಟ್ರಪತಿಯವರು ಈ ವಿಧವಾದ ಒಪ್ಪಂದದ ೫ ವರ್ಷಗಳ ನಂತರ ಒಪ್ಪಂದವನ್ನು ರದ್ದುಪಡಿಸಬಹುದು ಅಥವಾ ಸೂಕ್ತ ಬದಲಾವಣೆಗಳನ್ನೂ ಮಾಡಬಹುದು.

ಮಾನ್ಯರೆ, ಈ ತಿದ್ದುಪಡಿಯು ಈಗಾಗಲೇ ಒಪ್ಪಿರುವ ೨೫೮ ವಿಧಿಗೆ ಪೂರಕವಾದುದು. ಏಕೆಂದರೆ IIIನೆಯ ಭಾಗದಲ್ಲಿಯ ರಾಜ್ಯಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಅಧಿಕಾರವನ್ನು ತಾತ್ಕಾಲಿಕ ಹಣಕಾಸು ಹೊಂದಾಣಿಕೆಗೆ ಸಂಬಂಧಿಸಿದಂತೆ ಭಾರತ ಸರ್ಕಾರಕ್ಕೆ ನೀಡಲಾಗಿದೆ.

**ವಿಧಿ ೨೭೪ಡಿಡಿ ಯನ್ನು ಅಂಗೀಕರಿಸಿ ಸಂವಿಧಾನದಲ್ಲಿ ಸೇರ್ಪಡಿಸಲಾಯಿತು.**

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಾನ್ಯ ಮಿತ್ರರಾದ ಪಂಡಿತ್ ಕುಂಝ್ರು ಅವರಿಗೆ ಆತಂಕವಿಲ್ಲದೇ ಹೋದಲ್ಲಿ ನೂತನ ವಿಧಿ ೨೮೦ಎ ಯನ್ನು ಕೈಗೆತ್ತಿಕೊಳ್ಳಬಹುದು. ಅವರಿಗೆ ಅರ್ಧ ತಾಸಿನ ಸಮಯ ಈಗಾಗಲೇ ನೀಡಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಸ್ವಲ್ಪ ಕಾಲಾವಕಾಶದ ನಂತರ ಕೈಗೆತ್ತಿಕೊಳ್ಳಬಹುದು.

## ವಿಧಿ ೨೮೦ಎ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುವೆ.

ವಿಧಿ ೨೮೦ರ ನಂತರ ಈ ಕೆಳಗಿನ ವಿಧಿಯನ್ನು ಸೇರ್ಪಡಿಸಬೇಕು.

೨೮೦ಎ (೧) ಭಾರತದ ಹಾಗೂ ಯಾವುದೇ ಪ್ರಾಂತ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎಂದು ರಾಷ್ಟ್ರಪತಿಯವರಿಗೆ ಮನವರಿಕೆಯಾದಲ್ಲಿ ಅವರು ಒಂದು ಘೋಷಣೆಯ ಮೂಲಕ ಆರ್ಥಿಕ ತುರ್ತು ಪರಿಸ್ಥಿತಿಯನ್ನು ಸಾರಬಹುದು.

(೨) ೨೭೫ನೆಯ (೨) ಉಪನಿಬಂಧನೆಯಂತೆ ಸಂವಿಧಾನದಡಿಯಲ್ಲಿ (೧) ಈ ವಿಧಿಯಲ್ಲಿ ಹೇಳಿದಂತೆ ಅವರು ತುರ್ತು ಪರಿಸ್ಥಿತಿಯನ್ನು ಸಾರಬಹುದು.

(೩) (೧)ನೆಯ ಉಪನಿಬಂಧನೆಯಲ್ಲಿ ಹೇಳಿದಂತೆ ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ ಒಕ್ಕೂಟದ ಆಡಳಿತಾಧಿಕಾರ ರಾಜ್ಯಗಳಿಗೂ ವಿಸ್ತರಿಸುತ್ತದೆ. ಅಲ್ಲದೆ ಆರ್ಥಿಕ ನಿವೇದನೆಗಳನ್ನೂ ಆ ರಾಜ್ಯವು ಪಾಲಿಸಬೇಕು. ಈ ದಿಶೆಯಲ್ಲಿ ರಾಷ್ಟ್ರಪತಿಗಳು ಸೂಕ್ತ ನಿರ್ದೇಶನಗಳನ್ನೂ ನೀಡಬಹುದು.

(೪) ಈ ಸಂವಿಧಾನಕ್ಕೆ ವ್ಯತಿರಿಕ್ತವಾಗದೇ

(ಎ) ನಿವೇಶನದಲ್ಲಿ ಅಡಕವಾದ

(೧) ವೇತನ ಕಡಿತ, ಭತ್ಯೆಗಳ ಕಡಿತ ಯಾವ ವ್ಯಕ್ತಿಯದೇ ಆಗಿದ್ದರೂ ಕಡಿಮೆ ಮಾಡಬಹುದು.

(೨) ವಿಧಿ ೧೮೨ ರಂತೆ ಯಾವ ಬಗೆಯ ಆರ್ಥಿಕ ಮಸೂದೆಯನ್ನು ರಾಷ್ಟ್ರಪತಿಗಳ ಅವಗಾಹನೆಗೆ ತರಬಲ್ಲ ಅಧಿಕಾರ

(ಬಿ) ಈ ವಿಧವಾಗಿ ಉಪನಿಬಂಧನೆ (೧) ರಡಿಯಲ್ಲಿ ಸಾರಿದ ಘೋಷಣೆಯಂತೆ ಸೇವೆಯಲ್ಲಿದ್ದ ಯಾವುದೇ ವ್ಯಕ್ತಿಯು ಸರ್ವೋಚ್ಚ ಹಾಗೂ ಶ್ರೇಷ್ಠ ನ್ಯಾಯಾಲಯಗಳ ನ್ಯಾಯಾಧೀಶರನ್ನೂ ಒಳಗೊಂಡಂತೆ, ವೇತನ ಭತ್ಯೆಗಳಲ್ಲಿ ಕಡಿತ ಸೂಚಿಸಬಹುದು.

(೫) ಹೀಗೆ ಉಪನಿಬಂಧನೆ (೩) ರಲ್ಲಿ ಸೂಚಿಸಿದ ನಿರ್ದೇಶನಗಳನ್ನು ಉಲ್ಲಂಘಿಸಿದಲ್ಲಿ ಅದು ರಾಜ್ಯ ಸರಕಾರದ ಸಂವಿಧಾನಾತ್ಮಕ ಆಜ್ಞೆಯನ್ನು ಉಲ್ಲಂಘಿಸಿದಂತೆಯೇ ಎಂದು ಪರಿಗಣಿಸಲಾಗುವುದು.

ಮಾನ್ಯರೆ, ಈ ದೇಶದ ಇಂದಿನ ಆರ್ಥಿಕ ಪರಿಸ್ಥಿತಿಯನ್ನು ಅರಿತಿರುವ ಈ ಸದನದ ಯಾವ ಸದಸ್ಯರೂ ಇದಕ್ಕೆ ಅಡ್ಡಿ ಮಾಡಲಾರರೆಂದೇ ನನ್ನ ಭಾವನೆ. ಹೀಗಾಗಿ ನಾನು ಈ ವಿಷಯದಲ್ಲಿ ಹೆಚ್ಚು ಸಮಯ ತೆಗೆದುಕೊಳ್ಳದೇ ಒಂದೇ ಒಂದು ವಿಷಯ ಸದನದ ಗಮನಕ್ಕೆ ತರಬಯಸುವೆ. ಈ ೨೮೦ಎ

ವಿಧಿಯನ್ನು ಅಮೆರಿಕೆಯ ರಾಷ್ಟ್ರೀಯ ರಿಕವರಿ ಕಾನೂನಿನಂತೆ ಅಳವಡಿಸಲಾಗಿದೆ. ೧೯೩೦ ರಲ್ಲಿ ಆರ್ಥಿಕ ಕುಸಿತದಿಂದ ಉಂಟಾದ ಹಾನಿಯನ್ನು ನಿವಾರಿಸಲೆಂದೇ ಅಂದಿನ ಅಧ್ಯಕ್ಷರು ಈ ವಿಧವಾದ ನಿಯಮಾವಳಿ ಸಾರಿದರು. ಆದರೆ ಅಮೆರಿಕಾದ ಸರ್ವೋಚ್ಚ ನ್ಯಾಯಾಲಯ ಈ ಕಾರ್ಯವನ್ನು ಸಂವಿಧಾನಬಾಹಿರ ಎಂದೇ ಸಾರಿತು. ಹೀಗಾಗಿ ನಮ್ಮ ರಾಷ್ಟ್ರವು ಇಂಥ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಅದೇ ವಿಧವಾದ ತೊಂದರೆಗೆ ಈಡಾಗಬಾರದೆಂದೇ ಈ ವಿಧಿಯನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಲಾಗಿದೆ.

* * *

**ಶ್ರೀ ಬಿ. ದಾಸ್:** ನನಗೆ ತಿಳಿದಂತೆ ಡಾ. ಅಂಬೇಡ್ಕರ್‌ರರು, ಭಾರತ ದೇಶದಲ್ಲಿಯ ನ್ಯಾಯಮಂಡಳಿಯು ಆದಾಯಕರ ನ್ಯಾಯಮಂಡಳಿ ಮತ್ತು ರೈಲ್ವೆ ನ್ಯಾಯಮಂಡಳಿಗಳ ಮಧ್ಯೆ ಇರಬಹುದಾದ ಸಂಬಂಧಗಳನ್ನು ವಿವರಿಸಬೇಕು. ಒಂದು ವೇಳೆ ನ್ಯಾಯಮಂಡಳಿಯ ಅಧಿಕಾರ ವ್ಯಾಪ್ತಿ ಈ ಮಂಡಳಿಗೂ ಅನ್ವಯಿಸಿದಲ್ಲಿ ಆದಾಯಕರ ನ್ಯಾಯಮಂಡಳಿಯನ್ನು ನಾವು ಶೀಘ್ರದಲ್ಲಿಯೇ ರದ್ದುಪಡಿಸಬೇಕು. ಏಕೆಂದರೆ ಆದಾಯಕರ ವಿಷಯಗಳಲ್ಲಿ ಈ ಮಂಡಳಿಯ ಅಧಿಕಾರವೇ ಕೊನೆಯದಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ವಿಷಯಗಳು ಈಗ ಸಮಂಜಸವೇ? ಈ ನಮ್ಮ ಚರ್ಚೆಯಲ್ಲಿ ಆದಾಯಕರ ನ್ಯಾಯಮಂಡಳಿಯ ಪ್ರಸ್ತಾಪವೇಕೆ?

**ಶ್ರೀ ಬಿ.ದಾಸ್:** ಈ ವಿಧಿಯಲ್ಲಿ ಹೀಗೆ ಹೇಳಿದೆ: ಭಾರತ ಪ್ರದೇಶದಲ್ಲಿಯ ಯಾವ ನ್ಯಾಯಮಂಡಳಿ ಅಥವಾ ನ್ಯಾಯಾಲಯಗಳು ನೀಡಿದ ತೀರ್ಪು, ಡಿಕ್ರಿ, ನಿರ್ಣಯ, ಶಿಕ್ಷೆ ಅಥವಾ ಆಜ್ಞೆಗಳನ್ನು ಕುರಿತಂತೆ ಸರ್ವೋಚ್ಚ ನ್ಯಾಯಲಯವು ತನ್ನ ವಿವೇಚನೆಯಂತೆ, ಮರುಪರಿಶೀಲನೆಗೆ ಆಸ್ಪದ ನೀಡಬಹುದು. ಹೀಗಾಗಿ 'ನ್ಯಾಯಾಧೀಕರಣ' ಎಂದಾಗ ಆದಾಯಕರ ನ್ಯಾಯಾಧೀಕರಣಕ್ಕೆ ಅನ್ವಯಿಸುವುದೇ ಎಂಬ ಸಂಗತಿಯ ಬಗೆಗೆ ಭರವಸೆ ಕೋರುವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನೀವು ವಿವಿಧ ವ್ಯಕ್ತಿಗಳ ಬಗೆಗೂ ಹೇಳಿದಿರಿ. ನನಗೆ ತಿಳಿದಿರುವಂತೆ ಆದಾಯಕರ ಮೊಕದ್ದಮೆಗಳು ಕುರಿತಂತೆ ಸರ್ವೋಚ್ಚ ನ್ಯಾಯಾಲಯವು ವಿಚಾರಿಸಬಹುದು. ಈಗಾಗಲೇ ಸೂಕ್ತ ತಿದ್ದುಪಡಿ ಮಾಡಲಾಗಿದೆ.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ನನ್ನ ಅಲ್ಪ ಅಭಿಮತದಂತೆ ಉಪನಿಬಂಧನೆ (೨) ತುಂಬಾ ಸಮಗ್ರವಾಗಿದ್ದು ಅದು ಅನಾವಶ್ಯಕವೆಂದೇ ಹೇಳುವೆ.

ಸಶಸ್ತ್ರ ಪಡೆಗಳಿಗೆ, ಸಂಬಂಧಿಸಿದಂತೆ ಉಪನಿಬಂಧನೆ (೯೧)ರಲ್ಲಿ ಹೇಳಿದ ಯಾವುದೇ ತೀರ್ಪು, ನಿರ್ಣಯ, ಶಿಕ್ಷೆ ಅಥವಾ ಆಜ್ಞೆಗಳು ಅನ್ವಯಿಸವುವು.

ಸಶಸ್ತ್ರ ಪಡೆಯ ವ್ಯಕ್ತಿಗಳು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಿಂದ ಮುಕ್ತರಾಗಿರಬಹುದು. ಆದರೆ, ಕನ್‌ಟೋನ್‌ಮೆಂಟ್ ಕಾನೂನು, ಹಾಗು ಪ್ರಾದೇಶಿಕ ಸೈನ್ಯ ಮುಂತಾದ ಕಾನೂನುಗಳಡಿಯಲ್ಲಿ ನಾಗರಿಕರಿಗೆ ವಿಧಿಸಬಹುದಾದ ಶಿಕ್ಷೆಯ ಬಗೆಗೆ ಸರ್ವೋಚ್ಚ ನ್ಯಾಯಾಲಯವು ಅಧಿಕಾರ ಹೊಂದಿರಬೇಕಾಗುತ್ತದೆ. ಆದುದರಿಂದ ಈ ದಿಶೆಯಲ್ಲಿ ಸೂಕ್ತ ವಿವರಣೆಗೆ ಅವಕಾಶ ನೀಡಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಧ್ಯಕ್ಷರೆ, ನನ್ನ ಮಿತ್ರರಾದ ಶ್ರೀ ಶಿಬ್ಬನ್‌ಲಾಲ್ ಸಕ್ಸೇನಾ ಅವರ ಹೇಳಿಕೆಯಿಂದ, ನಾನು ಟಿ.ಟಿ.ಕೃಷ್ಣಮಾಚಾರಿಯವರು ಮಂಡಿಸಿದ ತಿದ್ದುಪಡಿಯ ಬಗೆಗೆ ಹಲವು ವಿಷಯಗಳನ್ನು ಹೇಳಲೇಬೇಕಾಗಿದೆ. ನಾವು ವಿಧಿ ೧೧೨ರ ಬಗೆಗೆ ಚರ್ಚಿಸುತ್ತಿದ್ದಾಗ ನನ್ನ ಮಿತ್ರರಾದ ಶಿಬ್ಬನ್‌ಲಾಲ್ ಸಕ್ಸೇನಾ ಅವರು ತಿದ್ದುಪಡಿಯನ್ನು ಮಂಡಿಸಿದಾಗ, ನಾನು ೧೧೨ರ ವಿಧಿಯಡಿಯಲ್ಲಿ

ಕೋರ್ಟ್ ಮಾರ್ಷಲ್ ವಿಚಾರಗಳ ಮೇಲೂ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರವಿದೆಯೆಂದು ಹೇಳಿದ್ದು ದಿಟ. ಸೈದ್ಧಾಂತಿಕವಾಗಿ ಆ ಅಭಿಪ್ರಾಯ ಇನ್ನೂ ಸರಿ ಎಂದೇ ನನ್ನ ಅಭಿಮತ. ಆದರೆ ನಾನು ಹೇಳಲು ಮರೆತಿರುವ ಸಂಗತಿ ಎಂದರೆ ನಮ್ಮ ಶ್ರೇಷ್ಠ ನ್ಯಾಯಾಲಯಗಳ ಹಾಗೂ ಬ್ರಿಟಿಷ್ ನ್ಯಾಯಾಲಯಗಳ ಮತ್ತು ಪ್ರಿವಿ ಕೌನ್ಸಿಲ್‌ಗಳ ತೀರ್ಪುಗಳಂತೆ ನಾಗರಿಕ ನ್ಯಾಯಾಲಯಗಳಿಗೆ ಈ ಅಧಿಕಾರವಿದೆಯಾದರೂ ಸೇನಾ ಪಡೆಯ ಶಿಸ್ತನ್ನು ಗಮನದಲ್ಲಿರಿಸಿಕೊಂಡು ಸೇನಾ ನ್ಯಾಯಾಲಯಗಳ ತೀರ್ಪನ್ನು ಈ ನ್ಯಾಯಾಲಯಗಳು ವಿಚಾರಿಸುವುದನ್ನು ತೊರೆದಿವೆ. ಈ ದಿಶೆಯಲ್ಲಿ ನಾಗರಿಕ ನ್ಯಾಯಾಲಯಗಳಿಗೆ ಇರಬಹುದಾದ ಹಕ್ಕನ್ನು ಹೆಚ್ಚು ವಿವರಿಸದೇ ಪ್ರಿವಿ ಕೌನ್ಸಿಲ್‌ನ ಕೆಲವು ಆದೇಶಗಳನ್ನು ಗಮನದಲ್ಲಿರಿಸಿಕೊಳ್ಳುವುದು ಸೂಕ್ತ. ಅಲ್ಲದೆ ಈ ನಿಟ್ಟಿನಲ್ಲಿ ನಮ್ಮ ಸಂಯುಕ್ತ ನ್ಯಾಯಾಲಯ (Federal Court) ನೀಡಿರಬಹುದಾದ ಆದೇಶಗಳನ್ನು ಉಪನಿಬಂಧನೆ (೨) ಕುರಿತಂತೆ ಆಲೋಚಿಸಿದಾಗ, ಶೋಚನೀಯ ವಿಷಯವೆಂದರೆ ಈ ವಿಧವಾದ ಬಹು ಪ್ರಮುಖ ವಿಷಯ ಸಂರಕ್ಷಣಾ ಖಾತೆಗೆ ಸಂಬಂಧಿಸಿದ್ದನ್ನು ಯಾವ ಚರ್ಚೆ ಇಲ್ಲದೇ ನ್ಯಾಯಾಲಯಕ್ಕೆ ಬಿಡಬಾರದೆಂದೇ ಕೈಗೆತ್ತಿಕೊಳ್ಳಲಾಗಿದೆ.

ಈ ದಿಶೆಯಲ್ಲಿ ಯಾವುದೇ ಸಂದೇಹಕ್ಕೂ ಆಸ್ಪದವಿರಬಾರದೆಂದೇ ಈ ವಿಷಯದ ಬಗೆಗೆ ಚರ್ಚೆ ಮಾಡಿ ಸೂಕ್ತ ಕಾನೂನನ್ನು ರಚಿಸಿದರೆ ಉತ್ತಮ. ಈ ಹಿನ್ನೆಲೆಯಲ್ಲಿ ನ್ಯಾಯಾಲಯಗಳ ಅಧಿಕಾರದ ವ್ಯಾಪ್ತಿಯನ್ನು ಪ್ರಸ್ತಾಪಿಸಿರುವೆ. ಹೀಗಾಗಿ ವಿಧಿ ೧೧೨ ಕ್ಕೆ ಉಪನಿಬಂಧನೆ (೨)ರ ಸೇರ್ಪಡೆ.

ಈ ದಿಶೆಯಲ್ಲಿ ನಾನು ಸ್ಪಷ್ಟ ಪಡಿಸಬಹುದಾದ ಸಂಗತಿ ಎಂದರೆ ಉಪನಿಬಂಧನೆ (೨) ಯಾವುದೇ ಕಾರಣಕ್ಕೂ ಶ್ರೇಷ್ಠ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯಗಳ ಅಧಿಕಾರವನ್ನು ಕಿತ್ತುಕೊಳ್ಳುವುದಿಲ್ಲ. ದೇಶದ ಸಾಮಾನ್ಯ ಕಾನೂನು, ಸಶಸ್ತ್ರ ಪಡೆಯವರನ್ನು ಮಿಲಿಟರಿ ನ್ಯಾಯಾಲಯಗಳಿಗೆ ಯಜ್ಞ ಪಶುಗಳನ್ನಾಗಿಸಲು ಅವಕಾಶ ನೀಡಲಾರದು. ಒಂದು ವೇಳೆ ಮಿಲಿಟರಿ ನ್ಯಾಯಾಲಯಗಳು, ತಮ್ಮ ವ್ಯಾಪ್ತಿಯನ್ನು ಮೀರಿ ನಡೆದಾಗ, ಸರ್ವೋಚ್ಚ ಅಥವಾ ಶ್ರೇಷ್ಠ ನ್ಯಾಯಾಲಯಗಳು ರಾಜ್ಯದ ಸಾಮಾನ್ಯ ಕಾನೂನು (common law) ಅಡಿಯಲ್ಲಿ ಅಂಥ ಸಂಗತಿಯನ್ನು ವಿಚಾರಿಸಬಹುದು. ಎರಡನೆಯದಾಗಿ ಯಾವ ಆಧಾರವಿಲ್ಲದೇ ಮಿಲಿಟರಿ ನ್ಯಾಯಾಲಯ ತೀರ್ಪು ನೀಡಿದ್ದರೆ ಅದನ್ನು ಮರುಪರಿಶೀಲಿಸುವ ಅಧಿಕಾರ ಶ್ರೇಷ್ಠ ಹಾಗು ಸರ್ವೋಚ್ಚ ನ್ಯಾಯಾಲಯಗಳಿಗಿದೆ. ಆದರೆ ಈ ದಿಶೆಯಲ್ಲಿ ನಾಗರಿಕ ನ್ಯಾಯಾಲಯಗಳ ವ್ಯಾಪ್ತಿಯನ್ನು ಅರಿತು ಮುಂದುವರಿಯಬಹುದು. ಹೀಗಾಗಿ ಈ ದಿಶೆಯಲ್ಲಿ ಸಂರಕ್ಷಣಾ ಶಾಖೆಗೆ ಇರಬಹುದಾದ ತೊಡಕುಗಳನ್ನು ನಿವಾರಿಸಲೆಂದೇ ನಾನು ಉಪನಿಬಂಧ (೨) ಯನ್ನು ಸೇರ್ಪಡಿಸಿರುವೆ. ಹಲವಾರು ವ್ಯಕ್ತಿಗಳು ಹೇಳಿರುವಂತೆ ಸಶಸ್ತ್ರ ಶಾಖೆಗೆ ಇರಬಹುದಾದ ತೊಡಕುಗಳನ್ನು ನಿವಾರಿಸಲೆಂದೇ ನಾನು ಉಪನಿಬಂಧ (೨) ಯನ್ನು ಸೇರ್ಪಡಿಸಿರುವೆ. ಹಲವಾರು ವ್ಯಕ್ತಿಗಳು ಹೇಳಿರುವಂತೆ ಸಶಸ್ತ್ರ ಶಾಖೆಗೆ ಇರಬಹುದಾದ ತೊಡಕುಗಳನ್ನು ನಿವಾರಿಸಲೆಂದೇ ನಾನು ಉಪನಿಬಂಧ (೨) ಯನ್ನು ಸೇರ್ಪಡಿಸಿರುವೆ. ಹಲವಾರು ವ್ಯಕ್ತಿಗಳು ಹೇಳಿರುವಂತೆ ಸಶಸ್ತ್ರ ಪಡೆಯವರಿಗೆ ಸಂಬಂಧಿಸಿದಂತೆ ಅನೇಕ ತೊಡಕುಗಳಿವೆ. ಏಕೆಂದರೆ ನಾವು ಭಾವಿಸಿದಂತೆ ಸಶಸ್ತ್ರ ಪಡೆಯ ಎಲ್ಲರೂ ಸೈನಿಕರಲ್ಲ, ಕೆಲವರು ಸೈನ್ಯದ ಹಿಂದೆ ಕಾರ್ಯ ಮಾಡುವವರೇ ಹೊರತು ನೇರವಾಗಿ ಹೋರಾಡುವ ಸೈನಿಕರಲ್ಲ. ಹೀಗಾಗಿ ಸೈನಿಕ ಕಾನೂನಿನಡಿಯಲ್ಲಿ ಈ ವ್ಯತ್ಯಾಸವನ್ನು ಗುರುತಿಸುವುದು ಸಾಮಾನ್ಯ ಸಂಗತಿ ಅಲ್ಲ.

ನನ್ನ ಮಾನ್ಯ ಮಿತ್ರರಾದ ಸಿಧ್ವ ಅವರು ಹೇಳಿದಂತೆ ಸೈನಿಕ ಪಡೆಯ ವಾಹನ ಚಾಲಕರು, ತಮ್ಮ

ಬೇಜವಾಬ್ದಾರಿಯಿಂದ ಹಲವರ ಮರಣಕ್ಕೆ ಕಾರಣವಾದಾಗ ಮಿಲಿಟರಿ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾದರೂ ಅವರನ್ನು ಸಾಮಾನ್ಯ ನ್ಯಾಯಾಲಯದ ಮುಂದೆ ತಾರದೇ ಹೋದ ಸಂಗತಿಗಳಿವೆ. ಆದರೆ ನಾನು ಹೇಳಬಹುದಾದರೆ ಸಶಸ್ತ್ರ ಪಡೆಯವರು ಮಿಲಿಟರಿ ಹಾಗೂ ಸಾಮಾನ್ಯ ನ್ಯಾಯಾಲಯಗಳೆರಡರ ವ್ಯಾಪ್ತಿಗೂ ಒಳಪಡುವರು. ಅವರು ತನ್ನ ಸೈನಿಕ ನ್ಯಾಯಾಲಯ ಹಾಗೂ ಪ್ರಜೆಯಾಗಿ ಸಾಮಾನ್ಯ ಕಾನೂನಿನಡಿಯಲ್ಲಿ ನಾಗರಿಕ ನ್ಯಾಯಾಲಯಗಳ ವ್ಯಾಪ್ತಿಗೂ ಬರುತ್ತಾರೆ. ಯಾರೇ ಈ ವಿಧವಾಗಿ ಶಿಕ್ಷೆಗೆ ಗುರಿಯಾಗದೇ ಹೋಗಿದ್ದರೆ ನಾಗರಿಕರು ಒತ್ತಾಯ ಮಾಡಿಲ್ಲ ಎಂದೇ ಹೇಳಬಹುದು.

**ಶ್ರೀ ಮಹಾವೀರ್ ತ್ಯಾಗಿ:** ಹಾಗಾದರೆ ಒಂದೇ ಅಪರಾಧಕ್ಕೆ ಅವನು ಎರಡು ಬಗೆಯ ಶಿಕ್ಷೆಯನ್ನು ಅನುಭವಿಸಬೇಕೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸಹಜವಾಗಿ

**ಶ್ರೀ ಆರ್. ಕೆ. ಸಿಧ್ವ:** ತಾವು ಏಕೆ ಸ್ಪಷ್ಟಪಡಿಸಬಾರದು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ತಿಳಿದ ವಿಷಯವೇ ಆಗಿದೆ. ಏಕೆಂದರೆ ಭಾರತದ ದಂಡ ಸಂಹಿತೆ ಭಾಗ (೨) ದಲ್ಲಿ ಹೇಳಿದಂತೆ ಪ್ರತಿಯೋರ್ವ ವ್ಯಕ್ತಿ ಅಂದರೆ ಮೇಲು ಕೀಳು ಅಥವಾ ಸಶಸ್ತ್ರ ಯಾವ ವ್ಯತ್ಯಾಸಗಳಿಗೂ ಅವಕಾಶವಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಟಿ.ಟಿ.ಕೃಷ್ಣಮಾಚಾರಿಯವರೇ ಏನಾದರೂ ಹೇಳಬಯಸುವಿರಾ?

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಏನೂ ಇಲ್ಲ.

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿಯನ್ನು ಮತಕ್ಕೆ ಹಾಕುವೆ.

(ತಿದ್ದುಪಡಿಗಳನ್ನೂ ನಿರಾಕರಿಸಲಾಯಿತು)

ಈಗ ನಾನು ವಿಧಿ ೧೧೨ ನಂ. ೪೨೧ರ ತಿದ್ದುಪಡಿಯಂತೆ ಮಂಡಿಸುವೆ.

ಎರಡನೆಯ ಪಟ್ಟಿ ತಿದ್ದುಪಡಿ ನಂ. ೩೬೪ ವಿಧಿ ೧೧೨ ಕ್ಕೆ ಸಂಬಂಧಿಸಿದಂತೆ ಈ ವಿಧಿಯನ್ನು ಸೇರ್ಪಡಿಸಬೇಕು.

೧೧೨(೧) ಭಾರತ ಪ್ರದೇಶದಲ್ಲಿಯ ಯಾವುದೇ ನ್ಯಾಯಾಲಯ, ನ್ಯಾಯಮಂಡಳಿ ನೀಡಿರಬಹುದಾದ ತೀರ್ಪು, ಆಜ್ಞೆ, ಆದೇಶ, ನಿರ್ಣಯಗಳು ಕುರಿತಂತೆ ಸರ್ವೋಚ್ಚ ನ್ಯಾಯಾಲಯ, ಸೂಕ್ತವೆನಿಸಿದಾಗ, ವಿಶೇಷ ಅವಕಾಶ ನೀಡಬಹುದು. ಹಾಗೂ ಈ ವಿಧವಾದ ಮನವಿಗಳನ್ನು ಮರುಪರಿಶೀಲಿಸಬಹುದು.

(೨) ಈ ಒಂದನೆಯ ಉಪನಿಬಂಧನೆಯು, ಸಶಸ್ತ್ರ ಪಡೆಗಳಿಗೆಂದೇ ನಿರ್ಮಿಸಿದ ನ್ಯಾಯಮಂಡಳಿಗೆ ಅನ್ವಯಿಸಲಾಗದು.

**(ಈ ಮಂಡನೆಯನ್ನು ಅಂಗೀಕರಿಸಲಾಯಿತು. ೧೧೨ನೆಯ ವಿಧಿಗೆ ತಿದ್ದುಪಡಿಯೊಂದಿಗೆ ಸಂವಿಧಾನದಲ್ಲಿ ಅಳವಡಿಸಲಾಯಿತು.)**

* * *

**ಮಾನ್ಯ ಸಭಾಧ್ಯಕ್ಷರು:** ನಾವು ಉಪನಿಬಂಧನೆಗಳು ಮುಕ್ತಾಯದ ಹಂತದಲ್ಲಿರುವುದರಿಂದ ಮಿಕ್ಕಿರಬಹುದಾದ ನಾಲ್ಕು ಅಥವಾ ಐದು ನಿಬಂಧನೆಗಳ ಬಗ್ಗೆ ಕಚ್ಚಾಟ ಬೇಡ.

**ಶ್ರೀ ಕೆ. ಸಂತಾನಮ್:** ಆದರೆ ಕೆಲವು ತಿದ್ದುಪಡಿಗಳು ಪ್ರಮುಖವಾಗಿರುವುದರಿಂದ ನನ್ನ ದೃಷ್ಟಿಯಲ್ಲಿ ಚರ್ಚೆ ಮಾಡಬೇಕು. ಆದರೆ ಅದನ್ನು ತಮ್ಮ ನಿರ್ಣಯಕ್ಕೆ ಬಿಡುವೆ. ಆದರೆ ಪಾರ್ಲಿಮೆಂಟ್‌ನಿಂದ ಮಾಡಿದ "ಪದವಿರಲೇಬೇಕು ಎಂದೇ ಸೂಚಿಸುವೆ, ಏಕೆಂದರೆ ಅದು ಯಾವ ಸಂದೇಹಕ್ಕೂ ಆಸ್ಪದ ನೀಡದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬೊಂಬಾಯಿ:ಸಾಮಾನ್ಯ): ಮಾನ್ಯರೆ ನನ್ನ ಮಿತ್ರರಾದ ಶ್ರೀ ಸಂತಾನಮ್ ಅವರ ತಿದ್ದುಪಡಿ ಅನಾವಶ್ಯಕವೆಂದೇ ಹೇಳುವೆ. ಏಕೆಂದರೆ ೬೦ನೆಯ ವಿಧಿಯಲ್ಲಿ ಹೇಳಿದ ೬೦ ದಿನಗಳ ಕಾಲಾವಧಿಯ ವಿಷಯವನ್ನು ಅವರು ಮರೆತಿರುವಂತಿದೆ. ಒಕ್ಕೂಟದ ಆಡಳಿತಾಧಿಕಾರವು ಸಂಸತ್ತಿಗೇ ಸೇರಿದೆ. ಹೀಗಾಗಿ ಯಾವುದೇ ಕಾನೂನಿನಲ್ಲಿ ಬದಲಾವಣೆಯಾಗಬೇಕಾದರೆ ಸಂಸತ್ತಿನ ಸಮ್ಮತಿ ಬೇಕೇ ಬೇಕು. (ಜಂಟಿ ಪಟ್ಟಿಗೆ ಸಂಬಂಧಿಸಿದಂತೆ) ಹೀಗಾಗಿ ನನ್ನ ಮಿತ್ರರಾದ ಶ್ರೀ ಟಿ.ಟಿ.ಕೃಷ್ಣಮಾಚಾರಿಯವರು ವಿಧಿ ೫೯ (೧) (ಬಿ)ಗೆ ಸೂಚಿಸಿರುವ ತಿದ್ದುಪಡಿಯಂತೆ ಯಾರೇ ಆಗಲಿ ಸಂಸತ್ತು ಮೀರಿ ಕಾನೂನು ಮಾಡಲಾರರು.

**ಶ್ರೀ ಕೆ. ಸಂತಾನಮ್:** ಈ ವಿಧಿಯು ಕಾನೂನು ರಚನೆಗೆ ಮಾತ್ರ ಸೀಮಿತವಾಗಿರದೇ ಇತರ ವಿಷಯಗಳಿಗೂ ವಿಸ್ತರಿಸಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸಲ್ಲದು. ಸಂಸತ್ತಿನ ಅಧಿಕಾರ ಎಲ್ಲದಕ್ಕೂ ವಿಸ್ತರಿಸಲಾಗದು. ಏಕೆಂದರೆ III ಪಟ್ಟಿಯಲ್ಲಿ ತಿಳಿಸಿದ ವಿಷಯಗಳು ರಾಜ್ಯಕ್ಕೆ ಸೀಮಿತವಾಗಿರುವುದರಿಂದ ಸಂಸತ್ತಿನ ಅಧಿಕಾರವನ್ನು ವಿಸ್ತರಿಸಿದಲ್ಲಿ ಅನಾಹುತಕ್ಕೆ ಆಸ್ಪದ ನೀಡಿದಂತಾಗುತ್ತದೆ. ಆದುದರಿಂದ ಶ್ರೀ ಸಂತಾನಮ್ ಅವರು ಸೂಚಿಸಿದ ತಿದ್ದುಪಡಿ ಬೇಕಾಗಿಲ್ಲ. ಅವರ ಇಂಗಿತ ೬೦ನೆ ವಿಧಿಯಲ್ಲಿ ಅಡಕವಾಗಿದೆ.

(ಶ್ರೀ ಸಂತಾನಮ್ ಅವರ ಸೂಚನೆಯನ್ನು ತಳ್ಳಿ ಹಾಕಲಾಯಿತು)

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಿತ್ರರಾದ ಟಿ. ಟಿ. ಕೃಷ್ಣಮಾಚಾರಿಯವರು ಮಂಡಿಸಿರುವ ಗೊತ್ತುವಳಿ ನೂತನವಾದ್ದೇನೂ ಅಲ್ಲ. ಏಕೆಂದರೆ ಅದು ೧೯೩೫ರ ಕಾನೂನಿಗೆ ಸೇರಿದ ಸಂಗತಿ. ಈ ಕಾರ್ಯ ಸಲಹೆರೂಪವಾಗಿ ಸಲಕರಣೆಯೆ ಅವರು ಮಂಡಿಸಿದ ಸಂಗತಿ. ಭಾರತ ಸರಕಾರದ ೧೯೩೫ ಕಾಯ್ದೆಯ ೧೭ ಪ್ಯಾರಾದಲ್ಲಿ ಹೀಗೆ ಹೇಳಲಾಗಿದೆ.

ಯಾವ ವಿಧವಾದ ಸಾಮಾನ್ಯ ಅಧಿಕಾರಕ್ಕೆ ಧಕ್ಕೆ ಬಾರದಂತೆ ನಮ್ಮ ಸರಕಾರವು, ಮಸೂದೆಗಳನ್ನು ಕಾಯ್ದಿರಿಸುವ ಬಗೆಗೆ ಗವರ್ನರ್ ಜನರಲ್ಲರ ಅವಗಾಹನೆಗೆ ತರುತ್ತದೆ. ಅದನ್ನು ಸ್ಪಷ್ಟೀಕರಿಸಲಾಗಿದೆ.

(ಬಿ) ಯಾವುದೇ ಮಸೂದೆಯು, ಗವರ್ನರ್‌ರ ಅಭಿಪ್ರಾಯದಲ್ಲಿ ಶ್ರೇಷ್ಠ ನ್ಯಾಯಾಲಯಕ್ಕೆ ಕುಂದು ತರುವಂತೆ ಇದ್ದಲ್ಲಿ ಅಂಥ ಮಸೂದೆಯನ್ನು ಗವರ್ನರ್ ಜನರಲ್ಲರ ಗಮನಕ್ಕೆಂದೇ ತಡೆ ಹಿಡಿಯಲಾಗುವುದು.

ಈ ಒಂದು ಉಪನಿಬಂಧನೆಯನ್ನು ಸಂವಿಧಾನ ರಚನಾ ಸಮಿತಿಯು ೪ನೆಯ ಪರಿಚ್ಛೇದದಲ್ಲಿ III ಅಳವಡಿಸಿಕೊಂಡಿದೆ. ೩೬೮-೩೭೬ ಪುಟಗಳಲ್ಲಿ ನನ್ನ ಸೂಚನೆಗೆ ಅನುಗುಣವಾಗಿ ರಚನಾ ಸಮಿತಿಯು ರಾಜಪಾಲರಿಗೆ ಸೂಚನೆಗಳು ನೀಡುವ ನಿಟ್ಟಿನಲ್ಲಿ ಈ ಮೇಲೆ ತಿಳಿಸಿದ ಸಂಗತಿಯನ್ನು ಅಳವಡಿಸಿಕೊಂಡಿದೆ. ಅದಕ್ಕೆ ಕಾರಣಗಳೆಂದರೆ:

ಶ್ರೇಷ್ಠ ನ್ಯಾಯಾಲಯಗಳು ಕೇಂದ್ರ ಹಾಗೂ ಪ್ರಾಂತ್ಯಗಳ ಅಧೀನದಲ್ಲಿ ಕಾರ್ಯಾಚರಣೆ ಮಾಡುತ್ತವೆ. ಶ್ರೇಷ್ಠ ನ್ಯಾಯಾಲಯದ ಸಂಘಟನೆ ಹಾಗೂ ವ್ಯಾಪ್ತಿಗೆ ಸಂಬಂಧಿಸಿದಂತೆ ಅದು ಸಂಪೂರ್ಣವಾಗಿ ಕೇಂದ್ರವನ್ನೇ ಅವಲಂಬಿಸಿದೆ. ಈ ದಿಶೆಯಲ್ಲಿ ಆ ನ್ಯಾಯಾಲಯದ ಪ್ರಾದೇಶಿಕ ವ್ಯಾಪ್ತಿಯನ್ನು ನಿರ್ಧರಿಸುವ ಅಧಿಕಾರ ಪ್ರಾಂತ್ಯಗಳಿಗಿಲ್ಲ. ಆದರೆ ಶ್ರೇಷ್ಠ ನ್ಯಾಯಾಲಯಕ್ಕೆ ಬರಬಹುದಾದ ಮೊಕದ್ದಮೆಗಳ ಹಣದ ವ್ಯಾಪ್ತಿಯನ್ನು ನಿರ್ಣಯಿಸುವ ಅಧಿಕಾರ ಪ್ರಾಂತ್ಯಗಳಿಗೆ ಇದೆ. ಇದು ಎರಡನೆಯ ಪಟ್ಟಿಯಲ್ಲಿ ಹೇಳಿರಬಹುದಾದ ವಿಷಯಗಳಿಗೆ ಸೀಮಿತವಾಗಿದೆ, ನೂತನ ಸಂವಿಧಾನದಂತೆ. ಏಕೆಂದರೆ ಈ ದಿಶೆಯಲ್ಲಿ ಪ್ರಾಂತೀಯ ಶಾಸನಸಭೆಗಳು,

ಶ್ರೇಷ್ಠ ನ್ಯಾಯಾಲಯದ ಮುಂದೆ ವಿಚಾರಣೆಗೆ ಬರಬಹುದಾದ ಮೊಕದ್ದಮೆಗಳ ಹಣದ ಮೊತ್ತವನ್ನು ನಿಗದಿಪಡಿಸಬಹುದಾದ ಕಾನೂನುಗಳನ್ನು ರಚಿಸಬಹುದು. ಹೀಗೆ ಪ್ರಾಂತ್ಯಗಳು ಶ್ರೇಷ್ಠ ನ್ಯಾಯಾಲಯದ ಕಾರ್ಯ ವ್ಯಾಪ್ತಿಯನ್ನು ಕಡಿತಗೊಳಿಸಬಹುದು.

ಎರಡನೆಯದಾಗಿ, ಎರಡನೆಯ ಪಟ್ಟಿಯಲ್ಲಿ ಹೇಳಿದ ವಿಷಯಗಳ ಬಗೆಗೆ ಉದಾಹರಣೆಗೆ ಸಾಲ ಮನ್ನಾ ಮಾಡುವ ವಿಷಯ ಕುರಿತಂತೆ ಶ್ರೇಷ್ಠ ನ್ಯಾಯಾಲಯವು ಡಿಕ್ರಿಯನ್ನು ತಡೆಗಟ್ಟುವಲ್ಲಿ ಮಸೂದೆಗಳನ್ನು ರಚಿಸಬಹುದು.

ನನಗೆ ತೋಚಿದಂತೆ ಈ ವಿಧವಾದ ಕಾರ್ಯಾಚರಣೆಯಿಂದ ಶ್ರೇಷ್ಠ ನ್ಯಾಯಾಲಯದ ಅಧಿಕಾರಕ್ಕೆ ಅಪಮಾನವಾಗುವ ಸಾಧ್ಯತೆಗಳಿರುವುದರಿಂದಲೇ ಈ ವಿಷಯವನ್ನು ನೇರವಾಗಿ ೧೯೩೫ನೆ ಕಾಯ್ದೆಯಿಂದ ಅಳವಡಿಸಿಕೊಳ್ಳಲಾಗಿದೆ. ಸಂವಿಧಾನದ ಪ್ರಮುಖ ಅಂಶಗಳಲ್ಲಿ ಒಂದಾದ ಶ್ರೇಷ್ಠ ನ್ಯಾಯಾಲಯದ ಘನತೆಗೆ ಕುಂದು ಬರಬಾರದು ಹಾಗೂ ಶಾಸನಸಭೆ, ಆಡಳಿತಾಂಗ ಮತ್ತು ನಾಗರಿಕರ ನಡುವಿನ ಬಾಂಧವ್ಯಕ್ಕೆ ಕುಂದು ಬರಬಾರದೆಂದೇ ರಾಷ್ಟ್ರಪತಿಯವರಿಗೆ ಈ ವಿಶೇಷ ಅಧಿಕಾರವನ್ನು ನೀಡಬೇಕೆಂದೇ ಈ ತಿದ್ದುಪಡಿಯ ಗುರಿ.

**ಹೆಚ್. ವಿ. ಕಾಮತ್:** ನಾನು ಭಾಷೆಯ ಸರಳೀಕರಣಕ್ಕೆ ಸಂಬಂಧಿಸಿದ ತಿದ್ದುಪಡಿಯನ್ನು ಮಂಡಿಸಿದ ವಿಷಯ ಏನಾಗಿದೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ಹಂತದಲ್ಲಿ ರಚನೆಗೆ ಸಂಬಂಧಿಸಿದ ತಿದ್ದುಪಡಿಗಳಿಗೆ ನಾನು ಅವಕಾಶ ನೀಡಲಾರೆ.

**ಹೆಚ್.ವಿ. ಕಾಮತ್:** ಹಾಗಾದರೆ ನಂತರ ಮಾಡಿ.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ಮತಕ್ಕೆ ಹಾಕುವೆ.

(ಕೃಷ್ಣಮಾಚಾರಿಯವರ ತಿದ್ದುಪಡಿ)

**ಅಡಗಿರುವ ಪ್ರಶ್ನೆ ಎಂದರೆ:** ೧೭೫ನೇ ವಿಧಿಗೆ ಕೆಳಗಿನ ಅಂಶಗಳನ್ನು ಸೇರಿಸಬೇಕು. ಯಾವುದೇ ಮಸೂದೆ ಗವರ್ನರರ ಅಭಿಪ್ರಾಯದಲ್ಲಿ, ಶ್ರೇಷ್ಠ ನ್ಯಾಯಾಲಯದ ಘನತೆಗೆ ಕುಂದು ತರಬಹುದೆಂದಿದ್ದರೆ ಆ ವಿಧವಾದ ಮಸೂದೆಯನ್ನು ರಾಷ್ಟ್ರಪತಿಗಳ ಮಂಜೂರಾತಿಗೆ ಕಳಿಸಬಹುದು.

**ತಿದ್ದುಪಡಿಯನ್ನು ಅಂಗೀಕರಿಸಲಾಯಿತು.**

* * *

**ಮಾನ್ಯ ಸಭಾಧ್ಯಕ್ಷರು:** ಡಾ॥ ಅಂಬೇಡ್ಕರರೇ ನೀವು ಉತ್ತರ ನೀಡಲು ಬಯಸುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ವಿಧಿಯನ್ನು ೮ನೆಯ ವಿಧಿಯೊಂದಿಗೆ ಬರಬೇಕು. ವಿಧಿ ೯ ಹೇಳುವಂತೆ

"ಈ ಸಂವಿಧಾನ ಜಾರಿಗೆ ಬರುವ ಮುನ್ನ ಭಾರತೀಯ ಪ್ರದೇಶದಲ್ಲಿದ್ದ ವಿವಿಧ ಕಾನೂನುಗಳು, ಸಂವಿಧಾನದಲ್ಲಿ ಸೂಚಿಸಿದ ಕಾನೂನುಗಳಿಗೆ ವಿರೋಧವಾಗಿದ್ದಲ್ಲಿ ಅವು ನಿಷೇಧಕ್ಕೆ ಗುರಿಯಾಗಿದೆ. ಅಲ್ಲದೆ ಸಂವಿಧಾನಬಾಹಿರ ಎಂದೇ ಪರಿಗಣಿಸಲಾಗುವುದು."

ಈ ವಿಧಿಯಲ್ಲಿ ಹೇಳಲಾದಂತೆ ಅಪಮಾನ, ಆಪಾದನೆ, ಹೀನವಾಗಿ ತೆಗಳುವಿಕೆ, ಹಾಗೂ ರಾಷ್ಟ್ರೀಯ ಭದ್ರತೆಗೆ ಧಕ್ಕೆ ತರಬಹುದಾದ ಹೇಳಿಕೆಗಳಿಗೆ ಇದು ಅನ್ವಯಿಸುವುದಿಲ್ಲ. ಅವು ಹಿಂದಿನಂತೆಯೇ ಮುಂದುವರಿಯುತ್ತವೆ. "ನ್ಯಾಯಾಲಯದ ನಿಂದನೆ" ಎಂಬ ಪದವಿಲ್ಲದೇ ಹೋದರೂ ಆ ವಿಷಯಕ್ಕೆ

ಸಂಬಂಧಿಸಿದ ಸಂಗತಿಗಳಿಗೆ ಎಂಟನೆಯ ವಿಧಿಯು ಅನ್ವಯಿಸುತ್ತದೆ. ಹಾಗೂ ಅದನ್ನು ನಿಷೇಧಿಸಲಾಗುವುದು. ಈ ವಿಧವಾದ ಅವಕಾಶ ಬರಕೂಡದು ಎಂದೇ "ನ್ಯಾಯಾಲಯದ ನಿಂದನೆ" ಪದಗಳನ್ನು ಬಳಸಿರುವುದರಿಂದ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವಲ್ಲಿ ಯಾವುದೇ ತೊಂದರೆ ಇಲ್ಲ.

ಈಗ ನನ್ನ ಮಿತ್ರರಾದ ಸಂತಾನಮ್ ಅವರು ಮೂಲಭೂತ ಹಕ್ಕುಗಳಿಗೆ ಹೇಳಿದ ಸಂಗತಿ ಸತ್ಯದಿಂದ ಕೂಡಿದೆ. 'ರಾಜ್ಯ' ಪದವನ್ನು ಎರಡೂ ಸಂದರ್ಭಗಳಲ್ಲಿ ಉಪಯೋಗಿಸಿವೆ. ಈ ಪದ ಪ್ರಾಂತ್ಯ ಹಾಗೂ ಕೇಂದ್ರಕ್ಕೆ ಅನ್ವಯಿಸುತ್ತದೆ. ಆದರೆ ಈ ವಿಷಯದಲ್ಲಿ ನನ್ನ ಮಿತ್ರರು ಮನವರಿಕೆ ಮಾಡಿಕೊಳ್ಳಬೇಕಾದ ವಿಷಯ ಎಂದರೆ, ರಾಜ್ಯ ಅಂದರೆ ಪ್ರಾಂತ್ಯಗಳು ಮತ್ತು ಕೇಂದ್ರವೂ ಕಾನೂನುಗಳನ್ನು ರಚಿಸಬಹುದು. ಎರಡನೆಯ ಪಟ್ಟಿಗೆ ಸೇರಿದ ವಿಷಯಗಳಲ್ಲಿ ಒಂದು ವೇಳೆ ಪ್ರಾಂತ್ಯವು ರಚಿಸಿರಬಹುದಾದ ಕಾನೂನು ದೋಷಪೂರಿತವಾಗಿದ್ದಲ್ಲಿ, ಕೇಂದ್ರ ಅದನ್ನು ಕೈಗೆತ್ತಿಗೊಂಡು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಗುಣವಾಗಿ ತಿದ್ದುಪಡಿ ಮಾಡಬಹುದು.

**ಶ್ರೀ ಕೆ. ಸಂತಾನಮ್:** "ನ್ಯಾಯಾಲಯದ ನಿಂದನೆ" ಎಂಬ ವಿಷಯವು ಜಂಟಿ ಪಟ್ಟಿಯಲ್ಲಿ ಸೇರ್ಪಡೆಯಾಗಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಹಾಗಿದ್ದಲ್ಲಿ ಅದನ್ನು ಅಳವಡಿಸಲಾಗುವುದು.

**ಮಾನ್ಯ ಸಭಾಧ್ಯಕ್ಷರು:** ಹಾಗಾದರೆ, ನಾನು ಈ ತಿದ್ದುಪಡಿಗಳನ್ನು ಮತದಾನಕ್ಕೆ ಮಂಡಿಸುವೆ. ನನಗೆ ತಿಳಿದಂತೆ, ಪಂಡಿತ್ ಠಾಕೂರ್‌ದಾಸ್ ಭಾರ್ಗವರ ತಿದ್ದುಪಡಿಯು ಬೇರೆಯಾಗಿದ್ದು ಅದು ಕೃಷ್ಣಮಾಚಾರಿಯವರು ಮಂಡಿಸಿದ ತಿದ್ದುಪಡಿಗೆ ತಿದ್ದುಪಡಿಯಲ್ಲ. ಆದುದರಿಂದ ಅದನ್ನು ಬೇರೆಯಾಗಿ ಕೈಗೆತ್ತಿಕೊಳ್ಳಬಹುದು. ಆದುದರಿಂದ ನಾನು ಮೊದಲು ಕೃಷ್ಣಮಾಚಾರಿಯವರ ತಿದ್ದುಪಡಿಯನ್ನು ಮತದಾನಕ್ಕೆ ಹಾಕುವೆ.

ಪ್ರಶ್ನೆ ಎಂದರೆ ವಿಧಿ ೧೩೮ (೨) ಉಪನಿಬಂಧನೆಯಲ್ಲಿ 'ಮಾನಹಾನಿ' ಪದದ ನಂತರ 'ನ್ಯಾಯಾಲಯದ ನಿಂದನೆ' ಪದವನ್ನು ಸೇರ್ಪಡಿಸಬೇಕು.

**ತಿದ್ದುಪಡಿಯನ್ನು ಅಂಗೀಕರಿಸಲಾಯಿತು.**

ಪಂಡಿತ್ ಠಾಕೂರ ದಾಸ್ ಭಾರ್ಗವ ಅವರ ತಿದ್ದುಪಡಿ ತಿರಸ್ಕರಿಸಲಾಯಿತು.

* * *

**ಮಾನ್ಯ ಸಭಾಧ್ಯಕ್ಷರು:** ನಂತರ ನಾವು ನೂತನ ೩೦೨ಎಎಎ ಅಂದರೆ ತಿದ್ದುಪಡಿ ನಂ. ೪೫೦ ಶ್ರೀ ಸಂತಾನಮ್ ಅವರ ಸಲಹೆಯಂತೆ "ನ್ಯಾಯಾಲಯದ ನಿಂದನೆ" ವಿಷಯವನ್ನು ಜಂಟಿ ಪಟ್ಟಿಯಲ್ಲಿ ಸೇರ್ಪಡಿಸಬೇಕೆಂದಿದೆ. ಇದು ಸಂದರ್ಭೋಚಿತವಾದುದರಿಂದ ಇದನ್ನು ಕೈಗೆತ್ತಿಕೊಳ್ಳುವುದು ಸೂಕ್ತ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ನೇರವಾಗಿ ತಿದ್ದುಪಡಿಯನ್ನು ಮಂಡಿಸುವೆ. ಜಂಟಿ ಪಟ್ಟಿಯ ೧೫ನೇ ವಿಷಯದ ನಂತರ ೧೫ಎ 'ನ್ಯಾಯಾಲಯದ ನಿಂದನೆ' ಎಂಬುದನ್ನು ಸೇರ್ಪಡಿಸ ಬೇಕು.

**ಮಾನ್ಯ ಸಭಾಧ್ಯಕ್ಷರು:** ಇದಕ್ಕೆ ಯಾರ ಅಭ್ಯಂತರವೂ ಇಲ್ಲವೆಂದೇ ಭಾವಿಸುತ್ತೇನೆ.

**ಶ್ರೀ ನಜೀರುದ್ದೀನ್ ಅಹ್ಮದ್:** ಇದರಂತೆ ಇನ್ನೂ ಅನೇಕ ವಿಷಯಗಳಿರಬಹುದು.

**ಮಾನ್ಯ ಸಭಾಧ್ಯಕ್ಷರು:** ಸಹಜ ಅವು ಸೂಕ್ತ ಸಮಯದಲ್ಲಿ ಪ್ರಸ್ತಾವಿಸಬಹುದು. ನಾನು ಮತದಾನಕ್ಕೆ ಹಾಕುವೆ.

**ಮೇಲಿನ ತಿದ್ದುಪಡಿಯನ್ನು ಸ್ವೀಕರಿಸಲಾಯಿತು.**

**ಪ್ರವೇಶ ೧೫ಎ ಯನ್ನು ಜಂಟಿ ಪಟ್ಟಿಯಲ್ಲಿ ಸೇರ್ಪಡಿಸಲಾಯಿತು.**

## ನೂತನ ವಿಧಿ ೩೦೨ಎಎಎ

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನನ್ನ ಮಿತ್ರರಾದ ಶ್ರೀ ಸಿಧ್ವ ಅವರು ಸಂಪೂರ್ಣವಾಗಿ ಪರಿಸ್ಥಿತಿಯನ್ನು ತಪ್ಪಾಗಿಯೇ ಗ್ರಹಿಸಿದ್ದಾರೆ. ಏಕೆಂದರೆ ಅವರು ಎರಡನೇ ಪಟ್ಟಿಯಲ್ಲಿ ಕ್ರಮಾಂಕ ೩೦ ಹಾಗೂ ೩೫ ಏಳನೆಯ ಪರಿಚ್ಛೇದದಲ್ಲಿ ಸೂಚಿಸಿದ ವಿಷಯವನ್ನು ಸರಿಯಾಗಿ ಗಮನಿಸಿದಂತಿಲ್ಲ. ಶ್ರೀ ಕೃಷ್ಣಮಾಚಾರಿಯವರ ತಿದ್ದುಪಡಿಯಂತೆ ಶಾಸನ ರಚನೆಯ ಅಧಿಕಾರವನ್ನು ೩೦ ಹಾಗೂ ೩೧ನೆಯ ಸಂಗತಿಯಡಿಯಲ್ಲಿ ಕೇಂದ್ರಕ್ಕೆ ನೀಡಿರುವ ಅಧಿಕಾರ ಇತಿಮಿತಿಯಿಂದ ಕೂಡಿದೆ. ೩೦ನೆಯ ಕಲಮಿನಲ್ಲಿ ವಾಯುಮಾರ್ಗ, ವಾಣಿಜ್ಯ, ನಿಬಂಧನೆಗಳನ್ನು ಸೂಚಿಸಿದೆ. ೩೫ನೇ ಕಲಮಿನಲ್ಲಿ ರೇವು ಬಂದರುಗಳ ಪ್ರದೇಶಕ್ಕೆ ಸಂಬಂಧಿಸಿದ ನಿಯಮಗಳನ್ನು ಸೂಚಿಸಿದೆ. ಈ ಕಲಮುಗಳನ್ನು ನನ್ನ ಮಿತ್ರರು ಗಮನಿಸಿ ನೋಡಿದಲ್ಲಿ ವಿಮಾನ ನಿಲ್ದಾಣ ಹಾಗೂ ಬಂದರು ಪ್ರದೇಶಗಳಿಗೆ ಸೇರಿದ ಪ್ರದೇಶವು ಪ್ರಾಂತ್ಯಗಳಿಗೆ ಸೇರಿರುವುದರಿಂದ, ಸಂದರ್ಭೋಚಿತವಾಗಿ ಪ್ರಾಂತ್ಯಗಳು ಮಾಡಿದ ನಿಯಮಗಳು ಅವಕ್ಕೆ ಅನ್ವಯಿಸುತ್ತದೆ. ಹೀಗಾಗಿ ೩೦–೩೫ನೇ ಕಲಮುಗಳ ಕೇಂದ್ರಕ್ಕೆ ಯಾವ ವಿಧವಾದ ಅಧಿಕಾರಕ್ಕೆ ಆಸ್ಪದ ನೀಡುವುದಿಲ್ಲ. ಹೀಗಾಗಿ ಈ ವಿಧಿಯಲ್ಲಿ ಸೂಚಿಸಬಹುದಾದ ಸಂಗತಿ ಎಂದರೆ ವಿಮಾನ ನಿಲ್ದಾಣ ಹಾಗೂ ಬಂದರು ಪ್ರದೇಶಗಳಿಗೆ ಸೇರಿದ ಸಂಗತಿ. ಪ್ರಾಂತ್ಯಗಳದ್ದಾದರೂ ಹಲವಾರು ವಿಷಯಗಳು ಅಂದರೆ ನೈರ್ಮಲ್ಯ ರೋಗ ಪ್ರತಿಬಂಧನ ಮುಂತಾದ ವಿಷಯಗಳಲ್ಲಿ ರಾಷ್ಟ್ರಪತಿಗಳಿಗೆ ಸೂಕ್ತವೆಂದು ತೋರಿದಲ್ಲಿ ನಿಯಮಾವಳಿಗಳನ್ನು ರಚಿಸಬಹುದು. ಈ ಒಂದು ವಿಷಯ ಬಿಟ್ಟು ಕೇಂದ್ರಕ್ಕೆ ಬೇರೆ ಯಾವ ವಿಧವಾದ ಅಧಿಕಾರಗಳೂ ಇರಲಾರವು. ಹೀಗಾಗಿ ನನ್ನ ಸ್ನೇಹಿತರು ಈ ವಿಷಯವನ್ನು ಗ್ರಹಿಸುವರೆಂದೂ ಹಾಗೂ ತಮ್ಮ ತಿದ್ದುಪಡಿಯನ್ನು ಮರಳಿ ಪಡೆಯುವರೆಂದು ಭಾವಿಸುವೆ.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ತಿದ್ದುಪಡಿ ನಂ. ೪೫೦ ಅನ್ನು ಮತದಾನಕ್ಕೆ ಮಂಡಿಸುವೆ.

ಅದು ಹೀಗಿದೆ:

೩೦೨ಎಎ ವಿಧಿಯ ನಂತರ ಈ ಕೆಳಗಿನವದನ್ನು ಸೇರ್ಪಡಿಸಬೇಕು.

"೩೦೨ಎಎಎ(೧) ಈ ಸಂವಿಧಾನದಲ್ಲಿ ಹೇಳಿದ ಯಾವ ಸಂಗತಿಗೆ ಧಕ್ಕೆ ಬಾರದಂತೆ ರಾಷ್ಟ್ರಪತಿಯವರು ತಮಗೆ ಸೂಕ್ತವೆನಿಸಿದ ದಿನದಿಂದ ನಿರ್ದೇಶನವನ್ನು ಪ್ರಕಟಿಸಬಹುದು.

(ಎ) ಯಾವುದೇ ಪ್ರಮುಖ ವಿಮಾನ ನಿಲ್ದಾಣ ಹಾಗೂ ಬಂದರುಗಳಿಗೆ ಕೇಂದ್ರ ಹಾಗೂ ರಾಜ್ಯದ ನಿಯಮಾವಳಿಗಳು, ವಿಶೇಷ ಪ್ರಕಟಣೆಗಳ ಮುಖಾಂತರವೇ ಜಾರಿಯಲ್ಲಿ ಬರುವವು.

(ಬಿ) ತಿಳಿಸಲಾದ ದಿನಾಂಕಕ್ಕೆ ಇರಬಹುದಾದ ನಿಯಮಗಳು, ಪ್ರಮುಖ ವಾಯುನಿಲ್ದಾಣ ಮತ್ತು ಬಂದರುಗಳಿಗೆ ಸಂಬಂಧಿಸಿದಂತೆ ಮೊದಲು ಇದ್ದುದರಿಂದ ರದ್ದಾಗುವುವು. ಆದರೆ ವಿಶೇಷ ಪ್ರಕಟನೆಯ ಮೂಲಕ ತಿಳಿಸಿದ ನಿಯಮಗಳಿಗೆ ಇದು ಅನ್ವಯಿಸಲಾರದು.

(೨) ಈ ವಿಧಿಯಲ್ಲಿ

(ಎ) **'**ಪ್ರಮುಖ ಬಂದರು**'** ಎಂದರೆ ಪ್ರಮುಖ ಬಂದರು ಎಂದು ಸಾರಲಾದ ಸಂಸತ್ತಿನಿಂದಾಗಲಿ ಅಥವಾ ಯಾವುದೇ ನಿಯಮಾವಳಿಯ ಅಡಿಯಲ್ಲಿ ಘೋಷಿಸಿರಬಹುದಾದ ಪ್ರದೇಶ.

(ಬಿ) **'**ವಾಯು ನಿಲ್ದಾಣ**'** ಎಂದರೆ, ವಾಯುಮಾರ್ಗಕ್ಕೆಂದೇ ವ್ಯಾಖ್ಯಾನಿಸಿರುವ ಹಾಗೂ ವಿಮಾನ ಮತ್ತು ವಾಯು ಉಡಾಣಕ್ಕೆ ಸೇರಿದಂತಹ ಪ್ರದೇಶ.

**ತಿದ್ದುಪಡಿಯನ್ನು ಅಂಗೀಕರಿಸಲಾಯಿತು.**

**ವಿಧಿ ೩೦೨ಎಎಎ ಯನ್ನು ಸಂವಿಧಾನದಲ್ಲಿ ಸೇರ್ಪಡಿಸಲಾಯಿತು.**

* * *

**ಮಾನ್ಯ ಸಭಾಧ್ಯಕ್ಷರು:** ಈಗ ನನಗೆ ಅನ್ಯಮಾರ್ಗವೇ ಇಲ್ಲ. ಹೀಗಾಗಿ ನಾನು ಕಾಮತ್‌ರ ತಿದ್ದುಪಡಿಯನ್ನು ಮತಕ್ಕೆ ಹಾಕಲೇಬೇಕಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರನ್ನು ತಿದ್ದುಪಡಿಯನ್ನು ಮರಳಿ ಪಡೆಯುವಂತೆ ಕೇಳಬಹುದಲ್ಲವೆ?

**ಮಾನ್ಯ ಸಭಾಧ್ಯಕ್ಷರು:** ನಾನು ಈಗಾಗಲೇ ಅವರನ್ನು ತಿದ್ದುಪಡಿಯನ್ನು ಮಂಡಿಸಬಾರದೆಂದೇ ಕೋರುವೆ. ಆದರೆ ಅವರಿಗೆ ಬಿಟ್ಟ ವಿಷಯ.

**ಶ್ರೀ ಹೆಚ್. ವಿ. ಕಾಮತ್:** ನಾನು ಮರಳಿ ಪಡೆಯುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆ ಎಂದರೆ, ಸಂಪುಟ ೧ ರಲ್ಲಿಯ ತಿದ್ದುಪಡಿಗಳ ಪಟ್ಟಿಯಲ್ಲಿ ನಂ. ೨ ರಲ್ಲಿ ಈ ಕೆಳಗಿನ ಅಂಶವನ್ನು ಪೂರ್ವ ಪೀಠಿಕೆಯಲ್ಲಿ ಸೇರ್ಪಡಿಸಬೇಕು.

**"**ಪರಮಾತ್ಮನ ಹೆಸರಿನಲ್ಲಿ
ನಾವು ಭಾರತೀಯರು**"**

ಭಾರತ ಒಂದು ಸಾರ್ವಭೌಮ, ಪ್ರಜಾಸತ್ತಾತ್ಮಕ, ಗಣತಂತ್ರ ರಾಜ್ಯವಾಗಿರಬೇಕೆಂದು ನಿರ್ಣಯಿಸಿದ್ದೇವೆ. ಹಾಗೂ ಜನತೆಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯಗಳನ್ನು ಆರಾಧನೆ, ಭಕ್ತಿ, ನಂಬಿಕೆ ಹಾಗೂ ವಿಚಾರ ಮತ್ತು ವಾಕ್ ಸ್ವಾತಂತ್ರ್ಯಗಳನ್ನು ಸಕಲರಿಗೂ ಸಮಾನ ಅವಕಾಶ ನೀಡಿ ಎಲ್ಲರೂ ಸಮಾನರು ರಾಷ್ಟ್ರದ ಒಕ್ಕಟ್ಟು, ಮಾನವ ಗೌರವ ಮತ್ತು ಭ್ರಾತೃತ್ವಗಳನ್ನು ನಮ್ಮ ಸಂವಿಧಾನದಲ್ಲಿ ಒದಗಿಸಬೇಕೆಂದೇ ನಾವು ನಮಗಾಗಿ ಸಂವಿಧಾನವನ್ನು ರಚಿಸಿದ್ದು ಅದನ್ನು ಜಾರಿಯಲ್ಲಿ ತರಬಯಸುವೆವು.

**ಶ್ರೀ ಹೆಚ್. ವಿ. ಕಾಮತ್:** ನನ್ನ ತಿದ್ದುಪಡಿಗೆ ಮತ ವಿಭಜನೆ ಕೋರುವೆ.

**ಶ್ರೀ ಪಂಡಿತ ಗೋವಿಂದ ಮಾಲ್ವಿಯಾ:** ನಾನು ಮತ ವಿಭಜನೆ ಕೇಳುವೆ.

**ಶ್ರೀ ಮೌಲಾನಾ ಹಸರತ್ ಮೊಹಾನಿ:** ಈ ಪ್ರಶ್ನೆಯ ಮೇಲೆ ನಾನೂ ವಿಭಜನೆ ಕೋರುವೆ.

**ಶ್ರೀ ಪಂಡಿತ ಗೋವಿಂದ ಮಾಲ್ವಿಯಾ:** ನಾವು ದೇಶಕ್ಕೆ ಅನ್ಯಾಯ ಮಾಡಲಿದ್ದೇವೆ. ಹೀಗಾಗಿ ಯಾರು ಏನನ್ನು ಹೇಳುವರೋ ಎಂದು ತಿಳಿಯಬೇಕೆಂದೆ ವಿಭಜನೆ ಬೇಡುವೆ.

ಸಭೆಯು ಕೈ ಎತ್ತುವ ಮೂಲಕ ತನ್ನ ವಿಭಜನೆಯನ್ನು ಸೂಚಿಸಿತು.

ಪರ ೪೧ ವಿರೋಧ ೬೮

ತಿದ್ದುಪಡಿಯನ್ನು ತಿರಸ್ಕರಿಸಲಾಯಿತು

**ಸದಸ್ಯರು:** ಮುಕ್ತಾಯ. ಮುಕ್ತಾಯ

**ಮಾನ್ಯ ಸಭಾಧ್ಯಕ್ಷರು:** ವಿಷಯ ಮುಕ್ತಾಯವಾಗಿದೆ. ಈಗ ಅಂಬೇಡ್ಕರರು ಉತ್ತರಿಸಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಧ್ಯಕ್ಷರೇ, ಈ ತಿದ್ದುಪಡಿಯಲ್ಲಿ ಅಡಕವಾಗಿರುವ ವಿಷಯ ಎಂದರೆ, ರಚನಾ ಸಮಿತಿಯು ಸೂಚಿಸಿದ್ದಕ್ಕೆ ವಿಷಯ ವಿಭಿನ್ನವಾಗಿದೆ. ರಚನಾ ಸಮಿತಿಯು ಸೂಚಿಸಿದಂತೆ "ಆಡಳಿತದ ಅಧಿಕಾರ ಹಾಗೂ ಶಕ್ತಿ ಯಾರಿಂದ ಪಡೆಯಲಾಗಿದೆ." ಹೀಗಾಗಿ ಸಂವಿಧಾನ ರಚನಾ ಸಮಿತಿಯು ಸದನದ ಅಭಿಪ್ರಾಯವನ್ನು ಪೂರ್ವ ಪೀಠಿಕೆಯಲ್ಲಿ ವ್ಯಕ್ತಮಾಡಿದೆ. ಈ ಸದನದ ಒಟ್ಟಾಭಿಪ್ರಾಯದಂತೆ ಈ ಸಂವಿಧಾನವು ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ಸಂವಿಧಾನವನ್ನು ರಚಿಸುವ ಅಧಿಕಾರವನ್ನು ಜನತಾ ಸಾರ್ವಭೌಮರಿಂದಲೇ ಪಡೆದಿದೆ. ಹೀಗಾಗಿ ಈ ವಿಷಯದಲ್ಲಿ ನನಗೆ ತಿಳಿದಂತೆ ಯಾವ ವಿಧವಾದ ಕಲಹಕ್ಕೆ ಆಸ್ಪದವಿರಬಾರದು. ನನಗೆ ತಿಳಿದಂತೆ ಈ ತಿದ್ದುಪಡಿಯಲ್ಲಿ ಸೂಚಿಸಿದ ಅಂಶ ಈಗಾಗಲೇ ರಚನೆ ಹೊಂದಿರುವ ಪೂರ್ವ ಪೀಠಿಕೆಯಲ್ಲಿದೆ.

**ಮೌಲಾನ ಹಸರತ್ ಮೊಹಾನಿ:** ಹಾಗಾದರೆ ಅದನ್ನೇಕೆ ನೀವು ಒಪ್ಪಬಾರದು?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈಗ ನಾನು ಹೊಂದಿದ ಅಭಿಪ್ರಾಯವೇ ದಿಟವಾದುದು ಎಂಬುದನ್ನೇ ತಿಳಿಸಬಯಸುತ್ತೇನೆ.

ಸರ್, ಈ ತಿದ್ದುಪಡಿಯನ್ನು ಪರಿಶೀಲಿಸಿದಲ್ಲಿ ಅದು ಮೂರು ಭಾಗಗಳಿಂದ ಕೂಡಿದೆ. ಮೊದಲನೆಯ ಭಾಗ ಘೋಷಣೆಯಿಂದ ಕೂಡಿದೆ. ಎರಡನೆಯ ಭಾಗ ವಿವರಣಾತ್ಮಕವಾಗಿದೆ. ಮೂರನೆಯದು ನಿಭಾಯಿಸಬೇಕಾದ ಗುರಿಯಿಂದ ಕೂಡಿದೆ. ಈಗ ಘೋಷಣಾತ್ಮಕ ಭಾಗ. ನಾವು, ಭಾರತೀಯರು ನಮ್ಮ ಸಂವಿಧಾನವನ್ನು ಈ ದಿನಾಂಕ.... ತಿಂಗಳಲ್ಲಿ ಅಂಗೀಕರಿಸಿದ ಸಂವಿಧಾನವನ್ನು ಪಡೆದಿದ್ದೇವೆ. ಆದುದರಿಂದ ತಿದ್ದುಪಡಿ ಮಂಡಿಸಲು ಬಯಸಿದ ಸದಸ್ಯರು ನಾನು ಈಗಾಗಲೇ ಓದಿದ 'ನಾವು ಭಾರತೀಯರು ನಮಗಾಗಿ ಸಂವಿಧಾನವನ್ನು ರಚಿಸಿಕೊಂಡಿದ್ದೇವೆ' ಎಂಬ ಪದಗಳಲ್ಲಿ ಜನತೆಯ ಸಾರ್ವಭೌಮ ಅಧಿಕಾರವನ್ನು ಒಪ್ಪಿಕೊಂಡಿರುವ ಅಂಶವನ್ನು ಮನಗಾಣಬೇಕು. ಹೀಗಾಗಿ ಈ ಸಂವಿಧಾನವನ್ನು ರಚಿಸುವ ಅಧಿಕಾರ ಹಾಗೂ ಶಕ್ತಿಯ ಮೂಲ ಭಾರತ ದೇಶದ ಜನತೆ ಎಂಬುದನ್ನು ಅರಿತು ಇತರ ತಿದ್ದುಪಡಿಗಳನ್ನು ಸೂಚಿಸಬಹುದು.

**ಶ್ರೀ ಮಹಾವೀರ್ ತ್ಯಾಗಿ:** ಜನರ ಪ್ರಶ್ನೆ ಎಲ್ಲಿಂದ ಬಂದಿದೆ? ಕೇವಲ ಸಂವಿಧಾನ ರಚನಾ ಸಭೆಯ ಸದಸ್ಯರು ಮಾತ್ರವಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಬೇರೆಯಾದ ವಿಷಯ. ನಾನು ತುಂಬಾ ಸಂದಿಗ್ಧ ವಿಷಯವನ್ನು ಪ್ರಸ್ತಾವಿಸುತ್ತಿರುವೆ. ಏಕೆಂದರೆ ಈ ಸಂವಿಧಾನವು ಜನರಿಂದ ಜಾರಿಗೆ ಬಂದ ಹಾಗೂ ಜನತೆಯೇ ಒಪ್ಪಿರುವ ಸಂವಿಧಾನ ಎಂಬ ವಿಷಯದ ಬಗೆಗೆ ಸಂವಿಧಾನವನ್ನು ಓದಿದ ಯಾರಿಗೇ ಸಂಶಯವಿರಲಾರದು. ಈ ವಿಷಯ ನಾನು ಈಗಾಗಲೇ ಹೇಳಿರುವ ಮೂರು ಭಾಗಗಳಿಂದ ಕೂಡಿದ ಪೂರ್ವ ಪೀಠಿಕೆಯಿಂದ ವಿಶದವಾಗುತ್ತದೆ.

ಈಗ ನನ್ನ ಮಿತ್ರರಾದ ಶ್ರೀ ತ್ಯಾಗಿಯವರು ಹೇಳಿದಂತೆ, ಈ ಸಂವಿಧಾನವು ಸಂಕುಚಿತ ಆಯ್ಕೆ ಪದ್ಧತಿಯಿಂದ ಚುನಾಯಿಸಲ್ಪಟ್ಟಿದೆ. ಅವರು ಹೇಳಿದಂತೆ ಇದು ಸಂವಿಧಾನ ರಚಿಸಲೆಂದೇ ಆಯ್ಕೆಯಾದ ಸಭೆಯೂ ಅಲ್ಲ. ಆದರೆ ನನ್ನ ಮಿತ್ರರು ಬಯಸುವಂತೆ ರಚನೆಗೊಂಡ ಸಂವಿಧಾನವನ್ನು ಜನರ ಒಪ್ಪಿಗೆಗೆ ಮಂಡಿಸದೇ ಹೋದುದರಿಂದ ಅದಕ್ಕೆ ಜನಾದೇಶವಿಲ್ಲ ಎಂಬುದು ಸೂಕ್ತವಾಗಲಾರದು.

ಆದರೆ ಅದು ಬೇರೆಯ ವಿಷಯ. ಈಗ ನಾವು ಕೈಗೆತ್ತಿಕೊಂಡಿರುವುದು ಬೇರೆಯಾಗಿರುವುದರಿಂದ, ಪ್ರಸ್ತುತ ಚರ್ಚೆಗೆ ಅದು ಸಂಬಂಧಿಸಿಲ್ಲ. ಈಗ ಚರ್ಚೆಯಲ್ಲಿರುವ ವಿಷಯ ಎಂದರೆ ಈ ಸಂವಿಧಾನವು

ಜನತೆಯ ಸಾರ್ವಭೌಮ ಅಧಿಕಾರವನ್ನು ಸೂಚಿಸುವುದಿಲ್ಲವೇ? ಜನತೆಯ ಅಂಗೀಕಾರ ಮುದ್ರೆಯನ್ನು ಹೊಂದಿಲ್ಲವೇ? ಜನರು ತಮ್ಮದೆಂದು ಘೋಷಿಸುವುದಿಲ್ಲವೇ? ಆದರೆ ಮೇಲಿನ ಎಲ್ಲದಕ್ಕೂ ನನ್ನ ಉತ್ತರ ಸಕಾರಾತ್ಮಕವಾದದ್ದು.

ಈ ಹಂತದಲ್ಲಿ ಸಂಯುಕ್ತ ಅಮೆರಿಕ ರಾಷ್ಟ್ರದ ಸಂವಿಧಾನದ ಪೂರ್ವ ಪೀಠಿಕೆಯನ್ನು ಅವಗಾಹಿಸುವಂತೆ ಸದಸ್ಯರಲ್ಲಿ ಕೋರುತ್ತೇವೆ. ನಾನು ಅದರ ಕೆಲವು ಭಾಗವನ್ನು ಓದ ಬಯಸುವೆ. "ನಾವು ಸಂಯುಕ್ತ ಅಮೆರಿಕೆಯ ಸಂಸ್ಥಾನಗಳ ಪ್ರಜೆಗಳು ಒಪ್ಪಿ ಜಾರಿಗೊಳಿಸಿ, ಸಂವಿಧಾನವನ್ನು ಸ್ಥಾಪಿಸಿದ್ದೇವೆ." ಅನೇಕರಿಗೆ ತಿಳಿದಂತೆ ಸಂವಿಧಾನವನ್ನು ಕೇವಲ ಕೆಲವರಿಂದಲೇ ರಚಿಸಲಾಯಿತು. ನನಗೆ ಈಗ ಸಂಪೂರ್ಣ ವಿವರಗಳನ್ನು ಹೇಳಲು ಹೆಚ್ಚು ಜ್ಞಾಪಕವಿಲ್ಲ. ಆದರೆ ಕೆಲವೇ ರಾಜ್ಯಗಳು ಸೇರಿ ಸಂವಿಧಾನವನ್ನು ರಚಿಸಿದವು. (ಕೇವಲ ಹದಿಮೂರು ರಾಜ್ಯಗಳ ಸದಸ್ಯರು ಸಾರಿದರು) ಹೀಗೆ ಫಿಲಿಡೆಲ್ಫಿಯಾ ಸಮಾವೇಶದಲ್ಲಿ ರೂಪುಗೊಂಡ ಸಂವಿಧಾನವು ಜನರು ನೀಡಿದ ಅಧಿಕಾರದಿಂದಲೇ ರಚಿತಗೊಂಡು ಜನರ ಸಾರ್ವಭೌಮ ಅಧಿಕಾರವನ್ನು ಮಾನ್ಯ ಮಾಡಿದೆ. ನಮ್ಮಂತಹ ವಿಶಾಲ ದೇಶದಲ್ಲಿ ೨೯೨ ಪ್ರತಿನಿಧಿಗಳನ್ನು ಹೊಂದಿರುವ ಈ ಸಭೆ ಜನರನ್ನು ಪ್ರತಿನಿಧಿಸುವುದಿಲ್ಲ ಎಂದರೆ ನನಗೆ ತಿಳಿದಂತೆ ಅವರು ಮೂಢರಾಗಿರಬೇಕು. (ಶಭಾಷ್, ಶಭಾಷ್) ಅಂಥವರು ಜನರನ್ನು ಪ್ರತಿನಿಧಿಸಲಾರರೆಂದೇ ಹೇಳಬೇಕಾಗಿದೆ.

**ಮೌಲಾನಾ ಹಸರತ್ ಮೊಹಾನಿ:** ನನ್ನ ವಿಚಾರದಲ್ಲಿ ಅದು ಕೇವಲ ಒಂದು ಸಮೂಹ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮೌಲಾನರೇ ಅದು ಬೇರೆ ವಿಷಯ. ಈಗ ನಾನು ಅದನ್ನು ಪ್ರಸ್ತಾವಿಸಲಾರೆ. ಆದುದರಿಂದ ಈಗ ಚರ್ಚೆಯಾಗುತ್ತಿರುವ ವಿಷಯದ ಬಗೆಗೆ ಹೇಳಬಹುದಾದರೆ, ಯಾವ ಭಯ ಭೀತಿಗೂ ಅವಕಾಶವಿಲ್ಲವೆಂದೇ ಹೇಳಬಯಸುವೆ. ಈ ಸದನದ ಯಾವ ಸದಸ್ಯನೇ ಇರಲಿ ಅವನು ಬ್ರಿಟಿಷ್ ಸಾರ್ವಭೌಮತೆಯ ನೆರಳು ಬೀಳದಂತೆ ನಮ್ಮ ಸಂವಿಧಾನವನ್ನು ಕಾಪಾಡಿ ಕೊಂಡು ಬಂದಿದ್ದಾನೆ. ಆದುದರಿಂದ ನೂತನ ಸಂವಿಧಾನದ ರಚನೆಗೆ ಮುಂಚೆ ಇದ್ದ ಎಲ್ಲಾ ಅಂಶಗಳನ್ನೂ ಕೈ ಬಿಡಲಾಗಿದೆ. ಈ ಬಗ್ಗೆ ಸದನದ ಯಾವ ಸದಸ್ಯನಿಗೂ, ಹಾಗೂ ರಚನಾ ಸಮಿತಿಯ ಸದಸ್ಯರಿಗೆ ಸಂದೇಹ ಬೇಡ. ಅಲ್ಲದೆ ಈ ದಿಶೆಯಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಂದೇ ಹೇಳ ಬಯಸುವೆ.

ಹಲವಾರು ಸದಸ್ಯರಿಗೆ ಈ ಬಗೆಗೆ ಕೆಲವು ಸಂದೇಹಗಳಿದ್ದವು. ಅದಕ್ಕೆ ಕಾರಣ ಎಂದರೆ ಕಳೆದ ವರ್ಷದ ಸಭೆಯಲ್ಲಿ ಭಾರತವು ಕಾಮನ್‌ವೆಲ್ತ್ ರಾಜ್ಯವಾಗಿರಬೇಕೆಂಬ ಪ್ರಸ್ತಾವನೆ ಬಂದಿತ್ತು. ಆದರೆ ಅದು ಸೂಕ್ತವಲ್ಲ. ಏಕೆಂದರೆ ಪ್ರತಿಯೊಂದು ನೂತನ ರಾಷ್ಟ್ರವೂ ಕೆಲವು ವಿಷಯಗಳ ಬಗೆಗೆ ಹಲವಾರು ರಾಜಿ ಸೂತ್ರಗಳನ್ನು ಅನುಸರಿಸಬೇಕಾಗುತ್ತದೆ. ಒಂದು ಸಾರ್ವಭೌಮ ರಾಷ್ಟ್ರವು ಇನ್ನೊಂದು ಸಾರ್ವಭೌಮ ರಾಷ್ಟ್ರದೊಂದಿಗೆ ಒಪ್ಪಂದ ಮಾಡಿಕೊಂಡಾಗ ಅದು ಹೆಚ್ಚು ಇದು ಕೀಳು ಎಂಬ ಭಾವನೆಗೆ ಅವಕಾಶವಿರಲಾರದು. ಆದರೂ ಹಲವರು ಇದರ ಬಗೆಗೆ ಭಯ ಭೀತಿ ಹೊಂದಿದವರಾಗಿದ್ದಾರೆ.

**ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿ:** ಮಾನ್ಯರೆ, ನಾನು......

**ಮಾನ್ಯ ಸಭಾಧ್ಯಕ್ಷರು:** ಅಂಬೇಡ್ಕರರ್ ಮುಂದುವರಿಯಲಿ. ಅವರು ಯಾವ ಆರೋಪಣೆ ಮಾಡಿಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೇಳಬಹುದಾದರೆ, ಈ ಸಂವಿಧಾನದ ಪೂರ್ವ ಪೀಠಿಕೆಯು, ಈ ಸದನದ ಪ್ರತಿಯೊಬ್ಬ ಸದಸ್ಯರ ಆಶೋತ್ತರಗಳಿಗೆ ಸ್ಪಂದಿಸುತ್ತದೆ. ಅಲ್ಲದೆ ಅದು ತನ್ನ ಸಾರ್ವಭೌಮತೆ, ಅಧಿಕಾರ ಹಾಗೂ ಮೂಲವನ್ನು ಜನತೆಯಿಂದಲೇ ಪಡೆದಿದೆ.

ಆದುದರಿಂದ ನಾನು ಈ ತಿದ್ದುಪಡಿಯನ್ನು ಒಪ್ಪಲಾರೆ. ಅಲ್ಲದೆ ನಾನು ಈ ತಿದ್ದುಪಡಿಯ ಪಾಠದ ಬಗ್ಗೆ ಏನೂ ಹೇಳಲಾರೆ. ನಾವು ಪೂರ್ವ ಪೀಠಿಕೆಯಲ್ಲಿ ಹೇಳಿದುದಕ್ಕಿಂತ ಈ ತಿದ್ದುಪಡಿ ಬೇರೆಯಾಗಿದ್ದು ಅದು ಸೂಕ್ತವು ಆಗಿರದೇ ಹೋದುದರಿಂದ ನಾನು ಈ ತಿದ್ದುಪಡಿಯನ್ನು ಒಪ್ಪಲಾರೆ. ಈ ಎಲ್ಲ ಕಾರಣಗಳಿಂದ ಇದನ್ನು ಕೈ ಬಿಡಬೇಕು.

**ಈ ತಿದ್ದುಪಡಿಯನ್ನು ತಿರಸ್ಕರಿಸಲಾಯಿತು. ಪೂರ್ವ ಪೀಠಿಕೆಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.**

* * *

**ಮಾನ್ಯ ಸಭಾಧ್ಯಕ್ಷರು:** ನಾವು ಸಮಾವೇಶದ ಅಂತಿಮ ಹಂತಕ್ಕೆ ಬಂದಿದ್ದೇವೆ. ಸಮಾವೇಶವನ್ನು ಮುಂದೂಡುವ ಮುನ್ನ, ಈ ಹಂತದಲ್ಲಿ ಹಲವಾರು ವಿಷಯಗಳನ್ನು ನಿರ್ಣಯಿಸಬೇಕಾಗಿದೆ. ಮೂರನೇ ವರದಿ ವಾಚನಕ್ಕೆ ಎಂದು ಸಮಾವೇಶವನ್ನು ಕರೆಯಬೇಕು? ಈ ಹಿಂದೆ, ಸದನವು ಈ ವಿಷಯದ ಬಗೆಗೆ ನನಗೆ ಸೂಕ್ತ ದಿನಾಂಕವನ್ನು ನಿರ್ಣಯಿಸಲು ಅಧಿಕಾರ ನೀಡಿತ್ತು. ಆದುದರಿಂದ ಈ ಬಾರಿಯೂ ನನಗೆ ಅಧಿಕಾರವನ್ನು ನೀಡಬಹುದೆಂದು ಆಶಿಸುತ್ತೇನೆ. ಹೀಗಾಗಿ ಈ ದಿಶೆಯಲ್ಲಿ ಸತ್ಯನಾರಾಯಣಸಿಂಹರನ್ನು ಗೊತ್ತುವಳಿ ಮಂಡಿಸುವಂತೆ ಕೋರುವೆ.

**ಶ್ರೀ ಸತ್ಯನಾರಾಯಣ ಸಿಂಹ:** ಸಮಾವೇಶವನ್ನು, ಅಧ್ಯಕ್ಷರು ನವೆಂಬರ್ ೧೯೪೯ ನಿರ್ಣಯಿಸುವ ದಿನಾಂಕದವರೆಗೆ ಮುಂದೂಡಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಸದನವನ್ನು ನವೆಂಬರ್ ೧೯೪೯ರ ವರೆಗೆ ಮುಂದೂಡಲಾಗಿದೆ.

(ಗೊತ್ತುವಳಿಯನ್ನು ಅಂಗೀಕರಿಸಲಾಯಿತು)

**ಮಾನ್ಯ ಸಭಾಧ್ಯಕ್ಷರು:** ನನಗೆ ತಿಳಿದಂತೆ ನೋಟೀಸ್ ನೀಡಿ ಬಂದ ತಿದ್ದುಪಡಿಗಳನ್ನು ಪರಿಶೀಲಿಸಿರುವುದರಿಂದ ನಾನು ಏನನ್ನೂ ಹೇಳಬೇಕಾಗಿಲ್ಲ. ನನಗೆ ನಿಯಮಾವಳಿ ೩೮ ಆರ್ ರಂತೆ ನೀಡಲಾದ ಅಧಿಕಾರದ ಅಡಿಯಲ್ಲಿ ಸಂವಿಧಾನದ ಎರಡನೆಯ ವಾಚನವನ್ನು ಮುಗಿಸಿರುವುದರಿಂದ ಸೂಚಿಸಿದ ತಿದ್ದುಪಡಿಗಳೊಂದಿಗೆ ನಾನು ರಚನಾ ಸಮಿತಿಗೆ ವರದಿ ಸಲ್ಲಿಸುವೆ, ಅವರು ಅದನ್ನು ಪರಿಶೀಲಿಸಿ, ಸೂಕ್ತವಾದ ವಿವರಣೆಗಳೊಂದಿಗೆ ಶುದ್ಧಗೊಳಿಸಲು ನಾನು ನನಗೆ ನೀಡಿದ ಅಧಿಕಾರದಂತೆ ರಚನಾ ಸಮಿತಿಗೆ ರವಾನಿಸುವೆ. ಆದುದರಿಂದ ಈ ಸಮಾವೇಶವನ್ನು ಮುಂದೂಡುವೆ.

* * *

ನವೆಂಬರ್ ೧೯೪೯ರಲ್ಲಿ ಅಧ್ಯಕ್ಷರು ನಿರ್ಣಯಿಸಬಹುದಾದ ದಿನಾಂಕದವರೆಗೂ ಸಭೆಯನ್ನು ಮುಂದೂಡಲಾಗಿದೆ.

ಪ್ರಮಾಣವಚನ ಸ್ವೀಕರಿಸುವ ಮತ್ತು ಹಾಜರಿ ರಿಜಿಸ್ಟರಿನಲ್ಲಿ ಸಹಿ ಮಾಡುವುದು.

**ಮಾನ್ಯ ಸಭಾಧ್ಯಕ್ಷರು:** ನನಗೆ ತಿಳಿದಂತೆ ಇಬ್ಬರು ಸದಸ್ಯರು ಪ್ರಮಾಣ ವಚನ ಸ್ವೀಕರಿಸಿ ರಿಜಿಸ್ಟರಿನಲ್ಲಿ ಸಹಿ ಹಾಕಬೇಕಾಗಿದೆ.

ಈ ಕೆಳಗಿನ ಸದಸ್ಯರು ಪ್ರಮಾಣ ಮಾಡಿ ರುಜು ಹಾಕಿದ್ದಾರೆ.

ಶ್ರೀ ಎಂ.ಆರ್. ಮುಸಾನಿ (ಬೊಂಬಾಯಿ ಸಾಮಾನ್ಯ)

**ಮಾನ್ಯ ಅಧ್ಯಕ್ಷರು:** ನಾವು ಈಗ ಸಂವಿಧಾನದ ಕರಡು ಮಸೂದೆಯನ್ನು ಕೈಗೆತ್ತಿಕೊಳ್ಳುವೆವು.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬಾಂಬೆ ಸಾಮಾನ್ಯ): ಅಧ್ಯಕ್ಷರೇ, ನಾನು ರಚನಾ

ಸಮಿತಿಯ ಕರಡನ್ನು ತಿದ್ದುಪಡಿಗಳೊಂದಿಗೆ, ನಿಯಮಾವಳಿ ೩೮೨ರ ಅಡಿಯಲ್ಲಿ ಸಭೆಯ ಮುಂದೆ ಮಂಡಿಸುವೆ.

"ಸಂವಿಧಾನ ರಚನಾ ಸಮಿತಿಯು ಶಿಫಾರಸ್ಸು ಮಾಡಿದ, ಕರಡು ಸಂವಿಧಾನದ ಪ್ರತಿಯನ್ನು ಪರಿಶೀಲನೆಗಾಗಿ ಮಂಡಿಸುವೆ."

ಮಾನ್ಯರೆ, ಕಳೆದ ಅಧಿವೇಶನದಲ್ಲಿ ತಿದ್ದುಪಡಿಯಾದ ಹಾಗೂ ಬದಲಾವಣೆಗಳಿಂದ ಒಡಗೂಡಿದ ಸಂವಿಧಾನ ರಚನಾ ಸಮಿತಿಯ ವರದಿಯನ್ನು ಸಭೆಯ ಅವಗಾಹನೆ ಹಾಗೂ ಪರಿಶೀಲನೆಗೆ ಸಲ್ಲಿಸುತ್ತಿರುವೆ. ಎರಡನೆಯ ಪಟ್ಟಿಯೊಂದಿಗೆ ಅನೇಕ ಟಿಪ್ಪಣಿ ಹಾಗು ಅನುಬಂಧಗಳನ್ನು ಸೇರ್ಪಡಿಸಿರುವ ಬಗೆಗೆ ನಾನು ಸದನದ ಕ್ಷಮೆ ಕೋರಲಾರೆ. ಏಕೆಂದರೆ ರಚನಾ ಸಮಿತಿಗೆ ಕಾಲಾವಕಾಶವೇ ಇರದೇ ಹೋದುದರಿಂದ ಹಾಗೆ ಮಾಡಲಾಗಿದೆ. ಸದನದ ಸದಸ್ಯರಿಗೆಲ್ಲಾ ತಿಳದಂತೆ ಘಟನಾ ಸಮಿತಿಯ ಸಭೆಯು ದಿನಾಂಕ ೧೭ ಅಕ್ಟೋಬರ್‌ನಂದು ಮುಕ್ತಾಯಗೊಂಡಿದೆ. ಇಂದು ೧೪ ನವೆಂಬರ್ ೧೯೪೯. ಹೀಗಾಗಿ ಒಂದು ತಿಂಗಳ ಅವಧಿಯ ಸಮಯವೂ ದೊರೆಯಲಿಲ್ಲ. ಈ ಅಲ್ಪ ಅವಧಿಯಲ್ಲಿ ರಚನಾ ಸಮಿತಿಯು ೩೯೫ ವಿಧಿಗಳನ್ನು ಪರಿಶೀಲಿಸಬೇಕಾಗಿ ಬಂತು. ನಾನು ಈಗಾಗಲೇ ಹೇಳಿದಂತೆ ರಚನಾ ಸಮಿತಿಗೆ ಒಂದು ತಿಂಗಳ ಕಾಲಾವಕಾಶವೂ ದೊರೆಯಲಿಲ್ಲ. ಅದರಲ್ಲಿಯೂ ೩೮ ಆರ್ ನಿಯಮಾವಳಿಯ ಅಡಿಯಲ್ಲಿ ರಚನಾ ಸಮಿತಿಯು ಸಿದ್ಧಪಡಿಸಿದ ವರದಿಯನ್ನು ಸದಸ್ಯರಿಗೆಲ್ಲಾ ತೋರಿಸಲೆಂದೇ ರವಾನಿಸಿತು. ಹೀಗೆ ಈ ಕಾರ್ಯವನ್ನು ಈ ಸಭೆ ಸೇರುವ ಕೇವಲ ೫ ದಿನಗಳ ಹಿಂದೆ ಮಾಡಲಾಯಿತು. ಖಚಿತವಾಗಿ ಹೇಳಬೇಕಾದರೆ ಸಂವಿಧಾನದ ಕರಡು ಪ್ರತಿಯನ್ನು ೬ನೆಯ ನವೆಂಬರ್‌ನಂದು ಕಳಿಸಲಾಯಿತು ಎಂದರೆ ಸಮಿತಿಗೆ ಇದ್ದ ಸಮಯಾಭಾವದ ಅರಿವಾಗಬಹುದು. ಹೀಗೆ ಸದಸ್ಯರಿಗೆ ಕಳಿಸುವ ಮುನ್ನ ಮುದ್ರಣಕಾರನಿಗೆ ಪ್ರತಿಯನ್ನು ಒದಗಿಸಬೇಕಾದುದರಿಂದ ನಮಗೆ ಹೆಚ್ಚು ಅವಕಾಶ ದೊರೆಯದೇ ಹೋದುದರಿಂದ ಶುದ್ಧ ಪ್ರತಿಯಲ್ಲಿಯೂ ಲೋಪದೋಷಗಳಿವೆ ಎಂಬುದನ್ನು ಮರೆಯಬಾರದು. ಮುದ್ರಣಕಾರನಿಗೂ ಹೆಚ್ಚು ಸಮಯವಿರಲಿಲ್ಲ. ಪ್ರೂಫ್ ತಿದ್ದುವವರಿಗೂ ಸಮಯದ ಅಭಾವ.

ಈ ಹಿನ್ನೆಲೆಯಲ್ಲಿ ನಾವು ಎರಡನೆಯ ಪಟ್ಟಿಯೊಡನೆ ಅನುಬಂಧಗಳನ್ನು ನೀಡಿದೆ. ವಿಧಿಗಳ ಕ್ರಮಸಂಖ್ಯೆ ತಿದ್ದುಪಡಿಗಳನ್ನು ಅವುಗಳ ಸ್ಥಾನದಲ್ಲಿ ಕ್ರಮಬದ್ಧವಾಗಿ ಜೋಡಿಸುವಲ್ಲಿಯೇ ಸಾಕಷ್ಟು ಪರಿಶ್ರಮ ವಹಿಸಬೇಕಾಯಿತು. ಈ ಎಲ್ಲಾ ಕಾರಣಗಳಿಗಾಗಿ ಸದನ ನಮ್ಮನ್ನು ಕ್ಷಮಿಸುತ್ತದೆ ಎಂದೇ ಭಾವಿಸುವೆ.

ಮಾನ್ಯರೆ, ಈ ಹಂತದಲ್ಲಿ ತಿದ್ದುಪಡಿಗಳ ಬಗೆಗೆ ರಚನಾ ಸಮಿತಿಯು ಕೈಕೊಂಡ ನಿರ್ಣಯವನ್ನು ನಾನು ಚರ್ಚಿಸಲಾರೆ. ಈ ಬದಲಾವಣೆಗಳ ಸ್ವರೂಪವನ್ನು ಈ ವರದಿಯ ೩ನೆಯ ಪ್ಯಾರಾದಲ್ಲಿ ತಿಳಿಸಲಾಗಿದೆ. ಈ ಬದಲಾವಣೆಗಳು ಮೂರು ವಿಧವಾಗಿವೆ. ಮೊದನೆಯದು ಎಂದರೆ ವಿಧಿಗಳ, ಉಪನಿಬಂಧನೆಗಳನ್ನು ಕ್ರಮಗೊಳಿಸಿದ್ದು ಇದನ್ನು ವಿವಿಧ ಎಡೆಯಲ್ಲಿ ಸೂಚಿಸಿದ ತಿದ್ದುಪಡಿಗಳನ್ನು ಸಮಗ್ರವಾಗಿ ಸೂಕ್ತ ಕ್ರಮಾಂಕದಲ್ಲಿ ಪುನಃ ರಚಿಸಲಾಗಿದೆ. ಓದುಗರಿಗೆ ಹಾಗೂ ಸದಸ್ಯರಿಗೆ ಅನುಕೂಲವಾಗುವಂತೆ ಆಯಾ ವಿಷಯಗಳನ್ನು ಪ್ರಕರಣಗಳಲ್ಲಿ ಜೋಡಿಸಲಾಗಿದೆ. ಎರಡನೆಯ ವಿಧವೆಂದರೆ ಸಂದರ್ಭೋಚಿತವಾದ ಪದಗಳ ಬದಲಾವಣೆ ಉದಾ "ಈ ಸಂವಿಧಾನ" ಪದ ಅನೇಕ ಎಡೆಯಲ್ಲಿ ಬಳಸಲಾಗಿದೆ. ದೊಡ್ಡ ಅಕ್ಷರವನ್ನು ಚಿಕ್ಕಕ್ಷರದಲ್ಲಿ ಮುದ್ರಿಸಿದ್ದರಿಂದ ಅದರ ಬದಲಾವಣೆಯು ಸದಸ್ಯರು ಸೂಚಿಸಿರುವ ಬದಲಾವಣೆಗಳಲ್ಲಿ ಹೆಚ್ಚು ಬದಲಾವಣೆ ಮಾಡಲು ಹೋಗದೆ ಅನಿವಾರ್ಯವೆನಿಸಿದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿದೆ. ಈ ವಿಧವಾದ ಬದಲಾವಣೆಗಳನ್ನು ಮಾಡದೇ ಹೋಗಿದ್ದರೆ ಕಳೆದ ಅಧಿವೇಶನದಲ್ಲಿ ಕಂಡುಬಂದ ದೋಷಗಳು ಉಳಿದೇ

ಹೋಗುವ ಭಯವಿತ್ತು. ಹೀಗಾಗಿ ಅಲ್ಲಲ್ಲಿ ರಚನಾ ಸಮಿತಿಯು ಮಹತ್ವದ ಬದಲಾವಣೆಗಳನ್ನು ಸೂಚಿಸಿದೆ. ಈ ವಿಧವಾದ ಬದಲಾವಣೆಗೆ ಸೂಕ್ತ ವಿವರಗಳನ್ನೂ ಉಪನಿಬಂಧನೆ (ಡಿ) ౨ನೆ ಪ್ಯಾರ ಹಾಗೂ ೪ನೇ ಪ್ಯಾರಾದಲ್ಲಿ ನೀಡಲಾಗಿದೆ.

ಮಾನ್ಯರೆ, ಈ ದಿಶೆಯಲ್ಲಿ ನನಗೆ, ರಚನಾ ಸಮಿತಿಯು ಸಲ್ಲಿಸಿದ ವರದಿಯ ಬಗೆಗೆ ಹೆಚ್ಚು ಹೇಳುವ ಆವಶ್ಯಕತೆ ಇಲ್ಲ. ಆದುದರಿಂದ ಸಭೆಯು, ರಚನಾ ಸಮಿತಿಯ ವರದಿ ಹಾಗೂ ಎರಡನೆಯ ಪಟ್ಟಿಯಲ್ಲಿ ತಿಳಿಸಲಾದ ಹಾಗೂ ಈ ಎಲ್ಲ ವಿಷಯವನ್ನು ಸದಸ್ಯರ ಗಮನಕ್ಕೆ ತಂದಿರುವುದರಿಂದ, ಸದನ ತನ್ನ ಒಪ್ಪಿಗೆಯನ್ನು ನೀಡುತ್ತದೆ ಎಂದೇ ಭಾವಿಸಿದ್ದೇನೆ.

## ವಿಧಿಗಳ ತಿದ್ದುಪಡಿಗಳು

**ಮಾನ್ಯ ಸಭಾಧ್ಯಕ್ಷರು:** ಡಾ॥ ಅಂಬೇಡ್ಕರ್‌ರವರು ಸದನದ ಮುಂದೆ ರಚನಾ ಸಮಿತಿಯ ವರದಿ ಹಾಗೂ ಕರಡು ಸಂವಿಧಾನದ ಪ್ರತಿ ಮಂಡಿಸಿದ್ದಾರೆ. ಆದುದರಿಂದ ಈ ಎರಡನ್ನೂ ಪರಿಶೀಲನೆಗೆ ಕೈಗೆತ್ತಿಕೊಳ್ಳಬಹುದು.....

* * *

**ಮಾನ್ಯ ಸಭಾಧ್ಯಕ್ಷರು:** ನನಗೆ ತಿಳಿಸಿದಂತೆ ಪಂಡಿತ್ ಕುಂಝ್ರು ಅವರು ಮಂಡಿಸಿದ ನಿಲುವಳಿ ಸೂಚನೆಯಂತೆ ಈ ವಿಧಿಯು ಸದನದ ನಿರ್ಣಯಕ್ಕೆ ಮೀರಿರುವುದರಿಂದ ಅದನ್ನು ಸಂದರ್ಭೋಚಿತವಾಗಿ ಪರಿಗಣಿಸಲಾಗುವುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬೊಂಬಾಯಿ:ಸಾಮಾನ್ಯ)"

ಈ ನಿಲುವಳಿಯ ಸೂಚನೆಯಂತೆ, ರಚನಾ ಸಮಿತಿಯು ವಿಧಿ ೩೬೫ಕ್ಕೆ ಬದಲಾವಣೆಯು ಸೂಕ್ತವೇ? ಎಂಬ ವಿಷಯ ಕುರಿತಂತೆ ಇದೆ. ಆದರೆ ರಚನಾ ಸಮಿತಿಯವರ ತೀರ್ಮಾನದಲ್ಲಿ ಅದು ಸೂಕ್ತ ಹಾಗೂ ಸಂದರ್ಭೋಚಿತ. ಏಕೆಂದರೆ ಒಂದು ಬಾರಿ ಕೇಂದ್ರಕ್ಕೆ ಹಲವು ವಿಷಯಗಳು ಕುರಿತಂತೆ ನಿರ್ದೇಶನ ನೀಡುವ ಅಧಿಕಾರ ನೀಡಿದರೆ ಅದು ನಿರ್ದಿಷ್ಟವಾಗಿ ನಿರ್ದೇಶನ ನೀಡಿದಾಗ ಪ್ರಾಂತ್ಯಗಳು ಅದನ್ನು ಜಾರಿಗೆ ತರದೇ ಹೋದಲ್ಲಿ ಆತಂಕಕಾರಿ ಪರಿಣಾಮ ಉದ್ಭವಿಸಬಹುದು. ಅದನ್ನು ನಿವಾರಿಸದೇ ಹೋದರೆ ಆ ವಿಧವಾದ ಅಧಿಕಾರವು ಕೇವಲ ಕಾಗದದ ಮೇಲಿನ ಅಧಿಕಾರವಾಗಿ ಉಳಿಯಬಹುದು. ಈ ಒಂದು ಅಂಶವನ್ನು ಗ್ರಹಿಸಿ ರಚನಾ ಸಮಿತಿಯು ಸೂಕ್ತ ಬದಲಾವಣೆಯನ್ನು ಸೂಚಿಸಿದೆ.

ಆದರೆ, ಮಾನ್ಯರೆ, ನಾನು ಒಂದು ವಿಷಯವನ್ನು ಪ್ರಸ್ತಾಪಿಸಬಯಸುವೆ. ಅದೇನೆಂದರೆ ರಚನಾ ಸಮಿತಿಯು ಈ ವಿಧಿಯಲ್ಲಿ ಕಳೆದ ಅಧಿವೇಶನದಲ್ಲಿ ನಡೆದ ಚರ್ಚೆಗಿಂತ ಹೆಚ್ಚು ಕ್ರಮಿಸಿಲ್ಲ. ಆದುದರಿಂದ ನಾನು ನನ್ನ ಮಿತ್ರರಾದ ಹೃದಯನಾಥ್ ಕುಂಝ್ರು ಅವರನ್ನು ವಿಧಿ ೨೮೦ಎ (೫) ಮತ್ತು ವಿಧಿ ೩೦೬ಬಿ, ವಿಧಿ ೨೮೦ಎ (೫) ಹಾಗೂ ೩೦೬ಬಿಗಳ ಅಂಶಗಳನ್ನು ಈಗ ೩೬೫ ವಿಧಿಯಲ್ಲಿ ಅಳವಡಿಸಲಾಗಿದೆ ಎಂಬುದನ್ನು ಗಮನಿಸಬೇಕು ಎಂದು ಕೇಳುವೆ. ಹೀಗಾಗಿ ೩೬೫ನೇ ವಿಧಿಯು ಯಾವ ನೂತನ ಅಂಶವನ್ನು ಹೊಂದಿಲ್ಲವೆಂದೇ ಸೂಚಿಸುವೆ.

**ಪಂಡಿತ್ ಹೃದಯನಾಥ್ ಕುಂಝ್ರು:** ನಾನು ನನ್ನ ಸ್ನೇಹಿತರಿಗೆ ಅಡಚಣೆ ಮಾಡಬಹುದೆ? ವಿಧಿ ೩೦೬ಬಿ ಒಂದನೆಯ ಪರಿಚ್ಛೇದ ಭಾಗ ಬಿ ಯಲ್ಲಿ ಕೇಂದ್ರವು ಪ್ರಾಂತ್ಯಗಳ ಮೇಲಿನ ಅಧಿಕಾರಕ್ಕೆ ಮಾತ್ರ

ಸಂಬಂಧಿಸಿದೆ. ಆದರೆ ನನ್ನ ಮಿತ್ರರು ಆ ಕೇಂದ್ರ ಆಡಳಿತಾಧಿಕಾರವನ್ನು ರಾಜ್ಯ ಸರಕಾರದ ಮೇಲೂ ವಿಸ್ತರಿಸಿದ್ದಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಾನ್ಯ ಮಿತ್ರರು ನನಗೆ ಹೇಳುವ ಅವಕಾಶವನ್ನು ನೀಡಿದಲ್ಲಿ, ನಾನು ವಿಧಿ ೨೮೦ಎ ಇಂದಿನದಲ್ಲ, ಹಿಂದಿನ ಕರಡನ್ನು ಎರಡನೆಯ ವಾಚನ ವರದಿಯಂತೆ ಓದಬಯಸುವೆ.

ಇವೆಲ್ಲವೂ ಆರ್ಥಿಕ ಅಂಶಗಳಿಂದ ಕೂಡಿದ್ದು ೨೮೦ಎ (೫) ಈ ವಿಧವಾಗಿ ತಿಳಿಸುತ್ತದೆ. ಈ ವಿಧಿಯ (೩) ರಂತೆ ಯಾವುದೇ ಕೇಂದ್ರ ನಿರ್ದೇಶನಗಳನ್ನು ಜಾರಿಗೊಳಿಸದೆ ಹೋದರೆ ಅದು ರಾಜ್ಯ ಸರಕಾರ ಸಂವಿಧಾನಬಾಹಿರವಾಗಿ ವರ್ತಿಸಿದೆ ಎಂದೇ ತಿಳಿಯಲಾಗುವುದು. ಆದುದರಿಂದ ವಿಧಿ ೩೬೫ ಕೇವಲ ವಿಧಿ ೨೮೦ಎ (೫)ನ್ನು ಒಳಗೊಂಡಿದೆ ಎಂಬುದನ್ನು ನನ್ನ ಮಿತ್ರರು ಅರಿಯಬೇಕು.

**ಪಂಡಿತ್ ಕುಂಝ್ರು:** ನನ್ನ ಸ್ನೇಹಿತರು ನನಗೆ ಅವಕಾಶ ನೀಡುವರೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನಗೆ ಮಾತನಾಡಲು ಅವಕಾಶ ನೀಡಿದ ನಂತರ ನನ್ನ ಸ್ನೇಹಿತರು ಮಾತನಾಡಬಹುದು. ಅವರು ಹೇಳಿದಂತೆ ೩೦೬ಬಿ ಯು ಕೇಂದ್ರವು ರಾಜ್ಯಗಳಿಗೆ ಭಾಗ III ರಲ್ಲಿ ಆದೇಶ ನೀಡುವ ವಿಷಯ. ಈಗ ಆ ರಾಜ್ಯಗಳು ಮೊದಲನೆಯ ಪರಿಚ್ಛೇದ ಭಾಗ 'ಬಿ' ಯಲ್ಲಿವೆ. ಅದರ ಕೊನೆಯಲ್ಲಿ ಹೀಗೆ ಹೇಳಲಾಗಿದೆ. "ಯಾವುದೇ ನಿರ್ದೇಶನಗಳನ್ನು ಪಾಲಿಸದೇ ಹೋದಲ್ಲಿ ರಾಜ್ಯವು ಸಂವಿಧಾನಕ್ಕೆ ವಿರೋಧವಾಗಿ ವರ್ತಿಸಿದಂತೆ," ಎಂದಿದೆ. ಆದುದರಿಂದ ನನ್ನ ಗ್ರಹಿಕೆಯಂತೆ ವಿಧಿ ೩೬೫ ಯಾವ ಸೂಚನೆ ವಿಚಾರವನ್ನೂ ತಿಳಿಸುವುದಿಲ್ಲ. ಅದು ಕೇವಲ ವಿವಿಧ ವಿಧಿಗಳಲ್ಲಿದ್ದ ವಿಷಯಗಳನ್ನು ಸಮಗ್ರವಾಗಿ ಸಂಗ್ರಹಿಸಿದೆ. ಹೀಗಾಗಿ ರಾಜ್ಯವು ನಿರ್ದೇಶನವನ್ನು ಪರಿಪಾಲಿಸದೇ ಹೋದಲ್ಲಿ ಮಾತ್ರ ರಾಷ್ಟ್ರಪತಿಗಳು ನಿರ್ದೇಶನವನ್ನು ನೀಡಬಹುದು. ಈ ವಿಧವಾದ ನಿರ್ದೇಶನವನ್ನು ಉಲ್ಲಂಘಿಸಿ ಸರಕಾರ ಕಾರ್ಯನಡೆಸಿದೆ ಎಂಬ ವಿಷಯವನ್ನು ಕೇವಲ ೨೫೬-೨೫೭ ವಿಧಿಗಳಲ್ಲಿ ಅಡಕವಾಗಿದೆ. ಅದು ಕೇಂದ್ರಕ್ಕೆ ನಿರ್ದೇಶನ ನೀಡುವ ಅಧಿಕಾರವಿದೆ ಎಂಬ ವಿಷಯವನ್ನು ಮಾತ್ರ ತಿಳಿಸುತ್ತದೆ. ಆದುದರಿಂದ ಈ ವಿಷಯದಲ್ಲಿ ೨೮೦ಎ(೫) ಹಾಗೂ ೩೦೬-ಬಿಯಲ್ಲಿ ಅಡಕವಾಗಿರಬಹುದಾದ ಸಂಗತಿ ಎಂದರೆ ಹಿಂದಿನ ವಿಧಿಗಳಲ್ಲಿ ಸೂಕ್ತವಾಗಿ ವಿವರಿಸದೇ ಹೋದ ವಿಷಯವನ್ನು ಇಲ್ಲಿ ಸಂಗ್ರಹಿಸಿ ಹೇಳಲಾಗಿದೆ. ನನ್ನ ವಿಚಾರದಂತೆ, ಸಂವಿಧಾನದಲ್ಲಿ ಈ ಬಗೆಯ ನಿರ್ದೇಶನಗಳ ಉಲ್ಲಂಘನೆಯಾದಾಗ ರಾಷ್ಟ್ರಪತಿಗಳಿಗೆ ನೀಡಿದ ಅಧಿಕಾರವನ್ನು ಅವರಿಗೆ ಮನವರಿಕೆಯಾದಾಗ, ನಿರ್ದೇಶನ ನೀಡಬಹುದು. ೩೬೫ನೇ ವಿಧಿಯಿಂದ ಹಲವಾರು ವಿಷಯಗಳನ್ನು ಕೈ ಬಿಡಬೇಕು ಎಂಬುದು ಕಷ್ಟಕರವಾದುದು. ಏಕೆಂದರೆ ೩೬೫ ವಿಧಿಯ ಗುರಿಯೇ ೨೮೦ಎ-೩೦೬ಬಿ ಗಳಲ್ಲಿ ಅಡಕವಾದ ವಿಷಯ. ಈಗಾಗಲೇ ಸದನ ಅದನ್ನು ಅಂಗೀಕರಿಸಿದ್ದು ಅದನ್ನು ವಿಸ್ತರಿಸಲಾಗಿದೆ. ಆದುದರಿಂದ ಈ ದಿಶೆಯಲ್ಲಿ ಯಾವ ನೂತನ ಆವಿಷ್ಕಾರವಿಲ್ಲ. ಮಂಜೂರಾದ ವಿಧಿಗಳನ್ನೇ ಸಮಗ್ರಗೊಳಿಸಲಾಗಿದೆ ಎಂದೇ ಹೇಳಬಯಸುವೆ.

**ಪಂಡಿತ್ ಹೃದಯನಾಥ್ ಕುಂಝ್ರು:** ನಾನು ಅಂಬೇಡ್ಕರರು ಹೇಳಿದ ೨೮೦ ಎ ಮತ್ತು ೩೦೬ಬಿ ಬಗೆಗೆ ಕರಡು ಸಂವಿಧಾನದಲ್ಲಿಯ ತಿದ್ದುಪಡಿಗೆ ಸಂಬಂಧಿಸಿರದೆ ಬೇರೆಯದಾಗಿದೆ. ೨೮೦ಎ ವಿಧಿಯು ಆರ್ಥಿಕ ತುರ್ತು ಪರಿಸ್ಥಿತಿಗೆ ಸಂಬಂಧಿಸಿದೆ. ಈ ವಿಧಿಯಡಿಯಲ್ಲಿ ರಾಷ್ಟ್ರಪತಿಗೆ ಕೇವಲ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎಂದು ಮನವರಿಕೆಯಾದಾಗ ಮಾತ್ರ ಅವರು ತುರ್ತು ಪರಿಸ್ಥಿತಿಯನ್ನು ಹಣಕಾಸಿನ ವಿಷಯಕ್ಕೆ ಮಾತ್ರ ಸಾರಬಹುದಾಗಿದೆ. ಹೀಗಾಗಿ ಈ ಅಧಿಕಾರ ಸೀಮಿತವಾಗಿದೆ. ಆದರೆ ಸಂವಿಧಾನದ ಮತ್ತೊಂದು

ವಿಧಿಯಂತೆ ರಾಷ್ಟ್ರಪತಿಯವರು ತುರ್ತು ಪರಿಸ್ಥಿತಿಯನ್ನು ಸಾರಬಹುದಾಗಿದೆ. ಆದರೆ ಅದು ಬಾಹ್ಯ ಗಂಡಾಂತರ ಹಾಗೂ ಆಂತರಿಕ ಗಂಭೀರ ಪರಿಸ್ಥಿತಿಯಿಂದ ಶಾಂತಿಗೆ ಧಕ್ಕೆ ಒದಗಿದಾಗ ಮಾತ್ರ. ಆದರೆ ಈ ವಿಧಿಗಳಲ್ಲಿ ಹೇಳಿದಂತೆ, ಕೇಂದ್ರದ ಆ ಆಡಳಿತಾಧಿಕಾರವನ್ನು ಎಲ್ಲಾ ಸಂದರ್ಭಗಳಿಗೆ ವಿಸ್ತರಿಸಲಾಗದು. ೩೦೬ಬಿಯು ಕೇವಲ ಭಾಗ ಬಿ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದು ಈ ಅಂಶವು ಮೊದಲನೆಯ ಪರಿಚ್ಛೇದದಲ್ಲಿ ತಿಳಿಸಲಾದ ಭಾಗ ಎ ರಾಜ್ಯಗಳಿಗೆ ಅನ್ವಯಿಸಲಾರದು ಎಂಬುದನ್ನು ಸ್ಮರಿಸಬೇಕು. ಡಾ. ಅಂಬೇಡ್ಕರ್‌ರೇ ಹೇಳಿದಂತೆ ಅವರು ವಿಧಿ ೩೦೬ಬಿಯಲ್ಲಿ ೨೮೦ಎ ದ ಅಂಶಗಳಿಂದ ವಿಸ್ತರಿಸಲಾಗಿದೆ. ಅವರು ಅವುಗಳನ್ನೆಲ್ಲಾ ಸಾಧಾರಣಗೊಳಿಸಿ, ಅದನ್ನು ಭಾಗ ಎ ರಾಜ್ಯಗಳಿಗೂ ವಿಸ್ತರಿಸಿದ್ದಾರೆ. ಈ ದಿಶೆಯಲ್ಲಿ ನಾನು ಹೇಳುವುದಿಷ್ಟೆ. ಅವರು ಉದಾಹರಿಸಿರುವುದು ಸೂಕ್ತವಾಗಲಾರದು. ಏಕೆಂದರೆ ಭಾಗ ಎ ಭಾಗ ಬಿ ಗಳ ರಾಜ್ಯಗಳು ಬೇರೆ ಬೇರೆ. ಹೀಗಾಗಿ ೩೬೫ನೆ ವಿಧಿಯಲ್ಲಿ ಬಳಸಿದ ಭಾಷೆ ಸೂಕ್ತವಾಗಿಲ್ಲ. ಏಕೆಂದರೆ ಅದು ಸಂವಿಧಾನ ಸಭೆಯ ಇಂಗಿತಕ್ಕೆ ಮೀರಿದೆ. ಭಾಗ ಎ ಭಾಗ ಬಿ ರಾಜ್ಯಗಳ ಮಧ್ಯೆ ಒಂದು ವ್ಯತ್ಯಾಸವಿರಬೇಕಾದುದು ಮುಖ್ಯ ವಿಷಯವಾಗಿದೆ. ಇದನ್ನು ಮರೆಯಬಾರದು. ಈ ದಿಶೆಯಲ್ಲಿ ರಚನಾ ಸಮಿತಿಯ ವಿಷಯವೇ ಅಧಿಕ ಎಂದು ಹೇಳಬಾರದು.

**ಪಂಡಿತ ಬಾಲಕೃಷ್ಣ ಶರ್ಮ** (ಯು.ವಿ. ಸಾಮಾನ್ಯ): ನಾನು ಕೆಲವು ಟಿಪ್ಪಣೆ ನೀಡಬಹುದೇ?

**ಮಾನ್ಯ ಸಭಾಧ್ಯಕ್ಷರು:** ನಿಲುವಳಿಯ ಸೂಚನೆಯ ಮೇಲೆಯೇ?

**ಪಂಡಿತ ಬಾಲಕೃಷ್ಣ ಶರ್ಮ:** ಹೌದು, ಸಾರ್.

**ಮಾನ್ಯ ಸಭಾಧ್ಯಕ್ಷರು:** ಡಾ॥ ಅಂಬೇಡ್ಕರರು ಆಗಲೇ ಉತ್ತರಿಸಿದ್ದಾರೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ದಿಶೆಯಲ್ಲಿ ನಾನು ನಿಮ್ಮ ಗಮನ ಸೆಳೆದು ಹೇಳಬಹುದಾದರೆ ಇಂದಿನ ಸರಕಾರದ ಅಂದರೆ ಇಂಡಿಯಾ ಆಕ್ಟ್‌ನಲ್ಲಿಯ ಪ್ರಕರಣ ೧೨೬ರಲ್ಲಿ ಗವರ್ನರ್ ಜನರಲ್‌ರಿಗೆ ರಾಜ್ಯದ ಗವರ್ನರರು ಈ ವಿಧವಾದ ನಿರ್ದೇಶನಗಳನ್ನು ಪಾಲಿಸಿಲ್ಲ ಎಂಬ ವಿಷಯ ಮನವರಿಕೆಯಾದಾಗ ಈ ವಿಧವಾದ ನಿರ್ದೇಶನಗಳನ್ನು ಜಾರಿಗೊಳಿಸಬಹುದೆಂದೇ ಹೇಳಲಾಗಿದೆ. ಹೀಗಾಗಿ ಈ ಅಂಶ ಅತಿ ಪ್ರಮುಖವಾದುದು. ನಾವು ಹಲವರು ಮಂತ್ರಿಗಳಾಗಿ ಯುದ್ಧ ಸಮಯದಲ್ಲಿ ಸೇವೆ ಸಲ್ಲಿಸಿದಾಗ ಹಲವಾರು ತೊಂದರೆ ಎದುರಿಸಿದ್ದೇವೆ. ಭಾರತ ಸರಕಾರದ ಆಹಾರ ಧೋರಣೆಗೆ ಸಂಬಂಧಿಸಿದಂತೆ ಪಂಜಾಬ್ ಸರಕಾರ ನಡೆದುಕೊಂಡದ್ದನ್ನು ನಾವು ಸ್ಮರಿಸಬೇಕು. ಈ ಹಿನ್ನೆಲೆಯಲ್ಲಿ ಕೇಂದ್ರದ ಆಡಳಿತ ಅಧಿಕಾರವನ್ನು ವಿಸ್ತರಿಸಲಿಕ್ಕೆ ಆಸ್ಪದವಿರುವುದು ಸೂಕ್ತ. ಇದು ಕೇವಲ ಸಾಂದರ್ಭಿಕ ವಿಷಯವಾಗಿರದೇ, ಕೇಂದ್ರ ಸರ್ಕಾರದ ಭದ್ರತೆಗೆ ಸಂಬಂಧಿಸಿದೆ.

* * *

**ಪಂಡಿತ್ ಹೃದಯನಾಥ್ ಕುಂಝ್ರು:** ನಾನು ಕುಳಿತುಕೊಳ್ಳುವ ಮುಂಚೆ ಇನ್ನೊಂದು ವಿಷಯ ಪ್ರಸ್ತಾಪ ಮಾಡುತ್ತೇನೆ. ರಚನಾ ಸಮಿತಿಯು ೩೬೫ನೆ ವಿಧಿಯಲ್ಲಿ ಬಳಸಿದ ಭಾಷೆಯಲ್ಲಿ ವಿವಿಧ ವಿಧಿಗಳ ಬಗೆಗೆ ಪ್ರಸ್ತಾಪಿಸಿದೆ. ಈಗ ಒಂದು ವಿಧವಾಗಿ ಉಪಯೋಗಿಸಿಕೊಂಡಿರುವ ವಿಧಿ ಎಂದರೆ ೩೭೧. ಇದು ಹಳೆಯ ೩೦೬ಬಿ ಗೆ ಸರಿ ಹೋಲುವಂತಹುದು. ಈ ಒಂದು ವಿಧಿಯನ್ನು ಕೈಬಿಟ್ಟಿದ್ದರೆ ೩೬೫ ನೇ ವಿಧಿಯು ನ್ಯಾಯಸಮ್ಮತವಾಗುತ್ತಿತ್ತು. ಆದರೆ ವಿಧಿ ೩೦೬ಬಿ ಯನ್ನು ಈ ಸಂವಿಧಾನದಲ್ಲಿ ಕೈ ಬಿಡಲಾಗಿಲ್ಲ. ಅದು ೩೭೧ರಲ್ಲಿ ಗೋಚರವಿದೆ. ನನಗೆ ೩೭೧ ಹಾಗೂ ೩೦೬ಬಿ ಗಳಲ್ಲಿ ಬಳಸಿದ ಭಾಷೆಗಳನ್ನು ಹೋಲಿಸಲಾಗುವುದಿಲ್ಲ. ಈ ತಿದ್ದುಪಡಿ ಕಳೆದ ತಿಂಗಳಲ್ಲಿ ಮಾತ್ರ ಅಂಗೀಕರಿಸಲಾಗಿದೆ. ಡಾ.

ಬಿ.ಆರ್.ಅಂಬೇಡ್ಕರ್ ನನ್ನ ಸ್ನೇಹಿತರು ಈ ವಿಷಯವನ್ನು ಮುಂದುವರಿಸುವ ಮುನ್ನವೇ ನಾನು ಈ ಪದಗಳನ್ನು ಸೂಚಿಸಬಯಸುವೆ. ಮತ್ತು ಯಾವುದೇ ವಿಧವಾಗಿ ನಿರ್ದೇಶನಗಳನ್ನು ವಿಫಲಗೊಳಿಸಿದಲ್ಲಿ ಆ ಸರಕಾರವು ಸಂವಿಧಾನಕ್ಕೆ ವಿರೋಧವಾಗಿ ವರ್ತಿಸಿದಂತೆ. ಇದನ್ನು ೩೭೧ರಲ್ಲಿ ಕೈ ಬಿಡಲಾಗಿದೆ. ಇದು ಮೂಲ ೩೦೬ಬಿಗೆ ಹೋಲುತ್ತದೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಹಾಗಾದರೆ ನನ್ನ ತಪ್ಪನ್ನು ತಿದ್ದಿಕೊಳ್ಳುವೆ. ಪಂಡಿತ್ ಠಾಕೂರ್‌ದಾಸ್ ಭಾರ್ಗವರ ಸಲಹೆಯಂತೆ ೩೬೫ನ್ನು ಕೈ ಬಿಟ್ಟಲ್ಲಿ, ರಚನಾ ಸಮಿತಿಯು ಹಳೆಯ ಕರಡಿನ ೩೦೬ಬಿಗೆ ಮರಳಬಹುದಲ್ಲವೇ? ಇದಲ್ಲದೇ ಅಂಬೇಡ್ಕರರು ಸೂಚಿಸಿದ ಪ್ರಶ್ನೆಯಂತೆ ಸಂವಿಧಾನ ಸಭೆಯ ತಿದ್ದುಪಡಿಯಂತೆ ೩೦೬ಬಿ ನಿಯಮಿತ ಸಮಯಕ್ಕೆ ಸೇರಿದಂತೆ ಇಂದಿನ ಕರಡಿನ ೩೭೧ಕ್ಕೆ ಸರಿ ಹೋಲುತ್ತದೆ.

**ಶ್ರೀ ಹೆಚ್. ವಿ. ಕಾಮತ್:** ವಿಧಿ ೩೭೧ ರಲ್ಲಿ ಹೇಳಿದಂತೆ ೧೦ ವರ್ಷಕ್ಕೂ ಅದು ಮೀರಿ ಜಾರಿಯಲ್ಲಿರಬಹುದೇ ಎಂದು ತಿಳಿಯಬಯಸುವೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ಸಂವಿಧಾನಕ್ಕೆ ಅಡ್ಡಿಯುಂಟಾದಂತೆ ಸಂವಿಧಾನ ಜಾರಿಗೆ ಬಂದ ದಿನದಿಂದ ಹತ್ತು ವರ್ಷದವರೆಗೆ ಅಥವಾ ಅಧಿಕ ಹಾಗೂ ಕಡಿಮೆ ಅವಧಿ ಸಂಸತ್ತಿನ ಅನುಮತಿಯಿಂದ ಕಾರ್ಯ ರೂಪದಲ್ಲಿರುವುದು.

**ಮಹಾವೀರ್ ತ್ಯಾಗಿ:** ಮಾನ್ಯರೆ, ಅಧ್ಯಕ್ಷರೆಂದರೆ, ಸಂವಿಧಾನ ಸಭೆಯ ಅಧ್ಯಕ್ಷರೆಂದೇ ನನ್ನ ಭಾವನೆ ಸರಕಾರದ ಅಧ್ಯಕ್ಷರೆ.

**ಮಾನ್ಯ ಸಭಾಧ್ಯಕ್ಷರು:** ಒಕ್ಕೂಟದ ಅಧ್ಯಕ್ಷರಲ್ಲದೆ ಬೇರೆ ಯಾವ ಆಧ್ಯಕ್ಷರೂ ಇಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಈ ವಿಷಯದ ಬಗೆಗೆ ನಂತರ ಮಾತನಾಡುವೆ. ಈಗ ಶ್ರೀ ಸಿಧ್ವ ಅವರು ತಮ್ಮ ಟಿಪ್ಪಣಿಯನ್ನು ಅಂತ್ಯಗೊಳಿಸಲಿ.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುವೆ.

ವಿಧಿ ೭೨(೧) (ಬಿ) ಯಲ್ಲಿಯ ಪದಗಳು "ಯಾವ ಕಾನೂನಿನಡಿಯಲ್ಲಿಯ ಅಪರಾಧ" ಎಂಬ ಪದಗಳನ್ನು "ಕಾನೂನಿನ ವಿರೋಧವಾದ ಯಾವುದೇ ಅಪರಾಧ" ಎಂಬುದನ್ನು ಸೇರ್ಪಡಿಸಬೇಕು.

* * *

**ಶ್ರೀ ಆರ್. ಕೆ. ಸಿಧ್ವ:** ಹಲವಾರು ಸಂದೇಹಗಳ ಬಗೆಗೆ ಉತ್ತರ ದೊರೆತಲ್ಲಿ ಸಹಕಾರಿಯಾಗಬಲ್ಲದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ನನ್ನ ಮಿತ್ರರಾದ ಸಿಧ್ವ ಅವರು ವಿಧಿ ೩೬೬(೧೨) ರಚನಾ ಸಮಿತಿ ತಿದ್ದಿದಂತೆ ಅದನ್ನು ಗಮನಿಸಿದರೆ ಆಗ ಅವರಿಗೆ ೩೬೭(೩) ರಲ್ಲಿ ಯಾವ ನೂತನ ಭಾಗವೂ ಇಲ್ಲವೆಂದೇ ಹೊಳೆಯುತ್ತದೆ. ಈ ತಿದ್ದುಪಡಿಯ ವಿಷಯ ನಂ. ೫೬೨ಎಗೆ ಸೇರಿದ್ದು. ವಿಧಿ ೩೬೬ ವ್ಯಾಖ್ಯೆಯ ವಿಧಿಯಾಗಿದ್ದು ಮತ್ತು ಉಪನಿಬಂಧವೋ(೧೨) ರಲ್ಲಿ ವಿದೇಶೀ ರಾಷ್ಟ್ರಗಳೆಂದರೆ ಯಾವುದು ಎಂಬುದರ ಬಗೆಗೆ ವಿವರಿಸಿದ್ದೆ. ೩೬೬(೧೨) ಕುರಿತಂತೆ ಸಂವಿಧಾನ ಸಭೆಯು ಮಂಜೂರು ಮಾಡಿದ್ದು ಮುದ್ರಿತವಾಗಿರದೇ ಹೋದುದರಿಂದಲೇ ಅದಕ್ಕೆ ವಿಶೇಷ ರೂಪ ನೀಡಲೆಂದೇ ರಚನಾ ಸಮಿತಿ ಅದನ್ನು ಕೈ ಬಿಡಬೇಕೆಂದು ನಿರ್ಣಯಿಸಿತು. ಇದನ್ನು ತಿದ್ದುಪಡಿ ನಂ. ೪೯೭ರ ಮೂಲಕ ಮಾಡಲಾಯಿತು. ಅದನ್ನು ಈಗ ತಿದ್ದುಪಡಿ ೫೬೨ಎ ಮೂಲಕ ಸೇರ್ಪಡಿಸಿದೆ. ಸದನಕ್ಕೆ ಸಲ್ಲಿಸಿದ ಕರಡು ಹಾಗೂ ವರದಿಯ ಪ್ರಮುಖ ಅಂಶಗಳೆಂದರೆ ರಾಷ್ಟ್ರಪತಿಗಳಿಗೆ ವಿದೇಶ ಎಂದರೆ ಯಾವುದು ಎಂಬುದನ್ನು ನಿರ್ಣಯಿಸುವ

ಅಧಿಕಾರವನ್ನು ನೀಡಲಾಗಿದ್ದು ೩೬೭(೩) ಪ್ರಮುಖ ಅಂಶವೂ ಇದೇ ಆಗಿದೆ. ಈ ದಿಶೆಯಲ್ಲಿ ಸೇರ್ಪಡಿಸಿರುವ ವಿಷಯ ಎಂದರೆ, ಸಂಸತ್ತು ಈ ದಿಶೆಯಲ್ಲಿ ಕಾನೂನು ರಚಿಸುವಾಗ ರಾಷ್ಟ್ರಪತಿಗಳಿಗೆ ಯಾವುದು 'ವಿದೇಶ' ಎಂಬುದನ್ನು ಘೋಷಣೆಯ ಆಜ್ಞೆಯ ಮೂಲಕ ಹೇಳುವ ಅಧಿಕಾರವಿರಬೇಕು. ರಚನಾಸಮಿತಿಯ ಅಭಿಪ್ರಾಯದಲ್ಲಿ ಈ ಬಗ್ಗೆ ಹೆಚ್ಚು ಬಿಗಿಯಾದ ಧೋರಣೆಯನ್ನು ಅನುಸರಿಸದೆ ವ್ಯಾವಹಾರಿಕ ರೀತಿಯನ್ನು ತಳೆದರೆ ಸಹಕಾರಿಯಾಗಬಲ್ಲದು. ಏಕೆಂದರೆ ಸಂಸತ್ತು ಹಾಗೂ ರಾಷ್ಟ್ರಪತಿಗಳಿಗೆ ಮಧ್ಯೆ ವಿರಸ ಉಂಟಾಗದಂತೆ ಇರುವುದೇ ಪ್ರಮುಖ ಅಂಶ. ಈ ವಿದೇಶೀ ರಾಜ್ಯಗಳು ಭಾರತದೊಂದಿಗೆ ಸೇರ್ಪಡೆ ಹೊಂದಿದಾಗ ಅದರ ಪ್ರಜೆಗಳಿಗೆ ಭಾರತದ ನಾಗರಿಕರಿಗೆ ನೀಡಿರುವ ಎಲ್ಲಾ ಹಕ್ಕುಗಳೂ ದೊರೆಯುವುವು. ಹೀಗಾಗಿ ೩೬೬(೧೨) ತರಲಾಗಿದೆ.

* * *

**ಮಾನ್ಯ ಸಭಾಧ್ಯಕ್ಷರು:** ಈ ಪ್ರಶ್ನೆಗೆ ಸಂಬಂಧಿಸಿದಂತೆ ಪಂಡಿತ ಭಾರ್ಗವರು, ಇಂದಿನಿಂದ ೨೫ರ ವರೆಗೆ ಅವಕಾಶವಿದೆ ಎಂದು ಸೂಚಿಸಿದರು. ಇದರ ಬಗೆಗೆ ಒಂದು ಒಮ್ಮತಕ್ಕೆ ಬರುವಲ್ಲಿ ಈ ಅವಕಾಶವನ್ನು ಸದಸ್ಯರು ಒಪ್ಪಿದಲ್ಲಿ ಹಾಗೆಯೇ ಮಾಡಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬೊಂಬಾಯಿ:ಸಾಮಾನ್ಯ): ನನಗೆ ತಿಳಿದಂತೆ ಈ ಸಮಸ್ಯೆಯನ್ನು ಮುಕ್ತಗೊಳಿಸಬೇಕೆಂದರೆ ಸದಸ್ಯರು ೨೫ ನವೆಂಬರ್ ಮುನ್ನ ಸರಕಾರದ ೧೯೩೫ನೆಯ ಕಾಯ್ದೆಗೆ ಒಂದು ತಿದ್ದುಪಡಿಯನ್ನು ಮಾಡಬೇಕು. ಅದು ಹೇಗೆಂದರೆ, ೨೯೦ನೆಯ, ಪ್ರಕರಣದಲ್ಲಿ ಗವರ್ನರ್ ಜನರಲ್ಲಿಗೆ ನೀಡಿದ ಹಲವಾರು ಅಧಿಕಾರಗಳಲ್ಲಿ ಪ್ರಾಂತ್ಯದ ಹೆಸರನ್ನೂ ಬದಲಾಯಿಸುವ ಅಧಿಕಾರವಿದೆ.

ಆದುದರಿಂದ ರಾಷ್ಟ್ರಪತಿಯವರು ವಿಧಿ ೩೬೧ರ ಅಡಿಯಲ್ಲಿ ಮತ್ತು ಪರಿಚ್ಛೇದವನ್ನೇ ಬದಲಾಯಿಸಿ, ಸರಕಾರದ ೧೯೩೫ನೇ ಕಾನೂನಿಗೆ ತಿದ್ದುಪಡಿಯನ್ನು ತರಬಹುದು. ಇದು ಕೇವಲ ಕೆಲವೇ ನಿಮಿಷಗಳ ಅವಧಿಯ ಕಾರ್ಯ. ಈ ಕಾರ್ಯವನ್ನು ರಚನಾ ಸಮಿತಿ ಅಥವಾ ಗೃಹ ಮಂತ್ರಿ ವರ್ಗದಿಂದ ಈ ಸದನದ ಮುಂದೆ ೧೯೩೫ ಕಾನೂನಿಗೆ ಒಂದು ತಿದ್ದುಪಡಿಯನ್ನು ಮಂಡಿಸಬಹುದು. ಅದನ್ನು ೨೬ ಜನವರಿಗೆ ಮುಂಚೆ ಅಂಗೀಕರಿಸಬಹುದು.

**ಶ್ರೀ ಕೆ. ಸಂತಾನಮ್:** ನಮಗೆ ಇರಬಹುದಾದ ತೊಂದರೆ ಹೆಸರು ಬದಲಾಯಿಸುವ ವಿಧಾನಕ್ಕಲ್ಲ. ಆದರೆ 'ಆರ್ಯಾವರ್ತ'ಕ್ಕೆ ಮಾತ್ರ. ಆದುದರಿಂದ ನಾವು ಗವರ್ನರ್ ಜನರಲ್ಲರಿಗೂ 'ಆರ್ಯಾವರ್ತ' ಎಂದು ನಾಮಕರಣ ಮಾಡುವುದಕ್ಕೆ ಅವಕಾಶ ನೀಡಲಾರೆವು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** 'ಆರ್ಯಾವರ್ತ'ದ ಪ್ರಶ್ನೆಯ ಬಗೆಗೆ ಸಂಬಂಧಿಸಿದವರು ಒಪ್ಪಿಗೆ ನೀಡಿದ್ದಾರೆ. ಅದನ್ನು ಪುರುಷೋತ್ತಮ ದಾಸ ಟಂಡನ್ ಅವರು ಗಮನಿಸಿರುವರೆಂದೇ ನಂಬಿದ್ದೇನೆ.

**ಶ್ರೀ ಗೋವಿಂದವಲ್ಲಭ ಪಂತ್** (ಸಂಯುಕ್ತ ಪ್ರಾಂತ): ನೀವು ತಿರಸ್ಕರಿಸಿರುವುದನ್ನು ಯು.ವಿ. ಸರಕಾರದಿಂದ ಮಂಡಿಸಲಾಗುವುದಿಲ್ಲ ಅಥವಾ ಗವರ್ನರ್ ಜನರೆಲ್ಲರೂ ಇಂಥ ಕ್ರಮಕ್ಕೆ ಒಪ್ಪುವುದಿಲ್ಲ. ನಾವೆಲ್ಲರೂ ನಿಮ್ಮ ಸಲಹೆಗೆ ಒಪ್ಪಿದ್ದೇವೆ.

**ಮಾನ್ಯ ಸಭಾಧ್ಯಕರು:** ಹಾಗಾದರೆ ಸದ್ಯ ಈ ವಿಷಯದ ಬಗೆಗೆ ಏನೂ ಮಾಡಲಾಗದು.

**ಶ್ರೀ ಗೋವಿಂದವಲ್ಲಭ ಪಂತ್:** ಒಂದು ತಿಳಿವಳಿಯಂತೆ ಡಾ॥ ಅಂಬೇಡ್ಕರರು ನಾವು ಇಲ್ಲಿಂದ

ತೆರಳುವ ಮುನ್ನ ತಿದ್ದುಪಡಿಯನ್ನು ಮಂಡಿಸಬೇಕು.

**ಮಾನ್ಯ ಸಭಾಧ್ಯಕ್ಷರು:** ಅದು ಅಂಬೇಡ್ಕರರಿಗೆ ಸೇರಿದ್ದು.

* * *

**ಮಾನ್ಯ ಸಭಾಧ್ಯಕ್ಷರು:** ನಾವು ಎಲ್ಲಾ ತಿದ್ದುಪಡಿಗಳನ್ನು ಪರಿಶೀಲಿಸಿದ್ದೇವೆ. ಹೆಚ್ಚು ತರ್ಕಕ್ಕೆ ಅವಕಾಶವಿಲ್ಲ. ವಾಸ್ತವಿಕವಾಗಿ ನಮ್ಮ ಮುಂದೆ ಬಂದಿದ್ದ ಎಲ್ಲ ಸಂಗತಿಗಳನ್ನು ಚರ್ಚಿಸಿದ್ದೇವೆ. ಈಗ ನಾನು ವಿವಿಧ ತಿದ್ದುಪಡಿಗಳ ಬಗೆಗೆ ಉತ್ತರ ನೀಡಬೇಕೆಂದು ಡಾ॥ ಅಂಬೇಡ್ಕರರನ್ನು ಕೋರುವೆ.

**ಶ್ರೀ ರಾಜ ಬಹದ್ದೂರ್:** ಮಾನ್ಯರೇ, ನಾನು ಒಂದು ವಿಷಯ ಹೇಳಬೇಕೆಂದಿರುವೆ. ಶಿರೋಡಿಗೆ ಸಂಬಂಧಿಸಿದ ಆಜ್ಞೆಯನ್ನು ಸದನದ ಮುಂದೆ ಇರಿಸಿದಲ್ಲಿ ನಾವು ಅದನ್ನು ತಿಳಿಯಲು ಅನುಕೂಲವಾಗುತ್ತದೆ. ಹಾಗೂ ಈ ಸದನ ಅದಕ್ಕೆ ತನ್ನ ಸಹಮತವನ್ನು ನೀಡುವುದೇ ಎಂಬ ವಿಷಯ ತಿಳಿಯಬಹುದಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಅದು ಈ ಸದನಕ್ಕೆ ಸಂಬಂಧಿಸಿದ ವಿಷಯವಲ್ಲ. ಅದು ಬೇರೆ ಸದನಕ್ಕೆ ಸೇರಿದ ವಿಷಯ ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ನನ್ನ ಉತ್ತರಗಳಲ್ಲಿ ಕೇವಲ ಪ್ರಮುಖವಾದ ಹಾಗೂ ವಿವಾದಕ್ಕೆ ಎಡೆ ಮಾಡಿದ ವಿಧಿಗಳನ್ನು ಮಾತ್ರ ಕೈಗೆತ್ತಿಕೊಳ್ಳುವೆ. ಈ ಹಂತದಲ್ಲಿ ನನ್ನಿಂದ ಎಲ್ಲಾ ವಿಧಿಗಳಿಗೆ ಉತ್ತರಿಸುವುದು ಸಾಧ್ಯವಿಲ್ಲ ಹಾಗೂ ಸೂಕ್ತವಲ್ಲ. ಹೀಗಾಗಿ ಕೆಲವೇ ವಿಧಿಗಳಿಗೆ ಉತ್ತರಿಸುವೆ.

ಚರ್ಚೆಯನ್ನು ಗಮನಿಸಿದ ನಾನು ೨೨ನೆಯ ವಿಧಿಯನ್ನು ಮೊದಲು ಕೈಗೆತ್ತಿಕೊಳ್ಳುವೆ. ನನಗೆ ತಿಳಿದಂತೆ ಈ ವಿಧಿಯನ್ನು ಕುರಿತಂತೆ ರಚನಾ ಸಮಿತಿಯ ತಿದ್ದುಪಡಿಗಳನ್ನು ಸೂಕ್ತವಾಗಿ ಅರಿತಂತೆ ಕಂಡು ಬರುತ್ತದೆ. ಹೀಗಾಗಿ ಅದನ್ನು ಸ್ಥೂಲವಾಗಿ ವಿವರಿಸಲು ಬಯಸುತ್ತೇನೆ. ರಚನಾ ಸಮಿತಿಯು ಈ ವಿಧಿಗೆ ಸೂಚಿಸಿದ ಹಲವಾರು ಅಂಶಗಳು ಹೀಗಿವೆ.

ಒಂದನೆಯದಾಗಿ ಯಾವುದೇ ಪ್ರತಿಬಂಧನಾಜ್ಞೆಯು ಕಾನೂನಿಗೆ ಅನುಗುಣವಾಗಿರಲೇಬೇಕು. ಅದು ಕೇವಲ ಆಡಳಿತಾಧಿಕಾರಿಯ ಮನಸ್ಸಿಗೆ ಬಿಟ್ಟಿದ್ದಲ್ಲ.

ಎರಡನೆಯದಾಗಿ, ಮೂರು ತಿಂಗಳ ಅವಧಿಗೂ ಮೀರಿದ ಪ್ರತಿಯೊಂದು ಪ್ರತಿಬಂಧನೆಯನ್ನು ನ್ಯಾಯಾಲಯದ ಮುಂದೆ ಇರಿಸಬೇಕು. ಆದರೆ ಸಂಸತ್ ಉಪನಿಬಂಧನೆ(೭)ರ ಅನುಬಂಧ (ಎ)ರ ಅಡಿಯಲ್ಲಿ ನಿರ್ಮಿಸಿದ ಕಾನೂನಿನಡಿಯಲ್ಲಿ ಮೇಲಿನಂತೆ ವರ್ತಿಸಲಾಗದು. ಏಕೆಂದರೆ ಅದು ನ್ಯಾಯಾಲಯದ ವ್ಯಾಪ್ತಿಗೆ ಸಂಬಂಧಿಸಿಲ್ಲ. ಈ ವಿಧವಾದ ಪ್ರಕರಣಗಳಲ್ಲಿ ಯಾವ ವಿಚಾರಣೆಯೂ ಇಲ್ಲದೆ, ಮೂರು ತಿಂಗಳು ಮೀರಿ ಬಂಧನದಲ್ಲಿಡಬಹುದು.

ಮೂರನೆಯದಾಗಿ, ಪ್ರತಿಯೊಂದು ಪ್ರತಿಬಂಧನಾತ್ಮಕ ವಿಷಯದಲ್ಲಿಯೂ ಅದು ನ್ಯಾಯಾಂಗದ ಮುಂದೆ ಸಾದರಪಡಿಸುವ ಅಥವಾ ಸಾದರಪಡಿಸದೆ ಹೋಗುವ ಪ್ರಕರಣಗಳಲ್ಲಿ ಸಂಸತ್ತು ಅನಿರ್ದಿಷ್ಟ ಕಾಲ ನಿರ್ಬಂಧನೆಯಲ್ಲಿಡುವ ಕಾನೂನಿನ ಸಂಸತ್ತಿಗೆ ಇದೆ.

ನಾಲ್ಕನೆಯದಾಗಿ, ವಿಧಿ ೨೨ ರಂತೆ ನ್ಯಾಯಾಲಯದ ಮುಂದೆ ತೆಗೆದುಕೊಂಡು ಹೋಗುವ ವಿಧಾನಗಳನ್ನು ರೂಪಿಸುವ ಹಕ್ಕು ಸಂಸತ್ತಿಗೆ ಇದೆ. ನಾನು ಈ ೨೨ನೇ ವಿಧಿಗೆ ಸೇರಿದಂತೆ ಅನೇಕ ಅಂಶಗಳನ್ನು ರಚನಾ ಸಮಿತಿಯು ತಿದ್ದಿರುವುದನ್ನು ಸದಸ್ಯರು ಗಮನಿಸಬೇಕೆಂದು ಕೋರುತ್ತೇನೆ. ಮೂಲದ ೧೫ಎ ಯ ವಿರುದ್ಧ ಎರಡು ಟೀಕೆಗಳಿದ್ದವು. ಒಂದು (೪) (ಎ) ಅಧಿಕ ಅವಧಿಯ ಪ್ರತಿಬಂಧನೆಯನ್ನು ಸರಿಯಗಿ ಸೂಚಿಸಿರದೇ ಇದ್ದುದು. ಕಲಮು (೭) ೪(ಎ) ೭ ರಿಂದ ಸ್ವತಂತ್ರವಾಗಿಯೇ ತೋರುತ್ತಿತ್ತು.

ಎರಡನೆಯ ದೋಷವೆಂದರೆ ಪ್ರತಿಬಂಧನಾ ಕಾನೂನಿಗೆ ಗುರಿಯಾದ ವ್ಯಕ್ತಿಯನ್ನು ಯಾವ ಆಧಾರದ ಮೇಲೆ ಹಿಡಿಯಲಾಗಿದೆ ಎಂಬುದನ್ನು ತಿಳಿಸುವ ಬಗೆಗೆ ೪(ಎ)ರಲ್ಲಿ ಸೂಕ್ತ ವಿವರಗಳಿರದೇ ಹೋದುದು. ಆದರೆ ಈಗ ನಮ್ಮ ಮುಂದೆ ಇರುವ ೨೨(೪) ಈ ಎರಡೂ ಕುಂದುಕೊರತೆಗಳನ್ನು ನಿವಾರಿಸಿದೆ.

೨೨ನೇ ವಿಧಿಯಲ್ಲಿ ತರಲಾದ ಸುಧಾರಣೆಯನ್ನು ಗಮನಿಸದೆ ಪೂರ್ಣಿಮಾ ಬ್ಯಾನರ್ಜಿಯವರು ದೂರಿರುವುದನ್ನು ನಾನು ಗಮನಿಸಿರುವೆ. ನಿನ್ನೆ ಅವರು ಮಾತನಾಡಿದಾಗ ಪ್ರತಿಬಂಧಕಾಜ್ಞೆಯನ್ನು ಯಾವ ಕಾನೂನಿನ ಆಧಾರವಿಲ್ಲದೇ ಜಾರಿಗೊಳಿಸಬಹುದು ಎಂದಿದ್ದಾರೆ. ಎರಡನೆಯದಾಗಿ ನ್ಯಾಯಮಂಡಳಿ ಮುಂದೆ ಹೋಗಲಾರದ ಇನ್ನೂ ಅನೇಕ ಪ್ರಕರಣಗಳಿವೆ. ಅವರ ಗ್ರಹಿಕೆ ಸೂಕ್ತವಾಗಿಲ್ಲ. ಹೀಗಾಗಿ ನಾನು ವಿವರಿಸಬಯಸುವೆ. ಸಾಮಾನ್ಯ ಕಾನೂನಿನ ಅಡಿಯಲ್ಲಿ ಬಂಧನಕ್ಕೆ ಗುರಿಯಾಗುವುದು ಹಾಗೂ ಪ್ರತಿಬಂಧನಾ ಕಾನೂನಿನ ಅಡಿಯಲ್ಲಿ ಬಂಧನಕ್ಕೆ ಗುರಿಯಾಗುವುದು ಇವೆರಡಕ್ಕೆ ವ್ಯತ್ಯಾಸವಿದೆ. ಪ್ರತಿಬಂಧನಾಜ್ಞೆಯೂ ಕಾನೂನಿನ ಪ್ರಕಾರವೇ ನಡೆಯುತ್ತದೆ. ಆದುದರಿಂದ ಅದು ಕೇವಲ ಆಡಳಿತಾಧಿಕಾರಿಯ ಕೈಗೊಂಬೆ ಅಲ್ಲ. ಇದು ನಿಜ ಸಂಗತಿ. ಅವರು ಟೀಕಿಸಿದ ಎರಡನೆಯ ಸಂಗತಿ ಕುರಿತಂತೆ. ನೂತನ ೨೨ನೇ ವಿಧಿಯಲ್ಲಿ ಕೇವಲ ಹಲವು ಪ್ರಕರಣಗಳು ಮಾತ್ರ ನ್ಯಾಯಾಲಯದ ವ್ಯಾಪ್ತಿಯಿಂದ ಮುಕ್ತವಾಗಿದೆ. ಅವರು ಹೇಳಿರಬಹುದಾದ ವಿಷಯ ನಿಜ ಎಂದು ಒಪ್ಪುವೆ. ಆದರೆ ಅದರಲ್ಲಿ ಬಂಧಿತರಾದ ವ್ಯಕ್ತಿಗಳ ವಿಷಯವನ್ನು ನ್ಯಾಯಾಲಯಕ್ಕೂ ತಿಳಿಸಲಾರದಂತಹ ಸೂಕ್ಷ್ಮ ಹಾಗೂ ಸಂಕಿರಣ ವಿಷಯಗಳಾಗಿರುತ್ತವೆ. ರಾಷ್ಟ್ರದ ಭದ್ರತೆಯ ದೃಷ್ಟಿಯಿಂದ ಅವನ್ನು ಬಹಿರಂಗ ಮಾಡಲಾಗದು. ಈ ವ್ಯತ್ಯಾಸವನ್ನು ಅವರು ಅರಿಯಬೇಕು. ಮೊದಲಿಗೆ ಈ ವಿಷಯವನ್ನು ಸಂಸತ್ತೇ ನಿರ್ಣಯಿಸುತ್ತದೆ. ಅದನ್ನು ಏಕಪಕ್ಷೀಯವಾಗಿ ಆಡಳಿತಾಧಿಕಾರವು ನಿರ್ಣಯಿಸುವಂತಿಲ್ಲ. ಹೀಗಾಗಿ ಯಾವ ಪ್ರಕರಣಗಳು ನ್ಯಾಯಮಂಡಳಿಯ ಮುಂದೆ ಹೋಗಬಾರದು ಎಂಬ ವಿಷಯವನ್ನು ಸಂಸತ್ತೇ ನಿರ್ಣಯಿಸುವುದರಿಂದ, ಸರಕಾರವು ೩ ತಿಂಗಳ ಅವಧಿಗೆ ಹೆಚ್ಚು ಆಗದಂತೆ ಪ್ರಕರಣಗಳಲ್ಲಿ ಮಾತ್ರ ಕಾನೂನು ಬದ್ಧವಾಗಿ ವರ್ತಿಸುವುದು ಅನಿವಾರ್ಯ. ಇಲ್ಲಿ ನಾವು ಅರಿಯಬೇಕಾದ ವಿಷಯವೆಂದರೆ ವಿವಿಧ ಪ್ರಕರಣಗಳಿಗೆ ಸಂಬಂಧಿಸಿದ ನಿರ್ಣಯ. ಆಡಳಿತಾಧಿಕಾರಕ್ಕೆ ಇರದೆ ಸಂಸತ್ತಿಗೆ ಇದೆ. ಆದುದರಿಂದ ಪ್ರತಿಬಂಧಕಾಜ್ಞೆಯನ್ನು ಕುರಿತಂತೆ ಸಂಸತ್ತೇ ಕಾಲಕಾಲಕ್ಕೆ ಶಾಸನಗಳನ್ನು ರಚಿಸುವ ಅಧಿಕಾರ ಹೊಂದಿವೆ.

ಆದುದರಿಂದಲೇ ರಚನಾ ಸಮಿತಿಯು ತನ್ನ ತಿದ್ದುಪಡಿಯಲ್ಲಿ ಅಂದರೆ ವಿಧಿ ೨೨ ರಲ್ಲಿ ವಿಧಿ ೧೫(ಎ)ಗೆ ಸಾಕಷ್ಟು ಸುಧಾರಣೆ ಮಾಡಿದೆ ಎಂದೇ ಹೇಳುವೆ. ಮಾನ್ಯರೆ, ನಾನು ೨೨ನೆಯ ವಿಧಿಯ ಬಗೆಗೆ ಸಾಕಷ್ಟು ವಿವರಿಸಿರುವುದರಿಂದ ಈಗ ೩೭೩ನೇ ವಿಧಿಯ ಬಗೆಗೆ ಮಾತನಾಡುವೆ. ಏಕೆಂದರೆ ಅದು ೨೨ನೆಯ ವಿಧಿಯೊಂದಿಗೆ ನಿಕಟ ಸಂಪರ್ಕ ಪಡೆದಿದೆ.

ಈ ೩೭೩ನೆಯ ವಿಧಿಗೆ ಸಂಬಂಧಿಸಿದಂತೆ ಅನೇಕರು ಆಕ್ಷೇಪಿಸಿದ್ದಾರೆ. ಹಲವರ ಅಭಿಪ್ರಾಯದಂತೆ ಈ ವಿಧವಾದ ವಿಧಿಯು ಸಂವಿಧಾನದಲ್ಲಿರಬಹುದೇ ಎಂದು ತಮ್ಮ ಶಂಕೆಯನ್ನು ತಿಳಿಸಿದ್ದಾರೆ. ಹೀಗಾಗಿ ಈ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗಿದ್ದು. ಈ ದಿಶೆಯಲ್ಲಿ ಸದಸ್ಯರ ಗಮನವನ್ನು ಸೆಳೆಯ ಬಯಸುತ್ತೇನೆ. ಈ ವಿಧಿಯನ್ನು ಸಂವಿಧಾನದಲ್ಲಿ ಏಕೆ ಸೇರಿಸಲಾಗಿದೆ? ಒಂದು ವೇಳೆ ಈ ವಿಧಿಯನ್ನು ಸಂವಿಧಾನದಲ್ಲಿ ಸೇರಿಸದೇ ಹೋದಲ್ಲಿ, ಜನವರಿ ೨೬, ೧೯೫೦ರಂದು ಮೂರು ತಿಂಗಳ ಅವಧಿ ಪೂರೈಸಿದ ಎಲ್ಲಾ ಬಂಧಿತರನ್ನು ಬಿಡುಗಡೆ ಮಾಡಬೇಕಾಗುತ್ತದೆ. ಆದರೆ ಈ ಪ್ರಕರಣಗಳ ಬಗೆಗೆ ಸಂಸತ್ತು

ಯಾವ ವಿಧವಾದ ಕಾನೂನಿನ ನಿಲುವನ್ನು ತೆಗೆದುಕೊಳ್ಳದೇ ಇರುವ ಸ್ಥಿತಿಯಲ್ಲಿ ಬಿಡುಗಡೆ ಮಾಡುವುದು ಸರಿಯಲ್ಲ. ಹಾಗೂ ಇದರಿಂದಾಗಬಹುದಾದ ದೂರಗಾಮಿ ಪರಿಣಾಮಗಳನ್ನು ನಾವು ಆಲೋಚಿಸಬೇಕು. ಹೀಗಾಗಿ ಕೇವಲ ಸಂಸತ್ತು ನಿರ್ಣಯ ಮಾಡಲು ಸಮಯವಿಲ್ಲ ಎಂಬ ಒಂದೇ ಕಾರಣಕ್ಕಾಗಿ ಬಂಧಿತರನ್ನು ಬಿಡುಗಡೆ ಮಾಡುವುದು ಆತಂಕಕಾರಿ. ಬಂಧನದ ಅವಧಿಯನ್ನು ವಿಸ್ತರಿಸಲು ಸಂಸತ್ತಿನ ಆಜ್ಞೆ ಬೇಕೇ ಬೇಕು. ಈ ಒಂದು ಸಂದಿಗ್ಧ ಪರಿಸ್ಥಿತಿಯನ್ನು ಮನಗಂಡೇ ನಾವು ಈ ಅಧಿಕಾರವನ್ನು ಸಂವಿಧಾನದಡಿಯಲ್ಲಿ ರಾಷ್ಟ್ರಪತಿಗೆ ನೀಡಿದ್ದೇವೆ. ಕಾನೂನು ಜಾರಿಯ ವಿಷಯದಲ್ಲಿ ಅಡಚಣೆ ಉಂಟಾಗಬಾರದು. ಹೀಗೆಂದು ಭಾವಿಸಿ ನಾವು ಬಂಧನವನ್ನು ವಿಸ್ತರಿಸಬಹುದಾದ ಪ್ರಕರಣಗಳ ಬಗೆಗೆ ಸಂಸತ್ತಿನ ಅನುಪಸ್ಥಿತಿಯಲ್ಲಿ ಅದರ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ನೀಡಿದ್ದೇವೆ. ಆದುದರಿಂದ ೩೭೩ನೆಯ ವಿಧಿಯಲ್ಲಿ ನೂತನವಾದ ಯಾವ ಸಂಗತಿಯೂ ಇಲ್ಲ ಎಂದೇ ಹೇಳಬಯಸುವೆ. ಕೇವಲ ಇದ್ದ ಕಾನೂನುಗಳನ್ನು ಜಾರಿಗೊಳಿಸುವ ಅಧಿಕಾರವನ್ನೇ ಇಲ್ಲಿ ನೀಡಲಾಗಿದೆ. ಸಂವಿಧಾನ ಜಾರಿಗೆ ಬಂದ ದಿನದಿಂದಲೇ ಸಂಸತ್ತಿಗೆ ಎಲ್ಲಾ ವಿಷಯಗಳನ್ನು ಕುರಿತಂತೆ ಮಸೂದೆಗಳನ್ನು ಸಿದ್ಧಪಡಿಸಲು ಸಾಧ್ಯವಾಗುವುದಿಲ್ಲ ಎಂಬ ವಿಷಯವನ್ನು ನಾವು ಸ್ಮರಿಸಬಹುದು. ಆದುದರಿಂದ ರಾಷ್ಟ್ರಪತಿಗಳಿಗೆ ಈ ಅಧಿಕಾರವನ್ನು ೩೭೩ರಲ್ಲಿ ನೀಡಲಾಗಿದೆ. ಈ ವಿಧವಾಗಿ ತಾತ್ಕಾಲಿಕ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ಸಂವಿಧಾನದಲ್ಲಿ ನೀಡಿದೆ. ಪ್ರತಿಬಂಧಕಾಜ್ಞೆಯನ್ನು ಜಾರಿಗೊಳಿಸುವಲ್ಲಿ ಉಂಟಾಗಬಹುದಾದ ಅಡಚಣೆಗಳನ್ನು ನಿವಾರಿಸಲೆಂದೇ ೩೭೩ನೆಯ ವಿಧಿಯ ಉದ್ದೇಶ.

ಮಾನ್ಯರೆ, ನಾನು ಈಗ ೩೪ನೆಯ ವಿಧಿ ಕೈಗೆತ್ತಿಕೊಳ್ಳುವೆ. ಇದು ಮಿಲಿಟರಿ ಶಾಸನಕ್ಕೆ ಸಂಬಂಧಿಸಿದೆ. ಈ ವಿಧಿಯ ಬಗೆಗೂ ಸಾಕಷ್ಟು ಟೀಕೆಗಳಿವೆ. ಶೋಚನೀಯ ಸಂಗತಿ ಎಂದರೆ ಇದರ ಬಗೆಗೆ ಸದಸ್ಯರು, ಸಂವಿಧಾನದ ೨೦(೧) ಮತ್ತು ೨೧ ವಿಧಿಗಳ ಗುರಿ ಏನು ಎಂಬುದನ್ನು ಅರಿಯದೆ ಟೀಕಿಸಿದ್ದಾರೆ. ಹಿಗಾಗಿ ನಾನು ವಿಧಿ ೨೦ (ಎ) ಹಾಗೂ ೨೧ನೆಯ ವಿಧಿಯನ್ನು ಓದುವೆ. ಏಕೆಂದರೆ ಈ ವಿಧಿಗಳ ಅರ್ಥವನ್ನು ಸರಿಯಾಗಿ ಗ್ರಹಿಸದೇ ಹೋದಲ್ಲಿ ೨೪ರ ಆವಶ್ಯಕತೆಯ ಬಗೆಗೆ ಅರಿವು ಮೂಡಲಾರದು. ವಿಧಿ ೨೦(೧) ಹೀಗಿದೆ.

"ಯಾವುದೇ ವ್ಯಕ್ತಿಯನ್ನು, ಅವನು ಮಾಡಿರಬಹುದಾದ ಅಪರಾಧ, ಕಾನೂನಿಗೆ ವಿರೋಧವಾಗಿದ್ದರೆ ಮಾತ್ರ ಬಂಧಿಸಬಹುದು. ಈ ವಿಧವಾದ ಕಾನೂನು ಜಾರಿಯಲ್ಲಿದ್ದರೆ ಮಾತ್ರ ಅವನ ಬಂಧನ ಸೂಕ್ತ."

ಈಗ ತಿಳಿದುಬರುವ ವಿಷಯ ಎಂದರೆ, ದಂಗೆ, ಲೂಟಿ, ವಿದ್ರೋಹ ರಾಜ್ಯದ ಅಧಿಕಾರದ ವಿರುದ್ಧ ಬಂಡಾಯ ಹೂಡಿದ ಪರಿಸ್ಥಿತಿಗಳಲ್ಲಿ ಮಾತ್ರ ಮಿಲಿಟರಿ ಶಾಸನಕ್ಕೆ ಆಸ್ಪದ ನೀಡಲಾಗುವುದು. ಹೀಗಾಗಿ ಮಿಲಿಟರಿ ಶಾಸನದ ಅಧಿಕಾರಿಯು ಎರಡು ಕಾರ್ಯಗಳನ್ನು ಮಾಡಬಹುದು. ಕೆಲವು ಕಾರ್ಯಾಚರಣೆಗಳು ತನ್ನ ಆಜ್ಞೆಗೆ ವಿರೋಧವಾದವು ಎಂದು ಘೋಷಿಸಬಹುದು. ಎರಡನೆಯದಾಗಿ ಅಪರಾಧಿಗಳ ಪರಿಶೀಲನೆಯ ವಿಧಾನದ ಬಗೆಗೆ ತನ್ನದೇ ಆದ ವಿಧಾನಗಳಿಂದ ಅಪರಾಧಿಗಳ ವಿಚಾರಣೆ ನಡೆಸಬಹುದು. ಮಿಲಿಟರಿ ಅಧಿಕಾರಿಯು ಅಪರಾಧ ಎಂದು ಭಾವಿಸಿದ ಅಪರಾಧವು ಜಾರಿಯಲ್ಲಿರುವ ಕಾನೂನಿನಂತೆ ಅಪರಾಧವಾಗಿರದೆಯೂ ಇರಬಹುದು. ಮಿಲಿಟರಿ ಅಧಿಕಾರಿಯು ಶಾಸನ ಮಾಡದವನು. ಹಾಗೂ ಅವರಿಗೆ ಶಾಸನ ರಚಿಸುವ ಅಧಿಕಾರವಿರದೇ ಹೋದುದರಿಂದ ಕೆಲವು ವಿಷಯ ಅಪರಾಧ ಎಂದು ಹೇಳುವ ಅಧಿಕಾರ ಅವನಿಗೆ ಇರದೇ ಹೋಗಿರಬಹುದು. ಎರಡನೆಯದಾಗಿ ಜಾರಿಯಲ್ಲಿರಬಹುದಾದ

ಕಾನೂನಿನಂತೆ, ಅವನು ಎಣಿಸಿದ ಅಪರಾಧವೂ ಅಪರಾಧವಾಗಿರದೇ ಇರಬಹುದು. ಆದರೆ ಕಾನೂನು ಪರಿಪಾಲನೆ ಮತ್ತು ಶಾಂತಿ ಸ್ಥಾಪನೆಗೆಂದೇ ಮಿಲಿಟರಿ ಶಾಸನ ಜಾರಿಗೆ ನೀಡಲಾಗುವುದು ಎಂಬುದನ್ನು ಮರೆತರೆ ೩೪ರ ಅಡಿಯಲ್ಲಿಯ ಹೇಳಿಕೆಗಳು ವ್ಯರ್ಥವಾಗುತ್ತದೆ. ನಾವು ೨೦(೧) ಹಾಗೂ ೨೧ ವಿಧಿಯಲ್ಲಿ ಇರಲಾರದೆ ಹೋದ ಅರ್ಹತೆಗಳನ್ನೇ ವಿಧಿ ೩೪ ರಲ್ಲಿ ಅಳವಡಿಸಿದ್ದೇವೆ. ಹೀಗೆ ಮಾಡದೇ ಹೋಗಿದ್ದಲ್ಲಿ ಕಾನೂನು ಹಾಗೂ ಶಾಂತಿ ಪರಿಪಾಲನೆಗೆ ಗಂಭೀರ ಅಡಚಣೆ ಉಂಟಾಗುತ್ತಿತ್ತು.

ಆದುದರಿಂದಲೇ ವಿಧಿ ೨೦ ಹಾಗೂ ೨೧ಕ್ಕೆ ಯಾವ ಬಾಧೆಯಾಗದಂತೆ ಈ ವಿಧಿಯನ್ನು ಕಮಾಂಡರ್ ಇನ್ ಚೀಫ್ ಸಾರಿದ ಆಜ್ಞೆಗಳ ಪರಿಪಾಲನೆ ಕಾನೂನು ವಿರೋಧವಲ್ಲ ಎಂಬುದನ್ನು ಗಮನಿಸಬೇಕು. ಅದರಂತೆಯೇ ಮಿಲಿಟರಿ ಅಧಿಕಾರಿಯು ಆಯ್ದುಕೊಂಡ ಅಪರಾಧಗಳ ವಿಚಾರಣೆಯ ವಿಧಾನವೂ ಜಾರಿಯಲ್ಲಿರುವ ಕಾನೂನಿಗೆ ವಿರೋಧವಲ್ಲ ಎಂದು ಅರಿಯಬೇಕು. ಮಾನ್ಯರೆ, ಈ ಎಲ್ಲಾ ಕಾರಣಗಳಿಂದ ೨೦–೨೧ ವಿಧಿಗಳಲ್ಲಿಯ ಕೊರತೆಯನ್ನು ನಿವಾರಿಸಲೆಂದೇ ೩೪ ವಿಧಿಯನ್ನು ಸೇರ್ಪಡಿಸಿದೆ.

**ಶ್ರೀ ಹೆಚ್. ವಿ. ಕಾಮತ್:** ಸರಕಾರಿ ಅಧಿಕಾರಿಗಳನ್ನು ಬಿಟ್ಟು ಮಿಕ್ಕವರನ್ನು ಅಪರಾಧಕ್ಕೆ ಗುರಿ ಮಾಡುವ ಬಗೆಗೆ ಯಾವ ವಿಧವಾದ ಮುಂದಾಲೋಚನೆಯನ್ನು ಈ ವಿಧಿಯಲ್ಲಿ ಮಾಡಲಾಗಿದೆ ಎಂಬುದನ್ನು ಅರಿಯಬಹುದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಬಹುಶಃ ನನ್ನ ಮಿತ್ರರು ನ್ಯಾಯವಾದಿಗಳಾಗಿದ್ದರೆ....

**ಶ್ರೀ ಹೆಚ್. ವಿ. ಕಾಮತ್:** ನಾನು ನ್ಯಾಯವಾದಿಯಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಿಲಿಟರಿ ಶಾಸನದ ಸಮಯದಲ್ಲಿ ಶಿಕ್ಷೆ ವಿಧಿಸುವುದು ಕೇವಲ ಕಮಾಂಡರ್ ಇನ್ ಚೀಫ್‌ಗೆ ಮಾತ್ರ ಸೇರಿಲ್ಲ. ಪ್ರತಿಯೋರ್ವ ನಾಗರಿಕನು ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಕಮಾಂಡರಿಗೆ ಸಹಕರಿಸುವುದೇ ಅವರ ಕರ್ತವ್ಯ. ಆದುದರಿಂದ ಮಿಲಿಟರಿಗೆ ಸಂಬಂಧಿಸದೇ ಹೋದರೂ ಶಾಂತಿ ಪರಿಪಾಲನೆಯಲ್ಲಿ ಸಹಕರಿಸುವವರಿಗೆ ಕೂಡಾ ಬಂಧನದಿಂದ ವಿನಾಯಿತಿ ನೀಡಲಾಗುವುದು. ಈ ದಿಶೆಯಲ್ಲಿ ಅಂದರೆ ಶಾಂತಿ ಪರಿಪಾಲನೆಯ ಕರ್ತವ್ಯದಲ್ಲಿ ಮಿಲಿಟರಿ ಹಾಗೂ ನಾಗರಿಕರೆಂಬ ಭೇದ ಎಣಿಸಲಾಗದು. ಮಾನ್ಯರೆ, ಈಗ ನಾನು ಗೋಹತ್ಯಾ ನಿಷೇಧದ ವಿಧಿ ೪೮ರ ಬಗೆಗೆ ಹೇಳಬಯಸುವೆ. ನಂ.೫೪೯ ತಿದ್ದುಪಡಿಯ ಸಹಮತದೊಂದಿಗೆ ರಚನಾ ಸಮಿತಿಯು ಪಟ್ಟಿ IVರಲ್ಲಿ ಈ ವಿಷಯವನ್ನು ಅಳವಡಿಸಿದೆ. ಹೀಗಾಗಿ ಇದರ ಬಗೆಗೆ ಯಾರಿಗೂ ವಿಷಾದ ಇರಬೇಕಾಗಿಲ್ಲ.

ನಾನು ವಿಧಿ ೭೭ರ ಬಗೆಗೆ ಹೇಳುವೆ. ಇದು ನಿಯಮಾವಳಿ ಹಾಗೂ ವ್ಯವಹಾರಕ್ಕೆ ಸಂಬಂಧಿಸಿದೆ. ಚರ್ಚೆಯ ಸಮಯದಲ್ಲಿ ಯಾವ ಕಾರಣಕ್ಕಾಗಿ ಈ ವಿಧಿಯನ್ನು ಸೇರ್ಪಡಿಸಲಾಗಿದೆ ಎಂಬುದು ಅನೇಕ ಸದಸ್ಯರಿಗೆ ತಿಳಿಯದೇ ಹೋಗಿರಬಹುದು. ಹಲವರ ಅಭಿಪ್ರಾಯದಲ್ಲಿ ಈ ವಿಧವಾದ ನಿಯಮದ ಅನಿವಾರ್ಯತೆ ಇದ್ದಲ್ಲಿ ನಿಯಮಾವಳಿ ಹಾಗೂ ವ್ಯವಹಾರದ ಬಗೆಗೆ ಪ್ರಧಾನಿಯವರಿಗೆ ಅಧಿಕಾರ ನೀಡಬಹುದಾಗಿತ್ತಲ್ಲವೇ? ಮಿಕ್ಕ ಹಲವರು ಹೇಳುವಂತೆ ದಕ್ಷತೆಗೆಂದೇ ಈ ವಿಧಿಯು ಇರುವಾಗ 'ದಕ್ಷತೆ' ಪದವನ್ನು ಸೇರ್ಪಡಿಸಬಹುದಾಗಿತ್ತಲ್ಲವೇ? ಮಾನ್ಯರೆ, ಶೋಚನೀಯ ವಿಷಯವೆಂದರೆ ಈ ೭೭ನೆ ವಿಧಿಯ ಚರ್ಚೆಯಲ್ಲಿ ಭಾಗವಹಿಸಿದ ಅನೇಕ ಸದಸ್ಯರು ಅದನ್ನು ಸೂಕ್ಷ್ಮವಾಗಿ ಗ್ರಹಿಸದೆ ಹೋದುದು. ಸದಸ್ಯರು ಮನವರಿಕೆ ಮಾಡಿಕೊಳ್ಳಬೇಕಾದ ವಿಷಯ ಎಂದರೆ ಈ ವಿಧಿಯಲ್ಲಿ ರಾಷ್ಟ್ರಪತಿಗೆ ನೀಡಿರುವ ಅಧಿಕಾರವನ್ನು

ಅವರು ಪ್ರಧಾನಿಗಳ ಸಲಹೆಯಂತೆಯೇ ಚಲಾಯಿಸಬೇಕಲ್ಲವೇ? ಹೀಗಾಗಿ ಯಾವುದೇ ಆದೇಶಗಳು ನಾಮಮಾತ್ರ ರಾಷ್ಟ್ರಪತಿಗಳ ಹೆಸರಿನಲ್ಲಿದ್ದು ವಸ್ತುತಃ ಅದು ಪ್ರಧಾನಿಯವರ ಆದೇಶವೇ ಎಂಬುದನ್ನು ಸದಸ್ಯರು ಅರಿಯಬೇಕು.

ಮಾನ್ಯರೆ, ಈ ೭೭ನೆಯ ವಿಧಿಯು ಅನಿವಾರ್ಯತೆಯನ್ನು ಅರಿಯಬೇಕಾದಲ್ಲಿ ೫೫ನೇ ವಿಧಿಯೊಂದಿಗೆ ಇದು ಹೊಂದಿರಬಹುದಾದ ಸಂಬಂಧವನ್ನು ತಿಳಿದುಕೊಳ್ಳಬೇಕು. ಏಕೆಂದರೆ ವಿಧಿ ೭೭ ವಾಸ್ತವಿಕವಾಗಿ ೫೩ನ್ನೇ ಅವಲಂಬಿಸಿದೆ. ವಿಧಿ ೫೩ ಸಾಮಾನ್ಯ ಅಂಶಗಳನ್ನು ಸೂಚಿಸುತ್ತದೆ. ಅದೇನೆಂದರೆ ಒಕ್ಕೂಟದ ಆಡಳಿತ ಅಧಿಕಾರವನ್ನು ಅಧ್ಯಕ್ಷರಿಗೆ ನೀಡಲಾಗಿದೆ. ಸಾಮಾನ್ಯವಾಗಿ ಸಂವಿಧಾನದಿಂದ ನೀಡಿದ ಈ ಅಧಿಕಾರವನ್ನು ರಾಷ್ಟ್ರಪತಿಗಳು ನೇರವಾಗಿ ಹಾಗೂ ಅಪರೋಕ್ಷವಾಗಿ ಚಲಾಯಿಸಬಹುದು. ಹೀಗಾಗಿ ೫೩ನೇ ವಿಧಿಯು ರಾಷ್ಟ್ರಪತಿಗೆ ತನ್ನ ಅಧಿಕಾರವನ್ನು ನಿಯೋಜಿಸುವ ಅವಕಾಶ ನೀಡಿದೆ.

ಆದುದರಿಂದ ಈ ವಿಧವಾಗಿ ನಿಯೋಜಿಸಬಹುದಾದ ಹಾಗೂ ಖುದ್ದಾಗಿ ಚಲಾಯಿಸಬೇಕಾದ ವಿಷಯವನ್ನು ಸ್ಪಷ್ಟಗೊಳಿಸದೇ ಹೋದರೆ ವಿಧಿ ೫೩ ವಿಫಲವಾಗುವ ಸಾಧ್ಯತೆಗಳಿವೆ. ಹೀಗಾಗಿ ಕಾನೂನು ಬದ್ಧ ಅಧಿಕಾರಗಳನ್ನು ೭೭ನೇ ವಿಧಿಯಲ್ಲಿ ವಿವರಿಸಲಾಗಿದೆ.

ಈ ದಿಶೆಯಲ್ಲಿ ಅರಿಯಬೇಕಾದ ವಿಷಯವೆಂದರೆ, ಒಂದು ವೇಳೆ ರಾಷ್ಟ್ರಪತಿಯು ತನ್ನ ಅಧಿಕಾರವನ್ನು ಯಾರಿಗೆ ನಿಯೋಜಿಸಿದ್ದಾರೆ ಎಂಬುದನ್ನು ತಿಳಿಯಲು, ಆಧಾರ ಬೇಕು. ಏಕೆಂದರೆ ಈ ವಿಷಯದ ಬಗೆಗೆ ಯಾರಾದರೂ ನ್ಯಾಯಾಲಯಕ್ಕೆ ಮೊರೆ ಹೋದರೆ, ರಾಷ್ಟ್ರಪತಿಯವರು ತಮ್ಮ ಅಧಿಕಾರವನ್ನು ಬೇರೆಯವರಿಗೆ ನೀಡಿರುವ ಬಗೆಗೆ ಆಧಾರ ಬೇಕು. ಎರಡನೆಯದಾಗಿ ಈ ವಿಧವಾದ ಅಧಿಕಾರವನ್ನು ವಹಿಸಿಕೊಳ್ಳಲಿರುವ ವ್ಯಕ್ತಿಗೂ ಕೂಡಾ ಆಧಾರ ಬೇಕಾಗುತ್ತದೆ. ಇದು ಇಲ್ಲದೇ ಹೋದಲ್ಲಿ ಅಧಿಕಾರವು ವಾದಗ್ರಸ್ತವಾಗಬಹುದು. ಈ ದಿಶೆಯಲ್ಲಿ ನ್ಯಾಯಾಲಯದ ಪರಿಚಯವಿರುವವರು ಶಿಬನಾಥ ಬ್ಯಾನರ್ಜಿ ಹಾಗೂ ಬಂಗಾಲ ಸರಕಾರದ ಮಧ್ಯೆ ಭಾರತೀಯ ಸಂರಕ್ಷ ಕಾನೂನಿಗೆ ಸಂಬಂಧಿಸಿದ ಪ್ರಕರಣವನ್ನು ಸ್ಮರಿಸಬಹುದು. ಈ ಪ್ರಕರಣದಲ್ಲಿ ಬಂಧನಕ್ಕೆ ಗುರಿಯಾದ ವ್ಯಕ್ತಿಯನ್ನೇ ಬಂಧಿಸಬೇಕೆಂಬ ನಿರ್ದಿಷ್ಟ ಆಜ್ಞೆಯ ಆಧಾರವನ್ನು ನ್ಯಾಯಾಲಯವು ಸರಕಾರವನ್ನು ಪ್ರಶ್ನಿಸಿತು. ಆಗ ಬಂಗಾಳ ಸರಕಾರವು ತನ್ನ ನಿಯಮಾವಳಿ ಮತ್ತು ವ್ಯವಹಾರದ ವಿವರಗಳನ್ನು ನ್ಯಾಯಾಲಯದ ಪರೀಕ್ಷೆಗೆ ಸಲ್ಲಿಸಿ, ನ್ಯಾಯಾಲಯವನ್ನು ತೃಪ್ತಿಪಡಿಸಬೇಕಾಯಿತು.

ಈ ವಿಧವಾದ ವ್ಯಾಜ್ಯಗಳಿಗೆ ಅವಕಾಶ ನೀಡಬಾರದೆಂದೇ ೭೭ನೆಯ ವಿಧಿಯನ್ನು ರೂಪಿಸಲಾಗಿದೆ. ನಾವು ಅರಿಯಬೇಕಾದ ಪ್ರಮುಖ ವಿಷಯವೆಂದರೆ ಈ ವಿಧಿಯು ಸಂಸತ್ತಿನ ಅಧಿಕಾರವನ್ನು ಕುಂದು ಗೊಳಿಸದೆ ನಿರ್ದಿಷ್ಟ ಆಜ್ಞೆಗಳನ್ನು ಹೊರಡಿಸುವ ಅಧಿಕಾರಕ್ಕೆ ಬಾಧೆಯಾಗದು. ಆದರೂ ಅನಾವಶ್ಯಕವಾದ ವಿವಾದಗಳಿಗೆ ಅವಕಾಶ ನೀಡದಂತೆ ರಾಷ್ಟ್ರಪತಿಗಳು ನಿರ್ದಿಷ್ಟ ಆದೇಶವನ್ನೂ ನೀಡಲು ಎಡೆ ಮಾಡಲಾಗಿದೆ.

೧೦೦ನೆಯ ವಿಧಿಯು ಕೋರಂ ಬಗೆಗೆ ಇದ್ದು ಅದರ ಬಗೆಗೆ ಉತ್ತರ ರೂಪವಾಗಿ ನಾನೇನೂ ಅಧಿಕವಾಗಿ ಹೇಳಬೇಕಾಗಿಲ್ಲ. ಈ ವಿಷಯದ ಬಗೆಗೆ ಬೇರೆ ಬೇರೆ ದೇಶಗಳ ಶಾಸನ ಸಭೆಗಳಲ್ಲಿ ನಿಗದಿ ಪಡಿಸಿದ ಮಿತಿ ಅಧಿಕ ಎಂದು ತಿಳಿದು ಆದಷ್ಟು ಕನಿಷ್ಠ ಮಿತಿಯನ್ನು ಸೂಕ್ತವಾಗಿ ನಿರ್ಣಯಿಸಬಹುದಾಗಿದೆ. ಹೀಗಾಗಿ ರಚನಾ ಸಮಿತಿಯ ಸಲಹೆಯೇ ಅಂತಿಮ ಎಂದು ಭಾವಿಸಬಾರದು. ಅದು ಸಂಸತ್ತಿಗೆ ಸೇರಿದ ವಿಷಯವಾಗಿದೆ. ಸಂಸತ್ತು ಕೆಲವು ಕಾಲದ ತನ್ನ ಅನುಭವದೊಂದಿಗೆ, ಕಾರ್ಯಕಲಾಪವನ್ನು ನಡೆಸಿಕೊಂಡು

ಹೋಗಲು ಸೂಕ್ತವಾದ ಕೋರಂ ಸಂಖ್ಯೆಯನ್ನು ಬದಲಾಯಿಸಿಕೊಳ್ಳಬಹುದು. ಆದುದರಿಂದ ಇದು ಒಂದು ಕಠಿಣವಾದ ಸಮಸ್ಯೆ ಅಲ್ಲ.

೧೨೮ನೆಯ ವಿಧಿಯ ಬಗೆಗೆ ಕೂಡಾ ವಿಷಯ ಪ್ರಸ್ತಾವಿಸಿ, ನಮ್ಮ ನ್ಯಾಯಾಧೀಶರ ಬಗೆಗೆ ಹೆಚ್ಚು ಹಸ್ತಕ್ಷೇಪವಿರಬಾರದು ಎಂದು ಹೇಳಿದೆ. ಈ ಪ್ರಶ್ನೆಯು ನ್ಯಾಯಾಧೀಶರಿಗೆ ನೀಡುವ ವೇತನ ಕುರಿತದ್ದಾಗಿದೆ. ಈಗಾಗಲೇ ಪ್ರಸ್ತುತ ನ್ಯಾಯಾಧೀಶರಿಗೆ ನೀಡಬಹುದಾದ ವೇತನ ಮತ್ತು ಮುಂದೆ ನೇಮಕವಾಗುವ ವೇತನದ ಬಗೆಗೆ ನಿಷ್ಕರ್ಷೆಯಾಗಿದೆ. ಇಲ್ಲಿ ನಮ್ಮ ಮುಂದೆ ಇರಬಹುದಾದ ಪ್ರಶ್ನೆ ಎಂದರೆ, ಓರ್ವ ನ್ಯಾಯಾಧೀಶರನ್ನು ಒಂದು ಕೋರ್ಟಿನಿಂದ ಬೇರೆ ಕೋರ್ಟಿಗೆ ವರ್ಗಾಯಿಸಬಹುದೇ? ಈ ವಿಧವಾದ ವರ್ಗಾವಣೆಯಿಂದ ಆಗಬಹುದಾದ ಆರ್ಥಿಕ ಲುಕ್ಸಾನವನ್ನು ಯಾವ ವಿಧವಾಗಿ ತುಂಬಿಕೊಡಬಹುದು? ರಚನಾ ಸಮಿತಿಯ ಅಭಿಪ್ರಾಯದಂತೆ ಭಾರತ ಎಲ್ಲಾ ಶ್ರೇಷ್ಠ ನ್ಯಾಯಾಲಯಗಳಿಗೆ ಅವರನ್ನು ನೇಮಿಸುವ ಅಧಿಕಾರ ಕೇಂದ್ರಕ್ಕೆ ಇದೆ. ಹೀಗಾಗಿ ಎಲ್ಲಾ ನ್ಯಾಯಾಧೀಶರನ್ನೂ ಐ.ಸಿ.ಎಸ್. ವರ್ಗದಂತೆ ಭಾವಿಸಿದಲ್ಲಿ ತೊಂದರೆ ಇಲ್ಲ. ಆದರೆ ಒಂದು ವೇಳೆ ಇದು ಕೇಂದ್ರದಲ್ಲಿರದೇ ಹೋದಾಗ, ನ್ಯಾಯ ನೀಡುವ ಕಾರ್ಯಕ್ಕೆ ಅಡಚಣೆ ಒದಗಬಹುದು. ಮುಂದುವರಿದು, ಹೇಳಬಹುದಾದರೆ ಅನೇಕ ಕಾರಣಗಳಿಗಾಗಿ ಒಂದು ನ್ಯಾಯಾಲಯದಿಂದ ಇನ್ನೊಂದು ನ್ಯಾಯಾಲಯಕ್ಕೆ ನ್ಯಾಯಾಧೀಶರನ್ನು ವರ್ಗಾಯಿಸುವ ಪ್ರಸಂಗಗಳು ಬರಬಹುದು. ಒಂದು ನ್ಯಾಯಾಲಯವನ್ನು ಬಲಪಡಿಸುವ ಕಾರಣಕ್ಕಾಗಲೀ ಅಥವಾ ಪ್ರಾದೇಶಿಕ ರಾಜಕೀಯದಿಂದ ಮುಕ್ತವಾಗಿರಿಸುವ ಧ್ಯೇಯದಿಂದ ಮುಖ್ಯ ನ್ಯಾಯಾಧೀಶರನ್ನು ಸಾಮಾನ್ಯವಾಗಿ ಬೇರೆ ಪ್ರಾಂತ್ಯದಿಂದಲೇ ವರ್ಗಾಯಿಸಬಹುದು. ಈ ಎಲ್ಲ ಕಾರಣಗಳಿಂದ ನ್ಯಾಯಾಧೀಶರ ವರ್ಗಾವಣೆ ಕೇಂದ್ರದಲ್ಲಿರುವುದೇ ಸೂಕ್ತ. ನಾವು ಈ ನ್ಯಾಯಾಧೀಶರ ವರ್ಗಾವಣೆ ದುರುಪಯೋಗವಾಗಲೂಬಹುದು ಎಂಬ ಅಂಶವನ್ನು ಗಮನದಲ್ಲಿರಿಸಿಕೊಂಡೇ ಅವಕ್ಕೆ ಪರಿಹಾರವನ್ನೂ ಸೂಚಿಸಿದ್ದೇವೆ. ಉದಾ ಒಂದು ಪ್ರಾಂತ್ಯದ ಶ್ರೇಷ್ಠ ನ್ಯಾಯಾಧೀಶನು ನೀಡಿದ ತೀರ್ಮಾನದ ಬಗೆಗೆ ಅಸಮಾಧಾನ ಹೊಂದಿ ಅವರ ವರ್ಗಾವಣೆಗೆ ಒತ್ತಾಯಿಸಬಹುದು. ಇದನ್ನು ನಿವಾರಿಸಲೆಂದೇ, ಕೇಂದ್ರ ವರ್ಗಾವಣೆಗಳ ವಿಷಯ ಬಂದಾಗ, ಸರ್ವೋಚ್ಚ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶರ ಸಲಹೆಯನ್ನು ಪಡೆದೇ ವರ್ಗಾವಣೆಗಳನ್ನು ಕೈಗೆತ್ತಿಕೊಳ್ಳಬಹುದು ಎಂದು ಸೂಚಿಸಿದ್ದೇವೆ.

ಆದುದರಿಂದ ನಮ್ಮ ಮುಂದಿರಬಹುದಾದ ಒಂದೇ ಒಂದು ಪ್ರಶ್ನೆ ಎಂದರೆ ನ್ಯಾಯಾಧೀಶರ ವರ್ಗಾವಣೆ ಅನಿವಾರ್ಯವಾದಾಗ ಅಂಥವರಿಗೆ ಪರಿಹಾರ ಒದಗಿಸಬೇಕೊ? ಏಕೆಂದರೆ, ನ್ಯಾಯಾಧೀಶರು ತಮ್ಮ ಪ್ರದೇಶದಲ್ಲಿ ತಮ್ಮದೇ ಆದ ಗೃಹ, ವಸತಿ ಸೌಕರ್ಯಗಳನ್ನು ಹೊಂದಿರುತ್ತಾರೆ. ಇವರನ್ನು ಬೇರೆಡೆಗೆ ವರ್ಗಾಯಿಸಿದಾಗ, ಪರಸ್ಥಳದಲ್ಲಿ ಇವರು ತಮ್ಮ ವಸತಿಗೆಂದೇ ಹಣ ಖರ್ಚು ಮಾಡಬೇಕಾಗುತ್ತದೆ. ಇಂತಹ ವಿಶೇಷ ಸಂದರ್ಭಗಳಲ್ಲಿ ಅವರಿಗೆ ಸೂಕ್ತ ಪರಿಹಾರ ಒದಗಿಸದೇ ಹೋದರೆ ಅವರು ತೊಂದರೆಗೆ ಗುರಿಯಾಗಬಹುದು. ಈ ಹಿನ್ನೆಲೆಯಲ್ಲಿ ಅವರಿಗೆ ಪರಿಹಾರ ನೀಡುವುದು ಸರಿಯಾದ ಕ್ರಮ ಎಂದೇ ಭಾವಿಸಿ, ಅವಕಾಶ ಮಾಡಲಾಗಿದೆ.

೧೪೮ ವಿಧಿಯ ಬಗೆಗೆ ನಾನು ಹೆಚ್ಚು ಹೇಳುವುದೇನಿಲ್ಲ. ನನ್ನ ಮಿತ್ರರಾದ ಟಿ. ಟಿ. ಕೃಷ್ಣಮಾಚಾರಿಯವರು ಮಂಡಿಸಿದ ತಿದ್ದುಪಡಿ (ನಂ. ೬೧೮) ಬಗೆಗೆ ಎಲ್ಲರೂ ಒಪ್ಪಿದ್ದಾರೆ. ನಾನು ಹೇಳಬಹುದಾದರೆ, ವಿಧಿ ೩೨೦ರ ಬಗೆಗೂ ಅನಾವಶ್ಯಕ ವಾದ ವಿವಾದ ಉಂಟಾಗಿದ್ದು ಈಗ ಅದನ್ನು ಸರಿಪಡಿಸಲಾಗಿದೆ. ನಂ ೫೫೮ ತಿದ್ದುಪಡಿಯ ಮೂಲಕ ಸದಸ್ಯರ ಆತಂಕಗಳನ್ನು ನಿವಾರಿಸಲಾಗಿದೆ.

೩೬೫ನೆಯ ವಿಧಿ ಕುರಿತಂತೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಆ ಚರ್ಚೆಯಲ್ಲಿ ನಾನೂ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರುವೆ. ಈ ದಿಶೆಯಲ್ಲಿ ಎಲ್ಲ ಅಂಶಗಳನ್ನೂ ಗಮನಿಸಿ ೩೬೫ನೇ ವಿಧಿಯ ಆವಶ್ಯಕತೆಯನ್ನು ಸದಸ್ಯರು ಅರಿತು ಅದು ಯಾವ ವಿಧದಲ್ಲಿಯೂ ಸದನ ತೆಗೆದುಕೊಂಡ ನಿರ್ಣಯವನ್ನು ಉಲ್ಲಂಘಿಸಿಲ್ಲವೆಂದೇ ಹೇಳಬಹುದು.

ಈಗ ೩೭೮ನೇ ವಿಧಿಯ ಬಗೆಗೆ ಹೇಳುವೆ. ಈ ವಿಧಿಯಲ್ಲಿ ಚುನಾವಣೆಗೆ ಅಗತ್ಯವಾದ ಜನಸಂಖ್ಯೆಯನ್ನು ನಿರ್ಧರಿಸುವ ಬಗೆಗೆ ಪ್ರಸ್ತಾಪಿಸಿದ್ದು, ಈ ದಿಶೆಯಲ್ಲಿ ಏಕರೂಪದ ನಿಯಮವಿರಬೇಕು ಎಂದೇ ತಿಳಿಸಲಾಗಿದೆ. ಆದರೆ ನಾನು ಈ ವಿಧವಾದ ಏಕರೂಪದ ಸಲಹೆಯನ್ನು ಅಂಗೀಕರಿಸಲಾರೆ. ಬದಲಾದ ಪರಿಸ್ಥಿತಿಗಳನ್ನು ಹೊಂದಿರುವ ಪ್ರಾಂತ್ಯಗಳಲ್ಲಿ ಈ ವಿಧವಾದ ಸೂತ್ರವನ್ನು ಒಪ್ಪುವುದು ಕಠಿಣವಾಗುತ್ತದೆ. ಆದುದರಿಂದ ಈ ಅಧಿಕಾರ ಕೇಂದ್ರಕ್ಕೆ ನೀಡಿ, ಅದು ವಿವಿಧ ಪ್ರಾಂತ್ಯಗಳ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಚುನಾವಣೆಗೆ ಅಗತ್ಯವಾದ ಜನಸಂಖ್ಯೆಯನ್ನು ನಿರ್ಣಯಿಸುವುದೇ ಸೂಕ್ತ. ಈ ವಿಧವಾದ ನಿರ್ಣಯದಲ್ಲಿ ಅಗಾಧವಾದ ಹಾಗೂ ಗಂಭೀರವಾದ ವ್ಯತ್ಯಾಸವೇನಾದರೂ ಸಂಭವಿಸಿದರೆ, ಅದನ್ನು ಭವಿಷ್ಯದಲ್ಲಿ ಸಂಸತ್ತು ಸರಿಪಡಿಸಬೇಕು. ಏಕೆಂದರೆ ಮತದಾರ ಕ್ಷೇತ್ರಗಳ ವಿಷಯಗಳನ್ನು ಚರ್ಚಿಸುವ ಅಧಿಕಾರ ಕೇವಲ ಸಂಸತ್ತಿಗೆ ಸೇರಿದ ಸಂಗತಿ. ಹೀಗಾಗಿ ಸಂಸತ್ತು ಮತದಾರ ಕ್ಷೇತ್ರವು ಎಷ್ಟು ಜನಸಂಖ್ಯೆಯನ್ನು ಹೊಂದಿರಬೇಕು ಎಂಬ ವಿಷಯವನ್ನು ನಿರ್ಣಯಿಸುವ ವೇದಿಕೆ. ಹೀಗಾಗಿ ಸರ್, ನಾನು ವಿಧಿ ೩೯೧ನ್ನು ಕೈಗೆತ್ತಿಕೊಳ್ಳುವೆ.

**ಪಂಡಿತ್ ಬಾಲಕೃಷ್ಣ ಶರ್ಮ:** ವಿಧಿ ೩೭೯?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನ್ನ ಮಿತ್ರರು ಈ ವಿಧಿಯ ಬಗೆಗೆ ಎತ್ತಿರುವ ಪ್ರತಿಭಟನೆಯನ್ನು ಪ್ರಶಂಸಿಸುವೆ. ಅವರು ಪ್ರಮುಖವಾದ ಪ್ರತಿಭಟನೆ "ಭಾರತದ ಡೊಮಿನಿಯನ್" ಕುರಿತಾಗಿದೆ. ನಾನು ನಿನ್ನೆಯ ದಿನ ನನ್ನ ಮುಖ್ಯ ಲಿಪಿಕಾರ ಶ್ರೀ ಮುಖರ್ಜಿಯವರೊಂದಿಗೆ, ಈ ವಿಧಿಯ ಪುನಾರಚನೆಗೆ ಈ ಮೇಲೆ ಸೂಚಿಸಿದ ಪದವನ್ನು ತೊರೆಯಲು ತುಂಬಾ ಪ್ರಯತ್ನ ಮಾಡಿದೆ. ನಿಜ ಹೇಳಬೇಕೆಂದರೆ ನನಗೆ ಆಗ ಪದಗಳನ್ನು ಬಿಡಲು ಆಗಲಿಲ್ಲ. ಹೀಗಾಗಿ ದಯಮಾಡಿ ಆ ಪದಗಳನ್ನು ಉಳಿಸಿಕೊಂಡೇ ಹೋಗುವಂತೆ ನನ್ನ ಮಿತ್ರರಾದ ಶರ್ಮ ಅವರನ್ನು ಕೋರುವೆ. ಇದು ಶೋಚನೀಯ. ಆದರೆ ಉಪಾಯವಿಲ್ಲ. ಏಕೆಂದರೆ ಸಮಯದ ಅಭಾವದಿಂದಾಗಿ ನನಗೆ ತೋಚದಾಗಿದೆ.

ಈಗ ೩೯೧ನೇ ವಿಧಿಯ ಸ್ಥಾನ ಹೀಗಿದೆ. ಪ್ರಾಂತ್ಯಗಳನ್ನು ರಚಿಸುವ ವಿಧಾನ ಕುರಿತಂತೆ ಸಂವಿಧಾನವು ಎರಡು ಅಂಶಗಳನ್ನು ಹೊಂದಿದೆ. ಸಂವಿಧಾನ ಜಾರಿಗೆ ಬಂದ ನಂತರ ಪ್ರಾಂತ್ಯಗಳ ರಚನೆಯನ್ನು ಕೈಗೆತ್ತಿಕೊಳ್ಳಬಹುದು. ನೂತನ ಪ್ರಾಂತ್ಯಗಳನ್ನು ನವೆಂಬರ್ ೨೬ ಹಾಗೂ ಜನವರಿ ೨೬ರ ಮಧ್ಯೆ ರಚಿಸಬಹುದು. ೩ ಹಾಗೂ ೪ನೆಯ ವಿಧಿಗಳಲ್ಲಿ ಹೇಳಿದಂತೆ ನೂತನ ಪ್ರಾಂತ್ಯಗಳನ್ನು ಸಂವಿಧಾನ ಜಾರಿಗೆ ಬಂದ ಮೇಲೆ ಕೈಗೆತ್ತಿಕೊಳ್ಳಬಹುದು. ಏಕೆಂದರೆ ಈ ವಿಧಿಗಳು ಸಂಸತ್ತಿಗೆ ಸದ್ಯ ಜಾರಿಯಲ್ಲಿರುವ ಪ್ರಾಂತ್ಯಗಳ ಸರಹದ್ದನ್ನು ಮಾರ್ಪಾಟು ಮಾಡುವ ಅಧಿಕಾರ ನೀಡಿವೆ. ಈ ವಿಧಿಗಳು ಸ್ಪಷ್ಟವಾಗಿರುವುದರಿಂದ ನಾನು ಹೆಚ್ಚು ಹೇಳಬಯಸುವುದಿಲ್ಲ.

ಜನವರಿ ೨೬ ನಡುವೆ ನೂತನ ಪ್ರಾಂತ್ಯಗಳನ್ನು ರಚಿಸಲು ಆಸ್ಪದ ನೀಡುವ ವಿಧಿ ಎಂದರೆ ೩೯೧ ಮತ್ತು ೧೯೩೫ ಭಾರತ ಸರಕಾರದ ಕಾಯ್ದೆಯ ೨೯೦ ಪ್ರಕರಣ. ಮಾನ್ಯರೆ, ವಿಧಿ ೩೯೧ ರಲ್ಲಿ ಹೇಳಿರುವಂತೆ ಜನವರಿ ೨೬ರೊಳಗೆ ಪ್ರಾಂತ್ಯಗಳ ರಚನೆಯಾಗಬೇಕೆಂದರೆ ೧೯೩೫ ಕಾನೂನಿನಡಿಯಲ್ಲಿ ಸಾಧ್ಯ. ಆಗ ರಾಷ್ಟ್ರಪತಿಯವರು ೩೯೧ರಡಿಯಲ್ಲಿ, ೨೯೦ ಪ್ರಕರಣವನ್ನು ಜಾರಿಗೊಳಿಸಬಹುದು. ಏಕೆಂದರೆ

ಜನವರಿ ೨೫ರ ವರೆಗೆ, ೧೯೩೫ನೆಯ ಕಾಯ್ದೆಯು ಜಾರಿಯಲ್ಲಿದ್ದು ೨೬ ರಂದು ಅದು ರದ್ದಾಗುತ್ತದೆ. ಹೀಗಾಗಿ ರಾಷ್ಟ್ರಪತಿಯವರು ೩೯೧ರಂತೆ ಆಜ್ಞೆ ನೀಡಿ, ಮೊದಲನೆಯ ಪರಿಚ್ಛೇದದಲ್ಲಿ ಬದಲಾವಣೆ ತರಬಹುದು. ಹಾಗೂ ರಾಜ್ಯಸಭೆಗೂ ಬದಲಾವಣೆ ತರಬಹುದು.

**ಓರ್ವಸದಸ್ಯ:** ಕೇವಲ ೨೬ರ ನಂತರ ಅವರು ಕಾರ್ಯ ಕೈಗೆತ್ತಿಕೊಳ್ಳಬಹುದಲ್ಲವೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅವರು ಎಂದಾದರೂ ಕೈಗೆತ್ತಿಕೊಳ್ಳಬಹುದು. ಹೀಗಾಗಿ ಸಂವಿಧಾನ ಸಮಿತಿ ಅದನ್ನು ಗಮನಕ್ಕೆ ತೆಗೆದುಕೊಳ್ಳಲಾಗದು. ಏಕೆಂದರೆ ಅದು ನವೆಂಬರ್ ೨೬ ನಂತರ ಜಾರಿಯಲ್ಲಿರುವುದಿಲ್ಲ. ಇಲ್ಲಿ ಮುಖ್ಯ ಅಂಶ ಎಂದರೆ ಜನವರಿ ೨೫ರ ವರೆಗೆ ಭಾರತ ಸರಕಾರದ ೧೯೩೫ ಕಾಯ್ದೆ ಜಾರಿಯಲ್ಲಿರುತ್ತದೆ. ಈ ಕಾಯ್ದೆ ಜಾರಿಯಲ್ಲಿ ಇರುವವರೆಗೂ ಗವರ್ನರ್ ಜನರಲ್ಲಿಗೆ ಅಧಿಕಾರವಿದೆ. ಅವರು ಏನನ್ನಾದರೂ ಕೈಗೆತ್ತಿಕೊಳ್ಳಬಹುದು.

ನನ್ನ ಮಿತ್ರರಾದ ಸಿಧ್ವ ಅವರು, ಇಂದಿನಿಂದ ನವೆಂಬರ್ ೨೫ರಂದು ನಡೆವ ಕಾರ್ಯಗಳು, ಸಂಸತ್ತಿನ ಪರಿಶೀಲನೆಗೆ ಒಳಪಟ್ಟಿರಬೇಕೆಂದು ಪ್ರಸ್ತಾವಿಸಿದ್ದಾರೆ. ನನ್ನ ಮಿತ್ರರು ಗಮನಿಸಬೇಕಾದ್ದುದು ಎಂದರೆ ಸಂಸತ್ತು ಜಾರಿಯಲ್ಲಿ ಬರುವುದು. ಕೇವಲ ೨೬ ನಂತರ, ಹೀಗಾಗಿ ೨೬ರವರೆಗೆ ಜಾರಿಯಲ್ಲಿರಬಹುದಾದ ಸಂವಿಧಾನ ಎಂದರೆ ೧೯೩೫ನೆಯ ಕಾಯ್ದೆ, ಏಕೆಂದರೆ ಆಗಸ್ಟ್ ೧೫, ೧೯೪೭ ರಂದೇ ಈ ಬಗೆಯ ನಿರ್ಣಯ ಮಾಡಲಾಗಿದೆ. ಆದುದರಿಂದ ಅವರ ಪ್ರಸ್ತಾವನೆಗೆ ಉತ್ತರ ೨೯೦ನೆಯ ಪ್ರಕರಣ ೧೯೩೫ ಕಾಯ್ದೆಯಲ್ಲಿದೆ.

ನನ್ನ ಮಿತ್ರರು ಈ ವಿಷಯದಲ್ಲಿ ಭಾರತ ಸರಕಾರದ ಕಾಯ್ದೆಯ ೨೯೦ ನ್ನು ವೀಕ್ಷಿಸಿದಲ್ಲಿ ಅವರಿಗೆ ಗವರ್ನರ್ ಜನರಲ್‌ರಿಗೆ ಇರಬಹುದಾದ ವಿಶೇಷ ಅಧಿಕಾರದ ಅರಿವಾಗುತ್ತದೆ. ಏಕೆಂದರೆ ಅವರು ಈ ವಿಷಯದಲ್ಲಿ ಪ್ರಾಂತೀಯ ಶಾಸನ ಸಭೆಯ ಅಥವಾ ಭಾರತೀಯ ಶಾಸನ ಸಭೆಯ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಲೇಬೇಕಾಗಿಲ್ಲ. ಈ ದಿಶೆಯಲ್ಲಿ ಅವರು ಕೇವಲ ಸಂಬಂಧಿಸಿದ ಪ್ರಾಂತ್ಯದ ಅಭಿಪ್ರಾಯ ಪಡೆಯಬೇಕು. ಆದುದರಿಂದ ಈ ದಿಶೆಯಲ್ಲಿ ಕೇವಲ ೨೯೦ನ್ನು ಅವಲಂಬಿಸಿದೆ.

ಹೀಗಾಗಿ ನನ್ನ ಮಿತ್ರರ ಹಿರಿಯಾಸೆ, ಪರಿಸ್ಥಿತಿಗೆ ಮೀರಿದ್ದು. ಆದುದರಿಂದ ಅವರು ನಿಜಸ್ಥಿತಿಗೆ ಹೊಂದಿಕೊಂಡೇ ಹೋಗಬೇಕು. ಹೀಗಾಗಿ ನಾನು ನನ್ನ ವಿವರಗಳನ್ನೂ ಮುಕ್ತಾಯಗೊಳಿಸಿ ಸದನವು ತನ್ನ ಮುಂದೆ ಮಂಡಿಸಿದ ಎಲ್ಲಾ ತಿದ್ದುಪಡಿಗಳನ್ನು ಅಂಗೀಕರಿಸಬೇಕೆಂದೆ ಕೋರುವೆ. (ಉಲ್ಲಾಸದ ಕೂಗು)

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ಒಂದೊಂದು ತಿದ್ದುಪಡಿಯನ್ನು ಮತಕ್ಕೆ ಹಾಕುವೆ. ಸದಸ್ಯರಿಗೆ ತಿಳಿದಂತೆ ರಚನಾ ಸಮಿತಿಯಿಂದ ಹಾಗೂ ಸದನದಿಂದ ತರಲಾದ ಹಲವಾರು ತಿದ್ದುಪಡಿಗಳನ್ನು ನಾವು ಚರ್ಚಿಸಿದ್ದೇವೆ. ಆದುದರಿಂದ ಈಗ ಹಲವು ಸದಸ್ಯರು ತಾವು ಮಂಡಿಸಿದ ತಿದ್ದುಪಡಿಗಳನ್ನು ಮರಳಿ ಪಡೆಯಲೂಬಹುದು.

ಒಟ್ಟಾರೆ ರಚನಾ ಸಮಿತಿಯ ೯೫ ತಿದ್ದುಪಡಿಗಳನ್ನು ಮಾತ್ರ ಅಂಗೀಕರಿಸಲಾಯಿತು: ೬೬ನ್ನು ತಿರಸ್ಕರಿಸಲಾಯಿತು. ೩೬ ನ್ನು ವಾಪಸು ಪಡೆಯಲಾಯಿತು.

* * *

**ಮಾನ್ಯ ಸಭಾಧ್ಯಕ್ಷರು:** ನಾನು ಸಭೆಯನ್ನು ಮೂದೂಡುವ ಮುಂಚೆ ಮುಂದಿನ ಕಾರ್ಯಕ್ರಮವನ್ನು

ನಿರ್ಣಯಿಸಲು ಯಾವ ಯಾವ ಸದಸ್ಯರು ಮಾತನಾಡಬಯಸುವರು ಎಂದು ತಿಳಿಸಿದರೆ ಅನುಕೂಲವಾಗುತ್ತದೆ. ಶನಿವಾರದ ಸಭೆಯನ್ನು ನಾನು ಶುಕ್ರವಾರದೆಂದೇ ನಿರ್ಣಯಿಸುವೆ. ಈ ದಿನದಿಂದ ಸಭೆಯನ್ನು ಯಾವ ರೀತಿ ನಡೆಸಬೇಕೆಂಬ ಬಗ್ಗೆ ಸದಸ್ಯರು ಸೂಚಿಸಬೇಕು.

**ಹಲವಾರು ಸದಸ್ಯರು:** ದಿನಕ್ಕೆ ಕೇವಲ ೫ ಗಂಟೆಗಳು ಮಾತ್ರ.

**ಪ್ರೊ. ಎನ್. ಜಿ. ರಂಗಾ:** ಒಂದು ಅಧಿವೇಶ ೨–೩೦ ಯಿಂದ ೬–೩೦ಗೆ. ನಾವು ಒಂದೇ ಬಾರಿ ಬರುತ್ತೇವೆ.

**ಮಾನ್ಯ ಸಭಾಧ್ಯಕ್ಷರು:** ಮಾತನಾಡಲು ಬಯಸಿದವರಿಗೆ ಎಷ್ಟು ಅವಧಿ ನೀಡಬಹುದು.

**ಕೆ. ಎಮ್. ಮುನ್ಷಿ:** ೧೫ ನಿಮಿಷ ದಿನದ ಕೇವಲ ೫ ತಾಸುಗಳ ಅಧಿವೇಶನ. ಇದರಿಂದ ಸದಸ್ಯರಿಗೆ ಚರ್ಚಿಸುವ ಅವಕಾಶ ಲಭಿಸುತ್ತದೆ.

ಹಲವಾರು ಸದಸ್ಯರು ಅರ್ಧಗಂಟೆ

**ಮಾನ್ಯ ಸಭಾಧ್ಯಕ್ಷರು:** ರಾಜಿ ಸೂತ್ರದಂತೆ ನಾನು ೨೦ ನಿಮಿಷ ಅವಧಿ ಗೊತ್ತುಪಡಿಸುವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾವು, ನಾಳೆ ಸಭೆ ಸೇರಬೇಕೇ ಎಂಬುದನ್ನು ನಿರ್ಧರಿಸಬೇಕು. ಅದಕ್ಕೂ ಮುನ್ನ ಯಾರು ಮಾಡನಾಡಲು ಬಯಸಿದ್ದಾರೋ ಅದರ ವಿವರಗಳನ್ನೂ ತಾವು ಪಡೆಯಬೇಕು. ಅದು ತಿಳಿದಲ್ಲಿ ಚರ್ಚೆಯ ಅವಧಿಯನ್ನು ನಿಗದಿಪಡಿಸಬಹುದು. ಏಕೆಂದರೆ ಅಧಿವೇಶನ ಒಂದು ಹೊತ್ತು ನಡೆಯಬೇಕೆ ಅಥವಾ ಎರಡೂ ಹೊತ್ತು ನಡೆಯಬೇಕೇ ಎಂಬುದನ್ನು ಆಗ ಮಾತ್ರ ನಿರ್ಣಯಿಸಬಹುದು. ಸದ್ಯ ನಾಳಿನ ಸಭೆಯ ಬಗೆಗೆ ನಿರ್ಣಯಿಸಿರಿ.

**ಮಾನ್ಯ ಸಭಾಧ್ಯಕ್ಷರು:** ಅದು ಸೂಕ್ತವಾದ ಸಲಹೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ನಾಳೆ ನಾವು ಮಾಮೂಲಿನಂತೆ ಬೆಳಿಗ್ಗೆ ೧೦ರಿಂದ ೧ ರವರೆಗೆ ಮತ್ತು ೩ ರಿಂದ ೫ ಗಂಟೆಯವರೆಗೆ ಸೇರೋಣವೇ?

ಮಾನ್ಯ ಅಧ್ಯಕ್ಷರು: ನಾವು ನಾಳೆ ೧೦ಕ್ಕೆ ಸೇರೋಣ. ಮಾತನಾಡಲು ಬಯಸುವವರು ಕಾರ್ಯಾಲಯದಲ್ಲಿ ತಮ್ಮ ಹೆಸರನ್ನು ನೀಡಲಿ. ಸದಸ್ಯರು ಹೆಸರು ನೀಡಿದ್ದರೂ ಮಾತನಾಡಲೇ ಬೇಕೆಂದೇನಿಲ್ಲ.

ಸದನವನ್ನು ನಾಳೆ ಬೆಳಗಿನ ೧೦ ಗಂಟೆಗೆ ಮುಂದೂಡಲಾಗಿದೆ.

ಸಭೆ ಮುಂದೂಡಿದೆ, ದಿನಾಂಕ ೧೭, ನವೆಂಬರ್ ೧೯೪೯ ಗುರುವಾರ ಬೆಳಿಗ್ಗೆ ೧೦ ಗಂಟೆಗೆ.

# ವಿಭಾಗ – III

## ೧೭, ನವೆಂಬರ್ ೧೯೪೯ ರಿಂದ ೨೬, ನವೆಂಬರ್ ೧೯೪೯

# ವಿಭಾಗ ಎಂಟು

## ಕರಡು ಸಂವಿಧಾನದ ಮೂರನೆ ಸುತ್ತಿನ ಪಠಣ

# ಕರಡು ಸಂವಿಧಾನದ ಮೂರನೆ ಸುತ್ತಿನ ಪಠಣ

ಭಾರತದ ಸಂವಿಧಾನ ಸಭೆಯು, ದೆಹಲಿಯಲ್ಲಿಯ ಸಂವಿಧಾನ ಸಭಾಂಗಣದಲ್ಲಿ ಡಾ॥ ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ದಿನಾಂಕ ೧೭ ನವೆಂಬರ್ ೧೯೪೯ ರಂದು ಬೆಳಿಗ್ಗೆ ೧೦ ಗಂಟೆ ಸಭೆ ಸೇರಿತ್ತು.

**ಮಾನ್ಯ ಸಭಾಧ್ಯಕ್ಷರು:** ನಾವು ಈಗ ಸಂವಿಧಾನದ ಮೂರನೆಯ ಸುತ್ತಿನ ಪಠಣ ಆರಂಭಿಸೋಣ ಡಾ॥ ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅಧ್ಯಕ್ಷರೇ, ನಾನು ಈ ರೀತಿ ಮಂಡಿಸುತ್ತಿದ್ದೇನೆ: ಸಂವಿಧಾನವನ್ನು ಸಭೆಯ ನಿರ್ಣಯದಂತೆ ಅಂಗೀಕರಿಸೋಣ.

**(ಉಲ್ಲಾಸದ ಅಲೆ)**

**ಶ್ರೀ ಮಹಾವೀರ್ ತ್ಯಾಗಿ:** ಶುಭ ಹಾರೈಕೆಗಳು.

**ಶ್ರೀ ಹೆಚ್. ವಿ. ಕಾಮತ್:** ಅಂಬೇಡ್ಕರರು ದಯಮಾಡಿ ಮಾತನಾಡಬೇಕು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಕೊನೆಗೆ ಮಾತನಾಡುವೆ. ಈಗಲೇ ಮಾತನಾಡುವುದು ಸರಿಯಾದ ಕ್ರಮವಲ್ಲ.

**ಶ್ರೀ ಎನ್.ಪಿ.ಗಾಡ್ಗಿಳ್:** ಈ ಪ್ರಶ್ನೆಯನ್ನು ಈಗ ಮಂಡಿಸ... (ಹಾಸ್ಯ)

**ಶ್ರೀ ಮಹಾವೀರ್ ತ್ಯಾಗಿ:** ನಾವು ಅಂಗೀಕರಿಸಲಿರುವ, ಸಂವಿಧಾನದ ಬಗೆಗೆ ಡಾ॥ ಅಂಬೇಡ್ಕರರ ಅಭಿಪ್ರಾಯವೇನು?

**ಮಾನ್ಯ ಸಭಾಧ್ಯಕ್ಷರು:** ನಾವು ಈಗ ಕಾರ್ಯಕಲಾಪದ ಕಡೆಗೆ ಗಮನ ಹರಿಸೋಣ. ಡಾ॥ ಅಂಬೇಡ್ಕರರು ಸದನದಿಂದ ಅಂಗೀಕರಿಸಿದ ಸಂವಿಧಾನವನ್ನು ಮಂಡಿಸಿದ್ದಾರೆ. ಅದನ್ನು ಅನುಮೋದಿಸಬಹುದು. ನಿಲುವಳಿಯು ಈಗ ಚರ್ಚೆಯಾಗಲಿ. ನಾವು ನಿನ್ನೆಯ ದಿನ, ಈ ವಿಷಯವನ್ನು ಮೂರನೆಯ ಸುತ್ತಿನ ಪಠಣ ನಿರ್ಣಯಿಸಿ, ಅದನ್ನು ಕುರಿತು ಮಾಡನಾಡಲು ೭೧ ಸದಸ್ಯರು ಹೆಸರನ್ನು ನೀಡಿದ್ದಾರೆ. ಅಲ್ಲದೆ ಈ ಬೆಳಿಗ್ಗೆ ಹಲವರು ಹೆಸರು ನೀಡಿದ್ದಾರೆ. ಹೀಗಾಗಿ ನಾವು ಪ್ರತಿಯೊಬ್ಬರಿಗೂ ೨೦ ನಿಮಿಷ ಅವಧಿಯನ್ನು ನೀಡಿದಲ್ಲಿ ಈ ವಾರದಲ್ಲಿ ಮೂರು ದಿನಗಳೆಂದು ಹಾಗೂ ಬರುವ ವಾರದಲ್ಲಿ ೫ ದಿನಗಳೆಂದು ಸಭೆ ಸೇರಬಹುದು. ನಮಗೆ ಒಟ್ಟು ೨೪ ಗಂಟೆಗಳ ಕಾಲಾವಕಾಶವಿದೆ.

ನನಗೆ ತಿಳಿದಂತೆ ಈ ಕಾಲಾವಧಿಯಲ್ಲಿ ಕಾರ್ಯಕಲಾಪ ಮುಕ್ತಗೊಳ್ಳುವುದರಿಂದ ದೀರ್ಘಕಾಲ ಬೇಕಾಗಲಾರದು.

* * *

**ಶ್ರೀ ಹೆಚ್. ವಿ. ಕಾಮತ್:** ಪ್ರತಿ ದಿನ ನಾಲ್ಕು ತಾಸು ಸೇರೋಣ.

**ಮಾನ್ಯ ಸಭಾಧ್ಯಕ್ಷರು:** ಈಗಿನ ಸಂದರ್ಭದಂತೆ ನಾಲ್ಕು ಗಂಟೆ ಬೇಕಾಗದೆ ಹೋಗಬಹುದು.

**ಶ್ರೀ ಹೆಚ್. ವಿ. ಕಾಮತ್:** ನಾವು ನಾಲ್ಕು ತಾಸು ಸಭೆ ನಡೆಸಿದರೆ, ಶುಕ್ರವಾರದ ಬದಲಾಗಿ

ಗುರುವಾರದಂದೇ ಮುಕ್ತಾಯಗೊಳಿಸಬಹುದು. ಈ ವಿಧವಾಗಿ ಮುಕ್ತಾಯಗೊಳಿಸಿದರೆ ಹೆಚ್ಚಿನ ಸಮಯಾವಕಾಶ ದೊರೆಯಬಹುದು.

**ಡಾ|| ಪಿ. ಎಸ್. ದೇಶಿಮುಖ್:** ಹಲವಾರು ಮಾನ್ಯ ಸದಸ್ಯರು ನಂತರದಲ್ಲಿ ತಮ್ಮ ಹೆಸರುಗಳನ್ನು ನೀಡಬಹುದು.

**ಮಾನ್ಯ ಸಭಾಧ್ಯಕ್ಷರು:** ಅವರಿಗೆ ಸ್ವಾಗತ. ನಮಗೆ ಬೇರೆ ಕಾರ್ಯಗಳನ್ನು ಮಾಡಬೇಕಾಗಿದೆ. ಹೀಗಾಗಿ ನಾಳೆ, ನಾಡಿದ್ದು ಹಾಗೂ ವಾರದ ಕೊನೆಯವರೆಗೂ ಕಾರ್ಯ ಮಾಡಬಹುದು. ಆದುದರಿಂದ ನಾವು ಕೇವಲ ಮೂರು ತಾಸುಗಳವರೆಗೆ ಕಾರ್ಯ ಮಾಡೋಣ. ಎರಡನೇ ಅಧಿವೇಶನವನ್ನು ಮುಂದಿನ ವಾರದಲ್ಲಿ ಜರುಗಿಸಬಹುದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್): ಬೆಳಿಗ್ಗೆ ೧೦ ರಿಂದ ಒಂದರವರೆಗೆಯೇ?

**ಮಾನ್ಯ ಸಭಾಧ್ಯಕ್ಷರು:** ಹೌದು

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ:** ನಮಗೆಲ್ಲಾ ಒಪ್ಪಿಗೆ.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ಸದಸ್ಯರನ್ನು ಯಾವ ಕ್ರಮದಲ್ಲಿ ಕರೆಯಬೇಕೋ ತಿಳಿಯದಾಗಿದೆ. ನಾನು ಈ ಮುನ್ನ ಅನುಸರಿಸಿದ ಕ್ರಮವನ್ನೇ ಅನುಸರಿಸುವೆ.

ಎದ್ದು ನಿಂತು ಸದಸ್ಯರನ್ನು ಕರೆಯುವೆ.

**ಶ್ರೀ ಹೆಚ್. ಜೆ. ಖಾಂಡೇಕರ್:** ಅಕ್ಷರ ಕ್ರಮ

**ಮಾನ್ಯ ಸಭಾಧ್ಯಕ್ಷರು:** ಅದು ತುಂಬಾ ತಾಂತ್ರಿಕವಾಗಬಹುದು. ಹೀಗಾಗಿ ನಾನು ಈ ಹಿಂದಿನ ಕ್ರಮದಂತೆ ನಿಂತ ಸದಸ್ಯರಲ್ಲಿ ಒಬ್ಬೊಬ್ಬರನ್ನೇ ಕರೆಯುವೆ. ಇದರಿಂದ ಮುನಿಸ್ವಾಮಿ ಪಿಳ್ಳೈಯವರಿಗೆ ಏನು ಅಭ್ಯಂತರವಿರಲಾರದು.

**ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾದ ಡಾ. ಬಿ. ಆರ್. ಅಂಬೇಡ್ಕರರ ಹಾಗೂ ಸಮಿತಿಯ ಸದಸ್ಯರನ್ನು ಮತ್ತು ಸಂವಿಧಾನವನ್ನು ಹೊಗಳುತ್ತಾ, ಹಲವಾರು ಸದಸ್ಯರು ಮಾಡಿದ ಪ್ರಶಂಸಾ ಭಾಷಣಗಳ ಆಯ್ದ ಭಾಗಗಳು.**

**ಶ್ರೀ ವಿ. ಆಯ್. ಮುನಿಸ್ವಾಮಿ ಪಿಳ್ಳೈ** (ಮದ್ರಾಸ್: ಸಾಮಾನ್ಯ): ಅಧ್ಯಕ್ಷರೆ, ನಾನು ಈ ಮಹಾನ್ ಸಭೆಯ ಮುಂದೆ, ನನ್ನ ಮಿತ್ರರಾದ ಡಾ|| ಅಂಬೇಡ್ಕರರು ಮಂಡಿಸಿದ ಸೂಚನೆಯನ್ನು ಅನುಮೋದಿಸಲೆಂದೇ ನಿಂತಿರುವೆ.

ಮಾನ್ಯರೆ, ಸಂವಿಧಾನ ರಚನಾ ಸಮಿತಿಯ ಸದಸ್ಯರು ಹಗಲು ರಾತ್ರಿ ಲೆಕ್ಕಿಸದೆ ಅತಿ ಮಹತ್ವವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅಲ್ಲದೆ ಅಮೂಲ್ಯ ಸಲಹೆಗಳಿಂದ ಸಂವಿಧಾನದ ಕರಡಿಗೆ ಮಹತ್ವಪೂರ್ಣ ತಿದ್ದುಪಡಿಗಳನ್ನೂ ಸೂಚಿಸಿದ್ದಾರೆ. ಈ ವಿಷಯದಲ್ಲಿ ನಾನು ಕರಡು ಸಮಿತಿಯ ಅಧ್ಯಕ್ಷರಾದ ಡಾ|| ಅಂಬೇಡ್ಕರರ ಬುದ್ಧಿವಂತಿಕೆ ಹಾಗೂ ದಕ್ಷತೆಯನ್ನು ಹೊಗಳಲೇಬೇಕಾಗಿದೆ (ಉಲ್ಲಾಸದ ಲಹರಿ) ನಾನು ಬಂದಿರುವ ಹರಿಜನ ಸಮೂಹವೇ ಡಾ|| ಅಂಬೇಡ್ಕರರಿಗೂ ಜನ್ಮ ನೀಡಿದೆ. ನಾನು ಅದರ ಬಗೆಗೆ ಹೆಮ್ಮೆ ಹೊಂದಿರುವೆ. ಈ ದಿನ ಅವರ ಸೇವೆ ಮತ್ತು ಪ್ರತಿಭೆಯನ್ನು ಕೇವಲ ಹರಿಜನರು ಮಾತ್ರವಲ್ಲದೇ ಭಾರತದ ಸಕಲ ಸಮೂಹಗಳು ಹೆಮ್ಮೆ ಹೊಂದಿವೆ. ಪರಿಶಿಷ್ಟ ಜಾತಿಯು ನಂದನಾರ್‌ರಂತಹ ಮಹಾನ್ ನಾಯಕ ಹಾಗೂ ಭಕ್ತನಿಗೂ ತಿರುಪುಝನಾಳ್ವ ನೆಂಬ ವೈಷ್ಣವ ಸಂತನಿಗೂ ಎಲ್ಲಕ್ಕೂ ಮಿಗಿಲಾಗಿ ತಿರುವಳ್ಳುವರ್ ಮಹಾನ್ ವೇದಾಂತಿ, ಭಾರತದಲ್ಲಿಯಲ್ಲದೇ ವಿಶ್ವಾದ್ಯಂತ ಪ್ರಖ್ಯಾತಿ ಪಡೆದಿರುವ ವ್ಯಕ್ತಿಗಳಿಗೆ ಜನ್ಮ ನೀಡಿದೆ.

ಈ ಒಂದು ಮಹಾಮಹಿಮರ ಪಂಕ್ತಿಗೆ ನಾವು ಇಂದು ಡಾ॥ ಅಂಬೇಡ್ಕರರನ್ನು ಸೇರಿಸಬಹುದು. ಏಕೆಂದರೆ ಅವರು ಪ್ರಪಂಚಕ್ಕೆ ಪರಿಶಿಷ್ಟ ಜಾತಿಯವರು ಸಲ್ಲಿಸಿದ ಸೇವೆಯನ್ನು ಎತ್ತಿ ತೋರ್ಪಡಿಸಿದ್ದಾರೆ. ಮಾನ್ಯರೆ, ಅವರು ಹರಿಜನ ಸಮಾಜಕ್ಕೆ ಕೂಡಾ ಅಪಾರ ಸೇವೆ ಸಲ್ಲಿಸಿದ್ದಾರೆ. ಅವರು ತ್ಯಾಗಪುರುಷರು. ಅವರು ಸಂವಿಧಾನ ರಚನೆಗೆ ಸಲ್ಲಿಸಿದ ಸೇವೆ ಶ್ಲಾಘನೀಯ. ಅವರೊಂದಿಗೆ ಸಿಬ್ಬಂದಿವರ್ಗ ಹಾಗೂ ಪ್ರಮುಖ ಡ್ರಾಫ್ಟ್‌ಮನ್ ಅವರುಗಳು ಸಲ್ಲಿಸಿದ ಸೇವೆ ಕಡಿಮೆಯಲ್ಲ...

**ಸೇಠ್ ಗೋವಿಂದ ದಾಸ್** (ಸಿ. ಪಿ. ಬಿರಾರ್, ಸಾಮಾನ್ಯ): ಸುಮಾರು ಮೂರು ವರ್ಷಗಳಿಂದ ನಡೆದ ಸಂವಿಧಾನ ಕಾರ್ಯವು, ಮೂರನೇ ಪಠನದ ಹಂತಕ್ಕೆ ಬಂದಿರುವುದು ಆನಂದದಾಯಕ ವಿಷಯ. ಈ ದಿಶೆಯಲ್ಲಿ ನಾನು ಡಾ॥ ಅಂಬೇಡ್ಕರರನ್ನು ಅಭಿನಂದಿಸುವೆ. ಅವರನ್ನು 'ಆಧುನಿಕ ಮನು' ಎಂದು ಕರೆಯಲಾಗಿದೆ. ಅದೇನೇ ಇರಲಿ, ಅವರು ನಮ್ಮ ಸಂವಿಧಾನದಕ್ಕೆ ಸ್ಪಷ್ಟ ರೂಪ ನೀಡಿದ್ದಾರೆ. ಅವರು ತಮಗೆ ವಹಿಸಿದ ಕಾರ್ಯವನ್ನು ತುಂಬಾ ಸಮರ್ಥನೀಯವಾಗಿ ನಿರ್ವಹಿಸಿದ್ದಾರೆ.

**ರೋಹಿಣಿಕುಮಾರ ಚೌಧುರಿ** (ಅಸ್ಸಾಂ, ಸಾಮಾನ್ಯ): ಒಂದು ನಿಲುವಳಿಯ ಅಂಶ. ಅಂಬೇಡ್ಕರರನ್ನು 'ಆಧುನಿಕ ಮನು' ಎಂದೇ ವರ್ಣಿಸಿದ ನನ್ನ ಮಿತ್ರರು 'ಹಿಂದೂಕೋಡನ್ನು' ಅವಲಂಬಿಸಿದ್ದಾರೆಯೇ?

**ಸೇಠ್ ಗೋವಿಂದ ದಾಸ್:** ನನ್ನ ಹೇಳಿಕೆಯು 'ಹಿಂದೂ ಕೋಡ್'ಗೆ ಸಂಬಂಧಿಸಿಲ್ಲ. ಅನೇಕ ಸದಸ್ಯರಿಗೆ ತಿಳಿದಂತೆ ನಾನು 'ಹಿಂದೂ ಕೋಡ್'ನ ಅನೇಕ ವಿಷಯಗಳಿಗೆ ವಿರೋಧಿಯಾಗಿರುವೆ.

**ಶ್ರೀ ಲಕ್ಷ್ಮೀನಾರಾಯಣ ಸಾಹು:** ಡಾ॥ ಅಂಬೇಡ್ಕರರು ತಮ್ಮ ಪರಿಶ್ರಮದಿಂದ ಸಂವಿಧಾನವನ್ನು ಸಿದ್ಧಪಡಿಸಿದ್ದಕ್ಕೆ ಅಭಿನಂದಿಸುವೆ. ಆದರೆ ಅವರು ನಮ್ಮ ದೇಶಕ್ಕೆ ಬೇಕಾಗಿರುವ ಸಹಜ ಹಾಗೂ ಸರಳ ಸಂವಿಧಾನವನ್ನು ನೀಡದೇ ಹೋದುದಕ್ಕೆ ವಿಷಾದಿಸುತ್ತೇನೆ. ಅವರು ಸಂವಿಧಾನವು ತನ್ನ ಕೈಗೊಂಬೆಯಲ್ಲ ಎಂದು ಹೇಳಲೂಬಹುದು. ಆದರೆ ಅವರು ನಮ್ಮ ದೇಶದಲ್ಲಿಯ ಬಹುಮತ ಪಕ್ಷದ ಆಶೋತ್ತರಕ್ಕೆ ಅನುಗುಣವಾಗಿ ಸಂವಿಧಾನ ರಚಿಸದೇ ಹೋದುದು...

* * *

**ಶ್ರೀ ಆರ್. ಕೆ. ಸಿಧ್ವ:** ಈಗ ಸಂವಿಧಾನವನ್ನು ಕುರಿತು ಹೇಳಬಹುದಾದರೆ, ಡಿಸೆಂಬರ್ ೬, ೧೯೪೬ರಂದು ನಾವು ಈ ಸಭಾಂಗಣದಲ್ಲಿ ಮೊದಲು ಬಾರಿಗೆ ಸೇರಿದೆವು. ನಮ್ಮ ಕಾರ್ಯ ಕಲಾಪಗಳಿಗೆಂದೇ ಈ ಸಭಾಂಗಣವನ್ನು ಸಜ್ಜುಗೊಳಿಸಲಾಯಿತು. ಈ ಸ್ಮರಣೀಯ ಕಟ್ಟಡದಲ್ಲಿಯೇ ನಾವು ನಮ್ಮ ಸಂವಿಧಾನವನ್ನು ರಚಿಸಿದೆವು ಎಂಬುದು ಹೆಮ್ಮೆಯ ವಿಷಯ. ಭಾರತವು ಇದನ್ನು ಸದಾ ಸ್ಮರಿಸುತ್ತದೆ. ಅಂದಿನಿಂದ ಇಂದಿನವರೆಗೆ, ನಮ್ಮದೇ ಆದ ಅನುಭವದಿಂದ ಹೇಳಬೇಕಾದ ಸಂಗತಿ ಎಂದರೆ ನಾವು ಈ ಭವ್ಯ ಮಂದಿರದಲ್ಲಿ ೩ ವರ್ಷ ಕಳೆದಿದ್ದೇವೆ. ಸರಿಯಾಗಿ ಹೇಳಿದರೆ ಮೂರು ವರ್ಷಕ್ಕೆ ಕೇವಲ ೧೫ ದಿನ ಕಡಿಮೆ ನಾವೆಲ್ಲ ಇಲ್ಲಿ ಸಮಾವೇಶಗೊಂಡಿದ್ದೇವೆ.

ಫೆಬ್ರವರಿ ೧, ೧೯೪೮ರಂದು ನಮ್ಮ ಚರ್ಚೆಯನ್ನು ಮುಗಿಸಿದಾಗ, ಡಿಸೆಂಬರ್ ೯, ೧೯೪೯ ರಿಂದ ೧೯೪೭ ರಲ್ಲಿ ನಮ್ಮ ಕರಡು ಸಂವಿಧಾನ ಪೂರ್ಣಗೊಂಡು ನಮ್ಮ ಕೈ ಸೇರಿದೆ. ಅಂದು ಅದು ೩೧೩ ವಿಧಿಗಳಿಂದ ಕೂಡಿದ್ದರೆ, ಇಂದು ೩೯೫ ವಿಧಿಗಳಿವೆ. ೮೨ ವಿಧಿಗಳನ್ನು ಅದಕ್ಕೆ ಸೇರಿಸಲಾಗಿದೆ. ಸುಮಾರು ೨೨೦ ಹಳೆಯ ವಿಧಿಗಳನ್ನು ತಳ್ಳಿಹಾಕಲಾಗಿದೆ. ೧೨೦ ವಿಧಿಗಳ ಶೈಲಿಯನ್ನು ಸಂಪೂರ್ಣವಾಗಿ ಬದಲಾಯಿಸಿದೆ. ಪೂರ್ವ ಪೀಠಿಕೆಯನ್ನು ಯಾವ ತಿದ್ದುಪಡಿಯಿಲ್ಲದೇ ಅಂಗೀಕರಿಸಲಾಗಿದೆ. ನಾವು ಈ ಸಂವಿಧಾನವನ್ನು ಯಾವ ಆತುರಕ್ಕೆ ಆಸ್ಪದ ನೀಡದೆ, ದೀರ್ಘಕಾಲ ತೆಗೆದುಕೊಂಡು ಸಿದ್ಧಪಡಿಸಿದ್ದೇವೆ. ಹಲವರು

ಹೇಳುವಂತೆ ನಾವು ದೀರ್ಘಕಾಲ ತೆಗೆದುಕೊಂಡು ಕಾಲಹರಣ ಹಾಗೂ ಹಣದ ದುರುಪಯೋಗಕ್ಕೆ ಆಸ್ಪದ ಕೊಟ್ಟಂತಾಗಿದೆ. ಆದರೆ ನಾವು ಸುದೀರ್ಘ ಚರ್ಚೆಯನ್ನು ಮುಕ್ತ ಮನಸ್ಸಿನಿಂದ ವಾದ–ವಿವಾದಗಳಿಂದ ನಿರ್ಣಯಕ್ಕೆ ಬಂದಿರುವುದು ಹೆಮ್ಮೆಯ ವಿಷಯ. ರಚನಾ ಸಮಿತಿಯು ನಮ್ಮ ತಿದ್ದುಪಡಿಗಳನ್ನು ಮುಕ್ತ ಮನಸ್ಸಿನಿಂದ ಪರಿಶೀಲಿಸಿರುವುದು ಆನಂದದಾಯಕ ವಿಷಯ. ನಾವೆಲ್ಲರೂ ನಮ್ಮ ಕರ್ತವ್ಯ ಪರಿಪಾಲಿಸಿರುವುದು, ಹೆಮ್ಮೆಯ ವಿಷಯ. ಚರಿತ್ರೆಕಾರರು ಮತ್ತು ಮುಂದಿನ ಜನಾಂಗ ನಾವು ಮಾಡಿರಬಹುದಾದ ಕಾರ್ಯದ ಬಗೆಗೆ ನಿರ್ಣಯಿಸುವರು. ನಾವು ಮಾಡಿದ್ದೆಲ್ಲಾ ಕ್ರಮಬದ್ಧ ಎಂದು ಹೇಳಲಾಗದು. ಅನೇಕ ಲೋಪ ದೋಷಗಳಿಲ್ಲ ಎಂದರೆ ತಪ್ಪಾಗಬಹುದು. ಆದರೆ ನಾವು ಪರಿಶ್ರಮ ವಹಿಸಿ ರಚಿಸಿರಬಹುದಾದ ಈ ಸಂವಿಧಾನ ಬೇರೆ ದೇಶಗಳಿಗೆ ದಾರಿ ದೀಪವಾದಲ್ಲಿ ನಮಗೆಲ್ಲಾ ಹೆಮ್ಮೆ. ಆದುದರಿಂದ ಈ ಸಂವಿಧಾನವು ಮುಂಬರಲಿರುವ ಜನವರಿ ೨೬, ೧೯೫೦ ರಂದು ನಾಡಿನ ಶಾಸನವಾಗಿ, ಭಾರತವನ್ನು ಪ್ರಜಾಸತ್ತಾತ್ಮಕ ಸಾರ್ವಭೌಮ ರಾಜ್ಯ ಎಂದೇ ಸಾರುತ್ತದೆ. ಇದು ನಮಗೆಲ್ಲಾ ಹೆಮ್ಮೆಯ ವಿಷಯ.

* * *

**ಶ್ರೀ ಗೋಕುಲ್ ಭಾಯಿ ದವಲತ್ ರಾಮ್ ಭಟ್ಟ:** ಕರಡು ಸಂವಿಧಾನದ ಪ್ರತಿಯನ್ನು ಸಭೆಯಲ್ಲಿ ಮೊದಲ ಬಾರಿಗೆ ಕಂಡಾಗ, ವಿವಿಧ ಪುಷ್ಪಗಳನ್ನು ವಿವಿಧ ಸ್ಥಳಗಳಿಂದ ಆಯ್ಕೆ ಮಾಡಿ ತಂದ ಪುಷ್ಪಗುಚ್ಛದಂತೆ ಕಂಡುಬಂದಿತು. ಆಗ ನನಗೆ ಈ ಪುಷ್ಪಗುಚ್ಛದಲ್ಲಿ ಹಲವಾರು ಗುಲಾಬಿ, ಹಲವಾರು ಮಲ್ಲಿಗೆ ಹಾಗೂ ಕಾಗದದ ಹೂವುಗಳಿವೆ ಎಂದೇ ಭಾಸವಾಯಿತು. ಹೀಗೆ ಈ ಪುಷ್ಪಗುಚ್ಛ ವಿವಿಧ ಜಾತಿಯ ಹೂಗಳಿಂದ ಕೂಡಿದ್ದಾಗಿದೆ. ಹೀಗೆ ಇಂದು ಈ ಗುಚ್ಛವನ್ನು ನಾವೇ ತಯಾರಿಸಿದ್ದು ಇದರಲ್ಲಿ ಅನೇಕ ಸುಗಂಧ ಪುಷ್ಪಗಳೂ ಇವೆ. ನಮಗೆ ಇಂದು ಎಲ್ಲಾ ವಿಧಗಳೂ ಬೇಕು. ಕೇವಲ ಗುಲಾಬಿಯನ್ನೇ ಆಯ್ದುಕೊಂಡು ಮುಳ್ಳನ್ನು ಬಿಡಲಾಗದು. ಗುಲಾಬಿಯಂತೆ ಈ ಜೀವನ ಸುಂದರ ಹಾಗೆಯೇ ಮುಳ್ಳಿನಂತೆ ದುಃಖಮಯವೂ ಆಗಿದೆ.

ನನ್ನ ಹಿರಿಯಾಸೆ ಎಂದರೆ ಜನತೆ ಮುಂದೆ ಸಾಗಿ ನೂತನ ಸಂವಿಧಾನವನ್ನು ಆಯ್ದುಕೊಂಡು ರಾಷ್ಟ್ರ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಿ. ಆಗ ಮಾತ್ರ ನಮ್ಮ ಈ ಪರಿಶ್ರಮ ಫಲಕಾರಿಯಾಗಬಲ್ಲದು. ನಾನು ರಚನಾ ಸಮಿತಿಯವರ ಪರಿಶ್ರಮವನ್ನು ಅಭಿನಂದಿಸುವೆ.

* * *

**ಪಂಡಿತ್ ಲಕ್ಷ್ಮೀಕಾಂತ ಮೈತ್ರಾ:** ನಾನು ನನ್ನ ಇತರ ಮಿತ್ರರಂತೆ, ರಚನಾ ಸಮಿತಿಯವರ ಪರಿಶ್ರಮವನ್ನೂ ಹೊಗಳದೇ ಇರಲಾರೆ. ವಿಶೇಷವಾಗಿ ಜಂಟಿ ಕಾರ್ಯದರ್ಶಿಯಾದ ಮುಖರ್ಜಿಯವರ ಪರಿಶ್ರಮ ಹಾಗೂ ಅವರ ಸಿಬ್ಬಂದಿಯ ಸಹಕಾರ ಮತ್ತು ಸಹನೆಯಿಂದಲೇ ನಾವೆಲ್ಲರೂ ಈ ಸಂವಿಧಾನ ಸಿದ್ಧಪಡಿಸಲು ಸಾಧ್ಯವಾಗಿದೆ.

* * *

**ಶ್ರೀ ಎನ್. ವಿ. ಗಾಡ್ಗೀಳ್:** ಸಂವಿಧಾನ ಒಂದು ಉಪಕರಣ. ಅದು ಮುಕ್ತಾಯವಲ್ಲ. ಕುಶಲಕರ್ಮಿಯಿಂದ ಉಪಕರಣವನ್ನು ಉತ್ತಮ ಕಾರ್ಯಗಳಿಗೆ ಉಪಯೋಗಿಸಬಹುದು. ಶ್ರದ್ಧೆಯಿಂದ ಬಳಸಿದ ಉಪಕರಣ, ಬೇಡಿಕೆಯ ಪೂರ್ಣಗೊಳಿಸಬಲ್ಲದು. ಬೇಡವಾದವರಿಗೆ, ದೂರಲು ಅವಕಾಶ ದೊರೆಯಲೂಬಹುದು. ನಾವು ಸಿದ್ಧಪಡಿಸಿದ ಸಂವಿಧಾನ ತನ್ನ ಲೋಪ ದೋಷಗಳಿಂದ ಕೂಡಿದ್ದರೂ ಒಂದು ಉತ್ತಮ ಸಾಧನೆಯೆಂದೇ ಪರಿಗಣಿಸುವೆ. ನಾನು ವಿಶ್ವಾಮಿತ್ರನಂತೆ ದೂಷಣೆಯೊಂದನ್ನೇ ಮಾಡದೆ ನಮ್ಮ ಸಂವಿಧಾನವು ಪೂರ್ವ

ಪೀಠಿಕೆಯಲ್ಲಿ ವ್ಯಕ್ತಪಡಿಸಿದಂತೆ ಆರ್ಥಿಕ ಸಾಮಾಜಿಕ ಮತ್ತು ರಾಜಕೀಯ ಗುರಿಗಳನ್ನು ಸಾಧಿಸಬಲ್ಲ ಉತ್ತಮ ಉಪಕರಣವಾಗಿದೆ.

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ): ಮಾನ್ಯರೆ, ಸಂವಿಧಾನ ರಚನೆಯ ಕಾರ್ಯ ಕಲಾಪಗಳಲ್ಲಿ ಎಲ್ಲ ಸಮೂಹಗಳು ಅಂದರೆ ಹಿಂದುಗಳು, ಮುಸ್ಲಿಮರು ಪರಿಶಿಷ್ಟ ವರ್ಗದವರು ಹಾಗೂ ಪರಿಶಿಷ್ಟ ಜನಾಂಗದ ಪ್ರತಿನಿಧಿಗಳು, ಸಿಕ್ಕರು, ಪಾರ್ಸಿಗಳು ಎಲ್ಲರೂ ಭಾಗವಹಿಸಿರುವರು. ಎಲ್ಲಾ ರಾಜಕೀಯ ವರ್ಗದ ಹಿತಾಸಕ್ತಿ ಹೊಂದಿದವರೂ ಇದ್ದಾರೆ. ಸೋಜಿಗದ ಸಂಗತಿ ಎಂದರೆ, ಕೇವಲ ಪ್ರೇಕ್ಷಕರೆಂದೇ ಆಗಮಿಸಿದ್ದ ಡಾ॥ ಅಂಬೇಡ್ಕರರು ಪ್ರಮುಖ ಪಾತ್ರ ವಹಿಸಿ ರಚನಾ ಸಮಿತಿಯ ಅಧ್ಯಕ್ಷರಾಗಿ ತಮ್ಮನ್ನು ಈ ಮಹಾನ್ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದು. ಅವರು ಇಂದು ನಾವು ರಚಿಸುತ್ತಿರುವ ಸಂವಿಧಾನದ ಶಿಲ್ಪಿಗಳಾಗಿದ್ದಾರೆ. ಯಾವ ವ್ಯಕ್ತಿ ಸಂದೇಹ ಹಾಗೂ ಟೀಕಾಕಾರನಾಗಿ ಬಂದಿದ್ದರೋ ಅವರೇ ಅಂತಿಮವಾಗಿ ಸಂವಿಧಾನದ ಶಿಲ್ಪಿಯಾದುದು ಸಂತಸ. ಹೀಗಾಗಿ ನಾನು ಅವರನ್ನು ಅಭಿನಂದಿಸುವುದಲ್ಲದೆ, ಈ ಮಾದರಿಯ ಪ್ರಜ್ಞಾವಂತ ನಮಗೆ ದೊರೆತಿದ್ದಕ್ಕೆ ನಮ್ಮನ್ನು ನಾವೇ ಅಭಿನಂದಿಸಬಹುದಾಗಿದೆ. ಅವರು ನಮ್ಮೊಡನೆ ತೋರಿದ ಹಾರ್ದಿಕ ಮನೋಭಾವನೆಗೆ ನಾನು ಋಣಿ. ನಾವು ಒಬ್ಬರಿಂದ ದೂರವಿದ್ದಾಗ ಅಲ್ಲ ಸಲ್ಲದ ಭಾವನೆಗಳು ಬೆಳೆದು ಬರುತ್ತವೆ. ಆದರೆ ನಿಕಟ ಸಂಪರ್ಕವನ್ನು ಪಡೆದಾಗ ನಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಅರಿತು ಅವನ್ನು ನಿವಾರಿಸಲು ಸಾಧ್ಯ ಎಂದೇ ನನ್ನ ನಂಬಿಕೆ. ಅದು ಈಗ ಸತ್ಯವಾಗಿದೆ. ನಮ್ಮ ಭಾವನೆಗಳಂತೇ ಈ ಸಂವಿಧಾನ ಕಾರ್ಯಾಚರಣೆಯಲ್ಲಿ ಬಂದಿದ್ದೇ ಆದರೆ, ವಿಶ್ವದಲ್ಲಿಯೇ ನಮ್ಮ ಸಂವಿಧಾನ ಉತ್ಕೃಷ್ಟ ಸಂವಿಧಾನ ಎಂದು ಪರಿಗಣಿಸುವುದರಲ್ಲಿ ಯಾವ ಸಂದೇಹವೂ ಇರಲಾರದು.

ನಮ್ಮ ಮಧ್ಯೆ ಮುತ್ಸದ್ದಿ ನ್ಯಾಯಕೋವಿದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರಂತಹ ಮಹಾನ್ ವ್ಯಕ್ತಿಗಳಾಗಿದ್ದಾರೆ. ಅವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದರೂ ಅವರು ಸದನದಲ್ಲಿ ಹಾಗೂ ಸದನದ ಹೊರಗಡೆ ನಮ್ಮೊಂದಿಗೆ ಸಹಕರಿಸಿದ್ದಾರೆ. ನಮ್ಮಲ್ಲಿ ಗೋಪಾಲಸ್ವಾಮಿ ಅವರು ಆಡಳಿತಗಾರರಾಗಿ ಶ್ಲಾಘನೀಯ, ಸಭೆಯ ಸದಸ್ಯರಾಗಿ ನಾಗರಿಕ ಸೇವಾ ವರ್ಗದಲ್ಲಿ ಅಪಾರ ಅನುಭವ ಪಡೆದಿದ್ದು ಅದನ್ನು ನಮಗೆ ಧಾರೆ ಎರೆದಿದ್ದಾರೆ. ಈಚೆಗೆ ಅವರು ಈ ಸಭೆಯಲ್ಲಿ ಹೆಚ್ಚು ತೋರ್ಪಡಿಸಿಕೊಳ್ಳದೇ ಇದ್ದಾರೆ. ಅವರ ಸ್ಥಾನದಲ್ಲಿ ಈ ದಿನ ನಾವು ಅವರಂತೆ ಅಂಬೇಡ್ಕರರನ್ನು ಕಾಣುತ್ತಿದ್ದೇವೆ.

ಸಭೆಯ ಎಲ್ಲಾ ವರ್ಗಗಳೂ ಉತ್ತಮ ಸಂವಿಧಾನಕ್ಕೆ ಶ್ರಮಿಸಿವೆ.

ಸರ್ವಶ್ರೀ ಹೆಚ್.ವಿ.ಕಾಮತ್, ಶಿಬ್ಬನ್‌ಲಾಲ್ ಸಕ್ಸೇನಾ, ಸಿಧ್ವ ಹಾಗೂ ಈಚಿನ ದಿನಗಳಲ್ಲಿ ಡಾ॥ ಪಂಜಾಬ್ ರಾವ್ ದೇಶಮುಖ್ ಅವರು ಸಕ್ರಿಯವಾದ ತಿದ್ದುಪಡಿಗಳನ್ನು ಮಂಡಿಸಿದ ಮಹನೀಯರು. ನಮ್ಮ ಮಿತ್ರರಾದ ಕೆ. ಟಿ. ಷಾ ಅವರ ತಿದ್ದುಪಡಿಗಳು ಅಂಗೀಕಾರವಾಗಲಿಲ್ಲ. ಆದರೆ ಅವರು ಎತ್ತಿರಬಹುದಾದ ವಿಷಯಗಳು ಮಹತ್ವಪೂರ್ಣವಾಗಿದೆ. ಅವರು ನಮ್ಮ ಗೌರವಕ್ಕೆ ಪಾತ್ರರು. ಅವರು ತುಂಬಾ ಸಂಯಮ ಹಾಗೂ ಸ್ವಪ್ರೇರಣೆಯಿಂದ ನಮ್ಮೊಂದಿಗೆ ಸಹಕರಿಸಿದ್ದಾರೆ. ಯಾರೂ ತಾವು ಸೋಲನ್ನು ಅನುಭವಿಸಿದ್ದೇವೆ ಎಂದರೆ ಅದು ಸೂಕ್ತವಲ್ಲ. ಕೇವಲ ಭಿನ್ನಾಭಿಪ್ರಾಯ ಎಂದೇ ಬಗೆಯಬೇಕು. ನಮಗೆಲ್ಲರಿಗೂ ಸ್ಫೂರ್ತಿದಾಯಿಯಾದವರು ಎಂದರೆ ಮಹಾತ್ಮಾ ಗಾಂಧಿ. ಅವರ ಭಾವನೆಗಳಿಗೆ ನಾವೆಲ್ಲರೂ ಸ್ಪಂದಿಸಿದ್ದೇವೆ. ಆದುದರಿಂದ ಶಾಂತಿಯ ಮೆಟ್ಟಲಿನ ಮೇಲೆ ಸುಭದ್ರ ಪ್ರಗತಿಯನ್ನು ಉತ್ತಮ ಆಡಳಿತವನ್ನೂ ಪಡೆಯೋಣ ಎಂದೇ ಭಗವಂತನಲ್ಲಿ ನನ್ನ ಪ್ರಾರ್ಥನೆ.

**ಶ್ರೀ ಬಿ. ಜಿ. ಖೇರ್** (ಬೊಂಬಾಯಿ: ಸಾಮಾನ್ಯ): ಅಧ್ಯಕ್ಷರೆ, ನಾನು ಈ ಒಂದು ಸದಾವಕಾಶವನ್ನು ಕೃತಜ್ಞತಾ ಭಾವನೆಗಳಿಂದ ಸ್ಮರಿಸದೇ ಇರಲಾರೆ. ನಾವು ೩ ವರ್ಷದ ಹಿಂದೆ ಈ ಭವನದಲ್ಲಿ ದಿನಾಂಕ ೯, ಡಿಸೆಂಬರ್ ೧೯೪೬ ರಂದು ಸಮಾವೇಶಗೊಂಡೆವು. ಈ ಕಳೆದ ಮೂರು ವರ್ಷಗಳಲ್ಲಿ ನಾವು ಮೂರು ದಶಕಗಳ ಅವಧಿ ಕಾರ್ಯವನ್ನು ಪೂರೈಸಿದ್ದೇವೆ. ಇದಕ್ಕಾಗಿ ನಾನು ಸಭೆಯನ್ನು ಅಭಿನಂದಿಸುವೆ. ನನ್ನ ಮೊದಲನೆಯ ಪ್ರತಿಕ್ರಿಯೆ ಎಂದರೆ ನಮಗೆ ವಹಿಸಿದ ಮಹಾನ್‌ಕಾರ್ಯವನ್ನು ಪೂರೈಸಿದ್ದು, ಈ ಮೂರು ವರ್ಷಗಳಲ್ಲಿ ನಮ್ಮ ಸಂವಿಧಾನವು ಅನೇಕ ಮಾರ್ಪಾಟುಗಳನ್ನು ಕಂಡಿದೆ. ನಾವು ಸ್ವಾತಂತ್ರ್ಯಗಳಿಸಿದ್ದು ಒಂದು ವಿನೂತನ ಹಾಗೂ ವಿಶಿಷ್ಟ ದಾಖಲೆಯೇ ಆಗಿದೆ. ಅದರಂತೆಯೇ ನಾವು ರಚಿಸಿದ ಸಂವಿಧಾನವೂ ಕೂಡ. ಏಕೆಂದರೆ ವಿಶ್ವದಲ್ಲಿ ಯಾವ ದೇಶದಲ್ಲಿಯೂ ಅಲ್ಲಿನ ಸಂಪತ್ತೇ ಸಂವಿಧಾನವನ್ನು ರಚಿಸಿಲ್ಲ. ಆ ಮಹಾಭಾಗ್ಯ ನಮಗೆಲ್ಲಾ ದೊರಕಿದೆ. ನಾವು ಸತತ ಮೂರು ವರ್ಷಗಳ ಪರಿಶ್ರಮದಿಂದ ನಮ್ಮ ದೇಶಕ್ಕೆ ನೂತನ ಸಂವಿಧಾನವನ್ನು ನೀಡಿದ್ದು ನಮಗೆಲ್ಲಾ ಹೆಮ್ಮೆಯ ವಿಷಯ.

**ಬ್ರಭುಟ್ ದಯಾಲ್ ಹಿಮ್ಮತ್ ಸಿಂಘ್** (ಪಶ್ಚಿಮ ಬಂಗಾಲ: ಸಾಮಾನ್ಯ): ಮಾನ್ಯರೆ, ಸಂವಿಧಾನದ ಕಾರ್ಯಾಚರಣೆ ವ್ಯಕ್ತಿಗಳ ಕೈಯಲ್ಲಿದೆ. ನೀವು 'ಎಕ್ಸ್' ವ್ಯಕ್ತಿಯ ಕೈಗೆ ನೀಡಿದಾಗ ಅದು ಉತ್ತಮವಾಗಿ ಜಾರಿಯಲ್ಲಿ ಬರಬಹುದು. ಆದರೆ ಅದನ್ನೇ 'ಇನ್ನೊಬ್ಬ' ವ್ಯಕ್ತಿಗೆ ನೀಡಿದಾಗ ನಾವು ಎಣಿಸಿದ ಫಲ ದೊರೆಯದೇ ಹೋಗಬಹುದು. ಹೀಗಾಗಿ ನಾವು ಸಿದ್ಧಪಡಿಸಿದ ಈ ಸಂವಿಧಾನಕ್ಕೆ ಜನರು ಉತ್ತಮ ಬೆಂಬಲ ನೀಡಿದಲ್ಲಿ ಇದರ ಕಾರ್ಯಾಚರಣೆ ಫಲಪ್ರದವಾಗುವುದರಲ್ಲಿ ಸಂದೇಹವಿಲ್ಲ. ಅದನ್ನು ತೊರೆದು ಜನರು ಕೇವಲ ದೂಷಣೆಯಲ್ಲಿ ನಿರತರಾದರೆ, ಅದಕ್ಕೆ ಸಂವಿಧಾನ ಯಾವ ಪರಿಹಾರ ನೀಡಲಾರದು. ಉತ್ತಮವಾಗಿಯೇ ಇದರ ಕಾರ್ಯಾಚರಣೆಯಾಗಲಿ ಎಂದೇ ಹಾರೈಸುವೆ.

**ಶ್ರೀ ಹೆಚ್. ವಿ. ಪಾಠಸ್ಕರ್:** ಅನೇಕ ಲೋಪ ದೋಷಗಳಿದ್ದರೂ, ನಾವು ಉತ್ತಮ ಅಂಶಗಳನ್ನು ಹೊಂದಿದ ಸಂವಿಧಾನವನ್ನೇ ರಚಿಸಿದ್ದೇವೆ. ಸಂವಿಧಾನ ವಿಕಾಸಕ್ಕೆ ಅವಕಾಶ ನೀಡುತ್ತದೆ. ಅದು ಜನತೆಯ ಆಶೋತ್ತರಗಳಿಗೆ ಸ್ಪಂದಿಸಿ ಬದಲಾವಣೆಗಳನ್ನು ಹೊಂದಬಹುದು. ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಜನರು ಸಂವಿಧಾನದಲ್ಲಿಯೂ ಬದಲಾವಣೆಗಳನ್ನು ತರಬಹುದು.

**ಶ್ರೀ ಬಿ. ಎ. ಮಂಡೋಲಿ** (ಸಿ.ಪಿ.ಬೀರಾರ್: ಸಾಮಾನ್ಯ): ಮುಕ್ತಾಯ ಹಂತದಲ್ಲಿ ನಾನು ರಚನಾ ಸಮಿತಿಯ ಬಗೆಗೆ ಹೇಳದೇ ಹೋದರೆ ಕರ್ತವ್ಯ ಚುತಿಯಾಗಬಹುದು. ಎಲ್ಲರಿಗೂ ತಿಳಿದಂತೆ ಸಮಿತಿಯು ಸಾಹಸಮಯ ಕಾರ್ಯವೆಸಗಿದೆ. ಡಾ. ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಸಮಿತಿಯ ಸದಸ್ಯರೆಲ್ಲರೂ ಸ್ವಯಂಪ್ರೇರಣೆಯಿಂದ, ಅಮೂಲ್ಯವಾದ ಸಂವಿಧಾನದ ಕರಡುಪ್ರತಿಯನ್ನು ತಯಾರಿಸಿದ್ದಾರೆ. ಅನೇಕ ವಿವಾದಾತ್ಮಕ ಸಂದರ್ಭಗಳಲ್ಲಿ ರಚನಾ ಸಮಿತಿಯ ಅಧ್ಯಕ್ಷರು ತಮ್ಮ ಅಪಾರ ಸಂಯಮ ಹಾಗೂ ಸಮಯೋಚಿತ ಸಲಹೆಗಳಿಂದ ಸದಸ್ಯರ ಮನಸ್ಸು ಗೆದ್ದಿದ್ದಾರೆ. ಸಂವಿಧಾನವನ್ನು ದಾಖಲೆಯ ಅವಧಿಯಾದ ಮೂರು ವರ್ಷಗಳಲ್ಲಿ ಮುಕ್ತಾಯ ಹೊಂದಿದೆ. ಇದಕ್ಕೆ ನಾನು ಡಾ. ಅಂಬೇಡ್ಕರರನ್ನು ಅಭಿನಂದಿಸುವೆ.

ನಾವು ಈ ಭವನದಲ್ಲಿ ಕಳೆದು ಮೂರು ವರ್ಷಗಳು, ದೇಶದಲ್ಲಿಯ ಅಶಾಂತಿ ದಿನಗಳಾಗಿದ್ದರೂ, ಅಂಬೇಡ್ಕರರು ಸಂವಿಧಾನದ ಚುಕ್ಕಾಣಿಯನ್ನು ಸಮರ್ಥನೀಯವಾಗಿ ನಡೆಸಿಕೊಂಡು ಬಂದಿರುವುದು ಶ್ಲಾಘನೀಯ. ಮಾನ್ಯರೆ, ನಾವು ಸಂವಿಧಾನವನ್ನು ಉತ್ತಮವಾಗಿ ರಚಿಸಿರಬಹುದು. ಆದರೆ ನಮ್ಮ ಈ ಭಾವನೆಗಳಿಗೆ ಅನುಗುಣವಾಗಿ ಜನತೆ ಸ್ಪಂದಿಸಿದಾಗ ಮಾತ್ರ ನಮ್ಮ ಶ್ರಮ ಸಾರ್ಥಕವಾಗಬಲ್ಲದು. ನಾವು ಉತ್ತಮ ಭವಿಷ್ಯವನ್ನೇ ಹಾರೈಸೋಣ. ನಮ್ಮ ದೇಶ ವಿಶ್ವದ ದೇಶಗಳ ಮಂಚೂಣಿಯಲ್ಲಿ ಸ್ಥಾನ ಪಡೆಯಲಿ ಎಂದು ಹಾರೈಕೆ.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ** (ಪೂರ್ವ ಪಂಜಾಬ್ ಸಾ.): ನಾನು ಈ ಸಮಯದಲ್ಲಿ, ನಮ್ಮೊಂದಿಗೆ ಸಹಕರಿಸಿದ ಇತರ ಸದಸ್ಯರಿಗೆಲ್ಲ ವಂದನೆಗಳನ್ನು ತಿಳಿಸಬಯಸುವೆ. ಅದರಲ್ಲಿಯೂ ವಿಶೇಷವಾಗಿ, ತಾವು ಅನಾರೋಗ್ಯ ಸ್ಥಿತಿಯಲ್ಲಿದ್ದಾಗ, ಈ ಸದನದ ಅಧ್ಯಕ್ಷತೆಯನ್ನು ವಹಿಸಿ, ತಾಳ್ಮೆ ಹಾಗೂ ಜಾಣ್ಮೆಯಿಂದ ಕಲಾಪಗಳನ್ನು ನಡೆಸಿಕೊಟ್ಟ ಹೆಚ್. ಸಿ. ಮುಖರ್ಜಿಯವರಿಗೆ, ವಂದನೆಗಳನ್ನು ಹೇಳಬಯಸುವೆ. ನನಗೆ ಯಾವ ವಿಧವಾಗಿ, ರಚನಾ ಸಮಿತಿಯ ಸದಸ್ಯರಿಗೆ, ಹಾಗೂ ಅದರ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಬೇಕು ತಿಳಿಯದಾಗಿದೆ. ಏಕೆಂದರೆ ಅವರು ಎಲ್ಲಾ ಕಠಿಣ ಸಮಯದಲ್ಲಿಯೂ ತಮ್ಮ ಸಂಯಮ, ಜಾಣ್ಮೆ ಹಾಗೂ ಮುತ್ಸದ್ದಿತನದಿಂದ ಕಾರ್ಯಕಲಾಪಗಳಿಗೆ ಒಂದು ಆಯಾಮ ನೀಡಿ ಅದನ್ನು ಸರ್ವಸಮ್ಮತಿಯಿಂದ ಮುಕ್ತಾಯಗೊಳಿಸಿದ್ದಾರೆ. ಅವರ ಸೇವೆಯನ್ನು ಹೊಗಳಲು ಶಬ್ದಗಳೇ ಸಾಲದಾಗಿವೆ. ಡಾ. ಅಂಬೇಡ್ಕರರು ಪರಿಶಿಷ್ಟ ವರ್ಗದ ಪ್ರತಿನಿಧಿಗಳಾಗಿ ಕಾಂಗ್ರೆಸ್ಸಿಗೆ ಸಲ್ಲಿಸಿದ ಸೇವೆ ಹೇಗೆ ಹೊಗಳಬೇಕೋ ತಿಳಿಯದು. ಅವರು ಈ ದಿನ ಸದನದಲ್ಲಿ ಹಾಜರಿಲ್ಲ. ಆದರೂ ಅವರು ಕಾಂಗ್ರೆಸ್ಸಿನ ಉನ್ನತ ಮಟ್ಟದ ಸಭೆಯ ಸದಸ್ಯರಾಗಬೇಕೆಂದು ಹೇಳುವೆ. ಏಕೆಂದರೆ ಅವರು ಈಗ ವಹಿಸಿಕೊಂಡಿರುವ ಪದವಿ ಅವರ ಗೌರವಕ್ಕೆ ಗೌಣವೆಂದೇ ಹೇಳಬಹುದು.

ಮಾನ್ಯರೆ, ಈಗ ನಾನು ಕೆಲವು ವಿಷಯ ಹೇಳಿ ನನ್ನ ಹೇಳಿಕೆಯನ್ನು ಮುಕ್ತಾಯಗೊಳಿಸುವೆ. ಸಂವಿಧಾನಗಳು ಕೇವಲ ಕಾಗದದ ಮೇಲೆ ಬರೆಯಲ್ಪಟ್ಟ ಸಂಗತಿ ಎಂದೇ ತಿಳಿದರೆ ಸಾಲದು. ಏಕೆಂದರೆ ಈ ಬರಹದ ಹಿಂದೆ ಇರಬಹುದಾದ ಧ್ಯೇಯಗಳನ್ನು ಅರಿತು ಆಚರಿಸಬೇಕು. ಹೀಗೆ ಸಂವಿಧಾನದಲ್ಲಿಯ ಭಾವನೆಗಳನ್ನು ಜನತೆ ತಿಳಿದಾಗ ದೇಶಕ್ಕೆ ಘನತೆ, ಗೌರವಗಳು ಅಧಿಕಗೊಳ್ಳುವುದರಲ್ಲಿ ಸಂದೇಹವೇ ಇಲ್ಲ. ನಾನು ನಮ್ಮ ಸದಸ್ಯರು ಜನವರಿ ೨೬, ೧೯೫೦ರಂದು ಈ ಸಂವಿಧಾನಕ್ಕೆ ಸಹಿ ಹಾಕುವುದರಿಂದ ಕಾರ್ಯ ಮುಕ್ತಾಯ ಹೊಂದಿತು ಎಂದು ಭಾವಿಸಬಾರದೆಂದೇ ವಿನಂತಿಸುವೆ. ಏಕೆಂದರೆ ನಿಜವಾದ ಕಾರ್ಯ ಅಂದಿನಿಂದ ಆರಂಭಗೊಳ್ಳುತ್ತದೆ. ಏಕೆಂದರೆ ಅವರು ಸಂವಿಧಾನವು ಜನತೆಗೆ ನೀಡಿದ ಸ್ವಾತಂತ್ರ್ಯ ದೊರಕಿಸಿ ಕೊಡಬೇಕು.

ಮಾನ್ಯರೆ, ನನಗೆ ಪ್ರಿಯವಾದ ಮತ್ತೊಂದು ವಿಷಯ ತಿಳಸಬಯಸುವೆ. ನಾವು ಪರಿಶಿಷ್ಟ ಜಾತಿಯವರಿಗೆ ವಿಧಿ ೩೩೫ ಹಾಗೂ ಅವರ ಸೇವೆಗೆ ವಿಧಿ ೧೬ರಲ್ಲಿ ಮೀಸಲಾತಿಯನ್ನು ಸಾರಿದ್ದೇವೆ. ಅದರ ಅವಧಿಯನ್ನು ಹತ್ತು ವರ್ಷ ಹಾಗೆಯೇ ಮುಂದುವರಿಸುವ ಪ್ರಸ್ತಾಪವನ್ನೂ ಮಾಡಿದ್ದೇವೆ. ಆದರೆ ಅದು ನಿಜವಾಗಿ ಜಾರಿಯಲ್ಲಿ ಬರಬೇಕಾದರೆ ಸಂವಿಧಾನಕ್ಕೆ ಸಹಿ ಹಾಕಿದ ಪ್ರತಿಯೋರ್ವ ಸದಸ್ಯನೂ ಹಿಂದುಳಿದವರನ್ನು ತಮ್ಮ ಮಟ್ಟಕ್ಕೆ ತರಲು ಕೇವಲ ಸಂಕಲ್ಪ ಮಾಡಿದರೆ ಸಾಲದು. ಸಂಕಲ್ಪ, ಸಿದ್ಧಿ ಸ್ವರೂಪಕ್ಕೆ ತರಲು ಕಟಿಬದ್ಧರಾಗಿ ಕಾರ್ಯರೂಪಕ್ಕೆ ತರಬೇಕು. ಆಗ ಮಾತ್ರ ನಾವು ಗಾಂಧೀಜಿಯವರ ವರ್ಗರಹಿತ ಸಮಾಜ ಸ್ಥಾಪನೆ ಮಾಡಬಹುದು. ಇಲ್ಲದೇ ಹೋದರೆ ಕೇವಲ ಆತ್ಮವಂಚನೆಯ ಕಾರ್ಯ ಮಾಡಿದಂತೆ.

**ಮಾನ್ಯ ಸಭಾಧ್ಯಕ್ಷರು:** ಚರ್ಚೆಯನ್ನು ಮುಂದುವರಿಸುವಾ. ಶ್ರೀ ಕಾಮತ್

**ಶ್ರೀ ಹೆಚ್. ವಿ. ಕಾಮತ್:** ನಾನು ಡಾ. ಅಂಬೇಡ್ಕರರ ತಿದ್ದುಪಡಿಗಳಿಗೆ, ನಿಯಮಿತ ಬೆಂಬಲ ನೀಡಿ ನಾವು ಭಾರತವಾಸಿಗಳು. ಒಂದು ಪ್ರಮುಖ ಅಧ್ಯಾಯದ ಕೊನೆಯ ಹಂತ ತಲುಪಿದ್ದೇವೆ. ನಮಗೆ ವಹಿಸಿದ ದೀರ್ಘ, ಸಾಹಸಮಯ ಕಾರ್ಯವನ್ನೂ ಪೂರೈಸಿದ್ದೇವೆ.

* * *

**ಶ್ರೀ ದಾಮೋದರ ಸ್ವರೂಪ** (ಯು.ಪಿ.ಸಾಮಾನ್ಯ): ಅಧ್ಯಕ್ಷರೆ, ಎರಡನೆ ವರದಿ ವಾಚನವು ಮುಗಿದಿದ್ದು,

ಮೂರನೆಯ ವರದಿ ವಾಚನವೂ ಮೂರು ನಾಲ್ಕು ದಿನಗಳಲ್ಲಿ ಮುಕ್ತಾಯವಾಗುವುದು. ಅದಾದ ನಂತರ ಈ ಸಂವಿಧಾನವನ್ನು ಚರಿತ್ರಾರ್ಹ ದಿನವಾದ ಜನವರಿ ೨೬ ರಂದು ಜಾರಿಯಲ್ಲಿ ಬರುವುದು. ಈ ಎಲ್ಲಾ ಶುಭಕಾರ್ಯಕ್ಕೆ ಡಾ. ಅಂಬೇಡ್ಕರ್ ಹಾಗೂ ರಚನಾ ಸಮಿತಿಯ ಅವರ ಸಹೋದ್ಯೋಗಿಗಳು ಅಭಿನಂದನೀಯರು. ಏಕೆಂದರೆ ಅವರು ಈ ಕಾರ್ಯಕ್ರಮಕ್ಕಾಗಿ ಅಗಾದ ಪರಿಶ್ರಮ....

**ಶ್ರೀ ಟಿ. ಪ್ರಕಾಶಂ** (ಮದ್ರಾಸ್ ಸಾಮಾನ್ಯ): ಸಂವಿಧಾನ ಒಂದು ವಿಶೇಷ ದಾಖಲೆ. ಇದನ್ನು ರಚಿಸಿದ ಸ್ನೇಹಿತರಾದ ಓರ್ವ ಮಹಾನ್ ನ್ಯಾಯವಾದಿ ಹಾಗೂ ಸಮರ್ಥ ಪುರುಷ. ಅವರು ತಮಗೆ ನೀಡಿದ ಈ ಕಾರ್ಯದಿಂದ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿ ತಾವು ಬ್ರಿಟಿಷ್ ರಾಜನ ನ್ಯಾಯಮಂಡಳಿ ಸದಸ್ಯನಾಗಬಲ್ಲ ಅರ್ಹತೆಯನ್ನು ಹೊಂದಿರುವ ಬಗೆಗೆ ಸಿದ್ಧಿ ಮಾಡಿ ತೋರಿಸಿದ್ದಾರೆ. ಅವರೀಗ ಅರ್ಹರಾಗಿದ್ದಾರೆ. ಆದರೆ ಭಾರತವು ಈ ಮಾದರಿಯ ಸಂವಿಧಾನವನ್ನು ಅಪೇಕ್ಷಿಸಿರಲಿಲ್ಲ. ಮಹಾತ್ಮ ಗಾಂಧೀಜಿ ಅವರು ಕಾಂಗ್ರೆಸ್ ನೇತೃತ್ವವನ್ನು ವಹಿಸಿಕೊಂಡಾಗ ಈ ದೇಶಕ್ಕೆ ಯಾವ ವಿಧವಾದ ಸಹಾಯ ಬೇಕಾಗಿದೆ, ಅದರಿಂದ ಭಾರತದ ಮಿಲಿಯನ್ ಜನತೆಗೆ ಹೇಗೆ ಸಹಾಯವಾಗಬಲ್ಲದು ಎಂದುದನ್ನು ಮನಗಂಡೇ ಅವರು ದೇಶವನ್ನು ಬಾಷಾವಾರು ಪ್ರಾಂತ್ಯಗಳಾಗಿ ವಿಂಗಡಿಸಿ, ಆಯಾ ಪ್ರದೇಶದ ಜನರು ತಮ್ಮ ಆಡಳಿತವನ್ನು ತಾವೇ ನಡೆಸಿಕೊಂಡು ಹೋಗಬೇಕೆಂದೇ ಬಯಸಿದ್ದರು....

* * *

**ಶ್ರೀ ಶಿಬ್ಬನ್‌ಲಾಲ್ ಸಕ್ಸೇನಾ:** ನಾನು, ಈ ಸಂವಿಧಾನದ ಬಗೆಗೆ ಮಾಡಿರಬಹುದಾದ ಟೀಕೆಗಳು, ನಾವು ಈ ಮೂರು ವರ್ಷಗಳಲ್ಲಿ ಸಾಧಿಸಿದ ಕಾರ್ಯದ ಬಗೆಗೆ ನನ್ನನ್ನು ಕುರುಡಾಗಿಸಿಲ್ಲ. ಹಾಗೆ ಹೇಳಬಹುದಾದರೆ ಈ ಮಹಾನ್ ಸಂವಿಧಾನವನ್ನು ಸಿದ್ಧಪಡಿಸಿರುವುದೇ ನಮ್ಮ ಮೂರು ವರ್ಷದ ಮಹಾಸಾಧನೆ ಎಂದೇ ಹೇಳಬಹುದು. ಸ್ವಾತಂತ್ರ್ಯ ಅರುಣೋದಯದ ಅವಧಿಯಲ್ಲಿ ಬ್ರಿಟಿಷರು ನಿರ್ಮಿಸಿದ ಆತಂಕಗಳಾದ ಅಲ್ಪಸಂಖ್ಯಾತರ ದೇಶೀಯ ರಾಜ ಮಹಾರಾಜರ ಹಾಗೂ ಸಮರ್ಥನೀಯವಾಗಿ ಪರಿಹಾರ ಕಂಡುಕೊಂಡಿರುವುದು ಕಡಿಮೆ ಸಾಧನೆಯಲ್ಲ. ಸಂವಿಧಾನ ರಚನೆಗೆ ಕಾಲ ವಿಳಂಬವಾದುದು ಒಂದು ವಿಧವಾಗಿ ಉತ್ತಮ ಫಲಕ್ಕೆ ಆಸ್ಪದ ದೊರೆತಂದಾಗಿ, ಭಾರತದ ೫೬೬ ದೇಶೀಯ ರಾಜ್ಯಗಳನ್ನು ವಿವಿಧ ಪ್ರಾಂತ್ಯಗಳಲ್ಲಿ ವಿಲೀನಗೊಳಿಸಲಾಯಿತು. ಇದೊಂದೇ ಮಹಾಸಾಧನೆ ಎಂದರೆ ತಪ್ಪಾಗಲಾರದು.

**ರೆವರೆಂಡ್ ಜೆ. ಜೆ. ನಿಕೋಲ್ಸ್‌ರಾಯ್** (ಅಸ್ಸಾಮ್, ಸಾಮಾನ್ಯ): ಮಾನ್ಯರೆ, ಡಾ. ಅಂಬೇಡ್ಕರರು ಮಂಡಿಸಿದ ಕರಡುಪ್ರತಿಯನ್ನು ಈ ಸದನವು ಅಂಗೀಕರಿಸಿದ್ದನ್ನೂ ಅನುಮೋದಿಸಲು ನನಗೆ ತುಂಬಾ ಹೆಮ್ಮೆ ಹಾಗೂ ಸಂತಸದ ವಿಷಯವಾಗಿದೆ. ನನಗೆ ತಿಳಿದಂತೆ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಸಂವಿಧಾನವು ವಿಶ್ವದಲ್ಲಿಯ ಸಂವಿಧಾನಗಳಲ್ಲಿಯೇ ಉತ್ಕೃಷ್ಟವಾಗಿದೆ. ಸಂವಿಧಾನದಲ್ಲಿ ಹಲವಾರು ಲೋಪದೋಷಗಳಿದ್ದರೂ ಇಂದಿನ ಪರಿಸ್ಥಿತಿಯಲ್ಲಿ ಒಂದು ಉತ್ತಮ ಸಂವಿಧಾನವನ್ನು ಸಿದ್ಧಪಡಿಸಿದ್ದೇವೆ. ಈ ದಿಶೆಯಲ್ಲಿ ನಾನೂ ನನ್ನ ಅಲ್ಪ ಪಾತ್ರ ವಹಿಸಿದ್ದೇನೆ. ಸಂಪೂರ್ಣ ದೇಶದ ಜನತೆಯು, ಸಲಹೆ ಹಾಗೂ ಟೀಕೆಗಳಿಂದ ಈ ಮಹಾನ್ ಕಾರ್ಯದಲ್ಲಿ ಭಾಗೀದಾರರಾಗಿದ್ದಾರೆ. ಎರಡು ವರ್ಷಗಳ ಹಿಂದೆಯೇ ಈ ಸಂವಿಧಾನದ ಕರಡುಪ್ರತಿಯನ್ನು ದೇಶದ ಮುಂದೆ ಮಂಡಿಸಿದ್ದು ಎಲ್ಲರೂ ಇದರಲ್ಲಿ ಆಸಕ್ತಿ ವಹಿಸಿರುವುದು ಪ್ರಶಂಸನೀಯ. ಹೀಗಾಗಿ ಈ ಸಂವಿಧಾನವು ಜನತೆಯಿಂದಲೇ ಸಿದ್ಧಪಡಿಸಲಾಗಿದೆ ಎಂದರೆ ತಪ್ಪಾಗಲಾರದು.

ನಾನು ಆರನೆಯ ಪರಿಚ್ಛೇದದ ಬಗೆಗೆ ಹೇಳಬಹುದಾದರೆ, ನಾನು ವ್ಯಕ್ತಿಗತವಾಗಿ, ಡ್ರಾಫ್ಟ್‌ಮ್ಯಾನ್

ಎಸ್. ಎನ್. ಮುಖರ್ಜಿಯವರಿಗೆ ಋಣಿ. ಬಿ.ಎನ್.ರಾವ್ ಹಾಗೂ ಡಾ.ಅಂಬೇಡ್ಕರರು ಈ ಪರಿಚ್ಛೇದದ ಬಗೆಗೆ ವಿಶೇಷ ಸಲಹೆ ನೀಡಿದ್ದಕ್ಕೂ ಋಣಿ. ರಚನಾ ಸಮಿತಿಯು ನನಗೆ ಮಾತನಾಡಲು ಆಸ್ಪದ ನೀಡಿದ್ದಕ್ಕೆ ನಾನು ಅವರಿಗೆಲ್ಲಾ ಋಣಿಯಾಗಿರುವೆ.

**ಡಾ. ರಘುವೀರ** (ಸಿ.ಪಿ.ಬೀರಾರ್: ಸಾಮಾನ್ಯ): ಈ ಸಂವಿಧಾನ ಕೇವಲ ವಿದೇಶೀ ಆದರ್ಶಗಳಿಂದ ಕೂಡಿದೆ. ಇದರಲ್ಲಿ ಭಾರತೀಯ ಆದರ್ಶಗಳೇ ಇಲ್ಲ. ಕೆಲವು ಕಾಲ ಈ ಸಂವಿಧಾನ ಜಾರಿಯಲ್ಲಿದ್ದು ನಂತರ ಅಪ್ಪಟ ಭಾರತೀಯ ಅಂಶಗಳನ್ನು ಪಡೆಯುತ್ತದೆ. ಆಗ ಅದು ಜನತೆಯ ಆಶೋತ್ತರಗಳನ್ನು ಪೂರೈಸಬಲ್ಲದು.

**ಶ್ರೀ ಕೆ.ಸಂತಾನಮ್:** ಹಿಂದಿರುಗಿ ಗಮನಿಸಿದಾಗ ನಾವು ಕಳೆದ ಮೂರು ವರ್ಷಗಳು ಅಧಿಕವಲ್ಲವೆಂದೇ ಹೇಳಬಹುದಾಗಿದೆ. ಈ ಅವಧಿಯು ನಮ್ಮ ಸಂವಿಧಾನವನ್ನು ಸಂಪೂರ್ಣಗೊಳಿಸಲು ಅನುವು ಮಾಡಿತು. ನಾವು ಈ ಕಾರ್ಯವನ್ನು ಎರಡು ವರ್ಷಗಳಲ್ಲಿಯೇ ಸಂಪೂರ್ಣಗೊಳಿಸಬಹುದಾಗಿತ್ತು. ಈ ಸಂವಿಧಾನಕ್ಕೆ ಹಲವಾರು ಟೀಕೆಗಳಿವೆ. ನನ್ನ ಮಿತ್ರರಾದ ನಜ್ಹೀರುದ್ದೀನ್ ಅಹ್ಮದ್ ಅವರು ರಚನೆಯ ಬಗೆಗೆ ದೂರಿದ್ದಾರೆ. ಆದರೆ ಸಂವಿಧಾನವನ್ನು ಸಂಪೂರ್ಣವಾಗಿ ಅವಲೋಕಿಸಿದಾಗ, ನಾವು ಸರಿಯಾದ ಸಂವಿಧಾನವನ್ನೇ ಸಿದ್ಧಗೊಳಿಸಿದ್ದೇವೆ.

* * *

**ಸರದಾರ್ ಭೂಪೇಂದ್ರ ಸಿಂಗ್ ಮಾನ್** (ಪೂರ್ವ ಪಂಜಾಬ್ ಸಿಖ್): ಈ ಸಂವಿಧಾನ ಸಜೀವ ಸಂವಿಧಾನವಲ್ಲ. ಏಕೆಂದರೆ ಇದು ಲಿಖಿತವಾದುದರಿಂದ ಅದೇ ಮಾನ್ಯತೆಯನ್ನು ಪಡೆಯುತ್ತದೆ. ಹಲವು ಕಾಲದ ನಂತರ ಹಲವಾರು ಸಂಪ್ರದಾಯಗಳು ಬೆಳೆದು ಬರಲೂಬಹುದು. ಹೀಗಾಗಿ ಸಂವಿಧಾನದಲ್ಲಿಯ ಭಾವನೆಗಳೇ ಪ್ರಧಾನ ಹೊರತು ಬರಹವಲ್ಲ. ಸಂವಿಧಾನದ ಭಾವನೆಯನ್ನು ನಮ್ಮ ಜನತೆ ಅರಿತು ಕಾರ್ಯಾಚರಣೆಗೆ ತಂದಾಗ ಆಡಳಿತದಲ್ಲಿ ನ್ಯಾಯ ದೊರೆಯುವುದರಲ್ಲಿ ಹಾಗೂ ಸಮಾಜದ ಆರ್ಥಿಕ ವ್ಯವಸ್ಥೆಯನ್ನು ಸ್ಥಿರಪಡಿಸುವಲ್ಲಿ ಫಲ ದೊರೆಯಬಹುದು.

**ಖಾಜಿ ಸಯ್ಯದ್ ಕರೀಂವುದ್ದೀನ್** (ಸಿ. ಪಿ. ಬೀರಾರ್: ಮುಸ್ಲಿಂ): ಅಧ್ಯಕ್ಷರೆ, ನಾನು ರಚನಾ ಸಮಿತಿಯ ಸದಸ್ಯರನ್ನು ಅವರು ಮಾಡಿದ ಅಗಾಧ ಕಾರ್ಯಕ್ಕಾಗಿ ಅಭಿನಂದಿಸುವೆ. ಅದರಂತೆಯೇ ನಜ್ಹೀರುದ್ದೀನ್ ಅಹ್ಮದ್ ಅವರನ್ನೂ ಅಭಿನಂದಿಸುವೆ. ಆದರೆ ಅವರಿಗೆ ರಚನಾ ಸಮಿತಿಯಿಂದ ಅಭಿನಂದನೆ ದೊರೆಯಬೇಕಿತ್ತು. ನಾನು ವಿಶೇಷವಾಗಿ ಡಾ॥ ಅಂಬೇಡ್ಕರರು ತಮಗೆ ವಹಿಸಿದ ಕಾರ್ಯವನ್ನು ಸಮರ್ಥನೀಯವಾಗಿ ಸಂಪೂರ್ಣಗೊಳಿಸಿದ್ದಕ್ಕೆ ಅವರಿಗೆ ಅಭಿನಂದನೆಗಳು. ಅವರಿಗೆ ಅನೇಕ ತೊಂದರೆಗಳನ್ನು ಎದುರಿಸಬೇಕಾದ ಪರಿಸ್ಥಿತಿ ಬಂದಿರಬಹುದು. ನಾನೇ ಅವರಿಗೆ ಗೈರು ಕಾನೂನು ಶೋಧನೆಯ ತಿದ್ದುಪಡಿಯ ಬಗೆಗೆ ತೊಂದರೆ ನೀಡಿರುವೆ. ಈ ದಿಶೆಯಲ್ಲಿ ಆ ತಿದ್ದುಪಡಿ ಸದನದಲ್ಲಿ ಚರ್ಚೆಯಾಗಿ ನಂತರ ಬಿದ್ದುಹೋದುದು.

**ಶ್ರೀ ಶಂಕರರಾವ್ ದೇವ್** (ಬೊಂಬಾಯಿ:ಸಾಮಾನ್ಯ): ನಾವು ಸಂವಿಧಾನ ರಚನಾ ಸಮಿತಿಗೆ ಸಂವಿಧಾನ ಪಂಡಿತರು ಹಾಗೂ ಸಂವಿಧಾನದ ಬಗೆಗೆ ನುರಿತ ನ್ಯಾಯವಾದಿಗಳನ್ನೇ ನೇಮಿಸಬೇಕೆಂಬ ಹಿರಿಯಾಸೆ ಹೊಂದಿದ್ದೆವು. ಡಾ. ಅಂಬೇಡ್ಕರರು ಹಾಗೂ ಅವರ ಸಹೋದ್ಯೋಗಿಗಳು ನಮ್ಮ ಆಶೋತ್ತರವನ್ನು ಸಫಲಗೊಳಿಸಿದ್ದಾರೆ. ಅವರು ವಿಶ್ವದ ಯಾವ ಸಂವಿಧಾನಕಾರರಿಗಿಂತ ಕಡಿಮೆ ಇಲ್ಲವೆಂದೇ ಹೇಳುವೆ....

* * *

**ಸಯ್ಯದ್ ಮಹಮದ್ ಸಾಧುಲ್ಲಾ** (ಅಸ್ಸಾಂ, ಮುಸ್ಲಿಂ): ಮಾನ್ಯರೇ, ಮಾತು ಬೆಳ್ಳಿ, ಮೌನ ಬಂಗಾರವೆಂದು ಹೇಳಲಾಗಿದೆ. ಈಗ ಈ ಸದನವು ಮೌನವಾಗಿದ್ದರೇ ಉತ್ತಮವೇನೋ ಎಂದು ಹೇಳಬಯಸುವೆ.

ನಾನು ಈ ದಿನ ನನ್ನ ದ್ವಿಮುಖ ವ್ಯಕ್ತಿತ್ವವನ್ನು ಹೇಳದೇ ಇರಲಾರೆ. ಒಂದೆಡೆ ನಾನು ಈ ಮಹಾಸಭೆಯ ಸದಸ್ಯನಾಗಿದ್ದರೆ ಮತ್ತೊಂದೆಡೆ ರಚನಾ ಸಮಿತಿಯ ಸದಸ್ಯನಾಗಿಯೂ ಇರುವೆ. ನಾವು ಕಳೆದ ಎರಡು ವರ್ಷಗಳಿಂದಲೂ ರಚನಾ ಸಮಿತಿಯ ಸದಸ್ಯರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಅನೇಕರು ನಮ್ಮ ಕಾರ್ಯವನ್ನು ಹೊಗಳಿರುವುದರಿಂದ ನಾನು ಅವರಿಗೆಲ್ಲಾ ನನ್ನ ಹಾಗೂ ಸಮಿತಿಯ ಪರವಾಗಿ ಋಣಿ. ನಾನು ನಮ್ಮ ಕಾರ್ಯವನ್ನು ಟೀಕಿಸಿದವರಿಗೂ ಋಣಿ. ಏಕೆಂದರೆ ಅವರು ವಿವೇಕಯುತವಾದ ಸಲಹೆಗಳನ್ನು ನೀಡಿದ್ದಾರೆ.

ಆದರೆ ಸಂಯಮದಿಂದ ಒಂದು ಸಂಗತಿ ನಾನು ಹೇಳಲೇಬೇಕು. ಅದೇನೆಂದರೆ ಅವರು ದೋಷಪೂರಿತ ದೃಷ್ಟಿಯಿಂದ ಹಾಗೂ ವಿಭಿನ್ನ ವಿಕಲ್ಪನೆಗಳಿಂದ ಕೂಡಿದ ಮನೋಭಾವನೆಯಿಂದ ಟೀಕಿಸಿದ್ದಾರೆ.

ಮಾನ್ಯರೇ, ರಚನಾ ಸಮಿತಿ ಸರ್ವ ಸ್ವತಂತ್ರವಾಗಿಲ್ಲ. ಅದು ಅನೇಕ ತೊಂದರೆಗಳನ್ನು ಮೊದಲಿನಿಂದಲೇ ಎದುರಿಸಬೇಕಾಗಿ ಬಂದಿತು. ನಾವು ನಮಗೆ ನೀಡಿದ ಮಗುವನ್ನು ಸಿಂಗರಿಸುವ ಕಾರ್ಯವನ್ನೇ ಮಾಡಬೇಕಾದ ಪ್ರಸಂಗ. ಏಕೆಂದರೆ ನಮಗೆ ನೀಡಿದ ಮಗುವಾದ ಸಂವಿಧಾನವನ್ನು, ಅದರ ಉದ್ದೇಶಗಳಿಂದ ಬಿಗಿದು ಹಾಕಲಾಗಿದ್ದು, ನಾವು ಸದನದ ಉದ್ದೇಶನೀಯ ಗೊತ್ತುವಳಿಯನ್ನು ಮೀರುವಂತಿರಲಿಲ್ಲ. ಹೀಗಾಗಿ ನಾವು ಆ ಇತಿಮಿತಿಯಲ್ಲಿಯೇ ಕಾರ್ಯ ಮಾಡಿದ್ದೇವೆ. ಉದ್ದೇಶ ಗೊತ್ತುವಳಿ ಚೌಕಟ್ಟನ್ನು ಮೀರಿ ಹೋಗದಂತೆ ನಾವು ನಡೆದಿದ್ದೇವೆ. ನಾವು ಕೇವಲ ಏಳು ಸದಸ್ಯರ ಅಭಿಪ್ರಾಯವನ್ನು ಈ ಸದನದ ಮಿಕ್ಕ ೩೦೮ ಸದಸ್ಯರ ಮೇಲೆ ಹೇರುವ ಸಾಹಸಕ್ಕೆ ಕೈ ಹಾಕಲಾಗುವುದೇ?

ಮಾನ್ಯರೆ, ಮನೋವಿಜ್ಞಾನದ ಒಂದು ಸೂತ್ರದಂತೆ ಮಾನವನು ಪರಿಸರದ ಕೈಕೂಸು. ಆದುದರಿಂದ ಸಾರ್ವತ್ರಿಕ ಅಭಿಪ್ರಾಯವನ್ನೇ ನಾವು ರಚನಾ ಸಮಿತಿಯ ಸದಸ್ಯರೂ ಬೆಂಬಲಿಸಿದ್ದೇವೆ. ಹೀಗಾಗಿ ಇದರಲ್ಲಿ ಈ ಸಮಿತಿಯ ಸದಸ್ಯರ ಅಭಿಪ್ರಾಯಗಳ ಪ್ರಶ್ನೆಯೇ ಉದ್ಭವಿಸಲಾರದು. ಅಲ್ಲದೆ ಅದು ಪ್ರಜಾಸತ್ತಾತ್ಮಕಕ್ಕೆ ವಿರೋಧ.

ಮಾನ್ಯರೆ, ನನಗೆ ತಿಳಿದಂತೆ ಕರುಡು ಮಸೂದೆಯ ಅನೇಕ ಪ್ರಕರಣಗಳನ್ನು ಸಮಿತಿಯು ಪುನಾರಚನೆ ಮಾಡಿರಬಹುದು. ಆದರೆ ಅದನ್ನು ಹಂತಹಂತವಾಗಿ ಸದಸ್ಯರ ಸಮ್ಮುಖಕ್ಕೆ ತಂದು, ಅವರು ನೀಡಿದ ಸಲಹೆ, ಟೀಕೆ ಟಿಪ್ಪಣಿಗಳನ್ನು ಅದರಲ್ಲಿ ಅಳವಡಿಸಿ ಮತ್ತೊಮ್ಮೆ ಅವರ ಅವಗಾಹನೆಗೆಂದು, ಅವರು ಒಪ್ಪಿದ ನಂತರವೇ ಅದಕ್ಕೆ ಅಸ್ತು ಎಂದು ಹೇಳಿದೆ. ಇದನ್ನು ಬಹುಮತ ಪಕ್ಷವಾದ ಕಾಂಗ್ರೆಸ್‌ನ ಅನುಮತಿಯನ್ನು ಪಡೆದ ನಂತರವೇ ಸ್ವೀಕರಿಸಿದೆ.

ಮಾನ್ಯರೇ, ಮಾನವನಿಂದ ಸಿದ್ಧಪಡಿಸಿದ ಯಾವುದೇ ಸಂವಿಧಾನವು ಲೋಪ–ದೋಷಗಳಿಂದ ಮುಕ್ತವಾಗಿರಲಾರದು. ನಾನೇ ರಚನಾ ಸಮಿತಿಯ ಸದಸ್ಯನಾಗಿ, ಎಷ್ಟೋ ವಿಷಯಗಳ ಬಗೆಗೆ ಅಸಮ್ಮತಿಯನ್ನು ಹೊಂದಿರುವೆ. ಆದರೆ ಬಹುಮತದಿಂದ ಬೆಂಬಲಿಸಲಾದ ಸಂಗತಿಯನ್ನು ಅಲ್ಲಗೆಳೆಯಲಾಗದು. ಆದರೂ ನಾನು ಈ ಸಂವಿಧಾನವನ್ನು ಜಾರಿಯಲ್ಲಿ ತರಲು ಬೇರೆಯವರಂತೆ ನನ್ನ ಹೊಣೆಗಾರಿಕೆಯನ್ನು ಅಲ್ಲಗೆಳೆಯಲಾರೆ.

* * *

**ಸಯ್ಯದ್ ಮಹಮದ್ ಸಾಧುಲ್ಲ:** ಮಾನ್ಯರೆ, ಎರಡು ಶತಮಾನಗಳ ದಾಸ್ಯದ ನಂತರ ನಾವು

ನಮ್ಮದೇ ಆದ ಒಂದು ಸಂವಿಧಾನವನ್ನು ಸಿದ್ಧಪಡಿಸಿದ್ದೇವೆ. ಈ ಒಂದು ಭಾವನೆಯೇ ನಮ್ಮನ್ನು ಪುಲಕಿತಗೊಳಿಸುತ್ತದೆ. ಆದರೂ ನಾವು ನಮ್ಮ ಎದೆಯ ಮೇಲೆ ಕೈ ಇರಿಸಿ ನಾವು ಸಿದ್ಧಪಡಿಸಿದ ಸಂವಿಧಾನವು ಸಂಪೂರ್ಣ ದೋಷಮುಕ್ತ ಎಂದು ಹೇಳಲಾರೆವು. ನಾವು ಸಿದ್ಧಪಡಿಸಿದ ಈ ಸಂವಿಧಾನವು ಇನ್ನೆರಡು ತಿಂಗಳಲ್ಲಿ ಜಾರಿಯಾಗುವುದು. ಇದು ಒಂದು ಮಾದರಿಯ ರಾಜೀ ಸಂವಿಧಾನವೆಂದೇ ಹೇಳಬಹುದು. ಮಾನ್ಯರೆ, ನನ್ನ ಆಕಾಂಕ್ಷೆಯಂತೆ ಮುಂದಿನ ಶಾಸಕರು ಅದನ್ನು ಹೆಚ್ಚು ಉತ್ತಮಗೊಳಿಸಬಹುದು. ಖೀರಿನ ಸ್ವಾದ ಅದರ ಸೇವನೆಯಿಂದ ತಿಳಿದುಬರುವಂತೆ, ಈ ಸಂವಿಧಾನವನ್ನು ಜನತೆಯು ಸ್ವೀಕರಿಸಲೂಬಹುದು. ತಿರಸ್ಕರಿಸಲೂಬಹುದು. ಇದರ ಕಾರ್ಯಾಚರಣೆಯ ಮೇಲೆ ಅವಲಂಬಿಸಿದೆ. ಹೀಗಾಗಿ ನಮ್ಮ ಜನತೆಯ ಜಾಣ್ಮೆ ಹಾಗೂ ಆವಶ್ಯಕತೆಗಳನ್ನು ಪೂರೈಸುವಲ್ಲಿ, ನಾವು ಸಿದ್ಧಪಡಿಸಿದ ಪೂರ್ವಪೀಠಿಕೆಯ ಭಾವನೆ ಹಾಗೂ ಸತ್ವವನ್ನು ಅನುಸರಿಸಿದರೆ ಉತ್ತಮ. ಇದು ನಮ್ಮ ಸಂವಿಧಾನವನ್ನು ಆದರ್ಶ ಸಂವಿಧಾನದ ಮಟ್ಟಕ್ಕೆ ತಲುಪಿಸುತ್ತದೆ.

ಹೀಗಾಗಿ ನಾವೆಲ್ಲರೂ ನಮ್ರತೆಯ ಭಾವನೆಯಿಂದ, ಜನತೆಯ ಸಮ್ಮತಿಯಿಂದ ಸಿದ್ಧಪಡಿಸಿದ ಈ ಸಂವಿಧಾನದ ಪೂರ್ವಪೀಠಿಕೆಯನ್ನು ಆಚರಿಸಿ ಅದರಲ್ಲಿ ಹೇಳಲಾದ ಸಾಮಾಜಿಕ ನ್ಯಾಯ ಹಾಗೂ ವಿಶ್ವ ಭ್ರಾತೃತ್ವಕ್ಕೆ ಎಡೆ ಮಾಡಿದಲ್ಲಿ ನಮ್ಮ ಸಂವಿಧಾನ ಸ್ವರ್ಗದ ತೋಟದ ಕುಸುಮವಾಗಬಲ್ಲದು.

**ಶ್ರೀ ಹೆಚ್. ಜೆ. ಖಾಂಡೇಕರ್** (ಸಿ.ಪಿ.ಬೀರಾರ್: ಸಾಮಾನ್ಯ): ಮಾನ್ಯರೆ, ನಾನು ಡಾ. ಅಂಬೇಡ್ಕರರು ಮಂಡಿಸಿದ ಗೊತ್ತುವಳಿಯನ್ನು ಬೆಂಬಲಿಸಲೆಂದೇ ನಿಂತಿರುವೆ... ನಾನು ರಚನಾ ಸಮಿತಿಯವರನ್ನು ತುಂಬುಹೃದಯದಿಂದ ಅಭಿನಂದಿಸುವೆ. ಅಂತೆಯೇ ಜಿ.ಜಿ. ಅವರ ಪರಮ ಭಕ್ತರಾದ ಪಂಡಿತ್ ಹೆಚ್. ವಿ. ಕಾಮತ್ ಅವರನ್ನೂ ಅಭಿನಂದಿಸುವೆ.

ಈ ಶುಭದಿನದಂದು ನಾವು ಸ್ವತಂತ್ರ ಭಾರತದ ಸಂವಿಧಾನವನ್ನು ವಿವೇಕಿಯಾದ ಡಾ॥ ಅಂಬೇಡ್ಕರ್‌ರ ಅಧ್ಯಕ್ಷತೆಯಲ್ಲಿ ಸಿದ್ಧಪಡಿಸಿದ್ದೇವೆ. ನನ್ನ ಹೇಳಿಕೆಯಂತೆ ನಾನು ಈ ಸಂವಿಧಾನವನ್ನು ಮಹಾನ್ ಶಾಸನವೆಂದೇ ಕರೆಯುವೆ. ಏಕೆಂದರೆ ಡಾ. ಅಂಬೇಡ್ಕರರು ಮಹಾರ್ ಜನಾಂಗದವರು. ಹೀಗಾಗಿ ನಾವು ಈ ಸಂವಿಧಾನವನ್ನು ಜನವರಿ ೨೬ ರಂದು ೧೯೫೦ ಜಾರಿಗೆ ತಂದಾಗ ಮನುವಿನ ಶಾಸನದಡಿಯಲ್ಲಿ ಯಾವ ವಿಕಾಸವನ್ನೇ ಪಡೆಯದೇ ಹೋದ ನಾವು, ಮಹಾರ್ ಶಾಸನದಡಿಯಲ್ಲಿ ಸ್ವರ್ಗಭೋಗವನ್ನು ಕಾಣುವಾ....

**ಮೆಹಬೂಬ್ ಆಲೀಬೇಗ್ ಸಾಹೇಬ್** (ಮದ್ರಾಸ್, ಮುಸ್ಲಿಂ): ಮಾನ್ಯರೆ, ತಾವು ಅಧ್ಯಕ್ಷತೆಯನ್ನು ವಹಿಸಿ ಘನತೆ ಹಾಗೂ ಗಾಂಭೀರ್ಯದಿಂದ ಈ ಸಭೆಯ ಕಾರ್ಯಕಲಾಪಗಳನ್ನು ಜರುಗಿಸಿದ್ದಕ್ಕೆ ತಮಗೆ ನನ್ನ ಅಭಿನಂದನೆಗಳು. ಇದನ್ನು ನಾನು ಕೇವಲ ಔಪಚಾರಿಕ ಅಥವಾ ಸಂಪ್ರದಾಯಕ್ಕೆ ಕಟ್ಟುಬಿದ್ದು ಹೇಳುವ ಮಾತಲ್ಲ. ಇದರಂತೆಯೇ ನಾನು ಡಾ. ಅಂಬೇಡ್ಕರರನ್ನೂ ಅಭಿನಂದಿಸುವೆ. ನಮ್ಮಂಥ ಹಲವರು, ಬಹುಮತದ ರಾಜಕೀಯ ಪಕ್ಷಕ್ಕೆ ಸೇರಿರದೇ ಹೋದರೂ, ನಮಗೆ ನಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಆಸ್ಪದ ನೀಡಿದ್ದಕ್ಕೆ ನಾನು ನಿಮಗೆ ಋಣಿ. ಅಂಬೇಡ್ಕರರು ತಮ್ಮ ಚಾಣಾಕ್ಷ ದೃಷ್ಟಿಯಿಂದ ಎಲ್ಲ ವಿಷಯವನ್ನೂ ಸಂಗ್ರಹಿಸಿ, ಸಮರ್ಪಕವಾಗಿ, ಸಮಗ್ರವಾಗಿ ಈ ಕಾರ್ಯವನ್ನು ಮುಗಿಸಿದ್ದಾರೆ. ಅವರಿಗೆ ಹೃದಯಪೂರಕವಾದ ವಂದನೆಗಳು. ಇಂದು, ನಮ್ಮೆದಿರು ಇರುವ ಸಂವಿಧಾನದಲ್ಲಿರಬಹುದಾದ ಲೋಪ ದೋಷಗಳು ಪರಿಸರದಿಂದ ಉದ್ಭವಿಸಿರಬಹುದಾದ ಅಡಚಣೆ ಎಂದೇ ಹೇಳುವೆ. ಅಲ್ಲದೆ ಡಾ. ಅಂಬೇಡ್ಕರರು ಬಂದ ಹಿನ್ನೆಲೆಯ ಲೋಪ ದೋಷಗಳಿಗೆ ನಾವು ಅವರನ್ನು ಹೊಣೆ ಮಾಡಲಾಗದು...

* * *

**ಶ್ರೀ ಎಸ್.ಎಂ.ಘೋಷ್** (ಪ.ಬಂಗಾಲ: ಸಾಮಾನ್ಯ): ನಾನು ಈ ಸದನದಲ್ಲಿ ಮನುವಿನ ಬಗೆಗೆ ಹಲವಾರು ಬಾರಿ ಕೇಳಿರುವೆ. ಆದರೆ ನಿಜವಾಗಿ ಹೇಳಬೇಕೆಂದರೆ ಮನು ಯಾರು ಎಂಬ ಸಂಗತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಡಾ. ಅಂಬೇಡ್ಕರ್‌ರು ತಾವು ಮನು ಅಲ್ಲ ಕೇವಲ ಮಹಾರನೆಂದು ಶಾಸನ ನೀಡುತ್ತಿರುವುದಾಗಿ ಹೇಳಿದ್ದಾರೆ. ಆದರೆ ಮನು ಬ್ರಾಹ್ಮಣನೇ ಅಥವಾ ಮಹಾರನೇ ಎಂಬ ಬಗೆಗೆ ಏನೂ ತಿಳಿಯದು. ಮನು ಭಾರತೀಯ ಜನರ ಕಲ್ಪನೆಗಳ ಪ್ರತಿನಿಧಿಯಾಗಿದ್ದನು. ಅವನು ಮಾನವರಿಗೆ ಆದರ್ಶಪ್ರಾಯವಾದ ಶಾಸನ ನೀಡಿದ್ದಾನೆ. ಈ ಒಂದು ಭಾವನೆಯಂತೆ ಡಾ. ಅಂಬೇಡ್ಕರರನ್ನೂ 'ಮನು' ಎಂದೇ ಕರೆಯಲಾಗಿದೆ. ಆದುದರಿಂದ ಕಾನೂನನ್ನು ರಚಿಸುವವರೆಲ್ಲರನ್ನೂ ಈ ಒಂದು ಪಂಕ್ತಿಯಲ್ಲಿ ಸೇರಿಸಲಾಗದು. ಯಾರು ಋಷಿ ದೃಷ್ಟಿಯಿಂದ ಶಾಸನಗಳನ್ನು ಪರಿಷ್ಕರಿಸಿ, ಕ್ರೋಡೀಕರಿಸುವರೋ ಅವರಿಗೆ ಪ್ರೇರಣೆ ದೊರೆಯುತ್ತದೆ. ಹೀಗಾಗಿ ಯಾರು ಯಾವ ಜನಾಂಗ ಅಥವಾ ವರ್ಗದಿಂದ ಬಂದಿದ್ದಾರೆ ಎಂಬುದು ಗೌಣ ವಿಷಯ. ಅವರಿಗೆ ಪ್ರಮುಖವಾಗಿರ ಬೇಕಾದುದು ಅಂತಃಪ್ರೇರಣೆ. ಹೀಗಾಗಿ ಈ ವಿಶಾಲ ದೃಷ್ಟಿಯನ್ನು ಪಡೆದವನೇ ಮನು.

**ಶ್ರೀ ಪಿ.ಜೆ.ಚಾಕೋ** (ಸಂಯುಕ್ತ ತಿರುವಾಂಕೂರು ಮತ್ತು ಕೊಚ್ಚಿನ್): ನನಗೆ ತಿಳಿದಂತೆ, ಸಂವಿಧಾನದ ಯಶಸ್ಸು ಜನರ ಅರಿವು ಹಾಗೂ ಅವರು ಜೀವಿಸಿರುವ ಕಾಲದ ಮೇಲೆ ಆಧಾರವಾಗಿದೆಯೇ ಹೊರತು ನಾವು ಅಳವಡಿಸುವ ವಿಷಯಗಳ ಮೇಲೆ ಅಲ್ಲ. ಹೀಗಾಗಿ ನಾವು ಸಿದ್ಧಪಡಿಸಿದ ಸಂವಿಧಾನದಲ್ಲಿಯ ಲೋಪದೋಷಗಳೊಂದಿಗೆ ಅದನ್ನು ಜಾರಿಯಲ್ಲಿ ತಂದು ಯಶಸ್ವಿಗೊಳಿಸಬೇಕು. ಹಾಗಾಗಿ ನಾವೆಲ್ಲರೂ ಅಂಧಕೂಪದಿಂದ ಮುಕ್ತರಾಗಿ ಆ ಕಾರ್ಯ ಮಾಡೋಣ. ಈ ಒಂದು ಶುಭೋದಯವನ್ನು ಹಾರೈಸಿ ಎಲ್ಲ ರಾಜ್ಯಗಳಿಗೂ ಸಮಾನ ಅವಕಾಶ ನೀಡುವ ಒಂದು ತಿದ್ದುಪಡಿ ಮಾಡುವಲ್ಲಿ ನಮಗೆಲ್ಲಾ ಪ್ರೇರಣೆ ಒದಗಲಿ ಎಂದೇ ಹಾರೈಸುವೆ.

**ಸರದಾರ್ ಹುಕುಂ ಸಿಂಗ್** (ಪೂರ್ವ ಪಂಜಾಬ್, ಸಿಕ್): ಮಾನ್ಯರೆ, ನಾನು ನಮ್ಮ ಈ ಸದನದ ಅಧ್ಯಕ್ಷತೆಯನ್ನು ವಹಿಸಿ, ಶಾಂತ ರೀತಿಯಿಂದ ಎಲ್ಲಾ ಕಾರ್ಯ ರೂಪಗಳನ್ನು ನಡಿಸಿಕೊಟ್ಟ ಅಧ್ಯಕ್ಷರಿಗೆ ಆಭಾರಿಯಾಗಿರುವೆ. ಅದರಂತೆಯೇ ರಚನಾ ಸಮಿತಿ ಹಾಗೂ ಅದರ ಸದಸ್ಯರಿಗೂ ಅಭಿನಂದಿಸುವೆ. ಈ ಒಂದು ದೈತ್ಯಾಕಾರ ಕಾರ್ಯವನ್ನು ಸಂಪೂರ್ಣಗೊಳಿಸಿದ ಅವರು ಈಗ ಸಂತಸದಿಂದ ಇರುವರೆಂದೇ ನನ್ನ ಅಭಿಪ್ರಾಯ.

**ಶ್ರೀ ಎಸ್. ನಾಗಪ್ಪ** (ಮದ್ರಾಸ್, ಸಾಮಾನ್ಯ): ಮಾನ್ಯರೆ, ಅನೇಕರು ರಚನಾ ಸಮಿತಿ ಹಾಗೂ ಅದರ ಅಧ್ಯಕ್ಷರನ್ನು ಪ್ರಶಂಸಿಸಿದ್ದಾರೆ. ನಾನೂ ಅವರೊಂದಿಗಿದ್ದೇನೆ.

ಪರಿಶಿಷ್ಟ ವರ್ಗಗಳ ಆಶೋತ್ತರಗಳು, ನಾವು ಎಂದು ಡಾ. ಅಂಬೇಡ್ಕರರನ್ನು ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ಚುನಾಯಿಸಿದೆವೋ ಅಂದೇ ಪೂರೈಕೆ ಹೊಂದಿತು. ಏಕೆಂದರೆ ಅವರು ಪರಿಶಿಷ್ಟ ಜಾತಿಗಳ ಪ್ರಬಲವಾದಿಯಾಗಿದ್ದಾರೆ. ಅವರು ಚುನಾವಣೆಯಾಗಿದ್ದ ದಿನದಿಂದ ಈ ಸದನದ ಪರಿಶಿಷ್ಟ ವರ್ಗದ ಸದಸ್ಯರು, ತಮ್ಮ ಆಶೋತ್ತರಗಳು ತಾವೇ ಈಡೇರುವುವು ಎಂಬ ಮನೋಭಾವನೆಯನ್ನು ತಳೆದು ಆ ವಿಷಯದ ಬಗೆಗೆ ಅಧಿಕ ಆಸಕ್ತಿಯನ್ನೇ ತೋರಲಿಲ್ಲ ಎಂದರೆ ಅತಿಶಯೋಕ್ತಿ ಆಗಲಾರದು. ಇದೊಂದು ವಿಧವಾದ ಅಸಹಕಾರವೇ ಎಂದೂ ಹೇಳಬಹುದಾಗಿದೆ. ಈ ಒಂದು ವಿಷಯ ಡಾ. ಅಂಬೇಡ್ಕರ್‌ರು ಹೊಂದಿರುವ ಉಚ್ಚ ಸ್ಥಾನವನ್ನೇ ಸೂಚಿಸುತ್ತದೆ. ಅವರು ಪರಿಶಿಷ್ಟ ವರ್ಗಕ್ಕೆ ಸೇರಿದವರಾದರೂ, ಅವಕಾಶ ದೊರೆತಲ್ಲಿ ಆ ವರ್ಗದವರೂ ಯಾರಿಗೂ ಕಡಿಮೆಯಿಲ್ಲ ಎಂಬುದನ್ನು ಎತ್ತಿ ತೋರಿಸಿದ್ದಾರೆ. ಇದರಿಂದಾಗಿ

ದಲಿತರು ಅಧ್ಯಕ್ಷರು ಎಂಬ ಆಪಾದನೆಯಿಂದ ಮುಕ್ತಿ ಪಡೆದರೆಂದೇ ಹೇಳಬಹುದು. ಅವರು ಈ ಸಂವಿಧಾನವನ್ನು ಸಿದ್ಧಗೊಳಿಸುವಲ್ಲಿ ತಮ್ಮ ಬುದ್ಧಿವಂತಿಕೆ ಹಾಗೂ ಕಾರ್ಯದಕ್ಷತೆಯನ್ನು ಮೆರೆದಿದ್ದಾರೆ. ಇದರಿಂದ ದಲಿತರು ಕಲಂಕ ಮುಕ್ತರಾಗಿದ್ದಾರೆ. ನಾನು ಪರಿಶಿಷ್ಟ ವರ್ಗದವರ ಪರವಾಗಿ ಅವರನ್ನು ಮನಸಾರೆ ಅಭಿನಂದಿಸುವೆ. ಆದರೆ ಅವರು ಪರಿಶಿಷ್ಟ ವರ್ಗದ ಬೆಂಬಲದಿಂದ ಅಧ್ಯಕ್ಷರಾಗದೇ ಬಹುಮತ ಪಕ್ಷದ ಉದಾರ ಬೆಂಬಲದಿಂದ ಆಯ್ಕೆಯಾದರು. ಆದುದರಿಂದ ನಾನು ಅವರನ್ನೂ ಅಭಿನಂದಿಸುವೆ.

ನಾನು, ಈಗ ಈ ಸಂವಿಧಾನವು ಶ್ರೀಸಾಮಾನ್ಯರ ಉದ್ಧಾರ ಹಾಗೂ ಹಿತಕ್ಕೆ ಮೀಸಲಾಗಿದೆ ಎಂದು ಹೇಳುವೆ. ಏಕೆಂದರೆ ಇದು ಉದ್ದಿಮೆದಾರರ, ಪೂಂಜಿಪತಿಗಳ ಅಥವಾ ಭೂಮಾಲೀಕ ವರ್ಗದ ಜಮೀನ್ದಾರರ ಹಿತಾಸಕ್ತಿಯನ್ನು ರಕ್ಷಿಸದೆ, ಶ್ರೀಸಾಮಾನ್ಯನನ್ನೇ ತನ್ನ ಅಂತಿಮ ಗುರಿಯಾಗಿರಿಸಿಕೊಂಡಿದೆ. ಡಾ. ಅಂಬೇಡ್ಕರರು ಶ್ರೀಸಾಮಾನ್ಯ ವರ್ಗದಿಂದಲೇ ಬಂದಿರುವರು. ವಿಧಿ ೧೪೦ ರಿಂದ ೧೭ ಪರಿಶಿಷ್ಟ ವರ್ಗದವರಿಗೆ ವರಪ್ರಸಾದಗಳಂತಿವೆ. ವಿಧಿ ೧೪ ಸಕಲರಿಗೂ ಕಾನೂನಿನ ಸಮಾನತ್ವವನ್ನು ನೀಡಿರುವುದು ಅತಿ ಪ್ರಮುಖವಾದ ಅಂಶವಾಗಿದೆ.

**ಮಾನ್ಯ ಅಧ್ಯಕ್ಷರು:** ..................

**ಶ್ರೀ ಜಸ್ಪತ್‌ರಾಯ್ ಕಪೂರ್** (ಯು.ಪಿ.ಸಾಮಾನ್ಯ): ಡಾ. ಅಂಬೇಡ್ಕರರು ಹಾಗೂ ಅವರ ಸಹೋದ್ಯೋಗಿಗಳು ಸದನದ ಎಲ್ಲಾ ವರ್ಗಗಳ ಪ್ರಶಂಸೆಗೂ ಪಾತ್ರರು. ಆದರೆ ಆರಂಭದಲ್ಲಿ ನಾನು ಅಂಬೇಡ್ಕರರನ್ನು ತಪ್ಪಾಗಿ ತಿಳಿದಿದ್ದುದು ನನ್ನ ಪೂರ್ವ ಗ್ರಹಪೀಡಿತ ಮನೋಭಾವನೆ ಎಂದೇ ವಿಷಾದಿಸುವೆ. ಇದಕ್ಕೆ ಕಾರಣವೆಂದರೆ, ಪರಿಶಿಷ್ಟ ಜಾತಿಯವರಿಗೆ ವಿಶೇಷ ಮತದಾರರ ಕ್ಷೇತ್ರವನ್ನು ನಿರ್ಮಿಸುವುದನ್ನು ವಿರೋಧಿಸಿ, ಮಹಾತ್ಮಾ ಗಾಂಧಿಯವರು ಉಪವಾಸ ಕೈಕೊಂಡರು. ಆಗ ದಲಿತರ ಸಮಸ್ಯೆಯನ್ನು ಚರ್ಚಿಸಲೆಂದೇ ಅವರು ಅಂಬೇಡ್ಕರರಿಗೆ ಹೇಳಿ ಕಳಿಸಿದರು. ಆ ಸಮಯದಲ್ಲಿ ಅಂಬೇಡ್ಕರರು ತಮಗೆ ಸಮಯಾವಕಾಶವಿಲ್ಲ ಎಂದೇ ನುಡಿದರು. ಈ ಘಟನೆ ನನಗೆ ತುಂಬಾ ನೋವನ್ನುಂಟು ಮಾಡಿತು. ಆದರೆ ಈಗ ಅಂಬೇಡ್ಕರರು ಮಾಡಿದ ಕಾರ್ಯದಿಂದ ಅವರು ಹಿಂದೆ ಮಾಡಿದ ಪಾಪ ಕಾರ್ಯದಿಂದ ವಿಮುಕ್ತಿ ಪಡೆದಿರುವರು. ಅವರು ತಮ್ಮ ಈ ಒಂದು ಉತ್ಕೃಷ್ಟ ಕಾರ್ಯದಿಂದ ತಮ್ಮ ಹಿಂದಿನ ಎಲ್ಲ ಪಾಪಕೃತ್ಯಗಳಿಂದ ವಿಮೋಚನೆ ಹೊಂದಿ, ಉನ್ನತ ಪದವಿಗೆ ಅರ್ಹರಾಗಿದ್ದಾರೆ. ಅವರು ಸಂದಿಗ್ಧ ಸಮಯದಲ್ಲಿ ಸೂಕ್ತ ಸಲಹೆ ಹಾಗೂ ಮಾಗದರ್ಶನ ನೀಡಿ ಎಲ್ಲರ ಮನಸ್ಸನ್ನು ಗೆದ್ದಿದ್ದಾರೆ. ಆದರೆ ಒಂದು ವಿಷಯದಲ್ಲಿ ಅವರು ಅಕ್ಷಮ್ಯರಾಗಿದ್ದಾರೆ. ಎಲ್ಲಾ ದಲಿತ ವರ್ಗ ಹಾಗೂ ಹಿಂದುಳಿದವರು ಮೀಸಲಾತಿಯನ್ನು ನಿರಾಕರಿಸಿದಾಗ ಅಂಬೇಡ್ಕರರು ಅದಕ್ಕೆ ಪಟ್ಟು ಹಿಡಿದರು.

ಅವರು ಇದೊಂದನ್ನು ಬಿಟ್ಟು ಕೊಟ್ಟಿದ್ದಲ್ಲಿ ಅವರ ಗೌರವ ಇನ್ನೂ ಉನ್ನತ ಮಟ್ಟಕ್ಕೆ ಹೋಗುತ್ತಿತ್ತು. ಆದರೆ ಶೋಚನೀಯ ಸಂಗತಿ ಅವರು ಆ ವಿಧವಾಗಿ ನಡೆಯಲಿಲ್ಲ. ಇದೊಂದನ್ನು ಬಿಟ್ಟರೆ ಅವರು ಮಾಡಿರಬಹುದಾದ ಕಾರ್ಯಗಳು ಮಹಾ....

**ಬೇಗಂ ಅಜೀಜ್‌ರಸೂಲ್** (ಯು.ಪಿ.ಮುಸ್ಲಿಂ): ಮಾನ್ಯರೇ, ಇದೊಂದು ಪರಮಪವಿತ್ರವಾದ ಹಾಗೂ ಶುಭವಾದ ಸಮಯ ಎಂದೇ ಹೇಳಬೇಕು. ಏಕೆಂದರೆ ನಾವು ಅಂದರೆ ಈ ಘಟನಾ ಸಮಿತಿಯವರು ಭಾರತದ ಸಂವಿಧಾನವನ್ನು ಸಿದ್ಧಗೊಳಿಸಿದ್ದೇವೆ. ಇದೇನೂ ಸಾಮಾನ್ಯ ವಿಷಯವಲ್ಲ. ಈ ಸಂವಿಧಾನವು ಭಾರತೀಯರ ಆಶೆ ಆಕಾಂಕ್ಷೆಗಳಿಂದ ಕೂಡಿದ ದಾಖಲೆ. ಸಂವಿಧಾನಗಳನ್ನೂ ಅದರ ಭಾಷೆಯಿಂದಲೇ ಅಳೆಯಬಹುದಾದರೆ ನಮ್ಮ ಈ ಸಂವಿಧಾನವು ಒಂದು ಉತ್ತಮ ಸಂವಿಧಾನವೆಂದೇ ಹೇಳಬಹುದು. ಈ

ದಿಶೆಯಲ್ಲಿ ನಾವು ಹೆಮ್ಮೆ ಹೊಂದಬಹುದು. ಇದಕ್ಕಾಗಿ ನಾನು ಡಾ॥ ಅಂಬೇಡ್ಕರರನ್ನು ಅಭಿನಂದಿಸುವೆ. ತಮ್ಮನ್ನೂ ಅಭಿನಂದಿಸುವೆ. ಅದರಂತೆಯೂ ಕಾರ್ಯಾಲಯ ಮತ್ತು ಸಿಬ್ಬಂದಿ ವರ್ಗದವರಿಗೂ ಅಭಿನಂದನೆಗಳು.

ಮಾನ್ಯರೆ, ಈ ಸಂವಿಧಾನದ ಒಂದು ಪ್ರಮುಖ ಲಕ್ಷಣವೆಂದರೆ ಅದರ ಜಾತ್ಯಾತೀತತೆ ಅಥವಾ ಸರ್ವಧರ್ಮ ಸಮನ್ವಯತೆ. ಈ ಸಂವಿಧಾನದ ಪವಿತ್ರತೆಯು ಈ ಅಂಶದಲ್ಲಿ ಅಡಕವಾಗಿದೆ. ಇದು ನಮಗೆಲ್ಲಾ ಗೌರವ ಅಲ್ಲ ಗರ್ವದ ವಿಷಯವೂ ಆಗಿದೆ. ನನ್ನ ವಿಶ್ವಾಸ ಎಂದರೆ, ನಾವು ಈ ಜಾತ್ಯಾತೀತ ಮನೋಭಾವನೆಯನ್ನೇ ಮುಂದುವರಿಸಿಕೊಂಡು ಬರುತ್ತೇವೆ. ಇದರಿಂದಲೇ ನಮ್ಮೆಲ್ಲರ ವಿಕಾಸ.

* * *

**ಪಂಡಿತ್ ಹೃದಯನಾಥ್ ಕುಂಝ್ರು:** ಈ ವಿಷಯಕ್ಕೆ ಸೇರಿದಂತೆ ನಾವೆಲ್ಲರೂ ರಚನಾ ಸಮಿತಿಯವರಿಗೆ ಋಣಿ. ಏಕೆಂದರೆ ಅವರು ತುಂಬಾ ಶ್ರದ್ಧೆಯಿಂದ ಹಾಗೂ ಸಮರ್ಥನೀಯವಾಗಿ ಈ ಕಾರ್ಯ ಪೂರೈಸಿದ್ದಾರೆ. ಅವರ ಸಾಮೂಹಿಕ ಹಾಗೂ ವೈಯಕ್ತಿಕ ಶ್ರಮದ ಫಲವೇ ಈ ನಮ್ಮ ಸಂವಿಧಾನ. ಅವರು ಸೂಚಿಸಿದ ಸಲಹೆಗಳು ಸದನದ ಎಲ್ಲರ ಮನಸ್ಸನ್ನೂ ಗೆದ್ದಿವೆ. ಇದು ಅವರ ಶ್ರಮದ ಪ್ರತಿಫಲ. ಏಕೆಂದರೆ ಅವರು ಸ್ವಾತಂತ್ರ್ಯದ ಪರಿಮಿತಿಯನ್ನು ವಿಸ್ತರಿಸಿದ್ದಾರೆ.

* * *

**ಶ್ರೀ ಶ್ಯಾಮನಂದನ ಸಹಾಯ್** (ಬಿಹಾರ್ : ಸಾಮಾನ್ಯ): ನಾನು ಈಗಾಗಲೇ ಹೇಳಿದಂತೆ ಇದೊಂದು ಪವಿತ್ರ ಹಾಗೂ ವಿಶೇಷ ಮಹತ್ವಪೂರ್ವ ಸಂದರ್ಭ. ನಮ್ಮ ದೇಶದ ಇತಿಹಾಸದಲ್ಲಿ ಇದಕ್ಕೆ ವಿಶಿಷ್ಟ ಸ್ಥಾನವಿದೆ. ಏಕೆಂದರೆ ಇದು ಹಿಂದಿನ ಘಟನೆಗಳನ್ನೆಲ್ಲಾ ಚಿತ್ರಿಸುತ್ತಿದೆ. ನಾವು ಹಿಂದಿರುಗಿ ನಮ್ಮ ಇತಿಹಾಸವನ್ನು ಅವಲೋಕಿಸಿದಾಗ ನಮ್ಮ ದೇಶ ಹಾಲುಜೇನಿನ ಹರಿಹೊಳೆಯಿಂದ ಕೂಡಿದ್ದ ಸಂಪತ್ ಸಮೃದ್ಧ ದೇಶವಾಗಿತ್ತು. ಈ ಅಂಶಗಳೇನಿದ್ದರೂ, ಇಂದು ನಾವು 'ರಾಮರಾಜ್ಯ'ದ ಕಲ್ಪನೆಯನ್ನು ಕಾಣುತ್ತಲಿದ್ದೇವೆ. ನಮ್ಮ ರಾಜರು ಉತ್ತಮರಾಗಿದ್ದರೂ ನಮಗೆ ನಮ್ಮದೇ ಆದ ಪ್ರತಿನಿಧಿ ಸರಕಾರವಿರಲಿಲ್ಲ. ಆದುದರಿಂದ ನಾನು ಈ ಸಂದರ್ಭವನ್ನು ವಿಶಿಷ್ಟ ಎಂದೇ ಹೇಳುವೆ. ನಮ್ಮ ಭೂತಕಾಲದಲ್ಲಿ ಏನೇ ಇದ್ದಿರಬಹುದು. ಆದರೆ ಅದು ಇಂದಿನ ವರ್ತಮಾನಕ್ಕೆ ಸಾಟಿಯಲ್ಲ. ಇದರಿಂದ ನಮ್ಮ ಭವಿಷ್ಯ ಉತ್ತಮವಾಗಿದೆ. ಹೀಗಾಗಿ ಈ ಸಂವಿಧಾನವೇ ನಮಗೆ ಅಮೂಲ್ಯವಾಗಿದೆ.

ಈ ಸಂವಿಧಾನದ ಇನ್ನೊಂದು ವಿಶಿಷ್ಟತೆ ಎಂದರೆ, ವಿರೋಧಿಗಳೊಂದಿಗೆ ಹೊಂದಿರ ಬೇಕಾದ ವಿಧಾನವನ್ನು ಮಹಾತ್ಮಾಜೀಯವರು ನಮಗೆ ಅರುಹಿದ ಸಂಗತಿ. ಅವರು ಈ ವಿಧಾನವನ್ನು ಕೃತಿಯಲ್ಲಿ ಮಾಡಿ ತೋರಿಸಿದ್ದಾರೆ. ಹೀಗಾಗಿ ಈ ಸಂವಿಧಾನ ಅವರ ಆದರ್ಶದ ಪ್ರತಿಫಲವೆಂದೇ ಹೇಳಬಹುದು. ಏಕೆಂದರೆ ಅವರ ಕಟುಟೀಕಾಕಾರರಾದ ಡಾ॥ ಅಂಬೇಡ್ಕರರೇ ನಮ್ಮ ಸಂವಿಧಾನದ ಶಿಲ್ಪಿಗಳಾಗಿದ್ದಾರೆ. ಅವರು ಹಾಗೂ ಅವರ ಸಹೋದ್ಯೋಗಿಗಳು ಕೇವಲ ಸದನವಲ್ಲ, ಸಂಪೂರ್ಣ ರಾಷ್ಟ್ರದ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಅಲ್ಲದೆ ಅವರು ತಮ್ಮ ಕಾರ್ಯಾಚರಣೆಯಿಂದ ಎಲ್ಲರ ಮನಸ್ಸನ್ನೂ ಗೆದ್ದಿದ್ದಾರೆ. ಈಗಿನ ಸಂದರ್ಭಕ್ಕೆ ಅನುಸರಿಸಿ ಅವರು ನಮಗೆ ಉತ್ತಮ ಸಂವಿಧಾನವನ್ನೇ ನೀಡಿದ್ದಾರೆ......

* * *

**ಶ್ರೀಮತಿ ಹಂಸಮೆಹತಾ** (ಮುಂಬೈ: ಸಾಮಾನ್ಯ): ಯಾವುದೇ ಒಂದು ಸಂವಿಧಾನವು ಉತ್ತಮವಿದೆಯೋ ಅಥವಾ ಇಲ್ಲವೋ ಎಂಬ ಅಂಶ ಅದರ ಕಾರ್ಯಾಚರಣೆಯಿಂದಲೇ ನಿರ್ಧರಿಸಬೇಕು. ಅದು ಜನರ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬಂದಲ್ಲಿ ಅದನ್ನು ಜನತೆಯೇ ಉತ್ತಮ ಸಂವಿಧಾನವೆಂದೂ ಹಾಗೆ ಇರದೇ ಹೋದರೆ ಅದು ಕೆಟ್ಟದೆಂದೇ ನಿರ್ಣಯಿಸುತ್ತಾರೆ. ಹೀಗಾಗಿ ಇದು ಭವಿಷ್ಯಕ್ಕೆ ಸೇರಿದ ವಿಷಯ. ಅಲ್ಲದೆ ಮುಂದಿನ ಶಾಸಕರಿಗೆ ಸಂಬಂಧಿಸಿದ ಸಂಗತಿ. ಹೀಗಾಗಿ ಇದರ ಜವಾಬ್ದಾರಿ ಜನತೆಗೆ ಸೇರಿದ್ದು. ಆದರೆ ನನ್ನ ತಿಳುವಳಿಕೆಯಂತೆ, ಸದ್ಯದ ಪರಿಸ್ಥಿತಿಯಲ್ಲಿ ನಾವು ಒಂದು ಉತ್ತಮ ಸಂವಿಧಾನವನ್ನೇ ಸಿದ್ಧಪಡಿಸಿದ್ದೇವೆ ಎಂದು ಧಾರಾಳವಾಗಿ ಹೇಳಬಯಸುವೆ. ವಿಭಿನ್ನ ಅಭಿಪ್ರಾಯಗಳನ್ನು ಹೊಂದಿರುವ ಈ ಸದನ, ಈ ಒಂದು ಕಾರ್ಯವನ್ನು ಮುಕ್ತಾಯಗೊಳಿಸಿದೆ ಎಂದರೆ ಅದೊಂದು ಪವಾಡ ಎಂದೇ ತಿಳಿಯುವೆ. ಏಕೆಂದರೆ ಒಂದೆಡೆ ಸೇಠ್ ಗೋವಿಂದದಾಸರಂಥ ಗೋರಕ್ಷಕರೂ, ಮತ್ತೊಂದೆಡೆ ಕೆ. ಟಿ. ಷಾರಂತಹ ಪುರೋಗಾಮಿಗಳೂ ಇವೆರಡರ ಮಧ್ಯೆ ರೋಹಿಣಿಕುಮಾರ ಚೌಧುರಿಯಂತವರೂ....

**ಶ್ರೀ ಲೋಕನಾಥ ಮಿಶ್ರ:** ನನ್ನ ಅಭಿಪ್ರಾಯದಲ್ಲಿ, ಈ ಸಂವಿಧಾನವು ಒಂದು ಉತ್ತಮ ನಾಗರಿಕ ದಾಖಲೆಯಾಗಿ, ಆಧುನಿಕ ಜಗತ್ತಿನಲ್ಲಿ ಮಿರುಗುವುದು. ಆದುದರಿಂದ ನಾನು ಯಾವ ಹೊಗಳಿಕೆಗಳಿಗೂ ಆಸ್ಪದ ನೀಡಲಾರೆ. ಏಕೆಂದರೆ ನಾವೆಲ್ಲರೂ ನಮ್ಮ ಕರ್ತವ್ಯವನ್ನು ಪರಿಪಾಲಿಸಿರುವೆವು. ನಮ್ಮ ಈ ಒಂದು ಕಾರ್ಯ ಮುಂದಿನ ಜನತೆಯ ತೀರ್ಮಾನಕ್ಕೆ ಸೇರಿದೆ.

* * *

**ಶ್ರೀ ಯದುವಂಶ ಸಹಾಯ್** (ಬಿಹಾರ್, ಸಾಮಾನ್ಯ): ಮಾನ್ಯರೇ, ಸಂವಿಧಾನದ ವಿವಿಧ ಮುಖಗಳ ಬಗೆಗೆ ಸಾಕಷ್ಟು ಚರ್ಚೆಯಾಗಿದೆ......

ಆದರೆ ನಾವು ನೂತನ ರಾಷ್ಟ್ರದವರಾಗಿರುವುದರಿಂದ ಪ್ರಜಾಪ್ರಭುತ್ವದ ಬಗೆಗೆ ಅನೇಕ ವಿಷಯಗಳನ್ನು ಇನ್ನೂ ಅರಿಯಬೇಕಾಗಿದೆ. ಏಕೆಂದರೆ ಈ ವಿಷಯ ಕೇವಲ ಪುಸ್ತಕಗಳಿಂದ ಕಲಿಯಲಾಗದು. ನಾವು ಅದನ್ನು ಅಳವಡಿಸಿಕೊಂಡು ಅಭಿವೃದ್ಧಿಗೊಳಿಸಬೇಕು. ಇದು ರಾಷ್ಟ್ರೀಯ ಚಾರಿತ್ರ್ಯಕ್ಕೆ ಸಂಬಂಧಿಸಿದ ವಿಷಯವಾಗಿರುವುದರಿಂದ, ಅದು ಜನತೆಯ ಗುಣಧರ್ಮಗಳನ್ನು ಅವಲಂಬಿಸಿ ಪ್ರಜಾಪ್ರಭುತ್ವದ ನಿಯಮಗಳನ್ನು ಅನುಸರಿಸುವ ಲವಲವಿಕೆಯ ಜನತೆಯಲ್ಲಿ ಮೂಡಿಬಂದಾಗ ಅದಕ್ಕೆ ಬೆಲೆ ಇಲ್ಲದೇ ಹೋದಲ್ಲಿ ಸಂವಿಧಾನಕ್ಕೆ ಅಪಾರ ಹಾನಿ ಒದಗುತ್ತದೆ. ಏಕೆಂದರೆ ಸಂವಿಧಾನದ ಮಹತ್ವ ಅದರ ಅಕ್ಷರಗಳಲ್ಲಿರದೆ ದೇಶದ ಚರಿತ್ರೆಯಲ್ಲಿ ಅಡಕವಾಗಿದೆ ಎಂಬುದನ್ನು ನಾವು ಸ್ಮರಿಸಬೇಕು. ಸಂವಿಧಾನದ ಬೀಜಗಳಿಗೆ, ಜನತೆಯ ಚಾರತ್ರ್ಯದ ಮಣ್ಣಿಗೆ ಆಶ್ರಯ ದೊರೆತಾಗಲೇ ಅದು ಹೆಮ್ಮರವಾಗಿ ಬೆಳೆಯಬಲ್ಲದು. ಒಂದು ವೇಳೆ ಇದು ದೊರೆಯದೇ ಹೋದರೆ ಸಂವಿಧಾನ ಉತ್ತಮವಾಗಿದ್ದರೂ ವಿಕಾಸ ಹೊಂದಲಾರದು. ಆದರೆ ನನಗೆ ನಮ್ಮ ಜನತೆಯ ಬುದ್ಧಿವಂತಿಕೆಯಲ್ಲಿ ನಂಬಿಕೆ ಇದೆ. ಅವರು ನಮ್ಮಲ್ಲಿರಬಹುದಾದ ಲೋಪ ದೋಷಗಳನ್ನು ಸರಿಪಡಿಸಬಲ್ಲರು ಎಂಬ ಭರವಸೆಯೂ ನನಗಿದೆ. ಹೀಗಾಗಿ ನಾವು ಸಂವಿಧಾನ ಹಾಗೂ ಅದರ ಕಾನೂನುಗಳ ವಿಷಯದಲ್ಲಿ ಸಹನೆಯಿಂದ ವರ್ತಿಸಿದಾಗ ಅದು ಫಲಕಾರಿಯಾಗಬಲ್ಲದು. ನಾವು ಅಸ್ಪೃಶ್ಯತೆ ಅಲ್ಪಮತೀಯರ ಬಗೆಗೆ ಸಂವಿಧಾನದಲ್ಲಿ ಹೇಳಿರಬಹುದಾದ ವಿಷಯಗಳು ಜನರ ಹೃದಯಕ್ಕೆ ತಟ್ಟಿದಾಗ ಮಾತ್ರ ಅದು ಫಲಪ್ರದವಾಗಬಲ್ಲದು. ಇಂತಹ ವಿಷಯಗಳು ಕೇವಲ ಸಂವಿಧಾನದಲ್ಲಿ ನಮೂದಿಸಿದರೆ ಸಾಲದು, ಜನತೆ ಈ ಭಾವನೆಗಳಿಗೆ ಸ್ಪಂದಿಸಿದಾಗ ಮಾತ್ರ ಅದಕ್ಕೆ ಬೆಲೆ......

**ಶ್ರೀ ಗೋಪಾಲ ನಾರಾಯಣ** (ಯು.ಪಿ., ಸಾಮಾನ್ಯ): ಮಾನ್ಯರೆ, ಈ ಮೂರು ವರ್ಷ ಸಂವಿಧಾನ ರಚನೆಯ ಅವಧಿಯಲ್ಲಿ ನಾನು ಕೇವಲ ಎರಡು ಬಾರಿ ಮಾತ್ರ ಮಾತನಾಡಿ, ಮೌನವಾಗಿದ್ದೆ. ಆದರೆ ಈಗ ನಾನು ನನ್ನ ಮೌನ ಮುರಿದು, ಈ ಮೂರನೇ ವರದಿ ವಾಚನ ಸಮಯದಲ್ಲಿ ನನ್ನ ಅನಿಸಿಕೆಗಳನ್ನು ಬಹಿರಂಗಗೊಳಿಸುವ ಸಾಹಸ ಮಾಡುವೆ.

ಮೊಟ್ಟ ಮೊದಲಿಗೆ, ನಾನು ಡಾ. ಅಂಬೇಡ್ಕರ್ ಹಾಗೂ ರಚನಾ ಸಮಿತಿಯ ಸದಸ್ಯರು ಈ ಬೃಹದಾಕಾರ ಸಂವಿಧಾನವನ್ನು ಸಿದ್ಧಪಡಿಸಿದ್ದಕ್ಕಾಗಿ ಅಭಿನಂದಿಸುವೆ. ಈ ಸಂವಿಧಾನವು ಮೌಲ್ಯ ನಿಯಂತ್ರಣದಂತಹ ವಿಷಯವನ್ನೂ ಒಳಗೊಂಡಿದೆ ಎಂದ ಮೇಲೆ ಇನ್ನು ಅಲ್ಪ ಅವಕಾಶವನ್ನು ನೀಡಿದ್ದರೆ ಅದು ಜೀವನದ ಬಗೆಗೆ ಒಂದು ಸಂಹಿತೆಯನ್ನು ಸಿದ್ಧಪಡಿಸುತ್ತಿತ್ತೇನೋ! ಅಂಬೇಡ್ಕರರ ಬಗೆಗೆ ಇನ್ನೊಂದು ವಿಷಯ ಹೇಳಬಹುದಾದರೆ, ಅವರು ವಿಷಯಗಳ ಬಗೆಗೆ ಹೊಂದಿರುವ ಪರಿಶುದ್ಧ ನಿಲುವು. ಅವರು ಸ್ಪಷ್ಟತೆಯ ಸಾಕಾರಮೂರ್ತಿ ಎಂದೇ ಹೇಳಿದರೆ ತಪ್ಪೇನಿಲ್ಲ. ಅವರು ಕೀರ್ತಿ ಶೇಷರಾಗಿ......

**ಶ್ರೀ ಅಜಿತಪ್ರಸಾದ ಜೈನ್** (ಯು.ಪಿ., ಸಾಮಾನ್ಯ): ಮಾನ್ಯರೇ, ರಾಷ್ಟ್ರವು ತನ್ನ ಜೀವಾವಧಿಯಲ್ಲಿ ಕೇವಲ ಒಂದು ಬಾರಿ ಸಂವಿಧಾನವನ್ನು ರಚಿಸಲು ನಿರ್ಧರಿಸುತ್ತದೆ. ಹೀಗಾಗಿ ನಾವು ಈ ಕಾರ್ಯದಲ್ಲಿ ಭಾಗಿಗಳಾಗಿರುವುದು ಗೌರವದ ವಿಷಯ. ಭಾರತದ ಇತಿಹಾಸದಲ್ಲಿ ಉನ್ನತದ ದಿನಗಳಾಗಿ ಹೋಗಿರಬಹುದು. ನಾಮಾಂಕಿತ ರಾಜ ಮಹಾರಾಜರು ಆಳಿ ಹೋಗಿರಬಹುದು. ಆದರೆ ಜನರಿಂದ, ಜನರಿಗೆಂದೇ ಸಂವಿಧಾನ ಸಿದ್ಧಪಡಿಸುವ ಅವಕಾಶ ಕೇವಲ ಇದೇ ಮೊದಲ ಬಾರಿ. ನಾವು ಮುಂದಿನ ಕಾರ್ಯಕ್ಕೆ ಕೈ ಹಾಕುವ ಮುಂಚೆ, ಡಾ॥ ಅಂಬೇಡ್ಕರರ ಹಾಗೂ ಅವರೊಂದಿಗೆ ಕಾರ್ಯ ಮಾಡಿದ ಇತರ ರಚನಾ ಸಮಿತಿಯವರಿಗೆ ಅಭಿನಂದನೆ ಸಲ್ಲಿಸಲೇಬೇಕು. ಅವರು ಹಗಲಿರುಳು ಈ ಕಾರ್ಯವನ್ನು.....

**ಶ್ರೀ ಎಸ್.ವಿ.ಕೃಷ್ಣಮೂರ್ತಿ ರಾವ್** (ಮೈಸೂರು ರಾಜ್ಯ): ತಮ್ಮ ಘನ ಅಧ್ಯಕ್ಷತೆಯಲ್ಲಿ ಜರುಗಿದ, ಈ ಸಂವಿಧಾನ ಸಿದ್ಧಗೊಳಿಸುವ ಕಾರ್ಯದಲ್ಲಿ ಭಾಗವಹಿಸಿದ್ದು ನನಗೆ ಹೆಮ್ಮೆಯ ವಿಷಯವಾಗಿದೆ. ನಾನು ವಿನಮ್ರವಾಗಿ, ರಚನಾ ಸಮಿತಿಯ ಅಧ್ಯಕ್ಷರು ಹಾಗೂ ಇತರ ಸದಸ್ಯರಿಗೆ ಅಭಿನಂದಿಸುತ್ತೇನೆ. ಅವರು ಉತ್ತಮ ಕಾರ್ಯ ಮಾಡಿದ್ದಾರೆ ಹಾಗೂ ತುಂಬಾ ಶ್ರಮವಹಿಸಿದ್ದಾರೆ. ಅವರ ಈ ಪರಿಶ್ರಮದಿಂದ ನಮಗೆ ಉತ್ತಮ ಸಂವಿಧಾನ....

**ಶ್ರೀ ತಿರುಮಲರಾವ್:** ನಮ್ಮ ಈ ಪರಿಸ್ಥಿತಿಯಲ್ಲಿ, ನಾವು ಒಂದು ಉತ್ತಮ ಸಂವಿಧಾನವನ್ನೇ ಹೊಂದಿದ್ದು, ಅದರ ಕಾರ್ಯಾಚರಣೆಯು, ಶಾಸಕರು, ಮಂತ್ರಿವರ್ಯರು ಮುಂತಾದವರಿಗೆ ಸಂಬಂಧಿಸಿದ ವಿಷಯ. ನಾನು ಹೇಳಬಹುದಾದರೆ ಈ ಕಾರ್ಯ ಅಧಿಕವಾಗಿ ಪ್ರಧಾನ ಮಂತ್ರಿಯವರನ್ನೇ ಅವಲಂಬಿಸಿದೆ. ಏಕೆಂದರೆ ಈ ಸಂವಿಧಾನದಿಂದ ಮುಂದಿನ ಹಲವಾರು ವರ್ಷಗಳಲ್ಲಿ ಲಾಭ ಹೊಂದುವುದು. ಈ ದಿಶೆಯಲ್ಲಿ ನಾವು ಚರಕವನ್ನು ಚಿನ್ಹೆಯಾಗಿ ಆಯ್ಕೆ ಮಾಡಿರುವುದು ತುಂಬಾ ಸೂಕ್ತವಾಗಿದೆ. ಏಕೆಂದರೆ ಅದು ಚಕ್ರವರ್ತಿ ಅಶೋಕನ ಧರ್ಮಚಕ್ರವಾಗಿದೆ. ಅಲ್ಲದೆ ಇತಿಹಾಸ ಪ್ರತಿಷ್ಠೆಯನ್ನೂ ಅದು ಪಡೆದಿದೆ. ರೈಸ್‌ಡೇವಿಡ್ ಅವರ ಹೇಳಿಕೆಯಂತೆ ಈ ಚಕ್ರವು ಈ ವಿಶ್ವದಲ್ಲಿ ಋಜುತ್ವವನ್ನು ಸಾರುವ ರಥದ ಗಾಲಿಯಾಗಿದೆ. ಯಾವುದೇ ದೇಶವು ನೈತಿಕ ಮೌಲ್ಯಗಳನ್ನು ಕಡೆಗಣಿಸದಂತೆ ಕಾಪಾಡಿಕೊಂಡು ಬರುವ ಸಂದೇಶವನ್ನು ಈ ಚಕ್ರ ಸಾರುತ್ತದೆ. ನಮ್ಮ ಈ ಪುರಾತನ ದೇಶವು ತನ್ನ ಸಂಪ್ರದಾಯ ಹಾಗೂ ಆದರ್ಶಗಳಿಗೆ ಅನುಗುಣವಾಗಿ ಈ ಧರ್ಮ ಚಕ್ರವನ್ನೇ ಆಯ್ದುಕೊಂಡಿದೆ. ಈ ಒಂದು ಆಯ್ಕೆ ಮಹಾತ್ಮಾಜೀ ಅವರ ಆಶೀರ್ವಾದವನ್ನೂ ಪಡೆದಿದೆ. ಅವರ ಭಾವನೆಗಳು ಈ ದೇಶದ ರಕ್ಷಾಕವಚವಾಗಿ, ಈ ಚಕ್ರವು ನಮ್ಮ ನಾಡಿನ ರಾಷ್ಟ್ರಧ್ವಜದಲ್ಲಿ

ಸದಾ ಬೆಳಗಲಿ. ಆದುದರಿಂದ ನಮ್ಮ ಮುಂಬರುವ ನಾಯಕರು ರಾಷ್ಟ್ರೀಯ ಕಾಂಗ್ರೆಸ್ಸಿನ ಗುರಿಗಳನ್ನು ಮರೆಯದೆ ರಾಷ್ಟ್ರದ ಹಿತ ಸಾಧಿಸಲಿ.

* * *

**ಶ್ರೀ ಅರಿ ಬಹದ್ದೂರ್ ಗುರುಂಗ** (ಪ.ಬಂಗಾಲ, ಸಾಮಾನ್ಯ): ಮಾನ್ಯರೆ, ನಾನು ನನ್ನ ಸಹೋದ್ಯೋಗಿಗಳೊಂದಿಗೆ, ರಚನಾ ಸಮಿತಿಯ ಸದಸ್ಯರು ಹಾಗೂ ಅದರ ಅಧ್ಯಕ್ಷರನ್ನು ಅಭಿನಂದಿಸುವೆ. ಅವರು ತಮ್ಮ ಪರಿಶ್ರಮದಿಂದ.....

**ಶ್ರೀ ಜ್ಞಾನಿ ಗುರುಮುಖಸಿಂಗ್ ಮುಸಾಫಿರ್** (ಪೂರ್ವ ಪಂಜಾಬ್, ಸಿಕ್): ಡಾ. ಅಂಬೇಡ್ಕರ್ ಹಾಗೂ ಅವರ ಸಹೋದ್ಯೋಗಿಗಳು ತಮ್ಮ ಪರಿಶ್ರಮದಿಂದ ಈ ಸಂವಿಧಾನ ಸಿದ್ಧಪಡಿಸಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುವೆ.

**ಶ್ರೀ ಆರ್.ವಿ. ಧುಲೇಕರ್** (ಯು.ಪಿ., ಸಾಮಾನ್ಯ): ನಾನು, ಅಂಬೇಡ್ಕರರು ಮಂಡಿಸಿದ ನಿಲುವಳಿಯ ಪರ. ಕಳೆದ ಮೂರು ವರ್ಷಗಳಿಂದ ಸಂವಿಧಾನದ ಬಗೆಗೆ ವಿಸ್ತಾರವಾಗಿ ಚರ್ಚೆಯಾಗಿದೆ. ಆದುದರಿಂದ ಈಗ ಅದರಲ್ಲಿರಬಹುದಾದ ಲೋಪದೋಷಗಳನ್ನು ಎತ್ತಿ ತೋರಿಸುವುದು ಅಸಮಂಜಸ. ಸಮಗ್ರವಾಗಿ ನೋಡಿದಲ್ಲಿ ನಮ್ಮ ಸಂವಿಧಾನ ಉತ್ತಮವಾಗಿದೆ. ಪ್ರತಿಯೋರ್ವರಿಗೂ ತಿಳಿದಂತೆ ಹಾಲು, ಅಧಿಕಾಂಶ ನೀರನ್ನೇ ಹೊಂದಿದೆ. ಇದು ಸೂಕ್ತವಾಗಿದ್ದಲ್ಲಿ ಅದು ದೇಹದ ಆರೋಗ್ಯಕ್ಕೆ ಉತ್ತಮವಾಗಿರುತ್ತದೆ. ಫಲಪ್ರದವಾಗಿ ದೀರ್ಘ ಜೀವನವನ್ನು ನೀಡುತ್ತದೆ.

ನಾನು ಕೊನೆಯದಾಗಿ ತಮಗೆ ಹಾಗೂ ಡಾ॥ ಅಂಬೇಡ್ಕರ್‌ರಿಗೆ ವಂದನೆ ಸಲ್ಲಿಸುವೆ. ನಮ್ಮ ಎದುರಿದ್ದ ಮಹಾನ್ ಕಾರ್ಯವನ್ನು ಡಾ॥ ಅಂಬೇಡ್ಕರರು ಸುಗಮವಾಗಿ ತಮ್ಮ ನಾಮವನ್ನು ಸಾರ್ಥಕಗೊಳಿಸಿದ್ದಾರೆ. ಭೀಮರಾವ್ ಅಂಬೇಡ್ಕರರು, ಮಹಾಭಾರತದ ಪಾಂಡವ ಸಹೋದರ ಭೀಮನಂತೆ, ಈ ಕಾರ್ಯವನ್ನು ಪೂರೈಸಿದ್ದಾರೆ. ಈ ದಿಶೆಯಲ್ಲಿ ಅವರ ಶೈಲಿ, ದೂರದೃಷ್ಟಿ, ಸರಳ ಯೋಚನಾಲಹರಿಯನ್ನು ಮೆಚ್ಚಲೇಬೇಕು. ಅವರು ಯಾವಾಗಲೂ ವಿರೋಧಿಗಳ ಮನೋಭಾವನೆಗಳನ್ನು ಅರಿತು ಅವರಿಗೆ ಸಹಕರಿಸಿ ತಮ್ಮ ಕಾರ್ಯವನ್ನು ಸಾಧಿಸಿರುವುದು ಪ್ರಶಂಸನೀಯ. ಅದು ಅವರ ಹಿರಿಮೆ ಹಾಗೂ ಜಾಣ್ಮೆಯನ್ನು ತೋರಿಸುತ್ತದೆ.....

* * *

**ಶ್ರೀ ಬಿ. ಪಿ. ಜುನ್‌ಜುನ್‌ವಾಲಾ** (ಬಿಹಾರ, ಸಾಮಾನ್ಯ): ಮಾನ್ಯರೇ, ಸಂವಿಧಾನಕ್ಕೆ ಸಂಬಂಧಿಸಿದಂತೆ ಅನೇಕ ಟೀಕೆಗಳಿವೆ. ಅದರಲ್ಲಿ ಪ್ರಮುಖವಾದುದೆಂದರೆ, ರಚನಾ ಸಮಿತಿಯು ಕೇವಲ ಭಾರತ ಸರಕಾರದ ೧೯೩೫ ಕಾಯ್ದೆಯನ್ನೇ ಅಳವಡಿಸಿದೆ. ಈ ಒಂದು ಟೀಕೆಯನ್ನು ರಚನಾ ಸಮಿತಿಯ ವಿರುದ್ಧ ಮಾಡಿರುವುದು, ಅದಕ್ಕೆ ಅಪಚಾರವೆಂದೇ ಹೇಳುವೆ. ಏಕೆಂದರೆ ರಚನಾ ಸಮಿತಿಯವರು ಯಾವುದೇ ಒಂದು ವಿಧಿಯನ್ನು ಅಂಗೀಕರಿಸುವ ಮುನ್ನ ವಿಶ್ವದ ವಿವಿಧ ಸಂವಿಧಾನಗಳನ್ನು ಹಾಗೂ ತಿದ್ದುಪಡಿಗಳ ಅಧ್ಯಯನ ನಡೆಸಿ ಅಪಾರ ಪರಿಶ್ರಮದಿಂದ, ಸಂವಿಧಾನವನ್ನು ಸಿದ್ಧಗೊಳಿಸಿದ್ದಾರೆ. ಅವರು ಯಾವುದೇ ಒಂದು ಸಿದ್ಧಾಂತವನ್ನು ಒಪ್ಪದೇ ಹೋದದ್ದು, ಆ ಸಿದ್ಧಾಂತವು ನಮ್ಮ ಪರಿಸ್ಥಿತಿಗೆ ಹೊಂದಲಾರದೇ ಹೋದುದರಿಂದ ಎಂದೇ ಹೇಳಬಹುದು. ಅದು ಪ್ರಸ್ತುತ ಪರಿಸ್ಥಿತಿಯ....

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸ್: ಸಾಮಾನ್ಯ): ಮಾನ್ಯರೇ, ಡಾ. ಅಂಬೇಡ್ಕರರು ಮಂಡಿಸಿರುವ ಗೊತ್ತುವಳಿಗೆ ಸಂಬಂಧಿಸಿದಂತೆ ನಾನು ಸದನದ ಅಲ್ಪ ಸಮಯ ಕೋರುವೆ. ಈ

ಸಂವಿಧಾನವನ್ನು ಸಿದ್ಧಗೊಳಿಸಲೆಂದೇ ಅನೇಕ ಮಿತಿಗಳನ್ನು ರಚಿಸಲಾಗಿತ್ತು. ಈ ವಿವಿಧ ಸಮಿತಿಗಳು ಕರಡುಪ್ರತಿಗೆ ಹಲವಾರು ಸೂಚನೆ ಹಾಗೂ ಸಲಹೆಗಳನ್ನು ನೀಡಿದ ನಂತರವೇ, ಸಂವಿಧಾನವನ್ನು ಸಿದ್ಧಪಡಿಸಿದೆ. ಆದುದರಿಂದ ಸಂವಿಧಾನವು ಸದನದ ಭಾವನೆಗಳನ್ನೇ ಪ್ರತಿಬಿಂಬಿಸಿದೆ. ಅಲ್ಲದೆ ಪೂರ್ವ ಪೀಠಿಕೆಯಲ್ಲಿಯೇ ಸಂವಿಧಾನದ ಗುರಿಯ ಗೊತ್ತುವಳಿಯನ್ನು ಅಂಗೀಕರಿಸಿರುವೆವು.....

ಆದುದರಿಂದ ಮುಕ್ತಾಯದ ಮುನ್ನ ನಾನು ಡಾ. ಅಂಬೇಡ್ಕರರ ವಿದ್ವತ್ ಹಾಗೂ ಸಾಮರ್ಥ್ಯವನ್ನು ಪ್ರಶಂಸಿಸದೇ ಹೋದರೆ ಕರ್ತವ್ಯ ಚ್ಯುತಿಯಾಗುತ್ತದೆ. ಏಕೆಂದರೆ ಈ ಸಂವಿಧಾನದ ಚುಕ್ಕಾಣಿ, ಅಂಬೇಡ್ಕರರ ಪರಿಶ್ರಮದಿಂದಲೇ ಮುಕ್ತಾಯ ಕಂಡಿದೆ. ನಂತರ ನನಗೆ ತಿಳಿದಂತೆ ಅವರಿಗೆ ಕೃಷ್ಣಮಾಚಾರಿಯವರ ಸಮರ್ಥ ಸಹಕಾರವೂ ಲಭಿಸಿತು. ಈ ದಿಶೆಯಲ್ಲಿ ನಾನು ಬಿ. ಎನ್. ರಾವ್ ಹಾಗೂ ಜಂಟಿ ಕಾರ್ಯದರ್ಶಿಯಾದ ಮುಖರ್ಜಿ ಅವರ ಸಹನೆ, ಸಾಮರ್ಥ್ಯ, ಕಾರ್ಯಕ್ಷಮತೆಯನ್ನೂ ಪ್ರಶಂಸಿಸದೇ ಇರಲಾರೆ...

ಕೊನೆಯಲ್ಲಿ ತಮ್ಮ ಕಾರ್ಯಾಚರಣೆ ಕುರಿತು ಹೇಳಬಯಸುವೆ. ತಾವು ದೇಶ ಸೇವೆಗೆಂದೇ ತಮ್ಮನ್ನು ಮುಡುಪಾಗಿ ಇರಿಸಿಕೊಂಡಿರುವುದು ಶ್ಲಾಘನೀಯ. ಈ ದಿಶೆಯಲ್ಲಿ ತಮಗಿಂತ ಬೇರೆ ಯಾವ ಓರ್ವ ವ್ಯಕ್ತಿ ಈ ಗೌರವಕ್ಕೆ ಪಾತ್ರವಲ್ಲ. ತಾವು ಸಂವಿಧಾನ ಸಭೆಯ ಅಧ್ಯಕ್ಷರಾಗಿ ಅದರ ಗೌರವ ಹೆಚ್ಚಿಸಿದ್ದೀರಿ. ತಮಗೆ ನಾನು ಋಣಿ. ತಾವು ತಮ್ಮ ಆರೋಗ್ಯ ಸರಿಯಾಗಿರದೇ ಹೋದರೂ, ಸಮರ್ಥನೀಯ ಸೇವೆ ಸಲ್ಲಿಸಿದ್ದೀರಿ. ಈ ದಿಶೆಯಲ್ಲಿ ಸದನದ ಎಲ್ಲ ಸದಸ್ಯರೂ ತಮ್ಮ ಬಗೆಗೆ ವಿಶೇಷ ಗೌರವ ಆದರಗಳನ್ನು ಸೂಚಿಸಿದ್ದಾರೆ. ಅವರಿಗೆ ಅಭಿನಂದನೆಗಳು (ಹರ್ಷೋದ್ಗಾರ).

**ಶ್ರೀ ಹೈದರ್ ಹುಸೇನ್:** ಈ ಹಂತದಲ್ಲಿ ಸಂವಿಧಾನದ ವಿವಿಧ ಅಂಶಗಳ ಬಗೆಗೆ ಟೀಕಿಸುವುದು ಸೂಕ್ತವಲ್ಲ. ಅದರ ಬಗೆಗೆ ಸದನದಲ್ಲಿ ಪರಿಸ್ಥಿತಿಯಲ್ಲಿ ಉತ್ತಮವಾದ ಸಂವಿಧಾನವನ್ನೇ ರಚಿಸಿದ್ದು, ಇದಕ್ಕಿಂತ ಉತ್ತಮವಾದದನ್ನು ಅಪೇಕ್ಷಿಸಲಾಗದು. ರಾಷ್ಟ್ರವು ಈ ಸಂವಿಧಾನದ ಬಗೆಗೆ ಹೆಮ್ಮೆ ಹೊಂದಿದೆ. ಆದುದರಿಂದ ಈ ಸಂವಿಧಾನಕ್ಕೆ ಬೆಂಬಲ ತೋರಿ ಅದನ್ನು ಜಾರಿಗೊಳಿಸಲು ನಾವೆಲ್ಲರೂ ಕಂಕಣಬದ್ಧರಾಗಲೇಬೇಕು. ನಮಗೆ ರಾಜಕೀಯ ಸ್ವಾಂತತ್ರ್ಯ ಲಭಿಸಿದೆ. ಈಗ ನಾವು ನಾಡಿನ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕು. ಆಗ ಮಾತ್ರ ನಾವು ನಡೆಸಿದ ಸ್ವಾತಂತ್ರ್ಯ ಹೋರಾಟ ಸಫಲಗೊಳ್ಳುವುದು. ಇದಕ್ಕಾಗಿ ನಾವು ಅಧಿಕ ತ್ಯಾಗ ಹಾಗೂ ಬಲಿದಾನ ಮಾಡಬೇಕು. ಏಕೆಂದರೆ ಧ್ವಂಸ ಮಾಡುವುದು ಸುಲಭ. ಆದರೆ ನಿರ್ಮಾಣ ಕಾರ್ಯ ಕಠಿಣ ಎಂಬುದನ್ನು ಅರಿಯಬೇಕು. ವಿದೇಶಿಯ ಆಳ್ವಿಕೆಯನ್ನು ಹೊಡೆದೋಡಿಸಿದ ನಂತರ ನಿರ್ಮಾಣ ಕಾರ್ಯಕ್ಕೆ ಸಿದ್ಧರಾಗೋಣ....

**ಶ್ರೀ ಬಿ. ಎಮ್. ಗುಪ್ತ:** ಸಂವಿಧಾನವನ್ನು ಅದರ ಪಠ್ಯದ ಆಧಾರದ ಮೇಲೆ ನಿರ್ಣಯಿಸಲಾಗದು. ಹೀಗಾಗಿ ಸಂವಿಧಾನವೇ ಆಗಲೀ ಅಥವಾ ಅದನ್ನು ಸಿದ್ಧಪಡಿಸಿದವರು ಪ್ರಮುಖವಾಗಿರದೆ ಅವರು ಅಳವಡಿಸಿದ ಭಾವನೆಗಳು ಮತ್ತು ಅವನ್ನು ಕಾರ್ಯಾಚರಣೆಗೊಳಿಸುವುದು ಪ್ರಮುಖ ಅಂಶ.

ಆರಂಭಿಕ ಅಡಚಣೆಗಳೇನೇ ಇದ್ದರೂ ಕೊನೆಯದಾಗಿ ಶ್ರೀಸಾಮಾನ್ಯರ ಸಾಮಾನ್ಯ ಜ್ಞಾನವೇ ಜಯಕ್ಕೆ ಪಾತ್ರವಾದುದು. ಆದುದರಿಂದ ನಮ್ಮ ಕಾರ್ಯ ಎಂದರೆ ಉಪಕರಣಗಳ ಜೋಡಣೆ ಮಾತ್ರ. ಅದನ್ನು ಉಪಯುಕ್ತವಾಗಿ ಜಾರಿಯಲ್ಲಿ ತರುವುದು ಜನತೆಗೆ ಸೇರಿದೆ. ನಾವು ತಯಾರಿಸಿರುವ ಸಂವಿಧಾನ ವಿಕಾಸದಿಂದ ಕೂಡಿದೆ. ಹೀಗಾಗಿ ನಾವು ಕರಡುಪ್ರತಿ ರಚನಾ ಸಭೆಯ ಒಂದು ಕಾರ್ಯವನ್ನು ಸ್ಮರಿಸಲೇಬೇಕು. ಅದೆಂದರೆ ರಾಷ್ಟ್ರ ರಕ್ಷಣೆ. ಆದುದರಿಂದ ರಕ್ಷಣೆ ಮತ್ತು ಭದ್ರತೆಯನ್ನು ಗಮನಿಸದೇ ಹೋದಲ್ಲಿ ಅದು ವಿಕಾಸಕ್ಕೆ ಅಡ್ಡಿಯಾಗಬಹುದು. ವ್ಯಕ್ತಿವಿಕಾಸಕ್ಕೆ ಮೇಲಿನ ಎರಡೂ ಅಂಶಗಳು ಪ್ರಮುಖವಾದವು.

ಹೀಗೆ ನನ್ನ ಅಭಿಪ್ರಾಯದಂತೆ, ಸಂವಿಧಾನದ ಸಫಲತೆ ವ್ಯಕ್ತಿ ಹಾಗೂ ಸಾಮೂಹಿಕ ವಿಕಾಸದಲ್ಲಿ ಅಡಕವಾಗಿದೆ. ಹೀಗೆ ಈ ಸಂವಿಧಾನವು ಸಂತೃಪ್ತಿಯನ್ನು ನೀಡಿದಲ್ಲಿ ಅದು ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಷಯ....

**ಶ್ರೀ ಬಲವಂತ ಸಿನ್ಹಾ ಮೆಹತಾ:** ನಾವು ಸಿದ್ಧಪಡಿಸಿದ ಸಂವಿಧಾನ ಸಾಕಷ್ಟು ವಿವರಗಳಿಂದ ಕೂಡಿರುವುದಲ್ಲದೇ ಉತ್ತಮವಾಗಿದೆ. ನನಗೆ ತಿಳಿದಂತೆ ವಿದೇಶಿಯರು ನಮ್ಮ ಈ ಸಂವಿಧಾನವನ್ನು ನೋಡಿದಾಗ ಆಶ್ಚರ್ಯಪಡುವುದರಲ್ಲಿ ಸಂದೇಹವೇ ಇಲ್ಲ. ಈ ಮಹಾನ್ ಸಭೆಯ ಸದಸ್ಯರು ಅದರಲ್ಲಿಯೂ ವಿಶೇಷವಾಗಿ ಡಾ. ಅಂಬೇಡ್ಕರ, ಟಿ.ಟಿ.ಕೃಷ್ಣಮಾಚಾರಿ, ಅಲ್ಲಾಡಿ ಕೃಷ್ಣಸ್ವಾಮಿ ಅವರು ಇದಕ್ಕೆ ಪರಿಶ್ರಮಿಸಿದ್ದಾರೆ. ಅಲ್ಲದೆ ನಾವು, ನೆಹರೂ, ವಲ್ಲಭಬಾಯಿ ಪಟೇಲ್ ಮುಂತಾದವರಿಗೆ ಮತ್ತು ಹುತಾತ್ಮರಿಗೆ ಋಣಿಯಾಗಿರಬೇಕು.

**ಸರದಾರ ಸುಚತ್ ಸಿಂಗ್:** ನಮ್ಮ ಸಂವಿಧಾನವು ಅದರ ಅಧ್ಯಕ್ಷರೂ ಮಹಾನ್ ಮನಸ್ಸನ್ನು ಪಡೆದಿರುವ ಡಾ. ರಾಜೇಂದ್ರ ಪ್ರಸಾದರ ಪ್ರಭಾವ, ಪಂಡಿತ ಜವಾಹರ್‌ಲಾಲರ ವಿಶ್ವದೃಷ್ಟಿ ಕೋನ, ಸೋಲರಿಯದ ಸರದಾರ ಪಟೇಲರ ಸಾಮರ್ಥ್ಯ, ಡಾ. ಪಟ್ಟಾಭಿಯವರ ತೀಕ್ಷ್ಣ ಬುದ್ಧಿಬಲ, ಡಾ. ಅಂಬೇಡ್ಕರರ ವಿದ್ವತ್, ಈ ಎಲ್ಲಕ್ಕಿಂತಲೂ ಮಿಗಿಲಾಗಿ ರಾಷ್ಟ್ರಪಿತ ಮಹಾತ್ಮರ ಆಶೀರ್ವಾದದಿಂದ ಕೂಡಿದೆ. ಹೀಗಾಗಿ ಈ ಬಗೆಯ ಸಂವಿಧಾನವು ಜನರಿಗೆ ಸುಖ, ಶಾಂತಿ ನೀಡುವಲ್ಲಿ ಯಾವ ಸಂದೇಹವೂ ಇರಲಾರದು. ಇದು ನಮ್ಮ ಕೋಟಿ ಕೋಟಿ ಜನರ ಸ್ವಾತಂತ್ರ್ಯದ ಒಂದು ಸಂಹಿತೆಯೇ ಆಗಿದೆ. (ಹರ್ಷೋದ್ಗಾರ).

**ಶ್ರೀ ಟಿ. ಜೆ. ಎಮ್.ವಿಲ್ಸನ್** (ಮದ್ರಾಸ್, ಸಾಮಾನ್ಯ): ಮಾನ್ಯರೇ, ತಾವು ರಾಷ್ಟ್ರಪತಿ, ಅಧ್ಯಕ್ಷರು ಹಾಗೂ ಕರಡು ಸಮಿತಿಯ ಸದಸ್ಯರನ್ನು ಅಭಿನಂದಿಸುವಲ್ಲಿ ನಾನೂ ಸಹಭಾಗಿ. ಈಗ ನಾನು ಸಂವಿಧಾನ ಶ್ರೀಸಾಮಾನ್ಯರಿಗೆ ಏನನ್ನೂ ನೀಡಿಲ್ಲ ಎಂಬ ಟೀಕೆಗೆ ಸೇರಿದಂತೆ ಕೆಲವು ವಿಷಯ ಹೇಳಬಯಸುವೆ. ಟೀಕೆಯಂತೆ ಸಂವಿಧಾನವು ಸಾಮಾಜಿಕ ಹಾಗೂ ಆರ್ಥಿಕ ನ್ಯಾಯವನ್ನೇ ನೀಡಿಲ್ಲ ಎಂದು ದೂರಲಾಗಿದೆ. ಆದರೆ ಇದು ಸರಿಯಾದ ಅಭಿಪ್ರಾಯವಲ್ಲ ಎಂದೇ ಹೇಳಬಯಸುವೆ.

ಯಾವುದೇ ಸಂವಿಧಾನವು ತನ್ನ ಇತಿಮಿತಿಗಳನ್ನು ಹೊಂದಿರುತ್ತದೆ ಎಂಬ ಅಂಶವನ್ನು ನಾವು ಮನವರಿಕೆ ಮಾಡಿಕೊಳ್ಳದೇ ಹೋದುದೇ ಇದಕ್ಕೆ ಕಾರಣ. ಸಂವಿಧಾನಗಳು, ಸರಕಾರದ ಕಾರ್ಯಾಚರಣೆಯ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ಮಾತ್ರ ನಿರೂಪಿಸುತ್ತದೆ. ಈ ಒಂದು ಹಿನ್ನೆಲೆಯಲ್ಲಿ ನಮ್ಮ ಈ ಸಂವಿಧಾನ ತನ್ನ ಕರ್ತವ್ಯ ಪೂರೈಸಿದೆ. ಅದರ ಲಕ್ಷ್ಯವೇನೇ ಇರಲಿ, ಹಾಗೂ ಹಲವಾರು ಪ್ರಕರಣಗಳಲ್ಲಿ ಅದು ನೀಡಿರಬಹುದಾದ ಹಕ್ಕು ಹಾಗೂ ಸೌಲಭ್ಯಗಳೇನೇ ಇದ್ದರೂ ಸಂವಿಧಾನವು ತನ್ನ ಗುರಿ ಸಾಧಿಸಿದೆ. ಈ ಒಂದು ಮೂಲ ಕಲ್ಪನೆ ನಾವು ಮರೆಯಬಾರದು. ನಮ್ಮ ಸಂವಿಧಾನದಲ್ಲಿ ನೀಡಲಾದ ಹಕ್ಕುಗಳನ್ನು ನಾವು ಇನ್ನೂ ಉಪಭೋಗಿಸಬೇಕಾಗಿದೆ. ಸಂವಿಧಾನವು ಆಸ್ತಿಯನ್ನು ಮೂಲಭೂತ ಹಕ್ಕಾಗಿ ಪರಿಗಣಿಸಿರುವುದು ವಿರೋಧಾಭಾಸದಿಂದ ಕೂಡಿದೆ. ಆದರೆ ಕೆ. ಸಂತಾನಮ್‌ರ ಅಪೇಕ್ಷೆಯಂತೆ ಸಮಾಜವಾದವನ್ನು ಸಾಧಿಸುವಲ್ಲಿ ಯಾವ ಅಡಚಣೆಯೂ ಇಲ್ಲ...

* * *

**ಶ್ರೀ ಧರಣೀಧರ ಬಸು ಮತಾರಿ** (ಅಸ್ಸಾಂ ಸಾಮಾನ್ಯ): ಮಾನ್ಯರೆ, ನಾನು ಡಾ. ಅಂಬೇಡ್ಕರರ ಹಾಗೂ ಕರಡು ರಚನಾ ಸಮಿತಿಯ ಇತರ ಸದಸ್ಯರಿಗೆ, ಧನ್ಯವಾದಗಳನ್ನು ಹೇಳದೆ, ನನ್ನ ಪ್ರಾಂತ್ಯ ಅಸ್ಸಾಂಗೆ ಹೋಗಲಾರೆ. ಅವರೆಲ್ಲಾ ಈ ಸಂವಿಧಾನ ಸಿದ್ಧಪಡಿಸುವಲ್ಲಿ ಅಪಾರ ಶ್ರಮ ವಹಿಸಿದ್ದಾರೆ. ಪ್ರತಿಯೊರ್ವನಿಗೂ ಒಂದಲ್ಲ ಒಂದು ವಿಧವಾದ ಅತೃಪ್ತಿ, ಟೀಕೆ ಇರುವುದು ಸಹಜ. ಆದರೆ ಸಂವಿಧಾನವು ಎಲ್ಲರ ಟೀಕೆಗೆ ಸಮಾಧಾನ ನೀಡುವ ಉಪಕರಣವಲ್ಲ. ಅಖಿಲ ಭಾರತ ಮಟ್ಟದ ದೃಷ್ಟಿಕೋನದಿಂದ

ಸಂವಿಧಾನ ಉತ್ತಮವಾಗಿದೆ. ವಿಭಜನೆ ಹಾಗೂ ಇತರ ಘಟನೆಗಳ ಹಿನ್ನೆಲೆಯಲ್ಲಿ ನಾವು ಉತ್ತಮ ಸಂವಿಧಾನವನ್ನೇ ನಿರ್ಮಿಸಿದ್ದೇವೆ. ದೇಶದ ಜನತೆ ಸಹಕರಿಸಿದಲ್ಲಿ ನಾವು ಸಂವಿಧಾನದಲ್ಲಿ ಅಡಕವಾಗಿರುವ ಭಾವನೆಗಳನ್ನು ಕಾರ್ಯಾಚರಣೆಯಲ್ಲಿ ತರಲು ಸಂದೇಹವಿಲ್ಲ.

**ಶ್ರೀ ಅರಿಬಹದ್ದೂರ್ ಗುರುಂಗ:** ಮಾನ್ಯರೇ, ನಾನು, ಸದನದ ಸದಸ್ಯರಂತೆ ಕರಡು ಸಮಿತಿಯ ಅಧ್ಯಕ್ಷರಾದ ಡಾ.ಅಂಬೇಡ್ಕರರ ಹಾಗೂ ಅದರ ಸದಸ್ಯರಿಗೆ ಅಭಿನಂದಿಸುವೆ. ಅವರೆಲ್ಲರೂ ಕೂಡಿ ಈ ಪರ್ವತ ಸದೃಶ್ಯ ಕಾರ್ಯವನ್ನು ಸಮರ್ಥನೀಯವಾಗಿ ಸಂಪೂರ್ಣಗೊಳಿಸಿದ್ದಾರೆ. ಈ ಸಂವಿಧಾನವು ಸಮಾಜವಾದಕ್ಕೆ ಆಸ್ಪದ ನೀಡಲಾರದು ಎಂಬ ವಾದದಲ್ಲಿ ಹುರುಳಿಲ್ಲ. ಅದರಂತೆಯೇ ಸರ್ವಾಧಿಕಾರಕ್ಕೆ ಅವಕಾಶ ನೀಡುತ್ತದೆ ಎಂಬುದೂ ಸತ್ಯಕ್ಕೆ ದೂರ. ಪ್ರಜಾಪ್ರಭುತ್ವದ ನಿಜ ಅರಿಯಬೇಕಾದಲ್ಲಿ ನಾವು ಜನತೆಗೆ ಅಧಿಕಾರ ನೀಡಿದ ನಂತರವೇ ಅದರ ಪ್ರತಿಫಲ ತಿಳಿದುಬರುತ್ತದೆ. ಸರ್ವಾಧಿಕಾರ ಅಥವಾ ಇನ್ನಾವುದೇ ವಿಧದ ಪರಿಣಾಮವನ್ನು ಅರಿಯಬೇಕಾದಲ್ಲಿ ಅದು ಜನತೆಯಿಂದಲೇ ನಿರ್ಣಯವಾಗಬೇಕು. ನನ್ನ ತಿಳುವಳಿಕೆಯಂತೆ ಸಂವಿಧಾನ ಪವಿತ್ರವಾದದ್ದು. ಅದು ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಿದೆ. ಅದು ಜ್ವಲಂತ ಜೀವನದ ಪ್ರತೀಕ....

**ಶ್ರೀ ಮಾಣಿಕ್ಯಲಾಲ್ ವರ್ಮಾ** (ಯುನೈಟೆಡ್, ರಾಜಸ್ಥಾನ): ನಾನು ನನಗೆ ದೊರೆತ ಈ ಅವಕಾಶವನ್ನು ಡಾ. ಅಂಬೇಡ್ಕರ್ ಹಾಗೂ ಅವರ ಸಂಗಡಿಗರನ್ನು ಅಭಿನಂದಿಸಲು ಉಪಯೋಗಿಸುವೆ.

* * *

**ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿ (ಯು.ಪಿ.ಸಾ):** ಪುನರುಚ್ಚರಣೆ ಆದರೂ ಅಡ್ಡಿಯಿಲ್ಲ. ನಾನೂ ಕರಡು ಸಮಿತಿಯ ಸದಸ್ಯರನ್ನು ಮತ್ತು ತಮ್ಮನ್ನೂ ಹಾಗೂ ಇತರ ಪ್ರಮುಖ ಪಾತ್ರಧಾರಿಗಳನ್ನು ವಂದಿಸುವೆ. ನಾನು ವಿಶೇಷವಾಗಿ ಹಿಂದಿನ ಸಾಲಿನ ಸದಸ್ಯರಾದ ನಮ್ಮೆಲ್ಲರ ಪರವಾಗಿ ತಮಗೆ ಅಭಿನಂದಿಸುವೆ. ಏಕೆಂದರೆ ಅನೇಕ ಬಾರಿ ಸರಿಯೋ ಅಥವಾ ತಪ್ಪಾಗಿಯೋ ನಾವು ನಮ್ಮ ಸಂದೇಹಗಳನ್ನು ವ್ಯಕ್ತಪಡಿಸಿದಾಗ ತಾವು ಅದನ್ನು ಕರಡು ಸಮಿತಿಯವರಿಗೆ ತಿಳಿಹೇಳಿ ನಮ್ಮ ಸಂದೇಹಗಳನ್ನು ನಿವಾರಿಸಿರುವಿರಿ.

ಮಾನ್ಯರೇ, ಸಂವಿಧಾನ ಎಂಬುದು ದೇಶದ ಪ್ರಮುಖ ಹಾಗೂ ಅಮೂಲ್ಯ ದಾಖಲೆ. ಏಕೆಂದರೆ, ಅದು ದೇಶದ ಮಹಾನ್ ಜನತೆಯು, ತಮ್ಮ ಸಂಘಟನೆಯ ಆದರ್ಶಗಳನ್ನು ಹೇಗೆ ರಚಿಸಿಕೊಳ್ಳುವರು ಎಂಬ ಸಂಗತಿಯನ್ನು ಎತ್ತಿ ತೋರಿಸುತ್ತದೆ. ಅವರ ರಾಜಕೀಯ ವ್ಯವಸ್ಥೆಯನ್ನು ತೀರ್ಮಾನಿಸುತ್ತದೆ. ಅವರ ಭವಿಷ್ಯದ ಆಶೋತ್ತರಗಳನ್ನು ನಿರೂಪಿಸುತ್ತದೆ.

* * *

**ಶ್ರೀ ಕೆ. ಎಮ್. ಜೆಧಿ** (ಬೊಂಬಾಯಿ, ಸಾಮಾನ್ಯ): ಡಾ.ಅಂಬೇಡ್ಕರ್ ಹಾಗೂ ಅವರ ಸಂಗಡಿಗರನ್ನು ನೂತನ ಸಂವಿಧಾನದ ನಿರ್ಮಾಣ ಕಾರ್ಯಕ್ಕೆ ಅಭಿನಂದಿಸುವೆ. ನಾವು ಈ ಮಹಾನ್ ಕಾರ್ಯಕ್ಕೆಂದೇ ಸುಮಾರು ಮೂರು ವರ್ಷ ಇಲ್ಲಿ ಸೇರಿದ್ದೇವೆ. ಹಲವು ಸದಸ್ಯರು, ಅಂಬೇಡ್ಕರರನ್ನು ಇಂದಿನ ಮನು ಎಂದೇ ಕರೆದಿದ್ದಾರೆ. ಆದರೆ ಅದು ಅವರಿಗೆ ಸರಿ ಕಂಡಿರಲಿಕ್ಕಿಲ್ಲ. ಏಕೆಂದರೆ ಅವರು ಮನು ದ್ವೇಷಿ. ಅಲ್ಲದೆ ೧೯೨೭ರಲ್ಲಿ ಅವರು ಬಹಿರಂಗ ಸಭೆಯಲ್ಲಿ ಮನುಸ್ಮೃತಿಯನ್ನು ಸುಟ್ಟುಹಾಕಿದ್ದಾರೆ. ಅವರು ಹರಿಜನರ ಮಹಾನ್ ನಾಯಕ. ಅವರನ್ನು ಹರಿಜನರು ಪೂಜಿಸುತ್ತಾರೆ. ಅಲ್ಲದೆ ಹೆಮ್ಮೆಯಿಂದ ಅವರನ್ನು ಭೀಮನೆಂದೇ ಹೊಗಳಿ, ಅವರು ಭೀಮಸ್ಮೃತಿಯನ್ನು ನಿರ್ಮಿಸಿದ್ದಾರೆ ಎಂದು ಹೊಗಳುತ್ತಾರೆ. ಹೀಗಾಗಿ ನಾನು ಸ್ವರ್ಶನಾದರೂ ಈ ಸಂವಿಧಾನವನ್ನು ಭೀಮಸ್ಮೃತಿ ಎಂದೇ ಕರೆಯಬಯಸುವೆ. ಡಾ. ಅಂಬೇಡ್ಕರರು ಓರ್ವ ಸಮರ್ಥ

ನ್ಯಾಯವಾದಿ ಮತ್ತು ತೀಕ್ಷ್ಣ ಬುದ್ಧಿಯುಳ್ಳವರು. ಅಸ್ಪೃಶ್ಯತೆಯನ್ನು ಕಾನೂನಿನ ಬಲದಿಂದ ತೊಡೆದುಹಾಕಿದ್ದಾರೆ. ಅಲ್ಲದೆ ಹರಿಜನರ ಹಿತಾಸಕ್ತಿಯನ್ನು ಸಮಗ್ರವಾಗಿ ಕಾಪಾಡಿದ್ದಾರೆ. ಈ ಒಂದು ಕಾರ್ಯಕ್ಕೆ ಹರಿಜನರು ಋಣಿಯಾಗಿರಬೇಕು. ಇದೇ ವಿಧವಾಗಿ ನಾವೆಲ್ಲರೂ ನಮ್ಮ ರಾಷ್ಟ್ರಪಿತ ಗಾಂಧೀಜಿಯವರಿಗೆ ಋಣಿಯಾಗಿರಬೇಕು. ಏಕೆಂದರೆ ಅವರ ಪ್ರಯತ್ನದ ಫಲದಿಂದಲೇ ನಮಗೆ ಸ್ವರಾಜ್ಯ ದೊರಕಿತು. ಅವರು ತಮ್ಮ ಜೀವನದುದ್ದಕ್ಕೂ ಹರಿಜನರ ಅಸ್ಪೃಶ್ಯತೆಯನ್ನು ನಿವಾರಿಸಲೆಂದೇ ಹೋರಾಟ ನಡೆಸಿದರು. ಆದರೆ ಅವರು ಇಂದು ನಮ್ಮೆದುರು ಇಲ್ಲ. ಅವರು ಕರಾಳ ಹಾಗೂ ಕ್ರೂರ ಯೋಜನೆಗೆ ಬಲಿಯಾದರು.

* * *

**ಶ್ರೀ ಜಯಪಾಲ ಸಿಂಗ್ (ಬಿಹಾರ: ಸಾಮಾನ್ಯ):** ಮಾನ್ಯರೆ, ನಾನು ಪುನರುಚ್ಚರಿಸದೆ, ತಾವು ತೋರಿದ ತಾಳ್ಮೆ ಹಾಗೂ ಡಾ. ಅಂಬೇಡ್ಕರರ ಜಾಣ್ಮೆಯನ್ನು ಅಭಿನಂದಿಸುವೆ.

**ಶ್ರೀ ಎ. ಥಾನು ಪಿಳ್ಳೈ:** ಕೊನೆಯ ಹಂತದಲ್ಲಿ ಈ ಸದನದಲ್ಲಿ ನಡೆದ ಕಾರ್ಯ ವಿಧಾನದ ಬಗೆಗೆ ತಾವು ಅನುಸರಿಸಿದ ಧೋರಣೆ ಹಾಗೂ ಆ ದಿಶೆಯಲ್ಲಿ ತಾವು ತೋರಿದ ಸಹನೆ ಶ್ಲಾಘನೀಯವಾಗಿದೆ. ಬಹುಶಃ ನಾವು ಚಂದ್ರನೊಡನೆ ಸಂಭಾಷಣೆ ಮಾಡಬೇಕೆಂದೇ ಇದ್ದು ಅದು ಏನಾದರೂ ತಮ್ಮ ಆಧೀನದಲ್ಲಿದ್ದರೆ ತಾವು ಅಲ್ಲಿ ಕೂಡಾ ಮತದಾನಕ್ಕೆ ಆಗ್ರಹಿಸುತ್ತಿದ್ದಿರೋ ಏನೋ. ಎರಡನೆಯದಾಗಿ ಕಾರ್ಯಕಲಾಪಗಳ ಬಗೆಗೆ ತಮ್ಮ ಸಹನೆ ಹಾಗೂ ಡಾ. ಅಂಬೇಡ್ಕರ್, ಟಿ. ಟಿ. ಕೃಷ್ಣಮಾಚಾರಿ, ಸಂತಾನಮ್ ಇತರರು ತೋರಿದ ಆಸಕ್ತಿ ಮತ್ತು ಪರಿಶ್ರಮವನ್ನು ವಂದಿಸದೇ ಇರಲಾರೆ. ವಿಶೇಷವಾಗಿ ನನ್ನ ಮಿತ್ರರಾದ ಟಿ. ಟಿ. ಕೆ. ಯವರು ನೀಡಿದ ಸಹಯೋಗವನ್ನು ಎಲ್ಲರೂ ನೆನೆಯಲೇಬೇಕು.

ಮಾನ್ಯರೇ, ಸಂವಿಧಾನವು ರಾಜ್ಯಗಳ ಸ್ವಾಯತ್ತತೆ ಹಾಗೂ ವ್ಯಕ್ತಿ ಸ್ವಾತಂತ್ರ್ಯವನ್ನು ತನ್ನ **'ಚೆಕ್ ಅಂಡ್ ಬ್ಯಾಲೆನ್ಸ್'** ವಿಧಾನದಿಂದ ನಿಬಂಧಿಸಿದೆ ಎಂಬ ಟೀಕೆ ಸೂಕ್ತವಲ್ಲ. ನಾನು ಆ ದೃಷ್ಟಿಕೋನದಿಂದ ಕಾಣುವುದಿಲ್ಲ. ಪ್ರಜಾಪ್ರಭುತ್ವವೆಂಬ ಫಸಲನ್ನು ತುಂಟ ದನಗಳ ಕಾಟದಿಂದ ರಕ್ಷಿಸುವ ಬೇಲಿಯೆಂದೇ ನಾನು ಭಾವಿಸುವೆ. ಹುಲಿ ಕುರಿಯನ್ನು ಕೊಂದು ಎತ್ತಿಕೊಂಡು ಹೋಗಬಾರದೆಂದೇ ಬೇಲಿಯನ್ನು ಭದ್ರವಾಗಿರಿಸುವುದು ಸರ್ವೇಸಾಮಾನ್ಯವಲ್ಲವೇ? ನಾಗರಿಕ ಸ್ವಾತಂತ್ರ್ಯ ಅಪಹರಣವಾಗಿದೆ ಎಂದು ಹೇಳುವರಿಗೆ ಇದೇ ನನ್ನ ಉತ್ತರ...

ಮಾನ್ಯರೇ, ಈ ಸಂವಿಧಾನದಲ್ಲಿ ಜಾತ್ಯಾತೀತ ಪ್ರಜಾಪ್ರಭುತ್ವದ ಬುನಾದಿಯನ್ನು ಭದ್ರಗೊಳಿಸಿದೆ. ಅದು ನಿಜವಾಗಿಯೂ ನಮ್ಮ ಪರಂಪರೆಗೆ ಅನುಗುಣವಾಗಿಯೂ ನಮ್ಮ ದೇಶದ ಮಹಾನ್ ನಾಯಕರಾದ ಗಾಂಧೀಜೀ ಅವರ ಉದ್ದೇಶಕ್ಕೆ ಅನುಗುಣವಾಗಿರುವುದರಿಂದ, ನಾವು ಶಾಂತಿ ಸಮೃದ್ಧಿಯನ್ನು ಪಡೆಯುವುದರಲ್ಲಿ ಸಂದೇಹವಿರಲಾರದು.

**ಶ್ರೀ ಲಕ್ಷ್ಮೀಸ್ವಾಮಿ ಭಾರತಿ:** ಮಾನ್ಯರೆ, ಈ ಮೂರು ವರ್ಷಗಳ ಅವಧಿಯಲ್ಲಿ ದೇಶಕ್ಕೆ ನಾವು ನೀಡಿರಬಹುದಾದ ಕಾಣಿಕೆಯು ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ. ಈ ಒಂದು ಅಲ್ಪ ಅವಧಿಯಲ್ಲಿ ನಾವು ಅಗಾಧವಾದ ಕಾರ್ಯವನ್ನು ಮಾಡಿದ್ದೇವೆ. ಅದು ಈ ದೇಶದ ಇತಿಹಾಸದ ತೆರೆಯ ಮೇಲೆ ಸದಾ ತೇಲುತ್ತಲೇ ಇರುತ್ತದೆ. ಏಕೆಂದರೆ ಈ ಅವಧಿಯಲ್ಲಿ ೫ ಮಹಾಘಟನೆಗಳು ಜರುಗಿರುವುವು.

೧. ದೇಶದ ವಿಭಜನೆ, ೨. ಸ್ವಾತಂತ್ರ ದೊರಕಿದ್ದು, ೩. ಮಹಾತ್ಮ ಗಾಂಧಿಯವರ ಕೊಲೆ, ೪. ದೇಶೀಯ ಸಂಸ್ಥಾನಗಳ ವಿಲೀನೀಕರಣ ೫. ಭಾರತ ಸಂವಿಧಾನದ ರಚನೆ.

* * *

**ಶ್ರೀ ಸಾರಂಗಧರ ದಾಸ:** ನಾನು ನಮ್ಮ ಹಿಂದೂ ಮಿತ್ರರ, ಗಣರಾಜ್ಯದ ಹೇಳಿಕೆಗಳನ್ನು ಒಪ್ಪಲಾರೆ. ನನ್ನ ಮಿತ್ರರು ಪುರಾತನ ಭಾರತದಲ್ಲಿ ಗಣತಂತ್ರ ಹಾಗೂ ಪ್ರಜಾಪ್ರಭುತ್ವಗಳು ಅಸ್ತಿತ್ವದಲ್ಲಿದ್ದವು ಎಂದು ಹೇಳುತ್ತಾರೆ. ಆದರೆ ಅದು ಕೇವಲ ಉನ್ನತ ವರ್ಗದವರಿಗೆ ಮಾತ್ರ ಮೀಸಲಾಗಿತ್ತು ಎಂಬುದನ್ನು ಸ್ಮರಿಸಬೇಕು. ಹಿಂದೂ ರಾಜಕೀಯ ವ್ಯವಸ್ಥೆಯಲ್ಲಿ ದಲಿತರು ಹಾಗೂ ಹರಿಜನರಿಗೆ ಎಂದೂ ಅವಕಾಶ ನೀಡಿರಲೇ ಇಲ್ಲ. ಹೀಗಾಗಿ ಪ್ರಜಾಪ್ರಭುತ್ವ ಜಾರಿಯಲ್ಲಿತ್ತೆಂದು ಹೇಳುವುದು ಸತ್ಯಕ್ಕೆ ದೂರವಾಗಿದೆ. ಈ ಸಂವಿಧಾನದ ಎರಡು ಉತ್ತಮ ಲಕ್ಷಣಗಳೆಂದರೆ ವಯಸ್ಕರ ಮತದಾನ ಪದ್ಧತಿ ಹಾಗೂ ಅಸ್ಪೃಶ್ಯತೆಯ ನಿವಾರಣೆ. ಮಾನ್ಯರೆ, ನಾನು ಅಮೆರಿಕ ಕುರಿತಂತೆ ಹೇಳಬಹುದಾದರೆ ಆ ದೇಶದಲ್ಲಿ ಕೇವಲ ಸ್ವತಂತ್ರ ನಾಗರಿಕರಿಗೆ ಮಾತ್ರ ಮತದಾನದ ಹಕ್ಕನ್ನು ನೀಡಲಾಗಿತ್ತು. ಏಕೆಂದರೆ ಅಂದಿನ ದಿನಗಳಲ್ಲಿ ಬಿಳಿಯರು ಹಾಗೂ ಕರಿಯರು ಕೂಲಿಗಳಾಗಿ ಪಶ್ಚಿಮ ಇಂಡೀಸ್ ಹಾಗೂ ಕೆರೆಬಿಯನ್ ದ್ವೀಪದಲ್ಲಿ ಕಾರ್ಯಮಾಡುತ್ತಿದ್ದರು. ಅವರಿಗೆ ಮತದಾನ ನೀಡಲಿಲ್ಲ. ಅವರು ಕೇವಲ, ಅಬ್ರಹಾಂ ಲಿಂಕನ್ ಅವಧಿಯಲ್ಲಿ ನಡೆದ ಹೋರಾಟದ ನಂತರ ಮತದಾನದ ಹಕ್ಕನ್ನು ಹೊಂದಿದರು. ಈ ಹಿನ್ನೆಲೆಯಲ್ಲಿ ವಯಸ್ಕರ ಮತದಾನದಿಂದ ಸ್ತ್ರೀಯರಿಗೆ ಹಕ್ಕು ದೊರೆಯುವುದಲ್ಲದೆ, ಸಮಾನತೆ ಹಾಗೂ ಅಸ್ಪೃಶ್ಯತೆಯ ನಿವಾರಣೆ ಈ ಮೂರು ದೊರಕುವುವು...

**ಶ್ರೀಮತಿ ಅಮ್ಮು ಸ್ವಾಮಿನಾಥನ್:** ನಾವು ಡಾ. ಅಂಬೇಡ್ಕರರ, ಕರಡು ಸಮಿತಿಯ ಸದಸ್ಯರಲ್ಲದೆ ಕಾರ್ಯಾಲಯದ ಸಿಬ್ಬಂದಿವರ್ಗದವರಿಗೂ ನಮ್ಮ ಅಭಿನಂದನೆಗಳನ್ನು ಸಲ್ಲಿಸಬೇಕು. ಏಕೆಂದರೆ ಅವರು ಹಗಲಿರುಳೂ ಈ ಕಾರ್ಯಕ್ಕೆ ಸಹಕರಿಸಿದ್ದಾರೆ. ಅವರ ಶ್ರಮ ಅಪಾರ ಹಾಗೂ ಅಗಾಧವಾದುದು. ನಾವು ಎಲ್ಲ ಅಡ್ಡಿ ಆತಂಕಗಳನ್ನು ಮೀರಿ ನಮ್ಮ ಸಂವಿಧಾನವನ್ನು ರೂಪಿಸಿದ್ದೇವೆ.

**ಶ್ರೀ ಎಲ್. ಎಸ್. ಭಾಸ್ಕರ** (ಸಿ. ಪಿ. ಬೀರಾರ, ಸಾಮಾನ್ಯ): ಅಧ್ಯಕ್ಷರೆ, ನಾನು ಡಾ. ಅಂಬೇಡ್ಕರರನ್ನು ಹಾಗೂ ಅವರ ಸಂಗಡಿಗರನ್ನು ಅವರು ಮಾಡಿದ ಕಾರ್ಯಕ್ಕೆ ಅಭಿನಂದಿಸುವೆ. ವಿಧಿ ೧೭ ಅಸ್ಪೃಶ್ಯತೆಯನ್ನು ನಿವಾರಿಸುತ್ತದೆ. ಇದಕ್ಕಾಗಿ ನಾನು ಅಂಬೇಡ್ಕರರನ್ನೂ ವಂದಿಸುವೆ. ಮುಂದುವರಿದು ವಿಧಿ ೩೩೮ ಪರಿಶಿಷ್ಟ ವರ್ಗದವರಿಗೆ ನ್ಯಾಯ ಒದಗಿಸುತ್ತದೆ. ಅಧ್ಯಕ್ಷರೆ, ನಾನು ಈ ದಿಶೆಯಲ್ಲಿ ಹರಿಜನರ ಸ್ಥಿತಿಗತಿಯನ್ನು ಈ ಕೆಳಕಂಡಂತೆ ಹೇಳಬಯಸುವೆ. ಅವರಿಗೆ ಸೇವೆಯಲ್ಲಿದ್ದ ಪರಿಸ್ಥಿತಿಯನ್ನೂ ನಾವು ಅರಿಯಬಹುದು.

## ಸಿ. ಪಿ. ಬಿರಾರ್

| ೧ | ೨ | ೩ |
|---|---|---|
| | ಜನಸಂಖ್ಯೆ ೧೯೩೧ ಖಾನೆ ಸುಮಾರಿ | ಗೆಜೆಟೆಡ್ ಅಧಿಕಾರಿಗಳು |
| ಬ್ರಾಹ್ಮಣರು | ೫,೪೨,೫೫೬ | ೪೪೮ |
| ಮರಾಠ ಹಾಗೂ ಇತರರು | ೧೮,೮೨,೬೫೪ | ೧೭ |
| ಪರಿಶಿಷ್ಟ ವರ್ಗದವರು | ೩೦,೫೧,೪೧೩ | ೩ |
| ಮುಸಲ್ಮಾನರು | ೭,೮೩,೬೯೭ | ೯೯ |
| ಸಿಖ್ಖರು | ೧೪,೯೯೬ | ೧೩ |
| | | ೫೮೦ |

ಬೊಂಬಾಯಿ ಶಾಸನ ಸಭೆಯಲ್ಲಿ ಶ್ರೀ ಆರ್.ಎಮ್. ನಲವಾಡಿಯವರ ಪ್ರಶ್ನೆಗೆ ಮಾನ್ಯ ಬಿ. ಜಿ. ಖೇರರು ಈ ಕೆಳಗಿನ ಅಂಕಿ ಸಂಖ್ಯೆಗಳಿಂದ ಉತ್ತರ ನೀಡಿದ್ದಾರೆ.

| ಸಮೂಹ | ಜನಸಂಖ್ಯೆ ೧೯೩೧ | ಗೆಜೆಟೆಡ್ ಅಧಿಕಾರಿಗಳು | ನಾನ್ ಗೆಜೆಟೆಡ್ ಅಧಿಕಾರಿಗಳು ಗುಮಾಸ್ತರು |
|---|---|---|---|
| ೧ | ೨ | ೩ | ೪ |
| ನಿಮ್ನ ವರ್ಗದವರು | ೧೮,೫೫,೧೪೮ | ೧೪ | ೮,೨೦೧ |
| ಮರಾಠರು ಇತರರು | ೪೨,೦೭,೧೫೯ | ೬೦೬ | ೪೩,೩೬೦ |
| ಬ್ರಾಹ್ಮಣರು | ೯,೧೮,೧೨೦ | ೧,೩೭೦ | ೨೧,೪೪೮ |
| ಮುಸ್ಲಿಂರು | ೧೯,೨೦,೩೬೮ | ೨೦೧ | ೧೩,೭೯೭ |
| ಇತರರು | | ೮೮೬ | ೧೮,೬೫೮ |

ಈ ಅಂಕಿ ಸಂಖ್ಯೆಗಳು ತೋರುವ ಅನ್ಯಾಯವನ್ನು ನಿವಾರಿಸಲು ಶೀಘ್ರ ಕ್ರಮ ಕೈಕೊಳ್ಳಲೇಬೇಕು. ಆದುದರಿಂದ ವಿಧಿ ೩೩೮ನ್ನು ಜಾರಿಯಲ್ಲಿ ತಂದು ಹರಿಜನರಿಗೆ ಸೇವೆಯಲ್ಲಿ ಅವರು ಜನಸಂಖ್ಯೆಯ ಆಧಾರದಂತೆ ಹುದ್ದೆಗಳನ್ನು ನೀಡಬೇಕು.

* * *

**ಶ್ರೀ ರಾಮಚಂದ್ರ ಗುಪ್ತ** (ಯು. ಪಿ. ಸಾ.): ನನಗೆ ಮಾತನಾಡಲು ಅವಕಾಶ ನೀಡಿದ ತಮಗೆ ವಂದನೆಗಳು. ಈ ಸಂವಿಧಾನವು ರಾಷ್ಟ್ರದ ಚರಿತ್ರೆಯಲ್ಲಿ ಒಂದು "ಮಹಾಸ್ವಾತಂತ್ರ್ಯ ಸನದಾಗಿ" ಮೆರೆಯುವುದರಲ್ಲಿ ಸಂದೇಹವೇ ಇಲ್ಲ. ಇದಕ್ಕಾಗಿ ನಮ್ಮ ಜನತೆಯು ನಿರಂತರ ಹೋರಾಟ ಹಾಗೂ ಕಷ್ಟಪಡಬೇಕಾದುದನ್ನು ನಾವು ಸ್ಮರಿಸಬಹುದಾಗಿದೆ. ಆದುದರಿಂದ ನಮಗೆಲ್ಲಾ ಇದು ಹೆಮ್ಮೆಯ ಸಂಗತಿಯಾಗಿದೆ. ನನಗೆ ತೋರಿದಂತೆ

ಜನವರಿ ೨೬, ೧೯೫೦ ಪವಿತ್ರ ದಿನವೆಂದೇ ನಮ್ಮ ಮುಂದಿನ ಪೀಳಿಗೆ ತಿಳಿಯುತ್ತದೆ. ಅಲ್ಲದೇ ಅದೇ ದಿನದಂದು ಈ ದೇಶದಲ್ಲಿ ಸ್ವಾತಂತ್ರ್ಯ ಸೂರ್ಯೋದಯವನ್ನೂ ಕಾಣುತ್ತದೆ.

ಈ ಸಂವಿಧಾನದಲ್ಲಿ ಸುಮಾರು ೪೦೦ ವಿಧಿಗಳಿವೆ. ಇದಕ್ಕೆಂದೇ ನಾವು ಮೂರು ವರ್ಷಗಳ ಕಾಲಾವಧಿಯನ್ನು ಕಳೆದಿರುವೆವು. ನಾವು ಪರಿಶ್ರಮ, ಪರಸ್ಪರರ ವಾದ ವಿವಾದ ಮತ್ತು ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ ಈ ಸಂವಿಧಾನವನ್ನು ಸಿದ್ಧಪಡಿಸಿದ್ದೇವೆ. ಇದಕ್ಕಾಗಿ ನಾನು ತಮ್ಮನ್ನು ಹಾಗೂ ಅಂಬೇಡ್ಕರರನ್ನೂ ವಂದಿಸುವೆ. ತಾವೀರ್ವರೂ ಬೇರೆಯವರೊಂದಿಗೆ ಹೇಗೆ ಹೊಂದಾಣಿಕೆಯನ್ನು ಹೊಂದಿದ್ದೀರಿ ಎಂಬುದಕ್ಕೆ ಈ ಮೂರು ವರ್ಷಗಳು ಸಾಕ್ಷಿಯಾಗಿವೆ.

ಇಂದು ನಮ್ಮ ಮುಂದಿರಬಹುದಾದ ಸಂವಿಧಾನವು ನಮ್ಮೆಲ್ಲರ ಚರ್ಚೆ, ತಿದ್ದುಪಡಿ ಹಾಗೂ ವಾದದ ಫಲವಾಗಿದೆ. ಈ ಸಂವಿಧಾನದ ಅಕ್ಷರ ಅಕ್ಷರವೂ ಸದನದ ಸದಸ್ಯರ ಚರ್ಚೆಗೆ ಈಡಾಗಿದೆ. ವಾಕ್ಯದಲ್ಲಿಯ ಕಾಮಾ ಮತ್ತು ಪೂರ್ಣ ವಿರಾಮಗಳನ್ನೂ ಗಮನಿಸಿದ ಕೀರ್ತಿ ನನ್ನ ಮಿತ್ರ ನಜೀರುದ್ದೀನ್ ಅಹ್ಮದ್‌ರಿಗೆ ಸಲ್ಲುತ್ತದೆ. ಒಂದು ರೀತಿಯಿಂದ ಎಲ್ಲಾ ವಿಷಯಗಳ ಬಗೆಗೆ ಒಮ್ಮತ ಬಾರದೇ ಹೋದರೂ ಬಹುಮತವನ್ನು ಯಾರು ಧಿಕ್ಕರಿಸಲಿಲ್ಲ. ಅಲ್ಲದೆ ಪ್ರಮುಖ ವಿಷಯಗಳಿಗೆ ಸಾಕಷ್ಟು ಅವಕಾಶ ನೀಡಿದ್ದು ಮೆಚ್ಚಲೇಬೇಕಾದ ವಿಷಯ.

ಒಂದೇ ವಾಕ್ಯದಲ್ಲಿ ಹೇಳಬಹುದಾದರೆ, ಈ ಸಂವಿಧಾನವು ರಾಜಿಯ ಒಂದು ಸಂಗಮವೆಂದೇ ಹೇಳಬೇಕು. ಈ ಒಂದು ಸಂತಸದ ವಾತಾವರಣದಲ್ಲಿ ಈ ಸಂವಿಧಾನ ಸಿದ್ಧವಾಗಿರುವುದು ಶ್ಲಾಘನೀಯ. ಯಾವ ಸಂಶಯವಿಲ್ಲದೆ ಸದನ ಇದನ್ನು ಅಂಗೀಕರಿಸುವುದು. ಮೂಲತಃವಾಗಿ ಸಿದ್ಧಪಡಿಸಿದ ಕರಡಿನಲ್ಲಿ ಅನೇಕ ತಿದ್ದುಪಡಿಗಳನ್ನು ತಂದಿರುವುದು ಈ ದೇಶದ ಸ್ಥಿತಿಗತಿಯ ಕೈಕನ್ನಡಿಯಾಗಿದೆ.....

* * *

# ಭಾರತ ಸರ್ಕಾರ ಕಾಯ್ದೆ ತಿದ್ದುಪಡಿ ಮಸೂದೆ

**ಮಾನ್ಯ ಸಭಾಧ್ಯಕ್ಷರು:** ಈ ದಿನದ ಮೊದಲನೆಯ ಕಾರ್ಯವೆಂದರೆ, ಡಾ. ಅಂಬೇಡ್ಕರರು ಮಂಡಿಸಿರುವ ನಿಲುವಳಿಯನ್ನು ಕೈಗೆತ್ತಿಕೊಳ್ಳುವುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** (ಬೊಂಬಾಯಿ ಸಾಮಾನ್ಯ): ಮಾನ್ಯರೇ, ಭಾರತ ಸರಕಾರ ಕಾಯ್ದೆ ೧೯೩೫ ಹೆಚ್ಚುವರಿ ತಿದ್ದುಪಡಿಯ ಮಸೂದೆಯನ್ನು ಮಂಡಿಸುವೆ.

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆ ಎಂದರೆ

ಭಾರತದ ೧೯೩೫ ಕಾಯ್ದೆಗೆ ಹೆಚ್ಚುವರಿ ತಿದ್ದುಪಡಿಗೆ ಅವಕಾಶ ನೀಡಬೇಕು.

ನಿಲುವಳಿಯನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಮಸೂದೆಯನ್ನು ಮಂಡಿಸಿರುವೆ.

**ಮಾನ್ಯ ಸಭಾಧ್ಯಕ್ಷರು:** ಮಸೂದೆ ಮಂಡಿಸಲಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೆ, ೧೯೩೫ನೇ ಶಾಸನಕ್ಕೆ ತಿದ್ದುಪಡಿ ತರುವ ಮಸೂದೆಯನ್ನು ಸದನ ಕೂಡಲೇ ಕೈಗೆತ್ತಿಕೊಳ್ಳಬೇಕೆಂದು ಕೋರುವೆ.

**ಮಾನ್ಯ ಸಭಾಧ್ಯಕ್ಷರು:** ನಿಲುವಳಿ ಮಂಡಿಸಲಾಗಿದೆ.

ನಿಲುವಳಿ ಅಂಗೀಕರಿಸಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಿಜವಾಗಿ ನನ್ನ ಮಿತ್ರರಾದ ನಜೀರುದ್ದೀನ್ ಅಹ್ಮದ್ ಅವರ ಮನದಲ್ಲಿ, ಸಂವಿಧಾನ ಸಭೆಯಿಂದ ಅಂಗೀಕರಿಸಿದ ಅನೇಕ ಮಸೂದೆಗಳ ಬಗೆಗೆ ಸಂಶಯವಿದೆ. ಸದನದಿಂದ ಸೂಚಿಸಲಾದ ಮಸೂದೆಯನ್ನು ನಾಲ್ಕನೆಯ ತಿದ್ದುಪಡಿ ಮಸೂದೆ ಎಂಬುದೇ ಸೂಕ್ತ. ಮೊದಲನೆಯ ಮಸೂದೆಯನ್ನು ಸಂವಿಧಾನ ಸಭೆಯು ಭಾರತ ಸರಕಾರ ೧೯೪೯ ಮಸೂದೆಯ ತಿದ್ದುಪಡಿಯೆಂದೇ ತಿದ್ದಲಾಯಿತು. ಎರಡನೆಯದನ್ನು ಭಾರತ ಸರಕಾರ ೧೯೪೯ ಮಸೂದೆಯ ಎರಡನೆಯ ತಿದ್ದುಪಡಿಯು ಕೈದಿಗಳನ್ನು ಒಂದು ಭಾಗದಿಂದ ಇನ್ನೊಂದು ವಿಭಾಗಕ್ಕೆ ವರ್ಗಾಯಿಸುವ ಬಗೆಗೆ ಇದೆ. ೧೯೪೯ರ ಮಸೂದೆಯು ತಿದ್ದುಪಡಿಯು ನಿರಾಶ್ರಿತರ ಆಸ್ತಿ ಮತ್ತು ಬಂಗಾಲದ ಚುನಾವಣೆಯದಾಗಿದೆ.

**ಶ್ರೀ ನಜೀರುದ್ದೀನ್ ಅಹ್ಮದ್:** ಅದನ್ನು ತಿದ್ದುಪಡಿ ಮಸೂದೆ ಎಂದು ಕರೆಯಲಾಗದು. ಅದಕ್ಕೆ ಬೇರೆ ಯಾವ ಹೆಸರಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ತಾವು ಉಪನಿಬಂಧನೆ ಒಂದು ಗಮನಿಸಿ, ಅಲ್ಲಿ **"**ಈ ಮಸೂದೆಯನ್ನು ೧೯೪೯ ಭಾರತ ಸರಕಾರದ ತಿದ್ದುಪಡಿ**"** ಮಸೂದೆ ಎಂದೇ ಕರೆಯಲಾಗಿದೆ. ಮುಂದಿನದನ್ನು ಮೂರನೆ ತಿದ್ದುಪಡಿ ೧೯೪೯ ನಿರಾಶ್ರಿತರ ಆಸ್ತಿ ಹರಾಜು ಹಾಗೂ ಪಶ್ಚಿಮ ಬಂಗಾಳದ ಚುನಾವಣೆ ಕುರಿತಾದ್ದಾಗಿದೆ.

ನಾವು ಸಂವಿಧಾನ ಸಭೆಯಲ್ಲಿ ಬೇರೆ ಎರಡು ತಿದ್ದುಪಡಿ ಮಸೂದೆಗಳನ್ನು ಅನುಮೋದಿಸಿರುವುದೇ, ಗೊಂದಲಕ್ಕೆ ಕಾರಣವಾಗಿದೆ. ಮೊದಲನೆಯದೆಂದರೆ ಪ್ರಿವಿ ಕೌನ್ಸಿಲ್‌ನ ಅಧಿಕಾರ ವ್ಯಾಪ್ತಿ. ಕೇಂದ್ರ ಸರಕಾರ ಮತ್ತು ಶಾಸನಮಸೂದೆ ೧೯೪೯ಯನ್ನು ತಿರಸ್ಕರಿಸುವ ಈ ಎರಡು, ಅವು ಭಾರತ ಸರಕಾರದ ತಿದ್ದುಪಡಿ ಮಸೂದೆಗೆ ಸಂಬಂಧಿಸಿಲ್ಲ. ಆದುದರಿಂದ ನಾವು ಈ ತಿದ್ದುಪಡಿಯನ್ನು ನಾಲ್ಕನೆಯ ತಿದ್ದುಪಡಿ ಎಂದು ಕರೆದರೆ ತಪ್ಪಾಗಲಾರದು. ಏಕೆಂದರೆ ಈ ಸದನವು ೧೯೩೫ ಭಾರತೀಯ ಸರಕಾರದ ಕಾಯ್ದೆಗೆ ಮೂರು ತಿದ್ದುಪಡಿಗಳನ್ನು ಮಾಡಿದೆ.

**ಶ್ರೀ ನಜೀರುದ್ದೀನ್ ಅಹ್ಮದ್:** ಆದರೆ ಮೂರನೆಯ ತಿದ್ದುಪಡಿ ಮಸೂದೆ ಎಂಬುವು ಮಸೂದೆಯೇ ಇಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಇದೆ. ಆ ಮಸೂದೆಯು ನಿರಾಶ್ರಿತರ ಆಸ್ತಿ ವಹಿಸಿಕೊಳ್ಳುವ, ಮಾರಾಟ ಮಾಡುವ, ನಿರ್ವಹಿಸುವ ವಿಷಯಗಳಿಗೆ ಸೇರಿದೆ. ಆ ಮಸೂದೆ ಇಲ್ಲಿ ನನ್ನ ಮುಂದೆಯೇ ಇದೆ.

**ಮಾನ್ಯ ಸಭಾಧ್ಯಕ್ಷರು:** ಈ ವಿಷಯದ ಬಗೆಗೆ ಗೊಂದಲವಿದೆ. ನಾಲ್ಕು ಮಸೂದೆಯ ಕ್ರಮಾಂಕವಲ್ಲ. ಆ ಮಸೂದೆಗೆ ಇಲ್ಲಿ ವಿವರಿಸಿರುವ ನಾಲ್ಕನೆಯ ತಿದ್ದುಪಡಿ ಮಾತ್ರ ಮಸೂದೆಯ ಕ್ರಮಾಂಕ ಬೇರೆ ಇದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸದ್ಯದ ಮಸೂದೆಯ ವಿವರಣೆ ಹಾಗೂ ಅದರ ಶಿರೋನಾಮೆ.

**ಮಾನ್ಯ ಸಭಾಧ್ಯಕ್ಷರು:** ಅದು ಕೇವಲ ವಿವರಣೆ, ಮಸೂದೆಯ ಕ್ರಮಾಂಕ ೬, ೧೯೪೯

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಸರಿ. ಸಂಕ್ಷಿಪ್ತ ಶಿರೋನಾಮೆ.

**ಮಾನ್ಯ ಸಭಾಧ್ಯಕ್ಷರು:** ಸಂವಿಧಾನ ಸಭೆಯು ಇಂದಿನವರೆಗೂ ೫ ಮಸೂದೆಗಳನ್ನು ಅನುಮೋದಿಸಿದೆ ಮತ್ತು ಇಂದಿನದು ೬ನೆಯದಾಗಿದೆ. ಆದರೆ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಇದು ನಾಲ್ಕನೆಯ ತಿದ್ದುಪಡಿ ಆದುದರಿಂದ ಇದನ್ನು ಭಾರತ ಸರಕಾರದ ಮಸೂದೆಯ ನಾಲ್ಕನೆಯ ತಿದ್ದುಪಡಿ ಎಂದೇ ಹೇಳಲಾಗಿದೆ.

**ಪಂಡಿತ್ ಹೃದಯನಾಥ್ ಕುಂಝ್ರು** (ಯು. ಪಿ. ಸಾ.): ಹಾಗಾದರೆ ಐದು ಮಸೂದೆಗಳಲ್ಲಿ ನಾವು ನಾಲ್ಕನ್ನು ಅನುಮೋದಿಸಿರುವೆವು...

**ಮಾನ್ಯ ಸಭಾಧ್ಯಕ್ಷರು:** ಇದು ಆರನೆಯದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಈ ಸದನದಲ್ಲಿ ನಾವು ಐದು ಮಸೂದೆಗಳನ್ನು ಅಂಗೀಕರಿಸಿದ್ದೇವೆ. ಅದರಲ್ಲಿ ಎರಡು ಭಾರತ ಸರಕಾರದ ೧೯೩೫ನೇ ಮಸೂದೆಯ ತಿದ್ದುಪಡಿಗೆ ಯಾವ ಸಂಬಂಧವನ್ನೂ ಹೊಂದಿಲ್ಲ.

**ಪಂಡಿತ್ ಹೃದಯನಾಥ್ ಕುಂಝ್ರು:** ಅವು ಸಂವಿಧಾನಕ್ಕೆ ಸಂಬಂಧಿಸಿರದೇ ಹೋದಲ್ಲಿ ಅವನ್ನು ಸಂವಿಧಾನ ಸಭೆಯ ಮುಂದೇಕೆ ಮಂಡಿಸಿದಿರಿ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸಂಕ್ಷಿಪ್ತ ಶಿರೋನಾಮೆಯು ಮಸೂದೆಯ ಉದ್ದೇಶಕ್ಕೆ ಭಿನ್ನವಾದದ್ದು.

**ಪಂಡಿತ್ ಹೃದಯನಾಥ್ ಕುಂಝ್ರು:** ಇಲ್ಲಿ ಪ್ರಶ್ನೆ ಎಂದರೆ ವಾದಿಗೆ ಪ್ರಿವಿ ಕೌನ್ಸಿಲಿಗೆ ಮನವಿಯನ್ನು ಸಲ್ಲಿಸುವ ಅಧಿಕಾರ ನಿರಾಕರಣೆಗೆ ಸಂಬಂಧಿಸಿದೆ. ಅದನ್ನು ೧೯೩೫ರ ಮಸೂದೆಗೆ ತಿದ್ದುಪಡಿಯನ್ನು ತಾರದೇ ನಡೆಯಬಲ್ಲದೇ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮುಂದಿನ ಮಸೂದೆಯು ಸಂಕ್ಷಿಪ್ತ ಶೀರ್ಷಿಕೆ ಕೇಂದ್ರ ಸರಕಾರ ಮತ್ತು ಶಾಸನಸಭೆ ತಿದ್ದುಪಡಿ ಮಸೂದೆ ೧೯೪೯. ಆ ಮಸೂದೆ ಭಾರತ (ಕೇಂದ್ರ ಸರಕಾರ ಮತ್ತು ಶಾಸನಸಭೆ) ಮಸೂದೆ ೧೯೪೯ ಸಂಸತ್ತಿನ ಕಾನೂನಾಗಿದೆ ಹೊರತು ಭಾರತ ಸರಕಾರ ೧೯೩೫ ಮಸೂದೆಗೆ ಸಂಬಂಧಿಸಿಲ್ಲ. ಮತ್ತೊಂದು ಮಸೂದೆ ಎಂದರೆ ಪ್ರಿನ್ಸಿ ಕೌನ್ಸಿಲಿನ ಅಧಿಕಾರ ವ್ಯಾಪ್ತಿಯನ್ನು ರದ್ದುಪಡಿಸುವ ೧೯೪೯ರ ಮಸೂದೆ.

**ಪಂಡಿತ್ ಹೃದಯನಾಥ್ ಕುಂಝ್ರು:** ಆದರೆ ಈ ಮೊದಲಿನ ಮಸೂದೆಗೆ ನನ್ನ ಮಿತ್ರರ ಸೂಚನೆಯಂತೆ ಅದೇ ಕೇಂದ್ರ ಶಾಸನಸಭೆಗೆ ತಿದ್ದುಪಡಿಯ ಮಸೂದೆಯೇ ಭಾರತ ಸರಕಾರದ ಕಾಯ್ದೆಯ ತಿದ್ದುಪಡಿ ಮಸೂದೆಯಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಸರಿಯಲ್ಲ. ಸಂಸತ್ತು ಬೇರೆಯಾಗಿಯೇ ಮಸೂದೆಯನ್ನು ಅನುಮೋದಿಸಿದ್ದು, ಅದನ್ನು ಭಾರತ (ಕೇಂದ್ರ ಸರಕಾರ ಮತ್ತು ಶಾಸನಸಭೆ) ಮಸೂದೆ ೧೯೪೬ ಎಂದೇ ಕರೆಯಲಾಗಿದೆ. ಈ ಮಸೂದೆ ಆ ಮಸೂದೆಗೆ ತಿದ್ದುಪಡಿ. ಹೀಗಾಗಿ ಆ ಮಸೂದೆ ಭಾರತ ಸರಕಾರದ ೧೯೩೫ ಕಾಯ್ದೆಗೆ ಸಂಬಂಧಿಸಿಲ್ಲ.

**ಶ್ರೀ ಆರ್.ಕೆ.ಸಿಧ್ವ:** ಬಹುಶಃ ಅಂಬೇಡ್ಕರರು ಜ್ಞಾಪಿಸಿಕೊಂಡಲ್ಲಿ ಹತ್ತಿ ಬೀಜಗಳ ಮಸೂದೆಯ ತಿದ್ದುಪಡಿಯು ಕೇವಲ ಹತ್ತಿಗೆ ತಂದ ತಿದ್ದುಪಡಿ; ಭಾರತ ಸರಕಾರದ ಕಾಯ್ದೆಗೆ ತಿದ್ದುಪಡಿಯಲ್ಲಿ ಇದನ್ನು ಅವರು ಪ್ರಸ್ತಾಪಿಸಿಯೇ ಇಲ್ಲ.

**ಗೌರವಾನ್ವಿತ ಡಾ. ಬಿ. ಆರ್.ಅಂಬೇಡ್ಕರ್:** ಹಾಗೆಂದಾಗ ಇದು ಆರನೆಯ ಮಸೂದೆ ಆದರೆ ಸಂಕ್ಷಿಪ್ತ ಶಿರೋನಾಮೆ ಬೇರೆಯಾಗಿದ್ದು ಮಸೂದೆಗಳ ಕ್ರಮಾಂಕಕ್ಕೆ ಸಂಬಂಧಿಸಿಲ್ಲ. ಈಗ ನಾವು ಸಂಕ್ಷಿಪ್ತ ಶಿರೋನಾಮೆಗಳ ಬಗೆಗೆ ಚರ್ಚಿಸುತ್ತಿದ್ದೇವೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ** (ಮದ್ರಾಸ್. ಸಾ): ಇದು ಕೇವಲ ನಾಮಪಟ್ಟಿ(ನಾಮಕರಣ)ಗೆ ಸೇರಿದ ವಿಷಯ. ವಾಸ್ತವವಾಗಿ ಈ ಹಿಂದೆ ಸಂಸತ್ತಿನಿಂದ ತಿದ್ದುಪಡಿಯಾದ ವಿಷಯಗಳಿಗೆ, ಬೇರೆ ಬೇರೆ, ಅವುಗಳಿಗೆ

ಸಂಬಂಧಿಸಿದ ಮಸೂದೆ ತಿದ್ದುಪಡಿಯ ಹೆಸರುಗಳನ್ನೇ ನೀಡಲಾಗಿದೆ. ಉದಾ: ಇಂಡಿಯಾ ಬರ್ಮಾ ತುರ್ತು ಅಧಿಕಾರಗಳ ಮಸೂದೆ ೧೯೪೨. ಆದುದರಿಂದ ನಾಮಕರಣದ ಪ್ರಶ್ನೆಯು ಈ ವಿಧವಾದ ತರ್ಕಕ್ಕೆ ಆಸ್ಪದ ನೀಡಬಾರದು. ಆದುದರಿಂದ ಸದನ ತನ್ನ ಕಾರ್ಯ ಕಲಾಪವನ್ನು ಮುಂದುವರಿಸಲಿ ಎಂದು ಸೂಚಿಸುತ್ತವೆ.

**ಶ್ರೀ ನಝೀರುದ್ದೀನ್ ಅಹ್ಮದ್:** ಮಸೂದೆ IV ಎಂದಿದೆಯೇ?

**ಮಾನ್ಯ ಸಭಾಧ್ಯಕ್ಷರು:** ಬಹುಶಃ ಇರಲೂಬಹುದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಇದೆ.

**ಶ್ರೀ ನಝೀರುದ್ದೀನ್ ಅಹ್ಮದ್:** ಅದು ನನಗೆ ದೊರೆತಿಲ್ಲ.

**ಗೌರವಾನ್ವಿತ ಡಾ. ಅಂಬೇಡ್ಕರ್:** ನಿಮ್ಮಲ್ಲಿ ಪ್ರತಿ ಇಲ್ಲದೇ ಹೋದಲ್ಲಿ ನಾವೇನು ಮಾಡಬಲ್ಲವು?

**ಮಾನ್ಯ ಸಭಾಧ್ಯಕ್ಷರು:** ಶೀರ್ಷಿಕೆಯೊಂದೇ ಅದು ಹೆಚ್ಚು ಮಹತ್ವದ್ದಲ್ಲ.

**ಗೌರವಾನ್ವಿತ ಡಾ. ಅಂಬೇಡ್ಕರ್:** ಅವರಿಗೆ ಬೇಕಾದಲ್ಲಿ ನಾನು ಅದರ ಕ್ರಮಸಂಖ್ಯೆ ನೀಡುವೆ.

ಮಸೂದೆ ನಂ. I,೧೯೪೯ ಅದರ ಶೀರ್ಷಿಕೆ "ಭಾರತ ಸರಕಾರ (ತಿದ್ದುಪಡಿ) ಮಸೂದೆ ೧೯೪೯."

೧೯೪೯ ಮಸೂದೆ II ನ್ನು "ಭಾರತ ಸರಕಾರ (ಎರಡನೆ ತಿದ್ದುಪಡಿ) ಮಸೂದೆ ೧೯೪೯"

೧೯೪೯ ಮಸೂದೆ III ನ್ನು "ಭಾರತದ (ಕೇಂದ್ರ ಸರಕಾರ ಮತ್ತು ಶಾಸನಸಭೆ) ತಿದ್ದುಪಡಿ ಮಸೂದೆ ೧೯೪೯"

೧೯೪೯ ಮಸೂದೆ IV ನ್ನು "ಭಾರತ ಸರಕಾರದ (ಮೂರನೆಯ ತಿದ್ದುಪಡಿ) ಮಸೂದೆ ೧೯೪೯"

ಮಸೂದೆ III & IV ಭಾರತ ಸರಕಾರದ ೧೯೩೫ ಮಸೂದೆಗೆ ಸಂಬಂಧಿಸಿಲ್ಲ. ಆದುದರಿಂದ ನಾವು ಭಾರತ ಸರಕಾರದ ೪ನೆಯ ತಿದ್ದುಪಡಿಯ ಮಸೂದೆ ಎಂದೇ ಕರೆದಿದ್ದೇವೆ.

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆಯೆಂದರೆ, ನಿಬಂಧನೆ ೧ರ ಉಪನಿಬಂಧನೆ(೧)ರಲ್ಲಿಯ ಪದಗಳು 'ನಾಲ್ಕನೆಯ ತಿದ್ದುಪಡಿ', 'ಮೂರನೆಯ ತಿದ್ದುಪಡಿ' ಬದಲಾಗಿ ಸೇರ್ಪಡಿಸಿದೆ.

ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು:** ಸಭೆಯ ಮುಂದಿನ ಪ್ರಶ್ನೆ ಎಂದರೆ:

ನಿಬಂಧನೆ ೧ ಮಸೂದೆಯ ಅಂಗವಾಗಿದೆ.

ನಿಲುವಳಿಯನ್ನು ಒಪ್ಪಲಾಯಿತು.

ನಿಬಂಧನೆ ೧ ಮಸೂದೆಗೆ ಸೇರಿಸಲಾಯಿತು.

## ನಿಬಂಧನೆ ೨

**ಶ್ರೀ ನಝೀರುದ್ದೀನ್ ಅಹ್ಮದ್:** ನಾನು ಮಂಡಿಸಲು ಕೋರುತ್ತೇನೆ.

ಎರಡನೆ ನಿಬಂಧನೆಯನ್ನು ಕೈ ಬಿಡಬೇಕು.

ಸರ್, ನಾನು ಮಂಡಿಸಲು ಕೋರುವೆ.

೩ನೆಯ ನಿಬಂಧನೆಯಲ್ಲಿ ಈ ಕೆಳಗಿನ ಕಾನೂನಿನ ವಿಷಯ ಲಗತ್ತಿಸಬೇಕು.

೫೨ ಮತ್ತು ೫೩ Vict ೬೩

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಹೇಳಬಹುದಾದರೆ ಈ ವಿಧವಾದ ಒಂದೇ ನಮೂನೆಯ ನಿಬಂಧನೆಯನ್ನು ಇತರ ೧೯೩೫ ಕಾಯ್ದೆ ತಿದ್ದುಪಡಿ ಮಸೂದೆಗೆ ಅನುಮೋದನೆ ನೀಡಿದೆ. ಆದುದರಿಂದ, ಸರಿಸಮಾನತೆ ಹಾಗೂ ವ್ಯಾಖ್ಯೆಗೆ ಅನುಗುಣವಾಗುವಂತೆ ಈ ಮಸೂದೆಯ ೨ನೆಯ ನಿಬಂಧನೆ ಮಸೂದೆಯ ಅನಿವಾರ್ಯ ಅಂಗವಾಗಿದೆ.

ಇನ್ನು ನನ್ನ ಮಿತ್ರರ ಸಲಹೆಯಂತೆ, ೧೮೯೭ ರ ಕಾಯ್ದೆಯ ಭಾಷ್ಯಕ್ಕೆ ಒಂದು ಟಿಪ್ಪಣಿಯನ್ನು ನೀಡಬೇಕು. ಇದು ಕರಡುಪ್ರತಿ ಬರಹಗಾರನಿಗೂ ಸಂಬಂಧಿಸಿದ ವಿಷಯ. ಅದನ್ನು ಅವರಿಗೆ ಸೂಚಿಸಲಾಗುವುದು. ಆದರೆ ಇದೇ ಮಾದರಿಯ ಟಿಪ್ಪಣಿಗಳನ್ನು ಭಾರತ ಸರಕಾರದ ೧೯೩೫ ಕಾನೂನಿನ ಇತರ ತಿದ್ದುಪಡಿಗಳಿಗೆ ಅನುಸರಿಸಲಾಗದು.

**ಶ್ರೀ ನಜೀರುದ್ದೀನ್ ಅಹ್ಮದ್:** ಡಾ. ಅಂಬೇಡ್ಕರರು ಹಿಂದಿನ ಎಲ್ಲಾ ಮಸೂದೆಗಳಲ್ಲಿ ಈ ನಿಬಂಧನೆ ಕಾಣಸಿಗುವುದು ಎಂದೇ ಹೇಳುತ್ತಿದ್ದಾರೆ. ಆದರೆ ಅದು ನನಗೆ ಗೋಚರಿಸಿಲ್ಲ. ಈ ದಿಶೆಯಲ್ಲಿಯ ನನ್ನ ವಿರೋಧವನ್ನು ತಳ್ಳಿಹಾಕಲಾಗಿದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಸ್ವಯಂ ಅರ್ಥವನ್ನು ಹೊಂದಿರುವ ಮಸೂದೆ. ಹೀಗಾಗಿ ಅದನ್ನು ವಿವರಿಸಲು ಯಾವ ಟಿಪ್ಪಣಿಯೂ ಬೇಕಾಗಿಲ್ಲ. ಶ್ರೀ ನಜೀರುದ್ದೀನ್ ಅಹ್ಮದ್ ಅವರ ತಿದ್ದುಪಡಿಯನ್ನು ತಿರಸ್ಕರಿಸಿ ನಿಬಂಧನೆಯನ್ನು ಸೇರಿಸಲಾಯಿತು.

* * *

# ನಿಬಂಧನೆ ೩

**ಶ್ರೀ ಹೆಚ್.ವಿ. ಪಾಠಸ್ಕರ್:** ನಾನು ಮಂಡಿಸುವೆ.

"ಮೂರನೆಯ ನಿಬಂಧನೆಯ" ಯಾವ ಪ್ರಾಂತ್ಯಗಳ ಹೆಸರನ್ನು ಬದಲಾಯಿಸುವ" ಪದಗಳ ನಂತರ "ಆ ಪ್ರಾಂತ್ಯ ಸದನದ ಸದಸ್ಯರು ಸೂಚಿಸಬಹುದಾದ ಹೆಸರನ್ನು" ಎಂದು ಸೇರಿಸಬೇಕು.

* * *

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಮಾನ್ಯರೇ, ಮೊದಲು ಪಾಠಸ್ಕರರ ತಿದ್ದುಪಡಿಯ ಬಗೆಗೆ ಹೇಳಬೇಕಾದರೆ ಅವರ ಸಲಹೆ, ವಿಧಿ ೨೯೦ರಲ್ಲಿ ಅಳವಡಿಸಲಾಗದು. ಅವರು ಪ್ರಕರಣ ೨೯೦(೧) ನಿಬಂಧನೆಯಲ್ಲಿಯ ಅಂಶದಲ್ಲಿಯ ಉಪನಿಬಂಧನೆಗಳಾದ (ಎ), (ಬಿ), (ಸಿ), (ಡಿ)ಗಳನ್ನು ಗಮನಿಸಿದಂತೆ ತೋರುವುದಿಲ್ಲ. ಅದನ್ನು ಅವರು ಗಮನಿಸಿದಲ್ಲಿ, ಅವರ ಸಲಹೆ ಎರಡು ಬಗೆಯ ಸ್ಥಿತಿಗೆ ಅವಕಾಶ ಮಾಡುತ್ತದೆ. ಅದೇನೆಂದರೆ ನೂತನ ನಿಬಂಧನೆಯ ಕಾರ್ಯಾಚರಣೆ ಅಂದರೆ ಉಪನಿಬಂಧನೆ (ಇ) ಯು, ಅವರು ಸೂಚಿಸಿದ ಪದಗಳಂತೆ ತಿದ್ದುಪಡಿಗೆ ಗುರಿಯಾಗುತ್ತದೆ. ಇದಲ್ಲದೆ ಉಪನಿಬಂಧನೆ (ಇ)ಯು ಗವರ್ನರ್ ಜನರೆಲ್ಲರು ಜನತೆಯ ಅಭಿಪ್ರಾಯವನ್ನು ಪಡೆಯುವ ಅಂಶದಡಿಯಲ್ಲಿ ಬರುತ್ತದೆ. ಹೀಗಾಗಿ ಸಮಸ್ಯೆ ಜಟಿಲಗೊಳ್ಳುವುದು. ಅವರ ಸಲಹೆಯಂತೆ ಜನಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆಯುವುದು ಗವರ್ನರ್ ಜನರಲ್‌ರಿಗೆ ಕಡ್ಡಾಯವಾಗುತ್ತದೆ. ಹೀಗಾಗಿ ಸಮಸ್ಯೆ ಉದ್ಭವಿಸುತ್ತದೆ. ಏಕೆಂದರೆ ಗವರ್ನರ್ ಜನರೆಲ್ಲರು ಎರಡು ಸದನಗಳ ಅಭಿಪ್ರಾಯವನ್ನು ಪಡೆಯಲೇಬೇಕಾಗುತ್ತದೆ. ಅದು ಅಷ್ಟು ಸುಲಭವಾದ ಕಾರ್ಯವಲ್ಲ. ಎರಡನೆಯದಾಗಿ ಅವರ ಸೂಚನೆ ಸೂಕ್ತವಲ್ಲ. ಏಕೆಂದರೆ ಉಪನಿಬಂಧನೆ (ಎ) ಗಾಗಿ ಇನ್ನೊಂದು ಅಂಶದಿಂದ ಆಡಳಿತ ನಡೆಸಬೇಕಾಗುತ್ತದೆ. ಈ ದ್ವಂದ್ವ ಸೂಕ್ತವಲ್ಲ.

**ಶ್ರೀ ಹೆಚ್. ವಿ. ಪಾಠಸ್ಕರ್:** ಅದು ಹಾಗಲ್ಲ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ಹಾಗೆಯೆ ಎಂದು ಹೇಳುವೆ. ಅದು ನಿಮಗೇನು ಗೊತ್ತು? ಆದುದರಿಂದ ಅವರು ಗವರ್ನರ್ ಜನರಲ್‌ರನ್ನು ತೊಂದರೆಗೆ ಸಿಲುಕಿಸುತ್ತಾರೆ. ಹೀಗಾಗಿ ಈ ಒಂದು ಹಂತದಲ್ಲಿ ಈ ಬಗೆಯ ಸಲಹೆಯನ್ನು ಅಂಗೀಕರಿಸುವುದು ತರ್ಕಬದ್ಧವಾಗಲಾರದು.

ಇನ್ನು ನನ್ನ ಮಿತ್ರರಾದ ಸಿಧ್ವ ಅವರ ತಿದ್ದುಪಡಿಯ ಬಗೆಗೆ, ನನಗೆ ತಿಳಿದಂತೆ ಅವರು ಗೊಂದಲಕ್ಕೆ ಈಡಾದಂತೆ ತೋರುತ್ತದೆ. ಏಕೆಂದರೆ ಅವರು ಹೇಳುವಂತೆ ಈ ಬಗೆಯ ಸೂಚನೆಗಳನ್ನು ಗವರ್ನರ್ ಜನರೆಲ್ಲರು ಮೂರು ದಿನಗಳ ಅವಧಿಯೊಳಗೆ, ಸಂಸತ್ತಿನ ಮುಂದೆ ಇರಿಸಿ ಒಪ್ಪಿಗೆ ಪಡೆಯಬೇಕೆಂದಿದ್ದಾರೆ. ಸಿಧ್ವ ಅವರು, ಈ ವಿಧವಾದ ಸಂಸತ್ ೨೬ ಜನವರಿ ೧೯೫೦ ರಂದು ಜಾರಿಯಲ್ಲಿ ಬರುವ ಅಂಶವನ್ನು ಮರೆತಿದ್ದಾರೆ. ಏಕೆಂದರೆ ಆ ದಿನ ಗವರ್ನರ್ ಜನರಲ್ಲರ ಹುದ್ದೆಯೇ ಇರುವುದಿಲ್ಲ. ಹಾಗೆ ೨೯೦ ಪ್ರಕರಣ ಮತ್ತು ಅನುಬಂಧಗಳೂ ಇರುವುದಿಲ್ಲ. ಜನವರಿ ೨೬ ರಂದು ವಿಧಿ ೩ ಜಾರಿಯಲ್ಲಿ ಬರುವುದು. ಹೀಗಾಗಿ ಅವರ ಸಲಹೆ ಸೂಕ್ತವಲ್ಲವೆಂದು ತಿಳಿಸಲು ವಿಷಾದವಾಗುತ್ತದೆ.

**ಶ್ರೀ ಆರ್. ಕೆ. ಸಿಧ್ವ:** ಗವರ್ನರ್ ಜನರಲ್ಲರು ಮಾಡುವ ಕಾರ್ಯಗಳೇ ರಾಷ್ಟ್ರಪತಿಗಳಿಗೆ ಅನ್ವಯಿಸುತ್ತದೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನನಗೆ ತಿಳಿದಂತೆ ಈ ಎರಡೂ ಸಲಹೆಗಳನ್ನು ಅಂಗೀಕರಿಸಲಾಗುವುದು. ಏಕೆಂದರೆ ಅವು ಕಾರ್ಯಾಚರಣೆಯಲ್ಲಿ ತರಲಾಗದಂತಿವೆ. ಸಂಸತ್ತಿನ ಅನುಮತಿಯನ್ನು ಕೋರುವ, ಎರಡು ವಿಷಯಗಳಿವೆ. ಮೊದಲನೆಯದಾಗಿ, ಭಾರತ ಸರಕಾರದ ೧೯೩೫ರ ಕಾನೂನಿನ ಅಡಿಯಲ್ಲಿ ಪ್ರಾಂತ್ಯಗಳು ಹೊಂದಿದ ಹೆಸರುಗಳು ಬೇರೆ ಬೇರೆಯಾಗಿದ್ದು, ಜನರಿಗೆ ಅವು ಸರಿಯಾಗಿ ಕಾಣದೇ ಹೋಗಬಹುದು. ಆದುದರಿಂದ ಅವರು, ಸಂವಿಧಾನ ಜಾರಿಗೆ ಬಂದ ಮೇಲೆ ತಮ್ಮ ಇಚ್ಛೆಯಂತೆ ಹೆಸರನ್ನು ಬದಲಾಯಿಸಲು ಬಯಸಬಹುದು. ಹೀಗಾಗಿ ಸಂವಿಧಾನ ಸಭೆಯಲ್ಲಿ ಈ ಬಗೆಗೆ ಈಗಾಗಲೇ ಚರ್ಚೆಯಾಗಿದೆ. ಸಂವಿಧಾನ ಜಾರಿಗೆ ಬರುವ ಮೊದಲೇ ಯಾರಾದರು ತಮ್ಮ ಪ್ರಾಂತ್ಯದ ಹೆಸರನ್ನು ಬದಲಾಯಿಸಬೇಕೆಂದರೆ ಗವರ್ನರ್ ಜನರಲ್ಲರ ಪರವಾನಿಗೆಯ ಪ್ರಶ್ನೆ ಬರುತ್ತದೆ.

ಈ ದಿಶೆಯಲ್ಲಿ ಹಲವಾರು ಭಯಭೀತಿಗಳಿವೆ. ಗವರ್ನರ್ ಜನರಲ್ಲರಿಗೆ ಸೂಚಿಸಿದ ಕೆಲವು ಪ್ರಾಂತ್ಯದ ಹೆಸರು ಬೇರೆಯವರಿಗೆ ಒಪ್ಪಿಗೆಯಾಗದೇ ಹೋಗಬಹುದು. ಹೀಗಾಗಿ ನೂತನ ಪ್ರಾಂತ್ಯಗಳ ಹೆಸರೇ ಈ ಸಂವಿಧಾನ ಸಭೆಗೆ ತಿಳಿಯದೇ ಹೋಗಲೂಬಹುದು. ಹೀಗಾಗಿ ೨೯೦ ಪ್ರಕರಣದಲ್ಲಿ ತಿಳಿಸಿದಂತೆ ಗವರ್ನರ್ ಜನರಲ್ಲರಿಗೆ ಪರಮಾಧಿಕಾರ ನೀಡಿರುವುದು ಸೂಕ್ತ. ಒಂದು ವೇಳೆ ನಾನು ಪಾಟಸ್ಕರರ ಸೂಚನೆಯನ್ನು ಒಪ್ಪಿದಲ್ಲಿ ಪ್ರಾಂತೀಯ ಸರಕಾರದ ಒಪ್ಪಿಗೆಯನ್ನು ಪಡೆಯಬೇಕು. ಅದು ಸಚಿವ ಸಂಪುಟಕ್ಕೆ ಸೇರಿದ ವಿಷಯ. ಹೀಗಾಗಿ ೨೯೦ ರಲ್ಲಿ ಹೇಳಲಾದ ವಿಷಯ ಎಂದರೆ ಪ್ರಾಂತ್ಯ ಸರಕಾರದ ಅಭಿಪ್ರಾಯವನ್ನು ಪಡೆಯಬೇಕು. ಇದು ಗವರ್ನರ್ ಜನರಲ್ಲರಿಗೆ ಬಂಧನಕಾರಿ ಎಂದು ತಿಳಿಯುವುದು ಸೂಕ್ತವಲ್ಲ. ನನಗೆ ತಿಳಿದಂತೆ, ಈ ಸದನದಲ್ಲಿ ಸಕ್ಸೇನಾ ಅವರ ಚರ್ಚೆಯಂತೆ ಯುನೈಟೆಡ್ ಪ್ರಾಂತ್ಯದ ಹೆಸರನ್ನು ಬದಲಾಯಿಸುವಲ್ಲಿ ೨೯೦ ರಂತೆಯೇ ಎಂದು ಸದನವೂ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

**ಮಾನ್ಯ ಸಭಾಧ್ಯಕ್ಷರು:** ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುವೆ. ನಜೀರುದ್ದೀನ್ ನಿಮ್ಮ ತಿದ್ದುಪಡಿ ಮರಳಿ ಪಡೆಯುವಿರಾ ಅಥವಾ ಮತದಾನಕ್ಕೆ ಮಂಡಿಸುವಿರಾ? ಅದು ಕೇವಲ ವಾಕ್ಯ ರಚನೆಗೆ ಸಂಬಂಧಿಸಿದ ವಿಷಯವಲ್ಲವೇ?

**ಶ್ರೀ ನಜೀರುದ್ದೀನ್ ಅಹ್ಮದ್:** ಅದು ಕರಡು ರಚನಾ ಸಮಿತಿಗೆ ಸೇರಿದ್ದು.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಅದು ತಪ್ಪಾದ ತಿದ್ದುಪಡಿ.

(ನಿಬಂಧನೆ ೩, ಪೂರ್ವ ಪೀಠಿಕೆ ಶೀರ್ಷಿಕೆಗಳನ್ನು ಒಪ್ಪಿ ಮಸೂದೆಯಲ್ಲಿ ಸೇರಿಸಲಾಯಿತು)

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ನಾನು ಮಂಡಿಸುವೆ.

"ಭಾರತ ಸರಕಾರದ ೧೯೩೫ ಕಾಯ್ದೆಗೆ, ಸದನದ ತೀರ್ಮಾನದಂತೆ ಹೆಚ್ಚುವರಿ ತಿದ್ದುಪಡಿಯನ್ನು ಸದನ ಅಂಗೀಕರಿಸಬೇಕು."

**ನಿಲುವಳಿಯನ್ನು ಅಂಗೀಕರಿಸಲಾಯಿತು.**

**ಮಿ. ಫ್ರಾಂಕ್ ಅಂಥೋನಿ** (ಪಿ.ಪಿ. ಮತ್ತು ಬಿರಾರ್: ಸಾಮಾನ್ಯ)

ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಚರ್ಚೆಗಳು ನಡೆಯುತ್ತಿದ್ದಾಗ, ತಾವು ನಿರಂತರವೂ ಅಧ್ಯಕ್ಷತೆ ವಹಿಸಿ, ಸೌಜನ್ಯದಿಂದಲೂ ವಿನಯಪೂರ್ವಕವಾಗಿಯೂ ಕಾರ್ಯಕಲಾಪಗಳನ್ನು ನಿರ್ವಹಿಸುವಲ್ಲಿ ನೆರವಾದ ಬಗ್ಗೆ ತಮ್ಮಲ್ಲಿ ನನ್ನ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಈ ಸಂದರ್ಭದಲ್ಲಿ ಇದು ಮೊದಲ ಕರ್ತವ್ಯ ಎಂದು ಭಾವಿಸಿದ್ದೇನೆ. ಕರಡು ರಚನಾ ಸಮಿತಿಯು ತನ್ನ ಕಠಿಣವಾದ ಮತ್ತು ಗುರುತರ ಜವಾಬ್ದಾರಿಯ ಕರ್ತವ್ಯವನ್ನು ಈಗಾಗಲೇ ಸಲ್ಲಿಸಿದ್ದುಂಟು. ಇನ್ನು ನನ್ನ ಬಲಗಡೆಗೆ ಕುಳಿತಿರುವ ನನ್ನ ಸನ್ಮಾನ್ಯ ಸ್ನೇಹಿತರೇ, ಡಾ. ಅಂಬೇಡ್ಕರ್ ಅವರಿಗೆ ಸಲ್ಲತಕ್ಕ ವಿಶಿಷ್ಟ ಪ್ರಶಂಸೆಯನ್ನು ಸಂಕ್ಷಿಪ್ತವಾಗಿ ಸಲ್ಲಿಸಬಯಸುತ್ತೇನೆ. ಹಲವಾರು ಸಂಪುಟಗಳ ಮತ್ತು ಖಂಡಿತವಾಗಿಯೂ ಕಷ್ಟಸಾಧ್ಯವಾದ ಈ ದಸ್ತಾವೇಜಿನ ರಚನೆಯಲ್ಲಿ ಒಳಗೊಂಡ ಕಾರ್ಯದ ಗುರುತರ ಭಾರವನ್ನು, ಆ ದಿಶೆಯಲ್ಲಿ ಅನಿವಾರ್ಯವಾದ ತದೇಕ ನಿಷ್ಠೆಯ ತೀವ್ರತೆಯನ್ನು ನಾವು, ನಮ್ಮಲ್ಲಿ ಯಾರೂ, ಅಂದಾಜು ಮಾಡಲು ಸಾಧ್ಯವಿಲ್ಲ ಎಂದು ಹೇಳಬಯಸುತ್ತೇನೆ. ಕೆಲವು ಸಂದರ್ಭಗಳಲ್ಲಿ ನಾನು ಅವರ ನಿಲುವನ್ನು ಒಪ್ಪಿರಲಿಕ್ಕಿಲ್ಲ. ಆದಾಗ್ಯೂ, ಸಿದ್ಧಾಂತಗಳನ್ನಷ್ಟೇ ಅಲ್ಲದೆ, ಸಂಬಂಧಪಟ್ಟ ವಿವರಗಳನ್ನು ಗ್ರಹಿಸುವ ತಮ್ಮ ಅಸಾಧಾರಣ ಶಕ್ತಿಯನ್ನು ಬಳಸಿ, ತಮ್ಮ ನಿಲುವನ್ನು ಸ್ಪಷ್ಟವಾಗಿ, ಖಚಿತವಾಗಿ ನಿರೂಪಿಸುತ್ತಿರುವಾಗ, ನಾನು ಅತ್ಯಂತ ಸಂತೋಷದಿಂದ ಆಲಿಸಿದ್ದುಂಟು. ಈ ಸಂವಿಧಾನಕ್ಕೆ ಮಿಶ್ರ ಪ್ರತಿಕ್ರಿಯೆ ದೊರೆತಿದೆ ಎಂದು ಹೇಳುತ್ತಾರೆ. ಸಹಜವೇ, ಅನಿವಾರ್ಯವೇ. ಕಾರಣವೆಂದರೆ, ಇದು ಸಂಯುಕ್ತ ಸ್ವರೂಪದ, ಸಂಮಿಶ್ರ ಸಂವಿಧಾನ. ಈ ಸಂವಿಧಾನವು, ಒಂದೆಡೆ ಆದರ್ಶ ಮತ್ತು ಇನ್ನೊಂದೆಡೆ ವಾಸ್ತವ, ಇವೆರಡೂ ತತ್ವಗಳನ್ನು ಮೇಳವಿಸಿ ಮೈವೆತ್ತ ಸಂವಿಧಾನ ಎಂದು ನಾನು ಭಾವಿಸಿದ್ದೇನೆ. ನನ್ನ ಸ್ನೇಹಿತರ ಪೈಕಿ ಕೆಲವರು ಉತ್ಕಟ ಆದರ್ಶವಾದಿಗಳು, ಇದನ್ನು ಟೀಕಿಸಿದ್ದಾರೆ. ಅವರ ಪ್ರಕಾರ, ಟೆನ್ ಕಂಮಾಂಡ್‌ಮೆಂಟ್ಸ್ ಮಾದರಿಯಲ್ಲಿ ಒಂದು ಕಟ್ಟುನಿಟ್ಟಾದ ಕಟ್ಟಲೆಗಳ ಸಂಪುಟವಾಗಿರಬೇಕಿತ್ತು, ಹೊರತು ಇಂಥ ಸಂಮಿಶ್ರ ದಸ್ತಾವೇಜು ಅವರಿಗೆ ಇಷ್ಟವಾಗಲಿಲ್ಲ. ಅವರು ಅಪೇಕ್ಷೆಪಟ್ಟ ಹಾಗೆ ಅತಿಶಯ ಆದರ್ಶದ ಸಂವಿಧಾನ ಆಗಿದ್ದರೆ, ಆ ಸಂವಿಧಾನವು ಆಡಳಿತಾತ್ಮಕ ವಾಸ್ತವಗಳ ಮತ್ತು ರಾಜಕೀಯ ಸಂಕಟಗಳ ಮೊದಲ ಆಘಾತಕ್ಕೆ ಶಿಥಿಲಗೊಳ್ಳುತ್ತಿತ್ತು.

ನಾನು ಹೇಳಿರುವ ಹಾಗೆ, ನಾವು ಈ ಸಂವಿಧಾನವು ಆಕರ್ಷಕವು ಸ್ಫೂರ್ತಿದಾಯಕವು ಆದ ದಸ್ತಾವೇಜು ಆಗುವ ದಿಶೆಯಲ್ಲಿ ಆದರ್ಶವಾದದ ಹಲವಾರು ಅಂಶಗಳನ್ನು ಇದರಲ್ಲಿ ಅಳವಡಿಸಿಕೊಂಡಿದ್ದೇವೆ. ಮಾತ್ರವಲ್ಲದೆ ಸಂವಿಧಾನದಲ್ಲಿ ಸೇರಿಸಲಾದ ಆದರ್ಶದ ಅಂಶಗಳು ಕುಂಠಿತಗೊಳ್ಳದ ಹಾಗೆ ಅಥವಾ ಅವು ವಿಲೋಪಗೊಳ್ಳದ ಹಾಗೆ ಅದನ್ನು ಅನನ್ಯವಾಗಿ ತಾಂತ್ರಿಕ ಅಥವಾ ಭೌತಿಕ ಅಂಶಗಳ ಮೇಲೆ ಮಾತ್ರವೇ ನೆಲೆಗೊಳಿಸಿಲ್ಲ. ಮಾನ್ಯರೆ, ಈ ಸಂವಿಧಾನವು ಪರಿಪೂರ್ಣ ಅಲ್ಲ ಎಂದು ನನಗೂ ಗೊತ್ತು. ಆದರೆ ಅದನ್ನು ಈಗಿರುವ ಹಾಗೆ ರೂಪುಗೊಳಿಸುವಲ್ಲಿ ನಾವು ಪ್ರಜಾತಂತ್ರಕ್ಕೆ ಆಧಾರಭೂತವಾದ ಸಕಲ ಅಂಶಗಳನ್ನು

ಪರಿಶೀಲಿಸಿದ್ದುಂಟು. ಸತರ್ಕ ವಿಚಾರ ಮಾಡಿದ್ದುಂಟು. ಸಿದ್ಧಾಂತಗಳನ್ನು ತೀಕ್ಷ್ಣ ವಿಶ್ಲೇಷಣೆಗೆ ಗುರಿಪಡಿಸಿದ್ದುಂಟು. ಒಮ್ಮೊಮ್ಮೆ ವಾದವಿವಾದಗಳು ಭೀಕರವಾಗಿ, ರೋಮನ್ ಸಾಮ್ರಾಜ್ಯದ ಕಾಲದಲ್ಲಿ ಪ್ರಚಲಿತವಾಗಿದ್ದ, ದೈಹಿಕ ಸಾಮರ್ಥ್ಯವನ್ನು ಪ್ರಯೋಗಿಸಿಯೇ ತೀರ್ಮಾನ ಎಂಬ ಅವಸ್ಥೆಗೂ ಹೋದದ್ದುಂಟು. ವಿಚಾರ ವಿಮರ್ಶೆಯು, ವಾದವಿವಾದಗಳ ಸಂಘರ್ಷ ಎಂದು ಭಾವಿಸಿದ್ದೇನೆ. ಆದಾಗ್ಯೂ, ಆಖೈರಾಗಿ, ಪರಸ್ಪರರ ನಿಲುವುಗಳನ್ನು ತಿಳಿದುಕೊಳ್ಳುವ ತಿಳಿವಳಿಕೆಯೇ ಮೇಲುಗೈ ಆಗಿ, ಸೌಹಾರ್ದ ಭಾವನೆಯು ನೆಲೆಗೊಂಡು ಚರ್ಚೆಗಳು ಸುಮಧುರ ತೀರ್ಮಾನಕ್ಕೆ ತಲ್ಪಿದ್ದುಂಟು. ಒಟ್ಟಿನಲ್ಲಿ, ನಾನು ಇಂತು ನಿವೇದಿಸಿಕೊಳ್ಳಬಯಸುತ್ತೇನೆ. ಆಖೈರಾಗಿ ನಾವು ಒಂದು ಉತ್ತಮ ಸಂವಿಧಾನವನ್ನು ರೂಪಿಸುವಲ್ಲಿ ಸಫಲರಾಗಿದ್ದೇವೆ. ಇದು ನನ್ನ ಅನಿಸಿಕೆ.

ಈ ಸಂವಿಧಾನವು ಅವಿಶ್ವಾಸನೀಯ ದಸ್ತಾವೇಜು ಆಗಿರುವ ಸಾಧ್ಯತೆ ಇಲ್ಲವೆಂದಲ್ಲ. ಕಾರಣವೆಂದರೆ, ಅದು ಪರಿಪೂರ್ಣರಲ್ಲದ ಮನುಷ್ಯರು ರೂಪಿಸಿದ ದಸ್ತಾವೇಜು, ಅನಿವಾರ್ಯವಾಗಿ ಸಕಲ ರೀತಿಯಲ್ಲಿ ದೋಷರಹಿತವಾಗಿರುವ ಸಂಭವವಿಲ್ಲ. ಆದಾಗ್ಯೂ ನಾವು ಒಂದು ಒಳ್ಳೆಯ ಕಾರ್ಯವನ್ನು ನಿರ್ವಹಿಸಿದ್ದೇವೆ ಎಂಬ ನಂಬಿಕೆ ನನಗುಂಟು. ಅದು ಕಾರಣ, ಈ ಸಂವಿಧಾನವು ನಮ್ಮ ಶುಭಕಾಮನೆಗಳಿಗೂ, ಶುಭಾಶೀರ್ವಾದಗಳಿಗೂ ಅರ್ಹವಾಗಿದೆ ಎಂದು ನಾನು ನಂಬಿದ್ದೇನೆ. ಆದರೆ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಮರೆಯುವಂತಿಲ್ಲ. ಈಗ ಈ ಸಂವಿಧಾನವನ್ನು ನೇಮಿಸಿಕೊಟ್ಟ ಶುಭಕಾರ್ಯದ ಗುರಿಯತ್ತ ಕಳಿಸುವಾಗ ನಾವು ನೆನಪಿಡಬೇಕಾದದ್ದು, ನಾವು ಭಾರೀ ಗಾತ್ರದ ಮತ್ತು ಗುರುತರ ಮಹತ್ವದ ಒಂದು ದಸ್ತಾವೇಜನ್ನು ರೂಪಿಸಿದ್ದೇವೆ ಎಂದಲ್ಲ ಅಥವಾ ಅಲ್ಪಸಂಖ್ಯಾತರಿಗಾಗಿ ಸುಯೋಜಿತವಾದ ಮತ್ತು ವಿಸ್ತೃತವಾದ ಗ್ಯಾರಂಟಿಗಳನ್ನು ಒದಗಿಸುವರೆ ಪ್ರಯತ್ನಿಸಿದ್ದೇವೆ ಎಂದಲ್ಲ. ಆದರೆ ಮುಖ್ಯವಾಗಿ ನೆನಪಿಡಬೇಕಾದ ಸಂಗತಿಯೆಂದರೆ. ಈ ಸಂವಿಧಾನವು ಯಾವ ಪರೀಕ್ಷೆಗೆ ಒಳಗಾಗಬೇಕು ಮತ್ತು ಆ ಯಾವ ಪರೀಕ್ಷೆಯ ಮೂಲಕವೇ ಅದು ನೆಲೆಗೊಳ್ಳುವುದೋ ಅಥವಾ ನೆಲೆತಪ್ಪುವುದೊ, ಆ ಆಖೈರು ಪರೀಕ್ಷೆ ಎಂದರೆ ಈ ಸಂವಿಧಾನವನ್ನು ಯಾವುದೇ ಉದ್ದೇಶದಿಂದ ಮತ್ತು ಮನೋಭಾವನೆಯಿಂದ ಈ ಸಂವಿಧಾನದ ಉಪಬಂಧಗಳನ್ನು ಜಾರಿಗೊಳಿಸಲಾಗುವುದೋ ಆ ಉದ್ದೇಶ ಮತ್ತು ಮನೋಭಾವನೆಯೇ.

**ಡಾ. ಪಟ್ಟಾಭಿ ಸೀತಾರಾಮಯ್ಯ:** ..........ಆಖೈರಾಗಿ ನಾನು ಒಂದು ಪ್ರಶ್ನೆ ಕೇಳುತ್ತೇನೆ:– ಸಾರಾಂಶದಲ್ಲಿ, ಈ ಸಂವಿಧಾನ ಎನ್ನುವುದಾದರೂ ಏನು? ಸಂವಿಧಾನ ರಾಜಕೀಯದ ಆಧಾರಗ್ರಂಥ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ರಾಜಕೀಯ ನಾವಿಕನಿಗೆ ದಿಕ್‌ಸೂಚಿ ಇದ್ದಹಾಗೆ. ಎಷ್ಟು ಉತ್ತಮವಾಗಿದ್ದರೂ ಸಂವಿಧಾನ ನಿರ್ಜೀವವಾದ, ಅಸಂವೇದನಾ ಶೂನ್ಯವಾದ ದಸ್ತಾವೇಜು. ಅದು ತಾನಾಗಿಯೇ ಜಾರಿಗೊಳ್ಳಬಲ್ಲವೋ ಅಷ್ಟು ಮಟ್ಟಿಗೆ ಅದು ಉಪಯುಕ್ತವಾಗುತ್ತದೆ, ಉತ್ತಮವಾಗುತ್ತದೆ. ಕಾರಣವೆಂದರೆ, ಅದರಲ್ಲಿ ಪ್ರಚ್ಛನ್ನವಾದ, ವಿಹಿತವಾದ ಪ್ರಚಂಡವಾದ ಶಕ್ತಿಯುಂಟು. ಅದನ್ನು ಬಳಸಿಕೊಳ್ಳುವಲ್ಲಿ ನಾವು ಅನುಸರಿಸುವ ನಿಲುವನ್ನು ಅವಲಂಬಿಸುತ್ತದೆ ನಮಗೆ ದೊರೆಯುವ ಸಕಲ ಸತ್ಫಲ. ನಾವು ಸಂವಿಧಾನದ ಪದಪ್ರಯೋಗವನ್ನು ಪರಿಗಣಿಸುತ್ತ ಅದರ ಅಂತಸ್ಸತ್ವವನ್ನು ಕಡೆಗಣಿಸುವೆವೋ ಅಥವಾ ಅದರ ಪದಪ್ರಯೋಗವನ್ನು ಮತ್ತು ಆ ಮೂಲಕ ಹೊಮ್ಮುವ ಅರ್ಥವಿಶೇಷವನ್ನು ಸಮ ಸಮವಾಗಿ ಅನುಸರಿಸುವೆವೋ, ಇದನ್ನೇ ಅವಲಂಬಿಸಿದೆ ಸಂವಿಧಾನದಿಂದ ದೊರೆಯುವ ನಾವು ದೊರಕಿಸಿಕೊಳ್ಳಬೇಕಾದ ಯಶಸ್ಸು ಅಥವಾ ಅಪಯಶಸ್ಸು. ನಿಘಂಟುವಿನ ಪದಗಳು ಒಂದೇ ಆಗಿರುತ್ತವೆಯಾದರೂ ವಿಭಿನ್ನ ಗ್ರಂಥಕರ್ತರ ಲೇಖನದ ವಿಭಿನ್ನ ಶೈಲಿಗಳ ಮೂಲಕ ವಿಭಿನ್ನ ಅರ್ಥಗಳನ್ನು ಪಡೆಯುತ್ತವೆ. ಅದೇ ಸ್ವರ ಮತ್ತು ಅದೇ ಲಯ. ಆದರೂ ಅವೆರಡೂ ಸೇರಿ ವಿಭಿನ್ನ ಸಂಗೀತಗಾರರ ಮೂಲಕ ವಿಭಿನ್ನ ಸಂಗೀತವನ್ನು ಹೊಮ್ಮಿಸುತ್ತದೆ.

ಹಾಗೆಯೇ, ಅದೇ ಕುಂಚ ಅದೇ ಬಣ್ಣ. ಆದರೂ, ವಿಭಿನ್ನ ಚಿತ್ರಕಲಾವಿದರ ಮೂಲಕ ವಿಭಿನ್ನ ಚಿತ್ರಗಳಾಗಿ ಒಡಮೂಡುತ್ತವೆ. ಸಂವಿಧಾನದ ವಿಚಾರವೂ ಹಾಗೆಯೇ. ಅದನ್ನು ನಾವು ಹೇಗೆ ಬಳಸಿಕೊಳ್ಳುವೆವೋ, ಅಂಥ ಫಲವು ನಮಗೆ ದೊರೆಯುತ್ತದೆ.

............ಹೇಳುವುದೆಲ್ಲ ಹೇಳಿದ್ದಾಯಿತು. ಮಾಡಬೇಕಾದದ್ದಲ್ಲ ಮಾಡಿದ್ದಾಯಿತು. ಇನ್ನು ಉಳಿದ ಸಂಗತಿಯಿಷ್ಟೆ. ಈ ಸಂವಿಧಾನವು ಅಂತಿಮವಾಗಿ ಈ ರೂಪ ವಿಶೇಷವನ್ನು ಪಡೆಯುವ ಕಾರ್ಯದಲ್ಲಿ ನೆರವಾದ ಆರು ಜನ ಮಹನೀಯರನ್ನು ವಿಶೇಷವಾಗಿ ನೆನೆಯಬೇಕು. ನಮ್ಮ ಸ್ನೇಹಿತರಾದ ಡಾ.ಅಂಬೇಡ್ಕರ್, ಹೊರಟುಹೋಗಿದ್ದಾರೆ. ಇಲ್ಲದಿದ್ದರೆ ಈ ಸಂವಿಧಾನ ರಚನಾ ಕಾರ್ಯದಲ್ಲಿ ಅವರು ಒದಗಿಸಿದವನ್ನು ಅವರಿಗೆ ಹೇಳುತ್ತಿದ್ದೆ. ಅರ್ಥಾತ್ "ತಮ್ಮ ಪ್ರಚಂಡ ಜ್ಞಾನಶಕ್ತಿ, ಪ್ರತಿರೋಧವನ್ನು ಮೀರಿನಿಲ್ಲುವ, ದುರ್ದಮ್ಯವಾದ, ಅಜೇಯವಾದ ಮತ್ತು ತನ್ನನ್ನು ವಿರೋಧಿಸಿ ಬರುವ ಸಕಲವನ್ನು ನೆಲಸಮಗೊಳಿಸುವ ಸಾಮರ್ಥ್ಯವುಳ್ಳ ಜ್ಞಾನಶಕ್ತಿ, ಪರಿಣಾಮಗಳ ಪರಿವೆ ಇಲ್ಲದೆ ಕಾರ್ಯ ತನಗೆ ನಿಯೋಜಿಸಿದ್ದನ್ನು ದೃಢಸಂಕಲ್ಪದಿಂದ ಸಮರ್ಥಿಸುವ ಅಗತ್ಯ ಧೀಮಂತಿಕೆ. ತರುವಾಯ, ಸ್ಮರಿಸಬೇಕಾದ, ಕೃತಜ್ಞತೆಗೆ ಅರ್ಹರಾದ ಮಹಾನುಭಾವ ಶ್ರೀ ಅಲ್ಲಾಡಿ ಅವರು ನಮ್ಮ ನೆರವಿಗೆ ತಂದದ್ದು ಮಹಾಸಾಗರದಷ್ಟು ಆಳವಾದ ವಿದ್ವತ್ತು ಮಾತ್ರವಲ್ಲದೆ, ಇಡೀ ವಿಶ್ವದ ವಿಭಿನ್ನ ದೇಶಗಳ ಸಂವೈಧಾನಿಕ ಕಾನೂನು ಅವರಿಗೆ ಅಂಗೈ ನೆಲ್ಲಿಕಾಯಿ ಹಾಗೆ ಸಂವಿಧಾನವನ್ನು ರೂಪಿಸುವುದಿಲ್ಲ ಅವರು ವಹಿಸಿದ ಪಾತ್ರ ಅದ್ವಿತೀಯ. ಆ ಪಾತ್ರದ ಶಿಖರ ಕಾರ್ಯ ಇನ್ನೂ ಬಾಕಿಯುಂಟು. ಅವರು ಈ ಸಂವಿಧಾನವನ್ನು ಕುರಿತು ಒಂದು ಮೀಮಾಂಸೆಯನ್ನು ಬರೆದು ಮುಗಿಸಿದಾಗಲೇ ಕೆಲಸ ಪೂರ್ತಿಯಾಗುತ್ತದೆ. ಹಾಗೆ ಮಾಡುವಂತೆ ಅವರಿಗೆ ಶ್ರೀ ಸಂತಾನಮ್ ಅವರೇ ಇತ್ತೀಚೆಗೆ ವಿನಂತಿಮಾಡಿಕೊಂಡಿದ್ದಾರೆ. ಅದನ್ನು ಅಲ್ಲಾಡಿಯವರು ಪೂರೈಸುತ್ತಾರೆ ಎಂದು ನಾನು ನಂಬಿದ್ದೇನೆ.

ಅನಂತರದ ಮಹಾನುಭಾವರು ಶ್ರೀ ಗೋಪಾಲ ಸ್ವಾಮಿ ಅಯ್ಯಂಗಾರ್. ಹುಡುಗಿಯಂತೆ ಲಜ್ಜಾಶೀಲ ಸ್ವಭಾವ. ಯಾರ ಗೊಡವೆಗೂ ಹೋಗುವವರಲ್ಲ. ಆದರೆ, ಸಂದರ್ಭಾನುಸಾರ ಅನಿವಾರ್ಯದ ಪಕ್ಷದಲ್ಲಿ, ಸನ್ನಿವೇಶಕ್ಕೆ ತಕ್ಕಂಥ ಉತ್ತುಂಗ ಶೃಂಗದೆತ್ತರ ಏರಬಲ್ಲವರು.

ಅನಂತರ ಶ್ರೀ ಮುನ್ಷಿ ಅವರು. ಅವರು ಗ್ರಹಣಶೀಲತೆ ಮತ್ತು ಸಮುತ್ಥಾನ ಶೀಲತೆ; ವಿಭಿನ್ನ ವಿಷಯಗಳ ಬಗ್ಗೆ ವಿಶ್ವ ವಿಶಾಲ ಜ್ಞಾನ, ಅವರ ತೀಕ್ಷ್ಣ ಬುದ್ಧಿ ಮತ್ತು ಆಶುವ್ಯುತ್ಪನ್ನಮತಿ ಇವೆಲ್ಲವನ್ನು ಮೇಳವಿಸಿಕೊಂಡ ಇನ್ನೊಬ್ಬ ಪ್ರತಿಭಾವಂತನನ್ನು ಎಲ್ಲಿ ಹುಡುಕೋಣ? ಅವರು ನಮ್ಮ ಕೆಲಸಕ್ಕೆ ಒದಗಿಸಿದ ನೆರವಿಗೆ ಸರಿಸಾಟಿಯಿಲ್ಲ.

ಶ್ರೀ ಮಾಧವರಾವ್ ಅವರು ಈಗ ಇಲ್ಲಿ ಇಲ್ಲ. ಅವರು ಮೈಸೂರಿನ ದಿವಾನರಾಗಿದ್ದರು. ಅವರು ನಮ್ಮ ಸಮಿತಿಯ ಕೆಲಸದಲ್ಲಿ ಬಹಳಷ್ಟು ಶ್ರಮವಹಿಸಿದ್ದಾರೆ. ಅವರ ವಿಭಿನ್ನ ಕ್ಷೇತ್ರದಲ್ಲಿ ದುಡಿದವರು. ವಿಶಾಲ ಅನುಭವ ಉಳ್ಳವರು. ಅವರ ಸಾರ್ವಜನಿಕ ಸೇವಾ ಜೀವನ ಪ್ರಾರಂಭವಾದದ್ದು ಮೈಸೂರು ವಿಭಾಗದ ಅಸಿಸ್ಟಂಟ್ ಕಮೀಷನರ್ ಆಗಿ. ಆ ಸಮಯದಲ್ಲಿ ನಾನು ಇನ್ನು ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾರ್ಥಿ ಆಗಿದ್ದೆನು. ಅಸಿಸ್ಟಂಟ್ ಕಮೀಶನರ್ ಹುದ್ದೆಯಿಂದ ಮೇಲಕ್ಕೇರುತ್ತ, ಆಖೈರಾಗಿ ಮೈಸೂರು ಸಂಸ್ಥಾನದ ದಿವಾನ ಪದವಿಯನ್ನು ಅಲಂಕರಿಸಿದರು. ಈ ನಮ್ಮ ಸಮಿತಿಯ ಕಾರ್ಯದಲ್ಲಿ ಅವರೂ ಸಹ ತಮ್ಮ ಪಾತ್ರವನ್ನು ನಿರ್ವಹಿಸಿದ್ದಾರೆ.

ಅನಂತರ ಗಮನಿಸಬೇಕಾದ ವ್ಯಕ್ತಿ, ಯಾರಿಗೂ ಕಾಣದ ಹಾಗೆ ಕುಳಿತವರು. ಸುಮಧರ ಸ್ವಭಾವದ ಸೌಮ್ಯ ವ್ಯಕ್ತಿ. ಶ್ರೀ ಸಯ್ಯದ್ ಉಲ್ಲಾ ಅವರು. ತಮ್ಮ ಸಮೃದ್ಧ ಅನುಭವದ ಜ್ಞಾನವನ್ನು ನಮ್ಮ ಸಮಿತಿಗೆ ಒದಗಿಸಿದವರು.

ಆಖ್ಯೆರಾಗಿ ನನ್ನ ಇದಿರಿನಲ್ಲಿ ಕುಳಿತಿರತಕ್ಕ ಮಹಾನುಭಾವ. ಕೃಶ ಶರೀರ. ಎತ್ತರ ನಿಲುವು. ಒಡನೆಯೇ ಪುನರುತ್ತರ, ಪ್ರತ್ಯುತ್ತರ. ಕತ್ತಿಯ ಅಲಗಿನಂತೆ ಹರಿತವಾದ ತೀಕ್ಷ್ಣಮತಿ. ವಿರೋಧ ಪಕ್ಷವನ್ನು, ಛಿದ್ರಗೊಳಿಸುವ, ಗಾಯಗೊಳಿಸುವ ಸಾಮರ್ಥ್ಯವುಳ್ಳವರು. ಆದಾಗ್ಯೂ, ಪ್ಲಾಸ್ಟಿಕ್ ಸರ್ಜರಿ ಮತ್ತು ಆರೋಗ್ಯ ವರ್ಧಕಗಳ ಮೂಲಕ ಉಂಟುಮಾಡಿದ ಗಾಯವನ್ನು ವಾಸಿಮಾಡುವ ಬಲವಂತ. ಅವರೇ ಶ್ರೀ ಟಿ. ಟಿ. ಕೃಷ್ಣಮಾಚಾರಿ.

ಈ ಎಲ್ಲ ಮಹಾನುಭಾವರು ನಮಗೆ ನೆರವಾಗಿದ್ದಾರೆ. ಆದರೆ, ನೀವು ಇಲ್ಲದೆ ಹೋಗಿದ್ದರೆ, ಈ ಎಲ್ಲ ಸನ್ಮಿತ್ರರು ಸಲ್ಲಿಸಿದ ಸೇವೆಯು ಪ್ರಯೋಜನಕಾರಿ ಆಗುತ್ತಿರಲಿಲ್ಲ ಎಂದು ಹೇಳಬಯಸುತ್ತೇನೆ.

ನಾನು ಇನ್ನು ಹೇಳಬೇಕಾಗಿರುವುದು ಇಷ್ಟೆ: ಈ ಸಂವಿಧಾನವು ನಮಗೆ ಪ್ರಾರಂಭಿಸುವ ದಿಶೆಯಲ್ಲಿ ಒಂದು ಉತ್ತಮ ಸಂವಿಧಾನ ಎನ್ನಬೇಕು. ಅದನ್ನು ಜಾರಿಗೊಳಿಸಿ. ಅದನ್ನು ಅನುಸರಿಸುವ ಕ್ರಮ ಕೈಗೊಳ್ಳಿ. ನಿಮ್ಮ ಶಕ್ತ್ಯಾನುಸಾರ, ನಿಮ್ಮ ಸಾಮರ್ಥ್ಯಾನುಸಾರ ಈ ಸಂವಿಧಾನವನ್ನು ಕಾರ್ಯಗತಗೊಳಿಸಿಕೊಳ್ಳಿ ಮತ್ತು ೧೯ನೇ ಶತಮಾನದ ಎಪ್ಪತ್ತರ ದಶಕದಲ್ಲಿ ಮತದಾನಾಧಿಕಾರವನ್ನು ವಿಕಾಸಗೊಳಿಸಿದಾಗ, ಬ್ರಿಟಿಷ್ ಹೌಸ್ ಆಫ್ ಕಾಮನ್ಸ್‌ನಲ್ಲಿ, ಮಹಾನ್ ಸಂಸದನು. ಹೇಳಿದ್ದನ್ನು ನಿಮಗೆ ನೀವೇ ಹೇಳಿಕೊಳ್ಳಿ. "ನಮ್ಮ ಪ್ರಭುಗಳಿಗೆ ಶಿಕ್ಷಣವನ್ನು ನೀಡೋಣ."

**ಶ್ರೀ ಜಗತ್ ನಾರಾಯಣ ಲಾಲ್:** ......ಕೊನೆಯಲ್ಲಿ ನಾನು ಸಭಾಧ್ಯಕ್ಷರಿಗೆ, ಅಥವಾ ಅಧ್ಯಕ್ಷರಿಗೆ ಮತ್ತು ಕರಡು ರಚನಾ ಸಮಿತಿಯ ಸದಸ್ಯರಿಗೆ, ಮುಖ್ಯವಾಗಿ, ಆ ಅನೇಕರಲ್ಲಿ ಒಳಗೊಂಡ ಡಾ. ಅಂಬೇಡ್ಕರ್, ಶ್ರೀ ಮುನ್ಷಿ ಮತ್ತು ಶ್ರೀ ಕೃಷ್ಣಮಾಚಾರಿ ಅವರಗಳಿಗೆಲ್ಲ ನನ್ನ ಮಹೋನ್ನತ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ.

* * *

**ಶ್ರೀ ಟಿ. ಟಿ. ಕೃಷ್ಣಮಾಚಾರಿ:** ಅಧ್ಯಕ್ಷ ಮಹಾಶಯರೆ, ಮೊಟ್ಟಮೊದಲಲ್ಲಿ ನಾನು, ಕರಡು ರಚನಾ ಸಮಿತಿಯ ಕಾರ್ಯವನ್ನು ಪ್ರಶಂಸಿಸಿ ಸಂವಿಧಾನದ ಉಪಬಂಧಗಳ ಸಂಬಂಧದಲ್ಲಿ ಹೊಂದಿರುವ ನಿಲುವು ಏನಾದರೂ ಇದ್ದರೂ, ಸರಿಯೇ, ಹಾಗೆ ಸಲ್ಲಿಸದ ಪ್ರಶಂಸೆಯಲ್ಲಿ ಏಕಾಭಿಪ್ರಾಯ ಹೊಂದಿರುವ ಆ ಸಕಲ ಸದಸ್ಯರಿಗೆ ಕರಡು ರಚನಾ ಸಮಿತಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಸ್ವಾಮಿ, ಮುಖ್ಯವಾಗಿ, ಕರಡು ರಚನಾ ಸಮಿತಿಯ ಸದಸ್ಯರ ಬಗ್ಗೆ ಒಬ್ಬರನ್ನು ಉಲ್ಲೇಖಿಸುತ್ತ, ಅವರು ಈಡೇರಿಸಿದ ಕಾರ್ಯವನ್ನು ಸಲ್ಲಿಸಿದ ಸೇವೆಯನ್ನು ಅತ್ಯಂತ ವಿನಯಪೂರ್ಣ ಪದಗಳಲ್ಲಿ ಪ್ರಶಂಸಿಸಿದ, ಆ ಎಪ್ಪತ್ತರ ಧುರೀಣನಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಅವರ ಮಾತುಗಳನ್ನು ನಾವು ಜೀವನದುದ್ದಕ್ಕೂ ಸ್ಮರಿಸುತ್ತ ಸಂತೋಷಪಡುತ್ತೇವೆ.

.......ಆದರೆ ನಾನೀಗ ಸಂವಿಧಾನದ ರಚನೆಯನ್ನು ಕೈಗೊಂಡ ರೀತಿಯ ಅತ್ಯಂತ ಜೀವಾಳದ ಭಾಗವನ್ನು ಉಲ್ಲೇಖಿಸ ಬಯಸುತ್ತೇನೆ. ಈ ಸಂವಿಧಾನವು, ಮಾನ್ಯ ಸದಸ್ಯರು ಉಲ್ಲೇಖಿಸಿರುವ, ನನ್ನ ಮುಂದಿರುವ..... ರಾಜಿ ಪ್ರಕ್ರಿಯೆಯ ಫಲಿತಾಂಶವಾಗಿ ಸೃಷ್ಟಿಯಾದ ಸಂವಿಧಾನ. ಇಲ್ಲಿ ಸಮಾವೇಶರಾಗಿರುವ (ಸೇರಿರತಕ್ಕ) ೨೯೦ ಜನ ಸದಸ್ಯರು ಆರ್ಥಿಕ ವಿಷಯಗಳ ಬಗ್ಗೆ ವಿಭಿನ್ನ ಅಭಿಪ್ರಾಯಗಳನ್ನು ಉಳ್ಳವರು ಮತ್ತು ಸಂದರ್ಭದಲ್ಲಿ ಒಂದು ನಿರ್ದಿಷ್ಟ ವಿಷಯಕ್ಕೆ ಅನುಮತಿ ನೀಡುವುದಿಲ್ಲ. ಉಳಿದವರು ನಾನು ಹೇಳಿದ್ದನ್ನು ಅನುಸರಿಸಬೇಕು ಮುಂತಾಗಿ ಹೇಳಿದರೆ ಸಂವಿಧಾನವನ್ನು ರೂಪಿಸುವ ಕಾರ್ಯವು ಮುಂದುವರಿಯುವಂತಿಲ್ಲ. ಒಪ್ಪಿಗೆಯು ಸಾಧ್ಯವಿಲ್ಲ. ವಾಸ್ತವವಾಗಿ ಇದೇ ಸಂವಿಧಾನವು, ಅದರ ಅತ್ಯಂತ ಪ್ರಧಾನ ಭಾಗಗಳು ಸಂಬಂಧಪಟ್ಟ ಪಕ್ಷಗಳ ಆಖ್ಯೆರು ಒಪ್ಪಿಗೆಯ ಫಲಿತಾಂಶವಾಗಿಯೇ ರೂಪುಗೊಂಡಿದ್ದು.

ಮತ್ತು ಪ್ರಸ್ತಾಪಗಳ ಪೈಕಿ ಅಧಿಕಾಂಶ ಪ್ರಸ್ತಾವಗಳಿಗೆ ಒಪ್ಪಿಗೆ ನೀಡಿ, ಈಗ ಯಾವುದೇ ಒಂದು ಪ್ರಸ್ತಾವಕ್ಕೆ ಒಪ್ಪಿಗೆಯಿಲ್ಲ. ಎಂದು ಯಾರಾದರೂ ಆಕ್ಷೇಪಿಸಿದರೆ, ಅವರು ಯಥೋಚಿತವಲ್ಲದ್ದನ್ನು ಮಾಡುತ್ತಿದ್ದಾರೆ ಎಂದು ಹೇಳಬಯಸುತ್ತೇನೆ. ಈ ಸಂವಿಧಾನವು ನಮ್ಮ ಪೈಕಿ ಅಧಿಕಾಂಶ ಒಪ್ಪಿಗೆಯ ಫಲಿತಾಂಶವಾಗಿ ರೂಪುಗೊಂಡಿದೆ....

**ಶ್ರೀ ಮಹಾವೀರ್ ತ್ಯಾಗಿ:** ನನಗೆ ಈ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ನಿಮಗೆ ಕೃತಜ್ಞ ನಾಗಿದ್ದೇನೆ.

ಸ್ವಾಮಿ, ನೀವು ನನಗೆ ಒದಗಿಸಿದ ಈ ಐದಾರು ಶಿಕ್ಷಣಗಳು ನನ್ನ ಹಿಂದಿನ, ಇಂದಿನ ಮತ್ತು ಮುಂದಿನ ಜೀವನದ ಅತ್ಯಂತ ಅಮೂಲ್ಯ ಕ್ಷಣಗಳು ಎಂದು ತಮ್ಮಲ್ಲಿ ನಿವೇದಿಸಿಕೊಳ್ಳಬಯಸುತ್ತೇನೆ. ಮಾತ್ರವಲ್ಲದೆ, ಅದು ಅತಿಶಯವಾಗಿ ಪುಲಕಿತಗೊಳಿಸುವ ಕ್ಷಣಗಳು ಎಂದು ಭಾವಿಸಿದ್ದೇನೆ. ನಾನು ನನ್ನ ಹಳೆಯ, ಅತ್ಯಂತ ಕನಸುಗಳ ಚಿತ್ರಕ್ಕೆ ಮತ್ತು ಮೂವತ್ತು ವರ್ಷಗಳ ಪರಿಶ್ರಮಪೂರ್ಣ ಪ್ರಯತ್ನಗಳ ಫಲಕ್ಕೆ ಅಭಿಮುಖನಾಗಿ ನಿಂತಿದ್ದೇನೆ. ನಮ್ಮೆದುರು ಈಗ ಒಂದು ಮೂರ್ತಿ ಸ್ವರೂಪದ ಚಿತ್ರವುಂಟು. ಮುಖ್ಯ ಕಲಾವಿದರಾದ ಡಾ. ಅಂಬೇಡ್ಕರ್ ಅವರು ತಮ್ಮ ಕುಂಚವನ್ನು ಬದಿಗಿರಿಸಿ, ತಮ್ಮ ಚಿತ್ರವನ್ನು ಅನಾವರಣಗೊಳಿಸಿದ್ದಾರೆ. ಸಾರ್ವಜನಿಕರಿಗೆ ಅದನ್ನು ಅವಲೋಕಿಸಿ ಟೀಕೆ ಟಿಪ್ಪಣಿಗಳನ್ನು ಸಾದರಪಡಿಸುವ ಅವಕಾಶ ಮಾಡಿಕೊಟ್ಟಿದ್ದಾರೆ. ಸದನವು ಚಿತ್ರದ ಸಂಬಂಧದಲ್ಲಿ ವಿಪುಲವಾದ ಟೀಕೆಟಿಪ್ಪಣಿಗಳನ್ನು ಮಾಡಿದೆ. ಅದು ನಾವೆಲ್ಲರೂ ಸೇರಿ ರೂಪಿಸಿದ ಚಿತ್ರ. ಆದಕಾರಣ, ಆ ಬಗ್ಗೆ ಇನ್ನಷ್ಟು ಟೀಕೆಟಿಪ್ಪಣಿಗಳನ್ನು ವ್ಯಕ್ತಗೊಳಿಸಲು ಇಷ್ಟಪಡುವುದಿಲ್ಲ. ಈ ಚಿತ್ರದ ಪರವಾಗಿ ಹೇಳಿರುವುದೆಲ್ಲವನ್ನು ಬೆಂಬಲಿಸುತ್ತೇನೆ, ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಏನಾದರೂ ಸರಿಯೆ, ನಾವು ನಿಷ್ಠೆಯಿಂದಲೂ ವಿನಯದಿಂದಲೂ ಕೂಡಿದವರಾಗಿ ನಮ್ಮ ಮುಂದಿನ ತಲೆಮಾರಿಗೆ ಈ ಸಂವಿಧಾನವನ್ನು ರೂಪಿಸುವಲ್ಲಿ ನಮ್ಮ ಸಕಲ ಪರಿಶ್ರಮವನ್ನು ಮಾಡಿದ್ದೇವೆ. ಸಕಲ ವಿಚಾರಶಕ್ತಿಯನ್ನು ವಿನಿಯೋಗಿಸಿದ್ದೇವೆ. ಆಖೈರಾಗಿ ಈ ಸಮಗ್ರ ಚಿತ್ರವನ್ನು ಸೃಷ್ಟಿಸುವಾಗ ಹತ್ತು ಹಲವಾರು ಚರ್ಚೆಗಳಾಗಿವೆ, ಆಲೋಚನೆ ಪರ್ಯಾಲೋಚನೆಗಳು ಒದಗಿವೆ. ಮುಂಬರುವ ತಲೆಮಾರಿನವರು, ಈ ಸಂಬಂಧದಲ್ಲಿ ಕುಂದುಕೊರತೆಗಳನ್ನು ಕ್ಷಮಿಸುತ್ತಾರೆ ಮತ್ತು ತಮ್ಮ ಬುದ್ಧಿ ಬಲದಿಂದ ಅವುಗಳನ್ನು ಸರಿಪಡಿಸಿಕೊಳ್ಳುತ್ತಾರೆ ಎಂದು ಆಶಿಸುತ್ತ, ಈ ಸಂವಿಧಾನವನ್ನು ಅವರಿಗೆ ಹೃತ್ಪೂರ್ವಕವಾಗಿ ಬಿಟ್ಟುಕೊಟ್ಟು ಹೋಗೋಣ. ಆದರೂ ನನ್ನ ಕಣ್ಣಂಚಿನಿಂದ ನಾನು ನೋಡುವಂತೆ, ಹಾಗೆಯೇ ಇಡೀ ಪ್ರಪಂಚವು ನೋಡುವ ಹಾಗೆ, ಇದರಲ್ಲಿ; ಈ ಚಿತ್ರದಲ್ಲಿ ಅಪಾಯದ ಸಂಕೇತಗಳು ಸಹ ಕಾಣಿಸುತ್ತಿವೆ...

**ಶ್ರೀ ಸುರೇಶ್‌ಚಂದ್ರ ಮುಜಮ್‌ದಾರ್:** ಸಮಾರೋಪ ಮಾಡುತ್ತ ಡಾ. ಅಂಬೇಡ್ಕರ್ ಅವರಿಗೂ ಮತ್ತು ಈ ಸದನದಲ್ಲಿನ ಹಿರಿಯರಿಗೂ ಸಹೋದ್ಯೋಗಿಗಳಿಗೂ ಮಹತ್ವಪೂರ್ಣವಾದ ಪರಿಶ್ರಮ ಪೂರ್ಣವಾದ ಮತ್ತು ಚಾರಿತ್ರಿಕದಾಯ ಈ ಕಾರ್ಯವಿಶೇಷವನ್ನು ಯಶಸ್ವಿಯಾಗಿ ನೆರವೇರಿಸಿದ್ದಕ್ಕಾಗಿ ನನ್ನ ಗೌರವಯುಕ್ತವಾದ ಅಭಿನಂದನೆಗಳನ್ನು ಸಲ್ಲಿಸಲೆ? ಮತ್ತು ಮಾನ್ಯ ಅಧ್ಯಕ್ಷರೇ, ತಾವು ಈ ಸದನದಲ್ಲಿ ವಿಚಾರವಿಮರ್ಶೆಗೆ, ಚರ್ಚೆಗೆ ಪ್ರಶಾಂತವಾದ, ಸಹನಶೀಲವಾದ ಮತ್ತು ಸೌಜನ್ಯಪೂರ್ಣವಾದ ಮತ್ತು ಒಟ್ಟಿನಲ್ಲಿ ಆದರ್ಶವಾದ ರೀತಿಯಲ್ಲಿ ಮಾರ್ಗದರ್ಶನ ನೀಡಿದುದಕ್ಕಾಗಿ ನಾನು ಹೀಗೆ ಅಭಿನಂದಿಸುತ್ತಿರುವಾಗ ಇಲ್ಲಿರುವ ಪ್ರತಿಯೊಬ್ಬರ ಭಾವನೆಗಳನ್ನು ಪ್ರತಿಧ್ವನಿಸುತ್ತಿದ್ದೇನೆ ಎಂದು ಭಾವಿಸಿದ್ದೇನೆ.

* * *

**ಶ್ರೀ ರಾಜ ಬಹದ್ದೂರ್:** ಅಧ್ಯಕ್ಷ ಮಹಾಶಯರೆ, ಮಾನ್ಯರಾದ ತಮ್ಮ ಮೇಲೆ, ಕರಡು ರಚನಾ

ಸಮಿತಿಯ ಮೇಲೆ, ಸಂವಿಧಾನ ಸಿಬ್ಬಂದಿ ವರ್ಗದವರ ಮೇಲೆ ಯಥಾಯೋಗ್ಯವಾದ ಸಂಬಂಧ ಕಲ್ಪಿಸಿಕೊಳ್ಳುವ ಬಗ್ಗೆ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞನಾಗಿದ್ದೇನೆ. ಇದು ಅತ್ಯಂತ ಮಹತ್ವಪೂರ್ಣವಾದ ಚಾರಿತ್ರಿಕ ಸಂದರ್ಭ. ಅತ್ಯಂತ ಮಹತ್ವಪೂರ್ಣ ಸಂದರ್ಭ ಎಂದು ಹೇಳಲು ಕಾರಣವೆಂದರೆ ಇದು ನಮ್ಮ ಇತಿಹಾಸದಲ್ಲಿಯೇ ಮೊಟ್ಟಮೊದಲ ಬಾರಿಗೆ ರಾಷ್ಟ್ರದ ಆಯ್ಕೆಗೊಂಡ ಪ್ರತಿನಿಧಿಗಳು ಒಂದೆಡೆಯಲ್ಲಿ ಸೇರಿ ದೇಶದ ಸಲುವಾಗಿ ಒಂದು ಸಂವಿಧಾನವನ್ನು ರೂಪಿಸಿರುವ ಮಹಾಸಂದರ್ಭ. ಇನ್ನೂ ಒಂದು ರೀತಿಯಲ್ಲಿ, ಅಂದರೆ ಇಮ್ಮಡಿಯಾಗಿ ಮಹತ್ವಪೂರ್ಣ. ಕಾರಣವೆಂದರೆ. ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಸಮರ್ಥ ಧುರೀಣರೇ ನಮ್ಮ ಸಂವಿಧಾನದ ಶಿಲ್ಪಿಗಳಾಗಿದ್ದಾರೆ....

ಕೊನೆಯಲ್ಲಿ ನಾನು ಹೇಳುವುದಿಷ್ಟೇ, ಸಂವಿಧಾನದ ಗರಿಮೆ ಮತ್ತು ಕೊರತೆಗಳೇನೇ ಇರಲಿ, ಚಾರ್ಟ್ ಬ್ರೇನ್‌ರವರ ಮಾತುಗಳಲ್ಲಿ ಹೇಳುವುದಾದರೆ "ಒಂದು ಸಂವಿಧಾನವನ್ನು ಒಂದೆಡೆಯಿಂದ ತಂದು ಇನ್ನೊಂದೆಡೆ ನೆಡುವುದು ಸುಲಭ, ಆದರೆ ಅದನ್ನು ಕಾರ್ಯಾಚರಣೆ ತರುವ ಮನೋಭಾವವನ್ನು ಹೊರಗಿನಿಂದ ತಂದು ನೆಡುವುದು ಸುಲಭವಲ್ಲ."

* * *

**ಗೌರವಾನ್ವಿತ ಡಾ. ಬಿ.ಆರ್.ಅಂಬೇಡ್ಕರ್:** ಸಂವಿಧಾನ ಸಭೆಯ ಕಾರ್ಯವನ್ನು ಒಮ್ಮೆ ಅವಲೋಕಿಸಿದರೆ, ಅದು ಪ್ರಥಮ ಬಾರಿಗೆ ೧೯೪೯ ಇಸವಿ ಡಿಸೆಂಬರ್ ತಿಂಗಳ ೯ನೇ ದಿನಾಂಕದಂದು ಸಮಾವೇಶಗೊಂಡಿತು. ಅಂದಿನಿಂದ ಇಂದಿನವರೆಗೆ ಒಟ್ಟು ಎರಡು ವರ್ಷ, ಹನ್ನೊಂದು ತಿಂಗಳು ಮತ್ತು ೧೭ ದಿನ ಗತಿಸಿದೆ. ಈ ಕಾಲಾವಧಿಯಲ್ಲಿ ಸಂವಿಧಾನ ಸಭೆಯು ಒಟ್ಟು ೧೧ ಸಭೆಗಳನ್ನು ನಡೆಸಿದೆ. ಈ ಹನ್ನೊಂದು ಸಭೆಗಳ ಪೈಕಿ ಆರು ಸಭೆಗಳಲ್ಲಿ, ಉದ್ದೇಶಗಳ ನಿರ್ಣಯಗಳನ್ನು ಅಂಗೀಕರಿಸಲು ಮತ್ತು ಮೂಲಭೂತ ಹಕ್ಕುಗಳು, ಒಕ್ಕೂಟ, ಸಂವಿಧಾನ, ಒಕ್ಕೂಟದ ಅಧಿಕಾರಿಗಳು, ಪ್ರಾಂತೀಯ ಸಂವಿಧಾನ, ಅಲ್ಪಸಂಖ್ಯಾತರು, ಅನುಸೂಚಿತ ಪ್ರದೇಶಗಳು ಮತ್ತು ಅನುಸೂಚಿತ ಬುಡಕಟ್ಟುಗಳು ಇವುಗಳಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ವರದಿಗಳನ್ನು ಪರಿಶೀಲಿಸುವ ಕೆಲಸ ನಡೆಯಿತು. ಏಳು, ಎಂಟು, ಒಂಬತ್ತು, ಹತ್ತು ಮತ್ತು ಹನ್ನೊಂದು ಸಭೆಗಳು ಸಂಪೂರ್ಣವಾಗಿ ಕರಡು ಸಂವಿಧಾನದ ಪರಿಶೀಲನ ಕಾರ್ಯಕ್ಕೆ ಮೀಸಲಾದುವು. ಸಂವಿಧಾನ ಸಭೆ ಈ ಹನ್ನೊಂದು ಸಭೆಗಳಿಗೆ ಒಟ್ಟು ೧೬೫ ದಿನಗಳನ್ನು ತೆಗೆದುಕೊಂಡಿತು. ಇವುಗಳಲ್ಲಿ ಕರಡು ಸಂವಿಧಾನವನ್ನು ಪರಿಶೀಲಿಸಲು ೧೧೪ ದಿನ ಬೇಕಾಯಿತು.

ಸಂವಿಧಾನ ಸಭೆಯು ಕರಡು ರಚನ ಸಮಿತಿಯನ್ನು ೨೯ನೇ ಆಗಸ್ಟ್ ೧೯೪೭ ರಂದು ಚುನಾಯಿಸಿತು. ಈ ಸಮಿತಿಯು ತನ್ನ ಮೊದಲನೆಯ ಸಭೆಯನ್ನು ಆಗಸ್ಟ್ ೩೦ ರಂದು ನಡೆಸಿತು. ಆ ತರುವಾಯ ಕರಡು ಸಂವಿಧಾನವನ್ನು ರಚಿಸಲು ೧೪೧ ದಿನ ತೆಗೆದುಕೊಂಡಿತು. ಸಂವಿಧಾನದ ಸಲಹೆಗಾರರು ಕರಡು ರಚನಾ ಸಮಿತಿಗೆ ಸಿದ್ಧಪಡಿಸಿಕೊಟ್ಟ ಕರಡು ಸಂವಿಧಾನದಲ್ಲಿ ಒಟ್ಟು ೨೪೩ ವಿಧಿಗಳು ಮತ್ತು ೧೩ ಅನುಸೂಚಿಗಳು ಇದ್ದವು. ಆಖೈರಾಗಿ ಪರಿಶೀಲಿಸಿದ ತರುವಾಯ ಸಂವಿಧಾನದಲ್ಲಿನ ವಿಧಿಗಳು ಸಂಖ್ಯೆ ೩೦೬ಕ್ಕೆ ಏರಿತು. ಅದು ಅಂತಿಮವಾಗಿ ರೂಪುಗೊಳ್ಳುವ ಹೊತ್ತಿಗೆ ಅದರಲ್ಲಿ ೩೯೫ ವಿಧಿಗಳೂ ೮ ಅನುಸೂಚಿಗಳೂ ಇದ್ದವು. ಕರಡು ಸಂವಿಧಾನಕ್ಕೆ ಪ್ರಸ್ತಾವಿಸತಕ್ಕ ತಿದ್ದುಪಡಿಗಳ ಸಲುವಾಗಿ ಸುಮಾರು ೭೬೩೫ ತಿದ್ದುಪಡಿಗಳನ್ನು ಪಟ್ಟಿಮಾಡಲಾಯಿತು. ಇವುಗಳ ಪೈಕಿ ೨೪೭೩ ತಿದ್ದುಪಡಿಗಳನ್ನು ವಾಸ್ತವವಾಗಿ ಸದನದ ಮುಂದೆ ಚರ್ಚೆಗೆ ಒಪ್ಪಿಸಲಾಯಿತು.

ನಾನು ಇವುಗಳನ್ನೆಲ್ಲ ಉಲ್ಲೇಖಿಸಲು ಕಾರಣವುಂಟು. ಒಂದು ಹಂತದಲ್ಲಿ ಸಂವಿಧಾನ ಸಭೆಯು

ಸುದೀರ್ಘ ಸಮಯ ತೆಗೆದುಕೊಳ್ಳುತ್ತಿದೆಯೆಂದೂ, ಸಮಯ ಹಾಗೂ ಸಾರ್ವಜನಿಕರ ಹಣ ಇವೆರಡನ್ನೂ ವ್ಯಯಮಾಡುತ್ತಿದೆಯೆಂದೂ ಆಪಾದಿಸಲಾಯಿತು. ಮಾತ್ರವಲ್ಲ, ರೋಂ ನಗರ ಬೆಂಕಿ ಹತ್ತಿ ಉರಿಯುತ್ತಿರುವಾಗ ದೊರೆ ನೀರೋ ಪಿಟೀಲು ಬಾರಿಸುತ್ತಿದ್ದ ಹಾಗೆ ಇದೆಲ್ಲ ಎಂದು ಸಹ ಆರೋಪಿಸಲಾಯಿತು. ಈ ಆಪಾದನೆಗಳಿಗೆ ಏನಾದರೂ ಆಧಾರ ಇದೆಯೇ? ವಿದೇಶಗಳಲ್ಲಿ ಅಲ್ಲಿನ ಸಂವಿಧಾನ ಸಭೆ ೧೭೮೭ನೇ ಇಸವಿ ಮೇ ೨೫ನೇ ತಾರೀಖು ತನ್ನ ಮೊದಲನೆಯ ಸಮಾವೇಶವನ್ನು ಜರುಗಿಸಿತು. ಕೈಗೆತ್ತಿಕೊಂಡ ಕರ್ತವ್ಯವನ್ನು ೧೭೮೭ನೇ ಸೆಪ್ಟೆಂಬರ್ ೧೭ನೇ ತಾರೀಖಿನಂದು ಪೂರ್ಣಗೊಳಿಸಿತು. ಅಂದರೆ ತೆಗೆದುಕೊಂಡ ಅವಧಿ ಒಟ್ಟು ನಾಲ್ಕು ತಿಂಗಳು. ಕೆನಡಾ ಸಂವಿಧಾನ ಸಭೆಯು ೧೮೬೪ರ ಅಕ್ಟೋಬರ್ ೧೦ನೇ ತಾರೀಖು ಸಮಾವೇಶಗೊಂಡು, ೧೮೬೭ರ ಮಾರ್ಚ್ ತಿಂಗಳಲ್ಲಿ ಸಂವಿಧಾನವನ್ನು ಕಾಯ್ದೆಯಾಗಿ ಅಂಗೀಕರಿಸುವವರೆಗೆ ೨ ವರ್ಷ ೫ ತಿಂಗಳ ಕಾಲವನ್ನು ತೆಗೆದುಕೊಂಡಿತು. ಆಸ್ಟ್ರೇಲಿಯಾ ಸಂವಿಧಾನ ಸಭೆಯು ೧೮೯೧ರ ಮಾರ್ಚಿಯಲ್ಲಿ ಸಮಾವೇಶಗೊಂಡು, ೧೯೦೦ರ ಜುಲೈ ೯ನೇ ತಾರೀಖು ಕಾಯ್ದೆ ಆಗಿ ಸಂವಿಧಾನವನ್ನು ಅಂಗೀಕರಿಸುವವರೆಗೆ ಸುಮಾರು ೯ ವರ್ಷಗಳೇ ಗತಿಸಿದುವು. ದಕ್ಷಿಣ ಆಫ್ರಿಕಾದ ಸಂವಿಧಾನ ಸಭೆಯು ಮೊದಲ ಬಾರಿಗೆ ಸಮಾವೇಶಗೊಂಡದ್ದು ೧೯೦೮ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ. ೧೯೦೯ರ ಸೆಪ್ಟೆಂಬರ್ ೨೦ನೇ ತಾರೀಖು ಸಂವಿಧಾನ ಕಾಯ್ದೆಯಾಗಿ ಅಂಗೀಕಾರವಾಗುವವರೆಗೆ ಕಾರ್ಯ ನಿರ್ವಹಿಸಿದ್ದು ಒಂದು ವರ್ಷ. ಅಮೆರಿಕಾ ಅಥವಾ ದಕ್ಷಿಣ ಆಫ್ರಿಕಾ ಸಂವಿಧಾನ ಸಭೆಗಳು ತೆಗೆದುಕೊಂಡಿದ್ದಕ್ಕಿಂತ ನಾವು ಹೆಚ್ಚು ಸಮಯ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾರೆ. ಅದು ನಿಜವೇ. ಆದರೆ ಕೆನಡಾ ಸಂವಿಧಾನ ಸಭೆ ಅಥವಾ ದಕ್ಷಿಣ ಆಫ್ರಿಕಾ ಸಂವಿಧಾನ ಸಭೆ ತೆಗೆದುಕೊಂಡ ಸಮಯಕ್ಕಿಂತ ಅಥವಾ ಆಸ್ಟ್ರೇಲಿಯಾ ಸಂವಿಧಾನ ಸಭೆ ತೆಗೆದುಕೊಂಡುದ್ದಕ್ಕಿಂತ ನಾವು ಹೆಚ್ಚಿನ ಸಮಯ ತೆಗೆದುಕೊಂಡಿಲ್ಲ. ಹೀಗೆ ತೆಗೆದುಕೊಂಡ ಸಮಯಗಳನ್ನು ಹೋಲಿಸುತ್ತ, ಆ ಆಧಾರದ ಸಂಗತಿಗಳನ್ನು ನೆನಪಿಡಬೇಕು. ಒಂದನೆಯದಾಗಿ, ಅಮೆರಿಕಾ, ಕೆನಡಾ, ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಈ ಸಂವಿಧಾನಗಳು ನಮ್ಮ ಸಂವಿಧಾನಕ್ಕಿಂತ ಎಷ್ಟೋ ಪಾಲು ಚಿಕ್ಕ ಸಂವಿಧಾನಗಳು. ಎರಡನೆಯದಾಗಿ, ನಾನು ಈಗಾಗಲೇ ಹೇಳಿರುವಂತೆ ನಮ್ಮ ಸಂವಿಧಾನ ೩೯೫ ಅನುಚ್ಛೇದಗಳನ್ನು ಒಳಗೊಂಡಿದ್ದರೆ, ಅಮೆರಿಕಾ ಸಂವಿಧಾನದಲ್ಲಿ ಕೇವಲ ೭ ಅನುಚ್ಛೇದಗಳನ್ನು ಒಳಗೊಂಡಿದೆ. ಈ ೭ ಅನುಚ್ಛೇದಗಳ ಪೈಕಿ ಮೊದಲನೆಯ ೪ ಅನುಚ್ಛೇದಗಳನ್ನು ೨೧ ಪ್ರಕರಣಗಳಾಗಿ ವಿಭಾಗಿಸಲಾಗಿದೆ. ಕೆನಡಾ ಸಂವಿಧಾನದಲ್ಲಿ ೧೪೭, ಆಸ್ಟ್ರೇಲಿಯಾ ಸಂವಿಧಾನದಲ್ಲಿ ೧೨೮ ಮತ್ತು ದಕ್ಷಿಣ ಆಫ್ರಿಕಾ ಸಂವಿಧಾನದಲ್ಲಿ ೧೫೩ ಹೀಗೆ ಪ್ರಕರಣಗಳುಂಟು. ಎರಡನೆಯದಾಗಿ, ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಈ ಸಂವಿಧಾನಗಳ ಕರ್ತರು ತಿದ್ದುಪಡಿಗಳ ಸಮಸ್ಯೆ ಇದಿರಿಸಬೇಕಾಗಿರಲಿಲ್ಲ. ಅಲ್ಲಿ ಅವು ಮಂಡಿಸುತ್ತಿದ್ದ ಹಾಗೆಯೇ ಅಂಗೀಕಾರವಾಗುತ್ತಿದ್ದವು. ಆದರೆ ನಮ್ಮ ಸಂವಿಧಾನ ಸಭೆಯು ೨೪೭೩ ತಿದ್ದುಪಡಿಗಳನ್ನು ಸುದೀರ್ಘ ಚರ್ಚೆಯಲ್ಲಿ ತೊಡಗಿ ಪರಿಶೀಲಿಸಬೇಕಾಯಿತು. ಇವೆಲ್ಲ ಸಂಗತಿಗಳನ್ನು ಗಮನಿಸಿ ನೋಡಿದಾಗ, ಸಮಯವನ್ನು ವ್ಯಯಮಾಡಲಾಗಿದೆ ಎಂಬ ಆರೋಪ ನಿರಾಧಾರವಾದದ್ದು ಎಂದು ನಾನು ಭಾವಿಸುತ್ತೇನೆ. ಇಷ್ಟೇ ಅಲ್ಲದೆ, ಈ ಸಂವಿಧಾನ ಸಭೆಯು, ತನಗೆ ವಹಿಸಿಕೊಡಲಾದ ಜವಾಬ್ದಾರಿಯನ್ನು ಅತ್ಯಂತ ಕಡಿಮೆ ಸಮಯದಲ್ಲಿ ಯಶಸ್ವಿಯಾಗಿ ನೆರವೇರಿಸಿದ್ದಕ್ಕಾಗಿ ನಮ್ಮನ್ನು ನಾವೇ ಅಭಿನಂದಿಸಿಕೊಳ್ಳಬಹುದಾಗಿದೆಯೆಂದು ಭಾವಿಸುತ್ತೇನೆ.

ಕರಡು ರಚನಾ ಸಮಿತಿಯು ನಿರ್ವಹಿಸಿದ ಕೆಲಸದ ಗುಣಾವಗುಣಗಳತ್ತ ನೋಡಿದಾಗ, ಮಾನ್ಯ ನಜೀರುದ್ದೀನ್ ಅಹ್ಮದ್ ಅವರು ಕರಡು ಸಂವಿಧಾನವನ್ನು ಕಟುವಾಗಿ ಟೀಕಿಸಬೇಕಾದದ್ದು ತಮ್ಮ ಕರ್ತವ್ಯ

ಎಂದು ಹೇಳಿದ್ದಾರೆ. ಅವರ ಅಭಿಪ್ರಾಯದಲ್ಲಿ ಕರಡು ರಚನಾ ಸಮಿತಿಯು ಮಾಡಿದ ಕೆಲಸ ಟೀಕೆಗೆ ಮಾತ್ರವೇ ಅರ್ಹವಾದದ್ದು, ಹೋಲಿಕೆಗೂ ಅರ್ಹವಲ್ಲ. ಕರಡು ಸಮಿತಿಯು ನೆರವೇರಿಸಿದ ಕೆಲಸದ ಸಂಬಂಧದಲ್ಲಿ ಪ್ರತಿಯೊಬ್ಬರೂ ತಮ್ಮಲ್ಲಿ ಸರಿಕಂಡದ್ದನ್ನು ಹೇಳುವ ಹಕ್ಕು ಹೊಂದಿರುತ್ತಾರೆ. ಹಾಗೆಯೇ ನಝಿರುದ್ದೀನ್ ಅಹ್ಮದ್ ಅವರು ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಬಹುದು. ನಝಿರುದ್ದೀನ್ ಅಹ್ಮದ್ ಅವರು ಕರಡು ರಚನಾ ಸಮಿತಿಯ ಯಾರೇ ಸದಸ್ಯರು ಹೊಂದಿಲ್ಲದಷ್ಟು ಅರ್ಹತೆ ಉಳ್ಳವನು ತಾನು ಎಂದು ಭಾವಿಸುವ ವ್ಯಕ್ತಿ. ಕರಡು ರಚನಾ ಸಮಿತಿ ಅವರ ಈ ಸವಾಲನ್ನು ಎತ್ತಿಕೊಂಡು ಚರ್ಚೆಗೆ ಇಳಿಯಲು ಇಷ್ಟಪಡುವುದಿಲ್ಲ. ಕರಡು ರಚನಾ ಸಮಿತಿಯು ಅವರನ್ನು ಸಮಿತಿಯಲ್ಲಿ ನೇಮಿಸಿಕೊಳ್ಳಬಯಸಿದ್ದರೆ, ಅವರನ್ನು ಸಮಿತಿಯಲ್ಲಿ ನೇಮಿಸಿಕೊಳ್ಳಬಹುದಾಗಿತ್ತು. ನಝಿರುದ್ದೀನ್ ಅಹ್ಮದ್ ಅವರಿಗೆ ಅವಕಾಶ ದೊರೆಯದೆ ಹೋಗಿದ್ದರೆ, ಆ ಬಗ್ಗೆ ಕರಡು ರಚನಾ ಸಮಿತಿ ಖಂಡಿತವಾಗಿಯೂ ಹೊಣೆಗಾರವಲ್ಲ.

ಮಾನ್ಯ ನಝಿರುದ್ದೀನ್ ಅಹ್ಮದ್ ಅವರು ಕರಡು ರಚನಾ ಸಮಿತಿಗೆ ಪುನರ್ ನಾಮಕರಣ ಮಾಡುವ ಮೂಲಕ ಸಮಿತಿಯ ಸಂಬಂಧದಲ್ಲಿ ತಮಗೆ ಇರುವ ಅಗೌರವವನ್ನು ಬಹಿರಂಗಗೊಳಿಸಿದ್ದಾರೆ. ಅವರು ಕರಡು ರಚನಾ ಸಮಿತಿ "ತೇಲುತ್ತಿರುವ ಸಮಿತಿ" ಎಂದು ಹೇಳಿದ್ದಾರೆ. ಅವರು ತಮ್ಮ ಹೇಳಿಕೆಯ ಬಗ್ಗೆ ತಾವೇ ಸಂತೋಷಪಟ್ಟಿರಬಹುದು. ಆದರೆ ಅವರಿಗೆ ನಿಯಂತ್ರಣ ಸಹಿತವಾಗಿ ತೇಲುವುದಕ್ಕೂ ನಿಯಂತ್ರಣ ರಹಿತವಾಗಿ ತೇಲುವುದಕ್ಕೂ ವ್ಯತ್ಯಾಸ ಇದೆಯೆಂಬ ತಿಳಿವಳಿಕೆ ಇದ್ದಂತೆ ತೋರುವುದಿಲ್ಲ. ಕರಡು ರಚನಾ ಸಮಿತಿ, ತೇಲುತ್ತಿದ್ದರೂ, ನಿಯಂತ್ರಣ ಸಹಿತವಾಗಿ ತೇಲುತ್ತಿತ್ತು. ಸಿಕ್ಕರೆ ಸಿಗಲಿ, ಇಲ್ಲದಿದ್ದರೆ ಇಲ್ಲ ಎಂಬ ಹಾಗೆ ಮೀನಿಗೆ ಗಾಳ ಹಾಕುವ ಪ್ರಯತ್ನ ಆಗಿರಲಿಲ್ಲ ಕರಡು ರಚನಾ ಸಮಿತಿಯ ಕಾರ್ಯಭಾರ. ಗೊತ್ತಿದ್ದ ನೀರಿನಲ್ಲಿ, ಹಿಡಿಯತಕ್ಕ ವಿಧಾನವನ್ನು ಹಿಡಿಯುವ ಪ್ರಯತ್ನವಾಗಿತ್ತು ಅವರ ಕರ್ತವ್ಯ ನಿರ್ವಹಣೆ. ಶ್ರೇಷ್ಠವಾದುದನ್ನು ಅರಸುತ್ತ ಹೋಗುವುದು ಬರಿದೆ ತೇಲುವುದಕ್ಕಿಂತ ಉತ್ತಮವಾದುದಲ್ಲವೆ? ಮಾನ್ಯ ನಝಿರುದ್ದೀನ್ ಅವರು ಕರಡು ರಚನಾ ಸಮಿತಿಗೆ ಅಭಿನಂದನೆಗಳನ್ನು ಹೇಳುವ ಉದ್ದೇಶವಿರದಿದ್ದರೂ, ಅವರು ಹೇಳಿದ್ದೆಲ್ಲವನ್ನು ಕರಡು ರಚನಾ ಸಮಿತಿಗೆ ಸಲ್ಲಿಸಿದ ಅಭಿನಂದನೆಗಳೆಂದೇ ಭಾವಿಸುತ್ತೇನೆ. ಕರಡು ರಚನಾ ಸಮಿತಿಯು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆಯನ್ನು ಧೈರ್ಯವನ್ನು ತೋರಿಸದೆ ಹೋಗಿದ್ದರೆ, ತಾನೇ ಮಂಡಿಸಿದ ತಿದ್ದುಪಡಿಗಳು, ದೋಷ ಪೂರ್ಣವಾಗಿವೆ ಎಂದು ಮನವರಿಕೆಯಾಗುತ್ತಲೆ ಅವುಗಳನ್ನು ಹಿಂದಕ್ಕೆ ಪಡೆದು, ಅವುಗಳಿಗಿಂತ ಉತ್ತಮವಾದುದನ್ನು ಸೇರಿಸುವ ಕೆಲಸವನ್ನು ನೆರವೇರಿಸುತ್ತಿರಲ್ಲಿಲ್ಲ. ಕರಡು ರಚನಾ ಸಮಿತಿಯು ಅದಕ್ಕೆ ತೋರಿಸಿಕೊಟ್ಟ ತಪ್ಪುಗಳನ್ನು ಒಪ್ಪಿಕೊಳ್ಳುತ್ತಿತ್ತು. ಅವುಗಳನ್ನು ಸರಿಪಡಿಸಿಕೊಳ್ಳಲು ಮುಂದೆ ಬರುತ್ತಿತ್ತು, ಅವುಗಳನ್ನು ಸರಿಪಡಿಸಿಕೊಳ್ಳಲು ಮುಂದೆ ಬರುತ್ತಿತ್ತು ಎಂದು ಹೇಳಲು ನನಗೆ ನಾಚಿಕೆ ಎನಿಸುವುದಿಲ್ಲ, ನಿಜವಾಗಿಯೂ ಸಂತೋಷವೆನಿಸುತ್ತಿದೆ.

ಆಪಾದನೆಗಳನ್ನು ಮಾಡಿರುವ ಒಬ್ಬ ಸದಸ್ಯರನ್ನು ಹೊರತುಪಡಿಸಿ ಹೇಳುವುದಾದರೆ, ಕರಡು ರಚನಾ ಸಮಿತಿಯು ನೆರವೇರಿಸಿದ ಕಾರ್ಯವನ್ನು ಸಂವಿಧಾನ ಸಭೆಯ ಪ್ರತಿಯೊಬ್ಬ ಸದಸ್ಯರು ಅಭಿನಂದಿಸಿದ್ದಾರೆ, ಪ್ರಶಂಸಿದ್ದಾರೆ ಎಂದು ತಿಳಿಸಲು ನನಗೆ ಎಣೆಯಿಲ್ಲದ ಸಂತೋಷವಾಗಿದೆ ಎಂದು ನಾನು ನಂಬುತ್ತೇನೆ. ಕರಡು ರಚನಾ ಸಮಿತಿಯ ಸದಸ್ಯರು ಸಂವಿಧಾನ ಸಭೆಯ ನನ್ನ ಸಹೋದ್ಯೋಗಿಗಳೂ ನನ್ನ ಮೇಲೆ ಕರೆದಿರುವ ಅಭಿನಂದನೆಗಳ ಸುರಿಮಳೆಗೆ ನಾನು ಮೂಕನಾಗಿದ್ದೇನೆ. ಅವರುಗಳಿಗೆಲ್ಲ ನಾನು ಯಾವ ರೀತಿಯಲ್ಲಿ ಕೃತಜ್ಞತೆಗಳನ್ನು ಸಲ್ಲಿಸಬೇಕು ಎಂದು ನನಗೆ ಕಿಂಚಿತ್ತು ಹೊಳೆಯುತ್ತಿಲ್ಲ. ಪರಿಶಿಷ್ಟ

ವರ್ಗಗಳ ಹಿತಾಸಕ್ತಿ. ಏಕೈಕ ಉದ್ದೇಶವನ್ನು ಅರಸುತ್ತ ನಾನು ಕರಡು ರಚನಾ ಸಮಿತಿಗೆ ಬಂದವನು. ಇದರ ಹೊರತಾಗಿ ಬೇರಾವ ಅಭಿಲಾಷೆಯನ್ನಾಗಲಿ, ಮಹಾತ್ವಾಕಾಂಕ್ಷೆಯನ್ನಾಗಲಿ ಹಂಬಲಿಸಿ ಬಂದವನಲ್ಲ. ಮಾತ್ರವಲ್ಲದೆ ಈ ಬಗೆಯ ಗುರುತರ ಗಂಭೀರ ಜವಾಬ್ದಾರಿಯನ್ನು ವಹಿಸಿಕೊಳ್ಳಲು ನನ್ನನ್ನು ಆಹ್ವಾನಿಸುತ್ತಾರೆ ಎಂದು ಕೂಡ ನನಗೆ ತಿಳಿದಿರಲಿಲ್ಲ. ಕರಡು ರಚನಾ ಸಮಿತಿಯು ನನ್ನನ್ನು ಒಬ್ಬ ಸದಸ್ಯನಾಗಿ ಆಯ್ಕೆಮಾಡಿದಾಗ ನನಗೆ ಅತಿದೊಡ್ಡ ಅಚ್ಚರಿ. ಅದಕ್ಕೂ ಮಿಗಿಲಾದ ಆಶ್ಚರ್ಯ ಆದದ್ದು, ನನ್ನನು ಕರಡು ರಚನಾ ಸಮಿತಿಯ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದಾಗ. ಕರಡು ರಚನಾ ಸಮಿತಿಯಲ್ಲಿ ನನಗಿಂತ ಹೆಚ್ಚು ಹಿರಿಯವರಾದವರೂ, ವಿದ್ವಾಂಸರು ಸಮರ್ಥರಾದವರು ಆದ ನನ್ನ ಮಾನ್ಯ ಮಿತ್ರರಾದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರಂಥ ಮಹಾನುಭಾವರಿದ್ದಾರೆ. ಸಂವಿಧಾನ ಸಭೆಯವರು ಮತ್ತು ಕರಡು ರಚನಾ ಸಮಿತಿಯವರು ನನ್ನಲ್ಲಿ ಇಷ್ಟೊಂದು ನಂಬಿಕೆಯನ್ನು ಮತ್ತು ವಿಶ್ವಾಸವನ್ನು ಇಟ್ಟು ಇಂತಹ ಅವಕಾಶವನ್ನು ಕಲ್ಪಿಸಿಕೊಡುವ ಮೂಲಕ ರಾಷ್ಟ್ರ ಸೇವಾ ಕಾರ್ಯಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅವರೆಲ್ಲರಿಗೂ ನಾನು ಚಿರಋಣಿಯಾಗಿರುತ್ತೇನೆ.

ನನಗೆ ಸಂದ ಈ ಗೌರವ ನನಗೊಬ್ಬನಿಗೇ ಸೀಮಿತವಾದುದಲ್ಲ. ಈ ಗೌರವವು, ಕರಡು ರಚನಾ ಸಮಿತಿಗೆ ಸಂವಿಧಾನ ಸಲಹೆಗಾರರಾಗಿದ್ದು, ಸಂವಿಧಾನ ಸಭೆಯ ಪರಿಶೀಲನೆಗಾಗಿ ಕಚ್ಚಾ ಕರಡು ಸಂವಿಧಾನವನ್ನು ಸಿದ್ಧಪಡಿಸಿಕೊಟ್ಟ ಶ್ರೀ ಬಿ. ಎನ್. ರಾವ್ ಅವರಿಗೆ ಸಲ್ಲಬೇಕು. ಗೌರವದ ಒಂದು ಭಾಗವು ೧೪೧ ದಿನಗಳ ಕಾಲ ಕುಳಿತುಕೊಂಡು, ತಮ್ಮ ಅನೇಕ ವಿಷಯಗಳನ್ನು ತಾಳ್ಮೆಯಿಂದ ಪರಿಶೀಲಿಸಿ, ವಿವಿಧ ವಿಷಯಗಳನ್ನು ಒಳಗೊಂಡಂಥ ಕರಡು ಸಂವಿಧಾನವನ್ನು ಸಿದ್ಧಪಡಿಸುವಲ್ಲಿ ನೆರವಾದ ಕರಡು ರಚನಾ ಸಮಿತಿಯ ಮಾನ್ಯ ಸದಸ್ಯರಿಗೆ ಸಲ್ಲಬೇಕು. ಅವರುಗಳ ಪಾಂಡಿತ್ಯ ಮತ್ತು ಪ್ರಯತ್ನ, ವಿಭಿನ್ನ ವಿಷಯಗಳ ಬಗ್ಗೆ ಅವರು ಕೈಗೊಂಡ ಎಡೆಬಿಡದ ಚರ್ಚೆ, ಇವುಗಳ ಸಹಾಯವು ಇಲ್ಲದೆ ಹೋಗಿದ್ದರೆ, ಈ ಸಂವಿಧಾನದ ರಚನೆಯು ಇಷ್ಟು ಸುಸೂತ್ರವಾಗಿ ಯಶಸ್ವಿಯಾಗಿ ಪೂರ್ಣಗೊಳ್ಳುತ್ತಿರಲಿಲ್ಲ. ಹಾಗೆಯೇ ಈ ಗೌರವದ ಇನ್ನೊಂದು ಭಾಗವು ಸಂವಿಧಾನದ ಪ್ರಧಾನ ಪ್ರಾರೂಪಣಕಾರರಾದ ಶ್ರೀ ಎಸ್. ಎಸ್. ಮುಖರ್ಜಿಯವರಿಗೂ ಸಲ್ಲಬೇಕು. ಅತ್ಯಂತ ಸೂಕ್ಷ್ಮ ವಿಷಯಗಳನ್ನು ಅತ್ಯಂತ ಸ್ಪಷ್ಟವಾಗಿ ಮತ್ತು ಸರಳವಾಗಿ ನಿರೂಪಿಸುವ ಮತ್ತು ಕಾನೂನು ವಿಷಯಗಳ ಅಂತರಂಗವನ್ನು ತಿಳಿಗೊಳಿಸಿ ತಿಳಿಸುವ ಅವರ ಸಾಮರ್ಥ್ಯವನ್ನು ಯಾರೊಂದಿಗೂ ಹೋಲಿಸಲು ಸಾಧ್ಯವಿಲ್ಲ. ಅವರು ಒಂದು ರೀತಿಯಲ್ಲಿ ಸಂವಿಧಾನ ಸಭೆಯ ಒಂದು ಅವಿಭಾಜ್ಯ ಅಂಗವೇ ಆಗಿಬಿಟ್ಟಿದ್ದರು. ಅವರ ಸಹಕಾರ ಮತ್ತು ಸಹಾಯ ಇಲ್ಲದೆ ಹೋಗಿದ್ದರೆ, ಸಂವಿಧಾನ ಸಭೆಯು ಸಂವಿಧಾನವನ್ನು ಪೂರ್ಣಗೊಳಿಸಲು ಇನ್ನು ಎಷ್ಟೋ ವರ್ಷ ತೆಗೆದುಕೊಳ್ಳುತ್ತಿತ್ತು. ಹಾಗೆಯೇ ಮಾನ್ಯ ಮುಖರ್ಜಿಯವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿದ್ದ ಅವರ ಸಿಬ್ಬಂದಿ ವರ್ಗದವರನ್ನು ಸಹ ನಾವು ಮರೆಯುವಂತಿಲ್ಲ. ಅವರುಗಳೆಲ್ಲ ಎಷ್ಟು ಕಷ್ಟಪಟ್ಟು ದುಡಿಯುತ್ತಿದ್ದರೆಂಬುದನ್ನು ಮಧ್ಯ ರಾತ್ರಿಯ ಅನಂತರವೂ ತಮ್ಮ ಕರ್ತವ್ಯದಲ್ಲಿ ನಿರತರಾಗಿರುತ್ತಿದ್ದರೆಂಬುದನ್ನು ನಾನು ಬಲ್ಲೆನು. ಅವರೆಲ್ಲರೂ ನೀಡಿದ ಸಹಕಾರಕ್ಕಾಗಿ ಸಲ್ಲಿಸಿದ ಸೇವೆಗಾಗಿ, ಅವರೆಲ್ಲರಿಗೂ ಅನಂತ ಕೃತ್ಯಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಸಂವಿಧಾನ ಸಭೆಯು ವಿಭಿನ್ನ, ವಿಲಕ್ಷಣ, ವಿಕ್ಷಿಪ್ತ ಮನೋಭಾವನೆಯುಳ್ಳ ಗುಂಪುಗಳ ಸಂಗಮವಾಗಿದ್ದರೆ ಮತ್ತು ಪ್ರತಿಯೊಂದು ತನ್ನ ಮನಸ್ಸಿಗೆ ತೋಚಿದ ತರದಲ್ಲಿ ವರ್ತಿಸುತ್ತಿದ್ದಿದ್ದರೆ ಸಂವಿಧಾನವನ್ನು ಸಿದ್ದಪಡಿಸುವಲ್ಲಿ ಕರಡು ರಚನಾ ಸಮಿತಿಗೆ ಬಹಳ ಕಷ್ಟವಾಗುತ್ತಿತ್ತು. ಮಾತ್ರವಲ್ಲದೆ, ಅಲ್ಲಿ ನಡೆಯುವ ಕಾರ್ಯ ಕಲಾಪಗಳು

ಗೊಂದಲಗಳ ಸಂತೆಯಾಗುತ್ತಿತ್ತೇ ಹೊರತು ಇನ್ನೇನೂ ಆಗುತ್ತಿರಲಿಲ್ಲ. ಗೊಂದಲ ಆಗದ ಹಾಗೆ, ಸುಗಮ ವಾತಾವರಣ ಏರ್ಪಡಿಸಲು, ಕಾಂಗ್ರೆಸ್ ಪಕ್ಷವು ಕರಡು ರಚನಾ ಸಮಿತಿಯ ವ್ಯವಹರಣೆಗಳಿಗೆ ಒಂದು ಶಿಸ್ತನ್ನು ವ್ಯವಸ್ಥೆಯನ್ನು ಒದಗಿಸಿದ್ದೇ ಪ್ರಮುಖ ಕಾರಣ ಎನ್ನಬಹುದು. ಹಾಗೆ ಏರ್ಪಾಟಿನ ಮೂಲಕ ಕರಡು ರಚನಾ ಸಮಿತಿಯಲ್ಲಿ ಪ್ರತಿಯೊಂದು ವಿಧಿಯನ್ನು ಮತ್ತು ಪ್ರತಿಯೊಂದು ತಿದ್ದುಪಡಿಯನ್ನು ಸ್ಪಷ್ಟ ಮತ್ತು ನಿಶ್ಚಿತ ಅಭಿಪ್ರಾಯ ದ್ವಾರಾ ಚರ್ಚಿಸಲು ಸಾಧ್ಯವಾಯಿತು. ಸಂವಿಧಾನ ಸಭೆಯು ತನಗೆ ವಹಿಸಿಕೊಟ್ಟ ಕರ್ತವ್ಯವನ್ನು ಸುಸೂತ್ರವಾಗಿ ನಿರ್ವಹಿಸಲು ಅಗತ್ಯವಾದ ವಾತಾವರಣವನ್ನು ಮೂಡಿಸುವಲ್ಲಿ ನೆರವಾದ ಕಾಂಗ್ರೆಸ್ ಪಕ್ಷಕ್ಕೆ ಅಭಿನಂದನೆಗಳು ಸಲ್ಲಬೇಕು.

ಸಂವಿಧಾನ ಸಭೆಯ ಎಲ್ಲಾ ಸದಸ್ಯರ ಸಕಲ ವ್ಯವಹರಣೆಗಳನ್ನು ಶಿಸ್ತಿನಿಂದ, ಕರ್ತವ್ಯ ನಿಷ್ಠೆಯಿಂದ ನಡೆಸದೆ ಹೋಗಿದ್ದರೆ, ಕಾರ್ಯಕಲಾಪಗಳು ನೀರಸವಾಗುತ್ತಿದ್ದವು, ಮಾತ್ರವಲ್ಲ, ನಿರರ್ಥಕವಾಗುತ್ತಿದ್ದುವು. ಪಕ್ಷದ ಕಠೋರ ಶಿಸ್ತು ಈ ಸಂವಿಧಾನ ಸಭೆಯನ್ನು ಹೌದಪ್ಪಗಳ ಸಭೆಯನ್ನಾಗಿ ಪರಿವರ್ತಿಸುವ ಸಾಧ್ಯತೆಯು ಇತ್ತು. ಆದರೆ ಅದೃಷ್ಟವಶಾತ್ ಪ್ರತಿಭಟಿಸುವವರು ಇದ್ದರು. ಹಾಗೆ ವಿವೇಕಪೂರ್ಣ ಪ್ರತಿಭಟನೆ ಸಲ್ಲಿಸಿ ಸಹಕರಿಸುವವರೆಂದರೆ, ಶ್ರೀಗಳಾದ ಮಾನ್ಯಶ್ರೀ ಎಚ್.ವಿ.ಕಾಮತ್, ಡಾ. ಪಿ. ಎಸ್. ದೇಶ್‌ಮುಖ್, ಶ್ರೀ ಸಿಧ್ವ, ಪ್ರೊಫೆಸರ್ ಸಕ್ಸೇನಾ ಮತ್ತು ಪಂಡಿತ್ ಠಾಕೂರ್‌ದಾಸ್ ಭಾರ್ಗವ ಮುಂತಾದ ಮಹನೀಯರು. ಅವರ ಹಾಗೆಯೇ ಉಲ್ಲೇಖಿಸಬೇಕಾದ ಮಹಾನುಭಾವರೆಂದರೆ ಪ್ರೊ.ಕೆ.ಟಿ.ಷಾ ಮತ್ತು ಪಂಡಿತ್ ಹೃದಯನಾಥ್ ಕುಂಜ್ರು ಅವರು. ಅವರು ಮುಖ್ಯವಾಗಿ ಚರ್ಚಿಸುತ್ತಿದ್ದ ವಿಷಯಗಳು ಸೈದ್ಧಾಂತಿಕ ಸ್ವರೂಪದವುಗಳಾಗಿರುತ್ತಿದ್ದವು. ಅವರು ನೀಡುವ ಪ್ರತಿಯೊಂದು ಸಲಹೆಯನ್ನು ಸ್ವೀಕರಿಸುವ ಸ್ಥಿತಿಯಲ್ಲಿ ಇರಲಿಲ್ಲ. ಆದಾಗ್ಯೂ ಅವರು ನೀಡುತ್ತಿದ್ದ ಯಾವುದೇ ಸಲಹೆಯನ್ನು ಅಗೌರವದಿಂದ ನೋಡಲಿಲ್ಲ. ಅಥವಾ ಸಂವಿಧಾನ ರಚನಾ ಸಮಿತಿಯ ವ್ಯವಹಾರಗಳಿಗೆ ಅವರು ನೀಡುತ್ತಿದ್ದ ಸಹಕಾರವನ್ನು ಸಾಮಾನ್ಯ ದೃಷ್ಟಿಯಿಂದ ನೋಡಲಿಲ್ಲ. ಅವರೆಲ್ಲರ ಸಹಕಾರಕ್ಕಾಗಿ ಅವರಿಗೆ ನಾನು ಚಿರಋಣಿಯಾಗಿದ್ದೇನೆ. ಅವರೆಲ್ಲರ ಸಹಕಾರ ಇಲ್ಲದೆ ಹೋಗಿದ್ದರೆ, ಸಂವಿಧಾನದ ಮೂಲ ಆಧಾರವಾಗಿರತಕ್ಕ ಸಿದ್ಧಾಂತಗಳನ್ನು ಪ್ರತಿಪಾದಿಸುವ, ವಿವರಿಸುವ ಕೆಲಸವು ಸುಲಭವಾಗಿರುತ್ತಿರಲಿಲ್ಲ. ಇದರಿಂದ ದೊರೆತ ಸಹಕಾರವು, ಸಂವಿಧಾನವನ್ನು ಅಂಗೀಕರಿಸುವ ಯಾಂತ್ರಿಕ ಕೆಲಸಕ್ಕಿಂತ ಅದೆಷ್ಟೋ ಮಹತ್ವಪೂರ್ಣವಾಗಿತ್ತು.

ಆಖೈರಾಗಿ, ಈ ಸಭೆಯ ವ್ಯವಹಾರಗಳನ್ನು ಸುಸೂತ್ರವಾಗಿ ಸುಗಮವಾಗಿ ನಡೆಸಿಕೊಟ್ಟದ್ದಾಗಿ, ಸಭೆಯ ಸನ್ಮಾನ್ಯ ಅಧ್ಯಕ್ಷರಾದ ತಮಗೆ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಈ ಸಮಿತಿಯ ಬಗ್ಗೆ ತಾವು ತೋರಿಸಿದ ಗೌರವವನ್ನು ಅದರಲ್ಲಿಟ್ಟ ವಿಶ್ವಾಸವನ್ನು, ಸಭೆಯ ವ್ಯವಹರಣೆಯಲ್ಲಿ ಭಾಗವಹಿಸುವ ಯಾವ ಸದಸ್ಯನೂ ಮರೆಯುವಂತಿಲ್ಲ. ಕರಡು ರಚನಾ ಸಮಿತಿಯು ಪ್ರಸ್ತಾಪಿಸಿದ ತಿದ್ದುಪಡಿಗಳನ್ನು ಅನೇಕ ಸಲ ಕೇವಲ ತಾಂತ್ರಿಕ ಕಾರಣಗಳ ಆಧಾರದ ಮೇಲೆ ತಳ್ಳಿಹಾಕುವ ಪ್ರಯತ್ನಗಳು ನಡೆದದ್ದುಂಟು. ಅಂಥ ಎಲ್ಲಾ ಸಂದರ್ಭಗಳಲ್ಲಿ ನಾನು ತಲ್ಲಣಗೊಳ್ಳುತ್ತಿದ್ದೆನು. ತಾವು ಕಾನೂನಿನ ಅನಗತ್ಯ ಪಾಂಡಿತ್ಯ ಸೂಕ್ಷ್ಮಗಳಿಗೆ ಎಡೆಗೊಡದೆ ಸಂವಿಧಾನ ರಚನಾ ಕಾರ್ಯವನ್ನು ಸುಸೂತ್ರಗೊಳಿಸಿದ್ದಕ್ಕಾಗಿ ತಮಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ನನ್ನ ಮಾನ್ಯ ಮಿತ್ರರಾದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮತ್ತು ಶ್ರೀ ಟಿ. ಟಿ. ಕೃಷ್ಣಮಾಚಾರಿ ಅವರುಗಳು ಸಂವಿಧಾನವನ್ನು ಸಮರ್ಥಿಸುತ್ತಾ, ಏನೆಲ್ಲ ವಾದಿಸಬೇಕೋ ಅಷ್ಟು ವಾದಿಸಿದ್ದಾರೆ. ಆದ್ದರಿಂದ ಗುಣವಿಶೇಷಗಳನ್ನು ಕುರಿತು ನಿರೂಪಿಸಲು ಬಯಸುವುದಿಲ್ಲ. ಚರ್ಚೆ ಮಾಡಲು ಇಷ್ಟಪಡುವುದಿಲ್ಲ.

ಕಾರಣವೆಂದರೆ, ಸಂವಿಧಾನ ಎಷ್ಟೇ ಶ್ರೇಷ್ಠ ಮಟ್ಟದಾಗಿದ್ದರೂ, ಅದನ್ನು ಅನುಸರಿಸಿ ಕಾರ್ಯ ನಿರ್ವಹಿಸತಕ್ಕವರು ಕೆಟ್ಟವರಾಗಿದ್ದರೆ, ಸಂವಿಧಾನವು ಕೆಟ್ಟ ಸಂವಿಧಾನವಾಗುತ್ತದೆ. ಆದರೆ ಸಂವಿಧಾನ ಎಷ್ಟೇ ಕೆಟ್ಟ ಸಂವಿಧಾನ ಆಗಿದ್ದರೂ ಅದನ್ನು ಅನುಸರಿಸಿ ಕಾರ್ಯನಿರ್ವಹಿಸತಕ್ಕವರು ಒಳ್ಳೆಯವರಾಗಿದ್ದರೆ, ಅದು ಒಳ್ಳೆಯ ಸಂವಿಧಾನ ಎಂದು ತೋರುತ್ತದೆ ಎಂದು ನಾನು ಭಾವಿಸುತ್ತೇನೆ. ಸಂವಿಧಾನದ ಅನುಷ್ಠಾನವು, ಕಾರ್ಯನಿರ್ವಹಣೆಯು ಸಂಪೂರ್ಣವಾಗಿ ಸಂವಿಧಾನದ ಸ್ವರೂಪವನ್ನು ಅವಲಂಬಿಸಿಲ್ಲ. ಸಂವಿಧಾನವು ರಾಜ್ಯವ್ಯವಸ್ಥೆಯ ಪ್ರಮುಖ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇವುಗಳನ್ನು ಒದಗಿಸಲು ಮಾತ್ರ ಸಾಧ್ಯ. ರಾಜ್ಯದ ಅಂಗಗಳನ್ನು ಕಾರ್ಯನಿರ್ವಹಣೆಗಾಗಿ ಯಾವ ಪಕ್ಷಗಳ ಮತ್ತು ವ್ಯಕ್ತಿಗಳ ಕೈಗೆ ಒಪ್ಪಿಸಲಾಗುವುದೋ ಅಂಥ ಪಕ್ಷಗಳ ವ್ಯಕ್ತಿಗಳು ತಮ್ಮ ವ್ಯಕ್ತಿಗತ ಹಿತಸಾಧನೆಯ ಅಥವಾ ಪಕ್ಷದ ಹಿತಸಂವರ್ಧನೆಯ ಉದ್ದೇಶಕ್ಕಾಗಿ ಸಂವಿಧಾನವು ಬಳಕೆಯಾಗುತ್ತದೆ. ಆದ್ದರಿಂದ ಸಂವಿಧಾನ ಕಾರ್ಯನಿರ್ವಹಣೆಯು ರಾಜಕೀಯ ಪಕ್ಷಗಳನ್ನು ಜನಸಮುದಾಯವನ್ನು ಅವಲಂಬಿಸಿರುತ್ತದೆ. ಭಾರತದ ಜನಸಮುದಾಯ ಮತ್ತು ಅದರ ರಾಜಕೀಯ ಪಕ್ಷಗಳು ಸಂವಿಧಾನವನ್ನು ಹೀಗೆ ಬಳಸಿಕೊಳ್ಳುತ್ತಾರೆ ಎಂದು ಯಾರು ಹೇಳಬಲ್ಲರು ಅವರು ತಮ್ಮ ಉದ್ದೇಶಗಳ ಈಡೇರಿಕೆಗಾಗಿ ಸಂವಿಧಾನದ ವಿಧಿವಿಧಾನಗಳನ್ನು ಅನುಸರಿಸುವರೋ? ಅಥವಾ ಕ್ರಾಂತಿಕಾರಕ ವಿಧಿವಿಧಾನಗಳನ್ನು ಅನುಸರಿಸಿದ ಸಂದರ್ಭದಲ್ಲಿ, ಆಗ ಸಂವಿಧಾನವು ಎಷ್ಟೇ ಶ್ರೇಷ್ಠ ಮಟ್ಟದ್ದಾಗಿದ್ದರೂ, ಅದು ವಿಫಲವಾಗುವಲ್ಲಿ ಸಂದೇಹವಿಲ್ಲ ಎಂದು ಹೇಳಲು ಯಾವ ಪ್ರವಾದಿಯೂ ಬೇಕಾಗಿಲ್ಲ. ಹೀಗಿರುವಾಗ ರಾಜಕೀಯ ಪಕ್ಷಗಳೂ ಜನಸಮುದಾಯಗಳೂ ಯಾವ ರೀತಿಯಲ್ಲಿ ವರ್ತಿಸಬಹುದು ಎಂಬುದನ್ನು ತಿಳಿಯದೆ ಈ ಸಂದರ್ಭದಲ್ಲಿ ಯಾವುದೇ ತೀರ್ಮಾನ ಕೊಡುವುದು ಅರ್ಥಹೀನವಾಗುತ್ತದೆ. ಅಪ್ರಸ್ತುತ ವಾಗುತ್ತದೆ.

ಸಂವಿಧಾನವನ್ನು ಟೀಕಿಸಿ ಮಾತನಾಡಿದವರು ಎರಡೂ ಕಡೆಗಳಿಂದ ಮಾತನಾಡಿದವರು ಮುಖ್ಯವಾಗಿ ಕಮ್ಯೂನಿಷ್ಟ್ ಪಕ್ಷ, ಸೋಶಲಿಷ್ಟ್ ಪಕ್ಷ ಇವುಗಳನ್ನು ಇಲ್ಲಿ ಹೆಸರಿಸಬಹುದು. ಇವರುಗಳು ಸಂವಿಧಾನವನ್ನು ಏಕೆ ಖಂಡಿಸುತ್ತಾರೆ, ಯಾಕೆ ಟೀಕಿಸುತ್ತಾರೆ? ಇದು ಒಂದು ಕೆಟ್ಟ ಸಂವಿಧಾನ ಎಂಬ ಕಾರಣವೆ? ಅದಕ್ಕೆ ನನ್ನ ಉತ್ತರ ಸಂವಿಧಾನ ಕೆಟ್ಟ ಸಂವಿಧಾನವಲ್ಲ. ಇದು ನನ್ನ ದಿಟ್ಟ ಉತ್ತರ. ಕಮ್ಯೂನಿಷ್ಟ್ ಪಕ್ಷಕ್ಕೆ ಕಾರ್ಮಿಕ ವರ್ಗದ ಸರ್ವಾಧಿಕಾರದ ಮೇಲೆ ನೆಲೆಯಾಗಿರತಕ್ಕ ಸಂವಿಧಾನ ಬೇಕು. ಸಂವಿಧಾನವು ಪ್ರಜಾಪ್ರಭುತ್ವವನ್ನು ಆಧರಿಸಿರುವ ಕಾರಣ ಅವರು ಅದನ್ನು ಖಂಡಿಸುತ್ತಾರೆ. ಸೋಶಲಿಷ್ಟ್ ಪಕ್ಷದವರಿಗೆ ಎರಡು ಮುಖ್ಯ ಸಂಗತಿಗಳು ಬೇಕು. ಅಧಿಕಾರಕ್ಕೆ ಬಂದೊಡನೇಯೇ ಖಾಸಗೀ ಸ್ವತ್ತನ್ನು ರಾಷ್ಟ್ರೀಕರಣಗೊಳಿಸಲು ಅಥವಾ ಸಮಾಜೀಕರಣಗೊಳಿಸಲು ಸಂವಿಧಾನದಲ್ಲಿ ಅವಕಾಶ ಕಲ್ಪಿಸಿರಬೇಕು. ಮತ್ತು ಹಾಗೆ ರಾಷ್ಟ್ರೀಕರಣಗೊಳಿಸಿದ ಸಂದರ್ಭದಲ್ಲಿ ಪರಿಹಾರಕ್ಕೆ ಅವಕಾಶವಿರಕೂಡದು. ಎರಡನೆಯ ಸಂಗತಿಯೆಂದರೆ ಸಂವಿಧಾನದಲ್ಲಿ ಉಲ್ಲೇಖಿಸಿರುವ ಮೂಲಭೂತ ಹಕ್ಕುಗಳ ಮೇಲೆ ನಿರ್ಬಂಧವಿರಕೂಡದು. ಅವು ಯಾವುದೇ ಪರಿಮಿತಿಗಳಿಗೆ ಒಳಪಟ್ಟಿರಕೂಡದು.

ಸಂವಿಧಾನವನ್ನು ಟೀಕಿಸಲು ಇವು ಕೆಲವು ಮುಖ್ಯ ಕಾರಣಗಳಾಗಿರುತ್ತವೆ. ಸಂಸದೀಯ ಪ್ರಜಾಪ್ರಭುತ್ವ ತತ್ವವು ಆದರ್ಶವಾದ ರಾಜಕೀಯ ತತ್ವ ಎಂದು ನಾನು ಹೇಳುತ್ತಿಲ್ಲ. ಅದೇ ರೀತಿ, ಪರಿಹಾರವನ್ನು ಕೊಡದೆ ಖಾಸಗೀ ಸ್ವತ್ತನ್ನು ರಾಷ್ಟ್ರೀಕರಣ ಮಾಡುವುದೇ ಶ್ರೇಷ್ಠವೆಂದು ಅದನ್ನು ಬಿಟ್ಟು ಬೇರೆ ಮಾರ್ಗವೇ ಇಲ್ಲವೆಂದೂ ಹೇಳುವವನಲ್ಲ. ಹಾಗೆಯೇ, ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಅನಿರ್ಬಂಧಿತ ಹಕ್ಕುಗಳು ಎಂದಾಗಲೀ, ಅವುಗಳ ಮೇಲೆ ವಿಧಿಸುವ ಷರತ್ತುಗಳು ಹಿಂತೆಗೆದುಕೊಳ್ಳಲಾಗದ ಷರತ್ತು

ಎಂದಾಗಲೀ ನಾನು ಹೇಳುತ್ತಿಲ್ಲ. ಸಂವಿಧಾನದಲ್ಲಿ ಯಾವ ಸಿದ್ಧಾಂತಗಳು ಮತ್ತು ಅಭಿಪ್ರಾಯಗಳು ಈ ತಲೆಮಾರಿನವರ ಸಿದ್ಧಾಂತಗಳೇ, ಅಭಿಪ್ರಾಯಗಳೇ ಆಗಿರುತ್ತವೆ. ಅಥವಾ ನೀವು ನನ್ನ ಈ ಹೇಳಿಕೆಯನ್ನು ಉತ್ಪ್ರೇಕ್ಷೆ ಎಂದು ಭಾವಿಸುವುದಾದರೆ, ಈ ಸಂವಿಧಾನದಲ್ಲಿ ಅಳವಡಿಸಿಕೊಂಡಿರತಕ್ಕ ತತ್ವಗಳು ಸಂವಿಧಾನ ಸಭೆಯ ಸದಸ್ಯರುಗಳ ತತ್ವವೇ ಆಗಿರುತ್ತವೆ ಎಂದು ಹೇಳಬಯಸುತ್ತೇನೆ. ಈ ಅಭಿಪ್ರಾಯಗಳನ್ನು ಸಂವಿಧಾನದಲ್ಲಿ ಅಳವಡಿಸಿರುವುದಕ್ಕಾಗಿ ಕರಡು ರಚನಾ ಸಮಿತಿಯನ್ನು ಏಕೆ ಆಪಾದಿಸಬೇಕು? ಅಥವಾ ಸಂವಿಧಾನ ಸಭೆಯ ಸದಸ್ಯರುಗಳನ್ನು ಏಕೆ ಆಪಾದಿಸಬೇಕು? ಎಂದು ಪ್ರಶ್ನಿಸುತ್ತೇನೆ. ಅಮೇರಿಕದ ಶ್ರೇಷ್ಠ ಮುತ್ಸದ್ದಿಗಳಾಗಿದ್ದವರು ಮತ್ತು ಅಮೆರಿಕದ ಸಂವಿಧಾನದ ರಚನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದವರು ಜಾಫರ್ ಸನ್ ಅವರು. ಈ ಸಂವಿಧಾನದಲ್ಲಿ ಅವರು ವ್ಯಕ್ತಗೊಳಿಸಿರುವ ಅಭಿಪ್ರಾಯಗಳನ್ನು ಯಾರೇ ಸಂವಿಧಾನಕರ್ತರು ಮರೆಯುವಂತಿಲ್ಲ.

"ಪ್ರತಿಯೊಂದು ತಲೆಮಾರು ಒಂದು ಪ್ರತ್ಯೇಕ ರಾಷ್ಟ್ರ ಎಂದು ನಾವು ಭಾವಿಸಬಹುದು. ಅಂಥ ತಲೆಮಾರಿಗೆ ಬಹುಸಂಖ್ಯಾತರ ಬೆಂಬಲದ ಮೂಲಕ ತಮ್ಮನ್ನು ತಾವೇ ಬದ್ಧಗೊಳಿಸಿಕೊಳ್ಳತಕ್ಕ ಹಕ್ಕು ಬರುತ್ತದೆ. ಹಾಗೆಯೇ, ಅಂದರೆ ಬೇರೆ ರಾಷ್ಟ್ರದ ನಿವಾಸಿಗಳನ್ನು ಬದ್ಧಗೊಳಿಸತಕ್ಕ ಹಕ್ಕು ನಮಗೆ ಹೇಗೆ ಇಲ್ಲವೋ ಅದೇ ರೀತಿ ಅದಕ್ಕೂ ಮಿಗಿಲಾಗಿ ಬರಲಿರುವ ತಲೆಮಾರನ್ನು ಬದ್ಧಗೊಳಿಸತಕ್ಕ ಹಕ್ಕು ನಮಗಿಲ್ಲ." ಅವರು ಇನ್ನೊಂದು ಹೀಗೆ ಹೇಳುತ್ತಾರೆ.

"ರಾಷ್ಟ್ರದ ಸೇವೆಯ ಸಲುವಾಗಿ ಸಾರ್ವಜನಿಕವಾಗಿ ಸಾಧಿಸಲಾದ ಸಂಸ್ಥೆಗಳನ್ನು ಮುಟ್ಟಲು ಬರುವುದಿಲ್ಲ ಅಥವಾ ಮಾರ್ಪಡಿಸಲು ಬರುವುದಿಲ್ಲ. ಹಾಗೂ, ಆಖ್ಯೆರಾಗಿ ತಮ್ಮ ಗುರಿಯ ಈಡೇರಿಕೆಯ ಸಂಬಂಧದಲ್ಲಿ ಉತ್ತರಿಸಬೇಕಾದ ಅಗತ್ಯವೂ ಇರುವುದಿಲ್ಲ. ಏಕೆಂದರೆ ಅಂಥ ಸಂಸ್ಥೆಗಳ ನಿರ್ವಹಣೆಯನ್ನು ವಹಿಸಿಕೊಂಡವರ ಕೈಯಲ್ಲಿ ಅಧಿಕಾರ ಇರುತ್ತದೆ ಎಂಬ ವಿಚಾರ ಸಂಸ್ಥೆಗಳ ಸಂಬಂಧದಲ್ಲಿ ಅನ್ವಯಿಸಿ ಹೇಳುವುದಾದರೆ ಆರೋಗ್ಯವಂತ ಸಾಧು ಉಪಬಂಧವೆಂದು ಒಪ್ಪಿಕೊಳ್ಳಬಹುದಾದರೂ, ರಾಷ್ಟ್ರಗಳ ಮಟ್ಟಿಗೆ ಅನ್ವಯಿಸಿ ಹೇಳುವುದಾದರೆ ಅಸಂಗತವಾಗುತ್ತದೆ. ವಿಸಂಗತ ವಿಚಾರವಾಗುತ್ತದೆ. ಆದರೂ ನಮ್ಮ ಪಂಡಿತರ ವರ್ಗದವರೂ ಈ ಸಿದ್ಧಾಂತವನ್ನೇ ಅಳವಡಿಸಿಕೊಳ್ಳಲು ಇಷ್ಟಪಡುತ್ತಾರೆ. ಒಂದು ವೇಳೆ ನಮ್ಮ ಹಿಂದಿನ ತಲೆಮಾರಿನವರು ಭೂಮಿಯನ್ನು ಹೆಚ್ಚು ಚೆನ್ನಾಗಿ ಬಳಸಿಕೊಂಡು, ನಮ್ಮ ಕಾನೂನುಗಳನ್ನು ಹೇರುವ ಹಕ್ಕು ಹೊಂದಿದ್ದರೆ ಮತ್ತು ಆ ಕಾನೂನನ್ನು ಮಾರ್ಪಡಿಸಲು ನಮಗೆ ಹಕ್ಕು ಇಲ್ಲದಿದ್ದರೆ ಮತ್ತು ಅದೇ ರೀತಿ ನಾವೂ ಸಹ ಕಾನೂನುಗಳನ್ನು ರಚಿಸಿ ಮುಂದಿನ ತಲೆಮಾರಿನವರ ಮೇಲೆ ಹೇರಿದರೆ ಮತ್ತೆ ಅವುಗಳನ್ನು ಮಾರ್ಪಡಿಸಲು ಹಕ್ಕು ಹೊಂದಿರದಿದ್ದರೆ, ಆಗ ಆ ಭೂಮಿಯು ಸತ್ತವರ ಉಪಯೋಗಕ್ಕೆ ಯೋಗ್ಯವಾಗುತ್ತದೆಯೇ ಹೊರತು ಬದುಕಿರುವವರ ಬಳಕೆಗೆ ಯೋಗ್ಯವಾಗಿರುವುದಿಲ್ಲ."

ಜಾಫರ್‌ಸನ್ ಏನೆಲ್ಲ ಹೇಳಿರುವವರೋ ಅದು ಸತ್ಯವಷ್ಟೇ ಅಲ್ಲ, ಪೂರ್ಣ ಸತ್ಯ ಎಂದು ಭಾವಿಸುತ್ತೇನೆ. ಜಾಫರ್‌ಸನ್ ಅವರು ಹಾಕಿಕೊಟ್ಟ ಈ ಸಿದ್ಧಾಂತದಿಂದ ಸಂವಿಧಾನ ಸಭೆಯು ವಿಮುಖಗೊಂಡಿದ್ದರೆ, ಆಗ ಸಂವಿಧಾನ ಸಭೆಯು ಆರೋಪಕ್ಕೆ ಗುರಿಯಾಗಬಹುದಿತ್ತು. ಸಂವಿಧಾನ ಸಭೆಯು ಹಾಗೆ ವಿಮುಖಗೊಂಡಿದೆಯೆ? ಎಂದು ನಾನು ಪ್ರಶ್ನಿಸುತ್ತೇನೆ. ಖಂಡಿತವಾಗಿಯೂ ಹಾಗೆ ವಿಮುಖಗೊಂಡಿಲ್ಲ. ಸಂವಿಧಾನಕ್ಕೆ ಸಂಬಂಧಿಸಿದ ತಿದ್ದುಪಡಿಗಳನ್ನು ಅಂದರೆ ಅವುಗಳಿಗೆ ಸಂಬಂಧಿಸಿದ ಉಪಬಂಧಗಳನ್ನು ಪರಿಶೀಲಿಸಿ ನೋಡಿದರೆ ಇದು ಮನವರಿಕೆಯಾಗುತ್ತದೆ. ಸಂವಿಧಾನ ಸಭೆಯು, ಕೆನಡಾದ ಸಂವಿಧಾನದಲ್ಲಿ ಇರುವ ಹಾಗೆ, ಸಂವಿಧಾನಕ್ಕೆ ತಿದ್ದುಪಡಿ ತರುವ ಅಧಿಕಾರವನ್ನು ಜನತೆಯಿಂದ ಕಸಿದುಕೊಳ್ಳಲು ಪ್ರಯತ್ನ

ಮಾಡಿಲ್ಲ. ಅಥವಾ ಹಾಗೆ ಮಾಡದಂತೆ ಜನತೆಯ ಮೇಲೆ ತನ್ನ ಅಂತಿಮ ನಿರ್ಧಾರವನ್ನು ಹೇರಲು ಸಹ ಪ್ರಯತ್ನಿಸಿಲ್ಲ. ಅಥವಾ ಅಮೆರಿಕ ಅಥವಾ ಆಸ್ಟ್ರೇಲಿಯಾ ಸಂವಿಧಾನಗಳಲ್ಲಿ ಇರುವ ಹಾಗೆ ತಿದ್ದುಪಡಿ ತರಲು ವಿಶೇಷ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಪಾಲಿಸಬೇಕು ಎಂದು ಗೊತ್ತುಪಡಿಸಿರುವುದಿಲ್ಲ. ಹಾಗೆ ಏನನ್ನೂ ಮಾಡದೆಯೆ ಸಂವಿಧಾನವನ್ನು ತಿದ್ದುಪಡಿ ಮಾಡಲು ಅತ್ಯಂತ ಸುಲಭವಾದ ಉಪಬಂಧಗಳನ್ನು ಏರ್ಪಡಿಸಿದ್ದುಂಟು. ಪ್ರಪಂಚದ ಯಾವುದೇ ಭಾಗದಲ್ಲಿನ ಯಾವುದೇ ಸಂವಿಧಾನ ಸಭೆಯು ನಮ್ಮ ದೇಶದ ಈ ಸಂವಿಧಾನದಲ್ಲಿ ಇರುವ ಹಾಗೆ ಸಂವಿಧಾನವನ್ನು ತಿದ್ದುಪಡಿಮಾಡಲು ಸುಲಭ, ಸರಳ ಉಪಬಂಧವನ್ನು ಕಲ್ಪಿಸಿದೆಯೆ ಎಂದು ನಾನು ಇಲ್ಲಿ ನಮ್ಮ ಸಂವಿಧಾನದ ಟೀಕಾಕಾರರಿಗೆ ಸವಾಲು ಒಡ್ಡುತ್ತೇನೆ. ಸಂವಿಧಾನದ ವಿಷಯದಲ್ಲಿ ಏನೇ ಅಸಾಮಾಧಾನ ಆದ ಸಂದರ್ಭದಲ್ಲಿ ಮೂರನೇ ಎರಡರಷ್ಟು ಬಹುಮತವು ಪಡೆದು ಅದನ್ನು ತಿದ್ದುಪಡಿ ಮಾಡಲು ಪ್ರಯತ್ನಿಸಬಹುದು. ಒಂದು ವೇಳೆ ಸಂಸತ್ತಿನಲ್ಲಿ ಮತದಾನ ಪದ್ಧತಿಯನ್ನು ಆಧರಿಸಿ ಚುನಾಯಿತರಾಗಿ ಬಂದ ಪ್ರತಿನಿಧಿಗಳ ಪೈಕಿ ಮೂರನೇ ಎರಡರಷ್ಟು ಬಹುಮತ ಪಡೆಯಲು ಸಾಧ್ಯವಾಗದೆ ಹೋದರೆ, ಆಗ ಸಂವಿಧಾನದ ಸಂಬಂಧದಲ್ಲಿ ಅವರಲ್ಲಿ ಉಂಟಾದ ಅಸಮಾಧಾನಕ್ಕೆ ಸಾರ್ವಜನಿಕರ ಬೆಂಬಲ ಇಲ್ಲ ಎಂದೇ ಭಾವಿಸಬೇಕಾಗುತ್ತದೆ.

ಸಂವಿಧಾನಕ್ಕೆ ಸಂಬಂಧಪಟ್ಟ ಹಾಗೆ ಒಂದು ಪ್ರಸ್ತಾಪ ಮಾಡಬಯಸುತ್ತೇನೆ. ಸಂವಿಧಾನದಲ್ಲಿ ಅಧಿಕಾರವನ್ನು ಒಕ್ಕೂಟ ಸರ್ಕಾರದಲ್ಲಿ ಕೇಂದ್ರೀಕರಿಸಲಾಗಿದೆಯೆಂದು ಮತ್ತು ರಾಜ್ಯಗಳನ್ನು ನಗರ ಸಭೆಗಳ ದರ್ಜೆಗಳಿಗೆ ಇಳಿಸಲಾಗಿದೆಯೆಂದು ಆಪಾದಿಸಲಾಗಿದೆ. ಈ ಅಭಿಪ್ರಾಯ ಅತಿಶಯೋಕ್ತಿ, ಅಷ್ಟೇ ಅಲ್ಲದೆ ಸಂವಿಧಾನದ ಸಂಬಂಧವಾಗಿ ತಪ್ಪು ತಿಳುವಳಿಕೆಯಿಂದ ಮೂಡಿದ ವಿಚಾರ ಎಂದು ಹೇಳಬಯಸುತ್ತೇನೆ. ಕೇಂದ್ರ ಮತ್ತು ರಾಜ್ಯಗಳು ಅವುಗಳ ನಡುವಣ ಸಂಬಂಧಗಳನ್ನು ಯಾವ ತತ್ವಗಳನ್ನು ಆಧರಿಸಿ ರೂಪಿಸಲಾಗಿದೆ ಎಂಬುದನ್ನು ನೆನಪಿಡಬೇಕು. ಸಂಯುಕ್ತ ಪದ್ಧತಿಯ ಮೂಲ ತತ್ವ ಎಂದರೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರವನ್ನು ಅಂದರೆ ಕಾರ್ಯಾಂಗದ ಅಧಿಕಾರವನ್ನು ಪ್ರತ್ಯೇಕ ಪ್ರತ್ಯೇಕವಾಗಿಯೇ ಗೊತ್ತುಪಡಿಸಿದ್ದುಂಟು. ಇದನ್ನು ಕೇಂದ್ರವು ಯಾವುದೇ ಕಾಯ್ದೆಯ ಅಡಿಯಲ್ಲಿ ಮಾಡಿದ್ದಲ್ಲ. ಸಂವಿಧಾನವೇ ಈ ವ್ಯವಸ್ಥೆಯನ್ನು ರೂಪಿಸಿದ್ದು. ಸಂವಿಧಾನದ ಅಡಿಯಲ್ಲಿ ನಮ್ಮ ರಾಜ್ಯಗಳು ತಮ್ಮ ತಮ್ಮ ಶಾಸಕಾಂಗದ ಅಧಿಕಾರ ಅಥವಾ ಕಾರ್ಯಾಂಗದ ಅಧಿಕಾರ ಇವುಗಳಿಗಾಗಿ ಕೇಂದ್ರವನ್ನು ಅವಲಂಬಿಸಬೇಕಾಗಿಲ್ಲ. ಈ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯಗಳು ಸಮಾನ ಸ್ಥಾನಮಾನದ ಮೇಲೆ ನೆಲೆಸಿರುತ್ತದೆ. ವಸ್ತುಸ್ಥಿತಿ ಹೀಗಿರುವಾಗ, ಈ ಸಂವಿಧಾನವನ್ನು ಕೇಂದ್ರ ಪ್ರಧಾನ ಸಂವಿಧಾನ ಎಂದು ಹೇಗೆ ಹೇಳುತ್ತಾರೆ ಎಂದು ಅರ್ಥವಾಗುತ್ತಿಲ್ಲ. ಯಾವುದೇ ಸಂಯುಕ್ತ ಪದ್ಧತಿ ಸಂವಿಧಾನದಲ್ಲಿ ಉಳಿಕೆ ಅಧಿಕಾರವನ್ನು ರಾಜ್ಯಗಳಿಗೆ ಕೊಡದೇ ಕೇಂದ್ರಗಳಿಗೆ ಕೊಡಲಾಗಿದೆ. ನಮ್ಮ ಸಂವಿಧಾನದ ಈ ಲಕ್ಷಣಗಳು ಸಂಯುಕ್ತ ಪದ್ಧತಿಯ ಸಾರಸರ್ವಸ್ವ ಅಲ್ಲ. ನಾನು ಈಗಾಗಲೇ ಹೇಳಿರುವ ಪ್ರಕಾರ ಸಂಯುಕ್ತ ಪದ್ಧತಿಯ ಮುಖ್ಯ ಲಕ್ಷಣಗಳು ಎಂದರೆ ಸಂವಿಧಾನ ದ್ವಾರಾ ಅಥವಾ ಸಂವಿಧಾನದ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಶಾಸಕಾಂಗ ಮತ್ತು ಕಾರ್ಯಾಂಗ ಅಧಿಕಾರಿಗಳ ವಿಭಜನೆ. ಈ ತತ್ವವೇ ನಮ್ಮ ಸಂವಿಧಾನದ ಮೂಲ ಲಕ್ಷಣ ಎನ್ನಬಹುದು. ಈ ಬಗ್ಗೆ ಯಾವುದೇ ಬಗೆಯ ತಪ್ಪು ತಿಳುವಳಿಕೆಗೆ ಅವಕಾಶವಿಲ್ಲ. ಆದ್ದರಿಂದ ರಾಜ್ಯಗಳನ್ನು ಕೇಂದ್ರದ ಕೃಪಾಕಟಾಕ್ಷದ ಅಡಿಯಲ್ಲಿ ಬದುಕುವ ಹಾಗೆ ಮಾಡಲಾಗಿದೆ ಎನ್ನುವುದು ಸರಿಯಲ್ಲ. ಕೇಂದ್ರವು ತಾನಾಗಿಯೇ ಇಂಥ ಅಧಿಕಾರ ಪ್ರತ್ಯೇಕತಾ ಸೀಮೆಗಳನ್ನು ಬದಲಾಯಿಸುವಂತಿಲ್ಲ. ನ್ಯಾಯಾಂಗವು ಹಾಗೆ ಮಾಡುವ ಹಾಗಿಲ್ಲ. ಈ ಸಂಬಂಧದಲ್ಲಿ ಈ ಕೆಳಕಂಡಂತೆ ಹೇಳಿರುವುದು ಯಥೋಚಿತವೇ.

"ನ್ಯಾಯಾಲಯಗಳು ಮಾರ್ಪಡಿಸಬಹುದೇ ಹೊರತು, ಒಂದರ ಬದಲಾಗಿ ಇನ್ನೊಂದನ್ನು ಸ್ಥಾಪಿಸುವಂತಿಲ್ಲ. ನ್ಯಾಯಾಲಯಗಳು ಹಿಂದಿನ ಯಾವುದೇ ವ್ಯಾಖ್ಯಾನವನ್ನು ಹೊಸ ವಾದಾಂಶಗಳನ್ನಾಗಿ ಹೊಸ ಅಭಿಪ್ರಾಯಗಳ ಅಂಶಗಳನ್ನಾಗಿ ಪುನರೀಕ್ಷಣೆಮಾಡಬಹುದು. ಮತ್ತು ಕೆಲವು ಮೊಕದ್ದಮೆಗಳಲ್ಲಿ ಪ್ರತ್ಯೇಕತಾ ಸೀಮೆಗಳನ್ನು ಬದಲಾಯಿಸಲೂಬಹುದು. ಆದರೆ ಅಧಿಕಾರವನ್ನು ನಿರ್ದಿಷ್ಟವಾಗಿ ಹಂಚಿಹಾಕಲು, ಪುನರ್‌ವಿಭಾಗಿಸಲು ನ್ಯಾಯಾಲಯಗಳ ಮೇಲೆ ಕೂಡ ನಿರ್ಬಂಧಗಳಿರುತ್ತವೆ. ಅವು ಪ್ರಸ್ತುತ ಅಧಿಕಾರ ಕ್ಷೇತ್ರದ ವ್ಯಾಪ್ತಿಗಳನ್ನು ವಿಸ್ತರಿಸಿ ವ್ಯಾಖ್ಯಾನ ಮಾಡಬಹುದು. ಆದರೆ ಈಗಾಗಲೇ ಒಂದು ಪ್ರಾಧಿಕಾರಕ್ಕೆ ವಹಿಸಿಕೊಡಲು ಬರುವುದಿಲ್ಲ.

ಆದ್ದರಿಂದ ಕೇಂದ್ರೀಕೃತಗೊಂಡ ಸಂವಿಧಾನವು ಸಂಯುಕ್ತ ಪದ್ಧತಿಯ ಸ್ವರೂಪವನ್ನು ವಿಫಲಗೊಳಿಸುತ್ತದೆ ಎಂದು ಹೇಳುವ ಮೊದಲನೇ ಆರೋಪವು ಬಿದ್ದುಹೋಗುತ್ತದೆ.

ಎರಡನೆಯ ಆರೋಪವೆಂದರೆ, ಕೇಂದ್ರಕ್ಕೆ ರಾಜ್ಯಗಳ ಮೇಲೆ ಸವಾರಿ ನಡೆಸುವ ಅಧಿಕಾರಗಳನ್ನು ಕೊಡಲಾಗಿದೆ ಎಂಬ ಆರೋಪ. ಈ ಆರೋಪವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸಂವಿಧಾನದ ಅಡಿಯಲ್ಲಿ ಕೇಂದ್ರಕ್ಕೆ ರಾಜ್ಯಗಳ ಮೇಲೆ ಸವಾರಿ ನಡೆಸುವ ಅಧಿಕಾರಗಳನ್ನು ಕೊಡಲಾಗಿದೆ ಅಂದ ಕಾರಣಕ್ಕಾಗಿ ಸಂವಿಧಾನವನ್ನು ಖಂಡಿಸುವುದಕ್ಕೆ ಮುನ್ನ ನಾವು ಕೆಲವು ಸಂಗತಿಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಮೊದಲನೆಯ ಸಂಗತಿ ಎಂದರೆ ಈ ಸವಾರಿ ಅಧಿಕಾರಗಳು ನಮ್ಮ ಸಂವಿಧಾನದ ಸಾಮಾನ್ಯ ಲಕ್ಷಣವಲ್ಲ. ಅವುಗಳ ಅನುಷ್ಠಾನ ಮತ್ತು ಅನುಷ್ಠಾನ ಕ್ರಮ ಕೇವಲ ತುರ್ತು ಪರಿಸ್ಥಿತಿಯ ಸಮಯಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಎರಡನೆಯ ಮುಖ್ಯ ಸಂಗತಿ ಎಂದರೆ, ತುರ್ತು ಪರಿಸ್ಥಿತಿಯ ಸಂದರ್ಭಗಳಲ್ಲಿ ಕೇಂದ್ರ ಅಂಥ ಅಧಿಕಾರಗಳನ್ನು ಕೊಡದೆ ಇರೋಣವೇ? ತುರ್ತು ಪರಿಸ್ಥಿತಿಯ ಸಂದರ್ಭಗಳಲ್ಲಿ ಕೂಡ ಈ ಸವಾರಿ ಅಧಿಕಾರಗಳ ಪ್ರಯೋಗವು ಇರತಕ್ಕದ್ದು ಎಂದು ಯಾರು ಒಪ್ಪಿಕೊಳ್ಳುವುದಿಲ್ಲವೋ ಅವರುಗಳಿಗೆ ಸಮಸ್ಯೆಯ ನೈಜ ಚಿತ್ರ ಅರಿವಾಗಿಲ್ಲ ಎಂದು ಹೇಳಬೇಕಾಗುತ್ತದೆ. ಈ ಸಮಸ್ಯೆಯ ನೈಜ ಚಿತ್ರಣವನ್ನು "ದಿ ರೌಂಡ್ ಟೇಬಲ್" ಎಂಬ ವಿಖ್ಯಾತ ಪತ್ರಿಕೆಯ ಒಂದು ಲೇಖನದಲ್ಲಿ ಕಂಡುಬರುತ್ತದೆ. ಅದನ್ನು ಈ ಪತ್ರಿಕೆಯ ೧೯೩೫ರ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಲೇಖನವನ್ನು ಓದಲು ಯಾರ ಕ್ಷಮೆಯನ್ನು ಯಾಚಿಸಬೇಕಾಗಿಲ್ಲ ಎಂದು ಭಾವಿಸುತ್ತೇನೆ.

ರಾಜಕೀಯ ಪರಿಸ್ಥಿತಿಗಳು ಸಂಕೀರ್ಣವಾಗಿರುತ್ತವೆ. ಆಖೈರಾಗಿ ಪ್ರಜೆಯಾದವನು ಯಾರಿಗೆ ಅಥವಾ ಯಾವ ಅಧಿಕಾರಕ್ಕೆ ನಿಷ್ಠೆಯನ್ನು ತೋರಿಸಬೇಕು ಎಂಬ ಪ್ರಶ್ನೆಯ ಮೇಲೆ ಹಕ್ಕುಗಳು ಮತ್ತು ಕರ್ತವ್ಯಗಳು ಅವಲಂಬಿಸಿರುತ್ತವೆ. ಸಾಮಾನ್ಯ ಪರಿಸ್ಥಿತಿ ಇರುವಾಗ ಈ ಪ್ರಶ್ನೆಯು ಉದ್ಭವಿಸುವುದಿಲ್ಲ. ವ್ಯಕ್ತಿಯೊಬ್ಬನು ತನ್ನ ದೈನಂದಿನ ವ್ಯವಹಾರಗಳಲ್ಲಿ, ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಒಂದು ಅಧಿಕಾರಕ್ಕೆ ಅಧೀನವಾಗಿ ನಡೆಯುತ್ತಾನೆ. ಆದರೆ ಸಂಕೀರ್ಣ ಪರಿಸ್ಥಿತಿಯಲ್ಲಿ ಈ ಹಕ್ಕುಗಳ ನಡುವೆ ಘರ್ಷಣೆ ಉಂಟಾಗುತ್ತದೆ. ಮತ್ತು ಆಗ ಅವನು ಯಾವ ಅಧಿಕಾರಕ್ಕೆ ಅಂತಿಮ ನಿಷ್ಠೆಯನ್ನು ತೋರಿಸತಕ್ಕದ್ದೋ ಆ ಪರಮ ನಿಷ್ಠೆಯನ್ನು ಯಾವ ಕಾರಣಕ್ಕೂ ವಿಭಜಿಸುವ ಹಾಗಿಲ್ಲ."

"ಅಂತಿಮ (ಪರಮ) ನಿಷ್ಠೆಗೆ ಸಂಬಂಧಿಸಿದ ಹಾಗೆ ಶಾಸನಗಳ ನ್ಯಾಯಿಕ ವ್ಯಾಖ್ಯಾನ ದ್ವಾರಾ ಅಂತಿಮವಾಗಿ ತೀರ್ಮಾನಿಸಬಹುದು. ಕಾನೂನು ತನ್ನ ಮುಂದಿರುವ ಪರಿಸ್ಥಿತಿಯನ್ನು ಅನುಸರಿಸಿ ತೀರ್ಮಾನಿಸಬೇಕಾಗುತ್ತದೆ. ಇಲ್ಲದೆ ಹೋದರೆ ಕಾನೂನಿನ ಪರಿಸ್ಥಿತಿಗೆ ಆ ಮಟ್ಟಿಗೆ ಕಠಿಣವಾಗುತ್ತದೆ. ಕಾನೂನುಬದ್ಧವಾದ ಎಲ್ಲ ಕಟ್ಟುನಿಟ್ಟುಗಳನ್ನು ಕಳಚಿ ನೋಡಿದಾಗ, ಪ್ರಜೆಯಾದವನಿಂದ ನಿಷ್ಠೆಯನ್ನು

ನಿರೀಕ್ಷಿಸುವ ಅಧಿಕಾರ ಯಾವುದು ಎಂಬ ಪ್ರಶ್ನೆ ಉಳಿಯುತ್ತದೆ. ಅದು ಕೇಂದ್ರವೋ ಅಥವಾ ಒಕ್ಕೂಟದ ಭಾಗವಾಗಿರುವ ರಾಜ್ಯವೋ?"

ಈ ಸಮಸ್ಯೆಗೆ ಪರಿಹಾರ ಎಂದರೆ ಸಮಸ್ಯೆಗೆ ಉತ್ತರ ನೀಡುವವರ ಉತ್ತರದಲ್ಲಿಯೇ ಮೂಲ ಸಮಸ್ಯೆಯು ಅಡಗಿರುತ್ತದೆ. ಬಹುಸಂಖ್ಯಾತರ ಅಭಿಪ್ರಾಯದ ಪ್ರಕಾರ ತುರ್ತು ಪರಿಸ್ಥಿತಿಯ ಸಂದರ್ಭಗಳಲ್ಲಿ ಪ್ರಜೆಯ ಅಂತಿಮ ನಿಷ್ಠೆಯು ಇರಬೇಕಾದದ್ದು ಕೇಂದ್ರಕ್ಕೆ ಹೊರತು ಒಕ್ಕೂಟದ ಭಾಗವಾಗಿರತಕ್ಕ ರಾಜ್ಯಗಳಿಗಲ್ಲ. ಯಾಕೆಂದರೆ ಅಂಥ ತುರ್ತು ಪರಿಸ್ಥಿತಿಯ ಸಮಯದಲ್ಲಿ ಕೇಂದ್ರವು ಸಮಾನ ಧ್ಯೇಯದ ಸಾಧನೆಯ ಉದ್ದೇಶಕ್ಕಾಗಿ ಮತ್ತು ಸಾರ್ವತ್ರಿಕ ಹಿತಕ್ಕಾಗಿ ತನ್ನ ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ. ಆ ಕಾರಣದಿಂದ ತುರ್ತು ಪರಿಸ್ಥಿತಿಯ ಕಾಲದಲ್ಲಿ ರಾಜ್ಯಗಳ ಮೇಲೆ ಕೇಂದ್ರಕ್ಕೆ ಅಧ್ಯಾರೋಹೀ ಅಧಿಕಾರಗಳನ್ನು ಕೊಟ್ಟಿರುವುದು ಸಮರ್ಥನೀಯವೇ. ತುರ್ತುಪರಿಸ್ಥಿತಿಯ ಈ ಅಧಿಕಾರಗಳ ಮೂಲಕ ಘಟಕ ರಾಜ್ಯಗಳ ಮೆಲೆ ವಿಧಿಸಲಾಗುವ ಹೊಣೆಗಾರಿಕೆಗಳಾದರೂ ಏನು? ತುರ್ತುಪರಿಸ್ಥಿತಿಯ ಸಮಯಗಳಲ್ಲಿ, ಪ್ರಾದೇಶಿಕ ಹಿತಾಸಕ್ತಿಗಳ ಜೊತೆಗೆ ರಾಷ್ಟ್ರದ ಅಭಿಪ್ರಾಯ ಮತ್ತು ಹಿತಾಸಕ್ತಿಗಳನ್ನಷ್ಟೇ ಗಮನಕ್ಕೆ ತೆಗೆದುಕೊಂಡು ರಾಜ್ಯಗಳು ಕಾರ್ಯ ನಿರ್ವಹಿಸಬೇಕಾಗುತ್ತದೆ. ಇದಕ್ಕಿಂತ ಹೆಚ್ಚಾಗಿ ಇನ್ನೇನೂ ಇಲ್ಲ. ಯಾರು ಸಮಸ್ಯೆಯನ್ನು ಅರ್ಥಮಾಡಿಕೊಂಡಿಲ್ಲವೋ ಅಂಥವರು ಮಾತ್ರ ಸಂವಿಧಾನದ ಸಂಬಂಧದಲ್ಲಿ ಟೀಕೆ ಮಾಡುವುದುಂಟು.

ಇಲ್ಲಿಗೆ ನಾನು ಚರ್ಚೆಯನ್ನು ಮುಕ್ತಾಯಗೊಳಿಸಬಹುದಿತ್ತು. ಆದರೆ ರಾಷ್ಟ್ರದ ಭವಿಷ್ಯವು ಮನಸ್ಸಿನ ತುಂಬೆಲ್ಲ ತುಂಬಿಕೊಂಡಿರುವುದರಿಂದ, ಆ ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ತಮ್ಮಲ್ಲಿ ನಿವೇದಿಸಿಕೊಳ್ಳಲು ಇಷ್ಟಪಡುತ್ತೇನೆ. ೧೯೫೦ನೇ ಇಸವಿ ಜನವರಿ ೨೬ನೇ ತಾರೀಖು ಭಾರತವು ಸ್ವತಂತ್ರ ರಾಷ್ಟ್ರವಾಗಲಿದೆ. ಆದರೆ ಅದರ ಸ್ವಾತಂತ್ರ್ಯ ಏನಾಗಲಿದೆ? ಭಾರತವು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದೇ? ಅಥವಾ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದೆ? ಎಂಬ ಚಿಂತೆಯೇ ನನ್ನ ಮನಸ್ಸಿನಲ್ಲಿ ಮೂಡಿದೆ. ಭಾರತವು ಹಿಂದೆಂದೂ ಸ್ವತಂತ್ರ ಆಗಿರಲಿಲ್ಲ ಎಂದು ಅರ್ಥವಲ್ಲ ಅದು ತನ್ನ ಸ್ವಾತಂತ್ರ್ಯವನ್ನು ಮಧ್ಯೆ ಒಮ್ಮೆ ಕಳೆದುಕೊಂಡಿತ್ತು. ಇನ್ನೊಂದು ಬಾರಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದೆ? ಈ ಒಂದು ಚಿಂತೆಯೇ ದೇಶದ ಭವಿಷ್ಯವನ್ನು ಕುರಿತಂತೆ ನನ್ನೆದೆಯಲ್ಲಿ ಕಳವಳವನ್ನು ಉಂಟುಮಾಡಿದೆ. ನನ್ನ ಮನಸ್ಸಿನ ಕ್ಷೋಭೆಗೆ ಕಾರಣವಾದ ಸಂಗತಿ, ಈ ಹಿಂದೆ ಸ್ವಾತಂತ್ರ್ಯವನ್ನು ಕಳೆದುಕೊಂಡಿತ್ತು. ಅದು ತನ್ನವರ ಕೃತ್ಯದಿಂದಲೇ ಎಂಬ ಆಲೋಚನೆಯೇ, ಚಿಂತೆಯೇ ನನ್ನ ಕ್ಷೋಭೆಗೆ, ನನ್ನ ತಳಮಳಕ್ಕೆ ಮೂಲ, ಮುಖ್ಯ ಕಾರಣ. ಸಿಂಧ್ ಪ್ರಾಂತ್ಯದ ಮೇಲೆ ಮೊಹಮ್ಮದ್ ಬಿನ್ ಕಾಸಿಂ ದಂಡೆತ್ತಿ ಬಂದಾಗ ಅವನ ವಿರುದ್ಧ ಯುದ್ಧ ಘೋಷಣೆ ಮಾಡಬೇಕಾಗಿದ್ದ ಧಾರ್ ರಾಜನ ಸೇನಾನಿಗಳು ಸೇನಾಪತಿಗಳು ಮೊಹಮ್ಮದ್ ಬಿನ್ ಕಾಸಿಂ ಕಡೆಯ ಏಜೆಂಟರು ಕೊಟ್ಟ ಲಂಚವನ್ನು ಸ್ವೀಕರಿಸಿ ತಮ್ಮ ರಾಜನ ಪರವಾಗಿ ಯುದ್ಧ ಮಾಡದೇ ಹೋದ ಉದಾಹರಣೆ ನನ್ನ ಕಣ್ಮುಂದೆ ಕಾಣುತ್ತಿದೆ. ಭಾರತದ ಮೇಲೆ ಧಾಳಿ ಮಾಡಲು ಮಹಮ್ಮದ್ ಘೋರಿಯನ್ನು ಭಾರತೀಯನೇ ಆಗಿದ್ದ ಜಯಚಂದ್ರ ಸ್ವಾಗತಿಸಿದ್ದು ಮತ್ತು ಅವನನ್ನು ಪೃಥ್ವಿರಾಜನ ವಿರುದ್ಧ ಯುದ್ಧ ಮಾಡುವಂತೆ ಪ್ರೇರೇಪಿಸಿದ್ದು ಮತ್ತು ಆ ಯುದ್ಧದಲ್ಲಿ ತಾನು ಮತ್ತು ಸೋಲಂಕಿ ರಾಜರುಗಳ ನೆರವಾಗುವುದಾಗಿ ಹೇಳಿದ್ದು ಸಹ ಕಣ್ಮುಂದೆ ಕಾಣುತ್ತಿದೆ. ಇನ್ನೂ ಕಾಣುವಂತೆ ಸಂಗತಿಗಳುಂಟು. ಛತ್ರಪತಿ ಶಿವಾಜಿ ಮಹಾರಾಜನು ಹಿಂದೂಗಳ ವಿಮೋಚನೆಗಾಗಿ ಮೊಘಲ್ ದೊರೆಗಳ ವಿರುದ್ಧ ಯುದ್ಧದಲ್ಲಿ ತೊಡಗಿದ್ದಾಗ ಇತರ ಮರಾಠ ರಾಜರುಗಳೂ, ರಜಪೂತ ಮಹಾರಾಜರುಗಳೂ ಮೊಘಲ ಚಕ್ರವರ್ತಿಗಳ ಪರವಾಗಿ ಯುದ್ಧ ಮಾಡುತ್ತಿದ್ದರು. ಬ್ರಿಟಿಷರು ಸಿಖ್ ರಾಜರುಗಳ ಆಳ್ವಿಕೆಯನ್ನು ವಿಧ್ವಂಸಗೊಳಿಸಬೇಕೆಂದು ಪ್ರಯತ್ನಿಸಿದಾಗ ಸಿಖ್ ರಾಜರುಗಳ ಸೇನೆಯ

ಮುಖ್ಯ ಸೇನಾಧಿಪತಿಯಾಗಿದ್ದ ಗುಲಾಬ್ ಸಿಂಘ್ ಪ್ರೇಕ್ಷಕನಂತೆ ಮೌನವಹಿಸಿ ಕುಳಿತಿದ್ದನು. ಅವನು ಸಿಖ್ ಸಾಮ್ರಾಜ್ಯದ ಪ್ರತಿ ರಕ್ಷಣೆಗಾಗಿ ಕಿಂಚಿತ್ತೂ ನೆರವಾಗಲಿಲ್ಲ. ಭಾರತದ ಅತ್ಯಂತ ೧೮೫೭ನೇ ಇಸವಿಯಲ್ಲಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಸಮರವನ್ನು ಘೋಷಿಸಿದಾಗ ಸಿಖ್ ಸಮುದಾಯವು ಮೂಕ ಪ್ರೇಕ್ಷಕರಂತೆ, ನಮ್ಮ ತಾನುಳಿದ ಸಂದರ್ಭವೂ ನನಗೆ ಕಣ್ಣಿಗೆ ಕಟ್ಟಿದಂತಿದೆ.

ಇತಿಹಾಸವು ಮರುಕಳಿಸಲಿದೆಯೆ? ಈ ಪ್ರಶ್ನೆಯೇ ನನ್ನ ಕಳವಳಕ್ಕೆ ಮುಖ್ಯ ಕಾರಣ. ನಮ್ಮ ಹಿಂದಿನ ಶತ್ರುಗಳ ಜಾತಿ ಪಂಗಡಗಳ ಜೊತೆಗೆ ಇನ್ನೂ ಮುಂದೆ ರಾಜಕೀಯ ಪಕ್ಷ ಪಂಗಡಗಳು ಸೇರಿಕೊಳ್ಳಲಿವೆ. ಭಾರತೀಯರಾದ ನಾವು ನಮ್ಮ ಜಾತಿ ಪಂಗಡಗಳನ್ನು ಬದಿಗೊತ್ತಿ, ರಾಷ್ಟ್ರವೇ ಮುಖ್ಯ ಎನ್ನುವೆವೊ, ನನಗೆ ಗೊತ್ತಿಲ್ಲ. ಆದರೂ ಇಷ್ಟು ಮಾತ್ರ ಸತ್ಯ. ದೇಶದ ರಾಜಕೀಯ ಪಕ್ಷಗಳು ಜಾತಿ ಪಂಗಡಗಳನ್ನೇ ಪ್ರಧಾನವಾಗಿ ಭಾವಿಸುತ್ತ ರಾಷ್ಟ್ರವನ್ನು ಕಡೆಗಣಿಸಿದರೆ, ರಾಷ್ಟ್ರದ ಸ್ವಾತಂತ್ರ್ಯಕ್ಕೆ ಪ್ರಧಾನವಾಗಿ ಭಾವಿಸುತ್ತ ರಾಷ್ಟ್ರವನ್ನು ಕಡೆಗಣಿಸಿದರೆ, ರಾಷ್ಟ್ರದ ಸ್ವಾತಂತ್ರ್ಯಕ್ಕೆ ಗಂಡಾಂತರ ಅನಿವಾರ್ಯ. ನಮ್ಮ ಸ್ವಾತಂತ್ರ್ಯವನ್ನು ಎರಡನೆ ಬಾರಿ, ಅಥವಾ ಶಾಶ್ವತವಾಗಿ ಕಳೆದುಕೊಳ್ಳುವ ಘೋರ ಪ್ರಸಂಗವೂ ಅನಿವಾರ್ಯವೇ, ಅಂಥ ಸಂಭಾವ್ಯ ಘಟನೆಯ ವಿರುದ್ಧ ನಾವು ಕೃತನಿಶ್ಚಯರಾಗಿ ನಿಲ್ಲಬೇಕು. ಕಟ್ಟಕಡೆಯ ನೆತ್ತರ ಹನಿಯನ್ನು ಹರಿಸಿಯಾದರೂ ಸ್ವಾತಂತ್ರ್ಯದ ರಕ್ಷಣೆಯ ಪ್ರತಿರಕ್ಷಣೆ ಮತ್ತು ಪರಿರಕ್ಷಣೆ ಮಾಡುತ್ತೇವೆ ಎಂದು ದೃಢಪ್ರತಿಜ್ಞೆ ಮಾಡಬೇಕು.

ಭಾರತವು ೧೯೫೦ರ ಜನವರಿ ೨೬ನೇ ತಾರೀಖಿನಂದು ಸ್ವತಂತ್ರ ಗಣರಾಜ್ಯವಾಗಲಿದೆ. ಅಂದರೆ ಭಾರತ ದೇಶವು, ಭಾರತದ ಜನತೆಯಿಂದ, ಜನರಿಗೋಸ್ಕರ, ಜನತಾ ಸರ್ಕಾರವು ರೂಢಿಸಿಕೊಳ್ಳಲಿದೆ. ಪುನಃ ಈ ಸಂದರ್ಭದಲ್ಲೂ ಅದೇ ತಲ್ಲಣವು ನನ್ನನ್ನು ಕಾಡುತ್ತಿದೆ. ಸಂವಿಧಾನವು ತನ್ನ ಪ್ರಜಾಸತ್ತಾತ್ಮಕ ಲಕ್ಷಣಗಳನ್ನು ಉಳಿಸಿಕೊಳ್ಳಲಿದೆಯೆ? ಉಳಿಸಿಕೊಳ್ಳುತ್ತದೆಯೆ ಅಥವಾ ಮತ್ತೊಮ್ಮೆ ಕಳೆದುಕೊಳ್ಳುತ್ತದೆಯೆ. ಈ ಎರಡನೆಯ ವಿಚಾರ ಅಥವಾ ಚಿಂತೆಯು ನನಗೆ ಮೊದಲನೆಯ ಚಿಂತೆಯಷ್ಟೆ ನನ್ನನ್ನು ತಲ್ಲಣ ಗೊಳಿಸುತ್ತಿದೆ.

ಭಾರತಕ್ಕೆ "ಪ್ರಜಾಪ್ರಭುತ್ವ" ಏನು ಎಂದು ತಿಳಿದಿರಲಿಲ್ಲ ಎಂದು ಹೇಳಲು ಬರುವಂತಿಲ್ಲ. ಭಾರತವು ಒಂದಾನೊಂದು ಕಾಲದಲ್ಲಿ ಅನೇಕ ಗಣರಾಜ್ಯಗಳನ್ನು ಅನೇಕ ರಾಜಮಹಾರಾಜರುಗಳನ್ನು ಹೊಂದಿತ್ತು. ಇವರ ಪೈಕಿ ಅನೇಕರು, ಚುನಾಯಿತರಾಗುವವರೂ ಇದ್ದರು. ಅಥವಾ ಅವರ ಅಧಿಕಾರಗಳು ಸೀಮಿತವಾಗಿದ್ದವು. ಆದರೆ ಅವರು ಎಂದೂ ನಿರಂಕುಶ ಪ್ರಭುಗಳಾಗಿರಲಿಲ್ಲ. ಭಾರತಕ್ಕೆ ಸಂಸತ್ತುಗಳು ಅಥವಾ ಸಂಸತ್ತುಗಳಲ್ಲಿ ನಡೆಯುವ ವಿಧಿವಿಧಾನಗಳು ಗೊತ್ತಿರಲಿಲ್ಲ ಎಂದಲ್ಲ. ಬೌದ್ಧ ಭಿಕ್ಷು ಸಂಘಗಳ ರಚನೆಯನ್ನು ಅಧ್ಯಯನ ಮಾಡಿದರೆ ನಮ್ಮಲ್ಲಿ ಆ ಸಂಘಗಳಿಗೆ ಪರ್ಯಾಯವಾಗಿ ಸಂಘಗಳಿಗೆ ಪರ್ಯಾಯವಾಗಿ ಸಂಘಗಳು ಇವೆ ಮತ್ತು ಸಂಘಗಳು ಎಂದರೆ ಸಂಸತ್ತುಗಳೇ ಹೊರತು ಇನ್ನೇನೂ ಅಲ್ಲ ಎಂದು ವೇದ್ಯವಾಗುತ್ತದೆ. ಆಧುನಿಕ ಯುಗದಲ್ಲಿನ ಸಂಸತ್ತುಗಳು ಯಾವ ವಿಧಿವಿಧಾನಗಳನ್ನು ಅನುಸರಿಸಿ ರಚನೆಯಾಗುತ್ತದೆಯೋ, ಆ ಸಂಘಗಳೂ ಕೂಡ ಅದೇ ಬಗೆಯ ವಿಧಿವಿಧಾನಗಳನ್ನು ಆಧರಿಸಿ ಕಾರ್ಯ ನಿರ್ವಹಿಸುತ್ತಿದ್ದವು. ಅವುಗಳಲ್ಲಿ ಆಸನಗಳ ವ್ಯವಸ್ಥೆ, ನಿರ್ಣಯಗಳನ್ನು ಕೈಗೊಳ್ಳಲು ಅನುಸರಿಸತಕ್ಕ ನಿಯಮಗಳು ಕೋರಂ, ಸಚೇತಕರ, ಮತಚೀಟಿಗಳ ಮಾಲಕ ಮತದಾನ, ಛೀಮಾರಿ ನಿರ್ಣಯ ಕಾರ್ಯಕಲಾಪಗಳನ್ನು ನಿಯಂತ್ರಿಸುವ ವಿಧಾನ, ಪೂರ್ವನ್ಯಾಯ ಇತ್ಯಾದಿಗಳೆಲ್ಲ ಇರುವುದನ್ನು ಕಾಣಬಹುದು. ಬುದ್ಧನು ಸಂಘಗಳ ಸಭೆಗಳ ಕಾರ್ಯ ನಿರ್ವಹಣೆಯ ಸಲುವಾಗಿ ಅನುಸರಿಸಬೇಕಾದ ವಿಧಿವಿಧಾನಗಳನ್ನು ಸಮಕಾಲೀನ ರಾಜಕೀಯ ಸಭೆಗಳಿಂದ ಅಥವಾ ರಾಜಕೀಯ ಪಕ್ಷಗಳಿಂದ ತೆಗೆದುಕೊಂಡಿರಬೇಕೆಂದು ತೋರುತ್ತದೆ.

ಆ ಪ್ರಜಾಪ್ರಭುತ್ವ ಪದ್ಧತಿಯನ್ನು ಭಾರತವು ಕಳೆದುಕೊಂಡಿತು. ಅದನ್ನು ಎರಡನೆಯ ಬಾರಿಯೂ ಕಳೆದುಕೊಳ್ಳಲಿದೆಯೆ? ನನಗೆ ಗೊತ್ತಿಲ್ಲ. ಆದರೆ ಭಾರತದಂಥ ದೇಶದಲ್ಲಿ ಈ ಬಗೆಯ ಪ್ರಜಾಪ್ರಭುತ್ವ ಪದ್ಧತಿಯು ಇತ್ತೀಚಿನ ಬಹಳ ವರ್ಷಗಳಿಂದ ಬಳಕೆಯಲ್ಲಿ ಇಲ್ಲದಿದ್ದ ಕಾರಣ ಈ ಪ್ರಜಾಪ್ರಭುತ್ವ ವ್ಯವಸ್ಥೆ ಹೊಸತೆನಿಸಬಹುದು. ಹೀಗಾಗಿ, ಪ್ರಜಾಪ್ರಭುತ್ವವು ಮರೆಯಾಗಿ, ಸರ್ವಾಧಿಕಾರವು ತಲೆದೋರುವ ಅಪಾಯ ಸಂಭವವುಂಟು. ಈಗ ಹೊಸದಾಗಿ ಜನ್ಮ ತಳೆದ, ಪ್ರಜಾಪ್ರಭುತ್ವವು ತನ್ನ ಸ್ವರೂಪವನ್ನು ಸತ್ವವನ್ನು ಉಳಿಸಿಕೊಳ್ಳಲಾರದೆ ಅದರ ಸ್ಥಳವನ್ನು ಸರ್ವಾಧಿಕಾರವು ಅತಿಕ್ರಮಿಸಲು ಅವಕಾಶ ಒದಗುವ ಸಂಭವವುಂಟು. ರಾಜಕೀಯ ಕ್ಷೇತ್ರದಲ್ಲಿ ಅಂಥ ಭೂಕಂಪವೇನಾದರೂ ಉದ್ಭವಿಸಿದರೆ ನಾನು ಉಲ್ಲೇಖಿಸುತ್ತಿರುವ ಈ ಎರಡನೆಯ ಅನುಮಾನುವು ಕೂಡ ವಾಸ್ತವ ಘಟನೆ ಆಗುವ ಸಾಧ್ಯತೆಯುಂಟು.

ಪ್ರಜಾಪ್ರಭುತ್ವವನ್ನು, ಅದರ ಸ್ವರೂಪವನ್ನಷ್ಟೇ ಅಲ್ಲದೇ, ಅದರ ತತ್ವವನ್ನು ಸತ್ವವನ್ನು ಉಳಿಸಿಕೊಳ್ಳಬೇಕಾದರೆ, ನಾವು ಏನು ಮಾಡಬೇಕು? ನನ್ನ ಅಭಿಪ್ರಾಯದ ಪ್ರಕಾರ, ನಮ್ಮ ಸಾಮಾಜಿಕ ಮತ್ತು ಆರ್ಥಿಕ ಧ್ಯೇಯಗಳನ್ನು ಈಡೇರಿಸಿಕೊಳ್ಳಲು ನಾವು ಸಂವೈಧಾನಿಕ ವಿಧಾನಗಳನ್ನೇ ಅನುಸರಿಸಬೇಕು. ಅಂದರೆ ರಕ್ತಪಾತದ ಮಾರ್ಗವನ್ನು ಸಂಪೂರ್ಣವಾಗಿ ತೊರೆಯಬೇಕು. ಅಂದರೆ ನಾವು ಕಾಯ್ದೆಭಂಗ, ಅಸಹಕಾರ, ಸತ್ಯಾಗ್ರಹ ಮುಂತಾದ ಮಾರ್ಗಗಳನ್ನು ಸಹ ಬಿಡಬೇಕಾಗುತ್ತದೆ. ಆರ್ಥಿಕ ಮತ್ತು ಸಾಮಾಜಿಕ ಆಶೋತ್ತರಗಳ ಈಡೇರಿಕೆಗೆ ಸಂವಿಧಾನ ಸಮ್ಮತವಾದ ಮಾರ್ಗಗಳನ್ನು ಅನುಸರಿಸಲು ಅವಕಾಶ ಇಲ್ಲದಿದ್ದ ಸಂದರ್ಭದಲ್ಲಿ, ಸಂವಿಧಾನ ಬಾಹಿರವಾದ ಮಾರ್ಗಗಳನ್ನು ಅನುಸರಿಸುವುದು ಒಂದು ದೃಷ್ಟಿಯಲ್ಲಿ ಸಮರ್ಥನೀಯವಾಗಿತ್ತು. ಆದರೆ ಎಲ್ಲಿ ಸಂವಿಧಾನ ಸಮ್ಮತವಾದ ಮಾರ್ಗಗಳಿಗೆ ಅವಕಾಶ ಇರುವುದೋ ಅಲ್ಲಿ ಸಂವಿಧಾನ ಬಾಹಿರವಾದ ಮಾರ್ಗಗಳಿಗೆ ಸಮರ್ಥನೆ ಇರುವುದಿಲ್ಲ. ಆ ಮಾರ್ಗಗಳೆಲ್ಲ ಅರಾಜಕತೆಯ ನೀತಿಸೂತ್ರಗಳಾಗಿದ್ದು, ಅವುಗಳನ್ನು ತೊರೆದಷ್ಟು, ಜನಸಮುದಾಯಕ್ಕೆ ಕ್ಷೇಮ, ರಾಷ್ಟ್ರಕ್ಕೆ ಕ್ಷೇಮ.

ಎರಡನೆಯದಾಗಿ ಜಾನ್ ಸ್ಟುವರ್ಟ್ ಮಿಲ್ ಅವರು ಪ್ರಜಾಪ್ರಭುತ್ವವನ್ನು ಕುರಿತಂತೆ ನುಡಿದ ಎಚ್ಚರಿಕೆಯನ್ನು ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ಆಸಕ್ತರಾದವರೆಲ್ಲರೂ ತಪ್ಪದೆ ಗಮನಿಸಬೇಕು, ಅನುಸರಿಸಬೇಕು. ಮಿಲ್ ಹೇಳುತ್ತಾರೆ. "ಎಂಥ ಮಹಾನ್ ವ್ಯಕ್ತಿಯೇ ಆಗಲಿ, ಅವನ ಪಾದದಡಿಯಲ್ಲಿ ಸ್ವಾತಂತ್ರ್ಯವನ್ನು ಎಸೆಯಬಾರದು. ನಮ್ಮ ಯಾವುದೇ ಸಂಸ್ಥೆಗಳು ಬುಡಮೇಲಾಗಲು ಅವಕಾಶವಾಗುವ ಹಾಗೆ ಅವನಿಗೆ ಅಧಿಕಾರಗಳನ್ನು ಒಪ್ಪಿಸಬಾರದು" ದೇಶಸೇವೆಯಲ್ಲಿ ತಮ್ಮ ಜೀವಮಾನವನ್ನೆಲ್ಲ ಧಾರೆಯೆರೆದ ಯಾರೇ ಮಹಾನ್ ವ್ಯಕ್ತಿಗೆ ಚಿರಋಣಿಯಾಗಿ ಇರುವುದರಲ್ಲಿ ತಪ್ಪೇನೂ ಇಲ್ಲ. ಋಣಿಗಳಾಗಿರುವುದಕ್ಕೂ ಕೆಲವು ಮಿತಿಗಳಿರುತ್ತವೆ. ರಾಷ್ಟ್ರ ಪ್ರೇಮಿ ಡೇನಿಯನ್ ಓ ಕಾನೆಲ್ ಹೇಳಿದ ಹಾಗೆ, ಯಾರೇ ವ್ಯಕ್ತಿಯು ತನ್ನ ಗೌರವವನ್ನು ಕಳೆದುಕೊಂಡು ಇನ್ನೊಬ್ಬನಿಗೆ ಹೊಣೆಯಾಗಕೂಡದು. ಯಾರೇ ಮಹಿಳೆಯು ತನ್ನ ಪಾವಿತ್ರ್ಯವನ್ನು ಬಲಿಕೊಟ್ಟು ಕೃತಜ್ಞತೆಯನ್ನು ತೋರಿಸಬೇಕಾಗಿಲ್ಲ. ಅದೇ ರೀತಿ, ಯಾವುದೇ ರಾಷ್ಟ್ರ ತನ್ನ ಸ್ವಾತಂತ್ರ್ಯವನ್ನು ಬಲಿಕೊಟ್ಟು ಕೃತಜ್ಞತೆಯನ್ನು ವ್ಯಕ್ತಗೊಳಿಸುವ ಅಗತ್ಯವಿಲ್ಲ. ಇದು ಎಚ್ಚರಿಕೆಯ ಮಾತು. ಇತರ ದೇಶಗಳಿಗಿಂತ ಭಾರತಕ್ಕೆ ಅಧಿಕವಾಗಿ ಅನ್ವಯಿಸುತ್ತದೆ. ಭಾರತದ ರಾಜಕೀಯದಲ್ಲಿ ಭಕ್ತಿ ಪಂಥವು ಅಥವಾ ವ್ಯಕ್ತಿಪೂಜೆಯು ವಿಪರೀತವಾಗಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಈ ವಿಚಾರದಲ್ಲಿ ಪ್ರಪಂಚದ ಯಾವ ರಾಷ್ಟ್ರವು ಭಾರತಕ್ಕೆ ಸರಿಸಾಟಿ ಆಗಲಾರದು. ಧಾರ್ಮಿಕವಾಗಿ ಭಕ್ತಿಯು ಆತ್ಮದ ಮೋಕ್ಷಕ್ಕೆ ದಾರಿ ಮಾಡಿಕೊಡಬಹುದು. ಆದರೆ ರಾಜಕೀಯ ಕ್ಷೇತ್ರದಲ್ಲಿ ಭಕ್ತಿಯು ಅಥವಾ ವ್ಯಕ್ತಿ ಪೂಜೆಯು ಖಂಡಿತವಾಗಿಯೂ ಅವನತಿಗೆ ಮತ್ತು ನಿರಂಕುಶಪ್ರಭುತ್ವದ ಉದಯಕ್ಕೆ ಕಾರಣವಾಗುತ್ತದೆ.

ಮೂರನೆಯದಾಗಿ ನಾವು ಮಾಡಬೇಕಾದ ಒಂದು ಕೆಲಸ ಉಂಟು. ನಾವು ಕೇವಲ ರಾಜಕೀಯ ಪ್ರಜಾಪ್ರಭುತ್ವದಿಂದ ಸಂತೃಪ್ತರಾಗಿ ಉಳಿಯಬಾರದು. ನಮಗೆ ದೊರೆತ ರಾಜಕೀಯ ಪ್ರಜಾಪ್ರಭುತ್ವಕ್ಕೆ ಆಧಾರವಾಗಿ ಆರ್ಥಿಕ ಪ್ರಜಾಪ್ರಭುತ್ವವನ್ನು ಏರ್ಪಡಿಸಿಕೊಳ್ಳಬೇಕು. ಆರ್ಥಿಕ ಪ್ರಜಾಪ್ರಭುತ್ವದ ಬುನಾದಿ ಇಲ್ಲದೆ ಹೋದರೆ, ರಾಜಕೀಯ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ. ಹಾಗಾದರೆ, ಸಾಮಾಜಿಕ ಪ್ರಜಾಪ್ರಭುತ್ವ ಎಂದರೆ ಏನು? ಅದೊಂದು ಜೀವನ ಪದ್ಧತಿ. ಸ್ವಾತಂತ್ರ್ಯ ಸೋದರತೆ ಮತ್ತು ಸಮಾನತೆಗಳನ್ನು ಒಳಗೊಂಡ ಪದ್ಧತಿ. ಈ ಮೂರು ಅಂಶಗಳನ್ನು ಪ್ರತ್ಯೇಕವೆಂದು ಪರಿಗಣಿಸುವಂತಿಲ್ಲ. ಏಕೆಂದರೆ ಒಂದು ಇಲ್ಲದೆ ಇನ್ನೊಂದಕ್ಕೆ ಅಸ್ತಿತ್ವವಿಲ್ಲ. ಒಂದಕ್ಕೆ ಇನ್ನೊಂದು ಪೂರಕ. ಅವುಗಳನ್ನು ಪ್ರತ್ಯೇಕಿಸಲು ಪ್ರಯತ್ನಿಸಿದರೆ ಪ್ರಜಾಪ್ರಭುತ್ವದ ಉದ್ದೇಶವೇ ವಿಫಲವಾಗುತ್ತದೆ. ಸ್ವಾತಂತ್ರ್ಯವನ್ನು ಸಮಾನತೆಯಿಂದ ಬೇರ್ಪಡಿಸುವಂತಿಲ್ಲ. ಹಾಗೆಯೇ ಸ್ವಾತಂತ್ರ್ಯ ಮತ್ತು ಸಮಾನತೆ ಇವುಗಳನ್ನು ಸೋದರತೆಯಿಂದ ಬೇರ್ಪಡಿಸುವಂತಿಲ್ಲ. ಎಲ್ಲಿ ಸಮಾನತೆ ಇರುವುದಿಲ್ಲವೋ ಅಲ್ಲಿ ಸ್ವಾತಂತ್ರ್ಯ ಎನ್ನುವುದು ಬಹುಸಂಖ್ಯಾತರ ಮೇಲೆ ಅಲ್ಪಸಂಖ್ಯಾತರು ನಡೆಸುವ ಅಧಿಕಾರ ಆಗುತ್ತದೆ. ಸ್ವ–ಸ್ವಾತಂತ್ರ್ಯ ಇಲ್ಲದ ಸಮಾನತೆಯು ವ್ಯಕ್ತಿತ್ವವನ್ನು ನಾಶಗೊಳಿಸುತ್ತದೆ. ಸೋದರತೆ ಇಲ್ಲದೆ ಸಮಾನತೆ ಮತ್ತು ಸ್ವಾತಂತ್ರ್ಯ ಇವು ಸುಸೂತ್ರವಾಗಿ ನಡೆಯುವಂತಿಲ್ಲ. ಆಗ ಅವುಗಳನ್ನು ಅನುಷ್ಠಾನಗೊಳಿಸಲು ಬಲಪ್ರಯೋಗವು ಅಗತ್ಯವಾಗುತ್ತದೆ. ಭಾರತೀಯ ಸಮಾಜದಲ್ಲಿ ಇವೆರಡೂ ಅಂಶಗಳ ಸಂಪೂರ್ಣ ಅಭಾವವುಂಟು ಎಂಬ ವಾಸ್ತವವನ್ನು ಒಪ್ಪಿಕೊಳ್ಳದೇ ವಿಧಿಯಿಲ್ಲ. ಅಂಥ ಎರಡು ಅಂಶಗಳಲ್ಲಿ ಸಮಾನತೆ ಒಂದು. ಸಾಮಾಜಿಕ ಸ್ತರದ ಮಟ್ಟಿಗೆ ಹೇಳಬೇಕಾದರೆ, ಭಾರತದಲ್ಲಿ ಸಾಮಾಜಿಕ ವ್ಯವಸ್ಥೆಯು ಅಸಮಾನತೆಗಳ ಶ್ರೇಣಿಗಳ ಮೇಲೆ ನೆಲೆನಿಂತಿದೆ. ಅಂದರೆ ಕೆಲವರು ಕೀಳು ಮತ್ತು ಕೆಲವರು ಮೇಲು ಎಂಬ ಅರ್ಥದಲ್ಲಿ. ಇನ್ನೂ ಆರ್ಥಿಕ ಸ್ತರದ ಮಟ್ಟಿಗೆ ಹೇಳಬೇಕಾದರೆ ನಮ್ಮ ಸಮಾಜದಲ್ಲಿ ಹೆಚ್ಚಿನವರು ಕಡುಬಡವರು. ಕೆಲವರು ಮಾತ್ರ ಶ್ರೀಮಂತರು. ೧೯೫೦ನೇ ಜನವರಿ ೨೬ನೇ ತಾರೀಖು ನಾನು ಇಂಥ ಪರಸ್ಪರ ವೈರುಧ್ಯಗಳಿರುವ ಸಮಾಜ ವ್ಯವಸ್ಥೆಯನ್ನು ಪ್ರವೇಶಿಸಲಿದ್ದೇವೆ. ರಾಜಕೀಯ ಜೀವನದಲ್ಲಿ ನಾವು ಸಮಾನತೆಯನ್ನು ಪಡೆದಿದ್ದೇವೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಅಸಮಾನತೆ ಇದೆ. ರಾಜಕೀಯದಲ್ಲಿ ಒಬ್ಬ ವ್ಯಕ್ತಿಗೆ ಒಂದು ಮತ ಮತ್ತು ಒಂದು ಮತಕ್ಕೆ ಒಂದು ಮೌಲ್ಯ ಎಂಬ ತತ್ವವನ್ನು ಸ್ವೀಕರಿಸಿದ್ದೇವೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ, ನಮ್ಮ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ನಿಮಿತ್ತ, ಪ್ರತಿಯೊಬ್ಬ ವ್ಯಕ್ತಿಗೂ ಒಂದು ಮತ ಒಂದು ಮೌಲ್ಯ ಎಂಬ ತತ್ವವನ್ನು ನಿರಾಕರಿಸಿದ್ದೇವೆ. ನಮ್ಮ ಸಮಾಜದಲ್ಲಿ ಇಂಥ ವೈರುಧ್ಯಮಯವಾದ ಜೀವನವನ್ನು ಎಲ್ಲಿಯವರೆಗೆ ಮುಂದುವರೆಸಿಕೊಂಡು ಹೋಗಲು ಸಾಧ್ಯ? ನಾವು ಈ ನಾಗರಿಕತೆಯನ್ನು ಹೀಗೆಯೇ ಮುಂದುವರೆಸಿಕೊಂಡು ಹೋದರೆ, ನಮ್ಮ ಪ್ರಜಾಪ್ರಭುತ್ವವನ್ನು ಅಪಾಯಕ್ಕೆ ಒಡ್ಡುವ ಸಂಭವವುಂಟು. ಈ ವೈರುಧ್ಯವನ್ನು ಸಾಧ್ಯವಾದಷ್ಟು ತ್ವರೆಯಿಂದ ತೊಡೆದುಹಾಕಬೇಕು. ಇಲ್ಲದೆ ಹೋದರೆ ಅಸಮಾನತೆಯ ಪೀಡೆಯ ಅಡಿಯಲ್ಲಿ ನರಳುತ್ತಿರುವವರು ಈ ರಾಜಕೀಯ ಪ್ರಜಾಪ್ರಭುತ್ವವನ್ನು ಏರ್ಪಡಿಸಲು ಪ್ರಯತ್ನಿಸಿ ಅದನ್ನು ಆ ರಾಜಕೀಯ ಪ್ರಜಾಪ್ರಭುತ್ವದ ಕಟ್ಟಡವನ್ನು ಹಿಂದೆ ಮುಂದೆ ನೋಡದೆ ನೆಲಸಮಗೊಳಿಸುತ್ತಾರೆ.

ಭ್ರಾತೃತ್ವ ಅಥವಾ ಸೋದರತೆಯ ತತ್ವಕ್ಕೆ ಮನ್ನಣೆ ಇಲ್ಲದಿರುವುದು ಎರಡನೆಯ ಪ್ರಶ್ನೆ. ಸೋದರತೆ ಎಂದರೇನು? ಅಂದರೆ ಭಾರತೀಯರಾದ ನಾವೆಲ್ಲರೂ ಸೋದರರು ಎಂಬ ಭಾವನೆ. ಭಾರತೀಯರೆಲ್ಲರೂ ಒಂದೇ ಎಂಬ ಭಾವನೆ. ಸೋದರತೆಯ ತತ್ವವೇ ಸಾಮಾಜಿಕ ಜೀವನಕ್ಕೆ ಏಕತೆಯನ್ನು ಶಕ್ತಿಯನ್ನು ಒದಗಿಸಿಕೊಡುತ್ತದೆ. ಈ ಭಾವನೆಯನ್ನು ನೆಲೆಗೊಳಿಸಲು, ವಿಕಾಸಗೊಳಿಸಲು ಅನನ್ಯ ಪರಿಶ್ರಮ ಅಗತ್ಯ.

ಅದು ಎಷ್ಟು ಕಷ್ಟ ಎಂದರೆ ಈ ವಿಚಾರಗಳನ್ನು ಅಮೆರಿಕಾ ಸಂಯುಕ್ತ ಸಂಸ್ಥಾನಗಳನ್ನು ಕುರಿತ 'ಅಮೆರಿಕನ್ ಕಾಮನ್ ವೆಲ್ತ್' ಎಂಬ ಪುಸ್ತಕದಲ್ಲಿ ಲೇಖಕ ಜೇಮ್ಸ್ ಬ್ರೈನ್ ಒಂದು ಕಥೆ ಹೇಳುತ್ತಾರೆ. ನನಗೆ ನೆನಪಿರುವ ಹಾಗೆ ಆ ಕಥೆಯನ್ನು ಅವನ ಮಾತುಗಳಲ್ಲೇ ಹೇಳುತ್ತೇನೆ.

"ಕೆಲವು ವರ್ಷಗಳ ಕೆಳಗೆ ಅಮೆರಿಕದ ಪ್ರಾಟೆಸ್ಟೆಂಟ್ ಎಪಿಸ್ಕೋಪಲ್ ಪಂಥದವರು, ತಮ್ಮ ತ್ರೈವಾರ್ಷಿಕ ಸಮ್ಮೇಳನದಲ್ಲಿ ತಮ್ಮ ಪ್ರಾರ್ಥನಾ ಪುಸ್ತಕವನ್ನು ಪರಿಷ್ಕರಿಸುವ ಕಾರ್ಯದಲ್ಲಿ ತೊಡಗಿದ್ದರು. ಇಡೀ ಸಮುದಾಯವು ಅಪೇಕ್ಷಿಸುವ ಒಂದು ಸಂಗ್ರಹರೂಪದ ಪ್ರಾರ್ಥನಾ ಪುಸ್ತಕವನ್ನು ರಚಿಸುವುದು ಅಗತ್ಯ ಎಂದು ಭಾವಿಸಿದರು. ನ್ಯೂ ಇಂಗ್ಲೆಂಡಿನ ಪಾದ್ರಿಯೊಬ್ಬರು 'ಓ ಪ್ರಭುವೇ ನಮ್ಮ ರಾಷ್ಟ್ರದ ಮೇಲೆ ದಯೆತೋರು' ಎಂಬುದಾಗಿ ಪ್ರಾರಂಭವಾಗುವ ಪ್ರಾರ್ಥನೆಯನ್ನು ಸೂಚಿಸಿದನು. ಆ ಕೂಡಲೇ ಒಂದು ದಿನ ಮಧ್ಯಾಹ್ನ ಅದನ್ನು ಅಂಗೀಕರಿಸಲಾಯಿತು. ಆದರೆ ಅದನ್ನು ಪುನಃ ಪರಿಶೀಲಿಸುವ ಸಂದರ್ಭದಲ್ಲಿ ಭಕ್ತಾದಿಗಳ ಪೈಕಿ ಒಬ್ಬರು "ರಾಷ್ಟ್ರ" ಪದಕ್ಕೆ ಆಕ್ಷೇಪವೆತ್ತಿದರು. "ರಾಷ್ಟ್ರ" ಎಂಬ ಪದ ಅವರ ಪ್ರಕಾರ ರಾಷ್ಟ್ರೀಯ ಏಕತೆಗೆ ನಿರ್ದಿಷ್ಟ ಮನ್ನಣೆ ಕೊಡುವ ಪದ. ಪರಿಣಾಮವಾಗಿ ರಾಷ್ಟ್ರ ಪದವನ್ನು, ಆ ಪ್ರಾರ್ಥನೆಯಿಂದ ಕೈಬಿಡಲಾಯಿತು. ಆ ಪ್ರಾರ್ಥನೆಗೆ ಬದಲಾಗಿ "ಪ್ರಭುವೆ, ನಮ್ಮ ಸಂಯುಕ್ತ ಸಂಸ್ಥಾನಗಳ ಮೇಲೆ ದಯೆತೋರು" ಎಂಬ ಪದಸಮುಚ್ಚಯಗಳನ್ನು ಒಳಗೊಂಡ ಪ್ರಾರ್ಥನೆಯನ್ನು ಒಪ್ಪಿಕೊಳ್ಳಲಾಯಿತು. ಈಗ ಅಮೆರಿಕದಲ್ಲಿ ಹೇಳಿದ ಈ ಪ್ರಾರ್ಥನೆಯ ಘಟನೆ ನಡೆದ ಸಂದರ್ಭಧಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಒಗ್ಗಟ್ಟು ಇರಲಿಲ್ಲ. ತಾವೆಲ್ಲರೂ ಒಂದೇ ಎಂಬ ಭಾವನೆ ವಿಕಾಸಗೊಂಡು, ನೆಲೆನಿಂತಿರಲಿಲ್ಲ. ಅಂದರೆ ತಾವು ಎಲ್ಲ ಅಮೆರಿಕದವರು ಸೇರಿ ಒಂದು ರಾಷ್ಟ್ರ ಎಂದು ಭಾವಿಸಿರಲಿಲ್ಲ. ಯು.ಎಸ್.ಎ.ದ ಜನತೆಗೇ ರಾಷ್ಟ್ರೀಯ ಭಾವನೆಯನ್ನು ಮೈಗೂಡಿಸಿಕೊಳ್ಳಲು ಅಷ್ಟೊಂದು ಕಷ್ಟವಾಗಿರುವಾಗ ಭಾರತೀಯರಿಗೆ ಎಷ್ಟು ಕಷ್ಟವಾಗಲಿಕ್ಕಿಲ್ಲ ಎಂಬುದನ್ನು ಊಹಿಸಿಕೊಳ್ಳಿ. ರಾಜಕೀಯ ಪ್ರಜ್ಞೆ ಇದ್ದಂಥ ಭಾರತೀಯರು ಸಹ ಒಂದು ಕಾಲಕ್ಕೆ ಭಾರತೀಯರಾದ ನಾವು ಪದಸಮಚ್ಚಯಕ್ಕೆ ತೀವ್ರವಾಗಿ ಆಕ್ಷೇಪವೆತ್ತಿದ್ದರು. ನಾನು ಅದನ್ನು ಇನ್ನೂ ನೆನಪು ಮಾಡಿಕೊಳ್ಳುತ್ತಿರುತ್ತೇನೆ. ಅವರು ಆ ಪದಗಳ ಬದಲಾಗಿ ಭಾರತ ರಾಷ್ಟ್ರ ಎಂಬ ಪದಸಮುಚ್ಚಯ ಸೂಕ್ತ ಎಂದು ಹೇಳುತ್ತಿದ್ದರು. ನಾವು ಒಂದು ರಾಷ್ಟ್ರ ಎಂದು ಹೇಳುವಾಗ, ನಾವು ಒಂದು ಭ್ರಮಾಲೋಕವನ್ನು ಸೃಷ್ಟಿಸಿಕೊಳ್ಳುತ್ತಿದ್ದೇವೆ ಎಂದು ನಾನು ಭಾವಿಸುತ್ತೇನೆ. ಸಾವಿರಾರು ಜಾತಿಗಳ ಹೆಸರಿನಲ್ಲಿ ವಿಂಗಡವಾಗಿರುವ ಜನತೆಯನ್ನು ಒಂದು ರಾಷ್ಟ್ರ ಎಂದು ಕರೆಯಲು ಹೇಗೆ ಸಾಧ್ಯ. ನಾವು ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಇನ್ನೂ ಒಂದು ರಾಷ್ಟ್ರ ಆಗಿಲ್ಲ ಎಂಬುದನ್ನು ಎಷ್ಟು ಬೇಗ ಅರ್ಥಮಾಡಿಕೊಳ್ಳುವೆವೋ ಅಷ್ಟು ಕ್ಷೇಮ. ಆಗ ಮಾತ್ರ ನಾವು ರಾಷ್ಟ್ರ ಆಗುವ ಅಗತ್ಯತೆಯನ್ನು ಮನಗಾಣುತ್ತೇವೆ. ಮತ್ತು ಎಂಥ ಒಂದು ಧ್ಯೇಯದ ಸಾಧನೆಗಾಗಿ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಗಂಭೀರವಾಗಿ ಯೋಚಿಸುತ್ತೇವೆ. ಆ ಗುರಿಯನ್ನು ಈಡೇರಿಸುವುದು ಅಷ್ಟೊಂದು ಸುಲಭವಲ್ಲ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಇರುವುದಕ್ಕಿಂತ ಅಧಿಕ ಜಾತಿಗಳು ನಮ್ಮ ಭಾರತದೇಶದಲ್ಲಿ ಇವೆ. ಆ ಅಸಂಖ್ಯೆ ಜಾತಿಗಳು ರಾಷ್ಟ್ರದ ಕಲ್ಪನೆಗೆ ವಿರೋಧವಾದವುಗಳು. ಮೊದಲನೆಯದಾಗಿ ಇವು ಸಾಮಾಜಿಕ ಜೀವನದಲ್ಲಿ ವಿಂಗಡತನವನ್ನು, ಪ್ರತ್ಯೇಕತೆಯನ್ನು ಉಂಟುಮಾಡುತ್ತೇವೆ. ಇವು ರಾಷ್ಟ್ರ ವಿರೋಧಿಗಳೂ ಕೂಡ. ಕಾರಣವೆಂದರೆ ಜಾತಿ ಜಾತಿಗಳಲ್ಲಿ ಅಸೂಯೆ ಮತ್ತು ದ್ವೇಷ ಭಾವನೆಯನ್ನು ಉಂಟುಮಾಡುತ್ತದೆ. ನಾವು ನಿಜವಾಗಿಯೂ ಒಂದು ರಾಷ್ಟ್ರ ಆಗಬೇಕು ಎಂದು ಬಯಸುವುದಾದರೆ ಇಷ್ಟೆಲ್ಲ ತೊಂದರೆಗಳನ್ನು ನಿವಾರಿಸಬೇಕಾಗುತ್ತದೆ. ಕಾರಣವೆಂದರೆ, ರಾಷ್ಟ್ರ ಎನ್ನುವುದು ಅಸ್ತಿತ್ವದಲ್ಲಿ ಇದ್ದರೆ ಸೋದರತೆಯು ವಾಸ್ತವವಾಗುತ್ತದೆ. ಸೋದರತೆ ಇಲ್ಲದೆ ಸಮಾನತೆಯೂ ಇಲ್ಲ ಸ್ವಾತಂತ್ರವೂ ಇಲ್ಲ. ಅವು ಕೇವಲ ಭ್ರಮೆಯಾಗುತ್ತವೆ.

ನಮ್ಮ ಮುಂದಿರುವ ಕರ್ತವ್ಯಗಳಿಗೆ ಸಂಬಂಧಿಸಿದಂತೆ ಇವು ಕೆಲವು ನನ್ನ ಚಿಂತನೆಗಳಾಗಿವೆ ಅಷ್ಟೆ. ಕೆಲವರಿಗೆ ಅವು ಸಂತೋಷವನ್ನು ಉಂಟುಮಾಡಿರಲಿಕ್ಕಿಲ್ಲ. ಆದರೆ ನಮ್ಮ ದೇಶದಲ್ಲಿ ರಾಜಕೀಯ ಅಧಿಕಾರವು ಕೆಲವೇ ಕೆಲವರ ಸ್ವತ್ತಾಗಿದ್ದು, ಇನ್ನುಳಿದ ಬಹುಸಂಖ್ಯಾತರು ಪಶುಗಳಂತೆ ಪ್ರಾಣಿಗಳಂತೆ ಜೀವಿಸುತ್ತಿದ್ದಾರೆ ಎಂಬ ಸಂಗತಿಯನ್ನು ಒತ್ತಿ ಹೇಳಬೇಕಾಗಿಲ್ಲ. ಅಧಿಕಾರವು ಕೆಲವೇ ಕೆಲವರ ಸ್ವತ್ತಾಗಿರುವ ಕಾರಣ, ಬಹುಸಂಖ್ಯಾತರಿಗೆ ತಮ್ಮ ಪರಿಸ್ಥಿತಿಯನ್ನು ಸ್ಥಿತಿಗಳನ್ನು ಸುಧಾರಿಸಿಕೊಳ್ಳುವ ಅವಕಾಶವೂ ಇಲ್ಲದಂತಾಗಿದೆ. ಮಾತ್ರವಲ್ಲದೆ, ಜೀವನವನ್ನು ಕುರಿತ ಅವರ ಆಸಕ್ತಿಯು ಉಡುಗಿಹೋಗುವಂತಾಗಿದೆ. ಪದದಲಿತರಾದ ಈ ಬಹುಸಂಖ್ಯಾತರು ಇವರ ಆಡಳಿತಕ್ಕೆ ಬೇಸತ್ತಿದ್ದಾರೆ. ರೋಸಿಹೋಗಿದ್ದಾರೆ. ತಮ್ಮನ್ನು ತಾವೇ ಆಳಿಕೊಳ್ಳುವ ಅವಕಾಶವನ್ನು ಅರಸುವ ತವಕದಲ್ಲಿದ್ದಾರೆ. ದಲಿತ ವರ್ಗದವರಲ್ಲಿ ಆತ್ಮಾವಲೋಕನದ ಸಲುವಾಗಿ ಉಮ್ಮಳಿಸುತ್ತಿರುವ ಉತ್ಕಟ ಆಕಾಂಕ್ಷೆ ಸ್ಫೋಟಗೊಂಡ ವರ್ಗ ಸಂಘರ್ಷದಲ್ಲಿ ಪರಿಣಾಮಗೊಳ್ಳದ ಹಾಗೆ ಎಚ್ಚರವಹಿಸಬೇಕಾದೀತು. ವರ್ಗ ಸಂಘರ್ಷವು ಉಲ್ಬಣಾವಸ್ಥೆಗೆ ತಲಿಪಿದ್ದೇ ಆದರೆ ಅದು ಘೋರ ದುರಂತದ ಪ್ರಸಂಗ ಆಗುತ್ತದೆ. ಆಗ ರಾಷ್ಟ್ರವು ವಿನಾಶ ಆದಂತೆಯೇ. ಕಾರಣವೆಂದರೆ, ಅಬ್ರಾಹಂ ಲಿಂಕನ್ ಹೇಳುವ ಹಾಗೆ ಯಾವ ಮನೆಯು ಇಬ್ಭಾಗವಾಗುವುದೋ ಆ ಮನೆಯು ವಿನಾಶವಾದಂತೆಯೇ. ಆದ್ದರಿಂದ ಅವರ ಆತ್ಮಾವಲೋಕನದ ಅಭಿಲಾಷೆಗೆ ಆದಷ್ಟು ಬೇಗನೆ ಅವಕಾಶ ಮಾಡಿಕೊಡಬೇಕು. ಅಂದರೆ ಅಲ್ಪಸಂಖ್ಯಾತರಿಗೂ ಕ್ಷೇಮ. ದೇಶಕ್ಕೂ ಕ್ಷೇಮ. ದೇಶದ ಸ್ವಾತಂತ್ರ್ಯ ರಕ್ಷಣೆಗೆ, ಪ್ರಜಾಪ್ರಭುತ್ವ ವ್ಯವಸ್ಥೆಯ ವಿಕಾಸಕ್ಕೆ ಕ್ಷೇಮ. ಇದಕ್ಕಾಗಿ ಸಕಲ ರಂಗಗಳಲ್ಲಿ ಸಮಾನತೆಯನ್ನು ಸೋದರತೆಯನ್ನು ಮತ್ತು ಸ್ವಾತಂತ್ರ್ಯವನ್ನು ನೆಲೆಗೊಳಿಸಲು, ವಿಕಾಸಗೊಳಿಸಲು ಸತತ ಪ್ರಯತ್ನ ಅಗತ್ಯ. ಆ ಕಾರಣವೇ ಅವುಗಳಿಗೆ ಒತ್ತುಕೊಟ್ಟು ನಾನು ಇಷ್ಟೆಲ್ಲ ಹೊತ್ತು ಮಾತನಾಡಿದ್ದು.

ನಾನು ಸದನದ ಮಾನ್ಯ ಸದಸ್ಯರಿಗೆ ನನ್ನ ಮಾತುಗಳಿಂದ ಬೇಸರ ಉಂಟುಮಾಡಲು ಇಷ್ಟಪಡುವುದಿಲ್ಲ. ಸ್ವಾತಂತ್ರ್ಯ ವಾಸ್ತವವಾಗಿ ಸಂತೋಷ ಉಂಟುಮಾಡುವ ಸಂಗತಿ. ಈ ಸ್ವಾತಂತ್ರ್ಯವು ನಮ್ಮ ಹೊಣೆಗಾರಿಕೆಗಳ ಹೊರೆಯನ್ನೇ ಹೇರಿದೆ ಎಂಬುದನ್ನು ಮರೆಯದಿರೋಣ. ಈ ಹಿಂದೆ ಏನಾದರೂ ತಪ್ಪು ಮಾಡಿದಾಗ, ಅಥವಾ ಏನಾದರೂ ತೊಂದರೆ ಉಂಟಾದಾಗ, ಆಳರಸರಾದ ಬ್ರಿಟಿಷರ ಕಡೆಗೆ ಬೆರಳು ಮಾಡಿ ತೋರಿಸುವ ಅವಕಾಶವಿತ್ತು. ಈಗ ಸ್ವಾತಂತ್ರ್ಯ ಬಂದ ಮೇಲೆ ಆ ಅವಕಾಶ ತಪ್ಪಿಹೋಗಿದೆ. ಇನ್ನು ಮುಂದೆ ಏನಾದರೂ ತಪ್ಪಾದರೆ, ತೊಂದರೆಯುಂಟಾದಾಗ ನಮ್ಮನ್ನು ನಾವೇ ದೂಷಿಸಬೇಕಾಗುತ್ತದೆ. ಬೇರೆ ಯಾರನ್ನು ಆಪಾದಿಸಿ ಹೇಳುವಂತಿಲ್ಲ. ತಪ್ಪುಗಳು, ಅನೇಕ ತಪ್ಪುಗಳು ಸಂಭವಿಸುವ ಅಪಾಯ ಉಂಟು. ಕಾರಣವೆಂದರೆ ಕಾಲವು ಅತಿವೇಗದಿಂದ ಓಡುತ್ತಿದೆ. ಎಲ್ಲೆಲ್ಲೂ ಜನಸಮುದಾಯಗಳು ಹೊಸ ಹೊಸ ಸಿದ್ಧಾಂತಗಳಿಗೆ ಕ್ರಾಂತಿಕಾರಕ ವಿಚಾರಗಳಿಗೆ ಮಾರುಹೋಗುತ್ತಿದ್ದಾರೆ. ಜನರ ಮೂಲಕ ಸರ್ಕಾರ ಎಂಬ ಬಗ್ಗೆ ಆಲೋಚಿಸುತ್ತಿದ್ದಾರೆಯೇ ಹೊರತು ಜನತೆಯ ಸರ್ಕಾರ ಅಥವಾ ಜನರ ಸರ್ಕಾರ ಎಂಬ ಸಿದ್ಧಾಂತಗಳಿಂದಲೂ ಬೇಸರಗೊಂಡಿದ್ದಾರೆ. ನಾನು ಜನತೆಯಿಂದ ಜನರಿಗಾಗಿ ಜನರ ಸರ್ಕಾರ ಎಂಬ ಯಾವ ಸಿದ್ಧಾಂತವನ್ನು ಆಧರಿಸಿ ಈ ಸಂವಿಧಾನವನ್ನು ರೂಪಿಸಿದೆವೋ ಅದನ್ನು ಉಳಿಸಿಕೊಳ್ಳಬೇಕಾದರೆ ದಾರಿಯಲ್ಲಿ ಇದಿರಾಗುವ ಎಡರು ತೊಡರುಗಳನ್ನು ತೊಡೆದುಹಾಕುತ್ತ ಮುಂದೆ ಸಾಗಬೇಕು. ಮಾತ್ರವಲ್ಲದೆ ಜನರಿಂದ ಜನರ ಸರ್ಕಾರಕ್ಕೆ ಬದಲಾಗಿ ಜನರಿಗೋಸ್ಕರ ಸರ್ಕಾರ ಬಯಸುವಂಥ ಜನಗಳನ್ನು ಪ್ರೋತ್ಸಾಹಿಸುವಂಥ ಅಡ್ಡಿ ಅಡಚಣೆಗಳನ್ನು ನಿವಾರಿಸಬೇಕು. ಇಷ್ಟೇ ಅಲ್ಲದೆ ಅಂಥ ತೊಡಕು–ತೊಂದರೆಗಳನ್ನು ನಿವಾರಿಸುವಾಗ ದುರ್ಬಲರ ಹಾಗೆ ವರ್ತಿಸಬಾರದು. ಅದೊಂದೇ ದೇಶಸೇವೆಯ ಸೂತ್ರ. ಅದೇ ಅನುಸರಿಸತಕ್ಕ ಮಾರ್ಗ. ಅದಕ್ಕಿಂತ ಉತ್ತಮವಾದ

ಸೂತ್ರವಾಗಲೀ ಮಾರ್ಗವಾಗಲೀ ನನಗೆ ಗೊತ್ತಿಲ್ಲ.

**ಮಾನ್ಯ ಅಧ್ಯಕ್ಷರು:** ಸದನವನ್ನು ನಾಳೆ ಹತ್ತು ಗಂಟೆಯ ತನಕ ಮುಂದೆ ಹಾಕಲಾಗಿದೆ. ಆಗ ನಾವು ಡಾ. ಅಂಬೇಡ್ಕರ್ ಅವರು ಮಂಡಿಸಿರುವ ಪ್ರಸ್ತಾಪದ ಮೇಲೆ ಮತ ತೆಗೆದುಕೊಳ್ಳೋಣ. ಆಗ ಸಭೆಯನ್ನು ಶನಿವಾರ, ೨೬ನೆಯ ನವೆಂಬರ್ ೧೯೪೯ರ ಹತ್ತು ಗಂಟೆಯ ತನಕ ಮುಂದೆ ಹಾಕಲಾಯಿತು.

* * *

## ಸಂವಿಧಾನ ಅಂಗೀಕಾರ

**ಮಾನ್ಯ ಅಧ್ಯಕ್ಷರು:** (ಡಾ. ರಾಜೇಂದ್ರ ಪ್ರಸಾದ್) ನನ್ನ ಮಾತನ್ನು ಮುಗಿಸುವುದಕ್ಕೆ ಮುಂಚೆ, ಈ ಸನ್ಮಾನ್ಯ ಸಭೆಯ ಸಕಲ ಸದಸ್ಯರಿಗೆ ನನ್ನ ಧನ್ಯವಾದಗಳನ್ನು ಸಲ್ಲಿಸಬೇಕು. ನನ್ನನ್ನು ಸೌಜನ್ಯದಿಂದ ನಡೆಸಿಕೊಂಡಿದ್ದಾರೆ. ಅವರಿಂದ ಗೌರವವನ್ನು ಮತ್ತು ಮಮತೆಯನ್ನು ಪಡೆದಿದ್ದೇನೆ. ಸಭೆಯ ಅಧ್ಯಕ್ಷ ಸ್ಥಾನದಲ್ಲಿ ದೈನಂದಿನ ವ್ಯವಹರಣೆಯನ್ನು ವೀಕ್ಷಿಸುತ್ತ, ಅಧ್ಯಕ್ಷರಾದ ಡಾ. ಅಂಬೇಡ್ಕರ್ ಅವರೂ ಕರಡು ರಚನಾ ಸಮಿತಿಯ ಸದಸ್ಯರೂ ಮತ್ತು ಮುಖ್ಯವಾಗಿ ತಮ್ಮ ಆರೋಗ್ಯವು ಅಷ್ಟು ತೃಪ್ತಿಕರವಾಗಿಲ್ಲದಿದ್ದರೂ ಯಾವ ಉತ್ಸಾಹದಿಂದ ಯಾವ ನಿಷ್ಠೆಯಿಂದ ಕೆಲಸ ಮಾಡಿದರೋ ಅದು ನನಗಿಂತ ಇತರರು ಯಾರೂ ಅಧಿಕವಾಗಿ ಮನಗಂಡಿರಲಿಕ್ಕಿಲ್ಲ. (ಹರ್ಷೋದ್ಗಾರ) ಅವರನ್ನು ಕರಡು ರಚನಾ ಸಮಿತಿಯ ಸದಸ್ಯರನ್ನಾಗಿ ಆ ತರುವಾಯ ಅಧ್ಯಕ್ಷರನ್ನಾಗಿ ನೇಮಿಸಿದಾಗ ನಿರ್ಣಯಕ್ಕಿಂತ ಹೆಚ್ಚು ಯಥಾಯೋಗ್ಯವಾದ ನಿರ್ಣಯವನ್ನು ತೆಗೆದುಕೊಳ್ಳುವುದು ಸಾಧ್ಯವಿರಲಿಲ್ಲ. ಡಾ. ಅಂಬೇಡ್ಕರ್ ಅವರಿಗೆ ಒಪ್ಪಿಸಿದ ಕೆಲಸವನ್ನು ನಮ್ಮ ಆಯ್ಕೆಯನ್ನು ಸಮರ್ಥಿಸುವ ಹಾಗೆ ಮಾತ್ರವೇ ಅಲ್ಲ, ಆ ಕೆಲಸವನ್ನು ಶೋಭೆ ತರುವ ಹಾಗೆ ಗೌರವ ಬರುವ ಹಾಗೆ ಸಮರ್ಥವಾಗಿ ನಿರ್ವಹಿಸಿದ್ದಾರೆ. ತಮ್ಮ ಈ ಸಾಧನೆಯು ಬೆಳಗುವಂತೆಯೂ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸಮಿತಿಯ ಸದಸ್ಯರ ನಡುವೆ ಪರಸ್ಪರರ ಬಗ್ಗೆ ಪಕ್ಷಪಾತಪೂರ್ಣ ಹೋಲಿಕೆ ಮಾಡುವುದು ತರವಲ್ಲೆಂದು ಭಾವಿಸಿದ್ದೇನೆ. ಅವರೆಲ್ಲರೂ ಅದೇ ಬಗೆಯ ಉತ್ಸಾಹದಿಂದ ಅದೇ ಬಗೆಯ ನಿಷ್ಠೆಯಿಂದ ತಮ್ಮ ಕಾರ್ಯ ನಿರ್ವಹಿಸಿದ್ದಾರೆ. ಅವರೆಲ್ಲರಿಗೂ ದೇಶದ ಧನ್ಯವಾದಗಳು ಸಲ್ಲುತ್ತವೆ.

ಎಲ್ಲರ ಕಡೆಯಿಂದ ನಾನು ಸೌಜನ್ಯವನ್ನು ಸಹಕಾರವನ್ನು ಕಾನೂನು ಸೇವೆಯನ್ನು ಪಡೆದಿರುವ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. (ಸುದೀರ್ಘ ಹರ್ಷೋದ್ಗಾರ).

ಈಗ ಉಳಿದಿರುವ ಕೆಲಸವೆಂದರೆ ಡಾ. ಅಂಬೇಡ್ಕರ್ ಅವರು ಮಂಡಿಸಿದ ಪ್ರಸ್ತಾವವನ್ನು ಸದನದ ಮತಕ್ಕೆ ಹಾಕುವ ಕೆಲಸವಷ್ಟೆ. ಪ್ರಸ್ತುತ ವಿಷಯವೆಂದರೆ

"ಸಭೆಯು ನಿರ್ಧರಿಸಿದ ಸಂವಿಧಾನವನ್ನು ಪೂರ್ಣಗೊಳಿಸಬೇಕು."

**ಪ್ರಸ್ತಾವವನ್ನು ಅಂಗೀಕರಿಸಲಾಯಿತು.** (ಸುದೀರ್ಘ ಹರ್ಷೋದ್ಗಾರ)

**(ಅಧ್ಯಕ್ಷರು ಆ ತರುವಾಯ ಸಂವಿಧಾನವನ್ನು ಪ್ರಮಾಣೀಕರಿಸಿದರು. ಸದನವು ಧ್ವನಿಮತದಿಂದ ಜನವರಿ ೧೯೫೦ ರಲ್ಲಿ ಇನ್ನೊಂದು ಅಧಿವೇಶನವನ್ನು ಕರೆಯಲು ಅಧ್ಯಕ್ಷರಿಗೆ ಅಧಿಕಾರ ನೀಡಿತು. ಆ ತರುವಾಯ ಸದಸ್ಯರು ಒಬ್ಬೊಬ್ಬರಾಗಿ ಅಧ್ಯಕ್ಷರ ಕೈ ಕುಲುಕಿದರು.)**

(ಸಂವಿಧಾನ ಸಭೆಯು ಶಾಸನ ರಚನಾ ಕಾರ್ಯವನ್ನೂ ಸಹ ನಿರ್ವಹಿಸಬೇಕಾಗಿತ್ತು. ಈ ಶಾಸನ ರಚನಾ ಪ್ರಕಾರ್ಯಗಳು, ವಿವಿಧ ಕಾನೂನುಗಳ ತಿದ್ದುಪಡಿಗಳೂ ಸೇರಿದಂತೆ ಸರ್ವಸಾದಾರಣ ಸಂಸದೀಯ

ವ್ಯವಹಾರಗಳನ್ನು ಒಳಗೊಂಡಿದ್ದವು. ಸಂವಿಧಾನ ರಚನೆಯಿಂದ ಪ್ರತ್ಯೇಕವಾಗಿ ಹಿಂದೂ ಕೋಡ್ ವಿಧೇಯಕವೂ ಸೇರಿದಂತೆ ಆ ಶಾಸನಗಳಿಗೆ ಸಂಬಂಧಿಸಿದಂತೆ ಡಾ. ಅಂಬೇಡ್ಕರ್ ಅವರು ಮಾಡಿದ ಭಾಷಣಗಳನ್ನು ಮುಂದಿನ ಸಂಪುಟದಲ್ಲಿ ಸೇರಿಸಲಾಗಿದೆ. –ವಸಂತ ಮೂನ್.)

**ಭಾರತದ ಸಂವಿಧಾನದಲ್ಲಿ ಇರುವ ವಿಧಿಗಳನ್ನು ಮತ್ತು ಕರಡು ಸಂವಿಧಾನದಲ್ಲಿ ಇರುವ ಖಂಡಗಳನ್ನು, ಅವನ್ನು ಚರ್ಚಿಸಿ ಅನುಮೋದಿಸಿದ ದಿನಾಂಕಗಳನ್ನು ತೋರಿಸುವ ಕೋಷ್ಟಕ ರೂಪದ ನಿರೂಪಣೆ.**

## ಭಾರತ ಸಂವಿಧಾನದ ಅನುಚ್ಛೇದಗಳು

| ಭಾರತ ಸಂವಿಧಾನದಲ್ಲಿನ ವಿಧಿ | ಕರಡು ಸಂವಿಧಾನದಲ್ಲಿನ ಸಂವಾದಿ ಖಂಡ | ಚರ್ಚಿಸಿದ ಮತ್ತು ಅನುಮೋದಿಸಿದ ದಿನಾಂಕಗಳು |
|---|---|---|
| ೧ | ೨ | ೩ |
| ೧ | ೧ | ೧೫ನೇ ನವೆಂಬರ್ ೧೯೪೮ |
| | | ೧೭ನೇ ನವೆಂಬರ್ ೧೯೪೮ |
| | | ೧೭ನೇ ಸೆಪ್ಟೆಂಬರ್ ೧೯೪೯ |
| | | ೧೮ನೇ ಸೆಪ್ಟೆಂಬರ್ ೧೯೪೯ |
| ೨ | ೨ | ೧೭ನೇ ನವೆಂಬರ್ ೧೯೪೮ |
| ೩ | ೩ | ೧೭/೧೮ನೇ ನವೆಂಬರ್ ೧೯೪೮ |
| | | ೧೩ನೇ ಅಕ್ಟೋಬರ್ ೧೯೪೯ |
| ೪ | ೪ | ೧೮ನೇ ನವೆಂಬರ್ ೧೯೪೮ |
| ೫ | ೫ | ೧೦ನೇ ಆಗಸ್ಟ್ ೧೯೪೯ |
| | | ೧೧ನೇ ಆಗಸ್ಟ್ ೧೯೪೯ |
| | | ೧೭ನೇ ಆಗಸ್ಟ್ ೧೯೪೯ |
| ೬ | ೫ಎ | ೧೦/೧೧/೧೨ನೇ ಆಗಸ್ಟ್ ೧೯೪೯ |
| ೭ | ೫ಎಎ | ೧೦/೧೧/೧೨ನೇ ಆಗಸ್ಟ್ ೧೯೪೯ |
| ೮ | ೫ಬಿ | ೧೦/೧೧/೧೨ನೇ ಆಗಸ್ಟ್ ೧೯೪೯ |
| ೯ (ಹೊಸದು) | | ೨೯ನೇ ನವೆಂಬರ್ ೧೯೪೯ |
| ೧೦ | ೫ಸಿ | ೧೦/೧೧/೧೨ನೇ ಆಗಸ್ಟ್ ೧೯೪೯ |
| ೧೧ | ೬ | ೧೦/೧೧/೧೨ನೇ ಆಗಸ್ಟ್ ೧೯೪೯ |
| ೧೨ | ೭ | ೨೫ನೇ ನವೆಂಬರ್ ೧೯೪೮ |
| ೧೩ | ೮ | ೨೫/೨೬/೨೯ನೇ ನವೆಂಬರ್ ೧೯೪೮ |
| ೧೪ (ಹೊಸದು) | | ೨೯ನೇ ನವೆಂಬರ್ ೧೯೪೮ |
| ೧೫ | ೯ | ೨೯ನೇ ನವೆಂಬರ್ ೧೯೪೮ |
| ೧೬ | ೧೦ | ೩೦ನೇ ನವೆಂಬರ್ ೧೯೪೮ |
| ೧೭ | ೧೧ | ೨೯ನೇ ನವೆಂಬರ್ ೧೯೪೮ |

| ೧ | ೨ | ೩ |
|---|---|---|
| ೧೮ | ೧೨ | ೩೦ನೇ ನವೆಂಬರ್ ೧೯೪೮ |
| | | ೧೦ನೇ ಡಿಸೆಂಬರ್ ೧೯೪೯ |
| ೧೯ | ೧೩ | ೧/೨ನೇ ಡಿಸೆಂಬರ್ ೧೯೪೮ |
| | | ೧೬ನೇ ಅಕ್ಟೋಬರ್ ೧೯೪೯ |
| | | ೧೬ನೇ ಅಕ್ಟೋಬರ್ ೧೯೪೯ |
| ೨೦ | ೧೪ | ೨/೩/೬ನೇ ಡಿಸೆಂಬರ್ ೧೯೪೮ |
| ೨೧ | ೧೫ | ೬/೧೩ನೇ ಡಿಸೆಂಬರ್ ೧೯೪೮ |
| ೨೨ | ೧೫ಎ | ೧೬ನೇ ಸೆಪ್ಟೆಂಬರ್ ೧೯೪೯ |
| ೨೩ | ೧೭ | ೩ನೇ ಡಿಸೆಂಬರ್ ೧೯೪೮ |
| ೨೪ | ೧೮ | ೩ನೇ ಡಿಸೆಂಬರ್ ೧೯೪೮ |
| ೨೫ | ೧೯ | ೩/೬ನೇ ಡಿಸೆಂಬರ್ ೧೯೪೮ |
| ೨೬ | ೨೦ | ೭ನೇ ಡಿಸೆಂಬರ್ ೧೯೪೮ |
| ೨೭ | ೨೧ | ೭ನೇ ಡಿಸೆಂಬರ್ ೧೯೪೮ |
| ೨೮ | ೨೨ | ೭ನೇ ಡಿಸೆಂಬರ್ ೧೯೪೮ |
| ೨೯ | ೨೩ | ೭/೮ನೇ ಡಿಸೆಂಬರ್ ೧೯೪೮ |
| ೩೦ | ೨೩ಎ | ೭/೮ನೇ ಡಿಸೆಂಬರ್ ೧೯೪೮ |
| ೩೧ | ೨೪ | ೧೦ನೇ ಸೆಪ್ಟೆಂಬರ್ ೧೯೪೮ |
| | | ೧೨ನೇ ಸೆಪ್ಟೆಂಬರ್ ೧೯೪೯ |
| ೩೨ | ೨೫ | ೯ನೇ ಡಿಸೆಂಬರ್ ೧೯೪೮ |
| ೩೩ | ೨೬ | ೯ನೇ ಡಿಸೆಂಬರ್ ೧೯೪೮ |
| ೩೪ (ಹೊಸದು) | | |
| ೩೫ | ೨೭ | ೯/೧೬ನೇ ಡಿಸೆಂಬರ್ ೧೯೪೮ |
| | | ೧೬ನೇ ಅಕ್ಟೋಬರ್ ೧೯೪೯ |
| ೩೬ | ೨೮ | ೧೯ನೇ ನವೆಂಬರ್ ೧೯೪೮ |
| ೩೭ | ೨೯ | ೧೯ನೇ ನವೆಂಬರ್ ೧೯೪೮ |
| ೩೮ | ೩೦ | ೧೯ನೇ ನವೆಂಬರ್ ೧೯೪೮ |
| ೩೯ | ೩೧ | ೨೨ನೇ ನವೆಂಬರ್ ೧೯೪೮ |
| ೪೦ | ೩೧ಎ | ೨೨ನೇ ನವೆಂಬರ್ ೧೯೪೮ |
| ೪೧ | ೩೨ | ೨೩ನೇ ನವೆಂಬರ್ ೧೯೪೮ |
| ೪೨ | ೩೩ | ೨೩ನೇ ನವೆಂಬರ್ ೧೯೪೮ |
| ೪೩ | ೩೪ | ೨೩ನೇ ನವೆಂಬರ್ ೧೯೪೮ |

| ೧ | ೨ | ೩ |
|---|---|---|
| ೪೪ | ೩೫ | ೨೩ನೇ ನವೆಂಬರ್ ೧೯೪೮ |
| ೪೫ | ೩೬ | ೨೩ನೇ ನವೆಂಬರ್ ೧೯೪೮ |
| ೪೬ | ೩೭ | ೨೩ನೇ ನವೆಂಬರ್ ೧೯೪೮ |
| ೪೭ | ೩೮ | ೨೩/೨೪ನೇ ನವೆಂಬರ್ ೧೯೪೮ |
| ೪೮ | ೩೮ಎ | ೨೪ನೇ ನವೆಂಬರ್ ೧೯೪೮ |
| ೪೯ | ೩೯ | ೨೪ನೇ ನವೆಂಬರ್ ೧೯೪೮ |
| ೫೦ | ೨೯ಎ | ೨೪/೨೫ನೇ ನವೆಂಬರ್ ೧೯೪೮ |
| ೫೧ | ೪೦ | ೨೫ನೇ ನವೆಂಬರ್ ೧೯೪೮ |
| ೫೨ | ೪೧ | ೧೦ನೇ ಡಿಸೆಂಬರ್ ೧೯೪೮ |
| ೫೩ | ೪೨ | ೧೦/೧೬ನೇ ಡಿಸೆಂಬರ್ ೧೯೪೮ |
| | | ೧೬ನೇ ಅಕ್ಟೋಬರ್ ೧೯೪೯ |
| ೫೪ | ೪೩ | ೧೦/೧೩ನೇ ಡಿಸೆಂಬರ್ ೧೯೪೮ |
| ೫೫ | ೪೪ | ೧೩ನೇ ಡಿಸೆಂಬರ್ ೧೯೪೮ |
| ೫೬ | ೪೫ | ೧೩ನೇ ಡಿಸೆಂಬರ್ ೧೯೪೮ |
| ೫೭ | ೪೬ | ೧೩ನೇ ಡಿಸೆಂಬರ್ ೧೯೪೮ |
| ೫೮ | ೪೭ | ೨೭ನೇ ಡಿಸೆಂಬರ್ ೧೯೪೯ |
| | | ೧೩ನೇ ಅಕ್ಟೋಬರ್ ೧೯೪೯ |
| ೫೯ | ೪೮ | ೨೭ನೇ ಡಿಸೆಂಬರ್ ೧೯೪೮ |
| | | ೧೪ನೇ ಅಕ್ಟೋಬರ್ ೧೯೪೯ |
| ೬೦ | ೪೯ | ೨೭ನೇ ಡಿಸೆಂಬರ್ ೧೯೪೮ |
| ೬೧ | ೫೦ | ೨೮ನೇ ಡಿಸೆಂಬರ್ ೧೯೪೮ |
| ೬೨ | ೫೧ | ೨೮ನೇ ಡಿಸೆಂಬರ್ ೧೯೪೮ |
| ೬೩ | ೫೨ | ೨೮ನೇ ಡಿಸೆಂಬರ್ ೧೯೪೮ |
| ೬೪ | ೫೩ | ೨೮ನೇ ಡಿಸೆಂಬರ್ ೧೯೪೮ |
| ೬೫ | ೫೪ | ೨೮ನೇ ಡಿಸೆಂಬರ್ ೧೯೪೮ |
| ೬೬ | ೫೫(೧)–(೪) | ೨೮/೨೯ನೇ ಡಿಸೆಂಬರ್ ೧೯೪೮ |
| | | ೧೩ನೇ ಅಕ್ಟೋಬರ್ ೧೯೪೯ |
| ೬೭ | ೫೬ | ೨೯ನೇ ಡಿಸೆಂಬರ್ ೧೯೪೮ |
| ೬೮ | ೫೫(೫)–(೬) | ೨೮/೨೯ನೇ ಡಿಸೆಂಬರ್ ೧೯೪೮ |
| | | ೧೩ನೇ ಅಕ್ಟೋಬರ್ ೧೯೪೯ |
| ೬೯ (ಹೊಸದು) | | ನವೆಂಬರ್ ೧೯೪೯ |

| ೧ | ೨ | ೩ |
|---|---|---|
| ೭೦ | ೫೭ | ೨೯ನೇ ಡಿಸೆಂಬರ್ ೧೯೪೮ |
| ೭೧ | ೫೮ | ೨೯ನೇ ಡಿಸೆಂಬರ್ ೧೯೪೮ |
| ೭೨ | ೫೯ | ೨೯ನೇ ಡಿಸೆಂಬರ್ ೧೯೪೮ |
| | | ೧೭ನೇ ಅಕ್ಟೋಬರ್ ೧೯೪೯ |
| ೭೩ | ೬೦ | ೨೯/೩೦ನೇ ಡಿಸೆಂಬರ್ ೧೯೪೮ |
| ೭೪ | ೬೧ | ೩೦ನೇ ಡಿಸೆಂಬರ್ ೧೯೪೮ |
| ೭೫ | ೬೨ | ೩೦/೩೧ನೇ ಡಿಸೆಂಬರ್ ೧೯೪೮ |
| | | ೧೪ನೇ ಅಕ್ಟೋಬರ್ ೧೯೪೯ |
| | | ೧೭ನೇ ಅಕ್ಟೋಬರ್ ೧೯೪೯ |
| ೭೬ | ೬೩ | ೭ನೇ ಜನವರಿ ೧೯೪೯ |
| ೭೭ | ೬೪ | ೭ನೇ ಜನವರಿ ೧೯೪೯ |
| ೭೮ | ೬೫ | ೬/೭ನೇ ಜವರಿ ೧೯೪೯ |
| ೭೯ | ೬೬ | ೩ನೇ ಜನವರಿ ೧೯೪೯ |
| ೮೦ | ೬೭(೧)–(೪) | ೩/೪ನೇ ಜನವರಿ ೧೯೪೯ |
| | | ೧೩/೧೪ನೇ ಮತ್ತು ೧೭ನೇ ಅಕ್ಟೋಬರ್ ೧೯೪೯ |
| ೮೧ | ೬೭(೫)–(೮) | ೩ನೇ/೪ನೇ ಜನವರಿ ೧೯೪೯ |
| | | ೧೦/೧೪/೧೭ನೇ ಅಕ್ಟೋಬರ್ ೧೯೪೯ |
| ೮೨ | ೬೭ಎ | ೧೮ನೇ ಮೇ, ೧೯೪೯ |
| | | ೨೩ನೇ ಮೇ ೧೯೪೯ |
| | | ೧೩ನೇ ಮೇ ೧೯೪೯ |
| ೮೩ | ೬೮ | ೧೮ನೇ ಮೇ ೧೯೪೯ |
| ೮೪ | ೬೮ಎ | ೧೮ನೇ ಮೇ ೧೯೪೯ |
| ೮೫ | ೬೯ | ೧೮ನೇ ಮೇ ೧೯೪೯ |
| ೮೬ | ೭೦ | ೧೮ನೇ ಮೇ ೧೯೪೯ |
| ೮೭ | ೭೧ | ೧೮ನೇ ಮೇ ೧೯೪೯ |
| ೮೮ | ೭೨ | ೧೮ನೇ ಮೇ ೧೯೪೯ |
| ೮೯ | ೭೩ | ೧೯ನೇ ಮೇ ೧೯೪೯ |
| ೯೦ | ೭೪ | ೧೯ನೇ ಮೇ ೧೯೪೯ |
| ೯೧ | ೭೫ | ೧೯ನೇ ಮೇ ೧೯೪೯ |
| ೯೨ | ೭೫ಎ | ೧೯ನೇ ಮೇ ೧೯೪೯ |
| ೯೩ | ೭೬ | ೧೯ನೇ ಮೇ ೧೯೪೯ |

| ೧ | ೨ | ೩ |
|---|---|---|
| ೯೪ | ೭೭ | ೧೯ನೇ ಮೇ ೧೯೪೯ |
| ೯೫ | ೭೮ | ೧೯ನೇ ಮೇ ೧೯೪೯ |
| ೯೬ | ೭೮ಎ | ೧೮/೧೯ನೇ ಮೇ ೧೯೪೯ |
| ೯೭ | ೭೯ | ೧೯ನೇ ಮೇ ೧೯೪೯ |
| ೯೮ | ೭೯ಎ | ೩೦ನೇ ಜುಲೈ ೧೯೪೯ |
| ೯೯ | ೮೧ | ೧೯ನೇ ಮೇ ೧೯೪೯ |
| ೧೦೦ | ೮೦ | ೧೯ನೇ ಮೇ ೧೯೪೯ |
| ೧೦೧ | ೮೨ | ೧೯ನೇ ಮೇ ೧೯೪೯ |
| ೧೦೨ | ೮೩ | ೧೯ನೇ ಮೇ ೧೯೪೯<br>೧೩ನೇ ಅಕ್ಟೋಬರ್ ೧೯೪೯ |
| ೧೦೩ | ೮೩ಎ | ೧ನೇ ಆಗಸ್ಟ್ ೧೯೪೯ |
| ೧೦೪ | ೮೪ | ೧೯ನೇ ಮೇ ೧೯೪೯ |
| ೧೦೫ | ೮೫ | ೧೯ನೇ ಮೇ ೧೯೪೯<br>೧೬ನೇ ಅಕ್ಟೋಬರ್ ೧೯೪೯ |
| ೧೦೬ | ೮೬ | ೨೦ನೇ ಮೇ ೧೯೪೯ |
| ೧೦೭ | ೮೭ | ೨೦ನೇ ಮೇ ೧೯೪೯ |
| ೧೦೮ | ೮೮ | ೨೦ನೇ ಮೇ ೧೯೪೯ |
| ೧೦೯ | ೮೯ | ೨೦ನೇ ಮೇ ೧೯೪೯ |
| ೧೧೦ | ೯೦ | ೨೦ನೇ ಮೇ ೧೯೪೯<br>೮ನೇ ಜೂನ್ ೧೯೪೯ |
| ೧೧೧ | ೯೧ | ೨೦ನೇ ಮೇ ೧೯೪೯ |
| ೧೧೨ | ೯೨ | ೮ನೇ ಜೂನ್ ೧೯೪೯<br>೧೦ನೇ ಜೂನ್ ೧೯೪೯<br>೧೩ನೇ ಅಕ್ಟೋಬರ್ ೧೯೪೯ |
| ೧೧೩ | ೯೩ | ೧೦ನೇ ಜೂನ್ ೧೯೪೯ |
| ೧೧೪ | ೯೪ | ೧೦ನೇ ಜೂನ್ ೧೯೪ |
| ೧೧೫ | ೯೫ | ೧೦ನೇ ಜೂನ್ ೧೯೪೯ |
| ೧೧೬ | ೯೬ | ೧೦ನೇ ಜೂನ್ ೧೯೪೯ |
| ೧೧೭ | ೯೭ | ೧೦ನೇ ಜೂನ್ ೧೯೪೯ |
| ೧೧೮ | ೯೮ | ೧೦ನೇ ಜೂನ್ ೧೯೪೯ |
| ೧೧೯ | ೯೮ಎ | ೧೦ನೇ ಜೂನ್ ೧೯೪೯ |

| ೧ | ೨ | ೩ |
|---|---|---|
| ೧೨೦ | ೯೯ | ೧೭ನೇ ಸೆಪ್ಟೆಂಬರ್ ೧೯೪೯ |
| ೧೨೧ | ೧೦೦ | ೨೩ನೇ ಮೇ ೧೯೪೯ |
| | | ೧೩ನೇ ಅಕ್ಟೋಬರ್ ೧೯೪೯ |
| ೧೨೨ | ೧೦೧ | ೨೩ನೇ ಮೇ ೧೯೪೯ |
| ೧೨೩ | ೧೦೨ | ೨೩ನೇ ಮೇ ೧೯೪೯ |
| ೧೨೪ | ೧೦೩ | ೨೩/೨೪ನೇ ಮೇ ೧೯೪೯ |
| ೧೨೫ | ೧೦೪ | ೨೭ನೇ ಮೇ ೧೯೪೯ |
| | | ೩೦ನೇ ಜುಲೈ ೧೯೪೯ |
| ೧೨೬ | ೧೦೫ | ೨೭ನೇ ಮೇ ೧೯೪೯ |
| ೧೨೭ | ೧೦೬ | ೨೭ನೇ ಮೇ ೧೯೪೯ |
| ೧೨೮ | ೧೦೭ | ೨೭ನೇ ಮೇ ೧೯೪೯ |
| ೧೨೯ | ೧೦೮ | ೨೭ನೇ ಮೇ ೧೯೪೯ |
| ೧೩೦ | ೧೦೮ಎ | ೨೭ನೇ ಮೇ ೧೯೪೯ |
| ೧೩೧ | ೧೦೯ | ೩ನೇ ಜೂನ್ ೧೯೪೯ |
| | | ೧೪ನೇ ಅಕ್ಟೋಬರ್ ೧೯೪೯ |
| ೧೩೨ | ೧೧೦ | ೩ನೇ ಜೂನ್ ೧೯೪೯ |
| ೧೩೩ | ೧೧೧ | ೩ನೇ ಜೂನ್ ೧೯೪೯ |
| | | ೬ನೇ ಜೂನ್ ೧೯೪೯ |
| | | ೧೬ನೇ ಅಕ್ಟೋಬರ್ ೧೯೪೯ |
| ೧೩೪ | ೧೧೧ಎ | ೧೩/೧೪ನೇ ಜೂನ್ ೧೯೪೯ |
| ೧೩೫ | ೧೧೨ಬಿ | |
| ೧೩೬ | ೧೧೨ | ೬ನೇ ಜೂನ್ ೧೯೪೯ |
| | | ೧೬ನೇ ಅಕ್ಟೋಬರ್ ೧೯೪೯ |
| ೧೩೭ | ೧೧೨ಎ | ೬ನೇ ಜೂನ್ ೧೯೪೯ |
| ೧೩೮ | ೧೧೪ | ೬ನೇ ಜೂನ್ ೧೯೪೯ |
| ೧೩೯ | ೧೧೫ | ೨೭ನೇ ಮೇ ೧೯೪೯ |
| ೧೪೦ | ೧೧೬ | ೨೭ನೇ ಮೇ ೧೯೪೯ |
| ೧೪೧ | ೧೧೭ | ೨೭ನೇ ಮೇ ೧೯೪೯ |
| ೧೪೨ | ೧೧೮ | ೨೭ನೇ ಮೇ ೧೯೪೯ |
| ೧೪೩ | ೧೧೯ | ೨೭ನೇ ಮೇ ೧೯೪೯ |
| ೧೪೪ | ೧೨೦ | ೨೭ನೇ ಮೇ ೧೯೪೯ |

| ೧ | ೨ | ೩ |
|---|---|---|
| ೧೪೫ | ೧೨೧ | ೬ನೇ ಜೂನ್ ೧೯೪೯ |
| ೧೪೬ | ೧೨೨ | ೨೭ನೇ ಮೇ ೧೯೪೯ |
| ೧೪೭ | ೧೨೨ಎ | ೬ನೇ ಜೂನ್ ೧೯೪೯ |
| | | ೧೬ನೇ ಅಕ್ಟೋಬರ್ ೧೯೪೯ |
| ೧೪೮ | ೧೨೪ | ೩೦ನೇ ಮೇ ೧೯೪೯ |
| ೧೪೯ | ೧೨೫ | ೩೦ನೇ ಮೇ ೧೯೪೯ |
| ೧೫೦ | ೧೨೬ | ೩೦ನೇ ಮೇ ೧೯೪೯ |
| ೧೫೧ | ೧೨೭ | ೩೦ನೇ ಮೇ ೧೯೪೯ |
| ೧೫೨ | ೧೨೮ | ೩೦ನೇ ಮೇ ೧೯೪೯ |
| ೧೫೩ | ೧೨೯ | ೩೦ನೇ ಮೇ ೧೯೪೯ |
| ೧೫೪ | ೧೩೦ | ೩೦ನೇ ಮೇ ೧೯೪೯ |
| | | ೧೬ನೇ ಅಕ್ಟೋಬರ್ ೧೯೪೯ |
| ೧೫೫ | ೧೩೧ | ೩೦/೩೧ನೇ ಮೇ ೧೯೪೯ |
| ೧೫೬ | ೧೩೨ | ೩೧ನೇ ಮೇ ೧೯೪೯ |
| ೧೫೭ | ೧೩೪ | ೩೧ನೇ ಮೇ ೧೯೪೯ |
| ೧೫೮ | ೧೩೫ | ೩೧ನೇ ಮೇ ೧೯೪೯ |
| | | ೧೪ನೇ ಅಕ್ಟೋಬರ್ ೧೯೪೯ |
| ೧೫೯ | ೧೩೬ | ೩೧ನೇ ಮೇ ೧೯೪೯ |
| ೧೫೯ | ೧೩೮ | ೧ನೇ ಜೂನ್ ೧೯೪೯ |
| ೧೬೧ | ೧೪೧ | ೧ನೇ ಜೂನ್ ೧೯೪೯ |
| | | ೧೭ನೇ ಅಕ್ಟೋಬರ್ ೧೯೪೯ |
| ೧೬೨ | ೧೪೨ | ೧ನೇ ಜೂನ್ ೧೯೪೯ |
| ೧೬೩ | ೧೪೩ | ೧ನೇ ಜೂನ್ ೧೯೪೯ |
| ೧೬೪ | ೧೪೪ | ೧ನೇ ಜೂನ್ ೧೯೪೯ |
| | | ೧೪ನೇ ಅಕ್ಟೋಬರ್ ೧೯೪೯ |
| ೧೬೫ | ೧೪೫ | ೧ನೇ ಜೂನ್ ೧೯೪೯ |
| ೧೬೬ | ೧೪೬ | ೨ನೇ ಜೂನ್ ೧೯೪೯ |
| ೧೬೭ | ೧೪೭ | ೨ನೇ ಜೂನ್ ೧೯೪೯ |
| ೧೬೮ | ೧೪೮ | ೬ನೇ ಜನವರಿ ೧೯೪೯ |
| ೧೬೯ | ೧೪೮ಎ | ೩೦ನೇ ಜುಲೈ ೧೯೪೯ |
| | ೧೪೯ | ೬ನೇ ಜನವರಿ ೧೯೪೯ |

| ೧ | ೨ | ೩ |
|---|---|---|
| ೧೭೦ | ೧೪೯ | ೭/೮ನೇ ಜನವರಿ ೧೯೪೯<br>೧೪ನೇ ಅಕ್ಟೋಬರ್ ೧೯೪೯ |
| ೧೭೧ | ೧೫೦ | ೨ನೇ ಜೂನ್ ೧೯೪೯<br>೩೦ನೇ ಜುಲೈ ೧೯೪೯<br>೧೯ನೇ ಆಗಸ್ಟ್ ೧೯೪೯ |
| ೧೭೨ | ೧೫೧ | ೨ನೇ ಜೂನ್ ೧೯೪೯ |
| ೧೭೩ | ೧೫೨ | ೨ನೇ ಜೂನ್ ೧೯೪೯ |
| ೧೭೪ | ೧೫೩ | ೨ನೇ ಜೂನ್ ೧೯೪೯ |
| ೧೭೫ | ೧೫೪ | ೨ನೇ ಜೂನ್ ೧೯೪೯ |
| ೧೭೬ | ೧೫೫ | ೨ನೇ ಜೂನ್ ೧೯೪೯ |
| ೧೭೭ | ೧೫೬ | ೨ನೇ ಜೂನ್ ೧೯೪೯ |
| ೧೭೮ | ೧೫೭ | ೨ನೇ ಜೂನ್ ೧೯೪೯ |
| ೧೭೯ | ೧೫೮ | ೨ನೇ ಜೂನ್ ೧೯೪೯ |
| ೧೮೦ | ೧೫೯ | ೨ನೇ ಜೂನ್ ೧೯೪೯ |
| ೧೮೧ | ೧೫೯ಎ | ೨ನೇ ಜೂನ್ ೧೯೪೯ |
| ೧೮೨ | ೧೬೦ | ೨ನೇ ಜೂನ್ ೧೯೪೯ |
| ೧೮೩ | ೧೬೧ | ೨ನೇ ಜೂನ್ ೧೯೪೯ |
| ೧೮೪ | ೧೬೨ | ೨ನೇ ಜೂನ್ ೧೯೪೯ |
| ೧೮೫ | ೧೬೨ಎ | ೨ನೇ ಜೂನ್ ೧೯೪೯ |
| ೧೮೬ | ೧೬೩ | ೩ನೇ ಜೂನ್ ೧೯೪೯ |
| ೧೮೭ | ೧೬೩ಎ | ೩೦ನೇ ಜುಲೈ ೧೯೪೯ |
| ೧೮೮ | ೧೬೫ | ೨ನೇ ಜೂನ್ ೧೯೪೯ |
| ೧೮೯ | ೧೬೪ | ೨ನೇ ಜೂನ್ ೧೯೪೯<br>೧೬ನೇ ಜೂನ್ ೧೯೪೯ |
| ೧೯೦ | ೧೬೬ | ೨ನೇ ಜೂನ್ ೧೯೪೯ |
| ೧೯೧ | ೧೬೭ | ೨ನೇ ಜೂನ್ ೧೯೪೯ |
| ೧೯೨ | ೧೬೭ಎ | ೧೪ನೇ ಜೂನ್ ೧೯೪೯ |
| ೧೯೩ | ೧೬೮ | ೩ನೇ ಜೂನ್ ೧೯೪೯ |
| ೧೯೪ | ೧೬೯ | ೩ನೇ ಜೂನ್ ೧೯೪೯<br>೧೬ನೇ ಅಕ್ಟೋಬರ್ ೧೯೪೯ |
| ೧೯೫ | ೧೭೦ | ೩ನೇ ಜೂನ್ ೧೯೪೯ |

| ೧ | ೨ | ೩ |
|---|---|---|
| ೧೯೬ | ೧೭೧ | ೩/೪ನೇ ಜೂನ್ ೧೯೪೯ |
| | | ೧೪ನೇ ಜೂನ್ ೧೯೪೯ |
| ೧೯೭ | ೧೭೨ | ೩೦ನೇ ಜುಲೈ ೧೯೪೯ |
| | | ೧ನೇ ಆಗಸ್ಟ್ ೧೯೪೯ |
| ೧೯೮ | ೧೭೩ | ೧೦ನೇ ಜೂನ್ ೧೯೪೯ |
| ೧೯೯ | ೧೭೪ | ೧೦ನೇ ಜೂನ್ ೧೯೪೯ |
| ೨೦೦ | ೧೭೫ | ೧೪ನೇ ಜೂನ್ ೧೯೪೯ |
| | | ೩೧ನೇ ಜುಲೈ ೧೯೪೯ |
| | | ೧ನೇ ಆಗಸ್ಟ್ ೧೯೪೯ |
| | | ೧೭ನೇ ಅಕ್ಟೋಬರ್ ೧೯೪೯ |
| ೨೦೧ | ೧೭೬ | ೧ನೇ ಆಗಸ್ಟ್ ೧೯೪೯ |
| ೨೦೨ | ೧೭೭ | ೧೦ನೇ ಜೂನ್ ೧೯೪೯ |
| ೨೦೩ | ೧೭೮ | ೧೦ನೇ ಜೂನ್ ೧೯೪೯ |
| ೨೦೪ | ೧೭೯ | ೧೦ನೇ ಜೂನ್ ೧೯೪೯ |
| ೨೦೫ | ೧೮೦ | ೧೦ನೇ ಜೂನ್ ೧೯೪೯ |
| ೨೦೬ | ೧೮೧ | ೧೦ನೇ ಜೂನ್ ೧೯೪೯ |
| ೨೦೭ | ೧೮೨ | ೧೦ನೇ ಜೂನ್ ೧೯೪೯ |
| ೨೦೮ | ೧೮೩ | ೧೦ನೇ ಜೂನ್ ೧೯೪೯ |
| ೨೦೯ | ೧೮೩ಎ | ೧೦ನೇ ಜೂನ್ ೧೯೪೯ |
| ೨೧೦ | ೧೮೪ | ೧೦ನೇ ಜೂನ್ ೧೯೪೯ |
| | | ೧೭ನೇ ಸೆಪ್ಟೆಂಬರ್ ೧೯೪೯ |
| ೨೧೧ | ೧೮೫ | ೧೦ನೇ ಜೂನ್ ೧೯೪೯ |
| ೨೧೨ | ೧೮೬ | ೧೦ನೇ ಜೂನ್ ೧೯೪೯ |
| ೨೧೩ | ೧೮೭ | ೧೪ನೇ ಜೂನ್ ೧೯೪೯ |
| ೨೧೪ | ೧೯೧ | ೬ನೇ ಜೂನ್ ೧೯೪೯ |
| ೨೧೫ | ೧೯೨ | ೬ನೇ ಜೂನ್ ೧೯೪೯ |
| ೨೧೬ | ೧೯೨ಎ | ೬ನೇ ಜೂನ್ ೧೯೪೯ |
| ೨೧೭ | ೧೯೩ | ೬/೭ನೇ ಜೂನ್ ೧೯೪೯ |
| ೨೧೮ | ೧೯೪ | ೭ನೇ ಜೂನ್ ೧೯೪೯ |
| ೨೧೯ | ೧೯೫ | ೭ನೇ ಜೂನ್ ೧೯೪೯ |
| ೨೨೦ | ೧೯೬ | ೭ನೇ ಜೂನ್ ೧೯೪೯ |

| ೧ | ೨ | ೩ |
|---|---|---|
| ೨೨೧ | ೧೯೭ | ೭ನೇ ಜೂನ್ ೧೯೪೯ |
| ೨೨೨ | ೧೯೮ | ೧ನೇ ಆಗಸ್ಟ್ ೧೯೪೯ |
| ೨೨೩ | ೧೯೯ | ೭ನೇ ಜೂನ್ ೧೯೪೯ |
| ೨೨೪ | ೨೦೦ | ೭ನೇ ಜೂನ್ ೧೯೪೯ |
| ೨೨೫ | ೨೦೧ | ೭ನೇ ಜೂನ್ ೧೯೪೯ |
| ೨೨೬ | ೨೦೨ | ೭ನೇ ಜೂನ್ ೧೯೪೯ |
| | | ೯ನೇ ಜೂನ್ ೧೯೪೯ |
| ೨೨೭ | ೨೦೩ | ೭ನೇ ಜೂನ್ ೧೯೪೯ |
| | | ೧೪ನೇ ಜೂನ್ ೧೯೪೯ |
| | | ೧೫ನೇ ಜೂನ್ ೧೯೪೯ |
| | | ೧೬ನೇ ಅಕ್ಟೋಬರ್ ೧೯೪೯ |
| ೨೨೮ | ೨೦೪ | ೭/೮ನೇ ಜೂನ್ ೧೯೪೯ |
| ೨೨೯ | ೨೦೫ | ೮ನೇ ಜೂನ್ ೧೯೪೯ |
| ೨೩೦ | ೨೦೭ | ೧೪ನೇ ಜೂನ್ ೧೯೪೯ |
| ೨೩೧ | ೨೦೮ | ೧೪ನೇ ಜೂನ್ ೧೯೪೯ |
| ೨೩೨ | ೨೦೯ | ೧೪ನೇ ಜೂನ್ ೧೯೪೯ |
| ೨೩೩ | ೨೦೯ಎ | ೧೯ನೇ ಜೂನ್ ೧೯೪೯ |
| | | ೧೬ನೇ ಸೆಪ್ಟೆಂಬರ್ ೧೯೪೯ |
| ೨೩೪ | ೨೦೯ಬಿ | ೧೬ನೇ ಸೆಪ್ಟೆಂಬರ್ ೧೯೪೯ |
| ೨೩೫ | ೨೦೯ಸಿ | ೧೬ನೇ ಸೆಪ್ಟೆಂಬರ್ ೧೯೪೯ |
| ೨೩೬ | ೨೦೯ಡಿ | ೧೬ನೇ ಸೆಪ್ಟೆಂಬರ್ ೧೯೪೯ |
| ೨೩೭ | ೨೦೯ಇ | ೧೬ನೇ ಸೆಪ್ಟೆಂಬರ್ ೧೯೪೯ |
| ೨೩೮ | ೨೧೧ಎ | ೧೨/೧೩ನೇ ಅಕ್ಟೋಬರ್ ೧೯೪೯ |
| ೨೩೯ | ೨೧೨ | ೧ನೇ ಆಗಸ್ಟ್ ೧೯೪೯ |
| ೨೪೦ | ೨೧೩ | ೧ನೇ ಆಗಸ್ಟ್ ೧೯೪೯ |
| | | ೨ನೇ ಆಗಸ್ಟ್ ೧೯೪೯ |
| ೨೪೧ | ೨೧೩ಎ | ೨ನೇ ಆಗಸ್ಟ್ ೧೯೪೯ |
| | | ೧೬ನೇ ಆಕ್ಟೋಬರ್ ೧೯೪೯ |
| ೨೪೨ | ೨೧೪ | ೨ನೇ ಆಗಸ್ಟ್ ೧೯೪೯ |
| ೨೪೩ | ೨೧೫ | ೧೬ನೇ ಸೆಪ್ಟೆಂಬರ್ ೧೯೪೯ |
| ೨೪೪ | ೨೧೫ಬಿ | ೧೯ನೇ ಆಗಸ್ಟ್ ೧೯೪೯ |

| ೧ | ೨ | ೩ |
|---|---|---|
| ೨೪೫ | ೨೧೬ | ೧೩ನೇ ಜೂನ್ ೧೯೪೯ |
| ೨೪೬ | ೨೧೭ | ೧೩ನೇ ಜೂನ್ ೧೯೪೯ |
| ೨೪೭ | ೨೧೯ | ೧೩ನೇ ಜೂನ್ ೧೯೪೯ |
| ೨೪೮ | ೨೨೩ | ೧೩ನೇ ಜೂನ್ ೧೯೪೯ |
| ೨೪೯ | ೨೨೬ | ೧೩ನೇ ಜೂನ್ ೧೯೪೯ |
| ೨೫೦ | ೨೨೭ | ೧೩ನೇ ಜೂನ್ ೧೯೪೯ |
| ೨೫೧ | ೨೨೮ | ೧೩ನೇ ಜೂನ್ ೧೯೪೯ |
| ೨೫೨ | ೨೨೯ | ೧೩ನೇ ಜೂನ್ ೧೯೪೯ |
| ೨೫೩ | ೨೩೦ | ೧೩ನೇ ಜೂನ್ ೧೯೪೯<br>೧೪ನೇ ಅಕ್ಟೋಬರ್ ೧೯೪೯ |
| ೨೫೪ | ೨೩೧ | ೧೩ನೇ ಜೂನ್ ೧೯೪೯ |
| ೨೫೫ | ೨೩೨ | ೧೩ನೇ ಜೂನ್ ೧೯೪೯ |
| ೨೫೬ | ೨೩೩ | ೧೩ನೇ ಜೂನ್ ೧೯೪೯ |
| ೨೫೭ | ೨೩೪, ೨೩೪ಎ | ೧೩ನೇ ಜೂನ್ ೧೯೪೯<br>೯ನೇ ಸೆಪ್ಟೆಂಬರ್ ೧೯೪೯ |
| ೨೫೮ | ೨೩೫ | ೧೩ನೇ ಜೂನ್ ೧೯೪೯<br>೧೩ನೇ ಅಕ್ಟೋಬರ್ ೧೯೪೯ |
| ೨೫೯ | ೨೩೫ಎ | ೧೩ನೇ ಜೂನ್ ೧೯೪೯ |
| ೨೬೦ | ೨೩೬ | ೧೩ನೇ ಜೂನ್ ೧೯೪೯<br>೧೩ನೇ ಅಕ್ಟೋಬರ್ ೧೯೪೯ |
| ೨೬೧ | ೨೩೮ | ೧೩ನೇ ಜೂನ್ ೧೯೪೯ |
| ೨೬೨ | ೨೪೨ಎ | ೯ನೇ ಸೆಪ್ಟೆಂಬರ್ ೧೯೪೯ |
| ೨೬೩ | ೨೪೬ | ೧೩ನೇ ಜೂನ್ ೧೯೪೯ |
| ೨೬೪ | ೨೪೭ | ೧೩ನೇ ಜೂನ್ ೧೯೪೯<br>೪ನೇ ಆಗಸ್ಟ್ ೧೯೪೯ |
| ೨೬೫ | ೨೪೮ | ೪ನೇ ಆಗಸ್ಟ್ ೧೯೪೯ |
| ೨೬೬ | ೨೪೮ಎ | ೪ನೇ ಆಗಸ್ಟ್ ೧೯೪೯<br>೭ನೇ ಸೆಪ್ಟೆಂಬರ್ ೧೯೪೯ |
| ೨೬೭ | ೨೪೮ಬಿ | ೪ನೇ ಆಗಸ್ಟ್ ೧೯೪೯<br>೧೩ನೇ ಅಕ್ಟೋಬರ್ ೧೯೪೯ |
| ೨೬೮ | ೨೪೯ | ೪/೫ನೇ ಆಗಸ್ಟ್ ೧೯೪೯ |

| ೧ | ೨ | ೩ |
|---|---|---|
| ೨೬೯ | ೨೫೦ | ೫ನೇ ಆಗಸ್ಟ್ ೧೯೪೯ |
| ೨೭೦ | ೨೫೧ | ೫ನೇ ಆಗಸ್ಟ್ ೧೯೪೯ |
| ೨೭೧ | ೨೫೨ | ೫ನೇ ಆಗಸ್ಟ್ ೧೯೪೯ |
| ೨೭೨ | ೨೫೩ | ೫ನೇ ಆಗಸ್ಟ್ ೧೯೪೯ |
| | | ೮ನೇ ಆಗಸ್ಟ್ ೧೯೪೯ |
| ೨೭೩ | ೨೫೪ | ೮ನೇ ಆಗಸ್ಟ್ ೧೯೪೯ |
| ೨೭೪ | ೨೫೪ಎ | ೮ನೇ ಆಗಸ್ಟ್ ೧೯೪೯ |
| ೨೭೫ | ೨೫೫ | ೮/೯ನೇ ಆಗಸ್ಟ್ ೧೯೪೯ |
| ೨೭೬ | ೨೫೬ | ೯ನೇ ಆಗಸ್ಟ್ ೧೯೪೯ |
| ೨೭೭ | ೨೫೭ | ೯ನೇ ಆಗಸ್ಟ್ ೧೯೪೯ |
| ೨೭೮ | ೨೫೮ | ೧೩ನೇ ಅಕ್ಟೋಬರ್ ೧೯೪೯ |
| ೨೭೯ | ೨೫೯ | ೯ನೇ ಆಗಸ್ಟ್ ೧೯೪೯ |
| ೨೮೦ | ೨೬೦ | ೯/೧೦ನೇ ಆಗಸ್ಟ್ ೧೯೪೯ |
| ೨೮೧ | ೨೬೧ | ೧೦ನೇ ಆಗಸ್ಟ್ ೧೯೪೯ |
| ೨೮೨ | ೨೬೨ | ೧೦ನೇ ಆಗಸ್ಟ್ ೧೯೪೯ |
| ೨೮೩ | ೨೬೩ | ೧೦ನೇ ಆಗಸ್ಟ್ ೧೯೪೯ |
| | | ೯ನೇ ಸೆಪ್ಟೆಂಬರ್ ೧೯೪೯ |
| | | ೧೩ನೇ ಅಕ್ಟೋಬರ್ ೧೯೪೯ |
| ೨೮೪ | ೨೬೩ಎ | ೯ನೇ ಸೆಪ್ಟೆಂಬರ್ ೧೯೪೯ |
| ೨೮೫ | ೨೬೪ | ೯ನೇ ಸೆಪ್ಟೆಂಬರ್ ೧೯೪೯ |
| ೨೮೬ | ೨೬೪ಎ | ೧೬ನೇ ಅಕ್ಟೋಬರ್ ೧೯೪೯ |
| ೨೮೭ | ೨೬೫ | ೯ನೇ ಸೆಪ್ಟೆಂಬರ್ ೧೯೪೯ |
| ೨೮೮ | ೨೬೫ಎ | ೯ನೇ ಸೆಪ್ಟೆಂಬರ್ ೧೯೪೯ |
| ೨೮೯ | ೨೬೬ | ೯ನೇ ಸೆಪ್ಟೆಂಬರ್ ೧೯೪೯ |
| ೨೯೦ | ೨೬೭ | ೧೦ನೇ ಆಗಸ್ಟ್ ೧೯೪೯ |
| ೨೯೧ | ೨೬೭ಎ | ೧೩ನೇ ಅಕ್ಟೋಬರ್ ೧೯೪೯ |
| ೨೯೨ | ೨೬೮ | ೧೦ನೇ ಆಗಸ್ಟ್ ೧೯೪೯ |
| ೨೯೩ | ೨೬೯ | ೧೦ನೇ ಆಗಸ್ಟ್ ೧೯೪೯ |
| ೨೯೪ | ೨೭೦ | ೧೫ನೇ ಜೂನ್ ೧೯೪೯ |
| | | ೧೩ನೇ ಅಕ್ಟೋಬರ್ ೧೯೪೯ |
| ೨೯೫ | ೨೭೦ಎ | ೧೩ನೇ ಅಕ್ಟೋಬರ್ ೧೯೪೯ |

| ೧ | ೨ | ೩ |
|---|---|---|
| ೨೯೬ | ೨೭೧ | ೧೫ನೇ ಜೂನ್ ೧೯೪೯ |
| ೨೯೭ | ೨೭೧ಎ | ೧೫ನೇ ಜೂನ್ ೧೯೪೯ |
| ೨೯೮ | ೨೭೨ | ೧೫ನೇ ಜೂನ್ ೧೯೪೯ |
| ೨೯೯ | ೨೭೩ | ೧೫ನೇ ಜೂನ್ ೧೯೪೯ |
| ೩೦೦ | ೨೭೪ | ೧೫ನೇ ಜೂನ್ ೧೯೪೯ |
| ೩೦೧ | ೨೭೪ಎ | ೧೫ನೇ ಜೂನ್ ೧೯೪೯<br>೮ನೇ ಸೆಪ್ಟೆಂಬರ್ ೧೯೪೯ |
| ೩೦೨ | ೨೭೪ಬಿ | ೮ನೇ ಸೆಪ್ಟೆಂಬರ್ ೧೯೪೯ |
| ೩೦೩ | ೨೭೪ಸಿ | ೮ನೇ ಸೆಪ್ಟೆಂಬರ್ ೧೯೪೯ |
| ೩೦೪ | ೨೭೪ಡಿ | ೮ನೇ ಸೆಪ್ಟೆಂಬರ್ ೧೯೪೯ |
| ೩೦೫ | ೨೭೪ಡಿಡಿಡಿ | ೮ನೇ ಸೆಪ್ಟೆಂಬರ್ ೧೯೪೯<br>೧೩ನೇ ಅಕ್ಟೋಬರ್ ೧೯೪೯ |
| ೩೦೬ | ೨೭೪ಡಿಡಿ | ೮ನೇ ಸೆಪ್ಟೆಂಬರ್ ೧೯೪೯<br>೧೩ನೇ ಅಕ್ಟೋಬರ್ ೧೯೪೯<br>೧೬ನೇ ಅಕ್ಟೋಬರ್ ೧೯೪೯ |
| ೩೦೭ | ೨೭೪ಇ | ೮ನೇ ಸೆಪ್ಟೆಂಬರ್ ೧೯೪೯ |
| ೩೦೮ | ೨೮೧ | ೭ನೇ ಸೆಪ್ಟೆಂಬರ್ ೧೯೪೯ |
| ೩೦೯ | ೨೮೨ | ೭ನೇ ಸೆಪ್ಟೆಂಬರ್ ೧೯೪೯ |
| ೩೧೦ | ೨೮೨ಎ | ೭ನೇ ಸೆಪ್ಟೆಂಬರ್ ೧೯೪೯ |
| ೩೧೧ | ೨೮೨ಬಿ | ೮ನೇ ಸೆಪ್ಟೆಂಬರ್ ೧೯೪೯ |
| ೩೧೨ | ೨೮೨ಸಿ | ೮ನೇ ಸೆಪ್ಟೆಂಬರ್ ೧೯೪೯ |
| ೩೧೩ | ೨೮೩ | ೮ನೇ ಸೆಪ್ಟೆಂಬರ್ ೧೯೪೯ |
| ೩೧೪ | ೨೮೩ಎ | ೧೦ನೇ ಅಕ್ಟೋಬರ್ ೧೯೪೯ |
| ೩೧೫ | ೨೮೪ | ೨೨ನೇ ಆಗಸ್ಟ್ ೧೯೪೯ |
| ೩೧೬ | ೨೮೫ | ೨೨ನೇ ಆಗಸ್ಟ್ ೧೯೪೯ |
| ೩೧೭ | ೨೮೫ಎ | ೨೨ನೇ ಆಗಸ್ಟ್ ೧೯೪೯ |
| ೩೧೮ | ೨೮೫ಬಿ | ೨೨ನೇ ಆಗಸ್ಟ್ ೧೯೪೯ |
| ೩೧೯ | ೨೮೫ಸಿ | ೨೨ನೇ ಆಗಸ್ಟ್ ೧೯೪೯ |
| ೩೨೦ | ೨೮೬ | ೨೩ನೇ ಆಗಸ್ಟ್ ೧೯೪೯ |
| ೩೨೧ | ೨೮೭ | ೨೩ನೇ ಆಗಸ್ಟ್ ೧೯೪೯ |
| ೩೨೨ | ೨೮೮ | ೨೩ನೇ ಆಗಸ್ಟ್ ೧೯೪೯ |

| ೧ | ೨ | ೩ |
|---|---|---|
| ೩೨೩ | ೨೮೮ಎ | ೨೩ನೇ ಆಗಸ್ಟ್ ೧೯೪೯ |
| ೩೨೪ | ೨೮೯ | ೧೫ನೇ ಜೂನ್ ೧೯೪೯ |
| ೩೨೫ | ೨೮೯ಎ | ೧೬ನೇ ಜೂನ್ ೧೯೪೯ |
| ೩೨೬ | ೨೮೯ಬಿ | ೧೬ನೇ ಜೂನ್ ೧೯೪೯ |
| ೩೨೭ | ೨೯೦ | ೧೬ನೇ ಜೂನ್ ೧೯೪೯ |
| ೩೨೮ | ೨೯೧ | ೧೬ನೇ ಜೂನ್ ೧೯೪೯ |
| ೩೨೯ | ೨೯೧ಎ | ೧೬ನೇ ಜೂನ್ ೧೯೪೯ |
| ೩೩೦ | ೨೯೨ | ೨೩ನೇ/೨೪ನೇ ಆಗಸ್ಟ್ ೧೯೪೯ |
| ೩೩೧ | ೨೯೩ | ೨೪ನೇ ಆಗಸ್ಟ್ ೧೯೪೯ |
| ೩೩೨ | ೨೯೪ | ೨೪ನೇ ಆಗಸ್ಟ್ ೧೯೪೯ |
| ೩೩೩ | ೨೯೫ | ೨೪ನೇ ಆಗಸ್ಟ್ ೧೯೪೯ |
| ೩೩೪ | ೨೯೫ಎ | ೨೪/೨೫ನೇ ಆಗಸ್ಟ್ ೧೯೪೯ |
| ೩೩೫ | ೨೯೬ | ೧೪ನೇ ಅಕ್ಟೋಬರ್ ೧೯೪೯<br>೨೬ನೇ ಆಗಸ್ಟ್೧೯೪೯ |
| ೩೩೬ | ೨೯೭ | ೧೬ನೇ ಜೂನ್ ೧೯೪೯ |
| ೩೩೭ | ೨೯೮ | ೧೬ನೇ ಜೂನ್ ೧೯೪೯ |
| ೩೩೮ | ೨೯೯ | ೨೩ನೇ ಆಗಸ್ಟ್ ೧೯೪೯<br>೧೪ನೇ ಅಕ್ಟೋಬರ್ ೧೯೪೯ |
| ೩೩೯ | ೩೦೦ | ೧೬ನೇ ಜೂನ್ ೧೯೪೯ |
| ೩೪೦ | ೩೦೧ | ೧೬ನೇ ಜೂನ್ ೧೯೪೯ |
| ೩೪೧ | ೩೦೦ಎ | ೧೭ನೇ ಸೆಪ್ಟೆಂಬರ್ ೧೯೪೯ |
| ೩೪೨ | ೩೦೦ಬಿ | ೧೭ನೇ ಸೆಪ್ಟೆಂಬರ್ ೧೯೪೯ |
| ೩೪೩ | ೩೦೧ಎ | ೧೨/೧೩/೧೪ನೇ ಸೆಪ್ಟೆಂಬರ್ ೧೯೪೯ |
| ೩೪೪ | ೩೦೧ಬಿ | ೧೨/೧೩/೧೪ನೇ ಸೆಪ್ಟೆಂಬರ್ ೧೯೪೯ |
| ೩೪೫ | ೩೦೧ಸಿ | ೧೨/೧೩/೧೪ನೇ ಸೆಪ್ಟೆಂಬರ್ ೧೯೪೯ |
| ೩೪೬ | ೩೦೧ಡಿ | ೧೨/೧೩/೧೪ನೇ ಸೆಪ್ಟೆಂಬರ್ ೧೯೪೯ |
| ೩೪೭ | ೩೦೧ಇ | ೧೨/೧೩/೧೪ನೇ ಸೆಪ್ಟೆಂಬರ್ ೧೯೪೯ |
| ೩೪೮ | ೩೦೧ಎಫ್ | ೧೨/೧೩/೧೪ನೇ ಸೆಪ್ಟೆಂಬರ್ ೧೯೪೯ |
| ೩೪೯ | ೩೦೧ಜಿ | ೧೨/೧೩/೧೪ನೇ ಸೆಪ್ಟೆಂಬರ್ ೧೯೪೯ |
| ೩೫೦ | ೩೦೧ಹೆಚ್ | ೧೨/೧೩/೧೪ನೇ ಸೆಪ್ಟೆಂಬರ್ ೧೯೪೯ |
| ೩೫೧ | ೩೦೧ಐ | ೧೨/೧೩/೧೪ನೇ ಸೆಪ್ಟೆಂಬರ್ ೧೯೪೯ |

| ೧ | ೨ | ೩ |
|---|---|---|
| ೩೫೨ | ೨೭೫ | ೨ನೇ ಆಗಸ್ಟ್ ೧೯೪೯ |
| ೩೫೩ | ೨೭೬ | ೩ನೇ ಆಗಸ್ಟ್ ೧೯೪೯ |
| ೩೫೪ | ೨೭೭ | ೧೯/೨೦ನೇ ಆಗಸ್ಟ್ ೧೯೪೯ |
| ೩೫೫ | ೨೭೭ಎ | ೩/೪ನೇ ಆಗಸ್ಟ್ ೧೯೪೯ |
| ೩೫೬ | ೨೭೮ | ೩/೪ನೇ ಆಗಸ್ಟ್ ೧೯೪೯ |
| ೩೫೭ | ೨೭೮ಎ | ೩/೪ನೇ ಆಗಸ್ಟ್ ೧೯೪೯ |
| ೩೫೮ | ೨೭೯ | ೪ನೇ ಆಗಸ್ಟ್ ೧೯೪೯ |
| ೩೫೯ | ೨೮೦ | ೪ನೇ ಆಗಸ್ಟ್ ೧೯೪೯ |
| | | ೨೦ನೇ ಆಗಸ್ಟ್ ೧೯೪೯ |
| ೩೬೦ | ೨೮೦ಎ | ೧೬ನೇ ಅಕ್ಟೋಬರ್ ೧೯೪೯ |
| ೨೬೧ | ೩೦೨ | ೮ನೇ ಸೆಪ್ಟೆಂಬರ್ ೧೯೪೯ |
| ೩೬೨ | ೩೦೨ಎ | ೧೩ನೇ ಅಕ್ಟೋಬರ್ ೧೯೪೯ |
| ೩೬೩ | ೩೦೨ಎಎ | ೧೬ನೇ ಅಕ್ಟೋಬರ್ ೧೯೪೯ |
| ೩೬೪ | ೩೦೨ಎಎಎ | ೧೭ನೇ ಅಕ್ಟೋಬರ್ ೧೯೪೯ |
| ೩೬೫ (ಹೊಸದು) | | |
| ೩೬೬ | ೩೦೩(೧) | ೧೬/೧೭ನೇ ಸೆಪ್ಟೆಂಬರ್ ೧೯೪೯ |
| | | ೧೪ನೇ ಅಕ್ಟೋಬರ್ ೧೯೪೯ |
| ೩೬೭ | ೩೦೨ (೨ ಮತ್ತು ೩) | ೧೬/೧೭ನೇ ಸೆಪ್ಟೆಂಬರ್ ೧೯೪೯ |
| | | ೧೪ನೇ ಅಕ್ಟೋಬರ್ ೧೯೪೯ |
| ೩೬೮ | ೩೦೪ | ೧೭ನೇ ಸೆಪ್ಟೆಂಬರ್ ೧೯೪೯ |
| ೩೬೯ | ೩೦೬ | ೭ನೇ ಅಕ್ಟೋಬರ್ ೧೯೪೯ |
| ೩೭೦ | ೩೦೬ಎ | ೧೩ನೇ ಅಕ್ಟೋಬರ್ ೧೯೪೯ |
| | | ೧೭ನೇ ಅಕ್ಟೋಬರ್ ೧೯೪೯ |
| ೩೭೧ | ೩೦೬ಬಿ | ೧೩ನೇ ಅಕ್ಟೋಬರ್ ೧೯೪೯ |
| ೩೭೨ | ೩೦೭ | ೧೦ನೇ ಅಕ್ಟೋಬರ್ ೧೯೪೯ |
| ೨೭೩ (ಹೊಸದು) | | |
| ೩೭೪ | ೩೦೮ | ೧೦ನೇ ಅಕ್ಟೋಬರ್ ೧೯೪೯ |
| ೩೭೫ | ೩೦೯ | ೭ನೇ ಅಕ್ಟೋಬರ್ ೧೯೪೯ |
| ೩೭೬ | ೩೧೦ | ೧೦ನೇ ಅಕ್ಟೋಬರ್ ೧೯೪೯ |
| ೩೭೭ | ೩೧೦ಎ | ೭ನೇ ಅಕ್ಟೋಬರ್ ೧೯೪೯ |
| ೩೭೮ | ೩೧೦ಬಿ | ೭ನೇ ಅಕ್ಟೋಬರ್ ೧೯೪೯ |

| ೧ | ೨ | ೩ |
|---|---|---|
| ೩೭೯ | ೩೧೧ | ೧೦/೧೧ನೇ ಅಕ್ಟೋಬರ್ ೧೯೪೯ |
| ೩೮೦ | ೩೧೧ಎ | ೭ನೇ ಅಕ್ಟೋಬರ್ ೧೯೪೯ |
| ೩೮೧ | ೩೧೧ಬಿ | ೭ನೇ ಅಕ್ಟೋಬರ್ ೧೯೪೯ |
| ೩೮೨ | ೩೧೨ | ೭ನೇ ಅಕ್ಟೋಬರ್ ೧೯೪೯ |
| ೩೮೩ | ೩೧೨ಎ | ೭ನೇ ಅಕ್ಟೋಬರ್ ೧೯೪೯ |
| ೩೮೪ | ೩೧೨ಬಿ | ೭ನೇ ಅಕ್ಟೋಬರ್ ೧೯೪೯ |
| ೩೮೫ | ೩೧೨ಸಿ | ೭ನೇ ಅಕ್ಟೋಬರ್ ೧೯೪೯ |
| ೩೮೬ | ೩೧೨ಡಿ | ೭ನೇ ಅಕ್ಟೋಬರ್ ೧೯೪೯ |
| ೩೮೭ | ೩೧೨ಇ | ೭ನೇ ಅಕ್ಟೋಬರ್ ೧೯೪೯ |
| ೩೮೮ | ೩೧೨ಎಫ್ | ೪ನೇ ಅಕ್ಟೋಬರ್ ೧೯೪೯ |
| ೩೮೯ | ೩೧೨ಜಿ | ೭ನೇ ಅಕ್ಟೋಬರ್ ೧೯೪೯ |
| | | ೧೧ನೇ ಅಕ್ಟೋಬರ್ ೧೯೪೯ |
| ೩೯೦ | ೩೧೨ಹೆಚ್ | ೭ನೇ ಅಕ್ಟೋಬರ್ ೧೯೪೯ |
| ೩೯೧ (ಹೊಸದು) | | |
| ೩೯೨ | ೩೧೩ | ೭ನೇ ಅಕ್ಟೋಬರ್ ೧೯೪೯ |
| ೩೯೩ | ೩೧೩ಎ | ೧೭ನೇ ಅಕ್ಟೋಬರ್ ೧೯೪೯ |
| ೩೯೪ | ೩೧೪ | ೧೭ನೇ ಅಕ್ಟೋಬರ್ ೧೯೪೯ |
| ೩೯೫ | ೩೧೫ | ೧೭ನೇ ಅಕ್ಟೋಬರ್ ೧೯೪೯ |

| | ಅನುಸೂಚಿ | ದಿನಾಂಕ |
|---|---|---|
| ೧ | | ೧೪/೧೫ನೇ ಅಕ್ಟೋಬರ್ ೧೯೪೯ |
| ೨ | | ೧೧/೧೨ನೇ ಅಕ್ಟೋಬರ್ ೧೯೪೯ |
| ೩ | | ೨೬ನೇ ಆಗಸ್ಟ್ ೧೯೪೯ |
| | | ೧೬ನೇ ಅಕ್ಟೋಬರ್ ೧೯೪೯ |
| ೪ | (ಪರಿಶಿಷ್ಟ III–ಎ) | ೧೭ನೇ ಅಕ್ಟೋಬರ್ ೧೯೪೯ |
| ೫ | | ೫ನೇ ಸೆಪ್ಟೆಂಬರ್ ೧೯೪೯ |
| | (ಭಾಗ ಡಿ) | ೫ನೇ ಸೆಪ್ಟೆಂಬರ್ ೧೯೪೯ |
| ೬ | | ೫ನೇ ಸೆಪ್ಟೆಂಬರ್ |
| | | ೬ನೇ ಸೆಪ್ಟೆಂಬರ್ |
| | | ೭ನೇ ಸೆಪ್ಟೆಂಬರ್ ೧೯೪೯ |
| | ಭಾಗ ೧, | ೫ನೇ ಸೆಪ್ಟೆಂಬರ್ ೧೯೪೯ |
| | ಭಾಗಗಳು ೨–೧೫, | ೬ನೇ ಸೆಪ್ಟೆಂಬರ್ ೧೯೪೯ |
| | ಭಾಗಗಳು ೧೬–೨೦ | ೭ನೇ ಸೆಪ್ಟೆಂಬರ್ ೧೯೪೯ |
| ೭ | | ೨೬ನೇ ಆಗಸ್ಟ್ ೧೯೪೯ |
| | | ೨೯ನೇ ಆಗಸ್ಟ್ ೧೯೪೯ |
| | | ೩೦ನೇ ಆಗಸ್ಟ್ ೧೯೪೯ |
| | | ೩೧ನೇ ಆಗಸ್ಟ್ ೧೯೪೯ |
| | | ೧ನೇ ಸೆಪ್ಟೆಂಬರ್ ೧೯೪೯ |
| | | ೨ನೇ ಸೆಪ್ಟೆಂಬರ್ ೧೯೪೯ |
| | | ೩ನೇ ಸೆಪ್ಟೆಂಬರ್ ೧೯೪೯ |
| | | ೯ನೇ ಸೆಪ್ಟೆಂಬರ್ ೧೯೪೯ |
| | | ೧೩ನೇ ಅಕ್ಟೋಬರ್ ೧೯೪೯ |
| | | ೧೭ನೇ ಅಕ್ಟೋಬರ್ ೧೯೪೯ |
| ೮ | (ಪರಿಶಿಷ್ಟ VII–ಎ) | ೧೪ನೇ ಸೆಪ್ಟೆಂಬರ್ ೧೯೪೯ |

# ಇತಿಹಾಸದ ಪುನರಾವೃತ್ತಿಯಾಗುವುದೇ?

೨೬ ಜನವರಿ ೧೯೫೦ರಂದು ಭಾರತ ಒಂದು ಸ್ವತಂತ್ರ ದೇಶವಾಗಲಿದೆ (ಹರ್ಷಧ್ವನಿ). ದೇಶದ ಸ್ವಾತಂತ್ರ್ಯದ ಗತಿ ಏನಾಗುವುದು? ಈ ದೇಶ ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಹೋಗುವುದೇ ಇಲ್ಲವೆ ಅದನ್ನು ಪುನಃ ಕಳೆದುಕೊಳ್ಳುವುದೇ? ಇದು ನನ್ನ ಮನಸ್ಸಿನಲ್ಲಿ ಬರುವ ಮೊದಲನೆಯ ವಿಚಾರ. ಇದರರ್ಥ ಭಾರತ ಯಾವಾಗಲೂ ಸ್ವತಂತ್ರ ದೇಶವಾಗಿರಲಿಲ್ಲ ಎಂದಲ್ಲ. ಸತ್ಯ ಸಂಗತಿ ಎಂದರೆ ಅದು ಹೊಂದಿದ್ದ ತನ್ನ ಸ್ವಾತಂತ್ರ್ಯವನ್ನು ಒಮ್ಮೆ ಕಳೆದುಕೊಂಡಿತ್ತು. ಅದು ಎರಡನೆಯ ಬಾರಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದೇ? ಈ ವಿಚಾರ ನಿಜವಾಗಿಯೂ ನನ್ನಲ್ಲಿ ಭಾರತದ ಭವಿಷ್ಯವನ್ನು ಕುರಿತು ತಳಮಳ ಉಂಟುಮಾಡಿದೆ. ನನ್ನ ಮನಸ್ಸಿನಲ್ಲಿ ಅತ್ಯಂತ ಕಾತರವನ್ನುಂಟುಮಾಡಿರುವ ಸಂಗತಿ ಎಂದರೆ ಭಾರತ ಒಮ್ಮೆ ಸ್ವಾತಂತ್ರ್ಯವನ್ನು ಕಳೆದುಕೊಂಡಿತ್ತೆಂಬುದು ಮಾತ್ರವಲ್ಲ, ಆದರೆ ಅದು ತನ್ನವರೇ ಆದ ಕೆಲವರು ಜನದ್ರೋಹ ಮತ್ತು ವಿಶ್ವಾಸಘಾತದಿಂದ ಕಳೆದುಕೊಂಡಿತು ಎಂಬ ಅಂಶ...

ಇತಿಹಾಸ ಪುನರಾವರ್ತಿಯಾಗುವುದೇ? ಈ ಸಂಗತಿ ನನ್ನಲ್ಲಿ ಕಾತರತೆಯನ್ನುಂಟುಮಾಡಿದೆ. ನಮ್ಮ ಹಳೆಯ ಶತ್ರುಗಳಾದ ಜಾತಿ ಮತ್ತು ಮತಗಳೂ ಅಲ್ಲದೆ, ನಾವು ಇನ್ನು ಮುಂದೆ ವಿವಿಧ ಹಾಗೂ ವಿಭಿನ್ನ ರಾಜಕೀಯ ನಂಬುಗೆಗಳಿಂದ ಕೂಡಿದ ರಾಜಕೀಯ ಪಕ್ಷಗಳನ್ನು ಹೊಂದಲಿದ್ದೇವೆ. ಭಾರತವು ತನ್ನ ದೇಶಕ್ಕಿಂತ ಈ ವಿಭಿನ್ನ ಮತಗಳಿಗೆ ಪ್ರಾಶಸ್ತ್ಯ ಕೊಡುವುದೇ ಅಥವಾ ತನ್ನ ದೇಶಕ್ಕಿಂತ ಹೆಚ್ಚಾಗಿ ಈ ವಿಭಿನ್ನ ಮತಗಳಿಗೆ ಆದ್ಯತೆ ಕೊಡುವುದೇ? ನನಗೇನೂ ತಿಳಿಯದಾಗಿದೆ. ಆದರೆ ಒಂದು ಮಾತಂತೂ ನಿಜ. ಅದೇನೆಂದರೆ ರಾಜಕೀಯ ಪಕ್ಷಗಳು ದೇಶಕ್ಕಿಂತ ತಮ್ಮ ನಂಬಿಕೆಗಳಿಗೇ ಪ್ರಾಶಸ್ತ್ಯ ನೀಡಿದರೆ ನಮ್ಮ ಸ್ವಾತಂತ್ರ್ಯ ಎರಡನೆಯ ಬಾರಿ ಅಪಾಯಕ್ಕೊಳಗಾಗುತ್ತದೆ. ಬಹುಶಃ ಆಗ ನಮ್ಮ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವ ಅಪಾಯವಿದೆ. ಇಂತಹ ಗಂಡಾಂತರದಿಂದ ದೇಶವನ್ನು ರಕ್ಷಿಸಬೇಕು. ನಮ್ಮ ರಕ್ತದ ಕೊನೆಯ ಹನಿ ಇರುವವರೆಗೆ ಹೋರಾಡಿ ನಮ್ಮ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕೆಂದು ದೃಢ ಸಂಕಲ್ಪ ಮಾಡಬೇಕಾಗಿದೆ (ಹರ್ಷೋದ್ಗಾರ).

**–ಡಾ. ಅಂಬೇಡ್ಕರ್**
ನವೆಂಬರ್ ೨೫, ೧೯೪೯ರಂದು
ಸಂವಿಧಾನ ರಚನಾ ಸಭೆಯಲ್ಲಿ.

# ವಿಷಯಸೂಚಿ

## ಅ

ಅಂಬೇಡ್ಕರ್ ೧, ೨, ೩, ೪, ೫, ೬, ೭, ೯, ೧೦, ೧೧, ೧೨, ೧೩, ೧೪, ೧೫, ೧೬, ೧೭, ೧೮, ೧೯, ೨೦, ೨೧, ೨೪, ೨೬, ೨೭, ೨೮, ೨೯, ೩೦, ೩೧, ೩೨, ೩೩, ೩೭, ೩೮, ೩೯, ೪೦, ೪೧, ೪೨, ೪೩, ೪೪, ೪೫, ೪೬, ೪೭, ೪೮, ೫೦, ೫೧, ೫೪, ೫೫, ೫೬, ೫೭, ೫೮, ೫೯, ೬೦, ೬೨, ೬೪, ೬೫, ೬೬, ೬೯, ೭೩, ೭೫, ೭೬, ೭೭, ೭೮, ೭೯, ೮೦, ೮೧, ೮೨, ೮೩, ೮೪, ೮೫, ೮೭, ೮೯, ೯೦, ೯೨, ೯೩, ೯೪, ೯೫, ೯೬, ೯೭, ೯೮, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೧೦, ೧೧೧, ೧೧೪, ೧೧೫, ೧೧೯, ೧೨೦, ೧೨೧, ೧೨೨, ೧೨೩, ೧೨೪, ೧೨೫, ೧೨೭, ೧೨೮, ೧೨೯, ೧೩೦, ೧೩೧, ೧೩೨, ೧೩೩, ೧೩೪, ೧೩೬, ೧೩೮, ೧೩೯, ೧೪೦, ೧೪೧, ೧೪೨, ೧೪೭, ೧೪೮, ೧೪೯, ೧೫೦, ೧೫೧, ೧೫೩, ೧೫೪, ೧೫೫, ೧೫೬, ೧೫೮, ೧೫೯, ೧೬೧, ೧೬೨, ೧೬೩, ೧೬೪, ೧೬೫, ೧೬೭, ೧೬೮, ೧೬೯, ೧೭೦, ೧೭೧, ೧೭೨, ೧೭೩, ೧೭೪, ೧೭೫, ೧೭೬, ೧೭೭, ೧೭೮, ೧೭೯, ೧೮೦, ೧೮೧, ೧೮೨, ೧೮೩, ೧೮೪, ೧೮೫, ೧೮೬, ೧೮೭, ೧೮೮, ೧೮೯, ೧೯೦, ೧೯೧, ೧೯೨, ೧೯೩, ೧೯೪, ೧೯೫, ೧೯೬, ೧೯೮, ೧೯೯, ೨೦೦, ೨೦೧, ೨೦೨, ೨೦೪, ೨೦೫, ೨೦೬, ೨೦೭, ೨೦೮, ೨೦೯, ೨೧೦, ೨೧೧, ೨೧೨, ೨೧೩, ೨೧೪, ೨೧೫, ೨೧೬, ೨೧೭, ೨೧೮, ೨೧೯, ೨೨೦, ೨೨೧, ೨೨೨, ೨೨೩, ೨೨೪, ೨೨೫, ೨೨೬, ೨೩೦, ೨೩೧, ೨೩೩, ೨೩೪, ೨೩೫, ೨೩೬, ೨೩೭, ೨೩೮, ೨೩೯, ೨೪೦, ೨೪೨, ೨೪೩, ೨೪೪, ೨೪೫, ೨೪೬, ೨೪೭, ೨೪೮, ೨೪೯, ೨೫೦, ೨೫೧, ೨೫೨, ೨೫೩, ೨೫೪, ೨೫೫, ೨೫೬, ೨೫೭, ೨೫೮, ೨೫೯, ೨೬೦, ೨೬೧, ೨೬೨, ೨೬೩, ೨೬೪, ೨೬೫, ೨೬೬, ೨೬೭, ೨೬೮, ೨೬೯, ೨೭೦, ೨೭೧, ೨೭೪, ೨೭೫, ೨೭೬, ೨೭೭, ೨೭೮, ೨೭೯, ೨೮೦, ೨೮೧, ೨೮೪, ೨೮೫, ೨೮೬, ೨೮೭, ೨೮೮, ೨೮೯, ೨೯೦, ೨೯೧, ೨೯೨, ೨೯೩, ೨೯೪, ೨೯೫, ೨೯೬, ೨೯೭, ೨೯೯, ೩೦೦, ೩೦೧, ೩೦೨, ೩೦೪, ೩೦೫, ೩೦೬, ೩೦೭, ೩೦೮, ೩೦೯, ೩೧೦, ೩೧೧, ೩೧೨, ೩೧೩, ೩೧೫, ೩೧೬, ೩೧೭, ೩೧೮, ೩೨೦, ೩೨೧, ೩೨೨, ೩೨೩, ೩೨೪, ೩೨೬, ೩೨೭, ೩೨೮, ೩೩೦, ೩೩೧, ೩೩೨, ೩೩೩, ೩೩೪, ೩೩೫, ೩೩೬, ೩೩೭, ೩೩೮, ೩೩೯, ೩೪೦, ೩೪೧, ೩೪೩, ೩೪೪, ೩೪೫, ೩೪೬, ೩೪೮, ೩೪೯, ೩೫೦, ೩೫೧, ೩೫೪, ೩೫೫, ೩೫೬, ೩೫೭, ೩೫೮, ೩೬೦, ೩೬೧, ೩೬೪, ೩೬೬, ೩೬೭, ೩೬೮, ೩೬೯, ೩೭೦, ೩೭೧, ೩೭೩, ೩೭೫, ೩೭೭, ೩೭೮, ೩೭೯, ೩೮೦, ೩೮೧, ೩೮೨, ೩೮೩, ೩೮೪, ೩೮೫, ೩೮೬, ೩೮೭, ೩೮೮, ೩೮೯, ೩೯೨, ೩೯೪, ೩೯೫, ೩೯೬, ೩೯೭, ೩೯೮, ೩೯೯, ೪೦೦, ೪೦೧, ೪೦೨, ೪೦೩, ೪೦೪, ೪೦೫, ೪೦೬, ೪೦೭, ೪೦೮, ೪೦೯, ೪೧೧, ೪೧೨, ೪೧೪, ೪೧೫, ೪೧೬, ೪೧೭, ೪೧೮, ೪೧೯,

೪೨೦, ೪೨೧, ೪೨೨, ೪೨೩, ೪೨೪, ೪೨೬, ೪೨೯, ೪೩೩, ೪೩೪, ೪೩೬, ೪೩೮, ೪೪೧, ೪೪೨, ೪೪೩, ೪೪೪, ೪೪೫, ೪೪೬, ೪೪೮, ೪೪೯, ೪೫೦, ೪೫೧, ೪೫೨, ೪೫೩, ೪೫೪, ೪೫೫, ೪೫೬, ೪೫೭, ೪೫೮, ೪೫೯, ೪೬೦, ೪೬೧, ೪೬೨, ೪೬೫, ೪೬೬, ೪೬೭, ೪೬೮, ೪೬೯, ೪೭೦, ೪೭೧, ೪೭೩, ೪೭೪, ೪೭೭, ೪೭೮, ೪೭೯, ೪೮೫, ೪೮೬, ೪೮೭, ೪೮೯, ೪೯೦, ೪೯೧, ೪೯೨, ೪೯೩, ೪೯೪, ೪೯೫, ೪೯೬, ೪೯೭, ೪೯೮, ೫೦೦, ೫೦೧, ೫೦೨, ೫೦೩, ೫೦೪, ೫೦೫, ೫೦೬, ೫೦೮, ೫೦೯, ೫೧೦, ೫೧೧, ೫೧೨, ೫೧೩, ೫೧೪, ೫೧೬, ೫೧೭, ೫೧೮, ೫೧೯, ೫೩೪, ೫೩೫, ೫೫೪

ಅಗ್ ೫೨೧

ಅಜಮೀರ್ ೪೪೭

ಅಜೀಜ್‌ರಸೂಲ್ ೪೯೮

ಅಡಿಗೆರೆ ೨೩೮

ಅಧ್ಯಾರೋಹಿ ೨೭೩, ೫೨೮

ಅನಂತಶಯನಂ ಅಯ್ಯಂಗಾರ್ ಎಂ. ೧೧, ೧೨, ೧೩, ೨೫, ೧೦೬, ೧೫೩, ೨೬೨, ೪೦೮, ೪೮೯

ಅಫೆನ್ಸ್ ೧೮೧

ಅಬೋರ್ ೩೦೪

ಅಬ್ರಹಾಂ ಲಿಂಕನ್ ೫೦೬, ೫೩೩

ಅಮಲಬಜಾವಣಿ ೩೮೨

ಅಮೆರಿಕ ೧೨, ೧೨, ೨೪, ೨೫, ೭೦, ೭೪, ೧೩೬, ೧೮೩, ೧೮೪, ೨೨೬, ೨೨೭, ೨೮೧, ೪೩೧, ೪೫೪, ೪೭೩, ೫೦೬, ೫೨೦, ೫೨೫, ೫೨೬, ೫೩೨

ಅಮ್ಮು ಸ್ವಾಮಿನಾಥನ್ ೫೦೬

ಅರಿಬಹದ್ದೂರ್ ೫೦೪

ಅಲಿಗಡ ೧೮೮

ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ೧೨, ೧೨, ೧೯೭, ೧೯೮, ೨೩೦, ೩೨೬, ೪೮೯, ೫೦೨, ೫೦೩, ೫೨೨, ೫೨೪

ಅಸ್ಸಾಂ ೮೫, ೮೮, ೯೫, ೧೧೫, ೧೧೬, ೧೧೭, ೧೨೮, ೧೫೫, ೧೫೬, ೧೫೭, ೧೫೮, ೧೫೯, ೧೭೬, ೨೭೭, ೨೭೮, ೨೭೯, ೨೮೦, ೨೮೧, ೨೮೨, ೨೮೩, ೨೮೪, ೨೮೫, ೨೮೬, ೨೮೭, ೨೮೮, ೨೮೯, ೨೯೧, ೨೯೨, ೨೯೫, ೨೯೬, ೨೯೭, ೨೯೮, ೩೦೦, ೩೦೧, ೩೦೩, ೩೦೪, ೩೦೫, ೩೦೬, ೩೦೭, ೩೦೮, ೩೦೯, ೩೧೦, ೩೧೧, ೩೬೮, ೪೪೬, ೪೮೭, ೪೯೨, ೪೯೪, ೫೦೪

**ಆ**

ಆಂಗ್ಲೋ ೨೭, ೧೬೦, ೧೬೨, ೧೬೭, ೩೬೮

ಆಕ್ಟ್ ೨೩೩, ೨೮೨, ೩೧೮, ೩೭೦, ೪೬೮

ಆಫ್ರಿಕಾ ೪೩೧, ೫೨೦

ಆಲೀಬೇಗ್ ೪೯೫

ಆಸ್ಟ್ರೇಲಿಯಾ ೫೨, ೭೦, ೧೫೪, ೩೯೦, ೪೩೧, ೫೨೦, ೫೨೬

**ಇ**

ಇಂಗ್ಲೀಷ್ ೧೫, ೨೦೦, ೩೮೪, ೩೯೬, ೩೯೯

ಇಂಗ್ಲೆಂಡ್ ೪೧೬, ೪೪೪, ೪೪೫, ೫೩೨

ಇಂಡೀಸ್ ೫೦೬

**ಉ**

ಉತ್ಕಲ್ ೪೪೬

ಉಪೇಂದ್ರನಾಥ ಬರ್ಮನ್ ೮೨, ೮೪

**ಎ**

ಎಡ್ಮಂಡ್ ಬರ್ಕ್ ೧೬೧

**ಐ**

ಐರಿಷ್ ೩೭೬, ೩೯೦

**ಒ**

ಒರಿಸ್ಸಾ ೪೩, ೪೩, ೮೮, ೧೪೧, ೧೬೧, ೧೮೭, ೨೮೫, ೩೭೮, ೪೪೬
ಓಗ್ ೧೩೬

**ಕ**

ಕಮಲಾಪತಿ ತ್ರಿಪಾಠಿ ೩೯೯
ಕರಾವಳಿ ೧೨
ಕರೇನರು ೨೮೫
ಕಾಂಗ್ರೆಸ್ ೧೩೬, ೧೩೬, ೨೨೬, ೪೯೧, ೪೯೨, ೪೯೪, ೫೦೧, ೫೨೩
ಕಾಚಾರ್ ೩೦೩
ಕಾನೆಲ್ ೫೩೦
ಕಾಪಸ ೪೦೦
ಕಾಮತ್ ಹೆಚ್. ವಿ. ೯, ೧೦, ೧೧, ೧೫, ೧೮, ೨೬, ೨೯, ೩೧, ೪೩, ೪೪, ೪೭, ೪೮, ೬೪, ೬೯, ೭೩, ೭೬, ೭೭, ೭೮, ೧೦೫, ೧೦೬, ೧೨೩, ೧೪೮, ೧೬೭, ೧೬೮, ೧೭೦, ೧೭೪, ೧೭೯, ೧೮೦, ೧೮೫, ೧೯೦, ೧೯೧, ೧೯೬, ೧೯೯, ೨೦೦, ೨೦೧, ೨೦೫, ೨೦೬, ೨೦೭, ೨೧೦, ೨೧೨, ೨೧೩, ೨೧೪, ೨೧೮, ೨೨೩, ೨೪೨, ೨೪೯, ೨೫೫, ೨೬೨, ೩೧೫, ೩೧೭, ೩೧೮, ೩೨೩, ೩೪೯, ೩೫೦, ೩೫೧, ೩೬೯, ೩೭೦, ೩೭೩, ೩೯೮, ೩೯೯, ೪೦೭, ೪೦೯, ೪೧೧, ೪೧೪, ೪೨೦, ೪೨೨, ೪೩೪, ೪೩೫, ೪೪೧, ೪೪೨, ೪೪೩, ೪೪೪, ೪೪೫, ೪೫೮, ೪೬೧, ೪೬೯, ೪೭೪, ೪೮೫, ೪೮೯, ೪೯೧, ೪೯೫, ೫೨೩
ಕಾಮಾ ೩೮೦, ೫೦೮
ಕಾರ್ವಿನ್ ೧೩೬
ಕಾಸ್ ೩೬೫
ಕಿರ್ಪಾಣ್ ೮೭
ಕುಲಧರ ಚಾಲಿಹಾ ೨೭೭, ೨೭೮, ೨೮೦, ೨೮೪, ೨೮೫, ೨೮೬, ೨೯೧, ೨೯೩, ೨೯೪, ೨೯೫, ೩೦೦, ೩೦೭, ೩೦೮, ೩೦೯, ೩೬೬
ಕೂಚ್‌ಬಿಹಾರ್ ೪೪೭
ಕೂರ್ಗ್ ೬೨
ಕೃಷ್ಣಮಾಚಾರಿ ಟಿ.ಟಿ. ೧, ೩, ೪, ೫, ೧೯, ೨೬, ೪೪, ೪೫, ೪೬, ೫೦, ೫೩, ೫೬, ೬೪, ೬೫, ೬೬, ೮೪, ೯೨, ೧೦೮, ೧೧೦, ೧೧೧, ೧೨೩, ೧೬೦, ೧೬೨, ೧೬೩, ೧೭೭, ೧೯೩, ೧೯೪, ೧೯೫, ೨೩೪, ೨೩೬, ೨೩೭, ೨೪೪, ೨೪೯, ೨೯೪, ೩೦೪, ೩೨೩, ೩೨೬, ೩೩೩, ೩೩೪, ೩೩೬, ೩೩೯, ೩೪೪, ೩೭೦, ೩೭೩, ೩೭೮, ೩೮೬, ೩೮೯, ೩೯೫, ೪೦೨, ೪೨೪, ೪೩೮, ೪೪೧, ೪೪೩, ೪೪೫, ೪೪೬, ೪೫೫, ೪೫೬, ೪೫೮, ೪೫೯, ೪೬೦, ೪೭೭, ೪೭೯, ೫೦೨, ೫೦೩, ೫೦೫, ೫೧೦, ೫೧೭, ೫೨೪
ಕೃಷ್ಣಮೂರ್ತಿ ಭಾರತಿ ಎಲ್. ೪
ಕೃಷ್ಣಮೂರ್ತಿರಾವ್ ಎಸ್.ವಿ. ೫೦೦
ಕೃಷ್ಣಸ್ವಾಮಿ ಭಾರತಿ ಎಲ್ ೨, ೫೭, ೪೮೬
ಕೆನಡಾ ೧೫೪, ೨೩೨, ೨೩೩, ೩೮೯, ೩೯೦, ೪೩೧, ೫೨೦, ೫೨೬
ಕೆನಡಿಯನ್ ೩೮೯
ಕೆರೆಬಿಯನ್ ೫೦೬
ಕೊಚ್ಚಿನ್ ೪೩೭, ೪೪೭, ೪೯೬
ಕೊಡಗು ೬೨, ೪೪೭
ಕೋವಾರಂಟೊ ೩೩೭
ಕೋಸಲ ೪೪೬
ಕ್ಯಾಂಟನ್ಸ್ ೩೯೦
ಕ್ರಿಶ್ಚಿಯನ್ ೧೫೯, ೧೬೦, ೧೬೩, ೧೬೭, ೩೬೮
ಕ್ರೌನ್ ೧೮೭

**ಖ**

ಖಾಂಡೇಕರ್ ಹೆಚ್. ಜೆ. ೪೮೬, ೪೯೫
ಖಾಜಿ ಸಯ್ಯದ್ ಕರೀಮುದ್ದೀನ್ ೨೧೧, ೪೯೩, ೪೯೪, ೪೯೫, ೫೧೭

ಖಾಸಿ ೩೦೩, ೩೦೪, ೩೦೫, ೪೪೬
ಖೇರ್ ೪೯೦, ೫೦೭

### ಗ

ಗಾಂಧಿ ೪೯೧, ೪೯೨, ೪೯೭, ೫೦೫, ೫೦೬
ಗಾಡ್ಗಿಳ್ ಎನ್.ಪಿ. ೪೮೫
ಗಾಡ್ಗೀಳ್ ಎನ್. ವಿ. ೪೮೮
ಗಾರೋ ಹಿಲ್ಸ್ ೩೦೩, ೩೦೮
ಗಿಟ್ಲೊ ೨೨೭
ಗುಪ್ತ ಬಿ.ಎಮ್. ೪೯, ೧೧೪, ೧೩೯, ೩೯೮, ೩೯೯, ೫೦೨
ಗುಪ್ತಾ ೬೦
ಗುಪ್ತೆ ೭೬
ಗುರುಂಗ ೫೦೧, ೫೦೪
ಗುರುಮುಖಸಿಂಗ್ ೫೦೧
ಗುಲಾಬ್ ಸಿಂಘ್ ೫೨೯
ಗೋಕುಲ್ ಭಾಯಿ ದವಲತ್ ರಾಮ್ ಭಟ್ಟ ೪೮೮
ಗೋಪಾಲಸ್ವಾಮಿ ಅಯ್ಯಂಗಾರ್ ಎನ್. ೧೧೮, ೪೮೯, ೫೧೬
ಗೋಪಿನಾ(ಥ್)ಥ ಬಾರ್ದೊರ್‌ಲೊಯ್ ೮೫, ೨೮೪, ೩೦೦
ಗೋವಿಂದ ಮಾಲವೀಯ, ಪಂಡಿತ್ ೪೫, ೪೬, ೪೬೧

### ಘೋ

ಘೋಷ್‌ಎಸ್.ಎಂ. ೪೯೬

### ಚ

ಚಂದರ್‌ನಾಗೋರ್ ೫೭, ೫೮
ಚಂದ್ರನಗರ ೧೧೨
ಚಾಕೋ ೪೯೬

### ಜ

ಜಗತ್ ನಾರಾಯಣ್ ಲಾಲ್ ೧೯೩, ೨೧೩, ೫೧೭
ಜಮ್ಮು ೪೪೭
ಜಯಚಂದ್ರ ೫೨೮
ಜಯಪಾಲ ೫೦೫
ಜರ್ಮನಿ ೬೪
ಜರ್ಮೀಯ ೨೮೫
ಜವರಿ ೫೪೦
ಜವಹರಲಾಲ್ ನೆಹರು ೮೭, ೫೦೩
ಜಸ್ಪತ್‌ರಾಯ್ ಕಪೂರ್ ೧೭, ೧೭, ೩೨, ೩೩, ೧೧೦, ೧೪೮, ೧೫೦, ೧೫೩, ೧೬೯, ೨೬೨, ೩೧೬, ೩೬೦, ೩೭೨, ೩೮೭, ೪೯೭
ಜಾನ್ ಸ್ಟುವರ್ಟ್ ಮಿಲ್ ೫೩೦
ಜಾಫರ್‌ಸನ್ ೫೨೫
ಜುಂಜನವಾಲಾ ೨೨೪, ೨೨೯, ೨೩೧, ೩೩೪, ೫೦೧
ಜೆಧಿ ಕೆ. ಎಮ್. ೫೦೪
ಜೇಮ್ಸ್ ಬೈನ್ ೫೩೨
ಜೈಂತಿಯಾ ಹಿಲ್ಸ್ ೩೦೩, ೩೦೪, ೩೦೫

### ಜ್ಞಾ

ಜ್ಞಾನಿ ಗುರುಮುಖಸಿಂಗ್ ಮುಸಾಫಿರ್ ೫೦೧

### ಟಿ

ಟಿಬೇಟ್ ೨೮೫
ಟೇಕಚಂದ ಬಕ್ಷಿ ಡಾ. ೩೬೦, ೩೬೪, ೩೭೮

### ಠಾ

ಠಾಕುರ್ ದಾಸ್ ಭಾರ್ಗವ ೨೦, ೬೪, ೧೩೮, ೧೩೯, ೧೬೨, ೨೩೦, ೩೩೭, ೩೪೫, ೩೪೬, ೩೪೮, ೩೪೯, ೩೫೪, ೩೫೫, ೩೫೬, ೩೬೧, ೩೭೮, ೩೭೯, ೩೮೦, ೩೮೨, ೪೫೪, ೪೫೯, ೪೬೯, ೪೯೧, ೫೨೩

### ಡೆ

ಡೇನಿಯನ್ ೫೩೦
ಡೊಮಿನಿಯನ್ ೨೬೨, ೩೮೩

## ತಿ

ತಿರಪ್ ೩೦೪
ತಿರುಪಗಜನಲವಾರ ೪೮೬
ತಿರುಮಲರಾವ್ ೫೦೦
ತಿರುವಳ್ಳುವರ್ ೪೮೬
ತಿರುವಾಂಕೂರು ೧೧, ೧೨, ೩೦, ೪೩೭, ೪೪೭, ೪೯೬
ತ್ರಿಪುರ ೪೪೭

## ಥಾ

ಥಾನು ಪಿಳ್ಳೈ ಎ. ೧೧, ೧೨, ೩೦, ೧೨೭, ೧೬೦, ೧೬೧, ೧೬೨, ೨೪೭, ೨೬೫, ೩೬೯, ೪೨೦, ೪೨೨, ೪೨೪, ೪೮೬, ೫೦೫

## ದಾ

ದಾಸ್ ಬಿ. ೯, ೮೩, ೧೩೮, ೧೬೦, ೧೬೨, ೧೮೭, ೨೦೨, ೨೦೪, ೨೮೫, ೩೭೮, ೩೮೦, ೪೪೬, ೪೫೪, ೪೫೯, ೪೮೭, ೪೯೧
ದಿಮಾಪುರ್ ೩೦೬, ೩೦೭, ೩೦೮
ದುರ್ಗಾಬಾಯಿ ೨೫೩, ೨೬೬, ೩೫೧
ದುಷ್ಯಂತ ೩೯೮
ದೆಹಲಿ ೧೮೮, ೧೮೯, ೨೪೭, ೪೪೭, ೪೪೯, ೪೮೫
ದೇವಸ್ವಮ್ ೪೩೭
ದೇಶಬಂಧು ಗುಪ್ತ ೨೨೩, ೨೨೪, ೨೨೬, ೨೩೦, ೨೩೧, ೨೪೭, ೨೪೮, ೨೬೭, ೨೬೮, ೨೭೦
ದೇಶಮುಖ್ ಪಿ. ಎಸ್. ಡಾ. ೧೦೫, ೧೦೮, ೧೧೫, ೧೨೦, ೧೨೧, ೧೨೩, ೧೭೧, ೧೭೪, ೧೭೫, ೧೭೮, ೧೭೯, ೧೮೫, ೧೮೯, ೧೯೩, ೧೯೬, ೨೦೪, ೨೦೬, ೨೦೮, ೨೦೯, ೨೧೩, ೨೧೫, ೨೧೭, ೨೨೧, ೨೨೨, ೨೩೭, ೨೫೨, ೨೫೩, ೨೫೪, ೨೫೬, ೨೫೭, ೨೫೮, ೨೬೦, ೨೬೪, ೨೬೫, ೨೭೪, ೨೭೫, ೩೨೦, ೩೨೧, ೩೩೮, ೩೩೯, ೪೦೧, ೪೦೩, ೪೦೪, ೪೦೫, ೪೦೬, ೪೦೭, ೪೧೧, ೪೧೨, ೪೧೩, ೪೧೪, ೪೮೬, ೪೮೯, ೫೨೩
ಧರಣೀಧರ ಬಸು ಮತಾರಿ ೫೦೪
ಧಾರ್ ೫೨೮
ಧುಲೇಕರ್ ಆರ್.ವಿ. ೫೦೧

## ನ

ನಜ಼ಿರುದ್ದೀನ್ ಅಹ್ಮದ್ ಡಾ. ೬, ೪೩, ೪೪, ೫೮, ೬೫, ೬೬, ೯೨, ೯೪, ೧೨೩, ೧೨೯, ೧೪೨, ೧೪೮, ೧೬೦, ೧೬೨, ೧೬೩, ೧೬೬, ೧೬೭, ೧೬೮, ೧೬೯, ೧೭೦, ೧೭೧, ೧೭೨, ೧೭೪, ೧೮೧, ೧೮೨, ೧೮೩, ೧೮೯, ೧೯೫, ೧೯೬, ೧೯೭, ೨೦೦, ೨೧೭, ೨೧೮, ೨೧೯, ೨೨೩, ೨೩೧, ೨೩೩, ೨೪೯, ೨೫೦, ೨೫೧, ೨೫೨, ೨೬೫, ೨೭೫, ೩೧೬, ೩೧೭, ೩೩೪, ೩೪೫, ೩೭೩, ೩೭೯, ೩೮೦, ೩೮೨, ೩೮೯, ೩೯೪, ೩೯೫, ೩೯೬, ೩೯೭, ೪೧೮, ೪೫೨, ೪೬೦, ೪೯೩, ೫೦೮, ೫೦೯, ೫೧೧, ೫೧೨, ೫೧೪, ೫೨೧
ನಲವಾಡಿ ೫೦೭
ನಾಗಪುರ ೪೩೧
ನಾಗಪ್ಪ ಎಸ್. ೧೨೬, ೧೬೧, ೨೬೭, ೪೯೬
ನಾಗಾ ೩೦೩, ೩೦೪
ನಾಡನಾರ ೪೮೬
ನಾರ್ತ್ ೩೦೩
ನಿಕೋಬಾರ್ ೪೪೭
ನಿಕೋಲ್ಸ್‌ರಾಯ್ ಜೆ. ಜೆ. ಎಂ. ೯೫, ೧೫೫, ೧೫೬, ೨೭೭, ೨೮೪, ೨೮೫, ೩೦೬, ೩೦೭, ೩೦೮, ೩೧೧, ೪೯೭
ನೀರೋ ೫೨೦
ನೆಹರೂ ೮೭, ೫೦೩
ನೌಕಾಬಲ ೨೩೫
ನೌಕಾಮಾರ್ಗ ೨೧೮

ನೌಕಾಸಾರಿಗೆ ೨೧೮
ನ್ಯೂಯಾರ್ಕ್ ೨೨೭

**ಪ**

ಪಂಜಾಬ್ ೧೨೧, ೧೫೬, ೧೮೨, ೩೩೭, ೩೬೦, ೪೪೬, ೪೪೭, ೪೬೮, ೪೮೯, ೪೯೧, ೪೯೩, ೪೯೬, ೫೦೧
ಪಂಜಾಬಿ ೨೪೩
ಪಂಜಾಬ್ ರಾವ್ ದೇಶಮುಖ್ ಡಾ॥ ೧೯೬, ೨೦೪, ೪೮೯, ೪೯೩, ೫೦೨, ೫೨೨
ಪಟ್ಟಾಭಿ ಸೀತಾರಾಮಯ್ಯ ಡಾ॥ ೫೦೩, ೫೧೫
ಪರಿಸೀಮನಾ ೧೯, ೪೫, ೪೬
ಪರ್ಶಿಯಾ ೧೧೨
ಪಶ್ಚಿಮಬಂಗಾಳ ೧೨೨, ೧೪೭
ಪಾಂಡಿಚೇರಿ ೧೧೨
ಪಾಕಿಸ್ತಾನ ೯, ೧೦೯, ೧೧೦, ೧೧೨, ೧೧೩, ೧೧೪, ೧೧೫, ೧೧೬, ೧೧೭, ೧೧೮, ೨೬೨, ೪೧೧
ಪಾ ಕೆ.ಟಿ. ಪ್ರೊ. ೫೨೩
ಪಾಟಸ್ಕರ ೪೨೦, ೪೨೧, ೫೧೨, ೫೧೩
ಪಾಟಿಯಾಲ ೪೪೭
ಪಾಠಸ್ಕರ್ ಹೆಚ್. ವಿ. ೩೫೪, ೪೯೦, ೫೧೨, ೫೧೩
ಪಿಪ್ಲೊಡಾ ೪೪೭
ಪುರುಷೋತ್ತಮ ದಾಸ ಟಂಡನ್ ೪೭೧
ಪೂಂಜಿಪತಿ ೪೯೭
ಪೂರ್ಣಿಮಾ ಬ್ಯಾನರ್ಜಿ ೨೩೬, ೨೬೨, ೩೪೯, ೪೨೪, ೪೭೨, ೪೭೪, ೫೦೪
ಪೃಥ್ವಿರಾಜನ ೫೨೮
ಪೋರ್ಚುಗೀಸ ೧೧೨
ಪ್ರಭು ದಯಾಳ ಹಿಮತ್ ಸಿಂಘ್ ೪೩೩
ಪ್ರಾಟೆಸ್ಟೆಂಟ್ ೫೩೨
ಪ್ಲೀಡರ್ ೩೬೪, ೩೬೬
ಫಿಲಿಡೆಲ್ಫಿಯಾ ೪೭೩
ಫೂರ್ ಸಿಂಗ್ ೨೦೦
ಫೆಲೆನೀಸ್ ೧೮೧
ಫ್ರಾಂಕ್ ೫೧೪
ಫ್ರೆಂಚ್ ೧೧೨, ೨೩೩

**ಬ**

ಬಂಗಾಳ ೪೩, ೬೫, ೮೮, ೧೧೬, ೧೨೧, ೧೨೨, ೧೨೩, ೨೦೦, ೨೦೨, ೨೪೯, ೩೭೩, ೪೪೬, ೪೭೫, ೪೯೦, ೪೯೬, ೫೦೧, ೫೦೯
ಬನಾರಸ ೧೮೮
ಬರೋಡಾ ೩೭೧
ಬರ್ಮಾ ೨೮೫, ೫೧೧
ಬಲವಂತ ಸಿನ್ಹಾ ಮೆಹತಾ ೫೦೩
ಬಾಪೂಜಿ ೩೪೯
ಬಾಬು ರಾಮನಾರಾಯಣ ಸಿಂಗ್ ೩೩೦, ೩೫೧, ೩೫೭
ಬಾಲಕೃಷ್ಣ ಶರ್ಮ ಪಂ. ೪೬೮, ೪೭೭
ಬಿಮಣಲಾಲ ಚಕುಭಾಯಿ ಶಾಹ ೩೨೭
ಬಿರಲ್ಲಿ ೧೧೪
ಬಿರಾರ್ ೬೯, ೭೬, ೮೧, ೨೪೯, ೪೪೧, ೪೮೭, ೫೦೭, ೫೧೪
ಬಿಸ್ವಂತದಾಸ ೪೧೪
ಬಿಹಾರ ೮೮, ೧೯೨, ೨೦೩, ೨೧೩, ೨೧೮, ೩೨೯, ೩೩೦, ೩೫೧, ೩೬೬, ೪೦೧, ೪೪೦, ೪೪೬, ೪೯೮, ೪೯೯, ೫೦೧, ೫೦೫
ಬೀರಾರ್ ೨೭೫, ೪೯೦, ೪೯೩, ೪೯೫, ೫೦೬
ಬೆರಾರ್ ೧೪೧, ೧೯೯
ಬೋರ್‌ಸ್ಟಲ್ ೨೫೩
ಬ್ರಜೇಶ್ವರ್ ಪ್ರಸಾದ್ ೪೭, ೧೭೪, ೨೧೩, ೨೧೫, ೨೧೮, ೨೧೯, ೨೨೦, ೨೨೧, ೨೩೩, ೨೩೫, ೨೩೭, ೨೪೨, ೨೭೭, ೨೭೮, ೨೯೭, ೨೯೯, ೩೦೨, ೩೨೧, ೩೩೮, ೩೯೫, ೪೦೧, ೪೦೨, ೪೨೯, ೪೩೬, ೪೩೮, ೪೪೦, ೪೪೧, ೪೮೫,

೫೦೩, ೫೩೪
ಬ್ರಭುಟ್ ದಯಾಲ್ ಹಿಮ್ಮತ್ ಸಿಂಘ್ ೪೯೦
ಬ್ರಿಟನ್ ೧೩೬
ಬ್ರಿಟಿಷ ೪೨೪, ೪೯೨, ೫೨೯, ೫೩೩
ಬ್ರೇನ್ ೫೧೯
ಭಾಸ್ಕರ ಎಲ್. ಎಸ್. ೫೦೬
ಭಿಲಾಸ್‍ಪುರ ೪೪೭
ಭೀಮಸ್ಮೃತಿ ೫೦೫

### ಭೂ

ಭೂಕ್ಷೇತ್ರ ೧೦೯, ೧೧೦, ೧೧೨, ೧೧೬, ೧೨೭
ಭೂಪಾಲ ೩೭೦

### ಮ

ಮಂಡೋಲಿ ೪೯೦
ಮಂತ್ರಾಲಯ ೨೦೮, ೨೨೯, ೩೪೩, ೩೬೭, ೪೦೧
ಮಣಿಪುರ ೪೪೭
ಮದ್ರಾಸ್ ೬, ೨೫, ೨೬, ೫೦, ೫೭, ೬೬, ೧೬೨, ೧೯೮, ೨೦೩, ೨೪೭, ೨೬೫, ೨೬೬, ೩೬೦, ೩೬೯, ೪೦೫, ೪೪೪, ೪೪೬, ೪೫೦, ೪೮೬, ೪೮೯, ೪೯೨, ೪೯೫, ೪೯೬, ೫೦೨, ೫೦೩, ೫೧೦
ಮನಮೋಹನ ದಾಸ ಡಾ. ೧೪೭, ೧೬೦, ೩೧೫
ಮರಾಠ ೫೦೭, ೫೨೯
ಮಲಯಾ ೩೭೧
ಮಹಮದ್ ೪೯೪, ೪೯೫
ಮಹಮ್ಮದ್ ೫೨೮
ಮಹಾತ್ಮಾ ೪೯೮
ಮಹಾಭಾರತ ೫೦೧
ಮಹಾರ್ ೪೯೫
ಮಹಾರ ೪೯೬
ಮಹಾವೀರ್ ತ್ಯಾಗಿ ೯, ೧೨, ೧೩, ೧೫, ೧೬, ೮೫, ೮೬, ೮೭, ೧೬೮, ೧೭೨, ೧೭೭, ೧೭೮, ೨೧೯, ೨೩೬, ೨೩೭, ೨೩೯, ೨೪೦, ೨೪೧, ೨೪೨, ೨೬೬, ೩೪೪, ೩೫೧, ೩೫೬, ೩೫೮, ೩೬೧, ೩೯೪, ೪೨೨, ೪೪೯, ೪೫೦, ೪೫೧, ೪೫೬, ೪೬೨, ೪೬೯, ೪೭೩, ೪೮೫, ೫೧೮
ಮಾಣಿಕ್ಯಲಾಲ್ ವರ್ಮಾ ೫೦೪
ಮಾಧವರಾವ್ ೫೧೬
ಮಾಲಗುಜಾರ್ ೨೫೭
ಮಾಲ್ವಿಯಾ ೪೬೧
ಮಿಕಿರ್ ೩೦೩
ಮಿಲಿಯಂ ೩೦೩, ೩೦೪, ೩೦೫
ಮಿಸಿಮಿ ಹಿಲ್ ೩೦೪
ಮುಂಬೈ ೩೭, ೧೦೦, ೧೨೨, ೩೭೧, ೪೫೦, ೪೯೯
ಮುಖರ್ಜಿ ಹೆಚ್. ಸಿ. ೪೭೭, ೪೯೧, ೪೯೩, ೫೦೨, ೫೨೨
ಮುನಿಸ್ವಾಮಿ ಪಿಳ್ಳೈ ೧೨೭, ೧೬೦, ೧೬೧, ೧೬೨, ೨೪೭, ೨೬೫, ೩೬೯, ೪೨೦, ೪೨೨, ೪೨೪, ೪೮೬ಮುನ್ಷಿ ಕೆ. ಎಮ್. ೧೪, ೨೭೫, ೩೪೪, ೪೪೨, ೪೭೯, ೫೧೬, ೫೧೭
ಮುಸಲ್ಮಾನ ೧೧೬, ೧೧೬, ೧೧೮, ೧೨೩, ೧೨೭, ೧೩೯, ೧೬೦, ೧೬೩, ೧೬೭, ೨೦೦, ೪೨೩, ೫೦೭ಮುಸಾನಿ ಎಂ.ಆರ್. ೪೬೫
ಮುಸ್ಲಿಂ ೨೭, ೪೩, ೬೫, ೧೮೮, ೨೪೯, ೩೭೩, ೪೨೨, ೪೮೯, ೪೯೩, ೪೯೪, ೪೯೫, ೪೯೮, ೫೦೭ಮೆಂಡಮಸ್ ೩೩೭
ಮೆಂಡೇಟ್ ೨೭೦
ಮೆಕಾಲೆ ೪೪೫
ಮೆಕೆಂಜಿಕಿಂಗ್ ೪೪೫
ಮೆಹಬೂಬ್ ಆಲೀಬೇಗ್ ಸಾಹೇಬ್ ೪೯೫
ಮೇವಾರ ೪೪೭
ಮೈಕಾ ೪೦೦
ಮೈಸೂರು ೫೧೬

ಮೊಘಲ್ ೫೨೯
ಮೊಹಮ್ಮದ್ ಬಿನ್ ಕಾಸಿಂ ೫೨೮
ಮೌಜ ೩೦೮
ಮೌಲಾನಾ ಹಸರತ್ ಮೊಹಾನಿ ೪೬೧, ೪೬೨, ೪೭೩

**ಯ**

ಯದುವಂಶ ೪೯೯
ಯುಧಿಷ್ಠಿರ ೧೬೧
ಯುನೈಟ್ ೩೦೪
ಯುರೋಪಿಯನ್ ೨೬೨
ಯುರೋಪು ೨೬೬

**ರ**

ರಂಗಾ ಎನ್. ಜಿ. ಪ್ರೊ. ೪೭೯
ರಘುವೀರ ಡಾ. ೪೯೩
ರಜಪೂತ ೫೨೯
ರಾಜಬಹದ್ದೂರ್ ೨೧೭, ೨೩೪, ೪೭೧
ರಾಜಸ್ಥಾನ ೪೪೭, ೪೪೮, ೫೦೪
ರಾಜೇಂದ್ರ ಪ್ರಸಾದ್ ಡಾ. ೪೨೯, ೪೩೬, ೪೩೮, ೪೪೧, ೪೮೫, ೫೦೩, ೫೩೪
ರಾಮಚಂದ್ರ ಗುಪ್ತ ೫೦೭
ರಾಮನಾಥ ಗೊಯೆಂಕಾ ೨೨೪, ೨೨೮, ೨೨೯, ೨೩೧, ೨೬೬, ೨೬೭, ೨೬೮, ೨೬೯, ೨೭೦
ರಾಮಪುರ ೪೪೭
ರೈಸ್‌ಡೇವಿಡ್ ೫೦೦
ರೋಮನ್ ೫೧೫
ರೋಹಿಣಿ ಕುಮಾರ ಚೌಧುರಿ ೧೧೫, ೧೧೬, ೨೬೨, ೨೮೪, ೨೮೬, ೨೮೭, ೨೮೯, ೨೯೨, ೨೯೬, ೨೯೭, ೩೦೪, ೩೦೬, ೪೮೭, ೪೯೯
ರೋಹಿತ್‌ಕುಮಾರ್ ಚೌಧುರಿ ೨೬೨

**ಲ**

ಲಕ್ಷ್ಮೀಕಾಂತ ಮೈತ್ರಾ ಪಂಡಿತ್ ೪೪, ೪೫, ೪೬, ೮೩, ೮೪, ೮೯, ೨೪೪, ೨೬೦, ೩೨೭
ಲಕ್ಷ್ಮೀಕಾಂತ್ ಮಿತ್ರಾ , ಪಂಡಿತ್ ೩೯೭, ೪೯೩
ಲಕ್ಷ್ಮೀ ನಾರಾಯಣ ಸಾಹು ೧೪೧, ೩೫೭, ೪೪೮, ೫೦೦
ಲಕ್ಷ್ಮೀಸ್ವಾಮಿ ೫೦೫
ಲಸ್ಕರ್ ೧೫೬
ಲಾರ್ಡ್ಸ್ ೫೧
ಲಾಲಾ ದೇಶಬಂಧು ಗುಪ್ತಾ ೬೦
ಲುದಾಯಿ ಹಿಲ್ಸ್ ೩೦೩

**ವ**

ವಲ್ಲಭಭಾಯಿ ಪಟೇಲ್ ೫೦೩
ವಸಂತ ಮೂನ್ ೫೩೫
ವಿಂಧ್ಯಪ್ರದೇಶ ೪೪೭
ವಿಕ್ಟೋರಿಯಾ ೧೮೭
ವಿಠ್ಠಲ ಭಾಯಿ ಪಟೇಲ ೩೭, ೧೬೩, ೫೦೩
ವಿಧಾನಪರಿಷತ್ ೨೦, ೪೧
ವಿಧಾನಸಭೆಯ ೪೩
ವಿಲಿಯಂ ೩೦೫
ವಿಲ್ಸನ್ ಟಿ. ಜೆ. ಎಮ್. ೫೦೩
ವಿಶ್ವಾಮಿತ್ರ ೪೮೯
ವೈಮಾರ್ ೬೪

**ಶ**

ಶಂಕರರಾವ್ ದೇವ್ ೩೯೮, ೪೯೩
ಶಂಕರಾಚಾರ್ಯ ೩೯೯
ಶಹಾ ಕೆ.ಟಿ. ಪ್ರೊ. ೧೦೫
ಶಿಬನಾಥ ಬ್ಯಾನರ್ಜಿ ೪೭೫
ಶಿಬ್ಬನ್‌ಲಾಲ್ ಸಕ್ಸೇನಾ ೫, ೨೪, ೨೫, ೨೮, ೪೨, ೪೭, ೪೯, ೬೦, ೬೫, ೭೩, ೭೪, ೭೬, ೭೭, ೭೮, ೮೨, ೮೪, ೮೬, ೮೯, ೯೧, ೧೦೩, ೧೦೫, ೧೮೦, ೧೮೩, ೧೯೩, ೨೦೭, ೨೦೯, ೨೧೧, ೨೧೨, ೨೩೪, ೨೪೩, ೨೪೫, ೨೪೬, ೨೪೮, ೨೭೪, ೨೭೫, ೨೭೯, ೨೯೬, ೨೯೭,

೩೧೨, ೩೪೫, ೩೪೬, ೪೦೪, ೪೦೫, ೪೧೧, ೪೧೬, ೪೨೨, ೪೨೩, ೪೩೪, ೪೩೮, ೪೫೦, ೪೫೫, ೪೮೯, ೪೯೨, ೫೧೩, ೫೨೩
ಶಿಯಾ ೪೨೩
ಶಿರೋಡಿ ೪೭೧
ಶಿಲ್ಲಾಂಗ್ ೧೫೯, ೩೦೩, ೩೦೪, ೩೦೫, ೩೦೬, ೩೦೭
ಶಿವಾಜಿ ೫೨೯
ಶೇಟ್(ಸೇಠ್) ಗೋವಿಂದದಾಸ್ ೩೯೫, ೪೮೭, ೪೯೯
ಶ್ಯಾಮನಂದನ ಸಹಾಯ್ ೧೯೨, ೪೯೮
ಶ್ಯಾಮಸುಂದರ ಸಹಾಯ ೩೨೯

## ಷಾ

ಷಾ ಕೆ. ಟಿ. ೪೮೯

## ಸ

ಸಂಜ್ಞೇಯ ೩೩೪
ಸಂತಾನಂ ಕೆ. ೪, ೬, ೭, ೧೮, ೨೬, ೫೨, ೮೭, ೨೦೮, ೨೧೪, ೩೫೭, ೩೭೦, ೩೭೧, ೪೦೫, ೪೪೪, ೪೪೫, ೪೪೬, ೪೫೭, ೪೫೯, ೪೭೦, ೪೯೩, ೫೦೩, ೫೦೫, ೫೧೬
ಸತೀಶ್ ಚಂದ್ರ ೪೯
ಸತ್ಯನಾರಾಯಣಸಿಂಹ ೪೭೪
ಸರದಾರ ಸುಚತ್ ಸಿಂಗ್ ೫೦೩
ಸರ್ದಾರ್ ಭೂಪಿಂದರ್ ಸಿಂಗ್ ಮಾನ್ ೧೫೬, ೪೯೩
ಸರ್ದಾರ್ ಹುಕುಂ ಸಿಂಗ್ ೧೫೭, ೧೭೬, ೧೮೨, ೨೧೩, ೨೩೧, ೨೩೩, ೨೩೫, ೨೪೩, ೩೬೭, ೩೬೮, ೪೪೨, ೪೯೬
ಸರ್ವಟೆ ೧೨೫
ಸರ್ವತೆ ವಿ.ಎಸ್. ೧೨೭, ೨೦೯

## ಸಿ

ಸಿಂಗ್ ೫೦೩, ೫೦೫
ಸಿಂಧ್ ೫೨೮
ಸಿಕ್ಕಿಂ ೧೫೬
ಸಿಖ್ ೨೭, ೨೪೩, ೪೪೨, ೪೯೩, ೫೦೭, ೫೨೯
ಸಿದ್ಧ್ವ ಆರ್. ಕೆ. ೧, ೧೯, ೩೯, ೪೦, ೮೧, ೮೬, ೧೪೧, ೧೭೭, ೧೮೬, ೧೯೦, ೧೯೧, ೨೨೧, ೨೨೨, ೨೫೭, ೨೫೮, ೨೯೯, ೩೧೬, ೩೩೪, ೩೩೫, ೩೩೬, ೩೪೦, ೩೬೬, ೩೭೦, ೪೦೫, ೪೩೬, ೪೫೬, ೪೬೦, ೪೬೯, ೪೭೮, ೪೮೭, ೪೮೯, ೫೧೦, ೫೧೩, ೫೨೩
ಸಿದ್ಧ್ವ ಬಿ.ಕೆ. ೩೩೦, ೩೩೧
ಸಿಬ್ಬನ್‌ಲಾಲ್ ಸಕ್ಸೇನಾ ೧೦೩, ೩೧೨
ಸಿರೋಹಿ ೪೪೮
ಸಿಲ್ಹೆಟ್ ೧೫೭
ಸೀತಾರಾಮ ಜಾಜೂ ೨೨೩, ೪೨೧
ಸುದ್ದಿಪತ್ರಿಕೆ ೩೩೫, ೪೦೦
ಸುಪ್ರೀಂಕೋರ್ಟ್ ೪೦, ೨೨೩, ೨೨೫, ೩೪೪, ೩೭೫, ೩೯೩, ೪೦೦, ೪೧೫, ೪೧೬, ೪೨೭, ೪೨೮, ೪೩೨, ೪೩೩, ೪೩೪
ಸುರೇಶಚಂದ್ರ ೧೨೨
ಸುರೇಶಚಂದ್ರ ಮುಜುಮದಾರ ೧೨೨, ೫೧೮
ಸುರೇಶ್‌ಚಂದ್ರ ೫೧೮
ಸೇಠ್ ೪೮೭, ೪೯೯
ಸೊಶಲಿಷ್ಟ್ ೫೨೪
ಸೋಲಂಕಿ ೫೨೯
ಸ್ವಿಸ್ ೩೯೦

## ಹ

ಹಂಸಮೆಹತಾ ೪೯
ಹಜಾರಿಬಾಗ್ ೩೩೦
ಹನುಮಂತಯ್ಯ ಕೆ. ೧೩
ಹಿಂದೂ ೧೧೬, ೧೫೪, ೧೬೭, ೧೬೮, ೨೮೧, ೫೨೯

ಹಿಟ್ಲರ್ ೬೪
ಹಿಮತ್‌ಸಿಂಗ್ ೯೭, ೪೩೩, ೪೩೫
ಹಿಮ್ಮತ್ ೪೯೦
ಹಿಲ್ಸ್ ೩೦೩, ೩೦೪, ೩೦೫, ೩೦೮
ಹೃದಯನಾಥ್ ಕುಂಝ್ರು ಪಂ. ೨೦, ೨೧, ೨೪, ೨೫, ೩೯, ೪೦, ೫೧, ೫೩, ೫೪, ೫೭, ೭೪, ೭೫, ೯೦, ೯೧, ೯೯, ೧೦೦, ೧೦೧, ೧೦೨, ೧೦೪, ೧೩೦, ೧೩೧, ೧೩೨, ೧೩೩, ೧೩೬, ೧೪೯, ೧೫೦, ೧೫೩, ೧೫೪, ೨೨೦, ೨೩೭, ೨೯೪, ೨೯೫, ೨೯೬, ೩೦೫, ೩೦೭, ೩೦೯, ೩೨೮, ೩೬೧, ೩೬೬, ೩೬೭, ೪೦೧, ೪೫೧, ೪೫೨, ೪೫೩, ೪೬೬, ೪೬೭, ೪೬೮, ೪೬೯, ೪೯೮, ೫೧೦, ೫೨೩
ಹೈದರಾಬಾದ್ ೪೪೭
ಹೈದರ್ ಹುಸೇನ್ ೫೦೨
ಹೊಸದಿಲ್ಲಿ ೪೨೯